# ಸಿರಾ ತಾಲ್ಲೂಕು
# ಗ್ರಾಮ ಚರಿತ್ರೆ ಕೋಶ


ಪ್ರಧಾನ ಸಂಪಾದಕರು :

**ಡಾ. ಅಂಬಳಿಕೆ ಹಿರಿಯಣ್ಣ**

ಕಾರ್ಯನಿರ್ವಾಹಕ ಸಂಪಾದಕರು :

**ಕಾ.ತ. ಚಿಕ್ಕಣ್ಣ**

ಸಂಯೋಜಕ ಸಂಪಾದಕರು :

**ಡಾ. ಚಕ್ಕೆರೆ ಶಿವಶಂಕರ್**

ಬೆಂಗಳೂರು

ಜಿಲ್ಲಾ ಸಂಪಾದಕರು :


**ಡಾ. ಚಿಕ್ಕಣ್ಣ ಯಣ್ಣೆಕಟ್ಟೆ**

ಪ್ರಾಧ್ಯಾಪಕರು, ಸಿರಾ



**ಕರ್ನಾಟಕ ಜಾನಪದ ವಿಶ್ವವಿದ್ಯಾಲಯ**

ಗೊಟಗೋಡಿ, ರಾ.ಹೆ-೪, ಶಿಗ್ಗಾವಿ ತಾ. ಹಾವೇರಿ ಜಿ-೫೮೧ ೧೯೭



ದೊಡ್ಡಬಾಣಗೆರೆ
ಹಂದಿಕುಂಟೆ
ಸಿರಾ
ರತ್ನಸಂದ್ರ
ಪಾಲೇವಹಳ್ಳಿ
ತಾಳಗುಂದ
ತರೂರು
ಯಲದಬಾಗಿ
ಬೆಂಚೆ
ಕುರುಬರಹಳ್ಳಿ

# ಪರಿವಿಡಿ


೧ ಸಿರಾ ಸೀಮೆ
೨ ಅರೇಹಳ್ಳಿ
೩ ಅರೇಹಳ್ಳಿ ಗೊಲ್ಲರಹಟ್ಟಿ
೪ ಅಜ್ಜಯ್ಯನಪಾಳ್ಯ
೫ ಅನುಪನಹಳ್ಳಿ
೬ ಅನುಪನಹಳ್ಳಿ ತಾಂಡ ೫
೭ ಅಪ್ಪಿಹಳ್ಳಿ ೫
೮ ಅರುಗನಹಳ್ಳಿ ೬
೯ ಅಂತಾಪುರ ೭
೧೦ ಆದಲೂರು ೮
೧೧ ಅರಿಯಜ್ಜಿಹಳ್ಳಿ೯
೧೨ ಅಂಬೇಡ್ಕರ್ ಕಾಲೋನಿ ೯
೧೩ ಅಮಲಗೊಂದಿ ೧೦
೧೪ ಅಜ್ಜಯ್ಯನ ಪಾಳ್ಯ ೧೧
೧೫ ಅಜ್ಜೇನಹಳ್ಳಿ ಕಾಲೋನಿ ೧೨
೧೬ ಅಜ್ಜೇನಹಳ್ಳಿ ಗೊಲ್ಲರಹಟ್ಟಿ ೧೨
೧೭ ಅಜ್ಜೇನಹಳ್ಳಿ ೧೩
೧೮ ಇನಕನಹಳ್ಳಿ ೧೪
೧೯ ಇನಾಂಗೊಲ್ಲಹಳ್ಳಿ ೧೫
೨೦ ಈಡಿಗರ ದಾಸರಹಳ್ಳಿ ೧೫
೨೧ ಉಪ್ಪಾರಪಾಳ್ಯ ೧೬
೨೨ ಉದ್ದರಾಮನಹಳ್ಳಿ ೧೭
೨೩ ಉಜ್ಜನಕುಂಟೆ ೧೮
೨೪ ಉಜ್ಜನಕುಂಟೆ ಗೊಲ್ಲರಹಟ್ಟಿ ೧೯
೨೫ ಉಮಾಪತಿಹಳ್ಳಿ ೧೯
೨೬ ಉದ್ದಯ್ಯನಪಾಳ್ಯ ೨೦
೨೭ ಉದ್ದನಚಿಕ್ಕನಹಟ್ಟಿ ೨೦
೨೮ ಉಪ್ಪಾರಹಟ್ಟಿ ೨೧
೨೯ ಎಮ್ಮೇರಹಳ್ಳಿ ೨೨
೩೦ ಎಮ್ಮೇರಹಳ್ಳಿ ತಾಂಡ ೨೩
೩೧ ಎಮ್ಮೇರಹಳ್ಳಿ ಗೊಲ್ಲರಹಟ್ಟಿ ೨೩
೩೨ ಎತ್ತಪ್ಪನ ಹಟ್ಟಿ ೨೪
೩೩ ಓಜಗುಂಟೆ ೨೫
೩೪ ಓಜಗುಂಟೆ ಗೊಲ್ಲರಹಟ್ಟಿ೨೬
೩೫ ಓಬಳಾಪುರ ೨೭
೩೬ ಓಬಳಹಳ್ಳಿ ೨೭
೩೭ ಕದರಿ ಕಂಬದಹಳ್ಳಿ ೨೮
೩೮ ಕೊಟ್ಟ ೨೯
೩೯ ಕುರುಡನಹಳ್ಳಿ ೩೦
೪೦ ಕೊಂಡಮ್ಮನಹಳ್ಳಿ ೩೧
೪೧ ಕೆಂತಾರ್ಲಹಟ್ಟಿ ೩೧
೪೨ ಕೊರಟಿಕೆರೆ ೩೨
೪೩ ಕೆರೆಯಾಗಲಹಳ್ಳಿ ೩೨
೪೪ ಕೂಸುಕುಂಟೆ ೩೩
೪೫ ಕೂಸುಕುಂಟೆ ಕಾವಲ್ ೩೪
೪೬ ಕಾಡಜ್ಜನಪಾಳ್ಯ೩೪
೪೭ ಕೆಂಪನಹಳ್ಳಿ ೩೫
೪೮ ಕೆಂಪನಹಳ್ಳಿ ಗೊಲ್ಲರಹಟ್ಟಿ ೩೬
೪೯ ಕಲ್ಲಹಳ್ಳಿ ೩೬
೫೦ ಕೊಟ್ಟರಂಗಾಪುರ ೩೭
೫೧ ಕಳುವರಹಳ್ಳಿ ೩೮
೫೨ ಕಂಬೇರಹಟ್ಟಿ ೩೯
೫೩ ಕಳುವರಹಳ್ಳಿ ಗೊಲ್ಲರಹಟ್ಟಿ ೪೦
೫೪ ಕಲ್ಲುಕುಂಟೆ ೪೦
೫೫ ಕಗ್ಗಲಡು ೪೦
೫೬ ಕರೇಕ್ಯಾತನಹಳ್ಳಿ ೪೨
೫೭ ಕೆರೆಯಾಗಲಹಳ್ಳಿ ೪೩
೫೮ ಕೆರೆಯಾಗಲ ಚಿಕ್ಕೇನಹಳ್ಳಿ೪೩
೫೯ ಕೃಷ್ಣಾಪುರ ಗೊಲ್ಲರಹಟ್ಟಿ ೪೪
೬೦ ಕಾಮಗೊಂಡನಹಳ್ಳಿ೪೫
೬೧ ಕುಂಟನಹಟ್ಟಿ ೪೬
೬೨ ಕಾನೆರಂಗನಹಳ್ಳಿ ೪೭
೬೩ ಕೆ.ಆರ್. ಗೊಲ್ಲರಹಟ್ಟಿ ೪೮
೬೪ ಕುಂಬಾರಹಳ್ಳಿ ೪೮
೬೫ ಕುಂಬಾರಹಳ್ಳಿ ಗೊಲ್ಲರಹಟ್ಟಿ ೪೯
೬೬ ಕುದುರೆಕುಂಟೆ ೫೦
೬೭ ಕರಿದಾಸರಹಳ್ಳಿ೫೦
೬೮ ಕುರುಬರ ರಾಮನಹಳ್ಳಿ ೫೧
೬೯ ಕದಿರೇಹಳ್ಳಿ ೫೨
೭೦ ಕರೇತಿಮ್ಮನಹಳ್ಳಿ ೫೩
೭೧ ಕರೇಕಲ್ಲು ಹಟ್ಟಿ ೫೪
೭೨ ಕಾರೇಹಳ್ಳಿ೫೪
೭೩ ಕಾಟನಹಳ್ಳಿ ೫೫
೭೪ ಕಲಿಗಾನಹಳ್ಳಿ ೫೬
೭೫ ಕರೆಕೆಂಚಪ್ಪನಪಾಳ್ಯ ೫೬
೭೬ ಕರಿರಾಮನಹಳ್ಳಿ ೫೭
೭೭ ಕ್ಯಾದಿಗುಂಟೆ ೫೮
೭೮ ಕೊಟ್ಟ ೫೯
೭೯ ಕೊಟ್ಟಪಾಳ್ಯ ೬೦
೮೦ ಕಳ್ಳಂಬೆಳ್ಳ ೬೧

೮೧ ಕಳ್ಳಂಬೆಳ್ಳ ಬಂಗ್ಲೆ ೬೨
೮೨ ಕಟಾವೀರನಹಳ್ಳಿ ೬೩
೮೩ ಕಡವಿಗೆರೆ ೬೫
೮೪ ಕರೇಜವನಹಳ್ಳಿ೬೭
೮೫ ಕಲ್ಲುಶೆಟ್ಟಪಹಳ್ಳಿ ೬೭
೮೬ ಕಳ್ಳಿಪಾಳ್ಯ ೬೮
೮೭ ಕಲಿಗಾನಹಟ್ಟಿ ೬೯
೮೮ ಕಪ್ಪೇನಹಳ್ಳಿ ೭೦
೮೯ ಕಾಳಾಪುರ ೭೧
೯೦ ಕಾರ್ಪೆಹಳ್ಳಿ ೭೨
೯೧ ಕಾರ್ಪೆಹಳ್ಳಿ ಗೊಲ್ಲರಹಟ್ಟಿ೭೩
೯೨ ಕಾಗೇಲಿಂಗನಹಳ್ಳಿ ೭೩
೯೩ ಕಾಳಜ್ಜಿ ರೊಪ್ಪ೭೪
೯೪ ಕಾಳೇನಹಳ್ಳಿ ೭೫
೯೫ ಕುಂಬಾರಹಳ್ಳಿ ಕಾಲೋನಿ ೭೬
೯೬ ಕುಂಟೇಗೌಡನಹಳ್ಳಿ ೭೬
೯೭ ಕೆಂಚಗಾನಹಳ್ಳಿ೭೭
೯೮ ಕಣಿವೆ ರಾಂಪುರ ೭೮
೯೯ ಕಮಲನಾಯಕನತಾಂಡ ೭೮
೧೦೦ಕರೇಮಾದನಹಳ್ಳಿ ೭೯
೧೦೧ ಕುರುಬರಹಳ್ಳಿ ೮೦
೧೦೨ ಕುಂಬಾರಹಳ್ಳಿ ೮೧
೧೦೩ ಕುಣಗಾಟನಹಳ್ಳಿ ೮೨
೧೦೪ ಕಾಟಮಾಳ ೮೨
೧೦೫ ಕಾಲಪ್ಪನಹಳ್ಳಿ ೮೩
೧೦೬ ಕ್ಯಾತೆದೇವರಹಟ್ಟಿ ೮೪
೧೦೭ ಕಿಲಾರದಹಳ್ಳಿ ೮೪
೧೦೮ ಕಿಲಾರದಹಳ್ಳಿ ವಡ್ಡರಹಟ್ಟಿ ೮೫
೧೦೯ ಕಿಲಾರದಹಳ್ಳಿ ತಾಂಡ ೮೬
೧೧೦ ಕಂಬದಹಳ್ಳಿ ೮೭
೧೧೧ ಕಂಚಿಗಾನಹಳ್ಳಿ೮೮
೧೧೨ ಕೆಂಚಪ್ಪನಹಳ್ಳಿ ೮೮
೧೧೩ ಕಂಬದ ರಂಗಪ್ಪನಪಾಳ್ಯ೮೯
೧೧೪ ಕೆಂಚಪ್ಪನಹಳ್ಳಿ ವಡ್ಡರಹಟ್ಟಿ ೯೦
೧೧೫ ಗಜಮಾರನಹಳ್ಳಿ ೯೦
೧೧೬ ಗುಡ್ಡದಹಟ್ಟಿ ೯೧
೧೧೭ ಗುಳಿಗೇನಹಳ್ಳಿ ೯೨
೧೧೮ ಗುಳಿಗೇನಹಳ್ಳಿ ಗೊಲ್ಲರಹಟ್ಟಿ ೯೩
೧೧೯ ಗುಳಿಗೇನಹಳ್ಳಿ ನವಗ್ರಾಮ ೯೩
೧೨೦ ಗುಮ್ಮನಹಳ್ಳಿ ೯೩
೧೨೧ ಗುಮ್ಮನಹಳ್ಳಿ ಗೊಲ್ಲರಹಟ್ಟಿ ೯೪
೧೨೨ ಗಿರಿನಾಥನಹಳ್ಳಿ ೯೫
೧೨೩ ಗಿರಿನಾಥನಹಳ್ಳಿ ಗೊಲ್ಲರಹಟ್ಟಿ ೯೬
೧೨೪ ಗಿಡದ ರಂಗನಹಳ್ಳಿ ೯೬
೧೨೫ ಗೋವಿಂದನಹಳ್ಳಿ ೯೭
೧೨೬ ಗೊಲ್ಲಹಳ್ಳಿ ೯೮
೧೨೭ ಗೊಲ್ಲಹಳ್ಳಿ– ಹೊಸಬಡಾವಣೆ ೯೯
೧೨೮ ಗಿಡಗನಹಳ್ಳಿ ೯೯
೧೨೯ ಗಂಗನಹಳ್ಳಿ ೧೦೦
೧೩೦ ಗಂಗನಹಳ್ಳಿ ಗೊಲ್ಲರಹಟ್ಟಿ ೧೦೧
೧೩೧ ಗೌಡಗೆರೆ ೧೦೨
೧೩೨ ಗೋಣಿಹಳ್ಳಿ ೧೦೩
೧೩೩ ಗೋಮಾರ್ದನಹಳ್ಳಿ೧೦೩
೧೩೪ ಗಜ್ಜೀರಹಳ್ಳಿ ೧೦೫
೧೩೫ ಗುಂಡಪ್ಪ ಚಿಕ್ಕೇನಹಳ್ಳಿ ೧೦೫
೧೩೬ ಗೊಲ್ಲರಹಳ್ಳಿ ೧೦೬
೧೩೭ ಗೋಪಿಕುಂಟೆ ೧೦೭
೧೩೮ ಗೋಪಿಕುಂಟೆ ನವಗ್ರಾಮ ೧೦೯
೧೩೯ ಗಂಡೀಹಳ್ಳಿ ೧೦೯
೧೪೦ ಗಂಡಿಹಳ್ಳಿ ಮಠ ೧೧೦
೧೪೧ ಗಂಜಲಗುಂಟೆ೧೧೧
೧೪೨ ಗಂಜಲಗುಂಟೆ ಗೊಲ್ಲರಹಟ್ಟಿ ೧೧೨
೧೪೩ ಗುಬ್ಬಿ ಚಿಕ್ಕಣ್ಣನಪಾಳ್ಯ ೧೧೨
೧೪೪ ಗಾಂಧಿನಗರ ೧೧೩
೧೪೫ ಗುಜ್ಜಯ್ಯನ ಪಾಳ್ಯ ೧೧೪
೧೪೬ ಗಾಣದಹುಣಸೆ ೧೧೪
೧೪೭ ಗಿಡ್ಡನಹಳ್ಳಿ ೧೧೫
೧೪೮ ಗಿಣ್ಣಪ್ಪನಹಟ್ಟಿ ೧೧೬
೧೪೯ ಗುಂಗರಪೇಟೆ ೧೧೬
೧೫೦ ಗೋಪಾಲದೇವರಹಳ್ಳಿ ೧೧೭
೧೫೧ ಗೊಲ್ಲರಹಟ್ಟಿ (ಬಂಗಾರ ಹಟ್ಟಿ) ೧೧೮
೧೫೨ ಚನ್ನನಕುಂಟೆ ೧೧೮
೧೫೩ ಚನ್ನನಕುಂಟೆ ಗೊಲ್ಲರಹಟ್ಟಿ ೧೧೯
೧೫೪ ಚಿಕ್ಕನಕೋಟೆ ೧೨೦
೧೫೫ ಚಿಕ್ಕನಕೋಟೆ ಗೊಲ್ಲರಹಟ್ಟಿ ೧೨೧
೧೫೬ ಚಿಕ್ಕಗೂಳ೧೨೧
೧೫೭ ಚಿನ್ನಹಳ್ಳಿ ಗೊಲ್ಲರಹಟ್ಟಿ ೧೨೩
೧೫೮ ಚಂಗಾವರ ೧೨೩
೧೫೯ ಚಿರತಹಳ್ಳಿ೧೨೫
೧೬೦ ಚಿಕ್ಕಬಾಣಗೆರೆ ೧೨೬
೧೬೧ ಚೌಳಹಟ್ಟಿ೧೨೭
೧೬೨ ಚಿಕ್ಕಹುಲಿಕುಂಟೆ ೧೨೮

| | | |
|---|---|---|
| ೧೬೩ | ಚನ್ನೇನಹಳ್ಳಿ | ೧೨೯ |
| ೧೬೪ | ಚನ್ನೇನಹಳ್ಳಿ | ೧೨೯ |
| ೧೬೫ | ಚಕ್ಕೇನಹಳ್ಳಿ | ೧೩೦ |
| ೧೬೬ | ಚಿಕ್ಕನಹಳ್ಳಿ | ೧೩೦ |
| ೧೬೭ | ಚಿಕ್ಕನಹಳ್ಳಿ ಬೋವಿ ಕಾಲೋನಿ | ೧೩೧ |
| ೧೬೮ | ಚಿನ್ನೇನಹಳ್ಳಿ | ೧೩೨ |
| ೧೬೯ | ಚಿಕ್ಕದಾಸರಹಳ್ಳಿ | ೧೩೩ |
| ೧೭೦ | ಚಿಕ್ಕದಾಸರಹಳ್ಳಿ ಗೊಲ್ಲರಹಟ್ಟಿ | ೧೩೪ |
| ೧೭೧ | ಚಿನ್ನಪ್ಪನಹಳ್ಳಿ | ೧೩೫ |
| ೧೭೨ | ಚಿಕ್ಕತಿಮ್ಮನಹಳ್ಳಿ | ೧೩೬ |
| ೧೭೩ | ಚಿಕ್ಕದಾಸರಹಳ್ಳಿ | ೧೩೬ |
| ೧೭೪ | ಚಿಕ್ಕಸಂದ್ರ ಕಾವಲ್ | ೧೩೭ |
| ೧೭೫ | ಚಿಕ್ಕ ಅಗ್ರಹಾರ | ೧೩೮ |
| ೧೭೬ | ಚಿಕ್ಕಗಿರಿಯನಹಳ್ಳಿ | ೧೩೯ |
| ೧೭೭ | ಚೆನ್ನಯ್ಯನಪಾಳ್ಯ | ೧೪೦ |
| ೧೭೮ | ಚಿನ್ನಪ್ಪನಹಟ್ಟಿ (ಮಾಳಿಗೆಹಟ್ಟಿ) | ೧೪೧ |
| ೧೭೯ | ಜವನಹಳ್ಳಿ | ೧೪೧ |
| ೧೮೦ | ಜಯನಗರ | ೧೪೨ |
| ೧೮೧ | ಜುಂಜರಾಮನಹಳ್ಳಿ | ೧೪೩ |
| ೧೮೨ | ಜುಂಜಪ್ಪನಗುಡ್ಡೆ ಹೊಸಹಳ್ಳಿ | ೧೪೪ |
| ೧೮೩ | ಜವನಹಳ್ಳಿ | ೧೪೪ |
| ೧೮೪ | ಜಯಚಂದ್ರ ಬಡಾವಣೆ | ೧೪೫ |
| ೧೮೫ | ಜೋಗಿಹಳ್ಳಿ | ೧೪೬ |
| ೧೮೬ | ಜೋಡಿದೇವರಹಳ್ಳಿ | ೧೪೬ |
| ೧೮೭ | ಜೋಡಿದೇವರಹಳ್ಳಿ ಬೋವಿಪಾಳ್ಯ | ೧೪೭ |
| ೧೮೮ | ಜಾಡರಹಳ್ಳಿ | ೧೪೮ |
| ೧೮೯ | ಜಾನಕಲ್ಲು | ೧೪೮ |
| ೧೯೦ | ಜೋಗಯ್ಯನಪಾಳ್ಯ | ೧೪೯ |
| ೧೯೧ | ತಗ್ಗಿಹಳ್ಳಿ | ೧೫೦ |
| ೧೯೨ | ತೊಗರಿಗುಂಟೆ | ೧೫೦ |
| ೧೯೩ | ತೊಗರಿಗುಂಟೆ ಗೊಲ್ಲರಹಟ್ಟಿ | ೧೫೧ |
| ೧೯೪ | ತಿಮ್ಮಸಾಗರ | ೧೫೨ |
| ೧೯೫ | ತೆತ್ತಿಗಾನಹಳ್ಳಿ | ೧೫೩ |
| ೧೯೬ | ತಾಡಿಪಾಳ್ಯ | ೧೫೩ |
| ೧೯೭ | ತಂಕಟಿ | ೧೫೪ |
| ೧೯೮ | ತಾವರೆಕೆರೆ | ೧೫೫ |
| ೧೯೯ | ತಡಕಲೂರು | ೧೫೭ |
| ೨೦೦ | ತಿಮ್ಮನಹಳ್ಳಿ | ೧೫೯ |
| ೨೦೧ | ತಿಮ್ಮನಹಳ್ಳಿ ಗೊಲ್ಲರಹಟ್ಟಿ | ೧೫೯ |
| ೨೦೨ | ತರೂರು | ೧೬೦ |
| ೨೦೩ | ತರೂರು ಗೊಲ್ಲರಹಟ್ಟಿ | ೧೬೧ |
| ೨೦೪ | ತಾಳಗುಂದ | ೧೬೨ |
| ೨೦೫ | ತಿಮ್ಮನಹಳ್ಳಿ ಗೊಲ್ಲರಹಟ್ಟಿ | ೧೬೪ |
| ೨೦೬ | ತೊರೆಯಪ್ಪನಹಳ್ಳಿ | ೧೬೪ |
| ೨೦೭ | ತಿಪ್ಪನಹಳ್ಳಿ | ೧೬೫ |
| ೨೦೮ | ತಿಪ್ಪನಹಳ್ಳಿ ಎ.ಕೆ. ಕಾಲೋನಿ | ೧೬೬ |
| ೨೦೯ | ತಿಮ್ಮಣ್ಣನಹಳ್ಳಿ | ೧೬೬ |
| ೨೧೦ | ತುಪ್ಪದಕೋಣ | ೧೬೬ |
| ೨೧೧ | ತುಪ್ಪದಕೋಣ ಗೊಲ್ಲರಹಟ್ಟಿ | ೧೬೭ |
| ೨೧೨ | ತುಪ್ಪದಕೊಣದ ಚೆನ್ನಪ್ಪನಪಾಳ್ಯ | ೧೬೮ |
| ೨೧೩ | ತಿತ್ತಿಗಾನಹಳ್ಳಿ | ೧೬೯ |
| ೨೧೪ | ದೇವರಪುರ | ೧೬೯ |
| ೨೧೫ | ದೇವರಹಳ್ಳಿ | ೧೭೦ |
| ೨೧೬ | ದೇವಗೊಂಡನಹಳ್ಳಿ | ೧೭೧ |
| ೨೧೭ | ದೇವಗೊಂಡನಹಳ್ಳಿ ಬೋವಿ ಕಾಲೋನಿ | ೧೭೨ |
| ೨೧೮ | ದೊಡ್ಡಗುಳ | ೧೭೨ |
| ೨೧೯ | ದ್ವಾರಾಳು | ೧೭೪ |
| ೨೨೦ | ದ್ವಾರಾಳು ಗೊಲ್ಲರಹಟ್ಟಿ | ೧೭೫ |
| ೨೨೧ | ದೊಡ್ಡನಹಳ್ಳಿ | ೧೭೫ |
| ೨೨೨ | ದಾವೂದ್‌ಪಾಳ್ಯ | ೧೭೬ |
| ೨೨೩ | ದೇವರಹಟ್ಟಿ | ೧೭೭ |
| ೨೨೪ | ಡ್ಯಾಗೇರಹಳ್ಳಿ | ೧೭೭ |
| ೨೨೫ | ದಂಡೀಕೆರೆ | ೧೭೮ |
| ೨೨೬ | ದಾಸರಹಳ್ಳಿ | ೧೭೯ |
| ೨೨೭ | ದ್ವಾರನಕುಂಟೆ | ೧೮೦ |
| ೨೨೮ | ದ್ವಾರನಕುಂಟೆಪಾಳ್ಯ | ೧೮೧ |
| ೨೨೯ | ದೇವಗಿರಿ | ೧೮೧ |
| ೨೩೦ | ದೊಡ್ಡಹುಲಿಕುಂಟೆ | ೧೮೨ |
| ೨೩೧ | ದೊಡ್ಡಬಾಣಗೆರೆ | ೧೮೩ |
| ೨೩೨ | ದೊಡ್ಡಬಾಣಗೆರೆ ಗೊಲ್ಲರಹಟ್ಟಿ | ೧೮೪ |
| ೨೩೩ | ದಿಬ್ಬದಹಟ್ಟಿ | ೧೮೫ |
| ೨೩೪ | ದಾಸರಹಳ್ಳಿ | ೧೮೬ |
| ೨೩೫ | ದಾಸರಹಳ್ಳಿ ಗೊಲ್ಲರಹಟ್ಟಿ | ೧೮೬ |
| ೨೩೬ | ದೇವರಹಳ್ಳಿ | ೧೮೭ |
| ೨೩೭ | ದೇವರಹಳ್ಳಿ ಗೊಲ್ಲರಹಟ್ಟಿ | ೧೮೮ |
| ೨೩೮ | ದುರ್ಗದಹಳ್ಳಿ | ೧೮೮ |
| ೨೩೯ | ದೊಡ್ಡ ಚಿಕ್ಕನಹಳ್ಳಿ | ೧೮೯ |
| ೨೪೦ | ದೊಡ್ಡ ಅಗ್ರಹಾರ | ೧೯೦ |
| ೨೪೧ | ದೊಡ್ಡ ಆಲದಮರದ ಮಡು ತಾಂಡ | ೧೯೧ |
| ೨೪೨ | ದೊಡ್ಡಾಲಮರದ ಮಡು | ೧೯೨ |
| ೨೪೩ | ನಾಗಜ್ಜಿ ಗುಡ್ಲು | ೧೯೨ |
| ೨೪೪ | ನ್ಯಾಯಗೆರೆ | ೧೯೩ |

೨೪೫ ನಾದೂರು ೧೯೪
೨೪೬ ನಾರಾಯಣಪುರ ೧೯೬
೨೪೭ ನಾರಾಯಣಪುರ ಪಾಳ್ಯ ೧೯೭
೨೪೮ ನೇರಲಹಳ್ಳಿ ೧೯೭
೨೪೯ ನಾರಗೊಂಡನಹಳ್ಳಿ ೧೯೮
೨೫೦ ನಿಡುಗಟ್ಟೆ ೧೯೮
೨೫೧ ನೇಜಂತಿ ೧೯೯
೨೫೨ ನೇಜಂತಿಪಾಳ್ಯ ೨೦೦
೨೫೩ ನರಸಮ್ಮಜ್ಜಿ ಕಟ್ಟೆ ೨೦೧
೨೫೪ ನವಣೆ ಬೋರನಹಳ್ಳಿ ೨೦೧
೨೫೫ ನಾಗೇನಹಳ್ಳಿ ೨೦೨
೨೫೬ ನೆಲದಿಮ್ಮನಹಳ್ಳಿ ೨೦೩
೨೫೭ ನಿಜಯ್ಯನಪಾಳ್ಯ ೨೦೩
೨೫೮ ನೇರಲಗುಡ್ಡ ೨೦೪
೨೫೯ ನಿಂಬೆಮರದ ಹಳ್ಳಿ ೨೦೫
೨೬೦ ಪದ್ಮಾಪುರ ೨೦೬
೨೬೧ ಪಂಜಿಗಾನಹಳ್ಳಿ ೨೦೭
೨೬೨ ಪಟ್ಟನಾಯಕನಹಳ್ಳಿ ೨೦೮
೨೬೩ ಪಟ್ಟನಾಯ್ಕನಹಳ್ಳಿ ಕ್ರಾಸ್ ೨೧೦
೨೬೪ ಪುರಲೇಹಳ್ಳಿ ೨೧೦
೨೬೫ ಪೂಜಾರ್ ಮುದ್ದನಹಳ್ಳಿ ೨೧೧
೨೬೬ ಪೂಜಾರ್ ಮುದ್ದನಹಳ್ಳಿ ಗೇಟ್ ಕಾಲೋನಿ ೨೧೨
೨೬೭ ಪಿನ್ನಿಹೊಳೆ ೨೧೩
೨೬೮ ಪಿಲ್ಲಹಳ್ಳಿ ೨೧೩
೨೬೯ ಪುರ ೨೧೪
೨೭೦ ಬೂವನಹಳ್ಳಿ ೨೧೫
೨೭೧ ಬಚ್ಚೀಕಟ್ಟೆ ೨೧೬
೨೭೨ ಭೂತೇಶ್ವರ ನಗರ ೨೧೭
೨೭೩ ಬೊಮ್ಮರಸನಹಳ್ಳಿ ೨೧೭
೨೭೪ ಬೋಚೇನಹಳ್ಳಿ ೨೧೮
೨೭೫ ಬೊಪ್ಪನಾಡು ೨೧೯
೨೭೬ ಬೋರಸಂದ್ರ ೨೨೦
೨೭೭ ಬಿದರಕೆರೆ ೨೨೦
೨೭೮ ಬಿದರೆಕೆರೆ ಗೊಲ್ಲರಹಟ್ಟಿ ೨೨೧
೨೭೯ ಬಂದಕುಂಟೆ ೨೨೨
೨೮೦ ಬಂದಕುಂಟೆ ಗೊಲ್ಲರಹಟ್ಟಿ ೨೨೩
೨೮೧ ಬಡಕನಹಳ್ಳಿ ೨೨೪
೨೮೨ ಬಡಕನಹಳ್ಳಿ ವಡ್ಡರಹಟ್ಟಿ ೨೨೪
೨೮೩ ಬಡಮಾರನಹಳ್ಳಿ ೨೨೫
೨೮೪ ಬಡಮಂಗನಹಟ್ಟಿ ೨೨೬
೨೮೫ ಬೇವಿನಹಳ್ಳಿ ೨೨೬
೨೮೬ ಬಿಳಿಗಿರಿಯಜ್ಜನ ಪಾಳ್ಯ ೨೨೮
೨೮೭ ಬಾಳಜ್ಜನ ಹಟ್ಟಿ ೨೨೯
೨೮೮ ಭೂತಕಾಟನಹಳ್ಳಿ ೨೨೯
೨೮೯ ಭೂತಪ್ಪನಗುಡಿ ೨೩೦
೨೯೦ ಭೂತಕಾಟನಹಳ್ಳಿ ಗೊಲ್ಲರಹಟ್ಟಿ ೨೩೧
೨೯೧ ಬೆಟ್ಟಪ್ಪನಹಳ್ಳಿ ೨೩೧
೨೯೨ ಬ್ರಹ್ಮಸಂದ್ರ ೨೩೨
೨೯೩ ಬ್ರಹ್ಮಸಂದ್ರ ಗೊಲ್ಲರಹಟ್ಟಿ ೨೩೩
೨೯೪ ಬೊಮ್ಮಗಾನಹಳ್ಳಿ ೨೩೪
೨೯೫ ಬರಗೂರು ೨೩೪
೨೯೬ ಬಡೇನಹಳ್ಳಿ ೨೩೬
೨೯೭ ಬಸವನಹಳ್ಳಿ ೨೩೮
೨೯೮ ಬಸವನಹಳ್ಳಿ ಗೊಲ್ಲರಹಟ್ಟಿ ೨೩೯
೨೯೯ ಬೀರನಹಳ್ಳಿ ೨೩೯
೩೦೦ ಬೆಜ್ಜಿಹಳ್ಳಿ ೨೪೦
೩೦೧ ಬೆಜ್ಜಿಹಳ್ಳಿ ಗೊಲ್ಲರಹಟ್ಟಿ ೨೪೧
೩೦೨ ಬೊಪ್ಪರಾಯಪ್ಪನ ಪಾಳ್ಯ ೨೪೧
೩೦೩ ಬಸರಿಹಳ್ಳಿ ೨೪೨
೩೦೪ ಬಸವಂತನಹಳ್ಳಿ ೨೪೩
೩೦೫ ಬಾಲೇನಹಳ್ಳಿ ೨೪೩
೩೦೬ ಬಾಲೇನಹಳ್ಳಿ ಆಂಜಿನೇಯ ಬಡಾವಣೆ ೨೪೪
೩೦೭ ಬಾಲಬಸವನಹಳ್ಳಿ ೨೪೫
೩೦೮ ಬಾಲನಪಾಳ್ಯ ೨೪೬
೩೦೯ ಬೆಟ್ಟನಹಳ್ಳಿ ೨೪೬
೩೧೦ ಭೂಪಸಂದ್ರ ೨೪೭
೩೧೧ ಬ್ರಹ್ಮಸಂದ್ರ ೨೪೮
೩೧೨ ಬ್ಯಾಡರಹಳ್ಳಿ ೨೪೯
೩೧೩ ಬ್ಯಾಟಗನಹಟ್ಟಿ ೨೫೦
೩೧೪ ಬೋರಸಂದ್ರ ೨೫೦
೩೧೫ ಬಸವನಹಳ್ಳಿ ೨೫೧
೩೧೬ ಬಟ್ಟೆಗಾನಹಳ್ಳಿ ೨೫೨
೩೧೭ ಬುಕ್ಕಾಪಟ್ಟಣ ೨೫೩
೩೧೮ ಬಾಲೇನಹಳ್ಳಿ ತಾಂಡ ೨೫೫
೩೧೯ ಬಾಳಾಪುರ ೨೫೫
೩೨೦ ಬೂದಿಗುಡ್ಡ ಕಾವಲು ೨೫೬
೩೨೧ ಭಾವಸಿಂಗನಾಯ್ಕನ ತಾಂಡ ೨೫೬
೩೨೨ ಬೆಂಚೆ ೨೫೭
೩೨೩ ಬೆಂಚೆಪಾಳ್ಯ ೨೫೮
೩೨೪ ಬೆಂಚೆಗೇಟ್ ೨೫೮
೩೨೫ ಬಂಗಾರಿಹಟ್ಟಿ ೨೫೯
೩೨೬ ಮದಲೂರು ೨೫೯

೩೨೭ ಮದಲೂರು ದಾಸರಹಳ್ಳಿ ೨೬೧
೩೨೮ ಮಲ್ಲೇಶ್ವರ ೨೬೨
೩೨೯ ಮಾಗೋಡು ೨೬೩
೩೩೦ ಮಾಗೋಡು ಗೊಲ್ಲರಹಟ್ಟಿ ೨೬೪
೩೩೧ ಮಾಗೋಡು ಕೃಷಿ ಕಾಲೋನಿ ೨೬೫
೩೩೨ ಮುದಿಗೆರೆ೨೬೬
೩೩೩ ಮುದಿಗೆರೆ ಕಾವಲ್ ೨೬೬
೩೩೪ ಮುದಿಗೆರೆ ಗೊಲ್ಲರಹಟ್ಟಿ ೨೬೭
೩೩೫ ಮಾನಂಗಿ೨೬೮
೩೩೬ ಮಾನಂಗಿ ತಾಂಡ ೨೬೯
೩೩೭ ಮೇಕೇರಹಳ್ಳಿ ೨೬೯
೩೩೮ ಮೂಗನಹಳ್ಳಿ ೨೭೦
೩೩೯ ಮೂಗನಹಳ್ಳಿ ಗೊಲ್ಲರಹಟ್ಟಿ ೨೭೧
೩೪೦ ಮುಷ್ಟಿಗರಹಳ್ಳಿ ೨೭೨
೩೪೧ ಮುಷ್ಟಿಗರಹಳ್ಳಿ ಗೇಟ್ ೨೭೨
೩೪೨ ಮುದ್ದರಂಗನಹಳ್ಳಿ ೨೭೩
೩೪೩ ಮೇಲುಕುಂಟೆ ೨೭೩
೩೪೪ ಮೇಲುಕುಂಟೆ ಗೊಲ್ಲರಹಟ್ಟಿ ೨೭೫
೩೪೫ ಮದ್ದೇವಹಳ್ಳಿ ೨೭೫
೩೪೬ ಮದ್ದಕ್ಕನಹಳ್ಳಿ ೨೭೬
೩೪೭ ಮದ್ದಕ್ಕನಹಳ್ಳಿ ಗೊಲ್ಲರಹಟ್ಟಿ ೨೭೭
೩೪೮ ಮಾರಪ್ಪನಹಳ್ಳಿ೨೭೮
೩೪೯ ಮುದ್ದೇನಹಳ್ಳಿ ೨೭೯
೩೫೦ ಮುದ್ದೇನಹಳ್ಳಿ ಗೊಲ್ಲರಹಟ್ಟಿ ೨೭೯
೩೫೧ ಮೆಳೆಕೋಟೆ ೨೮೦
೩೫೨ ಮೊಸರುಕುಂಟೆ ೨೮೦
೩೫೩ ಮಾರನಗೆರೆ ೨೮೧
೩೫೪ ಮಾರನಗೆರೆ ಗೊಲ್ಲರಹಟ್ಟಿ ೨೮೨
೩೫೫ ಮಾರನಗೆರೆ ಗೊಲ್ಲರಹಟ್ಟಿ ನವಗ್ರಾಮ ೨೮೩
೩೫೬ ಮುಸಕಲೋಟಿ ೨೮೩
೩೫೭ ಮುಕುಂದಪ್ಪನ ಪಾಳ್ಯ ೨೮೪
೩೫೮ ಮೇಲಗಿರಿ ಪಾಳ್ಯ ೨೮೪
೩೫೯ ಮೂಡ್ಲೇನಹಳ್ಳಿ೨೮೫
೩೬೦ ಮರುಳಪ್ಪನಹಳ್ಳಿ ೨೮೬
೩೬೧ ಮಲ್ಲಶೆಟ್ಟಿಹಳ್ಳಿ ೨೮೭
೩೬೨ ಮರಳೇಗೌಡನಪಾಳ್ಯ ೨೮೭
೩೬೩ ಮುದಿಮಡು ೨೮೮
೩೬೪ ಮುಚ್ಚವೀರನಹಳ್ಳಿ ೨೮೯
೩೬೫ ಮಾಯಸಂದ್ರ ೨೯೦
೩೬೬ ಮಾಟನಹಳ್ಳಿ ೨೯೨
೩೬೭ ಮಾಟನಹಳ್ಳಿ ಗೊಲ್ಲರಹಟ್ಟಿ ೨೯೩
೩೬೮ ಮರಿದಾಸರಹಳ್ಳಿ ೨೯೩
೩೬೯ ಮಾರಗೊಂಡನಹಳ್ಳಿ ೨೯೪
೩೭೦ ಮಾಳನಹಳ್ಳಿ ೨೯೪
೩೭೧ ಮಾದೇನಹಳ್ಳಿ ೨೯೫
೩೭೨ ಮಣ್ಣಮ್ಮ ದೇವಸ್ಥಾನದ ಗೇಟ್ ೨೯೬
೩೭೩ ಮಾದಯ್ಯನಪಾಳ್ಯ ೨೯೬
೩೭೪ ಮಾರುತಿನಗರ೨೯೭
೩೭೫ ಮೇಣಿಗಾನಹಳ್ಳಿ ೨೯೭
೩೭೬ ಮಂಗನಹಳ್ಳಿ ೨೯೮
೩೭೭ ಯಲಿಯೂರು೨೯೯
೩೭೮ ಯಲಿಯೂರು ಗೇಟ್ ೩೦೦
೩೭೯ ಯರಗುಂಟೆ ೩೦೧
೩೮೦ ಯರಗುಂಟೆ ಗೇಟ್೩೦೧
೩೮೧ ಯರಗುಂಟೆ ಎ.ಕೆ. ಕಾಲೋನಿ ೩೦೨
೩೮೨ ಯರಗುಂಟೇಶ್ವರ ನಗರ ೩೦೨
೩೮೩ ಯರವರಹಳ್ಳಿ ೩೦೩
೩೮೪ ಯಲಪೇನಹಳ್ಳಿ ೩೦೪
೩೮೫ ಯಾದಲಡಕು ೩೦೫
೩೮೬ ಯಂಜಲಗೆರೆ ೩೦೬
೩೮೭ ಯಂಜಲಗೆರೆ ಗೊಲ್ಲರಹಟ್ಟಿ ೩೦೭
೩೮೮ ಯಲದಬಾಗಿ ೩೦೮
೩೮೯ ಯರದಕಟ್ಟೆ ೩೦೮
೩೯೦ ಯರಮಾದನಹಳ್ಳಿ ೩೦೯
೩೯೧ ಯರಮಾದನಹಳ್ಳಿ ಗೊಲ್ಲರಹಟ್ಟಿ ೩೧೦
೩೯೨ ರತ್ನಸಂದ್ರ೩೧೧
೩೯೩ ರಂಗಾಪುರ ಗೊಲ್ಲರಹಟ್ಟಿ ೩೧೨
೩೯೪ ರಂಗಾಪುರ ೩೧೩
೩೯೫ ರಾಗಲಹಳ್ಳಿ ೩೧೪
೩೯೬ ರಂಗಾಪುರ ೩೧೪
೩೯೭ ರಂಗನಹಳ್ಳಿ ೩೧೫
೩೯೮ ರಾಮಲಿಂಗಾಪುರ (ಕುರೇಹಳ್ಳಿ) ೩೧೫
೩೯೯ ರಾಮನಹಳ್ಳಿ ೩೧೭
೪೦೦ ರಂಗನಾಥಪುರ ೩೧೭
೪೦೧ ರಂಗಾಪುರ ೩೧೯
೪೦೨ ರಂಗನಹಳ್ಳಿ (ಚಿಕ್ಕ ಅಗ್ರಹಾರ ಮಜರೆ ಗ್ರಾಮ) ೩೨೦
೪೦೩ ಲಕ್ಷ್ಮಿಸಾಗರ ೩೨೦
೪೦೪ ಲಿಂಗದಹಳ್ಳಿ ೩೨೨
೪೦೫ ಲಕ್ಕವ್ವನಹಳ್ಳಿ ೩೨೨
೪೦೬ ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ ೩೨೩
೪೦೭ ಲಕ್ಕನಹಳ್ಳಿ೩೨೪

೪೦೮ ಲಕ್ಕನಹಳ್ಳಿ ೩೨೫

೪೦೯ ಲುಟ್ಟಹನುಮನಪಾಳ್ಯ ೩೨೬

೪೧೦ ಲಿಂಗಶೆಟ್ಟಿಹಳ್ಳಿ ೩೨೬

೪೧೧ ವಡ್ಡರಹಟ್ಟಿ (ಡ್ಯಾಗೇರಹಳ್ಳಿ) ೩೨೭

೪೧೨ ವೀರಗಾನಹಳ್ಳಿ ೩೨೭

೪೧೩ ವೀರಾಪುರ ೩೨೮

೪೧೪ ವರದಾಪುರ ೩೨೯

೪೧೫ ವಾಜರಹಳ್ಳಿ ೩೩೦

೪೧೬ ವೀರಬೊಮ್ಮನಹಳ್ಳಿ ೩೩೦

೪೧೭ ವೆಂಕಟಾಪುರ ೩೩೧

೪೧೮ ವಡ್ಡನಹಳ್ಳಿ ೩೩೨

೪೧೯ ವಡ್ಡರಹಟ್ಟಿ (ಅಮಲಗೊಂದಿ)೩೩೩

೪೨೦ ವಡ್ಡರಹಟ್ಟಿ ೩೩೩

೪೨೧ ವಡ್ಡನಹಳ್ಳಿ ೩೩೪

೪೨೨ ವಡ್ಡನಹಳ್ಳಿ ತಾಂಡ ೩೩೫

೪೨೩ ಶಿವನಯ್ಯನಪಾಳ್ಯ ೩೩೬

೪೨೪ ಶಾಸಮರು ೩೩೭

೪೨೫ ಶೆಟ್ಟಿಗಾನಹಳ್ಳಿ ೩೩೮

೪೨೬ ಶೂಲದಾಳ ೩೩೮

೪೨೭ ಶಿವಾಜಿನಗರ ೩೩೯

೪೨೮ ಶಿಡ್ಲೆಕೋಣ ೩೩೯

೪೨೯ ಶಿಡ್ಲೆಕೋಣ ಗೊಲ್ಲರಹಟ್ಟಿ ೩೪೦

೪೩೦ ಶಾಗದಡು ೩೪೧

೪೩೧ ಸ್ವಾರೆಕುಂಟೆ ೩೪೩

೪೩೨ ಸಿಡಿಯಪ್ಪನಪಾಳ್ಯ ೩೪೪

೪೩೩ ಸಿದ್ದನಹಳ್ಳಿ ೩೪೫

೪೩೪ ಸೀಗಲಹಳ್ಳಿ ೩೪೫

೪೩೫ ಸಿದ್ದಾಪುರ ೩೪೬

೪೩೬ ಸಂಕಾಪುರ ೩೪೭

೪೩೭ ಸಲುಪರಹಳ್ಳಿ ೩೪೮

೪೩೮ ಸಿರಾದಡ ೩೪೯

೪೩೯ ಸಿರಾದಡು ಗೊಲ್ಲರಹಟ್ಟಿ ೩೫೦

೪೪೦ ಸೀಬಿ ೩೫೦

೪೪೧ ಸೀಬಿ ಅಗ್ರಹಾರ ೩೫೨

೪೪೨ ಸೀಬಯ್ಯನಪಾಳ್ಯ ೩೫೩

೪೪೩ ಸಾಕ್ಷಿಹಳ್ಳಿ ೩೫೪

೪೪೪ ಸಾದರ ಕರೇನಹಳ್ಳಿ ೩೫೫

೪೪೫ ಸೋಮ್ಲಾನಾಯಕನ ತಾಂಡ ೩೫೫

೪೪೬ ಸಂಗಯ್ಯನಪಾಳ್ಯ ೩೫೬

೪೪೭ ಹನುಮನಹಳ್ಳಿ ೩೫೭

೪೪೮ ಹಲ್ಲೂರು ೩೫೮

೪೪೯ ಹಲ್ಲೂರು ಕಾವಲ್ ೩೫೯

೪೫೦ ಹನುಮಂತನಗರ ೩೫೯

೪೫೧ ಹನುಮಂತಪುರ ೩೬೦

೪೫೨ ಹೆಗ್ಗನಹಳ್ಳಿ ೩೬೧

೪೫೩ ಹೆಗ್ಗನಹಳ್ಳಿ ಗೊಲ್ಲರಹಟ್ಟಿ ೩೬೧

೪೫೪ ಹುಳಿಗೆರೆ ೩೬೨

೪೫೫ ಹುಳಿಗೆರೆ ಗೊಲ್ಲರಹಟ್ಟಿ ೩೬೩

೪೫೬ ಹೊಸಹಳ್ಳಿ ೩೬೪

೪೫೭ ಹುಚ್ಚಗೀರನಹಳ್ಳಿ ೩೬೫

೪೫೮ ಹೊನ್ನಗೊಂಡನಹಳ್ಳಿ ೩೬೬

೪೫೯ ಹೊನ್ನಗೊಂಡನಹಳ್ಳಿ ಯಾದವರಹಟ್ಟಿ ೩೬೭

೪೬೦ ಹನುಮಂತನಗರ ೩೬೮

೪೬೧ ಹಳ್ಳಪ್ಪನ ಪಾಳ್ಯ ೩೬೮

೪೬೨ ಹನುಮೇಗೌಡನ ಪಾಳ್ಯ ೩೬೯

೪೬೩ ಹಾರೋಗೆರೆ ೩೭೦

೪೬೪ ಹೊಸಕೋಟೆ ೩೭೧

೪೬೫ ಹೊಸಹಳ್ಳಿ ೩೭೧

೪೬೬ ಹೊಸಹಳ್ಳಿ ಜನತಾ ಕಾಲೋನಿ ೩೭೨

೪೬೭ ಹಳೇ ಬಿಜ್ಜಂಬೆಳ್ಳ ೩೭೩

೪೬೮ ಹುಯಿಲ್‌ದೊರೆ ೩೭೪

೪೬೯ ಹುಣಸೆಕಟ್ಟೆ ೩೭೫

೪೭೦ ಹೊನ್ನೇನಹಳ್ಳಿ ೩೭೬

೪೭೧ ಹೊಸಬಿಜ್ಜನಬೆಳ್ಳ ೩೭೭

೪೭೨ ಹೊಸಹಳ್ಳಿ ೩೭೭

೪೭೩ ಹೊಸಹಳ್ಳಿ ಲಂಬಾಣಿ ತಾಂಡ ೩೭೮

೪೭೪ ಹೊಸಪಾಳ್ಯ ೩೭೯

೪೭೫ ಹಂದಿಮುಲ್ಲು ೩೭೯

೪೭೬ ಹಕ್ಕಿಪಿಕ್ಕಿಯರ ಕಾಲೋನಿ ೩೮೦

೪೭೭ ಹನುಮಂತನಗರ ೩೮೧

೪೭೮ ಹಾಲೇನಹಳ್ಳಿ ೩೮೨

೪೭೯ ಹಾವಿನಾಳು ೩೮೩

೪೮೦ ಹೊನ್ನೇನಹಳ್ಳಿ ೩೮೪

೪೮೧ ಹಾಲ್‌ದೊಡ್ಡೇರಿ ೩೮೫

೪೮೨ ಹಂಡೇಚಿಕ್ಕನಹಳ್ಳಿ ೩೮೬

೪೮೩ ಹುಂಜನಾಳು ೩೮೬

೪೮೪ ಹೊಸಬುರ್ಜಿ ೩೮೮

೪೮೫ ಹೊಸಮಲ್ಲನಹಳ್ಳಿ ೩೮೮

೪೮೬ ಹೊಸಮಲ್ಲನಹಳ್ಳಿ ಗೊಲ್ಲರಹಟ್ಟಿ ೩೮೯

೪೮೭ ಮೊದಲೂರು ರಂಗಾಪುರ ೩೯೦

೪೮೮ ಕಲ್ಲುಕೋಟೆ ವಾಡ\ರ್ ನಂ.೧ ೩೯೧

೪೮೯ ಜ್ಯೋತಿನಗರ ವಾರ್ಡ್ ನಂ. ೨ ೩೯೨

೪೯೦ ಜ್ಯೋತಿನಗರ ವಾರ್ಡ್ ನಂ. ೩ ೩೯೩
೪೯೧ ಜ್ಯೋತಿನಗರ ಕೊಳಚೆ ಪ್ರದೇಶ ವಾರ್ಡ್ ನಂ. ೪ ೩೯೩
೪೯೨ ಭೋವಿ ಕಾಲೋನಿ ವಾರ್ಡ್ ನಂ. ೫ ೩೯೪
೪೯೩ ರಂಗನಾಥ ನಗರ ವಾರ್ಡ್ ನಂ. ೬ ೩೯೫
೪೯೪ ಮೊದಲಹಂತ ಕಾಳಿದಾಸನಗರ–ವಾಡ್ ನಂ. ೭
೩೯೬
೪೯೫ ಕಾಳಿದಾಸನಗರ ವಾರ್ಡ್ ನಂ. ೮೩೯೭
೪೯೬ ಸೊಪ್ಪಿನಹಟ್ಟಿ ವಾರ್ಡ್ ನಂ. ೯ ೩೯೯
೪೯೭ ಲಾಡ್‌ಪುರ – ಭವಾನಿನಗರ– ವಾರ್ಡ್ ನಂ. ೧೦ ೪೦೦
೪೯೮ ಕಚೇರಿ ಮೊಹಲ್ಲಾ ವಾರ್ಡ್ ನಂ.೧೧ ೪೦೧
೪೯೯ ಸಿರಾನಿ ಮೊಹಲ್ಲಾ ವಾರ್ಡ್ ನಂ. ೧೨೪೦೨
೫೦೦ ವಾರ್ಡ್ ನಂ. ೧೩. ಗರಿಮಾರಿನ ಹಟ್ಟಿ೪೦೩
೫೦೧ ವಾರ್ಡ್ ನಂ. ೧೪ ಕೆರೆ ಹಿಂದಲಹಟ್ಟಿ ೪೦೪
೫೦೨ ವಾರ್ಡ್ ನಂ. ೧೫ ಪಾರ್ಕ್ ಮೊಹಲ್ಲಾ ೪೦೫
೫೦೩ ವಾರ್ಡ್ ನಂ. ೧೬. ಪಾರ್ಕ್ ಮೊಹಲ್ಲಾ ರಬ್ ನಗರ೪೦೬
೫೦೪ ವಾರ್ಡ್ ನಂ. ೧೭ ಮೆಹಬೂಬ್ ನಗರ ೪೦೭
೫೦೫ ವಾರ್ಡ್ ನಂ. ೧೯ ಬೇಗಂ ಮೊಹಲ್ಲಾ ೨ ೪೦೮
೫೦೬ ವಾರ್ಡ್ ನಂ. ೨೦ ಗಾಡಿವಾನ್ ಮೊಹಲ್ಲಾ ೪೦೯
೫೦೭ ವಾರ್ಡ್ ನಂ. ೨೧ ಅಸಾರ್ ಮೊಹಲ್ಲಾ ೪೦೯
೫೦೮ ವಾರ್ಡ್ ನಂ. ೨೨ ಖರಾದಿ ಮೊಹಲ್ಲಾ ೪೧೦
೫೦೯ ವಾರ್ಡ್ ನಂ. ೨೩ ಜಾಮೀಯಾ ನಗರ ೪೧೧
೫೧೦ ವಾರ್ಡ್ ನಂ. ೨೪ ಮುಚ್ಚಿಗರ ಹಟ್ಟಿ,
ಪೇಷ್ಮಾ ಮೊಹಲ್ಲಾ ೨ನೇ ಹಂತ ೪೧೨
೫೧೧ ವಾರ್ಡ್ ನಂ. ೨೫ ನಾಯಕಹಟ್ಟಿ–ಅಗ್ರಹಾರ ಬೀದಿ ೪೧೩
೫೧೨ ವಾರ್ಡ್ ನಂ. ೨೬ಎ ಮಲ್ಲಿಕಾಪುರದ ಹಟ್ಟಿ
ಬೀಡಿ ಕಾರ್ಮಿಕರ ಬಡಾವಣೆ ೪೧೪
೫೧೩ ಕರೇಕಲ್ಲುಹಟ್ಟಿ 'ಬಿ' ವಾಡ\ರ್ ನಂ.೨೬ಬಿ ೪೧೬
೫೧೪ ಸಂತೇಪೇಟೆ–ಮಾರುತಿನಗರ ವಾಡ್ ನಂ. ೨೭
೪೧೭
೫೧೫ ಸಂತೇಪೇಟೆ ೨ನೇ ಹಂತ ನಾಯಕರಹಟ್ಟಿ
ವಾರ್ಡ್ ನಂ. ೨೮೪೧೮
೫೧೬ ಗಾಂಧಿನಗರ, ಕೆ.ಆರ್. ಬಡಾವಣೆ ವಾರ್ಡ್ ನಂ.೨೯ ೪೨೦
೫೧೭ ಬಾಲಾಜಿ ನಗರ–ವಿದ್ಯಾನಗರ ವಾರ್ಡ್ ನಂ. ೩೦ ೪೨೧
೫೧೮ ಸಪ್ತಗಿರಿ ಬಡಾವಣೆ ವಾರ್ಡ್‌ನಂ. ೩೧ ೪೨೨
೫೧೯ ಮಂಜು ಪೀರ್ ಮಕಾನ೪೨೩

# ಸಿರಾ ಸೀಮೆ

ಸಿರಾ ನಗರವು ತುಮಕೂರು ಜಿಲ್ಲಾ ಕೇಂದ್ರದ ಆಗ್ನೇಯಕ್ಕೆ ೫೧ ಕಿ.ಮೀ. ದೂರದಲ್ಲಿದೆ. ತುಮಕೂರು ಜಿಲ್ಲೆಯ ಹತ್ತು ತಾಲ್ಲೂಕುಗಳ ಸಿರಾ ಒಂದಾಗಿದೆ. ಒಟ್ಟು ೫೧೫ ಹಳ್ಳಿಗಳನ್ನು ಹೊಂದಿದುವ ಈ ತಾಲ್ಲೂಕಿನ ಭೌಗೋಳಿಕ ವಿಸ್ತೀರ್ಣ ೧,೫,೩೭೭ ಹೆಕ್ಟೇರ ಆಗಿದೆ. ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ ೩,೧೩,೭೫೮ ಇದ್ದು ಸಿರಾ ನಗರದಲ್ಲಿ ೫೭,೭೪೯ ಜನಸಂಖ್ಯೆ ಇದೆ. ಸಮುದ್ರ ಮಟ್ಟಕ್ಕಿಂತ ೬೬೧.೪೨ ಮಿ.ಮೀ. ಎತ್ತರವಿದ್ದು, ಸಿರಾ ಸೀಮೆ ಅಕ್ಷಾಂಶ ೧೩.೪೪ ಹಾಗೂ ರೇಖಾಂಶ ೭೬.೫೪ ಸೆಂಟಿಗ್ರೇಡ್‌ಗಳಾಗಿವೆ. ರ್‍ಾಷ್ಟ್ರೀಯ ಹೆದ್ದಾರಿ ನಂ. ೪, ಸಿರಾ ಕಟ್ಟದ ಮೂಲಕ ಹಾದು ಹೋಗಿದ್ದು, ೪೭ ಕಿ.ಮೀ. ರ್‍ಾಷ್ಟ್ರೀಯ ಹೆದ್ದಾರಿಯು ಸಿರಾ ತಾಲ್ಲೂಕಿನ ಸರಹದ್ದಿನಲ್ಲಿ ಹಾದು ಹೋಗುತ್ತವೆ. ಮೂಡಿಗೆರೆ ಯಿಂದ ಆಂಧ್ರಪ್ರದೇಶದ ವೆಂಕಟಗಿರಿಯ ಕೋಟೆಯ ಮಾರ್ಗದಲ್ಲಿ ೫೯.೧೯ ಕಿ.ಮೀ. ದೂರದಲ್ಲಿ ಮೂರು ರಸ್ತೆಗಳು ಸಿರಾ ತಾಲ್ಲೂಕು ಕೇಂದ್ರದ ಮೇಲೆ ಹಾದು ಹೋಗುತ್ತವೆ. ಉಳಿದಂತೆ ೭೨೬.೯ ರಷ್ಟು ಉದ್ದದ ೪೨ ಜಿಲ್ಲಾ ಮುಖ್ಯ ರಸ್ತೆಗಳು ಸಿರಾ ತಾಲ್ಲೂಕಿನೊಂದಿಗೆ ವಿವಿಧ ನಗರಗಳಿಗೆ ಸಂಪರ್ಕ ಕಲ್ಪಿಸಿವೆ.

ಕೆಂಪು, ಕಪ್ಪು, ಮರಳು ಮಿಶ್ರಿತ ಮಣ್ಣಿನಿಂದ ಕೂಡಿದ ಮಣ್ಣು, ಸಿರಾ ಚಾರಿತ್ರಿಕವಾಗಿ ಭವ್ಯ ಪರಂಪರೆ ಹೊಂದಿರುವಂತೆ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕವಾಗಿಯೂ ಸದೃಢವಾಗಿದೆ.

೨ ಪದವಿ ಕಾಲೇಜು, ೫ ಪದವಿ ಪೂರ್ವ ಕಾಲೇಜು, ಒಂದು ಸರ್ಕಾರಿ ಐಟಿಐ ಕಾಲೇಜು ಸೇರಿದಂತೆ ೩ ಖಾಸಗಿ ಐಟಿಐ ಕಾಲೇಜುಗಳೂ ಇವೆ. ಚಾರಿತ್ರಿಕವಾದ ನೆಲೆಕೋಟೆಯಿದೆ. ಜಾಮಿಯಾ ಮಸೀದಿ, ಹಾಗೂ ಮಲ್ಲಿಕ್ ರಿಹಾನ್ ದರ್ಗಾಗಳು ಇಲ್ಲಿ ಚಾರಿತ್ರಿಕ ಸಂಗತಿ ಗಳಿಗೆ, ಮೊಗಲ್ ಆಳ್ವಿಕೆಗೆ ಸಾಕ್ಷಿಕಲ್ಲುಗಳಾಗಿ ನಿಂತಿವೆ. ಸಾಕ್ಷಿ ಆಂಜನೇಯ, ದುರ್ಗಮ್ಮ, ಕೊಳದ ಪಲೆ ಈಶ್ವರ, ರೇವಣಸಿದ್ದೇಶ್ವರ, ನಾರಾಯಣಸ್ವಾಮಿ, ಈ ಬಗೆಯ ಹಿಂದು ದೇವಾಲಯಗಳಿವೆ. ೨ ಚರ್ಚುಗಳಿವೆ.

ಜನಾಂಗಿಕವಾಗಿ ಸಿರಾ ನಗರವನ್ನು ಪರಿಗಣಿಸುವುದಾದರೆ, ಮುಸ್ಲಿಂಮರು ದೊಡ್ಡ ಸಮುದಾಯವಾಗಿದ್ದು ಸಮವಾಗಿಯೇ ಕುರುಬರು, ನಾಯಕರು, ಆದಿಕರ್ನಾಟಕ, ಬಣಜಿಗರು ಇದ್ದಾರೆ. ಕುಂಚಿಟಿಗರು, ವೀರಶೈವರು, ಮಡಿವಾಳರು, ಲಾಡ್‌ರು, ಗೊಲ್ಲರು, ಕಮ್ಮಾರರು, ಆದಿದ್ರಾವಿಡ, ಮರಾಠರು, ಕ್ಷೌರಿಕರು, ಬ್ರಾಹ್ಮಣರು, ಮಾರ್ವಾಡಿಗರು, ವೈಶ್ಯರು, ಅಕ್ಕಸಾಲಿಗರ ಕಿರು ಸಮುದಾಯಗಳಾಗಿವೆ. ೩೧ ವಾರ್ಡ್‌ಗಳಲ್ಲಿ ಇಲ್ಲಿನ ಬಡಾವಣೆಯ ಹಂಚಿಕೆಯಾಗಿದೆ. ನಗರಸಭೆಯ ಸ್ವರೂಪ ಪಡೆದಿರುವ ಸಿರಾ ಎಸ್.ಬಿ.ಎಂ., ಕೆನರಾ, ಕರ್ನಾಟಕ, ಇಂಡಿಯನ್ ಓವರ್ಸೀಸ್, ಕಾರ್ಪೋರೇಷನ್ ಬ್ಯಾಂಕುಗಳು, ಹಲವು ಖಾಸಗಿ ಸಹಕಾರ ಸೊಸೈಟಿಯ ಬ್ಯಾಂಕುಗಳೂ ಇವೆ. ದುರ್ಗಮ್ಮ, ಕೋಟೆ ಮಾರಮ್ಮ ಪ್ರಮುಖ ದೇವತೆಗಳಿವೆ.

ಗ್ರಾಮ ಹಬ್ಬವಾಗಿ ಉತ್ಸವ, ಜಾತ್ರೆ ನಡೆಯುತ್ತದೆ. ಬನ್ನಿ ಉತ್ಸವ ಈ ಗ್ರಾಮದ ವಿಶೇಷ ಮಲ್ಲಿಕಾ ರೆಹಾನ್ ಉರುಸ್ ಕೂಡ ಹಿಂದು–ಮುಸ್ಲಿಂಮರ ಭಾವೈಕ್ಯತೆಯ ಪ್ರತೀಕವಾಗಿ ವಿಜೃಂಭಣೆಯಿಂದ ನಡೆಯುತ್ತದೆ. ಸಿರಾದ ನೆಲ ಕೋಟೆ, ಚಾರಿತ್ರಿಕವಾಗಿ ಮಹತ್ವ ಪಡೆದು, ದೇಶೀಶೈಲಿಯಲ್ಲಿ ನಿರ್ಮಾಣವಾಗಿದೆ. ಕಸ್ತೂರಿ ರಂಗಪ್ಪ ನಾಯಕನಿಂದ ಆರಂಭವಾಗಿ ಮೊಗಲ್ ಅರಸರ ತನಕ ಈ ಕೋಟೆಯ ವಿಸ್ತಾರ, ವಾಸ್ತು ನಿರ್ಮಾಣವಾಗಿರುವುದು ಇದರ ವಿಶೇಷವಾಗಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡ, ಮಾಲಿ ಮರಿಯಪ್ಪ, ಕೆಂಚಪ್ಪ, ಕಾಂಗ್ರೆಸ್ ಸಿದ್ದಣ್ಣ, ಮೀಸೆ ನರಸಿಂಹಯ್ಯ, ತಿಮ್ಮಯ್ಯ, ರಂಗನಾಥಪ್ಪ, ಗೋವಿಂದಪ್ಪ, ಈ ಬಗೆಯ ಹಲವು ಸ್ವಾತಂತ್ರ್ಯ ಹೋರಾಟಗಾರರು ಈ ನೆಲದ ವಿಶೇಷ

ಹೇಮಾವತಿ ನದಿಯ ಜಲಾಶಯದ ನೀರು ಗುಬ್ಬಿ ತಾಲ್ಲೂಕಿನ ಪಟ್ಟರಾಹುತನ ಹಳ್ಳಿ, ಹುಂಜನ ಹಳ್ಳ ಎಂಬ ನೈಸರ್ಗಿಕ ಹಳ್ಳದ ಮೂಲಕ ಕಳ್ಳಂಬೆಳ್ಳದ ಕೆರೆ ತುಂಬಿ, ಸಿರಾ ದೊಡ್ಡ ಕೆರೆಯನ್ನು ೨೦೦೬ ರಿಂದ ತುಂಬಿಸುತ್ತಿದೆ. ಇದರಿಂದಾಗಿ ಸಿರಾ ನಗರ ನೀರಿನ ಭೀಕರ ಬವಣೆಯಿಂದ ತಪ್ಪಿದಂತಾಗಿದೆ. ದೊಡ್ಡಕೆರೆ, ಚಿಕ್ಕಕೆರೆ, ಜಾಜಿಕಟ್ಟೆ ಎಂಬ ಮೂರು ಕೆರೆಗಳಿವೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭೆ ಕ್ಷೇತ್ರದ ಕೇಂದ್ರವೂ ಆಗಿದೆ. ನಗರಸಭೆಯ ಕೇಂದ್ರವೂ ಹೌದು. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸಿರಾ ತಾಲ್ಲೂಕಿನ ಸಿರಾ ಕಸಬಾ, ಕಳ್ಳಂಬೆಳ್ಳ ಗೌಡಗೆರೆ, ಹುಲಿಕುಂಟೆ ಸೇರಿದ್ದು, ಬುಕ್ಕಾಪಟ್ಟಣ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭೆ ಹಾಗೂ ತುಮಕೂರು ಲೋಕಸಭಾ ವ್ಯಾಪ್ತಿಗೆ ಸೇರಿದೆ. ಬುಕ್ಕಾಪಟ್ಟಣ ೧೧೪೩೯ (ಮರಡಿಗುಡ್ಡ) ೭೧೪೧೪ ಎಕರೆ, ಸೀಬಿ ೪೫೬ ಎಕರೆ ಪ್ರದೇಶದಲ್ಲಿ ಸಾಮಾಜಿಕ ಅರಣ್ಯ ಪ್ರದೇಶವಿದೆ.

ಸಾಂಸ್ಕೃತಿಕ ಕಾರ್ಯಕ್ರಮ ನಿರ್ವಹಣೆಗಾಗಿ ರಂಗಮಂದಿರ, ಸಮುದಾಯ ಭವನಗಳಿವೆ. ಮೂರು ಚಿತ್ರ ಮಂದಿರಗಳಿವೆ. ಸಿರಾ ನಗರದ ೩೧ ಬಡಾವಣೆ ವಿವರಗಳ ಮಾಹಿತಿ ನೀಡಲಾಗಿದೆ. ಹೀಗೆ ಅಂತರ್ ಧರ್ಮಗಳ ಸಂಸ್ಕೃತಿಗೆ ಮಾದರಿಯಾಗಿದೆ.

**ಅರೇಹಳ್ಳಿ**

ಅರೇಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರ–ಈಶಾನ್ಯ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರ ಸಿರಾ–ಮಧುಗಿರಿ ಮುಖ್ಯ ರಸ್ತೆಯಲ್ಲಿ ಅರೇಹಳ್ಳಿ ಗೇಟಿನಿಂದ ಬಲಕ್ಕೆ ತಿರುಗಿ ೧ ಕಿ.ಮೀ. ದೂರದ ಹಾದಿ. ಸಿರಾ ನಗರದಿಂದ ಒಟ್ಟು ೬ ಕಿ.ಮೀ. ದೂರದಲ್ಲಿದ್ದು ಇದೊಂದು ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೨೩೫.೭ ಹೆಕ್ಟೇರ್ ಆಗಿದೆ. ಗೊಲ್ಲರಹಟ್ಟಿ ಎಂಬ ಒಂದು ಉಪಗ್ರಾಮವು ಈ ಗ್ರಾಮದಿಂದ ಒಂದು ಕಿ.ಮೀ. ದೂರದಲ್ಲಿದೆ.

ನೆಲಮಟ್ಟದ ಮಣ್ಣು ಮೇಲು ಪದರದ ಒಳಗೆ ಅಲ್ಲಲ್ಲಿ ಬಿಳಿ–ಕಪ್ಪು ವರ್ಣದ ಕಲ್ಲುಬಂಡೆ ಈ ಪರಿಸರದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಅರೇಹಳ್ಳಿ–ಸಿರಾ ರಸ್ತೆಯ ಬಲಬದಿಗೆ ಈ ತರಹದ ಮೂರ್‍ನಾಲ್ಕು ಬಂಡೆಗಳು ಇಂದಿಗೂ ಕಂಡುಬರುತ್ತವೆ. ಈ ಪ್ರಾಕೃತಿಕ ಕಾರಣಗಳಿಂದಲೇ ಈ ಗ್ರಾಮಕ್ಕೆ ಅನ್ವರ್ಥವಾಗಿ ಅರೆ> ಬಂಡೆಯ ಹಳ್ಳಿ – ಅರೇಹಳ್ಳಿ ಎಂದು ಕರೆಯಲಾಗಿದೆ.

ಕೆಂಪುಮಿಶ್ರಿತ ಮರಳು ಮಣ್ಣು ಗ್ರಾಮದ ಪೂರ್ವಕ್ಕೆ ತಗ್ಗಿನ ಪ್ರದೇಶ, ಪಶ್ಚಿಮಕ್ಕೆ ದಿಬ್ಬ ಹೊಂದಿರುವ ಇಲ್ಲಿ ಖುಷ್ಕಿ ಭೂಮಿಯೇ ಹೆಚ್ಚು. ಚಿಕ್ಕ ಚಿಕ್ಕ ಗಿಡ, ತೋಟದ ಸಾಧಾರಣ ವಾತಾವರಣ. ಹಳ್ಳ, ದಿಬ್ಬದ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕಾಡುಹಂದಿ, ಮುಂಗುಸಿ, ಕಾಡುಬೆಕ್ಕು, ಉಡದಂತಹ ಪ್ರಾಣಿಗಳು ಕಂಡುಬರುತ್ತವೆ. ಸಾಕುಪ್ರಾಣಿಗಳಾಗಿ ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತು ಹಾಗೂ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕುತ್ತಾರೆ. ಸಾಕು ನಾಯಿಗಳೂ ಗ್ರಾಮದಲ್ಲಿವೆ. ಈ ಪರಿಸರದಲ್ಲಿ ಕಾಡುಪಕ್ಷಿಯಾಗಿ ಕೋಗಿಲೆ, ಕಾಗೆ, ಗೊರವಂಕ, ಬೆಳವ, ಗೀಜಗ, ಗಿಡಗ, ಮರಕುಟಿಕ, ಕೌಜಲಗ, ಕೊಕ್ಕರೆ, ಗುಬ್ಬಚ್ಚಿ, ಗೂಬೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಕೋಳಿಯನ್ನು ಮಾಂಸ, ಮೊಟ್ಟೆ ಹಾಗೂ ಸಂತಾನೋತ್ಪತ್ತಿಗಾಗಿ ಸಾಕಲಾಗುತ್ತದೆ. ಈ ಪರಿಸರದಲ್ಲಿ ನಾಗರಹಾವು, ಹೆಬ್ಬಾವು, ಕೇರೇಹಾವು, ಚೇಳು, ಮಂಡರಗಪ್ಪೆ ಮೊದಲಾದ ವಿಷಪೂರಿತ ಸಸ್ತನಿಗಳಿವೆ.

ವಾರ್ಷಿಕ ಸರಾಸರಿ ೪೮೧.೪ ಮಿಮೀ ಮಳೆ ಬೀಳುವ ಇಲ್ಲಿ ಬಿಸಿಲು ಅಧಿಕ. ೩೭–೩೧೨ ಡಿಗ್ರಿ ಬಿಸಿಲಿನ ತಾಪಮಾನವಿದೆ. ಚಳಿ ೧೨ ಡಿಗ್ರಿ ಸಹಜವಾಗಿರುತ್ತದೆ. ಈ ಗ್ರಾಮದಲ್ಲಿ ೪ ತೆರೆದ ಸೇದುವ ಬಾವಿಗಳಿದ್ದು ಒಣಗಿವೆ. ತೋಟಗಾರಿಕೆ, ಕೃಷಿಗಾಗಿ ೩೯ ಬೋರ್‌ವೆಲ್‌ಗಳಿವೆ. ಕುಡಿಯಲು ಗ್ರಾಮಪಂಚಾಯ್ತಿಯ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತದೆ. ೪ ಸಿಸ್ಟರ್ನ್‌ಗಳಿದ್ದು ೨ ಕೈಪಂಪುಗಳಿವೆ.

ಕುಂಚಿಟಿಗ ಜನಾಂಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಆದಿದ್ರಾವಿಡ, ನಾಯಕ ಹಾಗೂ ಉಪ್ಪಾರ ಜನಾಂಗ ಕಿರು ಸಮುದಾಯವಾಗಿದೆ. ಕನ್ನಡ ಭಾಷೆ ಇಲ್ಲಿನ ಮನೆಮಾತಾಗಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಗ್ರಾಮದಲ್ಲಿ ವಿವಿಧ ಪ್ರಕಾರಗಳಾದ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಹಾಗೂ ಶೀಟಿನ ಒಟ್ಟು ೧೧೮ ಮನೆಗಳಿವೆ. ಈ ಮನೆಗಳಲ್ಲಿ ಕೆಲವು ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೨೨ ಫಲಾನುಭವಿಗಳಿದ್ದಾರೆ. ಗ್ರಾಮದ ೪೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ರಾಗಿಮುದ್ದೆ, ಅನ್ನ ಈ ಗ್ರಾಮದ ಮುಖ್ಯ ಆಹಾರ. ಉಳಿದಂತೆ ರೊಟ್ಟಿ, ಅನ್ನದ ಉತ್ಪನ್ನಗಳಾದ ಚಿತ್ರಾನ್ನ, ದೋಸೆ, ಇಡ್ಲಿಯನ್ನು ಬಳಸುವವರಿದ್ದಾರೆಬಳಸಲಾಗುತ್ತದೆ. ಬಾಡೂಟ, ಹೋಳಿಗೆ, ಪಾಯಸದ ವಿಶೇಷ ಊಟವು ಸಾಂದರ್ಭಿಕ ವಿಶೇಷ ಭೋಜನವಾಗಿರುತ್ತದೆ. ೬೧೦ ಜನಸಂಖ್ಯೆ ಇದೆ.

ಆರು ಸಾಂಪ್ರದಾಯಿಕ ವಾಹನವಾದ ಎತ್ತಿನ ಬಂಡಿಯನ್ನು ಬಳಸಿದರೆ ಉಳಿದಂತೆ ಟ್ರ್ಯಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ಆಧುನಿಕ ವಾಹನಗಳನ್ನು ಬಳಸುತ್ತಾರೆ.

ಪ್ರಧಾನವಾಗಿ ಶೇಂಗಾ ಬೆಳೆಯಿದ್ದು ಆಹಾರ ಬೆಳೆಗಳಾಗಿ ರಾಗಿ, ಭತ್ತ, ಜೋಳ, ತೊಗರಿ, ಹುರುಳಿ ಬೆಳೆಯುತ್ತಾರೆ. ಹತ್ತಿ, ಸೂರ್ಯಕಾಂತಿ ಬೆಳೆಯೂ ಇದೆ. ತೋಟಗಾರಿಕೆ ಇರುವವರು ತೆಂಗು, ಅಡಿಕೆ ಬೆಳೆಯುತ್ತಾರೆ. ಶೇಂಗಾ, ಹುಣಸೆಹಣ್ಣು, ಹೊಂಗೆಬೀಜ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಒಂದು ಮಿನಿ ಹಾಲಿನ ಕೇಂದ್ರವಿದ್ದು ಸರಾಸರಿ ೧೮೦ ಲೀ. ಹಾಲು ಸಂಗ್ರಹವಾಗುತ್ತಿದೆ. ಬ್ಯಾಂಕ್ ಉದ್ಯೋಗಿ ವಸಂತ್, ಸೊಸೈಟಿ ಮ್ಯಾನೇಜರ್ ಸೇರಿದಂತೆ ೪ ಜನ ಸರ್ಕಾರಿ ನೌಕರರಿದ್ದು ಡಾ.ಬಿ.ಪಿ. ವಿನಯ ಹಾಗೂ ಡಾ.ಶಿಲ್ಪ ವಿನಯ್ ಖಾಸಗಿ ವೈದ್ಯರಿದ್ದಾರೆ. ಇವರು ಸಿರಾ ನಗರದಲ್ಲಿ ಸ್ವಾತಿ ಆಸ್ಪತ್ರೆ ನಡೆಸುತ್ತಿದ್ದಾರೆ. ಇವರ ತಂದೆ ಡಾ.ಬಿ.ಪುಟ್ಟಕಾಮಯ್ಯ ಸಿರಾ ಕ್ಷೇತ್ರದಲ್ಲಿ ೧೯೭೨–೭೭ ರವರೆಗೆ ಶಾಸಕರಾಗಿದ್ದರು. ಸಿರಾದ ಶೈಕ್ಷಣಿಕ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡಿದ ಹಿರಿಮೆಯು ಬಿ.ಪುಟ್ಟಕಾಮಯ್ಯ ಅವರಿಗೆ ಸಲ್ಲುತ್ತದೆ. ಇದೇ ಗ್ರಾಮದ ಮಂಡಿ ಬೊಪ್ಪಣ್ಣ, ಅವರ ಮೊಮ್ಮಗ ಆರ್. ರಾಘವೇಂದ್ರ ಸ್ಥಳೀಯ ರಾಜಕಾರಣದಲ್ಲಿ ಗುರುತಿಸಿಕೊಂಡಿದ್ದಾರೆ.

ಗ್ರಾಮದಲ್ಲಿ ಗೃಹಕೈಗಾರಿಕೆಯಾಗಿ ಬೀಡಿ ಸುತ್ತುವುದು, ಊಟದ ಎಲೆ ತಯಾರಿಸುವುದು, ಟೈಲರಿಂಗ್ ಇವು ಮಹಿಳೆಯರ ಸಬಲೀಕರಣಕ್ಕೆ ಪ್ರೇರಕವಾಗಿ ತೊಡಗಿಸಿಕೊಂಡಿದ್ದಾರೆ. ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಯಲಿಯೂರು ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ರಾಜಕೀಯ, ಸಮಾಜಸೇವೆಗೆ ಗಣನೀಯ ಕೊಡುಗೆ ನೀಡಿರುವ ಈ ಗ್ರಾಮದ ಪರಂಪರೆ ಹಾಗೆಯೇ ಮುಂದುವರಿದಿದೆ. ಅರೇಹಳ್ಳಿ ರಮೇಶ್ ಬಿ.ಇ. ಪದವೀಧರರಾಗಿದ್ದು ಪ್ರಸ್ತುತ ಜಿಲ್ಲಾ ಪಂಚಾಯ್ತಿ ಸದಸ್ಯರಾಗಿ, ಸ್ಥಳೀಯ ಕಾಲೇಜುಗಳ ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾಗಿ, ಸಾಂಸ್ಕೃತಿಕ ಸಂಸ್ಥೆಗಳ ಗೌರವ ಸಲಹೆಗಾರರಾಗಿ ಪ್ರಗತಿಪರ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಸಿರಾ, ಮಧುಗಿರಿ, ರತ್ನಸಂದ್ರ, ತರೂರು ಮಾರ್ಗ ಹಾಗೂ ಕಾಳಾಪುರ–ಚಿಕ್ಕನಹಳ್ಳಿ ಮಾರ್ಗವಾಗಿ ತುಮಕೂರು ರಸ್ತೆಗೆ ಸಂಪರ್ಕ ರಸ್ತೆ ಹೊಂದಿದೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳಾ ಸಬಲೀಕರಣಕ್ಕೆ ಪ್ರೇರಕವಾಗಿವೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ ಇದ್ದು ಶಾಲೆಯಲ್ಲಿ ೧೦೩ ಮಕ್ಕಳಿದ್ದು ೪ ಜನ ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಕಾಂಪೌಂಡ್, ಪುಸ್ತಕ ಹಾಗೂ ಸಮವಸ್ತ್ರದ ಸೌಲಭ್ಯಗಳಿವೆ. ಒಟ್ಟು ೬೪.೮% ಸಾಕ್ಷರತೆ ಇದ್ದು ಪುರುಷರು ೭೮% ಪ್ರಮಾಣವಾದರೆ ಮಹಿಳೆಯರು ೫೦.೪% ರಷ್ಟಿದೆ.

ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೪ ಗೂಡಂಗಡಿ, ೨ ಟೀ ಅಂಗಡಿಗಳಿವೆ.

ಗ್ರಾಮದಲ್ಲಿ ೨ ವೀರಗಲ್ಲುಗಳಿದ್ದು ಗ್ರಾಮದ ಕರಿಯಮ್ಮ ದೇವಾಲಯದ ಬಳಿ ನಿಲ್ಲಿಸಲಾಗಿದೆ. ಮತ್ತೊಂದು ಆಲದ ಮರದ ಸಮೀಪದಲ್ಲಿದ್ದು ಈ ಎರಡೂ ಕಲ್ಲುಗಳು ೧೪–೧೬ ನೇ ಶತಮಾನದ ನಡುವೆ ರಚನೆಗೊಂಡಿವೆ. ಈ ಎರಡೂ ವೀರಗಲ್ಲುಗಳು ಉತ್ತಮ ಕಲಾಕೃತಿಯಾಗಿದ್ದು ಗತಕಾಲದ ಆಭರಣ, ಆಯುಧ, ಸೂರ್ಯ–ಚಂದ್ರ ಇವುಗಳ ಜೊತೆಗೆ ಯುದ್ಧನಿರತ ಆಯುಧ, ಕುಶಲ ಕೆತ್ತನೆಗಳಿಂದ ಕೂಡಿದೆ. ಗ್ರಾಮಸ್ಥರು ದಸರಾ ಸಂದರ್ಭದಲ್ಲಿ ಈ ವೀರಗಲ್ಲಿಗೆ ಪೂಜಿಸುವ ಸಂಪ್ರದಾಯವಿದೆ. ಗ್ರಾಮದ ನಡುವೆ ಅರಳಿಕಟ್ಟೆ, ಅದರ ಸನಿಹದಲ್ಲಿಯೇ ಆಂಜನೇಯ, ರಂಗನಾಥ ಮತ್ತು ಮೈಲಾರಲಿಂಗ ದೇವಸ್ಥಾನಗಳಿವೆ. ಕರಿಯಮ್ಮ ಈ ಗ್ರಾಮದ ಅಧಿದೇವತೆಯಾಗಿದ್ದು ಮಾರ್ಚ್ ತಿಂಗಳಲ್ಲಿ ೩ ದಿನಗಳ ಕಾಲ ಜಾತ್ರೆ, ಉತ್ಸವ ಏರ್ಪಡುತ್ತದೆ. ಆ ಸಂದರ್ಭದಲ್ಲಿ ಬಾನ, ಬ್ಯಾಟೆ ಸಂಪ್ರದಾಯ, ಹರಕೆಗಳಿವೆ. ಉಳಿದಂತೆ ದಸರಾ ಸಂದರ್ಭದಲ್ಲಿ ಗ್ರಾಮದ ಎಲ್ಲ ದೇವರುಗಳನ್ನು ಗ್ರಾಮದ ಹೊರವಲಯದ ಆಲದ ಮರದ ಬಳಿ ಕರೆದುಕೊಂಡು ಗದ್ದುಗೆ ಮಾಡಿ, ಬನ್ನಿ ಮುಡಿಸುವ ಸಂಪ್ರದಾಯವಿದೆ. ಇಲ್ಲಿ ಕುಲಾಚಾರ, ಧಾರ್ಮಿಕ ಪರಂಪರೆಯಂತೆ ಎಲ್ಲಾ ವರ್ಗದವರಿಗೂ ಸಮಾನ ಪದವಿ, ಗೌರವಗಳ ಅನುಸಾರ ದೇವರ ಉತ್ಸವ, ವೀಳ್ಯ ತಿದ್ದುವ ಸಂಪ್ರದಾಯವಿದೆ.

ಈ ಗ್ರಾಮದ ಅಜ್ಜಪ್ಪ ದೇವಸ್ಥಾನದ ಮುಂಭಾಗದಲ್ಲಿ ೧೩ ಸಾಲಿನ ಒಂದು ಕನ್ನಡ ಶಾಸನವಿದ್ದು ಅದು ವಿಜಯನಗರದ ಅರಸರ ಕಾಲದ ೧೫೩೪ ರ ಶಾಸನವಾಗಿದೆ. ಇದೊಂದು ದಾನಶಾಸನವಾಗಿದ್ದು ಅಸ್ಪಷ್ಟವಾಗಿದೆ. ಅಚ್ಯುತರಾಯ, ಚೆನ್ನಪ್ಪನಾಯಕ ಎಂಬುವರರಿಗೆ ದತ್ತಿ ನೀಡಿದ ಅಂಶ ಉಲ್ಲೇಖ ಪ್ರಕಟವಾಗಿದ್ದು ಕೆಂಚಪ್ಪ ಹಾಗೂ ತಿಮ್ಮಪ್ಪ ಎಂಬ ಎರಡು ಹೆಸರು ೧೨ ಮತ್ತು ೧೩ನೇ ಸಾಲಿನಲ್ಲಿ ಕಂಡುಬರುತ್ತಿದ್ದು ಮುಂದೆ ಮಾಹಿತಿ ಅಲಭ್ಯವಾಗಿದೆ. ಜೊತೆಗೆ ಸಿರಾ ಶಾಸನ ೭೩ ರ ಶಾಸನದಲ್ಲಿ ಅರೆಹಳ್ಳಿಯ ರಂಗನಾಥಸ್ವಾಮಿಗೆ ಪೂಜೆ ಮತ್ತಿತರ ವೆಚ್ಚಕ್ಕಾಗಿ ಕೆಲ ಗ್ರಾಮಗಳನ್ನು ದತ್ತಿ ಹಾಕಿಸಿಕೊಟ್ಟ ಸಂಗತಿ ಅಸ್ಪಷ್ಟವಾಗಿ ಪ್ರಕಟವಾಗಿದ್ದು ಅದರಲ್ಲಿ ಅರೇಹಳ್ಳಿಯ ಉಲ್ಲೇಖವಿದೆ.

ಧಾರ್ಮಿಕವಾಗಿ ಹಿಂದೂ ಪರಂಪರೆಯ ಯುಗಾದಿ. ದೀಪಾವಳಿ, ಶಿವರಾತ್ರಿ, ಸಂಕ್ರಾಂತಿ, ನವಮಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕೊಂತೆಮ್ಮ, ಗೌರಮ್ಮನ ವಿಶಿಷ್ಟ ಆಚರಣೆಯೂ ಹೆಣ್ಣುಮಕ್ಕಳ ವಿಶಿಷ್ಟ ಆಚರಣೆಯಾಗಿದೆ. ಜಾನಪದ ಸಂಗೀತ ಕಲಾವಿದರಾದ ನರಸಮ್ಮ, ಈರಮ್ಮ, ಮಲ್ಲಾಜಮ್ಮ, ಹನುಮಕ್ಕ ಸೋಬಾನೆ ಕಲಾವಿದರಾಗಿ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ನರಸಿಂಹಯ್ಯ, ಕಂಬಣ್ಣ, ದೊಡ್ಡಯ್ಯ ಇತರೆ ಜನಪದ ಕೋಲಾಟ ಹಾಡುಗಾರರಾಗಿ ಸ್ಥಳೀಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವ ಕಲಾವಿದರಾಗಿದ್ದಾರೆ.

## ಅರೇಹಳ್ಳಿ ಗೊಲ್ಲರಹಟ್ಟಿ

ಅರೇಹಳ್ಳಿ ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೭ ಕಿ.ಮೀ ದೂರದಲ್ಲಿದ್ದು ಇದೇ ಅರೇಹಳ್ಳಿ ಮುಖ್ಯ ಗ್ರಾಮಕ್ಕೆ ಉಪಗ್ರಾಮವಾಗಿದೆ. ಇದು ಮುಖ್ಯಗ್ರಾಮ ಅರೇಹಳ್ಳಿಯ ಭೌಗೋಳಿಕ ವಿಸ್ತೀರ್ಣ ೨೩೫.೬೭ ರೊಂದಿಗೆ ಹಂಚಿಕೆಯಾಗಿದೆ.

ಕೆಂಪುಮಿಶ್ರಿತ ಮರಳು ಮಣ್ಣನ್ನನು ಹೊಂದಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿಗಳು ಕಂಡುಬಂದರೆ ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆಯನ್ನು ಸಾಕಿದ್ದಾರೆ. ಕೋಳಿ ಸಾಕುಪಕ್ಷಿಯಾದರೆ ಗಿಳಿ, ಗೀಜುಗ, ಗೊರವಂಕ, ಗೂಬೆ, ಹದ್ದು, ಗರುಡ, ಕೋಗಿಲೆ, ಕಾಗೆ ಕಾಡುಪಕ್ಷಿಯಾಗಿವೆ. ವಾರ್ಷಿಕ ಸರಾಸರಿ ೪೮೧.೪ ಮಿಮೀ ಮಳೆ ಬೀಳುತ್ತಿದ್ದು ಉಷ್ಣಾಂಶ ೩೭ ಡಿಗ್ರಿ ಸೆಂ. ಇದ್ದರೆ ಚಳಿ ೧೨ ಡಿಗ್ರಿ ಸೆಂ. ಇರುತ್ತದೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ಒಂದು ಕಿರು ಟ್ಯಾಂಕ್ ಇದ್ದು ಒಂದು ಕೈಪಂಪು ಇದೆ.

ಕಾಡುಗೊಲ್ಲರ ೧೭ ಮನೆಗಳಿದ್ದು ೭೮ ಜನಸಂಖ್ಯೆ ಹೊಂದಿದ್ದಾರೆ. ಶೀಟಿನ, ಕಾಂಕ್ರೀಟ್ ಹಾಗೂ ೩ ಗುಡಿಸಲು ಮನೆಗಳಿವೆ. ೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ವಸತಿ ಯೋಜನೆಯಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೬ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಉಪ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನ ಆಧುನಿಕ ವಾಹನಗಳಾದ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಅಲಸಂದೆ, ತೊಗರಿ ಆಹಾರ ಬೆಳೆಗಳು. ಶೇಂಗಾ, ಕುರಿ, ಮೇಕೆ ವ್ಯಾಪಾರವಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಯಲಿಯೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಶಾಲೆಗೆ ಮುಖ್ಯ ಗ್ರಾಮ ಅರೇಹಳ್ಳಿಗೆ ಬರಬೇಕಾಗಿದ್ದು ಗ್ರಾಮದ ಸಾಕ್ಷರತಾ ಪ್ರಮಾಣ ೬೪.೮ ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಚಿತ್ರದೇವರ ತಾಳಿ, ಕರಿಯಮ್ಮನ ಗುಡಿ ಇದ್ದು ದೀಪಾವಳಿ ಸಂದರ್ಭದಲ್ಲಿ ದೀಪ ಏರಿಸುವ, ಹಿರಿಯ ಹಾಲು ಮೀಸಲು ಹಬ್ಬ ಮಾಡುತ್ತಾರೆ. ಕರಿಯಮ್ಮನ ಜಾತ್ರೆ ಏಪ್ರಿಲ್ ತಿಂಗಳಲ್ಲಿ ಊರ ಹಬ್ಬವಾಗಿ ನಡೆದು ಬಲಿ, ಆರತಿ, ಬಾನ ಹರಕೆ ಸಂಪ್ರದಾಯವಿರುತ್ತದೆ. ಯುಗಾದಿ, ದೀಪಾವಳಿ, ಗೌರಿ ಹಾಗೂ ಶಿವರಾತ್ರಿ, ಮಹಾನವಮಿ ಹಬ್ಬಗಳನ್ನು ಆಚರಿಸುತ್ತಾರೆ.

## ಅಜ್ಜಯ್ಯನಪಾಳ್ಯ

ಅಜ್ಜಯ್ಯನಪಾಳ್ಯ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೬ ಕಿಮೀ ದೂರದಲ್ಲಿದ್ದು ಮಾನಂಗಿ ಗ್ರಾಮದ ಮಜರೆ ಗ್ರಾಮವಾಗಿದೆ. ೪೯.೨ ಹೆಕ್ಟೇರ್ ಒಟ್ಟು ಭೌಗೋಳಿಕ ವಿಸ್ತೀರ್ಣವನ್ನು ಹೊಂದಿರುವ ಈ ಗ್ರಾಮ ಗ್ರಾಮದ ಹಿರಿಯ ವ್ಯಕ್ತಿಯ ಹೆಸರಲ್ಲೇ ಅಜ್ಜಯ್ಯ, ತಾತಯ್ಯ, ತಾತ ಎಂಬ ಹೆಸರಲ್ಲಿ ತಮ್ಮ ನಿವೇಶನ ಮತ್ತು ನಂತರದ ದಿನಗಳಲ್ಲಿ ಮನೆಗಳು ಬೆಳೆದುಬಂದು ಇಂದು ೩೨ ಮನೆಗಳಾಗಿವೆ. ಮರಳುಮಿಶ್ರಿತ ಕೆಂಪು ಭೂಮಿ ಹೊಂದಿದ್ದು ಶೇಂಗಾ, ಹತ್ತಿ ಬೆಳೆಯನ್ನು ಹೆಚ್ಚು ಬೆಳೆಯುತ್ತಾರೆ. ಈ ಪರಿಸರದಲ್ಲಿ ಮೊಲ, ಉಡ, ಮುಂಗುಸಿ, ಕಾಡುಹಂದಿ ಮೊದಲಾದ ಕಾಡುಪ್ರಾಣಿಗಳು ಕಂಡುಬಂದರೆ ಗ್ರಾಮದಲ್ಲಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ. ಈ ಪರಿಸರದಲ್ಲಿ ಪಕ್ಷಿಗಳಾದ ಕೋಗಿಲೆ, ಕಾಗೆ, ಹದ್ದು, ಗರುಡ, ಗುಬ್ಬಚ್ಚಿ, ಗೂಬೆ, ಕೌಜುಗ, ಕೊಕ್ಕರೆ ಕಂಡುಬರುತ್ತವೆ. ವಾರ್ಷಿಕ ಸರಾಸರಿ ಮಳೆ ೬೦೨ ಮಿಮೀ ಬೀಳುತ್ತಿದ್ದು ಕೆಬ್ಬೆ ನೆಲವಾದ್ದರಿಂದ ನೀರಿಗೆ ಅಭಾವವಿದೆ. ಚಳಿ ೧೨ ಡಿಗ್ರಿ ಸೆಂ ಇದ್ದರೆ ಬಿಸಿಲು ೩೮ ಡಿಗ್ರಿ ಸೆಂ. ಸಾಮಾನ್ಯವಾಗಿರುತ್ತದೆ. ಕೃಷಿ ಮೂಲವಾಗಿ ೧೩ ಕೊಳವೆ ಬಾವಿಗಳನ್ನು ಆಶ್ರಯಿಸಿದ್ದಾರೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರನ್ನು ಒದಗಿಸಲಾಗುತ್ತದೆ. ೧ ಕೈಪಂಪು ಇದೆ.

ಕುಂಚಿಟಿಗ ದೊಡ್ಡ ಸಮುದಾಯವಾಗಿದ್ದು ಆದಿದ್ರಾವಿಡ ಸಣ್ಣ ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ಕಾಂಕ್ರೀಟ್, ಹೆಂಚಿನ, ಶೀಟಿನ ೩೨ ಮನೆಗಳಿದ್ದು ಆಶ್ರಯ, ಜನತಾ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಯ ೬ ಫಲಾನುಭವಿಗಳಿದ್ದಾರೆ. ಉಚಿತ ವಿದ್ಯುತ್ ಸೌಲಭ್ಯವನ್ನು ಭಾಗ್ಯಜ್ಯೋತಿ ಯೋಜನೆಯಲ್ಲಿ ಪಡೆದಿದ್ದಾರೆ. ೬ ಮನೆಗಳಲ್ಲಿ ಶೌಚಾಲಯ ಬಳಸಲಾಗುತ್ತಿದ್ದು ಈ ಗ್ರಾಮದ ಒಟ್ಟು ಜನಸಂಖ್ಯೆ ೧೪೪ ಆಗಿರುತ್ತದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನವಾದ ೧ ಟ್ರ್ಯಕ್ಟರ್, ಮಿನಿ ಟೆಂಪೋ ಬಳಕೆಯಲ್ಲಿದೆ. ಗ್ರಾಮದ ಮುಖ್ಯ ಬೆಳೆ ಶೇಂಗಾ ಆಗಿದ್ದು ರಾಗಿ, ಅಲಸಂದಿ, ತೊಗರಿಯನ್ನು ಆಹಾರ ಬೆಳೆಗಳಾಗಿ ಬೆಳೆಯುತ್ತಾರೆ. ಹತ್ತಿ, ಸೂರ್ಯಕಾಂತಿ, ತೆಂಗು ವಾಣಿಜ್ಯ ಬೆಳೆಗಳಾಗಿವೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ ಹಾಗೂ ಬೂವನಹಳ್ಳಿ ಗ್ರಾಮಪಂಚಾಯ್ತಿಗೆ ಸೇರಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಇಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೭ ಮಕ್ಕಳು ಒಬ್ಬರು ಶಿಕ್ಷಕಿ

ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೬% ಇದ್ದು ಪುರುಷರು ೬೯%, ಮಹಿಳೆಯರು ೪೨% ಆಗಿರುತ್ತದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ ಫಲಾನುಭವಿಗಳಿದ್ದು ೨ ಪೆಟ್ಟಿಗೆ ಅಂಗಡಿಗಳಿವೆ. ಗಣೇಶ ಹಾಗೂ ಮಾರಮ್ಮನ ಪೌಳಿಯಿದ್ದು ಮಾರಮ್ಮನ ಊರ ಹಬ್ಬವನ್ನು ಆಚರಿಸುತ್ತಾರೆ. ಆರತಿ, ಬ್ಯಾಟೆ ಮೊದಲಾದ ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಗೌರಿ-ಗಣೇಶ, ದೀಪಾವಳಿ, ಮಹಾನವಮಿ, ಯುಗಾದಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸಿರಾ, ಚಿತ್ರದುರ್ಗ ಕಡೆ ಉತ್ತಮ ರಸ್ತೆ ಸಂಪರ್ಕ ಹೊಂದಿದೆ.

## ಅನುಪನಹಳ್ಳಿ

ಅನುಪನಹಳ್ಳಿ ಇದು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೮ ಕಿ.ಮೀ ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದೆ. ಸಿರಾ ಲಿಂಗದಹಳ್ಳಿ, ಹೊನ್ನಗೊಂಡನಹಳ್ಳಿ ಮಾರ್ಗದಲ್ಲಿ ಅನುಪನಹಳ್ಳಿ ಇದೆ. ಇದರ ಭೌಗೋಳಿಕ ವ್ಯಾಪ್ತಿ ೨೧೮ ಹೆಕ್ಟೇರ್ ಆಗಿದೆ. ಇದಕ್ಕೆ ಅನುಪನಹಳ್ಳಿ ಲಂಬಾಣಿ ತಾಂಡ ಎಂಬ ಉಪಗ್ರಾಮವಿದೆ. ದಿಣ್ಣೆ ಪ್ರದೇಶ. 'ಅನುಪ' ಎಂಬ ವ್ಯಕ್ತಿಯ ಹೆಸರಲ್ಲಿ ಈ ಗ್ರಾಮದ ರಚನೆಯಾಗಿದೆ. ಅನುಪ ಶಬ್ದಕ್ಕೆ ವಿಷ್ಣು ಎಂಬ ಅರ್ಥವೂ ಇದ್ದು ತಿರುಪತಿಯ ತಿಮ್ಮಪ್ಪನ ಒಕ್ಕಲು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಅನುಪ ಎಂಬ ಹೆಸರನ್ನೇ ವಿಷ್ಣುವಿನ ಅರ್ಥದಲ್ಲಿ ಕರೆದಿರಬಹುದೆಂದು ನರಸಿಂಹಮೂರ್ತಿ ಅಭಿಪ್ರಾಯಪಡುತ್ತಾರೆ. ಬಯಲು, ಬಿಸಿಲಿನ ಈ ಗ್ರಾಮ ಮರಳುಮಿಶ್ರಿತ ಕೆಂಪುಮಣ್ಣನ್ನು ಹೊಂದಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಹಂದಿ, ಜಿಂಕೆ, ಮುಂಗುಸಿ, ಬಾರ್‌ಬೆಕ್ಕು ಕಂಡುಬರುತ್ತದೆ. ಗ್ರಾಮದಲ್ಲಿ ಕುರಿ, ಮೇಕೆ ಮತ್ತು ಸೀಮೆಹಸುಗಳನ್ನು ಸಾಕಿದ್ದಾರೆ. ಕೋಳಿ ಸಾಕುಪಕ್ಷಿಯಾಗಿದೆ. ವಾಡಿಕೆ ಮಳೆ ೪೬೦ ಮಿಮೀ ಇದ್ದು ಉಷ್ಣಾಂಶ ೩೧೨ ಡಿಗ್ರಿ ಸೆಂ. ಹಾಗೂ ಚಳಿ ೧೨ ಡಿಗ್ರಿ ಸೆಂ. ಆಗಿದೆ.

ಈ ಗ್ರಾಮಕ್ಕೆ ನಿಸರ್ಗದತ್ತ ಮಳೆಯ ಹೊರತು ಇತರ ಯಾವುದೇ ನೀರಾವರಿ ಸೌಕರ್ಯಗಳಿಲ್ಲ. ವಿವಿಧ ಯೋಜನೆಗಳು ಹಾಗೂ ಸ್ವಂತ ೩೦ ಕೊಳವೆ ಬಾವಿ ಕೊರೆಸಿ ಕೃಷಿಗೆ, ಉಪಬೆಳೆಗೆ ನೀರನ್ನು ಬಳಸಿಕೊಳ್ಳಲಾಗುತ್ತಿದೆ. ಕುಡಿಯಲು ಗ್ರಾಮಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಕೆಯಾಗುತ್ತಿದ್ದು ೬ ಸಿಸ್ಟರ್ನ್‌ಗಳಿದ್ದು ೨ ಕೈಪಂಪುಗಳಿವೆ.

ಕುಂಚಿಟಿಗ ಇಲ್ಲಿನ ದೊಡ್ಡ ಸಮುದಾಯವಾಗಿದ್ದು ಈಡಿಗ, ಆದಿಕರ್ನಾಟಕ, ನಾಯಕ, ಕ್ಷೌರಿಕ ಕಿರು ಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೮೦ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದ ಮನೆಗಳಾಗಿವೆ. ಇವುಗಳು ಆಶ್ರಯ, ಜನತಾ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆಗಳ ಫಲಾನುಭವಿಗಳಿಂದ ೧೦ ಮನೆಗಳು ರಚನೆಯಾಗಿವೆ. ಗ್ರಾಮದಲ್ಲಿ ೪೦ ಮನೆಗಳು, ೧೦ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟೆಂಪೋ, ಟ್ರ್ಯಾಕ್ಟರ್‌ಗಳಿವೆ. ದ್ವಿಚಕ್ರ ವಾಹನಗಳೂ ಇವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ತೊಗರಿ, ಜೋಳ, ಹುರುಳಿ ಆಹಾರ ಬೆಳೆಗಳು. ಸೂರ್ಯಕಾಂತಿ, ರೇಷ್ಮೆ, ತೆಂಗು, ಅಡಿಕೆ ತೋಟದ ಬೆಳೆಗಳು. ಒಂದು ಹಾಲಿನ ಡೈರಿಯಿದ್ದು ಸರಾಸರಿ ೧೮೦-೨೦೦ ಲೀ. ಹಾಲನ್ನು ಸಂಗ್ರಹಿಸಲಾಗುತ್ತಿದೆ.

ಶಿಕ್ಷಕರು, ಸಾರಿಗೆ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಹೆಂಗಸರು ಬೀಡಿ ಸುತ್ತುವುದು, ಹೂ ಕಟ್ಟುವುದು ಉಪಕಸುಬಾಗಿಸಿ ಕೊಂಡಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕ್ಷೇತ್ರಗಳನ್ನು ಹೊಂದಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಗಳನ್ನು ಹೊಂದಿದೆ. ಈ ಗ್ರಾಮದ ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿವೆ. ಒಂದು ಅಂಗನವಾಡಿ ಕೇಂದ್ರ, ಒಂದು ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಶಾಲೆಯಲ್ಲಿ ೨೮ ಮಕ್ಕಳಿದ್ದಾರೆ. ೨ ಶಿಕ್ಷಕರಿದ್ದು ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ಸೌಲಭ್ಯಗಳಿವೆ. ಶೇ.೫೧ ರಷ್ಟು ಸಾಕ್ಷರತಾ ಪ್ರಮಾಣವಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೪ ಪೆಟ್ಟಿಗೆ ಅಂಗಡಿಗಳಿವೆ. ಯಲ್ಲಮ್ಮ, ಲಕ್ಷ್ಮಿ, ಮುತ್ತುರಾಯ ದೇವಾಲಯಗಳಿವೆ. ಯಲ್ಲಮ್ಮನ ಊರಹಬ್ಬ ಆಚರಿಸಿ ಬಲಿ, ಆರತಿ, ಬಾನಗಳ ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ದಸರಾ, ಗೌರಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಅನುಪನಹಳ್ಳಿ ತಾಂಡ

ಅನುಪನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೯ ಕಿ.ಮೀ. ದೂರದಲ್ಲಿದೆ. ಇದು ಅನುಪನಹಳ್ಳಿಗೆ ಸೇರಿದ ಜೋಡಿ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೧೦೨.೦ ಹೆಕ್ಟೇರ್ ಇದ್ದು ಪೂರ್ಣ ಲಂಬಾಣಿ ಬುಡಕಟ್ಟು ಗ್ರಾಮವಾಗಿದೆ. ಅನುಪನಹಳ್ಳಿಗೆ ಸೇರಿದ ಹಳ್ಳಿಯಾದ್ದರಿಂದ ಅದೇ ಹೆಸರಿನಲ್ಲಿ ತಾಂಡ ರಚನೆಯಾಗಿದೆ. ಎತ್ತರದ ದಿಣ್ಣೆ, ಮರಳುಮಿಶ್ರಿತ ಕೆಂಪು ಮಣ್ಣು ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಕಾಡುಹಂದಿ, ಮುಂಗುಸಿ ಕಂಡುಬಂದರೆ ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕಲಾಗಿದೆ. ಕೋಳಿಯನ್ನು ಸಾಕಲಾಗಿದೆ. ವಾರ್ಷಿಕ ಸರಾಸರಿ ಮಳೆ ೪೬೦ ಮಿಮೀ ಮಳೆ ಬೀಳುತ್ತಿದ್ದು ಉಷ್ಣಾಂಶ ೩೮ ಡಿಗ್ರಿ ಚಳಿ ೧೨ ಡಿಗ್ರಿ ಸೆಂ. ಇದೆ. ಕೃಷಿಗೆ ಉಪನೀರಾವರಿಗೆ ಗಂಗಾಕಲ್ಯಾಣ ಯೋಜನೆಯಲ್ಲಿ ೮ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಕುಡಿಯಲು ಗ್ರಾಮ ಪಂಚಾಯ್ತಿ, ಕಿರುನೀರು ಯೋಜನೆಯಡಿಯಲ್ಲಿ ಸರಬರಾಜು ಮಾಡಲಾಗುವುದು. ಗ್ರಾಮದಲ್ಲಿ ೪ ಕಿರು ಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ೬೨ ಮನೆಗಳಿದ್ದು ಲಂಬಾಣಿ ಭಾಷೆ ಮಾತೃ ಭಾಷೆಯಾಗಿದ್ದು ಕನ್ನಡ ವ್ಯವಹಾರಿಕ ಭಾಷೆಯಾಗಿದೆ. ಗ್ರಾಮದಲ್ಲಿ ಹೆಂಚಿನ, ಶೀಟಿನ ಮನೆಗಳಿವೆ. ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆಯ ೨೪ ಫಲಾನುಭವಿಗಳಿದ್ದಾರೆ. ೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ ವಿಶೇಷ ಸಂದರ್ಭಗಳಲ್ಲಿ ಬಾಡೂಟದ ಉಪಯೋಗವಿದೆ. ಆಧುನಿಕ ವಾಹನವಾದ ಟ್ರ್ಯಕ್ಟರ್, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯಬೆಳೆ. ರಾಗಿ, ಜೋಳ, ಅಲಸಂದೆ, ತೊಗರಿ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗು, ಸೇವಂತಿಗೆ ಹೂ ಬೆಳೆಯುತ್ತಾರೆ. ಶೇಂಗಾ ವ್ಯಾಪಾರ ಮಾಡುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಕಿರಿಯ ಪಾಠಶಾಲೆಯಿದ್ದು ೨೩ ಮಕ್ಕಳಿದ್ದಾರೆ. ಒಬ್ಬರು ಶಿಕ್ಷಕರಿದ್ದು ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೫೧% ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ಸೇವಾಲಾಲ್ ಗುಡಿ, ಚಾಮುಂಡಿ ಗುಡಿಯಿದ್ದು ಹೊರ ವಲಯದಲ್ಲಿ ಶನಿದೇವರ ಗುಡಿಯಿದೆ. ಚಾಮುಂಡಿಗೆ ವಿಶೇಷ ಪೂಜೆ ಮಾಡಿ ಬ್ಯಾಟೆ, ಬಾನ, ಆರತಿ ಮಾಡಿ ಹರಕೆ ತೀರಿಸುತ್ತಾರೆ. ಬಾಲನಾಯ್ಕ, ಬಂಗಾರಿಯಮ್ಮ, ಲಕ್ಷ್ಮಿ ಲಂಬಾಣಿ ನೃತ್ಯವನ್ನು ಸಾಂಪ್ರದಾಯಿಕವಾಗಿ ಅಭಿನಯಿಸುತ್ತಾರೆ. ವಿಶೇಷ ಹಬ್ಬ, ದೀಪಾವಳಿಯಲ್ಲಿ ಹೆಂಗಸರು ಹಾಡುತ್ತಾರೆ.

ಭೀಮಾಪತಿ, ಸೇವಾಲಾಲ್ ಹಬ್ಬವನ್ನು ದೀಪಾವಳಿ ಸಂದರ್ಭದಲ್ಲಿ ವಿಜೃಂಭಣೆಯಿಂದ ಆಚರಿಸುತ್ತಾರೆ. ಇದು ಇವರಿಗೆ ಹಿರಿಯರ ಹಬ್ಬವಾಗಿದ್ದು ಅರ್ಘ್ಯ ಅರ್ಪಣೆ, ಸಾಮೂಹಿಕ ಸಂತಾಪ ನಂತರ ಸಾಮೂಹಿಕ ನೃತ್ಯ ಕಾರ್ಯಕ್ರಮವಿರುತ್ತದೆ. ಯುಗಾದಿ, ದೀಪಾವಳಿ, ದಸರಾ, ಗೌರಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಅಪ್ಪಿಹಳ್ಳಿ

ಅಪ್ಪಿಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೧ ಕಿಮೀ ದೂರದಲ್ಲಿದೆ. ಹೊನ್ನಗೊಂಡನಹಳ್ಳಿಗೆ ಸಮೀಪದಲ್ಲಿರುವ ಈ ಗ್ರಾಮ ಹೊನ್ನಗೊಂಡನಹಳ್ಳಿಯ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೧೮೦ ಹೆಕ್ಟೇರ್ ಇದ್ದು ಕೆಂಪುಮಿಶ್ರಿತ ಮರಳು ಮಣ್ಣಿನಿಂದ ಕೂಡಿದೆ.

ಈ ಪರಿಸರದಲ್ಲಿ ಗಿಡ, ಚಿಕ್ಕಚಿಕ್ಕ ಪೊದೆ, ಹಳ್ಳ ಗುದ್ದರಗಳಿರುವುದರಿಂದ ಕಾಡು ಪ್ರಾಣಿಗಳು ಹೆಚ್ಚಾಗಿವೆ. ನರಿ, ಮೊಲ, ಜಿಂಕೆ, ಹಂದಿ, ಕರಡಿ, ಉಡ, ಮುಂಗುಸಿ, ಹಾವು ಮೊದಲಾದವು ಒಂದೆಡೆಯಾದರೆ ಕಾಡುಪಕ್ಷಿಗಳಾಗಿ ನವಿಲು, ಕಾಗೆ, ಕೋಗಿಲೆ, ಕೊಕ್ಕರೆ, ಗಿಳಿ, ಗೂಬೆ, ಗೊರವಂಕ, ಬೆಳವ, ಕೌಜುಗ, ಹದ್ದು, ಗರುಡ, ಗುಬ್ಬಚ್ಚಿ ಕಂಡುಬರುತ್ತವೆ.

ಅಪ್ಪನ ಮೂಲದಿಂದ ಅಪ್ಪಿಯಾಗಿ, ಅಪ್ಪೇನಹಳ್ಳಿಯಾಗಿ ನಂತರ ಅಪ್ಪಿಹಳ್ಳಿಯಾಗಿದ್ದು ಕೃಷಿ ಅವಲಂಬಿತ ಕುಟುಂಬಗಳಿವೆ. ಮಳೆನೀರೇ ಆಶ್ರಯ. ಒಂದು ಕೆರೆ ಇದ್ದರೂ ತುಂಬುವುದಿಲ್ಲ. ಹಾಗಾಗಿ ನೀರಿಗೆ ತೊಂದರೆ. ವಾಡಿಕೆ ಮಳೆ ೪೬೦ ಮಿಮೀ ಬಂದರೆ ಅಧಿಕ. ಬಿಸಿಲು ೩೧೨ ಡಿಗ್ರಿ ಸೆಂ. ಇದ್ದರೆ ಚಳಿ ೧೨ ಡಿಗ್ರಿ ಸೆಂ. ಇರುತ್ತದೆ. ಮಳೆಯ ನೀರಿನ ಜೊತೆಗೆ ಕೃತಕ ನೀರಾವರಿ ಸೌಲಭ್ಯವಾಗಿ ೧೩ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೪ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದೆ. ಕಾಡುಗೊಲ್ಲರು ಕಿರು ಸಮುದಾಯವಾಗಿದೆ. ಭೋವಿ ಜನಾಂಗದವರೂ ಇದ್ದಾರೆ. ಗ್ರಾಮದಲ್ಲಿ ಕನ್ನಡ ಮಾತೃಭಾಷೆಯಾಗಿದ್ದು ತೆಲುಗು ಮಾತನಾಡುತ್ತಾರೆ. ವಿವಿಧ ಪ್ರಕಾರಗಳಾದ ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿದ್ದು ಇವು ಸರ್ಕಾರಿ ವಸತಿ ಯೋಜನೆಗಳಾದ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಯ ೭೨ ಫಲಾನುಭವಿಗಳಿದ್ದಾರೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದವರೂ ಇದ್ದಾರೆ. ಒಟ್ಟು ೨೧೮ ಜನಸಂಖ್ಯೆಯ ಇಲ್ಲಿನ ೨೦ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಭೋಜನವಾಗಿ ಸ್ವೀಕರಿಸುತ್ತಾರೆ. ಆಧುನಿಕ ವಾಹನವಾದ ಟ್ರ್ಯಕ್ಟರ್, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ತೊಗರಿ, ಅಲಸಂದೆ ಬೆಳೆಗಳನ್ನು ಆಹಾರ ಬೆಳೆಯಾಗಿ ಬೆಳೆಯುತ್ತಾರೆ. ತೆಂಗು, ರೇಷ್ಮೆ, ಸೂರ್ಯಕಾಂತಿ ವಾಣಿಜ್ಯ ಬೆಳೆಗಳು. ಶೇಂಗಾ, ಹೊಂಗೆ ಬೀಜ, ರೇಷ್ಮೆ ವ್ಯಾಪಾರಿ ಸರಕುಗಳು.

ಶಿಕ್ಷಣ, ಸಾರಿಗೆ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರಿದ್ದಾರೆ. ಮಹಿಳೆಯರು ಬೀಡಿ ಸುತ್ತುವುದು, ಹುಣಸೆಹಣ್ಣು ಬಿಡಿಸುವುದು, ಹೊಂಗೆ ಬೀಜ ಬಿಡಿಸುವ ಉಪಕಸುಬುಗಳನ್ನು ಮಾಡುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಪಂಚಾಯ್ತಿ, ಗ್ರಾಮಪಂಚಾಯ್ತಿ ಕೇಂದ್ರಗಳಾಗಿವೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಸಿರಾ ಹೊನ್ನಗೊಂಡನಹಳ್ಳಿ ಮಾರ್ಗವಾಗಿ ಲಿಂಗದಹಳ್ಳಿ–ಕೊಟ್ಟದ ಮಾರ್ಗವಾಗಿಯೂ ರಸ್ತೆ ಸಂಪರ್ಕವಿದೆ. ೨ ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳೆಯರ ಆಧುನಿಕ ಸ್ವಾವಲಂಬನೆಗೆ ಪೂರಕವಾಗಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೨೪ ಮಕ್ಕಳು ಹಾಗೂ ಒಬ್ಬರು ಶಿಕ್ಷಕರಿದ್ದಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೮.೬ ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನದ ಫಲಾನುಭವಿಗಳಿದ್ದು ೩ ಪೆಟ್ಟಿಗೆ ಅಂಗಡಿಗಳಿವೆ. ಅರಳಿಕಟ್ಟೆ, ನಾಗರ ಕಲ್ಲುಗಳಿದ್ದು ನಾಗರಪಂಚಮಿ, ದೀಪಾವಳಿ ಹಬ್ಬಗಳಂದು ನಾಗಾರಾಧನೆ ನಡೆಯುತ್ತದೆ.

ಶ್ರೀರಾಮಮಂದಿರ, ಕಣಿವೆ ಮಾರಕ್ಕ ದೇವಾಲಯಗಳಿವೆ. ಶ್ರೀರಾಮ ನವಮಿ ದಿನದಂದು ರಾಮೋತ್ಸವ, ಹರಿಕಥೆ ಏರ್ಪಡುತ್ತದೆ. ಊರ ಹಬ್ಬವಾಗಿ ಕಣಿವೆ ಮಾರಮ್ಮನಿಗೆ ಆರತಿ, ಬ್ಯಾಟೆ, ಬಾನದ ಹರಕೆ ಸಂಪ್ರದಾಯವಿದೆ. ಕರಿಗಲ್ಲಿಗೆ ಬಾನದ ಎಡೆ ಹಾಕಿ ಸರಗು ಹಾಕುವುದು ಈ ಗ್ರಾಮದ ವಿಶೇಷ. ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸಲಾಗುತ್ತದೆ.

## ಅರುಗನಹಳ್ಳಿ

ಅರುಗನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೪ ಕಿ.ಮೀ. ದೂರದಲ್ಲಿರುವ ಗ್ರಾಮವಾಗಿದೆ. ಇದು ಕೊರಟಿಕೆರೆ ಕಂದಾಯ ಗ್ರಾಮದ ಉಪಗ್ರಾಮವಾಗಿದೆ. ಸಿರಾ–ಅಗಳಿ ಮುಖ್ಯ ರಸ್ತೆಯಲ್ಲಿ ಬ್ಯಾಡಗೆರೆಗೆ ಮುಂಚೆ ಮದಲೂರು ರಸ್ತೆಯಲ್ಲಿ ಒಂದು ಕಿ.ಮೀ. ದೂರದಲ್ಲಿ ಈ ಗ್ರಾಮವಿದ್ದು ಇದರ ಭೌಗೋಳಿಕ ವಿಸ್ತೀರ್ಣ ೧೫೮ ಹೆಕ್ಟೇರ್ ಆಗಿದೆ. ಅರುಗನಹಳ್ಳಿ ಈ ಗ್ರಾಮದ ನಿಷ್ಪತ್ತಿ ಅರುಗ ಎಂದರೆ ಹೊರಗೆ, ಮಗ್ಗುಲಿಗೆ ಎಂಬ ಅರ್ಥಗಳಿದ್ದು ಮಗ್ಗುಲಿನ ಗ್ರಾಮ ಎಂಬ ಅರ್ಥದಲ್ಲಿ ಅರುಗನಹಳ್ಳಿ ಎಂಬ ವ್ಯಕ್ತಿ ಸೂಚಕವಾಗಿ ಕರೆಯಲಾಗಿದೆ. ಕನ್ನಡದಲ್ಲಿ 'ಅರುಗಾಗು' ಪದ ಬಳಕೆ ಈ ಅರ್ಥದಲ್ಲಿಯೇ ಬಳಸಲಾಗುತ್ತಿದೆ. ಹೊರಗೆ ಇರುವವನ ಹಳ್ಳಿ > ಮನೆ – ಅರುಗನಹಳ್ಳಿ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿರುವ ಈ ಗ್ರಾಮ ಬಯಲು ಸೀಮೆಯಾಗಿದೆ. ಕರ್ನಾಟಕ–ಆಂಧ್ರದ ಉತ್ತರ–ಪೂರ್ವದ ಗಡಿ ಗ್ರಾಮವೂ ಆಗಿದೆ. ಕುರುಚಲು ಗಿಡ, ಮರ, ಪೊದೆಗಳಿವೆ ಹಾಗಾಗಿ ಇಲ್ಲಿ ನರಿ, ತೋಳ, ಮೊಲ, ಜಿಂಕೆ, ಮುಂಗುಸಿ ಕಂಡುಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಯಾಗಿ ಸೀಮೆಹಸು, ನಾಟಿಹಸು, ಹಳ್ಳಿಕಾರ್ ತಳಿಯ ಹೋರಿಗಳಿವೆ. ಕುರಿ, ಮೇಕೆ, ನಾಯಿ, ಎಮ್ಮೆಗಳು ಇವೆ. ಕೊಕ್ಕರೆ, ಕೋಗಿಲೆ, ಕಾಗೆ, ಕಾಜಾಣ, ಗೂಬೆ, ಗುಬ್ಬಚ್ಚಿ, ಗೊರವಂಕ ಮೊದಲಾದ ಪಕ್ಷಿಗಳೂ ಇವೆ. ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೪೬೦ ಮಿಮೀ ಇದ್ದು ಬಿಸಿಲು ೩೧೨ ಡಿಗ್ರಿ ಸೆಂ., ಚಳಿ ೧೨ ಡಿಗ್ರಿ ಸೆಂ. ಇರುತ್ತದೆ. ಕುಡಿಯಲು ಗ್ರಾಮಪಂಚಾಯ್ತಿಯ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಕೃಷಿಗೆ ನಿಸರ್ಗದತ್ತ ಮಳೆಯ ನೀರು ಸಾಕಾಗುವುದಿಲ್ಲ. ಅದಕ್ಕಾಗಿ ವಿವಿಧ ಮೂಲಗಳಾದ ಗಂಗಾ ಕಲ್ಯಾಣ ಯೋಜನೆಗಳಂಥ ಸರ್ಕಾರದ ಯೋಜನೆ ಬಳಸಿಕೊಂಡು ೧೮ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಗ್ರಾಮದಲ್ಲಿ ೫ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ನಾಯಕ, ಕ್ಷೌರಿಕ, ವಿಶ್ವಕರ್ಮ, ಈಡಿಗ, ಮಡಿವಾಳ ಜನಾಂಗ ಕಿರುಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಸ್ವರೂಪದ ಒಟ್ಟು ೮೦ ಮನೆಗಳಿದ್ದು ಇವು ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ವಸತಿ ಯೋಜನೆಯ ೧೧೨ ಫಲಾನುಭವಿಗಳಿದ್ದಾರೆ. ಕಾಂಕ್ರೀಟ್, ಹೆಂಚಿನ, ಶೀಟಿನ ಒಟ್ಟು ೮೦ ಮನೆಗಳಿದ್ದು ೩೫ ಮನೆಗಳಲ್ಲಿ ಶೌಚಾಲಯ ಬಳಕೆಯಲ್ಲಿದೆ. ಈ ಗ್ರಾಮದ ಜನಸಂಖ್ಯೆ ೩೪೨ ಆಗಿರುತ್ತದೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ ಸಾಂಪ್ರದಾಯಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಜೋಳ, ಹುರುಳಿ, ತೊಗರಿ ಆಹಾರ ಬೆಳೆಗಳಾಗಿವೆ. ತೋಟಗಾರಿಕೆ ಇರುವವರು ತೆಂಗು, ಅಡಿಕೆ, ಸೂರ್ಯಕಾಂತಿ, ಸೇವಂತಿಗೆ ಹೂಗಳನ್ನು ಬೆಳೆಯುತ್ತಾರೆ.

ಒಂದು ಸಹಕಾರ ಸಂಘದ ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತದೆ. ಶೇಂಗಾ, ಹುಣಸೆ ಹಣ್ಣು, ಹೊಂಗೆಬೀಜ ಮುಖ್ಯ ವ್ಯಾಪಾರಿ ಸರಕಾಗಿದೆ.

ಗ್ರಾಮದಲ್ಲಿ ರಸ್ತೆ ಸಾರಿಗೆ, ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುವ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಮಹಿಳೆಯರು ಬೀಡಿ ಸುತ್ತುವುದು, ಹುಣಸೆ ಹಣ್ಣು ಬಿಡಿಸುವ ಗೃಹಕೈಗಾರಿಕೆಯಲ್ಲಿ ನಿರತರಾಗಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರ ಹೊಂದಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದ ಒಬ್ಬರು ಜನಪ್ರತಿನಿಧಿಗಳಾಗಿದ್ದಾರೆ. ೨ ಸ್ತ್ರೀಶಕ್ತಿ ಸಹಕಾರ ಸಂಘ, ೧ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರಿ ಸಂಘಗಳಿದ್ದು ಮಹಿಳಾ ಆರ್ಥಿಕ ಸ್ವಾವಲಂಬನೆಗೆ ಪ್ರೋತ್ಸಾಹದಾಯಕವಾಗಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಶಾಲೆಯಲ್ಲಿ ೩೩ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕಗಳ ಉಚಿತ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ಶೇ.೫೮% ಇದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು ೬ ಪೆಟ್ಟಿಗೆ ಅಂಗಡಿಗಳಿವೆ.

ಶ್ರೀರಾಮ, ಕಣಿವೆಮಾರಕ್ಕ ಗ್ರಾಮದ ಮುಖ್ಯ ದೇವಸ್ಥಾನಗಳು. ಶ್ರೀರಾಮ ನವಮಿಯನ್ನು ವಿಜೃಂಭಣೆಯಿಂದ ರಾಮೋತ್ಸವ, ಮೆರವಣಿಗೆ, ಹರಿಕಥೆಯೊಂದಿಗೆ ಆಚರಿಸುತ್ತಾರೆ. ಕಣಿವೆ ಮಾರಕ್ಕನ ಜಾತ್ರೆ ಊರ ಹಬ್ಬವಾಗಿ ನಡೆಯುತ್ತದೆ. ಬಲಿ, ಆರತಿ, ಬಾನ ವಿಶೇಷ ಹರಕೆ ಸಂಪ್ರದಾಯವಿದೆ.

ಯುಗಾದಿ, ಮಹಾನವಮಿ, ಶಿವರಾತ್ರಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಈ ಗ್ರಾಮದ ನಡುವಿನ ಅರಳಿಕಟ್ಟೆಯ ಮೇಲೆ ೨ ವೀರಗಲ್ಲುಗಳನ್ನು, ೧ ಮಹಾಸತಿ ಕಲ್ಲನ್ನು ಸಂಗ್ರಹಿಸಿ ಇಡಲಾಗಿದೆ. ವೀರರ ಹೋರಾಟದ ಚಿತ್ರ ಸೊಗಸಾಗಿದ್ದು ಇವು ಒರಟು ಕಲ್ಲಿನ ರಚನೆಯಾಗಿವೆ. ೧೦ನೇ ಶತಮಾನದಲ್ಲಿ ರಚನೆಗೊಂಡಿವೆ.

## ಅಂತಾಪುರ

ಅಂತಾಪುರ ಸಿರಾ ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ. ದೂರದಲ್ಲಿದೆ. ಸಿರಾ–ಬುಕ್ಕಾಪಟ್ಟಣ ಮುಖ್ಯ ರಸ್ತೆಯಲ್ಲಿ ಅಂತಾಪುರ ಗೇಟಿನಿಂದ ಒಂದು ಕಿ.ಮೀ. ಬಲಭಾಗದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಸಿರಾ ಪಾಳೆಯಗಾರ ರಂಗಪ್ಪನಾಯಕನ ಸಂಬಂಧಿಕರು ಹೆಣ್ಣು ತಂದುಕೊಳ್ಳುವ ಗ್ರಾಮವಾಗಿದ್ದು ಇಂದಿಗೂ ಈ ಗ್ರಾಮದಲ್ಲಿ ನಾಯಕ ಜನಾಂಗದ ಮುಚ್ಚಳ ಬೆಡಗಿನವರು ಇಲ್ಲಿ ವಾಸಿಸುತ್ತಾರೆ. ಸಿರಾ ಪಾಳೆಯಗಾರನೊಂದಿಗೆ ವೈವಾಹಿಕ ಸಂಬಂಧ ಇರಿಸಿಕೊಂಡ ಕಾರಣದಿಂದ ಈ ಗ್ರಾಮವನ್ನು ಅಂತಃಪುರ, ಅಂತಾಪುರ ಎಂದು ಕರೆಯಲಾಗಿದೆ ಎಂದು ನಾಯಕ ಜನಾಂಗದ ತಮ್ಮೇಗೌಡ ಅಭಿಪ್ರಾಯಪಡುತ್ತಾರೆ. ೧೦೧೦೮೨ ಹೆಕ್ಟೇರ್ ಭೂವಿಸ್ತೀರ್ಣ ಹೊಂದಿರುವ ಈ ಗ್ರಾಮದ ಪರಿಸರ ಚಿಕ್ಕಸಂದ್ರ ಕಾವಲು ಎಂಬ ರಕ್ಷಿತ ಅರಣ್ಯದ ಪರಿಸರದಲ್ಲಿದೆ. ಹಾಗಾಗಿ ಈ ಭಾಗದಲ್ಲಿ ಕಾಡುಪ್ರಾಣಿಗಳಾದ ತೋಳ, ನರಿ, ಕರಡಿ, ಕಾಡುಹಂದಿ, ಚಿರತೆ ಕಂಡುಬರುತ್ತವೆ. ಸಾಕುಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ನಾಯಿಗಳಿವೆ. ಈ ಪರಿಸರದಲ್ಲಿ ಪಕ್ಷಿಗಳಾದ ಕಾಗೆ, ಕೋಗಿಲೆ, ಕೌಜುಗ, ಹದ್ದು, ಗೂಬೆ, ಕೊಕ್ಕರೆ, ಗಿಳಿ, ಗರುಡ, ಗಿಡುಗ ಕಂಡುಬರುತ್ತವೆ. ಕೋಳಿ ಸಾಕುಪಕ್ಷಿಯಾಗಿದೆ.

ಬಯಲು, ಗಿಡದ ನಾಡು. ವಾಡಿಕೆ ಮಳೆ ೯೪೪ ಮಿಮೀ ಆಗಿದ್ದು ಬಿಸಿಲು ೩೮ ಡಿಗ್ರಿ ಸೆಂ. ಹಾಗೂ ಚಳಿ ೧೨ ಡಿಗ್ರಿ ಸೆಂ. ಇರುತ್ತದೆ. ಕುಡಿಯಲು ನೀರು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಲ್ಲಿ ಪೂರೈಸಲಾಗುವುದು. ಈ ಪರಿಸರದಲ್ಲಿ ಕೃಷಿಗೆ ೨೫ ಕೊಳವೆ ಬಾವಿಗಳಿವೆ. ೪ ಕಿರುಟ್ಯಾಂಕ್‌ಗಳಿದ್ದು ಒಂದು ಕೈಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ಪೂರ್ಣ ಗ್ರಾಮವಾಸಿಯಾಗಿದ್ದು ವಿವಿಧ ಸ್ವರೂಪದ ೯೨ ಮನೆಗಳಿವೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ಕಾಂಕ್ರೀಟ್, ಮಣ್ಣಿನ, ಶೀಟಿನ, ಹೆಂಚಿನ ಮನೆಗಳಿವೆ. ಇವು ಇಂದಿರಾ ಆವಾಸ್, ಜನತಾ, ಆಶ್ರಯ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೨೯ ಫಲಾನುಭವಿಗಳಿದ್ದಾರೆ. ಒಟ್ಟು ೪೫೩ ಮನೆಗಳಿರುವ ಈ ಗ್ರಾಮದ ೨೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್, ಆಟೋ, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆಯಾಗಿದೆ. ರಾಗಿ, ಭತ್ತ, ಜೋಳ, ಹುರುಳಿ, ತೊಗರಿ ಆಹಾರ ಬೆಳೆಗಳು, ಸೂರ್ಯಕಾಂತಿ, ಸೇವಂತಿಗೆ, ರೇಷ್ಮೆ ಬೆಳೆಗಳಿವೆ.

ಕಿರು ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತದೆ. ಶೇಂಗಾ, ಹುಣಸೆಹಣ್ಣು ವ್ಯಾಪಾರಿಗಳು, ಶಿಕ್ಷಕರು, ಸಾರಿಗೆ, ಅರಣ್ಯ ಇಲಾಖೆಯಲ್ಲಿ ಕೆಲಸ ನಿರ್ವಹಿಸುವ ೬ ಜನ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಬೀಡಿ ಕಟ್ಟುವುದು ಹಾಗೂ ಊಟದ ಎಲೆ ತಯಾರಿಕೆ ಗೃಹ ಕೈಗಾರಿಕೆಯಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಹುಯಿಲ್ ದೊರೆ ತಾಲ್ಲೂಕು ಪಂಚಾಯ್ತಿ ಹಾಗೂ ಭೂವನಹಳ್ಳಿ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ಸಿರಾ–ಬುಕ್ಕಾಪಟ್ಟಣ ರಸ್ತೆ ಮಾರ್ಗವಿದ್ದು ಸಾರಿಗೆ ಸಂಪರ್ಕವಿದೆ.

ಸ್ತ್ರೀಶಕ್ತಿ ಸಂಘದ ೩ ತಂಡಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ೨ ಗುಂಪುಗಳಿದ್ದು ಸ್ತ್ರೀಯರ ಆರ್ಥಿಕ ಸಬಲತೆಗೆ ಪ್ರೇರಕವಾಗಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಶಾಲೆಯಿದ್ದು ಶಾಲೆಯಲ್ಲಿ ೩೧ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಹಾಗೂ ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ. ಶೇ.೫೬% ಸಾಕ್ಷರತೆಯಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾವೇತನ ಫಲಾನುಭವಿಗಳಿದ್ದು ೩ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಮಾರಮ್ಮ, ಭೂತಪ್ಪ ದೇವರುಗಳ ದೇವಾಲಯವಿದೆ. ಮಾರಮ್ಮನ ಊರಹಬ್ಬ ಮಾಡಿ ಆರತಿ, ಬ್ಯಾಟೆ, ಬಾನ, ಹರಕೆ ಸಂಪ್ರದಾಯಗಳಿವೆ. ಜೊತೆಗೆ ಕಾಂತಮ್ಮ, ಗೌರವ್ವನ ವಿಶೇಷ ಆಚರಣೆಯಿದ್ದು ಮಾಂಸದ ಊಟದ ವಿಶೇಷ ಸಮಾರಾಧನೆ ಊರ ಹಬ್ಬದಂತೆ ನಡೆಯುತ್ತದೆ. ಯುಗಾದಿ, ಶಿವರಾತ್ರಿ, ಮಹಾನವಮಿ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ.

## ಆದಲೂರು

ಆದಲೂರು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೫ ಕಿ.ಮೀ ದೂರದಲ್ಲಿದೆ. ಸಿರಾ–ಅಮರಾಪುರ ರಸ್ತೆಯ ಕೊಟ್ಟ ಗೇಟಿನ ಸ್ವಲ್ಪ ಮುಂದೆ ಎಡಗಡೆ ತಿರುಗಿ ೧ ಕಿಮೀ ದೂರವನ್ನು ಕಚ್ಚಾರಸ್ತೆಯಲ್ಲಿ ಕ್ರಮಿಸಿದರೆ ಆದಲೂರು ಇದೆ. ಆದಯ್ಯ ಎಂಬ ವ್ಯಕ್ತಿ ಮೂಲದ ಈ ಗ್ರಾಮ ಶೈವ ಪರಂಪರೆಯ ಸಂಗಮೇಶ್ವರ ದೇವಾಲಯದ ನಿರ್ಮಾಣ ಹಾಗೂ ಪೂಜಾ ಕಾರ್ಯದಲ್ಲಿ ಈ ಆದಯ್ಯನ ಕುಟುಂಬದವರ ಪಾತ್ರವಿತ್ತೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಆದಯ್ಯನ ಊರು > ಆದನ ಊರು > ಆದಲೂರು ಆಗಿದೆ. ಇದು ಕೊಟ್ಟದ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೧೧೮ ಹೆಕ್ಟೇರ್ ಹೊಂದಿದೆ.

ಪೂರ್ವಕ್ಕೆ ರಸ್ತೆ, ಕೊಟ್ಟ ಬದಿ, ಉತ್ತರಕ್ಕೆ ಸಾಮಾಜಿಕ ಅರಣ್ಯ, ದಕ್ಷಿಣಕ್ಕೆ ಸುವರ್ಣಮುಖಿ ನದಿ ಈ ಊರಿನ ಪರಿಸರದ ಭೌಗೋಳಿಕ ವಿನ್ಯಾಸವಾಗಿದೆ. ಹೊಳೆಯ ದಂಡೆಯ ಮೇಲೆಯೇ ಸಂಗಮೇಶ್ವರನ ದೇವಾಲಯವಿದ್ದು ಮಳೆಗಾಲದಲ್ಲಿ ಮಾತ್ರ ಹೊಳೆ ಹರಿದು ನಿಂತು ಹೋಗುತ್ತಿದೆ. ಇತ್ತೀಚೆಗೆ ೧೯೯೨ ರಲ್ಲಿ ಸಂಗಮೇಶ್ವರ ಪಿಕಪ್, ಕಿರುಡ್ಯಾಂ ನಿರ್ಮಿಸಲಾಗಿದೆ. ಕಂದು ಮಿಶ್ರಿತ ಮರಳು ಮಣ್ಣನ್ನು ಹೊಂದಿರುವ ಈ ಪರಿಸರದಲ್ಲಿ ಉತ್ಕೃಷ್ಟ ಮರಳು ಲಭ್ಯವಿದ್ದು ಉತ್ತಮ ವ್ಯಾಪಾರಿ ಸರಕಾಗಿದೆ. ಉಳಿದಂತೆ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಮುಂಗುಸಿ, ಬಾರ್‌ಬೆಕ್ಕು, ತೋಳ, ಹಂದಿ ಕಂಡುಬರುತ್ತವೆ. ಗ್ರಾಮದಲ್ಲಿ ಸಾಕುಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕುರಿ, ಆಡು, ಕೋಳಿಯನ್ನು ಸಾಕಲಾಗುತ್ತಿದೆ. ಗಿಡ–ಮರಗಳಲ್ಲಿ ಗಿಳಿ, ಕೋಗಿಲೆ, ಕಾಗೆ, ಗಿಳಿ, ಗೂಬೆ, ಹದ್ದು, ಗರುಡ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಒಂದು ಮಿನಿ ಹಾಲಿನ ಡೈರಿಯಿದೆ. ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಗ್ರಾಮದಲ್ಲಿ ಶೇಂಗಾ ಹಾಗೂ ಹುಣಸೆಹಣ್ಣಿನ ವ್ಯಾಪಾರವಿದೆ. ವಾಡಿಕೆ ಮಳೆ ೩೯೪ ಮಿಮೀ ಆಗಿದ್ದು ಬಿಸಿಲು ೩೮ ಡಿಗ್ರಿ ಸೆಂ. ಹಾಗೂ ಚಳಿ ೧೨ ಡಿಗ್ರಿ ಸೆಂ. ಇರುತ್ತದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ವೀರಶೈವ, ಕೊರಚ, ಮಡಿವಾಳ ಸಣ್ಣ ಸಮುದಾಯವಾಗಿವೆ. ಕನ್ನಡ ಇಲ್ಲಿನ

ಮಾತೃಭಾಷೆಯಾಗಿದ್ದು ಕಾಂಕ್ರೀಟ್, ಮಣ್ಣಿನ, ಶೀಟಿನ, ಹೆಂಚಿನ ಸ್ವರೂಪದ ೯೮ ಮನೆಗಳಿವೆ. ೩೨೫ ಜನಸಂಖ್ಯೆ ಇರುವ ಈ ಗ್ರಾಮದಲ್ಲಿ ೪೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ದೋಸೆ, ಅನ್ನ ಬಳಸುವವರಿದ್ದಾರೆ ಬಾಡೂಟ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನ ಬಂಡಿ, ಟ್ರ್ಯಕ್ಟರ್, ದ್ವಿಚಕ್ರ ವಾಹನಗಳಿದ್ದು ಆಟೋಗಳನ್ನು ಬಳಸಲಾಗುತ್ತಿದೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಭತ್ತ, ಜೋಳ, ತೊಗರಿ, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆಯ ಬೆಳೆಯಾಗಿ ತೆಂಗು ಬೆಳೆಯುತ್ತಾರೆ. ಹುಣಸೇಹಣ್ಣು, ಶೇಂಗಾ ವಾಣಿಜ್ಯ ಬೆಳೆಯಾಗಿವೆ.

ಜೈಲು ಅಧಿಕಾರಿ, ಶಿಕ್ಷಕರು ಸೇರಿದಂತೆ ೪ ಜನ ಸರ್ಕಾರಿ ನೌಕರರಿದ್ದಾರೆ. ಮಹಿಳೆಯರು ಗೃಹ ಕಸುಬಾಗಿ ಬೀಡಿ ಸುತ್ತುವುದು, ಎಲೆ ಕಟ್ಟುವುದು ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭೆ, ಮದಲೂರು ಜಿಲ್ಲಾ ಪಂಚಾಯ್ತಿ, ಕೊಟ್ಟ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯತ್ ಸದಸ್ಯರಿದ್ದಾರೆ. ೩ ಸ್ತ್ರೀಶಕ್ತಿ ಕೇಂದ್ರಗಳು, ೪ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪುಗಳಿದ್ದು ಆರ್ಥಿಕ ಸಬಲೀಕರಣದಲ್ಲಿ ತೊಡಗಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೫೪ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೮.೫% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಗೂಡಂಗಡಿ, ೨ ಟೀ ಅಂಗಡಿಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಒಂದು ಶಾಸನ ೧೭ನೇ ಶತಮಾನದ್ದು ಗ್ರಾಮದ ಹೊರ ವಲಯದಲ್ಲಿದ್ದು ಕಲ್ಲುಕೋಟೆ ರಂಗನ ದೇವರ ಭೋಗದ ಗದ್ದೆ ಎಂಬ ಅಸ್ಪಷ್ಟ ಮಾಹಿತಿ ಇದೆ. ಸಂಗಮೇಶ್ವರ, ಕೋಡಿಲಿಂಗೇಶ್ವರ, ಶ್ರೀರಾಮಮಂದಿರ, ಮಾರಮ್ಮ ಗ್ರಾಮದ ಪ್ರಮುಖ ದೈವಗಳು. ಸಂಗಮೇಶ್ವರ ಹಾಗೂ ಕೋಡಿಲಿಂಗೇಶ್ವರ ದೇವರುಗಳಿಗೆ ಪ್ರತಿ ಶಿವರಾತ್ರಿಯಂದು ವಿಶೇಷ ಉತ್ಸವ, ಮೆರವಣಿಗೆ, ಅಭಿಷೇಕದ ಆಚರಣೆಗಳಿರುತ್ತವೆ. ಮಾರಮ್ಮ ಗ್ರಾಮದೇವತೆಯ ಹಬ್ಬವಾಗಿದ್ದು ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ. ಶಿವರಾತ್ರಿ, ಯುಗಾದಿ, ಮಹಾನವಮಿ, ದೀಪಾವಳಿ, ಗೌರಿ–ಗಣೇಶ ಇವರ ಪ್ರಮುಖ ಹಬ್ಬಗಳಾಗಿವೆ.

ಈ ಗ್ರಾಮದ ಬಾಲಪ್ಪ, ಈರಣ್ಣ, ರಂಗನಾಥಪ್ಪ ಹೆಸರಾಂತ ಅರೆವಾದ್ಯ ಕಲಾವಿದರಾಗಿದ್ದು ಜಿಲ್ಲೆಯ ಬಹುತೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.

## ಅರಿಯಜ್ಜಿಹಳ್ಳಿ

ಅರಿಯಜ್ಜಿಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೦ ಕಿಮೀ ದೂರದಲ್ಲಿದೆ. ಇದು ಸಿರಾ, ಮದಲೂರು–ಬರಗೂರು ರಸ್ತೆಯಲ್ಲಿ ಬರುತ್ತದೆ. ಕಂದಾಯ ಗ್ರಾಮವಾಗಿರುವ ಈ ಹಳ್ಳಿಯ ಭೌಗೋಳಿಕ ವಿಸ್ತೀರ್ಣ ೩೭೦.೯೧ ಹೆಕ್ಟೇರ್. ಹಿರಿಯಜ್ಜಿ ತಿಳುವಳಿಕೆಯುಳ್ಳ ಅಜ್ಜಿ ಮಕ್ಕಳಿಗೆ ಬಾಲಗ್ರಹ, ಹಕ್ಕಿ ಅಳುಕು ಮೊದಲಾಗಿ ಕಾಯಿಲೆ ಸಂಬಂಧಿ ಔಷಧಿ ನೀಡುವ ಹಿರಿಯಜ್ಜಿಯ ಹೆಸರಿನಲ್ಲೇ ಗ್ರಾಮವೊಂದು ನಿರ್ಮಾಣವಾಗಿರುವುದು ಈ ಗ್ರಾಮದ ವಿಶೇಷ.

ಬಯಲು ಪ್ರದೇಶ. ಕುರುಚಲು ಗಿಡ, ಪೊದೆ ಹಾಗಾಗಿ ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಉಡ, ಹೆಗ್ಗಣ, ಬಾರುಬೆಕ್ಕು ಕಂಡುಬರುತ್ತವೆ. ಗ್ರಾಮದಲ್ಲಿ ಸಾಕುಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕುರಿ, ಮೇಕೆಗಳಿವೆ. ಕೋಳಿ ಸಾಕುಪಕ್ಷಿಯಾಗಿದೆ. ವಾರ್ಷಿಕ ಮಳೆ ಸರಾಸರಿ ೪೬೦ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಕಾಯಕದ ಇಲ್ಲಿನ ರೈತರು ೩೨ ಬೋರ್‌ವೆಲ್‌ಗಳ ಮೂಲಕ ಕೃಷಿ ಸಂಬಂಧಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುವುದು. ಗ್ರಾಮದಲ್ಲಿ ೮ ಸಿಸ್ಟರ್ನ್‌ಗಳಿದ್ದು ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಬೋವಿ, ನಾಯಕ, ಗೊಲ್ಲ, ಆದಿಕರ್ನಾಟಕ ಜನಾಂಗದವರು ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮನೆ ಭಾಷೆಯಾಗಿದೆ. ವಿವಿಧ ಪ್ರಕಾರಗಳ ಒಟ್ಟು ೧೪೮ ಮನೆಗಳಿದ್ದು ಕಡಪಾ ಕಲ್ಲಿನ, ಕಲ್ಲು ಕಟ್ಟಡದ, ಹೆಂಚಿನ, ಶೀಟಿನ ಮನೆಗಳಿವೆ. ಇವು ಆಶ್ರಯ, ಜನತಾ, ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳೂ ಇದ್ದಾರೆ. ೬೮೭ ಜನಸಂಖ್ಯೆ ಹೊಂದಿರುವ ಇಲ್ಲಿನ ಮನೆಯಲ್ಲಿ ೬೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಟ್ರ್ಯಕ್ಟರ್, ಟೆಂಪೋ, ಆಟೋ ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ಅಲಸಂದೆ, ತೊಗರಿ ಆಹಾರ ಬೆಳೆಗಳು.

ಸೂರ್ಯಕಾಂತಿ, ಹತ್ತಿ, ಸೇವಂತಿಗೆ ಇತರೆ ನೀರಾವರಿ ಬೆಳೆಗಳು. ಒಂದು ಕಿರು ಹಾಲಿನ ಡೈರಿಯಿದ್ದು ೧೫೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಕುರಿ ವ್ಯಾಪಾರ, ತೆಂಗು, ಹುಣಸೆ ಹಣ್ಣಿನ ವ್ಯಾಪಾರವಿದೆ. ಶಿಕ್ಷಕರು, ಸಾರಿಗೆ, ಇತರೆ ಇಲಾಖೆ ಸೇರಿ ೯ ಜನ ನೌಕರರಿದ್ದಾರೆ. ಗ್ರಾಮದಲ್ಲಿ ಬೀಡಿ ಸುತ್ತುವುದು, ಟೈಲರಿಂಗ್, ರಾಗಿ ಮಿಲ್ ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಹಂದಿಕುಂಟೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಒಬ್ಬರು ಈ ಗ್ರಾಮದ ಪ್ರತಿನಿಧಿಯಾಗಿದ್ದಾರೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ೨ ಸ್ತ್ರೀಶಕ್ತಿ ಕೇಂದ್ರಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಶಾಲೆಯಿದ್ದು ಶಾಲೆಯಲ್ಲಿ ೩೧ ಮಕ್ಕಳಿದ್ದು ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೮.೩% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ.

ಗ್ರಾಮದ ಅಧಿದೈವ ತಿಮ್ಮಪ್ಪ. ಉಳಿದಂತೆ ಮುತ್ತುರಾಯ, ಮುತ್ಯಾಲಮ್ಮ, ಲಕ್ಷ್ಮಿ, ಕರಿಯಮ್ಮ ದೇವಾಲಯಗಳಿವೆ. ಇಲ್ಲಿಯೇ ತಿಪ್ಪೇಸ್ವಾಮಿ ಮಠವಿದ್ದು ಪ್ರತಿ ಸೋಮವಾರ ಭಜನೆ, ವಾರ್ಷಿಕ ಪರ ನಡೆಯುತ್ತದೆ. ಸಾಧು-ಸಂತರು ಬಂದು ತಂಗಿ ಹೋಗುತ್ತಿರುವುದು ಇಲ್ಲಿನ ವಿಶೇಷ. ಕರಿಯಮ್ಮ ಗ್ರಾಮದೇವತೆ ಹಬ್ಬವಾಗಿದ್ದು ಊರ ಹಬ್ಬವಾಗಿ ಆರತಿ, ಬಾನ, ಬಲಿ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ ಹಾಗೂ ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ಸಿರಾ-ಹಂದಿಕುಂಟೆ - ಬರಗೂರಿಗೆ ರಸ್ತೆ, ಬಸ್ ಸಂಪರ್ಕ ಸೌಲಭ್ಯವಿದೆ.

## ಅಂಬೇಡ್ಕರ್ ಕಾಲೋನಿ

ಅಂಬೇಡ್ಕರ್ ಕಾಲೋನಿ ಸಿರಾ ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಹುಲಿಕುಂಟೆ ಹೋಬಳಿಗೆ ಸೇರಿದ ಗ್ರಾಮವಾಗಿದ್ದು, ಬಡೇನಹಳ್ಳಿಯ ಉಪಗ್ರಾಮವಾಗಿದೆ. ಬಡೇನಹಳ್ಳಿ-ಕರೇರಾಮನಹಳ್ಳಿ ನಡುವೆ ಭೌಗೋಳಿಕ ವ್ಯಾಪ್ತಿ ೧೪೦.೫ ಹೆಕ್ಟೇರ್ ಆಗಿದ್ದು, ಕೆಂಪು, ಬಿಳಿ ಮಿಶ್ರಿತ ಮರಳು ಹೊಂದಿದ್ದು, ಶೇಂಗಾ ಬೆಳೆಗೆ ಉತ್ಕೃಷ್ಟವಾಗಿದ್ದು, ಬಲಕ್ಕೆ ಕರೆರಾಮನಹಳ್ಳಿ ಕೆರೆ, ಬಲಕ್ಕೆ ಬಡೇನಹಳ್ಳಿ ಕಟ್ಟೆ-ಪೊದೆ, ಗಿಡ, ಮರ, ತಗ್ಗಿನಿಂದ ಕೂಡಿದ ಭೂ ಪ್ರದೇಶದಲ್ಲಿ ಪ್ರಾಣಿಗಳಾದ ನರಿ, ಮೊಲ, ಜಿಂಕೆ, ಉಡ, ಬೆಕ್ಕು ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾಗಿ ಹಸು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕಾಡು ಪಕ್ಷಿಗಳಾಗಿ ಕಾಗೆ, ಗಿಳಿ, ಗೊರವಂಕ, ಹದ್ದು, ಗರುಡು, ಕೋಗಿಲೆ ಕಂಡು ಬಂದರೆ, ಸಾಕು ಪಕ್ಷಿಗಳಾಗಿ ಕೋಳಿ ಇವೆ.

ವಾರ್ಷಿಕ ಸರಾಸರಿಮಳೆ ೫೮೦ ಮಿ.ಮೀ. ಆಗಿದ್ದು, ಉಷ್ಣಾಂಶ ೩೮೦ ಸೆಂ. ಇದ್ದು, ಚಳಿಯ ಪ್ರಮಾಣ ೧೨೦ ಸೆಂ. ಇರುತ್ತದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದ್ದು, ಒಂದು ಕಿರು ಟ್ಯಾಂಕ್ ಇದೆ.

ಆದಿ ಕರ್ನಾಟಕ, ನಾಯಕ, ಗೊಲ್ಲ, ವಿಶ್ವಕರ್ಮ, ಕ್ಷೌರಿಕರು, ಮುಸ್ಲಿಂ ಜನಾಂಗಗಳು ಇಲ್ಲಿ ವಾಸಿಸುತ್ತಿದ್ದು, ಆದಿ ಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದೆ. ಒಟ್ಟು ೪೦ ಮನೆಗಳಿದ್ದು, ಹೆಂಚಿನ, ಶೀಟಿನ, ಗೃಹ ನಿರ್ಮಾಣ ಸ್ವರೂಪದಲ್ಲಿವೆ. ೧೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಆಶ್ರಮ, ಅಂಬೇಡ್ಕರ್ ವಸತಿ ಯೋಜನೆ, ಭಾಗ್ಯ ಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ. ೨೧೨ ಜನಸಂಖ್ಯೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ರೊಟ್ಟಿ, ಅನ್ನ ಬಳಸುವವರಿದ್ದಾರೆ ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಪಾಯಸ, ಹೋಳಿಗೆಯ ಭೋಜನವಿರುತ್ತದೆ. ಗ್ರಾಮದಲ್ಲಿ ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಅಲಸಂದಿ, ತೊಗರಿ, ಹುರುಳಿ ಆಹಾರ ಬೆಳೆಗಳು.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ತಾಲ್ಲೂಕು ಪಂಚಾಯಿತಿ, ಹಂದಿ ಕುಂಟೆ ತಾಲ್ಲೂಕು ಪಂಚಾಯಿತಿ ಹಾಗೂ ಹೊಸಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಸಿರಾ ಅಮರಾಪುರ, ಬರಗೂರು ಗ್ರಾಮಗಳಿಗೆ ಬಸ್ ಸಂಚಾರ, ರಸ್ತೆ ಸಂಪರ್ಕ ಹೊಂದಿದೆ.

೨ ಸ್ತ್ರೀ ಶಕ್ತಿ, ಸ್ವಸಹಾಯ ಸಂಘವಿದೆ. ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ೨೯ ಮಕ್ಕಳು, ೨ ಶಿಕ್ಷಕರು ಇದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯವಿದ್ದು, ಉಚಿತ ಸಮವಸ್ತ್ರ, ಪುಸ್ತಕಗಳ ವಿತರಣೆಯೂ ಇದೆ. ವೃದ್ಧಾಪ್ಯ ವೇತನ,

ವಿಕಲ ಚೇತನ ವೇತನ, ವಿಧವಾ ವೇತನದ ಫಲಾನುಭವಿಗಳು ಇದ್ದು, ೨ ಅಂಗಡಿಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಹೊಸದಾಗಿ ಒಂದು ಅರಳಿಕಟ್ಟೆಯನ್ನು ನಿರ್ಮಿಸಲಾಗಿದ್ದು, ಇಲ್ಲಿ ಶಿವಲಿಂಗ, ನಂದಿಯನ್ನು ಸ್ಥಾಪಿಸಲಾಗಿದೆ. ಕೊಲ್ಲಾಪುರದಮ್ಮನ ಊರಹಬ್ಬ ಮಾಡಲಾಗುತ್ತದೆ. ದೇವರಿಗೆ ಎದುರೆತ್ತಿ, ಆರತಿ, ಬಾನ, ಬ್ಯಾಟೆ, ಹರಕೆ ಆಚರಣೆ ಇರುತ್ತದೆ. ಯುಗಾದಿ, ದೀಪಾವಳಿ, ನವಮಿ, ಗೌರಿಗಣೇಶ, ಹಾಗೂ ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

ಈರಮಯ್ಯ ಎಂಬ ೮೦ ವರ್ಷದ ಆದಿ ಕರ್ನಾಟಕ ಜನಾಂಗದ ಯಕ್ಷಗಾನ ಭಾಗವಹಿಸಿದ್ದು, ೫೦ ಕ್ಕೂ ಹೆಚ್ಚು ಮೂಡಲ ಪಾಯ ಯಕ್ಷಗಾನವನ್ನು ಕಲಿಸಿದ್ದಾರೆ. ಕಲಾವಿದ ಮಾಸಾಶನ ಗೌರವ ಪಡೆಯುತ್ತಿದ್ದಾರೆ. ಗ್ರಾಮದಲ್ಲಿ ಪ್ರತಿ ವರ್ಷ ದೇವಿ ಮಹಾತ್ಮೆ, ಯಕ್ಷಗಾನವನ್ನು ಪ್ರದರ್ಶಿಸುತ್ತಾರೆ. ವಿಜಯಕುಮಾರ್, ಅತ್ಯುತ್ತಮ ಯಕ್ಷಗಾನ ಕಲಾವಿದರು, ಗ್ರಾಮದಲ್ಲಿ ಅಂಬೇಡ್ಕರ್ ದಲಿತ ಸಂಘವಿದ್ದು, ಅಂಬೇಡ್ಕರ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

## ಅಮಲಗೊಂದಿ

ಅಮಲಗೊಂದಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೨೩೩ ಹೆಕ್ಟೇರ್ ಆಗಿದೆ. ಈ ಗ್ರಾಮಕ್ಕೆ ಜಯನಗರ ಎಂಬ ಹೊಸದಾಗಿ ನಿರ್ಮಾಣವಾಗಿರುವ ಬಡಾವಣೆಯೊಂದು ಸೇರ್ಪಡೆ ಯಾಗಿದೆ. ಅಮಲಗೊಂದಿ, ಆನೆಗೊಂದಿ ಎಂಬ ಅರ್ಥದಲ್ಲಿ ಪರಿಭಾವಿಸ ಲಾಗುತ್ತಿದ್ದು, ವಿಜಯನಗರದ ಅರಸರು, ಈ ಭಾಗದಲ್ಲಿ ಆನೆಗಳನ್ನು ಕೂಡುತ್ತಿದ್ದು, ಆನೆಲಾಯವಾಗಿತ್ತೆಂದು, ಆನೆಲಾಯ, ಗೊಂದಿಗೆ ಮುಂದೆ ಜನಪದರ ಅಮಲಗೊಂದಿ ಎಂದು ಕರೆಯಲಾಗಿದೆ ಎಂದು ಶಿಕ್ಷಕ ಚಂದ್ರಶೇಖರ್ ಅಭಿಪ್ರಾಯ ಪಡುತ್ತಾರೆ. ಇನ್ನೊಂದು ಮೂಲದ ಪ್ರಕಾರ ಹಾಲಪ್ಪ ಮೂಲ ಹೆಸರಿನ ವ್ಯಕ್ತಿ ನಂತರ ಅಮಲವೆಂದು ಕರೆದರು. ಆತನು ವಾಸಿಸುತ್ತಿದ್ದ ಗ್ರಾಮವಾದ ಕಾರಣದಿಂದ ಅಮಲನ ಗೂಡು, ಅಮಲಗೊಂದಿಗೆ ಅಮಲ ಗೊಂದಿಯಾಗಿದೆ ಎಂದು ನಾಗವೀರಪ್ಪ ಎಂಬ ನಾಟಿ ವೈದ್ಯರು ಅಭಿಪ್ರಾಯ ಪಡುತ್ತಾರೆ.

ಕೆಂಪು ಮಿಶ್ರಿತ ಬಿಳಿ ಮರಳು, ಪ್ರದೇಶವಾಗಿದ್ದು ಶೇಂಗಾ ಬೆಳೆಗೆ ಉತ್ಕೃಷ್ಟ ಭೂಮಿಯಾಗಿದೆ. ಈ ಪರಿಸರದಲ್ಲಿ ಬೆಕ್ಕು, ಮೊಲ, ಹಂದಿ, ಉಡ, ಕರಡಿ, ಮುಂಗುಸಿ ಕಂಡು ಬರುತ್ತದೆ. ಪಶುಪಾಲನೆಗಾಗಿ ಹಸು, ಎತ್ತು, ಕುರಿ, ಮೇಕೆ ಸಾಕುತ್ತಾರೆ. ಪಕ್ಷಿಗಳಾದ ಕೌಜುಗ, ಗರುಡ, ಕಾಗೆ, ಕೋಗಿಲೆ, ಗೀಜಗ, ನವಿಲು, ಮರಕುಟಿಕ ಮೊದಲಾದ ಹಕ್ಕಿಗಳು ಕಂಡು ಬರುತ್ತವೆ. ವಾರ್ಷಿಕ ಮಳೆ ಪ್ರಮಾಣ ೪೬೫ ಮಿ.ಮೀ. ಇದ್ದು ಉಷ್ಣಾಂಶ ૩೮೦ ಸೆಂ, ಚಳಿ ೧೨೦ ಸೆಂ.ಇರುತ್ತದೆ. ಕುಡಿಯುವ ನೀರಿಗೆ ೪ ಸಿಸ್ಟನ್‌ಗಳಿದ್ದು ಕೊಳಾಯಿ ಮೂಲಕ ಸರಬರಾಜು ಮಾಡಲಾಗುತ್ತದೆ. ಒಂದು ಕೈ ಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು, ನಾಯಕ, ಬೋವಿ, ಕ್ರಿಶ್ಚಿಯನ್ ಇದ್ದು, ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ. ಕನ್ನಡ, ಇಂಗ್ಲೀಷ್, ಹಾಗೂ ತಮಿಳು ಭಾಷೆ ಮಾತನಾಡುತ್ತಾರೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ೧೧೦ ಮನೆಗಳಿದ್ದು, ೪೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಗ್ರಾಮದ ಜನಸಂಖ್ಯೆ ೨೬೨ ಇದ್ದು, ಪುರುಷರು ಶೇ. ೧೩೮ ರಷ್ಟು ಇದ್ದು, ಮಹಿಳೆಯರು ಶೇ. ೮೮ ರಷ್ಟಿದ್ದಾರೆ. ಜನತಾ, ಆಶ್ರಯ, ವಸತಿ ಯೋಜನೆಯ ૩೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ, ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಟ್ರ್ಯಾಕ್ಟರ್, ಟೆಂಪೋ, ಆಟೋ, ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಶೇಂಗಾ ಗ್ರಾಮದ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ಜೋಳ, ಅಲಸಂದಿ, ತೊಗರಿ ಬೆಳೆಗಳನ್ನು ಆಹಾರ ಬೆಳೆಯಾಗಿ ಬೆಳೆಯುತ್ತಾರೆ. ತೆಂಗು, ಅಡಿಕೆ ತೋಟಗಾರಿಕೆ ವಾಣಿಜ್ಯ ಬೆಳೆಯಾಗಿದೆ.

ಶಿಕ್ಷಣ, ಕಂದಾಯ, ಸಾರಿಗೆ, ಅಂಚೆ ಇಲಾಖೆಗೆ ಸೇರಿದ ಒಟ್ಟು ಆರು ಜನ ಸರ್ಕಾರಿ ನೌಕರರಿದ್ದು, ಬೀಡಿ ಕಟ್ಟುವುದು, ತೋಟದ ಎಲೆ ತಯಾರಿಸು ವುದು ಮೊದಲಾದ ಗೃಹ ಕಸುಬಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ, ಸೀಬಿ ಅಗ್ರಹಾರ ತಾಲ್ಲೂಕು ಪಂಚಾಯಿತಿ ಕೇಂದ್ರವಾಗಿರುವ ಈ ಗ್ರಾಮ, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಪಾಠಶಾಲೆ, ಗೇಟಿನ ಬಳಿ ಬೊಮ್ಮಲಿಂಗೇಶ್ವರ ಗ್ರಾಮಾಂತರ ಪ್ರೌಢಶಾಲೆ ಇದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಕರ್ಯಗಳಿವೆ. ಉಪಆರೋಗ್ಯ ಕೇಂದ್ರವಿದ್ದು, ನಾಗಪ್ಪ ಪಾರಂಪರಿಕ ವೈದ್ಯರಾಗಿದ್ದ ಆಯುರ್ವೇದಿಕ ಔಷಧಿ ನೀಡುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಕರ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೫ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದ ಹೊರ ವಲಯದಲ್ಲಿ ೨ ಕರುಗಲ್ಲುಗಳಿದ್ದು, ೨ ಅರಳಿ ಮರಗಳಿದ್ದು ಪೂಜೆಗೆ ಪಾತ್ರವಾಗಿದೆ.

ಕರಿಯಮ್ಮ, ಮುತ್ತುರಾಯ, ಶನಿದೇವರ ಗುಡಿಗಳಿದ್ದು, ಕ್ಯಾಥೋಲಿಕ್ ಕ್ರಿಶ್ಚಿಯನ್ನರ ಚರ್ಚ್ ಇದೆ. ಕರಿಯಮ್ಮ ಗ್ರಾಮ ದೇವತೆಯಾಗಿದ್ದು ಊರಹಬ್ಬ ನಡೆಯುತ್ತದೆ. ಆರತಿ, ಬಾನ, ಬ್ಯಾಟೆ ಪ್ರಮುಖ ಆಚರಣೆಗಳು. ಯುಗಾದಿ, ದೀಪಾವಳಿ, ನವಮಿ, ಪ್ರಮುಖ ಹಬ್ಬಗಳು. ಸಿರಾ–ತುಮಕೂರು ಸಿಡ್ಲೆ ಕೋಣ ರಸ್ತೆಗೆ ಸಾರಿಗೆ ಸಂಪರ್ಕವಿದೆ. ಬಸ್ ಸಂಚಾರ ಇರುವುದಿಲ್ಲ.

## ಅಜ್ಜಯ್ಯನ ಪಾಳ್ಯ

ಅಜ್ಜಯ್ಯನಪಾಳ್ಯ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಇದೊಂದು ಸೀಬಿ ಅಗ್ರಹಾರದ ಉಪಗ್ರಾಮವಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೧೮೩.೧೧ ಹೆಕ್ಟೇರ್ ಆಗಿದೆ. ಅಜ್ಜಯ್ಯ ಎಂಬ ಹೆಸರಿನ ಹಿರಿಯರೊಬ್ಬರ ಹೆಸರಿನಿಂದಲೇ ಗ್ರಾಮದ ಹೆಸರನ್ನು ಸೂಚಿಸಲಾಗಿದ್ದು ಇದೇ ಹೆಸರಿನಲ್ಲಿ ಕರೆಯಲಾಗುವುದೆಂದು ಹೇಳಲಾಗುತ್ತಿದೆ. ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕುಂಚಿಟಿಗ ಜನಾಂಗವಿದ್ದು, ಅಲ್ಪೇನವರ ಬೆಡಗಿನವರಾಗಿದ್ದು ಇವರ ಮೂಲದೈವ ರಂಗನಾಥ ಸ್ವಾಮಿಯಾಗಿದೆ. ಈ ರಂಗನಾಥ ಒಕ್ಕಲಲ್ಲಿ ದೇವರನ್ನು ಅಜ್ಜಯ್ಯ, ಹಿರಿಯವನು ಎಂಬ ಭಾವನೆಯಿಂದಲೂ ರಂಗನಾಥನ ಬದಲಿಗೆ ಕರೆಯಲಾಗಿದ್ದು, ಇದೇ ಹೆಸರಿನ ಮೂಲವಾಗಿದೆ ಎಂದು ರಂಗನಾಥ್ ಅವರ ಅಭಿಪ್ರಾಯವಾಗಿದೆ, ಬಿಳಿ ಸಣ್ಣ ಕಲ್ಲುಗಳ ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ದಿಣ್ಣೆ, ಹಳ್ಳ, ಪೊದೆ, ಕುರುಚಲು ಗಿಡಗಳಿಂದ ಕೂಡಿದೆ. ಈ ಪರಿಸರದಲ್ಲಿ ನರಿ, ತೋಳ, ಜಿಂಕೆ, ಹಂದಿ, ಕಾಡು ಪ್ರಾಣಿಗಳನ್ನು ಕಾಣ ಬಹುದಾಗಿದೆ. ಊರಲ್ಲಿ ಹಸು, ಎಮ್ಮೆ, ಎತ್ತು, ಕುರಿ, ಮೇಕೆ ಪ್ರಾಣಿಗಳನ್ನು ಸಾಕು ಪ್ರಾಣಿಗಳಾಗಿ ಸಾಕಲಾಗುವುದು. ಕೋಳಿಯನ್ನು ಮಾಂಸಕ್ಕೆ ಹಾಗೂ ಸಂತಾನ ವೃದ್ಧಿಗಾಗಿ ಸಾಕಲಾಗುತ್ತದೆ. ಪಕ್ಷಿಗಳಾದ ಗಿಳಿ, ಗೊರವ, ಬೆಳವ, ಕೌಜಲಗ, ಕಾಗೆ, ಹದ್ದು ಕಂಡು ಬರುತ್ತದೆ. ಗ್ರಾಮದ ಸರ್ಕಾರಿ ಮಳೆ ಪ್ರಮಾಣ ೫೫೭.೩ ಮಿ.ಮೀ. ಇದ್ದು, ಉಷ್ಣಾಂಶ ೩೮೦ ಸೆಂ. ಇರುತ್ತದೆ. ಚಳಿಯ ಪ್ರಮಾಣ ೧೨೦ ಸೆಂ. ಇರುತ್ತದೆ. ಗ್ರಾಮ ಪರಿಸರದಲ್ಲಿ ೨೫ ಕೊಳವೆ ಬಾವಿಗಳಿದ್ದು, ಕೃಷಿಕೆ ಪೂರಕವಾಗಿದೆ. ೨ ಟ್ಯಾಂಕ್‌ಗಳಲ್ಲಿ ನೀರನ್ನು ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಪೂರೈಸಲಾಗುತ್ತದೆ. ಒಂದು ಕೈ ಪಂಪು ಇದೆ. ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ದಾಸರು ಸಣ್ಣ ಸಮುದಾಯವಾಗಿದೆ. ಕನ್ನಡ ಗ್ರಾಮದ ಸಹಜ ಭಾಷೆಯಾಗಿದೆ.

ಕಾಂಕ್ರೀಟ್, ಹೆಂಚಿನ, ಶೀಟಿನ ಒಟ್ಟು ೬೨ ಮನೆಗಳಿದ್ದು೧೯ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೨೪೨ ಜನಸಂಖ್ಯೆ ಹೊಂದಿದ್ದು, ಶೇ. ೧೩೪ ಗಂಡಸರು ಹಾಗೂ ಹೆಂಗಸರು ಶೇ. ೧೦೮ ಇದ್ದಾರೆ. ಭಾಗ್ಯಜ್ಯೋತಿ, ಆಶ್ರಯ, ಜನತಾ ವಸತಿ ಯೋಜನೆಯ ೧೪ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನಗಾಡಿ, ಸಂಪ್ರದಾಯಿಕ ವಾಹನವಾದರೆ, ಟ್ರ್ಯಾಕ್ಟರ್, ಮಿನಿಟೆಂಪೋ, ಆಟೋ, ದ್ವಿಚಕ್ರವಾಹನ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ಅಲಸಂದಿ, ತೊಗರಿ, ಹುರುಳಿ ಬೆಳೆಯುತ್ತಾರೆ. ಶೇಂಗಾ ಹುಣಸೆಹಣ್ಣು ಮುಖ್ಯ ವಾಣಿಜ್ಯ ಬೆಳೆಯಾಗಿದೆ.

ಆಡಳಿತಾತ್ಮಕ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ಸೀಬಿ ಗ್ರಾಮ ಪಂಚಾಯಿತಿ ಹಾಗೂ ಸೀಬಿ ಅಗ್ರಹಾರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಈ ಗ್ರಾಮದ ಪಂಚಾಯಿತಿ ಪ್ರತಿನಿಧಿ ಇದ್ದಾರೆ. ಚಿತ್ರದುರ್ಗ ಲೋಕಸಭೆಗೆ ಈ ಗ್ರಾಮ ಸೇರಿದೆ. ಅಮ್ಮಾಜಿ, ರಂಗನಾಥ ಎಂಬ ಎರಡು ಸ್ತ್ರೀ ಶಕ್ತಿ ಕೇಂದ್ರಗಳಿದ್ದು, ಸ್ತ್ರೀ ಪರ ಚಟುವಟಿಕೆ, ಆರ್ಥಿಕ ಸಂಘಟನೆಯಲ್ಲಿ ತೊಡಿಗಿಸಿಕೊಂಡಿದೆಚ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಗಳಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಹಾಗೂ ಸಮವಸ್ತ್ರ, ಉಚಿತ ಪಠ್ಯಪುಸ್ತಕ ವಿತರಣೆ ಇದೆ. ಒಟ್ಟು ಸಾಕ್ಷರತಾ ಪ್ರಮಾಣ ಶೇ. ೭೧ ರಷ್ಟು ಪ್ರಮಾಣದಲ್ಲಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ವೃದ್ಧಾಪ್ಯ ವೇತನ, ವಿಧವಾ ವೇತನ, ಈ ಗ್ರಾಮದ ಸಮುದಾಯ ಸೌಲಭ್ಯಗಳಿವೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದ ಒಳಗೆ ಹಾಗೂ ಸೀಬಿ ಅಗ್ರಹಾರ ದಾರಿಯಲ್ಲಿ ಊರ ಹೊರಗೆ ೨ ವೀರಗಲ್ಲುಗಳಿದ್ದು, ತುರುಗೋಳ್ ಸಂಬಂಧಿಸಿದ

ಕಲ್ಲುಗಳಾಗಿವೆ. ಗ್ರಾಮದ ಆರಾಧ್ಯ ದೇವವಾರ ಮರಡಿ ರಂಗನಾಥ, ಹಾಗೂ ಶಕ್ತಿದೇವತೆ ಮುದ್ದೇಮಾರಮ್ಮ ದೇವಸ್ಥಾನಗಳಿವೆ. ಮರಡಿ ರಂಗನಾಥನ ಜಾತ್ರೆಯಂದೇ ಎದುರೆತ್ತಿ ಇಲ್ಲಿಯೂ ಜಾತ್ರೆ ಮಾಡಲಾಗುತ್ತದೆ. ಮೇಕೆ ಬಲಿ, ಮೇಕೆ ಮಾಂಸವನ್ನು ಈ ಗ್ರಾಮದ ಜನ ತಿನ್ನುವುದಿಲ್ಲ. ಇದನ್ನು ಅಸಿಸಿ ಎಂದು ಗೌರವಿಸುವುದು ಈ ಬೆಡಗಿನವರ ಸಂಪ್ರದಾಯವಾಗಿದೆ. ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ರಾಮನವಮಿ, ದಸರಾ ಹಾಗೂ ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮದ್ದೇಮಾರಿ ಊರಹಬ್ಬವಾಗಿ ಬಲಿ, ಬಾನ, ಆರತಿ ಸಂಪ್ರದಾಯವಿದೆ.

## ಅಜ್ಜೇನಹಳ್ಳಿ ಕಾಲೋನಿ

ಅಜ್ಜೇನಹಳ್ಳಿ ಕಾಲೋನಿ ಸಿರಾ ಕಾಲೋನಿ ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಸಿರಾ–ಕಳ್ಳಂಬೆಳ್ಳ ರ್‍ಯಾಯ ಹೆದ್ದಾರಿಯಲ್ಲಿ ಕಳ್ಳಂಬೆಳ್ಳ ಗ್ರಾಮದ ಹೊರಬದಿಯ ಕಳ್ಳಂಬೆಳ್ಳ ಬಂಗ್ಲೆಯಿಂದ ಪೂರ್ವಕ್ಕೆ ಅರ್ಧ ಕಿ.ಮೀ ದೂರದಲ್ಲಿದೆ. ಇದು ಹಾಲೇನಹಳ್ಳಿಯ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೧೯೨.೦೭ ಹೆಕ್ಟೇರ್ ಆಗಿದೆ. ಈ ಗ್ರಾಮದ ಮೂಲ ಗ್ರಾಮವಾಗಿ ಅಜ್ಜೇನಹಳ್ಳಿ ಗ್ರಾಮವಿದ್ದು ಇಲ್ಲಿ ಕಾಡುಗೊಲ್ಲರ ೨೨ ಮನೆಗಳಿವೆ. ಅಜ್ಜಯ್ಯನೆಂಬ ವ್ಯಕ್ತಿ ಮೂಲದಿಂದ ಈ ಗ್ರಾಮಕ್ಕೆ ಈ ಹೆಸರು ಬಂದಿದೆ. ಅಜ್ಜೇನಹಳ್ಳಿಯ ಪರಿಸರ ಕೆಂಪು ಮರಳು ಮಿಶ್ರಿತ ಮಣ್ಣಿನಿಂದ ಕೂಡಿದ್ದು, ತೋಟಗಾರಿಕೆ, ಕುರುಚಲು ಗಿಡ, ಮರ, ಪೊದೆಗಳಿಂದ ಕೂಡಿದೆ.

ಈ ಪರಿಸರದಲ್ಲಿ ನರಿ, ಮೊಲ, ಮುಂಗುಸಿ ಕಂಡು ಬರುತ್ತವೆ. ಗ್ರಾಮದಲ್ಲಿ ಕೃಷಿಕರು ಸೀಮೆ ಹಸು, ಹಳ್ಳಿಕಾರು ಎತ್ತುಗಳನ್ನು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಕೋಳಿ ಸಾಕು ಪಕ್ಷಿಯಾಗಿದೆ. ಅಂತೆಯೇ ಈ ಪರಿಸರದಲ್ಲಿ ಪಕ್ಷಿಗಳಾದ ಗಿಳಿ, ಕೋಗಿಲೆ, ಕಾಗೆ, ಗೊರವಂಕ, ಗೂಬೆ, ಹದ್ದು ಕಂಡು ಬರುತ್ತವೆ. ಈ ಭಾಗದ ವಾರ್ಷಿಕ ಸರಾಸರಿ ಮಳೆ ೫೫೭.೩ ಹೆಕ್ಟೇರ್ ಮಳೆಯಾಗುತ್ತದೆ. ಚಳಿ ೯೦ ಸೆಂ. ಇದ್ದು, ಉಷ್ಣಾಂಶ ೩೭೦ ಸೆಂ ಇರುತ್ತದೆ. ಈ ಪರಿಸರದಲ್ಲಿ ೧೮ ಕೊಳವೆ ಬಾವಿಗಳಿದ್ದು, ಕೃಷಿಗೆ ನೀರು ಒದಗಿಸುತ್ತದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರನ್ನು ೪ ಕಿರು ಟ್ಯಾಂಕ್‌ಗಳಿಗೆ ಹರಿಸಿ, ಕುಡಿಯಲು ಒದಗಿಸಲಾಗುತ್ತದೆ. ಒಂದು ಕೈ ಪಂಪು ಇದೆ.

ಕುಂಚಿಟಿಗ ಜನಾಂಗ ಇಲ್ಲಿನ ದೊಡ್ಡ ಸಮುದಾಯವಾಗಿದೆ. ಕನ್ನಡ ಭಾಷೆ ಇಲ್ಲಿನ ಮಾತೃ ಭಾಷೆಯಾಗಿದೆ. ವಿವಿಧ ಆಕೃತಿಯಲ್ಲಿ ೫೨ ಮನೆಗಳಿದ್ದು, ಅವು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಾಗಿವೆ. ೨೧೯ ಜನಸಂಖ್ಯೆ ಹೊಂದಿದ್ದು, ೨೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದೆ. ರೊಟ್ಟಿ, ದೋಸೆ, ಬಳಸುವವರಿದ್ದಾರೆ ಪಾಯಸ, ಹೋಳಿಗೆ ಸಾಂದರ್ಭಿಕ ಭೋಜನವಾಗಿದೆ. ಟ್ರ್ಯಕ್ಟರ್, ಲಾರಿ, ಟೆಂಪೋ, ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ತೊಗರಿ, ಅಲಸಂದಿ, ಜೋಳಗಳನ್ನು ಆಹಾರ ಬೆಳೆಗಳಾಗಿ ಬೆಳೆಯಲಾಗುತ್ತದೆ. ತೆಂಗು, ಅಡಿಕೆಯನ್ನು ತೋಟಗಾರಿಕೆ ಬೆಳೆಯಾಗಿ ಬೆಳೆಯಲಾಗುವುದು. ಶೇಂಗಾ, ಹುಣಸೇಹಣ್ಣು ಬೆಳೆಯನ್ನು ವಾಣಿಜ್ಯ ಬೆಳೆಯಾಗಿ ಬೆಳೆಯಲಾಗುವುದು. ಗ್ರಾಮದಲ್ಲಿ ಒಬ್ಬರು ಶಿಕ್ಷಕರು, ಒಬ್ಬರು ವಕೀಲರಿದ್ದಾರೆ. ಹೆಂಗಸರು ಬೀಡಿ ಸುತ್ತುವುದು, ಟೈಲರಿಂಗ್ ಕೆಲಸಗಳಿಂದ ಗೃಹ ಕೈಗಾರಿಕೆಯಲ್ಲಿ ತೊಡಗಿದ್ದಾರೆ.

ಈ ಗ್ರಾಮದ ಡಾ.ಎ.ಪಿ. ಮಹಾಲಕ್ಷ್ಮಮ್ಮ ಭೂ ವಿಜ್ಞಾನನ ಸ್ನಾತಕೋತ್ತರ ಪದವೀಧರೆಯಾಗಿದ್ದು, ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪಡೆದು, ಪ್ರಸ್ತುತ ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣ ಇಲಾಖೆಯಲ್ಲಿ ಭೂ ವಿಜ್ಞಾನಿಯಾಗಿ ಕಾರ್ಯ ನಿರ್ವಹಿಸುತ್ತಿರುವುದು ವಿಶೇಷ

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ, ಚಿಕ್ಕನಹಳ್ಳಿ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳನ್ನು ಸೇರಿದ್ದು, ಕಳ್ಳಂಬೆಳ್ಳ ಗ್ರಾಮ ಪಂಚಾಯಿತಿಗೆ ಸೇರಿದೆ. ಇಲ್ಲಿನ ಇಬ್ಬರು ಸದಸ್ಯರು ಈ ಗ್ರಾಮದ ಪಂಚಾಯಿತಿ ಸದಸ್ಯರಾಗಿದ್ದಾರೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ೩ ಸ್ತ್ರೀ ಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳೂ ಈ ಗ್ರಾಮದ ಮಹಿಳಾ ಸಬಲೀಕರಣ ಕಾರ್ಯದಲ್ಲಿ ತೊಡಗಿಸಿಕೊಂಡಿವೆ. ಒಂದು ಅಂಗನವಾಡಿ ಕೇಂದ್ರ, ಪ್ರಾಥಮಿಕ ಪಾಠಶಾಲೆ ಇದ್ದು, ೩೦ ಮಕ್ಕಳಿದ್ದು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕಗಳ ವಿತರಣೆ ಇದೆ. ಗ್ರಾಮದ ಸಾಕ್ಷರತೆ ಶೇ. ೬೬.೩ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೩ ಪೆಟ್ಟಿಗೆ ಅಂಗಡಿಗಳಿವೆ. ಆಂಜನೇಯ, ಮಾರಮ್ಮ, ಕೊಲ್ಲಾಪುರದಮ್ಮ ದೇವಾಲಯಗಳಿವೆ. ಮಾರಮ್ಮ ಗ್ರಾಮ ದೇವತೆಯಾಗಿದ್ದು, ಆರತಿ, ಬಾನ, ಬ್ಯಾಟೆ ಸಂಪ್ರದಾಯ ಹರಕೆಗಳಿವೆ. ಯುಗಾದಿ,

ದೀಪಾವಳಿ, ಶಿವರಾತ್ರಿ, ಗೌರಿ, ಗಣೇಶ ಹಬ್ಬಗಳನ್ನು ಆಚರಿಸುತ್ತಾರೆ.

## ಅಜ್ಜೇನಹಳ್ಳಿ ಗೊಲ್ಲರಹಟ್ಟಿ

ಅಜ್ಜೇನಹಳ್ಳಿ ಗೊಲ್ಲರಹಟ್ಟಿ ಒಂದು ಕಾಡುಗೊಲ್ಲರ ಬುಡಕಟ್ಟು ಗ್ರಾಮವಾಗಿದ್ದು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೪ ಕಿ.ಮೀ. ದೂರದಲ್ಲಿದೆ. ಇದು ಹಾಲೇನಹಳ್ಳಿಯ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ, ೮೮೭.೭೫ ಹೆಕ್ಟೇರ್ ಆಗಿದ್ದು, ಹಾಲೇನಹಳ್ಳಿ ಸರ್ವೆ ನಂ. ಗೆ ಒಳಪಟ್ಟಿದೆ. ಈ ಗ್ರಾಮಕ್ಕೆ ಸೇರಿದಂತೆ ೧೯೨.೦೭ ಹೆಕ್ಟೇರ್ ಅಜ್ಜೇನಹಳ್ಳಿ ಕಾಲೋನಿಯೊಂದಿಗೆ ಹಂಚಿಕೆಯಾಗಿದೆ. ಮರಳು ಮಿಶ್ರಿತ ಕೆಂಪು ಮಣ್ಣು ಹೊಂದಿರುವ ಈ ಗ್ರಾಮದ ಪರಿಸರದಲ್ಲಿ ನರಿ, ಮೊಲ, ಮುಂಗುಸಿ, ಉಡ, ಕಾಡುಬೆಕ್ಕು ಕಂಡು ಬರುತ್ತವೆ. ಗ್ರಾಮದ ರೈತರು ಪಶು ಪಾಲನೆ ಹಾಗೂ ಹೈನುಗಾರಿಕೆಗಾಗಿ ಹಸು, ಎಮ್ಮೆ ಸಾಕಿದ್ದಾರೆ ಕೃಷಿಗಾಗಿ ಎತ್ತು, ಹಸು ಸಾಕಿದ್ದಾರೆ. ಕುರಿ, ಕೋಳಿ, ಮೇಕೆ, ಕತ್ತೆ, ನಾಯಿ ಗ್ರಾಮದ ಇತರೆ ಸಾಕು ಪ್ರಾಣಿಗಳು. ಈ ಪರಿಸರದ ಪಕ್ಷಿಗಳಾದ ಕೋಗಿಲೆ, ಕಾಗೆ, ಗೂಬೆ, ಹದ್ದು, ಗರುಡ, ನವಿಲು, ಕೌಜುಗ, ಕೊಕ್ಕರೆ ಮೊದಲಾದ ಪಕ್ಷಿಗಳನ್ನು ಸಾಕಲಾಗುತ್ತಿದೆ.

ಅಜ್ಜಪ್ಪ ಎಂಬ ಹಿರಿಯರು ಸಿರಾ ಸಮೀಪದ ಓಜಗುಂಟೆ ಗೊಲ್ಲರ ಹಟ್ಟಿಯಿಂದ ಬಂದು, ಈ ಗ್ರಾಮದಲ್ಲಿ ನೆಲೆಸಿದ ಕಾರಣ ಅದೇ ಹೆಸರಿನಲ್ಲಿ ಅಜ್ಜಯ್ಯನಹಳ್ಳಿ –ಅಜ್ಜೇನಹಳ್ಳಿ ಆಗಿದೆ ಎಂದು ಪೂಜಾರಿ ಮಲ್ಲೇಶಯ್ಯ ಅಭಿಪ್ರಾಯ ಪಡುತ್ತಾರೆ.

ವಾರ್ಷಿಕ ಸರಾಸರಿ ೫೫೭.೩ ಹೆಕ್ಟೇರ್ ಮಳೆ ಬೀಳುತ್ತಿದ್ದು, ಬಿಸಿಲು ೩೮೦ ಸೆಂ. ಆಗಿರುತ್ತದೆ. ಹಾಗೂ ಚಳಿ ೧೨೦ ಸೆಂ. ಇರುತ್ತದೆ. ಕೃಷಿಗಾಗಿ ೭ ಪಂಪ್ ಸೆಟ್ ಇದ್ದು, ರೈತಾಪಿ ಬದುಕಿಗೆ ಆಶ್ರಯವಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ಒಂದು ಕಿರು ಟ್ಯಾಂಕ ಇದ್ದು, ಒಂದು ಕೈ ಪಂಪು ಇದೆ.

ಕಾಡುಗೊಲ್ಲರು ಮಾತ್ರ ವಾಸ ಮಾಡುತ್ತಿರುವ ಈ ಗ್ರಾಮದಲ್ಲಿ ಒಟ್ಟು ೨೨ ಮನೆಗಳಿವೆ. ವಿಶೇಷವಾಗಿ ಗೊಲ್ಲರ ಮಾರನೋರ ಗೊಲ್ಲರ (ಕರಡೀ ಗೊಲ್ಲರು) ಇದ್ದು, ಜುಂಜಪ್ಪನ ಒಕ್ಕಲಾಗಿರುವುದು ವಿಶೇಷವಾಗಿದೆ. ಕಾಂಕ್ರೀಟ್, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿದ್ದು, ೧೦ ಶೌಚಾಲಯ ಹೊಂದಿರುವ ಕುಟುಂಬಗಳಿವೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ೧೪೩ ಜನಸಂಖ್ಯೆ ಇದೆ.

ಈ ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ. ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಆಹಾರವಾಗಿದೆ. ಎತ್ತಿನಗಾಡಿ ಸಾಂಪ್ರದಾಯಿಕ ವಾಹನವಾದರೆ, ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ತೊಗರಿ, ಜೋಳ, ಅಲಸಂದಿ ಆಹಾರ ಬೆಳೆಗಳಾಗಿವೆ. ತೋಟಗಾರಿಕೆ ಯಾಗಿ ತೆಂಗು, ರೇಷ್ಮೆ ಬೆಳೆಯಿದೆ. ವಾಣಿಜ್ಯವಾಗಿ ಹುಣಸೆಹಣ್ಣು, ಕುರಿ ವ್ಯಾಪಾರ, ಹಾಲು, ಮಜ್ಜಿಗೆ ವ್ಯಾಪಾರ ಉಪಕಸುಬಾಗಿದೆ. ಒಬ್ಬರು ಸರ್ಕಾರಿ ನೌಕರರಿದ್ದು, ೬ ಜನ ಖಾಸಗಿ ನೌಕರಿಯಲ್ಲಿದ್ದಾರೆ. ಹೆಂಗಸರು ಬೀಡಿ ಕಟ್ಟುವುದು, ಹೂ ಕಟ್ಟುವುದು ಉಪಕಸುಬಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳಳ ಜಿಲ್ಲಾ ಪಂಚಾಯಿತಿ, ಚಿಕ್ಕನಹಳ್ಳಿ ತಾಲ್ಲೂಕು ಪಂಚಾಯಿತಿ ಹಾಗೂ ಯಶೋಧ್ಮ ಎಂಬುವವರು ಗ್ರಾಮದ ಪ್ರತಿನಿಧಿಯಾಗಿದ್ದಾರೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

೨ ಸ್ತ್ರೀಶಕ್ತಿ ಗುಂಪು ಇದ್ದು, ಮಹಿಳಾ ಆರ್ಥಿಕ ಸಬಲೀಕರಣ ಕಾರ್ಯದಲ್ಲಿ ಸಹಕರಿಸುತ್ತದೆ. ಶೇ. ೬೩.೨ ಸಾಕ್ಷರತರಿದ್ದಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಒಂದು ಗೂಡಂಗಡಿ ಇದೆ. ಜುಂಜಪ್ಪನ ಪೌಳಿ, ಗೌರಸಂದ್ರದ ಮಾರಮ್ಮನ ಗುಡಿ ಇದ್ದು, ವಾರ್ಷಿಕವಾಗಿ ಆರತಿ, ಪ್ರಾಣಿ ಬಲಿ ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ದೀಪಾವಳಿ, ಹಾಗೂ ಯುಗಾದಿ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ, ಹಾಲೇನಹಳ್ಳಿ ಬಳಿಯ ಜುಂಜಪ್ಪನ ಗುಡ್ಡ ಬಳಿಗೆ ಬಂದು ಜಾತ್ರೆ ಮಾಡುವುದು ಈ ಗ್ರಾಮದ ವಿಶೇಷ. ಪೂಜಾರಿ ಮಲ್ಲೇಶಯ್ಯನ ನೇತೃತ್ವದಲ್ಲಿ ಕಾರ್ಯ ನಡೆಯುತ್ತದೆ. ಉಳಿದಂತೆ ಮಹಾನವಮಿ, ದೀಪಾವಳಿ, ಗೌರಿಹಬ್ಬವನ್ನು ಆಚರಿಸುತ್ತಾರೆ. ಮಲ್ಲೇಶಯ್ಯ ಜುಂಜಪ್ಪನ ಮೇಲೆ ಪದ ಹಾಡುತ್ತಾರೆ. ಕಳ್ಳಂಬೆಳ್ಳ ಬಂಗಲೆಯಿಂದ ಹೊರಭಾಗದಲ್ಲಿ ಈ ಗ್ರಾಮವಿದ್ದು, ಕಳ್ಳಂಬೆಳ್ಳದೊಂದಿಗೆ ಕೂಡು ಗ್ರಾಮವಾಗಿದೆ.

## ಅಜ್ಜೇನಹಳ್ಳಿ

ಅಜ್ಜೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ವಾಯುವ್ಯ ದಿಕ್ಕಿನಲ್ಲಿ ೨೧ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣವು ೮೮೨.೦೧ ಹೆಕ್ಟೇರ್‌ಗಳಾಗಿದೆ. ಉಡಸರತಾಂಡ ಅಥವಾ ಬಾಲೇನಹಳ್ಳಿ ತಾಂಡ ಇದರ ಉಪಗ್ರಾಮವಾಗಿದೆ. ಇದು ಬುಕ್ಕಾಪಟ್ಟಣ ಹೋಬಳಿಗೆ ಸೇರಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ ಪ್ರದೇಶವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೭೧.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಭಾಗದಲ್ಲಿ ೩೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಕುಡಿಯುವ ನೀರಿನ ವ್ಯವಸ್ಥೆಗೆ ಕೈಪಂಪುಗಳನ್ನು ಗ್ರಾಮಪಂಚಾಯ್ತಿ ಕಲ್ಪಿಸಿದೆ.

ಗ್ರಾಮದಲ್ಲಿ ೮೪ ಮನೆಗಳಿದ್ದು ೧೬೨ ಜನಸಂಖ್ಯೆಯನ್ನು ಹೊಂದಿದೆ. ಕನ್ನಡ ಮಾತನಾಡುವ ಜನರಿದ್ದಾರೆ. ಇದರಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಈಡಿಗರು ಕಿರು ಸಮುದಾಯವಾಗಿದೆ. ಗ್ರಾಮದಲ್ಲಿ ವಸತಿ ಯೋಜನೆಗಳಾದ ಇಂದಿರಾ ಆವಾಸ್, ಆಶ್ರಯ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ೩೨ ಜನರಿದ್ದಾರೆ.

ಗ್ರಾಮದ ಜನರ ಉದ್ಯೋಗ ಕೃಷಿಯಾಗಿದ್ದು ಶೇಂಗಾ ಮುಖ್ಯ ಬೆಳೆಯಾಗಿದೆ. ಇದರೊಂದಿಗೆ ರಾಗಿ, ಭತ್ತ, ಜೋಳ, ಸೂರ್ಯಕಾಂತಿ ಹಾಗೂ ದ್ವಿದಳ ಧಾನ್ಯಗಳು, ತೆಂಗು, ಅಡಿಕೆ, ಬೇವು, ಹುಣಸೆ ಬೆಳೆಯನ್ನು ಬೆಳೆಯುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ, ನೇರಳಗುಡ್ಡ ತಾಲ್ಲೂಕು ಪಂಚಾಯ್ತಿ ಹಾಗೂ ತಹಸೀಲ್ದಾರ ಕಛೇರಿ ಬುಕ್ಕಾಪಟ್ಟಣ ಉಪಪೋಲೀಸ್ ಠಾಣೆ ಹಾಗೂ ವಿದ್ಯುತ್ ಮಂಡಳಿ ಮತ್ತು ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರನ್ನು ಹೊಂದಿದೆ. ಗ್ರಾಮದಲ್ಲಿ ಹಣಕಾಸಿನ ವ್ಯವಸ್ಥೆಯಲ್ಲಿ ಸ್ತ್ರೀಶಕ್ತಿ ಸಂಘಗಳಿಂದ ವ್ಯವಹಾರ ಮಾಡುತ್ತಿದ್ದಾರೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೭೭.೪% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಆರೋಗ್ಯದ ಬಗ್ಗೆ ತಿಳಿಯಲು ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿ, ೨ ಟೀ ಅಂಗಡಿಗಳಿವೆ. ಶಿಕ್ಷಣ ಸಾರಿಕೆ, ಕೆಇಬಿ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರಿದ್ದಾರೆ.

ಈ ಗ್ರಾಮದ ಸಮೀಪದಲ್ಲಿ ಅಜ್ಜೇನಹಳ್ಳಿ ಗುಡ್ಡ ಎಂಬ ಗುಡ್ಡವಿದೆ. ಇದರಲ್ಲಿ ಚಿನ್ನದ ನಿಕ್ಷೇಪವಿದ್ದು ಈ ಹಿಂದೆ ಇಲ್ಲಿ ಹಟ್ಟಿ ಚಿನ್ನದ ಗಣಿ ಕಂಪನಿಯವರು ಚಿನ್ನದ ಕಲ್ಲುಗಳನ್ನು ಸಂಗ್ರಹಿಸಿ ಚಿತ್ರದುರ್ಗದ ಸಮೀಪದ ಇಂಗಳದಾಳು ಕೈಗಾರಿಕೆ ಕಂಪನಿಗೆ ಸಾಗಿಸುತ್ತಿದ್ದರು. ಆದರೆ ಇದರ ಪ್ರಮಾಣ ಕಡಿಮೆಯಾಗಿ ಇಲ್ಲಿನ ಚಿನ್ನದ ಅನ್ವೇಷಣೆಯ ಕಾರ್ಯ ನಿಂತಿದೆ.

ಕ್ರಿ.ಶ.೧೭ ನೇ ಶತಮಾನಕ್ಕೆ ಸಂಬಂಧಿಸಿದ ಶಾಸನವೊಂದು ಈ ಗ್ರಾಮದ ಹೆಸರಿನಲ್ಲಿದ್ದು ಅದು ಎಪಿಗ್ರಾಫಿಯ ಕರ್ನಾಟಕ ಸಂಪುಟ–ಫಿ೩೩ ರಲ್ಲಿ ಪ್ರಕಟವಾಗಿದೆ. ಇಲ್ಲಿನ ವಿವರಗಳು ಅಸ್ಪಷ್ಟವಾಗಿದ್ದು ಎರಡು ಕೆರೆ ವಕ್ಕಲುಕುಂಟ ಅಜ್ಜಯ್ಯನ ದಾಸಯ್ಯ ಎಂದಿದೆ. ಸ್ತ್ರೀಶಕ್ತಿ ಕೇಂದ್ರ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಸ್ತ್ರೀಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ, ರಾಮನವಮಿ ಹಬ್ಬಗಳನ್ನು ಆಚರಿಸುತ್ತಾರೆ. ರಾಮನಹಳ್ಳಿ, ಜವಗೊಂಡನಹಳ್ಳಿ, ಹಿರಿಯೂರು ಮಾರ್ಗವಾಗಿ ರಸ್ತೆ ಸಂಪರ್ಕವಿದೆ.

## ಇನಕನಹಳ್ಳಿ

ಇನಕನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೩ ಕಿ.ಮೀ ದೂರದಲ್ಲಿದೆ. ಸಿರಾ–ಅಗಳಿ ರಸ್ತೆಯ ಮದಲೂರು ಗೇಟಿನಿಂದ ಎಡಭಾಗದಲ್ಲಿ ೩ ಕಿ.ಮೀ ದೂರದಲ್ಲಿದೆ. ಇದೊಂದು ಮದಲೂರಿನ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೩೨.೦೭ ಹೆಕ್ಟೇರ್ ಆಗಿದೆ. ಇನಕ ಎಂಬ ವ್ಯಕ್ತಿಯ ಹೆಸರಿನಲ್ಲಿ ಈ ಗ್ರಾಮ ನಿರ್ಮಾಣವಾಗಿದ್ದು ಇದೊಂದು ಪ್ರಾಚೀನ ಹಳ್ಳಿ ಎನ್ನುವುದಕ್ಕೆ ಈ ಗ್ರಾಮದ ಕೋಟೆ, ಊರಬಾಗಿಲು, ಗ್ರಾಮದ ಸುತ್ತಲೂ ಲಭ್ಯವಿರುವ ವೀರಮಾಸ್ತಿಕಲ್ಲುಗಳು ಸಾಕ್ಷಿ ನುಡಿಯುತ್ತವೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದೆ. ಗಿಡ, ಪೊದೆ, ಬಯಲು ಪ್ರದೇಶ. ಈ ಪರಿಸರದಲ್ಲಿ ನರಿ, ಮೊಲ, ಕರಡಿ, ಜಿಂಕೆ ಕಂಡುಬರುತ್ತದೆ. ಕೃಷಿ ಹಾಗೂ ಹೈನುಗಾರಿಕೆಗಾಗಿ ಇಲ್ಲಿ ಹಸುಗಳನ್ನು ಸಾಕಿದ್ದಾರೆ. ಉಳಿದಂತೆ ಹಳ್ಳಿಕಾರ್ ತಳಿಯ ಎತ್ತು, ಕುರಿ, ಮೇಕೆ, ಎಮ್ಮೆ ಇತರ ಸಾಕುಪ್ರಾಣಿಗಳು. ವಾರ್ಷಿಕ ಸರಾಸರಿ ೪೩೪ ಮಿಮೀ ಮಳೆ ಬೀಳುತ್ತದೆ. ಉಷ್ಣಾಂಶ ೩೮–೩೧೨ ಡಿಗ್ರಿ ಸೆಂ. ಸಹಜವಾಗಿರುತ್ತದೆ. ಚಳಿಯೂ ಅಧಿಕ ೧೨ ಡಿಗ್ರಿ ಸೆಂ. ಪೂರ್ವ–ಪಶ್ಚಿಮಕ್ಕೆ ಒಂದು ಹಳ್ಳ ಮಳೆಗಾಲದಲ್ಲಿ ಹರಿಯುತ್ತದೆ. ಉಳಿದಂತೆ ಬತ್ತಿಹೋಗುತ್ತದೆ. ಒಂದು ಕೆರೆ ಇದೆ, ತುಂಬುವುದು ಅಪರೂಪ. ಕೃಷಿಗಾಗಿ ೨೮ ಕೊಳವೆ ಬಾವಿಗಳನ್ನು ರೈತರು ಅವಲಂಬಿಸಿದ್ದಾರೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ಗ್ರಾಮದಲ್ಲಿ ೬ ಕಿರು ಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದೆ. ಕುರುಬ, ನಾಯಕ, ಆದಿಕರ್ನಾಟಕ, ಆದಿದ್ರಾವಿಡ, ಮಡಿವಾಳ ಜನಾಂಗಗಳು ಕಿರು ಸಮುದಾಯಗಳಾಗಿವೆ. ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಸ್ವರೂಪದ ೮೪ ಮನೆಗಳಿದ್ದು ಅವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಾಗಿವೆ. ೨೧ ಮನೆಗಳಲ್ಲಿ ಶೌಚಾಲಯ ಬಳಕೆಯಿದೆ ಒಟ್ಟು ೪೩೩ ಜನಸಂಖ್ಯೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನಗಳು. ಗ್ರಾಮದಲ್ಲಿ ಟ್ರ್ಯಾಕ್ಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯಬೆಳೆ. ರಾಗಿ, ಭತ್ತ, ಅಲಸಂದೆ, ತೊಗರಿ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ ಬೆಳೆಗಳಿವೆ. ಹುಣಸೆಹಣ್ಣು, ಹೊಂಗೆಬೀಜ, ಶೇಂಗಾ ಮಾರಾಟ ಬೆಳೆಗಳು.

ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತದೆ. ಸಾರಿಗೆ, ಶಿಕ್ಷಣ, ಆರೋಗ್ಯ, ಪೊಲೀಸ್ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಮಹಿಳೆಯರು ಬೀಡಿ ಕಟ್ಟುವ, ಟೈಲರಿಂಗ್ ಉಪಕಸುಬಾಗಿ ಸ್ವಾವಲಂಬನೆಗೆ ಪ್ರೇರಕವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಜಗನ್ನಾಥಪ್ಪ ಎಂಬುವವರು ಈ ಗ್ರಾಮದ ಪಂಚಾಯ್ತಿ ಸದಸ್ಯರಾಗಿದ್ದು ಸಧ್ಯ ಮದಲೂರು ಗ್ರಾಮಪಂಚಾಯ್ತಿ ಉಪಾಧ್ಯಕ್ಷರಾಗಿದ್ದಾರೆ. ೨ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯಕ ಸಂಘಗಳಿದ್ದು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿದೆ. ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೩೧ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೮.೭ ಆಗಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ವಿವಿಧ ಆಕೃತಿಯ ಐದು ವೀರಗಲ್ಲುಗಳಿವೆ. ಈ ಎಲ್ಲವೂ ನೊಳಂಬರ ಕಾಲಕ್ಕೆ ಸಂಬಂಧಿಸಿದವುಗಳು. ಒಂದು ವೀರಗಲ್ಲು ಶಾಸನವಾಗಿದ್ದು ತುರುಗೋಳ್‌ಗೆ ಸಂಬಂಧಿಸಿದ್ದು ೯ನೇ ಶತಮಾನಕ್ಕೆ ಸಂಬಂಧಿಸಿದೆ. ಬರಹ ಅಸ್ಖಲಿತವಾಗಿದ್ದು ಸಿರಾ ಶಾಸನ ೪೬ ರಲ್ಲಿ ಪ್ರಕಟವಾಗಿದೆ.

ಶ್ರೀರಾಮ, ಮಾರಮ್ಮ, ಯಲ್ಲಮ್ಮ ಈ ಗ್ರಾಮದ ದೇವಸ್ಥಾನಗಳು ಮಾರಮ್ಮನ ದೇವರ ಊರ ಉತ್ಸವವಾಗಿದ್ದು ಆರತಿ, ಬಾನ, ಬೇಟೆಯ ಹರಕೆ ಸಂಪ್ರದಾಯವಿದೆ. ಶ್ರೀರಾಮನವಮಿ ವಿಜೃಂಭಣೆಯಿಂದ ಆಚರಿಸುತ್ತಾರೆ. ಉಳಿದಂತೆ ಯುಗಾದಿ, ದೀಪಾವಳಿ, ಗೌರಿ–ಗಣೇಶ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

## ಇನಾಂಗೊಲ್ಲಹಳ್ಳಿ

ಇನಾಂಗೊಲ್ಲಹಳ್ಳಿ ಒಂದು ಕಂದಾಯ ಗ್ರಾಮ. ಸಿರಾ ತಾಲ್ಲೂಕು, ಕಸಬಾ ಹೋಬಳಿಗೆ ಸೇರಿರುವ ಈ ಗ್ರಾಮ ಸಿರಾ ಮದಲೂರು ಮುಖ್ಯ ರಸ್ತೆಯಲ್ಲಿ ಗಿಡಗನಹಳ್ಳಿ ತಿರುವಿನ ಬಲಬದಿಗೆ ಈ ಗ್ರಾಮ ೧ ಕಿ.ಮೀ. ದೂರದಲ್ಲಿದೆ. ಸಿರಾ ನಗರದಿಂದ ಉತ್ತರಕ್ಕೆ ೮ ಕಿ.ಮೀ. ದೂರದಲ್ಲಿದೆ. ಇದರ ಭೌಗೋಳಿಕ ವ್ಯಾಪ್ತಿ ೨೦೮.೦೨ ಹೆಕ್ಟೇರ್ ಆಗಿದೆ. ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದು ಬಯಲು ಪ್ರದೇಶವಾಗಿದೆ. ಗ್ರಾಮ ನಾಮಸೂಚಿ ತುಂಬಾ ವಿಶಿಷ್ಟವಾಗಿದ್ದು ಸರ್ಕಾರ ದಾನ ನೀಡಿದ ಭೂಮಿಯಲ್ಲಿ ಗ್ರಾಮ ರಚನೆಯಾಗಿರಬೇಕು ಅಥವಾ ರಾಜನೊಬ್ಬನು ದತ್ತಿ ಹಾಕಿಕೊಟ್ಟ ಕಾರಣವೂ ಇರಬಹುದು. ಉರ್ದು ಭಾಷೆಯ ಇನಾಮ್ ಪದ ಪೂರ್ವದಲ್ಲಿ ಹಾಗೆಯೇ ಉಳಿದು ಗೊಲ್ಲಹಳ್ಳಿ ಬಳಕೆಯಾಗಿದೆ.

ಗೊಲ್ಲ ಜನಾಂಗದವರು ಮೊದಲು ಇಲ್ಲಿ ನೆಲೆಸಿದ ಕಾರಣದಿಂದಲೇ ಗೊಲ್ಲಹಳ್ಳಿ ಬಂದಿದೆ. ಗೊಲ್ಲರಿಗೆ ಬಹುಮಾನ ಅಥವಾ ದಾನವಾಗಿ ಬಂದ ನೆಲ ಅಥವಾ ಗ್ರಾಮವಾದುದರಿಂದ ಇನಾಂ ಗೊಲ್ಲಹಳ್ಳಿ ಎಂದಾಗಿದೆ. ಆದರೆ ಇಡೀ ಗ್ರಾಮದಲ್ಲಿ ಇಂದು ಗೊಲ್ಲ ಜನಾಂಗದ ಒಂದೂ ಕುಟುಂಬಗಳು ಇಲ್ಲ. ಬದಲಿಗೆ ಆದಿಕರ್ನಾಟಕ, ಸರ್ಪ ಒಕ್ಕಲಿಗ ಹಾಗೂ ಈಡಿಗ ಜನಾಂಗದವರು ಇಲ್ಲಿನ ನಿವಾಸಿಗಳಾಗಿದ್ದಾರೆ.

ಮರಳುಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದು ಬಯಲು ಪ್ರದೇಶ ಗಿಡ–ಮರ, ಪೊದೆ ಹೆಚ್ಚು. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಉಡ, ಹಂದಿ ಕಂಡುಬಂದರೆ ಗ್ರಾಮದಲ್ಲಿ ಕುರಿ, ಮೇಕೆ, ನಾಯಿಗಳೊಂದಿಗೆ ಕೃಷಿ ಹಾಗೂ ಹೈನುಗಾರಿಕೆಗಾಗಿ ಸೀಮೆ ಹಾಗೂ ನಾಟಿಹಸು, ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಗಿಳಿ, ಗೀಜಗ, ಗಿಡುಗ, ಗೂಬೆ, ಗುಬ್ಬಚ್ಚಿ, ಕೋಗಿಲೆ, ಕಾಗೆ, ಕೊಕ್ಕರೆಗಳನ್ನು ಕಾಣಬಹುದು. ನಾಟಿ ಹಾಗೂ ಗಿರಿರಾಜ ಕೋಳಿಯನ್ನು ಸಾಕಿದ್ದಾರೆ. ಬಿಸಿಲು ಅಧಿಕ ನೀರಿನ ತೀವ್ರ ಕೊರತೆ ಇದೆ. ಮಳೆಯ ಪ್ರಮಾಣ ೬೪೦ ಮಿಮೀ ಇದ್ದು ಉಷ್ಣಾಂಶ ೩೯–೪೦ ಡಿಗ್ರಿ ಸೆಂ. ಇರುತ್ತದೆ. ಚಳಿ ೧೨ ಡಿಗ್ರಿ ಸೆಂ. ಕೃಷಿಗೆ ನಿಸರ್ಗದತ್ತ ಮಳೆ ನೀರಿನ ಜೊತೆಗೆ ೨೨ ಕೊಳವೆ ಬಾವಿಗಳ ಮೂಲಕ ನೀರನ್ನು ಬಳಸಿ ಬೆಳೆ ತೆಗೆಯುತ್ತಾರೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ. ೫ ಕಿರು ಟ್ಯಾಂಕ್ ಹಾಗೂ ಒಂದು ಕೈಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ದೊಡ್ಡ ಸಮುದಾಯವಾಗಿದ್ದು ಸರ್ಪಒಕ್ಕಲಿಗ, ಈಡಿಗ ಕಿರು ಸಮುದಾಯಗಳು. ಕನ್ನಡ ಇಲ್ಲಿನ ಮಾತೃಭಾಷೆ. ವಿವಿಧ ಸ್ವರೂಪದ ೭೪ ಮನೆಗಳಿದ್ದು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ೧೯ ಜನ ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ದೀಪದ ಸೌಲಭ್ಯ ಪಡೆದವರಿದ್ದಾರೆ. ೩೦ ಮನೆಗಳಲ್ಲಿ ಶೌಚಾಲಯದ ಬಳಕೆ ಇದ್ದು ೩೧೮ ಜನಸಂಖ್ಯೆ ಹೊಂದಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ತೊಗರಿ, ಅಲಸಂದೆ, ಆಹಾರ ಬೆಳೆಗಳು ತೋಟಗಾರಿಕೆ ಬೆಳೆಯಾಗಿ ರೇಷ್ಮೆ, ಅಡಿಕೆ, ಸೇವಂತಿಗೆ ಹೂಗಳನ್ನು ಬೆಳೆಯುತ್ತಾರೆ. ಒಂದು ಹಾಲಿನ ಡೈರಿ ಇದ್ದು ೧೫೦ ಲೀಟರ್ ಹಾಲು ಸಂಗ್ರಹವಾಗುತ್ತದೆ. ಶೇಂಗಾ, ಹುಣಸೆಹಣ್ಣು, ಹೊಂಗೆಬೀಜಗಳ ಮಾರಾಟದ ಸರಕುಗಳಾಗಿವೆ. ಶಿಕ್ಷಕರು, ಸಾರಿಗೆ, ಕಂದಾಯ ಇಲಾಖೆಯ ೬ ಜನ ಸರ್ಕಾರಿ ನೌಕರರಿದ್ದಾರೆ. ಬೀಡಿ ಸುತ್ತುವುದು, ಹೊಂಗೆ ಬೀಜ, ಹುಣಸೆಹಣ್ಣು ಬಿಡಿಸುವುದು ಮಹಿಳೆಯರ ಗೃಹ ಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ ಹೊನ್ನಗೊಂಡನಹಳ್ಳಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯತ್ ಕೇಂದ್ರವಾಗಿದ್ದು ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಸ್ತ್ರೀಶಕ್ತಿ ಸ್ವಸಹಾಯ ಗುಂಪಿನ ೨ ತಂಡಗಳಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ಶಾಲೆಯಲ್ಲಿ ೨೫ ವಿದ್ಯಾರ್ಥಿಗಳಿದ್ದಾರೆ, ಇಬ್ಬರು ಶಿಕ್ಷಕರಿದ್ದಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೨% ರಷ್ಟಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ ವೇತನ, ವಿಧವಾ ವೇತನ ಸೌಲಭ್ಯಗಳಿದ್ದು ೩ ಅಂಗಡಿಗಳಿವೆ. ಧಾರ್ಮಿಕವಾಗಿ ಗಂಗಮ್ಮ, ಗೌರಮ್ಮ ದೇವಸ್ಥಾನಗಳಿರುವುದು ಈ ಗ್ರಾಮದ ವಿಶೇಷ. ಈ ಬಗೆಯ ದೇವಾಲಯಗಳಿರುವುದು ತುಮಕೂರು ಜಿಲ್ಲೆಯ ಮಟ್ಟಿಗೆ ಈ ಒಂದೇ ಗ್ರಾಮವಾಗಿರುವುದು ವಿಶೇಷ ಸಂಗತಿ. ಭೂತಪ್ಪನ ದೇವಾಲಯವಿದ್ದು ಆಷಾಢ ಮಾಸದಲ್ಲಿ ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಶ್ರಾವಣ ಮಾಸದಲ್ಲಿ ಗಂಗೆ–ಗೌರಿ ಹಬ್ಬ ಮಾಡುತ್ತಾರೆ. ಆರತಿ, ಸಿಹಿ ಅಡಿಗೆ ಎಡೆ ಮಾಡಲಾಗುವುದು. ಯುಗಾದಿ, ಮಹಾನವಮಿ, ಶಿವರಾತ್ರಿ, ದೀಪಾವಳಿ ಈ ಗ್ರಾಮದ ಇತರೆ ಹಬ್ಬಗಳಾಗಿವೆ.

## ಈಡಿಗರ ದಾಸರಹಳ್ಳಿ

ಈಡಿಗರ ದಾಸರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೬ ಕಿ.ಮೀ. ದೂರದಲ್ಲಿದೆ. ಇದು ಯಲಿಯೂರು ಗ್ರಾಮದ ಉಪಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೨೪೩ ಹೆಕ್ಟೇರ್ ಇದೆ. ಈಡಿಗರ ದಾಸಪಂಥದ ವ್ಯಕ್ತಿ ಮೊದಲಿಗೆ ಈ ಗ್ರಾಮ ನಿರ್ಮಿಸಿದ ಕಾರಣದಿಂದ ಜನಾಂಗ ಮತ್ತು ಪಂಥ ಎರಡನ್ನೂ ಸೇರಿಸಿ ಈಡಿಗರ ದಾಸರಹಳ್ಳಿ ಎಂದು ಕರೆಯಲಾಗಿದೆ. ಈಡಿಗರೇ ಊರಿನ ಮೂಲಪುರುಷರು ಎಂಬುದಕ್ಕೆ ಈ ಗ್ರಾಮದ ಆಂಜನೇಯ ದೇವಾಲಯದ ಬಳಿ ಕರಿಗಲ್ಲು ಇದೆ. ಈ ಉದ್ದನೆಯ ಕರಿಗಲ್ಲಿನಲ್ಲಿ ಈಚಲು ಮರದಿಂದ ಹೆಂಡ ಇಳಿಸುವ ಚಿತ್ರ, ಹೆಂಡದ ಮಡಿಕೆ, ಕೊಡಲಿ ಹಾಗೂ ಈಚಲು ಮರ ಏರಲು ಬಳಸುವ ಚರ್ಮ ಪಟ್ಟಿಕೆಯನ್ನು ಬಿಡಿಸಲಾಗಿದೆ. ಇದು ಈಡಿಗ ಜನಾಂಗೀಯ

ಸಂಸ್ಕೃತಿಯ, ಕುಲ ಕಸುಬಿನ ದಟ್ಟ ವಿವರಣೆ ಕೊಡುವ ಕಲ್ಲಾಗಿರುವ ಕಾರಣದಿಂದ ಈ ಗ್ರಾಮ ನಿರ್ಮಾಣದಲ್ಲಿ ಈಡಿಗರೇ ಮೊದಲನೆಯವರು ಎಂಬ ಖಚಿತ ವಿವರಣೆ ಲಭ್ಯವಾಗುತ್ತದೆ. ಈ ಕಲ್ಲು ಸಿರಾದ ಪಾಳೆಯಗಾರರ ಕಾಲದ ರಚನೆಯಾಗಿರಬೇಕೆಂದು ಪ್ರಿನ್ಸಿಪಾಲ್ ಅಹೋಬಲಯ್ಯ ಅಭಿಪ್ರಾಯಪಡುತ್ತಾರೆ.

ಮರಳು ಮಿಶ್ರಿತ ಕೆಂಪು, ಕಂದು ಮಣ್ಣನ್ನು ಹೊಂದಿದ್ದು ಒಂದು ಪುಟ್ಟ ಕೆರೆಯಿದೆ. ಉತ್ತರ–ದಕ್ಷಿಣಾಭಿಮುಖವಾಗಿ ಕರೆಹಳ್ಳ ಹರಿಯುತ್ತಿದ್ದು ಇದು ಮಳೆಗಾಲದಲ್ಲಿ ಮಾತ್ರ ನೀರಿರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಯಾದ ನರಿ, ಕಾಡುಹಂದಿ, ಮೊಲ, ಮುಂಗುಸಿ ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಪಕ್ಷಿಗಳಾದ ಗಿಳಿ, ಗೊರವಂಕ, ಗೀಜುಗ, ಕೋಗಿಲೆ, ಕಾಗೆ, ಬೆಳವ ಪಕ್ಷಿಗಳನ್ನು ಕಾಣಬಹುದು. ಕೋಳಿ ಇಲ್ಲಿನ ಸಾಕು ಪಕ್ಷಿಯಾಗಿದೆ. ವಾರ್ಷಿಕ ಸರಾಸರಿ ಮಳೆ ೪೫೧.೪ ಮಿಮೀ ಆಗುತ್ತಿದ್ದು ಬಿಸಿಲು ೩೮ ಡಿಗ್ರಿ ಸೆಂ. ಇದ್ದರೆ ಚಳಿ ೧೨ ಡಿಗ್ರಿ ಸೆಂ. ಇರುತ್ತದೆ. ಈ ಪರಿಸರದಲ್ಲಿ ೨೫ ಕೊಳವೆ ಬಾವಿಗಳಿದ್ದು ಒಂದು ಕೆರೆಯಿದೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ೨ ಕಿರು ಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ.

ಈಡಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗರು, ಬಣಜಿಗ ಸಣ್ಣ ಸಮುದಾಯಗಳು. ಕನ್ನಡ ಮಾತೃಭಾಷೆಯಾಗಿದೆ. ಕಾಂಕ್ರೀಟ್, ಹೆಂಚಿನ, ಶೀಟಿನ ಒಟ್ಟು ೭೪ ಮನೆಗಳಿದ್ದು ೨೮೮ ಜನಸಂಖ್ಯೆಯನ್ನು ಹೊಂದಿದೆ. ೩೬ ಮನೆಗಳಲ್ಲಿ ಶೌಚಾಲಯವಿದೆ.

ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೩ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ಆಟೋಗಳಿವೆ. ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಇಲ್ಲಿನ ಮುಖ್ಯ ಬೆಳೆ. ಆಹಾರ ಬೆಳೆಗಳಾದ ರಾಗಿ, ಜೋಳ, ಅಲಸಂದೆ, ತೊಗರಿ ಬೆಳೆಗಳನ್ನು ಬೆಳೆಯಲಾಗುವುದು. ಸೂರ್ಯಕಾಂತಿ, ಹತ್ತಿ ಬೆಳೆಯಿದೆ. ಶೇಂಗಾ ಹಾಗೂ ಹುಣಸೆಹಣ್ಣು ಪ್ರಮುಖ ವಾಣಿಜ್ಯ ಬೆಳೆಗಳು. ಶಿಕ್ಷಣ, ಸಾರಿಗೆ, ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುವ ೪ ಜನ ಸರ್ಕಾರಿ ನೌಕರರಿದ್ದಾರೆ.

ಈ ಗ್ರಾಮದಲ್ಲಿ ದೊರೆತ ೨ ಶಾಸನಗಳಲ್ಲಿ ಒಂದರಲ್ಲಿ ಇಲ್ಲಿ ದೇವಸ್ಥಾನ ನಿರ್ಮಿಸಿ, ಅದರ ಪುಣ್ಯ ಕಾರ್ಯಗಳ ವಿವರವಿದೆ. ಮತ್ತೊಂದು ಶಾಸನದಲ್ಲಿ ಸಿರಾದ ಈಡಿಗರ ಸಣ್ಣ ಪಡಿಗಯ್ಯನು ಸಿರಾದ ಶಂಕರರಾಶಿ ವಂಶದ ಕುಮಾರ ರಾಯಪ್ಪನಿಂದ ೩೫೦ ರೂ.ಗಳಿಗೆ ಎಲೆಯೂರಿಗೆ ಸೇರಿದ ರಾಮನಹಳ್ಳಿ ಮತ್ತು ದಾಸೇಗೌಡನಹಳ್ಳಿಗಳನ್ನು ಕೊಂಡುಕೊಂಡ ಉಲ್ಲೇಖವಿದ್ದು ಇದು ೧೮ನೇ ಶತಮಾನದ ಶಾಸನವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ, ಯಲಿಯೂರು ತಾಲ್ಲೂಕು, ಗ್ರಾಮಪಂಚಾಯ್ತಿ ಕ್ಷೇತ್ರ ಹೊಂದಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರ ಹೊಂದಿದೆ. ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ೨ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳಾ ಸಬಲೀಕರಣದಲ್ಲಿ ತೊಡಗಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೬೪.೮% ಸಾಕ್ಷರತಾ ಪ್ರಮಾಣ ಹೊಂದಿದೆ. ಈಡಿಗರ ದಾಸಣ್ಣ ಎಂಬುವವರು ಕುಡಿಯುವ ನೀರಿನ ಬಾವಿ ಕಟ್ಟಿಸಿ ಹಾಸಿರುವ ಶಾಸನವೊಂದು ಈ ಗ್ರಾಮದಲ್ಲಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಅಂಗಡಿಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಅಂಜಿನಪ್ಪ, ತಿಮ್ಮಪ್ಪ, ಭೂತಪ್ಪನ ಗುಡಿಗಳಿವೆ. ಆಂಜಿನಯ್ಯ, ತಿಮ್ಮಪ್ಪ ಪ್ರಾಚೀನ ದೇವಾಲಯವಾಗಿದ್ದು ಆಂಜನೇಯನ ಗುಡಿಯನ್ನು ಪುನರ್ ನಿರ್ಮಿಸಲಾಗಿದೆ. ಭೂತಪ್ಪನ ಪೌಳಿಯಿದೆ. ದಾಸ ಪರಂಪರೆಯವರು ಯುಗಾದಿಯ ದಿನ ಮಣೇವು ತಿದ್ದುವುದು, ಹರಿಗೆ ಸೇವೆ ನಡೆಸುತ್ತಾರೆ. ಆಂಜನೇಯನ ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ. ಭೂತಪ್ಪನಿಗೆ ಆರತಿ, ಬಲಿ, ಬ್ಯಾಟೆ ಇರುತ್ತದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಮಹಾನವಮಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಭಾಗವತ ರಮಾನಂದ ಹೆಸರಾಂತ ಯಕ್ಷಗಾನ ಭಾಗವತರಾಗಿದ್ದು ಜಿಲ್ಲೆಯ ಪ್ರಮುಖ ಕಲಾವಿದರೆಂದು ಗುರುತಿಸಿಕೊಂಡಿದ್ದಾರೆ. ಇವರ ನಿರ್ದೇಶನದ ಹತ್ತಾರು ಯಕ್ಷಗಾನ ಪ್ರಸಂಗಗಳು ಜನಪ್ರಿಯವಾಗಿವೆ. ರಮೇಶ್, ವೆಂಕಟೇಶ್ ಇತರೆ ಮೂಡಲಪಾಯ ಯಕ್ಷಗಾನದ ಕಲಾವಿದರು. ರಮಾನಂದ ಹಾಗೂ ಅವರ ಕುಟುಂಬ

ಮೂಡಲಪಾಯ ಯಕ್ಷಗಾನವನ್ನು ಅಭಿನಯಿಸುವ ಕಲಾ ಕುಟುಂಬವಾಗಿದೆ.

## ಉಪ್ಪಾರಪಾಳ್ಯ

ಉಪ್ಪಾರಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೫ ಕಿಮೀ ದೂರದಲ್ಲಿದೆ. ಸಿರಾ–ಮದಲೂರು–ಬರಗೂರು ರಸ್ತೆಯಲ್ಲಿ ಈ ಗ್ರಾಮವಿದ್ದು ಇದು ಮದಲೂರಿನ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೧೮೦.೧೬ ಹೆಕ್ಟೇರ್ ಇದ್ದು ಬಯಲು ಪ್ರದೇಶವಾಗಿದೆ. ಈ ಪರಿಸರ ಕುರುಚಲು ಗಿಡ, ಮರ, ಪೊದೆಗಳಿಂದ ಕೂಡಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಉಡ, ಹಂದಿ, ಮುಂಗುಸಿ ಕಂಡುಬರುತ್ತವೆ.

ಉಪ್ಪಾರ ಜನಾಂಗದವರು ಇಲ್ಲಿನ ಮೂಲನಿವಾಸಿಗಳಾಗಿದ್ದು ಜನಾಂಗಿಕ ಹೆಸರಿನಲ್ಲಿಯೇ ಗ್ರಾಮದ ಹೆಸರು ಕರೆಯಲಾಗಿದೆ. ಗೊಲ್ಲರಹಟ್ಟಿ, ಕುರುಬರ ಹಳ್ಳಿ ಈ ಬಗೆಯ ಹಳ್ಳಿಗಳು ಜಾತಿ ಹೆಸರಿನಿಂದಲೂ ರಚನೆಯಾಗಲು ಪ್ರಮುಖ ಕಾರಣ ಆಯಾಯ ಜನಾಂಗದವರು ಗ್ರಾಮ ರಚನೆಯ ಕಾಲದಲ್ಲಿ ಪ್ರಭಾವಿ ಪ್ರೇರಣೆಯೇ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿಯೇ ಉಪ್ಪಾರಪಾಳ್ಯ ಗ್ರಾಮದ ಹೆಸರು ಬಂದಿದೆ. ಗ್ರಾಮದಲ್ಲಿ ಕೃಷಿಗಾಗಿ ರೈತರು ಎತ್ತು, ಎಮ್ಮೆ, ಕುರಿ, ಮೇಕೆ ಸಾಕಿದ್ದಾರೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನವಿಲು, ಗಿಳಿ, ಗೊರವಂಕ, ಗೂಬೆ, ಗುಬ್ಬಚ್ಚಿ, ಕೋಗಿಲೆ, ಕಾಗೆ, ಕೊಕ್ಕರೆ ಬಾವಲಿ, ಹದ್ದು, ಗರುಡ ಪಕ್ಷಿಗಳು ಕಂಡುಬರುತ್ತವೆ. ಮಳೆ ಪ್ರಮಾಣ ಕಡಿಮೆ. ಸರಾಸರಿ ಮಳೆ ೪೩೪ ಮಿಮೀ ಇದ್ದು ಚಳಿ ೧೨ ಡಿಗ್ರಿ ಸೆಂ. ಇದ್ದರೆ ಬಿಸಿಲು ೩೮–೪೦ ಡಿಗ್ರಿ ಸೆಂ. ಇರುತ್ತದೆ. ಕೃಷಿಗೆ ಮಳೆಯ ನೀರಿನ ಜೊತೆಗೆ ಬೋರ್‌ವೆಲ್‌ಗಳ ಬಳಕೆಯಿದೆ. ಈ ಪರಿಸರದಲ್ಲಿ ೮ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಒದಗಿಸಲಾಗುತ್ತಿದ್ದು ೨ ಕಿರು ಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಉಪ್ಪಾರ ಜನಾಂಗ ದೊಡ್ಡ ಸಮುದಾಯವಾಗಿದ್ದು ಮಡಿವಾಳ ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಸ್ವರೂಪದ ೨೫ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಾಗಿದ್ದು ೮೭ ಜನಸಂಖ್ಯೆ ಹೊಂದಿದೆ. ೮ ಮನೆಗಳಲ್ಲಿ ಶೌಚಾಲಯಗಳನ್ನು ಹೊಂದಿದೆ. ಇಲ್ಲಿನ ಮನೆಗಳಲ್ಲಿ ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆಯ ೬ ಫಲಾನುಭವಿಗಳಿದ್ದು ಭಾಗ್ಯಜ್ಯೋತಿ ವಿದ್ಯುತ್ ಉಪಯೋಗ ಪಡೆದಿದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಭೋಜನದ ವ್ಯವಸ್ಥೆ ಇದೆ. ಗ್ರಾಮದಲ್ಲಿ ಎತ್ತಿನ ಬಂಡಿಯ ಜೊತೆಗೆ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆ. ಜೊತೆಗೆ ರಾಗಿ, ಭತ್ತ, ಜೋಳ, ಅಲಸಂದೆ, ತೊಗರಿ ಬೆಳೆಯುತ್ತಾರೆ. ತೆಂಗು, ಸೂರ್ಯಕಾಂತಿ, ಸೇವಂತಿಗೆ ಹೂಗಳನ್ನು ಬೆಳೆಯುತ್ತಾರೆ. ಗ್ರಾಮದಲ್ಲಿ ಶೇಂಗಾ, ಹುಣಸೆಹಣ್ಣಿನ ವ್ಯಾಪಾರಸ್ಥರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಗ್ರಾಮಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಒಂದು ಸ್ತ್ರೀಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಸಬಲೀಕರಣಕ್ಕೆ ಪ್ರೇರಕವಾಗಿದೆ. ಒಂದು ಅಂಗನವಾಡಿ ಕೇಂದ್ರವಿದ್ದು ೧೩ ಮಕ್ಕಳಿದ್ದಾರೆ. ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸಲಾಗುವುದು. ಗ್ರಾಮದ ಸಾಕ್ಷರತಾ ಪ್ರಮಾಣ ೬೮.೭ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ ಸೌಲಭ್ಯ ಪಡೆದವರಿದ್ದಾರೆ. ೧ ಪೆಟ್ಟಿಗೆ ಅಂಗಡಿಯಿದೆ.

ಗ್ರಾಮದಲ್ಲಿ ಕೊಲ್ಲಾಪುರದಮ್ಮನ ಗುಡಿಯಿದ್ದು ವಾರ್ಷಿಕ ಊರ ಹಬ್ಬ ಆಚರಿಸುತ್ತಾರೆ. ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಾಗಿದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಉದ್ದರಾಮನಹಳ್ಳಿ

ಉದ್ದರಾಮನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೧೭ ಕಿಮೀ ದೂರದಲ್ಲಿದ್ದು ನಾದೂರು ಜೋಡಿ ಗ್ರಾಮವಿದೆ. ಈ ಗ್ರಾಮದ ಭೌಗೋಳಿಕ ವ್ಯಾಪ್ತಿ ೨೫೪೩.೮೪ ಹೆಕ್ಟೇರ್ ಇದ್ದು ಇಲ್ಲಿ ೨೨೨ ಮನೆಗಳಿವೆ. ಕುಂಚಿಟಿಗರು, ನಾಯಕರು ಸಮ ಪ್ರಮಾಣದಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಗೊಲ್ಲರು, ಕೊರಚರು, ದೊಂಬಿ ದಾಸರು, ಮುಸ್ಲಿಂ ಸಮುದಾಯ ಇಲ್ಲಿ ಸಣ್ಣ ಪ್ರಮಾಣದಲ್ಲಿದೆ. ಗ್ರಾಮದಲ್ಲಿ ಕನ್ನಡ ಭಾಷೆ ಪ್ರಧಾನವಾದರೂ ಉರ್ದು ಬಳಕೆಯಲ್ಲಿದೆ. ಕೆಂಪು–ಬಿಳಿ ಮಿಶ್ರಿತ ಮರಳು ಈ ಗ್ರಾಮದ ಭೂಲಕ್ಷಣವಾಗಿದ್ದು ಇಲ್ಲಿ ರಾಗಿ, ಶೇಂಗಾ, ಅಲಸಂದೆ, ತೊಗರಿ

ಮುಖ್ಯ ಬೆಳೆಗಳು. ನೀರಾವರಿ ಸೌಕರ್ಯ ಇದ್ದವರು ಹತ್ತಿ, ದಾಳಿಂಬೆ, ಸಪೋಟ, ತೆಂಗು, ಅಡಿಕೆ ಬೆಳೆಯುತ್ತಾರೆ. ಗ್ರಾಮದಲ್ಲಿ ನಾಟಿ ಹಸು, ಸೀಮೆಹಸು ಸಾಕು ಪ್ರಾಣಿಗಳು. ಕುರಿ, ಮೇಕೆ ಸಾಕಾಣಿಕೆಯೂ ಇದೆ.

ಗ್ರಾಮದ ಪರಿಸರದಲ್ಲಿ ಕಾಡುಹಂಜಿ, ಜಿಂಕೆ, ತೋಳ, ಮುಂಗುಸಿ, ನವಿಲು, ಕಾಡುಕೋಳಿ, ಹದ್ದು, ಕಾಗೆ, ಗಿಳಿ ಕಂಡುಬರುತ್ತಿದೆ.

ಸರಾಸರಿ ವಾಡಿಕೆ ಮಳೆ ೪೬೫ ಮಿಮೀ ಆಗಿದ್ದು ಉಷ್ಣಾಂಶ ೩೬ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಈ ಗ್ರಾಮದ ರಾಮಣ್ಣ ಹೆಸರಿನ ಹಲವರು ಈ ಗ್ರಾಮದಲ್ಲಿದ್ದ ಕಾರಣಗಳಿಂದ ಉದ್ದಕ್ಕೆ ಎತ್ತರವಾಗಿದ್ದ ವ್ಯಕ್ತಿಯ ಕಾರಣದಿಂದ ಉದ್ದರಾಮನಹಳ್ಳಿ ಎಂದು ಈ ಗ್ರಾಮಕ್ಕೆ ಹೆಸರು ಬಂದಿದೆ ಎಂದು ಹೇಳಲಾಗುತ್ತಿದೆ. ಗ್ರಾಮದಲ್ಲಿ ಬಡಗಿ, ಕುಂಬಾರಿಕೆ ಕಾಯಕದ ಎರಡು ಕುಟುಂಬಗಳಿವೆ.

ಸಿರಾ ವಿಧಾನಸಭಾ ಕ್ಷೇತ್ರ, ಗೌಡಗೆರೆ ಹೋಬಳಿ, ಚಿತ್ರದುರ್ಗ ಲೋಕಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿರುವ ಇಲ್ಲಿ ಮೂವರು ಗ್ರಾಮ ಪಂಚಾಯ್ತಿ ಸದಸ್ಯರಿದ್ದು ಇವರ ಪೈಕಿ ಲೀಲಾವತಿ ಎಂಬುವವರು ನಾದೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿದ್ದಾರೆ. ಗ್ರಾಮದಲ್ಲಿ ನಾಲ್ಕು ಸ್ತ್ರೀಶಕ್ತಿ ಗುಂಪು, ಒಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಗುಂಪು ಇದ್ದು ಗ್ರಾಮದ ಸಾಕ್ಷರತಾ ಪ್ರಮಾಣ ೬೮.೫ ಇದ್ದು ಪುರುಷರು ಮೇಲ್ಮೆ ಸಾಧಿಸಿದ್ದು ೮೦.೫ ಮಹಿಳೆಯರು ೫೫.೭ ಇದ್ದಾರೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಶಾಲೆ ಸೇರಿದಂತೆ ಒಟ್ಟು ೫೯ ಮಕ್ಕಳು ಇಲ್ಲಿ ಕಲಿಯುತ್ತಿದ್ದು ೩ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷೆ, ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೧೬ ಅಂಗಡಿಗಳಿವೆ.

ಕಣಿವೆ ಮಾರಕ್ಕ ಈ ಗ್ರಾಮದ ಅಧಿದೇವತೆಯಾಗಿದ್ದು ಶ್ರಾವಣ ಮಾಸದಲ್ಲಿ ಊರ ಹಬ್ಬದ ಮಾದರಿಯಲ್ಲಿ ಕಣಿವೆ ಮಾರಕ್ಕನ ಜಾತ್ರೆ ನಡೆದು ಬಲಿ, ಆರತಿ, ಬಾನ ನಡೆಯುತ್ತದೆ. ಶನಿಮಹಾತ್ಮ, ಮಾರಮ್ಮ, ಭೂತಪ್ಪ, ಮುತ್ತುರಾಯ ದೇವರುಗಳ ಪೌಳಿಗಳಿವೆ. ಅರಳಿಕಟ್ಟೆ ಇದ್ದು ನಾಗಪ್ಪನ ಪೂಜೆ ವಿಶೇಷವಾಗಿರುತ್ತದೆ.

ಗ್ರಾಮದಲ್ಲಿ ಉದ್ದನೆಯ ರಾಮಣ್ಣನ ಹೆಸರಿನ ಉದ್ದರಾಮನ ಬಾವಿ, ಉದ್ದರಾಮನ ಹೊಲ ಎಂದೇ ಕರೆಯುತ್ತಾ ಬರುತ್ತಿರುವುದು ಈ ಗ್ರಾಮದ ವಿಶೇಷವಾಗಿದೆ. ವಿಶೇಷವಾಗಿ ಹಂಡೇನೂರ ಕುಲದಲ್ಲಿ ಇಂದಿಗೂ ರಾಮಣ್ಣ, ರಾಮಚಂದ್ರ ಎಂಬ ಹೆಸರನ್ನು ಇಟ್ಟು ಕರೆಯುವುದು ಸಹಜವಾಗಿದೆ. ೨ ಕರಿಗಲ್ಲುಗಳಿದ್ದು ಯುಗಾದಿಯಂದು ಹೂವು, ಕಾಯಿ ಒಡೆದು ಪ್ರತಿಯೊಬ್ಬರೂ ಪೂಜಿಸುತ್ತಾರೆ.

ಇಂಜಿನಿಯರ್, ಶಿಕ್ಷಕರು, ಗ್ರಂಥಪಾಲಕರು, ಸಾರಿಗೆ, ಆರೋಗ್ಯ ಇಲಾಖೆಯ ೮ ಜನ ಸರ್ಕಾರಿ ನೌಕರರಿದ್ದಾರೆ. ಕೇಂದ್ರ ಸರ್ಕಾರದ ಅಂಚೆ ಮಾಸ್ಟರ್ ಕುಮಾರ್ ಇದೇ ಗ್ರಾಮದವರು. ಇದೊಂದು ಕಲಾ ಗ್ರಾಮವಾಗಿದ್ದು ಯಕ್ಷಗಾನ, ಪೌರಾಣಿಕ ರಂಗಭೂಮಿಗೆ ವಿಶಿಷ್ಟ ಕೊಡುಗೆ ನೀಡಿದೆ. ಯಕ್ಷಗಾನ ಭಾಗವತ ವೀರಕ್ಯಾತಪ್ಪ ಶನಿದೇವರ ಕಣಿಮಣ್ಣ, ಮಾಜಿ ಛೇರ್ಮನ್ ಗೋವಿಂದಜ್ಜಿ ರಾಮಣ್ಣ, ಸಣ್ಣಜ್ಜಿ ಕಮರಣ್ಣ ಮುಖ್ಯರು, ಭಜನೆ ಕಲಾವಿದರಾಗಿ ಮಣೆಗಾರ ಕದುರಪ್ಪ, ಕರಿಯಣ್ಣ ಅತ್ಯುತ್ತಮ ಭಜನೆ ಕಲಾವಿದರಾಗಿ ಹೆಸರು ಮಾಡಿದ್ದರು. ಚಿಕ್ಕನಾಗಪ್ಪ, ಡೈರಿ ನಾಗರಾಜ್ ಸಾಮಾಜಿಕ, ಪೌರಾಣಿಕ ಕಲಾವಿದರಾಗಿದ್ದಾರೆ.

## ಉಜ್ಜನಕುಂಟೆ

ಉಜ್ಜನಕುಂಟೆ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೬ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೫೪೫.೨೯ ಹೆಕ್ಟೇರ್ ಇದ್ದು ಸಿರಾ-ಹಿರಿಯೂರು ರ‍್ರಾ.ಿಯ ಹೆದ್ದಾರಿಯಲ್ಲಿ ತಾವರೆಕೆರೆಯಿಂದ ೪ ಕಿಮೀ ದೂರದಲ್ಲಿ ಹೆದ್ದಾರಿಯಿಂದ ಬಲಭಾಗದಲ್ಲಿ ೨ ಕಿಮೀ ಅಂತರದಲ್ಲಿದೆ.

ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿರುವ ಒಂದು ಬಗೆಯ ಕಂದು ಬಣ್ಣದಿಂದಲೂ ಕೂಡಿದೆ. ಗ್ರಾಮದಪೂರ್ವಕ್ಕೆ ೧೨೫ ಹೆಕ್ಟೇರ್ ರಕ್ಷಿತ ಅರಣ್ಯವಿದ್ದು ಈ ಪರಿಸರ ಕುರುಚಲು

ಕಾಡು, ಪೊದೆ. ಮರ, ಹಳ್ಳ, ದಿಣ್ಣೆಗಳಿಂದ ಕೂಡಿದೆ. ಹಾಗಾಗಿ ಇಲ್ಲಿ ಮೊಲ, ಜಿಂಕೆ, ಮುಂಗುಸಿ, ತೋಳ, ಕಾಡುಹಂದಿ ಕಂಡು ಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ ಸಾಕಿದ್ದಾರೆ. ಗಿಳಿ, ಕೋಗಿಲೆ, ಕಾಗೆ, ಹದ್ದು, ಗರುಡ ಮೊದಲಾದ ಕಾಡುಪಕ್ಷಿಗಳಿವೆ. ಕೋಳಿ ಈ ಭಾಗದ ಸಾಕುಪಕ್ಷಿಯಾಗಿದೆ.

ವಾರ್ಷಿಕ ವಾಡಿಕೆ ಮಳೆ ೫೯೪ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ೩೮ ಕೊಳವೆ ಬಾವಿಗಳಿವೆ. ಉತ್ತರದಲ್ಲಿ ಒಂದು ಹಳ್ಳವಿದ್ದು ಬಲಬದಿಗೆ ಉಜ್ಜನಕುಂಟೆ ಕೆರೆಯಿದೆ.

ಗ್ರಾಮದಲ್ಲಿ ಈಶ್ವರ ದೇವಾಲಯವಿದ್ದು ಹಿರಿಯ ತಾತಯ್ಯ, ಅಜ್ಜಯ್ಯ ಎಂಬ ಅರ್ಥದಲ್ಲಿ ಅಜ್ಜಯ್ಯ > ಉಜ್ಜನ ಹೆಸರು ಗ್ರಾಮಕ್ಕೆ ಬಂದಿದೆ ಎಂದು ಗ್ರಾಮಸ್ಥರ ಅಭಿಮತವಾಗಿದೆ. ಕುಡಿಯಲು ಗ್ರಾಮ ಪಂಚಾಯ್ತಿ ಮೂಲಕ ಕೈಪಂಪು, ಟ್ಯಾಂಕ್ ಮೂಲಕ ನೀರು ಪೂರೈಸಲಾಗುವುದು.

ಕುಂಚಿಟಿಗರು, ಕುರುಬರು, ನಾಯಕ, ಆದಿಕರ್ನಾಟಕ, ಈಡಿಗ ಈ ಗ್ರಾಮದ ಜನಾಂಗಗಳಾಗಿದ್ದು ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ ಒಟ್ಟು ೧೩೦ ಮನೆಗಳಿದ್ದು ಆಶ್ರಯ, ಜನತಾ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನ ಎತ್ತಿನ ಗಾಡಿ, ಮಿನಿ ಟೆಂಪೋ, ಆಟೋ, ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ ಹಾಗೂ ಅಲಸಂದೆ, ತೊಗರಿ ಆಹಾರ ಬೆಳೆಗಳು. ಶೇಂಗಾ, ಹುಣಸೆಹಣ್ಣು ವಾಣಿಜ್ಯ ಬೆಳೆಗಳಾಗಿವೆ. ಬೀಡಿ ಸುತ್ತುವುದು, ಊಟದ ಎಲೆ ತಯಾರಿಕೆ, ಬಟ್ಟೆ ಹೊಲಿಯುವುದು ಗೃಹೋಪಯೋಗಿ ಕೈಗಾರಿಕೆಯಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ತಾಲ್ಲೂಕು ಜಿಲ್ಲಾ ಹಾಗೂ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ೩ ಸ್ತ್ರೀಶಕ್ತಿ ಸಂಘಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಕಾರ್ಯ ನಿರ್ವಹಿಸುತ್ತಿದೆ.

ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಶಾಲೆಯಲ್ಲಿ ೫೯ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೯.೪% ಇದ್ದು ಪುರುಷರು ೬೯%, ಮಹಿಳೆಯರು ೪೯% ರ ಪ್ರಮಾಣದಲ್ಲಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೭ ಪೆಟ್ಟಿಗೆ ಅಂಗಡಿಗಳಿವೆ.

ಗ್ರಾಮದಲ್ಲಿ ಪ್ರವೇಶ ದ್ವಾರದ ಬಳಿ ೨ ಕರಿಗಲ್ಲುಗಳಿದ್ದು ಬದಿಗೆ ೨ ಅರಳಿ ಮರಗಳಿವೆ. ಇದು ಗ್ರಾಮದ ಪೂಜೆಯ ಸ್ಥಳವಾಗಿದೆ. ಈಶ್ವರ, ರಂಗನಾಥ, ಲಕ್ಷ್ಮೀದೇವಿ ಗ್ರಾಮದ ಆರಾಧ ಕೇಂದ್ರಗಳು. ಗ್ರಾಮದ ಹೊರಗೆ ಅರಣ್ಯ ಪರಿಸರದಲ್ಲಿರುವ ರಂಗನಾಥ ದೇವರಿಗೆ ವಾರ್ಷಿಕವಾಗಿ ಜಾತ್ರೆ ಮಾಡುತ್ತಾರೆ. ಯುಗಾದಿ, ಸಂಕ್ರಾಂತಿ, ದೀಪಾವಳಿ, ಶ್ರೀರಾಮ ನವಮಿ, ದಸರಾ ಪ್ರಮುಖ ಹಬ್ಬಗಳು. ಮಾರಮ್ಮ ದೇವರ ಆರತಿ, ಬಾನ, ಬ್ಯಾಟೆ ಇದ್ದು ಊರಹಬ್ಬದ ಮಾದರಿಯಲ್ಲಿ ಉತ್ಸವ ಇರುತ್ತದೆ. ಸಿರಾ–ಹಿರಿಯೂರು ಚಿತ್ರದುರ್ಗ ರ್‍ಾಜ್ಯ ರಸ್ತೆ ಸಂಪರ್ಕವಿದೆ.

## ಉಜ್ಜನಕುಂಟೆ ಗೊಲ್ಲರಹಟ್ಟಿ

ಉಜ್ಜನಕುಂಟೆ ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೭ ಕಿ.ಮೀ. ದೂರದಲ್ಲಿದೆ. ಇದು ಉಜ್ಜನ ಕುಂಟೆಯ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ಮೂಲ ಗ್ರಾಮದ ೫೪೫.೨೯ ಹೆಕ್ಟೇರ್‌ನಲ್ಲಿ ಹಂಚಿಕೆ ಯಾಗಿದೆ. ಸಿರಾ–ಹಿರಿಯೂರು ಮುಖ್ಯ ರಸ್ತೆ ತಾವರೇಕೆರೆ ಗ್ರಾಮದಿಂದ ಉತ್ತರಕ್ಕೆ ೨ ಕಿ.ಮೀ. ದೂರದಲ್ಲಿದೆ.

ಕಾಡುಗೊಲ್ಲರ ೩೦ ಮನೆಗಳಿದ್ದು, ಇದು ಆಶ್ರಯ, ಇಂದಿರಾ ಆವಾಸ್, ವಸತಿ ಯೋಜನೆಯಿಂದ ರಚನೆಯಾಗಿವೆ. ಹೆಂಚಿನ, ಶೀಟಿನ, ಕಾಂಕ್ರೀಟ್ ಸ್ವರೂಪದ ಮನೆಗಳಿದ್ದು, ೨೨೩ ಜನಸಂಖ್ಯೆ ಹೊಂದಿದ್ದು, ಯಾವುದೇ ಮನೆಯಲ್ಲಿ ಶೌಚಾಲಯ ಬಳಸುವುದಿಲ್ಲ. ಕುಡಿಯಲು ಮುಖ್ಯ ಗ್ರಾಮ ಉಜ್ಜನ ಕುಂಟೆಯ ಮೂಲಕ ಬೋರ್‌ವೆಲ್‌ಗಳ ಮೂಲಕ ನೀರು ಪೂರೈಕೆಯಾಗುತ್ತಿದ್ದು, ಒಂದು ಕಿರು ಟ್ಯಾಂಕ್ ಇದೆ. ಅದರ ಮೂಲಕ ನೀರು ಪೂರೈಕೆಯಾಗುತ್ತಿದೆ.

ಗ್ರಾಮದವರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಅಮುಖ್ಯವಾಗಿ ಬಾಡೂಟ, ಪಾಯಸ, ಹೋಳಿಗೆ ಬಳಸುತ್ತಾರೆ.

ಶೈಕ್ಷಣಿಕವಾಗಿ ಮುಖ್ಯ ಗ್ರಾಮ ಉಜ್ಜನಕುಂಟೆಗೆ ಹೋಗಬೇಕಾಗಿದೆ. ಈ ಗ್ರಾಮ ಹಾಗೂ ಉಜ್ಜನ ಕುಂಟೆ ನಡುವೆ ರಂಗನಾಥನ ದೇವಾಲಯವಿದ್ದು, ಏಪ್ರಿಲ್‌ನಲ್ಲಿ ಜಾತ್ರೆಯೂ ನಡೆಯುತ್ತದೆ. ಉಳಿದಂತೆ ಚಿತ್ರದೇವರ ಪೌಳಿ ಇದೆ.

ಕಂದಾಯ ವ್ಯವಹಾರ, ಮುಖ್ಯ ಗ್ರಾಮ ಉಜ್ಜನಕುಂಟೆಯೊಂದಿಗೆ ವ್ಯವಹರಿಸಲಾಗುತ್ತಿದೆ. ಜ್ವರ, ಕೆಮ್ಮು, ನೆಗಡಿ ಈ ಬಗೆಯ ಖಾಯಿಲೆಗಳಿಗೆ ಸಮೀಪದ ತಾವರೆಕೆರೆ, ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗುತ್ತಾರೆ. ಗ್ರಾಮದಲ್ಲಿ ಕುರಿ, ಮೇಕೆ, ಹಸು ಸಾಕು ಪ್ರಾಣಿಗಳು. ಕಾಡುಗೊಲ್ಲರು ಮಾತ್ರ ವಾಸವಾಗಿದ್ದಾರೆ.

ಈ ಗ್ರಾಮದಲ್ಲಿ ಇಬ್ಬರು ಶಿಕ್ಷಕರು, ಒಬ್ಬರು ಕಂದಾಯ ಇಲಾಖೆಯ ನೌಕರರಿದ್ದಾರೆ. ಯುಗಾದಿ, ದೀಪಾವಳಿ, ಗೌರಿ, ಗಣೇಶ, ದಸರಾ ಮುಖ್ಯ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕರಿಯಮ್ಮನ ಊರ ಹಬ್ಬ ನಡೆಯುತ್ತದೆ. ಆರತಿ, ಬಾನ, ಬಲಿ, ಹರಕೆ ಸಂಪ್ರದಾಯವಿರುತ್ತದೆ.

## ಉಮಾಪತಿಹಳ್ಳಿ

ಉಮಾಪತಿ ಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೫ ಕಿ.ಮೀ ದೂರದಲ್ಲಿದೆ. ಶೈವ ಸಂಸ್ಕೃತಿಯ ಆರಾಧನೆಯ ಹಿನ್ನೆಲೆಯಲ್ಲಿ ಶಿವ ಪಾರ್ವತಿ. ಸ್ಮರಣೆಗಾಗಿ ಈ ಹೆಸರು ಕರೆಯಲಾಗಿದೆ ಎಂದು ಗ್ರಾಮದ ಹನುಮಂತರಾಯಪ್ಪ ನವರ ವ್ಯಾಖ್ಯಾನವಾದರೆ, ಶೀಬಿಯ ನಾರಾಯಣಪ್ಪನವರ ವ್ಯಾಖ್ಯಾನ ಇದಕ್ಕೆ ಭಿನ್ನವಾಗಿದೆ. ಈ ಗ್ರಾಮದ ಪಕ್ಕದಲ್ಲಿ ಹಳೆಯ ಊರು ಇದ್ದು, ಅದರಲ್ಲಿ ಉಮಾಪತಿ ಎಂಬ ಬ್ರಾಹ್ಮಣ ಕುಟುಂಬವಿದ್ದು, ಗ್ರಾಮದ ಶ್ಯಾನುಭೋಗಿಕೆಯನ್ನು ನೋಡಿ ಕೊಳ್ಳುತ್ತಿದ್ದರು. ಕ್ರಮೇಣ ಈ ಕುಟುಂಬದವರು ಸೀಬಿ ಗ್ರಾಮಕ್ಕೆ ಬಂದು ನೆಲೆಸಿದರು. ಉಮಾಪತಿ ಶ್ಯಾನುಭೋಗರ ಹೆಸರಲ್ಲೇ ಸರ್ಕಾರಕ್ಕೆ ದಾಖಲೆ ಒದಗಿಸಿದ್ದರಿಂದಾಗಿ 'ಉಮಾಪತಿಹಳ್ಳಿ' ಎಂಬ ಹೆಸರು ಬಂದಿದೆ ಎಂದು ನಾರಾಯಣಪ್ಪ ಅವರ ಹೇಳಿಕೆ ಸಮಂಜಸವಾಗಿದೆ. ೪೨ ಮನೆಗಳಿರುವ ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ, ಮುಖ್ಯ ಗ್ರಾಮ ಸೀಬಿಯಲ್ಲಿ ಹಂಚಿಕೆಯಾಗಿ, ೨೦೭೩.೩೪ ರಲ್ಲಿ ಹಂಚಿಕೆಯಾಗಿದೆ. ಸೀಬಿ–ಕಲ್ಲಶೆಟ್ಟಿಹಳ್ಳಿಯ ಮಾರ್ಗವಾಗಿಯೂ ಅಥವಾ ಸಿರಾ ತುಮಕೂರು ರ‍್ಯಾಷ್ಟ್ರೀಯ ಹೆದ್ದಾರಿಯ ಮೂಲಕ, ಹುಂಜನಾಳ್ ತಿರುವಿನಲ್ಲಿ– ಹುಂಜನಾಳ ಮಾರ್ಗವಾಗಿಯೂ ಉಮಾಪತಿ ಹಳ್ಳಿಗೆ ಬರಬಹುದಾಗಿದೆ. ಗುಬ್ಬಿ ತಾಲ್ಲೂಕಿನ ಗಡಿ ಗ್ರಾಮಕ್ಕೆ ಸಮೀಪವಾಗಿ, ಬಸರಿಹಳ್ಳ, ಅನುಪನಕುಂಟೆಯ ಕಾಡಿನ ಪರಿಸರದ ಕಲ್ಲು ನೆಲ ಉಮಾಪತಿಹಳ್ಳಿಯಾಗಿದೆ. ಬಿಳಿ ಸಣ್ಣ ಕಲ್ಲು, ಮರಳು ಮಿಶ್ರಿತ ನೆಲವಾಗಿದ್ದು, ಈ ಗ್ರಾಮದ ಪೂರ್ವಕ್ಕೆ ಕಾಡು, ಬಿಕ್ಕೆ ಗುಡ್ಡ, ಬಸರಿಹಳ್ಳ, ಹುಂಜನಹಳ್ಳಗಳಿವೆ. ೨೧೪ ಜನಸಂಖ್ಯೆ ಇದೆ.

ಹಾಗಾಗಿ ಈ ಕಾಡಿನ ಪರಿಸರದಲ್ಲಿ ನರಿ, ತೋಳ, ಮೊಲ, ಜಿಂಕೆ, ಮುಂಗುಸಿ, ಉಡ, ಆಮೆ ಮೊದಲಾದ ಕಾಡು ಪ್ರಾಣಿಗಳು ಅಧಿಕವಾಗಿ ಕಂಡು ಬರುತ್ತವೆ. ಗ್ರಾಮದಲ್ಲಿ ನಾಟಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ಕೋಳಿಯನ್ನು ಸಾಕುತ್ತಾರೆ. ಪಕ್ಷಿಗಳಾದ ಕೋಗಿಲೆ, ಗಿಳಿ, ಕೌಜುಗ, ಕಾಗೆ, ಗೊರವಂಕ, ಬೆಳವ, ಕೊಕ್ಕರೆ ಮೊದಲಾದ ಪಕ್ಷಿ ಜಾತಿಯ ಹಕ್ಕಿಗಳೂ ಕಂಡು ಬರುತ್ತವೆ. ವಿಶೇಷವಾಗಿ ಜನವರಿ–ಮಾರ್ಚಿ ತಿಂಗಳಲ್ಲಿ ಈ ಗ್ರಾಮದ ಸಮೀಪಕ್ಕೆ ಅನುಪನಕುಂಟೆ ಕಾಡು ಇದ್ದು, ಅದರಲ್ಲಿ ಮರಡಿ ಎಂಬ ಜಾತಿಯ ಮರ, ಕಪ್ಪು ದ್ರಾಕ್ಷಿ ಮಾದರಿಯಲ್ಲಿ ಗೊಂಚಲು ಗೊಂಚಲಾಗಿ ಹಣ್ಣು ಬಿಡುತ್ತದೆ. ಈ ಹಣ್ಣಿನ ಸಂದರ್ಭದಲ್ಲಿ ವ್ಯಾಪಕವಾಗಿ ವಿವಿಧ ಬಗೆಯ ಪಕ್ಷಿಗಳು ಈ ಭಾಗದಲ್ಲಿ ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ೪೬೫ ಮಿ.ಮೀ. ಮಳೆ ಬೀಳುವ ಈ ಪ್ರದೇಶದಲ್ಲಿ ೩೮–೪೦ ಸೆಂ. ಬಿಸಿಲು ಇರುತ್ತದೆ. ೧೨೦ ಸೆಂ. ಚಳಿಯೂ ಇರುತ್ತದೆ. ಕಲ್ಲು ನೆಲವಾಗಿ ಸದಾ ಶೀತದಿಂದ ಕೂಡಿರುತ್ತದೆ. ಈ ಗ್ರಾಮದ ಪರಿಸರದಲ್ಲಿ ೨೮ ಕೊಳವೆ ಬಾವಿಗಳಿದ್ದು, ಪೂರ್ವಕ್ಕೆ, ಹುಂಜನಹಳ್ಳ ವಿದೆ. ಈ ನೈಸರ್ಗಿಕ ಹಳ್ಳದಲ್ಲಿ, ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿ, ತುಮಕೂರು ತಾಲ್ಲೂಕಿನ ಬೆಳ್ಳಾವಿ, ಕೋರಾ ಹೋಬಳಿಯ ಭೌಗೋಳಿಕ ಪ್ರದೇಶದಿಂದ ನೀರು ಹರಿದು ಬರುತ್ತದೆ. ಈಗ ಬಳ್ಳ–ಸಿರಾ ಕೆರೆ ತಲುಪುತ್ತದೆ. ಆದರೂ ಕುಡಿಯುವ ನೀರಿಗೆ ತೊಂದರೆ ಇದ್ದು, ಬೋರ್‌ವೆಲ್‌ಗಳು ಮೂಲಕ ಹರಿದು, ಕಳ್ಳಂಕೆರೆ ಇದ್ದು, ಬೋರ್‌ವೆಲ್‌ಗಳ ಮೂಲಕ ನೀರು ಸಂಗ್ರಹಿಸಿ, ಗ್ರಾಮ ಪಂಚಾಯಿತಿ ವತಿಯಿಂದ, ಸಣ್ಣ ಟ್ಯಾಂಕ್‌ಗಳಲ್ಲಿ ನೀರನ್ನು ಬಿಡಲಾಗುತ್ತಿದೆ. ಒಂದು ಕೈ ಪಂಪು ಇದೆ.

ಬೇಡ–ನಾಯಕ ಸಮುದಾಯ ಈ ಗ್ರಾಮದ ದೊಡ್ಡ ಜನಾಂಗವಾಗಿದ್ದು, ಕುಂಚಿಟಿಗರು, ವಿಶ್ವಕರ್ಮ, ಜನಾಂಗ ಸಣ್ಣ ಸಮುದಾಯವಾಗಿದೆ. ಒಟ್ಟು ೪೨ ಮನೆಗಳಿದ್ದು, ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಆರು ಮನೆಗಳಲ್ಲಿ ಶೌಚಾಲಯವಿದ್ದು, ಜನತಾ, ಆಶ್ರಯ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದವರು ಅಧಿಕವಾಗಿದ್ದಾರೆ.

ಈ ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ರೊಟ್ಟಿ ಬಳಸುವವರಿದ್ದಾರೆ ಬಾಡೂಟ– ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳು ಬಳಕೆ ಇದ್ದು, ಶೇಂಗಾ ಪ್ರಮುಖ ಬೆಳೆಯಾಗಿದೆ. ತೊಗರಿ, ಜೋಳ, ರಾಗಿ, ಹುರುಳಿ, ನವಣೆ, ಅಡಿಕೆ ಈ ಬಗೆಯ ಆಹಾರ ಬೆಳೆಗಳನ್ನು ಬೆಳೆಯುತ್ತಾರೆ. ತೋಟಗಾರಿಕೆ ಸಹಾಯದಿಂದ

ತೆಂಗು, ರೇಷ್ಮೆ ಬೆಳೆಗಳನ್ನು ಬೆಳೆಯುತ್ತಾರೆ. ಒಂದು ಕಿರಿಯ ಶಾಲೆ ಇದ್ದು, ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಲಭ್ಯವಿದೆ. ಶಿಕ್ಷಣ, ಸಾರಿಗೆ ಇಲಾಖೆಯ ೩ ಜನ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ಸೀಬಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ಕ್ಷೇತ್ರವಾಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಮಾರಮ್ಮ, ಮುತ್ತುರಾಯ, ಭೂತಪ್ಪ ದೇವಾಲಯವಿದ್ದು, ಸೀಬಿ ನರಸಿಂಹಸ್ವಾಮಿಗೆ ಆರತಿ ಬಲಿ ಕೊಡುವ ಸಂಪ್ರದಾಯವಿದೆ. ಗ್ರಾಮದಲ್ಲಿ ಸಂಧ್ಯಾ ಸುರಕ್ಷೆ, ವಿಧವಾ ವೇತನ, ವೃದ್ಧಾಪ್ಯ ವೇತನಗಳ ಫಲಾನುಭವಿಗಳಿದ್ದು, ೨ ಎತ್ತಿನ ಬಂಡಿ, ಹಾಗೂ ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳಿವೆ. ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಉದ್ದಯ್ಯನಪಾಳ್ಯ

ಉದ್ದಯ್ಯನಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೪ ಕಿ.ಮೀ. ದೂರದಲ್ಲಿದೆ. ಇದು ರ್ಾ್ರಯ ಹೆದ್ದಾರಿ ಸಿರಾ –ತುಮಕೂರು ಮಾರ್ಗದಲ್ಲಿ ಕಳ್ಳಂಬೆಳ್ಳದಿಂದ ಎಡಭಾಗದಲ್ಲಿದ್ದು, ಹಾಲೇನಹಳ್ಳಿಯ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೧೩೦ ಹೆಕ್ಟೇರ್ ಆಗಿದೆ. ಮರಳು ಮಿಶ್ರಿತ ಕಂದು ಮಣ್ಣಿನಿಂದ ಕೂಡಿದೆ.

ಈ ಪರಿಸರದಲ್ಲಿ ತೋಟಸಾಲು, ಕುರುಚಲು ಗಿಡ, ಹಳ್ಳ, ದಿಣ್ಣೆ ಇರುವುದರಿಂದ ಈ ಭಾಗದಲ್ಲಿ ನರಿ, ಮೊಲ, ಬಾರುಬೆಕ್ಕು, ಉಡ, ಮುಂಗುಸಿ ಹಾವು ಕಂಡು ಬರುತ್ತದೆ. ಗ್ರಾಮದಲ್ಲಿ ಹೈನುಗಾರಿಕೆಗೆ ಸೀಮೆ ಹಸು ಸಾಕಿದ್ದಾರೆ. ಕೃಷಿಗಾಗಿ ಎತ್ತು, ಹಸು ಸಾಕಿದ್ದಾರೆ. ಕುರಿ, ಮೇಕೆ ವಿರಳವಾಗಿರುವ ಸಾಕು ಪ್ರಾಣಿಗಳು. ಪಕ್ಷಿಗಳಾದ ನವಿಲು, ಕೌಜಲಗ, ಗಿಳಿ, ಕೋಗಿಲೆ, ಗೊರವ, ಬೆಳವ ಕಂಡು ಬಂದರೆ, ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ೫೫೭.೩ ಮಿ.ಮೀ. ಮಳೆ ಬೀಳುತ್ತಿದ್ದು, ಚಳಿಯು ೧೨೦ ಸೆಂ. ಇದ್ದು. ಉಷ್ಣಾಂಶ ೩೮೦ ಸೆಂ. ಇರುತ್ತದೆ. ಕಳ್ಳಂಬೆಳ್ಳ ಕೆರೆಯ ನೀರಾವರಿಯಿಂದ ತೋಟಗಾರಿಕೆ ಮಾಡಲಾಗುತ್ತಿದೆ. ರೈತರು ೧೮ ಕೊಳವೆ ಬಾವಿಗಳ ಮೂಲಕ ನೀರಾವರಿಯಿಂದ ತೋಟಗಾರಿಕೆ, ಬೆಳೆಗಳಾದ ತರಕಾರಿ, ಹಣ್ಣು ಬೆಳೆಯುತ್ತಾರೆ. ಕುಡಿಯಲು ಗ್ರಾಮ ಪಂಚಾಯಿತಿಯ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ೩ ಕಿರು ಟ್ಯಾಂಕ್‌ಗಳ ಮೂಲಕ ನೀರು ಪೂರೈಸುತ್ತಿದ್ದಾರೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ತಿಗಳರು, ಮಡಿವಾಳ, ಮುಸ್ಲಿಂ ಕಿರು ಸಮುದಾಯ ವಾಗಿದೆ. ೪೭ ಮನೆಗಳಿದ್ದು, ಅವುಗಳು ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಾಗಿವೆ. ಜನತಾ, ಇಂದಿರಾ ಆವಾಸ್, ವಸತಿ ಯೋಜನೆ, ಭಾಗ್ಯ ಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ಕುಟುಂಬಗಳೂ ಇದ್ದು, ಒಟ್ಟು ೧೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೨೫೩ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ–ಅನ್ನ ಮುಖ್ಯ ಆಹಾರ ವಾಗಿದ್ದು, ಬಾಡೂಟ, ಪಾಯಸ, ಹೋಳಿಗೆ ಬಳಸುವವರಿದ್ದಾರೆ ೨ ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿಯ ಜೊತೆಗೆ, ಟ್ರ್ಯಾಕ್ಟರ್, ಟೆಂಪೋ, ಆಟೋ ಬಳಸುತ್ತಾರೆ. ಶೇಂಗಾ, ಸೂರ್ಯಕಾಂತಿ, ಜೋಳ ಬೆಳೆಗಳನ್ನು ಸಮಾನವಾಗಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ, ಬಾಳೆ ಬೆಳೆಯುತ್ತಾರೆ. ಹಣ್ಣು, ತರಕಾರಿ ಬೆಳೆಯನ್ನು ಬೆಳೆಯಲಾಗುವುದು. ಅಡಿಕೆ, ತೆಂಗು, ಹುಣಸೆಹಣ್ಣು ವಾಣಿಜ್ಯ ಬೆಳೆಯಾಗಿದೆ. ಗೃಹೋದ್ಯಮವಾಗಿ ಗರಿಚಾಪೆ, ತೆಂಗಿನ ಕಡ್ಡಿ ಸೀಳುವುದು ಇದೆ. ಇಬ್ಬರು ವಕೀಲರು ಇದ್ದಾರೆ. ವಾಣಿಜ್ಯ ತೆರಿಗೆ ಇನ್ಸ್‌ಪೆಕ್ಟರ್ ರಮೇಶ್ ಸೇರಿದಂತೆ ಶಿಕ್ಷಣ ಸಾರಿಗೆ ಇಲಾಖೆಯ ೫ ಜನ ಸರ್ಕಾರಿ ನೌಕರರಿದ್ದಾರ. ನಿವೃತ್ತ ಇಂಜಿನಿಯರ್ ಹೆಚ್. ಹೆಚ್. ರಾಯಪ್ಪ ಇದೇ ಗ್ರಾಮದವರು.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಕ್ಷೇತ್ರ ಹೊಂದಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರ ಹೊಂದಿದೆ. ೨ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳು ಇದ್ದು, ಆರ್ಥಿಕ ಸಬಲೀಕರಣದಲ್ಲಿ ತೊಡಗಿವೆ. ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಹೊಂದಿದ್ದು, ಶಾಲೆಯಲ್ಲಿ ೨೭ ಮಕ್ಕಳಿದ್ದಾರೆ. ಸಾಕ್ಷರತಾ ಪ್ರಮಾಣ ೬೬.೩ ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ ಫಲಾನುಭವಿಗಳಿದ್ದು, ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮ ದೇವತೆ ಮಾರಮ್ಮ, ಮುತ್ತರಾಯ, ಹಾಗೂ ಗಣಪತಿಯ ಗುಡಿಗಳಿದ್ದು, ಮಾರಮ್ಮನ ಹಬ್ಬವನ್ನು ಊರಹಬ್ಬವಾಗಿ ವಿಶೇಷವಾಗಿ ಆಚರಿಸುತ್ತಾರೆ. ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮಾರಮ್ಮನಿಗೆ ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯವಿದೆ.

## ಉದ್ದನಚಿಕ್ಕನಹಟ್ಟಿ

ಉದ್ದನಚಿಕ್ಕನಹಟ್ಟಿಯು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೩ ಕಿಮೀ ದೂರದಲ್ಲಿರುವ ಜನವಸತಿ ಗ್ರಾಮವಾಗಿದೆ. ಉದ್ದನಚಿಕ್ಕಣ್ಣನು ಈ ಗ್ರಾಮವನ್ನು ನಿರ್ಮಿಸಿದ್ದರಿಂದ ಉದ್ದನಚಿಕ್ಕನಹಟ್ಟಿ ಎಂದು ಹೆಸರು ಬಂದಿತೆಂದು ಗ್ರಾಮಸ್ಥರು ತಿಳಿಸುತ್ತಾರೆ. ಗ್ರಾಮದಲ್ಲಿ ಚಿಕ್ಕಣ್ಣ ಎಂಬ ಹೆಸರಿನ ಹಲವು ವ್ಯಕ್ತಿಗಳಿದ್ದು ಗುರುತಿಗಾಗಿ ಉದ್ದನೆಯ ಚಿಕ್ಕಣ್ಣ ಎಂಬ ವಿಶೇಷಣದೊಂದಿಗೆ ಉದ್ದನಚಿಕ್ಕನಹಳ್ಳಿ ಎಂದಾಗಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೨ ಹೆಕ್ಟೇರ್‌ಗಳಾಗಿವೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಯಾವುದೇ ಅರಣ್ಯ, ಬೆಟ್ಟ-ಗುಡ್ಡಗಳು ಕಂಡುಬರುವುದಿಲ್ಲ. ಆದರೆ ೧೫ ಹೆಕ್ಟೇರ್‌ಗಳಷ್ಟು ರಕ್ಷಿತಾರಣ್ಯವಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೬೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮದಲ್ಲಿ ೬ ಕೊಳವೆಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ.

ಈ ಗ್ರಾಮದಲ್ಲಿ ಒಟ್ಟು ೩೦ ಮನೆಗಳಿದ್ದು ೧೨೬ ಜನಸಂಖ್ಯೆಯನ್ನು ಹೊಂದಿದೆ. ಕಲ್ಲಿನ, ಶೀಟಿನ, ಹೆಂಚಿನ ಮನೆಗಳಿದ್ದು ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್ ಸೌಲಭ್ಯ ಪಡೆದಿದ್ದು ೧೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಗ್ರಾಮದ ಮುಖ್ಯಭಾಷೆ ಕನ್ನಡವಾಗಿದೆ. ಗ್ರಾಮದಲ್ಲಿ ಕಾಡುಗೊಲ್ಲರು ಮಾತ್ರ ವಾಸಿಸುತ್ತಿದ್ದಾರೆ. ಕೃಷಿಯನ್ನು ಜೀವನೋಪಾಯ ಕಸುಬಾಗಿಸಿಕೊಂಡಿದ್ದಾರೆ. ಇದರಲ್ಲಿ ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳು, ತೆಂಗು, ಅಡಿಕೆ, ಹುಣಸೆ ಬೆಳೆಗಳನ್ನು ಬೆಳೆಯುತ್ತಾರೆ. ಇಲ್ಲಿ ಯಾವುದೇ ನೌಕರಿ, ಕೈಗಾರಿಕೆಗಳು ಕಂಡುಬರದಿದ್ದರೂ ಕೃಷಿ ಕಾರ್ಮಿಕರನ್ನು ಒಳಗೊಂಡಿದೆ. ಹುಣಸೆಹಣ್ಣು, ಶೇಂಗಾ, ಕುರಿ ವ್ಯಾಪಾರ ಮುಖ್ಯ ಉದ್ಯೋಗವಾಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ, ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ ಸಿರಾದಲ್ಲಿ ತಹಸೀಲ್ದಾರ್ ಕಛೇರಿಯನ್ನು, ಹುಯಿಲ್‌ದೊರೆ ಪಂಚಾಯ್ತಿ ಕೇಂದ್ರವಾಗಿದೆ. ಒಬ್ಬರು ಪಂಚಾಯ್ತಿ ಸದಸ್ಯರನ್ನು ಒಳಗೊಂಡಿದೆ. ಬುಕ್ಕಾಪಟ್ಟಣ ಪೊಲೀಸ್ ಠಾಣೆ ಹಾಗೂ ವಿದ್ಯುತ್ ಮಂಡಳಿಯನ್ನು ಹೊಂದಿದೆ. ಈ ಗ್ರಾಮವು ಗ್ರಾಮದ ನ್ಯಾಯಮಂಡಳಿಯನ್ನು ಹೊಂದಿದೆ. ಹಣಕಾಸಿನ ವ್ಯವಸ್ಥೆಗೆ ಯಾವುದೇ ಸಂಘ-ಸಂಸ್ಥೆಗಳನ್ನು ಹೊಂದಿರುವುದು ಕಂಡುಬರುವುದಿಲ್ಲ.

ಅಂಗನವಾಡಿ ಕೇಂದ್ರ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೬% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಈ ಗ್ರಾಮದಲ್ಲಿ ಆರೋಗ್ಯ ಕೇಂದ್ರಗಳಿಲ್ಲದಿದ್ದರೂ ಪೂಜಾರ್ ಮಂಜಣ್ಣನವರು ಪಶುಗಳಿಗೆ ನಾಟಿ ಔಷಧಿಯನ್ನು ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಚಿಲ್ಲರೆ ವ್ಯಾಪಾರದ ಅಂಗಡಿಯನ್ನು ಹೊಂದಿದೆ. ಈ ಗ್ರಾಮದಲ್ಲಿ ಐತಿಹಾಸಿಕ ನೆಲೆ, ಸ್ಮಾರಕ, ಶಾಸನಗಳು, ಸ್ಮಶಾನ, ಪ್ರಾಚೀನ ಬಾವಿಗಳು ಕಂಡುಬರದಿದ್ದರೂ ಧಾರ್ಮಿಕ ಕೇಂದ್ರಗಳಲ್ಲಿ ಜುಂಜಪ್ಪ ದೇವಾಲಯವನ್ನು ಹೊಂದಿದೆ ಮತ್ತು ಪ್ರತಿ ವರ್ಷವೂ ಜಾತ್ರೆಯನ್ನು ಮಾಡುವುದು ಸಂಪ್ರದಾಯವಾಗಿದೆ.

ಈ ಗ್ರಾಮದಲ್ಲಿ ಗಣೆ ಕಲಾವಿದರು ಜುಂಜಣ್ಣ, ಕರಿಯಣ್ಣ ಮತ್ತು ಸೋಬಾನೆ ಪದಕಾರರು ಕರಿಯಮ್ಮ, ಚಿಕ್ಕಣ್ಣ, ತಾಯವ್ವ,

ಗೌರವ್ವ ಸಾಂಸ್ಕೃತಿಕತೆಯ ಒಂದು ಭಾಗದಲ್ಲಿ ಸಣ್ಣ ಪ್ರಮಾಣದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ದೀಪಾವಳಿಯ ಸಂದರ್ಭದಲ್ಲಿ ಏಳು ದಿನಗಳ ಕಾಲ ಜುಂಜಪ್ಪನ ಮಜ್ಜನ, ದೀಪ ಏರಿಸುವ, ಇಳಿಸುವ ಹಾಗೂ ಹಾಲು-ತುಪ್ಪದ ವಿಶೇಷ ಆಚರಣೆ ಇರುತ್ತದೆ. ಮರಡಿಗುಡ್ಡದ ಪರಸಮ್ಮನ ಕೆರೆಗೆ ಜುಂಜಪ್ಪ ಮಜ್ಜನಕ್ಕೆ ಹೋಗುವುದು ವಿಶೇಷ ಆಚರಣೆಯಾಗಿದೆ. ಯುಗಾದಿ, ದೀಪಾವಳಿ, ದಸರಾ, ರಾಮನವಮಿ, ನವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಉಪ್ಪಾರಹಟ್ಟಿ

ಉಪ್ಪಾರಹಟ್ಟಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ವಾಯವ್ಯ ದಿಕ್ಕಿಗೆ ೧೯ ಕಿಮೀ ದೂರದಲ್ಲಿರುವ ಜನಾಂಗಿಕ ಹಿನ್ನೆಲೆಯ ಗ್ರಾಮವಾಗಿದೆ. ಉಪ್ಪಾರ ಜನಾಂಗದವರು ಗ್ರಾಮ ರಚನೆಮಾಡಿ ವಾಸಿಸುತ್ತಿದ್ದರಿಂದ ಉಪ್ಪಾರಹಟ್ಟಿ ಎಂದು ಕರೆಯಲಾಗಿದೆ. ಇಲ್ಲಿ ಸಿದ್ದಲಿಂಗಪ್ಪ ಎಂಬ ವ್ಯಕ್ತಿ ಬಂದು ನೆಲೆಸಿದ್ದರಿಂದ ಸಿದ್ದಲಿಂಗಾಪುರವೆಂದೂ ಕರೆಯಲಾಗುತ್ತದೆ. ಗಾಣದಹುಣಸೆ ಮುಖ್ಯ ಗ್ರಾಮದೊಂದಿಗೆ ಉಪಗ್ರಾಮವಾಗಿದ್ದು ಇಲ್ಲಿಂದ ಒಂದು ಕಿಮೀ ದೂರದಲ್ಲಿದೆ.

ಭೌಗೋಳಿಕ ವಿಸ್ತೀರ್ಣ ೨೯೨.೦೮ ಹೆಕ್ಟೇರುಗಳು. ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪುಮಣ್ಣಿನಿಂದ ಕೂಡಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೪೯.೦೧ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮದಲ್ಲಿ ೧೩ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಇಲ್ಲಿ ಒಂದು ಕಟ್ಟೆ ಇದೆ. ಕುಡಿಯುವ ನೀರಿಗೆ ಕೈಪಂಪುಗಳ ವ್ಯವಸ್ಥೆಯನ್ನು ಗ್ರಾಮಪಂಚಾಯ್ತಿ ಕಲ್ಪಿಸಿದೆ.

ಗ್ರಾಮದಲ್ಲಿ ಒಟ್ಟು ೨೯ ಮನೆಗಳಿದ್ದು ೭೬ ಜನಸಂಖ್ಯೆಯನ್ನು ಹೊಂದಿದೆ. ಕನ್ನಡ ಮಾತನಾಡುವ ಜನರಿದ್ದಾರೆ. ಉಪ್ಪಾರರ ಮನೆಗಳಿವೆ. ಇವು ಹೆಂಚಿನ, ಶೀಟಿನ ಮನೆಯಾಗಿದ್ದು ವಸತಿ ಯೋಜನೆಯಾದ ಜನತಾ, ಆಶ್ರಯ ಯೋಜನೆ ಫಲಾನುಭವಿಗಳಿದ್ದಾರೆ. ೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು ಶೇಂಗಾ ಮುಖ್ಯ ಬೆಳೆಯಾಗಿದೆ. ಇದರೊಂದಿಗೆ ತೆಂಗು, ಅಡಿಕೆ, ರಾಗಿ, ಭತ್ತ, ಜೋಳ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಹುಣಸೆಹಣ್ಣು, ಹೊಂಗೆಬೀಜ, ಹೂ ಕಟ್ಟುವುದು ಮಹಿಳೆಯರ ಉಪಕಸುಬಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ, ನೇರಲಗುಡ್ಡ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ತಹಸೀಲ್ದಾರ್ ಕಛೇರಿ ಹಾಗೂ ಗ್ರಾಮಪಂಚಾಯ್ತಿ ನೇರಲಗುಡ್ಡದಲ್ಲಿದೆ. ಗ್ರಾಮದಲ್ಲಿ ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದೆ. ಬುಕ್ಕಾಪಟ್ಟಣ ಪೊಲೀಸ್ ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಹಣಕಾಸಿನ ವ್ಯವಸ್ಥೆಗೆ ಸ್ತ್ರೀಶಕ್ತಿ ಸಂಘವಿದೆ. ಮಾರಮ್ಮ ಯುವಕ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವಿದೆ. ಇಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೨% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಗ್ರಾಮದಲ್ಲಿ ಕುಟುಂಬ ಕಲ್ಯಾಣ ವ್ಯವಸ್ಥೆಯಿದೆ. ಗ್ರಾಮಕ್ಕೆ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಸುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಚಿಲ್ಲರೆ ವ್ಯಾಪಾರದ ಒಂದು ಅಂಗಡಿಯನ್ನು ಹೊಂದಿದೆ. ಶಿಕ್ಷಣ, ಸಾರಿಗೆ ಇಲಾಖೆಯಲ್ಲಿ ಕೆಲಸ ಮಾಡುವ ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಧಾರ್ಮಿಕ ಕೇಂದ್ರದಲ್ಲಿ ಮಾರಮ್ಮ ಮತ್ತು ಭೂತಪ್ಪನ ಪೌಳಿಗಳಿವೆ. ಪ್ರತಿ ವರ್ಷವೂ ಮಾರಮ್ಮನ ಜಾತ್ರೆಯನ್ನು ಮಾಡುತ್ತಾರೆ. ಗಾಣದಹುಣಸೆ ಕರಿಯಮ್ಮನ ಜಾತ್ರೆಯಲ್ಲಿ ಉಪ್ಪಾರಹಟ್ಟಿಯಿಂದ ಆರತಿ ಬರುವುದು ವಾಡಿಕೆಯಾಗಿದೆ.

## ಎಮ್ಮೇರಹಳ್ಳಿ

ಎಮ್ಮೇರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೪ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೨೧೧.೨೮ ಆಗಿದ್ದು ಇದರ ಉಪಗ್ರಾಮಗಳಾಗಿ ಎಮ್ಮೇರಹಳ್ಳಿ ತಾಂಡ ಹಾಗೂ ಎಮ್ಮೇರಹಳ್ಳಿ ಗೊಲ್ಲರಹಟ್ಟಿ ಗ್ರಾಮಗಳು ಹೊಂದಿದೆ. ಸಿರಾ– ತುಮಕೂರು ರ್‍ಾಷ್ಟ್ರೀಯ ಹೆದ್ದಾರಿಯ ಬದಿಗೆ ಸಿರಾದಿಂದ ಬಲಬದಿಗೆ ಇರುವ ಈ ಗ್ರಾಮ ಕುಂಚಿಟಿಗ ಒಕ್ಕಲಿಗರಲ್ಲಿನ ಒಂದು ಕುಲ ಎಮ್ಮೇನವರು ಎಂದು ಇದ್ದು ಆ ಕುಲದವರು ಇಲ್ಲಿನ ಮೂಲಪುರುಷರು. ಅವರಿಂದಲೇ ಗ್ರಾಮ ಬೆಳೆದುದರಿಂದ ಕುಲಮೂಲವಾಗಿ ಎಮ್ಮೇನರಹಳ್ಳಿ ಎಮ್ಮೇರಹಳ್ಳಿಯಾಗಿದೆ.

ಕೆಂಪುಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ಈ ಪರಿಸರದ ಪಶ್ಚಿಮಕ್ಕೆ ಸಿರಾ ದೊಡ್ಡಕೆರೆ, ದಕ್ಷಿಣಕ್ಕೆ ಬಯಲು, ದಿಣ್ಣೆ, ಪೂರ್ವೋತ್ತರವಾಗಿ ಸಣ್ಣ ಹಳ್ಳವಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ಜಿಂಕೆ, ಮೊಲ, ಕಾಡುಹಂದಿ, ಬಾರುಬೆಕ್ಕು ಹಾಗೂ ಮುಂಗುಸಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕುತ್ತಾರೆ. ನಾಯಿ, ಬೆಕ್ಕು ಇತರೆ ಸಾಕುಪ್ರಾಣಿಗಳು. ಈ ಪರಿಸರದಲ್ಲಿ ಪಕ್ಷಿಗಳಾದ ಕೋಗಿಲೆ, ಕಾಗೆ, ಗೊರವಂಕ, ಗಿಳಿ, ಗೂಬೆ, ಹದ್ದು, ಗಿಡುಗ, ಕೌಜಲ ಮೊದಲಾದ ಕಾಡು ಪಕ್ಷಿಗಳಿವೆ. ಸಾಕು ಪ್ರಾಣಿಯಾಗಿ ಕೋಳಿಯನ್ನು ಸಾಕಲಾಗುವುದು.

ವಾರ್ಷಿಕ ಸರಾಸರಿ ೪೫೮.೪ ಮಿಮೀ ಮಳೆ ಬೀಳುತ್ತಿದ್ದು ಉಷ್ಣಾಂಶ ೩೬–೩೮ ಡಿಗ್ರಿ ಸೆಂ. ಸಾಮಾನ್ಯವಾಗಿರುತ್ತದೆ. ಚಳಿ ೧೨ ಡಿಗ್ರಿ ಇರುತ್ತದೆ. ಈ ಪರಿಸರದಲ್ಲಿ ಕೃಷಿಗಾಗಿ ೧೦ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಕಿರು ಟ್ಯಾಂಕರ್ ಇದ್ದು ೧ ಕೈಪಂಪಿದೆ.

ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗ ಜನಾಂಗ ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಒಟ್ಟು ೩೨ ಮನೆಗಳಿದ್ದು ೯ ಮನೆಗಳಲ್ಲಿ ಶೌಚಾಲಯವಿದೆ. ಜನತಾ, ಆಶ್ರಯ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ಗ್ರಾಮದ ಜನಸಂಖ್ಯೆ ೧೮೯ ಇದೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ತೊಗರಿ, ಹುರುಳಿ ಇತರ ಆಹಾರ ಬೆಳೆಗಳು, ಸೂರ್ಯಕಾಂತಿ, ಹತ್ತಿ ಬೆಳೆಗಳೂ ಇವೆ. ಹುಣಸೆಹಣ್ಣು ಹಾಗೂ ಶೇಂಗಾ ವಾಣಿಜ್ಯ ಬೆಳೆಗಳಾಗಿವೆ. ಗ್ರಾಮದಲ್ಲಿ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಬೀಡಿ ಕಟ್ಟುವ, ಹೂ ಕಟ್ಟುವ ಗೃಹ ಕಸುಬಿನ ಮಹಿಳೆಯರೂ ಇದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಯಲಿಯೂರು ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ರ್‍ಾಷ್ಟ್ರೀಯ ಹೆದ್ದಾರಿಯ ಬಳಿ ೬ ವಿವಿಧ ಬಗೆಯ ಅಂಗಡಿಗಳಿವೆ. ೨ ಟೀ ಹೋಟೆಲ್‌ಗಳೂ ಇವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘವಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು ಶಾಲೆಯಲ್ಲಿ ೫೬ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಬಿಸಿಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ ಹಾಗೂ ಪಠ್ಯಪುಸ್ತಕ ಸೌಲಭ್ಯವಿದೆ. ೫೬.೨% ರಷ್ಟು ಸಾಕ್ಷರರಿದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನ ಫಲಾನುಭವಿಗಳಿದ್ದಾರೆ. ಧಾರ್ಮಿಕವಾಗಿ ಲಕ್ಕಮ್ಮ ಹಾಗೂ ಭೂತಪ್ಪನ ಪೌಳಿಗಲಿದ್ದು ಲಕ್ಕಮ್ಮನ ಊರಹಬ್ಬವನ್ನು ವಾರ್ಷಿಕವಾಗಿ ಆಚರಿಸುತ್ತಾರೆ. ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಕರಿಯಮ್ಮ ಜಾತ್ರೆಯೂ ನಡೆಯುತ್ತದೆ.

ಗ್ರಾಮದಲ್ಲಿ ಯುಗಾದಿ, ರಾಮನವಮಿ, ದಸರಾ, ಶಿವರಾತ್ರಿ, ದೀಪಾವಳಿ ಹಬ್ಬಗಳನ್ನು ಆಚರಿಸಲಾಗುತ್ತದೆ. ಸಿರಾ–ತುಮಕೂರು ಮಾರ್ಗವಾಗಿ ರ್‍ಾಷ್ಟ್ರೀಯ ಹೆದ್ದಾರಿ ಹಾದುಹೋಗಿದೆ.

## ಎಮ್ಮೇರಹಳ್ಳಿ ತಾಂಡ

ಎಮ್ಮೇರಹಳ್ಳಿ ತಾಂಡ ಒಂದು ಲಂಬಾಣಿ ಬುಡಕಟ್ಟು ಗ್ರಾಮ. ೧೮ ಲಂಬಾಣಿ ಜನಾಂಗದವರು ತಮ್ಮ ಪುಟ್ಟ ನೆಲೆಯೊಂದಿಗೆ ಇಲ್ಲಿ ವಾಸಿಸುತ್ತಿದ್ದಾರೆ. ಸಿರಾ–ತುಮಕೂರು ಮುಖ್ಯ ರಸ್ತೆಯ ಬಲಬದಿಗೆ ಅಂದರೆ ರ್‍ಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಇರುವ ಈ ಹಳ್ಳಿ ಸಿರಾಕ್ಕೆ ೪ ಕಿ.ಮೀ. ದೂರದಲ್ಲಿದೆ. ಇದು ಯಲಿಯೂರು ಗ್ರಾಮದ ಮಜರೆ ಗ್ರಾಮವಾಗಿದ್ದು ಎಮ್ಮೇರಹಳ್ಳಿಯ ಉಪಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೩೨.೧೮ ಹೆಕ್ಟೇರ್ ಆಗಿದೆ.

ಎತ್ತರದ ಪ್ರದೇಶ, ಕೆಂಪು ಮಣ್ಣಿನ ಮರಳು ಮಣ್ಣು, ಕೆರೆಕಟ್ಟೆಗಳು, ನೀರಿನ ಆಶ್ರಯವಿರುವುದಿಲ್ಲ. ಈ ಭಾಗದಲ್ಲಿ

ಕಾಡುಪ್ರಾಣಿಗಳಾದ ಮೊಲ, ಜಿಂಕೆ, ಹಂದಿ, ಉಡ, ಬಾರ್‌ಬೆಕ್ಕು ಕಂಡುಬರುತ್ತವೆ. ಗ್ರಾಮದಲ್ಲಿ ಸಾಕುಪ್ರಾಣಿಯಾಗಿ ಹಸು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕಿದ್ದಾರೆ. ಕೋಳಿ ಸಾಕುಪಕ್ಷಿಯಾಗಿದೆ. ಪಕ್ಷಿಗಳಾದ ಗೊರವಂಕ, ಗಿಳಿ, ಗೂಬೆ, ಹದ್ದು, ಗರುಡ, ಕೋಗಿಲೆ ಕಂಡುಬರುತ್ತವೆ. ಇಲ್ಲಿನ ವಾರ್ಷಿಕ ಸರಾಸರಿ ಮಳೆ ಪ್ರಮಾಣ ೪೮೧.೪ ಮಿಮೀ ಆಗಿದ್ದು ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಆದರೆ ಬಿಸಿಲು ೩೬ ಡಿಗ್ರಿ ಸೆಂಟಿಗ್ರೇಟ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ೪ ಕೊಳವೆ ಬಾವಿಗಳಿದ್ದು ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಕಿರು ಟ್ಯಾಂಕ್, ೧ ಕೈಪಂಪು ಗ್ರಾಮದಲ್ಲಿದೆ.

ಲಂಬಾಣಿ ಜನಾಂಗ ಮಾತ್ರ ವಾಸ ಮಾಡುತ್ತಿದ್ದು ಇಲ್ಲಿನ ಭಾಷೆ ಲಂಬಾಣಿ ಭಾಷೆಯಾಗಿದೆ. ೧೮ ಮನೆಗಳಲ್ಲಿ ಕಾಂಕ್ರೀಟ್, ಮಣ್ಣಿನ, ಶೀಟಿನ ಹಾಗೂ ಹೆಂಚಿನ ಮನೆಗಳಿವೆ. ಇವು ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ರಚನೆಗೊಂಡಿವೆ. ೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರ. ಚಪಾತಿ, ಅನ್ನ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ಸೇವನೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೃಷಿ ಕೆಲಸಕ್ಕೆ ಟ್ರ್ಯಾಕ್ಟರ್, ಟೆಂಪೋ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ. ರಾಗಿ, ತೊಗರಿ, ಜೋಳ ಆಹಾರ ಬೆಳೆಗಳು.

ಸಿರಾ ವಿಧಾನಸಭಾ ಕ್ಷೇತ್ರ, ಎಲೆಯೂರು ಗ್ರಾಮಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದ್ದು ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿಗೆ ಸೇರಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಒಬ್ಬರು ಈ ಗ್ರಾಮದ ಪಂಚಾಯ್ತಿ ಸದಸ್ಯರಿದ್ದಾರೆ. ಶೈಕ್ಷಣಿಕವಾಗಿ ನೆರೆಯ ಎಮ್ಮೇರಹಳ್ಳಿಗೆ, ಸಿರಾ, ಯಲಿಯೂರಿಗೆ ಹೋಗಬೇಕಾಗಿದ್ದು ಗ್ರಾಮದ ಸಾಕ್ಷರತೆ ೫೬.೨% ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೨ ಪೆಟ್ಟಿಗೆ ಅಂಗಡಿಗಳಿವೆ. ಧಾರ್ಮಿಕವಾಗಿ ಸೇವಾಲಾಲ್ ದೇವಾಲಯದ ಪೌಳಿಯಿದ್ದು ದೀಪಾವಳಿಯಲ್ಲಿ ಹಿರಿಯರ ಹಬ್ಬ, ಹೋಮ ಮೊದಲಾದ ಕುಲಸಂಬಂಧಿ ಜಾತ್ರೆ ಸ್ವರೂಪದ ಹಬ್ಬ ಏರ್ಪಡುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಮಹಾನವಮಿ ಹಬ್ಬಗಳನ್ನು ಆಚರಿಸುತ್ತಾರೆ.

## ಎಮ್ಮೇರಹಳ್ಳಿ ಗೊಲ್ಲರಹಟ್ಟಿ

ಎಮ್ಮೇರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೫ ಕಿಮೀ ದೂರದಲ್ಲಿದೆ. ರ್ಾಷ್ಟ್ರೀಯ ಹೆದ್ದಾರಿಯ ಸಿರಾ–ತುಮಕೂರು ನಡುವೆ ಸಿರಾ ಬೈಪಾಸ್ ರಸ್ತೆಯ ಬಲಬದಿಗೆ ಈ ಗ್ರಾಮವಿದೆ. ಇದೊಂದು ಕಾಡುಗೊಲ್ಲರ ಬುಡಕಟ್ಟು ಗ್ರಾಮವಾಗಿದ್ದು ಒಟ್ಟು ೬೦ ಮನೆಗಳಿವೆ. ಯಲಿಯೂರು ಮುಖ್ಯ ಗ್ರಾಮದ ಉಪಗ್ರಾಮವಾಗಿ ರೂಪುಗೊಂಡಿರುವ ಈ ಹಳ್ಳಿ ಎಮ್ಮೇರಹಳ್ಳಿಯ ಪಕ್ಕದಲ್ಲಿರುವುದರಿಂದ ಎಮ್ಮೇರಹಳ್ಳಿ ಗೊಲ್ಲರಹಟ್ಟಿಯಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೪೦.೬ ಹೆಕ್ಟೇರ್ ಆಗಿದೆ.

ಮರಳು ಮಿಶ್ರಿತ ಕೆಂಪುಮಣ್ಣು ಹೊಂದಿರುವ ಈ ಗ್ರಾಮ ಬಯಲು ಪ್ರದೇಶವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಮುಂಗುಸಿ ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಗೊರವಂಕ, ಕಾಗೆ, ಕೋಗಿಲೆ, ಹದ್ದು, ಗರುಡ, ಕೊಕ್ಕರೆ ಕಂಡುಬರುತ್ತವೆ. ಹಸು, ಮೇಕೆ, ಕುರಿ, ಎಮ್ಮೆ, ಎತ್ತುಗಳನ್ನು, ಕೋಳಿಯನ್ನು ಸಾಕುಪ್ರಾಣಿಯಾಗಿ ಸಾಕಲಾಗುವುದು.

ವಾರ್ಷಿಕ ಮಳೆ ೪೮೧.೪ ಮಿಮೀ ಬೀಳುತ್ತಿದ್ದು ಚಳಿ ಅತ್ಯಧಿಕ ೧೨ ಡಿಗ್ರಿ ಹಾಗೂ ಬಿಸಿಲು ಸರಾಸರಿ ೩೬–೩೮ ಡಿಗ್ರಿ ಇರುತ್ತದೆ. ಕುಡಿಯಲು ನೀರು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಪೂರೈಸಲಾಗುತ್ತದೆ. ೪ ಸಿಸ್ಟರ್ನ್‌ಗಳಿದ್ದು ಒಂದು ಕೈಪಂಪು ಇದೆ.

ಕಾಡುಗೊಲ್ಲರು ಮಾತ್ರ ವಾಸಿಸುವ ಇಲ್ಲಿನ ಭಾಷೆ ಕನ್ನಡ. ವಿವಿಧ ಪ್ರಕಾರಗಳಾದ ಹೆಂಚಿನ, ಶೀಟಿನ, ಮಣ್ಣಿನ ಒಟ್ಟು ೬೦ ಮನೆಗಳಿವೆ. ಇವು ಆಶ್ರಯ, ಜನತಾ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ೧೫ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ಗ್ರಾಮದ ಜನಸಂಖ್ಯೆ ೨೫೮ ಇದ್ದಾರೆ. ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕೃಷಿಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನ ಬಳಸುತ್ತಾರೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ಆಹಾರ ಬೆಳೆಯಾಗಿ ರಾಗಿ, ತೊಗರಿ, ಹುರುಳಿ ಬೆಳೆಯುತ್ತಾರೆ. ಗ್ರಾಮದಲ್ಲಿ ಹೆಂಗಸರು ಹಾಲು, ಮೊಸರು, ಮಜ್ಜಿಗೆ ಮಾರಾಟದ ಜೊತೆಗೆ ಬೀಡಿ ಕಟ್ಟುವ ಉಪಕಸುಬನ್ನು ಹೊಂದಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರವನ್ನು ಹೊಂದಿದ್ದು ಚಿಕನಹಳ್ಳಿ ಜಿಲ್ಲಾ ಪಂಚಾಯ್ತಿ, ಯಲಿಯೂರು ತಾಲ್ಲೂಕುಪಂಚಾಯ್ತಿ ಹಾಗೂ ಯಲಿಯೂರು ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವನ್ನು ಹೊಂದಿದೆ. ೨ ಸ್ತ್ರೀಶಕ್ತಿ ಸಂಘವಿದ್ದು ಗ್ರಾಮದ ಮಹಿಳಾ ಸಬಲೀಕರಣಕ್ಕೆ ಶ್ರಮಿಸುತ್ತಿವೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ೩೪ ಮಕ್ಕಳಿದ್ದು ಒಬ್ಬರು ಶಿಕ್ಷಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೫೬% ರಷ್ಟಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಉಚಿತ ಪುಸ್ತಕಗಳು ಹಾಗೂ ಶೌಚಾಲಯ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಧಾರ್ಮಿಕವಾಗಿ ಭೂತಪ್ಪನ ಪೌಳಿಯಿದೆ. ವಾರ್ಷಿಕವಾಗಿ ಭೂತಪ್ಪನಿಗೆ ಆರತಿ, ಬ್ಯಾಟೆ ಹಾಗೂ ಬಾನದ ಹರಕೆ ಸಂಪ್ರದಾಯವಿದೆ. ಭೂತಪ್ಪನ ವಾರ್ಷಿಕ ಜಾತ್ರೆಯಿದ್ದು ಊರ ಹಬ್ಬದ ಮಾದರಿಯಲ್ಲಿ ಜಾತ್ರೆಯನ್ನು ಆಚರಿಸುತ್ತಾರೆ.

ಯುಗಾದಿ, ದೀಪಾವಳಿ, ಶಿವರಾತ್ರಿ, ಸಂಕ್ರಾಂತಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕಾಡುಗೊಲ್ಲರ ಈರಣ್ಣ ಎಂಬುವವರು ಕೋಲಾಟ ಕಲಾವಿದರಾಗಿದ್ದಾರೆ. ರ‍್ರಾಷ್ಟ್ರೀಯ ಹೆದ್ದಾರಿ ಬಳಿ ಪೆಟ್ರೋಲ್ ಬಂಕ್, ಗ್ಯಾರೇಜ್, ೪ ಹೋಟೆಲ್‌ಗಳಿವೆ. ಕುರಿ ವ್ಯಾಪಾರ ಹಾಗೂ ಸಾಕಾಣಿಕೆಯ ವಿಶೇಷತೆ ಈ ಕಾಡುಗೊಲ್ಲರಹಟ್ಟಿಯ ವಿಶೇಷವಾಗಿದೆ.

## ಎತ್ತಪ್ಪನ ಹಟ್ಟಿ

ಎತ್ತಪ್ಪನ ಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ, ದಕ್ಷಿಣಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಇದೊಂದು ಬುಡಕಟ್ಟು ಗ್ರಾಮವಾಗಿದ್ದು, ಕಾಡುಗೊಲ್ಲರು ವಾಸಿಸುತ್ತಿದ್ದಾರೆ. ಕಾಡುಗೊಲ್ಲರ ಸಾಂಸ್ಕೃತಿಕ ವೀರ ಎತ್ತಪ್ಪನ ಹೆಸರಲ್ಲಿ ಸ್ಥಾಪನೆಯಾಗಿರುವ ಈ ಗ್ರಾಮದಲ್ಲಿ ಎತ್ತಪ್ಪನ ಗುಬ್ಬದ ದೇವರಿದೆ. ಹುಣ್ಣಜ್ಜನಹಳ್ಳ ಗ್ರಾಮದ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ, ಮೂಲ ಗ್ರಾಮದಲ್ಲಿ ಹಂಚಿಕೆಯಾಗಿದ್ದು, (೨೬೨೩.೪೩ ಹೆಕ್ಟೇರ್) ಅನುಪನ ಕುಂಟೆ, ಹುಂಜನಹಳ್ಳ, ಬಸರಿಹಳ್ಳ, ಹೊಂಗೆ ಹಳ್ಳಗಳ ಕೂಡ ಗ್ರಾಮವಾಗ ಹುಂಜನಹಳ್ಳ ದಲ್ಲಿ ನಿಸರ್ಗ ಮಳೆ ನೀರು ಸಂಗ್ರಹಗೊಂಡು ಮುಂದೆ ಕಳ್ಳಂಬೆಳ್ಳ ಕೆರೆ ತಲುಪುವುದು ಇಲ್ಲಿನ ಸ್ವಾಭಾವಿಕ ಲಕ್ಷಣವಾಗಿದೆ. ಹಾಗಾಗಿ ಕಲ್ಲು ಮಿಶ್ರಿತ ಮರಳು, ಬಿಳುಪಿನ ಇಲ್ಲಿನ ಭೂಮಿಯ ಲಕ್ಷಣವಾಗಿದೆ.

ಈ ಗ್ರಾಮದ ಪೂರ್ವಕ್ಕೆ ೧೧೮.೦೨ ಹೆಕ್ಟೇರ್ ಸಾಮಾಜಿಕ ಅರಣ್ಯವಿದೆ. ಈ ಭಾಗದಲ್ಲಿ ಮೊಲ, ನರಿ, ತೋಳ, ಕಪ್ಪಲುಟ್ಟೆ, ಸಾರಗ, ಬೆಕ್ಕು ಮೊದಲಾದ ಪ್ರಾಣಿಗಳಿವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾಗಿ ಹಸು, ಎತ್ತು, ಕುರಿ, ಮೇಕೆ, ಕತ್ತೆಗಳನ್ನು ಸಾಕುತ್ತಾರೆ. ಪಕ್ಷಿಗಳಾದ ಕೌಜುಗ, ಬೆಳವ, ನವಿಲು, ಗಿಳಿ, ಕೊಕ್ಕರೆ, ಗೊರವ, ಪುರ್ಲೆಹಕ್ಕಿ, ಗರುಡ, ಹದ್ದು ಮೊದಲಾದ ಹಕ್ಕಿಗಳಿವೆ. ನೀರು ಕೋಳಿ, ಕಾಡು ಕೋಳಿಗಳೂ ಇವೆ. ಗ್ರಾಮದ ಒಳಗೆ ಸಾಕು ಪಕ್ಷಿಯಾಗಿ ಕೋಳಿಯನ್ನು ಸಾಕಿದ್ದಾರೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ೪೬೫ ಮಿ.ಮೀ ಇದ್ದು, ೧೨೦ ಸೆಂ. ಚಳಿ ಇದ್ದು, ಬಿಸಿಲು ೩೮೦ ಸೆಂ. ಸಹಜವಾಗಿರುತ್ತದೆ. ಎಡಬದಿಗೆ ಹೊಂಗೆ ಹಳ್ಳ, ಬಲಬದಿಗೆ ಎತ್ತಪ್ಪನ ಕಟ್ಟೆ ಇದ್ದರೂ ಮಳೆಯಿಂದ ಮಾತ್ರ ನೀರು ಬರಬೇಕಾಗಿರುವುದರಿಂದ ಮಳೆಗಾಲದಲ್ಲಿ ಮಾತ್ರ ನೀರಿರುತ್ತದೆ. ಉಳಿದಂತೆ ಒಣಗಿರುತ್ತದೆ. ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿ ವತಿಯಿಂದ ಬೋರ್‌ವೆಲ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಗ್ರಾಮದಲ್ಲಿ ಒಟ್ಟು ೪೨ ಕೊಳವೆ ಬಾವಿಗಳಿವೆ. ಐದು ಸಿಸ್ಟನ್, ೨ ಕೈ ಪಂಪುಗಳಿವೆ. ವಿವಿಧ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರಿದ್ದಾರೆ.

ಇಲ್ಲಿನ ಸಾಮಾಜಿಕ ರಚನೆ ಕಾಡುಗೊಲ್ಲರ ಮನೆಗಳಿಂದಲೇ ರಚನೆ ಗೊಂಡಿದ್ದು, ಕಾಂಕ್ರೀಟ್, ಮಣ್ಣಿನ, ಹೆಂಚಿನ, ಶೀಟಿನ ಒಟ್ಟು ೧೧೮ ಮನೆಗಳಿವೆ. ಭಾಗ್ಯ ಜ್ಯೋತಿ ವಿದ್ಯುತ್ ಸೌಲಭ್ಯ, ಜನತಾ, ಆಶ್ರಯ ಮನೆಗಳ ಫಲಾನುಭವಿ ಗಳಿದ್ದು, ೬ ಮನೆಗಳಲ್ಲಿ ಮಾತ್ರ ಶೌಚಾಲಯದ ಬಳಕೆಯಿದೆ. ೬೧೪ ಜನಸಂಖ್ಯೆ ಇದೆ.

ಈ ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ. ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನಬಂಡಿ, ಸಾಂಪ್ರದಾಯಿಕ ವಾಹನವಾದರೆ, ಟ್ರ್ಯಾಕ್ಟರ್, ಮಿನಿ ಟೆಂಪೋ, ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಶೇಂಗಾ ಪ್ರಮುಖ ಬೆಳೆಯಾಗಿದ್ದು, ರಾಗಿ, ಜೋಳ, ಅಲಸಂದಿ, ತೊಗರಿ, ಹುರುಳಿ ಆಹಾರ ಬೆಳೆಗಳು. ರೇಷ್ಮೆ, ತೆಂಗು, ತೋಟದ ಬೆಳೆಗಳು. ಶೇಂಗಾ ಪ್ರಮುಖ ವಾಣಿಜ್ಯ ಬೆಳೆಗಳಾದರೆ, ಕುರಿ ವ್ಯಾಪಾರವೂ ಇದೆ. ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಸಿರಾ–ದೊಡ್ಡಾಲದ ಮರ, ಸಿರಾ–ಸೋಮಸಾಗರ ಗೇಟಿನಿಂದ ಹುಂಜನಹಾಳ ಮಾರ್ಗವಾಗಿ ಎತ್ತಪ್ಪನ ಹಟ್ಟಿ–ಚೇಳೂರಿಗೆ ಸಂಪರ್ಕ ರಸ್ತೆ ಇದೆ. ೨ ಸ್ತ್ರೀ ಶಕ್ತಿ ಸಂಘದ ಗುಂಪುಗಳಿದ್ದು, ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಶ್ರಮಿಸುತ್ತಿದೆ. ಗ್ರಾಮ ಮಟ್ಟದಲ್ಲಿ ಅರಣ್ಯ

ಸಂರಕ್ಷಣಾ ಸಮಿತಿ ಇದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಾಗೂ ಸರ್ಕಾರಿ ಪ್ರೌಢಶಾಲೆಗಳಿವೆ. ಹನ್ನೊಂದು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಗ್ರಾಮದಲ್ಲಿ ೪೮.೬ ಸಾಕ್ಷರತೆಯ ಪ್ರಮಾಣವಿದೆ. ಇದರಲ್ಲಿ ಶೇ. ೩೦ ಮಹಿಳೆಯರು, ಶೇ. ೬೦ ರಷ್ಟು ಪುರುಷರು ಸಾಕ್ಷರವಂತರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪಠ್ಯಪುಸ್ತಕ ಸೌಲಭ್ಯಗಳಿದ್ದು, ಶಾಲಾ ಕಾಂಪೌಂಡ್ ಹೊಂದಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಅಂಗಡಿಗಳೂ ಇವೆ. ಗ್ರಾಮದ ಸಮೀಪದ ಕೆರೆ ಗ್ರಾಮದ ಬಳಿ ಒಂದು ವೀರಗಲ್ಲು ಇದ್ದು, ವೀರನೊಬ್ಬನ ಹೋರಾಟದ ಚಿತ್ರವಿದ್ದು, ಇದು ಕಂದು ಮಿಶ್ರಿತ ಮೃದು ಶಿಲೆಯಲ್ಲಿ ರಚನೆಗೊಂಡಿದೆ. ಇದನ್ನು ದೇವಗನ್ನೆ ಕಲ್ಲು ಎಂದು ಪೂಜಿಸುತ್ತಾರೆ ಎಂದು ಇಲ್ಲಿನ ಮುಖ್ಯ ಶಿಕ್ಷಕ ಕೃಷ್ಣಪ್ಪ ಹೇಳುತ್ತಾರೆ. ಗ್ರಾಮದ ಆದಿ ದೈವ ಎತ್ತಪ್ಪನ ಗುಬ್ಬದ ಮಾದರಿ ದೇವಾಲಯವಿದ್ದು, ದೀಪಾವಳಿಯಲ್ಲಿ ದೀಪ ಏರಿಸುವ, ಹಾಲು ತುಪ್ಪದ ವಿಶೇಷ ಆಚರಣೆ ಹಬ್ಬವಿರುತ್ತದೆ. ಒಂದು ವಾರ ದಿನಗಳ ಕಾಲ ಜಾತ್ರೆ ಸ್ವರೂಪದಲ್ಲಿ ಊರ ಹಬ್ಬವಾಗಿ, ಪಕ್ಕದ ಚೆನ್ನಿ ಹಟ್ಟಿಯ ಈರಣ್ಣನ ಗುಡ್ಡೆ ಬಳಿಗೆ ದೇವರು ಜಿನ್ನಿಗೆ ಮೆರವಣಿಗೆ ಹೋಗುತ್ತದೆ.

ಮಾರಮ್ಮನ ಊರಹಬ್ಬ ಆಚರಿಸಿ, ಆರತಿ, ಬಾನ, ಬ್ಯಾಟೆ ಅರಕೆ ಸಂಪ್ರದಾಯಗಳಿರುತ್ತವೆ. ಸಂಕ್ರಾಂತಿ, ದೀಪಾವಳಿ, ಯುಗಾದಿ, ಶಿವರಾತ್ರಿ, ನವಮಿ, ವಿಶೇಷ ಹಬ್ಬಗಳು ನಾಗಜ್ಜಿ–ಕುರಿ–ದನಗಳಿಗೆ ಸಿಡಿಬು ಸಂಬಂಧಿ ಔಷಧೋಪಚಾರ ನೀಡುವ ನಾಟಿ ವೈದ್ಯರಾಗಿದ್ದಾರೆ.

## ಓಜಗುಂಟೆ

ಓಜಗುಂಟೆ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೪ ಕಿ.ಮೀ ದೂರದಲ್ಲಿದೆ. ಸಿರಾ–ಅಮರಾಪುರ ಮುಖ್ಯ ರಸ್ತೆಯ ಕಲ್ಲುಕೋಟೆ ಸೇತುವೆಯ ನಂತರದ ಓಜಗುಂಟೆ ಗೇಟಿನಿಂದ ಬಲಕ್ಕೆ ತಿರುಗಿ ಒಂದು ಕಿ.ಮೀ ದೂರದಲ್ಲಿ ಈ ಗ್ರಾಮವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೩೯.೬ ಹೆಕ್ಟೇರ್ ಆಗಿದ್ದು ಓಜಗುಂಟೆ ಗೊಲ್ಲರಹಟ್ಟಿ ಹನುಮಂತಪುರ ಉಪಗ್ರಾಮಗಳನ್ನು ಹೊಂದಿದೆ.

ಓಜ ಎಂದರೆ ಶಿಕ್ಷಕ, ವಿದ್ಯೆ ಕಲಿಸುವವನು, ಗುರುಮಠ ಎಂಬ ಅರ್ಥವಿದ್ದು ಓಜ ಎಂದರೆ ಶಿಕ್ಷಕರು ಸ್ನಾನ–ಸಂಧ್ಯಾವಂದನೆಗೆ ಅನುಕೂಲವಾಗುವ ಹಾಗೆ ಕಟ್ಟಿಸಿದ ಬೃಹತ್ ಕೊಳವಿದೆ. ಈ ಕೊಳದಲ್ಲಿ ಶಿಕ್ಷಕರು ಸ್ನಾನ ಮಾಡುತ್ತಾ, ಸಿರಾ ರಾಜಮೂಲದವರಿಗೆ ಹಾಗೂ ಬ್ರಾಹ್ಮಣ ವಟುಗಳಿಗೆ ಶಿಕ್ಷಣ ಹೇಳಿಕೊಡುತ್ತಿದ್ದ ಕಾರಣದಿಂದಾಗಿಯೇ ಈ ಗ್ರಾಮಕ್ಕೆ ಅನ್ವರ್ಥವಾಗಿ ಓಜಗುಂಟೆ ಎಂಬ ಹೆಸರು ಬಂದಿದೆ.

ಬಯಲು ಪ್ರದೇಶವಾದರೂ ತೋಟಗಳ ಸಾಲು, ಬಲಬದಿಗೆ ಜಯಮಂಗಲಿ ನದಿಯ, ಸಿರಾ ದೊಡ್ಡಕೆರೆ ನೀರಿನ ಹೊರಹರಿವು, ಗದ್ದೆ ಬಯಲಿಗೆ ಆತುಕೊಂಡಿರುವುದರಿಂದ ಈ ಭಾಗ ಸದಾ ಹಸಿರಿನಿಂದ ಕೂಡಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಹಂದಿ, ಮುಂಗುಸಿ, ಮೊಲ ಕಂಡುಬರುತ್ತವೆ. ಗ್ರಾಮದಲ್ಲಿ ರೈತಾಪಿ ಜನ ಹಸು, ಎತ್ತು, ಎಮ್ಮೆ, ಕುರಿ ಸಾಕುತ್ತಾರೆ. ಕೊಕ್ಕರೆ, ಕಾಗೆ, ಕೋಗಿಲೆ, ಗಿಳಿ, ಗರುಡ, ಹದ್ದು, ಕೌಜುಗ ಮೊದಲಾದ ಹಕ್ಕಿಗಳು, ನಾಗರ, ಕೇರೆ ಹಾಗೂ ನೀರು ಹಾವುಗಳಂಥ ವಿಷಪೂರಿತ ಹಾವುಗಳು ಈ ಭಾಗದಲ್ಲಿವೆ.

ಬಿಸಿಲಿನ ನಾಡಾದ ಈ ಗ್ರಾಮದಲ್ಲಿ ವಾಡಿಕೆ ಮಳೆ ೪೩೪ ಮಿಮೀ ಇದ್ದು ಬಿಸಿಲು ೩೮ ಡಿಗ್ರಿ ಸೆಂ., ಚಳಿ ೧೨ ಡಿಗ್ರಿ ಸೆಂ ಇರುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಉಳಿದಂತೆ ಕೃಷಿಗೆ ೪೧ ಕೊಳವೆ ಬಾವಿಗಳಿವೆ. ಒಂದು ಕೆರೆಯಿದೆ, ೨ ಕೈಪಂಪುಗಳಿವೆ.

ಕುಂಚಿಟಿಗ, ಆದಿಕರ್ನಾಟಕ, ಬೇಡ ಜನಾಂಗದವರಿದ್ದು ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ. ಬೇಡ, ಆದಿಕರ್ನಾಟಕ ಕಿರು ಸಮುದಾಯವಾಗಿವೆ. ಕನ್ನಡ ಇಲ್ಲಿನ ಮೂಲ ಭಾಷೆಯಾಗಿದೆ. ವಿವಿಧ ಪ್ರಕಾರಗಳ ೨೧೯ ಮನೆಗಳಿದ್ದು ಅವು ಕಲ್ಲಿನ, ಕಾಂಕ್ರೀಟ್, ಶೀಟಿನ, ಹೆಂಚಿನ ಸ್ವರೂಪದವುಗಳಾಗಿವೆ. ೯೭೯ ಜನಸಂಖ್ಯೆ ಹೊಂದಿರುವ ಇಲ್ಲಿ ೭೯ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ವಸತಿ ಯೋಜನೆಯ ೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳು ಇದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಮುಖ್ಯ ಆಹಾರ ರಾಗಿಮುದ್ದೆ. ರೊಟ್ಟಿ ಹಾಗೂ ಅನ್ನವನ್ನು ಅಮುಖ್ಯವಾಗಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ

ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ ಬಳಕೆಯಲ್ಲಿದ್ದು ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಜೋಳ, ತೊಗರಿ, ಭತ್ತ, ತೋಟಗಾರಿಕೆ ಬೆಳೆಗಳಾಗಿ ಟೊಮ್ಯಾಟೋ, ಹೀರೆ, ಬೆಂಡೆ, ಸೊಪ್ಪು, ತರಕಾರಿ ಬೆಳೆಯುತ್ತಾರೆ. ತೆಂಗು, ಅಡಿಕೆ ವಾಣಿಜ್ಯ ಬೆಳೆಯೂ ಇದೆ. ಒಂದು ಮಿನಿ ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶಿಕ್ಷಕರು, ಇಬ್ಬರು ವಕೀಲರು, ಇಬ್ಬರು ಇಂಜಿನಿಯರ್ ಸೇರಿ ೬ ಜನ ಸರ್ಕಾರಿ ನೌಕರರು ಈ ಗ್ರಾಮದಲ್ಲಿದ್ದಾರೆ. ವಕೀಲರಾದ ಮುರಳಿ ಲೇಖಕರೂ ಆಗಿದ್ದು ಜನಪ್ರಿಯ ವಕೀಲರಾಗಿದ್ದಾರೆ. ಬೀಡಿ ಸುತ್ತುವುದು, ಊಟದ ಎಲೆ ಕಟ್ಟುವುದು ಮಹಿಳೆಯರ ಗೃಹೋದ್ಯೋಗವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯ್ತಿ, ಕೊಟ್ಟ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದ ಇಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ಆರ್ಥಿಕ ಸಬಲೀಕರಣ ಯೋಜನೆಯಡಿ ೨ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಸ್ವಸಹಾಯ ಗುಂಪುಗಳಿವೆ. ಒಂದು ಅಂಗನವಾಡಿ ಕೇಂದ್ರ, ಒಂದು ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಶಾಲೆಯಲ್ಲಿ ೯೬ ಮಕ್ಕಳಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ಸೌಲಭ್ಯವಿದೆ. ಶಾಲೆಯಲ್ಲಿ ಮೂವರು ಶಿಕ್ಷಕರಿದ್ದಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೪.೬% ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಗೂಡಂಗಡಿಗಳಿವೆ. ಗ್ರಾಮದಲ್ಲಿ ವಿಶಾಲವಾದ ಮಲ್ಲೇಶ್ವರ ದೇವಾಲಯ, ಆಂಜನೇಯ, ರಂಗನಾಥಸ್ವಾಮಿ, ಲಕ್ಷ್ಮಿ, ಮಾರಮ್ಮ ಹಾಗೂ ಮರಿಯಮ್ಮ ದೇವಸ್ಥಾನಗಳಿದ್ದು ೨ ವೀರಗಲ್ಲು, ೨ ಕರುಗಲ್ಲು ಬೃಹತ್ತಾದ ಕಲ್ಯಾಣಿ, ಅರಳೀಕಟ್ಟೆ, ಧಾರ್ಮಿಕವಾಗಿ ಔನ್ನತ್ಯ ಮೆರೆದಿವೆ. ಈ ಗ್ರಾಮದ ಆರಂಭದಲ್ಲಿ ಒಂದು ಗೋರಿಯಿದ್ದು ಅದರಲ್ಲಿ ಕ್ರಿ.ಶ. ೧೬೮೯ ನೇ ಸಾಲಿನ ಪರ್ಶಿಯನ್ ಶಾಸನವಿದ್ದು ಭಗವಂತನ ಪ್ರವಾದಿಯಾದ ಮಹಮದನೇ ಭಗವಂತ ಎಂದಿದೆ. ಮತ್ತೊಂದು ತಾಮ್ರ ಶಾಸನ ಇಲ್ಲಿನ ಮಲ್ಲೇಶ್ವರ ದೇವಾಲಯದ ಅರ್ಚಕರಾದ ಮಲ್ಲೇಶಪ್ಪ ಅವರ ಬಳಿಯಿದ್ದು ಶೈವಸಂಸ್ಕಾರ ಹಾಗೂ ದೇವಾಲಯವೊಂದರ ವ್ಯಾಜ್ಯ ಪರಿಹರಿಸಿ ಅದರ ಮುಖ್ಯಸ್ಥರಾದ ಯತಿಗಳಿಗೆ ಶೈವಸಂಸ್ಕಾರದ ಉಡುಗೊರೆ ಕೊಟ್ಟ ಉಲ್ಲೇಖವಿದೆ. ವಿಶಾಲವಾದ ಕೊಳ, ಶುದ್ಧವಾದ ನೀರು, ಸುತ್ತಲೂ ಮುರಿದ ಕಲ್ಲುಕಟ್ಟು ಕಮಾನು ಮಂಟಪ ದೇವಾಲಯದ ಭವ್ಯತೆ ಸಾರುತ್ತದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ ಹಬ್ಬಗಳನ್ನು ಆಚರಿಸುತ್ತಾರೆ. ಮಾರಮ್ಮನ ಊರಹಬ್ಬ, ಹರಕೆ, ಬಲಿ, ಆರತಿ, ಬಾನ ಸಂಪ್ರದಾಯವಿದೆ.

## ಓಜಗುಂಟೆ ಗೊಲ್ಲರಹಟ್ಟಿ

ಓಜಗುಂಟೆ ಗೊಲ್ಲರಹಟ್ಟಿ ಕಾಡುಗೊಲ್ಲರ ಬುಡಕಟ್ಟು ಗ್ರಾಮ. ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೬ ಕಿ.ಮೀ. ದೂರದಲ್ಲಿದ್ದು ಓಜಕುಂಟೆ ಕಂದಾಯ ಗ್ರಾಮದ ಉತ್ತರಕ್ಕೆ ಅರ್ಧ ಕಿ.ಮೀ ದೂರದಲ್ಲಿದೆ. ಇದರ ಭೌಗೋಳಿಕ ವ್ಯಾಪ್ತಿ ೮೮.೪೫ ಆಗಿದ್ದು ಓಜಕುಂಟೆಯ ಮಜರೆ ಗ್ರಾಮವಾಗಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ಸುತ್ತಲೂ ಕುರುಚಲು ಕಾಡು, ಗಿಜ, ಪೊದೆ, ತೋಟಸಾಲು ಹೊಂದಿದೆ. ಹಾಗಾಗಿ ಈ ಪರಿಸರದಲ್ಲಿ ಹಂದಿ, ಮೊಲ, ಜಿಂಕೆ, ನರಿ ಕಂಡುಬರುತ್ತವೆ. ಗ್ರಾಮದಲ್ಲಿ ಕುರಿ, ಹಸು, ಎಮ್ಮೆ, ಮೇಕೆ, ಕತ್ತೆ, ನಾಯಿಗಳನ್ನು ಸಾಕುಪ್ರಾಣಿಗಳಾಗಿ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾದರೆ ಕಾಡುಹಕ್ಕಿಯಾಗಿ ಕಾಗೆ, ಕೋಗಿಲೆ, ಕಾಜಾಣ, ಗೂಬೆ, ಗುಬ್ಬಚ್ಚಿ, ಬೆಳವ, ಗೊರವಂಕ, ಕೌಜಲಗ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ೪೩೪ ಮಿಮೀ ಮಳೆ ಬೀಳುತ್ತಿದ್ದು ಬಿಸಿಲು ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತದೆ. ಕೃಷಿ ಕಸುಬಿಗೆ ಈ ಪರಿಸರದಲ್ಲಿ ೧೭ ಬೋರ್‌ವೆಲ್ ಗಳಿದ್ದು ತರಕಾರಿ, ಕೃಷಿ ಬೆಳೆಗೆ ಆಶ್ರಯವಾಗಿದೆ.

ಕಾಡುಗೊಲ್ಲ ಸಮುದಾಯದ ೫೪ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಹಾಗೂ ೬ ಗುಡಿಸಲುಗಳಿವೆ. ೨೧೮ ಜನಸಂಖ್ಯೆ ಹೊಂದಿದ್ದು ೧೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಜನತಾ, ಆಶ್ರಯ ವಸತಿ ಯೋಜನೆಯ ೪ ಫಲಾನುಭವಿಯಿದ್ದಾರೆ. ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ. ವಿಶೇಷ ಸಾಂದರ್ಭಿಕ ಬಾಡೂಟ, ಪಾಯಸ, ಹೋಳಿಗೆ ಊಟದ ಸೌಲಭ್ಯವಿದೆ. ಆಧುನಿಕ ವಾಹನವಾದ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನ, ಆಟೋಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಮುಖ್ಯ ಬೆಳೆ ಶೇಂಗಾ. ಆಹಾರ ಬೆಳೆಯಾಗಿ ರಾಗಿ, ಜೋಳ, ಭತ್ತ, ತೊಗರಿ, ಹುರುಳಿ ಬೆಳೆಯಿದೆ. ತರಕಾರಿ, ಸೊಪ್ಪು ಹೆಚ್ಚಾಗಿ ಬೆಳೆಯುತ್ತಾರೆ. ತೆಂಗಿನ ತೋಟಗಾರಿಕೆ, ಹುಣಸೆ ಹಣ್ಣಿನ ವ್ಯಾಪಾರವಿದೆ. ರೈಲ್ವೇ, ಶಿಕ್ಷಣ ಇಲಾಖೆಗೆ ಸೇರಿದ ಕಲ್ಲಪ್ಪ ಮೊದಲಾದ ೪ ಜನ ಸರ್ಕಾರಿ ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ, ಕೊಟ್ಟ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ೨ ಸ್ತ್ರೀಶಕ್ತಿ ಸಂಘಗಳಿದ್ದು ಅಂಗನವಾಡಿ, ಸರ್ಕಾರಿ ಕಿರಿಯ ಪಾಠಶಾಲೆ ಇದೆ. ೨೯ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ನೀಡಿಕೆಯ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೪೪.೬ ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ಹಾಗೂ ವಿಧವಾ ವೇತನ ಫಲಾನುಭವಿಗಳಿದ್ದು ಚಿತ್ರಯ್ಯ ಅಂಗವಿಕಲ ಸಂಘದ ಅಧ್ಯಕ್ಷರಾಗಿದ್ದಾರೆ. ಗ್ರಾಮದಲ್ಲಿ ಒಂದು ಪೆಟ್ಟಿಗೆ ಅಂಗಡಿ ಇದೆ. ಜುಂಜಪ್ಪ ದೇವಾಲಯ ಊರ ಹೊರಭಾಗದಲ್ಲಿದ್ದು ದೀಪಾವಳಿ ಮತ್ತು ಯುಗಾದಿಯ ನಂತರ ದಿನದಂದು ಬೃಹತ್ ಜಾತ್ರೆ ಮಾಡುತ್ತಾರೆ. ಹಾಲು–ತುಪ್ಪ ಹಾಕುವುದು ಈ ಹಬ್ಬದ ವಿಶೇಷ. ಜೊತೆಗೆ ಆ ವರ್ಷದಲ್ಲಿ ಸತ್ತವರ ಹೆಸರಿನಲ್ಲಿ ಒಂದೊಂದು ಕಲ್ಲು ಇಟ್ಟು ಆ ಕಲ್ಲುಗಳಿಗೆ ಹಾಲು ಎರೆಯುವುದು ಇಲ್ಲಿನ ವಿಶೇಷವಾಗಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ಯಜಮಾನ ಸಣ್ಣಚಿತ್ತಪ್ಪ, ಗಿಡ್ಡಾರೇಗೌಡ ಎಂಬ ಹಿರಿಯ ಜನಪದ ಕಲಾವಿದರು ಜುಂಜಪ್ಪನ ಕಥೆ ಹೇಳುವ ಕಲಾವಿದರು. ಇವರು ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಅವರು ಸಂಗ್ರಹಿಸಿರುವ 'ವೀರ ಜುಂಜಪ್ಪ ಸಮಗ್ರ ಕಥಾವಳಿ' ಪುಸ್ತಕಕ್ಕೆ ಕಥೆ ಹಾಡಿದ್ದಾರೆ. ಉಳಿದಂತೆ ಕದುರಮ್ಮ, ಸಣ್ಣಮ್ಮ ಸೋಬಾನೆ ಪದ ಹೇಳುವ ಸ್ಥಳೀಯ ಕಲಾವಿದರಾಗಿದ್ದಾರೆ.

ಓಜಗುಂಟೆ ಗೊಲ್ಲರಹಟ್ಟಿಯ ಒಂದು ಗುಂಪು ಲಿಂಗದಹಳ್ಳಿ ರಸ್ತೆ ಬದಿ ಹೊಸ ಬಡಾವಣೆ ನಿರ್ಮಿಸಿಕೊಂಡಿದ್ದು ೨೦ ಮನೆಗಳಿವೆ. ಈ ಎಲ್ಲ ಮನೆಗಳು ಜನತಾ, ಆಶ್ರಮ, ವಸತಿ ಯೋಜನೆಯ ಮನೆಗಳಾಗಿದ್ದು ವಿದ್ಯುತ್, ರಸ್ತೆ ಸಂಪರ್ಕ ಹೊಂದಿದ್ದಾರೆ. ಇಲ್ಲಿ ಪ್ರೌಢಶಾಲಾ ಶಿಕ್ಷಕ ಕಲ್ಲಪ್ಪ, ವೇಣುಗೋಪಾಲ್ ಸೇರಿ ಇಬ್ಬರು ಸರ್ಕಾರಿ ಶಿಕ್ಷಕರಿದ್ದಾರೆ. ಗಣೆ ಕಲಾವಿದ ಪೂಜಾರಿ ಚಿತ್ತಯ್ಯ, ಸೋಬಾನೆ ಕಲಾವಿದೆಯರಾದ ಸಣ್ಣಕಂಬಕ್ಕ, ಚಿತ್ತಮ್ಮ, ಸಣ್ಣಕಂಬಕ್ಕ, ಚಿತ್ತಮ್ಮ ಕಲಾವಿದೆಯರು ಜುಂಜಪ್ಪ, ಚಿತ್ರದೇವರ ಕಥನವನ್ನು ಮಾಡುತ್ತಾರೆ.

## ಓಬಳಾಪುರ

ಓಬಳಾಪುರ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೬ ಕಿ.ಮೀ. ದೂರದಲ್ಲಿದ್ದು, ಸಿರಾ–ಅಮರಾಪುರ ರಸ್ತೆಯಲ್ಲಿ, ಗಂಡಿಹಳ್ಳಿ ಗೇಟಿನಿಂದ ಬಲ ಭಾಗದಲ್ಲಿ, ದೊಡ್ಡ ಬಾಗಾನೆ ರಸ್ತೆಯಲ್ಲಿದೆ. ಇದು ದೊಡ್ಡ ಬಾಣಾವರೆಯ ಉಪಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೪೮.೧೩ ಹೆಕ್ಟೇರ್ ಆಗಿದೆ. ಹೋಬಳಿ ನರಸಿಂಹಸ್ವಾಮಿ ಒಕ್ಕಲು ಹೆಚ್ಚಾಗಿರುವುದರಿಂದ ಅದೇ ಹೆಸರಿನಲ್ಲಿ ಗ್ರಾಮವನ್ನು ಹೆಸರಿಸಿದೆ. ಇದು ಬಯಲು ಪ್ರದೇಶ. ಕೆಂಪು ಮಿಶ್ರಿತ ಮರಳು ಭೂಮಿ, ಈ ಪರಿಸರದಲ್ಲಿ ನರಿ, ತೋಳ, ಹಂದಿ, ಮೊಲ ಕಾಡು ಪ್ರಾಣಿಗಳಾಗಿ ಕಂಡು ಬಂದರೆ ಗ್ರಾಮದಲ್ಲಿ ಹಸು, ಎಮ್ಮೆ, ಎತ್ತು, ಕುರಿ, ಮೇಕೆ ಸಾಕಿದ್ದಾರೆ. ಪಕ್ಷಿಗಳಾದ ನವಿಲು, ಕೊಕ್ಕರೆ, ಗಿಳಿ, ಗೊರವಂಕ, ಗೂಬೆ,ಹದ್ದು, ಗರುಡ, ಗೀಜುಗ ಮೊದಲಾದ ಪಕ್ಷಿಗಳಿವೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ೪೨೪ ಮಿ.ಮೀ ಮಳೆ ಬೀಳುತ್ತಿದ್ದು, ಉಷ್ಣಾಂಶ೩೯ಂ ಸೆಂ., ಚಳಿ ೧೨ಂ ಸೆಂ ಆಗಿದೆ. ಈ ಪರಿಸರದಲ್ಲಿ ೧೮ ಕೊಳವೆ ಬಾವಿಗಳಿದ್ದು, ಕೃಷಿಗೆ ಉಪಯುಕ್ತವಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೩ ಕಿರು ಟ್ಯಾಂಕ್‌ಗಳಿದ್ದು, ೧ ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರ ದೊಡ್ಡ ಸಮುದಾಯಗಳಿದ್ದು, ಆದಿಕರ್ನಾಟಕ, ಕುರುಬ, ಕುಂಬಾರ, ನಾಯಕ, ವಿಶ್ವಕರ್ಮ, ಕಿರುಸಮುದಾಯ ಹೊಂದಿದೆ. ಕಾಂಕ್ರೀಟ್, ಹೆಂಚಿನ, ಶೀಟಿನ ೨ ಗುಡಿಸಲು ಮನೆಗಳಿವೆ. ೧೩ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ಇವು ಆಶ್ರಯ ಅಂಬೇಡ್ಕರ್, ಇಂದಿರಾ ಆವಾಸ್ ವಸತಿ ಯೋಜನೆಯ ೧೬ ಫಲಾನುಭವಿಗಳಿದ್ದರೆ, ಭಾಗ್ಯಜ್ಯೋತಿ ಉಚಿತ ವಿದ್ಯುತ್ ಫಲಾನುಭವಿಗಳಿದ್ದಾರೆ. ೬೩ ಮನೆಗಳಿದ್ದು ೨೮೪ ಜನಸಂಖ್ಯೆ ಹೊಂದಿದೆ.

ಇಲ್ಲಿನ ರಾಗಿ ಮುದ್ದೆ ಮುಖ್ಯ ಆಹಾರ. ಉಪ ಆಹಾರವಾಗಿ ಅನ್ನ, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಭೋಜನವಾಗಿದೆ. ಎತ್ತಿನಬಂಡಿ, ಟ್ರ್ಯಾಕ್ಟರ್, ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಜೋಳ, ತೊಗರಿ, ಅಲಸಂದಿ ಇತರ ಆಹಾರ ಬೆಳೆಗಳು. ರೇಷ್ಮೆ, ಹತ್ತಿ, ಹುಣಸೆಹಣ್ಣು, ತೆಂಗು ತೋಟಗಾರಿಕೆ ಬೆಳೆಗಳಾಗಿವೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರ, ದೊಡ್ಡ ಬಾಣಾಗೆರೆ ಗ್ರಾಮ ಪಂಚಾಯಿತಿ ಕೇಂದ್ರವಾಗಿವೆ. ಚಿತ್ರದುರ್ಗ

ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಒಬ್ಬರು ಈ ಗ್ರಾಮದ ಪಂಚಾಯಿತಿ ಸದಸ್ಯರಿದ್ದಾರೆ. ೨ ಸ್ತ್ರೀಶಕ್ತಿ ಗುಂಪು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪುಗಳಿದ್ದು, ಮಹಿಳಾ ಸಬಲೀಕರಣಕ್ಕೆ ಶ್ರಮಿಸುತ್ತದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು ೨೮ ಮಕ್ಕಳೊಟ್ಟಿಗೆ ಇಬ್ಬರು ಶಿಕ್ಷಕರಿದ್ದು, ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿವೆ. ಒಟ್ಟು ೬೯.೫ ಸಾಕ್ಷರತರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೨ ಅಂಗಡಿಗಳಿವೆ. ಗ್ರಾಮದಲ್ಲಿ ಆಂಜನೇಯ, ಈರಮ್ಮ ದೇವಾಲಯಗಳಿವೆ. ಆಂಜನೇಯ ಉತ್ಸವ, ಅನ್ನ ಸಂತರ್ಪಣೆ ಇದ್ದರೆ, ಈರಮ್ಮನಿಗೆ ಆರತಿ, ಪಾನಕ ಫಲಹಾರದ ಹರಕೆ ಸಂಪ್ರದಾಯವಿದೆ. ಮಾರಮ್ಮನ ಪೌಳಿ ಇದ್ದು, ಊರ ಹಬ್ಬವಾಗಿ ಬಾನ, ಬ್ಯಾಟೆ, ಆರತಿ, ಹರಕೆ ಸಂಪ್ರದಾಯ ಗಳಿವೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ಗೌರಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಓಬಳಹಳ್ಳಿ

ಓಬಳಹಳ್ಳಿಯು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ–ಚೇಳೂರು ರಸ್ತೆ ಮಾರ್ಗದಲ್ಲಿ ಬೆಂಚೆ ಗೇಟ್‌ನಿಂದ ಬಲಭಾಗಕ್ಕೆ ೩ ಕಿಮೀ ದೂರದಲ್ಲಿ ಸಿರಾದಿಂದ ೨೦ ಕಿಮೀ ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೨೫.೫೧ ಹೆಕ್ಟೇರ್‌ಗಳಾಗಿವೆ. ಅಲ್ಲದೇ ಮಾದಯ್ಯನಪಾಳ್ಯವು ಈ ಗ್ರಾಮಕ್ಕೆ ಸೇರ್ಪಡೆಯಾಗಿದೆ. ಓಬಳನರಸಿಂಹಸ್ವಾಮಿ ದೇವರ ಒಕ್ಕಲಾದ ಓಬಳಯ್ಯ ಎಂಬುವನು ಈ ಗ್ರಾಮದ ಮೂಲ ಪುರುಷನಾಗಿದ್ದು ಆತನ ಹೆಸರಿನಿಂದಲೇ ಗ್ರಾಮ ರಚನೆಯಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇಲ್ಲಿ ಯಾವುದೇ ಅರಣ್ಯ, ಬೆಟ್ಟ–ಗುಡ್ಡ, ತೋಪುಗಳು ಕಂಡುಬರುವುದಿಲ್ಲ. ಇಲ್ಲಿ ಒಂದು ಕೆರೆಯಿದ್ದು ಮಳೆಗಾಲದಲ್ಲಿ ತುಂಬಿರುತ್ತದೆ. ಹಾಗೆಯೇ ಇಲ್ಲಿ ೪೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಹಾಗೂ ಸಿಸ್ಟರ್ನ್ ಮತ್ತು ಕೈಪಂಪುಗಳಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೪೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಈ ಗ್ರಾಮದಲ್ಲಿ ಒಟ್ಟು ೭೩ ಮನೆಗಳಿದ್ದು ೨೩೮ ಜನಸಂಖ್ಯೆಯನ್ನು ಹೊಂದಿದೆ. ಇವರ ಭಾಷೆ ಕನ್ನಡವಾಗಿದೆ. ಇದರಲ್ಲಿ ಕುಂಚಿಟಿಗ, ಬೋವಿ, ನಾಯಕ, ವೀರಶೈವರ ಮನೆಗಳಿವೆ. ಈ ಗ್ರಾಮದ ಜನರ ಮುಖ್ಯ ಆಹಾರ ರಾಗಿಮುದ್ದೆ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಿಲ್ಲದಿದ್ದರೂ ಟ್ರ್ಯಾಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಈ ಗ್ರಾಮಕ್ಕೆ ಕಚ್ಚಾರಸ್ತೆಯನ್ನು ಒಳಗೊಂಡಿದೆ.

ಈ ಹಳ್ಳಿಯ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಇದರಲ್ಲಿ ಶೇಂಗಾ, ನವಣೆ, ರಾಗಿ, ಭತ್ತ, ಜೋಳ, ತೊಗರಿ, ತೆಂಗು, ಅಡಿಕೆ, ಹುಣಸೆ ಬೆಳೆಗಳನ್ನು ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಲ್ಲಿ ರೇಷ್ಮೆ ಸಾಕಾಣಿಕೆಯನ್ನು ಕಾಣುತ್ತೇವೆ ಮತ್ತು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಈ ಗ್ರಾಮದಲ್ಲಿ ಸಾರಿಗೆ ಸಂಸ್ಥೆಯಲ್ಲಿ ಒಬ್ಬರು ಕಾರ್ಯನಿರ್ವಹಿಸುತ್ತಿದ್ದಾರೆ. ಯಾವುದೇ ಬೃಹತ್ ಕೈಗಾರಿಕೆಗಳಿಲ್ಲದಿದ್ದರೂ ರಾಗಿಮಿಲ್, ಟೈಲರ್, ಬೀಡಿ ಸುತ್ತುವುದು ಕಂಡುಬರುತ್ತದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ಗೋಪಾಲದೇವರಹಳ್ಳಿ ತಾಲ್ಲೂಕು ಪಂಚಾಯ್ತಿ ಮತ್ತು ಗ್ರಾಮಪಂಚಾಯ್ತಿ ಕೇಂದ್ರವಾಗಿದೆ. ಬೆಂಚೆಯಿಂದ ಅಂಚೆ ಸಂಪರ್ಕ ಹೊಂದಿದೆ. ಕಳ್ಳಂಬೆಳ್ಳ ಪೊಲೀಸ್ ಮತ್ತು ವಿದ್ಯುತ್ ಮಂಡಳಿಯನ್ನು ಒಳಗೊಂಡಿರುತ್ತದೆ. ಈ ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದ್ದು ಬಗೆಹರಿಯದ ತೀರ್ಮಾನಗಳನ್ನು ತಾಲ್ಲೂಕು ಮತ್ತು ನ್ಯಾಯಾಲಯಗಳಲ್ಲಿ ಇತ್ಯರ್ಥಮಾಡಿಕೊಳ್ಳುತ್ತಾರೆ.

ಈ ಗ್ರಾಮವು ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿಲ್ಲದಿದ್ದರೂ ಮೂರು ಸ್ತ್ರೀಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಸಂಘದಿಂದ ಸಾಲ ಪಡೆದು ಕಂತಿನ ಮೂಲಕ

ತೀರಿಸುವಂತಹ ಹಣದ ಸ್ವಸಹಾಯ ಸೌಲಭ್ಯವನ್ನು ಪಡೆದುಕೊಂಡಿದೆ.

ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೭.೨% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಈ ಗ್ರಾಮದಲ್ಲಿ ಆರೋಗ್ಯ ಕೇಂದ್ರವಿಲ್ಲದಿದ್ದರೂ ಕುಟುಂಬ ಕಲ್ಯಾಣ ಪದ್ಧತಿಯನ್ನು ಹೊಂದಿದೆ. ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಧಾರ್ಮಿಕ ಕೇಂದ್ರಗಳಿಗೆ ಸಂಬಂಧಿಸಿದಂತೆ ಆಂಜನೇಯ, ತಿಮ್ಮಪ್ಪ, ಗ್ರಾಮದೇವತೆ ಮಾರಮ್ಮನನ್ನು ಹೊಂದಿದೆ. ಬೇವಿನಕಟ್ಟೆಯಿದೆ. ಪ್ರತಿ ವರ್ಷಕ್ಕೊಮ್ಮೆ ಮಾರಮ್ಮನ ಜಾತ್ರೆಯನ್ನು ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿದೆ. ಯುಗಾದಿ, ದೀಪಾವಳಿ, ದಸರಾ, ಗೌರಿಹಬ್ಬಗಳನ್ನು ಆಚರಿಸುತ್ತಾರೆ.

## ಕದರಿ ಕಂಬದಹಳ್ಳಿ

ಕದರಿ ಕಂಬದಹಳ್ಳಿಯು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೪ ಕಿ.ಮೀ ದೂರದಲ್ಲಿದೆ. ಇದು ರತ್ನಸಂದ್ರ ಮುಖ್ಯ ಗ್ರಾಮದ ಜೋಡಿ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೯೮೮.೩೨ ಹೆಕ್ಟೇರ್ ಆಗಿದೆ. ಕದರಿಯಿಂದ ನರಸಿಂಹಸ್ವಾಮಿಯ ಕಲ್ಲನ್ನು ತಂದು ಈ ಗ್ರಾಮದಲ್ಲಿ ಸ್ಥಾಪಿಸಿ, ಪೂಜಿಸುತ್ತಿದ್ದುದರಿಂದ ಕದರಿ ಮತ್ತು ಕಲ್ಲು (ನರಸಿಂಹನ ಕಲ್ಲಿನ ಅಥವಾ ಕಂಬದ ಸ್ವರೂಪದ) ಮೂರ್ತಿ ಇದಾಗಿದ್ದುದರಿಂದ ಕದರಿ ಕಂಬದಹಳ್ಳಿ ಎಂದು ಕರೆಯಲಾಗಿದೆ. ನಂತರ ದೇವರ ಉತ್ಸವ, ಹಣ ಹಾಗೂ ಜನ ಬೆಂಬಲವಿಲ್ಲದ ಕಾರಣ ಸಮೀಪದ ಚಿಕ್ಕಗೂಳದಲ್ಲಿ ಕದರಿ ನರಸಿಂಹಸ್ವಾಮಿ ಗುಡಿ ನಿರ್ಮಿಸಿ ದೇವರ ಉತ್ಸವವನ್ನು ಇದೇ ಗ್ರಾಮದವರ ಮುಖಂಡತ್ವದಲ್ಲಿ ನಡೆಸಿಕೊಂಡು ಬಂದರೆಂಬ ಐತಿಹ್ಯದ ಜೊತೆಗೆ ಇದೇ ಪರಂಪರೆಯೂ ಮುಂದುವರಿದಿದೆ.

ಬಯಲು ಪ್ರದೇಶ, ಎತ್ತರದ ಕೆಂಪುಭೂಮಿ, ಬಿಳಿಕಲ್ಲುಚಿಟ್ಟುಗಳ ಭೂ ಲಕ್ಷಣ ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ, ಉಡ ಕಂಡುಬಂದರೆ ಗ್ರಾಮದಲ್ಲಿ ರೈತಾಪಿ ಜನ ಹಸು, ಕುರಿ, ಮೇಕೆ, ಕೋಳಿಗಳನ್ನು ಸಾಕುಪ್ರಾಣಿಗಳನ್ನಾಗಿ ಸಾಕಿದ್ದಾರೆ. ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಹದ್ದು, ಗರುಡ, ಗೂಬೆ, ಗುಬ್ಬಚ್ಚಿ, ಕೊಕ್ಕರೆ, ಕಾಗೆ, ಕಾಜಾಣ, ಸಾಂಬಾರ ಕಾಗೆ, ಗೊರವಂಕ, ಬೆಳವ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಬಿಸಿಲು ಪ್ರದೇಶವಾಗಿದ್ದು ಕಳೆದ ೪ ವರ್ಷಗಳಲ್ಲಿ ಸರಾಸರಿ ೪೮೩ ಮಿಮೀ ಮಳೆಯಾಗಿದೆ. ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿಯ ಪ್ರಮಾಣ ೧೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಯೋಜನೆಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ಉಳಿದಂತೆ ಬೆಳೆಗೆ ಉಪನೀರಾವರಿಯಾಗಿ ೩೭ ಕೊಳವೆ ಬಾವಿಗಳನ್ನು ನಿರ್ಮಿಸಿಕೊಳ್ಳಲಾಗಿದ್ದು ಬಟನ್ಸ್ ಹೂ, ತರಕಾರಿ ಬೆಳೆಗಳು ಸೇರಿದಂತೆ ತೆಂಗು, ಅಡಿಕೆ ಬೆಳೆಗೆ ಪೂರಕವಾಗಿದೆ. ಗ್ರಾಮದಲ್ಲಿ ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ತಿಗಳ ಜನಾಂಗ ದೊಡ್ಡ ಸಮುದಾಯವಾಗಿದ್ದು ಬೇಡರು, ಮಡಿವಾಳ, ಕುಂಚಿಟಿಗರು ಕಿರುಸಮುದಾಯವಾಗಿದೆ. ೭೦ ಮನೆಗಳಿದ್ದು ಈ ಗ್ರಾಮದ ಭಾಷೆ ಕನ್ನಡವಾಗಿದೆ. ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಿದ್ದು ಇವು ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ೧೨ ಫಲಾನುಭವಿಗಳಿದ್ದಾರೆ. ೧೪ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ೪೭೩ ಜನಸಂಖ್ಯೆಯನ್ನು ಹೊಂದಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದ ಮುಖ್ಯ ಆಹಾರ ರಾಗಿಮುದ್ದೆ, ಅನ್ನ-ರೊಟ್ಟಿ ಬಳಸುವವರಿದ್ದಾರೆ ವಿಶೇಷವಾಗಿ ಹೋಳಿಗೆ, ಬಾಡೂಟದ ಸಂದರ್ಭಗಳೂ ಇರುತ್ತವೆ. ಎತ್ತಿನ ಗಾಡಿಯು ಸಾಂಪ್ರದಾಯಿಕ ವಾಹನದ ಜೊತೆಗೆ ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ಹಾರಕ, ನವಣೆ ಬೆಳೆಯುತ್ತಾರೆ. ತೆಂಗು, ಅಡಿಕೆ, ಸೇವಂತಿಗೆ ಹೂ ವಾಣಿಜ್ಯ ಬೆಳೆಗಳು. ಹುಣಸೇ ಹಣ್ಣು, ಹೊಂಗೆಬೀಜ, ಹೂ, ತರಕಾರಿ ಪ್ರಮುಖ ವಾಣಿಜ್ಯ ಸರಕಾಗಿವೆ. ಮಹಿಳೆಯರು ಬೀಡಿ ಕಟ್ಟುವ, ಹೂ ಕಟ್ಟುವ ಗೃಹಕಸುಬು ಹೊಂದಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಬಿಡ್ಡನಹಳ್ಳಿ ಜಿಲ್ಲಾ ಪಂಚಾಯ್ತಿ, ರತ್ನಸಂದ್ರ ತಾಲ್ಲೂಕು ಹಾಗೂ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು ೨೮ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಮಕ್ಕಳಿಗೆ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೨ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿಗಳಿವೆ. ೧ ಟೀ ಅಂಗಡಿಯಿದೆ. ಗ್ರಾಮದಲ್ಲಿ ಕದರಿ ನರಸಿಂಹದೇವರ ಗುಡಿ, ಭೂತಪ್ಪ, ಮಾರಮ್ಮನ ಪೌಳಿಗಳಿವೆ. ೧ ಕರಿಗಲ್ಲು ಇದೆ. ಚಿಕ್ಕಗೂಳ ನರಸಿಂಹಸ್ವಾಮಿ ದೇವರ ಉತ್ಸವ ಹೊಣೆಗಾರಿಕೆ ಇದೇ ಗ್ರಾಮದವರ ಮುಖಂಡತ್ವದಲ್ಲಿ ನಡೆಯುತ್ತದೆ.

ಯುಗಾದಿ, ದೀಪಾವಳಿ, ದಸರಾ, ರಾಮನವಮಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರತ್ನಸಂದ್ರ, ದೊಡ್ಡ ಆಲದ ಮರ, ತುಮಕೂರಿಗೆ ರಸ್ತೆ ಸಂಪರ್ಕ, ಬಸ್ ಸೌಲಭ್ಯವಿದೆ.

## ಕೊಟ್ಟ

ಕೊಟ್ಟ ಸಿರಾ ತಾಲ್ಲೂಕಿನ ಕಸಬಾ ಹೋಬಳಿಗೆ ಸೇರಿದ ಗ್ರಾಮ ಪಂಚಾಯ್ತಿ ಕೇಂದ್ರ. ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೬ ಕಿ.ಮೀ. ದೂರದಲ್ಲಿದೆ. ಸಿರಾ–ಅಮರಾಪುರ ಮುಖ್ಯರಸ್ತೆಯಲ್ಲಿ ಕೊಟ್ಟ ಗೇಟಿನಿಂದ ಎಡಕ್ಕೆ ತಿರುಗಿ ೨ ಕಿಮೀ ದೂರ ಕ್ರಮಿಸಿದರೆ ಕೊಟ್ಟ ಗ್ರಾಮವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೬೪೨.೩೨ ಹೆಕ್ಟೇರ್ ಆಗಿದೆ. ಇದಕ್ಕೆ ಮಜರೆ ಗ್ರಾಮಗಳಾಗಿ ಲಿಂಗದಹಳ್ಳಿ, ಆದಲೂರು, ಮುಷ್ಟಿಗರಹಳ್ಳಿ, ರಂಗಾಪುರ, ರಂಗಾಪುರ ಗೊಲ್ಲರಹಟ್ಟಿ, ಬೊಮ್ಮರಸನಹಳ್ಳಿ, ಬೈಚೇನಹಳ್ಳಿ ಸೇರಿವೆ. ಇದೆಲ್ಲ ಸೇರಿ ೨೧೫೨.೩೨ ಹೆಕ್ಟೇರ್ ಕಂದಾಯ ಭೂಪ್ರದೇಶವನ್ನು ಹೊಂದಿದೆ. ಪಶುಪಾಲನೆಯ ಸಂದರ್ಭದಲ್ಲಿ ಪಶುಗಳಿಗೆ ಗೊಟ್ಟದಿಂದ ಔಷಧ ಕುಡಿಸುವ ಸಂಪ್ರದಾಯ ರೂಢಿಯಲ್ಲಿದೆ. ಆದುದರಿಂದ ಗೊಟ್ಟ ನಂತರದ ದಿನಗಳಲ್ಲಿ 'ಗ'ಕಾರವು ಜನಪದರ ಬಾಯಲ್ಲಿ 'ಕ' ಕಾರಕ್ಕೆ ತಿರುಗಿ ಗೊಟ್ಟ ಕೊಟ್ಟವಾಗಿರುವ ಸಾಧ್ಯತೆ ಹೆಚ್ಚಿದೆ.

ಈಗಲೂ ಈ ಗ್ರಾಮದಲ್ಲಿ ಪಶುವೈದ್ಯಕೀಯದ ಪಾರಂಪರಿಕ ವೈದ್ಯರು ನಾಲ್ಕು ಜನ ಇರುವುದನ್ನು ಕಾಣಬಹುದು. ಗ್ರಾಮದ ಹಿರೀಕ ಸಿದ್ದಯ್ಯ ಅವರ ಅಭಿಪ್ರಾಯದಲ್ಲಿ ಕೊರೂರು ಕೊಟ್ಟ ಈಗ ಬರೀ ಕೊಟ್ಟ ಆಗಿದೆ ಎನ್ನುತ್ತಾರೆ. ಆದರೂ ಕೊಟ್ಟ ಗ್ರಾಮದ ನಿಷ್ಪತ್ತಿ ಗೊಟ್ಟ ಮೂಲದ್ದು.

ಬಯಲು ಪ್ರದೇಶದ ಕೆಂಪು ಮಿಶ್ರಿತ ಮರಳು ಮಣ್ಣು ಊರಿನ ಹೊರಭಾಗದಲ್ಲಿ ದೊಡ್ಡಕೆರೆ, ಕುರುಚಲು ಗಿಡ, ಪೊದೆಯಿದೆ. ಹಾಗಾಗಿ ಈ ಪರಿಸರದಲ್ಲಿ ನರಿ, ಮೊಲ, ಹಂದಿ, ಉಡ, ಬೆಕ್ಕು, ವಿಷಜಂತುಗಳಾದ ನಾಗರ, ಮಂಡಲ, ಹೆಬ್ಬಾವುಗಳು ಇವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ಎತ್ತುಗಳನ್ನು ಸಾಕಿದ್ದಾರೆ. ಕಾಡುಪಕ್ಷಿಗಳಾಗಿ ಕೋಗಿಲೆ, ಕಾಗೆ, ಗೊರವಂಕ, ಬೆಳವ, ಕೌಜುಗ, ಕೊಕ್ಕರೆ, ಹದ್ದು, ಗರುಡ ಕಂಡುಬರುತ್ತವೆ. ಕೋಳಿ ಸಾಕುಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ೪೩೪ ಮಿಮೀ ಮಳೆ ಬೀಳುತ್ತಿದ್ದು ಕೃಷಿಗೆ ಏನೇನೂ ಸಾಲದಾಗಿದೆ. ಹಾಗಾಗಿ ಈ ಪರಿಸರದಲ್ಲಿ ೧೧೩ ಕೊಳವೆ ಬಾವಿಗಳ ಮೂಲಕ ಕೃಷಿ ಬೆಳೆಗೆ ಸಹಕಾರಿಯಾಗಿದೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತದೆ. ಗ್ರಾಮದಲ್ಲಿ ೮ ಕಿರು ಟ್ಯಾಂಕ್‌ಗಳಿದ್ದು ೧ ದೊಡ್ಡ ಟ್ಯಾಂಕ್ ಇದೆ. ೨ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಆದಿದ್ರಾವಿಡ, ನಾಯಕ, ಗೊಲ್ಲರು, ವೀರಶೈವ ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೯೧೭ ಮನೆಗಳಿದ್ದು ಇವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಶೀಟಿನ, ಹೆಂಚಿನ ಸ್ವರೂಪದಲ್ಲಿವೆ. ವಸತಿ ಯೋಜನೆಯ ಜನತಾ, ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಫಲಾನುಭವಿಗಳು, ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೩೨೦ ಫಲಾನುಭವಿಗಳೂ ಇದ್ದಾರೆ. ಗ್ರಾಮದ ಒಟ್ಟು ಜನಸಂಖ್ಯೆ ೪೧೮೩ ಆಗಿದ್ದು ಇಲ್ಲಿನ ೨೫೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ರೊಟ್ಟಿ–ಅನ್ನ ಅಮುಖ್ಯವಾಗಿದೆ. ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಪಾಯಸ, ಹೋಳಿಗೆ ಭೋಜನ ಇರುತ್ತದೆ. ಸಾಂಪ್ರದಾಯಿಕ ವಾಹನವಾದ ಎತ್ತಿನಗಾಡಿ, ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಸ್ಕೂಟರ್, ಟೆಂಪೋ, ಆಟೋ ಬಳಕೆಯಲ್ಲಿದೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಯಾಗಿ ರಾಗಿ, ಜೋಳ, ತೊಗರಿ, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ ಬೆಳೆಯಿದೆ. ಹುಣಸೆಹಣ್ಣು, ಶೇಂಗಾ ವ್ಯಾಪಾರಿ ಬೆಳೆಯಾಗಿದೆ.

ಒಂದು ಹಾಲಿನ ಡೈರಿಯಿದ್ದು ಸರಾಸರಿ ೩೧೪ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಶಿಕ್ಷಕರು, ಕೆಎಸ್‌ಆರ್‌ಟಿಸಿ, ಬ್ಯಾಂಕ್

ಉಪನ್ಯಾಸಕರು ಸೇರಿದಂತೆ ಒಟ್ಟು ೨೭ ಜನ ಸರ್ಕಾರಿ ನೌಕರರಿದ್ದಾರೆ. ಬೀಡಿ ಸುತ್ತುವುದು, ಊಟದ ಎಲೆ ತಯಾರಿಕೆ, ಟೈಲರಿಂಗ್ ಮಹಿಳೆಯರ ಗೃಹ ಕಸುಬಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ ಮದಲೂರು ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯ್ತಿ ಕ್ಷೇತ್ರವಾಗಿದ್ದು ಕೊಟ್ಟ ಪಂಚಾಯ್ತಿ ಕೇಂದ್ರವೂ ಆಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ. ೪ ಜನ ಪಂಚಾಯ್ತಿ ಸದಸ್ಯರಿದ್ದು ಶ್ರೀಮತಿ ನಾಗರತ್ನಮ್ಮ ಈ ಗ್ರಾಮಪಂಚಾಯ್ತಿ ಅಧ್ಯಕ್ಷರಾಗಿದ್ದಾರೆ. ಒಂದು ಅಂಚೆ ಕಛೇರಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗ್ರಾಮ ಪಂಚಾಯ್ತಿ ಕಛೇರಿ, ವ್ಯವಸಾಯ ಸೇವಾ ಸಹಕಾರ ಸಂಘ, ಉಪ ಆರೋಗ್ಯ ಕೇಂದ್ರ, ಅಂಗನವಾಡಿ ಕೇಂದ್ರಗಳಿವೆ. ೪ ಸ್ತ್ರೀಶಕ್ತಿ, ೪ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳು ಮಹಿಳಾ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿವೆ. ಅಂಗನವಾಡಿಯಲ್ಲಿ ೩೬ ಮಕ್ಕಳಿದ್ದಾರೆ. ಶಾಲೆಯಲ್ಲಿ ೩೪ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಬಿಸಿಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪಠ್ಯಪುಸ್ತಕ ವಿತರಣಾ ಸೌಲಭ್ಯಗಳಿವೆ. ಒಂದು ವಾಚನಾಲಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನ ಫಲಾನುಭವಿಗಳಿದ್ದಾರೆ. ೪ ಹೋಟೆಲ್, ೧೦ ಗೂಡಂಗಡಿಗಳಿವೆ. ಗ್ರಾಮದಲ್ಲಿ ಒಂದು ವೀರಗಲ್ಲು, ೧ ಮಹಾಸತಿ ಕಲ್ಲು ಇದ್ದು ಇವು ೧೫ನೇ ಶತಮಾನದ ರಚನೆಗಳಾಗಿವೆ. ಅರಳಿಯ ಕಟ್ಟೆ, ಕರಿಗಲ್ಲು, ಮಾರಮ್ಮ, ಆಂಜನೇಯನ ಗುಡಿಗಳಿವೆ. ಎರಡು ಶಾಸನಗಳು ಈ ಗ್ರಾಮದ ವ್ಯಾಪ್ತಿಯಲ್ಲಿದ್ದು ಅವು ಸಿರಾ ಶಾಸನ ೮೧೮ ರ ಪ್ರಕಾರ ಕೊಟ್ಟದ ಜೋಗೇಗೌಡ ಮೊದಲಾದವರು ಕೂಡಿಕೊಂಡು ದೊಡ್ಡಯ್ಯ ಎಂಬುವರಿಗೆ ರಂಗಾಪುರದ ಗೌಡಿಕೆ ನೀಡಿ, ಅದಕ್ಕೆ ಒಂದಿಷ್ಟು ಭೂಮಿ ಕೊಟ್ಟ ವಿವರವಿದ್ದರೆ ಮತ್ತೊಂದು ಸಿರಾ ೪೭ ರ ಶಾಸನ ಕೊಟ್ಟ–ಮೊದಲೂರಿನ ಗಡಿಗೆ ಸಂಬಂಧಿಸಿದ ಶಾಸನವಾಗಿದೆ. ಈ ಶಾಸನ ೧೮ನೇ ಶತಮಾನದ ಶಿಲ್ಪವಾಗಿದ್ದು ಮದಲೂರನ್ನು ವೀರಬ್ರಹ್ಮಪುರ ಎಂದು ಉಲ್ಲೇಖಿಸಿದೆ. ಗ್ರಾಮದಲ್ಲಿ ಆಂಜನೇಯ, ರಂಗನಾಥ, ಚೌಡಮ್ಮ, ಭೈರವ, ಕರಿಯಮ್ಮ, ಯಲ್ಲಮ್ಮ, ಶಿವಗಣೇಶನ ದೇವಾಲಯಗಳಿವೆ. ದಸರಾ ದಿನದಂದು ಈ ದೇವತೆಗಳ ಉತ್ಸವ, ಮೆರವಣಿಗೆ ಇರುತ್ತದೆ. ಕರಿಯಮ್ಮ ಗ್ರಾಮ ದೇವತೆಯಾಗಿದ್ದು ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯಗಳಿವೆ. ಉಳಿದಂತೆ ಯುಗಾದಿ, ಮಹಾನವಮಿ, ದೀಪಾವಳಿ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಗ್ರಾಮದಲ್ಲಿ ವಿನಾಯಕ ಯುವಕರ ಸಂಘ, ದಲಿತ ಸಂಘರ್ಷ ಸಮಿತಿ ಕ್ರಿಯಾಶೀಲವಾಗಿದೆ. ಗಣೇಶನ ಉತ್ಸವ ಸಾಂಸ್ಕೃತಿಕ ಚಟುವಟಿಕೆಗೆ ವಿನಾಯಕ ಯುವಕರ ಸಂಘ ಜಾತ್ಯಾತೀತವಾಗಿ ಸಂಘಟಿತರಾಗಿದೆ. ಕೊಟ್ಟ ಶಂಕರ್ ಮೊದಲಾದ ವಿಚಾರವಂತ ಯುವಕರ ತಂಡದಲ್ಲಿ ದಲಿತ ಸಂಘರ್ಷ ಸಮಿತಿ ಕ್ರಿಯಾಶೀಲವಾಗಿದ್ದು ಮೇಲಿಂದ ಮೇಲೆ ಸಂಘಟನಾತ್ಮಕ ಕಾರ್ಯಕ್ರಮ ಏರ್ಪಡಿಸುತ್ತಾ ವಿಚಾರಪೂರಿತ ಉಪನ್ಯಾಸಗಳನ್ನು ಸಂಘಟಿಸುತ್ತಿದೆ. ಕರಿಯಮ್ಮ, ರಂಗಮ್ಮ, ನರಸಮ್ಮ ಸೋಬಾನೆ ಕಲಾವಿದರಾಗಿ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ದೊಡ್ಡರಂಗಯ್ಯ ವಿಷಜಂತು ಕಡಿತ ಸಂಬಂಧಿ ಔಷಧೋಪಚಾರ ಮಾಡುತ್ತಾರೆ. ಅಚ್ಚಮ್ಮ ಸೀತ–ವಾತ ಸಂಬಂಧಿ ಖಾಯಿಲೆಗಳಿಗೆ ಬೇರು–ನಾರಿನ ಔಷಧೋಪಚಾರದ ಮೂಲಕ ಗ್ರಾಮ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ.

ರಂಗಸಜ್ಜಿಕೆ, ಸೀನರಿ, ವೇಷಭೂಷಣ, ಪರಿಕರಕ್ಕೆ ಹೆಸರುವಾಸಿಯಾಗಿರುವ ಕೊಟ್ಟ ನಾಗರಾಜು ಉತ್ತಮ ರಂಗಪರಿಕರ ಹೊಂದಿದ್ದಾರೆ. ಪೂರ್ವದ ಕಾಲದಿಂದಲೂ ರಂಗಸಂಬಂಧಿ ಕೆಲಸ ಮಾಡುತ್ತಾ ಈಗಲೂ ಮುಂದುವರಿಸುತ್ತಿದ್ದಾರೆ. ಮೂಡಲಪಾಯ ಯಕ್ಷಗಾನಕ್ಕೆ ಸೀನರಿಯನ್ನು ನಾಗರಾಜು ಒದಗಿಸುತ್ತಿದ್ದಾರೆ.

## ಕುರುಡನಹಳ್ಳಿ

ಕುರುಡನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೮ ಕಿ.ಮೀ. ದೂರದಲ್ಲಿದ್ದು ಸಿರಾ, ಅಮರಾಪುರ, ಉದ್ದರಾಮನಹಳ್ಳಿ ಗೇಟಿನಲ್ಲಿ ಬರುತ್ತದೆ. ಇದು ಮೇಲುಕುಂಟೆ ಗ್ರಾಮದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೪೦.೩೦ ಹೆಕ್ಟೇರ್ ಆಗಿದೆ. ಕೆಂಪು ಮಿಶ್ರಿತ ಮರಳು ಮಣ್ಣಿನ ಭೂಮಿಯಾಗಿದೆ. ವ್ಯಕ್ತಿ ಅನ್ವರ್ಥದಿಂದಾಗಿ ಕುರುಡನಹಳ್ಳಿ ಎಂದು ಹೆಸರು ಬಂದಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ತೋಳ ಕಂಡುಬರುತ್ತವೆ. ಸಾಕುಪ್ರಾಣಿಗಳಾಗಿ ಕುರಿ, ಮೇಕೆ, ಎತ್ತು, ಹಸು, ಎಮ್ಮೆಗಳನ್ನು ಸಾಕುತ್ತಾರೆ.

ವಾಡಿಕೆ ಮಳೆ ೪೬೦ ಮಿಮೀ ಸಾಕಾಗುವುದಿಲ್ಲ. ಆದರೂ ಕೃಷಿ ಕೆಲಸಕ್ಕೆ ೨೦ ಕೊಳವೆ ಬಾವಿಗಳನ್ನು ತೆಗೆಸಲಾಗಿದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ೩ ಸಿಸ್ಟರ್ನ್‌ಗಳಿದ್ದು ೧ ಕೈಪಂಪು ಇದೆ. ಕುಂಚಿಟಿಗ ಜನಾಂಗ

ಇಲ್ಲಿನ ಸಾಮಾಜಿಕ ರಚನೆಯಲ್ಲಿ ದೊಡ್ಡ ಸಮುದಾಯವಾಗಿದ್ದು ಉಪ್ಪಾರರು ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ಬಿಸಿಲು ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇದೆ.

ವಿವಿಧ ಪ್ರಕಾರಗಳ ೩೮ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದ ಮನೆಗಳು. ೨೧೦ ಜನಸಂಖ್ಯೆ ಹೊಂದಿದ್ದು ೧೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೧೩ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನವಾಗಿರುತ್ತದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಹುರುಳಿ, ಜೋಳ, ತೊಗರಿ ಬೆಳೆಯುತ್ತಾರೆ. ರೇಷ್ಮೆ, ಸೂರ್ಯಕಾಂತಿ, ಹೂವಿನ ಬೆಳೆಗಳು, ತೋಟಗಾರಿಕೆ, ತೆಂಗು, ಅಡಿಕೆ ತೋಟಗಳಿವೆ. ಶೇಂಗಾ, ಹುಣಸೇಹಣ್ಣು, ಹೂವಿನ ಬೀಜದ ವ್ಯಾಪಾರವಿದೆ. ಶಿಕ್ಷಣ, ಸಾರಿಗೆ, ಪೊಲೀಸ್ ಇಲಾಖೆಗೆ ಸೇರಿದ ೪ ಜನ ನೌಕರರಿದ್ದಾರೆ. ಮಹಿಳೆಯರು ಬೀಡಿ ಕಟ್ಟುವುದು, ಊಟದ ಎಲೆ ತಯಾರಿಕೆ ಕಸುಬುಗಳಿವೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಮೇಲುಕುಂಟೆ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ ಮಾತ್ರವಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗುತ್ತದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೨% ರಷ್ಟಿದೆ. ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಚಾಮುಂಡೇಶ್ವರಿ ದೇವಾಲಯವಿದೆ.

ರಂಗಪ್ಪ, ಮಾರಮ್ಮನ ಪೌಳಿಗಳಿದ್ದು ಮಾರಮ್ಮನ ಊರಹಬ್ಬ ನಡೆದು ಆರತಿ, ಬಾನ, ಬಲಿ ಅರ್ಪಣೆ, ಹರಕೆ ಸಂಪ್ರದಾಯವಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಮಹಾನವಮಿ, ಬಸವಜಯಂತಿ, ಗೌರಮ್ಮ-ಕೊಂತಮ್ಮನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕೊಂಡಮ್ಮನಹಳ್ಳಿ

ಕೊಂಡಮ್ಮನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೨ ಕಿಮೀ ದೂರದಲ್ಲಿದೆ. ಸಿರಾ-ಮಧುಗಿರಿ ಮುಖ್ಯ ರಸ್ತೆಯಲ್ಲಿ ರತ್ನಸಂದ್ರ ಗೇಟಿನಿಂದ ಬಲಕ್ಕೆ ಒಂದು ಕಿ.ಮೀ. ಕ್ರಮಿಸಿದರೆ ಕೊಂಡಮ್ಮನಹಳ್ಳಿ ಸಿಕ್ಕುತ್ತದೆ. ಇದು ಹಲ್ಕೂರಿನ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೩೧೮.೧೨ ರಲ್ಲಿ ಹಲ್ಕೂರಿನೊಂದಿಗೆ ಹಂಚಿಕೆಯಾಗಿದೆ. ಈ ಮಜರೆ ಗ್ರಾಮದಲ್ಲಿ ೩೨ ಮನೆಗಳಿದ್ದು ಮುಖ್ಯ ಸಮುದಾಯ ಕುಂಚಿಟಿಗರು. ಸಣ್ಣ ಸಮುದಾಯ ಬೋವಿ ಜನಾಂಗ. ಕಲಾವಿದ ರಾಮಣ್ಣನವರ ಅಭಿಪ್ರಾಯದ ಪ್ರಕಾರ ಈ ಊರಿನ ಹೆಣ್ಣು ಮಗಳು ಸತಿ ಸಹಗಮನಾರ್ಥ ಅಗ್ನಿಕೊಂಡ ಹಾರಿದ್ದರಿಂದ ಆಕೆಯ ನೆನಪಿನಲ್ಲಿ ಕೊಂಡಮ್ಮನಹಳ್ಳಿ ಎಂದು ಕರೆಯಲಾಗುವುದೆಂದು ಹೇಳುತ್ತಾರೆ. ಆದರೂ ಆಕೆಯ ಬಗೆಗಿನ ಮಾಸ್ತಿಕಲ್ಲು, ದೇವಸ್ಥಾನ ಇರುವುದಿಲ್ಲ. ಊರಲ್ಲಿ ಕಣಿವೆ ಮಾರಕ್ಕ, ಕಾವಲವ್ವ, ದಂಡಿನ ಮಾರಮ್ಮ ದೇವಸ್ಥಾನಗಳಿವೆ. ಊರ ಹೊರಗೆ ಬಿಸಿಲು ಮಲ್ಲಪ್ಪನ ಪೌಳಿಯಿದ್ದು ಇಂದಿಗೂ ಪೂಜೆ ಪಾತ್ರವಾಗಿದೆ. ಈ ಬಿಸಿಲು ಮಲ್ಲಪ್ಪ, ಯಾವುದೇ ಸಂದರ್ಭದಲ್ಲಿ ಶತ್ರುಗಳ, ದನಗಳ್ಳವರ ವಿರುದ್ಧ ಹೋರಾಡಿ ಮಡಿದ ವೀರನೇ ಇರಬಹುದು. ಉಳಿದಂತೆ ಕಣಿವೆ ಮಾರಕ್ಕ, ದಂಡಿನ ಮಾರಮ್ಮನ ಜಾತ್ರೆ ವಿಜೃಂಭಣೆಯಿಂದ ನೆರವೇರುತ್ತದೆ. ಬಿಸಿಲು ಮಲ್ಲಪ್ಪನಿಗೆ ಬೆಳೆಗಳು ಕಟಾವಿಗೆ ಬಂದು ಕಟ್ಟು ಮಾಡುವ ಕಾಲದಲ್ಲಿ ಪರಿಶೆ, ಅನ್ನಸಂತರ್ಪಣೆ ನೆರವೇರಿಸಲಾಗುವುದು.

ಗ್ರಾಮದಲ್ಲಿ ೩೦ ಮನೆಗಳಿದ್ದು ಮುಖ್ಯ ಆಹಾರ ರಾಗಿಮುದ್ದೆ, ಅನ್ನ. ಉಪ ಆಹಾರವಾಗಿ ರೊಟ್ಟಿ, ಚಿತ್ರಾನ್ನ ಬಳಸುತ್ತಾರೆ. ಸಾಂಪ್ರದಾಯಿಕ ವಾಹನ ಎತ್ತಿನ ಬಂಡಿ ಬಳಕೆಯಲ್ಲಿದೆ. ಟೈರುಗಾಡಿಗಳು, ಸ್ಕೂಟರ್, ಲಾರಿ ಬಳಕೆಯಲ್ಲಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಗಿ, ಅಲಸಂದೆ, ತೊಗರಿ ಮುಖ್ಯ ಆಹಾರ ಬೆಳೆಗಳು. ಹತ್ತಿ, ತೆಂಗು, ಅಡಿಕೆ, ಹುಣಸೇಹಣ್ಣು, ಸೂರ್ಯಕಾಂತಿ ವಾಣಿಜ್ಯ ಬೆಳೆಯಾಗಿ ಬೆಳೆಯಲಾಗುವುದು. ಒಬ್ಬರು ಸರ್ಕಾರಿ ನೌಕರರಿದ್ದು ಗ್ರಾಮದಲ್ಲಿ ಒಂದು ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ೨ ಸ್ತ್ರೀಶಕ್ತಿ ಕೇಂದ್ರ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಗುಂಪುಗಳಿವೆ. ವೃದ್ಧಾಪ್ಯ,

ವಿಧವಾ ವೇತನ ಹಾಗೂ ರಂಗಭೂಮಿ ಪ್ರಮುಖ ಕಲಾವಿದ ರಾಮಣ್ಣ ಮಾಸಾಶನ (ಕಲೆ) ಪಡೆಯುತ್ತಿದ್ದಾರೆ.

ದಂಡಿನಮಾರಮ್ಮ ಬೋವಿ ಜನಾಂಗದ ಪ್ರಮುಖ ಜಾತ್ರೆಯಾದರೆ ಕುಂಚಿಟಗರು ಕಣಿವೆ ಮಾರಕ್ಕ ದೇವಿಯ ಜಾತ್ರೆ ಮಾಡುತ್ತಾರೆ. ಈ ಸಂದರ್ಭದಲ್ಲಿ ಆರತಿ, ಬಾನ, ಬ್ಯಾಟೆ ವಿಶೇಷವಾಗಿರುತ್ತದೆ.

## ಕೆಂತಾರ್ಲಹಟ್ಟಿ

ಕೆಂತಾರ್ಲಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೪ ಕಿ.ಮೀ. ದೂರದಲ್ಲಿದೆ. ಸಿರಾ–ಅಗಳಿ ಮಾರ್ಗದಲ್ಲಿ ಕರ್ನಾಟಕ–ಆಂಧ್ರ ಪ್ರದೇಶಗಳ ಗಡಿ ಭೂಪ್ರದೇಶದಲ್ಲಿದೆ. ಇದು ಮದಲೂರು ಗ್ರಾಮದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೨೪.೦೫ ಹೆಕ್ಟೇರ್ ಆಗಿದೆ. ಅಪ್ಪಟ ಬಯಲುಸೀಮೆ ಕೆಂಪು ಮಣ್ಣಿನ ಪ್ರದೇಶ. ಕೆಂಬಾರೆ ಗ್ರಾಮ ಎಂಬ ಅರ್ಥದಲ್ಲಿ ಕೆಂತಾರ್ಲಹಟ್ಟಿ ಎಂದಾಗಿದೆ.

ಈ ಪರಿಸರದಲ್ಲಿ ಮೊಲ, ಮುಂಗುಸಿ, ಜಿಂಕೆ, ತೋಳ, ನರಿ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ, ಕೋಳಿ ಸಾಕುಪ್ರಾಣಿಗಳಾಗಿವೆ. ಈ ಭಾಗದಲ್ಲಿ ಮಳೆ ಸಾಧಾರಣ ಪ್ರಮಾಣದಲ್ಲಿದ್ದು ೪೩೪ ಮಿಮೀ ಬೀಳುತ್ತದೆ. ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಟ್ ಇರುತ್ತದೆ.

ಕೃಷಿ ಮೂಲದವರು ನೀರಿನ ಆಶ್ರಯವಾಗಿ ೧೪ ಕೊಳವೆ ಬಾವಿ ಕೊರೆಸಲಾಗಿದ್ದು ಕೃಷಿ ಉಪಕಸುಬಿಗೆ ಬಳಸಲಾಗುವುದು. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ೪ ಸಿಸ್ಟರ್ನ್‌ಗಳಲ್ಲಿ ಪೂರೈಸಲಾಗುವುದು. ೧ ಕೈಪಂಪು ಇದೆ.

ಕಾಡುಗೊಲ್ಲ ಜನಾಂಗ ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗರು, ಮಡಿವಾಳ ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದ್ದು ವಿವಿಧ ಪ್ರಕಾರಗಳ ೪೫ ಮನೆಗಳಿವೆ. ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿವೆ. ೨೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಗ್ರಾಮದಲ್ಲಿ ೧೮೯ ಜನಸಂಖ್ಯೆ ಹೊಂದಿದೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಭೋಜನಗಳು. ೨ ಸಾಂಪ್ರದಾಯಿಕ ಎತ್ತಿನ ಗಾಡಿಗಳು ಸೇರಿದಂತೆ ಟ್ರ್ಯಾಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಜೋಳ, ಬಾರ್ಲಿ, ಹಾರಕ, ಹುರುಳಿ, ನವಣೆ, ತೊಗರಿ ಬೆಳೆಗಳು ಆಹಾರ ಬೆಳೆಗಳಾಗಿವೆ. ವಿರಳವಾಗಿ ತೆಂಗು, ರೇಷ್ಮೆ ತೋಟಗಾರಿಕಾ ಬೆಳೆಗಳಿವೆ. ಶೇಂಗಾ, ಹೊಂಗೆಬೀಜ, ಹುಣಸೆ ಹಣ್ಣು ವ್ಯಾಪಾರಿ ಸರಕಾಗಿವೆ. ಶಿಕ್ಷಣ, ಸಾರಿಗೆ ಇಲಾಖೆಗೆ ಸೇರಿದ ೩ ಜನ ನೌಕರರು ಇದ್ದಾರೆ. ಗ್ರಾಮದಲ್ಲಿ ಹೂ ಕಟ್ಟುವ, ಬೀಡಿ ಸುತ್ತುವುದು ಮಹಿಳೆಯರ ಉಪ ಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ಮದಲೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ೨ ಸ್ತ್ರೀಶಕ್ತಿ ಸಂಘಗಳಿದ್ದು ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯ ಮಕ್ಕಳಿಗೆ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ವಿತರಣಾ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೭% ರಷ್ಟಿದೆ.

ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದು ಒಂದು ಅಂಗನವಾಡಿ ಕೇಂದ್ರವಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದೇವತೆ ಮಾರಮ್ಮನಾಗಿದ್ದು ಗ್ರಾಮದಲ್ಲಿ ಮಾರಮ್ಮನ ಗದ್ದುಗೆ ಇದೆ. ಆಷಾಢಮಾಸದಲ್ಲಿ ಊರಹಬ್ಬ ಮಾಡುತ್ತಾರೆ. ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯಗಳಿವೆ. ಯುಗಾದಿ, ದೀಪಾವಳಿ, ಸಂಕ್ರಾಂತಿ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕೊರಟಿಕೆರೆ

ಕೊರಟಿಕೆರೆ ಇದು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೪ ಕಿ.ಮೀ. ದೂರದಲ್ಲಿದೆ. ಸಿರಾ–ಮದಲೂರು ರಸ್ತೆಯಲ್ಲಿ ಗಿಡುಗನಹಳ್ಳಿ ಗೇಟಿನಿಂದ ಬಲಭಾಗಕ್ಕೆ ಅಥವಾ ಸಿರಾ–ಲಿಂಗದಹಳ್ಳಿ–ಹೊನ್ನಗೊಂಡನಹಳ್ಳಿಯಿಂದ ಉತರಕ್ಕೆ ಕೊರಟಿಗೆರೆ ರಸ್ತೆ ಸಂಪರ್ಕವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೪೦೬.೧೮ ಹೆಕ್ಟೇರ್ ಆಗಿದ್ದು ಅರುಗನಹಳ್ಳಿ ಎಂಬ ಮಜರೆ ಗ್ರಾಮವನ್ನು ಹೊಂದಿದೆ.

ಕೊರಟಿಕೆರೆ ಒಂದು ಹಳೆಯ ಕಾಲದ ಹಳ್ಳಿ. ಸಮೀಪದಲ್ಲಿ ಒಂದು ಕೆರೆಯೂ ಇದೆ. ಚಿಗುರಿನ ಪ್ರದೇಶ ಎಂಬ ಅಥವಾ ಒಣಗಿದ ಗಿಡ ಕಾಂಡ ಚಿಗುರಿದ ಕಾರಣದಿಂದಲೂ ಕೊರಕು, ಕೊರಟಿ ಆಗಿರಬಹುದು. ಒಟ್ಟಾರೆ ಈ ಹೆಸರು ಸಸ್ಯ ಮೂಲದ್ದಾಗಿದೆಂದು ಎಂಬುದು ಇಲ್ಲಿನ ಹಿರಿಯರ ಅಭಿಪ್ರಾಯವಾಗಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ಕುರುಚಲು ಗಿಡ, ಪೊದೆಗಳಿಂದ ಕೂಡಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ಮೊಲ, ಜಿಂಕೆ, ಹಂದಿ, ಕರಡಿ, ಬಾರ್‌ಬೆಕ್ಕು, ಉಡ ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಎತ್ತು, ಕುರಿ, ಕೋಳಿ, ನಾಯಿ ಸಾಕುಪ್ರಾಣಿಗಳಾಗಿವೆ. ಗಿರಿರಾಜ ಹಾಗೂ ನಾಟಿ ಕೋಳಿಗಳನ್ನು ಸಾಕಲಾಗುವುದು.

ವಾಡಿಕೆಗಿಂತ ಕಡಿಮೆ ಪ್ರಮಾಣದ ಮಳೆ ಬಿದ್ದು ಈ ಪರಿಸರದಲ್ಲಿ ನೀರಿನ ಕೊರತೆ ಹೆಚ್ಚಿದೆ. ಸರಾಸರಿ ೬೪೦ ಮಿಮೀ ಮಳೆ ಬೀಳುತ್ತಿದ್ದು ಏನೇನೂ ಸಾಲದು. ಜೊತೆಗೆ ೩೯-೪೦ ಡಿಗ್ರಿ ಬಿಸಿಲು, ೧೨ ಡಿಗ್ರಿ ಚಳಿ ಇರುತ್ತದೆ. ರೈತರು ಮಳೆ ನೀರಿನ ಜೊತೆಗೆ ೧೦ ಕೊಳವೆ ಬಾವಿಗಳ ಮೂಲಕ ನೀರು ಪಡೆಯುತ್ತಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುವುದು. ೪ ಸಿಸ್ಟರ್ನ್‌ಗಳಲ್ಲಿ ನೀರು ಪೂರೈಕೆಯಾಗುತ್ತಿದ್ದು ೨ ಕೈಪಂಪುಗಳೂ ಇವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗ, ಮಡಿವಾಳ ಕಿರು ಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದ್ದು ವಿವಿಧ ಪ್ರಕಾರಗಳ ೩೬ ಮನೆಗಳಿವೆ. ಇವು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಾಗಿವೆ. ಒಟ್ಟು ೧೫೪ ಜನಸಂಖ್ಯೆ ಹೊಂದಿದೆ. ೧೦ ಮನೆಗಳಲ್ಲಿ ಶೌಚಾಲಯವಿದೆ. ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೧೨ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ-ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ ಸಾಂದರ್ಭಿಕ ವಿಶೇಷ ಭೋಜನಗಳಾಗಿವೆ.

ಆಧುನಿಕ ವಾಹನಗಳಾದ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ. ಅಲಸಂದೆ, ತೊಗರಿ, ಹುರುಳಿ ಬೆಳೆಯುತ್ತಾರೆ. ತೆಂಗು, ಅಡಿಕೆ ವ್ಯಾಪಾರಿ ಬೆಳೆಗಳು. ಶೇಂಗಾ, ಹುಣಸೆಹಣ್ಣು, ಹೊಂಗೆಬೀಜ ವ್ಯಾಪಾರಿ ಸರಕಾಗಿವೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಹಾಗೂ ಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ೨ ಸ್ತ್ರೀಶಕ್ತಿ ಕೇಂದ್ರಗಳಿದ್ದು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಶಾಲೆಯಲ್ಲಿ ೨೧ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ವಸ್ತ್ರ, ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೫೮% ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಅಂಗಡಿಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಆಂಜನೇಯ, ಮಾರಮ್ಮ ಗುಡಿಗಳಿದ್ದು ಒಂದು ಕರಿಗಲ್ಲು, ಅರಳೀಕಟ್ಟೆ, ನಾಗರಕಲ್ಲುಗಳು ಇವೆ. ಆಂಜನೇಯನಿಗೆ ಶ್ರಾವಣ ಮಾಸದಲ್ಲಿ ಆರತಿ ಮಾಡಿದರೆ ಮಾರಮ್ಮನ ಊರಹಬ್ಬ ಮಾಡಿ ಬಲಿ, ಬಾನ, ಆರತಿ, ಹರಕೆ ಸಂಪ್ರದಾಯಗಳಿವೆ. ರಾಮನವಮಿಯ ವಿಶೇಷ ಆಚರಣೆಯಿದೆ. ದೀಪಾವಳಿ, ಯುಗಾದಿ, ಸಂಕ್ರಾಂತಿ, ಮಹಾನವಮಿ ಹಬ್ಬಗಳನ್ನು ಆಚರಿಸುತ್ತಾರೆ.

## ಕೆರೆಯಾಗಲಹಳ್ಳಿ

ಕೆರೆಯಾಗಲಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೩ ಕಿ.ಮೀ. ದೂರದಲ್ಲಿದೆ. ಗುಳಿಗೇನಹಳ್ಳಿ-ಸಿರಾ ಮುಖ್ಯರಸ್ತೆಯಿಂದ ೨ ಕಿ.ಮೀ. ದೂರದಲ್ಲಿದ್ದು ಇದೊಂದು ಮಜರೆ ಗ್ರಾಮವಾಗಿದೆ. ಮಾಗೋಡು ಕಂದಾಯ ಗ್ರಾಮಕ್ಕೆ ಹೊಂದಿಕೊಂಡಿದ್ದು ಇದರ ಭೌಗೋಳಿಕ ವಿಸ್ತೀರ್ಣ ೧೮೭೦.೮೧ ಹೆಕ್ಟೇರ್. ಬಿಳಿ, ಕೆಂಪು ಮರಳು ಮಿಶ್ರಿತ ಮೇಲ್ಮೈ ಲಕ್ಷಣ ಹೊಂದಿರುವ ಇಲ್ಲಿನ ಮಣ್ಣಿನ ಲಕ್ಷಣವಾಗಿದ್ದು ರಾಗಿ, ಶೇಂಗಾ, ಹತ್ತಿ, ತೊಗರಿ, ಅವರೆ ಬೆಳೆಗೆ ಉತ್ತಮ ಭೂಮಿಯಾಗಿದೆ.

ಕೆರೆಯ ಮುಂಭಾಗದಲ್ಲಿ ಮನೆ ನಿರ್ಮಾಣವಾಗಿರುವ ಕಾರಣದಿಂದಲೇ ಕೆರೆಯಾಗಳಹಳ್ಳಿ ಎಂದು ಕರೆಯಲಾಗಿದೆ ಎಂದು ಗ್ರಾಮದ ಹಿರಿಯರ ಅಭಿಪ್ರಾಯವಾಗಿದೆ. ಈ ಗ್ರಾಮದ ಪಶ್ಚಿಮಕ್ಕೆ ಇದೇ ಹೆಸರಿನ ಕೆರೆಯೊಂದಿದ್ದು ಮಳೆ ಆಧಾರಿತವಾಗಿ ನೀರು ಸಂಗ್ರಹವಾಗುತ್ತದೆ. ಈ ಪರಿಸರದಲ್ಲಿ ನರಿ, ಜಿಂಕೆ, ಮೊಲ ಮೊದಲಾದ ಕಾಡುಪ್ರಾಣಿಗಳನ್ನು ಕಾಣಬಹುದು. ಕೃಷಿ ಮೂಲದ ರೈತಾಪಿಗಳು ಹಸು, ಎಮ್ಮೆ, ಎತ್ತು, ಕುರಿ, ಮೇಕೆಗಳನ್ನು ಸಾಕುತ್ತಾರೆ. ಗ್ರಾಮದಲ್ಲಿ ನಾಟಿ ಕೋಳಿಗಳು ಅಧಿಕವಾಗಿವೆ.

ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಬೇಡ, ನಾಯಕ, ಮಲ್ಲಿಗೆ ಕುಲದವರು ಹೆಚ್ಚು, ಹಾಗೂ ಸಣ್ಣ ಸಮುದಾಯವಾಗಿದೆ. ಗ್ರಾಮದಲ್ಲಿ ಮಾರಮ್ಮ ಹಾಗೂ ಈರಗಾಟರಾಯ ದೇವಾಲಯಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೬ ಜನ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿನ ವಾಡಿಕೆ ಮಳೆ ೪೮೦ ಮಿಮೀ ಉಷ್ಣಾಂಶ ೩೭ ಡಿಗ್ರಿ ಹಾಗೂ ಡಿಸೆಂಬರ್ ತಿಂಗಳ ಚಳಿ ೧೦ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಗ್ರಾಮಕ್ಕೆ ಕುಡಿಯಲು ಪಂಚಾಯ್ತಿ ವತಿಯಿಂದ ೧೦ ನಲ್ಲಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತದೆ.

ಗ್ರಾಮದ ಮುಖ್ಯ ಆಹಾರ ರಾಗಿಮುದ್ದೆ. ಅನ್ನ, ದೋಸೆ ಬಳಸುವವರಿದ್ದಾರೆ.ವಾಗಿದ್ದು ಸಾಂದರ್ಭಿಕವಾಗಿ ಬಾಡೂಟ, ಹೋಳಿಗೆ ಊಟ ಇರುತ್ತದೆ. ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ, ಮದಲೂರು ಜಿಲ್ಲಾ ಪಂಚಾಯ್ತಿ ಹಾಗೂ ಹೊನ್ನಗೊಂಡನಹಳ್ಳ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ಮೂಲ ಗ್ರಾಮ ಮಾಗೋಡು ಪಂಚಾಯ್ತಿ ಕೇಂದ್ರವಾಗಿದೆ. ಆಶ್ರಯ, ಜನತಾ, ಅಂಬೇಡ್ಕರ್ ಆವಾಸ್ ಯೋಜನೆಯ ಫಲಾನುಭವಿಗಳು ಇದ್ದು ಭಾಗ್ಯಲಕ್ಷ್ಮಿ ವಿದ್ಯುತ್ ಯೋಜನೆಯ ಉಪಯೋಗವೂ ಗ್ರಾಮದ ಬೇಡರ ಕೆಲವು ಮನೆಗಳಿಗೆ ಆಗಿರುತ್ತದೆ.

ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದು ೨ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಕರಿಯಮ್ಮ, ಈರಗಾಟರಾಯ, ಕೊಲ್ಲಾಪುರದಮ್ಮನ ಜಾತ್ರೆ ವರ್ಷಕ್ಕೊಮ್ಮೆ ನಡೆಯುತ್ತದೆ. ಆ ಕಾಲದಲ್ಲಿ ಬ್ಯಾಟೆ, ಆರತಿ, ಬಾನಗಳ ಆಚರಣೆ ಇರುತ್ತದೆ. ಮಾಗೋಡು ರಂಗನಾಥನಿಗೆ ಎದುರೆತ್ತಿ ಆರತಿ ಮಾಡುವ ಸಂಪ್ರದಾಯವೂ ಇಲ್ಲಿದೆ.

## ಕೂಸುಕುಂಟೆ

ಕೂಸುಕುಂಟೆ ಸಿರಾ ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ ದೂರದಲ್ಲಿ ಸಿರಾದಿಂದ ಪೂರ್ವ ದಿಕ್ಕಿನಲ್ಲಿದೆ. ಸಿರಾ ಕೆರೆಯ ಹಿಂದಿನಿಂದ ಹೊನ್ನಗೊಂಡನಹಳ್ಳಿ–ಚನ್ನನಕುಂಟೆ ಮಾರ್ಗವಾಗಿ ಹೋಗುವಾಗ ಕೂಸುಕುಂಟೆ ಗ್ರಾಮವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೫೮೧.೮೪ ರಷ್ಟಿದೆ.

ಕೂಸುಕುಂಟೆ ಇದೊಂದು ಪ್ರಾಕೃತಿಕ, ಕ್ರಿಯಾತ್ಮಕ ಹೆಸರು. ಮಕ್ಕಳಕೆರೆ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಆರಂಭದಲ್ಲಿ ಕಾಡುಗೊಲ್ಲ ಜನಾಂಗ ಅಧಿಕವಾಗಿದ್ದು ಮಕ್ಕಳು ಈ ಕೆರೆಯಲ್ಲಿ ಬಟ್ಟೆ ತೊಳೆಯುವ, ಸ್ನಾನ ಮಾಡುವ ಅಥವಾ ಈಜುವ ನಿಸರ್ಗ ಲಕ್ಷಣಗಳೊಂದಿಗೆ ಕೂಸುಕುಂಟೆ ಎಂಬ ಅರ್ಥದಲ್ಲಿ ಈ ಗ್ರಾಮವನ್ನು ಹೆಸರಿನಲಾಗಿದೆ. ಉತ್ಕೃಷ್ಟವಾದ ಸಿರಾ ದೊಡ್ಡಕೆರೆ ಗದ್ದೆ ಬಯಲು ವ್ಯಾಪ್ತಿ ದಕ್ಷಿಣಕ್ಕೆ ತೋಟಸಾಲು, ಎರೆ ಭೂಮಿಯಾಗಿದ್ದು ಒಂದು ಕೆರೆಯೂ ಇದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಉಡ, ಹಂದಿ, ಬೆಕ್ಕು ಕಂಡುಬಂದರೆ ಗ್ರಾಮದಲ್ಲಿ ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಸೀಮೆಹಸು, ಹಳ್ಳಿಕಾರ್ ತಳಿ ಎತ್ತು, ಕುರಿ, ಮೇಕೆಗಳನ್ನು ಸಾಕುತ್ತಿದ್ದಾರೆ. ಕಾಡುಗೊಲ್ಲರು ಕುರಿ ಪೋಷಣೆ ಹಾಗೂ ವಲಸೆ ಹೋಗುವ ಕಾರಣದಿಂದ ಭಾರ ಹೊರಲು ಕತ್ತೆಗಳನ್ನು ಸಾಕಿರುವುದು ಈ ಗ್ರಾಮದ ವಿಶೇಷವಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಕಾಗೆ, ಕೊಕ್ಕರೆ, ಗಿಳಿ, ಹದ್ದು, ಗಿಡುಗ, ಗೂಬೆ, ಕೋಗಿಲೆಗಳನ್ನು ಕಾಣಬಹುದು. ಕೋಳಿ ಸಾಕು ಪಕ್ಷಿಯಾಗಿದೆ.

ಬಿಸಿಲು–ಬರ ಎರಡೂ ಅಧಿಕವಾಗಿರುವ ಈ ಪರಿಸರದಲ್ಲಿ ವಾಡಿಕೆ ಮಳೆ ೪೬೦ ಮಿಮೀ, ಬಿಸಿಲು ೩೮–೩೧೨ ಡಿಗ್ರಿ ಸೆಂಟಿಗ್ರೇಡ್ ಆಗಿದ್ದು ಚಳಿ ೧೨ ಡಿಗ್ರಿ ಸೆಂಟಿಗ್ರೇಟ್ ಸಾಮಾನ್ಯವಾಗಿದೆ. ಕೃಷಿಗೆ ಮಳೆಯ ಆಶ್ರಯದೊಂದಿಗೆ ಕೊಳವೆ ಬಾವಿಗಳ ಮೂಲಕವೂ ನೀರನ್ನು ಪೂರೈಸಿಕೊಳ್ಳಲಾಗುತ್ತಿದೆ. ಈ ಪರಿಸರದಲ್ಲಿ ೨೫ ಕೊಳವೆಬಾವಿಗಳಿವೆ. ಕುಡಿಯಲು ೩ ಸಿಸ್ಟರ್ನ್‌ಗಳು ನೀರನ್ನು ಗ್ರಾಮ ಪಂಚಾಯ್ತಿ ವತಿಯಿಂದ ಪೂರೈಸಲಾಗುತ್ತಿದ್ದು ೨ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಗೊಲ್ಲಜನಾಂಗ ದೊಡ್ಡ ಸಮುದಾಯವಾಗಿದೆ. ನಾಯಕ, ಬಲಜಿಗ, ಮಡಿವಾಳ ಕಿರು ಸಮುದಾಯವಾಗಿದೆ. ವಿವಿಧ ಸ್ವರೂಪದ ೧೧೭ ಮನೆಗಳಿದ್ದು ಮಾತೃಭಾಷೆ ಕನ್ನಡವಾಗಿದೆ. ಇಲ್ಲಿನ ಮನೆಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿವೆ. ೬೦ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ಇಲ್ಲಿ ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಯ ಅಡಿಯಲ್ಲಿ ೧೬ ಮನೆಗಳು ರಚನೆಯಾಗಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಜೋಳ, ಹುರುಳಿ, ತೊಗರಿ ಆಹಾರ ಬೆಳೆಯಾಗಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ, ಹೂವಿನ ಗಿಡಗಳಿವೆ. ಒಂದು ಹಾಲಿನ ಕೇಂದ್ರವಿದ್ದು ಸರಾಸರಿ ೨೫೦ ಲೀ. ಹಾಲು ಸಂಗ್ರಹವಾಗುತ್ತದೆ. ಶೇಂಗಾ, ತೆಂಗು, ಅಡಿಕೆ, ಹೊಂಗೆಬೀಜ, ಸೇವಂತಿಗೆ ಹೂವು ವ್ಯಾಪಾರದ ಸರಕುಗಳಾಗಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶಿಕ್ಷಕರು, ಸಾರಿಗೆ, ಆಸ್ಪತ್ರೆ ಹಾಗೂ ಕಂದಾಯ ಇಲಾಖೆಯಲ್ಲಿ ೬ ಜನ ನೌಕರರು ಇದ್ದಾರೆ. ಯುವಕರು ಸಿರಾ ನಗರದಲ್ಲಿ ಖಾಸಗಿ ವ್ಯಾಪಾರ ಮುಂತಾದವುಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮಹಿಳೆಯರು ಬೀಡಿ ಸುತ್ತುವುದು, ಹೂ ಕಟ್ಟುವುದು ಇದೆ. ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರಗಳಾಗಿದ್ದು ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ.

೪ ಸ್ತ್ರೀಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೭೩ ಮಕ್ಕಳು, ೩ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪಠ್ಯಪುಸ್ತಕ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೪೪.೦೬ ರಷ್ಟಿದೆ.

ಸಮುದಾಯ ಸೌಲಭ್ಯಗಲಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಲಿದ್ದಾರೆ. ೨ ಹೋಟೆಲ್, ೮ ಅಂಗಡಿಗಳು ಈ ಗ್ರಾಮದ ವಿಶೇಷವಾಗಿದೆ.

ಆಂಜನೇಯ, ಮಾರಮ್ಮ, ಕೊಲ್ಲಾಪುರದಮ್ಮ, ವೀರಭದ್ರ ಗ್ರಾಮದ ಪ್ರಮುಖ ದೈವಗಳು. ಒಂದು ಕರಿಗಲ್ಲು ಇದ್ದು ಯುಗಾದಿಯ ದಿನ ಪೂಜಿಸಲಾಗುವುದು. ನಾಗರಕಲ್ಲುಗಳಿದ್ದು ಅವರವರ ಮನೆತನದ ದೇವರುಗಳಾಗಿವೆ. ದಸರಾ, ಶಿವರಾತ್ರಿಯ ದಿನಗಳಂದು ಆಂಜನೇಯನಿಗೆ ವೀರಭದ್ರ ದೇವರಿಗೆ ವಿಶೇಷ ಅಲಂಕಾರ, ಪೂಜೆ, ಉತ್ಸವ ಇರುತ್ತದೆ. ಮಾರಮ್ಮ ಗ್ರಾಮದೇವತೆಯಾಗಿದ್ದು ಆಷಾಢ ತಿಂಗಳಲ್ಲಿ ಗ್ರಾಮದೇವತೆ ಹಬ್ಬ ಏರ್ಪಡಿಸಿ ಬಲಿ, ಆರತಿ, ಬಾನ, ಸರಳು ಹಾಕುವುದು ಸಂಪ್ರದಾಯವಿದೆ.

ಯುಗಾದಿಯಂದು ಚಿತ್ರದೇವರು, ಜುಂಜಪ್ಪನಿಗೆ ಹಾಲು ಮೀಸಲು ಹೋಗುವ ಸಂಪ್ರದಾಯವಿದೆ. ಉಳಿದಂತೆ ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ, ದಸರಾ ವಿಶೇಷ ಹಬ್ಬಗಳನ್ನು ಆಚರಿಸುತ್ತಾರೆ. ದಾಸಣ್ಣ, ಚಿತ್ರಪ್ಪ ಕೋಲು ಪದ ಹೇಳುವ ಕಲಾವಿದರಾಗಿ ಸ್ಥಳೀಯವಾಗಿ ಗಮನ ಸೆಳೆದ ಕಲಾವಿದರು.

## ಕೂಸುಕುಂಟೆ ಕಾವಲ್

ಕೂಸುಕುಂಟೆ ಕಾವಲ್ ಒಂದು ಪುಟ್ಟ ಮನೆಗಳ ಸಮುದಾಯ. ಇದು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೬ ಕಿ.ಮೀ. ದೂರದಲ್ಲಿದೆ. ಇದು ಕೂಸುಕುಂಟೆ ಗ್ರಾಮದ ಮಜರೆ ಗ್ರಾಮವಾಗಿದ್ದು ೭೦.೭೭ ಹೆಕ್ಟೇರ್ ಭೂವಿಸ್ತೀರ್ಣವನ್ನು ಹೊಂದಿದೆ. ಮರಳು ಮಿಶ್ರಿತ ಕಪ್ಪು-ಕೆಂಪು ಮಣ್ಣನ್ನು ಹೊಂದಿದ್ದು ಈ ಪರಿಸರದಲ್ಲಿ ಗದ್ದೆ ಬಯಲು ಪ್ರದೇಶವಾಗಿದೆ. ಒಂದು ನೀರಾವರಿ ಜೌಗು ಪ್ರದೇಶವಾಗಿದ್ದು ಇಂದು ವ್ಯವಸಾಯದ ಭೂಮಿಯಾಗಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ, ಉಡ, ಬೆಕ್ಕು ಕಂಡುಬಂದರೆ ಗ್ರಾಮದಲ್ಲಿ ಹಸು, ಎತ್ತು, ಕೋಳಿ ಸಾಕಲಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಕಾಗೆ, ಕೋಗಿಲೆ, ಗೊರವಂಕ, ಗೂಬೆ, ಹದ್ದು, ಗಿಳಿ ಕಂಡುಬರುತ್ತವೆ. ವಾರ್ಷಿಕ ಸರಾಸರಿ ಮಳೆ ೪೬೦ ಮಿಮೀ, ಬಿಸಿಲು ೩೧೨ ಡಿಗ್ರಿ ಆದರೆ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇದೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ನೀರು ಪೂರೈಸಲಾಗುತ್ತಿದೆ. ೨ ಕೊಳವೆ ಬಾವಿಗಳಿದ್ದು ವ್ಯವಸಾಯಕ್ಕೆ ಬಳಸಲಾಗುತ್ತಿದೆ.

ಮುಸ್ಲಿಂ, ಕುಂಚಿಟಿಗರ ಒಟ್ಟು ಆರು ಮನೆಗಳಿದ್ದು ಗ್ರಾಮದಲ್ಲಿ ಸಾಮರಸ್ಯ ಇದೆ. ಉರ್ದು, ಕನ್ನಡ ಎರಡೂ ಭಾಷೆಯನ್ನು ಆಡುತ್ತಾರೆ. ೧ ಕಾಂಕ್ರೀಟ್ ಹಾಗೂ ಶೀಟಿನ, ಹೆಂಚಿನ ಮನೆಗಳಿವೆ. ೩ ಮನೆಗಳಲ್ಲಿ ಶೌಚಾಲಯ ಬಳಸುವುದು ಇಲ್ಲಿನ ವಿಶೇಷ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ-ರೊಟ್ಟಿ ಉಪ ಆಹಾರವಾಗಿದೆ. ಸಾಂದರ್ಭಿಕವಾಗಿ ಬಾಡೂಟದ ಭೋಜನ ಇರುತ್ತದೆ. ಆಧುನಿಕ ವಾಹನವಾಗಿ ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ, ರಾಗಿ, ಭತ್ತ, ಅಲಸಂದೆ, ತೊಗರಿ ಮುಖ್ಯ ಬೆಳೆಗಳು. ಶೇಂಗಾ, ಹೊಂಗೆಬೀಜ, ಹುಣಸೆಹಣ್ಣು ವ್ಯಾಪಾರಿ ಸರಕು.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಶೈಕ್ಷಣಿಕವಾಗಿ ಒಂದೂ ಸಂಸ್ಥೆಯಿಲ್ಲ. ಕೂಸುಕುಂಟೆ ಗ್ರಾಮಸ್ಥರು ಸಿರಾ ನಗರವನ್ನು ಅವಲಂಬಿಸಿದ್ದಾರೆ. ಗ್ರಾಮದ ಸಾಕ್ಷರತೆ ೪೪.೬ ರಷ್ಟಿದೆ. ಯಾವುದೇ ಸಾಮುದಾಯಿಕ ಸೌಲಭ್ಯವಿಲ್ಲ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಗ್ರಾಮದಲ್ಲಿ ಕರಿಯಮ್ಮನ ಪುಟ್ಟ ಗುಡಿಯಿದ್ದು ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ. ಗ್ರಾಮದಲ್ಲಿ ರಂಜಾನ್, ಬಕ್ರಿದ್, ಈದ್‌ಮಿಲಾದ್ ಹಬ್ಬಗಳೊಂದಿಗೆ ಯುಗಾದಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಕಾಡಜ್ಜನಪಾಳ್ಯ

ಕಾಡಜ್ಜನಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೬.೫ ಕಿ.ಮೀ ದೂರದಲ್ಲಿದೆ. ಸಿರಾ–ಚಿತ್ರದುರ್ಗ ರ್‍ಾಷ್ಟ್ರಿಯ ಹೆದ್ದಾರಿಯ ಶ್ರೀ ಆಂಜನೇಯ ದೇವಾಲಯದ ಬಳಿ ಬಲಕ್ಕೆ ತಿರುಗಿ ೧ ಕಿ.ಮೀ, ದೂರದಲ್ಲಿ ಈ ಗ್ರಾಮವಿದೆ. ಇದೊಂದು ಮಾನಂಗಿ ಗ್ರಾಮದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೪೫.೦೭ ಹೆಕ್ಟೇರ್ ಆಗಿದೆ. ಕಾಡಜ್ಜ ಎಂಬ ವ್ಯಕ್ತಿಯು ಈ ದಿಣ್ಣೆಯಲ್ಲಿ ವಸತಿ ಮಾಡಿಕೊಂಡು ವಾಸಿಸುತ್ತಿದ್ದ ಕಾರಣದಿಂದ ಆ ವ್ಯಕ್ತಿಯ ಹೆಸರಿನಲ್ಲಿಯೇ ಊರನ್ನು ಕರೆಯಲಾಗಿದೆ. ಕಾಡಜ್ಜ ಮೂಲತಃ ಸಿರಾದ ಕುರುಬರ ಹಟ್ಟಿಯ ಮೂಲದವರಾಗಿದ್ದು ಕುರುಚಲು ಗಿಡಮರಗಳು ಪಕ್ಕದಲ್ಲೇ ಗೋಕಟ್ಟೆ ಇದ್ದುದರಿಂದ ಇಲ್ಲಿ ದನಗಳ ದೊಡ್ಡಿಯನ್ನು ನಿರ್ಮಿಸಿಕೊಂಡು ಪಶುಪಾಲನೆ ಮಾಡುತ್ತಾ ವಾಸಮಾಡುತ್ತಿದ್ದನು. ಆತನು ಕಾಲವಾದ ನಂತರದ ದಿನಗಳಲ್ಲಿ ಇಲ್ಲಿ ಮನೆಗಳು ನಿರ್ಮಾಣವಾದವು. ಇಂದಿಗೂ ಕುರುಬ ಜನಾಂಗದವರೇ ಹೆಚ್ಚು ನೆಲೆಸಿ ತಮ್ಮನ್ನು ಕಾಡಜ್ಜನ ವಂಶದವರು ಎಂದೂ ಕರೆದುಕೊಳ್ಳುತ್ತಾರೆ.

ಕೆಂಪು–ಬಿಳಿ ಮಣ್ಣಿನಿಂದ ಕೂಡಿರುವ ಈ ಗ್ರಾಮದಲ್ಲಿ ಇಂದಿಗೂ ಕುರುಚಲು ಗಿಡ–ಮರಗಳಿವೆ. ಈ ಪರಿಸರದಲ್ಲಿ ನರಿ, ಮೊಲ, ಮುಂಗುಸಿ, ಕಾಡುಹಂದಿ ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ. ಕಾಗೆ, ಗೂಬೆ, ಕೋಗಿಲೆ, ಕೌಜುಗ, ಗುಬ್ಬಚ್ಚಿ, ಹದ್ದು, ಗರುಡ ಮುಂತಾದ ಪಕ್ಷಿಗಳನ್ನು ಕಾಣಬಹುದಾಗಿದೆ. ವಾರ್ಷಿಕ ೪೬೦ ಮಿಮೀ ಸರಾಸರಿ ಮಳೆ ಪ್ರಮಾಣ ಹೊಂದಿದ್ದು ೧೨ ಡಿಗ್ರಿ ಚಳಿಯನ್ನು, ೩೮ ಡಿಗ್ರಿ ಸೆಂಟಿಗ್ರೇಡ್ ಬಿಸಿಲನ್ನು ಹೊಂದಿದೆ. ಈ ಪರಿಸರದಲ್ಲಿ ೨೦ ಕೊಳವೆ ಬಾವಿಗಳಿದ್ದು ಕೃಷಿ ಕೆಲಸಕ್ಕೆ ಬಳಕೆಯಾಗುತ್ತಿದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಗ್ರಾಮದ ಪೂರ್ವಕ್ಕೆ ಗೋಕಟ್ಟೆ ಇದ್ದು ತುಂಬುವುದು ಅಪರೂಪವಾಗಿದೆ. ೨ ಕೈಪಂಪುಗಳಿವೆ.

ಕುರುಬರು ದೊಡ್ಡ ಸಮುದಾಯವಾಗಿದ್ದು ನಾಯಕ ಜನಾಂಗದ ೫ ಮನೆಗಳಿವೆ. ಕನ್ನಡ ಇಲ್ಲಿನ ಮಾತೃಭಾಷೆ. ವಿವಿಧ ಪ್ರಕಾರದ ೫೫ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿವೆ. ೩೦೦ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ರೊಟ್ಟಿ, ಅನ್ನ ಬಳಸುವವರಿದ್ದಾರೆ ಬಾಡೂಟ, ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಆಹಾರವಾಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ಆಧುನಿಕ ವಾಹನಗಳಾದ ಟೆಂಪೋ, ಆಟೋ, ಟ್ರ್ಯಾಕ್ಟರ್‌ಗಳಿದ್ದು ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಜೋಳ, ತೊಗರಿ, ಹುರುಳಿ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ, ತರಕಾರಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆ ಹುಣಸೆಹಣ್ಣು, ಶೇಂಗಾ, ತೆಂಗು ಇದೆ. ಕೆಎಸ್ಆರ್‌ಟಿಸಿ ಕಂಡಕ್ಟರ್, ಶಿಕ್ಷಕರು ವಿಧಾನಸೌಧದಲ್ಲಿ ಕಂದಾಯ ಅಧಿಕಾರಿ ಸೇರಿದಂತೆ ೬ ಜನ ಸರ್ಕಾರಿ ನೌಕರರಿದ್ದಾರೆ. ಸಿದ್ಧರಾಜು ವಕೀಲರಾಗಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಮಾನಂಗಿ ತಾಲ್ಲೂಕು ಪಂಚಾಯ್ತಿ ಹಾಗೂ ಬೂವನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ಈ ಗ್ರಾಮದ ಹನುಮಂತರಾಯ ಎಂಬುವರು ಬೂವನಹಳ್ಳಿ ಗ್ರಾಮಪಂಚಾಯ್ತಿ ಅಧ್ಯಕ್ಷರಾಗಿದ್ದಾರೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ೨ ಸ್ತ್ರೀಶಕ್ತಿ ಸ್ವಸಹಾಯ ಗುಂಪು ಇದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೩೪ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಪುಸ್ತಕ ಹಾಗೂ ಸಮವಸ್ತ್ರ ವಿತರಣೆ ಇದೆ. ಗ್ರಾಮದ ಸಾಕ್ಷರತೆ ೫೬% ರಷ್ಟಿದೆ. ಗ್ರಾಮದಲ್ಲಿ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ.

ಒಂದು ಅರಳಿಕಟ್ಟೆ, ನಾಗರಕಲ್ಲುಗಳಿವೆ. ಧಾರ್ಮಿಕವಾಗಿ ಆಂಜಿನಯ್ಯ, ದುರ್ಗಮ್ಮ, ಮಾರಮ್ಮನ ಪೌಳಿಗಳಿವೆ. ಮಾರಮ್ಮನ ಜಾತ್ರೆಯಲ್ಲಿ ಆರತಿ, ಬಾನ, ಬ್ಯಾಟೆ, ಬಲಿ, ಸಂಪ್ರದಾಯವಿದೆ. ಯುಗಾದಿ, ಶಿವರಾತ್ರಿ, ಮಹಾನವಮಿ, ದೀಪಾವಳಿ, ಗೌರಿ–ಗಣೇಶನ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

## ಕೆಂಪನಹಳ್ಳಿ

ಇದು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೨ ಕಿಮೀ ದೂರದಲ್ಲಿದೆ. ಸಿರಾ–ಮಧುಗಿರಿ ಮುಖ್ಯ ರಸ್ತೆಯಲ್ಲಿ ಯರಗುಂಟೆ ಗೇಟಿನಿಂದ ಬಲಕ್ಕೆ ತಿರುಗಿ ರತ್ನಸಂದ್ರ ಮಾರ್ಗದಲ್ಲಿ ಎಡಭಾಗದಲ್ಲಿ ಈ ಗ್ರಾಮವಿದೆ. ಇದು ರತ್ನಸಂದ್ರ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೮೮.೩೨ ರಷ್ಟಿದೆ.

ಕೆಂಪಣ್ಣ ಅಥವಾ ಕೆಂಪಯ್ಯ ಎಂಬ ವ್ಯಕ್ತಿ ಮೂಲದಿಂದ ಈ ಹೆಸರು ಬಂದಿದೆ. ಬಯಲುನಾಡು, ಕೆಂಪುಮಿಶ್ರಿತ ಮರಳು ಮಣ್ಣಿನಿಂದ ಕೂಡಿದ ಭೂ ಮೇಲ್ಮೈ ಸ್ವರೂಪವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ತೋಳ, ಮೊಲ, ನರಿ, ಹಂದಿ, ಮುಂಗುಸಿ ಕಂಡುಬಂದರೆ ಗ್ರಾಮದಲ್ಲಿ ಹಳ್ಳಿಕಾರ್ ತಳಿ ಎತ್ತು, ಸೀಮೆ ಹಾಗೂ ನಾಟಿ ಹಸುಗಳನ್ನು ಸಾಕಲಾಗುತ್ತಿದೆ. ಕುರಿ, ಕೋಳಿಗಳಿವೆ. ಈ ಪರಿಸರದಲ್ಲಿ ಕಾಡುಪಕ್ಷಿಯಾದ ಗೊರವಂಕ, ಗೀಜುಗ, ಗೂಬೆ, ಗರುಡ, ಹದ್ದು, ಗಿಡುಗ, ನವಿಲು, ಕೋಗಿಲೆ, ಕಾಗೆ, ಕೊಕ್ಕರೆ ಕಂಡು ಬರುತ್ತವೆ.

ಸಾಧಾರಣ ಮಳೆ ಪ್ರಮಾಣ ವಾರ್ಷಿಕ ೪೭೧.೬ ರಷ್ಟು ಮಳೆ ಬೀಳುತ್ತದೆ. ಚಳಿ ಪ್ರಮಾಣ ೧೨ ಡಿಗ್ರಿ ಇದ್ದರೆ ಉಷ್ಣಾಂಶ ೩೮ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಈ ಗ್ರಾಮಕ್ಕೆ ಸೇರಿದ ಒಂದು ಕೆರೆ ಇದ್ದು ತುಂಬುವುದು ಅಪರೂಪವಾಗಿದೆ. ಬೆಳೆಗಾಗಿ ರೈತರು ಮಳೆಯ ನೀರಿನ ಜೊತೆಗೆ ೩೦ ಕೊಳವೆ ಬಾವಿಗಳನ್ನು ಕೊರೆಸಿ ಉಪನೀರಾವರಿ ಮಾಡಿಕೊಂಡಿದ್ದಾರೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೪ ಸಿಸ್ಟರ್ನ್ ಇದ್ದು ೨ ಕೈಪಂಪುಗಳಿವೆ.

ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಕುರುಬ, ಆದಿ ಕರ್ನಾಟಕ, ಆದಿದ್ರಾವಿಡ, ಈಡಿಗ ಜನಾಂಗಗಳು ಕಿರುಸಮುದಾಯಗಳಾಗಿವೆ. ಕನ್ನಡ ಗ್ರಾಮದ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೧೨೦ ಮನೆಗಳಿದ್ದು ಅವು ಕಲ್ಲಿನ, ಮಣ್ಣಿನ, ಹೆಂಚಿನ ಸ್ವರೂಪದವುಗಳಾಗಿವೆ. ೭೯೮ ಜನಸಂಖ್ಯೆಯುಳ್ಳ ಈ ಗ್ರಾಮದ ೩೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಆಯ್ದ ಕೆಲವರು ಕುಟುಂಬ ಕಲ್ಯಾಣ ಯೋಜನೆಗೆ ಒಳಗಾಗಿದ್ದಾರೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ, ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಜೋಳ, ಕಡಲೆ, ಆರಕ, ನವಣೆ, ತೊಗರಿ ಹಾಗೂ ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆಯ ಬೆಳೆಯಾಗಿ ತೆಂಗು, ಅಡಿಕೆ ಬೆಳೆಗಳಿವೆ. ಒಂದು ನಂದಿನಿ ಹಾಲಿನ ಕೇಂದ್ರವಿದೆ. ಶೇಂಗಾ, ಹೊಂಗೆಬೀಜ, ಹುಣಸೆಹಣ್ಣು, ಹೂವಿನ ವ್ಯಾಪಾರ, ತೆಂಗು, ಸೂರ್ಯಕಾಂತಿ ಪ್ರಮುಖ ವ್ಯಾಪಾರಿ ಸರಕಾಗಿದೆ.

ಶಿಕ್ಷಣ, ಸಾರಿಗೆ, ತಾಂತ್ರಿಕ ಇಲಾಖೆಗಳಿಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಮಹಿಳೆಯರು ಬೀಡಿ ಕಟ್ಟುವುದು, ಹುಣಸೆಹಣ್ಣು ಬಿಡಿಸುವುದು ಉಪಕಸುಬಾಗಿದೆ. ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ರತ್ನಸಂದ್ರ, ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕ್ಷೇತ್ರಗಳು ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಒಬ್ಬರು ಪಂಚಾಯಿತಿ ಸದಸ್ಯರ ಈ ಗ್ರಾಮದ ಪ್ರತಿನಿಧಿಗಳಾಗಿದ್ದಾರೆ. ಸಿರಾ–ಮಧುಗಿರಿ–ಬ್ರಹ್ಮಸಂದ್ರ ಗೇಟ್ ತುಮಕೂರಿಗೆ ರತ್ನಸಂದ್ರದಿಂದ ಬಸ್ ಸಂಪರ್ಕವಿದೆ. ರತ್ನಸಂದ್ರದಿಂದ ಅಂಚೆ ಸಂಪರ್ಕವಿದ್ದು ಚರದೂರವಾಣಿಗಳು ಬಳಕೆಯಲ್ಲಿವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳು ಅಸ್ತಿತ್ವದಲ್ಲಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೮೩ ಮಕ್ಕಳು, ೪ ಜನ ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೫೪.೫ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಧಾರ್ಮಿಕವಾಗಿ ಆಂಜನೇಯ, ಮಾರಮ್ಮ, ಕೊಲ್ಲಾಪುರದಮ್ಮ ದೇವಾಲಯಗಳಿದ್ದು ದಸರಾ ಸಂದರ್ಭದಲ್ಲಿ ಗ್ರಾಮದಲ್ಲಿ ದೇವರುಗಳ ಉತ್ಸವ ಏರ್ಪಡುತ್ತದೆ. ಮಾರಮ್ಮನ ಊರ ಹಬ್ಬ ಆಷಾಢ ಮಾಸದಲ್ಲಿ ಏರ್ಪಟ್ಟು ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕೆಂಪನಹಳ್ಳಿ ಗೊಲ್ಲರಹಟ್ಟಿ

ಕೆಂಪನಹಳ್ಳಿ ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಸಿರಾ–ಮಧುಗಿರಿ ಮುಖ್ಯ ರಸ್ತೆಯಲ್ಲಿ ಯರಗುಂಟೆ ಗೇಟನಿಂದ ಬಲಭಾಗದಲ್ಲಿ ತಿರುಗಿ ೨ ಕಿಮೀನಲ್ಲಿ ರತ್ನಸಂದ್ರ ಮಾರ್ಗದಲ್ಲಿ ಈ ಗೊಲ್ಲರಹಟ್ಟಿ ಇದೆ. ಇದು ಕೆಂಪನಹಳ್ಳಿಯ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೪೦.೨೬ ಆಗಿದೆ. ಕೆಂಪನಹಳ್ಳಿ ಸರ್ವೆ ನಂಬರ್ ನಲ್ಲಿ ಕೆಂಪನಹಳ್ಳಿಗೆ ಸೇರಿದ ಗೊಲ್ಲ ಸಮುದಾಯದ ಮನೆಗಳು ರಚನೆಯಾಗಿರುವುದರಿಂದ ಕೆಂಪನಹಳ್ಳಿ ಗೊಲ್ಲರಹಟ್ಟಿ ಎಂದು ಕರೆಯಲಾಗಿದೆ. ಕೆಂಪುಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ಕುರಿಗಾರಿಕೆಯ ಜೊತೆಗೆ ಕೃಷಿ ನಿರತರಾಗಿದ್ದಾರೆ. ಈ ಪರಿಸರದಲ್ಲಿ ನರಿ, ತೋಳ, ಮೊಲ, ಮುಂಗುಸಿ, ಜಿಂಕೆ, ಉಡ, ಕಾಡುಪ್ರಾಣಿಗಳಿದ್ದು ಗ್ರಾಮದಲ್ಲಿ ಕುರಿ, ಮೇಕೆ, ಹಸು,

ಎಮ್ಮೆ, ನಾಯಿ, ಕತ್ತೆಗಳನ್ನು ಸಾಕಲಾಗಿದೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾಡಿಕೆ ಮಳೆ ೪೭೧.೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಸೆಂಟಿಗ್ರೇಡ್, ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಆಗಿದೆ. ಕೃಷಿಗೆ ನೀರು ಸಾಕಾಗುವುದಿಲ್ಲ. ಉಪನೀರಾವರಿಯಾಗಿ ೧೦ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ. ೨ ಕಿರುಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ.

ಕಾಡುಗೊಲ್ಲ ಸಮುದಾಯ ಮಾತ್ರ ವಾಸಿಸುವ ಈ ಗ್ರಾಮ ಬುಡಕಟ್ಟು ಸಂಸ್ಕೃತಿ ಹೊಂದಿದ್ದು ಕನ್ನಡ ಮಾತೃಭಾಷೆಯಾಗಿದೆ. ಇಲ್ಲಿ ಶೀಟಿನ, ಹೆಂಚಿನ, ಕಾಂಕ್ರೀಟ್ ಸೇರಿದಂತೆ ಒಟ್ಟು ೧೨೪ ಮನೆಗಳಿವೆ. ೭೮೧ ಜನಸಂಖ್ಯೆ ಹೊಂದಿದ್ದು ಗ್ರಾಮ ಸೌಲಭ್ಯಗಳಾದ ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ಉಚಿತ ವಿದ್ಯುತ್ ಸಂಪರ್ಕದ ಫಲಾನುಭವಿಗಳಿದ್ದಾರೆ. ೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು ರೊಟ್ಟಿ ಬಳಸುವವರಿದ್ದಾರೆ ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ಭೋಜನಗಳಿರುತ್ತವೆ. ಟ್ರ್ಯಕ್ಟರ್, ಟೆಂಪೋ, ಆಟೋ, ದ್ವಿಚಕ್ರ ವಾಹನಗಳ ಬಳಕೆಯಿರುತ್ತದೆ.

ಶೇಂಗಾ ಮುಖ್ಯಬೆಳೆ. ಭತ್ತ, ರಾಗಿ, ಜೋಳ, ಹುರುಳಿ, ತೊಗರಿ ಆಹಾರ ಬೆಳೆಗಳು. ತೆಂಗು ತೋಟಗಾರಿಕೆ ಇದೆ. ಸೂರ್ಯಕಾಂತಿ, ರೇಷ್ಮೆ ಬೆಳೆ ವಿರಳವಾಗಿದೆ. ಶೇಂಗಾ, ಕುರಿ, ಮೇಕೆ ಹಾಗೂ ಹುಣಸೆಹಣ್ಣು ವ್ಯಾಪಾರಿ ಸರಕುಗಳಾಗಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಧನಂಜಯ, ಅಶ್ವತ್ಥ್ ಎಂಬ ಇಬ್ಬರು ಈ ಗ್ರಾಮದಲ್ಲಿ ಸರ್ಕಾರಿ ಶಿಕ್ಷಕರಿದ್ದಾರೆ. ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯತ್, ರತ್ನಸಂದ್ರ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಒಂದು ಕಿರು ಅಂಗನವಾಡಿ ಕೇಂದ್ರವಿದ್ದು ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗುವುದು. ಗ್ರಾಮದ ಶೈಕ್ಷಣಿಕ ಸಾಕ್ಷರತೆ ೫೪.೪ ರಷ್ಟಿದೆ. ಹೆಚ್ಚಿನ ವ್ಯಾಸಂಗಕ್ಕೆ ಕೆಂಪನಹಳ್ಳಿ, ರತ್ನಸಂದ್ರ, ಸಿರಾ ಕೇಂದ್ರಗಳಿಗೆ ಹೋಗಬೇಕಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯ ವೇತನಗಳ ಫಲಾನುಭವಿಗಳಿದ್ದಾರೆ.

ಜುಂಜಪ್ಪ ಈ ಗ್ರಾಮದ ಆರಾಧ್ಯ ದೈವ. ದೀಪಾವಳಿ ಹಬ್ಬದ ಸಮಯದಲ್ಲಿ ಏಳು ದಿನ ವಿಶೇಷವಾಗಿ ಜುಂಜಪ್ಪನ ಜಾತ್ರೆಯನ್ನು ವಿಜೃಂಭಣೆಯಿಂದ ನಡೆಸುತ್ತಾರೆ. ದೀಪ ಏರಿಸುವ, ಇಳಿಸುವ, ಜನ್ನಿಗೆ ಆಚರಣೆ ಈ ಹಬ್ಬದ ವಿಶೇಷ ಆಚರಣೆಯಾಗಿದೆ. ಕೊಲ್ಲಾಪುರದಮ್ಮ, ಮಾರಮ್ಮನ ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ.

ಶ್ರೀರಂಗಯ್ಯ, ರಂಗಪ್ಪ, ಕದುರಯ್ಯ ಜನಪದ ಸಂಗೀತ ಕೋಲುಮೇಳದ ಕಲಾವಿದರಾಗಿದ್ದು ಶ್ರೀರಂಗಯ್ಯ ಹಾಡಿರುವ ಜನಪದ ಗೀತೆಗಳನ್ನು ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿ 'ಬಂಡಿ ಬಂದಾವು ಬಾಳೆ ವನದಾಗೆ' ಗೀತ ಸಂಕಲನದಲ್ಲಿ ಪ್ರಕಟಿಸಲಾಗಿದೆ. ಇವರು ಸ್ಥಳೀಯವಾಗಿ ಗುರುತಿಸಿಕೊಂಡಿರುವ ಕಲಾವಿದರಾಗಿದ್ದಾರೆ.

## ಕಲ್ಲಹಳ್ಳಿ

ಕಲ್ಲಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೦ ಕಿಮೀ ದೂರದಲ್ಲಿದೆ. ಸಿರಾ–ಮದಲೂರು, ಬರಗೂರು ಮಾರ್ಗದಲ್ಲಿ ಮುಖ್ಯ ರಸ್ತೆಯಿಂದ ೩ ಕಿಮೀ ದೂರದಲ್ಲಿದೆ. ಕರಲು, ಕಲ್ಲು ಮಣ್ಣುಗಳಿಂದ ಆವೃತ್ತವಾದ ಇಲ್ಲಿನ ಭೂ ಪ್ರದೇಶವಾದುದರಿಂದ ಪ್ರಾಕೃತಿಕ ಹೆಸರಿನಲ್ಲಿ ಕಲ್ಲಹಳ್ಳಿ ಎಂಬ ಹೆಸರು ಬಂದಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೯೬೭.೭೭ ಹೆಕ್ಟೇರ್ ಆಗಿದೆ. ಇದರ ಸಮೀಪದಲ್ಲಿ ೧೨೮.೭೭ ಹೆಕ್ಟೇರ್ ಗೋಮಾಳ ಭೂಮಿಯಿದ್ದು ಇದು ಒತ್ತುವರಿಯಾಗಿದ್ದು ದನ–ಕರುಗಳ ಮೇವಿಗೆ ಪರದಾಟವಾಗಿದೆ ಎಂದು ಗ್ರಾಮದವರ ಅಳಲು.

ಕರಲು ಮಿಶ್ರಿತ ಕೆಂಪುಭೂಮಿ ಶೇಂಗಾ ಬೆಳೆಗೆ ಪ್ರಶಸ್ತವಾಗಿದೆ. ಕುರುಚಲು ಗಿಡ, ಮರ, ಪೊದೆ ಇರುವುದರಿಂದ ಈ ಭಾಗದಲ್ಲಿ ಹೆಚ್ಚಾಗಿ ನರಿ, ಮೊಲ, ಹಂದಿ, ಮುಂಗುಸಿ ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಗೊರವಂಕ, ಗೂಬೆ, ಹದ್ದು ಕೌಜಲಗ ಕಂಡುಬಂದರೆ ಕೋಳಿ ಸಾಕು ಪಕ್ಷಿಯಾಗಿದೆ. ಗ್ರಾಮದ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕಾಣಿಕೆ ಇದೆ.

ವಾಡಿಕೆ ಮಳೆ ೪೩೪ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ನೀರಿನ ಪ್ರಮಾಣ ಕಡಿಮೆ. ಕೃಷಿ ಉಪಯೋಗಕ್ಕಾಗಿ ೪೮ ಕೊಳವೆ ಬಾವಿಗಳಿದ್ದು ೨ ಕೆರೆಗಳಿವೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೮ ಸಿಸ್ಟರ್ನ್‌ಗಳಿದ್ದು ೨ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಆದಿದ್ರಾವಿಡ ಹಾಗೂ ಕಾಡುಗೊಲ್ಲರು ಕಿರುಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮನೆಮಾತಾಗಿದೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ, ಮಣ್ಣಿನ, ಶೀಟಿನ ಒಟ್ಟು ೧೫೬ ಮನೆಗಳಿದ್ದು ಇವು ವಸತಿ ಯೋಜನೆಗಳಾದ ಇಂದಿರಾ ಆವಾಸ್, ಆಶ್ರಯ, ಜನತಾ ಹಾಗೂ ಭಾಗ್ಯಜ್ಯೋತಿ ವಸತಿಯೋಜನೆಯ ೧೬ ಫಲಾನುಭವಿಗಳಿದ್ದಾರೆ. ೫೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನವಾದ ಎತ್ತಿನ ಬಂಡಿಯ ಜೊತೆಗೆ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾದ ಭತ್ತ, ರಾಗಿ, ಜೋಳ, ತೊಗರಿ, ಅಲಸಂದೆ ಬೆಳೆಯುತ್ತಾರೆ.

ಸಾರಿಗೆ, ಶಿಕ್ಷಣ, ಆರೋಗ್ಯ ಇಲಾಖೆಗೆ ಸೇರಿದ ೧೦ ಜನ ಸರ್ಕಾರಿ ನೌಕರರಿದ್ದಾರೆ. ಮಹಿಳೆಯರು ಗೃಹ ಕಸುಬಾಗಿ ಬೀಡಿ ಸುತ್ತುವುದು, ಎಲೆ ಕಟ್ಟುವುದು, ಟೈಲರಿಂಗ್ ಕೆಲಸದಲ್ಲಿ ತೊಡಗಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಹಂದಿಕುಂಟೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕ್ಷೇತ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ೩ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಇವು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿವೆ.

ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಶಾಲೆಯಲ್ಲಿ ೪೪ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೨.೬ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೮ ಪೆಟ್ಟಿಗೆ ಅಂಗಡಿ, ೨ ಟೀ ಅಂಗಡಿಗಳಿವೆ. ಈರಪ್ಪ, ಆಂಜನೇಯ, ಕರಿಯಮ್ಮ, ಲಕ್ಷ್ಮೀದೇವರ ಗುಡಿಗಳಿವೆ. ಇವುಗಳಿಗೆ ದಸರಾ ಉತ್ಸವಗಳಂದು ಜಲಧಿ ಸೇವೆ, ಉತ್ಸವ ಏರ್ಪಡುತ್ತದೆ. ಮಾರಮ್ಮ ಗ್ರಾಮದೇವತೆಯಾಗಿದ್ದು ಆರತಿ, ಬಾನ, ಬ್ಯಾಟೆ ಸಂಪ್ರದಾಯವಿರುತ್ತದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಗೌರಿ–ಗಣೇಶ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕೊಟ್ಟರಂಗಾಪುರ

ರಂಗಾಪುರ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರ–ಪೂರ್ವಕ್ಕೆ ೬ ಕಿಮೀ ದೂರದಲ್ಲಿದೆ. ಇದು ಕೊಟ್ಟ ಗ್ರಾಮ ಪಂಚಾಯ್ತಿಗೆ ಸೇರಿದ್ದು ಕೊಟ್ಟ ಗ್ರಾಮದ ಉಪಗ್ರಾಮವಾಗಿದೆ. ರಂಗನಾಥ ದೇವಸ್ಥಾನ ಇಲ್ಲಿರುವುದರಿಂದ ಅದೇ ಹೆಸರಿನಲ್ಲಿ ಗ್ರಾಮ ನಿರ್ಮಾಣವಾಗಿರುವುದು ಈ ಹೆಸರಿನ ವಿಶೇಷವಾಗಿದೆ. ಒಟ್ಟು ೨೨೦.೨ ಹೆಕ್ಟೇರ್ ಭೂ ವಿಸ್ತೀರ್ಣ ಹೊಂದಿರುವ ಇಲ್ಲಿನ ನೆಲ ಕೆಂಪುಮಿಶ್ರಿತ ಮರಳು ಮಣ್ಣನ್ನು ಹೊಂದಿದೆ. ನಡುವೆ ಒಂದು ಕೆರೆ, ಕುರುಚಲು ಗಿಡ, ಹಳ್ಳಗಳಿಂದ ಕೂಡಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ಜಿಂಕೆ, ಮೊಲ, ಮುಂಗುಸಿ, ನರಿ, ಕಾಡುಹಂದಿ ಕಂಡುಬರುತ್ತವೆ. ಗ್ರಾಮದಲ್ಲಿ ನಾಟಿ ಹಾಗೂ ಸೀಮೆ ಹಸುಗಳನ್ನು ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕಿದ್ದಾರೆ. ಈ ಪರಿಸರದ ಮರ–ಗಿಡಗಳಲ್ಲಿ ಗಿಳಿ, ಕೋಗಿಲೆ, ಗೊರವಂಕ, ಕಾಗೆ, ಬೆಳವ, ಗೂಬೆ, ಹದ್ದು, ಗರುಡ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ಅತ್ಯಂತ ಕಡಿಮೆ ಇದ್ದು ವಾಡಿಕೆ ಮಳೆ ೪೫೧ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ೩೪ ಕೊಳವೆ ಬಾವಿಗಳಿದು ಕೃಷಿ ಕೆಲಸಕ್ಕೆ ಬಳಕೆಯಾಗುತ್ತದೆ. ಉಳಿದಂತೆ ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಕುಡಿಯಲು ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೪ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಕುಂಚಿಟಿ ಸಮುದಾಯ ದೊಡ್ಡ ಸಮುದಾಯವಾಗಿದ್ದು ಮುಸ್ಲಿಂ ಹಾಗೂ ನಾಯಕ ಜನಾಂಗಗಳು ಕಿರು ಸಮುದಾಯವಾಗಿವೆ. ಕನ್ನಡ ಮತ್ತು ಉರ್ದು ಭಾಷೆ ಗ್ರಾಮದಲ್ಲಿ ಮಾತನಾಡುತ್ತಾರೆ. ವಿವಿಧ ಪ್ರಕಾರಗಳ ೫೨ ಮನೆಗಳಿದ್ದು ಅವು ಕಾಂಕ್ರೀಟ್, ಶೀಟಿನ, ಹೆಂಚಿನ ಸ್ವರೂಪದವುಗಳಾಗಿವೆ. ೧೯೪ ಜನಸಂಖ್ಯೆ ಹೊಂದಿರುವ ಇಲ್ಲಿನ ೧೫ ಮನೆಗಳಲ್ಲಿ ಶೌಚಾಲಯವನ್ನು ಬಳಸುತ್ತಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ಆಟೋ ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ಆಹಾರ ಬೆಳೆಯಾಗಿ ರಾಗಿ, ತೊಗರಿ, ಹುರುಳಿ ಬೆಳೆಯುತ್ತಾರೆ. ಶೇಂಗಾ, ಹುಣಸೆಹಣ್ಣು ವ್ಯಾಪಾರಿ ಬೆಳೆಯಾಗಿದೆ.

ಶಿಕ್ಷಕರು, ಕಂಡಕ್ಟರ್ ಸೇರಿದಂತೆ ೪ ಜನ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಬೀಡಿ ಕಟ್ಟುವ, ಟೈಲರಿಂಗ್ ಗೃಹ ಕೆಲಸ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ಮೇಲುಕುಂಟೆ ತಾಲ್ಲೂಕು ಪಂಚಾಯ್ತಿ ಹಾಗೂ ಕೊಟ್ಟ ಗ್ರಾಮ ಪಂಚಾಯ್ತಿ ಕೇಂದ್ರ ಸ್ಥಳಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಈ ಗ್ರಾಮದ ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ಸ್ತ್ರೀಶಕ್ತಿ ಕೇಂದ್ರದ ೨ ಗುಂಪುಗಳಿದ್ದು ಆರ್ಥಿಕ ಪ್ರಗತಿಗೆ ಸಹಕಾರಿಯಾಗಿದೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಶಾಲೆಯಲ್ಲಿ ೩೪ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧ ಪೆಟ್ಟಿಗೆ ಅಂಗಡಿ ಹಾಗೂ ೧ ಟೀ ಅಂಗಡಿ ಇದೆ. ಧಾರ್ಮಿಕವಾಗಿ ರಂಗನಾಥ ಈ ಗ್ರಾಮದ ಆರಾಧ್ಯ ದೈವ. ರಂಗನಾಥ, ಕಂಬದ ರಂಗನಾಥನಾಗಿ ರೂಪಾಂತರ ಹೊಂದುವಾಗ ಸತ್ತವರನ್ನು ಬದುಕಿಸಿ ಪವಾಡ ಮೆರೆದ ಪ್ರಸಂಗ ಈ ಭಾಗದ ಉಲ್ಲೇಖ ಕಂಬದರಂಗನ ಕಥೆಯಲ್ಲಿ ಪ್ರಕಟವಾಗುತ್ತದೆ. ಉಳಿದಂತೆ ಭೂತಪ್ಪನ ಪೌಳಿ ಇದೆ. ರಂಗನಾಥಸ್ವಾಮಿ ಜಾತ್ರೆ ನಡೆಯುತ್ತದೆ. ಭೂತಪ್ಪನಿಗೆ ಆರತಿ, ಬಾನ, ಬ್ಯಾಟೆ ಬಲಿ ಸಂಪ್ರದಾಯದ ಹರಕೆಗಳಿವೆ. ಯುಗಾದಿ, ದೀಪಾವಳಿ, ದಸರಾ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕಳುವರಹಳ್ಳಿ

ಕಳುವರಹಳ್ಳಿ ತುಮಕೂರು ಜಿಲ್ಲೆಯಲ್ಲಿ ಸಾಂಸ್ಕೃತಿಕವಾಗಿ ಮಹತ್ವ ಪಡೆದ ಕಂದಾಯ ಗ್ರಾಮ. ಸಿರಾದಿಂದ ಪಶ್ಚಿಮಕ್ಕೆ ೨೩ ಕಿಮೀ ದೂರದಲ್ಲಿದೆ. ಸಿರಾ–ಹಿರಿಯೂರು ರ್‍ಾಷ್ಟ್ರೀಯ ಹೆದ್ದಾರಿಯಲ್ಲಿ ಜಿಲ್ಲಾ ಪಂಚಾಯ್ತಿ ಕೇಂದ್ರ ತಾವರೆಕೆರೆಯಿಂದ ಬಲಕ್ಕೆ ತಿರುಗಿ ೧೪ ಕಿಮೀಗಳ ದೂರವನ್ನು ಹೊಸೂರು ರಸ್ತೆಯಲ್ಲಿ ಸಾಗಿ ಕಾವಲು ರಂಗನಹಳ್ಳಿಯ ಆಚೆ ಕಳುವರಹಳ್ಳಿ ಗೇಟಿನಲ್ಲಿ ಬಲಭಾಗಕ್ಕೆ ತಿರುಗಿ ಕಚ್ಚಾರಸ್ತೆಯಲ್ಲಿ ೨ ಕಿಮೀ ಕ್ರಮಿಸಿದರೆ ಕಳುವರಹಳ್ಳಿ ಸಿಗುತ್ತದೆ. ಕಳುವರಹಳ್ಳಿ–ಹೊಸೂರು ಗ್ರಾಮ ಪಂಚಾಯ್ತಿ ಕೇಂದ್ರದ ಕೆರೆಯ ಮುಂದೆ, ಕೊಂಚ ಎತ್ತರ ಪ್ರದೇಶದಲ್ಲಿ ಈ ಗ್ರಾಮ ನಿರ್ಮಾಣವಾಗಿದೆ.

ಕಳುವರಹಳ್ಳಿ ಈ ಗ್ರಾಮ ಹೆಸರಿನ ನಿಷ್ಪತ್ತಿ ವಿಶಿಷ್ಟವಾಗಿದೆ. ರೈತಾಪಿ ಜನಾಂಗದವರೇ ಇಲ್ಲಿದ್ದು ಧಾನ್ಯವನ್ನು ಹೊಕ್ಕುವ, ಕಣಕ್ಕೆ ಪ್ರಸಿದ್ಧರಾದವರು ಎಂಬ ಹೆಸರಿನ ಪ್ರಸ್ತಾವನೆಯನ್ನು ಈ ಗ್ರಾಮದ ಜುಂಜೇಗೌಡ ಹೇಳಿದರೆ ಕಳುವರ ಅಂದರೆ ಚಿನ್ನದ ಒಡವೆಗಳನ್ನು ತಯಾರಿಸುತ್ತಿದ್ದ ಕೇಂದ್ರ, ಹಾಗಾಗಿಯೇ ಕಳಾವರವಾಗಿದ್ದು ಕಳುವರ ಎಂದು ಜನಭಾಷೆಯಲ್ಲಿ ಬದಲಾಗಿದೆ ಎಂದು ಈ ಗ್ರಾಮದ ಅಕ್ಕಸಾಲಿಗರ ರಂಗನಾಥಪ್ಪ ಹೇಳುತ್ತಾರೆ. ಈ ಎರಡೂ ಪದಗಳಿಗೂ ಮೀರಿದ ಸಂಗತಿಯನ್ನು ಸಂಶೋಧಕ ಶಂಭಾ ಜೋಶಿ ಅವರು ವಿವರಿಸಿ 'ಕಳುವರು' ಎಂಬ ಒಂದು ಜನಾಂಗ ಕರ್ನಾಟಕದ ಮೂಲ ಜನಾಂಗವಾಗಿದ್ದು ಕನ್ನಡ ನಾಡಿಗೆ ಕರ್ನಾಟಕ ಎಂಬ ಹೆಸರು ಬರಲು ಈ ಜನಾಂಗದ ಹಿನ್ನೆಲೆಯೂ ಕಾರಣ ಎಂದಿದ್ದಾರೆ.

ಒಟ್ಟಾರೆ ಜನಪದರ ಭಾಷೆಯಲ್ಲಿ ರಾಯ ಕಳುವೊರಹಳ್ಳಿ ಎಂಬ ವಿಶೇಷಣಕ್ಕೂ ಕಾರಣವಾಗಿ ವೀರಜುಂಜಪ್ಪನನ್ನೇ ರಾಯ ಎಂಬ ವಿಶೇಷಣದಿಂದ ಕರೆದಿರಬಹುದು ಅಥವಾ ಕಳುವರ ಎಂಬ ಜನಾಂಗದವರನ್ನು ರಾಯರು ಎಂದು ಸಂಬೋಧಿಸಿರಬಹುದು. ಆದರೆ ಕಳುವರು ಎಂಬ ಜನಾಂಗ ಈ ಗ್ರಾಮದಲ್ಲಿ ಇಂದು ಇರುವುದಿಲ್ಲ. ಆದರೂ ಈ ಭಾಗದ ಪ್ರಮುಖ ಸಾಂಸ್ಕೃತಿಕ, ಆಧ್ಯಾತ್ಮಿಕ ನಾಯಕ ಜುಂಜಪ್ಪನ ಸಮಾಧಿ ಈ ಗ್ರಾಮದಿಂದ ದಕ್ಷಿಣಕ್ಕೆ ಒಂದು ಕಿಮೀ ದೂರದಲ್ಲಿ ಇರುವುದರಿಂದ ರಾಯ ಕಳುವೊರಹಳ್ಳಿ ಎಂದು ಕರೆದಿರಬಹುದು. ಕಾಡುಗೊಲ್ಲರ ಸಂಸ್ಕೃತಿಯಲ್ಲಿ ಕಳುವರಹಳ್ಳಿ ಉಲ್ಲೇಖ ಬರುತ್ತದೆ.

೧೧೬೨.೪೦ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿರುವ ಈ ಗ್ರಾಮದಲ್ಲಿ ಕುಂಚಿಟಿಗರು ದೊಡ್ಡ ಸಮುದಾಯ. ಆದಿಕರ್ನಾಟಕ, ಆದಿದ್ರಾವಿಡ, ಬೇಡ, ಅಕ್ಕಸಾಲಿಗ, ಮಡಿವಾಳ, ದೇವಾಂಗ, ವೈಶ್ಯ ಈ ಜನಾಂಗಗಳು ಇಲ್ಲಿ ಸಣ್ಣ ಸಮುದಾಯ. ಒಟ್ಟು ೨೨೩ ಮನೆಗಳಿದ್ದು ೧೧೮೭ ಜನಸಂಖ್ಯೆ ಹೊಂದಿದೆ. ಇದರಲ್ಲಿ ಕಾಂಕ್ರೀಟ್, ಶೀಟಿನ ಮನೆ, ಕಲ್ಲಿನ ಮನೆ, ಮಣ್ಣಿನ ಮನೆಗಳಿವೆ. ಆಶ್ರಯ, ಜನತಾ ಮನೆಗಳು ಇಲ್ಲಿನ ಹರಿಜನರ

ಕಾಲೋನಿಯಲ್ಲಿವೆ. ಭಾಗ್ಯಜ್ಯೋತಿ ಯೋಜನೆಯಲ್ಲಿ ಉಚಿತ ವಿದ್ಯುತ್ ಸಂಪರ್ಕ ಹೊಂದಿದ ೪೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ವಾಡಿಕೆ ಮಳೆ ೪೭೧.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ರಾಗಿಮುದ್ದೆ ಮುಖ್ಯ ಆಹಾರ. ಚಿತ್ರಾನ್ನ, ದೋಸೆ, ಅನ್ನ, ಉಪ್ಪಿಟ್ಟು, ರೊಟ್ಟಿ ಬಳಸುವವರಿದ್ದಾರೆ.

ಕರಿಯಮ್ಮನ ಊರಹಬ್ಬದ ಸಂದರ್ಭದಲ್ಲಿ ಪ್ರಾಣಿಬಲಿ, ಆರತಿ, ಬಾನ, ಉತ್ಸವ ನಡೆದರೆ ಜುಂಜಪ್ಪನ ಜಾತ್ರೆಯಲ್ಲಿ ಸಿಹಿ ಅಡಿಗೆ ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಸಾಂಪ್ರದಾಯಿಕ, ಆಧುನಿಕ ಬೇಸಾಯ ಪದ್ಧತಿ ಇದ್ದು ಬೇಸಾಯ, ಸಾಗಾಟಕ್ಕೆ ಎತ್ತಿನ ಬಂಡಿ, ಟ್ರ್ಯಾಕ್ಟರ್ ಬಳಸುತ್ತಾರೆ. ಸ್ಕೂಟರ್ ಬಳಕೆಯೂ ಗ್ರಾಮದಲ್ಲಿದೆ. ಶೇಂಗಾ, ರೇಷ್ಮೆ, ಹತ್ತಿ, ಸೂರ್ಯಕಾಂತಿ ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆಗಳು. ರಾಗಿ, ಭತ್ತ, ಜೋಳ, ತೊಗರಿ, ಅಲಸಂದೆ, ಹುರುಳಿ ದ್ವಿದಳ ಧಾನ್ಯಗಳನ್ನು ಆಹಾರ ಬೆಳೆಯಾಗಿ ಬೆಳೆಯುತ್ತಾರೆ. ಬೀಡಿ ಕಟ್ಟುವುದು, ಮುತ್ತುಗದ ಎಲೆಯಿಂದ ಊಟದ ಎಲೆ ಕಟ್ಟುವುದು ಈ ಗ್ರಾಮದ ಗೃಹಕೈಗಾರಿಕೆಯಾಗಿದೆ. ಮೂವರು ಸರ್ಕಾರಿ ನೌಕರರಿದ್ದು ಕಂದಾಯ, ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ, ತಾವರೆಕೆರೆ ಜಿಲ್ಲಾ ಪಂಚಯ್ತಿ ಕೇಂದ್ರವಾಗಿರುವ ಕಳುವರಹಳ್ಳಿಗೆ ಹೊಸೂರು ಗ್ರಾಮ ಪಂಚಾಯ್ತಿ ಕೇಂದ್ರವಾಗಿದೆ. ಹೊಸೂರು ಈ ಗ್ರಾಮದಿಂದ ಉತ್ತರಕ್ಕೆ ೨ ಕಿಮೀ ಅಂತರದಲ್ಲಿದೆ. ಡಿ.ಎಸ್. ಕೃಷ್ಣಮೂರ್ತಿ ಪ್ರಾಂಶುಪಾಲರಾಗಿದ್ದು ಕಾದಂಬರಿಗಳನ್ನು ರಚಿಸಿದ್ದಾರೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯನ್ನು ಹೊಂದಿದ್ದು ಒಟ್ಟು ೫ ಜನ ಸರ್ಕಾರಿ ನೌಕರರು ಈ ಗ್ರಾಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ (ನೀರಗಂಟಿ) ಶೇ.೬೦.೬ ಸಾಕ್ಷರತೆಯ ಪ್ರಮಾಣ ಹೊಂದಿದ್ದು ೪೮.೯% ಮಹಿಳೆಯರು, ೭೧.೮% ಪುರುಷರು ಸಾಕ್ಷರರಾಗಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಭಾಗ್ಯಜ್ಯೋತಿ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳೂ ಸೇರಿದಂತೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೬ ಕಿರಾಣಿ ಅಂಗಡಿಗಳಿವೆ. ೨ ಟೀ ಗೂಡಂಗಡಿ ಇದೆ.

ಗ್ರಾಮದ ಒಳಗೆ ಲಕ್ಷ್ಮೀದೇವಿ, ಕರಿಯಮ್ಮ, ತಿಮ್ಮಪ್ಪನ ದೇವಸ್ಥಾನಗಳಿವೆ. ಜುಂಜಪ್ಪನ ಆರಾಧನೆ ಪ್ರತಿ ಸೋಮವಾರ ವಿಶೇಷವಾಗಿ ನಡೆಯುತ್ತದೆ. ಕರಿಯಮ್ಮನ ಊರಹಬ್ಬ, ಬ್ಯಾಟೆ, ಬಾನ, ಆರತಿ, ಉತ್ಸವ ಜರುಗುತ್ತಿದ್ದು ಬಾಡೂಟ ಅಂದಿನ ವಿಶೇಷವಾಗಿದೆ. ಯುಗಾದಿ, ದೀಪಾವಳಿ, ಗೌರಿಹಬ್ಬ, ಕಾರಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

ಒಂದು ಅಕ್ಕಸಾಲಿಗರ ಮೂರು ಮನೆಗಳಿದ್ದು ಇವರು ಜುಂಜಪ್ಪನ ಹಾವು, ಚೇಳಿನ, ಬೆಳ್ಳಿ, ಹಿತ್ತಾಳೆ ಒಡವೆಗಳನ್ನು ಮಾಡಿ ಮಾರಾಟ ಮಾಡುತ್ತಾರೆ. ಒಂದು ಸಿಳ್ಳೆಕ್ಯಾತರ ಮನೆಯಿದ್ದು ನಾರಾಯಣಪ್ಪ ಸಿರಾ ಸೀಮೆಯ ತೊಗಲುಗೊಂಬೆ ಮೇಳದ ಅಪರೂಪದ ಕಲಾವಿದರು. ದಶಕಂಠ ರಾಮಾಯಣ, ಲವ-ಕುಶ ಸೇರಿದಂತೆ ಮಹಾಭಾರತದ ೧೫ ಕ್ಕೂ ಮಿಕ್ಕು ತೊಗಲುಗೊಂಬೆ ಪ್ರಸಂಗಗಳನ್ನು ಮಾಡುತ್ತಾರೆ. ತಾಯಿ, ತಂದೆ, ಸೋದರ ಕೃಷ್ಣಪ್ಪ ಎಲ್ಲರೂ ಕಲಾವಿದರು. ಇವರ ತಂದೆ ತೀರಿಕೊಂಡಿದ್ದಾರೆ. ತೊಗಲು ಗೊಂಬೆಗಳ ಒಂದು ಸಂಗ್ರಹ ಇವರ ಮನೆಯಲ್ಲಿದೆ. ತಳವಾರ ತಮ್ಮಣ್ಣ ೭೪ ಹಾಗೂ ಮಣೆಗಾರ ಕದುರಯ್ಯ ೭೨ ಇವರಿಬ್ಬರೂ ಜುಂಜಪ್ಪನ ಸಮಗ್ರ ಕಥೆ ಹೇಳುವ, ಕಾವ್ಯ ಹಾಡುವ ಅಪರೂಪದ ಕಲಾವಿದರು. ಇವರು ಹಾಡಿನ ಕಥಾಭಾಗವನ್ನು ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ 'ವೀರ ಜುಂಜಪ್ಪ ಸಮಗ್ರ ಕಥಾವಳಿ' ಸಂಗ್ರಹಿಸಿದ್ದಾರೆ. ತಮ್ಮಣ್ಣ ಉತ್ತಮ ಜನಪದ ಹಾಡುಗಾರರೂ ಆಗಿದ್ದು ಕೋಲುಪದ, ಕೋಲುಕುಣಿತ, ಗಣೆಯನ್ನೂ ಊದುತ್ತಿದ್ದ ಕಲಾವಿದರು. ಇವರು ೨೦೧೧ ರಲ್ಲಿ ದಿವಂಗತರಾದರು.

ಗ್ರಾಮದಲ್ಲಿ ದೀಪಾವಳಿ, ದಸರಾ, ಯುಗಾದಿ, ಶಿವರಾತ್ರಿ, ಗೌರಿಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

## ಕಂಬೇರಹಟ್ಟಿ

ಇದು ಬೇಚರಕ್ ಗ್ರಾಮ. ಸಿರಾದಿಂದ ೨೨ ಕಿಮೀ ದೂರದಲ್ಲಿ ಕಳುವರಹಳ್ಳಿ ಗ್ರಾಮದ ದಕ್ಷಿಣಕ್ಕೆ ೧ ಕಿಮೀ ದೂರದಲ್ಲಿದೆ. ವಿಖ್ಯಾತ ವೀರಜುಂಜಪ್ಪನ ಸಮಾಧಿ, ನಾಯಿಗುಡ್ಡೆ, ಜಲಧಿ ಬಾವಿ ಹಾಗೂ ಒಂದು ವೀರಗಲ್ಲು ಮತ್ತು ಮಾಸ್ತಿಕಲ್ಲು ಇದೇ ಭಾಗದಲ್ಲಿದೆ. ಕಂಬೇರು ಎಂಬುದು

ಕಾಡುಗೊಲ್ಲರ ಒಂದು ಬೆಡಗು. ಇವರಲ್ಲಿ ಜುಂಜಪ್ಪನ ತಾಯಿ ಚೆನ್ನಮ್ಮ ಹುಟ್ಟುತ್ತಾಳೆ. ಈಕೆ ಜುಂಜಪ್ಪನ ತಂದೆ ಕೆಂಗರುಮಲ್ಲೇಗೌಡನನ್ನು ವಿವಾಹವಾಗುತ್ತಾಳೆ. ಇವರಿಗೆ ಜುಂಜಪ್ಪ, ಮಾರಣ್ಣ, ಮೈಲಣ್ಣ ಹಾಗೂ ಮಾರಕ್ಕ ಎಂಬ ಹೆಣ್ಣುಮಗಳು ಜನಿಸುತ್ತಾಳೆ. ಜುಂಜಪ್ಪನ ದನಗಳು ಹೆಚ್ಚಿಕೊಂಡ ಕಾರಣದಿಂದ ಇವನ ಮೇಲೆ ಮತ್ಸರ ಬೆಳೆಸಿಕೊಂಡ ಕಂಬೇರಗೊಲ್ಲರು (ಜುಂಜಪ್ಪನ ಸೋದರಮಾವಂದಿರು) ಜುಂಜಪ್ಪನನ್ನು ತಮ್ಮ ಮನೆಯ ಹಬ್ಬದ ಔತಣಕ್ಕೆ ಆಹ್ವಾನಿಸಿ ಆಹಾರದಲ್ಲಿ ವಿಷ ಹಾಕಿ ಕೊಂದರೆಂದೂ ಅದರಂತೆ ಜುಂಜಪ್ಪ ಇಬ್ಬರು ತಮ್ಮಂದಿರು ಜುಂಜಪ್ಪನ ಸಾಕುನಾಯಿ ಜೂಲುನಾಯಿ ವಿಷ ಉಂಡು ತೀರಿಕೊಳ್ಳುತ್ತಾರೆ. ಆದರೆ ಜುಂಜಪ್ಪ ಉರಿಗಣ್ಣು ಬಿಟ್ಟು ವಿಷ ಉಣಿಸಿದ ತನ್ನ ಸೋದರಮಾವಂದಿರ ವಾಸಸ್ಥಳವಾದ ಕಂಬೇರ ಹಟ್ಟಿಯನ್ನು ಸುಟ್ಟು ನಾಶಮಾಡಿದನೆಂದು ಐತಿಹ್ಯ ಕಂಬೇರಹಟ್ಟಿಯ ಬಗೆಗಿದೆ. ಇಂದಿಗೂ ಜುಂಜಪ್ಪನ ಸಮಾಧಿಯ ಹಿಂಭಾಗದಲ್ಲಿ ಹಾಳು ಮನೆಗಳ ಅವಶೇಷವನ್ನು ಕಾಣಬಹುದು. ಕಂಬೇರಹಟ್ಟಿಯ ಸುತ್ತ ಕುರುಚಲು ಗಿಡ–ಮರ ಬೆಳೆದು ಇದಕ್ಕೆ ಹೊಂದಿಕೊಂಡಂತೆ ಹೊಸಹಳ್ಳಿಯ ಕೆರೆಯೂ ಇದೆ. ಕುರಿ, ಮೇಕೆಗಳ ಮೇವಿಗೆ ಪ್ರಶಸ್ತ ಸ್ಥಳವಾಗಿದೆ. ಇಂದು ಕಂಬೇರಹಟ್ಟಿಯ ಉತ್ತರಕ್ಕೆ ಜುಂಜಪ್ಪನ ಸಮಾಧಿ, ದೇವಾಲಯ ಎಡಬದಿಗೆ ಭಕ್ತರ ಪ್ರವಾಸಿ ಮಂಟಪ, ದೇವಾಲಯದ ಸುತ್ತ ಕಾಂಪೌಂಡ್ ಪೌಳಿ ಇರುತ್ತದೆ. ಇದರ ಉತ್ತರದ ಬಲಬದಿಗೆ ಸ್ವಲ್ಪ ದೂರದಲ್ಲಿ ನಾಯಿಗುಡ್ಡೆ ಇದ್ದು, ಇದು ಜುಂಜಪ್ಪನ ನಾಯಿಯ ಸಮಾಧಿ ಎಂದು ಇಲ್ಲಿಗೆ ಬರುವ ಭಕ್ತರೆಲ್ಲರೂ ನಾಯಿಗುಡ್ಡೆಗೆ ಒಂದೊಂದು ಕಲ್ಲು ಹಾಕುವುದು ಇಲ್ಲಿನ ಸಂಪ್ರದಾಯವಾಗಿದೆ. ಇಲ್ಲಿ ದೀಪಾವಳಿಯ ಸಂದರ್ಭದಲ್ಲಿ ಜುಂಜಪ್ಪನ ಬೃಹತ್ ಜಾತ್ರೆ ನಡೆಯುತ್ತದೆ. ದೀಪ ಏರಿಸುವ, ಕಾಡುಗೊಲ್ಲರ ದೇವರುಗಳ ಮೆರವಣಿಗೆ ನಡೆಯುತ್ತದೆ. ಈ ಸಂದರ್ಭದಲ್ಲಿ ಕಾಡುಗೊಲ್ಲರ ಸಂಸ್ಕೃತಿ ಉತ್ಸವವೂ ಜರುಗುತ್ತದೆ. ಯುಗಾದಿ ಹಬ್ಬದಂದು ಇಲ್ಲಿ ವಿಶೇಷ ಪೂಜೆ, ಉತ್ಸವವೂ ನಡೆಯುತ್ತದೆ. ಇಲ್ಲಿಂದ ಬೇವಿನಹಳ್ಳಿ, ಗೌಡಗೆರೆಗೆ ಕಚ್ಚಾರಸ್ತೆ ನಿರ್ಮಾಣವಾಗಿದೆ. ಕೊಳವೆ ಬಾವಿಯ ಮೂಲಕ ಕುಡಿಯುವ ನೀರಿನ ಸೌಕರ್ಯ ಏರ್ಪಡಿಸಲಾಗಿದೆ. ಪಕ್ಕದಲ್ಲಿ ಮಜ್ಜನದ ಬಾವಿ ಇದ್ದು ಇಲ್ಲಿ ಪುಣ್ಯಸ್ನಾನದ ವ್ಯವಸ್ಥೆ ಇರುತ್ತದೆ. ಇಲ್ಲಿಂದ ಉತ್ತರದಲ್ಲಿ ಅರ್ಧ ಕಿಮೀ ದೂರದಲ್ಲಿ ಕಲ್ಲುಕುಂಟೆ ಚಿತ್ರದೇವರ ಗುಡಿಯಿದ್ದು ಜುಂಜಪ್ಪನ ಮೆರವಣಿಗೆ ದೇವರು ಇಲ್ಲಿಗೆ ಬಂದು ಪೂಜೆ ಸಲ್ಲಿಸುವ ಸಂಪ್ರದಾಯವೂ ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ಬೇವಿನಹಳ್ಳಿ ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಯ್ತಿ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ.

## ಕಳುವರಹಳ್ಳಿ ಗೊಲ್ಲರಹಟ್ಟಿ

ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೨ ಕಿಮೀ ದೂರದಲ್ಲಿ ಕಳುವರಹಳ್ಳಿಗೆ ಹೊಂದಿಕೊಂಡಂತೆ ಅರ್ಧ ಕಿಮೀ ದೂರದಲ್ಲಿದೆ. ಇದೊಂದು ಬುಡಕಟ್ಟು ಗ್ರಾಮವಾಗಿದ್ದು ಕಾಡುಗೊಲ್ಲರ ೪೪ ಮನೆಗಳಿವೆ. ಒಂದು ಅಂಗನವಾಡಿ ಕೇಂದ್ರ, ನೀರಿನ ಕೈಪಂಪು, ಟ್ಯಾಂಕ್ ಇದೆ. ಇದೊಂದು ಮಜರೆ ಗ್ರಾಮವಾಗಿದ್ದು ೧೫೫೮ ವಿಸ್ತೀರ್ಣದ ಭೌಗೋಳಿಕ ಪ್ರದೇಶ ಹೊಂದಿದೆ. ಕೆಂಪು–ಬಿಳಿ ಮರಳು ಮಿಶ್ರಿತ ಮಣ್ಣನ್ನು ಹೊಂದಿರುವ ಇಲ್ಲಿನ ನೆಲದಲ್ಲಿ ಹತ್ತಿ, ಶೇಂಗಾ, ಸೂರ್ಯಕಾಂತಿ ಬೆಳೆಗಳನ್ನು ವಿಶೇಷವಾಗಿ ಬೆಳೆಯುತ್ತಾರೆ. ರೇಷ್ಮೆ ಬೆಳೆ, ರೇಷ್ಮೆ ಹುಳು ಸಾಕುವುದು, ಹುಣಸೆಹಣ್ಣಿನ ವ್ಯಾಪಾರ ಪ್ರಮುಖ ಆರ್ಥಿಕ ಬೆಳೆಯಾಗಿದೆ. ಕನ್ನಡ ಭಾಷೆಯ ಹೊರತು ಇವರಿಗೆ ಬೇರೆ ಭಾಷೆಯ ಸಂಪರ್ಕವಿಲ್ಲ. ಗುಡಿಸಲು ಮುಕ್ತ ಗೊಲ್ಲರಹಟ್ಟಿ ಎಂಬುದೇ ಇಲ್ಲಿನ ವಿಶೇಷ. ಮಣ್ಣಿನ, ಕಾಂಕ್ರೀಟ್ ಹಾಗೂ ಶೀಟ್ ಹೊದಿಸಿದ ಮನೆಗಳಿವೆ. ಜನತಾ, ಆಶ್ರಯ ಮನೆಗಳ ಫಲಾನುಭವಿಗಳು ಇಲ್ಲಿ ಹೆಚ್ಚಿನವರಿದ್ದು ಎಲ್ಲರೂ ವಸತಿ ಹೊಂದಿರುವವರಾಗಿದ್ದಾರೆ.

ವಾಡಿಕೆ ಮಳೆ ೪೭೧.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ತಿಂಡಿಯಾಗಿ ಉಪ್ಪಿಟ್ಟು, ದೋಸೆ, ಚಪಾತಿಯನ್ನು ವಿರಳವಾಗಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಒಂದು ಜುಂಜಪ್ಪನ ದೇವಸ್ಥಾನವಿದ್ದು ಇದೊಂದು ಮೆರವಣಿಗೆಯ ದೇವರು. ದೀಪಾವಳಿಯ ಸಂದರ್ಭದಲ್ಲಿ ವಿಶೇಷ ಉತ್ಸವ ನಡೆಯುತ್ತದೆ. ಗೌರಸಂದ್ರದ ಮಾರಮ್ಮನ ಎದುರೆತ್ತಿ ಬಾನ, ಮಡೆ, ಬ್ಯಾಟೆ, ಆರತಿ ಆಚರಣೆಗಳು ವಿಶೇಷವಾಗಿ ನಡೆಯುತ್ತವೆ. ಗೊಲ್ಲರಹಟ್ಟಿಯಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಇಬ್ಬರು ನೌಕರರಿದ್ದಾರೆ. ಮಾರಮ್ಮ ಸ್ತ್ರೀಶಕ್ತಿ ಕೇಂದ್ರವೂ ಇದೆ. ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರ ಹಾಗೂ ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಬೇವಿನಹಳ್ಳಿ ತಾಲ್ಲೂಕು ಪಂಚಾಯ್ತಿಗೆ ಹೊಸೂರು ಗ್ರಾಮ ಪಂಚಾಯ್ತಿಯ ವ್ಯಾಪ್ತಿಗೆ ಒಳಪಡುವ ಈ ಹಟ್ಟಿ ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರನ್ನು ಹೊಂದಿರುವುದು ವಿಶೇಷ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ

ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಗೂಡಂಗಡಿ ಇದೆ.

## ಕಲ್ಲುಕುಂಟೆ

ಕಲ್ಲುಕುಂಟೆ ಒಂದು ಬೇಚರಕ್ ಗ್ರಾಮ. ಸಿರಾ ತಾಲ್ಲೂಕು ಗೌಡಗೆರೆ ಹೋಬಳಿಗೆ ಸೇರಿದ ಬೇವಿನಹಳ್ಳಿ ಸರ್ವೆ ನಂ ಭೂ ವ್ಯಾಪ್ತಿಯಲ್ಲಿ ಈ ಹಳೇಊರು ಬರುತ್ತದೆ.

ಸಿರಾ–ಚಂಗಾವರ ರಸ್ತೆಯಲ್ಲಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೭ ಕಿಮೀ ದೂರದಲ್ಲಿ ಈ ಗ್ರಾಮ ಕಂಡುಬರುತ್ತದೆ. ಬೇವಿನಹಳ್ಳಿಯ ಬೆಸ್ಕಾಂ ಪವರ್‌ಹೌಸ್ ಬಳಿ ಎಡಭಾಗದಲ್ಲಿ ಒಂದೂವರೆ ಕಿಮೀ ದೂರದಲ್ಲಿ ಕಲ್ಲುಕುಂಟೆ ಇದೆ. ಇಲ್ಲಿಂದ ಅರ್ಧ ಕಿಮೀ ದೂರದಲ್ಲಿ ಮೌಖಿಕ ಪರಂಪರೆಯ ಜನಪದ ಮಹಾಕಾವ್ಯವಾದ ಸಾಂಸ್ಕೃತಿಕ ವೀರ ಜುಂಜಪ್ಪನ ಸಮಾಧಿಯಿದ್ದು ಪವಿತ್ರ ಯಾತ್ರಾಸ್ಥಳವಾಗಿ ಸರ್ವ ಜನಾಂಗದವರಿಗೂ ಹಾವು–ಚೇಳು, ವಿಷಜಂತುವಿನ ಉಪಟಳದಿಂದ ಪಾರಾಗಲು ಜುಂಜಪ್ಪನಿಗೆ ನಡೆದುಕೊಳ್ಳುವ, ಹರಕೆ ಒಪ್ಪಿಸುವ ಸಂಪ್ರದಾಯವಿದೆ.

ಕಲ್ಲುಕುಂಟೆ ಒಂದು ಬೇಚಾರಕ್ ಗ್ರಾಮವಾಗಿದೆ. ಹಿಂದೆ ಈ ಭಾಗದಲ್ಲಿ ಮನೆಗಳಿದ್ದ ಅವಶೇಷ ಕಂಡುಬರುತ್ತದೆ. ಕಾಡುಗೊಲ್ಲರ ಮೂಲದೈವ ಚಿತ್ರದೇವರ ಮೂಲಗುಡಿ ಇರುವುದು ಇದೇ ಸ್ಥಳದಲ್ಲಿ. ಕಲ್ಲುಗಳಿಂದ ಸುಸಜ್ಜಿತವಾಗಿ ಕಟ್ಟಿರುವ ಕಟ್ಟಡ ಶಿಥಿಲವಾಗಿದೆ. ಕಾಂಪೌಂಡ್ ವಿಶಾಲವಾಗಿದೆ. ಬಿಲ್ವಪತ್ರೆ ಮರಗಳು ಆಕ್ರಮಿಸಿಕೊಂಡಿವೆ. ಇದನ್ನು ಕಲ್ಲುಕುಂಟೆ ಚಿತ್ರದೇವರು ಎಂದು ಕರೆಯಲಾಗುವುದು.

ಕಾಡುಗೊಲ್ಲರ ಎಲ್ಲ ಹಟ್ಟಿಗಳಲ್ಲಿ ಚಿತ್ರದೇವರ ಗುಬ್ಬ, ಪೌಳಿ ಇರುತ್ತದೆ. ಮನೆಗಳಲ್ಲಿ ಮೊದಲು ಹುಟ್ಟುವ ಮಗುವಿಗೆ ಅದು ಹೆಣ್ಣಾಗಲಿ ಗಂಡಾಗಲಿ ಚಿತ್ರಯ್ಯ, ಚಿತ್ರಮ್ಮ ಎಂದು ಕರೆಯುವುದು ವಾಡಿಕೆಯಾಗಿದೆ. ಕಾಡುಗೊಲ್ಲರ ಜನಪದ ಕಥೆ, ಖಂಡಕಾವ್ಯ, ಮಹಾಕಾವ್ಯ, ಕಥನ ಗೀತೆಗಳಲ್ಲಿ 'ಕಲ್ಲುಕುಂಟೆ ಚಿತ್ರದೇವರ ನೆನೆದೇವು' ಎಂಬ ಸೊಲ್ಲು ಮೊದಲಿಗೆ ಪ್ರಕಟವಾಗುತ್ತದೆ. ಈ ಪರಿಸರದಲ್ಲಿ ಹಿಂದೆ ಮನೆಗಳಿದ್ದ ಲಕ್ಷಣಗಳು ಕಂಡುಬರುತ್ತವೆ. ಯಾವುದೇ ಸಂದರ್ಭದಲ್ಲಿ ಇಲ್ಲಿಂದ ಊರುಬಿಟ್ಟು ಹೋಗಿರುವ ಸಂಭವವಿದೆ. ಮತ್ತೆ ಈ ಪರಿಸರದಲ್ಲಿ ಮನೆಗಗಳು ನಿರ್ಮಾಣವಾಗತೊಡಗಿವೆ. ಮದ್ದೇನಹಳ್ಳಿ ರಾಮಕೃಷ್ಣಪ್ಪ ಎಂಬುವವರು ಈ ದೇವಾಲಯದ ಬಳಿ ಮನೆ ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ತೋಟಗಾರಿಕೆ, ಕಲ್ಲಂಗಡಿ ಸೀಡ್ಸ್, ಕರ್ಬೂಜ ಬೆಳೆಯುತ್ತಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಬೇವಿನಹಳ್ಳಿ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕ್ಷೇತ್ರದ ವ್ಯಾಪ್ತಿಗೆ ಈ ಬೇಚರಕ್ ಗ್ರಾಮ ಸೇರಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ.

## ಕಗ್ಗಲಡು

ಕಗ್ಗಲಡು ಒಂದು ಪ್ರಾಚೀನ ಸ್ವರೂಪ ಹೋಲುವ ಗ್ರಾಮವಾಗಿದ್ದು ಸಿರಾ–ಚಂಗಾವರ ರಸ್ತೆಯಲ್ಲಿ ಸಿರಾ ತಾಲ್ಲೂಕು ಕೇಂದ್ರದಿಂದ ೯ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಒಟ್ಟು ಭೌಗೋಳಿಕ ವಿಸ್ತೀರ್ಣ ೭೬೩.೮೬. ಕಗ್ಗಲಡು ಊರ ಸುತ್ತಲೂ ಮುರಿದು ಬಿದ್ದ ಕೋಟೆಯ ಅವಶೇಷ. ಊರ ಹೊರಾಂಗಣದಲ್ಲಿ ತಾವರೆಕೆರೆ–ಚಂಗಾವರ ರಸ್ತೆಯ ಲಿಂಕ್ ರಸ್ತೆಗೆ ಆತುಕೊಂಡಂತೆ ಒಂದು ಗುಂಬ ಮಾದರಿಯ ಕೋಟೆ ಇಂದಿಗೂ ಇದೆ. ಇದು ಕಗ್ಗಲಡು ಗ್ರಾಮದ ಹಿರಿಮೆ, ಐತಿಹಾಸಿಕತೆ ಸಾರುವ ಸಂಕೇತ ಎಂದು ಊರಿನ ಹಿರಿಕ, ಕಲಾವಿದ ರಾಮಕೃಷ್ಣಪ್ಪ ಅಭಿಪ್ರಾಯಪಡುತ್ತಾರೆ.

ವಿಜಯನಗರ ಕಾಲದ ಎರಡು ವೀರಗಲ್ಲುಗಳು ಈ ಗ್ರಾಮದ ಆಂಜನೇಯ ಹಾಗೂ ಪಾತಲಿಂಗೇಶ್ವರ ದೇವಾಲಯಗಳ ಬದಿಗೆ ನಿಲ್ಲಿಸಲಾಗಿದೆ. ಇವು ಈ ಎರಡೂ ವೀರಗಲ್ಲುಗಳು ವಿಜಯನಗರದ ಅರಸರ ಕಾಲದವು ಎಂದು ಹೇಳಲಾಗುತ್ತಿದೆ. (೧೫–೧೬ ನೇ ಶತಮಾನ) ವೀರಗಲ್ಲುಗಳು ಕಲಾತ್ಮಕತೆಯಿಂದ ಕೂಡಿದ್ದು ಸ್ಥಳೀಯ ಕಾಡುಗಲ್ಲು ಒರಟು ಬಂಡೆಯಿಂದ ಕೆತ್ತಲಾಗಿದೆ. ವೀರನೊಬ್ಬ ಬಲಗೈಯಲ್ಲಿ ಕಠಾರಿ ಹಿಡಿದು ನಿಂತ ಭಂಗಿ, ನವುರಾಗಿ ಹಿಂದಕ್ಕೆ ಕಟ್ಟಿದ ಮುಡಿ, ಅರ್ಧ ತೋಳಿನ ಅಂಗಿ, ಕೈ ಕಡಗ, ಸೊಂಟಕ್ಕೆ ಬಿಗಿದ ಪಟ್ಟಿ ಆಭರಣ ಬಲಗೈಯಲ್ಲಿ ಈಟಿಯನ್ನು ಹಿಡಿದ ಭಂಗಿ ಇದು ವೀರಗಲ್ಲಿನ ಸ್ವರೂಪ ಸೂಚಿಸುತ್ತದೆ. ಸಿರಾ ಶಾಸನ–೫೩ ರಲ್ಲಿ ಈ ಗ್ರಾಮದ ಉಲ್ಲೇಖವಿದ್ದು ಕಗ್ಗಲಡುವಿನ ತಿಮ್ಮಯ್ಯನ ಮಕ್ಕಳಿಗೆ ಭೂಮಿಯನ್ನು ಮಾನ್ಯ ಕೊಟ್ಟ ಅಸ್ಪಷ್ಟ ವಿವರಗಳಿವೆ. ಕಾಲ ೧೫೮೦.

ಕಗ್ಗಲಡು ಗ್ರಾಮ ನಾಮದ ನಿಷ್ಪತ್ತಿ ಖಚಿತವಾಗಿ ತಿಳಿಯುತ್ತಿಲ್ಲ. ಗ್ರಾಮದವರೇ ವ್ಯಾಖ್ಯಾನಿಸುವ ಪ್ರಕಾರ ಇದೊಂದು ಪುರಾತನ ವಿದ್ಯಾ ಕೇಂದ್ರವಾಗಿದ್ದು ಆ ಕಾರಣದಿಂದಲೇ ಈ ಹೆಸರು ಬಂದಿದೆ ಎಂದು ಹೇಳುತ್ತಾ ಕಗ್ಗ ಎಂಬುದು ಅಚ್ಚಕನ್ನಡ ದೇಶೀ ಶಬ್ದ ಕಾವ್ಯ ಎಂದು, ಲಡು ಎಂದರೆ ಪುಸ್ತಕ, ಹೊತ್ತಿಗೆ ಎಂಬ ಹೆಸರಿರುವುದರಿಂದ ಇದೊಂದು ಕವಿಗಳ ಊರು. ಕಾವ್ಯಾಭ್ಯಾಸದ ಗ್ರಾಮ, ವಿದ್ಯಾಗ್ರಾಮ ಎಂದು ಹೇಳಲಾಗುತ್ತದೆ.

ಮೌಖಿಕ ಜುಂಜಪ್ಪನ ಕಾವ್ಯದಲ್ಲಿ ವೀರ ಜುಂಜಪ್ಪನಿಗೂ ಸಿರ್ಯಾದ ಕಸ್ತೂರಿ ರಂಗಪ್ಪನಿಗೂ ಕಗ್ಗಲಡು ಏಣಿನಲ್ಲಿ ಘೋರ ಯುದ್ಧವಾಗಿ ರಂಗಪ್ಪನಾಯಕ ಸೋತು ಜುಂಜಪ್ಪನಿಗೆ ಶರಣಾದ ಪ್ರಸಂಗದ ವಿವರವಿದೆ.

ಗ್ರಾಮದ ಹಿಂಭಾಗಕ್ಕೆ ಪೂರ್ವದಿಕ್ಕಿಗೆ ಕೆರೆಯಿದ್ದು ಕಪ್ಪು ಮಿಶ್ರಿತ ಎರೆ ಮಣ್ಣು ಹೊಂದಿದೆ. ದಿಣ್ಣೆ ಕಪ್ಪು–ಕೆಂಪು ಮಿಶ್ರಿತ ಮರಳು ಮಣ್ಣು ಹೊಂದಿದೆ. ಈ ಗ್ರಾಮದ ಬಲಭಾಗದಲ್ಲಿ ಒಂದು ಸ್ಮಾರಕವಿದ್ದು ಇಲ್ಲಿ ಶಂಖ, ಚಕ್ರವಿರುವ ಒಂದು ಕಲ್ಲು ಇದ್ದು ಇದನ್ನು ಗೆದ್ದವರ ಗುಡ್ಡೆ ಎಂದು ಕರೆಯುತ್ತಾರೆ. ದಾಸಯ್ಯ ಊರ ಮುಖಂಡರಿಬ್ಬರ ನಡುವೆ ಸತ್ಯಾಸತ್ಯತೆಯ ಪರೀಕ್ಷೆಯಲ್ಲಿ ದಾಸಯ್ಯ ಗೆದ್ದು, ಆ ಕುರುಹಾಗಿ ಕಂಬ ಹಾಕಲಾಗಿದೆ ಎಂಬ ಐತಿಹ್ಯ ಈ ಗದ್ದುಗೆಯ ಬಗೆಗಿದೆ.

ಹಸು, ಎಮ್ಮೆ, ಕುರಿ, ಮೇಕೆ ಸಾಕಾಣಿಕೆ ಈ ಗ್ರಾಮದಲ್ಲಿ ಕಂಡುಬಂದರೆ ಈ ಊರಿಗೆ ಹೊರಭಾಗದಲ್ಲಿ ಕಾಡುಹಂದಿ, ನರಿ, ಜಿಂಕೆ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಕೊಕ್ಕರೆಧಾಮ ಎಂದೇ ಖ್ಯಾತವಾಗಿರುವ ಈ ಹಳ್ಳಿ ಮೂರು ಕೆರೆಗಳ ಅಂಚಿಗೆ ಇರುವುದರಿಂದ ಹುಣಸೆ, ಬೇವು, ಹೊಂಗೆ, ಜಾಲಿ ಮರಗಳು ವಿಶೇಷವಾಗಿ ಬೆಳೆದಿರುವುದರಿಂದ ಇಲ್ಲಿಗೆ ಮೊಟ್ಟೆ ಹಾಗೂ ಸಂತತಿ ಅಭಿವೃದ್ಧಿಗಾಗಿ ಗ್ರೇಹೆರಾನ್, ಪೇಂಟೆಡ್ ಸ್ಟಾರ್ಕ್ ಕೊಕ್ಕರೆಗಳು ಇಲ್ಲಿಗೆ ಬಂದು ಗೂಡು ಕಟ್ಟಿಕೊಂಡು ಮರಿ ಮಾಡಿ, ಮರಿ ಬಲಿತು ಹಾರುವಂತಾದ ನಂತರ ಈ ಕೊಕ್ಕರೆಗಳು ಇಲ್ಲಿಂದ ಹಿಂತಿರುಗುತ್ತವೆ. ಗ್ರಾಮಸ್ಥರು ಈ ಪಕ್ಷಿಗಳಿಗೆ ತೊಂದರೆಯಾಗದಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾರೆ. ವಿಶೇಷವಾಗಿ ಡಿಸೆಂಬರ್–ಫೆಬ್ರವರಿ ತಿಂಗಳಲ್ಲಿ ಕೊಕ್ಕರೆಗಳ ವಾಸವಿರುತ್ತದೆ.

ವಾಡಿಕೆ ಮಳೆ ೪೬೩ ಮಿಮೀ ಆಗಿದ್ದು ಉಷ್ಣಾಂಶ ೩೬–೩೮ ಡಿಗ್ರಿ ಹಾಗೂ ಚಳಿ ೯–೧೦ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಮೂರು ತೆರೆದ ಬಾವಿಗಳಿದ್ದು ಒಣಗಿಹೋಗಿವೆ. ೪೮ ನಲ್ಲಿ ಸೌಕರ್ಯವನ್ನು ಕೊಳವೆ ಬಾವಿಗಳಿಂದ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ.

ಆದಿಕರ್ನಾಟಕ ಜನಾಂಗದವರು ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗ, ಗೊಲ್ಲರು, ಈಡಿಗ, ಬೇಡರು, ಕುರುಬರು, ಆದಿದ್ರಾವಿಡ, ಮಡಿವಾಳ, ಉಪ್ಪಾರ ಜನಾಂಗದ ಕುಟುಂಬಗಳಿವೆ. ಒಟ್ಟು ೨೧೭ ಮನೆಗಳಿದ್ದು ಕಾಂಕ್ರೀಟ್, ಕಡಪಾ ಕಲ್ಲುಹಾಸು, ಮಣ್ಣಿನ, ಹೆಂಚಿನ ಮನೆಗಳಿವೆ. ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ಯೋಜನೆಯ ಸೌಲಭ್ಯ ಪಡೆದ ೧೯ ಮನೆಗಳು, ಭಾಗ್ಯಜ್ಯೋತಿ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನಗಾಡಿ, ಕಾರು, ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳು ಇವೆ. ಶೇಂಗಾ, ರಾಗಿ, ಭತ್ತ, ಮೆಕ್ಕೆಜೋಳ, ಸೂರ್ಯಕಾಂತಿ, ಹತ್ತಿ ಮುಖ್ಯ ಬೆಳೆ. ಹೈನುಗಾರಿಕೆಯೂ ಇಲ್ಲಿದ್ದು ಒಂದು ಹಾಲಿನ ಕೇಂದ್ರವಿದ್ದು ಸರಾಸರಿ ೫೦೦ ಲೀ. ಹಾಲು ಸಂಗ್ರಹಿಸಲಾಗುತ್ತಿದೆ. ಈ ಗ್ರಾಮದ ಪೂರ್ವಭಾಗದಲ್ಲಿ ಒಂದು ಇಟ್ಟಿಗೆ ಫ್ಯಾಕ್ಟರಿ ಇದ್ದು ಹತ್ತಾರು ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ ಹಾಗೂ ಗೌಡಗೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಈ ಗ್ರಾಮ ಒಳಗೊಂಡಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಈ ಗ್ರಾಮದಲ್ಲಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದಲ್ಲಿ ೭ ಜನ ಸರ್ಕಾರಿ ನೌಕರರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಅಂಗಡಿಗಳು, ಟೀ ಅಂಗಡಿಗಳಿವೆ. ವಸತಿ ರಹಿತ ೬ ಕುಟುಂಬಗಳಿವೆ.

ಆಂಜನೇಯ, ಮಹಾಲಿಂಗೇಶ್ವರ, ಪಾತಲಿಂಗ, ಲಕ್ಷ್ಮೀನರಸಿಂಹ ದೇವರುಗಳಂತೆ ಕರಿಯಮ್ಮ, ಮಾರಮ್ಮ ಈ ಗ್ರಾಮದ ಶಕ್ತಿದೇವತೆಗಳು. ಗ್ರಾಮದ ಹೊರಗೆ ರಸ್ತೆ ಬದಿ ಭೂತಪ್ಪನ ಗುಡಿಇದ್ದು ಶನಿವಾರ ವಿಶೇಷ ಪೂಜೆ ನೆರವೇರುತ್ತದೆ.

ಮಾರಮ್ಮನ ಹಬ್ಬ ಊರ ಹಬ್ಬವಾಗಿ ಆರತಿ, ಬಾನ, ಬಲಿ ನಡೆಯುತ್ತದೆ. ದಸರಾ ಉತ್ಸವದಲ್ಲಿ ಎಲ್ಲ ದೇರರುಗಳ ಮೆರವಣಿಗೆ ಉತ್ಸವ ಇರುತ್ತದೆ. ರಾಮಕೃಷ್ಣಪ್ಪ ಎಂಬ ಅಂಗವಿಕಲ ಕಲಾವಿದ ಜನಪದ ಸಂಗೀತ ತತ್ವಪದ ನಾಯಕರಾಗಿದ್ದು ಭಜನೆ ಗುರುವಾಗಿ ಹಾಡುಗಾರರ ಒಂದು ತಂಡ ಕಟ್ಟಿ ಸಿರಾ ತಾಲ್ಲೂಕಿನಾದ್ಯಂತ ಕಾರ್ಯಕ್ರಮ ನೀಡುವ ಮೂಲಕ ಹೆಸರಾಗಿದ್ದಾರೆ. ಗೌಡಗೆರೆ ಪಂಚಾಯ್ತಿಗೆ ಸೇರಿದ ಒಬ್ಬರು ಸದಸ್ಯರಿದ್ದಾರೆ. ಶೈಕ್ಷಣಿಕವಾಗಿ ಸಿರಾ–ಮಕ್ಕನಹಳ್ಳಿಗೆ ಬಂದು ಹೋಗುವುದು ಈ ಗ್ರಾಮದ ಬವಣೆಯಾಗಿದೆ.

ಯುಗಾದಿ, ದೀಪಾವಳಿ, ದಸರಾ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕರೇಕ್ಯಾತನಹಳ್ಳಿ

ಕರೇಕ್ಯಾತನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೦ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಸಿರಾ, ಮದಲೂರು, ಬರಗೂರು ರಸ್ತೆಯಲ್ಲಿದ್ದು ಇದರ ಭೌಗೋಳಿಕ ವಿಸ್ತೀರ್ಣ ೧೯೩.೯೩ ಹೆಕ್ಟೇರ್ ಆಗಿದೆ. ಕೆಂಪು ಮರಳು ಮಿಶ್ರಿತ ಭೂಮಿಯಾಗಿದ್ದು ಶೇಂಗಾ ಬೆಳೆಗೆ ಉತ್ಕೃಷ್ಟ ಭೂಮಿ. ಕುರುಚಲು ಗಿಡ, ಪೊದೆ ಇರುವುದರಿಂದ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಹಂದಿ, ಮೊಲ, ಜಿಂಕೆ ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ, ಎತ್ತು ಹಾಗೂ ನಾಯಿಗಳು ಸಾಕುಪ್ರಾಣಿಗಳಾಗಿವೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ವಾಡಿಕೆ ಮಳೆ ೪೨೪ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಬರ, ಬಿಸಿಲಿನ ಊರು ರೈತರು ಮಳೆ ನೀರು ಸಾಕಾಗದೆ ಕೊಳವೆ ಬಾವಿಗಳ ಆಶ್ರಯದಲ್ಲಿ ಉಪ ವ್ಯವಸಾಯ ಮಾಡುತ್ತಿದ್ದಾರೆ. ೩೬ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೧೦ ಚಿಕ್ಕ ಟ್ಯಾಂಕ್ ಇದ್ದು, ೨ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಇವರ ಮೂಲದೈವ ವೀರಕ್ಯಾತರಾಯನ ದೇವಾಲಯವಿದೆ. ಕಪ್ಪು ಶಿಲೆಯ ಮೂರ್ತಿಯ ಈ ದೇವರನ್ನು ಕರೇಕ್ಯಾತ ಎಂತಲೂ ಕರೆದು ಈ ಗ್ರಾಮದ ಹೆಸರಿನ ಮೂಲಕ್ಕೂ ಕಾರಣವಾಗಿದೆ.

ಆದಿಕರ್ನಾಟಕ, ಗೊಲ್ಲರು, ಮಡಿವಾಳ ಇಲ್ಲಿ ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮನೆಭಾಷೆಯಾಗಿದೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಸ್ವರೂಪದ ೧೨೪ ಮನೆಗಳಿದ್ದು ೫೮೬ ಜನಸಂಖ್ಯೆ ಹೊಂದಿದ್ದಾರೆ. ೩೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಇಲ್ಲಿನ ಮನೆಗಳು ಆಶ್ರಯ, ಜನತಾ, ಇಂದಿರಾ ಆವಾಸ್, ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಪ್ರಯೋಜನ ಪಡೆದಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿ, ಆಧುನಿಕವಾದ ಟ್ರ್ಯಾಕ್ಟ್, ಟೆಂಪೋ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಭತ್ತ, ಜೋಳ, ಅಲಸಂದೆ, ತೊಗರಿ ಬೆಳೆಯುತ್ತಾರೆ. ಸೂರ್ಯಕಾಂತಿ, ಹತ್ತಿ ಬೆಳೆಯಿದೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ ಇದೆ. ಹುಣಸೆಹಣ್ಣು, ಕುರಿ ವ್ಯಾಪಾರವಿದೆ. ಶಿಕ್ಷಕರು, ಇಂಜಿನಿಯರ್ ಸೇರಿದಂತೆ ೬ ಜನ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಬೀಡಿ ಸುತ್ತುವುದು ಮೊದಲಾದ ಉಪಕಸುಬಿದೆ.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಹಂದಿಕುಂಟೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಇಬ್ಬರು ಈ ಗ್ರಾಮದ ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ೪ ಸ್ತ್ರೀಶಕ್ತಿ ಕೇಂದ್ರ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳಾ ಸಬಲೀಕರಣದಲ್ಲಿ ತೊಡಗಿದ್ದಾರೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೩೭ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೮.೫ ರಷ್ಟಿದೆ. ೩ ಜನ ಶಿಕ್ಷಕರಿದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಕಾಡುಗೊಲ್ಲರ ಪ್ರತ್ಯೇಕ ಬಡಾವಣೆಯಿದ್ದು ಅಲ್ಲಿ ತಿಮ್ಮಪ್ಪ, ಚಿತ್ರದೇವರ ಪೌಳಿಗಳಿವೆ. ಗ್ರಾಮದಲ್ಲಿ ಮೂಲದೈವ ಕ್ಯಾತರಾಯ ಇದನ್ನು ಅಜ್ಜಯ್ಯ ಎಂಬ ಹೆಸರಿನಲ್ಲಿಯೂ ಕರೆಯುತ್ತಾರೆ. ಆಂಜನೇಯ, ಕರಿಯಮ್ಮ, ಮಾರಮ್ಮ ದೇವಾಲಯಗಳಿವೆ. ಮಾರಮ್ಮನ ಊರ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ವಿಶೇಷವಾಗಿ ಯುಗಾದಿ, ದಸರಾ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ರಾಮನವಮಿ ಹಬ್ಬವನ್ನು ಆಚರಿಸುತ್ತಾರೆ. ಸಿರಾ ಬದನೂರು, ಮದಲೂರು ಮಾರ್ಗವಾಗಿ ರಸ್ತೆ, ಬಸ್ ಸಂಚಾರವಿದೆ.

## ಕೆರೆಯಾಗಲಹಳ್ಳಿ

ಈ ಗ್ರಾಮವು ನಾದೂರು ಗ್ರಾಮದ ಮಜರೆ ಗ್ರಾಮವಾಗಿದ್ದು ನಾದೂರಿಗೆ ೨ ಕಿಮೀ ದೂರ ಹಾಗೂ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಸಿರಾ–ಅಮರಾಪುರ ಮುಖ್ಯ ರಸ್ತೆಯಲ್ಲಿ ಸಿರಾದಿಂದ ೧೬ ಕಿಮೀ ದೂರದಲ್ಲಿದೆ. ಈ ಗ್ರಾಮದ ಉತ್ತರಕ್ಕೆ ಗ್ರಾಮಕ್ಕೆ ಹೊಂದಿಕೊಂಡಂತೆ ಕೆರೆಯೊಂದು ಇದ್ದು

ಅದು ಗ್ರಾಮದ ನೀರಿಗೆ ಬಹುತೇಕ ಆಶ್ರಯವಾಗಿದೆ. ಈ ಕಾರಣದಿಂದಲೇ ಈ ಗ್ರಾಮಕ್ಕೆ ಕೆರೆಯ ಮುಂದಿನ ಗ್ರಾಮ ಕೆರೆಯಾಗಲಹಳ್ಳಿ ಎಂದು ಜನಪದರು ಕರೆದಿದ್ದಾರೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ನಾದೂರು ಭೂವಿಸ್ತೀರ್ಣದೊಂದಿಗೆ ೨೫೪೩.೮೪ ಹೆಕ್ಟೇರ್‌ನಲ್ಲಿ ಸೇರ್ಪಡೆಯಾಗಿದೆ. ಕೆಂಪು, ಕಂದು ಮಿಶ್ರಿತ ಮರಳು ಈ ಗ್ರಾಮದ ಬಹುತೇಕ ನೆಲದ ಸ್ವರೂಪವಾಗಿದ್ದು ವಿಶೇಷವಾಗಿ ಶೇಂಗಾ, ಹತ್ತಿ, ರಾಗಿ, ಅವರೆ, ಅಲಸಂದೆ, ತೊಗರಿ ಬೆಳೆಗಳನ್ನು ಬೆಳೆಯುತ್ತಾರೆ. ಕಾಡಿನ ಪರಿಸರವಿದ್ದು ಇಲ್ಲಿ ನರಿ, ತೋಳ, ಮುಂಗುಸಿ, ಕಡವೆ, ಮೊಲ ಕಂಡುಬರುವ ಕಾಡುಪ್ರಾಣಿಗಳಾಗಿವೆ. ಅಂತೆಯೇ ಕಾಗೆ, ಗೊರವಂಕ, ಗಿಳಿ, ಗುಬ್ಬಚ್ಚಿ, ಕೋಗಿಲೆ ಕಂಡುಬರುತ್ತವೆ. ವಿಶೇಷವಾಗಿ ಗ್ರಾಮದಲ್ಲಿ ನಾಟಿ ಕೋಳಿಯನ್ನು ಸಾಕಲಾಗುತ್ತದೆ. ಕೃಷಿಗಾಗಿ ಎತ್ತು, ಹಸು, ಬಳಕೆಯಾದರೆ ಹಾಲಿಗೆ ಸೀಮೆಹಸು ಸಾಕಲಾಗುತ್ತದೆ. ಸರಾಸರಿ ವಾಡಿಕೆ ಮಳೆ ೪೬೫ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೦ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮದ ಪೂರ್ವಕ್ಕೆ ದೊಡ್ಡಜ್ಜನ ಹಳ್ಳವಿದೆ. ಇದು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಚಿಲುಮೆಯ ಮೂಲಕ ದನಕರು ಕುಡಿಯುವ ನೀರನ್ನು ಒದಗಿಸಿಕೊಳ್ಳುತ್ತಾರೆ. ಊರಿಗೆ ಆಶ್ರಯವಾಗಿ ದೊಡ್ಡ ಕೆರೆಯಿದ್ದರೂ ತುಂಬುವುದು ವಿರಳ. ಕೆರೆ ತುಂಬಿದರೆ ಹೆಚ್ಚು ಭತ್ತ ಬೆಳೆಯುತ್ತಾರೆ. ಇಲ್ಲದಿದ್ದರೆ ರಾಗಿ, ಮೆಕ್ಕೆಜೋಳ, ತೊಗರಿ, ಹೆಸರುಕಾಳು ಬೆಳೆಗಳನ್ನು ಬೆಳೆಯುತ್ತಾರೆ. ಕುಡಿಯುವುದಕ್ಕೆ ಗ್ರಾಮಪಂಚಾಯ್ತಿ ಮೂಲಕ ೨ ಕೈಪಂಪು ಹಾಗೂ ೨ ಮಿನಿ ಟ್ಯಾಂಕ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

ಗ್ರಾಮದಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಆದಿ ಕರ್ನಾಟಕ, ವೈಶ್ಯರು, ಸಾದರು, ಬ್ಯಾಡನಾಯಕರು, ಕುಂಬಾರ ಸಣ್ಣ ಸಮುದಾಯವಾಗಿದೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ನಾಡಹೆಂಚಿನ ಒಟ್ಟು ೮೭ ಮನೆಗಳಿದ್ದು ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ, ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳಿದ್ದಾರೆ. ೫೧೪ ಜನಸಂಖ್ಯೆ ಇದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನಗಾಡಿ ಸಾಂಪ್ರದಾಯಿಕ ವಾಹನವಾದರೆ ಟೆಂಪೋ, ಲಾರಿ, ಟ್ರ್ಯಕ್ಟರ ಆಧುನಿಕ ವಾಹನವಾಗಿದೆ. ಶೇಂಗಾ, ರಾಗಿ ಮುಖ್ಯ ಬೆಳೆ. ವ್ಯಾಪಾರೀಕರಣಕ್ಕಾಗಿ ರೇಷ್ಮೆ, ಸೂರ್ಯಕಾಂತಿ, ಹುಣಸೆಹಣ್ಣು ಬಳಕೆಯಲ್ಲಿರುವ ಬೆಳೆಗಳು. ವಿರಳವಾಗಿ ಸೇವಂತಿಗೆ, ಕಾಕಡ ಹಾಗೂ ಕನಕಾಂಬರ ಹೂ ಬೆಳೆಯಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ, ನಾದೂರ ಜಿಲ್ಲಾ ಪಂಚಾಯ್ತಿ ಹಾಗೂ ಹೆಂದೊರೆ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ಒಟ್ಟು ೫೪ ಮಕ್ಕಳು, ೩ ಜನ ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಗ್ರಾಮದಲ್ಲಿ ಒಂದು ಉಪಆರೋಗ್ಯ ಕೇಂದ್ರವಿದ್ದು ಆರೋಗ್ಯ ಕಾರ್ಯಕರ್ತೆ ಇದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಅಂಗಡಿ, ಟೀ ಅಂಗಡಿಗಳಿವೆ.

ಈ ಗ್ರಾಮದ ಪೂರ್ವಭಾಗದ ಹೊಲದಲ್ಲಿ ೧ ವೀರಗಲ್ಲು ಇದ್ದು ಇದು ತುರುಗೋಳ್ ಸಂಬಂಧಿ ಕಲ್ಲಾಗಿದ್ದು ಗೋವುಗಳ ಸಂರಕ್ಷಣೆಗಾಗಿ ಹೋರಾಡಿ ಮಡಿದ ವೀರನ ಚಿತ್ರಸಹಿತ ಕಲ್ಲು ಇದೆ. ಉಳಿದಂತೆ ೨ ಕರುಗಲ್ಲುಗಳಿದ್ದು ಅವುಗಳೂ ಪೂಜೆಗೆ ಒಳಗಾಗಿವೆ. ಗ್ರಾಮದ ಹೊರ ವಲಯದಲ್ಲಿರುವ ವೀರಗಲ್ಲಿನ ಬರಹ ರೂಪದ ಶಾಸನ ಕಲ್ಲು ೧೦ನೇ ಶತಮಾನಕ್ಕೆ ಸಂಬಂದಿಸಿದ್ದು ಕನ್ನಡ ಶಾಸನವಾಗಿದೆ. ಬರಹದ ಮಾಹಿತಿ ಅಸ್ಪಷ್ಟವಾಗಿದೆ. ಮೂರು ಸಾಲಿನ ಬರಹವಿದೆ. ಇವುಗಳಿಗೆ ಎಣ್ಣೆ ಹಾಕುವುದು ಇಲ್ಲಿನ ವಿಶೇಷ.

ಆಂಜನೇಯ, ಮಾರಮ್ಮ ಗ್ರಾಮದ ಮುಖ್ಯ ದೇವರುಗಳಾಗಿದ್ದು ಮಾರಮ್ಮನ ಗದ್ದುಗೆ ಇದೆ. ಪೂರ್ವ ಶ್ರಾವಣದ ಕಾಲದಲ್ಲಿ ಊರ ಮಾರಿ ಜಾತ್ರೆ ಮಾಡುವುದು ಇಲ್ಲಿನ ಸಂಪ್ರದಾಯ. ಹರಕೆ, ಬಾನ, ಬಲಿ ಹಾಗೂ ಆರತಿ ಉತ್ಸವ ಇರುತ್ತದೆ. ಗೌರಮ್ಮ–ಕುಂತಮ್ಮನ ಹಬ್ಬವನ್ನು ದೀಪಾವಳಿ ನಂತರ ವಿಶೇಷವಾಗಿ ಆಚರಿಸುವುದು ಇಲ್ಲಿನ ವಾಡಿಕೆ. ಯುಗಾದಿ, ದೀಪಾವಳಿ ಹಾಗೂ ಮಹಾನವಮಿ ಹಬ್ಬ ಇಲ್ಲಿನ ವಿಶೇಷ.

## ಕೆರೆಯಾಗಲ ಚಿಕ್ಕೇನಹಳ್ಳಿ

ಕೆರೆಯಾಗಲ ಚಿಕ್ಕೇನಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ೨೧ ಕಿಮೀ ದೂರದಲ್ಲಿ ಸಿರಾದಿಂದ ಉತ್ತರ–ದಕ್ಷಿಣೋತ್ತರದಲ್ಲಿದೆ. ಹೆಂದೊರೆಯ ಕೆರೆಯ ಮುಂಭಾಗದಲ್ಲಿರುವುದರಿಂದ ಕೆರೆಯಾಗಲ ಚಿಕ್ಕೇನಹಳ್ಳಿ ಎಂದು ಕರೆಯುತ್ತಾರೆ. ಮತ್ತೊಂದು ಕೆರೆಯಾಗಲ ಗೌಡಗೆರೆ ಹೋಬಳಿ

ನಾದೂರು ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿರುವುದರಿಂದ ಚಿಕ್ಕಣ್ಣನೆಂಬ ಹೆಸರನ್ನು ಉತ್ತರಕ್ಕೆ ಸೇರಿಸಿ ಕೆರೆಯಾಗಲಹಳ್ಳಿ ಚಿಕ್ಕೇನಹಳ್ಳಿ ಎಂದು ಕರೆಯಲಾಗಿದೆ. ಕಾಮಗೊಂಡನಹಳ್ಳಿಯಿಂದ ೧.೫ ಕಿಮೀ ದೂರದಲ್ಲಿದೆ. ಇದು ಹೆಂದೊರೆ ಗ್ರಾಮದ ಮಜರೆ ಗ್ರಾಮವಾಗಿದ್ದು ೩೧೮ ಹೆಕ್ಟೇರ್ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿದೆ. ಮರಳು ಮಿಶ್ರಿತ ಕೆಂಪು ಭೂಮಿ ಗ್ರಾಮದ ಬಲಕ್ಕೆ ಹೆಂದೊರೆ ಕೆರೆ. ಮೇಲ್ಭಾಗ ದಿಣ್ಣೆ ಕನ್ನೇರಮ್ಮನ ಹಳ್ಳ ಪೂರ್ವ–ಪಶ್ಚಿಮವಾಗಿ ಹರಿದರೂ ತುಂಬುವುದು ವಿರಳ. ಹೀಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಹಂದಿ ಕರಡಿಯಂತಹ ಕಾಡುಪ್ರಾಣಿಗಳಿವೆ. ಗ್ರಾಮದಲ್ಲಿ ಹಸು, ಎತ್ತು, ಕುರಿ, ಮೇಕೆ, ನಾಯಿ ಸಾಕುಪ್ರಾಣಿಗಳು. ಕಾಗೆ, ಕೋಗಿಲೆ, ಗೂಬೆ ಹದ್ದು, ಗರುಡ, ಕೊಕ್ಕರೆ ಕಾಡುಪಕ್ಷಿಗಳು. ಕೋಳಿ ಸಾಕುಪಕ್ಷಿಯಾಗಿದೆ.

ವಾರ್ಷಿಕ ವಾಡಿಕೆ ಮಳೆ ೬೦೨.೦ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಅವಲಂಬಿತ ಪ್ರದೇಶವಾದ ಇಲ್ಲಿನ ರೈತರು ಕೃಷಿಗಾಗಿ ಕೊಳವೆ ಬಾವಿ ಅವಲಂಬಿಸಿದ್ದಾರೆ. ಈ ಪರಿಸರದಲ್ಲಿ ೧೮ ಕೊಳವೆ ಬಾವಿಗಳಿವೆ. ೨ ಕಿರು ಟ್ಯಾಂಕ್‌ಗಳಿದ್ದು ಅದಕ್ಕೆ ಗ್ರಾಮಪಂಚಾಯ್ತಿ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೧ ಕೈಪಂಪು ಸಹ ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದೆ. ಸಾದರು, ವೈಶ್ಯರು, ಬೋವಿ ಜನಾಂಗ ಕಿರು ಸಮುದಾಯಗಳು. ಗ್ರಾಮದಲ್ಲಿ ಮಾತೃಭಾಷೆ ಕನ್ನಡವಾಗಿದ್ದು ತೆಲುಗು ಮಾತನಾಡುತ್ತಾರೆ. ವಿವಿಧ ಸ್ವರೂಪದ ೪೨ ಮನೆಗಳಿದು ಅವು ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಇವು ಆಶ್ರಯ, ಜನತಾ, ಅಂಬೇಡ್ಕರ್ ವಸತಿ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೮ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನ ಎತ್ತಿನ ಬಂಡಿಯ ಜೊತೆಗೆ ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದೆ. ರಾಗಿ, ಜೋಳ, ಭತ್ತ, ತೊಗರಿ, ಹುರುಳಿ, ನವಣೆ ಆಹಾರ ಬೆಳೆಗಳು, ಶೇಂಗಾ, ಹೊಂಗೆ ಬೀಜ, ಹುಣಸೆಹಣ್ಣು, ಹುಣಸೆಬೀಜ ವ್ಯಾಪಾರಿ ಬೆಳೆಗಳು. ಶಿಕ್ಷಕರು, ಸಾರಿಗೆ ಇಲಾಖೆ ಸೇರಿದಂತೆ ೪ ಜನ ಸರ್ಕಾರಿ ನೌಕರಿಯಲ್ಲಿದ್ದಾರೆ. ಹಾಲಿನ ಡೈರಿಯಿದ್ದು ಸರಾಸರಿ ೨೫೦ ಲೀ. ಹಾಲು ಸಂಗ್ರಹವಾಗುತ್ತಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಹೆಂದೊರೆ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೩೧ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೬.೮ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಧಾರ್ಮಿಕವಾಗಿ ಕಟ್ಟೆರಂಗಪ್ಪ, ಬೇವಿನಹಳ್ಳಮ್ಮ, ಶ್ರೀದೇವಿ ಗುಡಿಗಳಿವೆ. ಬೇವಿನಳ್ಳಮ್ಮನ ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದ್ದು ಊರಹಬ್ಬದ ಮಾದರಿಯಲ್ಲಿ ನಡೆಯುತ್ತದೆ. ಯುಗಾದಿ, ದೀಪಾವಳಿ, ಗೌರಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಕೊಂತಮ್ಮ–ಗೌರಮ್ಮನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕೃಷ್ಣಾಪುರ ಗೊಲ್ಲರಹಟ್ಟಿ

ಕೃಷ್ಣಾಪುರ ಸಿರಾ ತಾಲ್ಲೂಕು ಕೇಂದ್ರದಿಂದ ವಾಯವ್ಯಕ್ಕೆ ೧೮ ಕಿಮೀ ದೂರದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು ಕಾಡುಗೊಲ್ಲರ ಹಟ್ಟಿಯನ್ನು ಇತ್ತೀಚೆಗೆ ಕೃಷ್ಣಾಪುರ ಎಂದು ಕರೆದುಕೊಂಡಿದ್ದಾರೆ. ಪಟ್ಟನಾಯಕನಹಳ್ಳಿ ಗೇಟಿಗೆ ಹೊಂದಿಕೊಂಡಿದ್ದು ಜನಸಂದಣಿಯ ಹಳ್ಳಿಯಾಗಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೫೫೫.೪೬ ಹೆಕ್ಟೇರ್ ಆಗಿದ್ದು ಮೂಲ ಗ್ರಾಮ ರಂಗಾಪುರದಲ್ಲಿ ಹಂಚಿಕೆಯಾಗಿದೆ.

ಮರಳು ಮಿಶ್ರಿತ ಭೂಮಿಯಲ್ಲಿ ವಿಶೇಷವಾಗಿ ಶೇಂಗಾ–ರಾಗಿಯನ್ನು ಬೆಳೆಯುತ್ತಾರೆ. ವಾರ್ಷಿಕ ಸರಾಸರಿ ವಾಡಿಕೆ ಮಳೆ ೪೬೫ ಮಿಮೀ ಆಗಿದ್ದು ಉಷ್ಣಾಂಶ ೩೬ ಡಿಗ್ರಿ ಹಾಗೂ ಚಳಿ ೧೦ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯುವ ನೀರಿಗಾಗಿ ಕೊಳವೆ ಬಾವಿಗಳ ಮೂಲಕ ನೀರು ಪೂರೈಸಲಾಗುತ್ತಿದ್ದು ಎರಡು ಸಿಸ್ಟರ್ನ್ ಇವೆ. ೨ ಕೈಪಂಪುಗಳೂ ಇವೆ. ರಾಗಿ, ಅಲಸಂದೆ ಹಾಗೂ ತೊಗರಿ ಬೆಳೆಗಳನ್ನು ಆಹಾರ ಬೆಳೆಯಾಗಿ ಬೆಳೆಯುತ್ತಾರೆ.

ಇಲ್ಲಿ ಹಸು, ಎಮ್ಮೆ, ಕುರಿ ಮೇಕೆ ಸಾಕುತ್ತಾರೆ. ಕಾಡುಪ್ರಾಣಿಗಳಾದ ಮೊಲ, ಮುಂಗುಸಿ ಕಂಡುಬರುತ್ತವೆ. ಕೋಳಿಗಳು ಗ್ರಾಮದ ಪ್ರಮುಖ ಸಾಕಾಣಿಕೆಯ ಪಕ್ಷಿಯಾಗಿದೆ. ೨ ಕಾಂಕ್ರೀಟ್, ೧೮ ಹೆಂಚಿನ ಮನೆಗಳು ಹಾಗೂ ೨ ಗುಡಿಸಲುಗಳಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಹೆಂದೊರೆ ತಾಲ್ಲೂಕು ಪಂಚಾಯ್ತಿ ಹಾಗೂ ನಾದೂರು ಗ್ರಾಮ ಪಂಚಾಯ್ತಿಗೆ ಸೇರುವ ಈ ಗ್ರಾಮ ಚಿತ್ರದುರ್ಗ ಲೋಕಸಭೆಯ ವ್ಯಾಪ್ತಿಗೆ ಒಳಪಡುತ್ತದೆ. ಶೈಕ್ಷಣಿಕವಾಗಿ ಒಂದು ಮಿನಿ ಅಂಗನವಾಡಿ ಕೇಂದ್ರವಿದ್ದು ೮ ಹುಡುಗರು, ೬ ಹುಡುಗಿಯರು, ಒಬ್ಬರು ಸಹಾಯಕಿ ಕಾರ್ಯನಿರ್ವಹಿಸುತ್ತಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಬೊಮ್ಮಲಿಂಗ, ಚಿತ್ರದೇವರು, ಆಂಜನೇಯ ದೇವರ ಪೌಳಿಗಳಿವೆ. ಆಂಜನೇಯನ ಉತ್ಸವ ಇರುತ್ತದೆ. ಕರಿಯಮ್ಮನ ಊರಹಬ್ಬ ಮಾಡುತ್ತಾರೆ. ಆ ಸಂದರ್ಭದಲ್ಲಿ ಆರತಿ, ಬಾನ ಹಾಗೂ ಬಲಿಯನ್ನು ದೇವರಿಗೆ ಅರ್ಪಿಸುವುದು ಇಲ್ಲಿನ ಹರಕೆ ಸಂಪ್ರದಾಯವಾಗಿದೆ.

## ಕಾಮಗೊಂಡನಹಳ್ಳಿ

ಕಾಮಗೊಂಡನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೮ ಕಿಮೀ ದೂರದಲ್ಲಿದೆ. ಗೌಡಗೆರೆ ಹೋಬಳಿ, ನಾದೂರು ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೆ ಸೇರುವ ಈ ಗ್ರಾಮ ಕಂದಾಯ ಗ್ರಾಮವಾಗಿದ್ದು ೭೪೫.೨೫ ಹೆಕ್ಟೇರ್ ಭೂಪ್ರದೇಶವನ್ನು ಹೊಂದಿದೆ. ಸಿದ್ದನಹಳ್ಳಿ ಇದರ ಉಪಗ್ರಾಮವಾಗಿದೆ. ಕಾಮಣ್ಣಗೌಡ ಎಂಬುವವನು ಈ ಗ್ರಾಮದ ಮೂಲ ಪುರುಷ. ಈತನನ್ನು ಕಾಮನಾಯಕ ಎಂತಲೂ ಕರೆಯುತ್ತಿದ್ದರೆಂದು ಗ್ರಾಮದ ಹಿರಿಯರಾದ ಅಶ್ವತ್ಥಯ್ಯನವರು ಹೇಳುತ್ತಾರೆ. ಈ ವ್ಯಕ್ತಿಯ ಹೆಸರಿನಲ್ಲಿ ರೂಪುಗೊಂಡಿರುವ ಈ ಗ್ರಾಮ ಗೊಂಡ ಎಂಬ ಶಬ್ದ ಗೌಡ ಪದಕ್ಕೆ ಪರ್ಯಾಯವಾಗಿ ಬಳಸುತ್ತಿದ್ದ ಕಾಲಘಟ್ಟದಲ್ಲಿ ಈ ಗ್ರಾಮ ರಚನೆಯಾಗಿರುವುದನ್ನು ಕಾಣಬಹುದು. ಗೊಂಡ ಹೆಸರಿನ ೪ ಗ್ರಾಮಗಳು ಸಿರಾ ತಾಲ್ಲೂಕಿನಲ್ಲಿವೆ. ಕೋಟೆ ಅಗಸೆ ಬಾಗಿಲು, ಕಂದಕ, ಬುರುಜು ಇತ್ತೀಚೆಗೆ ನಾಶವಾಗಿದ್ದು ಅದರ ಅವಶೇಷಗಳಿವೆ.

ಈ ಗ್ರಾಮದ ಮುಂಭಾಗದಲ್ಲಿರುವ ಕ್ರಿ.ಶ. ೧೫೧೧ ರ ಶಾಸನ ಕೃಷ್ಣದೇವರಾಯನ ಕಾಲದ್ದಾಗಿದ್ದು ಶುಭಮಸ್ತುವಿನಿಂದ ಆರಂಭವಾಗಿ ೫ನೇ ಸಾಲು ರಾಜಾಧಿರಾಜ ಪರಮೇಶ್ವರ ಉಲ್ಲೇಖದೊಂದಿಗೆ ೫ ಸಾಲುಗಳಲ್ಲಿ ಮುಕ್ತಾಯವಾಗಿದ್ದು ಅಸ್ಪಷ್ಟವಾಗಿದೆ. ಸಿರಾ ಶಾಸನ-೨೧ ರ ಈ ಶಾಸನದ ಜೊತೆಗೆಯಲ್ಲಿಯೇ ಸಿರಾ ಶಾಸನ-೨೨ ರ ಮತ್ತೊಂದು ಶಾಸನ ೧೭ನೇ ಶತಮಾನಕ್ಕೆ ಸಂಬಂಧಿಸಿದ್ದು ಇದು ಕಾಮಗೊಂಡನಹಳ್ಳಿಯ ಗೌಡರ ಅಂದರೆ ಕೆರೆಯ ಹಿಂಭಾಗದಲ್ಲಿ ಇದ್ದಂತೆ ತಿಳಿಸಲಾಗಿದೆ. ಇದೂ ಕೂಡ ಅಸ್ಪಷ್ಟವಾಗಿದ್ದು ಕಾಮಗೊಂಡನಹಳ್ಳಿ ಕೋಣಪ್ಪ ಎನ್ನುವವನು ದೇವಸ್ಥಾನವೊಂದಕ್ಕೆ ಹೊಲವನ್ನು ದತ್ತಿ ಕೊಟ್ಟ ಸಂಗತಿ ಇದೆ. ಯಾರು ಯಾರಿಗೆ ಯಾವ ಜಮೀನು ಎಂಬ ಖಚಿತ ವಿವರ ಅಲಭ್ಯವಾಗಿದ್ದರೂ ಊರಿನ ಹಿರಿಯರು ಹೇಳುವ ಪ್ರಕಾರ ಆಂಜನೇಯ ದೇವಾಲಯದ ಪೂಜಾರಿಕೆಗಾಗಿ ರಾಜಣ್ಣಾಚಾರಿ ಪೂರ್ವ ವಂಶಿಕರಿಗೆ ದತ್ತು ಕೊಟ್ಟಿದ್ದು ಅದರ ಒಡೆತನ ಇಂದಿಗೂ ಆ ಕುಟುಂಬದವರಿಗೆ ಎಂದು ತಿಳಿಸುತ್ತಾರೆ.

ಮರಳು ಮಿಶ್ರಿತ ಕಂದು ಮಣ್ಣನ್ನು ಹೊಂದಿರುವ ಈ ಗ್ರಾಮದ ದಕ್ಷಿಣಕ್ಕೆ ಚಿಕ್ಕಕೆರೆ, ಉತ್ತರಕ್ಕೆ ದೊಡ್ಡಕೆರೆ ಒಟ್ಟು ಎರಡು ಕೆರೆಗಳನ್ನು ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ಜಿಂಕೆ, ಮೊಲ, ಬೆಕ್ಕು, ಉಡ, ಮುಂಗುಸಿ ಕಂಡುಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ನಾಯಿಗಳಿವೆ. ಪಕ್ಷಿಗಳಾದ ನವಿಲು, ಕೊಕ್ಕರೆ, ಕೋಗಿಲೆ, ಕಾಗೆ, ಕೌಜಲಗ, ಗಿಳಿ, ಗೂಬೆ, ಹದ್ದು, ಗರುಡ, ಮರಕುಟಿಕ ಪಕ್ಷಿಗಳು, ಸಾಕು ಪಕ್ಷಿಗಳಾಗಿ ಕೋಳಿಗಳಿವೆ.

ಬಯಲು ಬಿಸಿಲ ಪ್ರದೇಶ. ವಾರ್ಷಿಕ ವಾಡಿಕೆ ಮಳೆ ೪೬೦ ಮಿಮೀ ಆಗಿದ್ದು ವಾಡಿಕೆಗಿಂತ ಕಡಿಮೆ ಮಳೆಯಾಗುತ್ತದೆ. ಉಷ್ಣಾಂಶ ೩೮-೪೦ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಎರಡು ಕೆರೆಗಳಿದ್ದರೂ ತುಂಬುವುದು ದುರ್ಲಭ. ಕೆರೆಯಲ್ಲಿ ಸೀಮೆಜಾಲಿ ಬೆಳೆದಿದೆ. ಕಟ್ಟಿಗೆಗೆ ಆಶ್ರಯವಾಗಿದೆ.

ರೈತಾಪಿ ಬದುಕಿನ ಜನ ಕೃಷಿಗಾಗಿ ಮಳೆನೀರಿನ ಜೊತೆಗೆ ೫೦ ತೆರೆದ ಬಾವಿಗಳನ್ನು ಹೊಂದಿದ್ದರೂ ಅವೆಲ್ಲವೂ ಒಣಗಿಹೋಗಿವೆ. ಸಧ್ಯ ೭೫ ಕೊಳವೆ ಬಾವಿಗಳ ಮೂಲಕ ಕೃಷಿ ಕಾಯಕ ಮುಂದುವರಿಸಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ಕೊಳಾಯಿಗಳ ಮೂಲಕ ನೀರು ಸರಬರಾಜು ಮಾಡುತ್ತಾರೆ.

ಒಂದು ಲಕ್ಷ ಲೀ. ಸಾಮರ್ಥ್ಯದ ಒಂದು ದೊಡ್ಡ ಟ್ಯಾಂಕ್ ಇದ್ದು ಗ್ರಾಮದಲ್ಲಿ ಬೀದಿ ಮತ್ತು ಮನೆಯ ಸಂಪರ್ಕ ಸೇರಿ ೨೨೫ ನಲ್ಲಿಗಳಿವೆ. ೬ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಕುರುಬರು ದೊಡ್ಡ ಸಮುದಾಯ. ಆದಿಕರ್ನಾಟಕ, ಆದಿದ್ರಾವಿಡ, ಮುಸ್ಲಿಂ, ಕುಂಚಿಟಿಗ, ನಾಯಕ, ಬೆಸ್ತರು, ಮಡಿವಾಳ, ವಿಶ್ವಕರ್ಮ, ಕುಂಬಾರ, ಬ್ರಾಹ್ಮಣ ಜನಾಂಗಗಳು ಸಣ್ಣ ಸಮುದಾಯಗಳು. ಗ್ರಾಮದಲ್ಲಿ ಮಲ್ಲಜ್ಜಿ ಕೇರಿ, ಕಾಡಜ್ಜರ ಓಣಿ, ಪದ್ಮಜ್ಜರ ಬೀದಿ ಎಂಬ ಓಣಿಗಳಿವೆ. ಕನ್ನಡ ಮಾತೃಭಾಷೆಯಾಗಿದ್ದು ಉರ್ದು ಭಾಷೆಯನ್ನು ಆಡುತ್ತಾರೆ.

ವಿವಿಧ ಪ್ರಕಾರಗಳ ೫೪೨ ಮನೆಗಳಿದ್ದು ಇವು ಕಲ್ಲಿನ, ಹೆಂಚಿನ, ಮಣ್ಣಿನ, ಶೀಟಿನ ಸ್ವರೂಪದವುಗಳಾಗಿದ್ದು ಜನತಾ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಸತಿ ಯೋಜನೆಯ ಲಾಭ ಫಲಾನುಭವಿಗಳಿದ್ದಾರೆ. ಒಟ್ಟು ೨೩೪೫ ಜನಸಂಖ್ಯೆ ಹೊಂದಿರುವ ಈ ಗ್ರಾಮದ ೩೦೦ ಮನೆಗಳಲ್ಲಿ ಶೌಚಾಲಯ ಬಳಸುತ್ತಿರುವುದು ವಿಶೇಷವಾಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ೫ ಎತ್ತಿನ ಬಂಡಿಗಳು ಬಳಕೆಯಲ್ಲಿವೆ. ಟ್ರ್ಯಕ್ಟರ್, ಟೆಂಪೋ, ಲಾರಿ, ಬಸ್ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಇಲ್ಲಿನ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ತೊಗರಿ, ಹುರುಳಿ, ಅಲಸಂದೆ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ, ದಾಳಿಂಬೆ, ಸಪೋಟ, ಮಾವಿನ ಬೆಳೆಗಳಿವೆ. ಸೂರ್ಯಕಾಂತಿ, ಹತ್ತಿ ಬೆಳೆಗಳು ಇವೆ. ಒಂದು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘವಿದ್ದು (ಡೈರಿ) ಸರಾಸರಿ ೨೦೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ವ್ಯಾಪಾರಿ ಬೆಳೆಗಳಾದ ತೆಂಗು, ಶೇಂಗಾ, ಅಡಿಕೆ, ಸಪೋಟ, ದಾಳಿಂಬೆ, ಹತ್ತಿ, ಸೂರ್ಯಕಾಂತಿ ಇದೆ. ಹುಣಸೆಹಣ್ಣು, ಬೇವು, ಔಡಲ, ಹೊಂಗೆ ಬೀಜಗ ಬೆಳೆಗಳೂ ಇವೆ. ಕುರಿ ಉತ್ಪನ್ನವಾದ ಕಂಬಳಿ ವ್ಯಾಪಾರ ಗ್ರಾಮದಲ್ಲಿದೆ.

ಈ ಗ್ರಾಮದಲ್ಲಿ ವಿವಿಧ ಇಲಾಖೆಗೆ ಸೇರಿದ ೧೫೦ ಜನ ಸರ್ಕಾರಿ ನೌಕರರಿರುವುದು ಈ ಗ್ರಾಮದ ವಿಶೇಷ. ಶಿಕ್ಷಕರು ೨೬ ಜನ, ೫ ಜನ ಪ್ರೊಫೆಸರ್, ೫ ಜನ ಉಪನ್ಯಾಸಕರು, ೧೦ ಜನ ವೈದ್ಯರು, ೧೦ ಜನ ಇಂಜಿನಿಯರ್, ೧೦ ಜನ ಸಾರಿಗೆ ಇಲಾಖೆಯ ನೌಕರರಿರುವುದು ವಿಶೇಷವಾಗಿದೆ. ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯದ ಕುಲಪತಿ ಡಾ.ಮಹೇಶ್ ಈ ಗ್ರಾಮದವರೆಂಬುದು ವಿಶೇಷ. ಸಹಕಾರಿ ಇಲಾಖೆ ಆಯುಕ್ತ ಕೆ.ಎ. ಕುಮಾರ್, ಎಸ್.ಸಿದ್ದಯ್ಯ ನಿವೃತ್ತ ಸಿಆರ್‌ಪಿಎಫ್ ಯೋಧರಾಗಿದ್ದಾರೆ. ಹಿರಿಯ ಐಎಎಸ್ ಅಧಿಕಾರಿ ಭಾರತದ ಪ್ರಧಾನ ಮಂತ್ರಿಗಳ ಆಪ್ತ ಕಾರ್ಯದರ್ಶಿ, ರಾಜ್ಯ ಮಾಹಿತಿ ಆಯೋಗದ ಆಯುಕ್ತರಾಗಿದ್ದ ಕೆ.ಎ.ತಿಪ್ಪೇಸ್ವಾಮಿ ಇದೇ ಗ್ರಾಮದವರು.

ಮಧ್ಯಮ ಕೈಗಾರಿಕೆಯಾಗಿ ಶ್ರೀ ಹನುಮಾನ್ ಬಸ್ ಕಂಪನಿ ಇದೆ. ಉಣ್ಣೆ ಕೈಗಾರಿಕೆ, ನೂಲು ಯಂತ್ರವಿದ್ದು ಇಲ್ಲಿ ತಯಾರಾದ ಕಂಬಳಿಗಳು ಸಿಲೋನ್, ಬಾಂಬೆ, ಸಿಂಗಪುರಗಳಿಗೆ ರಫ್ತಾಗುತ್ತವೆ. ಕಂಬಳಿ ಸೇವಾ ಸಹಕಾರ ಸಂಘವಿದೆ. ಸಾಂಪ್ರದಾಯಿಕ ಕಸುಬುಗಳಾದ ಮಡಿಕೆ ತಯಾರಿಸುವ ಕುಂಬಾರ ದಾಸಣ್ಣ, ಬಡಗಿ ಭೂತಣ್ಣ ಇದ್ದು ಮಹಿಳೆಯರು ಬೀಡಿ ಸುತ್ತುವುದು, ಹೂ ಕಟ್ಟುವುದು ಉಪಕಸುಬುಗಳಿವೆ. ರಾಮಚಂದ್ರಯ್ಯ ಕೇಂದ್ರ ಸರ್ಕಾರದ ಹವಾಮಾನ ಇಲಾಖೆಯ ತಜ್ಞರಾಗಿದ್ದಾರೆ. ಆಚಾರಿ ಮಂಜುನಾಥ್, ಬಿಎಸ್‌ಎಫ್ ಸೈನಿಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಹೆಂದೊರೆ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದ ಕೆ.ಪದ್ಮರಾಜ್ ಸದ್ಯ ಹೆಂದೊರೆ ಗ್ರಾಮಪಂಚಾಯ್ತಿ ಅಧ್ಯಕ್ಷರಾಗಿದ್ದಾರೆ. ಇತರೆ ೪ ಜನ ಗ್ರಾಮಪಂಚಾಯ್ತಿ ಸದಸ್ಯರು ಈ ಗ್ರಾಮದ ಜನಪ್ರತಿನಿಧಿಗಳಾಗಿದ್ದಾರೆ. ಗ್ರಾಮದ ಪಿ.ಎಂ. ರಂಗನಾಥಪ್ಪ ಸಿರಾ ಶಾಸಕರಾಗಿದ್ದರು. ಶ್ರೀಮತಿ ಎಸ್.ನಾಗಮ್ಮ ಹಾಗೂ ಕೆ.ಎಂ. ರಾಮಕೃಷ್ಣಪ್ಪ ಜಿಲ್ಲಾ ಪಂಚಾಯ್ತಿ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಕಾಮಗೊಂಡನಹಳ್ಳಿ ವ್ಯವಸಾಯ ಮಾರಾಟ ಸಹಕಾರ ಸಂಘ, ೮ ಸ್ತ್ರೀಶಕ್ತಿ ಸಂಘ, ೪ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಇವು ಗ್ರಾಮದ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿವೆ.

ಶೈಕ್ಷಣಿಕವಾಗಿ ೨ ಅಂಗನವಾಡಿ ಕೇಂದ್ರಗಳಿದ್ದು ೫೦ ಮಕ್ಕಳಿದ್ದರೆ ಸರ್ಕಾರಿ ಪ್ರಾಥಮಿಕ ಕಿರಿಯ ಪಾಠಶಾಲೆಯಲ್ಲಿ ೬೭ ಮಕ್ಕಳಿದ್ದು ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ವಿತರಣೆ, ರಂಗಮಂದಿರ, ಕಾಂಪೌಂಡ್ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೭೦.೯% ರಷ್ಟಿದೆ. ನಾಟಿ ವೈದ್ಯ ಹಳ್ಳಿಕಾರ ನರಸೇಗೌಡ ಪಶು ಸಂಬಂಧಿ ಚಿಕಿತ್ಸೆ ನೀಡುವಲ್ಲಿ ಪ್ರಸಿದ್ಧರಾಗಿದ್ದಾರೆ. ಉಳಿದಂತೆ ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಟೀ ಹೋಟೆಲ್, ೫ ಪೆಟ್ಟಿಗೆ ಅಂಗಡಿಗಳಿವೆ. ಐತಿಹಾಸಿಕವಾಗಿ ೨ ಶಾಸನಗಳು, ೧ ವೀರಗಲ್ಲು ಇದೆ. ವೀರಗಲ್ಲು ಹೆಂದೊರೆ ರಸ್ತೆಯಲ್ಲಿದ್ದು ಇದು ವೀರನೊಬ್ಬನ ಹೋರಾಟದ ಚಿತ್ರಣವಿದ್ದು ನೊಳಂಬರ ಕಾಲದ ರಚನೆಯಾಗಿದೆ. ೨ ಅರಳಿಕಟ್ಟೆ, ೧ ಕರಿಗಲ್ಲು ಇದ್ದು ದಸರಾ ಹಬ್ಬದಂದು ಕರಿಗಲ್ಲಿಗೆ ವಿಶೇಷ ಪೂಜೆ, ಪ್ರಾಣಿಬಲಿ ನೀಡಿ ರಕ್ತ ಸಂಗ್ರಹಿಸಿದ ಅನ್ನವನ್ನು ಗ್ರಾಮದ ಸುತ್ತ ಸರಗು ಹಾಕುವುದು ಗ್ರಾಮದ ವಿಶೇಷವಾಗಿದೆ.

ಗ್ರಾಮದಲ್ಲಿ ಒಂದು ಸ್ಮಶಾನವಿದ್ದು ದೊಡ್ಡ ಕೆರೆಯ ಅಂಗಳಕ್ಕೆ ಹೊಂದಿಕೊಂಡಿದ್ದು ಸಾರ್ವತ್ರಿಕವಾಗಿದೆ. ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಬಹುದೊಡ್ಡ ಕೊಡುಗೆ ನೀಡಿರುವ ಈ ಗ್ರಾಮ ದಂಡಿಲಿಂಗಪ್ಪ, ಪದ್ಮಣ್ಣ, ಕೆ.ಎಲ್. ಕಾಟಣ್ಣ, ಅಶ್ವತ್ಥಪ್ಪ, ಬೇವಿನಹಳ್ಳಿ ಹಳ್ಳಪ್ಪ, (ಕಾಮಗೊಂಡನಹಳ್ಳಿ ವಾಸಿ) ಸ್ವಾತಂತ್ರ್ಯ ಸೇನಾನಿಗಳು ಭೂದಾನ ಚಳುವಳಿಯಲ್ಲಿ, ದಂಡಿಲಿಂಗಪ್ಪನವರು ಭಾಗವಹಿಸಿದವರಿದ್ದಾರೆ.

ಧಾರ್ಮಿಕವಾಗಿ ಬೀರಲಿಂಗೇಶ್ವರ, ಆಂಜನೇಯ, ಬೊಮ್ಮಲಿಂಗೇಶ್ವರ, ಶ್ರೀರಾಮ ಮಂದಿರ, ಭೂತಪ್ಪ, ಸೋಮೇಶ್ವರನ ಎರಡು ದೇವಸ್ಥಾನ, ದುರ್ಗಮ್ಮ, ಮದ್ದಮ್ಮ ದೇವಾಲಯಗಳಿವೆ. ದುರ್ಗಮ್ಮ ಗ್ರಾಮದೇವತೆಯಾಗಿದ್ದು ಇತ್ತೀಚೆಗೆ ದೇವಾಲಯದ ಜೀರ್ಣೋದ್ಧಾರ ಮಾಡಿದ್ದಾರೆ. ಊರ ಹಬ್ಬವಾಗಿ ಬಲಿ, ಆರತಿ, ಬಾನದ ಹರಕೆ ಸಂಪ್ರದಾಯಗಳಿವೆ. ಆಷಾಢ ಮಾಸದಲ್ಲಿ ದುರ್ಗಾದೇವಿ ಉತ್ಸವ ಅದ್ದೂರಿಯಾಗಿ ಏರ್ಪಡುತ್ತದೆ.

ಯುಗಾದಿ, ಗೌರಿ–ಗಣೇಶ, ದಸರಾ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರಂಜಾನ್, ಬಕ್ರೀದ್, ಬಾಬಯ್ಯನ ಜಲ್ದಿ ವಿಶೇಷ ಆಚರಣೆಗಳಾಗಿವೆ.

ಮಣೆಗಾರ ಗುಂಡಣ್ಣ ಕೋಲಾಟದ ಅದ್ಭುತ ಕಲಾವಿದ. ತಮಟೆ ಕಲಾವಿದ ನರಸಣ್ಣ, ಓಲಗದ ಕರಿಯಣ್ಣ ಈ ಭಾಗದ ಮರೆಯಲಾರದ ಕಲಾವಿದರು. ಜೊತೆಗೆ ರಂಗಭೂಮಿ ಹಿರಿಯ ಕಲಾವಿದರಾಗಿ, ಆಹ್ವಾನಿತ ಕಲಾವಿದರಾಗಿ ಹೊರ ಊರುಗಳಲ್ಲಿ ಪ್ರದರ್ಶನ ನೀಡುತ್ತಿರುವ ಶನಿಮಹಾತ್ಮ ಬೀರಲಿಂಗಪ್ಪ, ವಿಕ್ರಮ ಪಾತ್ರಧಾರಿ ಸೋಮೇಶಪ್ಪ, ರಕ್ತಬೀಜಾಸುರ ಕೃಷ್ಣಪ್ಪ, ಶ್ರೀದೇವಿ ನಾರಾಯಣಪ್ಪ, ಸದಾ ಸ್ಮರಣೀಯ ಕಲಾವಿದರು. ಸೋಬಾನೆ ಲಕ್ಷ್ಮಕ್ಕ, ರಂಗಮ್ಮ ಈ ಭಾಗದ ಸ್ಥಳೀಯ ಜನಪದ ಕಲಾವಿದರು.

ಗ್ರಾಮದಲ್ಲಿ ಕಾಳಿದಾಸ ಯುವಕ ಸಂಘ, ವಿನಾಯಕ ಯುವಕ ಸಂಘ, ಅಂಬೇಡ್ಕರ್ ಸಂಘಗಳಿದ್ದು ಗ್ರಾಮದ ಸಾಂಸ್ಕೃತಿಕ ಸಂಘಟನೆಯಲ್ಲಿ ಸಕ್ರಿಯವಾಗಿದೆ.

## ಕುಂಟನಹಟ್ಟಿ

ಕುಂಟನಹಳ್ಳಿ, ಕುಂಟಗಾನಹಟ್ಟಿ ಎಂದೆಲ್ಲಾ ಕರೆಯಲ್ಪಡುವ ಈ ಗ್ರಾಮ ಒಂದು ಕಾಡುಗೊಲ್ಲರ ಬುಡಕಟ್ಟು ಗ್ರಾಮವಾಗಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೩೨ ಕಿಮೀ ದೂರದಲ್ಲಿದೆ. ಸಿರಾ–ಜವಗೊಂಡನಹಳ್ಳಿ ಮಾರ್ಗವಾಗಿ ಹುಣಸೇಹಳ್ಳಿಯಿಂದ ತಿರುವು ಪಡೆದು ಯರವರ ಹಳ್ಳಿಯಿಂದ ಎಡಕ್ಕೆ ಈ ಗ್ರಾಮ ಬರುತ್ತದೆ. ಡ್ಯಾಗೇರಹಳ್ಳಿಯ ಮಜರೆ ಗ್ರಾಮವಾಗಿದ್ದು ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೧೭.೮೨ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ.

ಕುಂಟರಂಗಪ್ಪ ಎಂಬ ಕಾಡುಗೊಲ್ಲರ ವ್ಯಕ್ತಿ ಇಲ್ಲಿ ಮೊದಲು ವಾಸಿಸುತ್ತಿದ್ದ ಕಾರಣ ಕುಂಟರಂಗಪ್ಪ, ಕುಂಟರಂಗ, ಕುಂಟಾಗನಹಳ್ಳಿಯಾಗಿದ್ದು ಈಗ ಕುಂಟನಹಟ್ಟಿ ಎಂದಾಗಿದೆ. ಮೊಲ, ಮುಂಗುಸಿ, ನರಿ, ತೋಳ ಈ ಪರಿಸರದ ಕಾಡುಪ್ರಾಣಿಗಳು. ಗ್ರಾಮದಲ್ಲಿ ಹಸು, ಎತ್ತು, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ. ಗಿಳಿ, ಕೋಗಿಲೆ, ಗುಬ್ಬಚ್ಚಿ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿರುವ ಈ ಪರಿಸರದಲ್ಲಿ ಸರಾಸರಿ ವಾಡಿಕೆ ಮಳೆ ೪೬೧ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮದ ಬುಡಕ್ಕೆ ಒಂದು ದೊಡ್ಡ ಹಳ್ಳ ಇದ್ದು ಇಂದು ಮರಳು ತುಂಬಿ ಪ್ರಮುಖ ವಾಣಿಜ್ಯವನ್ನಾಗಿಸಿಕೊಂಡಿದ್ದಾರೆ. ಕುಡಿಯುವ ನೀರಿಗೆ ೨ ಕೈಪಂಪುಗಳಿದ್ದು ಚಿಕ್ಕ ಟ್ಯಾಂಕ್ ಮೂಲಕ ನೀರನ್ನು ಒದಗಿಸಲಾಗುತ್ತಿದೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

೭೪ ಕಾಡುಗೊಲ್ಲರ ಮನೆಗಳಿದ್ದು ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿವೆ. ಜನತಾ, ಆಶ್ರಯ ಯೋಜನೆಯ ಫಲಾನುಭವಿಗಳು ಭಾಗ್ಯಜ್ಯೋತಿ ಫಲಾನುಭವಿಗಳಿದ್ದಾರೆ. ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳಿವೆ.

ರಾಗಿ, ಶೇಂಗಾ, ತೊಗರಿ, ಹುರುಳಿ, ಅಲಸಂದೆ ಮುಖ್ಯ ಬೆಳೆಗಳು. ಸೂರ್ಯಕಾಂತಿ, ಹತ್ತಿ ಬೆಳೆಯಿದೆ. ಶೇಂಗಾ, ಹತ್ತಿ, ಹುಣಸೆಹಣ್ಣು ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಒಂದು ಇಟ್ಟಿಗೆ ಫ್ಯಾಕ್ಟರಿ ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಹುಣಸೇಹಳ್ಳಿ ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದಲ್ಲಿ ಒಬ್ಬರು ಗ್ರಾಮ ಪಂಚಾಯ್ತಿ ಪ್ರತಿನಿಧಿಗಳಿದ್ದಾರೆ. ಗ್ರಾಮದಲ್ಲಿ ಶ್ರೀಕೃಷ್ಣ ಯಾದವ ಯುವಕ ಸಂಘವಿದೆ. ಒಂದು ಅಂಗನವಾಡಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ೩ ಜನ ನೌಕರರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಕರಿಯಣ್ಣ ಎಂಬ ೮ ವರ್ಷದ ಕಾಡುಗೊಲ್ಲರ ವ್ಯಕ್ತಿ ನಾಟಿ ಔಷಧಗಳಿಂದ ಪಶುಚಿಕಿತ್ಸೆ ನೀಡುತ್ತಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಕರಿಯಮ್ಮನ ಊರ ಹಬ್ಬ ಮಾಡಿ ಜಾತ್ರೆನಡೆಸುತ್ತಾರೆ. ಬಲಿ, ಬ್ಯಾಟೆ, ಆರತಿ ಈ ಹಬ್ಬದ ವಿಶೇಷ ಆಚರಣೆಗಳು. ಶಿವರಾತ್ರಿ, ದೀಪಾವಳಿ, ಯುಗಾದಿ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಕಾನೆರಂಗನಹಳ್ಳಿ

ಕಾನೆರಂಗನಹಳ್ಳಿ ಎಂಬುದು ಸಂಕ್ಷಿಪ್ತಗೊಂಡು ಕೆ.ರಂಗನಹಳ್ಳಿ ಆಗಿರುವ ಈ ಗ್ರಾಮ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೪ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಒಟ್ಟು ೩೯೫.೬೨ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಗೊಲ್ಲರಹಟ್ಟಿ ಈ ಗ್ರಾಮಕ್ಕೆ ಸೇರ್ಪಡೆಯಾಗಿರುವ ಮಜರೆ ಗ್ರಾಮವಾಗಿದೆ. ತಾವರೆಕೆರೆ–ಹೊಸೂರು ಮುಖ್ಯ ರಸ್ತೆಯಲ್ಲಿದೆ.

ಮರಳು ಮಿಶ್ರಿತ ಕೆಂಪು ಭೂಮೇಲ್ಮೈಯನ್ನು ಹೊಂದಿದ್ದು ಈ ಪರಿಸರದಲ್ಲಿ ಕಾಡಿನ ಭಾಗ ಇಲ್ಲವಾದರೂ ಗಿಡ, ಪೊದೆಗಳು ವ್ಯಾಪಕವಾಗಿವೆ. ಹಾಗಾಗಿ ಇಲ್ಲಿ ನರಿ, ತೋಳ, ಮೊಲ, ಕಾಡುಹಂದಿ ಕಂಡುಬಂದರೆ ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗಾಗಿ ಹಸು, ಎಮ್ಮೆಯನ್ನು ಕೃಷಿ ಉಪಯೋಗಕ್ಕೆ ಎತ್ತುಗಳನ್ನು ಸಾಕುತ್ತಾರೆ. ಕುರಿ, ಮೇಕೆ, ಕೋಳಿ ಸಾಕಾಣಿಕೆಯೂ ಇದೆ. ಕಾಡು ಪಕ್ಷಿಯಾಗಿ ಗಿಳಿ, ಕಾಗೆ, ಮರಕುಟಿಕ, ಗೂಬೆ, ಹದ್ದು, ಕೊಕ್ಕರೆ, ಗೊರವಂಕ, ಬೆಳವ, ಗುಬ್ಬಚ್ಚಿ ಕಂಡುಬರುತ್ತವೆ.

ಮಳೆಯಿಂದಲೇ ಬದುಕು ಕಟ್ಟಿಕೊಂಡಿರುವ ಈ ಗ್ರಾಮದಲ್ಲಿ ವಾಡಿಕೆ ಮಳೆ ೪೬೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯುವ ನೀರನ್ನು ಗ್ರಾಮ ಪಂಚಾಯ್ತಿಯಿಂದ ಪೂರೈಸಲಾಗುತ್ತಿದ್ದು ಮಹದೇವಯ್ಯ ನೀರುಗಂಟಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ೨೫ ನಲ್ಲಿ ಸೌಕರ್ಯವಿದೆ. ಮೂರು ಕೈಪಂಪುಗಳಿವೆ.

ಗ್ರಾಮದ ಉತ್ತರಕ್ಕೆ ಸುವರ್ಣಮುಖಿ ಹಳ್ಳವಿದ್ದು ಇದರಿಂದ ಮಳೆಗಾಲದಲ್ಲಿ ಮಾತ್ರ ನೀರಿನ ಸೌಕರ್ಯವಾಗುತ್ತದೆ. ಒಂದು ಸಣ್ಣ ಕೆರೆಯಿದ್ದು ದನಕರುಗಳಿಗೆ ಕುಡಿಯಲು ಬಳಕೆಯಾಗುತ್ತಿದೆ.

ಗ್ರಾಮದಲ್ಲಿ ಆದಿಕರ್ನಾಟಕ ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗರು ಸಮಬಲದಲ್ಲಿದ್ದಾರೆ. ಆದಿದ್ರಾವಿಡ, ನಾಯಕ, ಈಡಿಗ, ಅಗಸ ಇವು ಸಣ್ಣ ಸಮುದಾಯಗಳಿ. ಒಟ್ಟು ೩೦೬ ಮನೆಗಳಿದ್ದು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಶೀಟ್ ಹಾಗೂ ಹೆಂಚಿನ ಮನೆಗಳಿವೆ. ಇವುಗಳಲ್ಲಿ ಆಶ್ರಯ, ಅಂಬೇಡ್ಕರ್ ಆವಾಸ್, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳು, ಭಾಗ್ಯಜ್ಯೋತಿ ಯೋಜನೆಯ ೨೮ ಫಲಾನುಭವಿಗಳು ಇದ್ದು ೧೬೫ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ತೊಗರಿ, ಅಲಸಂದೆ, ಈರುಳ್ಳಿ ಆಹಾರ ಬೆಳೆಗಳಾಗಿವೆ. ರೇಷ್ಮೆ, ಹತ್ತಿ ಬೆಳೆಯೂ ಇರುತ್ತದೆ. ಗ್ರಾಮದಲ್ಲಿ ೭ ಜನ ಸರ್ಕಾರಿ ನೌಕರರಿದ್ದಾರೆ. ಬೀಡಿ ಸುತ್ತುವುದು, ಟೈಲರಿಂಗ್, ರಾಗಿ ಮಿಲ್ ಇತ್ಯಾದಿ ಸಣ್ಣ ಕೈಗಾರಿಕೆ ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆ ಜಿಲ್ಲಾ ಪಂಚಾಯ್ತಿ, ಗೌಡಗೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಹೊಸೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಕೇಂದ್ರ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಸುಜಲ ಜಲಾನಯನ ಸಂಘಗಳಿವೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಅಂಗನವಾಡಿಯಲ್ಲಿ ೩೨ ಮಕ್ಕಳು, ಶಾಲೆಯಲ್ಲಿ ೧೦೩ ಮಕ್ಕಳು ಕಲಿಯುತ್ತಿದ್ದಾರೆ. ಒಟ್ಟು ಮೂವರು ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ

ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆಯ ಪ್ರಮಾಣ ೫೩% ಇದ್ದು ಪುರುಷರು ೬೫.೨, ಮಹಿಳೆಯರು ೪೧.೩ ರಷ್ಟಿದ್ದಾರೆ. ಒಂದು ಕಿರು ಆರೋಗ್ಯ ಕೇಂದ್ರವಿದೆ. ತಿಮ್ಮಣ್ಣ ಎಂಬ ೭೦ ವರ್ಷದ ವ್ಯಕ್ತಿ ಪ್ರಾಣಿ ಸಂಬಂಧಿ ಔಷಧೋಪಚಾರ ಮಾಡುತ್ತಿದ್ದು ನಾಟಿ ವೈದ್ಯ ಎಂದೇ ಕರೆಯುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೮ ಅಂಗಡಿಗಳಿವೆ. ಗ್ರಾಮದಲ್ಲಿ ೨ ವೀರಗಲ್ಲುಗಳಿದ್ದು ಇವು ವೀರನ ಆಕರ್ಷಕ ಹೋರಾಟದ ಚಿತ್ರಣ ಕೊನೆಯಲ್ಲಿ ದೇವ ಕನ್ನಿಕೆಯರೊಡನೆ ಸ್ವರ್ಗಾರೋಹಣ ಚಿತ್ರವನ್ನು ಕಟ್ಟಿಕೊಡಲಾಗಿದೆ. ಇದು ರಂಗಪ್ಪ ಎಂಬುವವರ ಹೊಲದಲ್ಲಿ ಗ್ರಾಮದ ಹೊರವಲಯದಲ್ಲಿದ್ದು ಪೂಜೆಗೆ ಒಳಪಟ್ಟಿದೆ. ಊರೊಳಗೆ ಬೇವು, ಅರಳಿಕಟ್ಟೆ ಇದ್ದು ಪೂಜೆಗೆ ಪಾತ್ರವಾಗಿದೆ. ಗ್ರಾಮದೇವತೆ ಕೊಲ್ಲಾಪುರದಮ್ಮ, ಕಣಿವೆ ಮಾರಕ್ಕ, ಪುರಲೇಹಳ್ಳಿ ಭೂತಪ್ಪ ಹೀಗೆ ದೇವರುಗಳ ಆರಾಧನೆ ನಡೆಯುತ್ತದೆ. ಕಣಿವೆ ಮಾರಮ್ಮನಿಗೆ ಊರ ಹಬ್ಬದ ಮಾದರಿಯಲ್ಲಿ ಜಾತ್ರೆ ನಡೆದು ಆರತಿ, ಬಾನ, ಬ್ಯಾಟೆ ನಡೆಯುತ್ತದೆ. ಗ್ರಾಮದಲ್ಲಿ ಶಿವರಾತ್ರಿ, ಯುಗಾದಿ, ದೀಪಾವಳಿ, ಗೌರಿ–ಗಣೇಶನ ಹಬ್ಬವನ್ನು, ದಸರಾ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

ಮುದ್ದೇಗೌಡ ಎಂಬ ೬೦ ವರ್ಷದ ಸಾಹಿತಿ ಇದ್ದು ೪ ಕವನ ಸಂಕಲನ ಪ್ರಕಟಿಸಿದ್ದಾರೆ, ಇವರು ಇತ್ತೀಚೆಗೆ ದಿವಂಗತರಾದರು. ಸಿರಾ, ಹೊಸೂರು, ತಾವರೆಕೆರೆ ಗ್ರಾಮಕ್ಕೆ ಸಂಪರ್ಕ ರಸ್ತೆ ಇದ್ದು ಈ ಗ್ರಾಮದ ಸುತ್ತ ಕೋಟೆಯ ಅವಶೇಷಗಳು ಕಂಡುಬರುತ್ತವೆ.

## ಕೆ.ಆರ್. ಗೊಲ್ಲರಹಟ್ಟಿ

ಕೆ.ರಂಗನಹಳ್ಳಿ ಗೊಲ್ಲರಹಟ್ಟಿಯನ್ನು ಸಂಕ್ಷಿಪ್ತವಾಗಿ ಕೆ.ಆರ್. ಗೊಲ್ಲರಹಟ್ಟಿ ಎಂದು ಕರೆಯುತ್ತಾರೆ. ವ್ಯಕ್ತಿಯ ಹೆಸರಿನಿಂದಲೇ ನಿರ್ಮಾಣವಾಗಿರುವ ರಂಗನಹಳ್ಳಿಯ ಪಕ್ಕದಲ್ಲಿಯೇ ಗೊಲ್ಲರಹಟ್ಟಿ ಬರುತ್ತದೆ. ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೮ ಕಿಮೀ ದೂರದಲ್ಲಿದ್ದು ತಾವರೆಕೆರೆ–ಹೊಸೂರು ನಡುವೆ ಈ ಗ್ರಾಮ ಬರುತ್ತದೆ. ಮರಳು ಮಿಶ್ರಿತ ಕೆಂಪು ಭೂ ಲಕ್ಷಣ ಹೊಂದಿದ್ದು ಈ ಪರಿಸರದಲ್ಲಿ ಮೊಲ, ನರಿ, ಮುಂಗುಸಿ, ಜಿಂಕೆ, ಕರಡಿ ಕಂಡುಬರುತ್ತವೆ. ಪಕ್ಷಿಗಳಾದ ಕೊಕ್ಕರೆ, ಗಿಳಿ, ಗೊರವಂಕ ಕಂಡುಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಕುರಿ, ಮೇಕೆ, ಎತ್ತು, ಎಮ್ಮೆ ಕೆಲವರು ಕತ್ತೆಗಳನ್ನು ಸಾಕಿದ್ದಾರೆ.

ಮಳೆಯ ಆಶ್ರಯವನ್ನೇ ನಂಬಿರುವ ಇಲ್ಲಿನ ಸರಾಸರಿ ಮಳೆ ಪ್ರಮಾಣ ೪೬೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯುವ ನೀರಿಗೆ ೧೨ ಮಿನಿ ಟ್ಯಾಂಕ್‌ಗಳಲ್ಲಿ ಗ್ರಾಮ ಪಂಚಾಯ್ತಿಯಿಂದ ನೀರು ಪೂರೈಸಲಾಗುತ್ತದೆ. ಕಾಡುಗೊಲ್ಲರು ಮಾತ್ರ ವಾಸಿಸುವ ಈ ಹಟ್ಟಿಯಲ್ಲಿ ೬೮ ಮನೆಗಳಿವೆ. ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿದ್ದು ೩ ಗುಡಿಸಲುಗಳೂ ಇವೆ. ಜನತಾ, ಆಶ್ರಯ, ವಸತಿ ಸೌಲಭ್ಯಗಳ ಫಲಾನುಭವಿಗಳು ಭಾಗ್ಯಜ್ಯೋತಿ ಯೋಜನೆಯಿಂದ ಫಲಾನುಭವಿಗಳು ಇದ್ದು ಗ್ರಾಮದಲ್ಲಿ ರಾಗಿಮುದ್ದೆ ಮುಖ್ಯ ಆಹಾರವಾಗಿದೆ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಟ್ರ್ಯಕ್ಟರ್, ಮಿನಿ ಟೆಂಪೋ, ದ್ವಿಚಕ್ರ ವಾಹನಗಳು ಬಳಕೆಯಲ್ಲಿದ್ದು ಶೇಂಗಾ ಮುಖ್ಯ ಬೆಳೆ. ರಾಗಿ, ಅಲಸಂದೆ, ತೊಗರಿ, ಜೋಳ ಆಹಾರ ಬೆಳೆಗಳು. ಸೂರ್ಯಕಾಂತಿ, ಹತ್ತಿ, ಸೇವಂತಿಗೆ ಹೂ, ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ ಬೆಳೆಯಿದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗೌಡಗೆರೆ ತಾಲ್ಲೂಕು ಪಂಚಾಯ್ತಿ, ಹೊಸೂರು ಗ್ರಾಮ ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ೧ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವಿದೆ. ಒಂದು ಅಂಗನವಾಡಿ ಕೇಂದ್ರವಿದ್ದು ೧೭ ಮಕ್ಕಳಿದ್ದಾರೆ. ಒಬ್ಬರು ನೌಕರರಿದ್ದಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೩% ಇದ್ದು ಪುರುಷರು ೬೫%, ಮಹಿಳೆಯರು ೪೧.೮% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಅಂಗಡಿ ಇದೆ. ರಂಗನಾಥಸ್ವಾಮಿ ದೇವಾಲಯವಿದ್ದು ಗ್ರಾಮದಲ್ಲಿ ಗೌರಸಂದ್ರದ ಮಾರಮ್ಮನ ಊರಹಬ್ಬ ಮಾಡುತ್ತಾರೆ. ಆರತಿ, ಬಾನ, ಬಲಿ ಇರುತ್ತದೆ. ಯುಗಾದಿ ಹಾಗೂ ದೀಪಾವಳಿ ಈ ಹಟ್ಟಿಯ ದೊಡ್ಡ ಹಬ್ಬಗಳು. ದೀಪಾವಳಿಯಂದು ಜುಂಜಪ್ಪನಿಗೆ ಎದುರೆತ್ತಿ ಆರತಿ ಮಾಡುತ್ತಾರೆ.

## ಕುಂಬಾರಹಳ್ಳಿ

ಜಾತಿ ಮೂಲದ ಈ ಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೮ ಕಿಮೀ ದೂರದಲ್ಲಿ ತಾವರೆಕೆರೆ–ಪುರಲೇಹಳ್ಳಿ

(ಭೂತಪ್ಪನ ಗುಡಿ) ಜಿಲ್ಲಾ ಪಂಚಾಯ್ತಿ ಮುಖ್ಯ ರಸ್ತೆಯಲ್ಲಿದೆ. ಪ್ರಸಿದ್ಧ ಪ್ರವಾಸಿ ಧಾರ್ಮಿಕ ಕೇಂದ್ರವಾದ ಭೂತಪ್ಪನ ಗುಡಿಯಿಂದ ಉತ್ತರಕ್ಕೆ ೨ ಕಿಮೀ ದೂರದಲ್ಲಿದೆ. ಕುಂಬಾರ ವ್ಯಕ್ತಿಯೊಬ್ಬರು ತಮ್ಮ ಕುಲಮೂಲ ಕಸುಬಿನಿಂದ ಈ ಸ್ಥಳದಲ್ಲಿ ನೆಲೆಸಿ ಒಕ್ಕಲಾದುದರಿಂದ ಕುಂಬಾರಹಳ್ಳಿ ಎಂಬ ಹೆಸರಾಗಿದೆ. ಆದರೆ ಇಂದು ಕುಂಬಾರರ ಒಂದು ಕುಟುಂಬವೂ ಇಲ್ಲಿ ಇರುವುದಿಲ್ಲ. ಜಾತಿ ಹೆಸರಿನ ೧೯ ಹಳ್ಳಿಗಳು ಸಿರಾ ತಾಲ್ಲೂಕಿನಲ್ಲಿದೆ. ಆ ಸ್ಥಳಗಳಲ್ಲಿ ಜಾತಿ ಹೆಸರಿನ ಅಥವಾ ಊರಿನ ಉಗಮಕ್ಕೆ ಪ್ರೇರಕರಾದ ಆ ಜಾತಿಯವರು ವಾಸಿಸುವುದಿಲ್ಲ. ನಾನಾ ನಿಮಿತ್ತವಾಗಿ ಬೇರೆ ಬೇರೆ ಕಡೆ ವಲಸೆ ಹೋಗಿರುವ ಸಂದರ್ಭಗಳೇ ಅಧಿಕ. ಕುಂಬಾರಹಳ್ಳಿಯ ಕತೆಯೂ ಇದೇ ಮಾದರಿಯದ್ದು. ಕುಂಬಾರಹಳ್ಳಿ ಹೆಸರಿನ ಎರಡು ಹಳ್ಳಿಗಳು ಸಿರಾ ತಾಲೂಕಿನಲ್ಲಿವೆ. ಭೂತಪ್ಪನ ಗುಡಿ ಕುಂಬಾರಹಳ್ಳಿ ಎಂದೇ ಅನ್ವರ್ಥವಾಗಿ ಕರೆಯಲ್ಪಡುವ ಈ ಗ್ರಾಮ ಕಂದಾಯ ಗ್ರಾಮವಾಗಿದೆ. ಭೌಗೋಳಿಕವಾಗಿ ೩೩೮.೬೮ ಹೆಕ್ಟೇರ್ ವಿಸ್ತೀರ್ಣ ಹೊಂದಿರುವ ಈ ಗ್ರಾಮ ಗೊಲ್ಲರಹಟ್ಟಿ ಎಂಬ ಮಜರೆ ಗ್ರಾಮವನ್ನು ಒಳಗೊಂಡಿದೆ.

೧೮೩ ಕುಟುಂಬಗಳು ನೆಲೆಸಿರುವ ಇಲ್ಲಿನ ಒಟ್ಟು ಜನಸಂಖ್ಯೆ ೯೦೮. ಕುಂಚಿಟಿಗ ಜನಾಂಗದವರು ದೊಡ್ಡ ಸಮುದಾಯವಾಗಿದ್ದು ಮಧ್ಯ ಸಮುದಾಯವಾಗಿ ಕುರುಬರು, ಆದಿಕರ್ನಾಟಕದವರು ಸಣ್ಣ ಸಮುದಾಯವಾಗಿ ಈಡಿಗರು, ಮಡಿವಾಳರು ಇದ್ದಾರೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ ಹಾಗೂ ಶೀಟ್ ಹೊದಿಸಿ ಮನೆಗಳನ್ನು ನಿರ್ಮಿಸಲಾಗಿದೆ. ಜನತಾ, ಆಶ್ರಯ ಸೌಲಭ್ಯ ಪಡೆದ ೧೨ ಮನೆಗಳಿವೆ. ಭಾಗಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ಮನೆಗಳಿವೆ.

ವಾಡಿಕೆ ಮಳೆ ೪೭೧.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ, ದೋಸೆ, ಚಪಾತಿ, ಉಪ್ಪಿಟ್ಟು ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದೇವತೆ ಕೊಲ್ಲಾಪುರದಮ್ಮನ ಊರಬ್ಬದ ಸಂದರ್ಭದಲ್ಲಿ ಬಾಡೂಟ ವಿಶೇಷವಾಗಿರುತ್ತದೆ. ಸಾಂದರ್ಭಿಕವಾಗಿ ಮಾಂಸ, ಮೀನು ಆಹಾರವಾಗಿ ಬಳಸುತ್ತಾರೆ.

ಸಂಪ್ರದಾಯ ರೈತಾಪಿ ಬದುಕು ಆಧುನಿಕ ಶೈಲಿಯ ಜೀವನ ಕ್ರಮದ ಸಮ್ಮಿಶ್ರಣದ ಈ ಗ್ರಾಮದಲ್ಲಿ ಎತ್ತಿನ ಗಾಡಿಗಳಿವೆ. ಟ್ರ್ಯಕ್ಟರ್, ಟೆಂಪೋ, ಆಟೋರಿಕ್ಷಾ ಸಹ ಇವೆ. ಶೇಂಗಾ ಈ ಗ್ರಾಮದ ಪ್ರಮುಖ ಬೆಳೆ. ರಾಗಿ, ಭತ್ತ, ಹತ್ತಿ, ತೊಗರಿ, ಹುರುಳಿ ಬೆಳೆಗಳನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಶೇಂಗಾ, ತೆಂಗು, ಸೂರ್ಯಕಾಂತಿ ಬಳಕೆಯಲ್ಲಿದೆ. ವಿರಳವಾಗಿ ಹುಣಸೆಹಣ್ಣು, ಅಡಿಕೆ ವ್ಯಾಪಾರವೂ ಕಂಡುಬರುತ್ತದೆ. ಒಂದು ಹಾಲಿನ ಡೈರಿಯಿದ್ದು ೨೪೦ ಲೀ. ಹಾಲಿನ ಸಂಗ್ರಹವಾಗುತ್ತಿದೆ.

ಶಿಕ್ಷಕರು, ನೀರು ಸೇವಕ ಸೇರಿ ಇಬ್ಬರು ನೌಕರರು ಈ ಗ್ರಾಮದಲ್ಲಿದ್ದು ಒಂದು ಇಟ್ಟಿಗೆ ಫ್ಯಾಕ್ಟರಿಯೂ ಇದೆ. ಇದರಲ್ಲಿ ೨೦ ಜನ ಕಾರ್ಮಿಕರು ಸರಾಸರಿ ಪ್ರಮಾಣದಲ್ಲಿ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಊಟದ ಎಲೆ ತಯಾರಿಕೆ, ಬೀಡಿ ಕಟ್ಟುವುದು, ಟೈಲರಿಂಗ್ ಮಹಿಳೆಯರ ಉಪಕಸುಬಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿರುವ ಈ ಹಳ್ಳಿ ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ, ತಾವರೆಕೆರೆ ಜಿಲ್ಲಾ ಪಂಚಾಯ್ತಿ ಹಾಗೂ ಹೊಸೂರು ಗ್ರಾಮ ಪಂಚಾಯ್ತಿಗೆ ಸೇರಿದೆ. ಈ ಗ್ರಾಮದಲ್ಲಿ ಇಬ್ಬರು ಗ್ರಾಮ ಪಂಚಾಯ್ತಿ ಸದಸ್ಯರು ಆಯ್ಕೆಯಾಗಿದ್ದಾರೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಹೊಂದಿದ್ದು, ನೀರು ಬಿಡುವ ಗ್ರಾಮಪಂಚಾಯ್ತಿ ನೌಕರನೂ ಸೇರಿದಂತೆ ಒಟ್ಟು ಐದು ಜನ ಸರ್ಕಾರಿ ನೌಕರರಿದ್ದಾರೆ. ಈ ಗ್ರಾಮದ ಸಾಕ್ಷರತೆಯ ಪ್ರಮಾಣ ೫೩.೬% ಇದ್ದು ಇಲ್ಲಿಯೂ ಪುರುಷರೇ ಮೇಲುಗೈ ಸಾಧಿಸಿದ್ದಾರೆ. ಶೇ.೬೫.೯ ರಷ್ಟು ಪುರುಷ ಸಾಕ್ಷರರಿದ್ದರೂ ಮಹಿಳೆಯರು ೪೩.೩ ರಷ್ಟಿದ್ದಾರೆ. ಪ್ರೌಢಶಾಲೆಗೆ ಭೂತಪ್ಪನ ಗುಡಿ ಬಡಾವಣೆ ಹಾಗೂ ಕಾಲೇಜು ಶಿಕ್ಷಣಕ್ಕೆ ತಾವರೆಕೆರೆ–ಸಿರಾ ಅವಲಂಬಿಸಿದ್ದಾರೆ. ಜಿಲ್ಲಾ ಪಂಚಾಯ್ತಿ ಮಣ್ಣಿನ ರಸ್ತೆ, ಭೂತಪ್ಪನ ಗುಡಿಯಿಂದ ಕುಂಬಾರಹಳ್ಳಿ–ಬೇವಿನಹಳ್ಳಿ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುತ್ತದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಯುಗಾದಿ, ದಸರಾ, ದೀಪಾವಳಿ, ಗೌರಿ, ರಾಮನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕುಂಬಾರಹಳ್ಳಿ ಗೊಲ್ಲರಹಟ್ಟಿ

ಕುಂಬಾರಹಳ್ಳಿಯ ಮುಖ್ಯ ಗ್ರಾಮಕ್ಕೆ ಹೊಂದಿಕೊಂಡಿರುವ ಗೊಲ್ಲರಹಟ್ಟಿ ಒಂದು ಮಜರೆ ಗ್ರಾಮ. ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೮ ಕಿಮೀ ದೂರದಲ್ಲಿದ್ದು ಸಿರಾ–

ತಾವರೆಕೆರೆ ರಸ್ತೆಯಲ್ಲಿ ತಾವರೆಕೆರೆಯಿಂದ ಹೊಸೂರು ಮಾರ್ಗದ ರಸ್ತೆಯಲ್ಲಿ ಭೂತಪ್ಪನಗುಡಿ ದೇವಸ್ಥಾನದ ಕೇಂದ್ರದಿಂದ ಬಲಭಾಗಕ್ಕೆ ೨ ಕಿಮೀ ದೂರದಲ್ಲಿದೆ. ಸಿರಾ–ಚಂಗಾವರ ರಸ್ತೆಯಿಂದಲೂ ಈ ಗ್ರಾಮಕ್ಕೆ ಬರಬಹುದು. ಜಾತಿ ಮೂಲದಿಂದ ರೂಪಿತವಾದ ಈ ಹಳ್ಳಿಯ ಮುಖ್ಯ ಗ್ರಾಮಕ್ಕೆ ಅನತಿ ದೂರದಲ್ಲಿರುವ ಕಾಡುಗೊಲ್ಲರ ಹಟ್ಟಿ ಇದಾಗಿದ್ದು ೨೨ ಮನೆಗಳನ್ನು ಹೊಂದಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೭೩ ಹೆಕ್ಟೇರ್ (೩೩೮.೬೮ ಮುಖ್ಯ ಗ್ರಾಮದ ವ್ಯಾಪ್ತಿಗೆ ಸೇರಿಕೊಂಡಂತೆ) ಬಯಲು ಪ್ರದೇಶವಾದ ಈ ಪ್ರದೇಶ ಅಚ್ಚ ಕರಿ ಮಿಶ್ರಿತ ಕೆಂಪು ನೆಲ.

ಹಸು, ಎಮ್ಮೆ, ಕುರಿ, ಕೋಳಿ ಈ ಹಟ್ಟಿಯ ಸಾಕುಪ್ರಾಣಿಗಳು. ಸರಾಸರಿ ೪೬೮.೯ ಮಿಮೀ ಮಳೆ ಆಗಿದ್ದು ಉಷ್ಣಾಂಶ ೩೪–೩೭ ಡಿಗ್ರಿ ಹಾಗೂ ಚಳಿ ೯–೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಒಂದು ಕೈಪಂಪಿನ ಸಹಾಯದಿಂದ ಸಿಸ್ಟರ್ನ್‌ಗೆ ನೀರು ತುಂಬಿಸಿಕೊಂಡು ಕುಡಿಯುವುದಕ್ಕೆ ಬಳಸಿಕೊಳ್ಳಲಾಗುವುದು. ಈರಣ್ಣ, ಕುಕ್ಕಲಾಡಮ್ಮ ಎಂಬ ಎರಡು ದೇವಸ್ಥಾನದ ಪುಟ್ಟ ಪೌಳಿಗಳಿದ್ದು ಊರ ಹೊರಭಾಗದಲ್ಲಿ ಕೊಲ್ಲಾಪುರದಮ್ಮನ ಗುಡಿಯಿದೆ. ಪ್ರತಿವರ್ಷ ಕೊಲ್ಲಾಪುರದಮ್ಮನ ಉತ್ಸವ, ಆರತಿ, ಬಾನ, ಬ್ಯಾಟೆ ನಡೆಯುತ್ತದೆ. ಆದರೂ ಕಾಡುಗೊಲ್ಲರು ಕುಲದೈವವಾಗಿ ಈರಣ್ಣ ಹಾಗೂ ಶಕ್ತಿದೇವತೆಯಾಗಿ ಕುಕ್ಕಲಾಡಮ್ಮಳ ಆರಾಧನೆ ಮಾಡುತ್ತಾರೆ. ಕುರಿಗಾಹಿಗಳಾದ ಕಾಡುಗೊಲ್ಲರು ಕುರಿಗಳ ಹುಲ್ಲು ನೀರಿಗಾಗಿ ಪರಸ್ಥಳಕ್ಕೆ ಹೋದಾಗ ಮೈಸೂರು ಸೀಮೆಯ ಕುಕ್ಕಲಾಡಮ್ಮನ ಪ್ರೇರಣೆ, ಪ್ರಭಾವ, ಶಕ್ತಿ ಸಾಮರ್ಥ್ಯ ಮೆಚ್ಚಿ ಅದಕ್ಕೆ ಒಲಿದು ಬೆಣಚುಕಲ್ಲಿನ ಮೂಲಕ ಕುಕ್ಕಲಾಡಮ್ಮಳ ಒಂದು ಪುಟ್ಟ ಪೌಳಿ, ಗುಡಿ ನಿರ್ಮಿಸಿ ಆರಾಧಿಸುವ ಸಂಪ್ರದಾಯವಿದೆ. ಈರಣ್ಣ ದೇವರನ್ನು ಕುನ್ನಿಕೆರೆ ಈರಣ್ಣ ಎಂತಲೂ ಕರೆಯುತ್ತಾರೆ. ಹಿರಿಯೂರು ತಾಲ್ಲೂಕಿನ ಕುನ್ನಿಕೆರೆಯ ಮೂಲ ದೇವರ ಒಂದು ಭಾಗವಾಗಿ ಈರಣ್ಣ ದೇವರ ಆರಾಧನೆ ಇಲ್ಲಿಯೂ ನಡೆಯುತ್ತದೆ.

ಸಂಪೂರ್ಣವಾಗಿ ಕಾಡುಗೊಲ್ಲ ಕುಟುಂಬಗಳಿರುವ ಈ ಹಟ್ಟಿಯಲ್ಲಿ ಕನ್ನಡ ಮಾತು ಹೊರತು ಬೇರೆ ಭಾಷೆಯ ಸಂಪರ್ಕ ಇರುವುದಿಲ್ಲ.

ರಾಗಿಮುದ್ದೆ ಅನ್ನ ಕುರಿಯ ಹಾಲಿನ ಮೊಸರು, ಮಜ್ಜಿಗೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೇಂಗಾ, ರಾಗಿ, ಭತ್ತ, ಸೂರ್ಯಕಾಂತಿ, ಹತ್ತಿ ಈ ಗ್ರಾಮದ ಮುಖ್ಯ ಬೆಳೆಗಳು. ಕುರಿ ಸಾಕಾಣಿಕೆ, ವ್ಯಾಪಾರ ಮಾಡುವ ಆರ್ಥಿಕ ವಹಿವಾಟು ಇಲ್ಲಿದೆ. ಸಾಂಪ್ರದಾಯಿಕ ಎತ್ತಿನ ಬಂಡಿ, ಸ್ಕೂಟರ್ ಬಳಕೆ ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ, ತಾವರೆಕೆರೆ ಜಿಲ್ಲಾ ಪಂಚಾಯ್ತಿ ಹಾಗೂ ಹೊಸೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿರುವ ಈ ಹಳ್ಳಿಯಲ್ಲಿ ಆಶ್ರಯ, ಜನತಾ ಯೋಜನೆ, ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಪುಟ್ಟ ಅಂಗಡಿ ಇದೆ. ಶಾಲೆಗೆ ಪಕ್ಕದ ಕುಂಬಾರಹಳ್ಳಿಗೆ ಬಂದು ಮಕ್ಕಳು ಕಲಿಯುತ್ತಿದ್ದಾರೆ. ಯುಗಾದಿ, ದೀಪಾವಳಿ, ಮಹಾನವಮಿ ಇತರ ಪ್ರಮುಖ ಹಬ್ಬಗಳು.

## ಕುದುರೆಕುಂಟೆ

ಕುದುರೆಕುಂಟೆ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೬ ಕಿಮೀ ದೂರದಲ್ಲಿದೆ. ಮುಖ್ಯ ಗ್ರಾಮವಾದ ಚಂಗಾರದಿಂದ ಎಡಕ್ಕೆ ೩ ಕಿಮೀ ದೂರದಲ್ಲಿದೆ. ಇದೊಂದು ಹುಲ್ಲುಗಾವಲಿನ ಪ್ರದೇಶ. ಜೊತೆಗೆ ಇಲ್ಲೊಂದು ಕೆರೆ. ಈಕೆಗೆ ಕುದುರೆಗಳು ನೀರು ಕುಡಿಯಲು ಬರುತ್ತಿದ್ದ ಕಾರಣ ಕುದುರೆಕುಂಟೆ ಆಗಿದೆ ಎಂದು ಗ್ರಾಮದ ಹಿರಿಯರ ಅಭಿಮತವಾಗಿದೆ. ಇನ್ನೊಂದು ಮೂಲದ ಪ್ರಕಾರ ಇದೇ ಗ್ರಾಮದ ಹಳ್ಳಿಕಾರ ಗೌಡರು ಕುದುರೆ ಸಾಕಿದ್ದು ಅವುಗಳು ಈ ಕೆರೆಯ ಅಂಗಳದಲ್ಲಿ ಸದಾ ಮೇಯುತ್ತಿದ್ದ ಕಾರಣ ಕುದುರೆಯ ಕೆರೆ ಅದೇ ಹೆಸರಿನಲ್ಲಿ ಗ್ರಾಮವನ್ನು ಕರೆಯಲಾಗಿದೆ.

ಮರಳು ಕಪ್ಪು ಮಿಶ್ರಿತ ಭೂಮಿ ಹೊಂದಿದೆ. ಈ ಪರಿಸರದಲ್ಲಿ ನರಿ, ತೋಳ, ಮೊಲ, ಮುಂಗುಸಿ ಕಂಡುಬರುವ ಕಾಡುಪ್ರಾಣಿಗಳು. ಹಸು, ಹಳ್ಳಿಕಾರ್ ತಳಿಯ ಎತ್ತು ಹಾಗೂ ಕುರಿ ಮೇಕೆಯನ್ನು ಸಾಕುತ್ತಾರೆ. ಕಾಗೆ, ಗುಬ್ಬಚ್ಚಿ, ಗಿಳಿ, ಪಾರಿವಾಳ, ಕೋಗಿಲೆ, ಗೊರವಂಕಗಳನ್ನು ಕಾಡುಪಕ್ಷಿಗಳಾಗಿವೆ. ಕೋಳಿ ಸಾಕಾಣಿಕೆಯೂ ಇದೆ. ವಾರ್ಷಿಕ ಸರಾಸರಿ ಮಳೆ ಪ್ರಮಾಣ ೪೬೩ ಮಿಮೀ ಆಗಿದ್ದು ಉಷ್ಣಾಂಶ ೩೬ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ಬೋರ್‌ವೆಲ್ ಹಾಗೂ ಗ್ರಾಮ ಪಂಚಾಯ್ತಿಯಿಂದ ಒದಗಿಸುವ ಟ್ಯಾಂಕ್‌ವಾಟರ್ ಬಳಸುತ್ತಾರೆ. ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಹಳ್ಳಿಕಾರ ಒಕ್ಕಲಿಗರು ಈ ಗ್ರಾಮದ ಜನಾಂಗವಾಗಿದ್ದು ೮ ಮನೆಗಳಿವೆ. ಹೆಂಚಿನ, ಶೀಟಿನ ಮನೆ ಮಾತ್ರ ಕಂಡುಬರುತ್ತವೆ. ೪ ಮನೆಗಳಲ್ಲಿ ಶೌಚಾಲಯ ಸೌಲಭ್ಯವಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನ ಬಳಸುತ್ತಾರೆ. ಶೇಂಗಾ ಮುಖ್ಯ ಬೆಳೆ. ರಾಗಿ, ತೊಗರಿ, ಅವರೆ, ನವಣೆ, ಹುರುಳಿ ಆಹಾರ ಬೆಳೆಗಳು. ತೋಟಗಾರಿಕೆಯಾಗಿ ತೆಂಗು, ಅಡಿಕೆ ಬೆಳೆದಿದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಗೌಡಗೆರೆ ತಾಲ್ಲೂಕು ಹಾಗೂ ಬೇವಿನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಶಾಲೆ ಇರುವುದಿಲ್ಲ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದೇವತೆ ಮಾರಮ್ಮನ ಆರಾಧನೆ, ಊರ ಹಬ್ಬವಾಗಿ ನಡೆಯುತ್ತದೆ. ಬಾನ, ಆರತಿ, ಬಲಿ ಇದ್ದು ವಿಜೃಂಭಣೆಯಿಂದ ನಡೆಯುತ್ತದೆ. ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ದೀಪಾವಳಿ, ಮಹಾನವಮಿ ಹಬ್ಬಗಳನ್ನು ಆಚರಿಸುತ್ತಾರೆ.

## ಕರಿದಾಸರಹಳ್ಳಿ

ಕರಿದಾಸರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೮ ಕಿ.ಮೀ ದೂರದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು, ಚಿರತಹಳ್ಳಿ ಮುಖ್ಯ ಗ್ರಾಮವಾಗಿದೆ. ಕರಿದಾಸರಹಳ್ಳಿ ಕರ್ನಾಟಕ– ಆಂಧ್ರ ಪ್ರದೇಶದ ಗಡಿಯ ಕೊನೆಯ ಗ್ರಾಮವಾಗಿದ್ದು, ಸಿರಾ ತಾಲ್ಲೂಕು ಹಾಗೂ ಆಂಧ್ರ ಪ್ರದೇಶದ ಮಡಕಸಿರಾ ತಾಲ್ಲೂಕಿನ ಅಮರಾಪುರಕ್ಕೆ ಹೊಂದಿಕೊಂಡಂತಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೧೫೫೮.೩೦ ಹೆಕ್ಟೇರ್ ಇದ್ದು, ಇದು ಮುಖ್ಯ ಗ್ರಾಮ ಚಿರತಹಳ್ಳಿಯಲ್ಲಿ ಹಂಚಿಕೆಯಾಗಿದೆ. ಕರಿದಾಸರಹಳ್ಳಿ ಹೆಸರೇ ಹೇಳುವಂತೆ, ದಾಸ ಪರಂಪರೆಯವರು ಇಲ್ಲಿ ವಾಸಿಸುತ್ತಿದ್ದ ಕಾರಣ ದಾಸರಹಳ್ಳಿ ಎಂದಿದ್ದು. ಕಪ್ಪು ಜನರು ಇವರಾದುದರಿಂದ ಕರಿ ದಾಸರು ಸೇರಿ ಮುಂದೆ ಕರಿದಾಸರಹಳ್ಳಿ ಆಗಿದೆ ಎಂದು ನರಸಿಂಹಯ್ಯ ಅಭಿಪ್ರಾಯ ಪಡುತ್ತಾರೆ.

ಕರಿದಾಸರಹಳ್ಳಿ ಒಂದು ಬಯಲು ಪ್ರದೇಶ. ಈ ಪರಿಸರದಲ್ಲಿ ನರಿ, ಕಾಡು ಹಂದಿ, ಮುಂಗುಸಿ, ತೋಳ, ಜಿಂಕೆ ಮೊದಲಾದ ಕಾಡು ಪ್ರಾಣಿಗಳು ಕಂಡು ಬರುತ್ತವೆ. ಅಂತೆಯೇ ಪಕ್ಷಿಗಳಾದ ಗಿಳಿ, ಕಾಗೆ, ಕೋಗಿಲೆ, ಗೊರವಂಕ, ಮರಕುಟಿಕ ಮೊದಲಾದವು ಈ ಪರಿಸರದಲ್ಲಿವೆ. ಸಾಕು ಪ್ರಾಣಿಗಳಾದ ಎತ್ತು, ಹಸು, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ. ಸದಾ ಬಿಸಿಲು–ಬರಕ್ಕೆ ಹೆಸರಾದ ಈ ಪರಿಸರದಲ್ಲಿ ಮಳೆ ಕಡಿಮೆ.

ವಾರ್ಷಿಕ ಸರಾಸರಿ ೪೬೩ ಮಿ.ಮೀ. ಅದಕ್ಕಿಂತ ಕಡಿಮೆ ಮಿ.ಮೀ ಮಳೆ ಬೀಳುತ್ತದೆ. ಹಾಗಾಗಿ ಧಗೆಯೂ ಕಾಣಬಹುದಾಗಿದೆ. ಜೊತೆಗೆ ಚಳಿಯೂ ಅಧಿಕ ೧೨೦ ಸೆಂ. ಇರುತ್ತದೆ. ಕುಡಿಯುವ ನೀರಿಗೆ ತಡಕಲೂರು ಗ್ರಾಮ ಪಂಚಾಯಿತಿಯಿಂದ ವ್ಯವಸ್ಥೆ ಕೂಡಿದ್ದು ಕೊಳವೆ ಬಾವಿಗಳನ್ನು ಕೊರೆಯಿಸಿ, ಮಿನಿಟ್ಯಾಂಕ್‌ಗಳಲ್ಲಿ ತುಂಬಿಸಿ ಅದರ ಸಹಾಯದಿಂದ ನೀರು ಬಿಡಲಾಗುತ್ತಿದೆ. ಗ್ರಾಮದಲ್ಲಿ ೨ ಕೈ ಪಂಪುಗಳೂ ಇವೆ.

ಕುಂಚಿಟಿಗ, ಆದಿಕರ್ನಾಟಕ, ಗೊಲ್ಲರು, ಕುರುಬರು, ಜೈನರು, ಬೇಡರು, ವೈಶ್ಯರು, ಅಗಸರ ಮನೆಗಳಿವೆ. ಇವುಗಳಲ್ಲಿ ಕುಂಚಿಟಿಗರು ದೊಡ್ಡ ಕಲ್ಲಿನ, ಹೆಂಚಿನ, ಮಣ್ಣಿನ, ಶೀಟಿನ ಮನೆಗಳಿವೆ. ಆಶ್ರಯ, ಅಂಬೇಡ್ಕರ್ ಯೋಜನೆಯ ೨೩ ಫಲಾನುಭವಿಗಳಿದ್ದಾರೆ. ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ೪೮ ಮನೆಯಲ್ಲಿ ಸಾಂಪ್ರದಾಯಿಕ ಬಳಕೆಯಿದೆ. ೧೩೦ ಮನೆಗಳಿದ್ದು ೭೭೨ ಜನಸಂಖ್ಯೆ ಇದೆ.

ರಾಗಿ ಮುದ್ದೆ ಗ್ರಾಮದ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿ, ಟ್ರ್ಯಕ್ಟರ್, ಮಿನಿಟೆಂಪೋ, ದ್ವಿಚಕ್ರವಾಹನಗಳಿವೆ.

ಶೇಂಗಾ ಪ್ರಮುಖ ಬೆಳೆಯಾಗಿದ್ದು, ರಾಗಿ, ಅಲಸಂದಿ, ತೊಗರಿ, ಹುರುಳಿ, ಮುಖ್ಯ ಆಹಾರ ಬೆಳೆಯಾಗಿದೆ. ಹತ್ತಿ, ಸೂರ್ಯಕಾಂತಿ, ತೋಟದ ಬೆಳೆಗಳಾದ ಅಡಿಕೆ, ತೆಂಗು ಈ ಭಾಗದ ವ್ಯಾಪಾರಿ ಬೆಳೆಯಾಗಿದೆ. ಹುಣಸೆಹಣ್ಣಿನ ವ್ಯಾಪಾರ ಇಲ್ಲಿ ಮುಖ್ಯ ವಾಣಿಜ್ಯ ಬೆಳೆಯಾಗಿದೆ. ಉಳಿದಂತೆ ಬೀಡಿ ಸುತ್ತುವುದು, ಎಲೆ ಕಟ್ಟುವುದು, ಸಣ್ಣ ಉದ್ದಿಮೆಯಾಗಿದೆ.

ವೈದ್ಯರಾದ ಡಾ. ಭಾಗ್ಯಮ್ಮ, ಇಸ್ರೋ ಇಂಜಿನಿಯರ್ ಶಿವಣ್ಣ, ಪುರುಷೋತ್ತಮ, ಜಗನ್ನಾಥ, ಉಪನಿರ್ದೇಶಕರು ಗಣಿ ಮತ್ತು ಭೂಗರ್ಭ ಇಲಾಖೆ ಕೆ.ತಿಮ್ಮಪ್ಪ ಈ ಬಗೆಯ ಪ್ರಮುಖ ಉದ್ಯೋಗದಲ್ಲಿರುವುದು ಈ ಗ್ರಾಮದ ವಿಶೇಷವಾಗಿದೆ. ಒಟ್ಟು ೧೪ ಜನ ಸರ್ಕಾರಿ ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಕಡಕಲೂರು ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುವ ಈ ಗ್ರಾಮ, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಸಿರಾ–ಹೈದರಾಬಾದ್, ಹಿಂದೂಪುರ, ಅನಂತಪುರ ಮಾರ್ಗವಾಗಿ ರಾಜ್ಯ ರಸ್ತೆ ಸೌಲಭ್ಯವಿದೆ.

ಶೈಕ್ಷಣಿಕವಾಗಿ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಅಂಗನವಾಡಿ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಪಶು ಆಸ್ಪತ್ರೆಗಳಿವೆ. ಆರು ಸ್ತ್ರೀ ಶಕ್ತಿ ಸಂಘಗಳಿದ್ದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ೩ ತಂಡಗಳಿವೆ. ಶಾಲೆಯಲ್ಲಿ ೧೯೯ ಮಕ್ಕಳು ಕಲಿಯುತ್ತಿದ್ದು, ಮೂವರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಗ್ರಾಮದ ಸಾಕ್ಷರತೆ ಪ್ರಮಾಣ ೬೩.೪ ಇದ್ದು, ಪುರುಷರು ೭೭.೪ ಇದ್ದರೆ, ಮಹಿಳೆಯರು ೪೭.೯ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ವೇತನ, ಅಂಗವಿಕಲ ವೇತನ, ವಿಧವಾ ವೇತನ ಸೌಲಭ್ಯ ಪಡೆಯುತ್ತಿದ್ದು, ಗ್ರಾಮದಲ್ಲಿ ೬ ಪೆಟ್ಟಿಗೆ ಅಂಗಡಿ, ೩ ಮಿನಿ ಹೋಟೆಲ್‌ಗಳಿವೆ. ಒಂದು ಸಮುದಾಯ ಭವನವಿದ್ದು, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಗ್ರಾಮದ ಒಳಗೆ ೨ ವೀರಗಲ್ಲುಗಳು ಕಂಡ ಬರುತ್ತಿದ್ದು, ಇವು ನೊಳಂಬರ ಕಾಲದವು. ತುರುಗೋಳ ಮಾದರಿಯಲ್ಲಿ ಅಸ್ಪಷ್ಟವಾಗಿರುವ ಈ ಕಲ್ಲು ಕಪ್ಪು–ಹಸಿರು ವರ್ಣದಿಂದ ಕೂಡಿದೆ. ಸೂರ್ಯ, ಚಂದ್ರ, ಚಿತ್ರವಿರುವ ಕೊನೆಯಲ್ಲಿ ದೇವಲೋಕದ ಪಯಣದ ಚಿತ್ರಣವಿದೆ. ಬೇವು–ಅರಳಿಯ ಕಟ್ಟೆ ಪೂಜಾ ಸ್ಥಳವಾಗಿದೆ. ಮುತ್ತುರಾಯನ ಪೌಳಿ ಇದ್ದು, ಮಳೆದೇವರು ಎಂದು ಪೂಜಿಸ ಲಾಗುತ್ತಿದೆ.

ಗ್ರಾಮದಲ್ಲಿ ತಮಟೆ ಜೂಲಯ್ಯ, ನರಸಿಂಹಯ್ಯ, ಕದರಯ್ಯ ಉತ್ತಮ ತಮಟೆ ಕಲಾವಿದರು. ಇವರು ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ಕೆ. ನರಸಪ್ಪ ಈ ಗ್ರಾಮದ ಕವಿ. ೨ ಪುಸ್ತಕ ಪ್ರಕಟಿಸಿದ್ದಾರೆ.

ಮುತ್ತರಾಯ, ಶನಿದೇವರು, ಕರಿಯಮ್ಮ ಈ ಗ್ರಾಮದ ಮುಖ್ಯ ದೇವಸ್ಥಾನಗಳು. ಮಳೆ ದೇವರಾಗಿ ಮುತ್ತುರಾಯನ ಆರಾಧನೆ ಇದ್ದರೆ ಗ್ರಾಮದೇವತೆ ಕರಿಯಮ್ಮ ವಾರ್ಷಿಕವಾಗಿ ಆರತಿ, ಬಾನ, ಬಲಿ, ಹರಕೆಯ ಸಂಪ್ರದಾಯವಿದೆ. ಊರಹಬ್ಬವಾಗಿ, ವಿಜೃಂಭಣೆಯಿಂದ ನಡೆಸುತ್ತಾರೆ. ಉಳಿದಂತೆ ಯುಗಾದಿ, ಮಹಾನವಮಿ, ಕುಂತಿಮ್ಮ, ಗೌರಮ್ಮ, ದೀಪಾವಳಿ ಹಬ್ಬಗಳು ವಿಜೃಂಭಣೆಯಿಂದ ಆಚರಿಸುವ ಹಬ್ಬಗಳು. ಸಮೀಪದ ಹೇಮಾವತಿ ಸಿದ್ದೇಶ್ವರ ಜಾತ್ರೆಯ ದಿನ ದೇವರಿಗೆ ಎದುರೆತ್ತಿ ಆರತಿ ಮಾಡುವ ಸಂಪ್ರದಾಯವೂ ಈ ಗ್ರಾಮದಲ್ಲಿದೆ.

## ಕುರುಬರ ರಾಮನಹಳ್ಳಿ

ಕುರುಬರ ರಾಮನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೦ ಕಿ.ಮೀ. ದೂರದಲ್ಲಿದೆ. ಇದು ಚಿಕ್ಕಬಾಣಗೆರೆಯ ಉಪಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೨೭೩ ಹೆಕ್ಟೇರ್. ಕುರುಬರ–ರಾಮಣ್ಣ ಎಂಬುವವರ ಹೆಸರಲ್ಲಿ ಈ ಗ್ರಾಮ ರಚನೆಯಾಗಿದ್ದು ಇಂದಿಗೂ ಕುರುಬರ ಹೊಲ, ಗುಡೀಬೀದಿ ಎಂದು ಕರೆಯಲಾಗುವುದು. ಕುರುಬರು ಇಲ್ಲಿನ ಮೈಲಾರಲಿಂಗ ದೇವರ ಅರ್ಚಕರಾಗಿದ್ದು, ಪ್ರತಿ ಭಾನುವಾರ ಬರಗೂರಿನಿಂದ ಬಂದು ಪೂಜೆ ಮಾಡುತ್ತಿರುವುದು ವಿಶೇಷ.

ಬಯಲು ಪ್ರದೇಶ ಕುರುಚಲು ಗಿಡ, ಪೊದೆಗಳ ಗಿಡ ಪ್ರದೇಶವಾಗಿದೆ. ಜೊತೆಗೆ ನರಿ, ತೋಳ, ಮುಂಗುಸಿ, ಮೊಲ, ತೋಳ ಕಂಡು ಬರುತ್ತವೆ. ಜೊತೆಗೆ ಗ್ರಾಮದಲ್ಲಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕು ಪ್ರಾಣಿಗಳು, ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ೪೩೪ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲು ೩೮೦ ಸೆಂ., ಚಳಿ ೧೨೦ ಸೆಂ. ಇದೆ. ಗ್ರಾಮದ ಪೂರ್ವಕ್ಕೆ ಕೆರೆಯಿದ್ದು, ತುಂಬುವುದು ಅಪರೂಪವಾಗಿದೆ. ರೈತರು ಕೃಷಿಗಾಗಿ ೪೮ ಬೋರ್‌ವೆಲ್‌ಗಳಿದ್ದು, ತೋಟ ಗಾರಿಕೆ, ಬೆಳೆಗಳಾಗಿ ಬಳಕೆಯಾಗುತ್ತಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಯೋಜನೆಯ ಅಡಿಯಲ್ಲಿ ನೀರು ಪೂರೈಕೆ ಮಾಡಲಾಗುತ್ತಿದೆ. ಎರಡು ಕೈ ಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರ ದೊಡ್ಡ ಸಮುದಾಯವಾಗಿದ್ದು, ಉಪ್ಪಾರ, ಆದಿಕರ್ನಾಟಕ ಸಣ್ಣ ಸಮುದಾಯವಾಗಿದೆ. ವಿವಿಧ ಪ್ರಕಾರಗಳ ೯೫ ಮನೆಗಳಿದ್ದು, ಇಲ್ಲಿ ಜನತಾ, ಆಶ್ರಯ, ಅಂಬೇಡ್ಕರ್, ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೨೯ ಫಲಾನುಭವಿಗಳಿದ್ದಾರೆ. ೬೪೩ ಜನಸಂಖ್ಯೆ ಹೊಂದಿರುವ ಇಲ್ಲಿ ೩೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಮನೆಗಳು ಕಾಂಕ್ರೀಟ್, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿವೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ಬಾಡೂಟ ವಿಶೇಷ ಭೋಜನವಾಗಿರುತ್ತದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿ, ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ

ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಭತ್ತ, ಜೋಳ ಅಲಸಂದಿ, ತೊಗರಿ ಬೆಳೆಯನ್ನು ಬೆಳೆಯುತ್ತಾರೆ. ಸೂರ್ಯಕಾಂತಿ, ಸಪೋಟ, ತೆಂಗು, ಅಡಿಕೆ, ತೋಟಗಾರಿಕೆ ಬೆಳೆಗಳು. ಹುಣಸೆ ಹಣ್ಣು, ಶೇಂಗಾ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಇಂಜಿನಿಯರ್ ಎಂ.ರಂಗನಾಥ್, ವಲಯ ಅರಣ್ಯಾ ಧಿಕಾರಿ, ದೇವರಾಜು ಸೇರಿ ಆರು ಜನ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಬರಗೂರು ತಾಲ್ಲೂಕು ಪಂಚಾಯಿತಿ ಹಾಗೂ ದೊಡ್ಡ ಬಾಣಗೆರೆ ಗ್ರಾಮ ಪಂಚಾಯಿತಿ ಕೇಂದ್ರಗಳಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ, ಹಾಗೂ ಸರ್ಕಾರಿ ಪ್ರೌಢಶಾಲೆಗಳಿದ್ದು, ಪ್ರಾಥಮಿಕ ಶಾಲೆಯಲ್ಲಿ ೫೪, ಪ್ರೌಢಶಾಲೆಯಲ್ಲಿ ೨೫೮ ಮಕ್ಕಳಿದ್ದಾರೆ. ಈ ಗ್ರಾಮದಲ್ಲಿ ೮ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತಾ, ಪ್ರಮಾಣ ಶೇ. ೫೦% ರಷ್ಟಿದೆ. ಕುರುಬರ ರಾಮನಹಳ್ಳಿ ತಂಡವು ಸ್ವಾತಂತ್ರ್ಯ ಹೋರಾಟಗಾರರಾಗಿ ಸೆರೆವಾರ ಅನುಭವಿಸಿದವರು.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ಮೈಲಾರಲಿಂಗ, ಅಮ್ಮಾಜಮ್ಮ, ಹಾಗೂ ಮಾರಮ್ಮನ ಪೌಳಿ ಇದೆ. ಅಮ್ಮಾಜಮ್ಮನನ್ನು ಮೂಗನಹಳ್ಳಿ ಅಮ್ಮ ಎಂದು, ಗಂಗೆ ಮಾಳಮ್ಮ ಎಂದು ಕರೆಯುತ್ತಾರೆ. ಮೈಲಾರಲಿಂಗನ ಪೂಜಾರಿಕೆ ಕುರುಬರ ಜನಾಂಗದವರಿದ್ದು ಅವರು ಸದ್ಯ ಬರಗೂರಿನಲ್ಲಿ ನೆಲೆಸಿದ್ದಾರೆ. ಗ್ರಾಮದ ಊರ ಹಿಂಭಾಗದ ಜಮೀನಿಗೆ ಇಂದಿಗೂ ಕುರುಬರ ಹೊಲ ಎಂದು ಕರೆಯುತ್ತಾರೆ. ಮಾರಮ್ಮನ ಪೌಳಿ ಇದ್ದು, ಅದರಲ್ಲಿ ರಾಜಪ್ಪ ಎಂಬುವವರು ಗುಡಿಕಾರರಾಗಿದ್ದಾರೆ.

ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮಾರಮ್ಮನ ಊರಹಬ್ಬ ಮಾಡುತ್ತಿದ್ದು, ಬಾನ, ಬಲಿ, ಆರತಿ ಹರಕೆ ಸಂಪ್ರದಾಯವಿದೆ. ಕೃಷ್ಣಪ್ಪ ಎಂಬ ಆದಿಕರ್ನಾಟಕದ ೫೦ ವರ್ಷದ ಜನಪದ ಕಲಾವಿದ ಅತ್ಯುತ್ತಮ ಕೋಲಾಟ ತಂಡ ಕಟ್ಟಿ, ಸಿರಾ, ತುಮಕೂರು ಭಾಗದಲ್ಲಿ ಹೆಸರು ಮಾಡಿದ್ದಾರೆ. ತಮಟೆ, ಕೋಲಾಟದ ಕಲಾವಿದರೂ ಆಗಿದ್ದಾರೆ.

## ಕದಿರೇಹಳ್ಳಿ

ಕದಿರೇಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೦ ಕಿ.ಮೀ. ದೂರದಲ್ಲಿದೆ. ಪಂಚಾಯಿತಿ ಗ್ರಾಮ ಬರಗೂರಿನಿಂದ ೧ಕಿ.ಮೀ. ದೂರದಲ್ಲಿದ್ದು ಬಲಕ್ಕೆ ಕದಿರೇಹಳ್ಳಿ ಗುಡ್ಡ (ದಕ್ಷಿಣಕ್ಕೆ) ಪಶ್ಚಿಮಕ್ಕೆ ಬರಗೂರು ಕೆರೆ, ಪೂರ್ವಕ್ಕೆ ಆಂಧ್ರದ ಗಡಿ ಗ್ರಾಮ. ಹಾರೋಗೆರೆ ಇವುಗಳ ನಡುವೆ ಇದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಒಟ್ಟು ೨೪೯.೮೨ ಹೆಕ್ಟೇರ್ ಭೌಗೋಳಿಕ ಪ್ರದೇಶಗಳನ್ನು ಹೊಂದಿದೆ. ಕದಿರೆ ನರಸಿಂಹಸ್ವಾಮಿ ಈ ಗ್ರಾಮದಲ್ಲಿದ್ದು, ಆ ಹೆಸರಿನಿಂದಲೇ ಹಳ್ಳಿಯನ್ನು ಕರೆಯಲಾಗಿದೆ. ಮರಳು ಮಿಶ್ರಿತ ಕೆಂಪು, ಕರಿ ಭೂ ಲಕ್ಷಣವನ್ನು ಹೊಂದಿರುವ ಇಲ್ಲಿನ ಮೇಲ್ಮೈ. ಶೇಂಗಾ, ಹತ್ತಿ, ರಾಗಿ, ಅಲಸಂದಿ, ತೊಗರಿ ಬೆಳೆಗಳಿವೆ. ಉತ್ತಮ ವಾತಾವರಣವಿದೆ. ಪಕ್ಕದಲ್ಲೇ ಗುಡ್ಡವಿದ್ದು ಈ ಪರಿಸರದಲ್ಲಿ ನರಿ, ಮೊಲ, ಹಂದಿ, ಮುಂಗುಸಿ ಮೊದಲಾದ ಕಾಡು ಪ್ರಾಣಿಗಳಿವೆ. ನವಿಲು, ಕೋಗಿಲೆ, ಗಿಳಿ, ಗೊರವಂಕ ಮೊದಲಾದ ಪಕ್ಷಿ ಸಂಕುಲಗಳಿವೆ.

ಗ್ರಾಮದಲ್ಲಿ ಬೇಸಾಯದ ಹಾಗೂ ಹೈನುಗಾರಿಕೆಯಾಗಿ ನಾಟಿ ಹಸುಗಳನ್ನು ಬೇಸಾಯಕ್ಕೆ ಎತ್ತುಗಳನ್ನು ಸಾಕಿದ್ದಾರೆ. ಕುರಿ, ಮೇಕೆಗಳೂ ಇವೆ. ಕೋಳಿಯನ್ನು ಸಾಕಲಾಗಿದೆ.

ಸರಾಸರಿ ೪೬೩ ಮಿ.ಮೀ. ಮಳೆ ಬೀಳುವ ಈ ಗ್ರಾಮ ಪರಿಸರದಲ್ಲಿ ಬಿಸಿಲು ೩೮ಂ ಸೆಂ. ಇದ್ದರೆ, ಚಳಿ ೧೨ಂ ಸೆಂ. ಇರುತ್ತದೆ. ಗ್ರಾಮಕ್ಕೆ ಹೊಂದಿ ಕೊಂಡಂತೆ ಕೆರೆಯೊಂದಿದ್ದು, ಮಳೆಗಾಲದಲ್ಲಿ ಮಾತ್ರ ನೀರಿರುತ್ತದೆ. ಹಾಗಾಗಿ ಕುಡಿಯುವುದಕ್ಕೆ ಬರಗೂರು ಗ್ರಾಮ ಪಂಚಾಯಿತಿಯಿಂದ, ಕೊಳವೆ ಬಾವಿಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ಒಂದು ಸಿಸ್ಟನ್ ಇದ್ದು ಅದಕ್ಕೆ ಎರಡು ಕೈ ಪಂಪುಗಳಿವೆ.

ಕುಂಚಿಟಿಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ಬೇಡರು, ಗೊಲ್ಲರು, ಉಪ್ಪಾರ ಜನಾಂಗ ಸಣ್ಣ ಸಮುದಾಯವಾಗಿದೆ. ೧೫೫ ಮನೆಗಳಿರುವ ಇಲ್ಲಿ ೧೫ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ಮಂಗಳೂರು ಹೆಂಚಿನ, ಶೀಟಿನ, ಕಲ್ಲಿನ, ಕಾಂಕ್ರೀಟ್ ಸ್ವರೂಪದ ಮನೆಗಳಿವೆ. ೭೫೨ ಜನಸಂಖ್ಯೆ ಇದೆ.

ರಾಗಿ ಮುದ್ದೆ ಗ್ರಾಮದ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಅಮುಖ್ಯ ಆಹಾರವಾಗಿದೆ. ವಿಶೇಷ ಸಂದರ್ಭದಲ್ಲಿ ಬಾಡೂಟ, ಹೋಳಿಗೆ ಊಟದ ವ್ಯವಸ್ಥೆಯೂ ಇರುತ್ತದೆ. ಸೂರ್ಯಕಾಂತಿ, ಹತ್ತಿ, ತೆಂಗು, ಅಡಿಕೆ, ಹುಣಸೇಹಣ್ಣು ಇವುಗಳು ಈ ಗ್ರಾಮದ ವ್ಯಾಪಾರಿ ಬೆಳೆಯಾಗಿದ್ದು, ಬೀಡಿ ಸುತ್ತುವುದು, ಊಟದ ಎಲೆ ಕಟ್ಟುವುದು, ರಾಗಿ ಮಿಲ್–ಸಣ್ಣ ಗೃಹ ಕೈಗಾರಿಕೆಯಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಬರಗೂರು ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಅಂಗನವಾಡಿಯಲ್ಲಿ ೨೦ ಮಕ್ಕಳು, ಶಾಲೆಯಲ್ಲಿ ೩೯ ಮಕ್ಕಳು ಕಲಿಯುತ್ತಿದ್ದಾರೆ. ಒಟ್ಟು ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಎರಡು ಸ್ತ್ರೀ ಶಕ್ತಿ ಕೇಂದ್ರಗಳಿದ್ದು, ವಿಶಾಲಾಕ್ಷಿ, ನರಸಿಂಹಸ್ವಾಮಿ ಎಂಬ ಹೆಸರಿನಿಂದ ಕರೆದು ಕೊಂಡಿದ್ದಾರೆ. ವಿನಾಯಕ ಯುವಕ ಸಂಘವು ಇದ್ದು, ಗಣಪತಿ ಉತ್ಸವವನ್ನು ಮುತುವರ್ಜಿಯಿಂದ ಆಚರಿಸುತ್ತಿದೆ. ರಂಗನಾಥ ಪಿಯು ಕಾಲೇಜಿನ ಪ್ರಿನ್ಸಿಪಾಲ್ ಕೆ.ಸೋಮಶೇಖರ್ ಸೇರಿದಂತೆ ೪ ಜನ ಸರ್ಕಾರಿ ನೌಕರರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ವೇತನ, ಅಂಗವಿಕಲ ವೇತನ, ಹಾಗು ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಚಿಲ್ಲರೆ ಅಂಗಡಿಗಳಿವೆ. ಕದಿರೆ ನರಸಿಂಹಸ್ವಾಮಿ ಅಜ್ಜಪ್ಪ, ಭೂತಪ್ಪ ದೇವಾಲಯ ಗಳಿವೆ. ಯುಗಾದಿ, ಶಿವರಾತ್ರಿ, ಮಹಾನವಮಿ, ಸಂಕ್ರಾಂತಿ, ಗೌರಿಗಣೇಶ ಹಬ್ಬಗಳನ್ನು ಆಚರಿಸುತ್ತಾರೆ. ಒಬ್ಬರು ವೈದ್ಯರು, ಇಬ್ಬರು ಉಪನ್ಯಾಸಕರೂ ಸೇರಿದಂತೆ ೬ ಜನ ಸರ್ಕಾರಿ ನೌಕರಿದ್ದಾರೆ.

## ಕರೇತಿಮ್ಮನಹಳ್ಳಿ

ಕರೇ ತಿಮ್ಮನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೫ ಕಿ.ಮೀ. ದೂರದಲ್ಲಿದೆ. ದೊಡ್ಡ ಬಾಣಗೆರೆಗೆ ಒಂದು ಕಿ.ಮೀ. ದೂರದಲ್ಲಿದೆ. ಇದೊಂದು ಬಾಣಾಗೆರೆಯ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೪೩.೬ ಹೆಕ್ಟೇರ್ ಹೊಂದಿದ್ದು ತಿಮ್ಮಯ್ಯನೆಂಬ ವ್ಯಕ್ತಿಯ ಹೆಸರಿನಲ್ಲಿ ಗ್ರಾಮ ನಿರ್ಮಾಣವಾಗಿದೆ. ತಿಮ್ಮಯ್ಯ ಎಂಬ ಹೆಸರಿನ ಹಲವರು ಈ ಗ್ರಾಮದಲ್ಲಿದ್ದು, ತಿರುಪತಿಯ ತಿಮ್ಮಪ್ಪನ ಒಕ್ಕಲು ತಿಮ್ಮಮ್ಮನ ಹೆಸರಲ್ಲಿಯೇ ಗ್ರಾಮ ಬೆಳೆದಿದೆ. ದಕ್ಷಿಣಕ್ಕೆ ಹಳ್ಳವಿದ್ದು, ಅಲ್ಲಿ ಪ್ರಸಿದ್ಧವಾದ ರಂಗನಾಥ ಸ್ವಾಮಿ ದೇವಾಲಯವಿದೆ. ಇದನ್ನು ಹಳ್ಳದ ರಂಗಸ್ವಾಮಿ ಎಂತಲೇ ಕರೆಯಲಾಗುವುದು. ಶ್ರಾವಣ ಮಾಸದಲ್ಲಿ ರಥೋತ್ಸವ, ಯಜ್ಞ, ಹೋಮ, ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯುತ್ತದೆ. ಬ್ರಾಹ್ಮಣ ಸಮುದಾಯ ಪೂಜಾ ಕಾರ್ಯಗಳಲ್ಲಿ ವಿಶೇಷವಾಗಿ ಪಾಲ್ಗೊಂಡರೂ, ಉಪ್ಪಾರ ಸಮುದಾಯ ದೇವಾಲಯದ ಉಸ್ತುವಾರಿ ನೋಡಿಕೊಳ್ಳುತ್ತದೆ. ಬಯಲು ಪ್ರದೇಶ, ಪೂರ್ವಕ್ಕೆ ಆಂಧ್ರ ಪ್ರದೇಶದ ಗೊಲ್ಲರ ಹಟ್ಟಿ ಇದೆ. ಇದೂ ಸಹ ಕೂಡು ಗ್ರಾಮದಂತಿದೆ.

ಕರ್ನಾಟಕ ಆಂಧ್ರದ ಗಡಿ ನೆಲವಾಗಿ, ಗೆರೆ ಕೊಯ್ದಂತಿರುವ ಕರೇತಿಮ್ಮನಹಳ್ಳಿಯ ಪರಿಸರದಲ್ಲಿ ಕೆಂಪು, ಮರಳು ಮಿಶ್ರಿತ ಬಿಳಿ ಭೂಮಿ ಇದ್ದು, ಕುರುಚಲು ಗಿಡ, ಪೊದೆಗಳಿವೆ. ಹಾಗಾಗಿ ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿ, ಮುಂಗುಸಿ, ಉಡ, ಬಾರುಬೆಕ್ಕು ಕಂಡು ಬರುತ್ತವೆ. ಗ್ರಾಮದಲ್ಲಿ ಕೃಷಿ ಕಸುಬಿಗಾಗಿ ಹಸು, ಎತ್ತುಗಳನ್ನು ಸಾಕಲಾಗಿದೆ. ಹೈನುಗಾರಿಕೆಯಾಗಿ ಎಮ್ಮೆ, ಸೀಮೆ ಹಸುಗಳನ್ನು ಸಾಕಲಾಗುತ್ತದೆ. ಕೋಳಿ ಸಾಕು ಪಕ್ಷಿಯಾಗಿದೆ.

ಬಿಸಿಲು ಬರದಂತಿರುವ ಈ ಪರಿಸರದಲ್ಲಿ ವಾರ್ಷಿಕ ಸರಾಸರಿ ಮಳೆ ೫೮೦ ಮಿ.ಮೀ. ಆಗಿರುತ್ತದೆ. ಚಳಿ ೧೨ಂ ಸೆಂ. ಇದ್ದರೆ, ಬಿಸಿಲು ೩೯–೪೦ಂ ಸೆಂ. ಸಹಜವಾಗಿರುತ್ತದೆ. ನೀರಿನ ಆಸರೆ ತುಂಬಾ ಕಡಿಮೆ. ಗ್ರಾಮಕ್ಕೆ ಕೆರೆ, ಕಟ್ಟೆಗಳು ಇರುವುದಿಲ್ಲ. ಊರ ದಕ್ಷಿಣಕ್ಕೆ ಹಳ್ಳವಿದ್ದು, ಮಳೆಗಾಲದಲ್ಲಿ ಸ್ವಲ್ಪ ನೀರು ಇರುತ್ತದೆ. ಸಮೀಪದಲ್ಲೇ ಬಾಣಗೆರೆ ಕೆರೆ ಇದ್ದರೂ ಗ್ರಾಮಕ್ಕೆ ಅನುಕೂಲ ಕಡಿಮೆ ಎನ್ನುತ್ತಾರೆ ಉಪ್ಪಾರ ಜನಾಂಗದ ಮಾರುತಿ ಎಂಬ ಯುವಕ. ಈ ಪರಿಸರದಲ್ಲಿ ೮೪ ಬೋರ್‌ವೆಲ್‌ಗಳಿದ್ದು, ತೋಟಗಾರಿಕೆ, ಕೃಷಿ ಕೆಲಸಕ್ಕೆ ಉಪಯೋಗವಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ಬೋರ್‌ವೆಲ್ ಮೂಲಕ ಕಿರು ಟ್ಯಾಂಕಿಗೆ ಹಾಯಿಸಿ, ನಲ್ಲಿಗಳ ಮೂಲಕ ನೀರು ಪೂರೈಸಲಾಗುತ್ತಿದೆ. ೭೦ ನಲ್ಲಿಗಳು ಇವೆ. ೩ ಕೈ ಪಂಪುಗಳಿವೆ. ೪ ಹಳೆಯ ಬಾವಿಗಳಿದ್ದು ಒಣಗಿ ಹೋಗಿವೆ. ಗ್ರಾಮದ ಸುತ್ತ ಕೋಟೆಯ ಅವಶೇಷ ಕಂಡು ಬರುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ಉಪ್ಪಾರ, ಆದಿಕರ್ನಾಟಕ, ಗೊಲ್ಲರು, ಕೊರಮರು ಸಣ್ಣ ಸಮುದಾಯವಾಗಿದೆ. ಗ್ರಾಮದ ಭಾಷೆ ಕನ್ನಡವಾಗಿರುತ್ತದೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ೨ ಗುಡಿಸಲು ಸೇರಿ ಹೆಂಚಿನ, ಶೀಟಿನ ಒಟ್ಟು ೨೬೦ ಮನೆಗಳಿವೆ. ಶೌಚಾಲಯದ ಬಳಕೆಯಿದೆ. ಆಶ್ರಯ, ಜನತಾ, ಇಂದಿರಾ ಆವಾಸ್ ಅಂಬೇಡ್ಕರ್ ವಸತಿ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ೧೨೧೪ ಜನಸಂಖ್ಯೆ ಇದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆಯಾಗಿದ್ದು, ಅನ್ನ, ರೊಟ್ಟಿ, ಬಳಸುವವರಿದ್ದಾರೆ ಹೋಳಿಗೆ, ಪಾಯಸ, ಬಾಡೂಟವನ್ನು ವಿಶೇಷ ಸಾಂದರ್ಭಿಕ ಭೋಜನವಾಗಿ

ಸ್ವೀಕರಿಸಲಾಗುತ್ತಿದೆ. ಆರು ಎತ್ತಿನ ಗಾಡಿಗಳಿದ್ದು ಆಧುನಿಕ ವಾಹನಗಳಾಗಿ ಟೆಂಪೋ, ಟ್ರ್ಯಕ್ಟರ್ ಬಳಸುತ್ತಾರೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಜೋಳ, ಅಲಸಂದಿ, ಹುರುಳಿ ಬೆಳೆಗಳಾಗಿವೆ. ವಾಣಿಜ್ಯ ಬೆಳೆಗಳಾಗಿ ಹುಣಸೆಹಣ್ಣು, ತೆಂಗು, ಹತ್ತಿ ಇದೆ. ಗ್ರಾಮದಲ್ಲಿ ೫ ಜನ ಸರ್ಕಾರಿ ನೌಕರರಿದ್ದು, ಖಜಾನೆ ಅಧಿಕಾರಿ ರಾಮು ಇಂಜಿನಿಯರ್, ಗೀರೀಶ್, ಭೂತರಾಜ್ ಹಾಗೂ ಅಮೇರಿಕಾದಲ್ಲಿರುವ ಕಾನ್ಸ್‌ಟೇಬಲ್ ಇದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರಕ್ಕೆ ದೊಡ್ಡ ಹುಲಿಕುಂಟೆ ಜಿಲ್ಲಾ ಪಂಚಾಯಿತಿ ಹಾಗೂ ದೊಡ್ಡ ಬಾಣಗೆರೆ ಗ್ರಾಮ ಪಂಚಾಯಿತಿಗೆ ಸೇರಿದ ಈ ಗ್ರಾಮ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಸ್ತ್ರೀ ಶಕ್ತಿ ಸಂಘದ ೪ ತಂಡಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘದ ೨ ತಂಡಗಳು ಕಾರ್ಯನಿರ್ವಹಿಸುತ್ತಿವೆ

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಶಾಲೆಯಲ್ಲಿ ೩೪ ಮಕ್ಕಳಿದ್ದು, ಇಬ್ಬರು ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪಠ್ಯ ಪುಸ್ತಕಗಳ ಸೌಲಭ್ಯವಿದೆ. ರಾಮಚಂದ್ರಪ್ಪ ಎಂಬ ೮೦ ವರ್ಷದ ವ್ಯಕ್ತಿ ವಯಸ್ಸಿನ ಕೊರಮ ಜನಾಂಗ ವ್ಯಕ್ತಿ ವಿಷಜಂತು ಕಡಿದರೆ ನಾಟಿ ಔಷಧದ ಮೂಲಕ ಗುಣ ಪಡಿಸುವಲ್ಲಿ ಹೆಸರಾಗಿದ್ದರು. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿಗಳಿವೆ. ಚೌಡಮ್ಮ, ಈರಣ್ಣ, ರಾಮದೇವರು, ಮಾರಮ್ಮ, ಗೌರಸಂದ್ರದ ಮಾರಮ್ಮ ದೇವಸ್ಥಾನಗಳಿದ್ದು, ದಸರಾ ಹಬ್ಬದಂದು ಈ ದೇವರುಗಳು ಉತ್ಸವ, ಮೆರವಣಿಗೆ ಇರುತ್ತದೆ.

ಊರ ಹೊರಗಿರುವ ಹಳ್ಳದ ರಂಗನಾಥ ಸ್ವಾಮಿ ಜಾತ್ರೆ ಶ್ರಾವಣ ಮಾಸದಲ್ಲಿ ಮೂರು ದಿವಸಗಳ ಕಾಲ ವಿಜೃಂಭಣೆಯಿಂದ ನೆರವೇರುತ್ತದೆ. ಮಾರಮ್ಮ ದೇವಿಯ ಊರಹಬ್ಬ, ಬಾನ, ಆರತಿ, ಹರಕೆ, ಸಂಪ್ರದಾಯವಿರುತ್ತದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಬಸವ ಜಯಂತಿ, ಮಹಾನವಮಿ, ಗೌರಿ ಗಣೇಶ, ಕುಂತಮ್ಮ, ಗೌರಮ್ಮನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ರಾಮು ಎಂಬ ೫೦ ವರ್ಷ ವಯಸ್ಸಿನ ಕವಿ ಈ ಗ್ರಾಮದಲ್ಲಿದ್ದು, ಚುಕ್ಕಗಳ ನಾಡಿನಲ್ಲಿ, ಪತಂಗ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಮಾರುತಿ ಎಂಬ ೨೦ ವರ್ಷ ವಯಸ್ಸಿನ ಯುವಕ ಈ ಭರವಸೆ ಮೂಡಿಸುವ ಕವಿತೆ, ಪ್ರಬಂಧ ಬರೆಯುತ್ತಿದ್ದು, ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟವಾಗುತ್ತಿವೆ.

## ಕರೇಕಲ್ಲು ಹಟ್ಟಿ

ಕರೇಕಲ್ಲುಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ. ದೂರದಲ್ಲಿದೆ. ಸಿರಾ–ಪಟ್ಟನಾಯಕನಹಳ್ಳಿ ಚೆಂಗಾವರ ರಸ್ತೆಯಲ್ಲಿ, ಚಂಗಾವರದಿಂದ ಉತ್ತರಕ್ಕೆ ೩ ಕಿ.ಮೀ. ಹಾಗೂ ಕೊಟ್ಟಿ–ಹುಲಿಕುಂಟೆ ರಸ್ತೆಯಲ್ಲಿ, ಮುಕಲೋಟಿ–ಯಂಜಲಗೆರೆ ಮಾರ್ಗವಾಗಿಯೂ ಕರೇಕಲ್ಲು ಹಟ್ಟಿಗೆ ಬರಬಹುದಾಗಿದೆ. ಇದೊಂದು ಮುಸರ ಲೋಟಿಯ ಉಪಗ್ರಾಮವಾಗಿದೆ. ಕರೆಕಲ್ಲು, ದಿಣ್ಣೆಯಿಂದ ಕೂಡುವ ಭೂ ಪ್ರದೇಶದಲ್ಲಿ ವಸತಿ ನಿರ್ಮಿಸಿ ವಾಸಿಸತೊಡಗಿದ ಕಾಡುಗೊಲ್ಲರ ಹಟ್ಟಿ ಇದಾಗಿರುವುದರಿಂದ ಹಟ್ಟಿ ಎಂದು, ನಿಸರ್ಗ ಸಹಜ ಗುಣಗಳಿಂದ ಕರೇಕಲ್ಲು ಎಂಬ ವಿಶೇಷಣೆ ಸೇರಿಸಿ ಈ ಗ್ರಾಮದ ಹೆಸರನ್ನು ಕರೆಯಲಾಗಿದೆ.

ಕಪ್ಪು ಸಣ್ಣ ಕಲ್ಲಿನ, ಮರಗಿಡ, ಪೊದೆಗಳ, ದಿಣ್ಣೆ ಪ್ರದೇಶವಾಗಿದೆ. ಕೆಂಪು, ಮರಳು ಮಣ್ಣಿನಿಂದ ಕೂಡಿರುವ ಭೂ ಭಾಗವಾಗಿದ್ದು, ಈ ಪ್ರದೇಶದಲ್ಲಿ ನರಿ, ತೋಳ, ಮೊಲ, ಮುಂಗುಸಿ, ಇಲಿ ಮೊದಲಾದ ಕಾಡು ಪ್ರಾಣಿಗಳೂ, ಕೃಷಿಕರು ಕುರಿ, ಮೇಕೆ, ಎತ್ತು, ಎಮ್ಮೆ , ನಾಯಿಗಳನ್ನು ಸಾಕುತ್ತಾರೆ. ಪಕ್ಷಿಗಳಾದ ಗಿಳಿ, ಕೊಕ್ಕರೆ, ಕಾಗೆ, ಗೂಬೆ, ಕೋಗಿಲೆ, ಸಾಂಬಾರ ಕಾಗೆ ಮೊದಲಾದ ಪಕ್ಷಿ ಸಂಕುಲವಿರುತ್ತದೆ. ಬಿಸಿಲು, ಕೆಬ್ಬೆ ಮಣ್ಣು ಹಾಗಾಗಿ ಹೆಚ್ಚು ಮಳೆ ಬಯಸುವ ಇಲ್ಲಿಗೆ ಮಳೆ ಪ್ರಮಾಣ ಕಡಿಮೆ.

ಸರಾಸರಿ ೪೬೩ ಮಿ.ಮೀ. ಮಳೆ ಸುರಿಯುತ್ತಿದೆ. ಉಷ್ಣಾಂಶ ೩೫ಂ ಸೆಂ. ಸಹಜವಾಗಿರುತ್ತದೆ. ಚಳಿಯ ಪ್ರಮಾಣ ೧೨ಂ ಸೆಂ., ಉತ್ತರಕ್ಕೆ ಶಾಸಮೂರು, ಪೂರ್ವಕ್ಕೆ ಯಂಜಲಗೆರೆ ಅಂಚಿಗೆ ಇರುವ ಈ ಗ್ರಾಮ, ಶಾಸನೂರು ಕೆರೆಯ ಆಶ್ರಯ ಪಡೆದಿದೆ. ಆದರೂ ಕೆರೆ ತುಂಬುವುದು ಅಪರೂಪವಾಗಿದೆ. ಈ ಪರಿಸರದಲ್ಲಿ ೩೦ ಕೊಳವೆ ಬಾವಿಗಳಿದ್ದು, ಕುಡಿಯಲು ಗ್ರಾಮ ಪಂಚಾಯಿತಿಯಿಂದ ನೀರು ಸರಬರಾಜು ಮಾಡಲಾಗುತ್ತದೆ. ೧ ಕೈ ಪಂಪು ಇದೆ. ಕಾಡುಗೊಲ್ಲರು ಇಲ್ಲಿ ದೊಡ್ಡ ಸಮುದಾಯವಾಗಿದ್ದು, ಕುಂಚಿಟಿಗ, ಆದಿಕರ್ನಾಟಕ ಈ ಗ್ರಾಮದ ಅಂಚಿಗಿದ್ದು, ಸಣ್ಣ ಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ.

ಕಾಂಕ್ರೀಟ್, ಹೆಂಚಿನ, ಹಾಗೂ ಸೀಟಿನ ೪೬ ಮನೆಗಳಿದ್ದು, ಜನತಾ, ಇಂದಿರಾ ಆವಾಸ್, ಆಶ್ರಯ ವಸತಿ ಪ್ರಯೋಜನದ ಫಲಾನುಭವಿಗಳಿದ್ದಾರೆ. ೦೭ ಮನೆಗಳಲ್ಲಿ ಶೌಚಾಲಯದ ಬಳಕೆ

ಇದೆ. ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಆಹಾರವಾಗಿದೆ. ಎತ್ತಿನ ಬಂಡಿ, ಟ್ರ್ಯಾಕ್ಟರ್, ಆಟೋ ವಾಹನಗಳು ಸಂಪರ್ಕ ಬಳಕೆಯಿದೆ. ಶೇಂಗಾ ಗ್ರಾಮದ ಮುಖ್ಯ ಬೆಳೆಯಾಗಿದ್ದು, ರಾಗಿ, ಅಲಸಂದಿ, ತೊಗರಿ, ನವಣೆ, ಕೊರಲೆ ಆಹಾರ ಬೆಳೆಯಾಗಿವೆ. ೨೫೭ ಜನಸಂಖ್ಯೆ ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ದ್ವಾರನಕುಂಟೆ ಗ್ರಾಮ ಪಂಚಾಯಿತಿ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ ಹಾಗೂ ಚಿತ್ರದುರ್ಗ ಲೋಕಸಭೆ ವ್ಯಾಪ್ತಿಗೆ ಬರುವ ಈ ಹಳ್ಳಿ, ಚಂಗಾವರ–ಸಿರಾ ಕಚ್ಚಾ ರಸ್ತೆ ಸಂಪರ್ಕ ಹೊಂದಿದೆ. ಒಬ್ಬರು ಪಂಚಾಯಿತಿ ಪ್ರತಿನಿಧಿ ಇದ್ದಾರೆ. ಗ್ರಾಮದಲ್ಲಿ ೨ ಸ್ತ್ರೀ ಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪು ಸೇರಿದಂತೆ, ಅಂಗನವಾಡಿ, ಪ್ರಾಥಮಿಕ ಕಿರಿಯ ಪಾಠಶಾಲೆಗಳಿವೆ ೨೫ ಮಕ್ಕಳು ಅಂಗನವಾಡಿಯಲ್ಲಿ, ೩೯ ಶಾಲೆಯಲ್ಲಿ ಕಲಿಯುತ್ತಿದ್ದು, ೩ ಜನ ನೌಕರಿದ್ದಾರೆ.

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪಠ್ಯ ಪುಸ್ತಕ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ಶೇ. ೬೩% ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದ, ೧ ಅಂಗಡಿ ಇದೆ. ಕಾಟಂಲಿಂಗ, ಕೋಡಿಯಳ್ಳಮ್ಮ, ನರಸಿಂಹಸ್ವಾಮಿ ದೇವಾಲಯಗಳಿದ್ದು, ಕೋಟಳಮ್ಮನ ಗ್ರಾಮದೇವತೆ, ಊರಹಬ್ಬ ಇರುತ್ತದೆ. ಬಲಿ, ಬ್ಯಾಟೆ, ಆರತಿ ಸಂಪ್ರದಾಯವಿದ್ದು ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಮಹಾನವಮಿ ಹಬ್ಬಗಳನ್ನು ಆಚರಿಸುತ್ತಾರೆ. ಕರೆಕಲ್ಲು ಹಟ್ಟಿ ನಿಂಗಣ್ಣ ಜನಪದ ಹಾಡುಗಾರರಾಗಿದ್ದು, ಇವರು ಹಾಡುವ ಹಾಡುಗಳನ್ನು ಡಾ. ಚಿಕ್ಕಣ್ಣ ಸಂಗ್ರಹಿಸಿದ್ದಾರೆ.

## ಕಾರೇಹಳ್ಳಿ

ಕಾರೇಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೮ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೨೧೭ ಹೆಕ್ಟೇರ್ ಇದ್ದು, ಬಯಲು ಸೀಮೆ ಪ್ರಧಾನವಾಗಿದೆ. ಮರಳು, ಬಿಳಿ, ಕರಲು ಭೂಮಿಯನ್ನು ಹೊಂದಿರುವ ಈ ಹಳ್ಳಿ ಸಿರಾ ತಾಲ್ಲೂಕಿನ ದ್ವಾರನಕುಂಟೆ, ಹಿರಿಯೂರು ತಾಲ್ಲೂಕಿನ ಸಕ್ಕರ ಗ್ರಾಮಗಳೆರಡರ ನಡುವಿನ ದಿಣ್ಣೆಯಲ್ಲಿದೆ. ಕಾರೆ ಕುರುಚಲು ಈ ಪ್ರದೇಶದಲ್ಲಿ ಹೆಚ್ಚಾಗಿರುವುದರಿಂದ ಈ ಹಳ್ಳಿಗೆ ಕಾರೇಹಳ್ಳಿ ಎಂಬ ಹೆಸರು ಬಂದಿದೆ ಎಂದು ಶಿಕ್ಷಕ ರಂಗನಾಥಪ್ಪ ಹೇಳುತ್ತಾರೆ. ಗ್ರಾಮದ ಪರಿಸರದಲ್ಲಿ ನರಿ, ಮೊಲ, ಮುಂಗುಸಿ, ಕಾಡುಹಂದಿ ಇದ್ದು, ಗ್ರಾಮದಲ್ಲಿ ಕುರಿ, ಮೇಕೆ, ಎಮ್ಮೆ, ದನ, ಹಾಗೂ ಹಳ್ಳಿಕಾರ ತಣಿ ಎತ್ತುಗಳನ್ನು ಸಾಕುತ್ತಾರೆ.

ನೀರಿನ ಸೌಕರ್ಯವಿಲ್ಲದ ಈ ಗ್ರಾಮದಲ್ಲಿ ಕುಡಿಯುವುದಕ್ಕೆ ಗ್ರಾಮ ಪಂಚಾಯಿತಿ ಮೂಲಕ ನೀರನ್ನು ಪೂರೈಸಲಾಗುತ್ತದೆ. ಎರಡು ಕೈ ಪಂಪುಗಳು ಇವೆ. ಗ್ರಾಮದ ಸಾಮಾಜಿಕ ರಚನೆಯಲ್ಲಿ ಗೊಲ್ಲ ಸಮುದಾಯ ದೊಡ್ಡ ಸಮುದಾಯವಾಗಿದ್ದು, ಹಳ್ಳಿಕಾರರು, ಅದಿದ್ರಾವಿಡ, ಕುರುಬ, ಈಡಿಗ, ಬ್ರಾಹ್ಮಣ, ಆದಿಕರ್ನಾಟಕ ಜನಾಂಗಗಳು, ಸಣ್ಣ ಸಮುದಾಯವಾಗಿದೆ. ಕನ್ನಡ ಈ ಗ್ರಾಮದ ಭಾಷೆಯಾಗಿದೆ.

ಕಾಂಕ್ರೀಟ್, ಮಣ್ಣಿನ, ಹೆಂಚಿನ ಹಾಗೂ ಶೀಟಿನ ಒಟ್ಟು ೬೮ ಮನೆಗಳಿದ್ದು, ಇವುಗಳಲ್ಲಿ ೩೭ ಮನೆಗಳು ಶೌಚಾಲಯ ಸೌಲಭ್ಯ ಹೊಂದಿವೆ. ಆಶ್ರಯ, ಜನತಾ ವಸತಿಗಳು, ಹಾಗೂ ಭಾಗ್ಯ ಜ್ಯೋತಿ ವಿದ್ಯುತ್ ಸಂಪರ್ಕ ಪಡೆದ ಮನೆಗಳೂ ಇವೆ. ೪೫೬ ಜನಸಂಖ್ಯೆ ಇದೆ.

ರಾಗಿ ಮುದ್ದೆ ಗ್ರಾಮದ ಮುಖ್ಯ ಆಹಾರವಾಗಿದೆ. ಅನ್ನ, ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಟ್ರ್ಯಾಕ್ಟರ್, ಮಿನಿ ಟೆಂಪೋ, ದ್ವಿಚಕ್ರವಾಹನಗಳಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಅಲಸಂದಿ, ಜೋಳ, ತೊಗರಿ ಆಹಾರ ಬೆಳೆಗಳು. ಸೂರ್ಯಕಾಂತಿ, ಹತ್ತಿ, ರೇಷ್ಮೆ ಬೆಳೆಗಳಿದ್ದು, ತೋಟದ ಬೆಳೆಯಾಗಿ ತೆಂಗು, ಅಡಿಕೆ, ಸೇವಂತಿ ಬೆಳೆಯನ್ನು ಬೆಳೆಯಲಾಗುವುದು. ಸಾರಿಗೆ ಶಿಕ್ಷಣ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಪಾರಂಪರಿಕ ವೈದ್ಯರೂ, ವಕೀಲರು ಇದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಹಾಗೂ ದ್ವಾರನಕುಂಟೆ ಗ್ರಾಮ ಪಂಚಾಯಿತಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ೨ ಸ್ತ್ರೀ ಶಕ್ತಿ ಸಂಘಗಳಿದ್ದು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವ ಸಹಾಯ ಸಂಘದ ೨ ಗುಂಪುಗಳಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ೨೧ ಮಕ್ಕಳಿದ್ದು, ಒಬ್ಬರು ಶಿಕ್ಷಕರಿದ್ದಾರೆ. ಸರ್ಕಾರಿ ಕಿರಿಯ ಪಾಠಶಾಲೆಯಿದ್ದು, ೪೬ ಮಕ್ಕಳಿದ್ದಾರೆ. ೩ ಜನ ಶಿಕ್ಷಕರಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯವಿದೆ. ಮಕ್ಕಳಿಗೆ ಉಚಿತ ಪುಸ್ತಕ, ಸಮವಸ್ತ್ರ ವಿತರಿಸಲಾಗಿದೆ. ಒಟ್ಟು ೫೬.೯ ಸಾಕ್ಷರತೆ ಪ್ರಮಾಣದಲ್ಲಿ ಶೇ. ೪೫% ಮಹಿಳೆಯರಿದ್ದರೆ. ೬೭.೭ ಮಹಿಳೆಯರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಯಾಪ್ಯ ವೇತನ, ಸಂಧ್ಯಾ ಸುರಕ್ಷೆ, ವಿಕಲಚೇತನ, ಹಾಗೂ ವಿಧವಾ ವೇತನದ ಸೌಲಭ್ಯ ಪಡೆದಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳೂ ಇವೆ. ಲಕ್ಷ್ಮಿ ರಂಗನಾಥ ಸ್ವಾಮಿ ದೇವಾಲಯವಿದ್ದು ಇದೊಂದು ೧೫ ನೇ ಶತಮಾನದ ಸಂದರ್ಭದಲ್ಲಿ ಕಟ್ಟಿರಬಹುದಾದ ಹಳೆಯ ವಾಸ್ತು ಶಿಲ್ಪದ ದೇವಾಲಯವಾಗಿದೆ. ಮಾರ್ಚಿ ತಿಂಗಳಲ್ಲಿ ರಂಗನಾಥ ಸ್ವಾಮಿಯ ಉತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಹೊರಬೀಡು ಎಂಬ ವಿಶಿಷ್ಟ ಆಚರಣೆಯೂ ಈ ಗ್ರಾಮದಲ್ಲಿದೆ.

ಯುಗಾದಿ, ಕಾರಹಬ್ಬ, ಗೌರಿ ಗಣೇಶ, ಮಹಾನವಮಿ, ದೀಪಾವಳಿ, ಶಿವರಾತ್ರಿ ಹಾಗೂ ಸಂಕ್ರಾಂತಿ ಹಬ್ಬದೊಂದಿದೆ ಶ್ರಾವಣ ಶನಿವಾರ, ಏಕಾದಶಿ, ರಾಮನವಮಿ ಹಬ್ಬಗಳನ್ನು ಆಚರಿಸುತ್ತಾರೆ.

ಕಾರೇಹಳ್ಳಿ ರಂಗನಾಥನ ಆಲಯ ಮಂಟಪ ವರ್ಣಗಳಿಂದ ಬಿಡಿಸಿದ ಕಂಬಾರ ಕಲೆಯ ಮಣ್ಣಿನ ಬೃಂದಾವನ ಅಪರೂಪದ್ದಾಗಿದ್ದು ಕಲಾತ್ಮಕವಾಗಿದೆ. ಡಾ. ನಾಗರಾಜ್ ವೃತ್ತಿಯಿಂದ ಪಾರಂಪರಿಕ ವೈದ್ಯರಾಗಿದ್ದು, ಸಂಗೀತ ನಾಟಕ ನಿರ್ದೇಶಕರಾಗಿಯೂ ಸ್ಥಳೀಯವಾಗಿ ಹೆಸರು ಮಾಡಿದ್ದಾರೆ.

## ಕಾಟನಹಳ್ಳಿ

ಕಾಟನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ, ೨೫ ಕಿ.ಮೀ. ದೂರದಲ್ಲಿ ಉತ್ತರ ದಿಕ್ಕಿಗಿದೆ. ಸಿರಾ-ಅಮರಾಪುರ ಮುಖ್ಯ ರಸ್ತೆಯ -ಕಾಟನ ಹಳ್ಳಿ ಗೇಟಿನಿಂದ ಬಲಭಾಗಕ್ಕೆ ತಿರುಗಿ ೨ ಕಿ.ಮೀ. ನಡೆದರೆ ಕಾಟನಹಳ್ಳಿ ಸಿಗುತ್ತದೆ. ಬೇಡರ ಆದಿ ದೈವ ಕಾಟೇಲಿಂಗೇಶ್ವರ ಆಗಿರುವುದರಿಂದ ಅದೇ ಹೆಸರಿನಲ್ಲಿ ಗ್ರಾಮವನ್ನು ಕರೆದುಕೊಂಡಿದ್ದಾರೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೧೮೮.೬ ಹೆಕ್ಟೇರ್ ಆಗಿದೆ. ಮರಳು ಮಿಶ್ರಿತ ಕೆಂಪು ಮಣ್ಣು ಹೊಂದಿರುವ ಈ ಗ್ರಾಮ ೪೮ ಹೆಕ್ಟೇರ್ ಗೋಮಾಳದ ಜಮೀನನ್ನು ಹೊಂದಿದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಕಂಡು ಬರುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಹದ್ದು, ಗಿಡುಗ, ಕೌಜುಗ, ಕಾಗೆ ಇವೆ. ಗ್ರಾಮದಲ್ಲಿ ಸಾಕು ಪ್ರಾಣಿಯಾಗಿ ಹಸು, ಎಮ್ಮೆ, ಮೇಕೆ, ಕುರಿ ಸಾಕುತ್ತಾರೆ. ಉಳಿದಂತೆ ಕೋಳಿಗಳೂ ಇವೆ.

ವಾರ್ಷಿಕ ಸರಾಸರಿ ೪೬೨ ಮಿ.ಮೀ. ಮಳೆ ಬೀಳುತ್ತಿದ್ದು. ಕೃಷಿಗೆ ಸಾಕಾಗುವುದಿಲ್ಲ. ಬಿಸಿಲು ೩೭೦ ಸೆಂ. ಇರುತ್ತದೆ. ಚಳಿಯೂ ೧೨೦ ಸೆಂ. ಇದೆ. ಕುಡಿಯುವ ನೀರಿಗೆ ೨ ಮಿನಿ ಟ್ಯಾಂಕ್‌ಗಳಲ್ಲಿ ೫೦ ನಲ್ಲಿಗಳ ಮೂಲಕ ಮನೆಗಳಿಗೆ ಕುಡಿಯುವ ನೀರು ಒದಗಿಸುತ್ತದೆ.

ಕುಂಚಿಟಿಗ ಈ ಗ್ರಾಮದ ದೊಡ್ಡ ಸಮುದಾಯವಾಗಿದೆ. ಬೇಡ, ನಾಯಕರು ವಾಸಿಸುತ್ತಿದ್ದಾರೆ. ಇದು ಸಣ್ಣ ಸಮುದಾಯವಾಗಿದೆ. ಗ್ರಾಮದಲ್ಲಿ ೭೩ ಮನೆಗಳಿದ್ದು, ಕಾಂಕ್ರೀಟ್, ಮಣ್ಣಿನ, ಮಂಗಳೂರು ಹೆಂಚಿನ ಮನೆಗಳ ಜೊತೆಗೆ ಒಂದು ಗುಡಿಸಲು ಸಹ ಇದೆ. ೧೨೩ ಮನೆಗಳಿದ್ದು ೯೧೪ ಜನಸಂಖ್ಯೆ ಇದೆ.

ರಾಗಿ ಮುದ್ದೆ ಇಲ್ಲಿನ ಮುಖ್ಯ ಆಹಾರವಾಗಿದ್ದು, ರೊಟ್ಟಿ ಬಳಸುವವರಿದ್ದಾರೆ ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹೋಳಿಗೆ ಊಟದ ವ್ಯವಸ್ಥೆಯೂ ಇರುತ್ತದೆ. ಗ್ರಾಮದಲ್ಲಿ ೨ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ೧ ಲಾರಿ ಇದ್ದು, ರಾಗಿ, ಅಲಸಂದಿ, ತೊಗರಿ ಮುಖ್ಯ ಆಹಾರ ಬೆಳೆಯಾಗುತ್ತಿದೆ. ಶೇಂಗಾ, ಹತ್ತಿ ಹಾಗೂ ಸೂರ್ಯಕಾಂತಿ ಬೆಳೆಗಳನ್ನು ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ ಇದೆ. ಒಬ್ಬರು ಸರ್ಕಾರಿ ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಬರಗೂರು ತಾಲ್ಲೂಕು ಪಂಚಾಯಿತಿ, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಬರಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕಾಟನಹಳ್ಳಿಯಲ್ಲಿ ಒಬ್ಬರು ಪಂಚಾಯಿತಿ ಸದಸ್ಯರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಖ ಪಾಠ ಶಾಲೆಗಳಿದ್ದು, ಅಂಗನವಾಡಿಯಲ್ಲಿ ೧೪ ಮಕ್ಕಳು, ಇಬ್ಬರು ಸಹಾಯಕರು, ಶಾಲೆಯಲ್ಲಿ ೮೨ ಮಕ್ಕಳಿದ್ದು, ಇಬ್ಬರು ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿವೆ. ಜುಂಜಯ್ಯ ಎಂಬ ಕುಂಚಿಟಿಗರು ವ್ಯಕ್ತಿಯೊಬ್ಬರು ಪಶು ವೈದ್ಯಕೀಯ, ನಾಟಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮದಲ್ಲಿ ವೃದ್ಧಾಪ್ಯ, ವಿಕಲಚೇತನ, ವಿಧವಾ ಚೇತನ ಫಲಾನುಭವಿಗಳಿದ್ದಾರೆ. ಒಂದು ಅಂಗಡಿ ಇದ್ದು ಈ ಗ್ರಾಮದ ಒಳಗೆ ಒಂದು ವೀರಗಲ್ಲಿದ್ದು, ಇದು ಹೋರಾಟದಲ್ಲಿ ಮಡಿದ ವೀರನ ವಿವರ ನೀಡುತ್ತದೆ. ೧೫ ನೇ ಶತಮಾನಕ್ಕೆ ಸಂಬಂಧಿಸಿದ ಕಲಾವೀರಗಲ್ಲು ವಿಜಯನಗರ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಊರಹಬ್ಬವಾಗಿ ಆಚರಿಸುತ್ತಾರೆ. ಆ

ಕಾಲದಲ್ಲಿ ಆರತಿ, ಬಾನು, ಬಲಿ, ಹರಕೆಯ ಸಂಪ್ರದಾಯವಾಗಿದೆ.

## ಕಲಿಗಾನಹಳ್ಳಿ

ಕಲಿಗಾನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೩೪೮.೬ ಹೆಕ್ಟೇರ್ ಆಗಿರುತ್ತದೆ. ಈ ಗ್ರಾಮ ನಿಷ್ಪತ್ತಿಯ ಬಗೆಗೆ ಖಚಿತವಾದ ಯಾವುದೇ ಆಕರ ಹಾಗೂ ಮೌಖಿಕ ಪರಂಪರೆಯ ಹೇಳಿಕೆಗಳು ಲಭ್ಯವಾಗುವುದಿಲ್ಲ. ಆದರೂ ಶ್ರೀ ಮೂಡ್ಲೇಗೌಡರ ಪ್ರಕಾರ ಕಲಿಪುರುಷನಾದ ಶ್ರೀರಾಮನ ದೇವಾಲಯ ಇಲ್ಲಿ ಮೊದಲಿಗೆ ಸ್ಥಾಪನೆ ಮಾಡುವುದರಿಂದ ಇದಕ್ಕೆ ಕಲಿಗಾನ (ಕಲಿಪುರುಷ) ಹೆಸರಿನಲ್ಲಿ ಕರೆದು ಕೊಳ್ಳುತ್ತಿದ್ದಾರೆಂದೂ, ಇನ್ನೊಂದು ಹೇಳಿಕೆಯಂತೆ, ಹಿಂದೆ ಈ ಗ್ರಾಮದಲ್ಲಿ ಬಯಲು ನಾಟಕಗಳಿಗೆ ಹೆಸರಾಗಿದ್ದು ಕಲೆಯಿಂದಾಗಿ ಕಲೆ–ಕಲಿಗಾ ಆಗಿರಬಹುದೆಂದು ನರಸಿಂಹಮೂರ್ತಿ ಅಭಿಪ್ರಾಯ ಪಡುತ್ತಾರೆ.

ಕಲಿಗಾನಹಳ್ಳಿ ಕೆಂಪು, ಮರಳುಗಳಿಂದ ಕೂಡಿರುವ ಮೇಲ್ಮೈ ರಾಗಿ, ತೊಗರಿ, ಅಲಸಂದಿ ಮುಖ್ಯ ಬೆಳೆಯಾಗಿದ್ದು, ನೀರಾವರಿ ಸೌಲಭ್ಯ ಇರುವವರು ಮಾತ್ರ ಭತ್ತ, ಮೆಕ್ಕೆಜೋಳ, ತೆಂಗು, ಅಡಿಕೆ, ದಾಳಿಂಬೆ ಬೆಳೆಗಳನ್ನು ಬೆಳೆಯುತ್ತಾರೆ.

ವಾರ್ಷಿಕ ಮಳೆ ಸರಾಸರಿ ೪೬೩ ಮಿ.ಮೀ. ಚಳಿ ೧೨೦ ಸೆಂ., ಬಿಸಿಲಿನ ತಾಪಮಾನ ೩೬೦ ಸೆಂ. ಆಗಿರುತ್ತದೆ. ಈ ಗ್ರಾಮಕ್ಕೆ ಸೇರಿದ ಒಂದು ಕೆರೆಯಿದ್ದು, ತುಂಬುವುದು ಅಪರೂಪ. ಕುಡಿಯುವ ನೀರಿಗೆ ೩ ಸಿಸ್ಟನ್‌ಗಳಲ್ಲಿ ನೀರು ಒದಗಿಸಿ, ೫೮ ನಲ್ಲಿಗಳ ಮೂಲಕ ಗ್ರಾಮ ಪಂಚಾಯಿತಿಯಿಂದ ಸರಬರಾಜು ಮಾಡಲಾಗುತ್ತಿದೆ.

ಗ್ರಾಮದಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ಬೇಡರು, ಬೋವಿ ಹಾಗೂ ಅಗಸರ ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮುಖ್ಯ ಭಾಷೆ. ಒಟ್ಟು ೩೫೬ ಮನೆಗಳಿರುವ ಈ ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಹಾಗೂ ೩ ಗುಡಿಸಲುಗಳು ಸೇರಿವೆ. ಗ್ರಾಮದಲ್ಲಿ ೧೭ ಮನೆಯಲ್ಲಿ ಶೌಚಾಲಯ ಬಳಸುತ್ತಿದ್ದು, ಆಶ್ರಯ, ಇಂದಿರಾ ಆವಾಸ್, ವಾಜಪೇಯಿ ಆವಾಸ್ ಯೋಜನೆಯ ಜೊತೆಗೆ ಭಾಗ್ಯ ಜ್ಯೋತಿ ಯೋಜನೆಯ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ೧೨೮೪ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ ಪ್ರಮುಖ ಆಹಾರವಾಗಿದ್ದು, ರೊಟ್ಟಿ, ಅನ್ನ ವಿಶೇಷ ಸಂದರ್ಭದಲ್ಲಿ ಬಾಡೂಟ ಹಾಗೂ ಹೋಳಿಗೆ ಊಟದ ವ್ಯವಸ್ಥೆಯೂ ಇರುತ್ತದೆ. ಲಾರಿ, ಸೈಕಲ್, ಸ್ಕೂಟರ್, ಟ್ರ್ಯಕ್ಟರ್ ಗ್ರಾಮದಲ್ಲಿ ವ್ಯವಸಾಯ ಹಾಗೂ ವಾಣಿಜ್ಯೀಕರಣಕ್ಕೆ ಬಳಸುತ್ತಾರೆ. ರಾಗಿಮಿಲ್, ಬೀಡಿ ಸುತ್ತವುದು, ಇಟ್ಟಿಗೆ ಫ್ಯಾಕ್ಟರಿ, ಹೊಲಿಗೆ ಯಂತ್ರದ ಕೈ ಕೆಲಸಗಾರರೂ ಇದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರ, ಬರಗೂರು ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಹಾಗೂ ಹುಲಿಕುಂಟೆ ಹೋಬಳಿ ಹಾಗೂ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೆ ಸೇರಿದೆ.

೪ ಸ್ತ್ರೀ ಶಕ್ತಿ ಸಂಘ ಕಾರ್ಯ ನಿರ್ವಹಿಸುತ್ತಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ ಗ್ರಾಮದ ಶೈಕ್ಷಣಿಕ ಚಳುವಳಿಯನ್ನು ವಿಸ್ತರಿಸಿವೆ. ಇಲ್ಲಿ ಇಬ್ಬರು ಅಂಗನವಾಡಿ ಸಿಬ್ಬಂದಿ, ಶಾಲೆಯಲ್ಲಿ ೩ ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು ೯೦ ಮಕ್ಕಳಿದ್ದಾರೆ. ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷೆ, ಅಂಗವಿಕಲ ವೇತನ, ವಿಧವಾ ವೇತನದ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ೨ ಹೋಟೆಲ್‌ಗಳು, ೬ ಅಂಗಡಿಗಳು ಕಂಡು ಬರುತ್ತವೆ. ಅರೆ ಮರಗಳು, ೨ ಕರುಗುಲ್ಲು ಇದ್ದು ಪೂಜಿಸಲ್ಪಡುತ್ತವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶ್ರೀರಾಮ, ಮಾರಮ್ಮ, ಕೊಲ್ಲಾಪುರದಮ್ಮ, ಗ್ರಾಮದ ದೇವಸ್ಥಾನಗಳು ವಾರ್ಷಿಕವಾಗಿ ಕಣಿವೆ ಮಾರಕ್ಕನಿಗೆ ಜಾತ್ರೆ ಮಾಡಿ, ಆರತಿ, ಬಾನ, ಬ್ಯಾಟೆಯ ಹರಕೆ ಸಂಪ್ರದಾಯವಿದೆ. ಜೊತೆಗೆ ಬರಗೂರು ಲಕ್ಷ್ಮೀದೇವರಿಗೆ ಕಲಿಗಾನಹಳ್ಳಿಯ ಜನತೆ ಆರತಿ ಮಾಡಿ ಎದುರೆತ್ತಿ ಬ್ಯಾಟೆ ಅರ್ಪಿಸುವುದು ಕಂಡು ಬರುತ್ತದೆ.

## ಕರೆಕೆಂಚಪ್ಪನಪಾಳ್ಯ

ಕೆಕೆಪಾಳ್ಯ, ಇಂದು ಸಂಕ್ಷಿಪ್ತ ಹೆಸರಿನಿಂದಲೇ ಕರೆಯುತ್ತಿರುವ ಈ ಗ್ರಾಮ ಯಂಜಲಗೆರೆಯ ಉಪಗ್ರಾಮವಾಗಿದೆ. ಸಿರಾ–ಹುಲಿಕುಂಟೆ ರಸ್ತೆಯ ಕೊಟ್ಟಿ ಗೇಟಿನಿಂದ ಎಡಭಾಗದಲ್ಲಿ ೨ ಕಿ.ಮೀ. ದೂರವಿದ್ದು, ಸಿರಾ ತಾಲ್ಲೂಕು ಕೇಂದ್ರಕ್ಕೆ ೩೦ ಕಿ.ಮೀ. ದೂರದಲ್ಲಿದೆ. ಗ್ರಾಮದ ಯುವ ಹೇಳುವ ಪ್ರಕಾರ ಇದು ಕರೆ ಕೆಂಚಪ್ಪನ ಪಾಳ್ಯ ಅಲ್ಲ, ಕೆರೆಕೆಂಚಪ್ಪನಪಾಳ್ಯ ಎಂದು ಬಲವಾಗಿ ಸಮರ್ಥಿಸುತ್ತಾರೆ. ಗ್ರಾಮದ ಬದಿಗೆ ವಿಸ್ತಾರವಾದ ಕೆರೆಯೂ ಇರುವುದು ಇವರ ಹೇಳಿಕೆಗೆ ಸ್ವಾಮ್ಯತೆ ಇದೆ. ಒಟ್ಟು ೧೪೭ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿರುವ ಈ ಗ್ರಾಮ ಕಂದು ಮಿಶ್ರಿತ ಮರಳು

ಮಣ್ಣನ್ನು ಹೊಂದಿದೆ. ಕಾಡು ಗಿಡ, ಪೊದೆ, ಹಳ್ಳ ದಿಣ್ಣೆಯಿಂದ ಕೂಡಿದ್ದು, ಈ ಪರಿಸರದಲ್ಲಿ ಮೊಲ, ಜಿಂಕೆ, ಉಡ, ಮುಂಗುಸಿ ಸಾಕುತ್ತಾರೆ. ಕೋಳಿ ಇಲ್ಲಿ ಸಾಕು ಪಕ್ಷಿಯಾಗಿದ್ದು, ಇಲ್ಲಿನ ಪರಿಸರದಲ್ಲಿ ಪಕ್ಷಿಗಳಾದ ಗಿಳಿ, ಗೊರವಂಕ, ಕೋಗಿಲೆ, ಕಾಗೆ, ಕೊಕ್ಕರೆ ಕಂಡು ಬರುತ್ತವೆ.

ವಾರ್ಷಿಕವಾಗಿ ೫೮೦ ಮಿ.ಮೀ ಮಳೆ ಬೀಳುತ್ತಿದ್ದು, ಬಿಸಿಲು ೩೮-೪೦ ಸೆಂ. ಸಹಜವಾಗಿರುತ್ತದೆ. ಚಳಿ ೧೨೦ ಸೆಂ. ಆಗಿರುತ್ತದೆ. ರೈತಾಪಿ ಬದುಕಿಗೆ ನೀರಿನ ಆಸರೆಯಾಗಿ ಮಳೆಯನ್ನೇ ನಂಬಲಾಗಿದೆ. ಆದರೂ ನೀರಿನ ಅಭಾವದ ಕಾರಣದಿಂದ ಈ ಪರಿಸರದಲ್ಲಿ ೩೮ ಕೊಳವೆ ಬಾವಿಗಳನ್ನು ಆಶ್ರಯಿಸಲಾಗಿದೆ. ಕುಡಿಯಲು ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಸಮುದಾಯದ ದೊಡ್ಡ ಜನಾಂಗವಾಗಿದ್ದು, ಉಪ್ಪಾರ, ಆದಿಕರ್ನಾಟಕ, ಆದಿ ದ್ರಾವಿಡ, ಅಕ್ಕಸಾಲಿಗ, ಹಾಗೂ ಅಗಸರು ಸಣ್ಣ ಸಮುದಾಯವಾಗಿದೆ. ಕನ್ನಡ ಗ್ರಾಮದ ಮಾತೃಭಾಷೆಯಾಗಿದೆ.

ಈ ಗ್ರಾಮದಲ್ಲಿ ಕಲ್ಲಿನ, ಮಣ್ಣಿನ, ಕಾಂಕ್ರೀಟ್, ಹೆಂಚಿನ, ಶೀಟಿನ ವಿವಿಧ ಸ್ವರೂಪದ ೯೬ ಮನೆಗಳಿದ್ದು, ಇವುಗಳು ಆಶ್ರಯ, ಜನತಾ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಉಚಿತ ಭಾಗ್ಯ ಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ. ಗ್ರಾಮದ ಜನಸಂಖ್ಯೆ ೪೪೬ ಇದ್ದು, ಒಟ್ಟು ೪೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು, ರೊಟ್ಟಿ, ಚಪಾತಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಸಾಂಪ್ರದಾಯಿಕವಾಗಿ ಎತ್ತಿನ ಗಾಡಿ ಬಳಸುತ್ತಾರೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಅಲಸಂದಿ, ತೊಗರಿ ಬೆಳೆಗಳನ್ನು ಬೆಳೆಯುತ್ತಾರೆ. ತೋಟಗಾರಿಕೆಯಾಗಿ ತೆಂಗು, ಅಡಿಕೆ, ವಾಣಿಜ್ಯವಾಗಿ ಹುಣಸೆಹಣ್ಣಿನ ಬೆಳೆಯಿದೆ. ಒಂದು ಹಾಲಿನ ಡೈರಿ ಇದ್ದು, ಸರಾಸರಿ ೨೪೦ ಲೀಟರ್ ಹಾಲು ಸಂಗ್ರಹವಾಗುತ್ತದೆ. ಡಾ. ಬಿಳಿಕೆಂಪಪ್ಪ ಹಾಗೂ ಡಾ. ಸೀತಾರಾಮಯ್ಯ ಎಂಬ ಇಬ್ಬರು ಪಶುವೈದ್ಯರೂ ಸೇರಿದಂತೆ ೪ ಜನ ಶಿಕ್ಷಕರಿದ್ದಾರೆ.

ಆಡಳಿತಾತ್ಮಕವಾಗಿ ಈ ಗ್ರಾಮ ಸಿರಾ ವಿಧಾನಸಭಾ ಕ್ಷೇತ್ರಕ್ಕೆ, ಹುಲಿಕುಂಟೆ ತಾಲ್ಲೂಕು, ಜಿಲ್ಲಾ ಹಾಗೂ ಗ್ರಾಮ ಪಂಚಾಯಿತಿ ಕ್ಷೇತ್ರಗಳ ವ್ಯಾಪ್ತಿಗೆ ಒಳಪಟ್ಟಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ.

ಗ್ರಾಮದಲ್ಲಿ ೩ ಸ್ತ್ರೀ ಶಕ್ತಿ ಸಂಘಗಳು, ೨ ಧರ್ಮಸ್ಥಳ ಸ್ವಸಹಾಯ ಗುಂಪುಗಳಿವೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಶಾಲೆ ಇದ್ದು, ೪೪ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಹಾಗೂ ಉಚಿತ ಸಮವಸ್ತ್ರ, ಪಠ್ಯ ಪುಸ್ತಕಗಳು ವಿತರಣ ಇದೆ. ಸಾಕ್ಷರತೆ ಪ್ರಮಾಣ ೫೬.೫ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಶ್ರೀದೇವಿ ಹಾಗೂ ಭೂತಪ್ಪ ದೇವರ ಪೌಳಿ ಇದ್ದು, ಭೂತಪ್ಪ ದೇವರ ಜಾತ್ರೆ, ಬಲಿ, ಆರತಿ, ಬಾನ ಮೊದಲಾದ ಹರಕೆ ಸಂಪ್ರದಾಯಗಳಿವೆ.

## ಕರಿರಾಮನಹಳ್ಳಿ

ಕರಿರಾಮನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೧ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಒಟ್ಟು ೪೩೮.೦೨ ಹೆಕ್ಟೇರ್ ಭೌಗೋಳಿಕ ವ್ಯಾಪ್ತಿಯನ್ನು ಪಡೆದಿದೆ. ಬಡೇನಹಳ್ಳಿ, ಅಂಬೇಡ್ಕರ್ ಕಾಲೋನಿ ಇದರ ಉಪಗ್ರಾಮಗಳಾಗಿವೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿರುವ ಇಲ್ಲಿನ ಮಣ್ಣಿನಲ್ಲಿ ಶೇಂಗಾ ಬೆಳೆ ಚೆನ್ನಾಗಿ ಬೆಳೆಯುತ್ತದೆ. ಪೂರ್ವಕ್ಕೆ ಕೆರೆ, ಹಳ್ಳ ದಿಣ್ಣೆ, ಗಿಡ, ಪೊದೆಗಳಿಂದ ಕೂಡಿರುವ ಈ ಪರಿಸರದಲ್ಲಿ ಹಂದಿ, ಮೊಲ, ಜಿಂಕೆ, ಉಡ, ಬಾರುಬೆಕ್ಕು, ಮುಂಗುಸಿ ಕಂಡು ಬರುತ್ತವೆ.

ಗ್ರಾಮದಲ್ಲಿ ಕುರಿ, ಮೇಕೆ, ಹಸು, ಎಮ್ಮೆ, ನಾಯಿಗಳನ್ನು ಸಾಕು ಪ್ರಾಣಿಗಳಾಗಿ ಸಾಕಲಾಗುತ್ತದೆ. ಈ ಪರಿಸರದಲ್ಲಿ ಗಿಳಿ, ಗೊರವಂಕ, ಕೋಗಿಲೆ, ಬೆಳವ, ಕಾಗೆ ಮೊದಲಾದ ಪಕ್ಷಿಗಳು ಕಂಡು ಬಂದರೆ ಕೋಳಿ ಈ ಭಾಗದ ಸಾಕು ಪಕ್ಷಿಯಾಗಿದೆ.

ಬಿಸಿಲು ಬಯಲು ಪ್ರದೇಶವಾಗಿರುವ ಇಲ್ಲಿ ವಾರ್ಷಿಕ ಸರಾಸರಿ ಮಳೆ ಪ್ರಮಾಣ ೫೮೦ ಮಿ.ಮೀ., ಚಳಿ ೧೨೦ ಸೆಂ. ಇದ್ದು, ಬಿಸಿಲು ೪೦ ಸೆಂ. ಆಗಿರುತ್ತದೆ. ಈ ಗ್ರಾಮದ ವ್ಯಾಪ್ತಿಯಲ್ಲಿ ೩೮ ಕೊಳವೆ ಬಾವಿಗಳಿವೆ. ಕುಡಿಯಲು ಕಿರು ನೀರು ಯೋಜನೆಯ ಅಡಿಯಲ್ಲಿ ಗ್ರಾಮ ಪಂಚಾಯಿತಿಯಿಂದ ನೀರು ಪೂರೈಸಲಾಗುತ್ತಿದೆ. ಆರು ಸಿಸ್ಟನ್‌ಗಳಿದ್ದು, ಒಂದು ಕೈ ಪಂಪು ಇದೆ.

ಗ್ರಾಮದಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದೆ. ಗೊಲ್ಲ, ಕುರುಬ, ಆದಿಕರ್ನಾಟಕ, ನಾಯಕ, ಈಡಿಗ, ಮುಸ್ಲಿಂ ಜನಾಂಗವಿರುವ ಒಟ್ಟು ೧೬೪ ಮನೆಗಳು ಇಲ್ಲಿವೆ. ಅವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಹಾಗೂ ಶೀಟಿನ ಮನೆಗಳಿದ್ದು, ಆಶ್ರಯ, ಅಂಬೇಡ್ಕರ್, ಜನತಾ ವಸತಿ ಯೋಜನೆಯ ೩೨ ಫಲಾನುಭವಿಗಳಿದ್ದಾರೆ. ಒಟ್ಟು ೫೯ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ೯೧೪ ಜನಸಂಖ್ಯೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನ ವಾಗಿದೆ. ಸಾಂಪ್ರದಾಯಿಕ ವಾಹನಗಳಾಗಿ ಎತ್ತಿನ ಬಂಡಿ, ಆಧುನಿಕ ವಾಹನ ಟ್ರ್ಯಾಕ್ಟರ್, ಟೆಂಪೋ, ಆಟೋಗಳನ್ನು ಬಳಸಲಾಗುತ್ತದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಜೋಳ, ತೊಗರಿ, ಅವರೆ, ಹುರುಳಿ ಆಹಾರ ಬೆಳೆಗಳಾಗಿವೆ. ತೆಂಗು, ಅಡಿಕೆ ತೋಟಗಾರಿಕೆ ಬೆಳೆಗಳು. ಹುಣಸೇಹಣ್ಣು, ರೇಷ್ಮೆ, ಸೂರ್ಯಕಾಂತಿ ವಾಣಿಜ್ಯ ಬೆಳೆಗಳಾಗಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಡಾ.ವಾಸುದೇವ ಸೇರಿದಂತೆ, ಶಿಕ್ಷಣ ಮೊದಲಾದ ಇಲಾಖೆಯ ಒಟ್ಟು ೩ ಜನ ಸರ್ಕಾರಿ ನೌಕರಿದ್ದಾರೆ. ಊಟದ ಎಲೆ ತಯಾರಿಸುವುದು ಕಂಡು ಬರುತ್ತದೆ.

ಆಡಳಿತಾತ್ಮಕವಾಗಿ ಈ ಗ್ರಾಮ ಸಿರಾ ವಿಧಾನಸಭಾ ಕ್ಷೇತ್ರ, ನಾದೂರಿ ಜಿಲ್ಲಾ ಪಂಚಾಯಿತಿ ಕ್ಷೇತ್ರ, ಹಂದಿಕುಂಟೆ ತಾಲ್ಲೂಕು ಪಂಚಾಯಿತಿ ಹಾಗೂ ಹೊಸಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರು ಈ ಗ್ರಾಮದಲ್ಲಿ ಪ್ರತಿನಿಧಿಸುತ್ತಿದ್ದಾರೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಸಿರಾ-ಬರಗೂರು, ಅಮರಾಪುರಗಳಿಗೆ ರಸ್ತೆ ಸಂಪರ್ಕವಿದೆ.

ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪುಗಳಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ, ಗೇಟಿನಲ್ಲಿ ಒಂದು ಸರ್ಕಾರಿ ಪ್ರೌಢಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯದ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ಶೇ. ೬೭ ರ ಪ್ರಮಾಣದಲ್ಲಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ಕಣಿವೆ ಮಾರಕ್ಕ, ತಿಪ್ಪೇಸ್ವಾಮಿ ದೇವಸ್ಥಾನಗಳಿದ್ದು, ಒಂದು ಹಂಪಣ್ಣನ ಮಠವಿದ್ದು, ಶ್ರಾವಣ ಮಾಸದಲ್ಲಿ , ಪರೇವು ಮಾಡಲಾಗುತ್ತದೆ. ಕಣಿವೆ ಮಾರಕ್ಕನ ಊರ ಹಬ್ಬ ಮಾಡಿ ಬಾನ, ಬ್ಯಾಟೆ, ಆರತಿ, ಹರಕೆ, ಸಂಪ್ರದಾಯವಿದೆ. ತಿಪ್ಪೇಸ್ವಾಮಿ ಯುವಕ ಸಂಘವಿದ್ದು, ಗ್ರಾಮಾಭಿವೃದಧಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿದೆ.

## ಕ್ಯಾದಿಗುಂಟೆ

ಕ್ಯಾದಿಗುಂಟೆ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೩೨೮.೧೪ ಹೆಕ್ಟೇರ್ ಆಗಿರುತ್ತದೆ. ಕಪ್ಪು, ಕಂದು ಮಿಶ್ರಿತ ಭೂಮಿಯ ಸ್ವರೂಪ ಹೊಂದಿ, ಸ್ವಲ್ಪ ತಗ್ಗಾಗಿರುವುದರಿಂದ, ಈ ಭಾಗದಲ್ಲಿ ಕೇದಿಗೆ ಹೂವುಗಳು ಬೆಳೆಯುತ್ತಿದ್ದವು. ಜೊತೆಗೆ ಗ್ರಾಮದ ಸನಿಹದಲ್ಲಿಯೇ ಒಂದು ಕೆರೆ, ಒಂದು ಗೋಕಟ್ಟೆ ಇರುವುದರಿಂದ, ನೀರು ಯಾವಾಗಲೂ ನಿಲ್ಲುತ್ತಿದ್ದು, ಇದರಲ್ಲಿ ಕ್ಯಾದಿಗೆ ಹೊಳು ಬೆಳೆಯುತ್ತಿದ್ದುದ್ದರಿಂದ ಈ ಗ್ರಾಮಕ್ಕೆ ಕಾದಿಗೆಯ ಗುಂಟೆ ಎಂಬ ಹೆಸರು ಬಂದಿದೆ ಎಂದು ರಂಗನಾಥ್ ಅಭಿಪ್ರಾಯ ಪಡುತ್ತಾರೆ. ಸಿರಾ-ಪಟ್ಟನಾಯಕನಹಳ್ಳಿ ರಸ್ತೆಯಲ್ಲಿ ಮುಂದೆ ಸಾಗಿದರೆ ಪಟ್ಟನಾಯಕನಹಳ್ಳಿ-ಹುಲಿಕುಂಟೆ ನಡುವೆ ಕ್ಯಾದಿಕುಂಟೆ ಇದೆ.

ತಗ್ಗು, ಕುರುಚಲು ಗಿಡ, ಪೊದೆ, ಹಳ್ಳ, ದಿಣ್ಣೆಯಿಂದ ಕೂಡಿದ ಪ್ರದೇಶ. ಹಾಗಾಗಿ ಇಲ್ಲಿ ನರಿ, ಮೊಲ, ಕರಡಿ, ಕಾಡು ಬೆಕ್ಕು, ಹಂದಿ ಕಂಡು ಬರುತ್ತದೆ. ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗೆ ಹಸು, ಎತ್ತುಗಳನ್ನು ಸಾಕುತ್ತಾರೆ. ಕುರಿ, ಮೇಕೆ, ನಾಯಿ, ಬೆಕ್ಕು ಸಾಕು ಪ್ರಾಣಿಗಳು. ಕೋಳಿಯನ್ನು ಮಾಂಸ ಹಾಗೂ ಸಂತಾನ ಅಭಿವೃದ್ಧಿಗಾಗಿ ಸಾಕುತ್ತಾರೆ.

ಬಿಸಿಲು, ಅಧಿಕವಾಗಿ, ಮಳೆ ಕಡಿಮೆ ಇರುತ್ತದೆ. ಹಾಗಾಗಿ ಇಲ್ಲಿ ಮಳೆಯ ಪ್ರಮಾಣ ವಾರ್ಷಿಕ ಸರಾಸರಿ ೪೨೪ ಮಿ.ಮೀ ಆಗಿರುತ್ತದೆ. ಚಳಿ ೧೨೦ ಸೆಂ., ಉಷ್ಣಾಂಶ ೩೯೦ ಸೆಂ.ಸಾಮಾನ್ಯವಾಗಿರುತ್ತದೆ. ಕ್ಯಾದಿಕುಂಟೆ ಕೆರೆ, ಹಾಗೂ ಒಂದು ಗೋವು ಕಟ್ಟೆ ಇದ್ದರೂ ತುಂಬುವುದು ವಿರಳ. ಈ ಪರಿಸರದಲ್ಲಿ ಕೃಷಿ ಮೂಲವಾಗಿ ೮೦ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕೊಳಾಯಿಗಳಲ್ಲಿ, ಸಣ್ಣ ನೀರಾವರಿ ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಎರಡು ಕೈ ಪಂಪುಗಳೂ ಇವೆ. ಕುಂಚಿಟಿಗ

ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ಗೊಲ್ಲ, ಮಡಿವಾಳ, ನಾಯಕ, ಲಿಂಗಾಯಿತ, ಆದಿದ್ರಾವಿಡ, ವಿಶ್ವಕರ್ಮ, ಕಮ್ಮಾರರು ಸಣ್ಣ ಸಮುದಾಯವಾಗಿದೆ. ಕನ್ನಡ ಗ್ರಾಮದ ಮಾತೃ ಭಾಷೆಯಾಗಿದೆ. ಮನೆಗಳ ರಚನೆ ಕಾಂಕ್ರೀಟ್, ಮಣ್ಣಿನ, ಕಲ್ಲಿನ, ಶೀಟ್ ಹಾಗೂ ಹೆಂಚಿನ ಸ್ವರೂಪದ ಒಟ್ಟು ೨೭೦ ಮನೆಗಳಿದ್ದು, ೯೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೨೩೨೪ ಜನಸಂಖ್ಯೆ ಇದೆ.

ಆಶ್ರಯ, ಅಂಬೇಡ್ಕರ್ ಆವಾಸ್, ಜನತಾ ವಸತಿ ಯೋಜನೆಯ ಫಲಾನುಭವಿಗಳೂ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದವರೂ ಇದ್ದಾರೆ.

ರಾಗಿ ಮುದ್ದೆ ಪ್ರಧಾನ ಊಟವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ. ವಾಗಿದೆ. ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಪಾಯಸ, ಹೋಳಿಗೆ ಭೋಜನವಿರುತ್ತದೆ.

೪ ಎತ್ತಿನ ಬಂಡಿ, ಆಧುನಿಕ ಸೌಲಭ್ಯಗಳಾದ ಟ್ರ್ಯಾಕ್ಟರ್, ಮಿನಿಟೆಂಪೋ, ಆಟೋ, ದ್ವಿಚಕ್ರ ವಾಹನಗಳಿವೆ. ಶೇಂಗಾ ಗ್ರಾಮದ ಮುಖ್ಯ ಬೆಳೆಯಾಗಿದ್ದು, ರಾಗಿ, ತೊಗರಿ, ಅಲಸಂದಿ ಆಹಾರ ಬೆಳೆಗಳು. ತೆಂಗು, ಅಡಿಕೆ, ರೇಷ್ಮೆ ಹಾಗೂ ಹುಣಸೆಹಣ್ಣನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ. ಸಣ್ಣ ಕೈಗಾರಿಕೆಯಾಗಿ ಬೀಡಿ ಸುತ್ತುವುದು, ಬಟ್ಟೆ ಹೊಲಿಯುವುದು ಇರುತ್ತದೆ.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ, ಹೊಸಗ್ಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೂ, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಟ್ಟು ೩ ಜನ ಪಂಚಾಯಿತಿ ಪ್ರತಿನಿಧಿಗಳಿದ್ದು, ಪಿ.ಆರ್. ಮಂಜುಳ ಸದ್ಯ ಹೊಸಹಳ್ಳಿ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರಾಗಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ೮ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳು, ಎರಡು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪುಗಳು ಇದ್ದು, ಅಂಗನವಾಡಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದೆ. ಒಟ್ಟು ೩೯ ಮಕ್ಕಳಿದ್ದು, ಇಬ್ಬರು ಶಿಕ್ಷಕರಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೬೦ ರಷ್ಟಿದ್ದು. ಪುರುಷರು ಶೇ.೭೦%, ಮಹಿಳೆಯರು ಶೇ.೪೯% ರ ಪ್ರಮಾಣದಲ್ಲಿದೆ. ಆರೋಗ್ಯ ಸಂಬಂಧಿ, ತಿಮ್ಮಣ್ಣ ಎಂಬ ೭೦ ವರ್ಷ ವಯಸ್ಸಿನ ವ್ಯಕ್ತಿ ಪಶು ನಾಟಿ ಔಷಧಿ ನೀಡುವ ವೈದ್ಯರಿದ್ದಾರೆ. ವೃದ್ಧಾಪ್ಯ ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳು ಇದ್ದು , ೮ ಪೆಟ್ಟಿಗೆ ಅಂಗಡಿ, ಟೀ ಅಂಗಡಿಗಳು ಸಮುದಾಯ ಸೌಲಭ್ಯ ಒದಗಿಸುತ್ತವೆ. ಗ್ರಾಮದಲ್ಲಿ ಒಂದು ಅಶ್ವತ್ಥ ಕಟ್ಟೆಯಿದ್ದು, ೨ ಕರುಗಲ್ಲುಗಳಿವೆ.

ಶತಮಾನಕ್ಕೆ ಸಂಬಂಧಿಸಿದ ೨ ಶಾಸನಗಳು ಲಭ್ಯವಿದ್ದು, ಸಿರಾ ೧೯ನೇ ಶಾಸನ ಈ ಗ್ರಾಮದ ನೈರುತ್ಯ ದಿಕ್ಕಿಗೆ ಆದಿ ದ್ರಾವಿಡ ಜನಾಂಗದ ಒಳಬದಾಸಿ ಹೋದಲ್ಲಿನ ಶಾಸನ, ಕರಿನಾಗಿ ಗೌಡ ದೇವರ ಸೇವೆಗಾಗಿ, ಹೊಳವನ್ನು ಓಬಳಿ ಎಂಬುವನಿಗೆ ದತ್ತಿ ನೀಡಿದ ಸಂಗತಿಯನ್ನು ತಿಳಿಸಿದರೆ, ಸಿರಾ ೨೦ ನೇ ಶತಮಾನದಲ್ಲಿ ಗೌಡರಾಯಪ್ಪ ಎಂಬುವವರು ಕ್ಯಾದಿಕುಂಟೆ ರಂಗನಾಥ ಸ್ವಾಮಿ ದೇವಸ್ಥಾನ ನಿರ್ಮಿಸಿರುವ ಸಂಗತಿ ತಿಳಿಸುತ್ತದೆ.

ರಂಗನಾಥ ಸ್ವಾಮಿ, ದುರ್ಗಮ್ಮ, ಈಶ್ವರ, ಹಟ್ಟಿ ಮಾರಮ್ಮ, ಶನಿದೇವರ ದೇವಸ್ಥಾನಗಳಿವೆ. ರಂಗನಾಥಸ್ವಾಮಿಯ ದೊಡ್ಡ ದೇವಾಲಯ, ಪೌಳಿ, ಕಾಂಪೌಂಡು, ಕಲ್ಯಾಣ ಮಂಟಪ ಹೊಂದಿದ್ದು, ಏಳು ದಿನಗಳ ಕಾಲ ದನಗಳ ಜಾತ್ರೆ ನಡೆಯುತ್ತದೆ. ಹಟ್ಟಿ ಮಾರಮ್ಮ, ಹಾಗೂ ಕರಿಯಮ್ಮ ದೇವರ ಪೌಳಿಗಳಿದ್ದು, ಗ್ರಾಮದ ಹಬ್ಬವಾಗಿ ಆಚರಿಸುತ್ತಾರೆ. ವಾರ್ಷಿಕ ಊರ ಹಬ್ಬದಂದು, ಬ್ಯಾಟೆ. ಆರತಿ, ಬಾನದ ವಿಶೇಷ ಆಚರಣೆ ಹರಕೆಗಳಿವೆ.

ಕೆ.ವಿ. ಮಂಜುನಾಥ್ ಕವಿಯಾಗಿದ್ದು ಪುಸ್ತಕ ಪ್ರಕಟಿಸಿದ್ದಾರೆ. ತಮ್ಮಟೆ ಕಲಾವಿದ ನರಸಿಂಹಯ್ಯ ಈ ಗ್ರಾಮದ ಪ್ರಮುಖ ಕಲಾವಿದರಾಗಿದ್ದಾರೆ. ಪ್ರಸ್ತುತ ಮುದ್ದರಂಗೇಗೌಡ ಬಿಇಡಿ ಕಾಲೇಜಿನ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಂಕ್ರಾಂತಿ, ದೀಪಾವಳಿ, ಮಹಾನವಮಿ, ಯುಗಾದಿ, ಗೌರಿ ಗಣೇಶನ ವಿಶೇಷ ಹಬ್ಬಗಳನ್ನು ಆಚರಿಸುತ್ತಾರೆ. ಶಿಕ್ಷಣ, ವೈದ್ಯಕೀಯ, ಇಂಜಿನಿಯರ್ ಈ ಕ್ಷೇತ್ರಗಳ ಒಟ್ಟು ೮ ಜನ ಸರ್ಕಾರಿ ನೌಕರರಿದ್ದು, ಡಾ. ಶ್ರೀನಿವಾಸ್ ಇಂಜಿನಿಯರ್ ಕಲಿಗಪ್ಪ, ಉಪನ್ಯಾಸಕರುಗಳಾದ ರಂಗನಾಥ್, ಕಂಬಯ್ಯ, ಚಿತ್ತಯ್ಯ, ಜಯಣ್ಣ ವಿಶೇಷವಾಗಿ ಗುರುತಿಸಿಕೊಂಡಿದ್ದಾರೆ. ಗ್ರಾಮದಲ್ಲಿ ರಾಜೀವ್ ಗಾಂಧಿ ಯುವಕರ ಸಂಘ ಕ್ರಿಯಾಶೀಲವಾಗಿದ್ದು, ಕನ್ನಡ ರಾಜ್ಯೋತ್ಸವ, ಸೇರಿದಂತೆ ಗ್ರಾಮದ ಸಾಂಸ್ಕೃತಿಕ ಕ್ರೀಡಾ ಚಟುವಟಿಕೆಗಳನ್ನು ನಡೆಸುತ್ತಾ ಬರುತ್ತಿದೆ.

## ಕೊಟ್ಟಿ

ಕೊಟ್ಟಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಬಸವನಹಳ್ಳಿ ಮತ್ತು ಕೊಟ್ಟಿಪಾಳ್ಯ ಎಂಬ

ಎರಡು ಉಪಗ್ರಾಮಗಳನ್ನು ಒಳಗೊಂಡಿದೆ. ಇದರ ಭೌಗೋಳಿಕ ವ್ಯಾಪ್ತಿ ೪೮೩.೮ ಹೆಕ್ಟೇರ್ ಆಗಿರುತ್ತದೆ. ಕೊಟ್ಟಿಗೆ ಮೂಲದಿಂದ ಕೊಟ್ಟಿ ಆಗಿದೆ ಎಂದು ಉಪನ್ಯಾಸಕ ವಿಜಯಕುಮಾರ್ ಅಭಿಪ್ರಾಯ ಪಟ್ಟರೆ, ಬಿ. ರಂಗಪ್ಪ ಎಂಬ ಕಲಾವಿದರ ಪ್ರಕಾರ ಹಿಂದೆ ಈ ಗ್ರಾಮ ಕಲ್ಲು ಕೋಟೆಯಿಂದ ಸುತ್ತುವರಿದ್ದು, ಹೇಮಾವತಿಯ ನೊಳಂಬರ ಕಾಲದಲ್ಲಿ ಆನೆಗಳನ್ನು ಕೂಡುವ ಸ್ಥಳ ಈ ಗ್ರಾಮವಾಗಿದ್ದ ಕಾರಣದಿಂದ ಕೊಟ್ಟಿಗೆ ಪದಕ್ಕೆ ಪುಸ್ತಕದ 'ಗೆ' ಶಿಥಿಲದಿತ್ವವಾಗಿ ಕೊಟ್ಟಿ ಮಾತ್ರವಾಗಿದೆ ಎಂದು ಶಿಕ್ಷಕರೂ ಆಗಿದ್ದ ರಂಗಪ್ಪ ಅಭಿಪ್ರಾಯ ಪಡುತ್ತಾರೆ.

ಬಯಲು ಪ್ರದೇಶ ಕಪ್ಪು, ಬಿಳಿ, ಮರಳು ಮಿಶ್ರಿತ ಭೂಮಿ. ಕುರುಚಲು ಗಿಡ, ಪೊದೆ, ಹಳ್ಳ, ದಿಣ್ಣೆಯಿಂದ ಕೂಡಿದ ಭೂಮೇಲ್ಮೈ ಪ್ರದೇಶ. ಹಾಗಾಗಿ ಈ ಪರಿಸರದಲ್ಲಿ ಹಂದಿ, ಉಡ, ಮೊಲ, ಮುಂಗುಸಿ ಕಂಡು ಬರುತ್ತದೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ಕೋಳಿ ಗ್ರಾಮದಲ್ಲಿವೆ. ಹಳ್ಳಿಕಾರ ತಳಿ ಎತ್ತು ಹಾಗೂ ಸೀಮೆ ಹಸುಗಳನ್ನು ವಿಶೇಷವಾಗಿ ಸಾಕಿದ್ದಾರೆ.

ಬಿಸಿಲು, ಅಧಿಕವಾಗಿ, ಮಳೆ ಕಡಿಮೆ ಇರುತ್ತದೆ. ಹಾಗಾಗಿ ಇಲ್ಲಿ ಮಳೆಯ ಪ್ರಮಾಣ ವಾರ್ಷಿಕ ಸರಾಸರಿ ೫೮೦ ಮಿ.ಮೀ ಆಗಿರುತ್ತದೆ. ಚಳಿ ೧೨೦ ಸೆಂ., ಉಷ್ಣಾಂಶ ೩೯೦ ಸೆಂ.ಸಾಮಾನ್ಯವಾಗಿರುತ್ತದೆ. ಈ ಗ್ರಾಮದಲ್ಲಿ ಕೃಷಿಗಾಗಿ ಕೊಳವೆ ಬಾವಿಗಳಿದ್ದು ೯೩ ಕುಟುಂಬಗಳಿಗೆ ಕೊಟ್ಟಿ ಕೆರೆಯಿದ್ದು, ತುಂಬುವುದು ಅಪರೂಪವಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸಮುದಾಯ ಯೋಜನೆಯಲ್ಲಿ ಪೂರೈಸಲಾಗುತ್ತಿದೆ. ಎರಡು ಕೈ ಪಂಪುಗಳೂ ಇವೆ.

ಇಲ್ಲಿ ಸಾಮಾಜಿಕ ರಚನೆಯಲ್ಲಿ ಆದಿ ಕರ್ನಾಟಕ ಜನಾಂಗದವರ ದೊಡ್ಡ ಸಮುದಾಯವಾಗಿದೆ, ಕುಂಚಿಟಿಗ, ಗೊಲ್ಲ, ಈಡಿಗ, ಆದಿದ್ರಾವಿಡ ಸಣ್ಣ ಸಮುದಾಯವಾಗಿದೆ. ಕನ್ನಡ ಗ್ರಾಮದ ಮಾತೃ ಭಾಷೆಯಾಗಿದೆ.

ಇಲ್ಲಿನ ಮನೆಗಳ ರಚನೆಯಲ್ಲಿ ಕಾಂಕ್ರೀಟ್, ಮಣ್ಣಿನ, ಕಲ್ಲಿನ, ಶೀಟ್ ಹಾಗೂ ಹೆಂಚಿನ ಸ್ವರೂಪದ ೪ ಗುಡಿಸಲುಗಳೂ ಇವೆ. ಒಟ್ಟು ೪೧೨ ಮನೆಗಳಿರುವ ಇಲ್ಲಿ ೧೩೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಆಶ್ರಯ, ಅಂಬೇಡ್ಕರ್ ಆವಾಸ್, ಜನತಾ ವಸತಿ ಯೋಜನೆಯ ೧೬ ಫಲಾನುಭವಿಗಳೂ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದವರೂ ಇದ್ದಾರೆ. ೨೦೧೪ ಜನಸಂಖ್ಯೆ ಇದೆ.

ರಾಗಿ ಮುದ್ದೆ ಪ್ರಧಾನ ಊಟವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ. ವಾಗಿದೆ. ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಪಾಯಸ, ಹೋಳಿಗೆ ಭೋಜನವಿರುತ್ತದೆ.

ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿ, ಆಧುನಿಕ ಸೌಲಭ್ಯಗಳಾದ ಟ್ರ್ಯಕ್ಟರ್, ಮಿನಿಟೆಂಪೋ, ಆಟೋ, ದ್ವಿಚಕ್ರ ವಾಹನಗಳಿವೆ. ಶೇಂಗಾ ಗ್ರಾಮದ ಮುಖ್ಯ ಬೆಳೆಯಾಗಿದ್ದು, ರಾಗಿ, ತೊಗರಿ, ಹುರುಳಿ, ಅಲಸಂದಿ ಆಹಾರ ಬೆಳೆಗಳು. ತೆಂಗು, ಅಡಿಕೆ, ರೇಷ್ಮೆ ಹಾಗೂ ಹುಣಸೆಹಣ್ಣನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ. ಒಂದು ಸಹಕಾರಿ ಸಂಘದ ಹಾಲಿನ ಡೈರಿ ಇದ್ದು, ನಿತ್ಯ ೩೦೦ ಲೀಟರ್ ಹಾಲು ಸಂಗ್ರಹಿಸಲಾಗುತ್ತಿದೆ. ೮ ಜನ ಸರ್ಕಾರಿ ನೌಕರರಿದ್ದು, ಉಪನ್ಯಾಸಕ ವಿಜಯಕುಮಾರ್, ವಾಣಿಜ್ಯ ತೆರಿಗಾಧಿಕಾರಿ ರಂಗಸ್ವಾಮಯ್ಯ ಸೇರಿದಂತೆ ವಿವಿಧ ಇಲಾಖೆಯ ಸರ್ಕಾರಿ ನೌಕರರಿದ್ದಾರೆ. ವಕೀಲರುಇದ್ದಾರೆ. ಸಣ್ಣ ಕೈಗಾರಿಕೆಯಾಗಿ ಬೀಡಿ ಸುತ್ತುವುದು, ಬಟ್ಟೆ ಹೊಲಿಯುವುದು, ಎಲೆ ಕಟ್ಟುವ ಕೆಲಸ ಮಾಡುತ್ತಿದ್ದಾರೆ.

ಆಡಳತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ತಾಲ್ಲೂಕು, ಜಿಲ್ಲಾ ಪಂಚಾಯಿತಿ, ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೂ, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಶ್ರೀಮತಿ ಭಾಗ್ಯಮ್ಮ ಎಂಬುವವರು ಈ ಗ್ರಾಮದ ಸದಸ್ಯರಾಗಿದ್ದು, ಹುಲಿಕುಂಟೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿರುವುದು ವಿಶೇಷವಾಗಿದೆ. ಸ್ಥಳೀಯ ಆರ್ಥಿಕರಾಗಿರುವುದು ವಿಶೇಷ ವಾಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ೫ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳು, ಮೂರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪುಗಳು ಕಾರ್ಯ ನಿರ್ವಹಿಸುತ್ತಿದ್ದು, ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದೆ. ಒಟ್ಟು ೯೪ ಮಕ್ಕಳಿದ್ದು, ನಾಲ್ಕು ಜನ ಶಿಕ್ಷಕರಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಉಚಿತ ಸಮವಸ್ತ್ರ, ಪಠ್ಯ ಪುಸ್ತಕ ಯೋಜನೆಗಳು ಜಾರಿಯಲ್ಲಿವೆ. ಶೈಕ್ಷಣಿಕ ಸಾಕ್ಷರತಾ ಪ್ರಮಾಣ ಶೇ. ೫೮.೭ ರಷ್ಟಿದ್ದು. ಪುರುಷರು ಶೇ.೬೯.೯%, ಮಹಿಳೆಯರು ಶೇ.೪೭.೪% ರ ಪ್ರಮಾಣದಲ್ಲಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸೌಲಭ್ಯಗಳಾದ ವೃದ್ಧಾಪ್ಯ ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳು ಇದ್ದು , ಗ್ರಾಮದಲ್ಲಿ ೧೦ ಟೀ

ಅಂಗಡಿಗಳಿವೆ. ಧಾರ್ಮಿಕವಾಗಿ ಈಶ್ವರ, ಬೀರಪ್ಪ, ಲಕ್ಷ್ಮೀದೇವರು, ಕರಿಯಮ್ಮ ದೇವಾಲಯಗಳಿವೆ. ಮೂಗ ಬಸವೇಶ್ವರ ಹಾಗೂ ಗೊಲ್ಲಾಳಮ್ಮ ದೇವಸ್ಥಾನಗಳೂ ಪ್ರಸಿದ್ಧಿಯಾಗಿ ಹಲವಾರು ಒಕ್ಕಲುಗಳನ್ನು ಹೊಂದಿದೆ. ಗೊಲ್ಲಾಳಮ್ಮ ದೇವಿಯ ಜಾತ್ರೆ ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯುತ್ತದೆ. ಉಳಿದಂತೆ ಕರಿಯಮ್ಮ ದೇವಿಯ ಊರ ಹಬ್ಬವಿರುತ್ತದೆ. ಹರಕೆಗಳಾಗಿ ಬಾನ, ಆರತಿ, ಪ್ರಾಣಿ ಬಲಿ ಇರುತ್ತದೆ.

ಯುಗಾದಿ, ದೀಪಾವಳಿ, ಬಸವ ಜಯಂತಿ, ಮಹಾನವಮಿ, ಗೌರಿ ಗಣೇಶ ಹಬ್ಬಗಳ ಜೊತೆಗೆ ಕೌಂತಮ್ಮ-ಗೌರಮ್ಮ ಎಂಬ ವಿಶಿಷ್ಟ ಹಬ್ಬವನ್ನು ಆಚರಿಸುತ್ತಾರೆ.

ಒಂದು ದಲಿತ ಸಂಘರ್ಷ ಸಮಿತಿಯ ಗುಂಪು, ರೈತ ಸಂಘದ ಒಂದು ಕೇಂದ್ರ ಗ್ರಾಮದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಗ್ರಾಮದಲ್ಲಿ ಒಟ್ಟು ಎರಡು ವೀರಗಲ್ಲು ಹಾಗೂ ಒಂದು ಮಾಸ್ತಿ ಕಲ್ಲು ಇದ್ದು, ಇವು ನೊಳಂಬರ ಕಾಲಕ್ಕೆ ಸೇರಿದವುಗಳಾಗಿವೆ. ಇವುಗಳಿಗೆ ವಿಶೇಷ ಹಬ್ಬಗಳಲ್ಲಿ ಪೂಜಿಸುವ ಸಂಪ್ರದಾಯವಿದೆ.

ಕೊಟ್ಟ-ಹುಲಿಕುಂಟೆ ಮಾರ್ಗವಾಗಿ ಸಿರಾ-ಅಮರಾಪುರ ಹಾಗೂ ಕೊಟ್ಟ- ಪಟ್ಟನಾಯಕನಹಳ್ಳಿ ಮಾರ್ಗವಾಗಿ ಸಿರಾ-ದ್ವಾರನಕುಂಟೆ ಧರ್ಮ ಪುರುಗಳಿಗೆ ಬಸ್ ಸಂಚಾರವಿದೆ. ಗ್ರಾಮದಲ್ಲಿ ಒಂದು ಚಲನಚಿತ್ರ ಟೆಂಟ್ ಇದೆ.

## ಕೊಟ್ಟಪಾಳ್ಯ

ಕೊಟ್ಟ ಪಾಳ್ಯ ಗ್ರಾಮವು, ಸಿರಾ ತಾಲ್ಲೂಕು ಕೇಂದ್ರದಿಂದ ಎತ್ತರಕ್ಕೆ ೨೯ ಕಿ.ಮೀ. ದೂರದಲ್ಲಿದೆ. ಇದು ಕೊಟ್ಟ ಗ್ರಾಮದ ಮಜರೆ ಗ್ರಾಮವಾಗಿದ್ದು, ಕೊಟ್ಟಗೆ ಒಂದು ಕಿ.ಮೀ. ದೂರದಲ್ಲಿದೆ. ಸಿರಾ ಪಟ್ಟನಾಯಕನಹಳ್ಳಿ ಹುಲಿಕುಂಟೆ ಮಾರ್ಗದಲ್ಲಿ ಈ ಗ್ರಾಮ ಬರುತ್ತದೆ.ಇದು ಭೌಗೋಳಿಕ ವಿಸ್ತೀರ್ಣ ೪೮.೧೩ ಹೆಕ್ಟೇರ್.

ಮರಳು ಕೆಂಪು-ಕಂದು ಮಿಶ್ರಿತ ಮಣ್ಣಿನ ಇಲ್ಲಿ ಕುರುಚಲು ಗಿಡ, ಮರ, ಪೊದೆ ಹೆಚ್ಚಿದ್ದು, ಈ ಪರಿಸರದಲ್ಲಿ ನರಿ, ಮೊಲ, ಕಾಡುಹಂದಿ, ಮುಂಗುಸಿ ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಹಳ್ಳಿಕಾರು ತಳಿ ಎತ್ತುಗಳನ್ನು ಸಾಕಲಾಗುತ್ತದೆ. ಕುರಿ, ಮೇಕೆ ಸಾಕಾಣಿಕೆಯೂ ಇದೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ, ಕೌಜಲಗ, ಗೂಬೆ, ಹದ್ದು, ಗರುಡು, ಗೀಜಗ ಕಂಡು ಬರುತ್ತವೆ. ಕೋಳಿ ಸಾಕಾಣಿಕೆಯೂ ಇದೆ.

ವಾರ್ಷಿಕ ಸರಾಸರಿ ೫೮೦ ಮಿ.ಮೀ. ಮಳೆ ಬೀಳುತ್ತದೆ. ಆದರೂ ಒಣ ನೆಲಕ್ಕೆ ಏನೇನೂ ಸಾಲದು. ಬಿಸಿಲು ೩೯-೪೦ಂ ಸೆಂ. ಇದ್ದು ಚಳಿ ೧೨ಂ ಸೆಂ. ಸಹಜವಾಗಿರುತ್ತದೆ. ಈ ಪರಿಸರದಲ್ಲಿ ೮ ಬೋರ್‌ವೆಲ್‌ಗಳಿದ್ದು, ರೈತಾಪಿ ಬದುಕಿಗೆ ಆಶ್ರಯವಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ಪೂರೈಸಲಾಗುತ್ತಿದೆ. ೨ ಕೈ ಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ಗೊಲ್ಲರು ಸಣ್ಣ ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ಕಾಂಕ್ರೀಟ್, ಹೆಂಚಿನ, ಶೀಟಿನ ಒಟ್ಟು ೨೧ ಮನೆಗಳಿದ್ದು, ೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೧೧೩ ಜನಸಂಖ್ಯೆ ಇದೆ.

ಈ ಗ್ರಾಮದ ಒಟ್ಟು ಜನಸಂಖ್ಯೆ ೧೦೮ ಆಗಿದ್ದು, ವಸತಿ ಯೋಜನೆಗಳಾದ ಜನತಾ, ಆಶ್ರಯ, ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ. ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನವಾಗಿದ್ದು, ಅಮುಖ್ಯವಾಗಿ ರೊಟ್ಟಿ, ದೋಸೆ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿರುತ್ತದೆ. ಸಾಂಪ್ರದಾಯಿಕ ವಾಹನವಾಗಿ ಎತ್ತಿನಗಾಡಿ, ಆಧುನಿಕವಾಗಿ ಟ್ರ್ಯಾಕ್ಟರ್, ಟೆಂಪೋ, ಹಾಗೂ ದ್ವಿಚಕ್ರ ವಾಹನ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಬಳಸುತ್ತಾರೆ. ಶೇಂಗಾ, ಮುಖ್ಯ ಬೆಳೆಯಾಗಿದ್ದು, ರಾಗಿ, ಅಲಸಂದಿ, ತೊಗರಿ ಆಹಾರ ಬೆಳೆಗಳು. ಶೇಂಗಾ, ರೇಷ್ಮೆ, ಅಡಿಕೆ, ತೆಂಗು, ತೋಟಗಾರಿಕೆ ಬೆಳೆಗಳು. ಶೇಂಗಾ, ಹುಣಸೇಹಣ್ಣು, ಅಡಿಕೆ, ತೆಂಗು ವಾಣಿಜ್ಯ ಬೆಳೆಯಾಗಿವೆ. ಕುರಿ ವ್ಯಾಪಾರವೂ ಇಲ್ಲಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ, ತಾಲ್ಲೂಕು, ಹಾಗೂ ಗ್ರಾಮ ಪಂಚಾಯಿತ್ ಕ್ಷೇತ್ರವಾಗಿದ್ದು, ತಹಸೀಲ್ದಾರ್ ಕಚೇರಿಗೆ ಸಿರಾ ಪೋಲೀಸ್ ಠಾಣೆಗೆ ಪಟ್ಟನಾಯಕನಹಳ್ಳಿ ಅವಲಂಬಿಸಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ.

ಗ್ರಾಮದಲ್ಲಿ ಒಂದು ಸ್ತ್ರೀ ಶಕ್ತಿ ಸಂಘವಿದ್ದು, ಸ್ವಸಹಾಯ ಅಧಿಕ ಪ್ರಗತಿಗೆ ಪೂರಕವಾಗಿದೆ. ಗ್ರಾಮದ ಶಿಕ್ಷಣಕ್ಕೆ ಕೊಟ್ಟ, ಹುಲಿಕುಂಟೆ, ಪಟ್ಟನಾಯಕನಹಳ್ಳಿ ಗಳನ್ನು ಆಶ್ರಯಿಸಬೇಕಿದೆ. ಯಂಜಲಗೆರೆಗೂ ಹೋಗುತ್ತಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೮.೭ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ಅಂಗವಿಕಲವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಒಂದು ಪೆಟ್ಟಿಗೆ ಅಂಗಡಿ ಇದೆ. ಗ್ರಾಮದ ಹೊರ ವಲಯದಲ್ಲಿ ಒಂದು ವೀರಗಲ್ಲು ಇದ್ದು, ನಾಶದ ಅಂಚಿನಲ್ಲಿದೆ. ಅದಕ್ಕೆ ಕಾರ ಹಬ್ಬದ ಸಂದರ್ಭದಲ್ಲಿ ಪೂಜಿಸುತ್ತಾರೆ. ಕರಿಯಮ್ಮ ದೇವರ ಪೌಳಿ ಇದ್ದು, ಅವರ ಊರಹಬ್ಬವನ್ನು ಆಷಾಢ ಮಾಸದಲ್ಲಿ ಆಚರಿಸುತ್ತಾರೆ. ಆರತಿ, ಬಾನ, ಬಲಿ ಈ ಮೊದಲಾದ ಹರಕೆ ಸಂಪ್ರದಾಯವಿದೆ.

ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗೌರಮ್ಮ – ಕಾಂತಮ್ಮನ ಹಬ್ಬ ಆಚರಣೆ ೨ ದಿನ ನಡೆಯುತ್ತದೆ.

## ಕಳ್ಳಂಬೆಳ್ಳ

ಕಳ್ಳಂಬೆಳ್ಳ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೨ ಕಿ.ಮೀ. ದೂರದ ಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೧೭೫೭.೮೦ ಹೆಕ್ಟೇರ್ ಆಗಿದೆ. ಹೋಬಳಿ ಕೇಂದ್ರವೂ ಆಗಿರುವ ಈ ಗ್ರಾಮ ಪಂಚಾಯಿತಿ ಕೇಂದ್ರವೂ ಆಗಿದೆ. ಸಮುದ್ರ ಮಟ್ಟಕ್ಕಿಂತ ೬೯೦ ಮೀಟರ್ ಎತ್ತರದಲ್ಲಿದೆ. ಕಳ್ಳಂಬೆಳ್ಳ ಬಂಗ್ಲೆ, ಮರುಳೇಗೌಡನ ಪಾಳ್ಯ, ಫಿಲ್ಲಯ್ಯನ ಪಾಳ್ಯ, ಬಸವಂತನ ಹಳ್ಳಿ, ಕೆಂಚಗಾನಹಳ್ಳಿ, ಲಕ್ಕನಹಳ್ಳಿ, ಮಲ್ಲಶೆಟ್ಟಿ ಹಳ್ಳಿಗಳು ಈ ಗ್ರಾಮದ ಮಜರೆ ಗ್ರಾಮಗಳು.

ಹಲವು ರಾಜಕೀಯ ಸ್ಥಿತ್ಯಂತರಗಳನ್ನು ಕೂಡಿರುವ ಕಳ್ಳಂಬೆಳ್ಳ ಗ್ರಾಮವು, ಪ್ರಜಾ ಪ್ರಭುತ್ವದ ನೆಲೆಯಲ್ಲಿ ಮೂರು ವಿಧಾನ ಸಭಾ ಕ್ಷೇತ್ರಕ್ಕೆ ಒಳಪಟ್ಟಿರುವುದು ಈ ಗ್ರಾಮದ ವಿಶೇಷ. ೧೯೫೬ ರಲ್ಲಿ ಗುಬ್ಬಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿತ್ತು. ನಂತರ ವಿಧಾನ ಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯ ಕಾಲಕ್ಕೆ ೧೯೬೭ ರಲ್ಲಿ ಸಿರಾ ತಾಲ್ಲೂಕಿನ ಕಳ್ಳಂಬೆಳ್ಳ, ಬುಕ್ಕಾಪಟ್ಟಣ, ಗುಬ್ಬಿ ತಾಲ್ಲೂಕಿನ ಹಾಗಲವಾಡಿ, ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರು ಹೋಬಳಿಯನ್ನು ಒಗ್ಗೂಡಿಸಿ, ಕಳ್ಳಂಬೆಳ್ಳ ವಿಧಾನ ಕ್ಷೇತ್ರದ ಕೇಂದ್ರವನ್ನಾಗಿಸಿತು. ಮೂರನೇ ಬಾರಿಗೆ ೨೦೦೮ ರಲ್ಲಿ ಕ್ಷೇತ್ರಗಳ ಪುನರ್ ವಿಂಗಡಣೆಯಲ್ಲಿ ಸಿರಾ ವಿಧಾನಸಭಾ ಕ್ಷೇತ್ರಕ್ಕೆ ಕಳ್ಳಂಬೆಳ್ಳ ಗ್ರಾಮವನ್ನು ಸೇರಿಸಿ, ಹುಳಿಯಾರು ಹೋಬಳಿಯನ್ನು ಚಿಕ್ಕನಾಯಕನಹಳ್ಳಿಗೂ, ಹಾಗಲವಾಡಿ ಹೋಬಳಿಯನ್ನು ಗುಬ್ಬಿ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿ, ಕಳ್ಳಂಬೆಳ್ಳವನ್ನು ವಿಧಾನ ಸಭಾ ಕ್ಷೇತ್ರದ ಸ್ಥಾನದಿಂದ ಪಲ್ಲಟಗೊಳಿಸಿ ಈಗ ಸಿರಾ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ತರಲಾಗಿದೆ.

ಕಳ್ಳಂಬೆಳ್ಳ ಹಳ್ಳದ ದಂಡೆಯ ಗ್ರಾಮ. ಇಲ್ಲಿನ ಹಳ್ಳ, ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿಯ ಅನುಪನಕುಂಟೆ ಕಾಡಿನಿಂದ ಆರಂಭಗೊಂಡು ಬಸರಿಹಳ್ಳ, ಹುಂಜನಹಳ್ಳ, ಹೊಂಗೆಹಳ್ಳದ ಮೂಲಕ ಹರಿದು ಕಟಾರಿ ವೀರನಹಳ್ಳಿ ಬಳಿ ತಿರುವು ಪಡೆದು, ಮುದಿಮಡುವಿನಿಂದ ಹೊರಳಿ ಕಳ್ಳಂಬೆಳ್ಳದ ಮೂಲಕ ಹರಿದು ಮುಂದೆ ಹೋಗುತ್ತದೆ. ಇಂಥ ಹಳ್ಳಕ್ಕೆ ಕಟ್ಟೆಯನ್ನು ಕಟ್ಟಿ ಕಳ್ಳಂಬೆಳ್ಳ ದೊಡ್ಡ ಕೆರೆಯನ್ನು ನಿರ್ಮಿಸಲಾಗಿದೆ. ಈ ಹಳ್ಳದಲ್ಲಿ ಹಾಗೂ ಅನುಪನ ಕುಂಟೆ ಕಾಡಿನಲ್ಲಿ ಇಂದಿಗೂ 'ಕಳ್ಳಂಗಿಡ' ಎಂಬ ಹೆಸರಿನ ಸಸ್ಯವೊಂದು ಬೆಳೆಯುತ್ತದೆ. ಇದರ ಹೂವು, ಬೀಜ, ಸೊಪ್ಪು, ಉತ್ತಮ ಔಷಧಿ ಗುಣದಿಂದ ಕೂಡಿರುತ್ತದೆ. ದನ, ಕುರಿ, ಎಮ್ಮೆ ಮೊದಲಾದ ಗಬ್ಬದ ಪ್ರಾಣಿಗಳು, ಕರು ಹಾಕಲು ಕಷ್ಟ ಪಡುವಾಗ ಈ ಭಾಗದ ರೈತರು, ಕಳ್ಳಂ ಸೊಪ್ಪನ್ನು ಬಿಸಿ ನೀರಿನಲ್ಲಿ ಕುದಿಸಿ ಗೊಟ್ಟಗಳ ಮೂಲಕ ಪ್ರಾಣಿಗಳಿಗೆ ಕುಡಿಸುತ್ತಾರೆ. ಹಾಗೆ ಕುಡಿಸಿದ ಒಂದೆರಡು ತಾಸಿನಲ್ಲೇ ಪ್ರಾಣಿ ಕರು ಹಾಕುತ್ತದೆ. ಈ ಬಗೆಯ ಕಳ್ಳಂ ಜಾತಿಯ ಸಸ್ಯ ಹಳ್ಳ, ಕಾಡು ಮೇಡುಗಳಲ್ಲಿ ಮಾತ್ರ ಬೆಳೆಯುತ್ತದೆ. ಆದುದರಿಂದ ಕಳ್ಳಂ ಗಿಡ ಬೆಳೆಯುವ ಹಳ್ಳವಾದುದರಿಂದ ಕಳ್ಳಂ ಹಳ್ಳ>ಕಳ್ಳಂಬೆಳ್ಳ (ಕಳ್ಳ>ಬೆಳ್ಳ) ವಾಗಿರುವ ಸಾಧ್ಯತೆ ಹೆಚ್ಚಿದೆ. (ಗಮನಿಸಿ ಸಿರಾ ಸೀಮೆ ಜಾನಪದೀಯ ಅಧ್ಯಯನ ಡಾ. ಚಿಕ್ಕಣ್ಣ ಯಣ್ಣೆಕಟ್ಟೆ) ಹಾಗೆಯೇ ಬೆಜ್ಜ> ಅಜ್ಜನ ಹಳ್ಳ>ಹಳ್ಳ= ಬಿಜ್ಜಂಬೆಳ್ಳವಾಗಿದೆ. ರಂಗನಾಥಪ್ಪನವರ ಅಭಿಪ್ರಾಯದ ಪ್ರಕಾರ ಕೆರೆಯ ಒಳಗಿರುವ ಕನ್ನೇರಲಮ್ಮನ ಮೂಲದಿಂದ ಕನ್ನೇರು–ಹಳ್ಳ, ಕಳ್ಳಂಬೆಳ್ಳವಾಗಿದೆ ಎನ್ನುತ್ತಾರೆ. ಶಿಕ್ಷಕ ಜಯರಾಮು ಅವರ ಅಭಿಪ್ರಾಯ ಕರಿಯಹಳ್ಳ–ಕಳ್ಳಂಬೆಳ್ಳ ಆಗಿದೆ ಎನ್ನುತ್ತಾರೆ. ಈಗಲೂ ಈ ಭಾಗದಲ್ಲಿ ಕನ್ನೇರಮ್ಮ ದೇವಾಲಯವಿದ್ದು ಜಾತ್ರೆಯನ್ನು ಮಾಡುತ್ತಾರೆ. ಜೊತೆಗೆ ನೀರು ಸಂಗ್ರಹಗೊಂಡು ತಿಳಿ ನಸುಗಪ್ಪಿನ ಬಣ್ಣ ಹೊಂದಿರುತ್ತದೆ. ಈ ಎಲ್ಲ ಪ್ರಾಕೃತಿಕ ಲಕ್ಷಣಗಳಿಂದ ಈ ಊರಿಗೆ ಕಳ್ಳಂ ಸಸ್ಯ ಮೂಲ, ಕರಿಯಹಳ್ಳ–ನೀರಿನ ಮೂಲ ಹಾಗೂ ಕನ್ನೇರಮ್ಮ ದೇವಿ, ಜಲ ಮೂಲಗಳಿಂದ ಕಳ್ಳಂಬೆಳ್ಳ ಎಂಬ ಹೆಸರು ಬಂದಿದೆ. ಇಲ್ಲಿನ ಪ್ರಾಕೃತಿಕ ಲಕ್ಷಣವೂ ಹಾಗೆಯೇ ಇದೆ. ಆರಂಭದಲ್ಲಿದ್ದ ಕಳ್ಳಂಬೆಳ್ಳ ಇಂದು ಬೃಹದಾಕಾರವಾಗಿ ಬೆಳೆದಿದೆ. ಇದೇ ಗ್ರಾಮಕ್ಕೆ ಹೊಂದಿಕೊಂಡಂತೆ, ಕಳ್ಳಂಬೆಳ್ಳ ಬಂಗಲೆ, ಅಜ್ಜೇನಹಳ್ಳಿ, ಅಜ್ಜೇನಹಳ್ಳಿ ಕಾಲೋನಿ, ನರಸಮ್ಮಜ್ಜಿ ಕಟ್ಟೆ, ಹಾಗೂ ಮರಳೇಗೌಡನ ಪಾಳ್ಯ–ಗ್ರಾಮಗಳ ಉಗಮಕ್ಕೆ ಪ್ರೇರಕವಾಗಿದೆ. ಅಷ್ಟರಮಟ್ಟಿಗೆ ಕಳ್ಳಂಬೆಳ್ಳ ಬೆಳೆದು ತಾಲ್ಲೂಕು ಕೇಂದ್ರವಾಗುವ ಪ್ರಸ್ತಾಪ ಸರ್ಕಾರದ ಮುಂದಿದೆ.

ಮರಳು ಮಿಶ್ರಿತ ಕಂದು ಮಣ್ಣನ್ನು ಹೊಂದಿರುವ ಈ ಗ್ರಾಮದ ಬದಿಗೆ ದೊಡ್ಡ ಕೆರೆ ಇದೆ. ಅಡಿಕೆ, ತೆಂಗು ತೋಟಗಳಿಂದ ಗ್ರಾಮ ಆವರಿಸಿದೆ. ಹಾಗಾಗಿ ಇಲ್ಲಿ ಜಿಂಕೆ, ನರಿ, ಮೊಲ, ಉಡ, ಆಮೆ, ಮುಂಗುಸಿ, ಇಲಿ, ಹೆಗ್ಗಣ,

ತೋಡ, ಅಳಿಲು ಮೊದಲಾದ ಪ್ರಾಣಿಗಳು ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾಗಿ ಹಸು, ಹಳ್ಳಿಕಾರು ತಳಿ ಎತ್ತು, ಎಮ್ಮೆ, ಕುರಿ, ಮೇಕೆ, ಕೋಳಿಗಳನ್ನು ಸಾಕಲಾಗುತ್ತಿದೆ. ಈ ಭಾಗದಲ್ಲಿ ಪಕ್ಷಿಗಳಾದ ನವಿಲು, ಕೋಗಿಲೆ, ಕಾಗೆ, ಕೌಜಲಗ, ಗಿಳಿ, ಗರುಡ, ಹದ್ದು, ಗುಬ್ಬಚ್ಚಿ, ಗೀಜಗ, ಬೆಳವ, ಗೊರವಂಕ ಮೊದಲಾದ ಪಕ್ಷಿಗಳು, ನಾಗರ, ಕೆರೆ ಹಾವು, ಹೆಬ್ಬಾವು, ಹಸಿರಾವು, ವಿಷಮಂಡಲ ಮೊದಲಾದ ಜಾತಿಯ ವಿಷ ಜಂತುಗಳೂ ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ೫೫೭.೩ ಮಿ.ಮೀ. ಮಳೆ ಬೀಳುತ್ತದೆ. ಬಿಸಿಲಿನ ತಾಪ ೩೮೦ ಸೆಂ ಇದ್ದು, ಚಳಿಯು ೧೨೦ ಸೆಂ. ಆಗಿರುತ್ತದೆ. ನಿಸರ್ಗ ಸಹಜ ಮಳೆ ಸಾಕಾಗುವುದಿಲ್ಲ. ರೈತರು ೧೬೮ ಕೊಳವೆ ಬಾವಿಗಳ ಮೂಲಕ ಕೃಷಿ ಕಾಯಕದಲ್ಲಿ ತೊಡಗಿದ್ದಾರೆ. ಒಂದು ದೊಡ್ಡ ಹಳ್ಳವಿದ್ದು, ಬದಿಗೆ ದೊಡ್ಡ ಕೆರೆ ಇದ್ದು, ೯೪೯ ಯೂನಿಟ್ ನೀರು ಸಂಗ್ರಹವಾಗುತ್ತಿದ್ದು, ೧೬೫೫ ಎಕರೆ ಭೂ ಪ್ರದೇಶಕ್ಕೆ ನೀರನ್ನು ಒದಗಿಸುವ ಸಾಮರ್ಥ್ಯ ಹೊಂದಿದೆ. ಈಗ ಕುಡಿಯುವ ನೀರು ಸಂಗ್ರಹವಾಗುತ್ತದೆ. ಗ್ರಾಮದ ಬಲ ಬದಿಗೆ ನರಸಮ್ಮಜ್ಜಿ ಕಟ್ಟೆ ಇದ್ದು, ಕೃಷಿಗೆ ನೀರು ಬಳಕೆಯಾಗುತ್ತಿದೆ. ಕುಡಿಯಲು ಗ್ರಾಮ ಪಂಚಾಯಿತ ವತಿಯಿಂದ, ಕಿರು ನೀರು ಯೋಜನೆ ಅಡಿಯಲ್ಲಿ ಟ್ಯಾಂಕ್‌ಗಳ ಮೂಲಕ ೫೦ ನಲ್ಲಿಗಳಲ್ಲಿ ನೀರು ಪೂರೈಸಲಾಗುವುದು. ಮೂರು ಕೈ ಪಂಪುಗಳಿವೆ.

ಕುಂಚಿಟಿಗ ಜನಾಂಗವು ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ನಾಯಕ, ಈಡಿಗ, ವೀರಶೈವ, ಮುಸ್ಲಿಂ, ಮಡಿವಾಳ, ಹಂದಿ ಜೋಗಿ, ಭಜಂತ್ರಿ, ಕೊರಚ, ಕಂಬಾರ, ವೈಷ್ಣವ ಕಿರು ಸಮುದಾಯವಾಗಿದೆ. ಕನ್ನಡ, ಉರ್ದು, ತೆಲುಗು ಭಾಷೆಯಲ್ಲಿ ಮಾತನಾಡುತ್ತಾರೆ. ವಿವಿಧ ಪ್ರಕಾರಗಳಾದ ಕಲ್ಲಿನ, ಕಾಂಕ್ರೀಟ್, ಮಣ್ಣಿನ, ಹೆಂಚು, ಶೀಟ್ ಹಾಗೂ ೪೦ ಗುಡಿಸಲುಗಳೂ ಸೇರಿ ೩೪೯ ಮನೆಗಳಿವೆ. ೭೭ ಮನೆಗಳು ಜನತಾ, ಆಶ್ರಯ, ಅಂಬೇಡ್ಕರ್, ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಫಲಾನುಭವಿಗಳಿದ್ದಾರೆ. ೧೮೮೪ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿ, ರೊಟ್ಟಿ, ದೋಸೆ ಬಳಸುವವರಿದ್ದಾರೆ ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹೋಳಿಗೆ, ಪಾಯಸದ ಭೋಜನವಿರುತ್ತದೆ. ಸಂಪ್ರದಾಯಿಕ ವಾಹನಗಳ ಜೊತೆಗೆ ಟ್ರ್ಯಕ್ಟರ್, ಲಾರಿ, ಟಿಲ್ಲರ್,ಟೆಂಪೋ, ಕಾರು, ದ್ವಿಚಕ್ರ ವಾಹನಗಳು ಬಳಕೆಯಿದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ಜೋಳ, ಅಲಸಂದಿ, ತೊಗರಿ ಆಹಾರ ಬೆಳೆಗಳು. ತೆಂಗು, ಅಡಿಕೆ, ರೇಷ್ಮೆ, ತರಕಾರಿ, ಹಣ್ಣು ತೋಟಗಾರಿಕೆ ಬೆಳೆಗಳು. ಹಾಲು ಉತ್ಪಾದಕರ ಸಹಕಾರಿ ಸಂಘವಿದ್ದು, ಸರಾಸರಿ ೬೦೦ ಲೀಟರ್ ಹಾಲು ಸಂಗ್ರಹ ವಾಗುತ್ತಿದೆ. ಹುಣಸೇಹಣ್ಣು, ಅಡಿಕೆ, ತೆಂಗು, ಹೂ ವಾಣಿಜ್ಯ ಬೆಳೆಯಾಗಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ವೈದ್ಯರಾದ ಕೆ.ಸಿ. ರಾಮಲಿಂಗಪ್ಪ, ಡಾ. ಅನಿತ, ವೈದ್ಯರಾದ ಕೆ. ಕಾಂತರಾಜು, ಇಂಜಿನಿಯರ್ ಸೇರಿದಂತೆ, ಪೋಲೀಸ್, ಮಿಲ್ಟ್ರಿ, ಶಿಕ್ಷಕರು, ಕಂದಾಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಬ್ಯಾಂಕ್, ಸಹಕಾರಿ ಇಲಾಖೆಗಳಿಗೆ ಸೇರಿದ ಒಟ್ಟು ೩೦ ಜನ ಸರ್ಕಾರಿ ನೌಕರರಿದ್ದಾರೆ.

ನಿವೃತ್ತ ಐ.ಎ.ಎಸ್. ಅಧಿಕಾರಿ ಕೃಷ್ಣ, ಪ್ರಾಂಶುಪಾಲರಾದ ಪ್ರೊ. ಕೆ. ಚಂದ್ರಣ್ಣ, ಎಸ್.ಪಿ. ರಂಗನಾಥಪ್ಪ ಈ ಗ್ರಾಮದವರೆಂಬುದು ವಿಶೇಷ. ೩ ಜನ ವಕೀಲರೂ ಇದ್ದಾರೆ. ಗೃಹ ಕೈಗಾರಿಕೆಯಾಗಿ ಬೀಡಿ ಸುತ್ತುವುದು, ಹೂ ಕಟ್ಟುವುದು, ಊಟದ ಎಲೆ ತಯಾರಿಕೆ, ಟೈಲರಿಂಗ್ ಮೊದಲಾದ ಕೈಗಾರಿಕೆ ಇದೆ. ಬಡಿಗೆ, ಕಂಬಾರಿಕೆ ಮೊದಲಾದ ಪಾರಂಪರಿಕ ಕಸುಬಿನ ಜನರಿದ್ದಾರೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿರುವ ಈ ಗ್ರಾಮದಲ್ಲಿ ೭ ಜನ ಪಂಚಾಯಿತಿ ಸದಸ್ಯರಿದ್ದು, ೪ ಜನ ಪಂಚಾಯಿತಿ ನೌಕರರಿದ್ದಾರೆ. ಅಂಚೆ ಕಚೇರಿ, ವ್ಯವಸಾಯ ಸೇವಾ ಸಹಕಾರ ಸಂಘ, ಗ್ರಾಮ ಪಂಚಾಯಿತಿ ಕಾರ್ಯಾಲಯ, ಸಮುದಾಯ ಭವನವಿದೆ. ಪ್ರತಿ ಭಾನುವಾರ ತರಕಾರಿ, ಸಂತೆ ನಡೆಯುತ್ತದೆ. ೮ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ೩ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು, ಮಹಿಳೆಯರ ಆರ್ಥಿಕ ಸಬಲತೆಗೆ ದುಡಿಯುತ್ತಿವೆ. ಎರಡು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಮರಡಿ ರಂಗನಾಥ ಪ್ರೌಢಶಾಲೆಗಳಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ಶೇ. ೬೬.೯ ರಷ್ಟಿದೆ. ಮೂರ್ಕಣಪ್ಪ, ಮರಳಪ್ಪ, ಮಲ್ಲೇಗೌಡ, ಇವರು ಸ್ವಾತಂತ್ರ ಚಳುವಳಿಗಳಲ್ಲಿ ಭಾಗವಹಿಸಿ ಕಾರಾಗೃಹ ವಾಸ ಅನುಭವಿಸಿದ ಹಿರಿಯರು.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ಅಂಗವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೨೫ ಅಂಗಡಿಗಳು, ೪ ಹೋಟೆಲ್ ಗಳು ಇವೆ. ೨ ವೀರಗಲ್ಲುಗಳಿದ್ದು, ಇದು ಕಳ್ಳಂಬೆಳ್ಳ ಕೆರೆಯ ಏರಿಯ ನಡುವೆ ಕನ್ನೇರಮ್ಮ ಗುಡಿಯ ಬದಿಗಿನ ನಾಗರ ಕಲ್ಲಿನ ಬಳಿ, ಇನ್ನೊಂದು ಕೆಂಚಗಾನಹಳ್ಳಿ ದಾರಿಯಲ್ಲಿದ್ದು, ಇವು ೧೫ ನೇ ಶತಮಾನಕ್ಕೆ ಸಂಬಂಧಿಸಿದವುಗಳಾಗಿವೆ. ಗ್ರಾಮದಲ್ಲಿ

ಆಂಜಿನಯ್ಯ, ಮಾರಮ್ಮ, ಮೈಲಾರಲಿಂಗ, ಈಶ್ವರ, ಅಜ್ಜಯ್ಯ, ಮರಡಿ ರಂಗನಾಥಸ್ವಾಮಿ ದೇವಸ್ಥಾನವಿದೆ. ದುರ್ಗಮ್ಮ, ಗಂಗಮಾಳಮ್ಮ ಹಾಗೂ ಶನಿದೇವರ ಗುಡಿಗಳಿವೆ. ಆಂಜನೇಯ, ಈಶ್ವರ ಮುಜರಾಯಿ ಇಲಾಖೆಗೆ ಸೇರಿದೆ. ಆಂಜನೇಯ ಕಲ್ಯಾಣ ಮಂಟಪವಿದೆ. ಮಾರಮ್ಮನ ಊರಹಬ್ಬವಿರುತ್ತದೆ. ಈ ಕಾಲದಲ್ಲಿ ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಯುಗಾದಿ, ಗೌರಿ, ಮಹಾನವಮಿ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕೆ.ಆರ್. ಶಿವಾನಂದ ರಂಗಕರ್ಮಿ, ಕಳ್ಳಂಬೆಳ್ಳ ಲಕ್ಷ್ಮಣ ಲೇಖಕ ರಾಗಿ ಹೆಸರು ಮಾಡಿದ್ದಾರೆ. ಗ್ರಾಮದ ಹೊರವಲಯ, ಮೈಸೂರು ರಸ್ತೆ ಸಮೀಪ ಕೂಡಲಿ ಶಂಕರಮಠವಿದ್ದು, ಮುಜರಾಯಿ ಇಲಾಖೆಗೆ ಒಳಪಟ್ಟಿದೆ. ಕಳ್ಳಂಬೆಳ್ಳದ ಹೊಸ ವಲಯದಲ್ಲಿ ನಿತ್ಯಾನಂದ ಹೆಸರಿನ ಆಶ್ರಮವಿದ್ದು, ಧಾರ್ಮಿಕ ಚಟುವಟಿಕೆಗಳು ನಡೆಯುತ್ತವೆ. ಗ್ರಾಮದಲ್ಲಿ ಸ್ವಾಮಿ ವಿವೇಕಾನಂದ ಯುವಜನ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ, ಗ್ರಾಮೀಣ ಶೈಕ್ಷಣಿಕ, ಬೆಳಕು, ನೀರು, ಆರೋಗ್ಯ ಜಾಗೃತಿಯಲ್ಲಿ ತೊಡಗಿಸಿ ಕೊಂಡಿದ್ದು, ವಿವೇಕ ಶೈಕ್ಷಣಿಕ ಸಂಪನ್ಮೂಲ ಕೇಂದ್ರ ಶೀರ್ಷಿಕೆಯಲ್ಲಿ ೧೫ ಹಳ್ಳಿಗಳಲ್ಲಿ ೩೦೦ ಮಕ್ಕಳಿಗೆ ರಾತ್ರಿ ಕಲಿಕಾ ಕೇಂದ್ರ ಆರಂಭಿಸಿದ್ದಾರೆ. ಕಂಪ್ಯೂಟರ್ ಕಲಿಕಾ ಕೇಂದ್ರಗಳನ್ನು ಆರಂಭಿಸಿರುವುದರ ಜೊತೆಗೆ ಕಲಿಕೆಗಾಗಿ ಬೆಳಕು ಯೋಜನೆಯ ಅಡಿಯಲ್ಲಿ ೨೫ ಶಾಲೆಗಳಿಗೆ ಸೌರಶಕ್ತಿ ವಿದ್ಯುತ್ ಯಂತ್ರಗಳ ಮೂಲಕ ಪರಿಸರ ಆಂದೋಲನದಲ್ಲಿ ತೊಡಗಿದ್ದಾರೆ. ಫ್ಲೋರೈಡ್ ಮುಕ್ತ ಕುಡಿಯುವ ನೀರಿನ ವಾಟರ್ ಫಿಲ್ಟರ್‌ನ್ನು ಶಾಲೆಗಳಲ್ಲಿ ಅಳವಡಿಸಿರುವುದು ಈ ಸಂಸ್ಥೆಯ ವಿಶೇಷ. ಕೆ.ಟಿ. ತಿಪ್ಪೇಸ್ವಾಮಿ ಅಧ್ಯಕ್ಷ, ಸಿ.ಜಿ. ಚೇತನ ಕಾರ್ಯದರ್ಶಿ ಇವರ ಜೊತೆಗೆ ೨೨ ಜನರ ಯುವ ತಂಡ ಸ್ವಯಂ ಸೇವಕರಾಗಿ ತೊಡಗಿಸಿಕೊಂಡಿರುವುದು ಈ ಸಂಸ್ಥೆಯ ವಿಶೇಷವಾಗಿದೆ. ಶ್ರೀ ಬಸವೇಶ್ವರ ಆಂಜನೇಯ ಅನ್ನದಾನ ಹಾಗೂ ಕಲ್ಯಾಣ ಸಮಿತಿ, ರ್‍ಪ್ರಾಯ ಸಾಂಸ್ಕೃತಿಕ ಯುವ ಸಂಘ, ವಿನಾಯಕ ಯುವಕ ಸಂಘ, ಈ ಸಂಸ್ಥೆಗಳೂ ಸ್ಥಳೀಯ ಕಲೆ, ಸಾಹಿತ್ಯ ಸಾಂಸ್ಕೃತಿಕ ಸಂಘಟನೆಯಲ್ಲಿ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದೆ. ಪ್ರೊ॥ ಕೆ. ಚಂದ್ರಣ್ಣ, ಕಳ್ಳಂಬೆಳ್ಳ ಲಕ್ಷ್ಮಣ್, ಕೆ.ಶೇಷ್‌ಗಿರಿ, ಈ ಗ್ರಾಮದ ಹಿರಿಯ ಲೇಖಕರಾಗಿದ್ದು ಕೃತಿಗಳನ್ನು ಪ್ರಕಟಿಸಿದ್ದಾರೆ.

## ಕಳ್ಳಂಬೆಳ್ಳ ಬಂಗ್ಲೆ

ಕಳ್ಳಂಬೆಳ್ಳ ಬಂಗ್ಲೆ ಕಳ್ಳಂಬೆಳ್ಳ ಮೂಲ ಗ್ರಾಮದ ಉಪ ಗ್ರಾಮವಾಗಿ, ಬಡಾವಣೆಯಾಗಿ ರೂಪುಗೊಂಡು, ಇದು ತನ್ನ ಮೂಲ ಗ್ರಾಮವನ್ನು ಮೀರಿಸಿ, ವಾಣಿಜ್ಯ ವೈವಿಧ್ಯತೆ, ಶೈಕ್ಷಣಿಕ ಸಂಪನ್ಮೂಲತೆಯಿಂದ ಬೆಳೆದಿದೆ. ರ್‍ಪ್ರಾಯ ಹೆದ್ದಾರಿ–೪ ಹೊಂದಿಕೊಂಡೇ ಇರುವ ಈ ಬಡಾವಣೆ ಸಾರಿಗೆ ಸಂಪರ್ಕ, ಸ್ಥಳಾವಕಾಶಗಳಿಂದ ಶೀಘ್ರವಾಗಿ ಬೆಳೆದಿದೆ.

ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೨ ಕಿ.ಮೀ. ದೂರದಲ್ಲಿರುವ ಈ ಭಾಗ ೭೭.೦೬ ಹೆಕ್ಟೇರ್ ಭೂ ವಿಸ್ತೀರ್ಣವನ್ನು ಹೊಂದಿದೆ. ಕಳ್ಳಂಬೆಳ್ಳ ಮೂಲ ಗ್ರಾಮಕ್ಕೆ ಪೂರ್ವಾಭಿಮುಖವಾಗಿ ಅರ್ಧ ಕಿ.ಮೀ. ದೂರದಲ್ಲಿರುವ ಈ ಗ್ರಾಮ ಬಂಗ್ಲೆ ಎಂದೇ ಪ್ರಸಿದ್ಧಿಯಾಗಿದೆ. ಬ್ರಿಟೀಷರ ಆಳ್ವಿಕೆಯ ಕಾಲಕ್ಕೆ ಅವರ ಆಡಳಿತಾತ್ಮಕ ಕಛೇರಿಯನ್ನು ಇಲ್ಲಿ ತೆರೆಯಲಾಗಿದ್ದು, ಅದಕ್ಕೆ ಹೊಂದಿಕೊಂಡಂತೆ ಪ್ರವಾಸಿ ಮಂದಿರವನ್ನು ಕಟ್ಟಿಸಲಾಗಿತ್ತು. ಬ್ರಿಟೀಷರ ಬಂಗ್ಲೆ ಇದ್ದ ಕಾರಣಗಳಿಂದಲೇ ಇದೇ ಹೆಸರಿನಲ್ಲಿ ಇಂದಿಗೂ ಕರೆಯಲಾಗುತ್ತಿದೆ. ಊರು ಬೆಳೆದಿದೆ. ಮಾತ್ರವಲ್ಲ ಬಸ್ ಸೌಕರ್ಯ, ಜನ ಸಂಪರ್ಕ ಆಡಳಿತ ನಿರ್ವಹಣೆ ಎಲ್ಲವೂ ಈ ಭಾಗದಲ್ಲಿಯೇ ಇರುವುದರಿಂದ ಬಂಗ್ಲೆ ದೊಡ್ಡ ಜನಸಂದಣಿ ಪ್ರದೇಶವೂ ಆಗಿದೆ. ಮರಳು ಮಿಶ್ರಿತ ಕಂದು ಮಣ್ಣು ಹೊಂದಿದ್ದು, ಉತ್ತರ ಹಾಗೂ ದಕ್ಷಿಣ ಹಾಗೂ ಪೂರ್ವ, ಪಶ್ಚಿಮಕ್ಕೆ ತೋಟಗಳ ಸಾಲಿದೆ. ಹಾಗಾಗಿ ಈ ಪರಿಸರದಲ್ಲಿ ಮೊಲ, ನರಿ,ಉಡ, ಬಾರು ಬೆಕ್ಕು ಕಂಡು ಬಂದರೆ. ಗ್ರಾಮದಲ್ಲಿ ರೈತಾಪಿ ಬದುಕಿಗೆ ಹಸು, ಎಮ್ಮೆ, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ. ಕಾಡು ಪಕ್ಷಿಗಳಾಗಿ ಕೊಕ್ಕರೆ, ಕೋಗಿಲೆ, ಗೂಬೆ, ಗುಬ್ಬಚ್ಚಿ, ಕೌಜಲುಗ, ಹದ್ದು, ಗರುಡ ಕಂಡು ಬರುತ್ತವೆ.

ವಾರ್ಷಿಕ ಮಳೆ ಪ್ರಮಾಣ ೫೫೭.೩ ಮಿ.ಮೀ. ಆಗುತ್ತಿದ್ದು, ಉಷ್ಣಾಂಶ ೩೮೦ ಸೆಂ. ಆಗಿದೆ. ಚಳಿಯ ಪ್ರಮಾಣ ೧೭೦ ಸೆಂ. ಸಹಜವಾಗಿರುತ್ತದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ೪ ಸಿಸ್ಟನ್‌ಗಳಲ್ಲಿ ಪೂರೈಸಲಾಗುತ್ತಿದೆ. ಈ ಪರಿಸರದಲ್ಲಿ ೧೨ ಕೊಳವೆ ಬಾವಿಗಳಿವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯ ವಾಗಿದ್ದು, ನಾಯಕ, ವೈಶ್ಯ, ಮುಸ್ಲಿಂ, ಈಡಿಗ, ವೀರಶೈವ, ಕುರುಬ, ಕೊರಚ, ಆದಿ ಕರ್ನಾಟಕ, ಆದಿದ್ರಾವಿಡ ಕಿರು ಸಮುದಾಯಗಳಾಗಿವೆ. ೭೫ ಮನೆಗಳಿದ್ದು ೩೬೮ ಜನಸಂಖ್ಯೆ ಹೊಂದಿದೆ. ಸಮುದಾಯ ವಸತಿ ಸೌಲಭ್ಯ ಪಡೆದ ಇಲ್ಲಿನ ನಿವಾಸಿಗಳಲ್ಲಿ ಕೆಲವರು, ಆಶ್ರಯ, ಜನತಾ, ವಸತಿ ಯೋಜನೆಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೨೨ ಫಲಾನುಭವಿಗಳಿದ್ದಾರೆ. ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದ ಮನೆಗಳಿದ್ದು, ೫೦ ಮನೆಯಲ್ಲಿ ಶೌಚಾಲಯದ ಬಳಕೆಯಿದೆ.

ಈ ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ದೋಸೆ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ,

ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಕಾರು, ಟೆಂಪೋ, ಲಾರಿ, ಸ್ಕೂಟರ್, ಟಿಲ್ಲರ್ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಜೋಳ, ಭತ್ತ, ತೊಗರಿ, ಅಲಸಂದಿ ಆಹಾರ ಬೆಳೆಗಳು. ತೆಂಗು, ಅಡಿಕೆ, ತರಕಾರಿ, ಹೂವು ತೋಟಗಾರಿಕೆ ಬೆಳೆಗಳು. ಶೇಂಗಾ, ಹುಣಸೆಹಣ್ಣು, ಅಡಿಕೆ, ತೆಂಗು ವ್ಯಾಪಾರಿ ಬೆಳೆಗಳಾಗಿವೆ. ಶಿಕ್ಷಣ, ಸಹಕಾರ, ಸಾರಿಗೆ ಸೇರಿದೆ ೪ ಜನ ಸರ್ಕಾರಿ ನೌಕರರಿದ್ದು, ಮಹಿಳೆಯರು ಸಣ್ಣ ಗೃಹ ಉದ್ಯಮವಾಗಿ, ಕಿರಾಣಿ ಅಂಗಡಿ, ಕಾಫಿ ಅಂಗಡಿ ಹಾಗೂ ಬೀಡಿ ಕಟ್ಟುವುದು, ಊಟದ ಎಲೆ ತಯಾರಿಕೆ, ಕಾರ್ಯ ನಿರ್ವಹಿಸುತ್ತಿದ್ದಾರೆ. ವಾಹನ ರಿಪೇರಿಯ ವೆಲ್ಡಿಂಗ್ ಷಾಪ್, ಗ್ಯಾರೇಜ್ ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಹೋಬಳಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಈ ಎಲ್ಲ ಕೇಂದ್ರವಾಗಿರುವ ಈ ಗ್ರಾಮ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಕೆನರಾ ಬ್ಯಾಂಕ್, ಎಟಿಎಂ, ದೂರವಾಣಿ ವಿನಿಮಯ ಕೇಂದ್ರ, ಅಂಚೆ ಕಛೇರಿ, ಕೆ.ಇ.ಬಿ. ಕಛೇರಿ, ಪಿ.ಹೆಚ್.ಸಿ., ಪೋಲೀಸ್ ಠಾಣೆ ಇದ್ದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಗೌತಮ ಕಾನ್ವೆಂಟ್ ಶಾಲೆ, ಮರಡಿ ರಂಗನಾಥ ಪ್ರೌಢಶಾಲೆ, ಮರಡಿ ರಂಗನಾಥ ಪದವಿ ಪೂರ್ವ ಕಾಲೇಜುಗಳು ಇಲ್ಲಿನ ಪ್ರಾಮುಖ್ಯ ಶೈಕ್ಷಣಿಕ ಕೇಂದ್ರಗಳಾಗಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪುಸ್ತಕ, ಹಾಗೂ ಶೌಚಾಲಯದ ಸೌಲಭ್ಯಗಳಿದ್ದು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಒಂದು ನೂರು ವರ್ಷ ತುಂಬಿದ ಸಡಗರದಲ್ಲಿದೆ. ಉತ್ತಮ ಸೌಕರ್ಯ ಹೊಂದಿದೆ. ಇಲ್ಲಿನ ಸಾಕ್ಷರತಾ ಪ್ರಮಾಣ ಶೇ. ೬೬.೯ ಇದೆ. ಖಾಸಗಿ ಆಸ್ಪತ್ರೆಗಳೂ, ಚಲನ ಚಿತ್ರ ಮಂದಿರ, ಹೋಟೆಲ್, ೧೦ ಗೂಡಂಗಡಿಗಳಿವೆ. ಪಶು ಆರೋಗ್ಯ ಕೇಂದ್ರವೂ, ರೈತ ಸಂಪರ್ಕ ಕೇಂದ್ರ, ನಾಡ ಕಛೇರಿ, ಸ್ವಾಮಿ ವಿವೇಕಾನಂದ ಯುವಜನ ಹಾಗೂ ಗ್ರಾಮೀಣ ಅಭಿವೃದ್ಧಿ ಕೇಂದ್ರ ಛೇರಿ ಇಲ್ಲಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಕಲಚೇತನ, ವಿಧವಾ ವೇತನ ಫಲಾನುಭವಿಗಳಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗಣೇಶನ ದೇವಾಲಯವಿದ್ದು, ಎಲ್ಲಾ ರ್‍ಾಷ್ಟ್ರೀಯ ಹಾಗೂ ಧಾರ್ಮಿಕ ಹಬ್ಬಗಳಾದ ಯುಗಾದಿ, ದೀಪಾವಳಿ, ಮಹಾನವಮಿ, ಬಸವಜಯಂತಿ, ಶಿವರಾತ್ರಿ ಹಬ್ಬಗಳನ್ನು, ಬಕ್ರೀದ್, ರಂಜಾನ್ ಹಬ್ಬಗಳನ್ನು ಆಚರಿಸುತ್ತಾರೆ. ಒಂದು ಮಸೀದಿಯೂ ಇದೆ.

ರ್‍ಾಷ್ಟ್ರೀಯ ಹೆದ್ದಾರಿ ಈ ಗ್ರಾಮದ ನಡುವೆ ಹಾದು ಹೋಗಿರುವುದರಿಂದ ಉತ್ತಮ ಸಾರಿಗೆ ಸಂಪರ್ಕ ಹೊಂದಿದೆ.

## ಕಟಾವೀರನಹಳ್ಳಿ

ಕಟಾವೀರನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೬ ಕಿ.ಮೀ. ದೂರದಲ್ಲಿದೆ. ಸಿರಾ ತುಮಕೂರು ರ್‍ಾಷ್ಟ್ರೀಯ ಹೆದ್ದಾರಿ ೪ ರಲ್ಲಿ, ಕಳ್ಳಂಬೆಳ್ಳ ಬಳಿಯ ಟೋಲ್‌ಗೇಟಿನಿಂದ ಸ್ವಲ್ಪ ಮುಂದೆ ಬಲಭಾಗದಲ್ಲಿ ಮುಖ್ಯ ರಸ್ತೆಯಿಂದ ಒಂದು ಕಿ.ಮೀ. ದೂರದಲ್ಲಿದೆ. ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ૩೧೪.೦೨ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ. ಕಟ್ಟಾವೀರನಹಳ್ಳಿ ವ್ಯಕ್ತಿ ಮೂಲದ ಹೆಸರಾಗಿದ್ದು ಆ ವೀರ ಯಾರು ಎಂಬ ಬಗೆಗೆ ಎ. ಶ್ರೀನಿವಾಸ್ ಹೀಗೆ ವಿವರಿಸುತ್ತಾರೆ. ಬ್ರಿಟೀಷರ ಆಳ್ವಿಕೆಯ ಸಂದರ್ಭ ದಲ್ಲಿ ಅಮಲ್ದಾರರ ಕಛೇರಿಯ ಬಾಗಿಲಲ್ಲಿ ಕಠಾರಿ ಹಿಡಿದು ಕಾವಲು ಕಾಯುತ್ತಿದ್ದ ವ್ಯಕ್ತಿ ವೀರಣ್ಣ ಅಥವಾ ವೀರನಾಯಕನ ಪರಮ ಸಾಹಸ, ಧೈರ್ಯಗಳಿಗೆ ಮೆಚ್ಚಿದ ಆ ಅಧಿಕಾರಿ ಈ ಜನವಸತಿ ಜಾಗವನ್ನು ಉಂಬಳಿಯಾಗಿ ನೀಡಿದ್ದರು.

ಕಠಾರಿ ಮತ್ತು ವೀರನಾಯಕ ಕೂಡಿಕೊಂಡು ಕಠಾರಿ ವೀರನ ಹಳ್ಳಿ ಆಗಿದೆ ಎಂಬ ಹೇಳಿಕೆ ಈ ಗ್ರಾಮಕ್ಕೆ ಅರ್ಥಪೂರ್ಣ ಹೊಂದಾಣಿಕೆಯಾಗಿದೆ. ಬಯಲು ನಾಡು, ಬೂದಿ,ಮರಳು, ಕೆಂಪು ಮಿಶ್ರಿತ ಮಣ್ಣು. ಗ್ರಾಮದ ಪೂರ್ವಕ್ಕೆ ಒಂದು ನರ್ಸರಿ ಅಂದರೆ ಗಿಡ ಬೆಳೆಸುವುದು. ಸಾಮಾಜಿಕ ಅರಣ್ಯದ ಒಂದು ಘಟಕವಿದೆ. ಗ್ರಾಮದ ಪಶ್ಚಿಮಕ್ಕೆ ಹೇಮಾವತಿ ಹಳ್ಳ ಹರಿದು, ಮುಂದೆ ಮುದಿ ಮಡುವಿನ ಬಳಿ ತಿರುವು ಪಡೆದುಕೊಂಡು ಕಳ್ಳಂಬೆಳ್ಳ ಕೆರೆ ಸೇರುತ್ತದೆ. ಈ ಸ್ಥಳದಲ್ಲಿ ಪ್ರಸ್ತುತ ಬೃಹತ್ ಪ್ರಮಾಣದ ನೀರಿನ ಒಡ್ಡು ನಿರ್ಮಾಣವಾಗು ತ್ತಿದ್ದು ಈ ಭಾಗದ ರೈತರಿಗೆ ಅನುಕೂಲವಾಗುತ್ತಿದೆ.

ಈ ಪರಿಸರದಲ್ಲಿ ತೋಟ, ಗಿಡ, ಕುರುಚಲು ಮರ, ಹಳ್ಳ, ದಿಣ್ಣೆಗಳಿವೆ. ಸಮೀಪದಲ್ಲಿ ಸೀಬಿ, ರಕ್ಷಿತ ಅರಣ್ಯವಿದೆ. ಹಾಗಾಗಿ ಈ ಪರಿಸರದಲ್ಲಿ ನರಿ, ಕರಡಿ, ಮೊಲ, ಜಿಂಕೆ, ತೋಳ, ಕತ್ತೆ ಕಿರುಬ, ಚಿರತೆ ಕಂಡು ಬರುತ್ತವೆ. ಗ್ರಾಮದಲ್ಲಿ ಪಶುಪಾಲನೆ ಹಾಗೂ ಕೃಷಿ ಬದುಕಿಗೆ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕಿದ್ದಾರೆ. ಸೀಮೆ ಹಾಗೂ ನಾಟಿ ಎರಡೂ ತಳಿಯ ಹಸುಗಳಿವೆ. ಅದರಂತೆ ಈ ಪರಿಸರದಲ್ಲಿ ಪಕ್ಷಿಗಳಾದ ಗಿಳಿ, ಗೊರವಂಕ, ಗೂಬೆ, ಗರುಡ, ಕೌಜಲಗ, ಕೋಗಿಲೆ, ಕಾಗೆ, ಗುಬ್ಬಚ್ಚಿ, ಹದ್ದು, ಕೊಕ್ಕರೆ, ನವಿಲು ಕಂಡು ಬರುತ್ತವೆ.

ಗ್ರಾಮದಲ್ಲಿ ಮಾಂಸ ಹಾಗೂ ಮೊಟ್ಟೆಗಾಗಿ ಗಿರಿರಾಜ, ಹ್ಯಾಟೆ, ಹುಂಜ,ನಾಟಿ ತಳಿಯ ಕೋಳಿಯನ್ನು ಸಾಕುತ್ತಾರೆ.

ಮಳೆ ಆಶ್ರಿತ ಪ್ರದೇಶ. ಯಾವುದೇ ನೀರಿನ ಮೂಲಗಳಿಲ್ಲ. ಬರುವ ಮಳೆಯ ಪ್ರಮಾಣವೂ ವಾಡಿಕೆಗಿಂತ ಕಡಿಮೆ ಇದೆ. ಕಳೆದ ೩ ವರ್ಷಗಳಲ್ಲಿ ಸರಾಸರಿ ೫೭೭.೩ ಮಿ.ಮೀ. ಮಳೆ ಬಿದ್ದಿದೆ. ಚಳಿ ೧೨ಂ ಸೆಂ. ಇದ್ದು, ಉಷ್ಣಾಂಶ ೩೭ಂ ಸೆಂ.ಇರುತ್ತದೆ. ಗ್ರಾಮದಲ್ಲಿ ದೊಡ್ಡ ಹಳ್ಳ, ಹೇಮಾವತಿ ಹಳ್ಳ ಕಾಮಯ್ಯನ ಕಟ್ಟೆ, ದಾಸಯ್ಯನ ಕಟ್ಟೆಗಳಿದ್ದರೂ, ನೀರಿನ ಸಂಗ್ರಹ, ಗ್ರಾಮದ ಬಳಕೆಗೆ ಸಾಧ್ಯವಾಗುತ್ತಿಲ್ಲ. ತೋಟಗಾರಿಕೆ, ನೀರಾವರಿ ಬೆಳೆಗಳಿಗೆ ಈ ಪರಿಸರದಲ್ಲಿ ೫೦ ಕೊಳವೆ ಬಾವಿಗಳನ್ನು ಕೊರೆಸಿ ಉಪ ಬೆಳೆ ಬೆಳೆಯುತ್ತಿದ್ದಾರೆ. ಇವುಗಳಲ್ಲಿ ಕೆಲವು ನೀರಿಲ್ಲದೆ ಬತ್ತಿ ಹೋಗಿವೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ. ಒಂದ ಲಕ್ಷ ಸಾಮರ್ಥ್ಯದ ನೀರಿನ ಟ್ಯಾಂಕ್ ಇದ್ದು, ೧೦೦ ಸಾರ್ವಜನಿಕ ನಲ್ಲಿಗಳ ಸಂಪರ್ಕಗಳಿವೆ. ಆರು ಕೈ ಪಂಪುಗಳಿದ್ದರೂ ನೀರಿಲ್ಲದೆ ಬತ್ತಿಹೋಗಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗೆ ಜನಾಂಗ ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ನಾಯಕ, ವಿಶ್ವಕರ್ಮ, ಅಗಸರು, ಕಿರು ಸಮುದಾಯವಾಗಿವೆ. ಕನ್ನಡ ಮಾತೃ ಭಾಷೆಯಾಗಿದೆ. ವಿವಿಧ ಪ್ರಕಾರಗಳ ಒಟ್ಟು ೧೭೫ ಮನೆಗಳಿದ್ದು, ಅವು ಕಾಂಕ್ರೀಟ್, ಹೆಂಚಿನ, ಶೀಟಿನ, ಕಲ್ಲಿನ ಸ್ವರೂಪದವಾಗಿವೆ. ಸರ್ಕಾರದ ವಸತಿ ಹಾಗೂ ಭಾಗ್ಯಜ್ಯೋತಿ ಯೋಜನೆಯಾದ ಇಂದಿರಾ ಆವಾಸ್, ಆಶ್ರಯ, ಜನತಾ ವಸತಿ ಯೋಜನೆಯ ೩೨ ಫಲಾನುಭವಿಗಳಿದ್ದಾರೆ. ೪ ಗುಡಿಸಲುಗಳೂ ಇವೆ. ಇಲ್ಲಿನ ಜನಸಂಖ್ಯೆ ೭೧೮ ಆಗಿದೆ.

ಮುಖ್ಯ ಆಹಾರ ರಾಗಿ ಮುದ್ದೆ. ಅನ್ನವಾಗಿದ್ದು, ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಊಟವಿರುತ್ತದೆ. ಸಾಂಪ್ರದಾಯಿಕ ಎತ್ತಿನ ಬಂಡಿ ಸೇರಿದಂತೆ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ಲಾರಿ, ಆಟೋ, ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಗಳಾಗಿವೆ. ರಾಗಿ, ಜೋಳ, ತೊಗರಿ, ಹುರುಳಿ, ನವಣೆ, ಅರಕ ಬೆಳೆಗಳು ಆಹಾರ ಬೆಳೆಗಳಾಗಿವೆ. ತೋಟಗಾರಿಕೆ ಬೆಳೆಗಳಾಗಿ ಮಾವು, ತೆಂಗು, ಅಡಿಕೆ, ಬಾಳೆ, ಸಪೋಟ, ಅಲ್ಪಕಾಲೀನ ಬೆಳೆಗಳಾದ ಸೂರ್ಯಕಾಂತಿ, ಸೇವಂತಿಗೆ ಹೂವು, ತರಕಾರಿ, ಹತ್ತಿ ಬೆಳೆಯುತ್ತಾರೆ. ಒಂದು ಹಾಲು ಉತ್ಪಾದಕರ ಸಹಕಾರ ಸಂಘವಿದ್ದು ಸರಾಸರಿ ೨೦೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಅಡಿಕೆ, ತೆಂಗು, ಶೇಂಗಾ, ಹುಣಸೆಹಣ್ಣು, ಹೊಂಗೆ ಬೀಜ ಮುಖ್ಯ ವ್ಯಾಪಾರಿ ಸರಕಾಗಿದೆ.

ಶಿಕ್ಷಣ ಸಾರಿಗೆ, ಕಂದಾಯ, ಬಿಎಸ್.ಎಲ್. ಇಂಜಿನಿಯರ್, ಅಬಕಾರಿ, ವೈದ್ಯಕೀಯ (ಸರ್ಕಾರಿ) ಈ ಇಲಾಖೆಗಳಿಗೆ ಸೇರಿದ ೧೯ ಜನ ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆಯ ಉಪ ಆಯುಕ್ತ ಕೆ.ಎ.ಎಸ್. ಅಧಿಕಾರಿ ಹೆಚ್. ಜನ್ನಪ್ಪ, ವೈದ್ಯಾಧಿಕಾರಿ ಡಾ. ನಾಗರಾಜ್, ಪ್ರಾಂಶುಪಾಲ ರವೀಂದ್ರ ಈ ಗ್ರಾಮದ ಸದ್ಯದ ವಿಶೇಷವಾಗಿದ್ದಾರೆ. ಖಾಸಗಿ ವೈದ್ಯರಾದ ಡಾ.ಕೆ.ರಾಮಕೃಷ್ಣ ಸಿರಾದ ರಾಮಕೃಷ್ಣ ಆಸ್ಪತ್ರೆ ಹಾಗೂ ಮದರ್ ಥೆರೇಸಾ ನರ್ಸಿಂಗ್ ಹೋಂ ಸ್ಥಾಪಿಸಿ ವೈದ್ಯಕೀಯ ಸೇವೆಯಲ್ಲಿ ತೊಡಗಿಸಿ ಕೊಂಡಿದ್ದಾರೆ. ಉತ್ತಮ ರಂಗ ಕಲಾವಿದರೂ ಆಗಿದ್ದಾರೆ. ೭ ಜನ ಖಾಸಗಿ ಇಂಜಿನಿಯರ್, ೪ ಜನ ಖಾಸಗಿ ವೈದ್ಯರು ಇದ್ದಾರೆ. ನಿವೃತ್ತಿ ಅಧಿಕಾರಿ ಗಳೂ ಇಲ್ಲಿ ನೆಲೆಸಿದ್ದಾರೆ. ಪ್ರೊ. ನಾಗರಾಜ್, ಪ್ರೊ. ಹೊನ್ನೇಶ್, ಪ್ರೊ.ಕೆ.ಹನುಮಂತರಾಯಪ್ಪ ನಿವೃತ್ತ ಪ್ರಾಂಶುಪಾಲರಾಗಿದ್ದಾರೆ.

ಗ್ರಾಮದಲ್ಲಿ ಮಹಿಳೆಯರು, ಹೂಕಟ್ಟುವ, ಬೀಡಿ ಸುತ್ತುವುದು, ಗರಿ ಕಡ್ಡಿ ಎರೆಯುವುದು ಮೊದಲಾದ ಸಣ್ಣ ಗೃಹ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಕಮ್ಮಾರಿಕೆ, ಬಡಗಿ ಕಾಯಕದ ಪಾರಂಪರಿಕ ಕಸುಬುದಾರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ, ತರೂರು ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ. ಈ ಗ್ರಾಮದಲ್ಲಿ ೨ ಪಂಚಾಯಿತಿ ಸದಸ್ಯರಿದ್ದಾರೆ. ಒಬ್ಬರು ನೀರು ಬಿಡುವ ಪಂಚಾಯಿತಿ ನೌಕರರಿದ್ದಾರೆ. ಕಟಾವೀರನಹಳ್ಳಿಯಿಂದ ರ್‍ಾಷ್ಟ್ರೀಯ ಹೆದ್ದಾರಿ (ಎನ್.ಎಚ್–೪) ಕೈ ಸಂಪರ್ಕ ರಸ್ತೆ ಇದೆ. ಒಂದು ಅಂಚೆ ಕಚೇರಿ ಇದ್ದು, ಸುತ್ತಲ ಹಳ್ಳಿಗೆ ಅಂಚೆ ಸೇವೆ ಒದಗಿಸುತ್ತದೆ. ಒಂದು ಕೃಷಿ ಪತ್ತಿನ ಸಹಕಾರ ಸಂಘವಿದ್ದು, ರೈತರಿಗೆ ಆರ್ಥಿಕವಾಗಿ ಸಹಾಯ ಮಾಡುತ್ತಿದೆ. ಆರು ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ೪ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘದ ಗುಂಪುಗಳಿದ್ದು, ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಕೆ. ಮಲ್ಲಣ್ಣ ಸ್ಮಾರಕ ಪ್ರೌಢಶಾಲೆ ಈ ಗ್ರಾಮದಲ್ಲಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ ವಿತರಣೆಗಳಿವೆ. ಗ್ರಾಮದ ಸಾಕ್ಷರತೆ ೬೨.೮ ರಷ್ಟಿದೆ.

ಒಂದು ಉಪ ಆರೋಗ್ಯ ಕೇಂದ್ರವಿದ್ದು, ಜ್ವರ, ನೆಗಡಿ, ಕ್ಯಾನ್ಸರ್, ಈ ಸಂಬಂಧಿ ಕಾಯಿಲೆಗಳಿಗೆ ಸ್ಥಳೀಯವಾಗಿಯೇ ಚಿಕಿತ್ಸೆ ನೀಡಲಾಗುತ್ತಿದೆ. ಇಬ್ಬರು ಆರೋಗ್ಯ

ಕಾರ್ಯಕರ್ತೆಯರಿದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಗೂಡಂಗಡಿಗಳಿವೆ. ಒಂದು ಸರ್ಕಾರದ ಅಲ್ಪ ಸಂಖ್ಯಾತ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯವಿದೆ.

ಐತಿಹಾಸಿಕವಾಗಿ ಇದು ಮುಖ್ಯ ಗ್ರಾಮವಾಗಿದ್ದು ಊರಿನ ಒಳಗೆ ೫ ಸೇದುವ ಬಾವಿಗಳಿದ್ದು, ಗೋಕಟ್ಟೆಗಳಾಗಿ ಕಾಮಣ್ಣನ ಕಟ್ಟೆ, ದಾಸಣ್ಣನ ಕಟ್ಟೆ, ಊರ ಪ್ರವೇಶದ ಬಳಿ ಇರುವ ಒಂದು ಕರುಗಲ್ಲು, ಅದರ ನಡುವೆ ಬಿಡಿಸಲು ಸೂರ್ಯ ಚಂದ್ರರ ಚಿತ್ರಗಳು. ಗ್ರಾಮದ ನಡುವೆ, ಮುಟ್ಟಾದ ಹೆಣ್ಣು ಮಕ್ಕಳು ತಂಗಲು ಇರುವ ಸೂತಕದ ಮನೆ, ಇತ್ತೀಚೆಗೆ ಕಟಾವೀರನಹಳ್ಳಿ ಹೆಚ್. ಜನಪ್ಪನವರು, ತಮ್ಮ 'ನಮ್ಮೂರು ನಮ್ಮವರು' ಪುಸ್ತಕದಲ್ಲಿ ೧೯ ನೇ ಶತಮಾನದಲ್ಲಿ ರಚನೆಯಾಗಿರಬಹುದಾದ ಒಂದು ಅರೆ ವಾದ್ಯ ಶಾಸನದಲ್ಲಿ, ಅಕ್ಕಮ್ಮ ಅಥವಾ ಅಮ್ಮಾಜಿ ದೇವರಿಗೆ ವಾದ್ಯ ಶಾಸನದಲ್ಲಿ, ಕಟಾವೀರನಹಳ್ಳಿಯ ಶಿಗ ಬೋರಣ್ಣನ ಮೊಮ್ಮಗನಾದ ಹುಂಜಣ್ಣನು ದೇವರ ತೋಪಿನಲ್ಲಿರುವ ಅಕ್ಕಮ್ಮ ದೇವರಿಗೆ ವಾದನವಾದ ಅರೆ ವಾದನವನ್ನು ಮಾಡಿಸಿಕೊಟ್ಟ ವಿವರ ಅರೆಯ ಮೇಲೆ ಕೆತ್ತಿರುವುದನ್ನು ಜನಪ್ಪನವರು ಮೊದಲಿಗೆ ಶೋಧಿಸಿ ಉಲ್ಲೇಖಿಸಿದ್ದಾರೆ. ಜೊತೆಗೆ ಬೇರೆ ಬೇರೆ ಮೂಲಗಳಿಂದ ಇಲ್ಲಿನ ಪೂರ್ವಿಕರು ವಲಸೆ ಬಂದು ಗ್ರಾಮ ರಚನೆ ಮಾಡಿಕೊಂಡಿರುವ ಬಗ್ಗೆ ಜನ್ನಪ್ಪನವರು ಸುದೀರ್ಘವಾದ ವಿವರಣೆಯನ್ನು ಕುಲ, ಗ್ರಾಮ, ದೈವ ಮೂಲಗಳಿಂದ ಉಲ್ಲೇಖಿಸುತ್ತಾರೆ.

ಧಾರ್ಮಿಕವಾಗಿ ಆಂಜನೇಯ, ಮಾರಮ್ಮ, ಅಮ್ಮಾಜಿ, ಭೂತರಾಯ, ಅರಳಿಕಟ್ಟೆ, ನಾಗರಕಲ್ಲು, ಊರಿನ ಹೊರಗೆ ಬೊಮ್ಮಪ್ಪ, ಸಿದ್ದಪ್ಪ, ಮುತ್ತುರಾಯನ ಗದ್ದಿಗೆ, ದೇವಾಲಯಗಳಿವೆ. ಶ್ರಾವಣ ಮಾಸದಲ್ಲಿ ಅಮ್ಮಾಜಿಗೆ ಆರತಿ, ಬಾನ, ಹರಕೆ ಸಂಪ್ರದಾಯಗಳಿವೆ. ಮಾರಮ್ಮನ ಊರಹಬ್ಬವನ್ನು ಆಚರಿಸಿ ಬಲಿ, ಹರಕೆ ಸಂಪ್ರದಾಯವಿದೆ. ಗೌರಿಹಬ್ಬ, ದಸರಾ, ಯುಗಾದಿ, ಶಿವರಾತ್ರಿ, ದೀಪಾವಳಿ, ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

ಸಾಹಿತ್ಯಾತ್ಮಕವಾಗಿ ಹೆಚ್. ಜನ್ನಪ್ಪನವರು, ನಮ್ಮೂರು ನಮ್ಮವರು ಮಾನವ ಶಾಸ್ತ್ರೀಯ ಮಾದರಿಯ ಗ್ರಾಮ ಕೇಂದ್ರೀಕೃತ ಗ್ರಂಥವನ್ನು ವಿಶಿಷ್ಟವಾಗಿ ಪ್ರಕಟಿಸಿದ್ದಾರೆ. ಗೀಜಿಗ ಎಂಬ ಕವನ ಸಂಕಲನ ಬಂದಿದೆ. ಕಟಾವೀರನಹಳ್ಳಿ ನಾಗರಾಜ್ ಕವನ ಸಂಕಲನ ಪ್ರಕಟಿಸಿದ್ದಾರೆ. ಪ್ರೊ.ಕೆ. ಹನುಮಂತರಾಯಪ್ಪ, ಗಡಿನಾಡ ಜಾನಪದ ಸಂಸ್ಕೃತಿ, ಕಸ್ತೂರಿ ಗ್ರಂಥಗಳನ್ನು ಇತರರೊಂದಿಗೆ ಕೊಂಡು ಸಂಪಾದಿಸಿದ್ದಾರೆ.

## ಕಡವಿಗೆರೆ

ಕಡವಿಗೆರೆ ಸಿರಾ ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ. ತುಮಕೂರು–ಸಿರಾ ರಾಷ್ಟ್ರೀಯ ಹೆದ್ದಾರಿ ೪ ರಲ್ಲಿ, ಚಿಕ್ಕನಹಳ್ಳಿಯಿಂದ ಒಂದು ಕಿ.ಮೀ. ದೂರದ ಮೈಸೂರು ತಿರುವು ರಸ್ತೆಯ ಬಳಿ–ಉತ್ತರ ದಿಕ್ಕಿಗೆ ಒಂದು ಕಿ.ಮೀ. ದೂರದಲ್ಲಿರುವ ಈ ಕಂದಾಯ ಗ್ರಾಮ.ಬಹು ಸಂಸ್ಕೃತಿಯ ಊರು. ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿರುವ ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೬೨೦.೨೪ ಹೆಕ್ಟೇರ್. ಕಾರ್ಪೆಹಳ್ಳಿ, ಕಾರ್ಪೆಹಳ್ಳಿ ಗೊಲ್ಲರಹಟ್ಟಿ ಎಂಬ ಎರಡು ಮಜರೆ ಗ್ರಾಮಗಳೂ ಕಡವಿಗೆರೆ ಮುಖ್ಯ ಗ್ರಾಮದ ವ್ಯಾಪ್ತಿಗೆ ಒಳಪಟ್ಟಿದೆ. ಕಡವಿಗೆರೆ ಗ್ರಾಮ ಐತಿಹ್ಯ ಕುತೂಹಲಕರವಾಗಿದೆ. ಈ ಗ್ರಾಮದ ಸುತ್ತಮುತ್ತ ಕಾಡಿನಿಂದ ಕೂಡಿದ್ದು, ಸಮೀಪದಲ್ಲಿರುವ ನೀರಿನ ಹೊಳೆ ಅಥವಾ ಹೊಂಡ ವಿದ್ದು, ಇದರಲ್ಲಿ ನೀರು ಕುಡಿಯುವುದಕ್ಕೆ ಕಡವೀ ಎಂಬ ಜಿಂಕೆಯ ಜಾತಿಯ ಪ್ರಾಣಿಗಳು ವ್ಯಾಪಕವಾಗಿ ಈ ಭಾಗದಲ್ಲಿ ನೆಲೆಸಿದ್ದ ಕಾರಣದಿಂದ ಅದೇ ಹೆಸರಿನಲ್ಲಿ ಕರೆಯಲಾಯಿತು. ಜೊತೆಗೆ ಈ ಗ್ರಾಮದಲ್ಲಿ ರಾಮಲಿಂಗೇಶ್ವರ ಎಂಬ ಪ್ರಾಚೀನ ಕಾಲದ (ಚೋಳರ ಕಾಲ) ದೇವಾಲಯವಿದ್ದು, ಇದರ ಪೂಜೆಯನ್ನು ಸಮೀಪದ ದೊಡ್ಡಗೂಟದ ಈರಪ್ಪ ಎಂಬುವವರು ಮಾಡುತ್ತಿದ್ದರು. ಅವರು ನಿತ್ಯ ಕಡವೀಗೆರೆ ದೊಡ್ಡಗುಳ ನಡುವೆ ಇರುವ ದೊಡ್ಡಹಳ್ಳವನ್ನು ದಾಟಿಕೊಂಡೇ ಬರಬೇಕಾಗಿತ್ತು. ಜೊತೆಗೆ ಈ ಅರ್ಚಕರು ಇಲ್ಲಿ ಸ್ನಾನ ಮಾಡಿಕೊಂಡು ಬರುತ್ತಿದ್ದರು. ಜೊತೆಗೆ ಹೊಳೆ ದಾಟುವ ಸ್ಥಳ ಎಂಬ ಅರ್ಥವೂ ಇರುವುದರಿಂದ ನೀರು ಮತ್ತು ಪ್ರಾಣಿ ಮೂಲದಿಂದ ಈ ಗ್ರಾಮಕ್ಕೆ ಕಡವೀಗೆರೆ ಎಂಬ ಹೆಸರು ಬಂದಿದೆ.

ತಿಗಳರು, ಸಾದರು, ವೀರಶೈವರು, ಅಕ್ಕಸಾಲಿಗರು, ಬ್ರಾಹ್ಮಣರು, ಮುಸ್ಲಿಂಮರು, ಆದಿದ್ರಾವಿಡ, ಆದಿಕರ್ನಾಟಕ, ಬೇಡರು ಸೇರಿ ಒಟ್ಟು ೭೦೦ ಕುಟುಂಬಗಳಿವೆ. ೧೭೬೦ ಜನಸಂಖ್ಯೆಯ ಈ ಗ್ರಾಮ, ೯೭೧ ಪುರುಷ ಹಾಗೂ ೭೮೬ ಮಹಿಳೆಯರನ್ನು ಹೊಂದಿದೆ. ತಿಗಳರು ಈ ಗ್ರಾಮದ ದೊಡ್ಡ ಸಮುದಾಯ. ಲಿಂಗಾಯಿತರು ಸಣ್ಣ ಸಮುದಾಯ. ಈ ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮೇಲುಮುದ್ದೆಯ ಮಾಳಿಗೆ ಮನೆಗಳಿವೆ. ಜೊತೆಗೆ ಇಪ್ಪತ್ತೈದು ಗುಡಿಸಲು ವಸತಿಗಳೂ ಇವೆ. ಜನತಾ, ಆಶ್ರಯ, ಇಂದಿರಾ ಆವಾಸ್ ಮನೆಗಳಿವೆ. ಭಾಗ್ಯಜ್ಯೋತಿ ಸೌಲಭ್ಯ ಪಡೆದವರು ಇದ್ದಾರೆ. ಸುಮಾರು ೫೧೨ ಮನೆಗಳು ಶೌಚಾಲಯ ಸೌಲಭ್ಯ ಹೊಂದಿರುವುದು ಈ

ಗ್ರಾಮದ ವಿಶೇಷ. ಒಟ್ಟು ಎಂಟು ಓಣಿಗಳು ಈ ಗ್ರಾಮದಲ್ಲಿದ್ದು, ಅಂಚೆ ಓಣಿ, ಮುಖ್ಯ ಬೀದಿಯಾಗಿದೆ. ಉಳಿದಂತೆ ದೇವಲಾಪುರದ ಕೇರಿ, ಗಿರೇಗೌಡನ ಕೇರಿ, ದೇವಸ್ಥಾನದ ಬೀದಿ, ಸಾಬರ ಕೇರಿ, ತಿಗಳರ ಕೇರಿ ಹೀಗೆ ಜಾತಿಗೊಂದರಂತೆ ಬೀದಿಗಳಿವೆ. ಬ್ರಿಟೀಷರ ಕಾಲದಿಂದಲೂ ಅಂಚೆ ಕಛೇರಿಯ ಸೌಲಭ್ಯ ಹೊಂದಿದ್ದು, ಇಲ್ಲಿಂದ ಸುತ್ತಲ ಹಳ್ಳಿಗಳಿವೆ. ಅಂಚೆಯ ಬಟವಾಡಿ ನಡೆಯುತ್ತಿತ್ತು. ಅದರ ಕುರುಹಾಗಿ ಅಂಚೆ ಓಣಿ ಎಂಬ ಹೆಸರು ರೂಢಿ ಮೂಲವಾಗಿ ಇಂದಿಗೂ ಉಳಿದು ಬಂದಿದೆ.

ಕಪ್ಪು, ಕೆಂಪು, ಮರಳಿ ಮಿಶ್ರಿತ ಮಣ್ಣಿನಿಂದ ಕೂಡಿರುವ ಇಲ್ಲಿನ ನೆಲ, ಭತ್ತ, ರಾಗಿ, ಶೇಂಗಾ ಬೆಳೆಗೆ ಉತ್ಕೃಷ್ಟವಾದುದು. ಈ ಗ್ರಾಮದ ಪೂರ್ವಕ್ಕೆ ನಾಲ್ಕು ಎಕರೆ ವಿಸ್ತೀರ್ಣದಲ್ಲಿ ಗುಂಡು ತೋಪು ಇದ್ದು, ಹುಲ್ಲು ಮಾಳವಾಗಿದೆ. ಈ ಗ್ರಾಮದ ಪರಿಸರದಲ್ಲಿ ಕಾಡುಹಂದಿ, ನರಿ, ಮೊಲ, ತೋಳ, ಕಾಡುಬೆಕ್ಕು, ಕೋತಿ ಮೊದಲಾದ ಕಾಡು ಪ್ರಾಣಿಗಳು, ಪಕ್ಷಿಗಳಾದ ಗಿಳಿ, ಗೊರವಂಕ, ನವಿಲು, ಕೋಗಿಲೆ, ಗುಬ್ಬಚ್ಚಿ, ಮೊದಲಾದವು ಕಂಡು ಬರುತ್ತವೆ. ಹಸು, ಎತ್ತು, ಎಮ್ಮೆ, ನಾಯಿ, ಸಾಕು ಪ್ರಾಣಿಗಳಾದರೆ ಕೋಳಿ, ಕಡವೀಗೆರೆಯ ಸಾಕು ಪಕ್ಷಿಯಾಗಿದೆ.

ಸರಾಸರಿ ೪೭೩ ಮಿ.ಮೀ. ಮಳೆ ಪ್ರಮಾಣ ಇಲ್ಲಿದ್ದು, ಬಿಸಿಲು ೩೩಼ ಸೆಂ. ಇದ್ದು, ಚಳಿಯ ಪ್ರಮಾಣ ೧೨಼ ಸೆಂ. ಇರುತ್ತದೆ. ಈ ಗ್ರಾಮದ ಉತ್ತರಕ್ಕೆ ಸುವರ್ಣ ಮುಖಿ ಹೊಳೆ ಇದ್ದು, ಮಳೆ ಆಶ್ರಿತ ಹೊಳೆಯಾಗಿದೆ. ಇದಕ್ಕೆ ಹೇಮಾವತಿ ನದಿ ನೀರು, ಚೇಳೂರು, ಪಟ್ಟರಾಹುತನಹಳ್ಳಿಯಿಂದ ತಿರುವು ಪಡೆದು ಉತ್ತರಮುಖವಾಗಿ ಅನುಪನಕುಂಟೆ, ಕಾಡಿನ ಬಲ ಬದಿಯ ಗೂಬೆ ಹಳ್ಳಿ, ಹೊಂಗೆಹಳ್ಳ, ಬಸುರಿಹಳ್ಳಿಯ ಸೋಮಯ್ಯನವರ ತೋಟ ಬಳಸಿಕೊಂಡು, ಹುಂಜನಹಳ್ಳದ ಮೂಲಕ ಕಲ್ಲುಗುಡಿ, ಬೇಡರಹಳ್ಳಿ ಹಾದು, ಕಟಾವೀರನಹಳ್ಳಿ ಮುದಿಮಡುವಿನಲ್ಲಿ ತಿರುವು ಪಡೆದು, ಕಳ್ಳಂಬೆಳ್ಳ ಕೆರೆಯನ್ನು ತುಂಬಿಸುವ ಪ್ರಾಕೃತಿಕ ಸಹಜ ಹಳ್ಳ-ಕಳ್ಳಂಬೆಳ್ಳದಿಂದ ಮುಂದುವರಿದು ಚಿಕ್ಕನಹಳ್ಳಿ ದೊಡ್ಡಹಳ್ಳ, ಬಾಲನಹಳ್ಳ, ಬಾಲೇನಹಳ್ಳಿ, ಹಾಲೇನಹಳ್ಳಿ ಮಾರ್ಗವಾಗಿ ಹರಿದು ಈಗಿನ ಕಡವಿಗೆರೆ ಆತುಕೊಂಡಿರುವ ದೊಡ್ಡಹಳ್ಳ (ಸುವರ್ಣ ಮುಖಿ ನದಿ) ಸಿರಾ ದೊಡ್ಡ ಕೆರೆ ಕಡೆಗೆ ಪಯಣಿಸುತ್ತದೆ. ಹಿಂದೆಲ್ಲಾ ಇದು ಸಹಜಹಳ್ಳ, ಕಾಡಿನಿಂದ ಕೂಡಿದ್ದು, ಕಾಡುಪ್ರಾಣಿಗಳ ಆವಾಸಸ್ಥಾನವೂ ಆಗಿತ್ತು ಎಂಬುದಕ್ಕೆ ಇಂದಿಗೂ ಈ ಭಾಗದ ಪ್ರಾಕೃತಿಕ, ಭೌಗೋಳಿಕ ಮೇಲ್ಮೈ ಸ್ಪಷ್ಟವಾಗಿ ಗೋಚರಿಸುತ್ತದೆ. ಕಡವೆ, ಜಿಂಕೆ, ಮೊಲ, ತೋಳ, ನರಿ, ಕಾಡುಹಂದಿ, ನವಿಲು ಈ ಭಾಗಗಳಲ್ಲಿ ಇಂದಿಗೂ ವಿರಳವಾಗಿ ಕಂಡು ಬರುತ್ತವೆ.

ಕಡವೀಗೆರೆಯ ಈ ಬಗೆಯ ಪ್ರಾಚೀನ ಹಳ್ಳಕ್ಕೆ ಮೇಲು ಸೇತುವೆಯನ್ನು ೨೦೦೦ ರಲ್ಲಿ ನಿರ್ಮಿಸಿ, ಸುವರ್ಣ ಮುಖಿ ನದಿ ಎಂಬ ನಾಮ ಫಲಕ ಹಾಕಲಾಗಿದೆ. ಇದೇ ಸಹಜ ಹಳ್ಳದ ಮೂಲಕ ೨೦೦೦ ನೇ ಇಸವಿಯಿಂದ ಹೇಮಾವತಿ ಜಲಾಶಯ ನೀರನ್ನು ಸಿರಾ-ಕಳ್ಳಂಬೆಳ್ಳವೂ ಸೇರಿದಂತೆ ಆ ಮಾರ್ಗದ ಕೆಲವು ಕೆರೆಗಳಿಗೆ ಹರಿಸಲಾಗುತ್ತದೆ. ಈ ಊರಿನ ದಕ್ಷಿಣ ಭಾಗದಲ್ಲಿ ತುರುಕನ ಕಟ್ಟೆ ಎಂಬ ಕೆರೆಯ ಸ್ವರೂಪದ ನೀರಿನ ಆಶ್ರಯ ತಾಣವಿದ್ದು, ಇಂದು ಹೇಮಾವತಿ ನೀರಿನಿಂದ ತುಂಬಿ, ಸಮೀಪದ ಗ್ರಾಮಗಳಿಗೆ ಏತನೀರಾವರಿಯ ಮೂಲಕ ಕುಡಿಯುವ ನೀರನ್ನು ಪೂರೈಸಲಾಗುತ್ತದೆ.

ಈ ಊರಿನ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನವಾಗಿದ್ದು, ಉಪ ಆಹಾರವಾಗಿ ತಿಂಡಿಯ ರೂಪದಲ್ಲಿ ದೋಸೆ,ಇಡ್ಲಿ, ಚಿತ್ರಾನ್ನ, ರೊಟ್ಟಿ ಮೊದಲಾದ ಆಹಾರವನ್ನು ಬಳಸುತ್ತಾರೆ. ವಿಶೇಷ ಆಹಾರವಾಗಿ ಹಬ್ಬ-ವಿಶೇಷ ಸಂದರ್ಭದಲ್ಲಿ ಮಾಂಸ, ಮೀನು ಆಹಾರ ಬಳಸಿದರೆ, ಸಸ್ಯಹಾರಿಗಳು ಹೋಳಿಗೆ, ಪಾಯಸ ಮೊದಲಾದ ಸಿಹಿ ಊಟ ಸೇವಿಸುತ್ತಾರೆ. ಹೈನುಗಾರಿಕೆ ಈ ಊರಿನ ಮುಖ್ಯ ಉದ್ಯಮವಾಗಿದ್ದು ಸರಾಸರಿ ೨೫೦೦ ಲೀಟರ್ ಹಾಲು ದಿನವೂ ಶೇಖರಿಸಲಾಗುತ್ತಿದೆ. ಒಂದು ಹಾಲಿನ ಡೈರಿಯೂ ಈ ಗ್ರಾಮದಲ್ಲಿದೆ. ತೆಂಗು, ಅಡಿಕೆ, ಹುಣಸೆಹಣ್ಣು, ವೀಳ್ಯೆದೆಲೆ, ತರಕಾರಿ ಪ್ರಮುಖ ವ್ಯಾಪಾರವಾಗಿದೆ. ವಿಶೇಷವಾಗಿ ತಿಗಳರು ಪಚ್ಚಮಾರು ರೂಪದಲ್ಲಿ ಅಡಿಕೆ, ತೋಟ ಕೊಂಡು, ಅಡಿಕೆ ಸಂಸ್ಕರಣೆ ವ್ಯಾಪಾರವನ್ನು ನಡೆಸುತ್ತಾರೆ. ಹಾಲು ಉತ್ಪಾದಕರ ಮಹಾ ಮಂಡಳಿಯ ನಿರ್ದೇಶನಾಲಯ, ಉನ್ನತ ಶಿಕ್ಷಣ, ತಾಂತ್ರಿಕ, ಇಂಜಿನಿಯರಿಂಗ್ ಸೇರಿದಂತೆ ಒಟ್ಟು ಒಂದು ನೂರು ಸರ್ಕಾರಿ ನೌಕರರಿದ್ದು, ಕೆ. ಎನ್. ಕುಸುಮ, ಡೈರಿ ನಿರ್ದೇಶಕನಾಲಯದಲ್ಲಿ ಉಪನಿರ್ದೇಶಕರಾಗಿ, ಶಿಕ್ಷಣ ಇಲಾಖೆಯ ಅಧೀಕ್ಷಕ ಜಿ.ಗಂಗಣ್ಣ, ರೇಷ್ಮೆ ಇಲಾಖೆಯ ಕಡವೀಗೆರೆ ಕೃಷ್ಣಮೂರ್ತಿ ಅರಣ್ಯ ಇಲಾಖೆಯ ಅಧಿಕಾರಿ ರಾಜಣ್ಣ ಮುಖ್ಯರಾದವರು ೫೦ ಜನ ಶಾಲಾ ಶಿಕ್ಷಕರಿದ್ದಾರೆ.

ಚಿತ್ರದುರ್ಗ ಲೋಕಸಭಾ ಕ್ಷೇತ್ರ, ಸಿರಾ ವಿಧಾನಸಭಾ ಕ್ಷೇತ್ರ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಯ ಕೇಂದ್ರವೂ ಆಗಿರುವ ಚಿಕ್ಕನಹಳ್ಳಿ ಈ ಗ್ರಾಮಕ್ಕೆ ಒಂದೂವರೆ ಕಿ.ಮೀ. ದೂರದ ಲ್ಲಿದೆ. ರಾಷ್ಟ್ರೀಯ ಹೆದ್ದಾರಿ ೪ ರಿಂದ ಊರಿಗೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಡಾಂಬರೀಕರಣ ರಸ್ತೆ ನಿರ್ಮಾಣವಾಗಿದೆ. ಈ ಗ್ರಾಮದಲ್ಲಿ ಅಂಚೆ ಕಛೇರಿ ಇದ್ದು, ೧೧೨ ಸ್ಥಿರ ದೂರವಾಣಿ ಹಾಗೂ ೧೬೮೦ ಮೊಬೈಲ್ ದೂರವಾಣಿಗಳನ್ನು ಬಳಸಲಾಗುತ್ತಿದೆ. ಕರಿಯಮ್ಮ, ಅನ್ನಪೂರ್ಣ, ಶಾರದ ಹೆಸರಿನ ಸ್ತ್ರೀಶಕ್ತಿ ಸಂಘಗಳಿದ್ದು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಫಲಾನುಭವಿ ಒಂದು ತಂಡವಿದೆ. ಒಂದು ಅಂಗನವಾಡಿ ಹಾಗೂ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಈ

ಶಾಲೆ೧೯೧೩ ರಲ್ಲಿ ಆರಂಭವಾಗಿ ಇತ್ತೀಚೆಗೆ ಶತಮಾನೋತ್ಸವ ಆಚರಿಸಿದೆ. ಶಾಲೆಗೆ ಆಟದ ಮೈದಾನ, ಗ್ರಂಥಾಲಯ, ಶೌಚಾಲಯ, ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಸೇರಿದಂತೆ, ಉತ್ತಮ ಸೌಲಭ್ಯಗಳೊಂದಿಗೆ ಪ್ರಗತಿ ಪಥದಲ್ಲಿದೆ. ಕ್ಷಯ, ಮಲೇರಿಯಾ, ಫ್ಲ್ಯೂ ಈ ಊರಿನ ಸಹಜ ಖಾಯಿಲೆಗಳು ಈ ಗ್ರಾಮದಲ್ಲಿ ಮೂಡಲಗಿರಿಯಪ್ಪ, ತಿಮ್ಮಯ್ಯ, ಪುಟ್ಟರಂಗಪ್ಪ ಎಂಬ ಮುಖ ವೀಣೆ ಯಕ್ಷಗಾನ ಭಾಗವಂತಿಕೆ, ಕೋಲಾಟ ಕಲಾವಿದರಿದ್ದು, ಇವರಿಗೆ ಸರ್ಕಾರದ ಮಾಸಾಶನ ದೊರೆಯುತ್ತಿದೆ. ೭ ಜನರು ವಿಕಲಚೇತನ, ೨೦ ಜನ ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆಯ ಫಲಾನುಭವಿಗಳಿದ್ದಾರೆ. ಊರ ನಡುವೆ ೪ ಹೋಟೆಲ್, ೫ ಪೆಟ್ಟಿಗೆ ಅಂಗಡಿಗಳು ಇವೆ. ಕಡವಿಗೆರೆ ರಂಗಪ್ಪ, ಚನ್ನಬಸವಯ್ಯ, ಅರಣ್ಯನಾಶ ಸ್ವಾತಂತ್ರ್ಯಾ ಚಳುವಳಿಯಲ್ಲಿ ಭಾಗವಹಿಸಿದ್ದರು.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಊರಿನ ಹೊರಭಾಗದ ಕರಿಯಮ್ಮ ದೇವಾಲಯಕ್ಕೆ ಹೊಂದಿಕೊಂಡಂತೆ ಒಂದು ವೀರಗಲ್ಲು ಇದೆ. ಮುರಿದು ಬಿದ್ದ ಕೋಟೆಯ ಅವಶೇಷದ ಊರಬಾಗಿಲು ಕಂಡು ಬರುತ್ತಿದೆ. ಒಂದು ಪ್ರಾಚೀನ ಕಲ್ಯಾಣಿಯೂ ಈ ಗ್ರಾಮದಲ್ಲಿದೆ. ಹರಿಹರೇಶ್ವರ, ರಾಮಲಿಂಗೇಶ್ವರ, ಗಣಪತಿ, ವೀರಕೆಂಚಮ್ಮ, ಓಬಳ ನರಸಿಂಹ, ಮಹಾಲಕ್ಷ್ಮಿ ದೇವರುಗಳ ಗುಡಿ ಜನಾಂಗಿಕವಾಗಿ ಆರಾಧನೆಗೆ ಒಳಗಾಗಿ ಕುಲದೈವರುಗಳಾದರೂ ಕರಿಯಮ್ಮ ಗ್ರಾಮದೇವತೆ ಪ್ರತಿ ವರ್ಷ ಬಾನ, ಆರತಿ, ಬಲಿ ಉತ್ಸವ ನಡೆಯುತ್ತದೆ. ಬ್ರಹ್ಮದೇವರು ಸರ್ವಜನಾಂಗದ ಆರಾಧನೆಯ ಮೂರ್ತಿ ಹೊರ ಭಾಗದಲ್ಲಿದೆ.

ದಿ|| ಪುಟ್ಟಶ್ಯಾಮಣ್ಣ, ಚೋರನ ಕಥೆ ನಾಟಕ ರಚನೆ, ನಿರ್ದೇಶನದ ಮೂಲಕ ಹೆಸರು ವಾಸಿಯಾಗಿದ್ದ ಲೇಖಕರು. ಕಡವೀಗೆರೆ ಕೃಷ್ಣಮೂರ್ತಿ ಕವಿ ಭಾಗವತ ತಿಮ್ಮಯ್ಯ, ಮುಖವೀಣೆ ಮೂಡಲಗಿರಿಯಪ್ಪ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀನಿವಾಸ್, ಜಿ. ಗಂಗಣ್ಣ, ದೊಡ್ಡ ತಿಮ್ಮಯ್ಯ, ಸಣ್ಣ ಸಿದ್ದಪ್ಪ, ಭೋಗರಾಜು ವಿವಿಧ ಕಲಾವಿದರು. ಯಕ್ಷಗಾನ ಚಲನಚಿತ್ರ, ರಂಗಭೂಮಿ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ.

ಪುಟ್ಟಶ್ಯಾಮಯ್ಯ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದ್ದವರು. ಇಂದಿಗೂ ಈ ಗ್ರಾಮದಲ್ಲಿ 'ಐರಾವತ' ಎಂಬ ಮೂಡಲಪಾಯ ಯಕ್ಷಗಾನವನ್ನು ಪಾರಂಪರಿಕ ಕಲೆಯಾಗಿ ಅಭಿನಯಿಸುತ್ತಾ ಬರುತ್ತಿರುವುದು ಈ ಗ್ರಾಮದ ವಿಶೇಷ.

## ಕರೇಜವನಹಳ್ಳಿ

ಕರೇಜವನಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದ್ದು, ಸಿರಾ–ತುಮಕೂರು ರ್‍ಾಷ್ಟ್ರಿಯ ಹೆದ್ದಾರಿಯಲ್ಲಿ ಕಳ್ಳಂಬೆಳ್ಳದಿಂದ, ೩ ಕಿ.ಮೀ. ರ್‍ಾಷ್ಟ್ರಿಯ ಹೆದ್ದಾರಿ ಟೋಲ್ ಗೇಟ್ ಬಳಿ ಬಲಕ್ಕೆ ಒಂದು ಕಿ.ಮೀ. ದೂರದಲ್ಲಿ ಈ ಗ್ರಾಮವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ವ್ಯಾಪ್ತಿ ೧೪೩ ಹೆಕ್ಟೇರ್ ಆಗಿದೆ. ಇದಕ್ಕೆ ಉಪಗ್ರಾಮಗಳಾಗಿ ಗಾಂಧಿನಗರ ಸರ್ಕಾರಿ ದಾಖಲೆಯಲ್ಲಿ ಸೇರ್ಪಡೆಯಾಗಿದ್ದರೆ, ಇತ್ತೀಚೆಗೆ ಕರೇಜವನಹಳ್ಳಿ ಟೋಲ್‌ಗೇಟ್ ಉಪಬಡಾವಣೆ ನಿರ್ಮಾಣವಾಗಿದೆ. ಹೋಟೆಲ್, ಅಂಗಡಿ, ವಾಸ ಗೃಹಗಳು ಇಲ್ಲಿವೆ.

ಕುಂಚಿಟಿಗರ ಕುಲದೇವತೆ ಜವಲಿಂಗೇಶ್ವರ ಒಕ್ಕಲಿಗ ವ್ಯಕ್ತಿಯೊಬ್ಬ ಈ ಗ್ರಾಮದ ಮುಖ್ಯ ಪುರುಷನಾಗಿದ್ದು, ಆತನ ದೈಹಿಕ ಚಹರೆ ಅನುಸರಿ ಕರೆ ಎಂಬ ವಿಶೇಷಣೆ ಹೊಂದಿದೆ. ಕರೇ ಜವನ ಹಳ್ಳಿಯಾಗಿದೆ. ಇತ್ತೀಚೆಗೆ ಈ ಗ್ರಾಮದ ಸುಂಕಟ್ಟೆ ಗೇಟಿನಲ್ಲಿ ಕರ ಜವನಹಳ್ಳಿ ಎಂದು ನಮೂದಿಸಿದೆ.

ದಿಣ್ಣೆಯ ಪ್ರದೇಶ, ಮರಳು, ಕೆಂಪು, ಕಂದು ಮಣ್ಣಿನ ಮಿಶ್ರಿತ ನೆಲ, ಪಶ್ಚಿಮಕ್ಕೆ ಹಳ್ಳ, ದಕ್ಷಿಣಕ್ಕೆ ಕೆರೆ ಇದೆ. ಹಳ್ಳ, ದಿಣ್ಣೆ ಕುರುಚಲು ಗಿಡ ಮರಳು ಪ್ರದೇಶವಾಗಿದೆ. ಹಾಗಾಗಿ ಈ ಪ್ರದೇಶದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕಾಡು ಹಂದಿ, ಬಾರು ಬೆಕ್ಕು, ಉಡ ಕಂಡು ಬಂದರೆ, ಹೈನುಗಾರಿಕೆ ಹಾಗೂ ಕೃಷಿ ಕಾರ್ಯಕ್ಕಾಗಿ ಹಸು, ಸೀಮೆ ಹಾಗೂ ನಾಟಿ ತಳಿಗಳು ಹಳ್ಳಿಕಾರು ತಳಿ ಎತ್ತು, ಕುರಿ, ಮೇಕೆ, ನಾಯಿ ಮಾಂಸ ಹಾಗೂ ಮೊಟ್ಟೆಗಾಗಿ ಕೋಳಿಗಳಾದ ಹುಂಜ, ಹ್ಯಾಟೆಗಳನ್ನು ಸಾಕುತ್ತಾರೆ.

ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಕೋಗಿಲೆ, ಕಾಗೆ, ಕೊಕ್ಕರೆ, ಗಿಳಿ, ಗೊರವಂಕ, ಬೆಳವ, ಬಾವಲಿ ಮೊದಲಾದ ಪಕ್ಷಿಗಳು ಕಂಡು ಬರುತ್ತವೆ. ವಾಡಿಕೆ ಮಳೆ ಇತ್ತೀಚೆಗೆ ಕಡಿಮೆಯಾಗುತ್ತಿದ್ದು, ಕಳೆದ ೩ ವರ್ಷದಲ್ಲಿ ೫೫೭.೩ ರಷ್ಟು ಮಳೆ ಬಿದ್ದಿದೆ. ಉಷ್ಣಾಂಶ ೩೭೦ ಸೆಂ.ರಷ್ಟಿದ್ದು, ಚಳಿಯ ಪ್ರಮಾಣ ೧೨೦ ಸೆಂ. ಇದೆ. ಒಂದು ಕೆರೆ ಇದ್ದರೂ ತುಂಬುವುದು ದುರ್ಲಭವಾಗಿದೆ. ಹಾಗೂ ಸಹಜ ಮಳೆಯ ಜೊತೆಗೆ ೫೯ ಕೊಳವೆ ಬಾವಿಗಳಿದ್ದು, ಉಪ ನೀರಾವರಿಗೆ ಬಳಸಲಾಗುತ್ತಿದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ನಾಲ್ಕು ಕೈ ಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯ ವಾಗಿದ್ದು, ಕುರುಬ, ಗೊಲ್ಲ, ಕುಂಬಾರ, ಆದಿ ದ್ರಾವಿಡ, ಕಿರು ಸಮುದಾಯಗಳಿವೆ. ವಿವಿಧ ಸ್ವರೂಪದ ೮೮ ಮನೆಗಳಿದ್ದು ಅವು ಹೆಂಚಿನ, ಶೀಟಿನ, ಕಾಂಕ್ರೀಟಿನ ಸ್ವರೂಪದ ಮನೆಗಳಾಗಿವೆ. ಇವು ಸರ್ಕಾರದ ವಸತಿ ಯೋಜನೆಯಾದ ಆಶ್ರಯ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೬ ಫಲಾನುಭವಿಗಳಿದ್ದಾರೆ. ೩೮೪ ಜನ ಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ೪೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಬಂಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ಹಾಗೂ ಲಾರಿ, ದ್ವಿಚಕ್ರವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಆರೆಕಾ, ಕೂರ್ಲೆ, ಹೆಸರು, ಹುರುಳಿ, ತೊಗರಿ ಆಹಾರ ಬೆಳೆಗಳು. ತೆಂಗು, ಅಡಿಕೆ, ಸಪೋಟ, ದಾಳಿಂಬೆ, ರೇಷ್ಮೆ, ಸೇವಂತಿ ತೋಟಗಾರಿಕೆ ಬೆಳೆಗಳಾಗಿವೆ.

ಒಂದು ಆರೋಗ್ಯ ಹಾಲಿನ ಡೈರಿ ಇದ್ದು, ಸರಾಸರಿ ೧೮೦ ಲೀಟರ್ ಹಾು ಸಂಗ್ರಹವಾಗುತ್ತದೆ. ಶೇಂಗಾ, ಅಡಿಕೆ, ತೆಂಗು, ಹೊಂಗೆ ಬೀಜ, ಹೂವು ಪ್ರಮುಖ ವಾಣಿಜ್ಯ ಸರಕಾಗಿವೆ. ನ್ಯಾಯಬೆಲೆ ಅಂಗಡಿ ಇದೆ. ಶಿಕ್ಷಣ, ಸಾರಿಗೆ, ಆರೋಗ್ಯ ಇಲಾಖೆಯ ೭ ಜನ ಸರ್ಕಾರಿ ನೌಕರರಿದ್ದು, ಖಾಸಗಿ ವೈದ್ಯರಾದ ಡಾ. ಮಧು ಪಾಟೀಲ್ ಸೇರಿ ಇಬ್ಬರು ಇಂಜಿನಿಯರ್ ಇದ್ದಾರೆ. ನಿವೃತ್ತ ಅಧಿಕಾರಿಗಳಿದ್ದಾರೆ. ಮಹಿಳೆಯರು ಹೂ ಕಟ್ಟುವುದು, ಬಟ್ಟೆ ಹೊಲಿಯುವುದು, ಬೀಡಿ ಕಟ್ಟುವುದು, ಗೃಹ ಕೈ ಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರಕ್ಕೆ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯತ್, ತರೂರು ತಾಲ್ಲೂಕು ಪಂಚಾಯಿತಿ, ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದ ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ರ‍್ರಾಷ್ಟ್ರೀಯ ಹೆದ್ದಾರಿ ೪ ಕ್ಕೆ ಸಂಪರ್ಕ ರಸ್ತೆ ಇದೆ. ಕೆ.ಎಲ್. ಮಹದೇವಪ್ಪ ನಿವೃತ್ತ ಅಧಿಕಾರಿಯಾಗಿದ್ದು, ರಾಜಕಾರಣದಲ್ಲಿ ಸಕ್ರಿಯರಾಗಿದ್ದಾರೆ. ಗ್ರಾಮದಲ್ಲಿ ನಗರ ದೂರವಾಣಿಗಳನ್ನು ಬಳಸುತ್ತಾರೆ. ಗ್ರಾಮದಲ್ಲಿ ನ್ಯಾಯ ಬೆಲೆ ಅಂಗಡಿ ಇದ್ದು, ೨ ಸ್ತ್ರೀ ಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಹಕಾರ ಸಂಘವಿದೆ. ಇವು ಮಹಿಳೆಯರ ಆರ್ಥಿಕ ಸ್ವಾಭಿವೃದ್ಧಿಗೆ ಪ್ರೇರಕವಾಗಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ೨೭ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು, ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ, ಪುಸ್ತಕ ವಿತರಣಾ ಸೌಲಭ್ಯವಿದೆ. ಶೇ.೫೨.೦೧ ರಷ್ಟು ಸಾಕ್ಷರತೆ ಇದೆ. ಪಾರಂಪರಿಕ ವೈದ್ಯರಾದ ಮುರುಡಪ್ಪ, ಶಿವಲಿಂಗಯ್ಯ ಹನುಮಂತರಾಯ ಸ್ಥಳೀಯವಾಗಿ ಹೆಸರಾಗಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳಾದ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಮಾರಮ್ಮನ ಪೌಳಿ, ಮುತ್ತುರಾಯನಕಲ್ಲು, ಕರಿಯಮ್ಮನ ಪೌಳಿಗಳಿವೆ. ಪ್ರತಿ ಶ್ರಾವಣ ಮಾಸದಲ್ಲಿ ಈ ಗ್ರಾಮದೇವತೆಗಳು ಆರತಿ ಮಾಡಿ, ಪ್ರಾಣಿ ಬಲಿ ಅರ್ಪಿಸುವ ಹರಕೆ ಸಂಪ್ರದಾಯಗಳಿವೆ. ಗ್ರಾಮದಲ್ಲಿ ಯುಗಾದಿ, ಬಸವ ಜಯಂತಿ,ದಸರಾ, ಸಂಕ್ರಾಂತಿ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ.

## ಕಲ್ಲುಶೆಟ್ಟಹಳ್ಳಿ

ಕಲ್ಲುಶೆಟ್ಟಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವೋತ್ತರ ದಕ್ಷಿಣ ದಿಕ್ಕಿನಲ್ಲಿದ್ದು, ಸಿರಾ ನಗರಕ್ಕೆ ೨೯ ಕಿ.ಮೀ. ದೂರದಲ್ಲಿದೆ. ಸಿರಾ–ತುಮಕೂರು ರ‍್ರಾಷ್ಟ್ರೀಯ ಹೆದ್ದಾರಿಯ ದೊಡ್ಡ ಆಲದ ಮರ, ಜೋಗಿ ಹಳ್ಳಿಯ ನಡುವಿನ ತುಮಕೂರು ರಸ್ತೆಯ ಎಡಕ್ಕೆ ತಿರುಗಿ–೫ ಕಿ.ಮೀ. ಮುಖ್ಯ–ಹುಂಜನಹಳ್ಳದ ಮಾರ್ಗವಾಗಿ ಚೇಳೂರು ರಂಗನಹಳ್ಳಿಯ–ಮೈಸೂರು–ಸಿರಾ ಮುಖ್ಯ ರಸ್ತೆ ಸಂಪರ್ಕ ಕಲ್ಪಿಸುತ್ತದೆ. ಇದು ಸೀಬಿ ಗ್ರಾಮದ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೨೦೭೩.೩೪ ಹೆಕ್ಟೇರ್ ಇರುತ್ತದೆ. ಮೂಲ ಗ್ರಾಮದಲ್ಲಿ ಹಂಚಿಕೆಯಾಗಿದೆ. ಈ ಗ್ರಾಮದ ಮೂಲದ ಬಗ್ಗೆ ಗ್ರಾಮದ ಸಿದ್ದರಾಮಣ್ಣ ಎಂಬ ಹಿರಿಯರ ಅಭಿಪ್ರಾಯದ ಪ್ರಕಾರ. ಈ ಗ್ರಾಮದಲ್ಲಿ ಕಲ್ಲು ಭೂಮಿಯಾಗಿದ್ದು, ಅನುಪನಕುಂಟೆ ಕಾಡಿಗೆ ಸಮೀಪದಲ್ಲಿದೆ. ಜೊತೆಗೆ ಇಲ್ಲಿ ಕುಂಬಾರ ಜನಾಂಗದ ಕಲ್ಲಶೆಟ್ಟಿ ಎಂಬುವರು ಈ ಗ್ರಾಮದ ಮೂಲ ವ್ಯಕ್ತಿಯಾಗಿದ್ದು, ಗ್ರಾಮವು ಅದೇ ಹೆಸರಿನಲ್ಲಿ ಕರೆಯಲಾಗಿದೆ. ಕಲ್ಲಶೆಟ್ಟಿ ಹಳ್ಳಿ ಎಂಬುದು ಈಗ ಕಲ್ಲುಶೆಟ್ಟಿಹಳ್ಳಿ ಎಂಬ ಹೆಸರಲ್ಲೂ ಕರೆಯುತ್ತಾರೆ. ವಿಜಯನಗರದ ಅರಸ ಬುಕ್ಕರಾಯನು ಹಾಕಿಸಿದ ಶಾಸನವು ಸಿರಾ ಶಾಸನ ೧೦೦ ರ ಉಲ್ಲೇಖದಲ್ಲಿ ಈ ಊರ ಹೊರ ವಲಯದಲ್ಲಿ ಶಾಸಕರಿದ್ದು ಕಲಿಶೆಟ್ಟಿ ಎಂಬುವವನು ಬುಕ್ಕರಾಯನ ನೇತೃತ್ವದಲ್ಲಿ ಕೆರೆ ಹಾಗೂ ಶಿವಾಲಯ ಸ್ಥಾಪಿಸಿ ನೆನಪಿಗೆ ಕಲಿಶೆಟ್ಟಿ ಹಳ್ಳಿ ಎಂಬ ಗ್ರಾಮದ ಹೆಸರನ್ನು ಸೂಚಿಸಿದೆ.

ಇದು ಈಗ ಶಿವಲಿಂಗದ ಆಕೃತಿಯ ಶಿಥಿಲಾವಸ್ಥೆಯ ಶಾಸನವಾಗಿದೆ. ಈ ಗ್ರಾಮವು ಬಿಳಿ ಮಿಶ್ರಿತ ಮರಳು ಮಣ್ಣನ್ನು

ಹೊಂದಿದ್ದು, ಮರಗಿಡಗಳ ತಂಪನೆಯ ವಾತಾವರಣ ಹೊಂದಿದೆ. ಈ ಪರಿಸರದಲ್ಲಿ ಮರ, ಪೊದೆ, ತೋಟ ಹೆಚ್ಚು ಇದ್ದು, ಕಾಡು ಪ್ರಾಣಿಗಳೂ ಅಧಿಕವಾಗಿ ನೆಲೆಸಿದೆ. ಹಾಗಾಗಿ ಈ ಪರಿಸರದಲ್ಲಿ ಸಹಜವಾಗಿ ಪಕ್ಷಿಗಳಾದ ಗಿಳಿ, ಕೌಜುಗ, ಕೊಕ್ಕರೆ, ಬೆಳವ, ಗೊರವಂಕ, ಗೀಜುಗ, ನೇರ್ಲಹಕ್ಕಿ, ಹದ್ದು, ಗರುಡ, ಬಾವುಲಿ, ಕಂಡು ಬರುತ್ತದೆ. ಅಂತೆಯೇ ಕಾಡು ಪ್ರಾಣಿಗಳಾದ ನರಿ, ಮೊಲ, ಉಡ, ಮುಂಗುಸಿ, ಜಿಂಕೆ, ಸಾರಂಗ, ಕರಡಿ, ತೋಳ ಕಂಡು ಬರುತ್ತವೆ. ರೈತಾಪಿ ಕಸುಬನ್ನು ಹೆಚ್ಚಾಗಿ ಅವಲಂಬಿಸಿರುವುದರಿಂದ ಗ್ರಾಮದಲ್ಲಿ ಹೈನುಗಾರಿಕೆ ಹೆಚ್ಚಿದು, ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ಎತ್ತುಗಳನ್ನು ಸಾಕಿದ್ದಾರೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ೪೬೭ ಮಿ.ಮೀ ಬೀಳುತ್ತಿದ್ದು, ಕಳೆದ ಐದು ವರ್ಷಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಬಿದ್ದಿದೆ. ಬಿಸಿಲಿನ ತಾಪ ೩೬೦ ಸೆಂ. ಆಗಿದ್ದು, ಚಳಿ ೯-೧೦೦ ಸೆಂ. ಸಾಮಾನ್ಯವಾಗಿರುತ್ತದೆ. ಈ ಗ್ರಾಮದ ಪೂರ್ವ ಹಾಗೂ ಉತ್ತರಕ್ಕೆ ಎರಡು ಕೆರೆಗಳಿದ್ದು, ತುಂಬುವುದು ವಿರಳವಾಗಿದೆ. ಈ ಗ್ರಾಮದ ಪರಿಸರದಲ್ಲಿ ೪೫ ಕೊಳವೆ ಬಾವಿಗಳಿದ್ದು, ತೋಟಗಾರಿಕೆ, ರೈತಾಪ ಬದುಕಿಗೆ ಆಶ್ರಯವಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಚಿಕ್ಕ ನೀರಿನ ಟ್ಯಾಂಕ್‌ಗಳ ಮೂಲಕ ನೀರು ಪೂರೈಕೆ ಮಾಡುತ್ತಿದ್ದಾರೆ. ಗ್ರಾಮದಲ್ಲಿ ೨ ಕೈ ಪಂಪುಗಳು ಇದೆ.

ವೀರಶೈವ ಹಾಗೂ ಆದಿ ಕರ್ನಾಟಕ ಈ ಎರಡು ಸಮುದಾಯಗಳು ಇಲ್ಲಿ ಸಮ ಪ್ರಮಾಣದಲ್ಲಿದ್ದು, ದೊಡ್ಡ ಸಮುದಾಯವಾಗಿವೆ. ಕುಂಚಿಟಿಗ, ಮಡಿವಾಳ, ಇವರು ಸಣ್ಣ ಸಮುದಾಯವಾಗಿ ಸಾಮಾಜಿಕ ರಚನೆಯಾಗಿದೆ. ವಿವಿಧ ಪ್ರಕಾರಗಳ ೧೪೮ ಮನೆಗಳಿದ್ದು, ಇವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಮಂಗಳೂರು ಹೆಂಚಿನ ಮನೆಗಳಿವೆ ಇವುಗಳಲ್ಲಿ ೭೪ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ೯೧೧ ಜನಸಂಖ್ಯೆ ಹೊಂದಿದೆ. ೭೬ ಮನೆಗಳಲ್ಲಿ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರ, ರೊಟ್ಟಿ, ಅನ್ನ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಮಿನಿಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳು ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ಅಲಸಂದಿ, ತೊಗರಿ, ಅವರೆ, ಜೋಳ ಆಹಾರ ಬೆಳೆಗಳಾಗಿವೆ.ಇಬ್ಬರು ಸರ್ಕಾರಿ ನೌಕರರಿದ್ದು, ಗೃಹ ಕೈಗಾರಿಕೆಯಾಗಿ ಬೀಡಿ ಸುತ್ತುವುದು, ಊಟದ ಎಲೆ ಕಟ್ಟುವುದು ಸಣ್ಣ ಪ್ರಮಾಣದ ಗೃಹ ಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯತ್, ಸೀಬಿ ತಾಲ್ಲೂಕು ಪಂಚಾಯಿತಿ, ಹಾಗೂ ಸೀಬಿ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೂ, ಚಿತ್ರದುರ್ಗ ಲೋಕ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ೨ ಗ್ರಾಮ ಪಂಚಾಯಿತಿ ಸದ್ಯರು, ಇಬ್ಬರು ಗ್ರಾಮ ಪಂಚಾಯಿತಿ ನೌಕರರು ಇದ್ದಾರೆ. ೩ ಸ್ತ್ರೀ ಶಕ್ತಿ ಸ್ವಸಹಾಯ, ಹಾಗೂ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯದ ೨ ಗುಂಪುಗಳಿವೆ. ೧ ಅಂಗನವಾಡಿ ಕೇಂದ್ರವಿದ್ದು ೨೪ ಮಕ್ಕಳಿದ್ದು, ಒಬ್ಬರು ಶಿಕ್ಷಕಿ ಇದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ೧೦೮ ಮಕ್ಕಳಿದ್ದು, ೪ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪಠ್ಯ ಪುಸ್ತಕ ವಿತರಣೆ ಇದೆ. ಹಾಗು ಉತ್ತಮವಾದ ಕಾಂಪೌಂಡು ವ್ಯವಸ್ಥೆಯೂ ಇದೆ. ಗ್ರಾಮದಲ್ಲಿ ಲಿಂಗಪ್ಪ ಎಂಬ ನಾಟಿ ವೈದ್ಯರಿದ್ದು, ವಾತ, ಪಿತ್ತ, ರಕ್ತ ಸಂಬಂಧಿ ಖಾಯಿಲೆಗಳಿಗೆ ಚಿಕಿತ್ಸೆ ನೀಡುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ವಿಧವಾ ವೇತನ, ಭಾಗ್ಯಜ್ಯೋತಿ ವಿದ್ಯುತ್ ಯೋಜನೆ, ಜನತಾ, ಆಶ್ರಯ, ಅಂಬೇಡ್ಕರ್ ಆವಾಸ್ ವಸತಿ ಯೋಜನೆ ಸೌಲಭ್ಯವಂತರಿದ್ದು, ೮ ಅಂಗಡಿ ಗಳು ಇದೆ. ಆಂಜನೇಯ, ಶ್ರೀರಾಮ ಮಂದಿರದ ದೇವಾಲಯಗಳಿದ್ದು, ಮಾರಮ್ಮನ ಪೌಳಿ ಇದೆ. ವಾರ್ಷಿಕ ಊರಹಬ್ಬವನ್ನು ವಿಶೇಷವಾಗಿ ಆಚರಿಸಿ, ಆರತಿ, ಪ್ರಾಣಿಬಲಿ, ಬಾನದ ಸಂಪ್ರದಾಯಗಳಿವೆ. ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ಗೌರಿ-ಗಣೇಶ, ಆಯುಧ ಪೂಜೆ, ದೀಪಾವಳಿ, ಮಹಾನವಮಿ, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಒಂದು ದಲಿತ ಸಂಘದ ಶಾಖೆಯೂ ಗ್ರಾಮದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

## ಕಳ್ಳಿಪಾಳ್ಯ

ಕಳ್ಳಿಪಾಳ್ಯವು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೩.೫ ಕಿ.ಮೀ. ದೂರದಲ್ಲಿದೆ. ಇದು ಭೂಪಸಂದ್ರದ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೧೩೨.೬೮ ಹೆಕ್ಟೇರ್ ಇದ್ದು, ಕೆಂಪು ಮಿಶ್ರಿತ ಬಿಳಿ ಮಣ್ಣನ್ನು ಹೊಂದಿದೆ. ಕಳ್ಳಿ ಜಾತಿಯ ಗಿಡಗಳು ಈ ಗ್ರಾಮದ ಪರಿಸರದಲ್ಲಿ ಹೆಚ್ಚು ಇದ್ದದ್ದರಿಂದಲೂ ಅದೇ ಸ್ಥಳದಲ್ಲಿ ಮನೆಗಳನ್ನು ಕಳಕೊಂಡು ಪಾಳೆಯ ಬೀಡು ಮಾಡಿಕೊಂಡಿ ದ್ದರಿಂದ ಕಳ್ಳಿ ಸಸ್ಯ ಜಾತಿಯ

ಹೆಸರಿನಿಂದ ಕರೆಯಲಾಗಿದೆ. ಬಯಲು ಪ್ರದೇಶ. ಕುರುಚಲು ಗಿಡ, ಪೊದೆಗಳಿವೆ. ಹಳ್ಳ ದಿಣ್ಣೆಗಳೂ ಇವೆ. ಹಾಗಾಗಿ ಈ ಪರಿಸರದಲ್ಲಿ ನರಿ, ಮೊಲ, ಮುಂಗುಸಿ, ಹಂದಿ ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ನಾಟಿ ಹಸು, ಸೀಮೆ ಹಸುಗಳನ್ನು ಸಾಕಲಾಗುವುದು. ಹಾಗೂ ಕುರಿ, ಮೇಕೆ, ನಾಯಿಗಳನ್ನು ಸಾಕಿದ್ದಾರೆ. ನಾಟಿ ಹುಂಜ, ಹ್ಯಾಟೆಯ ಜೊತೆಗೆ ಗಿರಿರಾಜ ಕೋಳಿ ಸಾಕಲಾಗುವುದು. ಪಕ್ಷಿಗಳಾದ ಗಿಳಿ, ಗೂಬೆ, ಕೌಜುಗ, ಕೊಕ್ಕರೆ, ಬೆಳವ, ಗೊರವಂಕ, ಗೀಜುಗ, ನೇರ್ಲಹಕ್ಕಿ, ಹದ್ದು, ಗರುಡ, ಬಾವುಲಿ, ಕಂಡು ಬರುತ್ತದೆ.

ವಾರ್ಷಿಕ ಸರಾಸರಿ ಮಳೆ ಕಡಿಮೆ ಪ್ರಮಾಣ ಇದ್ದು ವಾಡಿಕೆ ಮಳೆ ೫೫೭.೩ ಹೆಕ್ಟೇರ್ ಆಗಿದೆ. ಕಳೆದ ಬಿಸಿಲಿನ ತಾಪ ೩೯೦ ಸೆಂ. ಆಗಿದ್ದು, ಚಳಿ ೧೨೦ ಸೆಂ. ಸಾಮಾನ್ಯವಾಗಿರುತ್ತದೆ. ಈ ಗ್ರಾಮ ಪ್ರದೇಶದಲ್ಲಿ ಒಂದು ಕೆರೆಯಿದ್ದರೂ ತುಂಬುವುದಿಲ್ಲ. ಹಾಗಾಗಿ ರೈತರು ಉಪ ನೀರಾವರಿಗಾಗಿ ೨೨ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಸರಬರಾಜು ಕೂಡಲಾಗುತ್ತಿದೆ. ೩ ಸಿಸ್ಟನ್‌ಗಳಿದ್ದು ಗ್ರಾಮದಲ್ಲಿ ೧ ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯಗಳಿದ್ದು, ನಾಯಕ, ತಿಗಳ ಜನಾಂಗಗಳು ಕಿರು ಸಮುದಾಯಗಳು ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದೆ. ವಿವಿಧ ಪ್ರಕಾರಗಳ ೬೩ ಮನೆಗಳಿದ್ದು, ೨೨೬ ಜನಸಂಖ್ಯೆ ಹೊಂದಿದೆ. ಇವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಿವೆ. ಇವು ಆಶ್ರಯ, ಜನತಾ, ಇಂದಿರಾ ಆವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಇವುಗಳಲ್ಲಿ ೨೪ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರ, ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಮಿನಿಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳು ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ಸಜ್ಜೆ, ಆರಕ ಹಾಗೂ ಕೊರ್ಲೆ ಬೆಳೆಗಳನ್ನು ಆಹಾರ ಬೆಳೆಗಳಾಗಿವೆ. ತೆಂಗು, ಅಡಿಕೆ, ಸೇವಂತಿಗೆ ವ್ಯಾಪಾರಿ ಬೆಳೆಗಳು. ಶೇಂಗಾ, ಹುಣಸೇಹಣ್ಣು, ಹೊಂಗೆ ಬೀಜ ಪ್ರಮುಖ ವಾಣಿಜ್ಯ ಸರಕಾಗಿವೆ. ವಿವಿಧ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರಿದ್ದು, ಗೃಹ ಕೈಗಾರಿಕೆಯಾಗಿ ಬೀಡಿ ಸುತ್ತುವುದು, ಟೈಲರಿಂಗ್, ಹೊಂಗೆ ಬೀಜ ಕುಟ್ಟುವುದು ಮೊದಲಾದ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯತ್, ನಾದೂರು ತಾಲ್ಲೂಕು ಪಂಚಾಯಿತಿ, ಹಾಗೂ ಭೂಪಸಂದ್ರ ಗ್ರಾಮ ಪಂಚಾಯಿತಿ ಕ್ಷೇತ್ರವಾಗಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯಿತಿ ಸದಸ್ಯರಿದ್ದಾರೆ. ಚಿತ್ರದುರ್ಗ ಲೋಕ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ೨ ಸ್ತ್ರೀ ಶಕ್ತಿ ಸ್ವಸಹಾಯ, ಹಾಗೂ ಮಹಿಳಾ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ೧ ಅಂಗನವಾಡಿ ಕೇಂದ್ರವಿದ್ದು ೧೪ ಮಕ್ಕಳಿದ್ದು, ಒಬ್ಬರು ಕಾರ್ಯಕರ್ತೆ ಇದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಕೆಯಾಗುತ್ತದೆ. ಹೆಚ್ಚಿನ ಶಿಕ್ಷಣಕ್ಕೆ ಭೂಪಸಂದ್ರ, ಕನ್ನಾಲಮ್ಮ ದೇವಾಲಯಕ್ಕ ಮಕ್ಕಳು ಹೋಗುತ್ತಿದ್ದಾರೆ. ಗ್ರಾಮದ ಸಾಕ್ಷರತೆ ಶೇ. ೬೧ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಮಾರಮ್ಮನ ಪೌಳಿಯಿದ್ದು, ಕನ್ನಾಲಮ್ಮನಿಗೆ ಎದುರೆತ್ತಿ ಆರತಿ, ಬ್ಯಾಟೆ, ಹರಕೆ ಒಪ್ಪಿಸುವ ಸಂಪ್ರದಾಯವಿದೆ. ಕೆಮ್ಮು, ಜ್ವರ, ನೆಗಡಿ ಸಾಮಾನ್ಯ ಕಾಯಿಲೆಯಾಗಿದ್ದು ಕೆಲವರು ಕುಟುಂಬ ಯೋಜನೆಗೆ ಒಳಗಾಗಿದ್ದಾರೆ. ಆಸ್ಪತ್ರೆಗೆ ತರೂರು ಗ್ರಾಮಕ್ಕೆ ಹೋಗಬೇಕಾಗಿರುತ್ತದೆ.

ಮಾರಮ್ಮನ ಜಾತ್ರೆ ವಿಶೇಷವಾಗಿ ಆಶಾಢ ತಿಂಗಳಲ್ಲಿ ನಡೆಯುತ್ತದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ, ಗೌರಿ ಗಣೇಶನ ಹಬ್ಬಗಳನ್ನು ಶ್ರದ್ಧೆಯಿಂದ ಆಚರಿಸುತ್ತಾರೆ. ಸಿರಾ ಭೂಪಸಂದ್ರ, ತರೂರು–ತಾಳಗುಂದ ಮಾರ್ಗವಾಗಿ ಬಸ್ ಸಂಚಾರವಿದೆ.

## ಕಲಿಗಾನಹಟ್ಟಿ

ಕಲಿಗಾನಹಟ್ಟಿ ಕಾಡುಗೊಲ್ಲರ ಬುಡಕಟ್ಟು ಗ್ರಾಮ. ಇದು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಸಿರಾ–ಮೈಸೂರು ರಸ್ತೆಯಲ್ಲಿ ಕೃಷಿ ಫಾರಂ ಗೇಟಿನಿಂದ ೧ ಕಿ.ಮೀ. ದೂರದಲ್ಲಿ ಸಿರಾದಿಂದ ೧೧ ಕಿ.ಮೀ. ದೂರದಲ್ಲಿದೆ. ಕಲ್ಲಣ್ಣ ಎಂಬ ವ್ಯಕ್ತಿಯ ಹೆಸರಿನ ಈ ಮೂಲದ ಹಳ್ಳಿ. ನಂತರ ಕಲ್ಲನ–ಕಲಿಗಾನ ಹೆಸರು ನಿಂತಿದೆ. ಕಾಡುಗೊಲ್ಲರು ಮಾತ್ರ ವಾಸಿಸುತ್ತಿದ್ದರಿಂದ ಆ ಗ್ರಾಮ ಸಹಜವಾಗಿಯೇ ಹಳ್ಳಿಯಾಗಿ ಕಲಿಗಾನಹಟ್ಟಿಯಾಗಿದೆ. ಜವಲಿಂಗ ದೇವರು, ಈ ಗ್ರಾಮದ ಬದಿಗೇ ಇದ್ದು, ಅಲ್ಲೊಂದು ಕೆರೆಯೂ ಇದೆ. ಸುತ್ತಲಿನ ಬುಡಕಟ್ಟು ದೇವರುಗಳು ಈ ಕೆರೆಗೆ ಪುಣ್ಯ ಸ್ಥಾನಕ್ಕೆ ಬರುವ

ಸಂಪ್ರದಾಯವೂ ಇದೆ. ಇದು ಚಿಕ್ಕನಹಳ್ಳಿಯ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೪೫.೮ ಹೆಕ್ಟೇರ್ ಆಗಿದೆ.

ಕಂದು ಮಿಶ್ರಿತ ಮರಳು ಮಣ್ಣನ್ನು ಹೊಂದಿರುವ ಈ ಗ್ರಾಮ ಪುಟ್ಟದೊಂದು ಕೆರೆ, ಕುರುಚಲು ಗಿಡ, ಪೊದೆಗಳಿಂದ ಕೂಡಿದೆ. ಹಾಗಾಗಿ ಈ ಪರಿಸರದಲ್ಲಿ ನರಿ, ಮೊಲ, ಮುಂಗುಸಿ, ಜಿಂಕೆ, ಉಡ, ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಎತ್ತುಗಳನ್ನು ಸಾಕಲಾಗುವುದು. ಹಾಗೂ ಕುರಿ, ಮೇಕೆ, ನಾಯಿಗಳನ್ನು ಸಾಕಿದ್ದಾರೆ. ಪಕ್ಷಿಗಳಾದ ಕೋಗಿಲೆ, ಗಿಡುಗ, ಗೊರವ, ಬೆಳವ, ಪುರಲೆಹಕ್ಕಿ, ಗೀಜಗ, ಗೂಬೆ, ಹದ್ದು, ಗರುಡ ಕಂಡು ಬರುತ್ತದೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ೪೮೧.೪ ಮಿ.ಮೀ ಮಳೆ ಬೀಳುತ್ತಿದ್ದು, ಬಿಸಿಲಿನ ತಾಪ ೩೮೦ ಸೆಂ. ಆಗಿದ್ದು, ಚಳಿ ೧೨೦ ಸೆಂ. ಸಾಮಾನ್ಯವಾಗಿರುತ್ತದೆ. ಕೃಷಿ ಬದುಕಿಗೆ ಮಳೆ ನೀರು ಸಾಕಾಗುವುದಿಲ್ಲ. ಈ ಪರಿಸರದಲ್ಲಿ ೬ ಕೊಳವೆ ಬಾವಿಗಳನ್ನು ವ್ಯವಸಾಯಕ್ಕೆ ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೩ ಕಿರು ಟ್ಯಾಂಕ್‌ಗಳಿದ್ದು, ೨ ಕೈ ಪಂಪುಗಳು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕಾಡುಗೊಲ್ಲರು ಮಾತ್ರ ವಾಸಿಸುವ ಈ ಗ್ರಾಮದಲ್ಲಿ ಕಾಂಕ್ರೀಟ್, ಮಣ್ಣಿನ, ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ೫೩ ಮನೆಗಳಿವೆ. ಒಟ್ಟು ೧೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೨೧೪ ಜನಸಂಖ್ಯೆ ಇದೆ. ೬ ಜನತಾ ಮನೆಗಳಿವೆ.

ರಾಗಿ ಮುದ್ದೆ ರೊಟ್ಟಿ, ಅನ್ನ ಬಳಸಲಾಗುತ್ತದೆ. ಬಾಡೂಟ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಮಿನಿಟೆಂಪೋ, ಹಾಗೂ ದ್ವಿಚಕ್ರ ವಾಹನಗಳು ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ಅಲಸಂದೆ, ತೊಗರಿ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಹೂವು, ತರಕಾರಿ ಬೆಳೆಗಳು. ಶೇಂಗಾ, ಹುಣಸೇಹಣ್ಣು, ವ್ಯಾಪಾರಿ ಬೆಳೆಗಳು. ಕುರಿ ಮೇಕೆ ವ್ಯಾಪಾರವೂ ಇದೆ. ಶಿಕ್ಷಣ, ಸಾರಿಗೆ, ಲೋಕೋಪಯೋಗಿ ಇಲಾಖೆಯ ೧೪ ಸರ್ಕಾರಿ ನೌಕರರಿದ್ದು, ಚಿತ್ತಯ್ಯ ಎಂಬುವವರು ಇಂಜಿನಿಯರ್ ಆಗಿರುವುದು ಈ ಗ್ರಾಮದ ವಿಶೇಷ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯತ್, ಯಲಿಯೂರು ತಾಲ್ಲೂಕು ಪಂಚಾಯಿತಿ, ಹಾಗೂ ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರವಾಗಿದೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ಗ್ರಾಮದಲ್ಲಿ ಒಬ್ಬರು ಪಂಚಾಯಿತಿ ಸದಸ್ಯರಿದ್ದಾರೆ. ೨ ಸ್ತ್ರೀ ಶಕ್ತಿ ಸ್ವಸಹಾಯ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘದ ಗುಂಪುಗಳಿದ್ದು, ಮಹಿಳಾ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ೧ ಅಂಗನವಾಡಿ ಕೇಂದ್ರವಿದ್ದು , ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ಶಾಲೆಯಲ್ಲಿ ೬೦ ಮಕ್ಕಳಿದ್ದು, ಮೂವರು ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಪುಸ್ತಕ, ಸಮವಸ್ತ್ರ, ಶೌಚಾಲಯ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ಶೇ. ೬೭.೨ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ವಸತಿ ಯೋಜನೆಯ ಜನತಾ, ಆಶ್ರಯ, ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ. ೧ ಪೆಟ್ಟಿಗೆ ಅಂಗಡಿ ಇದೆ.

ಕರಿಯಮ್ಮ ಗ್ರಾಮ ದೇವತೆ. ವಾರ್ಷಿಕವಾಗಿ ಜಾತ್ರೆ ನಡೆದು ಬಲಿ, ಆರತಿ, ಬಾನದ ಹರಕೆ ಸಂಪ್ರದಾಯವಿದೆ. ಜವಲಿಂಗೇಶ್ವರ ಗ್ರಾಮದ ಹೊರವಲಯದ ಪೌಳಿಯಿದ್ದು, ದೇವರ ಉತ್ಸವ ನಡೆಯುತ್ತದೆ.

ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ, ದೊಡ್ಡ ಹಬ್ಬಗಳು, ದೀಪಾವಳಿಯನ್ನು ಹಿರಿಯರ ಹಬ್ಬ, ಹಾಲು ತುಪ್ಪದ ಹಬ್ಬವೆಂದು ಆರುದಿನಗಳ ಕಾಲ ಬೆಳಕಿನ ಹಬ್ಬವಾಗಿ ಆಚರಿಸುವ ಸಂಪ್ರದಾಯವಿದೆ. ಸಿರಾ–ಮೈಸೂರು–ಚೇಳೂರು ರಸ್ತೆಗೆ ಸಂಪರ್ಕ ಹೊಂದಿದೆ.

## ಕಪ್ಪೇನಹಳ್ಳಿ

ಕಪ್ಪೇನಹಳ್ಳಿ ಒಂದು ಕಂದಾಯ ಗ್ರಾಮ. ಇದು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಕಳ್ಳಂಬೆಳ್ಳ ಹೋಬಳಿ, ಚಿನ್ನೇನಹಳ್ಳ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಈ ಹಟ್ಟಿ ಸೇರಿದೆ. ಇದರ ಭೌಗೋಳಿಕ ವಿಸ್ತೀರ್ಣ ೨೩೧.೩೪ ಹೆಕ್ಟೇರ್ ಆಗಿದೆ. ಕೆಪ್ಪಣ್ಣನ ಹಳ್ಳಿ ಕ್ರಮೇಣ ಅಣ್ಣ ಪದ ತೇಲಿ ಹೋಗಿ ಕಪ್ಪು ಮಾತ್ರ ಉಳಿದು, ಜನರು ಕಪ್ಪೇನಹಳ್ಳಿ ಎಂದು ಕರೆಯುವುದು ವಾಡಿಕೆಯಾಗಿದೆ.

ಈ ಪರಿಸರದಲ್ಲಿ ನರಿ, ಮೊಲ, ಮುಂಗುಸಿ, ತೋಳ, ಉಡ, ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಜಾತಿಯ ಸೀಮೆ ಹಸು, ನಾಟಿ ಹಸುಗಳನ್ನು ಸಾಕಲಾಗಿದೆ. ಎತ್ತು, ಕುರಿ, ಮೇಕೆ, ನಾಯಿಗಳಿವೆ. ಸಾಕು ಪಕ್ಷಿಗಳಾದ

ಗಿರಿರಾಜ ಹಾಗು ಹ್ಯಾಟೆ ಮತ್ತು ಕೋಳಿ, ಹುಂಜಗಳನ್ನು ಮಾಂಸ ಹಾಗೂ ಮರಿ ಮಾಡುವುದಕ್ಕೆ ಸಾಕಲಾಗಿದೆ.

ಬಿಸಿಲು ಬರದ ಸೀಮೆ. ಈ ಪರಿಸರದಲ್ಲಿ ಮಳೆ ಕಡಿಮೆ. ಬಿಸಿಲಿನ ತಾಪ ೩೮೦ ಸೆಂ. ಆಗಿದ್ದು, ಚಳಿ ೧೭೦ ಸೆಂ. ಸಾಮಾನ್ಯವಾಗಿರುತ್ತದೆ. ಕೃಷಿ ಬದುಕಿಗೆ ಮಳೆ ನೀರು ಸಾಕಾಗುವುದಿಲ್ಲ. ಈ ಪರಿಸರದಲ್ಲಿ ರೈತರು ಉಪನೀರಾವರಿಗಾಗಿ ೪ ಕೊಳವೆ ಬಾವಿಗಳನ್ನು ಕೊರೆಸಿದ್ದಾರೆ. ಗ್ರಾಮದಲ್ಲಿ ೨ ಕೈ ಪಂಪುಗಳು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ಮಾತ್ರವಿದ್ದು ಸಂಪೂರ್ಣ ಬುಡಕಟ್ಟು ಗ್ರಾಮವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರದ ೨೫ ಮನೆಗಳಿದ್ದು, ಈ ಗ್ರಾಮದಲ್ಲಿ ಹೆಂಚಿನ, ಶೀಟಿನ ಸ್ವರೂಪದ ವುಗಳಾಗಿವೆ. ಜೊತೆಗೆ ಸರ್ಕಾರದ ವಿವಿಧ ವಸತಿ ಯೋಜನೆಗಳ ಸಹಕಾರದಿಂದ ರಚನೆಗೊಂಡಿದೆ. ಈ ಗ್ರಾಮದಲ್ಲಿ ಒಟ್ಟು ೧೦೮ ಜನಸಂಖ್ಯೆ ಇದ್ದು, ೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರ. ಬಳಸುವವರಿದ್ದಾರೆರೊಟ್ಟಿ, ದೋಸೆ ಬಳಸಲಾಗುತ್ತದೆ. ಬಾಡೂಟ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಹಾಗೂ ದ್ವಿಚಕ್ರ ವಾಹನಗಳು ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ಆರಕ, ಕೂರಲೆ, ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಗಳಾದ ತೆಂಗು, ರೇಷ್ಮೆ, ಸೂರ್ಯಕಾಂತಿ, ಸೇವಂತಿಗೆ ವ್ಯಾಪಾರ ಬೆಳೆಗಳು. ಶೇಂಗಾ, ಹುಣಸೇಹಣ್ಣು ಹಾಗೂ ಹೊಂಗೆ ಬೀಜ ಪ್ರಮುಖ ವ್ಯಾಪಾರಿ ಬೆಳೆಗಳು. ಮಹಿಳೆಯರು ಹುಣಸೆಹಣ್ಣು ಬಿಡಿಸುವ, ಹೂ ಕಟ್ಟುವ ಉಪ ಕಸುಬುಗಳನ್ನು ಹೊಂದಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯತ್, ತರೂರು ತಾಲ್ಲೂಕು ಹಾಗೂ ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರವಾಗಿದೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ಗ್ರಾಮದಲ್ಲಿ ೧ ಅಂಗನವಾಡಿ ಕೇಂದ್ರವಿದ್ದು, ೧೫ ಮಕ್ಕಳಿದ್ದಾರೆ, ಒಬ್ಬರು ಅಂಗನವಾಡಿ ಶಿಕ್ಷಕಿ ಇದ್ದು, ಮಕ್ಕಳಿಗೆ ಪೌಷ್ಠಿಕ ಆಹಾರದ ಬಳಕೆಯಿದೆ. ಗ್ರಾಮದ ಸಾಕ್ಷರತೆ ಶೇ. ೪೭.೪ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೧ ಪೆಟ್ಟಿಗೆ ಅಂಗಡಿ ಇದೆ.

ಧಾರ್ಮಿಕವಾಗಿ ಸೀಬಿ ನರಸಿಂಹಸ್ವಾಮಿ ಭಕ್ತರಿದ್ದು, ಸೀಬಿ ಜಾತ್ರೆಯ ಸಂದರ್ಭದಲ್ಲಿ ಈ ಗ್ರಾಮದಿಂದ ಆರತಿ ಎದುರೆತ್ತಿ, ಪ್ರಾಣಿ ಬಲಿ ಮಾಡುವ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕಾಳಾಪುರ

ಕಾಳಾಪುರ ಸಿರಾ ತಾಲ್ಲೂಕಿನ ಉತ್ತರಕ್ಕೆ, ಸಿರಾದಿಂದ ೧೫ ಕಿ.ಮೀ. ದೂರದಲ್ಲಿದೆ. ಸಿರಾ ಮಧುಗಿರಿ ಯರಗುಂಟೆ ಗೇಟಿನಿಂದ ಬಲಭಾಗಕ್ಕೆ ತಿರುಗಿ, ರತ್ನಸಂದ್ರ, ಚಿಕ್ಕಗೂಳ ಮಾರ್ಗವಾಗಿ ತಾಳಗುಂದಕ್ಕೆ ಹೋಗುವಾಗ ಮಾರ್ಗ ಮಧ್ಯ ಕಾಳಾಪುರವಿದೆ. ಇದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೧೭೦.೭ ಹೆಕ್ಟೇರ್ ಆಗಿದೆ. ಕಾಳಾಪುರ ವ್ಯಕ್ತಿ ಮೂಲದ ಹೆಸರು. ಕೊಲ್ಲಾಪುರದಮ್ಮ, ಮಾರಮ್ಮ ಶಕ್ತಿ ದೇವತೆಗಳ ಗ್ರಾಮವಾದರೂ ಕಾಳಿಕಾಂಬ ದೇವರು ಇರುವುದಿಲ್ಲ. ಹಾಗಾಗಿ ಕಾಳಿ ಮೂಲವಲ್ಲದ, ಕಾಳಯ್ಯ ನೆಲ ಮೂಲ ಸಂಸ್ಕೃತಿಯ ದೇಶಿ ಶಬ್ದ ಇದಾಗಿದೆ. ಹಾಗಾಗಿ ಕಾಳನ ಊರು ಕಾಳೂರು ಆಗದೆ, ಅದಕ್ಕೆ ಪುರ ಎಂದು ವಿಶೇಷಣ ಸೇರಿಸಿ ಕಾಳಾಪುರ ಎಂದು ಕರೆಯಲಾಗಿದೆ.

ಬಯಲು ಪ್ರದೇಶ ಪೂರ್ವಕ್ಕೆ ಚನ್ನಿಗರಾಯನ ಗುಡ್ಡವಿದೆ. ಒಂದು ಕೆರೆಯೂ ಇದೆ. ಹಾಗಾಗಿ ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಕರಡಿ, ಬಾರುಬೆಕ್ಕು, ಕತ್ತೆ, ಕಿರಬ, ತೋಳ ಕಂಡು ಬರುತ್ತವೆ. ವಿಷ ಜಂತುಗಳಾದ ನಾಗರಹಾವು, ಹೆಬ್ಬಾವು, ಚೇಳುಗಳೂ ಕಂಡು ಬರುತ್ತವೆ. ಗ್ರಾಮದಲ್ಲಿ ರೈತಾಪಿ ಬದುಕು ಮುಖ್ಯವಾಗಿದ್ದು, ಕೃಷಿ ಹಾಗೂ ಹೈನುಗಾರಿಕೆಗಾಗಿ ಹಳ್ಳಿಕಾರು ತಳಿ ಎತ್ತು, ನಾಟಿ ಹಾಗೂ ಸೀಮೆ ಹಸುಗಳನ್ನು ಸಾಕಲಾಗಿದೆ. ಎಮ್ಮೆ, ಕುರಿ, ಮೇಕೆ, ನಾಯಿ ಇತರೆ ಸಾಕು ಪ್ರಾಣಿಗಳಾಗಿವೆ. ನಾಟಿ ಕೋಳಿ, ಹುಂಜ, ಹ್ಯಾಟೆ, ಗಿರಿರಾಜ ಕೋಳಿಗಳನ್ನು ಮಾಂಸ ಹಾಗೂ ಮೊಟ್ಟೆಗಾಗಿ ಸಾಕಲಾಗುತ್ತಿದೆ.

ವಾಡಿಕೆ ಮಳೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದ್ದು, ಕಳೆದ ಎರಡು ವರ್ಷಗಳಲ್ಲಿ ವಾರ್ಷಿಕ ಸರಾಸರಿ ೫೫೭.೩ ಮಿ.ಮೀ. ಮಳೆ ಬೀಳುತ್ತದೆ. ಬಿಸಿಲಿನ ತಾಪ ೩೮೦ ಸೆಂ ಇದ್ದು, ಚಳಿಯು ೧೭೦ ಸೆಂ. ಆಗಿರುತ್ತದೆ. ಕೃಷಿ ಉಪನೀರಾವರಿಯಾಗಿ ೮೦ ಕೊಳವೆ ಬಾವಿಗಳನ್ನು ಕೊರೆಸಿದ್ದಾರೆ. ಇದರ ಸಹಾಯದಿಂದ ಅಲ್ಪಾವಧಿ ಬೆಳೆಗಳಾದ ಸೂರ್ಯಕಾಂತಿ, ಶೇಂಗಾ, ರಾಗಿ, ಸೇವಂತಿ, ಸೊಪ್ಪು, ತರಕಾರಿ ಹಾಗೂ ತೋಟಗಾರಿಕೆಗೆ ಬಳಕೆಯಾಗುತ್ತಿದೆ. ಕಾಳಾಪುರ ಕೆರೆ, ಹಾಗೂ ಒಂದು ಕಟ್ಟೆಯೂ ಇದ್ದು, ತುಂಬುವುದು ಅಪರೂಪವಾಗಿದೆ. ತುಂಬಿದರೆ ಕೃಷಿ ಹಾಗೂ ಪ್ರಾಣಿಗಳು ಕುಡಿಯುವುದಕ್ಕೆ ವಿನಿಮಯವಾಗುತ್ತಿದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು

ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಬೀದಿ ನಲ್ಲಿಗಳೂ ಇವೆ. ಹತ್ತು ಕಿರು ಟ್ಯಾಂಕ್‌ಗಳಿದ್ದು ೨ ಕೈ ಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗವು ದೊಡ್ಡ ಸಮುದಾಯವಾಗಿದ್ದು, ನಾಯಕ, ಗೊಲ್ಲ, ಕುಂಬಾರ, ಕೊರಮ, ಮಡಿವಾಳ, ಶ್ರೀ ವೈಷ್ಣವ, ವೈಶ್ಯರೂ, ಆದಿ ದ್ರಾವಿಡ ಜನಾಂಗಗಳು ಕಿರು ಸಮುದಾಯಗಳಿವೆ. ದೇವಸ್ಥಾನ ಬೀದಿ, ನಡು ಓಣಿ, ನಡೂರು ಎಂಬ ಬೀದಿಗಳಿವೆ. ಕನ್ನಡ, ತೆಲುಗು ಭಾಷೆಗಳನ್ನು ಮಾತನಾಡುತ್ತಾರಾದರೂ ಕನ್ನಡ ಮಾತೃ ಭಾಷೆಯಾಗಿದೆ. ವಿವಿಧ ಸ್ವರೂಪದ ೧೭೮ ಮನೆಗಳಿದ್ದು, ಅವು ಕಾಂಕ್ರೀಟ್, ಕಲ್ಲಿನ, ಹೆಂಚು, ಶೀಟ್ ಮನೆಗಳಿವೆ. ಇಲ್ಲಿ ಜನತಾ, ಆಶ್ರಯ, ಇಂದಿರಾ ಆವಾಸ್ ಹಾಗೂ ಸರ್ಕಾರದ ಭಾಗ್ಯಜ್ಯೋತಿ ವಸತಿ ಯೋಜನೆಯ ೬೪ ಫಲಾನುಭವಿಗಳು ಇದ್ದು, ೯೬ ಮನೆಗಳಲ್ಲಿ ಶೌಚಾಲಯಗಳ ಬಳಕೆಯಿದೆ. ೮೪೩ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದೆ. ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹೋಳಿಗೆ, ಪಾಯಸದ ಭೋಜನವಿರುತ್ತದೆ. ಸಂಪ್ರದಾಯಿಕ ವಾಹನಗಳ ಎತ್ತಿನ ಬಂಡಿಯ ಜೊತೆಗೆ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಲಾರಿ, ಟಿಲ್ಲರ್,ಟೆಂಪೋ, ಕಾರು, ದ್ವಿಚಕ್ರ ವಾಹನಗಳು ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಆರಕ, ಕೂರ್ಲೆ, ಜೋಳ, ತೊಗರಿ, ಹುರುಳಿ ಬೆಳೆಯುತ್ತಾರೆ. ಒಂದು ಹಾಲಿನ ಡೈರಿ ಇದ್ದು, ದಿನವಹಿ ೨೦೦ ಲೀಟರ್ ಹಾಲು ಸಂಗ್ರಹವಾಗುತ್ತದೆ. ಶೇಂಗಾ, ಹೊಂಗೆ ಬೀಜ, ಹುಣಸೇ ಹಣ್ಣು ವ್ಯಾಪಾರಿ ಸರಕಾಗಿವೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಉದ್ಯೋಗಸ್ಥವು ಈ ಗ್ರಾಮದಲ್ಲಿ ಅಧಿಕವಾಗಿದ್ದು, ೨೫ ಜನ ನೌಕರರಿದ್ದಾರೆ. ಶಿವಲಿಂಗಯ್ಯ ಇಂಡಿಯನ್ ಏರ್‌ಹೋರ್ಸ್‌ನಲ್ಲಿ ಇಂಜೀನೀಯರ್ ಆಗಿರುವುದು ವಿಶೇಷ. ಶಿಕ್ಷಣ, ಸಾರಿಗೆ, ಪಂಚಾಯತ್ ರಾಜ್, ಕಂದಾಯ, ಕೆಇಬಿ, ಅರಣ್ಯ ಇಲಾಖೆಯ ೧೦ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಇಂಜಿನಿಯರ್ ಇದ್ದಾರೆ. ಬಟ್ಟೆ ಹೊಲಿಯುವುದು, ಹೂ ಕಟ್ಟುವುದು ಮಹಿಳೆಯರ ಉಪ ಕಸುಬಾಗಿದೆ. ಕುಂಬಾರಿಕೆ ಇದೆ. ಮಡಿಕೆ ತಯಾರಿಸುವ ೬ ಕುಟುಂಬಗಳಿವೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರಕ್ಕೆ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯತ್, ಭೂಪಸಂದ್ರ ತಾಲ್ಲೂಕು ಪಂಚಾಯಿತಿ, ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದ ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ತಾಳಗುಂದ ಅಂಚೆ ಕಛೇರಿಯಿಂದ ಈ ಗ್ರಾಮ ಹಾಗೂ ಮಾಟನಹಳ್ಳಿ, ದೇವಗೊಂಡನಹಳ್ಳಿ ಇಲ್ಲಿಂದ ಅಂಚೆ ಬಟವಾಗುತ್ತಿದೆ. ಗ್ರಾಮ ಲೆಕ್ಕಾಧಿಕಾರಿಗಳ ಕಛೇರಿ, ೬ ಸ್ತ್ರೀ ಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಹಕಾರ ಸಂಘವಿದೆ. ಇವು ಮಹಿಳೆಯರ ಆರ್ಥಿಕ ಸ್ವಾಭಿವೃದ್ಧಿಗೆ ಪ್ರೇರಕವಾಗಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ ಇದ್ದು, ೭೭ ಮಕ್ಕಳಿದ್ದಾರೆ. ನಾಲ್ಕು ಜನ ಅಧ್ಯಾಪಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ, ಪುಸ್ತಕ ವಿತರಣಾ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ಶೇ.೫೮.೬ ರಷ್ಟು ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳಾದ ಫಲಾನುಭವಿಗಳಿದ್ದಾರೆ. ೨ ಟೀ ಅಂಗಡಿ ಹೋಟೆಲ್, ೮ ಗೂಡಂಗಡಿಗಳಿವೆ. ಗ್ರಾಮದಲ್ಲಿ ಕೋಟೆ, ಬುರ್ಜು, ಕಂದಕಗಳ ಅವಶೇಷ ಕಂಡು ಬರುತ್ತವೆ. ಈ ಗ್ರಾಮದ ರಂಗನಾಥ ದೇವಾಲಯ ಆವರಣದಲ್ಲಿ ಒಂದು ವೀರಗಲ್ಲು ಇದ್ದು, ಅದು ಆಕರ್ಷಕವಾಗಿದೆ. ಚಿತ್ರ ಚಾಮರ, ಖಡ್ಗ ಹಿಡಿದ ಹೋರಾಟದ ಚಿತ್ರವಇದೆ. ಕಲ್ಲು ಒರಟು ಕಲ್ಲಾಗಿದೆ.

ಗ್ರಾಮದಲ್ಲಿ ಲಕ್ಷ್ಮೀರಂಗನಾಥ ಬೃಹತ್ ದೇವಾಲಯ, ನವರಂಗ, ವಿಸ್ತಾರ ಪ್ರಾಂಗಣ, ಶ್ರೀದೇವಿ, ಭೂದೇವಿ, ಗರುಡ, ದೀಪದಸ್ಥಳ, ಗಣೇಶ, ಆಂಜನೇಯ ದೇವರ ವಿಗ್ರಹಗಳಿವೆ. ಆವರಣದಲ್ಲಿಯೇ ನವಗ್ರಹಗಳನ್ನು ನಿರ್ಮಿಸಿದ್ದಾರೆ. ಕಲ್ಲುಗಾಲಿ ರಥೋತ್ಸವ ನಡೆಯುತ್ತದೆ. ಪ್ರತಿವರ್ಷ ಉತ್ತರಾಯಣ ಶಶಿರಋತು ಪಾಲ್ಗುಣ ಶುಕ್ಲ ಹುಣ್ಣಿಮೆಯ ಸಂದರ್ಭದಲ್ಲಿ ಒಂದು ವಾರಗಳ ಕಾಲ ಬೃಹತ್ ರಥೋತ್ಸವದ ಕಾರ್ಯಕ್ರಮ ಏರ್ಪಡಿಸುತ್ತವೆ. ಈ ದೇವಸ್ಥಾನಕ್ಕೆ ಕರ್ನಾಟಕಾದ್ಯಂತ ಒಕ್ಕಲಿದ್ದಾರೆ.

ಮಾರಮ್ಮ, ಕೊಲ್ಲಾಪುರದಮ್ಮ, ದಾಸಯ್ಯನ ಮಂಟಪ, ಹೀಗೆ ಇತರೆ ದೇವಾಯಗಳಿದ್ದು, ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ.

ತಿಪ್ಪಯ್ಯ ಎಂಬ ಕೊರಮ ಜನಾಂಗದ ಮೃದಂಗವಾದಕ, ಸೇರಿದಂತೆ ರಂಗಸ್ವಾಮಿ, ಪುಟ್ಟರಂಗಯ್ಯ, ಲಿಂಗಪ್ಪ, ನಾಗಸ್ವರ ವಾದನಕ್ಕೆ ಹೆಸರು ವಾಸಿಯಾಗಿದ್ದಾರೆ. ತಾಳಗುಂದ ಟಿ.ಸಿ.ನರಸಿಂಹಯ್ಯ ಸಂಗೀತ, ರಂಗಭೂಮಿ ಕಲಾವಿದರಾಗಿದ್ದು, ಪೌರಾಣಿಕ ನಾಟಕಗಳ ನಿರ್ದೇಶಕರು ಆಗಿದ್ದಾರೆ. ತಿಪ್ಪಜ್ಜಿ, ನಾಗಮ್ಮ, ರಂಗಮ್ಮ ಎಂಬ ಕೊರಮ ಜನಾಂಗದ ಹೆಂಗಸರು

ಬುಟ್ಟಿ, ತಟ್ಟಿ ಎಣೆಯುವ ಕಲೆಯ ಜೊತೆಗೆ ಆಕರ್ಷಕ ಹಚ್ಚೆ ಕಲಾವಿದರಾಗಿವುದು ಈ ಗ್ರಾಮದ ವಿಶೇಷವಾಗಿದೆ. ಇಲ್ಲವಾಗುತ್ತಿರುವ ಹಚ್ಚೆ ಕಲೆಯ ಅಪರೂಪದ ಕಲಾವಿದರು.

## ಕಾರ್ಪೆಹಳ್ಳಿ

ಕಾರ್ಪೆಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೮ ಕಿ.ಮೀ. ದೂರದಲ್ಲಿದೆ. ಇದು ಕಡವಿಗೆರೆಯ ಉಪಗ್ರಾಮವಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೧೭೮.೦೮ ಹೆಕ್ಟೇರ್ ಆಗಿದೆ. ಇದಕ್ಕೆ ಮಜರೆಯಾಗಿ ಕಾರ್ಪೆಹಳ್ಳಿ ಗೊಲ್ಲರಹಟ್ಟಿ ಇದೆ. ಕಾರ್+ಪೆ=ಕಾಪೆ ಅಂದರೆ ಬಡಗಿ ಕಾಯಕ, ಅಂದರೆ ದೇವಾಲಯದ ಉಪಕರಣ. ಬಡಗಿ ಕಾಯಕದ ಕಾರ್ಮಿಗಳು ಇಲ್ಲಿ ನೆಲೆಸಿದ್ದರಿಂದ ಕಾರ್ಪನಹಳ್ಳಿ ಕಾರ್ಪೇನಹಳ್ಳಿ ಆಗಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಈ ಪರಿಸರದಲ್ಲಿ ಕುರುಚಲು ಗಿಡ, ಮರ, ಪೊದೆ ಇದೆ. ಹಾಗಾಗಿ ಇಲ್ಲಿ  ಮೊಲ, ಜಿಂಕೆ, ಬಾರುಬೆಕ್ಕು, ಉಡ ಕಂಡು ಬರುತ್ತವೆ. ಗ್ರಾಮದಲ್ಲಿ ರೈತಾಪಿ ಬದುಕಿಗೆ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕುರಿ, ಮೇಕೆ ಹಾಗೂ ನಾಯಿಗಳನ್ನು ಸಾಕು ಪ್ರಾಣಿಗಳಾಗಿ ಸಾಕಲಾಗುತ್ತಿದೆ. ಪಕ್ಷಿಗಳಾದ ಗೊರವಂಕ, ಕೋಗಿಲೆ, ಬೆಳವ, ಪುರಲೆಹಕ್ಕಿ, ಕೌಜುಲಗ ಕಂಡು ಬರುತ್ತದೆ. ಕೋಳಿಯನ್ನು ಸಾಕು ಪಕ್ಷಿಯಾಗಿ ಸಾಕಲಾಗುತ್ತಿದೆ.

ವಾರ್ಷಿಕ ಸರಾಸರಿ ೪೮೧.೪ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೮ಂ ಸೆಂ. ಚಳಿ ೧೨ಂ ಸೆಂ. ಕೃಷಿಗಾಗಿ ಈ ಪರಿಸರದಲ್ಲಿ ೩೬ ಕೊಳವೆ ಬಾವಿಗಳನ್ನು ಆಶ್ರಯಿಸಿದ್ದಾರೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ೩ ಕಿರು ಟ್ಯಾಂಕರ್‌ಗಳಿದ್ದು, ಗ್ರಾಮದಲ್ಲಿ ೨ ಕೈ ಪಂಪುಗಳು ಇದೆ. ಕಾರ್ಪೆಹಳ್ಳಿಗೆ ಸೇರಿದ ಕೆರೆ ಇದ್ದು, ತುಂಬುವುದು ಅಪರೂಪವಾಗಿದೆ.

ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ಆದಿಕರ್ನಾಟಕ, ಈಡಿಗ, ಸಾದರ, ಲಿಂಗಾಯಿತ, ಮಡಿವಾಳ, ಕುಂಬಾರ, ಅಕ್ಕಸಾಲಿಗೆ, ಕೊರಮ ಜನಾಂಗ ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದೆ. ಈ ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಹಾಗೂ ಶೀಟಿನ ಒಟ್ಟು ೧೮೨ ಮನೆಗಳಿದ್ದು, ೪೬೨ ಜನ ಸಂಖ್ಯೆಯನ್ನು ಹೊಂದಿದೆ. ೪೫ ಶೌಚಾಲಯಗಳಿವೆ. ಇಂದಿರಾ ಆವಾಸ್, ಜನತಾ ಆಶ್ರಯ, ಅಂಬೇಡ್ಕರ್, ವಸತಿ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೩೨ ಫಲಾನುಭವಿ ಗಳಿದ್ದಾರೆ.  ಜೊತೆಗೆ ಸರ್ಕಾರದ ವಿವಿಧ ವಸತಿ ಯೋಜನೆಗಳ ಸಹಕಾರದಿಂದ ರಚನೆಗೊಂಡಿದೆ. ಈ ಗ್ರಾಮದಲ್ಲಿ ಒಟ್ಟು ೧೦೮ ಜನಸಂಖ್ಯೆ ಇದ್ದು, ೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರ. ಬಳಸುವವರಿದ್ದಾರೆರೊಟ್ಟಿ, ದೋಸೆ ಬಳಸಲಾಗುತ್ತದೆ. ಬಾಡೂಟ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ಹಾಗೂ ದ್ವಿಚಕ್ರ ವಾಹನಗಳು ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ಜೋಳ, ಅಲಸಂದಿ, ತೊಗರಿ, ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ ಬೆಳೆಯಿದೆ. ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘವಿದ್ದು, ನಿತ್ಯ ೨೦೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೇಹಣ್ಣು, ತೆಂಗು ವ್ಯಾಪಾರಿ ಬೆಳೆಗಳಾಗಿವೆ. ಕಂದಾಯ,ಅ ಂಚೆ ಇಲಾಖೆ, ಶಿಕ್ಷಕರು ಸೇರಿದಂತೆ ೪ ಜನ ಸರ್ಕಾರಿ ನೌಕರರಿದ್ದಾರೆ. ಗೃಹ ಕೈಗಾರಿಕೆಯಾಗಿ ಬೀಡಿ ಸುತ್ತವುದು, ಊಟದ ಎಲೆ ತಯಾರಿಕೆ ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ತಾಲ್ಲೂಕು ಪಂಚಾಯತ್, ಜಿಲ್ಲಾ ಹಾಗೂ ಗ್ರಾಮ ಪಂಚಾಯಿತಿಕ ಕೇಂದ್ರ ಹೊಂದಿದ್ದು,  ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ವಿದ್ಯುತ್ ಪೋಲೀಸ್ ವಿಚಾರಗಳಿಗೆ ಕಳ್ಳಂಬೆಳ್ಳ ಗ್ರಾಮವನ್ನು ಸಂಪರ್ಕಿಸಬೇಕಾಗುತ್ತದೆ. ಈ ಗ್ರಾಮವನ್ನು ಸಂಪರ್ಕಿಸುವ ಬೇಕಾಗುತ್ತದೆ. ಈ ಗ್ರಾಮವನ್ನು ೨ ಗ್ರಾಮ ಪಂಚಾಯಿತಿ ಸದಸ್ಯರು ಪ್ರತಿನಿಧಿಸುತ್ತಿದ್ದು, ಒಬ್ಬರು ಪಂಚಾಯಿತಿ ನೌಕರಿದ್ದಾರೆ. ೪ ಸ್ತ್ರೀ ಶಕ್ತಿ  ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು, ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿವೆ. ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಅಂಗನವಾಡಿ ಕೇಂದ್ರವಿದ್ದು ೧೦೪ ಮಕ್ಕಳು, ೪ ಜನ ಶಿಕ್ಷಕರಿದ್ದಾರೆ.  ಕುಂಬಾರ ಜನಾಂಗದ ಚಿಕ್ಕನರಸಿಂಹಯ್ಯ ಎನ್ನುವವರು ಶಾಲೆಗೆ ಒಂದು ಎಕರೆ ಜಾಗವನ್ನು ದಾನವಾಗಿ ನೀಡಿದ್ದು, ಗ್ರಾಮದ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ವಿತರಣೆಯ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ಶೇ. ೬೩.೪ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೬

ಪೆಟ್ಟಿಗೆ ಅಂಗಡಿಗಳಿವೆ.ಗ್ರಾಮದ ಆರಂಭಕ್ಕೆ ೨ ಕರುಗಲ್ಲು, ಆಂಜನೇಯ, ಅರಳಿಕಟ್ಟೆಗಳಿವೆ. ಲಕ್ಷ್ಮೀ ದೇವಾಲಯ, ಗಂಗಮ್ಮ ದೇವರು, ರಾಮಮಂದಿರ, ಮುತ್ತರಾಯನ ಗುಡಿಗಳಿವೆ. ಕಡಿಗೆರೆ ಕರಿಯಮ್ಮ ದೇವಿಗೆ ಎದುರೆತ್ತಿ ಆರತಿ, ಬಾನ, ಬಲಿ ಸಂಪ್ರದಾಯಗಳು ಹರಕೆಗಳಾಗಿವೆ. ಯುಗಾದಿ, ಬಸವಜಯಂತಿ, ದಸರಾ, ಗೌರಿಗಣೇಶ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸಿರಾ–ಮೈಸೂರು, ಚೇಳೂರು ಮಾರ್ಗಕ್ಕೆ ಸಂಪರ್ಕವನ್ನು ಈ ಗ್ರಾಮ ಹೊಂದಿದೆ.

## ಕಾರ್ಪೆಹಳ್ಳಿ ಗೊಲ್ಲರಹಟ್ಟಿ

ಕಾರ್ಪೆಹಳ್ಳಿ ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೮ ಕಿ.ಮೀ. ದೂರದಲ್ಲಿದೆ. ಇದು ಕಾರ್ಪೆಹಳ್ಳಿಯ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೪೨.೭೫ ಹೆಕ್ಟೇರ್ ಆಗಿದೆ. ಬಡಗಿ ಕಾಯಕ, ನೇಗಿಲು, ದೇವಾಲಯದ ಉಪಕರಣ ತಯಾರಿಕೆಯ ಬಡಗಿ ಕಾಯಕದವನಿಂದಾಗಿ ಕಾರ್+ಕೈ– ಕಾರುಪ ಕಾರುಪೆ ಹಳ್ಳಿಯಾಗಿದ್ದು, ಅದರ ಉಪಗ್ರಾಮವಾಗಿ ಕಾಡುಗೊಲ್ಲರು ಪ್ರತ್ಯೇಕವಾಗಿ ವಾಸಿಸುವ ಸ್ಥಳವಾಗಿದೆ. ಗೊಲ್ಲರ ಹಟ್ಟಿಯಾಗಿದೆ.

ಮರಳು ಮಿಶ್ರಿತ ಭೂಮಿಯಾಗಿದ್ದು, ಕುರುಚಲು ಗಿಡಸ, ಪೊದೆ, ದಿಣ್ಣೆಗಳಿಂದ ಕೂಡಿದೆ. ಈ ಪರಿಸರದಲ್ಲಿ ನರಿ, ಮೊಲ, ಮುಂಗುಸಿ, ಉಡ ಕಂಡು ಬರುತ್ತವೆ. ಗ್ರಾಮದಲ್ಲಿ ರೈತಾಪಿ ಬದುಕಿಗೆ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕುರಿ, ಮೇಕೆ ಜೊತೆಗೆ ಕುರಿಗಾರರು ಕತ್ತೆಗಳನ್ನು ಸಾಕುತ್ತಾರೆ.

ವಾರ್ಷಿಕ ಸರಾಸರಿ ೪೮೧.೪ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೮೦ ಸೆಂ. ಚಳಿ ೧೨೦ ಸೆಂ. ಕೃಷಿಗಾಗಿ ಈ ಪರಿಸರದಲ್ಲಿ ೧೨ ಕೊಳವೆ ಬಾವಿಗಳಿದ್ದು ಕೃಷಿ ಬಳಕೆಗೆ ಉಪಯುಕ್ತವಾಗಿದೆ. ಕುಡಿಯಲು ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೧ ಕೈ ಪಂಪು ಇದೆ.

ಕಾಡುಗೊಲ್ಲ ಜನಾಂಗ ಮಾತ್ರವೇ ವಾಸಿಸುವ ಇಲ್ಲಿ ಕಾಂಕ್ರೀಟ್, ಮಣ್ಣಿನ, ಹೆಂಚಿನ, ಶೀಟಿನ ಒಟ್ಟು ೪೮ ಮನೆಗಳಿವೆ. ೧೫ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ೨೪೩ ಜನಸಂಖ್ಯೆ ಇದೆ. ೧೨ ಮನೆಗಳಲ್ಲಿ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ, ರೊಟ್ಟಿ, ಅನ್ನ ಮುಖ್ಯ ಆಹಾರವಾಗಿ ಬಳಸಲಾಗುತ್ತದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳಾದ ೨ ಟ್ರ್ಯಕ್ಟರ್, ಮಿನಿ ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳು ಬಳಕೆಯಲ್ಲಿವೆ. ಸಿರಾ–ಚೇಳೂರು, ಸಿರಾ–ತುಮಕೂರು ರಸ್ತೆ ಸಂಪರ್ಕವಿದ್ದು, ಗ್ರಾಮಕ್ಕೆ ಅರ್ಧ ಕಿ.ಮೀ. ದೂರದಲ್ಲಿ ಕಾರ್ಪೇನಹಳ್ಳಿ ಗೇಟಿನಿಂದ ಬಸ್ ಸಂಚಾರವಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ಆಹಾರಿ ಬೆಳೆಗಳಾಗಿ ರಾಗಿ, ಅವರೆ, ತೊಗರಿ, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಗಳಾಗಿ ಹೂವು, ತರಕಾರಿ, ತೆಂಗು, ಅಡಿಕೆ ಬೆಳೆಯಿದೆ. ಗ್ರಾಮದಲ್ಲಿ ೨೦೦೦ ಕುರಿಗಳಿದ್ದು, ಡಿಸೆಂಬರ್ನಿಂದ ಮೇ ಜೂನ್ ತಿಂಗಳವರೆಗೆ ಹುಲ್ಲು ನೀರಿಗಾಗಿ ಕುರಿಗಳೊಂದಿಗೆ ಪರಸ್ಥಳ ಹೋಗುವ ಸಂಪ್ರದಾಯವಿದ್ದು, ಹೋಗುವಾಗ –ಬರುವಾಗ ಕರಿಯಮ್ಮನಿಗೆ ಆರತಿ ಮಾಡಿ ಮರಿ ಕಡಿಯುವ ಸಂಪ್ರದಾಯವಿದೆ. ಶಿಕ್ಷಣ, ಕೆಇಬಿ, ಸಾರಿಗೆ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯಿತಿ ಹಾಗೂ ಗ್ರಾಮ ಪಂಚಾಯತ್ ಕ್ಷೇತ್ರಕೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಈ ಹಿಂದೆ ಚಿತ್ತಯ್ಯ ಎಂಬುವರು, ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದರು. ಸ್ತ್ರೀ ಶಕ್ತಿ ಸಂಘದ ೨ ತಂಡಗಳಿದ್ದು, ಸ್ವಸಹಾಯ ಪದ್ಧತಿಯ ಆರ್ಥಿಕ ಬೆಳವಣಿಗೆಗೆ ಕಾರಣರಾಗಿದ್ದಾರೆ. ಅಂಗನವಾಡಿ ಕೇಂದ್ರವಿದ್ದು ೧೧ ಮಕ್ಕಳಿದ್ದು, ಮಕ್ಕಳಿಗೆ ಪೌಷ್ಠಿಕ ಆಹಾರ ನೀಡಲಾಗುತ್ತದೆ. ಗ್ರಾಮದ ಸಾಕ್ಷರತೆ ಶೇ. ೬೩.೪ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೧ ಪೆಟ್ಟಿಗೆ ಅಂಗಡಿ ಇದೆ. ಗ್ರಾಮದೇವತೆ ಕರಿಯಮ್ಮ, ಚಿತ್ರದೇವರು, ಬಾಲಕೃಷ್ಣನ ಪೌಳಿಗಳಿವೆ. ಊರ ಹೊರಗೆ ಜುಂಜಪ್ಪನ ಪೌಳಿ ಇದ್ದು, ಯುಗಾದಿ ಹಾಗೂ ದೀಪಾವಳಿಯಲ್ಲಿ ವಿಶೇಷ ಜಾತ್ರೆ ನಡೆಯುತ್ತದೆ. ಹಿರಿಯರ ಹಬ್ಬ, ಹಾಲು ತುಪ್ಪದ ಹಬ್ಬಗಳನ್ನು ನಡೆಸಲಾಗುತ್ತದೆ. ಉಳಿದಂತೆ ಯುಗಾದಿ, ದಸರಾ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಚೇಳೂರು–ಮೈಸೂರು– ಸಿರಾ ರಸ್ತೆಸಂಪರ್ಕಕ್ಕೆ ಅರ್ಧ ಕಿ.ಮೀ. ದೂರದಲ್ಲಿದೆ.

## ಕಾಗೇಲಿಂಗನಹಳ್ಳಿ

ಕಾಗೇಲಿಂಗನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೬ ಕಿ.ಮೀ. ದೂರದಲ್ಲಿದೆ. ರ್‍ಾಷ್ಟ್ರೀಯ ಹೆದ್ದಾರಿ ಸಿರಾ-ತುಮಕೂರಿನ ನಡುವೆ ತರೂರು ಗೇಟಿನಿಂದ ಎಡಭಾಗದಲ್ಲಿ ಒಂದೂವರೆ ಕಿ.ಮೀ. ದೂರದಲ್ಲಿದ್ದು, ಇದು ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪಿ ೨೩೪.೨೪ ಹೆಕ್ಟೇರ್ ಆಗಿದ್ದು, ಕಪ್ಪು, ಬಿಳಿ, ಕೆಂಪು ಮಿಶ್ರಿತ ಮಣ್ಣಿನಿಂದ ಕೂಡಿದೆ. ಬಯಲು ಪ್ರದೇಶ. ಗಿಡ, ತೋಟ, ಹಳ್ಳ, ದಿಣ್ಣೆಗಳ ಪ್ರದೇಶ. ಕಾಗೇಲಿಂಗ ವ್ಯಕ್ತಿ ನಾಮದ ಈ ಹಳ್ಳಿಗೆ ಕುಂಚಿಟಿಗ ಜನಾಂಗದಲ್ಲಿ 'ಕಾಗೇನೋರು' ಎಂಬ ಒಂದು ಬೆಡಗಿದೆ. ಲಿಂಗಣ್ಣ ಎಂಬ ವ್ಯಕ್ತಿಗೆ ತನ್ನ ಜನಾಂಗಿಕ ಬೆಡಗು ಕಾಗೇನೊರು ಸೇರಿಸಿ 'ಕಾಗೇಲಿಂಗ' ಎಂಬ ಹೆಸರಿನಲ್ಲೇ ಗ್ರಾಮ ರಚನೆಯಾಗಿದೆ.

ಈ ಪರಿಸರದಲ್ಲಿ ಇಲ್ಲಿ ಮೊಲ, ಜಿಂಕೆ, ಬಾರುಬೆಕ್ಕು, ಉಡ, ಹಂದಿ ಕಂಡು ಬರುತ್ತವೆ. ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗಾಗಿ ಪಶುಪಾಲನೆಯೂ ಸೇರಿದಂತೆ ಹಸುಗಳಾದ ಇಲ್ಲಿ ಮೊಲ, ಜಿಂಕೆ, ಬಾರುಬೆಕ್ಕು, ಉಡ ಕಂಡು ಬರುತ್ತವೆ. ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗಾಗಿ ಪಶುಪಾಲನೆಯೂ ಸೇರಿದಂತೆ ಹಸುಗಳಾದ ನಾಟಿ ಹಸು, ಸೀಮೆ ಹಸುಗಳನ್ನು ಸಾಕಲಾಗಿದೆ. ಎಮ್ಮೆ, ಎತ್ತು, ಕುರಿ, ಮೇಕೆ ಹಾಗೂ ಪಕ್ಷಿಗಳಾದ ಗೊರವಂಕ, ಕೋಗಿಲೆ, ಗಿಳಿ, ಬೆಳವ, ಹದ್ದು, ಗರುಡ, ಗಿಡುಗ ಪಕ್ಷಿಗಳು ಕಂಡು ಬರುತ್ತದೆ. ನಾಟಿ ಕೋಳಿ ಹಾಗೂ ಗಿರಿರಾಜ ಕೋಳಿಗಳನ್ನು ಸಾಕುತ್ತಾರೆ.

ವಾರ್ಷಿಕ ಸರಾಸರಿ ೫೭೧.೩ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೮೦ ಸೆಂ. ಚಳಿ ೧೨೦ ಸೆಂ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೪ ಸಿಸ್ಟನ್‌ಗಳಿದ್ದು, ಗ್ರಾಮದಲ್ಲಿ ೨ ಕೈ ಪಂಪುಗಳು ಇವೆ. ಅರೆ ನೀರಾವರಿಗಾಗಿ ೧೬ ಕೊಳವೆ ಬಾವಿಗಳಿದ್ದು, ಇವುಗಳ ಸಹಾಯದಿಂದ ತೋಟಗಾರಿಕೆ, ಅಲ್ಪಕಾಲೀನ ಬೆಳೆಗಳನ್ನು ಬೆಳೆಯುತ್ತಾರೆ.

ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಈಡಿಗ, ಆದಿಕರ್ನಾಟಕ ಕಿರು ಸಮುದಾಯವಾಗಿದೆ. ಕನ್ನಡ ಮನೆಯ ಮಾತಾಗಿದ್ದು, ವಿವಿಧ ಪ್ರಕಾರಗಳ ೭೭ ಮನೆಗಳಿವೆ. ಇವು ಕಾಂಕ್ರೀಟ್, ಮಣ್ಣಿನ, ಹೆಂಚಿನ, ಸ್ವರೂಪದ ೩೩೦ ಜನಸಂಖ್ಯೆ ಹೊಂದಿದ್ದು, ೩೦ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ೧೬ ಮನೆಗಳಲ್ಲಿ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಮಿನಿ ಟೆಂಪೋ, ಆಟೋ, ಲಾರಿಗಳನ್ನು ಆಧುನಿಕ ವಾಹನಗಳಾಗಿ ಬಳಕೆಸುತ್ತಾರೆ.

ಶೇಂಗಾ ಕೃಷಿ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಜೋಳ, ಅಲಸಂದೆ, ತೊಗರಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಗಳಾಗಿ ಸೂರ್ಯಕಾಂತಿ, ತೆಂಗು, ಅಡಿಕೆ ಬೆಳೆಯುತ್ತಾರೆ. ಶೇಂಗಾ ಮುಖ್ಯ ಸರಕಾಗಿದೆ. ಹೊಂಗೆ ಬೀಜ, ಹುಣಸೇಹಣ್ಣು, ಇತರ ವ್ಯಾಪಾರಿ ಸರಕುಗಳು. ೩ ಜನ ಶಿಕ್ಷಕರು ಈ ಗ್ರಾಮದಲ್ಲಿದ್ದು, ೧೦ ಜ ನ ಖಾಸಗಿ ನೌಕರರು ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಹಿಳೆಯರು ಗೃಹ ಕಸಬಾಗಿ ಹುಣಸೆಹಣ್ಣು ಶುಚಿಗೊಳಿಸುವ, ಹೊಂಗೆ ಬೀಜ ಬಡಿಸುವ ಉಪಕಸುಬು ಹೊಂದಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ತರೂರು ತಾಲ್ಲೂಕು ಹಾಗು ಗ್ರಾಮ ಪಂಚಾಯತ್ ಕ್ಷೇತ್ರಕೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ಈ ಗ್ರಾಮದ ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ತರೂರಿನಿಂದ ಅಂಚೆ ಸಂಪರ್ಕವಿದೆ. ಒಂದು ಅಂಗನವಾಡಿ ಕೇಂದ್ರವಿದ್ದು , ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ೨೫ ಮಕ್ಕಳಿದ್ದು, ಒಬ್ಬರು ಶಿಕ್ಷಕರಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಕಾಂಪೌಂಡ್, ಉಚಿತ ಪುಸ್ತಕ, ಸಮವಸ್ತ್ರ, ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ಶೇ. ೫೦ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶ್ರೀರಾಮಯ್ಯ ಎಂಬ ಪಶು ಸಂಬಂಧಿ ಪಾರಂಪರಿಕ ವೈದ್ಯರಿದ್ದು, ಸ್ಥಳೀಯವಾಗಿ ಹೆಸರು ಮಾಡಿದ್ದಾರೆ. ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೩ ಪೆಟ್ಟಿಗೆ ಅಂಗಡಿಗಳು ಇದೆ. ಒಂದು ಅರಳಿಕಟ್ಟೆ, ನಾಗರ ಕಲ್ಲುಗಳಿವೆ. ಮುತ್ತುರಾಯ ಕಲ್ಲು ಇದ್ದು, ಅದಕ್ಕೆ ವಾರ್ಷಿಕವಾಗಿ ಬಲಿ, ಆರತಿ ಅರ್ಪಿಸಲಾಗುತ್ತಿದೆ. ತರೂರು ದುರ್ಗಮ್ಮ ಜಾತ್ರೆಯಂದು ದೇವರಿಗೆ ಎದುರೆತ್ತಿ, ಆರತಿ ಬೆಳಗುವ ಸಂಪ್ರದಾಯವಿದೆ. ಉಳಿದಂತೆ ಯುಗಾದಿ, ದಸರಾ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸ್ನೇಹಜೀವಿ ಯುವಕ ಸಂಘ ಕ್ರಿಯಾಶೀಲವಾಗಿದೆ.

**ಕಾಳಜ್ಜಿ ರೊಪ್ಪ**

ಕಾಳಜ್ಜಿ ರೊಪ್ಪ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೬ ಕಿ.ಮೀ. ದೂರದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು, ಮುಖ್ಯ ಗ್ರಾಮ ಹುಂಜನಹಾಳ ಗ್ರಾಮಕ್ಕೆ ಸೇರ್ಪಡೆಯಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣವು ಕಂದಾಯದಲ್ಲಿ ಸೇರ್ಪಡೆಯಾಗಿದ್ದು, ೨೬೨೩.೪೩ ರಲ್ಲಿ ಹಂಚಿಕೆಯಾಗಿದೆ. ಕಾಳಜ್ಜಿ ಎಂಬ ಗೊಲ್ಲ ಮೂಲದ ಮಹಿಳೆ ಕುರಿ ರೊಪ್ಪ ಹಾಕಿಕೊಂಡು ಮೊದಲಿಗೆ ವಾಸ ಮಾಡಿದ ಕಾರಣ ಅದೇ ವ್ಯಕ್ತಿಯ ಹೆಸರಲ್ಲಿ ಗ್ರಾಮ ನಿರ್ಮಾಣವಾಗಿದೆ. ಕೆಂಪು, ಬಿಳಿ ಕಲ್ಲು ಚಿಟ್ಟು ಹೊಂದಿದ್ದು, ಮರಳು ಮಿಶ್ರಿತ ಕಂದು ಭೂಮಿ ಇಲ್ಲಿಯದು. ಪಶ್ಚಿಮಕ್ಕೆ ಅನುಪನ ಕುಂಟೆ ಕಾಡು, ಗ್ರಾಮದ ದಕ್ಷಿಣಕ್ಕೆ ಹುಂಜನಹಳ್ಳ ಹೊಂದಿರುವ ಈ ಗ್ರಾಮದ ಪರಿಸರದಲ್ಲಿ ನರಿ, ಮೊಲ, ಜಿಂಕೆ, ತೋಳ, ಕಡವೆ, ಮುಂಗುಸಿ, ಬಾರುಬೆಕ್ಕು, ಉಡಗಳು ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ಕತ್ತೆ, ನಾಯಿಗಳನ್ನು ಸಾಕಿದ್ದಾರೆ. ಸಾಕು ಪಕ್ಷಿಯಾಗಿ ನಾಟಿ ಕೋಳಿ ಸಾಕಾಣಿಕೆ ಇದೆ. ಹಾಗೂ ಪಕ್ಷಿಗಳಾದ ಗೊರವಂಕ, ಕೋಗಿಲೆ, ಗಿಳಿ, ಬೆಳವ, ಹದ್ದು, ಗರುಡ, ಗುಬ್ಬಚ್ಚಿ, ನವಿಲು ಪಕ್ಷಿಗಳು ಕಂಡು ಬರುತ್ತದೆ.

ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೪೬೫ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೮಼ ಸೆಂ. ಚಳಿ ೧೨಼ ಸೆಂ. ಸಹಜವಾಗಿರುತ್ತದೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ಕೆರೆ ಇದ್ದು, ಮಳೆಗಾಲಕ್ಕೆ ಮಾತ್ರ ನೀರು ಸಂಗ್ರಹವಾಗುತ್ತದೆ. ಕೆರೆಯ ನೀರು ಕುರಿ, ಮೇಕೆ, ದನಕರುಗಳು ಕುಡಿಯುವುದಕ್ಕೆ ಉಪಯುಕ್ತವಾಗಿದೆ. ಉಳಿದಂತೆ ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿ ವತಿಯಿಂದ ಕೊಳಾಯಿಗಳ ಮೂಲಕ ಚಿಕ್ಕ ಟ್ಯಾಂಕಿಗೆ ಹರಿಸಿ, ಅಲ್ಲಿಂದ ನೀರನ್ನು ಪೂರೈಸಲಾಗುತ್ತಿದೆ. ಪಕ್ಕದ ಹುಂಜನಹಳ್ಳದ ಹೇಮಾವತಿ ನೀರು ಹರಿದು, ಕಳ್ಳಂಬೆಳ್ಳ ಕೆರೆಗೆ ನಿಸರ್ಗವಾಗಿ ಹರಿಯುತ್ತಿರುವುದರಿಂದ ಜಲಸಂವೃದ್ಧಿಯಾಗಿರುತ್ತದೆ. ಗ್ರಾಮದಲ್ಲಿ ೧ ಕೈ ಪಂಪು ಇದೆ.

ತಿಗಳ ಜನಾಂಗ ದೊಡ್ಡ ಸಮುದಾಯವಾಗಿದ್ದು ಗೊಲ್ಲರು, ಹಳ್ಳಿಕಾರರು, ದೊಂಬಿದಾಸರು ಇಲ್ಲಿನ ಗ್ರಾಮ ರಚನೆಯಲ್ಲಿ ಸಣ್ಣ ಸಮುದಾಯವಾಗಿದೆ. ಕನ್ನಡ ಮಾತೃ ಭಾಷೆಯಾಗಿದ್ದು, ದಾಸರು ತೆಲುಗು ಮಾತನ್ನು ವಿರಳವಾಗಿ ಆಡುತ್ತಾರೆ. ವಿವಿಧ ಪ್ರಕಾರಗಳ ೬೨ ಮನೆಗಳಿವೆ. ಇವು ಕಾಂಕ್ರೀಟ್, ಕಲ್ಲಿನ, ಶೀಟ್ ಹಾಗೂ ಹೆಂಚಿನ ಸ್ವರೂಪದ ಮನೆಗಳಿದ್ದು, ೧೦ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ಆಶ್ರಯ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳು, ಕೃಷ್ಣ ಗ್ರಾಮ ಕುಠೀರ ಸ್ವರೂಪದ ಫಲಾರ್ನುವಿಗಳು, ಭಾಗ್ಯಜ್ಯೋತಿ ವಸತಿ ಯೋಜನೆಯ ಫಲಾನುಭವಿಗಳೂ ಇದ್ದಾರೆ. ಸಾರಿಗೆ, ಅಂಚೆ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರಿದ್ದಾರೆ. ೩೦೦ ಜನಸಂಖ್ಯೆ ಇದೆ.

ರಾಗಿ ಮುದ್ದೆ ಗ್ರಾಮದ ಮುಖ್ಯ ಆಹಾರ. ರೊಟ್ಟಿ, ಅನ್ನ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೃಷಿ ಮೂಲದ ಬಂಡಿ, ಹಾಗೂ ಟ್ರ್ಯಕ್ಟರ್ ಬಳಕೆ ಇದೆ. ದ್ವಿಚಕ್ರ ವಾಹನದ ಬಳಕೆಯೂ ಇದೆ.

ಶೇಂಗಾ ಕೃಷಿ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಅಲಸಂದೆ, ತೊಗರಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಗಳಾಗಿ ಸೇವಂತಿಗೆ ಹೂ, ತರಕಾರಿ ಬೆಳೆಗಳಾಗಿ ಮತ್ತು ವಾಣಿಜ್ಯ ಬೆಳೆಯಾಗಿ ಹೂ, ತರಕಾರಿ ಬೆಳೆಯುತ್ತಾರೆ. ಕುರಿ ವ್ಯಾಪಾರವೂ ಇದೆ. ಒಬ್ಬರು ಸರ್ಕಾರಿ ನೌಕರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ಸೀಬಿ ತಾಲ್ಲೂಕು ಹಾಗು ಗ್ರಾಮ ಪಂಚಾಯತ್ ಕ್ಷೇತ್ರಕೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ಗ್ರಾಮದಲ್ಲಿ ಸ್ತ್ರೀ ಶಕ್ತಿ ಸಂಘ, ಒಂದು ಅಂಗನವಾಡಿ ಕೇಂದ್ರವಿದ್ದು ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ೪೨ ಮಕ್ಕಳಿದ್ದು, ಮೂವರು ನೌಕರರಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ, ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ಶೇ. ೪೦ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೩ ಪೆಟ್ಟಿಗೆ ಅಂಗಡಿಗಳು ಇದೆ. ಗ್ರಾಮದಲ್ಲಿ ಪಳೇಕನಮ್ಮ, ಮಾರಮ್ಮ ದೇವರ ಪೌಳಿಗಳಿದ್ದು, ಮಾರಮ್ಮನ ಊರಹಬ್ಬ ಮಾಡಿ, ಆರತಿ, ಬಾನ, ಬ್ಯಾಚೆ ಬಲಿ ನೀಡಲಾಗುತ್ತಿದೆ. ಯುಗಾದಿ, ಸಂಕ್ರಾಂತಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಭಜನೆ ಕಲಾವಿದ ನರಸಿಂಹಯ್ಯ, ಸೋಬಾನೆ ಸಿದ್ಧಗಂಗಮ್ಮ ಸ್ಥಳೀಯವಾಗಿ ಹೆಸರು ಮಾಡಿದ್ದಾರೆ. ಸಿರಾ–ತುಮಕೂರು, ಹುಂಜನಾಳ, ಚೇಳೂರು ಮಾರ್ಗವಾಗಿ ರಸ್ತೆ ಸಂಪರ್ಕವಿದೆ.

## ಕಾಳೇನಹಳ್ಳಿ

ಕಾಳೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೭ ಕಿ.ಮೀ. ದೂರದಲ್ಲಿದೆ. ಇದು ರ್‍ಾಷ್ಟ್ರೀಯ ಹೆದ್ದಾರಿ ಸಿರಾ–

ತುಮಕೂರು ನಡುವಿನ ಬ್ರಹ್ಮ ಸಂದ್ರ ಗೇಟಿನಿಂದ ಎಡಕ್ಕೆ ಚಿನ್ನೇನಹಳ್ಳಿಯ ಸಮೀಪದಲ್ಲಿ ಈ ಗ್ರಾಮವಿದೆ. ಕಂದಾಯ ಗ್ರಾಮವಾಗಿರುವ ಇದರ ಭೌಗೋಳಿಕ ವ್ಯಾಪ್ತಿ ೨೭೧.೬೨ ಹೆಕ್ಟೇರ್. ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಶೇಂಗಾ ಬೆಳೆಗೆ ಉತ್ಕೃಷ್ಟ ಭೂಮಿಯಾಗಿದೆ. ಬಿಸಿಲು–ಬೇಗೆಯ ನಡುವಿನ ಬಯಲು ಸೀಮೆಯಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ತೋಳ ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಕುರಿ, ಮೇಕೆ ಹಾಗೂ ಸಾಕು ಪಕ್ಷಿಯಾಗಿ ನಾಟಿ ಕೋಳಿ, ಗಿರಿರಾಜ ಕೋಳಿಗಳ ಸಾಕಾಣಿಕೆ ಇದೆ.

ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೨೪೬ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೮೦ ಸೆಂ.ಇದ್ದು, ಚಳಿಯು ೧೨೦ ಸೆಂ. ಸಹಜವಾಗಿರುತ್ತದೆ. ಪೂರ್ವಕ್ಕೆ ಒಂದು ಕೆರೆ ಇದ್ದರೂ ತುಂಬುವುದು ಅಪರೂಪವಾಗಿದೆ. ಈ ಪರಿಸರದಲ್ಲಿ ೧೫ ಕೊಳವೆ ಬಾವಿಗಳಿದ್ದು, ಕೃಷಿ ಕೆಲಸಕ್ಕೆ ಉಪಯೋಗವಾಗುತ್ತಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ದೊಡ್ಡ ಸಮುದಾಯ ಮಾತ್ರ ವಾಸಿಸುತ್ತಿದ್ದು, ೩೨ ಮನೆಗಳಿವೆ. ಕನ್ನಡ ಮಾತೃ ಭಾಷೆಯಾಗಿದ್ದು, ಇಲ್ಲಿ ಕಾಂಕ್ರೀಟ್, ಕಲ್ಲಿನ, ಶೀಟ್ ಹಾಗೂ ಹೆಂಚಿನ ಸ್ವರೂಪದ ಮನೆಗಳಿದ್ದು, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ವತಿಯಲ್ಲಿ, ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಪೂರೈಕೆಯ ಸೌಲಭ್ಯದಡಿ ೧೯ ಫಲಾನುಭವಿಗಳಿದ್ದಾರೆ. ೧೨ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ೧೫೩ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ ಗ್ರಾಮದ ಮುಖ್ಯ ಆಹಾರ. ರೊಟ್ಟಿ, ಅನ್ನ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಎತ್ತಿನ ಗಾಡಿಗಳು ಬಳಕೆಯಲ್ಲಿದ್ದು, ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನದ ಬಳಕೆಯೂ ಇದೆ.

ಶೇಂಗಾ ಕೃಷಿ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಜೋಳ, ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಗಳಾಗಿ ಸೂರ್ಯಕಾಂತಿ, ತೆಂಗು, ಅಡಿಕೆ, ರೇಷ್ಮೆ ಬೆಳೆಯುತ್ತಾರೆ. ಶೇಂಗಾ, ಹುಣಸೆಹಣ್ಣು, ಹೊಂಗೆ ಬೀಜ ಮುಖ್ಯ ವ್ಯಾಪಾರಿ ಸರಕುಗಳಾಗಿವೆ. ಒಬ್ಬರು ಸರ್ಕಾರಿ ನೌಕರರಿದ್ದು ಖಾಸಗಿ ಕಂಪನಿ, ಅಂಗಡಿಯಲ್ಲಿ ಉದ್ಯೋಗದಲ್ಲಿದ್ದಾರೆ. ಹೆಣ್ಣುಮಕ್ಕಳು, ಹೂ ಕಟ್ಟುವ, ಬೀಡಿ ಸುತ್ತುವ ಮೊದಲಾದ ಗೃಹ ಕಾರ್ಯದಲ್ಲಿ ತೊಡಗಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ತರೂರು ತಾಲ್ಲೂಕು ಹಾಗು ಚನ್ನೇನಹಳ್ಳಿ ಗ್ರಾಮ ಪಂಚಾಯತ್ ಕೇಂದ್ರವಾಗಿದ್ದು, ಒಂದು ಸ್ತ್ರೀ ಶಕ್ತಿ ಸಂಘ ಕೇಂದ್ರ, ಸ್ತ್ರೀಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದಾರೆ. ಒಬ್ಬರು ಅಂಗನವಾಡಿ ಕಾರ್ಯಕರ್ತೆಯರಿದ್ದಾರೆ. ಒಂದು ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಸದ್ಯಕ್ಕೆ ಶಾಲೆಗೆ ಮಕ್ಕಳು ಬಾರದೆ ಇರುವುದರಿಂದ ಶಾಲೆ ಮುಚ್ಚಿದೆ. ಗ್ರಾಮದ ಸಾಕ್ಷರತೆ ಶೇ. ೬೭.೩ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೧ ಪೆಟ್ಟಿಗೆ ಅಂಗಡಿ ಇದೆ. ಗ್ರಾಮದಲ್ಲಿ ಆಂಜನೇಯ ದೇವಾಲಯವಿದ್ದು, ಶ್ರಾವಣ ಮಾಸದಲ್ಲಿ ಆರತಿ ಮಾಡುತ್ತಾರೆ. ಕುನ್ನಾಲಮ್ಮನಿಗೆ ಎದುರೆತ್ತಿ ಆರತಿ ಮಾಡುವ ಹರಕೆ ಸಂಪ್ರದಾಯವಿದೆ.

ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

### ಕುಂಬಾರಹಳ್ಳಿ ಕಾಲೋನಿ

ಕುಂಬಾರಹಳ್ಳಿ ಕಾಲೋನಿ, ಸಿರಾ ತಾಲ್ಲೂಕಿನ ನೈರುತ್ಯ ದಿಕ್ಕಿಗಿದೆ. ಕುಂಬಾರಹಳ್ಳಿಗೆ ಹೊಂದಿಕೊಂಡಂತೆ, ಆದಿಕರ್ನಾಟಕ ಜನಾಂಗದವರು ಪ್ರತ್ಯೇಕ ವಸತಿ ನಿಲಯಗಳನ್ನು ಸ್ಥಾಪಿಸಿಕೊಂಡು ವಾಸಿಸುತ್ತಿರುವುದರಿಂದ ಕಂಬಾರಹಳ್ಳಿ ಕಾಲೋನಿ ಎಂದು ಕರೆಯುತ್ತಾರೆ. ಈ ಗ್ರಾಮ ಹುಯಲ್‌ದೊರೆ, ಮಂಚನ ದೊರೆ ಮಾರ್ಗದ ಸಿರಾ ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಸಾಕ್ಷಿಹಳ್ಳಿ ಮಣ್ಣೆಮ್ಮನ ದೇವಸ್ಥಾನಕ್ಕೆ ಪೂರ್ವಕ್ಕೆ ಒಂದು ಕಿ.ಮೀ. ದೂರದಲ್ಲಿದೆ. ಇದು ಕುಂಬಾರಹಳ್ಳಿಗೆ ಸೇರಿದ ಮಜರೆ ಗ್ರಾಮವಾಗಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ಒಂದು ಕಟ್ಟೆಯೂ ಇದೆ. ಕುಡಿಯಲು ಗ್ರಾಮ ಪಂಚಾಯತಿ ವತಿಯಿಂದ ಕೊಳವೆ ಬಾವಿ ಹಾಗೂ ಕಿರು ಟ್ಯಾಂಕ್ ಮೂಲಕ ನೀರು ಪೂರೈಸಲಾಗುತ್ತದೆ. ಒಂದು ಕೈ ಪಂಪು ಇದೆ.

ಗ್ರಾಮ ನೈರುತ್ಯ –ಪೂರ್ವಕ್ಕೆ ಗುಡ್ಡಗಾಡು, ಹಳ್ಳ, ದಿಣ್ಣೆ ಹೊಂದಿರುವುದರಿಂದ ಈ ಭಾಗದಲ್ಲಿ ನರಿ, ಮೊಲ, ಜಿಂಕೆ, ತೋಳ, ಉಡ, ಕಾಡುಬೆಕ್ಕು, ಚಿರತೆ ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸುಗಳನ್ನು ಸಾಕಿದ್ದಾರೆ. ನಾಯಿ, ಬೆಕ್ಕು, ಇತರ ಕಾಡು ಪ್ರಾಣಿಗಳು ಇವೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಬಾವುಲಿ,

ಕಾಗೆಪಿಳ್ಳೆ, ಕಾಗೆ, ಬೆಳವ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿಗಳಿವೆ. ಕೋಳಿಯನ್ನು ಮಾಂಸ ಹಾಗೂ ಮೊಟ್ಟೆಗಾಗಿ ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ಶೇ. ೪೪೯ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮–೩೯೦ ಸೆಂ.ರಷ್ಟು ಇದ್ದು, ಚಳಿಯು ೧೦–೧೨೦ ಸೆಂ. ಇರುತ್ತದೆ. ಡಿಸೆಂಬರ್ –ಜನವರಿ ತಿಂಗಳಲ್ಲಿ ಚಳಿಯ ಪ್ರಮಾಣ ಅಧಿಕವಾಗಿರುತ್ತದೆ. ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗ ಮಾತ್ರ ಇರುತ್ತದೆ. ಇವರ ಮಾತೃಭಾಷೆ ಕನ್ನಡವಾಗಿದೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು ಸೇರಿ ೬೩ ಮನೆಗಳಿದ್ದು, ಇವುಗಳಲ್ಲಿ ೧೪ ಮನೆಗಳು ಜನತಾ, ಆಶ್ರಯ, ಅಂಬೇಡ್ಕರ್ ಆವಾಸ್, ಇಂದಿರಾ ಆವಾಸ್ ಯೋಜನೆ ವಸತಿ ಯೋಜನೆಯ ಅಡಿಯಲ್ಲಿ ಇದ್ದು, ಶೌಚಾಲಯದ ಸೌಲಭ್ಯವಿಲ್ಲ ಹಾಗಾಗಿ ಬಯಲನ್ನೇ ಅವಲಂಬಿಸಿದ್ದಾರೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು, ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆ. ದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕೃಷಿ ಬದುಕು ಕಡಿಮೆ. ವ್ಯಾಪಾರ, ಉದ್ಯೋಗಿಗಳು ಅಧಿಕ. ಹಾಗಾಗಿ ವ್ಯವಸಾಯವಾಗಿ ರಾಗಿ, ಶೇಂಗಾ, ಅರಕ, ಭತ್ತ, ತೊಗರಿ, ಹುರುಳಿ ಬೆಳೆಯುತ್ತಾರೆ. ತೆಂಗಿನ, ಅಡಿಕೆ ತೋಟವೂ ಇದೆ. ತೋಟದ ಬೆಳೆಯಾಗಿ ತೆಂಗು, ಅಡಿಕೆ ಬೆಳೆಯುತ್ತಾರೆ.

ಶಿಕ್ಷಣ, ಕಂದಾಯ, ಸಾರಿಗೆ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ. ಮಹಿಳೆಯರು ಹೂಕಟ್ಟುವುದು, ಬೀಡಿ ಸುತ್ತುವುದು ಸ್ವಾವ ಲಂಬನೆ ಕಸುಬು ಹೊಂದಿದ್ದಾರೆ.

ಆಡಳಿತಾತ್ಮಕವಾಗಿ ಚಿಕ್ಕನಹಳ್ಳಿ ವಿಧಾನಸಭೆ ಹಾಗೂ ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದ್ದು, ರಾಮಲಿಂಗಾಪುರ, ತಾಲ್ಲೂಕು, ಪಂಚಾಯಿತಿ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಅಂಚೆ ಕಚೇರಿ, ರಾಮಲಿಂಗ ಪುರದಲ್ಲಿದೆ. ಬುಕ್ಕಾಪಟ್ಟಣದಲ್ಲಿ ಪೋಲೀಸ್ ಠಾಣೆ, ಆಸ್ಪತ್ರೆ ಸಂಪರ್ಕ ಹೊಂದಿದೆ. ವಿದ್ಯುತ್ ವಿಷಯಗಳಿಗೆ ಸಿರಾ ನಗರಕ್ಕೆ ಸಂಪರ್ಕವಿದೆ.

ಶೈಕ್ಷಣಿಕವಾಗಿ ಕುಂಬಾರಹಳ್ಳಿ ಮುಖ್ಯ ಗ್ರಾಮದಲ್ಲಿ ಶಾಲೆ ಇದ್ದು, ಇದರ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿದ್ದಾರೆ. ಈ ಗ್ರಾಮದ ಶೈಕ್ಷಣಿಕ ಪ್ರಮಾಣ ಶೇ. ೫೨.೬ ರಷ್ಟಿದೆ. ಗ್ರಾಮದಲ್ಲಿರುವ ಓಬಳನರಸಿಂಹ, ಆಂಜನೇಯ ದೇವರಿಗೆ ಪೂಜೆ, ಆರತಿ ಸಂಪ್ರದಾಯವಿದೆ. ಸಮೀಪದ ಮಣ್ಣೆಮ್ಮ ದೇವರ ಜಾತ್ರೆಯಂದು ಈ ಗ್ರಾಮದಲ್ಲಿ ಆರತಿ, ಉತ್ಸವ, ಬಲಿ, ಮಾಂಸಾ ಹಾರದ ವಿಶೇಷ ಜಾತ್ರೆ ಇರುತ್ತದೆ. ಜಾತ್ರೆಯ ಕೈವಾಡದವರಲ್ಲಿ ಈ ಗ್ರಾಮದ ತೋಟಿಗಳಿಗೂ ಪಾಲು, ಭಾಗವಹಿಸುವಿಕೆ ಇರುತ್ತದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ, ರಾಮನವಮಿ, ಹನುಮ ಜಯಂತಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ.

ಗ್ರಾಮಕ್ಕೆ ಬಸ್ ಸಂಚಾರ ಇರುವುದಿಲ್ಲ. ಸಾಕ್ಷಿಹಳ್ಳಿಗೆ ಬಂದು ಅಲ್ಲಿಂದ ಸಿರಾ–ಹೊಸಕೆರೆ ಮಾರ್ಗ ಅನುಸರಿಬಹುದಾಗಿದೆ.

## ಕುಂಟೇಗೌಡನಹಳ್ಳಿ

ಕುಂಟೇಗೌಡನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೯ ಕಿ.ಮೀ. ದೂರದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು, ಯಲದಬಾಗಿಯ ಉಪಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೨೩೨.೯ ಹೆಕ್ಟೇರ್ ಆಗಿದ್ದು, ಕೆಂಪು, ಮರಳು ಮಣ್ಣಿನಿಂದ ಕೂಡಿದೆ. ಕುಂಟೆಗೌಡ ಎಂಬ ಹಿರಿಯರು, ಮೈಸೂರು ಮಹಾರಾಜರಲ್ಲಿ ಆಪ್ತರಾಗಿದ್ದು ಕುದುರೆ ಮೇಲೆ ಓಡಾಡುತ್ತಿದ್ದ ರೆಂದೂ, ಈ ಭಾಗದ ಜಮ್ಮುನೇರಳೆಹಣ್ಣನ್ನು ಮಹಾರಾಜರಿಗೆ ಕಳುಹಿಸುತ್ತಿದ್ದರೆಂದು ಈ ಗ್ರಾಮದವರು ಹೇಳುತ್ತಾರೆ. ಕುಂಟೇಗೌಡ ಸ್ಥಾಪಿಸಿದ ಗ್ರಾಮವೇ ಕುಂಟೇಗೌಡನ ಹಳ್ಳಿಯಾಯಿತೆಂದು ಕದರಯ್ಯನವರ ಅಭಿಪ್ರಾಯ ವಾಗಿದೆ. ರ‍್ರಾಷ್ಟ್ರೀಯ ಹೆದ್ದಾರಿ ಸಿರಾ–ತುಮಕೂರು ರಸ್ತೆಯ ಬಲಭಾಗಕ್ಕೆ ತಿರುಗಿ ಒಂದು ಕಿ.ಮೀ. ನಡೆದರೆ ಈ ಗ್ರಾಮವಿದೆ.

ಕುರುಚಲು ಗಿಡ, ಕಲ್ಲು–ಪೊದೆ, ದಿಣ್ಣೆ ಹಳ್ಳಗಳಿಂದ ಕೂಡಿದ ಗ್ರಾಮವಾಗಿದ್ದು, ಈ ಭಾಗದಲ್ಲಿ ನರಿ, ಮೊಲ, ಹಂದಿ, ಜಿಂಕೆ, ಕರಡಿ ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ಸಾಕಿದ್ದಾರೆ. ಕಾಡು ಪಕ್ಷಿಯಾಗಿ ಗೊರವಂಕ, ಕೋಗಿಲೆ, ಗಿಳಿ, ಸಾಂಬಾರ ಕಾಗೆ, ಕೊಕ್ಕರೆ, ನವಿಲು ಪಕ್ಷಿಗಳು ಕಂಡು ಬರುತ್ತದೆ.

ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೫೫೭.೩ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೯೦ ಸೆಂ. ಚಳಿ ೧೨೦ ಸೆಂ. ಸಹಜವಾಗಿರುತ್ತದೆ. ಪೂರ್ವಕ್ಕೆ ಹಳ್ಳ ಪಶ್ಚಿಮಕ್ಕೆ ಕೆರೆ ಇದ್ದರೂ ನೀರಿಗೆ ಕಷ್ಟ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ನೀರನ್ನು ಪೂರೈಸಲಾಗುತ್ತಿದೆ. ಗ್ರಾಮ ಪರಿಸರದಲ್ಲಿ ೩೫ ಕೊಳವೆ ಬಾವಿಗಳಿದ್ದು, ೬ ಸಿಸ್ಟನ್‌ಗಳಲ್ಲಿ ,೧ ಕೈ ಪಂಪು ಇದೆ.

ಕುಂಟಿಟಿಗರು ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ದಾಸರು, ಆದಿದ್ರಾವಿಡ, ಮುಸ್ಲಿಂ, ಹಾಗೂ ಮಡಿವಾಳ ಸಣ್ಣ ಸಮುದಾಯ ವಾಗಿದೆ. ಗ್ರಾಮದಲ್ಲಿ ವಿವಿಧ ಪ್ರಕಾರಗಳ ೧೬೫ ಮನೆಗಳಿವೆ. ಇವು ಕಾಂಕ್ರೀಟ್, ಕಲ್ಲಿನ, ಶೀಟ್, ಮಣ್ಣಿನ ಹಾಗೂ ಹೆಂಚಿನ ಸ್ವರೂಪದ ಮನೆಗಳಿದ್ದು, ಈ ಗ್ರಾಮದ ಜನಸಂಖ್ಯೆ ೫೨೪ ಆಗಿದೆ. ಸಮುದಾಯ ಸೌಲಭ್ಯಗಳಾದ ಆಶ್ರಯ, ಅಂಬೇಡ್ಕರ್ ವಸತಿ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದಿದ್ದಾರೆ. ೭೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿ ಮುದ್ದೆ ಗ್ರಾಮದ ಮುಖ್ಯ ಆಹಾರ. ರೊಟ್ಟಿ, ಅನ್ನ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಎತ್ತಿನಗಾಡಿ, ಸಾಂಪ್ರದಾಯಿಕ ವಾಹನಗಳಾದ ಟ್ರ್ಯಕ್ಟರ್, ಮಿನಿಟೆಂಪೋ , ಆಟೋಗಳ ಬಳಕೆ ಇದೆ.

ಶೇಂಗಾ ಕೃಷಿ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಅಲಸಂದೆ, ತೊಗರಿ ಬೆಳೆಯುತ್ತಾರೆ. ತೆಂಗು, ಅಡಿಕೆ, ರೇಷ್ಮೆ ತೋಟಗಾರಿಕೆ ಬೆಳೆಗಳಾಗಿವೆ. ಕಂದಾಯ ಇಲಾಖೆ, ಲಕ್ಷ್ಮಿನರಸಯ್ಯ ವೈದ್ಯರಾದ ಡಾ. ಕೆ.ವೈ. ಲಕ್ಷ್ಮಯ್ಯ, ಪ್ರಾಂಶುಪಾಲ ಹನುಮಂತರಾಯಪ್ಪ ಸೇರಿದಂತೆ ೬ ಜನ ಸರ್ಕಾರಿ ನೌಕರರಿದ್ದಾರೆ. ಇಟ್ಟಿಗೆ ಫ್ಯಾಕ್ಟರಿ, ಬೀಡಿ ಕಟ್ಟುವುದು, ಎಲೆ ತಯಾರಿಕೆ, ರಾಗಿ ಮಿಲ್ಲು ಗೃಹ ಕೈಗಾರಿಕೆಗಳಿವೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ಸೀಬಿ ತಾಲ್ಲೂಕು ಪಂಚಾಯಿತಿ ಹಾಗು ಸೀಬಿ ಅಗ್ರಹಾರ ಗ್ರಾಮ ಪಂಚಾಯತ್ ಕ್ಷೇತ್ರಕೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ಈ ಹಳ್ಳಿಯ ಸಾಮಾಜಿಕ ಆಡಳಿತವಿದೆ. ಗ್ರಾಮದಲ್ಲಿ ಅಂಚೆ ಕಛೇರಿ ಇದೆ. ಗ್ರಾಮದಲ್ಲಿ ಸ್ತ್ರೀ ಶಕ್ತಿ ಸಂಘದ ೪ ತಂಡಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಕಾರ ಸಂಘ, ವ್ಯವಸಾಯ ಸೇವಾ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ, ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ಶೇ. ೬೦ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ಗ್ರಾಮದಲ್ಲಿ ೭ ಪೆಟ್ಟಿಗೆ ಅಂಗಡಿಗಳು ೨ ಟೀ ಅಂಗಡಿಗಳು ಇದೆ. ಗ್ರಾಮದ ಹೊರಭಾಗಕ್ಕೆ ಕೋಟೆಯ ಕಂದಕವಿದ್ದು, ಅದರ ಅವಶೇಷ ಕಂಡು ಬರುತ್ತವೆ. ಪ್ರತೀಕ ಗ್ರಾಮದ ಬಳಿ ೨ ಕರುಗಲ್ಲುಗಳಿದ್ದು, ಅರಳಿ ಕಟ್ಟೆ ಇದೆ. ಈಶ್ವರ, ಆಂಜನೇಯ, ಕದರಿನರಸಿಂಹ ದೇವಾಲಯವಿದ್ದು, ಮುತ್ತುರಾಯಸ್ವಾಮಿ ಪೌಳಿ ಇದೆ. ಕೊಲ್ಲಾಪುರದಮ್ಮನ ಊರಹಬ್ಬ ಮಾಡಿ, ಆರತಿ ಬಾನ, ಬ್ಯಾಟೆ ಇರುತ್ತದೆ. ಮುತ್ತುರಾಯಸ್ವಾಮಿಗೆ ಆರತಿ ಮಾಡುವ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕೆಂಚಗಾನಹಳ್ಳಿ

ಕೆಂಚಗಾನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೪ ಕಿ.ಮೀ. ದೂರದಲ್ಲಿದೆ. ಸಿರಾ–ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿಯ ಬದಿಗೆ ಕಳ್ಳಂಬೆಳ್ಳದಿಂದ ಆಚೆಗೆ ಕೆಂಚಗಾನಹಳ್ಳಿ ಗೇಟಿನಿಂದ ಒಂದು ಕಿ.ಮೀ. ದೂರದ ಹಾದಿಯಾಗಿದೆ. ಇದು ಕಳ್ಳಂಬೆಳ್ಳದ ಉಪ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೨೩೨.೦೮ ಹೆಕ್ಟೇರ್ ಆಗಿದೆ. ಕೆಂಚಪ್ಪ ವ್ಯಕ್ತಿ ಮೂಲದಿಂದ ಕೆಂಚಗಾನಹಳ್ಳಿ ಎಂದಾಗಿದೆ.

ಮರಳು ಮಿಶ್ರಿತ ಕೆಂಪು ಭೂಮಿಯನ್ನು ಹೊಂದಿದ್ದು, ಗ್ರಾಮಕ್ಕೊಂದು ಕೆರೆ ಇದೆ. ಈ ಪರಿಸರದ ಭಾಗದಲ್ಲಿ ನರಿ, ಮೊಲ, ಮುಂಗುಸಿ, ಉಡ, ಬಾರುಬೆಕ್ಕು ಕಂಡು ಬರುತ್ತವೆ. ಗ್ರಾಮದಲ್ಲಿ ರೈತಾಪಿ ಬದುಕಿಗೆ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ಸಾಕಿದ್ದಾರೆ. ಕೋಳಿಯನ್ನು ಮೊಟ್ಟೆ, ಮಾಂಸಕ್ಕೆ ಸಾಕುತ್ತಾರೆ. ಕಾಡು ಪಕ್ಷಿಗಳಾಗಿ ಗೊರವಂಕ, ಕೋಗಿಲೆ, ಗೂಬೆ, ಗರುಡ, ಹದ್ದು, ಕೌಜಲಗ, ಗಿಳಿ ಪಕ್ಷಿಗಳು ಕಂಡು ಬರುತ್ತದೆ.

ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೫೫೭.೩ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೯೦ ಸೆಂ. ಚಳಿ ೧೨೦ ಸೆಂ. ಸಹಜವಾಗಿರುತ್ತದೆ. ಈ ಗ್ರಾಮಕ್ಕೆ ಒಂದು ಕಟ್ಟೆ, ಹಾಗೂ ಕೆರೆ ನೀರಿನ ಮೂಲವಾದರೂ ತುಂಬುವುದಿಲ್ಲ. ಬಳ್ಳಾರಿ ಜಾಲಿ ಬೆಳೆದಿದೆ. ಆದರೂ ರೈತರು ೨೫ ಕೊಳವೆ ಬಾವಿಗಳ ಮೂಗಕ ಕೃಷಿ ಚಟುವಟಿಕೆ ನಡೆಸುತ್ತಿದ್ದಾರೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು

ಸರಬರಾಜು ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೬ ಕಿರು ಟ್ಯಾಂಕ್‌ಗಳು ಇದ್ದು , ೨ ಕೈ ಪಂಪುಗಳು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಟಿಚಿಗರು ಜನಾಂಗ ದೊಡ್ಡ ಸಮುದಾಯವಾಗಿದ್ದು , ದಾಸರು ಕಿರು ಸಮುದಾಯವಾಗಿದೆ. ಗ್ರಾಮದಲ್ಲಿ ಲಂಬಾಣಿ, ಅಗಸ, ಹಾವಾಡಿಗರು, ದಾಸರು ಕಿರು ಸಮುದಾಯವಾಗಿದೆ. ಗ್ರಾಮದಲ್ಲಿ ಲಂಬಾಣಿ, ಕನ್ನಡ ಭಾಷೆ ಮಾತನಾಡುತ್ತಾರೆ. ೮೦ ಮನೆಗಳಿರುವ ಈ ಗ್ರಾಮದಲ್ಲಿ ಇವು ಕಾಂಕ್ರೀಟ್, ಕಲ್ಲಿನ, ಶೀಟ್, ಮಣ್ಣಿನ ಹಾಗೂ ಹೆಂಚಿನ ಸ್ವರೂಪದ ಮನೆಗಳಿದ್ದು, ಈ ಗ್ರಾಮದ ಒಟ್ಟು ಜನಸಂಖ್ಯೆ ೩೯೯ ಆಗಿದೆ. ಇವರಲ್ಲಿ ೩೫ ಮನೆಗಳು ಶೌಚಾಲಯದ ಸೌಲಭ್ಯ ಹೊಂದಿದ್ದು, ಆಶ್ರಯ, ಜನತಾ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ, ಅನ್ನ ಗ್ರಾಮದ ಮುಖ್ಯ ಆಹಾರ. ಚಪಾತಿ, ರೊಟ್ಟಿ, ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನ ಎತ್ತಿನಗಾಡಿ, ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಮಿನಿಟೆಂಪೋ ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಭತ್ತ, ಜೋಳ, ಅಲಸಂದೆ, ತೊಗರಿ, ನವಣೆ, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆ ತೆಂಗು, ಅಡಿಕೆ ಬೆಳೆಯುತ್ತಾರೆ. ಮಹಿಳೆಯರು ಬಟ್ಟೆ ಹೊಲಿಯುವ, ಬೀಡಿ ಕಟ್ಟುವ ಉಪಕಸುಬು ಹೊಂದಿದ್ದಾರೆ. ಇಬ್ಬರು ಸರ್ಕಾರಿ ನೌಕರರಿದ್ದಾರೆ. ಒಬ್ಬರು ಗ್ರಾಮದ ಪಂಚಾಯಿತಿ ಪ್ರತಿನಿಧಿ ಇದ್ದಾರೆ. ಅಂಗನವಾಡಿ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೨೫ ಮಕ್ಕಳು, ಇಬ್ಬರು ಶಿಕ್ಷಕರಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಹಾಗೂ ಪಠ್ಯಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೬.೯ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಶೀನಪ್ಪ ಮತ್ತವರ ಕುಟುಂಬ ಪಶು, ವಿಷ ಜಂತುಗಳಿಗೆ ಸಂಬಂಧಿಸಿದ ಕಾಯಿಲೆಗಳಿಗೆ ನಾಟಿ ಔಷಧಿ ಕೊಡುವ ಮೂಲಕ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ಈ ಗ್ರಾಮದ ಮಾದಪ್ಪ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ಗ್ರಾಮದಲ್ಲಿ ೩ ಪೆಟ್ಟಿಗೆ ಅಂಗಡಿಗಳು ಇವೆ. ಗ್ರಾಮದಲ್ಲಿ ಅಜ್ಜಪ್ಪ, ಶ್ರೀರಾಮ, ಶನಿದೇವರ ಗುಡಿಗಳಿವೆ. ಹಾಗಲವಾಡಿ ಕರಿಯಮ್ಮ ಈ ಗ್ರಾಮದ ಅದಿದೇವತೆ ಎಂಬಂತೆ ಭಾವಿಸಿ, ಹಾಗಲವಾಡಿ ಯಲ್ಲಿ ಜರುಗುವ ಕರಿಯಮ್ಮನ ಜಾತ್ರೆಯ ಸಂದರ್ಭಕ್ಕೆ ಇಲ್ಲಿಂದಲೇ ಆರತಿ ಎದುರೆತ್ತಿ, ಬ್ಯಾಟೆ, ಬಾನ, ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ಬಸವಜಯಂತಿ, ದೀಪಾವಳಿ, ಶಿವರಾತ್ರಿ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸ್ನೇಹಜೀವಿ ಯುವಕ ಸಂಘ ಸಾಮಾಜಿಕ ಸೇವೆ ಹಾಗೂ ಸಾಂಸ್ಕೃತಿಕವಾಗಿ ಕ್ರಿಯಾಶೀಲವಾಗಿದೆ.

## ಕಣಿವೆ ರಾಂಪುರ

ಕಣಿವೆ ರಾಂಪುರ ಒಂದು ಬೇಚರಕ್ ಗ್ರಾಮ. ಬುಕ್ಕಾಪಟ್ಟಣದಿಂದ ಮಂಚಲದೊರೆ ಬೆಟ್ಟಗಳ ಸಾಲು ಸಂಪೂರ್ಣವಾಗಿ ಕರ್ನಾಟಕ ರಾಜ್ಯ ರಕ್ಷಿತ ಅರಣ್ಯ ಪ್ರದೇಶ ಎಂದೇ ಗುರುತಿಸಿದೆ. ಇಲ್ಲಿ ಶ್ರೀಗಂಧ, ಜಾಲಾರಿ, ಕಗ್ಗಲಿ, ಬಿಕ್ಕೆ, ಮರಡಿ, ತೂಬರೆ, ಮುತ್ತುಗ, ಬೇಟೆ, ಬಸರಿ, ಜಾಲಿ, ತಂಕಟಿ, ಬ್ಯಾಲ, ಹೊಂಗೆ, ಬೇವು ಮುಂತಾದ ಮರಗಳು ಬೆಳೆಯುತ್ತವೆ. ಅರಣ್ಯ ಇಲಾಖೆಯವರು ಟ್ರೆಂಚ್ (ಗುಂಡಿ) ಹೊಡೆದು ನೀರು ನಿಲ್ಲುವಂತೆ ಮಾಡಿರುವುದರಿಂದ ಮರಗಳಿಂದ ಡಿಸೆಂಬರ್–ಜನವರಿಯಲ್ಲಿ ಉದುರಿದ ಎಲೆಗಳು ಗಿಡದ ಬುಡದಲ್ಲಿನ ಟ್ರೆಂಚ್‌ನಲ್ಲಿ ನಿಂತು ನಿಸರ್ಗಸಹಜ ಮಳೆಯ ನೀರಿನಲ್ಲಿ ಕೊಳೆತು ಉತ್ಕೃಷ್ಟವಾದ ಹಸಿರೆಲೆ ಗೊಬ್ಬರವಾಗುವುದರಿಂದ ಈ ಪರಿಸರದ ಮರಗಳು ಎತ್ತರವಾಗಿ ಬೆಳೆಯುತ್ತವೆ. ಹೀಗೆ ರಾಜ್ಯ ರಕ್ಷಿತ ಅರಣ್ಯದ ನಡುವೆ ಆರಂಭದಲ್ಲಿದ್ದ ಹಲವು ಹಳ್ಳಿಗಳು ಇಂದು ಅಲ್ಲಿಂದ ಸ್ಥಳಾಂತರ ಮಾಡಿವೆ. ಅವುಗಳಲ್ಲಿ ಬುಕ್ಕಾಪಟ್ಟಣ ಪರಿಸರದಲ್ಲಿ ಕಣಿವೆ ರಾಂಪುರ, ಬೋರನಾಳು, ಮರಿದಾಸನಹಳ್ಳಿ, ಸೂಲದಾಳು, ವೆಂಕಟಾಪುರ, ಕಂಬದಾಳು, ಮಾದನಳ್ಳಿಗಳು ಬುಕ್ಕಾಪಟ್ಟಣ ರಕ್ಷಿತ ಅರಣ್ಯದ ವ್ಯಾಪ್ತಿಯೊಳಗೆ ಸೇರಿಕೊಂಡಿವೆ. ಇಲ್ಲಿ ವಸತಿ ಇರುವ ಲಕ್ಷಣಗಳು, ಮಡಕೆ ಚೂರು, ಒರಳುಕಲ್ಲು, ಅರೆಬರೆ ಕಲ್ಲು ಗ್ರಾಮ ಇತ್ತೆಂಬ ಅವಶೇಷ ಕಂಡುಬರುತ್ತದೆ.

ಹೀಗೆ ಬುಕ್ಕಾಪಟ್ಟಣ ಗ್ರಾಮಪಂಚಾಯ್ತಿ, ಜಿಲ್ಲೆ ಹಾಗೂ ತಾಲ್ಲೂಕು ಪಂಚಾಯ್ತಿ ಮತ್ತು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ಮತ್ತು ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಈ ಎಲ್ಲ ಹಳ್ಳಿಗಳು ಒಳಪಡುತ್ತಿದ್ದು ಇಂದಿಗೂ ಬುಕ್ಕಾಪಟ್ಟಣ, ಹುಣಸೇಕಟ್ಟೆ, ಹೊಸಹಳ್ಳಿ, ಗಾಣದಹುಣಸೆ ಈ ಪರಿಸರದವರು ಈ ಬೇಚರಕ್ ಗ್ರಾಮಗಳ ಬಗೆಗೆ ಮಾತನಾಡುತ್ತಾರೆ. ಕುರಿ, ದನ, ಮೇಯಿಸಲು ಕಾಡಿಗೆ ಹೋದಾಗ ಕಂಬದಾಳುವಿನವರೆಗೆ ಹೋಗಿದ್ದೆ, ಬೇಟೆ ಮಾದನಹಳ್ಳಿ ತಪ್ಪಲಲ್ಲಿ ಚೆನ್ನಾಗಿರುತ್ತದೆ ಎಂದೆಲ್ಲಾ ವ್ಯಾಖ್ಯಾನಿಸುತ್ತ ಈ ಬೇಚರಕ್ ಗ್ರಾಮಗಳ ಬಗೆಗೆ ಉಲ್ಲೇಖಿಸುತ್ತಾರೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ಚಿರತೆ, ನರಿ, ಮೊಲ, ಕರಡಿ, ಮುಂಗುಸಿ, ಉಡ, ಹೆಬ್ಬಾವು, ನಾಗರ ಹಾವು, ಹಸಿರು ಹಾವು, ಓತಿಕ್ಯಾತ, ಕಾಡುಬೆಕ್ಕು, ಮಂಗ, ಇಲಿ, ಹೆಗ್ಗಣ ಕಂಡುಬರುತ್ತವೆ. ಕಾಡುಪಕ್ಷಿಯಾಗಿ ನವಿಲು, ಹೀರೇಹಕ್ಕಿ, ಕೊಕ್ಕರೆ, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಇಲ್ಲಿ ಜನವಸತಿಯಿರುವುದಿಲ್ಲ. ರಕ್ಷಿತ ಅರಣ್ಯದ ನಡುವೆ ಗ್ರಾಮಗಳು ಇದ್ದವೆಂಬ ನಂಬಿಕೆ ಉಲ್ಲೇಖ ಮಾತ್ರ ಸರ್ಕಾರಿ ದಾಖಲೆಗಳಲ್ಲಿ ಲಭ್ಯವಿದೆ.

## ಕಮಲನಾಯಕನತಾಂಡ

ಕಮಲನಾಯಕನತಾಂಡವು ಸಿರಾ ತಾಲ್ಲೂಕು ಕೇಂದ್ರದಿಂದ ವಾಯವ್ಯ ದಿಕ್ಕಿನಲ್ಲಿದೆ. ಗಾಣದಹುಣಸೆ, ಬುಕ್ಕಾಪಟ್ಟಣ ರಸ್ತೆಯಲ್ಲಿ ಗೇಟಿನಿಂದ ಎಡಭಾಗಕ್ಕೆ ೧.೫ ಕಿಮೀ ದೂರದಲ್ಲೂ ಸಿರಾದಿಂದ ೨೫.೫ ಕಿಮೀ ದೂರದಲ್ಲಿರುವ ಗ್ರಾಮ ಜನವಸತಿ ಗ್ರಾಮವಾಗಿದೆ. ಈ ಹಳ್ಳಿಯನ್ನು ಕಮಲನಾಯಕನು ಮೂಲಪುರುಷನಾಗಿ ನಿರ್ಮಿಸಿದ್ದರಿಂದ ಆತನ ಹೆಸರಿನಲ್ಲಿಯೇ ಗ್ರಾಮ ರಚನೆಯಾಗಿದೆ. ಲಂಬಾಣಿ ತಾಂಡವಾದ್ದರಿಂದ ತಾಂಡವೆಂದು ಹೆಸರು ಪಡೆದಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣವು ೨೪೮.೩ ಹೆಕ್ಟೇರ್‌ಗಳಾಗಿವೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಒಂದ ಬಗೆಯ ಬಯಲು, ಕುರುಚಲು ಗಿಡಗಳ ಪ್ರದೇಶ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಗ್ರಾಮದಲ್ಲಿ ಒಟ್ಟು ೧೨೦ ಮನೆಗಳಿದ್ದು ೪೨೬ ಜನಸಂಖ್ಯೆಯನ್ನು ಹೊಂದಿದೆ. ಹೆಂಚಿನ, ಶೀಟಿನ ಸ್ವರೂಪದವುಗಳಾದಿದ್ದು ವು ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯಲ್ಲಿ ನಿರ್ಮಾಣವಾಗಿವೆ. ೧೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಇವರ ಭಾಷೆ ಕನ್ನಡ ಮತ್ತು ಲಂಬಾಣಿಯಾಗಿದೆ.

ವಾರ್ಷಿಕ ಸರಾಸರಿ ಮಳೆ ೪೪೯ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮದಲ್ಲಿ ೩೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಒಂದು ಕಟ್ಟೆ ಇದೆ. ಕುಡಿಯುವ ನೀರಿಗಾಗಿ ಎರಡು ಕೈಪಂಪುಗಳು ಮತ್ತು ಸಿಸ್ಟರ್ನ್‌ಗಳನ್ನು ಹೊಂದಿದೆ. ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ.

ಇವರ ಮುಖ್ಯ ಉದ್ಯೋಗ ಕೃಷಿಯಾಗಿದ್ದು ಶೇಂಗಾ ಪ್ರಮುಖ ಬೆಳೆಯಾಗಿದೆ. ಇದರೊಂದಿಗೆ ರಾಗಿ, ಭತ್ತ, ಜೋಳ, ಸೂರ್ಯಕಾಂತಿ, ತೆಂಗು, ಅಡಿಕೆ, ಹುಣಸೆ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಹುಣಸೆಹಣ್ಣು, ಹೊಂಗೆಬೀಜ ಮುಖ್ಯ ವ್ಯಾಪಾರಿ ಸರಕಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ನೇರಲಗುಡ್ಡ ಪಂಚಾಯ್ತಿ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದೆ. ಇಬ್ಬರು ಪಂಚಾಯ್ತಿ ಸದಸ್ಯರನ್ನು ಒಳಗೊಂಡಿದೆ. ಬುಕ್ಕಾಪಟ್ಟಣ ಪೊಲೀಸ್ ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ ಹಾಗೂ ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದೆ. ಗ್ರಾಮದಲ್ಲಿ ಹಣಕಾಸು ವ್ಯವಸ್ಥೆಗೆ ಬ್ಯಾಂಕಿಂಗ್ ಸೌಲಭ್ಯವಿರುವುದಿಲ್ಲ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಒಳಗೊಂಡಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೦% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಹೊಂದಿದೆ.

ಧಾರ್ಮಿಕ ಕ್ಷೇತ್ರದಲ್ಲಿ ನೇರಲಗುಡ್ಡದ ದೇವಾಲಯಗಳನ್ನು ಹೊಂದಿದೆ. ಗ್ರಾಮದೇವತೆಯ ಜಾತ್ರೆಯನ್ನು ಮಾಡುವುದು ಒಂದು ವಿಶೇಷವಾಗಿರುತ್ತದೆ. ಕಮಲನಾಯಕನ ತಾಂಡದಲ್ಲಿ ಐತಿಹಾಸಿಕ ನೆಲೆಯಾಗಿ ಅರಳಿವೃಕ್ಷ ಮತ್ತು ಬೇವಿನಕಟ್ಟೆಗಳಿರುವುದನ್ನು ಗಮನಿಸಬಹುದಾಗಿದೆ.

# ಕರೇಮಾದನಹಳ್ಳಿ

ಕರೇಮಾದನಹಳ್ಳಿಯು ಸಿರಾ ತಾಲ್ಲೂಕು ಕೇಂದ್ರದಿಂದ ನೈಋತ್ಯ ದಿಕ್ಕಿನಲ್ಲಿದೆ. ಇದು ಸಿರಾ, ಹುಯಿಲ್‌ದೊರೆ, ಹೊಸಕೆರೆ ಮಾರ್ಗದಲ್ಲಿ ಮಾರಗೊಂಡನಹಳ್ಳಿ ಯಿಂದ ಬಲಭಾಗಕ್ಕೆ ೨.೫ ಕಿಮೀ ದೂರದಲ್ಲೂ ಸಿರಾದಿಂದ ೨೫ ಕಿಮೀ ದೂರದಲ್ಲಿರುವ ಈ ಗ್ರಾಮವು ಕಂದಾಯ ಗ್ರಾಮವಾಗಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೩೪೫.೯೮ ಹೆಕ್ಟೇರ್‌ಗಳಾಗಿವೆ. ಚಿನ್ನಯ್ಯನಪಾಳ್ಯ ಇದರ ಉಪಗ್ರಾಮವಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳುಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ೨ ಕಟ್ಟೆಗಳಿದ್ದು ೧೩೦ ಕೊಳವೆ ಬಾವಿಗಳು ಕೃಷಿಗೆ ಸಹಾಯಕವಾಗಿವೆ. ಹಾಗೆಯೇ ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಸಿಸ್ಟರ್ನ್ ಮತ್ತು ಮೂರು ಕೈಪಂಪುಗಳಿವೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೩೫.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಈ ಗ್ರಾಮದಲ್ಲಿ ೩೦೫ ಮನೆಗಳಿದ್ದು ೧೬೩೭ ಜನಸಂಖ್ಯೆಯನ್ನು ಹೊಂದಿದೆ. ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಿದ್ದು ಇವು ವಸತಿ ಯೋಜನೆಗಳಾದ ಇಂದಿರಾ ಆವಾಸ್, ಆಶ್ರಯ, ಜನತಾ ಫಲಾನುಭವಿಗಲು, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಬಳಕೆದಾರರಿದ್ದಾರೆ. ನಾಯಕ ದೊಡ್ಡ ಸಮುದಾಯವಾಗಿದೆ. ಕುಂಚಿಟಿಗ, ಆದಿಕರ್ನಾಟಕ, ಮುಸ್ಲಿಂ, ಮಡಿವಾಳರ ಕಿರುಸಮುದಾಯಗಳಾಗಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಕಚ್ಚಾ ರಸ್ತೆಯನ್ನು ಹೊಂದಿದೆ.

ಗ್ರಾಮದಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು ಶೇಂಗಾ, ರಾಗಿ, ಭತ್ತ, ಜೋಳ, ದ್ವಿದಳ ಧಾನ್ಯಗಳು, ತೆಂಗು, ಅಡಿಕೆ ಮತ್ತು ಹುಣಸೆ ಮರಗಳು ಪ್ರಮುಖ ಬೆಳೆಗಳಾಗಿವೆ. ಹಾಗೆಯೇ ವ್ಯಾಪಾರದ ಸರಕುಗಳಿವೆ. ಶಿಕ್ಷಣ, ಬ್ಯಾಂಕ್ ಮ್ಯಾನೇಜರ್, ಕಾಲೇಜು ಇಲಾಖೆಗೆ ಸೇರಿದ ಸರ್ಕಾರಿ ಸೇವೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅಲ್ಲದೇ ಈ ಗ್ರಾಮದಲ್ಲಿ ಗಿರಣಿ/ ಮಿಲ್ ಹಾಗೂ ಸಣ್ಣ ಪ್ರಮಾಣದ ಗೃಹಕೈಗಾರಿಕೆಗಳಿವೆ. ಒಂದು ಆಧುನಿಕ ಡೈರಿಯಿದ್ದು ಕೃಷಿಯೇತರ ಆದಾಯ ಗಳಿಸಲು ಸಹಾಯಕವಾಗಿದೆ. ಬೀಡಿ ಸುತ್ತುವುದು, ಊಟದ ಎಲೆ ತಯಾರಿಕೆ, ಗರಿಕಡ್ಡಿ ಸಿಗಿಯುವುದು ಹೆಂಗಸರ ಗೃಹಕೈಗಾರಿಕೆಯಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ, ರಾಮಲಿಂಗಾಪುರ ಗ್ರಾಮಪಂಚಾಯ್ತಿ ಕೇಂದ್ರಗಳಾಗಿದ್ದು ಗ್ರಾಮಪಂಚಾಯ್ತಿಯಲ್ಲಿ ಇಬ್ಬರು ಸದಸ್ಯರು, ಸಿರಾ ತಹಸೀಲ್ದಾರ್ ಕಛೇರಿ, ಬುಕ್ಕಾಪಟ್ಟಣ ಪೊಲೀಸ್ ಠಾಣೆ, ತುಪ್ಪದಕೋಣ ಅಂಚೆ ಕಛೇರಿಯನ್ನು ಹೊಂದಿದೆ. ಗ್ರಾಮ ನ್ಯಾಯಮಂಡಳಿಯಿಂದ ಕೂಡಿದ್ದು ಬಗೆಹರಿಯದ ಸಮಸ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳಲಾಗುತ್ತದೆ.

ಈ ಗ್ರಾಮದಲ್ಲಿ ಹಣಕಾಸಿನ ವ್ಯವಸ್ಥೆಗೆ ಹಿರೇಲಿಂಗೇಶ್ವರ ಸಹಕಾರಿ ರೈತ ಕೂಟ ಬ್ಯಾಂಕ್ ಮತ್ತು ಸ್ತ್ರೀಶಕ್ತಿ ಸಂಘಗಳು, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವನ್ನು ಹೊಂದಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೧.೧% ಆಗಿದೆ. ಅಂಚೆ, ಬಿಎಸ್‌ಎನ್‌ಎಲ್, ಶಿಕ್ಷಣ, ಕಂದಾಯ, ರಕ್ಷಣೆ, ಅರಣ್ಯ, ಕೆಎಚ್‌ಡಿಸಿ ಸೇರಿದಂತೆ ಒಟ್ಟು ೧೨ ಜನ ಸರ್ಕಾರಿ ನೌಕರರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಕರೆಮಾದನಹಳ್ಳಿಯಲ್ಲಿ ಯಾವುದೇ ಆರೋಗ್ಯ ಕೇಂದ್ರಗಳಿಲ್ಲದಿದ್ದರೂ ಕುಟುಂಬ ಕಲ್ಯಾಣ ವ್ಯವಸ್ಥೆಯಿದ್ದು ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ಮಾಹಿತಿ ನೀಡುತ್ತಾರೆ. ಗ್ರಾಮದ ಕರೆಯಾಲಪ್ಪ ನಾಟಿ ಔಷಧ ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೯ ಅಂಗಡಿಗಳಿವೆ. ಯಾವುದೇ ಐತಿಹಾಸಿಕ ನೆಲೆಯ

ಸ್ಮಾರಕಗಳು, ಶಾಸನ, ಹಸ್ತಪ್ರತಿಗಳಿಲ್ಲದಿದ್ದರೂ ಗ್ರಾಮದಲ್ಲಿ ಎರಡು ಕರಿಗಲ್ಲು ಮತ್ತು ಅರಳಿಕಟ್ಟೆಯನ್ನು ಹೊಂದಿದೆ.

ಧಾರ್ಮಿಕ ಕೇಂದ್ರಗಳಾದ ಈಶ್ವರ, ಗ್ರಾಮದೇವತೆ ಮಾರಮ್ಮ, ಭೂತಪ್ಪನ ಪೌಳಿಗಳಿವೆ. ಇಲ್ಲಿ ಮುಸ್ಲಿಂ ಜನಾಂಗವಿದ್ದು ಬಾಬಯ್ಯನ ದೇವಾಲಯವಿದೆ. ಪ್ರತಿ ವರ್ಷವೂ ಮಾರಮ್ಮನ ಜಾತ್ರೆಯನ್ನು ಮಾಡಿ ವಿಶೇಷವಾಗಿ ಆಚರಣೆ ಮಾಡುತ್ತಾರೆ.

ಮದಕರಿನಾಯಕ ಸೇನೆ, ಸುಭಾಷ್‌ಚಂದ್ರ ಬೋಸ್ ಯುವಕಸಂಘ, ದಲಿತ ಯುವಕ ಸಂಘವನ್ನು ಹೊಂದಿದೆ. ಭಜನೆ ಕಲಾವಿದರಾದ ಗುರುಲಿಂಗಪ್ಪ, ರಾಮಣ್ಣ, ಮಹಾಲಿಂಗಪ್ಪ, ಜಯಣ್ಣ ಸ್ಥಳೀಯವಾಗಿ ಹೆಸರಾಗಿದ್ದಾರೆ ಹಾಗೂ ಗುರುಲಿಂಗಪ್ಪ ತಮಟೆ ಕಲಾವಿದರಾಗಿಯೂ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ.

## ಕುರುಬರಹಳ್ಳಿ

ಕುರುಬರಹಳ್ಳಿಯೂ ಸಿರಾ ತಾಲ್ಲೂಕು ಕೇಂದ್ರದಿಂದ ವಾಯುವ್ಯ ದಿಕ್ಕಿನಲ್ಲಿದೆ. ಸಿರಾ–ಬುಕ್ಕಾಪಟ್ಟಣ ತಾವರೆಕೆರೆ ಮಾರ್ಗದಲ್ಲಿ ಬುಕ್ಕಾಪಟ್ಟಣದಿಂದ ೫ ಕಿ.ಮೀ. ದೂರದಲ್ಲೂ, ಸಿರಾದಿಂದ ೨೫ ಕಿ.ಮೀ. ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಇದೊಂದು ಕುರುಬ ಜನಾಂಗಿಕ ಗ್ರಾಮ ರಚನೆಯಾಗಿರುವುದರಿಂದಾಗಿ ಕುರುಬರ ಹಳ್ಳಿ ಎಂದು ಕರೆಯಲಾಗಿದೆ.

ಬಯಲು ನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇದರ ಭೌಗೋಳಿಕ ಒಟ್ಟು ವಿಸ್ತೀರ್ಣವು ೬೪೪.೭೮ ಹೆಕ್ಟೇರ್‌ಗಳಾಗಿದ್ದು ಇದಕ್ಕೆ ಜೋಗಯ್ಯನ ಪಾಳ್ಯವು ಮಜರೆಯಾಗಿ ಸೇರಿಕೊಂಡಿದೆ. ಈ ಗ್ರಾಮದಲ್ಲಿ ೮೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಹಾಗೆಯೇ ವಾರ್ಷಿಕ ಸರಾಸರಿ ಮಳೆಯ ಪ್ರಮಾಣವು ೪೪೮.೯ ಮಿ.ಮೀ. ಆಗಿದೆ. ಬಿಸಿಲು ೩೧೨ ಡಿ.ಸೆಂ. ಚಳಿ ೧೧.ಡಿ.ಸೆ. ಇದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುವುದೆ.

ಈ ಗ್ರಾಮದಲ್ಲಿ ಒಟ್ಟು ೨೮೬ ಮನೆಗಳಿದ್ದು, ೧೨೪೨ ಜನಸಂಖ್ಯೆಯನ್ನು ಹೊಂದಿದೆ. ಇವು ಕಲ್ಲಿನ, ಹೆಂಚಿನ, ಸೀಟಿನ ಮನೆಯಾಗಿವೆ. ಇದರ ಭಾಷೆ ಕನ್ನಡವಾಗಿದೆ. ಇದರಲ್ಲಿ ಕುಂಚಿಟಿಗ ಆದಿ ಕರ್ನಾಟಕ ಬೋವಿ ನಾಯಕರ ಮನೆಗಳಿವೆ. ಇವು ವಸತಿ ಯೋಜನೆಗಳಾದ ಜನತಾ, ಆಶ್ರಮ, ಇಂದಿರಾ ಅವಾಸ್ ಯೋಜನೆ ಅಡಿ ನಿರ್ಮಾಣವಾಗಿ ಗ್ರಾಮದ ಮುಖ್ಯ ಉದ್ಯೋಗ ಕೃಷಿಯಾಗಿದ್ದು, ಶೇಂಗಾ ಪ್ರಮುಖವಾಗಿರುತ್ತದೆ. ಇದರೊಂದಿಗೆ ರಾಗಿ, ಭತ್ತ, ತೆಂಗು, ಅಡಿಕೆ–ದ್ವಿದಳಧಾನ್ಯಗಳನ್ನು ಬೆಳೆಯುತ್ತಾರೆ. ಇದಲ್ಲದೇ ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಬೀಡಿ ಸುತ್ತುವುದು ಹಲ್ಲರ್– ಅಥವಾ ಫ್ಲೋರ್ ಮಿಲ್ಸ್, ಟೈಲರ್ ಕೆಲಸ ಮಾಡುತ್ತಿದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ನೇರಳೆಗುಡ್ಡ ಪಂಚಾಯ್ತಿ, ತಹಶೀಲ್ದಾರ್ ಕಛೇರಿ ನೇರಲಗುಡ್ಡ ಪಂಚಾಯ್ತಿ ಮತ್ತು ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ.

ಈ ಪರಿಸರದಲ್ಲಿ ಕಾಡು ಪ್ರಾಣಿಗಳಾಗಿ ನರಿ, ಜಿಂಕೆ, ಮೊಲ, ಹಂದಿ, ಪಕ್ಷಿಗಳಾದ ನವಿಲು, ಗೊರವಂಕ, ಗಿಳಿ, ಕಾಗೆ ಹದ್ದು, ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ನಾಯಿ, ಕುರಿ, ಮೇಕೆ, ಕೋಳಿಗಳಿವೆ.

ಹಣಕಾಸು ವ್ಯವಸ್ಥೆಗೆ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದಿರುವುದು ಕಂಡು ಬರುತ್ತದೆ. ಹಾಗೂ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತಮ್ಮಣ್ಣ ಸ್ಮಾರಕ ಪ್ರೌಢಶಾಲೆ ಹೊಂದಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಉಚಿತ ಪುಸ್ತಕ ಸಮವಸ್ತ್ರ ಸೌಲಭ್ಯಗಳಿದ್ದು, ಉತ್ತಮ ಆಟದ ಮೈದಾನ ಕಾಂಪೌಂಡು ಹೊಂದಿದೆ. ಒಟ್ಟಾರೇ ೫೬.೯% ರಷ್ಟು ಸಾಕ್ಷರತೆಯ ಪ್ರಮಾಣವನ್ನು ಹೊಂದಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೬ ಚಿಲ್ಲರೆ ವ್ಯಾಪಾರದ ಕಂದಾಯ, ಸಾರಿಗೆ, ಶಿಕ್ಷಣ, ಕೆ.ಇ.ಬಿ ಅಂಚೆ ಇಲಾಖೆಯ ವಿವಿಧ ಹುದ್ದೆಗಳಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕ ಗಜೇಂದ್ರ ಸೇರಿದಂತೆ ಒಟ್ಟು ೯ ಜನ ಸರ್ಕಾರಿ ನೌಕರರಿದ್ದಾರೆ.

ಧಾರ್ಮಿಕ ಪರಂಪರೆಯಲ್ಲಿ ಆಂಜನೇಯ, ಮಾರಮ್ಮ, ಕೊಲ್ಲಾಪುರದಮ್ಮ, ಬೇವಿನಳ್ಳಮ್ಮ, ದೇವಾಲಯಗಳಿವೆ. ಸಾಂಪ್ರಾದಾಯಿಕ ಹಬ್ಬಗಳೊಂದಿಗೆ ಮಾರಮ್ಮನ ಜಾತ್ರೆಯನ್ನು ಪ್ರತಿವರ್ಷವು ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿದೆ. ರಂಗಭೂಮಿಯಲ್ಲಿ ಜನಪದ ಕಲೆಯಲ್ಲಿ ಈಗಲೂ ಪ್ರಸಿದ್ಧವಾಗಿದೆ ಎಂದು ಶಿಕ್ಷಕ ಮಂಜುನಾಥ್ ವಿವರಿಸುತ್ತಾರೆ. ಇರುವಲ್ಲಿ ರಂಗಭೂಮಿಯಲ್ಲಿ ತಿಮ್ಮಯ್ಯ ಮತ್ತು ಹರಿಗೆ ಕುಣಿತದಲ್ಲಿ ಶ್ರೀರಂಗಪ್ಪನವರು, ಸೋಬಾನೆ ಪದದಲ್ಲಿ ಹಳ್ಳಕ್ಕ, ಕರಿಯಮ್ಮನವರನ್ನು ಕಾಣಬಹುದಾಗಿದೆ.

# ಕುಂಬಾರಹಳ್ಳಿ

ಕುಂಬಾರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ–ಹುಯಿಲ್‌ದೊರೆ–ಹೊಸಕೆರೆ ಮಾರ್ಗದಲ್ಲಿ ಮಣ್ಣಮ್ಮನ ದೇವಸ್ಥಾನದಿಂದ ಎಡಭಾಗಕ್ಕೆ ಒಂದು ಕಿ.ಮೀ. ದೂರದಲ್ಲೂ, ಸಿರಾದಿಂದ ೧೮ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಕಂದಾಯ ಗ್ರಾಮವಾಗಿದೆ. ಕುಂಬಾರಹಳ್ಳಿಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೭೨೪.೫೩ ಹೆಕ್ಟೇರ್‌ಗಳಾಗಿವೆ. ಕುಂಬಾರ ಜನಾಂಗ ಈ ಗ್ರಾಮದ ಮೂಲ ಪುರು–ರಾಗಿದ್ದು ಕುಂಬಾರಹಳ್ಳಿ ಎಂದು ಹೆಸರಾಗಿದೆ. ಆದರೆ ಇಂದು ಈ ಜನಾಂಗದವರು ಒಂದು ಮನೆಯೂ ಇಲ್ಲ. ಪಕ್ಕದ ಸಾಕ್ಷಿಯಲ್ಲಿದ್ದಾರೆ. ಅವರ ಜಮೀನು ಕುಂಬಾರ ಹೊಲ ಎಂದು ಕರೆಯಲಾಗುವುದೆಂದು ಉಪನ್ಯಾಸಕ ಗಂಗಾಧರಯ್ಯ ವಿವರಿಸುತ್ತಾರೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇಲ್ಲಿ ಅರಣ್ಯ ಬೆಟ್ಟ, ಗುಡ್ಡ, ತೋಪುಗಳು ಕಂಡುಬರುವುದಿಲ್ಲ. ಇಲ್ಲಿ ಒಂದು ಕಟ್ಟೆಯಿದ್ದು ಮಳೆಗಾಲದಲ್ಲಿ ನೀರಿನಿಂದ ಕೂಡಿರುತ್ತದೆ. ಈ ಗ್ರಾಮದಲ್ಲಿ ೩೮ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಅಲ್ಲದೇ ಒಂದು ಕುಡಿಯುವ ನೀರಿನ ಸಿಸ್ಟನ್ ಮತ್ತು ಎರಡು ಕೈ ಪಂಪನ್ನು ಗ್ರಾಮಪಂಚಾಯಿತಿ ಕಿರುನೀರು ಸರಬರಾಜು ಇಲಾಖೆಯ ವತಿಯಿಂದ ವ್ಯವಸ್ಥೆ ಮಾಡಿದೆ.

ಈ ಗ್ರಾಮದಲ್ಲಿ ಒಟ್ಟು ೧೫೫ ಮನೆಗಳಿದ್ದು, ೭೪೬ ಜನಸಂಖ್ಯೆಯನ್ನು ಒಳಗೊಂಡಿದೆ. ಇವರ ಭಾಷೆ ಕನ್ನಡವಾಗಿದ್ದು, ಇಲ್ಲಿ ನಾಯಕ ದೊಡ್ಡ ಸಮುದಾಯವಾಗಿದೆ. ಆದಿ ಕರ್ನಾಟಕದವರ ಮನೆಗಳಿವೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ಇತ್ಯಾದಿಗಳಾಗಿವೆ. ಸಾಂಪ್ರದಾಯಕ ವಾಹನಗಳಾದ ೪ ಎತ್ತಿನ ಗಾಡಿ ಆಧುನಿಕ ವಾಹನಗಳಾದ ಟೆಂಪೋ, ಟ್ರಾಕ್ಟರ್, ಮಿನಿಟೆಂಪೋ, ದ್ವಿಚಕ್ರವಾಹನಗಳನ್ನು ಹೊಂದಿದ್ದು ಕಚ್ಚಾರಸ್ತೆ ಮತ್ತು ಡಾಂಬರಿನಿಂದ ಕೂಡಿದ ರಸ್ತೆಮಾರ್ಗವನ್ನು ಹೊಂದಿದೆ. ಬಿಸಿಲು ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ೪೪೯ ಮಿಮೀ ಮಳೆ ಬೀಳುತ್ತದೆ.

ಈ ಗ್ರಾಮದ ಮುಖ್ಯ ಉದ್ಯೋಗ ಕೃಷಿಯಾಗಿದೆ. ಇದರಲ್ಲಿ ಶೇಂಗಾ, ರಾಗಿ, ಭತ್ತ ಜೋಳ, ದ್ವಿದಳಧಾನ್ಯಗಳು, ತೆಂಗು, ಅಡಿಕೆ, ಹುಣಸೆ ಮರಗಳ ಬೆಳೆಗಳನ್ನು ಬೆಳೆಯುತ್ತಾರೆ. ಇವುಗಳೇ ವ್ಯಾಪಾರದ ಸರಕುಗಳಾಗಿವೆ. ಅಲ್ಲದೇ ಪ್ರಾಣಿಗಳ ವ್ಯಾಪಾರ ಪ್ರಮುಖ ಸರಕುಗಳಾಗಿವೆ. ಈ ಹಳ್ಳಿಯಲ್ಲಿಯೂ ವಾರ್ತಾ ಇಲಾಖೆಯ ದೇವರಾಜು ಸೇರಿದಂತೆ, ನ್ಯಾಯಾಂಗ, ಬಿಬಿಎಂ, ಸಾರಿಗೆ ರಕ್ಷಣೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಒಟ್ಟು ೭ ಜನ ಸರ್ಕಾರಿ ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ. ದೇವರಾಜಪ್ಪ ವಾರ್ತಾ ಮತ್ತು ಪ್ರಸಾರ ಇಲಾಖೆಯಲ್ಲಿ ಉಪನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವುದು ಈ ಗ್ರಾಮದ ವಿಶೇಷ. ಗೃಹ ಕೈಗಾರಿಕೆಗಳಲ್ಲಿ ಬೀಡಿ ಸುತ್ತುವುದು, ಟೈಲರ್ ಕೆಲಸ ಮಾಡುವುದು ತಿಳಿದು ಬರುತ್ತದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ, ರಾಮಲಿಂಗಾಪುರ ತಾಲ್ಲೂಕು, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ ಮತ್ತು ಸಿರಾ ತಹಶೀಲ್ದಾರ್ ಕಛೇರಿಯನ್ನು ರಾಮಲಿಂಗಪುರ ಗ್ರಾಮಪಂಚಾಯ್ತಿ ಮತ್ತು ಅಂಚೆ ಕಛೇರಿಯನ್ನು ಒಬ್ಬರು ಪಂಚಾಯಿತಿ ಸದಸ್ಯರನ್ನು ಒಳಗೊಂಡಿದ್ದು, ಬುಕ್ಕಾಪಟ್ಟಣ ಪೋಲಿಸ್ ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ. ಹಾಗೆಯೇ ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದ್ದು ಬಗೆಹರಿಯದ ಸಮಸ್ಯೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳಲಾಗುತ್ತಿದೆ.

ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೩.೬% ಆಗಿದೆ. ಇಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿಲ್ಲದಿದ್ದರೂ ಸಹ ಎರಡು ಸ್ತ್ರೀಶಕ್ತಿ ಸಂಘಗಳು, ಶ್ರೀಕ್ಷೇತ್ರ ಧರ್ಮಸ್ಥಳ ಸಂಘ, ಮದಕರಿ ನಾಯಕಸೇನೆ ಅಂಬೇಡ್ಕರ್‌ರವರ ದಲಿತ ಸಂಘವನ್ನು ಹೊಂದಿರುವುದನ್ನು ಕಾಣಬಹುದಾಗಿದೆ.

ಈ ಗ್ರಾಮದಲ್ಲಿ ಕುಟುಂಬ ಕಲ್ಯಾಣಪದ್ಧತಿಯನ್ನು ಹೊಂದಿದೆ. ಆಶಾಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಇಲ್ಲಿ ಕಂಡು ಬರುವಂತಹ ಜ್ವರ, ಕೆಮ್ಮು, ಬಿ.ಪಿ ಗಳಂತಹ ರೋಗಗಳಾಗಿವೆ. ಸಮುದಾಯದ ಸೌಲಭ್ಯಗಳಲ್ಲಿ ವಿಧವಾ ವೇತನ, ವೃದ್ದಾಪ್ಯ ವೇತನವನ್ನು ಪಡೆಯುತ್ತಿದ್ದು ಈ ಹಳ್ಳಿಯಲ್ಲಿ ಎರಡು ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಒಳಗೊಂಡಿದೆ. ಆಂಜಿನಯ್ಯ, ಓಬಳನರಸಿಂಹ, ಈ ಗ್ರಾಮದಲ್ಲಿ ಮಣ್ಣಮ್ಮ ದೇವರ ಮೆರವಣಿಗೆ ದೇವರ ಗುಡಿಗಳಿವೆ. ಕರುಗಲ್ಲು ಇದೆ.

ಈ ಗ್ರಾಮದ ಮಣ್ಣಮ್ಮ ಮೆರವಣಿಗೆ ದೇವರು, ಪೆಟ್ಟಿಗೆಯ ಆಕೃತಿಯಲ್ಲಿದ್ದು, ೨ ಸೋಮಗಳಿವೆ. ಈ ದೇವತೆಯನ್ನು ದೂರದ ಊರುಗಳಿಗೆ ಒಕ್ಕಲುಗೆ ಮನೆಗೆ ಕರೆದೊಯ್ಯುವ, ಬಲಿ, ಅರೆ, ಮಡಿಲಕ್ಕಿ, ಗದ್ದಿಗೆ ಸೇವೆಗಳಿವೆ. ಸೋಮನ ಕುಣಿತ ವಿಶೇಷವಾಗಿದ್ದು ಈ ಕಲೆಯಲ್ಲಿ ಸೋಮನಕುಣಿತದ ಪಾಪಯ್ಯ, ಯೋಗಾನಂದ, ನಾಗರಾಜು, ಪಾಪಣ್ಣ, ಗೀರೀಶ,

ನಾಗಮಾರಪ್ಪ, ಪ್ರಮುಖ ಸೋಮನ ಕುಣಿತ ಕಲಾವಿದರಾಗಿ ಖ್ಯಾತರಾಗಿದ್ದಾರೆ. ಪುಟ್ಟರಾಜು, ಹಳ್ಳಿ ಮಾರಪ್ಪ ಚಿಕ್ಕ ಪಾಪಯ್ಯ, ದೇವರು ಕರೆಯುವ ಪದ ಹೇಳುವ ಅಪರೂಪದ ಕಲಾವಿದರಾಗಿ, ಇವರು ಹಲವಾರು ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲುಗೊಳ್ಳುತ್ತಿದ್ದಾರೆಂದು ರಂಗ ನಿರ್ದೇಶಕರಾದ ನಾಗೇಂದ್ರ ಪ್ರಸಾದ್ ಸಂಪೂರ್ಣ ರಾಮಾಯಣ, ಕುರುಕ್ಷೇತ್ರ ನಾಟಕ ನಿರ್ದೇಶಿಸುತ್ತಿದ್ದಾರೆ.

## ಕುಣಗಾಟನಹಳ್ಳಿ

ಕುಣಗಾಟನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣದ ನೈರುತ್ಯಕ್ಕಿದೆ. ಈ ಗ್ರಾಮವು ಸಿರಾ ಹೊನ್ನೇನಹಳ್ಳಿ ಕಳ್ಳಂಬೆಳ್ಳ ಮಾರ್ಗದಲ್ಲಿ ೯ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಹೊನ್ನೇನಹಳ್ಳಿಯ ಜೋಡಿ ಗ್ರಾಮವಾಗಿದೆ. ಈ ಗ್ರಾಮಕ್ಕೆ ಕಂಬದರಂಗಪ್ಪನ ಪಾಳ್ಯ ಎಂಬ ಮಜರೆ ಗ್ರಾಮವನ್ನು ಹೊಂದಿದೆ

ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೧೯೮ ಹೆಕ್ಟೇರ್‌ಗಳಾಗಿದೆ. ಬಯಲುನಾಡಿನ ಪ್ರದೇಶವಾಗಿದ್ದು ಯಾವುದೇ ಅರಣ್ಯ ಬೆಟ್ಟಗುಡ್ಡಗಳನ್ನು ಹೊಂದಿಲ್ಲದಂತಹ ಹಳ್ಳಿಯಾಗಿದೆ. ಈ ಗ್ರಾಮದಲ್ಲಿ ವಾರ್ಷಿಕ ಸರಾಸರಿ ೪೫೧ ಮಿ.ಮೀ. ಮಳೆಯಾಗುತ್ತದೆ. ಉಷ್ಣಾಂಶ ೩೮ ಡಿ.ಸೆ. ಇದ್ದರೆ ಚಳಿ ೧೨ ಡಿ.ಸೆ. ಇರುತ್ತದೆ.

ಈ ಗ್ರಾಮದಲ್ಲಿ ೨೫ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಅಲ್ಲದೇ ಕುಡಿಯುವ ನೀರಿಗಾಗಿ ಸಿಸ್ಟನ್ ಮತ್ತು ಎರಡು ಕೈ ಪಂಪುಗಳಿವೆ. ಈ ಗ್ರಾಮದ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿ, ಕಂಡು ಬಂದರೆ, ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ಸಾಕು ಪ್ರಾಣಿಗಳಾಗಿವೆ. ಕಾಗೆ, ಗೂಬೆ, ಹದ್ದು, ಗುಬ್ಬಚ್ಚಿ, ಕೋಗಿಲೆ, ಸಾಕು ಪ್ರಾಣಿಗಳಾಗಿವೆ.

ಈ ಗ್ರಾಮದಲ್ಲಿ ಒಟ್ಟು ೧೦೮ ಮನೆಗಳಿದ್ದು, ೪೨೦ ಜನಸಂಖ್ಯೆಯನ್ನು ಹೊಂದಿದೆ. ಇವರ ಭಾಷೆ ಕನ್ನಡವಾಗಿದೆ. ಇಲ್ಲಿ ಕುಂಚಿಟಿಗ, ದೊಡ್ಡ ಸಮುದಾಯವಾಗಿದ್ದು, ಬಂಜಾರ, ನಾಯಕ ಆದಿ ಕರ್ನಾಟಕ ಮಡಿವಾಳ, ಕುಂಬಾರ ಕಿರುಸಮುದಾಯವಾಗಿದೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ ಅನ್ನ ಮತ್ತು ವಿಶೇಷ ಸಂದರ್ಭದಲ್ಲಿ ಬಾಡೂಟ, ಪಾಯಸ, ಹೋಳಿಗೆ ಇತ್ಯಾದಿಗಳಾಗಿವೆ.

ಹಳ್ಳಿಯ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಇದರಲ್ಲಿ ಶೇಂಗಾ ಇದರೊಂದಿಗೆ ರಾಗಿ, ಭತ್ತ, ಜೋಳ, ದ್ವಿದಳ ಧಾನ್ಯಗಳು, ತೆಂಗು, ಅಡಿಕೆ, ಹುಣಸೆ ಮರಗಳು ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಮತ್ತು ವ್ಯಾಪಾರದ ಸರಕುಗಳಾಗಿವೆ. ಈ ಪ್ರದೇಶದಲ್ಲಿ ಶಿಕ್ಷಣ ಸಾರಿಗೆ, ಅರಣ್ಯ ಇಲಾಖೆಗಳಲ್ಲಿ ೩ ಜನ ಸರ್ಕಾರಿ ಸೇವೆಯಲ್ಲಿದ್ದುಕೊಂಡು, ಹಳ್ಳಿಯಲ್ಲಿ ಕುಂಬಾರಿಕೆ, ಬೀಡಿಸುತ್ತುವುದು ಸಣ್ಣ ಪ್ರಮಾಣದ ಕೈಗಾರಿಕೆಗಳಾಗಿವೆ. ಮಡಿಕೆ, ಶೇಂಗಾ, ಹುಣಸೆಹಣ್ಣು ವ್ಯಾಪಾರಿ ಸರಕಾಗಿದೆ.

ಈ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ ಬುಕ್ಕಾಪಟ್ಟಣ ಜಿಲ್ಲಾ ಮತ್ತು ಹುಯಿಲ್‌ದೊರೆ ಪಂಚಾಯ್ತಿ ಸಿರಾ ತಹಶೀಲ್ದಾರ್ ಕಛೇರಿ ಹುಯಿಲ್ ದೊರೆ ಗ್ರಾಮಪಂಚಾಯ್ತಿ ಕೇಂದ್ರಗಳಾಗಿದ್ದು, ಒಬ್ಬರು ಸದಸ್ಯರನ್ನು ಒಳಗೊಂಡಿದೆ. ವಡ್ಡನಹಳ್ಳಿ ಅಂಚೆಯನ್ನು ಮತ್ತು ಚರ ದೂರವಾಣಿಗಳಾದ ಮೊಬೈಲ್‌ಗಳನ್ನು ಸಂಪರ್ಕ ಸಾಧನಗಳಾಗಿ ಹೊಂದಿದೆ. ಗ್ರಾಮನ್ಯಾಯ ಮಂಡಳಿಯನ್ನು ಹೊಂದಿದ್ದು, ಬಗೆಹರಿಯದ ಸಮಸ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳಲಾಗುತ್ತಿದೆ.

ಈ ಗ್ರಾಮದಲ್ಲಿ ಅಂಗನವಾಡಿಕೇಂದ್ರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು, ಒಟ್ಟು ಸಾಕ್ಷರತೆಯ ಪ್ರಮಾಣವು ೫೮.೩೮ ರಷ್ಟಿದೆ. ಇಲ್ಲಿ ೩ ಸ್ತ್ರೀ ಶಕ್ತಿ ಕೇಂದ್ರಗಳಿದ್ದು, ಒಂದು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಬ್ಯಾಂಕಿಂಗ್ ಸೌಲಭ್ಯವನ್ನು ಪಡೆಯುತ್ತವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ.

ಈ ಗ್ರಾಮವು ಯಾವುದೇ ಗ್ರಂಥಾಲಯ, ಆಟದ ಮೈದಾನವು ಇಲ್ಲದಿದ್ದರೂ ಕುಟುಂಬ ಕಲ್ಯಾಣ ಪದ್ಧತಿಯನ್ನು ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟೀನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಅಲ್ಲದೇ ಈ ಗ್ರಾಮದಲ್ಲಿ ಲಕ್ಷ್ಮಮ್ಮ ನಾಟಿ ವೈದ್ಯರಾಗಿದ್ದಾರೆ. ಇಲ್ಲಿ ಕಾಣಿಸಿಕೊಳ್ಳುವ ರೋಗಗಳು ಜ್ವರ, ಚಳಿ, ಕೆಮ್ಮು ಇತ್ಯಾದಿಗಳಾಗಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವಿಕಲಚೇತನ, ವೃದ್ಧಾಪ್ಯ ವೇತನ, ವಿಧವಾವೇತನ, ಕಲ್ಯಾಣ ಕಾರ್ಯಕ್ರಮಗಳನ್ನು ಪಡೆದುಕೊಳ್ಳುತ್ತಿದೆ. ಹಾಗೆಯೇ ಈ ಗ್ರಾಮದಲ್ಲಿ ಐದು ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಒಳಗೊಂಡಿದೆ.

ಯಾವುದೇ ಐತಿಹಾಸಿಕ ನೆಲೆಯ ಕುರುಹುಗಳು ಕಂಡುಬರದಿದ್ದರೂ ಸಹ ಗ್ರಾಮದಲ್ಲಿ ಒಂದು ಅರಳಿಕಟ್ಟೆಯನ್ನು ಹೊಂದಿದೆ. ಈ ಗ್ರಾಮದಲ್ಲಿ ಧಾರ್ಮಿಕ ಕೇಂದ್ರಗಳಾಗಿ ಯುಗಾದಿಯ ನಂತರ ಮಾರಮ್ಮನ ಜಾತ್ರೆಯನ್ನು ಮಾಡುತ್ತಾರೆ. ಇದಕ್ಕೆ ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿದೆ. ದಸರಾ, ದೀಪಾವಳಿ, ಯುಗಾದಿ, ರಾಮನವಮಿ, ಗೌರಿಗಣೇಶನ ಹಬ್ಬವನ್ನು ಆಚರಿಸುತ್ತಾರೆ.

ನಾಯಕ ಜನಾಂಗದ ಕುಲದೇವತೆ ವೀರಗಾಟರಾಯ ನಾಗಿದ್ದು, ಈ ದೇವರ ಉತ್ಸವದಲ್ಲಿ ಕುಣಿಯುವ, ದೇವರು ಮೆರೆಸುವ ವಿಶೇಷ ವ್ಯಕ್ತಿ ಈ ಗ್ರಾಮದಲ್ಲಿದ್ದ ಈರಣ್ಣ ಆತನ ಹೆಸರಿನಲ್ಲೆ ಕುಣಿಗಾಟ (ಕಾಟ)ನಹಳ್ಳಿ ಎಂದಾಗಿದೆ ಎಂಬುದು ಇಲ್ಲಿನ ಗ್ರಾಮಸ್ಥರ ಅಭಿಮತವಾಗಿದೆ.

## ಕಾಟಮಾಳ

ಕಾಟಮಾಳ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದ್ದು ೧೯ ಕಿ.ಮೀ. ದೂರದಲ್ಲಿದೆ. ಸಿರಾ ಚೇಳೂರು ರಸ್ತೆಯಲ್ಲಿ ಕಾಟಮಾಳಗೇಟ್‌ನಿಂದ ಬಲಕ್ಕೆ ಒಂದು ಕಿ.ಮೀ. ದೂರದಲ್ಲಿದೆ. ಇದು ಸಿರಾ ತಾಲ್ಲೂಕಿನ ಗಡಿ ಗ್ರಾಮವಾಗಿದೆ. ಮತ್ತು ಕಂದಾಯ ಗ್ರಾಮವಾಗಿದೆ. ಈ ಗ್ರಾಮವು ಕಾಟಮಾಳವೆಂದು ಹೆಸರು ಪಡೆಯಲು ಕಾಡುಗೊಲ್ಲ ಜನಾಂಗದಲ್ಲಿ ಕಾಟಮಾಳಮ್ಮ ಒಬ್ಬ ಸಾಂಸ್ಕೃತಿಕ ಮಹಿಳೆಯಾಗಿದ್ದು ಆಕೆಯ ಹೆಸರಿನಿಂದಲೇ ಈ ಗ್ರಾಮವನ್ನು ಕಾಟಮಾಳ (ಅಮ್ಮನಹಟ್ಟಿ) ಹೆಸರಾಯಿತೆಂಬ ನಂಬಿಕೆಯಿದೆ. ಈ ಹಳ್ಳಿಯ ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೮.೫೦ ಹೆಕ್ಟೇರ್‌ಗಳಾಗಿವೆ. ಕಾಡು ಗೊಲ್ಲರ ಸಾಂಸ್ಕೃತಿಕ ವೀರ ಚಿತ್ರ ದೇವರ ಮಡದಿ ಮಾಳಮ್ಮ ಈ ಅರ್ಥದಲ್ಲಿ ಕಾಟಮಾಳನಹಳ್ಳಿ ಎಂದು ಕರೆಯಲಾಗಿದೆ. ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇಲ್ಲಿ ಯಾವುದೇ ಅರಣ್ಯ ಬೆಟ್ಟಗುಡ್ಡ, ತೋಪುಗಳು ಕಂಡುಬರುವುದಿಲ್ಲ. ವಾರ್ಷಿಕ ಮಳೆಯ ಪ್ರಮಾಣ ೪೫೨ ಮಿ.ಮೀ. ಸರಾಸರಿಯಾಗಿದೆ. ಬಿಸಿಲು ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ.ಇಲ್ಲಿ ೩೫ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಅಲ್ಲದೇ ಕುಡಿಯುವ ನೀರಿನ ವ್ಯವಸ್ಥೆಗೆ ಸಿಸ್ಟನ್ ಮತ್ತು ೩ ಕೈ ಪಂಪುಗಳ ವ್ಯವಸ್ಥೆ ಮಾಡಲಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಕೆಯಾಗುವುದೆ.

ಈ ಗ್ರಾಮದಲ್ಲಿ ಒಟ್ಟು ೯೩ ಮನೆಗಳಿದ್ದು ೩೫೨ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಗೊಲ್ಲ, ಕುಂಚಿಟಿಗ, ಬೋವಿ, ವೈಷ್ಣವ, ಸಾದರ ಮನೆಗಳಿವೆ. ಇವರ ಮುಖ್ಯ ಭಾಷೆ ಕನ್ನಡ ಮುಖ್ಯ ಆಹಾರವು ರಾಗಿ ಮುದ್ದೆ, ಅನ್ನ ವಿಶೇಷ ಸಂದರ್ಭದಲ್ಲಿ ಬಾಡೂಟ, ಪಾಯಸ, ಹೋಳಿಗೆ, ಕಿಚುಡಿ ಇತ್ಯಾದಿಗಳಾಗಿವೆ. ಸಾಂಪ್ರದಾಯಿಕ ವಾಹನಗಳು ಕಂಡು ಬರದಿದ್ದರೂ ಆಧುನಿಕ ವಾಹನಗಳಾದ ಟ್ರಾಕ್ಟರ್, ಮಿನಿಟೆಂಪೋ, ದ್ವಿಚಕ್ರವಾಹನಗಳು ಇವೆ. ಈ ಗ್ರಾಮವು ಕಚ್ಚಾರಸ್ತೆ ಮತ್ತು ಚರಂಡಿ ವ್ಯವಸ್ಥೆಯನ್ನು ಹೊಂದಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಗಿಳಿ, ಗೂಬೆ, ಕೊಕ್ಕರೆ, ಕಂಡು ಬಂದರೆ ಕಾಡು ಪ್ರಾಣಿ ನರಿ, ಮೊಲ, ಜಿಂಕೆ, ಕಂಡು ಬರುತ್ತವೆ. ಹಸು, ಕುರಿ, ಮೇಕೆ, ನಾಯಿ, ಸಾಕು ಪ್ರಾಣಿಗಳಾಗಿವೆ.

ಹಳ್ಳಿಯ ಮುಖ್ಯ ಉದ್ಯೋಗವಾದ ಕೃಷಿಯಲ್ಲಿ ಶೇಂಗಾ ಪ್ರಮುಖ ಬೆಳೆ ರಾಗಿ, ಭತ್ತ, ಜೋಳ, ತೆಂಗು, ಅಡಿಕೆ ಇತ್ಯಾದಿಗಳು ವ್ಯಾಪರದ ಪ್ರಮುಖ ಸರಕುಗಳು ಆಗಿವೆ. ಇಲ್ಲಿ ಒಂದು ಸಣ್ಣ ಕೈಗಾರಿಕೆಯಲ್ಲಿ ಇಟ್ಟಿಗೆ ಫ್ಯಾಕ್ಟರಿ ಇದೆ. ಕುರಿ, ಹೊಂಗೆ ಬೀಜದ ವ್ಯಾಪಾರವೂ ಇದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ ಬುಕ್ಕಾಪಟ್ಟಣ ಗೋಪಾಲದೇವರಹಳ್ಳಿ ಜಿಲ್ಲಾ ತಾಲ್ಲೂಕು ಪಂಚಾಯ್ತಿ, ಸಿರಾ ತಹಸೀಲ್ದಾರ್ ಕಛೇರಿಯನ್ನು ಗೋಪಾಲದೇವರಹಳ್ಳಿ ಗ್ರಾಮಪಂಚಾಯ್ತಿಯನ್ನು ಇದರಲ್ಲಿ ಒಬ್ಬರು ಸದಸ್ಯರು ಕಳ್ಳಂಬೆಳ್ಳ ವಿದ್ಯುತ್ ಮತ್ತು ಪೋಲಿಸ್ ಠಾಣೆಯನ್ನು ಹೊಂದಿದೆ. ಅಲ್ಲದೇ ಗ್ರಾಮದಲ್ಲಿ ಗೋಪಾಲದೇವರಹಳ್ಳಿ ಅಂಚೆ ಕಛೇರಿಯನ್ನು ಒಳಗೊಂಡಿದೆ. ಗ್ರಾಮ ನ್ಯಾಯಮಂಡಳಿಯಲ್ಲಿ ಬಗೆ ಹರಿಯದ ಸಮಸ್ಯೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳುತ್ತಾರೆ.

ಈ ಗ್ರಾಮದಲ್ಲಿ ಒಂದು ಅಂಗನವಾಡಿಕೇಂದ್ರ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಇಲ್ಲಿನ ಒಟ್ಟು ಸಾಕ್ಷರತೆಯ ಪ್ರಮಾಣವು ೫೪.೮ ರಷ್ಟಿದೆ. ಅಲ್ಲದೇ ಯಾವುದೇ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿಲ್ಲದಿದ್ದರೂ ಒಂದು ಸ್ತ್ರೀಶಕ್ತಿ ಸಂಘವನ್ನು ಹೊಂದಿದೆ. ಈ ಗ್ರಾಮವು ಕುಟುಂಬ ಕಲ್ಯಾಣವನ್ನು ಹೊಂದಿದ್ದು ಆಶಾಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ ಅಲ್ಲದೇ ಬಾಲಣ್ಣ, ಸಿದ್ದಲಿಂಗಪ್ಪ ಎಂಬುವರು ನಾಟಿ ಓಷಧಿಯನ್ನು ನೀಡುತ್ತಾರೆ. ಇಲ್ಲಿನ ಪ್ರಮುಖ ರೋಗಗಳೆಂದರೆ ಜ್ವರ, ಕೆಮ್ಮು, ಚಳಿ, ತಲೆನೋವು ಇತ್ಯಾದಿಗಳು.

ಸಮುದಾಯದ ವೃದ್ದಾಪ್ಯ, ವಿಧುವಾ, ಅಂಗವಿಕಲ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದು, ೩ ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಹೊಂದಿದೆ. ಯಾವುದೇ ಐತಿಹಾಸಿಕವಾಗಿ ಎರಡು ಕರುಗಳಿವೆ. ಧಾರ್ಮಿಕ ಸಾಂಪ್ರದಾಯಕ್ಕೆ ಯಲ್ಲಮ್ಮ, ಕಾಟಮ್ (ಲಿಂಗೇಶ್ವರ) ಕದರಿನರಸಿಂಹಸ್ವಾಮಿ ದೇವಾಲಯಗಳಿವೆ. ಹಾಗೆಯೇ ಪಕ್ಕದಲ್ಲಿ ಒಂದು ತಿಪ್ಪೇರುದ್ರಸ್ವಾಮಿ ಮಠವನ್ನು ಹೊಂದಿದೆ. ಇಲ್ಲಿ ಪ್ರತಿ ವರ್ಷವು ಕಾಟಮಾಳಮ್ಮ ಜಾತ್ರೆಯು ನಡೆಯುತ್ತದೆ. ಈ ಮಠ ಜಾತ್ಯಾತ್ಯಾತೀತ ಮಠವಾಗಿದ್ದು, ಗುರುಭಕ್ತಿ ಸ್ವೀಕರಿಸಿದ ಹತ್ತಾರು, ಭಕ್ತರು, ಸಾದುಗಳು ಇಲ್ಲಿ ನೆಲಸಿದ್ದಾರೆ. ಮೈಸೂರು ಸಿರಾ ರಸ್ತೆಗೆ

ಮಠ ಹೊಂದಿಕೊಂಡಿದೆ. ಸಾಂಸ್ಕೃತಿಕ ರಂಗದಲ್ಲಿ ಕುರುಬೇಗೌಡ ಎಂಬುವರು ರಂಗಭೂಮಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಚಳುವಳಿ ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಗೌರಿಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ.

## ಕಾಲಪ್ಪನಹಳ್ಳಿ

ಕಾಲಪ್ಪನಹಳ್ಳಿಯೂ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ ಈ ಗ್ರಾಮವು ಸಿರಾ ಹೊನ್ನೇನಹಳ್ಳಿ ಕಳ್ಳಂಬೆಳ್ಳ ಮಾರ್ಗದಲ್ಲಿದ್ದು ಸಿರಾದಿಂದ ೧೪.೫ ಕಿ.ಮೀ. ದೂರದಲ್ಲಿರುವ ಗ್ರಾಮವು ಕಂದಾಯ ಗ್ರಾಮವಾಗಿದೆ. ಕಾವಲಪ್ಪ ಎಂಬುದು ನಂತರ ಕಾಲಪ್ಪ ಎಂದಾಗಿದೆ. ಇವರೇ ಗ್ರಾಮದ ಮೂಲದವರು. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣವು ೧೩೪೪.೯೧ ಹೆಕ್ಟೇರ್‌ಗಳಾಗಿವೆ. ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಯಾವುದೇ ಅರಣ್ಯ ಬೆಟ್ಟ ಗುಡ್ಡಗಳು ಕಂಡುಬರುವುದಿಲ್ಲ. ಇಲ್ಲಿ ಕೆರೆ ಕಟ್ಟೆಗಳು ಇಲ್ಲದಿದ್ದರೂ ೧೦ ಕೊಳವೆ ಬಾವಿಗಳಿದ್ದು ಕುಡಿಯುವ ನೀರಿಗೆ ಮತ್ತು ಕೃಷಿಗೆ ಸಹಾಯಕವಾಗಿವೆ. ಇಲ್ಲಿನ ವಾರ್ಷಿಕ ೪೨೮.೩ ಮಿ.ಮೀ. ಮಳೆಯಾಗುತ್ತದೆ. ಬಿಸಿಲು ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ.

ಕುಡಿಯಲು ಗ್ರಾಮ ಪಂಚಾಯಿತಿ ಕರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಕಾಡಿನ ಪರಿಸರವಾಗಿರುವುದರಿಂದ ಹಂದಿ, ನರಿ, ಮೊಲ, ಜಿಂಕೆ, ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎತ್ತು, ಕುರಿ, ಮೇಕೆ, ಸಾಕುತ್ತಾರೆ. ಈ ಹಳ್ಳಿಯಲ್ಲಿ ಒಟ್ಟು ೧೫ ಮನೆಗಳಿದ್ದು ೪೮ ಜನಸಂಖ್ಯೆಯನ್ನು ಹೊಂದಿದೆ ಅಲ್ಲದೇ ಕನ್ನಡ ಭಾಷೆಯನ್ನು ಹೊಂದಿದೆ ಇದರಲ್ಲಿ ಕುಂಚಿಟಿಗ ಬೋವಿಯರ ಮನೆಗಳಿವೆ ಮತ್ತು ಇವರ ಆಹಾರ ಮುದ್ದೆ, ಅನ್ನ ಮತ್ತು ವಿಶೇಷ ಸಂದರ್ಭದಲ್ಲಿ ಬಾಡೂಟ, ಪಾಯಸ, ಹೋಳಿಗೆ ಇತ್ಯಾದಿಗಳಾಗಿವೆ. ಮತ್ತು ಆಧುನಿಕ ವಾಹನಗಳಾದ ಮಿನಿಟೆಂಪೋ ದ್ವಿಚಕ್ರವಾಹನಗಳನ್ನು ಹೊಂದಿದೆ. ಇಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಅದರಲ್ಲಿ ಶೇಂಗಾ, ರಾಗಿ ಜೋಳ ದ್ವಿದಳ ಧಾನ್ಯಗಳ ಪ್ರಮುಖವಾಗಿವೆ. ಅಲ್ಲದೇ ತೆಂಗು ಅಡಿಕೆ ಮತ್ತು ವಿರಳವಾಗಿ ಹುಣಸೆಮರಗಳು ಹೇರಳವಾಗಿ ಕಂಡುಬರುತ್ತವೆ. ಇವು ವ್ಯಾಪಾರದ ಮುಖ್ಯ ಸರಕುಗಳಾಗಿವೆ.

ಈ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾಪಂಚಾಯ್ತಿ ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ ತಹಶೀಲ್ದಾರ್ ಕಛೇರಿ ದೊಡ್ಡ ಅಗ್ರಹಾರ ಗ್ರಾಮಪಂಚಾಯ್ತಿ ವಡ್ಡನಹಳ್ಳಿ ಅಂಚೆ ಸಂಪರ್ಕ ಹೊಂದಿದೆ. ಕಳ್ಳಂಬೆಳ್ಳ ಪೋಲಿಸ್‌ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ. ಅಲ್ಲದೇ ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದ್ದು ಬಗೆಹರಿಯದ ಸಮಸ್ಯೆಗಳನ್ನು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳನ್ನು ತೀರ್ಮಾನಿಸಿಕೊಳ್ಳುತ್ತಾರೆ.

ಈ ಗ್ರಾಮದಲ್ಲಿ ಶಿಕ್ಷಣ ಇಲಾಖೆಯ ಯಾವುದೇ ಕೇಂದ್ರಗಳಿಲ್ಲದಿದ್ದರೂ ಒಂದು ಸ್ತ್ರೀಶಕ್ತಿ ಸಂಘವನ್ನು ಹೊಂದಿದೆ. ಆದರೆ ಈ ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣವು ೬೫.೬% ರಷ್ಟಿದೆ.

ಕಾಲಪ್ಪನಹಳ್ಳಿಗೆ ಆರೋಗ್ಯ ಕೇಂದ್ರ ಆಶಾಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿನೀಡಿ ಆರೋಗ್ಯದ ಬಗ್ಗೆ ತಿಳಿಸುತ್ತಾರೆ ಮತ್ತೆ ಇಲ್ಲಿ ಜ್ವರ, ಕೆಮ್ಮು ಇತ್ಯಾದಿ ರೋಗಗಳು ಕಂಡುಬರುತ್ತವೆ. ಸರ್ಕಾರದ ಸಮುದಾಯ ಸೌಲಭ್ಯವನ್ನು ಪಡೆಯುತ್ತಿದ್ದು ಇಲ್ಲಿ ಅಂಗಡಿ ಹೋಟೆಲ್‌ಗಳು ಕಂಡು ಬರುವುದಿಲ್ಲ.

ಈ ಗ್ರಾಮದಲ್ಲಿ ಧಾರ್ಮಿಕ ಕೇಂದ್ರಗಳಾಗಿ ತಿಮ್ಮಪ್ಪ, ದುರ್ಗಮ್ಮನ ದೇವಾಲಯಗಳಿವೆ. ಹಾಗೆಯೇ ವರ್ಷಕ್ಕೊಮ್ಮೆ ದುರ್ಗಮ್ಮನ ಜಾತ್ರೆಯನ್ನು ಮಾಡಿ ಅದರಲ್ಲಿ ಆರತಿ ಮತ್ತು ಬಲಿ ನೀಡುವುದು ವಿಶೇಷವಾಗಿದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಗೌರಿಗಣೇಶನ ಹಬ್ಬಗಳನ್ನು ವಿಜೃಂಭಣೆಯಿಂದ ಮಾಡುತ್ತಾರೆ. ಮರಡಿ ಗುಡ್ಡದ ರಂಗನಾಥನಿಗೆ ಆರತಿ ಮಾಡುತ್ತಾರೆ.

## ಕ್ಯಾತೆದೇವರಹಟ್ಟಿ

ಕ್ಯಾತೆದೇವರಹಟ್ಟಿಯು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿನಲ್ಲಿದೆ. ಕ್ಯಾತೆದೇವರ ಹೆಸರಿನಲ್ಲಿ ಗ್ರಾಮ ರಚನೆಯಾಗಿದೆ, ಸಿರಾದಿಂದ ೨೧.೦೫ ಕಿ.ಮೀ. ದೂರದಲ್ಲಿರುವ ಗ್ರಾಮವು ಜನವಸತಿ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೪೮.೦೨ ಹೆಕ್ಟೇರ್‌ಗಳಾಗಿವೆ. ಬಯಲುನಾಡಿನ ಪ್ರದೇಶವಾಗಿದೆ. ಯಾವುದೇ ಅರಣ್ಯ ಬೆಟ್ಟ–ಗುಡ್ಡಗಳು ಕಂಡುಬರುವುದಿಲ್ಲ ಇಲ್ಲಿ ೧೮ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ ಬುಕ್ಕಾಪಟ್ಟಣ ಗ್ರಾಮಪಂಚಾಯ್ತಿಯಿಂದ ಕುಡಿಯುವ ನೀರಿನ ವ್ಯವಸ್ಥೆಗೆ ಕೈ ಪಂಪು ಮತ್ತು ಮಿನಿಟ್ಯಾಂಕ್‌ಗಳನ್ನು ಒಳಗೊಂಡಿದೆ. ಇಲ್ಲಿನ ಒಟ್ಟು ವಾರ್ಷಿಕ ಸರಾಸರಿ ಮಳೆಯ ಪ್ರಮಾಣವು ೪೫೮ ಮಿ.ಮೀ. ರಷ್ಟಿದೆ.

ಈ ಗ್ರಾಮದಲ್ಲಿ ೬೮ ಮನೆಗಳಿದ್ದು, ೧೯೭ ಜನಸಂಖ್ಯೆಯನ್ನು ಹೊಂದಿದೆ ಇವರ ಭಾಷೆ ಕನ್ನಡವಾಗಿದ್ದು ಇವರ ಆಹಾರ ಪದ್ಧತಿಯಲ್ಲಿ ರಾಗಿಮುದ್ದೆ ಮತ್ತು ವಿಶೇಷವಾಗಿ ಬಾಡೂಟವಾಗಿದೆ. ಅಲ್ಲದೇ ಆಧುನಿಕ ವಾಹನಗಳನ್ನು ಹೊಂದಿದೆ. ರಸ್ತೆ ಮತ್ತು ಚರಂಡಿಯನ್ನು ಕಾಣಬಹುದು.

ಮನೆಗಳು ಹೆಂಚಿನ, ಸೀಟಿನ ಸ್ವರೂಪದವುಗಳಿದ್ದು, ೩೬ ಜನ ಸರ್ಕಾರದ ವಸತಿ ಯೋಜನೆಗಳಾದ ಆಶ್ರಮ, ಇಂದಿರಾ ಅವಾಸ್ ಜನತಾ ಯೋಜನೆಯ ಫಲಾನುಭವಿಗಳಾಗಿದ್ದಾರೆ. ೭೪ ಮನೆಯಲ್ಲಿ ಶೌಚಾಲಯದ ಸೌಲಭ್ಯವಿದೆ.

ಈ ಗ್ರಾಮದಲ್ಲಿ ೬೮ ಮನೆಗಳಿದ್ದು, ಇದರಲ್ಲಿ ಗೊಲ್ಲ, ನಾಯಕ ಜನಾಂಗವನ್ನು ಹೊಂದಿದೆ. ಇಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು ಶೇಂಗಾ ಮುಖ್ಯ ಬೆಳೆಯಾಗಿದ್ದು ಇದರೊಂದಿಗೆ ರಾಗಿ ಭತ್ತ ನವಣೆ ಸೂರ್ಯಕಾಂತಿ ಮತ್ತು ದ್ವಿದಳಧಾನ್ಯಗಳನ್ನು ಹಾಗೂ ತೆಂಗು, ಅಡಿಕೆ, ಹುಣಸೆ ಬೆಳೆಗಳನ್ನು ಬೆಳೆಯುತ್ತಾರೆ.

ಕೃಷಿ ಕಾರ್ಮಿಕರಾಗಿದ್ದಾರೆ ಚಿಕ್ಕನಾಯಕನಹಳ್ಳಿ ವಿಧಾನ ಸಭಾಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ ಬುಕ್ಕಾಪಟ್ಟಣ ಜಿಲ್ಲಾಪಂಚಾಯ್ತಿ ಕ್ಷೇತ್ರ ಹೊಂದಿದ್ದು, ಬುಕ್ಕಾಪಟ್ಟಣ ಮಜರೆ ಗ್ರಾಮವಾಗಿದೆ. ಪಂಚಾಯ್ತಿ, ತಹಶೀಲ್ದಾರ್ ಕಛೇರಿಯನ್ನು ಹೊಂದಿದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರನ್ನು ಹೊಂದಿದೆ. ಹಾಗೂ ಬುಕ್ಕಾಪಟ್ಟಣ ಉಪಪೋಲೀಸ್‌ಠಾಣೆ ಹಾಗೂ ವಿದ್ಯುತ್ ಮಂಡಳಿಯನ್ನು ಹೊಂದಿದೆ. ಹಣಕಾಸು ವ್ಯವಸ್ಥೆಯಲ್ಲಿ ಯಾವುದೇ ಸ್ತ್ರೀಶಕ್ತಿಸಂಘಗಳು ಮತ್ತು ಬ್ಯಾಂಕುಗಳನ್ನು ಹೊಂದಿಲ್ಲ.

ಈ ಗ್ರಾಮದಲ್ಲಿ ಅಂಗನವಾಡಿಕೇಂದ್ರ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು, ಒಟ್ಟಾರೇ ೬೫ಅ ರಷ್ಟು ಸಾಕ್ಷರತೆಯನ್ನು ಹೊಂದಿದೆ.

ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ ಶೌಚಾಲಯ, ಉಚಿತ ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ. ಸಮುದಾಯ ಸೌಲಭ್ಯಗಳಾದ ವೃದ್ದಾಪನ, ವಿಧುವಾ ವೇತನ ಫಲಾನುಭವಿಗಳಾಗಿದ್ದು, ಗ್ರಾಮದಲ್ಲಿ ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಕ್ಯಾತೆದೇವರು ಪಾತೇದೇವರುಗಳಿದ್ದು, ಮಾರೆಮ್ಮನ ಪೌಳಿ ಇದೆ. ಮಾರೆಮ್ಮನಿಗೆ ಶ್ರಾಸ್ತ್ರ ಸಂದರ್ಭದಲ್ಲಿ ಆರತಿ, ಬ್ಯಾಟೆ ಜನಾಂಗದ ಹರಕೆ ಸಂಪ್ರದಾಯವಿದೆ.

ಯುಗಾದಿ, ದೀಪಾವಳಿ, ಗೌರಿ ಗಣೇಶ ಹಬ್ಬವನ್ನು ಆಚರಿಸುತ್ತಾರೆ. ಒಂದು ಅರಳಿಮರ ಊರಹೊರಗೆ ಹಿರಿಯ ಸ್ಮಾರಕವಾಗಿ ಕಲ್ಲುಗಳನ್ನು ಇಡಲಾಗಿದ್ದು, ದೀಪಾವಳಿ ಹಬ್ಬದಂದು ಹಿರಿಯರಿಗೆ ಹಾಲು ತುಪ್ಪ ಹಾಕುವ ಸಂಪ್ರದಾಯವಾಗಿದೆ

## ಕಿಲಾರದಹಳ್ಳಿ

ಕಿಲಾರದಹಳ್ಳಿಯು ಸಿರಾ ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನಲ್ಲಿದೆ. ಹಾಗೆಯೇ ಸಿರಾ–ಹುಯಿಲ್‌ದೊರೆ ಹೊಸಕೆರೆ ಮಾರ್ಗದಲ್ಲಿ ೨೦ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಕಂದಾಯ ಗ್ರಾಮವಾಗಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೪೧೧.೦೮ ಹೆಕ್ಟೇರ್‌ಗಳಾಗಿವೆ. ಈ ಗ್ರಾಮಕ್ಕೆ ಕಿಲಾರದಹಳ್ಳಿ ತಾಂಡ ಮತ್ತು ವಡ್ಡರಹಟ್ಟಿಯನ್ನು ಒಳಗೊಂಡಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದು ಸು.೧೮ ಹೆಕ್ಟೇರ್‌ನಷ್ಟು ರಕ್ಷಿತಾ ಅರಣ್ಣವನ್ನು ಒಳಗೊಂಡಿದ್ದು ಬೆಟ್ಟಗುಡ್ಡಗಳು ಕಂಡುಬರುವುದಿಲ್ಲ. ಇಲ್ಲಿ ವಾರ್ಷಿಕ ೪೪೮ ಮಿ.ಮೀ. ಮಳೆಯಾಗುತ್ತಿದೆ. ಈ ಗ್ರಾಮದ ಎರಡು ಕಟ್ಟೆಗಳಿದ್ದು ಮಳೆಗಾಲದಲ್ಲಿ ನೀರಿನಿಂದ ಕೂಡಿರುತ್ತದೆ. ಹಾಗೆಯೇ ೧೧೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಕುಡಿಯುವ ನೀರಿನ ಉಪಯೋಗಕ್ಕೆ ಸಿಸ್ಟನ್ ಮತ್ತು ಕೈ ಪಂಪುಗಳನ್ನು ಕಲ್ಪಿಸಲಾಗಿದೆ. ಈ ಪರಿಸರದಲ್ಲಿ ನರಿ,ಮೊಲ, ಜಿಂಕೆ,ಹಂದಿ, ಕಂಡು ಬಂದರೆ, ಗ್ರಾಮದಲ್ಲಿ ಹಸು, ಎತ್ತು, ಕುರಿ, ಮೇಕೆ, ಕೋಳಿ ಸಾಕಲಾಗಿದೆ. ಪಕ್ಷಿಗಳಾದ ಕಾಗೆ, ಕೋಗಿಲೆ, ಗೂಬೆ, ಹದ್ದು, ಗರುಡ, ಕೊಕ್ಕರೆ, ಗುಬ್ಬಚ್ಚಿ, ಕಂಡುಬರುತ್ತವೆ.

ಈ ಗ್ರಾಮಕ್ಕೆ ಕಿಲಾರದಹಳ್ಳಿ ಎಂದು ಹೆಸರು ಬರಲು ಕಾರಣವು ಕೀಲಾರಪರ್ವತ ಪ್ರಾಂತ್ಯದಿಂದ ಬಂದ ಕುಂಚಿಟಿಗರು ಮೊದಲು ಗ್ರಾಮ ನಿರ್ಮಿಸಿದ ಹಳ್ಳಿಯಾದುದರಿಂದ ಈ ಹೆಸರನ್ನು ನಾಮಕರಣ ಮಾಡಲಾಗಿದೆ. ಈ ಗ್ರಾಮದಲ್ಲಿ ಒಟ್ಟು ೧೯೮ ಮನೆಗಳಿದ್ದು, ೬೪೬ ಜನಸಂಖ್ಯೆಯನ್ನು ಹೊಂದಿದೆ. ಕುಂಚಿಟಿಗರು, ನಾಯಕರು, ಮಡಿವಾಳ, ಆದಿ ಕರ್ನಾಟಕ ಜನಾಂಗದವರಿದ್ದಾರೆ. ಇವರ ಮುಖ್ಯ ಭಾಷೆ ಕನ್ನಡವಾಗಿದೆ. ಅಲ್ಲದೇ ಇವರ ಆಹಾರ ಮುದ್ದೆ ಅನ್ನ ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ಇತ್ಯಾದಿಗಳು ೨ ಸಾಂಪ್ರದಾಯಿಕ ವಾಹನ ಎತ್ತಿನ ಗಾಡಿ, ಟ್ರಾಕ್ಟರ್, ಮಿನಿಟೆಂಪೋ, ದ್ವಿಚಕ್ರವಾಹನಗಳನ್ನು ಹೊಂದಿದೆ.

ಈ ಗ್ರಾಮಕ್ಕೆ ಕಚ್ಚಾರಸ್ತೆ ಮತ್ತು ಚರಂಡಿಯನ್ನೇ ಕಲ್ಪಿಸಿದ್ದಾರೆ. ಗ್ರಾಮದಲ್ಲಿ ಕಲ್ಲಿನ, ಹೆಂಚಿನ, ಸೀಟಿನ, ಕಾಂಕ್ರೀಟ್, ಸ್ವರೂಪದ ಮನೆಗಳಿದ್ದು, ಇಲ್ಲಿ ಆಶ್ರಯ, ಜನತಾ, ಇಂದಿರಾ ಆವಾಸ್ ವಸತಿ ಯೋಜನೆಯ ೪೩ ಫಲಾನುಭವಿಗಳಿದ್ದು ೫೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಹಳ್ಳಿಯ ಜನರ ಮುಖ್ಯ ಕಸುಬು ವ್ಯವಸಾಯವಾಗಿದ್ದು, ಇಲ್ಲಿ ಶೇಂಗಾ ಪ್ರಮುಖ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ದ್ದಿದಳಧಾನ್ಯಗಳು, ತೆಂಗು, ಅಡಿಕೆ, ಹುಣಸೆಮರಗಳು ಪ್ರಮುಖವಾಗಿದ್ದು ವ್ಯಾಪಾರದ ಸರಕುಗಳಾಗಿವೆ. ಹಾಗೆಯೇ ಇಲ್ಲಿ ಆಧುನಿಕ ಡೈರಿಯಿದು ಹೈನುಗಾರಿಕೆಯಿಂದ ಹೆಚ್ಚಿನ ಆದಾಯ ತಂದುಕೊಡುವಲ್ಲಿ ಪ್ರಮುಖವಾಗಿದೆ. ಕಂದಾಯ, ಸಾರಿಗೆ, ಅರಣ್ಯ, ಸರ್ವೆ ಇಲಾಖೆಯಲ್ಲಿ ೧೦ ಸರ್ಕಾರಿ ಸೇವೆಯಲ್ಲಿ ಕೆಲಸ ಮಾಡುತ್ತಿದ್ದ ರಾಗಿಮಿಲ್ಲ್, ಬೀಡಿಸುತ್ತುವಂತಹ ಗುಡಿಕೈಗಾರಿಕೆಗಳನ್ನು ಕಾಣಬಹುದಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ ತುಮಕೂರು ಲೋಕಸಭಾಕ್ಷೇತ್ರ ಬುಕ್ಕಾಪಟ್ಟಣ ಜಿಲ್ಲಾಪಂಚಾಯಿತಿ ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ ಹಾಗೂ ಸಿರಾ ತಹಶೀಲ್ದಾರ್ ಕಛೇರಿ ರಾಮರಿಂಗಾಪುರ ಅಂಚೆ ಮತ್ತು ಗ್ರಾಮಪಂಚಾಯ್ತಿಯನ್ನು ಹೊಂದಿದೆ. ಹಾಗೆಯೇ ಬುಕ್ಕಾಪಟ್ಟಣ ಪೋಲೀಸ್‌ಠಾಣೆ ಹಾಗೂ ವಿದ್ಯುತ್ ಮಂಡಳಿಯನ್ನು ಹೊಂದಿದೆ ಇದು ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದ್ದು ಬಗೆಹರಿಯದ ಸಮಸ್ಯೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳುತ್ತಾರೆ.

ಈ ಗ್ರಾಮದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿದ್ದರೂ ಸ್ತ್ರೀಶಕ್ತಿಸಂಘ ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಹಾಗೂ ಮದಕರಿನಾಯಕ ಸೇನಗಳಿಂದ ಸಣ್ಣ ಪ್ರಮಾಣದ ಉಳಿತಾಯವನ್ನು ಮಾಡಲು ಸಹಾಯಕಾರಿಯಾಗಿದೆ.

ಈ ಗ್ರಾಮದಲ್ಲಿ ಒಂದು ಅಂಗನವಾಡಿಕೇಂದ್ರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಹಾಗೂ ಈ ಗ್ರಾಮದ ಒಟ್ಟು ಸಾಕ್ಷರತೆಯ ಪ್ರಮಾಣವು ೫೭.೦೮ ರಷ್ಟಿದೆ. ಶಾಲೆಯಲ್ಲಿ ಬಿಸಿಊಟ, ಕ್ಷೀರಭಾಗ್ಯ ಶೌಚಾಲಯ, ಉಚಿತ ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದ್ದು, ಆಟದ ಮೈದಾನವಿದೆ.

ಕಿಲಾರದಹಳ್ಳಿಯಲ್ಲಿ ಯಾವುದೇ ಆರೋಗ್ಯ ಕೇಂದ್ರವಿಲ್ಲದಿದ್ದರೂ ಕುಟುಂಬ ಕಲ್ಯಾಣ ಇಲಾಖೆಯ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿಮಾಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಅಲ್ಲದೇ ಇಲ್ಲಿ ಕಾಣುವ ಪ್ರಮುಖ ರೋಗಗಳೆಂದರೆ ಚಳಿ, ಜ್ವರ, ಕೆಮ್ಮು, ಬಿ.ಪಿ. ಇತ್ಯಾದಿಗಳಾಗಿವೆ. ಇಲ್ಲಿ ಗುಜ್ಜಾರಪ್ಪನವರು ನಾಟಿ ಓಷಧಿ ನೀಡುವಂತಹ ವೈದ್ಯರಾಗಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನ ಮುಂತಾದವುಗಳನ್ನು ಪಡೆದುಕೊಳ್ಳುತ್ತಿದೆ ಮತ್ತು ಗ್ರಾಮದಲ್ಲಿ ಚಿಲ್ಲರೆ ವ್ಯಾಪಾರದ ಆರು ಅಂಗಡಿಗಳನ್ನು ಹೊಂದಿದೆ.

ಕಿಲಾರದಹಳ್ಳಿಯಲ್ಲಿ ಐತಿಹಾಸಿಕ ನೆಲೆದ ಸ್ಮಾರಕಗಳಾಗಿ ಎರಡು ಕರುಗಲ್ಲು, ಅಶ್ವತ್ಥ ವೃಕ್ಷಗಳು ಕಂಡುಬಂದಿದೆ. ಹಾಗೆಯೇ ಇಲ್ಲಿ ಧಾರ್ಮಿಕ ಕೇಂದ್ರಗಳಾದ ಕಣಿವೆಮಾರಮ್ಮ ಆಂಜನೇಯ ಶನಿಮಹಾತ್ಮ ಭೂತಪ್ಪನ ಪೌಳಿ ದೇವಾಲಯಗಳಿವೆ. ಈ ಗ್ರಾಮಕ್ಕೂ ಸಾಕ್ಷಿಹಳ್ಳಿ ಮಣ್ಣಮ್ಮನ ಗ್ರಾಮ ದೇವತೆಯಾಗಿದ್ದು ಪ್ರತಿ ಪರ್ವವು ಜಾತ್ರೆ ಮಾಡುತ್ತಾರೆ. ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿರುತ್ತದೆ.

ಸಾಂಸ್ಕೃತಿಕ ಕ್ಷೇತ್ರಕ್ಕೆ ಹೆಸರು ವಾಸಿಯಾಗದಿದ್ದರೂ ಸಣ್ಣ ಪ್ರಮಾಣದಲ್ಲಿ ಜನಪದದಲ್ಲಿ ಸೋಬಾನೆಪದ ಹಾಗೂ ತಮಟೆವಾದ್ಯವನ್ನು ಈ ಗ್ರಾಮದಲ್ಲಿ ರೂಢಿಸಿಕೊಂಡು ಬಂದಿದ್ದಾರೆ. ಕಡಿಮೆ ಯುಗಾದಿ, ದೀಪಾವಳಿ, ದಸರಾ, ರಾಮನವಮಿ, ಗೌರಿಗಣೇಶನ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕಿಲಾರದಹಳ್ಳಿ ವಡ್ಡರಹಟ್ಟಿ

ಕಿಲಾರದಹಳ್ಳಿ ವಡ್ಡರಹಟ್ಟಿಯು ಸಿರಾ ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನಲ್ಲಿದೆ. ಸಿರಾ ಹುಯಿಲ್‌ದೊರೆ-ಹೊಸಕೆರೆ ಮಾರ್ಗದಲ್ಲಿ ೨೦.೦೫ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಮಜರೆ ಗ್ರಾಮವಾಗಿದೆ. ಈ ಪ್ರದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣವು ೩೨ ಹೆಕ್ಟೇರ್‌ನ್ನು ಹೊಂದಿದೆ.

ಬಯಲು ನಾಡಿನ ಪ್ರದೇಶವಾಗಿದ್ದು ಕಿಲಾರದಹಳ್ಳಿಯ ಅರಣ್ಯವನ್ನು ಹೊಂದಿದೆ. ಮತ್ತು ಮರಳು ಮಿಶ್ರಿತ ಮಣ್ಣಿನಿಂದ ಕೂಡಿದ್ದು ಯಾವುದೇ ಬೆಟ್ಟಗುಡ್ಡವನ್ನು ಹೊಂದಿಲ್ಲ ೪೪೮ ಮಿ.ಮೀ. ವಾರ್ಷಿಕ ಸರಾಸರಿಯಲ್ಲಿ ಮಳೆಯಾಗುತ್ತಿದೆ. ಆದರೆ ಮೂರ್‍ನಾಲ್ಕು ವರ್ಷಗಳಿಂದ ಬರಗಾಲದಿಂದ ತತ್ತರಿಸಿ ಹೋಗಿದ್ದಾರೆ. ಇಲ್ಲಿ ಒಂದು ಕಟ್ಟೆ ಇದ್ದು ಮಳೆಗಾಲದಲ್ಲಿ ತುಂಬುತ್ತದೆ. ೩೮ ಡಿ.ಸೆಂ. ಉಷ್ಣಾಂಶ, ೧೨ ಡಿ.ಸೆಂ. ಚಳಿ ಇರುತ್ತದೆ. ೧೮ ಕೊಳವೆ ಬಾವಿಗಳಿದ್ದು, ಕೃಷಿಗೆ ಸಹಾಯವಾಗಿದೆ. ಅಲ್ಲದೇ ಕುಡಿಯುವ ನೀರಿಗಾಗಿ ಸಿಸ್ಟನ್ ಮತ್ತು ಕೈಪಂಪುಗಳನ್ನು ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಈ ವಡ್ಡರಹಟ್ಟಿಯಲ್ಲಿ ೬೦ ಮನೆಗಳಿದ್ದು ೧೪೦ ಜನಸಂಖ್ಯೆಯನ್ನು ಹೊಂದಿದ್ದು ಇವರ ಮಾತೃಭಾಷೆ ಕನ್ನಡವಾಗಿದೆ. ಅಲ್ಲದೇ ಬೋವಿ ಜನಾಂಗದ ಮನೆಗಳಿರುತ್ತವೆ. ಅದರಲ್ಲಿ ಕಾಂಕ್ರೀಟ್, ಸೀಟಿನ ಮನೆ, ಹೆಂಚಿನ ಮತ್ತು ಕಡಪದಕಲ್ಲಿನ ಮನೆಗಳಿವೆ ಮತ್ತು ಕಚ್ಚಾರಸ್ತೆಯನ್ನು ಹೊಂದಿದ್ದು ಚರಂಡಿ ವ್ಯವಸ್ಥೆ ಇದೆ. ಸರ್ಕಾರದ ವಸತಿ ಯೋಜನೆಗಳಾದ ಜನತಾ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿದ್ದು, ೧೮ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ.

ಈ ಹಳ್ಳಿಯ ಜನರ ಮುಖ್ಯ ಉದ್ಯೋಗ ಕೃಷಿ ಮತ್ತು ಕಲ್ಲು ಹೊಡಯುವುದಾಗಿದೆ. ಆದರೆ ಈ ಪ್ರದೇಶದಲ್ಲಿ ಕಲ್ಲು ಬಂಡೆಗಳಿಲ್ಲದೇ ದೂರದಲ್ಲಿರುವ ಬಂಡೆಗೆಲಸಕ್ಕೆ ಹೋಗುವುದು ರೂಢಿಯಲ್ಲಿದೆ. ಮತ್ತು ಕೃಷಿಯಲ್ಲಿ ಶೇಂಗಾ, ರಾಗಿ, ಭತ್ತ, ಜೋಳ, ತೆಂಗು, ಅಡಿಕೆ, ಹುಣಸೆಮರಗಳ ಬೆಳೆಯನ್ನು ಬೆಳೆಯುತ್ತಾರೆ ಮತ್ತು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಅಲ್ಲದೇ ಇಲ್ಲಿನ ಜನರ ಮುಖ್ಯ ಆಹಾರ ರಾಗಿ ಮುದ್ದೆ ಅನ್ನ ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ

ಇತ್ಯಾದಿಗಳಾಗಿವೆ. ಅಲ್ಲದೇ ಆಧುನಿಕ ವಾಹನಗಳಾದ ಟ್ರಾಕ್ಟರ್, ಲಾರಿ ಮತ್ತು ದ್ವಿಚಕ್ರವಾಹನಗಳಿವೆ.

ವಡ್ಡರಹಟ್ಟಿಯು ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಹುಯಿಲ್ ದೊರೆ ತಾಲ್ಲೂಕು ಪಂಚಾಯ್ತಿ ಸಿರಾ ತಹಸೀಲ್ದಾರ್ ಕಛೇರಿ ರಾಮಲಿಂಗಾಪುರ ಗ್ರಾಮಪಂಚಾಯ್ತಿ ಹಾಗೂ ಅಂಚೆ ಕಛೇರಿಯನ್ನು ಹೊಂದಿದೆ. ಹಾಗೆಯೇ ಬುಕ್ಕಾಪಟ್ಟಣ ವಿದ್ಯುತ್ ಮತ್ತು ಪೋಲೀಸ್ ಠಾಣೆಯನ್ನು ಹೊಂದಿದೆ. ಇಲ್ಲಿ ಗ್ರಾಮನ್ಯಾಯ ಮಂಡಳಿಯಿದ್ದು ಬಗೆಹರಿದಂತಹ ಸಮಸ್ಯೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ.

ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಪಕ್ಕದ ಕಿಲಾರದಹಳ್ಳಿಯು ಶಾಲೆಯನ್ನು ಹೊಂದಿದೆ ಹಾಗೂ ಈ ಹಳ್ಳಿಯ ಒಟ್ಟು ಸಾಕ್ಷರತೆಯ ಪ್ರಮಾಣವು ೫೭೮ ರಷ್ಟಿದೆ. ಅಲ್ಲದೇ ಯಾವುದೇ ಬ್ಯಾಂಕಿಂಗ್ ಸೌಲಭ್ಯವಿಲ್ಲದಿದ್ದರೂ ಸ್ತ್ರೀಶಕ್ತಿ ಸಂಘವನ್ನು ಹೊಂದಿದ್ದು ಇದರಿಂದ ಸಾಲಸೌಲಭ್ಯವನ್ನು ಪಡೆದುಕೊಳ್ಳುತ್ತಿವೆ.

ಕಿಲಾರದಹಳ್ಳಿ ವಡ್ಡರಹಟ್ಟಿಯಲ್ಲಿ ಆರೋಗ್ಯ ಕೇಂದ್ರವಿಲ್ಲದಿದ್ದರೂ ಕುಟುಂಬ ಕಲ್ಯಾಣ ಯೋಜನೆಯ ಆಶಾಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಇಲ್ಲಿ ಕಾಣಿಸಿಕೊಳ್ಳುವ ರೋಗಗಳೆಂದರೆ ಚಳಿ, ಜ್ವರ, ಕೆಮ್ಮು ಇತ್ಯಾದಿಗಳಾಗಿವೆ. ಈ ಗ್ರಾಮದಲ್ಲಿ ನಾಟಿ ಓಷಧಿಯನ್ನು ನೀಡುವರು ಇಲ್ಲದಿದ್ದರೂ ಗುಜ್ಜಾರಪ್ಪನವರಿಂದ ನಾಟಿಪದ್ಧತಿಯನ್ನು ಪಡೆಯುತ್ತಿದ್ದಾರೆ.

ಸಮುದಾಯದ ಲಾಭವನ್ನು ಪಡೆದುಕೊಳ್ಳುತ್ತಿದ್ದು ಇದರಿಂದ ವೃದ್ದಾಪ್ಯ ವೇತನ ವಿಕಲಚೇತನ ವೇತನ, ವಿಧವಾ ವೇತನವನ್ನು ಪಡೆಯುತ್ತಿದ್ದಾರೆ ಹಾಗೆಯೇ ಈಗ್ರಾಮದಲ್ಲಿ ಒಂದು ಚಿಲ್ಲರೆ ವ್ಯಾಪಾರದ ಅಂಗಡಿಯನ್ನು ಕಾಣುತ್ತೇವೆ.

ಐತಿಹಾಸಿಕ ನೆಲೆಯ ಸ್ಮಾರಕ ಒಂದು ಆರಳಿಮರವನ್ನು ಕಾಣುತ್ತೇವೆ. ಧಾರ್ಮಿಕ ಕೇಂದ್ರಗಳಾಗಿ ಆಂಜನೇಯ ಮತ್ತು ಮಾರಮ್ಮನನ್ನು ಪೂಜಿಸುವ ದೇವಾಲಯಗಳಿವೆ ಹಾಗೂ ಸಾಕ್ಷಿಹಳ್ಳಿ ಮಾರಮ್ಮನಿಗೆ ಪ್ರತಿವರ್ಷವು ಜಾತ್ರೆ ಮಾಡುವುದು ರೂಢಿಯಲ್ಲಿದೆ. ಇಲ್ಲಿ ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿರುತ್ತದೆ.

ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶ, ಶಿವರಾತ್ರಿ, ರಾಮನವಮಿ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕಿಲಾರದಹಳ್ಳಿ ತಾಂಡ

ಕಿಲಾರದಹಳ್ಳಿ ತಾಂಡವು ಸಿರಾ ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ ಹುಯಿಲ್‌ದೊರೆ ಹೊಸಕೆರೆ ರಸ್ತೆಮಾರ್ಗದಲ್ಲಿ ಸಿರಾದಿಂದ ೧೬ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಕಿಲಾರದ ಹಳ್ಳಿಗೆ ಮತ್ತು ಜೋಡಿ ಗ್ರಾಮವಾಗಿರುತ್ತದೆ. ಈ ಗ್ರಾಮಕ್ಕೆ ಯಾವುದೇ ಸಾರಿಗೆ ಸಂಪರ್ಕವಿರುವುದಿಲ್ಲ. ಈ ಗ್ರಾಮದಲ್ಲಿ ಬಹುಪಾಲು ಲಂಬಾಣಿ ಜನಾಂಗದವರೇ ಇರುವ ಕಾರಣ ಪಕ್ಕದಲ್ಲಿ ಕಿಲಾರದಹಳ್ಳಿ ಇದ್ದು ಆದ್ದರಿಂದ ಅದಕ್ಕೇ ಕಿಲಾರದಹಳ್ಳಿ ತಾಂಡವೆಂದು ಕರೆಯಲಾಗಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೧೨೩ ಹೆಕ್ಟೇರ್‌ಗಳಾಗಿವೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಯಾವುದೇ ಅರಣ್ಯ ಬೆಟ್ಟಗುಡ್ಡಗಳು ಕಂಡುಬರುವುದಿಲ್ಲ. ಮತ್ತು ಕುಡಿಯುವ ನೀರಿಗಾಗಿ ಸಿಸ್ಟನ್ ಮತ್ತು ಕೈ ಪಂಪ್‌ಗಳಿವೆ ಅಲ್ಲದೇ ಇಲ್ಲಿ ೨೮ ಕೊಳವೆಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ ಮತ್ತು ವಾರ್ಷಿಕವಾಗಿ ೪೪೮ ಮಿ.ಮೀ. ಮಳೆಯಾಗುತ್ತದೆ. ಒಂದು ಕಟ್ಟೆಯಿದ್ದು ಮಳೆಗಾಲದಲ್ಲಿ ನೀರಿನ ಪ್ರಮಾಣವಿರುತ್ತದೆ. ಬಿಸಿಲು ೩೮ ಡಿ.ಸೆಂ. ಚಳಿ ೧೨ ಡಿ.ಸೆಂ. ಸಹಜವಾಗಿದೆ.

ಈ ಗ್ರಾಮದಲ್ಲಿ ಒಟ್ಟು ೧೨೦ ಮನೆಗಳಿದ್ದು ೪೪೮ ಜನಸಂಖ್ಯೆಯನ್ನು ಹೊಂದಿದೆ. ಕನ್ನಡ ಮಾತೃಭಾಷೆಯಾಗಿದ್ದು ಇತರ ಭಾಷಗಳು ಲಂಬಾಣೆ, ಉರ್ದುಗಳಾಗಿವೆ. ಇಲ್ಲಿ ಕಾಂಕ್ರೀಟ್, ಸೀಟ್, ಹೆಂಚಿನ ಮನೆಗಳಿವೆ. ಇವರ ಮುಖ್ಯ ಆಹಾರ ಮುದ್ದೆ, ಅನ್ನ ಮತ್ತು ಬಾಡೂಟ, ಪಾಯಸ, ಹೋಳಿಗೆ ಇತ್ಯಾದಿ ಸಿಹಿತಿನಿಸುಗಳಾಗಿವೆ. ೨ ಸಾಂಪ್ರದಾಯಕ ವಾಹನ ಎತ್ತಿನಗಾಡಿ ಟ್ಯಾಕ್ಟರ್ ಮಿನಿಟೆಂಪೋ ದ್ವಿಚಕ್ರವಾಹನಗಳಿವೆ. ಕಚ್ಚಾರಸ್ತೆಯನ್ನು ಹೊಂದಿದೆ. ಕಲ್ಲಿನ, ಮಣ್ಣಿನ, ಸೀಟಿನ, ಸ್ವರೂಪದ ಮನೆಗಳಿದ್ದು ಇವು ಸರ್ಕಾರದ ಇಂದಿರಾ ಅವಾಸ್, ಜನತಾ ಸೌಲಭ್ಯ ಪಡೆದು ೪೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಈ ಹಳ್ಳಿಯ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಅದರಲ್ಲಿ ಶೇಂಗಾ, ರಾಗಿ, ತೆಂಗು ಹುಣಸೆಮರಗಳು ಪ್ರಮುಖವಾಗಿದ್ದು ವ್ಯಾಪಾರದ ಸರಕುಗಳಾಗಿವೆ. ಇಲ್ಲಿ ಮುಸ್ಲಿಂರು ಪಾತ್ರೆ ವ್ಯಾಪಾರ ಮಾಡುವಂತಹ ಕೆಲಸದಲ್ಲಿ ತೊಡಗಿದ್ದಾರೆ. ಹಾಗೆಯೇ ಲಂಬಾಣಿ ಮತ್ತು ಇತರೆ ಜನಾಂಗದವರು ಕೃಷಿಯೊಂದಿಗೆ ಕೂಲಿ ಮಾಡುವುದು ಕಂಡುಬರುತ್ತದೆ. ಅಲ್ಲದೇ ಬುಟ್ಟಿ ಎಣೆಯುವುದು, ಊಟದ ಎಲೆತಯಾರಿಕೆಯ ಗುಡಿಕೈಗಾರಿಕೆಗಳಿವೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ ಬುಕ್ಕಾಪಟ್ಟಣ ಜಿಲ್ಲಾ ಹುಯಿಲ್‌ದೊರೆ

ತಾಲ್ಲೂಕು ಪಂಚಾಯ್ತಿ ಸಿರಾ ತಹಶೀಲ್ದಾರ್ ಕಛೇರಿಯನ್ನು ಒಳಗೊಂಡಿದೆ. ಈ ಗ್ರಾಮವು ರಾಮಲಿಂಗಾಪುರ ಗ್ರಾಮಪಂಚಾಯ್ತಿಯನ್ನು ಹೊಂದಿದ್ದು ಇದರಲ್ಲಿ ಒಬ್ಬರು ಸದಸ್ಯರಿದ್ದಾರೆ. ಬುಕ್ಕಾಪಟ್ಟಣ ವಿದ್ಯುತ್ ಮತ್ತು ಪೋಲೀಸ್ ಕಾಣೆಯನ್ನು ಒಳಗೊಂಡಿದೆ. ಈ ಗ್ರಾಮದಲ್ಲಿ ಗ್ರಾಮನ್ಯಾಯ ಮಂಡಳಿಯನ್ನು ಹೊಂದಿದ್ದು ಬಗೆಹರಿಯದಂತಹ ಸಮಸ್ಯೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳುತ್ತಾರೆ.

ಈ ಗ್ರಾಮದಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಹೊಂದಿಲ್ಲ ಆದರೂ ಸ್ತ್ರೀಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಸುಜಲ ಜಲಾಯನ ಸಂಘ ಸೇವಾಲಾಲ್ ಯುವಕ ಸಂಘಗಳು ಸಣ್ಣ ಪ್ರಮಾಣದ ಸಾಲಸೌಲಭ್ಯವನ್ನು ಒದಗಿಸುವಲ್ಲಿ ಯಶಸ್ವಿಯಾಗಿವೆ.

ಈ ಗ್ರಾಮದಲ್ಲಿ ಒಂದು ಅಂಗನವಾಡಿಕೇಂದ್ರವಿದ್ದು ೨೫ ಮಕ್ಕಳು ಒಬ್ಬರು ಶಿಕ್ಷಕಿ ಮತ್ತು ಸಹಾಯಕಿಯನ್ನು ಹೊಂದಿದಲ್ಲದೇ ಸ.ಕಿ. ಪ್ರಾಥಮಿಕ ಶಾಲೆಯಿದ್ದು ಅದರಲ್ಲಿ ೩೨ ವಿದ್ಯಾರ್ಥಿಗಳಿದ್ದು ೨ ಶಿಕ್ಷಕರು ಮತ್ತು ೨ ಬಿಸಿಯೂಟದ ಸಹಾಯಕರನ್ನು ಹೊಂದಿರುತ್ತದೆ.

ಈ ಗ್ರಾಮದಲ್ಲಿ ಒಟ್ಟು ಸಾಕ್ಷರತೆಯ ಪ್ರಮಾಣವು ೫೨೭ ರಷ್ಟಿದೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ. ಇಲಾಖೆಯ ತಾಂಡದಲ್ಲಿ ಆರೋಗ್ಯ ಕೇಂದ್ರವಿಲ್ಲದಿದ್ದರೂ ಕುಟುಂಬ ಕಲ್ಯಾಣ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಮತ್ತು ಇಲ್ಲಿ ಕಂಡು ಬರುವ ರೋಗಳೆಂದರೆ ಚಳಿ, ಜ್ವರ, ಕೆಮ್ಮು ಇತ್ಯಾದಿಗಳಾಗಿವೆ. ಲಾಲಾ ನಾಯಕರವರು ನಾಟಿ ಓಷಧಿಯನ್ನು ನೀಡುತ್ತಾರೆ. ವೃಧ್ಧಾಪ್ಯ ವೇತನ, ಅಂಗವಿಕಲ, ಸಂಧ್ಯಾಸುರಕ್ಷಾ ಸರ್ಕಾರದ ಸಮುದಾಯದ ಸೌಲಭ್ಯಗಳನ್ನು ಪಡೆಯುತ್ತಿದೆ. ಮತ್ತು ಇಲ್ಲಿ ೩ ಚಿಲ್ಲರೆ ವ್ಯಾಪಾರ ಅಂಗಡಿಗಳನ್ನು ಹೊಂದಿದೆ. ೨ ಅರಳಿಮರಗಳಿವೆ ಗುರು ಗೋವಿಂದ ಸಿದ್ದಯೋಗಿಗಳ ಒಂದು ಆಶ್ರಮವಿದ್ದು, ಸತ್ಸಂಗ ಕಾರ್ಯಕ್ರಮ ಜರುಗುತ್ತಿರುತ್ತದೆ. ಧಾರ್ಮಿಕ ಕೇಂದ್ರಗಳಾಗಿ ಶ್ರೀಕಾಳಿಕಾಂಬ, ಪಾಂಡುರಂಗ, ತೊಳಜಾದೇವಿ, ಒಂದು ಮಸೀದಿ ಇದೆ. ಪಕ್ಕದಲ್ಲಿ ಶ್ರೀಗೋವಿಂದ ಸ್ವಾಮಿ ಆಶ್ರಮವಿದೆ. ಪ್ರತಿವರ್ಷಕ್ಕೊಮ್ಮೆ ಮಾರಮ್ಮನ ಜಾತ್ರೆಯನ್ನು ಮಾಡುತ್ತಾರೆ. ಮತ್ತು ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿದೆ. ಸಾಂಸ್ಕೃತಿಕ ಉಡುಗೆ ತೊಡಿಗೆ ಧರಿಸಿ, ದೀಪಾವಳಿ, ಭೀಮಸತಿ ಹಬ್ಬವನ್ನು ಆಚರಿಸುತ್ತಾರೆ. ದೀಪಾವಳಿ, ದಸರಾ, ಶಿವರಾತ್ರಿ, ಯುಗಾದಿ, ಗೌರಿಗಣೇಶನ ಹಬ್ಬಗಳನ್ನು ಏರ್ಪಡಿಸುವುದು ಇಲ್ಲಿನ ವಿಶೇಷವಾಗಿದೆ.

## ಕಂಬದಹಳ್ಳಿ

ಕಂಬದಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿನಲ್ಲಿದೆ. ಸಿರಾ ಬುಕ್ಕಾಪಟ್ಟಣ ರಸ್ತೆಯಲ್ಲಿ ಕಂಬದಹಳ್ಳಿ ಗೇಟ್‌ನಿಂದ ಒಂದು ಕಿ.ಮೀ. ದೂರದಲ್ಲಿದ್ದೂ, ಕಂದಾಯ ಗ್ರಾಮವಾಗಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೨೮೦.೧೧ ಹೆಕ್ಟೇರ್ ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪುಮಣ್ಣಿನಿಂದ ಆವೃತ್ತವಾಗಿದೆ. ಈ ಪ್ರದೇಶದಲ್ಲಿ ಹೊನ್ನೇನಹಳ್ಳಿಯ ಅರಣ್ಯ ಪ್ರದೇಶ ಕಂಡು ಬಂದಿದು ಬುಕ್ಕಾಪಟ್ಟಣ ಅರಣ್ಯ ರೇಂಜಿಗೆ ಸೇರಿಕೊಂಡಿದೆ. ಇಲ್ಲಿ ವಾರ್ಷಿಕ ೪೫೨ ಮಿ.ಮೀ. ಸರಾಸರಿ ಮಳೆಯಾಗುತ್ತಿದೆ. ಒಂದು ಕಟ್ಟೆಯನ್ನು ಹೊಂದಿದ್ದು ಮಳೆಗಾಲದಲ್ಲಿ ತುಂಬುತ್ತದೆ. ಹಾಗೂ ೩೨ ಕೊಳವೆಬಾವಿಗಳನ್ನು ಹೊಂದಿದ್ದು ಕೃಷಿಗೆ ನೀರನ್ನು ಒದಗಿಸುತ್ತಿವೆ. ಹಾಗೆಯೇ ೦೧ ಕುಡಿಯುವ ನೀರಿನ ಸಿಸ್ಟನ್ ಮತ್ತು ಎರಡು ಕೈ ಪಂಪುಗಳನ್ನು ಕಲ್ಪಿಸಲಾಗಿದೆ. ೩೮ ಡಿ.ಸೆಂ. ಉಷಾಂಶವಿದ್ದು, ೧೨ ಡಿ.ಸೆಂ. ಚಳಿ ಇರುತ್ತದೆ.

ಈ ಗ್ರಾಮದಲ್ಲಿ ಒಟ್ಟು ೮೩ ಮನೆಗಳನ್ನು ಹೊಂದಿದ್ದು, ಅದರಲ್ಲಿ ೨೯೮ ಜನ ಸಂಖ್ಯೆಯನ್ನು ಹೊಂದಿದೆ. ಹಾಗೆಯೇ ಇಲ್ಲಿ ಕುಂಚಿಟಿಗ, ದೊಡ್ಡ ಸಮುದಾಯವಾಗಿದೆ. ನಾಯಕ, ಮಡಿವಾಳರ ಕಿರು ಸಮುದಾಯಗಳಾಗಿ ಇವರ ಮುಖ್ಯ ಭಾಷೆ ಕನ್ನಡ ಹಾಗೂ ಆಹಾರ ರಾಗಿ ಮುದ್ದೆ, ಅನ್ನ ವಿಶೇಷವಾಗಿ ಬಾಡೂಟ ಸಿಹಿತಿನಿಸುಗಳು ಇತ್ಯಾದಿ. ಈ ಗ್ರಾದಲ್ಲಿ ಎರಡು ಸಾಂಪ್ರಾದಾಯಿಕ ವಾಹನ ಎತ್ತಿನಗಾಡಿ ಹಾಗೂ ಆಧುನಿಕ ವಾಹನಗಳಾದ ಟ್ರಾಕ್ಟರ್, ಮಿನಿಟೆಂಪೋ, ದ್ವಿಚಕ್ರವಾಹನಗಳು ಕಂಡುಬರುತ್ತವೆ. ಈ ಗ್ರಾಮಕ್ಕೆ ಡಾಂಬರು ರಸ್ತೆಯನ್ನೇ ಹೊಂದಿದೆ. ಇಲ್ಲಿನ ಮನೆಗಳ ವಸತಿ ಯೋಜನೆಗಳಾದ ಆಶ್ರಮ, ಜನತಾ, ಇಂದಿರಾ ಆವಾಸ್, ಫಲಾನುಭವಿಯು ಇದ್ದಾರೆ. ೪೨ ಮನೆಯಲ್ಲಿ ಶೌಚಾಲಯದ ಬಳಕೆ ಇದೆ.

ಈ ಹಳ್ಳಿಯ ಮುಖ್ಯ ವೃತ್ತಿ ಕೃಷಿಯಾಗಿದ್ದು ಅದರಲ್ಲಿ ಶೇಂಗಾ ಮುಖ್ಯ ಬೆಳೆಯಾಗಿದೆ. ರಾಗಿ, ಭತ್ತ, ಜೋಳ, ದ್ವಿದಳಧಾನ್ಯಗಳು ಇಲ್ಲಿನ ಬೆಳೆಗಳಾಗಿವೆ. ಹಾಗೆಯೇ ತೆಂಗು, ಅಡಿಕೆ, ಹುಣಸೆಮರಗಳು ಮುಖ್ಯವಾಗಿವೆ. ಹಾಗೆಯೇ ವ್ಯಾಪಾರದ ಸರಕುಗಳು ಸಹ ಆಗಿವೆ. ಈ ಗ್ರಾಮದಲ್ಲಿ ಒಬ್ಬರು ಶಿಕ್ಷಕರು ಮತ್ತು ಹಾಸ್ಟೆಲ್ ವಾರ್ಡನ್ ಆಗಿದ್ದಾರೆ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಟೈಲರ್ ಮತ್ತು ಬೀಡಿಸುತ್ತುವುದು ಕಂಡುಬರುತ್ತದೆ. ಅಲ್ಲದೇ ಕೃಷಿ ಕಾರ್ಮಿಕರು ಕಂಡು ಬರುತ್ತಾರೆ. ಈ ಪರಿಸರದಲ್ಲಿ ಪಕ್ಷಿಗಳಾದ ನರಿ, ಕರಡಿ, ಜಿಂಕೆ, ಮೊಲ ಕಂಡುಬಂದರೆ, ಗ್ರಾಮದಲ್ಲಿ ಹಸು, ಎಮ್ಮೆ, ಕುರಿ,

ಮೇಕೆ, ಸಾಕಿದ್ದಾರೆ. ಕಾಗೆ, ಗಿಳಿ, ಗುಬ್ಬಚ್ಚಿ, ಕೋಗಿಲೆ, ಗೂಬೆ, ಕಂಡುಬರುವ ಕಾಡು ಪಕ್ಷಿಗಳಾಗಿವೆ.

ಕಂಬದಹಳ್ಳಿಯು ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ ಸಿರಾ ತಹಶೀಲ್ದಾರ್ ಕಛೇರಿ ಹಾಗೂ ಬುಕ್ಕಾಪಟ್ಟಣ ಪೋಲೀಸ್‌ಠಾಣೆ ಹಾಗೂ ವಿದ್ಯುತ್ ನಿಗಮ ಮಂಡಳಿಯನ್ನು ಹಾಗೂ ಹುಯಿಲ್‌ದೊರೆ ಗ್ರಾಮಪಂಚಾಯ್ತಿ ಮತ್ತು ಒಬ್ಬರು ಸದಸ್ಯರನ್ನು ಹೊಂದಿದೆ. ಹಾಗೆಯೇ ಹುಯಿಲ್‌ದೊರೆ ಅಂಚೆ ವ್ಯವಸ್ಥೆಯನ್ನು ಕಲ್ಪಿಸಿದೆ. ಈ ಗ್ರಾಮದಲ್ಲಿ ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದೆ.

ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿಲ್ಲದಿದ್ದರೂ ಎರಡು ಸ್ತ್ರೀಶಕ್ತಿ ಸಂಘ ಹಾಗೂ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಇದು ಮಹಿಳೆಯರ ಆರ್ಥಿಕ ಸ್ವಾವಲಂಭನೆಗೆ ಪ್ರೇರಿತವಾಗಿದೆ.

ಕಂಬದಹಳ್ಳಿಯಲ್ಲಿ ಒಂದು ಅಂಗನವಾಡಿಕೇಂದ್ರ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹೊಂದಿದ್ದು ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ಪಡೆಯುವ ಸಹಾಯಕವಾಗಿದ್ದು, ಈ ಹಳ್ಳಿಯ ಒಟ್ಟು ಸಾಕ್ಷರತೆಯ ಪ್ರಮಾಣ ೬೪.೮೮ ರಷ್ಟಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಲಭ್ಯಗಳಿವೆ.

ಈ ಗ್ರಾಮದಲ್ಲಿ ಗ್ರಂಥಾಲಯ, ಆಟದ ಮೈದಾನಗಳಿಲ್ಲದಿದ್ದರೂ ಕುಟುಂಬ ಕಲ್ಯಾಣ ಪದ್ಧತಿಯನ್ನು ಅಳವಡಿಸಿಕೊಂಡಿದೆ. ಹಾಗೆಯೇ ಇಲ್ಲಿನ ಮುಖ್ಯ ರೋಗಗಳು ಕೆಮ್ಮು ಜ್ವರ, ಚಳಿ ಇತ್ಯಾದಿಗಳು. ಈ ಗ್ರಾಮಕ್ಕೆ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟೀನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಕರಿಕಾಮಜ್ಜ ನಾಟಿ ಪದ್ಧತಿಯನ್ನು ಓಷಧಿ ನೀಡುತ್ತಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳನ್ನು ವೃದ್ದಾಪ್ಯ ವೇತನ, ವಿಕಲಚೇತನ ಸಂಧ್ಯಾಸುರಕ್ಷೆ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ. ಹಾಗೆಯೇ ಇಲ್ಲಿ ೩ ಚಿಲ್ಲರೆ ವ್ಯಾಪಾರದೊಂದಿಗೆ ಟೀ ಅಂಗಡಿಯನ್ನು ಹೊಂದಿದೆ. ಐತಿಹಾಸಿಕ ಎರಡು ಕರುಗಲ್ಲು ಮತ್ತು ಒಂದು ಬೇವಿನ ಕಟ್ಟೆಯನ್ನು ಹೊಂದಿದೆ.

ಧಾರ್ಮಿಕ ಕ್ಷೇತ್ರದಲ್ಲಿ ಗ್ರಾಮದೇವತೆ, ಕರಿಯಮ್ಮ, ಶ್ರೀರಾಮ ದೇವಾಲಯಗಳಿವೆ. ಹಾಗೆಯೇ ಗ್ರಾಮದೇವತೆಗೆ ಬಲಿ ಆರತಿಯನ್ನು ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಶಿವರಾತ್ರಿ ದಸರಾ, ಗೌರಿಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ.

## ಕಂಚಿಗಾನಹಳ್ಳಿ

ಕಂಚಿಗಾನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಸಿರಾದಿಂದ ೧೪ ಕಿ.ಮೀ. ದೂರದಲ್ಲಿದೆ. ಸಿರಾ ಹೊನ್ನೇನಹಳ್ಳಿ ಹಿಕಳ್ಳಂಬೆಳ್ಳ ಮಾರ್ಗದಲ್ಲಿದ್ದೂ ಕಂದಾಯ ಗ್ರಾಮವಾಗಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೧೭೨.೫೨ ರಷ್ಟಿದೆ. ಈ ಹಳ್ಳಿಯು ಬಯಲುನಾಡಿನ ಪ್ರದೇಶವಾಗಿದ್ದು ಯಾವುದೇ ಅರಣ್ಯ-ತೋಪುಗಳಿಂದ ಕೂಡಿಲ್ಲದಿದ್ದರೂ ಮರಳು ಮಿಶ್ರಿತ ಕೆಂಪು ಮಣ್ಣು ಹಾಗೂ ಎರೆಮಣ್ಣಿನಿಂದ ಕೂಡಿದೆ. ಕಂಚು ಶಬ್ದದಿಂದ ಗ್ರಾಮದ ಹೆಸರು ಬಂದಿದ್ದು, ಕಂಚಿನ ವ್ಯಾಪಾರ, ತಯಾರಿಕೆ ಅಥವಾ ಮೊದಲಿಗೆ ಪಂಪನ್ನು ಬಳಸಿದ ಹೆಗ್ಗಳಿಕೆಯಿಂದಲೂ ಈ ಶಬ್ದ ಬಂದಿದೆ. ಉತ್ತರದಲ್ಲಿ ವ್ಯಕೆ ಸೂಚಕ ಇರುವುದರಿಂದ ಕಂಚಿಗಾ ಎಂಬುದು ಕಂಪು ವ್ಯಕ್ತಿ ಎರಡೂ ಸೇರಿ ಗ್ರಾಮ ರಚನೆಯಾಗಿದೆ.

ಈ ಹಳ್ಳಿಯಲ್ಲಿ ವಾರ್ಷಿಕ ಮಳೆಯ ಪ್ರಮಾಣವು ೪೩೦ ಮಿ.ಮೀ. ಸರಾಸರಿಯಾಗಿದೆ. ಇಲ್ಲಿ ೭೦ ಕೊಳವೆ ಬಾವಿಯನ್ನು ಹೊಂದಿದ್ದು ಟ್ಯಾಂಕ್ ಮತ್ತು ೩ ಮಿನಿಟ್ಯಾಂಕ್ ಮತ್ತು ೩ ಕೈ ಪಂಪನ್ನು ಹೊಂದಿದೆ.

ಗ್ರಾಮದಲ್ಲಿ ಒಟ್ಟು ೧೮೭ ಮನೆಗಳಿದ್ದು, ೭೭೯ ಜನಸಂಖ್ಯೆಯನ್ನು ಹೊಂದಿದೆ. ಇಲ್ಲಿ ಕುಂಚಿಟಿಗ, ಬೋವಿ, ಆದಿಕರ್ನಾಟಕ, ದೊಂಬಿದಾಸ, ಆದಿದ್ರಾವಿಡ, ಮಡಿವಾಳ, ಗೊಲ್ಲರ ಮನೆಗಳಿವೆ. ಇವರ ಭಾಷೆ ಕನ್ನಡವಾಗಿದೆ. ಅಲ್ಲದೇ ಇವರ ಮುಖ್ಯ ಆಹಾರ ರಾಗಿಮುದ್ದೆ, ಅನ್ನ ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ, ಇತ್ಯಾದಿಗಳಾಗಿವೆ. ಸಾಂಪ್ರದಾಯಿಕ ಎತ್ತಿನಗಾಡಿಗಳಿವೆ ಅಲ್ಲದೇ ಆಧುನಿಕ ವಾಹನಗಳಾದ ಟ್ರಾಕ್ಟರ್, ಮಿನಿಟೆಂಪೋ, ಮತ್ತು ದ್ವಿಚಕ್ರವಾಹನಗಳನ್ನು ಹೊಂದಿದ್ದು ಕಚ್ಚಾರಸ್ತೆಯನ್ನು ಒಳಗೊಂಡಿದೆ.

ಈ ಗ್ರಾಮದ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ ಮುಖ್ಯ ಬೆಳೆಯಾಗಿದೆ. ರಾಗಿ, ಭತ್ತ, ಜೋಳ, ದ್ವಿದಳಧಾನ್ಯಗಳು, ತೆಂಗು ಅಡಿಕೆ ಇತ್ಯಾದಿಗಳು, ಅಲ್ಲದೇ ಮುಖ್ಯ ವ್ಯಾಪಾರದ ಸರಕುಗಳಾಗಿವೆ ಆರ್ಥಿಕೇತರ ಆದಾಯಕ್ಕಾಗಿ ಆಧುನಿಕ ಡೈರಿಯನ್ನು ಹೊಂದಿದೆ. ಇದರೊಂದಿಗೆ ಈ ಗ್ರಾಮದಲ್ಲಿ ರೈಲ್ವೆ, ಶಿಕ್ಷಕರು, ಅರಣ್ಯ ಬಿಎಂಟಿಸಿ ಕ್ಷೇತ್ರದಲ್ಲಿ ಸರ್ಕಾರಿ ನೌಕರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಯಾವುದೇ ಕೈಗಾರಿಕೆಗಳಿಲ್ಲದಿದ್ದರೂ ಟೈಲರ್, ಗಂಧದ ಕಡ್ಡಿ, ಬೀಡಿಸುತ್ತುವುದು ಗುಡಿಕೈಗಾರಿಕೆಗಳಲ್ಲಿ ಒಂದಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ ಬುಕ್ಕಾಪಟ್ಟಣ ಜಿಲ್ಲಾ ಹುಯಿಲ್‌ದೊರೆ, ಪಂಚಾಯ್ತಿ ತಹಶೀಲ್ದಾರ್ ಕಛೇರಿಯನ್ನು ಹೊಂದಿದ್ದು ದೊಡ್ಡ

ಅಗ್ರಹಾರ ಗ್ರಾಮಪಂಚಾಯ್ತಿ ಮತ್ತು ಒಬ್ಬರು ಸದಸ್ಯರನ್ನು ಹೊಂದಿದೆ. ಇದು ವಡ್ಡನಹಳ್ಳಿ ಅಂಚೆಕಛೇರಿಯನ್ನು ಒಳಗೊಂಡಿದೆ. ಈ ಗ್ರಾಮವು ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದ್ದು ಬಗೆಹರಿಯದ ಸಮಸ್ಯೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳಲಾಗುತ್ತದೆ. ಇದು ಕಳ್ಳಂಬೆಳ್ಳ ವಿದ್ಯುತ್ ಮತ್ತು ಉಪಪೋಲೀಸ್ ಠಾಣೆಯನ್ನು ಹೊಂದಿದೆ.

ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದಿದ್ದರೂ ೩ ಸ್ತ್ರೀಶಕ್ತಿಸಂಘಗಳನ್ನು ಮತ್ತು ಎರಡು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವನ್ನು ಹೊಂದಿದೆ. ಈ ಗ್ರಾಮದ ಸಾಕ್ಷರತೆಯ ಪ್ರಮಾಣ ೬೮.೯೮ ರಷ್ಟಿದೆ. ಹಾಗೂ ಒಂದು ಅಂಗನವಾಡಿಕೇಂದ್ರ ಸ.ಹಿ.ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಊಟ, ಶೌಚಾಲಯ, ಕ್ಷೀರಭಾಗ್ಯ,ಉಚಿತ ಸಮವಸ್ತ್ರ, ಪುಸ್ತಕ ಸೌಲಭ್ಯವಿದ್ದು, ಸಾರಿಗೆ, ಶಿಕ್ಷಣ, ಕಂದಾಯ ಇಲಾಖೆಯ ೫ ಜನ ಸರ್ಕಾರಿ ನೌಕರರಿದ್ದಾರೆ.

ಕಂಚಿಗಾನಹಳ್ಳಿಯಲ್ಲಿ ಯಾವುದೇ ಆರೋಗ್ಯ ಕೇಂದ್ರವಿಲ್ಲದಿದ್ದರೂ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟೀನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಈ ಗ್ರಾಮದ ಪ್ರಮುಖ ರೋಗಳೆಂದರೆ ಚಳಿ, ಜ್ವರ, ಕೆಮ್ಮು ಇತ್ಯಾದಿಗಳಾಗಿವೆ. ಗ್ರಾಮದಲ್ಲಿ ರಾಜಪ್ಪನವರು ನಾಟಿ ಔಷಧಿಯನ್ನು ನೀಡುವಂತಹ ವೈದ್ಯರಿದ್ದಾರೆ.

ಸಮುದಾಯದ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದೆ ಅಲ್ಲದೇ ಈ ಗ್ರಾಮದಲ್ಲಿ ನಾಲ್ಕು ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಹೊಂದಿದೆ. ಮತ್ತು ಗೇಟ್‌ನಲ್ಲಿ ೬ ಟೀ ಅಂಗಡಿಗಳನ್ನು ಹೊಂದಿರುವುದು ಕಂಡುಬರುತ್ತದೆ. ಐತಿಹಾಸಿಕವಾದ ಎರಡು ಕರುಗಲ್ಲು ೨ ಅರಳಿಕಟ್ಟೆಯನ್ನು ಹೊಂದಿದೆ.

ಧಾರ್ಮಿಕ ಆಚರಣೆಗಳಲ್ಲಿ ನೋಡಿದಾಗ ಶ್ರೀರಾಮು, ಮುತ್ತರಾಯ, ತಿಮ್ಮಪ್ಪ, ಮಾರಮ್ಮ, ಬಸವಣ್ಣನ ಗುಡ್ಡೆ, ಕರಿಯಮ್ಮನ ಪೌಳಿಗೆಳೆಂಬ ದೇವಾಲಯಗಳಿವೆ. ಅಲ್ಲದೇ ಆಶಾಡಮಾಸದಲ್ಲಿ ಮಾರಮ್ಮನ ಜಾತ್ರೆ ನಡೆಯುತ್ತದೆ. ಇದು ಈ ಗ್ರಾಮದೇವತೆಯ ಒಂದು ವಿಶೇಷವಾಗಿದೆ. ಆರತಿ ಮತ್ತು ಬಲಿ ನೀಡುವಂತಹ ಕಾರ್ಯಚರಣೆಯನ್ನು ಇನ್ನು ಮುಂದುವರೆಸಿದ್ದಾರೆ. ಯುಗಾದಿ, ದೀಪಾವಳಿ, ದಸರಾ ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

**ಕೆಂಚಪ್ಪನಹಳ್ಳಿ**

ಕೆಂಚಪ್ಪನಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ ಹೊನ್ನೇನಹಳ್ಳಿ ಕಳ್ಳಂಬೆಳ್ಳ ಗ್ರಾಮದ ಮಾರ್ಗದಲ್ಲಿ ಕೆಂಚಪ್ಪನಹಳ್ಳಿ ಗೇಟ್‌ನಿಂದ ಒಂದು ಕಿ.ಮೀ. ದೂರದಲ್ಲಿ ಎಡಭಾಗಕ್ಕೆ ಇದೆ. ಸಿರಾದಿಂದ ೧೬ ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಕಂದಾಯ ಗ್ರಾಮವಾಗಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ಕಾಲೋನಿ ಸೇರ್ಪಡೆಯಾಗಿದೆ. ಕೆಂಚಪ್ಪ ಎಂಬ ವ್ಯಕ್ತಿ ಈ ಗ್ರಾಮದ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರಿಂದ ಆತನ ಹೆಸರಿನಲ್ಲಿ ಈ ಗ್ರಾಮ ರಚನೆಯಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳುಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ ಹಾಗೂ ಅರಣ್ಯ ಬೆಟ್ಟ–ಗುಡ್ಡ ತೋಪುಗಳಿರುವುದಿಲ್ಲ. ಹಾಗೆಯೇ ಇಲ್ಲಿ ೨೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಕುಡಿಯುವ ನೀರಿನ ವ್ಯವಸ್ಥೆಗೆ ಸಿಸ್ಟನ್ ಮತ್ತು ಕೈ ಜಗ್ಗುಗಳನ್ನು ಹೊಂದಿದೆ ಇಲ್ಲಿನ ಒಟ್ಟು ವಾರ್ಷಿಕ ಮಳೆಯ ಪ್ರಮಾಣವು ೪೩೦ ಮಿ.ಮೀ. ಆಗಿದೆ. ೨೧೨ ಡಿ.ಸೆಂ. ಉಷ್ಣಾಂಶವಿದ್ದು, ಚಳಿ ೧೨ ಡಿ.ಸೆ. ಇದೆ.

ಈ ಗ್ರಾಮದಲ್ಲಿ ಒಟ್ಟು ೨೦೦ ಮನೆಗಳಿದ್ದು ೮೬೪ ಮಂದಿ ಜನಸಂಖ್ಯೆಯನ್ನು ಹೊಂದಿದೆ ಹಾಗೆಯೇ ಇವರ ಭಾಷೆ ಕನ್ನಡ, ಹಾಗೂ ಇಲ್ಲಿ ಕುಂಚಿಟಿಗ, ಆದಿ ಕರ್ನಾಟಕ ನಾಯಕ, ವೀರಶೈವ, ಮಡಿವಾಳ, ಭಜಂತ್ರಿ ಆದಿದ್ರಾವಿಡರ ಮನೆಗಳಿವೆ. ಇವರ ಮುಖ್ಯ ಆಹಾರ ಮುದ್ದೆ ಅನ್ನ ಮತ್ತು ವಿಶೇಷವಾಗಿ ಬಾಡೂಟ ಪಾಯಸ ಇತ್ಯಾದಿಗಳಾಗಿವೆ. ಹಾಗೂ ಈ ಪ್ರದೇಶದಲ್ಲಿ ಆಧುನಿಕ ವಾಹನಗಳಾದ ಟ್ರಾಕ್ಟರ್, ಮಿನಿಟೆಂಪೋ, ದ್ವಿಚಕ್ರವಾಹನಗಳು ಕಂಡು ಬಂದಿದ್ದು ಸಿ.ಸಿ. ರಸ್ತೆ ಮತ್ತು ಚರಂಡಿಯನ್ನು ಒಳಗೊಂಡಿದೆ. ನರಿ, ಮೊಲ, ಜಿಂಕೆ, ಹಂದಿ ರೆ, ಗೂಬೆ, ಗುಬ್ಬಚ್ಚಿ, ಗಿಳಿ, ಹದ್ದು, ಕೊಕ್ಕರೆ, ಈಜಗ, ಸಾಂಬಾರ, ಕಾಗೆ, ಬಾವಲಿ, ಕಾಡು ಪಕ್ಷಿಗಳು, ಕೋಳಿ ಸಾಕುಪಕ್ಷಿ ಹಸು, ಎಮ್ಮೆ, ಕುರಿ, ಮೇಕೆ, ಸಾಕು ಪ್ರಾಣಿಗಳಾಗಿವೆ.

ಕೆಂಚಪ್ಪನಹಳ್ಳಿಯ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ, ರಾಗಿ, ಭತ್ತ, ಜೋಳ, ನವಣೆ, ಸೂರ್ಯಕಾಂತಿ, ಹುಣಸೆ ತೆಂಗು ಅಡಿಕೆ ಬೆಳೆಗಳನ್ನು ಬೆಳೆಯುತ್ತಾರೆ ಮತ್ತು ಇಲ್ಲಿ ಯಾವುದೇ ಸರ್ಕಾರಿ ನೌಕರರು ಹಾಗೂ ಸಾಂಪ್ರದಾಯಿಕ ಕೆಲಸಗಾರರು ಕಂಡುಬಂದಿಲ್ಲ. ಕೂಲಿ ಕಾರ್ಮಿಕರನ್ನು ಕಾಣುತ್ತೇವೆ.

ಚಿಕ್ಕನಾಯಕನಹಳ್ಳಿ ವಿಧಾನ ಸಭಾ, ತುಮಕೂರು ಲೋಕಸಭಾ ಬುಕ್ಕಾಪಟ್ಟಣ ಹುಯಿಲ್‌ದೊರೆ ಜಿಲ್ಲಾ ತಾಲ್ಲೂಕು ಪಂಚಾಯ್ತಿಗಳನ್ನು, ಸಿರಾ ತಹಶೀಲ್ದಾರ್ ಕಛೇರಿ ಕಳ್ಳಂಬೆಳ್ಳ ಪೋಲೀಸ್ ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ದೊಡ್ಡ ಅಗ್ರಹಾರ ಗ್ರಾಮಪಂಚಾಯ್ತಿ ವಡ್ಡನಹಳ್ಳಿ ಅಂಚೆ, ಒಬ್ಬರು ಸದಸ್ಯರನ್ನು ಹೊಂದಿದೆ.

ಈ ಗ್ರಾಮವು ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ. ಹಾಗೂ ಬಗೆಹರಿಯದ ಸಮ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ. ಈ ಗ್ರಾಮದಲ್ಲಿ ಹಣಕಾಸು ವ್ಯವಸ್ಥೆಗೆ ಯಾವುದೇ ಬ್ಯಾಕಿಂಗ್ ಸೌಲಭ್ಯವು ಇಲ್ಲ ಆದ್ದರಿಂದಾಗಿ ಸ್ತ್ರೀಶಕ್ತಿಕೇಂದ್ರ ಮತ್ತು ಧರ್ಮಸ್ಥಳ ಸಂಘಗಳಿಂದ ಕೆಲಸ ನಿರ್ವಹಿಸಿಕೊಳ್ಳುತ್ತಿದ್ದಾರೆ.

ಈ ಗ್ರಾಮದಲ್ಲಿ ಅಂಗನವಾಡಿಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಇಲ್ಲಿನ ಒಟ್ಟು ಶಿಕ್ಷಣದ ಸಾಕ್ಷರತಾ ಪ್ರಮಾಣವು ೪೩.೦೭ರಷ್ಟಿದೆ. ಈ ಗ್ರಾಮದಲ್ಲಿ ಯಾವುದೇ ಆಟದ ಮೈದಾನ ಯಾವುದೇ ಆರೋಗ್ಯ ಕೇಂದ್ರಗಳಿಲ್ಲದಿದ್ದರೂ ಕುಟುಂಬ ಕಲ್ಯಾಣವನ್ನು ಹೊಂದಿದ್ದು ಆಶಾಕಾರ್ಯಕರ್ತೆಯರು ಆರೋಗ್ಯದ ಬಗ್ಗೆ ನಿಗಾವಹಿದ್ದಾರೆ. ಇಲ್ಲಿ ಕಂಡುಬರುವಂತವ ಜ್ವರ, ಕೆಮ್ಮು, ಚಳಿ ಮುಂತಾದ ರೋಗಗಳನ್ನು ತಡೆಯಲು ಕಾರಣರಾಗಿದ್ದಾರೆ. ಇಲ್ಲಿ ಚಂದ್ರಶೇಖರಪ್ಪ, ಲೋಕಣ್ಣ, ರಂಗಪ್ಪನವರು ನಾಟಿ ಓಷಧಿಯನ್ನು ನೀಡುವ ವೈದ್ಯರಾಗಿದ್ದಾರೆ.

ಸರ್ಕಾರದ ಸೌಲಭ್ಯಗಳನ್ನು ಪಡೆಯುತ್ತಿದ್ದು, ಈ ಗ್ರಾಮದಲ್ಲಿ ಚಿಲ್ಲರೆ ವ್ಯಾಪಾರದ ೬ ಅಂಗಡಿಗಳಿವೆ. ಹಾಗೂ ಐತಿಹಾಸಿಕವಾಗಿ ಇಲ್ಲಿ ನೆಲೆ, ಸ್ಮಾರಕ, ಶಾಸನಗಳಿಲ್ಲದಿದ್ದರೂ ಕರುಗಲ್ಲುಗಳಿರುವುದು ವಿಶೇಷವಾಗಿದೆ. ಹಾಗೆಯೇ ಒಂದು ಬೇವಿನ ಕಟ್ಟೆಯನ್ನು ಹೊಂದಿದೆ.

ಧಾರ್ಮಿಕ ಪರಂಪರೆಯ ಕೇಂದ್ರವಾಗಿದ್ದು ಇಲ್ಲಿ ಮುತ್ತುರಾಯಮ ಗ್ರಾನದೇವತೆ ದೇವಾಲಯಗಳಿವೆ. ಇಲ್ಲಿ ಪ್ರತಿವರ್ಷವು ಮಾರಮ್ಮನ ಜಾತ್ರೆಯನ್ನು ಮಾಡುತ್ತಾರೆ ಆರತಿ ಮತ್ತು ಬಲಿ ನೀಡುವುದು ವಿಶೇಷವಾಗಿರುತ್ತದೆ.

## ಕಂಬದ ರಂಗಪ್ಪನಪಾಳ್ಯ

ಕೆ.ಆರ್. ಪಾಳ್ಯವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ ಹೊನ್ನೇನಹಳ್ಳಿ ಕಳ್ಳಂಬೆಳ್ಳ ಮಾರ್ಗದಲ್ಲಿ ೯.೦೫ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಕಂದಾಯ ಗ್ರಾಮವಾಗಿದ್ದು ಕುಣಗಾನಹಳ್ಳಿಯ ಜೋಡಿಗ್ರಾಮವಾಗಿದೆ. ಇಲ್ಲಿನ ಒಟ್ಟು ಭೌಗೋಳಿಕ ವಿಸ್ತೀರ್ಣವು ೩೦ ಹೆಕ್ಟೇರ್‌ಗಳಾಗಿವೆ. ಈ ಭಾಗದಲ್ಲಿ ರಂಗನಹಳ್ಳಿ, ರಂಗಾಪುರ ಹೀಗೆ ಗ್ರಾಮ ಇರುವುದರಿಂದ ಮರಡಿಗುಡ್ಡದ ರಂಗನಾಥ ದೇವಾಲಯಕ್ಕೆ ಸಮೀಪ ಇರುವುದರಿಂದ ಕಂಬದ ರಂಗಪ್ಪನ ಪಾಳ್ಯದಂದು ಕರೆಯುತ್ತಾರೆ.

ಬಯಲುನಾಡಿನ ಪ್ರದೇಶವಾಗಿದ್ದು ಯಾವುದೇ ಅರಣ್ಯ ಬೆಟ್ಟಗುಡ್ಡ ತೋಪುಗಳು ಕಂಡುಬರುವುದಿಲ್ಲ ಈ ಗ್ರಾಮದಲ್ಲಿನ ಒಟ್ಟು ವಾರ್ಷಿಕ ಸರಾಸರಿ ಉಷ್ಣಾಂಶ ೩೮ ಡಿ.ಸೆ. ಚಳಿ ೧೨ ಡಿ.ಸೆಂ. ಇರುತ್ತದೆ. ೪೫೧ ಮಿ.ಮೀ. ಮಳೆಯ ಪ್ರಮಾಣವಾಗಿದೆ. ಈ ಭಾಗದಲ್ಲಿ ೧೨ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ ಹಾಗೆಯೇ ಕುಡಿಯುವ ನೀರಿಗಾಗಿ ಸಿಸ್ಟನ್ ಮತ್ತು ಕೈ ಪಂಪನ್ನು ಹೊಂದಿದೆ.

ಈ ಗ್ರಾಮದಲ್ಲಿ ಒಟ್ಟು ೧೨ ಮನೆಗಳಿದ್ದು ೩೨ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಕುಂಚಿಟಿಗ ದೊಡ್ಡ ಸಮುದಾಯವಾಗಿದೆ. ಮಡಿವಾಳ ಮನೆಗಳಿವೆ. ಇವರ ಭಾಷೆ ಕನ್ನಡವಾಗಿದೆ. ಅಲ್ಲದೇ ಆಧುನಿಕ ವಾಹನಗಳಾದ ಟ್ರಾಕ್ಟರ್, ದ್ವಿಚಕ್ರವಾಹನಗಳನ್ನು ಹೊಂದಿದೆ. ಸಾಂಪ್ರದಾಯಿಕವಾಗಿ ಮುಖ್ಯ ಆಹಾರವು ರಾಗಿ ಮುದ್ದೆ ಅನ್ನು ಮತ್ತು ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ಇತ್ಯಾದಿಗಳಾಗಿವೆ. ಈ ಗ್ರಾಮವು ರಸ್ತೆ ಸಂಪರ್ಕದಲ್ಲಿ ಡಾಂಬರು ರಸ್ತೆ ಮತ್ತು ಕಚ್ಚಾರಸ್ತೆಯಿಂದ ಕೂಡಿದೆ.

ಈ ಹಳ್ಳಿಯ ಮುಖ್ಯ ಕಸುಬಾ ಕೃಷಿಯಾಗಿದೆ. ಮುಖ್ಯ ಬೆಳೆ ಶೇಂಗಾ ಇದರೊಂದಿಗೆ, ರಾಗಿ, ಭತ್ತ, ಜೋಳ, ತೆಂಗು ಅಡಿಕೆ, ಹುಣಸೆ ಬೇವುಗಳು ಇತರೆ ಬೆಳೆಗಳಾಗಿದ್ದು ವ್ಯಾಪಾರದ ಸರಕುಗಳಾಗಿವೆ. ಈ ಗ್ರಾಮದಲ್ಲಿ ಕೂಲಿ ಕಾರ್ಮಿಕರನ್ನು ಹೊಂದಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ ಹಾಗೂ ಬುಕ್ಕಾಪಟ್ಟಣ ಜಿಲ್ಲಾ ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ ಸಿರಾ ತಹಶೀಲ್ದಾರ್ ಕಛೇರಿಯನ್ನು ಹೊಂದಿದೆ. ಹುಯಿಲ್‌ದೊರೆ ಪಂಚಾಯ್ತಿ ಮತ್ತು ವಡ್ಡನಹಳ್ಳಿ ಅಂಚೆ ಕಛೇರಿಯನ್ನು ಒಳಗೊಂಡಿದೆ. ಹಾಗೂ ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದ್ದು ಬಗೆಹರಿಯದ ಸಮಸ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ಬಗೆ ಹರಿಸಿಕೊಳ್ಳುತ್ತಾರೆ.

ಈ ಗ್ರಾಮದ್ಲಲಿ ಯಾವುದೇ ಶಾಲೆಗಳು ಇಲ್ಲದಿದ್ದರೂ ಒಟ್ಟು ಸಾಕ್ಷರತೆಯ ಪ್ರಮಾಣವು ೫೮.೩೭ ರಷ್ಟಿದೆ. ಇಲ್ಲಿ ಯಾವುದೇ ಹಣಕಾಸು ವ್ಯವಸ್ಥೆಗೆ ಯಾವ ಸಂಘಗಳು ಕಂಡುಬರುವುದಿಲ್ಲ ಪಕ್ಕದ ಕುಣಿಗಾಟನಹಳ್ಳಿಗೆ ಶಿಕ್ಷಣಕ್ಕೆ ಮಕ್ಕಳು ಬರುತ್ತಿದ್ದಾರೆ.

ಈ ಗ್ರಾಮದಲ್ಲಿ ಆರೋಗ್ಯ ಕೇಂದ್ರವಿಲ್ಲದಿದ್ದರೂ ಕುಟುಂಬ ಕಲ್ಯಾಣ ಇಲಾಖೆಯ ಆಶಾಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ, ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಇಲ್ಲಿ ಕಾಣಿಸಿಕೊಳ್ಳುವ ಮುಖ್ಯ ರೋಗಗಳೆಂದರೆ ಕೆಮ್ಮು, ಜ್ವರ, ಚಳಿ ಇತ್ಯಾದಿಗಳಾಗಿವೆ.

ಸಮುದಾಯ ಸೌಲಭ್ಯಗಳು ಅಂಗಡಿಮುಗ್ಗಟ್ಟುಗಳು ಕಂಡುಬರುವುದಿಲ್ಲ ಈ ಗ್ರಾಮದಲ್ಲಿ ಒಂದು ಅರಳಿವೃಕ್ಷವಿದೆ. ಈ

ಗ್ರಾಮಕ್ಕೆ ತನ್ನದೇ ಆದ ಧಾರ್ಮಿಕ ಕೇಂದ್ರಗಳಾದ ದೇವಾಲಯ ಮಾರಮ್ಮ ಮತ್ತು ಆಂಜನೇಯ ದೇವಾಲಯಗಳೆರಡು ಕುಣಗಾಟನಹಳ್ಳಿಯ ಜೊತೆಗೆ ಜಾತ್ರೆ ಮತ್ತು ಹಬ್ಬಗಳನ್ನು ಆಚರಣೆ ಮಾಡುತ್ತಾರೆ. ವರ್ಷಕ್ಕೊಮ್ಮೆ ಮಾರಮ್ಮನ ಜಾತ್ರೆಯನ್ನು ಮಾಡಿ ಬಲಿ ಮತ್ತು ಆರತಿ ಮಾಡುವುದು ವಿಶೇಷವಾಗಿದೆ.

ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ, ರಾಮನವಮಿ, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮರಡಿ ರಂಗನಾಥನ ಜಾತ್ರೆಗೆ ಇಲ್ಲಿ ಆರತಿ ಮಾಡುವುದು ಸಂಪ್ರದಾಯವಾಗಿದೆ.

## ಕೆಂಚಪ್ಪನಹಳ್ಳಿ ವಡ್ಡರಹಟ್ಟಿ

ವಡ್ಡರಹಟ್ಟಿಯು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ ಹೊನ್ನೇನಹಳ್ಳಿ ಕಳ್ಳಂಬೆಳ್ಳ ಮಾರ್ಗದಲ್ಲಿ ಕೆಂಚಪ್ಪನಹಳ್ಳಿ ಗೇಟ್‌ನಿಂದ ಎಡಭಾಗಕ್ಕೆ ೧.೨ ಕಿ.ಮೀ ದೂರದಲ್ಲೂ ಸಿರಾದಿಂದ ೧೪ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಕಂದಾಯ ಗ್ರಾಮವಾಗಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೪೮ ಹೆಕ್ಟೇರ್‌ಗಳಾಗಿದೆ. ವಡ್ಡ ಜನಾಂಗದವರು ಇಲ್ಲಿನ ಮೂಲ ಪುರುಷರಾಗಿರುವುದರಿಂದ ಇದೇ ಹೆಸರಿನಲ್ಲಿ ಗ್ರಾಮ ರಚನೆಯಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಯಾವುದೇ ಬೆಟ್ಟಗುಡ್ಡಗಳಿರದಿದ್ದರೂ, ಕುಡಿಯುವ ನೀರಿನ ವ್ಯವಸ್ಥೆಗೆ ೨ ಕೈ ಜಗ್ಗುಗಳು ಮತ್ತು ಸಿಸ್ಟನ್‌ನ್ನು ಹೊಂದಿದೆ. ಅಲ್ಲದೇ ೦೮ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಇಲ್ಲಿನ ವಾರ್ಷಿಕ ೪೨೦ ಮಿ.ಮೀ. ಸರಾಸರಿ ಮಳೆಯ ಪ್ರಮಾಣವಾಗಿದೆ.

ಈ ಗ್ರಾಮದಲ್ಲಿ ಒಟ್ಟು ೩೨ ಮನೆಗಳಿದ್ದು ೧೦೨ ಜನಸಂಖ್ಯೆಯನ್ನು ಹೊಂದಿದೆ. ಇವರ ಭಾಷೆ ಕನ್ನಡವಾಗಿದ್ದು ಬೋವಿ ಜನಾಂಗದವರನ್ನು ಕಾಣುತ್ತೇವೆ. ಇಲ್ಲಿ ಇವರ ಆಹಾರ ರಾಗಿಮುದ್ದೆ ಅನ್ನ ವಿಶೇಷವಾಗಿ ಪಾಯಸ, ಬಾಡೂಟ, ಹೋಳಿಗೆ ಇತ್ಯಾದಿಗಳಾಗಿವೆ. ಇಲ್ಲಿ ಆಧುನಿಕ ವಾಹನಗಳಾದ ಟ್ರಾಕ್ಟರ್, ಮಿನಿಟೆಂಪೋ ಮತ್ತು ದ್ವಿಚಕ್ರವಾಹನಗಳನ್ನು ಹೊಂದಿದೆ. ಇದು ಕಚ್ಚಾರಸ್ತೆಯನ್ನು ಹೊಂದಿದೆ.

ಇಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು ಶೇಂಗಾ ರಾಗಿ, ಭತ್ತ, ಜೋಳ, ಸೂರ್ಯಕಾಂತಿ ಪ್ರಮುಖ ಬೆಳೆಗಳಾಗಿವೆ. ಇವು ವ್ಯಾಪಾರದ ಮುಖ್ಯ ಸರಕುಗಳಾಗಿವೆ ಮತ್ತು ಹೇರಳವಾಗಿ ಹುಣಸೇ ಮರಗಳು ಮತ್ತು ವಿರಳವಾಗಿ ತೆಂಗಿನ ಮರಗಳನ್ನು ಕಾಣುತ್ತೇವೆ ಮತ್ತು ಇಲ್ಲಿನ ಜನರು ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ ತುಮಕೂರು ಲೋಕಸಭಾಕ್ಷೇತ್ರ ಬುಕ್ಕಾಪಟ್ಟಣ ಜಿಲ್ಲಾ ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ ತಹಶೀಲ್ದಾರ್ ಕಛೇರಿ ದೊಡ್ಡ ಅಗ್ರಹಾರ ಗ್ರಾಮಪಂಚಾಯ್ತಿ ಒಬ್ಬರು ಸದಸ್ಯರು ವಡ್ಡನಹಳ್ಳಿ ಅಂಚೆ ಕಛೇರಿಯನ್ನು ಹೊಂದಿದೆ. ಇಲ್ಲಿ ಗ್ರಾಮ ನ್ಯಾಯ ಮಂಡಳಿಯಿದ್ದು ಬಗೆಹರಿಯದ ತೀರ್ಮಾನಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ. ಯಾವುದೇ ಹಣಕಾಸಿನ ವ್ಯವಸ್ಥೆಗೆ ಬ್ಯಾಂಕುಗಳಿಲ್ಲದಿದ್ದರೂ ೦೧ ಸ್ತ್ರೀಶಕ್ತಿ ಸಂಘವನ್ನು ರಚನೆ ಮಾಡಿಕೊಂಡಿದ್ದಾರೆ. ಇಲ್ಲಿ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಒಂದು ಅಂಗನವಾಡಿಕೇಂದ್ರವನ್ನು ಹೊಂದಿದೆ. ಇಲ್ಲಿನ ಒಟ್ಟು ಸಾಕ್ಷರತೆಯ ಪ್ರಮಾಣವು ೪೦% ರಷ್ಟಿದೆ. ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸಲಾಗುತ್ತದೆ.

ಈ ಗ್ರಾಮದಲ್ಲಿ ಕುಟುಂಬ ಕಲ್ಯಾಣ ಪದ್ಧತಿ ಇದೆ ಹಾಗೆಯೇ ಆರೋಗ್ಯದ ಕೇಂದ್ರಗಳಿಲ್ಲದಿದ್ದರೂ ಆಶಾ ಕಾರ್ಯಕರ್ತೆಯರು ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಇಲ್ಲಿನ ಪ್ರಮುಖ ರೋಗಗಳೆಂದರೆ ಜ್ವರ, ಕೆಮ್ಮು, ಬಿ.ಪಿ. ಇತ್ಯಾದಿಗಳಾಗಿವೆ. ರಂಗನಾಯ್ಕರವರು ನಾಟಿ ಔಷಧಿಯನ್ನು ನೀಡುತ್ತಾರೆ. ವಡ್ಡರಹಟ್ಟಿಯಲ್ಲಿ ಒಂದು ಚಿಲ್ಲರೆ ವ್ಯಾಪಾರದ ಅಂಗಡಿ ಇದೆ. ಸರ್ಕಾರದ ಸಮುದಾಯ ಸೌಲಭ್ಯಗಳನ್ನು ಪಡೆಯುತ್ತಿದೆ. ಯಾವುದೇ ಐತಿಹಾಸಿಕ ನೆಲೆಗಳು ಕಂಡುಬರುವುದಿಲ್ಲ ಮತ್ತು ಮಾರಮ್ಮ ಉಡಸಲಮ್ಮ ಎಂಬ ದೇವಾಲಯವಿದೆ. ಪ್ರತಿವರ್ಷವು ಈ ದೇವರಿಗೆ ಜಾತ್ರೆ ಮಾಡುವುದು ಆರತಿ ಮತ್ತು ಬಲಿ ನೀಡುವ ಪ್ರಸಂಗವು ವಿಶೇಷವಾಗಿರುತ್ತದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬವನ್ನು ಆಚರಿಸುತ್ತಾರೆ.

## ಗಜಮಾರನಹಳ್ಳಿ

ಗಜಮಾರನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೪ ಕಿ.ಮೀ. ದೂರದಲ್ಲಿದೆ. ಸಿರಾ–ಚಂಗಾವರ ಮುಖ್ಯ ರಸ್ತೆಯಲ್ಲಿ ಬರುವ ಈ ಹಳ್ಳಿ ಬಿದರೆಕೆರೆಯ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೨೪೨ ಹೆಕ್ಟೇರ್ ಆಗಿದ್ದು ಮರಳು ಮಿಶ್ರಿತ ಕೆಂಪುಮಣ್ಣನ್ನು ಹೊಂದಿದೆ. ಎಡಕ್ಕೆ ಸುವರ್ಣಮುಖಿ ಹಳ್ಳ ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ಈ ಗ್ರಾಮದಿಂದ ಪೂರ್ವಕ್ಕೆ ಸಿರಾ–ಚಂಗಾವರ ರಸ್ತೆಯ ಎಡಬದಿಗೆ ಈ ಗ್ರಾಮದಿಂದ ಅರ್ಧ ಕಿ.ಮೀ ದೂರದಲ್ಲಿ ಗುಡ್ಡೆ ರಂಗನಾಥನ ದೇವಾಲಯವಿದೆ.

ಆನೆಯನ್ನು ಮೇಯಿಸುವ ಅಥವಾ ಪಳಗಿಸುವ ಮಾರಣ್ಣ ಎಂಬ ವ್ಯಕ್ತಿ ಸಿರಾ ಪರಿಸರದ ಆಳರಸರ ಅಧೀನದಲ್ಲಿದ್ದು ನಂತರ ಆತನು ಈ ಗ್ರಾಮದಲ್ಲಿ ವಸತಿ ಮಾಡಿಕೊಂಡಿದ್ದರಿಂದ ಆತನ ಹೆಸರನ್ನೇ ಈ ಗ್ರಾಮ ರಚನೆಯಾಗಿದೆ ಎಂದು ಗ್ರಾಮದ ಹಿರಿಯ ಶಿಕ್ಷಕ ಗೋವಿಂದಯ್ಯ ಅವರ ಅಭಿಪ್ರಾಯ. ತುಮಕೂರು ಜಿಲ್ಲೆಯಲ್ಲಿ ರಾಹುತನಹಳ್ಳಿ ಈ ಮೊದಲಾದವು ಪ್ರಾಣಿ ಮೂಲದಿಂದಲೇ ರಚನೆಯಾಗಿರುವ ಹಿನ್ನೆಲೆಯೂ ಇದೆ.

ಕುರುಚಲು ಗಿಡ, ಗ್ರಾಮದ ಉತ್ತರಕ್ಕೆ ಹಳ್ಳವಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಹಂದಿ, ಮುಂಗುಸಿ, ಉಡ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಸಾಕುಪ್ರಾಣಿಗಳಾಗಿ ಹಸು, ಹಳ್ಳಿಕಾರ್ ತಳಿ ಎತ್ತುಗಳನ್ನು ಸಾಕಲಾಗುತ್ತದೆ. ಕುರಿ, ಮೇಕೆ, ಎಮ್ಮೆ, ನಾಯಿ, ಬೆಕ್ಕುಗಳು ಇತರ ಸಾಕುಪ್ರಾಣಿಗಳಾಗಿವೆ. ಈ ಪರಿಸರದಲ್ಲಿ ಕಾಡುಪಕ್ಷಿಗಳಾಗಿ ಗರುಡ, ಕೋಗಿಲೆ, ಕಾಗೆ, ಗೂಬೆ, ಹದ್ದು, ಗೀಜುಗ, ಗುಬ್ಬಚ್ಚಿ, ನವಿಲು ಕಂಡುಬರುತ್ತದೆ. ಕೋಳಿ ಸಾಕುಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ಮಳೆ ೪೩೪ ಮಿಮೀ ಈ ಭಾಗದಲ್ಲಿ ಬೀಳುತ್ತಿದ್ದು ಚಳಿ ೧೨ ಡಿಗ್ರಿ ಹಾಗೂ ಉಷ್ಣಾಂಶ ೩೮ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿದೆ. ಒಂದು ಕೆರೆ ಇದ್ದರೂ ತುಂಬುವುದು ಅಪರೂಪ. ಹಾಗಾಗಿ ಈ ಪರಿಸರದಲ್ಲಿ ೫೮ ಬೋರ್‌ವೆಲ್‌ಗಳ ಮೂಲಕ ಕೃಷಿ ಕೆಲಸದಲ್ಲಿ ನಿರತರಾಗಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ಮೂಲಕ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ೬ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಕುಂಚಿಟಿಗ ಸಮುದಾಯ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಬೇಡ, ಮಡಿವಾಳ, ಭಜಂತ್ರಿ ಕಿರು ಸಮುದಾಯಗಳಾಗಿವೆ. ಕನ್ನಡ ಮನೆಯ ಮಾತಾಗಿದೆ. ವಿವಿಧ ಪ್ರಕಾರಗಳ ೧೮೮ ಮನೆಗಳಿದ್ದು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಶೀಟಿನ, ಹೆಂಚಿನ ಹಾಗೂ ೨ ಗುಡಿಸಲು ಮನೆಗಳಿವೆ. ಒಟ್ಟು ೬೪೮ ಜನಸಂಖ್ಯೆ ಇದ್ದು ೫೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೧೨ ಫಲಾನುಭವಿಗಳಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ.. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನವಾಗಿದೆ. ೨ ಎತ್ತಿನ ಗಾಡಿಗಳೂ ಸೇರಿದಂತೆ ಟ್ರಾಕ್ಟರ್, ಆಟೋ, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಗ್ರಾಮದ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ತೊಗರಿ, ಟೊಮ್ಯಾಟೋ, ತರಕಾರಿ, ಸೊಪ್ಪು ಇತರ ಆಹಾರ ಬೆಳೆಗಳಾಗಿವೆ. ಸೂರ್ಯಕಾಂತಿ, ತೆಂಗು, ಅಡಿಕೆ ಬೆಳೆಗಳಿವೆ. ಹುಣಸೆ ಹಣ್ಣಿನ ಬೆಳೆಯೂ ಗ್ರಾಮದಲ್ಲಿದೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀಟರ್ ಹಾಗೂ ಸಂಗ್ರಹವಾಗುತ್ತಿದೆ.

ಪೊಲೀಸ್ ಇನ್ಸ್‌ಪೆಕ್ಟರ್ ಗಿರಿಜೇಶ್, ಪಿಡಿಓ ಚಂದ್ರಶೇಖರ್, ಶಿಕ್ಷಕರು, ಲೈನ್‌ಮನ್ ಸೇರಿದಂತೆ ೧೦ ಜನ ಸರ್ಕಾರಿ ನೌಕರರಿದ್ದಾರೆ. ವಕೀಲರಾದ ಭೀಮೇಗೌಡ, ಯಶೋಧರ ಇದೇ ಗ್ರಾಮದವರು. ಹೆಣ್ಣುಮಕ್ಕಳು ಬೀಡಿ ಕಟ್ಟುವುದು, ಟೈಲರಿಂಗ್ ಮೊದಲಾದ ಗೃಹ ಕೈಗಾರಿಕೆಯಲ್ಲಿ ತೊಡಗಿ ಆರ್ಥಿಕ ಸಬಲತೆಗೆ ಪ್ರೇರಕರಾಗಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರಕ್ಕೆ ಮದಲೂರು ಜಿಲ್ಲಾ ಪಂಚಾಯ್ತಿ, ಮೇಲ್ಕುಂಟೆ ತಾಲ್ಲೂಕು ಪಂಚಾಯ್ತಿ ಹಾಗೂ ಕೊಟ್ಟ ಗ್ರಾಮಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಈ ಗ್ರಾಮವನ್ನು ಪ್ರತಿನಿಧಿಸುತ್ತಿದ್ದಾರೆ. ೪ ಸ್ತ್ರೀಶಕ್ತಿ ಸ್ವಸಹಾಯ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಶಾಲೆಯಲ್ಲಿ ೧೦೨ ಮಕ್ಕಳಿದ್ದಾರೆ. ೪ ಜನ ಶಿಕ್ಷಕರಿದ್ದು ಗ್ರಾಮದ ಸಾಕ್ಷರತೆ ೫೭% ರಷ್ಟಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಪಠ್ಯಪುಸ್ತಕ, ಸಮವಸ್ತ್ರ, ಕಾಂಪೌಂಡ್ ಸೌಕರ್ಯಗಳಿವೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಹೋಟೆಲ್, ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಆಂಜನೇಯ, ಮಾರಮ್ಮ ದೇವಾಲಯಗಳ ನಡುವೆ ಒಂದು ಕರಿಗಲ್ಲು ಇದೆ. ತಿಮ್ಮಪ್ಪನ ದೇವಾಲಯವಿದ್ದು ದಸರಾ ಸಂದರ್ಭದಲ್ಲಿ ದೇವರ ಉತ್ಸವ, ಆರತಿ ನಡೆಯುತ್ತದೆ. ಉಳಿದಂತೆ ಮಾರಮ್ಮನ ಊರಹಬ್ಬ, ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ.

ಗ್ರಾಮದಲ್ಲಿ ಊರಬಾಗಿಲು, ಕೋಟೆಯ ಅವಶೇಷಗಳು ಕಂಡುಬರುತ್ತವೆ. ಈ ಗ್ರಾಮದಲ್ಲಿ ಒಟ್ಟು ೨ ವೀರಗಲ್ಲುಗಳು, ೧ ಮಾಸ್ತಿಕಲ್ಲು ಇದ್ದು ಇವು ವಿಜಯನಗರದ ಅರಸರ ಕಾಲಕ್ಕೆ ಸಂಬಂಧಿಸಿದವುಗಳಾಗಿವೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ,

ಶಿವರಾತ್ರಿ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸಮೀಪದ ಕಲ್ಲುಕೋಟೆಗೆ ಸೇರಿದ ಗುಡ್ಡದ ರಂಗನಾಥನ ದೇವಾಲಯದಲ್ಲಿ ೬ ದಿನಗಳ ಕಾಲ ರಥೋತ್ಸವ, ಅನ್ನ ಸಂತರ್ಪಣೆ ವಿಶೇಷವಾಗಿ ನಡೆಯುತ್ತದೆ. ಆಗ ಈ ಗ್ರಾಮದವರ ಪಾತ್ರ ಮುಖ್ಯವಾಗಿರುತ್ತದೆ. ಸಿರಾ–ಚಂಗಾವರ–ಹಿರಿಯೂರು ಕಡೆ ಉತ್ತಮ ಸಾರಿಗೆ ಸಂಪರ್ಕವಿದೆ.

## ಗುಡ್ಡದಹಟ್ಟಿ

ಗುಡ್ಡದಹಟ್ಟಿಯು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೪.೬ ಕಿ.ಮೀ. ದೂರದಲ್ಲಿದೆ. ಸಿರಾ–ಚಂಗಾವರ ಮುಖ್ಯರಸ್ತೆಯಲ್ಲಿರುವ ಈ ಹಟ್ಟಿ ಕಾಡುಗೊಲ್ಲರ ಬುಡಕಟ್ಟು ಗ್ರಾಮ. ಗ್ರಾಮದ ಉತ್ತರಕ್ಕೆ ಊರಿಗೆ ಹೊಂದಿಕೊಂಡಂತೆ ಗುಡ್ಡದ ರಂಗನಾಥ ದೇವಾಲಯ ಇರುವುದರಿಂದ ಈ ಗ್ರಾಮಕ್ಕೆ ಗುಡ್ಡದಹಟ್ಟಿ ಎಂದು ಕರೆಯಲಾಗುತ್ತದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೭೫೩.೪೮ ಹೆಕ್ಟೇರ್ ಕಲ್ಲುಕುಂಟೆ ಮುಖ್ಯ ಗ್ರಾಮದಲ್ಲಿ ಹಂಚಿಕೆಯಾಗಿದೆ.

ಬಿಳಿ ಮರಳು ಮಣ್ಣಿನಿಂದ ಕೂಡಿರುವ ಇಲ್ಲಿ ಮಳೆ ಸಾಧಾರಣ ೫೩೭.೮ ಮಿಮೀ ಇದ್ದು ಉಷ್ಣಾಂಶ ೩೪ ಡಿಗ್ರಿ ಹಾಗೂ ಚಳಿಯು ೯–೧೧ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಕುರಿ, ಮೇಕೆ, ಕತ್ತೆ, ಹಸು, ಎತ್ತು, ಎಮ್ಮೆ, ಕತ್ತೆ ಈ ಗ್ರಾಮದ ಮುಖ್ಯ ಸಾಕುಪ್ರಾಣಿಗಳು. ಕಾಡುಪ್ರಾಣಿಗಳು ತೋಳ, ನರಿ, ಮೊಲ, ಕಾಡುಹಂದಿ, ಕೋತಿ ಕಂಡುಬರುತ್ತವೆ. ಕಾಡುಪಕ್ಷಿಗಳಾಗಿ ಕೋಗಿಲೆ, ಗಿಳಿ, ಗೊರವಂಕ, ಗೂಬೆ, ಕಾಗೆ ಕಂಡುಬರುತ್ತವೆ. ಸಿರಾ ನಗರಸಭಾ ವಾರ್ಡ್‌ನ ಮಧ್ಯೆ ಸೇರಿರುವುದರಿಂದ ಸಿರಾ ನಗರ ಸಭೆಯಿಂದ ಕುಡಿಯುವ ನೀರಿನ ಪೂರೈಕೆಯಾಗುತ್ತದೆ. ಈ ಗ್ರಾಮದಲ್ಲಿ ಒಂದು ನೀರಿನ ಚಿಕ್ಕ ಟ್ಯಾಂಕ್ ಇದೆ.

ಕಾಡುಗೊಲ್ಲರು ಮಾತ್ರ ಈ ಗ್ರಾಮದ ನಿವಾಸಿಗಳಾಗಿದ್ದು ಕನ್ನಡ ಮಾತೃಭಾಷೆಯನ್ನು ಆಡುತ್ತಿದ್ದಾರೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ ಹಾಗೂ ಹೆಂಚಿನ ಮನೆಗಳಿದ್ದು ಗ್ರಾಮದ ಮುಖ್ಯ ಆಹಾರ ರಾಗಿಮುದ್ದೆ, ಅನ್ನವಾಗಿರುತ್ತದೆ. ಎತ್ತಿನ ಬಂಡಿ ಬಳಕೆಯಲ್ಲಿದ್ದು ಟ್ರ್ಯಕ್ಟರ್ ಸಹ ಇವೆ. ಸ್ಕೂಟರ್ ಬಳಕೆಯೂ ಇದೆ. ರಾಗಿ, ಶೇಂಗಾ, ತೊಗರಿ, ಅಲಸಂದೆ, ಹುರಳಿ ಮುಖ್ಯ ಆಹಾರ ಬೆಳೆಗಳು. ತೆಂಗು, ಅಡಿಕೆ, ತರಕಾರಿ ಉಪಬೆಳೆಗಳು. ಕುರಿಪಾಲನೆ ಮುಖ್ಯ ಕಸುಬು. ವ್ಯಾಪಾರವೂ ಇದೆ. ಹೆಣ್ಣುಮಕ್ಕಳು ಮಜ್ಜಿಗೆ, ಹಾಲು, ಮೊಸರಿನ ವ್ಯಾಪಾರವನ್ನು ಮಾಡುತ್ತಿದ್ದಾರೆ.

ಸಿರಾ ನಗರಸಭೆ ಹಾಗೂ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ ವ್ಯಾಪ್ತಿಗೆ ಒಳಪಡುತ್ತದೆ. ಒಂದು ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಇಬ್ಬರು ಶಿಕ್ಷಕರು, ಒಬ್ಬರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳೂ ಇದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ಗುಡ್ಡದರಂಗಪ್ಪನ ಜಾತ್ರೆ ೫ ದಿನಗಳ ಕಾಲ ನಡೆಯುತ್ತದೆ ರಥೋತ್ಸವ, ಅನ್ನಸಂತರ್ಪಣೆ ಹಾಗೂ ಬಿಲ್ಲು ಸೇವೆ ನಡೆಯುತ್ತದೆ. ಹಾಗೂ ಕರಿಯಮ್ಮನ ಜಾತ್ರೆ ನಡೆಯುತ್ತದೆ. ಜಾತ್ರೆಗೆ ಆರತಿ, ಬಾನ ನಡೆಯುತ್ತದೆ. ಯುಗಾದಿ, ದೀಪಾವಳಿ, ಮಹಾನವಮಿ ಮುಖ್ಯ ಹಬ್ಬಗಳು. ಹಿರಿಯರ ಹಬ್ಬವಾಗಿ ದೀಪಾವಳಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

## ಗುಳಿಗೇನಹಳ್ಳಿ

ಗುಳಿಗೇನಹಳ್ಳಿ–ಸಿರಾ ತಾಲ್ಲೂಕು ಕೇಂದ್ರದಿಂದ ೧೨ ಕಿಮೀ ದೂರದಲ್ಲಿ ಸಿರಾ–ಮಧುಗಿರಿ ಮುಖ್ಯ ರಸ್ತೆಯಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಒಟ್ಟು ೩೭೧.೭೨ ಹೆಕ್ಟೇರ್ ಭೂವಿಸ್ತೀರ್ಣವನ್ನು ಪಡೆದಿದೆ. ಗೊಲ್ಲರಹಟ್ಟಿ ಹಾಗೂ ಜವನಹಳ್ಳಿ ಎಂಬ ಎರಡು ಉಪ ಗ್ರಾಮಗಳನ್ನು ಒಳಗೊಂಡಿದೆ.

ಬಿಳಿ–ಕಪ್ಪು, ಕೆಂಪು ಮಣ್ಣಿನ ಸ್ವರೂಪ ಹೊಂದಿರುವ ಈ ಗ್ರಾಮದ ಪರಿಸರದಲ್ಲಿ ಮುಂಗಸಿ, ಮೊಲ, ಕಾಡುಬೆಕ್ಕು, ಹಂದಿ, ಬೆಕ್ಕು ಮೊದಲಾದ ಕಾಡುಪ್ರಾಣಿಗಳು ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ಕೋಳಿ ಮೊದಲಾದ ಸಾಕುಪ್ರಾಣಿಗಳು ಕಂಡುಬರುತ್ತವೆ. ಒಟ್ಟು ೪೧೮ ಮನೆಗಳಿರುವ ಈ ಗ್ರಾಮದಲ್ಲಿ ೧೭೭೧ ಜನಸಂಖ್ಯೆಯಿದೆ. ಹಿಂದೆ ದೇಶೀ ವೈದ್ಯಕೀಯದ ನೆಲೆಯಾಗಿದ್ದು ದೇಶೀ ವೈದ್ಯದ ಔಷಧೋಪಚಾರ ಮಾಡುತ್ತಿದ್ದ ವ್ಯಕ್ತಿ ಇಲ್ಲಿ ವಾಸ ಮಾಡುತ್ತಿದ್ದುದರಿಂದ ಈ ಗ್ರಾಮಕ್ಕೆ ಗುಳಿಗೆ ಕೊಡುವವನ ಹಳ್ಳಿ – ಗುಳಿಗೇನಹಳ್ಳಿ ಎಂದು ವ್ಯಕ್ತಿನಾಮದಿಂದ ಕ್ರಿಯಾನಾಮಕ್ಕೆ ಮಾರ್ಪಟ್ಟಿದೆ. ಇಂದಿಗೂ ಸರ್ಕಾರಿ ದಾಖಲೆಗಳಲ್ಲಿ ಗುಳಿಗೇನಹಳ್ಳಿ ಎಂದೇ ನಮೂದಾಗಿದೆ.

ಕುಂಚಿಟಿಗ ಜನಾಂಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಆದಿದ್ರಾವಿಡ, ಬೇಡ, ಅಗಸ, ಈಡಿಗ, ಕಮ್ಮಾರ, ಕುಂಬಾರ ಹಾಗೂ ಕ್ಷೌರಿಕರು ಇಲ್ಲಿನ ಸಣ್ಣ ಸಮುದಾಯವಾಗಿದೆ. ಈ ಗ್ರಾಮಕ್ಕೆ ಸೇರಿದ ಒಂದು ಕೆರೆಯಿದ್ದು ೬೪ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದು ೬ ಮಟ್ಟು ನೀರಿನ ಹರಿವಿದೆ. ವಾರ್ಷಿಕ ಸರಾಸರಿ ೪೫೩.೭೦ ಸೆಂಮೀ ಮಳೆ ಬೀಳುವ ಈ ಪ್ರದೇಶದಲ್ಲಿ ಉಷ್ಣಾಂಶ ೩೬ ಡಿಗ್ರಿ, ಚಳಿ ೧೦ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ನೀರಿಗಾಗಿ ಗ್ರಾಮಪಂಚಾಯ್ತಿ ವತಿಯಿಂದ ಕೊಳಾಯಿ, ಓವರ್‌ಹೆಡ್ ಟ್ಯಾಂಕ್ ಮೂಲಕ ನೀರನ್ನು ೧೦೦ ನಲ್ಲಿ ಸಂಪರ್ಕದಿಂದ ಪೂರೈಸಲಾಗುತ್ತಿದೆ.

ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ ಮಣ್ಣಿನ, ಗುಡಿಸಲು, ಮಂಗಳೂರು ಹೆಂಚಿನ ಮನೆಗಳಿವೆ. ವಸತಿ ಹಾಗೂ ನಿವೇಶನ ರಹಿತ ೧೬ ಮನೆಗಳಿದ್ದು ರಸ್ತೆ ಬದಿ ಗೂಡಂಗಡಿ ಟಿ, ತಿಂಡಿ ವ್ಯಾಪಾರ ಮಾಡುತ್ತಾರೆ. ಒಂದು ಹಾಲಿನ ಡೈರಿ, ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಅಂಗನವಾಡಿ, ಕಿರಿಯ ಕಾಲೇಜು, ಆಂಗ್ಲ ಮಾಧ್ಯಮ, ಖಾಸಗಿ ಶಾಲೆಗಳು ಗ್ರಾಮದಲ್ಲಿನ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿವೆ. ೭೪ ಮನೆಗಳು ಆಶ್ರಯ, ಅಂಬೇಡ್ಕರ್, ಜನತಾ ವಸತಿ ಯೋಜನೆಯಲ್ಲಿ ರಚನೆಯಾಗಿವೆ.

ಜೈಲರ್ ವೀರಭದ್ರಸ್ವಾಮಿ ಕಾ.ಶಿ. ಇಲಾಖೆಯ ಗ್ರಂಥಾಲಯಾಧಿಕಾರಿ ಬಂಡಿರಂಗನಾಥ್ ಸೇರಿದಂತೆ ಶಿಕ್ಷಣ, ಸಾರಿಗೆ, ಆರ್‌ಡಿಸಿಆರ್ ನ್ಯಾಯಾಲಯ, ತೋಟಗಾರಿಕೆ, ರಕ್ಷಣೆ, ಅಂಚೆ ಇಲಾಖೆಗೆ ಸೇರಿದೆ. ಒಟ್ಟು ೨೩ ಜನ ಸರ್ಕಾರಿ ನೌಕರರಿದ್ದಾರೆ. ಇಬ್ಬರು ವಕೀಲರು, ಇಂಜಿನಿಯರ್ ಈ ಗ್ರಾಮದಲ್ಲಿದ್ದಾರೆ. ಸಾಂಪ್ರದಾಯಿಕ ಕುಂಬಾರಿಕೆ, ಕಮ್ಮಾರಿಕೆಯ ಕಾಯಕದವರು ಇಲ್ಲಿ ಒಂದೊಂದು ಕುಟುಂಬ ನೆಲೆಸಿದ್ದಾರೆ.

ರಾಗಿ, ಶೇಂಗಾ, ಸೂರ್ಯಕಾಂತಿ, ಅವರೆ, ತೊಗರಿ, ನವಣೆ, ಹರಳು ಮುಖ್ಯ ಬೆಳೆಗಳು. ತೋಟದ ಬೆಳೆಗಾಗಿ ಭತ್ತ, ಅಡಿಕೆ, ತೆಂಗು, ದಾಳಿಂಬೆ, ರೇಷ್ಮೆ, ಹುಣಸೆ, ಮಾವು ಬೆಳೆಗಳನ್ನು ಬೆಳೆಯುತ್ತಾರೆ.

ಮದಲೂರು ಜಿಲ್ಲಾ ಪಂಚಾಯ್ತಿ, ಸಿರಾ ವಿಧಾನಸಭೆ, ಚಿತ್ರದುರ್ಗ ಲೋಕಸಭೆ ಹಾಗೂ ಹೊನ್ನಗೊಂಡನಹಳ್ಳಿ ತಾಲ್ಲೂಕು ಪಂಚಾಯ್ತಿ, ಮಾಗೋಡು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿರುವ ಈ ಗ್ರಾಮದ ಗುಳಿಗೇನಹಳ್ಳಿ ನಾಗರಾಜ್ ಬಹಳ ವರ್ಷಗಳ ಕಾಲ ರಾಜಕೀಯ ಸಾರ್ವತ್ರಿಕ ಜೀವನದಲ್ಲಿ ತೊಡಗಿಸಿಕೊಂಡು ಛೇರ್ಮನ್ ಆಗಿದ್ದರು. ಪ್ರಸ್ತುತ ತಾಲ್ಲೂಕು ಕುಂಚಿಟಿಗರ ಸಂಘದ ಅಧ್ಯಕ್ಷ, ರಂಗನಾಥ ಸಹಕಾರ ಬ್ಯಾಂಕಿನ ಅಧ್ಯಕ್ಷ, ಮಾಗೋಡು ರಂಗನಾಥ ದೇವಸ್ಥಾನ ಸಮಿತಿಯ ಧರ್ಮದರ್ಶಿಗಳಾಗಿದ್ದಾರೆ. ಗ್ರಾಮದಲ್ಲಿ ನಾಲ್ಕು ಸ್ತ್ರೀಶಕ್ತಿ ಕೇಂದ್ರದ ಘಟಕಗಳಿದ್ದು ೨ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಯ ತಂಡಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ನಾಟಿ ವೈದ್ಯರಾದ ತಾಯಮ್ಮ, ಚಂದ್ರಶೇಖರ್, ಕುಂಚಿಟಿಗ ಜನಾಂಗದವರಾಗಿದ್ದು ಹಾವು-ಚೇಳು ಮುಂತಾದ ವಿಷಜಂತುಗಳ ಕಡಿತಕ್ಕೆ ಔಷಧಿ ನೀಡುತ್ತಾ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ಕರಿಯಣ್ಣ ಎಂಬ ೬೦ ವರ್ಷದ ವ್ಯಕ್ತಿ ಹಸುಗಳಿಗೆ ಚಿಕಿತ್ಸೆ ನೀಡುತ್ತಾರೆ.

ವೃದ್ಧಾಪ್ಯವೇತನ, ವಿಕಲಚೇತನ, ವಿಧವಾವೇತನ ಫಲಾನುಭವಿಗಳಿದ್ದು ಆರು ಹೋಟೆಲ್, ಅಂಗಡಿಗಳು, ೧೦ ಕಿರಾಣಿ, ಸಾಮಾನ್ಯ ಅಂಗಡಿಗಳು ಇವೆ. ಗ್ರಾಮದಲ್ಲಿ ಆಂಜನೇಯ, ಉಡಸಲಮ್ಮ, ಕರಿಯಮ್ಮ, ತಿಮ್ಮಪ್ಪ, ಭೂತಪ್ಪ, ಕರಿಯಮ್ಮ ದೇವರುಗಳ ಗುಡಿಗಳಿವೆ. ವಾರ್ಷಿಕವಾಗಿ ಉಡಸಲಮ್ಮ ಮಾರಮ್ಮನ ಜಾತ್ರೆಯನ್ನು ಊರಹಬ್ಬವಾಗಿ ಆಚರಿಸುತ್ತಾರೆ. ಆರತಿ, ಬಾನ, ಬ್ಯಾಟೆ ಮೊದಲಾದ ಆಚರಣೆ, ಹರಕೆಯ ಪದ್ಧತಿಯೂ ಇದೆ. ಅಂಚೆ ಕಛೇರಿಯಿದ್ದು ಸುತ್ತಲ ಹಳ್ಳಿಗಳಿಗೆ ಅಂಚೆ ಸಂಪರ್ಕ ಒದಗಿಸುತ್ತಿದ್ದು ೩ ಜನ ಅಂಚೆ ನೌಕರರಿದ್ದಾರೆ. ಸಿದ್ಧಿವಿನಾಯಕ ಸೇವಾ ಸಂಘ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಬಸವಜಯಂತಿ, ಶಿವರಾತ್ರಿ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮಾಗೋಡು ರಂಗನಾಥನ ಜಾತ್ರೆ, ಮೂಗನಹಳ್ಳಿ ಕಾವಲೇಶ್ವರಿ ಜಾತ್ರೆಯಲ್ಲಿ ಗುಳಿಗೇನಹಳ್ಳಿಯ ಪಾತ್ರವೂ ಪ್ರಮುಖವಾಗಿರುತ್ತದೆ. ನಾಗಣ್ಣ, ಚಿಕ್ಕಣ್ಣ ರಂಗ ಕಲಾವಿದರಾಗಿ ಹೆಸರಾಗಿದ್ದಾರೆ.

## ಗುಳಿಗೇನಹಳ್ಳಿ ಗೊಲ್ಲರಹಟ್ಟಿ

ಗುಳಿಗೇನಹಳ್ಳಿ ಗೊಲ್ಲರಹಟ್ಟಿಯು ಸಿರಾ-ಮಧುಗಿರಿ ಮುಖ್ಯ ರಸ್ತೆಯಲ್ಲಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೨ ಕಿಮೀ ದೂರದಲ್ಲಿದೆ. ಮುಖ್ಯ ಗ್ರಾಮ ಗುಳಿಗೇನಹಳ್ಳಿಗೆ ಹೊಂದಿಕೊಂಡಂತೆ ಪೂರ್ವಕ್ಕಿದ್ದು ಕಾಡುಗೊಲ್ಲರ ಗ್ರಾಮವಾಗಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೩೭೧.೧೨ ಹೆಕ್ಟೇರ್ ಆಗಿದ್ದು ಇದು ಮುಖ್ಯ ಗ್ರಾಮದಲ್ಲಿ ಹಂಚಿಕೆಯಾಗಿದೆ.

ಬಿಳಿ, ಕೆಂಪು, ಮರಳು ಮಿಶ್ರಿತ ಭೂಮಿ ಹೊಂದಿದ್ದು ಶೇಂಗಾ, ತೊಗರಿ, ಅಲಸಂದಿ ಬೆಳೆಗೆ ಉತ್ತಮ ವಾತಾವರಣ. ರಾಗಿಯನ್ನು ಬೆಳೆಯುತ್ತಾರೆ. ಈ ಪರಿಸರದಲ್ಲಿ ನರಿ, ಮೊಲ, ಕರಡಿ, ಮೊದಲಾದ ಕಾಡುಪ್ರಾಣಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕುರಿ, ಮೇಕೆ, ಹಸು, ಎತ್ತು ಮತ್ತು ಕತ್ತೆಗಳನ್ನು ಸಾಕಿದ್ದಾರೆ. ನಾಟಿಕೋಳಿಗಳೂ ಇವೆ. ಸರಾಸರಿ ಮಳೆಯ ಪ್ರಮಾಣ ೪೫೩.೬೦ ಇದ್ದು ಬಿಸಿಲಿನ ತಾಪಮಾನ ಸರಾಸರಿ ೩೭ ಡಿಗ್ರಿ ಸೆಂಟಿಗ್ರೇಡ್ ಇದ್ದು ಚಳಿ ೯.೫ ಇರುತ್ತದೆ. ಕುಡಿಯುವ ನೀರನ್ನು ಗ್ರಾಮಪಂಚಾಯ್ತಿ ಮೂಲಕ ಪೂರೈಸುತ್ತಿದ್ದ ಕೊಳಾಯಿ ವ್ಯವಸ್ಥೆ ಇದೆ.

೨ ಕಾಂಕ್ರೀಟ್ ಮನೆಗಳು, ೧೧ ಮಣ್ಣಿನ ಮನೆ, ೪ ಗುಡಿಸಲು, ೧೨ ಮಂಗಳೂರು ಹೆಂಚಿನ ಮನೆಗಳಿವೆ. ಜನತಾ ಯೋಜನೆಯ ೭ ಫಲಾನುಭವಿಗಳಿದ್ದು ಎಲ್ಲರೂ ಭಾಗ್ಯಜ್ಯೋತಿ ಫಲಾನುಭವಿಗಳಾಗಿದ್ದಾರೆ. ರಾಗಿಮುದ್ದೆ ಪ್ರಧಾನ ಆಹಾರವಾಗಿದ್ದು ಅನ್ನ, ರೊಟ್ಟಿ, ದೋಸೆ ಬಳಸುತ್ತಾರೆ.

ಬಾಡೂಟ, ಹೋಳಿಗೆ ಊಟ ವಿಶೇಷ ಸಂದರ್ಭಗಳಲ್ಲಿ ಇರುತ್ತದೆ. ಕುರಿ ಸಾಕುವುದು, ವ್ಯಾಪಾರ ಪ್ರಮುಖ ವ್ಯಾಪಾರ ಸರಕಾಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ, ಮದಲೂರು ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ಮಾಗೋಡು ಗ್ರಾಮಪಂಚಾಯ್ತಿಯಾಗಿದೆ. ೪ ವೃದ್ಧಾಪ್ಯವೇತನ, ೬ ವಿಧವಾ ವೇತನ ಸೌಲಭ್ಯ ಪಡೆಯುವವರಿದ್ದು ಶಿಕ್ಷಣಕ್ಕೆ ಸಂಬಂದಿಸಿದಂತೆ ಮಕ್ಕಳು ಪಕ್ಕದ ಗುಳಿಗೇನಹಳ್ಳಿಗೆ ಹೋಗುತ್ತಿದ್ದಾರೆ.

ಮಾರಮ್ಮ, ಭೂತಪ್ಪ ಮುಖ್ಯ ದೇವರುಗಳಾಗಿದ್ದು ಪೌಳಿ ಆಕೃತಿಯ ಪುಟ್ಟ ಗುಡಿಗಳಿವೆ. ಮಾರಮ್ಮನ ಊರ ಹಬ್ಬವನ್ನು ಏಪ್ರಿಲ್ ತಿಂಗಳಲ್ಲಿ ವಿಶೇಷವಾಗಿ ಆಚರಿಸುತ್ತಾರೆ. ಆರತಿ, ಬಾನ, ಬ್ಯಾಟೆ ಆಚರಣೆಗಳಾಗಿವೆ.

## ಗುಳಿಗೇನಹಳ್ಳಿ ನವಗ್ರಾಮ

ಗುಳಿಗೇನಹಳ್ಳಿ ನವಗ್ರಾಮವು ಸಿರಾ–ಮಧುಗಿರಿ ಮುಖ್ಯ ರಸ್ತೆಯಲ್ಲಿನ ಗುಳಿಗೇನಹಳ್ಳಿ ಕಂದಾಯ ಗ್ರಾಮಕ್ಕೆ ಹೊಂದಿ ಕೊಂಡಿದೆ. ಮಧುಗಿರಿ ರಸ್ತೆಯ ಬದಿಗೆ ಮುಖ್ಯ ಗ್ರಾಮದಿಂದ ಸ್ವಲ್ಪ ದೂರವಿರುವ ಈ ನವಗ್ರಾಮ ರಚನೆ ಯಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ಮುಖ್ಯ ಗ್ರಾಮದೊಂದಿಗೆ ಹಂಚಿಕೆ ಯಾಗಿದ್ದು (೨೪೩ ಹೆಕ್ಟೇರ್) ಇಲ್ಲಿ ೧೬ ಮನೆಗಳಿವೆ. ಗ್ರಾಮ ಠಾಣಾ ವ್ಯಾಪ್ತಿಯ ೩೦೦ ನಿವೇಶನಗಳನ್ನು ಗುರುತಿಸಿ, ಹೊಸ ಮನೆ ರಚಿಸಿಕೊಳ್ಳಲು ಅನುವು ಮಾಡಿ ಕೊಡಲಾಗಿದೆ. ೬೦ ಮನೆಗಳು ನಿರ್ಮಾಣವಾಗುತ್ತಿದ್ದು, ಇಲ್ಲಿ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಕುಂಚಿಟಿಗ, ಆದಿಕರ್ನಾಟಕ, ಆದಿದ್ರಾವಿಡ, ನಾಯಕ, ದಾಸರು ಇಲ್ಲಿ ಸಂಮಿಶ್ರ ವಾಗಿದ್ದು, ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ.

ಕಲ್ಲಿನ, ಶೀಟಿನ, ಕಾಂಕ್ರೀಟ್ ಸ್ವರೂಪದ ೧೬ ಮನೆಗಳಿದ್ದು, ಮಾಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ.

ಗುಳಿಗೇನಹಳ್ಳಿ ಮುಖ್ಯ ಗ್ರಾಮದಿಂದ ನೀರು ಪೂರೈಸುತ್ತಿದ್ದು, ಈಗ ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣವಾಗಿದೆ. ಒಂದು ಹಳೆಯ ತೆರೆದ ಬಾವಿ ಇದೆ. ನಾಗರಾಜು ಎಂಬುವವರು ಧ್ವನಿವರ್ಧಕ (ಜಿ.ಕೆ.ಎಸ್. ಸೌಂಡ್ ಸಿಸ್ಟಂ ಅಂಗಡಿ ತೆರೆದಿದ್ದಾರೆ) ರಸ್ತೆ ಬದಿಗೆ ೩ ಗೂಡಂ ಗಳಿವೆ. ರಾಮಚಂದ್ರಪ್ಪ ಎಂಬ ಉಡುಸಲಮ್ಮ ಪಟ್ಟದ ಪೂಜಾರಿ ಇಲ್ಲಿ ನೆಲೆಸಿದ್ದು, ಅವರು ಮಾರಿಕುಣಿತ, ದೇವರನ್ನು ಆಡಿಸುವ ಕಲಾವಿದರಾಗಿ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ಶೈಕ್ಷಣಿಕ ಹಾಗೂ ಇತರೆ ಸೌಲಭ್ಯವನ್ನು ಮುಖ್ಯ ಗ್ರಾಮ ಗುಳಿಗೇನಹಳ್ಳಿಯಿಂದ ಪಡೆಯುತ್ತಿದ್ದಾರೆ.

## ಗುಮ್ಮನಹಳ್ಳಿ

ಗುಮ್ಮನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೪ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೪೭೧.೨೧ ಹೆಕ್ಟೇರ್ ಆಗಿದೆ. ಇದರ ಮಜರೆ ಗ್ರಾಮವಾಗಿ ಗೊಲ್ಲರಹಟ್ಟಿಯೊಂದು ರಚನೆಯಾಗಿದೆ. ಗುಮ್ಮಣ್ಣ ಎಂಬ ವ್ಯಕ್ತಿ ಮೂಲದಿಂದಾಗಿ ಗ್ರಾಮಕ್ಕೆ ಈ ಹೆಸರು ಬಂದಿದೆ.

ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿಯಲ್ಲಿ ಎಡಭಾಗಕ್ಕೆ ರಸ್ತೆಗೆ ಹೊಂದಿಕೊಂಡೇ ಈ ಗ್ರಾಮವಿದೆ. ವ್ಯಕ್ತಿಯ ಹೆಸರಿನಲ್ಲಿ ಗ್ರಾಮ ಬೆಳೆದಿದ್ದು ಗುಮ್ಮನಹಳ್ಳಿಯಾಗಿದೆ. ಚಾರಿತ್ರಿಕವಾಗಿ ಹಳೆಯ ಕೋಟೆ, ಕಂದಕ, ಹಳೆಯ ಕಾಲದ ಸ್ಮಾರಕಗಳು ಇಂದಿಗೂ ಲಭ್ಯವಾಗುತ್ತಿವೆ. ಸಿರಾದ ಪಾಳೆಯಗಾರ ಕಸ್ತೂರಿ ರಂಗಪ್ಪನಾಯಕನು ಗುಮ್ಮನಹಳ್ಳಿ ದಿಣ್ಣೆಯಲ್ಲಿ ಬಿಜಾಪುರ ಸುಲ್ತಾನ ಅಫ್‌ಜಲ್‌ಖಾನ್‌ನೊಂದಿಗೆ ಹೋರಾಡಿ ವೀರಮರಣ ಹೊಂದಿದ ಐತಿಹಾಸಿಕ ಸ್ಥಳವಾಗಿದೆ. ಮೌಖಿಕವಾಗಿ ಕಥೆ, ಹಾಡುಗಳು ಈ ಭಾಗದಲ್ಲಿ ಇಂದಿಗೂ ಇವೆ.

> ನುಚ್ಚಾಕಿದ ಕುದುರೆ ಮತ್ತೆಲ್ಲಿ ಕುಣಿದಾವು
> ಚಿಕ್ಕಗುಮ್ಮನಹಳ್ಳಿ ಬೈಲಾಗೆ, ರಂಗಣ್ಣನ
> ಬೊಲಾಕಿದ ಕುದುರೆ ಕುಣಿದಾವು
> ..
> ಆಚೆ ಕೊತ್ತಲವಿದ್ದು, ಈಚೆ ಕೊತ್ತಲ ಬಿದ್ದು
> ಜಂಗಿಸಿ ಹೋದಾನ ತಲೆಬಿದ್ದು ರಂಗಣ್ಣನ
> ಅಂಗಿ ಬಿದ್ದಾವು ರಣದಾಗೆ

ಈ ಮುಂತಾದ ಗೀತೆಗಳಲ್ಲಿ ಗುಮ್ಮನಹಳ್ಳಿಯ ಉಲ್ಲೇಖ ಬರುತ್ತದೆ. ಕೆಂಪುಮಿಶ್ರಿತ ಮರಳು ಮಣ್ಣು ಸ್ವರೂಪದ ಈ ಹಳ್ಳಿಯ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಹಂದಿ, ಉಡ, ಮುಂಗುಸಿ ಕಂಡುಬರುತ್ತವೆ. ಗ್ರಾಮದಲ್ಲಿ ರೈತರು ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕಿದ್ದಾರೆ. ಕೋಳಿ ಸಾಕು ಪಕ್ಷಿಯಾಗಿದೆ. ಕಾಡುಪಕ್ಷಿಯಾದ ಕಾಗೆ, ಕೋಗಿಲೆ, ಗಿಡುಗ, ಗರುಡ, ಹದ್ದು, ಗೊರವಂಕ, ಗಿಳಿ, ಗೀಜುಗ ಕಂಡುಬರುತ್ತವೆ. ಕಡಿಮೆ ಮಳೆ ಪ್ರದೇಶದ ಇಲ್ಲಿ ೪೮೧.೪ ಮಿಮೀ ಸರಾಸರಿ ಮಳೆಯಾಗಿದ್ದು ಉಷ್ಣಾಂಶ ೩೮ ಡಿಗ್ರಿ ಸೆಂಟಿಗ್ರೇಡ್ ಇದ್ದು ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಈ ಪರಿಸರದಲ್ಲಿ ೨೪ ಕೊಳವೆ ಬಾವಿಗಳಿದ್ದು ರೈತಾಪಿ ಬದುಕಿಗೆ ಆಶ್ರಯವಾಗಿದೆ. ಉಳಿದಂತೆ ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಲ್ಲಿ ನೀರು ಪೂರೈಕೆ ಮಾಡುತ್ತಿದೆ. ೨ ಕಿರು ಟ್ಯಾಂಕ್‌ಗಳಿವೆ, ೨ ಕೈಪಂಪುಗಳಿವೆ.

ಆದಿಕರ್ನಾಟಕ, ಆದಿದ್ರಾವಿಡ, ಬೇಡರು, ಈಡಿಗ, ಮಡಿವಾಳ ಹಾಗೂ ಸಾದರು ಇಲ್ಲಿ ಕಿರು ಸಮುದಾಯವಾಗಿದೆ. ಕಾಂಕ್ರೀಟ್, ಹೆಂಚಿನ, ಶೀಟಿನ ಹಾಗೂ ೨ ಗುಡಿಸಲು ಸೇರಿದಂತೆ ಒಟ್ಟು ೭೪ ಮನೆಗಳಿವೆ. ಇವು ಆಶ್ರಯ, ಅಂಬೇಡ್ಕರ್, ಜನತಾ ವಸತಿ ಯೋಜನೆಯ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೧೪ ಫಲಾನುಭವಿಗಳಿಂದ ಕೂಡಿದೆ. ಒಟ್ಟು ೧೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ರೊಟ್ಟಿ, ಅನ್ನ ಬಳಸುವವರಿದ್ದಾರೆ ಬಾಡೂಟ, ಪಾಯಸ ಹಾಗೂ ಹೋಳಿಗೆ ಊಟದ ವಿಶೇಷ ಸಾಂದರ್ಭಿಕತೆ ಇದೆ. ಗ್ರಾಮದಲ್ಲಿ ಟ್ರ್ಯಕ್ಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ತೊಗರಿ, ಅಲಸಂದೆ ಬೆಳೆಗಳನ್ನು ಬೆಳೆಯುತ್ತಾರೆ. ಸೂರ್ಯಕಾಂತಿ, ಹತ್ತಿ ಬೆಳೆಗಳೂ ಇವೆ. ಶೇಂಗಾ, ಹುಣಸೆಹಣ್ಣು ವಾಣಿಜ್ಯ ಬೆಳೆಯಾಗಿವೆ.

ಇಂಜಿನಿಯರ್ ಸೇರಿದಂತೆ ವಿವಿಧ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರಿದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಯಲಿಯೂರು ತಾಲ್ಲೂಕು ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮದಲ್ಲಿ ೨ ಪಂಚಾಯ್ತಿ ಸದಸ್ಯರಿದ್ದಾರೆ. ೨ ಸ್ತ್ರೀಶಕ್ತಿ ಕೇಂದ್ರಗಳಿವೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಕಿರಿಯ ಪಾಠಶಾಲೆ ಇದ್ದು ಶಾಲೆಯಲ್ಲಿ ೩೦ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಪುಸ್ತಕ, ಸಮವಸ್ತ್ರ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ಶೇ.೪೪ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನ ಸೌಲಭ್ಯದ ಫಲಾನುಭವಿಗಳಿದ್ದಾರೆ. ೨ ಗೂಡಂಗಡಿಗಳಿದ್ದು ರಸ್ತೆ ಬದಿ ೪ ಕಿರಾಣಿ, ಟೀ ಅಂಗಡಿಗಳಿವೆ. ಆಂಜನೇಯ, ಮಾರಮ್ಮ, ಕರಿಯಮ್ಮ, ಮೈಲಾರಲಿಂಗ ದೇವಸ್ಥಾನಗಳಿವೆ. ಗಣಪತಿ ಗುಡಿಯಿದ್ದು ಹೊರ ವಲಯದಲ್ಲಿ ಹೈದರಾಲಿಯ ತಾತ ಫತೆ ಮಹಮದ್ ಹಾಗೂ ವಂಶಕ್ಕೆ ಸೇರಿದವು ಎಂದು ಮೌಖಿಕವಾಗಿ ಹೇಳುವ ಗೋರಿಗಳಿವೆ. ಇವು ಜರಾಜೀರ್ಣವಾಗಿವೆ. ಮಾರಮ್ಮನ ಊರ ಹಬ್ಬ ಮಾಡಲಾಗುತ್ತಿದ್ದು ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಉಳಿದಂತೆ ಆಂಜನೇಯನ ಪರೇವು, ಯುಗಾದಿ, ಶಿವರಾತ್ರಿ, ದಸರಾ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗುಮ್ಮನಹಳ್ಳಿ ಗೊಲ್ಲರಹಟ್ಟಿ

ಗುಮ್ಮನಹಳ್ಳಿ ಗೊಲ್ಲರಹಟ್ಟಿಯು ಒಂದು ಕಾಡುಗೊಲ್ಲರ ಪೂರ್ಣ ಬುಡಕಟ್ಟು ಗ್ರಾಮ. ಇದು ಮೂಲಹಳ್ಳಿ ಗುಮ್ಮನಹಳ್ಳಿಗೆ ಸೇರಿದ ಉಪಗ್ರಾಮವಾಗಿದ್ದು ಮೂಲಗ್ರಾಮವನ್ನು ಮೀರಿಸಿ ಬೆಳೆದಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಸಿರಾ ದೊಡ್ಡಕೆರೆಯ ಮುಂಭಾಗದಲ್ಲಿ ಈ ಗ್ರಾಮವಿದ್ದು ಸಿರಾ ನಗರಕ್ಕೆ ೩.೫ ಕಿಮೀ ದೂರದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು ೮೮.೭ ಹೆಕ್ಟೇರ ವಿಸ್ತೀರ್ಣ ಹೊಂದಿದೆ.

ಕಂದುಮಿಶ್ರಿತ ಮರಳು ಮಣ್ಣನ್ನು ಹೊಂದಿದೆ. ಪೂರ್ವಕ್ಕೆ ಗುಮ್ಮನಹಳ್ಳಿ ಕೆರೆಯಿದೆ, ಈ ಪರಿಸರದಲ್ಲಿ ನರಿ, ಮೊಲ, ಮುಂಗುಸಿ, ಉಡ, ಕಾಡುಹಂದಿ, ಜಿಂಕೆ ಮೊದಲಾದ ಪ್ರಾಣಿಗಳು. ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕುರಿ, ಮೇಕೆಯನ್ನು, ಹಸು, ಎತ್ತು, ಎಮ್ಮೆಯನ್ನು ಸಾಕು ಪ್ರಾಣಿಯಾಗಿ ಸಾಕಲಾಗುವುದು. ಈ ಪರಿಸರದಲ್ಲಿ ಕಾಗೆ, ಕೋಗಿಲೆ, ಗಿಳಿ, ಗೀಜುಗ, ಗೊರವಂಕ, ಬೆಳವ, ಹದ್ದು, ಗರುಡ ಪಕ್ಷಿಗಳು ಕಂಡುಬರುತ್ತವೆ. ಕೋಳಿಯನ್ನು ಸಾಕು ಪಕ್ಷಿಯಾಗಿ ಸಾಕಲಾಗುವುದು.

ವಾರ್ಷಿಕ ೪೮೧.೪ ಮಿಮೀ ಮಳೆ ಬೀಳುತ್ತಿದ್ದು ಸಾಕಾಗುವುದಿಲ್ಲ. ಬಿಸಿಲು ೩೭ ಡಿಗ್ರಿ ಸೆಂಟಿಗ್ರೇಡ್ ಇದ್ದರೆ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಹಜವಾಗಿರುತ್ತದೆ. ರೈತಾಪಿ ಬದುಕು, ತೋಟಗಾರಿಕೆ, ಹಣ್ಣು, ತರಕಾರಿ ಬೆಳೆಯುವುದು ಇಲ್ಲಿನ ವಿಶೇಷ. ಈ ಪರಿಸರದಲ್ಲಿ ೩೮ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ೨ ಕಿರು ಟ್ಯಾಂಕ್‌ಗಳಲ್ಲಿ ನೀರನ್ನು ಪೂರೈಸಲಾಗುತ್ತದೆ. ೨ ಕೈಪಂಪುಗಳಿವೆ. ಕಾಡುಗೊಲ್ಲರ ಈ ಗ್ರಾಮದ ಭಾಷೆ ಕನ್ನಡವಾಗಿದ್ದು ಕಾಂಕ್ರೀಟ್, ಶೀಟಿನ, ತಗಡಿನ ಹಾಗೂ ಹುಲ್ಲು–ಹೆಂಚಿನ ಒಟ್ಟು ೧೭೧ ಮನೆಗಳಿವೆ. ಕೆಲವು ಮನೆಗಳಿಗೆ ಆಶ್ರಯ, ಇಂದಿರಾ ಆವಾಸ್, ಜನತಾ ವಸತಿ ಯೋಜನೆಯ ೧೩ ಫಲಾನುಭವಿಗಳಿದ್ದಾರೆ. ೬ ಮನೆಗಳಲ್ಲಿ ಶೌಚಾಲಯ ಬಳಕೆಯಿದೆ. ೧೪ ಇಟ್ಟಿಗೆ ಫ್ಯಾಕ್ಟರಿ ಇದೇ ಗ್ರಾಮದ ಪರಿಸರದಲ್ಲಿ ಬರುತ್ತವೆ.

ಗ್ರಾಮದ ಮುಖ್ಯ ಆಹಾರ ರಾಗಿಮುದ್ದೆ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ಊಟದ ವ್ಯವಸ್ಥೆ ಇರುತ್ತದೆ. ೩ ಟ್ರ್ಯಕ್ಟರ್, ಟೆಂಪೋ, ಆಟೋಗಳು ಇದ್ದು ಒಂದು ಎತ್ತಿನ ಗಾಡಿ ಇದೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಹುರುಳಿ, ತೊಗರಿ ಆಹಾರಬೆಳೆಗಳು. ತೋಟಗಾರಿಕೆಯಾಗಿ ವೀಳ್ಯದೆಲೆ, ಅಡಿಕೆ ಬೆಳೆಯಿದೆ. ಹುಣಸೆಹಣ್ಣು ಬೆಳೆಯು ವಾಣಿಜ್ಯ ಬೆಳೆಯಾಗಿದೆ. ಗ್ರಾಮದಲ್ಲಿ ಒಂದು ಕಿರು ಡೈರಿಯಿದ್ದು ಸರಾಸರಿ ೧೪೦ ಲೀ. ಹಾಲು ಸಂಗ್ರಹವಾಗುತ್ತದೆ. ಶೇಂಗಾ, ಹುಣಸೆಹಣ್ಣು ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಕಂಡಕ್ಟರ್, ಶಿಕ್ಷಕರು ಸೇರಿ ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಯಲಿಯೂರು ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ. ಒಂದು ಅಂಗನವಾಡಿ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಅಂಗನವಾಡಿಯಲ್ಲಿ ೨೦ ಮಕ್ಕಳು ಶಾಲೆಯಲ್ಲಿ ೨೮ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯವಿದೆ. ಸಮವಸ್ತ್ರ, ಪುಸ್ತಕ ವಿತರಣೆ ಸೌಲಭ್ಯವಿದೆ.

ಈ ಗ್ರಾಮದ ಹೊರವಲಯ ಸಿರಾ ಕೆರೆಯ ಬಳಿ ಸಮತಾ ಶಿಕ್ಷಣ ಸಂಸ್ಥೆ ಇದ್ದು ಕರಕುಶಲ ಕಲೆಯಾದ ಕಂಬಳಿ ನೇಯ್ಗೆ, ಕುಂಬಾರಿಕೆ, ಚಾಪೆ ಹೆಣೆಯುವುದನ್ನು ಕಲಿಸುತ್ತಿದೆ. ಇದರ ಜೊತೆಗೆ ಸಮತಾ ಜಾಗೃತಿ ವಿಚಾರ ಸಂಕಿರಣ ಏರ್ಪಡಿಸುತ್ತಿದೆ. ಆರ್.ರೆಹಾನ್ ಶಿಕ್ಷಣ ಸಂಸ್ಥೆ ೧ ರಿಂದ ೧೨ನೇ ತರಗತಿಯವರೆಗೆ ಉರ್ದು, ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತಾ ಬೃಹತ್ತಾಗಿ ಬೆಳೆದಿದೆ. ಮದರ್ ತೆರೇಸಾ ನರ್ಸಿಂಗ್ ಕಾಲೇಜು ಇದೇ ಬಡಾವಣೆಯಲ್ಲಿದೆ.

೨೦೦೧-೦೮ ರವರೆಗೆ ಈ ಶಾಲೆಯಲ್ಲಿ ಸಿರಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ತಟಕ ದತ್ತು ಗ್ರಾಮವನ್ನಾಗಿ ತೆಗೆದುಕೊಂಡು ಶಾಲಾ ವನ, ಪರಂಗಿ, ಬಾಳೆ, ತೆಂಗು, ಗಿಡಗಳ ವನವನ್ನಾಗಿ ರೂಪಿಸಿದೆ. ೨೦೦೬ ರಲ್ಲಿ ಈ ಶಾಲೆಗೆ ಉತ್ತಮ ಕೈತೋಟ ಹೊಂದಿರುವ ಶಾಲೆ ಎಂದು ಶಿಕ್ಷಣ ಇಲಾಖೆಯಿಂದ ಜಿಲ್ಲಾ ಪ್ರಶಸ್ತಿ ಬಂದಿದೆ.

ಚಿಕ್ಕಣ್ಣ ಯಣ್ಣೆಕಟ್ಟೆ ಅವರು ಈ ಗ್ರಾಮದ ರಾಜಣ್ಣ, ಮಂಜಣ್ಣ, ರಂಗಪ್ಪ, ಕದುರಣ್ಣ, ಈರಕರಿಯಪ್ಪ ಕಲಾವಿದರನ್ನು ವಿವಿಧ ರಾಜ್ಯಗಳ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಕ್ಕೆ ಕರೆದೊಯ್ದು ಕೋಲುಮೇಳ ನಡೆಸಿಕೊಟ್ಟಿದ್ದಾರೆ. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಯಾಗಿ ಗ್ರಾಮದ ನೈರ್ಮಲ್ಯ, ಸೂತಕ ಗೃಹ ಪರಿವರ್ತನೆಗೆ ಹಲವಾರು ಅರಿವಿನ ಜಾಥಾ ಕಾರ್ಯಕ್ರಮ ರೂಪಿಸಿ ಯಾದವ ಯುವಕ ಸಂಘ ಆರಂಭಿಸಲು ಪ್ರೇರಕರಾಗಿರುವುದನ್ನು ಗ್ರಾಮದ ಹಿರಿಯ ಸಿದ್ದಣ್ಣ, ಈರಮರಿಯಪ್ಪ ನೆನೆಯುತ್ತಾರೆ.

ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿದ್ದು ಹೆಂಗಸರು ಹಾಲು, ಮೊಸರು, ಮಜ್ಜಿಗೆ, ಸೊಪ್ಪಿನ ತಲೆಬುಟ್ಟಿ ವ್ಯಾಪಾರ ಮಾಡುತ್ತಾರೆ. ಗ್ರಾಮದ ಆರಂಭದಲ್ಲಿ ೨ ಕರಿಗಲ್ಲುಗಳಿದ್ದು ನರಸಿಂಹಸ್ವಾಮಿ, ಈರಮರಿಯಣ್ಣ ದೇವರ ಗುಡಿಗಳಿವೆ. ಕರಿಯಮ್ಮನ ಪೌಳಿಯಿದ್ದು ಇಲ್ಲಿಂದ ೨ ಕಿಮೀ ದೂರದಲ್ಲಿ ಕರಿಯಮ್ಮ ನೆಲೆದೇವರಿದ್ದು ಪ್ರತಿ ಶ್ರಾವಣ ಶನಿವಾರದಂದು ವಿಶೇಷ ಆರತಿ, ಬಲಿ, ಹರಕೆ ಸಂಪ್ರದಾಯ, ದೇವರ ಕಳಸ, ಮೆರವಣಿಗೆ ಇರುತ್ತದೆ. ಕಾಡುಗೊಲ್ಲರ ಸಂಪ್ರದಾಯದ ಪ್ರಕಾರ ದೀಪಾವಳಿ ದೊಡ್ಡ ಹಬ್ಬವಾಗಿದ್ದು ಹಾಲು ಮೀಸಲು, ಜನ್ನಿಗೆ ಹಾಕುವುದು, ಹಿರಿಯರ ಹಬ್ಬ, ದೀಪ ಏರಿಸುವ, ದೀಪ ಇಳಿಸುವ ಹಬ್ಬ ಒಂದು ವಾರದ ಕಾಲ ನಡೆಯುತ್ತದೆ. ದೀಪಾವಳಿ, ಯುಗಾದಿ, ಮಹಾನವಮಿ, ಗೌರಿ ಮುಖ್ಯ ಹಬ್ಬಗಳು. ದ್ಯಾವೀರಮ್ಮ, ಕದರಮ್ಮ, ಸೋಬಾನೆ ಕಲಾವಿದರು. ಗ್ರಾಮದಲ್ಲಿ ಕೃಷ್ಣ ಯಾದವರ ಸಂಘವಿದೆ. ಸಾಂಸ್ಕೃತಿಕ ಸಂಘಟನೆಯಲ್ಲಿ ತೊಡಗಿದೆ.

## ಗಿರಿನಾಥನಹಳ್ಳಿ

ಗಿರಿನಾಥನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ ದೂರದಲ್ಲಿದ್ದು ಮಧುಗಿರಿ-ಸಿರಾ ಮುಖ್ಯ ರಸ್ತೆಯಲ್ಲಿ ಗಿರಿನಾಥನಹಳ್ಳಿ ಗೇಟಿನಿಂದ ಎಡಗಡೆಗೆ ತಿರುಗಿ ೨ ಕಿಮೀ ಒಳಗೆ ಕಚ್ಚಾರಸ್ತೆಯಲ್ಲಿ ಸಾಗಿದರೆ ಈ ಗ್ರಾಮ ಸಿಗುತ್ತದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಒಟ್ಟು ೩೦೫.೯೯ ಹೆಕ್ಟೇರ್ ಭೂವಿಸ್ತೀರ್ಣ ಹೊಂದಿದೆ. ಮಾಗೋಡು ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಈ ಗ್ರಾಮದಲ್ಲಿ ೧೮೧ ಮನೆಗಳಿದ್ದು ೮೨೦ ಜನಗಳಿದ್ದಾರೆ. ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಬೇಡ ನಾಯಕರು ಸಣ್ಣ ಸಮುದಾಯವಾಗಿದೆ.

ಗಿರಿಯಪ್ಪ ಎಂಬ ವ್ಯಕ್ತಿಯ ನಾಮಸೂಚಿಯಾಗಿ ಗ್ರಾಮಕ್ಕೆ ಈ ಹೆಸರು ಬಂದಿದೆ ಎಂದು ಹಿರಿಯರ ಅಭಿಮತವಾಗಿದೆ.

ಗ್ರಾಮದಲ್ಲಿ ಶೈವ ಸಂಬಂಧಿ ದೇವಾಲಯಗಳು ಕಂಡುಬರುವುದಿಲ್ಲ. ಆದುದರಿಂದ ವ್ಯಕ್ತಿ ಮೂಲದಿಂದಲೇ ಈ ಹೆಸರು ಬಂದಿದೆ ಎನ್ನುವುದು ಹೆಚ್ಚು ಸೂಕ್ತವಾಗಿದೆ.

ಆಂಜನೇಯ, ಮಾರಮ್ಮ, ಕಾವಲಮ್ಮ (ಅಮ್ಮಾಜಿ) ದೇವಸ್ಥಾನಗಳಿವೆ. ಮಾಗೋಡು ರಂಗನಾಥನಿಗೆ ಶ್ರಾವಣ ಮಾಸದಲ್ಲಿ ಈ ಗ್ರಾಮದಿಂದ ಆರತಿ ಹೋಗುವ ಸಂಪ್ರದಾಯವಿದೆ. ಮೂಗನಹಳ್ಳಿ ಕಾವಲೇಶ್ವರಿಯ ಆರಾಧನೆ, ಅಲ್ಲಿಯ ಉತ್ಸವದಲ್ಲಿ ಈ ಗ್ರಾಮದವರ ಪಾತ್ರ ಪ್ರಮುಖವಾಗಿರುತ್ತದೆ. ಆಂಜನೇಯನ ಪರೇವು, ಆರತಿ ಉತ್ಸವವು ಶ್ರಾವಣ ಮಾಸದ ಸಂದರ್ಭದಲ್ಲಿ ಏರ್ಪಡುತ್ತದೆ.

ಗೊಲ್ಲರಹಟ್ಟಿ ಸಮೀಪದಲ್ಲಿಯೇ ಇದ್ದು ಈ ಗ್ರಾಮದ ಮಜರೆ ಗ್ರಾಮವಾಗಿದೆ. ಮರಳು, ಬಿಳಿ ಲಕ್ಷಣದ ಇಲ್ಲಿನ ಭೂಮಿಯಲ್ಲಿ ರಾಗಿ, ಶೇಂಗಾ, ಹತ್ತಿ, ಜೋಳ ಆಹಾರ ಧಾನ್ಯವಾಗಿ ಬೆಳೆಯುತ್ತಾರೆ. ಮೊಲ, ಜಿಂಕೆ, ಉಡ, ಕಾಡುಹಂದಿ ಈ ಬಗೆಯ ಪ್ರಾಣಿಗಳು ಈ ಪರಿಸರದಲ್ಲಿ ವ್ಯಾಪಕವಾಗಿದ್ದು ಗ್ರಾಮದಲ್ಲಿ ಹೈನುಗಾರಿಕೆಯು ಚೆನ್ನಾಗಿದೆ. ಹಾಲಿನ ಹಸು, ನಾಟಿ ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ.

ಗ್ರಾಮಕ್ಕೆ ಸ್ವಲ್ಪ ದೂರದಲ್ಲಿ ಗಿರಿನಾಥನಹಳ್ಳಿ ಕೆರೆಯಿದ್ದು ಮಳೆ ಚೆನ್ನಾಗಿ ಬಿದ್ದರೆ ಮಾತ್ರ ತುಂಬುತ್ತದೆ. ಈ ಕೆರೆ ಕಳೆದ ಹತ್ತು ವರ್ಷಗಳಿಂದ ತುಂಬಿಲ್ಲ. ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿಯಿಂದ ಕೊಳವೆ ಬಾವಿಯ ಮೂಲಕ ನೀರು ಸರಬರಾಜು ಮಾಡಲಾಗುತ್ತದೆ.

ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಕೃಷಿಕರಾದ ಇಲ್ಲಿನ ಜನ ರಾಗಿಮುದ್ದೆ, ಅನ್ನ ಮುಖ್ಯ ಆಹಾರವನ್ನಾಗಿ ಸ್ವೀಕರಿಸುತ್ತಾರೆ. ರೊಟ್ಟಿ, ದೋಸೆ, ಅನ್ನ ಬಳಸುವವರಿದ್ದಾರೆಬಳಸುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಎತ್ತಿನ ಬಂಡಿ ಸಾಂಪ್ರದಾಯಿಕ ವಾಹನವಾದರೆ ಟ್ರ್ಯಾಕ್ಟರ್, ಲಾರಿ, ಸ್ಕೂಟರ್ ಆಧುನಿಕ ವಾಹನವಾಗಿ ಬಳಕೆಯಲ್ಲಿದೆ. ತೆಂಗು, ಅಡಿಕೆ, ದಾಳಿಂಬೆ ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ. ಹುಣಸೆ ಹಣ್ಣಿನ ವ್ಯಾಪಾರವೂ ಇದೆ. ಸರ್ಕಾರಿ ನೌಕರರು ಇಬ್ಬರಿದ್ದಾರೆ. ಗ್ರಾಮದಲ್ಲಿ ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಕಿರಿಯ ಪಾಠಶಾಲೆಯಿದೆ. ೪ ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ೬೩.೬% ಸಾಕ್ಷರತೆ ಇದೆ.

ಇಂಜಿನಿಯರ್‌ಗಳಾದ ಕಾಂತರಾಜು, ರಾಜಣ್ಣ ಈ ಗ್ರಾಮದ ಪ್ರತಿಭಾನ್ವಿತ ಸರ್ಕಾರಿ ನೌಕರರು. ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ, ಮದಲೂರು ಜಿಲ್ಲಾ ಪಂಚಾಯ್ತಿ ಹಾಗೂ ಹೊನ್ನಗೊಂಡನಹಳ್ಳಿ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ೩ ಸ್ತ್ರೀಶಕ್ತಿ ಸ್ವಸಹಾಯ ಗುಂಪು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಂಡಗಳಿವೆ. ವಿಧವಾ ವೇತನ, ವಿಕಲ ಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಇಂದಿರಾ ಆವಾಸ್, ಜನತಾ ವಸತಿ ಯೋಜನೆ, ಭಾಗ್ಯಲಕ್ಷ್ಮಿ ವಿದ್ಯುತ್ ದೀಪದ ೨೬ ಫಲಾನುಭವಿಗಳಿದ್ದಾರೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಗಿರಿನಾಥನಹಳ್ಳಿ ಗೊಲ್ಲರಹಟ್ಟಿ

ಈ ಗ್ರಾಮವು ಸಿರಾ-ಮಧುಗಿರಿ ಮುಖ್ಯ ರಸ್ತೆಯಲ್ಲಿ ಗುಳಿಗೇನಹಳ್ಳಿಯಿಂದ ೨ ಕಿ.ಮೀ. ದೂರದಲ್ಲಿದೆ. ಸಿರಾ ತಾಲ್ಲೂಕು ಕೇಂದ್ರಕ್ಕೆ ೧೪ ಕಿ.ಮೀ. ದೂರದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು ಮುಖ್ಯಗ್ರಾಮ ಗಿರಿನಾಥನಹಳ್ಳಿಯಲ್ಲಿ ಸೇರ್ಪಡೆಗೊಂಡಿದೆ. ಇದರ ಭೌಗೋಳಿಕ ವಿಸ್ತೀರ್ಣ ೩೦೫.೯೯ ಹೆಕ್ಟೇರ್ ಆಗಿದ್ದು ಕಾಡುಗೊಲ್ಲರು ಒಂದೆಡೆ ವಾಸಿಸುವ ಈ ಗ್ರಾಮದಲ್ಲಿ ೨೪ ಮನೆಗಳಿದ್ದು ಎಲ್ಲರೂ ರೈತಾಪಿ ಬದುಕಿನವರು. ಕುರಿಗಾರಿಕೆ ಇವರ ಉಪಕಸುಬು. ಹಸು, ಎಮ್ಮೆ, ಕುರಿ, ಮೇಕೆ, ಕೋಳಿ ಈ ಗ್ರಾಮದ ಸಾಕುಪ್ರಾಣಿಗಳು. ಈ ಪರಿಸರದಲ್ಲಿ ಕಾಗೆ, ಕೋಗಿಲೆ, ಗೊರವಂಕ, ಬೆಳವ, ಕೌಜಗ, ಕೊಕ್ಕರೆ ಮೊದಲಾದ ಪಕ್ಷಿಗಳು, ನರಿ, ಮೊಲ, ಜಿಂಕೆ ಮೊದಲದ ಪ್ರಾಣಿ ಸಂಕುಲವನ್ನು ಕಾಣಬಹುದು. ಸರಾಸರಿ ೪೫೩ ಮಳೆ ಬೀಳುವ ಇಲ್ಲಿ ಚಳಿಯೂ ೯-೧೦ ಡಿಗ್ರಿ ಸೆಂಟಿಗ್ರೇಡ್, ಬಿಸಿಲು ೩೭ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯುವ ನೀರಿಗೆ ಬೋರ್‌ವೆಲ್ ಮೂಲಕ ಟ್ಯಾಂಕ್‌ಗೆ ಹರಿಸಿ ಅಲ್ಲಿಂದ ಕುಡಿಯುವುದಕ್ಕೆ ಬಳಸುತ್ತಾರೆ. ಮಣ್ಣಿನ, ಹೆಂಚಿನ ಮನೆಗಳು ಇದ್ದು ಜನತಾ ಹಾಗೂ ಭಾಗ್ಯಜ್ಯೋತಿಯ ಫಲಾನುಭವಿಗಳಿದ್ದಾರೆ. ಗ್ರಾಮದ ಸಾಕ್ಷರತೆ ೫೭.೬% ರಷ್ಟಿದೆ.

ರಾಗಿಮುದ್ದೆ ಪ್ರಮುಖ ಆಹಾರವಾಗಿದ್ದು ಅನ್ನ, ರೊಟ್ಟಿ, ಉಪ ಆಹಾರವಾಗಿ ಬಳಸುತ್ತಾರೆ. ಎತ್ತಿನ ಬಂಡಿ ಸಾಂಪ್ರದಾಯಿಕ ವಾಹನ. ಸ್ಕೂಟರ್, ಸೈಕಲ್ ಬಳಕೆಯಿದೆ. ರಾಗಿ, ಅಲಸಂದೆ, ಶೇಂಗಾ ಬೆಳೆಯುತ್ತಾರೆ. ಕುರಿ ಸಾಕಾಣಿಗೆ ಹಾಗೂ ವ್ಯಾಪಾರ ಉಪಕಸುಬು ಆಗಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಜನಸಂಖ್ಯೆ ೨೧೨ ರಷ್ಟಿದ್ದಾರೆ.

ಸಿರಾ ವಿಧಾನಸಭೆ, ಚಿತ್ರದುರ್ಗ ಲೋಕಸಭೆ, ಮದಲೂರು ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ಮಾಗೋಡು ಗ್ರಾಮಪಂಚಾಯ್ತಿಗೆ ಸೇರಿದೆ. ಕರಿಯಮ್ಮ ಗ್ರಾಮದ ದೇವತೆಯಾಗಿದ್ದು ವಾರ್ಷಿಕ ಜಾತ್ರೆ, ಆರತಿ, ಬಾನ, ಬ್ಯಾಟೆ ಇರುತ್ತದೆ. ದೀಪಾವಳಿ ಈ ಗ್ರಾಮದ ವಿಶೇಷ ಹಬ್ಬವಾಗಿದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಗಿಡದ ರಂಗನಹಳ್ಳಿ

ಜಿ.ರಂಗನಹಳ್ಳಿ ಎಂದು ಕರೆಯುವ ಗಿಡದ ರಂಗನಹಳ್ಳಿ ಗೌಡಗೆರೆ ಹೋಬಳಿ, ತಾವರೆಕೆರೆ ಜಿಲ್ಲಾ ಪಂಚಾಯ್ತಿ ಹಾಗೂ ಲಕ್ಷ್ಮೀಸಾಗರ ಗ್ರಾಮಪಂಚಾಯ್ತಿಗೆ ಸೇರಿದ ಈ ಗ್ರಾಮ ಕಂದಾಯ ಗ್ರಾಮವಾಗಿದೆ. ಚಿನ್ನಹಳ್ಳಿ ಅಥವಾ ಜಿ.ಗೊಲ್ಲರಟ್ಟಿ ಎಂಬುದು ಇದರ ಉಪಗ್ರಾಮವಾಗಿದೆ. ಸಿರಾ ನಗರದಿಂದ ಪಶ್ಚಿಮಕ್ಕೆ ೧೦ ಕಿ.ಮೀ ದೂರದ ಈ ಹಳ್ಳಿ ಲಕ್ಷ್ಮೀಸಾಗರದಿಂದ ಮೇಲಕ್ಕಿದೆ. ೮೪೯.೯೨ ಹೆಕ್ಟೇರ್ ಭೂವಿಸ್ತೀರ್ಣ ಹೊಂದಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಪೊದೆ, ಗಿಡ-ಮರಗಳ ಬಯಲು ಪ್ರದೇಶ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿ ಮೊದಲಾದ ಕಾಡುಪ್ರಾಣಿಗಳು ಕಂಡುಬಂದರೆ ಗ್ರಾಮದಲ್ಲಿ ಹಸು, ಕುರಿ ಮೇಕೆ ಮತ್ತು ನಾಯಿ ಸಾಕುಪ್ರಾಣಿಗಳು. ಕಾಗೆ, ಕೋಗಿಲೆ, ಕೊಕ್ಕರೆ, ಗಿಳಿ, ಗೂಬೆ, ಹದ್ದು ಪಕ್ಷಿಗಳು ಈ ಪರಿಸರದಲ್ಲಿ ಕಂಡುಬರುತ್ತವೆ. ಕೋಳಿ ಸಾಕುಪಕ್ಷಿಯಾಗಿದೆ. ವಾಡಿಕೆ ಮಳೆ ೪೩೨ ಮಿಮೀ ಬೀಳುತ್ತಿದ್ದು ಕೃಷಿಗೆ ಸಾಕಾಗುವುದಿಲ್ಲ. ಬದಲಿಗೆ ಗಂಗಾ ಕಲ್ಯಾಣ ಮೊದಲಾದ ಯೋಜನೆಗಳಿಂದ ಕೊಳವೆಬಾವಿ ಕೊರೆಸಿಕೊಂಡು ನೀರಾವರಿಗೆ ಅನುಕೂಲ ಮಾಡಿಕೊಂಡಿರುತ್ತಾರೆ. ಬಿಸಿಲು ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇದೆ. ಒಂದು ಕೆರೆ ಇದ್ದು ತುಂಬುವುದು ಅಪರೂಪವಾಗಿದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಯೋಜನೆಯಡಿಯಲ್ಲಿ ಕೊಳಾಯಿಗಳ ಮೂಲಕ ನೀರಿನ ಪೂರೈಕೆಯಾಗುತ್ತಿದೆ. ೨೦ ಬೀದಿ ನಲ್ಲಿಗಳಿವೆ.

ಸಾಮಾಜಿಕ ರಚನೆಯಲ್ಲಿ ಲಂಬಾಣಿ ಜನಾಂಗದ ಪೂರ್ಣ ಬುಡಕಟ್ಟು ಗ್ರಾಮವಾಗಿದ್ದು ಗ್ರಾಮದಲ್ಲಿ ೨೨೦ ಮನೆಗಳಿವೆ. ಕೆಳಗಲ ಮತ್ತು ಮೇಗಲ ಎರಡು ಓಣಿಗಳಿದ್ದು ಎರಡು ಭಾಗಗಳಾಗಿ ಊರು ರಚನೆಯಾಗಿದೆ. ಲಂಬಾಣಿ ಮಾತೃಭಾಷೆಯಾಗಿದೆ.

ಕಾಂಕ್ರೀಟ್, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿದ್ದು ೫೦ ಶೌಚಾಲಯಗಳ ಬಳಕೆಯಿದೆ. ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಜೋಳ, ಭತ್ತ, ತೊಗರಿ ಆಹಾರ ಬೆಳೆಗಳು. ಸೂರ್ಯಕಾಂತಿ ಹತ್ತಿ, ಸೀಡ್ಸ್ ಬೆಳೆಗಳು. ತೆಂಗು, ಹುಣಸೆ, ಹುಣಸೆಹಣ್ಣು, ಹೊಂಗೆ ಬೀಜಗಳು ವಾಣಿಜ್ಯ ಬೆಳೆಗಳಾಗಿವೆ. ಆರೋಗ್ಯ, ಕಂದಾಯ, ಶಿಕ್ಷಣ, ಪೊಲೀಸ್ ಇಲಾಖೆಗೆ ಸೇರಿದ ಒಟ್ಟು ೨೦ ಜನ ಸರ್ಕಾರಿ ನೌಕರರಿದ್ದಾರೆ.

ಬೀಡಿ ಕಟ್ಟುವುದು, ಟೈಲರಿಂಗ್, ಗೃಹ ಕೈಗಾರಿಕೆ ಇದೆ. ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಹಾಗೂ ಲಕ್ಷ್ಮೀಸಾಗರ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ೩ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಅಂಗನವಾಡಿ, ಸರ್ಕಾರಿ ಹಿರಿಯ ಪಾಠಶಾಲೆ ಇದ್ದು ೯೫ ಜನ ಮಕ್ಕಳಿದ್ದು ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ, ಪುಸ್ತಕ ಹಾಗೂ ಸಮವಸ್ತ್ರ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೪೭.೬% ಪ್ರಮಾಣವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಂಗಪ್ಪ ಎಂಬ ನಾಟಿ ವೈದ್ಯರಿದ್ದು ಪಶುಗಳಿಗೆ ಚಿಕಿತ್ಸೆ ನೀಡುತ್ತಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೫ ಪೆಟ್ಟಿಗೆ ಅಂಗಡಿಗಳಿವೆ. ೨ ಕರಿಗಲ್ಲು, ಅರಳಿಕಟ್ಟೆಗಳಿವೆ.

ಸೇವಾಲಾಲ್, ಮರಿಯಮ್ಮ ದೇವಾಲಯಗಳಿದ್ದು ಇದನ್ನು ಮಠ ಎಂದು ಕರೆಯುತ್ತಾರೆ. ಕಾಳಿಕಾಂಬ, ತುಳಜಾಭವಾನಿ ದೇವಾಲಯಗಳೂ ಇವೆ, ಮರಿಯಮ್ಮ ದೇವಾಲಯದ ವಾರ್ಷಿಕ ಆಚರಣೆಯಿದ್ದು ಬಲಿ, ಆರತಿ, ಉತ್ಸವವಿದ್ದು ಸೇವಾಲಾಲ್ ಜಾತ್ರೆ ೫ ವರ್ಷಕ್ಕೊಮ್ಮೆ ಜರುಗುತ್ತದೆ.

ಗ್ರಾಮದಲ್ಲಿ ಯುಗಾದಿ, ದಸರಾ, ಗೌರಿ-ಗಣೇಶ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ಲೇಖಕರಾದ ರವಿಚಂದ್ರನಾಯಕ್ ಕಲಾವಿದರಾದ ಅಣ್ಣಾನಾಯಕ್, ಗಂಗಾನಾಯಕ್ ಇದ್ದಾರೆ. ಗ್ರಾಮದಲ್ಲಿ ಪಾರಂಪರಿಕ ಲಂಬಾಣಿ ಕಲೆಯಿದೆ.

## ಗೋವಿಂದನಹಳ್ಳಿ

ಗೋವಿಂದನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೧ ಕಿಮೀ ದೂರವಿದೆ. ಸಿರಾ-ಚಂಗಾವರ ಮಾರ್ಗದಲ್ಲಿ ಭೂತಕಾಟನಹಳ್ಳಿಯಿಂತ ಉತ್ತರಕ್ಕೆ ೨ ಕಿಮೀ ದೂರದಲ್ಲಿದ್ದು

ಸಿರಾ ಕಸಬಾ ಹೋಬಳಿ, ಮೇಲುಕುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಇದರ ಭೌಗೋಳಿಕ ವ್ಯಾಪ್ತಿ ೧೧ ಕಿಮೀ ಇದ್ದು ಕಂದುಮಿಶ್ರಿತ ಮರಳು ಮಣ್ಣು ಹೊಂದಿದೆ. ಬಯಲು ಪ್ರದೇಶ. ಒಂದು ಕೆರೆ ಇದ್ದರೂ ತುಂಬುವುದು ಅಪರೂಪ. ಆದುದರಿಂದ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಮೊಲ, ಮುಂಗುಸಿ, ಹಂದಿ ಮೊದಲಾದ ಕಾಡುಪ್ರಾಣಿಗಳು ಕಂಡುಬರುತ್ತವೆ. ಸಾಕುಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಕೋಳಿಗಳಿವೆ. ಕಾಡುಪಕ್ಷಿಯಾಗಿ ಗಿಳಿ, ಗೊರವಂಕ, ಗೂಬೆ, ಹದ್ದು, ಗರುಡ, ಕೋಗಿಲೆ, ಕಾಗೆ, ಕೊಕ್ಕರೆ ಕಂಡುಬರುತ್ತವೆ. ವಾರ್ಷಿಕ ಸರಾಸರಿ ೪೬೪ ಮಿಮೀ ಮಳೆ ಬಿದ್ದರೂ ನೀರಿನ ತೀವ್ರ ಕೊರತೆಯಿದೆ. ಬಯಲು ಪ್ರದೇಶ. ಬಿಸಿಲೂ ಅಧಿಕ ೩೮-೩೧೨ ಡಿಗ್ರಿ ಸೆಂಟಿಗ್ರೇಡ್ ಬಿಸಿಲಿನ ಪ್ರಮಾಣವಿದ್ದು ೧೨ ಡಿಗ್ರಿ ಸೆಂಟಿಗ್ರೇಡ್ ಚಳಿ ಸಾಮಾನ್ಯವಾಗಿರುತ್ತದೆ.

ಮಳೆಯಾಶ್ರಿತ ರೈತಾಪಿ ಬದುಕಾಗಿರುವುದರಿಂದ ನೀರಿನ ಪ್ರಮಾಣ ಕಡಿಮೆಯಿದ್ದು ನೀರಿನ ಪೂರೈಕೆಗೆ೨೪ ಬೋರ್‌ವೆಲ್‌ಗಳಿವೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಒದಗಿಸುತ್ತಿದ್ದು ೪ ಸಿಸ್ಟರ್ನ್‌ಗಳಿದ್ದು ಒಂದು ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಕಾಡುಗೊಲ್ಲರ ಕೆಲವು ಕುಟುಂಬಗಳಿವೆ. ಅವು ಗೊಲ್ಲರಹಟ್ಟಿ ಎಂದು ಪ್ರತ್ಯೇಕವಾಗಿ ಕರೆದುಕೊಳ್ಳದೆ ಗೋವಿಂದನಹಳ್ಳಿಯೊಂದಿಗೆ ಗುರುತಿಸಿಕೊಂಡಿವೆ. ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರದ ೩೪ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದ ಮನೆಗಳಾಗಿವೆ. ೧೪೮ ಜನಸಂಖ್ಯೆ ಇದ್ದು ೧೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯಬೆಳೆ. ಭತ್ತ, ಜೋಳ, ರಾಗಿ, ಅಲಸಂದೆ, ತೊಗರಿ ಆಹಾರ ಬೆಳೆಗಳು. ರೇಷ್ಮೆ, ಹತ್ತಿ ಬೆಳೆಗಳಿವೆ. ಶೇಂಗಾ, ಹತ್ತಿ, ಹುಣಸೆಹಣ್ಣು, ಹೊಂಗೆಬೀಜದ ವ್ಯಾಪಾರವಿದೆ.

ಗ್ರಾಮದಲ್ಲಿ ಹಿರಿಯ ಶಿಕ್ಷಕ ಚಿಕ್ಕಲಿಂಗಪ್ಪ, ಮೇಘರಾಜು ಶಿಕ್ಷರಾಗಿದ್ದು ಬಾಲಕೃಷ್ಣ ಕೃಷಿ ಶಿಕ್ಷಕರಾಗಿದ್ದಾರೆ. ಗ್ರಾಮದಲ್ಲಿ ಬೀಡಿ ಕಟ್ಟುವ, ಹೂ ಕಟ್ಟುವುದು ಮೊದಲಾದ ಮಹಿಳಾ ಗೃಹಕೈಗಾರಿಕೆಯಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಮೇಲ್ಕುಂಟೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಸಿರಾ-ಭೂತಕಾಟನಹಳ್ಳಿ, ಹನುಮನಹಳ್ಳಿ, ಪಟ್ಟನಾಯಕನಹಳ್ಳಿ ಮಾರ್ಗವಾಗಿ ಬಸ್‌ಸಂಚಾರ, ರಸ್ತೆಯಿದೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಶಾಲೆಯಲ್ಲಿ ೨೦ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೫೬% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಭೂತಪ್ಪ, ಮಾರಮ್ಮನ ಪೌಳಿಗಳಿವೆ. ದೀಪಾವಳಿ, ಮಹಾನವಮಿ ಸಂದರ್ಭದಲ್ಲಿ ವಿಶೇಷ ಉತ್ಸವ ನಡೆಯುತ್ತದೆ. ಮಾರಮ್ಮನ ಊರಹಬ್ಬವಿದ್ದು ಆರತಿ, ಬಾನ, ಬ್ಯಾಟೆ ಮತ್ತು ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ದೀಪಾವಳಿ, ಯುಗಾದಿ, ಗೌರಿ-ಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗೊಲ್ಲಹಳ್ಳಿ

ಗೊಲ್ಲಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೩ ಕಿ.ಮೀ ದೂರದಲ್ಲಿದೆ. ಸಿರಾ-ಮೇಲುಕುಂಟೆ-ಬರಗೂರು ರಸ್ತೆಯಲ್ಲಿರುವ ಈ ಗ್ರಾಮ ಮೇಲುಕುಂಟೆಯ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೧೩೪.೦೮ ಹೆಕ್ಟೇರ್ ಆಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ.

ಬಯಲುಸೀಮೆ, ಕುರುಚಲು ಗಿಡ, ಪೊದೆಗಳ ಪ್ರದೇಶ ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಯಾದ ನರಿ, ಮೊಲ, ಜಿಂಕೆ, ಉಡ, ತೋಳ ಕಂಡುಬರುತ್ತದೆ. ಹಾವು ಮೊದಲಾದ ವಿಷಪೂರಿತ ಸಸ್ತನಿಗಳೂ ಇವೆ. ಗ್ರಾಮದಲ್ಲಿ ರೈತಾಪಿ ಬದುಕು ಪ್ರಧಾನವಾಗಿದ್ದು ರೈತರು ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ಕತ್ತೆ, ನಾಯಿಗಳನ್ನು ಸಾಕಿದ್ದಾರೆ. ಪಕ್ಷಿಗಳಾದ ಗಿಳಿ, ನವಿಲು, ಕೋಗಿಲೆ, ಕಾಗೆ, ಕೊಕ್ಕರೆ, ಬೆಳವ, ಹದ್ದು, ಗರುಡ, ಗಿಡುಗ ಪಕ್ಷಿಗಳು, ಕೋಳಿಯನ್ನು ಸಾಕು ಪಕ್ಷಿಯಾಗಿ ಸಾಕುತ್ತಿದ್ದಾರೆ.

ಗೊಲ್ಲ ಜನಾಂಗವೇ ಈ ಗ್ರಾಮದ ಮೂಲನಿವಾಸಿಗಳಾಗಿದ್ದು ಇಂದಿಗೂ ಅಧಿಕ ಸಂಖ್ಯೆಯಲ್ಲಿ

ನೆಲೆಸಿದ್ದಾರೆ. ಗೊಲ್ಲರ ವಾಸಸ್ಥಳವಾಗಿರುವುದರಿಂದ ಗೊಲ್ಲರಹಳ್ಳಿ ಎಂದಾಗಿದೆ. ಸಾಮಾನ್ಯವಾಗಿ ಸಿರಾ ತಾಲ್ಲೂಕಿನ ಬಹುತೇಕ ಗೊಲ್ಲರ ಊರುಗಳಿಗೆ ಹಟ್ಟಿ ಎಂದು ಕರೆಯುತ್ತಾರೆ. ಆದರೆ ಈ ಹಳ್ಳಿಗೆ ಗೊಲ್ಲರಹಳ್ಳಿ ಎಂದು ಕರೆದಿರುವುದು ವಿಶೇಷವಾಗಿದೆ.

ಬಿಸಿಲು, ಧಗೆ ಅಧಿಕವಾಗಿದ್ದು ಮಳೆ ಕಡಿಮೆ. ಹಾಗಾಗಿ ಇಲ್ಲಿ ವಾಡಿಕೆಗಿಂತಲೂ ಕಡಿಮೆ ಮಳೆ ಬೀಳುತ್ತಿದ್ದು ಕಳೆದ ೨ ವರ್ಷಗಳಲ್ಲಿ ೪೬೦ ಮಿಮೀ ಮಳೆ ಬಿದ್ದಿದೆ. ಬಿಸಿಲು ೩೮–೪೦ ಡಿಗ್ರಿ ಇದ್ದರೆ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ರೈತಾಪಿ ಬದುಕಿನ ಜನ ವ್ಯವಸಾಯಕ್ಕೆ ಉಪನೀರಾವರಿಯಾಗಿ ೨೫ ಕೊಳವೆ ಬಾವಿಗಳ ಮೂಲಕ ಕೃಷಿನಿರತರಾಗಿದ್ದಾರೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ಕೊಳವೆ ನಲ್ಲಿಗಳಿದ್ದು ೬ ಕಿರು ಟ್ಯಾಂಕ್‌ಗಳೂ ಇವೆ. ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕಾಡುಗೊಲ್ಲ ಜನಾಂಗ ದೊಡ್ಡ ಸಮುದಾಯವಾಗಿದೆ. ಕುಂಚಿಟಿಗರು, ಕುಂಬಾರರು ಕಿರುಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ವಿವಿಧ ಸ್ವರೂಪದ ೧೪೦ ಮನೆಗಳಿದ್ದು ಅವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಾಗಿವೆ. ಇಲ್ಲಿ ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದು ೭೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೮೩೨ ಜನಸಂಖ್ಯೆ ಹೊಂದಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ–ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಬಂಡಿಯ ಜೊತೆಗೆ ಆಧುನಿಕ ವಾಹನಗಳು, ಟ್ರ್ಯಾಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಆಹಾರವಾಗಿದೆ. ರಾಗಿ, ಭತ್ತ, ಜೋಳ ಆಹಾರ ಬೆಳೆಗಳು. ತೋಟಗಾರಿಕಾ ಬೆಳೆಯಾಗಿ ತೆಂಗು, ಅಡಿಕೆ, ರೇಷ್ಮೆ, ಸೇವಂತಿಗೆ ಹೂ, ತರಕಾರಿ ಬೆಳೆಯಾಗಿ ತೆಂಗು, ಅಡಿಕೆ, ರೇಷ್ಮೆ, ಸೇವಂತಿಗೆ ಹೂ, ತರಕಾರಿ ಬೆಳೆಯುತ್ತಾರೆ. ಶೇಂಗಾ, ಹುಣಸೆಹಣ್ಣು, ಹೊಂಗೆಬೀಜ, ತರಕಾರಿ, ಹೂವು ವ್ಯಾಪಾರಿ ಬೆಳೆಗಳಾಗಿವೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೫೦ ಲೀ. ಹಾಲು ಸಂಗ್ರಹವಾಗುತ್ತಿದೆ. ಮಹಿಳೆಯರು ಬೀಡಿ ಕಟ್ಟುವ, ಊಟದ ಎಲೆ ತಯಾರಿಸುವ, ಗೃಹಕೃತ್ಯದ ಕಾಯಕದಲ್ಲಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಮೇಲುಕುಂಟೆ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕ್ಷೇತ್ರಗಳನ್ನು ಹೊಂದಿದ್ದು ಚಿತ್ರದುರ್ಗ ಲೋಕಸಬಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ೪ ಸ್ತ್ರೀಶಕ್ತಿ ಸಹಕಾರ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸಂಘಟನೆಯಲ್ಲಿ ಸಹಕಾರಿಯಾಗಿವೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಗಳಿದ್ದು ಉತ್ತಮ ಕಾಂಪೌಂಡ್, ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ. ಒಟ್ಟು ಒಂಬತ್ತು ಜನ ಶಿಕ್ಷಕರು, ಅಡಿಗೆ ಸಿಬ್ಬಂದಿ, ಅಂಗನವಾಡಿ ಶಿಕ್ಷಕಿಯರಿದ್ದಾರೆ. ಗ್ರಾಮದ ಸಾಕ್ಷರತೆ ೬೨೧ ರಷ್ಟಿದೆ. ಒಂದು ಉಪ ಆರೋಗ್ಯ ಕೇಂದ್ರ, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಿದ್ದು ಉತ್ತಮ ಸರ್ಕಾರಿ ಸೌಲಭ್ಯ ಪಡೆದ ಗ್ರಾಮವಾಗಿದೆ.

ಧಾರ್ಮಿಕವಾಗಿ ಕಂಬದ ರಂಗನಾಥಸ್ವಾಮಿ, ಲಕ್ಷ್ಮೀದೇವರು, ಕಣಿವೆ ಮಾರಕ್ಕ ಹಾಗೂ ನಾಗರಕಲ್ಲು, ಅರಳಿಕಟ್ಟೆಗಳಿವೆ. ಗ್ರಾಮದ ಹೊರಾಂಗಣದಲ್ಲಿ ಚಿತ್ರದೇವ, ತಿಮ್ಮನ ಪೌಳಿಗಳಿವೆ. ದೀಪಾವಳಿಯಿಂದ ಚಿತ್ರದೇವರ ಹಾಗೂ ಅಮ್ಮನ ವಿಶೇಷ ಆಚರಣೆಯಿರುತ್ತದೆ. ಶ್ರಾವಣ ಮಾಸದಲ್ಲಿ ಬಂಡಿ ರಂಗನಾಥನಿಗೆ ಆರತಿ ಉತ್ಸವವೂ ಇರುತ್ತದೆ. ಕಣಿವೆ ಮಾರಕ್ಕ ಗ್ರಾಮದ ಹಬ್ಬ. ಆರತಿ, ಬಾನ, ಬ್ಯಾಟೆಯೊಂದಿಗೆ ನಡೆಯುತ್ತದೆ. ಊರ ಹಬ್ಬಗಳಾಗಿ ಯುಗಾದಿ, ಮಹಾನವಮಿ, ದೀಪಾವಳಿ, ಗೌರಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಟೀ ಅಂಗಡಿ, ೮ ಗೂಡಂಗಡಿಗಳಿವೆ. ಗ್ರಾಮದಲ್ಲಿ ಶಿಕ್ಷಣ, ಬೆಸ್ಕಾಂ, ಆರೋಗ್ಯ, ತಾಂತ್ರಿಕ, ಸೇವಾ ಸಹಕಾರ, ರಕ್ಷಣಾ ಇಲಾಖೆ, ಹಾಸ್ಟೆಲ್, ಸಾರಿಗೆ ಇಲಾಖೆಗೆ ಸೇರಿದ ೧೦ ಜನ ಸರ್ಕಾರಿ ನೌಕರರಿದ್ದು ಗ್ರಾಮಾಭಿವೃದ್ಧಿಗೆ ನಿವೃತ್ತ ವೈದ್ಯರಾದ ಡಾ॥ಹಂಪಣ್ಣ ವಿಶೇಷವಾಗಿ ಶ್ರಮಿಸಿದ್ದಾರೆ. ಇವರ ಮಗನೂ ಖಾಸಗಿ ವೈದ್ಯರಾಗಿ ಗ್ರಾಮದ ಪ್ರಗತಿಗೆ ಶ್ರಮಿಸುತ್ತಿದ್ದಾರೆ. ಇವರು ಹಲವಾರು ಸ್ವಸಹಾಯ, ಎನ್‌ಎಸ್‌ಎಸ್ ಸೇವಾ ಸಂಸ್ಥೆಗಳ ಮೂಲಕ ಗ್ರಾಮದ ಆರೋಗ್ಯ, ಪರಿಸರ, ಶಿಕ್ಷಣ, ಸಾಂಸ್ಕೃತಿಕ, ಕೃಷಿ, ಪ್ರಾಣಿ ಸಂಬಂಧಿ ಆರೋಗ್ಯ ಶಿಬಿರ ಹಾಗೂ ಸರ್ಕಾರಿ ಸೌಲಭ್ಯ ಕುರಿತು ಇಂದಿಗೂ ಜಾಗೃತಿ ಮೂಡಿಸುವಲ್ಲಿ

ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಖಾಸಗಿ ವಕೀಲರಾದ ಚಂದ್ರಣ್ಣ, ವೈದ್ಯ ವೆಂಕಟೇಶ್, ಪಶುವೈದ್ಯ ತಿಮ್ಮರಾಜ್ ಇದ್ದಾರೆ.

## ಗೊಲ್ಲಹಳ್ಳಿ– ಹೊಸಬಡಾವಣೆ

ಗೊಲ್ಲಹಳ್ಳಿ– ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೩ ಕಿ.ಮೀ. ದೂರದಲ್ಲಿದ್ದು, ಸಿರಾ–ಮೇಲುಕುಂಟೆ, ಬರಗೂರು ಮುಖ್ಯ ರಸ್ತೆಯಲ್ಲಿದೆ. ಗೊಲ್ಲಹಳ್ಳಿ ಬೆಳೆದಂತೆಲ್ಲಾ, ರಸ್ತೆಯ ಇಕ್ಕೆಲಗಳಲ್ಲಿ ಮುಖ್ಯ ಗ್ರಾಮದಿಂದ ಉತ್ತರಕ್ಕೆ ಹೊಸದಾಗಿ ಮನೆಗಳು ನಿರ್ಮಾಣಗೊಂಡಿವೆ. ಇವುಗಳಿಗೆ ಗೊಲ್ಲಹಳ್ಳಿ ಹೊಸಬಡಾವಣೆ ಎಂದು ಕರೆಯಲಾಗುವುದು.

ಗೊಲ್ಲ ಜನಾಂಗ ಅಧಿಕವಾಗಿರುವ ಮುಖ್ಯ ಗ್ರಾಮ ಗೊಲ್ಲಹಳ್ಳಿಯಲ್ಲಿ ಈ ಬಡಾವಣೆಯಲ್ಲಿಯೂ ಅಧಿಕವಾಗಿ ಗೊಲ್ಲ ಜನಾಂಗದವರು ಮನೆ ಕಟ್ಟಿಕೊಂಡಿದ್ದಾರೆ. ಉಳಿದಂತೆ ಕುಂಬಾರರು, ಕುಂಚಿಟಿಗರು, ನಾಯಕರು, ಆದಿಕರ್ನಾಟಕ ಜನಾಂಗದವರು ಕಿರು ಸಮುದಾಯವಾಗಿ ಕಂಡು ಬರುತ್ತಾರೆ.

ಇಲ್ಲಿ ೨೭ ಮನೆಗಳಿದ್ದು, ಅವೆಲ್ಲವೂ ಹೆಂಚಿನ, ಶೀಟಿನ, ಕಾಂಕ್ರೀಟ್ ಮನೆಗಳಾಗಿವೆ. ಇವು ಆಶ್ರಯ, ಜನತಾ, ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಇಲ್ಲಿನ ೧೪ ಮನೆಯಲ್ಲಿ ಶೌಚಾಲಯದ ಸೌಲಭ್ಯವಿದೆ.

ಶಿಕ್ಷಕರು, ಸಾರಿಗೆ ಇಲಾಖೆಯ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಧಾರ್ಮಿಕವಾಗಿ ಮುಖ್ಯ ಗ್ರಾಮದ ಚಿತ್ರದೇವರು, ಮಾರಮ್ಮ, ಕಂಬದ ರಂಗನಾಥ, ಲಕ್ಷ್ಮೀದೇವರುಗಳಿಗೆ ನಡೆದು ಕೊಳ್ಳುತ್ತಾರೆ. ಮಕ್ಕಳು ಶಿಕ್ಷಣಕ್ಕೆ ಮುಖ್ಯ ಗ್ರಾಮದ ಶಾಲೆಗೆ ಸೇರಿಕೊಂಡಿರುತ್ತಾರೆ. ಹೆಚ್ಚು ರೈತಾಪಿ ವರ್ಗದವರಿದ್ದು, ರಾಗಿ, ಶೇಂಗಾ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ, ತೋಟಗಾರಿಕೆ ಇದೆ. ಕುರಿ ವ್ಯಾಪಾರ, ದನಗಳು ವ್ಯಾಪಾರದವರೂ ಇದ್ದಾರೆ. ಗ್ರಾಮದಲ್ಲಿ ಹಾಲಿನ ಡೈರಿ ಇದ್ದು, ಡೈರಿಗೆ ಹಸು, ಎಮ್ಮೆಗಳಿಂದ ಕರೆದ ಹಾಲನ್ನು ಹಾಕುತ್ತಾರೆ. ಹೆಂಗಸರು ಹುಣಸೆ ಹಣ್ಣು ಬಿಡಿಸುವ, ಬೀಡಿ ಸುತ್ತುವ, ಹಾಗೂ ಊಟ ಎಲೆ ತಯಾರಿಸುವ ಉಪ ಕಸುಬು ಹೊಂದಿದ್ದಾರೆ. ೧೩೩ ಜನಸಂಖ್ಯೆ ಹೊಂದಿದ್ದು, ಸಣ್ಣ ಪುಟ್ಟ ಕಾಯಿಲೆಗಳಿಗೆ ಆರೋಗ್ಯ ಇಲಾಖೆಯಿಂದ ಚಿಕಿತ್ಸೆ ಪಡೆದರೆ ಹೆಚ್ಚಿನ ಚಿಕಿತ್ಸೆಗೆ ಸಿರಾ ನಗರಕ್ಕೆ ಹೋಗುವುದು ವಾಡಿಕೆಯಾಗಿದೆ.

## ಗಿಡಗನಹಳ್ಳಿ

ಗಿಡಗನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಆಂಧ್ರ ಪ್ರದೇಶದ ಮಡಕಸಿರಾ ತಾಲ್ಲೂಕಿನ ಗಡಿ ಗ್ರಾಮ ಬ್ಯಾಡಗೆರೆಯ ಮಗ್ಗಲು ಗ್ರಾಮ. ಸಿರಾದಿಂದ ಮದಲೂರು– ಅಗಳಿ ಮುಖ್ಯರಸ್ತೆಯಲ್ಲಿ ೧೩.೬ ಕಿ.ಮೀ. ದೂರದಲ್ಲಿದ್ದು ಅಗಳಿ ರಸ್ತೆಯಲ್ಲಿ ಎಡಭಾಗದಿಂದ ಉತ್ತರಕ್ಕೆ ಅರ್ಧ ಕಿ.ಮೀ. ದೂರದಲ್ಲಿದೆ. ಇದು ಮದಲೂರಿನ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೩೪೦.೦೩ ಹೆಕ್ಟೇರ್ ಆಗಿದೆ. ಮರಳು ಮಿಶ್ರಿತ ಕೆಂಪು, ಕೆಬ್ಬೆ ಮಣ್ಣನ್ನು ಹೊಂದಿರುವ ಗ್ರಾಮ. ಪೂರ್ವದಲ್ಲಿ ಈ ಭಾಗ ಸಂಪೂರ್ಣ ಕಾಡಿನಿಂದ ಕೂಡಿದ್ದು ಕಾಡನ್ನು ಗಿಡ ಎಂದೇ ಕರೆಯುತ್ತಿದ್ದರು. ಈ ಗಿಡದ ಕಾರಣದಿಂದಲೇ ಗಿಡದಹಳ್ಳಿ ನಂತರ ಸ್ಥಿತ್ಯಂತರಗೊಂಡು ಗಿಡಗನಹಳ್ಳಿಯಾಗಿದೆ ಎಂದು ಶಿಕ್ಷಕ ಶ್ರೀರಂಗಪ್ಪ, ಡಾ॥ ವಸಂತಕುಮಾರ್ ಅಭಿಪ್ರಾಯ ಪಡುತ್ತಾರೆ. ಗಿಡ ಅಥವಾ ಕಾಡು ಪ್ರದೇಶದಲ್ಲಿ ವಸತಿ ನಿರ್ಮಿಸಿಕೊಂಡ ಕಾರಣದಿಂದಾಗಿ ಗಿಡದಹಳ್ಳಿ ಎಂದು ಕರೆಯಲಾಗಿದೆ.

ಇದು ಕಾಡು ಪ್ರದೇಶವಾಗಿದ್ದು ಗಿಡುಗ ಜಾತಿಯ ಪಕ್ಷಿಗಳು ವ್ಯಾಪಕವಾಗಿ ಈ ಪರಿಸರದಲ್ಲಿ ನೆಲೆಸಿದ್ದ ಕಾರಣದಿಂದಲೂ ಗಿಡಗನಹಳ್ಳಿ ಎಂದು ಹೆಸರು ಬಂದಿದೆ ಎಂದು ಸಸ್ಯಶಾಸ್ತ್ರ ಪ್ರಾಧ್ಯಾಪಕ ಡಾ॥ಲಕ್ಷ್ಮಣ್ ವ್ಯಾಖ್ಯಾನಿಸುತ್ತಾರೆ. ಒಟ್ಟಾರೆ ಸಸ್ಯ, ಪಕ್ಷಿ ಮೂಲಗಳೆರಡೂ ಈ ಗ್ರಾಮದ ನಿಷ್ಪತ್ತಿಗೆ ಬಲವಾದ ಕಾರಣಗಳಾಗಿವೆ.

ಗಿಡಗನಹಳ್ಳಿ ಬಯಲು ಪ್ರದೇಶ, ರೈತಾಪಿ ಬದುಕು. ಮಾರಣ್ಣನ ಕಟ್ಟೆ, ಜೊತೆಗೆ ಹೊಸಕಟ್ಟೆ ಎರಡೂ ನೀರಿನ ಪ್ರಮುಖ ಸೆಲೆಗಳು, ಆದರೂ ತುಂಬುವುದು ದುರ್ಲಭ. ಕುರುಚಲು ಗಿಡ ಬಯಲು ಪ್ರದೇಶ ಈ ಪರಿಸರದಲ್ಲಿ ನರಿ, ಮೊಲ, ಹಂದಿ, ತೋಳ, ಜಿಂಕೆ, ಕಿರುಬ ಈ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕೃಷಿಗೆ ಹಳ್ಳಿಕಾರ್ ಜಾತಿಯ ಎತ್ತು ಹಾಗೂ ಹಸುಗಳನ್ನು ಹೈನುಗಾರಿಕೆಗೆ ಎಮ್ಮೆ, ಸೀಮೆಹಸು, ಕುರಿ, ಮೇಕೆ, ನಾಯಿಗಳನ್ನು ಸಾಕಿದ್ದಾರೆ. ಈ ಪರಿಸರದಲ್ಲಿ ಗರುಡ, ಗಿಳಿ, ಕೋಗಿಲೆ, ಕೊಕ್ಕರೆ, ಕಾಗೆ, ಗೂಬೆ, ಹದ್ದು, ಗಿಡುಗ, ಬೆಳವ, ಬಾವಲಿ ಈ ಪಕ್ಷಿಗಳನ್ನು ಕಾಣಬಹುದಾಗಿದೆ. ಕೋಳಿ ಸಾಕುಪಕ್ಷಿ.

ಬಿಸಿಲು, ಬರ ಎರಡೂ ಅತಿಯಾಗಿರುವ ಗ್ರಾಮ ಇಲ್ಲಿ ವಾಡಿಕೆ ಮಳೆ ಸರಾಸರಿಗಿಂತ ಕಡಿಮೆ. ಕಳೆದ ೩ ವರ್ಷಗಳಲ್ಲಿ ೪೩೪ ಮಿಮೀ ಮಳೆ ಆಗಿದೆ. ಬಿಸಿಲು ೩೯–೪೦ ಡಿಗ್ರಿ, ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಕೃಷಿ ಅವಲಂಬಿತ ಕುಟುಂಬಗಳು ಮಳೆ ನೀರಿನ ಜೊತೆಗೆ ೧೦೪ ಕೊಳವೆ ಬಾವಿಗಳ ಮೂಲಕ ನೀರನ್ನು ಪೂರೈಸಿಕೊಳ್ಳುತ್ತಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ೬ ಕಿರು ಟ್ಯಾಂಕ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಕುಂಚಿಟಿಗ, ಆದಿಕರ್ನಾಟಕ ಈ ಗ್ರಾಮದ ಸಾಮಾಜಿಕ ರಚನೆಯಲ್ಲಿ ದೊಡ್ಡ ಸಮುದಾಯವಾಗಿದ್ದು ನಾಯಕರು, ಆದಿದ್ರಾವಿಡ, ಮಡಿವಾಳ ಜನಾಂಗಗಳು ಕಿರು ಸಮುದಾಯಗಳಾಗಿವೆ. ಕನ್ನಡ ಗ್ರಾಮದ ಮಾತೃಭಾಷೆಯಾಗಿದೆ.

೨೦೪ ವಿವಿಧ ಪ್ರಕಾರಗಳ ಮನೆಗಳಿದ್ದು ಅವುಗಳು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದವುಗಳಾಗಿವೆ. ಇಲ್ಲಿ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಸೌಲಭ್ಯಪಡೆದವರು ೭೨ ಜನರಿದ್ದಾರೆ. ೮೮೪ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ೭೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಅಮುಖ್ಯ ಹಾಗೂ ವಿಶೇಷ ಸಾಂದರ್ಭಿಕ ಭೋಜನಗಳು.

ಸಾಂಪ್ರದಾಯಿಕ ವಾಹನವಾಗಿ ಎತ್ತಿನ ಬಂಡಿಯ ಜೊತೆಗೆ ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ.

ಶೇಂಗಾ ಗ್ರಾಮದ ಮುಖ್ಯ ಆಹಾರವಾಗಿದ್ದು ರಾಗಿ, ನವಣೆ, ಭತ್ತ, ಜೋಳ, ಅಲಸಂದೆ, ತೊಗರಿ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಗಳಾಗಿ ತೆಂಗು, ಅಡಿಕೆ, ರೇಷ್ಮೆ, ಸೇವಂತಿಗೆ ಹೂವಿನ ಬೆಳೆಗಳಿವೆ. ಒಂದು ಹಾಲಿನ ಸಹಕಾರಿ ಕೇಂದ್ರವಿದ್ದು ೨೫೦ ಲೀ. ಸರಾಸರಿ ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೆಹಣ್ಣು, ಹೊಂಗೆಬೀಜ ಪ್ರಮುಖ ವಾಣಿಜ್ಯ ಬೆಳೆಗಳು.

ವಿವಿಧ ಹುದ್ದೆಗಳಾದ ಕಾಲೇಜು ಶಿಕ್ಷಣ, ಪ್ರಾಥಮಿಕ ಶಾಲಾ ಶಿಕ್ಷಕ, ವೈದ್ಯ, ಇಂಜಿನಿಯರ್, ಕಂದಾಯ, ಸಾರಿಗೆ, ರಕ್ಷಣಾ ಇಲಾಖೆಗೆ ಸೇರಿದ ೫೦ ಜನ ಸರ್ಕಾರಿ ನೌಕರರಿದ್ದಾರೆ. ವೈದ್ಯರಾದ ಡಾ॥ ದಯಾನಂದ್, ಡಾ॥ ಶ್ರೀರಂಗಪ್ಪ, ಪ್ರಾಧ್ಯಾಪಕರಾದ ಡಾ॥ ಲಕ್ಷ್ಮಣ್, ಡಾ॥ ವಸಂತ್‌ಕುಮಾರ್ ಈ ಗ್ರಾಮದ ವಿಶೇಷ.

ಡಾ॥ ವಸಂತ್ ಕುಮಾರ್ ಎರಡೂ ಕಣ್ಣಿಲ್ಲದ ಹುಟ್ಟು ಕುರುಡರಾಗಿದ್ದರೂ ಇತಿಹಾಸ ಎಂ.ಎ., ಪಿ.ಎಚ್‌ಡಿ, ಎಂ.ಫಿಲ್ ಪದವಿಯನ್ನು ಉತ್ತಮ ಅಂಕಗಳೊಂದಿಗೆ ಪಡೆದಿದ್ದು ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಾ ಚರಿತ್ರೆಗೆ ಸಂಬಂಧಿಸಿದ ಸಂಪನ್ಮೂಲ ವ್ಯಕ್ತಿಯಾಗಿರುವುದು ವಿಶೇಷವಾಗಿದೆ.

ಗ್ರಾಮದ ಮಹಿಳೆಯರು ಗೃಹ ಕಸುಬಾಗಿ ಬೀಡಿ ಕಟ್ಟುವುದು, ಹೂ ಕಟ್ಟುವುದು, ಹೊಂಗೆಬೀಜ-ಹುಣಸೇಹಣ್ಣು ಬಿಡಿಸುವ ಕೆಲಸ ನಿರ್ವಹಿಸುತ್ತಾ ಆಧುನಿಕ ಸಬಲೀಕರಣದಲ್ಲಿ ತೊಡಗಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಈ ಗ್ರಾಮದಿಂದ ೩ ಜನ ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ೪ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳಾ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ, ಸಿದ್ಧಾರ್ಥ ಪ್ರೌಢಶಾಲೆಗಳಿದ್ದು ಶಾಲೆಗಳಲ್ಲಿ ಕ್ಷೀರಭಾಗ್ಯ, ಶೌಚಾಲಯ, ಬಿಸಿ ಊಟ, ಪುಸ್ತಕ, ಗ್ರಂಥಾಲಯದ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೫೮.೭ ರಷ್ಟಿದೆ.

ಗ್ರಾಮದ ಪ್ರಾಚೀನ ಐತಿಹಾಸಿಕತೆಯ ಕುರುಹಾಗಿ ೨ ವೀರಗಲ್ಲುಗಳಿದ್ದು ಇವು ಗ್ರಾಮದ ರಂಗನಾಥ ದೇವಾಲಯದ ಬಳಿ ಇವೆ. ಇವು ವಿಜಯನಗರ ಕಾಲಕ್ಕೆ ಸಂಬಂದಿಸಿದ ಕಲ್ಲುಗಳಾಗಿದ್ದು ಒಂದು ವೀರಗಲ್ಲು ಹಾಗೂ ಮಾಸ್ತಿಕಲ್ಲಾಗಿದೆ.

ರಂಗನಾಥಸ್ವಾಮಿ ದೇವಾಲಯ, ಯರಬಳ್ಳಿ ಮಾರಮ್ಮ, ಮುತ್ತುರಾಯ, ಶನಿದೇವರು, ಲಕ್ಷ್ಮೀದೇವರ ಗುಡಿಗಳಿವೆ. ಗಿಡಗನಹಳ್ಳಿ ರಂಗಧಾಮ ಎಂಬ ಹೆಸರಲ್ಲಿ ಏಪ್ರಿಲ್ ತಿಂಗಳಲ್ಲಿ ಐದು ದಿನಗಳ ಕಾಲ ಬೃಹತ್ ಜಾತ್ರಾ ಮಹೋತ್ಸವ, ರಥೋತ್ಸವ, ದೇವರ ವಿವಿಧ ಉತ್ಸವ, ಮೆರವಣಿಗೆ ಇರುತ್ತದೆ. ಮುತ್ತುರಾಯನಿಗೆ ಪ್ರಾಣಿಬಲಿ, ಮಾರಮ್ಮನಿಗೆ ಆರತಿ, ಬಾನ ಹಾಗೂ ಬ್ಯಾಟೆಯ ಹರಕೆ ಸಂಪ್ರದಾಯವಿದೆ.

ಪಾರಂಪರಿಕ ವೈದ್ಯರಾಗಿ ಸಣ್ಣತಿಮ್ಮಣ್ಣ, ಅಶ್ವತ್ಥಪ್ಪ, ರಂಗಯ್ಯ ಪಶು ಹಾಗೂ ವಿಷಜಂತು ಕಡಿತಕ್ಕೆ ಔಷಧಿ ನೀಡುವಲ್ಲಿ ಹೆಸರು ಮಾಡಿದ್ದಾರೆ.

ಯುಗಾದಿ, ದೀಪಾವಳಿ, ದಸರಾ, ಶ್ರೀರಾಮನವಮಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ಗಿಡಗನಹಳ್ಳಿ ಕೆಂಪರಾಜು ಉತ್ತಮ ಜನಪದ ಸಂಗೀತ ಕಲಾವಿದರು, ಶಿಕ್ಷಕರಾಗಿದ್ದು ಸ್ಥಳೀಯವಾಗಿ ಹೆಸರಾಗಿದ್ದಾರೆ. ನರಸಿಂಹಯ್ಯ, ಮೂಡ್ಲಯ್ಯ ತಮಟೆ ಕಲಾವಿದರಾಗಿದ್ದಾರೆ. ಚಲನಚಿತ್ರ ಕಲಾವಿದೆ ಸುಮನ್ ರಂಗನಾಥ್ ಇದೇ ಗ್ರಾಮದವರೆಂಬುದು ವಿಶೇಷ.

## ಗಂಗನಹಳ್ಳಿ

ಗಂಗನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿ ಪೂರ್ವಕ್ಕಿದೆ. ಸಿರಾ-ತುಮಕೂರು ರ್‍ಾ.ಯ ಹೆದ್ದಾರಿಯಲ್ಲಿ ಚಿಕ್ಕನಹಳ್ಳಿಯಿಂದ ಎಡಕ್ಕೆ ೩ ಕಿ.ಮೀ.

ದೂರದಲ್ಲಿದೆ. ಇದು ಚಿಕ್ಕಗೂಳ ಗ್ರಾಮದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೬೦ ಹೆಕ್ಟೇರ್ ಆಗಿದೆ.

ಗಂಗಣ್ಣ ಅಥವಾ ಅಯ್ಯ ಹೆಸರಿನ ವ್ಯಕ್ತಿವಾಚಕ ಪದವಾಗಿ ಗಂಗಯ್ಯನ ಹೆಸರಿನಲ್ಲಿ ಗ್ರಾಮ ರಚನೆಯಾಗಿದೆ. ಬಯಲುನಾಡು ಬಿಸಿಲು, ಬರನಾಡಿನ ಪ್ರದೇಶ. ಕೆಂಪು–ಬಿಳಿ–ಕಪ್ಪು ಮಿಶ್ರಿತ ಮಣ್ಣು. ಶೇಂಗಾ ಬೆಳೆಗೆ ಉತ್ಕೃಷ್ಟವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಉಡ, ಬಾರ್‌ಬೆಕ್ಕು, ಹಂದಿ ಕಂಡುಬಂದರೆ ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗಾಗಿ ಹಸು, ಎಮ್ಮೆ, ಹಳ್ಳಿಕಾರ್ ತಳಿ ಎತ್ತು, ಸೀಮೆ ಹಾಗೂ ನಾಟಿ ಹಸು, ಕುರಿ, ಮೇಕೆ ಸಾಕುಪ್ರಾಣಿಗಳು. ಪಕ್ಷಿಗಳಾದ ಗಿಳಿ, ಗೊರವಂಕ, ಗುಬ್ಬಚ್ಚಿ, ಗೂಬೆ, ಕೋಗಿಲೆ, ಕೊಕ್ಕರೆ, ಗಿಡುಗ, ಮರಕುಟಿಕ, ಹದ್ದು, ಗರುಡ ಕಂಡುಬರುತ್ತವೆ. ಮಾಂಸ ಹಾಗೂ ಮೊಟ್ಟೆಗಾಗಿ ನಾಟಿಕೋಳಿ, ಗಿರಿರಾಜ ಕೋಳಿ ಸಾಕುತ್ತಾರೆ.

ಈ ಪರಿಸರದ ವಾಡಿಕೆ ಮಳೆ ೪೭೬.೬ ರಷ್ಟಿದ್ದು ಬಿಸಿಲು ೩೮ ಡಿಗ್ರಿ ಚಳಿ ೧೨ ಡಿಗ್ರಿ ಆಗಿರುತ್ತದೆ. ನಿಸರ್ಗ ನೀರಿನ ಆಶ್ರಯ ಇರುವುದಿಲ್ಲ. ಪಕ್ಕದಲ್ಲಿ ಹೇಮಾವತಿ ಚಾನಲ್ ಹರಿದು ಸಿರಾ ಕೆರೆಗೆ ಹೋದರೂ ಅದರಿಂದ ಗ್ರಾಮದ ರೈತರಿಗೆ ಅನುಕೂಲವಿಲ್ಲ. ಹಾಗಾಗಿ ಅರೆ ಕೃಷಿಗಾಗಿ ಈ ಪರಿಸರದಲ್ಲಿ ೩೦ ಕೊಳವೆಬಾವಿಗಳನ್ನು ತೆಗೆಸಲಾಗಿದ್ದು ಅದರಿಂದ ತೋಟಗಾರಿಕೆ ನಡೆಸುತ್ತಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಒದಗಿಸಲಾಗುತ್ತಿದೆ. ೬ ಸಿಸ್ಟರ್ನ್‌ಗಳಿದ್ದು ೨ ಕೈಪಂಪಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿ ದ್ರಾವಿಡ, ಮಡಿವಾಳ ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮನೆಯ ಭಾಷೆಯಾಗಿದೆ. ವಿವಿಧ ಪ್ರಕಾರಗಳ ೧೦೪ ಮನೆಗಳಿದ್ದು ಅವು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದವುಗಳಾಗಿವೆ. ಇವುಗಳು ಸರ್ಕಾರದ ವಸತಿ ಯೋಜನೆಯಾದ ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ೧೬ ಫಲಾನುಭವಿಗಳಿದ್ದಾರೆ.

೪೯೮ ಜನಸಂಖ್ಯೆ ಹೊಂದಿರುವ ಇಲ್ಲಿ ೪೦ ಮನೆಗಳಲ್ಲಿ ಶೌಚಾಲಯ ಹೊಂದಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಬೋಜನಗಳಾಗಿವೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನ ಎತ್ತಿನ ಬಂಡಿಯ ಜೊತೆಗೆ ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಕೂರ್ಲೆ, ಹಾರಕ, ಹುರುಳಿ, ತೊಗರಿ ಆಹಾರ ಬೆಳೆಗಳು. ತೆಂಗು, ರೇಷ್ಮೆ, ತರಕಾರಿ, ಸೇವಂತಿಗೆ ಹೂ ತೋಟಗಾರಿಕಾ ಬೆಳೆಗಳಾಗಿವೆ. ಒಂದು ಮಿನಿ ಹಾಲಿನ ಡೈರಿ ಇದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತದೆ. ಶೇಂಗಾ ಮುಖ್ಯ ಸರಕಾಗಿದ್ದು ಹೊಂಗೆಬೀಜ, ಹುಣಸೇಹಣ್ಣು, ರೇಷ್ಮೆ ಸರಕಾಗಿವೆ. ಸಾರಿಗೆ, ಶಿಕ್ಷಣ ಇಲಾಖೆಯ ೨ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಬೀಡಿ ಸುತ್ತುವುದು, ಗರಿಕಡ್ಡಿ ಹೆಣೆಯುವುದು, ಹೂ ಕಟ್ಟುವುದು ಮಹಿಳೆಯರ ವಿಶೇಷ ಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ರತ್ನಸಂದ್ರ ತಾಲ್ಲೂಕು ಪಂಚಾಯ್ತಿ, ಗ್ರಾಮ ಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಗ್ರಾಮದಲ್ಲಿ ಮೊಬೈಲ್, ಅಂಚೆ ಸಂಪರ್ಕ ಸೌಲಭ್ಯಗಳಿವೆ.

ಶೈಕ್ಷಣಿಕರಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಶಾಲೆಯಲ್ಲಿ ೨೫ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ ಒದಗಿಸಲಾಗಿದೆ. ಗ್ರಾಮದ ಸಾಕ್ಷರತೆ ೫೮.೮% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು ೧ ಹೋಟೆಲ್, ೪ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಮುತ್ತುರಾಯನ ಪೌಳಿಯಿದ್ದು ಆಷಾಢ ಮಾಸದಲ್ಲಿ ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ, ಗೌರಿ–ಗಣೇಶನ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

## ಗಂಗನಹಳ್ಳಿ ಗೊಲ್ಲರಹಟ್ಟಿ

ಗಂಗನಹಳ್ಳಿಗೆ ಹೊಂದಿಕೊಂಡಿರುವ ಬುಡಕಟ್ಟು ಗ್ರಾಮವಾದ ಕಾಡುಗೊಲ್ಲರ ಗ್ರಾಮವಾಗಿರುವ ಕಾರಣ ಗಂಗನಹಳ್ಳಿ ಗೊಲ್ಲರಹಟ್ಟಿ ಎಂದು ಕರೆಯಲಾಗಿದೆ. ಇದು ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿ–೪ ರಲ್ಲಿ ಚಿಕ್ಕನಹಳ್ಳಿಯಿಂದ ಎಡಭಾಗದಲ್ಲಿ ೩ ಕಿಮೀ ದೂರದಲ್ಲಿ ಚಿಕ್ಕಗೂಳ–ರತ್ನಸಂದ್ರ ರಸ್ತೆಯಲ್ಲಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ೧೪ ಕಿಮೀ ದೂರದಲ್ಲಿದೆ. ಇದರ ಭೌಗೋಳಿಕ ವಿಸ್ತೀರ್ಣ ೩೦.೦೮ ಹೆಕ್ಟೇರ್ ಆಗಿದ್ದು ಬಯಲು

ಪ್ರದೇಶವಾಗಿದೆ. ಕೆಂಪು, ಬಿಳಿ, ಮರಳು ಮಿಶ್ರಿತ ಮಣ್ಣಿನಿಂದ ಕೂಡಿದ್ದು ಶೇಂಗಾ ಬೆಳೆಗೆ ಉತ್ಕೃಷ್ಟವಾಗಿದೆ.

ಈ ಪರಿಸರದಲ್ಲಿ ನರಿ, ತೋಳ, ಮೊಲ, ಜಿಂಕೆ, ಕಾಡುಹಂದಿ, ಉಡ, ಬಾರುಬೆಕ್ಕು ಕಂಡುಬರುತ್ತವೆ. ಗ್ರಾಮದಲ್ಲಿ ಕುರಿ, ಮೇಕೆ, ನಾಯಿ, ಹಸು, ಎತ್ತು, ಎಮ್ಮೆಗಳನ್ನು ಸಾಕುಪ್ರಾಣಿಗಳಾಗಿ ಸಾಕಲಾಗುತ್ತಿದೆ. ಕೋಳಿ ಸಾಕು ಪಕ್ಷಿಯಾಗಿದೆ. ವಾರ್ಷಿಕ ಸರಾಸರಿ ೪೭೧.೦೬ ಮಿಮೀ ಮಳೆ ಪ್ರಮಾಣ ಹೊಂದಿದ್ದು ಬಿಸಿಲು ೩೮ ಡಿಗ್ರಿ, ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಆಗಿದೆ. ನಿಸರ್ಗದತ್ತ ಮಳೆಯ ನೀರು ಸಾಲುವುದಿಲ್ಲ. ಬೇರಾವುದೇ ನೀರಿನ ಸೌಲಭ್ಯವಿಲ್ಲ. ಹಾಗಾಗಿ ಉಪನೀರಾವರಿಯಾಗಿ ೩೦ ಕೊಳವೆ ಬಾವಿಗಳನ್ನು ತೆಗೆಸಲಾಗಿದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ಗ್ರಾಮದಲ್ಲಿ ೨ ಸಿಸ್ಟರ್ನ್‌ಗಳಿದ್ದು ಒಂದು ಕೈಪಂಪು ಇದೆ.

ಕಾಡುಗೊಲ್ಲರು ಮಾತ್ರ ವಾಸಿಸುವ ಇಲ್ಲಿ ವಿವಿಧ ಪ್ರಕಾರದ ೧೮ ಮನೆಗಳಿವೆ. ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದವುಗಳಾಗಿವೆ. ಒಟ್ಟು ೭೨ ಜನಸಂಖ್ಯೆ ಹೊಂದಿರುವ ಇಲ್ಲಿನ ಮನೆಗಳಲ್ಲಿ ೮ ಮನೆಗಳಲ್ಲಿ ಶೌಚಾಲಯದ ಸೌಲಭ್ಯ ಹೊಂದಿವೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು ವಿಶೇಷವಾಗಿ ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಭೋಜನವಿರುತ್ತದೆ. ಗ್ರಾಮದಲ್ಲಿ ಟ್ರ್ಯಕ್ಟರ್, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಕೂರ್ಲೆ, ಹಾರಕ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಗಳಾಗಿ ಸೂರ್ಯಕಾಂತಿ, ಸೇವಂತಿಗೆ, ತೆಂಗು ಬೆಳೆಯುತ್ತಾರೆ. ಶೇಂಗಾ ಮತ್ತು ಹುಣಸೇಹಣ್ಣು ಹೊಂಗೆ ಬೀಜ ಸಂಸ್ಕರಣೆ ಮುಖ್ಯ ವ್ಯಾಪಾರಿ ಸರಕಾಗಿದೆ. ಕುರಿ–ಮೇಕೆಗಳ ವ್ಯಾಪಾರವೂ ಇದೆ. ಹೆಂಗಸರು ಹುಣಸೆಹಣ್ಣು ಬಿಡಿಸುವ, ಹೂ ಕಟ್ಟುವ ಹಾಗೂ ಹೊಂಗೆ ಬೀಜದ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ರತ್ನಸಂದ್ರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಸಿರಾ, ತುಮಕೂರು, ಚಿಕ್ಕನಹಳ್ಳಿ ರಸ್ತೆ ಸಂಪರ್ಕವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶೈಕ್ಷಣಿಕವಾಗಿ ಪಕ್ಕದ ಗಂಗನಹಳ್ಳಿ, ಚಿಕ್ಕನಹಳ್ಳಿಗೆ ಮಕ್ಕಳು ಶಾಲೆಗೆ ಹೋಗುತ್ತಿದ್ದು ಗ್ರಾಮದ ಸಾಕ್ಷರತೆ ೫೮.೮ ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ.

ಗ್ರಾಮದಲ್ಲಿ ಆಕೃತಿ ರೂಪದ ಯಾವುದೇ ದೇವಾಲಯ ಇರುವುದಿಲ್ಲ. ಎದುರೆತ್ತಿ ಮಾರಮ್ಮನಿಗೆ ಆರತಿ, ಬ್ಯಾಚೆ, ಬಾನ, ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಶಿವರಾತ್ರಿ, ಗೌರಿ–ಗಣೇಶನ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಯುಗಾದಿ ಮರುದಿನ ಹಾಲೇನಹಳ್ಳಿ ಜುಂಜಪ್ಪನ ಜಾತ್ರೆಗೆ ಕುಗ್ರಾಮದಿಂದ ಹಾಲುಬಾನ ಹೋಗುತ್ತದೆ. ಇದೊಂದು ವಿಶೇಷ ಆಚರಣೆಯಾಗಿದೆ.

## ಗೌಡಗೆರೆ

ಗೌಡಗೆರೆ ಸಿರಾ ತಾಲ್ಲೂಕಿನ ಹೋಬಳಿ ಕೇಂದ್ರಗಳಲ್ಲಿ ಒಂದಾಗಿದ್ದು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೨ ಕಿಮೀ ದೂರದಲ್ಲಿದೆ. ಸಿರಾ–ಚಂಗಾವರ ಮುಖ್ಯ ರಸ್ತೆಯಲ್ಲಿರುವ ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೯೬೬.೯೨ ಹೆಕ್ಟೇರ್ ಪೂರ್ವ–ಪಶ್ಚಿಮಕ್ಕೆ ಹೇರೂರು, ಉತ್ತರ–ದಕ್ಷಿಣಕ್ಕೆ ದಂಡೀಕೆರೆ ಈ ಕೇಂದ್ರದ ಗಡಿ ಪ್ರದೇಶಗಳಾಗಿದ್ದು ನಾದೂರು, ಕಾಮಗೊಂಡನಹಳ್ಳಿ, ಹೆಂದೊರೆ, ಬೇವಿನಹಳ್ಳಿ, ಚಂಗಾವರ, ಹುಣಸೇಹಳ್ಳಿ, ಹೊಸೂರು, ಮೊಸರಕುಂಟೆ, ತಾವರೆಕೆರೆ, ಡ್ಯಾಗೇರಹಳ್ಳಿಸ ಹೇರೂರು, ಬಂದಕುಂಟೆ ಹಾಗೂ ಗೌಡಗೆರೆ ಈ ಕಂದಾಯ ವಲಯಗಳನ್ನು ಹೊಂದಿದೆ.

ಗ್ರಾಮ ಪಂಚಾಯ್ತಿಗಳಾಗಿ ಬೇವಿನಹಳ್ಳಿ, ಹಂದಿಕುಂಟೆ, ನಾದೂರು, ಹೆಂದೊರೆ, ಹುಣಸೇಹಳ್ಳಿ, ಹೊಸೂರು, ತಾವರೇಕೆರೆ ಹಾಗೂ ಗೌಡಗೆರೆ ಈ ಎಂಟು ಗ್ರಾಮ ಪಂಚಾಯ್ತಿಗಳನ್ನು ಒಳಗೊಂಡು ಹೋಬಳಿ ಕೇಂದ್ರವಾಗಿದೆ. ಕಂದಾಯ ಗ್ರಾಮಗಳು ಮಜರೆ ಗ್ರಾಮಗಳು ಸೇರಿ ಒಟ್ಟು ೧೫೩ ಹಳ್ಳಿಗಳ ಒಟ್ಟು ವ್ಯಾಪ್ತಿಯನ್ನು ಗೌಡಗೆರೆ ಹೋಬಳಿ ಹೊಂದಿದೆ.

ಹಳ್ಳಿಕಾರ್ ಗೌಡ ಜನಾಂಗದವರು ಅಧಿಕವಾಗಿ ನೆಲೆಸಿದ ಈ ಗ್ರಾಮಕ್ಕೆ ಹೊಂದಿಕೊಂಡಂತೆ ಕೆರೆಯೊಂದು ಇರುವುದರ ಹಿನ್ನೆಲೆಯಲ್ಲಿ ಈ ಗ್ರಾಮಕ್ಕೆ ಗೌಡನಕೆರೆ > ಗೌಡಗೆರೆ ಎಂದು ಹೆಸರು ಬಂದಿದೆ ಎಂದು ಗ್ರಾಮದ ಹಿರೀಕ ಹಾಗೂ ಶಿಕ್ಷಣ ತಜ್ಞ ಹೆಚ್.ಹನುಮಂತಪ್ಪ ಅಭಿಪ್ರಾಯಪಡುತ್ತಾರೆ. ಈ ಗ್ರಾಮದ ಊರ ಮುಂಭಾಗದಲ್ಲಿ ಪುರಾತನ ಕಾಲದ ಆಂಜನೇಯ ದೇವಾಲಯವಿದ್ದು ವ್ಯಾಪಕ ಭಕ್ತರನ್ನು ಹೊಂದಿದೆ. ವಿಜಯನಗರ ಅರಸರ ಕಾಲದಲ್ಲಿ ರಚನೆಯಾಗಿರುವ ಲಕ್ಷಣ ತೋರುತ್ತದೆ. ಲಕ್ಷ್ಮೀನರಸಿಂಹ ಸ್ವಾಮಿ, ಕರಿಯಮ್ಮ ದೇವಾಲಯಗಳು ಈ ಗ್ರಾಮದಲ್ಲಿದೆ.

ಹಳ್ಳಿಕಾರರು, ಕುರುಬರು ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಕೊರಚ, ಬೇಡರು, ವಿಶ್ವಕರ್ಮ, ಶ್ರೀವೈಷ್ಣವರು, ಮಡಿವಾಳ, ಲಂಬಾಣಿ ಸಣ್ಣ ಸಮುದಾಯವಾಗಿದೆ. ಹಾಗೂ ಈ ಗ್ರಾಮಕ್ಕೆ ಹೊಂದಿಕೊಂಡಂತೆ ಪ್ರತ್ಯೇಕ ಬಡಾವಣೆಯಲ್ಲಿ ಕಾಡುಗೊಲ್ಲರ ಕುಟುಂಬಗಳಿವೆ. ೨೧೦ ಮನೆಗಳಿವೆ. ಇಲ್ಲಿ ೯೬೭ ಜನಸಂಖ್ಯೆ ಇದೆ.

ಕಾಂಕ್ರೀಟ್, ಹಾಸುಕಲ್ಲು, ಮಣ್ಣಿನ, ಹೆಂಚಿನ ಹಾಗೂ ಶೀಟಿನ ಮನೆಗಳಿರುವ ಇಲ್ಲಿ ೨೩ ಜನ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿದ್ದಾರೆ. ಭಾಗ್ಯಜ್ಯೋತಿಯ ಫಲಾನುಭವಿಗಳಿದ್ದಾರೆ. ೧೪೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ವಾಡಿಕೆ ಮಳೆ ೪೬೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ರಾಗಿಮುದ್ದೆ ಮುಖ್ಯ ಆಹಾರ. ಚಿತ್ರಾನ್ನ, ರೊಟ್ಟಿ, ದೋಸೆ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಬಂಡಿಗಳ ಜೊತೆಗೆ ಟ್ರ್ಯಾಕ್ಟರ್, ಆಟೋ, ದ್ವಿಚಕ್ರ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

ಕೆಂಪು-ಬಿಳಿ ಮರಳು ಮಿಶ್ರಿತ ಇಲ್ಲಿನ ಭೂಮಿಯಲ್ಲಿ ಮಳೆ ಪ್ರಮಾಣ ಕಡಿಮೆ. ಶೇಂಗಾ, ರಾಗಿ, ಹತ್ತಿ, ಮೆಕ್ಕೆ ಜೋಳ, ಭತ್ತ, ಸೂರ್ಯಕಾಂತಿ, ಸೇವಂತಿಗೆ ಹೂ, ತರಕಾರಿ, ಹಣುಸೆಹಣ್ಣು, ಹರಳು ಆರ್ಥಿಕ ಬೆಳೆಗಳಾಗಿದ್ದು ತೊಗರಿ, ಹುರುಳಿ, ಹೆಸರು, ಅಲಸಂದೆ ಬೆಳೆಗಳನ್ನು ಬೆಳೆಯುತ್ತಾರೆ.

ಪ್ರಾಣಿಗಳಾದ ಎತ್ತು, ಹಸು ಹಾಗೂ ಕುರಿಯ ವ್ಯಾಪಾರವೂ ಇದೆ. ಸಾರಿಗೆ, ಕೆಇಬಿ, ಕಂದಾಯ, ಅಂಚೆ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸೇರಿದ ೧೦ ಸರ್ಕಾರಿ ನೌಕರರು ಈ ಗ್ರಾಮದಲ್ಲಿ ಇದ್ದಾರೆ. ಒಂದು ಕೋಳಿ ಪೌಲ್ಟ್ರಿ, ಇಟ್ಟಿಗೆ ಫ್ಯಾಕ್ಟರಿ, ಹಿಟ್ಟಿನ ಗಿರಣಿ, ಬೀಡಿ ಸುತ್ತುವುದು ಗ್ರಾಮದ ಉಪಕೈಗಾರಿಕೆಗಳು. ಒಂದು ಹಾಲಿನ ಡೈರಿಯಿದ್ದು ಸರಾಸರಿ ದಿನಕ್ಕೆ ೫೦೦ ಲೀ. ಹಾಲು ಸಂಗ್ರಹವಾಗುತ್ತದೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿಗೆ ಸೇರಿದ್ದು ಗೌಡಗೆರೆ ತಾಲ್ಲೂಕು ಪಂಚಾಯ್ತಿಯ ಕೇಂದ್ರವೂ ಆಗಿದೆ. ಗ್ರಾಮದಲ್ಲಿ ಸ್ಥಿರ ಹಾಗೂ ೫೦೦ ಕ್ಕೂ ಹೆಚ್ಚು ಮೊಬೈಲ್ ದೂರವಾಣಿಗಳ ಬಳಕೆಯಿದೆ.

ಒಂದು ಅಂಗನವಾಡಿ ಕೇಂದ್ರವೂ ಸೇರಿದಂತೆ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಒಟ್ಟು ೭ ಜನ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೬ ಅಂಗಡಿಗಳಿದ್ದು ೨ ಟೀ ಅಂಗಡಿಗಳಿವೆ.

ಐತಿಹಾಸಿಕತೆ ಸಾರುವ ನಾಲ್ಕು ವೀರಗಲ್ಲುಗಳು ಈ ಗ್ರಾಮದಲ್ಲಿ ಸಂಗ್ರಹಗೊಂಡಿದ್ದು ಇವು ವಿಜಯನಗರ ಕಾಲದವು ಎಂದು ಹೇಳಲಾಗುತ್ತದೆ. ವೀರನ ವಿವಿಧ ಆಭರಣ, ಆಯುಧಗಳ ಚಿತ್ರಗಳಿವೆ. ಹಸಿರು ಮಿಶ್ರಿತ ಒರಟು ಕಲ್ಲಿನಲ್ಲಿ ಚಿತ್ರಗಳನ್ನು ಬಿಡಿಸಲಾಗಿದೆ. ಗ್ರಾಮದೇವತೆ ಕರಿಯಮ್ಮನ ಜಾತ್ರೆ, ಬಾನ, ಬಲಿ, ಆರತಿ, ಉತ್ಸವ ಏರ್ಪಡುತ್ತದೆ. ಅರಳಿ ವೃಕ್ಷದ ಪೂಜೆ, ಕರಿಗಲ್ಲುಗಳ ಆರಾಧನೆಯೂ ಇಲ್ಲಿದೆ. ಯುಗಾದಿ, ರಾಮನವಮಿ, ಶಿವರಾತ್ರಿ, ಮಹಾನವಮಿ ಈ ಗ್ರಾಮದ ಮುಖ್ಯ ಹಬ್ಬಗಳು.

ಪ್ರತಿವರ್ಷ ಆಂಜನೇಯ ದೇವರ ಉತ್ಸವ ಬೃಹತ್ ಪ್ರಮಾಣದಲ್ಲಿ ನಡೆಯುತ್ತದೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಅಂಚೆ ಕಛೇರಿ, ಉಪಆರೋಗ್ಯ ಕೇಂದ್ರ, ಹಾಲು ಉತ್ಪಾದಕರ ಸಂಘ, ಗ್ರಾಮ ಪಂಚಾಯ್ತಿ ಕಾರ್ಯಾಲಯ, ಸರ್ಕಾರಿ ಕಛೇರಿಗಳಿವೆ. ಪೊಲೀಸ್ ಇಲಾಖೆ ಅಧಿಕಾರಿ ನಾಗರಾಜ್, ಬ್ಯಾಂಕ್ ಅಧಿಕಾರಿ ಸದಾನಂದಯ್ಯ, ಮುಖ್ಯ ಶಿಕ್ಷಕ ಹನುಮಂತಯ್ಯ ತಾರಾನಾಥ್ ಸೇರಿದಂತೆ ಹತ್ತು ಜನ ನಿವೃತ್ತ ನೌಕರರಿದ್ದಾರೆ.

ಒಂದು ನೂರಕ್ಕೂ ಹೆಚ್ಚು ಪದವೀಧರರಿದ್ದಾರೆ. ಗ್ರಾಮಾಭಿವೃದ್ಧಿಗಾಗಿ ಯಂಗ್ ಚಾಲೆಂಜರ್ಸ್ ಯುವಕ ಸಂಘವಿದ್ದು ಗ್ರಾಮದ ಸಾಂಸ್ಕೃತಿಕ, ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿವೆ. ಗ್ರಾಮದ ಸನಿಹ ಉಪಲಬ್ಧ ವೀರಗಲ್ಲುಗಳನ್ನು ಸಂಗ್ರಹಿಸಿ ಊರ ಮಧ್ಯೆ ಸುರಕ್ಷಿತವಾಗಿರಿಸಿದ್ದಾರೆ. ಪ್ರತಿವರ್ಷ ಕ್ರೀಡಾ, ಸಾಂಸ್ಕೃತಿಕ ಚಟುವಟಿಕೆ ನಡೆಸುತ್ತಾ ಸಮುದಾಯ ಸೌಹಾರ್ದತೆಗಾಗಿ ಈ ಸಂಘ ಶ್ರಮಿಸುತ್ತಿದೆ.

## ಗೋಣಿಹಳ್ಳಿ

ಗೋಣಿಹಳ್ಳಿ ಸಿರಾ ತಾಲ್ಲೂಕು ಉತ್ತರ-ಪೂರ್ವದ, ಕರ್ನಾಟಕ-ಆಂಧ್ರದ ಗಡಿಗ್ರಾಮ. ಸಿರಾ-ಮದಲೂರು,

ಬರಗೂರು ಮಾರ್ಗದ ಹಂದಿಕುಂಟೆ ಗೇಟಿನಿಂದ ಪೂರ್ವಕ್ಕೆ ೩ ಕಿಮೀ ದೂರದಲ್ಲಿದೆ.ಇದು ಬಡಮಾರನಹಳ್ಳಿಗೆ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೩೪.೦೫ ಹೆಕ್ಟೇರ್‌ನಷ್ಟಿದೆ. ಈ ಗ್ರಾಮದಲ್ಲಿ ಹೊಸ ಬಡಾವಣೆಯಾಗಿಯೂ ಬೆಳೆದು ಗ್ರಾಮದ ವಿಸ್ತೀರ್ಣ ದೊಡ್ಡದಾಗಿದೆ.

ಗೋಣಿಮರಗಳು ದಟ್ಟವಾಗಿ ಬೆಳೆಯುತ್ತಿದ್ದ ಪ್ರದೇಶವಾದುದರಿಂದ ಗೋಣಿ ಹೆಸರಿನಲ್ಲಿಯೇ ಗ್ರಾಮ ರಚನೆಯಾಗಿದೆ.

ಮರಳು ಮಿಶ್ರಿತ ಕೆಂಪು, ಕಂದುಮಣ್ಣನ್ನು ಹೊಂದಿದೆ. ಪೊದೆ, ಚಿಕ್ಕ ಚಿಕ್ಕ ಗಿಡ, ಮರಗಳ ಪ್ರದೇಶವಾಗಿದೆ. ಹಾಗಾಗಿ ಈ ಪರಿಸರದಲ್ಲಿ ವ್ಯಾಪಕವಾಗಿ ಕಾಡುಪ್ರಾಣಿಗಳು ಕಂಡುಬರುತ್ತವೆ. ಹಂದಿ, ಮೊಲ, ತೋಳ, ನರಿ ಕಂಡುಬಂದರೆ ಗ್ರಾಮದಲ್ಲಿ ರೈತರು ಹಸು, ಎಮ್ಮೆ, ಎತ್ತು, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಪಕ್ಷಿಗಳಾದ ಹದ್ದು, ಗೀಜುಗ, ಗಿಳಿ, ಗೂಬೆ, ಕೊಕ್ಕರೆ, ಕೌಜಲ ಕಂಡುಬರುತ್ತವೆ.

ವಾಡಿಕೆ ಮಳೆ ೪೨೪ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಈ ಪರಿಸರದಲ್ಲಿ ೪೦ ಕೊಳವೆ ಬಾವಿಗಳಿದ್ದು ಕೃಷಿಗೆ ಬಳಕೆಯಾಗುತ್ತಿದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ನಾಯಕ, ಕಮ್ಮಾರ, ಭಜಂತ್ರಿ, ಈಡಿಗ ಸಮುದಾಯಗಳು ಕಿರುಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮನೆಮಾತಾಗಿದೆ. ವಿವಿಧ ಪ್ರಕಾರಗಳ ಒಟ್ಟು ೧೫೯ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದವುಗಳಾಗಿವೆ. ಆಶ್ರಯ, ಇಂದಿರಾ ಆವಾಸ್, ಜನತಾ ವಸತಿ ಯೋಜನೆಯ ೩೨ ಫಲಾನುಭವಿಗಳಿದ್ದು ೬೩೨ ಜನಸಂಖ್ಯೆಯಲ್ಲಿ ೪೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿಯ ಜೊತೆಗೆ ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ಸ್ಕೂಟರ್, ಆಟೋ ಮುಖಾಮುಖಿಯಾಗಿವೆ. ದ್ವಿಚಕ್ರ ವಾಹನಗಳು ಹೆಚ್ಚಾಗಿವೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಅಲಸಂದೆ, ತೊಗರಿ ಪ್ರಮುಖ ಆಹಾರ ಬೆಳೆಗಳಾಗಿವೆ. ಶೇಂಗಾ, ಹುಣಸೆಹಣ್ಣು, ತೆಂಗು, ಹತ್ತಿ, ಸೂರ್ಯಕಾಂತಿ, ರೇಷ್ಮೆ ವ್ಯಾಪಾರಿ ಬೆಳೆಗಳಾಗಿವೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀ ಹಾಲನ್ನು ಸಂಗ್ರಹಿಸಲಾಗುತ್ತಿದೆ. ಶಿಕ್ಷಕರು, ಸಾರಿಗೆ ಪೊಲೀಸ್ ಇಲಾಖೆ, ನ್ಯಾಯಾಲಯ ಇಲಾಖೆ ಸೇರಿದಂತೆ ೧೨ ಜನ ಸರ್ಕಾರಿ ನೌಕರಿಯಲ್ಲಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭೆ, ನಾದೂರು ಜಿಲ್ಲಾ ಪಂಚಾಯ್ತಿ, ಹಂದಿಕುಂಟೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಒಬ್ಬರು ಈ ಗ್ರಾಮದ ಪಂಚಾಯ್ತಿ ಸದಸ್ಯರಿದ್ದಾರೆ. ೩ ಸ್ತ್ರೀಶಕ್ತಿ ಸ್ವಸಹಾಯ ಸಂಘ, ೨ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘಗಳಿದ್ದು ಒಂದು ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಹಿರಿಯ ಪಾಠಶಾಲೆ, ಸರ್ಕಾರಿ ಪ್ರೌಢಶಾಲೆಗಳಿವೆ. ಶಾಲೆಯಲ್ಲಿ ೯೭ ಮಕ್ಕಳು, ಹೈಸ್ಕೂಲ್‌ನಲ್ಲಿ ೬೯ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೬೦% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಟೀ ಅಂಗಡಿಗಳು ಸೇರಿ ೬ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಕೊಲ್ಲಾಪುರದಮ್ಮ, ಭೂತಪ್ಪನ ಪೌಳಿಗಳಿವೆ. ಪ್ರತಿವರ್ಷ ಕೊಲ್ಲಾಪುರದಮ್ಮ ಉತ್ಸವ, ಆರತಿ, ಬಾನ, ಬ್ಯಾಟೆಗಳೊಂದಿಗೆ ನಡೆಯುತ್ತಿದೆ. ಮಾರಮ್ಮನಿಗೆ ಆರತಿ ಮಾಡಿ ಬಲಿ ಕೊಡುತ್ತಾರೆ. ಗೌರಿ–ಗಣೇಶ, ದೀಪಾವಳಿ, ಯುಗಾದಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಅಂಬೇಡ್ಕರ್ ಯುವಕ ಸಂಘ, ವಿನಾಯಕ ಯುವಕರ ಸಂಘಗಳಿದ್ದು ಸಾಂಸ್ಕೃತಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿವೆ. ಸಿರಾ, ಬರಗೂರು, ಮದಲೂರು ಮಾರ್ಗವಾಗಿ ಕಚ್ಚಾರಸ್ತೆ ಇದ್ದು ಅದರಲ್ಲಿಯೇ ಬಸ್ ಸಂಚಾರವಿದೆ.

## ಗೋಮಾರ್ದನಹಳ್ಳಿ

ಗೋಮಾರ್ದನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೧೯ ಕಿಮೀ ದೂರದಲ್ಲಿ ಪಶ್ಚಿಮ ದಿಕ್ಕಿನಲ್ಲಿದೆ. ತಾವರೆಕೆರೆ–ಹೊಸೂರು ರಸ್ತೆಯಲ್ಲಿ ಭೂತಪ್ಪನ ಗುಡಿಯ ಬಳಿ ಎಡಭಾಗಕ್ಕೆ ತಿರುಗಿ ೨.೫ ಕಿಮೀ ಕ್ರಮಿಸಿದರೆ ಗೋಮಾರ್ದನಹಳ್ಳಿ ಎಲ್ಲೆ ಎದುರಾಗುತ್ತದೆ.

ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೩೫೫.೧ ಹೆಕ್ಟೇರ್.

ಗ್ರಾಮದಲ್ಲಿ ೧೧೨ ಮನೆಗಳಿವೆ. ಈ ಗ್ರಾಮದ ಜನಸಂಖ್ಯೆ ೫೧೮. ಕುಂಚಿಟಿಗ ಜನಾಂಗ ಇಲ್ಲಿನ ದೊಡ್ಡ ಸಮುಜದಾಯವಾಗಿದ್ದು ಆದಿಕರ್ನಾಟಕ, ಮಡಿವಾಳ ಜನಾಂಗದವರೂ ಇದ್ದಾರೆ. ಕಾಂಕ್ರೀಟ್, ಕಡಪ ಕಲ್ಲಿನ ಹಾಸುಬಂಡೆ, ಹೆಂಚುಗಳಿಂದ ಹೊಂದಿಸಿದ ೧೧೨ ಮನೆಗಳಿರುವ ಈ ಗ್ರಾಮದಲ್ಲಿ ೧ ಗುಡಿಸಲು ಇದ್ದು ಇಬ್ಬರು ವಸತಿರಹಿತರಿದ್ದಾರೆ.

ಪಶುಪಾಲನೆಯ ಮೂಲದಿಂದಾಗಿ ಈ ಗ್ರಾಮಕ್ಕೆ ಗೋಮಾರ್ದನಹಳ್ಳಿ ಎಂದು ಹೆಸರು ಬಂದಿದೆ ಎಂದು ಗ್ರಾಮದ ಐತಿಹ್ಯ ಹೇಳುವುದರ ಜೊತೆಗೆ ಗ್ರಾಮದ ಹಿರೀಕ ಕೋದಂಡರಾಮಯ್ಯನವರು ಹೇಳುವ ಪ್ರಕಾರ ಈ ಗ್ರಾಮದಲ್ಲಿ ಹಳ್ಳಿಕಾರ್ ತಳಿ ಎತ್ತುಗಳನ್ನು ಸಾಕುವ, ಅವುಗಳನ್ನು ಕೃಷಿ ಕೆಲಸಕ್ಕೆ ಮಾತ್ರ ಬಳಸಿಕೊಳ್ಳುವ ಸಂಪ್ರದಾಯವಿದ್ದು ಯಾವುದೇ ಕಾರಣಕ್ಕೂ ಮಾರಾಟ ಮಾಡುತ್ತಿರಲಿಲ್ಲ.

ಎತ್ತುಗಳನ್ನು ಜುಂಜಪ್ಪ ಎಂದೇ ಭಾವಿಸಿ ಅವುಗಳು ಸತ್ತಾಗ ಸಮಾಧಿ ಮಾಡುವ ಪದ್ಧತಿ ಹಿಂದಿನವರಲ್ಲಿದ್ದು ಕ್ರಮೇಣ ಮಾಯವಾಗಿದೆ. ಈ ಕಾರಣಗಳಿಂದಾಗಿಗೋವು ಮಾರದೇ ಇರುವವನ ಊರು ಗೋಮಾರ್ದನ ಹಳ್ಳಿಯಾಗಿದೆ. ಗೋಮಾರ್ದನಹಳ್ಳಿಯ ಪರಿಸರದಲ್ಲಿ ವ್ಯಾಪಕವಾಗಿ ಚೇಳು, ಹಾವು ಮುಂತಾದ ವಿಷ ಜಂತುಗಳು ಇದ್ದರೂ ಅವು ಜನಗಳಿಗೆ ಕಚ್ಚುವುದಿಲ್ಲ. ಒಂದು ಪಕ್ಷ ಕಚ್ಚಿದರೂ ಅಪಾಯ ಇರುವುದಿಲ್ಲ ಎಂಬ ನಂಬಿಕೆ, ನಂಬಿಕೆಗೆ ತಕ್ಕ ನಡಾವಳಿ ಇಂದಿಗೂ ಇದೆ. ಗೋವುಗಳನ್ನು ಜುಂಜಪ್ಪನ ಬಸವ ಎಂದು ಪರಿಭಾವಿಸಿರುವುದು ಸಿರಾ ಸೀಮೆಯಲ್ಲಿ ಬಲವಾದ ನಂಬಿಕೆಯಾಗಿದೆ. ಜುಂಜಪ್ಪನ ಸಮಾಧಿ, ಆತನ ಭಂಟ ಭೂತಪ್ಪನ ನೆಲೆ ಇವುಗಳ ನಡುವೆ ಇರುವ ಈ ಹಳ್ಳಿಗೆ ಸಹಜವಾಗಿಯೇ ಈ ಪರಿಕಲ್ಪನೆ ಬಂದಿದೆ.

ಹಾಗಾಗಿ ಗೋವು (ಎತ್ತುಗಳನ್ನು) ಮಾರದಿರುವವರ ಊರು ಗೋ–ಮಾರು–ಗೋಮಾರ್ಧನ ಎಂಬ ಪಶು ಮೂಲದಿಂದ ಈ ಹೆಸರು ಬಂದಿದೆ. ಇನ್ನೊಂದು ಮೂಲದ ಪ್ರಕಾರ ಉತ್ತಮ ಜಾತಿಯ ಹೋರಿಕರುಗಳನ್ನು ಕೊಂಡು ತಂದು ಅವುಗಳನ್ನು ಕೃಷಿ ಕಾಯಕಕ್ಕೆ ಪಳಗಿಸುತ್ತಿದ್ದರೆಂದೂ ಇಲ್ಲಿ ಪಳಗಿಸಿದ ಎತ್ತುಗಳು ಉತ್ತಮ ಜಾತಿಯ, ಉತ್ತಮ ಕೆಲಸದವುಗಳಾಗಿರುತ್ತಿದ್ದವು. ಹೀಗೆ ಗೋವುಗಳನ್ನು ಪಳಗಿಸುವ ಕೆಲಸ ಈ ಗ್ರಾಮದಲ್ಲಿ ನಡೆಯುತ್ತಿದ್ದ ಕಾರಣ ಗೋವು–ಮರ್ದನ ಮುಂದೆ ಗೋಮಾರ್ಧನ ಹಳ್ಳಿ ಆಗಿದೆ ಎಂಬ ನಂಬಿಕೆಯೂ ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ, ತಾವರೆಕೆರೆ ಜಿಲ್ಲಾ ಪಂಚಾಯ್ತಿ ಹಾಗೂ ಗೌಡಗೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬ ಗ್ರಾ.ಪಂ ಪ್ರತಿನಿಧಿ ಈ ಗ್ರಾಮದಿಂದ ಆಯ್ಕೆಯಾಗಿದ್ದಾರೆ. ರೈತಾಪಿ ಬದುಕೇ ಪ್ರಧಾನವಾಗಿರುವ ಈ ಗ್ರಾಮದಲ್ಲಿ ಕುಡಿಯುವ ನೀರಿಗೆ ಕೈಪಂಪು, ಕೊಳವೆ ಬಾವಿಗಳ ಮೂಲಕ ಗ್ರಾ.ಪಂ ನೆರವಿನೊಂದಿಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ವಾಡಿಕೆ ಮಳೆ ೪೭೧.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಸಾಂಪ್ರದಾಯಿಕ ಎತ್ತಿನ ಬಂಡಿ, ಟೆಂಪೋ, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳನ್ನು ಗ್ರಾಮದಲ್ಲಿ ಬಳಸುತ್ತಿದ್ದು ಶೇಂಗಾ, ರಾಗಿ, ಹತ್ತಿ, ಹಾರಕ, ನವಣೆ, ಮೆಕ್ಕೆ ಜೋಳಗಳನ್ನು ಬೆಳೆಯುತ್ತಾರೆ. ನೀರಾವರಿ ಸೌಲಭ್ಯ ಇರುವ ಕೆಲವರು ತೆಂಗು, ತರಕಾರಿ, ಸೇವಂತಿಗೆ ಬೆಳೆಯನ್ನು ಆರ್ಥಿಕ ಬೆಳೆಗಳಾಗಿ ಬೆಳೆಯುವುದನ್ನು ಕಾಣಬಹುದು. ಹುಣಸೆಹಣ್ಣು ಶೇಖರಣೆ ಮತ್ತು ಮಾರಾಟದ ಕೆಲವು ಮನೆಗಳಿವೆ. ಎತ್ತುಗಳನ್ನು ಮಾರದಿರುವ ಮೂಲ ವ್ಯಕ್ತಿಯ ಆಶಯಕ್ಕೆ ಕೊಂಚ ವ್ಯತಿರಿಕ್ತವಾಗಿ ಹೋರಿಗಳನ್ನು ಮಾರುವ, ಕೊಳ್ಳುವ ಸಾಟಿ ವ್ಯಾಪಾರದ (ದಲ್ಲಾಳಿ) ಕೆಲವು ಕುಟುಂಬಗಳು ಈ ಗ್ರಾಮದಲ್ಲಿವೆ. ಗೃಹ ಕಸುಬಾಗಿ ಈ ಭಾಗದಲ್ಲಿ ಲಭ್ಯವಿರುವ ಮುತ್ತುಗದ ಎಲೆಗಳ ಸಂಗ್ರಹ, ಊಟದ ಎಲೆ ಕಟ್ಟುವ ಕಾರ್ಯದಲ್ಲಿ ಕೆಲವು ಹೆಂಗಸರು ನಿರತರಾಗಿದ್ದರೆ ೩–೪ ಕುಟುಂಬಗಳು ಬೀಡಿಸುತ್ತುವ ಕಾಯಕದಲ್ಲೂ ನಿರತರಾಗಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಮಕ್ಕಳ ಸಂಖ್ಯೆ ವಿರಳವಾಗಿದೆ (೨೪). ಇಬ್ಬರು ಶಿಕ್ಷಕರು, ಅಂಗನವಾಡಿ ಟೀಚರ್, ಬಿಸಿಊಟದ ಸಿಬ್ಬಂದಿ, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ, ಕಾಂಪೌಂಡ್, ನೀರಿನ ಸೌಕರ್ಯ ಸೌಲಭ್ಯವಿದೆ. ಶೇ.೬೦.೪ ರಷ್ಟು ಸಾಕ್ಷರತೆ ಪ್ರಮಾಣವಿದ್ದು ಶೈಕ್ಷಣಿಕವಾಗಿ ಮಹಿಳೆಯರು ಮುನ್ನಡೆ ಸಾಧಿಸಿದ್ದಾರೆ (೭೮.೬), ಪುರುಷರು ೪೧.೬.

ಧಾರ್ಮಿಕ ಶ್ರದ್ಧೆ ಅನುಕರಣೆಯು ಪರಂಪರಾಗತವಾಗಿದ್ದು ಈ ಗ್ರಾಮದಲ್ಲಿ ತಿಮ್ಮಪ್ಪ, ನರಸಿಂಹಸ್ವಾಮಿ ಹಾಗೂ ಭೂತಪ್ಪನ ದೇವಾಲಯಗಳಿವೆ. ತಿಮ್ಮಪ್ಪನ ಉತ್ಸವ ದಸರಾ, ಯುಗಾದಿ ಸಂದರ್ಭಗಳಲ್ಲಿ ವಿಶೇಷವಾಗಿ ನಡೆಯುತ್ತದೆ. ಉಳಿದಂತೆ ಯುಗಾದಿ, ಮಹಾನವಮಿ, ಶಿವರಾತ್ರಿ, ದೀಪಾವಳಿ ಮೊದಲಾದ

ಸಾಂಪ್ರದಾಯಿಕ ಹಬ್ಬಗಳನ್ನು ಆಚರಿಸುತ್ತಾರೆ. ಈ ಗ್ರಾಮದಲ್ಲಿ ೧೧ನೇ ಶತಮಾನಕ್ಕೆ ಸೇರಿದವುಗಳೆಂಬ ನಂಬಿಕೆಯ ಹಸಿರು ಮಿಶ್ರಿತ ಕಪ್ಪು, ನುಣುಪಾದ ಕಲ್ಲಿನ ಎರಡು ವೀರಗಲ್ಲುಗಳು ಇದ್ದು ಇವುಗಳನ್ನು ಗ್ರಾಮದ ಪಾಠಶಾಲೆಯ ಸಮೀಪದ ಖಾಸಗಿ ಜಮೀನಿನಲ್ಲಿ ವೀರರ ಪೌಳಿ ಎಂದೇ ಗದ್ದುಗೆಯ ಆಕೃತಿಯಲ್ಲಿ ನಿರ್ಮಿಸಿ ವೀರಗಲ್ಲುಗಳನ್ನು ಸಂರಕ್ಷಿಸಲಾಗಿದೆ. ಇವುಗಳಿಗೂ ಸಾಂಪ್ರದಾಯಿಕ ಪೂಜೆ ನಡೆಯುತ್ತದೆ. ವೀರಗಲ್ಲು, ಆಯುಧಗಳನ್ನು ಹಿಡಿದು ಯುದ್ಧನಿರತ ವೀರನ ಚಿತ್ರವಿದ್ದು ನಿಲುವಂಗಿ, ಹಿಂದಕ್ಕೆ ಬಾಚಿ ಕಟ್ಟಿದ ತಲೆಯ ಮುಡಿ ಕೈಯಲ್ಲಿ ಬಾಣ, ಕೈಕಡಗ ಈ ಬಗೆಯ ಕುಸುರಿ ಕಲೆಗಳನ್ನು ಬಿಡಿಸಲಾಗಿದೆ. ಮತ್ತೊಂದರಲ್ಲಿ ಕೈಮುಗಿದು ನಿಂತ ವಿನಯಪರ ಭಂಗಿಯ ಎರಡು ಚಿತ್ರಗಳಿವೆ. ಎರಡು ಪುರಾತನ ಮಾದರಿಯ ಅಶ್ವತ್ಥ ವೃಕ್ಷಗಳಿದ್ದು ಅವುಗಳಿಗೂ ಪೂಜೆ ನಡೆಯುತ್ತದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ, ಎಸ್‌ಎಸ್‌ವೈ ಯೋಜನೆ, ಫಲಾನುಭವಿಗಳಿದ್ದಾರೆ. ಇದೊಂದು ಹೋಟೆಲ್ ಮುಕ್ತ ಗ್ರಾಮವಾಗಿದೆ. ಮೂರು ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ.

ಜನಪದ ಸಂಗೀತ, ಹಾಡುಗಾರಿಕೆ, ತತ್ವಪದ ಗಾಯನಕಾರರು ಈ ಗ್ರಾಮದಲ್ಲಿದ್ದು ಗಿರಿಯಪ್ಪ, ಕೋದಂಡರಾಮಯ್ಯ ತಂಡ ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿ ಹಾಡುತ್ತಾರೆ. ಗೋಮರ್ಧನಹಳ್ಳಿ ಪಿ.ಮಂಜುನಾಥ್ ಕವಿ, ರಂಗನಿರ್ದೇಶಕ ಹಾಗೂ ಸಿರಾ ಸೀಮೆ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷರಾಗಿದ್ದಾರೆ. ಇವರ ಮಡದಿ ಉತ್ತಮ ಕವಿತೆಗಳನ್ನು ಪ್ರಕಟಿಸಿದ್ದಾರೆ. ಶಿಕ್ಷಕಿ ಜಿ.ಕೆ ಶೈಲಜಾ ಉತ್ತಮ ಕವಿತೆಗಳನ್ನು ಪ್ರಕಟಿಸಿದ್ದಾರೆ.

## ಗಜ್ಜೀರಹಳ್ಳಿ

ಗಜ್ಜಿಗರಹಳ್ಳಿ, ಗಜ್ಜೀರನಹಳ್ಳಿ, ಗಜ್ಜೀರಹಳ್ಳಿ ಎಂದೆಲ್ಲಾ ಕರೆಯುವ ಗಜ್ಜೀರಹಳ್ಳಿ ಕಜ್ಜಿ ಮುಖದ ಈರಣ್ಣ ಎಂಬ ವ್ಯಕ್ತಿ ಈ ಭಾಗದಲ್ಲಿನೆಲೆಸಿ ತನ್ನ ವಕ್ಕಲನ್ನು ವಿಸ್ತರಿಸಿದ್ದರಿಂದ ಕಜ್ಜಿ ಈರನಹಳ್ಳಿ ನಂತರ ಶಿಥಿಲತ್ವ ಹೊಂದಿ ಗಜ್ಜೀರಹಳ್ಳಿಯಾಗಿದೆ ಎಂಬುದು ಗ್ರಾಮದವರ ಹೇಳಿಕೆ. ಇದು ವಾಸ್ತವಕ್ಕೆ ಹತ್ತಿರವಾದ ಅಂಶವೂ ಆಗಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ೨೪೮.೮೮ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ.ಕಂದು ಮರಳು ಮಿಶ್ರಿತ ಭೂಮಿ. ಕುರುಚಲು ಗಿಡ, ಮರ ಹಳ್ಳ ದಿಬ್ಬದ ಈ ಪರಿಸರದಲ್ಲಿ ನರಿ, ತೋಳ, ಹಂದಿ, ಜಿಂಕೆ, ಮೊಲ ಈ ಮೊದಲಾದ ಕಾಡುಪ್ರಾಣಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ರೈತಾಪಿ ಜನರು ಹಸು, ಎತ್ತು, ಕುರಿ, ಮೇಕೆ, ನಾಯಿಗಳನ್ನು ಸಾಕಿದ್ದಾರೆ. ಸಾಕು ಪಕ್ಷಿಯಾಗಿ ಕೋಳಿ ಕಂಡುಬರುತ್ತವೆ.

ವಾಡಿಕೆ ಮಳೆ ೩೯೪ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಪರಿಸರದಲ್ಲಿ ೧೮ ಕೊಳವೆ ಬಾವಿಗಳಿದ್ದು ಕುಡಿಯುವುದಕ್ಕೆ ೩ ಸಿಸ್ಟರ್ನ್‌ಗಳಲ್ಲಿ ನೀರನ್ನು ಗ್ರಾಮ ಪಂಚಾಯ್ತಿ ವತಿಯಿಂದ ಪೂರೈಸಲಾಗುತ್ತದೆ.

ಕುಂಚಿಟಿಗ ದೊಡ್ಡ ಸಮುದಾಯವಾಗಿದ್ದು ಆದಿದ್ರಾವಿಡ, ಉಪ್ಪಾರ, ನಾಯಕ, ವೈಷ್ಣವರು ಸಣ್ಣ ಸಮುದಾಯವಾಗಿದೆ. ಕನ್ನಡ ಈ ಗ್ರಾಮದ ಸಹಜ ಮಾತು. ಕಾಂಕ್ರೀಟ್, ಹೆಂಚಿನ, ಶೀಟಿನ ಒಟ್ಟು ೪೮ ಮನೆಗಳಿದ್ದು ೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನವಾಗಿ ಟ್ರ್ಯಾಕ್ಟರ್, ಟೆಂಪೋ, ಆಟೋ ವಾಹನಗಳಿವೆ. ಶೇಂಗಾ ಗ್ರಾಮದ ಮುಖ್ಯ ಬೆಳೆಯಾಗಿದ್ದು ರಾಗಿ, ಹಾರಕ, ನವಣೆ, ಹುರುಳಿ, ತೊಗರಿನ್ನು ಸಾಂದರ್ಭಿಕ ಬೆಳೆಯಾಗಿ ಬೆಳೆಯುತ್ತಾರೆ.ಶೇಂಗಾ ಮತ್ತು ಹುಣಸೆಹಣ್ಣಿನ ಬೆಳೆಯೂ ವಾಣಿಜ್ಯ ಬೆಳೆಯಾಗಿದೆ. ಮಹಿಳೆಯರು ಬೀಡಿ ಸುತ್ತುವುದು ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ಕ್ಷೇತ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಒಂದು ಸ್ತ್ರೀಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದಾರೆ. ಸಹಾಯಕಿ ಹಾಗೂ ಕಾರ್ಯಕರ್ತೆ ಸೇರಿ ಇಬ್ಬರು ನೌಕರರಿದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗುತ್ತಿದೆ. ಗ್ರಾಮದಲ್ಲಿ ಹಿಂದೆ ಇದ್ದ ಸರ್ಕಾರಿ ಪಾಠಶಾಲೆ ಮಕ್ಕಳ ಕೊರತೆಯಿಂದ ಮುಚ್ಚಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೮.೨ ಇದ್ದು ಮಹಿಳೆಯರು ೩೬.೭, ಪುರುಷರು ೫೫.೩ ರಷ್ಟು ಇದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ

ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಅಂಗಡಿಗಳಿವೆ. ಗ್ರಾಮದ ಆರಂಭದಲ್ಲಿ ೨ ಕರಿಗಲ್ಲುಗಳಿದ್ದು ಅರಳಿಕಟ್ಟೆ ಇದೆ. ಇವು ಇಂದಿಗೂ ಪೂಜಿಸಲ್ಪಡುತ್ತಿದೆ. ಗ್ರಾಮದಲ್ಲಿ ರಂಗನಾಥ ದೇವಾಲಯ, ಭೂತಪ್ಪನ ಪೌಳಿ ಇದೆ. ಗ್ರಾಮದೇವತೆ ಮಾರಮ್ಮನ ಉತ್ಸವ ವಾರ್ಷಿಕವಾಗಿ ಜರುಗುತ್ತದೆ. ಆರತಿ, ಬಾನ, ಬ್ಯಾಟೆ ಇರುತ್ತದೆ. ಶಿವರಾತ್ರಿ, ಯುಗಾದಿ, ಮಹಾನವಮಿ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ತಾವರೆಕೆರೆ, ಜವಗೊಂಡನಹಳ್ಳಿಗೆ ರ‍್ರಾಷ್ಟ್ರೀಯ ಹೆದ್ದಾರಿ–೪ ರ ಮೂಲಕ ಸಂಪರ್ಕ ರಸ್ತೆಯಿದೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ತಾವರೆಕೆರೆ, ಮೊಸರಕುಂಟೆ ಭೂತಪ್ಪನಗುಡಿ ಗ್ರಾಮಗಳ ಶಾಲೆಗಳನ್ನು ಅವಲಂಬಿಸಿದ್ದಾರೆ.

## ಗುಂಡಪ್ಪ ಚಿಕ್ಕೇನಹಳ್ಳಿ

ಗುಂಡಪ್ಪ ಚಿಕ್ಕೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಟ್ಟನಾಯಕನಹಳ್ಳಿ ಹೆಂದೊರೆ ಮಾರ್ಗವಾಗಿ ಸಿರಾದಿಂದ ಉತ್ತರಕ್ಕೆ ೨೦ ಕಿಮೀ ದೂರದಲ್ಲಿದೆ. ಇದು ಗ್ರಾಮಪಂಚಾಯ್ತಿ ಕೇಂದ್ರ ಹೆಂದೊರೆಗೆ ೧.೫ ಕಿಮೀ ದೂರದಲ್ಲಿದ್ದು ಹೆಂದೊರೆ ಗ್ರಾಮದ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೩೪೨ ಹೆಕ್ಟೇರ್ ಇದ್ದು ಪೂರ್ವಕ್ಕೆ ಕೆರೆ, ಪಶ್ಚಿಮಕ್ಕೆ ಗುಂಡಾಜನಯ್ಯ ಗೋಮಾಳ ಹಾಗೂ ರಕ್ಷಿತ ಅರಣ್ಯ ಪ್ರದೇಶವಿದೆ.

ಕೆಂಪು ಮಿಶ್ರಿತ ಬಿಳಿ ಮರಳು, ಕಂದು ಮಣ್ಣನ್ನು ಹೊಂದಿರುವ ಈ ಗ್ರಾಮ ಶೇಂಗಾ ಬೆಳೆಗೆ ಉತ್ಕೃಷ್ಟವಾಗಿದೆ.

ಈ ಗ್ರಾಮದ ಅಧಿದೇವತೆ ಆಂಜನೇಯ. ಇದು ಗ್ರಾಮದ ಹೊರ ವಲಯಕ್ಕೆ ಅರ್ಧ ಕಿಮೀ ದೂರದಲ್ಲಿದೆ. ಗುಂಡುಕಲ್ಲಿನ ಸ್ವರೂಪದ ಆಂಜನೇಯನನ್ನು ಗುಂಡಯ್ಯ, ಗುಣ್ಣಯ್ಯ ಎಂದು ಕರೆದು ಪೂಜಿಸಲಾಗುತ್ತಿದೆ. ದೇವಸ್ಥಾನ ಒಂದು ಎಕರೆ ವಿಸ್ತೀರ್ಣದಲ್ಲಿ ಮಂಟಪಗಳಿದ್ದು ನಡುವೆ ಪ್ರಾಚೀನ ದೇವಾಲಯವಿದೆ. ಪ್ರತಿ ಶನಿವಾರ ಈ ದೇವರ ಉತ್ಸವ, ಪ್ರಾಣಿಬಲಿ, ಮಂಡೆ, ಹರಕೆ ರೂಪದಲ್ಲಿ ವಿಶೇಷ ಭೋಜನ ಏರ್ಪಡುತ್ತದೆ. ಗ್ರಾಮದ ದೇವರು ಗುಂಡ ಆಂಜನೇಯ ಆದುದರಿಂದ ಇದೇ ಹೆಸರಿನಲ್ಲಿ ಗ್ರಾಮ ನಿರ್ಮಾಣವಾಗಿದೆ. ಇದು ಮೌಖಿಕವಾಗಿ ಗುಣ್ಣ ಎಂಬ ವಿಶೇಷಣವಾಗಿಯೂ ಬಳಸಲಾಗುತ್ತದೆ. ಈ ಗ್ರಾಮದ ಪ್ರತಿ ಮನೆಯ ಮೊದಲ ಮಗ ಅಥವಾ ಮಗಳಿಗೆ ಗುಂಡಮ್ಮ, ಗುಣ್ಣಮ್ಮ, ಗುಂಡಯ್ಯ, ಗುಣ್ಣಯ್ಯ, ಚಿಕ್ಕಗುಣ್ಣ, ದೊಡ್ಡಗುಣ್ಣ, ಕರಿಗುಣ್ಣ ಹೀಗೆ ಹೆಸರನ್ನು ಇಡುವುದು ವಾಡಿಕೆಯಾಗಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ, ಉಡ, ಕಾಡುಬೆಕ್ಕು ಕಂಡುಬಂದರೆ ಪಕ್ಷಿಗಳಾದ ಕೋಗಿಲೆ, ಕಾಗೆ, ಕೊಕ್ಕರೆ, ಗಿಳಿ, ಗೀಜುಗ, ಗರುಡ, ಗೂಬೆ, ಹದ್ದು ಕಂಡುಬರುತ್ತವೆ. ಕೋಳಿ ಸಾಕು ಪಕ್ಷಿಯಾಗಿದೆ. ಗ್ರಾಮದಲ್ಲಿ ರೈತಾಪಿ ಬದುಕಿಗೆ ಕುರಿ, ಮೇಕೆ, ಎತ್ತು, ಹಸು, ಎಮ್ಮೆ, ದನ ಹಾಗೂ ನಾಯಿಗಳನ್ನು ಸಾಕುಪ್ರಾಣಿಯಾಗಿ ಸಾಕಲಾಗುತ್ತಿದೆ.

ಈ ಪರಿಸರ ಬಯಲು, ಬಿಸಿಲು ಭೂಮಿಯಾಗಿದೆ. ಹಾಗಾಗಿ ಇಲ್ಲಿ ವಾಡಿಕೆ ಮಳೆ ೩೯೪ ಮಿಮೀ ಆಗಿದ್ದು ರೈತರು ಕೃಷಿಗಾಗಿ ಕೊಳವೆ ಬಾವಿಗಳನ್ನು ಅವಲಂಬಿಸಿದ್ದಾರೆ. ವಿವಿಧ ಮೂಲದಿಂದ ೭೦ ಕೊಳವೆ ಬಾವಿಗಳನ್ನು ಈ ಪರಿಸರದಲ್ಲಿ ಕೊರೆಸಲಾಗಿದೆ. ಗಂಗಾಕಲ್ಯಾಣ ಯೋಜನೆಯ ಫಲಾನುಭವಿಗಳಿದ್ದಾರೆ. ಉಷ್ಣಾಂಶ ೩೯–೪೦ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಆರು ಸಿಸ್ಟರ್ನಗಳಿದ್ದು ೨ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಕುರುಬರು ಕಿರು ಸಮುದಾಯವಾಗಿದೆ ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ವಿವಿಧ ಸ್ವರೂಪಗಳಾದ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಒಟ್ಟು ೧೭೦ ಮನೆಗಳಿವೆ. ಇಲ್ಲಿ ಜನತಾ, ಆಶ್ರಯ, ಇಂದಿರಾ ಆವಾಸ್ ಹಾಗೂ ಅಂಬೇಡ್ಕರ ವಸತಿ ಯೋಜನೆಯಡಿಯಲ್ಲಿ ರಚನೆಯಾಗಿವೆ. ೫೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಒಟ್ಟು ೭೮೪ ಜನಸಂಖ್ಯೆಯನ್ನು ಹೊಂದಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳೊಂದಿಗೆ ಎತ್ತಿನ ಬಂಡಿಯ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಹುರುಳಿ, ತೊಗರಿ ಬೆಳೆಗಳನ್ನು ಬೆಳೆಯುತ್ತಾರೆ. ನೀರಾವರಿ ಬೆಳೆಗಳಾಗಿ ತೆಂಗು, ಅಡಿಕೆ, ಸಪೋಟ, ಬಾಳೆ ತೋಟಗಾರಿಕೆಗಳಿವೆ. ಹತ್ತಿ, ಸೂರ್ಯಕಾಂತಿ, ರೇಷ್ಮೆ ಉಪಬೆಳೆಯಾಗಿದೆ. ಶೇಂಗಾ, ತೆಂಗು, ಸಪೋಟ, ಹುಣಸೆಹಣ್ಣು, ಹೊಂಗೆ ಬೀಜ ಮುಖ್ಯ ವಾಣಿಜ್ಯ ಬೆಳೆಗಳಾಗಿವೆ.

ಶಿಕ್ಷಣ, ಬ್ಯಾಂಕ್, ಆರೋಗ್ಯ, ಸಾರಿಗೆ ಇಲಾಖೆಯ ೧೦ ಜನ ನೌಕರರು ಈ ಗ್ರಾಮದಲ್ಲಿದ್ದು ಡಾ॥ ಹನುಮಂತರಾಯಪ್ಪ, ಪ್ರೊ॥ ಬಾಲಕೃಷ್ಣ, ಟಿ.ತಿಮ್ಮಯ್ಯ ಶಿಕ್ಷಕ ಗಿರಿಯಪ್ಪ, ಬ್ಯಾಂಕ್

ಉದ್ಯೋಗಿ ಪಾರ್ವತಮ್ಮ ಈ ಮೊದಲಾದವರು ಮುಖ್ಯವಾದವರು. ಬೀಡಿ ಕಟ್ಟುವುದು, ಹೂ ಕಟ್ಟುವುದು, ಇಟ್ಟಿಗೆ ಫ್ಯಾಕ್ಟರಿ ಈ ಮೊದಲಾದ ಸಣ್ಣ ಕೈಗಾರಿಕೆ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪೂರಕವಾಗಿವೆ. ೪ ಜನ ಖಾಸಗಿ ವೈದ್ಯರು, ೫ ಜನ ಇಂಜಿನಿಯರ್ ಇರುವುದು ಈ ಗ್ರಾಮದ ವಿಶೇಷ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಹೆಂದೊರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಈ ಗ್ರಾಮದ ಲಕ್ಷ್ಮಕ್ಕ ಹೆಂದೊರೆ ಗ್ರಾಮಪಂಚಾಯ್ತಿ ಅಧ್ಯಕ್ಷರಾಗಿದ್ದರು. ಸಿರಾ, ಹೆಂದೊರೆ, ಚಂಗಾವರ ಮಾರ್ಗವಾಗಿ ಕಚ್ಚಾರಸ್ತೆ ಮಾರ್ಗವಿದ್ದು ಖಾಸಗಿ ಬಸ್ ಸಂಪರ್ಕವಿದೆ. ೫ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಹಕಾರ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸಬಲತೆಗೆ ಪೂರಕವಾಗಿವೆ.

ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ೬೦ ಮಕ್ಕಳಿದ್ದಾರೆ. ೩ ಜನ ಶಿಕ್ಷಕರಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಉತ್ತಮ ಕಾಂಪೌಂಡ್, ಕೈತೋಟಗಳಿವೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೬.೮ ರಷ್ಟಿದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಈ ಗ್ರಾಮದ ಪ್ರತಿನಿಧಿಗಳಾಗಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಟೀ ಅಂಗಡಿ, ೫ ಗೂಡಂಗಡಿಗಳಿವೆ. ಅಶ್ವತ್ಥಕಟ್ಟೆ, ನಾಗರ ಪ್ರತಿಷ್ಠೆಯ ಜೊತೆಗೆ ಅರಳಿ, ಬೇವಿನ ಮರವಿದೆ. ಆರಂಭದಲ್ಲಿ ಒಂದು ಕರಿಗಲ್ಲು ಇದ್ದು ವಿಶೇಷ ಸಂದರ್ಭಗಳಲ್ಲಿ ಎಣ್ಣೆ ಹಾಕಲಾಗುತ್ತದೆ. ಭೂತಪ್ಪ, ಗುಂಡಾಂಜನೇಯ, ಕೊಲ್ಲಾಪುರದಮ್ಮ, ಈರಮ್ಮ ದೇವಾಲಯಗಳಿವೆ. ಇವುಗಳಲ್ಲಿ ಗುಂಡಾಂಜನೇಯ ಗ್ರಾಮದ ಹೊರ ವಲಯದಲ್ಲಿದೆ. ಭೂತಪ್ಪನಿಗೆ ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಕೊಲ್ಲಾಪುರದಮ್ಮನ ಊರಹಬ್ಬ ವಿಶೇಷವಾಗಿ ಆರತಿ, ಬಾನ, ಬಲಿಯೊಂದಿಗೆ ಸಾಂಪ್ರದಾಯಿಕವಾಗಿ ಏರ್ಪಡುತ್ತದೆ. ಗುಣ್ಣಾಂಜನೇಯನಿಗೆ ಶ್ರಾವಣದ ಆರಂಭದಲ್ಲಿ ಆರತಿ ಅರ್ಪಣೆ ಇದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಗೌರಿ-ಗಣೇಶ, ಶಿವರಾತ್ರಿ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕಾಂತಮ್ಮ, ಗೌರಮ್ಮನ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

ಹನುಮಂತಯ್ಯ ರಂಗ ಕಲಾವಿದ ಹಾಗೂ ಸಂಗೀತ ನಿರ್ದೇಶಕ. ಶಿಕ್ಷಕ ಗಿರಿಯಪ್ಪ, ರಂಗಮ್ಮ, ಹನುಮಕ್ಕ ಉತ್ತಮ ಕಲಾವಿದರಾಗಿ ಕೋಲಾಟ, ಸೋಬಾನ, ಭಜನೆ ಕಲಾವಿದರಾಗಿ ಗುರುತಿಸಿಕೊಂಡಿದ್ದಾರೆ.

## ಗೊಲ್ಲರಹಳ್ಳಿ

ಗೊಲ್ಲರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೨೪ ಕಿಮೀ ದೂರದಲ್ಲಿದೆ. ಸಿರಾ-ಅಮರಾಪುರ ಮುಖ್ಯ ರಸ್ತೆಯಲ್ಲಿ ವೀರಗಾನಹಳ್ಳಿ ಕಚ್ಚಾರಸ್ತೆಯಲ್ಲಿ ಎಡಭಾಗಕ್ಕೆ ತಿರುಗಿ ೪ ಕಿಮೀ ದೂರ ನಡೆದರೆ ಗೊಲ್ಲರಹಳ್ಳಿ ಸಿಕ್ಕುತ್ತದೆ. ಪಟ್ಟನಾಯಕನಹಳ್ಳಿ-ವೀರಗಾನಹಳ್ಳಿ ಮೂಲಕವೂ ಈ ಗ್ರಾಮಕ್ಕೆ ಬರುವ ಸೌಲಭ್ಯಗಳಿವೆ. ಇದೊಂದು ಮಜರೆ ಗ್ರಾಮವಾಗಿದ್ದು ಹೆಂದೊರೆಯ ಉಪಗ್ರಾಮ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೯೨ ಹೆಕ್ಟೇರ್ ಆಗಿದೆ. ಕಾಡುಗೊಲ್ಲರೇ ವಾಸಿಸುವ ಕಾರಣದಿಂದ ಗೊಲ್ಲರಹಳ್ಳಿಯಾಗಿದೆ. ಸಾಮಾನ್ಯವಾಗಿ ಗೊಲ್ಲರಹಟ್ಟಿ ಎಂದು ಕರೆಯುವ ಬದಲಾಗಿ ಹಳ್ಳಿ ಎಂದು ಕರೆದಿರುವುದು ಈ ಗ್ರಾಮದ ವಿಶೇಷ.

ಕೆಂಪುಮರಳು ಮಿಶ್ರಿತ ಭೂಮಿ ಹೊಂದಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಹಂದಿ ಕಂಡುಬರುತ್ತವೆ. ಗ್ರಾಮದಲ್ಲಿ ಕುರಿ, ಮೇಕೆ, ಹಸು, ಎಮ್ಮೆಗಳನ್ನು ಸಾಕಿದ್ದಾರೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಕೊಕ್ಕರೆ, ಗೀಜಗ, ಗೂಬೆ, ಗೊರವಂಕ ಕಂಡುಬರುತ್ತವೆ.

ವಾರ್ಷಿಕ ವಾಡಿಕೆ ಮಳೆ ೫೮೦ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಒಂದು ಹಳ್ಳ ಮತ್ತು ಕೆರೆ ಇದ್ದರೂ ತುಂಬುವುದು ಅಪರೂಪ. ಆದುದರಿಂದ ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸುತ್ತಿದ್ದು ೪ ಕಿರು ಟ್ಯಾಂಕ್‌ಗಳಿವೆ. ೨ ಕೈಪಂಪುಗಳಿವೆ. ಮಳೆನೀರಿನ ಜೊತೆಗೆ ೪೫ ಬೋರ್‌ವೆಲ್ ಕೊರೆಸಲಾಗಿದೆ.

ಕಾಡುಗೊಲ್ಲರು ದೊಡ್ಡ ಸಮುದಾಯ. ಹೊರಚ್ಚಿಗೆ ಆದಿಕರ್ನಾಟಕ ಮತ್ತು ಆದಿದ್ರಾವಿಡರ ಮನೆಗಳಿದ್ದು ಕಿರು ಸಮುದಾಯವಾಗಿದೆ. ವಿವಿಧ ಪ್ರಕಾರಗಳ ೧೨೮ ಮನೆಗಳಿದ್ದು ಅವು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಿ. ೨೬ ಮನೆಗಳು ಜನತಾ, ಆಶ್ರಯ, ಅಂಬೇಡ್ಕರ ವಸತಿ ಯೋಜನೆಯಡಿಯಲ್ಲಿ ರಚನೆಯಾಗಿವೆ. ೯೩೨

ಜನಸಂಖ್ಯೆ ಹೊಂದಿದ್ದು ೨೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿಯ ಜೊತೆಗೆ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ ಪ್ರಮುಖ ಆಹಾರ ಬೆಳೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ ಇದೆ. ಗ್ರಾಮದಲ್ಲಿ ಹುಣಸೆಹಣ್ಣು, ಕುರಿ ವ್ಯಾಪಾರವಿದೆ.

ಮಹಿಳೆ-ಮಕ್ಕಳ ಇಲಾಖೆಯ ತಿಪ್ಪೇಸ್ವಾಮಿ ಸೇರಿದಂತೆ ಶಿಕ್ಷಣ, ಸಾರಿಗೆ, ಕಂದಾಯ, ಆರೋಗ್ಯ ಇಲಾಖೆಯ ೧೦ ಜನ ನೌಕರರಿದ್ದಾರೆ. ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಹೆಂದೊರೆ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಗ್ರಾಮದಲ್ಲಿ ಇಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ೩ ಸ್ತ್ರೀಶಕ್ತಿ ಕೇಂದ್ರಗಳಿವೆ. ಒಂದು ಅಂಗನವಾಡಿ, ಸರ್ಕಾರಿ ಕಿರಿಯ ಪಾಠಶಾಲೆಯಿದೆ. ಶಾಲೆಯಲ್ಲಿ ೩೦ ಮಕ್ಕಳಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೮ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಅರಳಿಕಟ್ಟೆ ಇದೆ. ನಾಗರಪೂಜೆ ನಡೆಯುತ್ತದೆ. ತಿಮ್ಮಪ್ಪ, ಓಬಳನರಸಿಂಹ, ಹಟ್ಟಿಮಾರಮ್ಮ ಗ್ರಾಮದ ದೇವಾಲಯಗಳು. ಹಟ್ಟಿಮಾರಮ್ಮನ ಊರಹಬ್ಬ, ಆರತಿ, ಬಾನ, ಬಲಿ ಆಚರಣೆ ಸಂಪ್ರದಾಯವಿದೆ. ಕನ್ನೇರಮ್ಮನ ಆಚರಣೆಯೂ ಗ್ರಾಮದಲ್ಲಿದೆ.

ಯುಗಾದಿ, ದೀಪಾವಳಿ, ಗೌರಿ-ಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ದೀಪಾವಳಿ ಕಾಡುಗೊಲ್ಲರ ವಿಶೇಷ ಆಚರಣೆಯಾಗಿದೆ.

## ಗೋಪಿಕುಂಟೆ

ಗೋಪಿಕುಂಟೆ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೭ ಕಿ.ಮೀ. ದೂರದಲ್ಲಿದೆ. ಸಿರಾ-ಬರಗೂರು ಮುಖ್ಯ ರಸ್ತೆಯಲ್ಲಿ ಬರಗೂರಿನಿಂದ ಪಶ್ಚಿಮಕ್ಕೆ ೨ ಕಿ.ಮೀ. ದೂರದಲ್ಲಿದೆ. ಟಾರ್ ರಸ್ತೆ ಇದೆ. ಸಿರಾ ಅಮರಾಪುರ ಮುಖ್ಯ ರಸ್ತೆಯಲ್ಲಿ ಹೊಸಹಳ್ಳಿ ಗೇಟಿನಿಂದ ಬಲಕ್ಕೆ ೨ ಕಿ.ಮೀ. ದೂರದಲ್ಲಿದೆ. ಗೋಪಿಕಟ್ಟೆ, ಗೋಪಾಲ ದೇವಾಲಯ ಗ್ರಾಮದಲ್ಲಿ ಎರಡೂ ಇವೆ. ಗ್ರಾಮದ ಹೊರ ವಲಯಗಳಲ್ಲಿ ಗೋಮಾಳವಿದ್ದು, ಗೋಪಲ ಎಂಬುವವನು ದನಗಳನ್ನು ಮೇಯಿಸಿ ಕೊಂಡು ಇರುತ್ತಿದ್ದನು. ಈತನೇ ಹಾಲು, ತುಪ್ಪ, ಕರುಗಳನ್ನು ಮಾರಿ ಒಂದು ಗೋಕಟ್ಟೆ ನಿರ್ಮಿಸಿದ ಕಾರಣದಿಂದ ಗೋಪಿಯ ಕಟ್ಟೆ > ಗೋಪಿ ಕುಂಟೆಯಾಗಿದೆ. ಏಕೆಂದರೆ ಕಟ್ಟೆ -ಕುಂಟೆಯಾಗಿ ಬಳಕೆಯಾಗುವುದು ಸಾಮಾನ್ಯ ಸಂಗತಿಯಾಗಿದೆ. ಜೊತೆಗೆ ಗ್ರಾಮದಲ್ಲಿ ಗೋಪಾಲಕೃಷ್ಣ ದೇವಾಲಯವೂ ಇದೆ. ಹಾಗಾಗಿ ಗೋಪಿಕುಂಟೆ ಎಂಬ ಹೆಸರು ಎರಡೂ ಮೂಲದಿಂದ ಬಳಕೆಯಾಗುತ್ತಿದ್ದು. ಪಶು ಪಾಲನೆಯ ಗೋಪಿ ಮತ್ತು ಆ ಸಂಬಂಧಿ ಗೋಕಟ್ಟೆ ಒಂದು ಕಾರಣವಾದರೆ, ಗ್ರಾಮದ ಮೂಲ ದೈವ ಗೋಪಾಲಕೃಷ್ಣ ದೇವಾಲಯ. ಹೀಗೆ ಪ್ರಾಕೃತಿಕ ಮತ್ತು ಧಾರ್ಮಿಕ ಈ ಎರಡೂ ದೃಷ್ಟಿಗಳಿಂದಲೂ, ಸಮಾನ ಅರ್ಥ, ಪ್ರಾಕೃತಿಕ ವಾತಾವರಣ, ಐತಿಹಾಸಿಕ ಸಾಕ್ಷ್ಯಾಧಾರಗಳು ಪ್ರಕಟವಾಗುತ್ತೆ, ಇದೊಂದು ಪಶು ಸಂಸ್ಕೃತಿಯ ಗ್ರಾಮ ಎಂಬುದು ವೇದ್ಯವಾಗುತ್ತದೆ.

ಇದು ಕಂದಾಯ ಗ್ರಾಮವಾಗಿದ್ದು, ಇದರ ಒಟ್ಟು ಭೌಗೋಳಿಕ ವ್ಯಾಪ್ತಿ ೩೧೪.೩ ಹೆಕ್ಟೇರ್ ಆಗಿದೆ. ಬಯಲು ಪ್ರದೇಶ ಕೆಂಪು ಮಿಶ್ರಿತ ಮರಳು ಮಣ್ಣಿನ ಭೂಮಿ. ಗೋಮಾಳ, ಒಂದು ಕೆರೆ, ಗೋಪುಕುಂಟೆ ಕಟ್ಟೆ ಇದೆ. ಹಾಗಾಗಿ ಈ ಪರಿಸರದಲ್ಲಿ ನರಿ, ಕರಡಿ, ಮೊಲ, ಉಡ, ಜಿಂಕೆ, ಹಂದಿ, ಕಾಡು ಬೆಕ್ಕ ಕಂಡು ಬಂದರೆ ಗ್ರಾಮದಲ್ಲಿ ಪಶು ಪಾಲನೆಯ ಹಾಗೂ ಹೈನುಗಾರಿಕೆಯ ಮೂಲವಾಗಿ ಹಸು, ಕುರಿ, ಮೇಕೆ, ಎಮ್ಮೆಗಳನ್ನು ಸಾಕಿದ್ದಾರೆ. ನಾಟಿ ಕೋಳಿ, ಹುಂಜ, ಹೆಂಟೆ, ಗಿರಿರಾಜ ಕೋಳಿಗಳನ್ನು ಮಾಂಸ ಹಾಗೂ ಮೊಟ್ಟೆಗಾಗಿ ಸಾಕಲಾಗುತ್ತಿದೆ.

ಕಾಡು ಪಕ್ಷಿಗಳಾಗಿ ಗಿಳಿ, ಹದ್ದು, ಗರುಡ, ಗೊರವಂಕ, ಗೂಬೆ, ಬೆಳವ, ಬಾವಲಿ, ಕೊಕ್ಕರೆ, ಕೋಗಿಲೆ, ಗುಬ್ಬಚ್ಚಿ, ಮರಕುಟಿಕ, ಸಿಪ್ಲೆಹಕ್ಕಿ, ಕೌಜುಗ, ಕಾಗೆಸಿಳ್ಳ, ಸಾಂಬಾರ ಕಾಗೆ ಕಂಡು ಬರುತ್ತವೆ.

ಬಯಲು ಪ್ರದೇಶ ಬಿಸಿಲು ಅಧಿಕ, ಮಳೆ ಸಾಧಾರಣ ಕೃಷಿ ಅವಲಂಬಿತ ಬದುಕು ಇಲ್ಲಿನ ಸಾಮಾನ್ಯ ಲಕ್ಷಣವಾಗಿದೆ. ಕಳೆದ ಐದು ವರ್ಷಗಳಲ್ಲಿ ೪೮೦ ಮಿ.ಮೀ. ಸರಾಸರಿ ಮಳೆ ಬಿದ್ದಿದ್ದು, ವಾಡಿಕೆಗಿಂತ ಕಡಿಮೆ ಇದೆ. ಬಿಸಿಲು ೩೦-೪೦ಂ ಸೆಂ. ಇದ್ದರೆ, ಚಳಿ ೧೨ಂ ಸೆಂ. ಇರುತ್ತದೆ. ಗ್ರಾಮಕ್ಕೆ ಗೋಪಿಕುಂಟೆ ಕೆರೆ ಊರಿಗೆ ಹೊಂದಿಕೊಂಡಂತೆ ಹೊಸಹಳ್ಳಿ ರಸ್ತೆಯಲ್ಲಿದ್ದು, ಗೋಪಿಕುಂಟೆ ಎಂಬ ಗೋಕಟ್ಟೆಯಾಗಿ ಇದೆ. ಆದರೆ ಮಳೆಯ ಕುಸಿತದಿಂದಾಗಿ ತುಂಬುವುದು ಅಪರೂಪವಾಗುತ್ತಿದೆ. ಹಾಗಾಗಿ

ರೈತರು ಉಪ ನೀರಾವರಿಗಾಗಿ ೧೨೪ ಕೊಳವೆ ಬಾವಿಗಳನ್ನು ಕೊರೆಸಿ, ಅರೆ ನೀರಾವರಿಯಿಂದ, ಆಹಾರ ಹಾಗೂ ತೋಟಗಾರಿಕೆ ಮುಂದುವರಿಸಿದ್ದಾರೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಟ್ಯಾಂಕ್‌ಗಳ ಮೂಲಕ ಕೊಳಾಯಿಗಳಲ್ಲಿ ನೀರು ಒದಗಿಸಲಾಗುತ್ತಿದೆ. ೬೪ ಬೀದಿ ನಲ್ಲಿಗಳಿವೆ. ೩ ಕೈ ಪಂಪುಗಳಿದ್ದು, ೧ ಕೆಟ್ಟು ಹೋಗಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ಬೇಡ, ಕುರುಬ, ಅಗಸ, ಆದಿಕರ್ನಾಟಕ, ವಿಶ್ವಕರ್ಮ ಕಿರು ಸಮುದಾಯಗಳಾಗಿವೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದೆ. ವಿವಿಧ ಪ್ರಕಾರಗಳ ೧೫೮ ಮನೆಗಳಿದ್ದು ೭೨೬ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಕಲ್ಲಿನ, ಹೆಂಚಿನ, ಶೀಟಿನ, ಕಾಂಕ್ರೀಟ್ ಸ್ವರೂಪದಲ್ಲಿವೆ. ವಸತಿ ಯೋಜನೆಗಳಾದ ಇಂದಿರಾ ಆವಾಸ್, ಆಶ್ರಯ, ಜನತಾ ನಗ್ರಾಮ, ಅಂಬೇಡ್ಕರ್ ವಸತಿ ಯೋಜನೆಯ ೨೩ ಫಲಾನುಭವಿಗಳು ಹಾಗೂ ಭಾಗ್ಯ ಜ್ಯೋತಿ ಉಚಿತ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ೧೦೦ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ, ಅಮುಖ್ಯವಾಗಿ ರೊಟ್ಟಿ, ಅನ್ನ, ತಿಂಡಿ ಬಳಕೆಯಲ್ಲಿದೆ. ವಿಶೇಷ ಸಾಂದರ್ಭಿಕವಾಗಿ ಹೋಳಿಗೆ, ಪಾಯಸ, ಬಾಡೂಟವೂ ಇರುತ್ತದೆ. ಸಾಂಪ್ರದಾಯಿಕ ವಾಹನಗಳಾದ ೬ ಎತ್ತಿನ ಗಾಡಿಗಳಿದ್ದು, ಟ್ರ್ಯಾಕ್ಟರ್, ಟೆಂಪೋ, ಲಾರಿ ಹಾಗೂ ದ್ವಿಚಕ್ರವಾಹನಗಳಿವೆ. ರಸ್ತೆ ಮತ್ತು ತೆರೆದ ಚರಂಡಿ ನಿರ್ಮಿಸಲಾಗಿದೆ.

ಶೇಂಗಾ ಗ್ರಾಮದ ಮುಖ್ಯ ಬೆಳೆ, ಆಹಾರ ಬೆಳೆಗಳಾಗಿ ರಾಗಿ, ಜೋಳ, ಭತ್ತ, ಅಲಸಂದಿ, ತೊಗರಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ದಾಳಿಂಬೆ, ಸಪೋಟ, ಅಡಿಕೆ ಬೆಳೆಗಳನ್ನು ಬೆಳೆಯುತ್ತಾರೆ. ಒಂದು ಹಾಲಿನ ಡೈರಿ ಇದ್ದು, ಸರಾಸರಿ ೨೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ದಾಳಿಂಬೆ, ಹುಣಸೆಹಣ್ಣು, ಶೇಂಗಾ, ತೆಂಗು, ಮುಖ್ಯ ವ್ಯಾಪಾರಿ ಸರಕಾಗಿದೆ.

ಸಾರಿಗೆ, ಆರೋಗ್ಯ, ಕಂದಾಯ, ಲೋಕೋಪಯೋಗಿ, ಕೆಇಬಿ, ಪಂಚಾಯತ್ ರಾಜ್ ಇಲಾಖೆ, ಶಿಕ್ಷಣ, ಕೃಷಿ, ತೋಟಗಾರಿಕೆ ಈ ಇಲಾಖೆಗಳಿಗೆ ಸೇರಿದ ೧೬ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಇಂಜಿನಿಯರ್ ಗೋಪಿಕುಂಟೆ ಈರಣ್ಣ , ಮಾಸ್ಟರ್ ಸುಬ್ರಹ್ಮಣ್ಯ ಸ್ವಾಮಿ ತಾಂತ್ರಿಕ ಇಂಜಿನಿಯರ್ ಆಗಿ ಬೆಂಗಳೂರಿನಲ್ಲಿ ಐಟಿ ಉದ್ಯಮಿಯಾಗಿ, ಜಿಮ್ ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಇವರ ತಂದೆ, ಗೋಪಕುಂಟೆ ಈರಣ್ಣ ಶಾಲಾ ಮಾಸ್ತರಾಗಿದ್ದು, ಉದಾರತೆ, ಪ್ರೋತ್ಸಾಹ, ಶಿಕ್ಷಣ ಆಂದೋಲನಗಳಿಂದಾಗಿ ಗ್ರಾಮೀಣ ಪರಿಸರದಲ್ಲಿ ಉತ್ತಮ ಕೀರ್ತಿ ಸಂಪಾದಿಸಿದ್ದಾರೆ. ಗ್ರಾಮದ ಮೊದಲ ಶಿಕ್ಷಕ ಎಂಬ ಹಿರಿಮೆಗೂ ಪಾತ್ರರಾಗಿದ್ದಾರೆ. ಇವರ ಶಿಲಾ ಪ್ರತಿಮೆಯನ್ನು ಸಿರಾ ಪ್ರೆಸಿಡೆನ್ಸಿ ವಿದ್ಯಾಸಂಸ್ಥೆಯ ಆವರಣದಲ್ಲಿ ಸ್ಥಾಪಿಸಿ ಇವರ ಸಾರ್ಥಕ ಜೀವನ ಗಾಥೆಯನ್ನು ಬಿಡಿಸಿದ್ದಾರೆ.

ಆರು ಜನ ವೈದ್ಯರಿದ್ದಾರೆ. ಐಟಿಬಿಟಿ ಇಂಜಿನಿಯರ್ ೪ ಜನ ವಕೀಲರು, ಕಾಂಟ್ರ್ಯಾಕ್ಟರ್‌ದಾರರೂ ಇದ್ದಾರೆ. ಕರ್ನಾಟಕ ಸರ್ಕಾರದ ಹಿರಿಯ ಲೋಕೋಪಯೋಗಿ ಇಂಜಿನಿಯರ್ ಇದೇ ಗ್ರಾಮದವರು. ಬೀಡಿ ಸುತ್ತವುದು, ಹೂ ಕಟ್ಟುವುದು, ರಾಗಿ ಮಿಲ್ಲು, ಹೊಂಗೆ ಬೀಜ, ಹುಣಸೆಹಣ್ಣು ಬಿಡಿಸುವುದು, ಮಹಿಳೆಯರ ಗೃಹ ಕೈಗಾರಿಕೆಯಾಗಿದೆ. ಇಟ್ಟಿಗೆ ಫ್ಯಾಕ್ಟರಿಗಳೂ ಇವೆ. ಬಡಗಿ, ಕಮ್ಮಾರಿಕೆ, ಪಾರಂಪರಿಕೆ ಕಸುಬು ಇಂದಿಗೂ ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಹೊಸಹಳ್ಳಿ ಗ್ರಾಮ ಪಂಚಾಯಿತಿ ಹಾಗೂ ಬರಗೂರು ತಾಲ್ಲೂಕು ಪಂಚಾಯಿತಿ ಕೇಂದ್ರವಾಗಿದ್ದು, ಈ ಗ್ರಾಮದ ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಜಿ.ಎನ್. ಮೂರ್ತಿ ಸಿರಾ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರೂ ಆಗಿದ್ದರು. ಪ್ರಗತಿಪರ ರೈತರೂ ಆಗಿದ್ದಾರೆ. ತಾಲ್ಲೂಕು ಕಚೇರಿ ಸಿರಾ, ಪೋಲೀಸ್ ಠಾಣೆಗೆ ಬರಗೂರು, ಸಂಪರ್ಕ ಹೊಂದಿದ್ದಾರೆ. ಅಂಚೆ ಸಂಪರ್ಕ ಹೊಸಹಳ್ಳಿಯಿಂದ ಇದೆ.

ನ್ಯಾಯಬೆಲೆ ಅಂಗಡಿ ಇದೆ. ೪ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ೨ ಧರ್ಮಸ್ಥಲ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳಾ ಸಬಲೀಕರಣಕ್ಕೆ ಪ್ರೇರಕವಾಗಿದೆ.

ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು, ೯೪ ಮಕ್ಕಳಿದ್ದು, ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ, ಪುಸ್ತಕಗಳು ಸೌಲಭ್ಯವಿದೆ. ೬೬.೪ ರಷ್ಟು ಸಾಕ್ಷರತೆ ಪ್ರಮಾಣವಿದೆ.

ಕ್ಷಯ, ಕೆಮ್ಮು, ಜ್ವರ, ಗ್ಯಾಸ್ಟಿಕ್ ಸಂಬಂಧಿ ಕಾಯಿಲೆಗಳು ಸಾಮಾನ್ಯವಾ ಗಿದ್ದು, ಪಟ್ಟನಾಯಕನಹಳ್ಳಿ, ಸಿರಾ ಸಾರ್ವಜನಿಕ ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆ ಚಿಕಿತ್ಸೆ ಪಡೆಯುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳು, ೩ ಟೀ ಅಂಗಡಿಗಳಿವೆ.

ಗ್ರಾಮದಲ್ಲಿ ಅರಳೀಮರ, ಬೇವಿನಕಟ್ಟೆ, ನಾಗರಕಲ್ಲು, ಕರುಗಲ್ಲುಗಳಿವೆ. ಗ್ರಾಮದಲ್ಲಿ ವೇಣುಗೋಪಾಲಸ್ವಾಮಿ, ಯಡ್ರಪ್ಪ,

ಲಕ್ಷ್ಮಿ, ಈಶ್ವರ, ಮುತ್ತುರಾಯನ ಪೌಳಿ ಇದೆ. ಕರಿಯಮ್ಮನ ಊರಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಬಲಿ, ಆರತಿ, ಹರಕೆ ಸಂಪ್ರದಾಯಗಳಿವೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ, ಗೌರಿ ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ.

ಗೋಪಿಕುಂಟೆ ನರಸಿಂಹಯ್ಯ ತಮಟೆ ವಾದ್ಯ ಕಲಾವಿದರಾಗಿದ್ದು, ವೈವಿಧ್ಯ ದಾಟಿಯಲ್ಲಿ ತಮಟೆ ನುಡಿಸುವುದು, ನೃತ್ಯ ಈತನ ವಿಶೇಷವಾಗಿದೆ. ಗ್ರಾಮದಲ್ಲಿ ವಿನಾಯಕ ಯುವಕರ ಸಂಘ, ಅಂಬೇಡ್ಕರ್ ಯುವಕ ಸಂಘ, ರೈತ ಸಂಘ, ಮದಕರಿ ನಾಯಕ ಸಂಘಗಳಿವೆ. ಇವು ಗ್ರಾಮದ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗೆ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ.

## ಗೋಪಿಕುಂಟೆ ನವಗ್ರಾಮ

ಗೋಪಿಕುಂಟೆ ನವಗ್ರಾಮವು ಸಿರಾ-ಅಮರಾಪುರ ಮುಖ್ಯ ರಸ್ತೆಯಲ್ಲಿ ೨೭ಕಿ.ಮೀ. ದೂರದಲ್ಲಿದೆ. ಗೋಪಿ ಕುಂಟೆಗೆ ೧ ಕಿ.ಮೀ. ದೂರದಲ್ಲಿದೆ. ೨೦೦೩ ರಲ್ಲಿ ಸಿರಾ ಕ್ಷೇತ್ರದ ಶಾಸಕ ಪಿ.ಎಂ. ರಂಗನಾಥಪ್ಪ ಶಾಸಕರಾಗಿದ್ದ ಅವಧಿಯಲ್ಲಿ ನವಗ್ರಾಮ ನಿರ್ಮಾಣವಾಗಿದೆ. ಇದು ಗೋಪಿಕುಂಟೆಯ ಉಪಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ಗೋಪಿಕುಂಟೆಯ ೩೧೪.೩ ಹೆಕ್ಟೇರ್‌ಗಳಲ್ಲಿ ಹಂಚಿಕೆಯಾಗಿದ್ದು, ಇಲ್ಲಿ ಇರುವ ೨೬ ಮನೆಗಳವರು ನಿರಾಶ್ರಿತರಾಗಿದ್ದು, ಜಮೀನು ರಹಿತ ಕುಟುಂಬಗಳಾಗಿವೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ತೋಳ, ಉಡ, ಕಾಡುಬೆಕ್ಕು, ಚಿರತೆ ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸುಗಳನ್ನು ಸಾಕಿದ್ದಾರೆ. ನಾಯಿ, ಬೆಕ್ಕು, ಇತರ ಕಾಡು ಪ್ರಾಣಿಗಳು ಇವೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಬಾವುಲಿ, ಕಾಗೆಪಿಳ್ಳೆ, ಕಾಗೆ, ಬೆಳವ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿಗಳಿವೆ. ಕೋಳಿಯನ್ನು ಮಾಂಸ ಹಾಗೂ ಮೊಟ್ಟೆಗಾಗಿ ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ಶೇ. ೪೮೦ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮-೪೦ಂ ಸೆಂ.ರಷ್ಟು ಇದ್ದು, ಚಳಿಯು ೧೨-೧೩ಂ ಸೆಂ. ಇರುತ್ತದೆ. ಕುಡಿಯಲು ಗೋಪಿಕುಂಟೆ ಗ್ರಾಮ ಪಂಚಾಯ್ತಿ ವತಿಯಿಂದ ಕಿರು ನೀರು ಯೋಜನೆ ಅಡಿಯಲ್ಲಿ ನೀರಿನ ಕೊಳವೆ ಬಾವಿ ೧ ಸಿಸ್ಟನ್‌ಗಳ ವ್ಯವಸ್ಥೆ ಮಾಡಿದ್ದಾರೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದ್ದು, ಬೇಡ, ನಾಯಕರು, ಅಕ್ಕಸಾಲಿಗರು, ಕುರುಬರು, ಆದಿದ್ರಾವಿಡ, ೪ ಕುಂಚಿಟಿಗರ ಮನೆಗಳಿವೆ. ಇಲ್ಲಿ ಜನತಾ, ಅಂಬೇಡ್ಕರ್ ವಸತಿ ಯೋಜನೆಯಲ್ಲಿ ೨೬ ಮನೆ ರಚನೆಯಾಗಿವೆ. ಎಲ್ಲರೂ ಬಯರು ಶೌಚಾಲಯವನ್ನು ಬಳಸುತ್ತಾರೆ. ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದ್ದು

ಗ್ರಾಮದಲ್ಲಿ ೨ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಕೂಲಿ ಕಾರ್ಮಿಕರಿದ್ದು, ಎಲ್ಲರೂ ಹೊಲದ ಕೆಲಸ ಮಾಡುತ್ತಾರೆ. ಹೆಂಗಸರು ಬೀಡಿ ಕಟ್ಟುವ, ಹೂ ಕಟ್ಟುವ, ಹುಣಸೆ ಹಣ್ಣು ಬಿಡಿಸುವ, ಹೊಂಗೆ ಬೀಜ ಆರಿಸುವ ಉಪಕಸುಬು ಹೊಂದಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರವಾಗಿದೆ. ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಬರಗೂರು ತಾಲ್ಲೂಕು ಪಂಚಾಯಿತಿ, ಹೊಸಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಡುತ್ತದೆ.

ಶೈಕ್ಷಣಿಕವಾಗಿ ಒಂದು ಪ್ರಾಥಮಿಕ ಶಾಲೆ ಇದ್ದು, ಉತ್ತಮ ಕಟ್ಟಡ, ಆಟದ ಮೈದಾನ, ಶೌಚಾಲಯದ ಸೌಲಭ್ಯಗಳಿದ್ದರೂ, ಮಕ್ಕಳ ಕೊರತೆಯಿಂದ ಸುಸಜ್ಜಿತವಾದ ಶಾಲೆಯನ್ನು ಮುಚ್ಚಿದೆ. ಗೋಪಿಕುಂಟೆ ಶಾಲೆಗೆ ಇಲ್ಲಿಂದ ೭ ಜನ ಮಕ್ಕಲು ಹೋಗುತ್ತಿದ್ದಾರೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಉಳಿದಂತೆ ಯುಗಾದಿ, ದಸರಾ, ಗೌರಿಗಣೇಶ, ದೀಪಾವಳಿ, ಕುಂತಮ್ಮ-ಗೌರಮ್ಮನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗಂಡೀಹಳ್ಳಿ

ಗಂಡೀಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೦ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಗಂಡಿಹಳ್ಳಿ ಮಠ ಇವರ ಉಪಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೨೮೪.೨೭ ಹೆಕ್ಟೇರ್. ಮರಳು ಮಿಶ್ರಿತ ಕೆಬ್ಬೆ ಮಣ್ಣನ್ನು ಹೊಂದಿದ್ದು, ಈ ಪರಿಸರದಲ್ಲಿ ನರಿ, ಮೊಲ, ಮುಂಗುಸಿ, ಬೆಕ್ಕು ಮೊದಲಾದ ಕಾಡು ಪ್ರಾಣಿಗಳು, ಹಸು, ಕುರಿ, ಮೇಕೆ, ಎಮ್ಮೆ, ನಾಯಿ, ಮೊದಲಾದ ಸಾಕು ಪ್ರಾಣಿಗಳು ಇವೆ. ಈ ಪರಿಸರದಲ್ಲಿ ಪಕ್ಷಿಗಳಾದ ಗಿಳಿ, ಗೊರವಂಕ, ಗೂಬೆ, ಕೌಜುಗ, ಕೊಕ್ಕರೆ, ಬೆಳವ,ಹದ್ದು, ಗರುಡು ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ೪೨೯ ಮಿ.ಮೀ. ಮಳೆ ಬೀಳುವ ಇಲ್ಲಿ ಉಷ್ಣಾಂಶ ಅಧಿಕವಾಗಿದೆ. ೪೦೦ ಸೆಂ. ಉಷ್ಣಾಂಶ, ಚಳಿ ೧೨೦ ಸೆಂ ಇದ್ದು, ಕೃಷಿ ಅವಲಂಬಿತ ಬದುಕಾಗಿದೆ. ನೀರಿನ ಆಸರೆ ಕಡಿಮೆ ಇದ್ದು, ೩೫ ಬೋರ್‌ವೆಲ್‌ಗಳು ಬಳಕೆ ಯಲ್ಲಿವೆ. ಆರು ಕಿರು ಟ್ಯಾಂಕ್‌ಗಳಿದ್ದು, ಎರಡು ಕೈ ಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಗೊಲ್ಲರು, ದೊಡ್ಡ ಸಮುದಾಯವಾಗಿದ್ದು, ನಾಯಕ, ಮುಸ್ಲಿಂ, ಉಪ್ಪಾರ, ಕಿರು ಸಮುದಾಯಗಳಾಗಿವೆ. ವಿವಿಧ ಪ್ರಕಾರಗಳ ೮೨ ಮನೆಗಳಿದ್ದು ಇವು ಕಡಪ ಕಲ್ಲಿನ ಹೆಂಚಿನ, ಶೀಟಿನ ಮನೆಗಳಿವೆ. ಆಶ್ರಯ, ಅಂಬೇಡ್ಕರ್, ಜನತಾ, ವಸತಿ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಪ್ರಯೋಜನದ ಫಲಾನುಭವಿಗಳಿದ್ದಾರೆ. ೪೧೨ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ, ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ, ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಬಂಡಿ, ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರವಾಹನಗಳಿವೆ. ಶೇಂಗಾ ಈ ಭಾಗದ ಮುಖ್ಯ ಬೆಳೆಯಾಗಿದ್ದು, ಭತ್ತ ರಾಗಿ, ಅಲಸಂದಿ, ತೊಗರಿ ಮುಖ್ಯ ಬೆಳೆ. ಶೇಂಗಾ, ಹುಣಸೆಹಣ್ಣು ವ್ಯಾಪಾರಿ ಬೆಳೆಗಳು. ಶಿಕ್ಷಕರು, ಸಾರಿಗೆ ಇಲಾಖೆ ಸೇರಿದಂತೆ ಮೂರು ಜನ ಸರ್ಕಾರಿ ನೌಕರರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಗುಂಟೆ ತಾಲ್ಲೂಕು, ಜಿಲ್ಲಾ ಪಂಚಾಯತ್ ಕೇಂದ್ರವಾಗಿದ್ದು, ದೊಡ್ಡ ಬಾಣಗೆರೆ ಗ್ರಾಮ ಪಂಚಾಯಿತಿ ಕ್ಷೇತ್ರವಾಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ೨ ಸ್ತ್ರೀ ಶಕ್ತಿ ಕೇಂದ್ರ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು, ಮಹಿಳಾ ಸಬಲೀಕರಣಕ್ಕೆ ಪ್ರೇರಕವಾಗಿದೆ. ಒಂದು ಅಂಗನವಾಡಿ ಕೇಂದ್ರವಿದ್ದು, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ೪೭ ವಿದ್ಯಾರ್ಥಿಗಳಿದ್ದಾರೆ. ಇಬ್ಬರು ಶಿಕ್ಷಕರಿದ್ದು. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಹಾಗೂ ಪಠ್ಯಪುಸ್ತಕ, ಸಮವಸ್ತ್ರ ವಿತರಣಾ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೪೮.೨ ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯ ಪಡೆದವರಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ.

ಧಾರ್ಮಿಕವಾಗಿ, ಬಾಬಾ ಬುಡನ್ ದೇವಸ್ಥಾನ, ಕೆಂಚರಾಯ ದೇವಾಲಯ ಊರ ಹೊರಗೆ ಪ್ರತ್ಯೇಕವಾಗಿದೆ. ಕರಿಯಮ್ಮ ದೇವಾಲಯವಿದ್ದು, ಊರ ಹಬ್ಬ ನಡೆಸಿ ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ. ಯುಗಾದಿ, ಶಿವರಾತ್ರಿ, ಮಹಾಲಯ, ಗೌರಿಗಣೇಶನ ಹಬ್ಬಗಳನ್ನು ಆಚರಿಸುತ್ತಿದ್ದಾರೆ.

## ಗಂಡಿಹಳ್ಳಿ ಮಠ

ಗಂಡಿಹಳ್ಳಿ ಮಠ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಹಿಂದು-ಮುಸ್ಲಿಂ ಸಮನ್ವಯ – ಆಧ್ಯಾತ್ಮಕ ಕೇಂದ್ರವಾಗಿರುವ ಈ ಗ್ರಾಮ, ಕಂದಾಯ ಗ್ರಾಮವಾಗಿದ್ದು, ೩೨೨ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೋಂದಿದೆ. ಸಿರಾ-ಅಮರಾಪುರ ಮುಖ್ಯ ರಸ್ತೆಯಲ್ಲಿ ಚಿಕ್ಕ ಹುಲಿಕುಂಟೆ ಗೇಟಿನಿಂದ ಮುಂದೆ ಗಂಡಿಹಳ್ಳಿ ಗೇಟಿನಲ್ಲಿ ಬಲಕ್ಕೆ ತಿರುಗಿ ಅರ್ಧ ಕಿ.ಮೀ. ನಡೆದರೆ ಈ ಗ್ರಾಮವಿದೆ. ಆರಂಭದಲ್ಲಿ ಇದೊಂದು ತೋಪಿನ ನೆಲವಾಗಿದ್ದು, ದರ್ಗಾ, ಕೆಂಚರಾಯನ ಗುಡಿ, ದತ್ತಾತ್ರೇಯ ಮಂದಿರ, ಎಲ್ಲವೂ ಒಂದೇ ಕಡೆ ಇರುವುದು. ಇವುಗಳನ್ನು ಕಾಡುಗೊಲ್ಲರು ಆರಾಧಿಸುವುದು, ಹಿಂದೂ ಸಂಪ್ರದಾಯ, ಮುಸ್ಲಿಂ ಪರಂಪರೆಗೆ ಅನುಗುಣವಾಗಿ ನಮಾಜು, ಸಕ್ಕರೆ ಓದಿಸುವುದು, ಅಲಾಲ್ ಹಾಗೂ ತೆಂಗಿನಕಾಯಿ ಒಡೆಯದೆ ಪ್ರಾರ್ಥನೆ ಸಲ್ಲಿಸುವುದು ಇಲ್ಲಿನ ವಿಶೇಷ

ಕಾಡುಗೊಲ್ಲರ ತಿಮ್ಮಪ್ಪ ಈ ದರ್ಗಾ ಮಂದಿರದ ಅರ್ಚಕ. ಹಿಂದೂ ವಾದರೂ ಮುಸ್ಲಿಂ ರೀತಿಯ ಮುಂಜಿ, ಹಂದಿ ಸಂಬಂಧಿ ಮಾಂಸಾಹಾರ ನಿಷೇಧ ಇಲ್ಲಿನ ವಿಶೇಷವಾಗಿದೆ. ದೇವಸ್ಥಾನದಲ್ಲಿ ದೊಡ್ಡ ನಗಾರಿ ಇದ್ದು ನಮಾಜಿನ ಕಾಲದಲ್ಲಿ ನಗಾರಿ ಬಾರಿಸುವ ಸಂಪ್ರದಾಯವಿದೆ. ಮೊಹರಂ, ಬುಡೇನ್ ಜಾತ್ರೆ ಎಂಬ ಹೆಸರಲ್ಲಿ ಒಂದು ವಾರಗಳ ಜಾತ್ರೆ, ಅಗ್ನಿ ಕುಂಡ ಸೇವೆ, ಜಡೆಯ ಸೇವೆ, ಅಲಾವಿ ಬಿಡುವುದು. ಈ ಬಗೆಯ ಆಚರಣೆಯಲ್ಲಿ ಗಂಡಿ ಹಳ್ಳಿ ಪ್ರಸಿದ್ಧವಾಗಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಕಾಡುಹಂದಿ, ಕತ್ತೆ ಕಿರುಬ, ಬಾರು ಬೆಕ್ಕು, ಉಡ ಈ ಮೊದಲಾದ ಕಾಡು ಪ್ರಾಣಿಗಳು ಕಂಡು ಬರುತ್ತವೆ.

ಗ್ರಾಮದಲ್ಲಿ ರೈತರು ಹಸು, ಎಮ್ಮೆ, ಕುರಿ, ಮೇಕೆ ಸಾಕುತ್ತಿದ್ದು, ಹಂದಿ ಇವರಿಗೆ ನಿಷೇಧವಾಗಿದೆ. ಸಾಕು ಪಕ್ಷಿಯಾಗಿ ಕೋಳಿ ಸಾಕಾಣಿಕೆ ಇದೆ.

ಪಕ್ಷಿಗಳಾದ ಕೋಗಿಲೆ, ಕೊಕ್ಕರೆ, ಗಿಳಿ, ಗೀಜಗ, ಗೊರವಂಕ, ಗಿಳಿ, ಹದ್ದು, ಗರುಡ, ಗೂಬೆ, ಕೌಜುಲ, ಬಾವುಲಿ, ಬೆಳವ, ಗುಬ್ಬಚ್ಚಿ ಕಂಡು ಬರುತ್ತವೆ. ಈ ಪರಿಸರದಲ್ಲಿ ಒಂದು ಕೆರೆಯಿದ್ದರೂ ತುಂಬುವುದು ಕಡಿಮೆ. ಹಾಗಾಗಿ ಇಲ್ಲಿನ ಕೃಷಿ ಅವಲಂಬಿತ ರೈತರು ೧೬ ಕೊಳವೆ ಬಾವಿಗಳನ್ನು ಕೊರೆಸಿದ್ದು, ಕುಡಿಯಲು ಗ್ರಾಮ ಪಂಚಾಯಿತಿಯ ಕಿರು ನೀರು ಸರಬರಾಜು

ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ದೊಡ್ಡ ಟ್ಯಾಂಕ್ ಇದ್ದು, ನಲ್ಲಿಗಳ ಮೂಲಕ ದೇವಾಲಯದ ಭಕ್ತರಿಗೆ ನೀರು ಒದಗಿಸಿದೆ. ಈ ಪರಿಸರದಲ್ಲಿ ೨ ಕೈ ಪಂಪುಗಳಿವೆ.

ಕಾಡುಗೊಲ್ಲರು ಇಲ್ಲಿನ ಸಾಮಾಜಿಕ ರಚನೆಯಲ್ಲಿ ದೊಡ್ಡ ಸಮುದಾಯ ವಾಗಿದ್ದು, ನಾಯಕ, ಮುಸ್ಲಿಂ, ಕಿರು ಸಮುದಾಯಗಳಾಗಿವೆ. ಕನ್ನಡ ಮತ್ತು ಉರ್ದು ಭಾಷೆ ಬಳಕೆಯಲ್ಲಿವೆ. ಒಟ್ಟು ೨೫ ಮನೆಗಳಿದ್ದು, ಹೆಂಚಿನ, ಶೀಟಿನ, ಮಣ್ಣಿನ ಮನೆಗಳಿವೆ. ೬೪ ಜನ ಸಂಖ್ಯೆ ಹೊಂದಿದ್ದು, ೬ ಮನೆಯಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ರೊಟ್ಟಿ, ಅನ್ನ ಬಳಸುವವರಿದ್ದಾರೆ ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಊಟದ ಬಳಕೆಯಿದೆ. ಟ್ರ್ಯಾಕ್ಟರ್, ಸ್ಕೂಟರ್ ಹಾಗೂ ಟೆಂಪೋ ಬಳಕೆಯಲ್ಲಿದ್ದು, ಶೇಂಗಾ ಈ ಪ್ರದೇಶದ ಮುಖ್ಯ ಬೆಳೆ. ಜೋಳ, ಅಲಸಂದಿ, ತೊಗರಿ ಆಹಾರ ಬೆಳೆಗಳು. ಶೇಂಗಾ, ಹುಣಸೆಹಣ್ಣು, ಸೂರ್ಯಕಾಂತಿ ವ್ಯಾಪಾರಿ ಬೆಳೆಗಳು. ಇಬ್ಬರು ಸರ್ಕಾರಿ ನೌಕರರಿದ್ದು, ಗ್ರಾಮದಲ್ಲಿ ಬೀಡಿ ಸುತ್ತುವುದು, ಎಲೆ ಕಟ್ಟುವುದು, ಹೂ ಕಟ್ಟುವುದು ಹೆಂಗಸರ ಗೃಹ ಕೈಗಾರಿಕೆಯಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನು ಹೊಂದಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಸಿರಾ–ಅಮರಾಪುರಕ್ಕೆ ಉತ್ತಮ ರಸ್ತೆ ಸಂಪರ್ಕ, ವಾಹನ ಸೌಲಭ್ಯವಿದೆ. ಒಬ್ಬರು ಪಂಚಾಯಿತಿ ಸದಸ್ಯರಿದ್ದಾರೆ. ಶೈಕ್ಷಣಿಕವಾಗಿ ದೊಡ್ಡ ಬಾಣಗೆರೆ, ಬರಗೂರು, ಲಕ್ಕನಹಳ್ಳಿ ಅವಲಂಬಿಸಿರುವ ಈ ಗ್ರಾಮ ೪೮.೨ ರಷ್ಟು ಸಾಕ್ಷರತರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ವೃದ್ಧಾಪ್ಯ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೮ ಪೆಟ್ಟಿಗೆ, ಟೀ ಅಂಗಡಿಗಳಿವೆ. ದತ್ತಾತ್ರೇಯ ಬುಡನ್ ಜಾತ್ರೆ ಒಂದು ವಾರಗಳ ಕಾಲ ನಡೆಯುತ್ತದೆ. ಹಲಾವಿ ಬಿಡುವುದು, ಕುದರೆ ಸುತ್ತಲ ಹಳ್ಳಿಗಳಲ್ಲಿ ಸುತ್ತಾಡಿ, ಕಾಣಿಕೆ, ಹರಕೆ ಸ್ವೀಕರಿಸಿ, ಹಿಂತಿರುಗಿ ಬಂದಾಗ ಬೃಹತ್ ಜಾತ್ರೆ ಕಲಿಯುತ್ತದೆ. ಗಾಳಿ, ದೆವ್ವ ಸಂಬಂಧಿ ಉತ್ತಮ ಪರಿಹಾರ ಎಂಬ ನಂಬಿಕೆ ಈ ಭಾಗದಲ್ಲಿದ್ದು ಹಿಂದೂಪುರ, ಅನಂತಪುರ ಸೇರಿದಂತೆ ಕರ್ನಾಟಕ–ಆಂಧ್ರ ಎರಡೂ ಪ್ರದೇಶಗಳ ಜನ ವಿಶೇಷವಾಗಿ ಶುಕ್ರವಾರ ಕಲೆಯುವುದು ಇಲ್ಲಿನ ವಿಶೇಷವಾಗಿದೆ. ಅಗ್ನಿಕುಂಡ ಆಚರಣೆ ಇದು ಹಿಂದು ಪರಂಪರೆಯ ಪ್ರಕಾರ ಏರ್ಪಡುತ್ತದೆ. ಈ ಸಂದರ್ಭದಲ್ಲಿ ಸಕ್ಕರೆ ಓದಿಸುವುದು, ಬಾಬಯ್ಯನ ಕುಣಿತ, ಕವಾಲಿ ಆಚರಣೆ, ತಮ್ಮಟೆ, ಕೋಲುಮೇಳ ಮೊದಲಾದ ಸಾಂಸ್ಕೃತಿಕ ಮೇಳ ವಾರದ ೭ ದಿನಗಳಲ್ಲಿ ಜರುಗುತ್ತವೆ. ಉಳಿದಂತೆ ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ ಹಬ್ಬಗಳು ಆಚರಣೆ ಇದೆ. ಯಾತ್ರಾರ್ಥಿಗಳು ಇಳಿದು ಕೊಳ್ಳಲು ಕಲ್ಲಿನ ಮಂಟಪಗಳು, ನೀರಿನ ಸೌಕರ್ಯ ಕಲ್ಪಿಸಿದೆ.

## ಗಂಜಲಗುಂಟೆ

ಗಂಜಲಗುಂಟೆ ಸಿರಾ ತಾಲ್ಲೂಕಿನಿಂದ ಆಗ್ನೇಯ ದಿಕ್ಕಿಗೆ ೧೮ ಕಿ.ಮೀ. ದೂರದಲ್ಲಿದೆ. ಸಿರಾ–ತುಮಕೂರು ಮುಖ್ಯ ರಸ್ತೆಯಲ್ಲಿ ಕಳ್ಳಂಬೆಳ್ಳದ ನಂತರ ಮಳ್ಳಪ್ಪನಹಳ್ಳಿ ಗೇಟಿನಿಂದ ಗಂಜಲಗುಂಟೆಗೆ ಬಸ್ ವ್ಯವಸ್ಥೆ ಇದೆ. ಬ್ರಹ್ಮಸಂದ್ರ ಗೇಟಿನಿಂದಲೂ ರಸ್ತೆ ಸಂಪರ್ಕ ಹೊಂದಿದೆ. ಇದು ತರೂರಿನ ಮಜರೆ ಗ್ರಾಮವಾಗಿದ್ದು, ಇದರ ಒಟ್ಟು ಭೌಗೋಳಿಕ ವ್ಯಾಪ್ತಿ ೧೬೮.೧೯ ಹೆಕ್ಟೇರ್ ಆಗಿದೆ. ಇದಕ್ಕೆ ಗಂಜಲ ಗುಂಟೆ ಗೊಲ್ಲರಹಟ್ಟಿ ಉಪಗ್ರಾಮವಾಗಿದೆ.

ಪಶುಪಾಲನೆಯ ಮೂಲದಿಂದ ಗಂಜಲ ಶಬ್ದ ಬಂದಿದ್ದು, ಪಕ್ಕದಲ್ಲಿ ತರೂರು ಇದೆ. ಈ ಭಾಗದಲ್ಲಿ ಒಂದು ಕೆರೆ ಇದ್ದು, ದನಗಳು ನೀರು ಕುಡಿಯಲು, ಮೇಯಲು ಒಟ್ಟುಗೂಡುತ್ತಿದ್ದರಿಂದಾಗಿ ಗಂಜಲಗುಂಟೆ ಎಂದು ಕರೆಯಲಾಗಿದೆ. ಗಂಜಲಗುಂಟೆ ಪ್ರಾಕೃತಿಕವಾಗಿ ತಗ್ಗಿನ ಪ್ರದೇಶ. ಪಶ್ಚಿಮಕ್ಕೆ ತರೂರು, ಉತ್ತರಕ್ಕೆ ಗುಬ್ಬಿ ಚಿಕಣ್ಣನ ಪಾಳ್ಯವಿದೆ. ಪ್ರಾಕೃತಿಕವಾಗಿಯೂ ಹುಲ್ಲುಗಾರಿಕೆಯ ಹಳ್ಳ, ತಗ್ಗಿನ ಪ್ರದೇಶವಾಗಿದೆ. ಇದೇ ಮಾದರಿ ವೈ ಲಕ್ಷಣಗಳನ್ನು ಅನುಸರಿಸಿ ಇಂದು ತೋಟಸಾಲು ವಿಶೇಷವಾಗಿ ಬೆಳೆದಿದೆ. ಈ ಭಾಗದ ಕೊಬ್ಬರಿ ತುಮಕೂರು ಜಿಲ್ಲೆಯಲ್ಲಿ ಅತಿ ಹೆಚ್ಚು ತೂಕ ಕೊಡುವ ಉತ್ಕೃಷ್ಟ ಬೆಳೆಯಾಗಿದ್ದು ರೈತರಿಗೆ ವಿಶೇಷವಾಗಿ ತೆಂಗಿನ ಬೆಳೆಗಾರರಿಗೆ ಈ ಮಣ್ಣು, ಹವಾಮಾನ ಉತ್ಕೃಷ್ಟವಾಗಿದೆ.

ಮರಳು ಮಿಶ್ರಿತ ಕೆಂಪು, ಕಪ್ಪು ಮಣ್ಣನ್ನು ಹೊಂದಿದೆ. ಬಯಲು ಸೀಮೆಯಾದರೂ ಗಂಜಲಗುಂಟೆ ತೋಟ ಸಾಲಿನಿಂದ ಸದಾ ಹಸಿರಾಗಿದೆ. ಈ ಪರಿಸರದಲ್ಲಿ ನರಿ, ಜಿಂಕೆ, ಬಾರು ಬೆಕ್ಕು, ಮೊಲ, ಮುಂಗುಸಿ, ಉಡ, ಕಾಡುಹಂದಿ ಕಂಡು ಬರುತ್ತವೆ. ಗ್ರಾಮದಲ್ಲಿ ರೈತಾಪಿ ಪಶುಪಾಲನೆ ಇರುವುದರಿಂದ ಹಸು ನಾಟಿ ಹಾಗೂ ಸೀಮೆ ಹಸುಗಳನ್ನು ಸಾಕುತ್ತಾರೆ. ಎತ್ತು, ಕುರಿ, ಮೇಕೆ, ನಾಯಿ, ಎಮ್ಮೆಗಳನ್ನು ಸಾಕಿದ್ದಾರೆ. ಕಾಡು ಪಕ್ಷಿಗಳಾಗಿ ಗೊರವಂಕ, ಕೊಕ್ಕರೆ, ಕೋಗಿಲೆ, ನವಿಲು, ಗರುಡ, ಹದ್ದು, ಕೌಜಲಗ, ಗುಬ್ಬಚ್ಚಿ, ಗಿಳಿ ಪಕ್ಷಿಗಳು ಕಂಡು ಬರುತ್ತದೆ.

ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೫೫೭.೩ ಮಿ.ಮೀ. ಕಳೆದ ಮೂರು ವರ್ಷಗಳಿಂದ ಮಳೆ ಬೀಳುತ್ತಿದ್ದು,

ಉಷ್ಣಾಂಶ ೩೮೦ ಸೆಂ. ಇದ್ದು, ಚಳಿ ೧೨೦ ಸೆಂ. ಸಹಜವಾಗಿರುತ್ತದೆ. ಮಳೆ ಸಾಧಾರಣ ಇರುವುದರಿಂದ ರೈತಾಪಿ ಬದುಕು, ಉಪನೀರಾವರಿಗಾಗಿ ೩೦ ಬೋರ್ ವೆಲ್‌ಗಳನ್ನು ಕೊರೆಸಿ ನೀರಿಗೆ ಅನುಕೂಲ ಮಾಡಿಕೊಂಡಿದ್ದಾರೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೪ ಕಿರು ಟ್ಯಾಂಕ್‌ಗಳು ಇದ್ದು , ೨ ಕೈ ಪಂಪುಗಳು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಲಿಂಗಾಯಿತ ಜನಾಂಗ ದೊಡ್ಡ ಸಮುದಾಯವಾಗಿದ್ದು , ಸಾದರು, ಕುಂಚಿಟಿಗೆ, ನಾಯಕ, ಅಕ್ಕಸಾಲಿಗರು ಕಿರು ಸಮುದಾಯವಾಗಿದೆ. ಕನ್ನಡ ಭಾಷೆ ಮಾತನಾಡುತ್ತಾರೆ. ೧೨೦ ವಿವಿಧ ಪ್ರಕಾರದ ಮನೆಗಳಿರುವ ಈ ಗ್ರಾಮದಲ್ಲಿ ಇವು ಕಾಂಕ್ರೀಟ್, ಶೀಟಿನ, ಹೆಂಚಿನ ಸ್ವರೂಪದ ಮನೆಗಳಿದ್ದು, ವಿಶೇಷವಾಗಿ ಸರ್ಕಾರದ ವಸತಿ ಯೋಜನೆ, ಇಂದಿರಾ ಆವಾಸ್, ಹಾಗೂ ಉಚಿತ ವಿದ್ಯುತ್ ಸಂಪರ್ಕದ ಭಾಗ್ಯಜ್ಯೋತಿ ಫಲಾನುಭವಿಗಳಿದ್ದಾರೆ. ೨೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೫೪೩ ಜನಸಂಖ್ಯೆ ಇದೆ.

ರಾಗಿ ಮುದ್ದೆ, ಅನ್ನ ಗ್ರಾಮದ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನ ಎತ್ತಿನಗಾಡಿ ಇದ್ದು, ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಮಿನಿಟೆಂಪೋ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಭತ್ತ, ಜೋಳ, ಬೆಳೆಯುತ್ತಾರೆ. ತೋಟಗಾರಿಕೆ ಅಧಿಕವಾಗಿದ್ದು ತೆಂಗು, ಅಡಿಕೆ ಹೆಚ್ಚಾಗಿ ಬೆಳೆಯುತ್ತಾರೆ. ಅಲ್ಪ ಕಾಲೀನ ಬೆಳೆಯಾಗಿ ಹತ್ತಿ, ರೇಷ್ಮೆ, ಸೇವಂತಿಗೆ, ಸೊಪ್ಪು, ತರಕಾರಿ ಬೆಳೆಯುತ್ತಾರೆ.

ಹಾಲನ್ನು ಸಮೀಪದ ಗುಬ್ಬಿ ಚಿಕ್ಕಣ್ಣನ ಪಾಳ್ಯ ಡೈರಿಗೆ ಹಾಕುತ್ತಾರೆ. ಶೇಂಗಾ, ತೆಂಗು, ಅಡಿಕೆ, ಸೇವಂತಿಗೆ, ಹುಣಸೇಹಣ್ಣು, ಹೊಂಗೆ ಬೀಜ ಮುಖ್ಯ ವ್ಯಾಪಾರಿ ಸರಕಾಗಿದೆ. ಮೂರು ಜನ ಶಿಕ್ಷಕರು ಸರ್ಕಾರಿ ನೌಕರರಿದ್ದು, ಖಾಸಗಿ ವಕೀಲರು ಒಬ್ಬರಿದ್ದಾರೆ. ಕೆ.ಎಸ್.ಆರ್.ಟಿ.ಸಿ. ನೌಕರರು ಒಬ್ಬರಿದ್ದಾರೆ. ಗ್ರಾಮದಲ್ಲಿ ಗರಿ ಕಟ್ಟಿ ಹೆಣೆಯುವುದು, ಹೂ ಕಟ್ಟುವುದು, ಮಹಿಳೆಯರ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯಿತಿ ಹಾಗೂ ತರೂರು ತಾಲ್ಲೂಕು ಗ್ರಾಮ ಪಂಚಾಯತ್ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಸಿರಾ–ತುಮಕೂರು – ಕಳ್ಳಂಬೆಳ್ಳಕ್ಕೆ ಬಸ್ ಸಂಪರ್ಕವಿದೆ. ಗ್ರಾಮದಲ್ಲಿ ೨ ಸ್ತ್ರೀ ಶಕ್ತಿ ಸಂಘಗಳಿದ್ದು ಸ್ತ್ರೀಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ೪ ಜನ ಶಿಕ್ಷಕರು , ೯೭ ಜನ ವಿದ್ಯಾರ್ಥಿಗಳಿದ್ದಾರೆ. ಗ್ರಾಮದ ಸಾಕ್ಷರತೆ ಶೇ. ೬೨.೪ ರಷ್ಟಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಹಾಗೂ ಪಠ್ಯಪುಸ್ತಕ, ಕಾಂಪೌಂಡ್, ಸಮವಸ್ತ್ರ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೬.೯ ರಷ್ಟಿದೆ. ರಾಷ್ಟ್ರಬಂಧು ಯುವಕ ಸಂಘವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ಗ್ರಾಮದಲ್ಲಿ ೪ ಪೆಟ್ಟಿಗೆ ಅಂಗಡಿಗಳು ಟೀ ಅಂಗಡಿಗಳು ಇವೆ. ಗ್ರಾಮದಲ್ಲಿ ಬಸವೇಶ್ವರ ದೇವಾಲಯವಿದ್ದು, ಮಾರಮ್ಮ ಗದ್ದಿಗೆ, ಅರಳಿಕಟ್ಟೆ ಇದೆ. ತರೂರು ದುರ್ಗನ ಮಡಿಲಕ್ಕಿ ಸೇವೆ, ಮಾರಮ್ಮನಿಗೆ ಹರಕೆ ಮರಿ, ಬಾನದ ಮರಿ, ಭರಿ ಸೆರಗು ಹಾಕುವುದು ಈ ಗ್ರಾಮದ ವಿಶೇಷವಾಗಿದೆ. ಉಳಿದಂತೆ ಯುಗಾದಿ, ಮಹಾನವಮಿ, ಶಿವರಾತ್ರಿ, ಸಂಕ್ರಾತಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮರಿಯಣ್ಣ ಎಂಬ ಪಾರಂಪರಿಕೆ ವೈದ್ಯನಿದ್ದು ನಾಟಿ ಔಷಧಿ ನೀಡುತ್ತಾರೆ. ಒಂದು ನ್ಯಾಯಬೆಲೆ ಅಂಗಡಿ ಇದ್ದು, ಪಡಿತರ ವಿತರಣೆ ಮಾಡಲಾಗುತ್ತದೆ.

## ಗಂಜಲಗುಂಟೆ ಗೊಲ್ಲರಹಟ್ಟಿ

ಗಂಜಲಗುಂಟೆ ಗೊಲ್ಲರಹಟ್ಟಿ ಕಾಡುಗೊಲ್ಲರ ಒಂದು ಬುಡಕಟ್ಟು ಗ್ರಾಮವಾಗಿದೆ. ಇದು ಗಂಜಲಗುಂಟೆ ಮೂಲ ಗ್ರಾಮಕ್ಕೆ ಸೇರಿರುವುದರಿಂದ ಗಂಜಲಗುಂಟೆ ಹೆಸರಿನಲ್ಲೇ ಗೊಲ್ಲರಹಟ್ಟಿಯಾಗಿದೆ. ಸಿರಾದಿಂದ ತರೂರು ಮಾರ್ಗವಾಗಿ ೧೯ ಕಿ.ಮೀ. ದೂರದಲ್ಲಿದೆ. ಇದರ ಭೌಗೋಳಿಕ ವ್ಯಾಪ್ತಿ ೯೬.೮ ಇದ್ದು, ತರೂರಿನ ಮಜರೆ ಗ್ರಾಮವಾಗಿದೆ. ಮರಳು ಮಿಶ್ರಿತ ಕೆಂಪು, ಕಪ್ಪು ಮಣ್ಣನ್ನು ಹೊಂದಿದೆ.

ಈ ಪರಿಸರದಲ್ಲಿ ನರಿ, ಜಿಂಕೆ, ಮೊಲ, ಮುಂಗುಸಿ, ಉಡ, ಮುಂಗುಸಿ ಹಾಗೂ ವಿಷಪೂರಿತ ಹಾವುಗಳು ಕಂಡು ಬರುತ್ತವೆ. ಗ್ರಾಮದಲ್ಲಿ ರೈತಾಪಿ ಪಶುಪಾಲನೆ ಇರುವುದರಿಂದ ಹಸು, ಎತ್ತು, ಕುರಿ, ಮೇಕೆ, ನಾಯಿ, ಎಮ್ಮೆಗಳನ್ನು ಸಾಕಿದ್ದಾರೆ. ಕಾಡು ಪಕ್ಷಿಗಳಾಗಿ ಗೊರವಂಕ, ಕೊಕ್ಕರೆ, ಕೋಗಿಲೆ, ಗೂಬೆ, ಕಾಗೆ, ಹದ್ದು, ಮರಕುಟಿಕ, ಗುಬ್ಬಚ್ಚಿ, ಗಿಳಿ ಪಕ್ಷಿಗಳು ಕಂಡು ಬರುತ್ತದೆ. ಕೋಳಿಗಳಾಗಿ ನಾಟಿ ಹಾಗೂ ಗಿರಿರಾಜ ಕೋಳಿಗಳನ್ನು ಮಾಂಸ ಹಾಗೂ ಮೊಟ್ಟೆಗಾಗಿ ಸಾಕಲಾಗುತ್ತಿದೆ.

ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೫೭೧.೧ ಮಿ.ಮೀ. ಮಳೆ ಬೀಳುತ್ತಿದ್ದು ಸಾಕಾಗುತ್ತಿಲ್ಲ. ಬಿಸಿಲಿನ ಉಷ್ಣಾಂಶ ೩೮೦ ಸೆಂ. ಇದ್ದು, ಚಳಿ ೧೨೦ ಸೆಂ. ಸಹಜವಾಗಿರುತ್ತದೆ. ಈ ಪರಿಸರದಲ್ಲಿ ೧೪ ಕೊಳವೆ ಬಾವಿಗಳಿದ್ದು, ಉಪ ನೀರಾವರಿ ಮೂಲಕ ಬಳಕೆಗೆ ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ  ಕಿರು ನೀರು ಸರಬರಾಜು ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೧ ಚಿಕ್ಕ ಟ್ಯಾಂಕ್ ಇದ್ದು , ೧ ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕಾಡುಗೊಲ್ಲ ಜನಾಂಗ ದೊಡ್ಡ ಸಮುದಾಯವಾಗಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ.  ವಿವಿಧ ಪ್ರಕಾರದ ಮನೆಗಳಿರುವ ಈ ಗ್ರಾಮದಲ್ಲಿ ಇವು ಕಾಂಕ್ರೀಟ್, ಶೀಟಿನ, ಹೆಂಚಿನ ಸ್ವರೂಪದ ಮನೆಗಳಿದ್ದು,  ೬೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಒಟ್ಟು ಜನಸಂಖ್ಯೆ ೧೬೨ ಇದ್ದು, ಕುರಿಗಾರಿಕೆಯ ಕಾರಣದಿಂದ ಅಲೆಮಾರಿ ಬದುಕು ಇಲ್ಲಿದೆ.

ರಾಗಿ ಮುದ್ದೆ, ಅನ್ನ ಗ್ರಾಮದ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನ ಇಲ್ಲ. ಆಧುನಿಕ ವಾಹನಗಳು ಟ್ರ್ಯಕ್ಟರ್, ಮಿನಿಟೆಂಪೋ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಹುರುಳು, ಜೋಳ, ಬೆಳೆಯುತ್ತಾರೆ. ವಿರಳವಾಗಿ ತೋಟಗಾರಿಕೆ ಇದ್ದು ತೆಂಗು, ಸೇವಂತಿಗೆ, ಸೂರ್ಯಕಾಂತಿ ಬೆಳೆಯೂ ಬೆಳೆಯುತ್ತಾರೆ. ಶೇಂಗಾ, ಕುರಿಗಾರಿಕೆ ಮುಖ್ಯ ಸರಕಾರಿದೆ. ಮಹಿಳೆಯರು ಹುಣಸೆಹಣ್ಣು ಬಿಡಿಸುವುದು, ಹೂ ಕಟ್ಟುವುದು, ಹೊಂಗೆ ಬೀಜ ಶೇಕರಣೆ  ಮಹಿಳೆಯರ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯಿತಿ ಹಾಗೂ ತರೂರು ತಾಲ್ಲೂಕು ಗ್ರಾಮ ಪಂಚಾಯತ್ ಕೇಂದ್ರವಾಗಿದ್ದು,  ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಈ ಗ್ರಾಮದಿಂದ ೧ ಪಂಚಾಯಿತಿ ಸದಸ್ಯರಿದ್ದಾರೆ. ಒಂದು ಸ್ತ್ರೀಶಕ್ತಿ ಸಂಘವಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು, ಶೇ. ೬೨.೪ ರಷ್ಟು ಸಾಕ್ಷರತಾ ಪ್ರಮಾಣ ಇದೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ತರೂರು, ಸಿರಾ ಗ್ರಾಮಕ್ಕೆ ಹೋಗಬೇಕಾಗಿರುತ್ತದೆ. ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ನರಸಿಂಹಸ್ವಾಮಿ ಗುಬ್ರವಿದ್ದು, ದಸರಾ ಸಂದರ್ಭದಲ್ಲಿ ವಿಶೇಷ ಉತ್ಸವ, ಮೆರವಣಿಗೆ, ಆರತಿ, ಉತ್ಸವವಿರುತ್ತದೆ. ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ದಸರಾ, ರಾಮನವಮಿ ಹಬ್ಬಗಳನ್ನು ಆಚರಿಸುತ್ತಾರೆ.

## ಗುಬ್ಬಿ ಚಿಕ್ಕಣ್ಣನಪಾಳ್ಯ

ಗುಬ್ಬಿ ಚಿಕ್ಕಣ್ಣನ ಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಸಿರಾ–ತುಮಕೂರು ರ್‍ಾಷ್ಟ್ರಿಯ ಹೆದ್ದಾರಿಯಲ್ಲಿ ಮಳ್ಳಪ್ಪನ ಗೇಟಿನಿಂದ ಎಡಕ್ಕೆ ತರೂರು ರಸ್ತೆಯ ಎಡಬದಿಯಿಂದ ಒಂದು ಕಿ.ಮೀಉತ್ತರಕ್ಕೆ ಗುಬ್ಬಿ ಚಿಕ್ಕಣ್ಣನ ಪಾಳ್ಯವಿದೆ. ಈ ರಸ್ತೆಯಲ್ಲಿ ಗಂಜಲಗುಂಟೆಗೆ ಹೊಸ ಮಲ್ಲರಹಳ್ಳಿಗೆ ಬಸ್ ಸಂಪರ್ಕವಿದೆ. ಗುಬ್ಬಿ ಮೂಲದ ಚಿಕ್ಕಣ್ಣ ಎಂಬ ವ್ಯಕ್ತಿ ಮೊದಲಿಗೆ ಇಲ್ಲಿ ಮನೆ ಕಟ್ಟಿ ಕೊಂಡು ವಾಸಮಾಡ ತೊಡಗಿದ್ದರು. ಆತನನ್ನು ಅನುಸರಿಸಿ ಗ್ರಾಮ ಬೆಳೆಯತೊಡಗಿತು. ಹೀಗೆ ಹಲವು ಮನೆಗಳ ಒಂದು ಗುಂಪಾಗಿ ಆ ಮೂಲ ಪುರುಷನ ಹೆಸರಾಗಿ ಗುಬ್ಬಿ ಚಿಕ್ಕಣ್ಣನ ಪಾಳ್ಯ ಎಂದಾಗಿದೆ. ಬಯಲು ಪ್ರದೇಶ, ವ್ಯಾಪಕ ತೋಟ, ತುಡಿಕೆಗಳ ಭೂಮಿ. ಕಂದು, ಮರಳು ಮಣ್ಣಿನಿಂದ ಕೂಡಿದೆ. ಇಲ್ಲಿನ ಭೌಗೋಳಿಕ ವಿಸ್ತೀರ್ಣ ೮೪.೦೮. ಹೆಕ್ಟೇರ್ ಇದ್ದು, ತರೂರು ಗ್ರಾಮದ ಮಜರೆ ಗ್ರಾಮವಾಗಿದೆ.

ತೆಂಗಿನ, ಅಡಿಕೆ ತೋಟಸಾಲು, ದಿಣ್ಣೆ, ಹಳ್ಳಗಳ ಸೀಮೆ. ಬೇಲಿಗಿಡವೂ ಇದೆ. ಹಾಗಾಗಿ ಈ ಪ್ರದೇಶದಲ್ಲಿ  ನರಿ, ಮೊಲ, ಜಿಂಕೆ, ಕಾಡುಹಂದಿ, ಉಡ, ಮುಂಗುಸಿ, ಹಾಗು ವಿಷಪೂರಿತ ಹಾವುಗಳು ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಎತ್ತು, ಕುರಿ, ಮೇಕೆ, ನಾಯಿ, ಎಮ್ಮೆಗಳನ್ನು ಸಾಕಿದ್ದಾರೆ. ಕಾಡು ಪಕ್ಷಿಗಳಾಗಿ ಗೊರವಂಕ, ಕೊಕ್ಕರೆ, ಕೋಗಿಲೆ, ಗೂಬೆ, ಕಾಗೆ, ಹದ್ದು, ಮರಕುಟಿಕ, ಗಿಡುಗ, ಗಿಳಿ ಪಕ್ಷಿಗಳು ಕಂಡು ಬರುತ್ತದೆ. ಮಳೆ ಕಡಿಮೆ. ತೆಂಗಿನ ತೋಟ, ಅಡಿಕೆ, ವೀಳ್ಯೆದೆಲೆ ತೋಟಗಳಇವೆ. ಹಾಗಾಗಿ ಉಪನೀರಿನ ಅಗತ್ಯತೆ ತೀವ್ರವಾಗಿದ್ದು, ಇಲ್ಲಿ ೬೦ ಕೊಳವೆ ಬಾವಿಗಳ ಮೂಲಕ ನೀರನ್ನು ಪೂರೈಸಲಾಗುತ್ತಿದೆ.

ಗ್ರಾಮದಲ್ಲಿ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೫೭೭.೧ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ಉಷ್ಣಾಂಶ ೩೮೦ ಸೆಂ. ಇದ್ದು, ಚಳಿ ೧೨೦ ಸೆಂ. ಸಹಜವಾಗಿರುತ್ತದೆ. ಯಾವುದೇ ಕೆರೆ, ಕಟ್ಟೆ ಹಳ್ಳದ ಸೌಲಭ್ಯವಿಲ್ಲ. ಈ ಪರಿಸರದಲ್ಲಿ ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ  ಕಿರು ನೀರು

ಸರಬರಾಜು ಅಡಿಯಲ್ಲಿ ನೀರಿನ ಸೌಲಭ್ಯವಿದೆ. ೩ ಸಿಸ್ಟನ್‌ಗಳಿದ್ದು, ೧ ಕೈ ಪಂಪು ಇದೆ. ಮಾತ್ರವಲ್ಲ ಗ್ರಾಮದ ಬಹುತೇಕ ಮನೆಗಳಲ್ಲಿ ಸ್ವಯಂ ಪ್ರೇರಣೆಯಿಂದ ಕೊಳಾಯಿಗಳ ಮೂಲಕ ಮನೆಗಳಿಗೆ ನೀರಿನ ಸೌಲಭ್ಯ ಮಾಡಿಕೊಂಡಿದ್ದಾರೆ. ೬೦ ನಲ್ಲಿ ಸೌಕರ್ಯಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ವೀರಶೈವ ಜನಾಂಗ ದೊಡ್ಡ ಸಮುದಾಯವಾಗಿದ್ದು, ವಿಶೇಷವಾಗಿ ಗುಬ್ಬಿ, ಸಾಗರನಹಳ್ಳಿ ಈ ಪ್ರದೇಶಗಳಿಂದ ಬಂದು ನೆಲೆಸಿರುವ ನೊಣಬ ಲಿಂಗಾಯಿತ ಸಮುದಾಯದವರಾಗಿರುವುದು ವಿಶೇಷ. ಮಾಜಿ ಸಚಿವ ಸಾಗರನಹಳ್ಳಿ ರೇವಣ್ಣನವರೂ ಇಲ್ಲಿ ಕೆಲ ಕಾಲ ನೆಲೆಸಿದ್ದರೆಂಬುದು ಈ ಹಳ್ಳಿಯ ವಿಶೇಷವಾಗಿದೆ. ಇಲ್ಲಿನ ಮನೆಗಳಿಗೆ ಕಾಂಕ್ರೀಟ್, ಶೀಟಿನ, ಹೆಂಚಿನ ಸ್ವರೂಪದ ೬೦ ದೊಡ್ಡ ದೊಡ್ಡ ಮನೆಗಳಿವೆ. ಕೊಬ್ಬರಿ ತುಂಬುವ ಪ್ರತ್ಯೇಕ ಶೆಡ್‌ಗಳು ಇಲ್ಲಿ ಅಧಿಕವಾಗಿವೆ. ೧೮೪ ಜನ ಸಂಖ್ಯೆ ಹೊಂದಿದ್ದು, ೬೦ ಮನೆಗಳಲ್ಲಿ ಶೌಚಾಲಯದ ಬಳಕೆಯಿರುವುದು ಈ ಗ್ರಾಮದ ವಿಶೇಷವಾಗಿದೆ.

ರಾಗಿ ಮುದ್ದೆ, ಅನ್ನ ಗ್ರಾಮದ ಮುಖ್ಯ ಆಹಾರ. ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನ ಇಲ್ಲ. ಆಧುನಿಕ ವಾಹನಗಳು ಟ್ರ್ಯಕ್ಟರ್, ಮಿನಿಟೆಂಪೋ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಹುರುಳು, ಅವರೆ, ಜೋಳ, ಬೆಳೆಯುತ್ತಾರೆ. ವಿರಳವಾಗಿ ತೋಟಗಾರಿಕೆ ಈ ಗ್ರಾಮದ ವಿಶೇಷ. ಸಿರಾ ತಾಲ್ಲೂಕಿನಲ್ಲಿ ಅತಿ ಹೆಚ್ಚು ಇಳುವರಿ ಕೊಡುವ ಕೊಬ್ಬರಿ ಈ ಗ್ರಾಮದ ವಿಶೇಷವಾಗಿದೆ. ಅಡಿಕೆ, ರೇಷ್ಮೆ ತರಕಾರಿ ಬೆಳೆಗಳೂ ಇವೆ. ಒಂದು ಮಿನಿ ಹಾಲಿನ ಡೈರಿ ಕೇಂದ್ರವಿದ್ದು, ಸರಾಸರಿ ೨೦೦ ಲೀಟರ್ ಹಾಲು ಸ ಂಗ್ರಹವಾಗುತ್ತಿದೆ. ತೆಂಗು, ಅಡಿಕೆ, ಹುಣಸೆ ಹಣ್ಣು, ಶೇಂಗಾ, ವೀಳ್ಯೆದೆಲೆ ಮುಖ್ಯ ಸರಕಾರಿದೆ. ಶಿಕ್ಷಣ, ಕಂದಾಯ ಇಲಾಖೆಯ ನೌಕರರಿದ್ದು, ಇಂಜಿನಿಯರ್, ವಕೀಲರು, ಖಾಸಗಿ ಉದ್ಯೋಗಿಯಾಗಿದ್ದಾರೆ. ಮಹಿಳೆಯರು ಗರಿ ಕಡ್ಡಿ ಹೆರೆಯುವುದು, ಹುಣಸೆಹಣ್ಣು ಬಿಡಿಸುವುದು, ಬಟ್ಟೆ ಹೊಲಿಯುವುದು, ಹೂ ಕಟ್ಟುವುದು, ಹೊಂಗೆ ಬೀಜ ಶೇಖರಣೆ ಮಹಿಳೆಯರ ಗೃಹ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ತರೂರು ತಾಲ್ಲೂಕು ಹಾಗೂ ಗ್ರಾಮ ಪಂಚಾಯತ್ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ತರೂರಿನಿಂದ ಅಂಚೆ ಸಂಪರ್ಕ ಹೊಂದಿದೆ. ೨ ಸ್ತ್ರೀ ಶಕ್ತಿ ಸ್ವಸಹಾಯ ಸಂಘವಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು, ಮಕ್ಕಳಿಗೆ ಪೌಷ್ಠಿಕ ಆಹಾರ ನೀಡಲಾಗುತ್ತಿದೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮಕ್ಕಳು ಗಂಜಲುಗುಂಟೆಗೆ ಹೋಗುತ್ತಾರೆ. ಗ್ರಾಮದಲ್ಲಿ ಶೇ. ೬೨.೦೪ ರಷ್ಟು ಸಾಕ್ಷರತಾ ಪ್ರಮಾಣ ಇದೆ. ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು. ೨ ಪೆಟ್ಟಿಗೆ ಅಂಗಡಿಗಳಿವೆ. ಒಂದು ರಾಗಿ ಮಿಲ್ಲಿನ ಗಿರಣಿ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಈ ಗ್ರಾಮದ ಹೊರಭಾಗದಲ್ಲಿ ಚೋಳರ ಕಾಲದ್ದು ಎಂದು ಹೇಳಲಾಗುತ್ತಿ ರುವ ಮಲ್ಲೇಶ್ವರನ ಬೃಹತ್ ಶಿವಾಲಯವಿದೆ. ಎತ್ತರದ ಪೀಠ ಶಿವಲಿಂಗ ಸುಂದರ ಕಟ್ಟೆ ಆಕರ್ಷಕವಾಗಿದೆ. ಶಿವರಾತ್ರಿಯಂದು ಅಖಂಡ ಭಜನೆ, ಅಭಿಷೇಕ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯುತ್ತದೆ. ಗ್ರಾಮದಲ್ಲಿ ಶಿವರಾತ್ರಿ, ಯುಗಾದಿ, ದೀಪಾವಳಿ, ಮಹಾನವಮಿ ಹಬ್ಬಗಳನ್ನು ತುಂಬಾ ವಿಜೃಂಭಣೆಯಿಂದ ಆಚರಿಸುತ್ತಾರೆ. ವಿವೇಕಾನಂದ ಸಂಸ್ಥೆಯ ರಾಷ್ಟ್ರಬಂಧು ಯುವಕ ಸಂಘವಿದೆ.

## ಗಾಂಧಿನಗರ

ಗಾಂಧಿನಗರ ಸಿರಾ ತಾಲ್ಲೂಕಿನ ಕಳ್ಳಂಬೆಳ್ಳ ಹೋಬಳಿ ಕರೇಜವನಹಳ್ಳಿ ಸಮೀಪದ ಗ್ರಾಮ. ಸಿರಾ ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದ್ದು, ಕರೇಜವನಹಳ್ಳಿ ಉಪಗ್ರಾಮವಾಗಿದೆ. ಸಿರಾ–ತುಮಕೂರು ರ್‍ರಾಷ್ಟ್ರೀಯ ಹೆದ್ದಾರಿ, ಕರೇ ಜವನಹಳ್ಳಿ ಟೋಲ್ ಗೇಟ್‌ನಿಂದ ಎಡಬದಿಗೆ ಒಂದು ಕಿ.ಮೀ. ದೂರದ ಲ್ಲಿದೆ. ಇದು ಮಜರೆ ಗ್ರಾಮವಾಗಿದ್ದು, ಕರೇಜವನಹಳ್ಳಿ ಗ್ರಾಮದ ಹೊಸ ಬಡಾವಣೆಯಾಗಿ ರೂಪುಗೊಂಡಾಗ ಮಹಾತ್ಮಗಾಂಧಿ ಅವರ ಪ್ರಭಾವ, ಪ್ರೇರಣೆಯಿಂದಾಗಿ ಗಾಂಧಿನಗರ ಹೆಸರು ಬಂದಿದೆ. ಇದರ ಭೌಗೋಳಿಕ ವಿಸ್ತೀರ್ಣ ೬೫.೮೬ ಆಗಿದ್ದು, ಆರಂಭದಲ್ಲಿ ಗಿಡ ಮರ, ಕುರುಚಲು ಕಾಡಿನಿಂದ ಕೂಡಿದ ಪ್ರದೇಶವಾಗಿತ್ತು. ಈಗ ಕಾಡು ನಾಡಾಗಿದೆ. ಆರಂಭದ ಹರಿಜನರ ಮೂರ್‍ನಾಲ್ಕು ಕುಟುಂಬಗಳು ಈಗ ದೊಡ್ಡ ಗ್ರಾಮವಾಗಿ ಬೆಳೆದಿದೆ.

ಕಪ್ಪು ಮಿಶ್ರಿತ ಕಂದು ಮರಳು ಮಿಶ್ರಿತ ಕಪ್ಪು ಪ್ರದೇಶ. ಈ ಭಾಗದಲ್ಲಿ ನರಿ, ಮೊಲ, ಜಿಂಕೆ, ಕರಡಿ, ಉಡ, ಬಾರುಬೆಕ್ಕು ರೈತಾಪಿ ಬದುಕಿನ ಜನ ಸಾಕು ಪ್ರಾಣಿಗಳಾದ ಹಸು, ಎತ್ತು, ಕುರಿ, ಎಮ್ಮೆ ಸಾಕಿದ್ದಾರೆ. ಸಾಕು ಪಕ್ಷಿಯಾಗಿ ಕೋಳಿಗಳಿವೆ. ಕಾಡು ಪಕ್ಷಿಗಳಾಗಿ ಗೊರವಂಕ, ಕೊಕ್ಕರೆ, ಕೌಜುಲಗ, ಕೋಗಿಲೆ,

ಗೂಬೆ, ಕಾಗೆ, ಹದ್ದು, ಮರಕುಟಿಕ, ಗಿಡುಗ, ಗುಬ್ಬಚ್ಚಿ, ಗಿಳಿ ಪಕ್ಷಿಗಳು ಕಂಡು ಬರುತ್ತದೆ.

ಗ್ರಾಮದಲ್ಲಿ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೫೫೭.೩ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ಉಷ್ಣಾಂಶ ೩೭೦ ಸೆಂ. ಇದ್ದು, ಚಳಿ ೧೨೦ ಸೆಂ. ಸಹಜವಾಗಿರುತ್ತದೆ. ಯಾವುದೇ ಕೆರೆ, ಕಟ್ಟೆ ಹಳ್ಳದ ಸೌಲಭ್ಯವಿಲ್ಲ. ಈ ಪರಿಸರದಲ್ಲಿ ೨೫ ಕೊಳವೆ ಬಾವಿಗಳಿದ್ದು, ಇವು ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ನಿರ್ಮಾಣಗೊಂಡಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಲ್ಲಿ ನೀರನ್ನು ಒದಗಿಸಲಾಗುತ್ತದೆ. ೩ ಟ್ಯಾಂಕ್‌ಗಳಿದ್ದು, ೧ ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ದೊಡ್ಡ ಸಮುದಾಯವಾಗಿದ್ದು, ೪೫ ಮನೆಗಳಿವೆ. ಈ ಗ್ರಾಮದ ಭಾಷೆ ಕನ್ನಡವಾಗಿದೆ. ಇಲ್ಲಿನ ಮನೆಗಳಿಗೆ ಕಾಂಕ್ರೀಟ್, ಶೀಟಿನ, ಹೆಂಚಿನ ಸ್ವರೂಪದ ಮನೆಗಳಿದ್ದು, ಇವು ಸರ್ಕಾರದ ವಸತಿ ಯೋಜನೆಯ ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧೫೮ ಜನಸಂಖ್ಯೆ ಇದ್ದು ೨೦ ಮನೆಗಳಲ್ಲಿ ಶೌಚಾಲಯದ ಬಳಕೆಯಿರುವುದು ಈ ಗ್ರಾಮದ ವಿಶೇಷವಾಗಿದೆ.

ರಾಗಿ ಮುದ್ದೆ, ಅನ್ನ ಗ್ರಾಮದ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳು ಟ್ರ್ಯಾಕ್ಟರ್, ಮಿನಿಟೆಂಪೋ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಭತ್ತ, ಜೋಳ, ಹುರುಳಿ, ತೊಗರಿ ಆಹಾರ ಬೆಳೆಗಳು. ಸೂರ್ಯಕಾಂತಿ, ಸೇವಂತಿ, ತೆಂಗು ಬೆಳೆಗಳಿವೆ. ಶೇಂಗಾ, ಹೊಂಗೆಬೀಜ, ಹುಣಸೆಹಣ್ಣು ಮುಖ್ಯ ವ್ಯಾಪಾರಿ ಸರಕಾಗಿದೆ. ಶಿಕ್ಷಕರು, ಸಾರಿಗೆ ಹಾಗೂ ಕಂದಾಯ ಇಲಾಖೆಗೆ ಸೇರಿದ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ತರೂರು ತಾಲ್ಲೂಕು ಹಾಗೂ ಗ್ರಾಮ ಪಂಚಾಯತ್ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಕಳ್ಳಂಬೆಳ್ಳದಿಂದ ಅಂಚೆ ಸಂಪರ್ಕ ಹೊಂದಿದೆ. ೧ ಸ್ತ್ರೀ ಶಕ್ತಿ ಸ್ವಸಹಾಯ ಸಂಘವಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇಥೆ. ೨೩ ಮಕ್ಕಳಿದದು, ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪಠ್ಯ ಪುಸ್ತಕ, ಸಮವಸ್ತ್ರದ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಶೇ. ೫೨.೦೨ ರಷ್ಟು ಸಾಕ್ಷರತಾ ಪ್ರಮಾಣ ಇದೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು. ೨ ಪೆಟ್ಟಿಗೆ ಅಂಗಡಿಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಮಾರಮ್ಮ, ಆಂಜನೇಯ ದೇವತೆಗಳಿದ್ದು, ಶ್ರಾವಣ ಮಾಸದಲ್ಲಿ ಈ ದೇವರುಗಳಿಗೆ ಆರತಿ ಮಾಡುತ್ತಾರೆ. ಮಾರಮ್ಮನ ಊರಹಬ್ಬ ಮಾಡಿ, ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಶಿವರಾತ್ರಿ, ಯುಗಾದಿ, ದೀಪಾವಳಿ, ಮಹಾನವಮಿ ಹಬ್ಬಗಳನ್ನು ತುಂಬಾ ವಿಜೃಂಭಣೆಯಿಂದ ಆಚರಿಸುತ್ತಾರೆ. ರಾಷ್ಟ್ರೀಯ ಹೆದ್ದಾರಿ-೪ ಕ್ಕೆ ಸಂಪರ್ಕ ರಸ್ತೆ ಇದೆ.

## ಗುಜ್ಜಯ್ಯನ ಪಾಳ್ಯ

ಗುಜ್ಜಯ್ಯನ ಪಾಳ್ಯ ಗ್ರಾಮವು ಜವನಹಳ್ಳಿಯ ಉಪಗ್ರಾಮವಾಗಿದೆ. ಸಿರಾ-ಹನುಮಂತ ಪುರ (ಬ್ರಹ್ಮಸಂದ್ರ ಗೇಟ್) ನಿಂದ ಮಧುಗಿರಿ ಬಡವನಹಳ್ಳಿ ರಸ್ತೆಯ, ಜವನಹಳ್ಳಿ ಸಮೀಪ ಈ ನವಗ್ರಾಮ ರಚನೆಯಾಗಿದೆ. ಗುಜ್ಜ ಆಂಜಿನಯ್ಯ ದೇವರ ಹೆಸರಿನಲ್ಲಿ ಗ್ರಾಮ ರಚನೆಯಾಗಿರುವುದು ಇಲ್ಲಿನ ವಿಶೇಷ. ಪುಟ್ಟಲಿಂಗಯ್ಯ ಎಂಬುವವರು ಮೊದಲು ಇಲ್ಲಿ ಮನೆ ರಚಿಸಿಕೊಂಡು ವಾಸ ಮಾಡತೊಡಗಿದರು. ನಂತರ ೧೪ ಮನೆಗಳು ರಚನೆಯಾಗಿ ಒಂದು ಗ್ರಾಮದ ಸ್ವರೂಪ ಪಡೆದಿದೆ. ಬ್ರಹ್ಮಸಂದ್ರ-ತರೂರು ರಸ್ತೆಯ ನಡುವಿನ ಕತ್ತಾಳೆ ಗೇಟಿನ ಬಳಿ ಗ್ರಾಮವಿದ್ದು, ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ಮಾತ್ರವಿದ್ದು ೧೪ ಮನೆಗಳಿವೆ. ೭೩ ಜನಸಂಖ್ಯೆ ಹೊಂದಿದೆ.

ಸಿರಾ ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ. ದೂರವಿದ್ದು, ಇದರ ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮ ಜವನಹಳ್ಳಿಯಲ್ಲಿ ಹಂಚಿಕೆಯಾಗಿದ್ದು ೮೦.೩೨ ಹೆಕ್ಟೇರ್ ಹೊಂದಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕ ಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ, ಹಾಗೂ ಚಿನ್ನೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. ರೈತಾಪಿ ಬದುಕು ಮುಖ್ಯವಾಗಿದ್ದು, ರಾಗಿ, ಶೇಂಗಾ, ಹತ್ತಿ, ಆರಕ, ನವಣೆ ಬೆಳೆಯುತ್ತಾರೆ. ಮುಖ್ಯ ಆಹಾರ ರಾಗಿ ಮುದ್ದೆ, ಅನ್ನವಾಗಿದೆ. ಗ್ರಾಮದಲ್ಲಿ ಶೈಕ್ಷಣಿಕವಾಗಿ ಯಾವುದೇ

ಸೌಲಭ್ಯವಿಲ್ಲ. ಪಕ್ಕದ ಜವನಹಳ್ಳಿ ಹಾಗೂ ಬ್ರಹ್ಮಸಂದ್ರ ಗೇಟಿಗೆ ಹಾಗೂ ತರೂರಿಗೆ ಹೋಗಬೇಕಾಗಿದೆ. ಇಲ್ಲಿನ ಸಾಕ್ಷರತಾ ಪ್ರಮಾಣ ೬೫.೮೦ ರಷ್ಟಿದೆ.

ಜವಲಿಂಗೇಶ್ವರ ಎದುರೆತ್ತಿ ಆರತಿ, ಉತ್ಸವ ಮಾಡುತ್ತಾರೆ. ಸಾಮಾಜಿಕ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ.

## ಗಾಣದಹುಣಸೆ

ಗಾಣದಹುಣಸೆ ಸಿರಾ ತಾಲ್ಲೂಕು ಕೇಂದ್ರದಿಂದ ವಾಯುವ್ಯ ದಿಕ್ಕಿನಲ್ಲಿದೆ. ಸಿರಾ ತಾವರೆಕೆರೆ–ಬುಕ್ಕಾಪಟ್ಟಣ ರಸ್ತೆಯಲ್ಲಿ ೧೮.ಕಿ.ಮೀ. ದೂರದಲ್ಲಿದೆ. ಕಂಬಳಿ ನೇಕಾರಿಯಲ್ಲಿ ಕಂಬಳಿ ಬಳಸುವ ಹುಣಸೆ ಬೀಜದ ಸರಿಯನ್ನು ಇಲ್ಲಿ ತಯಾರಿಸುವಾಗ ಗಾಣಕ್ಕೆ ಎತ್ತುಗಳನ್ನು ಹೂಡಿ ಬೇಯಿಸಿದ ಹುಣಸೆ ಬೀಜದಾರ ಸರಿ ಅರೆಯುವ ಕೆಲಸದ ಕಾರಣದಿಂದ ಗಾಣಹುಣಸೆ ಎಂಬ ಹೆಸರಾಗಿದೆ. ಎಂದು ಗ್ರಾಮಸ್ಥರು ತಿಳಿಸುತ್ತಾರೆ. ಭೌಗೋಳಿಕ ವಿಸ್ತೀರ್ಣ ೧೩೯೧.೩೬ ಹೆಕ್ಟೇರ್‌ಗಳಾಗಿವೆ. ಬಯಲು ನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಈ ಗ್ರಾಮದಲ್ಲಿ ಒಂದು ಕೆರೆ ಇದೆ. ಕೃಷಿಗೆ ನೂರಹೆಂಬತ್ತು ಕೊಳವೆ ಬಾವಿಗಳಿವೆ. ಕೃಷಿಗೆ ಸಹಾಯಕವಾಗಿವೆ ೪೪೯ ಮಿ.ಮೀ. ವಾರ್ಷಿಕ–ಮಳೆಯಾಗುತ್ತದೆ. ಬಿಸಿಲು ೩೧೨ ಡಿ.ಸೆ. ಇದ್ದರೆ. ಚಳಿ ೧೧ ಡಿ.ಸೆ. ಇರುತ್ತದೆ.

ಗ್ರಾಮದಲ್ಲಿ ಒಟ್ಟು ೨೯೭ ಮನೆಗಳಿದ್ದು ಇವು ಕಲ್ಲಿನ, ಕಾಂಕ್ರೀಟ್, ಸೀಟಿನ ಸ್ವರೂಪದಲ್ಲಿದೆ. ೧೩೯೦ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ನಾಯಕ ಕುರುಬ ಕುಂಚಿಟಿಗ, ವೀರಶೈವರ ಮನೆಗಳಿವೆ. ಇಲ್ಲಿ ೯೧ ಮನೆಗಳು ಸರ್ಕಾರದ ಯೋಜನೆಗಳಾದ ಜನತಾ, ಆಶ್ರಮ ಯೋಜನೆಯಲ್ಲಿ ನಿರ್ಮಾಣವಾಗಿದೆ. ಇವರು ಸಾಂಪ್ರದಾಯಿಕ–ವಾಹನಗಳೊಂದಿಗೆ ಆಧುನಿಕ ವಾಹನಗಳನ್ನು ಒಳಗೊಂಡಿದೆ. ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಇದರಲ್ಲಿ ರಾಗಿ, ಭತ್ತ ಜೋಳ ದ್ವಿದಳ ಧಾನ್ಯಗಳು ತೆಂಗು, ಅಡಿಕೆ, ಹುಣಸೆ, ಶೇಂಗಾ ಬೆಳೆಗಳನ್ನು ಬೆಳೆಯುತ್ತಾರೆ. ಆಧುನಿಕ ಡೈರಿಯನ್ನು ಹೊಂದಿದೆ. ೧೪ ಶಿಕ್ಷಕರು, ಕೆ.ಇ.ಬಿ. ಕಂದಾಯ ಇಲಾಖೆಯ ಸರ್ಕಾರಿ ಸೇವೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಮಹಿಳೆಯರು ಹೂ ಕಟ್ಟುವುದು, ಹೊಂಗೆಬೀಜ, ಬೀಡಿ ಕಟ್ಟುವ ಉಪ ಕಸುಬು ಹೊಂದಿದ್ದಾರೆ. ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ ತುಮಕೂರು ಲೋಕಸಭಾಕ್ಷೇತ್ರ ಬುಕ್ಕಾಪಟ್ಟಣ ನೇರಳೆಗುಡ್ಡ ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದೆ ತಹಶೀಲ್ದಾರ್ ಕಛೇರಿ, ನೇರಲಗುಡ್ಡ ಪಂಚಾಯ್ತಿ ಇಬ್ಬರು ಸದಸ್ಯರನ್ನು ಒಳಗೊಂಡಿದೆ. ಹಾಗೆಯೇ ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ. ಮುತ್ತಲಕ್ಕಪ್ಪ ಈ ಗ್ರಾಮದ ರಾಜಕೀಯ ದುರೀಣರಾಗಿದ್ದು, ಅಂಬಾಭವಾನಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಸಿರಾ ತಾಲ್ಲೂಕು ಬೋರ್ಡಿನ ಉಪಾಧ್ಯಕ್ಷರು ಆಗಿದ್ದರು.

ಹಣಕಾಸು ವ್ಯವಸ್ಥೆಗೆ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದಿದ್ದರೂ ಕೃಷಿ/ವ್ಯವಸಾಯ ಸೇವಾ ಸಹಕಾರಿ ಸಂಘವಿದೆ. ಮೂರು ಸ್ತ್ರೀಶಕ್ತಿ ಸಂಘಗಳು ಮೂರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವನ್ನು ಹೊಂದಿದೆ.

ಅಂಗನವಾಡಿಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸುವರ್ಣಮುಖಿ ಗ್ರಾಮಾಂತರ ಪ್ರೌಢಶಾಲೆಯನ್ನು ಹೊಂದಿದ್ದು ೫೩.೬೮ ರಷ್ಟು ಸಾಕ್ಷರತೆಯನ್ನು ಹೊಂದಿದೆ. ಶಾಲೆಗಳಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ ಪುಸ್ತಕಗಳ ಸೌಲಭ್ಯವಿದೆ.

ಧಾರ್ಮಿಕ ಪರಂಪರೆಯಲ್ಲಿ ತಿಮ್ಮಪ್ಪ, ಕರಿಯಮ್ಮ, ಬೇವಿನಾಳಮ್ಮ ದೇವಾಲಯಗಳಿವೆ. ಸಾಂಪ್ರದಾಯಿಕ ಹಬ್ಬಗಳೊಂದಿಗೆ ಪ್ರತಿ ವರ್ಷವು ಕರಿಯಮ್ಮನ ಜಾತ್ರೆಯನ್ನು ಮಾಡುವುದು ಅದರಲ್ಲಿ ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿರುತ್ತದೆ. ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶ ಪ್ರಮುಖ ಹಬ್ಬಗಳು.

ಈ ಗ್ರಾಮದ ಮಧ್ಯಭಾಗದಲ್ಲಿ ನೆಟ್ಟಿರುವ ಶಾಸನ ಕಲ್ಲು ಇದ್ದು, ಇದು ಒಂದನೇ ವೀರವೆಂಕಟಪತಿಯ ಶಾಸನವಾಗಿದೆ. ಉಫಿ.ಕರ್ನಾಟಕ ಸಂ. ಫಿಖಖ ಸಿರಾ ೩ ರ ಉಲ್ಲೇಖಿತ ಗಾಣದ ಹುಣಸೆ ಶಾಸನದಲ್ಲಿ, ಕಾಲ ೧೫೮೩ ನೇ ಮಾರ್ಚಿ ೧೪ ರಲ್ಲಿ ವಿಜಯನಗರದ ರಾಜ ವೆಂಕಟಪತಿಯವರ ಪ್ರತಿನಿಧಿಯಾದ, ಹರತಿ ಸಂಸ್ಥಾನದ ಕೆಂಪನಾಯಕನು ದಳವಾಯಿಯಾಗಿದ್ದ ಬಸವನಾಯಕನಿಗೆ, ಗಾಣದ ಹುಣಸೆ ಗ್ರಾಮವನ್ನು ಸರ್ವಮಾನ್ಯ ಮಾಡಿ, ಇದರ ಕಂದಾಯ ಇತರ ಭೋಗ್ಯವೆಲ್ಲವು ಬಸವ ನಾಯಕರಿಗೆ ಸೇರಿ ಅವರು ಉತ್ತಮವಾಗಿ ಬೆಳೆಯಲಿ ಎಂದು ಉಲ್ಲೇಖಿಸಲಾಗಿದೆ.

ಇದೇ ಗ್ರಾಮದಲ್ಲಿ ಎರಡು ಕರುಗಲ್ಲುಗಳಿವೆ ಸಾಂಸ್ಕೃತಿಕವಾಗಿ ಹರಿಕಥೆದಾಸರು ದಾಸಪ್ಪ ಭಾಗವತ ಭೀಮಣ್ಣನವರನ್ನು ಕಾಣಬಹುದು ಶನಿದೇವರ ಪಾತ್ರ ವಿಶೇಷ ಖ್ಯಾತಿಯ ಕರಿಯಣ್ಣ ಸೋಬಾನೆ ಹಾಡುಗಾರ್ತಿಯರಾದ ಬೊಮ್ಮಕ್ಕ ಪುಟ್ಟಲಕ್ಕಮ್ಮ, ಸಣ್ಣಕ್ಕ ಕರಿಯಮ್ಮ ಸ್ಥಳೀಯವಾಗಿ ಗುರುತಿಸಿಕೊಂಡಿರುವ ಕಲಾವಿದರು. ಇವರು ಹಾಡಿರುವ ಗೀತೆಗಳನ್ನು ಡಾ// ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿ ಬಂಡಿಬಂದಾವು ಬಾಳೆವನದಾಗೆ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ.

## ಗಿಡ್ಡನಹಳ್ಳಿ

ಗಿಡ್ಡನಹಳ್ಳಿ ಸಿರಾ ತಾಲ್ಲೂಕಿನಿಂದ ದಕ್ಷಿಣಕ್ಕೆ ೧೭ ಕಿ.ಮೀ. ದೂರದಲ್ಲಿದೆ. ಇದು ಶಾಗದಡುವಿನ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೪೪೨.೧೭ ಶ್ಯಾಗದಡು ಮುಖ್ಯ ಗ್ರಾಮದಲ್ಲಿ ಹರಿಸಿಕೊಂಡಾಗಿದೆ. ಶ್ಯಾಗದಡು ಗ್ರಾಮಕ್ಕೆ ಅರ್ಧ ಕಿ.ಮೀ. ದೂರದಲ್ಲಿದೆ. ಗ್ರಾಮ ಬೆಳೆದು ಹೊಂದಿಕೊಂಡಂತೆ ಕಾಣುತ್ತದೆ. ಗಿಡ್ಡಯ್ಯ ಎಂಬ ಶ್ಯಾಗದಡು ಮೂಲದ ವ್ಯಕ್ತಿ ಮೊದಲು ಇಲ್ಲಿ ಮನೆ ನಿರ್ಮಿಸಿಕೊಂಡು ವಾಸಮಾಡಿದ್ದರಿಂದ ದಲಿತರ ಗ್ರಾಮ ಬೆಳೆಯಿತು. ಒಂದೊಂದಾಗಿ ಮನೆಗಳು ರಚನೆಯಾದವು. ಹೊಸದಾಗಿ ಊರು ಬೆಳೆದುದರಿಂದ ಹೆಸರನ್ನೇ ಗ್ರಾಮಕ್ಕೆ ಇಡಲಾಗಿದೆ. ಹಾಗಾಗಿ ಗಿಡ್ಡನಹಳ್ಳಿ ಎಂದು ಕರೆಯಲಾಗಿದೆ.

ಕೆಂಪು, ಬಿಳಿ, ಕಲ್ಲು, ಚಿಟ್ಟೆ, ಮಣ್ಣಿನಿಂದ ಕೂಡಿದ ಭೂ ಲಕ್ಷಣವಾಗಿದೆ. ಈ ಪರಿಸರದಲ್ಲಿ ನರಿ, ಜಿಂಕೆ, ಹಂದಿ, ಮೊಲ, ಚಿರಚಿತಜ, ಉಡ, ಮುಂಗಸಿ, ಬಾರುಬೆಕ್ಕು, ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕುಪ್ರಾಣಿಯಾಗಿ ಹಸು, ಕುರಿ, ಮೇಕೆ, ನಾಯಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಗಿಳಿ, ಗೊರವಂಕ, ಗೂಬೆ, ಹದ್ದು, ಗರುಡ, ಕೋಗಿಲೆ, ನವಿಲು, ಕೌಜಲಗ, ಮರ ಕುಟಿಕ ಕಂಡುಬರುತ್ತವೆ. ಸಾಕು ಪ್ರಾಣಿಗಳಾಗಿ ಕೋಳಯನ್ನು ಸಾಕಲಾಗಿದೆ.

ಬಯಲು ಪ್ರದೇಶ ಮಳೆ ಪ್ರಮಾಣ ಕಳೆದ ಐದು ವರ್ಷಗಳಲ್ಲಿ ಸರಾಸರಿ ೪೪೮ ಮಿ.ಮೀ. ಮಳೆಯಾಗಿದ್ದು ವಾಡಿಕೆಗಿಂತ ಕಡಿಮೆಯಾಗಿದೆ. ಉಷ್ಣಾಂಶ ೩೧೨ ಡಿ.ಸೆಂ. ಇದ್ದರೆ, ಚಳಿ ೧೨ ಡಿ.ಸೆಂ. ಇರುತ್ತದೆ. ಮಳೆ ಆಶ್ರಿತ ಬದುಕು. ನೀರಿನ ಆಶ್ರಮ ತುಂಬಾ ಕಡಿಮೆ. ಉಪ ನೀರಾವರಿ, ತೋಟಗಾರಿಕೆ ಬೆಳೆಗೆ ೧೮ ಕೊಳವೆ ಬಾವಿಯನ್ನು ಕೊರೆಸಲಾಗಿದೆ. ಇದರ ಸಹಾಯದಿಂದ ಉಪ ಬೆಳೆ ಬೆಳೆಯಲಾಗುತ್ತಿದೆ. ಕುಡಿಯುವ ಗ್ರಾಮ ಪಂಚಾಯಿತಿ ಕರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಸಿಸ್ಟನ್‌ಗಳಿದ್ದು ಒಂದು ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಬೋವಿಜನಾಂಗ ದೊಡ್ಡ ಸಮುದಾಯವಾಗಿದ್ದು, ಕುಂಚಿಟಿಗರು, ಕುಂಬಾರರು, ನಾಯಕ ಕಿರು ಸಮುದಾಯವಾಗಿದೆ. ಇಲ್ಲಿನ ಮಾತೃ ಭಾಷೆ ಕನ್ನಡವಾಗಿದ್ದು, ತೆಲಗು ಅಲ್ಪ ಸಂಖ್ಯಾತರ ಭಾಷೆಯಾಗಿದೆ. ವಿವಿಧ ಪ್ರಕಾರಗಳ ೩೬ ಮನೆಗಳಿವೆ. ಇವು ಕಲ್ಲಿನ, ಮಣ್ಣಿನ, ಹೆಂಚಿನ, ಸೀಟಿನ, ಸ್ವರೂಪದವುಗಳಾಗಿವೆ. ಇವು ಸರ್ಕಾರದ ವಸತಿ ಯೋಜನೆಗಳಾದ ಆಶ್ರಮ, ಇಂದಿಆ ಆವಾಸ್, ಹಾಗೂ ಜನತಾ ವಸತಿ ಯೋಜನೆ ಹಾಗೂ ಉಚಿತ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ೧೪ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ಈ ಗ್ರಾಮದ ಒಟ್ಟು ಜನ ಸಂಖ್ಯೆ ೧೮೪ ಆಗಿದೆ.

ಇಲ್ಲಿನ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ, ರೊಟ್ಟಿ, ಪ್ರಮುಖ ಆಹಾರವಾಗಿದೆ. ಬಾಡೂಟ, ಹೋಳಿಗೆ ವಿಶೇಷ ಸಾಂದರ್ಭಿಕ ಬೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಬಂಡಿ ಬಳಕೆಯಲ್ಲಿದ್ದು, ಆಧುನಿಕವಾಗಿ ಟ್ರಾಕ್ಟರ್, ದ್ವಿಚಕ್ರವಾಹನಗಳ ಬಳಕೆಯಿದೆ.

ಶೇಂಗಾ ಗ್ರಾಮದ ಮುಖ್ಯ ಬೇಳೆ ರಾಗಿ, ಜೋಳ, ತೊಗರಿ, ಅಲಸಂದಿ, ಬೆಳೆಯುತ್ತಾರೆ. ಹುಣಸೆಹಣ್ಣು, ಈರುಳ್ಳಿ, ಸೀಡ್ಸ್ ಕಲ್ಲಂಗಡಿ, ಕರ್ಬೂಜ ಹಣ್ಣಿನ ಬೀಜ ಹಾಗೂ ಹತ್ತಿಯನ್ನು ಬೆಳೆಯಲಾಗುವುದು ಇವು ವ್ಯಾಪಾರಿ ಸರಕಾಗಿವೆ.

ಶಿಕ್ಷಣ, ಸಾರಿಗೆ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಹೆಂಗಸರು ಹೂ ಕಟ್ಟುವುದು, ಬೀಡಿಸುತ್ತುವುದು, ಮುತ್ತುಕದ ಎಲೆ ಸಂಗ್ರಹ, ಹುಣಸೆಹಣ್ಣು, ಹೊಂಗೆಬೀಜ, ಪರಿಸರಕ್ಕೆ ಕಾರ್ಯದಲ್ಲಿ ತೊಡಗಿದ್ದಾರೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯಿತಿ, ಹುಯಿಲ್‌ದೊರೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ತಾಲ್ಲೂಕು ಕಛೇರಿ, ಕೆಇಬಿ, ಆಸ್ಪತ್ರೆಗೆ ಸಿರಾ ನಗರಕ್ಕೆ ಬರಬೇಕಿದೆ. ಹುಯಿಲ್‌ದೊರೆಯಿಂದ ಅಂಚೆ ಸಂಪರ್ಕ ಹೊಂದಿದೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘವಿದೆ.

ಶೈಕ್ಷಣಿಕವಾಗಿ ಒಂದು ಮಿನಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ಒಬ್ಬರು ಶಿಕ್ಷಕರಿದ್ದಾರೆ ಶಾಲೆಯ ಮಕ್ಕಳಿಗೆ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ, ಪುಸ್ತಕ ವಿತರಣಾ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ಪ್ರಮಾಣ ೪೯% ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧುವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೨ ಪೆಟ್ಟಿಗೆ ಅಂಗಡಿಗಳಿವೆ. ಒಂದು ಬಸಪ್ಪನ ಪೌಳಿ ಇದ್ದು, ಪೂಜೆಗೆ ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಗೌರಿಗಣೇಶ, ಶಿವರಾತ್ರಿ, ದಸರಾ ಹಬ್ಬಗಳಾಗಿ ವಿಶೇಷವಾಗಿ ಆಚರಿಸುತ್ತಾರೆ. ರಾಮನವಮಿ, ಈ ಗ್ರಾಮದ ವಿಶೇಷ ಆಚರಣೆಯಾಗಿದೆ. ಶ್ಯಾಗದಡು ಸಿರಾ–ಗಿಡ್ಡನಹಳ್ಳಿ ತಾವರೆಕೆರೆಗೆ ರಸ್ತೆ ಸಂಪರ್ಕ ಬಸ್ ಸಂಪರ್ಕವಿದೆ.

## ಗಿಣ್ಣಪ್ಪನಹಟ್ಟಿ

ಗಿಣ್ಣಪ್ಪನಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ವಾಯುವ್ಯ ದಿಕ್ಕಿನಲ್ಲಿದೆ. ಸಿರಾದಿಂದ ೨೫ ಕಿ.ಮೀ. ದೂರದಲ್ಲಿದ್ದು, ಕಂದಾಯ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೨೨೫.೦೨ ಹೆಕ್ಟೇರ್‌ಗಳಾಗಿವೆ. ಗಿಣ್ಣಪ್ಪ ಎಂಬ ಪಶುಪಾಲಕ ವ್ಯಕ್ತಿ

ಮೂಲದಿಂದ ಗ್ರಾಮಕ್ಕೆ ಗಿಣ್ಣಪ್ಪನ ಹಟ್ಟಿ ಎಂದು ಕರೆಯಲಾಗಿದೆ. ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇಲ್ಲಿ ಹದಿನೆಂಟು ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಮತ್ತು ವಾರ್ಷಿಕ ಸರಾಸರಿ ೪೫೮.೯ ಮಿ.ಮೀ. ನಷ್ಟಿದೆ. ಗ್ರಾಮದಲ್ಲಿ ಅರಣ್ಯ ಬಿಸಿಲು ೩೧೨ ಡಿ.ಸೆಂ. ಚಳಿ ೧೨ ಡಿ.ಸೆ. ಇದೆ. ನರಿ, ಮೊಲ, ಹಂದಿ, ಜಿಂಕೆ, ಕಂಡುಬಂದರೆ, ಗ್ರಾಮದಲ್ಲಿ ಹಸು, ಕುರಿ, ಮೇಕೆ, ಸಾಕು ಪ್ರಾಣಿಗಳು ನವಿಲು, ಕಾಗೆ, ಹದ್ದು, ಕೋಗಿಲೆ, ಗಿಳಿ, ಗೂಬೆ ಕಾಡು ಪಕ್ಷಿಗಳಾಗಿವೆ. ಕೋಳಿ ಸಾಕು ಪಕ್ಷಿಯಾಗಿದೆ.

ಗ್ರಾಮದಲ್ಲಿ ಒಟ್ಟು ೩೫ ಮನೆಗಳಿದ್ದು ೧೩೬ ಜನಸಂಖ್ಯೆಯನ್ನು ಹೊಂದಿದೆ. ಗೊಲ್ಲ–ನಾಯಕರ ಮನೆಗಳನ್ನು ಒಳಗೊಂಡಿದೆ. ಹಾಗೆಯೇ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಆಹಾರದಲ್ಲಿ ರಾಗಿಮುದ್ದೆ ಅನ್ನ ಬಾಡೂಟ, ಪಾಯಸ, ಹೋಳಿಗೆ ಆಧುನಿಕ ವಾಹನಗಳಾದ ಟ್ರಾಕ್ಟರ್, ಆಟೋ ದ್ವಿಚಕ್ರವಾಹನಗಳನ್ನು ಹೊಂದಿದೆ. ಇಲ್ಲಿನ ೧೬ ಮನೆಗಳು ಆಶ್ರಯ, ಜನತಾ ಇಂದಿರಾ ಆವಾಸ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯವನ್ನು ಹೊಂದಿದೆ. ೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಗ್ರಾಮದಲ್ಲಿ ಕೃಷಿ ಪ್ರಮುಖ ಉದ್ಯೋಗವಾಗಿದೆ. ಶೇಂಗಾ, ರಾಗಿ, ಭತ್ತ, ಜೋಳ, ದ್ವಿದಳಧಾನ್ಯಗಳು, ತೆಂಗು, ಅಡಿಕೆ, ಹುಣಸೆ ಬೆಳೆಗಳನ್ನು ಬೆಳೆಯುತ್ತಾರೆ. ಹೊಂಗೆಬೀಜ, ಕುರಿ ವ್ಯಾಪಾರ, ಹುಣಸೆಹಣ್ಣು, ವ್ಯಾಪಾರಿ ಸರಕಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ ಬುಕ್ಕಾಪಟ್ಟಣ ನೇರಳೆಗುಡ್ಡ ಜಿಲ್ಲಾ ತಾಲ್ಲೂಕು ಪಂಚಾಯ್ತಿ, ತಹಶೀಲ್ದಾರ್ ಕಛೇರಿ ನೇರಲಗುಡ್ಡ ಪಂಚಾಯ್ತಿ, ಬುಕ್ಕಾಪಟ್ಟಣ ಪೋಲಿಸ್‌ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ. ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ. ಹಣಕಾಸಿನ ವ್ಯವಸ್ಥೆಗೆ ಬ್ಯಾಂಕಿಂಗ್ ಸೌಲಭ್ಯವನ್ನು ಹೊಂದಿಲ್ಲ. ಅಂಗನವಾಡಿಕೇಂದ್ರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಶೇ. ೪೦.೬೮ ರಷ್ಟಿದೆ. ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ ಸಮವಸ್ತ್ರ ಸೌಲಭ್ಯವಿದೆ.

ಧಾರ್ಮಿಕ ಪರಂಪರೆಯಲ್ಲಿ ಗ್ರಾಮದೇವತೆ ಕರಿಯಮ್ಮನ ದೇವಾಲಯವಿದ್ದು ಪ್ರತಿ ವರ್ಷವು ಜಾತ್ರೆಯನ್ನು ಮಾಡುತ್ತಾರೆ. ಇದರಲ್ಲಿ ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿರುತ್ತದೆ.

ಕಾಡು ಗೊಲ್ಲರು ದೀಪಾವಳಿ ಸಂದರ್ಭಗಳಲ್ಲಿ ಜುಂಜಪ್ಪನ ಜಾತ್ರೆ ಆಚರಿಸುತ್ತಾರೆ. ದೀಪ ಏರಿಸುವ, ಇಳಿಸುವ, ಹಿರಿಯರ ಹಾಲು ತುಪ್ಪದ ಹಟ್ಟಿ ಆಚರಿಸುತ್ತಾರೆ. ನಾಗರ ಕಲ್ಲು ಹೊರಗೆ ಹಿರಿಯಗುಡ್ಡ ಕಲ್ಲುಗಳು ಸ್ಮಾರಕವಾಗಿವೆ.

## ಗುಂಗರಪೇಟೆ

ಗುಂಗರ ಪೇಟೆಯು ಸಿರಾ ತಾಲ್ಲೂಕು ಕೇಂದ್ರದಿಂದ ವಾಯುವ್ಯ ಭಾಗದಲ್ಲಿದ್ದು ೨೯ ದೂರದಲ್ಲಿರುವ ಜನವತಿ ಕೇಂದ್ರವಾಗಿದೆ. ಭೌಗೋಳಿಕ ವಿಸ್ತೀರ್ಣ ೧೦೪೪.೨೧ ಹೆಕ್ಟೇರ್‌ಗಳು ಈ ಗ್ರಾಮವು ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪುಮಣ್ಣಿನಿಂದ ಕೂಡಿದೆ. ೧೨೪ ಹೆಕ್ಟೇರ್‌ನಲ್ಲಿ ರಕ್ಷಿತಾರಣ್ಯವನ್ನು ಕಾಣಬಹುದಾಗಿದೆ. ವಾರ್ಷಿಕ ಸರಾಸರಿ ಮಳೆಯ ಪ್ರಮಾಣವು ೪೬೩ ಮಿ.ಮೀ. ಆಗಿದೆ. ಏಂಟು ಕೊಳವೆಬಾವಿಗಳಿದ್ದು ಕೃಷಿಗೆ ಮತ್ತು ಕುಡಿಯುವ ನೀರಿಗೆ ಉಪಯೋಗವಾಗಿವೆ. ಇಲ್ಲಿ ಬಿದಿರುಮೇಳ ಕುರುಪಲು ಕಾಡಿನಿಂದ ಕೂಡಿದ್ದ ಸ್ಥಳದಲ್ಲಿ ಕಾಡು ಕಡಿದು ಮನೆ ನಿರ್ಮಿಸಿದರು ಇದು ಬಿದಿರು ಹೆಚ್ಚಾಗಿದ್ದು, ಗುಂಗುರಾಕಾರವಾಗಿದ್ದುದರಿಂದ ಗುರಗರ ಪೇಟೆಯಾಗಿ ನಂತರ ಗುಂಗರ ಪೇಟೆ ಆಗಿದೆ. ಗುಂಗರ ಸೊಳ್ಳೆ ಜಾನೆಯ ಕೀಟಗಳು ಅಧಿಕ ಎಂಬ ಅರ್ಥದಿಲ್ಲಿಯೂ ಈ ಹೆಸರು ಬಂದಿದೆ.

ಗ್ರಾಮದಲ್ಲಿ ೩೩ ಮನೆಗಳಿದ್ದು ೧೨೮ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಬೋವಿ, ಮಡಿವಾಳ ಕುಂಚಿಟಿಗರ ಆಶ್ರಮ ಇವು ಇಂದಿರಾ ಆವಾಸ್ ಫಲಾನುಭವಿಗಳಿದ್ದಾರೆ. ಹೆಂಚಿನ, ಸೀಟಿನ, ಸ್ವರೂಪದಲ್ಲಿದ್ದು, ವಸತಿ ಯೋಜನೆಗಳಾದ ಮನೆಗಳಿವೆ. ಸಾಂಪ್ರದಾಯಿಕ ವಾಹನಗಳೊಂದಿಗೆ ಆಧುನಿಕ ವಾಹನಗಳನ್ನು ಒಳಗೊಂಡಿದೆ. ರಸ್ತೆ ವ್ಯವಸ್ಥೆಯನ್ನು ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಕಂಡುಬಂದರೆ ಗ್ರಾಮದಲ್ಲಿ ಹಸು, ಎತ್ತು, ಕುರಿ, ಮೇಕೆ, ಸಾಕಿದ್ದಾರೆ. ಕಾಡು ಪಕ್ಷಿಗಳಾಗಿ ನವಿಲು, ಕೋಗಿಲೆ, ಗುಬ್ಬಚ್ಚಿ ಕಾಗೆ ಕಂಡುಬರುತ್ತವೆ.

ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ ಪ್ರಮುಖ ಬೆಳೆಯಾಗಿದ್ದು ಇದರೊಂದಿಗೆ ರಾಗಿ, ಜೋಳ, ಸೂರ್ಯಕಾಂತಿ ತೆಂಗು ಹುಣಸೆ ಬೆಳೆಗಳನ್ನು ಬೆಳೆಯುತ್ತಾರೆ. ಈ ಗ್ರಾಮದಲ್ಲಿ ಬೀಡಿಸುತ್ತುವುದು, ತೆಂಗಿನಗರಿ ಎರೆಯುವುದು, ಹೂ ಕಟ್ಟುವುದು ಮಹಿಳೆಯರ ಉಪಕಸುಬಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ನೇರಳೆಗುಡ್ಡ ಮತ್ತು ತಾಲ್ಲೂಕು ಪಂಚಾಯ್ತಿ ನೇರಲಗುಡ್ಡ ಗ್ರಾಮಪಂಚಾಯ್ತಿ ಸಿರಾ ತಹಶೀಲ್ದಾರ್ ಕಛೇರಿ ಬುಕ್ಕಾಪಟ್ಟಣ ಪೋಲಿಸ್ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ. ಗ್ರಾಮನ್ಯಾಯ ಮಂಡಳಿಯನ್ನು ಒಳಗೊಂಡಿದೆ.

ಅಂಗನವಾಡಿಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಶೇಕಡ ೪೫.೬೮ ರಷ್ಟು ಸಾಕ್ಷರತೆಯನ್ನು ಒಳಗೊಂಡಿದೆ. ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ ಸೌಲಭ್ಯಗಳಿವೆ. ಈ ಗ್ರಾಮದಲ್ಲಿ ಯಾವುದೇ ಆರೋಗ್ಯ ಕೇಂದ್ರಗಳಿಲ್ಲದಿದ್ದರೂ ಕುಟುಂಬ ಕಲ್ಯಾಣ ಪದ್ಧತಿಯನ್ನು ಪಡೆದುಕೊಂಡಿದೆ ವೃದ್ಧಾಪ್ಯ ವೇತನ, ವಿಧವಾ ವೇತನ --- ಸಮುದಾಯದ ಸೌಲಭ್ಯಗಳನ್ನು ಪಡೆಯುತ್ತಿದ್ದು, ಒಂದು ಚಿಲ್ಲರೆ ವ್ಯಾಪಾರದ ಅಂಗಡಿಯನ್ನು ಒಳಗೊಂಡಿದೆ. ಶಿಕ್ಷಣ, ಸಾರಿಗೆ ಇಲಾಖೆಯ ೨ ಸರ್ಕಾರಿ ನೌಕರಿದ್ದಾರೆ.

ಧಾರ್ಮಿಕ ಪರಂಪರೆಯಲ್ಲಿ ಬೋರನಾಳ ಕರಿಯಮ್ಮ ದೇವಾಲಯವಿದೆ. ಪ್ರತಿವರ್ಷವು ಸಾಂಪ್ರದಾಯಿಕ ಹಬ್ಬಗಳೊಂದಿಗೆ ದೇವತೆಯ ಜಾತ್ರೆಯನ್ನು ಮಾಡುವುದು ವಿಶೇಷವಾಗಿರುತ್ತದೆ. ಅದರಲ್ಲಿ ಆರತಿ ಮಾಡಿ ಬಲಿ ನೀಡುತ್ತಾರೆ.

## ಗೋಪಾಲದೇವರಹಳ್ಳಿ

ಗೋಪಾಲದೇವರಹಳ್ಳಿ ಸಿರಾ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕಿದೆ. ಈ ಗ್ರಾಮವು ಸಿರಾ ಚೇಳೂರು ರಸ್ತೆಯಲ್ಲಿದೆ. ಸಿರಾದಿಂದ ೨೦ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಕಂದಾಯ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಗೋವುಗಳನ್ನು ಹೆಚ್ಚಾಗಿ ಸಾಕುತ್ತಿದ್ದರಿಂದ ಜನರಿಗೆ ಗೋವುಗಳ ಬಗ್ಗೆ ದೇವರೆಂಬ ನಂಬಿಕೆ ಇದ್ದುದರಿಂದ ಗೋಪಾಲದೇವರಹಳ್ಳಿ ಎಂದು ಹೆಸರು ಈ ಪರಿಸರದಲ್ಲಿ ಹಲವು ದೇವರಹಳ್ಳಿ ಎಂಬ ಹೆಸರಿನ ಗ್ರಾಮ ಇರುವುದರಿಂದ ಗೋಪಾಲ ಎಂಬ ವಿಶೇಷದೊಂದಿಗೆ ಗ್ರಾಮ ರಚನೆಯಾಗಿದೆ. ಬುಕ್ಕಾಪಟ್ಟಣ ಹೋಬಳಿಗೆ ಸೇರಿದ್ದು, ಇದು ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯ್ತಿ ಕೇಂದ್ರವುಳ್ಳವಾಗಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೩೬೦.೭೯ ಹೆಕ್ಟೇರ್‌ಗಳಾಗಿವೆ. ಸಂಗಯ್ಯನ ಪಾಳ್ಯವು ಈ ಗ್ರಾಮಕ್ಕೆ ಸೇರ್ಪಡೆಯಾಗಿದೆ.

ಈ ಗ್ರಾಮವು ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಮಣ್ಣಿನಿಂದ ಕೂಡಿದ್ದು, ಎರೆಮಣ್ಣನ್ನು ಸ್ವಲ್ಪ ಪ್ರಮಾಣದಲ್ಲಿ ಕಾಣುತ್ತೇವೆ. ಹಾಗೂ ಈ ಭಾಗದಲ್ಲಿ ಯಾವುದೇ ಅರಣ್ಯ ತೋಪು ಬೆಟ್ಟ ಗುಡ್ಡಗಳು ಕಂಡುಬರುವುದಿಲ್ಲ. ಹಳ್ಳಿಯಲ್ಲಿ ಹೆಚ್ಚಿನದಾಗಿ ದನಕರುಗಳ ಸಾಕಾಣಿಕೆಯನ್ನು ಕಾಣಬಹುದಾಗಿದೆ. ನರಿ, ಮೊಲ, ಜಿಂಕೆ, ಉಡ, ಕರಡಿ, ಕಂಡುಬಂದರೆ, ಗ್ರಾಮದಲ್ಲಿ ಸಾಕು ಪ್ರಾಣಿಗಳಾಗಿ ಕುರಿ, ದನ, ಮೇಕೆ, ಸಾಕುತ್ತಾರೆ. ಕೋಳಿ ಸಾಕು ಪಕ್ಷಿಯೊಂದಿಗೆ ಕಾಡು ಪಕ್ಷಿಗಳಾಗಿ ಗಿಳಿ, ಗೊರವಂಕ, ನವಿಲು, ಕೋಗಿಲೆ, ಗೂಬೆ, ಹದ್ದು, ಗರುಡ, ಗುಬ್ಬಚ್ಚಿ ಕಂಡು ಬರುತ್ತವೆ.

ಈ ಹಳ್ಳಿಯಲ್ಲಿ ಮೂರ್‍ನಾಲ್ಕು ವರ್ಷಗಳಿಂದ ಹೆಚ್ಚಿನದಾಗಿ ಮಳೆಯಾಗದೇ ಬರಗಾಲವನ್ನು ಎದುರಿಸುತ್ತಿದೆ. ಆದರೂ ಇಲ್ಲಿನ ವಾರ್ಷಿಕ ಮಳೆಯ ಪ್ರಮಾಣ ೪೪೦.ಮಿ.ಮೀ. ಆಗಿದೆ. ಬಿಸಿಲು ೩೧೨ ಡಿ.ಸೆಂ. ಚಳಿ ೧೨ ಡಿ.ಸೆ. ಇದೆ. ಇಲ್ಲಿ ೮೫ ಕೊಳವೆ ಬಾವಿಗಳಿದ್ದು, ಕೃಷಿಗೆ ಸಹಾಯಕವಾಗಿವೆ. ಅಲ್ಲದೇ ಒಂದು ಹಳ್ಳವನ್ನು ಹೊಂದಿದ್ದು ಮಳೆಗಾಲದಲ್ಲಿ ತುಂಬಿಹರಿಯುತ್ತದೆ. ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ಕಲ್ಪಿಸಲಾಗಿದೆ.

ಈ ಗ್ರಾಮದಲ್ಲಿ ಒಟ್ಟು ೧೯೫ ಮನೆಗಳಿದ್ದು ೭೪೯ ಮಂದಿ ಜನಸಂಖ್ಯೆಯನ್ನು ಒಳಗೊಂಡಿದೆ. ಇವರ ಪ್ರಮುಖ ಭಾಷೆ ಕನ್ನಡ ಮತ್ತು ಉರ್ದುಗಳು ಇದರಲ್ಲಿ ಕುಂಚಿಟಿಗನ, ದೊಡ್ಡ ಸಮುದಾಯವಾಗಿದೆ. ಮುಸ್ಲಿಂ, ವೀರಶೈವ, ಆದಿಕರ್ನಾಟಕ, ನಾಯಕ, ಮಡಿವಾಳರ ಮನೆಗಳು ಸಣ್ಣ ಸಮುದಾಯವಿದೆ. ಇಲ್ಲಿನ ಮುಖ್ಯ ಆಹಾರ ರಾಗಿಮುದ್ದೆ, ಅನ್ನ ವಿಶೇಷವಾಗಿ ಬಾಡೂಟ ಪಾಯಸ, ಕಿಚುಡಿ, ಹೋಳಿಗೆ ಇತ್ಯಾದಿಗಳಾಗಿವೆ. ವಸತಿ ಯೋಜನೆಗಳಾದ ಆಶ್ರಮ, ಜನತಾ, ಇಂದಿರಾ ಆವಾಸ್ ಹಾಗೂ ಭ್ಯಾಗ್ಯ ಜ್ಯೋತಿ ವಿದ್ಯುತ್ ಸಂಪರ್ಕದ ೯೬ ಫಲಾನುಭವಿಗಳಿದ್ದಾರೆ ೭೪ ಮನೆಯಲ್ಲಿ ಶೌಚಾಲಯದ ಬಳಕೆಯಿದೆ.

ಜಿ.ಡಿ. ಹಳ್ಳಿಯಲ್ಲಿ ಸಾಂಪ್ರದಾಯಿಕ ವಾಹನಗಳಿದ್ದು ಅದರೊಂದಿಗೆ ಟ್ರಾಕ್ಟರ್, ಮಿನಿಟೆಂಪೋ, ದ್ವಿಚಕ್ರವಾಹನಗಳು ಇವೆ. ಅಲ್ಲದೇ ಗ್ರಾಮದಲ್ಲಿ ಡಾಂಬರು ಮತ್ತು ಕಚ್ಚಾರಸ್ತೆಯನ್ನು ಹೊಂದಿದೆ ಹಾಗೂ ಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಜೆ.ಡಿ. ಹಳ್ಳಿಯ ಮುಖ್ಯ ಉದ್ಯೋಗ ಕೃಷಿಯಾಗಿದೆ. ಇದರಲ್ಲಿ ಮುಖ್ಯ ಬೆಳೆ ಶೇಂಗಾವಾಗಿದೆ. ಇದರೊಂದಿಗೆ ರಾಗಿ, ಭತ್ತ, ಜೋಳ ಸೂರ್ಯಕಾಂತಿ ಇತ್ಯಾದಿ ತೆಂಗು, ಅಡಿಕೆ, ಹುಣಸೆ, ಹಲಸು, ಮಾವು ಬೇವು, ಬೆಳೆಗಳನ್ನು ಬೆಳೆಯುತ್ತಾರೆ. ಅಲ್ಲದೇ ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಇದರೊಂದಿಗೆ ಆರ್ಥಿಕ ಆದಾಯಕ್ಕೆ ಆಧುನಿಕ ಡೈರಿಯಿಂದ ಪಶುಸಂಗೋಪನೆಯನ್ನು ಮಾಡುತ್ತಿದ್ದಾರೆ.

ಈ ಹಳ್ಳಿಯಲ್ಲಿ ಸರ್ಕಾರಿ ಸೇವೆಯಲ್ಲಿ ಉಪನ್ಯಾಸಕ, ಶಿಕ್ಷಣ, ಸಾರಿಗೆ, ಸಮಾಜ ಕಲ್ಯಾಣ, ಅರಣ್ಯ ಇಲಾಖೆ ೯ ಜನ ಮಾಡುತ್ತಿರುವುದನ್ನು ಕಾಣಬಹುದು. ಗಂಧದ ಕಡ್ಡಿ, ಹಿಟ್ಟಿನ ಗಿರಣಿ, ಊಟದ ಎಲೆತಯಾರಿಕೆ, ಬೀಡಿಕಾರ್ಮಿಕರನ್ನು ಕಾಣಬಹುದಾಗಿದೆ. ಶಿಕ್ಷಕ ಬಸವರಾಜು, ಪ್ರವಾಸೋದ್ಯಮ, ಬಸವರಾಜು, ವಕೀಲ ಜವನಯ್ಯ ಗ್ರಾಮದವರಾಗಿದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ ಬುಕ್ಕಾಪಟ್ಟಣ ಗೋಪಾಲದೇವರಹಳ್ಳಿ ಜಿಲ್ಲಾ

ತಾಲ್ಲೂಕು ಪಂಚಾಯ್ತಿ, ತಹಶೀಲ್ದಾರ್ ಕಛೇರಿಯನ್ನು ಕಳ್ಳಂಬೆಳ್ಳ ವಿದ್ಯುತ್ ಮತ್ತು ಪೋಲಿಸ್ ಠಾಣೆಯನ್ನು ಹೊಂದಿದೆ. ಅಲ್ಲದೇ ಜಿ.ಡಿ. ಹಳ್ಳಿ ಗ್ರಾಮಪಂಚಾಯ್ತಿ ಮತ್ತು ಅಂಚೆ ಕಛೇರಿಯನ್ನು ಹೊಂದಿದೆ. ಈ ಗ್ರಾಮದಲ್ಲಿ ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರನ್ನು ಒಳಗೊಂಡಿದೆ. ಅಲ್ಲದೇ ಗ್ರಾಮನ್ಯಾಯ ಮಂಡಳಿಯನ್ನು ಹೊಂದಿದ್ದು ಬಗೆಹರಿಯದ ಕಲಹಗಳ ಸಮಸ್ಯೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳುತ್ತಿದ್ದಾರೆ.

ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯನ್ನು ಹೊಂದಿದ್ದು ಕನ್ನಡ ಮಾಧ್ಯದಲ್ಲಿ ಉಚಿತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಹಾಗೆಯೇ ಈ ಗ್ರಾಮದಲ್ಲಿನ ಒಟ್ಟು ಸಾಕ್ಷರತೆಯ ಪ್ರಮಾಣವು ೭೭.೭ ಅ ರಷ್ಟಿದೆ. ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ ಪುಸ್ತಕ ಸೌಲಭ್ಯವಿದೆ. ಎರಡು ಸ್ತ್ರೀಶಕ್ತಿ ಸಂಘಗಳು ಮತ್ತು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿಗಳು ಕಂಡು ಬರುತ್ತವೆ. ಇದರಿಂದ ಸಣ್ಣ ಪ್ರಮಾಣದ ಹಣ ಉಳಿತಾಯ ಮಾಡುವಂತಹ ಕೆಲಸ ಮಾಡುತ್ತಿದ್ದಾರೆ. ಅಲ್ಲದೇ ಇದರಿಂದ ಸಾಲ ಪಡೆಯುವುದು ತೀರಿಸುವಂತಹ ಬ್ಯಾಂಕಿಂಗ್ ಸಾಲಸೌಭ್ಯ ಪಡೆಯುತ್ತಿದ್ದಾರೆ.

ಈ ಗ್ರಾಮದಲ್ಲಿ ಉಪ ಆರೋಗ್ಯ ಕೇಂದ್ರವಿದೆ. ಇದರಿಂದ ಕುಟುಂಬ ಕಲ್ಯಾಣವನ್ನು ಹೊಂದಿದ್ದಾರೆ. ಆಶಾಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಇಲ್ಲಿ ಕಾಣುವ ರೋಗಗಳೆಂದರೆ ಚಳಿ, ಜ್ವರ, ಕೆಮ್ಮು ಇತ್ಯಾದಿಗಳಾಗಿವೆ. ಇಲ್ಲಿ ಬಸವಯ್ಯ, ಬನಪ್ಪ, ರಂಗಪ್ಪರವರು ನಾಟಿ ಓಷಧಿ ಪದ್ಧತಿಯನ್ನು ನೀಡುತ್ತಾರೆ ಈ ಗ್ರಾಮವು ಸರ್ಕಾರದ ಸಮುದಾಯ ಸೌಲಭ್ಯ ಪಡೆಯುತ್ತಿದೆ. ಅಲ್ಲದೇ ಗ್ರಾಮದಲ್ಲಿ ಆರು ಅಂಗಡಿಗಳನ್ನು ಹೊಂದಿದೆ.

ಯಾವುದೇ ಐತಿಹಾಸಿಕ ಸ್ಮಾರಕಗಳು, ಶಾಸನಗಳು, ಹಸ್ತಪ್ರತಿಗಳು ಇಲ್ಲದಿದ್ದರೂ, ಒಂದು ಅರಳಿ ವೃಕ್ಷದ ಕಟ್ಟೆ ಎರಡು ಕರಗಲ್ಲುಗಳಿವೆ. ಧಾರ್ಮಿಕ ದೇವಾಲಯಗಳಲ್ಲಿ ಮುರುಡು ಬಸವೇಶ್ವರ, ಮುದ್ದೆಮಾರಿ, ದುರ್ಗಾಂಬ, ಮಸೀದಿಯನ್ನು ಹೊಂದಿದೆ. ಇಲ್ಲಿ ವರ್ಷಕ್ಕೊಮ್ಮೆ ದುರ್ಗಾಂಬದೇವಿಯ ಜಾತ್ರೆ ನಡೆಯುತ್ತದೆ. ಅಲ್ಲದೇ ಆರತಿ ಮಾಡಿ ಬಲಿ ನೀಡುವ ಪದ್ಧತಿ ಜಾರಿಯಲ್ಲಿದೆ. ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ, ಬಕ್ರೀದ್, ರಂಜಾನ್ ಹಬ್ಬವನ್ನು ಆಚರಿಸುತ್ತಾರೆ. ಬಸವೇಶ್ವರ ಸಮುದಾಯ ಭವನ ಇದೆ.

ಈ ಗ್ರಾಮದಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾನಪದದಲ್ಲಿ ಭಜನೆ ಮತ್ತು ತತ್ವಪದಗಳನ್ನಾಡುವ ಬಸವಣ್ಣ ಮತ್ತು ತಂಡದವರು ಇದ್ದಾರೆ. ಈ ಗ್ರಾಮದಲ್ಲಿ ಒಂದು ದಲಿತ ಅಂಬೇಡ್ಕರ್ ಸಂಘವನ್ನು ಹಾಗೂ ಬೀಡಿ ಕಾರ್ಮಿಕರ ಸಂಘವನ್ನು ಹೊಂದಿದೆ. ಚೇಳೂರು ಸಿರಾ ರಸ್ತೆಗೆ ಸಂಪರ್ಕ ರಸ್ತೆ ಇದೆ.

## ಗೊಲ್ಲರಹಟ್ಟಿ (ಬಂಗಾರ ಹಟ್ಟಿ)

ಗೊಲ್ಲರಹಟ್ಟಿಯಾ ಸಿರಾ ತಾಲ್ಲೂಕು ಕೇಂದ್ರದಿಂದ ೨೩.೮ ಕಿ.ಮೀ. ದೂರದಲ್ಲಿರುವ ವಾಯುವ್ಯ ದಿಕ್ಕಿನಲ್ಲಿದೆ ಇದು ಹುಣಸೆಕಟ್ಟೆಯ ಉಪಗ್ರಾಮದಲ್ಲಿದೆ ಇದರ ಭೌಗೋಳಿಕ ವಿಸ್ತೀರ್ಣವು ೮೬.೮ ಹೆಕ್ಟೇರ್‌ಗಳಾಗಿವೆ. ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಈ ಗ್ರಾಮದಲ್ಲಿ ಪರಿಸರದಲ್ಲಿ ಜಿಂಕೆ, ಹಂದಿ, ನರಿ, ಕರಡಿ, ತೋಳ, ಕಂಡುಬಂದರೆ ಗ್ರಾಮದಲ್ಲಿ ಕುರಿ, ಮೇಕೆ, ನಾಯಿ, ಕತ್ತೆ, ಹಸು, ಎಮ್ಮೆ, ಸಾಕುಪ್ರಾಣಿಗಳಾಗಿವೆ.

ಈ ಗ್ರಾಮದಲ್ಲಿ ೮ ಕೊಳವೆ ಬಾವಿಗಳಿದ್ದು, ಒಂದು ಬಂಡೆಕಟ್ಟೆಯಿದೆ. ಕುಡಿಯುವ ನೀರಿಗೆ ಕೈ ಪಂಪು ಮತ್ತು ಸಿಸ್ಟನ್‌ಗಳನ್ನು ಕಲ್ಪಿಸಿದೆ. ಇಲ್ಲಿನ ವಾರ್ಷಿಕ ಮಳೆಯ ಪ್ರಮಾಣವು ೪೬೧ ಮಿ.ಮೀ. ಆಗಿದೆ. ಉಷ್ಣಾಂಶ ೩೧೨ ಡಿ.ಸೆಂ. ಆಗಿದ್ದು ಚಳಿ ೧೨ ಡಿ.ಸೆಂ. ಆಗಿದೆ. ಈ ಗ್ರಾಮದಲ್ಲಿ ೩೦ ಗೊಲ್ಲರ ಮನೆಗಳಿವೆ. ಇಲ್ಲಿನ ಜನರ ಮುಖ್ಯ ಭಾಷೆ ಕನ್ನಡ ಹಾಗೂ ಆಹಾರ ರಾಗಿಮುದ್ದೆ ವಿಶೇಷ ಸಂದರ್ಭದಲ್ಲಿ ಬಾಡೂಟ, ಪಾಯಸ, ಹೋಳಿಗೆ ಇತ್ಯಾದಿಗಳಾಗಿವೆ. ಇಲ್ಲಿನ ಮನೆಗಳು ಹೆಂಚಿನ, ಸೀಟಿನ, ಮನೆಗಳಾಗಿದ್ದು, ವಸತಿ ಯೋಜನೆಗಳಾದ ಆಶ್ರಮ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿದ್ದಾರೆ. ಇಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು ಶೇಂಗಾ ಪ್ರಮುಖ ಬೆಳೆಯಾಗಿದೆ. ಇದರೊಂದಿಗೆ ರಾಗಿ, ಭತ್ತ, ಜೋಳ, ತೆಂಗು, ಅಡಿಕೆ ಇತ್ಯಾದಿಗಳನ್ನು ಬೆಳೆಯುತ್ತಾರೆ. ಹುಣಸೆಹಣ್ಣು, ಹೊಂಗೆ ಬೀಜ, ಬೀಡಿಕಟ್ಟುವುದು, ಹೂಕಟ್ಟುವುದು ಮಹಿಳೆಯರ ಉಪ ಕಸುಬಾಗಿದೆ. ಕುರಿ ವ್ಯಾಪಾರ ವ್ಯಾಪಾರಿ ಸರಕಾಗಿದೆ. ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾಕ್ಷೇತ್ರ ಬುಕ್ಕಾಪಟ್ಟಣ ಜಿಲ್ಲಾ ನೇರಳಗುಡ್ಡ ತಾಲ್ಲೂಕು ಪಂಚಾಯ್ತಿ ತಹಶೀಲ್ದಾರ್ ಕಛೇರಿ ನೇರಲಗುಡ್ಡ ಪಂಚಾಯ್ತಿ ಬುಕ್ಕಾಪಟ್ಟಣ ಪೋಲಿಸ್‌ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ.

ಈ ಗ್ರಾಮದಲ್ಲಿ ಅಂಗನವಾಡಿಕೇಂದ್ರವಿದ್ದು ಒಟ್ಟಾರೇ ಸಾಕ್ಷರತೆಯ ಪ್ರಮಾಣವು ೪೮೮ ರಷ್ಟಿದೆ. ಈ ಗ್ರಾಮದಲ್ಲಿ ಯಾವುದೇ ಆರೋಗ್ಯ ಕೇಂದ್ರಗಳು ಇಲ್ಲ ಮತ್ತು ಸರ್ಕಾರದ

ಸಮುದಾಯದ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದು ಒಂದು ಚಿಲ್ಲರೆ ವ್ಯಾಪಾರದ ಅಂಗಡಿಯನ್ನು ಹೊಂದಿದೆ. ಧಾರ್ಮಿಕ ಕೇಂದ್ರಗಳಲ್ಲಿ ಜುಂಜಪ್ಪ ದೇವಾಲಯವಿದೆ. ಸಾಂಪ್ರದಾಯಿಕ ಹಬ್ಬಗಳೊಂದಿಗೆ ಪ್ರತಿವರ್ಷವು ಜುಂಜಪ್ಪನ ಜಾತ್ರೆಯನ್ನು ಮಾಡುತ್ತಾರೆ. ದೀಪಾವಳಿ, ಯುಗಾದಿ, ದಸರಾ, ರಾಮನವಮಿ, ಹಬ್ಬಗಳನ್ನು ಆಚರಿಸುವ ಇಲ್ಲಿ ಹಿರಿಯರ ಹಬ್ಬ, ಹಾಲುಹಬ್ಬ, ಜಿನ್ನಿಗೆಸೇವೆ ಹಿರಿಯ ಹಬ್ಬವಾಗಿ ಏಳುದಿನಗಳ ಕಾಲ ಜಾತ್ರೆ ನಡೆಯುತ್ತದೆ.

## ಚನ್ನನಕುಂಟೆ

ಚನ್ನನಕುಂಟೆ ಸಿರಾ ತಾಲ್ಲೂಕು ಕೇಂದ್ರದಿಂದ ೭ ಕಿಮೀ ದೂರದಲ್ಲಿದೆ. ಸಿರಾ–ಹೊನ್ನಗೊಂಡನಹಳ್ಳಿ ಮಾರ್ಗದಲ್ಲಿ ಸಿರಾದಿಂದ ಉತ್ತರಕ್ಕಿದೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೩೧೧.೭೯ ಹೆಕ್ಟೇರ್. ಚನ್ನಪ್ಪ ಎಂಬ ವ್ಯಕ್ತಿಯ ಹೆಸರಿನಲ್ಲಿ ಗ್ರಾಮ ರಚನೆಯಾಗಿದೆ. ಈ ಗ್ರಾಮದ ಪಕ್ಕದಲ್ಲಿಯೇ ಒಂದು ಕೆರೆಯಿದ್ದು ತುಂಬುವುದು ದುರ್ಲಭವಾಗಿದೆ. ಪೂರ್ವಕ್ಕೆ ಸಿರಾ ಗದ್ದೆ ಬಯಲು, ಪಶ್ಚಿಮ–ಪೂರ್ವಕ್ಕೆ ಹಳ್ಳ, ತೊರೆಸಾಲು, ತೋಟಗಾರಿಕೆ ಹಾಗಾಗಿ ಈ ಪ್ರದೇಶದಲ್ಲಿ ಕಾಡುಪ್ರಾಣಿಗಳಾದ ಜಿಂಕೆ, ನರಿ, ಮೊಲ, ಮುಂಗುಸಿ, ಬಾರುಬೆಕ್ಕು ಕಂಡುಬಂದರೆ ಗ್ರಾಮದಲ್ಲಿ ವ್ಯವಸಾಯ ಹಾಗೂ ಹೈನುಗಾರಿಕೆಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕಲಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಕಾಗೆ, ಕೊಕ್ಕರೆ, ಗೀಜುಗ, ಹದ್ದು, ಗರುಡ, ಗುಬ್ಬಚ್ಚಿ ಕಂಡುಬರುತ್ತವೆ. ವಾಡಿಕೆ ಮಳೆ ೪೬೦ ಮಿಮೀ ಆಗಿದ್ದು ಬಿಸಿಲು ೩೮ ಡಿಗ್ರಿ, ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಆಗಿದೆ. ಕೃಷಿ ಆಧಾರಿತ ರೈತರು ಮಳೆನೀರು ಸಾಲದೆ ೧೨೦ ಕೊಳವೆ ಬಾವಿಗಳ ಮೂಲಕ ನೀರಿನ ಆಸರೆ ಮಾಡಿಕೊಂಡು ಉಪಬೆಳೆ ಬೆಳೆಯುತ್ತಾರೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ನೀರು ಪೂರೈಸಲಾಗುತ್ತದೆ. ೧೨ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಬಲಿಜ ಜನಾಂಗ ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಈಡಿಗ, ರೆಡ್ಡಿ ಜನಾಂಗ ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೨೪೪ ಮನೆಗಳಿದ್ದು ೭೩ ಜನ ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿವೆ. ಇವು ಆಶ್ರಯ, ಇಂದಿರಾ ಆವಾಸ್, ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದಿದ್ದಾರೆ. ೧೫೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ರೊಟ್ಟಿ, ಅನ್ನ ಬಳಸುವವರಿದ್ದಾರೆ. ವಿಶೇಷ ಸಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಭೋಜನದ ವ್ಯವಸ್ಥೆ ಇರುತ್ತದೆ. ಇಲ್ಲಿ ಸಾಂಪ್ರದಾಯಿಕ ವಾಹನ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ತೊಗರಿ, ಅಲಸಂದೆ, ಆಹಾರ ಬೆಳೆಗಳು. ತೆಂಗು, ಅಡಿಕೆ, ಸೇವಂತಿಗೆ, ರೇಷ್ಮೆ ತೋಟಗಾರಿಕೆ ಬೆಳೆಗಳು. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೫೦ ಲೀ. ಹಾಲು ಸಂಗ್ರಹವಾಗುತ್ತಿದೆ.

ಶೇಂಗಾ, ಹುಣಸೆಹಣ್ಣು, ಹೊಂಗೆಬೀಜ ಮುಖ್ಯ ವ್ಯಾಪಾರಿ ಸರಕುಗಳಾಗಿವೆ. ವಾಣಿಜ್ಯಶಾಸ್ತ್ರ ಉಪನ್ಯಾಸಕ ವಿಜಯಕುಮಾರ್ ಸೇರಿದಂತೆ ಶಿಕ್ಷಕರು, ಸಾರಿಗೆ, ಆರೋಗ್ಯ ಇಲಾಖೆಯಲ್ಲಿ ಆರು ಜನ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಬೀಡಿ ಸುತ್ತುವುದು, ಹೂ ಕಟ್ಟುವುದು, ಊಟದ ಎಲೆ ತಯಾರಿಕೆ, ಟೈಲರಿಂಗ್ ಮಹಿಳೆಯರ ಗೃಹ ಕೈಗಾರಿಕಾ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ ಹೊನ್ನಗೊಂಡನಹಳ್ಳಿ ತಾಲ್ಲೂಕು, ಗ್ರಾಮ ಪಂಚಾಯ್ತಿ ಕೇಂದ್ರ ಹೊಂದಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದ ೫ ಜನ ಪಂಚಾಯ್ತಿ ಸದಸ್ಯರಿರುವುದು ವಿಶೇಷವಾಗಿದೆ. ಅಂಚೆ ಕಛೇರಿ, ಅಂಗನವಾಡಿ ಕೇಂದ್ರವಿದ್ದು ೫ ಸ್ತ್ರೀಶಕ್ತಿ ಸ್ವಸಹಾಯ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಸರ್ಕಾರಿ ಹಿರಿಯ ಪಾಠಶಾಲೆ ಇದ್ದು ೧೩೫ ಮಕ್ಕಳಿದ್ದಾರೆ. ೫ ಜನ ಶಿಕ್ಷಕರಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಪುಸ್ತಕ, ಸಮವಸ್ತ್ರ, ಕಾಂಪೌಂಡ್ ಸೌಲಭ್ಯಗಳಿವೆ. ೬೨% ರಷ್ಟು ಸಾಕ್ಷರರಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದು ೨ ಹೋಟೆಲ್, ೧೩ ಪೆಟ್ಟಿಗೆ ಅಂಗಡಿಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸ್ತ್ರೀ ದೇವತೆಗಳ ಆವಾಸ ನೆಲೆಯಾದ ಇಲ್ಲಿ ಮಾರಮ್ಮ, ಕೊಲ್ಲಾಪುರದಮ್ಮ, ಲಕ್ಷ್ಮೀ ದೇವಾಲಯಗಳಿದ್ದು ದಸರಾ, ಯುಗಾದಿ ದಿನಗಳಿಂದ ಉತ್ಸವ ಇರುತ್ತದೆ. ಮಾರಮ್ಮನ ಊರಹಬ್ಬ ವಿಶೇಷವಾಗಿ ನಡೆದು ಪ್ರಾಣಿಬಲಿ, ಆರತಿ, ಬಾನ, ಹರಕೆ ಸಂಪ್ರದಾಯಗಳಿವೆ.

ಯುಗಾದಿ, ಶಿವರಾತ್ರಿ, ದಸರಾ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರಂಗಪ್ಪನವರು

ಸ್ಥಾಪಿಸಿರುವ ಸಿದ್ದಾಶ್ರಮವಿದ್ದು ಸತ್ಸಂಗ, ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯುತ್ತವೆ.

ಚನ್ನನಕುಂಟೆ ರಂಗ ಸೀನರಿಗೆ ಪ್ರಖ್ಯಾತವಾದ ಗ್ರಾಮವಾಗಿದ್ದು ಇಲ್ಲಿನ ಹುಚ್ಚರಂಗಪ್ಪ, ನಿರಂತರವಾಗಿ ಯಕ್ಷಗಾನ, ಪೌರಾಣಿಕ, ಸಾಮಾಜಿಕ ನಾಟಕಗಳಿಗೆ ಹೊಸ ಹಾಗೂ ಪಾರಂಪರಿಕ ರಂಗ ಸೀನರಿಗಳನ್ನು ಹಿಂದಿನಿಂದಲೂ ಒದಗಿಸುತ್ತಾ ಬರುತ್ತಿದೆ. ಅತ್ಯುತ್ತಮ ರಂಗ ಉಡುಗೆ, ತೊಡುಗೆ, ಅಲಂಕಾರ, ಸೀನರಿ, ವಾಹನ ಸೌಕರ್ಯ, ಮೇಕಪ್ ಕಲಾವಿದರನ್ನು ಹೊಂದಿದೆ.

## ಚನ್ನನಕುಂಟೆ ಗೊಲ್ಲರಹಟ್ಟಿ

ಚನ್ನನಕುಂಟೆ ಗೊಲ್ಲರಹಟ್ಟಿ ಚನ್ನನಕುಂಟೆ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ಒಂದು ಉಪಗ್ರಾಮ. ಚನ್ನನಕುಂಟೆಗೆ ಸೇರಿದ ಕಾರಣ ಅದೇ ಹೆಸರಿನಲ್ಲಿ ಗೊಲ್ಲರೇ ವಾಸಿಸುವ ಕಾರಣ ಗೊಲ್ಲರಹಟ್ಟಿ ಎಂದೂ ಕರೆಯಲಾಗುತ್ತಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೭ ಕಿ.ಮೀ ದೂರದಲ್ಲಿದೆ. ಇದರ ಭೌಗೋಳಿಕ ವಿಸ್ತೀರ್ಣ ೪೨.೦೯ ಹೆಕ್ಟೇರ್ ಆಗಿದ್ದು ಬಯಲು ಮಿಶ್ರಿತ ತೋಟಗಾರಿಕೆ ಪ್ರದೇಶ. ಸಿರಾ ದೊಡ್ಡ ಕೆರೆಯ ಬಯಲಿಗೆ ಸಮೀಪದಲ್ಲಿದೆ. ಕಪ್ಪುಮಿಶ್ರಿತ ಕೆಂಪು ಮಣ್ಣನ್ನು ಹೊಂದಿದೆ. ಉತ್ತರಕ್ಕೆ ತೋಟಗಾರಿಕೆ ಪೂರ್ವಕ್ಕೆ ಗದ್ದೆ ಬಯಲ ಸಾಲು ಪೂರ್ವ–ಪಶ್ಚಿಮಕ್ಕೆ ಹಳ್ಳ ಇದೆ. ಹಾಗಾಗಿ ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿ ಕಂಡುಬರುತ್ತದೆ. ಗ್ರಾಮದಲ್ಲಿ ಕೃಷಿ ಹಾಗೂ ಜೀವ ಉಪಕ್ರಮವಾಗಿ ಹಸು, ಎತ್ತು ಹಾಗೂ ಕುರಿ, ಮೇಕೆ ಸಾಕಲಾಗಿದೆ.

ಈ ಪರಿಸರದಲ್ಲಿ ಕಾಡು ಪಕ್ಷಿಯಾಗಿ ಗಿಳಿ, ಗರುಡ, ನವಿಲು, ಹದ್ದು, ಗೂಬೆ, ಕೊಕ್ಕರೆ, ಕೋಗಿಲೆ, ಕಾಗೆ, ಗುಬ್ಬಚ್ಚಿ ಕಂಡುಬರುತ್ತದೆ. ಸಾಕು ಪಕ್ಷಿಯಾಗಿ ಕೋಳಿ ಸಾಕಾಣಿಕೆ ಇದೆ. ವಾರ್ಷಿಕವಾಗಿ ೪೬೦ ಮಿಮೀ ಮಳೆ ಪ್ರಮಾಣ ಹೊಂದಿದ್ದು ಬಿಸಿಲು ೩೭ ಡಿಗ್ರಿ, ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಕೃಷಿಗೆ ವಾಡಿಕೆ ಮಳೆ ಸಾಕಾಗುವುದಿಲ್ಲ. ಆದುದರಿಂದ ಕೊಳವೆ ಬಾವಿಗಳ ಮೂಲಕ ಉಪನೀರಿನ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಈ ಪರಿಸರದಲ್ಲಿ ೧೨ ಕೊಳವೆ ಬಾವಿಗಳಿವೆ. ೩ ಸಿಸ್ಟರ್ನ್‌ಗಳು ಒಂದು ಕೈಪಂಪಿನ ಮೂಲಕ ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ಕುಡಿಯಲು ನೀರನ್ನು ಪೂರೈಸಲಾಗುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಸಂಪೂರ್ಣವಾಗಿ ಕಾಡುಗೊಲ್ಲರು ವಾಸಿಸುತ್ತಿದ್ದು ವಿವಿಧ ಪ್ರಕಾರಗಳ ೨೮ ಮನೆಗಳಿವೆ. ಇವು ಕಾಂಕ್ರೀಟ್, ಶೀಟಿನ, ಹೆಂಚಿನ ಸ್ವರೂಪದಲ್ಲಿವೆ. ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳೂ ಇದ್ದಾರೆ.

ಮುಖ್ಯ ಆಹಾರ ರಾಗಿಮುದ್ದೆ. ಬಳಸುವವರಿದ್ದಾರೆರೊಟ್ಟಿ, ಅನ್ನ ಬಳಸುತ್ತಾರೆ. ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಆದುನಿಕ ವಾಹನಗಳಾದ ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಆಹಾರ. ರಾಗಿ, ಭತ್ತ, ಜೋಳ, ಹುರುಳಿ, ತೊಗರಿ, ಆಹಾರ ಬೆಳೆಗಳು. ಸೂರ್ಯಕಾಂತಿ, ಬಟನ್ಸ್ ಹೂ ಬೆಳೆಯುತ್ತಾರೆ. ಶೇಂಗಾ, ಕುರಿ ವ್ಯಾಪಾರ, ಹುಣಸೇಹಣ್ಣಿನ ವ್ಯಾಪಾರಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರಗಳನ್ನು ಹೊಂದಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ೪೩ ಮೊಬೈಲ್ ಫೋನ್ ಬಳಕೆಯಲ್ಲಿವೆ. ಒಂದು ಅಂಗನವಾಡಿ ಕೇಂದ್ರವಿದ್ದು ೧೪ ಮಕ್ಕಳಿದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗುತ್ತಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೨% ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಕೊಲ್ಲಾಪುರದಮ್ಮ, ಬೇವಿನಳ್ಳಯ್ಯ ದೇವರ ಗುಡಿಗಳಿವೆ. ಊರ ಹಬ್ಬವಾಗಿ ಕೊಲ್ಲಾಪುರದಮ್ಮನಿಗೆ ಆರತಿ, ಬಾನ, ಬ್ಯಾಟೆಯ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಗೌರಿ–ಗಣೇಶ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ದೀಪಾವಳಿ ಹಬ್ಬವನ್ನು ಹಿರಿಯರ ಹಾಲುತುಪ್ಪದ, ದೀಪ ಏರಿಸುವ–ಇಳಿಸುವ ಹಬ್ಬವಾಗಿ ೬ ದಿನಗಳ ಕಾಲ ಆಚರಿಸುವುದು ವಾಡಿಕೆಯಾಗಿದೆ. ಚನ್ನನಕುಂಟೆ– ಸಿರಾ – ಹೊನ್ನಗೊಂಡನಹಳ್ಳಿಗೆ ರಸ್ತೆ ಸಂಪರ್ಕವಿದೆ.

## ಚಿಕ್ಕನಕೋಟೆ

ಚಿಕ್ಕನಕೋಟೆ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೮ ಕಿಮೀ ದೂರದಲ್ಲಿದ್ದು ಸಿರಾ–ಅಮರಾಪುರ ಮುಖ್ಯ ರಸ್ತೆಯಲ್ಲಿ ಆದಲೂರು ಗೇಟಿನಿಂದ ಎಡಕ್ಕೆ ತಿರುಗಿ ೩ ಕಿ.ಮೀ ದೂರ ಕ್ರಮಿಸಬೇಕು. ಇದೊಂದು ಕಂದಾಯ ಗ್ರಾಮವಾಗಿದ್ದು ೪೫೫.೨೫ ಹೆಕ್ಟೇರ್ ಭೌಗೋಳಿಕ ವ್ಯಾಪ್ತಿಯನ್ನು ಪಡೆದಿದೆ. ಈ

ಗ್ರಾಮದ ಉಪಗ್ರಾಮವಾಗಿ ಚಿಕ್ಕನಕೋಟೆ ಗೊಲ್ಲರಹಟ್ಟಿ ಇದ್ದು ಇದು ಈ ಗ್ರಾಮದಿಂದ ಪಶ್ಚಿಮಕ್ಕೆ ಅರ್ಧ ಕಿಮೀ ಅಂತರದಲ್ಲಿದೆ.

ಕಪ್ಪುಮಿಶ್ರಿತ ಮರಳು ಮಣ್ಣು ಹೊಂದಿದ್ದು ಈ ಗ್ರಾಮದ ಪೂರ್ವಕ್ಕೆ ನಾರಾಯಣಪ್ಪನವರ ಹೊಲದಲ್ಲಿ ವೀರಗಲ್ಲು ಇದ್ದು ಮೂರು ಹಂತದಲ್ಲಿ ಚಿತ್ರಿಸಲಾಗಿದೆ. ಮೊದಲ ಹಂತ ಯುದ್ಧಕ್ಕೆ ಹೊರಟ ವೀರನ ಆಯುಧ ದಾರಿ ಚಿತ್ರ, ಎರಡನೆಯದು ಮಡಿದ ವೀರನಿಗೆ ದೇವತೆಗಳು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ಚಿತ್ರ ಕೊನೆಹಂತ ಶಿವಪೂಜೆಯಲ್ಲಿ ನಿರತ ಭಂಗಿ. ಇದು ವಿಜಯನಗರ ಕಾಲದ ನಿರ್ಮಾಣವಾಗಿರಬಹುದು. ಸಿರಾ ಪಾಳೆಯಗಾರರ ಆಳ್ವಿಕೆ ಕಾಲದಲ್ಲಿ ಸಣ್ಣ ಪ್ರಾಂತ್ಯವಾಗಿದ್ದು ಈ ಗ್ರಾಮದಲ್ಲಿ ಸಣ್ಣದೊಂದು ಕೋಟೆಯ ಬುರ್ಜ ಇದ್ದುದರಿಂದ ಚಿಕ್ಕಕೋಟೆ ಗ್ರಾಮವಾಗಿ ಚಿಕ್ಕನಕೋಟೆ ಆಗಿದೆ ಎಂದು ಗ್ರಾಮದ ಹಿರೀಕ ಎಸ್.ರಂಗಪ್ಪ ಅಭಿಪ್ರಾಯ ಪಟ್ಟರೆ ಪಾಳೆಯಗಾರ ಚಿಕ್ಕಣ್ಣ ಎಂಬುವನು ಕಟ್ಟಿಸಿದ ಬುರ್ಜು ಇದಾಗಿದ್ದುದರಿಂದ ಸುತ್ತಲ ಗ್ರಾಮಸ್ಥರಿಗೆ ಚಿಕ್ಕನಕೋಟೆ ಎಂದು ಕ್ರಮೇಣ ಚಿಕ್ಕನಕೋಟೆ ಎಂದೇ ದಾಖಲೆಯಾಗಿದೆ ಎಂದು ನರಸಿಂಹಯ್ಯ ವಿವರಿಸುತ್ತಾರೆ.

ಮೊಲ, ಜಿಂಕೆ, ಕಾಡುಕೋಳಿ, ಕಾಡುಹಂದಿ, ನರಿ ಈ ಮೊದಲಾದ ಕಾಡುಪ್ರಾಣಿಗಳು ಈ ಗ್ರಾಮದ ಪರಿಸರದಲ್ಲಿ ಕಂಡುಬಂದರೆ ಗ್ರಾಮದಲ್ಲಿ ರೈತಾಪಿ ಬದುಕಿಗೆ ಆಶ್ರಯವಾಗಿ ಹಸು, ಎತ್ತು, ಎಮ್ಮೆ, ಕುರಿ, ಆಡು, ಕೋಳಿ ಮೊದಲಾದ ಪ್ರಾಣಿಗಳನ್ನು ಸಾಕುತ್ತಾರೆ. ನವಿಲು, ಕೊಕ್ಕರೆ, ಬೆಳವ, ಕೋಗಿಲೆ, ಗೂಬೆ, ಗುಬ್ಬಚ್ಚಿ, ಕಾಗೆ ಪಕ್ಷಿಗಳಿವೆ.

ಕೃಷಿ ಆಧಾರಿತ ಬದುಕಿನ ಇಲ್ಲಿನ ಮಳೆಯ ಸರಾಸರಿ ಪ್ರಮಾಣ ೪೫೬ ಮಿಮೀ ಏನೇನೂ ಸಾಲದು. ರೈತರು, ಗಂಗಾಕಲ್ಯಾಣ, ಸಹಕಾರಿ ಬ್ಯಾಂಕ್‌ಗಳ ನೆರವಿನೊಂದಿಗೆ ಕೊಳವೆ ಬಾವಿ ಕೊರೆಸಿ ನೀರು ಪೂರೈಸಿಕೊಂಡು ಬೆಳೆಯುತ್ತಾರೆ. ಚಳಿ ೯.೧೨ ಡಿಗ್ರಿ ಇದ್ದು ಬಿಸಿಲು ೩೬-೩೮ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಈ ಗ್ರಾಮದ ಪೂರ್ವಕ್ಕೆ ಸಂಗಮೇಶ್ವರ ಹಳ್ಳವಿದ್ದು ಮಳೆಗಾಲದಲ್ಲಿ ತುಂಬಿರುತ್ತದೆ. ಇದರಿಂದ ಪಕ್ಕದ ಬೋರ್‌ವೆಲ್‌ಗಳಿಗೆ ಜಲ ಸಂಪನ್ಮೂಲ ಉತ್ಪತ್ತಿಯಾಗಿ ರೈತರಿಗೆ ಆಶಾದಾಯಕವಾಗಿದೆ. ಉಳಿದಂತೆ ೪ ಕೊಳವೆ ಬಾವಿಗಳ ಮೂಲಕ ೨೩ ನಲ್ಲಿಗಳಲ್ಲಿ ಗ್ರಾಮಕ್ಕೆ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಿದೆ.

ಕುಂಚಿಟಿಗರು ಈ ಗ್ರಾಮದ ದೊಡ್ಡ ಜನಾಂಗವಾಗಿದ್ದು ಆದಿ ಕರ್ನಾಟಕ, ಆದಿದ್ರಾವಿಡ, ಬೇಡರು, ಕುರುಬ, ಈಡಿಗರು, ಮುಸ್ಲಿಮರ ಎರಡು ಕುಟುಂಬಗಳು ಇವೆ. ಗ್ರಾಮದಲ್ಲಿ ಒಟ್ಟು ೧೮೯ ಮನೆಗಳಿದ್ದು ಎಲ್ಲರೂ ವಸತಿ ಪಡೆದಿದ್ದಾರೆ. ೬೦ ಕಾಂಕ್ರೀಟ್, ೨೦ ಹಾಸುಬಂಡೆ, ೮೦ ಮಣ್ಣಿನ ಮನೆ, ೬ ಗುಡಿಸಲು, ೧೩ ಹೆಂಚಿನ ಮನೆಗಳಿದ್ದು ಇಂದಿರಾ ಆವಾಸ್, ಆಶ್ರಯ, ಜನತಾ ಯೋಜನೆಯ ಹಾಗೂ ಭಾಗ್ಯಜ್ಯೋತಿ ಯೋಜನೆಯ ೩೪ ಫಲಾನುಭವಿಗಳಿದ್ದಾರೆ.

ಈ ಗ್ರಾಮದಲ್ಲಿ ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು ರೊಟ್ಟಿ, ಚಿತ್ರಾನ್ನ, ಉಪ್ಪಿಟ್ಟು ಉಪ ಆಹಾರವಾಗಿದೆ. ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹೋಳಿಗೆ, ಪಾಯಸದ ಊಟದ ಅವಕಾಶವನ್ನು ಮಾಡಿಕೊಳ್ಳುತ್ತಾರೆ. ಎತ್ತಿನ ಬಂಡಿ ಗ್ರಾಮದ ಸಾಂಪ್ರದಾಯಿಕ ವಾಹನವಾಗಿದ್ದು ಟ್ರ್ಯಾಕ್ಟರ್, ಕಾರು, ಲಾರಿ ಹಾಗೂ ಟಿಲ್ಲರನ್ನು ಸ್ಕೂಟರ್ ಆಧುನಿಕ ವಾಹನಗಳಾಗಿ ಬಳಕೆಯಾಗುತ್ತಿವೆ.

ರಾಗಿ, ಭತ್ತ, ಶೇಂಗಾ ಮುಖ್ಯ ಆಹಾರ ಬೆಳೆಗಳಾಗಿದ್ದು ತೊಗರಿ, ಅಲಸಂದೆ, ಹುರುಳಿ, ಹತ್ತಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಹುಣಸೇಹಣ್ಣು, ತೆಂಗಿನಕಾಯಿ, ಅಡಿಕೆ, ಕುರಿ ವ್ಯಾಪಾರವೂ ಉಪಜೀವನವಾಗಿದೆ. ಇದೊಂದು ಪುಟ್ಟ ಹಳ್ಳಿಯಾದರೂ ಪದವೀಧರರ ಸಂಖ್ಯೆ ಅಧಿಕವಾಗಿದೆ. ಇಬ್ಬರು ವೈದ್ಯರು, ಇಬ್ಬರು ಉಪನ್ಯಾಸಕರು, ಪ್ರಾಂಶುಪಾಲರು, ಪ್ರೌಢಶಾಲೆ ವಾರ್ತಾ ಮತ್ತು ಪ್ರಸಾರ ಇಲಾಖೆಯ ಉಪನಿರ್ದೇಶಕರು ಈ ಗ್ರಾಮದವರಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರೂ ಸೇರಿ ಒಟ್ಟು ೧೬ ಜನ ಸರ್ಕಾರಿ ನೌಕರರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರಕ್ಕೆ ನಾದೂರು ಜಿಲ್ಲಾ ಪಂಚಾಯತ್, ಮೇಲ್ಕುಂಟೆ ತಾಲ್ಲೂಕು ಪಂಚಾಯ್ತಿ ಹಾಗೂ ಕೊಟ್ಟ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿ ಸದಸ್ಯರಿದ್ದು ೧೯೯೬-೨೦೦೦ ರಲ್ಲಿ ಗ್ರಾಮದ ಪದವೀಧರ ಯುವತಿ ಪುಟ್ಟಮ್ಮ ಕೊಟ್ಟ ಪಂಚಾಯ್ತಿ ಅಧ್ಯಕ್ಷರಾಗಿದ್ದರು. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫ ಜನ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಶೌಚಾಲಯ, ಬಿಸಿಊಟ, ಕ್ಷೀರಭಾಗ್ಯ, ಕಾಂಪೌಂಡ್ ಸೌಲಭ್ಯ ಹೊಂದಿದೆ. ಉನ್ನತ ಶಿಕ್ಷಣಕ್ಕೆ ಸಿರಾ ನಗರಕ್ಕೆ ಬರುವ ವ್ಯವಸ್ಥೆ ಇದೆ. ವೃದ್ಧಾಪ್ಯವೇತನ, ಅಂಗವಿಕಲ ವೇತನ, ವಿಧವಾ ವೇತನ ಮೊದಲಾದ ಸರ್ಕಾರಿ ಸೇವಾ ಸೌಲಭ್ಯ ಪಡೆದ

ಕುಟುಂಬಗಳಿದ್ದು ಗಂಗಾಕಲ್ಯಾಣ, ನೀರಾವರಿ ಯೋಜನೆಯ ಫಲಾನುಭವಿಗಳಿದ್ದಾರೆ.

ಗ್ರಾಮದ ಪ್ರಮುಖ ದೈವ ಕೆಂಚಮ್ಮ. ಅಮ್ಮಾಜಿ ಎಂದು ಕರೆದು ಪೂಜಿಸುತ್ತಾರೆ. ದುರ್ಗಮ್ಮ, ಭೈರವ ದೇವರುಗಳು ಪೂಜೆಗೆ ಒಳಪಡುತ್ತವೆ. ಕೋಟೆಗಳಲ್ಲಿ ಬೊಮ್ಮಪ್ಪ, ಮುನಿಯಪ್ಪ, ಭೂತಪ್ಪ ಹೆಸರಿನ ಹಾಸುಕಲ್ಲು ಹೊದಿಸಿ ಪುಟ್ಟದಾಗಿ ನಿರ್ಮಿಸಿಕೊಂಡಿರುವ ಕಲ್ಲುಶಿಲೆಯ ಗುಡಿಗಳಿದ್ದು ಹೊಸ ಬೆಳೆ ಕೊಯ್ಲಿಗೆ ಬರುವ ಸಂದರ್ಭದಲ್ಲಿ ಪೂಜೆ, ಬಲಿ, ಅನ್ನ ಸಂತರ್ಪಣೆಯನ್ನು ನಡೆಸಲಾಗುತ್ತದೆ. ಈ ಗ್ರಾಮದ ಪಕ್ಕದಲ್ಲಿನ ಸಂಗಮೇಶ್ವರ ಹಳ್ಳದ ದಡದಲ್ಲಿ ಕರಿಸಿದ್ದೇಶ್ವರ ದೇವಾಲಯವಿದ್ದು ಶಿವರಾತ್ರಿಯ ಸಂದರ್ಭದಲ್ಲಿ ವಿಶೇಷ ಪೂಜೆ, ಪ್ರಸಾದ ವಿನಿಯೋಗ ಇರುತ್ತದೆ. ಅಖಂಡ ಭಜನೆಯೂ ನಡೆಯುತ್ತದೆ. ಕ್ರಿ.ಶ. ೧೬ನೇ ಶತಮಾನಕ್ಕೆ ಸೇರಿದ ಅಸ್ಪ ೃಶ್ಯ ಶಾಸನವೊಂದು ಈ ಗ್ರಾಮದ ಭೈರವೇಶ್ವರ ದೇವಾಲಯದ ಮುಂದಿದ್ದು ಇದು ಸಿರಾ ಶಾಸನ ೮೯ ರಲ್ಲಿ ಪ್ರಕಟವಾಗಿದೆ.

ಮಲ್ಲೇಗೌಡ, ಎಸ್.ರಂಗಪ್ಪ ಉತ್ತಮ ರಂಗ ಕಲಾವಿದರಾಗಿದ್ದಾರೆ. ಶಿವರಾತ್ರಿಯ ಸಂದರ್ಭದಲ್ಲಿ ದೇವಿ ಮಹಾತ್ಮೆ, ದಕ್ಷಯಾಗ ಮೊದಲಾದ ನಾಟಕಗಳ ಪ್ರದರ್ಶನ ಏರ್ಪಡಿಸಲಾಗುತ್ತದೆ. ಶಿವರಾತ್ರಿ, ಯುಗಾದಿ, ಗೌರಿ–ಗಣೇಶ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಚಿಕ್ಕನಕೋಟೆ ಗೊಲ್ಲರಹಟ್ಟಿ

ಚಿಕ್ಕನಕೋಟೆ ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೮ ಕಿಮೀ ದೂರದಲ್ಲಿದೆ. ಸಿರಾ–ಚಂಗಾವರ ಮುಖ್ಯ ರಸ್ತೆಯಲ್ಲಿ ಭೂತಕಾಟನಹಳ್ಳಿ ಗ್ರಾಮದಲ್ಲಿ ಬಲಕ್ಕೆ ತಿರುಗಿ ಒಂದು ಕಿ.ಮೀ ದೂರದಲ್ಲಿ ಚಿಕ್ಕನಕೋಟೆ ಗೊಲ್ಲರಹಟ್ಟಿ ಇದೆ. ಇದೊಂದು ಕಾಡುಗೊಲ್ಲರ ಬುಡಕಟ್ಟು ಗ್ರಾಮವಾಗಿದ್ದು ಚಿಕ್ಕನಕೋಟೆಯ ಉಪಗ್ರಾಮವಾಗಿದೆ. ಇದರ ಭೌಗೋಲಿಕ ವಯಾಪ್ತಿ ૩೪.೦೬ ಹೆಕ್ಟೇರ್ ಆಗಿದೆ.

ಕಂದು ಮಿಶ್ರಿತ ಮರಳು ಮಣ್ಣನ್ನು ಹೊಂದಿರುವ ಈ ಗ್ರಾಮದ ಪರಿಸರ ಕುರುಚಲು ಗಿಡ, ಹಳ್ಳ ಪೊದೆಯಿಂದ ಕೂಡಿದೆ. ಈ ಭಾಗದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಮುಂಗುಸಿ, ಉಡ, ಕಾಡುಹಂದಿ ಕಂಡುಬಂದರೆ ಗ್ರಾಮದಲ್ಲಿ ಕುರಿ, ಹಸು, ಎಮ್ಮೆ, ಮೇಕೆ, ಕತ್ತೆ ನಾಯಿಗಳನ್ನು ಸಾಕಿದ್ದಾರೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಬೆಳವ, ಕೋಗಿಲೆ, ಕಾಗೆ, ಗುಬ್ಬಚ್ಚಿ, ಹದ್ದು ಕಂಡುಬರುತ್ತದೆ. ಕೋಳಿ ಸಾಕುಪಕ್ಷಿಯಾಗಿದೆ. ಬಿಸಿಲು, ಬರದ ಒಣಹವೆಯಿದ್ದು ૩೮ ಡಿಗ್ರಿ ಬಿಸಿಲಿನ ತಾಪಮಾನವಿದೆ. ಮಳೆ ૩೪ ಮಿಮೀ ಬರುತ್ತಿದ್ದು ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಹಜವಾಗಿದೆ. ಚಿಕ್ಕನಕೋಟೆಗೆ ಸಂಬಂಧಿಸಿದ ಒಂದು ಕೆರೆಯಿದೆ. ಕೃಷಿಕರು ಕೊಳವೆ ಬಾವಿಗಳ ಮೂಲಕ ತೋಟಗಾರಿಕೆ ಮಾಡಿಕೊಂಡಿದ್ದಾರೆ. ಈ ಪರಿಸರದಲ್ಲಿ ೧೫ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಲ್ಲಿ ನೀರನ್ನು ಪೂರೈಸಲಾಗುತ್ತದೆ. ೪ ಸಿಸ್ಟರ್ನ್‌ಗಳಿದ್ದು ಒಂದು ಕೈಪಂಪು ಇದೆ.

ಕಾಡುಗೊಲ್ಲರ ೬೮ ಮನೆಗಳಿವೆ. ಕನ್ನಡ ಮಾತೃಭಾಷೆ. ಕಾಂಕ್ರೀಟ್, ಹೆಂಚಿನ, ಶೀಟಿನ ೪ ಗುಡಿಸಲು ಮನೆಗಳಿವೆ. ಆಶ್ರಯ, ಜನತಾ, ವಸತಿ ಯೋಜನೆಯ ೯ ಫಲಾನುಭವಿಗಳಿದ್ದು ೧೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ, ಮುಖ್ಯ ಆಹಾರವಾಗಿದ್ದು ರೊಟ್ಟಿ, ಅನ್ನವನ್ನು ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನವಾದ ಟ್ರ್ಯಕ್ಟರ್ ಜೊತೆಗೆ ಎರಡು ಎತ್ತಿನ ಗಾಡಿಗಳಿವೆ. ದ್ವಿಚಕ್ರ ವಾಹನ ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ತೊಗರಿ, ಹುರುಳಿ ಇತರ ಆಹಾರ ಬೆಳೆಗಳು. ಶೇಂಗಾ, ಕುರಿ ವ್ಯಾಪಾರ ಗ್ರಾಮದಲ್ಲಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ ಹಾಗೂ ಮೇಲ್ಕುಂಟೆ ತಾಲ್ಲೂಕು ಪಂಚಾಯ್ತಿ, ಕೊಟ್ಟ ಗ್ರಾಮಪಂಚಾಯ್ತಿ ಕೇಂದ್ರಗಳನ್ನು ಬಳಸಿಕೊಂಡಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೨೯ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯದ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ૩ ಪೆಟ್ಟಿಗೆ ಅಂಗಡಿಗಳಿವೆ. ತಿಮ್ಮಪ್ಪ ಗ್ರಾಮದ ಅಧಿದೇವತೆ. ಊರ ಹೊರಭಾಗದಲ್ಲಿ ವಿಶೇಷವಾಗಿ ನಡೆದರೆ ಭೂತಪ್ಪನ ಹರಕೆ, ಆರತಿ, ಬಾನ, ಬ್ಯಾಟೆ ಸಂಪ್ರದಾಯ ಊರ ಹಬ್ಬವಾಗಿ ಆಚರಿಸುತ್ತಾರೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಸಂಕ್ರಾಂತಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುವುದು ಇಲ್ಲಿನ ವಿಶೇಷವಾಗಿದೆ.

ಈರಣ್ಣ ಚಿತ್ರದೇವರ ಕುರಿತ ಪದ ಹೇಳುವ ಕಲಾವಿದರು. ಕೋಲಾಟದ ಪದ ಹೇಳುತ್ತಾರೆ.

## ಚಿಕ್ಕಗೂಳ

ಚಿಕ್ಕಗೂಳ ದೊಡ್ಡಗುಳ ಎರಡೂ ಗ್ರಾಮಗಳು ಒಂದೇ ಆಸುಪಾಸಿನಲ್ಲಿ ರಚನೆಯಾಗಿರುವ ಗ್ರಾಮಗಳು. ಎರಡೂ ಗ್ರಾಮಗಳು ಕಂದಾಯ ಗ್ರಾಮವಾಗಿದ್ದು ಬಹು ಸಂಸ್ಕೃತಿಯ ಜನಾಂಗಿಕ ಹಿನ್ನೆಲೆಯ ಗ್ರಾಮಗಳು. ಎರಡೂ ಗ್ರಾಮಗಳು ಊರಿನ ಬದಿಗೆ ಕೆರೆಗಳನ್ನು ಹೊಂದಿರುವುದು ವಿಶೇಷವಾಗಿದೆ. ಗೂಳ-ಕೊಳ ಕೆರೆಯ ರೂಪದಲ್ಲಿ ಪ್ರಕಟವಾಗುವ ಶಬ್ದಗಳು. ಹಾಗಾಗಿ ಚಿಕ್ಕಕೆರೆಯ ಗ್ರಾಮ ಚಿಕ್ಕಗೂಳವಾದರೆ ದೊಡ್ಡಕೆರೆಯ ಊರು ದೊಡ್ಡಗೂಳವಾಗಿದೆ. ಗುಳ ನಂತರದಲ್ಲಿ ಗೂಳವಾಗಿ ಪರಿವರ್ತನೆಯಾಗಿ ಚಿಕ್ಕಗೂಳವಾಗಿದೆ. ಚಿಕ್ಕಗೂಳ ಗ್ರಾಮದ ಪೂರ್ವಕ್ಕೆ ಕೋಟೆ ಬಾಗಿಲ ಬದಿಗೆ ಕೆರೆಯ ಕೋಡಿ ಇದೆ. ಕೋಟೆಯ ಪ್ರವೇಶದ್ವಾರದ ಎಡಭಾಗದಲ್ಲಿ ಹೂತುಹೋಗಿರುವ ಒಂದು ಒರಟು ಕಲ್ಲಿನ ಶಾಸನವಿದೆ. ಹಾಗಾಗಿ ಈ ಗ್ರಾಮ ಪುರಾತನವಾದ ಗ್ರಾಮವಾಗಿದೆ.

ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರ-ಪೂರ್ವಕ್ಕೆ ೧೨ ಕಿಮೀ ದೂರದಲ್ಲಿ ಸಿರಾ-ಮಧುಗಿರಿ ರಸ್ತೆಯ ಅರೆಹಳ್ಳಿ ಗೇಟಿನಿಂದ ಬಲಭಾಗದ ರಸ್ತೆಯಲ್ಲಿ ಅಥವಾ ರ್‍ಾಯ ಹೆದ್ದಾರಿ ಸಿರಾ-ತುಮಕೂರು ರಸ್ತೆಯ ಚಿಕ್ಕನಹಳ್ಳಿಯಿಂದ ಎಡಕ್ಕೆ ನೇರವಾಗಿ ಚಿಕ್ಕಗೂಳಕ್ಕೆ ರಸ್ತೆ ಸಂಪರ್ಕವಿದೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೩೮೦.೧೦ ಹೆಕ್ಟೇರ್ ಆಗಿದೆ. ಇದಕ್ಕೆ ಮಜರೆ ಗ್ರಾಮಗಳಾಗಿ ಗಂಗನಹಳ್ಳಿ, ಗಂಗನಹಳ್ಳಿ ಗೊಲ್ಲರಹಟ್ಟಿಗಳಿವೆ.

ಬಿಳಿ ಮಿಶ್ರಿತ ಕಪ್ಪು ಮಣ್ಣು ಹೊಂದಿರುವ ಭೂಮಿ. ಬಯಲು ಪ್ರದೇಶವಾಗಿದೆ. ಈ ಪರಿಸರದಲ್ಲಿ ಕೆರೆ, ಬಯಲು, ಗಿಡ-ಪೊದೆ, ಹಳ್ಳ-ದಿಣ್ಣೆ, ತೋಟದಸಾಲು ಅಧಿಕ. ಹಾಗಾಗಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಉಡ, ತೋಳ, ಕರಡಿ, ಬಾರ್‌ಬೆಕ್ಕು ಕಂಡುಬರುತ್ತವೆ. ಗ್ರಾಮಸ್ಥರು ಕೃಷಿ ಹಾಗೂ ಹೈನುಗಾರಿಕೆಗಾಗಿ ಎತ್ತು, ನಾಟಿ ಹಸು, ಸೀಮೆ ಹಸುಗಳನ್ನು ಸಾಕಿದ್ದಾರೆ. ಕುರಿ, ಮೇಕೆ, ಎಮ್ಮೆಗಳೂ ಇವೆ. ನಾಟಿಕೋಳಿ, ಹೇಟೆ, ಹುಂಜಗಳಿವೆ. ವಾಡಿಕೆ ಮಳೆ ಕಡಿಮೆ ಈ ಪರಿಸರದಲ್ಲಿ ೮೦೦ ಅಡಿ ಕೊರೆದರೂ ನೀರಿನ ಒರತೆ ಇಲ್ಲ. ಈ ಪರಿಸರದಲ್ಲಿ ಬಿಸಿಲು ಹೆಚ್ಚು. ಸರಾಸರಿ ಮಳೆ ೪೭೧.೬ ರಷ್ಟಿದೆ. ಬಿಸಿಲು ೩೧೨ ಡಿಗ್ರಿ ಇದ್ದರೆ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿದೆ. ಕೃಷಿಗೆ ಮಳೆ ನೀರು ಸಾಲುವುದಿಲ್ಲ. ೮೦ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಇದರ ಸಹಾಯದಿಂದ ಅರೆ ನೀರಾವರಿಯಾಗಿ ತೋಟಗಾರಿಕೆ ಬೆಳೆ ತೆಂಗು, ಅಡಿಕೆ, ಹೂ, ತರಕಾರಿ ಬೆಳೆಯುತ್ತಾರೆ. ಗ್ರಾಮದಲ್ಲಿ ೪೦ ಕೊಳವೆ ಬಾವಿಗಳು, ಗಂಗಾಕಲ್ಯಾಣ ಮತ್ತಿತರ ಸಹಾಯಧನ ಪಡೆದಿರುವುದು ವಿಶೇಷವಾಗಿದೆ.

ಗ್ರಾಮಕ್ಕೆ ಹೊಂದಿಕೊಂಡಂತೆ ಒಂದು ಕೆರೆಯಿದ್ದು ತುಂಬುವುದು ಅಪರೂಪವಾಗಿದೆ. ಕುಡಿಯಲು ಗ್ರಾಮ ಪಂಚಾಯ್ತಿಯ ಕಿರುನೀರು ಸರಬರಾಜು ಅಡಿಯಲ್ಲಿ ನೀರು ಸರಬರಾಜು ಮಾಡಲಾಗುತ್ತದೆ. ೧೦೦ ಕ್ಕೂ ಹೆಚ್ಚು ನಲ್ಲಿ ಸಂಪರ್ಕವಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದ್ದು ತಿಗಳರು ಸಮಸಂಖ್ಯೆಯಲ್ಲಿದ್ದಾರೆ. ಲಿಂಗಾಯಿತ, ಕುಂಚಿಟಿಗ, ನಾಯಕ, ಬೋವಿ, ಮಡಿವಾಳ ಸಮುದಾಯಗಳು ಕಿರು ಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮನೆಯ ಮಾತಾಗಿದೆ. ಕೆರೆಯ ಓಣಿ, ಮೇಗಲ ಓಣಿ, ತಿಗಳರ ಬೀದಿ ಎಂಬ ಓಣಿಗಳಿವೆ. ವಿವಿಧ ಸ್ವರೂಪದ ೨೪೯ ಮನೆಗಳಿದ್ದು ಅವು ಕಲ್ಲಿನ, ಹೆಂಚಿನ, ಶೀಟಿನ, ಮಣ್ಣಿನ ಸ್ವರೂಪದವುಗಳಾಗಿವೆ. ೯೧೬ ಜನಸಂಖ್ಯೆ ಹೊಂದಿದ್ದು ೬೦ ಶೌಚಾಲಯ ಹೊಂದಿವೆ. ಇವು ಸರ್ಕಾರದ ವಸತಿ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದವರಾಗಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನಗಳಾಗಿವೆ. ಸಾಂಪ್ರದಾಯಿಕ ವಾಹನ ಎತ್ತಿನ ಗಾಡಿಯ ಜೊತೆಗೆ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ಆಟೋ, ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಒಳಚರಂಡಿ ವ್ಯವಸ್ಥೆ ಇದೆ.

ಶೇಂಗಾ ಗ್ರಾಮದ ಮುಖ್ಯ ಬೆಳೆ. ಉಳಿದಂತೆ ರಾಗಿ, ಭತ್ತ, ಹಾರಕ, ಕೂರ್ಲೆ, ಹುರುಳಿ, ತೊಗರಿ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆಯ ಜೊತೆಗೆ ತಿಗಳರು ತರಕಾರಿ, ಹೂವು ಅಲ್ಪಕಾಲೀನ ವ್ಯಾಪಾರಿ ಬೆಳೆಗಳು. ರೇಷ್ಮೆ, ಸೂರ್ಯಕಾಂತಿ, ಹೂವಿನ ಬೆಳೆಗಳಿವೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೪೦೦ ಲೀ. ಹಾಲು ದಿನವಹಿ ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೇಹಣ್ಣು, ಹೂವು, ಹೊಂಗೆ ಬೀಜ ವ್ಯಾಪಾರಿ ಸರಕುಗಳು.

ಶಿಕ್ಷಣ, ವೈದ್ಯಕೀಯ, ಸಾರಿಗೆ, ಅರಣ್ಯ, ಮೀನುಗಾರಿಕೆ ಇಲಾಖೆಗೆ ಸೇರಿದ ೧೬ ಜನ ಸರ್ಕಾರಿ ನೌಕರರಿದ್ದಾರೆ. ಬಟ್ಟೆ ಹೊಲಿಯುವುದು, ಹೂ ಕಟ್ಟುವುದು, ಬೀಡಿ ಸುತ್ತುವುದು, ಗರಿಕಡ್ಡಿ ಹೆರೆಯುವುದು, ಅಡಿಕೆ ಸುಲಿಯುವುದು ಮಹಿಳೆಯರ ಉಪಕಸುಬಾಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ

ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ರತ್ನಸಂದ್ರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕ್ಷೇತ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಉತ್ತಮ ರಸ್ತೆ ಸಂಪರ್ಕ ಹೊಂದಿದೆ. ಒಂದು ಅಂಚೆ ಕಚೇರಿ ಇದ್ದು ಸಮೀಪದ ಗ್ರಾಮಗಳಿಗೆ ಅಂಚೆ ಸಂಪರ್ಕ ಕಲ್ಪಿಸಲಾಗಿದೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘ ಹಾಗೂ ೩ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಇವು ಮಹಿಳಾ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಶಾಲೆಯಲ್ಲಿ ೧೨೪ ಮಕ್ಕಳಿದ್ದು ೪ ಜನ ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ, ಪುಸ್ತಕಗಳು ಸೌಲಭ್ಯಗಳಿವೆ. ಉತ್ತಮ ಕಾಂಪೌಂಡ್ ಇದೆ. ಗ್ರಾಮದ ಸಾಕ್ಷರತೆ ೫೨.೮ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಹೋಟೆಲ್‌ಗಳು, ೮ ಪೆಟ್ಟಿಗೆ ಅಂಗಡಿಗಳಿವೆ. ರಸ್ತೆಯಲ್ಲಿ ಅಂಗಡಿ, ಸೈಕಲ್ ರಿಪೇರಿ, ಕಿರಾಣಿ ಅಂಗಡಿಗಳಿವೆ.

ಊರಿನ ಕೆರೆಕೋಡಿ ಬಳಿಯ ಕೋಲೆಬಾಗಿಲು ಎಂದು ಹೇಳುವ ಮಠದವರ ಮಲೆಯ ಬುಡದಲ್ಲಿ ಕಲ್ಲಿನ ಶಾಸನವಿದ್ದು ಅರ್ಧ ಅಳಿಸಿಹೋಗಿದೆ. ಇದು ವಿಜಯನಗರದ ಅರಸರ ಕಾಲದ ರಚನೆಯಾಗಿದ್ದು ಇದೊಂದು ದಾನಶಾಸನ ಎಂದು ತಿಳಿಸುತ್ತಾರೆ ನರಸಿಂಹಯ್ಯ ಎಂಬ ಗ್ರಾಮದ ಹಿರೀಕ. ಕರಿಗಲ್ಲು, ನಾಗರಕಲ್ಲು, ಬೇವು-ಅರಳೀಕಟ್ಟೆಗಳಿವೆ. ಕೋಟೆ, ದಿಂಡಿ ಬಾಗಿಲುಗಳ ಅವಶೇಷಗಳಿವೆ.

ಗ್ರಾಮದಲ್ಲಿ ಕದರಿ ನರಸಿಂಹ, ಶ್ರೀರಾಮ ಮಂದಿರ, ಗಣಪತಿ, ಬಸವೇಶ್ವರ ದೇವಾಲಯಗಳಿದ್ದು ಸಿದ್ಧಪ್ಪಸ್ವಾಮಿ ಗದ್ದಿಗೆ ಇದೆ. ಲಕ್ಷ್ಮೀದೇವಿ, ಮಾರಮ್ಮ, ಕೊಲ್ಲಾಪುರಮ್ಮ ಗುಡಿಗಳಿವೆ. ದಸರಾ ಹಬ್ಬದಂದು ಗ್ರಾಮದ ಎಲ್ಲ ದೇವರುಗಳನ್ನು ಕುಲಾಚಾರ, ಕೈವಾಡದವರ ನೇತೃತ್ವದಲ್ಲಿ ಮೆರವಣಿಗೆ ಹೊರಡಿಸಲಾಗುವುದು. ಮಾರಮ್ಮ, ಕೊಲ್ಲಾಪುರದಮ್ಮನ ಗ್ರಾಮದೇವತೆ ಹಬ್ಬ ಆಚರಿಸಲಾಗುವುದು ವಾಡಿಕೆಯಾಗಿದೆ. ಆರತಿ, ಬಾನ, ಬಲಿ, ಸರಗು ಹಾಕುವುದು ಗ್ರಾಮ ಸಂಪ್ರದಾಯವಾಗಿದೆ. ಕದಿರೆ ಕಂಬದಹಳ್ಳಿ ಅಣ್ಣ-ತಮ್ಮಗಳು ವಿಶೇಷವಾಗಿ ನರಸಿಂಹ ದೇವಾಲಯದ ನೇತೃತ್ವದಲ್ಲಿ ದೇವರ ಉತ್ಸವ ಏರ್ಪಡಿಸುತ್ತಾ ಬರುತ್ತಿದ್ದಾರೆ.

ಯುಗಾದಿ, ಶ್ರೀರಾಮನವಮಿ, ಮಹಾನವಮಿ, ಶಿವರಾತ್ರಿ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗೌರಮ್ಮ, ಕುಂತೆಮ್ಮ ಹಬ್ಬವನ್ನು ಹೆಣ್ಣುಮಕ್ಕಳು ಆಚರಿಸುವುದು ರೂಢಿಯಲ್ಲಿದೆ.

ಗಣಪತಿ ಯುವಕ ಸಂಘ, ರೈತಸಂಘ, ಕೆರೆ ಅಭಿವೃದ್ಧಿ ಸ್ವಸಹಾಯ ಸಂಘ ಹಾಗೂ ವಾಲ್ಮೀಕಿ ಸಂಘ, ದಲಿತ ಸಂಘಗಳು ಜನಾಂಗಿಕ ಸಂಘಟನೆ, ಸಾಂಸ್ಕೃತಿಕ ಸಂಘಟನೆಯಲ್ಲಿ ತೊಡಗಿಸಿಕೊಂಡಿವೆ.

## ಚಿನ್ನಹಳ್ಳಿ ಗೊಲ್ಲರಹಟ್ಟಿ

ಜಿ.ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೯ ಕಿಮೀ ದೂರದಲ್ಲಿದೆ. ಇದು ಜಿ.ರಂಗನಹಳ್ಳಿಯ ಉಪಗ್ರಾಮವಾಗಿದ್ದು ಕಾಡುಗೊಲ್ಲರ ೩೮ ಮನೆಗಳಿರುವ ಒಂದು ಬುಡಕಟ್ಟು ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೧೮೯.೦೮ ಹೆಕ್ಟೇರ್ ಆಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಈ ಗ್ರಾಮದ ಸನಿಹಕ್ಕೆ ಗಿಡದಾಗಲ ರಂಗಣ್ಣಹಳ್ಳಿ ನಡುವೆ ೪೫ ಹೆಕ್ಟೇರ್ ಪ್ರಮಾಣದಲ್ಲಿ ಗೋಮಾಳ ಭೂಮಿಯಿದೆ. ಚಿಕ್ಕ ಎಂಬ ಅರ್ಥದಲ್ಲಿ ಚಿನ್ನಹಳ್ಳಿ ಎಂದಾಗಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ತೋಳ, ಕರಡಿ, ಮುಂಗುಸಿ ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ನಾಯಿ, ಕತ್ತೆ ಸಾಕು ಪ್ರಾಣಿಗಳಾಗಿವೆ. ಕೋಳಿ ಸಾಕು ಪಕ್ಷಿಯಾಗಿದೆ. ಕಾಗೆ, ಕೋಗಿಲೆ, ಕೊಕ್ಕರೆ, ಗೀಜುಗ, ಗಿಡುಗ, ಗರುಡ, ಹದ್ದು, ಗೂಬೆ ಕಾಡು ಪಕ್ಷಿಗಳಾಗಿವೆ. ವಾರ್ಷಿಕ ೪೩೨ ಮಿಮೀ ಮಳೆ ಪ್ರಮಾಣ ಹೊಂದಿದ್ದು ಬಿಸಿಲು ೩೯ ಡಿಗ್ರಿ, ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇದೆ. ಕೃಷಿಗಾಗಿ ೨೦ ಕೊಳವೆ ಬಾವಿಗಳಿವೆ. ೨ ಸಿಸ್ಟರ್ನ್‌ಗಳಿದ್ದು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ. ಒಂದು ಕೈಪಂಪು ಇದೆ. ಕಾಡುಗೊಲ್ಲರೊಂದಿಗೆ ೨ ಮನೆ ವೀರಶೈವ ಜನಾಂಗದವರಿದ್ದು ಕಿರು ಸಮುದಾಯವಾಗಿದೆ.

ವಿವಿಧ ಸ್ವರೂಪದ ೩೮ ಮನೆಗಳಿದ್ದು ಅವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಹಾಗೂ ೪ ಗುಡಿಸಲುಗಳಿವೆ. ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದ್ದು ೧೨ ಮನೆಗಳು ಆಶ್ರಯ, ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ರಚನೆಯಾಗಿವೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನವಾಗಿರುತ್ತದೆ. ಸಾಂಪ್ರದಾಯಿಕ ವಾಹನ ಎತ್ತಿನ ಬಂಡಿಯೊಂದಿಗೆ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಆಹಾರ. ರಾಗಿ, ಭತ್ತ, ತೊಗರಿ, ಹುರುಳಿ ಆಹಾರ ಬೆಳೆಗಳು. ಸೂರ್ಯಕಾಂತಿ, ಹತ್ತಿ, ಸೀಡ್ಸ್ ಬೆಳೆಗಳಿವೆ. ಶೇಂಗಾ, ಹತ್ತಿ, ಸೀಡ್ಸ್, ಹುಣಸೆಹಣ್ಣು, ಹೊಂಗೆಬೀಜ ವ್ಯಾಪಾರಿ ಬೆಳೆಗಳು. ಕುರಿ ವ್ಯಾಪಾರ ಇದೆ. ಒಬ್ಬರು ಸಾರಿಗೆ ಇಲಾಖೆಯಲ್ಲಿ ಕೆಲಸದಲ್ಲಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಲಕ್ಷ್ಮೀಸಾಗರ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕ್ಷೇತ್ರವಾಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ೨ ಸ್ತ್ರೀಶಕ್ತಿ ಸಂಘಗಳಿವೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೨೭ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ವಿತರಣೆ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೪೭.೬ ರಷ್ಟಿದೆ. ಗ್ರಾಮದ ಶಿವರಾಮಣ್ಣ ಎಂಬ ೭೪ ವರ್ಷದ ವಯಸ್ಕರು ಪಶುಸಂಬಂಧಿ ವಿಷಜಂತುಗಳಿಗೆ ಔಷಧಿ ಚಿಕಿತ್ಸೆ ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಒಂದು ಬೇವಿನಕಟ್ಟೆಯಿದ್ದು ಹಟ್ಟಿಲಕ್ಕಮ್ಮ, ಈಶ್ವರನ ದೇವಾಲಯಗಳಿವೆ. ಚಿತ್ರದೇವರ ಪೌಳಿಯೂ ಇದೆ. ಗ್ರಾಮದೇವತೆಯಾಗಿ ಹಟ್ಟಿಲಕ್ಕಮ್ಮನಿಗೆ ವಾರ್ಷಿಕವಾಗಿ ಆರತಿ, ಬಾನ, ಬ್ಯಾಟೆಯ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಚಂಗಾವರ

ಚಂಗಾವರ, ಸಂಗಾವರ ಎಂದೆಲ್ಲಾ ಜನಬಳಕೆಯ ಈ ಗ್ರಾಮ ಸಿರಾ ತಾಲ್ಲೂಕು ಗೌಡಗೆರೆ ಹೋಬಳಿಗೆ ಸೇರಿದ ಒಂದು ಕಂದಾಯಗ್ರಾಮ. ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೪ ಕಿಮೀ ದೂರದಲ್ಲಿದೆ. ಸಿರಾ–ಧರ್ಮಪುರ ಮುಖ್ಯರಸ್ತೆಯಲ್ಲಿದ್ದು ಚಂಗಾವರ ರಸ್ತೆ ಎಂದೇ ಕರೆಯುತ್ತಾರೆ. ಇದರ ಭೌಗೋಳಿಕ ವ್ಯಾಪ್ತಿ ೨೬೪೬.೭೭ ಹೆಕ್ಟೇರ್ ಇದ್ದು ಬೆಟ್ಟಪ್ಪನಹಳ್ಳಿ, ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ, ಕುದುರೆಕುಂಟೆ, ದೇವರಹಟ್ಟಿ ಹಾಗೂ ಬಡಮಂಗನಹಟ್ಟಿ ಎಂಬ ಆರು ಉಪಗ್ರಾಮಗಳು ಇದರ ಭೌಗೋಳಿಕ ವ್ಯಾಪ್ತಿಗೆ ಸೇರಿದೆ.

ಮೂಲದಲ್ಲಿ ಈ ಗ್ರಾಮಕ್ಕೆ ಸಂಗಾವರ ಎಂಬ ಹೆಸರಿದ್ದು ಸಂಗಪ್ಪಗೌಡ ಎಂಬ ವ್ಯಕ್ತಿ ಸಿರ್ಯಾ ಸಂಸ್ಥಾನದ ಮಾಂಡಲೀಕನಾಗಿದ್ದನು. ಈತನು ಕುರುಬ ಜನಾಂಗಕ್ಕೆ ಸೇರಿದವನಾಗಿದ್ದು ಶಿವಭಕ್ತನೂ ಆಗಿದ್ದನೆಂದು ಈ ಕಾರಣದಿಂದ ಗ್ರಾಮದಲ್ಲಿ ಕಲ್ಲೇಶ್ವರ, ಮಲ್ಲೇಶ್ವರ ಹಾಗೂ ರಾಮೇಶ್ವರ ಎಂಬ ಮೂರು ಶಿವಾಲಯಗಳನ್ನು ಸ್ಥಾಪಿಸಿದನು.ಸಂಗಪ್ಪಗೌಡ ಹೆಸರೂ ಸೇರಿದಂತೆ ಗ್ರಾಮದ ಮೂರು ಶಿವಾಲಯಗಳ ಸಂಗಮವಾದ ಕಾರಣದಿಂದ ಸಂಗಾವರ ಎಂದು ಕರೆಯಲಾರಂಭಿಸಿದರು. ಇದೇ ಕಾಲದಲ್ಲಿ ಗ್ರಾಮದ ಪೂರ್ವಕ್ಕೆ ಕೆರೆಯು ನಿರ್ಮಾಣವಾಯಿತು. ಹೀಗೆ ಜನಪದರು ಸಂಗಾವರ > ಸಂಗಾವರವಾಗಿ ನಂತರದಲ್ಲಿ ಚೆಂಗಾವರವಾಗಿದೆ ಎಂದು ಗ್ರಾಮದ ಹಿರಿಯ ಜನಪದ ಕಾವ್ಯಚಿಂತಕ ಹಾಗೂ ಕೆಇಬಿ ಇಂಜಿನಿಯರ್ ಚಂಗಾವರ ಕರಿಯಪ್ಪ ಅಭಿಪ್ರಾಯಪಡುತ್ತಾರೆ.

ಮೊದಲಿಗೆ ಕುರುಬರ ಸಂಗಪ್ಪಗೌಡ ಎಂಬುವನಿಂದ ಗ್ರಾಮ ರಚನೆಯಾದರೂ ತನ್ನ ತಳವಾರ ಮಾಡಿದ ಮೋಸ ಹಾಗೂ ಧಿಮಾಕಿಗೆ ಆತನ ತಲೆಕಡಿದ ಸಂಗಪ್ಪಗೌಡ ಅದರ ಪ್ರಾಯಶ್ಚಿತ್ತಕ್ಕಾಗಿ ಊರನ್ನೇ ಕುಲಬಾಂಧವರೊಂದಿಗೆ ತ್ಯಜಿಸಿದನೆಂದು ಹೇಳಲಾಗುತ್ತಿದೆ. ಹಳ್ಳದ ಬೊಮ್ಮಲಿಂಗ ಎಂಬ ತಳವಾರನ ಪೌಳಿಗೆ ಇಂದಿಗೂ ಪೂಜೆ ನೆರವೇರುತ್ತದೆ. ವಾಸ್ತವವಾಗಿ ಇದೊಂದು ವೀರಗಲ್ಲಿರಬಹುದು.

ಕೆಂಪುಮಿಶ್ರಿತ ಮರಳು ಮಣ್ಣಿನಿಂದ ಕೂಡಿರುವ ಈ ಗ್ರಾಮ ಸಮುದ್ರ ಮಟ್ಟಕ್ಕಿಂತ ೭೨೦ ಮೀ ಎತ್ತರದಲ್ಲಿದೆ. ಕುರುಚಲು ಗಿಡ, ಪೊದೆ, ದಿಣ್ಣೆ, ಬಯಲು ನೆಲ, ಕೊರಲು ಕೆರೆ ಕುಂಟೆಗಳಿಂದ ಕೂಡಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಜಿಂಕೆ, ಕಾಡುಹಂದಿ, ಉಡ, ಮುಂಗುಸಿ, ಕಾಡುಬೆಕ್ಕು ಕಂಡುಬರುತ್ತವೆ. ಪಕ್ಷಿಗಳಾದ ಕಾಗೆ, ಕೋಗಿಲೆ, ಕಾಗೆಸಿಳ್ಳ, ಗುಬ್ಬಚ್ಚಿ, ಗೂಬೆ, ಗರುಡ, ಗಿಡುಗ, ಗೊರವಂಕ, ಬೆಳವ, ಬಾವಲಿ, ಸಾಂಬಾರ ಕಾಗೆ, ಕೊರಲೆ ಹಕ್ಕಿ ಕಂಡುಬರುತ್ತವೆ. ಸಾಕುಪಕ್ಷಿಯಾಗಿ ನಾಟಿ ಕೋಳಿಗಳಾಗಿ ಹೇಂಟೆ, ಹುಂಜಗಳನ್ನು, ಗಿರಿರಾಜ ಸಂತತಿಯ ಕೋಳಿಗಳನ್ನು ಸಾಕಲಾಗಿದೆ. ಗ್ರಾಮದಲ್ಲಿ ಪಶುಪಾಲನೆ ಹಾಗೂ ಹೈನುಗಾರಿಕೆಗಾಗಿ ಹಳ್ಳಿಕಾರ್ ತಳಿ ಎತ್ತು, ನಾಟಿ ಹಾಗೂ ಸೀಮೆಹಸುಗಳನ್ನು ಸಾಕಲಾಗಿದೆ. ಕುರಿ, ಮೇಕೆ ಹಾಗೂ ಕತ್ತೆಗಳನ್ನು ಸಾಕುತ್ತಾರೆ. ಕೋಳಿ ಸಾಕಾಣಿಕೆಯೂ ಇದೆ.

ವಾಡಿಕೆ ಮಳೆ ೪೬೩ ಮಿಮೀ ಆಗಿದ್ದು ನೀರಿನ ತೊಂದರೆ ಇದೆ. ಬಾವಿ, ಬೋರ್‌ವೆಲ್‌ಗಳ ಮೂಲಕ ತೋಟಗಾರಿಕೆ ವ್ಯವಸಾಯ ನಡೆಯುತ್ತದೆ. ಉಷ್ಣಾಂಶ ೩೮ ಡಿಗ್ರಿ ಇದ್ದು ಏಪ್ರಿಲ್–ಮೇ ತಿಂಗಳಲ್ಲಿ ೪೧–೪೨ ಡಿಗ್ರಿಗೆ ಹೋಗುವ ಸಂದರ್ಭಗಳೂ ಇವೆ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಗ್ರಾಮದ ಉತ್ತರಕ್ಕೆ ೧೩೫ ಹೆಕ್ಟೇರ್ ಗೋಮಾಳ ಪ್ರದೇಶವಿದ್ದು ಹುಲ್ಲುಗಾವಲಾಗಿದೆ. ಇದರ ಮೌಖಿಕ ಪರಂಪರೆಯನ್ನು ಚದುರಂಗದ ಕಾವಲು ಎನ್ನುತ್ತಾರೆ. ಗ್ರಾಮಕ್ಕೆ ಹೊಂದಿಕೊಂಡಂತೆ ದೊಡ್ಡ ಕೆರೆಯಿದ್ದು ಅದು ತುಂಬುವುದು ವಿರಳವಾಗಿದೆ. ಕುಡಿಯುವ ನೀರಿಗೆ ಗ್ರಾಮ ಪಂಚಾಯ್ತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೮ ಮಿನಿ ಟ್ಯಾಂಕ್‌ಗಳಿದ್ದು ೪೫ ನಲ್ಲಿಗಳಿವೆ. ೨ ಕೈಪಂಪುಗಳೂ ಇವೆ.

ಗ್ರಾಮದಲ್ಲಿ ಆದಿಕರ್ನಾಟಕರು ದೊಡ್ಡ ಸಮುದಾಯವಾಗಿದ್ದು ಬೇಡ-ನಾಯಕರು, ಹಳ್ಳಿಕಾರರು, ಗೊಲ್ಲರು, ಆದಿದ್ರಾವಿಡ ಸಣ್ಣ ಸಮುದಾಯಗಳಾಗಿವೆ. ೨೬೭ ಮನೆಗಳಿರುವ ಈ ಗ್ರಾಮದ ರಚನೆ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಶೀಟಿನ, ಹೆಂಚಿನಿಂದ ರಚನೆಯಾಗಿದೆ. ಆಶ್ರಯ, ಅಂಬೇಡ್ಕರ್, ಜನತಾ ಯೋಜನೆಯ ೬೩ ಫಲಾನುಭವಿಗಳು, ಭಾಗ್ಯಜ್ಯೋತಿಯ ಫಲಾನುಭವಿಗಳಿದ್ದಾರೆ. ೧೬೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ , ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಬಂಡಿ ೬ ಇದ್ದು ಆಧುನಿಕ ವಾಹನವಾದ ಟ್ರ್ಯಕ್ಟರ್, ಮಿನಿ ಟೆಂಪೋ, ಆಟೋ, ದ್ವಿಚಕ್ರ ವಾಹನ ಕಂಡುಬರುತ್ತವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ಅಲಸಂದೆ, ತೊಗರಿ, ಹುರುಳಿ ಆಹಾರ ಬೆಳೆಗಳಾಗಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ದಾಳಿಂಬೆ, ತೆಂಗು, ಅಡಿಕೆ, ರೇಷ್ಮೆ ಇದೆ. ಕೆಇಬಿ ಇಂಜಿನಿಯರ್ ಚೆಂಗಾವರ ಕರಿಯಪ್ಪ, ಸ್ವಾತಂತ್ರ್ಯ ಹೋರಾಟಗಾರ ಮರುಳೇಗೌಡ ಮಹಾರಾಜರ ಪ್ರಜಾಪ್ರತಿನಿಧಿ ಸದಸ್ಯರಾಗಿದ್ದು ವಿಶೇಷ. ಉಪನ್ಯಾಸಕರಾದ ವೇದಮೂರ್ತಿ, ಆರ್ಟಿಓ ಮಂಜುನಾಥ್, ಲೋಕಾಯುಕ್ತ ವಕೀಲ ಕೆ.ರಾಮಣ್ಣ, ವೈದ್ಯರಾದ ಡಾ॥ ಕೃಷ್ಣಮೂರ್ತಿ ಈ ಗ್ರಾಮದವರು. ಕರಿಯಪ್ಪ ಜನಪದ ಮಹಾಕಾವ್ಯ ಹಾಡುವ ಕಲಾವಿದರೂ ಹೌದು. ಕೆ.ಚಂದ್ರಣ್ಣ ಜಿಲ್ಲಾ ಪಂಚಾಯತ್, ಶ್ರೀನಿವಾಸ್ ವ್ಯವಸ್ಥಾಪಕ ಕೆಎಫ್‌ಸಿಎಫ್‌ಸಿ ಸೇರಿ ಒಟ್ಟು ೧೩ ಜನ ನೌಕರರು ಈ ಗ್ರಾಮದಲ್ಲಿದ್ದಾರೆ. ಹೆಣ್ಣುಮಕ್ಕಳು ಊಟದ ಎಲೆ ಕಟ್ಟುವುದು, ಬೀಡಿ ಸುತ್ತುವುದು, ಬಟ್ಟೆ ಹೊಲಿಯುವ ಸಣ್ಣ ಕೈಗಾರಿಕೆಯಲ್ಲಿ ನಿರತರಾಗಿದ್ದಾರೆ. ಶೇಂಗಾ, ಹುಣಸೆಹಣ್ಣು, ಹತ್ತಿ, ರೇಷ್ಮೆ ವ್ಯಾಪಾರಿ ಬೆಳೆಯಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಗೌಡಗೆರೆ ತಾಲ್ಲೂಕು ಪಂಚಾಯ್ತಿ, ಬೇವಿನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿರುವ ಈ ಹಳ್ಳಿ ಚಿತ್ರದುರ್ಗ ಜಿಲ್ಲಾ ಪಂಚಾಯ್ತಿಗೆ ಒಳಪಟ್ಟಿದೆ. ಒಂದು ಅಂಚೆ ಕಛೇರಿ, ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರೌಢಶಾಲೆ, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯ, ಉಪಆರೋಗ್ಯ ಕೇಂದ್ರ, ಸುಜಲ ಜಲಾನಯನ ಅಭಿವೃದ್ಧಿ ಸಂಘ, ಸ್ತ್ರೀಶಕ್ತಿ ಸಂಘ, ಶ್ರೀ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸ್ವಸಹಾಯ ಗುಂಪುಗಳಿದ್ದು ಗ್ರಾಮದಲ್ಲಿ ಸಾಕ್ಷರತೆಯ ಪ್ರಮಾಣ ೫೧.೭ ರಷ್ಟಿದೆ. ಮಹಿಳೆಯರು ೪೦.೨ ರಷ್ಟಿದ್ದರೆ, ಪುರುಷರು ೬೩% ಇದ್ದಾರೆ. ಶಾಲೆಯಲ್ಲಿ ೧೪೮ ಮಾಧ್ಯಮಿಕ ಶಾಲೆ, ೨೯೩ ಹೈಸ್ಕೂಲ್ ಹಾಗೂ ಅಂಗನವಾಡಿಯಲ್ಲಿ ೩೨ ಮಕ್ಕಳಿದ್ದು ಒಟ್ಟು ೧೫ ಮಂದಿ ಶಿಕ್ಷಕ ನೌಕರರಿದ್ದಾರೆ. ಒಂದು ಸಮುದಾಯ ಗ್ರಂಥಾಲಯವಿದ್ದು ಹೆಸರಿಗಷ್ಟೇ ಪುಸ್ತಕವೂ ಇಲ್ಲ, ಕಾರ್ಯನಿರ್ವಹಣೆಯೂ ಇರುವುದಿಲ್ಲ (೨೪.೦೧.೨೦೧೪ ಕ್ಕೆ)

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಹೋಟೆಲ್, ೧೫ ಪುಟ್ಟ ಪುಟ್ಟ ಗೂಡಂಗಡಿಗಳಿವೆ.

ಐತಿಹಾಸಿಕತೆ ಸಾರುವ ೧ ಮಹಾಸತಿ ಕಲ್ಲು ಹಾಗೂ ೩ ವೀರಗಲ್ಲುಗಳು ಈ ಗ್ರಾಮದಲ್ಲಿ ಕಂಡುಬರುತ್ತವೆ. ಒಂದು ವೀರಗಲ್ಲು ಕಲ್ಲೇಶ್ವರ ದೇವಾಲಯದ ಬದಿಗೂ ಮತ್ತೊಂದು ಗ್ರಾಮದ ಹೊರ ಹೊಲದ ಬದುವಿನಲ್ಲೂ ಇದ್ದು ಕಂದುಬಣ್ಣದ ಕೆತ್ತನೆ ಹೋರಾಟದ ವೀರನ ಚಿತ್ರವಿದೆ. ಮಹಾಸತಿ ಕಲ್ಲು ಹೊರಭಾಗದ ಹೊಲದಲ್ಲಿ (ಪಟ್ಟನಾಯಕನಹಳ್ಳಿ ರಸ್ತೆ) ಬದಿಗೆ ಮಾಸ್ತಿಕಲ್ಲು ಕಂಡುಬರುತ್ತದೆ. ಇದೊಂದು ೩ ಹಂತದ ಕೆತ್ತನೆಯಾಗಿದ್ದು ಸ್ತ್ರೀಯ ಸೌಂದರ್ಯ, ವೀರನ ಮರಣ, ಅಗ್ನಿಪ್ರವೇಶ ಕೊನೆಯ ಘಟ್ಟದಲ್ಲಿ ಆಕೆಯೂ ದೇವಲೋಕ ಸೇರುವ ಚಿತ್ರಣಗಳಿವೆ.

ಕಲ್ಲೇಶ್ವರ, ಲಕ್ಷ್ಮೀದೇವರು, ಆಂಜನೇಯ, ಗೌರಸಂದ್ರದ ಮಾರಮ್ಮ, ಬೊಮ್ಮಲಿಂಗೇಶ್ವರ, ಭೂತಪ್ಪನ ದೇವಾಲಯಗಳಿವೆ. ಕಲ್ಲೇಶ್ವರ ಐತಿಹಾಸಿಕ ದೇವಾಲಯವಾಗಿದ್ದು ಅಪಾರ ಒಕ್ಕಲುಗಳನ್ನು ಹೊಂದಿದೆ. ಗೌರಸಂದ್ರದ ಮಾರಮ್ಮ ಕಾಡುಗೊಲ್ಲರ ಪೂಜಾರಿಕೆಯಲ್ಲಿ ನಡೆಯುತ್ತದೆ. ಊರಹಬ್ಬವಾಗಿ ಮಾರಮ್ಮನ ಉತ್ಸವ, ಆರತಿ, ಬಾನ, ಪ್ರಾಣಿಬಲಿ ಇರುತ್ತದೆ. ಗ್ರಾಮದಲ್ಲಿ ದೀಪಾವಳಿ, ಕಾಂತಮ್ಮ, ಕೊಂತೆಮ್ಮ, ಗೌರಮ್ಮ ಕನ್ನೇರಮ್ಮ ಶಿವರಾತ್ರಿ, ಯುಗಾದಿ, ಗೌರಿ, ಸಂಕ್ರಾಂತಿ ಹಬ್ಬಗಳನ್ನು ಮಾಡುತ್ತಾರೆ. ಸಂಕ್ರಾಂತಿ ಹಬ್ಬದಂದು, ದನಗಳಿಗೆ ಕಿಚ್ಚು ಹಾರಿಸುವ ವಿಶೇಷ ಉತ್ಸವ ಏರ್ಪಡುವುದು ಈ ಗ್ರಾಮದ ವಿಶೇಷವಾಗಿದೆ. ಸೋಬಾನೆ ಹಾಡುಗಾರ್ತಿಯರಾದ

ಲಕ್ಷ್ಮಮ್ಮ, ಮಾಳಮ್ಮ, ನಾಗಮ್ಮ, ಗೊರಲವ್ವನ ಮಾರಮ್ಮ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ಜನಪದ ಮಹಾಕಾವ್ಯ ಹಾಡುವ ಇಂಜಿನಿಯರ್ ಕರಿಯಪ್ಪ ಬುಡಕಟ್ಟು ಸಂಸ್ಕೃತಿಯ ಬಗೆಗೆ ಅಪೂರ್ವ ಮಾಹಿತಿ ಒದಗಿಸಬಲ್ಲ ಆಕರವಾಗಿದ್ದಾರೆ.

## ಚಿರತಹಳ್ಳಿ

ಚಿರತಹಳ್ಳಿ –ಚಿರ್ತಹಳ್ಳಿ ಹೀಗೆ ಕರೆಯಲ್ಪಡುವ ಈ ಗ್ರಾಮ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೪೦ ಕಿ.ಮೀ. ದೂರದಲ್ಲಿದೆ. ಒಟ್ಟು ೧೫೮೦.೩೫ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿರುವ ಚಿರತಹಳ್ಳಿ ಒಂದು ಕಂದಾಯ ಗ್ರಾಮವಾಗಿದೆ. ಕರಿದಾಸರಹಳ್ಳಿ, ಹನುಮಂತನಗರ ಈ ಗ್ರಾಮಕ್ಕೆ ಸೇರ್ಪಡೆ ಯಾಗಿರುವ ಮಜರೆ ಗ್ರಾಮಗಳು. ಚಿರತಹಳ್ಳಿ – ಕುರುಚಲು ಗಿಡ, ಮರ, ಬಯಲು ಪ್ರದೇಶವಾಗಿದ್ದು, ಆಂಧ್ರದ ಮದನಕುಂಟೆಗೆ ಹೊಂದಿಕೊಂಡಂತಿದೆ. ಆದರೂ ಗ್ರಾಮದಲ್ಲಿ ಕನ್ನಡ ಭಾಷೆ ಬಿಟ್ಟರೆ ತೆಲುಗು ಮಾತನಾಡುವುದಿಲ್ಲ. ಅಪ್ಪಟ ಕನ್ನಡದ ನೆಲೆ, ಚಿರತೆಗಳ ಆವಾಸ ಸ್ಥಾನವಾದುದರಿಂದ ಗ್ರಾಮಕ್ಕೆ ಚಿರತೆಹಳ್ಳಿ ಎಂದು ಕರೆದಿರುವುದಾಗಿ ಮಾಜಿ ಶಾಸಕ ಸಾಂಸ್ಕೃತಿಕ ಚಿಂತಕ ಪಿ.ಪಿ. ಮೂಡ್ಲೇಗೌಡರು ಅಭಿಪ್ರಾಯ ಪಡುತ್ತಾರೆ. ಬರಗೂರು (ಬರಗ=ಹುಲಿ) ಬಗ್ಗವಡು (ಹುಲಿ) ಈ ಬಗೆಯ ಹೆಸರುಗಳಿಂದ ಕರ್ನಾಟಕದಲ್ಲಿ ಗ್ರಾಮಗಳು ರಚನೆಯಾಗಿರುವುದು ಕಂಡು ಬರುತ್ತದೆ.

ಚಿರತಹಳ್ಳಿ ಮರಳು ಮಿಶ್ರಿತ ಕೆಂಪು, ಬಿಳಿ ಮಣ್ಣಿನ ಪ್ರದೇಶವಾಗಿದೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ಗೋಮಾಳವಿದೆ. ಇದರ ಪರಿಸರದಲ್ಲಿ ಕಾಡುನರಿ, ಚಿರತೆ, ತೋಳ, ಮುಂಗುಸಿ, ಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡು ಬರುತ್ತವೆ.

ಪಕ್ಷಿಗಳಾದ ನವಿಲೂ, ಗೊರವಂಕ, ಕೋಗಿಲೆ, ಕಾಗೆ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡು ಬರುತ್ತವೆ. ಗ್ರಾಮದಲ್ಲಿ ಕುರಿ, ಮೇಕೆ, ಹಸು, ಎತ್ತು, ಎಮ್ಮೆ, ಕೋಳಿಗಳನ್ನು ಸಾಕುತ್ತಾರೆ.

ಸದಾ ಬಿಸಿಲು–ತಾಪಮಾನದಿಂದ ಕೂಡಿರುವ ಈ ಹಳ್ಳಿಯಲ್ಲಿ ವಾರ್ಷಿಕ ಸರಾಸರಿ ಮಳೆ ೪೬೪ ಮಿ.ಮೀ. ಮಳೆ ಆಗಿದ್ದು ಬಿಸಿಲು ೩೭–೪೦ಂ ಸೆಂ. ಇರುತ್ತದೆ. ಚಳಿ ೧೨ಂ ಸೆಂ. ಗ್ರಾಮಕ್ಕೆ ಹಳ್ಳಿಯ ಒಂಬತ್ತು ತೆರೆದ ಬಾವಿಗಳಿದ್ದು ಅವೆಲ್ಲವೂ ಬತ್ತಿ ಹೋಗಿವೆ. ಗ್ರಾಮದ ಪೂರ್ವಕ್ಕೆ ಹಳ್ಳವಿದ್ದು ಮಳೆಗಾಲದ ಕೆಲವು ದಿನ ಹರಿಯುತ್ತದೆ. ಉಳಿದಂತೆ ಒಣಗಿ ಹೋಗುತ್ತದೆ. ಹಾಗಾಗಿ ನೀರಿಗೆ ತಾಪತ್ರಯ ಪಡುವ ಇಲ್ಲಿನ ಜನತೆ ಸದ್ಯ ಗ್ರಾಮ ಪಂಚಾಯಿತಿಯ ಮೂಲಕ ಕೊಳಾಯಿನಲ್ಲಿ ನೀರು ಪೂರೈಕೆ ಮಾಡಿಕೊಳ್ಳುತ್ತಿದ್ದಾರೆ. ಗ್ರಾಮದಲ್ಲಿ ೪ ಮಿನಿ ಟ್ಯಾಂಕ್‌ಗಳಿದ್ದು, ೨ ಕೈ ಪಂಪುಗಳಿವೆ.

ಆದಿಕರ್ನಾಟಕ, ಕುಂಚಿಟಿಗ ಈ ಗ್ರಾಮದ ದೊಡ್ಡ ಸಮುದಾಯ. ಕುರುಬರು, ಬೇಡರು, ಆದಿದ್ರಾವಿಡ, ಈಡಿಗ, ವೀರಶೈವ ನಾಲ್ಕು ಮುಸ್ಲಿಂಮರ ಮನೆಗಳೂ ಇದ್ದೂ ಸಣ್ಣ ಸಮುದಾಯವಾಗಿದೆ. ಒಟ್ಟು ೨೯೫ ಮನೆಗಳಿರುವ ಈ ಗ್ರಾಮದಲ್ಲಿ ೧೬೮ ಮನೆಯಲ್ಲಿ ಶೌಚಾಲಯ ಬಳಕೆ ಇದೆ. ೧೫೨೭ ಜನಸಂಖ್ಯೆ ಹೊಂದಿದೆ. ಕಾಂಕ್ರೀಟ್, ಹಾಸುಕಲ್ಲಿನ, ಮಣ್ಣಿನ, ಹೆಂಚಿನ ಹಾಗೂ ಶೀಟಿನ ಮನೆಗಳಿದ್ದು ೪ ಗುಡಿಸಲುಗಳು ಇವೆ. ೪೭ ಮನೆಗಳಲ್ಲಿ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ ಈ ಗ್ರಾಮದ ನಿತ್ಯದ ಆಹಾರವಾಗಿದ್ದು, ರೊಟ್ಟಿ, ಅನ್ನ ಬಳಸುವವರಿದ್ದಾರೆ ಸಾಂದರ್ಭಿಕವಾಗಿ ಬಾಡೂಟ, ಹೋಳಿಗೆ ಇತ್ಯಾದಿ ಆಹಾವಿರುತ್ತದೆ. ಎತ್ತಿನಗಾಡಿಗಳು ಗ್ರಾಮದ ಸಂಪ್ರದಾಯಿಕ ವಾಹನಗಳಾದ ಸ್ಕೂಟರ್,ಟ್ರ್ಯಾಕ್ಟರ್, ಲಾರಿ ಆಧುನಿಕ ವಾಹನಗಳಾಗಿವೆ.

ಶೇಂಗಾ ಪ್ರಮುಖ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಜೋಳ, ಅಲಸಂದಿ, ತೊಗರಿ ಬೆಳೆಯುತ್ತಾರೆ. ಸೂರ್ಯಕಾಂತಿ, ಹತ್ತಿ, ರೇಷ್ಮೆ ಬೆಳೆಗಳನ್ನು ಬೆಳೆದು, ತೋಟಗಾರಿಕೆಯಾಗಿ ಸಪೋಟ, ದಾಳಿಂಬೆ, ತೆಂಗು, ಮಾವು, ಅಡಿಕೆ ಬೆಳೆಯೂ ಇದೆ. ಒಂದು ಆಧುನಿಕ ಡೈರಿ ಇದ್ದು, ಹುಣಸೆಹಣ್ಣಿನ ವ್ಯಾಪಾರ ಸಹಜವಾಗಿರುತ್ತದೆ. ಸಣ್ಣ ಉದ್ಯಮವಾಗಿ ಬೀಡಿ ಸುತ್ತುವುದು, ಊಟದ ಎಲೆ ತಯಾರಿಸುವುದು, ರಾಗಿ ಮಿಲ್, ಸೈಕಲ್ ರಿಪೇರಿ ಸಣ್ಣ ಅಂಗಡಿಗಳಿವೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ ಹಾಗೂ ತಡಕಲೂರು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಇದು ಗ್ರಾಮದ ಸಿ.ಪಿ.ಮೂಡಲೇ ಗೌಡರು ಸಿರಾ ಕ್ಷೇತ್ರದ ಶಾಸಕರಾಗಿ (೧೯೮೩–೧೯೮೫) ಕಾರ್ಯ ನಿರ್ವಹಿಸಿರುವುದಲ್ಲಿದೆ. ಹಲವಾರು ಪ್ರಗತಿಪರ ವೇದಿಕೆ, ಶಿಕ್ಷಣ ಸಂಸ್ಥೆಯ ಉಗಮಕ್ಕೂ ಕಾರಣವಾಗಿದ್ದು, ಅತ್ಯುತ್ತಮ ಕಾವ್ಯಾಭ್ಯಾಸಿಗಳೂ ಆಗಿದ್ದ ಪಂಡಿತರು. ಇವರ ಸೋದರ ಸಿ.ಪಿ. ಮೂಡಲಗರು, ೧೯೮೯–೧೯೯೬, ಮತ್ತು ೧೯೯೮ ರಿಂದ ೧೯೯೯ ಹೀಗೆ ಮೂರು ಅವಧಿಗೆ ಚಿತ್ರದುರ್ಗ ಲೋಕಸಭಾ ಸದಸ್ಯರಾಗಿ, ೧೯೮೫–೧೯೮೯ ರವರೆಗೆ ಸಿರಾ ವಿಧಾನಸಭಾ ಕ್ಷೇತ್ರದ ಶಾಸಕರೂ ಆಗಿದ್ದರು. ಸದ್ಯ ಇದೇ ಕುಟುಂಬದ 'ಶ್ರೀಮನೆ' ವಿಶಾಲಕ್ಷಿ ಪ್ರಕಾಶ್ ಗೌಡ ಅವರು ಹುಲಿಕುಂಟೆ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂಚೆ ಕಚೇರಿ, ಹಾಲಿನ ಡೈರಿ, ಸರ್ಕಾರಿ ಹಿರಿಯ ಪಾಠಶಾಲೆ, ಅಂಗನವಾಡಿ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮೊದಲಾದ ಸಾರ್ವಜನಿಕ ಸೇವಾ ಕೇಂದ್ರಗಳಿದ್ದು, ಈ ಗ್ರಾಮ ಶೇ. ೬೩.೪

ರಷ್ಟು ಸಾಕ್ಷರತೆ ಪ್ರಮಾಣ ಹೊಂದಿದೆ. ಇದರಲ್ಲಿ ಪುರುಷರು ೭೭.೬ ರಷ್ಟಿದ್ದರೆ ಮಹಿಳೆಯರು ಶೇ. ೪೭.೭೧ ರಷ್ಟಿದ್ದಾರೆ. ಇಂಜಿನಿಯರ್ ಶಿವಣ್ಣ, ಬೊಪ್ಪರಾಯಪ್ಪ, ಆರ್.ಟಿ.ಓ. ಅಧಿಕಾರಿ ಶಿವಣ್ಣ ಇದೇ ಗ್ರಾಮದವರಾಗಿದ್ದಾರೆ.

ಸಾರಿಗೆ, ಕಂದಾಯ, ಶಿಕ್ಷಣ, ಪೋಲೀಸ್ ಇಲಾಖೆಗೆ ಸೇರಿದ ೧೪ ಜನ ನೌಕರರಿದ್ದಾರೆ. ಸದ್ಯಕ್ಕೆ ಕುಸುಮ ತಡಕಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಚಿರತಹಳ್ಳಿಯವರಾಗಿದ್ದಾರೆ.

ಗ್ರಾಮದಲ್ಲಿ ೩ ಸ್ತ್ರೀ ಶಕ್ತಿ ಕೇಂದ್ರ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ೨ ಘಟಕಗಳಿವೆ. ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ಸಂಧ್ಯಾ ಸುರಕ್ಷಾ ವೇತನ, ವಿಧವಾ ವೇತನದ ಫಲಾನುಭವಿಗಳು. ಜನತಾ, ಆಶ್ರಯ, ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳು. ಆರು ಕಿರಾಣಿ ಅಂಗಡಿಗಳು ಕಾರ್ಯ ನಿರ್ವಹಿಸುತ್ತಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಮೈಲಾರಲಿಂಗ, ರಾಮದೇವರು, ಹನುಮಂತರಾಯ, ಗ್ರಾಮ ದೇವತೆ ಕರಿಯಮ್ಮ, ನಾಗಮ್ಮ, ಅಕ್ಕಸಾಲಿಗರ ಕುಲದೇವತೆ ಮಲ್ಲಿಗಮ್ಮ ದೇವಾಲಯ ಗಳಿವೆ. ಕರಿಯಮ್ಮನ ಹಬ್ಬವನ್ನು ಊರಹಬ್ಬವಾಗಿ ಆಚರಿಸುವುದು ಸಂಪ್ರದಾಯವಾಗಿದೆ. ಆರತಿ, ಬ್ಯಾಟೆ, ಬಾನ ಉತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಕಾರಹಬ್ಬ, ಮಹಾನವಮಿ, ಗೌರಿಗಣೇಶ ಹಬ್ಬವನ್ನು ಮಾಡುತ್ತಾರೆ.

ಐತಿಹಾಸಿಕ ಸ್ಮಾರಕವಾಗಿ ೨ ವೀರಗಲ್ಲು, ೬೫ ಗುಡಿಸಲುಗಳಿದ್ದು, ಇವುಗಳು ಶಾಸನ ಸ್ವರೂಪದಲ್ಲೂ ಇವೆ.

ಚಿರತಹಳ್ಳಿಯ ಕಲ್ಲೇಶ್ವರ ಲಿಂಗದಲ್ಲಿರುವ ವೀರಗಲ್ಲು ಶಾಸನವನ್ನು ಡಾ.ಎಂ.ವಿ.ಶ್ರೀನಿವಾಸ್ ಕರ್ನಾಟಕ ಹಿಸ್ಟರಿ ಆಂಡ್ ಕಲ್ಚರ್ ಪ್ರೊಸೀಡಿಂಗ್ಸ್ ಸಂ.೧೫೫೫ ನಲ್ಲಿ ಉಲ್ಲೇಖಿಸಿದ್ದಾರೆ. ಇವರ ಪ್ರಕಾರ ಕಾಲದ ಉಲ್ಲೇಖ ಖಚಿತವಾಗಿಲ್ಲ. ಅಂಚೆ ಪೇದೆಯೊಬ್ಬ ಒಂದು ಯುದ್ಧದಲ್ಲಿ ಧೈರ್ಯದಿಂದ ಕಾದಾಡಿ ಮಡಿಯುತ್ತಾನೆ. ಆತನ ಮಗ ಬಿಜ್ಜಿಯನು ತನ್ನ ತಂದೆಯ ಹೆಸರಿನಲ್ಲಿ ಗುಡಿ ನಿರ್ಮಿಸಿ ಶಾಸನ ಹಾಕಿದಂತೆ ವಿವರವಿದೆ. ಮತ್ತೊಂದು ಅದೇ ಮಾದರಿಯಲ್ಲಿ ಕಲ್ಲಿನ ವಿವರವನ್ನು ಡಾ.ಎಂ.ವಿ.ಶ್ರೀನಿವಾಸ್ ನೀಡುತ್ತಾರೆ. ಹರಿಯಪ್ಪ ಶೆಟ್ಟಿ ಎಂಬ ವೀರನ ಮಗ ಚೋಮ ಜಯ ಗಳಿಸಿದ ಜ್ಞಾಪಕಾರ್ಥವಾಗಿ ಆಡಳಿತಾಧಿಕಾರಿಗಳು ಬಹುಮಾನ ಕೊಟ್ಟ ವಿವರ ಇದೆ.

ಸೋಬಾನೆ ಕರಿಯಮ್ಮ, ನಿಂಗಮ್ಮ ತತ್ವಪದ, ಭಜನೆ, ಸೋಬಾನೆ ಪದ ಹಾಡುವ ಮೂಲಕ ಸ್ಥಳೀಯವಾಗಿ ಹೆಸರಾಗಿದ್ದಾರೆ. ನಿಂಗಣ್ಣ ಎಂಬ ಗ್ರಾಮದ ೭೪ ವರ್ಷ ವಯಸ್ಸಿನ ವೃದ್ಧರು ನಾಟಿ ಔಷಧ ನೀಡುವ ಮೂಲಕ ವಿಷ ಜಂತುಗಳ ಸಂಬಂಧಿ ರೋಗಿ, ಗಾಯ, ಕೈ–ಬಾಯಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಅಮರಾಪುರ–ಸಿರಾ ರಸ್ತೆಯ ಬಲಭಾಗದಲ್ಲಿ ತಿರುಗಿ ಒಂದು ಕಿ.ಮೀ. ಕಚ್ಚಾ ರಸ್ತೆಯಲ್ಲಿ ಸಾಗಿದರೆ ಚಿರತಹಳ್ಳಿ ಇದ್ದು, ಇಬ್ಬರು ಶಾಸಕರು, ಮೂರು ಅವಧಿಗೆ ಒಂದೇ ಕುಟುಂಬದವರನ್ನು ಸಂಸದರನ್ನಾಗಿ ಆರಿಸಿದ ಹಿರಿಮೆಯೂ ಇದೇ ಗ್ರಾಮಕ್ಕೆ ಸಲ್ಲುತ್ತದೆ.

## ಚಿಕ್ಕಬಾಣಗೆರೆ

ಚಿಕ್ಕಬಾಣಗೆರೆ ಸಿರಾ ತಾಲ್ಲೂಕು ಕೇಂದ್ರದಿಂದ, ಉತ್ತರಕ್ಕೆ ೨೯ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಉಪಗ್ರಾಮಗಳಾಗಿ ಕುರುಬರ ರಾಮನಹಳ್ಳಿ ಶೆಟ್ಟಿಗಾನಹಳ್ಳಿ ಎಂಬ ಎರಡು ಗ್ರಾಮಗಳು ರಚನೆಯಾಗಿದೆ. ಇಲ್ಲಿಂದ ಎರಡು ಕಿ.ಮೀ. ಹಂತದಲ್ಲಿ ದೊಡ್ಡ ಬಾಣಗೆರೆ ಎಂಬ ಗ್ರಾಮವಿದ್ದು, ಅದರ ಮತ್ತೊಂದು ಗ್ರಾಮ ಚಿಕ್ಕಬಾಣಗೆರೆ ಎಂದಾಗಿದೆ. ಕ್ರಿ.ಶ. ೧೩೪೧ ರಲ್ಲಿ ರಚನೆಯಾದ ಚಿಕ್ಕಬಾಣಗೆರೆ ಬೊಮ್ಮನಾಯಕನ ಶಾಸನ (ಸಿರಾ ೨೦) ರಲ್ಲಿ ವಿಜಯನಗರದ ಸಾಮಂತ ನಿಡಗಲ್ಲು ಗಂಗನಾಯಕನ ಮಗ ಬೊಮ್ಮನಾಯಕನು, ತಿಪ್ಪಯ್ಯನಾಯಕ ಮಗ ಮಾರಯ್ಯನಾಯಕನಿಗೆ ಚಿಕ್ಕ ಬಾಣಗೆರೆ ಸೇರಿದ ಮಾಗಾಣೆ ಭೂಮಿಯನ್ನು ಕೊಡಿಗೆ ಕೊಡುವ ವಿವರವಿದ್ದು, ಇದಕ್ಕೆ ಗಡಿ ಸಾಕ್ಷಿಯಾದ ಗೌಡಶ್ಯಾನುಭೋಗರ ಉಲ್ಲೇಖವಿದೆ. ಮತ್ತೊಂದು ೧೬ನೇ ಶತಮಾನದ ಶಾಸನದಲ್ಲಿ ಕೊಳ್ಳೆಯ ರಾಮಯ್ಯನಾಯ್ಕ, ಚಿಕ್ಕಬಾಣಗೆರೆಯನ್ನು ಆಳುತ್ತಿದ್ದರೆಂದು, ಇದೇ ಸಮಯದಲ್ಲಿ ದೇವರನಾಗಯ್ಯ ಗೌಡ, ಗೌಡಿಕೆಯನ್ನು ಗೋಪಣ್ಣನಿಗೆ, ಈತನ ಪ್ರತಿಷ್ಠೆ ಮಾಡಿಸಿದ ವಿವರವಿದೆ. ಅಂದರೆ ಗೌಡಿಕೆ, ಆ ಸಂಬಂಧಿ ಅಧಿಕಾರ ಧಾರಣೆ ಮಾಡಿದ ಸಂಗತಿ ಲಭ್ಯವಾಗುತ್ತದೆ.

ಈ ಗ್ರಾಮದ ಸನಿಹದಲ್ಲೇ ದೊಡ್ಡ ಕೆರೆಯಿದೆ. ಪೊದೆ ಬೆಳೆದಿದೆ. ಈ ಪರಿಸರದಲ್ಲ ಜಿಂಕೆ, ಮೊಲ, ನರಿ, ಕಾಡುಹಂದಿ ಕಂಡು ಬಂದರೆ, ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗಾಗಿ ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ನಾಯಿ, ಕತ್ತೆಗಳನ್ನು ಸಾಕಿದ್ದಾರೆ. ಕೆಂಪು ಮಿಶ್ರಿತ ಮಣ್ಣನ್ನು ಹೊಂದಿದ್ದು, ಶೇಂಗಾ ಬೆಳೆಗೆ ಉತ್ಕೃಷ್ಟವಾದ ಭೂಮಿಯನ್ನು ಹೊಂದಿದೆ.

ಬಿಸಿ, ಧಗೆ ಕಡಿಮೆ ಬೆಳೆ, ಇಲ್ಲಿನ ರೈತರ ಕೊರಗು. ಸರಾಸರಿ ಮಳೆ ೪೬೩ ಮಿ.ಮೀ. ಉಷ್ಣಾಂಶ ೩೯–೪೦ಂ ಸೆಂ.

ಇದ್ದು, ಚಳಿ ೧೨ಂ ಸೆಂ. ಇರುತ್ತದೆ.ಕೃಷಿಗಾಗಿ ೮೦ ಕೊಳವೆ ಬಾವಿಗಳಿದ್ದು ಮಳೆಯ ನೀರಿನ ಜೊತೆಗೆ ಉಪಮಳೆ ತೆಗೆಯಲು ಸಹಾಯಕವಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುವುದು. ಒಂದು ದೊಡ್ಡ ಟ್ಯಾಂಕ್ ಇದ್ದು, ಅದರ ಸಹಾಯದಿಂದ ನಲ್ಲಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ೨ ಕೈ ಪಂಪುಗಳಿವೆ. ನಾಡು ಗೊಲ್ಲರು, ಇಲ್ಲಿ ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ಕುಂಚಿಟಿಗ ಸಣ್ಣ ಸಮುದಾಯಗಳಾಗಿವೆ. ನಾಯಕ, ಉಪ್ಪಾರರ ಕುಟುಂಬಗಳೂ ಇವೆ. ವಿವಿಧ ಪ್ರಕಾರಗಳ ೪೬೨ ಮನೆಗಳಿದ್ದು ಮನೆಗಳ ವಸತಿ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆ ೭೬ ಫಲಾನುಭವಿಗಳೂ, ಭಾಗ್ಯ ಜ್ಯೋತಿ ವಿದ್ಯುತ್ ಸೌಲಭ್ಯ ಫಲಾನುಭವಿಗಳೂ ಇದ್ದಾರೆ. ೧೩೮ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ೨೨೧೧ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ ಮುಖ್ಯ ಆಹಾರ. ಅಲಸಂಧಿ, ತೊಗರಿ, ಹುರುಳಿ, ರಾಗಿ, ಜೋಳ ಆಹಾರ ಬೆಳೆಯಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಹೋಳಿಗೆ, ಪಾಯಸ ಸಾಂದರ್ಭಿಕ ವಿಶೇಷ ಭೋಜವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಬಂಡಿ, ಆಧುನಿಕವಾದ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರವಾಹನಗಳಿವೆ.

ಶೇಂಗಾ ಮುಖ್ಯ ಬೆಳೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಸಪೋಟ, ದಾಳಿಂಬೆ ತೋಟಗಳಿವೆ. ಹುಣಸೆಹಣ್ಣು, ತೆಂಗು, ಕುರಿ ವ್ಯಾಪಾರವಿದೆ. ಉಪನ್ಯಾಸಕರು, ಇಂಜಿನಿಯರು, ವೈದ್ಯರು, ಶಿಕ್ಷಕರು ಸೇರಿದಂತೆ ಒಟ್ಟು ೨೦ ಜನ ಸರ್ಕಾರಿ ನೌಕರರಿದ್ದಾರೆ. ಇಂಜಿನಿಯರ್ ಜಯರಾಮಯ್ಯ, ಪ್ರಾಧ್ಯಾಪಕ ಡಾ.ಬೊಮ್ಮಯ್ಯ ಇದೇ ಗ್ರಾಮದವರು. ಗ್ರಾಮದಲ್ಲಿ ಬೀಡಿ ಸುತ್ತುವುದು, ಊಟದ ಎಲೆ ತಯಾರಿಕೆ ಉಪಕಸುಬಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಬರಗೂರು ತಾಲ್ಲೂಕು ಪಂಚಾಯಿತಿ, ದೊಡ್ಡಬಾಣಗೆರೆ ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಬರುತ್ತದೆ. ಮೂವರು ಗ್ರಾಮ ಪಂಚಾಯಿತಿ ಸದಸ್ಯರು ಈ ಗ್ರಾಮದ ಪ್ರತಿನಿಧಿಗಳಿದ್ದಾರೆ. ಈ ಗ್ರಾಮಕ್ಕೆ ಸಂಬಂಧಿಸಿದ ಒಂದು ವಿದ್ಯುತ್ ಉಪನಿಯಂತ್ರಕ ಸಂಘಗಳಿದ್ದು, ಮಹಿಳಾ ಆರ್ಥಿಕ ಸ್ವಾವಲಂಬನೆಯಲ್ಲಿ ಸಹಕಾರಿಯಾಗಿದೆ. ಒಂದು ಅಂಗನವಾಡಿ ಕೇಂದ್ರಗಳಿದ್ದು ೩೩ ಮಕ್ಕಳಿದ್ದಾರೆ. ಪ್ರಾಥಮಿಕ ಹಿರಿಯ ಪಾಠಶಾಲೆ ಗ್ರಾಮದ ಹೊರಭಾಗದಲ್ಲಿದ್ದು, ಉತ್ತಮ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ. ಗ್ರಾಮದಲ್ಲಿ ಶೇ. ೫೦ ರಷ್ಟು ಸಾಕ್ಷರತೆ ಇದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ, ವಿಕಲಚೇತನ ವೇತನ ಫಲಾನುಭವಿಗಳಿದ್ದಾರೆ. ೩ ಟೀ ಅಂಗಡಿ, ೮ ಪೆಟ್ಟಿಗೆ ಅಂಗಡಿ ಕಿರಾಣಿ ಅಂಗಡಿಗಳಿವೆ. ಗ್ರಾಮದಲ್ಲಿ ೨ ವೀರಗಲ್ಲುಗಳಿದ್ದು, ಇವು ಈಶ್ವರ ದೇವಾಲಯದ ಪಕ್ಕದಲ್ಲಿವೆ, ಚಿತ್ರಲಿಂಗೇಶ್ವರ, ಈಶ್ವರ, ಹನುಮಂತರಾಯ, ಭೈರವೇಶ್ವರ ಇವುಗಳು ಜೊತೆಗೆ ಗ್ರಾಮದೇವತೆ ಕರಿಯಮ್ಮ, ಬಂಡೆಕಟ್ಟೆ ಸಾಂಸ್ಕೃತಿಕ ವೀರ ದೇವಾಲಯಗಳಿವೆ. ದಸರಾ ಹಬ್ಬದಂತೆ, ದೀಪಾವಳಿ ಈ ಎರಡು ದಿನ ಊರು ದೇವರುಗಳು ಉತ್ಸವ, ಚಿತ್ರದೇವ ದೀಪ ಏರುವ, ಇಳಿಸುವ, ಹಾಲು ಮೀಸಲು ವಿಶೇಷವಾಗಿರುತ್ತದೆ. ಕರಿಯಮ್ಮ ಊರದೇವತೆ ಯಾಗಿದ್ದು ಬಲಿ, ಬ್ಯಾಟೆ, ಆರತಿ, ಹರಕೆ ಸಂಪ್ರದಾಯವಿರುತ್ತದೆ. ಯುಗಾದಿ, ದೀಪಾವಳಿ, ಗೌರಿ, ಶಿವರಾತ್ರಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಡಾ.ತಿಮ್ಮಯ್ಯ, ಇಂಜಿನಿಯರ್ ಜಯರಾಮಯ್ಯ ಬರಹಗಾರರಾಗಿದ್ದು, ತಿಮ್ಮಯ್ಯ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕ ಪ್ರಕಟಿಸಿದ್ದಾರೆ ಲಕ್ಷ್ಮಣಸ್ವಾಮಿ ಭಜನೆ ಕಲಾವಿದರಾಗಿದ್ದಾರೆ. ರಂಗಮ್ಮ, ಚಿತ್ರಮ್ಮ, ಕದರಯ್ಯ, ಲಕ್ಕಮ್ಮ ಸೋಬಾನೆ ದೇವರ ಮೇಲೆ ಪದ ಹೇಳುವ ಜನಪದ ಕಲಾವಿದರಾಗಿದ್ದಾರೆ. ಕೆರೆಯ ಏರಿಯ ಮೇಲಿರುವ ಹೊಲತಮ್ಮ ಪೌಳಿಗೆ ಗ್ರಾಮಸ್ಥರೆಲ್ಲ ಹೊಸ ಬೆಳೆಯೊಂದಿಗೆ ಬೋನ ಅರ್ಪಿಸುವುದು. ಪ್ರಸಾದ ಸ್ವೀಕಾರ ಮಾಡುವುದು ಗ್ರಾಮದ ಸಂಪ್ರದಾಯವಾಗಿದೆ. ಆದಿ ದ್ರಾವಿಡ ಪಂಗಡದ ಗರ್ಭಿಣಿ ಸ್ತ್ರೀಯನ್ನು ಕೆರೆಗೆ ಬಲಿ ಕೊಟ್ಟು, ಆಕೆಗೆ ಪೂಜ್ಯ ಸ್ಥಾನ ಕಲ್ಪಿಸಿ, ಕೃತಾರ್ಥತೆಗಾಗಿ ಪೂಜಿಸುವುದು ಈ ಗ್ರಾಮದ ವಿಶೇಷವಾಗಿದೆ.

## ಚೌಳಹಟ್ಟಿ

ಚೌಳಹಟ್ಟಿಯು ಸಿರಾ ತಾಲ್ಲೂಕಿನಿಂದ ಪಶ್ಚಿಮ, ಉತ್ತರಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ, ಮೂಲ ಗ್ರಾಮ ಮುಸಕಲೋಟಿಯಲ್ಲಿ ಸೇರ್ಪಡೆಯಾಗಿದೆ. ೬೪೨.೮ ಹೆಕ್ಟೇರ್ ಮುಖ್ಯ ಗ್ರಾಮದೊಂದಿದೆ ಹಂಚಿಕೊಂಡಿದೆ. ಜೌಗುಭೂಮಿಯಾದು ದರಿಂದ ಈ ಗ್ರಾಮಕ್ಕೆ, ಚೌಳಹಟ್ಟಿ ಎಂದು ಕರೆದು ಕೊಂಡಿದ್ದಾರೆ. ಉಪ್ಪಿನ ಅಂಶ ಹೆಚ್ಚಾಗಿರುವುದರಿಂದ ಚೌಳ ಭೂಮಿ ಗ್ರಾಮದ ಉತ್ತರಕ್ಕೆ, ದಕ್ಷಿಣಕ್ಕೆ ಕೆಂಪು ಮಿಶ್ರಿತ ಮರಳು ಮಣ್ಣಿನ್ನು ಹೊಂದಿದೆ.

ಮುಸಕಲೋಟಿ , ಕರೇಕಲ್ಲು, ಕೊಟ್ಟಿ, ಯಂಜಲುಗೆರೆ ಈ ಹೊಂದಿಗೆ ಗ್ರಾಮದ ನಡುವೆ ಈ ಗ್ರಾಮ ಬರುತ್ತಿದ್ದು,

ಈ ಪರಿಸರದ ಪೊದೆ, ಗಿಡ, ಮರಗಳ ನಡುವೆ, ಮೊಲ, ನರಿ, ಕಾಡುಹಂದಿ, ಮುಂಗುಸಿ, ಕಾಡುಬೆಕ್ಕು ಮೊದಲಾದ ಕಾಡು ಪ್ರಾಣಿಗಳು ಕಂಡು ಬರುತ್ತವೆ. ಗ್ರಾಮದಲ್ಲಿ ಪಶುಪಾಲನೆಯಾಗಿ ಕುರಿ, ಮೇಕೆ, ಕತ್ತೆ, ನಾಯಿ, ಹಸು, ಎಮ್ಮೆಗಳನ್ನು ಸಾಕುತ್ತಾರೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಮರಕುಟಿಕ, ಗುಬ್ಬಚ್ಚಿ, ಗೂಬೆ, ಹದ್ದು, ಗರುಡ, ಕಾಗೆ ಕಂಡು ಬರುತ್ತವೆ. ಸಾಕು ಪಕ್ಷಿಯಾಗಿ ಕೋಳಿಯನ್ನು ಸಾಕುತ್ತಾರೆ. ೪೬೨ ಮಿ.ಮೀ. ಮಳೆಯ ಪ್ರಮಾಣ ಹೊಂದಿರುವ ಈ ಗ್ರಾಮದಲ್ಲಿ ಬಿಸಿಲು ಹೆಚ್ಚು. ಸರಾಸರಿ ಬಿಸಿಲು ೩೭-೪೦೦ ಸೆಂ. ಇರುತ್ತದೆ. ಚಳಿ ೧೨೦ ಸೆಂ ಇರುತ್ತದೆ. ಕುಡಿಯಲು ಕೊಳವೆ ಬಾವಿಯ ಮೂಲಕ ನೀರನ್ನು ಪೂರೈಸಲಾಗುತ್ತಿದೆ. ೨ ಮಿನಿ ಟ್ಯಾಂಕ್ ಇದ್ದು, ಎರಡು ಕೈ ಪಂಪುಗಳಿವೆ.

ಕಾಡುಗೊಲ್ಲ ಸಮುದಾಯವೇ ಇಲ್ಲಿ ಪೂರ್ಣ ಪ್ರಮಾಣದಲ್ಲಿದ್ದು, ೨೮ ಮನೆಗಳಿವೆ. ೦೬ ಶೌಚಾಲಯಗಳು ಗ್ರಾಮಪಂಚಾಯಿತಿಯಿಂದ ಮಂಜೂರು ಮಾಡಿಸಿಕೊಂಡು ನಿರ್ಮಿಸಿದ್ದಾರೆ. ಬಳಕೆ ಕಡಿಮೆಯಾಗಿದೆ. ಹೆಂಚಿನ, ಶೀಟಿನ, ಮನೆಗಳಿದ್ದು ಜನತಾ ಯೋಜನೆಯ ಮನೆಗಳಾಗಿವೆ. ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಫಲಾನುಭವಿಗಳೂ ಇದ್ದಾರೆ. ೧೫೨ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ , ಈ ಗ್ರಾಮದ ಮುಖ್ಯ ಆಹಾರ. ಅಮುಖ್ಯವಾಗಿ ಅನ್ನ, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಭೋಜನಗಳು. ಎತ್ತಿನಗಾಡಿ ಹಾಗೂ ಟ್ರ್ಯಾಕ್ಟರ್ ಬಳಕೆ ಇದೆ. ಶೇಂಗಾ ಗ್ರಾಮದ ಮುಖ್ಯ ಬೆಳೆ. ರಾಗಿ, ತೊಗರಿ, ಅಲಸಂದಿ, ಜೋಳ, ಆಹಾರ ಬೆಳೆಗಳ. ಸೂರ್ಯಕಾಂತಿ, ರೇಷ್ಮೆ ಕೃಷಿ ಅಲ್ಪ ಪ್ರಮಾಣದಲ್ಲಿದ್ದು, ತೋಟಗಾರಿಕೆಯ ಬೆಳೆಗಳಾದ ತೆಂಗು-ಅಡಿಕೆ ಇರುವುದಿಲ್ಲ. ಹುಣಸೆಹಣ್ಣು ವ್ಯಾಪಾರ ಇರುತ್ತದೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರ ಹಾಗೂ ದ್ವಾರನಕುಂಟೆ ಗ್ರಾಮ ಪಂಚಾಯಿತಿ ಕ್ಷೇತ್ರಗಳನ್ನು ಹೊಂದಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಗಳನ್ನು ಹೊಂದಿದೆ. ಒಂದು ಸ್ತ್ರೀ ಶಕ್ತಿ ಸಂಘವಿದ್ದು, ಅಂಗನವಾಡಿ ಕೇಂದ್ರವಿದೆ. ಇದರಲ್ಲಿ ೨೨ ಮಕ್ಕಳಿದ್ದು, ಒಬ್ಬರು ಶಿಕ್ಷಕರು ಇದ್ದಾರೆ. ಮಕ್ಕಳಿಗೆ ಉಪ ಆಹಾರ ಪೌಷ್ಠಿಕ ತಿಂಡಿಯನ್ನು ಪೂರೈಸಲಾಗುತ್ತದೆ. ಸ್ವತಃ ಕಟ್ಟಡ ಇರುವುದಿಲ್ಲ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ, ಸಮುದಾಯ ಸೌಲಭ್ಯಗಳಾದ ಫಲಾನುಭವಿಗಳಿದ್ದು, ೧ ಪೆಟ್ಟಿಗೆ ಅಂಗಡಿ ಇದೆ. ಕೃಷ್ಣನ ಚಿತ್ರದೇವರ ಪುಟ್ಟ ಪೌಳಿ ಇದೆ. ಗ್ರಾಮ ದೇವತೆ ಕರಿಯಮ್ಮನ ಹಬ್ಬ ಗ್ರಾಮದ ಹಬ್ಬವಾಗಿ ಆರತಿ, ಬಾನ, ಬ್ಯಾಟೆ ಇರುತ್ತದೆ. ದೀಪಾವಳಿ ಈ ಗ್ರಾಮದ ವಿಶೇಷ ಹಬ್ಬ. ದೀಪ ಏರಿಸುವ ಹಂತದಿಂದ ದೀಪ ಇಳಿಸುವ ಆರು ದಿನಗಳ ಕಾಲ ಗ್ರಾಮದಲ್ಲಿ ಸಂಭ್ರದಲ್ಲಿರುತ್ತದೆ.

## ಚಿಕ್ಕಹುಲಿಕುಂಟೆ

ಚಿಕ್ಕಹುಲಿಕುಂಟೆ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೦ ಕಿ.ಮೀ. ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೬೩೨ ಹೆಕ್ಟೇರ್ ಆಗಿದೆ. ನಡುವೆ ಹುಲಿಕುಂಟೆ ಕೆರೆಯಿದ್ದು, ಬಲಗಡೆ ದೊಡ್ಡಹುಲಿಕುಂಟೆ, ಎಡಗಡೆ ಕೋಡಿಗೆ ಚಿಕ್ಕಹುಲಿಕುಂಟೆ ಎರಡು ಗ್ರಾಮಗಳು ಅರ್ಧ ಕಿ.ಮೀ. ಅಂತರದಲ್ಲಿದೆ. ಹುಲಿ-ಕಾಡು, ಕೆರೆ ಮೂಲದಿಂದ ಈ ಹೆಸರು ಬಂದಿದೆ. ಹುಲಿ ನೀರು ಕುಡಿಯುವ ಕೆರೆ-ಕುಂಟೆ-ಹುಲಿಕುಂಟೆಯಾಗಿದೆ ಎಂದು ಗ್ರಾಮದ ಹಿರಿಯ ರಾಮಣ್ಣ ಅವರ ಅಭಿಪ್ರಾಯವಾಗಿದೆ. ಆದರೂ ಮಾಟಗಾರ ತಮ್ಮಣ್ಣ ತಾತನ ಜನಜನಿತ ದಂತಕತೆಯೂ ಎರಡು ಹುಲಿಕುಂಟೆಗಳಿಗೆ ಒಂದೇ ಆಗಿದೆ. ಕೆಂಪು-ಕಂದು ಮಿಶ್ರಿತ ಮರಳು ಮಣ್ಣು, ಕುರುಚಲು ಗಿಡ ದಕ್ಷಿಣಕ್ಕೆ ಕೆರೆ ಬಯಲು, ಉತ್ತರಕ್ಕೆ ಗದ್ದೆ ಬಯಲು, ಪೂರ್ವಕ್ಕೆ ಹುಲಿಕುಂಟೆ ಕೆರೆ.

ಹೀಗಾಗಿ ಈ ಪರಿಸರದಲ್ಲಿ ನರಿ, ಮೊಲ, ಕರಡಿ, ಉಡ, ಬಾರುಬೆಕ್ಕು ಕಂಡು ಬರುತ್ತದೆ. ಸಾಕು ಪ್ರಾಣಿಗಳಾಗಿ ಹಸು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕಲಾಗುವುದು. ಪಕ್ಷಿಗಳಾದ ಕಾಗೆ, ಕೋಗಿಲೆ, ಕೌಜುಗ, ಕೊಕ್ಕರೆ, ಗಿಳಿ, ಗೊರವಂಕ, ಗೂಬೆ, ಹದ್ದು, ಗರುಡ ಕಂಡು ಬರುತ್ತವೆ. ಸಾಕು ಪಕ್ಷಿಯಾಗಿ ಕೋಳಿಗಳನ್ನು ಸಾಕುತ್ತಾರೆ. ವಾರ್ಷಿಕ ಮಳೆ ಪ್ರಮಾಣ ೫೮೦ ಮಿ.ಮೀ. ಆಗಿದ್ದು, ಉಷ್ಣಾಂಶ ೩೯-೪೦೦ ಸೆಂ. ಇರುತ್ತದೆ. ಚಳಿ ೧೨೦ ಸೆಂ. ಇರುತ್ತದೆ. ಎರಡು ಕೆರೆಗಳಿದ್ದರೂ ತುಂಬುವುದು ಅಪರೂಪ. ಈ ಪರಿಸರದಲ್ಲಿ ೬೮ ಕೊಳವೆ ಬಾವಿಗಳಿದ್ದು ಕೃಷಿ ಕಾಯಕಕ್ಕೆ ಬಳಕೆಯಾಗುತ್ತದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರಿ ನೀರು ಸರಬರಾಜು ಯೋಜನೆಯಲ್ಲಿ ನೀರು ಪೂರೈಸಲಾಗುತ್ತದೆ. ೮ ಕಿರು ಟ್ಯಾಂಕರ್‌ಗಳಿವೆ. ೨ ಕೈ ಪಂಪು ಇದ್ದು, ಕೆಟ್ಟು ಹೋಗಿರುತ್ತವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಗ ಸಮುದಾಯ ದೊಡ್ಡ ಸಮುದಾಯವಾಗಿದ್ದು ಗೊಲ್ಲರು,

ಕುರುಬರು, ಆದಿಕರ್ನಾಟಕ, ಬೋವಿ, ಮಡಿವಾಳ, ಕೊರಚ, ಹಾಗೂ ಮುಸ್ಲಿಂ, ಬ್ರಾಹ್ಮಣ ಸಣ್ಣ ಸಮುದಾಯವಾಗಿದೆ. ಕನ್ನಡ ಮತ್ತು ವಿರಳವಾಗಿ ಉರ್ದು ಭಾಷೆ ಬಳಕೆಯಲ್ಲಿದೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಹಾಗೂ ೨ ಗುಡಿಸಲು ಸೇರಿ ಒಟ್ಟು ೨೧೩ ಮನೆಗಳಿದ್ದು, ೯೨೦ ಜನಸಂಖ್ಯೆಯನ್ನು ಹೊಂದಿದೆ. ೮೦ ಮನೆಗಳಲ್ಲಿ ಶೌಚಾಲಯ ಹೊಂದಿದೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆಯ ೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ-ಅನ್ನ ಮುಖ್ಯ ಆಹಾರವಾಗಿದ್ದು, ರೊಟ್ಟಿ, ಉಪ್ಪಿಟ್ಟು, ಬಳಸುವವರಿದ್ದಾರೆ ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಪಾಯಸ, ಹೋಳಿಗೆ ಭೋಜನವಿರುತ್ತದೆ. ಸಾಂಪ್ರದಾಯಿಕ ವಾಹನವಾಗಿ ಎತ್ತಿನಗಾಡಿ, ಆಧುನಿಕ ವಾಹನಗಳೂ ಟ್ರ್ಯಾಕ್ಟರ್, ಟೆಂಪೋ, ಆಟೋ, ದ್ವಿಚಕ್ರ ವಾಹನಗಳು ಬಳಕೆಯಿದೆ.

ಶೇಂಗಾ ಗ್ರಾಮದ ಮುಖ್ಯ ಬೆಳೆ. ರಾಗಿ, ಅಲಸಂದಿ, ತೊಗರಿ, ಭತ್ತ, ಜೋಳ ಆಹಾರ ಬೆಳೆಗಳು. ಅಡಿಕೆ, ತೆಂಗು, ವೀಳ್ಯದೆಲೆ ತೋಟಗಾರಿಕೆ ಬೆಳೆಗಳಾಗಿವೆ. ಶೇಂಗಾ, ಹುಣಸೆಹಣ್ಣು ಪ್ರಮುಖ ವ್ಯಾಪಾರಿ ಬೆಳೆಗಳಾಗಿವೆ. ಇಂಜಿನಿಯರ್, ಕೆ.ಇ.ಬಿ. ಕೃಷಿ ನಿರ್ದೇಶಕರು, ಉಪನ್ಯಾಸಕರು, ಮುಖ್ಯ ಶಿಕ್ಷಕ ರಾಮಣ್ಣ ಸೇರಿದೆತ ೧೫ ಜನ ಸರ್ಕಾರಿ ನೌಕರರಿದ್ದಾರೆ. ಬೆಸ್ಕಾಂ ಇಂಜಿನಿಯರ್ ಶಾಂತರಾಜು ಈ ಗ್ರಾಮದ ವಿಶೇಷ. ಬೀಡಿ ಕಟ್ಟುವುದು, ಊಟದ ಎಲೆ ತಯಾರಿಕೆ, ಗೃಹ ಕಸುಬು ಇದೆ. ಗ್ರಾಮದಲ್ಲಿ ಚರ್ಮ ಹದ ಮಾಡುವ ಪ್ರಾಚೀನ ಒಲೆ ಈ ಗ್ರಾಮದಲ್ಲಿ ವಿಶೇಷವಾಗಿ ಕಂಡು ಬರುತ್ತವೆ. ಪ್ರಸ್ತುತ ಇವು ಕಾರ್ಯ ನಿರ್ವಹಿಸುತ್ತಿಲ್ಲವಾಗಿವೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮ ಪಂಚಾಯಿತಿಯ ೪ ಜನ ಸದಸ್ಯರು ಈ ಗ್ರಾಮವನ್ನು ಪ್ರತಿನಿಧಿಸುತ್ತಿದ್ದಾರೆ. ಒಂದು ಅಂಚೆ ಕಛೇರಿ ಇದೆ. ಆರು ಸ್ತ್ರೀಶಕ್ತಿ ಸ್ವಸಹಾಯ ಸಂಘ, ಹೆಣ್ಣು ಮಕ್ಕಳ ಆರ್ಥಿಕ ಚಟುವಟಿಕೆಗೆ ಸಹಕಾರಿಯಾಗಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ೯೭ ಮಕ್ಕಳು ಕಲಿಯುತ್ತಿದ್ದಾರೆ. ೪ ಶಿಕ್ಷಕರು ಇದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪಠ್ಯಪುಸ್ತಕ ಸೌಲಭ್ಯ ಒದಗಿಸಲಾಗಿದೆ. ಈ ಗ್ರಾಮದ ಸಾಕ್ಷರತೆ ಶೇ. ೬೩.೭% ರಷ್ಟಿದೆ. ಮಹಿಳೆಯರು ೫೦.೨ ಆದರೆ ಪುರುಷರು ಶೇ. ೭೭% ಪ್ರಮಾಣದಲ್ಲಿದ್ದಾರೆ. ಈ ಊರಿನಿಂದ ಒಂದು ಕಿ.ಮೀ ದೂರದಲ್ಲಿ ಅಮರಾಪುರ-ಹುಲಿಕುಂಟೆ ಗೇಟಿನಲ್ಲಿ ಡಬ್ಲ್ಯೂ. ಹೆಚ್. ಹನುಮಂತ ಸ್ಮಾರಕ ಪದವಿಪೂರ್ವ ಕಾಲೇಜು ಇದ್ದು, ಒಟ್ಟು ೫೦ ಮಕ್ಕಳಿದ್ದು, ಕಲಾ ವಿಭಾಗದಲ್ಲಿ ಮಾತ್ರ ಬೋಧನೆ ನಡೆಯುತ್ತಿದೆ. ಕೃಷ್ಣಪ್ಪ ಇಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೮ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ೨ ಕರುಗಲ್ಲು, ಒಂದು ಭವ್ಯವಾದ ರಂಗನಾಥಸ್ವಾಮಿ ದೇವಾಲಯ, ಅರಳಿಕಟ್ಟೆ, ಒಂದು ಕಲ್ಯಾಣಿ, ಕಲ್ಲೇಶ್ವರ, ಈರಣ್ಣ, ಹಾಗೂ ಮಾರಮ್ಮ, ಆಂಜಿನೇಯ, ಕೊಲ್ಲಾಪುರದಮ್ಮ ದೇವಾಲಯಗಳಿವೆ. ಬೀರದೇವರ ಪೌಳಿಯೂ ಇದೆ. ರಂಗನಾಥಸ್ವಾಮಿ ಜಾತ್ರೆ ನಡೆಯುತ್ತದೆ. ಕೊಲ್ಲಾಪುರದಮ್ಮನ ಊರಹಬ್ಬ ವಿದ್ದು, ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯವಿದೆ. ಯುಗಾದಿ, ಮಹಾನವಮಿ, ಗೌರಿಗಣೇಶ, ಕೊಂತೆಮ್ಮ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಗ್ರಾಮದಲ್ಲಿ ಧೀರೋದ್ಧಾರ ಯುವಕ ಸಂಘವಿದ್ದು, ವಾರ್ಷಿಕವಾಗಿ ಕ್ರೀಡಾಕೂಟ, ಸಾಂಸ್ಕೃತಿಕ ಕಲಾ ಮೇಳಗಳನ್ನು ಪ್ರತಿವರ್ಷ ಏರ್ಪಡಿಸುತ್ತಾ ಬರುತ್ತಿದೆ. ಒಂದು ಕನ್ನಡ ಧ್ವಜ ಸ್ತಂಭವಿದೆ. ರಾಮಣ್ಣ ಎಂಬ ವರ್ಷ ವಯಸ್ಸಿನ ಹಿರಿಯ ಕಲಾವಿದರು ಜನಪದ ಗೀತೆ ಹಾಡುತ್ತಾರೆ. ಸಿದ್ದೇಶ್ವರ, ಯಂಜಾರಪ್ಪ, ರಾಯಣ್ಣ, ಸಿದ್ದೇಶ್ ಕೋಲಾಟ ತಂಡಗಳು, ತಾಲ್ಲೂಕು  ಹಂತದಲ್ಲಿ ಹೆಸರಾಗಿದ್ದಾರೆ. ಲಕ್ಷ್ಮಣಪ್ಪನವರು ಪ್ರಗತಿಪರ ರೈತರಾಗಿದ್ದು, ಭತ್ತದ ಬೆಳೆಯ ಹೊಸ ಪ್ರಯೋಗಕ್ಕಾಗಿ ರಾಜ್ಯ ಸರ್ಕಾರ ೧೯೯೯ ರಲ್ಲಿ ಮುಖ್ಯ ಮಂತ್ರಿ ಚಿನ್ನದ ಪದಕ ಪಡೆದಿದ್ದಾರೆ. ಗ್ರಾಮದ ಪಶ್ಚಿಮಕ್ಕೆ ಸಮಾಧಿ ತಾತನ ಗದ್ದುಗೆ ಇದ್ದು, ಯುಗಾದಿಯಂದು ವಿಶೇಷ ಆರಾಧನೆ ನೈವೇದ್ಯ ಅರ್ಪಣೆ ನಡೆಯುತ್ತದೆ.

## ಚನ್ನೇನಹಳ್ಳಿ

ಚನ್ನೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವ-ಉತ್ತರಕ್ಕೆ ೨೪ ಕಿ.ಮೀ. ದೂರದಲ್ಲಿದೆ. ತಾಳಗುಂದ, ಭೂಪಸಂದ್ರ ಮಾರ್ಗದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೩೯೬.೯೩ ಹೆಕ್ಟೇರ್ ಇದೆ. ಚನ್ನಪ್ಪ ಎಂಬ ಹೆಸರಿನಲ್ಲಿ ಈ ಗ್ರಾಮ

ರಚನೆಯಾಗಿದ್ದು, ಗ್ರಾಮ್ಯವಾಗಿ ಚನ್ನನಹಳ್ಳಿ ಚನ್ನೇನ ಹಳ್ಳಿಯಾಗಿದೆ. ಸಮೀಪದಲ್ಲಿ ತಾಳಗುಂದ ಸಮೀಪ ಚನ್ನಿಗರಾಯನ ದೇವಾಲಯ ಇರುವುದರಿಂದ ಚನ್ನಿಗ–ಚೆನ್ನ ಅರ್ಥದಲ್ಲೂ ಬಳಕೆಯಾಗಿರಬೇಕೆಂದು ಶಿಕ್ಷಕ ರಂಗನಾಥ್ ಅಭಿಪ್ರಾಯ ಪಡುತ್ತಾರೆ. ಒಟ್ಟಾರೆ ವ್ಯಕ್ತಿ ಮೂಲದಿಂದ ಈ ಗ್ರಾಮಕ್ಕೆ ಚನ್ನೇನಹಳ್ಳಿ ಎಂಬ ಹೆಸರು ಬಂದಿದೆ.

ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ಬಯಲು ಸೀಮೆಯಾಗಿದೆ. ಈ ಪರಿಸರದಲ್ಲಿ ನರಿ, ತೋಳ, ಮೊಲ, ಜಿಂಕೆ, ಕರಡಿ, ಕಂಡು ಬರುತ್ತವೆ. ರೈತಾಪಿ ಬದುಕಿನ ಜನ ಸಾಕು ಪ್ರಾಣಿಗಳಾದ ಹಸು, ಎತ್ತು, ಕುರಿ, ಎಮ್ಮೆ ಸಾಕುತ್ತಿದ್ದಾರೆ. ಮಾಂಸ ಹಾಗೂ ಮೊಟ್ಟೆಗಾಗಿ ಕೋಳಿಗಳಾದ ಹ್ಯಾಟಿ, ಗಿರಿರಾಜ, ಫಾರಂ ಕೋಳಿಗಳ ಸಾಕಾಣೆ ಇದೆ. ಪಕ್ಷಿಗಳಾದ ಗೊರವಂಕ, ಕಾಗೆ, ಹದ್ದು, ಬೆಳವ, ಕೋಗಿಲೆ, ಗಿಳಿ ಪಕ್ಷಿಗಳು ಕಂಡು ಬರುತ್ತದೆ.

ಕೃಷಿ ಆಧಾರಿತ ಕುಟುಂಬ ಮಳೆ ಕಡಿಮೆ. ವಾಡಿಕೆ ಮಳೆಯ ಪ್ರಮಾಣ ೫೫೭.೩ ಮಿ.ಮೀ. ಮಳೆ ಬೀಳುತ್ತಿದ್ದು, ಕೃಷಿಗೆ ಸಾಕಾಗುವುದಿಲ್ಲ. ಹಾಗಾಗಿ ಈ ಪರಿಸರದಲ್ಲಿ ೧೪ ಕೊಳವೆ ಬಾವಿಗಳಿದ್ದು, ಅರೆ ನೀರಾವರಿಗೆ ಸಹಾಯಕ ವಾಗಿದೆ. ಬಿಸಿಲಿನ ಉಷ್ಣಾಂಶ ೩೮° ಸೆಂ. ಇದ್ದು, ಚಳಿ ೧೨° ಸೆಂ. ಸಹಜವಾಗಿರುತ್ತದೆ. ನಾಲ್ಕು ಸಿಸ್ಟನ್‌ಗಳಿದ್ದು, ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಲ್ಲಿ ನೀರನ್ನು ಒದಗಿಸಲಾಗುತ್ತದೆ. ಗ್ರಾಮದಲ್ಲಿ ೧ ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ದೊಡ್ಡ ಸಮುದಾಯವಾಗಿದ್ದು, ನಾಯಕ, ಲಿಂಗಾಯಿತ, ಗೊಲ್ಲ ಕಿರು ಸಮುದಾಯ ಗಳಾಗಿವೆ. ಈ ಗ್ರಾಮದ ಭಾಷೆ ಕನ್ನಡವಾಗಿದೆ. ವಿವಿಧ ಪ್ರಕಾರಗಳ ೨೬ ಮನೆಗಳಿದ್ದು , ಅವು ಕಾಂಕ್ರೀಟ್, ಶೀಟಿನ, ಹೆಂಚಿನ ಸ್ವರೂಪದ ಮನೆಗಳಿದ್ದು, ಇವು ಸರ್ಕಾರದ ವಸತಿ ಯೋಜನೆಯ ಆಶ್ರಯ, ಅಂಬೇಡ್ಕರ್ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ, ಅನ್ನ ಗ್ರಾಮದ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳು ಟ್ರ್ಯಕ್ಟರ್, ಮಿನಿಟೆಂಪೋ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ತೆಂಗು, ಅಡಿಕೆ, ಸೇವಂತಿ ಮುಖ್ಯ ಬೆಳೆಗಳಿವೆ. ರೇಷ್ಮೆ, ಸೂರ್ಯಕಾಂತಿ ಬೆಳೆಯುತ್ತಾರೆ. ಗ್ರಾಮದಲ್ಲಿ ಶೇಂಗಾ, ಹೊಂಗೆಬೀಜ, ಹುಣಸೆಹಣ್ಣು ಮುಖ್ಯ ವ್ಯಾಪಾರಿ ಸರಕಾಗಿದೆ. ಹುಣಸೆಹಣ್ಣು, ಬೀಡಿ ಕಟ್ಟುವುದು ಮೊದಲಾದ ಗೃಹ ಕೆಲಸದಲ್ಲಿ ಮಹಿಳೆಯರು ಉಪಕಸುಬಾಗಿ ಅವಲಂಬಿಸಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ಭೂಪಸಂದ್ರ ತಾಲ್ಲೂಕು ಹಾಗೂ ಗ್ರಾಮ ಪಂಚಾಯತ್ ಕೇಂದ್ರವಾಗಿದ್ದು, ಒಬ್ಬರು ಗ್ರಾಮ ಪಂಚಾಯಿತ ಸದಸ್ಯರಿದ್ದಾರೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಕಳ್ಳಂಬೆಳ್ಳದಿಂದ ಅಂಚೆ ಸಂಪರ್ಕ ಹೊಂದಿದೆ. ೧ ಸ್ತ್ರೀ ಶಕ್ತಿ ಸ್ವಸಹಾಯ ಸಂಘವಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳಿದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಕೆಯಾಗುತ್ತಿದೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಭೂಪಸಂದ್ರ, ತಾಳಗುಂದ, ಸಿರಾ ನಗರಕ್ಕೆ ಹೋಗಬೇಕಾಗಿದೆ. ಈ ಗ್ರಾಮದ ಸಾಕ್ಷರತೆ ಶೇ. ೩೩ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಸಾಮಾನ್ಯವಾಗಿ ಕೆಮ್ಮು, ನೆಗಡಿ ಕಾಣಿಸಿಕೊಳ್ಳುವ ಸಾಮಾನ್ಯ ಕಾಯಿಲೆಗಳು. ಸಿರಾ, ಕಳ್ಳಂಬೆಳ್ಳ ತರೂರುಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೆಲವು ಕುಟುಂಬಗಳು ಸಂತಾನಹರಣ ಚಿಕಿತ್ಸೆಗೂ ಒಳಗಾಗಿದ್ದಾರೆ. ಈ ಗ್ರಾಮದವರು ಸಮೀಪದ ಗಂಗಾಧರೇಶ್ವರ ಗುಡ್ಡದ ಶ್ರೀ ಗಂಗಾಧರೇಶ್ವರ ದೇವಸ್ಥಾನಕ್ಕೆ ನಡೆದು ಕೊಳ್ಳುತ್ತಾರೆ. ಶ್ರಾವಣ ಮಾಸದಲ್ಲಿ ಆರತಿ, ಬಲಿ, ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಶಿವರಾತ್ರಿ, ಯುಗಾದಿ, ದೀಪಾವಳಿ, ಮಹಾನವಮಿ ಹಬ್ಬಗಳನ್ನು ತುಂಬಾ ವಿಜೃಂಭಣೆಯಿಂದ ಆಚರಿಸುತ್ತಾರೆ. ಸಿರಾ–ಕಾಳಾಪುರ–ತಾಳಗುಂದ–ಮಧುಗಿರಿ ಮಾರ್ಗ, ಬ್ರಹ್ಮಸಂದ್ರ ತುಮಕೂರು ಮಾರ್ಗವಾಗಿ ರಸ್ತೆ ಸಂಪರ್ಕವಿದೆ.

## ಚನ್ನೇನಹಳ್ಳಿ

ಚನ್ನೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೬ ಕಿ.ಮೀ. ಇದ್ದು ಬುಕ್ಕಾಪಟ್ಟಣ–ಹುಳಿಯಾರು ಮುಖ್ಯ ರಸ್ತೆಯ ಬಲಬದಿಗೆ ಇತ್ತೆಂದು ಹೇಳಲಾಗುವ ಒಂದು ಬೇಚಾರಕ್ ಗ್ರಾಮವಾಗಿದೆ.ಈ ಭಾಗದ ಚನ್ನೇನಹಳ್ಳಿ ಭೂ ಹಿಡುವಳಿಯಲ್ಲಿಯ ಹೆಸರಿನಲ್ಲಿಯೇ ಕರೆಯಲಾಗುತ್ತಿದೆ.

ಮರಳು ಮಿಶ್ರಿತ ಕಪ್ಪು, ಮಣ್ಣನ್ನು ಹೊಂದಿದ್ದು, ಪಶ್ಚಿಮ ದಕ್ಷಿಣಕ್ಕೆ ರಕ್ಷಿತ ಅರಣ್ಯವನ್ನು ಹೊಂದಿದೆ. ಈ ಅರಣ್ಯದಲ್ಲಿ ಬಿಕ್ಕೆ, ಮರಡಿ, ಬೇಲ, ಜಾಲಿ, ಹೊಂಗೆ, ತುಗ್ಗಲಿ, ನೇರಳೆ, ಕಾಡು, ಮತ್ತಿ, ಕಾಡು ಬಾದಾಮಿ, ನೀಲಗಿರಿ ಮರಗಳು ಕಂಡು ಬರುತ್ತವೆ. ಈ ಪರಿಸರದಲ್ಲಿ ಕಾಡುಪಕ್ಷಿಗಳಾಗಿ ಕಾಗೆ, ಕೋಗಿಲೆ, ಗಿಳಿ, ಗರುಡ, ಗೀಜಗ, ಗೂಬೆ, ಹದ್ದು, ಗಿಡುಗ, ಕೌಜುಲಗ, ಬೆಳವ ಕಾಡು ಪ್ರಾಣಿಗಳಾಗಿ ಕರಡಿ, ಮೊಲ, ಜಿಂಕೆ, ತೋಳ, ಉಡ, ಮುಂಗುಸಿ ಹಾವುಗಳು ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ೫೪೨ ಮಿ.ಮೀ. ಮಳೆ ಬೀಳುತ್ತಿದ್ದು, ಚಳಿಯು ೧೨-೧೪ ಡಿ. ಸೆಂ. ಇರುತ್ತದೆ. ಹಾಗು ಬಿಸಿಲಿನ ತಾಪ ३೬-३೮ ಡಿ.ಸೆಂ. ಇರುತ್ತದೆ.

ಚಿಕ್ಕನಾಯಕನಹಳ್ಳಿ ವಿಧಾನಸಭೆ, ಚಿತ್ರದುರ್ಗ ಲೋಕಸಭೆ, ಬುಕ್ಕಾಪಟ್ಟಣ ಜಿಲ್ಲಾ, ತಾಲ್ಲೂಕು ಹಾಗು ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದೆ.

## ಚಕ್ಕೇನಹಳ್ಳಿ

ಚಕ್ಕೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೬ ಕಿ.ಮೀ. ದೂರದಲ್ಲಿದೆ. ಸಿರಾ – ಬುಕ್ಕಾಪಟ್ಟಣ ಮುಖ್ಯ ರಸ್ತೆಯಲ್ಲಿ ಬುಕ್ಕಾಪಟ್ಟಣದಿಂದ ೬ ಕಿ.ಮೀ. ದೂರದಲ್ಲಿ ಈ ಗ್ರಾಮ ಇತ್ತೆಂದು ಹೇಳಲಾಗುತ್ತಿದೆ. ಇಂದು ಬೇಚಾರಕ್ ಗ್ರಾಮವಾಗಿದ್ದು, ಜನವಸತಿ ಇರುವುದಿಲ್ಲ. ಆದರೂ ಬುಕ್ಕಾಪಟ್ಟಣದ ಜನ, ಹೊಲ, ಗಿಡ, ಪ್ರಾಣಿಗಳ ವಿಚಾರದಲ್ಲಿ ಚಕ್ಕೇನಹಳ್ಳಿ ಗ್ರಾಮದ ಉಲ್ಲೇಖ ಮಾಡುತ್ತಾರೆ. ಇದು ಸಂಪೂರ್ಣವಾಗಿ ಬುಕ್ಕಾಪಟ್ಟಣ ರಕ್ಷಿತ ಅರಣ್ಯದ ಗಡಿಗೆ ಸೇರಿದೆ.

ಈ ಪರಿಸರದಲ್ಲಿ ಕಾಡು ಆವೃತ್ತವಾಗಿದ್ದು, ಬಿಕ್ಕೆ, ಬ್ಯಾಲ, ನೀಲ, ನೇರಳೆ, ನೀಲಗಿರಿ, ಕಾಡುಮತ್ತಿ, ಹೊಂಗೆ, ಬೇವು, ಬ್ಯಾಟೆ, ಮರಡಿ, ತುಗ್ಗಲಿ ಮರಗಳಿವೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಕರಡಿ, ಉಡ, ತೋಳ, ಕಂಡು ಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಕಾಗೆ, ಕೋಗಿಲೆ, ಕೌಜುಲಗ, ಗಿಡುಗ, ಬೆಳವ, ಗುಬ್ಬಚ್ಚಿ ಕಂಡು ಬರುತ್ತವೆ.

ಚಿಕ್ಕನಾಯಕಹಳ್ಳಿ ವಿಧಾನಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದ್ದು, ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ.

## ಚಿಕ್ಕನಹಳ್ಳಿ

ಚಿಕ್ಕನಹಳ್ಳಿ–ಸಿರಾ–ತುಮಕೂರು ರ್ರಾ್ಟ್ರೀಯ ಹೆದ್ದಾರಿಯಲ್ಲಿ ಸಿರಾ ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿದೆ. ವ್ಯಕ್ತಿ ಮೂಲದಿಂದ ಈ ಗ್ರಾಮಕ್ಕೆ ಹೆಸರು ಬಂದಿದ್ದು, ಚಿಕ್ಕ ಎಂಬ ಹೆಸರಿಗೆ 'ನ' ಉತ್ತರ ಅಕ್ಷರ ಕೂಡಿಕೊಂಡು ಚಿಕ್ಕನಹಳ್ಳಿ ಆಗಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ, ೨೭३.೫೨ ಹೆಕ್ಟೇರ್ ಆಗಿದೆ. ಈ ಗ್ರಾಮಕ್ಕೆ ಮಜರೆ ಗ್ರಾಮಗಳಾಗಿ, ದೇವರಹಳ್ಳಿ, ಚಿಕ್ಕದಾಸರ ಹಳ್ಳಿ, ಚಿಕ್ಕದಾಸರಹಳ್ಳಿ ಗೊಲ್ಲರಹಟ್ಟಿ, ಕಲ್ಲಿಗಾನ ಹಳ್ಳಿ, ದೇವರಹಳ್ಳಿ, ಗೊಲ್ಲರಹಟ್ಟಿ, ಚಿಕ್ಕನಹಳ್ಳಿ, ವಡ್ಡರಹಟ್ಟಿ ಈ ಗ್ರಾಮಗಳು ಉಪಗ್ರಾಮಗಳಾಗಿವೆ. ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿಯ ಕೇಂದ್ರ ಸ್ಥಾನವೂ ಆಗಿದ್ದು, ಹನ್ನೊಂದು ಹಳ್ಳಿಗಳು ಈ ವ್ಯಾಪ್ತಿಗೆ ಸೇರುತ್ತವೆ. ಅವೆಂದರೆ ಕಡವೀಗೆರೆ, ಕಾರ್ಪೆಹಳ್ಳಿ, ಚಿಕ್ಕದಾಸರಹಳ್ಳಿ, ದೇವರಹಳ್ಳಿ, ದೇವರಹಳ್ಳ ಗೊಲ್ಲರಹಟ್ಟಿ, ಚಿಕ್ಕದಾಸ ಹಳ್ಳ, ಗೊಲ್ಲರಹಳ್ಳ, ಕಲಿಗಾನಹಳ್ಳಿ, ಜಯಚಂದ್ರ ಬಡಾವಣೆ, ಕಾರ್ಪೆಹಳ್ಳಿ ಗೊಲ್ಲರಹಟ್ಟಿ, ಚಿಕ್ಕನಹಳ್ಳಿ ವಡ್ಡರಹಟ್ಟಿ ಇವು ಗ್ರಾಮ ಪಂಚಾಯಿತಿಗೆ ಒಳಪಡುವ ಗ್ರಾಮಗಳಾಗಿವೆ.

ಚಿಕ್ಕನಹಳ್ಳಿ ಸಿರಾ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ಕೇಂದ್ರಗಳಲ್ಲಿ ಒಂದಾಗಿದೆ. ಅರೇಹಳ್ಳಿ ರಮೇಶ್ ಪ್ರಸ್ತುತ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದಾರೆ. ತಾಲ್ಲೂಕು ಪಂಚಾಯಿತಿ ಕೇಂದ್ರವೂ ಆಗಿರುವ ಚಿಕ್ಕನಹಳ್ಳಿ, ಕಾಳೇಗೌಡ ಸದಸ್ಯರಾಗಿದ್ದಾರೆ. ಚಿಕ್ಕನಹಳ್ಳಿ ಪ್ರಮುಖ ವಿದ್ಯಾಕೇಂದ್ರವೂ ಆಗಿದೆ. ಚಿಕ್ಕನಹಳ್ಳಿಯ ದಕ್ಷಿಣದಿಂದ ಬಳಸಿಕೊಂಡು, ಕಳ್ಳಂಬೆಳ್ಳದ ಮೂಲಕ ಬಸಿರಿ– ಹುಂಜನಹಳ್ಳ ಹರಿಯುತ್ತಿದ್ದು, ಅವು ಕಡವೀಗೆರೆ, ಯಲಿಯೂರು ಮೂಲಕ ಸಿರಾ ಕೆರೆ ಸೇರುತ್ತಿದ್ದವು. ಈಗ ಈ ನಿಸರ್ಗ ಹಳ್ಳಕ್ಕೆ ಕಳ್ಳಂಬೆಳ್ಳದ ಕೆರೆ ನಿರ್ಮಾಣವಾಗಿದೆ. ಇದೇ ಹಳ್ಳದ ಮೂಲಕ ಹೇಮಾವತಿ ಜಲಾಶಯದಿಂದ ಕುಣಿಗಲ್ ಸಿರಾ ಕೆರೆಗೆ ನೀರು ಹರಿಸಲಾಗುತ್ತಿದೆ. ಪಶ್ಚಿಮಕ್ಕೆ ಅಂದರೆ ಈಗ ಕೃಷಿ ಸಂಶೋಧನಾ ಕೇಂದ್ರದ ಬದಿಗೆ ಗೌಡನಕಟ್ಟೆ ಎಂಬ ಗೋಕಟ್ಟೆ ಇದೆ.

ಮರಳು ಮಿಶ್ರಿತ ಕಂದು, ಕರಿಯ ಮಣ್ಣನ್ನು ಹೊಂದಿರುವ ಈ ಗ್ರಾಮದ ಪರಿಸರ ತೋಟಗಾರಿಕೆ, ಹಳ್ಳ, ಗದ್ದೆ ಬಯಲು, ಕುರುಚಲು ಗಿಡಗಳಿಂದ ಕೂಡಿದೆ. ಆದುದರಿಂದ ಈ ಗ್ರಾಮದ ಪರಿಸರದಲ್ಲಿ ನರಿ, ಮೊಲ, ಉಡ, ಬಾರುಬೆಕ್ಕು, ಮುಂಗುಸಿ ಮೊದಲಾದ ಕಾಡು ಪ್ರಾಣಿಗಳು, ಪಕ್ಷಿಗಳಾದ ಗಿಳಿ, ಗೊರವಂಕ, ನವಿಲು, ಕೋಗಿಲೆ, ಗುಬ್ಬಚ್ಚಿ, ಗೂಬೆ, ಹದ್ದು, ಗುರುಡ, ಕೌಜುಲಗ, ಮಂದಾರ ಮೊದಲಾದವು ಪಕ್ಷಿಗಳು ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಮೇಕೆ, ಕುರಿ, ನಾಯಿ, ಸಾಕು ಪ್ರಾಣಿಗಳಾದರೆ ಕೋಳಿ ಸಾಕು ಪಕ್ಷಿಯಾಗಿದೆ. ಒಂದು ಹೊಳೆ ಈ ಗ್ರಾಮದ ಬದಿಗೆ ಹರಿಯುತ್ತಿದ್ದರೂ, ನೀರಿಗೆ ತೊಂದರೆಯಿದೆ. ಈ ಪರಿಸರದಲ್ಲಿ ಕೃಷಿ ಆಧಾರಿತ ೫೮ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯಿತಿ ಮನೆಯಿಂದ ಕಿರು ನೀರು ಸರಬರಾಜು

ಯೋಜನೆ ಅಡಿಯಲ್ಲಿ ೨ ಕಿರು ಟ್ಯಾಂಕ್‌ಗಳ ಮೂಲಕ ನೀರನ್ನು ಒದಗಿಸಲಾಗುತ್ತಿದೆ. ೨ ಕೈ ಪಂಪುಗಳಿವೆ.

ಸಾದರು ಇಲ್ಲಿನ ಸಾಮಾಜಿಕ ರಚನೆಯಲ್ಲಿ ದೊಡ್ಡ ಸಮುದಾಯವಾಗಿದ್ದು, ಕುಂಚಿಟಿಗ, ತಿಗಳ, ಆದಿಕರ್ನಾಟಕ, ವೀರಶೈವ, ದಾಸರು, ಕ್ಷೌರಿಕರು, ವೈಶ್ಯರು, ಕುಂಬಾರರು, ಲಂಬಾಣಿ ಕಿರು ಸಮುದಾಯಗಳಾಗಿವೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚು, ಹಾಗೂ ಶೀಟಿನ ಸ್ವರೂಪದ ೨೧೮ ಮನೆಗಳಿದ್ದು, ೬೮ ಶೌಚಾಲಯಗಳು ಹೊಂದಿವೆ. ೧೬೧೫ ಜನಸಂಖ್ಯೆ ಹೊಂದಿರುವ ಇಲ್ಲಿನ ೭೬ ಮನೆಗಳು, ವಸತಿ ಯೋಜನೆಯ, ಜನತಾ, ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಾಗಿದ್ದಾರೆ.

ಈ ಊರಿನ ಮುಖ್ಯ ಆಹಾರ ರಾಗಿ ಮುದ್ದೆ. ಉಪ ಆಹಾರವಾಗಿ ಅನ್ನ, ರೊಟ್ಟಿ ಮೊದಲಾದ ಆಹಾರವನ್ನು ಬಳಸುತ್ತಾರೆ. ವಿಶೇಷ ಆಹಾರವಾಗಿ ಹಬ್ಬ-ವಿಶೇಷ ಸಂದರ್ಭದಲ್ಲಿ ಬಾಡೂಟದ, ಹೋಳಿಗೆ, ಪಾಯಸದ ವ್ಯವಸ್ಥೆ ಇರುತ್ತದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಮಿನಿಟೆಂಪೋ, ಆಟೋ ಹಾಗೂ ದ್ವಿಚಕ್ರವಾಹನಗಳಿವೆ.

ಶೇಂಗಾ, ಭತ್ತ ಮುಖ್ಯ ಬೆಳೆಗಳು. ರಾಗಿ, ತೊಗರಿ, ಅಲಸಂದಿ, ಆಹಾರ ಬೆಳೆಗಳಾಗಿ ಬೆಳೆಯುತ್ತಾರೆ. ತೆಂಗು, ಅಡಿಕೆ, ವೀಳ್ಯದೆಲೆ, ತರಕಾರಿ, ಹೂವು ಬೆಳೆಗೆ ಹೆಸರಾಗಿರುವ ಈ ಗ್ರಾಮ ಒಂದು ಪುಷ್ಪ ಹರಾಜು ಮಾರುಕಟ್ಟೆಯನ್ನು ಹೊಂದಿದೆ. ಹಾಲಿನ ಸಹಕಾರ ಸಂಘವಿದ್ದು, ನಿತ್ಯ ೩೦೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ವೀಳ್ಯದೆಲೆ ಪ್ರಮುಖ ವಾಣಿಜ್ಯ ಸರಕುಗಳು. ಹನ್ನೆರಡು ಜನ ವಿವಿಧ ಇಲಾಖೆಯ ಸರ್ಕಾರಿ ನೌಕರರಿದ್ದು, ವಕೀಲರಾದ ಉಗ್ರೇಗೌಡ, ವಕೀಲರಾದ, ಅಪ್ಪಾಜಪ್ಪ, ನಿವೃತ್ತ ಡೆಪ್ಯೂಟಿ ಕಂಟ್ರೋಲರ್ ಸಿ.ಎನ್. ಶ್ರೀಧರ್ ಪ್ರಾತಸ್ಮರಣೀಯ ನೌಕರ ಅಧಿಕಾರಿಗಳು. ಗೃಹ ಕೈಗಾರಿಕೆ ಬೀಡಿ ಸುತ್ತುವುದು, ಹೂ ಕಟ್ಟುವುದು, ಹೊಲಿಗೆ ಕೆಲಸ, ಊಟದ ಎಲೆ ಕಟ್ಟುವುದು, ಮೊದಲಾದ ಗೃಹ ಕೈಗಾರಿಕೆ ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಯ ಕೇಂದ್ರವೂ ಆಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಈ ಗ್ರಾಮದಲ್ಲಿ ೩ ಜನ ಪಂಚಾಯಿತಿ ಸದಸ್ಯರು ಇದ್ದಾರೆ. ೧ ತಾಲ್ಲೂಕು ಪಂಚಾಯಿತಿ ಸದಸ್ಯರೂ ಪ್ರತಿನಿಧಿಗಳಾಗಿದ್ದಾರೆ. ಗ್ರಾಮದ ಬೆಳವಣಿಗೆಗೆ ಪ್ರೇರಕರಾದ ಉಗ್ರೇಗೌಡರ ಉದಾರ ನೆರವು, ಶೈಕ್ಷಣಿಕವಾಗಿ ಕಾಳಜಿಯಿಂದ, ತುಮಕೂರು ಜಿಲ್ಲೆಯಲ್ಲಿ ಮೊದಲಿಗೆ ಜಿಲ್ಲಾ ಹಂತದ ಕೃಷಿ ತರಬೇತಿ ರೈತ ಕೇಂದ್ರ, ಬೀಜ ಸಂಶೋಧನಾಲಾಯ, ಟಿ.ಸಿ.ಹೆಚ್. ಕಾಲೇಜು, ಸರ್ಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಪ್ರೌಢಶಾಲೆ ಆರಂಭವಾಗುವುದರ ಮೂಲಕ ತಮ್ಮ ೫೦ ಎಕರೆ ಭೂಮಿಯನ್ನು ಶೈಕ್ಷಣಿಕ ಕಾರ್ಯಕ್ಕೆ ದಾನ ನೀಡಿದವರು. ಇವರೆ ಹೆಸರಲ್ಲಿ ಒಂದು ಸ್ಮಾರಕವೂ ನಿರ್ಮಾಣವಾಗಿದೆ. ಸರ್ಕಾರಿ ಪ್ರಾಥಮಿಕ ಹಿರಿಯ ಪಾಠಶಾಲೆ, ಪ್ರೌಢಶಾಲೆ, ಶಿಕ್ಷಕರ ತರಬೇತಿ ಕಾಲೇಜು, ಸರ್ಕಾರಿ ಕಿರಿಯ ಕಾಲೇಜು, ಶಾಂತಲಾ ಖಾಸಗಿ ಪ್ರೌಢಶಾಲೆ, ಕಾನ್ವೆಂಟ್ ಸ್ಕೂಲ್ ಹೀಗೆ ಒಂದು ತಾಲ್ಲೂಕು ಮಟ್ಟದಲ್ಲಿ ಇರಬಹುದಾದ ಶೈಕ್ಷಣಿಕ ಸೌಲಭ್ಯ ಈ ಪುಟ್ಟ ಹಳ್ಳಿಯಲ್ಲಿದೆ. ವಿದ್ಯಾರ್ಥಿಗಳಿಗೆ ಉಚಿತ ವಸತಿ,ಊಟ ನಿಲಯ, ಪಂಚಾಯಿತಿ ಕಛೇರಿ, ಗ್ರಾಮ ಲೆಕ್ಕಾಧಿಕಾರಿ ಕಛೇರಿ, ಮೊದಲಾದ ಸರ್ಕಾರಿ ಸೌಲಭ್ಯಗಳಿವೆ. ನಾಲ್ಕು ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿದ್ದು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು, ಮಹಿಳೆಯರ ಸ್ವಾವಲಂಬನೆಗೆ ಪರಸ್ಪರ ಸಹಕಾರಿಯಾಗಿದೆ. ಸರ್ಕಾರಿ ಶಾಲೆಯಲ್ಲಿ ಶೌಚಾಲಯ, ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಸೇರಿದಂತೆ ಸಮವಸ್ತ್ರ, ಪಠ್ಯಪುಸ್ತಕ ಸೌಲಭ್ಯಗಳಿವೆ. ಪ್ರಾಥಮಿಕ ಆರೋಗ್ಯ ಕೇಂದ್ರವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನ, ಕಲಾವಿದರ ಮಾಸಾಶನದ ಫಲಾನುಭವಿಗಳಿದ್ದಾರೆ. ಒಟ್ಟು ೮ ಅಂಗಡಿಗಳು, ೨೮ ಗೂಡಂಗಡಿಗಳಿವೆ. ಸ್ಮಾರಕವಾಗಿ ಡಿ. ಉಗ್ರೇಗೌಡರ ಕಂಚಿನ ಪುತ್ಥಳಿ ಇದೆ. ಧಾರ್ಮಿಕವಾಗಿ ಆಂಜನೇಯ ಮುಜರಾಯಿ ದೇವಾಲಯವಾಗಿದೆ. ಈಶ್ವರ, ಜವಲಿಂಗೇಶ್ವರ, ಓಬಳ ನರಸಿಂಹ, ಲಕ್ಷ್ಮೀದೇವರ, ಮೈಲಾರಲಿಂಗ, ನವಗ್ರಹ ದೇವರ ಗುಡಿಗಳಿವೆ. ಮೂಲ ದೇವರು ಮಾರಮ್ಮ, ಗಣೇಶ ದೇವರ ಗುಡಿಗಳಿವೆ. ಮಾರಮ್ಮನ ಊರಹಬ್ಬವದ್ದು, ಆರತಿ, ಬಾನ, ಬ್ಯಾಟೆ, ಏರ್ಪಡುತ್ತದೆ. ಆಂಜನೇಯನ ಉತ್ಸವ, ಕಳ್ಳಂಬೆಳ್ಳ ಕೆರೆಗೆ ಪುಣ್ಯಸ್ಥಾನಕ್ಕೆ ಹೋಗುವುದು, ಹರಿಸೇವೆ ಮೊದಲಾದ ಕಾರ್ಯಕ್ರಮಗಳು ನಡೆಯುತ್ತವೆ.

ಯುಗಾದಿ, ಶ್ರಾವಣ ಶನಿವಾರ, ಗೌರಿಗಣೇಶ, ಮಹಾನವಮಿ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಜವಲಿಂಗೇಶ್ವರ ದೇವಸ್ಥಾನವು ಅತಿ ಪುರಾತನವಾಗಿದ್ದು, ದೇವಸ್ಥಾನದ ಗರ್ಭಗುಡಿಯ ಒಳಗೆ ಗವಿಯು ಅದರೊಳಗೆ ಕಲ್ಯಾಣಿಯು ಇದೆ ಎಂದು ದೇವಸ್ಥಾನದ ಪುಸ್ತಕದ ರಚನೆಯಲ್ಲಿ ತೋರಲ್ಪಟ್ಟಿದೆ. ಹಿಂದಿನ ಕಾಲದಲ್ಲಿ ವೈಭವದ ಜಾತ್ರೆಯನ್ನು ನಡೆಸುತ್ತಿದ್ದು ದೇವಸ್ಥಾನದ

ಪೂಜಾರಿಯು ಒಂದು ತಿಂಗಳು ಏಲಕ್ಕಿ ತಿಂದು ಉಪವಾಸವಿದ್ದು ಗರ್ಭಗುಡಿಯನ್ನು ಪ್ರವೇಶಿಸಿ ಅಲ್ಲಿಂದ ಬೆಳ್ಳಿಯ ಹೊಂಬಾಳೆ ದೀಪ ಮಾಡುವುದರ ಮೂಲಕ ಜಾತ್ರೆಯನ್ನು ಆಚರಿಸಲಾಗಿದೆ. ಗರ್ಭಗುಡಿಯೊಳಗೆ ಶಿವ ಪಾರ್ವತಿಯರು ನೆಲೆಸಿರುವುದಾಗಿ ನಂಬಿಕೆ ಇದೆ. ಪೂಜಾರಿಯವರು ಗರ್ಭಗುಡಿಯಿಂದ ಹೊರಬಂದಾಗ ಅವರ ಮೈಮೇಲೆಲ್ಲಾ ಹಾವುಗಳು ಸುತ್ತಿಕೊಂಡಿದ್ದು ಅವು ಅವರಿಗೆ ಏನೂ ಮಾಡದೆ ಮತ್ತೆ ಒಳಗೆ ಹೋಗಿದ್ದು ವಿಸ್ಮಯವಾಗಿತ್ತೆಂದು ಊರಿನವರು ಹೇಳುತ್ತಾರೆ. ಈಗ ಅವರ ಮಗನಿಗೆ ಪಟ್ಟವನ್ನು ಕಟ್ಟಿದ್ದು, ಊರಿನ ಒಳಿತಿಗಾಗಿ ಮುಂದಿನ ದಿನಗಳಲ್ಲಿ ಪೂಜಾರಿಗಳ ಮಗನು ಈ ಕಾರ್ಯವನ್ನು ಮುಂದುವರಿಸುತ್ತಾ ಹೋಗುತ್ತಿದ್ದಾರೆ.

ಜನಪದ ವೀರಗಾಸೆ ಕಲಾವಿದರಾಗಿ ಚಿಕ್ಕನಹಳ್ಳಿ ಈರಣ್ಣ, ಲೇಖಕರಾಗಿ ತಾರೇಗೌಡ, ರಂಗನಿರ್ದೇಶಕ ನಾರಾಯಣಪ್ಪ, ಚಿಕ್ಕಣ್ಣ, ಇವರು ಸ್ಥಳೀಯವಾಗಿ ಹೆಸರು ಮಾಡಿರುವ ಸಾಂಸ್ಕೃತಿಕ ಸಂಪನ್ನರು. ತಾರೇಗೌಡರು ಪ್ರಗತಿಪರ ರೈತರೂ ಆಗಿದ್ದು, ಕೃಷಿಕರ ಸಂಘದ ಅಧ್ಯಕ್ಷರೂ ಆಗಿದ್ದರು. ಗ್ರಾಮದ ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

## ಚಿಕ್ಕನಹಳ್ಳಿ ಬೋವಿ ಕಾಲೋನಿ

ಬೋವಿ ಕಾಲೋನಿ ಚಿಕ್ಕನಹಳ್ಳಿಗೆ ಸೇರಿದ ಮಜರೆ ಗ್ರಾಮ. ಚಿಕ್ಕನ ಹಳ್ಳಿಗೆ ಹೊಂದಿಕೊಂಡಂತಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೯ ಕಿ.ಮೀ. ದೂರದಲ್ಲಿದೆ. ಇದರ ಭೌಗೋಳಿಕ ವ್ಯಾಪ್ತಿ ೮೭.೦೮ ಹೆಕ್ಟೇರ್ ಇದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ಈ ಪರಿಸರದಲ್ಲಿ ನರಿ, ತೋಳ, ಮೊಲ, ಮುಂಗುಸಿ ಕಂಡು ಬರುತ್ತವೆ. ರೈತಾಪಿ ಬದುಕಿನ ಜನ ಸಾಕು ಪ್ರಾಣಿಗಳಾದ ಹಸು, ಮೇಕೆ, ದನ, ಕುರಿ, ಎಮ್ಮೆ ಸಾಕುತ್ತಿದ್ದಾರೆ. ಪಕ್ಷಿಗಳಾದ ಗೊರವಂಕ, ಕಾಗೆ, ಹದ್ದು, ಬೆಳವ, ಕೋಗಿಲೆ, ಗಿಳಿ ಪಕ್ಷಿಗಳು ಕಂಡು ಬರುತ್ತದೆ. ಸಾಕುಪಕ್ಷಿಯಾಗಿ ಕೋಳಿಯನ್ನು ಸಾಕಲಾಗುತ್ತಿದೆ.

ವಾರ್ಷಿಕ ಮಳೆಯ ಸರಾಸರಿ ೪೨೦.೩ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ಉಷ್ಣಾಂಶ ೩೯೦ ಸೆಂ. ಇದ್ದು, ಚಳಿ ೧೨೦ ಸೆಂ. ಸಹಜವಾಗಿರುತ್ತದೆ. ೨ ಕಿರು ಟ್ಯಾಂಕುಗಳು ಇದ್ದು, ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಲ್ಲಿ ನೀರನ್ನು ಒದಗಿಸಲಾಗುತ್ತದೆ. ಗ್ರಾಮದಲ್ಲಿ ೧ ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಬೋವಿ ಜನಾಂಗ ವಾಸಿಸುತ್ತಿರುವ ಈ ಗ್ರಾಮದ ಭಾಷೆ ಕನ್ನಡವಾಗಿದೆ. ವಿವಿಧ ಪ್ರಕಾರಗಳ ೨೫ ಮನೆಗಳಿದ್ದು , ಅವು ಕಾಂಕ್ರೀಟ್, ಶೀಟಿನ, ಹೆಂಚಿನ ಸ್ವರೂಪದ ಮನೆಗಳಿದ್ದು, ೮೨ ಜನಸಂಖ್ಯೆ ಹೊಂದಿರುವ ಇಲ್ಲಿ ೧೨ ಮನೆಯಲ್ಲಿ ಶೌಚಾಲಯ ಸೌಲಭ್ಯ ಹೊಂದಿದೆ.

ರಾಗಿ ಮುದ್ದೆ ಮುಖ್ಯ ಆಹಾರವಾದರೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಭತ್ತ, ಅಲಸಂದಿ, ತೊಗರಿ ಆಹಾರ ಬೆಳೆಗಳು. ಗ್ರಾಮದಲ್ಲಿ ಶೇಂಗಾ, ಹುಣಸೆಹಣ್ಣು ಮುಖ್ಯ ವ್ಯಾಪಾರವಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯಿತಿ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರುತ್ತದೆ. ಗ್ರಾಮದಲ್ಲಿ ೧ ಸ್ತ್ರೀ ಶಕ್ತಿ ಸ್ವಸಹಾಯ ಸಂಘವಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು ೧೪ ಮಕ್ಕಳಿದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಕೆಯಾಗುತ್ತಿದೆ. ಈ ಗ್ರಾಮದ ಸಾಕ್ಷರತೆ ಶೇ. ೬೭.೨ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು. ೧ ಪೆಟ್ಟಿಗೆ ಅಂಗಡಿ ಇದೆ. ಗ್ರಾಮದಲ್ಲಿ ಒಂದು ಭೂತಪ್ಪನ ಪೌಳಿ ಇದ್ದು, ವಾರ್ಷಿಕವಾಗಿ ಕಣಿವೆ ಮಾರಕ್ಕನ ಊರಹಬ್ಬ ಮಾಡಿ, ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯವಿದೆ.

ಗ್ರಾಮದಲ್ಲಿ ಗೌರಿಗಣೇಶ, ಯುಗಾದಿ, ದೀಪಾವಳಿ, ಮಹಾನವಮಿ , ಶಿವರಾತ್ರಿ, ಹಬ್ಬಗಳನ್ನು ತುಂಬಾ ವಿಜೃಂಭಣೆಯಿಂದ ಆಚರಿಸುತ್ತಾರೆ. ಚಿಕ್ಕನಹಳ್ಳಿ–ತುಮಕೂರು–ಚಿತ್ರದುರ್ಗ ರಸ್ತೆ ಸಂಪರ್ಕ, ಸಾರಿಗೆ ಸಂಪರ್ಕವಿದೆ.

## ಚಿನ್ನೇನಹಳ್ಳಿ

ಚಿನ್ನೇನಹಳ್ಳಿ ಎಂದು ಜನರು ಕರೆಯುವ ಈ ಗ್ರಾಮ ಸರ್ಕಾರಿ ದಾಖಲೆಯಲ್ಲಿ ಚೆನ್ನೇನಹಳ್ಳಿ ಎಂದು ದಾಖಲಾಗಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೪ ಕಿ.ಮೀ. ದೂರದಲ್ಲಿದೆ. ಸಿರಾ–ತುಮಕೂರು ರ್‍ಾಪ್ರಿಯ ಹೆದ್ದಾರಿಯ ನಡುವಿನ ಬ್ರಹ್ಮಸಂದ್ರ ಗೇಟಿನಿಂದ ಎಡಕ್ಕೆ ಬಡವನಹಳ್ಳಿ

ಮಧುಗಿರಿ ರಸ್ತೆಯಲಲಿ ೩ ಕಿ.ಮೀ. ದೂರದಲ್ಲಿ ಚಿನ್ನೇನಹಳ್ಳಿ ಇದೆ. ಜಿವನಹಳ್ಳಿ ಇದರ ಬದಿಗಿರುವ ಮತ್ತೊಂದು ಗ್ರಾಮವಾಗಿದ್ದು ಚಿನ್ನೇನಹಳ್ಳಿಗೆ ನೆಲದಿಮ್ಮನಹಳ್ಳಿ ಉಪಗ್ರಾಮವಾಗಿದೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೬೪.೮೭ ಹೆಕ್ಟೇರ್ ಹೊಂದಿದ್ದು, ಪೂರ್ವ-ಉತ್ತರಕ್ಕೆ ಗುಡ್ಡವನ್ನು, ಪಶ್ಚಿಮಕ್ಕೆ ಬಯಲು ಸೀಮೆಯನ್ನು ಹೊಂದಿದೆ. ಕೆಂಪು ಮಿಶ್ರಿತ ಮರಳು ಮಣ್ಣಿನಿಂದ ಕೂಡಿದ್ದು, ಶೇಂಗಾ ಬೆಳೆಗೆ ಉತ್ಕೃಷ್ಟವಾಗಿದೆ. ಆರಂಭದಲ್ಲಿ ಈ ಗ್ರಾಮದಲ್ಲಿ ಚಿನ್ನದ ಒಡವೆ ತಯಾರಿಸುವ ಅಕ್ಕಸಾಲಿ ವೃತ್ತಿಯ ಜನವಿದ್ದು, ಚಿನ್ನ ತಯಾರಿಸುವ ಮೂಲದಿಂದ ಗ್ರಾಮಕ್ಕೆ ಚಿನ್ನೇನಹಳ್ಳಿ ಎಂದು ಹೆಸರು ಬಂದಿದೆ.

ಈ ಪರಿಸರದಲ್ಲಿ ನರಿ, ತೋಳ, ಮೊಲ, ಕರಡಿ, ಜಿಂಕೆ, ಉಡ, ಬೆಕ್ಕು, ಇಲಿ, ಹೆಗ್ಗಣ ವ್ಯಾಪಕವಾಗಿ ವಾಸಿಸುತ್ತವೆ. ಗ್ರಾಮದಲ್ಲಿ ರೈತಾಪಿ ಬದುಕಿನ ಜನ ಹಳ್ಳಿಕಾರ್ ತಳಿ ಎತ್ತು, ನಾಟಿ ಹಾಗೂ ಸೀಮೆಹಸುಗಳನ್ನು ಪಶುಪಾಲನೆ ಹಾಗೂ ಹೈನುಗಾರಿಕೆಗೆ ಮೇಕೆ ಸಾಕಲಾಗಿದೆ. ಕೋಳಿಗಳಾದ ಗಿರಿರಾಜ, ನಾಟಿಹುಂಜ, ಹ್ಯಾಟೆಗಳಿವೆ. ಪಕ್ಷಿಗಳಾದ ಗೊರವಂಕ, ಕಾಗೆ, ಹದ್ದು, ಬೆಳವ, ಗೂಬೆ, ಕೊಕ್ಕರೆ, ಕೌಜುಗ, ಕೋಗಿಲೆ, ಗಿಳಿ ಪಕ್ಷಿಗಳು ಕಂಡು ಬರುತ್ತದೆ.

ಇಲ್ಲಿನ ಬೇಸಿಗೆ-ಮಳೆಗಾಲದಲ್ಲಿ ಹವಾಮಾನ ಸಹಜವಾಗಿರುತ್ತದೆ. ವಾರ್ಷಿಕ ಮಳೆಯ ಸರಾಸರಿ ೬೪೦ ಮಿ.ಮೀ. ಮಳೆ ಬೀಳುತ್ತಿದ್ದು, ಈ ಮಳೆ ಪ್ರಮಾಣ ರೈತಾಪಿ ಬದುಕಿಗೆ ಸಾಲದು. ಹಾಗಾಗಿ ಈ ಪರಿಸರದಲ್ಲಿ ೪೭ ಕೊಳವೆ ಬಾವಿಗಳಿದ್ದು ಕೃಷಿ ಉಪನೀರಾವರಿಯಾಗಿ ಮಾಡಿಕೊಂಡಿದ್ದಾರೆ. ಬಿಸಿಲಿನ ಉಷ್ಣಾಂಶ ೩೯ಂ ಸೆಂ. ಇದ್ದು, ಚಳಿ ೧೨ಂ ಸೆಂ. ಸಹಜವಾಗಿರುತ್ತದೆ. ಗ್ರಾಮದಲ್ಲಿ ೮ ಕಿರು ಟ್ಯಾಂಕುಗಳು ಇದ್ದು, ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಲ್ಲಿ ನೀರನ್ನು ಒದಗಿಸಲಾಗುತ್ತದೆ. ಗ್ರಾಮದಲ್ಲಿ ೨ ಕೈ ಪಂಪುಗಳು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ಮಡಿವಾಳ ಜನಾಂಗ ಕಿರು ಸಮುದಾಯವಾಗಿದೆ. ಈ ಗ್ರಾಮದ ಭಾಷೆ ಕನ್ನಡವಾಗಿದೆ.

ವಿವಿಧ ಪ್ರಕಾರಗಳ ೧೦೭ ಮನೆಗಳಿದ್ದು , ಅವು ಕಾಂಕ್ರೀಟ್, ಶೀಟಿನ, ಹೆಂಚಿನ ಸ್ವರೂಪದ ಮನೆಗಳಿದ್ದು, ಒಟ್ಟು ೪೧೧ ಜನಸಂಖ್ಯೆ ಹೊಂದಿರುವ ಇಲ್ಲಿನ ಗೃಹ ನಿರ್ಮಾಣದಲ್ಲಿ ಆಶ್ರಯ, ಇಂದಿರಾ ಆವಾಸ್, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಇಲ್ಲಿ ೫೨ ಮನೆಯಲ್ಲಿ ಶೌಚಾಲಯ ಸೌಲಭ್ಯ ಹೊಂದಿದೆ.

ರಾಗಿ ಮುದ್ದೆ ಮುಖ್ಯ ಆಹಾರವಾದರೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನ ಎತ್ತಿನ ಗಾಡಿಯ ಜೊತೆಗೆ ಆಧುನಿಕ ವಾಹನಗಳು ಟ್ರ್ಯಾಕ್ಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಭತ್ತ, ಅಲಸಂದಿ, ತೊಗರಿ ಆಹಾರ ಬೆಳೆಗಳು. ತೆಂಗು, ಅಡಿಕೆ, ರೇಷ್ಮೆ, ಸೇವಂತಿಗೆ ತೋಟಗಾರಿಕೆಯ ಬೆಳೆಗಳು. ಒಂದು ನಂದಿನಿ ಹಾಲಿನ ಸಹಕಾರ ಸಂಘವಿದ್ದು ಸರಾಸರಿ ೨೦೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಗ್ರಾಮದಲ್ಲಿ ಹುಣಸೆಹಣ್ಣು, ಹೊಂಗೆ ಬೀಜ, ತೆಂಗು, ಅಡಿಕೆ ವ್ಯಾಪಾರಿ ಸರಕಾಗಿವೆ. ಶಿಕ್ಷಕರು, ಪೋಲೀಸ್, ಕಂದಾಯ, ಸಾರಿಗೆ ಇಲಾಖೆಯ ೧೦ ಜನ ಸರ್ಕಾರಿ ನೌಕರರಿದ್ದಾರೆ. ವಕೀಲರಾದ ಜಗದೀಶ್ ಸೇರಿ ಇಬ್ಬರು ವಕೀಲರಿದ್ದಾರೆ. ಗ್ರಾಮದಲ್ಲಿ ಬೀಡಿ ಸುತ್ತುವುದು, ಎಲೆ ಕಟ್ಟುವುದು, ಹೂ ಕಟ್ಟುವುದು ಸೇರಿದಂತೆ ಮಹಿಳೆಯರ ಗೃಹ ಕೈಗಾರಿಗೆಗಳಿವೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ತರೂರು ತಾಲ್ಲೂಕು ಪಂಚಾಯಿತಿ ಹಾಗೂ ಚಿನ್ನೇನಹಳ್ಳಿ ಪಂಚಾಯಿತ ಕೇಂದ್ರವೂ ಆಗಿದೆ. ಗ್ರಾಮ ಪಂಚಾಯಿತಿ ಕಛೇರಿ, ಗ್ರಾಮ ಲೆಕ್ಕಿಗರ ಕಛೇರಿ ಇದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರುತ್ತದೆ. ಸದ್ಯ ಈ ಗ್ರಾಮದ ಒಬ್ಬರು ಪಂಚಾಯಿತಿ ಸದಸ್ಯರಿದ್ದಾರೆ. ಇದು ಸ್ವಾತಂತ್ರ್ಯ ಹೋರಾಟಗಾರರಾದ ಸಿ.ಜೆ. ಮುಕ್ಕಣ್ಣಪ್ಪನವರ ಗ್ರಾಮವಾಗಿರುವುದು ವಿಶೇಷ. ಇವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಗುಬ್ಬಿ ಹಾಗೂ ಸಿರಾ ವಿಧಾನಸಭೆ, ಚುನಾವಣೆಯಲ್ಲಿ ಆಯ್ಕೆಯಾಗಿದ್ದು, ಶಾಸಕರಾಗಿದ್ದಾರೆ. ಸದ್ಯ ಇದೇ ಪರಂಪರೆಯ ಸಿ.ಆರ್. ಉಮೇಶ್, ನಾದೂರು ಜಿಲ್ಲಾ ಪಂಚಾಯಿತಿ ಕ್ಷೇತ್ರದಿಂದ ಸದಸ್ಯರಾಗಿ, ದೊಡ್ಡ ಕಾಂಟ್ರ್ಯಾಕ್ಟರ್ ಆಗಿರುವುದು ಈ ಗ್ರಾಮದ ವಿಶೇಷವಾಗಿದೆ.

ಗ್ರಾಮದಲ್ಲಿ ೩ ಸ್ತ್ರೀ ಶಕ್ತಿ ಸ್ವಸಹಾಯ ಸಂಘವಿದೆ. ೨ ಧರ್ಮಸ್ಥಳ ಗ್ರಾಮಾಭಿವೃದ್ಧಿಯ ಸ್ವಸಹಾಯ ಸಹಕಾರ ಸಂಘವಿದ್ದು, ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು ೧೦೨ ಮಕ್ಕಳಿದ್ದಾರೆ. ಸರ್ಕಾರಿ ಹಿರಿಯ ಪಾಠಶಾಲೆ ಇದ್ದು, ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ಸೌಲಭ್ಯಗಳಿವೆ. ಈ ಗ್ರಾಮದ ಸಾಕ್ಷರತೆ ಶೇ. ೬೫ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ರಾಷ್ಟ್ರಬಂಧು ಯುವಕ ಸಂಘವಿದೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು. ೬ ಪೆಟ್ಟಿಗೆ ಅಂಗಡಿಗಳು ಇದೆ. ಗ್ರಾಮದಲ್ಲಿ ಅರಳಿಕಟ್ಟೆ, ನಾಗರಕಲ್ಲುಗಳಿವೆ. ಗ್ರಾಮಕ್ಕೆ ಪ್ರವೇಶ ದ್ವಾರವಿದೆ.

ಗ್ರಾಮದಲ್ಲಿ ಗಣೇಶ ಇಲ್ಲಿನ ಮುಖ್ಯ ದೈವ. ಗ್ರಾಮಸ್ಥರು ಕನ್ನಾಲಮ್ಮ, ತರೂರು ದುರ್ಗಮ್ಮ ದೇವರಿಗೆ ನಡೆದುಕೊಳ್ಳುತ್ತಾರೆ. ಶಿವರಾತ್ರಿ, ದೀಪಾವಳಿ, ಮಹಾನವಮಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಚಿಕ್ಕದಾಸರಹಳ್ಳಿ

ಚಿಕ್ಕದಾಸರಹಳ್ಳಿ, ಸಿಗದಾಸರಹಳ್ಳಿ ಎಂಬ ಹೆಸರುಗಳಿಂದ ಕರೆಯಲ್ಪಡುವ ಈ ಗ್ರಾಮ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೧ ಕಿ.ಮೀ. ದೂರದಲ್ಲಿದೆ. ಸಿರಾ–ಕಡವಿಗೆರೆ ತಿರುವಿನಿಂದ ಮೈಸೂರು ರಸ್ತೆಯಲ್ಲಿ–ಚಿಕ್ಕನಹಳ್ಳಿ ಕೃಷಿ ಫಾರಂ ನಿಂದ ೧ ಕಿ.ಮೀ. ದೂರದಲ್ಲಿ ಚಿಕ್ಕದಾಸರಹಳ್ಳಿ ಇದೆ. ಇದು ಚಿಕ್ಕನಹಳ್ಳಿಯ ಉಪಗ್ರಾಮವಾಗಿದ್ದು, ಇದು ಭೌಗೋಳಿಕ ವಿಸ್ತೀರ್ಣ ೧೭೩.೦೨ ಹೆಕ್ಟೇರ್ ಇದೆ. ಹಿಂದೆ ಇದೇ ಗ್ರಾಮದಲ್ಲಿ ಪೊನ್ನಹಳ್ಳಿ ಎಂದು ಕರೆಯುವ ಗ್ರಾಮವಿದ್ದು, ನಂತರ ಊರಿನ ಮೇಲ್ಭಾಗಕ್ಕೆ ಹೊಸ ಮನೆಗಳು ಬೆಳೆದು, ಚಿಕ್ಕದಾಸರಹಳ್ಳಿಯಾಗಿ ರೂಪಾಂತರವಾಗಿದೆ. ಹಳೆಯ ತಲೆನವರು ಇಂದಿಗೂ ಪೊನ್ನಹಳ್ಳಿ ಎಂದೇ ಕರೆಯುತ್ತಾರೆ ಮಾತ್ರವಲ್ಲ ಈ ಗ್ರಾಮದ ಹಿರಿಯ ಯಕ್ಷಗಾನ ಕಲಾವಿದ ರಂಗಣ್ಣನವರನ್ನು ಪೊನ್ನಹಳ್ಳಿ ರಂಗಣ್ಣ ಎಂದೇ ಗುರುತಿಸುತ್ತಾರೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ, ಮೇಲ್ಭಾಗದಲ್ಲಿ ಕಾಡುಗೊಲ್ಲರ ಹಟ್ಟಿಯಿದೆ. ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿರುವ ಇಲ್ಲಿನ ಭೂಮಿ, ಗ್ರಾಮದ ಪೂರ್ವಕ್ಕೆ ಕಳ್ಳಂಬೆಳ್ಳ ಕೆರೆಯ ನೀರಿನ ಹರಿವಿನಿಂದಾಗಿ ಜೇಡಿ ಮಣ್ಣಿನ ಸ್ವರೂಪದಲ್ಲಿದ್ದರೆ– ಪಶ್ಚಿಮಕ್ಕೆ ಬೆದ್ದಲು ಜಮೀನು ಕೆಂಪು ಮಣ್ಣಿನಿಂದ ಕೂಡಿದೆ. ಈ ಪರಿಸರದಲ್ಲಿ ತೋಟಗಾರಿಕೆ ಚಿಕ್ಕ ಚಿಕ್ಕ ಗಿಡ, ಪೊದೆ, ಮರಗಳಿಂದ ಕೂಡಿದ್ದು, ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಮುಂಗುಸಿ, ಉಡ, ಬಾರುಬೆಕ್ಕು, ಕಾಡುಹಂದಿ ವ್ಯಾಪಕವಾಗಿ ವಾಸಿಸುತ್ತವೆ. ಗ್ರಾಮದಲ್ಲಿ ರೈತಾಪಿ ಬದುಕಿನ ಜನ ಹಳ್ಳಿಕಾರ್ ತಳಿ ಎತ್ತುಗಳನ್ನು ಸಾಕಲಾಗುತ್ತದೆ. ಕುರಿ, ಮೇಕೆ, ಹಾಗೂ ಕೋಳಿಗಳನ್ನು ಸಾಕಲಾಗುವುದು. ಹಾಗೂ ಪಕ್ಷಿಗಳಾದ ಗೊರವಂಕ, ಕಾಗೆ, ಹದ್ದು, ಬೆಳವ, ಗೂಬೆ, ಕೊಕ್ಕರೆ, ಕೌಜುಗ, ಕೋಗಿಲೆ, ಗೀಜುಗ, ಗುಬ್ಬಚ್ಚಿ, ಗಿಳಿ ಪಕ್ಷಿಗಳು ಕಂಡು ಬರುತ್ತದೆ.

ಕಡಿಮೆ ಮಳೆ, ಕೃಷಿ ಆಧಾರಿತ ಬದುಕು. ಕಳೆದ ಎರಡು ವರ್ಷಗಳ ಸರಾಸರಿ ೪೧೧೮.೪ ಮಿ.ಮೀ. ಮಳೆ ಬೀಳುತ್ತಿದ್ದು, ಹಾಗಾಗಿ ಈ ಪರಿಸರದಲ್ಲಿ ಕೃಷಿಗೆ ೩೮ ಕೊಳವೆ ಬಾವಿಗಳ ಆಶ್ರಯವಾಗಿದೆ. ಬಿಸಿಲಿನ ಉಷ್ಣಾಂಶ ೩೭೦ ಸೆಂ. ಇದ್ದು, ಚಳಿ ೧೨೦ ಸೆಂ. ಸಹಜವಾಗಿರುತ್ತದೆ. ಗ್ರಾಮದಲ್ಲಿ ೪ ಕಿರು ಟ್ಯಾಂಕುಗಳು ಇದ್ದು, ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಲ್ಲಿ ನೀರನ್ನು ಒದಗಿಸಲಾಗುತ್ತದೆ. ಗ್ರಾಮದಲ್ಲಿ ೨ ಕೈ ಪಂಪುಗಳು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ಆದಿಕರ್ನಾಟಕ, ನಾಯಕ, ಮೇದರು, ಮಡಿವಾಳ ಜನಾಂಗ ಕಿರು ಸಮುದಾಯವಾಗಿದೆ. ಈ ಗ್ರಾಮದ ಭಾಷೆ ಕನ್ನಡವಾಗಿದೆ.

ವಿವಿಧ ಪ್ರಕಾರಗಳ ೨೧೩ ಮನೆಗಳಿದ್ದು, ಅವು ಕಾಂಕ್ರೀಟ್, ಕಲ್ಲಿನ, ಶೀಟಿನ ಮನೆಗಳಾಗಿದ್ದು ಗುಡಿಸಲು ಸ್ವರೂಪದ ೬ ಮನೆಗಳಿವೆ. ಒಟ್ಟು ೯೬೮ ಜನಸಂಖ್ಯೆ ಹೊಂದಿದ್ದು, ಇಲ್ಲಿ ೮೩ ಮನೆಯಲ್ಲಿ ಶೌಚಾಲಯ ಸೌಲಭ್ಯ ಹೊಂದಿದೆ. ವಸತಿ ಯೋಜನೆಗಳಾದ ಆಶ್ರಯ, ಅಂಬೇಡ್ಕರ್, ಜನತಾ ವಸತಿ ಯೋಜನೆ, ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ೧೦೪ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ ಮುಖ್ಯ ಆಹಾರವಾದರೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನ ಎತ್ತಿನ ಗಾಡಿಯ ಜೊತೆಗೆ ಆಧುನಿಕ ವಾಹನಗಳು ಟ್ರ್ಯಕ್ಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಭತ್ತ, ಅಲಸಂದಿ, ತೊಗರಿ, ಅವರೆ, ಜೋಳ, ಸಜ್ಜೆ ಬೆಳೆಗಳನ್ನು ಆಹಾರ ಬೆಳೆಗಳಾಗಿ ಬೆಳೆಯುತ್ತಾರೆ. ಸೂರ್ಯಕಾಂತಿ, ತೆಂಗು, ಅಡಿಕೆ, ರೇಷ್ಮೆ, ಸೇವಂತಿಗೆ ತೋಟಗಾರಿಕೆಯ ಬೆಳೆಗಳು. ಒಂದು ಕಿರು ನಂದಿನಿ ಹಾಲಿನ ಸಹಕಾರ ಸಂಘವಿದ್ದು ಸರಾಸರಿ ೧೮೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಗ್ರಾಮದಲ್ಲಿ ಹುಣಸೆಹಣ್ಣು, ತೆಂಗು, ಅಡಿಕೆ ವ್ಯಾಪಾರಿ ಸರಕಾಗಿವೆ. ಕಂಡಕ್ಟರ್, ಶಿಕ್ಷಕರೂ ಸೇರಿದಂತೆ, ವೈದ್ಯರಾದ ಡಾ. ರಮೇಶ್ ಇಂಜಿನಿಯರ್ ರಾಮಣ್ಣ, ಮೊದಲಾದ ೧೨ ಜನ ನೌಕರರಿದ್ದಾರೆ. ಗ್ರಾಮದಲ್ಲಿ ಉಪಕಸುಬಾಗಿ ಮೊದಲಾದ ಗೃಹ ಕೈಗಾರಿಕೆ ಇದೆ. ಅಡಿಕೆ ಸುಲಿಯುವುದು ಉಪಕಸುಬಾಗಿದೆ. ಈ ಗ್ರಾಮದ ಆರ್.ಪ್ರಕಾಶ್

ರಂಗಕಲಾವಿದ, ರಂಗ ಸಂಘಟಕರೂ ಆಗಿದ್ದು, ಸಿರಾ ನಗರದಲ್ಲಿ ಮಾರುತಿ ಪ್ರಿಂಟಿಂಗ ಪ್ರೆಸ್ ನಡೆಯುತ್ತಿದ್ದಾರೆ. ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿದ್ದರು.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕೇಂದ್ರವೂ ಆಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರುತ್ತದೆ. ಈ ಗ್ರಾಮದ ಇಬ್ಬರು ಪಂಚಾಯಿತಿ ಸದಸ್ಯರೂ ಈ ಗ್ರಾಮದವರನ್ನು ಪ್ರತಿನಿಧಿಸುತ್ತಿದ್ದಾರೆ.

ಗ್ರಾಮದಲ್ಲಿ ೪ ಸ್ತ್ರೀ ಶಕ್ತಿ ಸ್ವಸಹಾಯ ಸಂಘವಿದೆ. ೨ ಧರ್ಮಸ್ಥಳ ಗ್ರಾಮಾಭಿವೃದ್ಧಿಯ ಸ್ವಸಹಾಯ ಸಹಕಾರ ಸಂಘವಿದ್ದು, ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು ೬೬ ಮಕ್ಕಳಿದ್ದಾರೆ. ಸರ್ಕಾರಿ ಹಿರಿಯ ಪಾಠಶಾಲೆ ಇದ್ದು, ೩ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕ ವಿತರಣಾ ಸೌಲಭ್ಯಗಳಿವೆ. ಈ ಗ್ರಾಮದ ಸಾಕ್ಷರತೆ ಶೇ. ೬೭.೨ ರಷ್ಟಿದೆ. ಮಹಿಳೆಯರು ಶೇ.೫೭.೨ ಇದ್ದು, ಪುರುಷರು ೬೮.೨ ರಷ್ಟಿದ್ದಾರೆ. ಚಿಕ್ಕದಾಸರಹಳ್ಳಿ, ಭೀ

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಕಿರು ಹೋಟೆಲ್‌ಗಳು, ೬ ಗೂಡಂಗಡಿಗಳು ಇದೆ. ಗ್ರಾಮದಲ್ಲಿ ೨ ಅರಳಿಮರವುಳ್ಳ ಅಶ್ವತ್ಥಕಟ್ಟೆ, ೨ ಕರುಗಲ್ಲುಗಳಿದ್ದು ಪೂಜೆಗೆ ಪಾತ್ರವಾಗಿವೆ. ಶ್ರೀರಾಮ, ಆಂಜನೇಯ, ದುರ್ಗಮ್ಮ, ಮುತ್ತರಾಯ ಗುಡಿಗಳಿವೆ.

ಮಾರಮ್ಮನ ಹಾಗೂ ದುರ್ಗಮ್ಮ ದೇವರ ದೇವಿಯ ಊರಹಬ್ಬವಿದ್ದು, ಬಲಿ, ಆರತಿ, ಬಾನ, ಹರಕೆ, ಸಂಪ್ರದಾಯವಿರುತ್ತದೆ. ಯುಗಾದಿ, ಕಾರಹಬ್ಬ, ಬಸವಜಯಂತಿ, ದೀಪಾವಳಿ, ಶಿವರಾತ್ರಿ, ಹಾಗೂ ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಚಿಕ್ಕದಾಸರಹಳ್ಳಿ, ಚಿಕ್ಕನಹಳ್ಳಿ ನಡುವೆ, ಗವಿಬಂಡೆ ದೇವಾಲಯವಿದ್ದು, ಮಠವಿದ್ದು, ಪ್ರವಾಸ ಕೇಂದ್ರವಾಗಿದೆ. ಶಿವ ದೇವಾಲಯವಿದೆ.

ಇದೊಂದು ಕಲಾಗ್ರಾಮವಾಗಿದ್ದು, ಬೊಪ್ಪರಾಯಪ್ಪ, ದೇವಿಮಹಾತ್ಮೆ, ನಾಟಕದ ರಕ್ತಬೀಜಾಸುರನ ಪಾತ್ರದಲ್ಲಿ ವಿಶೇಷ ಹೆಸರು ಮಾಡಿದ್ದಾರೆ. ಪೊನ್ನಹಳ್ಳಿ ರಂಗಣ್ಣ, ರಾವಣ, ದುಶ್ಶಾಸನ, ದುರ್ಯೋಧನ ಈ ಮೊದಲಾದ ಪಾತ್ರಗಳಲ್ಲಿ ಪ್ರಸಿದ್ಧರು. ಆದಿಕರ್ನಾಟಕದ ಭಾಗವತ ಹನುಮಂತಪ್ಪ ಹತ್ತಾರು ಯಕ್ಷಗಾನವನ್ನು ಸಮರ್ಥವಾಗಿ ನಿರ್ದೇಶಿಸುತ್ತಿರುವ ಹಿರಿಯ ಕಲಾವಿದ ಆರ್. ಪ್ರಕಾಶ್, ಅತ್ಯುತ್ತಮ ರಂಗ ಕಲಾವಿದರಾಗಿದ್ದು, ಶ್ರೀರಂಗ ವಿನಾಯಕ ಕಲಾಸಂಘದ ಸ್ಥಾಪಕ ಅಧ್ಯಕ್ಷರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ಗಂಗಮ್ಮ ಎಂಬ ಕಲಾವಿದೆ ಭಜನೆ, ತತ್ವಪದ ಹಾಡುಗಾರಿಕೆಗೆ ಸ್ಥಳೀಯವಾಗಿ ಹೆಸರು ಮಾಡಿದ್ದಾರೆ. ಕರ್ನಾಟಕ ಸರ್ಕಾರದ ಕಲಾವಿದ ಗೌರವ ಮಾಸಾಶನ ಪಡೆಯುತ್ತಿದ್ದಾರೆ. ಗ್ರಾಮದಲ್ಲಿ ವಿನಾಯಕ ಯುವಕರ ಸಂಘ, ದಲಿತ ಸಂಘಗಳಿವೆ. ಸಿರಾ–ಚೇಳೂರು–ಮೈಸೂರಿಗೆ ಖಾಸಗಿ, ಸರ್ಕಾರಿ ಬಸ್ ಸಂಚಾರವಿದೆ.

## ಚಿಕ್ಕದಾಸರಹಳ್ಳಿ ಗೊಲ್ಲರಹಟ್ಟಿ

ದಾಸರಹಳ್ಳಿ ಹೆಸರಿನ ಆರು ಹಳ್ಳಿಗಳಲ್ಲಿ ಚಿಕ್ಕದಾಸರಹಳ್ಳಿ ಗೊಲ್ಲರ ಹಟ್ಟಿಯೂ ಒಂದಾಗಿದೆ. ಇದು ಕಳ್ಳಂಬೆಳ್ಳ ಹೋಬಳಿಗೆ ಸೇರಿದ್ದು, ಚಿಕ್ಕ ದಾಸರಹಳ್ಳಿಯ ಜೋಡಿ ಗ್ರಾಮವಾಗಿದೆ. ಇದರ ಒಟ್ಟು ಭೌಗೋಳಿಕ ವ್ಯಾಪ್ತಿ ೩೯.೧೨ ಹೆಕ್ಟೇರ್. ಇದು ಕಾಡುಗೊಲ್ಲರ ಬುಡಕಟ್ಟು ಗ್ರಾಮವಾಗಿದೆ. ಕನ್ನಡ ಇಲ್ಲಿನ ಮಾತಾಡುವ ಭಾಷೆಯಾಗಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೧.೫ ಕಿ.ಮೀ. ದೂರವಿದ್ದು, ಸಿರಾ–ಚೇಳೂರು–ಮೈಸೂರು ರಸ್ತೆಯಲ್ಲಿ ಚಿಕ್ಕದಾಸರ ಹಳ್ಳಿಗೆ ಅರ್ಧ ಕಿ.ಮೀ. ದೂರದಲ್ಲಿ ಮಿಶ್ರಿತವಾಗಿದ್ದು, ಕುರುಚಲು ಗಿಡ, ಪೊದೆಗಳಿಂದ ಕೂಡಿದೆ. ಎತ್ತರದಲ್ಲಿ ಹಟ್ಟಿ ಇದ್ದು, ಕೆಳಭಾಗದಲ್ಲಿ ಮುಖ್ಯ ಗ್ರಾಮ ಚಿಕ್ಕದಾಸರಹಳ್ಳಿ ಇದೆ. ಈ ಗ್ರಾಮದ ಪೂರ್ವಭಾಗಕ್ಕೆ ಕಳ್ಳಂಬೆಳ್ಳ, ನರಸಮ್ಮನ ಕಟ್ಟೆ ನೀರಿನ ಹರಿವು ಇರುವುದರಿಂದ ಮಣ್ಣು ಕಪ್ಪು ಬಣ್ಣದಿಂದ ಕೂಡಿದೆ. ಈ ಪರಿಸರದಲ್ಲಿ ಕಂಡು ಬರುವ ಕಾಡು ಪ್ರಾಣಿಗಳು ನರಿ, ಮೊಲ, ಜಿಂಕೆ, ಉಡ, ಬಾರು ಬೆಕ್ಕು, ಮುಂಗುಸಿ ಕಾಣುತ್ತವೆ. ಗ್ರಾಮದಲ್ಲಿ ಕುರಿ, ಮೇಕೆ, ಎತ್ತು, ನಾಯಿ, ಹಸು, ಎಮ್ಮೆ ಹಾಗೂ ಕತ್ತೆ ಸಾಕಲಾಗಿದೆ.

ವಾರ್ಷಿಕ ಮಳೆಯ ಸರಾಸರಿ ೪೮೧.೪ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ಉಷ್ಣಾಂಶ ೩೮° ಸೆಂ. ಇದ್ದು, ಚಳಿ ೯° ಸೆಂ. ಸಹಜವಾಗಿರುತ್ತದೆ. ಈ ಗ್ರಾಮ ಪರಿಸರದಲ್ಲಿ ೪ ಕೊಳವೆ ಬಾವಿಗಳಿದ್ದು, ಕೃಷಿ ಕಾಯಕಕ್ಕೆ ಬಳಕೆಯಾಗುತ್ತಿವೆ. ಉಳಿದಂತೆ ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಯೋಜನೆ ಅಡಿಯಲ್ಲಿ ನೀರನ್ನು ಒದಗಿಸಲಾಗುತ್ತದೆ. ೨ ಕಿರು ಟ್ಯಾಂಕ್‌ಗಳಿದ್ದು, ಗ್ರಾಮದಲ್ಲಿ ೨ ಕೈ ಪಂಪುಗಳು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕಾಡುಗೊಲ್ಲರ ೩೫ ಮನೆಗಳು ಇದ್ದು, ಈ ಗ್ರಾಮದ ಭಾಷೆ ಕನ್ನಡವಾಗಿದೆ. ವಿವಿಧ ಪ್ರಕಾರಗಳಾದ ಕಾಂಕ್ರೀಟ್, ಹೆಂಚಿನ, ಶೀಟಿನ ೨ ಗುಡಿಸಲು

ಮನೆಗಳು ಸೇರಿ, ಒಟ್ಟು ೧೨೪ ಜನಸಂಖ್ಯೆ ಹೊಂದಿರುವ ಇಲ್ಲಿನ ಜನತಾ, ಆಶ್ರಯ ವಸತಿ ಯೋಜನೆಯ ೧೨ ಫಲಾನುಭವಿಗಳಿದ್ದಾರೆ. ಇಲ್ಲಿ ೬ ಮನೆಯಲ್ಲಿ ಶೌಚಾಲಯ ಸೌಲಭ್ಯ ಹೊಂದಿದೆ.

ರಾಗಿ ಮುದ್ದೆ ಮುಖ್ಯ ಆಹಾರವಾದರೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನ ೩ ಎತ್ತಿನ ಗಾಡಿಯ ಜೊತೆಗೆ ಆಧುನಿಕ ವಾಹನಗಳು ಟ್ರ್ಯಕ್ಟರ್, ಟೆಂಪೋ ವಾಹನಗಳ ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಭತ್ತ, ಅಲಸಂದಿ, ತೊಗರಿ ಆಹಾರ ಬೆಳೆಗಳು. ತೋಟಗಾರಿಕೆ ಕಡಿಮೆ. ಸೇವಂತಿಗೆ ಹೂ ಬೆಳೆಯುವುದು ಕಂಡು ಬರುತ್ತದೆ. ಹುಣಸೆಹಣ್ಣಿನ , ಕುರಿಯ ವ್ಯಾಪಾರವಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತ ವ್ಯಾಪ್ತಿಗೆ ಸೇರಿದೆ. ಗ್ರಾಮದಲ್ಲಿ ೨ ಸ್ತ್ರೀ ಶಕ್ತಿ ಸ್ವಸಹಾಯ ಸಂಘವಿದೆ. ೨ ಧರ್ಮಸ್ಥಳ ಗ್ರಾಮಾಭಿವೃದ್ಧಿಯ ಸ್ವಸಹಾಯ ಸಹಕಾರ ಸಂಘವಿದ್ದು, ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ೨ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ಸೌಲಭ್ಯಗಳಿವೆ. ಈ ಗ್ರಾಮದ ಸಾಕ್ಷರತೆ ಶೇ. ೬೭.೨ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು. ೨ ಪೆಟ್ಟಿಗೆ ಅಂಗಡಿಗಳು ಇದೆ. ಗ್ರಾಮದ ಅಧಿದೇವತೆ ಜುಂಜಪ್ಪ, ದೀಪಾವಳಿಯ ಸಂದರ್ಭದಲ್ಲಿ ದೀಪ ಏರಿಸುವ, ಜನ್ನಿಗೆ ಸೇವೆ ಸೇರಿ ಏಳು ದಿನಗಳ ಕಾಲ ಜಾತ್ರೆ ನಡೆಯುತ್ತದೆ.

ಗ್ರಾಮದಲ್ಲಿ ಗೌರಿ ಗಣೇಶನ ಹಬ್ಬ ಮಾಡುತ್ತಾರೆ. ಕರಿಯಮ್ಮನ ಊರಹಬ್ಬವಿದ್ದು, ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ.

## ಚಿನ್ನಪ್ಪನಹಳ್ಳಿ

ಚಿನ್ನಪ್ಪನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೯ ಕಿ.ಮೀ. ದೂರದಲ್ಲಿದೆ. ಸಿರಾ–ಅರೇಹಳ್ಳಿ ಮಾರ್ಗದಲ್ಲಿ ಕಳ್ಳಂಬೆಳ್ಳ ಹೋಬಳಿಗೆ ಸೇರಿದೆ. ಇದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೧೬೬.೭೫ ಹೆಕ್ಟೇರ್ ಇದ್ದು, ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದೆ. ಚಿನ್ನಪ್ಪನ ಕಟ್ಟೆ ಈ ಗ್ರಾಮದ ಪಕ್ಕದಲ್ಲಿಯೇ ಇದೆ. ಹಾಗಾಗಿ ಚಿನ್ನಪ್ಪ ಎಂಬ ವ್ಯಕ್ತಿ ಈ ಗ್ರಾಮವನ್ನು ರೂಪಿಸಲು ಶ್ರಮಿಸಿದ ಕಾರಣ ಆತನ ಜನೋಪಯೋಗಿಯಾಗಿದ್ದ ನೆಂಬುದಕ್ಕೆ ಆತನ ಹೆಸರಿನಲ್ಲಿಯೇ ಗೋಕಟ್ಟೆಯೂ ನಿರ್ಮಾಣವಾಗಿರುವುದ ರಿಂದ ಚಿನ್ನಪ್ಪ ಜನಪ್ರಿಯ ವ್ಯಕ್ತಿಯಾಗಿದ್ದು ಆತನ ಹೆಸರಿನಲ್ಲಿಯೇ ಗ್ರಾಮ ರಚನೆಯಾಗಿದೆ. ಈ ಪರಿಸರದಲ್ಲಿ ಬಯಲು ಪ್ರದೇಶ, ಕುರುಚಲು ಗಿಡ, ತೋಟ ಸಾಲು, ದಿಣ್ಣೆ, ತಗ್ಗು. ಹಾಗಾಗಿ ಇಲ್ಲಿ ನರಿ, ಮೊಲ, ಜಿಂಕೆ, ಉಡ, ಮುಂಗುಸಿ ಕಂಡು ಬಂದರೆ, ಗ್ರಾಮದಲ್ಲಿ ಹಳ್ಳಿಕಾರ್ ಎತ್ತು, ನಾಟಿ ಹಾಗೂ ಸೀಮ ಹಸು, ಕುರಿ, ಮೇಕೆಗಳನ್ನು ಸಾಕಲಾಗುತ್ತಿದೆ. ನಾಟಿ ಕೋಳಿ ಹಾಗೂ ಗಿರಿರಾಜ ಕೋಳಿ ಸಾಕು ಪ್ರಾಣಿಗಳಾಗಿವೆ.

ವಾರ್ಷಿಕ ಮಳೆಯ ಸರಾಸರಿ ೪೬೦ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ಉಷ್ಣಾಂಶ ೩೬–೩೭ಂ ಸೆಂ. ಇದ್ದು, ಚಳಿ ೧೨ಂ ಸೆಂ. ಸಹಜವಾಗಿರುತ್ತದೆ. ಒಂದು ಕಟ್ಟೆ ಇದ್ದರೂ ನೀರು ಸಾಕಾಗುವುದಿಲ್ಲ. ಆದುದರಿಂದ ಉಪಕಸುಬಾಗಿ ೧೧ ಕೊಳವೆ ಬಾವಿಗಳ ಮೂಲಕ ನೀರನ್ನು ಒದಗಿಸಲಾಗುತ್ತದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೩ ಕಿರು ಟ್ಯಾಂಕ್‌ಗಳಿದ್ದು, ಗ್ರಾಮದಲ್ಲಿ ೧ ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ದೊಡ್ಡ ಸಮುದಾಯ ವಾಗಿದ್ದು, ನಾಯಕ, ಕುಂಚಿಟಿಗ, ಗೊಲ್ಲರು, ಉಪ್ಪಾರ, ಕ್ಷೌರಿಕ, ಬಳೆಶೆಟ್ಟಿ ಜನಾಂಗಗಳು ಕಿರು ಸಮುದಾಯಗಳಾಗಿವೆ. ವಿವಿಧ ಪ್ರಕಾರಗಳ ೧೦೫ ಮನೆಗಳಿದ್ದು, ಇವುಗಳಲ್ಲಿ ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳು ಇದ್ದು, ಒಟ್ಟು ೪೫೯ ಜನಸಂಖ್ಯೆ ಹೊಂದಿರುವ, ೭೫ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರವಾದರೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಯ ಜೊತೆಗೆ ಆಧುನಿಕ ವಾಹನಗಳು ಟ್ರ್ಯಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಭತ್ತ, ಹುರುಳಿ, ತೊಗರಿ ಪ್ರಮುಖ ಆಹಾರ ಬೆಳೆಗಳು. ತೋಟಗಾರಿಕೆ ಕಡಿಮೆ. ಸೇವಂತಿಗೆ ಸೂರ್ಯಕಾಂತಿ, ರೇಷ್ಮೆ, ಅಡಿಕೆ, ತೆಂಗು

ತೋಟಗಾರಿಕೆ ಬೆಳೆಗಳು. ಒಂದು ಹಾಲಿನ ಡೈರಿ ಇದ್ದು ದಿನವಹಿ ೧೫೦–೨೦೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೇಹಣ್ಣು, ಹೊಂಗಬೀಜ ಮುಖ್ಯ ವ್ಯಾಪಾರಿ ಸರಕುಗಳು. ಬೀಡಿ ಸುತ್ತುವುದು, ಊಟದ ಎಲೆ ತಯಾರಿಕೆ, ಮಹಿಳೆಯರ ಉಪ ಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ಭೂಪಸಂದ್ರ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಅಂಚೆ ಮತ್ತಿತರ ವ್ಯವಹಾರಕ್ಕೆ ಭೂಪಸಂದ್ರವನ್ನು ಅವಲಂಬಿಸಿದೆ. ಗ್ರಾಮದಲ್ಲಿ ೨ ಸ್ತ್ರೀ ಶಕ್ತಿ ಸ್ವಸಹಾಯ ಸಂಘವಿದ್ದು, ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ಸೌಲಭ್ಯಗಳಿವೆ. ಈ ಗ್ರಾಮದ ಸಾಕ್ಷರತೆ ಶೇ. ೬೦.೭ ರಷ್ಟಿದೆ. ರಾಷ್ಟ್ರಬಂಧು ಯುವಕ ಸಂಘವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು. ೨ ಪೆಟ್ಟಿಗೆ ಅಂಗಡಿಗಳು ಇದೆ. ಗ್ರಾಮದಲ್ಲಿ ಹಳೆಯ ಕೋಟೆಗಳು, ಬುರುಜು, ಕಾವಲು ಗೋಪುರ ಇತ್ತೀಚಿನವರೆಗೆ ಇತ್ತೆಂದು, ಸದ್ಯ ಅದರ ಕುರುಹುಗಳು ಮಾತ್ರ ಗೋಚರಿಸುತ್ತವೆ. ಆಂಜನೇಯ, ಲಕ್ಷ್ಮೀದೇವ ಸ್ಥಾನಗಳಿವೆ. ಕರುಗಲ್ಲು, ಮತ್ತುರಾಯಸ್ವಾಮಿ ಕಲ್ಲುಗಳಿವೆ. ಗ್ರಾಮದೇವತೆ ಕುನ್ನಾಲಮ್ಮ ದೇವಿಯನ್ನು ಎದುರೆತ್ತಿ ಪೂಜಿಸಿ, ಆರತಿ ಬಾನ ಅರ್ಪಿಸುತ್ತಾರೆ. ಆಂಜನೇಯ ದೇವರಿಗೆ ಶ್ರಾವಣದ ಸಂದರ್ಭದಲ್ಲಿ ಹರಿಸೇವೆ, ಸಾಮೂಹಿಕ ಅನ್ನ ಸಂತರ್ಪಣೆ ಪಾರಂಪರಿಕವಾಗಿದೆ. ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ದಸರಾ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಚಿಕ್ಕತಿಮ್ಮನಹಳ್ಳಿ

ಚಿಕ್ಕತಿಮ್ಮನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವೋತ್ತರವಾಗಿ ೨೨ ಕಿ.ಮೀ. ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು, ತಾಲ್ಲೂಕಿನ ಕಂದಾಯ ಗ್ರಾಮಗಳಲೆಲ್ಲಾ ಅತ್ಯಂತ ಕಡಿಮೆ ಭೌಗೋಳಿಕ ವ್ಯಾಪ್ತಿಯನ್ನು ಪಡೆದ ಹಳ್ಳಿ. ಇದರ ವ್ಯಾಪ್ತಿ ೪೭.೯೩ ಹೆಕ್ಟೇರ್ ಮಾತ್ರವಾಗಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಈ ಪರಿಸರದಲ್ಲಿ ನರಿ, ಮೊಲ, ಬಾರುಬೆಕ್ಕು, ಉಡ, ಮುಂಗುಸಿ ಕಂಡು ಬಂದರೆ, ಗ್ರಾಮದಲ್ಲಿ ಪಶುಪಾಲನೆ ಕೃಷಿ ಕಾಯಕಕ್ಕೆ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ನಾಯಿ, ಬೆಕ್ಕುಗಳನ್ನು ಸಾಕು ಪ್ರಾಣಿಗಳಾಗಿ ಸಾಕಲಾಗಿದೆ. ಗಿರಿರಾಜ ಕೋಳಿ ಹಾಗೂ ನಾಟಿ ಕೋಳಿಗಳನ್ನು ಸಾಕಲಾಗಿದ್ದು, ಮರಿ ಹಾಗೂ ಮಾಂಸಕ್ಕಾಗಿ ಕೋಳಿಯನ್ನು ಬಳಸಲಾಗುತ್ತಿದೆ.

ವಾರ್ಷಿಕ ಮಳೆಯ ಸರಾಸರಿ ೫೫೭.೩ ಮಿ.ಮೀ. ಮಳೆ ಬೀಳುತ್ತಿದ್ದು, ಸಾಕಾಗುವುದಿಲ್ಲ. ಹಾಗಾಗಿ ಕೃಷಿಗಾಗಿ ವಿವಿಧ ಸರ್ಕಾರಿ ಸೌಲಭ್ಯಗಳ ಅಡಿಯಲ್ಲಿ ೧೪ ಕೊಳವೆ ಬಾವಿಗಳನ್ನು ತೆಗೆಸಲಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಸಿಸ್ಟನ್‌ಗಳಿದ್ದು, ೧ ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಬೇಡ ಜನಾಂಗ ದೊಡ್ಡ ಸಮುದಾಯ ವಾಗಿದ್ದು, ಕುಂಚಿಟಿಗರು ಕಿರು ಸಮುದಾಯವಾಗಿವೆ. ಕನ್ನಡ ಈ ನೆಲದ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೩೬ ಮನೆಗಳಿದ್ದು, ಇವುಗಳಲ್ಲಿ ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳು ಇದ್ದು, ಒಟ್ಟು ೧೫೫ ಜನಸಂಖ್ಯೆ ಹೊಂದಿರುವ, ೧೮ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ. ಇಲ್ಲಿನ ಮನೆಗಳು ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್ ಯೋಜನೆಯ ೨೪ ಫಲಾನುಭವಿಗಳು ಇದ್ದಾರೆ.

ರಾಗಿ ಮುದ್ದೆ ಮುಖ್ಯ ಆಹಾರವಾದರೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ೨ ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಆಧುನಿಕ ವಾಹನಗಳು ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳ ಬಳಕೆ ಇದೆ. ಕಾಳಾಪಾರ ದೇವಗೊಂಡನಹಳ್ಳಿ ತಾಳಗುಂದ ಮಾರ್ಗವಾಗಿ ರಸ್ತೆ ಸಂಪರ್ಕ ಹೊಂದಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಭತ್ತ, ಅಲಸಂದಿ. ತೊಗರಿ ಆಹಾರ ಬೆಳೆಗಳು. ರೇಷ್ಮೆ, ಅಡಿಕೆ, ತೆಂಗು ತೋಟಗಾರಿಕೆ ಬೆಳೆಗಳು. ಶೇಂಗಾ, ಹುಣಸೇಹಣ್ಣು, ಹೊಂಗಬೀಜ ಮುಖ್ಯ ವ್ಯಾಪಾರಿ ಸರಕುಗಳು. ಶಿಕ್ಷಣ, ಸಾರಿಗೆ, ಕಂದಾಯ, ಪಂಚಾಯಿತಿ ರಾಜ್ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ಭೂಪಸಂದ್ರ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಚಿತ್ರದುರ್ಗ

ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಗ್ರಾಮದಲ್ಲಿ ೨ ಸ್ತ್ರೀ ಶಕ್ತಿ ಸ್ವಸಹಾಯ ಸಂಘವಿದ್ದು, ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ಸೌಲಭ್ಯಗಳಿವೆ. ಈ ಗ್ರಾಮದ ಸಾಕ್ಷರತೆ ಶೇ. ೬೭ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು. ೧ ಪೆಟ್ಟಿಗೆ ಅಂಗಡಿ ಇದೆ. ಕುನ್ನಾಲಮ್ಮ ದೇವಿಯ ಜಾತ್ರೆಯ ಸಂದರ್ಭದಲ್ಲಿ ಈ ಗ್ರಾಮ ಭಕ್ತರ ಪಾತ್ರ ಮುಖ್ಯವಾಗಿದೆ. ಕರಿಯಮ್ಮ ದೇವಿಗೆ ಆರತಿ ಬಾನ , ಅರ್ಪಣೆ ಸಂಪ್ರದಾಯವಿದೆ. ಯುಗಾದಿ, ಶಿವರಾತ್ರಿ, ದಸರಾ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಕುನ್ನಾಲಮ್ಮ, ಕುಂದಾಲದಮ್ಮ ಎಂಬ ಹೆಸರಿನ ದೇವಸ್ಥಾನವಿದ್ದು, ಇದನ್ನು ಕರಿಯಮ್ಮ ಎಂದೂ ಕರೆಯಲಾಗುವುದು. ಗುಬ್ಬಿ ತಾಲ್ಲೂಕಿನ ಕುನ್ನಾಲ ಮೂಲದ ದೇವತೆಯಾದುದರಿಂದ ಕನ್ನಾಲಮ್ಮ ಎಂದೇ ಕರೆಯಲಾಗುವುದು. ಕುಂದಾಲದಮ್ಮ ಎಂತಲೂ ಕರೆಯುತ್ತಾರೆ. ಒಂದು ವಾರಗಳ ಕಾಲ ಬೃಹತ್ ಜಾತ್ರೆ ನಡೆಯುತ್ತದೆ. ಬಲಿ, ಆರತಿ, ಮಡೆ, ಸೇವೆ, ಬೇರೆ ಬೇರೆ ಗ್ರಾಮದವರಿಂದ ಸೇವೆಗಳು ನಡೆಯುತ್ತವೆ.

ಈ ಗ್ರಾಮದಲ್ಲಿ ಕಾಳಾಪುರಕ್ಕೆ ಸೇರಿದ ಶ್ರೀ ರಂಗನಾಥ ಪ್ರೌಢಶಾಲೆ ಇದ್ದು, ಸುತ್ತಲಿನ ಹಲವು ಹಳ್ಳಿಗಳ ಮಕ್ಕಳಿಗೆ ಪ್ರಯೋಜನವಾಗಿದೆ. ಪಶು ಆಸ್ಪತ್ರೆ, ಸರ್ಕಾರಿ ಹೆರಿಗೆ ಆಸ್ಪತ್ರೆಗಳಿಗೂ ಈ ದೇವಸ್ಥಾನದ ಸಮೀಪದಲ್ಲಿ ಆರಂಭವಾಗಿರುವುದು ಈ ಪುಟ್ಟ ಗ್ರಾಮದ ವಿಶೇಷ. ಸಿರಾ ಮಳ್ಳಪ್ಪನಹಳ್ಳಿ–ಮಾಯಸಂದ್ರ–ಕಾಳಾಪುರ ತಾಳಗುಂದ ಮಧುಗಿರಿ ಬಸ್ ಸಂಪರ್ಕವಿದೆ.

## ಚಿಕ್ಕದಾಸರಹಳ್ಳಿ

ಚಿಕ್ಕದಾಸರಹಳ್ಳಿ ಕೆ.ಎಂ. ಚಿಕ್ಕದಾಸರಹಳ್ಳಿ ಎಂದು ಕರೆಯಲ್ಪಡುವ ಮಜರೆ ಗ್ರಾಮ. ಸಿರಾ–ಮೈಸೂರು ರಸ್ತೆಯ ಬದಿಗೆ ೧೬ ಕಿ.ಮೀ. ದೂರದಲ್ಲಿದೆ. ಕಳ್ಳಂಬೆಳ್ಳ ಕೆರೆಯ ಹಿನ್ನೀರಿಗೆ ಸಮೀಪದಲ್ಲಿರುವುದರಿಂದ ಕೆರೆಯದಾಸರಹಳ್ಳಿ ಎಂದು ಕರೆಯಲಾಗುವುದು. ಇದು ಮುದಿಮಡು ಕಂದಾಯ ಗ್ರಾಮಕ್ಕೆ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ಮೂಲ ಗ್ರಾಮ. ಮುದಿ ಮಡ್ಡುವಇನ ೪೬೨.೫೬ ಹೆಕ್ಟೇರ್ ವ್ಯಾಪ್ತಿ. ನಿಜಯ್ಯನ ಪಾಳ್ಯ ಹಾಗೂ ಕೆ.ಎಂ. ಚಿಕ್ಕದಾಸರಹಳ್ಳಿ ಹಂಚಿಕೊಂಡಿವೆ. ಸಿರಾ–ಮೈಸೂರು ರಸ್ತೆಯ ಕಳ್ಳಂಬೆಳ್ಳ ಸಮೀಪದ ಶನಿಮಹಾತ್ಮೆ ದೇವಸ್ಥಾನದಿಂದ ಎಡಭಾಗಕ್ಕೆ ೨.೫ ಕಿ.ಮೀ. ದೂರದಲ್ಲಿದೆ. ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಪಶ್ಚಿಮಕ್ಕೆ ಕಳ್ಳಂಬೆಳ್ಳ ಕೆರೆಯ ಹಿನ್ನೀರು ಇರುತ್ತದೆ. ಬದಿಗೆ ನಿಸರ್ಗ ಹಳ್ಳ ಹರಿದು ಹೇಮಾವತಿ ಮೀರು ಕೂಡಿಕೊಂಡು ಕಳ್ಳಂಬೆಳ್ಳ ಕೆರೆ ಸೇರುತ್ತದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ತೋಳ, ಕರಡಿ, ಕಂಡು ಬಂದರೆ, ಗ್ರಾಮದಲ್ಲಿ ಸಾಕು ಪ್ರಾಣಿಗಳಾಗಿ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ಸಾಕಲಾಗಿದೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡು ಪಕ್ಷಿಗಳಾಗಿ ಕೋಗಿಲೆ, ಕೊಕ್ಕರೆ, ಗಿಳಿ, ಗೀಜಗ, ಗೊರವಂಕ, ಗೂಬೆ, ಹದ್ದು, ಕೌಜಲಗ, ಗರುಡ ಕಂಡು ಬರುತ್ತವೆ. ಗುಬ್ಬಚ್ಚಿ ವಿರಳವಾಗಿವೆ.

ವಾರ್ಷಿಕ ಮಳೆಯ ಸರಾಸರಿ ೫೭೭.೩ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲು ೩೮೦ ಸೆಂ. ಇದ್ದು, ಚಳಿಯು ೧೨೦ ಸೆಂ. ಇರುತ್ತದೆ. ಈ ಪರಿಸರದಲ್ಲಿ ೩೦ ಕೊಳವೆ ಬಾವಿಗಳನ್ನು ತೆಗೆಸಲಾಗಿದೆ. ಕೃಷಿ ಕೆಲಸಕ್ಕೆ ಬಳಕೆಯಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ೨ ಚಿಕ್ಕ ಟ್ಯಾಂಕ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. ೨ ಪಂಪುಗಳು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕ್ಷೌರಿಕರು ದೊಡ್ಡ ಸಮುದಾಯವಾಗಿದ್ದು, ಕುರುಬರು, ಕುಂಚಿಟಿಗರು, ಉಪ್ಪಾರ, ಬ್ರಾಹ್ಮಣ ಕಿರು ಸಮುದಾಯವಾಗಿವೆ. ಕನ್ನಡ ಈ ನೆಲದ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೬೪ ಮನೆಗಳಿದ್ದು, ಇವುಗಳಲ್ಲಿ ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳು ಇದ್ದು, ಒಟ್ಟು ೨೧೯ ಜನಸಂಖ್ಯೆ ಹೊಂದಿರುವ, ೪೪ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ. ಇಲ್ಲಿನ ಮನೆಗಳು ಸರ್ಕಾರದ ವಸತಿ ಯೋಜನೆಗಳಾದ ಜನತಾ, ಆಶ್ರಯ, ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೧೬ ಫಲಾನುಭವಿಗಳು ಇದ್ದಾರೆ.

ರಾಗಿ ಮುದ್ದೆ ಮುಖ್ಯ ಆಹಾರವಾದರೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಮಾಂಸಾಹಾರವೂ ಬಳಕೆಯಲ್ಲಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಆಧುನಿಕ ವಾಹನಗಳು ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆ ಇದೆ. ಶಿಕ್ಷಣ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಭತ್ತ, ಅಲಸಂದಿ. ತೊಗರಿ, ಹುರುಳಿ ಆಹಾರ ಬೆಳೆಗಳು. ಶೇಂಗಾ, ಹುಣಸೇಹಣ್ಣು ವಾಣಿಜ್ಯ ಬೆಳೆಗಳು.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ತರೂರು ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು. ಮಾರಮ್ಮನ ಪೌಳಿಇದ್ದು, ಇದು ಗ್ರಾಮದ ವಿಕಾಸಕ್ಕೆ, ಹೆಸರಿನ ಮೂಲಕ್ಕೆ ಕಾರಣವಾಗಿದೆ. ಮಾತ್ರವಲ್ಲ ೬ ದಾಸರಹಳ್ಳಿಗಳ ಪೈಕಿ, ದಾಸರ ಹೆಸರಿನ ದೇವಾಲಯವಿರುವುದು ಈ ಗ್ರಾಮದ ವಿಶೇಷವಾಗಿದೆ. ಉಳಿದಂತೆ ಕೆರೆಯ ಮುಂಭಾಗದಲ್ಲಿ ಆಂಜನೇಯನ ದೇವಾಲಯವಿದ್ದು ಏಳು ಗ್ರಾಮಗಳ ಒಕ್ಕಲಿದ್ದಾರೆ. ಶ್ರಾವಣ ಮಾಸದಲ್ಲಿ ಹರಿಸೇವೆ ಮಾಡುವುದು ಇಲ್ಲಿನ ವಿಶೇಷ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ನೀಡಲಾಗುವುದು.

ಮಾರಮ್ಮನ ಊರಹಬ್ಬವಿದ್ದು, ಆರತಿ, ಬಲಿ, ಬಾನಗಳ ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಗೌರಿಗಣೇಶ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ಬಸ್ ಸಂಚಾರಕ್ಕೆ ಮುದುಮಡು ಗೇಟು, ಅಥವಾ ಮೈಸೂರು ರಸ್ತೆಯ ಶನಿದೇವರ ದೇವಸ್ಥಾನದ ಬಳಿಗೆ ಬರಬೇಕಾಗುತ್ತದೆ. ಬಯಲು ಪ್ರದೇಶವಾಗಿದೆ ಅನುಕೂಲ ವಿರಳವಾಗಿದೆ.

## ಚಿಕ್ಕಸಂದ್ರ ಕಾವಲ್

ಚಿಕ್ಕಸಂದ್ರ ಕಾವಲು, ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೬ ಕಿ.ಮೀ. ದೂರದಲ್ಲಿದೆ. ಸಿರಾ-ಬುಕ್ಕಾಪಟ್ಟಣ ಮುಖ್ಯರಸ್ತೆಯಲ್ಲಿ ಕಂಬದ ಹಳ್ಳಿ ಗೇಟಿನಿಂದ ಬಲಕ್ಕೆ ಆರು ಕಿ.ಮೀ. ದೂರದಲ್ಲಿ ಈ ಬುಡಕಟ್ಟು ಗ್ರಾಮವಿದೆ. ಇದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೨೨೮೩.೭೪ ಹೆಕ್ಟೇರ್ ಆಗಿದೆ. ಚಿಕ್ಕಸಂದ್ರ ಕಾವಲು-ರಕ್ಷಿತ ಅರಣ್ಯ ಭಾಗವೂ ಆಗಿದ್ದು, ಬೆಣಚುಕಲ್ಲು, ಗಿಡ, ಮರಗಳಿಂದ ಕೂಡಿದೆ. ಈ ಅರಣ್ಯ ಪ್ರದೇಶದಲ್ಲಿ ನೀಲಗಿರಿ, ಕಾಡುಮತ್ತಿ, ನೇರಳೆ, ಹುಣಸೆ, ತುಗ್ಗಲಿ, ಬಂದ್ರೆ, ತೂಬರಿ, ಬಪರಿ, ಮರಡಿ ಗಿಡಗಳಿವೆ. ಮರಳು ಮಿಶ್ರಿತ ಬಳಿ ಮಣ್ಣಿನ ಪ್ರದೇಶವಾಗಿದೆ. ಉತ್ತರಕ್ಕೆ ಚಿಕ್ಕಸಂದ್ರ ದೊಡ್ಡ ಕೆರೆಇದ್ದು, ಅದು ಹೊನ್ನೇನಹಳ್ಳಿ ಮುದಿಗೆರೆಯವರೆಗೆ ನೀರಿನ ಹಲವು ವಿಸ್ತಾರವಾಗಿದೆ. ಅದರ ಮುನ್ನಿರು ರಕ್ಷಣಾ ಅರಣ್ಯದಲ್ಲಿ ಹಿಕರವಾಗಿ ನಿಲ್ಲುತ್ತದೆ.

ಈ ಪರಿಸರದಲ್ಲಿ ತೋಳ, ಜಿಂಕೆ, ಚಿರಚಿತಜ, ಕಿರುಬ, ಕರಡಿ, ನರಿ, ವಿಷಪೂರಿತ ಹಾವುಗಳು ಕಂಡು ಬರುತ್ತವೆ. ಚಿಕ್ಕಸಂದ್ರ ಕಾವಲು ಗ್ರಾಮದಲ್ಲಿ ಹಸು, ಕುರಿ, ಮೇಕೆ, ಸಾಕು ಪ್ರಾಣಿಗಳಾಗಿ ಸಾಕಲಾಗುತ್ತದೆ. ಕಾಡು ಪಕ್ಷಿಗಳಾಗಿ ನವಿಲು, ಕೋಗಿಲೆ, ಗಿಳಿ, ಕೊಕ್ಕರೆ, ಕೌಜಗ, ಹದ್ದು, ಗರುಡ, ಗೀಜಗ, ಗೂಬೆ, ರಣಹದ್ದು, ಕಂಡು ಬರುತ್ತವೆ. ಗ್ರಾಮದಲ್ಲಿ ನಾಟಿ ಕೋಳಿ ಹಾಗೂ ಗಿರಿರಾಜ ಕೋಳಿಗಳನ್ನು ಸಾಕಲಾಗುತ್ತಿದೆ.

ಬಿಸಿಲು-ವಾಡಿಕೆ ಮಳೆ ೪೬೦ ಮಿ.ಮೀ. ಕಳೆದ ಐದು ವರ್ಷಗಳ ಸರಾಸರಿ ಮಳೆ ಪ್ರಮಾಣ ಉಷ್ಣಾಂಶ ೩೧ ಡಿ.ಸೆಂ. ಚಳಿ ೧೨ ಡಿ.ಸೆ. ಇರುತ್ತದೆ. ಕುಡಿಯಲು ಗ್ರಾಮಪಂಚಾಯ್ತಿ ಕರು ನೀಡು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಕೆಯಾಗಿದೆ. ಕೃಷಿಗೆ ಗಂಗಾ ಕಾವೇರಿ ಯೋಜನೆಯ ಮೂಲಕ ೧೮ ಕೊಳವೆ ಬಾವಿಯ ನಿರ್ಮಾಣವಾಗಿದೆ. ಇದರ ಸಹಾಯದಿಂದ ಕಿರು ನೀರಿನ ಸಹಾಯದಲ್ಲಿ ತೋಟಗಾರಿಕೆ, ಹೂ, ತರಕಾರಿ, ಬೆಳೆಯುತ್ತಾರೆ. ೨ ಕೈ ಪಂಪುಗಳಿವೆ.

ಇಲ್ಲಿನ ಸಾಮೂಹಿಕ ರಚನೆಯಲ್ಲಿ ಲಂಬಾಣಿ ಜನಾಂಗ ದೊಡ್ಡ ಸಮುದಾಯವಾಗಿದ್ದು, ೬೦ ಲಂಬಾಣಿ ಜನಾಂಗ ಮನೆಗಳಿವೆ ೧ ಮನೆ ನಾಯಕರ ಮನೆ ಇದೆ. ಒಟ್ಟು ೨೨೨ ಜನ ಸಂಖ್ಯೆ ಹೊಂದಿದ್ದುಇಲ್ಲಿನ ಮನೆಗಳ ಆಶ್ರಮ ಇಂದಿರಾ ಆವಾಸ್, ವಸತಿ ಯೋಜನೆ, ಹಾಗೂ ಉಚಿತ ಭಾಗ್ಯ ಜ್ಯೋತಿ ವಿದ್ಯುತ್ ಸೌಲಭ್ಯ ಪಡೆದಿದ್ದಾರೆ. ೧೦ ಮನೆಯಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಇಲ್ಲಿನ ಮುಖ್ಯ ಆಹಾರ, ರೊಟ್ಟಿ, ಅನ್ನ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಬೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಗಾಡಿಯ ಜೊತೆಗೆ ಟ್ರಾಕ್ಟರ್, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ, ರಾಗಿ, ಹುರುಳಿ, ತೊಗರಿ, ಹತ್ತಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ತರಕಾರಿ, ಬೆಳೆಗಳಿವೆ. ಶೇಂಗಾ, ಹುಣಸೆಹಣ್ಣು, ಹೊಂಗೆಬೀಜ, ಕುರಿ ವ್ಯಾಪಾರ ವ್ಯಾಪಾರಿ ಸರಕಾಗಿದೆ. ಬೀಡಿಕಟ್ಟುವುದು ಹೂ ಕಟ್ಟುವುದು ಹೊಂಗೆ ಬೀಜ ಸಂಗ್ರಹ ಹುಣಸೆ ಹಣ್ಣು ಶುದ್ಧೀಕರಣ ಮಹಿಳೆಯರ ಗೃಹ ಕೆಲಸವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನ ಸಭಾಕ್ಷೇತ್ರ ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ ಹುಯಿಲ್ ದೊರೆ ತಾಲ್ಲೂಕು ಪಂಚಾಯ್ತಿ

ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದ ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಕಂಬದ ಹಳ್ಳಿಯಿಂದ ಕಚ್ಚಾರಸ್ತೆ ಸಂಪರ್ಕವಿದ್ದು, ಬಸ್ ಸೌಕರ್ಯ ಇರುವುದಿಲ್ಲ. ಹುಯಿಲ್ ದೊರೆಯವರ ಅಂಚೆ ಸಂಪರ್ಕವಿದೆ.

೨ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿದ್ದು, ಅಂಗನವಾಡಿ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು ೨೪ ಮಕ್ಕಳು, ಇಬ್ಬರು ಶಿಕ್ಷರಿದ್ದಾರೆ. ಶಾಲೆಯ ಬಿಸಿ ಊಟ, ಕ್ಷೀರಭಾಗ್ಯ ಶೌಚಾಲಯ, ಉಚಿತ ಪುಸ್ತಕ, ಬಟ್ಟೆ, ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೩೮ ರಷ್ಟಿದೆ.

ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧುವಾ ವೇತನ, ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಸೇವಾಲಾಲ್, ಬೀಮಸೇನೆ ದೇವರ ಪೌಳಿಗಳಿವೆ. ದೀಪಾವಳಿಯ ಸಂದರ್ಭದಲ್ಲಿ ಭೀಮವತಿ ಉತ್ಸವ ನಡೆಯುತ್ತದೆ. ಗೌರಸಂದ್ರದ ಮಾರಮ್ಮನಿಗೆ ಎದುರೆತ್ತಿ, ಆರತಿ, ಬ್ಯಾಟೆ ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ. ಪ್ರತಿ ವರ್ಷ ವಿರಾಟಪರ್ವ ಯಕ್ಷಗಾನ ಪ್ರಸಂಗವನ್ನು ಭಾಗವತ ಲಕ್ಷ್ಮಿರಾಮೇಗೌಡರ ನೇತೃತ್ವದಲ್ಲಿ ಏರ್ಪಡಿಸುವುದು ಇಲ್ಲಿನ ವಿಶೇಷವಾಗಿದೆ.

## ಚಿಕ್ಕ ಅಗ್ರಹಾರ

ಚಿಕ್ಕ ಅಗ್ರಹಾರ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿ ೨೦ ಕಿಮೀ ದೂರದಲ್ಲಿದೆ. ಈ ಗ್ರಾಮವು ಸಿರಾ–ಮೈಸೂರು ರಸ್ತೆಯಲ್ಲಿ ಬೆಂಚೆ ಗೇಟ್‌ನಿಂದ ಬಲಭಾಗಕ್ಕೆ ೬ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಊರು ಎಂದರ್ಥ. ಆದರೆ ಈ ಊರಿನಿಂದ ರಾಜನಿಗೆ ಸಲ್ಲಬೇಕಾಗಿದ್ದ ಆದಾಯವನ್ನು ಬ್ರಾಹ್ಮಣರು ಅನುಭವಿಸುತ್ತಿದ್ದರು. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೮೦.೨೦ ಹೆಕ್ಟೇರ್ ಆಗಿದ್ದು ಗ್ರಾಮಕ್ಕೆ ರಂಗನಹಳ್ಳಿ ಎಂಬ ಉಪಗ್ರಾಮವು ಹೊಂದಿಕೊಂಡಿದೆ. ಈ ಗ್ರಾಮವು ಚಿಕ್ಕ ಹಳ್ಳ, ದೊಡ್ಡ ಹಳ್ಳಗಳಿಂದ ಸುತ್ತುವರಿದಿದ್ದು ಒಂದು ಬಗೆಯ ದ್ವೀಪದಂತಿದೆ.

ಗ್ರಾಮದ ಭೂಮೇಲ್ಮೈ ಬಯಲುನಾಡಿನಿಂದ ಕೂಡಿದ್ದು ಖುಷ್ಕಿ ಭೂಮಿಯನ್ನು ಹೊಂದಿದೆ. ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿರುವ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಜಿಂಕೆ. ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೨೫.೯ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಹವಾಮಾನ ವೈಪರೀತ್ಯದಿಂದಾಗಿ ಬರಗಾಲ ಎದುರಿಸುತ್ತಿದೆ. ಗ್ರಾಮದಲ್ಲಿ ಒಂದು ಕಟ್ಟೆಯಿದೆ. ಇದು ಮಳೆಗಾಲದಲ್ಲಿ ಮಾತ್ರ ತುಂಬುತ್ತದೆ. ೭೩ ಕೊಳವೆ ಬಾವಿಗಳಿವೆ. ಕೃಷಿಗೆ ಅಗತ್ಯವಾದ ನೀರನ್ನು ಒದಗಿಸುತ್ತಿವೆ. ಕುಡಿಯುವ ನೀರಿಗಾಗಿ ೨ ಸಿಸ್ಟರ್ನ್‌ಗಳು ಮತ್ತು ಎರಡು ಕೈಪಂಪು (ಜಗ್ಗು)ಗಳಿವೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ.

ಗ್ರಾಮದಲ್ಲಿ ಒಟ್ಟು ೨೭೩ ಮನೆಗಳಿದ್ದು ೧೧೯೬ ಜನಸಂಖ್ಯೆಯನ್ನು ಹೊಂದಿದೆ. ಕಲ್ಲಿನ ಮನೆ, ಕಾಂಕ್ರೀಟ್ ಮನೆ, ಮಣ್ಣಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿಂದ ಕೂಡಿವೆ. ಈ ಗ್ರಾಮದಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಆದಿದ್ರಾವಿಡ, ನಾಯಕ, ಮುಸ್ಲಿಂ, ಈಡಿಗ, ವೈಷ್ಣವ, ಶಿಳ್ಳೇಕ್ಯಾತರು ಕಿರುಸಮುದಾಯವಾಗಿವೆ. ಇವರ ಭಾಷೆ ಕನ್ನಡ, ಉರ್ದುಗಳಾಗಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಗ್ರಾಮದ ರಸ್ತೆಯು ಡಾಂಬರು ಮತ್ತು ಕಚ್ಚಾ ರಸ್ತೆಯನ್ನು ಹೊಂದಿದ್ದು ಸ್ವಲ್ಪ ಪ್ರಮಾಣದ ಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ.

ಕೃಷಿಯು ಈ ಹಳ್ಳಿಯ ಪ್ರಮುಖ ಕಸುಬಾಗಿದೆ. ಇಲ್ಲಿ ಶೇಂಗಾ, ಸೂರ್ಯಕಾಂತಿ, ಭತ್ತ, ರಾಗಿ, ತೆಂಗು, ಅಡಿಕೆ ಮೊದಲಾದ ಬೆಳೆಗಳನ್ನು ಬೆಳೆಯುತ್ತಾರೆ. ಆಧುನಿಕ ಡೈರಿಯಿಂದ ಕೃಷಿಯ ಜೊತೆಗೆ ಆರ್ಥಿಕತೆ ಬೆಳವಣಿಗೆಗೆ ದನಕರುಗಳನ್ನು ಸಾಕಲಾಗುತ್ತಿದೆ. ಪ್ರಾಣಿಗಳ ವ್ಯಾಪಾರ ಮತ್ತು ಈರುಳ್ಳಿ, ತೆಂಗು, ಅಡಿಕೆ ವ್ಯಾಪಾರಿ ಸರಕುಗಳಾಗಿವೆ. ಇಲ್ಲಿ ಶಿಕ್ಷಣ, ಕಂದಾಯ, ಕೆಇಬಿ. ಅರಣ್ಯ, ಮಿಲಿಟರಿ ಇಲಾಖೆಗಳ ಒಟ್ಟು ೧೦ ಜನರು ಸರ್ಕಾರಿ ನೌಕರಿಯಲ್ಲಿದ್ದಾರೆ. ಯಾವುದೇ ಬೃಹತ್ ಕೈಗಾರಿಕೆಗಳಿಲ್ಲದಿದ್ದರೂ ಸಣ್ಣ ಪ್ರಮಾಣದ ಟೈಲರ್ ಮತ್ತು ಮಿಲ್‌ಗಳನ್ನು ಹೊಂದಿದೆ. ನಿವೃತ್ತ ಪ್ರಾಂಶುಪಾಲರಾದ ಸಿ.ಜೆ.ಭೂತಣ್ಣ, ಪ್ರೊ॥ ಜಿ.ಹಾಲಪ್ಪ, ಡಾ॥ಗೋವಿಂದಪ್ಪ ಇವರು ಈ ಗ್ರಾಮದ ನಿವೃತ್ತ ಅಧಿಕಾರಿಗಳಾಗಿದ್ದಾರೆ.

ಈ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ ಕ್ಷೇತ್ರವಾಗಿದ್ದು ದೊಡ್ಡ ಅಗ್ರಹಾರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಾಲ್ಲೂಕು ಕೇಂದ್ರವಾದ ಸಿರಾದಲ್ಲಿ ತಹಸೀಲ್ದಾರರ ಕಛೇರಿಯಿದೆ. ಕಳ್ಳಂಬೆಳ್ಳ ವಿದ್ಯುತ್ ಮತ್ತು ಉಪ ಪೊಲೀಸ್ ಠಾಣೆಯನ್ನು ಹೊಂದಿದೆ.

ಸಿರಾ-ಮೈಸೂರು ರಸ್ತೆ ಮಾರ್ಗದಲ್ಲಿ ಬೆಂಚೆ ಗೇಟ್‌ನಿಂದ ಬಲಭಾಗಕ್ಕೆ ೬ ಕಿಮೀ ದೂರಕ್ಕೆ ಸಂಪರ್ಕವಿದೆ. ದೊಡ್ಡ ಅಗ್ರಹಾರದಿಂದ ಅಂಚೆ ಸಂಪರ್ಕ ಹೊಂದಿದೆ. ಚರದೂರವಾಣಿಯಾದ ಮೊಬೈಲ್‌ಗಳು ಸಂಪರ್ಕ ಸಾಧನವಾಗಿವೆ. ಅಲ್ಲದೆ ಖಾಸಗಿ ಮತ್ತು ಕೆಎಸ್‌ಆರ್‌ಟಿಸಿ ಬಸ್ಸಿನ ಸೌಲಭ್ಯವನ್ನು ಪಡೆದುಕೊಂಡಿದೆ. ಸಣ್ಣಪುಟ್ಟ ಕಲಹಗಳು ಗ್ರಾಮ ಮಟ್ಟದಲ್ಲಿ ಇತ್ಯರ್ಥಪಡಿಸಲು ಗ್ರಾಮ ನ್ಯಾಯಮಂಡಳಿಯನ್ನು ರೂಪಿಸಿಕೊಂಡಿದೆ. ಬಗೆಹರಿಯದ ಕಲಹಗಳಿಗೆ ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳುತ್ತಾರೆ.

ಯಾವುದೇ ಬ್ಯಾಂಕಿಂಗ್ ವ್ಯವಸ್ಥೆ ಕಂಡುಬರುವುದಿಲ್ಲ. ಐದು ಸ್ತ್ರೀಶಕ್ತಿ ಸಂಘಗಳು ಮತ್ತು ಎರಡು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಅದರಲ್ಲಿ ೪೧ ಮಕ್ಕಳು, ಒಬ್ಬರು ಶಿಕ್ಷಕಿ ಮತ್ತು ಒಬ್ಬರು ಸಹಾಯಕಿಯಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ಕನ್ನಡ ಮಾಧ್ಯಮದಲ್ಲಿ ೧೧೦ ಮಕ್ಕಳು, ಇಬ್ಬರು ಶಿಕ್ಷಕರು, ಇಬ್ಬರು ಶಿಕ್ಷಕರಿಯರು ಹಾಗೂ ಮೂವರು ಬಿಸಿಯೂಟ ಅಡಿಗೆ ತಯಾರಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಕಾಂಪೌಂಡ್, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೭.೩% ಆಗಿದೆ. ಗ್ರಾಮದ ಜೆ.ಹಾಲಪ್ಪ ಎಂಬುವವರು ತುಮಕೂರಿನಲ್ಲಿ ಶ್ರೀರಂಗ ಮತ್ತು ಶಾರದಾಂಬ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಜನರು ಕುಟುಂಬ ಕಲ್ಯಾಣ ಯೋಜನೆಯನ್ನು ಪಡೆದುಕೊಂಡಿದ್ದಾರೆ. ವಾರಕ್ಕೊಮ್ಮೆ ಆರೋಗ್ಯ ಕಾರ್ಯಕರ್ತೆಯರು ಗ್ರಾಮಕ್ಕೆ ಭೇಟಿ ನೀಡಿ ಆರೋಗ್ಯ ಸಮಸ್ಯೆಯನ್ನು ತಿಳಿಯುತ್ತಾರೆ. ರಂಗಣ್ಣನವರು ಪಶುಗಳಿಗೆ ನಾಟಿ ಔಷಧಿಯನ್ನು ನೀಡುವ ವೈದ್ಯರಾಗಿದ್ದಾರೆ. ನಾಗೇಂದ್ರಪ್ಪ ಹಾವು ಕಡಿದ ವ್ಯಕ್ತಿಗಳಿಗೆ ಔಷಧಿ ನೀಡುವ ವೈದ್ಯರಾಗಿರುವುದು ಕಂಡುಬರುತ್ತದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೬ ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಹೊಂದಿದೆ. ಇಂದಿರಾ ಆವಾಸ್, ಜನತಾ, ಅಂಬೇಡ್ಕರ್ ವಸತಿ ಯೋಜನೆಯ ಹಾಗೂ ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳಿದ್ದಾರೆ.

ಐತಿಹಾಸಿಕ ಸಂಸ್ಕೃತಿಯ ಪ್ರತೀಕಗಳಾದ ಅಶ್ವತ್ಥಕಟ್ಟೆ, ಬೇವಿನ ಕಟ್ಟೆಯನ್ನು ಹೊಂದಿದ್ದು ಎರಡು ಕರಿಗಲ್ಲುಗಳನ್ನು ಹೊಂದಿದೆ. ಕಾರಹಬ್ಬದ ದಿನದಂದು ಈ ಕಲ್ಲುಗಳನ್ನು ಪೂಜಿಸುತ್ತಾರೆ. ಸ್ಮಾರಕದಲ್ಲಿ ಹಿಂದೆ ಕೋಟೆಯಿದ್ದು ಅದನ್ನು ಹಾಳಾಗಿರುವುದರಿಂದ ಕೆಡವಲಾಗಿದೆ. ಊರ ನಡುವೆ ಒಂದು ಚಾವಡಿಯಿದ್ದು ನ್ಯಾಯಕಟ್ಟೆಯಾಗಿದೆ. ಈ ಗ್ರಾಮದ ಅಣ್ಣಪ್ಪನವರ ಮಗ ದೊಡ್ಡಲಿಂಗಯ್ಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು.

ಧಾರ್ಮಿಕ ಸಂಸ್ಕೃತಿಯ ಕೇಂದ್ರಗಳಾದ ತಿಮ್ಮಪ್ಪ ಆಂಜನೇಯ ದೇವಾಲಯಗಳು, ಮಾರಮ್ಮನ ಜಾತ್ರೆ ನಡೆಯುತ್ತದೆ. ಇದಕ್ಕೆ ಬಲಿ ಮತ್ತು ಆರತಿಗಳನ್ನು ಮಾಡಿ ಜನರು ಭಕ್ತಿಭಾವದಿಂದ ಪೂಜಿಸುತ್ತಾರೆ. ಗ್ರಾಮದಲ್ಲಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದಂತಹ ಜಾನಪದ ಕ್ಷೇತ್ರದಲ್ಲಿ ಸೋಬಾನೆ ಪದಗಳು, ದೇವರ ಪದಗಳನ್ನು, ಭಜನೆಗಳನ್ನು ಮಾಡುವಂತಹ ಸಾಹಿತ್ಯಕಾರರನ್ನು ಹೊಂದಿದೆ. ಇದರಲ್ಲಿ ನಿಂಗಜ್ಜಿ, ದೇವರಂಗಮ್ಮ ಪ್ರಮುಖವಾಗಿ ಕಂಡುಬರುತ್ತಾರೆ. ಈ ಗ್ರಾಮದಲ್ಲಿ ಆದಿಕರ್ನಾಟಕರು ಅಂಬೇಡ್ಕರ್‌ರವರ ದಲಿತ ಯುವಕ ಸಂಘವನ್ನು ಸ್ಥಾಪಿಸಿಕೊಂಡಿರುವುದನ್ನು ಗಮನಿಸಬಹುದಾಗಿದೆ.

## ಚಿಕ್ಕಗಿರಿಯನಹಳ್ಳಿ

ಚಿಕ್ಕಗಿರಿಯನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಸಿರಾದಿಂದ ೨೩ ಕಿಮೀ ದೂರದಲ್ಲಿದ್ದು ಸಿರಾ-ಚೇಳೂರು ಮಾರ್ಗದ ರಸ್ತೆಯಲ್ಲಿ ಬೆಂಚೆ ಗೇಟ್‌ನಿಂದ ಬಲಭಾಗಕ್ಕೆ ೭.೮ ಕಿಮೀ ದೂರದಲ್ಲಿದೆ. ಇದು ಒಂದು ಕಂದಾಯ ಗ್ರಾಮವಾಗಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೧.೦೩ ಹೆಕ್ಟೇರ್‌ಗಳಾಗಿವೆ. ಚಿಕ್ಕಗಿರಿಯಣ್ಣ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ.

ಈ ಹಳ್ಳಿಯು ಬಯಲುನಾಡಿನ ಪ್ರದೇಶವಾಗಿದ್ದು ಮರಳುಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇಲ್ಲಿ ಯಾವುದೇ ಬೆಟ್ಟ-ಗುಡ್ಡ, ಅರಣ್ಯ ತೋಪುಗಳಾಗಲಿ ಕಂಡುಬರುವುದಿಲ್ಲ.

ಇಲ್ಲಿನ ವಾರ್ಷಿಕ ಮಳೆಯ ಪ್ರಮಾಣ ೪೩೮ ಮಿಮೀ ಸರಾಸರಿಯಾಗಿದೆ. ಈ ಭಾಗದಲ್ಲಿ ನಾಲ್ಕು ತೆರೆದ ಬಾವಿಗಳೊಂದಿಗೆ ಕೊಳವೆ ಬಾವಿಗಳಿವೆ. ಆದರೆ ತೆರೆದ ಬಾವಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದೆ. ಒಂದು ಕಟ್ಟೆಯಿದ್ದು ಮಳೆಗಾಲದಲ್ಲಿ ನೀರು ತುಂಬುತ್ತವೆ. ಕುಡಿಯುವ ನೀರಿನ ಬಳಕೆಗೆ ಒಂದು ಕೈಪಂಪನ್ನು ಕಲ್ಪಿಸಲಾಗಿದೆ. ಇದು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿ ನೀರು ಪೂರೈಕೆಯಾಗುತ್ತಿದೆ.

ಗ್ರಾಮದಲ್ಲಿ ಒಟ್ಟು ೭ ಮನೆಗಳಿದ್ದು ಎಲ್ಲಾ ಮನೆಗಳು ಶೀಟಿನ ಮನೆಗಳಾಗಿವೆ. ಇಲ್ಲಿ ಕುಂಚಿಟಿಗ ಜನಾಂಗದವರಿದ್ದು ೨೬ ಮಂದಿ ಜನಸಂಖ್ಯೆಯನ್ನು ಹೊಂದಿದೆ. ಇವರ ಮಾತೃಭಾಷೆ ಕನ್ನಡವಾಗಿದೆ. ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೩೮ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಕಚ್ಚಾರಸ್ತೆಯಿದೆ.

ಕೃಷಿ ಗ್ರಾಮದ ಪ್ರಮುಖ ಉದ್ಯೋಗವಾಗಿದೆ. ಇದರಲ್ಲಿ ಮುಖ್ಯ ಬೆಳೆಯಾಗಿ ಶೇಂಗಾ, ರಾಗಿ,ಭತ್ತ, ಜೋಳ, ನವಣೆ ಇತ್ಯಾದಿಗಳನ್ನು ಬೆಳೆಯುತ್ತಾರೆ. ಅಲ್ಲದೆ ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆಗಳನ್ನು ಬೆಳೆಯುತ್ತಾರೆ. ಇವು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಇಲ್ಲಿನ ಜನರು ಕೃಷಿ ಕಾರ್ಮಿಕರಾಗಿದ್ದು ಗಂಧದಕಡ್ಡಿ ಮತ್ತು ಬೀಡಿ ಸುತ್ತುವುದನ್ನು ಮುಂದುವರಿಸಿದ್ದಾರೆ.

ಈ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ಗೋಪಾಲದೇವರಹಳ್ಳಿ ತಾಲ್ಲೂಕು ಪಂಚಾಯ್ತಿ, ಸಿರಾ ತಹಸೀಲ್ದಾರ್ ಕಛೇರಿಯನ್ನು ಒಳಗೊಂಡಿದೆ. ಗೋಪಾಲದೇವರಹಳ್ಳಿ ಗ್ರಾಮ ಪಂಚಾಯ್ತಿಯನ್ನು ಹಾಗೂ ಕಳ್ಳಂಬೆಳ್ಳ ವಿದ್ಯುತ್ ಮತ್ತು ಪೊಲೀಸ್ ಠಾಣೆಯನ್ನು, ಗೋಪಾಲದೇವರಹಳ್ಳಿ ಅಂಚೆ ಕಛೇರಿಯನ್ನು ಹೊಂದಿದೆ. ಗ್ರಾಮದ ನ್ಯಾಯಮಂಡಳಿಯಲ್ಲಿ ಬಗೆಹರಿಯದ ಸಮಸ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳಲಾಗುತ್ತಿದೆ.

ಶಾಲೆಗೆ ಮಕ್ಕಳು ಶಿಡ್ಲೇಕೋಣ, ಕಳ್ಳಂಬೆಳ್ಳಕ್ಕೆ ಹೋಗಬೇಕಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೬% ಆಗಿದೆ.

ಚಿಕ್ಕಗಿರಿಯನಹಳ್ಳಿಯಲ್ಲಿ ಯಾವುದೇ ಉಪಆರೋಗ್ಯ ಕೇಂದ್ರವಿಲ್ಲದಿದ್ದರೂ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಈ ಗ್ರಾಮಕ್ಕೆ ಭೇಟಿ ನೀಡಿ ಆರೋಗ್ಯದ ಬಗ್ಗೆ ಮಾಹಿತಿ ನೀಡುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಗ್ರಾಮವು ಕುಟುಂಬ ಕಲ್ಯಾಣ ವ್ಯವಸ್ಥೆಯನ್ನು ಹೊಂದಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಅಂಗಡಿ ಹೋಟೆಲ್‌ಗಳಿಲ್ಲ. ಈ ಗ್ರಾಮದಲ್ಲಿ ಐತಿಹಾಸಿಕ ನೆಲೆಯ ಸ್ಮಾರಕ, ಶಾಸನ, ಹಸ್ತಪ್ರತಿಗಳು ಕಂಡುಬರುವುದಿಲ್ಲ. ಒಂದು ಬೇವಿನಕಟ್ಟೆಯನ್ನು ಹೊಂದಿದೆ.

ಧಾರ್ಮಿಕತೆಗೆ ಸಂಬಂಧಿಸಿದಂತೆ ಇಲ್ಲಿ ಗೋಪಾಲದೇವರಹಳ್ಳಿಯ ಗ್ರಾಮ ದೇವತೆಯನ್ನು ಪೂಜಿಸುತ್ತಾರೆ. ಸಾಂಪ್ರದಾಯಿಕ ಹಬ್ಬಗಳನ್ನು ಪ್ರತಿ ವರ್ಷವೂ ಆಚರಿಸುತ್ತಾರೆ. ಯುಗಾದಿ, ದೀಪಾವಳಿ, ದಸರಾ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಚೆನ್ನಯ್ಯನಪಾಳ್ಯ

ಚೆನ್ನಯ್ಯನಪಾಳ್ಯವು ಸಿರಾ ತಾಲ್ಲೂಕು ಕೇಂದ್ರದಿಂದ ನೈಋತ್ಯ ದಿಕ್ಕಿನಲ್ಲಿದೆ. ಸಿರಾದಿಂದ ೨೫.೫ ಕಿಮೀ ದೂರದಲ್ಲಿರುವ ಈ ಗ್ರಾಮವು ಕರೆಮಾದೇನಹಳ್ಳಿಯ ಮಜರೆ ಗ್ರಾಮವಾಗಿದೆ. ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೮.೧೦ ಹೆಕ್ಟೇರ್. ಇದು ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇಲ್ಲಿ ಅರಣ್ಯ, ಬೆಟ್ಟ–ಗುಡ್ಡಗಳು ಕಂಡುಬರುವುದಿಲ್ಲ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೩೫.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ೧೭ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಕುಡಿಯುವ ನೀರಿನ ವ್ಯವಸ್ಥೆಗೆ ೨ ಕೈಪಂಪುಗಳು ಮತ್ತು ಸಿಸ್ಟರ್ನ್‌ನ್ನು ಹೊಂದಿದೆ.

ಗ್ರಾಮದಲ್ಲಿ ಒಟ್ಟು ೪೮ ಮನೆಗಳಿದ್ದು ೧೬೭ ಜನಸಂಖ್ಯೆಯನ್ನು ಹೊಂದಿದೆ. ಕುಂಚಿಟಿಗ, ನಾಯಕ, ಬೋವಿ, ನಾಯಕರು, ಆದಿಕರ್ನಾಟಕರ ಮನೆಗಳಿವೆ. ಮುಖ್ಯ ಭಾಷೆ ಕನ್ನಡವಾಗಿದೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಗ್ರಾಮದ ಪ್ರಮುಖ ಉದ್ಯೋಗ ಕೃಷಿಯಾಗಿದ್ದು ಶೇಂಗಾ, ರಾಗಿ, ನವಣೆ, ಭತ್ತ, ಜೋಳ ಮತ್ತು ತೆಂಗು, ಅಡಿಕೆ, ಹುಣಸೆ ಮರಗಳು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಕೃಷಿ ಮತ್ತು ಕೂಲಿ ಕಾರ್ಮಿಕರಿದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಸಿರಾ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿಗೆ ಸೇರಿದೆ. ಸಿರಾದಲ್ಲಿ ತಹಸೀಲ್ದಾರ್ ಕಛೇರಿ, ರಾಮಲಿಂಗಾಪುರದಲ್ಲಿ ಗ್ರಾಮಪಂಚಾಯ್ತಿ ಕಛೇರಿಯಿದೆ. ಗ್ರಾಮದಿಂದ ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಬುಕ್ಕಾಪಟ್ಟಣ ಪೊಲೀಸ್ ಠಾಣೆ ಮತ್ತು ತುಪ್ಪದಕೋಣ ಅಂಚೆ ಕಛೇರಿ ವ್ಯಾಪ್ತಿಗೆ ಸೇರಿದೆ. ಗ್ರಾಮದಲ್ಲಿ ಗ್ರಾಮನ್ಯಾಯಮಂಡಳಿಯಿದೆ. ಬಗೆಹರಿಯದ ಸಮಸ್ಯೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ನ್ಯಾಯ ತೀರ್ಮಾನಗಳನ್ನು ಮಾಡಿಕೊಳ್ಳುತ್ತಾರೆ.

ಈ ಗ್ರಾಮದಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದಿದ್ದರೂ ಒಂದು ಹಿರೇಲಿಂಗೇಶ್ವರ ಬ್ಯಾಂಕ್, ಸ್ನೇಹಿತರ ರೈತಕೂಟ ಮತ್ತು ಎರಡು ಸ್ತ್ರೀಶಕ್ತಿ ಸಂಘಗಳು, ಒಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿಂದ ಸಣ್ಣ ಪ್ರಮಾಣದ ಉಳಿತಾಯ ಮತ್ತು ಸಾಲಸೌಲಭ್ಯ ಪಡೆಯಲಾಗುತ್ತಿದೆ.

ಇಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೧% ಆಗಿದೆ.

ಈ ಹಳ್ಳಿಯಲ್ಲಿ ಆರೋಗ್ಯ ಕೇಂದ್ರವಿಲ್ಲದಿದ್ದರೂ ಕುಟುಂಬ ಕಲ್ಯಾಣ ವ್ಯವಸ್ಥೆಯನ್ನು ಹೊಂದಿದ್ದು ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಗ್ರಾಮದ ಕರೆಯಾಲಪ್ಪನವರು ನಾಟಿ ಔಷಧಿಯನ್ನು ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಐತಿಹಾಸಿಕ ನೆಲೆಯ ಯಾವುದೇ ಸ್ಮಾರಕಗಳು, ಶಾಸನಗಳು ಕಂಡುಬರದಿದ್ದರೂ ಕರಿಗಲ್ಲು ಮತ್ತು ಅರಳಿವೃಕ್ಷಗಳಿವೆ. ಧಾರ್ಮಿಕ ಕೇಂದ್ರಗಳಾದ ಬಸವೇಶ್ವರ, ಭೂತಪ್ಪನ ಪೌಳಿಯನ್ನು ಒಳಗೊಂಡಿದೆ. ಗ್ರಾಮದೇವತೆ ಮಣ್ಣಮ್ಮನ ಜಾತ್ರೆಯನ್ನು ಮಾಡುತ್ತಾರೆ. ಜಾತ್ರೆಯಲ್ಲಿ ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿದೆ.

## ಚಿನ್ನಪ್ಪನಹಟ್ಟಿ (ಮಾಳಿಗೆಹಟ್ಟಿ)

ಚಿನ್ನಪ್ಪನಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ವಾಯುವ್ಯ ಕೇಂದ್ರದಲ್ಲಿದೆ. ಸಿರಾದಿಂದ ೨೭ ಕಿಮೀ ದೂರದಲ್ಲಿದ್ದು ಜನವಸತಿಯುಳ್ಳ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೪೨೦.೬ ಹೆಕ್ಟೇರ್‌ಗಳು. ಬಯಲುನಾಡು ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಬಣ್ಣದ ಮಣ್ಣನ್ನು ಹೊಂದಿದೆ. ಯರದಕಟ್ಟೆಯ ಉಪಗ್ರಾಮವಾಗಿದೆ. ಇದನ್ನೇ ಮಾಳಿಗೆಹಟ್ಟಿ ಎಂತಲೂ ಕರೆಯುತ್ತಾರೆ

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೫೮ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮದಲ್ಲಿ ೨೨ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ.

ಗ್ರಾಮದಲ್ಲಿ ಒಟ್ಟು ೬೪ ಮನೆಗಳಿದ್ದು ೨೪೮ ಜನಸಂಖ್ಯೆಯನ್ನು ಹೊಂದಿದೆ. ಇವು ಆಶ್ರಯ, ಜನತಾ ವಸತಿ ಯೋಜನೆಯಲ್ಲಿ ರಚನೆಯಾಗಿವೆ. ಇದು ಗೊಲ್ಲ ಜನಾಂಗದ ಪೂರ್ಣ ಗ್ರಾಮವಾಗಿದ್ದು ಬುಡಕಟ್ಟು ಗ್ರಾಮವಾಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ರಸ್ತೆ ವ್ಯವಸ್ಥೆಯಿದೆ.

ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ ಪ್ರಮುಖ ಬೆಳೆಯಾಗಿದ್ದು ಇದರೊಂದಿಗೆ ರಾಗಿ, ಭತ್ತ, ಜೋಳ, ದ್ವಿದಳ ಧಾನ್ಯಗಳು, ತೆಂಗು, ಅಡಿಕೆ ಬೆಳೆಗಳನ್ನು ಬೆಳೆಯುತ್ತಾರೆ. ಕುರಿ ವ್ಯಾಪಾರ, ಹುಣಸೆಹಣ್ಣು ಮುಖ್ಯ ವ್ಯಾಪಾರಿ ಸರಕಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ, ನೇರಳಗುಡ್ಡ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ಸಿರಾದಲ್ಲಿ ತಹಸೀಲ್ದಾರ್ ಕಛೇರಿ, ಬುಕ್ಕಾಪಟ್ಟಣದಲ್ಲಿ ಪೊಲೀಸ್ ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ. ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ. ಹಣಕಾಸಿನ ವ್ಯವಸ್ಥೆಗೆ ಬ್ಯಾಂಕಿಂಗ್ ಸೌಲಭ್ಯವನ್ನು ಹೊಂದಿಲ್ಲದಿದ್ದರೂ ೨ ಸ್ತ್ರೀಶಕ್ತಿ ಸಂಘಗಳಿವೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೦% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಈರದೊಡ್ಡಯ್ಯನವರು ಮನುಷ್ಯರ ರೋಗಗಳಿಗೆ ನಾಟಿ ಔಷಧ ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಚಿಲ್ಲರೆ ವ್ಯಾಪಾರದ ೨ ಅಂಗಡಿಗಳಿವೆ.

ಧಾರ್ಮಿಕ ಪರಂಪರೆಯಲ್ಲಿ ಚಿತ್ರದೇವರ ದೇವಾಲಯವಿದೆ. ಸಾಂಪ್ರದಾಯಿಕ ಹಬ್ಬಗಳೊಂದಿಗೆ ಚಿತ್ರದೇವರ ಜಾತ್ರೆಯನ್ನು ಮಾಡುತ್ತಾರೆ. ಹಿರಿಯ ಕಲ್ಲು, ಗುಡ್ಡೆಗಳಿವೆ. ದೀಪಾವಳಿ, ದಸರಾ ಹಬ್ಬಗಳಂದು ಪೂಜಿಸಲಾಗುವುದು. ದಸರಾ, ಯುಗಾದಿ, ದೀಪಾವಳಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಜವನಹಳ್ಳಿ

ಜವನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೩ ಕಿಮೀ ದೂರದಲ್ಲಿದೆ. ಸಿರಾ–ಮಧುಗಿರಿ ಮುಖ್ಯ ರಸ್ತೆಯ ಗುಳಿಗೇನಹಳ್ಳಿಯಿಂದ ಬಲಕ್ಕೆ ಮೂಗನಹಳ್ಳಿ ರಸ್ತೆಯಲ್ಲಿ ಜವನಹಳ್ಳಿ ಗ್ರಾಮವಿದೆ. ಗುಳಿಗೇನಹಳ್ಳಿಯ ಸಮೀಪದಲ್ಲಿಯೇ ಇದೆ. ಗ್ರಾಮದ ಕೆಲ ಹಿರಿಯರು ತಮ್ಮನ್ನು ಗುಳಿಗೇನಹಳ್ಳಿ ಮೂಲದಿಂದಲೇ ಗುರುತಿಸಿಕೊಳ್ಳುತ್ತಾರೆ. ಜವನಹಳ್ಳಿ, ಜವನಗೊಂಡನಹಳ್ಳಿ ಈ ಬಗೆಯ ಹೆಸರುಗಳು ಸಿರಾ ಸೀಮೆಯಲ್ಲಿ ಸಾಮಾನ್ಯವಾಗಿವೆ. ಚಿನ್ನೇನಹಳ್ಳಿ ದೊಡ್ಡಾಲದಮರದ ಸಮೀಪದಲ್ಲಿ ಒಂದು ಜವನಹಳ್ಳಿ ಇದೆ. ಈ ಹಿನ್ನೆಲೆಯಲ್ಲಿ ಇದೊಂದು ದೈವಮೂಲ ಹೆಸರಾಗಿದೆ. ಕುಂಚಿಟಿಗ ಜನಾಂಗದ ಕಾನೇನರ ಗೋತ್ರದ ಕುಲದೇವರು ಜವಲಿಂಗೇಶ್ವರ ಆದುದರಿಂದ ಆ ಗೋತ್ರದವರು ಸಾಮಾನ್ಯವಾಗಿ ಜವಲಿಂಗ ಎಂದು ಹೆಸರಿಟ್ಟುಕೊಳ್ಳುವುದು ವಾಡಿಕೆ. ಈ ಹಿನ್ನೆಲೆಯಲ್ಲಿ ಜವನಪ್ಪ, ಜವನಯ್ಯ, ಜವನಮ್ಮ, ಜವನಣ್ಣ ಎಂದು ಕರೆಯುವುದು ಸಾಮಾನ್ಯವಾಗಿದೆ. ಗುಳಿಗೇನಹಳ್ಳಿಯ ಸಮೀಪದ ಜವನಹಳ್ಳಿ ಇದೇ ಮೂಲದಿಂದ ದೇವರ ಹೆಸರಾಗಿ ನಂತರ ವ್ಯಕ್ತಿಯ ಹೆಸರಾಗಿ ಅದೇ ವ್ಯಕ್ತಿ ಈ ಗ್ರಾಮದ ಮೂಲ ಪುರುಷನಾದುದರಿಂದ ಜವನಹಳ್ಳಿ ಎಂದು ಕರೆಯಲಾಗಿದೆ. ಸಿರಾ ತಾಲ್ಲೂಕಿನ ವಿಶೇಷವಾಗಿ ಕುಂಚಿಟಿಗ ಜನಾಂಗದ ಜವರಯ್ಯ, ಜವರೇಗೌಡ ಈ ಹೆಸರುಗಳು ಜವಲಿಂಗೇಶ್ವರನ ರೂಪಾಂತರವಾಗಿ ಕರೆಯಲ್ಪಡುವ ನಾಮ ಸೂಚಕವಾಗಿವೆ. ಈ ಕಾರಣದಿಂದಲೇ ಜವನಹಳ್ಳಿ ಎಂಬ ಹೆಸರು ಬಂದಿದೆ.

ಜವನಹಳ್ಳಿ ಗುಳಿಗೇನಹಳ್ಳಿಯ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೧೪ ಹೆಕ್ಟೇರ್ ಆಗಿದೆ. ಕೆಂಪು–ಬಿಳಿ ಮಣ್ಣನ್ನು ಹೊಂದಿದ್ದು ನೀರಿನ ಆಸರೆ ಇರುವುದಿಲ್ಲ. ಕುರುಚಲು ಗಿಡ, ಪೊದೆ, ಹಳ್ಳ ದಿಣ್ಣೆಗಳಿಂದ ಕೂಡಿದ ಭೂಲಕ್ಷಣ. ಇಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಉಡ, ಬಾರುಬೆಕ್ಕು, ಮುಂಗುಸಿ, ಇಲಿ, ಹೆಗ್ಗಣ, ಅಳಿಲು, ಮಂಗ ಕಂಡುಬರುತ್ತವೆ. ಗ್ರಾಮದಲ್ಲಿ ಕೃಷಿಕರು ಹಸು ಹಾಗೂ ಹಳ್ಳಿಕಾರ್ ತಳಿ ಎತ್ತುಗಳನ್ನು ಸಾಕುತ್ತಾರೆ. ಕುರಿ, ಮೇಕೆ, ನಾಯಿ ಸಾಕುಪ್ರಾಣಿಗಳು. ಪಕ್ಷಿಗಳಾದ ಕೌಜಲಗ, ಕಾಗೆ, ಕೊಕ್ಕರೆ, ಕೋಗಿಲೆ, ಗರುಡ, ಹದ್ದು, ಗೊರವಂಕ, ಗಿಳಿ, ಗೂಬೆ, ಗುಬ್ಬಚ್ಚಿ ಕಂಡುಬರುತ್ತದೆ. ಕೋಳಿ ಸಾಕು ಪಕ್ಷಿಯಾಗಿದೆ.

ಬಿಸಿಲು ಬರಗಳೊಂದಿಗೆ ಹೊಂದಿಕೆಯಾಗಿಯೇ ಬಂದಿರುವ ಈ ಪ್ರದೇಶದಲ್ಲಿ ವಾರ್ಷಿಕ ಸರಾಸರಿ ಮಳೆ ಪ್ರಮಾಣ ೪೫೩.೬೦ ಮಿಮೀ ಆಗಿದ್ದು ಕೆಬ್ಬೆ ಭೂಮಿಗೆ ಏನೇನೂ ಸಾಲದು. ಬಿಸಿಲು ೩೭ ಡಿಗ್ರಿ ಇದ್ದರೆ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿದೆ. ರೈತಾಪಿ ಬದುಕಿಗೆ ಆಶ್ರಯವಾಗಿ ಈ ಪರಿಸರದಲ್ಲಿ ೨೩ ಕೊಳವೆ ಬಾವಿಗಳಿವೆ.

ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಬೇಡ, ನಾಯಕ, ಮಡಿವಾಳ ಸಣ್ಣ ಸಮುದಾಯವಾಗಿವೆ. ಕನ್ನಡ ಈ ಗ್ರಾಮದ ಮಾತೃಭಾಷೆಯಾಗಿದೆ. ಕಾಂಕ್ರೀಟ್, ಹೆಂಚಿನ ಹಾಗೂ ಶೀಟಿನ ಸ್ವರೂಪದ ೧೦೪ ಮನೆಗಳಿದ್ದು ಇಲ್ಲಿ ಜನತಾ, ಆಶ್ರಯ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ೪೨ ಫಲಾನುಭವಿಗಳಿದ್ದಾರೆ. ಗ್ರಾಮದ ಜನಸಂಖ್ಯೆ ೪೯೩ ಇದ್ದು ೨೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ-ರೊಟ್ಟಿ ಬಳಸುವವರಿದ್ದಾರೆ ಸಾಂದರ್ಭಿಕವಾಗಿ ಹೋಳಿಗೆ, ಪಾಯಸ, ಬಾಡೂಟದ ಭೋಜನ ಇರುತ್ತದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಬಂಡಿಯ ಜೊತೆಗೆ ಆಧುನಿಕ ವಾಹನವಾದ ಟ್ರ್ಯಾಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ತೊಗರಿ, ಹುರುಳಿ, ಜೋಳ, ನವಣೆಯನ್ನು ಆಹಾರ ಬೆಳೆಯನ್ನಾಗಿ ಬೆಳೆಯಲಾಗುವುದು. ಹುಣಸೆಹಣ್ಣು, ಶೇಂಗಾ ವಾಣಿಜ್ಯ ಬೆಳೆಯಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ರತ್ನಸಂದ್ರ ತಾಲ್ಲೂಕು ಪಂಚಾಯ್ತಿ ಜಿಲ್ಲಾ ಪಂಚಾಯ್ತಿ ಹಾಗೂ ರತ್ನಸಂದ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗುಳಿಗೇನಹಳ್ಳಿ, ಮೂಕನಹಳ್ಳಿ, ಸಿರಾ ಮಾರ್ಗವಾಗಿ ರಸ್ತೆಯಿದ್ದು ವಾಹನ ಸಂಚಾರ ಇರುವುದಿಲ್ಲ. ಬಸ್ಸಿಗಾಗಿ ಸಮೀಪದ ಗುಳಿಗೇನಹಳ್ಳಿ ಬರುತ್ತಾರೆ. ಶೈಕ್ಷಣಿಕರಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೧೬ ವಿದ್ಯಾರ್ಥಿಗಳಿದ್ದಾರೆ. ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು ಗ್ರಾಮದ ಸಾಕ್ಷರತೆ ಶೇ.೬೪.೯ ರಷ್ಟಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ ಹಾಗೂ ಸಮವಸ್ತ್ರ ವಿತರಣಾ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷೆ, ವೃದ್ಧಾಪ್ಯವೇತನ, ಅಂಗವಿಕಲ ವೇತನಗಳು ಸೇವಾ ಸೌಲಭ್ಯದ ಫಲಾನುಭವಿಗಳಿದ್ದಾರೆ. ಮಾರಮ್ಮನ ಪೌಳಿಯಿದ್ದು ವಾರ್ಷಿಕವಾಗಿ ಮಾರಮ್ಮನ ಊರಹಬ್ಬ ನಡೆಯುತ್ತದೆ. ಆರತಿ, ಬಾನ, ಬ್ಯಾಟೆ ಈ ಗ್ರಾಮದ ಹರಕೆ ಸಂಪ್ರದಾಯಗಳಾಗಿವೆ.

ಕೆ. ಕರಿಸ್ವಾಮಿ ಎಂಬುವವರು ಈ ಗ್ರಾಮದ ಕೆಂಚಣ್ಣನವರ ಮಗನಾಗಿದ್ದು ಬೆಂಗಳೂರಿನ ವಿಜಯಕರ್ನಾಟಕ ಪತ್ರಿಕೆಯ ಉಪಸಂಪಾದಕರಾಗಿದ್ದಾರೆ. ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ಚಿಂತಕರಲ್ಲಿ ಒಬ್ಬರಾಗಿದ್ದು ವಿವಿಧ ಪತ್ರಿಕೆ, ಸಾಂದರ್ಭಿಕ ಗ್ರಂಥಗಳಿಗೆ ಬರೆದ ಅಂಕಣ ಬರಹಗಳ 'ಹುರಿದುಂಬಿ' ಬೃಹತ್ ಸಂಪುಟ ಪ್ರಕಟವಾಗಿದೆ. ವ್ಯಕ್ತಿಚಿತ್ರ, ರಂಗಭೂಮಿ ಕಲಾವಿದರ ಸಂದರ್ಶನ, ವಿಚಾರ ಪ್ರಚೋದಕ ೪೦ ವೈವಿಧ್ಯಮಯ ಬರಹಗಳಿವೆ. ಆಕಾಶವಾಣಿ ಸೇರಿದಂತೆ ರಾಜ್ಯಮಟ್ಟದ ಕವಿಮೇಳ, ಗೋಷ್ಠಿಗಳಲ್ಲಿ ಬಹುಮಾನಿತ ಕವನಗಳ ಸಂಕಲನ 'ಉಕ್ಕೆಕಾಯಿ' ಪುಸ್ತಕ ಪ್ರಾಧಿಕಾರದ ಯುವ ಪ್ರಶಸ್ತಿಗೆ ಭಾಜನವಾದ 'ಸಿಂಗಾರಿತ್ಲು' ನಾಟಕ ಪ್ರಕಟವಾಗಿದೆ.

## ಜಯನಗರ

ಜಯನಗರ ಪಂಜಿಗಾನಹಳ್ಳಿ ಜೋಡಿ ಗ್ರಾಮವಾಗಿದ್ದು ಪ್ರತ್ಯೇಕ ಅಸ್ತಿತ್ವವನ್ನು ಪಡೆದುಕೊಂಡಿದೆ. ಸಿರಾ-ಚಿತ್ರದುರ್ಗ ರ್‍ಾಷ್ಟ್ರೀಯ ಹೆದ್ದಾರಿಯ ಸಮೀಪ ಪಂಜಿಗಾನಹಳ್ಳಿ ಸನಿಹದಲ್ಲೇ ಇರುವ ಈ ಗ್ರಾಮ ಸಿರಾ ನಗರಕ್ಕೆ ೮ ಕಿಮೀ ದೂರದಲ್ಲಿದೆ. ೭೫.೦೧ ಹೆಕ್ಟೇರ್ ಭೂ ಪ್ರದೇಶ ಹೊಂದಿದೆ.

ಮರಳು ಮಿಶ್ರಿತ ಕೆಂಪು ಮರಳನ್ನು ಹೊಂದಿದ್ದು ತೋಟಗಾರಿಕೆ, ಹಳ್ಳ-ದಿಣ್ಣೆಗಳಿಂದ ಕೂಡಿದೆ. ಹಾಗಾಗಿ ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮೊದಲಾದ ಕಾಡುಪ್ರಾಣಿಗಳು ಅಧಿಕವಾಗಿ ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕೌಜುಗ, ಗೂಬೆ, ಹದ್ದು, ಗರುಡ, ಕಾಗೆ, ಕೋಗಿಲೆ ಕಂಡುಬಂದರೆ ಕೋಳಿ ಸಾಕುಪಕ್ಷಿಯಾಗಿದೆ. ಗ್ರಾಮದಲ್ಲಿ ಹಸು, ಎತ್ತು, ಕುರಿ, ಮೇಕೆ, ಎಮ್ಮೆ ಸಾಕುಪ್ರಾಣಿಗಳಾಗಿವೆ. ವಾರ್ಷಿಕ ಸರಾಸರಿ ಮಳೆ ೪೬೦ ಮಿಮೀ ಆಗಿದ್ದು ಬಿಸಿಲು ೩೮ ಡಿಗ್ರಿ ಇದ್ದರೆ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಆಗಿದೆ. ಕೃಷಿಗಾಗಿ ೧೩ ಬೋರ್‌ವೆಲ್‌ಗಳಿವೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಯೋಜನೆಯಡಿಯಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ೬ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಕುರುಬ, ಲಂಬಾಣಿ, ಗೊಲ್ಲರು, ಮುಸ್ಲಿಂ, ಆದಿಕರ್ನಾಟಕ, ನಾಯಕ, ಬೋವಿ ಕಿರು ಸಮುದಾಯಗಳು. ಕನ್ನಡ, ಉರ್ದು, ತೆಲುಗು ಮಾತನಾಡುತ್ತಾರೆ. ವಿವಿಧ ಪ್ರಕಾರಗಳ ಒಟ್ಟು ೧೨೮

ಮನೆಗಳಿದ್ದು ಇಲ್ಲಿ ಜನತಾ, ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಯ ೬೩ ಫಲಾನುಭವಿಗಳಿದ್ದಾರೆ.

ಗ್ರಾಮದಲ್ಲಿನ ಒಟ್ಟು ಜನಸಂಖ್ಯೆ ೪೦೮ ಆಗಿದ್ದು ೧೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಹೆಂಚಿನ, ಶೀಟಿನ, ಕಾಂಕ್ರೀಟ್ ಸ್ವರೂಪದ ಮನೆಗಳಿವೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಡ್ಡಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಭೋಜನಗಳಾಗಿವೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳು ಈ ಗ್ರಾಮದಲ್ಲಿವೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಸೂರ್ಯಕಾಂತಿ ಆಹಾರ ಬೆಳೆಗಳು. ತೋಟಗಾರಿಕೆ, ಅಡಿಕೆ, ತೆಂಗು, ಸೀಡ್ಸ್ ಬೆಳೆಯಿದೆ. ಹುಣಸೇಹಣ್ಣು, ಹೊಂಗೆಬೀಜ ವಾಣಿಜ್ಯ ಬೆಳೆಗಳಾಗಿವೆ. ಇಲ್ಲಿ ಒಂದು ಸ್ವಸಹಾಯ ಯೋಜನೆಯಡಿ ಹಾಲು ಉತ್ಪಾದಕರ ಮಹಿಳಾ ಸಂಘವಿದೆ. ಸಾರಿಗೆ, ಶಿಕ್ಷಣ, ಆರೋಗ್ಯ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ಬೀಡಿ ಸುತ್ತುವುದು, ಊಟದ ಎಲೆ ತಯಾರಿಕೆ, ಟೈಲರಿಂಗ್ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಲಕ್ಷ್ಮೀಸಾಗರ ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಇಲ್ಲಿಂದ ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ೩ ಸ್ತ್ರೀಶಕ್ತಿ ಸಂಘಗಳು, ೧ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘ ಗುಂಪುಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಒಂದು ಅಂಗನವಾಡಿ ಕೇಂದ್ರವಿದ್ದು ೨೭ ಮಕ್ಕಳಿದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಕೆಯಾಗುತ್ತಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೭೦% ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೬ ಪೆಟ್ಟಿಗೆ ಅಂಗಡಿಗಳಿವೆ.

ಧಾರ್ಮಿಕವಾಗಿ ಉಡಸಲಮ್ಮ, ಮಾರಮ್ಮ ದೇವಾಲಯಗಳಿದ್ದು ಆಷಾಢ ಮಾಸದಲ್ಲಿ ಊರಹಬ್ಬ ಮಾಡಿ ಆರತಿ, ಬ್ಯಾಟೆ, ಬಾನ, ಹರಕೆ ಸಂಪ್ರದಾಯಗಳಿವೆ. ದೀಪಾವಳಿ, ದಸರಾ, ಗೌರಿ–ಗಣೇಶ, ಶಿವರಾತ್ರಿ, ಯುಗಾದಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಜುಂಜರಾಮನಹಳ್ಳಿ

ಜುಂಜರಾಮನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೫ ಕಿ.ಮೀ ದೂರದಲ್ಲಿದೆ. ಇದೊಂದು ಯಲಿಯೂರಿನ ಉಪಗ್ರಾಮವಾಗಿದ್ದು ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿಯ ಎಡಬದಿಗೆ ಒಂದು ಕಿಮೀ ದೂರದಲ್ಲಿದೆ. ಇದೊಂದು ಬಯಲು ಪ್ರದೇಶವಾಗಿದ್ದು ಕೆಂಪುಮಿಶ್ರಿತ ಮರಳು ಮಣ್ಣನ್ನು ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಮುಂಗುಸಿ ಕಂಡುಬಂದರೆ ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕುತ್ತಾರೆ. ಈ ಪರಿಸರದಲ್ಲಿ ಕಾಗೆ, ಕೋಗಿಲೆ, ಕೌಜಲಗ, ಗಿಳಿ, ಗುಬ್ಬಿಚ್ಚಿ, ಗೀಜಗ, ಹದ್ದು, ಗರುಡ ಕಂಡುಬರುತ್ತದೆ. ವಾರ್ಷಿಕ ಸರಾಸರಿ ೪೮೧.೪ ಮಿಮೀ ಮಳೆ ಬೀಳುತ್ತಿದ್ದು ಉಷ್ಣಾಂಶ ೩೭ ಡಿಗ್ರಿ ಸೆಂಟಿಗ್ರೇಡ್ ಇದ್ದರೆ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ನೀರಿನ ಯಾವುದೇ ಆಶ್ರಯಗಳಿಲ್ಲ. ಆದರೂ ಈ ಪರಿಸರದಲ್ಲಿ ೧೨ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಕುಡಿಯಲು ೨ ಸಿಸ್ಟರ್ನ್‌ಗಳಲ್ಲಿ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಒಂದು ಕೈಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ದೊಡ್ಡ ಸಮುದಾಯವಾಗಿದ್ದು ಈಡಿಗ, ಶ್ರೀವೈಷ್ಣವ, ಬಣಜಿಗ, ಕುಂಚಿಟಿಗ ಕಿರು ಸಮುದಾಯಗಳಾಗಿವೆ. ಜುಂಜರಾಮ ಎಂಬ ವ್ಯಕ್ತಿಯ ಹೆಸರಲ್ಲಿ ಈ ಗ್ರಾಮ ರಚನೆಯಾಗಿದೆ. ವಿವಿಧ ಆಕೃತಿಯ ಪ್ರಕಾರಗಳ ೩೮ ಮನೆಗಳಿದ್ದು ಅವು ಕಲ್ಲಿನ, ಶೀಟಿನ, ಹೆಂಚಿನ ಮನೆಗಳಾಗಿವೆ. ೨೧೯ ಜನಸಂಖ್ಯೆಯುಳ್ಳ ಈ ಗ್ರಾಮದಲ್ಲಿ ಶೌಚಾಲಯದ ಬಳಕೆ ೧೫ ಮನೆಗಳು ಮಾತ್ರವಿದೆ. ಗ್ರಾಮದ ಮುಖ್ಯ ಆಹಾರ ರಾಗಿಮುದ್ದೆ. ಅಮುಖ್ಯವಾಗಿ ಅನ್ನ, ಬಾಡೂಟ, ಪಾಯಸ, ಹೋಳಿಗೆ ಬಳಸುತ್ತಾರೆ. ಆಧುನಿಕ ವಾಹನವಾದ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ. ಉಚಿತ ಭಾಗ್ಯಜ್ಯೋತಿ, ಆಶ್ರಯ ಮನೆಗಳ ಫಲಾನುಭವಿಗಳಿದ್ದಾರೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಅವರೆ, ತೊಗರಿ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ತೆಂಗು ಇದೆ. ಶೇಂಗಾ, ಹುಣಸೆಹಣ್ಣಿನ ವಾಣಿಜ್ಯ ಕರಣವಿದೆ. ಇಬ್ಬರು ಸರ್ಕಾರಿ ನೌಕರರಿದ್ದಾರೆ. ಆಡಳಿತಾತ್ಮಕವಾಗಿ ಸಿರಾ ವಿಧಾನಸಭೆ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ ಹಾಗೂ ಯಲಿಯೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಬರುತ್ತದೆ.

ಗ್ರಾಮವು ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವುದರಿಂದ ಪ್ರಯಾಣಕ್ಕೆ ಅನುಕೂಲಕರವಾಗಿದೆ.

ಒಂದು ಸ್ತ್ರೀಶಕ್ತಿ ಕೇಂದ್ರವಿದೆ. ಒಂದು ಅಂಗನವಾಡಿ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಶಾಲೆಯಲ್ಲಿ ೨೬ ಮಕ್ಕಳಿದ್ದಾರೆ. ಒಬ್ಬರು ಶಿಕ್ಷಕರಿದ್ದು ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ವಿತರಣಾ ಸೌಲಭ್ಯವಿದೆ. ಶೇ.೬೪.೮ ರಷ್ಟು ಸಾಕ್ಷರರಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ ಸೌಲಭ್ಯಗಳಿವೆ. ೨ ಪೆಟ್ಟಿಗೆ ಅಂಗಡಿಗಳಿವೆ. ಹನುಮಂತರಾಯ ಗ್ರಾಮದ ಮುಖ್ಯ ದೈವ. ಮಾರಮ್ಮ ಗ್ರಾಮದೇವತೆಯಾಗಿದ್ದು ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ಮಹಾನವಮಿ, ದೀಪಾವಳಿ, ಶಿವರಾತ್ರಿ, ವರಮಹಾಲಕ್ಷ್ಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶ್ರೀ ರಾಮಾಂಜಿನಯ್ಯ ಎಂಬ ೮೦ ವರ್ಷ ವಯಸ್ಸಿನ ಹಿರಿಯ ಯಕ್ಷಗಾನ ಭಾಗವತರಿದ್ದು ಲವಕುಶ, ಶಿವ–ಜಲಂಧರ, ದುಶ್ಯಾಸನ ಕಥೆ, ಕರಿಭಂಟ ಈ ಮೊದಲಾದ ೫೦ ಕ್ಕೂ ಹೆಚ್ಚು ಮೂಡಲಪಾಯ ಯಕ್ಷಗಾನಗಳನ್ನು ಕಲಿಸಿ ಪ್ರದರ್ಶಿಸಿದ ಹಿರಿಮೆಗೆ ಪಾತ್ರರಾಗಿದ್ದಾರೆ. ಈಡಿಗರಹಳ್ಳಿ ರಮಾನಂದ, ಲಕ್ಷ್ಮಣ ಮೊದಲಾದ ಭಾಗವತರಿಗೆ ಕಲಿಸಿದ ಹಿರಿಮೆಯೂ ಇವರಿಗೆ ಸಲ್ಲುತ್ತದೆ.

## ಜುಂಜಪ್ಪನಗುಡ್ಡೆ ಹೊಸಹಳ್ಳಿ

ಜೆ.ಹೊಸಹಳ್ಳಿ ಸಂಕ್ಷಿಪ್ತವಾಗಿ ಕರೆಯಲ್ಪಡುವ ಈ ಗ್ರಾಮ ಕಂದಾಯ ಗ್ರಾಮವಾಗಿದ್ದು ೩೭೬.೫೮ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಸಿರಾ–ಬೇವಿನಹಳ್ಳಿ ಮುಖ್ಯರಸ್ತೆಯಲ್ಲಿ ಕುಂಬಾರಹಳ್ಳಿ ಕ್ರಾಸಿನಿಂದ ಬಲಕ್ಕೆ ತಿರುಗಿ ೨ ಕಿಮೀ ಕ್ರಮಿಸಿದರೆ ಹೊಸಹಳ್ಳಿಯನ್ನು ಪ್ರವೇಶಿಸಬಹುದು. ಸಿರಾ ತಾಲ್ಲೂಕಿನಲ್ಲಿ ನಾಲ್ಕಕ್ಕಿಂತ ಹೆಚ್ಚು ಹಳ್ಳಿಗಳು ಒಂದೇ ಹೆಸರಿನಿಂದ ರೂಪಿತಗೊಂಡಿರುವುದರಿಂದ ಸಂಪರ್ಕಕ್ಕೆ ಅನುಗುಣವಾಗಿ ಜುಂಜಪ್ಪನಗುಡ್ಡೆ ಹೊಸಹಳ್ಳಿ ಎಂದು ರೂಢನಾಮವಾಗಿದ್ದು ಆಂಗ್ಲಪದ ಬಳಕೆಯ ಸರ್ಕಾರಿ ದಾಖಲೆಗಳಲ್ಲಿ 'ಜೆ' ಎಂಬ ಸಂಕ್ಷಿಪ್ತ ಅಕ್ಷರವನ್ನು ಹೊಸಹಳ್ಳಿಗೆ ಪೂರ್ವದಲ್ಲಿ ಸೇರಿಸಿ 'ಜೆ.ಹೊಸಹಳ್ಳಿ' ಎಂದಾಗಿದೆ. ಇಂದು ಜೆ.ಹೊಸಹಳ್ಳಿ ಎಂದೇ ಹೆಸರಾಗಿದೆ.

ಸಾಂಸ್ಕೃತಿಕ ವೀರ ಜುಂಜಪ್ಪನ ಸಮಾಧಿ ಎಂದು ಭಾವಿಸುವ ಐತಿಹ್ಯ. ಈ ಗ್ರಾಮದ ಪಶ್ಚಿಮಕ್ಕೆ ಅರ್ಧ ಕಿಮೀ ದೂರದಲ್ಲಿ ದೇವಸ್ಥಾನವಿದೆ. ಜುಂಜಪ್ಪನ ಸಮಾಧಿ – ಹೊಸಹಳ್ಳಿ ನಡುವೆ ಹೊಸಹಳ್ಳಿ ಹೆಸರಿನ ಕೆರೆಯೊಂದು ಸಂಪರ್ಕ ಕಡಿತಗೊಳಿಸಿದೆ ಅಷ್ಟೇ. ಇಲ್ಲದಿದ್ದರೆ ಇದೊಂದು ಕೂಡು ಗ್ರಾಮವೇ ಆಗಿರುತ್ತಿತ್ತು. ಹೊಸಹಳ್ಳಿಯಲ್ಲಿ ೧೧೨ ಮನೆಗಳಿದ್ದು ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ. ಕುರುಬರು, ದೇವಾಂಗ, ಭಜಂತ್ರಿ ಹಾಗೂ ಆದಿಕರ್ನಾಟಕ ಜನಾಂಗ ಸಣ್ಣ ಸಮುದಾಯವಾಗಿದೆ. ಕಾಂಕ್ರೀಟ್, ಕಡಪಾ ಕಲ್ಲು, ಮಣ್ಣಿನ ಮನೆಗಳಿದ್ದು ಮೂರು ಗುಡಿಸಲುಗಳೂ ಇವೆ. ಇಲ್ಲಿ ಆಶ್ರಯ, ಜನತಾ ಯೋಜನೆಯ ೨೨ ಮನೆಗಳಿದ್ದು ಭಾಗ್ಯಜ್ಯೋತಿ ಫಲಾನುಭವಿಗಳಿದ್ದಾರೆ. ಈ ಎಲ್ಲವೂ ಹೆಂಚಿನ ಮನೆಗಳಾಗಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ತಿಂಡಿಯಾಗಿ ಉಪ್ಪಿಟ್ಟು, ದೋಸೆ, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾಗಿ ಎತ್ತಿನ ಬಂಡಿ, ಆಧುನಿಕ ವಾಹನವಾಗಿ ಟೆಂಪೋ, ಸ್ಕೂಟರ್ ಬಳಕೆಯಲ್ಲಿದೆ. ಶೇಂಗಾ, ರಾಗಿ, ಹತ್ತಿ, ಮುಸುಕಿನ ಜೋಳ, ಸೂರ್ಯಕಾಂತಿ ಇವುಗಳನ್ನು ಬೆಳೆಯುವ ಇಲ್ಲಿನ ರೈತರು ಹುಣಸೆಹಣ್ಣು, ಸೇವಂತಿಗೆ, ತೆಂಗು ಬೆಳೆಗಳನ್ನು ಆರ್ಥಿಕ ಬೆಳೆಯಾಗಿ ಬೆಳೆಯುತ್ತಾರೆ. ಒಟ್ಟು ೫೧೮ ಜನಸಂಖ್ಯೆ ಇರುವ ಈ ಗ್ರಾಮದಲ್ಲಿ ಶೇ.೫೮ ರಷ್ಟು ಸಾಕ್ಷರತೆ ಇದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಈ ಗ್ರಾಮದ ಶೈಕ್ಷಣಿಕ ಕೇಂದ್ರಗಳು. ಐವರು ಸರ್ಕಾರಿ ನೌಕರರಿದ್ದು ಉನ್ನತ ಶಿಕ್ಷಣಕ್ಕೆ ಸಿರಾ, ತಾವರೆಕೆರೆ, ಭೂತಪ್ಪನ ಗುಡಿ ಈ ಸ್ಥಳಗಳಿಗೆ ಹೋಗಬೇಕಾಗಿದೆ. ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ, ಗೌಡಗೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವೂ ಆಗಿದ್ದು ತಾವರೆಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರವಾಗಿದೆ. ತಾಲ್ಲೂಕು ಕಛೇರಿ, ಆರೋಗ್ಯ ಕೇಂದ್ರಗಳಿಗೆ ಸಿರಾ ನಗರಕ್ಕೆ ಬರಬೇಕಾಗಿದೆ. ಒಂದು ಹಾಲಿನ ಡೈರಿಯಿದ್ದು ಹಾಲನ್ನು ಸಂಗ್ರಹಿಸಿ ಸಿರಾ ಡೈರಿಗೆ ತಲುಪಿಸಲಾಗುತ್ತದೆ. ಎರಡು ಸ್ತ್ರೀಶಕ್ತಿ ಸಂಘಗಳಿವೆ.

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೪ ಅಂಗಡಿಗಳಿವೆ.

ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ, ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸಿರಾ–ಧರ್ಮಪುರ ಮಾರ್ಗವಾಗಿ ಬಂದಿರುವ ಜಿಲ್ಲಾ ಮುಖ್ಯ ರಸ್ತೆಯಲ್ಲಿ ಬೇವಿನಹಳ್ಳಿಯಿಂದ ಈಚೆಗೆ ಒಂದು ಕಿ.ಮೀ ದೂರದಿಂದ ಜುಂಜಪ್ಪನ ಗುಡ್ಡೆಗೆ ಸಂಪರ್ಕ ಕಲ್ಪಿಸಿರುವ ಮುಖ್ಯರಸ್ತೆಯಿಂದ ಎಡಬದಿಗೆ ಜೆ.ಹೊಸಹಳ್ಳಿಗೂ ಡಾಂಬರ್ ರಸ್ತೆ ನಿರ್ಮಿಸಿದ್ದಾರೆ. ತಾವರೆಕೆರೆ–ಹೊಸೂರು ರಸ್ತೆಯ ಭೂತಪ್ಪನ ಗುಡಿಯಿಂದಲೂ ಜೆ.ಹೊಸಹಳ್ಳಿಗೆ ಜಿ.ಪಂ ರಸ್ತೆಯದ್ದು ಇದು ಜಲ್ಲಿಕಲ್ಲಿನ ಕಚ್ಚಾರಸ್ತೆಯಾಗಿರುತ್ತದೆ. ಮಳೆಯ ನೀರು ಆಶ್ರಯಿತ ಇಲ್ಲಿನ ಬದುಕು, ರೈತಾಪಿ ಕುಟುಂಬ ಕೆಂಪು, ಕೆಬ್ಬೆ ಹಾಗೂ ಮರಳು ಮಿಶ್ರಿತ ಮಣ್ಣನ್ನು ಹೊಂದಿದ್ದು ಶೇಂಗಾ ಹಾಗೂ ಸೂರ್ಯಕಾಂತಿ ಬೆಳೆಗೆ ಉತ್ತಮವಾಗಿದೆ.

ವಾಡಿಕೆ ಮಳೆ ೪೬೮ ಮಿಮೀ ಆಗಿದ್ದು ಉಷ್ಣಾಂಶ ೩೬ ಡಿಗ್ರಿ ಹಾಗೂ ಚಳಿ ೯–೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೊಳವೆ ಬಾವಿಯಿಂದ ಕುಡಿಯುವ ನೀರಿನ ಸೌಲಭ್ಯ ಹೊಂದಿರುವ ಈ ಗ್ರಾಮದಲ್ಲಿ ನಾಲ್ಕು ಕೈಪಂಪುಗಳಿವೆ. ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಗ್ರಾಮದ ಪ್ರಮುಖ ಸಾಕುಪ್ರಾಣಿಗಳಾದರೆ ಬಯಲು, ಗಿಡ–ಪೊದೆಗಳ ಬಯಲಲ್ಲಿ ನರಿ, ಕರಡಿ, ಕಾಡುಹಂದಿ, ಜಿಂಕೆ, ಮೊಲ ವಾಸಿಸುತ್ತವೆ. ಇಬ್ಬರು ಸರ್ಕಾರಿ ನೌಕರರು ಈ ಗ್ರಾಮದಲ್ಲಿದ್ದಾರೆ. ಹಳ್ಳಿಕಾರ್ ತಳಿ ಎತ್ತುಗಳು ಈ ಗ್ರಾಮದ ವಿಶೇಷವಾಗಿವೆ.

## ಜವನಹಳ್ಳಿ

ಜವನಹಳ್ಳಿ ಒಂದು ಕಂದಾಯ ಗ್ರಾಮವಾಗಿದ್ದು ಕಳ್ಳಂಬೆಳ್ಳ ಹೋಬಳಿಗೆ ಸೇರಿದೆ. ಸಿರಾ – ತುಮಕೂರು ರ್‍ಾಷ್ಟ್ರೀಯ ಹೆದ್ದಾರಿಯ ಬ್ರಹ್ಮಸಂದ್ರ ಗೇಟ್ ಎಡ ಮುಖವಾಗಿ ಮೂರು ಕಿ.ಮೀ. ದೂರದಲ್ಲಿ ಈ ಗ್ರಾಮವಿದೆ. ಜವಲಿಂಗೇಶ್ವರ ಒಕ್ಕಲುಗಳಲ್ಲಿ ಜವನಮಯ್ಯ, ಜವಲಿಂಗಪ್ಪ ಎಂದು ಹುಟ್ಟುವ ಮಕ್ಕಳಿಗೆ ಕರೆದುಕೊಳ್ಳುವ ವಾಡಿಕೆಯಿದೆ. ಈ ಕಾರಣದಿಂದಲೇ ಜವನಯ್ಯ ದೈವ ಮೂಲದಿಂದ ಜವನಹಳ್ಳಿ ಎಂದು ಹೆಸರು ಬಂದಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ. ದೂರದಲ್ಲಿರುವ ಈ ಗ್ರಾಮ ೮೦.೩೨ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ. ಮುಂಭಾಗದ ಬಲಬದಿಗೆ ಗುಡ್ಡ, ಎಡಭಾಗಕ್ಕೆ ತರೂರು ಗುಡ್ಡ, ಹಳ್ಳ–ದಿಣ್ಣೆಗಳಿಂದ ಕೂಡಿದ ಪ್ರದೇಶವಾಗಿದೆ.

ಹಾಗಾಗಿ ಈ ಪ್ರದೇಶದಲ್ಲಿ ಕಾಡುಪ್ರಾಣಿಗಳಾದ ಜಿಂಕೆ, ನರಿ, ಮೊಲ, ಉಡ, ಕರಡಿ, ಬೆಕ್ಕು, ಕಂಡು ಬಂದರೆ, ಗ್ರಾಮದಲ್ಲಿ ಎತ್ತು, ಕುರಿ, ಮೇಕೆ, ಎಮ್ಮೆ, ಕೋಳಿ ಸಾಕು ಪ್ರಾಣಿಗಳಾಗಿವೆ.

ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಕೋಗಿಲೆ, ಕಾಗೆ, ಕೊಕ್ಕರೆ, ಗಿಳಿ, ಗೊರವಂಕ, ಬೆಳವ, ಬಾವಲಿ ಮೊದಲಾದ ಪಕ್ಷಿಗಳು ಕಂಡು ಬರುತ್ತವೆ. ಬಿಸಿಲು–ಧಗೆ ಎರಡೂ ಅಧಿಕ. ಸರಾಸರಿ ವಾರ್ಷಿಕ ಮಳೆ ೫೫೭.೩ ರಷ್ಟು ಮಳೆ ಬಿದ್ದಿದೆ. ಉಷ್ಣಾಂಶ ೩೮೦ ಸೆಂ.ರಷ್ಟಿದ್ದು, ಚಳಿಯ ಪ್ರಮಾಣ ೧೨೦ ಸೆಂ. ಇದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ನಾಲ್ಕು ಕಿರು ಟ್ಯಾಂಕ್‌ಗಳಿದ್ದು, ಒಂದು ಕೈ ಪಂಪು ಇದೆ. ಕೃಷಿಗೆ ೨೧ ಕೊಳವೆ ಬಾವಿಗಳಿವೆ.

ಸಾಮಾಜಿಕ ರಚನೆಯಲ್ಲಿ ಕುರುಬ ಮತ್ತು ಕುಂಚಿಟಿಗ ಜನಾಂಗ ಸಮ ಸಂಖ್ಯೆಯಲ್ಲಿದ್ದಾರೆ. ಬೇಡ, ನಾಯಕರು, ಬೆತ್ತ ಗೊಲ್ಲರು ಕಿರು ಸಮುದಾಯಗಳಿವೆ. ವಿವಿಧ ಸ್ವರೂಪದ ೭೦ ಮನೆಗಳಿದ್ದು ಅವು ಹೆಂಚಿನ, ಶೀಟಿನ, ಕಾಂಕ್ರೀಟಿನ ಹಾಗೂ ಬಂಡೆಯ ಮನೆಗಳಾಗಿವೆ. ೨ ಗುಡಿಸಲುಗಳೂ ಇವೆ. ಈ ಗ್ರಾಮದಲ್ಲಿ ೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೩೮೪ ಜನಸಂಖ್ಯೆ ಇದೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಬಂಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ಹಾಗೂ ದ್ವಿಚಕ್ರವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಜೋಳ, ತೊಗರಿ, ಅಲಸಂದಿ ಆಹಾರ ಬೆಳೆಗಳು. ತೆಂಗು, ಸೂರ್ಯಕಾಂತಿ, ಸೇವಂತಿ ತೋಟಗಾರಿಕೆ ಬೆಳೆಗಳಾಗಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ವಿದ್ಯಾ ಇಲಾಖೆಗೆ ಸೇರಿದ ಉಪನ್ಯಾಸಕ ಪುಟ್ಟಲಿಂಗಯ್ಯ, ಕೃಷಿ ಇಲಾಖೆಯ ತಾಯಮ್ಮ, ವಕೀಲ ಜವನಯ್ಯ, ಶಿವರಾಮು, ಉದಯಶಂಕರ್, ತಾಲ್ಲೂಕು ಕಂದಾಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರೆಲ್ಲರೂ ಒಂದೇ ಗ್ರಾಮದವರು. ೭ ಜನ ಸರ್ಕಾರಿ ನೌಕರರಿದ್ದು, ಮಹಿಳೆಯರು ಹೂ ಕಟ್ಟುವುದು, ಬೀಡಿ ಕಟ್ಟುವುದು, ಗೃಹ ಕೈ ಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರಕ್ಕೆ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯತ್, ಚಿನ್ನೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದ ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ೨

ಸ್ತ್ರೀ ಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಹಕಾರ ಸಂಘವಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ೨೪ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು, ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ, ಪುಸ್ತಕ ವಿತರಣಾ ಸೌಲಭ್ಯವಿದೆ. ಶೇ.೬೫.೮ ರಷ್ಟು ಸಾಕ್ಷರತೆ ಇದೆ. ರಾಷ್ಟ್ರಬಂಧು ಯುವಕ ಸಂಘ ಕ್ರಿಯಾಶೀಲವಾಗಿ ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗೆ ಉತ್ತೇಜಿಸುತ್ತಿದೆ. ನಾಗರಾಜ್ ಇದರ ಅಧ್ಯಕ್ಷರು ಮತ್ತು ಚೇತನ್ ಕಾರ್ಯದರ್ಶಿಯಾಗಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳಾದ ಫಲಾನುಭವಿಗಳಿದ್ದಾರೆ. ನೊಳಂಬರ ಕಾಲಕ್ಕೆ ಸಂಬಂಧಿಸಿದ ೧೦ ನೇ ಶತಮಾನದ ಒಂದು ವೀರ ಮಾಸ್ತಿ ಕಲ್ಲು ಇದ್ದು, ವೀರನ ಸಾವಿರ ಚಿತ್ರಣವನ್ನು ಸೊಗಸಾಗಿ ಚಿತ್ರಿಸಿದೆ. ಗ್ರಾಮದಲ್ಲಿ ಬಸವೇಶ್ವರ, ದೇವಾಲಯವಿದೆ. ಶ್ರಾವಣ ಮಾಸದಲ್ಲಿ ಇದಕ್ಕೆ ಆರತಿ ಮಾಡುತ್ತಾರೆ. ಗ್ರಾಮದಲ್ಲಿ ಬಸವ ಜಯಂತಿ ವಿಜೃಂಭಣೆಯಿಂದ ಮಾಡುತ್ತಾರೆ. ಕುರಿ ದುಪ್ಪಟ ಕತ್ತರಿಸುವ, ಕಂಬಳಿ ತಯಾರಿಸುವ, ಮಾರಾಟದ ಕುಶರ ಕೆಲಸದವರಿದ್ದಾರೆ. ಸಿರಾ ತುಮಕೂರಿಗೆ ಸಮರ್ಪಕವಾದ ರಸ್ತೆ ಸಂಚಾರವಿದೆ.

## ಜಯಚಂದ್ರ ಬಡಾವಣೆ

ಜಯಚಂದ್ರ ಬಡಾವಣೆ, ಜಯಚಂದ್ರ ನಗರ, ಚಿಕ್ಕನಹಳ್ಳಿ ಫಾರಂ ಎಂದೆಲ್ಲಾ ಕರೆಸಿಕೊಂಡು, ಗ್ರಾಮ ರಚನೆಯಾಗಿರುವ ಜಯಚಂದ್ರ ಬಡಾವಣೆ, ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ, ಸಿರಾ–ಮೈಸೂರು ಮುಖ್ಯ ರಸ್ತೆಯಲ್ಲಿದೆ. ಸಿರಾದಿಂದ ೯.೫ ಕಿ.ಮೀ. ದೂರದಲ್ಲಿದ್ದು, ಇದು ಚಿಕ್ಕನಹಳ್ಳಿಯ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೨೩ ಹೆಕ್ಟೇರ್ ಆಗಿದೆ. ಈ ಭಾಗದ ಜನಪ್ರಿಯ ರಾಜಕಾರಣಿ, ಸಮಾಜ ಸೇವಕ, ಟಿ.ಬಿ.ಜಯಚಂದ್ರ ಅವರು ಕೃಷಿ ಸಚಿವರಾಗಿದ್ದ ಕಾಲಕ್ಕೆ, ಇಲ್ಲಿ ಜೋಗು, ದರಖಾಸ್ತು ಜಮೀನಿನಲ್ಲಿ ವಸತಿ ಯೋಜನೆ ರೂಪಿಸಿ ನಿರಾಶ್ರಿತ ವಸತಿ ಹೀನರಿಗೆ ಹಂಚಿದ್ದರು. ಮುಂದೆ ಒಂದೊಂದಾಗಿ ಅಲ್ಲಿ ಮನೆಗಳು ಏಳಲಾರಂಭಿಸಿದವು. ಗ್ರಾಮ ನಿರ್ಮಾಣ ವಾದಾಗ, ಜಯಚಂದ್ರ ಅಧಿಕಾರಿದಲ್ಲಿ ಇರಲಿಲ್ಲ. ಆದರೂ ತಮಗೆ ಆಶ್ರಯ ಕಲ್ಪಿಸಿದ ಕೃತಾರ್ಥವಾಗಿ ಜಯಚಂದ್ರ ಅವರ ಹೆಸರನ್ನೇ ಗ್ರಾಮಕ್ಕೆ ಇಡಲಾಗಿದೆ. ಹೀಗೆ ಒಂದೊಂದೇ ಮನೆಗಳು ೧೯೭೪–೭೯ ರಿಂದ ಬೆಳೆದು, ಇಂದು ದೊಡ್ಡ ಊರಾಗಿದೆ. ೫೦ ಮನೆಗಳು ರಚನೆಯಾಗಿದೆ. ನಾಗರೀಕ ಸೌಲಭ್ಯ ಪಡೆದಿದೆ.

ಗ್ರಾಮದ ಬದಿಗೆ ವಿಶ್ವವಿದ್ಯಾನಿಲಯದ ಸ್ವರೂಪದ ಮುರಾರ್ಜಿ ಬಾಲಕ–ಬಾಲಕಿಯರ ವಸತಿ ಶಾಲೆ, ಅಧ್ಯಾಪಕರ ನಿವಾಸಗಳು, ಬೋಧನಾ ಕೊಠಡಿಗಳು, ಅದಕ್ಕೆ ಹೊಂದಿಕೊಂಡೇ ಇರುವ ಜಯಚಂದ್ರ ಬಡಾವಣೆ ಆಕರ್ಷಕ ಗ್ರಾಮವಾಗಿ ಬೆಳೆಯುತ್ತಿದೆ. ಕುರುಚಲು ಗಿಡ, ಮರ, ಪೊದೆ, ಸುತ್ತ ಬಯಲು ಪ್ರದೇಶವಾಗಿರುವ ಈ ಹಳ್ಳಿ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಕರಡಿ, ಉಡ ಮೊದಲಾದ ಕಾಡು ಪ್ರಾಣಿಗಳಿವೆ. ಸಾಕು ಪ್ರಾಣಿಯಾಗಿ ಹಸು, ಎಮ್ಮೆ, ಕುರಿ, ಮೇಕೆ, ಕೋಳಿಗಳನ್ನು ಸಾಕಲಾಗುತ್ತಿದೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಕೌಜಲ, ಬೆಳವ, ಕೋಗಿಲೆ, ಕಾಗೆ ಕಂಡು ಬರುತ್ತವೆ. ವಾರ್ಷಿಕ ಸರಾಸರಿ ಮಳೆ ಪ್ರಮಾಣ ೪೮೧.೪ ಮಿ.ಮೀ ಬಿಸಿಲಿನ ತಾಪ ೩೮೦ ಸೆಂ. ಆಗಿದ್ದು, ಚಳಿ ೧೨೦ ಸೆಂ. ಆಗಿದೆ. ಈ ಭಾಗದಲ್ಲಿ ೫ ಕೊಳವೆ ಬಾವಿಗಳಿದ್ದು ಕೃಷಿ ಕೆಲಸಕ್ಕೆ ಬಳಕೆಯಾಗುತ್ತಿವೆ. ಚಿಕ್ಕನಹಳ್ಳಿ ಕೆರೆ ಇದ್ದು, ತುಂಬುವುದು ಅತಿ ವಿರಳ. ಹಾಗಾಗಿ ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆ ಅಡಿಯಿಲ್ಲಿ ನೀರು ಪೂರೈಸಲಾಗುತ್ತಿದೆ. ೩ ಸಿಸ್ಟನ್‌ಗಳಿವೆ. ಒಂದು ಕೈ ಪಂಪು ಇದೆ. ಸಾಮಾಜಿಕ ರಚನಯಲ್ಲಿ ಕುಂಚಿಟಿಗ ಸಮುದಾಯ ದೊಡ್ಡ ಜನಾಂಗವಾಗಿದ್ದು, ಆದಿ ಕರ್ನಾಟಕ, ಗೊಲ್ಲ, ತಿಗಳ, ಸಾದರ, ಬೇಡರು, ಮಡಿವಾಳರು, ಕಿರು ಸಮುದಾಯವಾಗಿವೆ. ಕಾಂಕ್ರೀಟ್, ಹೆಂಚಿನ, ಶೀಟಿನ ಒಟ್ಟು ೫೨ ಮನೆಗಳಿದ್ದು, ೧೬ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್, ವಸತಿ ಯೋಜನೆಯ ೨೩ ಫಲಾನುಭವಿಗಳಿದ್ದು, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯವನ್ನು ಉಚಿತವಾಗಿ ಪಡೆದಿದ್ದಾರೆ. ೨೫೮ ಜನಸಂಖ್ಯೆ ಇದೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರ, ರೊಟ್ಟಿ, ಅನ್ನ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನ, ಗ್ರಾಮದಲ್ಲಿ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಜೋಳ, ತೊಗರಿ, ಹುರುಳಿ ಬೆಳೆಯುತ್ತಾರೆ. ಹುಣಸೆಹಣ್ಣು, ಹಾಗೂ ಶೇಂಗಾ ವ್ಯಾಪಾರಿ ಬೆಳೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯಿತಿ, ಹಾಗೂ ಗ್ರಾಮ ಪಂಚಾಯಿತಿ ಕ್ಷೇತ್ರ ಸ್ಥಾನವಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ೨ ಸ್ತ್ರೀ ಶಕ್ತಿ ಸ್ವಸಹಾಯ, ಹಾಗೂ ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯದ ಸಂಘಗಳಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ೩೦ ಮಕ್ಕಳು, ೨ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪಠ್ಯ ಪುಸ್ತಕ ವಿತರಣೆ ಇದೆ. ಮುರಾರ್ಜಿ ವಸತಿಶಾಲೆ ಇದೇ ಗ್ರಾಮದ ವ್ಯಾಪ್ತಿಗೆ ಬರುತ್ತದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ, ಸೌಲಭ್ಯವಂತರಿದ್ದು, ೧ ಪೆಟ್ಟಿಗೆ ಅಂಗಡಿ ಇದೆ. ಗ್ರಾಮದಲ್ಲಿ ಮಾರಮ್ಮ, ಹನುಮಂತ ರಾಯನ ದೇವಾಲಯಗಳಿವೆ. ಯುಗಾದಿ, ದೀಪಾವಳಿ, ಮಹಾನವಮಿ, ಗೌರಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಜೋಗಿಹಳ್ಳಿ

ಜೋಗಿಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೨ ಕಿ.ಮೀ. ದೂರದಲ್ಲಿದೆ. ಇದೊಂದು ಸೀಬಿ ಅಗ್ರಹಾರದ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ, ೧೩೨.೯ ಹೆಕ್ಟೇರ್ ಆಗಿದೆ.

ಇದೊಂದು ತಿಗಳ ಪಾಳ್ಯದಂತೆ ಕಂಡು ಬರುತ್ತದೆ. ಬಿಳಿ, ಕಂದು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಊರ ಸುತ್ತ ಕಂದಕ, ಕೋಟೆಯ ಅವಶೇಷ ಕಂಡು ಬರುತ್ತದೆ. ಶಕ್ತಿ ದೇವತೆಯ ಭಕ್ತರಾದ ಜೋಗಿ ಪರಂಪರೆಯವರು ಇಲ್ಲಿ ವಾಸಿಸುತ್ತಿದ್ದರಿಂದ ಈ ಗ್ರಾಮಕ್ಕೆ ಜೋಗಿಯರ ಹಳ್ಳಿ ಜೋಗಿ ಹಳ್ಳಿ ಆಗಿದೆ ಎಂದು ಗ್ರಾಮದ ಕೆಂಪಣ್ಣನವರ ಅಭಿಪ್ರಾಯವಾಗಿದೆ. ಶಕ್ತಿದೇವತೆಗಳಾದ ಕೆಂಪಮ್ಮ, ಮುಳಕಟ್ಟಮ್ಮ, ಮುದ್ದೆಮಾರಮ್ಮ, ಕರೆಮುಂದಮ್ಮ ದೇವತೆಗಳ ಪೌಳಿಗಳಿದ್ದು, ದಸರಾ ಸಂದರ್ಭದಲ್ಲಿ ಎಲ್ಲಾ ದೇವರಿಗೆ ಆರತಿ, ಬಲಿ ಹರಕೆ, ಸಂಪ್ರದಾಯವಿರುತ್ತದೆ.

ಈ ಗ್ರಾಮ ಪರಿಸರದಲ್ಲಿ ದಿಣ್ಣೆ, ಕೆರೆ ಬಯಲು, ಕುರುಚಲು ಗಿಡ ಪೊದೆಗಳಿರುವು ದರಿಂದ ಸಹಜವಾಗಿ ಪಕ್ಷಿಗಳಾದ ನವಿಲು, ಕಾಗೆ, ಗಿಳಿ, ಕೌಜುಗ, ಕಾಗೆ, ಹದ್ದು ಕಂಡು ಬರುತ್ತದೆ. ಅಂತೆಯೇ ಪ್ರಾಣಿಗಳಾದ ನರಿ, ತೋಳ, ಕರಡಿ, ಮೊಲ, ಜಿಂಕೆ, ಉಡ, ಮುಂಗುಸಿ, ಕಾಡು ಬೆಕ್ಕು ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ಎತ್ತುಗಳನ್ನು ಸಾಕಿದ್ದಾರೆ. ಕೋಳಿ ಸಾಕು ಪಕ್ಷಿಯಾಗಿದೆ. ಬಳಸಕಟ್ಟೆ, ಹೊಸ್ಕೆರೆ, ಜೋಗಿಹಳ್ಳಿ, ಹೊಸಹಳ್ಳಿ ಈ ರೀತಿಯ ಕೆರೆ ಕಟ್ಟೆಗಳಿದ್ದರೆ ತುಂಬುವುದು ಅಪರೂಪ. ಮಳೆ ಆಶ್ರಯದಿಂದಲೇ ತುಂಬಬೇಕಾದುದರಿಂದ ಮಳೆ ವಿರಳ. ಹಾಗಾಗಿ ಕುಡಿಯುವುದಕ್ಕೆ ಗ್ರಾಮ ಪಂಚಾಯಿತಿಯಿಂದ ನೀರು ಒದಗಿಸಲಾಗುತ್ತಿದೆ. ೩ ಮಿನಿ ಟ್ಯಾಂಕ್, ೨ ಕೈ ಪಂಪುಗಳಿವೆ.

ತಿಗಳ ಸಮುದಾಯ ದೊಡ್ಡ ಜನಾಂಗವಾಗಿದ್ದು ಆದಿ ಕರ್ನಾಟಕ, ನಾಯಕ, ಮುಸ್ಲಿಂ, ಸಾದರ ಜನಾಂಗ ಗ್ರಾಮದ ಸಣ್ಣ ಸಮುದಾಯವಾಗಿದೆ. ಗ್ರಾಮದಲ್ಲಿ ಕನ್ನಡ, ಉರ್ದು ಮಾತನಾಡುತ್ತಾರೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ, ಸೀಟಿನ ಒಟ್ಟು ೧೩೩ ಮನೆಗಳಿದ್ದು, ೨೦ ಮನೆಗಳಲ್ಲಿ ಶೌಚಾಲಯ ಬಳಕೆಯಿದೆ. ಗ್ರಾಮದ ಜನಸಂಖ್ಯೆ ೭೭೮ ಇದ್ದು, ೩೭೬ ಹೆಂಗಸರು, ಗಂಡಸರು ೪೦೨ ಇದ್ದಾರೆ. ರಾಗಿ ಮುದ್ದೆ ಗ್ರಾಮದ ಪ್ರಮುಖ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ೨ ಎತ್ತಿನಗಾಡಿಯೂ ಸೇರಿದಂತೆ, ಟ್ರ್ಯಕ್ಟರ್, ಟೆಂಪೋ ದ್ವಿಚಕ್ರವಾಹನಗಳಿವೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳಿ, ಅಲಸಂದಿ, ತೊಗರಿ ಆಹಾರ ಬೆಳೆಯಾಗಿ ಬೆಳೆಯುತ್ತಾರೆ. ತೆಂಗು, ಅಡಿಕೆ, ಹುಣಸೆಹಣ್ಣು ವ್ಯಾಪಾರಿ ಬೆಳೆಗಳು. ಮೂವರು ಸರ್ಕಾರಿ ನೌಕರರಿದ್ದು, ಟೈಲರಿಂಗ್ ಕೆಲಸವನ್ನು ಹೆಂಗಸರು ಮಾಡುತ್ತಾರೆ. ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ, ಸೀಬಿ ತಾಲ್ಲೂಕು ಪಂಚಾಯಿತಿ, ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಜೋಗಿಹಳ್ಳಿ ಸೀಬಿ ಅಗ್ರಹಾರ ಗ್ರಾಮ ಪಂಚಾಯಿತಿಗೆ ಸೇರಿದೆ. ನಾಲ್ಕು ಸ್ತ್ರೀ ಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ ಹಾಗೂ ಉಚಿತ ಪುಸ್ತಕ ವಿತರಣೆಯ ಪ್ರಯೋಜನವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೬೧ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ, ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳಿವೆ. ೨ ಹೋಟೆಲ್, ೬ ಅಂಗಡಿಗಳಿವೆ. ೨ ಅರವಿಕಟ್ಟೆ ಇದ್ದು, ಕೆಂಪಮ್ಮ, ಗಣೇಶ, ಮುದ್ದೇಮಾರಮ್ಮ, ಮುಳುಕಟ್ಟಮ್ಮ, ಪೌಳಿಗಳಿವೆ. ಯುಗಾದಿ, ದೀಪಾವಳಿ, ನವಮಿ, ಹಾಗೂ ಗೌರಿ ಗಣೇಶನ ಹಬ್ಬ ಆಚರಣೆ ಮಾಡುತ್ತಾರೆ. ಮುಸ್ಲಿಂ ಕುಟುಂಬಗಳು ರಂಜಾನ್, ಬಕ್ರೀದ್, ಹಬ್ಬ ಆಚರಿಸುತ್ತಾರೆ. ಕೆಂಪಮ್ಮ ದೇವತೆಯ ಊರಹಬ್ಬ ಇದ್ದು, ಆರತಿ, ಬಾನ, ಬ್ಯಾಟೆ ಇರುತ್ತದೆ. ತುಮಕೂರು, ಸಿರಾ ರ್‍ಾಷ್ಟ್ರಿಯ ಹೆದ್ದಾರಿ ಹಾದು ಹೋಗಿರುವು ದರಿಂದ ಉತ್ತಮ ಸಾರಿಗೆ ಸಂಪರ್ಕವಾಗಿದೆ. ತರಕಾರಿ, ಹಣ್ಣು ಬೆಳೆ ಈ ಗ್ರಾಮದ ವಿಶೇಷವಾಗಿದೆ.

## ಜೋಡಿದೇವರಹಳ್ಳಿ

ಜೋಡಿದೇವರಹಳ್ಳಿ ಇದು ಕಂದಾಯಗ್ರಾಮವಾಗಿದ್ದು, ಒಂದು ಕಾಲದ ಸೀಬಿ ಗ್ರಾಮದ ಉಪಗ್ರಾಮವಾಗಿದ್ದು, ಬೇಡ ನಾಯಕರು ಸೀಬಿ ನರಸಿಂಹ ಸ್ವಾಮಿಯ ತೇರುಕಟ್ಟೆ, ರಥದ ಸಿದ್ಧತೆ, ವಿವಿಧ ಕಾರ್ಯಗಳ ಸೇವೆಗಾಗಿ ಈ ಗ್ರಾಮವನ್ನು ದತ್ತಿ ನೀಡಲಾಗಿತ್ತೆಂದು ಹೇಳಲಾಗುತ್ತಿದೆ. ನಂತರ ಇದೊಂದು ಕಂದಾಯ ಗ್ರಾಮವಾಗಿ ಪರಿವರ್ತಿತವಾಗಿದೆ. ಸಿರಾ, ತುಮಕೂರು ರ್ರಾಷ್ಟ್ರೀಯ ಹೆದ್ದಾಗಿ –ಎಡಭಾಗದಲ್ಲಿ ಜೋಗಿಹಳ್ಳಿ ತಿರುವಿನಿಂದ ೨ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಭೌಗೋಳಿಕ ವ್ಯಾಪ್ತಿ ೩೯೧.೦೮ ಹೆಕ್ಟೇರ್ ಆಗಿದ್ದು, ಬೋವಿ ಪಾಳ್ಯ ಎಂಬ ಉಪಗ್ರಾಮವನ್ನು ಹೊಂದಿದೆ. ಮರಳು ಮಿಶ್ರಿತ ಕೆಂಪು ಮಣ್ಣು ಹೊಂದಿದ್ದು, ಈ ಪರಿಸರದಲ್ಲಿ ಸಹಜವಾಗಿ ಪಕ್ಷಿಗಳಾದ ನವಿಲು, ಕಾಗೆ, ಗಿಳಿ, ಕೌಜುಗ, ಕೊಕ್ಕರೆ, ಬೆಳವ, ಗೊರವಂಕ, ಗೀಜುಗ, ಕಾಗೆ, ಕಂಡು ಬರುತ್ತದೆ. ಅಂತೆಯೇ ಪ್ರಾಣಿಗಳಾದ ನರಿ, ಮೊಲ, ಉಡ, ಮುಂಗುಸಿ, ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ಎತ್ತುಗಳನ್ನು ಸಾಕಿದ್ದಾರೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ೫೫೭.೩ ಮಿ.ಮೀ ಬಿಸಿಲಿನ ತಾಪ೩೦ಂ ಸೆಂ. ಆಗಿದ್ದು, ಚಳಿ ೧೨ಂ ಸೆಂ. ಆಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆ ಅಡಿಯಿಲ್ಲಿ ನೀರು ಪೂರೈಸಲಾಗುತ್ತಿದೆ. ಕೃಷಿಗಾಗಿ ರೈತರು ೩೯ ಕೊಳವೆ ಬಾವಿಗಳ ಮೂಲಕ ನೀರು ಪೂರೈಕೆ ಮಾಡುತ್ತಿದ್ದಾರೆ. ಗ್ರಾಮದಲ್ಲಿ ೪ ಕಿರು ಟ್ಯಾಂಕ್‌ಗಳಿದ್ದು, ೨ ಕೈ ಪಂಪುಗಳಿವೆ.

ನಾಯಕ ಸಮುದಾಯ ಮಾತ್ರ ವಾಸಿಸುವ ಇಲ್ಲಿ ಕನ್ನಡ ಮಾತೃಭಾಷೆ. ಕಾಂಕ್ರೀಟ್, ಹೆಂಚಿನ, ಶೀಟಿನ ವಿವಿಧ ಪ್ರಕಾರಗಳ ಒಟ್ಟು ೧೨೮ ಮನೆಗಳಿದ್ದು, ೫೬೨ ಜನಸಂಖ್ಯೆ ಹೊಂದಿದೆ. ಜನತಾ ಆಶ್ರಯ, ಇಂದಿರಾ ಆವಾಸ್, ವಸತಿ ಯೋಜನೆಯ ೨೯ ಫಲಾನುಭವಿಗಳಿದ್ದಾರೆ. ೨೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರ, ರೊಟ್ಟಿ, ಅನ್ನ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನ, ಗ್ರಾಮದಲ್ಲಿ ಎತ್ತಿನ ಗಾಡಿಗಳೊಂದಿಗೆ, ಟ್ರ್ಯಕ್ಟರ್, ದ್ವಿಚಕ್ರ ವಾಹನಗಳಿವೆ. ರಾಗಿ ಮುಖ್ಯ ಬೆಳೆ. ಉಪಬೆಳೆಗಳಾಗಿ ಶೇಂಗಾ, ಹತ್ತಿ, ಸೂರ್ಯಕಾಂತಿ, ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ ಜೊತೆ, ಹುಣಸೆಹಣ್ಣು ವ್ಯಾಪಾರವಿದೆ.

ಸಾರಿಗೆ, ಆರೋಗ್ಯ, ಶಿಕ್ಷಣ ಇಲಾಖೆಗೆ ಸೇರಿದ ೬ ಜನ ನೌಕರರಿದ್ದಾರೆ. ಬೀಡಿ ಸುತ್ತುವುದು, ಊಟದ ಎಲೆ ತಯಾರಿಕೆ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯತ್, ಸೀಬಿ ತಾಲ್ಲೂಕು ಪಂಚಾಯಿತಿ, ಹಾಗೂ ಚನ್ನೇನಹಳ್ಳಿ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನವಾಗಿದ್ದು, ಇಬ್ಬರು ಪಂಚಾಯತ್ ಸದಸ್ಯರಿದ್ದಾರೆ. ಸ್ತ್ರೀ ಶಕ್ತಿ ಸ್ವಸಹಾಯ ಕೇಂದ್ರ, ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯದ ಸಂಘಗಳಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ೭೩ ಮಕ್ಕಳಿದ್ದಾರೆ, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪಠ್ಯ ಪುಸ್ತಕ ವಿತರಣೆ ಇದೆ. ಇಬ್ಬರು ಶಿಕ್ಷಕರಿದ್ದಾರೆ. ಶೇ. ೫೩ ರಷ್ಟು ಸಾಕ್ಷರವಂತರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ, ಸೌಲಭ್ಯವಂತರಿದ್ದು, ೪ ಪೆಟ್ಟಿಗೆ ಅಂಗಡಿಗಳು ಇದೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ, ಮುತ್ತುರಾಯ, ವೆಂಕಟೇಶ್ವರ ದೇವಾಲಯಗಳಿವೆ. ಸೀಬಿ ನರಸಿಂಹ ಸ್ವಾಮಿ ಜಾತ್ರೆಯ ಕಾಲದಲ್ಲಿ ಇಲ್ಲಿನ ದೇವರುಗಳಿಗೆ ವಿಶೇಷ ಉತ್ಸವ, ಆರತಿ ಇರುತ್ತದೆ. ಮಾರಮ್ಮನ ಜಾತ್ರೆ, ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ದಸರಾ– ಯುಗಾದಿ ಎರಡು ದಿನಗಳು ಇಲ್ಲಿನ ಬ್ಯಾಡರು ಕೋಲು ಬೇಟೆಯ ಸಂಪ್ರದಾಯದಲ್ಲಿ ಬೇಟೆ ಯಾಡುವ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ವಾಲ್ಮೀಕಿ ಯುವಕ ಸಂಘವಿದೆ.

## ಜೋಡಿದೇವರಹಳ್ಳಿ ಬೋವಿಪಾಳ್ಯ

ಜೋಡಿದೇವರಹಳ್ಳಿ ಬೋವಿಪಾಳ್ಯ ಎಂದೆಲ್ಲಾ ಕರೆಯುತ್ತಿರುವ ಈ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೭ ಕಿ.ಮೀ. ದೂರದಲ್ಲಿದೆ. ರ್ರಾಷ್ಟ್ರೀಯ ಹೆದ್ದಾರಿ ಸಿರಾ–ತುಮಕೂರು ಮಾರ್ಗದ ಜೋಗಿಹಳ್ಳಿಯಿಂದ ಎಡಕ್ಕೆ ೨.೫ ಕಿ.ಮೀ. ದೂರದಲ್ಲಿದೆ. ಇದೊಂದು ಜೋಡಿದೇವರ ಹಳ್ಳಿಗೆ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೪೬ ಹೆಕ್ಟೇರ್ ಆಗಿದೆ. ಸಂಪೂರ್ಣವಾಗಿ ಇದೊಂದು ಭೋವಿ ಜನಾಂಗದವರ ಗ್ರಾಮವಾಗಿರುವುದ ರಿಂದ ಬೋವಿ ಪಾಳ್ಯ ಎಂತಲೂ, ವಡ್ಡರ ಹಟ್ಟಿ ಎಂತಲೂ, ವಿಶೇಷಣವಾಗಿ ಜೋಡಿ

ದೇವರಹಳ್ಳಿ ಬೋವಿ ಪಾಳ್ಯ ಎಂದು ಕರೆಯಲಾಗುವುದು. ಕಳ್ಳಂಬೆಳ್ಳ ಹೋಬಳಿಗೆ ಸೇರಿರುವ ಈ ಗ್ರಾಮದ ಬಯಲು ಸೀಮೆ. ಗಿಡ, ಮರ, ಪೂದೆ, ಮುಳ್ಳುಗಳಿಂದ ಕೂಡಿದೆ. ಹಾಗಾಗಿ ಈ ಪರಿಸರದಲ್ಲಿ ಸಹಜವಾಗಿ ಪಕ್ಷಿಗಳಾದ ನವಿಲು, ಕಾಗೆ, ಗಿಳಿ, ಕೌಜುಗ, ಕೊಕ್ಕರೆ, ಬೆಳವ, ಗೊರವಂಕ, ಗೀಜುಗ, ಕಾಗೆ, ಕಂಡು ಬರುತ್ತದೆ. ಅಂತೆಯೇ ಕಾಡು ಪ್ರಾಣಿಗಳಾದ ನರಿ, ಮೊಲ, ಉಡ, ಮುಂಗುಸಿ, ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ಎತ್ತುಗಳನ್ನು ಸಾಕಿದ್ದಾರೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ೫೫೭.೩ ಮಿ.ಮೀ ಬಿಸಿಲಿನ ತಾಪ ೩೮೦ ಸೆಂ. ಆಗಿದ್ದು, ಚಳಿ ೧೨೦ ಸೆಂ. ಆಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆ ಅಡಿಯಿಲ್ಲಿ ನೀರು ಪೂರೈಸಲಾಗುತ್ತಿದೆ. ಕೃಷಿಗಾಗಿ ರೈತರು ೩೯ ಕೊಳವೆ ಬಾವಿಗಳ ಮೂಲಕ ನೀರು ಪೂರೈಕೆ ಮಾಡುತ್ತಿದ್ದಾರೆ. ಗ್ರಾಮದಲ್ಲಿ ೧ ಕಿರು ಟ್ಯಾಂಕ್‌ಗಳಿದ್ದು, ೧ ಕೈ ಪಂಪು ಇದೆ.

ವಿವಿಧ ಪ್ರಕಾರಗಳ ೨೫ ಮನೆಗಳಿದ್ದು, ಇವು ಹೆಂಚಿನ, ಶೀಟಿನ ಸ್ವರೂಪದವುಗಳಾಗಿವೆ. ಇಂದಿರಾ ಆವಾಸ್, ವಸತಿ ಯೋಜನೆಯ ೧೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಪ್ರಯೋಜನದ ಕುಟುಂಬಗಳಿವೆ. ೧೦೪ ಜನಸಂಖ್ಯೆ ಇಧ್ದು ೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಗ್ರಾಮದ ಭಾಷೆ ತೆಲುಗು, ಕನ್ನಡ ಮಾತನಾಡುತ್ತಾರೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರ, ರೊಟ್ಟಿ, ಅನ್ನ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ ಮದ್ಯಪಾನ ಈ ಗ್ರಾಮದ ವಿಶೇಷ ಭೋಜನ ಕೂಟವಾಗಿದೆ. ಗ್ರಾಮದಲ್ಲಿ ಸ್ಕೂಟರ್, ಆಟೋ ಬಳಕೆಯಲ್ಲಿವೆ. ಹೆಚ್ಚಾಗಿ ಕಲ್ಲು ಹೊಡೆಯುವ ಕೂಲಿ ಕಾರ್ಮಿಕರಿದ್ದು, ರೈತರು ವಿರಳವಾಗಿದ್ದಾರೆ. ರಾಗಿ, ಶೇಂಗಾ, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ಶೇಂಗಾ, ಹುಣಸೆಹಣ್ಣು ವ್ಯಾಪಾರವಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯತ್, ಸೀಬಿ ತಾಲ್ಲೂಕು ಪಂಚಾಯಿತಿ, ಹಾಗೂ ಚನ್ನೇನಹಳ್ಳಿ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನವಾಗಿದ್ದು, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಒಂದು ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ೨೩ ಮಕ್ಕಳಿದ್ದಾರೆ, ೧ ಶಿಕ್ಷಕರಿದ್ದಾರೆ. ೧.೫೩ ಸಾಕ್ಷರತೆ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ, ಸೌಲಭ್ಯವಂತರಿದ್ದು, ೨ ಅಂಗಡಿಗಳು ಇದೆ. ಪೆದ್ದಮ್ಮ ಈ ಗ್ರಾಮದ ಅದಿದೇವತೆ, ದೇವರ ಉತ್ಸವ, ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ. ಪೆದ್ದಮ್ಮ ಇಲ್ಲಿನ ಜನರಿಗೆ ದೊಡ್ಡ ಅಮ್ಮನಾಗಿ ಪ್ರಸಿದ್ಧಿಯಾಗಿದೆ. ಉಳಿದಂತೆ ಯುಗಾದಿ, ದೀಪಾವಳಿ, ಮಹಾನವಮಿ, ಗೌರಿಗಣೇಶನ ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಜಾಡರಹಳ್ಳಿ

ಜಾಡರಹಳ್ಳಿ–ಬುಕ್ಕಾಪಟ್ಟಣದಿಂದ ಪಶ್ಚಿಮಕ್ಕೆ ೨ ಕಿ.ಮೀ. ದೂರದಲ್ಲಿದೆ. ಇದು ಬೇಚಾರಕ್ ಗ್ರಾಮವಾಗಿದ್ದು, ದೇವಾಂಗ ಜನಾಂಗದವರೂ ಮೊದಲಿಗೆ ಇಲ್ಲಿ ವಾಸಿಸುತ್ತಿದ್ದರೆಂದು ಅವರೆಲ್ಲರೂ ವೃತ್ತಿ ಮೂಲವನ್ನು ಹುಡುಕಿಕೊಂಡು ಬೇರೆ ಬೇರೆ ನಗರ ಸೇರಿದ ಕಾರಣ ಊರು ಒಂದಾಗಿ ಇದು ಕೇವಲ ಅವಶೇಷಗಳು ಮಾತ್ರ ಉಳಿದಿದೆ. ಬುಕ್ಕಾಪಟ್ಟಣ–ಹುಳಿಯಾರು ಮುಖ್ಯ ರಸ್ತೆಯಲ್ಲಿ ಜಾಡರಹಳ್ಳಿ ಎಂಬ ಸ್ಥಳವಿದ್ದು ಇಲ್ಲಿ ಭೂತಪ್ಪನ ದೇವಾಲಯವಿದೆ. ಗ್ರಾಮದ ಬದಿಗೆ ಕಾಡಿನ ಭಾಗವಿದೆ.

ಈ ಪರಿಸರದಲ್ಲಿ ಕಾಡಿನ ಮರಗಳಾದ ಬಿಕ್ಕೆ, ಬ್ಯಾಲ, ನೀಲ, ನೇರಳೆ, ನೀಲಗಿರಿ, ಕಾಡುಮತ್ತಿ, ಹೊಂಗೆ, ಬೇವು, ಬ್ಯಾಟೆ, ಮರಡಿ, ತುಗ್ಗಲಿ ಮರಗಳಿವೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಕರಡಿ, ಉಡ, ತೋಳ, ಕಂಡು ಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಕಾಗೆ, ಕೋಗಿಲೆ, ಕೌಜುಲಗ, ಗಿಡುಗ, ಬೆಳವ, ಗುಬ್ಬಚ್ಚಿ ಕಂಡು ಬರುತ್ತವೆ.

ಬುಕ್ಕಾಪಟ್ಟಣ ಗ್ರಾಮ ಪಂಚಾಯಿತಿ, ಬುಕ್ಕಾಪಟ್ಟಣ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. ಸಿರಾ ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ.

## ಜಾನಕಲ್ಲು

ಜಾನಕಲ್ಲು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿನಲ್ಲಿ ೨೭ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೬೮೯.೬೧ ಹೆಕ್ಟೇರ್‌ಗಳಾಗಿವೆ. ಬಯಲು ನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ.

ಈ ಗ್ರಾಮದ ಸುತ್ತಲೂ ೧೮೦ ಹೆಕ್ಟೇರ್‌ನಷ್ಟು ರಕ್ಷಿತ ಅರಣ್ಯವನ್ನು ಹೊಂದಿದೆ. ಯಾವುದೇ ಬೆಟ್ಟ-ಗುಡ್ಡಗಳು ಕಂಡುಬರುವುದಿಲ್ಲ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೬೮ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ೮೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಕುಡಿಯುವ ನೀರಿನ ವ್ಯವಸ್ಥೆಗೆ ಕೈಪಂಪುಗಳು ಹಾಗೂ ಸಿಸ್ಟರ್ನ್‌ಗಳಿವೆ.

ಗ್ರಾಮದಲ್ಲಿ ಒಟ್ಟು ೨೪೩ ಮನೆಗಳಿದ್ದು ೮೬೨ ಜನಸಂಖ್ಯೆಯನ್ನು ಹೊಂದಿದೆ. ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿದ್ದು ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೯೬ ಫಲಾನುಭವಿಗಳಿದ್ದಾರೆ. ಇವರ ಭಾಷೆ ಕನ್ನಡವಾಗಿದೆ. ಇದರಲ್ಲಿ ನಾಯಕ, ಕುಂಚಿಟಿಗ, ಬೋವಿ, ಭಜಂತ್ರಿ, ಕುಂಬಾರ, ಉಪ್ಪಾರ, ವೀರಶೈವರ ಮನೆಗಳಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು ಶೇಂಗಾ ಪ್ರಮುಖ ಬೆಳೆಯಾಗಿದೆ. ಇದರೊಂದಿಗೆ ರಾಗಿ, ಭತ್ತ, ಜೋಳ, ದ್ವಿದಳ ಧಾನ್ಯಗಳು, ತೆಂಗು ಅಡಿಕೆ, ಹುಣಸೆ ಬೆಳೆಗಳನ್ನು ಬೆಳೆಯುತ್ತಾರೆ. ಇಲ್ಲಿ ಒಂದು ಆಧುನಿಕ ಡೈರಿಯನ್ನು ಹೊಂದಿದೆ. ಸಣ್ಣ ಪ್ರಮಾಣದ ಗರಿಕಡ್ಡಿ, ಅಡಿಕೆ ತಟ್ಟೆ ತಯಾರಿಸುವ ಕಾರ್ಖಾನೆ ಇದೆ. ಶಿಕ್ಷಣ, ಸಾರಿಗೆ, ಕಂದಾಯ ಇಲಾಖೆಗೆ ಸೇರಿದ ೯ ಜನ ಸರ್ಕಾರಿ ನೌಕರರಿದ್ದಾರೆ. ಕೃಷಿ ಕಾರ್ಮಿಕರು, ದ್ವಿಚಕ್ರ ವಾಹನ ರಿಪೇರಿಗಾರರು ಉದ್ಯೋಗದಲ್ಲಿ ತೊಡಗಿದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ ಸಿರಾ ತಹಸೀಲ್ದಾರ್ ಕಛೇರಿ, ರಾಮಲಿಂಗಾಪುರ ಗ್ರಾಮಪಂಚಾಯ್ತಿ ಒಬ್ಬರು ಸದಸ್ಯರನ್ನು ಹೊಂದಿದೆ. ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ.

ಹಣಕಾಸಿನ ವ್ಯವಸ್ಥೆಯಲ್ಲಿ ಸ್ತ್ರೀಶಕ್ತಿ ಸಂಘಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಗ್ರಾಮ ಅರಣ್ಯ ಸಮಿತಿಯನ್ನು ಹೊಂದಿದ್ದು ಅಂಗನವಾಡಿ ಕೇಂದ್ರ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೯.೩% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಯಾವುದೇ ಆರೋಗ್ಯ ಕೇಂದ್ರವಿಲ್ಲದಿದ್ದರೂ ರಾಮಣ್ಣ, ಬಸವಲಿಂಗಪ್ಪನವರು ನಾಟಿ ಔಷಧ ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೮ ಚಿಲ್ಲರೆ ವ್ಯಾಪಾರದ ಅಂಗಡಿಗಳಿವೆ. ಧಾರ್ಮಿಕ ಕೇಂದ್ರಗಳಾಗಿ ಕರಿಯಮ್ಮ, ಕದರಿ ನರಸಿಂಹಸ್ವಾಮಿ ದೇವಾಲಯಗಳಿದ್ದು ಪ್ರತಿ ವರ್ಷವೂ ಜಾತ್ರೆಯನ್ನು ಮಾಡುತ್ತಾರೆ. ಭಜನೆ ಕಲಾವಿದರು ಜೋಗಪ್ಪ, ನರಸಪ್ಪ. ಸೋಬಾನೆ ಪದಕಾರರು ಲಕ್ಷ್ಮಮ್ಮ, ಸಾಕಮ್ಮನವರಾಗಿದ್ದಾರೆ. ಯುಗಾದಿ, ದೀಪಾವಳಿ, ದಸರಾ, ಗೌರಿ-ಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಜೋಗಯ್ಯನಪಾಳ್ಯ

ಜೋಗಯ್ಯನಪಾಳ್ಯವು ಸಿರಾ ತಾಲ್ಲೂಕು ಕೇಂದ್ರದಿಂದ ವಾಯವ್ಯ ದಿಕ್ಕಿನಲ್ಲಿರುವ ೨೬ ಕಿಮೀ ದೂರದಲ್ಲಿರುವ ಕುರುಬರಹಳ್ಳಿಯ ಉಪಗ್ರಾಮವಾಗಿದೆ. ಈ ಗ್ರಾಮಕ್ಕೆ ಜೋಗಯ್ಯನೆಂಬ ವ್ಯಕ್ತಿ ಇಲ್ಲಿ ಮೊದಲಿಗೆ ವಾಸಿಸುತ್ತಿದ್ದುದರಿಂದ ಜೋಗಯ್ಯನಪಾಳ್ಯ ಎಂದು ಹೆಸರು ಬರಲು ಕಾರಣವಾಗಿದೆ ಎಂದು ಗ್ರಾಮಸ್ಥರು ತಿಳಿಸುತ್ತಾರೆ. ಭೌಗೋಳಿಕ ವಿಸ್ತೀರ್ಣ ೧೪೩.೭೮.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಯಾವುದೇ ಅರಣ್ಯ, ಬೆಟ್ಟ-ಗುಡ್ಡಗಳು ಕಂಡುಬರುವುದಿಲ್ಲ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ.

ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೪೮.೯ ಮಿಮೀ ಆಗಿದ್ದು ಉಷ್ಣಾಂಶ ೩೧-೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಇಲ್ಲಿ ೧೮ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಲ್ಲಿ ನೀರು ಪೂರೈಸಲಾಗುತ್ತಿದೆ.

ಗ್ರಾಮದಲ್ಲಿ ಒಟ್ಟು ೭೦ ಮನೆಗಳಿದ್ದು ಕುಂಚಿಟಿಗ, ಕ್ರಿಶ್ಚಿಯನ್, ಆದಿಕರ್ನಾಟಕರ ಮನೆಗಳಿವೆ. ಇವರಲ್ಲಿ ಕನ್ನಡ ಭಾಷೆ ಪ್ರಮುಖವಾಗಿದೆ. ೨೧೦ ಜನಸಂಖ್ಯೆಯನ್ನು ಹೊಂದಿದೆ. ಅಲ್ಲದೆ ಇಲ್ಲಿ ಮಡಿವಾಳರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದಾರೆ. ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿದ್ದು ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ಇವರ ಮುಖ್ಯ ಉದ್ಯೋಗ ಕೃಷಿಯಾಗಿದೆ. ರಾಗಿ, ಭತ್ತ, ಜೋಳ, ತೆಂಗು, ಶೇಂಗಾ ಪ್ರಮುಖವಾಗಿವೆ. ಹುಣಸೆಮರಗಳು ಹೇರಳವಾಗಿವೆ. ಮಹಿಳೆಯರ ಉಪಕಸುಬಾಗಿ ಹುಣಸೆಹಣ್ಣು ಬಡಿಯುವುದು, ಹೂ ಕಟ್ಟುವುದು ವಾಡಿಕೆಯಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ, ನೇರಳೆಗುಡ್ಡ ತಾಲ್ಲೂಕು ಪಂಚಾಯ್ತಿ, ತಹಸೀಲ್ದಾರ್ ಕಛೇರಿಯನ್ನು ಒಳಗೊಂಡಿದ್ದು ನೇರಲಗುಡ್ಡ ಪಂಚಾಯ್ತಿಯನ್ನು ಹೊಂದಿದೆ. ಗ್ರಾಮ ನ್ಯಾಯಮಂಡಳಿಯಿದೆ. ಒಂದು ಸ್ತ್ರೀಶಕ್ತಿ ಸಂಘವನ್ನು ಕಾಣುತ್ತೇವೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘವಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಒಳಗೊಂಡಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೩% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಯಾವುದೇ ಆರೋಗ್ಯ ಕೇಂದ್ರಗಳು ಕಂಡುಬರದಿದ್ದರೂ ಉಮೇಶ್ ನಾಟಿ ಔಷಧಿ ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಚಿಲ್ಲರೆ ವ್ಯಾಪಾರದ ಅಂಗಡಿಗಳಿವೆ. ಸಾರಿಗೆ, ಶಿಕ್ಷಣ ಇಲಾಖೆಗೆ ಸೇರಿದ ೩ ಜನ ನೌಕರರಿದ್ದಾರೆ. ಧಾರ್ಮಿಕ ಪರಂಪರೆಯಲ್ಲಿ ಕಣಿವೆ ಮಾರಕ್ಕ, ಕೊಲ್ಲಾಪುರದಮ್ಮ ದೇವಾಲಯಗಳಿವೆ. ರೀಟಮ್ಮನ ಚರ್ಚ್ ಇದೆ. ಪ್ರತಿ ವರ್ಷವೂ ಕೊಲ್ಲಾಪುರದಮ್ಮ ಮತ್ತು ಮಾರಕ್ಕನ ಜಾತ್ರೆಯನ್ನು ಮಾಡುತ್ತಾರೆ. ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿದೆ. ಯುಗಾದಿ, ದೀಪಾವಳಿ, ದಸರಾ, ರಾಮನವಮಿ, ಗೌರಿ–ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ. ನಾಗರಾಜು ಎಂಬ ಕಾಲೇಜು ಉಪನ್ಯಾಸಕರು ೬ ಪುಸ್ತಕಗಳನ್ನು ರಚಿಸಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ.

## ತಗ್ಗಿಹಳ್ಳಿ

ತಗ್ಗಿಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೫ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮ. ಸಿರಾ ದೊಡ್ಡ ಕೆರೆಯ ಹಿಂದಿನಿಂದ ಮಧುಗಿರಿ ರಸ್ತೆಯಲ್ಲಿ ದೊಡ್ಡಗೂಳ ಗೇಟಿನಿಂದ ಬಲಕ್ಕೆ ೧ ಕಿಮೀ ದೂರದಲ್ಲಿದೆ. ಯಲಿಯೂರು, ಕಡವಿಗೆರೆ, ಅರೇಹಳ್ಳಿ, ರತ್ನಸಂದ್ರ ಹಾಗೂ ದೊಡ್ಡಗೂಳ ಈ ಹಳ್ಳಿಗಳ ಕೆರೆಗಳಿಂದ ನೀರು ಹರಿದು ಬಂದು ತಗ್ಗಾಗಿರುವುದರಿಂದ ಈ ನೆಲ ಕಪ್ಪು, ಜೇಡಿಮಣ್ಣಿನಿಂದ ಕೂಡಿದೆ. ತಗ್ಗಿನಹಳ್ಳಿ ತಗ್ಗೀಹಳ್ಳಿ ಆಗಿದೆ. ಇದೊಂದು ಪ್ರಾಕೃತಿಕ ಅನ್ವರ್ಥ ಹೆಸರಾಗಿದೆ. ಈ ಗ್ರಾಮದ ಭೌಗೋಳಿಕ ವ್ಯಾಪ್ತಿ ೮೪.೯೨ ಹೆಕ್ಟೇರ್ ಆಗಿದೆ.

ತಗ್ಗಿನ ಪ್ರದೇಶ, ಗಿಡಪೊದೆಗಳು ಹಳ್ಳ ಹೇರಳವಾಗಿದೆ, ಗುಂಡಿಗಳೂ ಇವೆ. ಆದುದರಿಂದ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಕಾಡುಹಂದಿ, ಮೊಲ, ಮುಂಗುಸಿ ಮೊದಲಾದ ಪ್ರಾಣಿಗಳು ಗ್ರಾಮದಲ್ಲಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಪ್ರಾಣಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕಾಗೆ, ಕೋಗಿಲೆ, ಗಿಳಿ, ಗೀಜುಗ, ಗೂಬೆ, ಹದ್ದು, ಗರುಡ, ಗೊರವಂಕ, ಬೆಳವ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಸಾಕುಪಕ್ಷಿಯಾಗಿ ಕೋಳಿಯನ್ನು ಸಾಕಲಾಗುತ್ತದೆ. ವಾರ್ಷಿಕ ಸರಾಸರಿ ೪೮೧.೪ ಮಿಮೀ ಮಳೆ ಬೀಳುತ್ತದೆ. ಬಿಸಿಲು ೩೭– ೩೮ ಡಿಗ್ರಿ ಸೆಂಟಿಗ್ರೇಡ್ ಇದ್ದು ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಪದ್ಮಾಪುರದ ಕೆರೆಯಿದ್ದು ನೀರು ಸಾಕಾಗುವುದಿಲ್ಲ. ಈ ಪರಿಸರದಲ್ಲಿ ೨೫ ಕೊಳವೆ ಬಾವಿಗಳಿವೆ.

೨ ಕಿರು ಟ್ಯಾಂಕ್‌ಗಳ ಮೂಲಕ ನೀರನ್ನು ಗ್ರಾಮಪಂಚಾಯ್ತಿಯ ಕಿರುನೀರು ಯೋಜನೆಯಡಿಯಲ್ಲಿ ಪೂರೈಸಲಾಗುವುದು.

ಉಪ್ಪಾರ ಜನಾಂಗ ದೊಡ್ಡ ಸಮುದಾಯವಾಗಿದ್ದು ಬೋವಿ, ನಾಯಕ, ಕುಂಚಿಟಿಗ ಜನಾಂಗ ಸಣ್ಣ ಸಮುದಾಯವಾಗಿದೆ. ಕಾಂಕ್ರೀಟ್, ಶೀಟಿನ, ಹೆಂಚಿನ, ೩ ಗುಡಿಸಲು ಸೇರಿದಂತೆ ಒಟ್ಟು ೮೪ ಮನೆಗಳಿವೆ. ಇಂದಿರಾ ಆವಾಸ್, ಆಶ್ರಯ, ಜನತಾ ವಸತಿ ಯೋಜನೆಯ ವಿವಿಧ ಫಲಾನುಭವಿಗಳಿದ್ದಾರೆ. ೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಆಹಾರವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳಿವೆ. ಇಂದಿರಾ ಆವಾಸ್, ಆಶ್ರಯ, ಜನತಾ, ವಸತಿ ಯೋಜನೆಯ ೨೩ ಜನ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಆಹಾರವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಜೋಳ, ನವಣೆ, ಹುರುಳಿ, ತೊಗರಿ, ಈರುಳ್ಳಿ ಆಹಾರ ಬೆಳೆಗಳು. ಸೂರ್ಯಕಾಂತಿ, ಹತ್ತಿ, ವಾಣಿಜ್ಯ ಬೆಳೆಗಳಾಗಿವೆ. ಒಬ್ಬರು ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಮಹಿಳೆಯರು ಬೀಡಿ ಕಟ್ಟುವ ಗೃಹ ಕೈಗಾರಿಕೆ ಮಾಡುತ್ತಾ ಆರ್ಥಿಕ ಸಬಲೀಕರಣಕ್ಕೆ ಶ್ರಮಿಸುತ್ತಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಯಲಿಯೂರು ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ೨ ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳಾ ಆರ್ಥಿಕ ಸಬಲೀಕರಣಕ್ಕೆ ದುಡಿಯುತ್ತಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೨೯ ಮಕ್ಕಳಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯವಿದೆ. ಶೇ.೪೮.೬ ರಷ್ಟು ಸಾಕ್ಷರವಂತರಿದ್ದಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನದ ಫಲಾನುಭವಿಗಳಿದ್ದು ೩ ಅಂಗನವಾಡಿಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಧಾರ್ಮಿಕವಾಗಿ ಕರಿಯಮ್ಮ ಗ್ರಾಮದೇವತೆಯಾಗಿದ್ದು ಊರಹಬ್ಬ ಮಾಡಿ ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ. ಗಣೇಶ, ಬಸವಣ್ಣನ ಗುಡಿಗಳಿವೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಗೌರಿ, ಮಹಾನವಮಿ, ಗಣೇಶನ ಉತ್ಸವ ನಡೆಯುತ್ತದೆ. ಮಧುಗಿರಿ–ಸಿರಾ ನಗರಕ್ಕೆ ಸಂಪರ್ಕ ರಸ್ತೆಯಿದ್ದು ಬಸ್ ಸಂಪರ್ಕ ಉತ್ತಮವಾಗಿದೆ.

## ತೊಗರಿಗುಂಟೆ

ತೊಗರಿಗುಂಟೆ ತೊಗರಗುಂಟೆ ಎಂಬ ಹೆಸರುಗಳಿಂದ ಕರೆಯಲ್ಪಡುವ ಈ ಗ್ರಾಮ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೭ ಕಿಮೀ ದೂರದಲ್ಲಿದೆ. ಮೇಲುಕುಂಟೆಯ ಮಜರೆ ಗ್ರಾಮವಾಗಿದ್ದರೂ ಕಂದಾಯ ಕಛೇರಿ, ಗ್ರಾಮಪಂಚಾಯ್ತಿ ಕೇಂದ್ರ ಇರುವುದು ತೊಗರಿಗುಂಟೆ ಗ್ರಾಮದಲ್ಲಿಯೇ. ಸಿರಾ–ಅಮರಾಪುರ ಮುಖ್ಯ ರಸ್ತೆಯ್ಲಲಿ ರಸ್ತೆಗೆ ಹೊಂದಿಕೊಂಡೇ ಇರುವ ಈ ಗ್ರಾಮ. ೧೪೮.೩ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದೆ. ಇಂದು ಅಮ್ಮಾಜಮ್ಮನ ಪವಿತ್ರ ಕ್ಷೇತ್ರವಾಗಿ ದೊಡ್ಡ ಆಲದ ಮರದ ಪ್ರೇಕ್ಷಣೀಯ ಸ್ಥಳವಾಗಿಯೂ ಹೆಸರುವಾಸಿಯಾಗಿದೆ.

ತೊಗರಿ ಬೆಳೆಯುವ ತಾಣ, ಕಟ್ಟೆ ನೀರು ನಿಲುಗಡೆ ಸ್ಥಳ ಈ ಎರಡೂ ಪ್ರಾಕೃತಿಕ ಲಕ್ಷಣಗಳನ್ನು ಆಧರಿಸಿ ತೊಗರಿ+ಕುಂಟೆ= ತೊಗರಿಗುಂಟೆಯಾಗಿದೆ. ಕರಲುಮಿಶ್ರಿತ ಕೆಂಪುಮಣ್ಣು ತೊಗರಿ ಶೇಂಗಾ ಬೆಳೆಗೆ ಉತ್ತಮ ವಾತಾವರಣವಿರುವ ಸ್ಥಳವಾಗಿದೆ. ಹಾಗಾಗಿ ಹೆಚ್ಚಾಗಿ ತೊಗರಿ ಬೆಳೆಯುವ ಸ್ಥಳವಾದುದರಿಂದ ತೊಗರಿಗುಂಟೆ ಎಂದು ಕರೆಯಲಾಗಿದೆ. ಇದರ ಉತ್ತರಕ್ಕೆ ಈ ಗ್ರಾಮಕ್ಕೆ ಹೊಂದಿಕೊಂಡಂತೆ ಗೊಲ್ಲರಹಟ್ಟಿ ಇದ್ದು ಅದೂ ತೊಗರಿಗುಂಟೆ ಗ್ರಾಮಕ್ಕೆ ಸೇರಿದೆ. ಬಯಲುಪ್ರದೇಶ ಉತ್ತರಕ್ಕೆ ಇಲ್ಲಿಂದ ಅರ್ಧ ಮೈಲಿ ದೂರದಲ್ಲಿ ರಕ್ಷಿತ ಅರಣ್ಯವಿದೆ. ಈ ಗ್ರಾಮದ ಹಿಂಭಾಗಕ್ಕೆ ಗದ್ದೆ ಬೈಲು, ತಗ್ಗಿನ ಪ್ರದೇಶ ಬಯಲು, ಗಿಡ, ಪೊದೆ, ಹಳ್ಳಗಳ ಪ್ರದೇಶವಾಗಿದ್ದು ಈ ಪರಿಸರದಲಬ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ, ಉಡ, ಕರಡಿ ಅಧಿಕವಾಗಿ ಕಂಡುಬರುತ್ತವೆ.

ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗೆ ಹಸು, ಹಳ್ಳಿಕಾರ್ ತಳಿ ಎತ್ತು, ಕುರಿ, ಮೇಕೆ, ಎಮ್ಮೆಗಳನ್ನು ಸಾಕಲಾಗಿದೆ. ಕೋಳಿ ಸಾಕುಪಕ್ಷಿಯಾಗಿದೆ. ಗಿಳಿ, ಗರುಡ, ಗೂಬೆ, ಹದ್ದು, ಕೋಗಿಲೆ, ಕಾಗೆ, ಕೊಕ್ಕರೆ, ಮರಕುಟಿಕ, ಗುಬ್ಬಚ್ಚಿ, ಹಕ್ಕಿಗಳು ಕಂಡುಬರುತ್ತವೆ. ಬಿಸಿಲು ಬಯಲುಭೂಮಿ ಕೃಷಿ ಅವಲಂಬಿತ ಪ್ರದೇಶ. ಇಲ್ಲಿ ವಾಡಿಕೆಗಿಂತ ಕಡಿಮೆ ಮಳೆ. ಸರಾಸರಿ ೪೬೦ ಮಿಮೀ ಮಳೆ ಬೀಳುತ್ತದೆ. ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇದ್ದರೆ ಬಿಸಿಲು ೩೮ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಕೃಷಿಗೆ ಮಳೆಯ ನೀರು ಸಾಲುವುದಿಲ್ಲ. ಕೃಷಿಗೆ ೪೨ ಬೋರ್‌ವೆಲ್‌ಗಳ ಮೂಲಕ ನೀರನ್ನು ಪೂರೈಸಲಾಗುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿಯ ಕಿರು ನೀರು ಸರಬರಾಜು

ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ೪ ದೊಡ್ಡ ಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ. ಈ ಗ್ರಾಮಕ್ಕೆ ಸಂಬಂಧಿಸಿದ ಒಂದು ಕೆರೆ ಅಥವಾ ಕುಂಟೆ ಇದೆ. ಆದರೂ ತುಂಬುವುದೇ ಇಲ್ಲ. ಸೀಮೆ ಜಾಲಿ, ಪೊದೆ ಬೆಳೆದುಕೊಂಡಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ. ಆದಿದ್ರಾವಿಡ, ಆದಿಕರ್ನಾಟಕ, ಬೇಡರು ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ವಿವಿಧ ಸ್ವರೂಪದ ೮೦ ಮನೆಗಳಿದ್ದು ಅವು ಕಾಂಕ್ರೀಟ್, ಶೀಟಿನ, ಮಂಗಳೂರು ಹೆಂಚಿನ ಮನೆಗಳಿವೆ. ೪೦ ಮನೆಯಲ್ಲಿ ಶೌಚಾಲಯದ ಬಳಕೆಯಿದ್ದು ಈ ಗ್ರಾಮದ ಒಟ್ಟು ಜನಸಂಖ್ಯೆ ೪೨೬ ಇದೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದೆ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನವಾಗಿರುತ್ತದೆ.

ಆಧುನಿಕ ವಾಹನವಾದ ಟ್ರ್ಯಕ್ಟರ್, ಮಿನಿ ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳು ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ತೊಗರಿ, ಅಲಸಂದೆ ಆಹಾರ ಬೆಳೆಗಳು. ತೆಂಗು, ಅಡಿಕೆ, ರೇಷ್ಮೆ, ಸೂರ್ಯಕಾಂತಿ, ದಾಳಿಂಬೆ ನೀರಾವರಿ ಬೆಳೆಗಳಾಗಿವೆ. ಶೇಂಗಾ, ಹುಣಸೇಹಣ್ಣು, ಹೊಂಗೆಬೀಜ, ತೆಂಗು, ಅಡಿಕೆ ದಾಳಿಂಬೆ ಪ್ರಮುಖ ವ್ಯಾಪಾರವಿದೆ. ಗ್ರಾಮದಲ್ಲಿ ಒಂದು ಹಾಲಿನ ಡೈರಿ ಇದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ವೈದ್ಯರು, ಶಿಕ್ಷಕರು, ಸಾರಿಗೆ ಹಾಗೂ ಕಂದಾಯ ಇಲಾಖೆಯ ೪ ಜನ ಸರ್ಕಾರಿ ನೌಕರರಿದ್ದಾರೆ. ವೈದ್ಯರಾದ ಡಾ.ದಯಾನಂದ್, ಉಪನ್ಯಾಸಕ ಶಿವಪ್ರಕಾಶ್, ವಕೀಲರಾದ ಟಿ.ಎಂ.ನಾಗರಾಜ್ ಈ ಗ್ರಾಮದವರಾಗಿದ್ದಾರೆ. ಗ್ರಾಮದಲ್ಲಿ ಮಹಿಳೆಯರು ಬೀಡಿ ಕಟ್ಟುವ, ಊಟದ ಎಲೆ ತಯಾರಿಸುವ ಉಪ ಕಸುಬು ಹೊಂದಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಮೇಲುಕುಂಟೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಪಂಚಾಯ್ತಿ ಕೇಂದ್ರ ಇದೇ ಗ್ರಾಮದಲ್ಲಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಇವುಗಳು ಗ್ರಾಮಪಂಚಾಯತ್ ಸದಸ್ಯರಾಗಿದ್ದಾರೆ. ಮಾಜಿ ತಾಲ್ಲೂಕು ಪಂಚಾಯ್ತಿ ಸದಸ್ಯರಾದ ದೊಡ್ಡೇಗಡರು ಇದೇ ಗ್ರಾಮದವರು.

೩ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಯಂಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿವೆ. ಒಂದು ಅಂಗನವಾಡಿ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಇಬ್ಬರು ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ಸೌಲಭ್ಯವಿದೆ. ಉತ್ತಮವಾದ ಶಾಲಾ ಪರಿಸರ, ಕಾಂಪೌಂಡು ಇದೆ. ಗ್ರಾಮ ಪಂಚಾಯತ್ ಗ್ರಂಥಾಲಯ, ಉಪ ಆರೋಗ್ಯ ಕೇಂದ್ರ ಇದೆ. ಪಾರಂಪರಿಕ ವೈದ್ಯಳಾದ ಶ್ರೀಮತಿ ನರಸಮ್ಮ ಸ್ಥಳೀಯವಾಗಿ ಪ್ರಸಿದ್ಧರಾಗಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ಹಾಗೂ ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೫ ಚಿಕ್ಕ ಗೂಡಂಗಡಿ ೨ ಹೋಟೆಲ್‌ಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಮಾರಮ್ಮ, ದ್ಯಾಮಲಾಂಬ ದೇವತೆಗಳು ಇದ್ದು ಗ್ರಾಮದ ಹೊರವಲಯದಲ್ಲಿ ಶ್ರೀ ಅಮ್ಮಾಜಿ ದೇವರ ಬೃಹತ್ ದೇವಾಲಯ, ಗೋಪುರ, ಚಿತ್ರಗಳು, ನವಗ್ರಹ ದೇವಸ್ಥಾನ, ಕಲ್ಯಾಣ ಮಂಟಪ ಇದ್ದು ವಿಸ್ತಾರವಾದ ಸ್ಥಳವಾಗಿದೆ. ಇದರ ಪಕ್ಕದಲ್ಲಿಯೇ ೨೫೦ ಕ್ಕೂ ಬೇರುಗಳ ಒಂಟಿ ಆಲ ವಿಸ್ತಾರವಾಗಿ ೨ ಎಕರೆ ಭೂ ಪ್ರದೇಶ ಮೀರಿ ಬೆಳೆದಿದೆ, ಬೆಳೆಯುತ್ತಿದೆ. ಇದೊಂದು ಪ್ರವಾಸಿ ನೆಲೆಯಾಗಿದೆ. ಶಿವರಾತ್ರಿ ಹಬ್ಬದ ನಂತರ ೫ ದಿನಗಳ ಬೃಹತ್ ಜಾತ್ರೆ, ರಥೋತ್ಸವ, ವಾನ ಮೆರವಣಿಗೆ, ವಿವಿಧ ಪ್ರದೇಶಗಳಿಂದ ಬಂದ ಭಕ್ತರ ವಿವಿಧ ಸೇವೆ, ಅನ್ನ ಸಂತರ್ಪಣೆ, ವಿಜೃಂಭಣೆಯಿಂದ ನಡೆಯುತ್ತಿದೆ. ಉತ್ತಮ ನೀರು, ನೆರಳು, ವಸತಿ, ರಸ್ತೆ ಸಾರಿಗೆ ಸೌಕರ್ಯವಿದ್ದು ಸಿರಾ ತಾಲ್ಲೂಕಿನ ಪ್ರಮುಖ ಯಾತ್ರಾ ಸ್ಥಳವಾಗಿ ರೂಪುಗೊಂಡಿದೆ.

ನಿವೃತ್ತ ಆರೋಗ್ಯ ಅಧಿಕಾರಿ ಶ್ರೀ ಮಲ್ಲಪ್ಪ, ಶ್ರೀ ಮಲ್ಲೇಗೌಡ ಇವರ ನೇತೃತ್ವದಲ್ಲಿ ಅಭಿವೃದ್ಧಿ ಕಾರ್ಯ ನಡೆದಿದೆ. ಬೃಹತ್ ಕಲ್ಯಾಣ ಮಂಟಪವಿದ್ದು ನಿತ್ಯ ವಾಹನಗಳು ಇಲ್ಲಿ ನಡೆಯುತ್ತಿವೆ. ಮಾರಮ್ಮ ಊರ ಹಬ್ಬವಾಗಿದೆ. ಬಲಿ, ಆರತಿ, ಬಾನದ ಹರಕೆ, ಉತ್ಸವವಿರುತ್ತದೆ. ಈ ಗ್ರಾಮದ ಹೊರವಲಯದಲ್ಲಿ ಆಂಜನೇಯ, ಮೂರು ವೀರಗಾರರ ಗುಡಿಗಳಿವೆ. ಅರಳೀಕಟ್ಟೆ ಇಂದು ಇಲ್ಲವಾಗಿದೆ. ಕರಿಗಲ್ಲು ಇದ್ದು ದಸರಾ ಸಂದರ್ಭದಲ್ಲಿ ಪೂಜಿಸಲಾಗುತ್ತದೆ. ೩ ವೀರಗಲ್ಲುಗಳಿವೆ.

ಯುಗಾದಿ, ದೀಪಾವಳಿ, ಮಹಾನವಮಿ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತೊಗರಿಗುಂಟೆ ಗೊಲ್ಲರಹಟ್ಟಿ

ತೊಗರಿಗುಂಟೆ ಗೊಲ್ಲರಹಟ್ಟಿ ತೊಗರಿಕುಂಟೆಯ ಮಜರೆ ಗ್ರಾಮ. ಸಿರಾ–ಅಮರಾಪುರ ಮುಖ್ಯ ರಸ್ತೆಯಲ್ಲಿ ೭ ಕಿಮೀ ದೂರದಲ್ಲಿ ಬಂದಕುಂಟೆ ಗೇಟಿನಿಂದ ಬಲಭಾಗದಲ್ಲಿ ಅಮ್ಮಾಜಿ ದೇವಾಲಯದ ಮೇಲ್ಭಾಗದಲ್ಲಿ ಈ ಗ್ರಾಮವಿದೆ. ಇದು ಪೂರ್ಣವಾಗಿ ಕಾಡುಗೊಲ್ಲರ ವಾಸಸ್ಥಳ. ಇದು ೨೯ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು ೨೫ ಮನೆಗಳಿವೆ. ಕನ್ನಡ ಪೂರ್ಣವಾಗಿ ಮನೆಮಾತಾಗಿದೆ. ಮರಳು ಮಿಶ್ರಿತ ಕೆಂಪುಮಣ್ಣನ್ನು ಹೊಂದಿದ್ದು ಗಿಡಮರ, ಪೊದೆಗಳಿಂದ ಕೂಡಿದೆ. ಈ ಪರಿಸರದಲ್ಲಿ ಮೊಲ, ನರಿ, ಮುಂಗುಸಿ, ಬಾರ್‌ಬೆಕ್ಕು ಮೊದಲಾದ ಕಾಡುಪ್ರಾಣಿಗಳಿವೆ.

ಗ್ರಾಮದಲ್ಲಿ ಕುರಿ, ಮೇಕೆ, ಹಸು, ಎತ್ತು, ಎಮ್ಮೆ, ನಾಯಿಗಳನ್ನು ಸಾಕಿದ್ದಾರೆ. ಈ ಪರಿಸರದಲ್ಲಿ ಬಿಸಿಲು, ಧಗೆ ಅಧಿಕ, ವಾಡಿಕೆಯ ಮಳೆ ೪೬೦ ಮಿಮೀ. ಬಿಸಿಲು ೩೮ ಡಿಗ್ರಿ ಇದ್ದರೆ ಚಳಿ ೧೨ ಡಿಗ್ರಿ ಸಾಮಾನ್ಯವಾಗಿರುತ್ತದೆ. ವಾಡಿಕೆ ಮಳೆಯ ಜೊತೆಗೆ ೮ ಬೋರ್‌ವೆಲ್‌ಗಳ ಮೂಲಕ ಕೃಷಿಗೆ ನೀರನ್ನು ಒದಗಿಸಿಕೊಳ್ಳಲಾಗುತ್ತಿದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಕಿರು ಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ.

ಕಾಡುಗೊಲ್ಲರ ೨೫ ಮನೆಗಳಿದ್ದು ಅವು ಹೆಂಚಿನ, ಶೀಟಿನ ಮನೆಗಳಾಗಿವೆ. ಒಟ್ಟು ೮೪ ಜನಸಂಖ್ಯೆ ಹೊಂದಿದ್ದು ೮ ಮನೆಗಳಲ್ಲಿ ಶೌಚಾಲಯ ಹೊಂದಿದೆ. ಮುಖ್ಯ ಆಹಾರ ರಾಗಿಮುದ್ದೆ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಭೋಜನಗಳು. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ದ್ವಿಚಕ್ರ ವಾಹನಗಳಿವೆ. ಶಿಕ್ಷಣ, ಸಾರಿಗೆ ಇಲಾಖೆಯ ೬ ಜನ ನೌಕರರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶೇಂಗಾ ಮುಖ್ಯಬೆಳೆ. ರಾಗಿ, ಭತ್ತ, ಜೋಳ ಆಹಾರ ಬೆಳೆಗಳು. ತೆಂಗು, ಅಡಿಕೆ ಸೇವಂತಿಗೆ ಬೆಳೆಗಳನ್ನು ಬೆಳೆಯುತ್ತಾರೆ. ಹುಣಸೇಹಣ್ಣು, ಹೊಂಗೆಬೀಜ, ಕುರಿ ವ್ಯಾಪಾರಗಳಿವೆ. ರಾಜಣ್ಣ ಎಂಬ ಕ್ರಾಫ್ಟ್ ಟೀಚರ್ ಇದ್ದಾರೆ. ಬೀಡಿ ಸುತ್ತುವುದು, ಹೂ ಕಟ್ಟುವುದು ಮಹಿಳೆಯರ ಉಪಕಸುಬಾಗಿದೆ.

ಅಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಮೇಲುಕುಂಟೆ ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ೧ ಸ್ತ್ರೀಶಕ್ತಿ ಸಂಘವಿದ್ದು ಮಹಿಳಾ ಆರ್ಥಿಕ ಸಬಲೀಕರಣಕ್ಕೆ ದುಡಿಯುತ್ತಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳಿದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಿಕೊಡಲಾಗುತ್ತಿದೆ. ಹೆಚ್ಚಿನ ಶಿಕ್ಷಣಕ್ಕೆ ತೊಗರಿಕುಂಟೆ ಸಿರಾ ನಗರವನ್ನು ಅವಲಂಬಿಸಿದೆ. ಗ್ರಾಮದ ಸಾಕ್ಷರತೆ ಶೇ.೬೨ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ದ್ಯಾಮಲಾಂಬ ದೇವಸ್ಥಾನವಿದೆ. ಭೂತಪ್ಪನ ಪೌಳಿಯಿದ್ದು ಹಿರಿಯ ಗುಡ್ಡೆ ಆಲದ ಮರವಿದೆ. ದೀಪಾವಳಿ ಸಂದರ್ಭದಲ್ಲಿ ವಿಶೇಷ ಹಾಲು–ತುಪ್ಪ ಬಿಡುವ, ದೀಪ ಏರಿಸುವ ಹಬ್ಬ ಆಚರಿಸಲಾಗುತ್ತದೆ. ದ್ಯಾಮಲಾಂಬ ದೇವರಿಗೆ ಆರತಿ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ ದಸರಾ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಿಮ್ಮಸಾಗರ

ತಿಮ್ಮಸಾಗರ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೪ ಕಿಮೀ ದೂರದಲ್ಲಿದೆ. ಸಿರಾ ಮದಲೂರು–ಬರಗೂರು ಮಾರ್ಗದಲ್ಲಿ ಮದಲೂರಿನಿಂದ ಆರಂಭವಾಗುವ ದೊಡ್ಡಕೆರೆಯ ಕೊನೆಯ ಕೋಡಿಗೆ ಹೊಂದಿಕೊಂಡಂತೆ ಈ ಬೋವಿ ಜನಾಂಗದ ಗ್ರಾಮ ನಿರ್ಮಾಣವಾಗಿದೆ. ಇದು ಮದಲೂರಿನ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೬೨ ಹೆಕ್ಟೇರ ಆಗಿದೆ. ಮದಲೂರು ಕೆರೆ ನಿರ್ಮಾಣದ ಕಾರ್ಯದಲ್ಲಿ ತೊಡಗಿಸಿಕೊಂಡ ಬೋವಿ ಜನಾಂಗದ ತಿಮ್ಮಾ ಬೋವಿ ಈ ದಿಬ್ಬದಲ್ಲಿ ನೆಲೆಸಿ, ಗ್ರಾಮ ರಚನೆಯಾಗಿರುವುದರಿಂದ ಜನಾಂಗದ ಪ್ರಮುಖ ಹಾಗೂ ಪ್ರಾಕೃತಿಕ ಕಾರಣದಿಂದಾಗಿ ತಿಮ್ಮ+ಸಾಗರ (ಕೆರೆ) ತಿಮ್ಮಸಾಗರವಾಗಿದೆ ಎಂಬ ಶಿಕ್ಷಕ ವೆಂಕಟೇಶ್ ಅವರ ಅಭಿಪ್ರಾಯ ಸಮರ್ಥವಾಗಿದೆ.

ಕೆಂಪುಮಿಶ್ರಿತ ಮರಳು ಮಣ್ಣಿನಿಂದ ಕೂಡಿದ ಪರಿಸರ, ಗ್ರಾಮದ ಬಲಬದಿಗೆ ಹೊಂದಿಕೊಂಡಂತೆ ಹೊಂದಿಕೊಂಡಂತೆ ತುಂಬಿದರೆ ಸಾಗರದ ಹಾಗೆ ಕಾಣುವ ಮದಲೂರು ದೊಡ್ಡ ಕೆರೆಯಿದೆ. ಈ ಪರಿಸರದಲ್ಲಿ ಕಾಡು ಪ್ರಾಣಿಗಲಾದ ನರಿ, ಮೊಲ, ಜಿಂಕೆ, ಹಂದಿ, ತೋಳಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕೃಷಿ ಹಾಗೂ ಕಲ್ಲು ಮಣ್ಣಿನ ಕೆಲಸವಾಗಿರುವುದರಿಂದ ಕೃಷಿಗಾಗಿ ಎತ್ತು, ಹಸು, ಕುರಿ, ಮೇಕೆ, ನಾಯಿಗಳನ್ನು ಸಾಕಲಾಗಿದೆ. ಗಿಳಿ, ಗೂಬೆ, ಹದ್ದು, ಕೊಕ್ಕರೆ, ಕೋಗಿಲೆ, ಕಾಗೆ, ಗಿಡುಗ, ಬೆಳವ, ಗೊರವಂಕ ಪಕ್ಷಿಗಳು ಕಂಡುಬರುತ್ತವೆ. ಕೋಳಿ ಸಾಕುಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ಮಳೆ ೪೩೬ ಮಿಮೀ ಆಗಿದ್ದು ಬಿಸಿಲು ೩೯ ಡಿಗ್ರಿ, ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಕೃಷಿಗಾಗಿ ಗಂಗಾ ಕಲ್ಯಾಣ ಯೋಜನೆಯಲ್ಲಿ ೧೮ ಕೊಳವೆಬಾವಿಗಳನ್ನು ಕೊರೆಸಿ ಕೃಷಿ ಕಾಯಕದಲ್ಲಿ ಬಳಸಿಕೊಳ್ಳಲಾಗುತ್ತದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ೪ ಕಿರುಟ್ಯಾಂಕ್‌ಗಳ ಮೂಲಕ ನೀರು ಬಿಡಲಾಗುತ್ತಿದೆ. ಒಂದು ಕೈಪಂಪು ಇದೆ.

ಸಾಮಾಜಿಕ ರಚನೆ ಪೂರ್ಣವಾಗಿ ಬೋವಿ ಜನಾಂಗದಿಂದ ಕೂಡಿದೆ. ೫೧ ಮನೆಗಳಿದ್ದು ಮಾತೃಭಾಷೆ ತೆಲುಗು ಆಗಿದ್ದು ಕನ್ನಡ ಭಾಷೆ ಮಾತನಾಡುತ್ತಾರೆ. ಮನೆಗಳು ಕಾಂಕ್ರೀಟ್, ಕಲ್ಲಿನ, ಶೀಟಿನ, ಹೆಂಚಿನ ಸ್ವರೂಪದವುಗಳು. ೧೮ ಮನೆಗಳಲ್ಲಿ ಶೌಚಾಲಯದ ಸೌಲಭ್ಯ ಪಡೆದಿದ್ದಾರೆ. ೨೩೮ ಜನಸಂಖ್ಯೆ ಹೊಂದಿದ್ದಾರೆ. ೧೬ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅಂಬಲಿ, ಅನ್ನ, ರೊಟ್ಟಿ ಬಳಸುವವರಿದ್ದಾರೆ ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಊಟವಿರುತ್ತದೆ. ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನದ ಬಳಕೆಯಿದೆ. ಬಾಡಿಗೆ ಆಟೋಗಳಿವೆ. ಶೇಂಗಾ ಮುಖ್ಯಬೆಳೆ. ರಾಗಿ, ಜೋಳ, ತೊಗರಿ, ಹುರುಳಿ ಆಹಾರ ಬೆಳೆಗಳು. ರೇಷ್ಮೆ, ಸೂರ್ಯಕಾಂತಿ ಬೆಳೆಗಳಿವೆ. ಹುಣಸೆಹಣ್ಣಿನ ವ್ಯಾಪಾರವಿದೆ. ಗ್ರಾಮದಲ್ಲಿ ಶಿಕ್ಷಣ, ಸಾರಿಗೆ ಹಾಗೂ ಕೈಗಾರಿಕಾ ಇಲಾಖೆಯಲ್ಲಿ ಒಟ್ಟು ೬ ಜನ ನೌಕರರಿದ್ದಾರೆ. ಗೃಹ ಕಸುಬಾಗಿ ಬೀಡಿ ಸುತ್ತುವುದು ಮಹಿಳೆಯರ ಉಪಕಸುಬಾಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ವಿಶೇಷವೆಂದರೆ ಈ ಗ್ರಾಮದಿಂದ ಇಬ್ಬರು ಮದಲೂರು ಗ್ರಾಮ ಪಂಚಾಯ್ತಿ ಸದಸ್ಯರಿದ್ದು ಪ್ರಸ್ತುತ ಜಯಮ್ಮ ಈರಣ್ಣ ಎಂಬುವವರು ಮದಲೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿದ್ದಾರೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು ಶಾಲೆಯಲ್ಲಿ ೩೬ ಮಕ್ಕಳಿದ್ದಾರೆ. ಬಿಸಿಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪಠ್ಯಪುಸ್ತಕ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೮.೭ ರಷ್ಟಿದೆ.

ಗ್ರಾಮದ ೭೨ ವರ್ಷ ವಯಸ್ಸಿನ ಹನುಮಂತ ಬೋವಿ ಮನುಷ್ಯ ಸಂಬಂಧಿ ಖಾಯಿಲೆಗಳಿಗೆ ನಾಟಿ ಔಷಧಿ ಚಿಕಿತ್ಸೆ ನೀಡುತ್ತಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಈ ಗ್ರಾಮದಲ್ಲಿ ೨ ವೀರಗಲ್ಲುಗಳಿದ್ದು ಒಂದಕ್ಕೆ ಗುಡಿ ಕಟ್ಟಿರುವ ವಿಶೇಷತೆ ಈ ಗ್ರಾಮಕ್ಕಿದೆ. ಈ ವೀರಗಲ್ಲು ೯–೧೦ ನೇ ಶತಮಾನದ ನೊಳಂಬರ ಕಾಲದ ರಚನೆಯಾಗಿದೆ. ಸಿದ್ದಾರೂಢರ ಆಶ್ರಮವಿದ್ದು ಸತ್ಸಂಗ ಕಾರ್ಯಕ್ರಮ ನಡೆಯುತ್ತದೆ.

ದುರ್ಗಮ್ಮ ಗ್ರಾಮದೇವತೆ. ಶನಿದೇವರ ಪುಟ್ಟ ಗುಡಿ, ಸಿದ್ಧಾರೂಢರ ಮಠವೂ ಇದ್ದು ನಿತ್ಯ ಪೂಜೆಯಾಗುತ್ತಿದೆ. ದುರ್ಗಾದೇವಿ ಜಾತ್ರೆ ಊರಹಬ್ಬದ ಮಾದರಿಯಲ್ಲಿ ವಾರ್ಷಿಕವಾಗಿ ನೆರವೇರುತ್ತದೆ. ಆರತಿ, ಬಾನ, ಬೇಟೆ ಹರಕೆ ಸಂಪ್ರದಾಯವಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮದಲೂರು–ಬರಗೂರು–ಹುಳಿಗೆರೆ ಮಾರ್ಗವಾಗಿ ಸಾರಿಗೆ ಸಂಪರ್ಕವಿದೆ.

## ತೆತ್ತಿಗಾನಹಳ್ಳಿ

ತೆತ್ತಿಗಾನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೧೩ ಕಿಮೀ ದೂರದಲ್ಲಿದೆ. ರಾಷ್ಟ್ರೀಯ ಹೆದ್ದಾರಿಯಿಂದ ೩ ಕಿ.ಮೀ ದೂರದಲ್ಲಿರುವ ಈ ಗ್ರಾಮ ಒಂದು ಮಜರೆ ಗ್ರಾಮವಾಗಿದೆ. ಯಲಿಯೂರಿಗೆ ಉಪವಾಗಿ ಈವರ ಇಲ್ಲಿನ ಭೌಗೋಳಿಕ ವ್ಯಾಪ್ತಿ ೧೩೧.೧೦ ಹೆಕ್ಟೇರ್ ಆಗಿದೆ. ಕೆಂಪುಮಿಶ್ರಿತ ಮರಳು ಮಣ್ಣನ್ನು ಹೊಂದಿರುವ ಈ ಗ್ರಾಮದ ಪರಿಸರದಲ್ಲಿ ನರಿ, ತೋಳ, ಮೊಲ, ಮುಂಗುಸಿ ಕಂಡುಬರುತ್ತದೆ. ಗ್ರಾಮದಲ್ಲಿ ಕುರಿ, ಮೇಕೆ, ದನ, ಹಸುಗಳನ್ನು ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಈ ಭಾಗದಲ್ಲಿ ಗಿಳಿ, ಕಾಗೆ, ಕೋಗಿಲೆ, ಹದ್ದು, ಗರುಡ, ಗೂಬೆ ಮೊದಲಾದ ಕಾಡುಪಕ್ಷಿಗಳಿವೆ. ವಾರ್ಷಿಕ ಸರಾಸರಿ ಮಳೆ ಪ್ರಮಾಣ ೪೮೧.೪ ಮಿಮೀ ಬೀಳುತ್ತಿದ್ದು ಬಿಸಿಲು ೩೬.೭೮ ಡಿಗ್ರಿ, ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ಕೃಷಿ ಉಪಯೋಗಕ್ಕಾಗಿ ೧೪ ಬೋರ್‌ವೆಲ್‌ಗಳಿವೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೪ ಕಿರು ಟ್ಯಾಂಕ್‌ಗಳಿದ್ದು ಒಂದು ಕೈಪಂಪು ಇದೆ.

ಬ್ಯಾಡ ನಾಯಕರು ಮಾತ್ರ ನೆಲೆಸಿರುವ ಈ ಗ್ರಾಮದಲ್ಲಿ ನಾಯಕ ಸಮುದಾಯದ ೪೨ ಮನೆಗಳಿವೆ. ಕಾಂಕ್ರೀಟ್, ಶೀಟಿನ, ಹೆಂಚಿನ ಮನೆಗಳಿವೆ. ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿದ್ದಾರೆ. ಒಟ್ಟು ೧೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕೃಷಿಗೆ ಟ್ರ್ಯಕ್ಟರ್, ಟೆಂಪೋ ಬಳಸುತ್ತಾರೆ. ಗ್ರಾಮದಲ್ಲಿ ಮಿನಿಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ಹುರುಳಿ ಆಹಾರ ಬೆಳೆಯಾಗಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಸೂರ್ಯಕಾಂತಿ, ರೇಷ್ಮೆ ಬೆಳೆಯಿದೆ. ಶೇಂಗಾ ಹಾಗೂ ಹುಣಸೆಹಣ್ಣಿನ ವ್ಯಾಪಾರ ವ್ಯಾಪಕವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಯಲಿಯೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತದೆ. ರ‍್ರಾಜ್ಯ ಹೆದ್ದಾರಿಗೆ ಸಂಪರ್ಕ ರಸ್ತೆಯಿದೆ. ೨ ಸ್ತ್ರೀಶಕ್ತಿ ಕೇಂದ್ರ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಗಳಿದ್ದು ಶಾಲೆಯಲ್ಲಿ ೨೬ ಮಕ್ಕಳಿದ್ದು ಒಬ್ಬರು ಶಿಕ್ಷಕರಿದ್ದಾರೆ. ಬಿಸಿ ಊಟ, ಕ್ಷೀರಭಾಗ್ಯ, ಪಠ್ಯಪುಸ್ತಕ, ಸಮವಸ್ತ್ರ, ಶೌಚಾಲಯಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ಪ್ರಮಾಣ ೬೪.೮ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನ ಸೌಲಭ್ಯದ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ತಿಮ್ಮಪ್ಪ ಈ ಗ್ರಾಮದ ಮುಖ್ಯ ದೈವವಾಗಿದೆ. ತಿಮ್ಮಪ್ಪ, ತಿಪ್ಪಗ, ತೆತ್ತಿಗನಾಗಿ ತಿತ್ತಿಗಾನಹಳ್ಳಿಯಾಗಿದೆ ಎಂಬ ಅಭಿಪ್ರಾಯ ಗ್ರಾಮದ ಗೋವಿಂದಪ್ಪ ಅವರದು. ಆಂಜಿನಯ್ಯ ದೇವರ ಗುಡಿಯೂ ಇದೆ. ಮಾರಮ್ಮನ ಪೌಳಿಯಿದ್ದು ವಾರ್ಷಿಕವಾಗಿ ಆರತಿ, ಬಾನ, ಬ್ಯಾಟೆಯ ಹರಕೆ, ಸಂಪ್ರದಾಯಗಳಿವೆ. ತಿಮ್ಮಪ್ಪನಿಗೆ ಆರತಿ, ಸೇವೆಯ ಸಂಪ್ರದಾಯವಿದೆ.

ಯುಗಾದಿ, ಮಹಾನವಮಿ, ಗೌರಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಬೇಡರ ಕಣ್ಣಪ್ಪ, ಯುವಕ ಸಂಘವಿದ್ದು ಪ್ರಸ್ತುತ ಚಟುವಟಿಕೆ ಇರುವುದಿಲ್ಲ.

## ತಾಡಿಪಾಳ್ಯ

ತಾಡಿಪಾಳ್ಯ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೧ ಕಿ.ಮೀ ದೂರದಲ್ಲಿದೆ. ಸಿರಾ ಕಸಬಾ ಹೋಬಳಿಗೆ ಸೇರಿದ ಈ ಗ್ರಾಮವು ಮೇಲುಕುಂಟೆ ಗ್ರಾಮದ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೭೩.೦೪ ರಷ್ಟಿದ್ದು ಬಯಲುಸೀಮೆಯಾಗಿದೆ.

ಕೆಂಪು ಮರಳು ಮಿಶ್ರಣದಿಂದ ಕೂಡಿದೆ. ತಾಡಿ ಎಂದರೆ ತಾಳೆ ಮರಗಳು ಬೆಳೆಯುವ ಜಾಗ ಎಂದರ್ಥ. ನೀರಿನ, ಗಿಡ–ಮರ ಬೆಳೆಯುವ ಸ್ಥಳವಾಗಿಯೂ ತಾಡಿ ಶಬ್ದದ ಅರ್ಥದಲ್ಲಿ ತಾಡಿಪಾಳ್ಯ ರಚನೆಯಾಗಿದೆ. ಇನ್ನೊಂದು ಮೂಲದ ಪ್ರಕಾರ ತಾಡಿ ನಾಗಮ್ಮನ ಒಕ್ಕಲಾದ ಇಲ್ಲಿನ ಕುಂಚಿಟಿಗರ ಮೂಲನಿವಾಸಿಗಳು ತಾಡಿ ಕ್ಷೇತ್ರದ ಹೆಸರಿನಲ್ಲಿಯೇ ಗ್ರಾಮ ರಚನೆ ಮಾಡಿಕೊಂಡಿದ್ದಾರೆಂದು ವೀರಣ್ಣ ಅವರ ಅಭಿಪ್ರಾಯವೂ ಆಗಿದೆ. ಒಟ್ಟಾರೆ ತಾಡಿ ಗ್ರಾಮದಲ್ಲಿ ಕುಂಚಿಟಿಗರೇ ಪೂರ್ಣ ವಾಸಿಸುತ್ತಿದ್ದು ಈ ಹೇಳಿಕೆ ಸತ್ಯಕ್ಕೆ ಹತ್ತಿರವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಮುಂಗುಸಿ, ಬಾರುಬೆಕ್ಕು ಕಂಡುಬರುತ್ತದೆ.

ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗೆ ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ಕೋಳಿಯನ್ನು ಸಾಕಿದ್ದಾರೆ. ಈ ಪರಿಸರದಲ್ಲಿ ಪಕ್ಷಿಗಳಾದ ಗಿಳಿ, ಗೊರವಂಕ, ಗೂಬೆ, ಗುಬ್ಬಚ್ಚಿ, ಕೋಗಿಲೆ, ಕೊಕ್ಕರೆ, ಮರಕುಟಿಕ, ಹದ್ದು, ಕಾಗೆ ಕಂಡುಬರುತ್ತವೆ. ಬಿಸಿಲು ಅಧಿಕ. ಮಳೆ ವಾಡಿಕೆಗಿಂತ ಕಡಿಮೆ. ಇಲ್ಲಿನ ಸರಾಸರಿ ಮಳೆ ೪೬೦ ಮಿಮೀ, ಚಳಿ ೧೨ ಡಿಗ್ರಿ ಹಾಗೂ ಬಿಸಿಲು ೩೮ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಮಳೆ ನೀರನ್ನೇ ಅವಲಂಬಿಸಿರುವ ಇಲ್ಲಿನ ರೈತರು ೬ ಕೊಳವೆ ಬಾವಿಗಳನ್ನು ಕೊರೆಸಿದ್ದಾರೆ. ಉಪನೀರಾವರಿಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೨ ಸಿಸ್ಟರ್ನ್ ಇದ್ದು ೧ ಕೈಪಂಪು ಇದೆ.

ಇಲ್ಲಿನ ಗ್ರಾಮ ರಚನೆಯಲ್ಲಿ ಕುಂಚಿಟಿಗ ಜನಾಂಗ ಮಾತ್ರವಿದೆ. ೧೮ ಮನೆಗಳಿದ್ದು ಕನ್ನಡ ಮಾತೃಭಾಷೆಯಾಗಿದೆ. ತಿಳಿದಿರುವ ಭಾಷೆಯೂ ಕನ್ನಡ ಒಂದೇ. ಇಲ್ಲಿನ ಮನೆಗಳಲ್ಲಿ ಕಾಂಕ್ರೀಟ್, ಹೆಂಚಿನ ಹಾಗೂ ಶೀಟಿನ ಮನೆಗಳಿವೆ. ೯೬ ಜನಸಂಖ್ಯೆ ಹೊಂದಿದ್ದು ೮ ಮನೆಗಳಲ್ಲಿ ಶೌಚಾಲಯವನ್ನು ಹೊಂದಿದ್ದಾರೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಆಟೋ, ದ್ವಿಚಕ್ರ ವಾಹನಗಳಿವೆ. ೬ ಆಶ್ರಯ ಮನೆಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಅಲಸಂದೆ, ತೊಗರಿ ಬೆಳೆಗಳನ್ನು ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ, ಸೇವಂತಿಗೆ ಹೂ, ತರಕಾರಿ ಬೆಳೆಗಳಿವೆ. ವ್ಯಾಪಾರಿ ಬೆಳೆಯಾಗಿ ಶೇಂಗಾ, ಹುಣಸೇಹಣ್ಣು, ಹೊಂಗೆ ಬೀಜ, ಬೇವಿನ

ಬೀಜಗಳ ವ್ಯಾಪಾರವಿದೆ. ಶಿಕ್ಷಕರು, ಸಾರಿಗೆ ಇಲಾಖೆಯ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಬೀಡಿ ಕಟ್ಟುವುದು, ಹೂ ಕಟ್ಟುವುದು ಇಲ್ಲಿನ ಮಹಿಳೆಯರ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ನಾದೂರು ಜಿಲ್ಲಾಪಂಚಾಯ್ತಿ, ಸಿರಾ ವಿಧಾನಸಭಾ ಕ್ಷೇತ್ರ, ಮೇಲ್ಕುಂಟೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಒಂದು ಸ್ತ್ರೀಶಕ್ತಿ ಸ್ವಸಹಾಯ ಸಂಘವಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ಒಂದು ಅಂಗನವಾಡಿ ಕೇಂದ್ರವಿದ್ದು ೧೪ ಮಕ್ಕಳಿದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರದ ವ್ಯವಸ್ಥೆಯಿದೆ. ಗ್ರಾಮದ ಸಾಕ್ಷರತೆ ೬೨% ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ ಫಲಾನುಭವಿಗಳಿದ್ದು ೨ ಪೆಟ್ಟಿಗೆ ಅಂಗಡಿಗಳಿವೆ.

ನಾಗಪ್ಪ ವಿಶೇಷ ಕಲ್ಲುಗಳ ಗ್ರಾಮದ ನಿತ್ಯದ ಆರಾಧನೆಯಾಗಿದೆ. ಭೂತಪ್ಪನ ಪೌಳಿಯಿದೆ. ಊರಹಬ್ಬವಾಗಿ ಭೂತಪ್ಪನ ಜಾತ್ರೆ ನಡೆಯುತ್ತದೆ. ಬಲಿ, ಆರತಿ, ಬಾನ, ಹರಕೆ ಸಂಪ್ರದಾಯವಿದೆ. ಯುಗಾದಿ, ಮಹಾನವಮಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ನಾಗರಹಬ್ಬ, ರಾಮನವಮಿ ವಿಶೇಷ ಹಬ್ಬಗಳು. ಗ್ರಾಮದಲ್ಲಿ ಹಿರಿಯರು ಸಿದ್ದಾರೂಢರ ಮಠವನ್ನು ಸ್ಥಾಪಿಸಿಕೊಂಡು ಭಜನೆ, ಸತ್ಸಂಗ ಚಟುವಟಿಕೆಯಲ್ಲಿ ತೊಡಗಿದ್ದಾರೆ.

## ತಂಕಟಿ

ತಂಕಟಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೩ ಕಿ.ಮೀ. ದೂರದಲ್ಲಿದೆ. ಇದು ಸೋರೇಕುಂಟೆಯ ಉಪಗ್ರಾಮವಾಗಿದ್ದು, ಶ್ಯಾಗದಡು ಗ್ರಾಮಕ್ಕೆ ಹೋಗುವ ಮುಖ್ಯ ರಸ್ತೆಯ ದಿಬ್ಬದಲ್ಲಿ ತಂಕಟಿ ಗಿಡಗಳ ಭೂ ಪ್ರದೇಶದಲ್ಲಿ ಹೊಸದಾಗಿ ಗ್ರಾಮ ರಚನೆಯಾದುದರಿಂದಾಗಿ ತಂಕಟಿ ಎಂದು ಕರೆಯಲಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮ ಸೋರೇ ಕುಂಟೆಯ ಹೆಕ್ಟೇರ್‌ಗಳಲ್ಲಿ ಹಂಚಿಹೋಗಿದೆ.

ಕಪ್ಪು ಮಿಶ್ರಿತ ಮರಳು, ಜೇಡಿನ ಮಣ್ಣನ್ನು ಹೊಂದಿದ್ದು, ಭೂ ಪ್ರದೇಶವಾಗಿದೆ. ಈ ಪರಿಸರದಲ್ಲಿ ಮುಂಗುಸಿ, ಇಲಿ, ಹೆಗ್ಗಣ ಕಂಡು ಬರುತ್ತವೆ. ಗ್ರಾಮದಲ್ಲಿ ರೈತರು ಕೃಷಿಕರಾಗಿದ್ದು ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಎಮ್ಮೆ , ಎತ್ತುಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೪೮೦ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮-೩೯ಂ ಸೆಂ.ರಷ್ಟು ಇದ್ದು, ಚಳಿಯು ೧೧-೧೨ಂ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಪೂರೈಸಲಾಗುತ್ತದೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಉಪ್ಪಾರ, ಲಿಂಗಾಯಿತರು ದೊಡ್ಡ ಸಮುದಾಯವಾಗಿದ್ದು, ನಾಯಕರು, ಕುಂಚಿಟಿಗ, ಗೊಲ್ಲ, ಆದಿಕರ್ನಾಟಕ ಜನಾಂಗಗಳು ಕಿರುಸಮುದಾಯವಾಗಿದೆ. ಇಲ್ಲಿನ ಮಾತೃ ಭಾಷೆ ಕನ್ನಡ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೭೦ ಮನೆಗಳಿದ್ದು, ಇವುಗಳು ಇಂದಿರಾ ಆವಾಸ್, ಜನತಾ, ಆಶ್ರಯ, ವಸತಿ ಯೋಜನೆಯ ಅಡಿಯಲ್ಲಿ ಗೋಮಾಳ ವಿಂಗಡಿಸಿ ವಸತಿ ನಿರ್ಮಿಸಿ ಕೊಂಡಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದ ಜನರು ರಾಗಿ, ಶೇಂಗಾ, ಭತ್ತ, ಅಲಸಂದಿ, ತೊಗರಿ, ಅವರೆ, ಹುಣಸೆ ಹಣ್ಣು ಮುಖ್ಯ ಬೆಳೆಗಳನ್ನು ಬೆಳೆಯುತ್ತಾರೆ. ಸಾರಿಗೆ ಇಲಾಖೆಗೆ ಸೇರಿದ ಸೋಮಣ್ಣ ಎಂಬ ಸರ್ಕಾರಿ ನೌಕರರಿದ್ದಾರೆ.

ಸೋರೇಕುಂಟೆ, ಮುಖ್ಯ ಗ್ರಾಮದ ಎಲ್ಲಾ ಸೌಲಭ್ಯಗಳೂ ಇಲ್ಲಿಗೆ ಅನ್ವಯವಾಗುತ್ತಿದ್ದು, ಸೋರೇಕುಂಟೆ, ಸಿರಾ, ಶ್ಯಾಗದಡು ಮಾರ್ಗ ಮುಖ್ಯ ರಸ್ತೆ ಇದೆ.

ಶೈಕ್ಷಣಿಕವಾಗಿ ಒಂದು ಪ್ರಾಥಮಿಕ ಶಾಲೆ ಇದ್ದು, ೪೨ ಮಕ್ಕಳಿದ್ದು, ಇಬ್ಬರು ಶಿಕ್ಷಕರಿದ್ದರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪಠ್ಯಪುಸ್ತಕಗಳ ಸೌಲಭ್ಯವಿದೆ. ಒಂದು ಅಂಗನವಾಡಿ ಕೇಂದ್ರವಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯಿತ್, ಹೊನ್ನಗಾನಹಳ್ಳಿ ತಾಲ್ಲೂಕು ಪಂಚಾಯಿತಿ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಒಂದು ಪ್ರಾಥಮಿಕ ಶಾಲೆ, ಒಂದು ಅಂಗನವಾಡಿ ಕೇಂದ್ರವಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಉಚಿತ ಪಠ್ಯಪುಸ್ತಕದ ಸೌಲಭ್ಯಗಳಿವೆ. ಶೌಚಾಲಯದ ಸೌಲಭ್ಯವಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಬಸವೇಶ್ವರ ದೇವಾಲಯವಿದೆ. ಶ್ರಾವಣ ಹಾಗೂ ಶಿವರಾತ್ರಿ ಸಂಕ್ರಾಂತಿಯ ಕಾಲದಲ್ಲಿ ವಿಶೇಷ ಪೂಜೆ, ಅಭಿಷೇಕದ ಕಾರ್ಯ ನಡೆಯುತ್ತದೆ.

ಉಳಿದಂತೆ ಶಿವರಾತ್ರಿ, ಯುಗಾದಿ, ರಾಮನವಮಿ, ಗೌರಿಗಣೇಶ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸಲಾಗುತ್ತದೆ.

### ತಾವರೆಕೆರೆ

ತಾವರೆಕೆರೆ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೨ ಕಿಮೀ ದೂರದಲ್ಲಿದೆ. ಸಿರಾ–ಚಿತ್ರದುರ್ಗ ರ‍್ರಾಷ್ಟ್ರೀಯ ಹೆದ್ದಾರಿಯ್ಲಲಿದ್ದು ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೭೭೫.೩೫ ಹೆಕ್ಟೇರ್. ಉತ್ತರಕ್ಕೆ ಕಲ್ಲುಬಂಡೆಗೆ ಹೆಸರುವಾಸಿಯಾದ ಮದ್ದಕ್ಕನಹಳ್ಳಿ ಪೂರ್ವಕ್ಕೆ ಮಾನಂಗಿ, ದಕ್ಷಿಣಕ್ಕೆ ಶಾಗದಡು, ಪಶ್ಚಿಮಕ್ಕೆ ಮಾರನಗೆರೆ ಗ್ರಾಮಗಳು ಇದ್ದು ಈ ಎಲ್ಲವುಗಳಿಗೆ ಪ್ರಮುಖ ವಾಣಿಜ್ಯ, ಶೈಕ್ಷಣಿಕ, ಸಾರಿಗೆ, ಆರ್ಥಿಕ ವ್ಯವಹಾರ, ಆಸ್ಪತ್ರೆ, ವಿದ್ಯುತ್, ರಕ್ಷಣೆ ವಿಚಾರಗಳಿಗೆ ಕೇಂದ್ರಸ್ಥಾನವಾಗಿದೆ. ತಗ್ಗು ಪ್ರದೇಶದಿಂದ ಕೂಡಿದ್ದು ಗ್ರಾಮ ಸನಿಹದಲ್ಲೇ ಕೆರೆ, ಉತ್ತರಕ್ಕೆ ಸುವರ್ಣಮುಖಿ ಹಳ್ಳ ಇದ್ದು ನೈಸರ್ಗಿಕವಾಗಿ ತಗ್ಗು ಪ್ರದೇಶವಾಗಿದೆ. ಒಂದು ಕಾಲದಲ್ಲಿ ವೀಳ್ಯದೆಲೆಗೆ ಈ ಗ್ರಾಮ ಪ್ರಸಿದ್ಧಿಯಾಗಿತ್ತು. ಇಲ್ಲಿನ ಕೆರೆಯಲ್ಲಿ ತಾವರೆಯ ಹೂಗಳು ಯಾವಾಗಲೂ ಬೆಳೆಯುತ್ತಿದ್ದರಿಂದಲೇ ತಾವರೆಕೆರೆ ಎಂದು ಕರೆಯಲಾಗಿದೆ. ತಾವುರ್‌ಗೆರೆ, ತಾವುರಕೆರೆ ಎಂದೇ ಕರೆಯಲ್ಪಡುವ ಈ ಗ್ರಾಮದ ಭೌಗೋಳಿಕ ಪರಿಸರ ಕುರಿತೇ ಜಾನಪದ ವಾಙ್ಮಯವಿದೆ.

ತಗ್ಗಿನಾಗಳ ತಾವರಗೆರೆ
ಉಜ್ಜಿನಾಗಳ ಮೊಸರಕುಂಟೆ
ಉಬ್ಬತ್ತಿ ಕ್ಯಾತೆಗೆ ಬರುತಾರೆ
ಉಜ್ಜಿನಕುಂಟೆಯವರು

ಈ ಹಾಡಿನ ವಿವರಣೆ ಏನೇ ಇದ್ದರೂ ತಾವರೆಕೆರೆ ತಗ್ಗಿನ ಪ್ರದೇಶ ಎಂಬುದನ್ನು ಸುತ್ತಲ ಹಳ್ಳಿಗಳು ಕೆರೆಗಳಿಂದ ಆವೃತ್ತವಾದ ಹಾಗೂ ಕೆರೆ ಮೂಲದ ಹಳ್ಳಿಗಳು ಎಂಬುದನ್ನು ಸ್ವಾರಸ್ಯಕರವಾಗಿ ಧ್ವನಿಸುತ್ತದೆ. ಇದೊಂದು ಪ್ರಾಚೀನ ಗ್ರಾಮವಾಗಿದ್ದು ಸಿರಾ ಶಾಸನ ಒಂದರಲ್ಲಿ ಇದನ್ನು ತುರುಗೆರೆ ಎಂದು ಉಲ್ಲೇಖಿಸಿದೆ. ಈ ಬಗೆಗೆ ಇಲ್ಲಿನ ಬಂಡಿ ರಂಗನಾಥ ದೇವಾಲಯದ ಅರ್ಚಕ ವಿಷ್ಣುಮೂರ್ತಿಯನ್ನು ವಿಚಾರಿಸಿದಾಗ ಇಲ್ಲಿ ಸದಾ ನೀರಿನಿಂದ ಕೂಡಿದ ಕೆರೆ, ಹೊಳೆ, ಹಳ್ಳಗಳಿದ್ದು ದನಗಳು ಈ ಪರಿಸರದ ಕಾಡುಗಳಲ್ಲಿ ಮೇಯ್ದು ನೀರಿಗೆ ಇಲ್ಲಿಗೆ ಬರುತ್ತಿದ್ದವು. ಕೆಲವೊಮ್ಮೆ ಬಂಡಿ ರಂಗನಾಥನ ದೇವಸ್ಥಾನದ ಮುಂದೆ ಅರಳಿಕಟ್ಟೆಯ ಬಳಿ ಮಂದೆಮಂದೆಯಾಗಿ ದನಗಳು ಮಲಗಿಕೊಳ್ಳುತ್ತಿದ್ದವು. ಮಾತ್ರವಲ್ಲ ಬಂಡಿ ರಂಗನಾಥನ ಜಾತ್ರೆ ೧೫ ದಿನಗಳ ಕಾಲ ನಡೆಯುತ್ತಿದ್ದು ಹೊರ ರಾಜ್ಯಗಳಿಂದಲೂ ದನಗಳನ್ನು ಕೊಳ್ಳಲು, ಮಾರಲು ಜನರು ಸೇರುತ್ತಿದ್ದರು. ಅಪಾರ ಪ್ರಮಾಣದಲ್ಲಿ ರಾಸುಗಳು ಇಲ್ಲಿ ಕಲೆಯುತ್ತಿದ್ದ ಕಾರಣ ಅವುಗಳು ಇಲ್ಲಿನ ಕೆರೆ, ಕೊಳ, ಹಳ್ಳಗಳಲ್ಲಿ ನೀರು ನೆರಳು, ಹುಲ್ಲಿಗೆ ಪ್ರಶಸ್ತ ಸ್ಥಳವಾಗಿರುತ್ತಿದ್ದುದರಿಂದಲೂ ಶಾಸನದ ಉಲ್ಲೇಖ ತುರುಗೆರೆ ಅರ್ಥಪೂರ್ಣವಾಗಿದೆ.

ಇದೊಂದು ಪ್ರಮುಖ ಧಾರ್ಮಿಕ ಸ್ಥಳವೂ ಆಗಿದ್ದು ಕಲ್ಲುಗಾಲಿ ರಥೋತ್ಸವಕ್ಕೆ ಹೆಸರುವಾಸಿ. ರಥಸಪ್ತಮಿಯ ದಿನದಂದೇ ರಥೋತ್ಸವ ಜರುಗುವ, ಮಡಿತೇರಿನ ಮೇಲೆ ಗರುಡ ಬಂದು ಮೂರು ಸುತ್ತು ಹಾಕುವುದು ಇಲ್ಲಿನ ಸಂಪ್ರದಾಯವೂ ಆಗಿರುವುದರಿಂದ ಇದೊಂದು ವಿಶೇಷವಾಗಿದೆ. ಇಂದಿಗೂ ಜಾತಿ, ಧರ್ಮ, ಲಿಂಗಬೇಧ ಮೀರಿ ಜನ–ಜಾನುವಾರು ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ.

ಗ್ರಾಮದ ಪ್ರವೇಶ ದ್ವಾರದ ಬಳಿ ಆಂಜನೇಯ, ಬಲಗಡೆ ಕರಿಗಲ್ಲು, ಶಕ್ತಿದೇವತೆ ಮಾರಮ್ಮ ಇವು ಗ್ರಾಮ ಸಂಪ್ರದಾಯಬದ್ಧವಾಗಿ ನಿರ್ಮಾಣವಾಗಿರುವುದರ ಕುರುಹಾಗಿದೆ. ಮಾತ್ರವಲ್ಲ ಈಶ್ವರ, ಕಾಳಿಕಾಂಬ, ಕೊಲ್ಲಾಪುರದಮ್ಮ, ಎಲ್ಲಮ್ಮ, ಬಸವೇಶ್ವರ, ಅಹೋಬಲ ನರಸಿಂಹಸ್ವಾಮಿ, ಸೋಮೇಶ್ವರ, ಬುಡ್ಡಮ್ಮ ಈ ಬಗೆಯ ಹತ್ತಾರು ದೇವಾಲಯಗಳು ಇವುಗಳಿಗೆಲ್ಲಾ ಕೈವಾಡದವರು, ಗೌಡಿಕೆ, ತೋಟಿ, ತಳವಾರ, ಪರಿವಾರ ಒಂದೊಂದೂ ಗ್ರಾಮ ಸಂಸ್ಕೃತಿಯ, ಭಾವೈಕ್ಯತೆಯ ಪ್ರತೀಕವಾಗಿ ರೂಪುಗೊಂಡಿದೆ. ಇಂದಿಗೂ ಅದೇ ಮಾದರಿ ಮುಂದುವರಿದಿದೆ.

ಕಪ್ಪು ಜೌಗು ಮರಳು ಮಿಶ್ರಿತ ಮಣ್ಣನ್ನು ಹೊಂದಿದ್ದು ಶೇಂಗಾ ಬೆಳೆ ದಿಣ್ಣೆಯ ಪ್ರಮುಖ ಬೆಳೆಯಾಗಿದೆ. ಆಹಾರ ಬೆಳೆಗಳಾಗಿ ರಾಗಿ, ಭತ್ತ, ಅಲಸಂದೆ, ತೊಗರಿ, ಜೋಳ, ಧಾನ್ಯಗಳನ್ನು ಬೆಳೆಯುತ್ತಾರೆ. ಒಂದು ಕಾಲದಲ್ಲಿ ಸಜ್ಜೆ ಹಾಗೂ ಕೊರ್ಲೆ ಧಾನ್ಯಗಳನ್ನು ವಿಶೇಷವಾಗಿ ಬೆಳೆಯುತ್ತಿದ್ದು ಇಂದು ಬೆಳೆಯುತ್ತಿಲ್ಲ ಎಂದು ಕಲಾವಿದ ಗೋವಿಂದಪ್ಪ ಹೇಳುತ್ತಾರೆ. ತೋಟಗಾರಿಕೆ ಬೆಳೆಯಾಗಿ ವೀಳ್ಯದೆಲೆ, ಅಡಿಕೆ, ತೆಂಗು, ದಾಳಿಂಬೆ, ಸಪೋಟ ಬೆಳೆಯುತ್ತಾರೆ. ರೇಷ್ಮೆ ಮತ್ತು ಹತ್ತಿ (ಸೀಡ್ಸ್) ಇತ್ತೀಚೆಗೆ ಹೆಚ್ಚು ಬೆಳೆಯುತ್ತಿದ್ದು ಆರ್ಥಿಕ ಸಬಲತೆಗೆ ಕಾರಣವಾಗಿದೆ ಎಂದು ಪ್ರಾಚಾರ್ಯ ಟಿ.ಕೃಷ್ಣಮೂರ್ತಿ ಅಭಿಪ್ರಾಯಪಡುತ್ತಾರೆ. ಪೊದೆ, ಕುರುಚಲು ಕಾಡು, ಹಳ್ಳ, ದಿಣ್ಣೆ ಇಲ್ಲಿನ ಪರಿಸರವಾಗಿರುವುದರಿಂದ ಈ ಭಾಗದಲ್ಲಿ ನರಿ, ತೋಳ, ಮೊಲ, ಕಾಡುಹಂದಿ, ಮುಂಗುಸಿ, ಕಾಡುಬೆಕ್ಕು, ಮಂಗ, ಉಡ, ಆಮೆ ವಿಶೇಷವಾಗಿ ಕಂಡುಬರುತ್ತವೆ.

ಗ್ರಾಮವು ಪಶುಪಾಲನೆಗೆ ಹೆಸರಾಗಿದ್ದು ಹಳ್ಳಿಕಾರ್ ತಳಿ ಎತ್ತು, ನಾಟಿ ಹಸು ಇತ್ತೀಚೆಗೆ ಸೀಮೆಹಸು, ಕುರಿ, ಮೇಕೆ,

ನಾಯಿ, ಬೆಕ್ಕುಗಳನ್ನು ವಿಶೇಷವಾಗಿ ಸಾಕುತ್ತಾರೆ. ಪಕ್ಷಿಗಳಾದ ಕೋಗಿಲೆ, ಗರುಡ, ಗಿಳಿ, ಕಾಗೆ, ಕೊಕ್ಕರೆ, ಮರಕುಟಿಕ, ಪಾರಿವಾಳ, ಗುಬ್ಬಚ್ಚಿ, ಕೌಜುಗ, ಬೆಳವ, ಗೊರವಂಕ, ಗೂಬೆ, ಸಾಂಬಾರಕಾಗೆ ಮೊದಲಾದ ಪಕ್ಷಿ ಸಮೂಹವಿರುತ್ತದೆ. ಗ್ರಾಮದಲ್ಲಿ ನಾಟಿ ಕೋಳಿಯನ್ನು ಮಾಂಸ ಹಾಗೂ ಸಂತಾನೋತ್ಪತ್ತಿಗಾಗಿ ಸಾಕಿದ್ದಾರೆ. ಬಿಸಿಲು-ಚಳಿಗೆ ಸದಾ ಹೆಸರಾಗಿರುವ ತಾವರೆಕೆರೆ ಬಡತನಕ್ಕೂ ಹೆಸರುವಾಸಿ.

ವಾಡಿಕೆ ಮಳೆ ೩೯೪ ಮಿಮೀ ಆಗಿದ್ದು ಇದು ಮಳೆ ಅವಲಂಬಿತ ಕೃಷಿಕರಿಗೆ ಏನೇನೂ ಸಾಲದು. ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ೧೭೫ ಕೊಳವೆ ಬಾವಿಗಳಿದ್ದು ತೋಟಗಾರಿಕೆ, ಕೃಷಿ ಅಭಿವೃದ್ಧಿಗೆ ಪೂರಕವಾಗಿದೆ. ಕೆರೆ ಹಳ್ಳಗಳಿದ್ದರೂ ತುಂಬುವುದು, ಹರಿಯುವುದು ತುಂಬಾ ಅಪರೂಪ. ಕೆರೆಯ ಅಂಗಳ, ಬಳ್ಳಾರಿ ಜಾಲಿ ಬೆಳೆದಿದ್ದು ಸೌದೆಗೆ ಆಶ್ರಯವಾಗಿದೆ. ಕುಡಿಯುವ ನೀರಿಗೆ ಗ್ರಾಮ ಪಂಚಾಯ್ತಿ ವತಿಯಿಂದ ೧೩ ಟ್ಯಾಂಕ್‌ಗಳಲ್ಲಿ ೪೫ ನಲ್ಲಿಗಳ ಮೂಲಕ ನೀರು ಸರಬರಾಜು ಮಾಡಲಾಗಿದೆ. ಕೆಲವರು ಮನೆಗಳಿಗೂ ನೀರಿನ ಸಂಪರ್ಕ ಪಡೆದಿದ್ದಾರೆ.

ನಾಯಕ (ವಾಲ್ಮೀಕಿ) ಜನಾಂಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಕುಂಚಿಟಿಗ, ಬೆಸ್ತ, ಕುರುಬ, ಮುಸ್ಲಿಂ, ಅಗಸ, ಶ್ರೀವೈಷ್ಣವ, ದರ್ಜಿ, ಭಜಂತ್ರಿ, ತಿಗಳರು, ಕೊರಚ ಹಾಗೂ ಮಾರ್ವಾಡಿ (ರಾಜಾಸ್ಥಾನ ಪಟೇಲ್) ಜನಾಂಗಗಳು ಇಲ್ಲಿ ಸಣ್ಣ ಸಮುದಾಯವಾಗಿದೆ. ಗ್ರಾಮದಲ್ಲಿ ಕನ್ನಡ ಪ್ರಧಾನ ಭಾಷೆಯಾಗಿದ್ದು ಉರ್ದು, ತೆಲುಗು ವಿರಳವಾಗಿ ಮಾತನಾಡುತ್ತಾರೆ.

ಗೃಹ ನಿರ್ಮಾಣ ರಚನೆಯಲ್ಲಿ ಕಾಂಕ್ರೀಟ್, ಕಡಪಾಕಲ್ಲಿನ, ಮಣ್ಣಿನ, ಮಂಗಳೂರು ಹೆಂಚಿನ, ಶೀಟಿನ ಹಾಗೂ ೮ ಗುಡಿಸಲುಗಳೂ ಸೇರಿ ಒಟ್ಟು ೮೧೨ ಮನೆಗಳಿವೆ. ಇವುಗಳಲ್ಲಿ ೫೨೦ ಮನೆಗಳಲ್ಲಿ ಶೌಚಾಲಯ ಬಳಕೆಯಲ್ಲಿದೆ. ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್, ಜನತಾ ವಸತಿ ಯೋಜನೆಯ ೯೮ ಫಲಾನುಭವಿಗಳು, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದವರಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾಗಿ ಎತ್ತಿನ ಬಂಡಿ ಕೃಷಿಕೆಲಸಕ್ಕೆ ಬಳಕೆಯಾಗುತ್ತಿದ್ದು ವಿರಳವಾಗಿದೆ. ಟ್ರ್ಯಕ್ಟರ್, ಟಿಲ್ಲರ್, ಲಾರಿ, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನ ಹೆಚ್ಚಾಗಿವೆ.

ಪ್ರಾಂಶುಪಾಲರಾದ ಕೃಷ್ಣಮೂರ್ತಿ, ಸರ್ಕಲ್ ಇನ್ಸ್‌ಪೆಕ್ಟರ್ ರಾಘವೇಂದ್ರ, ವಿನಯಕುಮಾರ್, ವೈದ್ಯರಾದ ಡಾ॥ ಸತ್ಯನಾರಾಯಣ ಶೆಟ್ಟಿ, ಲಂಡನ್‌ನಲ್ಲಿ ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದು ಬ್ರಿಟನ್ ರಾಣಿಯಿಂದ ಪಾರಿತೋಷಕ ಪಡೆದ ಹಿರಿಮೆಗೆ ಪಾತ್ರರಾಗಿದ್ದಾರೆ. ಉಪನ್ಯಾಸಕರಾದ ಲಕ್ಷ್ಮೀಕಾಂತ ಸೇರಿದಂತೆ ಒಟ್ಟು ೫೦ ಜನ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಸಣ್ಣ ಕೈಗಾರಿಕೆಯಾಗಿ ಇಟ್ಟಿಗೆ ಫ್ಯಾಕ್ಟರಿ, ಸಾಮಿಲ್, ರಾಗಿಮಿಲ್, ಬಟ್ಟೆ ಹೊಲಿಯುವುದು, ಊಟದ ಎಲೆ ತಯಾರಿಕೆ, ಬೀಡಿ ಕಟ್ಟುವುದು, ಟೈಲರಿಂಗ್, ವಾಹನ ರಿಪೇರಿ ಇದೆ. ಸಾಂಪ್ರದಾಯಿಕ ಕಸುಬಾದ ಸುಣ್ಣ ಸುಡುವುದು, ಬಡಗಿತನ, ಕಮ್ಮಾರಿಕೆ ಇದೆ.

ಸಿರಾ ವಿಧಾನಸಬಾ ಕ್ಷೇತ್ರ, ತಾವರೆಕೆರೆ ತಾಲ್ಲೂಕು, ಜಿಲ್ಲಾ ಹಾಗೂ ಗ್ರಾಮ ಪಂಚಾಯ್ತಿಗಳ ಕೇಂದ್ರವೂ ಆಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಈ ಗ್ರಾಮದಲ್ಲಿ ೮ ಜನ ಗ್ರಾಮಪಂಚಾಯ್ತಿ ಸದಸ್ಯರಿದ್ದು ೧೧ ನೌಕರರಿದ್ದಾರೆ. ಒಂದು ಅಂಚೆ ಕಛೇರಿ, ಕೆನರಾ ಬ್ಯಾಂಕ್, ಸರ್ಕಾರಿ ಹಿರಿಯ ಪಾಠಶಾಲೆ, ಸರ್ಕಾರಿ ಪ್ರೌಢಶಾಲೆ, ಅಂಬಾಭವಾನಿ ಪದವಿಪೂರ್ವ ಕಾಲೇಜು, ಜ್ಞಾನಾಂಬಿಕ ಆಂಗ್ಲಮಾಧ್ಯಮ ಶಾಲೆ, ಗ್ರಾಮಪಂಚಾಯ್ತಿ ಕಛೇರಿ, ೨ ಅಂಗನವಾಡಿ ಕೇಂದ್ರ, ಪೊಲೀಸ್ ಠಾಣೆ, ದೂರವಾಣಿ ವಿನಿಮಯ ಕಛೇರಿ, ಸಾರ್ವಜನಿಕ ಆಸ್ಪತ್ರೆ, ಪಶುಚಿಕಿತ್ಸಾಲಯ, ಹಾಲಿನ ಡೈರಿ, ವ್ಯವಸಾಯ ಸೇವಾ ಸಹಕಾರ ಸಂಘ, ಗ್ರಂಥಾಲಯ, ರೈತ ಸಂಪರ್ಕ ಕೇಂದ್ರ ಮೊದಲಾದ ಶೈಕ್ಷಣಿಕ, ಗ್ರಾಮಾಭಿವೃದ್ಧಿ ಆರ್ಥಿಕ ಹಿನ್ನೆಲೆಯ ವ್ಯವಹಾರಿಕ ಸಂಘಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಈ ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೬೮.೭ ರಷ್ಟಿದ್ದು ಮಹಿಳೆಯರು ೬೧.೭ ಹಾಗೂ ಪುರುಷರು ೭೫.೯ ರಷ್ಟಿದೆ. ಇಲ್ಲಿನ ಸಿದ್ಧಾರ್ಥ ಪದವಿಪೂರ್ವ ಕಾಲೇಜು ಉತ್ತಮ ಫಲಿತಾಂಶ ನೀಡುತ್ತಿದ್ದು ಕಲಾ ವಿಭಾಗದಲ್ಲಿ ೨೦೦೭ ನೇ ಸಾಲಿನಲ್ಲಿ ಕು॥ ಕಲ್ಪನ ರಾಜ್ಯಕ್ಕೆ ೫ನೇ ರ್‍ಯಾಂಕ್ ಪಡೆದಿರುವುದು ಈ ಕಾಲೇಜಿನ ಹಿರಿಮೆ. ಪ್ರಸ್ತುತ ಕಾಲೇಜಿನಲ್ಲಿ ೧೯೮ ವಿದ್ಯಾರ್ಥಿಗಳಿದ್ದು ೬ ಜನ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಉತ್ತಮ ಕೊಠಡಿ, ವಿಸ್ತಾರವಾದ ಕಾಂಪೌಂಡ್ ಸೌಲಭ್ಯವಿದೆ. ಅಡವೀಶಯ್ಯ ಪಶುಸಂಬಂಧಿ ಚಿಕಿತ್ಸೆ ನೀಡಿ ಸ್ಥಳೀಯವಾಗಿ ಹೆಸರಾಗಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೧೫ ಹೋಟೆಲ್‌ಗಳಿದ್ದು ३೬ ಅಂಗಡಿಗಳಿವೆ. ಬಡಗಿ ಕರಿಯಜ್ಜಿ ಮಕ್ಕಳಿಗೆ ಬರುವ ಕಾಯಿಲೆಗಳನ್ನು ನಾಟಿ ಔಷಧಿಯಿಂದ ಗುಣಪಡಿಸುವ ಪಂಡಿತೆ. ಊರ ಸುತ್ತಲೂ ಕೋಟೆ, ಅದರ ಬದಿಗೆ ಕಂದಕ ನಡುವೆ ಮಣ್ಣಿನ ಬುರ್ಜು ಇದೆ. ೨ ದ್ವಾರಬಾಗಿಲಿದ್ದು ಈಗ ಒಂದು ದ್ವಾರ ಬಾಗಿಲನ್ನು ಪುನರ್ ನಿರ್ಮಿಸಿ ದ್ವಾರದ ಬಳಿ ಆಂಜನೇಯನ ವಿಗ್ರಹ ನಿರ್ಮಿಸಿದ್ದಾರೆ. ಬಂಡಿ ರಂಗನಾಥಸ್ವಾಮಿ, ಮರಡಿ ಗುಡ್ಡ ಬಳಿಯ ಮೂಲ ರಂಗನಾಥನ ದೇವಾಲಯವಿದೆ. ಶ್ರೀ ಮಲವಾಡಿ ಸುಬ್ರಹ್ಮಣ್ಯಸ್ವಾಮಿ ಗೀತಾಶ್ರಮವಿದ್ದು ಇಲ್ಲಿ ಚಿದಾನಂದ ಅವಧೂತರ ಶ್ರೀದೇವಿ ಮಹಾತ್ಮೆಯನ್ನು ಮನೆಮನೆಗಳಲ್ಲಿ ಪಾರಾಯಣ ಮಾಡಿಸುವ ಪರಿಪಾಠವನ್ನು ಈ ಆಶ್ರಮ ಮಾಡುತ್ತಿದೆ.

ಯುಗಾದಿ, ಮಹಾನವಮಿ, ಶಿವರಾತ್ರಿ, ಗೌರಿ–ಗಣೇಶ, ಸಂಕ್ರಾಂತಿ ಹಾಗೂ ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ. ಯುಗಾದಿ ಹಬ್ಬದಂದು ಬಿಲ್ಲುಗೂಡು ಆಚರಣೆ ಗಮನ ಸೆಳೆಯುವ ಸಾಂಸ್ಕೃತಿಕ ಆಚರಣೆ. ಅಂದು ಕಂಚಿನ ವಿಷ್ಣು ಮೂರ್ತಿಯನ್ನು ಊರಿನ ಹೊರಗೆ ಬಿಲ್ಲು ಮಂಟಪ ಮಾಡಿ ಅದರಲ್ಲಿ ಗದ್ದುಗೆ ಮಾಡಿ ಹೂವಿನಿಂದ ಅಲಂಕರಿಸಿ, ಪ್ರಾಚೀನ ಧೂಪದ ಕಾಣಿಕೆಯಿಟ್ಟು ಅದಕ್ಕೆ ಧೂಪಾರತಿ ಮಾಡುವುದು ವಾಡಿಕೆಯಾಗಿದೆ.

ನಾಯಕರ ಭೂತಣ್ಣನ ವಂಶದವರಿಂದ ಭೂತಪ್ಪನ ಮೆರವಣಿಗೆ, ಮಣೇವು ಕುಣಿತ ಇರುತ್ತದೆ. ತೇರಿನ ಬೀದಿ, ಪೇಟೆಬೀದಿ, ಗಾಂಧಿರಸ್ತೆ, ಸುಣ್ಣಕಲ್ಲರ ಓಣಿ, ಮೇಗಲಹಟ್ಟಿ, ಮಾದಿಗರಹಟ್ಟಿ ಗ್ರಾಮದ ಮುಖ್ಯ ಓಣಿಗಳು.

ಟಿ.ತಾರೇಗೌಡರು ೧೯೭೪ ರ ಸುಮಾರಿನಲ್ಲಿ ಬಂಡಿ ರಂಗನಾಥನ ಕಥಾವಳಿ ಚರಿತ್ರೆ ಪುಸ್ತಕ ರಚಿಸಿದ್ದಾರೆ. ತಾವರೆಕೆರೆ ಪ್ರಕಾಶರಾವ್ ಪ್ರಕಾಶನ ಸಂಸ್ಥೆ ಆರಂಭಿಸಿ ಪುಸ್ತಕ ಪ್ರಕಟಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಉದ್ಯೋಗಿ. ಇವರ ತಂದೆ ಸುಬ್ಬರಾವ್ ಶಿಕ್ಷಕರಾಗಿದ್ದು ವೈದಿಕ ಸಂಸ್ಕೃತಿಗೆ ಸಂಬಂದಿಸಿದ ಮಹತ್ವದ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಶ್ರೀರಂಗ ಜೋಯಿಸಲು ಜ್ಯೋತಿಷ್ಯ ಸಂಬಂಧಿ ಹಲವಾರು ಗ್ರಂಥ ರಚಿಸಿದರೆ ಪ್ರಾಂಶುಪಾಲ ಟಿ.ಓ. ಕೃಷ್ಣಮೂರ್ತಿ ಉತ್ತಮ ಲೇಖಕರು. ಶಿಕ್ಷಕಿ ತಾ.ಸ. ಪುಷ್ಪ ಕಾದಂಬರಿಗಳ ಲೇಖಕಿ. ಇವರೆಲ್ಲರೂ ತಾವರೆಕೆರೆಯವರು.

ಕುರುಬರ ಎಲ್ಲಪ್ಪ ಶನಿಮಹಾತ್ಮೆ ಪಾತ್ರದ ವಿಶೇಷ ಕಲಾವಿದ. ಹನುಮಂತರಾಯಪ್ಪ, ರಂಗನಾಥ ತತ್ವಪದಕಾರ ಬಸವಣ್ಣ ಸೋಬಾನೆ ಪದಗಾರ್ತಿ ಸಣ್ಣಕ್ಕ, ಲಕ್ಕಮ್ಮ ಸ್ಥಳೀಯವಾಗಿ ಹೆಸರು ಮಾಡಿದ್ದಾರೆ. ಎಲೆಬಳ್ಳಿ ತಜ್ಞ ಬಳ್ಳಿ ನರಸಿಂಹಯ್ಯ ಕೃಷಿ ಪಂಡಿತರು. ತಾವರೆಕೆರೆ ಸಿರಾ–ಚಿತ್ರದುರ್ಗ ಉತ್ತಮ ಸಾರಿಗೆ ಸಂಪರ್ಕ ಹೊಂದಿದೆ. ತಾವರೆಕೆರೆ ಸ್ವಾತಂತ್ರ್ಯ ಚಳುವಳಿಗೂ ಮಹತ್ವದ ಕೊಡುಗೆ ನೀಡಿದ ಗ್ರಾಮ. ಟಿ.ತಾರೇಗೌಡ, ಬಾಲಯ್ಯ, ಪಾತಣ್ಣ, ಬಸಪ್ಪ, ಸಂಜೀವಯ್ಯ, ಶೆಟ್ಟಿಕಾಡಪ್ಪ ಪ್ರಮುಖ ಸ್ವಾತಂತ್ರ್ಯ ಸೇನಾನಿಗಳು. ಈಗ ಇವರೆಲ್ಲರೂ ದಿವಂಗತರಾಗಿದ್ದಾರೆ. ಶ್ರೀ ತಾವರೆಕೆರೆ ಸತ್ಯನಾರಾಯಣ ಎಂಬುವರು ಪರಿಸರ ಅಭಿವೃದ್ಧಿ, ಗ್ರಾಮ ನೈರ್ಮಲ್ಯ ಹಾಗೂ ನಿರ್ಮಲ ಭಾರತ ಅಭಿಯಾನದ ಜಿಲ್ಲಾ ಸಂಚಾಲಕರಾಗಿ ಸಾಕಷ್ಟು ಪ್ರಗತಿಪರ ಕಾರ್ಯಕ್ರಮ ರೂಪಿಸಿ ಜನಜಾಗೃತಿ ಮೂಡಿಸುತ್ತಿದ್ದಾರೆ.

## ತಡಕಲೂರು

ತಡಕಲೂರು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ३೬ ಕಿ.ಮೀ. ದೂರದಲ್ಲಿದೆ. ಇದೊಂದು ಪ್ರಾಚೀನ ಗ್ರಾಮವಾಗಿದ್ದು, ದೇವಾಲಯಗಳ, ಶಾಸನ, ವೀರಗಲ್ಲು, ಮಾಸ್ತಿಕಲ್ಲು, ನಾಗರಕಲ್ಲುಗಳ– ಪ್ರಾಶ್ಯ ವಸ್ತುಗಳ ಅವಶೇಷಗಳ ಗ್ರಾಮವಾಗಿದೆ. ಸಿರಾ ತಾಲ್ಲೂಕು ಹುಲಿಕುಂಟೆ ಹೋಬಳಿಯ ತಾಲ್ಲೂಕು ಪಂಚಾಯಿತಿ ಕೇಂದ್ರ ಹಾಗೂ ಗ್ರಾಮ ಪಂಚಾಯಿತಿಯ ಕೇಂದ್ರವೂ ಆಗಿದೆ. ತಿಮ್ಮನಹಳ್ಳಿ, ಲಕ್ಕನಹಳ್ಳಿ, ದಿಬ್ಬದ ಹಳ್ಳಿ, ಮೇಲುಗಿರಿ ಪಾಳ್ಯ (ಎಂಜಿಪಾಳ್ಯ) ಹಳ್ಳಪ್ಪನ ಪಾಳ್ಯ ಇವು ಈ ಗ್ರಾಮಕ್ಕೆ ಸೇರ್ಪಡೆಗೊಂಡಿರುವ ಮಜರೆ ಗ್ರಾಮಗಳು. ಇವು ತೊಡರಿಕೊಂಡಿರುವ ಸ್ವರೂಪದ ಗ್ರಾಮಗಳೂ ಆಗಿದ್ದು, ತೊಡಕು>ತಡಕ>ಊರು ತಡಕಲೂರು ಆಗಿರುವ ಸಾಧ್ಯತೆ ಇದೆ. ಜೊತೆಗೆ ಗ್ರಾಮದ ಲಕ್ಷ್ಮೀದೇವಿ ದೇವಸ್ಥಾನದ ಅರ್ಚಕ ೭೨ ವರ್ಷ ವಯಸ್ಸಿನ ಶ್ರೀ ತಿಮ್ಮಯ್ಯನವರ ಅಭಿಪ್ರಾಯವೂ ಕೆಲಗ್ರಾಮದ ನಿಷ್ಪತ್ತಿಯಲ್ಲಿ ಮುಖ್ಯವಾಗಿರುತ್ತದೆ. ಇಲ್ಲಿಗೆ ೪೦ ಕಿ.ಮೀ. ದೂರದ ನಿಡುಗಲ್ಲು ಬೆಟ್ಟದ ದೇವರುಗಳು ಸಿರಾ ಸೀಮೆಗೆ, ವಕ್ಕಲುಗಳ ಮನೆಗಳಿಗೆ ಬರುವಾಗ, ಈ ಗ್ರಾಮದಲ್ಲಿ ದೇವರುಗಳು ತಂಗುತ್ತಿದ್ದ ತಡೆದು ನಿಂತ ದೇವರುಗಳ ಊರು ತಡಕಲೂರು ಆಗಿದೆ ಎಂಬ ಅಭಿಪ್ರಾಯ ವ್ಯಕ್ತ ಪಡಿಸುತ್ತಾರೆ. ಇಲ್ಲಿಗೆ ೧೫ ಕಿ.ಮೀ. ದೂರದಲ್ಲಿ ನೊಳಂಬರ ರಾಜಧಾನಿ ಹೇಮಾವತಿ ಪಟ್ಟಣವಿದ್ದು, ಆ ರಾಜರ ಕಾಲದ ಬಸವೇಶ್ವರ ದೇವಸ್ಥಾನ ಗ್ರಾಮದಲ್ಲಿದ್ದರಿಂದ ನೊಳಂಬರಿಗೆ ಈ ಗ್ರಾಮ ತಡೆದ, ಊರಾಗಿತ್ತು ಎಂಬ ಇನ್ನೊಂದು ಅಭಿಪ್ರಾಯವೂ ಇದೆ. ಇನ್ನೊಂದು ಮತದ ಪ್ರಕಾರ ತಡಕಲೂರು ಗ್ರಾಮದ ಬದಿಗೆ ಇರುವ ಕೆರೆಯ ಅಂಗಳದಲ್ಲಿ, ಒಂದು ಬಸವನ ಪೀಠ ಹಾಗೂ ಅದರ ಮೇಲೆ ಬಳಪದ ಕಲ್ಲಿನ ಬಸವಣ್ಣನ ಮೂರ್ತಿ ಇದೆ. ಈ ಭಾಗದಲ್ಲಿ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆಯ ತೊಂದರೆಯಾದಲ್ಲಿ ಕೆರೆಯ ಅಂಗಳದ ಬಸವನನ್ನು ಪೀಠದಿಂದ ಕದಲಿಸಿ ಕೆಳಕ್ಕೆ ಇರಿಸಿದ

ಸ್ವಲ್ಪ ಹೊತ್ತಿನಲ್ಲಿಯೇ ಹೆರಿಗೆಯಾಗುತ್ತದೆಂಬ ನಂಬಿಕೆ ಈ ನಂಬಿಕೆ ಇಂದಿಗೂ ಇದೆ. ಹಾಗಾಗಿ ಹೆರಿಗೆ ಕಷ್ಟದ ತೊಡಕನ್ನು ಬಿಡಿಸಿದ ಗ್ರಾಮ ಎಂಬ ಹಿನ್ನೆಲೆಯೂ ಈ ಗ್ರಾಮಕ್ಕಿದೆ. ಕೋಟೆ ಕೊತ್ತಳಗಳ ಪಳೆಯುಳಿಕೆ, ಹಳೆ ದೇಗುಲಗಳ, ವೀರಗಲ್ಲು, ಮಾಸ್ತಿಕಲ್ಲುಗಳು, ನಾಗರಕಲ್ಲು, ಈರಗಾರರ ಗುಡಿ, ಕಲ್ಯಾಣಿ ಬಾವಿ, ಕೆರೆಕಟ್ಟೆಗಳ ಜಲಗಾರಿಕೆಯ ತಡಕಲೂರು ಹಲವು ಜಾತಿಯ, ಜಾತಿಗೊಂದು ದೇಗುಲಗಳ ಸೌಹಾರ್ದ, ಸಹಬಾಳ್ವೆ, ಈ ಗ್ರಾಮದ ವಿಶೇಷವಾಗಿದೆ. ಶಿವಲಿಂಗ, ಶಾಸನ, ಕಲ್ಲುಗಳ ದೇವಾಲಯಗಳು ಈ ತಡಕಲೂರು ಗತಕಾಲದ ಚಾರಿತ್ರಿಕ, ಸಾಂಸ್ಕೃತಿಕ, ಧಾರ್ಮಿಕ, ಸಂಸ್ಕೃತಿಯ ಪಳೆಯುಳಿಕೆಯಾಗಿ ಚೋಳರು, ನೊಳಂಬರು, ಈ ಊರಲ್ಲಿ ಆಳ್ವಿಕೆ ಮಾಡಿದ ಕಟ್ಟಿ ಬೆಳೆಸಿದರೆಂಬ ನಂಬಿಕೆಯೂ ಇದೆ. ಸಾವೆ ಎಂಬ ಧಾನ್ಯವನ್ನು ಪಡೆದು ಈ ಗ್ರಾಮವನ್ನು ಶ್ಯಾನುಭೋಗರು ಗೌಡರಿಗೆ ಬಿಟ್ಟುಕೊಟ್ಟರೆಂಬುದು ಗ್ರಾಮದ ಹಿರಿಯರು ಹೇಳುತ್ತಾರೆ. ಊರಿನ ಊರ ವಲಯದ 'ಪಾದಗಟ್ಟೆ' ದೇವರುಗಳ ದರ್ಬಾರು ದೇವರುಗಳ ಪುಣ್ಯಸ್ಥಾನದ ತಡಕೂರು ಕೆರೆಯ ತನಕ, ಊರು ವಿಸ್ತಾರವಾಗಿದ್ದ ಪುರಾವೆಗಳು ಕಂಡು ಬರುತ್ತವೆ. ಈ ಭಾಗದಲ್ಲಿ ಮನೆಯ ಪಾಯ ತೋಡುವಾಗ, ಮತ್ತಿತರ ಗುಂಡಿ ತೆಗೆದರೆ ಅಲ್ಲೊಂದು ಶಿವಲಿಂಗ ಮೊದಲಾದ ಪ್ರಾಚ್ಯ ಅವಶೇಷ ದೊರೆಯುತ್ತದೆ ಎಂದು ನರಸಪ್ಪ ಅವರ ಹೇಳಿಕೆಯಾಗಿದೆ. ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ತಡಕಲೂರು, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ಇದಕ್ಕೆ ದಿಬ್ಬದ ಹಟ್ಟಿ, ಲಕ್ಕನಹಳ್ಳಿ, ಬೆಜ್ಜಿಹಳ್ಳಿ, ಚಿರತಹಳ್ಳಿ, ಕರಿದಾಸರಹಳ್ಳಿ, ತಿಮ್ಮನಹಳ್ಳಿ, ಹನುಮಂತನಗರ, ಸಿ.ಬಿ.ಪಾಳ್ಯ, ಹಳ್ಳಪ್ಪನ ಪಾಳ್ಯ, ಬಪ್ಪರಾಯಪ್ಪನ ಪಾಳ್ಯಗಳನ್ನು ತನ್ನ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡಿಸಿಕೊಂಡಿದೆ.

ಮರಳು, ಕೆಂಪು, ಕಂದು ಮಿಶ್ರಿತ ಮರಳು ಮಣ್ಣನ್ನು ಹೊಂದಿರುವ ಇಲ್ಲಿನ ನೆಲ ಶೇಂಗಾ ಬೆಳೆಗೆ ಉತ್ಕೃಷ್ಟವಾದುದು. ಕುರುಚಲು ಗಿಡ, ಪೊದೆ, ಮರ, ತಗ್ಗು, ದಿಣ್ಣೆಗಳಿಂದ ಕೂಡಿದ ಈ ಪ್ರದೇಶದಲ್ಲಿ ಮೊಲ, ಜಿಂಕೆ, ನರಿ, ತೋಳ, ಮುಂಗುಸಿ, ಬೆಕ್ಕು, ಉಡ ಮೊದಲಾದ ಕಾಡು ಪ್ರಾಣಿಗಳು ಗ್ರಾಮ ಪರಿಸರದಲ್ಲಿ ಸಾಕು ಪ್ರಾಣಿಗಳಾದ ಕುರಿ, ಮೇಕೆ, ಹಸು, ಎತ್ತು, ಎಮ್ಮೆ, ನಾಯಿ ಸಾಕು ಪ್ರಾಣಿಗಳಿವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಗೊರವಂಕ, ನವಿಲು, ಗೀಜಗ, ಗೂಬೆ, ಹದ್ದು, ಗರುಡ, ಗೊರವಂಕ, ಬೆಳವ ಮೊದಲಾದ ಪಕ್ಷಿಗಳು ಕಂಡು ಬರುತ್ತದೆ. ಕೋಳಿಯನ್ನು ಸಾಕು ಪಕ್ಷಿಯನ್ನಾಗಿ ಸಾಕಲಾಗುತ್ತಿದೆ.

ಬಿಸಿಲು, ಸಾಧಾರಣ ಮಳೆ, ನೀರಿನ ಸೌಕರ್ಯ ಇಲ್ಲಿನ ಈ ಗ್ರಾಮ ಪರಿಸರದಲ್ಲಿ ಮಳೆ ೪೫೮ ಮಿ.ಮೀ. ವಾರ್ಷಿಕವಾಗಿ ಬಿದ್ದರೆ ಉಷ್ಣಾಂಶ ೩೮೦ ಸೆಂ. ಇದ್ದರೆ, ಚಳಿ ೧೨೦ ಸೆಂ. ಸಾಮಾನ್ಯವಾಗಿರುತ್ತದೆ. ಈ ಗ್ರಾಮದ ಪಕ್ಕದಲ್ಲಿ ತಡಕಲೂರು ಕೆರೆಯಿದ್ದು ಅದು ೮೮ ಹೆಕ್ಟೇರ್‌ಗಳಿಗೆ ನೀರನ್ನು ಒದಗಿಸುತ್ತದೆ. ಆದರೆ ತುಂಬುವುದು ವಿರಳವಾಗಿದೆ. ಕುಡಿಯುವುದಕ್ಕೆ ಕೊಳವೆ ಬಾವಿಗಳ ಮೂಲಕ ಗ್ರಾಮ ಪಂಚಾಯಿತಿಯವರು ಆರು ಚಿಕ್ಕ ಚಿಕ್ಕ ಟ್ಯಾಂಕ್‌ಗಳ ಮೂಲಕ ಪೂರೈಸಲಾಗುತ್ತಿದೆ. ೪ ಕೈ ಪಂಪುಗಳು ಇವೆ.

ಕುಂಚಿಟಿಗರು ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ಆದಿಕರ್ನಾಟಕ, ಆದಿದ್ರಾವಿಡ, ನಾಯಕ, ವೀರಶೈವ, ಕುರುಬರು, ಕಮ್ಮಾರ, ಅಗಸರು, ಬ್ರಾಹ್ಮಣರು ಹಾಗೂ ಮುಸ್ಲಿಂ ಜನಾಂಗಳು ಸಣ್ಣ ಸಮುದಾಯಗಳಿವೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಒಟ್ಟು ೩೨೫ ಮನೆಗಳಿದ್ದು, ಇದರಲ್ಲಿ ೧೨೫ ಮನೆಗಳಲ್ಲಿ ಶೌಚಾಲಯ ಬಳಕೆಯಿದೆ. ಜನತಾ, ಆಶ್ರಯ, ಇಂದಿರ ಆವಾಸ್, ಗೃಹ ಯೋಜನೆ, ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಾಲದ ೭೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ, ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗ ಊಟದ ವಿಶೇಷ ಸಂದರ್ಭಗಳೂ ಇವೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿ, ಆಧುನಿಕ ವಾಹನಗಳೂ ಹೆಚ್ಚಿವೆ. ೧೪೮೦ ಜನಸಂಖ್ಯೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಅಡಿಕೆ, ನವಣೆ, ಸಜ್ಜೆ, ಕಡಲೆ, ಸಾವೆ, ಹುರುಳಿ, ಅಲಸಂದಿ, ಅವರೆ, ಜೋಳ, ಭತ್ತಗಳನ್ನು ಆಹಾರ ಬೆಳೆಯಾಗಿದ್ದು ತೋಟದ ಬೆಳೆಯನ್ನಾಗಿ ಬೆಳೆಯುತ್ತಾರೆ ಶಿಕ್ಷಕರು, ಕಂದಾಯ ಇಲಾಖೆ, ಪೋಲೀಸ್ ಇಲಾಖೆಯಲ್ಲಿ ಸೇರಿದಂತೆ ೧೦ ಮಂದಿ ಸರ್ಕಾರಿ ನೌಕರಿದ್ದಾರೆ. ಗೃಹೋಪ ಉದ್ಯಮವಾಗಿ ಬೀಡಿ ಕಟ್ಟುವುದು, ಊಟದ ಎಲೆ ಕಟ್ಟುವುದು, ಟೈಲರಿಂಗ್ ಕಾಯಕ ನಿರ್ವಹಿಸುವ ಗೃಹಿಣಿಯರಿದ್ದಾರೆ.

ಸಿರಾ ವಿಧಾನಸಭೆ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ತಡಕಲೂರು ತಾಲ್ಲೂಕು ಪಂಚಾಯಿತ್ ಹಾಗೂ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ಬರುವ ಈ ಗ್ರಾಮ ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಬರುತ್ತದೆ. ಅಂಚೆ ಕಛೇರಿ, ೪ ಸ್ತ್ರೀ ಶಕ್ತಿ ಸಂಘಗಳು, ೨ ಧರ್ಮಸ್ಥಳ ಸ್ವಸಹಾಯ ಸಂಘಗಳಿದ್ದು, ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಗಳಿವೆ. ಶೇ. ೬೬ ರಷ್ಟು ಸಾಕ್ಷರತಾ ಪ್ರಮಾಣದಲ್ಲಿದ್ದು, ಪುರುಷರು ೭೨.೬ ರಷ್ಟು, ೫೯.೪ ರಷ್ಟು ಮಹಿಳಾ ಸಾಕ್ಷರತರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಹಾಗೂ ಉಚಿತ ಪುಸ್ತಕ ವಿತರಣಾ ಸರ್ಕಾರದ ಸೌಲಭ್ಯ ದೊರೆತಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ

ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ಗ್ರಾಮದಲ್ಲಿ ೮ ಕಿರಾಣಿ ಅಂಗಡಿಗಳು, ೩ ಹೋಟೆಲ್‌ಗಳು ಇವೆ. ನೊಳಂಬರ, ಚೋಳರ. ಚಾಲುಕ್ಯ ಕಾಲದ ೧೨ ವೀರ ಗಲ್ಲುಗಳು, ೪ ಮಾಸ್ತಿ ಕಲ್ಲುಗಳು, ಆರು, ಏಳು, ಮೂರು ಒಂದೂವರೆ ಅಡಿ ಎತ್ತರದ ಸ್ವರೂಪದಲ್ಲಿವೆ. ಕೆಲವು ವೀರನ ಹೋರಾಟ, ಸಾವು, ದೇವಲೋಕದ ಪ್ರವೇಶ. ಈ ಬಗೆಯ ಹಂತಗಳನ್ನು ಬಿಡಿಸಿರುವುದು ವಿಶೇಷವಾಗಿದೆ. ಊರ ಪ್ರದೇಶ ದ್ವಾರದ ಬಿಳಿ ಕರುಗಲ್ಲು, ಊರ ಬಾಗಿಲು, ಅಲ್ಲಿಂದ ಬಸವಣ್ಣ ದೇವಸ್ಥಾನದ ಬಾಗಿಲು, ಒಳ ಪ್ರವೇಶಿಸಿದರೆ, ಬಸವೇಶ್ವರ, ಆಂಜಿನಯ್ಯ, ಕದರಿ ನರಸಿಂಹ, ಕರಿಯಮ್ಮ, ಏಳು ಮಂಡಕ್ಕ, ಮಾರಮ್ಮ ದೇವಸ್ಥಾನಗಳಿವೆ. ಈರಗಾರರ ಗುಡಿ ಇದ್ದು, ಅದನ್ನು ಗ್ರಾಮದ ಸಂರಕ್ಷಕರ ದೇವಸ್ಥಾನವೆಂದು ಇಂದಿಗೂ ಪೂಜಿಸುತ್ತಿರುವುದು ವಿಶೇಷವಾಗಿದೆ. ಇಲ್ಲಿನ ಮೂರು ಶಾಸನಗಳ ಈ ಗ್ರಾಮದ ಸಣ್ಣ ವಿವರಿದು. ೧೪೬೨ ಸಂದರ್ಭಗಳಲ್ಲಿ ತಡಕಲೂರಿನ ಕೆರೆಯ ತೂಬನ್ನು, ಗ್ರಾಮದ ಶಿವನಗೌಡರ ಮಗ ಪನ್ನಪ್ಪನು ಕಟ್ಟಿಸಿದಾಗ ಅದನ್ನು ಮೆಚ್ಚಿದ, ವಿಜಯನಗರದ ರಾಜ ಸದಾಶಿವರಾಯ ಮಹಾ ಮೂಡಲಿಕ ಚೆಂಗಪ್ಪ ದೇವ ಅರಸನು, ಪನ್ನಪ್ಪನಿಗೆ ಕೆರೆಯ ಹಿಂದಿನ ತೂಬಿನ ಗುಂಡಿ ಗದ್ದೆಯನ್ನು ಮಾನ್ಯ ಮಾಡಿಕೊಟ್ಟ ವಿವರವಿದೆ. (ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್ ಪ್ರೊಸೀಡಿಂಗ್ಸ್ ಸಂಗಿ೬೬.

ಉಳಿದ ೨ ಶಾಸನದಲ್ಲಿ ನೊಳಂಬರ ದೀಲೀಪನ ಮಡದಿ ಅಂಬಲ ಪೊನ್ನಬ್ಬೆ ೯೩೯ ರಲ್ಲಿ ಹಾಸಿದಳೆಂಬ ಅಸ್ಪಷ್ಟ ವಿವರಗಳ ಶಾಸನಕಲ್ಲು (ವಿ.ಕ.ಸಂ.೯೬೬). ಮತ್ತೊಂದು ೧೭೬೯ ವಿರೋಧಿ ಸಂವತ್ಸರ ಎಂಬ ಉಲ್ಲೇಖ. ಅಸ್ಪಷ್ಟ ವಿವರ ವಿ.ಕ. ೯೬೬.

ಅಲ್ಲದೆ ಮೂರು ಲಕ್ಷ್ಮೀದೇವರ ಗುಡಿಗಳಿದ್ದು, ಕುಂಚಿಟಿಗರು, ಆದಿದ್ರಾವಿಡ, ಹಾಗೂ ಆದಿಕರ್ನಾಟಕ ಜನಾಂಗದವರೂ, ಪ್ರತ್ಯೇಕ ಪ್ರತ್ಯೇಕವಾಗಿಯೇ ನಿರ್ಮಿಸಿಕೊಂಡು ಪೂಜಿಸುತ್ತಾರೆ. ಮಾರಮ್ಮ ಗ್ರಾಮ ದೇವತೆಯಾದರೂ ಬೇಡ ಜನಾಂಗದವರ ಒಡೆತದಲ್ಲಿದೆ. ಕದಿರೆ ನರಸಿಂಹಸ್ವಾಮಿಗೆ ೫ ದಿನಗಳ ವಿಶೇಷ ಜಾತ್ರೆ, ಕಲ್ಲುಗಾಲಿನ ರಥೋತ್ಸವ ಕದಿರೆ ಹುಣ್ಣಿಮೆಯ ದಿನದಂದು ನಡೆಯುತ್ತದೆ. ತಡಕಲೂರು ನಾಗರ ಆರಾಧನೆಗೆ ವಿಶೇಷವಾಗಿದೆ, ಕೆರೆಯ ಮುಂಭಾಗ ಪ್ರತ್ಯೇಕವಾಗಿಯೇ ನಾಗಸ್ಥಾನವಿದ್ದು ಸಾಲಾಗಿ ನಾಗರಕಲ್ಲುಗಳ ವಿವಿಧ ಆಕೃತಿ, ಏಳು ಹೆಡೆ ಸರ್ಪ, ಹೀಗೆ ವೈವಿಧ್ಯವಾಗಿ ಕೆತ್ತಲಾಗಿದೆ. ಚೆಲುವಾದಿಗಳು ಪ್ರತ್ಯೇಕವಾಗಿಯೇ ನಾಗವನ ನಿರ್ಮಿಸಿಕೊಂಡಿದ್ದು, ೪೦ ಗ್ರಾಮಗಳ ಒಕ್ಕಲು ಬಂದು ಇಲ್ಲಿ ಪೂಜಿಸುತ್ತಾರೆ ಎನ್ನುತ್ತಾರೆ. ಲಕ್ಷ್ಮೀದೇವರ ಅರ್ಚಕ ಚಲುವಾದಿ ತಿಮ್ಮಮ್ಮ ಬಸವೇಶ್ವರ ಪ್ರಾಚೀನ ದೇವಸ್ಥಾನವಾಗಿದ್ದು, ಇದು ಚೋಳರ ಕಾಲದ ದೇವಸ್ಥಾನ ಎಂದು ಕರೆಯುತ್ತಾರೆ. ಇದಕ್ಕೂ ೪ ಕಲ್ಲುಗಾಲಿ ರಥೋತ್ಸವ ನಡೆಸಲಾಗುತ್ತದೆ. ವೀರಶೈವವು ಇದರ ಅರ್ಚಕರಾದರೂ ಗ್ರಾಮದ ಸಮಸ್ತರೂ ಭಕ್ತಿ ಭಾವದಿಂದ ನಡೆದು ಕೊಳ್ಳುತ್ತಾರೆ. ಆಶಾಢ ಮಾಸದಲ್ಲಿ 'ಹಬ್ಬದೀಪ' ಎಂದೇ ಕರೆದು ಜಾತ್ರೆ ನಡೆಸುವ ಚಲುವಾದಿ ಲಕ್ಷ್ಮೀದೇವಿ ಜಾತ್ರೆಯಲ್ಲಿ ೧೨ ಕೈವಾಡದವರು ಸಮಭಾಗಿಯಾಗುವುದು ವಿಶೇಷವಾಗಿದೆ. ಮಾರಿ ದೇವರ ಜಾತ್ರೆ ಊರಹಬ್ಬವಾಗಿ ಆರತಿ, ಬಾನ, ಬ್ಯಾಟೆಯ ಸಂಪ್ರದಾಯವಿರುತ್ತದೆ. ಬಸವೇಶ್ವರ, ಆಂಜನೇಯ, ಕದರಿನರಸಿಂಹ, ಮಾರಮ್ಮ ದೇವರುಗಳಿಗೆ ಹನ್ನೆರಡು ಕೈವಾಡದವರ ಪಾತ್ರ. ಗ್ರಾಮೈಕ್ಯತೆಯ ಪ್ರತೀಕವಾಗಿದೆ. ಲಕ್ಷ್ಮೀದೇವರುಗಳಿಗೆ ಪ್ರತಿ ಅಮಾವ್ಯಾಸೆಯ ವಿಶೇಷ ಸೊಕ್ಕ ಭೋಜನ ಏರ್ಪಾಡು, ಪಾಯಸ–ಅನ್ನದ ಸಾಮೂಹಿಕ ಭೋಜನ ಇರುತ್ತದೆ. ಉರುವೆ, ಜನಪದ ಸಂಗೀತದ ಕಲಾವಿದರಿದ್ದು, ಸೇದೋ ಬಾವಿ ಮೂಡ್ಲಯ್ಯ, ನಾಗಜ್ಜರ ತಿಮ್ಮಯ್ಯ, ತಿಪ್ಪೇಸ್ವಾಮಿ, ಕಹಳೆ ನರಸಿಂಹಯ್ಯ, ಈರಣ್ಣ–ತತ್ವಪದ ಕಾರರಾದ ಕೊಟ್ಟಜ್ಜರ ತಿಮ್ಮಯ್ಯ, ಬೈಲಜ್ಜ, ಲಕ್ಷ್ಮಮ್ಮ, ತಿಮ್ಮಮ್ಮ, ಹನುಮಜ್ಜಿ, ನಾಗರಾಜು ಪ್ರಮುಖ ಜನಪದ ಕಲಾವಿದರಾಗಿದ್ದಾರೆ. ಗ್ರಾಮದ ಹೊರ ವಲಯದಲ್ಲಿ 'ಪಾದಗಟ್ಟೆ' ಎಂಬ ಸ್ಥಳವಿದ್ದು, ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಇಲ್ಲಿ ನೆರವೇರುತ್ತದೆ. ದೇವರು ಬನ್ನಿ ಪೂಜೆ, ಉತ್ಸವ ಏರ್ಪಡುವುದು ಇದೇ ಜಾಗದಲ್ಲಿಯೇ, ಇದರ ಬದಿಯಲ್ಲಿ ಒಂದು ಮಠ ಇದ್ದು ಆತ್ಮ ಪರಮಾತ್ಮ ಎಂಬ ಧಾರ್ಮಿಕ ಪ್ರವಚನ ಮಠವಿದ್ದು ಪ್ರತಿ ಹುಣ್ಣಿಮೆಯ ಭಜನಾ ಕಾರ್ಯಕ್ರಮವಿರುತ್ತದೆ. ಮುನ್ನಾದಿನ ಅನ್ನ ಸಂತರ್ಪಣೆ ಕಾರ್ಯಕ್ರಮವಿರುತ್ತದೆ. ಶಿವಣ್ಣ ಸ್ವಾಮಿಗಳು ಈ ಮಠ ಪೀಠಾಧ್ಯಕ್ಷರಾಗಿದ್ದಾರೆ. ಲಕ್ಕನಹಳ್ಳಿ, ಸಿರಾ, ಧರ್ಮಪುರ, ಅಮರಾಪುರ ಮಾರ್ಗ ಕಲ್ಪಿಸುವ ಜಿಲ್ಲಾ ರಸ್ತೆ ಇದ್ದು, ಸಿರಾ ಬರಗೂರು ಮಾರ್ಗವಾಗಿ ಖಾಸಗಿ ಬಸ್ ಸಂಚಾರದ ವ್ಯವಸ್ಥೆ ಇದೆ.

## ತಿಮ್ಮನಹಳ್ಳಿ

ತಿಮ್ಮನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೭ ಕಿ.ಮೀ. ದೂರದಲ್ಲಿದ್ದು, ಇದೊಂದು ತಡಕಲೂರಿನ ಮಜರೆ ಗ್ರಾಮವಾಗಿದೆ. ಗ್ರಾಮದಲ್ಲಿ ತಿಮ್ಮಪ್ಪನ ದೇವಸ್ಥಾನ ಇರುವ ಕಾರಣ, ಇದೇ ದೇವರ ಹೆಸರಲ್ಲಿ ಗ್ರಾಮದ ನಾಮಕರಣವಾಗಿದೆ ಎಂಬುದು ಗ್ರಾಮಸ್ಥರ ಅಭಿಪ್ರಾಯವಾಗಿದೆ. ಇಂದಿಗೂ ಶ್ರೀ ವೆಂಕಟರಮಣಸ್ವಾಮಿ ದೇವಾಲಯವನ್ನು ಜನಪದರು ತಿಮ್ಮನ ಗುಡಿ ಎಂದೇ ಕರೆಯುತ್ತಾರೆ. ಮರಳು ಮಿಶ್ರಿತ, ಕೆಬ್ಬೆ ಮಣ್ಣನ್ನು

ಹೊಂದಿರುವ ಇಲ್ಲಿನ ಭೂಮಿ ಸಾಧಾರಣವಾಗಿ ಒಣಗಿದ ಹವೆವುಳ್ಳದ್ದು.

ಈ ಪರಿಸರದಲ್ಲಿ ಹಂದಿ, ಮೊಲ, ಜಿಂಕೆ, ನರಿ, ಮುಂಗುಸಿ ಮೊದಲಾದ ಪ್ರಾಣಿಗಳು ಕಂಡು ಬರುತ್ತವೆ. ಗ್ರಾಮದಲ್ಲಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಪಕ್ಷಿಗಳಾದ ಕಾಗೆ, ಗಿಳಿ, ಕೋಗಿಲೆ, ಮರಕುಟಿಕಗಳಿವೆ.

ವಾರ್ಷಿಕ ಸರಾಸರಿ ೪೫೮ ಮಿ.ಮೀ ಇದ್ದು, ೧೨೦ ಸೆಂ. ಚಳಿ ಇದ್ದು, ೩೬೦ ಸೆಂ ಉಷ್ಣಾಂಶದಿಂದ ಕೂಡಿದೆ. ೨೮ ಕೊಳವೆ ಬಾವಿಗಳಿದ್ದು, ೨ ಮಿನಿ ಟ್ಯಾಂಕ್‌ಗಳ ಮೂಲಕ ನೀರು ಒದಗಿಸಲಾಗುತ್ತಿದೆ.

ಕುಂಚಿಟಿಗರು ಗ್ರಾಮದ ದೊಡ್ಡ ಸಮುದಾಯ ಕುರುಬರು. ಆದಿ ಕರ್ನಾಟಕ, ಆದಿ ದ್ರಾವಿಡ, ಬೇಡರು, ಕಾಡುಗೊಲ್ಲರು, ಈಡಿಗರು ಮನೆಗಳಿದ್ದು ಸಣ್ಣ ಸಮುದಾಯಗಳಾಗಿವೆ. ಕನ್ನಡ ಈ ಗ್ರಾಮದ ಮುಖ್ಯ ಭಾಷೆ. ೭೫ ಮನೆಗಳಿದ್ದು, ಆಶ್ರಯ, ಅಂಬೇಡ್ಕರ್, ಜನತಾ ಸೌಲಭ್ಯ ಪಡೆದವರು ಇದ್ದಾರೆ. ಕಾಂಕ್ರೀಟ್, ಮಣ್ಣಿನ, ಹೆಂಚಿನ, ಹಾಗೂ ಶೀಟನ ಮನೆಗಳಿವೆ. ಮುಖ್ಯ ಆಹಾರ ರಾಗಿ ಮುದ್ದೆಯಾಗಿದ್ದು, ಬಳಸುವವರಿದ್ದಾರೆಅನ್ನ, ರೊಟ್ಟಿ ಬಳಕೆಯಲ್ಲಿದೆ. ಬಾಡೂಟ, ಹೋಳಿಗೆ ವಿಶೇಷ ಆಹಾರವಾಗಿದೆ. ಟ್ರ್ಯಕ್ಟರ್, ಮಿನಿ ಟೆಂಪೋ, ದ್ವಿಚಕ್ರ ವಾಹನಗಳನ್ನು ಬಳಸಲಾಗುತ್ತದೆ. ಗ್ರಾಮದಲ್ಲಿ ೮೪ ಮನೆಗಳಿದ್ದು ೪೧೨ ಜನಸಂಖ್ಯೆ ಇದೆ.

ಶೇಂಗಾ ಗ್ರಾಮದ ಮುಖ್ಯ ಬೆಳೆ. ರಾಗಿ, ಭತ್ತ, ಅಲಸಂದಿ, ತೊಗರಿ ಬೆಳೆಗಳನ್ನು ಬೆಳೆಯುತ್ತಾರೆ. ಸೂರ್ಯಕಾಂತಿ, ತೆಂಗು, ರೇಷ್ಮೆ, ಸೇವಂತಿಗೆ ಬೆಳೆ ವಾಣಿಜ್ಯ ಬೆಳೆಗಳಾಗಿವೆ. ವೆಸ್ಟ್ ಇಂಡೀಸ್‌ನಲ್ಲಿ ವೈದ್ಯರಾಗಿರುವ ಡಾ. ಗುರುಸ್ವಾಮಿ, ಹಿರಿಯ ಪತ್ರಕರ್ತರಾದ ಎಂ.ಮದಕರಿ ನಾಯಕ, ಈ ಗ್ರಾಮದವರಾಗಿರುವುದು ವಿಶೇಷ. ಬೀಡಿ ಸುತ್ತುವುದು, ಊಟದ ಎಲೆ ತಯಾರಿಸುವುದು, ಗೃಹ ಕೈಗಾರಿಕೆಯಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯತಿ ಕ್ಷೇತ್ರ, ತಡಕಲೂರು ತಾಲ್ಲೂಕು ಪಂಚಾಯಿತಿ, ಹಾಗೂ ಗ್ರಾಮ ಪಂಚಾಯಿತಿ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಈ ಗ್ರಾಮ, ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಗಳನ್ನು ಹೊಂದಿದೆ. ಇಬ್ಬರು ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯ ಹೊಂದಿದೆ. ೬೬.೨೦ ಸಾಕ್ಷರತಾವಂತರಿದ್ದು, ಪುರುಷರು ೭೨.೬, ಮಹಿಳೆಯರು ೫೯.೪೧ ಪ್ರಮಾಣದಲ್ಲಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನ, ಸಂಧ್ಯಾ ಸುರಕ್ಷಾ ವೇತನ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಒಂದು ಅಂಗಡಿ ಇದ್ದು, ಟೀ ವ್ಯವಸ್ಥೆಯೂ ಇಲ್ಲಿದೆ.

ತಿಮ್ಮಪ್ಪ, ದತ್ತಾತ್ರೇಯ ದೇವಾಲಯಗಳು ಇದ್ದು, ತಿಮ್ಮಪ್ಪನ ಜಾತ್ರೆ ವಾರ್ಷಿಕವಾಗಿ ತಿಮ್ಮಪ್ಪ ಜಾತ್ರೆ ನಡೆಸಲಾಗುತ್ತಿದೆ. ಯುಗಾದಿ, ದೀಪಾವಳಿ, ಗೌರಮ್ಮ-ಕೊಂತೆಮ್ಮನ ಹಬ್ಬ ವಿಶೇಷವಾಗಿ ಆಚರಿಸಲಾಗುತ್ತಿದೆ.

## ತಿಮ್ಮನಹಳ್ಳಿ ಗೊಲ್ಲರಹಟ್ಟಿ

ತಿಮ್ಮನಹಳ್ಳಿ ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೭ ಕಿ.ಮೀ. ದೂರದಲ್ಲಿದೆ. ಕಾಡು ಗೊಲ್ಲರೇ ಪ್ರತ್ಯೇಕವಾಗಿ ವಸತಿ ನಿರ್ಮಿಸಿಕೊಂಡು, ತಿಮ್ಮನಹಳ್ಳಿಗೆ ಹೊಂದಿಕೊಂಡಂತೆ ನೆಲೆಸಿದ್ದರಿಂದಾಗಿ ತಿಮ್ಮನಹಳ್ಳಿ ಗೊಲ್ಲರಹಟ್ಟಿ ಎಂದು ಪ್ರತ್ಯೇಕವಾಗಿ ಕರೆಯಲಾಗಿದೆ. ಇದು ತಡಕಲೂರಿನ ಕಂದಾಯ ಗ್ರಾಮಕ್ಕೆ ಸೇರಿದ ಮಜರೆ ಗ್ರಾಮವಾಗಿದೆ.

ಈ ಪರಿಸರದಲ್ಲಿ ಕಾಡುಹಂದಿ, ಮೊಲ, ಜಿಂಕೆ, ಉಡ, ಹಾವು ಮುಂತಾದ ಕಾಡು ಪ್ರಾಣಿಗಳು ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸುಗಳನ್ನು ಸಾಕಲಾಗಿದೆ. ಕೋಳಿಗಳನ್ನು ಸಾಕು ಪಕ್ಷಿಯಾಗಿ ಸಾಕಲಾಗಿದೆ. ವಾರ್ಷಿಕ ಸರಾಸರಿ ೪೫೮ ಮಿ.ಮೀ. ಮಳೆ ಬೀಳುತ್ತದೆ. ಉಷ್ಣಾಂಶ ೩೬ ಡಿ.ಸೆಂ. ಇದ್ದರೆ, ಚಳಿಯು ೧೨ ಡಿ.ಸೆಂ. ಇರುತ್ತದೆ. ಕುಡಿಯಲು ಕೊಳವೆ ಬಾವಿಗಳ ಮೂಲಕ ನೀರು ಪೂರೈಸಲಾಗುತ್ತದೆ. ಕಾಡುಗೊಲ್ಲರು ಮಾತ್ರ ಇಲ್ಲಿದ್ದು ೧೮ ಮನೆಗಳಿವೆ. ಇವರ ಮಾತೃಭಾಷೆ ಕನ್ನಡವಾಗಿದೆ.

ಗ್ರಾಮದಲ್ಲಿ ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿದ್ದು ಇವು ಸರ್ಕಾರದ ವಸತಿ ಯೋಜನೆಯಾದ ಆಶ್ರಯ, ಜನತಾ ಯೋಜನೆಯ ಫಲಾನುಭವಿಗಳಿ ದ್ದಾರೆ. ಗ್ರಾಮದ ಜನರ ಮುಖ್ಯ ಬೆಳೆ ಶೇಂಗಾ. ಕುರಿ ಸಾಕಾಣಿಕೆ ಇದೆ. ಗ್ರಾಮದ ಜನರ ಸಂಖ್ಯೆ ೧೧೯ ಹೊಂದಿದ್ದಾರೆ. ಹುಲಿಕುಂಟೆ ಜಿಲ್ಲಾ, ತಡಕಲೂರು ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಒಬ್ಬರು ಸಾರಿಗೆ ಇಲಾಖೆಯ ನೌಕರರಿದ್ದಾರೆ. ಕುರಿ ಮಾರಾಟ, ಎತ್ತುಗಳ ಮಾರಾಟದ ಕಾಯಕ ವ್ಯಾಪಾರದ ಸರಕಾಗಿದೆ. ಹುಣಸೆ, ಹೊಂಗೆ ಬೀಜಗಳ ಸಂಗ್ರಹ, ಹುಣಸೆ ಹಣ್ಣಿನ ಮಾರಾಟವೂ ಇದೆ. ತಿಮ್ಮಪ್ಪನ ಪೌಳಿ, ಮಾರಮ್ಮನ

ಪೌಳಿಗಳಿವೆ. ಗೌರಸಂದ್ರದ ಮಾರಮ್ಮನಿಗೆ ಆರತಿ, ಬ್ಯಾಟೆ ಸಂಪ್ರದಾಯವಿದೆ. ಹೇಮಾವತಿ ಸಿದ್ದೇಶ್ವರ ಜಾತ್ರೆಗೆ ಈ ಗ್ರಾಮದವರು ಹೆಚ್ಚಿನ ಸಂಖ್ಯೆಯಲ್ಲಿ ನಡೆದುಕೊಳ್ಳುತ್ತಾರೆ.

## ತರೂರು

ತರೂರು ಸಿರಾ ತಾಲ್ಲೂಕು, ಕಳ್ಳಂಬೆಳ್ಳ ಹೋಬಳಿಯ ಒಂದು ಹಳೆಯ ಗ್ರಾಮದಲ್ಲಿ ಕಲೆ, ಸಂಸ್ಕೃತಿಗೆ ಹೆಸರಾಗಿದೆ. ಸಿರಾ–ತುಮಕೂರು ರ್‍ಹ್ವಾಯ ಹೆದ್ದಾರಿಯಲ್ಲಿ ತರೂರು ಗೇಟಿನಿಂದ ಎಡಭಾಗದಲ್ಲಿ ೩ ಕಿ.ಮೀ. ದೂರದಲ್ಲಿದ್ದು, ಸಿರಾ ನಗರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ೨೫೧.೫೦ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿರುವ ಈ ಗ್ರಾಮವು ಕಂದಾಯ ಗ್ರಾಮ ವಾಗಿದ್ದು, ತರೂರು ಗೊಲ್ಲರಹಟ್ಟಿ, ಗುಬ್ಬಿ ಚಿಕ್ಕಪ್ಪನ ಪಾಳ್ಯ, ಗಂಜಲಗುಂಟೆ, ಗಂಜಲಗುಂಟೆ ಗೊಲ್ಲರಹಟ್ಟಿ, ಈ ನಾಲ್ಕು ಗ್ರಾಮಗಳನ್ನು ಉಪಗ್ರಾಮವಾಗಿ ಹೊಂದಿದೆ. ತಾಲ್ಲೂಕು ಪಂಚಾಯಿತಿ ಕೇಂದ್ರ ಗ್ರಾಮ ಪಂಚಾಯಿತಿ ಕೇಂದ್ರಗಳೂ ಆಗಿದ್ದು, ಪ್ರಾಚೀನ ಕಾಲದಿಂದಲೂ ಶೈಕ್ಷಣಿಕವಾಗಿ ಪ್ರಸಿದ್ಧಿ ಪಡೆದಿದೆ. ಮರಳು ಮಿಶ್ರಿತ ಕೆಂಪು, ಹಾಗೂ ಕಪ್ಪು ಮಣ್ಣನ್ನು ಹೊಂದಿರುವ ಇಲ್ಲಿನ ಮೇಲ್ನೆ ಶೇಂಗಾ, ಕಡಲೆ, ತೆಂಗು ಬೆಳೆಗೆ ಉತ್ಕೃಷ್ಟವಾಗಿದೆ.

ತರೂರು ಪಶು ಸಂಸ್ಕೃತಿಯ ಹಿನ್ನಲೆಯಿಂದ ಬಂದ ಹೆಸರು. ಆರಂಭದಲ್ಲಿ ಕುರುಚಲು ಕಾಡು ಇರುವುದರಿಂದ ಈ ಭಾಗದಲ್ಲಿ ಗೋ ಸಂಪತ್ತು ಅಧಿಕವಾಗಿರುತ್ತಿದ್ದ ಕಾರಣದಿಂದ ತುರು>ಊರು> ತರೂರು ಆಗಿದೆ. ಇಂದಿಗೂ ಗಂಜಲಗುಂಟೆ, ದನಕರುಗಳ, ನೀರು ಕುಡಿಯುವ, ತಂಗುವ ಪ್ರದೇಶ ಎಂಬ ಅರ್ಥದಲ್ಲಿಯೇ ಬಳಕೆಯಾಗುತ್ತಿದೆ. ಕಾಡು ಪ್ರದೇಶವಾಗಿದ್ದ ಕಾರಣ ತಾರೇ ಮರಗಳು ವಿಶೇಷವಾಗಿ ಬೆಳೆಯುತ್ತಿದ್ದವು. ತಾರೇ ಮರಗಳ ಊರು ಮುಂದೆ ತರೂರು ಆಗಿದೆ ಎಂದು ಶಿಕ್ಷಕ ನಾಗರಾಜು ಅಭಿಪ್ರಾಯ ಪಟ್ಟರೂ, ಪಶು ಸಂಸ್ಕೃತಿಯು ಈ ಗ್ರಾಮದ ನಿಸರ್ಗ ಬದುಕಿಗೆ ಅರ್ಥಪೂರ್ಣ ಹೊಂದಾಣಿಕೆ ಯಾಗುತ್ತದೆ. ಪೂರ್ವಕ್ಕೆ ತರೂರು ಗುಡ್ಡ, ಕಾಡು ಪ್ರದೇಶ, ದಾಸಪ್ಪನ ಕಟ್ಟೆ, ಪಂಚನ ಕಟ್ಟೆ, ತರೂರು ಕೆರೆ, ಈ ಎಲ್ಲವೂ ಪಶು ಸಂಸ್ಕೃತಿಗೆ ನೀರು ಹುಲ್ಲುಗಾವಲಿನ ವಿಶೇಷತೆ ಹೇಳುವುದರಿಂದ ತುರು>ತರುವಾಗಿ ಮುಂದೆ ತರೂರು ಆಗಿದೆ. ಚಾರಿತ್ರಿಕ ವಿಷಯಗಳಲ್ಲಿ ತರೂರು ಕ್ರಿ.ಶ. ೧೩ ನೇ ಶತಮಾನ ದಿಂದಲೂ ಉಲ್ಲೇಖಗೊಳ್ಳುತ್ತದೆ. ಸಿರಾ ಶಾಸನ ೧೦೫(ಎಪಿಕನಾ) ತರೂರು ಶಾಸನದ ಪ್ರಕಾರ, ನಿಡಗಲ್ಲು ದೊರೆ, ಚೋಳ ರಾಜರು, ಮಾಂಡಲೀಕನಾದ ಮಾಚಪ್ಪನ ಹೆಂಡತಿ ಲಕ್ಷ್ಮೀಬಾಯಿ, ತರೂರಿನ ಮಲ್ಲೇಶ್ವರ ದೇವಸ್ಥಾನದ ಜೀರ್ಣೋದ್ಧಾರದ ಪುಣ್ಯ ಕಾರ್ಯಮಾಡಿ, ಅದರ ಮುಂದೆ ನಂದಿ ವಿಗ್ರಹವನ್ನು ಪ್ರತಿಷ್ಠಾಪಿಸಿ ಮಾಡಿದ ವಿವರವಿದೆ. ಇದೇ ಗ್ರಾಮಕ್ಕೆ ಸಂಬಂಧಿಸಿದ ಕ್ರಿ.ಶ ೧೪೯೯ ರ ಮತ್ತೊಂದು ಶಾಸನದಲ್ಲಿ ನಿಡಗಲ್ಲು ರಾಜಮನೆತನದ ಚೋಳವಂಶದ ಮಾಂಡಲೀಕ ರಾಚಪ್ಪನ ಮಕ್ಕಳು ಇಮ್ಮಡಿ ರಾಜ ಒಡೆಯರು ಈ ಗ್ರಾಮದ ಏಕನಾಥೇಶ್ವರಿ ಗುಡಿ ನಿರ್ಮಿಸಿದ ಅದರ ದೇವಾಲಯಕ್ಕೆ ಗದ್ದೆ ಹಾಗೂ ಹೊಲವನ್ನು ದಾನ ಕೊಟ್ಟಂತೆ ಸಿರಾ ಶಾಸನ–ತರೂರು, ೧೦೬ (ಎ.ಕ.೧೧) ತಿಳಿಸುತ್ತದೆ. ಈ ಐತಿಹಾಸಿಕ ಸ್ಮಾರಕಗಳ ದಾಖಲೆಗಳು ತರೂರು ಒಂದು ಪ್ರಾಚೀನ ನೆಲ ಮೂಲ ಸಂಸ್ಕೃತಿಯಿಂದ ರೂಪುಗೊಂಡ ಗ್ರಾಮ ಎಂದು ಖಚಿತವಾಗುತ್ತದೆ.

ಈ ಪರಿಸರದಲ್ಲಿ ನರಿ, ಮೊಲ, ಹಂದಿ, ಜಿಂಕೆ, ಕಾಡುಬೆಕ್ಕು, ಉಡ ಕಂಡು ಬಂದರೆ, ಗ್ರಾಮದಲ್ಲಿ ಪಶುಪಾಲನೆ ಹಾಗೂ ಕೃಷಿ ಮೂಲದಿಂದ ಸಾಕು ಪ್ರಾಣಿಗಳಾಗಿ ಅದರಲ್ಲೂ ನಾಟಿ, ಹಾಗೂ ಸೀಮಹಸು, ಹಳ್ಳಿಕಾರ್ ಎತ್ತು, ಎಮ್ಮೆ, ಕುರಿ, ಮೇಕೆ, ನಾಯಿ, ಬೆಕ್ಕು ಸಾಕಲಾಗಿದೆ. ಸಾಕು ಪಕ್ಷಿಯಾಗಿ ನಾಟಿ ಕೋಳಿ, ಹ್ಯಾಟೆ, ಹುಂಜ, ಗಿರಿರಾಜ ಕೋಳಿ ಹಾಗೂ ಪಾರಿವಾಳಗಳನ್ನು ಸಾಕಲಾಗಿದೆ. ಕಾಡು ಪಕ್ಷಿಗಳಾಗಿ ನವಿಲು, ಕೋಗಿಲೆ, ಕೊಕ್ಕರೆ, ಕಾಗೆ, ಗಿಳಿ, ಗೀಜಗ, ಗೊರವಂಕ, ಸಾಂಬಾರಕಾಗೆ, ಗೂಬೆ, ಹದ್ದು, ಬಾವುಲಿ, ಕೌಜಲಗ, ಗರುಡ, ಗುಬ್ಬಚ್ಚಿ ಕಂಡು ಬರುತ್ತವೆ.

ಬಯಲು ಪ್ರದೇಶ. ಮಳೆ ಪ್ರಮಾಣ ಕಡಿಮೆ. ಕಳೆದ ೩ ವರ್ಷಗಳಲ್ಲಿ ವಾರ್ಷಿಕ ಮಳೆಯ ಸರಾಸರಿ ೫೭೭.೩ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ಪ್ರಮಾಣ ೩೭ಂ ಸೆಂ., ಇದ್ದು, ಚಳಿಯು ೧೨ಂ ಸೆಂ. ಸಹಜವಾಗಿದೆ. ನೀರಿನ ತೊಂದರೆ ಇದೆ. ಕೃಷಿ ಆಶ್ರಿತ ಜೀವನ. ಮಳೆಯ ನೀರಿನೊಂದಿಗೆ ಸರ್ಕಾರದ ಗಂಗಾ ಕಲ್ಯಾಣ ಸೇರಿದೆ ಸಾಲ ಮೂಲದಿಂದಲೂ ರೈತರು ೨೧೦ ಕೊಳವೆ ಬಾವಿಗಳನ್ನು ಕೊರೆಸಿಕೊಂಡು, ಉಪಬೆಳೆಗಳನ್ನು ಬೆಳೆಯುತ್ತಿದ್ದಾರೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ೨ ಚಿಕ್ಕ ಟ್ಯಾಂಕ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ನಲ್ಲಿ ಸಂಪರ್ಕ ವ್ಯವಸ್ಥೆ ಇದೆ. ಒಂದೂವರೆ ಲಕ್ಷ ಗ್ಯಾಲರಿ ನೀರಿನ ಟ್ಯಾಂಕ್ ಇದ್ದು, ೬ ಕೈಪಂಪುಗಳು ಇದ್ದು ಅವುಗಳಲ್ಲಿ ನೀರು ಬತ್ತಿ ಹೋಗಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ವೀರಶೈವ ಜನಾಂಗ ದೊಡ್ಡ ಸಮುದಾಯವಾಗಿದ್ದು, ನಾಯಕ, ಸಾದರು, ಕುಂಚಿಟಿಗ, ಮುಸ್ಲಿಂ, ಬ್ರಾಹ್ಮಣರು, ಉಪ್ಪಾರ, ಈಡಿಗ, ಮಡಿವಾಳ, ಆದಿದ್ರಾವಿಡ, ಆದಿಕರ್ನಾಟಕ, ಕುಂಬಾರ, ಭಜಂತ್ರಿ, ಕಿರು ಸಮುದಾಯವಾಗಿವೆ. ವೈಶ್ಯರೂ ಇದ್ದಾರೆ. ಕನ್ನಡ ಈ ನೆಲದ ಮಾತೃಭಾಷೆಯಾಗಿದೆ. ತೆಲುಗು, ಉರ್ದು ಅಲ್ಪ ಸಂಖ್ಯಾತರ ಭಾಷೆಯಾಗಿದೆ. ಪೇಟೆ ಬೀದಿ, ದೇವಸ್ಥಾನದ ಓಣಿ, ಕೊನೆ ಓಣಿ, ಕೆರೆ ಹಿಂದಿಲಕೇರಿ, ಮಾದಿಗರ ಹಟ್ಟಿ ಹೀಗೆ ಓಣಿಗಳಿವೆ.

ವಿವಿಧ ಪ್ರಕಾರದ ೩೫೦ ಮನೆಗಳಿದ್ದು, ಅವು ಕಲ್ಲಿನ, ಕಾಂಕ್ರೀಟ್, ಮಣ್ಣಿನ, ಹೆಂಚಿನ, ಶೀಟಿನ ೧೨ ಗುಡಿಸಲು ಅಂಗಡಿ ಬೀದಿ ಸೇರಿವೆ. ಇವು ಸರ್ಕಾರದ ವಸತಿ ಯೋಜನೆಯಾದ ಆಶ್ರಯ, ಜನತಾ, ಇಂದಿರಾ ಆವಾಸ್ ಹಾಗೂ ಅಂಬೇಡ್ಕರ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ಉಚಿತ ವಿದ್ಯುತ್ ಸೌಲಭ್ಯದ ೧೮೪ ಫಲಾನುಭವಿಗಳಿದ್ದಾರೆ. ೧೪೩೫ ಜನ ಸಂಖ್ಯೆಯನ್ನು ಹೊಂದಿರುವ ಇಲ್ಲಿನ ೨೬೦ ಮನೆಯಲ್ಲಿ ಶೌಚಾಲಯದ ಸೌಕರ್ಯ ಪಡೆದಿದ್ದಾರೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು, ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳು ಟ್ರ್ಯಕ್ಟರ್, ಟೆಂಪೋ, ಆಟೋ, ಲಾರಿಗಳು ಹಾಗು ದ್ವಿಚಕ್ರ ವಾಹನಗಳ ಜೊತೆಗೆ ಎತ್ತಿನ ಗಾಡಿಯ ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಭತ್ತ, ಅಲಸಂದಿ. ಕೂರ್ಲೆ, ನವಣೆ, ಆರಕ, ತೊಗರಿ, ಹುರುಳಿ ಆಹಾರ ಬೆಳೆಗಳು. ಹರಳು,ಹುಚ್ಚೆಳ್ಳು, ಈ ಗ್ರಾಮದ ವಿಶೇಷ ಬೆಳೆಗಳು. ತೋಟಗಾರಿಕೆಯಾಗಿ ತೆಂಗು, ಅಡಿಕೆ, ರೇಷ್ಮೆ, ಸೇವಂತಿ, ತರಕಾರಿಗಳನ್ನು ಬೆಳೆಯುತ್ತಾರೆ. ಹುಣಸೇಹಣ್ಣು, ಹೊಂಗೆ ಮರಗಳಿಂದ ಬೀಜದ ವ್ಯಾಪಾರವೂ ಇದೆ. ಸಾಂಪ್ರದಾಯಿಕ ಪಶುಪಾಲನೆ, ಮೊಸರು, ಮಜ್ಜಿಗೆ ಬಳಕೆಯಿದ್ದರೆ, ಒಂದು ನಂದಿನ ಹಾಲಿನ ಡೈರಿ ಇದ್ದು, ಸರಾಸರಿ ೩೫೦-೪೦೦ ಲೀಟರ್ ಹಾಲು ಸಂಗ್ರಹವಾಗುತ್ತದೆ. ಶೇಂಗಾ, ತೆಂಗು, ಅಡಿಕೆ, ಹೊಂಗೆಬೀಜ, ಹುಣಸೇಹಣ್ಣು ಮುಖ್ಯ ವ್ಯಾಪಾರಿ ಸರಕುಗಳು.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

೧೯೦೦ ರಿಂದಲೇ ಶೈಕ್ಷಣಿಕವಾಗಿ ಗುರುತಿಸಿಕೊಂಡಿರುವ ಈ ಗ್ರಾಮದಲ್ಲಿ ಸರ್ಕಾರಿ ನೌಕರರ ಅಧಿಕವಾಗಿದ್ದಾರೆ. ಶಿಕ್ಷಣ, ಸಾರಿಗೆ, ಕಂದಾಯ, ವಿದ್ಯುತ್, ಗ್ರಾಮೀಣಾಭಿವೃದ್ಧಿ, ಕೃಷಿ ಇಲಾಖೆಗೆ ಸೇರಿದ ೨೪ ಜನ ನೌಕರರಿದ್ದಾರೆ. ಖಾಸಗಿ, ವಕೀಲರು, ವೈದ್ಯರೂ ಇದ್ದಾರೆ. ವಿವಿಧ ಕಂಪನಿ, ಖಾಸಗಿ ವಲಯದಲ್ಲಿ ಉದ್ಯೋಗಿಗಳು ೧೪೦ ಕ್ಕೂ ಹೆಚ್ಚಿದ್ದಾರೆ. ಮುಖ್ಯ ಇಂಜಿನಿಯರ್ ಆಗಿದ್ದ ಸಿದ್ದಯ್ಯ ಅನಂತ ನಿವೃತ್ತ ಹಿರಿಯ ಅಧಿಕಾರಿಗಳೂ ಇದೇ ಗ್ರಾಮದವರಾಗಿದ್ದು ವಿಶೇಷವಾಗಿದೆ.

ಗ್ರಾಮದಲ್ಲಿ ಮಹಿಳೆಯರು ಬೀಡಿ ಕಟ್ಟುವುದು, ಟೈಲರಿಂಗ್, ಹುಣಸೇಹಣ್ಣು ಬಿಡಿಸುವುದು, ಹೊಂಗೆ ಬೀಜ ಸಂಗ್ರಹದಂತ ಗೃಹದಾನಿಕ ಕೆಲಸದಲ್ಲಿ ತೊಡಗಿದ್ದಾರೆ. ಆರ್ಥಿಕ ಸಬಲತೆಗೆ ಪ್ರೇರಕವಾಗಿದೆ. ಇಟ್ಟಿಗೆ ಫ್ಯಾಕ್ಟರಿ, ಗರಿಕಡ್ಡಿ ಉದ್ದಿಮೆ, ರಾಗಿ ಮಿಲ್ಲು ಕೈಗಾರಿಕೆಗಳೂ ಇವೆ. ಕುಂಬಾರಿಕೆ, ಕಮ್ಮಾರಿಕೆ, ಬಡಿಗ ಈ ಬಗೆಯ ಪಾರಂಪರಿಕೆ ಕಸುಬು ಚೆನ್ನಾಗಿದೆ. ದ್ವಿಚಕ್ರ ವಾಹನಗಳ ರಿಪೇರಿ, ಮೋಟಾರ್ ವೈಡಿಂಗ್ ವಿದ್ಯುತ್ ಉಪಕರಣ ರಿಪೇರಿ ಕೆಲಸಗಳಿವೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ತರೂರು ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಗ್ರಾಮದಲ್ಲಿ ೪ ಜನ ಪಂಚಾಯಿತಿ ಸದಸ್ಯರಿದ್ದಾರೆ. ಅಂಚೆ ಕಚೇರಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಪಶು ಆಸ್ಪತ್ರೆ, ವ್ಯವಸಾಯ ಸಹಕಾರ ಸಂಘ, ಪಂಚಾಯಿತಿ ಹಂತದ ಗ್ರಂಥಾಲಯ. ಈ ಗ್ರಾಮದ ಸರ್ಕಾರದ ಸೌಲಭ್ಯಗಳು. ಸ್ತ್ರೀಯರ ಅಭಿವೃದ್ಧಿ ಹಾಗೂ ಆರ್ಥಿಕ ಸ್ವಾವಲಂಬನೆಗಾಗಿ, ೫ ಸ್ತ್ರೀ ಶಕ್ತಿ ಸಂಘ, ೪ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘವಿದೆ. ಸ್ವಾತಂತ್ರ್ಯ ಹೋರಾಟಗಾರರಾದ ನರಸಿಂಹಯ್ಯ, ಅರಣ್ಯ ಚಳುವಳಿಯಲ್ಲಿ ಬಂಧಿಯಾಗಿ ಜೈಲು ಸೇರಿದ್ದ ವೀರಯೋಧರು. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಶ್ರೀ ಸಿದ್ಧಗಂಗಾ ಗ್ರಾಮಾಂತರ ಪ್ರೌಢಶಾಲೆ, ರೇಣುಕಾ ಪಬ್ಲಿಕ್ ಕಾನ್ವೆಂಟ್ ಶಾಲೆಗಳಿವೆ. ಸರ್ಕಾರಿ ಹಾಗೂ ಸಿದ್ಧಗಂಗಾ ಪ್ರೌಢಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ, ಕಾಂಪೌಂಡ್, ಆಟದ ಮೈದಾನ, ರಂಗಮಂದಿರದ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೬೨.೪ ರಷ್ಟಿದೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ಹಾಗೂ ವಿಧವಾ ವೇತನದ ಫಲಾನುಭವಿಗಳಿದ್ದು. ೧೫ ಅಂಗಡಿಗಳು, ೫ ಹೋಟೆಲ್‌ಗಳಿವೆ. ಅರಳಿಕಟ್ಟೆ, ಕರುಗಲ್ಲು, ನಾಗರ ಕಲ್ಲುಗಳಿವೆ. ದುರ್ಗಮ್ಮ, ಆಂಜನೇಯ, ಮಾರಮ್ಮ, ಮಲ್ಲೇಶ್ವರ , ವೀರಭದ್ರ, ರಂಗನಾಥ, ಬಸವೇಶ್ವರ,ಕ ಕೆಂಪಮ್ಮ, ಗಣೇಶನ ದೇವಾಲಯಗಳಿವೆ. ಮಲ್ಲೇಶ್ವರ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದ್ದು, ಗ್ರಾಮದ ಹೊರವಲಯದಲ್ಲಿದೆ. ಇದಕ್ಕೆ ಚೋಳರಾಜರು ದತ್ತಿ ನೀಡಿರುವ ಶಾಸನಗಳಿವೆ. ವೀರಭದ್ರ ಸ್ವಾಮಿಗೆ ಅಗ್ನಿ ಕುಂಡೆ ಸೇವೆ, ಆರತಿ, ಅಭಿಷೇಕ, ಮೆರವಣಿಗೆ ಸೇವೆ ಶಿವರಾತ್ರಿ ಸಂದರ್ಭದಲ್ಲಿ ನಡೆದರೆ ದುರ್ಗಮ್ಮನ ಜಾತ್ರೆ ೭ ವಾರ ಊರ ಜಾತ್ರೆಯಾಗಿ ವಿಜೃಂಭಣೆಯಿಂದ ನಡೆಯುತ್ತದೆ. ಆರತಿ, ಸಿಡಿ, ಬಾಯಿಬೀಗ, ಬಲಿ ವಿಶೇಷ ಹರಕೆ ಸಂಪ್ರದಾಯ. ಜನಪದ ಕಲೆಗಳ ಆಕರ್ಷಕ ಮೆರವಣಿಗೆಗಳು ಜರುಗುತ್ತವೆ. ಈ ದಿನ ಸುತ್ತಲ ಗ್ರಾಮಗಳಲ್ಲಿ ದುರ್ಗಮ್ಮನಿಗೆ ಎದುರೆತ್ತಿ, ದಸರಾ, ವರಲಕ್ಷ್ಮಿ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

ವಿವೇಕ ಶೈಕ್ಷಣಿಕ ಸಂಸ್ಥೆಯ ಕಂಪ್ಯೂಟರ್ ಉಚಿತ ತರಗತಿ ಶಾಲೆಯಿದೆ.

ಯಕ್ಷಗಾನ ಭಾಗವತ ಬಯಾಟದ ಭೀಮಣ್ಣ ಈ ಭಾಗದ ಪ್ರಮುಖ ಕಲಾವಿದರು. ಮೂಡಲಪಾಯ ಯಕ್ಷಗಾನ ಪ್ರಸಂಗಗಳು ಸುತ್ತಲ ಹತ್ತಾರು ಹಳ್ಳಿಗಳಲ್ಲಿ ಕಲಿಸಿದ್ದಾರ. ಸ್ವತಃ ರಾವಣನ, ದಶಕಂಠನ ಪಾತ್ರದಲ್ಲಿ ಖ್ಯಾತರಾಗಿ ದ್ದಾರೆ. ಹೆಸರಾಂತ ಚಲನಚಿತ್ರ ನಿರ್ದೇಶಕ, ರಂಗಕಲಾವಿದ ತರೂರು ಸಿದ್ಧಲಿಂಗಯ್ಯ ಇದೇ ಗ್ರಾಮದವರು. ಅವರ ಬಂಗಾರದ ಮನುಷ್ಯ, ಚಲನ ಚಿತ್ರವನ್ನು ತರೂರು ಸುಪ್ರಸಿದ್ಧ ನಿರ್ದೇಶನ ಮಾಡಿ, ಚಿತ್ರೀಕರಿಸಿದ ಹಿರಿಮೆ ಅವರದು. ಇವರ ಮಗ ಮುರುಳಿ, ಸಹ ನಿರ್ದೇಶಕ ಬಿ.ರಾಜಶೇಖರ್ ಈ ಗ್ರಾಮದ ವಿಶೇಷ. ಸಿರಾ–ತುಮಕೂರು–ಬೊಮ್ಮಸಂದ್ರ ಹಾಗೂ ಕಳ್ಳಂಬೆಳ್ಳ ಮಾರ್ಗವಾಗಿ ಜಿಲ್ಲಾ ಪಂಚಾಯಿತಿ ರಸ್ತ, ಬಸ್ ಸಂಚಾರ ಸಂಪರ್ಕವಿದೆ.

## ತರೂರು ಗೊಲ್ಲರಹಟ್ಟಿ

ತರೂರು ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೯ ಕಿ.ಮೀ. ದೂರದಲ್ಲಿದೆ. ಇದು ತರೂರು ಮುಖ್ಯ ಗ್ರಾಮಕ್ಕೆ ಮಜರೆ ಗ್ರಾಮ ವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೧೫೦ ಹೆಕ್ಟೇರ್ ಆಗಿದೆ. ಮರಳು, ಕೆಂಪು ಮಿಶ್ರಿತ ಮಣ್ಣು. ಬಯಲು ಪ್ರದೇಶ. ಕಾಡುಗೊಲ್ಲರ ಸಂಪೂರ್ಣ ಗ್ರಾಮ. ತರೂರಿಗೆ ಹೊಂದಿಕೊಂಡ ಕಾರಣ ತರೂರು ಗೊಲ್ಲರ ಹಟ್ಟಿ ಎಂದಾಗಿದೆ. ಈ ಗ್ರಾಮದ ಪೂರ್ವಕ್ಕೆ ತರೂರುಗುಡ್ಡ ಬಯಲು. ಕುರುಚಲು ಗಿಡ ಮರ ಇರುವುದರಿಂದ ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ತೋಳ, ಕರಡಿ, ಉಡ ಹಾಗೂ ವಿಷಪೂರಿತ ಹಾವುಗಳು ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾಗಿ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ನಾಯಿ, ಕತ್ತೆಗಳನ್ನು ಸಾಕಲಾಗಿದೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡು ಪಕ್ಷಿಗಳಾಗಿ ಕೋಗಿಲೆ, ಕೊಕ್ಕರೆ, ಗಿಳಿ, ಗೀಜಗ, ಗೊರವಂಕ, ಗೂಬೆ, ಹದ್ದು, ಕೌಜಲಗ, ಗರುಡ ಕಂಡು ಬರುತ್ತವೆ.

ಬಿಸಿಲು ಅಧಿಕ, ರೈತಾಪಿ ವರ್ಗ ಬಯಲು ನಾಡಾಗಿದ್ದು, ಕಾಡು ಗೊಲ್ಲರು ಕುರಿಗಳು ಹುಲ್ಲು ನೀರಿಗಾಗಿ ಪರಸ್ಥಳಕ್ಕೆ ಹೋಗುವ ಸಂಪ್ರದಾಯವಿದೆ. ವಾರ್ಷಿಕ ಮಳೆಯ ಸರಾಸರಿ ೫೭೧.೧ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲು ೩೮೦ ಸೆಂ. ಇದ್ದು, ಚಳಿಯು ೧೨ಸೆಂ. ಇರುತ್ತದೆ. ಈ ಪರಿಸರದಲ್ಲಿ ೧೪ ಕೊಳವೆ ಬಾವಿಗಳನ್ನು ತೆಗೆಸಲಾಗಿದೆ. ಕೃಷಿಗೆ ಉಪನೀರಾವಿಯಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೩ ಸಿಸ್ಟನ್‌ಗಳಿದ್ದು, ೨ ಕೈ ಪಂಪುಗಳು ಇದೆ.

ಕಾಡುಗೊಲ್ಲರ ಸಮುದಾಯದ ೧೨೦ ಮನೆಗಳಿದ್ದು, ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದ ಮನೆಗಳಾಗಿವೆ. ಒಟ್ಟು ೪೯೮ ಜನಸಂಖ್ಯೆ ಹೊಂದಿರುವ, ೪೫ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ರಾಗಿ ಮುದ್ದೆ , ಅನ್ನ ಮುಖ್ಯ ಆಹಾರವಾದರೆ, ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳು ಟ್ರ್ಯಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಭತ್ತ, ಅಲಸಂದಿ. ತೊಗರಿ ಪ್ರಮುಖ ಆಹಾರ ಬೆಳೆಗಳು. ಶೇಂಗಾ, ಹುಣಸೇಹಣ್ಣು, ಹೊಂಗೆಬೀಜ, ಕುರಿ ವ್ಯಾಪಾರ ಪ್ರಮುಖ ವ್ಯಾಪಾರಿ ಸರಕುಗಳಾಗಿವೆ. ಈ ಗ್ರಾಮದಲ್ಲಿ ವಕೀಲರಾದ ಕೆಂಪರಾಮಯ್ಯ ಎಂಬುವರು ಖಾಸಗಿ ವಕೀಲ ವೃತ್ತಿ ಮಾಡುತ್ತಿದ್ದಾರೆ. ಮಹಿಳೆಯರು ಹೂ ಕಟ್ಟುವುದು, ಹುಣಸೆ ಹಣ್ಣು ಬಿಡಿಸುವ ಕೆಲಸ ನಿರ್ವಹಿಸುತ್ತಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯಿತಿ ಹಾಗೂ ತರೂರು ತಾಲ್ಲೂಕು ಪಂಚಾಯಿತಿ ಕ್ಷೇತ್ರವಾಗಿದ್ದು, ತರೂರು ಗ್ರಾಮ ಪಂಚಾಯಿತಿ ಕ್ಷೇತ್ರವೂ ಆಗಿದೆ. ಒಬ್ಬರು ಪಂಚಾಯಿತಿ ಸದಸ್ಯರಿದ್ದಾರೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ೨ ಸ್ತ್ರೀ ಶಕ್ತಿ ಕೇಂದ್ರಗಳೂ ಇದ್ದು, ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ನೀಡಲಾಗುತ್ತಿದೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಪಕ್ಕದ ತರೂರು, ಸಿರಾಗೆ ಹೋಗಬೇಕಾಗಿದೆ. ಗ್ರಾಮದ ಸಾಕ್ಷರತೆ ಪ್ರಮಾಣ ೬೨.೪ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಜುಂಜಪ್ಪ, ಈರಕರಿಯಮ್ಮ, ಭೂತಪ್ಪ, ಶನಿಮಹಾತ್ಮೆ ದೇವಾಲಯಗಳಿವೆ. ದೀಪಾವಳಿಯಲ್ಲಿ ಏಳು ದಿನಗಳ ಕಾಲ ಜುಂಜಪ್ಪನ ಜಾತ್ರೆ ಏರ್ಪಡುತ್ತದೆ. ಭೂತಪ್ಪನಿಗೆ ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಉಳಿದಂತೆ ಯುಗಾದಿ, ದೀಪಾವಳಿ, ಗೌರಿಗಣೇಶ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಾಳಗುಂದ

ತಾಳಗುಂದ ಗ್ರಾಮವು ಸಿರಾ ತಾಲ್ಲೂಕು ಕಳ್ಳಂಬೆಳ್ಳ ಹೋಬಳಿಗೆ ಸೇರಿದ ಒಂದು ಕಂದಾಯ ಗ್ರಾಮ. ಸಿರಾ ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ೨೨ ಕಿ.ಮೀ. ದೂರದಲ್ಲಿದೆ. ರ್ಾಷ್ಟ್ರೀಯ ಹೆದ್ದಾರಿ ಸಿರಾ–ತುಮಕೂರಿನ ನಡುವೆ ಕಳ್ಳಂಬೆಳ್ಳ ಸಮೀಪದ ಮರಳಪ್ಪನಹಳ್ಳಿ ಗೇಟಿನಿಂದ ಎಡಕ್ಕೆ ಭೂಪಸಂದ್ರ ಮಾರ್ಗದಲ್ಲಿ ರಸ್ತೆ ಸಂಪರ್ಕವಿದೆ. ಸಿರಾ–ಮಧುಗಿರಿ ರಸ್ತೆಯ ಅರೇಹಳ್ಳಿ ಗೇಟಿನ ಬಲಭಾಗದಿಂದ ರತ್ನಸಂದ್ರ ಚಿಕ್ಕಗುಳ ತಾಳಗುಂದ ಬ್ರಹ್ಮಸಂದ್ರ ಗೇಟಿಗೆ ಬಸ್ ಸಂಪರ್ಕವಿದೆ. ಪೂರ್ವಕ್ಕೆ ದೊಡ್ಡ ಚಿಕ್ಕಪ್ಪನಹಳ್ಳಿ ಕೆರೆ, ದಕ್ಷಿಣಕ್ಕೆ ಈರಬೊಮ್ಮಣ್ಣನ ಕೆರೆ, ಮರಿಸಿದ್ದನಕಟ್ಟೆ, ಪಶ್ಚಿಮಕ್ಕೆ ಚೌಳಕಟ್ಟೆ–ಉತ್ತರಕ್ಕೆ ಚನ್ನಿಗರಾಯನ ಬೆಟ್ಟ, ಕಾಡು, ಇವು ತಾಳಗುಂದದ ಮೇಲ್ಮೈ ನೋಟ. ಇದರ ಭೌಗೋಳಿಕ ವ್ಯಾಪ್ತಿ ೧೮೨.೯೭ ಹೆಕ್ಟೇರ್ ಆಗಿದೆ. ತಾಳಗುಂದ–ಹಾಲುಗುಂದದ ರೂಪಾಂತರ ಪದವಾಗಿದೆ. ಪಶು ಸಂಸ್ಕೃತಿಯ ಮೂಲದ ಗ್ರಾಮ. ಈ ಬಗ್ಗೆ ಸ್ಥಳೀಯ ಐತಿಹ್ಯವೂ ಇದೆ. ಹಸುವೊಂದು ನಿತ್ಯವೂ ಈಗಿನ ಚನ್ನಿಗರಾಯ ಬೆಟ್ಟದ ತಪ್ಪಲಿನ ಹುತ್ತಕ್ಕೆ ಹಾಲು ಸುರಿಸುತ್ತಿದ್ದು, ನಂತರ ಅಲ್ಲಿ ಶಿವಲಿಂಗ ರೂಪದಲ್ಲಿ ಇರುವುದಾಗಿ ತಿಳಿದು, ದೇವಾಲಯ ನಿರ್ಮಿಸಿದ ಬಗ್ಗೆ ವಿವರವಿದೆ. ಹಾಲುಗುಂದ ವಾಡಿಕೆಯಲ್ಲಿ ತಾಳಗುಂದವಾಗಿದೆ. ಕುಂದ ಎಂದರೆ ದನ ಎಂದು ಅರ್ಥವೂ ಇದೆ.

ಕೆಂಪು, ಕಪ್ಪು ಮಿಶ್ರಿತ ಮರಳು ಭೂಮಿ. ಬಯಲು ನಾಡಿನ ಭೂಪ್ರದೇಶ. ಅಕ್ಕಪಕ್ಕ ಕುರುಚಲು ಗಿಡ, ಹಳ್ಳ, ದಿಣ್ಣೆಗಳಿಂದ ಕೂಡಿದೆ. ಈ ಪರಿಸರದಲ್ಲಿ ನರಿ, ಮೊಲ, ಕರಡಿ, ಉಡ, ಮುಂಗುಸಿ ಹಾಗೂ ವಿಷಪೂರಿತ ಹಾವುಗಳು ಕಂಡು ಬರುತ್ತವೆ. ಸಮೀಪದ ಚನ್ನಿಗರಾಯ ದುರ್ಗದ ಕಾಡಿನಲ್ಲಿ ಕಾಡು ಪ್ರಾಣಿಗಳು ವ್ಯಾಪಕವಾಗಿವೆ. ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಯಾಗಿ ಎತ್ತು, ಸೀಮೆ ಹಾಗೂ ನಾಟಿ ಹಸು, ಕುರಿ, ಮೇಕೆ, ನಾಯಿಗಳನ್ನು ಸಾಕಲಾಗಿದೆ. ನಾಟಿ ಕೋಳಿ, ಹ್ಯಾಟೆ,ಹುಂಜ, ಗಿರಿರಾಜ ಕೋಳಿಗಳು ಮಾಂಸ ಹಾಗೂ ಮೊಟ್ಟೆಯ ಬಳಕೆಗಾಗಿ ಸಾಕಲಾಗಿದೆ. ಕಾಡು ಪಕ್ಷಿಗಳಾಗಿ ಮರಕುಟಿಕ, ಗುಬ್ಬಿ, ಕಾಗೆ, ಕೋಗಿಲೆ, ಕೊಕ್ಕರೆ, ಗಿಳಿ, ಗೀಜಗ, ಗೊರವಂಕ, ಗೂಬೆ, ಹದ್ದು, ಕೌಜಲಗ, ಗರುಡ ಇಲ್ಲಿ ಕಂಡು ಬರುತ್ತವೆ.

ಬಿಸಿಲು ಅಧಿಕ ಇದೆ. ವಾರ್ಷಿಕ ಮಳೆಯು ಸರಾಸರಿಗಿಂತ ಕಡಿಮೆ. ಕಳೆದ ೩ ವರ್ಷಗಳಲ್ಲಿ ೫೫೭.೧ ಮಿ.ಮೀ. ಮಳೆ ಬೀಳುತ್ತಿದ್ದು, ಕೃಷಿಗೆ ಸಾಕಾಗುವುದಿಲ್ಲ. ಹಾಗಾಗಿ ಈ ಪ್ರದೇಶದಲ್ಲಿ ೧೩೫ ಕೊಳವೆ ಬಾವಿಗಳನ್ನು ತೆಗೆಸಲಾಗಿದೆ. ಇದು ಕೃಷಿಗೆ ಉಪನೀರಾವಿಯಾಗಿದೆ. ತೋಟಗಾರಿಕೆ ಕೆಲಸಕ್ಕೆ ಬಳಸಲಾಗುತ್ತಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಒಂದು ನೂರಕ್ಕೂ ಅಧಿಕವಾಗಿ ನಲ್ಲಿಗಳಿವೆ. ಕೆಲವರು ಮನೆಗಳಿಗೂ ನೀರಿನ ಸಂಪರ್ಕ ಪಡೆದಿದ್ದಾರೆ. ೪ ಕೈ ಪಂಪುಗಳು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ, ಕುಂಚಿಟಿಗ ಸಮಪ್ರಮಾಣದಲ್ಲಿದ್ದು, ದೊಡ್ಡ ಸಮುದಾಯಗಳಾಗಿವೆ. ಬ್ರಾಹ್ಮಣ, ಅಕ್ಕಸಾಲಿಗರು, ಬೇಡರು, ವೀರಶೈವ, ಕುಂಬಾರ, ಗಾಣಿಗ, ಗೊಲ್ಲರು, ಮಡಿವಾಳ ಕಿರು ಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದ್ದು, ದೇವಸ್ಥಾನ ಬೀದಿ, ನಾಯ್ಕರ ಕೇರಿ, ಮಾದಿಗರ ಹಟ್ಟಿ ಎಂಬ ಓಣಿಗಳಿವೆ. ವಿವಿಧ ಪ್ರಕಾರದ ೩೩೭ ಮನೆಗಳಿದ್ದು, ಅವು ಕಾಂಕ್ರೀಟ್, ಹೆಂಚಿನ, ಕಲ್ಲಿನ, ಮಣ್ಣಿನ ಶೀಟಿನ ೪ ಗುಡಿಸಲೂ ಸೇರಿವೆ. ಇವು ಆಶ್ರಯ, ಜನತಾ ಇಂದಿರಾ ಆವಾಸ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಉಚಿತ ಸಂಪರ್ಕದ ಫಲಾನುಭವಿಗಳಿದ್ದಾರೆ. ಒಟ್ಟು ೧೩೮೯ ಜನಸಂಖ್ಯೆ ಹೊಂದಿರುವ, ೧೮೪ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ರಾಗಿ ಮುದ್ದೆ , ಅನ್ನ ಮುಖ್ಯ ಆಹಾರವಾದರೆ, ಇತರೆ ತಿಂಡಿಗಳಾದ ರೊಟ್ಟಿ, ಉಪ್ಪಿಟ್ಟು ಬಳಸುವವರಿದ್ದಾರೆ.ಗಳು. ಮಾಂಸ, ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳು ಟ್ರ್ಯಕ್ಟರ್, ಮಿನಿ ಟೆಂಪೋ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ. ಚರಂಡಿ ವ್ಯವಸ್ಥೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಭತ್ತ, ಅಲಸಂದಿ. ನವಣೆ, ಕೊರ್ಲೆ, ಹಾರಕ, ಹುರುಳಿ, ತೊಗರಿ ಪ್ರಮುಖ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಗಳು ತೆಂಗು, ಅಡಿಕೆ, ಸೂರ್ಯಕಾಂತಿ, ತರಕಾರಿ, ಸೇವಂತಿಗೆ ಹೂವಿನ ಬೆಳೆಯೂ ಇದೆ. ಒಂದು ಹಾಲಿನ ಡೈರಿ ಇದ್ದು ದಿನವಹಿ ೨೦೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೇಹಣ್ಣು, ಹೊಂಗೆಬೀಜ, ಹೊಂಗೆ, ಸೇವಂತಿಗೆ ಹೂವು ಮುಖ್ಯ ವ್ಯಾಪಾರಿ ಬೆಳೆಗಳು.

ಸರಕಾರಿ ಇಲಾಖೆಯ ೩೦ ಶಿಕ್ಷಕರು, ಪಿ.ಡಿ.ಓ. ಕಂದಾಯ, ಅರಣ್ಯ, ಪೋಲೀಸ್, ಮೀನುಗಾರಿಕೆ ಇಲಾಖೆ ಸೇರಿದಂತೆ ಒಟ್ಟು ೩೫ ಜನ ಸರ್ಕಾರಿ ನೌಕರರಿದ್ದಾರೆ. ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ವಿಶ್ವನಾಥ್, ಅರಣ್ಯ ಉಪನೀರೀಕ್ಷಕ, ಮಲ್ಲಣ್ಣ ಕಂದಾಯ ಅಧಿಕಾರಿ ರವಿ ಈ ಗ್ರಾಮದ ವಿಶೇಷ ಅಧಿಕಾರಿಗಳು. ಕಲ್ಕತ್ತ ಕೃಷಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಪ್ರೊ.ಟಿ.ಎಸ್. ನಾಗೇಶ್, ಸೌರಶಕ್ತಿ ಖ್ಯಾತಿಯ ಟಿ.ಜಿ.ಗಂಗಾಧರ, ಜೀವವಿಮಾ ಅಧಿಕಾರಿ ಎಸ್.ರಾಧಾಕೃಷ್ಣ, ತಹಸೀಲ್ದಾರ್

ಲಕ್ಷ್ಮೀನಾರಾಯಣಪ್ಪ, ಟಿ.ಎಸ್.ಹೆಂಜಾರಪ್ಪ ಕೇಂದ್ರ ಸರ್ಕಾರದ ಅಧಿಕಾರಿ ಹಾಗೂ ಸೀಮಾ ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮದಲ್ಲಿ ಬೀಡಿ ಸುತ್ತುವುದು, ಹೂ ಕಟ್ಟುವುದು, ಊಟದ ಎಲೆ ಕಟ್ಟುವುದು, ಬಟ್ಟೆ ಹೊಲಿಯುವುದು, ಗರಿಕಟ್ಟಿ ಕೆಲಸ, ಹುಣಸೆ ಹಣ್ಣು ಬಿಡಿಸುವುದು, ಹೊಂಗೆ ಬೀಜ ಕುಟ್ಟುವುದು ಮಹಿಳೆಯರ ಉಪಕಸುಬಾಗಿದೆ. ಸಾಂಪ್ರದಾಯಿಕ ಕುಲಕಸುಬಾದ ಬಡಗಿತನ, ಕಮ್ಮಾರಿಕ ಗ್ರಾಮದಲ್ಲಿ ಇಂದಿಗೂ ಬಳಕೆಯಲ್ಲಿದೆ. ಓಬಳ ನರಸಿಂಹಯ್ಯ ಪಶು ಸಂಬಂಧಿ ಸಾಂಪ್ರದಾಯಿಕ ಚಿಕಿತ್ಸೆ ನೀಡುತ್ತಾ ಸ್ಥಳೀಯವಾಗಿ ಹೆಸರಾಗಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ಭೂಪಸಂದ್ರ ತಾಲ್ಲೂಕು ಪಂಚಾಯಿತಿ ಕ್ಷೇತ್ರವಾಗಿದ್ದು, ಗ್ರಾಮ ಪಂಚಾಯಿತಿ ಕ್ಷೇತ್ರವೂ ಆಗಿದೆ. ಈ ಗ್ರಾಮದಲ್ಲಿ ನಾಲ್ಕು ಜನ ಪಂಚಾಯಿತಿ ಸದಸ್ಯರಿದ್ದಾರೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಲಲಿತಮ್ಮ ಮಂಜುನಾಥ್ ಎಂಬ ಪರಿಶಿಷ್ಟ ಜನಾಂಗ ಮಹಿಳೆ ಸದ್ಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿರುವುದು ಈ ಗ್ರಾಮದ ವಿಶೇಷವಾಗಿದೆ. ೪ ಸ್ತ್ರೀಶಕ್ತಿ ಸಂಘಗಳಿವೆ. ಒಂದು ಅಂಚೆ ಕಚೇರಿ ಇದ್ದು, ಸುತ್ತಲ ಹಲವು ಗ್ರಾಮಗಳಿಗೆ ಅಂಚೆ ಸಂಪರ್ಕ ಕಲ್ಪಿಸಿದೆ. ಸಿರಾ, ತುಮಕೂರು ಮಧುಗಿರಿ ಮುಖ್ಯ ಸ್ಥಳಗಳಿಗೆ ರಸ್ತೆ, ಬಸ್ ಸಂಪರ್ಕ ಕಲ್ಪಿಸಿದೆ.

ಸ್ತ್ರೀಯರ ಸ್ವಾವಲಂಬಿ ಆರ್ಥಿಕ ಪ್ರಬುದ್ಧತೆಗಾಗಿ ಆರು ಸ್ತ್ರೀ ಶಕ್ತಿ ಕೇಂದ್ರಗಳು, ೩ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಸಿದ್ಧಾರ್ಥ ಗ್ರಾಮಾಂತರ ಪ್ರೌಢಶಾಲೆಗಳಿದ್ದು, ಮಕ್ಕಳಿಗೆ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಕಾಂಪೌಂಡ್, ಉಚಿತ ಪುಸ್ತಕ, ಸಮವಸ್ತ್ರ ಸೌಲಭ್ಯ ಹೊಂದಿದ್ದಾರೆ. ಗ್ರಾಮದ ಸಾಕ್ಷರತೆ ೬೧.೭ ರಷ್ಟಿದೆ. ಚರ ದೂರವಾಣಿ ಸಂಪರ್ಕವಿದೆ. ಜ್ವರ, ಕೆಮ್ಮು, ಗ್ಯಾಸ್ಟ್ರಿಕ್ ಸಂಬಂಧಿ ಖಾಯಿಲೆಗಳು ಇಲ್ಲಿ ಸಹಜವಾಗಿದ್ದು ಆರೋಗ್ಯ ಸಹಾಯಕರು ಸ್ಥಳೀಯವಾಗಿ ಚಿಕಿತ್ಸೆ ನೀಡುತ್ತಾರೆ. ಹೆಚ್ಚಿಗೆ ತಾಲ್ಲೂಕು ಕೇಂದ್ರ ಸಿರಾಕ್ಕೆ ಹೋಗುತ್ತಾರೆ.

ಗ್ರಾಮದಲ್ಲಿ ಪ್ರಾಚೀನ ಬಾವಿಗಳು, ಊರಬಾಗಿಲು, ಕೋಟೆ ನಾಶವಾಗಿವೆ. ಬಾವಿಗಳು ಒಣಗಿವೆ. ವೀರಗಲ್ಲುಗಳಿದ್ದು ಹಾಗೂ ಒಂದು ಮಾಸ್ತಿ ಕಲ್ಲುಗಳಿವೆ. ಇವು ವಿಜಯನಗರ ಕಾಲದ ರಚನೆ ಎಂದು ಶಿಕ್ಷಕ ದಿನೇಶ್ ಅಭಿಪ್ರಾಯ ಪಡುತ್ತಾರೆ. ಮಾತ್ರದಲ್ಲಿ ಇದ್ದು, ಇಂದು ಅಗೋಚರವಾಗಿದೆ ಎನ್ನುತ್ತಾರೆ. ಈ ಗ್ರಾಮದ ಹೆಸರಿನಲ್ಲಿ ೨ ಶಾಸನಗಳಿದ್ದು, ಅವು ಕರ್ನಾಟಕ ಎಪಿಗ್ರಾಫಿಕ್ ಕರ್ನಾಟಕದ ಸಂಪುಟ ೪೧೫೫ ರಲ್ಲಿ ಪ್ರಕಟವಾಗಿವೆ. ಈ ಭಾಗದ ಎರಡೂ ಶಾಸನದಲ್ಲಿ ವಿವರವಿದೆ. ತಾಳಗುಂದ ಶಾಸನ ಸಿರಾ, ೧೦೮ ರಲ್ಲಿ ತಾಳಗುಂದದ ಬಡಗಿ ಚನ್ನಯ್ಯಗಿರಿ ಎಂಬುವನನ್ನು ಗ್ರಾಮದ ಊರ ಬಾಗಿಲು ಮಾಡಿಸಿದ ಹಾಗೂ ಇದರ ಅವಧಿ ಕ್ರಿ.ಶ. ೧೮ ನೆಯ ಶತಮಾನವಾಗಿದೆ. ಇನ್ನೊಂದು ಚಲುವರಾಯ ಸ್ವಾಮಿ ಬೆಟ್ಟದ ಮೇಲಿರುವ ಗರುಡಗಂಬದ ಬಳಿ ಬರುವ ಶಾಸನದಲ್ಲಿ, ಲಕ್ಕಯ್ಯ ಗೌಡನ ಮಗ ಮಾದಗೌಡನು ಮಾಡಿಸಿದ ಸೇವೆ ಎಂದು ಮಾತ್ರವಿದ್ದು, ಖಚಿತ ವಿವರ ನೀಡುವುದು. ಇದರ ಕಾಲವೂ ೧೮ ನೆಯ ಶತಮಾನವಾಗಿದೆ. ಗ್ರಾಮದ ಹೊರವಲಯದಲ್ಲಿ ಒಂದು ದೀಪ ಸ್ತಂಭ ಇದೆ. ೨ ವೀರಗಲ್ಲುಗಳು ಇಲ್ಲಿ ಕಂಡು ಬರುತ್ತವೆ. ಉಳಿದಂತೆ ಒಂದು ಕರುಗಲ್ಲು, ೩ ಅರಳಿಕಟ್ಟೆ ನಾಗರಕಲ್ಲುಗಳಿವೆ. ಈ ಎಲ್ಲವೂ ಈ ಗ್ರಾಮದ ಪುರಾತನ ಸಂಸ್ಕೃತಿಯ ಪ್ರತೀಕವಾಗಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಸೀತಾರಾಮಾಂಜನೇಯ ಬೃಹತ್ ದೇವಾಲಯವಿದ್ದು, ಇತ್ತೀಚೆಗೆ ಪುನರ್ ನವೀಕರಣಗೊಂಡಿದೆ. ರಾಮಲಿಂಗೇಶ್ವರ, ಗುಗ್ಗರಿ ಮಾರಮ್ಮ, ಆಹೋಬಲ ನರಸಿಂಹ, ಓಬಳದೇವರು, ಲಕ್ಷ್ಮೀಗುಡಿ, ಮಣಿವೆ ಮಾರಮ್ಮನ ಗದ್ದಿಗೆಗಳಿವೆ. ಶ್ರಾವಣ ಮಾಸದಲ್ಲಿ ಈ ಎಲ್ಲಾ ದೇವರಿಗೆ ಆರತಿ, ಬಾನ, ಹರಕೆ ಸಂಪ್ರದಾಯಗಳಿವೆ. ಮಾರಕ್ಕನಿಗೆ ಬಲಿ, ಆರತಿ ಸಂಪ್ರದಾಯ ಊರಹಬ್ಬವಾಗಿದೆ.

ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಗೌರಿಗಣೇಶ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರಾಮನವಮಿಯಂದು ಮೂರು ದಿನ ರಾಮೋತ್ಸವ ನಡೆಯುತ್ತದೆ. ಭಾರತ ಭೂ ವೈಜ್ಞಾನಿಕ ಸರ್ವೆಯಲ್ಲಿ ಹಿರಿಯ ವಿಜ್ಞಾನಿಯಾಗಿ, ವಿಜ್ಞಾನ ಪರಿಷತ್ತಿನ ಪದಾಧಿಕಾರಿಯಾಗಿ, ವಿಜ್ಞಾನ, ವ್ಯಕ್ತಿಚಿತ್ರ, ವಿಸ್ಮಯ ಕುರಿತಂತೆ ಅರವತ್ತಕ್ಕೂ ಹೆಚ್ಚು ಪುಸ್ತಕ ರಚಿಸಿರುವ ಕರ್ನಾಟಕದ ಪ್ರಮುಖ ವಿಜ್ಞಾನ ಲೇಖಕರಾಗಿ ಹೆಸರಾಗಿರುವ ಟಿ.ಆರ್.ಅನಂತರಾಮು ಈ ಗ್ರಾಮದವರೆಂಬುದು ಹೆಮ್ಮೆಯ ಸಂಗತಿ. ಇವರು ವಿಜ್ಞಾನಕ್ಕೆ ಸಂಬಂಧಿಸಿದ ನಿಘಂಟುಗಳ ಸಂಪಾದಕರೂ ಆಗಿದ್ದಾರೆ. ಇವರಿಗೆ ರಾಷ್ಟ್ರೀಯ ಮಟ್ಟದ ಗೌರವ ಪುರಸ್ಕಾರಗಳೂ ಲಭಿಸಿವೆ. ಶ್ರೇಷ್ಠ ವಿಜ್ಞಾನ ಸಂವಹನಕಾರಿ ಪ್ರಶಸ್ತಿಯೂ ಸೇರಿದಂತೆ ರಾಜ್ಯಮಟ್ಟದ ಹಲವು ಪುರಸ್ಕಾರಗಳು ಸಂದಿವೆ. ಪತ್ರಕರ್ತ, ಶಿಕ್ಷಕ ಟಿ.ಆರ್.ಗೋಪಾಲಕೃಷ್ಣ, ನೃತ್ಯಪಟು, ಟಿ.ಎಸ್.ಶರತ್,

ಯಕ್ಷಗಾನ ಭಾಗವತ ಗಿರಿಯಪ್ಪ, ರಂಗ ನಿರ್ದೇಶಕ ನರಸಿಂಹಯ್ಯ, ಈ ಗ್ರಾಮದ ಪ್ರಮುಖ ಸಾಹಿತಿ ಕಲಾವಿದರು. ಚಿತ್ರ ರಚನೆಕಾರ ಮಂಜುನಾಥ್ ಸ್ಥಳೀಯವಾಗಿ ಹೆಸರಾಗಿದ್ದಾರೆ.

ಶ್ರಾವಣ ಮಾಸದಲ್ಲಿ ಇಲ್ಲಿಂದ ೨ ಕಿ.ಮೀ. ದೂರದಲ್ಲಿರುವ ಶ್ರೀ ಚನ್ನಿಗರಾಯ ದೇವರಿಗೆ ಆರತಿ, ಹರಿಸೇವೆ ಸುತ್ತಲ ಗ್ರಾಮಸ್ಥರಿಂದ ನಡೆಯುತ್ತದೆ.

## ತಿಮ್ಮನಹಳ್ಳಿ ಗೊಲ್ಲರಹಟ್ಟಿ

ತಿಮ್ಮನಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೯.೫ ಕಿ.ಮೀ. ದೂರದಲ್ಲಿದೆ. ಹುಂಜನಾಳ ಗ್ರಾಮಕ್ಕೆ ಸೇರಿದ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೬೨೩.೪೩ ಹೆಕ್ಟೇರ್ ಮೂಲ ಗ್ರಾಮದಲ್ಲಿ ಸೇರ್ಪಡೆ ಯಾಗಿದೆ. ಇದೊಂದು ಕಾಡುಗೊಲ್ಲರ ಹಟ್ಟಿಯಾದರೂ ಗ್ರಾಮದಲ್ಲಿ ಇತರೆ ಜನಾಂಗದವರೂ ಇದ್ದಾರೆ. ತಿಮ್ಮಪ್ಪ ದೇವರ ಹೆಸರಿನಲ್ಲಿ ಗ್ರಾಮ ನಿರ್ಮಾಣವಾಗಿರುವುದೇ ಇದರ ಐತಿಹ್ಯವಾಗಿದೆ. ಪೂರ್ವ, ದಕ್ಷಿಣಕ್ಕೆ ಕಾಡಿನ ಭಾಗವಿದ್ದು, ಸಣ್ಣ ಕಲ್ಲುಗಳ ಕೆಂಪು ಮಿಶ್ರಿತ ಮರಳೂ ಭೂಮಿಯಾಗಿದೆ. ಈ ಹಟ್ಟಿಯ ಪರಿಸರದಲ್ಲಿ ನರಿ, ತೋಳ, ಮೊಲ, ಜಿಂಕೆ ಕಂಡು ಬಂದರೆ, ಗ್ರಾಮದಲ್ಲಿ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ಸಾಕು ಪ್ರಾಣಿಗಳಾಗಿ ಸಾಕಲಾಗಿದೆ. ಕೋಳಿ ಸಾಕು ಪಕ್ಷಿಯಾಗಿದೆ. ಪಕ್ಷಿಗಳಾದ ನವಿಲು, ಕೌಜಲ, ಹದ್ದು, ಕಾಗೆ, ಬೆಳವ ಮೊದಲಾದ ಪ್ರಾಣಿ ಸಂಕುಲಗಳು ವಾಸಿಸುತ್ತಿವೆ.

ವಾರ್ಷಿಕ ಮಳೆಯ ಸರಾಸರಿ ೪೬೫ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ತಾಪ ೩೮೦ ಸೆಂ. ಇದ್ದು, ಚಳಿಯು ೧೨೦ ಸೆಂ. ಇರುತ್ತದೆ. ಪಕ್ಕದಲ್ಲಿ ಹಳ್ಳವಿದ್ದರೂ ಹೇಮಾವತಿ ನೀರು ಹರಿದರೂ ಪ್ರಯೋಜನವಾಗಿಲ್ಲ ಎನ್ನುತ್ತಾರೆ. ಗ್ರಾಮದ ನಾಗಣ್ಣನವರು ಕುಡಿಯುವ ನೀರಿಗೆ ಪರದಾಟವಿದೆ ಎನ್ನುತ್ತಾರೆ. ಗ್ರಾಮ ಪಂಚಾಯಿತಿಯಿಂದ ಬೋರ್‌ವೆಲ್ ಕೊಳವೆಯ ಮೂಲಕ ನೀರು ಪೂರೈಸಲಾಗುತ್ತಿದೆ. ೨ ಚಿಕ್ಕ ಟ್ಯಾಂಕ್‌ಗಳಿದ್ದು, ಗ್ರಾಮದಲ್ಲಿ ೨೯ ಬೋರ್‌ವೆಲ್ ಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕಾಡುಗೊಲ್ಲ ಜನಾಂಗ ದೊಡ್ಡ ಸಮುದಾಯವಾಗಿದ್ದು, ಬೇಡ, ಆದಿಕರ್ನಾಟಕ ಕಿರು ಸಮುದಾಯವಾಗಿವೆ. ವಿವಿಧ ಪ್ರಕಾರಗಳ ೭೬ ಮನೆಗಳಿದ್ದು, ಇವುಗಳಲ್ಲಿ ಕಾಂಕ್ರೀಟ್, ಹೆಂಚಿನ, ಮನೆಗಳು ಇದ್ದು, ಆಶ್ರಯ, ಜನತಾ, ಅಂಬೇಡ್ಕರ್ ವಸತಿ ಯೋಜನೆ, ಗ್ರಾಮದ ಮನೆಯಲ್ಲಿ ಶೌಚಾಲಯದ ವ್ಯವಸ್ಥೆ ಇದೆ. ೨೮೩ ಜನಸಂಖ್ಯೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರವಾದರೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಕೃಷಿಗೆ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ, ಮಿನಿ ಟೆಂಪೋಗಳಿವೆ. ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಭತ್ತ, ಅಲಸಂದಿ. ತೊಗರಿ ಆಹಾರ ಬೆಳೆಗಳು. ಶೇಂಗಾ, ಹುಣಸೇಹಣ್ಣು ವಾಣಿಜ್ಯ ಬೆಳೆಗಳಾಗಿವೆ. ಒಬ್ಬರು ಸರ್ಕಾರಿ ನೌಕರರಿದ್ದಾರೆ. ಊಟದ ಎಲೆ ಕಟ್ಟುವುದು, ಗ್ರಾಮದಲ್ಲಿ ಕಂಡು ಬರುತ್ತದೆ. ಹಂಚಿ ಕಡ್ಡಿ ಪೂರಕೆ ತಯಾರಿಕೆಯೂ ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ಸೀಬಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಒಬ್ಬರು ಪಂಚಾಯಿತಿ ಸದಸ್ಯರು ಈ ಗ್ರಾಮದ ಪ್ರತಿನಿಧಿಯಾಗಿದ್ದು, ಗ್ರಾಮದಲ್ಲಿ ೨ ಸ್ತ್ರೀ ಶಕ್ತಿ ಸ್ವಸಹಾಯ ಸಂಘವಿದ್ದು, ಒಂದು ಅಂಗನವಾಡಿ ಕೇಂದ್ರ, ಈ ಗ್ರಾಮದ ಸಾಕ್ಷರತೆ ಶೇ. ೪೮.೯ ರಷ್ಟಿದೆ. ಇದರಲ್ಲಿ ಶೇ. ೩೮ ರಷ್ಟು ಮಹಿಳೆಯರು, ಶೇ. ೬೦ ರಷ್ಟು ಪುರುಷರಿದ್ದಾರೆ. ಅಂಗನವಾಡಿಯಲ್ಲಿ ಮಕ್ಕಳಿಗೆ ಪೌಷ್ಠಿಕ ಆಹಾರದ ಬಳಕೆ ಇದೆ. ಒಬ್ಬರು ನೀರು ಬಿಡುವ ನೌಕರರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವಿಧವಾ ವೇತನದ ಫಲಾನುಭವಿಗಳಿದ್ದು. ೨ ಗೂಡಂಗಡಿಗಳಿವೆ. ಗ್ರಾಮದ ಹೊರ ಬಯಲಲ್ಲಿ ಒಂದು ವೀರಗಲ್ಲು ಇದ್ದು, ಮಡಿದ ವೀರರ ಚಿತ್ರವನ್ನು ಪ್ರಕಟಿಸುತ್ತದೆ. ತಿಮ್ಮಪ್ಪ ಗ್ರಾಮದ ಮೂಲ ದೈವವಾಗಿದ್ದು, ಈ ಗ್ರಾಮದ ಉಗಮಕ್ಕೆ ಕಾರಣವಾಗಿದೆ. ಭೂತಪ್ಪನ ಪೌಳಿಯೂ ಇದ್ದು, ವಾರ್ಷಿಕ ಊರಹಬ್ಬವಾಗಿ ಬಲಿ, ಆರತಿ, ಉತ್ಸವ ಜರುಗುತ್ತವೆ. ಯುಗಾದಿ, ದೀಪಾವಳಿ ಹಬ್ಬಗಳನ್ನು ಗ್ರಾಮದಲ್ಲಿ ವಿಶೇಷವಾಗಿ ಆಚರಿಸುತ್ತಾರೆ. ದೀಪಾವಳಿಯನ್ನು ದೀಪ ಏರುವ ಹಬ್ಬ, ಹಾಲು ತುಪ್ಪದ ಹಬ್ಬ, ಹಿರಿಯರ ಹಬ್ಬವೆಂದು ಆರಾಧಿಸಿ ಪೂಜಿಸುತ್ತಾರೆ. ಪಕ್ಕದ ಚೆನ್ನಿಹಟ್ಟಿ ಈರಣ್ಣನ ಗುಡ್ಡಗೆ ಮೀಸಲು ಹಾಲು, ಜನ್ನಿಗೆ ಮೀಸಲು ತೆಗೆದುಕೊಂಡು ಹೋಗುವ ಸಂಪ್ರದಾಯವಿದೆ. ಅಲ್ಲಿ ಕಡೆಯ ದೀಪಾವಳಿಯಂದು ಸಾವಿರಾರು ಜನ ಸೇರಿ ಬಹು ದೊಡ್ಡ ಜಾತ್ರೆ ನಡೆದು ಕಾಡುಗೊಲ್ಲರ ಸಂಸ್ಕೃತಿ ಉತ್ಸವ ನಡೆಯುತ್ತದೆ.

## ತೊರೆಯಪ್ಪನಹಳ್ಳಿ

ತೊರೆಯಪ್ಪನ ಹಳ್ಳಿ ಈ ಗ್ರಾಮ ಸಿರಾ ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದ್ದು. ಸಿರಾ ತುಮಕೂರು ರ್‍ಹ್ವಾಯ ಹೆದ್ದಾರಿಗೆ ಎಡಭಾಗದಲ್ಲಿ ಮಲ್ಲಪ್ಪನಹಳ್ಳಿ ಗೇಟಿನಿಂದ ಸ್ವಲ್ಪ ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೨೪೯.೬೬ ಹೆಕ್ಟೇರ್ ಆಗಿದೆ. ಸಿರಾ ತಾಲ್ಲೂಕಿನಲ್ಲಿ ಕಂದಾಯ ಗ್ರಾಮವೊಂದು ಅತ್ಯಂತ ಕಡಿಮೆ ಜನಸಂಖ್ಯೆ ಹೊಂದಿರುವ ಖ್ಯಾತಿಗೆ ಈ ಹಳ್ಳಿ ನಿದರ್ಶನವಾಗಿದೆ.

ತೊರೆಯಪ್ಪ ಎಂಬ ಪ್ರಕೃತಿ ಹೆಸರಿನ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ತೊರೆಯಪ್ಪನ ಹಳ್ಳಿ ಎಂದು ಕರೆಯಲಾಗಿದೆ. ಇಂದು ಗ್ರಾಮದಲ್ಲಿ ಕೋಟೆಯ ಅವಶೇಷ, ದಿಡ್ಡಿ ಬಾಗಿಲು, ಒಂದು ಮಸೀದಿಯೂ ಸೇರಿದಂತೆ ಪುರಾತನ ಲಕ್ಷಣಗಳು ಅವಸಾನದಂತೆ ಗೋಚರಿಸುತ್ತವೆ. ಕೇವಲ ೬ ಮನೆಗಳು ಮಾತ್ರ ಇದ್ದು, ಕಾಲ ಘಟ್ಟದಲ್ಲಿ ಮುಸ್ಲಿಂ ಕುಟುಂಬ, ಹಿಂದು ಕುಟುಂಬಗಳು ಇಲ್ಲಿಂದ ವಲಸೆ ಹೋಗಿರುವ ಎಲ್ಲಾ ಲಕ್ಷಣಗಳೂ ಕಂಡು ಬರುತ್ತವೆ. ಇಂದು ಸಾಮಾಜಿಕ ಸವಲತ್ತು ಕಡಿಮೆ ಇದ್ದು, ಆದಿ ಕರ್ನಾಟಕ ಹಾಗು ಮುಸ್ಲಿಂ ಮನೆಗಳು ಮಾತ್ರ ಗ್ರಾಮದಲ್ಲಿದ್ದಾರೆ. ಉಳಿದಂತೆ ಮೂಲ ನಿವಾಸಿಗಳು ಬೇರೆ ಕಡೆ ನೆಲಸಿದ್ದರೂ ತಮ್ಮ ಆಸ್ತಿ ಉಳಿಸಿಕೊಂಡಿದ್ದು, ಕೃಷಿ ಕಾರ್ಯವನ್ನು ಮುಂದುವರಿಸಿರುವುದು ಈ ಗ್ರಾಮದ ವಿಶೇಷವಾಗಿದೆ.

ಗ್ರಾಮದಲ್ಲಿ ಹೆಂಚಿನ, ಶೀಟಿನ ಸ್ವರೂಪದ ೬ ಮನೆಗಳಿದ್ದು, ೪ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ಒಟ್ಟು ೨೫ ಜನ ಸಂಖ್ಯೆ ಹೊಂದಿದ್ದು, ಇಲ್ಲಿ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ,ರೊಟ್ಟಿ ಆಗಿದ್ದು, ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಬಳಸುತ್ತಾರೆ. ಗ್ರಾಮದಲ್ಲಿ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ದ್ವಿಚಕ್ರ ವಾಹನ ಬಳಸುತ್ತಾರೆ. ಶೇಂಗಾ ಈ ಗ್ರಾಮದ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಕೂರ್ಲೆ, ನವಣೆ ಬೆಳೆಯುತ್ತಾರೆ. ತೆಂಗು, ಅಡಿಕ, ರೇಷ್ಮೆ ಬೆಳೆಯುತ್ತಾರೆ. ಶೇಂಗಾ, ಹುಣಸೆಹಣ್ಣು, ಹೊಂಗೆ ಬೀಜಗಳು ವ್ಯಾಪಾರಿ ಸರಕುಗಳಾಗಿವೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ತರೂರು ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ತರೂರಿನಿಂದ ಅಂಚೆ ಸಂಪರ್ಕ ಹೊಂದಿದೆ.

ಸಾಮಾಜಿಕ ಸೌಲಭ್ಯ ತೀರಾ ಕೊರತೆಯಿದೆ. ಕುಡಿಯಲು ನೀರನ್ನು ಗ್ರಾಮ ಪಂಚಾಯಿತಿ ಕಿರುನೀರು ಸರಬರಾಜು ಯೋಜನೆಯು ಪೂರೈಸುತ್ತಿದ್ದು, ೧ ಸಿಸ್ಟನ್‌ಗಳಿದ್ದು, ಈ ಪರಿಸರದಲ್ಲಿ ಅರೆ ನೀರಾವರಿಗಾಗಿ ಕೊಳವೆ ಬಾವಿಗಳಿವೆ. ವಿದ್ಯಾಭ್ಯಾಸ, ಆಸ್ಪತ್ರೆ, ತಾಲ್ಲೂಕು ಕಛೇರಿ, ವಿದ್ಯುತ್ ಮೊದಲಾದ ಮೂಲಭೂತ ಸೌಕರ್ಯಕ್ಕಾಗಿ ಸಿರಾ, ಕಳ್ಳಂಬೆಳ್ಳ ಅವಲಂಬಿಸಿದ್ದಾರೆ. ಗ್ರಾಮದ ಸಾಕ್ಷರತೆ ೫೦.೮ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಆಶ್ರಯ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಉಚಿತ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದಿದ್ದಾರೆ. ತರೂರು ದುರ್ಗಮ್ಮನಿಗೆ ಎದುರೆತ್ತಿ ಆರತಿ, ಬಲಿ ಅರ್ಪಿಸುತ್ತಾರೆ. ಒಂದು ಹಳೆಯ ಮಸೀದಿ ಇದೆ. ಹಿಂದು–ಮುಸ್ಲಿಂ ಇಬ್ಬರೂ ಭಾವೈಕ್ಯರಾಗಿದ್ದು, ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ, ಗೌರಿಗಣೇಶ, ಬಕ್ರೀದ್, ರಂಜಾನ್ ಹಬ್ಬಗಳನ್ನು ಆಚರಿಸುವುದು ಈ ಗ್ರಾಮದ ವಿಶೇಷವಾಗಿದೆ.

## ತಿಪ್ಪನಹಳ್ಳಿ

ತಿಪ್ಪನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೨೯ ಕಿ.ಮೀ ದೂರದಲ್ಲಿದೆ. ಇದು ಹಳೆಯ ಗ್ರಾಮವಾಗಿದ್ದು, ಪ್ರಾಚೀನ ಕಾಲದ ಕೋಟೆ, ಬುರ್ಜುವಿನ ಅವಶೇಷಗಳಿವೆ. ಸಿರಾ–ಮೈಸೂರು ರಸ್ತೆಯ ಶಿಡ್ಲಕೋಣ–ಅಮಲಗೊಂದಿ ರಸ್ತೆಯ ಬಲಭಾಗಕ್ಕೆ ಈ ಗ್ರಾಮವಿದ್ದು, ವ್ಯಕ್ತಿ ನಾಮದಿಂದ ಗ್ರಾಮ ರೂಪಿತವಾಗಿದೆ. ತಿಪ್ಪಣ್ಣ ಎಂಬ ವ್ಯಕ್ತಿಯು ಈ ಗ್ರಾಮದ ಅಸ್ತಿತ್ವಕ್ಕೆ ಪ್ರೇರಕವಾದುದರಿಂದ ಆತನ ಹೆಸರಿನಲ್ಲಿಯೇ ಗ್ರಾಮ ಬೆಳೆದಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ೬೬೩.೨೧ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಇದಕ್ಕೆ ಹೊಂದಿಕೊಂಡಂತೆ ಹರಿಜನರ ಕಾಲೋನಿ ಇದ್ದು, ಕೂಡು ಗ್ರಾಮವಾಗಿದೆ. ಬಯಲು ಸೀಮೆಯಾಗಿರುವ ತಿಪ್ಪನಹಳ್ಳಿ ಮರಳು, ಕೆಂಪು ಮಿಶ್ರಿತ ಮಣ್ಣನ್ನು ಹೊಂದಿದ್ದು, ಶೇಂಗಾ ಬೆಳೆಗೆ ಉತ್ತಮ ವಾತಾವರಣವಿದೆ. ಬಯಲು, ಗಿಡ ಮರಗಳ ಪೊದೆ, ಹಳ್ಳ, ದಿಣ್ಣೆ ಇರುವುದರಿಂದ ಈ ಭಾಗದಲ್ಲಿ ನರಿ, ತೋಳ, ಮೊಲ, ಜಿಂಕೆ, ಮುಂಗುಸಿ ಕಂಡು ಬಂದರೆ, ಗ್ರಾಮದಲ್ಲಿ ರೈತಾಪಿ ಕಸುಬಿನ ಜನರು ಕೃಷಿ ಹಾಗೂ ಹೈನುಗಾರಿಕೆಗಾಗಿ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ಸಾಕು ಪ್ರಾಣಿಗಳಾಗಿ ಸಾಕಲಾಗಿದೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಮಳೆಯ ಸರಾಸರಿ ೪೬೫ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ತಾಪ ೩೮–೩೯೦ ಸೆಂ. ಇದ್ದು, ಚಳಿಯು ೧೨೦ ಸೆಂ. ಇರುತ್ತದೆ. ನೀರಿನ ಸೌಕರ್ಯ ಕಡಿಮೆ. ಈ ಗ್ರಾಮಕ್ಕೆ ಒಂದು ಕೆರೆ ಇದ್ದರೂ ತುಂಬುವುದು ಅಪರೂಪ. ಗ್ರಾಮ ಪಂಚಾಯಿತಿಯಿಂದ ಕುಡಿಯುವ ನೀರಿಗೆ ಒಂದು ಮಿನಿ

ಟ್ಯಾಂಕ್, ಹಾಗೂ ೨ ಕೈ ಪಂಪುಗಳ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ಜನಾಂಗ ದೊಡ್ಡ ಸಮುದಾಯವಾಗಿದ್ದು, ಆದಿದ್ರಾವಿಡ, ನಾಯಕ, ಭಜಂತ್ರಿ, ಅಕ್ಕಸಾಲಿಗ, ಮಡಿವಾಳ ಕಿರು ಸಮುದಾಯವಾಗಿವೆ. ಕನ್ನಡ ಈ ಗ್ರಾಮದ ಮಾತೃ ಭಾಷೆಯಾಗಿದೆ. ವಿವಿಧ ಪ್ರಕಾರಗಳ ೧೩೭ ಮನೆಗಳಿದ್ದು, ಇವುಗಳಲ್ಲಿ ಕಾಂಕ್ರೀಟ್, ಹೆಂಚಿನ, ಮಣ್ಣಿನ, ಕಲ್ಲಿನ, ಶೀಟಿನ ಮನೆಗಳು ಇದ್ದು, ಇವುಗಳಲ್ಲಿ ೩೦ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ಆಶ್ರಯ, ಜನತಾ, ಅಂಬೇಡ್ಕರ್ ವಸತಿ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೬೭ ಫಲಾನುಭವಿಗಳಿದ್ದಾರೆ. ೩೫೮ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ ಮುಖ್ಯ ಆಹಾರವಾದರೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಕೃಷಿಗೆ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ, ಮಿನಿ ಟೆಂಪೋಗಳಿವೆ. ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಭತ್ತ, ಅಲಸಂದಿ. ತೊಗರಿ ಆಹಾರ ಬೆಳೆಗಳು. ತೋಟಗಾರಿಕೆಯಾಗಿ ತೆಂಗು, ಅಡಕೆ ಬೆಳೆಯಿದೆ. ಒಂದು ನಂದಿನಿ ಹಾಲಿನ ಡೈರಿಯ ಶಾಖೆ ಇದ್ದು ೬೦೦ ಲೀಟರ್ ಹಾಲನ್ನು ಸಂಗ್ರಹಿಸಲಾಗುತ್ತಿದೆ. ಶೇಂಗಾ, ತೆಂಗು, ಅಡಿಕೆ ವ್ಯಾಪಾರವಿದೆ. ಶಿಕ್ಷಕರು, ಇಂಜಿನಿಯರ್ ಸೇರಿದಂತೆ ೧೦ ಜನ ಸರ್ಕಾರಿ ನೌಕರರಿದ್ದಾರೆ. ಸಣ್ಣ ಕೈಗಾರಿಕೆಯಾಗಿ, ಬೀಡಿ ಸುತ್ತುವುದು, ಟೈಲರಿಂಗ್, ಕೆಲಸ ನಿರ್ವಹಣೆ ಇದೆ. ಖಾಸಗಿ ವೈದ್ಯರು, ಇಂಜಿನಿಯರ್ ಇದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ಸೀಬಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಗ್ರಾಮದಲ್ಲಿ ಕೊಲ್ಲಾಪುರದಮ್ಮ, ಲಕ್ಷ್ಮಿ, ಮೊದಲಾದ ೬ ಸ್ತ್ರೀ ಶಕ್ತಿ ಸ್ವಸಹಾಯ ಸಂಘವಿದ್ದು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘದ ೨ ಗುಂಪುಗಳಿವೆ. ಒಂದು ಅಂಗನವಾಡಿ ಕೇಂದ್ರ, ಒಂದು ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ೬ ಜನ ಶಿಕ್ಷಕರು, ೧೯೦ ಮಕ್ಕಳು ಕಲಿಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕ ಈ ಬಗೆಯ ಸೌಲಭ್ಯಗಳಿದ್ದು, ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೬೭ ರಷ್ಟಿದೆ. ಇದರಲ್ಲಿ ಶೇ.೫೫.೯ ರಷ್ಟು ಮಹಿಳೆಯರು, ಶೇ.೭೯.೮ ರಷ್ಟು ಪುರುಷರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವಿಧವಾ ವೇತನದ ಫಲಾನುಭವಿಗಳಿದ್ದು. ೫ ಗೂಡಂಗಡಿಗಳಿವೆ. ಗ್ರಾಮದ ಮಾರಮ್ಮ, ಕೊಲ್ಲಾಪುರದಮ್ಮ, ಆಂಜನೇಯ, ಲಕ್ಷ್ಮೀದೇವಸ್ಥಾನಗಳಿವೆ. ಕೊಲ್ಲಾಪುರದಮ್ಮ, ಗ್ರಾಮದ ಮೂಲ ದೈವ ಎಂಬ ಐತಿಹ್ಯ ಹೊಂದಿದೆ. ಊರ ಹಬ್ಬ ನೆರವೇರಿಸುತ್ತಾ ಬಂದಿದ್ದು, ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ದಲಿತ ಯುವಕ ಸಂಘ, ಚಿರಂಜೀವಿ ಯುವಕ ಸಂಘಗಳಿದ್ದು, ಸಾಂಸ್ಕೃತಿಕ ಕ್ರೀಡಾ ಚಟುವಟಿಕೆಯನ್ನು ನಡೆಸುತ್ತಿವೆ. ಸೋಬಾನೆ ಸಣ್ಣ ಬನಕ್ಕ ರಂಗಮ್ಮ, ನರಸಮ್ಮ, ಗಿರಿಯಮ್ಮ ತಂಡದ ಭಜನೆ ಕಲಾಕೂಟ, ಸ್ಥಳೀಯವಾಗಿ ಗುರುತಿಸಿಕೊಂಡಿದ್ದು, ಧಾರ್ಮಿಕ ಚಟುವಟಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಭಜನೆ ನಡೆಸಿ ಕೊಡುತ್ತಾರೆ.

## ತಿಪ್ಪನಹಳ್ಳಿ ಎ.ಕೆ. ಕಾಲೋನಿ

ತಿಪ್ಪನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೨೯ ಕಿ.ಮೀ. ದೂರದಲ್ಲಿ ಪೂರ್ವ ದಿಕ್ಕಿನಲ್ಲಿದೆ. ಇದೊಂದು ಹಳೆಯ ಗ್ರಾಮವಾಗಿದ್ದು, ಹಳೆಯ ಕಾಲದ ಕೋಟೆ, ಬುರ್ಜಿನ ಅವಶೇಷ ಇಂದಿಗೂ ಇದೆ. ಅಮಲಗೊಂದಿ ಗ್ರಾಮದಿಂದ ಬಲಭಾಗದಲ್ಲಿ ಈ ಗ್ರಾಮವಿದೆ. ತಿಪ್ಪಣ್ಣ ಎಂಬ ವ್ಯಕ್ತಿ ಮೂಲದಿಂದಾಗಿ ತಿಪ್ಪನಹಳ್ಳಿ ಎಂದಾಗಿದ್ದು, ಅದಕ್ಕೆ ಹೊಂದಿಕೊಂಡಂತೆ ಆದಿಕರ್ನಾಟಕ ಜನಾಂಗ ದವರು ಪ್ರತ್ಯೇಕವಾಗಿ ವಸತಿ ಮಾಡಿಕೊಂಡು ಜೀವಿಸುತ್ತಿದ್ದರಿಂದ ಮೊದಲಿಗೆ ಮಾದಿಗರ ಹಟ್ಟಿ ಎಂದೇ ಕರೆಯಲಾಗುತ್ತಿತ್ತು. ನಂತರ ಎ.ಕೆ. ಕಾಲೋನಿ ಎಂದೇ ಕರೆಯಲಾಗಿದೆ. ಆದಿಕರ್ನಾಟಕ ಜನಾಂಗದವರು ಮಾತ್ರ ನೆಲೆಸಿರುವ ಈ ಬಡಾವಣೆ ಇಂದು ಮುಖ್ಯ ಗ್ರಾಮದೊಂದಿಗೆ ಕೂಡಿ ಕೊಂಡಿದೆ. ಆದರೂ ಹಳೆಯ ಹೆಸರಿನಿಂದ ಮಾದಿಗರ ಹಟ್ಟಿ ಎಂದೇ ಕರೆಯುತ್ತಾರೆ. ಹೆಂಚಿನ, ಶೀಟಿನ ಸ್ವರೂಪದ ೨೮ ಮನೆಗಳಿದ್ದು, ಇವು ಸರ್ಕಾರದ ವಸತಿ ಯೋಜನೆಯ ಆಶ್ರಯ, ಅಂಬೇಡ್ಕರ್ ಯೋಜನೆಯ ಫಲಾನುಭವಿಗಳು ಇದ್ದಾರೆ. ಉಚಿತ ವಿದ್ಯುತ್ ಪೂರೈಸಲಾಗುತ್ತಿದೆ. ಇಲ್ಲಿ ಭೂ ಹಂಚಿಕೆ ತಿಪ್ಪನಹಳ್ಳಿ ಕಂದಾಯ ಗ್ರಾಮದಲ್ಲಿ ೬೬೩.೨೧ ಹೆಕ್ಟೇರ್ ವಿಸ್ತೀರ್ಣದಲ್ಲಿ ಹಂಚಿಕೆಯಾಗಿದೆ. ಕೃಷಿಕರೇ ಬಹುತೇಕ ಇದ್ದು, ಸಾರಿಗೆ, ಶಿಕ್ಷಣ ಇಲಾಖೆಯ ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾ ವೇತನದ ಫಲಾನುಭವಿ ಗಳಿದ್ದಾರೆ. ಕುರಿ, ಮೇಕೆ, ಹಸು ಪಾಲನೆ ಇದ್ದು ಗ್ರಾಮದ ನಂದಿನಿ ಹಾಲಿನ ಡೈರಿಗೆ ಇಲ್ಲಿಂದ ಹಾಲು ಸಂಗ್ರಹಿಸಲಾಗುತ್ತದೆ. ಒಂದು ಗೂಡಂಗಡಿ ಇದೆ.

ಮಾರಮ್ಮನ ಪೌಳಿ ಇದ್ದು, ಕೊಲ್ಲಾಪುರದಮ್ಮ, ಮಾರಮ್ಮನಿಗೆ ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯವಿದೆ. ಆಂಜನೇಯ ಹಾಗೂ ಲಕ್ಷ್ಮೀದೇವರುಗಳಿಗೂ ನಡೆದುಕೊಳ್ಳುತ್ತಾರೆ. ನರಸಮ್ಮ, ಗಿರಿಯಮ್ಮ ಭಜನೆ ಕಲಾವಿದರಾಗಿದ್ದು, ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ.

## ತಿಮ್ಮಣ್ಣನಹಳ್ಳಿ

ತಿಮ್ಮಣ್ಣನ ಹಳ್ಳಿ ಒಂದು ಬೇಚಾರಕ್ ಗ್ರಾಮವಾಗಿದ್ದು, ಬುಕ್ಕಾಪಟ್ಟಣದಿಂದ ಆರು ಕಿ.ಮೀ. ದೂರಕ್ಕೆ ದಕ್ಷಿಣ ದಿಕ್ಕಿಗಿದೆ. ಕಾಡು ಪ್ರದೇಶವಾಗಿದೆ. ಮರಳು ಮಿಶ್ರಿತ ಕಪ್ಪು ಮಣ್ಣನ್ನು ಹೊಂದಿದೆ. ಬುಕ್ಕಾಪಟ್ಟಣ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ, ಬುಕ್ಕಾಪಟ್ಟಣ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ.

ಈ ಪರಿಸರದಲ್ಲಿ ಕಾಡಿನ ಪ್ರದೇಶವಾಗಿರುವುದರಿಂದ ಬಿಕ್ಕೆ, ಬ್ಯಾಲ, ನೀಲ, ನೇರಳೆ, ನೀಲಗಿರಿ, ಕಾಡುಮತ್ತಿ, ಹೊಂಗೆ, ಬೇವು, ಬ್ಯಾಟೆ, ಮರಡಿ, ತುಗ್ಗಲಿ ಮರಗಳಿವೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಕರಡಿ, ಉಡ, ತೋಳ, ಕಂಡು ಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಕಾಗೆ, ಕೋಗಿಲೆ, ಕೌಜುಲಗ, ಗಿಡುಗ, ಬೆಳವ, ಗುಬ್ಬಚ್ಚಿ ಕಂಡು ಬರುತ್ತವೆ.

ಬುಕ್ಕಾಪಟ್ಟಣ ರಕ್ಷಿತ ಅರಣ್ಯ ಇಲಾಖೆಯವರು ಸಸ್ಯ ಸಂರಕ್ಷಣೆಯಲ್ಲಿ ಉಸ್ತುವಾರಿ ಹೊತ್ತಿದ್ದಾರೆ. ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ.

## ತುಪ್ಪದಕೋಣ

ತುಪ್ಪದಕೋಣವು ಸಿರಾ ತಾಲ್ಲೂಕು ಕೇಂದ್ರದಿಂದ ನೈಋತ್ಯ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ, ಬುಕ್ಕಾಪಟ್ಟಣ, ಹೊಸಕೆರೆ ಮಾರ್ಗದಲ್ಲಿ ಸಿರಾದಿಂದ ೨೬ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಈ ಪ್ರದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣವು ೯೯೬.೧೦ ಹೆಕ್ಟೇರ್‌ಗಳಾಗಿವೆ. ಈ ಗ್ರಾಮಕ್ಕೆ ಗೊಲ್ಲರಹಟ್ಟಿ, ಚೆನ್ನಪ್ಪನಪಾಳ್ಯ, ಮಾರಗೊಂಡನಹಳ್ಳಿ ಗ್ರಾಮಗಳು ಸೇರ್ಪಡೆಯಾಗಿವೆ. ತುಪ್ಪವನ್ನು ಸಂಗ್ರಹಿಸುವ ಕೊಣ (ಬಾವಿ) ಅರ್ಥ ಆಡುನುಡಿಯಲ್ಲಿ ಕೋಣವಾಗಿ ಬಳಕೆಯಾಗುತ್ತಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳುಮಿಶ್ರಿತ ಕೆಂಪು ಮಣ್ಣಿನಿಂದ ಆವೃತ್ತವಾಗಿದೆ ಅಲ್ಲದೆ ಈ ಪ್ರದೇಶದಲ್ಲಿ ಯಾವುದೇ ಅರಣ್ಯ, ಬೆಟ್ಟ-ಗುಡ್ಡ ತೋಪುಗಳು ಕಂಡುಬರುವುದಿಲ್ಲ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೪೮ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ೧೮ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಕುಡಿಯುವ ನೀರಿಗೆ ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಇಲಾಖೆಯಿಂದ ಸಿಸ್ಟರ್ನ್ ಮತ್ತು ಎರಡು ಕೈಪಂಪುಗಳಿಂದ ನೀರಿನ ವ್ಯವಸ್ಥೆ ಮಾಡಲಾಗಿದೆ.

ಈ ಗ್ರಾಮದಲ್ಲಿ ಒಟ್ಟು ೭೩ ಮನೆಗಳಿದ್ದು ೧೮೩ ಜನಸಂಖ್ಯೆಯನ್ನು ಒಳಗೊಂಡಿದೆ. ಮನೆಗಳು ಕಲ್ಲಿನ, ಹೆಂಚಿನ ಮತ್ತು ಶೀಟಿನ ಸ್ವರೂಪವುಗಳಾಗಿವೆ. ಇದರಲ್ಲಿ ಕುಂಚಿಟಿಗ, ನಾಯಕ, ಕ್ರಿಶ್ಚಿಯನ್, ಆದಿಕರ್ನಾಟಕ, ಈಡಿಗ, ಮಡಿವಾಳ, ಭಜಂತ್ರಿಯವರ ಮನೆಗಳಿವೆ. ಇವರ ಭಾಷೆ ಕನ್ನಡವಾಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳು ಕಂಡುಬರದಿದ್ದರೂ ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಚರಂಡಿ ವ್ಯವಸ್ಥೆಯಿದ್ದು ಉತ್ತಮವಾದ ಕಚ್ಚಾ ರಸ್ತೆಯನ್ನು ಹೊಂದಿದೆ. ವಸತಿ ಯೋಜನೆಯಾದ ಆಶ್ರಯ, ಜನತಾ, ಇಂದಿರಾ ಆವಾಸ್ ೧೭ ಫಲಾನುಭವಿಗಳು ಉಚಿತ ವಿದ್ಯುತ್ ಸೌಲಭ್ಯ ಪಡೆದ ಫಲಾನುಭವಿಗಳಿದ್ದಾರೆ.

ಈ ಹಳ್ಳಿಯ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು ಶೇಂಗಾ, ರಾಗಿ, ಭತ್ತ, ಜೋಳ, ದ್ವಿದಳ ಧಾನ್ಯಗಳು, ತೆಂಗು, ಅಡಿಕೆ, ಹುಣಸೆ ಮರಗಳು ಪ್ರಮುಖವಾಗಿದ್ದು ಇವೇ ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಹಾಗೆಯೇ ಇಲ್ಲಿ ಒಂದು ಆಧುನಿಕ ಡೈರಿಯಿದ್ದು ಊಟದ ಎಲೆ ತಯಾರಿಸುವುದು, ಟೈಲರ್ ಮತ್ತು ದ್ವಿಚಕ್ರ ರಿಪೇರಿ ಮಾಡುವ ಅಂಗಡಿಗಳನ್ನು ಮಾಡುವುದು ರೂಢಿಯಲ್ಲಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾಪಂಚಾಯ್ತಿ ಮತ್ತು ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದೆ. ಸಿರಾ ತಹಸೀಲ್ದಾರ್ ಕಛೇರಿ ರಾಮಲಿಂಗಾಪುರ ಗ್ರಾಮಪಂಚಾಯ್ತಿ ಕೇಂದ್ರವಾಗಿದೆ. ತುಪ್ಪದಕೋಣ ಅಂಚೆ ಕಛೇರಿ ಹೊಂದಿದ್ದು ಬುಕ್ಕಾಪಟ್ಟಣ ವಿದ್ಯುತ್ ಮತ್ತು ಉಪಪೊಲೀಸ್ ಠಾಣೆಯನ್ನು ಹೊಂದಿದೆ. ಇಲ್ಲಿ ಖಾಸಗಿ ಬಸ್ಸುಗಳ ಸಂಪರ್ಕ ಹಾಗೂ ಚರ ದೂರವಾಣಿಗಳಾದ

ಮೊಬೈಲ್‌ಗಳನ್ನು ಹೊಂದಿದೆ. ಈ ಗ್ರಾಮವು ಗ್ರಾಮನ್ಯಾಯಮಂಡಳಿಯನ್ನು ಹೊಂದಿದೆ. ಅಲ್ಲದೇ ಬಗೆಹರಿಯದ ಸಮಸ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳಲಾಗುತ್ತಿದೆ.

ತುಪ್ಪದಕೋಣದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಕನ್ನಡ ಮಾಧ್ಯಮದಲ್ಲಿ ಉಚಿತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಶಾಲಾ ಕಾಂಪೌಂಡ್, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೭.೨% ಆಗಿದೆ. ಈ ಹಳ್ಳಿಯಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದಿದ್ದರೂ ಸ್ತ್ರೀಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿಂದ ಸಣ್ಣ ಪ್ರಮಾಣದ ಹಣವನ್ನು ಉಳಿತಾಯ ಮತ್ತು ಸಾಲಸೌಲಭ್ಯ ಪಡೆಯಲು ಸಹಾಯಕವಾಗಿವೆ.

ಈ ಗ್ರಾಮದಲ್ಲಿ ಒಂದು ಉಪಆರೋಗ್ಯ ಕೇಂದ್ರವಿದ್ದು ಕುಟುಂಬ ಕಲ್ಯಾಣ ಇಲಾಖೆಯ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಇಲ್ಲಿ ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಒಳಗೊಂಡಿದೆ. ಒಂದು ಬೇವಿನಕಟ್ಟೆಯಿದೆ. ಧಾರ್ಮಿಕ ಕೇಂದ್ರಗಳಲ್ಲಿ ಮಾರಮ್ಮ, ಆಂಜನೇಯ, ಶನಿಮಹಾತ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಮಾರಮ್ಮನ ಜಾತ್ರೆಯನ್ನು ಮಾಡುತ್ತಾರೆ. ಗ್ರಾಮದಲ್ಲಿ ಗಣೇಶ, ದಸರಾ, ಯುಗಾದಿ, ಶಿವರಾತ್ರಿ, ದೀಪಾವಳಿ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

## ತುಪ್ಪದಕೋಣ ಗೊಲ್ಲರಹಟ್ಟಿ

ತುಪ್ಪದಕೋಣವು ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ ತಾಲ್ಲೂಕಿನಿಂದ ೨೬.೦೫ ಕಿ.ಮೀ ದೂರದಲ್ಲಿರುವ ಗ್ರಾಮವು ಮಜರೆ ಗ್ರಾಮವಾಗಿದೆ. ಬಯಲುನಾಡಿ ಪ್ರದೇಶವಾಗಿದ್ದು ಇದರ ಒಟ್ಟು ಭೌಗೋಳಿಕ ವಿಸ್ತೀರ್ಣವು ೯೯೬.೧೦ ರಲ್ಲಿ ೧೯೮.೮ ಹೆಕ್ಟೇರ್‌ಗಳಾಗಿವೆ. ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ.

ಈ ಗ್ರಾಮದಲ್ಲಿ ಅರಣ್ಯ, ಬೆಟ್ಟ, ಗುಡ್ಡ ತೋಪುಗಳು ಇಲ್ಲದಿದ್ದರೂ ೭ ಕೊಳವೆ ಬಾವಿಗಳಿದ್ದು ಒಂದು ಕಟ್ಟೆ ಇದೆ. ಇವುಗಳು ಕೃಷಿಗೆ ಸಹಾಯಕವಾಗಿದೆ ಹಾಗೆಯೇ ಕುಡಿಯುವ ನೀರಿನ ವ್ಯವಸ್ಥೆಗೆ ಒಂದು ಕೈ ಪಂಪು ಇದೆ.

ವಾರ್ಷಿಕ ಮಳೆಯ ಸರಾಸರಿ ೪೪೪೮ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ತಾಪ ೩೮೦ ಸೆಂ. ಇದ್ದು, ಚಳಿಯು ೧೨೦ ಸೆಂ. ಇರುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಗೊಲ್ಲರಹಟ್ಟಿಯಲ್ಲಿ ೩೧ ಮನೆಗಳಿದ್ದು, ೧೨೫ ಜನಸಂಖ್ಯೆಯನ್ನು ಹೊಂದಿದೆ. ಕನ್ನಡ ಮಾತೃ ಭಾಷೆಯಾಗಿದೆ. ಇಲ್ಲಿ ಗೊಲ್ಲರ ಮನೆಗಳಿವೆ. ಇವುಗಳಲ್ಲಿ ಕಾಂಕ್ರೀಟ್ ಗುಡಿಸಲು ಮತ್ತು ಹೆಂಚಿನ, ಮನೆಗಳಿದ್ದು, ಇವು ಆಶ್ರಯ, ಇಂದಿರಾ ಆವಾಸ್ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಪಡೆದಿವೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾದರೆ, ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ೨ ಎತ್ತಿನಬಂಡಿ, ಆಧುನಿಕ ವಾಹನಗಳಾದ ಟ್ರ್ಯಾಕ್ಟರ್ ಹಾಗೂ ಮಿನಿಟೆಂಪೋ, ಆಟೋ ಮತ್ತು ದ್ವಿಚಕ್ರ ವಾಹನಗಳ ಬಳಕೆ ಇದೆ. ಅಲ್ಲದೆ ಕಚ್ಚಾ ರಸ್ತೆಯನ್ನು ಹೊಂದಿದೆ.

ಈ ಗ್ರಾಮದ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ, ರಾಗಿ ಜೋಳ, ಸೂರ್ಯಕಾಂತಿ, ನವಣೆ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗು, ಅಡಿಕೆ, ಹುಣಸೆಹಣ್ಣುಗಳನ್ನು ಬೆಳೆಯುತ್ತಾರೆ. ವ್ಯಾಪಾರದ ಮುಖ್ಯ ಸರಕುಗಳಾಗಿವೆ.

ಈ ಗೊಲ್ಲರಹಟ್ಟಿಯು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತರ, ಬುಕ್ಕಾಪಟ್ಟಣ ಜಿಲ್ಲಾ ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ ಸಿರಾ ತಹಶೀಲ್ದಾರ್ ಕಛೇರಿ, ರಾಮಲಿಂಗಾಪುರ ಗ್ರಾಮ ಪಂಚಾಯ್ತಿಯನ್ನು ತುಪ್ಪದಕೋಣ ಅಂಚೆ ಕಛೇರಿಯನ್ನು ಹೊಂದಿದೆ. ಹಾಗೂ ಬುಕ್ಕಾಪಟ್ಟಣ ಪೋಲೀಸ್ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ. ಈ ಗ್ರಾಮದಲ್ಲಿ ಗ್ರಾಮನ್ಯಾಯ ಮಂಡಳಿಯನ್ನು ಹೊಂದಿದ್ದು ಬಗೆಹರಿಯದ ಸಮಸ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ.

ಗೊಲ್ಲರಹಟ್ಟಿಯಲ್ಲಿ ಒಂದು ಸ್ತ್ರೀ ಶಕ್ತಿ ಸಂಘವಿದ್ದು ಸಣ್ಣ ಪ್ರಮಾಣದ ಉಳಿತಾಯ ಮತ್ತು ಸಾಲಸೌಲಭ್ಯವನ್ನು ಪಡೆದುಕೊಳ್ಳುತ್ತಿವೆ. ಒಟ್ಟಿನಲ್ಲಿ ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಒಟ್ಟು ಸಾಕ್ಷರತೆಯ ಪ್ರಮಾಣವು ಶೇ. ೫.೨೬ ರಷ್ಟಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗುತ್ತಿದೆ.

ಗೊಲ್ಲರಹಟ್ಟಿಯಲ್ಲಿ ಆರೋಗ್ಯದ ಉಪಕೇಂದ್ರಗಳಿಲ್ಲದಿದ್ದರೂ ಕುಟುಂಬ ಕಲ್ಯಾಣ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ

ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಹಾಗೆಯೇ ಈ ಗ್ರಾಮದಲ್ಲಿ ದಾಸಪ್ಪಜ್ಜ ನಾಟಿ ಔಷಧಿ ನೀಡುತ್ತಾರೆ. ಆದರೆ ಇಲ್ಲಿ ಕಾಣಿಸಿಕೊಳ್ಳುವ ಮುಖ್ಯ ರೋಗಗಳೆಂದರೆ ಜ್ವರ, ಕೆಮ್ಮು ಚಳಿ ಇತ್ಯಾದಿಗಳಾಗಿವೆ.

ಈ ಗ್ರಾಮದಲ್ಲಿ ಐತಿಹಾಸಿಕ ಧಾರ್ಮಿಕ ಕೇಂದ್ರಗಳಾದ ಜುಂಜಪ್ಪ ಮತ್ತು ಭೂತಪ್ಪ ದೇವಾಲಯಗಳಿವೆ. ಇಲ್ಲಿ ಪ್ರತಿವರ್ಷವೂ ಜುಂಜಪ್ಪ ಜಾತ್ರೆಯನ್ನು ಮಾಡುತ್ತಾರೆ.

ಈ ಹಳ್ಳಿಯಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸೋಬಾನೆ ಪದ ಹಾಡುವ ಲಕ್ಷ್ಮಕ್ಕ, ಬನಮ್ಮ ಮತ್ತು ಹರಿಕಥೆದಾಸರು ಶಿವರಾಮಯ್ಯನವರು ಈ ಗ್ರಾಮದಲ್ಲಿ ಕಲಾವಿದರಾಗಿದ್ದು, ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ.

ದಸರಾ, ದೀಪಾವಳಿ, ಯುಗಾದಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತುಪ್ಪದಕೊಣದ ಚೆನ್ನಪ್ಪನಪಾಳ್ಯ

ಚೆನ್ನಪ್ಪನಪಾಳ್ಯವು ಸಿರಾ ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನಲ್ಲಿದೆ. ಸಿರಾ ಹುಯಿಲ್‌ದೊರೆ–ಹೊಸಕೆರೆ ಮಾರ್ಗದಲ್ಲಿ ಸಿರಾದಿಂದ ೨೫.೦೮ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ತುಪ್ಪದಕೋಣದ ಜೋಡಿ ಗ್ರಾಮವಾಗಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೨೯೬.೧೦ ಹೆಕ್ಟೇರ್‌ಗಳಾಗಿವೆ. ಚೆನ್ನಪ್ಪ ಎಂಬ ವ್ಯಕ್ತಿ ಮೊದಲು ಮನೆ ನಿರ್ಮಿಸಿಕೊಂಡು ವಾಸವಾಗಿದ್ದು, ನಂತರ ಗ್ರಾಮ ಬೆಳೆದು ಆತನ ಹೆಸರಿನಲ್ಲೇ ಊರಾಗಿದೆ. ಆದುದರಿಂದ ಚೆನ್ನಪ್ಪನ ಪಾಳ್ಯವೆಂದು ಕರೆಯುತ್ತಾರೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಅರಣ್ಯ ಬೆಟ್ಟ–ಗುಡ್ಡ ತೋಪುಗಳು ಕಂಡು ಬರುವುದಿಲ್ಲ. ಈ ಗ್ರಾಮದಲ್ಲಿ ಒಟ್ಟು ೬ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಇಲ್ಲಿನ ವಾರ್ಷಿಕ ೪೪೪೮ ಮಿ.ಮೀ. ಸರಾಸರಿ ಮಳೆಯ ಪ್ರಮಾಣವಾಗಿದೆ. ಬಿಸಿಲಿನ ತಾಪ ೩೮಼ ಸೆಂ. ಇದ್ದು, ಚಳಿಯು ೧೨಼ ಸೆಂ. ಸಹಜವಾಗಿದೆ.

ಈ ಗ್ರಾಮದಲ್ಲಿ ಒಟ್ಟು ೨೧ ಮನೆಗಳಿದ್ದು, ಇದರಲ್ಲಿ ೬೭ ಜನಸಂಖ್ಯೆಯನ್ನು ಹೊಂದಿದೆ. ಇವರ ಭಾಷೆ ಕನ್ನಡವಾಗಿದ್ದು ಇದರಲ್ಲಿ ನಾಯಕ, ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗ, ಬೋವಿ, ಮಡಿವಾಳರ ಮನೆಗಳಿವೆ. ಇವರ ಮುಖ್ಯ ಆಹಾರ ಮುದ್ದೆ, ಅನ್ನ ಮತ್ತು ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ಇತ್ಯಾದಿಗಳಾಗಿವೆ. ಇಲ್ಲಿನ ಮನೆಗಳು ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದಲ್ಲಿದ್ದು ೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಈ ಗ್ರಾಮದ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ, ರಾಗಿ ಜೋಳ, ತೆಂಗು, ಅಡಿಕೆ, ಹುಣಸೆಹಣ್ಣುಗಳನ್ನು ಬೆಳೆಯುತ್ತಾರೆ. ಇವುಗಳು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಗರಿಕಡ್ಡಿ ಸಿಗಿಯುವುದು, ಹೊಂಗೆ ಬೀಜ ಸಂಗ್ರಹ, ಹುಣಸೆಹಣ್ಣು ಬಿಡಿಸುವುದು ಕಂಡು ಬರುತ್ತದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತರ, ಬುಕ್ಕಾಪಟ್ಟಣ ಜಿಲ್ಲಾ ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ ಸಿರಾ ತಹಶೀಲ್ದಾರ್ ಕಛೇರಿ, ರಾಮಲಿಂಗಾಪುರ ಗ್ರಾಮ ಪಂಚಾಯ್ತಿಯನ್ನು ತುಪ್ಪದಕೋಣ ಅಂಚೆ, ಬುಕ್ಕಾಪಟ್ಟಣ ಪೋಲೀಸ್ ಠಾಣೆಯನ್ನು ಹೊಂದಿದೆ. ಈ ಗ್ರಾಮವು ನ್ಯಾಯ ಮಂಡಳಿಯನ್ನು ಹೊಂದಿದ್ದು ಬಗೆಹರಿಯದ ಸಮಸ್ಯೆ ಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ.

ಈ ಗ್ರಾಮದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿಲ್ಲದಿದ್ದರೂ ಎರಡು ಸ್ತ್ರೀ ಶಕ್ತಿ ಸಂಘಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ.

ಈ ಹಳ್ಳಿಯಲ್ಲಿ ಒಂದು ಅಂಗನವಾಡಿ ಕೇಂದ್ರ ಮತ್ತು ಸರ್ಕಾರಿ ಹಿರಿಯರ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು, ಒಟ್ಟು ಈ ಹಳ್ಳಿಯ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ. ೪೬ ರಷ್ಟಿದೆ. ಈ ಗ್ರಾಮದಲ್ಲಿ ಆರೋಗ್ಯ ಕೇಂದ್ರಗಳಿಲ್ಲದಿದ್ದರೂ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಹಾಗೆಯೇ ಈ ಗ್ರಾಮದಲ್ಲಿ ಕಾಣಿಸಿಕೊಳ್ಳುವ ಮುಖ್ಯ ರೋಗಗಳೆಂದರೆ ಜ್ವರ, ಕೆಮ್ಮು ಚಳಿ ಇತ್ಯಾದಿಗಳಾಗಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಹಾಗೂ ಸಮವಸ್ತ್ರ, ಪಠ್ಯಪುಸ್ತಕ ಸೌಲಭ್ಯಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಈ ಗ್ರಾಮದಲ್ಲಿ ಸಮುದಾಯದ ಸೌಲಭ್ಯಗಳಾದ ವಿಧವಾ, ವೃದ್ಧಾಪ ವೇತನಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಎರಡು ಚಿಲ್ಲರೆ ವ್ಯಾಪಾರದ ಅಂಗಡಿ ಯನ್ನು ಹೊಂದಿದೆ. ಅಲ್ಲದೆ ಐತಿಹಾಸಿಕ ನೆಲೆಯಾಗಿ ಬೇವಿನ ಕಟ್ಟೆಯನ್ನು ಹೊಂದಿದೆ.

ಧಾರ್ಮಿಕ ಕೇಂದ್ರಗಳಾದ ಶನಿಮಹಾತ್ಮೆ ಮತ್ತು ಭೂತಪ್ಪನ ದೇವಾಲಯ ಗಳಿವೆ. ಇಲ್ಲಿ ತುಪ್ಪದ ಕೋಣದ ಮಾರಮ್ಮನ ಜಾತ್ರೆಯನ್ನು ಮಾಡುತ್ತಾರೆ ಇಲ್ಲಿ ಆರತಿ, ಮತ್ತು ಬಲಿ ನೀಡುವುದು ವಿಶೇಷವಾಗಿದೆ.

ದಸರಾ, ದೀಪಾವಳಿ, ಯುಗಾದಿ, ರಾಮನವಮಿ, ಗೆರಿಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಿತ್ತಿಗಾನಹಳ್ಳಿ

ತಿತ್ತಿಗಾನಹಳ್ಳಿಯು ಸಿರಾ ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನಲ್ಲಿದೆ. ಈ ಗ್ರಾಮಕ್ಕೆ ಸಿರಾ ಹೊನ್ನೇನಹಳ್ಳಿ–ಕಳ್ಳಂಬೆಳ್ಳ ಮಾರ್ಗದಲ್ಲಿ ನಿಂಬೆಮರದ ಹಳ್ಳಿಯಿಂದ ಬಲಭಾಗಕ್ಕೆ ೧.೨ ಕಿ.ಮೀ. ದೂರದಲ್ಲಿ, ಸಿರಾದಿಂದ ೧೫ ಕಿ.ಮೀ. ದೂರದಲ್ಲಿ ಇದೆ. ಇದು ಕಂದಾಯ ಗ್ರಾಮವಾಗಿದ್ದು, ಯಲಿಯೂರಿನ ಉಪಗ್ರಾಮವಾಗಿದೆ. ಈ ಗ್ರಾಮಕ್ಕೆ ಬಸ್ ಸೌಲಭ್ಯವಿಲ್ಲ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೧೪೮.೦೬ ಹೆಕ್ಟೇರ್‌ಗಳಾಗಿವೆ.

ಬೇಡ ಜನಾಂಗದವರ ಮನೆ ದೇವರಾದ ತಿಮ್ಮಪ್ಪನ ದೇವಾಲಯ ಮತ್ತು ತಿಮ್ಮಪ್ಪ ಎಂಬುದು ಅಪಭ್ರಂಶವಾಗಿ ತಿತ್ತಿಯಾಗಿ ಹಳ್ಳಿಯಾಗಿದೆ. ಒಟ್ಟು ಇದೊಂದು ವ್ಯಕ್ತಿ ಮೂಲದ ಹೆಸರಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಅರಣ್ಯ ಬೆಟ್ಟ–ಗುಡ್ಡ ತೋಪುಗಳು ಕಂಡು ಬರುವುದಿಲ್ಲ. ಇಲ್ಲಿನ ವಾರ್ಷಿಕ ೪೩೮ ಮಿ.ಮೀ. ಸರಾಸರಿ ಮಳೆಯ ಪ್ರಮಾಣವಾಗಿದೆ. ಬಿಸಿಲಿನ ತಾಪ ೩೮೦ ಸೆಂ. ಇದ್ದು, ಚಳಿಯು ೧೨೦ ಸೆಂ. ಸಹಜವಾಗಿದೆ. ಅಲ್ಲದೆ ೧೨ ಕೊಳವೆ ಬಾವಿಗಳಿದ್ದು, ಕೃಷಿಗೆ ಸಹಾಯಕವಾಗಿವೆ. ಹಾಗೆಯೇ ಕುಡಿಯುವ ನೀರಿನ ವ್ಯವಸ್ಥೆಗೆ ಸಿಸ್ಟನ್ ಮತ್ತು ಕೈ ಪಂಪನ್ನು ಕಲ್ಪಿಸಲಾಗಿದೆ.

ಈ ಗ್ರಾಮದಲ್ಲಿ ಒಟ್ಟು ೩೮ ಮನೆಗಳಿದ್ದು, ಇದರಲ್ಲಿ ೧೮೨ ಜನಸಂಖ್ಯೆಯನ್ನು ಹೊಂದಿದೆ. ಇವರ ಭಾಷೆ ಕನ್ನಡವಾಗಿದ್ದು ಇದರಲ್ಲಿ ನಾಯಕ, ದೊಡ್ಡ ಸಮುದಾಯವಾಗಿದ್ದು, ಆದಿಕರ್ನಾಟಕ ಮನೆಗಳು ಕಂಡು ಬರುತ್ತವೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ಮತ್ತು ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ಇತ್ಯಾದಿಗಳಾಗಿವೆ. ಸಾಂಪ್ರದಾಯಿಕ ವಾಹನಗಳೊಂದಿಗೆ ಆಧುನಿಕ ವಾಹನಗಳಾದ ಮಿನಿಟೆಂಪೋ, ದ್ವಿಚಕ್ರ ವಾಹನಗಳು ಒಳಗೊಂಡಿದ್ದು ಕಚ್ಚಾ ರಸ್ತೆಯನ್ನು ಹೊಂದಿದೆ.

ಈ ಗ್ರಾಮದ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ, ರಾಗಿ ಜೋಳ, ಸೂರ್ಯಕಾಂತಿ, ದ್ವಿದಳ ಧಾನ್ಯಗಳು, ತೆಂಗು, ಅಡಿಕೆ, ಹುಣಸೆ ಹಣ್ಣುಗಳನ್ನು ಬೆಳೆಯುತ್ತಾರೆ. ಇವುಗಳು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಇಲ್ಲಿ ಯಾವುದೇ ರೀತಿಯ ಸರ್ಕಾರಿ ನೌಕರರು ಮತ್ತು ಕೈಗಾರಿಕೆಗಳು ಕಂಡು ಬರುವುದಿಲ್ಲ. ಆದ್ದರಿಂದ ಕೃಷಿ ಕಾರ್ಮಿಕರನ್ನು ಕಾಣುತ್ತೇವೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ, ಸಿರಾ ತಹಶೀಲ್ದಾರ್ ಕಛೇರಿ, ಬುಕ್ಕಾಪಟ್ಟಣ ಪೋಲೀಸ್ ಠಾಣೆ, ಹುಯಿಲ್‌ದೊರೆ ಗ್ರಾಮಪಂಚಾಯ್ತಿ ಹಾಗೂ ವಡ್ಡನಹಳ್ಳಿ ಅಂಚೆ ಕಛೇರಿಯನ್ನು ಹೊಂದಿದೆ. ಈ ಗ್ರಾಮವು ನ್ಯಾಯ ಮಂಡಳಿಯನ್ನು ಹೊಂದಿದ್ದು ಬಗೆಹರಿಯದ ಸಮಸ್ಯೆ ಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ.

ಈ ಗ್ರಾಮದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿಲ್ಲದಿದ್ದರೂ ಒಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವನ್ನು ಹೊಂದಿದ್ದು, ಇದರಿಂದ ಸಣ್ಣ ಪ್ರಮಾಣದ ಹಣಕಾಸು ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಈ ಹಳ್ಳಿಯಲ್ಲಿ ಒಂದು ಅಂಗನವಾಡಿ ಕೇಂದ್ರ, ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು, ಶೇ. ೫೬ ರಷ್ಟು ಸಾಕ್ಷರತೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ.

ತಿತ್ತಿಗಾನಹಳ್ಳಿಯಲ್ಲಿ ಯಾವುದೇ ರೀತಿಯ ಕುಟುಂಬ ಕಲ್ಯಾಣ ಇಲಾಖೆಯ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಹಾಗೆಯೇ ಈ ಗ್ರಾಮದಲ್ಲಿ ಕಾಣಿಸಿಕೊಳ್ಳುವ ಮುಖ್ಯ ರೋಗಗಳೆಂದರೆ ಜ್ವರ, ಕೆಮ್ಮು , ಬಿ.ಪಿಯಂತಹ ರೋಗಗಳು ಪ್ರಮುಖವಾಗಿವೆ. ಹಾಗೆಯೇ ರಂಗದಾಸಜ್ಜ ಮತ್ತು ಈರಬೊಮ್ಮಯ್ಯ ಎಂಬುವರು ನಾಟಿ ಔಷಧಿ ಯನ್ನು ನೀಡುತ್ತಾರೆ.

ಈ ಗ್ರಾಮದಲ್ಲಿ ಸಮುದಾಯದ ಸೌಲಭ್ಯಗಳನ್ನು ಪಡೆಯುತ್ತಿದ್ದು, ಇಲ್ಲಿ ಒಂದು ಚಿಲ್ಲರೆ ವ್ಯಾಪಾರದ ಅಂಗಡಿಯನ್ನು ಒಳಗೊಂಡಿದೆ. ಈ ಗ್ರಾಮದಲ್ಲಿ ಐತಿಹಾಸಿಕ ನೆಲೆಯ ಸ್ಮಾರಕಗಳಾಗಿ ಅರಳಿವೃಕ್ಷ ಮತ್ತು ಕರಗಲ್ಲುಗಳನ್ನು ಒಳಗೊಂಡಿದೆ.

ಧಾರ್ಮಿಕ ಕೇಂದ್ರಗಳಲ್ಲಿ ತಿಮ್ಮಪ್ಪನ ದೇವಾಲಯವಿದ್ದು, ಜೊತೆಗೆ ಮಾರಮ್ಮ ಶನಿಮಹಾತ್ಮೆ ಮತ್ತು ಭೂತಪ್ಪನ ದೇವಾಲಯಗಳಿವೆ. ಇಲ್ಲಿ ತುಪ್ಪದ ಕೋಣದ ಮಾರಮ್ಮನನ್ನು ಪೂಜಿಸುತ್ತಾರೆ. ಮತ್ತು ಪ್ರತಿವರ್ಷವೂ ಯುಗಾದಿಯ ನಂತರ ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿ ಜಾತ್ರೆಯಾಗಿದೆ.

## ದೇವರಪುರ

ದೇವರಪುರ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮ-ದಕ್ಷಿಣಕ್ಕೆ ೧೧ ಕಿಮೀ ದೂರದಲ್ಲಿದೆ. ಗ್ರಾಮಪಂಚಾಯ್ತಿ ಕೇಂದ್ರ ಲಕ್ಷ್ಮೀಸಾಗರದಿಂದ ೨ ಕಿ.ಮೀ ದೂರದಲ್ಲಿದ್ದು ಲಕ್ಷ್ಮೀಸಾಗರ ಕೆರೆಯ ತೂಬಿನ ಸನಿಹದಲ್ಲಿದೆ. ಹಂಡೇನಹಳ್ಳಿ ಕೆರೆ ನಿರ್ಮಾಣ ಪೂರ್ವದಲ್ಲಿ ಈಗಿನ ದೇವವಪುರ ಗ್ರಾಮದ ಬಳಿ ಸಂಗಮೇಶ್ವರ ದೇವಾಲಯ ಇತ್ತೆಂದು, ಈ ಕಾರಣದಿಂದಲೇ ದೇವರು ಮತ್ತು ಊರು ಸೇರಿ ದೇವರಪುರ ಅಥವಾ ದೇವರು ಇರುವ ಊರು ಎಂದಾಗಿದೆ. ಈ ಗ್ರಾಮದಲ್ಲಿ ಕೋಟೆಬಾಗಿಲು, ದಿಂಡಿ ಈ ಎಲ್ಲ ಲಕ್ಷಣಗಳು ದೇವರಪುರ ಗ್ರಾಮದ ಹೊರವಲಯದಲ್ಲಿ ಇಂದಿಗೂ ಕಾಣಬಹುದಾಗಿದೆ.

ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೦೦೯.೦೨ ಹೆಕ್ಟೇರ್ ಆಗಿದ್ದು ಗಾಂಧಿನಗರ ಎಂಬ ಹೊಸ ಬಡಾವಣೆಯೂ ಈ ಗ್ರಾಮದೊಂದಿಗೆ ಹಂಚಿಕೆಯಾಗಿದೆ. ಮರಳು ಮಿಶ್ರಿತ ಕೆಂಪುಮಣ್ಣನ್ನು ಹೊಂದಿದ್ದು ದಿಣ್ಣೆ, ಕುರುಚಲು ಗಿಡ ಬಲಭಾಗದಲ್ಲಿ ಕೆರೆ, ಊರ ಉತ್ತರಕ್ಕೆ ಕೆರೆ ಬಯಲು, ತೋಟ ಸಾಲುಗಳಿವೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಜಿಂಕೆ, ಉಡ, ಬೆಕ್ಕುಗಳಿವೆ. ಗ್ರಾಮದಲ್ಲಿ ಹಸು, ಎತ್ತು, ಕುರಿ, ಮೇಕೆ, ಎಮ್ಮೆ ಮೊದಲಾದ ಪ್ರಾಣಿಗಳಿವೆ. ಪಕ್ಷಿಗಳಾದ ಗಿಳಿ, ಗೂಬೆ, ಗೊರವಂಕ, ಕೊಕ್ಕರೆ, ಕೋಗಿಲೆ, ಕಾಗೆ ಮೊದಲಾದ ಪಕ್ಷಿಗಳಿವೆ. ಗ್ರಾಮದಲ್ಲಿ ಸಾಕುಪಕ್ಷಿಗಳಾಗಿ ಕೋಳಿಗಳಿವೆ. ಗ್ರಾಮದ ಸರಾಸರಿ ಮಳೆ ಪ್ರಮಾಣ ೪೬೦ ಮಿಮೀ, ಚಳಿ ೧೨ ಡಿಗ್ರಿ ಹಾಗೂ ಬಿಸಿಲಿನ ತಾಪ ೩೮ ಡಿಗ್ರಿ ಇರುತ್ತದೆ.

ರೈತಾಪಿ ವರ್ಗ ಸಹಜ ಮಳೆಯೊಂದಿಗೆ ಕೊಳವೆ ಬಾವಿಗಳನ್ನು ಹೊಂದಿ ಕೃಷಿ ಬದುಕನ್ನು ಸಾಗಿಸುತ್ತಿದ್ದಾರೆ. ಈ ಪರಿಸರದಲ್ಲಿ ೮ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೪ ಸಿಸ್ಟರ್ನ್‌ಗಳಲ್ಲಿ ನೀರಿನ ಸರಬರಾಜಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಈಡಿಗರು, ಬಣಜಿಗ, ಬೋವಿ, ಕಾಡುಗೊಲ್ಲರು ಕಿರು ಸಮುದಾಯವಾಗಿವೆ. ಕನ್ನಡ ಮಾತೃಭಾಷೆಯಾಗಿದ್ದು ತೆಲುಗು ಭಾಷೆಯನ್ನೂ ಮಾತನಾಡುತ್ತಾರೆ. ವಿವಿಧ ಪ್ರಕಾರಗಳ ಒಟ್ಟು ೫೨ ಮನೆಗಳಿದ್ದು ಅವು ಹೆಂಚಿನ, ಕಲ್ಲಿನ, ಶೀಟಿನ, ಕಡಪಾ ಹಾಸುಗಲ್ಲಿನ ಮನೆಗಳಿವೆ. ಇವು ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೯ ಮಂದಿ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಸಾಂಪ್ರದಾಯಿಕ ಎತ್ತಿನ ಬಂಡಿಯ ಜೊತೆಗೆ ಟ್ರ್ಯಕ್ಟರ್ ಹಾಗೂ ಸ್ಕೂಟರ್ ಗಾಡಿಗಳಿವೆ. ಶೇಂಗಾ ಮುಖ್ಯಬೆಳೆ. ರಾಗಿ, ಅಲಸಂದೆ, ತೊಗರಿ ಬೆಳೆಗಳು, ಹತ್ತಿ, ಸೀಡ್ಸ್, ಹಣ್ಣಿನ ಬೆಳೆಗಳಿವೆ. ಹುಣಸೆಹಣ್ಣು, ಸೀಡ್ಸ್, ಹತ್ತಿ ವ್ಯಾಪಾರಿ ಬೆಳೆಗಳು. ಗ್ರಾಮದಲ್ಲಿ ಸಾರಿಗೆ, ಕಂದಾಯ, ಆರೋಗ್ಯ, ಶಿಕ್ಷಣ ಇಲಾಖೆಗೆ ಸೇರಿದ ೬ ಜನ ನೌಕರರಿದ್ದಾರೆ. ಬೀಡಿ ಸುತ್ತುವ, ಊಟದ ಎಲೆ ಕಟ್ಟುವ ಗೃಹಕೃತ್ಯ ಮಹಿಳಾ ಉದ್ಯೋಗವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಲಕ್ಷ್ಮೀಸಾಗರ ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

೨ ಸ್ತ್ರೀಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘದ ಗುಂಪುಗಳಿವೆ. ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೩೯ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಬಿಸಿಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೬೨.೨ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಸಂಗಮೇಶ್ವರ, ಬಸವಣ್ಣ, ಮಾರಮ್ಮ, ಬೋವಿ ಜನಾಂಗದ ಗಂಗಾದೇವಿ ದೇವಾಲಯಗಳಿವೆ. ಮಾರಮ್ಮನ ಊರಹಬ್ಬವಿದ್ದು ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಗೌರಿ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸಲಾಗುವುದು.

## ದೇವರಹಳ್ಳಿ

ದೇವರಹಳ್ಳಿ, ದ್ಯಾವರಹಳ್ಳಿ ಎಂದು ಕರೆಯಲ್ಪಡುವ ಈ ಗ್ರಾಮ ಸಿರಾ ತಾಲ್ಲೂಕಿನಿಂದ ಪಶ್ಚಿಮಕ್ಕೆ ೮ ಕಿ.ಮೀ ದೂರದಲ್ಲಿದೆ. ಸಿರಾ-ಚಿತ್ರದುರ್ಗ ರ್‍ಾ್ರಯ ಹೆದ್ದಾರಿಯಲ್ಲಿ ಮಾನಗಿಯಿಂದ ಬಲಭಾಗದಲ್ಲಿ ಹೆದ್ದಾರಿಗೆ ೧ ಕಿಮೀ ದೂರದಲ್ಲಿದೆ.

ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೨೩೮.೦೮ ಹೆಕ್ಟೇರ್ ಆಗಿದೆ. ಗ್ರಾಮದ ದಕ್ಷಿಣಕ್ಕೆ ರ್‍ಾ್ರಯ ಹೆದ್ದಾರಿಗೆ ಹೊಂದಿಕೊಂಡಂತೆ ೩೫ ಹೆಕ್ಟೇರ್

ಗೋಮಾಳ ಜಮೀನಿದೆ. ಮರಳು ಮಿಶ್ರಿತ ಕಂದುಮಣ್ಣನ್ನು ಹೊಂದಿರುವ ಈ ಗ್ರಾಮದ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ ಕಂಡುಬರುತ್ತವೆ. ಸಾಕುಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ನಾಯಿಗಳಿವೆ. ಪಕ್ಷಿಗಳಾದ ಗಿಳಿ, ಗೀಜುಗ, ಗೂಬೆ, ಗೊರವಂಕ, ಬೆಳವ, ಕೊಕ್ಕರೆ, ಕೋಗಿಲೆ, ಕಾಗೆ, ಹದ್ದು, ಗುಬ್ಬಚ್ಚಿ, ಗರುಡ, ಗಿಡುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಕೋಳಿ ಸಾಕುಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ಮಳೆ ೪೬೦ ಮಿಮೀ ಆಗಿದ್ದು ಚಳಿ ೯ ಡಿಗ್ರಿ, ಉಷ್ಣಾಂಶ ೩೮ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿಗೆ ಮಳೆನೀರು ಸಾಕಾಗುವುದಿಲ್ಲ. ಹಾಗಾಗಿ ಕೊಳವೆ ಬಾವಿಗಳ ಮೊರೆಹೋಗಿದ್ದಾರೆ. ಈ ಪರಿಸರದಲ್ಲಿ ೨೮ ಕೊಳವೆ ಬಾವಿಗಳಿವೆ. ಒಂದು ಕೆರೆ ಇದ್ದರೂ ತುಂಬುವುದು ಅಪರೂಪವಾಗಿದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುವುದು. ೬ ಸಿಸ್ಟರ್ನ್‌ಗಳಿವೆ.

ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ದೊಡ್ಡ ಸಮುದಾಯವಾಗಿದೆ. ಕುಂಚಿಟಿಗ, ಬೋವಿ, ಮುಸ್ಲಿಂ, ಉಪ್ಪಾರ, ಕುಂಬಾರ, ಮಡಿವಾಳ, ಗೊಲ್ಲ ಕಿರು ಸಮುದಾಯಗಳಾಗಿವೆ. ಕನ್ನಡ ಮಾತೃಭಾಷೆಯಾಗಿದ್ದು ಉರ್ದು, ತೆಲುಗು ಭಾಷೆ ಅಲ್ಪಸಂಖ್ಯಾತರ ಭಾಷೆಯಾಗಿದೆ. ವಿವಿಧ ಸ್ವರೂಪದ ೧೨೮ ಮನೆಗಳಿದ್ದು ಕಾಂಕ್ರೀಟ್, ಕಲ್ಲಿನ ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿವೆ. ಇಲ್ಲಿ ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆ ಅಡಿಯಲ್ಲಿ ರಚನೆಗೊಂಡಿದ್ದು ಗ್ರಾಮದ ೪೮ ಮನೆಗಳಲ್ಲಿ ಶೌಚಾಲಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನವಾಗಿದೆ. ಮಿನಿ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ಆಟೋ ವಾಹನಗಳೊಂದಿಗೆ ಸಾಂಪ್ರದಾಯಿಕ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಅಲಸಂದಿ, ತೊಗರಿ ಆಹಾರ ಬೆಳೆಗಳು. ತೆಂಗು, ಅಡಿಕೆ ತೋಟಗಾರಿಕೆ ಬೆಳೆಗಳು. ಸೂರ್ಯಕಾಂತಿ, ಹತ್ತಿ ಬೆಳೆಗಳಿವೆ. ಕಿರು ಹಾಲಿನ ಡೈರಿ ಇದ್ದು ದಿನವಹಿ ೨೦೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಹುಣಸೇಹಣ್ಣು, ಹೊಂಗೆ ಬೀಜ, ತೆಂಗು, ಅಡಕೆ, ಸೀಡ್ಸ್ ಹತ್ತಿ ಪ್ರಮುಖ ವಾಣಿಜ್ಯ ಬೆಳೆಗಳಾಗಿವೆ.

೭ ಜನ ಸರ್ಕಾರಿ ನೌಕರರಿದ್ದು ಜೈಲರ್ ಲಕ್ಷ್ಮೀನಾರಾಯಣ, ಶಿಕ್ಷಕರು, ಸಾರಿಗೆ, ಕಂದಾಯ ಇಲಾಖೆಯ ನೌಕರರಿದ್ದಾರೆ. ಇಬ್ಬರು ವಕೀಲರಿದ್ದಾರೆ. ಬೀಡಿ ಸುತ್ತುವುದು, ಟೈಲರಿಂಗ್ ಗೃಹ ಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಲಕ್ಷ್ಮೀಸಾಗರ ಗ್ರಾಮಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಜಿಲ್ಲಾ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದಲ್ಲಿ ಇಬ್ಬರು ಗ್ರಾಮಪಂಚಾಯ್ತಿ ನೌಕರರಿದ್ದಾರೆ. ೩ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳಾ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು ೩೪ ಮಕ್ಕಳಿದ್ದಾರೆ. ಇಬ್ಬರು ಬೋಧಕರಿದ್ದು ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪಠ್ಯಪುಸ್ತಕಗಳ ಸೌಲಭ್ಯಗಳಿವೆ. ಶೇ.೬೩% ರಷ್ಟು ಸಾಕ್ಷರರಿದ್ದಾರೆ.

ಕಾಂತರಾಜು ಎಂಬುವವರು ಲೇಖಕರಾಗಿದ್ದು ಸುದ್ಧಿ ಮಾಧ್ಯಮದಲ್ಲಿ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜೈಲ್ ಸೂಪರಿಡೆಂಟ್ ಲಕ್ಷ್ಮೀನಾರಾಯಣ ಅವರಿಗೆ ೨೦೦೬ ರಲ್ಲಿ ಭಾರತದ ರಾಷ್ಟ್ರಪತಿ ಚಿನ್ನದ ಪದಕ ಗೌರವ ಲಭಿಸಿರುವುದು ಇಲ್ಲಿನ ವಿಶೇಷ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೬ ಗೂಡಂಗಡಿಗಳಿವೆ. ಗ್ರಾಮದಲ್ಲಿ ಆಂಜನೇಯ, ಮಾರಮ್ಮ, ಉಡಸಲಮ್ಮ ದೇವಾಲಯಗಳಿದ್ದು ಮಾರಮ್ಮನ ಊರಹಬ್ಬವಿದ್ದು ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ, ಗೌರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದೇವಗೊಂಡನಹಳ್ಳಿ

ದೇವಗೊಂಡನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಸಿರಾ–ಮಧುಗಿರಿ ರಸ್ತೆಯಲ್ಲಿ ಯರಗುಂಟೇಶ್ವರ ನಗರದಿಂದ ಬಲಕ್ಕೆ ತಿರುಗಿ ರತ್ನಸಂದ್ರ–ಚಿಕ್ಕಗೂಳ ಮಾರ್ಗವಾಗಿ ತಾಳಗುಂದ, ಬ್ರಹ್ಮಸಂದ್ರಕ್ಕೆ ಹೋಗುವ ಮಾರ್ಗದಲ್ಲಿ ದೇವಗೊಂಡನಹಳ್ಳಿ ಇದೆ. ಇದರ ಭೌಗೋಳಿಕ ವ್ಯಾಪ್ತಿ ೪೪೦.೪೦ ಹೆಕ್ಟೇರ್ ಆಗಿದ್ದು ಮಲ್ಲೇಶ್ವರ ದೇವಗೊಂಡನಹಳ್ಳಿ ಬೋವಿ ಕಾಲೋನಿ ಎಂಬ ಎರಡು ಉಪಗ್ರಾಮಗಳನ್ನು ಮಜರೆ ಗ್ರಾಮವಾಗಿ ಹೊಂದಿದೆ.

ದೇವಗೊಂಡ ಎಂಬುದು ವ್ಯಕ್ತಿವಾಚಕ ಶಬ್ದವಾಗಿದ್ದು ವ್ಯಕ್ತಿಮೂಲದ ಹೆಸರಾಗಿದೆ. ವಾಸ್ತವವಾಗಿ ಇದೊಂದು ದೇವಾಲಯಗಳ ಗ್ರಾಮ. ಮುರಿದುಬಿದ್ದ ಕೋಟೆ, ದಿಡ್ಡಿ ಬಾಗಿಲು, ದೇವಾಲಯಗಳ ಅವಶೇಶ ಇಂದಿಗೂ ಕಣ್ಣಿಗೆ ರಾಚುವಂತಿದೆ. ಕೆಂಪುಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ಸಮತಟ್ಟಾದ ಭೂಪ್ರದೇಶ, ಮರ-ಗಿಡಗಳಿವೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ, ಉಡ, ಬಾರುಬೆಕ್ಕುಗಳಿವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ಕೋಳಿಗಳಿವೆ. ಪಕ್ಷಿಗಳಾದ ಗಿಳಿ, ಗೊರವಂಕ, ಗೂಬೆ, ಕೋಗಿಲೆ, ಕಾಗೆ, ಕೊಕ್ಕರೆ, ಕೌಜಲಗ, ಹದ್ದು, ಗರುಡ ಪಕ್ಷಿಗಳನ್ನು ಕಾಣಬಹುದಾಗಿದೆ.

ಕೃಷಿ ಕಾಯಕದ ಈ ಈ ಗ್ರಾಮ ಮಳೆ ಅವಲಂಬಿತ ಬದುಕು. ದೇವಗೊಂಡನಹಳ್ಳಿ ಕೆರೆ ಸೇರಿದಂತೆ ೨ ಕಟ್ಟೆಗಳಿವೆ. ರಾಹುತನಕಟ್ಟೆ ಎಂಬುದು ವಿಶೇಷವಾಗಿದ್ದು ನಾಗರಾಜು ಎಂಬ ಯುವಕನ ಅಭಿಪ್ರಾಯದಂತೆ ಪಾಳೆಯಗಾರರು ಕುದುರೆ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದ ನೆನಪಿನ ಕಟ್ಟೆ ಎಂದು ಹೇಳುತ್ತಾರೆ. ಒಟ್ಟಾರೆ ಮಳೆ ಕಡಿಮೆ ಇರುವ ಕಾರಣ ಕೆರೆ-ಕಟ್ಟೆ ತುಂಬುವುದಿಲ್ಲ. ವಿವಿಧ ನೆರವಿನ ೫೦ ಕೊಳವೆ ಬಾವಿಗಳಿಂದ ಕೃಷಿಗೆ ಉಪನೀರಾವರಿ ಮಾಡಿಕೊಂಡಿದ್ದಾರೆ. ವಾರ್ಷಿಕ ಸರಾಸರಿ ಮಳೆ ೪೭೧.೬ ಮಿಮೀ ಆಗಿದ್ದು ಉಷ್ಣಾಂಶ ೩೯ ಡಿಗ್ರಿ, ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಹಜವಾಗಿದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ದೊಡ್ಡ ಸಮುದಾಯವಾಗಿದ್ದು ನಾಯಕರು, ಗೊಲ್ಲ, ಆದಿಕರ್ನಾಟಕ, ಕುಂಬಾರ ಜನಾಂಗಗಳು ಕಿರು ಸಮುದಾಯವಾಗಿವೆ. ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ಒಟ್ಟು ೮೦ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ ಮತ್ತು ಶೀಟಿನ ಸ್ವರೂಪದ ಮನೆಗಳಾಗಿವೆ. ೩೯೮ ಜನಸಂಖ್ಯೆ ಹೊಂದಿದ್ದು ೨೦ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ೬ ಜನ ಆಶ್ರಯ, ಜನತಾ ವಸತಿ ಸೌಲಭ್ಯ ಪಡೆದಿದ್ದಾರೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಆಹಾರ ಭೋಜನಗಳು. ಗ್ರಾಮದಲ್ಲಿ ಟ್ರ್ಯಕ್ಟರ್, ಮಿನಿ ಟೆಂಪೋ, ಆಟೋ, ಲಾರಿಗಳನ್ನು ಬಳಸಲಾಗುತ್ತಿದೆ. ದ್ವಿಚಕ್ರ ವಾಹನಗಳೂ ಇವೆ.

ಶೇಂಗಾ ಮುಖ್ಯ ಬೆಳೆ, ರಾಗಿ, ಭತ್ತ, ಜೋಳ, ಕೊರ್ಲೆ, ಹಾರಕ ಬೆಳೆಗಳನ್ನು ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ರೇಷ್ಮೆ, ತೆಂಗು, ಅಡಿಕೆ, ಸೇವಂತಿಗೆ ಹೂ ಬೆಳೆಯುತ್ತಾರೆ. ಶೇಂಗಾ, ಹುಣಸೆ ಹಣ್ಣು, ಹೊಂಗೆ ಬೀಜಗಳ ಸರಕು ವ್ಯಾಪಾರವಿದೆ. ಗ್ರಾಮದಲ್ಲಿ ಒಬ್ಬರು ಶಿಕ್ಷಕರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ರತ್ನಸಂದ್ರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ಉತ್ತಮ ರಸ್ತೆ, ಬಸ್ ಸಂಚಾರ ವ್ಯವಸ್ಥೆ ಇದೆ. ೨ ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳಾ ಸ್ವಾವಲಂಬನೆಗೆ ಪ್ರೇರಕವಾಗಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಗಳಿದ್ದು ಶಾಲೆಯಲ್ಲಿ ೩೬ ಮಕ್ಕಳಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೪೬% ರಷ್ಟಿದೆ.

ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಧಾರ್ಮಿಕವಾಗಿ ಮಹತ್ವ ಪಡೆದ ಈ ಗ್ರಾಮ ನಾಯಕ ಸಮುದಾಯದ ಧಾರ್ಮಿಕ ಸ್ಥಳ. ಪ್ರಾಚೀನ ಕಾಲದ ಬೊಮ್ಮಲಿಂಗೇಶ್ವರ ದೇವಾಲಯ ಪಾಳುಬಿದ್ದು ಪುನರ್ ನಿರ್ಮಾಣಕ್ಕೆ ಸಿದ್ಧವಾಗುತ್ತಿದೆ. ಪೌಳಿ, ಮಂಟಪ, ದ್ವಾರಬಾಗಿಲು ಉತ್ತಮವಾಗಿದೆ. ಬಿಳಿಗಿರಿ ರಂಗಪ್ಪ, ಮುತ್ತುರಾಯ, ಶನಿಮಹಾತ್ಮ, ಮಾರಮ್ಮ, ದಾದಮ್ಮನ ಗುಡಿಗಳಿವೆ. ದಾದಮ್ಮ, ಕುಂಚಿಟಿಗ ಜನಾಂಗದ ಸಣ್ಣಮುದ್ದಪ್ಪನವರ ವೀರಗಲ್ಲು ಮಾದರಿಯ ಕಲ್ಲು. ಕಾರೆಗಿಡಗಳೊಂದಿಗೆ ವರ್ಷಕ್ಕೆ ಒಮ್ಮೆ ವಿಶೇಷ ಪೂಜೆ ಏರ್ಪಡುವುದು ಇಲ್ಲಿನ ವಿಶೇಷವಾಗಿದೆ. ಕುನ್ನಾಲಮ್ಮನಿಗೆ, ಮಾರಮ್ಮನಿಗೆ ಎದುರೆತ್ತಿ, ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ, ರಾಮನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದೇವಗೊಂಡನಹಳ್ಳಿ ಬೋವಿ ಕಾಲೋನಿ

ದೇವಗೊಂಡನಹಳ್ಳಿ ಬೋವಿ ಕಾಲೋನಿ ಸಿರಾ ತಾಲ್ಲೂಕು ಕೇಂದ್ರದಿಂದ ೧೬ ಕಿಮೀ ದೂರದಲ್ಲಿದ್ದು ದೇವಗೊಂಡನಹಳ್ಳಿಗೆ ಹೊಂದಿಕೊಂಡಿದೆ. ಚಿಕ್ಕಗೂಳದಿಂದ ೨ ಕಿಮೀ ದೂರದಲ್ಲಿ ಕಾಳಾಪುರ-ತಾಳಗುಂದ ರಸ್ತೆಯಲ್ಲಿ ಈ ಗ್ರಾಮವಿದ್ದು ಇದು ದೇವಗೊಂಡನಹಳ್ಳಿಗೆ ಸೇರಿದ್ದು ಪ್ರತ್ಯೇಕ ಅಸ್ತಿತ್ವ ಪಡೆದ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೧೦೦ ಹೆಕ್ಟೇರ್ ಆಗಿದ್ದು, ಬೋವಿ ಜನಾಂಗದವರು ಮಾತ್ರ ವಾಸಿಸುತ್ತಿರುವುದರಿಂದ ಬೋವಿ ಕಾಲೋನಿ ಆಗಿದೆ. ಪೂರ್ಣ ಬೋವಿ ಜನಾಂಗವಾಗಿ ವಾಸಿಸುತ್ತಿದ್ದಾರೆ. ಕೆಂಪು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಈ ಪರಿಸರದಲ್ಲಿ ನರಿ, ಮೊಲ, ತೋಳ, ಮುಂಗುಸಿಗಳು ಕಾಡುಪ್ರಾಣಿಗಳಾಗಿದ್ದು ಹಸು, ಕೋಳಿ, ನಾಯಿ

ಸಾಕುಪ್ರಾಣಿಗಳಾಗಿವೆ. ಈ ಪರಿಸರದಲ್ಲಿ ಕಾಗೆ, ಕೋಗಿಲೆ, ಗೀಜುಗ, ಗಿಳಿ, ಗೊರವಂಕ, ಗೂಬೆ, ಹದ್ದು, ಗಿಡುಗ, ಗರುಡ ಪಕ್ಷಿಗಳು ಗುಬ್ಬಚ್ಚಿ, ಕಾಗೆಗಳು ಇವೆ.

ವಾರ್ಷಿಕ ೪೭೧.೪ ಮಿಮೀ ಮಳೆ ಬೀಳುತ್ತಿದ್ದು ಕೃಷಿಗೆ ಸಾಲುವುದಿಲ್ಲ. ಬೋವಿ ಜನಾಂಗವಾಗಿರುವ ಕಾರಣ ಕಲ್ಲು ಕಟ್ಟುವುದು, ಬಂಡೆ ಸೀಳುವುದು ಇವರ ಮುಖ್ಯ ಕೆಲಸವಾಗಿದ್ದು ಕೃಷಿ ವಿರಳವಾಗಿದೆ. ೨ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದ್ದು ೧ ಕಿರುಟ್ಯಾಂಕ್, ಒಂದು ಕೈಪಂಪು ಇದೆ. ಇಲ್ಲಿನ ಬಿಸಿಲಿನ ಪ್ರಮಾಣ ೩೭ ಡಿಗ್ರಿ ಸೆಂಟಿಗ್ರೇಡ್ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇದೆ.

ಸಾಮಾಜಿಕ ರಚನೆಯಲ್ಲಿ ಬೋವಿ ಜನಾಂಗ ಮಾತ್ರ ವಾಸಿಸುತ್ತಿದ್ದು ಆ ವರ್ಗದ ೮ ಮನೆಗಳಿವೆ. ಈ ಎಲ್ಲವೂ ಶೀಟಿನ ಮನೆಗಳಾಗಿದ್ದು ಇವು ಸರ್ಕಾರದ ವಸತಿ ಯೋಜನೆಯಾದ ಇಂದಿರಾ ಆವಾಸ್, ಆಶ್ರಯ ೪ ಫಲಾನುಭವಿಗಳು. ೨ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ದ್ವಿಚಕ್ರ ವಾಹನಗಳಿವೆ. ಆಟೋ, ಟೆಂಪೋ ಬಳಕೆಯಿದೆ. ಶೇಂಗಾ ಇಲ್ಲಿನ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಹತ್ತಿ ಬೆಳೆಯುತ್ತಾರೆ. ಹೊಂಗೆಬೀಜ, ಶೇಂಗಾ, ಹುಣಸೆಹಣ್ಣಿನ ವ್ಯಾಪಾರವಿದೆ.

ಸಿರಾ ವಿಧಾನಸಭಾ ಕ್ಷೇತ್ರ ಚಿಕ್ಕನಹಳ್ಳಿ ಜಿಲ್ಲಾ ಪಂಚಾಯತ್, ರತ್ನಸಂದ್ರ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮದ ಶೈಕ್ಷಣಿಕ ಮಕ್ಕಳು ದೇವಗೊಂಡನಹಳ್ಳಿ, ಕಾಳಾಪುರ, ರತ್ನಸಂದ್ರ ಸಿರಾ ಗ್ರಾಮಕ್ಕೆ ಬರಬೇಕಿದೆ. ಒಟ್ಟು ಸಾಕ್ಷರರ ಪ್ರಮಾಣ ೪೬% ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಕುನ್ನಾಲಮ್ಮ ದೇವರಿಗೆ ಎದುರೆತ್ತಿ ಆರತಿ, ಬಲಿ, ಹರಕೆ ಸಂಪ್ರದಾಯವಿದೆ. ಉಳಿದಂತೆ ಯುಗಾದಿ, ಮಹಾನವಮಿ, ಗೌರಿ–ಗಣೇಶ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ದೊಡ್ಡಗುಳ

ದೊಡ್ಡಗುಳ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೦ ಕಿಮೀ ದೂರದಲ್ಲಿದೆ. ಸಿರಾ–ಮಧುಗಿರಿ ಮುಖ್ಯ ರಸ್ತೆಯ ಪದ್ಮಾಪುರ ಗೇಟಿನಿಂದ ಬಲಕ್ಕೆ ತಿರುಗಿ ೨ ಕಿಮೀ ದೂರದ ಕಚ್ಚಾರಸ್ತೆಯಲ್ಲಿ ಸಾಗಿದರೆ ದೊಡ್ಡಗುಳವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಪ್ರಾಚೀನ ಗ್ರಾಮವೂ ಹೌದು. ಗ್ರಾಮದ ಸುತ್ತಲೂ ಕೋಟೆಯ ಅವಶೇಷ, ಅಗಸೆ ಬಾಗಿಲು ಕಂಡುಬರುತ್ತದೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೭೮೫.೮೯ ಹೆಕ್ಟೇರ್ ಆಗಿದೆ. ಗೊಲ್ಲರಹಟ್ಟಿ ಈ ಗ್ರಾಮದ ಕೂಡು ಗ್ರಾಮವಾಗಿದ್ದು ಹೊಂದಿಕೊಂಡಿದೆ. ಇದರ ಆಚೆಗೂ ಬೇಡ ಜನಾಂಗ, ಆದಿಕರ್ನಾಟಕ ಜನಾಂಗದ ಮನೆಗಳು ಬೆಳೆದಿದ್ದು ಸಧ್ಯ ಗೊಲ್ಲರಹಟ್ಟಿ ಊರ ನಡುವಿನ ಒಂದು ಭಾಗವಾಗಿದೆ. ಗ್ರಾಮದ ಪೂರ್ವಕ್ಕೆ ದೊಡ್ಡ ಕೆರೆ ಇರುವುದರಿಂದ ಕೆರೆ–ಕೊಳ, ಗೂಟವಾಗಿದೆ. ಜನಪದರ ಭಾಷೆಯಲ್ಲಿ ಕೆರೆ, ಕುಂಟೆ, ಕಟ್ಟೆ ಸಾಮಾನ್ಯ ಬಳಕೆಯ ಶಬ್ದಗಳು. ಅಂತೆಯೇ ಕೊಳ ಗೂಳವಾಗಿದೆ. ಈ ಪರಿಸರದಲ್ಲಿ ಎರಡು ಗ್ರಾಮಗಳಿದ್ದು ಅವರೆಡಕ್ಕೂ ಊರಿಗೆ ಹೊಂದಿಕೊಂಡಂತೆ ದೊಡ್ಡ ಕೆರೆಯಿದೆ. ದೊಡ್ಡ ಕೆರೆ ಹೊಂದಿರುವ ಅಥವಾ ಮೊದಲಿಗೆ ಗ್ರಾಮ ನಿರ್ಮಾಣವಾದ ಹಳ್ಳಿ (ದೊಡ್ಡಕೊಳ) ದೊಡ್ಡಗೂಳವಾದರೆ ತಡವಾಗಿ ರಚನೆಯಾದ ಚಿಕ್ಕ ಗ್ರಾಮ (ಚಿಕ್ಕಕೊಳ) ಚಿಕ್ಕಗೂಳ ಆಗಿದೆ. ರೈತಾಪಿ ಬದುಕಿಗೆ ಅಗತ್ಯವಾದ ನೇಗಿಲ ಕುಳಗಳ ತಯಾರಿಕೆ ಕಾರಣಗಳಿಂದಲೂ ಕುಳ > ಗುಳವಾಗಿ ನಂತರ ಗೂಳವಾಗಿರಬೇಕೆಂಬ ಅಭಿಪ್ರಾಯವನ್ನನು ನಿವೃತ್ತ ಇಂಜಿನಿಯರ್ ಕೆ.ಬೊಮ್ಮಲಿಂಗಯ್ಯ ವ್ಯಕ್ತಪಡಿಸುತ್ತಾರೆ. ಆದರೂ ಕುಳಮೂಲಕ್ಕಿಂತ ಕೊಳಮೂಲ ಗೂಳವಾಗಿರುವ ಸಾಧ್ಯತೆ ನಿಚ್ಚಳವಾಗಿದೆ.

ಪೂರ್ವಕ್ಕೆ ದೊಡ್ಡ ಕೆರೆ ಊರ ಬದಿಗೆ ಅರಳಿಮರ, ಸುತ್ತ ಗದ್ದೆ ಬಯಲು, ತೋಟಗಾರಿಕೆ ಗಿಡ–ಮರ ಇದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಯಾದ ಮೊಲ, ನರಿ, ಹಂದಿ, ಜಿಂಕೆ, ಬಾರುಬೆಕ್ಕು, ಉಡ ಕಂಡುಬರುತ್ತವೆ. ಗ್ರಾಮದಲ್ಲಿ ರೈತಾಪಿ ಬದುಕಿಗೆ ಆಶ್ರಯವಾಗಿ ಹಳ್ಳಿಕಾರ್ ತಳಿ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಕಾಗೆ, ಗೂಬೆ, ಹದ್ದು, ಕೊಕ್ಕರೆ, ಗಿಳಿ, ಗೊರವಂಕ, ಬೆಳವ ಕಂಡುಬರುತ್ತದೆ.

ಮಳೆಪ್ರಮಾಣ ಕಡಿಮೆಯಿದ್ದು ವಾರ್ಷಿಕ ಸರಾಸರಿ ೪೮೧.೦೪ ಮಿಮೀ ಮಳೆ ಬೀಳುತ್ತದೆ. ಉಷ್ಣಾಂಶ ೩೬ ಡಿಗ್ರಿ, ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ರೈತಾಪಿ ಬದುಕಿಗೆ ಆಶ್ರಯವಾಗಿ ೧೫೦ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಉಳಿದಂತೆ ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರನ್ನು ೮ ಚಿಕ್ಕ ಟ್ಯಾಂಕ್‌ಗಳ ಮೂಲಕ ಪೂರೈಸಲಾಗುತ್ತಿದೆ. ೩ ಕೈಪಂಪುಗಳಿವೆ.

ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಗಂಗಟಿಕಾರ ಒಕ್ಕಲಿಗ, ಬೋವಿ, ತಿಗಳ, ಬಲಜಿಗ, ದೇವಾಂಗ, ವೀರಶೈವ, ಮಡಿವಾಳ ಜನಾಂಗಗಳು ಕಿರುಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಮತ್ತು ೬ ಗುಡಿಸಲು ಸೇರಿದಂತೆ ಒಟ್ಟು ೭೦೪ ಮನೆಗಳಿವೆ. ೧೪೯೩ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ೧೩೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೩೨ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ವಿಶೇಷವಾಗಿ ಬಾಡೂಟ, ಹೋಳಿಗೆ, ಪಾಯಸದ ಭೋಜನವಿರುತ್ತದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿ ಆಧುನಿಕ ವಾಹನವಾದ ಟ್ರ್ಯಾಕ್ಟರ್, ಮಿನಿ ಟೆಂಪೋ, ಆಟೋ ಬಳಕೆಯಿದೆ. ದ್ವಿಚಕ್ರ ವಾಹನಗಳನ್ನು ಹೆಚ್ಚು ಬಳಸುತ್ತಾರೆ. ಶೇಂಗಾ ಮುಖ್ಯಬೆಳೆ. ರಾಗಿ, ಭತ್ತ, ತೊಗರಿ, ಹುರುಳಿ, ಜೋಳ, ಮೆಣಸಿನ ಕಾಯಿ, ಈರುಳ್ಳಿ ಆಹಾರ ಬೆಳೆಗಳು. ವಿರಳವಾಗಿ ತೆಂಗು, ಅಡಿಕೆ ತೋಟಗಳಿವೆ.

ಒಂದು ಹಾಲಿನ ಡೈರಿ ಇದ್ದು ಸರಾಸರಿ ೨೫೦ ಲೀ. ಹಾಲು ಸಂಗ್ರಹವಾಗುತ್ತದೆ. ಶೇಂಗಾ, ಹುಣಸೆಹಣ್ಣು, ಕುರಿ, ಮೇಕೆ ವ್ಯಾಪಾರ ಗ್ರಾಮದ ವಾಣಿಜ್ಯೋದ್ಯಮಕ್ಕೆ ಸಹಕಾರಿಯಾಗಿದೆ. ಸಿಟಿಓ, ಶಿಕ್ಷಣ, ಸಾರಿಗೆ, ರೈಲ್ವೇ, ವೈದ್ಯರು, ಕೋರ್ಟ್, ಸಹಕಾರಿ, ತೋಟಗಾರಿಕೆ ಇಲಾಖೆಗೆ ಸೇರಿದ ೧೬ ಜನ ಸರ್ಕಾರಿ ನೌಕರರಿದ್ದಾರೆ. ನಿವೃತ್ತ ಬೆಸ್ಕಾಂ ಇಂಜಿನಿಯರ್ ಬೊಮ್ಮಲಿಂಗಯ್ಯ ಸೇರಿದಂತೆ ಇಬ್ಬರು ನಿವೃತ್ತ ಹಿರಿಯ ಅಧಿಕಾರಿಗಳಿದ್ದಾರೆ. ಹೂ ಕಟ್ಟುವುದು, ಬೀಡಿ ಕಟ್ಟುವುದು, ಊಟದ ಎಲೆ ತಯಾರಿಕೆ ಮೊದಲಾದ ಗೃಹ ಕೈಗಾರಿಕೆಗಳು ಮಹಿಳೆಯರ ಸಬಲೀಕರಣಕ್ಕೆ ಪ್ರೇರಕವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಯಲಿಯೂರು ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕ್ಷೇತ್ರ ಮತ್ತು ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಗೊಂಡಿದೆ. ಗ್ರಾಮದಲ್ಲಿ ೪ ಜನ ಪಂಚಾಯ್ತಿ ಸದಸ್ಯರಿದ್ದು ರಾಮಚಂದ್ರಪ್ಪ ಎಂಬ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರಿದ್ದಾರೆ. ಸಿರಾ–ಮಧುಗಿರಿ, ಬ್ರಹ್ಮಸಂದ್ರ ಗೇಟ್, ಚಿಕ್ಕನಹಳ್ಳಿಗೆ ಕಚ್ಚಾರಸ್ತೆಯ ಸಂಪರ್ಕವಿದೆ. ಒಂದು ವ್ಯವಸಾಯ ಸಹಕಾರ ಸಂಘ, ಕಿರು ಆರೋಗ್ಯ ಕೇಂದ್ರ, ೫ ಸ್ತ್ರೀಶಕ್ತಿ ಕೇಂದ್ರ, ೩ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯಕ ಸಂಘಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಶಾಲೆಯಲ್ಲಿ ೧೧೧ ಮಕ್ಕಳಿದ್ದು ೪ ಜನ ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಹಾಗೂ ಸಮವಸ್ತ್ರ, ಪಠ್ಯಪುಸ್ತಕ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೫೯.೨% ರಷ್ಟಿದ್ದು ಮಹಿಳೆಯರು ೪೬%, ಪುರುಷರು ೬೯.೫% ರಷ್ಟಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನ ಫಲಾನುಭವಿಗಳಿದ್ದಾರೆ. ೬ ಗೂಡಂಗಡಿ, ೨ ಕಿರು ಹೋಟೆಲ್‌ಗಳಿದ್ದು ಗ್ರಾಮದಲ್ಲಿ ಅರಳಿಕಟ್ಟೆ, ನಾಗರ ಕಲ್ಲುಗಳು ಗ್ರಾಮದ ಹೊರವಲಯ ಸಿರಾ–ಪದ್ಮಾಪುರ ರಸ್ತೆ ಬದಿಯಲ್ಲಿ ಒಂದು ಮಾಸ್ತಿಕಲ್ಲು, ಕೆರೆಯ ಹಿಂದೆ ಒಂದು ಮಾಸ್ತಿಕಲ್ಲು ಹಾಗೂ ಚಿಕ್ಕನಹಳ್ಳಿ–ಮಾಳ ರಸ್ತೆಯ ಬಸವಣ್ಣ ದೇವರ ಗುಡಿಯ ಪಕ್ಕ ಒಂದು ವೀರಗಲ್ಲು ಇದ್ದು ಇವು ಸ್ಥಳೀಯ ಒರಟು ಕಲ್ಲಿನಿಂದ ರಚನೆಯಾಗಿದೆ. ಮುರಿದುಬಿದ್ದ ಕೋಟೆಯ ಅವಸೇಷ ಅಗಸೆ ಬಾಗಿಲು, ಊರಬಾಗಿಲಿನ ಅವಶೇಷಗಳಿವೆ. ಗ್ರಾಮದಲ್ಲಿ ನಾಯಕ ಜನಾಂಗದ ಮಲ್ಲಿಗೆ ಕುಲದವರ ವೀರಗಾಟರಾಯನ ಬೃಹತ್ ದೇವಾಲಯವಿದೆ. ಆಂಜಿನಯ್ಯ, ವೀರಭದ್ರ, ಮುಜರಾಯಿ ದೇವಾಲಯಗಳಾಗಿದ್ದು ಚೌಡಮ್ಮನ ಜಾತ್ರೆ, ದೇವಾಲಯವಿದ್ದು ಶ್ರಾವಣ ಮಾಸದಲ್ಲಿ ಬೃಹತ್ ಜಾತ್ರೆ ಸೇರುತ್ತದೆ. ದೇವಾಂಗ ಜನಾಂಗದ ರಾಜ್ಯದ ನಾನಾ ಕಡೆಗಳಿಂದ ಒಕ್ಕಲುಗಳು ಬಂದು ಇಲ್ಲಿ ಸೇವೆ ಸಲ್ಲಿಸುವುದು ಹರಕೆ ಸಂಪ್ರದಾಯವಿದೆ. ವೀರಭದ್ರ ದೇವರ ಪ್ರಾಚೀನ ಗುಡಿಯಿದ್ದು ತುಮಕೂರು, ಸಿರಾ ಗೇಟ್, ಚಿಕ್ಕವೀರಯ್ಯನ ಪಾಳ್ಯದವರು ಸೇವೆ, ದೇವಸ್ಥಾನದ ಹರಕೆ ಬಾಗಿಲು, ದೇವರ ಅಲಂಕಾರಿಕ ವಸ್ತುಗಳಿವೆ. ನರಸಿಂಹಸ್ವಾಮಿ, ಚಿಕ್ಕಮ್ಮ, ದೊಡ್ಡಮ್ಮ ದೇವಾಲಯಗಳಿವೆ. ಕಾಡುಗೊಲ್ಲರ ಪ್ರತ್ಯೇಕವಾಗಿ ನರಸಿಂಹಸ್ವಾಮಿ ಚಿತ್ರದೇವರ ಪೌಳಿಗಳಿವೆ. ಕೆರೆಮುಂದಲ ಬಸವಣ್ಣ, ರಾಮಪುರದಮ್ಮ, ಕಲ್ಲುಕುಂಟೆ ಬಸವಣ್ಣ, ಕರಿಗಲ್ಲು, ಮಸೀದಿಗಳಿವೆ. ೩ ಹಳೆಯ ಬಾವಿಗಳಿವೆ.

ಗ್ರಾಮದ ಊರಹಬ್ಬ ಮಾರಮ್ಮನ ಉತ್ಸವ ಇತ್ತೀಚೆಗೆ ಬೃಹತ್ ಪ್ರಮಾಣದಲ್ಲಿ ಆಚರಿಸುತ್ತಾರೆ. ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಶಿವರಾತ್ರಿ, ದೀಪಾವಳಿ, ಯುಗಾದಿ, ಮಹಾನವಮಿ, ಗೌರಿ–ಗಣೇಶ, ವರಮಹಾಲಕ್ಷ್ಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಗೂಳದ ನಿಂಗ ಎಂಬ ವ್ಯಕ್ತಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು ಈಚಲುವನ ನಾಶ ಚಳುವಳಿಯಲ್ಲಿ ಜೈಲುವಾಸ ಅನುಭವಿಸಿದವರು. ಈ ಗ್ರಾಮದ ಗುಳ್ಳಪ್ಪ, ಬೊಮ್ಮೇಗೌಡರು, ದೊಡ್ಡಮಾಥಯ್ಯನವರ ಮಾಥಯ್ಯ ಇತರೆ ಸ್ವಾತಂತ್ರ್ಯ ಹೋರಾಟಗಾರರಾಗಿದ್ದಾರೆ.

ಭಜನೆ ನಿಂಗಣ್ಣ ಎಂಬ ೭೦ ವರ್ಷ ವಯಸ್ಸಿನ ಹಿರಿಯ ಜನಪದ ಕಲಾವಿದರ ನೇತೃತ್ವದಲ್ಲಿ ಭಜನೆ ಕಲಾತಂಡವಿದ್ದು ಈ ಗ್ರಾಮ ಪರಿಸರ ಸಣ್ಣಮ್ಮ, ನರಸಿಂಹಯ್ಯ, ರಾಜಣ್ಣ, ವೀರಪ್ಪ ಭಜನೆ ಕಲಾವಿದರಿದ್ದಾರೆ. ಮೂಡಲಪಾಯ ಯಕ್ಷಗಾನಕ್ಕೆ ಈ ಗ್ರಾಮ ಹೆಸರುವಾಸಿಯಾಗಿದ್ದು ಲವ-ಕುಶ, ದಕ್ಷಯಾಗ, ಇಂದ್ರಜಿತ್ ಕಾಳಗದ ಪ್ರಯೋಗ ಪ್ರತಿವರ್ಷ ನಡೆಯುತ್ತಿದ್ದು ಕೆ.ಬೊಮ್ಮಲಿಂಗಯ್ಯ ಮೊದಲಾದ ಯಕ್ಷಗಾನ ಭಾಗವತರಿದ್ದಾರೆ. ಕುಮಾರಸ್ವಾಮಿ ಲೇಖಕರಾಗಿದ್ದು ಬಡಭಕ್ತಿ ಕೇಂದ್ರ ಪ್ರಕಾಶನದಡಿಯಲ್ಲಿ ೨ ಪುಸ್ತಕ ಪ್ರಕಟಿಸಿದ್ದಾರೆ.

## ದ್ವಾರಾಳು

ದ್ವಾರಾಳು ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೦ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೩೯೧.೬೭ ಹೆಕ್ಟೇರ್ ಆಗಿದೆ. ಇದಕ್ಕೆ ಉಪಗ್ರಾಮವಾಗಿ ಗೊಲ್ಲರಹಟ್ಟಿ ಯರಗುಂಟೇಶ್ವರ ನಗರ ಸೇರ್ಪಡೆಗೊಂಡಿವೆ. ಬಯಲು, ಬಿಸಿಲಿನ ಪ್ರದೇಶವಾದ ಇದು ಸಿರಾ-ಚಿತ್ರದುರ್ಗ ರ್‍ಹಾಷ್ಟ್ರೀಯ ಹೆದ್ದಾರಿಯಲ್ಲಿದೆ. ಹಿಂದೆ ಊರು ತುಂಬಿಕೊಂಡಂತಿದ್ದು ಈಗ ಚದುರಿ ಆಕಾರವನ್ನೇ ಕಳೆದುಕೊಂಡಿದೆ ಎಂದು ವಕೀಲ ಡಿ.ಆರ್.ಕಾಮರಾಜು ಅಭಿಪ್ರಾಯಪಡುತ್ತಾರೆ. ದ್ವಾರಾಳು ಎಂದರೆ ದ್ವಾರಕಾಪುರ ಎಂಬ ಪೌರಾಣಿಕ ಹಿನ್ನೆಲೆಯಿದೆ. ದ್ವಾರಕಾಪುರ ಭೂತಗಳ ಶಾಪದಿಂದ ನಾಶವಾಗಿ ದ್ವಾರಾಳು ಆಗಿದೆ ಎಂದು ಗ್ರಾಮದ ಮುಖಂಡ ಕಂಬಣ್ಣ ಅಭಿಪ್ರಾಯಪಡುತ್ತಾರೆ. ಕಾಮರಾಜು ಎಂಬುವವನು ರಾಜ ಮನೆತನಕ್ಕೆ ಬಲವಾದ ಕಾವಲುಗಾರನಿದ್ದ ಕಾರಣ ದ್ವಾರದ+ಆಳು=ದ್ವಾರಾಳು ಆಗಿದೆ ಎಂಬ ವ್ಯಾಖ್ಯಾನ ನೀಡುತ್ತಾರೆ. ದ್ವಾರಾಳು ಮುರಿದುಬಿದ್ದ ಕೋಟೆ, ಕಲ್ಲು ಕೂಚು, ದ್ವಾರಬಾಗಿಲು, ಗೋಪುರ, ನಿಲುಗಲ್ಲು ಗಮನಿಸಿದರೆ ಇದೊಂದು ಪ್ರಾಚೀನ ಗ್ರಾಮವೇ ಆಗಿರಬೇಕೆಂಬ ಅಭಿಪ್ರಾಯ ಸಹಜವಾಗಿಯೇ ಮೂಡುತ್ತದೆ.

ಬಯಲು ಪ್ರದೇಶ, ಹಂಡೇನಹಳ್ಳಿ ಕೆರೆ, ಚಿಕ್ಕಸಂದ್ರದ ಕೆರೆಯ ಹಿಂದೆ ಈ ಗ್ರಾಮ ಇರುವುದರಿಂದ ಈ ಕೆರೆಯ ನೀರು ದ್ವಾರಾಳು ಗ್ರಾಮಕ್ಕೆ ಸಲೀಸಾಗಿ ತಲುಪಿ ಗದ್ದೆ ಮಾಡಲು ಪ್ರಶಸ್ತವಾಗಿದೆ. ಕಂದುಮಿಶ್ರಿತ ಎರೆಭೂಮಿಯಾಗಿದೆ. ಈ ಪ್ರದೇಶದಲ್ಲಿ ಕಾಡುಪ್ರಾಣಿಯಾದ ನರಿ, ಮೊಲ, ಜಿಂಕೆ, ಉಡ, ಬೆಕ್ಕು ಕಂಡುಬಂದರೆ ಗ್ರಾಮದಲ್ಲಿ ಸಾಕುಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ನಾಯಿಗಳಿವೆ. ಕಾಡುಪಕ್ಷಿಗಳಾಗಿ ಕಾಗೆ, ಕೊಕ್ಕರೆ, ಕೋಗಿಲೆ, ಗೊರವಂಕ, ಬೆಳವ, ಗೂಬೆ, ಹದ್ದು, ಗರುಡ ಪಕ್ಷಿಗಳಿವೆ.

ವಾರ್ಷಿಕ ಸರಾಸರಿ ಮಳೆ ೩೯೪.೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ, ಚಳಿಯ ಪ್ರಮಾಣ ೧೨ ಡಿಗ್ರಿ ಇರುತ್ತದೆ. ಮಳೆಯ ನೀರು ಕೃಷಿಗೆ ಸಾಕಾಗುವುದಿಲ್ಲ. ಹಾಗಾಗಿ ಕೊಳವೆ ಬಾವಿ, ಕಪ್ಪಲೆ ಬಾವಿಗಳು ಇಲ್ಲಿವೆ. ಕಪಿಲೆ ಬಾವಿ ಒಣಗಿ ಹೋಗಿದ್ದು ಈ ಪರಿಸರದಲ್ಲಿ ೭೦ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯ್ತಿ ನೀರು ಯೋಜನೆಯಡಿಯಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ಆರು ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಆದಿದ್ರಾವಿಡ, ಮುಸ್ಲಿಂ, ಉಪ್ಪಾರ, ನಾಯಕರು, ಕಮ್ಮಾರ, ಕ್ಷೌರಿಕರು, ಮಡಿವಾಳರು ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೨೯೭ ಮನೆಗಳಿದ್ದು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿವೆ. ಇವುಗಳಲ್ಲಿ ಜನತಾ, ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆಯ ೬೩ ಫಲಾನುಭವಿಗಳು ಇದ್ದಾರೆ. ೧೩೦ ಮನೆಯಲ್ಲಿ ಶೌಚಾಲಯ ಬಳಸುತ್ತಿದ್ದಾರೆ. ಗ್ರಾಮದ ಜನಸಂಖ್ಯೆ ೧೨೦೧ ಆಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಭೋಜನದ ವ್ಯವಸ್ಥೆ ಇರುತ್ತದೆ. ಆಧುನಿಕ ವಾಹನದ ಜೊತೆಗೆ ವಿರಳವಾಗಿ ಎತ್ತಿನ ಗಾಡಿಯಿದೆ. ಟ್ರ್ಯಾಕ್ಟರ್, ಟೆಂಪೋ, ಆಟೋ, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯಬೆಳೆ. ಭತ್ತ, ರಾಗಿ, ಅಲಸಂದೆ, ತೊಗರಿ ಆಹಾರ ಧಾನ್ಯಗಳು. ತೋಟಗಾರಿಕೆ ಇದ್ದು ತೆಂಗು, ಅಡಿಕೆ, ಸಪೋಟ, ಮಾವು ಇದೆ. ಸೂರ್ಯಕಾಂತಿ, ಮುಸುಕಿನ ಜೋಳ, ಹತ್ತಿ, ರೇಷ್ಮೆ ಬೆಳೆಗಳಿವೆ. ಹಣ್ಣು, ತರಕಾರಿ ಬೆಳೆಯೂ ಇದೆ. ಶೇಂಗಾ, ಅಡಿಕೆ, ತೆಂಗು, ಹುಣಸೆಹಣ್ಣು, ಹೊಂಗೆಬೀಜ ವ್ಯಾಪಾರಿ ಬೆಳೆಯಾಗಿವೆ. ೪ ಜನ ವೈದ್ಯರು, ಪ್ರಾಧ್ಯಾಪಕರು, ಗ್ರಂಥಾಲಯ, ಶಿಕ್ಷಕರು, ಪೊಲೀಸ್, ಆರ್ಟಿಓ ಇಲಾಖೆಯಲ್ಲಿ ಸೇರಿದಂತೆ ೧೯ ಜನ ಸರ್ಕಾರಿ ನೌಕರರಿದ್ದಾರೆ. ಶಿವಕುಮಾರ್, ಸಿದ್ದೇಶ್, ಸವಿತ, ನಾಗರತ್ನ ಈ ಗ್ರಾಮದ ವಕೀಲರು. ಗ್ರಾಮದಲ್ಲಿ ಬೀಡಿ ಕಟ್ಟುವುದು, ಹೂ ಕಟ್ಟುವುದು, ಟೈಲರಿಂಗ್, ಮಹಿಳಾ ಗೃಹ ಉಪಕಸುಬಾಗಿದೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಲಕ್ಷ್ಮೀಸಾಗರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ.

ಈ ಗ್ರಾಮದ ಲಕ್ಷ್ಮಮ್ಮ ಲಕ್ಷ್ಮೀಸಾಗರ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷರಾಗಿದ್ದಾರೆ. ೩ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಒಂದು ಅಂಗನವಾಡಿ ಕೇಂದ್ರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದೆ. ಶಾಲೆಯಲ್ಲಿ ೭೨ ಮಕ್ಕಳಿದ್ದು ೪ ಜನ ಶಿಕ್ಷಕರಿದ್ದಾರೆ. ಬಿಸಿಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪಠ್ಯಪುಸ್ತಕ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೬೮.೯ ಪ್ರಮಾಣದಲ್ಲಿದೆ. ಉಪ ಆರೋಗ್ಯ ಕೇಂದ್ರ, ಒಂದು ಗ್ರಂಥಾಲಯವಿದ್ದು ಪ್ರಸ್ತುತ ಕಾರ್ಯನಿರ್ವಹಿಸುತ್ತಿಲ್ಲ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಹೋಟೆಲ್, ೧೮ ಅಂಗಡಿಗಳಿವೆ. ಆರು ವೀರಗಲ್ಲುಗಳು ಈ ಗ್ರಾಮದಲ್ಲಿ ಕಂಡುಬರುತ್ತಿದ್ದು ಈ ಎಲ್ಲವೂ ೧೦–೧೧ ನೇ ಶತಮಾನಕ್ಕೆ ಸಂಬಂಧಿಸಿದವುಗಳಾಗಿವೆ. ಇವುಗಳಲ್ಲಿ ತುರುಗೋಳ್, ವೀರಶಾಸನ ಹೋರಾಟದ ವೈವಿಧ್ಯ ಭಂಗಿ ಆಕರ್ಷಕ ಉಡುಗೆ–ತೊಡುಗೆಯ ಎರಡು ಶಾಸನಗಳು ಈ ಗ್ರಾಮದಲ್ಲಿ ಲಭ್ಯವಿದ್ದು ೧೦ನೇ ಶತಮಾನಕ್ಕೆ ಸಂಬಂಧಿಸಿದ ನೊಳಂಬ ದೀಲೀಪರಸನ ಶಾಸನದಲ್ಲಿ ನೊಳಂಬ ರಾಜ ದೀಲೀಪರಸನು ರಾಜ್ಯವಾಳಿದ್ದ ಸಂದರ್ಭದಲ್ಲಿ ಬದಣ್ಣನ ಮಗ ಬೈಯಣ್ಣನ ಹಿರಿಯಣ್ಣನು ತುರು ಸಂರಕ್ಷಣೆಗಾಗಿ ಹೋರಾಡಿ ಮಡಿದ ಬಗೆಗೆ ವಿವರವಿದೆ. ಮತ್ತೊಂದು ಅಪೂರ್ವ ಶಾಸನ ೧೦ನೇ ಶತಮಾನಕ್ಕೆ ಸಂಬಂಧಿಸಿದದು. ದೀವೀಚರನ ಹೆಸರನ್ನು ಉಲ್ಲೇಖಿಸುತ್ತದೆಯಾದರೂ ವಿವರಗಳಿಲ್ಲ. ೭ ಸಾಲಿನ ಅಸ್ಖಲಿತ ಬರಹವಾಗಿದೆ. (ಇತಿಹಾಸ ದರ್ಶನ ಸಂ.೨೨, ಎಂ.ಜಿ. ನಾಗರಾಜು, ಪಿ.ಪಿ. ಕೃಷ್ಣಮೂರ್ತಿ)

ಅರಳಿಕಟ್ಟೆ, ನಾಗರಕಲ್ಲುಗಳಿವೆ. ಮಾರಮ್ಮ, ಉಡಸಲಮ್ಮ, ಯರಗುಂಟೇಶ್ವರ, ದ್ಯಾಮಲಾಂಬ, ಲಕ್ಷ್ಮೀದೇವಿ, ಭೈರವೇಶ್ವರ ದೇವಾಲಯಗಳಿವೆ. ದ್ಯಾಮಲಾಂಬ ನಿತ್ಯ ಆರಾಧನೆಗೆ ಒಳಗಾದರೆ ಉಡಸಲಮ್ಮ ಗ್ರಾಮದೇವತೆ. ವಾರ್ಷಿಕವಾಗಿ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಎರಗುಂಟೇಶ್ವರನ ನೆಲೆ ದೇಗುಲವಾಗಿದೆ.

ಸ್ವಾತಂತ್ರ್ಯ ಹೋರಾಟಗಾರರಾದ ನರಸಿಂಹಯ್ಯನವರ ಮಗ ಹನುಮಂತಪ್ಪ, ದ್ವಾರಾಳು ದಾಸಪ್ಪ, ಕಾಡಪ್ಪ, ಉಗ್ರಪ್ಪ ಪ್ರಮುಖರಾಗಿದ್ದು ಅರಣ್ಯ ನಾಶ ಅಸಹಕಾರ ಚಳುವಳಿಯಲ್ಲಿ ಜೈಲು ಶಿಕ್ಷೆ ಅನುಭವಿಸಿದರು.

ಯುಗಾದಿ, ಶಿವರಾತ್ರಿ, ಮಹಾನವಮಿ, ಗೌರಿ–ಗಣೇಶ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸಿರಾ–ಬೆಂಗಳೂರು, ಪೂನಾ–ಚಿತ್ರದುರ್ಗ ಹಾಗೂ ರ‍್ರಾಷ್ಟ್ರೀಯ ಹೆದ್ದಾರಿ ಹಾದು ಹೋಗಿದ್ದು ಉತ್ತಮ ರಸ್ತೆ ಸಂಪರ್ಕವಿದೆ.

## ದ್ವಾರಾಳು ಗೊಲ್ಲರಹಟ್ಟಿ

ದ್ವಾರಾಳು ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೯ ಕಿ.ಮೀ. ದೂರದಲ್ಲಿದೆ. ಇದೊಂದು ಕಾಡುಗೊಲ್ಲರ ಬುಡಕಟ್ಟು ಗ್ರಾಮವಾಗಿದ್ದು, ೪೦ ಕುಟುಂಬಗಳು ಇಲ್ಲಿ ವಾಸಿಸುತ್ತವೆ. ದ್ವಾರಾಳು ಉಪ ಗ್ರಾಮವಾಗಿದ್ದು, ೩೮ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದೆ.

ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ಈ ಭಾಗದಲ್ಲಿ ನರಿ, ಮೊಲ, ಕಾಡುಹಂದಿ, ಉಡ, ಆಮೆ, ಮುಂಗುಸಿ, ಇಲಿ, ಹೆಗ್ಗಣ ಕಂಡು ಬರುತ್ತವೆ. ಗ್ರಾಮದಲ್ಲಿ ರೈತರು ಕೃಷಿಕರಾಗಿದ್ದು ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಎಮ್ಮೆ , ಎತ್ತುಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೪೬೦ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮–೩೧೨೦ ಸೆಂ.ರಷ್ಟು ಇದ್ದು, ಚಳಿಯು ೧೧–೧೨ಂ ಸೆಂ. ಇರುತ್ತದೆ. ಈ ಪರಿಸರದಲ್ಲಿ ೩೮ ಕೊಳವೆ ಬಾವಿಗಳಿದ್ದು, ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೩ ಸಿಸ್ಟನ್‌ಗಳಿದ್ದು, ೨ ಕೈ ಪಂಪುಗಳಿವೆ.

ಗ್ರಾಮದಲ್ಲಿನ ಮಾತೃ ಭಾಷೆ ಕನ್ನಡ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೪೦ ಮನೆಗಳಿದ್ದು, ಇಲ್ಲಿನ ಆಶ್ರಯ, ಜನತಾ ಹಾಗೂ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಮತ್ತು ಉಚಿತ ಭಾಗ್ಯಜ್ಯೋತಿ ಯೋಜನೆಯ ೮ ಫಲಾನುಭವಿಗಳಿದ್ದಾರೆ. ೬ ಮನೆಯಲ್ಲಿ ಶೌಚಾಲಯದ ಬಳಕೆ ಹೊಂದಿದ್ದಾರೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ರೈತಾಪಿ ಜನರು ಶೇಂಗಾ, ರಾಗಿ ಬೆಳೆಯುತ್ತಾರೆ. ರಾಗಿ, ಭತ್ತ, ತೊಗರಿ, ಅಲಸಂದಿ ಆಹಾರ ಬೆಳೆಗಳು. ಸೂರ್ಯಕಾಂತಿ, ಹತ್ತಿ ಬೆಳೆಗಳಿವೆ. ಹುಣಸೇ ಹಣ್ಣು, ಹಣ್ಣಿನ ಬೀಜಗಳ ವಾಣಿಜ್ಯ ಕಸುಬಾಗಿದೆ. ಅಡಿಕೆ ಸುಲಿಯುವುದು, ಈ ಸಂಬಂಧಿ ವ್ಯಾಪಾರದ ಕಸುಬಾಗಿದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ತಾವರೆಕೆರೆ ಜಿಲ್ಲಾ ಪಂಚಾಯಿತಿ, ಲಕ್ಷ್ಮೀಸಾಗರ ತಾಲ್ಲೂಕು ಗ್ರಾಮ ಪಂಚಾಯ್ತಿ, ಚಿತ್ರದುರ್ಗ ಲೋಕಸಭೆ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯಿತಿ ಸದಸ್ಯರಿದ್ದಾರೆ. ರ್‍ಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ರಸ್ತೆ ಇದೆ. ಅಂಚೆ ಸೌಲಭ್ಯ ಲಕ್ಷ್ಮೀಸಾಗರದಲ್ಲಿದೆ. ಕಾನೂನು, ನ್ಯಾಯ ಮಂಡಳಿ, ಸಿರಾ ನಗರದಲ್ಲಿ ಪಡೆಯಲಾಗುತ್ತದೆ.

ಆರ್ಥಿಕವಾಗಿ ೨ ಸ್ತ್ರೀ ಶಕ್ತಿ ಸಂಘಗಳಿವೆ. ಶೈಕ್ಷಣಕವಾಗಿ ಒಂದು ಪ್ರಾಥಮಿಕ ಪಾಠಶಾಲೆ, ಒಂದು ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪಠ್ಯ ಪುಸ್ತಕ ಸೌಲಭ್ಯಗಳಿವೆ. ಶೈಕ್ಷಣಿಕ ಸಾಕ್ಷರತೆ ಪ್ರಮಾಣ ಶೇ. ೬೮.೯೧ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿಗಳಿವೆ.

ಯರ್ರಪ್ಪ, ಗೌಡನಹಳ್ಳಪ್ಪ ದೇವಾಲಯಗಳಿವೆ. ಮಾರಮ್ಮ ಜಾತ್ರೆಯನ್ನು ಏಪ್ರಿಲ್, ಮಾರ್ಚಿ ತಿಂಗಳಲ್ಲಿ ಆಚರಿಸುತ್ತಾರೆ. ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯಗಳಿವೆ.

ಯುಗಾದಿ, ಶಿವರಾತ್ರಿ, ದೀಪಾವಳಿ, ದಸರಾ, ಗೌರಿಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದೊಡ್ಡನಹಳ್ಳಿ

ದೊಡ್ಡನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೪ ಕಿ.ಮೀ ದೂರದಲ್ಲಿದೆ. ಮಧುಗಿರಿ–ಸಿರಾ ಮುಖ್ಯರಸ್ತೆಯಲ್ಲಿ, ಮಾಗೋಡು ಗೇಟ್‌ನಲ್ಲಿ ಎಡಕ್ಕೆ ತಿರುಗಿ ಮಾಗೋಡು ಮಾರ್ಗವಾಗಿ ಮಾಗೋಡಿನಿಂದ ಮುಂದಕ್ಕೆ ೧ ಕಿಮೀ ದೂರದಲ್ಲಿದೆ. ಇದೊಂದು ಮಾಗೋಡಿನ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೮೭೦.೮೦ ರ ಮುಖ್ಯ ಗ್ರಾಮದಲ್ಲಿ ಹಂಚಿಕೆಯಾಗಿದೆ.

೧೨೦ ಮನೆಗಳಿವೆ. ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಕ್ಷೌರಿಕರ ಒಂದು ಮನೆಯಿದೆ. ಸಣ್ಣ ಸಮುದಾಯವೂ ಆಗಿದೆ. ಕರಿಯಮ್ಮ, ಮಾರಮ್ಮ ಗ್ರಾಮದೈವಗಳು. ಊರಬಾಗಿಲು, ಕೋಟೆಯ ಅವಶೇಷ ಕಂಡುಬರುತ್ತವೆ.

ಕೆಂಪು ಮಿಶ್ರಿತ ಮರಳು ಭೂಮಿ, ಶೇಂಗಾ ಬೆಳೆಗೆ ಒಪ್ಪಿತವಾದ ಭೂಮಿ. ರಾಗಿ, ಅಲಸಂದೆ, ತೊಗರಿ ಬೆಳೆಗಳನ್ನು ಬೆಳೆಯುತ್ತಾರೆ. ದೊಡ್ಡನಹಳ್ಳಿ ಎಂಬ ಗ್ರಾಮ ನಾಮ ವ್ಯಕ್ತಿ ಮೂಲದಿಂದ ಬಂದಿದ್ದು ಗ್ರಾಮದ ಹಿರಿಯ ವ್ಯಕ್ತಿಯ ಹೆಸರು ಹೇಳುವ ಬದಲಿಗೆ ದೊಡ್ಡವನು, ಹಿರಿಯವನು ಎಂಬ ಹೆಸರಲ್ಲಿ ಗ್ರಾಮದ ಹೆಸರನ್ನು ಸೂಚಿಸಲಾಗಿದೆ. ಕುಂಚಿಟಿಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಆದಿ ಕರ್ನಾಟಕ ಮತ್ತು ಕ್ಷೌರಿಕರು ಸಣ್ಣ ಸಮುದಾಯವಾಗಿದೆ. ಗ್ರಾಮದ ಮುಖ್ಯ ಆಹಾರ ರಾಗಿಮುದ್ದೆ, ಅನ್ನವಾಗಿದ್ದು ಉಪಆಹಾರವಾಗಿ ರೊಟ್ಟಿ, ದೋಸೆ ಬಳಸುತ್ತಾರೆ. ಬಾಡೂಟ, ಹೋಳಿಗೆಯನ್ನು ವಿಶೇಷ ಸಂದರ್ಭಗಳಲ್ಲಿ ಬಳಸುತ್ತಾರೆ.

ಈ ಗ್ರಾಮದಲ್ಲಿ ೧೦ ಜನ ಸರ್ಕಾರಿ ನೌಕರರಿದ್ದು ಸಮಾಜಕಲ್ಯಾಣ ಶಿಕ್ಷಣ, ಜಿಲ್ಲಾ ನೋಂದಣಿ ಇಲಾಖೆಯ ನಿರ್ದೇಶಕರಾಗಿ ಹೆಚ್.ಗುಜ್ಜಾರಪ್ಪ ಈ ಗ್ರಾಮದವರು. ಜೊತೆಗೆ ಉಮೇಶ್, ವಿಶ್ವನಾಥ್. ಐ.ಟಿ ಕಂಪನಿಯ ಪ್ರತಿಷ್ಠಿತ ಇಂಜಿನಿಯರ್.

ಸಿರಾ ವಿಧಾನಸಭೆ, ಚಿತ್ರದುರ್ಗ ಲೋಕಸಭೆ, ಮದಲೂರು ಜಿಲ್ಲಾ ಪಂಚಾಯ್ತಿ ಹಾಗೂ ಹೊನ್ನಗೊಂಡನಹಳ್ಳಿ ತಾಲ್ಲೂಕು ಪಂಚಾಯ್ತಿ ಸೇರುವ ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದೆ. ಒಂದು ಕೆರೆಯಿಂದ ಮಳೆಯ ನೀರಿನಿಂದ ಮಾತ್ರ ತುಂಬುತ್ತದೆ. ತುಂಬಿದರೆ ಭತ್ತದ ಬೆಳೆಯನ್ನು ಬೆಳೆಯುತ್ತಾರೆ. ಇಲ್ಲದಿದ್ದರೆ ಸೂರ್ಯಕಾಂತಿ, ಹತ್ತಿ ಬೆಳೆಯನ್ನು ಬೆಳೆಯುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ವೃದ್ಧಾಪ್ಯ ವೇತನ, ಅಂಗವಿಕಲ ವೇತನ ಹಾಗೂ ವಿಧವಾ ವೇತನ ಫಲಾನುಭವಿಗಳಿದ್ದು ಗ್ರಾಮದಲ್ಲಿ ೨ ಗೂಡಂಗಡಿಗಳಿವೆ. ಮಾರಮ್ಮನ ಜಾತ್ರೆಯನ್ನು ವಿಶೇಷವಾಗಿ ಊರಹಬ್ಬದ

ಮಾದರಿಯಲ್ಲಿ ಆಚರಿಸುತ್ತಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕುಂತಮ್ಮ, ಗೌರಮ್ಮನ ಹಬ್ಬವನ್ನು ಹಣಿಮಕ್ಕ ಶ್ರದ್ಧಾಭಕ್ತಿಯಿಂದ ಆಚರಿಸಿ, ಮೊದಲು ಸಿಹಿ ಅಡಿಕೆ ನಂತರ ಮಾಂಸದ ಅಡಿಗೆ ತಯಾರಿಸಿ ಊಟ ಮಾಡುತ್ತಾರೆ. ಆರತಿ, ಬಾನ, ಬ್ಯಾಟೆ ಮಾರಿ ಜಾತ್ರೆಯ ಸಂದರ್ಭದಲ್ಲಿ ವಿಶೇಷವಾಗಿದೆ.

## ದಾವೂದ್‌ಪಾಳ್ಯ

ದಾವೂದ್‌ಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೩ ಕಿಮೀ ದೂರದಲ್ಲಿ ಸಿರಾ–ಲಿಂಗದಹಳ್ಳಿ ಹೊನ್ನಗೊಂಡನಹಳ್ಳಿ ಮಾರ್ಗವಾಗಿ ಹೊನ್ನಗೊಂಡನಹಳ್ಳಿಗೆ ದಕ್ಷಿಣಕ್ಕೆ ೧ ಕಿಮೀ ಮುಖ್ಯ ರಸ್ತೆಯ ಎಡಬದಿಗೆ ಇದೆ. ಇದು ಹೊನ್ನಗೊಂಡನಹಳ್ಳಿಯ ಮಜರೆ ಗ್ರಾಮವಾಗಿದ್ದು ಪಿಂಜಾರ ಜಾತಿಯ ಬಹುತೇಕ ಜನ ಇಲ್ಲಿ ನೆಲೆಸಿದ್ದಾರೆ. ಆರಂಭದಲ್ಲಿ ದಾವೂದ್ ಸಾಬ್ ಎಂಬುವವರು ಪಾತ್ರೆ, ಹಳೆ ಕಬ್ಬಿಣದ ಪರಿಕರಗಳನ್ನು ಮಾರುವ ಕಾರಣದಿಂದ ಹೊನ್ನಗೊಂಡನಹಳ್ಳಿ ಬರುವ ಮಾರ್ಗದಲ್ಲಿ ಗುಡಾರ ಹೂಡಿಕೊಂಡು ವಾಸಿಸುತ್ತಾ ಸುತ್ತಮುತ್ತಲ ಹಳ್ಳಿಗಳಲ್ಲಿ ವ್ಯಾಪಾರ ಮಾಡುತ್ತಿದ್ದರು. ನಂತರ ಆತನನ್ನು ಅನುಸರಿಸಿ ಮನೆಗಳು ರಚನೆಯಾಗತೊಡಗಿ ಈಗ ಊರು ಬೆಳೆದಿದೆ. ಮೂಲಪುರುಷ ದಾವೂದ್ ಸಾಬರ ಹೆಸರನ್ನೇ ಊರಿಗೆ ಇಟ್ಟು ಕರೆಯಲಾಗಿದೆ.

ಇದರ ಭೌಗೋಳಿಕ ವಿಸ್ತೀರ್ಣ ೧೨೮.೬೩ ರಷ್ಟಿದ್ದು ಕೆಂಪು ಮಿಶ್ರಿತ ಮರಳು ಭೂಮಿಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಲಾದ ನರಿ, ಜಿಂಕೆ, ತೋಳ, ಮೊಲ, ಹಂದಿ ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಕುರಿ, ಮೇಕೆ, ಕೋಳಿಗಳನ್ನು ಸಾಕಲಾಗಿದೆ. ಕೃಷಿ ಹಾಗೂ ಬಹುತೇಕ ವ್ಯಾಪಾರ ಇಲ್ಲಿನ ಕಸುಬಾಗಿದ್ದು ಮಳೆ ನೀರಿನ ಆಶ್ರಯ ಪಡೆದಿದ್ದಾರೆ.

ವಾಡಿಕೆ ಮಳೆ ೪೬೦ ಮಿಮೀ ಉಷ್ಣಾಂಶ ೩೭ ಡಿಗ್ರಿ ಇದ್ದರೆ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ನಿಸರ್ಗ ಮಳೆಯ ಜೊತೆಗೆ ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ೪ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ. ಗಂಗಾ ಕಲ್ಯಾಣ ಯೋಜನೆಯಲ್ಲಿ ೮ ಕೊಳವೆ ಬಾವಿಯನ್ನು ತೋಡಿಸಿದ್ದು ಕೃಷಿಗೆ ಬಳಸಲಾಗುತ್ತಿದೆ.

ಇಲ್ಲಿನ ಸಾಮಾಜಿಕ ರಚನೆಯೇ ಪಿಂಜಾರ ಜನಾಂಗ ದೊಡ್ಡ ಸಮುದಾಯವಾಗಿದೆ. ಹೊರಾಂಗಣದಲ್ಲಿ ಕುಂಚಿಟಿಗರು, ನಾಯಕ, ಮಡಿವಾಳರ ಒಂದೊಂದು ಮನೆಗಳಿವೆ. ಒಟ್ಟು ೪೮ ಮನೆಗಳಿದ್ದು ಉರ್ದು, ಕನ್ನಡ ಮಾತನಾಡುತ್ತಾರೆ.

ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿದ್ದು ಇವು ಆಶ್ರಯ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿದ್ದಾರೆ. ೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಮುಖ್ಯ ಆಹಾರ ರಾಗಿಮುದ್ದೆ. ಅಮುಖ್ಯವಾಗಿ ಚಪಾತಿ, ರೊಟ್ಟಿ, ಅನ್ನ ಬಳಸುತ್ತಾರೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಕೃಷಿ ಬೆಳೆ. ರಾಗಿ, ಜೋಳ ಬೆಳೆಯುತ್ತಾರೆ.

ಪಾತ್ರೆ, ಹಳೆ ಕಬ್ಬಿಣ, ಗುಜರಿ ಸಾಮಾನಿನ ದೈನಂದಿನ ವ್ಯಾಪಾರವಾಗಿದೆ. ಶೇಂಗಾ ಒಳ್ಳೆಯ ವ್ಯಾಪಾರವೂ ಇದೆ. ಒಬ್ಬರು ಅಂಗನವಾಡಿ ಶಿಕ್ಷಕಿ, ಸರ್ಕಾರಿ ನೌಕರರಿದ್ದಾರೆ.

ಗ್ರಾಮದಲ್ಲಿ ಮಹನೀಯರು ಬೀಡಿ ಕಟ್ಟುವುದು, ಪಾತ್ರೆಗಳಿಗೆ ಕಲಾಯಿ ಹಾಕುವುದು, ಪಾತ್ರೆ ವ್ಯಾಪಾರ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದ್ದು ಹಸೀನ್‌ಸಾಬ್ ಗ್ರಾಮಪಂಚಾಯ್ತಿ ಮಾಜಿ ಅಧ್ಯಕ್ಷರೂ ಪ್ರಸ್ತುತ ಸದಸ್ಯರಾಗಿದ್ದಾರೆ.

ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಪಾಠಶಾಲೆಯಿದ್ದು ೨೯ ಮಕ್ಕಳು ಇಬ್ಬರು ಶಿಕ್ಷಕರಿದ್ದಾರೆ. ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೪೮.೬% ರಷ್ಟಿದೆ. ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿಗಳಿವೆ. ಒಂದು ಕಿರು ಮಸೀದಿ ಇದ್ದು ಅದು ಪ್ರಾರ್ಥನಾ ಮಂದಿರವಾಗಿದೆ. ಗ್ರಾಮದಲ್ಲಿ ರಂಜಾನ್, ಈದ್‌ಮಿಲಾದ್, ಬಕ್ರೀದ್ ಹಬ್ಬಗಳು ವಿಜೃಂಭಣೆಯಿಂದ ಆಚರಿಸುತ್ತಾರೆ.

## ದೇವರಹಟ್ಟಿ

ದೇವರಹಟ್ಟಿ ಕಾಡುಗೊಲ್ಲರ ಬುಡಕಟ್ಟು ಗ್ರಾಮ. ಅಪ್ಪಟ ನೆಲಮೂಲ ಸಂಸ್ಕೃತಿಗೆ ಹೊಂದಿಕೊಂಡಂತಿರುವ ಇಲ್ಲಿ ಕಾಡುಗೊಲ್ಲರ ೧೧೯ ಮನೆಗಳಿವೆ. ಒಟ್ಟು ೫೮೩ ಜನಸಂಖ್ಯೆ ಹೊಂದಿದ್ದು ಚಂಗಾವರ ಕಂದಾಯ ಗ್ರಾಮಕ್ಕೆ ಸೇರ್ಪಡೆಯಾಗಿದೆ. ಸಿರಾ–ಧರ್ಮಪುರ ರಾಜ್ಯ ಹೆದ್ದಾರಿಯಲ್ಲಿ ಸಿರಾದಿಂದ ಪಶ್ಚಿಮಕ್ಕೆ ೨೬ ಕಿಮೀ ದೂರದಲ್ಲಿದೆ. ಮುಖ್ಯ

ರಸ್ತೆಯ ಎಡಬದಿಗೆ ಅರ್ಧ ಕಿಮೀ ದೂರದ ಗ್ರಾಮ. ಮೂಲತಃ ದೇವರುಗಳ ವಾಸಸ್ಥಳವಾದುದರಿಂದ ದೇವರಹಟ್ಟಿ ಎಂಬ ಹೆಸರು ಪಡೆದಿದೆ. ನಂತರ ದೇವರ ಗುಬ್ಬಗಳ ಸುತ್ತ ಮನೆಗಳು ನಿರ್ಮಾಣವಾಗಿ ಒಂದು ಮಜರೆ ಗ್ರಾಮವಾಗಿ ರೂಪಾಂತರವಾಗಿದೆ. ಗ್ರಾಮದ ನಡುವೆ ಈರಮಾರಣ್ಣ, ಮಡ್ನಿಮಾರಣ್ಣ ದೇವರ ಗುಡಿಗಳು ಆಧುನಿಕ ಮಾದರಿಯಲ್ಲಿ ನಿರ್ಮಾಣವಾಗಿವೆ.

ಸಿರಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಈ ಗ್ರಾಮ ಚಿತ್ರದುರ್ಗ ಲೋಕಸಬಾ ಕ್ಷೇತ್ರ, ಬೇವಿನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ತಾವರೆಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದೆ. ಕಾಡುಗೊಲ್ಲರ ಮಾರನೋರ ಗೊಲ್ಲರೇ ಅಧಿಕವಾಗಿರುವ ಈ ಗ್ರಾಮದಲ್ಲಿ ವಾಡಿಕೆ ಮಳೆ ೪೬೪ ಮಿಮೀ ಆಗಿದ್ದು ಉಷ್ಣಾಂಶ ೩೮–೪೦ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ರಾಗಿಮುದ್ದೆ ಮುಖ್ಯ ಆಹಾರ. ಚಿತ್ರಾನ್ನ, ಉಪ್ಪಿಟ್ಟು, ದೋಸೆ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನಗಾಡಿ ಸಾಂಪ್ರದಾಯಿಕ ವಾಹನವಾದರೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳನ್ನು ಈ ಗ್ರಾಮದಲ್ಲಿ ಹೊಂದಿವೆ. ಶೇಂಗಾ, ರಾಗಿ, ಹತ್ತಿ, ಸೂರ್ಯಕಾಂತಿ ಪ್ರಮುಖ ಬೆಳೆಗಳು. ತರಕಾರಿ, ತೆಂಗು, ಹುಣಸೆಹಣ್ಣು ವ್ಯಾಪಾರಿ ಬೆಳೆಯಾಗಿದೆ. ಹೆಂಗಸರು ಬೀಡಿ ಸುತ್ತುವುದು, ಟೈಲರಿಂಗ್ ಕೆಲಸ ನಿರ್ವಹಿಸುತ್ತಾ ಸಣ್ಣ ಗೃಹಕೈಗಾರಿಕೆಯಲ್ಲಿ ನಿರತರಾಗಿದ್ದಾರೆ. ಒಂದು ಅಂಗನವಾಡಿ ಕೇಂದ್ರವೂ ಸೇರಿದಂತೆ ೨೭ ಮಕ್ಕಳು ಕಲಿಯುತ್ತಿರುವ ಒಂದು ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ನಡೆಯುತ್ತಿದೆ. ೨೦೧೩ ನೇ ಸಾಲಿನಿಂದ ಕನಕ ಪದವಿಪೂರ್ವ ಕಾಲೇಜು ಈ ಗ್ರಾಮದಿಂದ ಅರ್ಧ ಕಿಮೀ ದೂರದಲ್ಲಿ ದೇವರಹಟ್ಟಿ ಗೇಟ್ ಬಳಿ ನಿರ್ಮಾಣವಾಗಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಕುರಿ, ಹಸು, ಎಮ್ಮೆ, ಕೋಳಿ ಪ್ರಮುಖ ಸಾಕುಪ್ರಾಣಿಗಳು. ನರಿ, ಕರಡಿ, ಕಾಡುಹಂದಿ, ಜಿಂಕೆ, ಮೊಲ ಈ ಪರಿಸರದ ಪ್ರಮುಖ ಕಾಡುಪ್ರಾಣಿಗಳು. ಕೌಜಿಗ, ಕೋಗಿಲೆ, ಗೊರವಂಕ, ಗಿಳಿ, ಬೆಳವ ಈ ಬಗೆಯ ಕಾಡುಪಕ್ಷಿಗಳು ಕಂಡುಬರುತ್ತವೆ. ನೀರಿಗೆ ಮಳೆಯನ್ನೇ ಆಶ್ರಯಿಸಿರುವ ಈ ಗ್ರಾಮದಲ್ಲಿ ಶೌಚಾಲಯಗಳಿರುವುದಿಲ್ಲ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಆಶ್ರಯದಿಂದ ಹಿಡಿದು ಜನತಾ ವಸತಿ ಸೌಲಭ್ಯ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ಮನೆಗಳಿವೆ. ಎರಡು ಕೈಪಂಪು, ೨ ಮಿನಿ ಟ್ಯಾಂಕ್, ೨೮ ನಲ್ಲಿ ಸಂಪರ್ಕದ ಮನೆಗಳಿವೆ. ಎರಡು ಕಿರಾಣಿ ಅಂಗಡಿಗಳೂ ಇವೆ. ಕನ್ನಡವೇ ಇಲ್ಲಿನ ಬಳಕೆಯ ಭಾಷೆ. ಗ್ರಾಮದಲ್ಲಿ ಮಂಗಳೂರು ಹೆಂಚು, ಶೀಟಿ ಹಾಗೂ ಕಲ್ಲುಬಂಡೆ ಹಾಸಿನಿಂದ ನಿರ್ಮಿಸಿರುವ ಒಟ್ಟು ೧೧೯ ಮನೆಗಳಿವೆ. ೬೧೨ ಜನಸಂಖ್ಯೆ ಇದೆ.

ಶಿಕ್ಷಣ, ಸಾರಿಗೆ ಇಲಾಖೆಯ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಊರ ಮಧ್ಯಭಾಗದ, ಚೌಕಾಕೃತಿಯ ಕಾಂಪೌಂಡಿನ ಒಳಗೆ ಈರಮಾರಣ್ಣ, ಮಡ್ನಿ ಈರಣ್ಣ ಹಾಗೂ ಗೌರಸಂದ್ರದ ಮಾರಕ್ಕನ ದೇವಸ್ಥಾನಗಳಿವೆ. ದೀಪಾವಳಿ ಈ ಊರಿನ ಪ್ರಮುಖ ಧಾರ್ಮಿಕ ಹಬ್ಬ. ದೀಪ ಏರಿಸುವ, ಜನ್ನಿಗೆ ಹಾಕುವ, ಹಿರಿಯರ ಹಬ್ಬವಾಗಿ ಆಚರಿಸಲಾಗುತ್ತದೆ. ದೀಪಾವಳಿಯಂದು ಜುಂಜಪ್ಪನಿಗೆ ಹಾಲು ಮೀಸಲು ಈ ಗ್ರಾಮದಿಂದ ಹೊರಡುತ್ತದೆ.

ನಂಜಪ್ಪ ಎಂಬ ಹಿರಿಯ ಜನಪದ ಕಲಾವಿದರು ತಮ್ಮ ೭೪ ನೆಯ ವಯಸ್ಸಿನಲ್ಲಿ ತೀರಿಕೊಂಡರು. ಗಣೆಯ ವಾದಕರೂ ಆಗಿದ್ದು ಜುಂಜಪ್ಪನ ಮೇಲೆ ಸಮಗ್ರ ಪದ ಹಾಡುತ್ತಿದ್ದ ಹಿರಿಯ ಕಲಾವಿದರು. ಡಾ॥ ಕಾಳೇಗೌಡರ 'ಕಾಡುಗೊಲ್ಲರಹಟ್ಟಿ ಒಂದು ಸಾಂಸ್ಕೃತಿಕ ಅಧ್ಯಯನ' ಸಂಶೋಧನೆಗೆ ಶ್ರೀ ನಂಜಪ್ಪನವರು ಪ್ರಮುಖ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಆಕಾಶವಾಣಿಯಿಂದಲೂ ಜುಂಜಪ್ಪನ ಮೇಲೆ ಪದಹಾಡಿದ ಹಿರಿಮೆ ಇವರದು. ನಂಜಪ್ಪನ ಗಣೆ, ಅದಕ್ಕೆ ಬೆಳ್ಳಿಯ ಅಣಸು ಈಗಲೂ ಅವರ ಮನೆಯಲ್ಲಿ ಸಂರಕ್ಷಿಸಿ ಇಡಲಾಗಿದೆ. ನಾಟಿ ಔಷಧಿ ನೀಡುವ ಮೂಡ್ಲಯ್ಯ ಕುರಿಗಳಿಗೆ ಔಷಧೋಪಚಾರ ಮಾಡುತ್ತಾರೆ. ಶಿವರಾತ್ರಿ, ಯುಗಾದಿ, ಗೌರಿ–ಗಣೇಶ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಡ್ಯಾಗೇರಹಳ್ಳಿ

ಡ್ಯಾಗೇರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೩೨ ಕಿ.ಮೀ. ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು, ಒಟ್ಟು ೧೧೧೭.೮೨ ಹೆಕ್ಟೇರ್ ಭೂ ಪ್ರದೇಶವನ್ನು ಹೊಂದಿದೆ. ಇದಕ್ಕೆ ಉಪಗ್ರಾಮವಾಗಿ ಯರವರಹಳ್ಳಿ, ಬಾಲಜ್ಯಹಳ್ಳಿ, ಒಡ್ಡರಹಳ್ಳಿ ಹಾಗೂ ಕುಂಟನಹಳ್ಳಿ ಸೇರ್ಪಡೆಗೊಂಡಿದೆ. ಕೆಲಗ್ರಾಮದ ಶಬ್ದ ನಿಷ್ಪತ್ತಿ ಖಚಿತವಾಗಿ ತಿಳಿದು ಬರುವುದಿಲ್ಲ. ಧೆಗೆಯ, ಬೇಗೆಯ, ಬಲಬಿಸಿಲಿನ ಕಾರಣದಿಂದಾಗಿಯೇ ಅದೇ

ಹೆಸರಿನಲ್ಲಿ ಕರೆದಿರುವ ಸಾಧ್ಯತೆಯಿದೆ. ತುಮಕೂರು ಜಿಲ್ಲೆಯಲ್ಲಿ ಬಿಸಿಲಹಳ್ಳಿ ಎಂಬ ಹಳ್ಳಿಯೂ ಈ ಹಿನ್ನೆಲೆಯಲ್ಲಿಯಲ್ಲೇ ಆಗಿರುವ ಸಾಧ್ಯತೆಗಳಿವೆ. ಧೆಗೆಯ ಹಳ್ಳಿ ನಂತರ ಡ್ಯಾಗೇರಹಳ್ಳಿ ಆಗಿರುವ ಸಾಧ್ಯತೆಗಳಿವೆ. ಏಕೆಂದರೆ ಡ್ಯಾಗೇರು ಎಂಬ ಒಂದು ನಿರ್ದಿಷ್ಟ ಜಾತಿ, ಕಸುಬಿನ ಜನಾಂಗ ಸಿರಾ ಸೀಮೆಯಲ್ಲಿ ಕಂಡು ಬರುವುದಿಲ್ಲ.

ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿರುವ ಈ ಹಳ್ಳಿ ಅಪ್ಪಟ ಬಯಲು ಸೀಮೆಯ ಪೊದೆ, ಕುರುಚಲು ಗಿಡ ವ್ಯಾಪಿಸಿವೆ. ಹಾಗಾಗಿ ಈ ಪರಿಸರದಲ್ಲಿ ಕರಡಿ, ನರಿ, ಉಡ, ಮೊಲ, ಮೊದಲಾದ ಕಾಡು ಪ್ರಾಣಿಗಳು ಕಂಡು ಬರುತ್ತವೆ.

ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಈ ಪರಿಸರದಲ್ಲಿ ಕಾಗೆ, ಗೂಬೆ, ಕೋತಿ, ನವಿಲು, ಸಾಂಬಾರ ಕಾಗೆ ಮೊದಲಾದ ಪಕ್ಷಿ ಸಂಕುಲವಿದೆ. ಕೋಳಿಯನ್ನು ಸಾಕು ಪಕ್ಷಿಯಾಗಿ ಸಾಕಲಾಗುತ್ತಿದೆ.

ಬೇಸಿಗೆಯ ಬಿಸಿಲಿಗೆ ಇಲ್ಲಿ ಬೀಳುವ ವಾರ್ಷಿಕ ಸರಾಸರಿ ೪೬೧ ಮಿ.ಮೀ. ಮಳೆ ಏನೇನೂ ಸಾಲದು. ಬಿಸಿಲು ೩೭ ಸೆಂ. ಇರುತ್ತದೆ. ಚಳಿಯು ೧೨ ಸೆಂ. ಸಾಮಾನ್ಯ ಕುಡಿಯುವ ನೀರಿಗೆ ೨ ಕೈ ಪಂಪು, ೪ ನಲ್ಲಿ, ೨ ಮಿನಿ ಟ್ಯಾಂಕ್‌ಗಳ ಮೂಲಕ ಪೂರೈಕೆಯಾಗುತ್ತಿದೆ.

ಹಳ್ಳಿಕಾರ ಜನಾಂಗ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ನಾಯಕ, ಮಡಿವಾಳ ಸಮುದಾಯವಾಗಿದೆ. ಹೆಂಚಿನ, ಕಾಂಕ್ರೀಟ್, ಮಣ್ಣಿನ, ಶೀಟಿನ ಒಟ್ಟು ೧೩೨ ಮನೆಗಳಿದ್ದು, ೪೮ ಮನೆಗಳು ಶೌಚಾಲಯ ಪಡೆದಿದೆ. ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರವಾಹನಗಳು ಇವೆ.

ರಾಗಿ, ಶೇಂಗಾ, ರೇಷ್ಮೆ, ಹತ್ತಿ, ಸೂರ್ಯಕಾಂತಿ ಮುಖ್ಯಬೆಳೆಗಳು. ರಾಗಿ, ಜೋಳ, ಹತ್ತಿ, ಅಲಸಂದಿ, ತೊಗರಿ ಆಹಾರ ಬೆಳೆಗಳು. ಇಬ್ಬರು ಸರ್ಕಾರಿ ನೌಕರರು ಕೆಲ ಗ್ರಾಮದಲ್ಲಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯಿತಿ. ಹಾಗೂ ಹುಣಸೇಹಳ್ಳಿ ತಾಲ್ಲೂಕು ಪಂಚಾಯಿತಿ ಕ್ಷೇತ್ರಕ್ಕೆ ಸೇರಿರುವ ಕೆಲ ಗ್ರಾಮಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಕಾರ್ಯ ನಿರ್ವಹಿಸುತ್ತವೆ. ಶೇ. ೪೯.೯ ಸಾಕ್ಷರತಾ ಪ್ರಮಾಣ ಹೊಂದಿರುವ ಕೆಲ ಗ್ರಾಮದಲ್ಲಿ ಪುರುಷರು ೫೯.೪, ಮಹಿಳೆಯರು ೩೮.೫%. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಂಧ್ಯಾ ಸುರಕ್ಷೆ, ವೃದ್ಧಾಪ್ಯ, ಅಂಗವಿಕಲ, ವಿಧವಾ ವೇತನದ ಫಲಾನುಭವಿಗಳಿದ್ದು, ೪ ಕಿರಾಣಿ ಅಂಗಡಿಗಳಿವೆ. ಗ್ರಾಮದ ನಡುವೆ ಒಂದು ಅರಳಿ ವೃಕ್ಷವಿದ್ದು, ಅದಕ್ಕೆ ಹೊಂದಿಕೊಂಡಂತೆ ನಾಗರಕಲ್ಲು, ಹಾಗೂ ಪಕ್ಕದಲ್ಲಿ ೨ ವೀರಗಲ್ಲುಗಳಿವೆ. ಈ ವೀರಗಲ್ಲು ನೊಳಂಬರ ಕಾಲದವುಗಳಾಗಿದ್ದು, ಹೋರಾಟದ ವೀರನ ಚಿತ್ರ, ಕೊನೆಗೆ ಆತನ ವೀರಮರಣವನ್ನೆಪ್ಪಿದ ದೇವಲೋಕದ ಪಯಣದ ಪರಿಕಲ್ಪನೆ ಮಾಡುವ ಕೆತ್ತನೆ ಇದೆ. ಹಸಿರು, ಕಂದು ಮಿಶ್ರಿತ ಕಲ್ಲು, ಲಕ್ಷ್ಮೀದೇವರ ದೇವಾಲಯವಿದೆ.

ಗ್ರಾಮ ಹಬ್ಬವಾಗಿ ವಾರ್ಷಿಕ ಆರತಿ, ಬಾನ, ಬ್ಯಾಟೆ ಇರುತ್ತದೆ. ಉಳಿದಂತೆ ಯುಗಾದಿ, ಮಹಾನವಮಿ, ದೀಪಾವಳಿ ಹಬ್ಬದ ಆಚರಣೆ ಇರುತ್ತದೆ.

ಗ್ರಾಮದ ಮುಖ್ಯ ಆಹಾರ ರಾಗಿಮುದ್ದೆ, ಅಮುಖ್ಯವಾಗಿ ಅನ್ನ, ರೊಟ್ಟಿ ಬಳಕೆಯಲ್ಲಿದೆ. ಮಾಂಸ ಭೋಜನ ವಿಶೇಷ ಆಹಾರ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ ಇದ್ದು, ಇಬ್ಬರು ಶಿಕ್ಷಕರನ್ನು ಹೊಂದಿದೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಲಭ್ಯ ಹೊಂದಿದೆ.

## ದಂಡೀಕೆರೆ

ದಂಡೀಕೆರೆ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು, ಒಟ್ಟು ೪೯೩.೫೯ ಹೆಕ್ಟೇರ್ ಭೌಗೋಳಿಕ ವಿಸ್ತೀಣ ಹೊಂದಿದೆ.

ಮರಳು ಮಿಶ್ರಿತ ಕೆಂಪು, ಬಿಳಿ ಮಣ್ಣನ್ನು ಹೊಂದಿರುವ ಈ ಹಳ್ಳಿ ವ್ಯವಸಾಯಕ್ಕೆ ಉತ್ತಮ ಲಕ್ಷಣ ಹೊಂದಿದೆ. ಕುರುಚಲು ಗಿಡ ವ್ಯಾಪಿಸಿವೆ. ಪೊದೆ ವ್ಯಾಪಕವಾಗಿದ್ದು, ಕಾಡು ಪ್ರಾಣಿಗಳಿಗೆ ಉತ್ತಮ ತಾಣವಾಗಿದೆ. ಪಕ್ಕದಲ್ಲಿಯೇ ಕೆರೆ ಇದ್ದು ಗ್ರಾಮದ ಹೆಸರಿನ ಮೂಲಕ್ಕೆ ಪ್ರೇರಕವಾಗಿದೆ. ಚಿತ್ರದುರ್ಗ–ಸಿರಾ, ಹಿರಿಯೂರು ಮೂರು ಕಡೆಯೂ ತಾಳೆಯಾಕಾರದ ದಂಡು. ಈ ಗ್ರಾಮದಲ್ಲಿ ಇಳಿದು, ರೊಟ್ಟಿ ಬುತ್ತಿ ಉಂಡು, ಮುಂದೆ ಹೋಗುತ್ತಿದ್ದು, ಅದಕ್ಕಾಗಿಯೇ ನಿರ್ಮಿಸಿದ ಕೆರೆ–ದಂಡೀ ಕೆರೆಯಾಗಿದೆ. ಹಾಗಾಗಿ ಈ ಪರಿಸರದಲ್ಲಿ ಮೊಲ, ಜಿಂಕೆ, ಉಡ, ತೋಳ, ನರಿ ಕಂಡು ಬರುತ್ತವೆ. ಪಕ್ಷಿಗಳಾದ ಗಿಳಿ, ಗೊರವಂಕ, ಕೊಕ್ಕರೆ, ಕೋಗಿಲೆ, ಕಾಗೆ, ಸಾಂಬಾರ ಕಾಗೆ ಕಂಡು ಬರುತ್ತವೆ.

ಗ್ರಾಮದಲ್ಲಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿಯನ್ನು ಸಾಕು ಪಕ್ಷಿಯಾಗಿ ಸಾಕಲಾಗುತ್ತಿದೆ.

ಬೇಸಿಗೆಯ ಬಿಸಿಲಿಗೆ ಇಲ್ಲಿ ಬೀಳುವ ವಾರ್ಷಿಕ ಸರಾಸರಿ ೪೬೧ ಮಿ.ಮೀ. ಮಳೆ ಏನೇನೂ ಸಾಲದು. ಬಿಸಿಲು ೩೬ ಸೆಂ. ಇರುತ್ತದೆ. ಚಳಿಯು ೧೨ ಸೆಂ. 'ದಂಡಿಕೆರೆ' ಹೆಸರಿನ ಕೆರೆ ಗ್ರಾಮಕ್ಕೆ ಹೊಂದಿಕೊಂಡಿದ್ದು, ಮಳೆ ಬಿದ್ದರೆ ಮಾತ್ರ ತುಂಬುತ್ತದೆ. ಉಳಿದಂತೆ ಕುಡಿಯುವುದಕ್ಕೆ ಗ್ರಾಮ ಪಂಚಾಯ್ತಿಯಿಂದ ಕೊಳಾಯಿಯ ಮೂಲಕ ನೀರು ಪೂರೈಸಲಾಗುವುದು. ೨ ಕೈ ಪಂಪುಗಳಿವೆ.

ನಾಯಕ (ಬೇಡ) ಜನಾಂಗ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಕಿರು ಸಮುದಾಯವಾಗಿ ಆದಿಕರ್ನಾಟಕ ಜನಾಂಗವಿದೆ. ಹೆಂಚಿನ, ಕಾಂಕ್ರೀಟ್, ಮಣ್ಣಿನ, ಹಾಗೂ ಶೀಟಿನ ಒಟ್ಟು ೮೦ ಮನೆಗಳಿದ್ದು, ಜನತಾ ಆಶ್ರಯ, ಅಂಬೇಡ್ಕರ್ ಯೋಜನೆಗಳ ಫಲಾನುಭವಿಗಳು ಹೆಚ್ಚಿದ್ದಾರೆ. ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳು ಇದ್ದು ೬ ಮನೆಗಳು ಶೌಚಾಲಯ ಪಡೆದಿದೆ. ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ರೊಟ್ಟಿ, ಅನ್ನ ಬಳಸುವವರಿದ್ದಾರೆ ಬಾಡೂಟ, ಹೋಳಿಗೆ ವಿಶೇಷ ಸಾಂದರ್ಭಿಕ ಊಟ. ಸಾಂಪ್ರದಾಯಿಕ ವಾಹನ ಟ್ರ್ಯಾಕ್ಟರ್, ಕಾರು, ಟೆಂಪೋ, ಆಟೋಗಳು ಬಳಕೆಯಲ್ಲಿ ಇವೆ. ೩೮೪ ಜನಸಂಖ್ಯೆ ಇದೆ.

ರಾಗಿ, ಶೇಂಗಾ, ಅಲಸಂದಿ, ತೊಗರಿ ಮುಖ್ಯ ಆಹಾರ ಬೆಳೆಗಳು. ರೇಷ್ಮೆ, ಹತ್ತಿ, ಸೂರ್ಯಕಾಂತಿ ವಾಣಿಜ್ಯ ಬೆಳೆಗಳು. ತೋಟಗಾರಿಕೆಯಾಗಿ ಅಡಿಕೆ, ತೆಂಗು, ಸೇವಂತಿ ಬೆಳೆಯುತ್ತಾರೆ. ಇಬ್ಬರು ಸರ್ಕಾರಿ ನೌಕರರು ಈ ಗ್ರಾಮದಲ್ಲಿದ್ದು, ಬೀಡಿ ಸುತ್ತುವುದು, ಊಟದ ಎಲೆ ಕಟ್ಟುವುದು ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯಿತಿ. ಹಾಗೂ ಹುಣಸೇಹಳ್ಳಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೂ ಚಿತ್ರದುರ್ಗ ಜಿಲ್ಲೆ ಕಸಬಾ ಕ್ಷೇತ್ರದ ವ್ಯಾಪ್ತಿಗೆ ಸೇರಿರುವ ಈ ಹಳ್ಳಿ ಒಟ್ಟು ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರನ್ನು ಹೊಂದಿದೆ. ಈ ಗ್ರಾಮದ ಎಸ್. ಲಿಂಗಯ್ಯನವರು ಸಿರಾ ಕ್ಷೇತ್ರದ ಶಾಸಕರಾಗಿದ್ದರು. ಸಕ್ರಿಯವಾಗಿ ರಾಜಕಾರಣದಲ್ಲಿ ಮುಂದುವರಿದಿದ್ದಾರೆ.

೨ ಸ್ತ್ರೀ ಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಕಾರ್ಯ ನಿರ್ವಹಿಸುತ್ತಿದ್ದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಗಳಿವೆ. ೪ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಂಧ್ಯಾ ಸುರಕ್ಷೆ, ವೃದ್ಧಾಪ್ಯ, ಅಂಗವಿಕಲ, ವಿಧವಾ ವೇತನದ ಫಲಾನುಭವಿಗಳಿದ್ದು, ಭಾಗ್ಯ ಜ್ಯೋತಿ ಯೋಜನೆ ಫಲಾನುಭವಿಗಳು ಇದ್ದಾರೆ. ೨ ಅಂಗಡಿಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಐತಿಹಾಸಿಕವಾಗಿ ಗ್ರಾಮದ ವಿವಿಧ ಕಡೆ ಇದ್ದ ೮ ವೀರಗಲ್ಲುಗಳನ್ನು ಮಾಸ್ತಿಗಲ್ಲುಗಳನ್ನು ಸಂಗ್ರಹಿಸಿ ಗ್ರಾಮದ ನಡುವಿನ ಅರಳಿ ಕಟ್ಟೆಯ ಮೇಲೆ ಒಪ್ಪವಾಗಿ ಜೋಡಿಸಿದ್ದಾರೆ. ಇದರಲ್ಲಿ ಒಂದು ಮಹಾಸತಿ ಕಲ್ಲಾಗಿದೆ. ವೀರರ ಹೋರಾಟ, ಅವರ ವೇಷಭೂಷಣ, ಆಯುಧ, ಕಟ್ಟಿದ ಮುಡಿ ಆಕರ್ಷಕವಾಗಿದೆ. ಗ್ರಾಮದ ಪ್ರಮುಖ ದೈವ ಪಾತಲಿಂಗೇಶ್ವರ ಫೆಬ್ರವರಿ ಮೊದಲ ವಾರದಲ್ಲಿಈ ದೇವತೆಯ ಜಾತ್ರೆ ನಡೆಯುತ್ತದೆ.

ಊರಹಬ್ಬದಲ್ಲಿ ಬಲಿ, ಆರತಿ, ಉತ್ಸವವೂ ಇರುತ್ತದೆ. ಯುಗಾದಿ, ಶಿವರಾತ್ರಿ, ಮಹಾನವಮಿ ಹಬ್ಬ ವಿಶೇಷವಾಗಿರುತ್ತದೆ. ಪೂಜಾರಿ ಸಿದ್ದಲಿಂಗಪ್ಪ, ರಂಗಣ್ಣ, ಕರಿಯಪ್ಪ ಜನಪದ ಭಜನೆ ಕಲಾವಿದರು.

ನಾಯಕ ಜನಾಂಗವನ್ನು ಗೌಡ ಎಂಬ ವಿಶೇಷತೆಯಿಂದ ಕರೆಯುತ್ತಿರುವುದು, ಅದೊಂದು ಪರಂಪರೆಯಾಗಿ ಬಂದಿರುವುದು ಈ ಗ್ರಾಮದ ವಿಶೇಷ.

## ದಾಸರಹಳ್ಳಿ

ದಾಸರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೮ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೩೨೧.೦೮ ಹೆಕ್ಟೇರ್ ಇರುತ್ತದೆ. ಬರಗೂರು ಗ್ರಾಮದಿಂದ ಒಂದು ಕಿ.ಮೀ. ದೂರದಲ್ಲಿ, ಸಿರಾ, ಅಮರಾಪುರ ಮುಖ್ಯ ರಸ್ತೆಯ ಬಲಬದಿಗಿದೆ. ಬರಗೂರು ದಾಸರಹಳ್ಳಿ ಎಂದು ಕರೆಯುತ್ತಾರೆ.

ಮರಳು ಮಿಶ್ರಿತ ಕೆಂಪು, ಸಣ್ಣ ಕಲ್ಲಿನ ಪ್ರದೇಶ. ಇದಕ್ಕೆ ಹೊಂದಿಕೊಂಡಂತೆ ೪೦ ಎಕರೆ ರಕ್ಷಿತಾ ಅರಣ್ಯವಿದ್ದು ಗೋಮಾಳವಾಗಿದೆ. ದಾಸರಹಳ್ಳಿ ಸಂಬಂಧಿ ಕೆರೆ ಹಾಗೂ ಒಂದು ಗೋಕಟ್ಟೆಯೂ ಇದೆ. ಸಿರಾ ತಾಲ್ಲೂಕಿನಲ್ಲಿ ೪ ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ದಾಸರಹಳ್ಳಿಗಳಿವೆ. ಆದುದರಿಂದಲೇ ಅವುಗಳಿಗೆ ಪಕ್ಕದ ಹಳ್ಳಿಗಳೊಂದಿಗೆ ಸೇರಿಸಿ ಕರೆಯುವುದು ವಾಡಿಕೆಯಾಗಿದೆ. ಮೊದಲೂರು, ದಾಸರಹಳ್ಳಿ, ಚಿಕ್ಕದಾಸರಹಳ್ಳಿ, ಕರಿದಾಸರಹಳ್ಳಿ ಹೀಗೆ ಪ್ರಸ್ತುತ ದಾಸರಹಳ್ಳಿ ಎಂದೇ ಸಂಬೋಧಿಸಲಾಗುತ್ತಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ಕಾಡುಹಂದಿ, ಮೊಲ, ನರಿ, ತೋಳ ಕಂಡು ಬರುತ್ತವೆ. ಪಕ್ಷಿಗಳಾದ ಕಾಗೆ, ಗೂಬೆ, ಮೈನ, ಕೋಗಿಲೆ, ಗಿಡುಗ ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕೋಳಿ, ಕುರಿ,

ಮೇಕೆಗಳನ್ನು ಸಾಕಲಾಗುತ್ತಿದೆ. ನೀರಿಗೆ ವಿಶೇಷ ಸೌಲಭ್ಯಗಳಾವುವೂ ಇರುವುದಿಲ್ಲ.

ಬಿಸಿಲು ಸರಾಸರಿ ೪೬೨.೨ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲು ಅಧಿಕ ೩೬೦ ಸೆಂ. ಪ್ರಮಾಣದಲ್ಲಿರುತ್ತದೆ. ಚಳಿ ೯೦ ಸೆಂ. ಇರುತ್ತದೆ. ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿ ವತಿಯಿಂದ ಬೋರ್‌ವೆಲ್‌ಗಳ ಮೂಲಕ ನೀರು ಒದಗಿಸಲಾಗುತಿದೆ. ಕುಂಚಿಟಿಗ ಗ್ರಾಮದ ದೊಡ್ಡ ಸಮುದಾಯ ಉಳಿದಂತೆ ಆದಿ ಕರ್ನಾಟಕ, ಬೋವಿ, ನಾಯಕ, ಆದಿ ದ್ರಾವಿಡ ಜನಾಂಗ ಸಣ್ಣ ಸಮುದಾಯವಾಗಿದೆ. ೯೨ ಮನೆಗಳಿರುವ ಇಲ್ಲಿ ಕಲ್ಲಿನ, ಮಣ್ಣಿನ, ತಗಡು ಹಾಗೂ ಮಂಗಳೂರು ಹೆಂಚಿನ ಮನೆಗಳಿವೆ. ಆಶ್ರಯ, ಅಂಬೇಡ್ಕರ್, ವಾಜಪೇಯಿ ಅವಾಜ್ ಯೋಜನೆಯ ಫಲಾನುಭವಿಗಳು ಇದ್ದು, ಭಾಗ್ಯ ಜ್ಯೋತಿ ಫಲಾನುಭವಿಗಳೂ ಇದ್ದಾರೆ. ಗ್ರಾಮದಲ್ಲಿ ೪ ಮನೆಗಳಲ್ಲಿ ಮಾತ್ರ ಶೌಚಾಲಯ ಬಳಕೆಯಲ್ಲಿದ್ದು, ಉಳಿದ ಕುಟುಂಬಗಳು ಬಯಲು ಆಶ್ರಯ ಪಡೆದಿದ್ದಾರೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಸಾಂದರ್ಭಿಕವಾಗಿ ಬಾಡೂಟ ಏರ್ಪಡುತ್ತದೆ. ಸಾಂಪ್ರದಾಯಿಕ ಎತ್ತಿನ ಬಂಡಿ, ಟ್ರ್ಯಕ್ಟರ್, ಟೆಂಪೋ, ಆಟೋ ಬಳಕೆಯಲ್ಲಿದ್ದು, ರಾಗಿ, ಅಲಸಂದಿ, ತೊಗರಿ ಮುಖ್ಯ ಬೆಳೆಗಳು, ಶೇಂಗಾ, ರೇಷ್ಮೆ, ಹತ್ತಿ ಆರ್ಥಿಕ ಬೆಳೆಗಳು. ನೀರಾವರಿ ಸೌಕರ್ಯದ ಕೆಲವು ಕುಟುಂಬಗಳು ತೆಂಗು, ಅಡಿಕೆ, ದಾಳಿಂಬೆ ಬೆಳೆಯುತ್ತಾರೆ. ಹುಣಸೆಹಣ್ಣಿನ ವೈವಾಟು ಅಧಿಕವಾಗಿದೆ. ಗ್ರಾಮದಲ್ಲಿ ರಾಗಿ ಮಿಲ್, ಇಟ್ಟಿಗೆ ಫ್ಯಾಕ್ಟರಿ, ಕೈಗಾರಿಕೆಗಳಾದರೆ, ಎಲೆ ಕಟ್ಟುವುದು, ಬೀಡಿ ತಯಾರಿಕೆ ಗೃಹ ಕಸುಬಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಬರಗೂರು ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಯ ಒಳಗೆ ಈ ಗ್ರಾಮ ಬರುತ್ತದೆ. ಗ್ರಾಮದಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಅಂಬೇಡ್ಕರ್ ಯುವಕ ಸಂಘ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತವೆ. ಒಂದು ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ಇಬ್ಬರು ಶಿಕ್ಷಕರು, ಅಂಗನವಾಡಿ ಶಿಕ್ಷಕಿ, ಸಹಾಯಕರು ಇದ್ದಾರೆ. ಒಟ್ಟು ೨೦-೧೯ ರ ಸಂಖ್ಯೆಯಲ್ಲಿ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಗ್ರಾಮದ ಸಾಕ್ಷರತೆ ಪ್ರಮಾಣ ಶೇ.೬೫ ಇದ್ದು, ಮಹಿಳೆಯರು ೪೨.೯, ಪುರುಷರು ೭೩.೯ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಇತರೆ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ಎರಡು ಕಿರಾಣಿ ಅಂಗಡಿಗಳಿವೆ.

ಗ್ರಾಮದಲ್ಲಿ ಭೂತಪ್ಪ, ಮಾರಮ್ಮ, ಶನಿಮಹಾತ್ಮ ದೇವಸ್ಥಾನಗಳಿದ್ದು, ಒಂದು ಅರಳಿಕಟ್ಟೆ ಹಾಗೂ ೨ ಕರುಗಲ್ಲುಗಳಿವೆ. ಮಾರಿದೇವತೆಯ ಊರಹಬ್ಬ ಆರತಿ, ಬಾನ, ಬಲಿಗಳ ಸಂಪ್ರದಾಯದೊಂದಿಗೆ ವಾರ್ಷಿಕ ಹಬ್ಬವಾಗಿ ನಡೆಯುತ್ತದೆ. ೩ ಸರ್ಕಾರಿ ನೌಕರರಿದ್ದು, ಈ ಗ್ರಾಮದ ಪರಮೇಶ್ವರ ಗೌಡ ಬರಗೂರಿನಲ್ಲಿ ಜ್ಞಾನಜ್ಯೋತಿ ವಿದ್ಯಾಸಂಸ್ಥೆ ಕಟ್ಟಿ, ಪದವಿ, ತರಗತಿಗಳ ತನಕ ಶೈಕ್ಷಣಿಕ ಸೌಲಭ್ಯ ಒದಗಿಸಿರುವುದು ವಿಶೇಷವಾಗಿದೆ. ಗಿಡ್ಡಮ್ಮ, ಸಣ್ಣಮ್ಮ, ಆಯನಮ್ಮ ಈ ಗ್ರಾಮದ ಸೋಬಾನೆ ಕಲಾವಿದರು.

## ದ್ವಾರನಕುಂಟೆ

ದ್ವಾರನಕುಂಟೆ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೩೩ ಕಿ.ಮೀ. ದೂರದಲ್ಲಿದ್ದು, ಕಂದಾಯ ಗ್ರಾಮವಾಗಿದೆ. ಸಿರಾ-ಧರ್ಮಪುರ ಮುಖ್ಯ ರಸ್ತೆಯಲ್ಲಿರುವ ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೪೦೫.೧೧ ಹೆಕ್ಟೇರ್. ಗ್ರಾಮ ಪಂಚಾಯಿತಿ ಕೇಂದ್ರವೂ ಆಗಿರುವ ಈ ಗ್ರಾಮಕ್ಕೆ ವಾಜರಹಳ್ಳಿ, ನೇಜಯಂತಿ, ಮುಸಕಲೋಟಿ , ಕಾರೇಹಳ್ಳಿ, ಕರೇಕಲ್ಲು ಹಟ್ಟಿ, ಶ್ಯಾಸಮರ, ಹಾಗೂ ಚೌಳಹಟ್ಟಿಗಳು ಸೇರುತ್ತವೆ. ಸಮುದ್ರ ಮಟ್ಟಕ್ಕಿಂತ ೬೦೫ ಮೀಟರ್ ಎತ್ತರಕ್ಕಿದ್ದು, ಕೆಂಪು ಕೆಬ್ಬೆ, ಹಾಗೂ ಮರಳು ಮಿಶ್ರಿತ ಮಣ್ಣನ್ನು ಹೊಂದಿದೆ. ಸಿರಾ ತಾಲ್ಲೂಕು ಹಿರಿಯೂರು ತಾಲ್ಲೂಕು ಗಡಿಯ ಗ್ರಾಮವಾಗಿದ್ದು, ಊರಿನಲ್ಲಿ ಮುರಿದು ಬಿದ್ದ ಕೋಟೆ, ಊರಬಾಗಿಲು ಅವಶೇಷಗಳು ಕಂಡು ಬರುತ್ತವೆ. ಗ್ರಾಮದ ಪ್ರವೇಶ ದ್ವಾರದಲ್ಲಿ ಒಂದು ಕುಂಟೆ (ಗಿರಿಯಣ್ಣನ ಕಟ್ಟೆ) ಇರುವುದರಿಂದ ಈ ಗ್ರಾಮಕ್ಕೆ ದ್ವಾರದಕಟ್ಟೆ- ದ್ವಾರನಕುಂಟೆ ಆಗಿದೆ ಎಂದು ಗ್ರಾಮದ ಹಿರಿಕ ಏಳು ಕೋಟಪ್ಪ ತಿಳಿಸುತ್ತಾರೆ. ಪೂರ್ವಕ್ಕೆ ಉತ್ತಪ್ಪನ ಕಟ್ಟೆ, ಪಶ್ಚಿಮಕ್ಕೆ ಗದ್ದೆ ಬಯಲು, ದ್ವಾರನಕುಂಟೆ ಕೆರೆ ಬಯಲು, ಉತ್ತರಕ್ಕೆ ಉತ್ತರದ ಬಯಲು ಪ್ರದೇಶ ಇದ್ದು, ಕುರುಚಲು ಗಿಡ, ಮರಗಳ ಪೊದೆಯಿದೆ. ದ್ವಾರನಕುಂಟೆ ಪಾಳ್ಯ ಈ ಗ್ರಾಮದ ಮಜರೆ ಗ್ರಾಮವಾಗಿದೆ.

ಹಾಗಾಗಿ ಇಲ್ಲಿ ನರಿ, ಮೊಲ, ಉಡ, ಜಿಂಕೆ, ಹಂದಿ, ಮುಂಗುಸಿ, ಕಾಡು ಬೆಕ್ಕು ಕಂಡು ಬರುತ್ತವೆ. ಪಕ್ಷಿಗಳಾದ ಗಿಳಿ, ಕಾಗೆ, ಕೋಗಿಲೆ, ಹದ್ದು, ಗರುಡ, ಕೌಜಲಗ, ಕೊಕ್ಕರೆ ಕಂಡು ಬರುತ್ತವೆ. ಗ್ರಾಮದಲ್ಲಿ ಕುರಿ, ಮೇಕೆ, ಎತ್ತು, ಎಮ್ಮೆ ಸಾಕುತ್ತಾರೆ.

ಕೋಳಿ ಸಾಕಾಣಿಕೆಯೂ ಇದೆ. ವಾರ್ಷಿಕ ಸರಾಸರಿ ೪೬೪ ಮಿ.ಮೀ.ಮಳೆ ಬೀಳುತ್ತಿದ್ದು, ನೀರಿಗೆ ಅಭಾವವಿದೆ. ಚಳಿಯೂ ಅಧಿಕ ೧೨೦ ಸೆಂ. ಇದ್ದರೆ ಉಷ್ಣಾಂಶ ೩೯೦ ಸೆಂ ಇರುತ್ತದೆ. ಗ್ರಾಮಕ್ಕೆ ದ್ವಾರನಕುಂಟೆ ಕೆರೆಯ ಜೊತೆಗೆ ಗಿರಿಯಜ್ಜನ ಗೋಕಟ್ಟೆ ಇದ್ದರೂ ಮಳೆ ಇಲ್ಲದ ಕಾರಣ ತುಂಬುವುದು ಅಪರೂಪ. ತುಂಬಿದರೂ ಸಣ್ಣ ಪ್ರಮಾಣದಲ್ಲಿ ಭತ್ತ ಬೆಳೆಯುತ್ತಾರೆ. ಹಾಗಾಗಿ ಗ್ರಾಮ ಪಂಚಾಯಿತಿ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ೮ ಸಿಸ್ಟನ್‌ಗಳಿದ್ದು ಒಟ್ಟು ೨೯ ನಲ್ಲಿಗಳಿವೆ. ೩ ಕೈ ಪಂಪುಗಳಿವೆ.

ಕುರುಬರು ಈ ಗ್ರಾಮದ ದೊಡ್ಡ ಸಮುದಾಯ ಆದಿ ಕರ್ನಾಟಕ, ಬೇಡರು, ಗೊಲ್ಲರು, ಕಮ್ಮಾರ, ಹಳ್ಳಿಕಾರ, ಕುಂಚಿಟಿಗ, ಅಕ್ಕಸಾಲಿಗರು ಇಲ್ಲಿ ಸಣ್ಣ ಸಮುದಾಯವಾಗಿದೆ. ೪೩೩ ಮನೆಗಳಿರುವ ಈ ಗ್ರಾಮದ ಪ್ರಕಾರ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಹಾಗೂ ರಸ್ತೆ ಬದಿಯಲ್ಲಿ ೬ ಗುಡಿಸಲುಗಳಿವೆ. ೨೯೩ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ೨೨೧೪ ಜನಸಂಖ್ಯೆ ಇದೆ. ೭೨ ಮನೆಗಳಲ್ಲಿ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ ಗ್ರಾಮದ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಭೋಜನಗಳು. ಎತ್ತಿನಗಾಡಿ, ಟ್ರ್ಯಕ್ಟರ್, ಮಿನಿ ಟೆಂಪೋಗಳು, ಲಾರಿ, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ಅವರೆ, ತೊಗರಿ, ಹುರುಳಿ ಆಹಾರ ಬೆಳೆಗಳು. ಸೂರ್ಯಕಾಂತಿ, ರೇಷ್ಮೆ, ಹತ್ತಿ, ಹುಣಸೆಹಣ್ಣು ಹಾಗೂ ಶೇಂಗಾ ವ್ಯಾಪಾರಿ ಬೆಳೆಗಳು. ಉಪನ್ಯಾಸಕರು, ಶಿಕ್ಷಕರು, ಇಂಜಿನಿಯರ್ ಸೇರಿದಂತೆ ಒಟ್ಟು ೧೩ ಮಂದಿ ಸರ್ಕಾರಿ ನೌಕರರಿದ್ದು, ಡಾ. ರಂಗಯ್ಯ ಮೈಸೂರು ವಿಶ್ವವಿದ್ಯಾಲಯ ಭೂಗರ್ಭ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಇಂಜಿನಿಯರು ಕಂಬಣ್ಣ, ತಿಪ್ಪೇಸ್ವಾಮಿ, ದ್ವಾರನಕುಂಟೆ ಪಾತಣ್ಣ ಇದ್ದಾರೆ. ಸಹಕಾರಿ ಇಲಾಖೆಯ ಡೆಪ್ಯೂಟಿರಿಜಿಸ್ಟ್ರರ್ ಡಿ.ಆರ್. ರೇವಣ್ಣಸಿದ್ದಪ್ಪ, ವಕೀಲ ರಾದ ಶ್ರೀನಿವಾಸ, ಉಪನ್ಯಾಸಕರಾದ ಭಾರತಿ, ಡಿ.ಆರ್. ರೇವಣಸಿದ್ದೇಶ್ವರ ಇದೇ ಗ್ರಾಮದವರು. ಕಂಬಳಿ ನೇಯ್ಗೆ, ಕಂಬಳಿ ವ್ಯಾಪಾರ, ಇಲ್ಲಿನ ಮುಖ್ಯ ವ್ಯಾಪಾರವಾಗಿದ್ದು, ಬಟ್ಟೆ ಅಂಗಡಿಯೂ ಇದೆ. ಮಹಿಳೆಯರು ಎಲೆ ಕಟ್ಟುವುದು, ಬೀಡಿ ಕಟ್ಟುವುದು, ಟೈಲರಿಂಗ್ ಗೃಹ ಕೈಗಾರಿಕೆಯಾಗಿದೆ. ೪ ಜನ ಪ್ರಾಥಮಿಕ ಶಾಲಾ ಶಿಕ್ಷಕರು, ಖಾಸಗಿ ಶಾಲೆಗಳಲ್ಲಿ ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ ಬೂತ್ ನಂ.೧ ಇಲ್ಲಿಂದಲೇ ಆರಂಭ. ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಹಾಗೂ ತಾಲ್ಲೂಕು ಪಂಚಾಯಿತಿ, ದ್ವಾರನಕುಂಟೆ ಗ್ರಾಮ ಪಂಚಾಯಿತಿ ಕೇಂದ್ರವೂ ಆಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಗ್ರಾಮದಲ್ಲಿ ಅಂಚೆ ಕಛೇರಿ, ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ, ವ್ಯವಸಾಯ ಸೇವಾ ಸಹಕಾರ ಸಂಘವಿದೆ.

ಸ್ತ್ರೀ ಶಕ್ತಿ ಸಂಘದ ೮ ಗುಂಪು, ಹಾಗೂ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘದ ೩ ಸಂಘಗಳಿವೆ. ಉಣ್ಣೆ ನೇಕಾರ ಸೊಸೈಟಿಯಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ, ಕಾಳಿದಾಸ ಪ್ರೌಢಶಾಲೆ ಇದ್ದು, ಗ್ರಾಮದ ಸಾಕ್ಷರತಾ ಪ್ರಮಾಣ ೫೯.೫ ಇದೆ. ಪುರುಷರು ೪೬.೨, ಮಹಿಳೆಯರು ೪೬.೮೯ ಆಗಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಉತ್ತಮ ಕೌಂಪೌಂಡು ಸೌಕರ್ಯವಿದೆ. ಉಪ ಆರೋಗ್ಯ ಕೇಂದ್ರ, ಪಶು ಚಿಕಿತ್ಸಾಲಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ನಾಟಿ ವೈದ್ಯ ವೆಂಕೀರಪ್ಪ, ನಾಗರಾಜು ಗ್ರಾಮೀಣ ಮಟ್ಟದಲ್ಲಿ ಪ್ರಸಿದ್ಧರಾಗಿ, ಮನುಷ್ಯ ಸಂಬಂಧಿ ಕಾಯಿಲೆಗೆ ಔಷಧಿ ನೀಡುತ್ತಾರೆ. ಸಂಧ್ಯಾ ಸುರಕ್ಷೆ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ಗ್ರಾಮದಲ್ಲಿ ೪ ಗುಡಿಸಲು ಸ್ವರೂಪದ ಹೋಟೆಲ್‌ಗಳಿವೆ. ೧೬ ಪೆಟ್ಟಿಗೆ ಅಂಗಡಿ, ಒಂದು ಜವಳಿ ಅಂಗಡಿ ಇದೆ. ಕೃಷ್ಣಾ ಮೆಡಿಕಲ್ ಷಾಪ್ ಇದೆ. ಕಾಳಿದಾಸ ಹೈಸ್ಕೂಲ್‌ಗೆ ಹೊಂದಿ ಕೊಂಡಂತೆ ಗ್ರಾಮದ ಹೊರ ವಲಯದಲ್ಲಿ ವಿದ್ಯಾರ್ಥಿ ನಿಲಯವಿದೆ. ಗ್ರಾಮದಲ್ಲಿ ಶ್ರೀ ಮೈಲಾರಲಿಂಗ, ಲಕ್ಷ್ಮೀದೇವರು, ಎತ್ತಪ್ಪ, ರಂಗನಾಥ, ಮಾರಮ್ಮನ ಪೌಳಿ ಇದೆ. ಕನಕ ಯುವಕ ಸಂಘ, ಕನಕ ಜಯಂತಿ ಯಾದವ ಸಂಘ, ಕೃಷ್ಣ ಜಯಂತಿಯನ್ನು ದೊಡ್ಡ ಪ್ರಮಾಣದ ಸಾಮೂಹಿಕ ವಿವಾಹ, ಧಾರ್ಮಿಕ ಚಿಂತನೆಗಳ ಮೂಲಕ ಪ್ರತಿ ವರ್ಷ ಧಾರ್ಮಿಕ ಸಮಾವೇಶ ನಡೆಸುತ್ತಾರೆ. ಸಾಮೂಹಿಕ ವಿವಾಹ ದೊಡ್ಡ ಮಟ್ಟದಲ್ಲಿ ಜರುಗುತ್ತದೆ. ಮಾರಮ್ಮ ಊರಹಬ್ಬವಾಗಿ ದೊಡ್ಡ ಪ್ರಮಾಣದಲ್ಲಿ ಆಚರಿಸುತ್ತಾರೆ. ಹರಕೆಗಳಾಗಿ, ಆರತಿ, ಬಾನ, ಬ್ಯಾಟೆ ಇರುತ್ತದೆ. ಯುಗಾದಿ, ಕಾರಹಬ್ಬ, ಮಹಾನವಮಿ, ದೀವಳಿಗೆ, ಸಂಕ್ರಾಂತಿ, ಶಿವರಾತ್ರಿ ಹಬ್ಬಗಳನ್ನು, ಗೌರಮ್ಮ ಕುಂತಮ್ಮನ ಹಬ್ಬವನ್ನು ಆಚರಿಸುತ್ತಾರೆ.

ದ್ವಾರನಕುಂಟೆ ರಂಗಯ್ಯ ಭೂಗರ್ಭ ವಿಜ್ಞಾನಿಯಾಗಿ ಹಲವು ಪುಸ್ತಕ ರಚಿಸಿದ್ದಾರೆ. ದ್ವಾರನಕುಂಟೆ ಪಾತಣ್ಣ ೧೦ ಕವನ ಸಂಕಲನ ಪ್ರಕಟಿಸಿದ್ದಾರೆ. ಇಂಜಿನಿಯರ್ ಭಾರತಿ ದ್ವಾರನಕುಂಟೆ, ಇಂಗ್ಲೀಷ್– ಕನ್ನಡ ಎರಡೂ ಭಾಷೆಗಳಲ್ಲಿ ಸಮರ್ಥವಾಗಿ ಬರೆಯುವ ಲೇಖಕಿ. ಪಾತಲಿಂಗಪ್ಪ, ಮಹಾಲಿಂಗಪ್ಪ ಪ್ರಮುಖ ಬೇಡಿಕೆ ಕಲಾವಿದರು. ಜಾನಪದ

ಅಕಾಡೆಮಿಯ ಕಾರ್ಯಾಗಾರ, ಕಲೋತ್ಸವ ಗಳಲ್ಲಿ ಭಾಗವಹಿಸಿದ್ದಾರೆ. ಜಯಣ್ಣ ಜನಪದ ಗಾಯಕ, ವಾದ್ಯಕಾರರೂ ಹೌದು. ಜಿಲ್ಲಾ ಮಟ್ಟದ ಕಲಾ ಮೇಳ ಹಾಡುಗಾರಿಕೆಯಲ್ಲಿ ಭಾಗಿಯಾಗಿದ್ದಾರೆ. ಏಳು ಕೋಟಪ್ಪ ನೇತೃತ್ವದ ಜಾನಜಾಗೃತಿ ತಂಡ, ಕಲಾ ರೂಪಕಗಳನ್ನು ಪ್ರಕಟಿಸುತ್ತಾ ಹೆಸರಾಗಿದೆ. ಶಿಕ್ಷಕ ಗುರುಸಿದ್ದಪ್ಪ ಉತ್ತಮ ಕಲಾಕಾರರು, ಸಂಘಟಕ, ರಂಗ ಕಲಾವಿದರೂ ಆಗಿದ್ದಾರೆ. ನಂದಕುಮಾರ್, ಏಳು ಕೋಟಪ್ಪ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು. ಸೀತಣ್ಣ, ಕಂಬಣ್ಣ ಗ್ರಾಮ ಮುಖಂಡ ರಾಗಿದ್ದಾರೆ.

ಉದಯಶಂಕರ್, ರೈಲ್ವೆ ಇಲಾಖೆಯಲ್ಲಿ ಚೀಫ್ ಇಂಜಿನಿಯರ್ ಆಗಿ ಗೌಹಾತಿಯಲ್ಲಿದ್ದಾರೆ. ಪ್ರೊ॥ ರಂಗಯ್ಯ ಅವರ ಇಬ್ಬರು ಮಕ್ಕಳು ಇಂಜಿನಿಯರ್ ಅಮೇರಿಕಾದಲ್ಲಿದ್ದರು. ಸ್ವಾತಂತ್ರ್ಯ ಹೋರಾಟಗಾರರಾದ ಚನ್ನಬಸಪ್ಪ, ಅರಣ್ಯ ನಾಶ ಚಳುವಳಿಯಲ್ಲಿ ಜೈಲುವಾಸ ಅನುಭವಿಸಿದ ವೀರಯೋಧರು.

## ದ್ವಾರನಕುಂಟೆಪಾಳ್ಯ

ದ್ವಾರನಕುಂಟೆ ಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೩೫ ಕಿ.ಮೀ. ದೂರದಲ್ಲಿದೆ. ಸಿರಾ ಧರ್ಮಪುರ ಮುಖ್ಯ ರಸ್ತೆಯ ದ್ವಾರನಕುಂಟೆಯ ಕೆರೆಯ ಹಿಂಭಾಗದಿಂದ ದ್ವಾರನಕುಂಟೆ ಗ್ರಾಮಕ್ಕೆ ಒಂದೂವರೆ ಕಿ.ಮೀ. ದೂರದಲ್ಲಿದೆ.

ಕೆಂಪು ಮಿಶ್ರಿತ ಮರಳು ಮಣ್ಣಿನಿಂದ ಕೂಡಿದ್ದು, ಗ್ರಾಮಕ್ಕೆ ಪೂರ್ವ ದಿಕ್ಕಿನಲ್ಲಿ ದ್ವಾರನಕುಂಟೆ ಕೆರೆಯಿದೆ. ಇದರ ಭೌಗೋಳಿಕ ವಿಸ್ತೀರ್ಣ ೪೦೫.೧೧ ಹೆಕ್ಟೇರ್ ವಿಸ್ತೀರ್ಣದಲ್ಲಿ ಮುಖ್ಯ ಗ್ರಾಮ ದ್ವಾರನ ಕುಂಟೆಯಲ್ಲಿ ಹಂಚಿಕೆಯಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ತೋಳ, ಉಡ, ಕಾಡುಬೆಕ್ಕು, ಚಿರತೆ ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸುಗಳನ್ನು ಸಾಕಿದ್ದಾರೆ. ನಾಯಿ, ಬೆಕ್ಕು, ಇತರ ಕಾಡು ಪ್ರಾಣಿಗಳು ಇವೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಬಾವುಲಿ, ಕಾಗೆಪಿಳ್ಳೆ, ಕಾಗೆ, ಬೆಳವ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿಗಳಿವೆ. ಕೋಳಿಯನ್ನು ಮಾಂಸ ಹಾಗೂ ಮೊಟ್ಟೆಗಾಗಿ ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ಶೇ. ೪೮೦ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮–೪೦ಂ ಸೆಂ.ರಷ್ಟು ಇದ್ದು, ಚಳಿಯು ೧೨–೧೩ಂ ಸೆಂ. ಇರುತ್ತದೆ. ಕುಡಿಯಲು ದ್ವಾರನಕುಂಟೆ ಗ್ರಾಮ ಪಂಚಾಯ್ತಿ ವತಿಯಿಂದ ಕಿರು ನೀರು ಯೋಜನೆ ಅಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಹಳ್ಳಿಕಾರ ಒಕ್ಕಲಿಗರ ದೊಡ್ಡ ಸಮುದಾಯವಾಗಿದ್ದು, ಕುಂಚಿಟಿಗರ ೩ ಮನೆಗಳಿವೆ. ಇನ್ನು ಕೆಲವು ಜನತಾ ಮನೆಗಳಿರುವ ಇಲ್ಲಿ ಕಲ್ಲಿನ, ಹೆಂಚಿನ ಮನೆಗಳಿವೆ. ಉಚಿತ ಭಾಗ್ಯಜ್ಯೋತಿ ಯೋಜನೆ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದೆ. ೧೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಒಂದು ಅಂಗನವಾಡಿ ಕೇಂದ್ರವಿದ್ದು, ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸುತ್ತಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಲಭ್ಯವಿದೆ. ಉಚಿತ ಶಿಕ್ಷಣಕ್ಕೆ ದ್ವಾರನಕುಂಟೆ, ಸಿರಾ, ಧರ್ಮಪುರ ಗ್ರಾಮಗಳಿಗೆ ಹೋಗುತ್ತಾರೆ. ಇಲ್ಲಿನ ಸಾಕ್ಷರತಾ ಪ್ರಮಾಣ ಶೇ. ೬೨.೪ ರಷ್ಟಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಹುಲಿಕುಂಟೆ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೆ ಸೇರಿದ್ದು, ದ್ವಾರನಕುಂಟೆ ಗ್ರಾಮ ಪಂಚಾಯ್ತಿಗೆ ಸೇರಿದ್ದು, ಅಂಚೆ, ಶಾಲೆ, ಇತರೆ ಸೌಲಭ್ಯಗಳನ್ನು ದ್ವಾರನಕುಂಟೆಯಿಂದ ಪಡೆಯುತ್ತಾರೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಉಳಿದಂತೆ ಯುಗಾದಿ, ದಸರಾ, ಗೌರಿಗಣೇಶ, ದೀಪಾವಳಿ, ಕುಂತಮ್ಮ–ಗೌರಮ್ಮನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದೇವಗಿರಿ

ದೇವಗಿರಿ –ವೀರಬೊಮ್ಮನಹಳ್ಳಿಯ ಮಜರೆ ಗ್ರಾಮವಾಗಿದ್ದು, ಗ್ರಾಮಕ್ಕೆ ಹೊಂದಿಕೊಂಡಂತಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿ ಉತ್ತರ ದಿಕ್ಕಿಗಿದೆ. ಸಿರಾ–ಅಮರಾಪುರ ಮುಖ್ಯ ರಸ್ತೆಯ, ವೀರಬೊಮ್ಮನಹಳ್ಳಿ ಗೇಟಿನಿಂದ ೨ ಕಿ.ಮೀ ದೂರದಲ್ಲಿದೆ. ವೀರಬೊಮ್ಮನಹಳ್ಳಿಯ ಕೆಲವು ಕುಟುಂಬಗಳು ಇಲ್ಲಿನ ಭೂ ಪ್ರದೇಶದಲ್ಲಿ ಪ್ರತ್ಯೇಕ ಮನೆಗಳನ್ನು ನಿರ್ಮಿಸಿ ಕೊಂಡು ವಸತಿಯನ್ನಾಗಿ ಮಾಡಿಕೊಂಡು ಅದಕ್ಕೆ 'ದೇವಗಿರಿ' ಎಂಬ ಹೆಸರಿನಿಂದ ಕರೆಯಲಾಗುವುದು.

ಇದರ ಭೌಗೋಳಿಕ ವ್ಯಾಪ್ತಿ ೫೩.೦೮ ಹೆಕ್ಟೇರ್ ಆಗಿದ್ದು, ಕಂದು ಮರಳು ಮಿಶ್ರಿತ ಮಣ್ಣಿನಿಂದ ಕೂಡಿದೆ. ಈ ಪರಿಸರದಲ್ಲಿ ಹಸು, ಎಮ್ಮೆ, ಕೋಳಿ, ಮೇಕೆಗಳನ್ನು ಸಾಕು ಪ್ರಾಣಿಯಾಗಿ, ನರಿ, ಮುಂಗುಸಿ, ಮೊಲ, ಕಾಡು ಪ್ರಾಣಿಗಳಾಗಿ ಕಾಣ ಬಹುದಾಗಿದೆ. ಗೊರವಂಕ, ಕೋಗಿಲೆ, ಗಿಳಿ, ನವಿಲು, ಕಾಗೆ, ಕೊಕ್ಕರೆ ಮೊದಲಾದ ಕಾಡು ಪಕ್ಷಿಗಳು ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ೫೮೦ ಮಿ.ಮೀ. ಇದ್ದು, ಉಷ್ಣಾಂಶ ೩೯ಂ ಸೆಂ. ಇದ್ದು, ಚಳಿಯು ೧೨ಂ ಸೆಂ. ಇರುತ್ತದೆ. ಈ ಗ್ರಾಮದ ಹೆಸರಿನಲ್ಲಿ ೮ ಬೋರ್‌ವೆಲ್‌ಗಳು

ಇದ್ದು ಕುಡಿಯಲು ಕಿರು ನೀರು  ಯೋಜನೆ ಅಡಿಯಲ್ಲಿ ೨ ಚಿಕ್ಕ ಟ್ಯಾಂಕ್ ಮೂಲಕ ನೀರು ಒದಗಿಸಲಾಗಿದೆ. ಒಂದು ಕೈ ಪಂಪು ಇದೆ.

ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ನಾಯಕ, ಮಡಿವಾಳರು ಸಣ್ಣ ಸಮುದಾಯವಾಗಿದೆ. ವಿವಿಧ ಪ್ರಕಾರದ ೨೭ ಮನೆಗಳಿದ್ದು, ಅವು ಕಾಂಕ್ರೀಟ್ ಹಾಗೂ ಹೆಂಚು, ಶೀಟ್ ಸ್ವರೂಪದಲ್ಲಿ ಕೂಡಿವೆ. ೧೫೩ ಜನಸಂಖ್ಯೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನ ಬಂಡಿ, ಟ್ರ್ಯಕ್ಟರ್, ದ್ವಿಚಕ್ರ ವಾಹನಗಳು ಬಳಕೆಯಿದೆ. ಶೇಂಗಾ ಗ್ರಾಮದ ಮುಖ್ಯ ಬೆಳೆಗಳಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ತೊಗರಿ, ಅಲಸಂದಿ, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆಯಲ್ಲಿ ತೆಂಗು,  ಅಡಿಕೆ ಬೆಳೆಯುವುದುದ ರೂಢಿಯಲ್ಲಿದೆ. ಹುಣಸೆ ಹಣ್ಣಿನ ವ್ಯಾಪಾರವೂ ಗ್ರಾಮದಲ್ಲಿದೆ.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ, ಬರಗೂರು ತಾಲ್ಲೂಕು ಪಂಚಾಯಿತಿ, ಹೊಸಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರಗಳನ್ನು ಚಿತ್ರದುರ್ಗ ಲೋಕಸಭಾ ಕ್ಷೇತ್ರ ಹೊಂದಿರುವ ಈ ಗ್ರಾಮ ಹುಲಿಕುಂಟೆ ಹೋಬಳಿಗೆ ಸೇರುತ್ತದೆ. ಗ್ರಾಮದಲ್ಲಿ ಒಂದು ಸ್ತ್ರೀ ಶಕ್ತಿ ಸ್ವಸಹಾಯ ತಂಡ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ತಂಡಗಳಿವೆ. ಒಂದು ಅಂಗನವಾಡಿ ಕೇಂದ್ರವಿದ್ದು, ೧೫ ಮಕ್ಕಳಿದ್ದಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ಶೇ .೬೬.೩ ರಷ್ಟಿದ್ದು ಪುರುಷರು ೭೪.೯, ಮಹಿಳೆಯರು ಶೇ.೫೨ ಪ್ರಮಾಣದಲ್ಲಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ಒಂದು ಅಂಗಡಿ ಇವೆ. ೧ ಪರಿಸರದಲ್ಲಿ ೧ ವೀರಗಲ್ಲು ಇದ್ದು, ಅದು ತುರುಗೋಳ್ ಸಂಬಂಧಿ ಕಲ್ಲಾಗಿದ್ದು, ಮಡಿದ ವೀರನ ಚಿತ್ರವನ್ನು ತೋರಿಸಲಾಗಿದೆ. ಒಂದು ಅರಳಿಕಟ್ಟೆ ಇದೆ.

ಗ್ರಾಮದಲ್ಲಿ ಗೌರಸಂದ್ರದ ಮಾರಮ್ಮ, ಕರಿಯಮ್ಮ ದೇವರ ಪೌಳಿ ಇದ್ದು, ಆರತಿ ಭಾವ ಮಾಡುತ್ತಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸಲಾಗುವುದು.

## ದೊಡ್ಡಹುಲಿಕುಂಟೆ

ದೊಡ್ಡ ಹುಲಿಕುಂಟೆ, ಸಿರಾ ತಾಲ್ಲೂಕಿನ ಹೋಬಳಿ ಕೇಂದ್ರಗಳಲ್ಲಿ ಒಂದು. ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೧.೪ ಕಿ.ಮೀ ದೂರದಲ್ಲಿದ್ದು, ಇದು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯಿತಿಯ ಕೇಂದ್ರವಾಗಿದೆ. ತಡಕಲೂರು, ದೊಡ್ಡಬಾಣಗೆರೆ ಹುಲಿಕುಂಟೆ, ಹೊಸಹಳ್ಳಿ, ಬರಗೂರು, ಹಾಗೂ ದ್ವಾರನಕುಂಟೆ ಹೀಗೆ ಒಟ್ಟು ಆರು ಗ್ರಾಮ ಪಂಚಾಯಿತಿ ಗಳನ್ನು ಈ ಹೋಬಳಿ ಕೇಂದ್ರ ಒಳಗೊಂಡಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೧೨೪೮ ಹೆಕ್ಟೇರ್ ಆಗಿದೆ. ಈ ಗ್ರಾಮದ ಹೆಸರಿನ ಐತಿಹ್ಯವಾಗಿ ಕಥನ ಕವನವೂ ಈ ಭಾಗದಲ್ಲಿದೆ. ಕುರುಚಲು ಕಾಡು, ಮರ, ಹಳ್ಳ, ದಿಣ್ಣೆಗಳಿಂದ ಕೂಡಿದ ಈ ಭಾಗದಲ್ಲಿ ಹುಲಿಗಳು ಹೇರಳವಾಗಿದ್ದು ಇಲ್ಲಿನ ಕೆರೆಗೆ ನೀರು ಕುಡಿಯಲು ಬರುತ್ತಿದ್ದವೆಂಬ  ಕಾರಣದಿಂದ ಹುಲಿ ನೀರು ಕುಡಿಯುವ ಕುಂಟೆ ಅಥವಾ ಕೆರೆ ಇದಾಗಿದ್ದರಿಂದ ಹುಲಿಕುಂಟೆ ಆಗಿದೆ.

ಇದೇ ಮೂಲ ಬರಗೂರಿಗೂ ಅನ್ವಯವಾಗುತ್ತದೆ. ಜನಪದ ಮಹಾ ಕಾವ್ಯದಲ್ಲಿ ಈ ಗ್ರಾಮದ ಪ್ರಸ್ತಾಪವಿದ್ದು, ತಮ್ಮಣ್ಣನೆಂಬ ಮಹಾ ಮಾಟಗಾರ ತಮ್ಮಣ್ಣನ್ನು ಸಂಹರಿಸಿದ ಪ್ರಸ್ತಾಪವಿದೆ.

ತಮ್ಮಣ್ಣ ತಾತನ ಮಗಳೊಬ್ಬಳು ಗಂಡನ ಕುತೂಹಲ, ನೋಡಿ ಪ್ರಯೋಗಕ್ಕೆ ಒಳಗಾಗಿ ಹುಲಿಯಾದ ಬಗೆಗೂ ಕಥನ ಗೀತೆ ಪ್ರಕಟವಾಗುತ್ತದೆ. (ಹುಲಿಕುಂಟೆ ಲಾವಣಿ ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ–ಬಂಡಿ ಬಂದಾವು ಬಾಳೆ ವನದಾಗೆ)

ಮರಳು, ಮಿಶ್ರಿತ ಕಂದು ಬಣ್ಣದ ಇಲ್ಲಿನ ಭೂಮೇಲ್ಮೈ, ಶೇಂಗಾ ಬೆಳೆಗೆ ಉತ್ಕೃಷ್ಟವಾಗಿದೆ. ಈ ಗ್ರಾಮಕ್ಕೆ ಸೇರಿದ ೧೪೫ ಹೆಕ್ಟೇರ್ ಗೋಮಾಳವಿದ್ದು, ಪಶುಗಳಿಗೆ ಹುಲ್ಲುಗಾವಲಾಗಿದೆ. ಈ ಪರಿಸರದಲ್ಲಿ ಕಾಡು ಪಕ್ಷಿಗಳಾದ, ಗೊರವಂಕ, ನವಿಲು, ಕೋಗಿಲೆ, ಗೂಬೆ, ಗುಬ್ಬಚ್ಚಿ, ಹದ್ದು, ಗರುಡ ಕಂಡು ಬಂದರೆ ಮೊಲ, ಮುಂಗುಸಿ, ನರಿ, ಬಾರುಬೆಕ್ಕು, ಉಡ ಕಂಡು ಬರುತ್ತವೆ. ಜೊತೆಗೆ ಸಾಕು ಪ್ರಾಣಿಗಳಾದ ಹಸು, ಎತ್ತು, ಕುರಿ, ಮೇಕೆ, ನಾಯಿಗಳನ್ನು ಸಾಕಲಾಗುತ್ತಿದೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ಮಳೆ ೫೮೦ ಮಿ.ಮೀ. ಇದ್ದು, ಬಿಸಿಲು ೩೯–೪೦ಂ ಸೆಂ.ಇರುತ್ತದೆ. ಚಳಿ ೧೨ಂ ಸೆಂ. ಇದ್ದು, ಬಿಸಿಲು, ಧಗೆ, ನೀರಿನ ಆಸರೆ ತುಂಬಾ ಕಷ್ಟ. ಗ್ರಾಮಕ್ಕೆ ಹೊಂದಿಕೊಂಡಂತೆ ಒಂದು ದೊಡ್ಡ ಕೆರೆ ಇದ್ದರೂ ತುಂಬುವುದು ವಿರಳ. ಬಳ್ಳಾರಿ ಜಾಲಿ ಬೆಳೆದು, ಹುರುವಲುಗಳಿಗೆ ಆಶ್ರಯವಾಗಿದೆ. ಕೃಷಿ ಕಾಯಕದವರು ೧೨೦

ಕೊಳವೆ ಬಾವಿಗಳ ಮೂಲಕ ಬೆಳೆ ತೆಗೆಯುತ್ತಿದ್ದಾರೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಕೆಯಾಗುತ್ತದೆ. ೧೨೦ ನಲ್ಲಿಗಳು, ಒಂದು ಬೃಹತ್ ಟ್ಯಾಂಕ್ ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿ ಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದ್ದು, ಕುರುಬ, ಕುಂಚಿಟಿಗ, ಉಪ್ಪಾರ, ನಾಯಕ, ವೀರಶೈವ, ಅಕ್ಕಸಾಲಿಗ, ಅಗಸ ಕಿರು ಸಮುದಾಯಗಳಾಗಿವೆ. ಮುಸಲ್ಮಾನ ಕುಟುಂಬಗಳಿಗೂ ಇವೆ. ವಿವಿಧ ಪ್ರಕಾರಗಳ ೩೨೧ ಮನೆಗಳಿದ್ದು, ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಾಗಿವೆ. ಒಟ್ಟು ೧೧೮೯ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ೧೩೫ ಮನೆಗಳು ಶೌಚಾಲಯದ ಬಳಕೆ ಹೊಂದಿದೆ. ವಸತಿ ಯೋಜನೆಗಳಾದ ಜನತಾ, ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದಿವೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನವಾಗಿದ್ದು, ರೊಟ್ಟಿ, ಅನ್ನ, ದೋಸೆಯನ್ನು ಬಳಸಲಾಗುತ್ತಿದೆ. ವಿಶೇಷ ಆಹಾರವಾಗಿ ಬಾಡೂಟ, ಹೋಳಿಗೆ, ಪಾಯಸ ಬಳಸುತ್ತಾರೆ. ಗ್ರಾಮದಲ್ಲಿ ಎತ್ತಿನಬಂಡಿ ಸಾಂಪ್ರದಾಯಿಕ ವಾಹನ ವಾದರೆ, ಟ್ಯಾಕ್ಟರ್, ಟ್ರಿಲ್ಲರ್, ಟೆಂಪೋ, ದ್ವಿಚಕ್ರವಾಹನ ಬಳಸಲಾಗುತ್ತಿದೆ.

ಶೇಂಗಾ ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಗಳಾಗಿ ರಾಗಿ, ಅಲಸಂದಿ, ತೊಗರಿ, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆಯಾಗಿ ತೆಂಗು, ಅಡಿಕೆ ಬೆಳೆಯಲಾಗುತ್ತಿದೆ. ಗ್ರಾಮದಲ್ಲಿ ಒಂದು ಹಾಲಿನ ಡೈರಿ ಇದ್ದು ಸರಾಸರಿ ೫೦೦ ಲೀಟರ್ ಹಾಲು ಸಂಗ್ರಹಿಸಲಾಗುತ್ತಿದೆ. ಶೇಂಗಾ ಹಾಗೂ ಹುಣಸೇಹಣ್ಣು ಮುಖ್ಯ ವ್ಯಾಪಾರಿ ಬೆಳೆಯಾಗಿದೆ. ಸದ್ಯ ಶಿಕ್ಷಣ, ಸಾರಿಗೆ, ಅಂಚೆ, ಬೆಸ್ಕಾಂ, ವೈದ್ಯರು ಸೇರಿ ಪ್ರಿನ್ಸಿಪಾಲ್ ಎನ್. ಕರಿಯಣ್ಣ, ಉಪನಿರ್ದೇಶಕ ದೊಡ್ಡಸಿದ್ದಯ್ಯ, ಪೋಲೀಸ್ ಐ.ಜಿ. ಸಿದ್ದೇಶ್‌ಗೌಡ ಸೇರಿದಂತೆ ೨೦ ಜನ ಸರ್ಕಾರಿ ನೌಕರರಿದ್ದಾರೆ.

ಹೆಣ್ಣು ಮಕ್ಕಳು ಗೃಹ ಕೈಗಾರಿಕೆಯಾಗಿ ಬೀಡಿ ಸುತ್ತುವುದು, ಬಟ್ಟೆ ಹೊಲಿಯುವುದು, ಊಟದ ಎಲೆ ತಯಾರಿಕೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮ ಪಂಚಾಯಿತಿ ಕೇಂದ್ರವೂ ಇದೇ ಗ್ರಾಮವಾಗಿದ್ದು, ನಾಡ ಕಛೇರಿಯ್ನು ಹೊಂದಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ. ಕೃಷಿ ಸಹಕಾರ ಸಂಘ, ಕೆನರಾ ಬ್ಯಾಂಕ್ ಇದ್ದು, ೮ ಸ್ತ್ರೀ ಶಕ್ತಿ ಸ್ವಸಹಾಯ ಗುಂಪು, ೪ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪು ಆರ್ಥಿಕ ಸಂಘಟನೆಯಲ್ಲಿ ತೊಡಗಿವೆ. ಒಂದು ಅಂಗನವಾಡಿ ಕೇಂದ್ರ, ನಾಡ ಕಛೇರಿ, ಅಂಚೆ ಕಛೇರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ, ಆಂಜನೇಯ ಗ್ರಾಮಾಂತರ ಪ್ರೌಢಶಾಲೆ, ಈ ಸಂಸ್ಥೆಗಳಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪಠ್ಯ ಪುಸ್ತಕ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೩.೭ ರಷ್ಟಿದ್ದು ಪುರುಷರು ಶೇ.೭೭%. ಮಹಿಳೆಯರು ೫೦.೨ ರಷ್ಟು ಸಾಕ್ಷರತರಾಗಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯ ಪಡೆಯುತ್ತಿದ್ದು, ಗ್ರಾಮದಲ್ಲಿ ೪ ಹೋಟೆಲ್‌ಗಳು, ೧೨ ಪೆಟ್ಟಿಗೆ ಅಂಗಡಿಗಳಿವೆ. ಒಂದು ಮಾಸ್ತಿಕಲ್ಲು, ೨ ವೀರಗಲ್ಲು ಇದ್ದು, ಇವು ಪೂಜೆಗೆ ಒಳಗಾಗಿವೆ. ೨ ಅರಳಿಕಟ್ಟೆ, ಚೋಳ ಮಹಾರಾಜ ಇರುಂಗೋಳದೇವ ನಿಡುಗಲ್ಲು ರಾಜ್ಯ ಆಳುತ್ತಿದ್ದ ಕಾಲದಲ್ಲಿ (ಕ್ರಿ.ಶ.೧೧೭೪) ಚಿಕ್ಕಬಾಣಗೆರೆಯ ಮಲ್ಲಿಕಾರ್ಜುನ ದೇವಸ್ಥಾನಕ್ಕೆ, ಅದರ ಜೀರ್ಣೋದ್ಧಾರ, ಪೂಜೆ, ಎಣ್ಣೆ, ಅಭಿಷೇಕ ಮೊದಲಾದ ಕಾರ್ಯಗಳಿಗೆ, ಹುಲಿಕುಂಟೆಯ ಈಶ್ವರ ಎಂಬುವರಿಗೆ ಚಿಕ್ಕಬಾಣಗೆರೆ ಕೆರೆಯ ಹಿಂದಿನ ಗದ್ದೆಯನನು ಮಾನ್ಯ ಮಾಡಿಕೊಟ್ಟ ವಿವರಣೆ ಇದೆ. ಇದು ಹುಲಿಕುಂಟೆಯ ಈಶ್ವರ ದೇವಾಲಯದ ಮುಂದೆ ನಿಲುಗಲ್ಲನ್ನು ಹಾಕಿಸಲಾಗಿದೆ. (ಎ.ಕೆ.ಸಂ.೬೩೩ ಸಿರಾ ಶಾಸನ).

ಆಂಜನೇಯ, ದಾರಮಾದಯ್ಯ, ವೀರಪ್ಪ, ಮೈಲಾರಲಿಂಗ, ಲಕ್ಷ್ಮೀದೇವರು, ಕೊಲ್ಲಾಪುರದಮ್ಮ, ಮಾರಮ್ಮ, ಪೌಳಿಗಳಿವೆ. ೨ ಕರುಗಲ್ಲುಗಳಿದ್ದು, ಗ್ರಾಮ ಬೆಳೆದಂತೆ ಮುಚ್ಚಿಹೋಗಿವೆ ಎಂದು ನಿ. ಪ್ರಾಂಶುಪಾಲ ಎನ್. ಕರಿಯಣ್ಣ ಅಭಿಪ್ರಾಯ ಪಡುತ್ತಾರೆ. ಕೊಲ್ಲಾಪುರದಮ್ಮನ ಊರ ಹಬ್ಬ ನಡೆದು, ಆರತಿ, ಬಾನ, ಬ್ಯಾಟೆ, ಆರತಿ ಸಂಪ್ರದಾಯವಿರುತ್ತದೆ.

ಯುಗಾದಿ, ಕಾರಹಬ್ಬ, ಗೌರಿಗಣೇಶ, ದೀವಳಿಗೆ, ಗೌರಮ್ಮ, ಕೊಂತೆಮ್ಮ, ಮಹಾನವಮಿ, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸಿರಾ–ಪಟ್ಟನಾಯಕನ ಹಳ್ಳಿ, ಧರ್ಮಪುರ, ಸಿರಾ, ಬರಗೂರು, ಅಮರಾಪುರ ಮಾರ್ಗವಾಗಿ ಖಾಸಗಿ ಬಸ್ ಸಂಚಾರವಿರುತ್ತದೆ.

## ದೊಡ್ಡಬಾಣಗೆರೆ

ದೊಡ್ಡಬಾಣಗೆರೆ ಸಿರಾ ತಾಲ್ಲೂಕು ಕೇಂದ್ರದಿಂದ, ೩೫ ಕಿ.ಮೀ. ದೂರದಲ್ಲಿದ್ದು ಕರ್ನಾಟಕಾಂದ್ರ ಪೂರ್ವ ಉತ್ತರದ ಗಡಿ ಗ್ರಾಮವಾಗಿದೆ. ಸಿರಾ–ಅಮರಾಪುರ ಮುಖ್ಯ ರಸ್ತೆಯಲ್ಲಿ

ಗಂಡಿಹಳ್ಳಿ ಗೇಟಿನಿಂದ ಒಳಗೆ ೩ ಕಿ.ಮೀ. ದೂರದ ಹಾದಿ ಸಾರಿಗೆ ಸಂಪರ್ಕ ವಿರಳವಾಗಿದೆ. ಸಿರಾ ದೊಡ್ಡ ಬಾಣಗೆರೆ, ಹೇಮಾವತಿಗೆ ಸಂಪರ್ಕ ರಸ್ತೆ, ಬಸ್ ಸೌಕರ್ಯವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ೪೮೦.೧೨ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ಉಪಗ್ರಾಮಗಳಾಗಿ ದೊಡ್ಡಬಾಣಗೆರೆ ಗೊಲ್ಲರಹಟ್ಟಿ, ಓಬಳಾಪುರ, ಕರೇತಿಮ್ಮನಹಳ್ಳಿ, ಮುದ್ದೇನಹಳ್ಳಿ ಗಳಿವೆ. ಆರಂಭದಲ್ಲಿ ಹೇಮಾವತಿ ಸಂಸ್ಥಾನದ ಅಗ್ರಹಾರವಾಗಿದ್ದು, ಭೋನಗೆರೆ ಎಂದಿದ್ದು, ನಂತರ ಬಾಣಗೆರೆಯಾಗಿದೆ ಎಂದು ನಿ. ಶಿಕ್ಷಕ ಚಿಕ್ಕೋಬನಾಯಕ್ ಅಭಿಮತ. ಹೇಮಾವತಿ ನೊಳಂಬರ ರಾಜಧಾನಿಯಾಗಿದ್ದು, ಕ್ರಿ.ಶ. ೬ ನೇ ಶತಮಾನದಿಂದ ೧೨ ನೇ ಶತಮಾನದವರೆಗೆ ವೈಭವದಿಂದ ರಾಜ್ಯಾಡಳಿತ ಮಾಡಿದ ಸ್ಥಳ. ಅವೈಭವ, ರಾಜದೈವ ಹಂಜೇರಿ ಸಿದ್ಧೇಶ್ವರ ಜಾತ್ರೆ ಉತ್ಸವ, ಆರಾಧನೆ ಇಂದಿಗೂ ವೈವಿಧ್ಯಮಯವಾಗಿ ನಡೆಯುತ್ತದೆ. ದೊಡ್ಡ ಬಾಣಗೆರೆ ಇಲ್ಲಿಂದ ದಕ್ಷಿಣಕ್ಕೆ ೭ ಕಿ.ಮೀ. ದೂರದಲ್ಲಿದೆ.

ಕೆಂಪು ಮಿಶ್ರಿತ ಮರಳು ಮಣ್ಣು ಹೊಂದಿದ್ದು, ಗ್ರಾಮದ ಮುಂಭಾಗದಲ್ಲಿ ದೊಡ್ಡ ಕೆರೆಯಿದೆ. ಈ ಪರಿಸರದಲ್ಲಿ ಕಾಡು ಪ್ರಾಣಿಗಳಾಗಿ ಮೊಲ, ಜಿಂಕೆ, ನರಿ, ಉಡ, ಮುಂಗುಸಿಯನ್ನು ಕಾಣಬಹುದಾಗಿದೆ. ಗ್ರಾಮದಲ್ಲಿ ಸಾಕು ಪ್ರಾಣಿಯಾಗಿ ಹಸು, ಎಮ್ಮೆ, ಕುರಿ, ಮೇಕೆ ಕಾಣ ಬಹುದಾಗಿದೆ. ಗ್ರಾಮದಲ್ಲಿ ಕಾಡು ಪಕ್ಷಿಗಳಾಗಿ ಹದ್ದು, ಗರುಡು, ಗಿಳಿ, ಕೋಗಿಲೆ, ಕಾಗೆ, ಗೊರವಂಕ, ಗುಬ್ಬಚ್ಚಿ, ಗೂಬೆ, ಕೊಕ್ಕರೆ, ಬೆಳವ, ಕೌಜಲಗ ಪಕ್ಷಿಗಳನ್ನು ಕಾಣಬಹುದು.

ವಾರ್ಷಿಕ ಸರಾಸರಿ ೫೮೦ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೯–೪೦° ಸೆಂ ಇರುತ್ತದೆ. ಚಳಿ ೧೨° ಸೆಂ. ಇದ್ದು, ಕೆರೆ ಇದ್ದರೂ ತುಂಬುವುದು ಅಪರೂಪ. ಬಳ್ಳಾರಿ ಜಾಲಿ ಬೆಳೆದು, ಅದು ಉರುವಲು, ಇಜ್ಜಿಲು ಸುಡುವುದಕ್ಕೆ ಪ್ರೇರಕವಾಗಿದೆ. ಕೃಷಿಗಾಗಿ ೧೫೦ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ಗ್ರಾಮದಲ್ಲಿ ಎರಡು ದೊಡ್ಡ ಟ್ಯಾಂಕ್ ಗಳಿದ್ದು, ೮೦ ಕ್ಕೂ ಹೆಚ್ಚು ನಲ್ಲಿಗಳಿವೆ.

ಸಾಮಾಜಿಕ ರಚನೆಯಲ್ಲಿ ಇದೊಂದು ಬಹು ಜಾತಿಯ ಸಮನ್ವಯ ನೆಲ. ಕುಂಚಿಟಿಗರು ದೊಡ್ಡ ಸಮುದಾಯ, ಆದಿ ಕರ್ನಾಟಕ, ಆದಿ ದ್ರಾವಿಡ, ಕುರುಬರು, ಉಪ್ಪಾರ, ಮುಸ್ಲಿಂ, ವೈಶ್ಯರು, ವೀರಶೈವರು. ಮಡಿವಾಳರ ಮನೆಗಳಿವೆ. ಕೆಳಗ ಕೇರಿ, ಮೇಗಲಕೇರಿ, ಹೊರಗೇರಿ, ಊರ ಮಂಡಲ ಬೀದಿ ಎಂದು ಬಣೆಗಳಿದ್ದು, ಕನ್ನಡ ಮಾತೃಭಾಷೆ, ಉರ್ದು ಇಲ್ಲಿನ ಅಲ್ಪ ಸಂಖ್ಯಾತರ ಭಾಷೆಯಾಗಿದೆ.

ವಿವಿಧ ಪ್ರಾಕಾರಗಳ ೫೫೬ ಮನೆಗಳಿದ್ದು, ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿದ್ದು, ೨೭೮೨ ಜನಸಂಖ್ಯೆ ಹೊಂದಿದೆ. ೧೧೬ ಮನೆಗಳಲ್ಲಿ ಜನತಾ, ಆಶ್ರಯ ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಭೋಜನ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಬಂಡಿ, ಸಂಪ್ರದಾಯಿಕ ವಾಹನಗಳಾದ ಟ್ರ್ಯಾಕ್ಟರ್, ಸ್ಕೂಟರ್, ಟೆಂಪೋ, ಆಟೋ ಬಳಕೆಯಲ್ಲಿವೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ತೊಗರಿ, ಹುರುಳಿ, ಆಹಾರ ಬೆಳೆಗಳು. ತೆಂಗು, ಅಡಿಕೆ, ದಾಳಿಂಬೆ, ಸಪೋಟ ತೋಟಗಾರಿಕೆ ಬೆಳೆಗಳು. ಒಂದು ಹಾಲಿನ ಕೇಂದ್ರವಿದ್ದು ಸರಾಸರಿ ೨೫೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಹುಣಸೇಹಣ್ಣು, ತೆಂಗು, ಅಡಿಕೆ ವ್ಯಾಪಾರಿ ಬೆಳೆಗಳು. ಉಪನ್ಯಾಸಕರು, ವೈದ್ಯರು, ಇಂಜಿನಿಯರ್ ಸೇರಿದಂತೆ ೨೦ ಜನ ಸರ್ಕಾರಿ ನೌಕರರಿದ್ದಾರೆ. ಐ.ಟಿ., ಬಿ.ಟಿ ಇಂಜಿನಿಯರ್ ಕಾರ್ಟರ್ ಅಕೌಂಟೆಂಟಗಳೂ ಇದ್ದಾರೆ. ಬೀಡಿ ಕಟ್ಟುವುದು, ಊಟದ ಎಲೆ ತಯಾರಿಕೆ, ಗೃಹ ಕೈಗಾರಿಕೆ, ಇಟ್ಟಿಗೆ ಫ್ಯಾಕ್ಟರಿ, ಟೈಲರಿಂಗ್, ರಾಗಿ ಮಿಲ್‌ಗಳಿವೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ದೊಡ್ಡಬಾಣಗೆರೆ ಗ್ರಾಮ ಪಂಚಾಯಿತ ಕೇಂದ್ರವೂ ಆಗಿದ್ದು, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಈ ಗ್ರಾಮದ ೪ ಜನ ಪಂಚಾಯಿತಿ ಸದಸ್ಯರಿದ್ದಾರೆ. ಒಂದು ಅಂಚೆ ಕಛೇರಿ ಇದೆ. ಮಹಿಳಾ ಸಬಲೀಕರಣದ ಹಿನ್ನೆಲೆಯಲ್ಲಿ ೮ ಸ್ತ್ರೀ ಶಕ್ತಿ ಸಂಘ, ೩ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಸರ್ಕಾರಿ ಪ್ರೌಢಶಾಲೆ ಇದ್ದು, ಶಾಲೆಗಳಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಕರ್ಯಗಳಿವೆ. ಗ್ರಾಮದ ಸಾಕ್ಷರತೆ ೫೫.೩ ರಷ್ಟಿದೆ. ಗ್ರಂಥಾಲಯ, ಉಪ ಆರೋಗ್ಯ ಕೇಂದ್ರ, ಒಂದು ಖಾಸಗಿ ಕ್ಲಿನಿಕ್ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಿದ್ದು, ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನ, ಮಾಸಾಶನದ

ಫಲಾನುಭವಿಗಳಿದ್ದಾರೆ. ೪ ಹೋಟೆಲ್, ೧೪ ಪೆಟ್ಟಿಗೆ ಅಂಗಡಿಗಳಿವೆ. ೪ ವೀರಗಲ್ಲುಗಳಿದ್ದು, ಕರುಗಲ್ಲು, ಅರಳಿಕಟ್ಟೆಗಳಿವೆ. ಕರಿಯಮ್ಮ, ವರಸೆ ಮಾರಮ್ಮ, ವೀರಭದ್ರ, ರಂಗನಾಥ, ಲಕ್ಷ್ಮೀದೇವಸ್ಥಾನಗಳಿವೆ. ದಸರಾ ದಿನದಂದುಗ್ರಾಮದ ಎಲ್ಲಾ ದೇವತೆಗಳ ಉತ್ಸವವಿರುತ್ತದೆ. ಕರಿಯಮ್ಮ ಊರಹಬ್ಬ, ಆರತಿ, ಬಾನ, ಬ್ಯಾಟೆಯ ಹರಕೆ ಸಂಪ್ರದಾಯವಿದೆ.

ಯುಗಾದಿ, ಶಿವರಾತ್ರಿ, ಮಹಾನವಮಿ, ದೀಪಾವಳಿ, ಸಂಕ್ರಾಂತಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ದೀಪಾವಳಿ ದಿನದಂದು ದೇವಸ್ಥಾನದ ಮುಂದೆ ಬೆಂಕಿ ಉರಿಯ ಮೇಲೆ ದನಗಳನ್ನು ನಡೆಸುವ ಕಿಚ್ಚು ಹಾರಿಸುವ ವಿಶಿಷ್ಟ ಸಂಪ್ರದಾಯವಿದೆ. ಅಂತರ್ರಾಷ್ಟ್ರೀಯ ವ್ಯಂಗ್ಯ ಚಿತ್ರಕಲಾವಿದ ದೊಡ್ಡಬಾಗೆ ಗುಜ್ಜಾರ್, ಪರಿಸರ ಹೋರಾಟಗಾರ ಸಾಹಿತಿ ಗುಂಡಪ್ಪ, ದೊಡ್ಡಬಾಗೆರೆ ಪ್ರಕಾಶ್ ಮೂರ್ತಿ ಡಾ.ವಿ. ಚಂದ್ರಪ್ಪ ಇದೇ ಗ್ರಾಮದವರಾಗಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡುದ ಹಿರಿಮೆ ಇವರದು.

ಈ ಗ್ರಾಮದ ಕೆರೆಯ ಏರಿಯ ದೊರೆತ ೩ ಶಾಸನಗಳಲ್ಲಿ ಸಿರಾ ಶಾಸನ ಸಂಖ್ಯೆ ೭ ರಲ್ಲಿ, ಚಾಲುಕ್ಯರ ಸಾಮಂತ ತ್ರೈಲೋಕ್ಯ ಮಲ್ಲನ ಸಾಮಂತ ವೀರ ಪಾಂಡ್ಯ ಇರಂಗೋಳರ ಮಾಂಡಲೀಕ, ಎರಕ ಮಾರಗೌಡನು. ದೊಡ್ಡ ಬಾಣಗೆರೆಯಲ್ಲಿ ಸೋಮೇಶ್ವರ ದೇವಸ್ಥಾನ ನಿರ್ಮಿಸಿ ಅದರ ಸೇವಾ ಕಾರ್ಯಕ್ಕೆ ಗದ್ದೆಯನ್ನು ಮಾನ್ಯ ಬಿಟ್ಟ ಸಂಗತಿ ಪ್ರಕಟವಾಗುತ್ತದೆ. ಮತ್ತೊಂದು ಸಿರಾ ಶಾಸನ ೯ ರಲ್ಲಿ ಪೊನ್ನರಾಜನು ದೊಡ್ಡ ಬಾಣಗೆರೆಯ ಕೆಳಗಿನ ೧೨ ಕಂಡುಗದ ಭೂಮಿಯನ್ನು ಕೌಂಡಿಲ್ಯ ವಶಿಷ್ಠ ಗೋತ್ರದ ಮಾರಯ್ಯ ಎಂಬುವವನಿಗೆ ದತ್ತಿ ನೀಡಿದ ಅಂಶ ಪ್ರಕಟವಾಗಿದೆ. ಕಾಲ ೧೧೭೩, ದಿನಾಂಕ೬, ಭಾನುವಾರ ಎಂದಿರುತ್ತದೆ. ಮತ್ತೊಂದು ಸಿರಾ ಶಾಸನ ೮, ೧೩೩೭ ರಲ್ಲಿ ಹಾಕಿಸಿರುವ ಶಾಸನದ ಪ್ರಕಾರ ನಿಡಗಲ್ಲು ರಾಜ ಆಡಳಿತಾವಧಿಯಲ್ಲಿ ಗುಡೇ ಕೋಟೆಯ ಪಾಳೆಯಗಾರ (ಕೂಡ್ಲಗಿ) ಬೈರರಸನ ಮಕ್ಕಳಾದ ಕೇಸರಸ ಹಾಗೂ ವಿಜಯರಸರುಗಳು, ಹಿರಿಯ ಬಾಣಗೆರೆ ಕೆರೆಯನ್ನು ಕಟ್ಟಿಸಿ, ಊರಗೌಡರಿಗೆ ಕೊಡುಗೆ ನೀಡಿದ ಉಲ್ಲೇಖವಿದೆ. ಇಲ್ಲಿನ ಮೂರು ಶಾಸನಗಳಲ್ಲಿಯೂ, ದೊಡ್ಡ ಬಾಣಗೆರೆಯನ್ನು, ಹಿರಿಯ ಬಾಣಗೆರೆ ಎಂದೇ ಕರೆಯಲಾಗಿದೆ.

## ದೊಡ್ಡಬಾಣಗೆರೆ ಗೊಲ್ಲರಹಟ್ಟಿ

ದೊಡ್ಡಬಾಣಗೆರೆ ಗೊಲ್ಲರಹಟ್ಟಿ –ದೊಡ್ಡಬಾಣಗೆರೆ ಗ್ರಾಮಕ್ಕೆ ಸೇರಿದ ಒಂದು ಜೋಡಿ ಗ್ರಾಮವಾಗಿದ್ದು, ಕಾಡುಗೊಲ್ಲರ ಪ್ರತ್ಯೇಕ ವಾಸಸ್ಥಳವಾಗಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೬ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಬಲಮಗ್ಗುಲಿಗೆ ಆತುಕೊಂಡಂತೆ ದೊಡ್ಡಕೆರೆ. ಅದರ ಸನಿಹದಲ್ಲಿಯೇ ದೊಡ್ಡ ಬಾಣಗೆರೆಹಳ್ಳಿ ಸ್ಥಾಪನೆಯಾಗಿದೆ. ಆದುದರಿಂದ ದೊಡ್ಡ ಬಾಣಗೆರೆವೆಂಬ ಹೆಸರು ಬಂದಿದ್ದು. ಆದರೆ ಬುಡದಲ್ಲಿ ಉಪಗ್ರಾಮವಾಗಿ ಕಾಡುಗೊಲ್ಲರ ಹಟ್ಟಿ ರಚನೆಯಾಗಿರುವುದರಿಂದ ದೊಡ್ಡ ಬಾಣಗೆರೆ ಗೊಲ್ಲರಹಟ್ಟಿಯಾಗಿದೆ. ಇದರ ಭೌಗೋಳಿಕ ವಿನ್ಯಾಸ ೩೯.೦೮ ಹೆಕ್ಟೇರ್ ಆಗಿದ್ದು, ಮರಳು ಮಿಶ್ರಿತ ಕೆಂಪು ಮಣ್ಣು ಹೊಂದಿದೆ.

ಗ್ರಾಮದ ಮುಂಭಾಗ ದೊಡ್ಡಕೆರೆ, ಗ್ರಾಮದ ಹಿಂದಕ್ಕೆ ಆಂಧ್ರದ ಕೆಂತಾರಲಹಟ್ಟಿ, ಹಿಂಭಾಗಕ್ಕೆ ತೋಟದ ಸಾಲು. ಈ ಪರಿಸರದಲ್ಲಿ ಮೊಲ, ನರಿ, ಉಡ, ಬಾರುಬೆಕ್ಕು, ಮುಂಗುಸಿ, ಕಾಡುಹಂದಿ ಕಂಡು ಬರುತ್ತವೆ. ಸಾಕು ಪ್ರಾಣಿಗಳಾಗಿ ಹಸು, ಎಮ್ಮೆ, ಕುರಿ, ಮೇಕೆ, ಕತ್ತೆ, ನಾಯಿಗಳನ್ನು ಸಾಕಲಾಗಿದೆ. ಕಾಡು ಪಕ್ಷಿಗಳಾಗಿ ಗಿಳಿ, ಗಿಡುಗ, ಕೋಗಿಲೆ, ಕಾಗೆ, ಕೊಕ್ಕರೆ, ಗರುಡ, ಹದ್ದು ಕಂಡು ಬರುತ್ತವೆ.

ಈ ಪರಿಸರದಲ್ಲಿ ಬಿಸಿಲು, ಧಗೆ ಅಧಿಕವಾಗಿದೆ. ಮಳೆ ಕಡಿಮೆ ಇದ್ದು , ವಾರ್ಷಿಕ ಸರಾಸರಿ ೫೮೦ ಮಿ.ಮೀ. ಬಿದ್ದರೆ ಅದೇ ಅಧಿಕ ಬಿಸಿಲು ೪೦ಂ ಸೆಂ., ಚಳಿ ೧೨ಂ ಸೆಂ. ಇರುತ್ತದೆ. ಬೇಸಾಯಕ್ಕೆ ಮಳೆಯ ನೀರಿನ ಆಶ್ರಯದ ಜೊತೆಗೆ ಬೋರ್‌ವೆಲ್‌ಗಳ ಮೂಲಕ ಪೂರೈಸಿಕೊಳ್ಳಲಾಗುತ್ತಿದ್ದು, ೧೬ ಬೋರ್‌ವೆಲ್ ಗಳಿವೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ೧ ಕೈ ಪಂಪು ಇದೆ. ಇಲ್ಲಿನ ಸಾಮಾಜಿಕ ರಚನೆ ಪೂರ್ಣ ಕಾಡುಗೊಲ್ಲರ ೨೮ ಮನೆಗಳಿವೆ. ಕಡಪ ಕಲ್ಲಿನ, ಹೆಂಚಿನ, ಶೀಟಿನ, ೨ ಗುಡಿಸಲು ಸೇರಿ ೨೮ ಮನೆಗಳಿವೆ. ೯೨ ಜನಸಂಖ್ಯೆಯಲ್ಲಿ ೧೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ರಾಗಿ ಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಉಪ ಆಹಾರ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಎತ್ತಿನಗಾಡಿ, ಟ್ರ್ಯಾಕ್ಟರ್, ಸ್ಕೂಟರ್ ಬಳಕೆಯಲ್ಲಿದೆ. ಶೇಂಗಾ ಮುಖ್ಯ ಬೆಲೆ. ತೊಗರಿ, ಅಲಸಂದಿ, ತೊಗರಿ ಆಹಾರ ಬೆಳೆಗಳು. ತೋಟಗಾರಿಕೆಯಾಗಿ ತೆಂಗು, ರೇಷ್ಮೆ ಬೆಳೆಯುತ್ತಾರೆ. ಶೇಂಗಾ ಹಾಗು ಹುಣಸೆ ಹಣ್ಣಿನ ವ್ಯಾಪಾರವಿದೆ.

ಸಿರಾ ವಿಧಾನಸಭೆ, ಹುಲಿಕುಂಟೆ ತಾಲ್ಲೂಕು, ಜಿಲ್ಲಾ ಪಂಚಾಯಿತಿ ದೊಡ್ಡ ಬಾಣಗೆರೆ ಗ್ರಾಮದ ಪಂಚಾಯಿತಿ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದ ಒಬ್ಬರು ಪಂಚಾಯಿತಿ ಸದಸ್ಯರಿದ್ದಾರೆ. ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರಗಳಿದ್ದು, ೧೫ ಮಕ್ಕಳಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ೧೯ ಮಕ್ಕಳಿದ್ದು ಒಬ್ಬರು ಶಿಕ್ಷಕರಿದ್ದಾರೆ. ಗ್ರಾಮದ ಸಾಕ್ಷರತೆ ೫೫.೩ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವಿವಾಹ ಸೌಲಭ್ಯಗಳ ಫಲಾನುಭವಿಗಳಿದ್ದಾರೆ. ಮಾರಕ್ಕ, ಮುತ್ತಿನಕ್ಕ, ಜನಪದ ಕಲಾವಿದರಾಗಿದ್ದು, ಮಾಸಾಶನ ಪಡೆಯುತ್ತಿದ್ದಾರೆ. ರಂಗಪ್ಪ, ಗೌರಸಂದ್ರ ಮ್ಮದ ಮಾರಮ್ಮನ ದೇವಸ್ಥಾನವಿದ್ದು ದೀಪಾವಳಿ ಸಂದರ್ಭದಲ್ಲಿ ವಿಶೇಷ ಉತ್ಸವ, ಜಾತ್ರೆ ನಡೆಯುತ್ತದೆ. ಯುಗಾದಿ, ದೀಪಾವಳಿ, ಮಹಾನವಮಿ ಹಬ್ಬಗಳು ಆಚರಣೆ ಇದ್ದು, ಮಾರಮ್ಮನಿಗೆ ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ.

ಮಾರಕ್ಕ ಮತ್ತು ಮುತ್ತಿನಮ್ಮ ಜನಪದ ಹಾಡುಗಾರರಾಗಿದ್ದು ಜುಂಜಪ್ಪ, ಚಿತ್ರದೇವವು, ಹೆಂಜೇರು ಸಿದ್ದೇಶ್ವರನ ಮೇಲೆ ಕಾವ್ಯ ಹಾಡುವ ಅಪರೂಪದ ಕಲಾವಿದರು. ಕರ್ನಾಟಕ ಜನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕಲಾವಿದರಾಗಿ ರುವುದು ವಿಶೇಷ. ಇದೇ ಗ್ರಾಮದ ದೊಡ್ಡ ಬಾಣಗೆರೆ ಮಾರಣ್ಣ ಲೇಖಕರಾಗಿದ್ದು, ಕೆಲವು ಪುಸ್ತಕ ಪ್ರಕಟಿಸಿದ್ದಾರೆ. ಅಧ್ಯಾಪಕರಾಗಿ ಮಾಗಡಿಯಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಪ್ರಜಾವಣಿ ಸ್ಥಳೀಯ ಪತ್ರಿಕೆಯ ವರದಿಗಾರರಾಗಿಯೂ ಕಾರ್ಯನಿರತರಾಗಿದ್ದಾರೆ.

## ದಿಬ್ಬದಹಟ್ಟಿ

ದಿಬ್ಬದಹಟ್ಟಿ–ಕಾಡುಗೊಲ್ಲರ ಒಂದು ಪುಟ್ಟ ಹಟ್ಟಿಯಾಗಿದ್ದು, ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೪ ಕಿ.ಮೀ. ದೂರದಲ್ಲಿದೆ. ತಡಕಲೂರು ಗ್ರಾಮಕ್ಕೆ ಸೇರ್ಪಡೆಯಾಗಿದ್ದು, ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದೆ. ಸ್ವಲ್ಪ ಎತ್ತರದ ಪ್ರದೇಶದಲ್ಲಿ ಕಾಡುಗೊಲ್ಲರ ಚಿತ್ತಯ್ಯ ಎಂಬುವರು ಮೊದಲು ಕುರಿ ರೊಪ್ಪ ಹಾಕಿಕೊಂಡು ವಾಸಿಸುತ್ತಿದ್ದರು. ನಂತರ ಅಲ್ಲಿಯೇ ಮನೆಗಳು ನಿರ್ಮಾಣವಾದುದರಿಂದ ದಿಬ್ಬದ ಅಥವಾ ಬಾರೆ ಮೇಲಿನ ಹಳ್ಳಿ ಎಂಬ ಅರ್ಥದಲ್ಲಿ ದಿಬ್ಬದಹಳ್ಳಿ ಎಂದು ಕರೆಯಲಾಗುವುದು. ದಿಬ್ಬದಹಳ್ಳಿಗೆ ಹೊಂದಿ ಕೊಂಡಂತೆ ೧೧೫ ಹೆಕ್ಟೇರ್ ರಕ್ಷಿತಾ ಅರಣ್ಯವಿದ್ದು, ಗೋಮಾಳವಾಗಿದೆ.

ಈ ಪರಿಸರದಲ್ಲಿ ಮೊಲ, ನರಿ, ತೋಳ ಕಾಡು ಪ್ರಾಣಿಗಳು ಕಂಡು ಬರುತ್ತವೆ. ಗ್ರಾಮದಲ್ಲಿ ಕುರಿ, ಮೇಕೆ, ಕತ್ತೆ ಸಾಕುಪ್ರಾಣಿಗಳಾಗಿ ಹಾಗೂ ಕೋಳಿ ಸಾಕಾಣಿಕೆಯೂ ಇದೆ. ಕುಡಿಯಲು ಗ್ರಾಮ ಪಂಚಾಯಿತಿಯ ಸಹಾಯದಿಂದ ಕೊಳವೆ ಬಾವಿಯಿಂದ ನೀರಿನ ಪೂರೈಕೆಯಿದೆ. ೨ ಚಿಕ್ಕ ಟ್ಯಾಂಕ್ ಇದ್ದು, ಅದರ ಮೂಲಕ ನೀರು ಪೂರೈಕೆಯಾಗುತ್ತದೆ. ಸರಾಸರಿ ವಾರ್ಷಿಕ ಮಳೆ ೪೬೩ ಮಿ.ಮೀ. ಇದ್ದು, ಚಳಿ ೧೨º ಸೆಂ. ಇರುತ್ತದೆ. ಬಿಸಿಲು ೪೦º ಸೆಂ. ಇರುತ್ತದೆ. ೬೦೫ ಮಿ.ಮೀ. ಸಮುದ್ರ ಮಟ್ಟಕ್ಕಿಂತ ಎತ್ತರದಲ್ಲಿದೆ.

ಇದೊಂದು ಕಾಡುಗೊಲ್ಲರ ಹಟ್ಟಿಯಾಗಿದ್ದು ಪೂರ್ಣವಾಗಿ ಕಾಡುಗೊಲ್ಲರು ವಾಸಿಸುತ್ತಿದ್ದಾರೆ. ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಒಟ್ಟು ೬೬ ಮನೆಗಳಿದ್ದು, ಆಶ್ರಯ, ಜನತಾ ವಸತಿ ಸೌಲಭ್ಯ ಪಡೆದಿದ್ದಾರೆ. ಗ್ರಾಮದಲ್ಲಿ ಟೈಲರಿಂಗ್ ೨ ಮನೆಯಲ್ಲಿ ಬಳಕೆ ಇದೆ. ೩೭೦ ಜನಸಂಖ್ಯೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ, ಉಪ ಆಹಾರ, ವಿಶೇಷ ಸಂದರ್ಭದಲ್ಲಿ ಮಾತ್ರ ಬಾಡೂಟ, ಹೋಳಿಗೆ, ಪಾಯಸ, ಊಟದ ವ್ಯವಸ್ಥೆ ಇರುತ್ತದೆ. ಎತ್ತಿನಗಾಡಿ, ಟ್ರ್ಯಾಕ್ಟರ್, ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇವೆ. ಶೇಂಗಾ ಗ್ರಾಮದ ಮುಖ್ಯ ಬೆಳೆ. ರಾಗಿ, ಅಲಸಂದಿ, ತೊಗರಿ ಆಹಾರ ಬೆಳೆಗಳು. ಸೂರ್ಯಕಾಂತಿ, ಹತ್ತಿ ಬೆಳೆಯೂ ಇದೆ. ಹುಣಸೆಹಣ್ಣು, ತೆಂಗು ವ್ಯಾಪಾರಿ ಬೆಳೆಯಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾಪಂಚಾಯಿತಿ ಕ್ಷೇತ್ರವಾಗಿದೆ. ತಡಕಲೂರು ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ.

ಗ್ರಾಮದಲ್ಲಿ ೨ ಸ್ತ್ರೀ ಶಕ್ತಿ ಸಂಘಗಳಿವೆ, ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಶಾಲೆ ಇದ್ದು, ಇಬ್ಬರು ಶಿಕ್ಷಕರು, ಒಬ್ಬರು ಅಂಗನವಾಡಿ ಸಹಾಯಕರು ಇದ್ದಾರೆ. ಮಕ್ಕಳು ಶಾಲೆಯಲ್ಲಿ ೨೨ ಇದ್ದು, ಅಂಗನವಾಡಿಯಲ್ಲಿ ೧೭ ಜನರಿದ್ದಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೬೬.೨ ರಷ್ಟಿದೆ. ವೃದ್ಧ್ಯಾಪ್ಯ ವೇತನ, ವಿಧವಾ ವೇತನ ಫಲಾನುಭವಿಗಳಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ವೀರಜುಂಜಪ್ಪ, ಚಿತ್ರದೇವರು, ಈರಣ್ಣ ಗುಡಿಗಳ ಪೌಳಿಗಳಿದ್ದು, ಹಟ್ಟಿಯ ನಡುವೆ ಪ್ರತ್ಯೇಕವಾಗಿದೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಜುಂಜಪ್ಪ ದೇವರ ಜಾತ್ರೆ, ದೀಪ ಏರಿಸುವುದು, ವಿಜೃಂಭಣೆಯಿಂದ ನಡೆಯುತ್ತದೆ. ಕರಿಯಮ್ಮ ಗ್ರಾಮದೇವತೆ, ಆರತಿ, ಬಾನ, ಬ್ಯಾಟೆ, ಹರಕೆ ಇರುತ್ತದೆ. ಕೋಲಾಟದ ನಿಂಗಜ್ಜ, ಸೋಬಾನೆ ಜಾನಪದ ಕಲಾವಿದರು. ಬಸಪ್ಪ–ಕುರಿ, ದನಗಳಿಗೆ ನಾಟಿ ಔಷಧಿ ನೀಡುತ್ತಾರೆ. ಗ್ರಾಮದಲ್ಲಿ ದಸರಾ, ದೀಪಾವಳಿ, ಶಿವರಾತ್ರಿ, ಯುಗಾದಿ, ಗೌರಿಗಣೇಶ

ಹಾಗೂ ಕುಂತಮ್ಮ ಗೌರಮ್ಮನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದಾಸರಹಳ್ಳಿ

ದಾಸರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೯ ಕಿ.ಮೀ. ದೂರದಲ್ಲಿದೆ. ಸಿರಾ–ತುಮಕೂರು ರಸ್ತೆಯ ಸೋಮಸಾಗರ ಗೇಟಿನಿಂದ ಎಡಭಾಗಕ್ಕೆ ತರೂರು ೪.೫ ಕಿ.ಮೀ. ದೂರ ಕ್ರಮಿಸಿದರೆ ದಾಸರಹಳ್ಳಿ ಇದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೨೪೪೪.೭೫ ಹೆಕ್ಟೇರ್ ಆಗಿದೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ಕಾಡುಗೊಲ್ಲರಹಟ್ಟಿ ರೂಪುಗೊಂಡಿದೆ. ಸಿರಾ ತಾಲ್ಲೂಕಿನಲ್ಲಿ ದಾಸರ ಹೆಸರಲ್ಲಿ ಏಳು ದಾಸರಹಳ್ಳಿಗಳು ರಚನೆಯಾಗಿದೆ. ಆದರೆ ಆ ದಾಸರಹಳ್ಳಿಯ ಪೂರ್ವ ಪದಗಳು ಬೇರೆ ಬೇರೆಯಾಗಿವೆ. ಕರಿದಾಸರ , ಚಿಕ್ಕದಾಸರ, ಮದಲೂರು ದಾಸರ, ಕೆರೆಮೇಲಗ ದಾಸರ, ಈಡಿಗ ದಾಸರ ಹೀಗೆ ಜಾತಿ, ಪ್ರಾದೇಶಿಕ ಅಳತೆಯ ಮಾಪನದಲ್ಲೂ ರೂಪುಗೊಂಡಿದೆ. ಜೊತೆಗೆ ಅವೆಲ್ಲವೂ ಮಜರೆ ಗ್ರಾಮವಾಗಿವೆ. ಸೀಬಿ ಬಳಿಯ, ಚನ್ನೇನಹಳ್ಳಿ ಗ್ರಾಮ ಪಂಚಾಯಿತಿಯ ದಾಸರಹಳ್ಳಿ ನೇರವಾಗಿ ದಾಸರ ಹೆಸರಲ್ಲೇ ಪ್ರಕಟವಾಗಿದೆ. ದಾಸ ಪಂಥದ, ಒಕ್ಕಲ ಜನಾಂಗದವರು ಮೂಲವಾದ ಕಾರಣದಿಂದ ದಾಸರ ಹಳ್ಳಿ ಎಂದು ಕರೆಯಲಾಗಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ಸೀಬಿಗುಡ್ಡ, ಕೆರೆಯಾಗಲ ಗಡ್ಡ, ಗಿಡಮರ, ಪೊದೆಗಳಿಂದ ಕೂಡಿದೆ. ಹಾಗಾಗಿ ಈ ಪರಿಸರದಲ್ಲಿ ನರಿ, ತೋಳ, ಮೊಲ, ಕರಡಿ, ಜಿಂಕೆ, ಮುಂಗುಸಿ ಕಂಡು ಬಂದರೆ, ಗ್ರಾಮದಲ್ಲಿ ರೈತಾಪಿ ಕಸುಬಿನ ಜನರು ಕೃಷಿ ಹಾಗೂ ಹೈನುಗಾರಿಕೆಗಾಗಿ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕು ಪ್ರಾಣಿಗಳಾಗಿ ಸಾಕಲಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ಗಿಳಿ, ಗೊರವಂಕ, ಗೂಬೆ, ಗೀಜಗ, ಕೊಕ್ಕರೆ, ಕೋಗಿಲೆ, ಕಾಜಾಣ, ಹದ್ದು, ಗರುಡ ಕಂಡು ಬರುತ್ತವೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಮಳೆಯ ಸರಾಸರಿ ೫೫೭.೩ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ತಾಪ ೩೮° ಸೆಂ. ಇದ್ದು, ಚಳಿಯು ೧೨° ಸೆಂ. ಇರುತ್ತದೆ. ಗ್ರಾಮದ ಗಡಿಗೆ ಕೆರೆ ಇದ್ದು, ಉತ್ತರ ಪೂರ್ವಕ್ಕೆ, ಹಳ್ಳ ಇದ್ದರೂ ನೀರು ಹರಿಯುವುದಿಲ್ಲ. ಕುಡಿಯಲು ಗ್ರಾಮ ಪಂಚಾಯಿತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಉಳಿದಂತೆ ಕೃಷಿಗಾಗಿ ಗಂಗಾ ಕಲ್ಯಾಣ ಯೋಜನೆ ಹಾಗೂ ಹಣದಿಂದ ೩೪ ಕೊಳವೆ ಬಾವಿಗಳನ್ನು ಕೊರೆಸಿದ್ದಾರೆ. ಗ್ರಾಮದಲ್ಲಿ ೧ ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ವೀರಶೈವ, ನಾಯಕ, ಗಾಣಿಗರು ಕಿರು ಸಮುದಾಯ ವಾಗಿವೆ. ಕನ್ನಡ ಈ ಗ್ರಾಮದ ಮಾತೃ ಭಾಷೆಯಾಗಿದೆ. ವಿವಿಧ ಪ್ರಕಾರಗಳ ೭೩ ಮನೆಗಳಿದ್ದು, ಜನಸಂಖ್ಯೆ ೩೧೭ ಇದೆ. ಇವುಗಳಲ್ಲಿ ಕಾಂಕ್ರೀಟ್, ಹೆಂಚಿನ, ಮಣ್ಣಿನ, ಶೀಟಿನ ಮನೆಗಳು ಇದ್ದು, ಆಶ್ರಯ, ಇಂದಿರಾ ಆವಾಸ್, ಜನತಾ, ಯೋಜನೆಯ ಸೌಲಭ್ಯದ ೧೮ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ ಮುಖ್ಯ ಆಹಾರವಾದರೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಕೃಷಿಗೆ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ, ಮಿನಿ ಟೆಂಪೋಗಳಿವೆ. ಬಳಕೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಹೆಸರು, ಅಲಸಂದಿ. ಆಹಾರ ಬೆಳೆಗಳು. ನೀರಾವರಿಗೆ ತೆಂಗು, ಅಡಿಕೆ, ತರಕಾರಿ, ಹೂವಿನ ಬೆಳೆಯಿದೆ. ಶಿಕ್ಷಕರು, ಹುಣಸೇಹಣ್ಣಿನ ವ್ಯಾಪಾರವೂ ಗ್ರಾಮದಲ್ಲಿದೆ. ಶಿಕ್ಷಕರು, ಸಾರಿಗೆ ಇಲಾಖೆಗೆ ಸೇರಿದ ೩ ಜನ ನೌಕರರಿದ್ದಾರೆ. ಗ್ರಾಮದ ಮಹಿಳೆಯರು ರೂ ಕಟ್ಟುವ, ಊಟದ ಎಲೆ ತಯಾರಿಸುವ ಕೆಲಸವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ಚಿನ್ನೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ೩ ಸ್ತ್ರೀ ಶಕ್ತಿ ಸ್ವಸಹಾಯ ಸಂಘವಿದ್ದು, ಸ್ತ್ರೀಯರ ಸ್ವಾವಲಂಬನೆಗೆ ಸಹಕಾರಿಯಾಗಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ೩೮ ಮಕ್ಕಳು ಕಲಿಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯಗಳ ಸೌಲಭ್ಯಗಳಿದ್ದು, ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೫೯.೬ ರಷ್ಟಿದೆ. ೪ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಆಂಜನೇಯ ಪ್ರಾಚೀನ ದೇವರು, ಮಾರಮ್ಮನ ಪೌಳಿ ಇದೆ. ಗಜ್ಜೀರಳ್ಳಮ್ಮ ಗ್ರಾಮ ದೇವತೆ ಇದ್ದು, ಗ್ರಾಮ ದೇವತೆಯಾಗಿದೆ. ಊರ ಉತ್ಸವವಾಗಿ ಆರತಿ, ಬಲಿ, ಹರಕೆ ಸಂಪ್ರದಾಯವಿದೆ. ದೀಪಾವಳಿ, ಗೌರಿ, ಗಣೇಶ, ಮಹಾನವಮಿ, ಯುಗಾದಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ದಾಸರಹಳ್ಳಿ ಗೊಲ್ಲರಹಟ್ಟಿ

ದಾಸರಹಳ್ಳಿ ಗೊಲ್ಲರಹಟ್ಟಿ, ಕಳ್ಳಂಬೆಳ್ಳ ಹೋಬಳಿ, ಸೀಬಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ದಾಸರಹಳ್ಳಿಯ ಮಜರೆ ಗ್ರಾಮ. ಇದು ಸಿರಾ–ತುಮಕೂರು ರ್‍ರಾಷ್ಟ್ರೀಯ ಹೆದ್ದಾರಿಯ, ಸೋಮಸಾಗರ ಗೇಟಿನಿಂದ ಎಡಭಾಗಕ್ಕೆ ೫ ಕಿ.ಮೀ. ದೂರದಲ್ಲಿದೆ. ಇದು ಬುಡಕಟ್ಟು ಗ್ರಾಮವಾಗಿದ್ದು, ಕಾಡುಗೊಲ್ಲರು ಮಾತ್ರ ವಾಸಿಸುತ್ತಿದ್ದಾರೆ. ಇದರ ಭೌಗೋಳಿಕ ವಿಸ್ತೀರ್ಣ ೩೮.೭೨ ಹೆಕ್ಟೇರ್ ಆಗಿದೆ. ಪೂರ್ವಕ್ಕೆ ಗಿಡದಾರಲಹಳ್ಳಿ ಕಾಡು, ಗುಡ್ಡವಿದೆ. ಈ ಪರಿಸರದಲ್ಲಿ ನರಿ, ತೋಳ, ಮೊಲ, ತೋಳಗಳು ಕಂಡು ಬಂದರೆ, ಗ್ರಾಮದಲ್ಲಿ ರೈತಾಪಿ ಕಸುಬಿನ ಜನರು ಕೃಷಿ ಹಾಗೂ ಹೈನುಗಾರಿಕೆಗಾಗಿ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಹಾಗೂ ಕತ್ತೆಗಳನ್ನು ಸಾಕು ತ್ತಿದ್ದಾರೆ. ಈ ಪರಿಸರದಲ್ಲಿ ಪಕ್ಷಿಗಳಾದ ಗಿಳಿ, ಗೊರವಂಕ, ಗೂಬೆ, ಗೀಜಗ, ಕೊಕ್ಕರೆ, ಕೋಗಿಲೆ, ಕಾಡುಕೋಳಿ, ಬಾನಲಿ, ಹದ್ದು, ಗರುಡ ಕಂಡು ಬರುತ್ತವೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಮಳೆಯ ಸರಾಸರಿ ೫೫೭.೩ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ತಾಪ ೩೮೦ ಸೆಂ. ಇದ್ದು, ಚಳಿಯು ೧೨೦ ಸೆಂ. ಇರುತ್ತದೆ. ಗ್ರಾಮದ ಗಡಿಗೆ ಕೆರೆ ಇದ್ದು, ಉತ್ತರ ಪೂರ್ವಕ್ಕೆ, ಹಳ್ಳ ಇದ್ದರೂ ನೀರು ಹರಿಯುವುದಿಲ್ಲ. ಕುಡಿಯಲು ಗ್ರಾಮ ಪಂಚಾಯಿತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೧ ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕಾಡುಗೊಲ್ಲರ ೩೧ ಮನೆಗಳಿದ್ದು, ಕನ್ನಡ ಮಾತ್ರ ಭಾಷೆಯಾಗಿದೆ. ಇವುಗಳಲ್ಲಿ ಹೆಂಚಿನ, ಶೀಟಿನ ೪ ಗುಡಿಸಲು ಮನೆಗಳಿದ್ದು, ಇಲ್ಲಿ ಆಶ್ರಯ, ಇಂದಿರಾ ಆವಾಸ್ ಯೋಜನೆಯ ಸೌಲಭ್ಯದ ೨೩ ಫಲಾನುಭವಿಗಳಿದ್ದಾರೆ. ೧೩೪ ಜನಸಂಖ್ಯೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರವಾದರೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಬಂಡಿ, ಆಧುನಿಕ ವಾಹನಗಳಾದ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ. ಶೇಂಗಾ, ರಾಗಿ ಮುಖ್ಯ ಬೆಳೆಯಾಗಿದ್ದು, ಜೋಳ, ಭತ್ತ, ತೊಗರಿ, ಹುರುಳಿ ಬೆಳೆಗಳನ್ನು ಬೆಳೆಯುತ್ತಾರೆ. ೬ ಮನೆಗಳಲ್ಲಿ ಟ್ರೆಲರ್ ಬಳಸುತ್ತಾರೆ. ಹೆಂಗಸರು ಊಟದ ಎಲೆ ಕಟ್ಟುವುದು. ಹೂ ಕಟ್ಟುವುದು ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ಹಾಗೂ ಸೀಬಿ ತಾಲ್ಲೂಕು ಪಂಚಾಯಿತಿ ಹಾಗೂ ಚಿನ್ನೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ೩೧ ಮಕ್ಕಳಿದ್ದಾರೆ. ಒಬ್ಬರು ಶಿಕ್ಷಕರಿದ್ದು. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯಗಳ ಸೌಲಭ್ಯಗಳಿದ್ದು, ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೫೯.೬ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಕದರಿನರಸಿಂಹಸ್ವಾಮಿ ದೇವಾಲಯವಿದ್ದು, ದಸರಾ ಹಬ್ಬದಂದು ವಿಶೇಷ ಪೂಜೆ, ಆರತಿ ಇರುತ್ತದೆ. ಹಟ್ಟಿ ಲಕ್ಕಮ್ಮ, ಮಾರಮ್ಮನ ಪೌಳಿ ಇದ್ದು, ವಾರ್ಷಿಕವಾಗಿ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ದೀಪಾವಳಿ, ಗೌರಿ, ಗಣೇಶ, ಯುಗಾದಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ದೇವರಹಳ್ಳಿ

ದೇವರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೧೧ ಕಿ.ಮೀ. ದೂರದಲ್ಲಿದೆ ಸಿರಾ–ಕಡವೀಗೆರೆ–ಮೈಸೂರು ರಸ್ತೆಯಲ್ಲಿ ಕೃಷಿ ಫಾರಂನಿಂದ ಮುಂದೆ ಬಲಭಾಗದಲ್ಲಿ ೧ ಕಿ.ಮೀ. ದೂರದ ಹಾದಿ, ಇದೊಂದು ಚಿಕ್ಕನಹಳ್ಳಿಯ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೧೦೦.೩ ಹೆಕ್ಟರ್. ಇದಕ್ಕೆ ಗೊಲ್ಲರಹಟ್ಟಿ ಸೇರ್ಪಡೆಯಾಗಿದೆ.

ಕೆಂಪು ಮಿಶ್ರಿತ ಮರಳು ಭೂಮಿಯನ್ನು ಹೊಂದಿರುವ ಈ ಪರಿಸರದಲ್ಲಿ ಕಾಡು ಪ್ರಾಣಿಯಾದ ಮೊಲ, ನರಿ, ಮುಂಗಸಿ, ಬಾರುಬೆಕ್ಕು, ಉಡ ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಯಾದ ಹಸು, ಎತ್ತು, ನಾಯಿ, ಕುರಿ, ಮೇಕೆಗಳನ್ನು ಸಾಕಲಾಗುತ್ತಿದೆ. ಕೋಳಿ ಸಾಕು ಪಕ್ಷಿಯಾಗಿದೆ. ಕಾಡು ಪಕ್ಷಿಯಾಗಿ ಕೋಗಿಲೆ, ಕಾಗೆ, ಕೊಕ್ಕರೆ, ಗೊರವಂಕ, ಗೂಬ್ಬಚ್ಚಿ, ಗಿಡುಗ, ಹದ್ದು, ಗರುಡ ಕಂಡು ಬರುತ್ತವೆ. ೪೮.೪ ವಾರ್ಷಿಕ ಸರಾಸರಿ ಮಳೆ ಬೀಳುವ ಪ್ರದೇಶದಲ್ಲಿ ಬಿಸಿಲಿನ ತಾಪಮಾನ ಅಧಿಕ ಸರಾಸರಿ ೩೭ ಡಿ.ಸೆ. ಉಷ್ಣಾಂಶವಿದ್ದು, ಚಳಿ ೧೨ ಡಿ.ಸೆ. ಇರುತ್ತದೆ.

ದಿಣ್ಣೆ ಪ್ರದೇಶವಾಗಿದ್ದು, ಯಾವುದೇ ನೀರಾವರಿ ಸೌಕರ್ಯವಿಲ್ಲ ರೈತರು ಕೃಷಿಗಾಗಿ ೨೯ ಕೊಳವೆ ಭಾವಿಗಳನ್ನು ಅವಲಂಬಿಸಿದ್ದಾರೆ. ಕುಡಿಯಲು ಗ್ರಾಮ ಪಂಚಾಯತಿ ಮನೆಯಿಂದ ಕಿರುನೀರು ಸರಬರಾಜು ಅಡಿಯಲ್ಲಿ ೪ ಕಿರು ಟ್ಯಾಂಕ್ ನಲ್ಲಿ ನೀರನ್ನು ಬದಗಿಸಲಾಗುತ್ತೀದೆ. ಗ್ರಾಮದಲ್ಲಿ ೨

ಕೈಪಂಪುಗಳಿವೆ. ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ಕುರುಬ, ಆದಿ ಕರ್ನಾಟಕ, ನಾಯಕ ಜನಾಂಗಯು ಕಿರು ಸಮುದಾಯವಾಗಿವೆ. ಕನ್ನಡ ಇಲ್ಲಿನ ಆಡು ಭಾಷೆಯಾಗಿದೆ. ವಿವಿಧ ಪ್ರಕಾರದ ೧೪ ಮನೆಗಳಿದ್ದು, ಅವುಗಳು ಕಾಂಕ್ರಿಂಟ್, ಹೆಂಚಿನ, ಸೀಟಿನ ಸ್ವರೂಪದಲ್ಲಿವೆ. ಒಟ್ಟು ೬೨ ಜನಸಂಖ್ಯೆ ಹೊಂದಿದ್ದು ೩ ಮನೆಯಲ್ಲಿ ಶೌಚಾಲಯ ಬಳಕೆಯಿದೆ. ವಸತಿ ಯೋಜನೆಗಳಾದ ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮುಖ್ಯ ಆಹಾರ ರೊಟ್ಟಿ, ಅನ್ನ ಬಳಸುವವರಿದ್ದಾರೆ., ವಿಶೇಷ ಸಾಂದರ್ಭಿಕವಾಗಿ ಬಾಡೂಟ, ಪಾಯಿಸ್, ಹೋಳಿಗೆ ಮೋಜು ನೀಡುತ್ತದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನಗಳು ಇಲ್ಲವಾಗಿದ್ದು, ಕೃಷಿಗೆ ಟ್ರ್ಯಕ್ಟರ್ ಬಳಸುತ್ತಾರೆ. ಟೆಂಪೋ ಹಾಗೂ ದ್ವಿಚಕ್ರ ವಾಹನವು ಬಳಕೆಯಿದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಅಲಸಂದಿ, ತೊಗರಿ ಆಹಾರ ಬೆಳೆಗಳು ತೋಟಗಾರಿಕೆಯಾಗಿ ತೆಂಗು, ಹೂ ಬೆಳೆಯುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ತಾಲ್ಲೂಕು, ಜಿಲ್ಲಾ ಹಾಗೂ ಗ್ರಾಮ ಪಂಚಾಯಿತಿ ಕೇಂದ್ರ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರಗಳನ್ನು ಹೊಂದಿದೆ. ಒಂದು ಸ್ತ್ರೀಶಕ್ತಿ ಸ್ವಸಹಾಯ ಸಂಘವಿದ್ದು, ಆರ್ಥಿಕ ಸಬಲತೆಗೆ ಪ್ರೇರಕವಾಗಿದೆ. ಗ್ರಾಮದ ಶೈಕ್ಷಣಿಕವಾಗಿ ಚಿಕ್ಕನಹಳ್ಳಿ ಅವಲಂಬಿಸಿದ್ದು, ಸಾಕ್ಷರತಾ ಪ್ರಮಾಣ ೬೭.೨ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವಿಧವಾ ವೇತನ ಫಲಾನುಭವಿಗಳಿದ್ದಾರೆ. ಇಬ್ಬರು ಮಾತ್ರ ಮಾರಮ್ಮ, ತಿಮ್ಮಕ್ಕ ದೇವರ ಗುಡಿಗಳಿವೆ. ಹೊರಭಾಗದಲ್ಲಿ ಕಾಡು ಗೊಲ್ಲರ ಹಟ್ಟಿಗೆ ಸಂಬಂಧಿಸಿದಂತೆ ಜುಂಜಪ್ಪನ ಗುಡಿ ಇದ್ದು, ದೀಪಾವಳಿ ಸಂದರ್ಭದಲ್ಲಿ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಮಾರಮ್ಮನ ಜಾತ್ರೆ ವಾರ್ಷಿಕವಾಗಿ ನಡೆದು, ಬಲಿ, ಆರತಿ, ಬಾನದ, ಹರಕೆ ಸಂಪ್ರದಾಯವಿದೆ. ವಿಶೇಷವಾಗಿ ದೀಪಾವಳಿ, ಯುಗಾದಿ, ಗೌರಿ ಗಣೇಶ, ಶಿವರಾತ್ರಿ, ಮಹನವಮಿ ಹಬ್ಬಗಳನ್ನು ಆಚರಿಸುವ ಸಂಪ್ರದಾಯವಿದೆ.

## ದೇವರಹಳ್ಳಿ ಗೊಲ್ಲರಹಟ್ಟಿ

ದೇವರಹಳ್ಳಿ ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಸಿರಾದಿಂದ ಪೂರ್ವಕ್ಕೆ, ಸಿರಾ ಮೈಸೂರು ರಸ್ತೆ ಬಲ ತಿರುವಿನಲ್ಲಿರುವ ಈ ಹಳ್ಳಿ ಕಾಡುಗೊಲ್ಲರ ಬುಡಕಟ್ಟು ಗ್ರಾಮವಾಗಿದೆ. ಇದರ ಸಮೀಪದಲ್ಲೇ ದೇವರಹಳ್ಳಿ ಎಂಬ ಗ್ರಾಮವಿದ್ದು, ಅದರ ಹೆಸರಲ್ಲೇ ಮತ್ತೊಂದು ಸಾಕುಗೊಲ್ಲರಹಟ್ಟಿ ನಿರ್ಮಾಣವಾಗಿದೆ. ಜುಂಜಪ್ಪ ದೇವರು ಇರುವುದರಿಂದ ದೇವರಹಟ್ಟಿ ಎಂದು ಕರೆಯಲಾಗಿದೆ. ಚಿಕ್ಕನಹಳ್ಳಿ ಮುಖ್ಯ ಗ್ರಾಮಕ್ಕೆ ಸೇರಿದ್ದು ಇದರ ಭೌಗೋಳಿಕ ವಿಸ್ತೀರ್ಣ ೨೮ ಹೆಕ್ಟರ್ ಆಗಿದೆ.

ಮರಳು ಮಿಶ್ರಿತ ಕುಂಪು ಮಣ್ಣು ಹೊಂದಿದ್ದು, ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಮುಂಗಸಿ, ಉಡ ಮೊದಲಾದ ಕಾಡು ಪ್ರಾಣಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕಾಡುಗೊಲ್ಲರು ಹೆಚ್ಚಿನ ಸಂಖ್ಯೆಯಲ್ಲಿ ಕುರಿ, ಮೇಕೆ ಸಾಕಿದ್ದಾರೆ. ವ್ಯವಸಾಯಕ್ಕೆ ಹಸು, ಎತ್ತು ಸಾಕಿದ್ದಾರೆ. ಗ್ರಾಮದಲ್ಲಿ ಕತ್ತೆ ಮತ್ತು ನಾಯಿಗಳು ಇವೆ. ಸಾಕು ಪಕ್ಷಿಯಾಗಿ ಕೋಳಿಯನ್ನು ಸಾಕಲಾಗಿದೆ. ಈ ಪರಿಸರದಲ್ಲಿ ಕಾಡು ಪಕ್ಷಿಯಾದ ಕೊಕ್ಕರೆ, ಕಾಗೆ, ಗಿಳಿ, ಗೊರವಂಕ, ಗೂಬೆ, ಹದ್ದು, ಗರುಡ ಕಂಡುಬಂದರೆ. ಗುಬ್ಬಚ್ಚಿ ವಿರಳವಾಗಿ ಕಾಣುತ್ತವೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ೪೮೧.೪ ರಷ್ಟು ಇದ್ದು, ಉಷ್ಣಾಂಶ ೩೮ ಡಿ.ಸೆಂ. ಚಳಿ ೧೨ ಡಿ.ಸೆಂ. ಆಗಿರುತ್ತದೆ ಈ ಪರಿಸರದಲ್ಲಿ ೪ ಕೊಳವೆ ಭಾವಿಗಳಿದ್ದು, ಕೃಷಿಗೆ ಬಳಕೆಯಾಗುತ್ತವೆ. ಉಳಿದಂತೆ ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರುನೀರು ಯೋಜನೆಯಲ್ಲಿ ನೀರು ಪೂರೈಸಲಾಗುವುದು ಮೂರು ಕಿರು ಟ್ಯಾಂಕ್‌ಗಳಿವೆ. ಕೈ ಪಂಪು ಇದೆ. ಕಾಡುಗೊಲ್ಲರ ೩೫ ಮನೆಗಳಿದ್ದು, ಕಾಂಕ್ರೀಟ್, ಕಲ್ಲಿನ, ಹೆಂಚಿನ ಹಾಗೂ ಸೀಟಿನ ಸ್ವರೂಪದಲ್ಲಿವೆ. ಇಲ್ಲಿನ ಜನಸಂಖ್ಯೆ ೧೬೮ ಆಗಿದ್ದು, ೧೦ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ಆಶ್ರಯ, ಜನತಾ ಇಂದಿರಾ ಆವಾಸ್ ವಸತಿ ಯೋಜನೆಯ ೧೩ ಫಲಾನುಭವಿಗಳಿದ್ದಾರೆ ಭಾಗ್ಯ ಜ್ಯೋತಿ ಉಚಿತ ವಿದ್ಯುತ್ ಯೋಜನೆಯ ಫಲಾನುಭವಿಗಳು ಹೆಚ್ಚಿದ್ದಾರೆ.

ರಾಗಿ ಮುದ್ದೆ ಮುಖ್ಯ ಆಹಾರ, ಅನ್ನ, ರೊಟ್ಟಿ, ಉಪ ಆಹಾರ ಬಾಡೂಟ, ಪಾಯಿಸ, ಹೋಳಿಗೆ ಸಾಂದರ್ಭೀಕ ಯೋಜನೆವಾಗಿವೆ. ಸಾಂಪ್ರದಾಯಿಕ ವಾಹನವಾಗಿ ಎತ್ತಿನ ಬಂಡಿ, ಆಧುನಿಕವಾಗಿ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳು ಬಳಕೆಯಿದೆ. ಶೇಂಗಾ ಮುಖ್ಯ ಆಹಾರ ಉಪಬೆಳೆಗಳಾಗಿ ರಾಗಿ, ಜೋಳ, ಅಲಸಂದಿ, ತೊಗರಿ ಬೆಳೆಯುತ್ತಾರೆ ಶೇಂಗಾ ಮತ್ತು ಕುರಿ, ಮೇಕೆ ವ್ಯಾಪಾರವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ, ತಾಲ್ಲೂಕು ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠ ಶಾಲೆ ಇದ್ದು, ೨೭ ಮಕ್ಕಳಿದ್ದು, ೨ ಶಿಕ್ಷಕರಿದ್ದಾರೆ. ಬಿಸಿಊಟ, ಕ್ಷೀರಭಾಗ್ಯ,

ಶೌಚಾಲಯ, ಸಮವಸ್ತ್ರ, ಪಠ್ಯಪುಸ್ತಕ ವಿತರಿಸಲಾಗಿದೆ ಸಾಕ್ಷರತೆ ೬೭.೨ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಜುಂಜಪ್ಪ, ಆಂಜನೇಯ ದೇವರ ಗುಡಿಗಳಿವೆ. ದೀಪಾವಳಿ ಸಂದರ್ಭದಲ್ಲಿ ೭ ದಿನಗಳ ಕಾಲ ಜುಂಜಪ್ಪನ ಜಾತ್ರೆ ನಡೆಯುತ್ತದೆ. ಆಂಜನೇಯನಿಗೆ ಶ್ರಾವಣ ಮಾಸದಲ್ಲಿ ಆರತಿ ಹರಕೆ ಸಂಪ್ರದಾಯವಿದೆ. ಕರಿಯಮ್ಮ ದೇವರಿಗೆ ಆರತಿ, ಬಾನ ಹಾಗೂ ಬಲಿ ಕೊಡುವ ಹರಕೆ ಸಂಪ್ರದಾಯವಿದೆ. ದೀಪಾವಳಿ, ಶಿವರಾತ್ರಿ, ಯುಗಾದಿ, ಮಹಾನವಮಿ, ಗೌರಿ ಹಬ್ಬ ವಿಶೇಷ ಹಬ್ಬಗಳು.

## ದುರ್ಗದಹಳ್ಳಿ

ದುರ್ಗದಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೫ ಕಿ.ಮೀ. ದೂರದಲ್ಲಿದೆ. ತುಮಕೂರು ಸಿರಾ ರ್‍ಹ್ವಾಯ ಹೆದ್ದಾರಿಯ ಬಳಿ, ಜೋಗಿಹಳ್ಳಿಯಲ್ಲಿ ಸಿರಾ ಕಡೆಯಿಂದ ಬಲಕ್ಕೆ ತಿರುಗಿ ೪ ಕಿ.ಮೀ. ದಊರಕ್ರಮಿಸಿದರೆ ದುರ್ಗದಹಳ್ಳಿ ಇದೆ. ದೊಡ್ಡ ಶೀಬಿಯ ಮಜರೆ ಗ್ರಾಮವಾಗಿದ್ದು, ಮೂಲ ಗ್ರಾಮ ಸೀಬಿಗೆ ೨೦೭೩.೩೪ ಹೆಕ್ಟರ್ ಭೌಗೋಳಿಕ ವಿಸ್ತೀರ್ಣದಲ್ಲಿ ಹಂಚಿಕೆಯಾಗಿದೆ. ಬಿಳಿ ಮಿಶ್ರಿತ ಮರಳು ಮಣ್ಣು ಹೊಂದಿರುವ ಈ ಭೂ ಪ್ರದೇಶದ ಬಳಿ ಸೀಬಿ ಗುಡ್ಡ ಇದೆ. ಈ ಕಾರಣದಿಂದಲೇ ಇರಬಹುದು ದುರ್ಗ ಎಂದೇ ಭಾವಿಸಿ, ದುರ್ಗದಹಳ್ಳಿ ಎಂದು ಕರೆದಿದ್ದಾರೆ.

ನರಿ, ತೋಳ, ಮೊಲ, ಜಿಂಕೆ, ಮುಂಗಸಿ ಈ ಪರಿಸರದ ಕಾಡು ಪ್ರಾಣಿಗಳು, ನವಿಲು, ಗಿಳಿ, ಗೊರವಂಕ, ಬೆಳವ, ಗರುಡ, ಹದ್ದು. ಈ ಮೊದಲಾದ ಕಾಡು ಪ್ರಾಣಿಗಳಿವೆ. ಕೃಷಿ ಮೂಲದ ಹಿನ್ನೆಲೆಯಲ್ಲಿ ಹಸು, ಎತ್ತು, ಎಮ್ಮೆ, ಕುರಿ, ಆಡುಗಳನ್ನು ಸಾಕುತ್ತಾರೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ೪೬೫ ಹೆಕ್ಟರ್ ಭೌಗೋಳಿಕ ವಿಸ್ತೀರ್ಣ ಹೊಂದಿರುವ ಈ ಗ್ರಾಮ ೧೨ ಡಿ.ಸೆ. ಚಳಿ ೩೭.೩೧೨ ಡಿ.ಸೆ. ಬಿಸಿಲಿನ ತಾಪಮಾನ ಹೊಂದಿದೆ. ಹುಂಜನಹಳ್ಳಿ ಈ ಗ್ರಾಮದ ಸಮೀಪದಿಂದ ಹಾದು ಹೋಗುತ್ತದೆ. ಆದರೂ ನೀರಿಗೆ ತೊಂದರೆಯಿದ್ದು, ಸೀಬಿ ಗ್ರಾಮ ಪಂಚಾಯಿತಿಯಿಂದ ಕೊಳಾಯಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಗ್ರಾಮ ಪರಿಸರದಲ್ಲಿ ೪೦ ಕೊಳವೆ ಭಾವಿಗಳಿವೆ. ೩ ಚಿಕ್ಕ ಟ್ಯಾಂಕರ್‌ಗಳಲ್ಲಿ, ಎರಡು ಕೈಪಂಪುಗಳಲ್ಲಿ ನೀರನ್ನು ಸರಬರಾಜು ಮಾಡಲಾಗುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ವೀರಶೈವ, ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು, ಕುಂಚಿಟಿಗ, ಹಳ್ಳಿಕಾರ, ಆದಿ ಕರ್ನಾಟಕ, ಆದಿ ದ್ರಾವಿಡ ಜನಾಂಗಗಳು ಸಣ್ಣ ಸಮುದಾಯವಾಗಿವೆ. ಕನ್ನಡ ಇಲ್ಲಿನ ಸಾಮಾನ್ಯ ಆಡು ಭಾಷೆಯಾಗಿದೆ. ಕಾಂಕ್ರೀಟ್, ಕಲ್ಲಿನ, ಸೀಟಿನ, ಹೆಂಚಿನ ಒಟ್ಟು ೯೮ ಮನೆಗಳಿದ್ದು, ೫೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಜನತಾ ಅಂಬೇಡ್ಕರ್ ಆವಾಸ್, ಇಂದಿರಾ ಆವಾಸ್ ವಸತಿ ಸೌಲಭ್ಯದ ೨೩ ಫಲಾನುಭವಿಗಳು, ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಫಲಾನುಭವಿಗಳು ಇದ್ದಾರೆ.

ರಾಗಿ ಮುದ್ದೆ ಗ್ರಾಮದ ಮುಖ್ಯ ಆಹಾರ ಅನ್ನ, ರೊಟ್ಟಿ, ಬಳಸುವವರಿದ್ದಾರೆ ಬಾಡೂಟ, ಹೋಳಿಗೆ, ಪಾಯಸ ವಿಶೇಷ ಭೋಜನದ ವ್ಯವಸ್ಥೆಯೂ ಇದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಲಾರಿ, ದ್ವಿಚಕ್ರವಾಹನಗಳಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಅವರೆ, ತೊಗರಿ, ಹುರಳಿ ಆಹಾರ ಬೆಳೆಯಿದ್ದು. ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ ಬೆಳೆಗಳಿವೆ. ಹುಣಸೆಹಣ್ಣು ಶೇಂಗಾ ವಾಣಿಜ್ಯ ಬೆಳೆಯಾಗಿವೆ.

ಹೆಣ್ಣು ಮಕ್ಕಳು ಬೀಡಿಸುತ್ತುವುದು ಊಟದ ಎಲೆ ತಯಾರಿಸುವುದು, ರಾಗಿ ಮಿಲ್ ಗೃಹ ಕೈಗಾರಿಕೆಗಳಾಗಿವೆ. ಸಿರಾ ವಿಧಾನಸಭಾ ಕೇಂದ್ರ, ಸೀಬಿ ತಾಲ್ಲೂಕು ಪಂಚಾಯಿತಿ ಹಾಗೂ ಸೀಬಿ ಗ್ರಾಮ ಪಂಚಾಯಿತಿಗೆ ಸೇರಿರುವ ಈ ಹಟ್ಟಿ, ಚಿತ್ರದುರ್ಗ ಲೋಕಸಭೆ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ ವ್ಯಪ್ತಿಗೆ ಸೇರಿದೆ. ರಾಜಣ್ಣ ಈ ಗ್ರಾಮದ ಪಂಚಾಯ್ತಿ ಸದಸ್ಯರು.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿದ್ದು, ಸ್ವಸಹಾಯ ಸಂವರ್ಧನೆಯಲ್ಲಿ ತೊಡಗಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠ ಶಾಲೆ ಇದ್ದು, ಅಂಗನವಾಡಿಯಲ್ಲಿ ೨೩ ಮಕ್ಕಳು, ಒಬ್ಬರು ಶಿಕ್ಷಕಿ ಶಾಲೆಯಲ್ಲಿ ೩೯ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ ಹಾಗೂ ಉಚಿತ ಪುಸ್ತಕ ಸೌಲಭ್ಯಗಳಿವೆ. ಶಿಕ್ಷಣ, ಕೆಇಬಿ, ಕಂದಾಯ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ಖಾಲಿ ನೌಕರರಿದ್ದಾರೆ. ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನ ಸೌಲಭ್ಯ ಫಲಾನುಭವಿಗಳಿದ್ದು. ೪ ಅಂಗಡಿಗಳಿವೆ. ತಿಮ್ಮಪ್ಪ, ಆಂಜನೇಯ ಗ್ರಾಮದ ದೇವಾಲಯಗಳಾಗಿದ್ದು, ಗ್ರಾಮ ದೇವತೆ ಮಾರಮ್ಮನ ಉತ್ಸವ, ಆರತಿ, ಬಾನ, ಬ್ಯಾಟೆಯ ಆರಕೆ, ಸಂಪ್ರದಾಯಗಳಿವೆ.

ಯುಗಾದಿ, ಗೌರಿ, ಮಹಾನವಮಿ, ಶಿವರಾತ್ರಿ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ದೊಡ್ಡ ಚಿಕ್ಕನಹಳ್ಳಿ

ದೊಡ್ಡ ಚಿಕ್ಕನಹಳ್ಳಿ ಸಂಪೂರ್ಣ ಆದಿಕರ್ನಾಟಕ ಜನಾಂಗದವರೇ ವಾಸಿಸುತ್ತಿರುವ ಸಿರಾ ತಾಲ್ಲೂಕಿನ ಏಕೈಕ ಕಂದಾಯ ಗ್ರಾಮವಾಗಿದೆ. ಸಿರಾ ತಾಲ್ಲೂಕು ಕಳ್ಳಂಬೆಳ್ಳ ಹೋಬಳಿಗೆ ಸೇರಿದ ಈ ಗ್ರಾಮ ಸಿರಾದಿಂದ ಪೂರ್ವಕ್ಕೆ ೨೦ ಕಿ.ಮೀ. ದೂರದ ಈ ಹಳ್ಳಿ ಕಾಳಾಪುರ ಮಾಳನಹಳ್ಳಿ ಮಾರ್ಗದಲ್ಲಿದೆ

ಇದರ ಭೌಗೋಳಿಕ ವಿಸ್ತೀರ್ಣ ೨೩೮.೨೮ ಹೆಕ್ಟರ್ ಆಗಿದ್ದು. ದೊಡ್ಡ ಚಿಕ್ಕಣ್ಣ ಎಂಬ ವ್ಯಕ್ತಿ ಹೆಸರಿನಲ್ಲೇ ಗ್ರಾಮ ರಚನೆಯಾಗಿದೆ. ಚಿಕ್ಕನಹಳ್ಳಿ ಎಂಬ ಹೆಸರಿನ ಹಳ್ಳಿಗಳು ಸಿರಾ ತಾಲ್ಲೂಕಿನಲ್ಲಿ ವಿಶೇಷವಾಗಿ ಕಳ್ಳಂಬೆಳ್ಳ ಹೋಬಳಿಯಲ್ಲಿ ೨ ಗ್ರಾಮಗಳಿದ್ದು ಗ್ರಾಮಗಳನ್ನು ಗುರುತಿಸುವುದಕ್ಕೆ ಹಿನ್ನೆಲೆಯಾಗಿ ಇಲ್ಲಿ ದೊಡ್ಡ ಹೆಸರನ್ನು ವಿಶೇಷವಾಗಿ ಬಳಸಲಾಗಿದೆ. ಇನ್ನೊಂದು ಚಿಕ್ಕನಹಳ್ಳಿ ಸಿರಾ–ಕಳ್ಳಂಬೆಳ್ಳ ನಡುವಿನ ರ್‍ಾಜ್ಯ ಹೆದ್ದಾರಿಯಲ್ಲಿದೆ.

ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ಪೊದೆ, ಮರಗಿಡಗಳಿಂದ ಕೂಡಿದ ಬಯಲು ಸಿಮೆಯಾಗಿದೆ.

ಈ ಪರಿಸರದಲ್ಲಿ ಕಾಡು ಪ್ರಾಣಿಯಾದ ನರಿ, ತೋಳ, ತೊಲ, ಮುಂಗಸಿ, ಉಡ, ಪಾರ್ ಬೆಕ್ಕುಗಳನ್ನು ಹೊಂದಿದ್ದು, ಗ್ರಾಮದಲ್ಲಿ ಹೈನುಗಾರಿಕೆ ಹಾಗೂ ಕೃಷಿ ಬದುಕಿಗಾಗಿ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ನಾಯಿ ಹಾಗೂ ಬೆಕ್ಕುಗಳು ಸಾಕು ಪ್ರಾಣಿಯಾಗಿವೆ. ಅಂತೆಯೇ ಗಿಳಿ, ಗೂಬೆ, ಗುಬ್ಬಚ್ಚಿ, ಗೊರವಂಕ, ಕೋಗಿಲೆ, ಕೊಕ್ಕರೆ, ಬೆಳವ, ಹದ್ದು, ಗರುಡ, ಕೌಜಗ ಈ ಬಗೆಯ ಹಕ್ಕಿಗಳು ಕಾಡು ಪಕ್ಷಿಗಳಾಗಿವೆ. ಕೋಳಿ ಸಾಕು ಪಕ್ಷಿಯಾಗಿದೆ.

ಬಯಲು ಬಿಸಿಲಿನ ಪ್ರದೇಶ ಈ ಪರಿಸರದಲ್ಲಿ ಮಳೆ ೪೬೦ ಮಿ.ಮಿ ಇದ್ದು, ಬಿಸಿಲು ೩೧೨ ಡಿ.ಸೆಂ. ಚಳಿ ೧೨ ಡಿ.ಸೆಂ. ಆಗಿದೆ. ವಾಡಿಕೆ ಮಳೆಯ ನೀರು ಕೃಷಿ ಬದುಕಿಗೆ ಸಾಕಾಗುವುದಿಲ್ಲ ಹಾಗಾಗಿ ರೈತಾಪಿ ಜನ ಗಂಗಾ ಕಲ್ಯಾಣ ಯೋಜನೆ ಅಡಿ ೧೨ ಕೊಳವೆ ಭಾವಿಗಳನ್ನು ಕೊರೆಯಲಾಗಿದೆ. ಕುಡಿಯಲು ಗ್ರಾಮ ಪಂಚಾಯತಿ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಕೆ ಮಾಡಲಾಗುತ್ತಿದೆ. ಗ್ರಾಮದಲ್ಲಿ ೩ ಟ್ಯಾಂಕರ್‌ಗಳಿದ್ದು, ೧ ಕೈಪಂಪು ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿ ಕರ್ನಾಟಕ ಜನಾಂಗ ಮಾತ್ರ ವಾಸವಾಗಿದ್ದು. ಕಂದಾಯ ಗ್ರಾಮವಾಗಿರುವುದು ಇದರ ವಿಶೇಷವಾಗಿದೆ ಗ್ರಾಮದ ಭಾಷೆ ಕನ್ನಡವಾಗಿದೆ. ವಿವಿಧ ಪ್ರಾರದ ಒಟ್ಟು ೩೪ ಮನೆಗಳಿದ್ದು ಅವು ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಇವುಗಳಲ್ಲಿ ೧೨ ಮನೆಗಳು ವಸತಿ ಯೋಜನೆಯಾದ ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್‌ವಸತಿ ಯೋಜನೆಯ ಅಡಿಯಲ್ಲಿ ರಚನೆಯಾಗಿವೆ. ಉಚಿತ ಯೋಜನೆ ಭಾಗ್ಯಜ್ಯೋತಿ ಅಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆದಿದ್ದಾರೆ. ೧೩ ಮನೆಯಲ್ಲಿ ಶೌಚಾಲಯದ ಬಳಕೆ ಇದೆ. ೧೪೩ ಜನಸಂಖ್ಯೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರ, ಅನ್ನ, ರೊಟ್ಟಿ, ಬಳಸುವವರಿದ್ದಾರೆ. ಬಾಡೂಟ, ಪಾಯಿಸ್, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನಗಳಾಗಿವೆ. ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಬಂಡಿ, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳು ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆ, ರಾಗಿ, ಭತ್ತ, ಜೋಳ, ತೊಗರಿ, ಹುರುಳಿ ಆಹಾರ ಬೆಳೆಗಳು, ತೋಟಗಾರಿಕೆಯಾಗಿ ತೆಂಗು, ಅಡಿಕೆ, ಸಪವಂತಿ, ರೇಷ್ಮೆ ಬೆಳೆಗಳನ್ನು ಬೆಳೆಯುತ್ತಾರೆ.

ಶೇಂಗಾ, ಹೋಂಗೆಬೀಜ, ತೆಂಗು ಮುಖ್ಯ ವ್ಯಾಪಾರಿ ಸರಕಾಗಿವೆ. ಹುಣಸೆ ಹಣ್ಣಿನ ವ್ಯಾಪಾರ ಇದೆ. ಶಿಕ್ಷಕರು, ಸಾರಿಗೆ, ಕಂದಾಯ ಇಲಾಖೆಗೆ ಸೇರಿದ ಸರ್ಕಾರಿ ನೌಕರರಿದ್ದಾರೆ. ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ, ಭೂಪಸಂದ್ರ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕೇಂದ್ರಗಳಾಗಿದ್ದು, ಚಿತ್ರದುರ್ಗ ಲೋಕಸಭಾ ಕೇಂದ್ರದ ವ್ಯಾಪ್ತಿಗೆ ಒಳಪಟ್ಟಿದೆ. ಸಿರಾ ಬ್ರಹ್ಮಸಂದ್ರ, ಕಳ್ಳಂಬೆಳ್ಳ ಮಾರ್ಗವಾಗಿ ರಸ್ತೆ ಸಂಪರ್ಕವಿದೆ. ಗ್ರಾಮದಲ್ಲಿ ಒಂದು ಸ್ತ್ರೀಶಕ್ತಿ ಕೇಂದ್ರವಿದ್ದು, ಸ್ತ್ರೀಯರ ಸಬಲೀಕರಣಕ್ಕೆ ಪ್ರೇರಕವಾಗಿದೆ. ಅಂಗನವಾಡಿ ಕೇಂದ್ರ ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ೨೪ ಮಕ್ಕಳಿದ್ದಾರೆ. ಒಬ್ಬರು ಶಿಕ್ಷಕರಿದ್ದು, ಶಾಲೆಯಲ್ಲಿ ಬಿಸಿಊಟ, ಕ್ಷೀರಭಾಗ್ಯ, ಶೌಚಾಲಯ ಸಮವಸ್ತ್ರ, ಪುಸ್ತಕಗಳು ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೫೭.೬ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ದಾಪ್ಯ ವೇತನ, ವಿಕಲ ಚೇತನ ವಿಧವಾ ವೇತನದ ೮ ಫಲಾನುಭವಿಗಳಿದ್ದಾರೆ. ೨ ಅಂಗಡಿಗಳಿವೆ. ಮಾರಮ್ಮ ಗ್ರಾಮ ದೇವತೆಯಾಗಿದ್ದು, ಪುಟ್ಟ ಪೌಳಿ ಇದೆ. ಆಷಾಡ ಮಾಸದಲ್ಲಿ ಮಾರಮ್ಮನ ಊರಹಬ್ಬವಿದ್ದು, ಆರತಿ, ಬಾನ, ಬ್ಯಾಟೆ, ಆರತಿ

ಸಂಪ್ರದಾಯವಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದೊಡ್ಡ ಅಗ್ರಹಾರ

ದೊಡ್ಡ ಅಗ್ರಹಾರವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ–ಹೊನ್ನೇನಹಳ್ಳಿ–ಕಳ್ಳಂಬೆಳ್ಳ ಮಾರ್ಗದಲ್ಲಿ ಮತ್ತು ಸಿರಾ–ಚೇಳೂರು ರಸ್ತೆಯಲ್ಲಿ ಕಳ್ಳಂಬೆಳ್ಳ ಗೇಟಿನಿಂದ ಬಲಭಾಗಕ್ಕೆ ೩ ಕಿಮೀ ದೂರದಲ್ಲಿದೆ. ಇದು ಸಿರಾದಿಂದ ೧೬ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೨೯೮ ಹೆಕ್ಟೇರ್‌ಗಳಾಗಿವೆ.

ದೊಡ್ಡ ಅಗ್ರಹಾರ ಮೂಲತಃ ದತ್ತಿ ರೂಪದ ಹಳ್ಳಿಯಾಗಿದ್ದು ಬ್ರಾಹ್ಮಣರ ಪ್ರಾಬಲ್ಯದ ಗ್ರಾಮವಾಗಿತ್ತೆಂದೂ ವಿದ್ಯೆ, ವೈದ್ಯಕೀಯ, ನ್ಯಾಯ ತೀರ್ಮಾನಗಳಿಗೆ ಈ ಗ್ರಾಮ ಹೆಸರಾಗಿತ್ತೆಂದು ಈ ಗ್ರಾಮದ ಹಿರಿಯರಾದ ಚನ್ನೇಗೌಡರು ವಿವರಿಸಿ, ಮೊದಲು ದೊಡ್ಡ ಅಗ್ರಹಾರವಾಗಿ ನಂತರ ಕೆರೆಯ ಮುಂಭಾಗಕ್ಕೆ ಮತ್ತೊಂದು ಗ್ರಾಮ ರಚನೆಯಾದಾಯ ಅದಕ್ಕೆ ಚಿಕ್ಕ ಅಗ್ರಹಾರ ಎಂದು ಕರೆದಿದ್ದಾರೆ. ಒಂದು ಕಾಲದಲ್ಲಿ ಬ್ರಾಹ್ಮಣರು ಈ ಗ್ರಾಮದ ಪ್ರಭಾವೀ ಜನಾಂಗವಾಗಿದ್ದು ಇಂದು ಅವರ ಸಂಖ್ಯೆ ತಗ್ಗಿದೆ. ಮಾತ್ರವಲ್ಲ ಇಲ್ಲಿನ ಹೊಲ–ಗದ್ದೆಗಳಿಗೆ ಇಂದಿಗೂ ಬ್ರಾಹ್ಮಣರ ಶ್ಯಾನುಭೋಗರ ಬಾವಿ, ಹೊಲ, ಗದ್ದೆ ಎಂದು ಕರೆಯುವ ಪದ್ಧತಿಯಿದೆ. ಹಾರುವರ ಊರು > ಹಾರವರ ಕೇರಿಯಿಂದಾಗಿ > ಅಗ್ರಹಾರ ಆಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳುಮಿಶ್ರಿತ ಕೆಂಪು ಮತ್ತು ಎರೆಮಣ್ಣಿನಿಂದ ಕೂಡಿದೆ. ಇಲ್ಲಿ ಯಾವುದೇ ಬೆಟ್ಟ–ಗುಡ್ಡಗಳು ಇರುವುದಿಲ್ಲ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಬಿಸಿಲಿನಿಂದ ಕೂಡಿದ ಹವಾಮಾನವಿರುವ ಗ್ರಾಮದಲ್ಲಿ ವಾರ್ಷಿಕ ಸರಾಸರಿ ಮಳೆ ೪೬೦.೯ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮದಲ್ಲಿ ಒಂದು ಕೆರೆಯಿದ್ದು ಮಳೆಗಾಲದಲ್ಲಿ ನೀರಿನ ಪ್ರಮಾಣವನ್ನು ಹೊಂದಿರುತ್ತದೆ. ದೊಡ್ಡ ಅಗ್ರಹಾರದ ಕೆರೆ ಸುತ್ತಲ ಹತ್ತಾರು ಹಳ್ಳಿಗಳಿಗೆ ಆಶ್ರಯವಾಗಿದ್ದು ತುಂಬಿದಾಗ ೧೦ ಕಿಮೀ ವರೆಗೆ ನೀರು ಬಳಕೆಯಾಗುತ್ತದೆ. ೨೦೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಕುಡಿಯುವ ನೀರಿನ ವ್ಯವಸ್ಥೆಗೆ ಸಿಸ್ಟರ್ನ್ (ಮಿನಿಟ್ಯಾಂಕ್) ಮತ್ತು ಕೈಪಂಪುಗಳಿವೆ.

ಗ್ರಾಮದಲ್ಲಿ ಒಟ್ಟು ೪೫೨ ಮನೆಗಳಿದ್ದು ೨೦೩೪ ಜನಸಂಖ್ಯೆಯನ್ನು ಹೊಂದಿದೆ. ಇವರ ಭಾಷೆ ಕನ್ನಡವಾಗಿದೆ. ಇಲ್ಲಿ ಆದಿಕರ್ನಾಟಕ, ಕುಂಚಿಟಿಗ, ಸಾದರು, ಶೆಟ್ಟಿ ಬಣಜಿಗ, ನಾಯಕ, ಬ್ರಾಹ್ಮಣ, ವೈಶ್ಯ, ದರ್ಜಿಗ, ಈಜಿಗ, ಕೊರಮ, ವೀರಶೈವ, ಮುಸ್ಲಿಮರ ಮನೆಗಳಿವೆ. ಇಲ್ಲಿನ ಮನೆಗಳು ಹೆಂಚಿನ, ಶೀಟಿನ ಮತ್ತು ಕಾಂಕ್ರೀಟ್ ಸ್ವರೂಪದಲ್ಲಿವೆ. ಇಲ್ಲಿನ ಮನೆಗಳು ಆಶ್ರಯ, ಇಂದಿರಾ ಆವಾಸ್ ವಸತಿ ಸೌಕರ್ಯ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದಿದ್ದು ೨೦೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಮಿನಿಟೆಂಪೋ, ಲಾರಿಗಳು, ದ್ವಿಚಕ್ರ ವಾಹನಗಳ ಬಳಕೆಯಿದೆ. ಗ್ರಾಮದಲ್ಲಿ ಕಚ್ಚಾರಸ್ತೆಯಿದೆ.

ಕೃಷಿಯೇ ಇಲ್ಲಿನ ಜನರ ಮುಖ್ಯ ಉದ್ಯೋಗವಾಗಿದೆ. ಶೇಂಗಾ, ರಾಗಿ, ಭತ್ತ, ಜೋಳ, ಸೂರ್ಯಕಾಂತಿ, ನವಣೆ, ತೊಗರಿ, ತೆಂಗು, ಅಡಿಕೆ. ಹುಣಸೆ ಇತ್ಯಾದಿಗಳು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಈ ಗ್ರಾಮದಲ್ಲಿ ಕೃಷಿಯೇತರ ಆರ್ಥಿಕ ಗಳಿಕೆಗೆ ಆಧುನಿಕ ಡೈರಿಯನ್ನು ಹೊಂದಿದೆ. ಗ್ರಾಮದಲ್ಲಿ ಸುಮಾರು ೧೨–೧೫ ಜನರು ಸರ್ಕಾರಿ ಸೇವೆಯಲ್ಲಿದ್ದಾರೆ. ಬೃಹತ್ ಪ್ರಮಾಣದ ಕೈಗಾರಿಕೆಗಳು ಕಂಡುಬರದಿದ್ದರೂ ಗಿರಣಿ ಮಿಲ್, ಊಟದ ಎಲೆ ತಯಾರಿಕೆ, ಗಂಧದಕಡ್ಡಿ ತಯಾರಿಕೆ, ಬೀಡಿ ಸುತ್ತುವುದು, ಬಟ್ಟೆ ಹೊಲಿಯುವುದು ಕಂಡುಬರುತ್ತದೆ.

ಆಡಳಿತಾತ್ಮಕವಾಗಿ ದೊಡ್ಡ ಅಗ್ರಹಾರ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡ ಅಗ್ರಹಾರ ಗ್ರಾಮ ಪಂಚಾಯ್ತಿ ಕೇಂದ್ರವೂ ಆಗಿದ್ದು ೫ ಜನ ಪಂಚಾಯ್ತಿ ಸದಸ್ಯರಿದ್ದಾರೆ. ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ, ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ, ಕಳ್ಳಂಬೆಳ್ಳ ಪೊಲೀಸ್ ಠಾಣೆ ಮತ್ತು ವಿದ್ಯುತ್ ಮಂಡಳಿ, ಸಿರಾ ತಹಸೀಲ್ದಾರ್ ಕಛೇರಿ, ದೊಡ್ಡ ಅಗ್ರಹಾರ ಅಂಚೆ ಕಛೇರಿಯನ್ನು ಹೊಂದಿದೆ. ಸಾರಿಗೆ ಸಂಪರ್ಕ ಮತ್ತು ಚರದೂರವಾಣಿಗಳಾದ ಮೊಬೈಲ್‌ಗಳನ್ನು ಹೊಂದಿದೆ. ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದ್ದು ಇಲ್ಲಿ ಬಗೆಹರಿಯದ ಸಮಸ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳುತ್ತಾರೆ.

ಈ ಗ್ರಾಮದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯಿದ್ದು ಕೇಂದ್ರ ಸರ್ಕಾರದ ಕೆನರಾ ಬ್ಯಾಂಕ್ ಉಪಶಾಖೆಯನ್ನು ಹೊಂದಿದೆ.

ಸ್ತ್ರೀಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಗ್ರಾಮ ಲೆಕ್ಕಿಗರ ಕಛೇರಿಯಿದೆ. ಶಿಕ್ಷಣ, ಪೊಲೀಸ್ ಇಲಾಖೆ, ಅರಣ್ಯ, ಪಂಚಾಯತ್ ರಾಜ್, ಇಂಜಿನಿಯರ್ ಹಾಗೂ ಆರೋಗ್ಯ ಇಲಾಖೆಯ ೧೪ ಜನ ನೌಕರರಿದ್ದಾರೆ. ಡಾ॥ ಸದಾಶಿವ ಇತಿಹಾಸ ಲೇಖಕರಾಗಿದ್ದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ರಾಜೇಶ್ ಸಿದ್ಧಗಂಗಾ ಕಾಲೇಜಿನ ಇತಿಹಾಸ ಪ್ರಾಧ್ಯಾಪಕರಾಗಿದ್ದಾರೆ.

ದೊಡ್ಡ ಅಗ್ರಹಾರದಲ್ಲಿ ಅಂಗನವಾಡಿ ಕೇಂದ್ರಗಳು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಪ್ರೌಢಶಾಲೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೧.೯% ಆಗಿದೆ.

ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಹೊಂದಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸಿದ್ಧಲಿಂಗೇಗೌಡರು, ರಾಮಕ್ಕಜ್ಜಿ ಚಿಕ್ಕಪುಟ್ಟ ಖಾಯಿಲೆಗಳಿಗೆ ನಾಟಿ ಔಷಧಿಯನ್ನು ನೀಡುತ್ತಾರೆ. ಗ್ರಾಮದಲ್ಲಿ ಸರ್ಕಾರಿ ಪಶುಚಿಕಿತ್ಸಾಲಯವಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಚಿಲ್ಲರೆ ವ್ಯಾಪಾರದ ಮತ್ತು ೯ ಟೀ ಅಂಗಡಿಳು, ೩ ಹೋಟೆಲ್‌ಗಳಿವೆ.

ದೊಡ್ಡ ಅಗ್ರಹಾರದಲ್ಲಿ ಐತಿಹಾಸಿಕ ನೆಲೆಗಳು ಕಂಡುಬರದಿದ್ದರೂ ೨ ಕರಿಗಲ್ಲುಗಳು, ೩ ಅಶ್ವತ್ಥ ವೃಕ್ಷಗಳು ಮತ್ತು ಪ್ರಾಚೀನ ಕಲ್ಯಾಣಿಯಿದೆ. ಧಾರ್ಮಿಕ ಪರಂಪರೆಯ ಕೇಂದ್ರವಾಗಿ ಇಲ್ಲಿ ಈಶ್ವರ, ಅಂಜನೇಯ, ಉಡಸಲಮ್ಮ, ಮೈಲಾರ ಲಿಂಗೇಶ್ವರ, ದುರ್ಗಮ್ಮ, ಮಾರಮ್ಮ, ಬೈಲತಿಮ್ಮಪ್ಪ ದೇವಾಲಯಗಳಿವೆ. ಪ್ರತಿ ವರ್ಷವೂ ಮಾರಮ್ಮನ ಜಾತ್ರೆಯನ್ನು ವಿಶೇಷವಾಗಿ ಆಚರಿಸುತ್ತಾರೆ. ಹೆಚ್ಚಾಗಿ ಮುಸ್ಲಿಮರು ವಾಸವಾಗಿದ್ದರೂ ಚಿಕ್ಕ ಮಸೀದಿ ಮಾತ್ರವಿದೆ.

ಹಿಂದೂಗಳು ಯುಗಾದಿ, ದೀಪಾವಳಿ, ದಸರಾ, ರಾಮನವಮಿ, ಗೌರಿ-ಗಣೇಶ, ಶಿವರಾತ್ರಿ ಹಬ್ಬಗಳನ್ನು ಹಾಗೂ ಮುಸ್ಲಿಮರು ಬಕ್ರಿದ್, ಈದಮಿಲಾದ್, ರಂಜಾನ್ ಹಬ್ಬಗಳನ್ನು ಆಚರಿಸುತ್ತಾರೆ. ಬಾಬಯ್ಯನ ಜಲದಿಯನ್ನು ಗ್ರಾಮ್ಯ ಹಬ್ಬವಾಗಿ ಹಿಂದೂ-ಮುಸ್ಲಿಂ ಎರಡೂ ಜನಾಂಗದವರು ಸೇರಿ ಆಚರಿಸುವುದು ಈ ಗ್ರಾಮದ ವಿಶೇಷವಾಗಿದೆ.

ಬರಹಗಾರರಾದ ಕೃಷಿ ವಿಜ್ಞಾನಿ ದಾಸಪ್ಪ ಮತ್ತು ಇತಿಹಾಸಕಾರ ಡಾ॥ ಕೆ.ಸದಾಶಿವ ರವರು ಈ ಗ್ರಾಮದವರಾಗಿದ್ದಾರೆ. ಇವರು ಅನೇಕ ಮಹತ್ವದ ಕೃತಿಗಳನ್ನು ಪ್ರಕಟಿಸಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಿದ್ದರೆಂದು ಹೇಳಲು ದಿ॥ ರಾಮಯ್ಯನವರ ಸಮಾಧಿಯನ್ನು ಕಾಣಬಹುದು. ರಾಜ್ಯ ದಲಿತ ಸಂಘದ ಸಂಚಾಲಕರಲ್ಲಿ ಒಬ್ಬರಾದ ಜೆ.ಎನ್.ರಾಜಸಿಂಹ ಈ ಗ್ರಾಮದಲ್ಲಿ ನೆಲೆಸಿದ್ದಾರೆ.

ದಲಿತ ಯುವಕ ಸಂಘ, ವಾಲ್ಮೀಕಿ, ಮದಕರಿನಾಯಕ ಸೇನೆಗಳು ತಲೆ ಎತ್ತುತ್ತಿವೆ. ಈ ಸಂಘಗಳು ಸಾಂಸ್ಕೃತಿಕವಾಗಿಯೂ ತೊಡಗಿಸಿಕೊಂಡಿದ್ದು ಗಣೇಶನ ಉತ್ಸವ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

ಸೀಡಾ ಎಂಬ ಸ್ವಯಂಸೇವಾ ಸಂಸ್ಥೆಯಿದ್ದು ಮಹಿಳಾ ಸಬಲೀಕರಣ, ಗೃಹ ಕೈಗಾರಿಕೆ, ಆರೋಗ್ಯದ ಬಗೆಗೆ ಜಾಗೃತಿ ಶಿಬಿರ, ಸಹಾಯಧನಗಳ ಮೂಲಕ ಗ್ರಾಮಾಭಿವೃದ್ಧಿಗೆ ಶ್ರಮಿಸುತ್ತಿದೆ.

## ದೊಡ್ಡ ಆಲದಮರದ ಮಡು ತಾಂಡ

ದೊಡ್ಡ ಆಲದಮರದ ಮಡು ಲಂಬಾಣಿ ತಾಂಡ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೫ ಕಿಮೀ ದೂರದಲ್ಲಿದೆ. ಸಿರಾ-ಹುಯಿಲ್‌ದೊರೆ ತಾವರೆಕೆರೆ ರಸ್ತೆಯಲ್ಲಿ ಹುಯಿಲ್‌ದೊರೆ-ಶಾಗದಡು ನಡುವೆ ಹುಯಿಲ್‌ದೊರೆಯಿಂದ ೨ ಕಿಮೀ ದೂರದಲ್ಲಿ ಈ ಗ್ರಾಮವಿದೆ. ಇದು ಶಾಗದಡು ಗ್ರಾಮದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೪೪೨.೧೭ ಮುಖ್ಯ ಗ್ರಾಮದೊಂದಿಗೆ ಹಂಚಿಕೆಯಾಗಿದೆ.

ಈ ಗ್ರಾಮಕ್ಕೆ ಸಮೀಪದಲ್ಲಿ ಚಿಕ್ಕಸಂದ್ರ-ಬುಕ್ಕಾಪಟ್ಟಣ ರಕ್ಷಿತ ಅರಣ್ಯದ ಸೆರಗಿನಲ್ಲಿ ದೊಡ್ಡ ಆಲದಮಡು ಎಂಬ ಗ್ರಾಮವಿದ್ದು ಅದು ಇಂದು ನಾಶವಾಗಿದೆ. ಹಿಂದೆ ಅಲ್ಲಿ ಕುಂಚಿಟಿಗರ ಒಳಕಲ್ಲಿನ ಗೋತ್ರದವರು ವಾಸವಾಗಿದ್ದು ಅವರ ಕುಲದೈವವಾದ ಮಾರಮ್ಮನ ದೇವಾಲಯ ಇಂದಿಗೂ ಇದೆ. ಈ ಪ್ರದೇಶಕ್ಕೆ ಹೊಂದಿಕೊಂಡು ಸ್ವಲ್ಪ ಎತ್ತರದಲ್ಲಿ ನೀರು, ಜನಸಂಪರ್ಕಕ್ಕೆ ಹತ್ತಿರವಾಗಿ ಮನೆ ನಿರ್ಮಿಸಿದ್ದರಿಂದ ಗ್ರಾಮಕ್ಕೆ ಮೂಲ ಹೆಸರನ್ನೇ ಬಳಸಿ ದೊಡ್ಡ ಆಲದಮರದ ಮಡು ಎಂದು ಲಂಬಾಣಿ ಜನಾಂಗದವರ ವಾಸಸ್ಥಳವಾದುದರಿಂದ ತಾಂಡ ಸೇರಿ ದೊಡ್ಡ ಆಲದಮಡು ತಾಂಡ ಎಂದಾಗಿದೆ.

ಬಿಳಿ ಮಿಶ್ರಿತ ಕೆಂಪು ಭೂಲಕ್ಷಣ ಹೊಂದಿರುವ ಬಯಲು ಪ್ರದೇಶವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ,

ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಬಯಲು, ಬಿಸಿಲು ಪ್ರದೇಶ. ವಾಡಿಕೆ ಮಳೆ ಕಳೆದ ೫ ವರ್ಷಗಳಿಂದ ಕಡಿಮೆಯಾಗಿದ್ದು ವಾರ್ಷಿಕ ಸರಾಸರಿ ಮಳೆ ೪೪೪೮ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಬೇಸಾಯ ಮುಖ್ಯ ಉದ್ಯೋಗವಾಗಿದೆ. ಉಪಕಸುಬಾಗಿ ಕೂಲಿಯಿದೆ. ನೀರಿನ ತೊಂದರೆಯಿಂದಾಗಿ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ೨೮ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಈ ಮೂಲಕ ಉಪನೀರಾವರಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಸಿಸ್ಟರ್ನ್‌ಗಳಿದ್ದು ೨ ಕೊಳವೆ ಬಾವಿಗಳಿವೆ.

ಸಾಮಾಜಿಕ ರಚನೆಯಲ್ಲಿ ಲಂಬಾಣಿ ಜನಾಂಗ ಇಲ್ಲಿ ದೊಡ್ಡ ಸಮುದಾಯವಾಗಿದೆ. ಗ್ರಾಮದಲ್ಲಿ ಲಂಬಾಣಿ ಭಾಷೆ ಮಾತನಾಡುತ್ತಿದ್ದು ಸಾರ್ವತ್ರಿಕ ವ್ಯವಹಾರ ಕನ್ನಡದಲ್ಲಿಯೇ ನಡೆಯುತ್ತದೆ. ವಿವಿಧ ಪ್ರಕಾರದ ೭೨ ಮನೆಗಳಿದ್ದು ಅವು ಹೆಂಚಿನ, ಶೀಟಿನ ಸ್ವರೂಪದವುಗಳಾಗಿವೆ. ಮನೆಗಳು ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಹೊಂದಿವೆ. ೨೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೩೬೦ ಜನಸಂಖ್ಯೆ ಹೊಂದಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾದ ರಾಗಿ, ಅಲಸಂದೆ, ತೊಗರಿ ಬೆಳೆಯುತ್ತಾರೆ. ಹತ್ತಿ, ಸೀಡ್ ಬೆಳೆಗಳನ್ನು ವ್ಯಾಪಾರಿ ಬೆಳೆಗಳನ್ನಾಗಿ ಬೆಳೆಯಲಾಗುವುದು. ಕೂಲಿ, ಇಟ್ಟಿಗೆ ಫ್ಯಾಕ್ಟರಿಗೆ ಮಹಿಳೆಯರು ಕೆಲಸಕ್ಕೆ ಹೋಗುತ್ತಾರೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾಪಂಚಾಯ್ತಿ, ಹುಯಿಲ್‌ದೊರೆ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ತುಮಕೂರು ಲೋಕಸಭಾ ಕ್ಷೇತ್ರವಾಗಿದೆ. ಒಬ್ಬರು ಈ ಗ್ರಾಮದ ಪಂಚಾಯ್ತಿ ಸದಸ್ಯರಿದ್ದಾರೆ.

೨ ಸ್ತ್ರೀಶಕ್ತಿ ಸಂಘ, ೧ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿವೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೭% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಮಾರಮ್ಮನ ಪೌಳಿ, ಭೀಮಾವತಿ ಪೌಳಿ ಹಾಗೂ ಸೇವಾಲಾಲ್ ದೇವರ ಗುಡಿಗಳಿವೆ. ದೀಪಾವಳಿಯಂದು ಸೇವಾಲಾಲ್ ಹಾಗೂ ಭೀಮಸತಿ ದೇವರ ಉತ್ಸವ, ಹಿರಿಯರಿಗೆ ಶ್ರಾದ್ಧ ಮೊದಲಾದ ಪಾರಂಪರಿಕ ಕಾರ್ಯಕ್ರಮ ಏರ್ಪಡುತ್ತದೆ. ಅಂದು ಪುರುಷರು, ಮಹಿಳೆಯರು ಕೂಡಿ ಸಾಂಪ್ರದಾಯಿಕ ಉಡುಗೆ ತೊಡುಗೆಗಳೊಂದಿಗೆ ನರ್ತಿಸುವುದು ಈ ಗ್ರಾಮ ಸಂಪ್ರದಾಯವಾಗಿದೆ.

ಮಾರಮ್ಮನ ಆರತಿ, ಬಲಿ, ಹರಕೆ ಸಂಪ್ರದಾಯವಿದೆ. ಸಾಕ್ಷಿಹಳ್ಳಿ ಮಣ್ಣಮ್ಮನ ಜಾತ್ರೆಯಂದು ಗ್ರಾಮದಲ್ಲಿ ದೇವರಿಗೆ ಎದುರೆತ್ತಿ, ಆರತಿ, ಬಲಿ ಕೊಡುವ ಸಂಪ್ರದಾಯವಿದೆ. ವಾರ್ಷಿಕವಾಗಿ ನೆಲೆದೇವರಾದ ದೊಡ್ಡಆಲದ ಮಡು ಮಾರಮ್ಮನಿಗೆ ಆರತಿ ಮಾಡಿ ಪೂಜೆ ಮಾಡುತ್ತಾ ಬರುತ್ತಿದ್ದಾರೆ.

## ದೊಡ್ಡಾಲಮರದ ಮಡು

ದೊಡ್ಡಲಮರದ ಮಡು ಒಂದು ಬೇಚರಕ್ ಗ್ರಾಮ. ಇದು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೮ ಕಿಮೀ ದೂರದಲ್ಲಿದೆ. ಶಾಗದಡು ಗ್ರಾಮಕ್ಕೆ ದಕ್ಷಿಣಾಭಿಮುಖವಾಗಿ ೨ ಕಿಮೀ ದೂರದಲ್ಲಿದೆ. ಬುಕ್ಕಾಪಟ್ಟಣ ರಕ್ಷಿತ ಅರಣ್ಯ, ಚಿಕ್ಕಸಂದ್ರ ಕಾವಲಿನ ಕೂಡು ಪ್ರದೇಶವಾಗಿದ್ದು ಹಿಂದೆ ಇಲ್ಲಿ ಗ್ರಾಮವಿತ್ತೆಂದು ನಾನಾ ಕಾರಣಗಳಿಂದ ಗ್ರಾಮ ನಾಶವಾಗಿ ಬೇರೆ ಬೇರೆ ಕಡೆ ಹೋದರೆಂದು ಮಾಜಿ ತಾ.ಪಂ ಸದಸ್ಯ ಶಾಗದಡು ಜುಂಜೇಗೌಡರ ಅಭಿಪ್ರಾಯವಾಗಿದೆ.

ಇಲ್ಲಿ ಗ್ರಾಮವಿತ್ತೆಂದು ಹೇಳಲು ಯಾವುದೇ ಕುರುಹುಗಳು ಕಾಣುವುದಿಲ್ಲ. ಆದರೆ ೪೦೦ ವರ್ಷಗಳ ಹಳೆಯದಾದ ಮಾರಮ್ಮನ ದೇವಾಲಯವಿದೆ. ಇದರ ಸುತ್ತ ಆಲದ ಮರಗಳಿವೆ. ಸಮ್ಮಿತ ಸರೋವರ ಹರಿದು ಮುಂದೆ ಹೋಗುತ್ತದೆ. ಬೇಸಿಗೆ ಕಾಲದಲ್ಲಿ ನೀರು ಇರದೆ ತಗ್ಗಾದ

ಗುಂಡಿಗಳಲ್ಲಿ ನೀರು ನಿಲ್ಲುವುದರಿಂದ ದೊಡ್ಡ ಆಲದ ಮರದ ಮಡು ಎಂದು ಕರೆಯಲಾಗುವುದು.

ಇಲ್ಲಿನ ಮಾರಮ್ಮ ಕುಂಚಿಟಿಗರ ಒಳಪಂಗಡವಾದ ಒಳಕಲ್ಲುನವರ ಕುಲದೇವತೆಯಾಗಿದ್ದು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ದೊಡ್ಡ ದೇವರು, ಜಾತ್ರೆ ಬೃಹತ್ ಪ್ರಮಾಣದಲ್ಲಿ ಜರುಗುತ್ತದೆ. ಜಾತ್ರೆ ೫ ದಿನ ನಡೆದು ಪುಣ್ಯಜಲ, ಗಂಗಾಸ್ನಾನ, ಹೊಳೆಸೇವೆ, ರಾಶಿ ಪೂಜೆ, ಉತ್ಸವ, ಮಂಡೆ, ಬಾನ ಹೀಗೆ ನಡೆದು ಕೊನೆಯಲ್ಲಿ ಜಾಡಿಸೇವೆ, ಅಕ್ಕಿ ಅಳೆಯುವ ಕಾರ್ಯದೊಂದಿಗೆ ಮುಕ್ತಾಯವಾಗುತ್ತದೆ.

## ನಾಗಜ್ಜಿ ಗುಡ್ಲು

ನಾಗಜ್ಜಿಗುಡ್ಲು, ಎನ್.ರಂಗನಾಥನಗರ, ರಂಗನಾಥನಗರ ಎಂದೆಲ್ಲಾ ಹಲವು ಪರಿವರ್ತನೆಗಳಿಂದ ಈಗ ರಂಗನಾಥನಗರ (ಎನ್) ಎಂದಾಗಿರುವ ನಾಗಜ್ಜಿಗುಡ್ಲು ಸಿರಾ ನಗರದಿಂದ ಪಶ್ಚಿಮಕ್ಕೆ ೩ ಕಿಮೀ ದೂರದಲ್ಲಿದೆ. ಕಲ್ಲುಕೋಟೆ ಕಂದಾಯ ಗ್ರಾಮಕ್ಕೆ ಸೇರ್ಪಡೆಯಾಗಿರುವ ಈ ಗ್ರಾಮ ೫೧ ಮನೆಗಳ ಹಳ್ಳಿ. ಕಲ್ಲುಕೋಟೆ ಭೌಗೋಳಿಕ ವ್ಯಾಪ್ತಿ ೭೫೩.೪೮ ರಲ್ಲಿ ಇದು ಸೇರ್ಪಡೆಗೊಂಡಿದೆ. ಸುಮಾರು ೬೦ ವರ್ಷಗಳ ಹಿಂದೆ ಈ ಗ್ರಾಮ ಅಸ್ತಿತ್ವ ಪಡೆದಿದೆ.

ಮಡಕಸಿರಾ ತಾಲ್ಲೂಕು (ಆಂಧ್ರಪ್ರದೇಶ) ಅಗಳಿ ಹೋಬಳಿಯ ಇನಗನಹಳ್ಳಿಯ ಕದರಪ್ಪ–ನರಸಮ್ಮ ಎಂಬ ಆದಿಕರ್ನಾಟಕ ಜನಾಂಗದ ದಂಪತಿಗಳಿಗೆ ಹುಟ್ಟಿದ ಮೂರು ಹೆಣ್ಣು, ೨ ಗಂಡುಗಳಲ್ಲಿ ನಾಗಜ್ಜಿ ಹಿರಿಯ ಮಗಳು. ತದನಂತರ ಕದುರಪ್ಪ, ನರಸಮ್ಮ ಕುಟುಂಬ ಮದಲೂರು ಅಲ್ಲಿಂದ ಸಿರಾ ಸಮೀಪದ ಕಲ್ಲುಕೋಟೆಗೆ ಬಂದು ನೆಲೆಸಿದರು. ಮೊದಲ ಹೆಣ್ಣು ಮಗಳಾದ ನಾಗಜ್ಜಿಯನ್ನು ತಂದೆ ತಾಯಿಗಳೇ ದೇವದಾಸಿ ಬಿಟ್ಟರು. ಅವಳಿಗೆ ಒಬ್ಬಳು ಮಗಳು ಹುಟ್ಟಿದಳು. ದೇವದಾಸಿಯಾದ ನಾಗಮ್ಮ ಕಲ್ಲುಕೋಟೆಯಿಂದ ಸಿರಾದ ಪಶ್ಚಿಮಕ್ಕೆ ಇದ್ದ ಈಚಲುವನದ ದಡದಲ್ಲಿ ಕಲ್ಲುಕೋಟೆ ಕೆರೆಯ ನೀರನ್ನು ಆಶ್ರಯಿಸಿ ಒಂದು ಗುಡಿಸಲು ನಿರ್ಮಿಸಿಕೊಂಡು ಹೆಂಡ ಇಳಿಸುವವರಿಗೆ ಊಟ, ತಿಂಡಿಗಳನ್ನು ತಯಾರಿಸಿಕೊಡುವ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಳು. ಈಕೆಗೆ ಒಬ್ಬಳು ಹೆಣ್ಣುಮಗಳಾಗಿ ಆಕೆಯನ್ನು ಮದುವೆ ಮಾಡಿ ಅಳಿಯನೊಂದಿಗೆ ಮಗಳನ್ನು ಇಲ್ಲಿಯೇ ಇಟ್ಟುಕೊಳ್ಳಲಾಯಿತು. ಹೀಗೆ ಕುಟುಂಬ ಎರಡಾಗಿ ಬೆಳೆಯಿತು. ಒಂದು ನಾಗಜ್ಜಿ ಗುಡಿಸಲು ಬೆಳೆದು ಇಂದು ೫೧ ಕುಟುಂಬಗಳು ಬೆಳೆದಿವೆ. ಮೊದಲಿಗೆ ಆದಿಕರ್ನಾಟಕರು ಮಾತ್ರ ವಾಸಿಸುತ್ತಿದ್ದ ಈ ಗ್ರಾಮದಲ್ಲಿ ಇಂದು ಆದಿಕರ್ನಾಟಕ ದೊಡ್ಡ ಸಮುದಾಯದೊಂದಿಗೆ ಕುಂಚಿಟಿಗರು, ಈಡಿಗರು, ಅಗಸರು, ಬೇಡ ನಾಯಕರು, ಕುರುಬರು ಸಣ್ಣ ಸಮುದಾಯವಾಗಿ ವಾಸಿಸುತ್ತಿದ್ದು ಆರಂಭದಲ್ಲಿ ನಾಗಜ್ಜಿಗುಡ್ಲು ಎಂದು ಇದ್ದದ್ದು ೨೦೧೦ ರಿಂದ ಈಚೆಗೆ ಎನ್.ರಂಗನಾಥನಗರ ಎಂದಾಗಿದೆ.

ಬಿಳಿ ಮಿಶ್ರಿತ ಮರಳು, ಚೌಳುಮಿಶ್ರಿತ ಮಣ್ಣು ಹೊಂದಿರುವ ಈ ಗ್ರಾಮದಲ್ಲಿ ಹಸು, ಎಮ್ಮೆ, ಎತ್ತುಗಳನ್ನು ಸಾಕಿ ಪಶುಪಾಲನೆ ಹಾಗೂ ವ್ಯವಸಾಯಕ್ಕೆ ಉಪಯೋಗಿಸುತ್ತಾರೆ. ಸರಾಸರಿ ೪೫೨ ಮಿಮೀ ಮಳೆ ಪ್ರಮಾಣ ಹೊಂದಿದ್ದು ಬಿಸಿಲು ೩೬ ಡಿಗ್ರಿ, ಚಳಿಯೂ ೧೦ ಡಿಗ್ರಿ ಇರುತ್ತದೆ.

ಮುಂಗುಸಿ, ಕಾಡುಬೆಕ್ಕು, ನರಿ ಈ ಪರಿಸರದ ಕಾಡುಪ್ರಾಣಿಗಳು. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ, ಕೋಳಿ ಸಾಕುಪ್ರಾಣಿಗಳಾಗಿವೆ. ಕೋಗಿಲೆ, ಗೊರವಂಕ, ಕೊಕ್ಕರೆ ಕಂಡುಬರುತ್ತವೆ. ಈ ಊರಿನ ಪಶ್ಚಿಮಕ್ಕೆ ಕಲ್ಲುಕೋಟೆ ಕೆರೆಯಿದ್ದು ಕುಡಿಯುವುದಕ್ಕೆ ಸಿರಾ ನಗರಸಭೆಯಿಂದ ನೀರು ಪೂರೈಸುತ್ತಿದೆ. ೧೦ ನಲ್ಲಿಗಳು ಇವೆ. ಗ್ರಾಮದಲ್ಲಿ ೧೦ ಕಾಂಕ್ರೀಟ್ , ೫ ಕಲ್ಲಿನ, ೨೮ ಮಣ್ಣಿನ, ೧೨ ಮಂಗಳೂರು ಹೆಂಚಿನ ಮನೆಗಳಿವೆ. ೬ ವಸತಿ ರಹಿತ ಕುಟುಂಬಗಳು ಇವೆ, ೪ ಗುಡಿಸಲುಗಳಿವೆ. ೨೩ ಮನೆಗಳು ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯಲ್ಲಿ ರಚನೆಯಾಗಿವೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು ಉಪಆಹಾರವಾಗಿ ದೋಸೆ, ಚಿತ್ರಾನ್ನ ಬಳಸುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹೋಳಿಗೆ ಉಪಯೋಗಿಸುತ್ತಾರೆ. ಎತ್ತಿನ ಬಂಡಿ ಸಾಂಪ್ರದಾಯಿಕ ವಾಹನವಾಗಿದ್ದು ೧೦ ಕ್ಕೂ ಹೆಚ್ಚು ಸ್ಕೂಟರ್, ೨ ಆಟೋ, ೨ ಟೆಂಪೋ ಇವೆ. ರಾಗಿ, ಶೇಂಗಾ, ತೊಗರಿ, ಅಲಸಂದೆ ಗ್ರಾಮದ ಮುಖ್ಯ ಬೆಳೆ.

ಪೊಲೀಸ್, ಕಂದಾಯ, ಶಿಕ್ಷಣ, ಅಂಚೆ ಕಛೇರಿ ಇಲಾಖೆಗಳಲ್ಲಿ ನೌಕರಿಯಲ್ಲಿದ್ದು ಕೂಲಿ ಕಾರ್ಮಿಕರು ಅಧಿಕವಾಗಿದ್ದಾರೆ.

ಸಿರಾ ವಿಧಾನಸಭೆ, ನಗರಸಭೆ ವ್ಯಾಪ್ತಿಗೆ ಒಳಪಟ್ಟಿರುವ ಈ ಗ್ರಾಮ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಒಂದು ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೨೨ ಮಕ್ಕಳು, ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ೩ ಅಂಗವಿಕಲ ವೇತನದ, ೬ ವೃದ್ಧಾಪ್ಯ ವೇತನದ, ೪ ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಮಾರಮ್ಮ ಮುಖ್ಯ ದೈವವಾಗಿದ್ದು ಊರಹಬ್ಬ, ಆರತಿ, ಬಾನ, ಬ್ಯಾಟೆ ಇರುತ್ತದೆ.

ಶ್ರೀದೇವಿ, ಶನಿಮಹಾತ್ಮೆ ದೇವಾಲಯಗಳಿದ್ದು ಅಂಗವಿಕಲ ಸಣ್ಣಈರಪ್ಪ ಇದರ ನೇತೃತ್ವ ವಹಿಸುತ್ತಾ ಹರಿಕಥೆ, ಹೋಮ, ಭಜನೆ ಕಾರ್ಯದಲ್ಲಿ ತೊಡಗಿದ್ದಾರೆ. ಸಣ್ಣೀರಪ್ಪ, ಯಕ್ಷಗಾನ ಭಾಗವತರಾಗಿದ್ದು ಭಜನೆ, ಹರಿಕಥೆ, ಕಥಾ ಪಾರಾಯಣದಲ್ಲಿ

ಪರಿಣಿತರು. ಉಳಿದಂತೆ ಪುಟ್ಟರಂಗಮ್ಮ, ಕದುರಮ್ಮ ಸೋಬಾನೆ ಹಾಡುಗಾರರಾಗಿದ್ದಾರೆ.

## ನ್ಯಾಯಗೆರೆ

ನ್ಯಾಯಗೆರೆ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೧ ಕಿಮೀ ದೂರದಲ್ಲಿದೆ. ಸಿರಾ-ಮಧುಗಿರಿ ಮುಖ್ಯ ರಸ್ತೆಯ ನ್ಯಾಯಗೆರೆ ಗೇಟಿನಿಂದ ಬಲಭಾಗದಲ್ಲಿ ಈ ಗ್ರಾಮ ಇದ್ದು, ಇದು ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೩೭೪.೮೮ ಹೆಕ್ಟೇರ್ ಆಗಿದೆ. ನ್ಯಾಯಗೆರೆ ಇದೊಂದು ವಿಶಿಷ್ಟ ಹೆಸರು. ಬುಡಕಟ್ಟು ಸಂಸ್ಕೃತಿಯಲ್ಲಿ ಕಟ್ಟೆ ನ್ಯಾಯಾಧಿಕರಣ ಅತಿ ಮುಖ್ಯ ಅಂಶ. ಶೀಲ-ಶೌಚದ ವಿಷಯವಾಗಲಿ, ಆಸ್ತಿ, ವೈವಾಹಿಕ ಕಲಹಗಳಾಗಲಿ, ಕೋರ್ಟು ಮೆಟ್ಟಿಲು ಏರುವ ಈ ದಿನಗಳಲ್ಲಿ ಬುಡಕಟ್ಟು ಸಂಸ್ಕೃತಿಯಲ್ಲಿ ಇದಕ್ಕೆ ಆಸ್ಪದವಿರಲಿಲ್ಲ. ಕಾಡುಗೊಲ್ಲರು, ಕುರುಬರು, ಬೇಡರು, ಕುಂಚಿಟಿಗ ಈ ಜನಾಂಗ ಮುಖಂಡರು ಒಂದೆಡೆ ಕಲೆತು ಕರಿಯ ಕಂಬಳಿ ಹಾಸಿ, ವೀಳ್ಯ ಇರಿಸಿ ನ್ಯಾಯ ತೀರ್ಮಾನ ಮಾಡುತ್ತಿದ್ದ ಸಂಸ್ಕೃತಿ ಸಿರಾ ಸೀಮೆಯ ಮೌಖಿಕ ಕಾವ್ಯಗಳಲ್ಲೂ ಪ್ರಕಟವಾಗುತ್ತಿದೆ. ಆ ನಿದರ್ಶನವಾಗಿ ನ್ಯಾಯಗೆರೆ ಗ್ರಾಮವಾಗಿದೆ. ನ್ಯಾಯಗೆರೆ ನ್ಯಾಯಾಧಿಕರಣದ ಹಿನ್ನೆಲೆಯಲ್ಲಿ ರೂಪಿತವಾಗಿರುವ ಗ್ರಾಮವಾಗಿದೆ.

ಮರಳುಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಬಯಲುನಾಡಿನ ಪ್ರದೇಶ. ಕುರುಚಲು ಗಿಡ, ಪೊದೆ ಇದೆ. ಹಳ್ಳ-ದಿಣ್ಣೆ ಇದೆ. ಹಾಗಾಗಿ ಈ ಭಾಗದಲ್ಲಿ ಕಾಡಿಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ, ಮುಂಗುಸಿ, ಕರಡಿ ಕಂಡುಬರುತ್ತವೆ. ಗ್ರಾಮದಲ್ಲಿ ಕೃಷಿ ಬದುಕಿನ ಜನ ಎತ್ತು, ಹಸು, ಕುರಿ, ಮೇಕೆ ಸಾಕಿದ್ದಾರೆ. ನಾಟಿಕೋಳಿ, ಗಿರಿರಾಜ ಕೋಳಿಗಳನ್ನು ಸಾಕಲಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ಕಾಗೆ, ಕೋಗಿಲೆ, ಕೌಜಲಗ, ಗೊರವಂಕ, ಬೆಳವ, ಕೊಕ್ಕರೆ, ಗೀಜಗ, ಗಿಳಿ, ಗೂಬೆ, ಹದ್ದು, ಗರುಡ ಪಕ್ಷಿಗಳನ್ನು ಕಾಣಬಹುದು. ಬಿಸಿಲು, ಬಯಲಿನ ಈ ಪ್ರದೇಶದಲ್ಲಿ ವಾರ್ಷಿಕ ಮಳೆ ಪ್ರಮಾಣ ಕಡಿಮೆ.

ಸರಾಸರಿ ವಾಡಿಕೆ ಮಳೆ ೪೭೧.೬ ಆಗಿದ್ದು ಬಿಸಿಲು ೩೮ ಡಿಗ್ರಿ ಹಾಗೂ ಚಳಿಯ ಪ್ರಮಾಣ ೧೨ ಡಿಗ್ರಿ ಸೆಂಟಿಗ್ರೇಡ್ ಇದೆ. ರೈತಾಪಿ ಜನರು ಮಳೆ ನೀರಿನ ಜೊತೆಗೆ ಕಿರುನೀರು ಸೌಲಭ್ಯಗಳಲ್ಲಿ ೨೦ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ೪ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ದೊಡ್ಡ ಸಮುದಾಯವಾಗಿದೆ. ಕುಂಚಿಟಿಗ ಜನಾಂಗ ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ಒಟ್ಟು ೭೮ ಮನೆಗಳಿರುವ ಇಲ್ಲಿನ ಮನೆಗಳ ಪ್ರಕಾರದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ, ಹೆಂಚಿನ ಹಾಗೂ ಶೀಟಿನ ಮನೆಗಳಿವೆ. ಇಲ್ಲಿನ ೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಇಲ್ಲಿನ ೧೮ ಮನೆಗಳು ರಾಜ್ಯಸರ್ಕಾರ ಆಶ್ರಯ, ಇಂದಿರಾ ಆವಾಸ್, ವಸತಿ ಯೋಜನೆ ಹಾಗೂ ವಿದ್ಯುತ್ ಸಂಪರ್ಕದ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ಗ್ರಾಮದ ಸಾಂದರ್ಭಿಕ ವಿಶೇಷ ಭೋಜನವಾಗಿದೆ. ಗ್ರಾಮದಲ್ಲಿ ಟ್ರ್ಯಾಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳಂಥ ಆಧುನಿಕ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ. ಶೇಂಗಾ, ತೊಗರಿ, ಹುರುಳಿ, ಜೋಳ, ಕೊರ್ಲೆ, ಹಾರಕ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ರೇಷ್ಮೆ, ಸೇವಂತಿಗೆ, ಅಡಿಕೆ ಬೆಳೆಯುತ್ತಾರೆ. ಶೇಂಗಾ, ಹೊಂಗೆ ಬೀಜ, ಹುಣಸೆ ಹಣ್ಣು ವ್ಯಾಪಾರಿ ಸರಕಾಗಿದೆ.

ಶಿಕ್ಷಕರು, ಸಾರಿಗೆ ಇಲಾಖೆಯ ಇಬ್ಬರು ನೌಕರರಿದ್ದಾರೆ. ಗ್ರಾಮದಲ್ಲಿ ಹೊಂಗೆ ಬೀಜ ಪರಿಷ್ಕರಣೆ, ಹುಣಸೆಹಣ್ಣು, ಬೀಡಿ ಕಟ್ಟುವುದು, ಹೂ ಕಟ್ಟುವುದು ಮಹಿಳೆಯರ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ರತ್ನಸಂದ್ರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಒಬ್ಬರು ಈ ಗ್ರಾಮದ ಪಂಚಾಯ್ತಿ ಸದಸ್ಯರಿದ್ದಾರೆ. ಸಿರಾ, ಮಧುಗಿರಿ, ಬ್ರಹ್ಮಸಂದ್ರ ತುಮಕೂರಿಗೆ ಬಸ್ ರಸ್ತೆ ಸಂಪರ್ಕವಿದೆ.

೨ ಸ್ತ್ರೀಶಕ್ತಿ ಕೇಂದ್ರಗಳಿದ್ದು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ. ಒಂದು ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಕಿರಿಯ ಪಾಠಶಾಲೆ ಇದೆ. ಶಾಲೆಯಲ್ಲಿ ೨೫ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಗಳಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೩೫.೨ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನದ ಸೌಲಭ್ಯದಾರರಿದ್ದಾರೆ. ಗ್ರಾಮದಲ್ಲಿ ೩ ಗೂಡಂಗಡಿಗಳಿವೆ. ಗ್ರಾಮದ ಪ್ರಾಚೀನ ಸಂಸ್ಕೃತಿಯ ರೂಪಕವಾಗಿ ನ್ಯಾಯಗೆರೆಗೆ ತಕ್ಕನಾಗಿ ಒಂದು ವೀರಗಲ್ಲು ಇದೆ. ಇದು ವಿಜಯನಗರ ಅರಸರ ಕಾಲದ ರಚನೆಯಾಗಿದ್ದು ಯುದ್ಧನಿರತ ಹಾಗೂ ಮಡಿದ ಎರಡೂ ದೃಶ್ಯಗಳು ರೋಚಕವಾಗಿ ಪ್ರಕಟವಾಗಿವೆ. ಹಿಂದೆ ಕೋಟೆ, ಬುರ್ಜು,

ಕಂದಕ ಇದ್ದವೆಂದು ಗ್ರಾಮಸ್ಥರು ಹೇಳುತ್ತಾರೆ. ಸಧ್ಯ ಅದರ ಲಕ್ಷಣಗಳು ಕಾಣುತ್ತಿಲ್ಲ.

ಗ್ರಾಮದಲ್ಲಿ ಮಾರಮ್ಮನ ಪೌಳಿ ಇದೆ. ಪ್ರತಿ ಆಷಾಢ ಮಾಸದಲ್ಲಿ ಮಾರಮ್ಮನ ಊರ ಹಬ್ಬ ಮಾಡಿ ಆರತಿ, ಬಲಿ, ಬಾನ, ಸರಗು ಹಾಕುವುದು ಗ್ರಾಮ ಸಂಸ್ಕೃತಿಯ ಹರಕೆ ಸಂಪ್ರದಾಯವಾಗಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ರಾಮನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ನಾದೂರು

ನಾದೂರು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ದೂರದಲ್ಲಿದೆ. ಸಿರಾ– ಅಮರಾಪುರ ರಸ್ತೆಯಲ್ಲಿ,. ಪಟ್ಟನಾಯಕನಹಳ್ಳಿ, ಕ್ರಾಸಿನ ಬಳಿ ಎಡಕ್ಕೆ ಒಂದು ಕಿ.ಮೀ. ದೂರದಲ್ಲಿದೆ. ಇದೊಂದು ಪ್ರಾಚೀನ ಗ್ರಾಮವಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೨೫೪೩.೮೪ ಹೆಕ್ಟೇರ್ ಇದ್ದು ಈ ಗ್ರಾಮಕ್ಕೆ ಉಪ ಗ್ರಾಮವಾಗಿ ಪಟ್ಟನಾಯಕನಹಳ್ಳಿ, ಉದ್ದರಾಮನಹಳ್ಳಿ, ಶೀಗಲಹಳ್ಳಿ, ಮುದ್ದೇಹಳ್ಳಿ, ಕೆರೆಯಾಗಲಹಳ್ಳಿ, ನೇರಲಹಳ್ಳಿ, ಹಾಗೂ ಸಿಡಿಯಜ್ಜನ ಪಾಳ್ಯ, ಹೀಗೆ ಒಟ್ಟು ೭ ಮಜರೆ ಗ್ರಾಮಗಳಿವೆ. ನಾದೂರಿನಲ್ಲಿ ಇಂದು ೧೩೮೦ ಮನೆಗಳಿದ್ದು, ೫೨೦೦ ಜನಸಂಖ್ಯೆ ಇದೆ.

ಈ ಗ್ರಾಮಕ್ಕೆ ಸಂಬಂಧಿಸಿದಂತೆ ೧೫,೧೬ ನೇ ಶತಮಾನಕ್ಕೆ ಸೇರಿದ ಹಾಗೂ ೧೧ ನೇ ಶತಮಾನ ಮೂರು ಶಾಸನಗಳಲ್ಲಿ ನಾದೂರಿನ ಉಲ್ಲೇಖವಿದೆ. ವಿಶೇಷವಾಗಿ ಮಹಾಸತಿ ಸಂಬಂಧ ಶಾಸನ ದೊರೆಯುವ ಹಾಗೂ ತುಮಕೂರು ಜಿಲ್ಲೆಯ ನೊಳಂಬರ, ಹೊಯ್ಸಳರ ಹಾಗೂ ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿದ್ದ ಗ್ರಾಮವಾಗಿದ್ದು, ಕಲಾ ಕೇಂದ್ರವಾಗಿತ್ತು. ಆ ಕಾರಣಗಳಿಂದಲೇ ಈ ಗ್ರಾಮವನ್ನು ನಾದಗಳ ಊರು– ನಾದೂರು ಆಗಿದೆ ಎಂದು ಇಲ್ಲಿನ ಮುಖ ವೀಣೆ ಕಲಾವಿದ ಗುಡ್ಡದ ದಾಸಪ್ಪ ಹೇಳುತ್ತಾರೆ. ನೊಳಂಬರ ಅರಸ ಮಹೇಂದ್ರನು ಈ ಗ್ರಾಮದಲ್ಲಿ ಹಾಗೂ ಬರಗೂರಿನ ಈಶ್ವರ ದೇವಾಲಯದಲ್ಲಿರುವ ಶಾಸನ ಪ್ರಕಟಿಸುತ್ತದೆ. ಕ್ರಿ.ಶ. ೧೫೭೭ ರ ನಾದೂರಿನ ಕಲ್ಲೇಶ್ವರ ದೇವಸ್ಥಾನದಲ್ಲಿ ಹಾಕಿಸಿರುವ ಮಹಾಸತಿ ಶಾಸನ ಹೊಂದಿದ್ದು, ನಾದೂರಿನ ನಾಗಮ್ಮ ಎಂಬುವವರು ತನ್ನ ಗಂಡ 'ಮೇರೆಗೇರಾ' ತೀರಿಕೊಂಡಾಗ, ನಾಗಮ್ಮ ಸತಿಯಾಗಿ ಚಿತೆ ಏರಿದ ವಿವರ, ಗ್ರಾಮಸ್ಥರು ಇವರುಗಳ ಸ್ಮಾರಕವಾಗಿ ಕಲ್ಲೊಂದನ್ನು ನೆಟ್ಟು, ಅದರಲ್ಲಿ ಈ ವಿವರ ಬರೆದು ಈ ಪ್ರದೇಶವನ್ನು ಆಳುತ್ತಿದ್ದ ಆಚೆಗೌಡ ಮತ್ತು ಹೆಗ್ಗಡೆ ಪೆರೆಮಯ್ಯ ಎಂಬ ಉಲ್ಲೇಕವೂ ಇರುತ್ತದೆ.

ನಾದೂರಿನ ಕಲ್ಲೇಶ್ವರ, ಶ್ರೀರಾಮ, ಆಂಜನೇಯ, ಬಸವಣ್ಣ, ಈರಕೃಷ್ಣಪ್ಪ, ಕಣಿವೆ ಮಾರಕ್ಕ, ಲಕ್ಕಮ್ಮ, ದುರ್ಗಮ್ಮ, ಕರಿಯಮ್ಮ ದೇವಸ್ಥಾನಗಳಿವೆ. ನಾದೂರು ಕೆರೆಯ ಕೋಡಿಯ ಅಂಚಿಗೆ ಇಂದಿಗೂ ಭವ್ಯವಾಗಿರುವ ಕಲ್ಲೇಶ್ವರ ದೇವಾಲಯಕ್ಕೆ , ಹೇಮಾವತಿ, ಬರಗೂರು, ಮದಲೂರು, ಈ ಭಾಗಗಳ ಅಪಾರ ಭಕ್ತರಿದ್ದಾರೆ. ಕರಿಯಮ್ಮನ ಉತ್ಸವ ಮಾಡುತ್ತಾರೆ. ಬಾನ, ಆರತಿ, ಬ್ಯಾಟೆ ಮುಖ್ಯ ಆಚರಣೆಗಳು.

ಬಿಳಿ, ಕೆಂಪು ಮಿಶ್ರಿತ ಮರಳು ಭೂಮಿಯನ್ನು ಹೊಂದಿರುವು ನಾದೂರು ಪರಿಸರದಲ್ಲಿ ಕುರುಚಲು ಗಿಡ, ಪೊದೆಗಳಿರುತ್ತವೆ. ಆದುದರಿಂದ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಮುಂಗುಸಿ, ಕಾಡುಹಂದಿ, ಕಾಡುಪ್ರಾಣಿಗಳು ಕಂಡು ಬರುತ್ತವೆ.

ಪಕ್ಷಿಗಳಾದ ಕಾಗೆ, ಕೋಗಿಲೆ, ಕೌಜುಗ, ಕೊಕ್ಕರೆ, ಗುಬ್ಬಚ್ಚಿ, ಮೊದಲಾದ ಕಾಡು ಪಕ್ಷಿಗಳು ಕಂಡು ಬರುತ್ತವೆ. ಇದೊಂದು ರೈತಾಪಿ ಗ್ರಾಮವಾಗಿದ್ದು, ಗ್ರಾಮದಲ್ಲಿ ಎಮ್ಮೆ, ಕುರಿ, ಮೇಕೆ, ಎತ್ತುಗಳನ್ನು ವಿಶೇಷವಾಗಿ ಸಾಕುತ್ತಾರೆ.

ಕಾಡುಗೊಲ್ಲರು ಗ್ರಾಮದ ದೊಡ್ಡ ಸಮುದಾಯವಾಗಿದ್ದು, ಕುರಿಗಾಹಿಗಳಾಗಿದ್ದಾರೆ. ಆದಿ ಕರ್ನಾಟಕ, ಬೇಡರು, ಆದಿ ದ್ರಾವಿಡ, ಬೋವಿ, ವೀರಶೈವ, ಕುಂಚಿಟಿಗ, ಮಡಿವಾಳ, ಬ್ರಾಹ್ಮಣ ಜನಾಂಗ ಈ ಗ್ರಾಮದ ಸಣ್ಣ ಸಮುದಾಯವಾಗಿದೆ.

ಕಾಂಕ್ರಿಟ್ ಮನೆಗಳು, ಕಲ್ಲಿನ ಮನೆಗಳು, ಮಂಗಳೂರು ಹೆಂಚಿನ ಮನೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಗ್ರಾಮದಲ್ಲಿ ೨೫ ಗುಡಿಸಲುಗಳಿದ್ದು, ವಸತಿ ರಹಿತರು ಇದ್ದಾರೆ. ಸಿಮೆಂಟ್ ಶೀಟಿನ ಮನೆಗಳು ಮತ್ತು ಗುಡಿಸಲು ಮನೆಗಳಿವೆ. ಗ್ರಾಮದಲ್ಲಿ ಅಂಬೇಡ್ಕರ್ ಆವಾಸ್, ಕೃಷ್ಣ ಸೂತಕ ಗೃಹ, ಜನತಾ ವಸತಿ ಯೋಜನೆಯ ೩೨ ಫಲಾನುಭವಿಗಳು, ಭಾಗ್ಯ ಜ್ಯೋತಿ ಸೌಲಭ್ಯ ಪಡೆದವರೂ ಇದ್ದಾರೆ.

ಪ್ರಮುಖ ಆಹಾರ ಪದ್ದತಿ ರಾಗಿ ಮುದ್ದೆ, ಅನ್ನ ಗ್ರಾಮದ ಮುಖ್ಯ ಆಹಾರವಾಗಿದ್ದು, ರೊಟ್ಟಿ, ದೋಸೆ ಉಪ ಆಹಾರವಾಗಿ ಬಳಸುತ್ತಾರೆ. ಜೊತೆಗೆ ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹೋಳಿಗೆ ಭೋಜನವೂ ಇರುತ್ತದೆ.

ಗ್ರಾಮದಲ್ಲಿ ರೈತಾಪಿ ಜನ ೦೮ ಎತ್ತಿನಗಾಡಿಗಳನ್ನು ಬಳಸುತ್ತಿದ್ದು, ಟೆಂಪೋ, ಟ್ರ್ಯಕ್ಟರ್, ಆಟೋಗಳು, ಸ್ಕೂಟರ್‌ಗಳ ಬಳಕೆಯೂ ಇದೆ.

ಇಲ್ಲಿನ ಮುಖ್ಯ ಬೆಳೆ ಶೇಂಗಾ ರಸ್ತೆ ಸಂಚಾರಕ್ಕೆ ಮೂರು ಖಾಸಗಿ ಬಸ್ಸುಗಳು, ಆಟೋ ರಿಕ್ಷಾ ಮತ್ತು ಸ್ವಂತ ವಾಹನಗಳ ಪ್ರಮುಖ ಸಾರಿಗೆ ವ್ಯವಸ್ಥೆ. ಆಹಾರ ಬೆಳೆಗಳಾಗಿ ರಾಗಿ, ತೊಗರಿ, ಅಲಸಂದಿ ಪ್ರಮುಖವಾಗಿ ಬೆಳೆಯುತ್ತಾರೆ. ನೀರಿನ

ಆಶ್ರಯವಿದ್ದವರು ಭತ್ತ ಬೆಳೆಯುತ್ತಾರೆ. ಸೂರ್ಯಕಾಂತಿ, ರೇಷ್ಮೆ, ಹುಣಸೆ, ತೆಂಗು, ಅಡಿಕೆ ವ್ಯಾಪಾರಿ ಬೆಳೆಯಾಗಿ ಬೆಳೆಯುವುದುಂಟು.

ಈ ಗ್ರಾಮದಲ್ಲಿ ಪಂಚಾಯಿತಿ ಕೇಂದ್ರವಾದರೂ, ಸರ್ಕಾರಿ ಕಛೇರಿಗ ಳೆಲ್ಲವೂ ಪಕ್ಕದ ಪಟ್ಟನಾಯಕನಹಳ್ಳಿಯಲ್ಲಿ ಕೇಂದ್ರವಾಗಿದೆ. ಈ ಗ್ರಾಮದಲ್ಲಿ ೮ ಜನ ಸರ್ಕಾರಿ ನೌಕರರಿದ್ದು, ಪೋಲೀಸ್, ಶಿಕ್ಷಣ, ಕಂದಾಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಇಬ್ಬರು ವಕೀಲರು ಇದ್ದಾರೆ. ಟೈಲರಿಂಗ್, ಕಂಬಳಿ, ಕೈಮಗ್ಗಗಳೂ ಇವೆ. ಚಂದ್ರಶೇಖರ್ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಿರಾ ವಿಧಾನಸಭೆ, ಚಿತ್ರದುರ್ಗ ಲೋಕಸಭೆ, ನಾದೂರು ಜಿಲ್ಲಾಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಯ ಕೇಂದ್ರವೂ ಆಗಿದೆ. ಕೆಲಗ್ರಾಮದಲ್ಲಿ ಮೂವರು ಪಂಚಾಯಿತಿ ಸದಸ್ಯರು ಈ ಗ್ರಾಮದವರಾಗಿದ್ದು, ಒಬ್ಬರು ಪಂಚಾಯಿತಿ ನೀರುಗಂಟಿಯೂ ಸೇರಿದಂತೆ, ಅಂಚೆ ಕಚೇರಿಯೂ ಇದೆ. ಸರ್ಕಾರಿ ಹಿರಿಯ ಪಾಠಶಾಲೆ, ಅಂಗನವಾಡಿ ಕೇಂದ್ರವಿದ್ದು ೫ ಜನ ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಶಾಲೆಯಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ, ಬಿಸಿಯೂಟ, ಕ್ಷೀರಭಾಗ್ಯ ಯೋಜನೆಗಳು ಹೊಂದಿದ್ದು ಆಟದ ಮೈದಾನ ಇರುವುದಿಲ್ಲ. ಮೂರು ಸ್ತ್ರೀ ಶಕ್ತಿ ಕೇಂದ್ರಗಳಿವೆ. ಪಂಚಾಯಿತಿ ಗ್ರಂಥಾಲಯ ಹೆಸರಿಗಿದ್ದು ಮುಚ್ಚಿದೆ. ಪುಸ್ತಕಗಳು ಇರುವುದಿಲ್ಲ. ಉಪ ಆರೋಗ್ಯ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ. ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ ಫಲಾನುಭವಿಗಳಿದ್ದು, ಎಸ್.ಎಸ್.ವೈ. ಯೋಜನೆಯ ೨೦ ತಂಡಗಳಿವೆ. ಈ ಗ್ರಾಮದಲ್ಲಿ ಮೂರು ಕಡೆ ಅರಳಿಕಟ್ಟೆ, ಎರಡು ಕರುಗಲ್ಲು ಇದ್ದು, ಇವುಗಳಿಗೂ ಪೂಜೆ ನೆರವೇರುತ್ತದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ಕಲ್ಲೇಶ್ವರ, ಬಸವಣ್ಣ, ಇವು ಹೆಚ್ಚಾಗಿ ಸಾರ್ವತ್ರಿಕ ದೇವಾಲಯ ಲಗಳಾಗಿ ನಿತ್ಯ ಪೂಜೆಗೆ ಪಾತ್ರವಾದರೆ, ಶ್ರೀರಾಮ, ಕಣಿವೆ ಮಾರಕ್ಕ, ಕರಿಯಮ್ಮ ವಾರದ ಮಂಗಳವಾರ, ಶುಕ್ರವಾರ ಮಾತ್ರ ಪೂಜೆ ನಡೆಯುತ್ತದೆ. ಗ್ರಾಮ ದೇವತೆ ಕರಿಯಮ್ಮವಾಗಿದ್ದ, ವಾರ್ಷಿಕವಾಗಿ ವಿಶೇಷ ಹಬ್ಬವಾಗಿ ನಡೆಸುತ್ತಾರೆ. ಆ ಸಂದರ್ಭದಲ್ಲಿ ನೆರೆಯ ಹತ್ತಾರು ಹಳ್ಳಿಯ ಜನ ಸೇರುತ್ತಾರೆ. ಪ್ರಾಣಿಬಲಿ, ಆರತಿ, ದೇವರ ಉತ್ಸವ ವಿಶೇಷವಾಗಿ ನಡೆದು ರಾತ್ರಿಯೆಲ್ಲಾ ಜನಪದ ಕಲೆಗಳ ಪ್ರದರ್ಶನ ಇರುತ್ತದೆ. ಶಿವರಾತ್ರಿ, ಯುಗಾದಿ, ಮಹಾನವಮಿಯಂದು ಕಲ್ಲೇಶ್ವರ, ಬಸವೇಶ್ವರ ದೇವರ ಉತ್ಸವ ಹೊರಡಿಸಲಾಗುವುದು. ಗುಡ್ಡ ರಂಗಪ್ಪ ಈ ಗ್ರಾಮದ ಹೆಸರಾಂತ ಮುಖ್ಯ ವೀಣೆ ಕಲಾವಿದರಾಗಿದ್ದು, ತಾವು ನೊಳಂಬವಾಡಿ ಸಂಸ್ಥಾನದ ಕಲಾ ಪರಂಪರೆಯವರೆಂದು ಹೇಳುತ್ತಾರೆ. ಮೂಡಲಪಾಯ ಯಕ್ಷಗಾನಕ್ಕೆ ಮುಖ್ಯ ವೀಣೆ ಊದುವ ಮೂಲಕ ಹೆಸರಾಗಿದ್ದಾರೆ. ನರಸಿಂಹ ಮೂರ್ತಿ ಎಂಬ ಪೌರಾಣಿಕ ನಾಟಕ ನಿರ್ದೇಶಕರೂ ಈ ಗ್ರಾಮದ ರಾಜಕೀಯ ಮುಖಂಡರಾಗಿ, ಹಲವು ಪ್ರಗತಿಪರ ಅಭಿವೃದ್ಧಿಗೆ ಪ್ರೇರಕರಾಗಿದ್ದಾರೆ. ವಿವಿಧ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ಡಾ. ನಂಜುಂಡೇಗೌಡ, ಪ್ರೊ. ಹನುಮಂತರಾವ್ ಹಾಗೂ ಪ್ರೊ.ಚಂದ್ರಶೇಖರ್ ಇದೇ ಗ್ರಾಮದವರಾಗಿರುವುದು ವಿಶೇಷವಾಗಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೮.೬ ಇದ್ದು, ಪುರುಷರು ಮೇಲ್ಮೆ ಸಾಧಿಸಿದ ೮೦.೫ ಇದ್ದರೆ ಮಹಿಳೆಯರು ೫೫.೭ ರಷ್ಟಿದ್ದಾರೆ. ನೀರಿಗೆ ೩ ಸಿಸ್ಟನ್‌ಗಳಿದ್ದು, ಗ್ರಾಮ ಪಂಚಾಯಿತಿಯಿಂದ ೨೮ ಕೊಳವೆ ಬಾವಿ ತೋಡಿಸಿದರೂ ನೀರಿನ ಕೊರತೆಯಿದೆ. ಸದ್ಯ ಮೂರು ಕೊಳವೆ ಬಾವಿಗಳು ಕಾರ್ಯನಿರ್ವಹಿಸುತ್ತಿವೆ. ನಾದೂರು ಗ್ರಾಮಕ್ಕೆ ಹೊಂದಿಕೊಂಡಂತೆ ಉತ್ತರ ಭಾಗಕ್ಕಿದ್ದು ತುಂಬುವುದು ಅಪರೂಪದ ಸಂದರ್ಭವಾಗಿದೆ.

ಗೌಡಗೆರೆ ಹೋಬಳಿ ನಾದೂರಿನಲ್ಲಿ ೩ ಶಾಸನಗಳು ಲಭ್ಯವಿದ್ದು, ಸಿರಾ ಶಾಸನ ೫೨ ರ ಪ್ರಕಾರ, ವಿಜಯನಗರದ ಬುಕ್ಕರಾಯನ ಕಾಲದಲ್ಲಿ ನಾದೂರಿನ ಅಚ್ಚಿಗೌಡ ಮತ್ತು ಹೆಗಡೆ ಪೆರಿಯ ಇವರು ಆಳುತ್ತಿದ್ದ ಕಾಲದಲ್ಲಿ ಒಂದು ಯುದ್ಧವಾಗುತ್ತದೆ. ಆಗ ಮಡಿವಾಳ ಕುಟುಂಬದ ಬೊಮ್ಮನ ಹೆಂಡತಿ ಕುಮಾರಿ ಇವಳ ಮಗಳ ಮಗ ಹೊನ್ನಮ್ಮನ ಮಗ ನಾಗಯ್ಯ ಹೋರಾಡಿ ಸತ್ತರು. ಆಘ ನಾಗಯ್ಯನ ಮಡದಿ ನಾಗಮ್ಮ ಯುದ್ಧಕ್ಕೆ ಹೋಗಿ ಆಕೆಯೂ ಮಡಿದಳು. ಮಡಿದ ಸೊಸೆಯ ನೆನಪಿಗೆ ಮಾವ ವೀರಮಾಸ್ತಿಗಲ್ಲು ನೆಟ್ಟ ಸಂಗತಿ ಇದೆ. ಮತ್ತೊಂದು ಶಾಸನ ೫೧ ರ ಪ್ರಕಾರ ವಿಜಯನಗರದಲ್ಲಿ ಕೃಷ್ಣದೇವರಾಯ ಅಧಿಕಾರ ಮಾಡುವಾಗ, ಕೊಪ್ಪದ ಒಡೆಯನಾದ ಬಸವರಸ ಒಡೆಯನು, ನಾದೂರಿನ ಶ್ರೀ ಕಲ್ಲೇಶ್ವರ ದೇವರಿಗೆ ನಿತ್ಯ ಅಭಿಷೇಕ ಮೊದಲಾದ ದೇವತಾ ಕಾರ್ಯ ನಡೆಸಲು ತಮ್ಮಡಿ ಕೆಂಚಯ್ಯನಿಗೆ ದೇವರ ಮಾನ್ಯದ ಗದ್ದೆಯನ್ನು ದತ್ತಿ ಕೊಟ್ಟನು. ಹಾಗೂ ಬ್ರಾಹ್ಮಣರ ವಿಷ್ಣು ಭಟ್ಟರ ಮಗ ದಾಸಿ ಭಟ್ಟರಿಗೆ ಆದಾಯ ಮೂಲವಾಗಿ ಗದ್ದೆ ಹಾಗೂ ಖುಷ್ಕಿ ಭೂಮಿಯನ್ನು ದತ್ತಿ ಕೊಟ್ಟ ಸಂಗತಿ ಇದೆ. ನಾದೂರು ಶಾಸನ ೧೨೬ರ ಪ್ರಕಾರ ಕುಮಾರು ಮಾರಸಿಂಗನ ಮಗ ಬಸವಣ್ಣನು ಶ್ರೀ ರಾಮ ದೇವಸ್ಥಾನಕ್ಕೆ ಮಜ್ಜನದ ಬಾವಿಯನ್ನು ಕಟ್ಟಿಸಿದ ಪ್ರಸ್ತಾಪವಿದೆ. ಕಾಲ ೧೬ ನೇ ಶತಮಾನವಾಗಿದೆ.

ಮೋಡಿ ಕಲೆಗೆ ಈ ಗ್ರಾಮ ಪ್ರಸಿದ್ಧವಾಗಿತ್ತು. ಮಡಿವಾಳ ಸಮುದಾಯದ ದಿವಂಗತ ಕರಿಯಪ್ಪ, ಈಶ್ವರಪ್ಪ ಮೋಡಿ ಕಲಾವಿದರಾಗಿದ್ದರು. ಇವರ ಮಗ ದಾಸಪ್ಪ ಮೋಡಿ ಕಲೆ ಬಗ್ಗೆ ಮಾತನಾಡುತ್ತಾರೆ. ಬೇರೆ ತಂಡಗಳ ಜೊತೆಗೆ ಮೋಡಿ ಪಂದ್ಯ ಪ್ರದರ್ಶಿಸುವುದಾಗಿ ಹೇಳುತ್ತಾರೆ.

ಶ್ರೀಮತಿ ಶಾರದಮ್ಮ ನಾದೂರು ನೆನಪು ನೂರಾರು ಎಂಬ ಪುಸ್ತಕ ಪ್ರಕಟಿಸಿದ್ದಾರೆ. ಇದರಲ್ಲಿ ನಾದೂರಿನ ಗತಕಾಲದ ಬದುಕು, ಕಲೆ, ಸಂಸ್ಕೃತಿ, ಸೌಹಾರ್ದತೆಯ ಬದುಕನ್ನು ವಿಶ್ಲೇಷಿಸಿದ್ದಾರೆ. ನಾದೂರು ವಾಸುದೇವ ಸಾಂಸ್ಕೃತಿಕ ಚಿಂತಕರಾಗಿ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ.

## ನಾರಾಯಣಪುರ

ನಾರಾಯಣಪುರ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಸಿರಾ– ಹಿರಿಯೂರು ಹೆದ್ದಾರಿಯಲ್ಲಿ ಎಡಕ್ಕೆ ತಿರುಗಿ, ತಾವರೆಕೆರೆ, ಹೊಸೂರು, ಭೂತಪ್ಪನ ಗಡಿ ಜಿಲ್ಲಾ ರಸ್ತೆಯಲ್ಲಿ ಸಾಗಿ, ಕೆರಗನಹಳ್ಳಿಯಿಂದ ಮುಂದೆ ಬಂದು ಎಡಕ್ಕೆ ನಾರಾಯಣ ಪುರುವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು. ಇದರ ಭೌಗೋಳಿಕ ವಿಸ್ತೀರ್ಣ ೯೧೫.೭೬ ಹೆಕ್ಟೇರ್ ಹೊಂದಿದೆ. ಕಪ್ಪು ಮರಳು–ಚೌಳು ಮಣ್ಣಿನಿಂದ ಕೂಡಿದ್ದು ಇಲ್ಲಿ ಮೇಲ್ಸ್ತ್ರೆ ಕಡಲೆ, ಹತ್ತಿ, ಸಾಂಬಾರು ಬೀಜ ಬೆಳೆಯುವುದಕ್ಕೆ ಉಪಯುಕ್ತವಾಗಿದೆ. ಬಯಲು ಸೀಮೆಯಾಗಿರುವ ಈ ಹಳ್ಳಿಗೆ ಸುವರ್ಣ ಮುಖಿ ನದಿ ಉತ್ತರ ದಕ್ಷಿಣವಾಗಿ ಹರಿದು, ಮಳೆಗಾಲದಲ್ಲಿ ಮಾತ್ರ ಮುಂದೆ ಹೋಗುತ್ತದೆ. ಬೇಸಿಗೆ ಕಾಲದಲ್ಲಿ ಬತ್ತಿ ಹೋಗುತ್ತದೆ. ಈ ಗ್ರಾಮ ಒಂದು ಪುರಾತನ ಗ್ರಾಮವಾಗಿದ್ದು, ಗ್ರಾಮದಲ್ಲಿ ಕದಿರೆ ನರಸಿಂಹಸ್ವಾಮಿ ದೇವಾಲಯವಿದ್ದು, ಇದೇ ನಾರಾಯಣಸ್ವಾಮಿ ಎಂದು ಖ್ಯಾತವಾಗಿದ್ದು, ಆ ಕಾರಣದಿಂದಲೇ ನಾರಾಯಣಪುರ ಎಂಬ ಹೆಸರು ಬಂದಿದೆ. ಗ್ರಾಮದಲ್ಲಿ ಐದು ವೀರಗಲ್ಲುಗಳ ಬಗ್ಗೆ ಕರ್ನಾಟಕ ಎಕ್ಸ್‌ಪ್ರೆಸ್‌ನಲ್ಲಿ ಉಲ್ಲೇಖಿಸಿದ್ದರೂ, ಕೆಲವು ಕಲ್ಲುಗಳು ಮಾತ್ರ ಕದಿರೆ ನರಸಿಂಹಸ್ವಾಮಿ ದೇವಸ್ಥಾನದ ಬಳಿ ಸಂಗ್ರಹಿಸಿ ಇಡಲಾಗಿದೆ. ಈ ಎಲ್ಲಾ ಕಲ್ಲುಗಳ ಹೋರಾಟ ನಿರತ ವೀರನೊಬ್ಬನ ಕಥನ ಹೇಳುವ ಚಿತ್ರಪಟಲವಾಗಿದೆ. ಇವು ಹಸಿರು, ಮೃದುಕಲ್ಲು ಹೊಂದಿರುವುದರಿಂದ ಇವು ೧೦–೧೧ ನೇ ಶತಮಾನದ ಹೇಮಾವತಿ ಸಂಸ್ಥಾನದ ನೊಳಂಬರ ಕಾಲದ ರಚನೆಗಳಂತಿವೆ.

ನಾರಾಯಣಪುರ ಬಯಲು, ಹಳ್ಳ, ಮರ, ಕುರುಚಲು ಕಾಡು, ಪೊದೆಗಳಿಂದ ಕೂಡಿದೆ. ಹಾಗಾಗಿಯೇ ಕೆಲಭಾಗದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಉಡ, ಮುಂಗುಸಿ, ಕಾಡುಹಂದಿ, ಕಾಡುಪ್ರಾಣಿಗಳು ಕಂಡು ಬರುತ್ತವೆ.

ಪಕ್ಷಿಗಳಾದ ಕಾಗೆ, ಕೋಗಿಲೆ, ಪಾರಿವಾಳ, ಬೆಳವ, ಕೌಜುಲ, ಕೊಕ್ಕರೆ, ಗುಬ್ಬಚ್ಚಿ, ಮೊದಲಾದ ಕಾಡು ಪಕ್ಷಿಗಳು ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ. ಸರಾಸರಿ ೪೬೩ ಮಿ.ಮೀ. ಮಳೆಯ ಪ್ರಮಾಣ ಹೊಂದಿರುವ ಈ ಗ್ರಾಮದಲ್ಲಿ ಚಳಿಯೂ ಹೆಚ್ಚು. ೧೨ ಸೆಂ.ಚಳಿ ಇದ್ದರೆ, ಬಿಸಿಲಿನ ತಾಪಮಾನ ೩೮ ಸೆಂ. ಇರುತ್ತದೆ. ಕುಡಿಯುವುದಕ್ಕೆ ೩ ಸಿಸ್ಟನ್‌ಗಳ ಮೂಲಕ ನಲ್ಲಿಗಳಲ್ಲಿ ನೀರನ್ನು ಪೂರೈಕೆ ಮಾಡಲಾಗುತ್ತದೆ.

ಕುಂಚಿಟಿಗ ಇಲ್ಲಿನ ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ಬೇಡರು, ಭಜಂತ್ರಿ ಹಾಗೂ ತಿಗಳರು ಮನೆಗಳಿವೆ. ಇವು ಅರೆ ಸಣ್ಣ ಸಮುದಾಯವಾಗಿವೆ. ಒಟ್ಟು ೧೦೨ ಮನೆಗಳಿರುವ ಕಾಂಕ್ರಿಟ್ ಮನೆಗಳು, ಹೆಂಚಿನ ಮನೆಗಳು ಹಾಗೂ ಶೀಟಿನ ಮನೆಗಳಿವೆ. ೪೨೩ ಜನಸಂಖ್ಯೆ ಇದೆ. ಗ್ರಾಮದಲ್ಲಿ ಆಶ್ರಯ ಜನತಾ ಯೋಜನೆ ೯೩ ಮನೆಗಳಿದ್ದು ಭಾಗ್ಯಜ್ಯೋತಿ ದೀಪದ ಫಲಾನುಭವಿಗಳು ಇದ್ದು, ಒಟ್ಟು ೪೦ ಮನೆಯಲ್ಲಿ ಶೌಚಾಲಯದ ಬಳಕೆಯಿದೆ.

ಪ್ರಮುಖ ಆಹಾರ ಪದ್ಧತಿ ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು, ರೊಟ್ಟಿ, ದೋಸೆ ಬಳಸುವವರಿದ್ದಾರೆಬಳಸುತ್ತಾರೆ. ಜೊತೆಗೆ ವಿಶೇಷ ಸಂದರ್ಭಗಳಲ್ಲಿ ಬಾಡೂಟವೂ ಇರುತ್ತದೆ. ಸಾಂಪ್ರದಾಯಿಕ ವಾಹನ ಇರುವುದಿಲ್ಲ. ಕೃಷಿ ಹಾಗೂ ವಾಣಿಜ್ಯ ಸರಕು ಸಾಗಾಣಿಕೆಗಾಗಿ ಟ್ರ್ಯಕ್ಟರ್, ಮಿನಿಟೆಂಪೋ, ಆಟೋಗಳು, ಲಾರಿಗಳ ಬಳಕೆಯೂ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದ ಮುಖ್ಯ ಬೆಳೆ ಶೇಂಗಾ. ಆಹಾರ ಬೆಳೆಗಳಾಗಿ ರಾಗಿ, ಭತ್ತ, ತೊಗರಿ, ಅಲಸಂದಿ, ಜೋಳ ಪ್ರಮುಖವಾಗಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆಗಳಾಗಿ ಸೂರ್ಯಕಾಂತಿ, ರೇಷ್ಮೆ, ತೆಂಗು, ಅಡಿಕೆ ಬೆಳೆಯುತ್ತಾರೆ. ಈ ಗ್ರಾಮದಲ್ಲಿ ೪ ಜನ ಸರ್ಕಾರಿ ನೌಕರರಿದ್ದು, ಟೈಲರಿಂಗ್, ಇಟ್ಟಿಗೆ ಫ್ಯಾಕ್ಟರಿ, ಬೀಡಿ ಸುತ್ತುವುದು ಉಪಕಸುಬಾಗಿದೆ.

ಸಿರಾ ವಿಧಾನಸಭೆ, ತಾವರೆಕೆರೆ ಜಿಲ್ಲಾಪಂಚಾಯಿತಿ, ಹುಣಸೇಹಳ್ಳಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರುವ ನಾರಾಯಣಪುರ, ಚಿತ್ರದುರ್ಗ ಲೋಕಸಭಾ

ಕ್ಷೇತ್ರದ ವ್ಯಾಪ್ತಿಗೆ ಬರುತದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ, ಸರ್ಕಾರಿ ಪ್ರೌಢಶಾಲೆಗಳಿದ್ದು, ಒಟ್ಟು ೧೯ ಜನ ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಶಾಲೆಯಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ, ಬಿಸಿಯೂಟ, ಕ್ಷೀರಭಾಗ್ಯ ಯೋಜನೆಗಳಿದ್ದು, ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ವಿಕಲ ಚೇತನ, ವಿಧವಾ ವೇತನ ಫಲಾನುಭವಿಗಳಿದ್ದು, ೪ ಅಂಗಡಿಗಳು ಕಾರ್ಯ ನಿರ್ವಹಿಸುತ್ತವೆ. ಗ್ರಾಮದ ಪ್ರಾಚೀನತೆ ಸಾರುವ ೫ ವೀರಗಲ್ಲುಗಳಿದ್ದು, ಹೋರಾಟನಿರತ ವೀರನ ಚಿತ್ರ, ಸೂರ್ಯಚಂದ್ರನ ಚಿತ್ರಗಳು ಈ ವೀರನ ಸಾಹಸ, ಬದುಕು ಶಾಶ್ವತ ಎಂಬ ಸೂರ್ಯ, ಚಂದ್ರರ ಚಿತ್ರ ಆಕರ್ಷಕವಾಗಿದೆ.

ನಾರಾಯಣಪುರದಲ್ಲಿ ಒಟ್ಟು ೫ ಶಾಸನಗಳು ಲಭ್ಯವಿದ್ದು ಕ್ರಿ.ಶ. ೯೬೭ ರ ಕಾಲಮಾನವಾಗಿದ್ದು ನೊಳಂಬ ಅರಸರ ಅವಧಿಯಂಟಾಗಿದೆ. ವಿಶೇಷವೆಂದರೆ ಈ ಐದು ವೀರಗಲ್ಲು ಶಾಸನಗಳಾಗಿದ್ದು, ಇವೆಲ್ಲವೂ ಕದನದಲ್ಲಿ ಹೋರಾಡಿದವರ ಮಡಿದವರ ವಿವರವಿದೆ. ಶಾಸನ ೫೬ ರಲ್ಲಿ ತುರು ಸಂರಕ್ಷಣೆಗಾಗಿ ಮಡಿದ ತಂದೆ ಎಡೆಕಯ್ಯ ಎಂಬುವನಿಗೆ ಆತನ ಮಗಳಾದ ಪೊರವಾಚಿ ವೀರಗಲ್ಲು ನೆಟ್ಟ ಸಂಗತಿ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಕದೀರೀನರಸಿಂಹಸ್ವಾಮಿ, ಆಂಜನೇಯ, ರಂಗನಾಥ, ವೀರಬಸವಣ್ಣ, ಯಲ್ಲಮ್ಮ, ಬೇವಿನಹಳ್ಳಮ್ಮ ದೇವಸ್ಥಾನಗಳಿದ್ದು, ಯಲ್ಲಮ್ಮ, ಬೇವಿನಹಳ್ಳಮ್ಮ ಇವುಗಳ ಜಾತ್ರೆ ಊರಹಬ್ಬವಾಗಿ ಆರತಿ, ಬಾನ, ಮಡೆ, ಹರಕೆ–ಉತ್ಸವವಾಗಿ ನಡೆಯುತ್ತದೆ. ಶಿವರಾತ್ರಿ, ಯುಗಾದಿ, ಮಹಾನವಮಿ, ದೀಪಾವಳಿಯಂದು ವಿಜೃಂಭಣೆಯಿಂದ ಆಚರಿಸುತ್ತಾರೆ. ಶಿಕ್ಷಣ, ರಸ್ತೆಸಾರಿಗೆ, ಪಂಚಾಯಿತಿ, ಈ ವ್ಯಾಪ್ತಿಯ ೪ ಜನ ಸರ್ಕಾರಿ ನೌಕರರಿದ್ದಾರೆ. ಇಂಜಿನಿಯರ್ ದೊಡ್ಡರಂಗಯ್ಯ ಉಪನ್ಯಾಸಕರಾದ ಕೃಷ್ಣಪ್ಪ, ಪಾಂಡುರಂಗಯ್ಯ. ಈ ಗ್ರಾಮದವರು ಹೊಸೂರು ಕೆರೆ ತುಂಬಿದರೆ ಸಾಕಷ್ಟು ಭತ್ತ ಬೆಳೆಯುವ ನಾರಾಯಣಪುರದ ಜನತೆ, ನೀರಿನ ತೊಂದರೆ ಅನುಭವಿಸುತ್ತಿದ್ದಾರೆಂದು ಹಿರಿಯರಾದ ನಾಗಜ್ಜಿ ಹೇಳುತ್ತಾರೆ.

## ನಾರಾಯಣಪುರ ಪಾಳ್ಯ

ನಾರಾಯಣಪುರ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ. ದೂರದಲ್ಲಿದೆ. ಇದೊಂದು ನಾರಾಯಣಪುರದ ಮಜರೆ ಗ್ರಾಮವಾಗಿದ್ದು, ೨೦೦೦ ನೇ ಸಾಲಿನಿಂದ ಇಲ್ಲಿ ಮನೆಗಳು ರಚನೆಯಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೪೮.೧೬ ಹೆಕ್ಟೇರ್ ಆಗಿದೆ. ನಾರಾಯಣಪುರದ ಗೇಟಿನ ಸರ್ಕಾರಿ ಜಮೀನಿನಲ್ಲಿ ಮನೆ ನಿರ್ಮಿಸಿ ಕೊಂಡದ್ದರಿಂದ ನಾರಾಯಣಪುರ ಪಾಳ್ಯ ಎಂದು ಕರೆಯಲಾಗಿದೆ. ಕೆಂಪು, ಮಿಶ್ರಿತ ಬಿಳಿ ಮರಳು ಭೂಮಿಯಿಂದ ಹೊಂದಿರುವ ಈ ಗ್ರಾಮ, ಕೃಷಿ ಹಾಗೂ ಕೂಲಿ ಅವಲಂಬಿತ ಜನವಸತಿ ಕೇಂದ್ರವಾಗಿದೆ.

ಈ ಪರಿಸರದಲ್ಲಿ ನರಿ, ಮೊಲ, ಮುಂಗುಸಿ, ತೋಳ ಮೊದಲಾದ ಕಾಡುಪ್ರಾಣಿಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ, ಕಾಗೆ, ಕೋಗಿಲೆ, ಬೆಳವ, ಕೊಕ್ಕರೆ, ಕಾಡು ಪಕ್ಷಿಗಳು ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ.

ಸರಾಸರಿ ೫೪೬ ಮಿ.ಮೀ. ಮಳೆಯ ಪ್ರಮಾಣ ಹೊಂದಿರುವ ಈ ಗ್ರಾಮದಲ್ಲಿ ಚಳಿಯೂ ಹೆಚ್ಚು. ೧೨ ಸೆಂ.ಚಳಿ ಇದ್ದರೆ, ಬಿಸಿಲಿನ ತಾಪಮಾನ ೩೮ ಸೆಂ. ಇರುತ್ತದೆ. ಸುವರ್ಣ ಮುಖಿ ದಂಡೆಯ ಮೇಲಿದ್ದರೂ ನೀರಿಗೆ ಅಜ್ಞಾತವಿದೆ. ಈ ಪರಿಸರದಲ್ಲಿ ೫ ಕೊಳವೆ ಬಾವಿಗಳಿದ್ದು ಕೃಷಿಗೆ ಆಗ್ರಹವಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕುಡಿಯುವುದಕ್ಕೆ ನೀರನ್ನು ಪೂರೈಕೆ ಮಾಡಲಾಗುತ್ತದೆ. ೧ ಕೈ ಪಂಪು ಇದೆ.

ಕುಂಚಿಟಿಗ ಇಲ್ಲಿನ ದೊಡ್ಡ ಸಮುದಾಯವಾಗಿದ್ದು, ನಾಯಕ, ಆದಿ ದ್ರಾವಿಡ, ಸಣ್ಣ ಸಮುದಾಯವಾಗಿದೆ. ಒಟ್ಟು ೨೪ ಮನೆಗಳಿರುವ ಇಲ್ಲಿ ೧ ಕಾಂಕ್ರಿಟ್ ಮನೆ (ಕುಂಚಿಟಿಗರ ಪಾಂಡುರಂಗಪ್ಪನವರ ಮನೆ), ಹೊರತು ಪಡಿಸಿ ಉಳಿದವು ಹೆಂಚಿನ ಮನೆ ಹಾಗೂ ೨ ಗುಡಿಸಲು ಮನೆಗಳಿವೆ. ಒಟ್ಟು ಜನಸಂಖ್ಯೆ ೭೨ ಇದ್ದು ಬಸವ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧ ಮನೆಯಲ್ಲಿ ಶೌಚಾಲಯದ ಬಳಕೆಯಿದೆ.

ಪ್ರಮುಖ ಆಹಾರ ಪದ್ದತಿ ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು, ರೊಟ್ಟಿ ಬಳಸುವವರಿದ್ದಾರೆಬಳಸುತ್ತಾರೆ. ಜೊತೆಗೆ ವಿಶೇಷ ಸಂದರ್ಭಗಳಲ್ಲಿ ಬಾಡೂಟವೂ, ಪಾಯಸ ಭೋಜನವೂ ಇರುತ್ತದೆ.

ಸಾಂಪ್ರದಾಯಿಕವಾಗಿ ಸೈಕಲ್ ಹಾಗೂ ಎತ್ತಿನಗಾಡಿ ಬಳಕೆಯಲ್ಲಿದೆ. ಗ್ರಾಮದ ಮುಖ್ಯ ಬೆಳೆ ಶೇಂಗಾ. ಆಹಾರ ಬೆಳೆಗಳಾಗಿ ರಾಗಿ, ಹುರುಳಿ, ಹತ್ತಿ ತೊಗರಿ ಪ್ರಮುಖವಾಗಿ ಬೆಳೆಯುತ್ತಾರೆ. ವಿಜಯಕುಮಾರ್ ಎಂಬ ಒಬ್ಬರು ಪೋಲೀಸ್ ಇಲಾಖೆಯಲ್ಲಿ ನೌಕರರಿದ್ದಾರೆ.

ಸಿರಾ ವಿಧಾನಸಭೆ, ತಾವರೆಕೆರೆ ಜಿಲ್ಲಾಪಂಚಾಯಿತಿ, ಹುಣಸೇಹಳ್ಳಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರುವ ನಾರಾಯಣಪುರ, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತದೆ. ಸಿರಾ–ಹುರಿವೇಹಳ್ಳಿ, ದಂಡಿಕೆರೆ ಮಾರ್ಗವಾಗಿ ರಸ್ತೆ ಸಂಪರ್ಕವಿದೆ. ಬಸ್ ಸಂಚಾರವೂ ಇದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ ಫಲಾನುಭವಿಗಳಿದ್ದು, ಭಾಗ್ಯಜ್ಯೋತಿ ಉಚಿತ ವಿದ್ಯುತ್ ಸೌಲಭ್ಯ ಪಡೆದ ಮನೆಗಳಿವೆ. ಗ್ರಾಮದಲ್ಲಿ ಬಸವೇಶ್ವರ ದೇವಾಲಯವಿದ್ದು, ಭೂತಪ್ಪನ ಪೌಳಿಯೂ ಇದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ಶ್ರಾವಣ ಮಾಸದ ಸಂದರ್ಭದಲ್ಲಿ ಬಂಡ್ಲಿ ಈರಪ್ಪ ದೇವರಿಗೆ ಆರತಿ ಮಾಡಲಾಗುವುದು. ಶಿವರಾತ್ರಿ, ದಸರಾ, ಯುಗಾದಿ, ದೀಪಾವಳಿ ಹಬ್ಬದ ಆಚರಣೆಯೂ ಇದೆ. ಶಾರದ ಎನ್.ಪಿ. ಎಂಬ ಒಬ್ಬ ವಿದ್ಯಾರ್ಥಿನಿ ಪದವಿ ತರಗತಿಯಲ್ಲಿ ಕಲಿಯುತ್ತಿದ್ದು, ಗ್ರಾಮದ ಸಾಕ್ಷರತೆ ೪೩.೨ ಮಾತ್ರ ಇದೆ.

## ನೇರಲಹಳ್ಳಿ

ನೇರಲಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ನೇರಲ ಮರಗಳ ಸಾಲು ತೋಪು ಈ ಗ್ರಾಮದ ಪರಿಸರದಲ್ಲಿ ವ್ಯಾಪಕವಾಗಿದ್ದ ಕಾರಣ ನೇರಲೆಸಾಲು – ನೇರಲಹಳ್ಳಿ ಎಂದು ಕರೆಯಲಾಗಿದೆ. ಇದು ನಾದೂರು ಉಪ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ಮೂಲ ಗ್ರಾಮದಲ್ಲಿ ಹಂಚಿಕೆಯಾಗಿದ್ದು, ೨೫೪೩.೮೪ ಹೆಕ್ಟೇರ್‌ನಲ್ಲಿ ಸೇರ್ಪಡೆಯಾಗಿದೆ. ಮರಳು ಮಿಶ್ರಿತ ಬಿಳಿ–ಕೆಂಪು ಕಲ್ಲುಗಳು ಕಂಡು ಬರುತ್ತವೆ. ಕರಲು ಪ್ರದೇಶವಾಗಿದೆ.

ಸರಾಸರಿ ೪೬೫ ಮಿ.ಮೀ. ಮಳೆಯು ಬೀಳುತ್ತಿದ್ದು, ಬಿಸಿಲಿನ ತಾಪಮಾನ ೩೭ ಸೆಂ. ಪ್ರಮಾಣ ಹೊಂದಿರುವ ಈ ಗ್ರಾಮದಲ್ಲಿ ಚಳಿಯೂ ಹೆಚ್ಚು, ೧೦ ಸೆಂ. ಚಳಿ ಇರುತ್ತದೆ. ಗ್ರಾಮದಲ್ಲಿ ಒಂದು ಪುಟ್ಟ ಕೆರೆಯಿದ್ದು ಮಳೆಗಾಲದಲ್ಲಿ ಮಾತ್ರ ತುಂಬಿ ನೀರು ಒದಗಿಸುತ್ತದೆ. ಬೇಸಿಗೆಯಲ್ಲಿ ಒಣಗಿ ಹೋಗುತ್ತದೆ. ಗೋಕಟ್ಟೆ ಪ್ರತ್ಯೇಕವಾಗಿದ್ದು, ಚಿಕ್ಕ ಹಳ್ಳವೂ ಇದೆ. ಗ್ರಾಮಕ್ಕೆ ಪಂಚಾಯಿತಿ ವತಿಯಿಂದ ಕುಡಿಯುವ ನೀರನ್ನು ಪೂರೈಸಲಾಗುವುದು. ೩ ಕೈ ಪಂಪುಗಳು ಗ್ರಾಮದಲ್ಲಿ ಇದೆ.

ಕುಂಚಿಟಿಗ ಜನಾಂಗ ಇಲ್ಲಿನ ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ದರ್ಜಿ ಕಿರು ಸಮುದಾಯವಾಗಿದೆ. ಪೂರ್ಣ ಕನ್ನಡ ಭಾಷೆಯನ್ನೇ ಬಳಸಲಾಗುವುದು. ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿದ್ದು, ೫ ಮನೆಯಲ್ಲಿ ಮಾತ್ರ ಶೌಚಾಲಯದ ಬಳಕೆಯಿದೆ.

ಪ್ರಮುಖ ಆಹಾರ ಪದ್ಧತಿ ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ರೊಟ್ಟಿ, ದೋಸೆ, ಉಪ ಆಹಾರವಾಗಿ ಬಳಸುತ್ತಾರೆ. ಜೊತೆಗೆ ವಿಶೇಷ ಸಂದರ್ಭಗಳಲ್ಲಿ ಮಾಂಸ, ಹೋಳಿಗೆ ಭೋಜನವೂ ಇರುತ್ತದೆ.

ಸಾಂಪ್ರದಾಯಿಕವಾಗಿ ಟ್ರ್ಯಾಕ್ಟರ್, ಸ್ಕೂಟರ್ ಬಳಕೆಯಿದ್ದು, ಮುಖ್ಯ ಬೆಳೆ ಶೇಂಗಾ. ಉಪ ಬೆಳೆಗಳಾಗಿ ತೆಂಗು, ಅಡಿಕೆ, ಭತ್ತ ಬೆಳೆಯುತ್ತಾರೆ. ಒಬ್ಬರು ಶಿಕ್ಷಕರು ಸರ್ಕಾರಿ ನೌಕರಿಯಲ್ಲಿದ್ದಾರೆ. ಒಂದು ಅಂಗನವಾಡಿ, ಸರ್ಕಾರಿ ಕಿರಿಯ ಪಾಠಶಾಲೆಗಳಿದ್ದು, ೨೯ ಮಕ್ಕಳು ಹಾಗೂ ೩ ಜನ ನೌಕರರಿದ್ದಾರೆ. ಗ್ರಾಮದಲ್ಲಿ ಬೀಡಿ ಸುತ್ತುವುದು, ಸ್ತ್ರೀ ಶಕ್ತಿ ಕೇಂದ್ರ ಹಾಗೂ ತಿಲಕ್ ಯುವಕ ಸಂಘ, ಗ್ರಾಮಾಭಿವೃದ್ಧಿಗಾಗಿ ಶ್ರಮಿಸುತ್ತಿದೆ. ವೃದ್ಧಾಪ್ಯ, ಅಂಗವಿಕಲ, ವಿಧವಾ ವೇತನ, ಎಸ್ಎಸ್‌ವೈ ಯೋಜನೆಯ ಫಲಾನುಭವಿಗಳಿದ್ದು, ಆಶ್ರಯ, ಅಂಬೇಡ್ಕರ್, ಜನತಾ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಶಕ್ತಿ ಯೋಜನೆ ಫಲಾನುಭವಿಗಳಿದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಮೂರು ಪುಟ್ಟ ಪುಟ್ಟ ಅಂಗಡಿಗಳೂ ಇವೆ. ಗ್ರಾಮದಲ್ಲಿ ಲಕ್ಷ್ಮೀದೇವರು, ದುರ್ಗಮ್ಮ ದೇವರ ಗುಡಿಗಳು, ಇತ್ತೀಚೆಗೆ ಗಣಪತಿ ದೇವಸ್ಥಾನಗಳಿವೆ. ದುರ್ಗಮ್ಮ ಗ್ರಾಮ ದೇವತೆಯಾಗಿದ್ದು, ವಾರ್ಷಿಕವಾಗಿ ಊರಹಬ್ಬ ಮಾಡಲಾಗುತ್ತಿದೆ. ಆ ಕಾಲದಲ್ಲಿ ಆರತಿ, ಬಾನ, ಬಲಿ ಸೇವೆಗಳು ನಡೆಯುತ್ತಿವೆ. ಯುಗಾದಿ, ದೀಪಾವಳಿ ಮಹಾನವಮಿ, ಗಣಪತಿ ಹಬ್ಬದ ಆಚರಣೆಯೂ ಇದೆ.

ನಂಜಾವಧೂತ ಶಾಖಾಮಠವಿದೆ. ಇಲ್ಲಿ ಮಠದ ಸಸ್ಯ ತೋಟವಾಗಿದೆ. ಇದು ಪಟ್ಟನಾಯಕನಹಳ್ಳಿ ಗುರುಗುಂಡ ಬ್ರಹ್ಮ ಮಠಕ್ಕೆ ಸೇರಿದೆ.

## ನಾರಗೊಂಡನಹಳ್ಳಿ

ನಾರಗೊಂಡನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ೧೩೮.೨ ಹೆಕ್ಟೇರ್ ಭೌಗೋಳಿತ ವಿಸ್ತೀರ್ಣ ಹೊಂದಿದೆ. ನಾರಾಯಣಪ್ಪ ಎಂಬ ವ್ಯಕ್ತಿಯ ಹೆಸರಿನಿಂದ

ಗ್ರಾಮ ನಿಷ್ಪತ್ತಿ ರೂಪುಗೊಂಡಿದ್ದು, ನಾರಾಯಣಗೌಡ ಸಂಕ್ಷಿಪ್ತವಾಗಿ ನಾರನೊಂಡ ಆಗಿದೆ. ಕಂದು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ಕುರುಚಲು ಗಿಡ, ಪೊದೆ, ಹಳ್ಳ, ದಿಣ್ಣೆಗಳಿಂದ ಕೂಡಿದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿ, ಉಡ, ಮುಂಗುಸಿ, ಮಂಗಗಳು ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕುರಿ, ಮೇಕೆಗಳನ್ನು ಸಾಕಲಾಗಿದೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ೫೮೦ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೯ಂ ಸೆಂ., ಚಳಿ ೧೨ಂ ಸೆಂ. ಇರುತ್ತದೆ. ಪೂರ್ವ ಪಶ್ಚಿಮಕ್ಕೆ ಹಳ್ಳವಿದ್ದು, ಒಂದು ಕುಂಟೆ ಇದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಕೃಷಿಗೆ ೩೦ ಕೊಳವೆ ಬಾವಿಗಳಿವೆ. ೨ ಸಿಸ್ಟನ್‌ಗಳಿದ್ದು, ೧ ಕೈ ಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ದೊಡ್ಡ ಸಮುದಾಯವಾಗಿದ್ದು, ವೀರಶೈವ, ಕುರುಬ, ಆದಿ ದ್ರಾವಿಡ, ನಾಯಕ, ಮಡಿವಾಳ, ಆದಿ ಕರ್ನಾಟಕ ಕಿರು ಸಮುದಾಯಗಳಾಗಿವೆ. ವಿವಿಧ ಪ್ರಕಾರಗಳ ೧೪೨ ಮನೆಗಳಿದ್ದು ಅವು ಹೆಂಚಿನ, ಶೀಟಿನ, ಕಾಂಕ್ರೀಟ್ ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆ ಗಳಾದ ಜನತಾ, ಆಶ್ರಯ, ಅಂಬೇಡ್ಕರ್ ಯೋಜನೆಯೂ ಸೇರಿದಂತೆ ಉಚಿತ ವಿದ್ಯುತ್ ಸೌಲಭ್ಯವನ್ನು ಪಡೆದಿದ್ದಾರೆ. ೪೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೭೧೪ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ ಸಾಂಪ್ರದಾಯಿಕ ವಾಹನಗಳಾದ ಎತ್ತಿನಬಂಡಿಯ ಜೊತೆಗೆ ಟೆಂಪೋ, ಆಟೋ, ಟ್ರ್ಯಕ್ಟರ್ ಇವೆ.

ಶೇಂಗಾ ಮುಖ್ಯ ಬೆಳೆಯಾಗಿದೆ. ರಾಗಿ, ಭತ್ತ, ಜೋಳ, ಅಲಸಂದಿ, ತೊಗರಿ ಬೆಳೆ ಬೆಳೆಯುತ್ತಾರೆ. ಸೂರ್ಯಕಾಂತಿ, ಹತ್ತಿ ಬೆಳೆಯಿದೆ. ಒಂದು ಕಿರು ಹಾಲಿನ ಡೈರಿ ಇದೆ. ಶಇಕ್ಷಕರು, ಸಾರಿಗೆ ಇಲಾಖೆಯ ೪ ಜನ ನೌಕರರು ಇದ್ದಾರೆ. ಹೆಂಗಸರು ಟೈಲರಿಂಗ್, ಬೀಡಿ ಕಟ್ಟುವ ಗೃಹ ಕೆಲಸ ಮಾಡುತ್ತಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನ ಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಬರಗೂರು ತಾಲ್ಲೂಕು ಪಂಚಾಯಿತಿ ಹಾಗೂ ದೊಡ್ಡಬಾಣಗೆರೆ ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ. ಇಬ್ಬರು ಪಂಚಾಯಿತಿ ಸದಸ್ಯರು ಈ ಗ್ರಾಮದ ಪ್ರತಿನಿಧಿಗಳಾಗಿದ್ದಾರೆ. ೨ ಸ್ತ್ರೀ ಶಕ್ತಿ ಸಂಘ, ೪ ಧರ್ಮಸ್ಥಳ ಗ್ರಾಮಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಸ್ತ್ರೀಯರು ಅಧಿಕ ಸಬಲೀಕರಣಕ್ಕೆ ಪ್ರೇರಕವಾಗಿದ್ದಾರೆ. ಉಳಿದಂತೆ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ೧೧೦೫ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಶೌಚಾಲಯದ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೪.೩ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಧಾರ್ಮಿಕವಾಗಿ ಕೊಲ್ಲಾಪುರದಮ್ಮ, ಮಾರಮ್ಮ, ಈಶ್ವರ, ರಂಗನಾಥ ಸ್ವಾಮಿ ದೇವಾಲಯಗಳಿವೆ. ಮಾರಮ್ಮನ ಊರಹಬ್ಬ, ಬಾನ, ಆರತಿ, ಬ್ಯಾಟೆ ಆರತಿ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ಮಹಾನವಮಿ, ಶಿವರಾತ್ರಿ ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ.

## ನಿಡುಗಟ್ಟೆ

ನಿಡುಗಟ್ಟೆ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೫ ಕಿ.ಮೀ ದೂರದಲ್ಲಿದೆ. ಸಿರಾ–ಅಮರಾಪುರ ರಸ್ತೆಯಲ್ಲಿ ಗಂಡಿಹಳ್ಳಿ ಗೇಟಿನಿಂದ ಮುಂದಕ್ಕೆ –ನಿಡುಗಟ್ಟೆ ಕ್ರಾಸ್‌ನಿಂದ ಎಡಕ್ಕೆ ೧ ಕಿ.ಮೀ. ದೂರದಲ್ಲಿ ಈ ಗ್ರಾಮವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಗ್ರಾಮದ ಸಮೀಪದಲ್ಲಿ ಕೆರೆಯೊಂದಿದೆ. ಈ ಕಾರಣದಿಂದಲೇ ಈ ಗ್ರಾಮಕ್ಕೆ ನಿಡಿದಾದ ಕಟ್ಟೆ ಹೊಂದಿರುವ ಗ್ರಾಮ ನಿಡುಕಟ್ಟೆ–ನಿಡುಗಟ್ಟೆ ಆಗಿದೆ ಎಂದು ಮುಖ್ಯ ಶಿಕ್ಷಕ ಚಿಕ್ಕಲಿಂಗಯ್ಯ ಹೇಳುತ್ತಾರೆ.

ಇದರ ಭೌಗೋಳಿಕ ವ್ಯಾಪ್ತಿ ೩೨೪.೦೯ ಹೆಕ್ಟೇರ್ ಆಗಿದೆ. ಕಂದು ಮಿಶ್ರಿತ ಕೆಂಪು, ಹುಡಿ ಮರಳು ಹೊಂದಿರುವ ಇಲ್ಲಿನ ಮರಗಳು, ಶೇಂಗಾ ಬೆಳೆಗೆ ಉತ್ಕೃಷ್ಟವಾದುದು. ತಗ್ಗು, ದಿಣ್ಣೆ, ಕುರುಚಲು ಗಿಡ, ಪೊದೆಗಳಿಂದ ಕೂಡಿರುವ ಈ ಪರಿಸರದಲ್ಲಿ ಮೊಲ, ನರಿ, ಕಾಡುಹಂದಿ, ಕರಡಿ, ಉಡ, ಬಾರುಬೆಕ್ಕು ಕಂಡು ಬಂದರೆ ಸಾಕು ಪ್ರಾಣಿಗಳಾದ ಕುರಿ, ಮೇಕೆ, ಹಳ್ಳಿಕಾರ್ ತಳಿ ಎತ್ತು, ಸೀಮೆ ಹಸುಗಳನ್ನು ಸಾಕಿದ್ದಾರೆ. ಕೋಳಿಯ ಸಾಕಾಣಿಕೆಯ ಇದೆ. ಕಾಡು ಪಕ್ಷಿಗಳಾಗಿ ಗಿಳಿ, ಗೊರವಂಕ, ಗುಬ್ಬಚ್ಚಿ, ಗೂಬೆ, ಹದ್ದು, ಗರುಡ, ಕೋಗಿಲೆ, ಕಾಗೆ ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ೫೮೦ ಮಿ.ಮೀ. ಮಳೆ ಬೀಳುವ ಈ ಪರಿಸರದಲ್ಲಿ ಬಿಸಿಲು ೩೯ಂ ಸೆಂ. ಇದ್ದರೆ, ಚಳಿ ೧೨ಂ ಸೆಂ. ಸಾಮಾನ್ಯವಾಗಿರುತ್ತದೆ. ಕೃಷಿಗೆ ೬೫ ಕೊಳವೆ ಬಾವಿಗಳ

ಮೂಲಕ ನೀರಿನ ಆಶ್ರಯ ಮಾಡಿಕೊಂಡಿದ್ದಾರೆ. ಗ್ರಾಮಕ್ಕೆ ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ೮ ಕಿರು ಟ್ಯಾಂಕರ್‌ಗಳಿವೆ. ೨ ಕೈ ಪಂಪುಗಳು ಇವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯ ವಾಗಿದ್ದು, ಕುರುಬರು, ಆದಿಕರ್ನಾಟಕ, ಬೇಡರು, ಉಪ್ಪಾರ ಕಿರು ಸಮುದಾಯ ಗಳಾಗಿವೆ. ಒಟ್ಟು ೨೫೪ ಮನೆಗಳಿರುವ ಇವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಈ ಗ್ರಾಮದ ಒಟ್ಟು ಜನಸಂಖ್ಯೆ ೧೨೪೭ ಆಗಿದೆ. ೧೨೪ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ವಸತಿ ಯೋಜನೆಗಳಾದ ಇಂದಿರಾ ಆವಾಸ್, ಜನತಾ, ಆಶ್ರಯ ಹಾಗೂ ಭಾಗ್ಯ ಜ್ಯೋತಿ ವಿದ್ಯುತ್ ಯೋಜನೆಯ ೩೨ ಫಲಾನುಭವಿಗಳಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನವಾಗಿದ್ದು, ರೊಟ್ಟಿ, ಉಪ್ಪಿಟ್ಟು ಬಳಸುವವರಿದ್ದಾರೆ ಬಾಡೂಟ. ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನವಾಗಿ ಎತ್ತಿನಬಂಡಿ, ಆಧುನಿಕವಾಗಿ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರವಾಹನ, ಕಾರು ಬಳಕೆ ಇದೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಯಾಗಿ ರಾಗಿ, ಜೋಳ, ಅಲಸಂದಿ, ತೊಗರಿ ಬೆಳೆಯುತ್ತಾರೆ. ಹುಣಸೆಹಣ್ಣು, ಶೇಂಗಾ ವ್ಯಾಪಾರಿ ಬೆಳೆಗಳು. ಕಂಬಳಿ ವ್ಯಾಪಾರ ಗ್ರಾಮದ ಮುಖ್ಯ ಉದ್ದಿಮೆಯೂ ಆಗಿದೆ. ೨೫ ಕ್ಕೂ ಹೆಚ್ಚು ಜನ ಸರ್ಕಾರಿ ನೌಕರರಿದ್ದು, ಅರಣ್ಯ ಇಲಾಖೆಯ ದೊಡ್ಡತಿಮ್ಮಯ್ಯ, ಇಂಜಿನಿಯರುಗಳಾದ ಮೈಲಾರಪ್ಪ, ಬಿ.ಗುಂಡಪ್ಪ ಸೇರಿದಂತೆ ಒಟ್ಟು ೭ ಜನ ಇಂಜಿನಿಯರ್ ಚಿಕ್ಕಲಿಂಗಯ್ಯ ಸೇರಿದಂತೆ ೩ ಜನ ಶಿಕ್ಷಕರಿದ್ದಾರೆ. ಬೀಡಿ ಸುತ್ತುವುದು, ಕಂಬಳಿ ದಾರ ತೆಗೆಯುವುದು, ನೂಲು ಹದಗೊಳಿಸುವ ಸಣ್ಣ ಕೈಗಾರಿಕೆ ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ತಾಲ್ಲೂಕು, ಜಿಲ್ಲಾ ಹಾಗೂ ಗ್ರಾಮ ಪಂಚಾಯಿತಿ ಕೇಂದ್ರಗಳಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಗಾಗಿದೆ. ದ್ವಾರನಕುಂಟೆ, ಧರ್ಮಪುರ, ಸಿರಾ–ಅಮರಾಪುರ ಕಚ್ಚಾ ರಸ್ತೆ ಇದೆ. ಗ್ರಾಮದಲ್ಲಿ ೪ ಸ್ತ್ರೀ ಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯಕ ಸಂಘಗಳಿವೆ. ಅಂಗನವಾಡಿ ಕೇಂದ್ರ.

ಸರ್ಕಾರಿ ಹಿರಿಯ ಪಾಠಶಾಲೆ ಇದ್ದು, ೮೫ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪಠ್ಯ ಪುಸ್ತಕ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೬೩ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೧೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಮೈಲಾರಲಿಂಗ, ಬೀರಪ್ಪ, ಮಾರಮ್ಮ, ಪಾತಲಿಂಗ ದೇವಸ್ಥಾನಗಳಿವೆ. ಚೌಡಿಕೆ ಕಲಾವಿದ ರಾಮಣ್ಣ, ಬೀರದೇವರ ಕಾವ್ಯ ಹಾಡುವ ಭರಮಣ್ಣ, ಭಜನೆ ಕೃಷ್ಣಮೂರ್ತಿ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ಮಾರಮ್ಮನ ಊರಹಬ್ಬವಿದ್ದು, ಬಲಿ, ಆರತಿ, ಹರಕೆ ಸಂಪ್ರದಾಯವಿದೆ.

ಯುಗಾದಿ, ಮಹಾನವಮಿ, ಗೌರಿ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಪ್ರಸ್ತುತ ಗುಣ್ಣಯ್ಯ ಎಂಬುವವರು, ಈ ಗ್ರಾಮದ ಪಂಚಾಯಿತಿ ಸದಸ್ಯರಾಗಿದ್ದು, ಹುಲಿಕುಂಟೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿದ್ದಾರೆ. ನಿಡುಗಟ್ಟೆ ಚಂದ್ರಶೇಖರ್ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರೂ ಆಗಿದ್ದರು.

## ನೇಜಂತಿ

ನೇಜಂತಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೩೬ ಕಿ.ಮೀ. ದೂರದಲ್ಲಿದೆ. ೨೪೦ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿರುವ ಈ ಕಂದಾಯ ಗ್ರಾಮವಾಗಿದ್ದು ನೇಜ ಎಂದರೆ ಸಸಿಗಳನ್ನು ಬೆಳೆಯುವ ಸ್ಥಳ ಎಂಬ ಅರ್ಥವಿದ್ದು ರೈತಾಪಿ ಬದುಕಿನ ಈ ಹಳ್ಳಿಯನ್ನು ನೇಜಂತಿ ಎಂದು ಕರೆದಿರಬಹುದೆ. ನೇಜ,ಜೇನು,ಸಸ್ಯ ಅಥವಾ ಜೇನುಗೂಡು ಕಟ್ಟುವ ಸ್ಥಳ ಎಂಬ ಅರ್ಥದಲ್ಲಿ ನೇಜಂತಿ ಆಗಿದೆ.

ಮರಳು ಮಿಶ್ರಿತ ಬಿಳಿ ಸಣ್ಣ ಕಲ್ಲಿನ ನೆಲವಾಗಿರುವ ಈ ಗ್ರಾಮದಲ್ಲಿ ಪೂರ್ವಕ್ಕೆ ಹಳ್ಳ, ಬಲ ಬದಿಗೆ ಕೆರೆ ಇದ್ದು, ನೀರಿನ ಕೊರತೆಯಿಂದ ತುಂಬುವುದು ಅಪರೂಪವಾಗಿದೆ. ಇಲ್ಲಿ ಕುರುಚಲು ಗಿಡ, ಪೊದೆ, ಸಣ್ಣ ಗಿಡ ಮರಗಳಿಂದ ಕೂಡಿದ್ದು, ಈ ಪರಿಸರದಲ್ಲಿ ನರಿ, ಮುಂಗುಸಿ, ಮೊಲ, ಜಿಂಕೆ ಮೊದಲಾದ ಪ್ರಾಣಿಗಳು ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ದನ, ಎಮ್ಮೆ, ಹಸು, ಕುರಿ, ಮೇಕೆ ಕಂಡು ಬರುತ್ತವೆ. ಪಕ್ಷಿಗಳಾದ ಗೊರವಂಕ, ಗಿಳಿ, ಕಾಗೆ, ಹದ್ದು, ಗರುಡ, ಕೊಕ್ಕರೆ, ಕೌಜುಗ ಮೊದಲಾದ ಪಕ್ಷಿಗಳು ಕಂಡು ಬಂದರೆ, ಗ್ರಾಮದಲ್ಲಿ ಸಾಕು ಪಕ್ಷಿಗಳಾದ ಕೋಳಿಗಳು ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೪೬೪ ಮಿ.ಮೀ.ಇದ್ದು, ಉಷ್ಣಾಂಶ ೩೮೦ ಸೆಂ. ಇರುತ್ತದೆ. ಚಳಿಯೂ

೧೨೦ ಸೆಂ. ಅಧಿಕವಾಗಿರುತ್ತದೆ. ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಇರುತ್ತದೆ. ಗ್ರಾಮದಲ್ಲಿ ಒಂದು ಮಿನಿ ಟ್ಯಾಂಕ್ ಇದ್ದು ೨೫ ನಲ್ಲಿಗಳಲ್ಲಿ ನೀರನ್ನು ಪೂರೈಸಲಾಗುವುದು.

ಆದಿ ಕರ್ನಾಟಕ ದೊಡ್ಡ ಸಮುದಾಯವಾಗಿದ್ದು, ಕುಂಚಿಟಿಗ, ಕುರುಬರು ಸಣ್ಣ ಸಮುದಾಯವಾಗಿದೆ. ಒಟ್ಟು ೧೬೫ ಮನೆಗಳಿದ್ದು, ಆಶ್ರಯ, ಅಂಬೇಡ್ಕರ್, ವಸತಿ ಯೋಜನೆ, ಭಾಗ್ಯ ಜ್ಯೋತಿಯ ೨೩ ಫಲಾನುಭವಿಗಳು ಇದ್ದು ಒಟ್ಟು ೧೧೧೨ ಜನಸಂಖ್ಯೆ ಇದೆ. ೧೪ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ.

ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳೂ ಇವೆ. ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ಊಟದ ವಿಶೇಷ ಸಂದರ್ಭವೂ ಇರುತ್ತದೆ. ಆಧುನಿಕ ವಾಹನವಾದ ಟ್ರ್ಯಾಕ್ಟರ್, ಮಿನಿಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಗ್ರಾಮದ ಮುಖ್ಯ ಆಹಾರವಾಗಿದ್ದು, ರಾಗಿ, ಭತ್ತ, ಅಲಸಂದಿ, ತೊಗರಿ ಆಹಾರ ಬೆಳೆಗಳಾಗಿವೆ. ತೆಂಗು, ಅಡಿಕೆ, ರೇಷ್ಮೆ, ಸೂರ್ಯಕಾಂತಿ, ಸೇವಂತಿ, ಹೂ ವಾಣಿಜ್ಯ ಬೆಳೆಯಾಗಿವೆ. ಒಂದು ಹಾಲಿನ ಡೈರಿ ಇದ್ದು ಸರಾಸರಿ ೫೦೦ ಲೀಟರ್ ಹಾಲನ್ನು ಸಂಗ್ರಹಿಸಲಾಗುತ್ತದೆ. ಮೂವರು ಸರ್ಕಾರಿ ನೌಕರರಿದ್ದು, ಗ್ರಾಮದಲ್ಲಿ ಬೀಡಿ ಕಟ್ಟುವುದು, ಊಟ, ಎಲೆ ತಯಾರಿಕೆ ಉಪ ಕಸುಬಾಗಿದೆ. ಶಿಕ್ಷಣ, ಸಾರಿಗೆ, ಆರ್ಡಿಪಿ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಕ್ಷೇತ್ರ ಹಾಗೂ ದ್ವಾರನಕುಂಟೆ ಗ್ರಾಮ ಪಂಚಾಯಿತಿ ಕ್ಷೇತ್ರಗಳನ್ನು ಒಳಗೊಂಡ ಈ ಗ್ರಾಮದ ಆಡಳಿತ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರು ಈ ಗ್ರಾಮದವರಿದ್ದಾರೆ. ೩ ಸ್ತ್ರೀ ಶಕ್ತಿ ಸಂಘಗಳ ಗುಂಪು ಇದ್ದು, ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಗಳಿವೆ. ಶಾಲೆಯಲ್ಲಿ ೩ ಜನ ಶಿಕ್ಷಕರು, ಒಬ್ಬರು ಅಂಗನವಾಡಿ ಶಿಕ್ಷಕಿಯಿದ್ದು, ೧೧೮ ಮಕ್ಕಳು ಒಂದೇ ತರಗತಿಯಿಂದ ೮ನೇ ತರಗತಿಯವರೆಗೆ ಕಲಿಯುತ್ತಿದ್ದಾರೆ.

ಗ್ರಾಮದ ಸಾಕ್ಷರತಾ ಪ್ರಮಾಣ ೫೯.೪ ರಷ್ಟು ಇದ್ದು, ಪುರುಷರು ೬೯.೭, ಮಹಿಳೆಯರು ೪೭.೬ ರಷ್ಟಿದೆ, ನೇಜಂತಿ ಚಿಕ್ಕಣ್ಣ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸೌಲಭ್ಯಗಳಾದ ಸಂಧ್ಯಾ ಸುರಕ್ಷೆ, ವೃದ್ಧಾಪ್ಯ ವೇತನದ ಫಲಾನುಭವಿಗಳು ಇದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯವಿದೆ. ಎರಡು ಪುಟ್ಟ ಹೋಟೆಲ್, ೬ ಅಂಗಡಿಗಳಿದ್ದು ದೈನಂದಿನ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿವೆ. ರಂಗನಾಥ ಸ್ವಾಮಿ ಈ ಗ್ರಾಮದ ಪುರಾತನ ದೇವಾಲಯವಾಗಿದ್ದು, ಫೆಬ್ರವರಿ ತಿಂಗಳಲ್ಲಿ ದೇವರ ಉತ್ಸವ ನಡೆಯುತ್ತದೆ. ಯುಗಾದಿ, ಗೌರಿ, ಆಯುಧ ಪೂಜೆ, ದೀಪಾವಳಿ, ಸಂಕ್ರಾಂತಿ, ಕುಂತಮ್ಮ-ಗೌರಮ್ಮನ ಹಬ್ಬದ ಆಚರಣೆ ಇದೆ.

ಗ್ರಾಮದಲ್ಲಿ ಕರಿಯಮ್ಮನ ಹಬ್ಬ ಊರಹಬ್ಬವಾಗಿ ಆಚರಣೆಯಲ್ಲಿದ್ದು, ಬಾನ, ಆರತಿ, ಬ್ಯಾಟೆ ಇರುತ್ತದೆ. ಗ್ರಾಮದಲ್ಲಿ ಜನಪದ ಕಲಾವಿದರಾದ ಭಜನೆ ತಿಪ್ಪೇಸ್ವಾಮಿ(೭೦), ಗೋವಿಂದ(೭೦) ಸೋಬಾನೆ ಕಲಾವಿದರಾದ ಲಿಂಗಮ್ಮ (೬೮) ಸಾಮಕ್ಕ ೭೦ ವರ್ಷದ- ಈ ಕಲಾವಿದರು ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ನೇಜಂತಿ ದ್ವಾರನಕುಂಟೆ-ಧರ್ಮಪುರ-ಹುಲಿಕುಂಟೆಗೆ ಸಂಪರ್ಕ ರಸ್ತೆಯನ್ನು ಹೊಂದಿದೆ.

## ನೇಜಂತಿಪಾಳ್ಯ

ನೇಜಂತಿ ಪಾಳ್ಯವು ನೇಜಯಂತಿ ಗ್ರಾಮದ ಉಪಗ್ರಾಮಕ್ಕೆ ಹೊಂದಿ ಕೊಂಡಿದೆ. ಕೋಡಪ್ಪ ಎಂಬುವವರು ಮೊದಲು ಮನೆ ನಿರ್ಮಿಸಿಕೊಂಡಿದ್ದು ನಂತರ ಗ್ರಾಮ ಬೆಳೆದು ಒಂದು ಪಾಳೆಯವಾಗಿದೆ. ಸಿರಾ ಧರ್ಮಪುರ ಮುಖ್ಯರಸ್ತೆಯಲ್ಲಿ ೩೬ ಕಿ.ಮೀ. ದೂರದಲ್ಲಿದ್ದು. ಇದರ ಭೌಗೋಳಿಕ ವಿಸ್ತೀರ್ಣ ಮುಖ್ಯಗ್ರಾಮ ನೇಜಂತಿಯ ೨೪೦ ಹೆಕ್ಟೇರ್ ಹಂಚಿಕೆಯಾಗಿದೆ. ಇಲ್ಲಿನ ಭೂಮಿ ಕೆಂಪು ಮಿಶ್ರಿತ ಮರಳು ಮಣ್ಣಿನಿದ ಕೂಡಿದ್ದು, ಶೇಂಗಾ ಬೆಳೆಗೆ ಉತ್ಕೃಷ್ಟವಾಗಿದೆ.

ಈ ಪರಿಸರದಲ್ಲಿ ಕುರುಚಲು ಗಿಡ, ಮರ, ಬಯಲು ದಿಣ್ಣೆಗಳಿರುವುದರಿಂದ ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ತೋಳ, ಉಡ, ಕಾಡುಬೆಕ್ಕು, ಚಿರತೆ ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸುಗಳನ್ನು ಸಾಕಿದ್ದಾರೆ. ನಾಯಿ, ಬೆಕ್ಕು, ಇತರ ಕಾಡು ಪ್ರಾಣಿಗಳು ಇವೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಬಾವುಲಿ, ಕಾಗೆಪಿಳ್ಳ, ಕಾಗೆ, ಬೆಳವ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿಗಳಿವೆ. ಕೋಳಿಯನ್ನು ಮಾಂಸ ಹಾಗೂ ಮೊಟ್ಟೆಗಾಗಿ ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ಶೇ. ೪೬೪ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೯-೪೦೦ ಸೆಂ.ರಷ್ಟು ಇದ್ದು, ಚಳಿಯು ೯-೧೧೦ ಸೆಂ. ಇರುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರು ನೀರು ಯೋಜನೆ ಅಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರ ಜನಾಂಗ ದೊಡ್ಡ ಸಮುದಾಯವಾಗಿದ್ದು, ಕುರುಬರು, ಅಕ್ಕಸಾಲಿಗರು, ಆದಿದ್ರಾವಿಡ, ಹಾಗೂ ನಾಯಕ ಕಿರು ಸಮುದಾಯಗಳಿವೆ. ಗ್ರಾಮದಲ್ಲಿ ೩೨ ಮನೆಗಳಿದ್ದು, ೧೨೦ ಜನಸಂಖ್ಯೆ ಹೊಂದಿದೆ. ಕಾಂಕ್ರೀಟ್, ಕಲ್ಲಿನ, ಶೀಟಿನ ಮನೆಗಳಿದ್ದು ಇಲ್ಲಿ ಜನತಾ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಉಚಿತ ಭಾಗ್ಯಜ್ಯೋತಿ ಯೋಜನೆ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದೆ.

ಶೈಕ್ಷಣಿಕವಾಗಿ ಮುಖ್ಯ ಗ್ರಾಮ ನೇಜಂತಿಗೆ ಹೋಗುತ್ತಿದ್ದು, ಉನ್ನತ ಶಿಕ್ಷಕ್ಕೆ ದ್ವಾರನಕುಂಟೆ, ಸಿರಾ, ಧರ್ಮಪುರ ಗ್ರಾಮವನ್ನು ಅವಲಂಬಿಸಿದ್ದಾರೆ. ಶಿಕ್ಷಕರು, ಕಂದಾಯ ಇಲಾಖೆಯ ನೌಕರರಿದ್ದಾರೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಗೂಡಂಗಡಿಗಳಿದ್ದು, ಒಂದು ಟೀ ಅಂಗಡಿ ಇದೆ. ರಂಗನಾಥಸ್ವಾಮಿ ದೇವರ ಉತ್ಸವ ನಡೆಯುತ್ತದೆ. ಉಳಿದಂತೆ ಯುಗಾದಿ, ದಸರಾ, ಗೌರಿಗಣೇಶ, ದೀಪಾವಳಿ, ಕುಂತಮ್ಮ-ಗೌರಮ್ಮನ ಹಬ್ಬಗಳನ್ನು ವಿಶೇಷವಾಗಿ ಆಚರಿಸುವುದು ರೂಢಿಯಲ್ಲಿದೆ.

## ನರಸಮ್ಮಜ್ಜಿ ಕಟ್ಟೆ

ನರಸಮ್ಮಜ್ಜಿ ಕಟ್ಟೆ ಕಳ್ಳಂಬೆಳ್ಳ ಉಪಗ್ರಾಮ. ಗುಂಡು ತೋಪು, ಮೈಸೂರು ರೋಡ್. ಈ ಮೂರು ಹೆಸರುಗಳಿಂದ ಕರೆದು ಒಂದೊಂದಾಗಿ ವಸತಿಗಳು ನಿರ್ಮಾಣವಾಗಿ ಇಂದು ಗ್ರಾಮವಾಗಿ, ವ್ಯಾಪಾರಿ ಸಂಪರ್ಕ ಕೇಂದ್ರವಾಗಿ ಬೆಳೆದಿದೆ. ಕುಂಚಿಟಿಗ ಮೂಲದ ನರಸಮ್ಮಜ್ಜಿ ಎಂಬುವವರು ಇಲ್ಲಿನ ಗುಂಡು ತೋಪಿನಲ್ಲಿ ಒಂದು ಗುಡಿಸಲು ಹಾಕಿಕೊಂಡು ವಾಸಿಸುತ್ತಿದ್ದಳು. ಸಿರಾ-ಮೈಸೂರು ಮುಖ್ಯ ರಸ್ತೆ ಇದಾಗಿದ್ದು ಇಲ್ಲಿಗೆ ಕಳ್ಳಂಬೆಳ್ಳ ಬಂಗಲೆ-ಎನ್.ಹೆಚ್.೪ ರಸ್ತೆ ೩ ಕಿ.ಮೀ. ದೂರದಲ್ಲಿದೆ ಈ ಅಡ್ಡ ರಸ್ತೆ ಕಳ್ಳಂಬೆಳ್ಳ ಕೆರೆಯ ಹಿಂಭಾಗದಲ್ಲಿ ಹಾದು ದೊಡ್ಡ ಅಗ್ರಹಾರ ತಲುಪಲು ಸಹಾಯಕವಾಗಿದೆ. ಹೀಗೆ ಸಿರಾ-ಮೈಸೂರು ರಸ್ತೆ, ಕಳ್ಳಂಬೆಳ್ಳ ಬಂಗಲೆ, ಹಾಗೂ ದೊಡ್ಡ ಅಗ್ರಹಾರ ಸಂಪರ್ಕ ಕೇಂದ್ರವಾದುದರಿಂದ, ಗ್ರಾಮ ಬಿರುಸಾಗಿ ಬೆಳೆದಿದೆ. ಕಳ್ಳಂಬೆಳ್ಳ ಮುಖ್ಯ ಗ್ರಾಮದ ಭಾಗವೇ ಆಗಿದ್ದು, ಎಲ್ಲಾ ಭೂ ದಾಖಲೆ, ಸಾಮಾಜಿಕ ಸೇವಾ ಸೌಲಭ್ಯಗಳು. ಕಳ್ಳಂಬೆಳ್ಳ ಹೆಸರಿನಲ್ಲಿಯೇ ಪಡೆಯುತ್ತಿದ್ದಾರೆ. ಕಳ್ಳಂಬೆಳ್ಳ ನರಸಮ್ಮಜ್ಜಿ ಕಟ್ಟೆ ಗ್ರಾಮಕ್ಕೆ ಗೆರೆ ಕೊರೆದಂತೆ ಕಳ್ಳಂಬೆಳ್ಳ ದೊಡ್ಡ ಕೆರೆಯ ಎರಡನೇ ಕೋಡಿಯ ಹಳ್ಳ ಗ್ರಾಮಗಳನ್ನು ಬೇರ್ಪಡಿಸಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ದೊಡ್ಡ ಸಮುದಾಯವಾಗಿದ್ದು, ಕುಂಚಿಟಿಗರು, ಆದಿದ್ರಾವಿಡ, ಮಡಿವಾಳ, ಹಂದಿಜೋಗಿ, ಕಮ್ಮಾರ, ಕ್ಷೌರಿಕ, ಬೋವಿ ಕಿರುಸಮುದಾಯಗಳಿವೆ. ಇಲ್ಲಿನ ಮಾತೃ ಭಾಷೆ ಕನ್ನಡವಾಗಿದೆ. ವಿವಿಧ ಪ್ರಕಾರ ೩೪೩ ಮನೆಗಳಿದ್ದು, ಅವು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ, ಗರಿ ಗುಡಿಸಿಲಿನ ಒಟ್ಟು ಏಳು ಗುಡಿಸಲು ಮನೆಗಳಿದ್ದು ಇಲ್ಲಿ ಜನತಾ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿದ್ದಾರೆ. ಒಟ್ಟು ಇಲ್ಲಿನ ಜನಸಂಖ್ಯೆ ೧೩೪೭ ರಷ್ಟಿದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಆಡಳಿತಾತ್ಮಕವಾಗಿ ಕಳ್ಳಂಬೆಳ್ಳಕ್ಕೆ ಸೇರಿದ್ದು, ಕುಡಿಯಲು ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಕೊಳಾಯಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತದೆ. ಇದರ ಸಮೀಪದಲ್ಲಿಯೇ ಕಳ್ಳಂಬೆಳ್ಳ ಗ್ರಾಮ ಪಂಚಾಯ್ತಿ ಕೇಂದ್ರ ಕಛೇರಿ, ನೀರು ಶುದ್ಧೀಕರಣ ಘಟಕವಿದೆ.

ಶೈಕ್ಷಣಿಕವಾಗಿ ೧೯೬೩ ರಲ್ಲಿ ಆರಂಭವಾದ ಶ್ರೀ ಮರಡಿ ರಂಗನಾಥ ಪ್ರೌಢಶಾಲೆ, ಸಿರಾ ಸೀಮೆಗೆ ಹಳೆಯ ಶಿಕ್ಷಣ ಸಂಸ್ಥೆಯಾಗಿದ್ದು, ಗ್ರಾಮಾಂತರ ವಿದ್ಯಾರ್ಥಿಗಳಿಗೆ ವರದಾನವಾಗಿದೆ. ಮುಖ್ಯ ಶಿಕ್ಷಕ ನಾಗರಾಜ್ ನೇತೃತ್ವದಲ್ಲಿ ೧೧ ಜನ ಅಧ್ಯಾಪಕ ಸಿಬ್ಬಂದಿ ಇದ್ದು ೧೮೩ ಮಕ್ಕಳಿದ್ದಾರೆ. ಶಾಲೆಯಲ್ಲಿ ಉತ್ತಮ ಕಾಂಪೌಂಡ್, ಬಿಸಿಯೂಟ, ಸಮವಸ್ತ್ರ, ಶೌಚಾಲಯದ ಸೌಲಭ್ಯವಿದೆ. ಒಂದು ಅಂಗನವಾಡಿ ಕೇಂದ್ರವಿದೆ. ಇಲ್ಲಿಗೆ ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆ ಉಚಿತ ಕಂಪ್ಯೂಟರ್ ಕಲಿಕಾ ಕೇಂದ್ರ ತೆರೆದಿದೆ. ಶಾಲೆಗೆ ಕಂಪ್ಯೂಟರ್ ದೇಣಿಗೆ ನೀಡಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಧಾರ್ಮಿಕವಾಗಿ ಈಚಲು ದುರ್ಗಮ್ಮ, ಅಜ್ಜಯ್ಯಸ್ವಾಮಿ ದೇವಾಲಯಗಳಿವೆ. ದುರ್ಗದ ಆರತಿ, ಬಾನ, ಬ್ಯಾಟೆಯ ಸಂಪ್ರದಾಯವಿದೆ. ಅಜ್ಜಯ್ಯ ಸ್ವಾಮಿಗೆ ಭಜನೆ, ಪ್ರಾರ್ಥನೆ, ಶಿವರಾತ್ರಿ ಸಂದರ್ಭದಲ್ಲಿ ಪಾನಕ ಫಲಹಾರ ಸೇವೆ ನಡೆಯುತ್ತದೆ.

ಸುವರ್ಣ ಗ್ರಾಮ ಯೋಜನೆಯ ಅಡಿಯಲ್ಲಿ ಒಂದು ಸಮುದಾಯ ಭವನ ನಿರ್ಮಾಣವಾಗಿದೆ. ೭ ಹೋಟೆಲ್, ೧೪ ಅಂಗಡಿ, ಎಲೆಕ್ಟ್ರಿಕಲ್, ವೈಂಡಿಂಗ್ ಇವರ ಅಂಗಡಿಗಳಿವೆ.

ಸಿರಾ–ಮೈಸೂರು ಬಸ್ ಸಂಚಾರವಿದೆ. ಬಂಗ್ಲೆಗೆ ಆಟೋ ಸಂಪರ್ಕವಿದೆ.

ಶಿಕ್ಷಣ, ಸಾರಿಗೆ, ಕಂದಾಯ, ಪೌರಸೇವೆ ಇಲಾಖೆಗೆ ಸೇರಿದೆ ೬ ಜನ ಸರ್ಕಾರಿ ನೌಕರರಿದ್ದಾರೆ. ಉಳಿದಂತೆ ಯುಗಾದಿ, ದಸರಾ, ಗೌರಿಗಣೇಶ, ದೀಪಾವಳಿ, ಹಬ್ಬಗಳನ್ನು ವಿಶೇಷವಾಗಿ ಆಚರಿಸುವುದು ರೂಢಿಯಲ್ಲಿದೆ.

## ನವಣೆ ಬೋರನಹಳ್ಳಿ

ನವಣೆ ಬೋರನಹಳ್ಳಿ, ಸಿರಾ ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದ್ದು, ಕುರುಚಲು ಕಾಡು, ಹಳ್ಳ ದಿಣ್ಣೆಗಳ ನಡುವಿನ ಉತ್ತರದ ಪ್ರದೇಶದಲ್ಲಿರುವ ಕಾಡುಹಳ್ಳಿ, ಸಿರಾ ಮೈಸೂರು ರಸ್ತೆಯ ಶಿಡ್ಲೆಕೋಣ ಗ್ರಾಮದ ನಂತರ ಯಲದಬಾಗಿ ರಸ್ತೆಯಲ್ಲಿ ತಿರುಗಿ ಅರ್ಧ ಕಿ.ಮೀ. ಸಾಗಿ ಮತ್ತೆ ಬಲಕ್ಕೆ ತಿರುಗಿ ಕಾಡುರಸ್ತೆಯಲ್ಲಿ ೩ ಕಿ.ಮೀ.ದೂರ ಹೋದರೆ ಈ ಗ್ರಾಮ ಸಿಕ್ಕುತ್ತದೆ. ಅಲ್ಲದೆ ಯಲದಬಾಗಿ, ಕುಂಟೇಗೌಡನಹಳ್ಳಿ ಮಾರ್ಗವಾಗಿಯೂ ಸಿರಾ ಕಳ್ಳಂಬೆಳ್ಳ ರ್‍ಹಾಯ ಹೆದ್ದಾರಿಗೆ ೫ ಕಿ.ಮೀ. ದೂರದಲ್ಲಿದೆ.

ನವಣೆ ಬೋರನಹಳ್ಳಿ, ವಿಶೇಷವಾಗಿ ಕರಲುಗಲ್ಲಿನ, ಬಳಿ, ಕೆಂಪು ಮಣ್ಣನ್ನು ಹೊಂದಿದ್ದು, ಶೇಂಗಾ ಬೆಳೆಗೆ ಉತ್ಕೃಷ್ಟವಾಗಿದೆ ಆದರೂ ತಗ್ಗಿನ ಬಾಗದಲ್ಲಿ ನವಣೆ ಬೆಳೆಯನ್ನು ವಿಶೇಷವಾಗಿ ಬೆಳೆಯುತ್ತಿದ್ದ ಬೋರೇಗೌಡನ ಹೆಸರಲ್ಲಿಯೇ ಈ ಗ್ರಾಮದ ರಚನೆಯಾಗಿದೆ ಎಂದು ಶಿಕ್ಷಕ ಶಿವಲಿಂಗಯ್ಯ ಅಭಿಪ್ರಾಯ ಪಡುತ್ತಾರೆ.

೧೬೩ ಹೆಕ್ಟರ್ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ಯಲದಬಾಗಿಯ ಮಜರೆ ಗ್ರಾಮವಾಗಿದೆ. ಕುರುಚಲು ಕಾಡು, ಗಿಡ, ಪೊದೆ, ಹಳ್ಳ, ದಿಬ್ಬದ ಪ್ರದೇಶವಾಗಿರುವುದರಿಂದ ಈ ಪರಿಸರದಲ್ಲಿ ಕಾಡು ಪ್ರಾಣಿಯಾದ ಮೊಲ, ಜಿಂಕೆ, ಹಂದಿ, ಉಡ, ಬೆಕ್ಕು, ಮುಂಗುಸಿ, ವ್ಯಾಪಕವಾಗಿ ಕಂಡು ಬರುತ್ತವೆ. ಗ್ರಾಮದಲ್ಲಿ ರೈತರು ಹಸು, ಎತ್ತು, ಕುರಿ, ಮೇಕೆ, ಸಾಕುತ್ತಾರೆ. ಕೋಳಿ ಸಾಕಾಣಿಕೆಯೂ ಇದೆ. ಪಕ್ಷಿಗಳಾದ ಗೊರವಂಕ, ನವಿಲು, ಗಿಳಿ, ಕೋಗಿಲೆ, ಸಿಳ್ಳೆಕಾಗೆ, ಬಳವ ಕಂಡು ಬರುತ್ತವೆ.

ಗ್ರಾಮದಲ್ಲಿ ನೀರಿಗೆ ಅಭಾವವಿದ್ದು ಕೊಳವೆ ಭಾವಿಗಳ ಮೂಲಕ ಮಿನಿ ಟ್ಯಾಂಕ್‌ಗೆ ಹಾಯಿಸಿ ಗ್ರಾಮ ಪಂಚಾಯಿತಿಯಿಂದ ನೀರು ಪೂರೈಸಲಾಗುತ್ತದೆ. ಒಂದು ಕೈಪಂಪು ಇದೆ. ಈ ಪರಿಸರದಲ್ಲಿ ೨೩ ಕೊಳವೆ ಭಾವಿಗಳಿದ್ದು, ಕೃಷಿ ಉದ್ದಿಮೆಗೆ ಸಹಕಾರಿಯಾಗಿದೆ. ವಾರ್ಷಿಕ ಸರಾಸರಿ ೫೫೭.೩ ಮೀ.ಮೀ. ಮಳೆ ಬರುತ್ತಿದ್ದು, ಉಷ್ಣಾಂಶ ೩೮ ಡಿ.ಸೆಂ. ಚಳಿ ೧೨ ಡಿ.ಸೆಂ. ಇರುತ್ತದೆ.

ಕುಂಚಿಟಿಗ ಸಮುದಾಯ ದೊಡ್ಡ ಸಮುದಾಯವಾಗಿದ್ದು, ನಾಯಕ ಹಾಗೂ ಬೆಸ್ತರ ಮನೆಗಳಿದ್ದು ಸಣ್ಣ ಸಮುದಾಯವಾಗಿವೆ. ಕನ್ನಡ ಗ್ರಾಮದ ಮುಖ್ಯಭಾಷೆಯಾಗಿದೆ. ಕಾಂಕ್ರೀಟ್, ಮಣ್ಣಿನ, ಹೆಂಚಿನ ಹಾಗೂ ಸೀಟಿನ ೫೩ ಮನೆಗಳಿದ್ದು, ಜನಸಂಖ್ಯೆ ೧೯೮ ಇದೆ. ೧೫ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ರಾಗಿ ಮುದ್ದೆ, ಮುಖ್ಯ ಆಹಾರವಾಗಿದ್ದು, ಅನ್ನ ಬಳಸುವವರಿದ್ದಾರೆ ಬಾಡೂಟ, ಸಿಹಿ ಭೋಜನ ವಿಶೇಷ ಸಂದರ್ಭಿಕ ಊಟವಾಗಿರುತ್ತದೆ. ಎತ್ತಿನಗಾಡಿ, ಟೆಂಪೋ, ಟ್ರ್ಯಕ್ಟರ್‌ಗಳಿದ್ದು, ಕೃಷಿ ಹಾಗೂ ಸರಕು ಸಾಗಾಟಕ್ಕೆ ಬಳಸುತ್ತಾರೆ. ಗ್ರಾಮದ ಮುಖ್ಯ ಬೆಳೆ ಶೇಂಗಾವಾಗಿದ್ದು ಆಹಾರ ಬೆಳೆಯಾಗಿ ರಾಗಿ, ಅಲಸಂದಿ, ತೊಗರಿ, ಹುರಳಿ, ನವಣೆ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿವೆ. ಬದನೆ, ಹಣ್ಣು, ತರಕಾರಿಯ ಜೊತೆಗೆ ತೆಂಗು, ಅಡಿಕೆ, ವೀಳ್ಯದ ಎಲೆ ಬೆಳೆಯುತ್ತಾರೆ. ಗ್ರಾಮದಲ್ಲಿ ಶಿಕ್ಷಕರೂ ಸೇರಿದಂತೆ ಇಬ್ಬರು ಸರ್ಕಾರಿ ನೌಕರಿದ್ದಾರೆ. ಬೀಡಿ ಸುತ್ತುವುದು ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ವ್ಯಾಪ್ತಿಗೆ ಒಳಪಟ್ಟಿದ್ದು, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ, ಸೀಬಿ ತಾಲ್ಲೂಕು ಪಂಚಾಯಿತಿ ಸೀಬಿ ಅಗ್ರಹಾರ ಪಂಚಾಯಿತಿ ಹಾಗೂ ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಕಚ್ಚಾರಸ್ತೆ ಇದ್ದು, ವಾಹನ ಓಡುತ್ತಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

೨ ಸ್ತ್ರೀಶಕ್ತಿ ಸಂಘ, ವಿನಾಯಕ ಯುವಕರ ಬಳಗ ಸಾಂಸ್ಕೃತಿಕವಾಗಿ ತೊಡಗಿಸಿಕೊಂಡಿದೆ. ಕನ್ನಡ ಕಿರಿಯ ಪ್ರಾಥಮಿಕ ಶಾಲೆ, ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ೩೧ ಮಕ್ಕಳಿದ್ದಾರೆ. ೧ ಶಿಕ್ಷಕರಿದ್ದು, ಬಿಸಿಊಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪಠ್ಯಪುಸ್ತಕ, ಸಮವಸ್ತ್ರದ ಸಹಾಯವಿದೆ. ಸೇ ೬೦ ರಷ್ಟು ಸಾಕ್ಷರತೆ ಸಾದಿಸಿದ ಗ್ರಾಮ ೭೦ ಪುರುಷರು, ೫೦ ಮಹಿಳೆಯರು ಸಾಕ್ಷರತರಾಗಿದ್ದಾರೆ. ಸಮುದಾಯ ಸೌಲಭ್ಯಗಳಾದ ವೃದ್ದಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿಗಳಿವೆ.

ಊರಹೊರಗೆ ಕೋಟೆ ಇದ್ದ ಸ್ವರೂಪಕಂಡು ಬರುತ್ತಿದ್ದು, ಕಂದಕ, ಕೋಟೆಗಳ ಅವಶೇಷಕಂಡು ಬರುತ್ತದೆ. ಗ್ರಾಮದ ಪ್ರವೇಶದ್ವಾರದ ಬಳಿ ಅರಳಿಕಟ್ಟೆ ಇದ್ದು, ಅರಳಿ, ಬೇವಿನ ವೃಕ್ಷಗಳಿವೆ. ಗ್ರಾಮದಲ್ಲಿ ಮುದ್ದೇಮಾರಮ್ಮ, ಯಲ್ಲಾಪುರದಮ್ಮ ದೇವರ ಪೌಳಿಗಳಿದ್ದು, ಶ್ರಾವಣ ಹಾಗೂ ಕಾರ್ತಿಕ ರೂಪದಲ್ಲಿ ಆರತಿ, ಬಾನ, ಬ್ಯಾಟೆ, ಮಾಡುವ ಸಂಪ್ರದಾಯವಿದೆ.

ಯುಗಾದಿ, ದೀಪಾವಳಿ, ದಸರಾ, ಮಹಾನವಮಿ, ಗಣೇಶ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ನಾಗೇನಹಳ್ಳಿ

ನಾಗೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೯ ಕಿಮೀ ದೂರದಲ್ಲಿದೆ. ರಾಷ್ಟ್ರೀಯ ಹೆದ್ದಾರಿಯ ದೊಡ್ಡ ಆಲದ ಮರದ ಬಳಿಯ ತಿರುವಿನಲ್ಲಿ ೧ ಕಿಮೀ ದೂರ ಹೋದರೆ ನಾಗೇನಹಳ್ಳಿ ಇದೆ. ಇದೊಂದು ಬುಡಕಟ್ಟು ಗ್ರಾಮವಾಗಿದೆ. ಇದು ಸೀಬಿ ಅಗ್ರಹಾರದ ಮಜರೆ ಗ್ರಾಮವಾಗಿದ್ದು ಇದರ ವ್ಯಾಪ್ತಿ ೧೯೮.೧೮ ಹೆಕ್ಟೇರ್ ಇದ್ದು ನಾಗಣ್ಣ ಎಂಬುವನು ಈ ಗ್ರಾಮದ ಮೂಲ ಪುರುಷನಾಗಿರುವುದರಿಂದ ನಾಗನಹಳ್ಳಿ ನಾಗೇನಹಳ್ಳಿಯಾಗಿದೆ.

ಮರಳುಮಿಶ್ರಿತ ಕೆಂಪು ಕಲ್ಲುಗಳನ್ನು ಹೊಂದಿರುವ ಈ ಗ್ರಾಮದ ಪರಿಸರದಲ್ಲಿ ಕುರುಚಲು ಮರ, ಗಿಡ, ಪೊದೆ ಇರುವುದರಿಂದ ಇಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ತೋಳ, ಕಾಡುಹಂದಿ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ, ಮೇಕೆಯನ್ನು ಸಾಕುಪ್ರಾಣಿಯಾಗಿ ಸಾಕಲಾಗುವುದು. ಹಾಗೆಯೇ ಗೊರವಂಕ, ಬೆಳವ, ಕೌಜುಗ, ಕಾಗೆ, ಕೋಗಿಲೆ ಕಂಡುಬರುತ್ತವೆ. ಕೋಳಿ ಸಾಕುಪಕ್ಷಿಯಾಗಿದೆ.

ಸರಾಸರಿ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ೧೩ ಕೊಳವೆ ಬಾವಿಗಳಿದ್ದು ಪಕ್ಕದಲ್ಲೇ ಹಳ್ಳವಿದೆ. ೨ ಚಿಕ್ಕ ಟ್ಯಾಂಕ್‌ಗಳಲ್ಲಿ ನೀರನ್ನು ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಪೂರೈಸಲಾಗುವುದು.

ನಾಯಕ ಜನಾಂಗ ಗ್ರಾಮದ ದೊಡ್ಡ ಸಮುದಾಯವಾಗಿದ್ದು ತಿಗಳ, ಮಡಿವಾಳ, ಕುಂಚಿಟಿಗ, ವಿಶ್ವಕರ್ಮ ಸಣ್ಣ ಸಮುದಾಯಗಳಾಗಿವೆ. ಕಾಂಕ್ರೀಟ, ಕಲ್ಲಿನ, ಹೆಂಚಿನ ಒಟ್ಟು ೬೦ ಮನೆಗಳಿದ್ದು ೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೨೧೮ ಜನಸಂಖ್ಯೆ ಇರುವ ಇಲ್ಲಿ ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನ ಬಂಡಿ, ಟ್ರ್ಯಾಕ್ಟರ್, ಮಿನಿ ಟೆಂಪೋ, ಆಟೋ, ದ್ವಿಚಕ್ರ ವಾಹನಗಳನ್ನು ಇದ್ದು ಶೇಂಗಾ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಅಡಿಕೆ, ತೆಂಗು, ಹುಣಸೆ ಬೆಳೆಗಳು ವ್ಯಾಪಾರಿ ಬೆಳೆಗಳು.

ಸಿರಾ ವಿಧಾನಸಭಾ ಕ್ಷೇತ್ರ ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಸೀಬಿ ಅಗ್ರಹಾರ ಗ್ರಾಮ ಪಂಚಾಯ್ತಿ ಹಾಗೂ ಸೀಬಿ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆಯ ಪ್ರಮಾಣ ೬೧% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಆಂಜನೇಯ ಈ ಗ್ರಾಮದ ದೈವವಾಗಿದ್ದು ಶ್ರಾವಣ ಮಾಸದಲ್ಲಿ ಆರತಿ, ಉತ್ಸವ ನಡೆಯುತ್ತದೆ. ಯುಗಾದಿ, ದೀಪಾವಳಿ, ಶ್ರೀರಾಮನವಮಿ ಹಬ್ಬ ಆಚರಣೆ ಇದೆ. ಸಾರಿಗೆ, ರಸ್ತೆ ವ್ಯವಸ್ಥೆ ಇರುವುದಿಲ್ಲ.

## ನೆಲದಿಮ್ಮನಹಳ್ಳಿ

ನೆಲದಿಮ್ಮನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೪ ಕಿಮೀ ದೂರದಲ್ಲಿದೆ. ಸಿರಾ-ತುಮಕೂರು ರಾಷ್ಟ್ರೀಯ ಹೆದ್ದಾರಿ-೪ ರ ಬ್ರಹ್ಮಸಂದ್ರ ಗೇಟ್ ಬಳಿ ಎಡಕ್ಕೆ ತಿರುಗಿ ಅಲ್ಲಿಂದ ೩ ಕಿಮೀ ದೂರದಲ್ಲಿ ಈ ಗ್ರಾಮವಿದೆ. ಇದು ಕಂದಾಯ ಗ್ರಾಮವಾಗಿದೆ. ಒಂದೇ ಗೇಟಿನ ಎಡಕ್ಕೆ ನೆಲದಿಮ್ಮನಹಳ್ಳಿ ಇದ್ದರೆ ಗೆರೆ ಕೊಯ್ದಂತೆ ಬಲಕ್ಕೆ ಚಿನ್ನೇನಹಳ್ಳಿ ಇದೆ. ಈ ಎರಡೂ ಗ್ರಾಮಗಳು ಕೂಡಿಕೊಂಡು ಒಂದೇ ಎನ್ನುವಂತಿದ್ದರೂ ೨ ಗ್ರಾಮಗಳು ಕಂದಾಯ ಗ್ರಾಮಗಳಾಗಿ ಪ್ರತ್ಯೇಕ ಅಸ್ತಿತ್ವ ಉಳಿಸಿಕೊಂಡಿರುವುದು ವಿಶೇಷವಾಗಿದೆ.

ಕೃಷಿ ಕಾಯಕದ ತಿಮ್ಮಯ್ಯ ಎಂಬ ಹೆಸರಲ್ಲಿ ಈ ಗ್ರಾಮ ನಿರ್ಮಾಣವಾಗಿದೆ. ತಿರುಪತಿಯ ಒಕ್ಕಲಾದ ತಿಮ್ಮಯ್ಯ ಕೃಷಿ ಕಾಯಕದಲ್ಲಿ ಅಕಾಲಕ್ಕೆ ಪರಿಣಿತನಾಗಿದ್ದ ಕಾರಣದಿಂದಲೇ ನೆಲ ಮತ್ತು ವ್ಯಕ್ತಿ ಗೌರವಸೂಚಕವಾಗಿ ನೆಲತಿಮ್ಮ ಆಡುಭಾಷೆಯಲ್ಲಿ ನೆಲದಿಮ್ಮನಾಗಿ ನೆಲದಿಮ್ಮನಹಳ್ಳಿಯಾಗಿದೆ. ಬಲಬದಿಗೆ ಗುಡ್ಡ ಮತ್ತು ರಕ್ಷಿತ ಅರಣ್ಯ ಪ್ರದೇಶ ಹೊಂದಿರುವ ಈ ಗ್ರಾಮಕ್ಕೆ ಒಂದು ಕೆರೆಯೂ ಇದೆ. ಒಟ್ಟು ೨೬೫.೪೮ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿರುವ ಈ ಗ್ರಾಮದ ಮಣ್ಣು ಕೆಂಪು ಮಿಶ್ರಿತ ಮರಳು ಮಣ್ಣಾಗಿದ್ದು ಶೇಂಗಾ ಬೆಳೆಗೆ ಉತ್ಕೃಷ್ಟ ಭೂಮಿಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ಜಿಂಕೆ, ಮೊಲ, ಕರಡಿ, ಚಿರತೆ, ತೋಳ ಕಂಡುಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕುರಿ, ಮೇಕೆ

ಹಾಗೂ ನಾಯಿಗಳಿವೆ. ಈ ಪರಿಸರದ ಬಯಲಿನಲ್ಲಿ ಪಕ್ಷಿಗಳಾದ ಕೊಕ್ಕರೆ, ಕೋಗಿಲೆ, ಕಾಗೆ, ಕೌಜುಗ, ನವಿಲು, ಗಿಳಿ, ಗೊರವಂಕ, ಗೂಬೆ, ಹದ್ದು ಕಂಡುಬರುತ್ತವೆ. ಕೋಳಿ ಸಾಕುಪಕ್ಷಿಯಾಗಿದೆ.

ಬಿಸಿಲು-ಬರ ಜೊತೆಯಾದಂತಿರುವ ಈ ಗ್ರಾಮ ಪರಿಸರದಲ್ಲಿ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿಗಾಗಿ ರೈತರು ೪೩ ಬೋರ್‌ವೆಲ್ ಹಾಕಿಸಿಕೊಂಡಿರುತ್ತಾರೆ. ಕುಡಿಯಲು ಗ್ರಾಮ ಪಂಚಾಯ್ತಿಯ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಒದಗಿಸಲಾಗುತ್ತಿದೆ. ೬ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಕುರುಬರು, ನಾಯಕರು, ಬೆಸ್ತ, ಆದಿಕರ್ನಾಟಕ ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೧೨೨ ಮನೆಗಳಿದ್ದು ಅವು ಕಲ್ಲಿನ, ಮಣ್ಣಿನ, ಶೀಟಿನ, ಹೆಂಚಿನ ರೂಪದಲ್ಲಿವೆ. ಇಲ್ಲಿ ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆಯ ೩೨ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೪೪೧ ಜನಸಂಖ್ಯೆ ಇದ್ದು ೪೦ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಇಲ್ಲಿ ಸಾಂಪ್ರದಾಯಿಕ ವಾಹನವಾದ ಎತ್ತಿನ ಬಂಡಿಯೊಂದಿಗೆ ಆಧುನಿಕ ಟ್ರ್ಯಕ್ಟರ್, ಟೆಂಪೋ, ಆಟೋ, ಟಿಲ್ಲರ್, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಪ್ರಮುಖ ಬೆಳೆ. ರಾಗಿ, ಜೋಳ, ತೊಗರಿ, ಅಲಸಂದೆ ಆಹಾರ ಬೆಳೆಗಳು. ಹಾಲಿನ ಡೈರಿಯಿದ್ದು ೨೦೦ ಲೀ. ಹಾಲು ಸಂಗ್ರಹವಾಗುತ್ತದೆ. ಶಿಕ್ಷಕರು, ವೈದ್ಯರು, ಸಾರಿಗೆ, ಕೃಷಿ ಈ ಬಗೆಯ ೧೨ ಜನ ಸರ್ಕಾರಿ ನೌಕರರಿದ್ದಾರೆ. ವಿಚಾರವಾದಿ, ಚಿಂಕ, ಕಾನೂನು ತಜ್ಞ ಡಾ॥ ರವಿವರ್ಮ ಕುಮಾರ್ ಪ್ರಸ್ತುತ ಕರ್ನಾಟಕ ಸರ್ಕಾರದ ಅಡ್ವೋಕೇಟ್ ಜನರಲ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ದೆಹಲಿಯ ಸುಪ್ರೀಂ ಕೋರ್ಟ್‌ನಲ್ಲಿ ಹಿರಿಯ ನ್ಯಾಯವಾದಿಗಳಾದ ಈಶ್ವರಚಂದ್ರ ಸಾಗರ್ ಇದೇ ಗ್ರಾಮದವರೆಂಬುದು ವಿಶೇಷ. ಗ್ರಾಮದಲ್ಲಿ ಹೂಕಟ್ಟುವ, ಬೀಡಿ ಸುತ್ತುವ ಮಹಿಳಾ ಉಪಕಸುಬುದಾರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಕೇಂದ್ರವಾಗಿರುವ ಈ ಗ್ರಾಮ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಈ ಗ್ರಾಮದ ಇಬ್ಬರು ಗ್ರಾಮ ಪಂಚಾಯ್ತಿ ಪ್ರತಿನಿಧಿಗಳಾಗಿದ್ದಾರೆ.

ವ್ಯವಸಾಯ ಸಹಕಾರ ಸಂಘ, ೩ ಸ್ತ್ರೀಶಕ್ತಿ ಸಂಘ, ೪ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಗ್ರಾಮದ ಹಣಕಾಸಿನ ಸಬಲೀಕರಣಕ್ಕೆ ದುಡಿಯುತ್ತಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೩೬ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೬೭.೭ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.೪ ಗೂಡಂಗಡಿಗಳಿವೆ. ೨ ಟೀ ಅಂಗಡಿಯೂ ಇದೆ. ಧಾರ್ಮಿಕವಾಗಿ ಬಸವೇಶ್ವರ, ರಂಗನಾಥ, ಮಾರಮ್ಮ ದೇವರ ಗುಡಿಗಳಿವೆ. ದಸರಾ, ಬಸವ ಜಯಂತಿಗಳಂದು ದೇವರ ವಿಶೇಷ ಪೂಜೆ ಇರುತ್ತದೆ. ಮಾರಮ್ಮನ ಊರಹಬ್ಬ ಮಾಡಿ ಆರತಿ, ಬಾನ, ಬಲಿ ಅರ್ಪಿಸುತ್ತಾರೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಸಂಕ್ರಾಂತಿ ಹಬ್ಬಗಳನ್ನು ವಿಶೇಷವಾಗಿ ಏರ್ಪಡಿಸುತ್ತಾರೆ. ಸಿರಾ-ತುಮಕೂರು ಮುಖ್ಯ ರಸ್ತೆಗೆ ಸಂಪರ್ಕ ರಸ್ತೆಯಿದ್ದು ಬಸ್ ಸಂಚಾರದ ಉತ್ತಮ ವ್ಯವಸ್ಥೆ ಇದೆ.

## ನಿಜಯ್ಯನಪಾಳ್ಯ

ನಿಜಯ್ಯನಪಾಳ್ಯವು ಸಿರಾದಿಂದ ಪೂರ್ವಕ್ಕೆ ೧೫ ಕಿಮೀ ದೂರದಲ್ಲಿದೆ. ಮೈಸೂರು ರಸ್ತೆಯ ಎಡಭಾಗದಲ್ಲಿ ಕಳ್ಳಂಬೆಳ್ಳ ಕೆರೆಯ ಮುಂಭಾಗ ಈ ಗ್ರಾಮವಿದೆ. ಇದು ವ್ಯಕ್ತಿ ರೂಢನಾಮ ಸೂಚಿಯಾಗಿದ್ದು ನಿಜಯ್ಯ ಎಂಬ ವ್ಯಕ್ತಿ ಮೊದಲು ವಸತಿ ಮಾಡಿಕೊಂಡು ವಾಸಿಸುತ್ತಾ ನಂತರ ಗ್ರಾಮ ಬೆಳೆದ ಕಾರಣ ನಿಜಯ್ಯನಪಾಳ್ಯ ಎಂದು ಇದೇ ಹೆಸರಿನಲ್ಲಿ ಗ್ರಾಮ ಬೆಳೆದಿದೆ. ಇದು ಮುದಿಮಡು ಗ್ರಾಮದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೮೮.೧೩ ಆಗಿದೆ. ಮರಳು ಮಿಶ್ರಿತ ಕೆಂಪು ಮಣ್ಣು ಇಲ್ಲಿನ ಲಕ್ಷಣವಾಗಿದ್ದು

ಈ ಪರಿಸರದಲ್ಲಿ ನರಿ, ತೋಳ, ಹಂದಿ, ಕರಡಿ, ಜಿಂಕೆಗಳು ವಾಸಿಸುತ್ತವೆ. ಗ್ರಾಮದಲ್ಲಿ ರೈತಾಪಿ ಬದುಕು ಪ್ರಧಾನವಾಗಿದ್ದು ಹಸು, ಎತ್ತು, ಕುರಿ, ಮೇಕೆ, ನಾಯಿ ಸಾಕುಪ್ರಾಣಿಗಳಾಗಿವೆ. ಪಕ್ಷಿಗಳಾದ ನವಿಲು, ಗೊರವಂಕ, ಗಿಳಿ, ಗೂಬೆ, ಗುಬ್ಬಚ್ಚಿ, ಕಾಗೆ, ಕೋಗಿಲೆ, ಬಾನುಲಿ ಕಂಡುಬರುತ್ತವೆ. ಸಾಕುಪಕ್ಷಿಯಾಗಿ ನಾಟಿ

ಹೇಂಟೆ, ಹುಂಜಗಳ ಜೊತೆಗೆ ಗಿರಿರಾಜ ಕೋಳಿಯನ್ನು ಸಾಕಲಾಗಿದೆ.

ಈ ಗ್ರಾಮದ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಮೂಲದ ಕಾರಣ ನಿಸರ್ಗದತ್ತ ಮಳೆ ಸಾಲದೆ ಉಪನೀರಾವರಿಯಾಗಿ ೧೮ ಕೊಳವೆ ಬಾವಿ ಕೊರೆಸಲಾಗಿದೆ. ಕುಡಿಯಲು ತರೂಪು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೩ ಕಿರುಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯ ಆಗಿದ್ದು ಮಡಿವಾಳ ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮನೆಯ ಮಾತಾಗಿದೆ. ವಿವಿಧ ಪ್ರಕಾರಗಳ ೩೪ ಮನೆಗಳಿದ್ದು ಅವು ಕಾಂಕ್ರೀಟ್, ಮಂಗಳೂರು ಹೆಂಚಿನ, ಶೀಟಿನ ಮನೆಗಳಾಗಿವೆ. ಇಲ್ಲಿ ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್ ಯೋಜನೆಯ ೧೧೦ ಫಲಾನುಭವಿಗಳಿದ್ದಾರೆ. ೧೫ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ೧೪೬ ಜನಸಂಖ್ಯೆ ಹೊಂದಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನವಾದ ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳು ಹೊಂದಿದ್ದಾರೆ.

ಶೇಂಗಾ ಗ್ರಾಮದ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಕೊರ್ಲೆ, ತೊಗರಿ, ಹುರುಳಿ, ನವಣೆ, ಹಾರಕ ಬೆಳೆಯುತ್ತಾರೆ. ತೆಂಗು, ಅಡಿಕೆ, ಸೂರ್ಯಕಾಂತಿ, ಸೇವಂತಿಗೆ ತೋಟಗಾರಿಕೆ ಬೆಳೆಗಳಾಗಿವೆ. ಶೇಂಗಾ, ಹುಣಸೆಹಣ್ಣು, ಸೇವಂತಿಗೆ, ಹೊಂಗೆ ಬೀಜ ಮುಖ್ಯ ವ್ಯಾಪಾರಿ ಸರಕಾಗಿವೆ. ಹೆಂಗಸರು ಹುಣಸೆಹಣ್ಣು ಶುದ್ಧೀಕರಣ, ಬೀಡಿ ಕಟ್ಟುವುದು, ಸೇವಂತಿಗೆ ಹೂ ಕಟ್ಟುವುದು ಉಪಕಸುಬಾಗಿಸಿಕೊಂಡಿದ್ದಾರೆ. ಸಾಂಪ್ರದಾಯಿಕ ಕಸುಬಾಗಿ ಮಡಿವಾಳಿಕೆ ಮುಂದುವರಿದಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ತರೂರು ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರಗಳ ವ್ಯಾಪ್ತಿಗೆ ಸೇರಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಕಳ್ಳಂಬೆಳ್ಳದಿಂದ ಅಂಚೆ ಸಂಪರ್ಕವಿದೆ. ಒಂದು ಸ್ತ್ರೀಶಕ್ತಿ ಕೇಂದ್ರವಿದ್ದು ೧ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೩೨ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೬೨.೪ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸಾಮಾನ್ಯ ಖಾಯಿಲೆಗಳಿಗೆ ಆರೋಗ್ಯ ಸೇವಾ ಕಾರ್ಯಕರ್ತೆ ಚಿಕಿತ್ಸೆ ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಧಾರ್ಮಿಕವಾಗಿ ಕಣಿವೆಮಾರಕ್ಕ, ಆಂಜನೇಯ, ಶನಿದೇವರ ಗುಡಿಗಳಿವೆ. ಶ್ರಾವಣ ಮಾಸದಲ್ಲಿ ಆಂಜನೇಯನಿಗೆ ಆರತಿ ಮಾಡುತ್ತಾರೆ. ಕಣಿವೆ ಮಾರಕ್ಕನ ಆರತಿ, ಬಾನ, ಬ್ಯಾಟೆ ವಿಶೇಷ ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಶಿವರಾತ್ರಿ, ದಸರಾ, ಯುಗಾದಿ, ಗೌರಿ–ಗಣೇಶ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ನೇರಲಗುಡ್ಡ

ನೇರಲಗುಡ್ಡ ಸಿರಾ ತಾಲ್ಲೂಕು ಕೇಂದ್ರದಿಂದ ವಾಯುವ್ಯ ದಿಕ್ಕಿನಲ್ಲಿದೆ. ಸಿರಾ–ತಾವರೆಕೆರೆ ಬುಕ್ಕಾಪಟ್ಟಣ ರಸ್ತೆಯಲ್ಲಿ ನೇರಲಗುಡ್ಡ ಗೇಟಿನಿಂದ ಬಲಭಾಗಕ್ಕೆ ೧ ಕಿ.ಮೀ. ದೂರದಲ್ಲಿದ್ದು, ಸಿರಾದಿಂದ ೨೬ ಕಿ.ಮೀ. ದೂರದಲ್ಲಿದೆ. ಇದೊಂದು ಜನವಸತಿ ಗ್ರಾಮವಾಗಿದೆ. ಕುರುಚಲು ಕಾಡಿನ ಪ್ರದೇಶವಾಗಿದ್ದು, ಇಲ್ಲಿನ ಹಳ್ಳದ ಸಾಲಿನಲ್ಲಿ ನೇರಳೆಮರಗಳ ಸಾಲು ವಿಶೇಷವಾಗಿ ಇದ್ದುದ್ದರಿಂದ ಮತ್ತು ಪಕ್ಕದಲ್ಲಿ ಗುಡ್ಡ ಇದ್ದುದ್ದರಿಂದ ಪ್ರಾಕೃತಿಕವಾಗಿ ಈ ಗ್ರಾಮಕ್ಕೆ ನೇರಲಗುಡ್ಡ ಎಂದು ಹೆಸರನ್ನು ಈ ಗ್ರಾಮ ರಚನೆಯ ಸಂದರ್ಭದಲ್ಲಿ ಇಡಲಾಗಿದೆ.

ಈ ಗ್ರಾಮದ ಭೌಗೋಳಿಕ ವಿಸ್ತೀರ್ಣವು ೧೩೫೪.೦೩ ಹೆಕ್ಟೇರ್‌ಗಳು ಇದ್ದು, ಇದಕ್ಕೆ ಸೇರ್ಪಡೆಯಾಗಿರುವಂತಹ ಗ್ರಾಮಗಳೆಂದರೆ ಸೋಮ್ಲನಾಯಕ ತಾಂಡ ಮತ್ತು ಕಮಲನಾಯಕತಾಂಡ. ಎರಡು ಲಂಬಾಣಿ ಬುಡಕಟ್ಟು ಗ್ರಾಮಗಳಿವೆ. ಇದು ಬಯಲು ನಾಡಿನ ಪ್ರದೇಶವಾಗಿದ್ದು, ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಈ ಪರಿಸರದಲ್ಲಿ ನರಿ, ತೋಳ, ಮೊಲ, ಹಂದಿ, ಉಡ, ಜಿಂಕೆ ಕಂಡು ಬಂದರೆ, ಗ್ರಾಮದಲ್ಲಿ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕು ಪ್ರಾಣಿಗಳಾಗಿ ಸಾಕಲಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ

ನವಿಲು, ಗಿಳಿ, ಕೊಕ್ಕರೆ, ಕೋಗಿಲೆ, ಕಾಗೆ, ಕಂಡು ಬರುತ್ತವೆ. ಕೋಳಿ ಸಾಕು ಪಕ್ಷಿಯಾಗಿದೆ.

ಗ್ರಾಮದಲ್ಲಿ ೧೨೪ ಕೊಳವೆ ಬಾವಿಗಳಿದ್ದು, ಕೃಷಿಗೆ ಸಹಾಯಕವಾಗಿದೆ. ವಾರ್ಷಿಕ ಮಳೆಯ ಸರಾಸರಿ ೪೬೩ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ತಾಪ ೩೮೦ ಸೆಂ. ಇದ್ದು, ಚಳಿಯು ೧೨೦ ಸೆಂ. ಇರುತ್ತದೆ. ಇಲ್ಲಿ ಒಂದು ಕಟ್ಟೆ ಇದೆ. ಕುಡಿಯುವ ನೀರಿಗೆ  ಗ್ರಾಮ ಪಂಚಾಯಿತಿಯಿಂದ ಕೈ ಪಂಪುಗಳು ಮತ್ತು ಸಿಸ್ಟನ್‌ಗಳನ್ನು ಕಲ್ಪಿಸಿಕೊಡಲಾಗಿದೆ. ಗ್ರಾಮದಲ್ಲಿ ಒಟ್ಟು ೨೮೩ ಮನೆಗಳಿದ್ದು, ೧೩೨೩ ಜನಸಂಖ್ಯೆಯನ್ನು ಹೊಂದಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ಮಡಿವಾಳ, ನಾಯಕ, ಮುಸ್ಲಿಂರ ಕಿರು ಸಮುದಾಯ ವಾಗಿವೆ. ಕನ್ನಡ ಈ ಗ್ರಾಮದ ಮಾತೃ ಭಾಷೆಯಾಗಿದೆ. ಉರ್ದು ಅಲ್ಪಸಂಖ್ಯಾತರ ಭಾಷೆಯಾಗಿದೆ. ಇಲ್ಲಿನ ಮನೆಗಳು ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳು ಇದ್ದು, ಆಶ್ರಯ, ಇಂದಿರಾ ಆವಾಸ್, ವಸತಿ ಯೋಜನೆಯ ೯೬ ಫಲಾನುಭವಿಗಳಿದ್ದಾರೆ. ಗ್ರಾಮದ ಮನೆಗಳಲ್ಲಿ ೧೪೦ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಸಾಂಪ್ರದಾಯಿಕ ವಾಹನಗಳೊಂದಿಗೆ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ಹಾಗೂ ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಮಿನಿ ಟೆಂಪೋಗಳಿವೆ. ಬಳಕೆ ಇದೆ.

ಗ್ರಾಮದ ಮುಖ್ಯ ಬೆಳೆಯಾಗಿದ್ದು ಇದರೊಂದಿಗೆ ತೆಂಗು, ಅಡಿಕೆ, ರಾಗಿ, ಭತ್ತ, ಜೋಳ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಹುಣಸೆಮರಗಳು ಹೇರಳವಾಗಿದೆ. ಅಲ್ಲದೇ ವ್ಯಾಪಾರದ ಸರಕು ಸಹ ಆಗಿದೆ. ಆರ್ಥಿಕೇತರ ಆದಾಯಕ್ಕೆ ಹೈನುಗಾರಿಕೆ ಮತ್ತು ಆಧುನಿಕ ಡೈರಿಯನ್ನು ಹೊಂದಿದೆ. ಈ ಗ್ರಾಮದಲ್ಲಿ ಕಿರು ಕೈಗಾರಿಕೆಯಾಗಿ ಇಟ್ಟಿಗೆ ಫ್ಯಾಕ್ಟರಿ, ಹಲ್ಲರ್, ಬಟ್ಟೆ ಹೊಲಿಯುವುದು ಕಂಡು ಬಂದಿದೆ. ಹಾಗೆಯೇ ಆಧುನಿಕ ಉದ್ಯೋಗದಲ್ಲಿ ಸೈಕಲ್ ಮತ್ತು ದ್ವಿಚಕ್ರ ವಾಹನ ರಿಪೇರಿ ಕೆಲಸವಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ಹುಯಿಲ್‌ದೊರೆ ಪಂಚಾಯ್ತಿ. ತಹಶೀಲ್ದಾರ್ ಕಛೇರಿ, ನೇರಲಗುಡ್ಡ ಗ್ರಾಮ ಪಂಚಾಯ್ತಿ ಆಗಿದೆ ಮತ್ತು ಅಂಚೆ ಕಚೇರಿಯನ್ನು ಒಳಗೊಂಡಿದೆ.

ಈ ಗ್ರಾಮದಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲ ಆದರೆ ಸ್ತ್ರೀಶಕ್ತಿ ಸಂಘಗಳಿಂದ ವ್ಯವಹಾರ ಮಾಡುತ್ತಿದ್ದಾರೆ. ಈ ಗ್ರಾಮದಲ್ಲಿ ಅಂಗನವಾಡಿಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಒಟ್ಟಾರೆ ಶೇ. ೫೦.೪ ರಷ್ಟು ಸಾಕ್ಷರತೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ.

ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು, ಕುಟುಂಬ ಕಲ್ಯಾಣ ವ್ಯವಸ್ಥೆಯನ್ನು ಹೊಂದಿದೆ. ಹಾಗೆಯೇ ಪಶು ಚಿಕಿತ್ಸಾಲಯವಿದೆ. ಈ ಗ್ರಾಮದ ಡಾ॥ ಜಿ. ಕೃಷ್ಣಪ್ಪನವರು ಪಶು ವೈದ್ಯಕೀಯ ಇಲಾಖೆಯಲ್ಲಿ ನಿರ್ದೇಶಕರಾಗಿದ್ದಾರೆ. ಸಮುದಾಯದ ಸೌಲಭ್ಯವನ್ನು ಪಡೆಯುತ್ತಿದ್ದು ೦೮ ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಹೊಂದಿದೆ. ಶಿಕ್ಷಣ, ಕಂದಾಯ, ಪಂಚಾಯತ್ ರಾಜ್, ಸಾರಿಗೆ ಇಲಾಖೆಗೆ ಸೇರಿದ ೧೪ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಉದ್ಯೋಗಿಗಳೂ ಇದ್ದಾರೆ.

ಧಾರ್ಮಿಕವಾಗಿ ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ ಹಬ್ಬಗಳೊಂದಿಗೆ ಜನರು ಗ್ರಾಮದೇವತೆ ಮಾರಮ್ಮ, ಭೂತಪ್ಪನ ದೇವಾಲಯ ಗಳಲ್ಲಿ ಜಾತ್ರೆಯನ್ನು ಮಾಡುತ್ತಾರೆ. ಇದಕ್ಕೆ ಆರತಿ ಮಾಡಿ, ಬಲಿ ನೀಡುವುದು ವಿಶೇಷವಾಗಿದೆ. ಈ ಗ್ರಾಮದಲ್ಲಿ ಯಾವುದೇ ಸಾಂಸ್ಕೃತಿಕ ರಂಗದಲ್ಲಿ ಕಾಣಬರುವುದಿಲ್ಲ. ಸೋಬಾನೆ ಪದಕಾರರಿದ್ದಾರೆ.

೨ ಕರುಗಲ್ಲುಗಳಿದ್ದು, ಅರಳಿ ವೃಕ್ಷಗಳನ್ನು ಹೊಂದಿದ್ದು, ಹಳ್ಳಿಯ ಲಕ್ಷಣವನ್ನು ಪ್ರತಿಬಿಂಬಿಸುತ್ತವೆ. ಶಿವಕುಮಾರ್ ಎಂಬುವರು ಲೇಖಕರಾಗಿದ್ದು, ಸ್ಥಳೀಯ ಪತ್ರಿಕೆಗೆ ಲೇಖನ ಜಾಗೃತಿ ಬರಹ ಮಾಡುತ್ತಿದ್ದಾರೆ.

## ನಿಂಬೆಮರದ ಹಳ್ಳಿ

ನಿಂಬೆಮರದ ಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಸಿರಾ–ಹೊನ್ನೇನಹಳ್ಳಿ – ಕಳ್ಳಂಬೆಳ್ಳ ಮಾರ್ಗದಲ್ಲಿದ್ದು ಕಂದಾಯ ಗ್ರಾಮವಾಗಿದೆ. ಈ ಗ್ರಾಮದಲ್ಲಿ ನಿಂಬೇಹಣ್ಣು ಬೆಳೆಗೆ ಪ್ರಸಿದ್ಧವಾಗಿದ್ದ ಕಾರಣ ನಿಂಬೆಮಾರ ಹಳ್ಳಿ ನಿಂಬೇಮರದ ಹಳ್ಳಿಯಾಗಿದೆ. ನಿಂಬೆಹಣ್ಣುಗಳನ್ನು ಕೊಡುತ್ತಿದ್ದರೆಂಬ ಪ್ರತೀತಿಯೂ ಇದೆ. ಇದರಿಂದಾಗಿ ನಿಂಬೇಮರದಹಳ್ಳಿ ಎಂದು ಹೆಸರಾಯಿತೆಂದು ಹೇಳಲಾಗಿದೆ. ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೨೮೧.೫೧ ಹೆಕ್ಟೇರ್‌ಗಳು. ಇದಕ್ಕೆ ಹೊಸದಾಗಿ ಒಂದು ಶಿವಾಜಿನಗರ/ಬಡಾವಣೆ ಈ ಗ್ರಾಮಕ್ಕೆ ಸೇರಿಕೊಂಡಿದೆ.

ಗ್ರಾಮದ ಭೂಮೇಲ್ಮೈ ಬಯಲುನಾಡಿನಿಂದ ಕೂಡಿದ್ದು ಖುಷ್ಕಿ ಭಾಗಾಯ್ತ ಭೂಮಿಯನ್ನು ಹೊಂದಿದೆ. ಮರಳು ಮಿಶ್ರಿತ ಕೆಂಪು ಮಣ್ಣಿನ ಭೂಮಿಯನ್ನು ಹೊಂದಿದೆ. ಈ ಗ್ರಾಮದಲ್ಲಿ

ಬೆಟ್ಟ, ಗುಡ್ಡ ಮತ್ತು ಅರಣ್ಯ ಹಾಗೂ ತೋಪುಗಳು ಕಂಡು ಬರುವುದಿಲ್ಲ.

ವಾರ್ಷಿಕ ಮಳೆಯ ಸರಾಸರಿ ೪೪೦.೬ ಮಿ.ಮೀ. ಮಳೆ ಬೀಳುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಮೂರ್‍ನಾಲ್ಕು ವರ್ಷಗಳಿಂದ ತೀವ್ರ ಬರಗಾಲವನ್ನು ಎದುರಿಸುತ್ತಿದೆ. ದಿನೇ ದಿನೇ ಮಳೆಯ ಪ್ರಮಾಣದಲ್ಲಿ ಕುಸಿತ ಉಂಟಾಗಿದ್ದು, ಜಲಕ್ಷಾಮ ತೀವ್ರವಾಗಿದೆ. ಬೇಸಿಗೆ ಕಾಲದಲ್ಲಿ ಅಧಿಕ ಪ್ರಮಾಣದ ೪೦ ಸೆಂ. ಉಷ್ಣತೆ ಇದ್ದು, ಚಳಿಯು ೧೨ ಸೆಂ. ಇರುತ್ತದೆ. ಸಮಯಕ್ಕೆ ಸರಿಯಾಗಿ ಮಳೆ ಬಾರದೆ ಇರುವುದರಿಂದ ರೈತರು ಕಂಗಾಲಾಗಿದ್ದಾರೆ.

ಈ ಗ್ರಾಮದಲ್ಲಿ ಒಂದು ಕಟ್ಟೆಯಿದೆ. ಇದು ಮಳೆಗಾಲದಲ್ಲಿ ಮಾತ್ರ ತುಂಬುತ್ತದೆ. ಇಲ್ಲಿ ಎರಡು ತೆರೆದ ಬಾವಿ ಮತ್ತು ೩೫ ಕೊಳವೆ ಬಾವಿಗಳಿವೆ. ಇವು ಕೃಷಿಗೆ ಅಗತ್ಯವಾದ ನೀರನ್ನು ಒದಗಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ಕೆಲವು ಕೊಳವ ಬಾವಿಗಳು ಬತ್ತಿ ಹೋಗಿವೆ. ಕುಡಿಯುವ ನೀರಿಗಾಗಿ ಪ್ರಾಚೀನ ಕಾಲದ ಬಾವಿಯಿದ್ದು ನೀರಿಲ್ಲದೆ ಬತ್ತಿಹೋಗಿದೆ. ಗ್ರಾಮ ಪಂಚಾಯಿತಿ ಕಿರು ನೀರು ಯೋಜನೆಯ ಅಡಿಯಲ್ಲಿ ೦೨ ಸಿಸ್ಟನ್ ಮತ್ತು ೨ ಕೈ ಪಂಪುಗಳ ಮೂಲಕ ಕುಡಿಯುವ ನೀರಿನ ವ್ಯವಸ್ಥೆ ಮಾಡಿದೆ.

ಗ್ರಾಮದಲ್ಲಿ ಒಟ್ಟು ೧೧೯ ಮನೆಗಳನ್ನು ಹೊಂದಿರುವ ಗ್ರಾಮವಾಗಿದ್ದು ೪೮೫ ಜನಸಂಖ್ಯೆಯನ್ನು ಹೊಂದಿದೆ. ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ, ಹೆಂಚಿನ ಮನೆ, ಮತ್ತು ಶೀಟಿನ ಮನೆಗಳಿವೆ. ಗ್ರಾಮದಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ಆದಿಕರ್ನಾಟಕ, ಮಡಿವಾಳ, ಗೊಲ್ಲ,ಕಮ್ಮಾರ, ಬಣಜಿಗರು ಕಿರು ಸಮುದಾಯವಾಗಿವೆ. ಕನ್ನಡ ಈ ಗ್ರಾಮದ ಮಾತೃ ಭಾಷೆಯಾಗಿದೆ. ಹಳ್ಳಿಯ ಜನರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಭೋಜನ ಗಳಾಗಿವೆ.

ಸಾಂಪ್ರದಾಯಿಕ ವಾಹನ ೦೪ ಎತ್ತಿನಗಾಡಿಗಳಿವೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಮಿನಿ ಟೆಂಪೋ, ಹಾಗೂ ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಮಿನಿ ಟೆಂಪೋಗಳ ಬಳಕೆ ಇದೆ. ಉತ್ತಮವಾದ ಡಾಂಬರು ರಸ್ತೆ ಮತ್ತು ಕಚ್ಚಾ ರಸ್ತೆಯನ್ನು ಹೊಂದಿದೆ. ಆದರೆ ಚರಂಡಿ ವ್ಯವಸ್ಥೆ ಇಲ್ಲ.

ಕೃಷಿ ಇಲ್ಲಿನ ಜನರ ಮುಖ್ಯ ಕಸುಬಾಗಿದ್ದು, ಕೃಷಿಕರು, ಕೃಷಿ ಕಾರ್ಮಿಕರು ಕಂಡು ಬರುತ್ತಾರೆ. ಈ ಭಾಗದಲ್ಲಿ ಪ್ರಮುಖವಾದ ಬೆಳೆ ಎಂದರೆ ಶೇಂಗಾ. ಅದರೊಂದಿಗೆ ನವಣೆ, ಸೂರ್ಯಕಾಂತಿ, ರಾಗಿ, ಜೋಳ, ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಹಾಗೆಯೇ ವಾಣಿಜ್ಯ ಬೆಳೆಗಳಾಗಿ ತೆಂಗು, ಅಡಿಕೆ, ಹೇರಳವಾಗಿ ಹುಣಸೆಮರಗಳು ಈ ಪ್ರದೇಶದಲ್ಲಿ ಕಂಡು ಬರುತ್ತದೆ.

ಗ್ರಾಮದಲ್ಲಿ ಹೈನುಗಾರಿಕೆ ವ್ಯಾಪಾರದಲ್ಲಿ ಪ್ರಾಣಿಗಳ ವ್ಯಾಪಾರವನ್ನು ಕಾಣುತ್ತೇವೆ. ಈ ಗ್ರಾಮದಲ್ಲಿ ಡಿ ದರ್ಜೆ ನೌಕರರಾಗಿ ಒಬ್ಬರು ಕಾರ್ಯನಿರ್ವಹಿಸುತ್ತಿದ್ದಾರೆ. ಯಾವುದೇ ಬೃಹತ್ ಕೈಗಾರಿಕೆಗಳು ಕಂಡು ಬರುವುದಿಲ್ಲ. ಎರಡು ಬಟ್ಟೆ ಹೊಲಿಯುವ ಪುರುಷ ಮತ್ತು ಮಹಿಳಾ ದರ್ಜಿಗಳಿದ್ದು ಆಧುನಿಕ ಶೈಲಿಯ ಉಡುಪುಗಳನ್ನು ತಯಾರಿಸುತ್ತಾರೆ. ಅದರೊಂದಿಗೆ ಬೀಡಿ ಸುತ್ತುವುದು ಒಂದು ಗುಡಿ ಕೈಗಾರಿಕೆಗಳಲ್ಲಿ ಪ್ರಮುಖವಾಗಿದೆ.

ಈ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ಹುಯಿಲ್‌ದೊರೆ ಪಂಚಾಯ್ತಿ. ತಹಶೀಲ್ದಾರ್ ಕಛೇರಿ, ನೇರಲಗುಡ್ಡ ಗ್ರಾಮ ಪಂಚಾಯ್ತಿ ಕ್ಷೇತ್ರವಾಗಿದ್ದು ದೊಡ್ಡ ಅಗ್ರಹಾರ ಗ್ರಾಮ ಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ತಾಲ್ಲೂಕು ಕೇಂದ್ರವಾದ ಸಿರಾದಲ್ಲಿ ತಹಶೀಲ್ದಾರ್ ಕಛೇರಿ ಇದೆ. ಕಳ್ಳಂಬೆಳ್ಳ ಉಪಪೋಲೀಸ್ ಠಾಣೆ ಮತ್ತು ವಿದ್ಯುತ್ ನಿಗಮದ ಕೇಂದ್ರವಾಗಿದೆ.

ಸಿರಾ–ಹೊನ್ನೇನಹಳ್ಳಿ ಕಳ್ಳಂಬೆಳ್ಳದ ಮಾರ್ಗದ ರಸ್ತೆಯ ಮೂಲಕ ಈ ಗ್ರಾಮವನ್ನು ಸಂಪರ್ಕಿಸಬಹುದು. ಖಾಸಗಿ ಸಾರಿಗೆ ವ್ಯವಸ್ಥೆಯನ್ನು ಹೊಂದಿದೆ. ವಡ್ಡನಹಳ್ಳಿಯಿಂದ ಅಂಚೆ ಸಂಪರ್ಕ ಹೊಂದಿದೆ. ಸ್ಥಿರದೂರವಾಣಿಗಳೆಲ್ಲ ಚರದೂರವಾಣಿಗಳಾದ ಮೊಬೈಲ್‌ಗಳಿವೆ. ಸಣ್ಣ ಪುಟ್ಟ ಜಗಳ, ಕಲಹಗಳು ಗ್ರಾಮ ಮಟ್ಟದಲ್ಲಿ ಇತ್ಯರ್ಥವಾಗುತ್ತದೆ. ಬಗೆ ಹರಿಯದ ವ್ಯಾಜ್ಯಗಳು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳುತ್ತಾರೆ.

ಯಾವುದೇ ಬ್ಯಾಂಕಿಂಗ್ ವ್ಯವಸ್ಥೆ ಕಂಡು ಬರುವುದಿಲ್ಲ. ಎರಡು ಸ್ತ್ರೀಶಕ್ತಿ ಸಂಘಗಳು ಮತ್ತು ಒಂದು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿದ್ದು ಸಣ್ಣ ಪ್ರಮಾಣದ ಹಣವನ್ನು ಉಳಿತಾಯ ಮಾಡುತ್ತಿದ್ದಾರೆ. ಸಾಲ ಸೌಲಭ್ಯ ಪಡೆದು ಕಂತಿನ ಮೂಲಕ ತೀರಿಸುತ್ತಿದ್ದಾರೆ.

ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಒಬ್ಬರು ಶಿಕ್ಷಕಿ ಮತ್ತು ಒಬ್ಬರು ಸಹಾಯಕಿಯರಿದ್ದಾರೆ. ಅಲ್ಲದೇ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಅದರಲ್ಲಿ ೩೬ ಮಕ್ಕಳಿದ್ದು ಕನ್ನಡ ಭಾಷಾ ಮಾಧ್ಯಮದಲ್ಲಿ ಉಚಿತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇದರಲ್ಲಿ ಇಬ್ಬರು ಶಿಕ್ಷಕರಿದ್ದು, ಇಬ್ಬರು ಬಿಸಿಯೂಟ, ಅಡುಗೆ ತಯಾರಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ಶೇ. ೫೫.೩ ರಷ್ಟಿದೆ.

ಗ್ರಾಮದ ಜನರ ಕುಟುಂಬ ಕಲ್ಯಾಣ ವ್ಯವಸ್ಥೆಯನ್ನು ಅಳವಡಿಸಿ ಕೊಂಡಿದ್ದಾರೆ. ಪಶುಗಳಿಗೆ ನಾಟಿ
ಔಷಧಿಯನ್ನು ನರಸಿಂಹಪ್ಪನವರು ನೀಡುತ್ತಾರೆ. ವಾರಕ್ಕೊಮ್ಮೆ ಆರೋಗ್ಯ ಸಹಾಯಕಿಯರು ಗ್ರಾಮಕ್ಕೆ ಭೇಟಿ ನೀಡಿ ಆರೋಗ್ಯ ಸಮಸ್ಯೆಯನ್ನು ತಿಳಿಯುತ್ತಾರೆ. ಬಿ.ಪಿ., ಜ್ವರ, ಕೆಮ್ಮು ಮುಖ್ಯ ರೋಗಗಳಾಗಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ ವೇತನ, ವಿಧವಾ ವೇತನದ ಇನ್ನಿತರ ಕಲ್ಯಾಣ ಕಾರ್ಯಕ್ರಮಗಳಿವೆ. ಅಲ್ಲದೇ ೩ ಚಿಲ್ಲರೆ ವ್ಯಾಪಾರದೊಂದಿಗೆ ಟೀ ವ್ಯಾಪಾರದ ಅಂಗಡಿಗಳಿವೆ.

ಐತಿಹಾಸಿಕ ಸಂಸ್ಕೃತಿಯ ಪ್ರತೀಕಗಳಾದ ಸ್ಮಾರಕಗಳು, ಶಾಸನಗಳು, ಹಸ್ತಪ್ರತಿಗಳು ಕಂಡು ಬರುವುದಿಲ್ಲ. ಯಾವುದೇ ಕಟ್ಟೆಯನ್ನು ನಿರ್ಮಿಸದಂತಹ ಒಂದು ಅಶ್ವತ್ಥ ವೃಕ್ಷವಿದೆ. ಹಾಗೆಯೇ ಅದರ ಪಕ್ಕದಲ್ಲಿಯೇ ಪ್ರಾಚೀನ ಕಾಲದ ಒಂದು ಬಾವಿ ಇದೆ. ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ಬ್ರಹ್ಮಾನಂದ ಆಶ್ರಮವಿದ್ದು, ಅಮಾವ್ಯಾಸೆಗಳಂದು ಭಜನೆ, ಅನ್ನ ಸಂತರ್ಪಣೆ ನಡೆಯುತ್ತದೆ. ಧಾರ್ಮಿಕ ಸಂಸ್ಕೃತಿಯ ಕೇಂದ್ರಗಳಾದ ಎರಡು ದೇವಾಲಯಗಳಿವೆ. ಕಣಿವೆ ಮಾರಮ್ಮ, ಈಶ್ವರ ದೇವಸ್ಥಾನಗಳಿವೆ. ಅಲ್ಲದೇ ಒಂದು ಬ್ರಹ್ಮಾನಂದ ಆಶ್ರಮವನ್ನು ಕಾಣಬಹುದಾಗಿದೆ. ಯುಗಾದಿ ನಂತರ ಗ್ರಾಮದೇವತೆ ಕಣಿವೆ ಮಾರಮ್ಮನಿಗೆ ಜಾತ್ರೆ ಮಾಡುತ್ತಾರೆ. ಇದರಲ್ಲಿ ಆರತಿ ಮತ್ತು ಬಲಿಕೊಡುವುದು ಸಹಜ ಪ್ರಕ್ರಿಯೆಯಾಗಿದೆ.

## ಪದ್ಮಾಪುರ

ಪದ್ಮಾಪುರ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೭.೫ ಕಿಮೀ ದೂರದಲ್ಲಿ ಸಿರಾ–ಮಧುಗಿರಿ ಮುಖ್ಯ ರಸ್ತೆಯಲ್ಲಿ ದೊಡ್ಡಗೂಳ ತಿರುವಿನಿಂದ ಬಲಕ್ಕೆ ತಿರುಗಿ ಗೂಳ ರಸ್ತೆಯ ೧ ಕಿಮೀ ದೂರದಲ್ಲಿ ಪದ್ಮಾಪುರವಿದೆ. ಇದೊಂದು ಪಾಪಮ್ಮ ದೇವಾಲಯವಿದ್ದು ಆ ಮೂಲ ದೈವ ಪದ್ಮಾವತಿ ಆಗಿರಬೇಕು. ಆ ದೇವತೆಯ ಹೆಸರಿನಲ್ಲಿ ಪದ್ಮಾಪುರ ಎಂದು ಕರೆಯಲಾಗಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೨೦.೮೧ ಆಗಿದೆ. ಮರಳು ಮಿಶ್ರಿತ ಕಪ್ಪು ಮಣ್ಣನ್ನು ಹೊಂದಿದ್ದು ಸಿರಾ ಕೆರೆಯ ಪೂರ್ವದಲ್ಲಿದ್ದು ಕೆರೆಯ ಹಿಂಭಾಗಕ್ಕೆ ಸೇರಿದೆ. ಹಾಗಾಗಿ ಈ ಭಾಗದಲ್ಲಿ ಕುರುಚಲು ಗಿಡ, ಬಳ್ಳಾರಿ ಜಾಲಿ ಅಧಿಕವಾಗಿದೆ. ಇಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಬಾರುಬೆಕ್ಕು, ಹಂದಿ ಕಂಡುಬರುತ್ತವೆ. ಕೃಷಿಗಾಗಿ ರೈತರು ಹಸು, ಎಮ್ಮೆ ಪಶುಪಾಲನೆಗಾಗಿ ಕುರಿ, ಮೇಕೆ, ನಾಯಿಗಳನ್ನು ಸಾಕುತ್ತಾರೆ. ಕೋಳಿ ಸಾಕುಪ್ರಾಣಿಯಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ಗರುಡ, ಹದ್ದು, ಗಿಳಿ, ಗೀಜುಗ, ಗೂಬೆ, ಕಾಗೆ, ಕೋಗಿಲೆ ಕಂಡುಬರುತ್ತವೆ. ವಾರ್ಷಿಕ ಸರಾಸರಿ ಮಳೆ ೪೮೧.೪ ಮಿಲೀಲೀಟರ್ ಮಳೆ ಬೀಳುತ್ತಿದ್ದು ಉಷ್ಣಾಂಶ ೩೮ ಡಿಗ್ರಿ, ಚಳಿಯು ಅಧಿಕವಾಗಿ ೧೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ.

ಈ ಪರಿಸರದಲ್ಲಿ ವಿವಿಧ ಯೋಜನೆಯ ೨೮ ಕೊಳವೆ ಬಾವಿಗಳಿದ್ದು ಕೃಷಿಗೆ ಬಳಕೆಯಾಗುತ್ತಿದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ೨ ಸಿಸ್ಟರ್ನ್‌ಗಳಿವೆ, ೧ ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಬೋವಿ ಜನಾಂಗ ದೊಡ್ಡ ಸಮುದಾಯವಾಗಿದೆ. ಸರ್ಪ ಒಕ್ಕಲಿಗ, ಬೇಡರು, ಕುಂಬಾರರು ಕಿರು ಸಮುದಾಯವಾಗಿದೆ. ಗ್ರಾಮದಲ್ಲಿ ತೆಲುಗು, ಕನ್ನಡ ಮಾತನಾಡುತ್ತಾರೆ. ಕಲ್ಲಿನ, ಕಾಂಕ್ರೀಟ್, ಹೆಂಚಿನ, ಶೀಟಿನ ಒಟ್ಟು ೧೧೮ ಮನೆಗಳಿದ್ದು ೫೫೧ ಜನಸಂಖ್ಯೆ ಹೊಂದಿದೆ. ವಸತಿ ಯೋಜನೆಯಾದ ಜನತಾ, ಆಶ್ರಯ, ಅಂಬೇಡ್ಕರ್, ವಸತಿ ಯೋಜನೆ ಹಾಗೂ ಉಚಿತ ವಿದ್ಯುತ್ ಸೌಲಭ್ಯದ ೧೮ ಫಲಾನುಭವಿಗಳಿದ್ದಾರೆ. ೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ಆಟೋ ದ್ವಿಚಕ್ರ ವಾಹನಗಳು ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ನವಣೆ, ಜೋಳ, ಹುರುಳಿ, ಅಲಸಂದೆ ಆಹಾರ ಬೆಳೆಗಳು. ಹುಣಸೆಹಣ್ಣು, ತೆಂಗು ವಾಣಿಜ್ಯ ಬೆಳೆಯಾಗಿವೆ. ಒಂದು ಮಿನಿ ಹಾಲಿನ ಡೈರಿಯಿದ್ದು ಸರಾಸರಿ ೧೨೦ ಲೀ. ಹಾಲು ಸಂಗ್ರಹವಾಗುತ್ತದೆ. ಕಲ್ಲುಕುಟುಕ, ಬಂಡೆ ಕೆಲಸ ಇಲ್ಲಿ ಹೆಚ್ಚಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಯಲಿಯೂರು ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ ಮತ್ತು ಚಿತ್ರದುರ್ಗ ವಿಧಾನಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮದಲ್ಲಿ ೧ ಪಂಚಾಯ್ತಿ ಸದಸ್ಯರಿದ್ದಾರೆ. ಸಿರಾ ಗೂಳ, ಮಧುಗಿರಿ ಮಾರ್ಗವಾಗಿ ರಸ್ತೆ ಸಂಚಾರವಿದೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಶಾಲೆಯಲ್ಲಿ ೩೨ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿದ್ದು ಮಕ್ಕಳಿಗೆ ಸಮವಸ್ತ್ರ, ಪುಸ್ತಕ ವಿತರಣೆಯ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೧.೫% ಇದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ಹಾಗೂ ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಅಂಗಡಿಗಳಿವೆ. ಗ್ರಾಮದಲ್ಲಿ ಪಾಪಮ್ಮ, ಬಸವಣ್ಣ, ಮಾರಮ್ಮನ ಗದ್ದುಗೆ ಇದೆ. ಬೋವಿ ಜನಾಂಗದವರು ಪಾಪಮ್ಮನ ಜಾತ್ರೆಯನ್ನು ವಿಶೇಷವಾಗಿ ಆಚರಿಸುತ್ತಾರೆ. ಉಳಿದಂತೆ ಮಾರಮ್ಮ ಊರ ಹಬ್ಬವಾಗಿ ಬಾನ, ಆರತಿ, ಬ್ಯಾಟೆ, ಹರಕೆ ಸಂಪ್ರದಾಯಗಳಿವೆ. ಯುಗಾದಿ, ಮಹಾನವಮಿ, ದೀಪಾವಳಿ, ಶಿವರಾತ್ರಿ, ಗೌರಿ–ಗಣೇಶನ ಹಬ್ಬಗಳ ಆಚರಣೆ ಇದೆ.

## ಪಂಜಿಗಾನಹಳ್ಳಿ

ಪಂಜಿಗಾನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೮ ಕಿಮೀ ದೂರದಲ್ಲಿದೆ. ಸಿರಾ–ಚಿತ್ರದುರ್ಗ ರ‍್ಹಾಯ ಹೆದ್ದಾರಿಯ ಎಡಭಾಗದಲ್ಲಿ ೧ ಕಿಮೀ ದೂರದಲ್ಲಿ ಗ್ರಾಮವಿದೆ. ಇದೊಂದು ಕಂದಾಯ ಗ್ರಾಮವಾಗಿದೆ. ಪಂಜಿಗಾನಹಳ್ಳಿ ಸ್ವತಂತ್ರ ಬಂದಾಗ ಗ್ರಾಮಪಂಚಾಯ್ತಿ ನಂತರ ಮಂಡಲ ಪಂಚಾಯ್ತಿ ಕೇಂದ್ರವಾಗಿತ್ತು. ಆದರೆ ಪ್ರಸ್ತುತ ಲಕ್ಷ್ಮೀಸಾಗರ ಪಂಚಾಯ್ತಿಗೆ ಸೇರಿದೆ. ಪಂಜಿಗಾನಹಳ್ಳಿ ಗ್ರಾಮ ಜೋಡಿಗ್ರಾಮವಾಗಿದ್ದು ಜಯನಗರವೆಂಬ ಮತ್ತೊಂದು ಉಪಗ್ರಾಮವಿದೆ.

ಇದರ ಭೌಗೋಳಿಕ ವಿಸ್ತೀರ್ಣ ೨೩೮.೦೮ ಹೆಕ್ಟೇರ್ ಆಗಿದ್ದು ಎರೆಭೂಮಿಯಾಗಿದೆ. ಮರಳು ಮಿಶ್ರಿತ ಎರೆಮಣ್ಣು ಹೊಂದಿದ್ದು ಫಲವತ್ತಾದ ಮಣ್ಣನ್ನು ಹೊಂದಿದೆ. ಈ ಗ್ರಾಮದ ಸನಿಹದಲ್ಲಿ ೩೫ ಹೆಕ್ಟೇರ್ ಗೋಮಾಳ ಭೂಮಿಯನ್ನು ಹೊಂದಿದೆ. ಈ ಗ್ರಾಮದಲ್ಲಿ ಮೊದಲಿಗೆ ದಾಸಕುಲದ ಪಂಜಿನ ದಾಸಯ್ಯ ನೆಲೆಸಿ, ಮನೆ ನಿರ್ಮಿಸಿದನೆಂದೂ ಆ ಕಾರಣದಿಂದಲೇ ಪಂಜಿಗಾನಹಳ್ಳಿ ಎಂಬ ಹೆಸರು ಬಂದಿದ್ದು ಇಂದಿಗೂ ಯುಗಾದಿ ಹಬ್ಬದಂದು ಆರು ಕುಟುಂಬಗಳ ದಾಸಯ್ಯಗಳು ಶಂಖ, ಬವನಾಸಿ, ದೀಪಾಲೆ ಕಂಬದೊಂದಿಗೆ ಮನೆಯಾಡುವುದು, ಪ್ರತಿ ಮನೆಯಲ್ಲಿಯೂ ದಾಸಯ್ಯನಿಗೆ ಪಡಿಯಾಗಿ ಅಕ್ಕಿ, ಬೇಳೆ, ಬೆಲ್ಲ, ನಾಣ್ಯ ಬೇಡುವುದು ವಾಡಿಕೆಯಾಗಿದೆ.

ಅನಂತರವೇ ಅವರ ಊಟ, ಉಪಚಾರದ ಪರಂಪರೆ ನಿಷ್ಠೆ ನೇಮಮವಾಗಿದೆ ಎಂದು ಶಿಕ್ಷಕ ಗೋವಿಂದರಾಜು ಹೇಳಿ ಈ ಕಾರಣದಿಂದಲೇ ಪಂಜಿಗಾನಹಳ್ಳಿ ಆಗಿದೆ ಎಂದು ಖಚಿತವಾದ ಧ್ವನಿಯಲ್ಲಿ ಹೇಳುತ್ತಾರೆ ಉಪನ್ಯಾಸಕ ಪ್ರಕಾಶ. ಅವರು ಇದಕ್ಕೆ ಹೊರತಾದ ಕಾರಣ ನೀಡುತ್ತಾರೆ. ಪಾಳೆಯಗಾರರ ಕಾಲದಲ್ಲಿ ಕೋಟೆಯ ಮೇಲಿನ ಬುರ್ಜಿಗೆ, ಸೈನಿಕರಿಗೆ ಬೇಕಾಗಿದ್ದ ಪಂಜುಗಳನ್ನು ತಯಾರು ಮಾಡುತ್ತಿದ್ದ ಕಾರಣವೇ ಈ ಗ್ರಾಮ ಪಂಜಿಗಾನಹಳ್ಳಿ ಆಗಲು ಪ್ರೇರಣೆ ಎಂದು ಅಭಿಪ್ರಾಯಪಡುತ್ತಾರೆ. ಒಟ್ಟಾರೆ ಪಂಜಿಗಾನಹಳ್ಳಿ ಬೆಳೆದಿದೆ. ಗ್ರಾಮ ದೊಡ್ಡದಾಗಿದೆ. ಬಹುದೊಡ್ಡ ವಿದ್ಯಾವಂತರು, ಲೇಖಕರು, ಅಧಿಕಾರಿಗಳಿದ್ದಾರೆ. ಅಡಕೆ, ತೆಂಗು, ಬಾಳೆ ತೋಟಗಳ ತಣ್ಣನೆಯ ನೆಲ.

ಈ ಪರಿಸರದಲ್ಲಿ ಬಾರ್‌ಬೆಕ್ಕು, ನವಿಲು, ನರಿ, ತೋಳ, ಜಿಂಕೆ, ಹಂದಿ, ಕರಡಿ, ಮೊಲ ಬಾರ್‌ಬೆಕ್ಕುಗಳಿವೆ. ಗ್ರಾಮದಲ್ಲಿ ಕುರಿ, ಮೇಕೆ, ಹಸು, ಎಮ್ಮೆ, ನಾಯಿ ಸಾಕುಪ್ರಾಣಿಗಳು. ಕೋಳಿಯೂ ಸಾಕುಪ್ರಾಣಿಯಾಗಿದೆ. ವಾರ್ಷಿಕ ಸರಾಸರಿ ೪೬೦ ಮಿಮೀ ಮಳೆ ಬೀಳುವ ಈ ಪ್ರದೇಶದಲ್ಲಿ ಬಿಸಿಲು ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ, ತೋಟಗಾರಿಕೆ ಅವಲಂಬಿತ ರೈತರು ಹಂಡೇನಹಳ್ಳಿ ಚಿಕ್ಕಸಂದ್ರ ಕೆರೆ ನೀರನ್ನು ಅವಲಂಬಿಸಿದ್ದರೂ ಸಾಕಾಗುವುದಿಲ್ಲ. ಹಾಗಾಗಿ ಈ ಪರಿಸರದಲ್ಲಿ ೮೦ ಕೊಳವೆ ಬಾವಿಗಳಿದ್ದು ಕೃಷಿ ಕೆಲಸಕ್ಕೆ ನೀರು ಪೂರೈಸಿಕೊಳ್ಳುತ್ತಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ಒಂದು ದೊಡ್ಡ ಟ್ಯಾಂಕ್ ಇದ್ದು ೧೫೦ ನಲ್ಲಿ ಸಂಪರ್ಕವಿದೆ. ೨ ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ದೊಡ್ಡ ಸಮುದಾಯವಾಗಿದೆ. ಕುಂಚಿಟಿಗ, ಆದಿಕರ್ನಾಟಕ, ಲಿಂಗಾಯಿತ, ಕುರುಬ, ಮುಸ್ಲಿಂ, ಗೊಲ್ಲರು, ಆದಿ ದ್ರಾವಿಡ ಕಿರುಸಮುದಾಯಗಳಾಗಿವೆ. ವಿವಿಧ ಸ್ವರೂಪದ ೩೭೮ ಮನೆಗಳಿದ್ದು ಇವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಿವೆ. ೧೨೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕನ್ನಡ ಮಾತೃಭಾಷೆಯಾಗಿದ್ದು ಉರ್ದು ಮಾತನಾಡುವ ಒಂದು ಸಮುದಾಯವಾಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಆಹಾರವಾಗಿದೆ. ಸಾಂಪ್ರದಾಯಿಕ ವಾಹನವಾದ ೩ ಎತ್ತಿನ ಬಂಡಿ, ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ಭತ್ತ, ರಾಗಿ, ಜೋಳ, ಹೆಸರು ಮುಖ್ಯ ಆಹಾರ ಬೆಳೆಗಳು. ತೆಂಗು, ಅಡಿಕೆ ವಿಶೇಷ ತೋಟಗಾರಿಕೆ ಬೆಳೆಗಳು. ಸಪೋಟ, ದಾಳಿಂಬೆ ವಾಣಿಜ್ಯ ಬೆಳೆಗಳಾಗಿವೆ. ಹುಣಸೆಹಣ್ಣು, ಹೊಂಗೆ ಬೀಜ ವ್ಯಾಪಾರದ ಬೆಳೆಗಳಾಗಿವೆ. ಹತ್ತಿ, ಸೂರ್ಯಕಾಂತಿ, ಹೂ, ತರಕಾರಿ ಬೆಳೆಯಿದೆ. ಒಂದು ಸಹಕಾರಿ ಹಾಲಿನ ಡೈರಿಯಿದ್ದು ಸರಾಸರಿ ೩೫೦ ಲೀ. ಹಾಲು ಸಂಗ್ರಹವಾಗುತ್ತಿದೆ.

ಪ್ರಾಂಶುಪಾಲರು, ಪ್ರಾಧ್ಯಾಪಕರು, ಶಿಕ್ಷಕರು, ಅರಣ್ಯ, ಸಾರಿಗೆ ಇಲಾಖೆಗೆ ಸೇರಿದ ೨೫ ಜನ ಸರ್ಕಾರಿ ನೌಕರರಿದ್ದಾರೆ. ಲೇಖಕ, ಪ್ರಾಂಶುಪಾಲ ಪಿ.ಹೆಚ್. ಮಹೇಂದ್ರಪ್ಪ, ಪ್ರಾಂಶುಪಾಲ ಸಿ.ವಿಶ್ವನಾಥ್, ಪ್ರೊ॥ ಮಹಾಲಿಂಗಪ್ಪ ವೈದ್ಯರಾದ ಡಾ॥ ರಾಮೇಗೌಡ ಮೂವರು ಇಂಜಿನಿಯರ್, ಹೆಸರಾಂತ ವಕೀಲ ಪಿ.ಬಿ. ಸತ್ಯನಾರಾಯಣ, ಭೂಪತಿಗೌಡ ಈ ಗ್ರಾಮದ ವಿಶೇಷ ಸಂಪನ್ಮೂಲ ನೌಕರರು. ಅಡಿಕೆ ಸುಲಿಯುವ ವಿಶೇಷ ಪರಿಣತಿ ಪಡೆದ ಮಹಿಳಾ ತಂಡ ಹೂ ಕಟ್ಟುವುದು, ಬೀಡಿ ಸುತ್ತುವುದು, ಟೈಲರಿಂಗ ಗೃಹ ಕೆಲಸ ಮಹಿಳಾ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿದೆ. ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಗೊಂಡಿದೆ. ಇಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ೮ ಸ್ತ್ರೀಶಕ್ತಿ ಸಹಕಾರ ಸಂಘ, ೩ ಧರ್ಮಸ್ಥಳ ಸಹಕಾರ ಸಂಘಗಳಿದ್ದು ಮಹಿಳಾ ಆರ್ಥಿಕ ಸಬಲತೆಗೆ ಕಾರಣವಾಗಿದೆ. ಹಾಲು ಉತ್ಪಾದಕರ ಸಹಕಾರ ಸಂಘವಿದೆ.

ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ, ರಂಗನಾಥ ಪ್ರೌಢಶಾಲೆ ಇದ್ದು ಶಾಲೆಗಳಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ, ಕಾಂಪೌಂಡ್ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೭೦ ರಷ್ಟಿದೆ. ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು ಆರೋಗ್ಯ ಸುಧಾರಣೆಗೆ ಸಹಕಾರಿಯಾಗಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೧೩ ಅಂಗಡಿಗಳು, ೨ ಹೋಟೆಲ್‌ಗಳು ಇವೆ. ಬೇವು, ಅರಳಿಕಟ್ಟೆ ಇದ್ದದು ೨ ಕರಿಗಲ್ಲುಗಳಿವೆ. ಉಡಸಲಮ್ಮ, ಶ್ರೀರಾಮ, ಆಂಜನೇಯ, ಪಾಂಡುರಂಗ ದೇವಾಲಯಗಳಿದ್ದು ಮಾರಮ್ಮನ ಊರ ಹಬ್ಬ ವಾರ್ಷಿಕವಾಗಿ ನಡೆಯುತ್ತದೆ. ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ.

ದಸರಾ ಹಬ್ಬದಿಂದ ಗ್ರಾಮದ ಎಲ್ಲ ದೇವತೆಗಳ ಉತ್ಸವ, ಕುಲಾಚಾರ, ಸಾಂಪ್ರದಾಯಿಕ ಪದ್ಧತಿಯಂತೆ ನಡೆಯುತ್ತದೆ. ಯುಗಾದಿ, ದೀಪಾವಳಿ, ಸಂಕ್ರಾಂತಿ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರಂಜಾನ್, ಮೊಹರಂ, ಬಕ್ರೀದ್ ಹಬ್ಬ ಮುಸಲ್ಮಾನ ಸಾಂಪ್ರದಾಯಿಕ ಹಬ್ಬವಾಗಿದೆ. ಪ್ರಾಂಶುಪಾಲ ಪಿ.ಹೆಚ್. ಮಹೇಂದ್ರಪ್ಪ, ಚಲನಚಿತ್ರ ಸಹನಿರ್ದೇಶಕರು ಆಗಿದ್ದರು. ರಾಜ್ಯಶಾಸ್ತ್ರ ಪ್ರವೇಶಿಕೆ, ಪಠ್ಯಪೂರಕ ಪುಸ್ತಕಗಳನ್ನು ರಚಿಸಿದ್ದಾರೆ. ಸಿರಾದ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾನಿಲಯ ನಿರ್ದೇಶಕರಾಗಿದ್ದಾರೆ. ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಣೆ, ೨೦೧೪ ರಲ್ಲಿ ಉತ್ತಮ ಪ್ರಾಂಶುಪಾಲರೆಂದು ರಾಜ್ಯಪ್ರಶಸ್ತಿಗೆ ಭಾಜನರಾಗಿದ್ದಾರೆ. ಉತ್ತಮ ಚಿಂತಕರು, ಕದರಪ್ಪ ತಮಟೆ ಕಲಾವಿದರಾದರೆ ಹೊಸೂರಣ್ಣ ರಂಗ ನಿರ್ದೇಶಕರಾಗಿ, ಕಲಾವಿದರಾಗಿ ಹೆಸರು ಮಾಡಿದ್ದಾರೆ.

## ಪಟ್ಟನಾಯಕನಹಳ್ಳಿ

ಪಟ್ಟನಾಯಕನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೯ ಕಿ.ಮೀ. ದೂರದಲ್ಲಿದ್ದು, ಅಮರಾಪುರ–ಸಿರಾ ಮುಖ್ಯ ರಸ್ತೆಯಲ್ಲಿ, ಇದೇ ಗ್ರಾಮದ ಹೆಸರಿನ ಸರ್ಕಲ್ ಇದ್ದು, ಅಲ್ಲಿ ಎಡಗಡೆ ತಿರುಗಿ ಅಲ್ಲಿಂದ ಎರಡು ಕಿ.ಮೀ. ಒಳಗೆ ಹೋದರೆ ಈ ಗ್ರಾಮವಿದೆ. ರಾಜ್ಯ ಸಾರಿಗೆ ಹಾಗೂ ಖಾಸಗಿ ಬಸ್ಸುಗಳು ಬರಗೂರು, ಅಮರಾಪುರ ಕಡೆಗೆ ಹೋಗುವ ಎಲ್ಲಾ ಖಾಸಗಿ ಬಸ್ಸುಗಳು ಪಟ್ಟನಾಯಕನಹಳ್ಳಿಯನ್ನು ತಲುಪಿಯೇ ಮುಂದೆ ಹೋಗುತ್ತವೆ. ಇದೊಂದು ನಾದೂರಿನ ಮಜರೆ ಗ್ರಾಮವಾಗಿದ್ದರೂ ತನ್ನೆಲ್ಲಾ ಸಾಮರ್ಥ್ಯಗಳಿಂದ ಹೋಬಳಿ ಕೇಂದ್ರವನ್ನು ಮೀರಿಸಿ ಬೆಳೆದಿದೆ.

ಅಂಗನವಾಡಿ ಕೇಂದ್ರಗಳಿಂದ ಆರಂಭಿಸಿ, ಕೆನರಾ ಬ್ಯಾಂಕ್, ಸರ್ಕಾರಿ ಪದವಿಪೂರ್ವ ಕಾಲೇಜು, ಹೈಸ್ಕೂಲ್, ಸಾರ್ವಜನಿಕ ಆಸ್ಪತ್ರೆ, ಪಶು ಆಸ್ಪತ್ರೆ, ಬೆಸ್ಕಾಂ, ಪೋಲೀಸ್ ಠಾಣೆ, ಗ್ರಾಮ ಲೆಕ್ಕಿಗರ ಕಛೇರಿ, ವ್ಯವಸಾಯ ಸೇವಾ ಸಹಕಾರ ಸಂಘ, ಕಂಬಳಿ ನೇಕಾರರ ಸಂಘ ಈ ಮೊದಲಾದ ಸರ್ಕಾರಿ ಸಂಸ್ಥೆಗಳಂತೆ, ಮಣ್ಣಮ್ಮ ಪ್ರೌಢಶಾಲೆ, ಶ್ರೀ ಗುರುಗುಂಡ ಬ್ರಹ್ಮೇಶ್ವರ ಬಾಲಕಿಯರ ಪ್ರೌಢಶಾಲೆ, ಶಾಂತಿನಿಕೇತನ ಕಾನ್ವೆಂಟ್ ಶಾಲೆ ಮೊದಲಾದ ಸಾರ್ವಜನಿಕ ಸೇವಾ ಸಂಸ್ಥೆಗಳು ಅಧಿಕವಾಗಿದೆ.

ವಾಸ್ತವವಾಗಿ ಈ ಗ್ರಾಮಕ್ಕೆ ಗೌಡಗೆರೆ ಹೋಬಳಿ ಕೇಂದ್ರವಾಗಿದೆ. ಆದರೂ ಹೋಬಳಿ ಕೇಂದ್ರ ಗೌಡಗೆರೆಯಲ್ಲಿ ಈ ಸೌಲಭ್ಯಗಳಿಲ್ಲ. ಗೌಡಗೆರೆ ಪಶ್ಚಿಮಕ್ಕೆ ಇಲ್ಲಿಂದ ೪ ಕಿ.ಮೀ ದೂರದಲ್ಲಿದ್ದು, ಅಲ್ಲಿನ ಗ್ರಾಮಸ್ಥರು ಸಾರ್ವಜನಿಕ ಸೌಲಭ್ಯಕ್ಕಾಗಿ ಪಟ್ಟನಾಯಕನಹಳ್ಳಿಗೆ ಬರಬೇಕಾದ ಅನಿವಾರ್ಯ ಸಂದರ್ಭವಿದೆ. ಅಷ್ಟರ ಮಟ್ಟಿಗೆ ಹೋಬಳಿಯೂ ಅಲ್ಲದೆ, ಗ್ರಾಮ ಪಂಚಾಯಿತಿಯೂ ಅಲ್ಲದೆ, ಮಜರೆ ಗ್ರಾಮವೊಂದೇ ಈ ಪರಿಯಲ್ಲಿ ಬೆಳೆದಿರುವುದು. ಸಿರಾ ತಾಲ್ಲೂಕಿನ ಅಪರೂಪದ ಪ್ರಸಂಗವಾಗಿದೆ. ೭ ವಾರ್ಷಿಕ ೪೬೫ ಮಿ.ಮೀ. ಸರಾಸರಿ ಮಳೆ ಬೀಳುತ್ತಿದ್ದು ಉಷ್ಣಾಂಶವೂ ೩೭ ಸೆಂ. ಆದರೆ ಬೆಳೆಯ ಪ್ರಮಾಣ ೧೦ ಸೆಂ. ಇರುತ್ತದೆ.

ಪಟ್ಟನಾಯಕ ಎಂಬ ಪಾಳೆಯಗಾರನೊಬ್ಬನು ಈ ಪರಿಸರದಲ್ಲಿ ಆಳ್ವಿಕೆ ನಡೆಸಿದನು ಎಂಬ ಕಾರಣದಿಂದ ಈ ಹೆಸರು ಪ್ರಾಪ್ತವಾಗಿದೆ ಎಂಬ ಸ್ಥಳೀಯರ ಐತಿಹ್ಯವಿದೆ. ಪಟ್ಟನಾಯಕನಹಳ್ಳಿ ಇದರ ಪಕ್ಕ ಕಾಮಗೊಂಡನಹಳ್ಳಿ, ನಡುವೆ ಪುರಾತನ ಕಾಲದ ಶ್ರೀ ಗುರುಗುಂಡ ಬ್ರಹ್ಮ ಗುರು ಮಠವಿದೆ.

ಇದೊಂದು ಅವಧೂತ ಪರಂಪರೆಯ ಮಠವಾಗಿದ್ದು, ಸಿರಾ, ಹಿರಿಯೂರು, ಚಳ್ಳಕೆರೆ, ಆಂಧ್ರದ ಉತ್ತರ ಗಡಿ ಭಾಗದ ಹಲವು ತಾಲ್ಲೂಕಿನ ಭಕ್ತರನ್ನು ಹೊಂದಿದೆ. ಶ್ರೀ ಓಂಕಾರೇಶ್ವರ ಬೃಹತ್ ಶಿವಲಿಂಗ, ಕಲ್ಲು ಬಂಡೆಗಳಿಂದಲೇ ನಿರ್ಮಿಸಿರುವ ಎತ್ತರವಾದ ಪೀಠ ಬೃಹಾದಾಕಾರದ ಶಿವಲಿಂಗ, ವಿಮಾನಗೋಪುರ ಇಲ್ಲಿನ ಆಕರ್ಷಣೆ. ಕಲ್ಲುಗಾಲಿ ರಥೋತ್ಸವವನ್ನು ಪ್ರತಿವರ್ಷ ವಿಜೃಂಭಣೆಯಿಂದ ಸಾರ್ವತ್ರಿಕವಾಗಿ ನಡೆಯುತ್ತದೆ. ಬೃಹತ್ ಎತ್ತುಗಳ ಜಾತ್ರೆಗಳೂ ಸೇರುತ್ತದೆ. ಮಠದ ವತಿಯಿಂದ ಊಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನೆರವೇರಿಸುತ್ತಾ ಬರಲಾಗುತ್ತದೆ. ಶ್ರೀ ನಂಜಾವಧೂತ ಸ್ವಾಮಿಗಳು ಈ ಮಠದ ಪೀಠಾಧ್ಯಕ್ಷರಾಗಿದ್ದಾರೆ. ದತ್ತಾತ್ರೇಯನು, ನೀಲಕಂಠೇಶ್ವರ, ಪಾರ್ವತಿ ಮಂದಿರ, ಹಾಗೂ ಯಾತ್ರಿನಿವಾಸ ಮೊದಲಾದ ಸೇವಾ ಸೌಲಭ್ಯಗಳೂ ಇಲ್ಲಿವೆ. ಪಟ್ಟನಾಯಕನಹಳ್ಳಿಯ ಗ್ರಾಮದಲ್ಲೂ ಬೀರೇಶ್ವರ, ಮೈಲಾರಲಿಂಗೇಶ್ವರ, ಭದ್ರಮ್ಮ, ಶನಿದೇವರು, ಗಣಪತಿ, ನವಗ್ರಹ, ಶ್ರೀರಾಮ, ಸೂರ್ಯ, ಆಂಜನೇಯ, ಬಂಡಿ ರಂಗನಾಥ ದೇವಾಲಯಗಳು ಗ್ರಾಮದ ಆರಾಧ್ಯ ದೇವಸ್ಥಾನಗಳಾಗಿವೆ.

ಪಟ್ಟನಾಯಕನಹಳ್ಳಿ ನಾದೂರಿಗೆ ಸೇರಿಕೊಂಡಂತೆ ಒಟ್ಟು ಭೌಗೋಳಿಕ ೨೫೪೩.೮೪ ಹೆಕ್ಟೇರ್‌ನಲ್ಲಿ ಭೂ ಪ್ರದೇಶದಲ್ಲಿ ಹಂಚಿಕೆಯಾಗಿದೆ. ಕಪ್ಪು ಮಿಶ್ರಿತ ಮರಳು, ಪೂರ್ವಕ್ಕೆ –ಉತ್ತರಕ್ಕೆ ಕೆಂಪು ಬಿಳಿ–ಮರಳು ಭೂಮಿಯನ್ನು ಹೊಂದಿದೆ.

ಇಲ್ಲಿನ ಮುಖ್ಯ ಆಹಾರ ಬೆಳೆಗಳಾಗಿ ಶೇಂಗಾ ರಾಗಿ, ತೊಗರಿ, ಅಲಸಂದಿ ಪ್ರಮುಖವಾಗಿ ಬೆಳೆಯುತ್ತಾರೆ. ಹತ್ತಿ, ಸೂರ್ಯಕಾಂತಿ, ಭತ್ತ ಮೊದಲಾದವುಗಳನ್ನು ಬೆಳೆಯುತ್ತಾರೆ. ನೀರಾವರಿ ಸೌಲಭ್ಯವುಳ್ಳವರು ತೆಂಗು, ಅಡಿಕೆ ಬೆಳೆಯನ್ನು ಅಧಿಕವಾಗಿ ಬೆಳೆಯುವುದುಂಟು.

ಒಟ್ಟು ಮನೆಗಳ ಸಂಖ್ಯೆ ೫೦೦. ೨೮೧೪ ಜನಸಂಖ್ಯೆ ಇದೆ. ಕುರುಬ ಜನಾಂಗ ಇಲ್ಲಿನ ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ಮುಸ್ಲಿಂ, ಬೇಡರು, ದರ್ಜಿ, ಈಡಿಗ, ವೈಶ್ಯರು, ಬ್ರಾಹ್ಮಣರು, ಕ್ರಿಶ್ಚಿಯನ್, ವಿರಳವಾಗಿ ಕುಂಚಿಟಿಗರಿದ್ದಾರೆ.

ಈ ಗ್ರಾಮದ ಪೂರ್ವ–ಉತ್ತರ ಕುರುಚಲು ಗಿಡ, ಕೆರೆಗಳಿಂದ ಕೂಡಿದ್ದು, ಇಲ್ಲಿ ನರಿ, ಮೊಲ, ಕಾಡುಹಂದಿ, ಜಿಂಕೆ ಮೊದಲಾದ ಕಾಡುಪ್ರಾಣಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಇದೊಂದು ರೈತಾಪಿ ಗ್ರಾಮವಾಗಿದ್ದು, ಗ್ರಾಮದಲ್ಲಿ ಎಮ್ಮೆ, ಕುರಿ, ಮೇಕೆ, ಎತ್ತುಗಳನ್ನು ವಿಶೇಷವಾಗಿ ಸಾಕುತ್ತಾರೆ. ಕೋಳಿಗಳನ್ನು ಮಾಂಸಾಹಾರ ಕ್ಕಾಗಿ ಸಾಕುವುದು ವಾಡಿಕೆಯಾಗಿದೆ. ಅದರಂತೆ ಈ ಪರಿಸರದಲ್ಲಿ ಪಕ್ಷಿಗಳಾದ ಕಾಗೆ, ಕೋಗಿಲೆ, ಕೌಜುಲ, ಕೊಕ್ಕರೆ, ಗುಬ್ಬಚ್ಚಿ, ಮೊದಲಾದ ಕಾಡು ಪಕ್ಷಿಗಳು ಕಂಡು ಬರುತ್ತವೆ.

ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ ಹಾಗೂ ಹೆಂಚಿನ ಮನೆಗಳಿದ್ದು, ರಸ್ತೆ ಬದಿ ೨ ಗುಡಿಸಲು ಸಲ ಇವೆ. ಆಶ್ರಯ ಇಂದಿರಾ ಆವಾಸ್, ವಾಜಪೈ ಆವಾಸ್ ಯೋಜನೆಯಲ್ಲಿ ವಸತಿ ಸೌಲಭ್ಯ ಪಡೆದವರು, ಭಾಗ್ಯಜ್ಯೋತಿ ಫಲಾನುಭವಿಗಳು ಗ್ರಾಮದಲ್ಲಿ ಇದ್ದಾರೆ. ವಿಶೇಷವೆಂದರೆ ಈ ಗ್ರಾಮದಲ್ಲಿರುವ ಎಲ್ಲಾ ೫೦೦ ಮನೆಯಲ್ಲಿಯೂ ಶೌಚಾಲಯದ ಬಳಕೆಯಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಪ್ರಮುಖ ಆಹಾರ ಪದ್ಧತಿ ರಾಗಿ ಮುದ್ದೆ. ಅಮುಖ್ಯವಾಗಿ ರೊಟ್ಟಿ, ದೋಸೆ, ಚಿತ್ರಾನ್ನ, ಉಪ್ಪಿಟ್ಟು ತಿಂಡಿಗಳಾಗಿ ಬಳಸುತ್ತಾರೆ. ಜೊತೆಗೆ ವಿಶೇಷ ಸಂದರ್ಭಗಳಲ್ಲಿ ಮಾಂಸ, ಹೋಳಿಗೆ ಭೋಜನವೂ ಇರುತ್ತದೆ.

ಈ ಗ್ರಾಮದಲ್ಲಿ ಸಂಪ್ರದಾಯಿಕ ವಾಹನವಾಗಿ ಕೃಷಿ ಹಾಗೂ ವಾಣಿಜ್ಯ ಗಳಾಗಿ ಲಾರಿ, ಟ್ರ್ಯಾಕ್ಟರ್, ಟೆಂಪೋ, ಆಟೋ, ಬಸ್ಸು, ಕಾರುಗಳನ್ನು ಬಳಸುತ್ತಾರೆ. ೩೮೦ ಸ್ಕೂಟರ್‌ಗಳನ್ನು ಗ್ರಾಮದಲ್ಲಿ (೫.೨.೨೦೧೪) ಕಾಣಬಹುದಾಗಿದೆ.

೭೫ ಸರ್ಕಾರಿ ನೌಕರರು ಈ ಗ್ರಾಮದಲ್ಲಿದ್ದು, ಇಂಜಿನಿಯರ್, ಪ್ರಾಂಶುಪಾಲರು, ಪ್ರಾಧ್ಯಾಪಕರು, ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಬಸ್ ಮಾಲೀಕರು, ಕಂಡಕ್ಟರ್, ಡ್ರೈವರ್‌ಗಳೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಣ್ಣ ಕೈಗಾರಿಕೆಗಳಾಗಿ, ಬೀಡಿ ಸುತ್ತುವುದು, ಟೈಲರ್, ಹಿಟ್ಟಿನ ಗಿರಣಿ ಮೊದಲಾದ ಉದ್ಯಮಗಳೂ ಇಲ್ಲಿವೆ. ಒಂದು ಚಿತ್ರಮಂದಿರವೂ ಇದೆ. ವಾಹನ ರಿಪೇರಿ ಅಂಗಡಿಗಳು, ಪೆಟ್ರೋಲ್ ಬಂಕ್ ಸಹ ಹೊಂದಿದೆ.

ಸಿರಾ ವಿಧಾನಸಭಾ ಕ್ಷೇತ್ರಕ್ಕೆ, ನಾದೂರು ಜಿಲ್ಲಾ ಪಂಚಾಯಿತಿ ಕ್ಷೇತ್ರ, ಹಾಗೂ ಹೆಂದೊರೆ ತಾಲ್ಲೂಕು ಪಂಚಾಯಿತಿ ಕೇಂದ್ರ ಹಾಗೂ ನಾದೂರು ಗ್ರಾಮ ಪಂಚಾಯಿತಿ ಕ್ಷೇತ್ರ ಹೊಂದಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ.

ಈ ಗ್ರಾಮದಲ್ಲಿ ೬ ಜನ ಪಂಚಾಯಿತಿ ಸದಸ್ಯರು ಆಯ್ಕೆಯಾಗಿದ್ದು ಮಾಜಿ ಪಂಚಾಯಿತಿ ಅಧ್ಯಕ್ಷರಾಗಿದ್ದು ಲಕ್ಷ್ಮೀದೇವಮ್ಮ ಇದೇ ಗ್ರಾಮದವರು.

ಗ್ರಾಮದಲ್ಲಿ ೩ ಸ್ತ್ರೀ ಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳೂ, ೨ ನೇಕಾರರ ಸಂಘಗಳು, ಕನಕ ಸಂಘ, ಸ್ವಾಮಿ ವಿವೇಕಾನಂದ ಸಂಘಗಳನ್ನು ಕಾಣಬಹುದು. ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ, ಸೌಲಭ್ಯ ಪಡೆದವರು ಒಟ್ಟು ೭೮ ಫಲಾನುಭವಿಗಳು ಈ ಗ್ರಾಮದಲ್ಲಿದ್ದಾರೆ. ಸಾಂಸ್ಕೃತಿಕವಾಗಿಯೂ ಈ ಗ್ರಾಮ ಮುಖ್ಯವಾಗಿದ್ದು, ಬೀರಲಿಂಗಪ್ಪ, ಶನಿದೇವರ ಪಾತ್ರದಲ್ಲಿ ಹೆಚ್ಚು ಹೆಸರು ಮಾಡಿದ್ದಾರೆ. ಜನಪದ ಕಲಾವಿದ ನಂಜಪ್ಪ, ನಂದಿ ಧ್ವಜ ಕುಣಿತದ ತಿಪ್ಪೇಸ್ವಾಮಿ, ಗಂಗಾಧರ, ನರಸಿಂಹಮೂರ್ತಿ ಮೊದಲಾದ ಕಲಾವಿದರನ್ನು ಕಾಣಬಹುದಾಗಿದೆ. ಪತ್ರಿಕೋದ್ಯಮಿ ಪ್ರಜಾಪ್ರಗತಿ ಎಸ್. ನಾಗಣ್ಣ ಮತ್ತು ತುಮಕೂರು ವಾರ್ತೆ ಸಂಪಾದಕ ಶ್ರೀ ಜ್ಞಾನದೇವ್ ಇದೇ ಗ್ರಾಮದವರು. ಶ್ರೀದೇವಿ ನಾರಾಯಣಪ್ಪ ದೇವಿ ಪಾತ್ರದಲ್ಲಿ ಹೆಸರುವಾಸಿ. ಇಲ್ಲಿ ಯಶೋಧರ ನಾಟಕ ರಂಗ ಸೀನರಿ ಕಂಪನಿ ಇದ್ದು, ತುಮಕೂರು ಜಿಲ್ಲೆಯ ಹಲವು ರಂಗ ಕಲಾವಿದರ ಅಭಿನಯಕ್ಕೆ ರಂಗ ಸೀನರಿಯನ್ನು ಒದಗಿಸುತ್ತಾ ಪ್ರಸಿದ್ಧವಾಗಿದೆ. ಒಂದು ವೀರಗಲ್ಲು, ಒಂದು ಶಾಸನ ಈ ಗ್ರಾಮದಲ್ಲಿ ಕಂಡು ಬರುತ್ತದೆ. ಪ್ರಾಚೀನ ಕಾಲದ ಒಂದು ಬಾವಿ ಮುಚ್ಚಿಹೋಗುವ ಹಂತದಲ್ಲಿದೆ.

ಗ್ರಾಮದೇವತೆಯಾಗಿ ಕರಿಯಮ್ಮನ ಆಚರಣೆ ವಾರ್ಷಿಕ ಆಚರಣೆ, ಊರಹಬ್ಬವಾಗಿ ವಿಜೃಂಭಣೆಯಿಂದ ನಡೆಯುತ್ತದೆ. ದೇವಿಗೆ ಆರತಿ, ಬಾನ, ಬ್ಯಾಟೆಗಳ ಹರಕೆ, ಆಚರಣೆಗಳು ವಾರ್ಷಿಕವಾಗಿ ಜರುಗುತ್ತವೆ.

ಪಟ್ಟನಾಯಕನಹಳ್ಳಿ ಶ್ರೀ ಗುರುಗುಂಡೆ ಬ್ರಹ್ಮೇಶ್ವರ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಒಟ್ಟು ಎಂಟು ಶಾಸನಗಳು ಪ್ರಕಟವಾಗಿದ್ದು ಅವುಗಳಲ್ಲಿ ಒಂದು ೧೯ನೇ ಶತಮಾನದ ಶಾಸನ ಕಲ್ಲು. ಇದು ಗುರುಗುಂಡ ಬ್ರಹ್ಮನ ಶಿವರಾಜ ಯೋಗಮಠವೆಂದು ತಿಳಿಸುತ್ತದೆ. ಇನ್ನೊಂದು ಕಾಲದಲ್ಲಿ, ಗುರು ಗುಂಡ ಬ್ರಹ್ಮರಾಜ ಯೋಗ ಶಾಲೆಯೆಂದು, ಆ ಶಾಲೆಗೆ ಕಾಲಭೈರರ ಮಂಟಪ ಎಂದು ಕರೆಯಲಾಗಿದೆ. ಉಳಿದ ಐದು ಶಾಸನಗಳು ಗುರುಗುಂಡ ಬ್ರಹ್ಮೇಶ್ವರ ಮಠದ, ಶ್ಲೋಕ, ಗುರು ನಂಜಾವಧೂತ ಸ್ವಾಮಿಗಳಿಗೆ ಒಳ್ಳೆಯದಾಗಲಿ, ಗುಂಡಾವಧೂತರ ಶಿಷ್ಯ ವಾತ್ಸಲ್ಯ, ಗಾಂಭೀರ್ಯ, ರಂಗಾವಧೂತರಿಗೆ ಪರಾಕ್, ಗುರುಗುಂಡ ಬ್ರಹ್ಮೇಶ್ವರಿಗೆ ವಿಜಯವಾಗಲಿ, ಮುಂತಾದ ಜಯ, ಶುಭ, ಮಠ ಪರಂಪರೆಯ ಸತ್ ಕೀರ್ತಿಯನ್ನು ಸ್ತುತಿಸಿವೆ. ಈ ಎಂಟು ಶಾಸನಗಳನ್ನು ಕನ್ನಡ ಪ್ರಾಧ್ಯಾಪಕ ಕೆ. ಚಂದ್ರಣ್ಣನವರು ಮಠದ ಸ್ಮರಣ ಸಂಚಿಕೆ ಬೆಳ್ಳಿ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ. ಈ ಮಠದ ಶ್ರೀ ಗುರುಕುಮಾರ ಅವಧೂತ ಸ್ವಾಮಿಗಳು ನಂಜಾವಧೂತ ಸ್ವಾಮಿಗಳ ಜೀವನಚರಿತ್ರೆ ರಚಿಸಿದ್ದಾರೆ.

## ಪಟ್ಟನಾಯ್ಕನಹಳ್ಳಿ ಕ್ರಾಸ್

ಪಟ್ಟನಾಯ್ಕನಹಳ್ಳಿ ಕ್ರಾಸ್ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧ ಕಿ.ಮೀ. ದೂರದಲ್ಲಿದೆ. ಸಿರಾ ಅಮರಾಪುರ ಮುಖ್ಯ ರಸ್ತೆಯು ಪಟ್ಟನಾಯಕನಹಳ್ಳಿ ನಾದೂರು ಮಾರ್ಗವಾಗಿ ಕವಲೊಡೆಯುವ ಸ್ಥಳವೇ ಪಟ್ಟನಾಯಕನಹಳ್ಳಿ ಕ್ರಾಸ್. ೨೦೦೩ ರಲ್ಲಿ ಸಿರಾ ಕ್ಷೇತ್ರದ ಶಾಸಕರಾಗಿದ್ದ ಪಿ.ಎಂ. ರಂಗನಾಥಪ್ಪನವರು ಉದ್ದರಾಮನಹಳ್ಳಿ–ಪಟ್ಟನಾಯಕನಹಳ್ಳಿ ಮೂಲದ ನಿರಾಶ್ರಿತರಿಗೆ ವಸತಿ ನಿರ್ಮಿಸಲು ಸ್ಥಳ ನೀಡಿ ಹಾಗೂ ಗೃಹ ನಿರ್ಮಿಸಲು ಆಶ್ರಯ ಯೋಜನೆಯ ಅಡಿಯಲ್ಲಿ ಹಣಕಾಸು ಬಿಡುಗಡೆ ಮಾಡಿದ್ದರಿಂದಾಗಿ ಪಟ್ಟನಾಯಕನಹಳ್ಳಿ ನವಗ್ರಾಮ ಎಂಬ ಹೆಸರಲ್ಲಿ ಗ್ರಾಮ ರಚನೆಯಾಯಿತು. ಇಂದು ಪಟ್ಟನಾಯ್ಕನ ಹಳ್ಳಿ ಕ್ರಾಸ್ ಎಂದೇ ಪ್ರಸಿದ್ಧವಾಗಿದೆ. ಅಲ್ಲದೆ ಉದ್ದರಾಮನಹಳ್ಳಿ ಗೇಟ್ ಎಂದು ಕರೆಯಲಾಗುತ್ತದೆ.

ಇದೊಂದು ದಿಣ್ಣೆಯ ಪ್ರದೇಶ. ಇಲ್ಲಿ ನೀರಿನ ಆಶ್ರಯ ಕೆರೆ ಮೂಲ ಇಲ್ಲ. ಇದರ ಭೌಗೋಳಿಕ ವಿಸ್ತೀರ್ಣ ೨೫೫ ಹೆಕ್ಟೇರ್‌ಗಳಲ್ಲಿ ಹಂಚಿಕೆಯಾಗಿದೆ. ಈ ಪರಿಸರದಲ್ಲಿ ಗಿಡ, ಮರ, ಬಯಲು, ದಿಣ್ಣೆ ಇರುವುದರಿಂದ ಮೊಲ, ಕೋತಿ, ನರಿ, ಮುಂಗುಸಿ, ತೋಳ, ಇಲಿ, ಹೆಗ್ಗಣ, ಮುಂಗುಸಿ ಕಂಡು ಬರುತ್ತವೆ. ಸಾಕು ಪ್ರಾಣಿಗಳಾಗಿ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ನಾಯಿ, ಬೆಕ್ಕು, ಗೂಬೆ, ಪಕ್ಷಿಗಳಾದ ಗರುಡ, ಹದ್ದು, ಬೆಳವ, ಕೌಜಲಗ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿಗಳನ್ನು ಸಾಕಲಾಗಿದೆ.

ಇಲ್ಲಿನ ಹವಾಮಾನ ಉಷ್ಣಾಂಶ ಅಧಿಕವಾಗಿದೆ. ಬಿಸಿ ತಾಪಮಾನದಿಂದ ಕೂಡಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಶೇ. ೪೬೫ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮–೪೦಼ ಸೆಂ.ರಷ್ಟು ಇದ್ದು, ಚಳಿಯು ೧೨಼ ಸೆಂ. ಇರುತ್ತದೆ. ಕುಡಿಯಲು ನಗರ ಸಭೆಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಒಂದು ಒಂದೂವರೆ ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್ ಇದ್ದು, ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯ ವಾಗಿದ್ದು, ಕುರುಬರು, ಗೊಲ್ಲರು, ಆದಿದ್ರಾವಿಡ, ನಾಯಕರು, ಮಡಿವಾಳರು ಸಮುದಾಯಗಳು ಕಿರು ಸಮುದಾಯವಾಗಿದೆ. ಗ್ರಾಮದ ಮುಖ್ಯ ಭಾಷೆ ಕನ್ನಡ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು ಹಾಗೂ ೬ ಗುಡಿಸಲುಗಳು ಸೇರಿ ಒಟ್ಟು ೧೫೦ ಮನೆಗಳಿದ್ದು, ಇವು ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೭೫ ಮನೆಗಳಲ್ಲಿ ಶೌಚಾಲಯದ ಸೌಲಭ್ಯ ಹೊಂದಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳು ಎತ್ತಿನಗಾಡಿಗಳಿವೆ. ಆಧುನಿಕ ವಾಹನಗಳಾದ ೪ ಟ್ರ್ಯಕ್ಟರ್, ೨ ಜೀಪು, ೬ ಆಟೋ, ೪೩ ದ್ವಿಚಕ್ರ ವಾಹನಗಳು ಬಳಕೆಯಲ್ಲಿದೆ.

ಇಲ್ಲಿನ ಮುಖ್ಯ ಬೆಳೆ ಶೇಂಗಾ, ಉಪಬೆಳೆಗಳಾಗಿ ರಾಗಿ, ಸಜ್ಜೆ, ಹುರುಳಿ, ನವಣೆ, ಕೂರ್ಲೆ, ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಗಳಾಗಿ ತೆಂಗು, ಅಡಿಕೆ, ಹತ್ತಿ ಬೆಳೆಯುತ್ತಾರೆ. ಮುಖ್ಯ ವ್ಯಾಪಾರಿ ಸರಕು ಶೇಂಗಾ, ಹುಣಸೆ ಹಣ್ಣು ಆಗಿದೆ.

೩ ಜನ ಶಿಕ್ಷಕರು, ೨ ಪೋಲೀಸ್, ೧ ಕಂಡಕ್ಟರ್ ಸೇರಿದಂತೆ ಒಟ್ಟು ೬ ಜನ ಸರ್ಕಾರಿ ನೌಕರರಿದ್ದಾರೆ. ಮಿಡಿ ಸೌತೆಯಿಂದ ಉಪ್ಪಿನಕಾಯಿ ತಯಾರಿಸುವ ಕಾರ್ಖಾನೆ ಇಲ್ಲಿನ ಸಮೀಪದಲ್ಲಿದ್ದು, ೧೦೦ ಜನ ನೌಕರರು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಾಂಪ್ರದಾಯಿಕ ಬಡಗಿ ಕಾಯಕದ ೧೪ ಜನ ಕೆಲಸ ನಿರ್ವಹಿಸುತ್ತಿದ್ದಾರೆ.

ಆಡಳಿತಾತ್ಮಕವಾಗಿ ಸಿರ ವಿಧಾನಸಭೆ, ಗೌಡಗೆರೆ ಹೋಬಳಿ, ಚಿತ್ರದುರ್ಗ ಲೋಕಸಭೆ ಕ್ಷೇತ್ರ ಹೊಂದಿದ್ದು, ನಾದೂರು ಗ್ರಾಮ ಪಂಚಾಯ್ತಿ, ವ್ಯಾಪ್ತಿಗೆ ಸೇರಿದೆ. ಒಬ್ಬರು ಪಂಚಾಯಿತಿ ಸದಸ್ಯರಿದ್ದಾರೆ.

ಗ್ರಾಮದಲ್ಲಿ ೬ ಸ್ತ್ರೀ ಶಕ್ತಿ ಸಂಘಗಳಿವೆ. ಶಾಲೆ ಮತ್ತು ಅಂಗನವಾಡಿ ಕೇಂದ್ರವಿದೆ. ಉದ್ದರಾಮನಹಳ್ಳಿ ಹೆಸರಿನಲ್ಲಿದ್ದರೂ ಇದೇ ಗ್ರಾಮದ ನಡುವೆ ಇದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯ, ಉಚಿತ ಪಠ್ಯಪುಸ್ತಕ, ಬಟ್ಟೆ, ಶೌಚಾಲಯ ಸೌಲಭ್ಯವಿದೆ. ಇಲ್ಲಿನ ಸಾಕ್ಷರತಾ ಪ್ರಮಾಣ ಶೇ. ೭೩.೫ ರಷ್ಟಿದೆ. ೪ ಜನ ಶಿಕ್ಷಕರಿದ್ದಾರೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ವಿಧವಾ ವೇತನ, ಸಂಧ್ಯ ಸುರಕ್ಷಾ ಫಲಾನುಭವಿಗಳಿದ್ದಾರೆ. ಬಸ್ ಸೌಲಭ್ಯವಿದೆ. ೮ ಗೂಡಂಗಡಿಗಳು, ೨ ಕಟಿಂಗ್ ಷಾಪ್, ೧೫ ಜನ ಕಾರ್ಪೆಂಟರಿ ವರ್ಕ್, ೧ ಮೋಟಾರ್ ವೆಲ್ಡಿಂಗ್, ೪ ಹೋಟೆಲ್‌ಗಳು, ಗ್ಯಾರೇಜ್‌ಗಳಿವೆ. ಪೋಟೋ ಷಾಪ್, ಧಾರ್ಮಿಕವಾಗಿ ಕಣಿವೆ ಮಾರಕ್ಕ, ಏಳೂರು ಕರಿಯಮ್ಮನ ಪೌಳಿಗಳಿವೆ. ಬೇವು–ಅರಳಿ ಪೂಜಿತ ಒಂದು ಅರಳಿ ಕಟ್ಟೆ ಇದೆ. ನಾಗರಕಲ್ಲುಗಳಿದ್ದು ಪೂಜಿಸಲಾಗುತ್ತಿದೆ. ಒಂದು ಉಪ ಅರಣ್ಯ ಅಧಿಕಾರಿಯ ಕಾರ್ಯಾಲಯವಿದೆ.

ಕಣಿವೆ ಮಾರಕ್ಕ, ಏಳೂರು ಕರಿಯಮ್ಮನ ಊರ ಹಬ್ಬ ವಿಶೇಷವಾಗಿರುತ್ತದೆ. ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯವಿದೆ. ಪಟ್ಟನಾಯಕನಹಳ್ಳಿಗೆ ಇಲ್ಲಿನ ನಂಜಪ್ಪನ ಮಠದ ಕಮಾನು ನಿರ್ಮಿಸಲಾಗಿದೆ. ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ. ಶ್ರಾವಣ, ಹಾಗೂ ಕಾರ್ತೀಕ ಮಾಸದಲ್ಲಿ ಶನಿದೇವರ ಕಥೆ, ಆರತಿ, ಕಾರ್ತಿಕ ದೀಪೋತ್ಸವ ಆಚರಣೆ ಸಂಪ್ರದಾಯವಿದೆ.

## ಪುರಲೇಹಳ್ಳಿ

ಪುರಲೇಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೧೬.೫ ಕಿ.ಮೀ. ದೂರದಲ್ಲಿದೆ. ಇದೊಂದು ಮೊಸರುಕುಂಟೆ ಕಂದಾಯ ಗ್ರಾಮಕ್ಕೆ ಮಜರೆ ಗ್ರಾಮವಾಗಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ಮೂಲ ಗ್ರಾಮ ಮೊಸರುಕುಂಟೆಯಲ್ಲಿ ಸೇರಿದ್ದು, ೭೫೮ ಹೆಕ್ಟೇರ್ ಹೊಂದಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ಬಿಳಿ ಸಣ್ಣ ಕಲ್ಲುಗಳ ನೆಲವಾಗಿದೆ.

ಪುರಲೆಹುಲ್ಲು ಗಿಡಗಳ ಭೂಪ್ರದೇಶವಾಗಿದ್ದ ಕಾರಣದಿಂದಾಗಿ ಇಲ್ಲಿ ಗ್ರಾಮ ರಚನೆಯಾದಾಗ ಪುರಲೇಹಳ್ಳಿ ಎಂದಾಗಿದೆ.

ಕುರುಚಲು ಕಾಡು, ಪೊದೆಗಳಿಂದ ಕೂಡಿದೆ. ಹಾಗಾಗಿಯೇ ಕೆಲಭಾಗದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಮುಂಗುಸಿ, ಕಾಡುಹಂದಿ, ಕಾಡುಪ್ರಾಣಿಗಳು ಕಂಡು ಬರುತ್ತವೆ.

ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ. ಸರಾಸರಿ ೪೬೪ ಮಿ.ಮೀ. ಮಳೆಯ ಪ್ರಮಾಣ ಹೊಂದಿರುವ ಈ ಗ್ರಾಮದಲ್ಲಿ ಚಳಿಯೂ ಹೆಚ್ಚು. ೧೨ ಸೆಂ.ಚಳಿ ಇದ್ದರೆ, ಬಿಸಿಲಿನ ತಾಪಮಾನ ೩೮ ಸೆಂ. ಇರುತ್ತದೆ. ಪುರಲೇಹಳ್ಳಿ ಪೂರ್ವಕ್ಕೆ ಒಂದು ಕೆರೆ ಇದ್ದು, ದಕ್ಷಿಣಕ್ಕೆ ಸಣ್ಣ ಹಳ್ಳವಿದೆ. ಆದರೂ ಕುಡಿಯುವ ನೀರಿಗೆ ತೊಂದರೆ ಇದ್ದು, ಮೊಸರು ಕುಂಟೆಯಿಂದ ಪೈಪ್‌ಲೈನ್ ಮೂಲಕ ನೀರು ಹರಿಸಿ, ಗ್ರಾಮದಲ್ಲಿ ೭ ನಲ್ಲಿಗಳಿವೆ. ಎರಡು ಕೈ ಪಂಪುಗಳಿವೆ.

ಬೇಡ ಜನಾಂಗ ದೊಡ್ಡ ಸಮುದಾಯವಾಗಿದ್ದು, ಆದಿ ದ್ರಾವಿಡ, ಗೊಲ್ಲ, ಕುಂಚಿಟಿಗ, ಸಣ್ಣ ದೊಡ್ಡ ಸಮುದಾಯವಾಗಿದೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಒಟ್ಟು ೯೫ ಮನೆಗಳಿದ್ದು, ೪೮ ಮನೆಗಳಲ್ಲಿ ಮಾತ್ರ ಶಾಚಾಲಯದ ಬಳಕೆಯಿದೆ. ೩೯೬ ಜನಸಂಖ್ಯೆ ಹೊಂದಿದೆ.

ಪ್ರಮುಖ ಆಹಾರ ಪದ್ಧತಿ ರಾಗಿ ಮುದ್ದೆ. ಬಳಸುವವರಿದ್ದಾರೆ. ಅನ್ನ, ರೊಟ್ಟಿ ಆಹಾರವಾಗಿ ಬಳಸುತ್ತಾರೆ. ಜೊತೆಗೆ ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹೋಳಿಗೆ ಭೋಜನವೂ ಇರುತ್ತದೆ.

ಸಾಂಪ್ರದಾಯಿಕವಾಗಿ ಟ್ರ್ಯಾಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರವಾಹನಗಳನ್ನು ಬಳಸುತ್ತಾರೆ. ಮುಖ್ಯ ಬೆಳೆ ಶೇಂಗಾ. ಆಹಾರ ಬೆಳೆಗಳಾಗಿ ರಾಗಿ, ಭತ್ತ, ಅಲಸಂದಿ, ತೊಗರಿ. ಈರುಳ್ಳಿ ಬೆಳೆಯೂ ಇದೆ. ಶೇಂಗಾ ಹಾಗೂ ಹುಣಸೇಹಣ್ಣು ವಾಣಿಜ್ಯ ಬೆಳೆಯಾಗಿದೆ. ಬೀಡಿ ಸುತ್ತುವುದು ಇದೆ.

ಸಿರಾ ವಿಧಾನಸಭೆ, ತಾವರೆಕೆರೆ ಜಿಲ್ಲಾಪಂಚಾಯಿತಿ, ಹಾಗೂ ತಾಲ್ಲೂಕು ಪಂಚಾಯಿತಿ, ತಾವರೇಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಈ ಗ್ರಾಮ, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ.

೩ ಸ್ತ್ರೀ ಶಕ್ತಿ ಸಂಘ, ಒಂದು ಧರ್ಮಸ್ಥಳ ಸ್ವಸಹಾಯ ಗುಂಪು ಇದೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಕಿರಿಯ ಪಾಠಶಾಲೆಯಿದ್ದು, ಗ್ರಾಮದ ಸಾಕ್ಷರತಾ ಪ್ರಮಾಣ ೫೪.೮ ರಷ್ಟಿದೆ. ಮಹಿಳೆಯರು ೪೧.೩, ಪುರುಷರು ೬೭.೪ ರಷ್ಟಿದ್ದಾರೆ. ಶಾಲೆಯಲ್ಲಿ ಸಮುದಾಯ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನ ಫಲಾನುಭವಿಗಳಿದ್ದು, ೨ ಚಿಕ್ಕ ಅಂಗಡಿಗಳಿವೆ. ಭೂತಪ್ಪ, ಹಾಗೂ ಕಣಿವೆ ಮಾರಮ್ಮನ ದೇವಾಲಯಗಳಿವೆ. ಕಣಿವೆ ಮಾರಕ್ಕನ ವಿಶೇಷ ಪೂಜೆ, ದೇವರು ಕುಣಿಸುವುದು ನಾಯಕ ಜನಾಂಗದವರು ಮಾಡುತ್ತಾರೆ. ದೇವರು ಕುಣಿಸೋ ರಂಗನಾಥಪ್ಪ, ಕುದುರೆ ಕುಣಿಸೋ ಗೋವಿಂದಪ್ಪ ಕೈವಾರದ ಹನುಮಂತರಾಯಪ್ಪ, ಭೋಜಣ್ಣ ದೇವರ ಉಸ್ತುವಾರಿ ನೋಡಿಕೊಳ್ಳುವ ಗ್ರಾಮದ ಹಿರಿಯರು. ಕಣಿವೆ ಮಾರಕ್ಕನ ಜಾತ್ರೆ ಮೇ ತಿಂಗಳಲ್ಲಿ ನಡೆದು ಊರ ಹಬ್ಬವಾಗಿರುತ್ತದೆ. ಆರತಿ, ಬಾನ, ಬ್ಯಾಟೆ ಏರ್ಪಡುತ್ತದೆ. ಅಕ್ಟೋಬರ್ ಮಾಸದಲ್ಲಿ ಭೂತಪ್ಪನ ಉತ್ಸವ ಊರ ಹಬ್ಬದ ಮಾದರಿಯಲ್ಲಿ ಜರುಗುತ್ತದೆ. ಸಿರಾ, ತಾವರೆಕೆರೆ, ಹೊಸೂರು ಜಿಲ್ಲಾ ಮುಖ್ಯ ರಸ್ತೆ ಇದ್ದು, ಕೆಎಸ್‌ಆರ್‌ಟಿಸಿ ಬಸ್ ಸಂಚಾರವಿರುತ್ತದೆ. ಕಾಡುಗೊಲ್ಲರ ಸೋಬಾನೆ ಈರಜ್ಜಿ, ಹೊಲೆಯರ ನರಸಜ್ಜಿ ಸೋಬಾನೆ ಕಲಾವಿದರು. ಹೊಲೆಯರ ಚಿಕ್ಕೋಬಣ್ಣ, ಗಿರಿಯಣ್ಣ, ನಾಗಣ್ಣ ಉರುಮೆ ವಾದ್ಯ ಕಲಾವಿದರಾಗಿ ಸ್ಥಳೀಯವಾಗಿ ಹೆಸರು ಮಾಡಿದ್ದಾರೆ. ಯುಗಾದಿ, ದೀಪಾವಳಿ, ದಸರಾ ಹಾಗೂ ಶಿವರಾತ್ರಿ, ರಾಮನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಪೂಜಾರ್ ಮುದ್ದನಹಳ್ಳಿ

ಈ ಗ್ರಾಮವು ಕಂದಾಯ ಗ್ರಾಮವಾಗಿದ್ದು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೧ ಕಿ.ಮೀ. ದೂರದಲ್ಲಿದೆ. ಒಟ್ಟು ೨೦೦.೨೭ ಹೆಕ್ಟೇರ್ ಭೌಗೋಳಿಕ ವಿಸ್ತೀಣ ಹೊಂದಿದೆ. ದಟ್ಟ ಬಯಲು ಸೀಮೆ ಪ್ರದೇಶವಾಗಿದೆ. ೪೮೦ ಸೆಂ.ಮೀ. ವಾರ್ಷಿಕ ಮಳೆ ಬೀಳುವುದರಿಂದ ಅಷ್ಟೇನೂ ಪ್ರಯೋಜನವಾಗದೆ, ನೀರಾವರಿಗೆ ಕೊಳವೆ ಬಾವಿಗಳ ಆಶ್ರಯ ಪಡೆದಿರುವುದು ಕಂಡು ಬರುತ್ತದೆ. ಸರಾಸರಿ ಬಿಸಿಲು ೩೮ ಸೆಂ. ಇದ್ದು ಚಳಿ ೯–೧೧ ಸೆಂ.ಇರುತ್ತದೆ. ಅರಸೀಕೆರೆಯ ಮುದ್ದಮ್ಮ ದೇವತೆಯ ಪೂಜಾರಿ ಮನೆತನದ ಮುದ್ದಣ್ಣ ಎಂಬ ವ್ಯಕ್ತಿ ಅರಸೀಕೆರೆಯಿಂದ ಬಂದು, ಈ ಗ್ರಾಮದಲ್ಲಿ ನೆಲೆಸಿದ್ದರಿಂದ, ಈ ಗ್ರಾಮಕ್ಕೆ ಪೂಜಾರಿ ಮುದ್ದನಹಳ್ಳಿ ಎಂದು ಕರೆಯಲಾಯಿತೆಂದು ರಾಮಚಂದ್ರ ಹೇಳುತ್ತಾರೆ.

ಸಿರಾ–ಅಮರಾಪುರ ರಸ್ತೆಯಲ್ಲಿ ಇದೇ ಗ್ರಾಮದ ಹೆಸರಿನ ತಿರುವು ಕ ಚ್ಚಾ ರಸ್ತೆಯಿಂದ ಒಂದು ಕಿ.ಮೀ. ದೂರದಲ್ಲಿರುವ ಪೂಜಾರಿ ಮುದ್ದನಹಳ್ಳಿ, ಕೆಂಪು–ಮರಳು ಮಿಶ್ರಿತ ಮಣ್ಣಿನಿಂದ ಕೂಡಿದ್ದು, ಶೇಂಗಾ, ರಾಗಿ, ಮೆಕ್ಕೆ ಜೋಳ, ನವಣೆ ಈ ಬೆಳೆಗಳಿಗೆ ಪ್ರಶಸ್ತವಾಗಿದೆ.

ಗ್ರಾಮದ ಮುಖ್ಯ ಬೆಳೆಗಳೂ ಇವೆ. ಗ್ರಾಮದ ಉತ್ತರ ಮತ್ತು ಪೂರ್ವಕ್ಕೆ ದೊಡ್ಡ ಗುದ್ದರಹಳ್ಳಿ ಮತ್ತು ಚಿಲುಮೆಹಳ್ಳ ಎಂಬ ಎರಡು ಹಳ್ಳಗಳಿದ್ದು, ಮಳೆಗಾಲದಲ್ಲಿ ಮಾತ್ರ ನೀರು ಇದ್ದು, ನಂತರ ಇಂಗಿ ಹೋಗುತ್ತದೆ. ಒಂದು ಗೋಕಟ್ಟೆ, ಎಂಟು ಸೇದುವ ಬಾವಿಗಳಿದ್ದು ಅವೆಲ್ಲವೂ ಬತ್ತಿ ಹೋಗಿವೆ. ಸದ್ಯ ೨ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರನ್ನು ಪೂರೈಸಿಕೊಳ್ಳಲಾಗುತ್ತಿದೆ.

೨೮೩ ಜನಸಂಖ್ಯೆ ಇದೆ. ಕುಂಚಿಟಿಗ ಜನಾಂಗದ ದೊಡ್ಡ ಸಮುದಾಯವಾಗಿದ್ದು, ಬಲಿಜಿಗರು ಸಣ್ಣ ಸಮುದಾಯವಾಗಿದೆ. ಉಳಿದಂತೆ ಆದಿಕರ್ನಾಟಕ, ಆದಿದ್ರಾವಿಡ, ಮಡಿವಾಳ ಜನಾಂಗದವರಿದ್ದಾರೆ. ಒಟ್ಟು ಮನೆಗಳು ೫೦. ಕಾಂಕ್ರೀಟ್, ಕಡಪ ಕಲ್ಲಿನ, ಆರ್.ಸಿ.ಸಿ. ಮಣ್ಣಿನ ಹಾಗೂ ಮಂಗಳೂರು ಹೆಂಚಿನ ಮನೆಗಳಿದ್ದು, ಇಂದಿರಾ ಆವಾಸ್, ಜನತಾ, ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳಿದ್ದಾರೆ. ಮೂರು ಮನೆಗಳಲ್ಲಿ ಶೌಚಾಲಯ ಬಳಕೆ ಇದೆ.

ರಾಗಿ ಮುದ್ದೆ ಅನ್ನ ಈ ಗ್ರಾಮದ ಮುಖ್ಯ ಆಹಾರವಾಗಿದ್ದು, ರೊಟ್ಟಿ, ಚಿತ್ರಾನ್ನ, ಉಪ ಆಹಾರವಾಗಿ ಬಳಸುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹೋಳಿಗೆ ಊಟವಿರುತ್ತದೆ. ಎತ್ತಿನಬಂಡಿ, ಗ್ರಾಮದ ಸಾಂಪ್ರದಾಯಿಕ ವಾಹನವಾಗಿದ್ದು ಗ್ರಾಮದಲ್ಲಿ ಆರು ಬಂಡಿಗಳಿವೆ. ಉಳಿದಂತೆ ಟೆಂಪೋ, ಸ್ಕೂಟರ್ ಬಳಕೆಯಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ, ನಾದೂರು ಜಿಲ್ಲಾ ಪಂಚಾಯಿತಿ, ಹಂದಿಕುಂಟೆ ತಾಲ್ಲೂಕು ಪಂಚಾಯಿತಿಗೆ ಸೇರುವ ಈ ಗ್ರಾಮದಲ್ಲಿ ನರಸಿಂಹಯ್ಯ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ, ಭಾಗ್ಯಮ್ಮ ಹಂದಿಕುಂಟೆ ಗ್ರಾಮ ಪಂಚಾಯಿತಿ ಅಧ್ಯಕ್ಷರೂ ಆಗಿದ್ದರು. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಒಟ್ಟು ೩ ಜನ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಗ್ರಾಮದ ಸಾಕ್ಷರತೆ ಪ್ರಮಾಣ ಪುರುಷರು ೭೪, ಮಹಿಳೆಯರು ೫೨ ರಷ್ಟು ಇದ್ದಾರೆ. ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ ಸೌಲಭ್ಯ ಪಡೆದವರಿದ್ದು ಒಂದು ಕಿರಾಣಿ ಅಂಗಡಿ ಇದೆ.

ಬೇವಿನಳಮ್ಮ ತಾಯಿ ಮುದ್ದಮ್ಮ, ಮುತ್ತುರಾಯಸ್ವಾಮಿ ದೇವಾಲಯಗಳಿದ್ದು, ಬೇವಿನಳ್ಳಮ್ಮ ದೇವಿಯ ಜಾತ್ರೆ ಐದು ವರ್ಷಗಳಿಗೊಮ್ಮೆ ವಿಜೃಂಭಣೆಯಿಂದ ನಡೆಯುತ್ತದೆ. ತಾಯಿ ಮುದ್ದಮ್ಮನ ಬೆಣಚುಕಲ್ಲಿನ ವಿಗ್ರಹವಿದ್ದು, ಸಾಂದರ್ಭಿಕ ವಾಗಿ ಪೂಜೆ ನಡೆಯುತ್ತದೆ. ಗ್ರಾಮದ ಹಿರಿಯರು ಹಾಗೂ ನಿವೃತ್ತ ಶಿಕ್ಷಕ ಶಿವಲಿಂಗಪ್ಪ ಅವರು ಧಾರ್ಮಿಕ ಅಸಕ್ತರಾಗಿದ್ದು, ಶ್ರೀ ಸಿದ್ಧಾರೂಢ ಮಠ ಸ್ಥಾಪಿಸಿಕೊಂಡು ಧಾರ್ಮಿಕ ಮಾರ್ಗದರ್ಶನ ಮಾಡುತ್ತಿದ್ದಾರೆ. ಪೂರ್ಣಿಮೆ ಸಂದರ್ಭದಲ್ಲಿ ವಿಶೇಷ ಭಜನೆ, ಪೂಜೆ, ಸತ್ಸಂಗ, ಅನ್ನ ಸಂತರ್ಪಣೆ ತಪ್ಪದೆ ನಡೆಯುತ್ತದೆ. ಶಿಕ್ಷಕ ಚಿದಾನಂದ ಭಾರತಿ ಧಾರ್ಮಿಕ ಸಂಘಟಕರಾಗಿದ್ದಾರೆ.

ಶಿಕ್ಷಕರು, ತಂತಿ ಇಲಾಖೆ ಸೇರಿದಂತೆ ೩ ಜನ ಸರ್ಕಾರಿ ನೌಕರರಿದ್ದಾರೆ. ಈ ಗ್ರಾಮದ ಪುಟ್ಟವೀರಪ್ಪ ಎಂಬ ಹಿರಿಯ ಸಹಕಾರಿ, ಶಿಕ್ಷಣ, ಬ್ಯಾಂಕ್ ಸಂಸ್ಥೆಗಳನ್ನು ತುಮಕೂರು ನಗರದಲ್ಲಿ ಸ್ಥಾಪಿಸಿದ್ದಾರೆ. ಬೇವಿನಳ್ಳಮ್ಮ ದೇವಾಲಯ ಸೇರಿದಂತೆ ಗ್ರಾಮದ ಪ್ರಗತಿಗೆ ಶ್ರಮಿಸುತ್ತಿದ್ದಾರೆ. ನರಸಿಂಹಯ್ಯನವರೂ ಇವರಿಗೆ ಜೊತೆ ಜೊತೆಯಾಗಿ ಸಹಕರಿಸುತ್ತಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯ ಹೊಂದಿದೆ. ರಂಗಮ್ಮ, ನರಸಮ್ಮ, ಮಲ್ಲಣ್ಣ, ತಿಮ್ಮಯ್ಯ, ನಾಗರಾಜ್, ತತ್ವಪದಕಾರರಾಗಿ ಜಾನಪದ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಕಲಾವಿದರು. ೨ ಸ್ತ್ರೀ ಶಕ್ತಿ ಸ್ವಸಹಾಯ ಗುಂಪು ಇದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶ, ಕಾಂತಮ್ಮ, ಗೌರಮ್ಮನ ಹಬ್ಬಗಳನ್ನು ಶಿವರಾತ್ರಿ ಜಾಗರಣೆ, ಬೆಳಿಗ್ಗೆ ದೇವಾಲಯದಲ್ಲಿ ಹರಿಸೇವೆ ಸಾಮೂಹಿಕ ಭೋಜನದ ವ್ಯವಸ್ಥೆ ಇರುತ್ತದೆ. ಪ್ರತಿವರ್ಷವೂ ಸಿದ್ಧಾರೂಢ ಮಹಾತ್ಮೆ ನಾಟಕ ಅಭಿನಯಿಸುವುದು ಈ ಗ್ರಾಮದ ವಿಶೇಷ.

## ಪೂಜಾರ್ ಮುದ್ದನಹಳ್ಳಿ ಗೇಟ್ ಕಾಲೋನಿ

ಪೂಜಾರ್ ಮುದ್ದನಹಳ್ಳಿ ಗೇಟ್, ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಸಿರಾ–ಬರಗೂರು ರಸ್ತೆಯಲ್ಲಿ ೨೦ ಕಿ.ಮೀ. ದೂರದಲ್ಲಿದೆ. ಇದು ಹೊಸದಾಗಿ ಬೇರೆ ಬೇರೆ ಮೂಲಗಳಿಂದ ಬಂದು ವಸತಿ ಮಾಡಿಕೊಂಡು ಒಂದು ಗ್ರಾಮದ ಸ್ವರೂಪ ಪಡೆದಿದೆ. ಸಿರಾ ಶಾಸಕರಾಗಿದ್ದ ಪಿ.ಎಂ. ರಂಗನಾಥ ಪುನರರು ಇಲ್ಲಿನ ಜಮೀನಿನಲ್ಲಿ ಮನೆ ಕಟ್ಟಿಕೊಳ್ಳಲು ಹಕ್ಕು ಪತ್ರ, ವಿದ್ಯುತ್ ಸೌಲಭ್ಯ ನೀಡಿದುದರಿಂದ ಲಿಖಿತವಾಗಿ ರಂಗನಾಥಪ್ಪ ಕಾಲೋನಿ ಎಂದು ಕರೆದರು. ಪೂಜಾರ್ ಮುದ್ದನಹಳ್ಳಿ ಗೇಟ್ ಕಾಲೋನಿ ಎಂದೆ ಕರೆಯುತ್ತಾರೆ.

ಇದು ಪೂಜಾರ್ ಮುದ್ದನಹಳ್ಳಿ ಉಪಗ್ರಾಮವಾಗಿದ್ದು ಇದರ ಒಟ್ಟು ಭೌಗೋಳಿಕ ವಿಸ್ತೀಣ ೨೦೦.೭೭ ಹೆಕ್ಟೇರ್ ಹೊಂದಿದೆ.

ದಟ್ಟ ಬಯಲು ಸೀಮೆ ಪ್ರದೇಶವಾಗಿದೆ. ೪೮೦ ಸೆಂ.ಮೀ. ವಾರ್ಷಿಕ ಮಳೆ ಬೀಳುವುದರಿಂದ ಅಷ್ಟೇನೂ ಪ್ರಯೋಜನವಾಗದೆ, ನೀರಾವರಿಗೆ ಕೊಳವೆ ಬಾವಿಗಳ ಆಶ್ರಯ ಪಡೆದಿರುವುದು ಕಂಡು ಬರುತ್ತದೆ. ಸರಾಸರಿ ಬಿಸಿಲು ೩೮ ಸೆಂ. ಇದ್ದು ಚಳಿ ೯–೧೧ ಸೆಂ.ಇರುತ್ತದೆ. ಅರಸೀಕೆರೆಯ ಮುದ್ದಮ್ಮ ದೇವತೆಯ ಪೂಜಾರಿ ಮನೆತನದ ಮುದ್ದಣ್ಣ ಎಂಬ ವ್ಯಕ್ತಿ ಅರಸೀಕೆರೆಯಿಂದ ಬಂದು, ಈ ಗ್ರಾಮದಲ್ಲಿ ನೆಲೆಸಿದ್ದರಿಂದ, ಈ ಗ್ರಾಮಕ್ಕೆ ಪೂಜಾರಿ ಮುದ್ದನಹಳ್ಳಿ ಎಂದು ಕರೆಯಲಾಗುವುದೆಂದು ರಾಮಚಂದ್ರ ಹೇಳುತ್ತಾರೆ.

ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದು, ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಉಡ, ಮುಂಗುಸಿ, ಕಾಡು ಬೆಕ್ಕು ಕಂಡು ಬಂದರೆ, ಗ್ರಾಮದಲ್ಲಿ ಹಸು, ಕುರಿ, ಹಂದಿ ಸಾಕುಪ್ರಾಣಿಗಳಾಗಿವೆ. ಸಾಕು ಪಕ್ಷಿಗಳಾದ ನಾಟಿ ಹಾಗೂ ಗಿರಿರಾಜ ಕೋಳಿಗಳಿವೆ.

ವಾರ್ಷಿಕ ೪೮೦ ಮಿ.ಮೀ ಮಳೆ ಬೀಳುತ್ತಿದ್ದು, ಬಿಸಿಲು ೩೧೨ ಸೆಂ. ಇದ್ದರೆ ಚಳಿ ೧೨ ಸೆಂ. ಇರುತ್ತದೆ. ಗ್ರಾಮ ಪಂಚಾಯಿತಿ ವತಿಯಿಂದ ಕೈ ಪಂಪು ಮೂಲಕ ಕುಡಿಯುವ ನೀರನ್ನು ಪೂರೈಸಿಕೊಳ್ಳಲಾಗುತ್ತಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕೊರಚರು, ಹಂದಿಜೋಗಿಗಳು, ದೊಡ್ಡ ಸಮುದಾಯವಾಗಿವೆ. ಹಕ್ಕಿ ಪಿಕ್ಕರು ಕಿರುಸಮುದಾಯವಾಗಿದೆ. ಒಟ್ಟು ಮನೆಗಳು ೨೪

ಇದ್ದು ಹೆಂಚಿನ, ಶೀಟಿನ, ಹಾಗೂ ೬ ಗುಡಿಸಲು ಮನೆಗಳಾಗಿವೆ. ೯೮ ಜನರ ಸಂಖ್ಯೆ ಹೊಂದಿದೆ. ಹಾಗೂ ಆಶ್ರಯ ಬಸವ ವಸತಿ ಯೋಜನೆಯಲ್ಲಿ ಸಹಾಯ, ಭಾಗಜ್ಯೋತಿ ವಿದ್ಯುತ್ ಸಂಪರ್ಕ ಪಡೆದಿದ್ದಾರೆ. ಬಯಲು ಶೌಚಾಲಯವನ್ನೇ ಬಳಸುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಗಿ ಮುದ್ದೆ ಈ ಗ್ರಾಮದ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ, ಬಳಸುವವರಿದ್ದಾರೆಬಳಸುತ್ತಾರೆ. ಬೇಟೆ ಹವ್ಯಾಸವಾಗಿದ್ದು, ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹೋಳಿಗೆ ಊಟವಿರುತ್ತದೆ. ಕೂಲಿ, ಭಿಕ್ಷಾಟನೆ, ಹಂದಿ ಮೇಯಿಸುವುದು ಇವರ ಮುಖ್ಯ ಕಾಯಕವಾಗಿದೆ. ಕುರಿ ಸಾಕಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ, ಹಂದಿಕುಂಟೆ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತ ಕೇಂದ್ರವಾಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ನಾದೂರು ಅಂಚೆ ಸಂಪರ್ಕ ಹೊಂದಿದ್ದು, ಸಿರಾ ತಾಲ್ಲೂಕು ಕಛೇರಿ ಪಟ್ಟನಾಯಕನಹಳ್ಳಿ ಪೋಲೀಸ್ ಠಾಣೆಗೆ ಹೋಗಬೇಕಾಗಿದೆ. ಸಿರಾ–ಅಮರಾಪುರ ರಸ್ತೆ ಖಾಸಗಿ, ಆಂಧ್ರ, ಕರ್ನಾಟಕ ಎರಡೂ ರಾಜ್ಯಗಳ ಬಸ್ ಸೌಲಭ್ಯವಿದೆ. ಸರ್ಕಾರಿ ಪ್ರಾಥಮಿಕ ಶಾಲೆಯಿದ್ದು ೨೩ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಉತ್ತಮ ಕಾಂಪೌಂಡ್ ಸೌಕರ್ಯ ಹೊಂದಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ ಫಲಾನುಭವಿಗಳಿದ್ದು, ಒಂದು ಪೆಟ್ಟಿಗೆ ಅಂಗಡಿ, ಟೀ ಅಂಗಡಿ ಇದ್ದು ಬಸ್ ನಿಲ್ದಾಣದ ಬಳಿ ಪ್ರವಾಸಿ ವಿಶ್ರಾಂತಿ ಧಾಮವಿದೆ.

ಇಲ್ಲಿ ಮಾರಮ್ಮ, ಸಾಕ್ಷಿಹಳ್ಳಿ ಮಣ್ಣಮ್ಮ, ಹಾಗೂ ನಾಯಕನಹಟ್ಟಿ ತಿಪ್ಪೇಸ್ವಾಮಿಗೆ ನಡೆದುಕೊಳ್ಳುತ್ತಾ ಆ ದೇವರಿಗೆ ಬಲಿ, ಆರತಿ ಅರ್ಪಿಸುತ್ತಾರೆ. ಶಿವರಾತ್ರಿ, ಯುಗಾದಿ, ಗೌರಿ–ಗಣೇಶ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಪಿನ್ನಿಹೊಳೆ

ಪಿನ್ನಿಹೊಳೆ, ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೬ ಕಿ.ಮೀ. ದೂರದಲ್ಲಿದೆ. ಸಿರಾ, ಹಿರಿಯೂರು ರ್‍ಾಷ್ಟ್ರೀಯ ಹೆದ್ದಾರಿಯಲ್ಲಿ ಮಾರನಗೆರೆಯಿಂದ ಬಲಕ್ಕೆ ಒಂದು ಕಿ.ಮೀ. ದೂರದಲ್ಲಿ ಈ ಗ್ರಾಮವಿದೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೧೭೯.೧೨ ಹೆಕ್ಟೇರ್ ಆಗಿದೆ. ಬಯಲು ಪ್ರದೇಶ ಹಳ್ಳ, ದಿಣ್ಣೆ, ಕುರುಚಲು ಗಿಡ, ಪೊದೆ ಪ್ರದೇಶವಾಗಿದೆ. ಕಪ್ಪು ಮಿಶ್ರಿತ ಮರಳು ಮಣ್ಣು ಹೊಂದಿದೆ. ಒಂದು ಕಟ್ಟೆಯಿದ್ದು, ನೀರು ತುಂಬುವುದು ಅಪರೂಪವಾಗಿದೆ. ಸುವರ್ಣ ಮುಖಿ ಹೊಳೆ ಹರಿಯುತ್ತದೆ. ಈ ಹೊಳೆಯ ಕಾರಣದಿಂದಲೇ ತಿಳಿ ನೀರಿನ ಹೊಳೆ ಪನ್ನೀರ್ ಆಗಿ ಜನಪದರು ಪನ್ನಿ ಹೊಳೆ ಎಂದು ಕರೆದಿರುವ ಸಾಧ್ಯತೆಗಳಿವೆ ಎಂದು ನಾಗರಾಜ್ ವ್ಯಾಖ್ಯಾನಿಸಿರುತ್ತಾರೆ. ಈ ಪರಿಸರದಲ್ಲಿ ಕುರಿ, ಮೇಕೆ, ಹಸುಗಳಿದ್ದು, ಕೋಳಿಯನ್ನು ಸಾಕಲಾಗಿದೆ. ನರಿ, ಮೊಲ, ಜಿಂಕೆ, ಉಡ, ಕಾಡು, ಹಂದಿ, ಕಂಡು ಬರುತ್ತವೆ. ಗಿಳಿ, ನವಿಲು, ಗೊರವಂಕ, ಕೋಗಿಲೆ, ಗರುಡ, ಗುಬ್ಬಚ್ಚಿ, ಬಾವಲಿ, ಹದ್ದು ಮೊದಲಾದ ಕಾಡು ಪಕ್ಷಿಗಳು ಕಂಡು ಬರುತ್ತವೆ.

ಮಳೆ ಪ್ರಮಾಣ ಕಳೆದ ಐದು ವರ್ಷಗಳಲ್ಲಿ ವಾಡಿಕೆಗಿಂತ ಕಡಿಮೆಯಾಗಿದೆ. ವಾರ್ಷಿಕ ೫೫೨ ಮಿ.ಮೀ. ಮಳೆ ಬಿದ್ದಿದ್ದು, ಬಿಸಿಲು ೩೧೨ ಸೆಂ. ಇದೆ. ಚಳಿ ೧೨ ಸೆಂ.ಇರುತ್ತದೆ. ರೈತಾಪಿ ಜನ ಕಿರು ನೀರಾವರಿಯಾಗಿ ೧೮ ಕೊಳವೆ ಬಾವಿಗಳ ಮೂಲಕ ತೋಟಗಾರಿಕೆ ಮಾಡುತ್ತಿದ್ದಾರೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ೨ ಸಿಸ್ಟನ್‌ಗಳಿದ್ದು, ೧ ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಲಂಬಾಣಿ ಜನಾಂಗ ದೊಡ್ಡ ಸಮುದಾಯವಾಗಿದ್ದು, ವೀರಶೈವರೂ, ಬೇಡರು, ಮಡಿವಾಳರು ಕಿರು ಸಮುದಾಯಗಳಿವೆ. ಕನ್ನಡ ಮಾತೃ ಭಾಷೆಯಾಗಿದ್ದು, ಲಂಬಾಣಿ ಭಾಷೆಯನ್ನು ಮಾತನಾಡುತ್ತಾರೆ. ಇಲ್ಲಿ ಹೆಂಚಿನ, ಶೀಟಿನ ಒಟ್ಟು ೨೧ ಮನೆಗಳಿದ್ದು, ೧೧೧ ಜನ ಸಂಖ್ಯೆ ಹೊಂದಿದೆ. ಈ ಮನೆಗಳು ಇಂದಿರಾ ಆವಾಸ್, ಆಶ್ರಯ ವಸತಿ ಯೋಜನೆ ಹಾಗೂ ಉಚಿತ ಭಾಗ್ಯಲಕ್ಷ್ಮಿ ವಿದ್ಯುತ್ ಫಲಾನುಭವಿ ಗಳಿದ್ದಾರೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಬಾಡೂಟ, ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಆಹಾರವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಬಂಡಿಯು, ಜೊತೆಗೆ ಆಧುನಿಕ ವಾಹನಗಳು ಟ್ರ್ಯಾಕ್ಟರ್, ಟೆಂಪೋ ಬಳಕೆ ಇದ್ದು, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ, ರಾಗಿ, ಜೋಳ, ಮುಖ್ಯ ಬೆಳೆಗಳು.
ತೋಟಗಾರಿಕೆಯಾಗಿ ತೆಂಗು, ಅಡಿಕೆ ಇದೆ. ಹತ್ತಿ, ಸೀಡ್ಸ್ ಕಲ್ಲಂಗಡಿ, ಕರ್ಬೂಜ ಬೆಳೆಯುತ್ತಿದ್ದಾರೆ. ಸೀಡ್ಸ್, ಹತ್ತಿ, ತೆಂಗು, ಶೇಂಗಾ ವ್ಯಾಪಾರಿ ಸರಕುಗಳಾಗಿದೆ.

ಸದ್ಯದಲ್ಲೇ ಹೊಳೆ ಹರಿಯುತ್ತಿದ್ದು, ಮಳೆಗಾಲದಲ್ಲಿ ಮಾತ್ರ ನೀರು ಇರುತ್ತದೆ. ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ,

ತಾವರೆಕೆರೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಹಾಗೂ ಪಂಚಾಯಿತಿ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಈಶ್ವರ, ಸೇವಾ ಲಾಲ್ ಪೌಳಿಗಳಿವೆ. ಸೇವಾಲಾಲ್ ಹಬ್ಬವನ್ನು ದೀಪಾವಳಿಯಂದು ವಿಜೃಂಭಣೆಯಿಂದ ಆಚರಿಸಲಾಗುವುದು.

ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶ, ಶಿವರಾತ್ರಿ, ಹಬ್ಬವೂ ವಿಶೇಷವಾಗಿ ಆಚರಿಸುತ್ತಾರೆ. ಗ್ರಾಮದಲ್ಲಿ ಶೈಕ್ಷಣಿಕವಾಗಿ ತಾವರೆಕೆರೆ, ಮಾರನ ಕೆರೆಗೆ ಹೋಗಬೇಕಾಗಿದ್ದು, ಶೈಕ್ಷಣಿಕ ಪ್ರಮಾಣ ೪೩.೫ ರಷ್ಟಿದೆ. ಚಿತ್ರದುರ್ಗ–ಬೆಂಗಳೂರು ರ್‍ಹಾಯ ಹೆದ್ದಾರಿಗೆ ಸಂಪರ್ಕ ಕಚ್ಚಾ ರಸ್ತೆ ಇದೆ.

## ಪಿಲ್ಲಹಳ್ಳಿ

ಪಿಲ್ಲಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೬ ಕಿಮೀ ದೂರದಲ್ಲಿದೆ. ಇದು ಹುಂಜನಾಳ ಕಂದಾಯ ಗ್ರಾಮದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೨೬೨೩.೪೩ ಹೆಕ್ಟೇರ್ ಮೂಲಗ್ರಾಮವಾದ ಹುಂಜನಾಳ ಗ್ರಾಮದೊಂದಿಗೆ ಹಂಚಿಕೆಯಾಗಿದೆ.

ಬಿಳಿ ಸಣ್ಣಕಲ್ಲಿನ ಮರಳು ಮಿಶ್ರಿತ ಬಿಳಿ ಮಣ್ಣಿನ ಭೂಮಿಯನ್ನು ಹೊಂದಿರುವ ಈ ಗ್ರಾಮದ ಪಿಳ್ಳಪ್ಪನ ಹೆಸರಿನಲ್ಲಿ ಸ್ಥಾಪನೆಗೊಂಡು ನಂತರ ಪಿಲ್ಲ ಹೆಸರಿನಲ್ಲಿ ಳ ಕಾರ ಲಕಾರಕ್ಕೆ ಪಲ್ಲಟವಾಗಿದೆ. ಜನಪದರ ಬಾಯಲ್ಲಿ ಇಂದಿಗೂ ಪಿಳ್ಳಪ್ಪ, ಪಿಲ್ಲಪ್ಪ ಸಮಾನವಾಗಿ ಬಳಕೆಯಾಗಿರುತ್ತಿರುವ ಪದಗಳಾಗಿವೆ. ಅನುಪನಕುಂಟೆ, ಬಸರಿಹಳ್ಳ, ಹುಂಜನಹಳ್ಳ ಇವುಗಳ ಸಮೀಪದಲ್ಲಿರುವ ಈ ಗ್ರಾಮದ ಪರಿಸರದಲ್ಲಿ ನರಿ, ಮೊಲ, ತೋಳ, ಜಿಂಕೆ, ಕಾಡುಬೆಕ್ಕು, ಉಡ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಕೌಜುಗ, ನವಿಲು, ಕಾಡುಕೋಳಿ, ಗಿಳಿ, ಗೂಬೆ, ಹದ್ದು, ಗರುಡ, ಗೊರವನಹಕ್ಕಿ, ಬೆಳವ ಈ ಮೊದಲಾದ ಪಕ್ಷಿಗಳಿವೆ. ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗಾಗಿ ನಾಟಿಹಸು, ಹಳ್ಳಿಕಾರ್ ಎತ್ತುಗಳನ್ನು, ಎಮ್ಮೆ, ಕುರಿ ಮೇಕೆಗಳನ್ನು, ಕೋಳಿ ಸಾಕು ಪಕ್ಷಿಯಾಗಿ ಸಾಕುತ್ತಾರೆ.

ಪಿಲ್ಲಹಳ್ಳಿ ಮರ–ಗಿಡ, ಗುಡ್ಡಗಳಿಂದ ಕೂಡಿದ ಗ್ರಾಮವಾಗಿದ್ದು ಮಳೆ ಸಾಮಾನ್ಯ. ವಾಡಿಕೆ ಮಳೆ ೪೬೫ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯುವ ನೀರಿಗೆ ಕೊಳವೆ ಬಾವಿಯ ಮೂಲಕ ನೀರನ್ನು ಟ್ಯಾಂಕ್‌ಗೆ ಹರಿಸಿ ಕೊಳಾಯಿ ಮೂಲಕ ಗ್ರಾಮಪಂಚಾಯ್ತಿಯ ವತಿಯಿಂದ ಸರಬರಾಜು ಮಾಡಲಾಗುತ್ತಿದೆ. ಗ್ರಾಮದಲ್ಲಿ ಒಟ್ಟು ೧೮ ಕೊಳವೆ ಬಾವಿಗಳಿವೆ. ಒಂದು ಕೈಪಂಪು ಇದೆ.

ಗ್ರಾಮದ ಸಾಮಾಜಿಕ ರಚನೆಯಲ್ಲಿ ಹಳ್ಳಿಕಾರ್ ಜನಾಂಗ ದೊಡ್ಡ ಸಮುದಾಯವಾಗಿದ್ದು ಬೋವಿ, ವಿಶ್ವಕರ್ಮ, ವೀರಶೈವ ಈ ಜನಾಂಗಗಳು ಸಣ್ಣ ಸಮುದಾಯಗಳಾಗಿವೆ. ಕನ್ನಡ, ತೆಲುಗು ಈ ಗ್ರಾಮದ ಸಂವಹನ ಭಾಷೆಯಾಗಿದೆ. ಒಟ್ಟು ೬೭ ಮನೆಗಳಿರುವ ಈ ಗ್ರಾಮದಲ್ಲಿ ಕಾಂಕ್ರೀಟ್, ಶೀಟಿನ, ಹೆಂಚಿನ ಸ್ವರೂಪದ ಮನೆಗಳಿದ್ದು ೩೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೪೧೨ ಜನಸಂಖ್ಯೆ ಇದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನ ಕಡಿಮೆಯಿದ್ದು (೨) ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಗ್ರಾಮದ ಮುಖ್ಯ ಬೆಳೆಯಾಗಿದ್ದು ಆಹಾರ ಬೆಳೆಯಾಗಿ ರಾಗಿ, ಅಲಸಂದೆ, ತೊಗರಿ, ಅವರೆ, ಜೋಳ ಬೆಳೆಯುತ್ತಾರೆ. ತೋಟಗಾರಿಕೆಯಾಗಿ ತೆಂಗು, ರೇಷ್ಮೆ ಅಲ್ಪ ಪ್ರಮಾಣದ ವ್ಯಾಪಾರಿ ಬೆಳೆಗಳಾಗಿವೆ. ಒಬ್ಬರು ಸರ್ಕಾರಿ ನೌಕರರಿದ್ದು ಬೀಡಿ ಸುತ್ತುವ, ಊಟದ ಎಲೆ ಸಂಗ್ರಹಿಸುವ ಕೆಲಸ ಮಾಡುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಸೀಬಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಈ ಹಳ್ಳಿ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಸಿರಾ–ಹುಂಜನಹಳ್ಳಿ ಮಾರ್ಗವಾಗಿ ಜಿಲ್ಲಾ ಪಂಚಾಯ್ತಿ ರಸ್ತೆ ಮಾರ್ಗವಿದೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳಾ ಆರ್ಥಿಕ ಸಬಲತೆಗೆ ಶ್ರಮಿಸುತ್ತವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿ ಪಾಠಶಾಲೆಯಿದ್ದು ಅಂಗನವಾಡಿಯಲ್ಲಿ ೨೩ ಹಾಗೂ ಶಾಲೆಯಲ್ಲಿ ೩೨ ಮಕ್ಕಳು ಕಲಿಯುತ್ತಿದ್ದಾರೆ. ೩ ಜನ ನೌಕರರು ಕಾರ್ಯನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಈ ಗ್ರಾಮದ ಮನೆಗಳಲ್ಲಿ ಆಶ್ರಯ, ಜನತಾ, ವಸತಿ ಸೌಲಭ್ಯ, ಭಾಗ್ಯಜ್ಯೋತಿ ವಿದ್ಯುತ್ ಫಲಾನುಭವಿಗಳಿದ್ದಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೮.೬ ರಷ್ಟಿದ್ದು ಮಹಿಳೆಯರು ತೀವ್ರ ಹಿನ್ನಡೆ ಕಂಡು ಶೇ.೩೦ ರಷ್ಟು ಪುರುಷರು ೬೦%

ಪಡೆದಿದ್ದಾರೆ. ಶೈಕ್ಷಣಿಕ ಸೌಲಭ್ಯದ ಕೊರತೆ ಇದೆ ಎಂದು ಗ್ರಾಮದ ಓಬಳನರಸಿಂಹಯ್ಯ ಕೊರಗನ್ನು ತೋಡಿಕೊಳ್ಳುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಕೊಲ್ಲಾಪುರದಮ್ಮ, ಮಾರಮ್ಮ ದೇವತೆಗಳ ಪೌಳಿಗಳಿದ್ದು ವಾರ್ಷಿಕವಾಗಿ ಊರಹಬ್ಬ ಮಾಡುತ್ತಾರೆ. ಈ ಸಂದರ್ಭದಲ್ಲಿ ಆರತಿ, ಬ್ಯಾಟೆ, ಬಾನ, ಉತ್ಸವವಿರುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ನವರಾತ್ರಿ, ಸಂಕ್ರಾಂತಿ ಹಬ್ಬಗಳ ಆಚರಣೆಯಿದೆ.

## ಪುರ

ಪುರ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿನಲ್ಲಿದೆ. ೨೬ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಬುಕ್ಕಾಪಟ್ಟಣ ಸಮೀಪದಲ್ಲಿ ರಚನೆಯಾಗಿದ್ದು, ಪಟ್ಟಣದ ಪ್ರಭಾವದಿಂದಾಗಿ ಪಟ್ಟಣಕ್ಕೆ ಸಮಾನವಾಗಿ ಪುರ ಎಂದು ಕರೆದಿದ್ದಾರೆಂದು ಶಿಕ್ಷಕ ನಾಗರಾಜು ಅಭಿಪ್ರಾಯ ಪಡುತ್ತಾರೆ. ಈ ಗ್ರಾಮವು ಕಂದಾಯ ಗ್ರಾಮವಾಗಿದೆ. ಬಯಲು ನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಈ ಪರಿಸರದಲ್ಲಿ ನರಿ, ತೋಳ, ಮೊಲ, ಹಂದಿ, ಜಿಂಕೆ ಕಂಡು ಬಂದರೆ, ಗ್ರಾಮದಲ್ಲಿ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ಸಾಕು ಪ್ರಾಣಿಗಳಾಗಿ ಸಾಕಲಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಗಿಳಿ, ಕೊಕ್ಕರೆ, ಗುಬ್ಬಚ್ಚಿ, ಗೊರವಂಕ, ಬೆಳವ, ಕಾಗೆ, ಕಂಡು ಬರುತ್ತವೆ. ಕೋಳಿ ಸಾಕು ಪಕ್ಷಿಯಾಗಿದೆ.

ಗ್ರಾಮದಲ್ಲಿ ೪೮ ಕೊಳವೆ ಬಾವಿಗಳಿದ್ದು, ಕೃಷಿಗೆ ಸಹಾಯಕವಾಗಿದೆ. ಹಾಗೂ ಇಲ್ಲಿ ಒಂದು ಕಟ್ಟೆ ಇದೆ. ವಾರ್ಷಿಕ ಮಳೆಯ ಸರಾಸರಿ ೪೬೦ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ತಾಪ ೩೭೦ ಸೆಂ. ಇದ್ದು, ಚಳಿಯು ೯೦ ಸೆಂ. ಇರುತ್ತದೆ. ಇಲ್ಲಿ ಒಂದು ಕಟ್ಟೆ ಇದೆ. ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿಯಿಂದ ಕಿರು ನೀರು ಯೋಜನೆ ಅಡಿಯಲ್ಲಿ ಕಲ್ಪಿಸಿದೆ.

ಈ ಗ್ರಾಮದಲ್ಲಿ ೧೬೧ ಮನೆಗಳಿದ್ದು, ೬೪೦ ಜನಸಂಖ್ಯೆಯನ್ನು ಹೊಂದಿದೆ. ಕನ್ನಡ ಈ ಗ್ರಾಮದ ಮಾತೃ ಭಾಷೆಯಾಗಿದೆ. ಇದರಲ್ಲಿ ಮುಸ್ಲಿಂ, ನಾಯಕ, ಬೋವಿ, ಬ್ರಾಹ್ಮಣ, ಆದಿಕರ್ನಾಟಕ ಇತ್ಯಾದಿಗಳ ಮನೆಗಳಿವೆ. ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು, ಶೇಂಗಾ ಮುಖ್ಯ ಬೆಳೆಯಾಗಿದ್ದು ಇದರೊಂದಿಗೆ ತೆಂಗು, ಅಡಿಕೆ, ರಾಗಿ, ಭತ್ತ, ಜೋಳ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಇಲ್ಲಿನ ಮನೆಗಳು ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳು ಇದ್ದು, ಅವು ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್, ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಸೌಲಭ್ಯ ಪಡೆದಿವೆ. ಗ್ರಾಮದ ಮನೆಗಳಲ್ಲಿ ೧೦೦ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಶಿಕ್ಷಕ, ಕಂದಾಯ ಸಾರಿಗೆ, ಅರಣ್ಯ ಇಲಾಖೆಯಲ್ಲಿ ೭ ಜನ ಸರ್ಕಾರಿ ಸೇವೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಕೃಷಿಕ ಕಾರ್ಮಿಕರನ್ನು ಒಳಗೊಂಡಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ಬುಕ್ಕಾಪಟ್ಟಣ ಪಂಚಾಯ್ತಿ. ತಹಶೀಲ್ದಾರ್ ಕಛೇರಿ, ಬುಕ್ಕಾಪಟ್ಟಣ ಗ್ರಾಮ ಪಂಚಾಯ್ತಿ ಆಗಿದೆ. ಇದರಲ್ಲಿ ಇಬ್ಬರು ಸದಸ್ಯರಿದ್ದಾರೆ. ಗ್ರಾಮನ್ಯಾಯ ಮಂಡಳಿಯನ್ನು ಹೊಂದಿದೆ. ಬುಕ್ಕಾಪಟ್ಟಣ ಪೋಲೀಸ್ ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ.

ಹಣಕಾಸಿನ ವ್ಯವಸ್ಥೆಗೆ ಸ್ತ್ರೀ ಶಕ್ತಿ ಸಂಘಗಳಿಂದ ಸಣ್ಣ ಉಳಿತಾಯ ಹಾಗೂ ಸಾಲ ಪಡೆಯುವವರು ವ್ಯವಹಾರ ಮಾಡುತ್ತಿದ್ದಾರೆ. ಈ ಗ್ರಾಮದಲ್ಲಿ ಅಂಗನವಾಡಿಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಒಟ್ಟಾರೆ ಶೇ. ೬೬.೯ ರಷ್ಟು ಸಾಕ್ಷರತೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ.

ಪುರ ಗ್ರಾಮವು ಕುಟುಂಬ ಕಲ್ಯಾಣವನ್ನು ಹೊಂದಿ ಗ್ರಾಮಕ್ಕೆ ಆಶಾಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸರ್ಕಾರದ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದು ಈ ಗ್ರಾಮದಲ್ಲಿ ಚಿಲ್ಲರೆ ವ್ಯಾಪಾರದ ೦೮ ಅಂಗಡಿಗಳನ್ನು ಹೊಂದಿದೆ.

ಈ ಗ್ರಾಮದಲ್ಲಿ ಧಾರ್ಮಿಕ ಕೇಂದ್ರಗಳಾದ ಈಶ್ವರ, ತಿಮ್ಮಪ್ಪ, ಭೂತಪ್ಪ, ಮಸೀದಿ, ಆಂಜನೇಯ ದೇವಾಲಯಗಳನ್ನು ಹೊಂದಿದೆ. ವರ್ಷಕ್ಕೊಮ್ಮೆ ತಿಮ್ಮಪ್ಪ ಮತ್ತು ಆಂಜನೇಯ ಜಾತ್ರೆಯನ್ನು ಮಾಡುತ್ತಾರೆ. ಯುಗಾದಿ, ದಸರಾ, ರಂಜಾನ್, ಈದ್ ಮಿಲಾದ್, ಹಾಗೂ ಶಿವರಾತ್ರಿ ಹಬ್ಬಗಳನ್ನು ಮಾಡುತ್ತಾರೆ.

ಸಾಂಸ್ಕೃತಿಕ ಕ್ಷೇತ್ರದಲ್ಲಿ ರಂಗಭೂಮಿ ಕಲೆಯ ರಂಗನಾಥಪ್ಪ ರಾಜೀವ್ ಗಾಂಧಿ ಕ್ರೀಡಾ ಸಂಘದಲ್ಲಿ ಓಂಕಾರಮೂರ್ತಿ ಮತ್ತು ತಂಡವು ಪ್ರಮುಖ ಪಾತ್ರ ವಹಿಸಿದ್ದಾರೆ. ಹಿಂದು, ಮುಸ್ಲಿಂ ಇಬ್ಬರೂ ರಂಗಭೂಮಿಯಲ್ಲಿ ಧಾರ್ಮಿಕ ಕಾರ್ಯಕ್ರಮದಲ್ಲಿ ಒಟ್ಟಾಗಿ ಭಾಗವಹಿಸುತ್ತಿರುವುದು.

## ಬೂವನಹಳ್ಳಿ

ಬೂವನಹಳ್ಳಿ ಸಿರಾ ಕಸಬಾ ಹೋಬಳಿಗೆ ಸೇರಿದ ಗ್ರಾಮ. ಸಿರಾ–ಹಿರಿ ಯೂರು ರ‍್ರಾ್ರಯ ಹೆದ್ದಾರಿ–೪ ರಲ್ಲಿ ಸಿರಾದಿಂದ ಪಶ್ಚಿಮಕ್ಕೆ ೭ ಕಿ.ಮೀ ದೂರದಲ್ಲಿ ಎಡಗಡೆ ಇದೆ. ಜಿಲ್ಲಾ ಪಂಚಾಯತ್ ರಸ್ತೆಯಲ್ಲಿ ಅರ್ಧ ಕಿ.ಮೀ. ದೂರದಲ್ಲಿ ಬೂವನಹಳ್ಳಿಯಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಪ್ರೌಢಶಾಲೆಯವರೆಗೆ ಶಿಕ್ಷಣ ಸಂಸ್ಥೆಗಳಿವೆ. ಎರಡು ಅಂಗನವಾಡಿ ಕೇಂದ್ರಗಳಿದ್ದು ಗ್ರಾಮ ಪಂಚಾಯ್ತಿಯ ಕೇಂದ್ರವಾಗಿದೆ. ಅಜ್ಜಯ್ಯನಪಾಳ್ಯ, ಮಾನಂಗಿ, ಮಾನಂಗಿ ತಾಂಡ, ಕಾಡಜ್ಜಯ್ಯನಪಾಳ್ಯ, ಭೂತಪ್ಪನ ಗುಡಿ, ಮೇಕೆಶಿರಹಳ್ಳಿ, ಮುದಿಗೆರೆ, ಮುದಿಗೆರೆ ಕಾವಲು, ಅಂತಪುರ ಈ ಗ್ರಾಮಗಳು ಬೂವನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುತ್ತವೆ. ಒಟ್ಟು ೧೫ ಸದಸ್ಯರನ್ನೊಳಗೊಂಡ ಈ ಪಂಚಾಯ್ತಿಯಲ್ಲಿ ಬೂವನಹಳ್ಳಿಯವರೇ ೪ ಸದಸ್ಯರಿದ್ದಾರೆ.

ಕುಂಚಿಟಿಗರು, ಗೊಲ್ಲರು, ಬೇಡರು, ಆದಿಕರ್ನಾಟಕ, ಕಮ್ಮಾರ, ವೀರಶೈವ, ವಿಶ್ವಕರ್ಮ, ಕುಂಬಾರ ಜಾತಿಗಳಿಗೆ ಸೇರಿದ ತಲಾ ಒಂದೊಂದು ಮನೆಗಳಿದ್ದು ಕುಂಚಿಟಿಗರು ಮುಖ್ಯ ಜನಾಂಗವಾಗಿದ್ದು ಕುಂಚಿಟಿಗರ ೧೮೦, ಬೇಡ ಜನಾಂಗದ ೧೦೦, ಗೊಲ್ಲ ಜನಾಂಗದ ೯೦ ಕುಟುಂಬಗಳೂ ಸೇರಿದಂತೆ ಆದಿಕರ್ನಾಟಕರ ೫೫, ಇತರೆಯವರೂ ಸೇರಿ ಗ್ರಾಮದಲ್ಲಿ ಒಟ್ಟು ೪೩೦ ಕುಟುಂಬಗಳಿವೆ. ಗ್ರಾಮದ ಒಟ್ಟು ಜನಸಂಖ್ಯೆ ೧೬೮೦. ಇಲ್ಲಿನ ಮನೆಗಳು ಹೆಂಚಿನ, ಕಲ್ಲಿನ, ಮಾಳಿಗೆ, ಕಾಂಕ್ರೀಟ್ ಸ್ವರೂಪದಲ್ಲಿದ್ದು ೪೨ ಮನೆಗಳು ಆಶ್ರಯ, ಜನತಾ ವಸತಿ ಯೋಜನೆಯಲ್ಲಿ ರಚನೆಯಾಗಿವೆ.

ರೈತಾಪಿ ಬದುಕೇ ಪ್ರಧಾನವಾಗಿರುವ ಈ ಹಳ್ಳಿ ತಗ್ಗಿನ ಪ್ರದೇಶವಾಗಿದ್ದು ಕಪ್ಪು ಮಿಶ್ರಿತ ಜೇಡಿಮಣ್ಣಿನಿಂದ ಕೂಡಿದ್ದು ಭತ್ತ ಬೆಳೆಯುತ್ತಿದ್ದ ಕಾರಣ ಅನ್ನದ ಊರು ಬೂವನಹಳ್ಳಿ ಎಂಬ ಹೆಸರನ್ನು ಈ ಗ್ರಾಮ ಹೊಂದಿರಬಹುದೆಂದು ಈ ಗ್ರಾಮದ ಪಂಚಾಯ್ತಿ ಸದಸ್ಯ ಚಿಕ್ಕಣ್ಣ ಅಭಿಪ್ರಾಯಪಡುತ್ತಾರೆ. ಜನಪದರ ಬಾಯಲ್ಲಿ ಬೂನಹಳ್ಳಿ ಎಂದೇ ಕರೆಯಲಾಗುತ್ತದೆ.

ಎರಡು ಅಂಗನವಾಡಿ ಕೇಂದ್ರಗಳೂ ಸೇರಿದಂತೆ ಪ್ರಾಥಮಿಕ, ಪ್ರೌಢಶಾಲೆಯವರೆಗೆ ಶೈಕ್ಷಣಿಕ ಸೌಲಭ್ಯವನ್ನು ಈ ಗ್ರಾಮ ಹೊಂದಿದೆ. ವ್ಯವಸಾಯ ಸೇವಾ ಸಹಕಾರ ಸಂಘ, ಎಣ್ಣೆ ಕಾಳಿನ ಸೊಸೈಟಿ ಇದೆ. ಈ ಗ್ರಾಮಕ್ಕೆ ಸೇರಿದ ತಿಮ್ಮಜ್ಜಿ ಕೆರೆ, ಕೆಂಚಪ್ಪನ ಕೆರೆ, ಹತ್ತಿರದ ಚಿಕ್ಕಸಂದ್ರದ ಕೆರೆಗಳ ನೀರಿನ ಸೌಲಭ್ಯ ಹೊಂದಿದ್ದು ಗ್ರಾಮದಲ್ಲಿ ಭತ್ತ, ರಾಗಿ, ಸೇಂಗಾ, ಸೂರ್ಯಕಾಂತಿಯನ್ನು ವಿಶೇಷವಾಗಿ ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗಿನ ತೋಟ ಈ ಗ್ರಾಮದಲ್ಲಿ ಹೆಚ್ಚು ಇದ್ದು ಅಡಿಕೆ ವ್ಯಾಪಾರ ಈ ಊರಿನ ಪ್ರಧಾನ ಆರ್ಥಿಕ ಮೂಲವಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಈ ಗ್ರಾಮ ಚಿತ್ರದುರ್ಗ ಲೋಕಸಭೆ, ಮದಲೂರು ಜಿಲ್ಲಾ ಪಂಚಾಯ್ತಿ ಹಾಗೂ ಮಾನಂಗಿ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಡುತ್ತದೆ. ಬಿ.ಎಸ್. ಸತ್ಯಪ್ರಕಾಶ್ ಸದ್ಯ ತಾಲ್ಲೂಕು ಪಂಚಾಯ್ತಿಯ ಸದಸ್ಯರಾಗಿದ್ದಾರೆ. ಶ್ರೀ ಬಿ.ಸತ್ಯನಾರಾಯಣ ಇದೇ ಗ್ರಾಮದವರಾಗಿದ್ದು ೧೯೯೪ ಮತ್ತು ೨೦೦೪ ಎರಡು ಬಾರಿ ಸಿರಾ ಕ್ಷೇತ್ರದ ಶಾಸಕರಾಗಿ, ಈ ಎರಡೂ ಅವಧಿಯಲ್ಲಿ ಕ್ರಮವಾಗಿ ಕಾರ್ಮಿಕ ರಾಜ್ಯ ಸಚಿವ ಮತ್ತು ತುಮಕೂರು ಜಿಲಾಲಾ ಉಸ್ತುವಾರಿ ಸಚಿವರು, ೨೦೦೪ ರಲ್ಲಿ ಗ್ರಾಮೀಣ ನೀರು ಸರಬರಾಜು ಹಾಗೂ ಇಂಜಿನಿಯರಿಂಗ್ ಇಲಾಖೆಯ ಸಚಿವರು ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿ ಕಾರ್ಯ ನಿರ್ವಹಿಸಿದ್ದಾರೆ. ಈ ಗ್ರಾಮದ ಒಟ್ಟು ಭೂ ವಿಸ್ತೀರ್ಣ ೬೯೯.೭೧ ಹೆಕ್ಟೇರ್.

ಶ್ರೀನಿವಾಸಯ್ಯ, ಬಂಡೆ ರಾಮಕೃಷ್ಣ, ಹಿರಿಯ ರಾಜಕಾರಣಿಗಳಾದರೆ ರಾಮಕೃಷ್ಣ, ರಾಜಣ್ಣ, ರಾಜಕುಮಾರ್, ಶ್ರೀನಿವಾಸ ಇವರು ಈ ಗ್ರಾಮದ ವಕೀಲರು. ಬೂವನಹಳ್ಳಿ ನಾಗರಾಜ್ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯಲ್ಲಿ ಅಧೀನ ಕಾರ್ಯದರ್ಶಿ ಹಾಗೂ ಸಾರ್ವಜನಿಕ ಸಂಪರ್ಕಾಭಿವೃದ್ಧಿ ಅಧಿಕಾರಿ ಹುದ್ದೆಯಲ್ಲಿದ್ದಾರೆ. ಇವರು ಮೂರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಜಗನ್ನಾಥ್, ಶ್ರೀನಿವಾಸ್, ಹೇಮಲತ ಉಪನ್ಯಾಸಕರಾಗಿದ್ದಾರೆ. ಒಟ್ಟು ೧೦ ಜನ ಸರ್ಕಾರಿ ನೌಕರರರಾಗಿದ್ದಾರೆ.

ಇದೊಂದು ಸಂಕೀರ್ಣ ಗ್ರಾಮವಾಗಿದ್ದು ಧಾರ್ಮಿಕವಾಗಿ ಭಾವೈಕ್ಯತೆಯಿಂದ ಕೂಡಿದೆ. ಈಶ್ವರ, ಬಂಡಿ ರಂಗನಾಥ, ಮೈಲಾರ ಲಿಂಗೇಶ್ವರ, ಲಕ್ಷ್ಮೀದೇವಿ ಗುಡಿ, ಮಾರಮ್ಮ, ಚಂದ್ರಮೌಳೇಶ್ವರ ಗುಡಿಗಳಿವೆ.

ಕಾಡುಗೊಲ್ಲರು, ತಿಮ್ಮಪ್ಪ, ಚಿತ್ರದೇವರು, ಜುಂಜಪ್ಪ ಹಾಗೂ ಸೋರೆಕುಂಟೆ ಕರಿಯಮ್ಮನ ಒಕ್ಕಲಾಗಿದ್ದು ದೀಪಾವಳಿ ಕಾಡುಗೊಲ್ಲರ ಪವಿತ್ರ ಹಬ್ಬವನ್ನಾಗಿ ಹಾಲುಮೀಸಲು, ಹಿರಿಯರ ಹಬ್ಬವಾಗಿ ಆಚರಿಸುತ್ತಾರೆ. ಜನ್ನಿಗೆ ಹೆಡೆ, ಎಣ್ಣೆ ಎರೆಯುವುದು ಇವರ ಆಚರಣೆಗಳಾಗಿವೆ. ಕುಂಚಿಟಿಗರು ಲಕ್ಷ್ಮೀದೇವರ ವಿಶೇಷ ಆರಾಧಕರಾಗಿದ್ದು ಈ ಗ್ರಾಮದ ಜಲದೇನವರ ಪವಿತ್ರ ದೇವತೆಯಾಗಿದೆ. ಶುಕ್ರವಾರ ವಿಶೇಷ ಪೂಜೆ ನಡೆಯುತ್ತದೆ. ಗ್ರಾಮ ದೇವತೆಯಾಗಿ ಮಾರಮ್ಮ

ಆರಾಧನೆಗೆ ಒಳಗಾದರೆ ಮೈಲಾರಲಿಂಗ ನಾಯಕ ಮಕ್ಕಳು ಆದಿಕರ್ನಾಟಕರ ಆರಾಧನೆಗೆ ಒಳಗಾಗಿದೆ. ಸಮುದ್ರ ಮಟ್ಟಕ್ಕಿಂತ ೬೭೦ ಮೀ. ಎತ್ತರದಲ್ಲಿರುವ ಈ ಗ್ರಾಮದಲ್ಲಿ ವಾಡಿಕೆ ಮಳೆ ೪೫೩ ರಿಂದ ೪೬೦ ಮಿಮೀ ಪ್ರಮಾಣದಲ್ಲಿದೆ. ಚಳಿ ೧೨ ಡಿಗ್ರಿ ಇದ್ದರೆ ಬಿಸಿಲು ೩೮ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ರಾಗಿಮುದ್ದೆ, ಅನ್ನ, ರೊಟ್ಟಿ–ಚಟ್ನಿ ಈ ಗ್ರಾಮದ ಪ್ರಮುಖ ಆಹಾರವಾಗಿದ್ದು ಉಪ ಹಾಗೂ ವಿಶೇಷ ಊಟವಾಗಿ ಬಾಡೂಟ, ಹೋಳಿಗೆ, ಪಾಯಸ, ಕಿಚಡಿ, ಶ್ಯಾವಿಗೆ ಅಡಿಗೆಯನ್ನು ವಿಶೇಷ ಸಂದರ್ಭಗಳಲ್ಲಿ ಬಳಸುತ್ತಾರೆ.

ದನ, ಎಮ್ಮೆ, ಕುರಿ, ಮೇಕೆಗಳನ್ನು ಸಾಕುತ್ತಿರುವ ಈ ಗ್ರಾಮದಲ್ಲಿ ಒಂದು ಹಾಲಿನ ಡೈರಿಯಿದೆ. ಕಾಡುಗೊಲ್ಲರು ಕುರಿಯನ್ನು ವಿಶೇಷವಾಗಿ ಹಿಂಡು ಹಿಂಡಾಗಿ ಸೊಲಿಗೆ ಲೆಕ್ಕದಲ್ಲಿ ಸಾಕುತ್ತಾರೆ. ಐದು ಜಗ್ಗೋ ಬೋರಿದ್ದು ಕೊಳಾಯಿಗಳ ಮೂಲಕ ನೀರಿನ ಸರಬರಾಜಿದೆ. ಮುಖ್ಯವಾಗಿ ಮೇಗಳ ಓಣಿ (ಕೇರಿ) ಒಳಚರಂಡಿ ಸೌಲಭ್ಯ ಹೊಂದಿದ್ದು ಉಳಿದೆಡೆ ಮನೆಗಳ ಸಾಂದ್ರತೆ ಒತ್ತಾಗಿರುವುದರಿಂದ ಚರಂಡಿ ಸಾಧ್ಯವಾಗಿಲ್ಲ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಬೆಕ್ಕು, ಕೋಳಿ, ನಾಯಿ ಈ ಬಗೆಯ ಸಾಕು ಪ್ರಾಣಿಗಳನ್ನು ಈ ಗ್ರಾಮದಲ್ಲಿ ಕಾಣಬಹುದು. ಕಾಡುಹಂದಿ, ಮೊಲ, ಜಿಂಕೆ, ಉಡ, ಅಳಿಲು, ಕಾಡುಬೆಕ್ಕು, ನರಿ, ವಿಷದ ಹಾವುಗಳು, ಕಾಡು ಇಲಿ ಈ ಪರಿಸರದ ಕಾಡು ಪ್ರಾಣಿಗಳಾಗಿವೆ. ನವಿಲು, ಕಾಡುಕೋಳಿ, ಗಿಳಿ, ಗೊರವಂಕ, ಬೆಳವ, ಕೋಗಿಲೆ, ಗೂಬೆ, ಗುಬ್ಬಚ್ಚಿ, ಕೌಜುಗ, ಕೊಕ್ಕರೆ ಈ ಗ್ರಾಮದ ಸನಿಹದಲ್ಲಿನ ಮರ, ಗಿಡ, ಪೊದೆಯನ್ನು ಆಶ್ರಯಿಸಿರುವ ಕಾಡುಪಕ್ಷಿಗಳಾಗಿವೆ. ದೀಪಾವಳಿ, ದಸರಾ ಹಬ್ಬ, ಆಯುಧ ಪೂಜೆ, ಯುಗಾದಿ, ಗೌರಿ–ಗಣೇಶ ಈ ಊರಿನ ವಿಶೇಷ ಹಬ್ಬಗಳು. ಈ ಗ್ರಾಮದ ಯುವಕರು ಪ್ರತಿ ವರ್ಷ ಕನ್ನಡ ರಾಜ್ಯೋತ್ಸವ ಆಚರಣೆಯನ್ನು, ಎತ್ತಿನ ಬಂಡಿಯ ಮೇಲೆ ರಾಜರಾಜೇಶ್ವರಿಯ ಭಾವಚಿತ್ರದೊಂದಿಗೆ ವಿವಿಧ ವೇಶಾವಳಿ, ದೃಶ್ಯಗಳಿಂದ ಬೂವನಹಳ್ಳಿಯಿಂದ ಸಿರಾ ನಗರದ ಒಳಗೆ ಮೆರವಣಿಗೆ, ಸಮಾರಂಭ ಏರ್ಪಡಿಸುತ್ತಾ ಊರಿನ ಎಲ್ಲರಿಗೂ ಸಿಹಿ ಬೂಂದಿ ಹಂಚುವ ಕೆಲಸ ನಿರಂತರವಾಗಿ ನಡೆಯುತ್ತಿದೆ. ಗ್ರಾಮದ ಆರಂಭಕ್ಕೆ ಕಾಡುಗೊಲ್ಲರು, ನಡುವೆ ಕುಂಚಿಟಿಗರು, ಚೆಲ್ಲಿಕೊಂಡಂತೆ ನಾಯಕರು, ಇತರೆ ವರ್ಗದವರು ವಾಸಿಸುತ್ತಾರೆ. ಕಾಡುಗೊಲ್ಲರು ಚಿಕ್ಕಣ್ಣ ಅವರ ನಿರ್ದೇಶನದಲ್ಲಿ ಕೋಲಾಟ ಪ್ರದರ್ಶಿಸಿದರೆ ಕುರುಕ್ಷೇತ್ರ, ದಾನಶೂರ ಕರ್ಣ ಈ ನಾಟಕಗಳನ್ನು ಗ್ರಾಮದವರೆಲ್ಲರೂ ಕೂಡಿ ಅಭಿನಯಿಸುತ್ತಾರೆ.

ದೂರವಾಣಿ ಸೌಲಭ್ಯವಿದ್ದು ಇತ್ತೀಚೆಗೆ ಮನೆಗಳ ದೂರವಾಣಿಯನ್ನು ಕಡಿತಗೊಳಿಸಿ, ಮೊಬೈಲ್ ಬಳಸುವವರ ಸಂಖ್ಯೆ ಹೆಚ್ಚಾಗಿದೆ. ಈ ಗ್ರಾಮದಲ್ಲಿ ೬೨೦ ಮೊಬೈಲ್ ಇವೆ ಎಂದು ಶ್ರೀನಿವಾಸ್ ವಿವರಿಸಿದ್ದಾರೆ. ಈ ಗ್ರಾಮ ಜಿಲ್ಲಾ ಪಂಚಾಯ್ತಿ ರಸ್ತೆ ಹೊಂದಿದ್ದು ಬೂವನಹಳ್ಳಿಯಿಂದ ಸೋರೇಕುಂಟೆ, ಬೂವನಹಳ್ಳಿ, ಮುದಿಗೆರೆ ಅಂತಃಪುರ ಮಾರ್ಗವಾಗಿ ಸಿರಾ–ಬುಕ್ಕಾಪಟ್ಟಣ ರಾಜ್ಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುತ್ತದೆ. ಒಟ್ಟು ಬೂವನಹಳ್ಳಿ ತೆಂಗು, ಅಡಿಕೆ ತೋಟಗಳ ನಡುವೆ ಇದ್ದಂತೆ ಭಾಸವಾಗುವುದು ಈ ಗ್ರಾಮದ ವಿಶೇಷ.

ಕೆಂಚಪ್ಪನಕಟ್ಟೆ, ತಿಮ್ಮಜ್ಜಿಕಟ್ಟೆ ಎಂಬ ಎರಡು ಕಟ್ಟೆಗಳು ಈ ಗ್ರಾಮದ ಪೂರ್ವಕ್ಕೆ ೨ ಕಿಮೀ ದೂರದಲ್ಲಿದ್ದು ಗೋಮಾಳವಾಗಿತ್ತು. ಪ್ರಸ್ತುತ ಈ ಜಾಗದಲ್ಲಿನ ಈಚಲು ಮರ, ಶೇಂದಿ ಇಳಿಸುವ ಕೆಲಸದ ಜೊತೆಗೆ ಈಚಲು ಗರಿಯಿಂದ ಚಾಪೆ, ಮೊರ, ತಟ್ಟಿ ತಯಾರಿಸಲಾಗುತ್ತಿತ್ತು. ಈಗ ಈ ಸ್ಥಳ ಸಿರಾ ನಗರಸಭೆಯವರು ಕಸ ವಿಲೇವಾರಿ ಸಮೀಪ ಪಶುಸಂಶೋಧನಾ ನಿರ್ದೇಶನಾಲಯ ನಿರ್ಮಿಸುವ ಯೋಜನೆ ಹಾಕಿದ್ದಾರೆ. ಮದರ್ ಸೀಡ್ಸ್ ಯೋಜನೆಯಲ್ಲಿ ಮೂಲ ಬೀಜೋತ್ಪಾದನೆಯ ಬೀಜಗಳಾದ ಕಲ್ಲಂಗಡಿ, ಕರಬೂಜ, ಮಿಡಿಸೌತೆ ಬೀಜಗಳ ಸೀಡ್ಸ್‌ನ್ನು ವೈಜ್ಞಾನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಗ್ರಾಮ ಸ್ವಾವಲಂಬನೆ ಹಾಗೂ ಆರ್ಥಿಕ ಪ್ರಗತಿಗೆ ಪ್ರೇರಕರಾಗುತ್ತಿದ್ದಾರೆಂದು ಇತಿಹಾಸ ತಜ್ಞ, ಪ್ರಾಧ್ಯಾಪಕರೂ ಆದ ಪ್ರೊ॥ ಜಗನ್ನಾಥ್ ವಿವರಿಸಿದ್ದಾರೆ. ಆಲೆಮನೆಗಳಿದ್ದು ದೇಶೀತಳಿ ಅಚ್ಚಿನ ಹಾಗೂ ಉಂಡೆ ಬೆಲ್ಲ ತಯಾರಿಸುತ್ತಾರೆ.

೨ ಅಂಗನವಾಡಿ ಕೇಂದ್ರ, ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಪ್ರೌಢಶಾಲೆ ಇದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಲಭ್ಯವಿದೆ. ಸಾಕ್ಷರತೆ ೭೬% ರಷ್ಟಿದೆ.

ಅಡಿಕೆ ಸುಲಿಯುವುದು ಈ ಗ್ರಾಮದ ಮಹಿಳೆಯರ ವಿಶೇಷ ಕಲಾತ್ಮಕ ಕೆಲಸವಾಗಿದೆ. ಈರುಳ್ಳಿ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಕಲಾವಿದರಾಗಿ ಕರ್ಣ ಗೋವಿಂದಪ್ಪ, ಶನಿದೇವರ ಈರಣ್ಣ ಪ್ರಸಿದ್ಧರು. ಬಿ.ಪಿ. ಈರಣ್ಣ ತಬಲಾ ಕಲಾವಿದ. ರಂಗಸ್ವಾಮಯ್ಯ, ಮುದ್ದಜ್ಜಿ, ಮಾಲಿಂಗಣ್ಣ ತಮಟೆ ಕಲಾವಿದರು. ಸೋಬಾನೆ ಪುಟ್ಟಲಿಂಗಮ್ಮ, ಹನುಮಕ್ಕ ಸ್ಥಳೀಯವಾಗಿ ಗುರುತಿಸಿಕೊಂಡಿರುವ ಜನಪದ ಕಲಾವಿದರು. ಕಾಮರಾಜು ಡಿ.ಆರ್., ರಂಗಾಚಾರಿ ಪ್ರಮುಖ ವ್ಯಾಪಾರಿ ಹೋಟೆಲ್ ಉದ್ಯಮಿಗಳಾಗಿದ್ದಾರೆ.

## ಬಚ್ಚೀಕಟ್ಟೆ

ಬಚ್ಚೀಕಟ್ಟೆ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ೪ ಕಿಮೀ ದೂರದಲ್ಲಿದೆ. ಸಿರಾ–ಬುಕ್ಕಾಪಟ್ಟಣ ಮುಖ್ಯ ರಸ್ತೆಯಲ್ಲಿ ಸಿರಾ ಸಮೀಪದ ಭೂತಪ್ಪನ ಗುಡಿಯ ಬಳಿಯ ಮುದಿಗೆರೆ ಕ್ರಾಸಿನಿಂದ ೨ ಕಿಮೀ ದೂರದಲ್ಲಿದೆ. ಇದು ಮುದಿಗೆರೆ ಮುಖ್ಯ ಗ್ರಾಮದ ಉಪಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೧೩೨.೦೩ ಹೆಕ್ಟೇರ್ ಆಗಿದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿ ಕಂಡುಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ನಾಯಿ, ಸಾಕು ಪಕ್ಷಿಯಾಗಿ ಕೋಳಿಗಳನ್ನು ಸಾಕಲಾಗುತ್ತದೆ. ಈ ಪರಿಸರದಲ್ಲಿ ಪಕ್ಷಿಗಳಾದ ಗಿಳಿ, ಗೊರವಂಕ, ಗುಬ್ಬಿ, ಗೀಜುಗ, ಗರುಡ ಕಂಡುಬಂದರೆ ಪಕ್ಕದ ಕೆರೆಯಲ್ಲಿ ಸೆರಲೆಹಕ್ಕಿ, ನೀರ ಹಕ್ಕಿಗಳಿವೆ. ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿರುವ ಇಲ್ಲಿನ ನೆಲೆ ಮಳೆ ಆಶ್ರಿತ ಭೂಮಿಯಾಗಿದೆ. ವಾಡಿಕೆ ಮಳೆ ೫೫೪ ಮಿಮೀ, ಬಿಸಿಲು ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಆಗಿದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತದೆ. ೨ ಕಿರುಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ. ಈ ಪರಿಸರದಲ್ಲಿ ೪ ಕೊಳವೆ ಬಾವಿಗಳಿದ್ದು ಕೃಷಿ ಉಪಯೋಗಕ್ಕೆ ಬಳಸಲಾಗುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ನಾಯಕರು ದೊಡ್ಡ ಸಮುದಾಯ ಕುಂಚಿಟಿಗ, ಆದಿ ಕರ್ನಾಟಕ, ಲಂಬಾಣಿ, ಮಡಿವಾಳ ಮನೆಗಳಿದ್ದು ಕಿರು ಸಮುದಾಯವಾಗಿದೆ. ವಿವಿಧ ರೀತಿಯ ಸ್ವರೂಪದ ೧೫ ಮನೆಗಳಿದ್ದು ೫೪ ಜನಸಂಖ್ಯೆ ಹೊಂದಿದೆ. ಶೀಟಿನ, ಹೆಂಚಿನ ಮನೆಗಳಿವೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಭೋಜನಗಳಾಗಿವೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿ, ದ್ವಿಚಕ್ರ ವಾಹನವಾದ ಟೆಂಪೋ, ಸ್ಕೂಟರ್‌ಗಳಿವೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಹುರುಳಿ, ತೊಗರಿ ಆಹಾರ ಬೆಳೆಗಳು. ಶೇಂಗಾ, ಹುಣಸೆಹಣ್ಣು ವ್ಯಾಪಾರಿ ಬೆಳೆಗಳು. ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಬೂವನಹಳ್ಳಿ ಗ್ರಾಮ ಪಂಚಾಯತ್ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಶೈಕ್ಷಣಿಕವಾಗಿ ಮುದಿಗೆರೆ, ಸಿರಾ ನಗರವನ್ನು ಅವಲಂಬಿಸಿದ್ದು ಸಾಕ್ಷರತೆ ೫೬% ರಷ್ಟಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೧ ಟೀ, ಗೂಡಂಗಡಿ ಇದೆ. ಗ್ರಾಮದಲ್ಲಿ ತಿಮ್ಮಪ್ಪ, ಮಾರಮ್ಮನ ಗುಡಿ, ಪೌಳಿಗಳಿವೆ. ತಿಮ್ಮಪ್ಪನಿಗೆ ಶ್ರಾವಣ ಮಾಸದಲ್ಲಿ ಉತ್ಸವ ಮಾಡಿದರೆ ಮಾರಮ್ಮನಿದೆ ಹಸಿರು ಮಾರಿ ಎಂದು ಆಷಾಢ ಮಾಸದಲ್ಲಿ ಊರಹಬ್ಬ ಮಾಡಿ ಪ್ರಾಣಿಬಲಿ, ಆರತಿ, ಬಾನ, ಅರ್ಪಣೆಯ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ಗೌರಿ–ಗಣೇಶ, ಮಹಾನವಮಿ, ದೀವಳಿಗೆ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಭೂತೇಶ್ವರ ನಗರ

ಭೂತಪ್ಪನಗುಡಿ, ಭೂತೇಶ್ವರ ನಗರ ಎಂದೆಲ್ಲಾ ಕರೆಯುವ ಈ ಹಳ್ಳಿ ಸಿರಾ ನಗರದಿಂದ ದಕ್ಷಿಣಕ್ಕೆ ಬುಕ್ಕಾಪಟ್ಟಣ–ಸಿರಾ ಮುಖ್ಯ ರಸ್ತೆಯಲ್ಲಿ ಸಿರಾದಿಂದ ೩ ಕಿಮೀ ದೂರದಲ್ಲಿದೆ. ಭೂತಪ್ಪನ ಪುಟ್ಟ ಕಲ್ಲು ಮಂಟಪವಿದ್ದು ಇದೊಂದು ಗೋಮಾಳದ ಭೂಮಿಯಾಗಿತ್ತು. ಈ ರೀತಿಯ ಗೋಮಾಳ ಭೂಮಿಯಲ್ಲಿ ವಿವಿಧ ಮೂಲಗಳಿಂದ ಬಂದು ನೆಲೆಸಿದ ೪೨ ಮನೆಗಳಿವೆ.

೪೨.೧೭ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿರುವ ಸಮತಟ್ಟಾದ ಭೂಮಿ. ಕೆಂಪು ಮಿಶ್ರಿತ ಮರಳು ನೆಲ. ಗ್ರಾಮದ ಬಲಭಾಗದಲ್ಲಿ ಒಂದು ಕಟ್ಟೆ ಇದೆ. ಹೆಂಚಿನ, ಶೀಟಿನ ಹಾಗೂ ಗುಡಿಸಲು ಮನೆಗಳೇ ಅಧಿಕ. ೧೨೧ ಜನಸಂಖ್ಯೆಯ ಈ ಗ್ರಾಮದಲ್ಲಿ ಬಯಲೇ ಶೌಚಾಲಯವಾಗಿದೆ. ೨ ಮನೆಗಳಲ್ಲಿ ಮಾತ್ರ ಶೌಚಾಲಯದ ಬಳಕೆಯಿದೆ. ಬಿಸಿಲು ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ೪೫೬ ಮಿಮೀ ಮಳೆ ಬೀಳುತ್ತದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಸಾಂದರ್ಭಿಕವಾಗಿ ಪಾಯಸ, ಹೋಳಿಗೆ, ಭೋಜನದ ವ್ಯವಸ್ಥೆ ಇದೆ. ಆಟೋ, ದ್ವಿಚಕ್ರ ವಾಹನಗಳಿವೆ. ಶೇಂಗಾ, ರಾಗಿ ಬೆಳೆಯುವ ಇಲ್ಲಿನ ಬಹುತೇಕ ಕುಟುಂಬಗಳು ಭೂರಹಿತ ಕಾರ್ಮಿಕರು, ಕೂಲಿ, ಸಣ್ಣಪುಟ್ಟ ವ್ಯಾಪಾರವನ್ನು ಅವಲಂಬಿಸಿಕೊಂಡಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಬೂವನಹಳ್ಳಿ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಇಲ್ಲಿ ೧ ಅಂಗನವಾಡಿ ಕೇಂದ್ರ, ೧ ಕಿರಿಯ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಬಳಕೆಯಿದೆ. ೨ ಸ್ತ್ರೀಶಕ್ತಿ ಸಂಘ, ೧ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಗ್ರಾಮದ ಸಾಕ್ಷರತೆ ೬೫.೧% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಟೀ ಅಂಗಡಿಗಳು, ೨ ಚಿಕ್ಕ ಅಂಗಡಿಗಳಿವೆ. ಭೂತಪ್ಪನ ಆರತಿ, ಬ್ಯಾಟೆ, ಬಾನದ ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ ಹಬ್ಬಗಳ ಆಚರಣೆ ಇದೆ. ಉತ್ತಮ ರಸ್ತೆ ಸಂಪರ್ಕ, ನೀರಿನ ಸೌಲಭ್ಯಗಳಿವೆ.

## ಬೊಮ್ಮರಸನಹಳ್ಳಿ

ಬೊಮ್ಮರಸನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೦ ಕಿಮೀ ದೂರದಲ್ಲಿದೆ. ಮಧುಗಿರಿ–ಸಿರಾ ಮುಖ್ಯ ರಸ್ತೆಯಲ್ಲಿ ಕೊಟ್ಟ ಗೇಟಿನಿಂದ ೪ ಕಿಮೀ ದೂರ ಕೊಟ್ಟ–ರಂಗಾಪುರ ಮಾರ್ಗದಲ್ಲಿದೆ. ಇದೊಂದು ಕೊಟ್ಟ ಗ್ರಾಮದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೬೮.೮ ಹೆಕ್ಟೇರ್ ಆಗಿದೆ. ಬೊಮ್ಮಣ್ಣ, ಬೊಮ್ಮೇಗೌಡ, ಬೊಮ್ಮರಸನಾದ ಬಗೆಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ೧೭ನೇ ಶತಮಾನದ ವೇಳೆಗೆ ಈ ಗ್ರಾಮ ಪ್ರಸಿದ್ಧವಾಗಿದ್ದು ಟಿಪ್ಪು ಸುಲ್ತಾನನು ಮರಾಠರ ಮೇಲೆ ಈ ಗ್ರಾಮದಲ್ಲಿ ಯುದ್ಧ ಮಾಡುತ್ತಾನೆಂದು ಮರಾಠರು ಗ್ರಾಮ ಬಿಟ್ಟರೆಂದು ನಾರಾಯಣ ವಿವರಿಸುತ್ತಾರೆಯಾದರೂ ಖಚಿತತೆ ಇರುವುದಿಲ್ಲ. ಆದುದರಿಂದ ವ್ಯಕ್ತಿ ಮೂಲದ ಈ ಹೆಸರು ಬಂದಿದೆ. ಗೌಡರನ್ನೇ ಮೈಸೂರು ಮಹಾರಾಜರ ಪ್ರೇರಣೆಯಿಂದಾಗಿ ಬೊಮ್ಮರಸ ಎಂದು ಕರೆದು ಅದೇ ಹೆಸರಿನಲ್ಲಿ ಗ್ರಾಮ ನಿರ್ಮಾಣವಾಗಿದೆ.

ಕೆಂಪು ಮರಳು ಮಣ್ಣಿನಿಂದ ಕೂಡಿರುವ ಈ ಬಯಲು ಪ್ರದೇಶದಲ್ಲಿ ಕುರುಚಲು ಗಿಡ, ಕೊಟ್ಟ ಕೆರೆಯಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಮೇಕೆ, ಕುರಿಗಳನ್ನು ಸಾಕುತ್ತಾರೆ. ಈ ಪರಿಸರದಲ್ಲಿ ಪಕ್ಷಿಗಳಾದ ಕೋಗಿಲೆ, ಗಿಳಿ, ಗೊರವಂಕ, ನವಿಲು, ಕಾಗೆ, ಗೂಬೆ, ಹದ್ದು, ಗಿಡುಗಗಳನ್ನು ಕಾಣಬಹುದು.

ಬರ, ಬಿಸಿಲಿನ ಪ್ರದೇಶವಾಗಿದ್ದು ವಾರ್ಷಿಕ ಸರಾಸರಿ ೪೩೪ ಮಿಮೀ ಮಳೆ ಬೀಳುತ್ತದೆ. ಬಿಸಿಲಿನ ತಾಪಮಾನ ೩೮ ಡಿಗ್ರಿ ಸಾಮಾನ್ಯವಾಗಿದ್ದು ಚಳಿ ೧೨ ಡಿಗ್ರಿ ಇರುತ್ತದೆ. ಕೃಷಿ ಬದುಕು ಪ್ರಧಾನವಾಗಿದ್ದು ಇಲ್ಲಿ ೨೭ ಕೊಳರೆ ಬಾವಿಗಳ ಆಶ್ರಯ ಪಡೆದಿದ್ದಾರೆ. ಕುಡಿಯಲು ಕೊಟ್ಟ ಗ್ರಾಮಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರನ್ನು ಪೂರೈಸಲಾಗುತ್ತದೆ. ೪ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಕಾಡುಗೊಲ್ಲರು, ಕುಂಚಿಟಿಗರು, ಈಡಿಗರು, ಬೇಡರು ಸಮೂಹವಾಗಿ ವಾಸಿಸುವ ಇಲ್ಲಿ ಗೊಲ್ಲರು ದೊಡ್ಡ ಸಮುದಾಯವಾದರೆ ಉಳಿದವು ಸಣ್ಣ ಸಮುದಾಯಗಳಾಗಿವೆ. ವಿವಿಧ ಪ್ರಕಾರಗಳ ೬೮ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಾಗಿವೆ. ೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದ್ದು ಸಮುದಾಯ ಸೌಲಭ್ಯವಾದ ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಪ್ರಮುಖ ಆಹಾರವಾಗಿದ್ದು ಅನ್ನ ಬಳಸುವವರಿದ್ದಾರೆ ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಊಟದ ಸಂದರ್ಭಗಳಿವೆ. ಸಾಂಪ್ರದಾಯಿಕ ವಾಹನವಾದ ಟ್ರ್ಯಕ್ಟರ್, ಟೆಂಪೋ, ಆಟೋ ಬಳಸುತ್ತಾರೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ತೊಗರಿ, ಹುರುಳಿ ಆಹಾರ ಬೆಳೆಗಳು. ವಾಣಿಜ್ಯ ಬೆಳೆಯಾಗಿ ಶೇಂಗಾ, ಹುಣಸೆ ಹಣ್ಣಿನ ವ್ಯಾಪಾರವಿದೆ. ಇಬ್ಬರು ಸರ್ಕಾರಿ ನೌಕರರಿದ್ದು ಗೃಹ ಕಸುಬಾಗಿ ಬೀಡಿ ಕಟ್ಟುವುದು, ಟೈಲರಿಂಗ್ ಉಪಕಸುಬಾಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ಕೊಟ್ಟ ಗ್ರಾಮ ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಗೊಂಡಿದೆ. ಗ್ರಾಮದಲ್ಲಿ ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಒಂದು ಸ್ತ್ರೀಶಕ್ತಿ ಸಂಘದ ಸ್ವಸಹಾಯ ತಂಡವಿದ್ದು ಮಹಿಳಾ ಸಬಲೀಕರಣದತ್ತ ತೊಡಗಿಸಿಕೊಂಡಿದೆ. ಒಂದು ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ೫೮.೫% ಸಾಕ್ಷರತೆ ಪ್ರಮಾಣವಿದೆ. ಶಾಲೆಯಲ್ಲಿ ೨೭ ಮಕ್ಕಳಿದ್ದು ಒಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ.

ಕಾಡುಗೊಲ್ಲರ ಕುಲದೈವ ಕಾಟಂಲಿಂಗ, ಬಂಡಿ ರಂಗನಾಥ, ಭೂತಪ್ಪ ಹಾಗೂ ಎಲ್ಲಮ್ಮ ದೇವಿಯ ಪೌಳಿಗಳಿವೆ. ದೀಪಾವಳಿಯಲ್ಲಿ ೬ ದಿನಗಳ ಕಾಲ ಕಾಡುಗೊಲ್ಲರ ಸಂಪ್ರದಾಯದಂತೆ ಜನ್ನಿಗೆ ಹಬ್ಬ, ಹಾಲು ಮೀಸಲು, ದೀಪ ಏರಿಸುವ, ದೀಪ ಇಳಿಸುವ ಹಬ್ಬಗಳನ್ನು ಆಚರಿಸಲಾಗುತ್ತದೆ. ಭೂತಪ್ಪನಿಗೆ ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಎಲ್ಲಮ್ಮನಿಗೂ ಆರತಿ, ಬ್ಯಾಟೆ ಸಂಪ್ರದಾಯವಿದೆ. ಸಂಕ್ರಾಂತಿಯ ಸಂದರ್ಭದಲ್ಲಿ ದೇವಸ್ಥಾನದ ಮುಂದೆ ಬೆಂಕಿ ಹಾಕಿ, ಅದರ ಮೇಲೆ ದನಗಳನ್ನು ಓಡಿಸುವ ಪದ್ಧತಿ ಈ ಗ್ರಾಮದಲ್ಲಿ ವಿಶೇಷವಾಗಿದೆ. ಯುಗಾದಿ, ದೀಪಾವಳಿ, ದಸರಾ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬೋಚೇನಹಳ್ಳಿ

ಬೋಚೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೮ ಕಿಮೀ ದೂರದಲ್ಲಿದೆ. ಸಿರಾ–ಅಮರಾಪುರ ರಸ್ತೆಯ ಕೊಟ್ಟ ಗೇಟಿನಿಂದ ತಿರುಗಿ ಮುಂದೆ ಕೊಟ್ಟ ಕೆರೆ ಕೋಡಿಯಿಂದ ಅರ್ಧ ಕಿಮೀ ದೂರದಲ್ಲಿದೆ. ಬೋಚಯ್ಯ ಎಂಬ ವ್ಯಕ್ತಿಯ ಹೆಸರಿನಲ್ಲಿ ಗ್ರಾಮ ನಿರ್ಮಾಣವಾಗಿದೆ.

ಈ ಗ್ರಾಮವು ಕೊಟ್ಟ ಮುಖ್ಯ ಗ್ರಾಮದ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೧೪.೩ ಹೆಕ್ಟೇರ್ ಹೊಂದಿದೆ. ಮರಳು ಮಿಶ್ರಣ ಕೆಂಪು ಮಣ್ಣು ಹೊಂದಿದ್ದು ಬಲಭಾಗದಲ್ಲಿ ಕೊಟ್ಟ ಕೆರೆ, ಬಯಲು, ಕುರುಚಲು ಗಿಡಗಳಿಂದ ಕೂಡಿದೆ. ಈ ಪರಿಸರದಲ್ಲಿ ಹಂದಿ, ಮೊಲ, ನರಿ, ಉಡ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದರೆ ಗ್ರಾಮದಲ್ಲಿ ಹಸು, ಕುರಿ, ಮೇಕೆ, ಕೋಳಿ ಸಾಕುಪ್ರಾಣಿಗಳಾಗಿವೆ. ಕಾಡುಪಕ್ಷಿಗಳಾಗಿ ಕೋಗಿಲೆ, ಕಾಗೆ, ಗೊರವಂಕ, ಗಿಳಿ, ಹದ್ದು, ಗರುಡ, ಗುಬ್ಬಚ್ಚಿ, ಗೂಬೆಗಳಿವೆ.

ಬಿಸಿಲಿನ ತಾಪಮಾನ ಅಧಿಕವಾಗಿದ್ದು ಬಿಸಿಲು ೩೮ ಡಿಗ್ರಿ ಸೆಂಟಿಗ್ರೇಡ್ ಇದ್ದರೆ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಸರಾಸರಿ ವಾರ್ಷಿಕ ಮಳೆ ೪೩೪ ಮಿಲಿಮೀಟರ್ ಇರುತ್ತದೆ. ಈ ಪರಿಸರದಲ್ಲಿ ೧೪ ಕೊಳವೆ ಬಾವಿಗಳಿವೆ. ೨ ಸಿಸ್ಟರ್ನ್‌ಗಳಲ್ಲಿ ನೀರು ಪೂರೈಕೆಯನ್ನು ಗ್ರಾಮ ಪಂಚಾಯಿತಿ ವತಿಯಿಂದ ಪೂರೈಸಲಾಗುತ್ತಿದೆ. ೧ ಕೈಪಂಪು ಇದೆ.

ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ನಾಯಕರು, ಜೋಗಿ ಕಿರು ಸಮುದಾಯವಾಗಿದೆ. ವಿವಿಧ ಪ್ರಕಾರದ ೨೮ ಮನೆಗಳಿದ್ದು, ಅವು ಕಾಂಕ್ರೀಟ್, ಮಣ್ಣಿನ, ಕಲ್ಲಿನಿಂದ ಕೂಡಿವೆ. ೪ ಹೆಂಚಿನ, ೬ ಶೀಟಿನ ಮನೆಗಳೂ ಇವೆ. ಗ್ರಾಮದ ಜನಸಂಖ್ಯೆ ೧೪೦ ಇದ್ದು ೨೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಜನತಾ, ಆಶ್ರಯ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೬ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ತೊಗರಿ, ಹುರುಳಿ ಆಹಾರ ಬೆಳೆಗಳು. ಶಿಕ್ಷಣ, ಸಾರಿಗೆ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯಿತಿ ಹಾಗೂ ಮದಲೂರು ತಾಲ್ಲೂಕು ಪಂಚಾಯಿತಿ, ಕೊಟ್ಟ ಗ್ರಾಮ ಪಂಚಾಯಿತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಒಂದು ಸ್ತ್ರೀಶಕ್ತಿ ಸ್ವಸಹಾಯ ಗುಂಪಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೨೩ ಮಕ್ಕಳಿದ್ದಾರೆ. ಒಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೮.೫% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧ ಪೆಟ್ಟಿಗೆ ಅಂಗಡಿ ಇದೆ. ಹೊಯ್ಸಳರ ಕಾಲದ ಲಕ್ಷ್ಮಿ ದೇವಾಲಯವಿದ್ದು ಕೋಟೆಯ ಅವಶೇಷಗಳಿವೆ.

ಮಾರಮ್ಮ, ಈಶ್ವರ, ಶನಿದೇವರ ಗುಡಿಗಳಿವೆ. ಮಾರಮ್ಮನ ಊರಹಬ್ಬವನ್ನು ವಾರ್ಷಿಕವಾಗಿ ಆಚರಿಸಿ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಶಿವರಾತ್ರಿ ಹಾಗೂ ಮಹಾನವಮಿ ಹಬ್ಬಗಳನ್ನು ಆಚರಿಸುತ್ತಾರೆ. ಕೊಟ್ಟ, ಮದಲೂರಿಗೆ ರಸ್ತೆ ಸಂಪರ್ಕವಿದೆ.

## ಬೊಪ್ಪನಾಡು

ಬೊಪ್ಪನಾಡು ತುಂಬಾ ವಿಶಿಷ್ಟವಾದ ಹೆಸರು. ಬೊಪ್ಪ ಹೆಸರಿನ ಜೊತೆಗೆ ನಾಡು ಶಬ್ದ ಸೇರಿರುವುದೇ ಇಲ್ಲಿನ ವಿಶೇಷ. ಈ ಗ್ರಾಮವನ್ನು ಕಂದಾಯ ದಾಖಲೆಗಳಲ್ಲಿ ಬೊಪ್ಪನಡು ಎಂದೇ ಕರೆದಿದೆ. ಇದು ಕಂದಾಯ ಗ್ರಾಮವಾಗಿದ್ದು ಸಿರಾ

ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೫ ಕಿಮೀ ದೂರದಲ್ಲಿದ್ದು ಸಿರಾ–ಮದಲೂರು, ಹುಳಿಗೆರೆ–ಬರಗೂರು ಮಾರ್ಗದಲ್ಲಿದೆ. ಹೊಸಹಳ್ಳಿ ಇದರ ಮಜರೆ ಗ್ರಾಮವಾಗಿದೆ. ಬೊಪ್ಪನಡು ಗ್ರಾಮದ ಭೌಗೋಳಿಕ ವಿಸ್ತೀರ್ಣ ೩೯೫.೧೭ ಹೆಕ್ಟೇರ್.

ಕುಂಚಿಟಿಗರ ಜಲದೇನವರ ಕುಲದೇವತೆ ವೀರಬೊಪ್ಪರಾಯ ಸಿರಾ ತಾಲ್ಲೂಕಿನ ಹುಲಿಕುಂಟೆ ಹೋಬಳಿಯ ಬೆಜ್ಜಿಹಳ್ಳಿ ಬೊಪ್ಪರಾಯನ ದೇವಾಲಯವಿದೆ. ಬೊಪ್ಪರಾಯನ ಒಕ್ಕಲಾದ ಈ ಗ್ರಾಮದವರು ದೈವಸಂಬಂಧಿ ಹಿನ್ನೆಲೆಯಲ್ಲಿ ಬೊಪ್ಪನಾಡು ಎಂದು ಕರೆದಿರಬೇಕು. ಜನಪದರ ಬಾಯಿ ಬೊಪ್ಪನಡುವಾಗಿ, ಸರ್ಕಾರಿ ದಾಖಲೆಯಲ್ಲಿಯೂ ಹೀಗೆಯೇ ದಾಖಲಾಗಿದೆ. ಬೊಪ್ಪರಾಯನ ಬಗೆಗೆ ಕುಂಚಿಟಿಗರ ಪುರಾಣ ಕುರುಬ ಮೂಲವನ್ನು ಹೆಸರಿಸಿದೆ. ಕುಂಚಿಟಿಗ ಜನಾಂಗದವರಿಗೆ ಸಹಾಯ ಮಾಡಿದ ಕಾರಣದಿಂದ ಆ ವರ್ಗದವರಿಗೆ ಪೂಜ್ಯನಾದ ಎಂದು ಉಲ್ಲೇಖಿಸಿದೆ.

ದೈವಮೂಲದ ಈ ಬೊಪ್ಪನಡು ಕೆಂಪುಮಿಶ್ರಿತ ಮರಳು ಮಣ್ಣಿನಿಂದ ಕೂಡಿದೆ. ಕುರುಚಲು ಗಿಡ, ಪೊದೆ, ಹಳ್ಳ–ದಿಣ್ಣೆಗಳಿಂದ ಕೂಡಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ತೋಳ ಕಂಡುಬಂದರೆ ಗ್ರಾಮದಲ್ಲಿ ಹಸು, ಎತ್ತು, ಕುರಿ, ಮೇಕೆ, ಕೋಳಿ, ಎಮ್ಮೆ ಸಾಕು ಪ್ರಾಣಿಗಳು. ಈ ಪರಿಸರದಲ್ಲಿ ಪಕ್ಷಿಗಳಾದ ಕಾಗೆ, ಕೋಗಿಲೆ, ಗಿಳಿ, ಗೂಬೆ, ಗೊರವ, ಬೆಳವ, ಹದ್ದು, ಗೂಬೆ ಮೊದಲಾದ ಪಕ್ಷಿಗಳನ್ನು ಕಾಣಬಹುದಾಗಿದೆ. ಬಯಲು ಪ್ರದೇಶ, ಬಿಸಿಲು ಅಧಿಕ. ಕೃಷಿಗಾಗಿ ಒಂದು ಕೆರೆಯಿದ್ದರೂ ತುಂಬುವುದು ಅಪರೂಪ. ಆದುದರಿಂದ ಕೃಷಿ ಅನುಕೂಲಕ್ಕಾಗಿ ೨೯ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯತ್ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ. ೩ ಕಿರು ಟ್ಯಾಂಕ್ ಇದ್ದು ೧ ಕೈಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಬಣಜಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ಮಾದಿಗರಹಟ್ಟಿ ಎಂಬ ಪ್ರತ್ಯೇಕ ಕೇರಿಯಿದೆ. ವಿವಿಧ ಸ್ವರೂಪದ ೮೦ ಮನೆಗಳಿದ್ದು ಅವು ಕಾಂಕ್ರೀಟ್, ಕಲ್ಲಿನ, ಶೀಟಿನ, ಹೆಂಚಿನ ಮನೆಗಳಾಗಿವೆ. ಇಲ್ಲಿ ಜನತಾ, ಅಂಬೇಡ್ಕರ್ ವಸತಿ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ೩೮೬ ಜನಸಂಖ್ಯೆಯಿದ್ದು ೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ದ್ವಿಚಕ್ರ ವಾಹನಗಳ ಜೊತೆಗೆ ಮಿನಿ ಟೆಂಪೋ, ಟ್ರ್ಯಕ್ಟರ್, ಆಟೋಗಳಿವೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ತೊಗರಿ, ಅಲಸಂದೆ ಆಹಾರ ಬೆಳೆಗಳು. ಸೂರ್ಯಕಾಂತಿ, ಮುಸುಕಿನಜೋಳ, ಹತ್ತಿ ಬೆಳೆಯುತ್ತಾರೆ. ತೋಟಗಾರಿಕೆಯಾಗಿ ತೆಂಗು, ಅಡಿಕೆ ಬೆಳೆಯೂ ಇದೆ. ಶೇಂಗಾ, ಹುಣಸೆ ಹಣ್ಣು, ಹೊಂಗೆಬೀಜ ವ್ಯಾಪಾರಿ ಬೆಳೆಗಳು. ಈ ಗ್ರಾಮ ಹೂವಿನ ಬೆಳೆ ಹಾಗೂ ವ್ಯಾಪಾರಕ್ಕೆ ಪ್ರಸಿದ್ಧವಾಗಿದ್ದು ಇಲ್ಲಿಂದ ಕಾಕಡ, ಮಲ್ಲಿಗೆ ಹೂಗಳನ್ನು ಸಂಗ್ರಹಿಸಿ ಬಾಂಬೆ, ಪುಣೆ, ಕೊಲ್ಲಾಪುರಗಳಿಗೆ ರವಾನಿಸಲಾಗುತ್ತಿದೆ. ಶ್ರೀ ರಾಜಣ್ಣ, ಜಗದೀಶ್ ಪ್ರಮುಖ ಹೂವಿನ ಸಗಟು ವ್ಯಾಪಾರಗಾರರಾಗಿದ್ದಾರೆ. ಶಿಕ್ಷಣ, ಸಾರಿಕೆ, ಆರೋಗ್ಯ, ಕಂದಾಯ ಇಲಾಖೆಯ ೬ ಜನ ಸರ್ಕಾರಿ ನೌಕರರಾಗಿದ್ದಾರೆ. ಮಹಿಳೆಯರು ಹೂ ಕಟ್ಟುವುದು, ಬೀಡಿ ಕಟ್ಟುವುದು ಗೃಹ ಕೈಗಾರಿಕೆಯಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರು ಈ ಗ್ರಾಮದ ಪ್ರತಿನಿಧಿಗಳಿದ್ದಾರೆ.

೨ ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳಾ ಸ್ವಾವಲಂಬನೆಗೆ ಪ್ರೇರಕವಾಗಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೪೩ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ೫೭.೫% ರಷ್ಟು ಸಾಕ್ಷರತಾ ಪ್ರಮಾಣವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ೨ ವೀರಗಲ್ಲುಗಳಿದ್ದು ನೊಳಂಬರ ಕಾಲದ ರಚನೆಗಳಾಗಿವೆ.

ಗ್ರಾಮದೇವತೆ ದುರ್ಗಮ್ಮ, ತಿಮ್ಮಪ್ಪ, ಶನಿದೇವರ ದೇವಾಲಯಗಳಿವೆ. ದುರ್ಗಮ್ಮನ ವಾರ್ಷಿಕ ಜಾತ್ರೆ ಊರ ಉತ್ಸವವಾಗಿದೆ. ಆರತಿ, ಬ್ಯಾಟೆ, ಹರಕೆ ಸಂಪ್ರದಾಯಗಳಿವೆ. ಯುಗಾದಿ, ಮಹಾನವಮಿ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬೋರಸಂದ್ರ

ಬೋರಸಂದ್ರ, ಬೋರಸಮುದ್ರ ಎಂದೆಲ್ಲಾ ಕರೆಯುವ ಈ ಕಂದಾಯ ಗ್ರಾಮ ಸಿರಾ ತಾಲ್ಲೂಕು ಕೇಂದ್ರದಿಂದ ೧೪ ಕಿಮೀ ದೂರದಲ್ಲಿದೆ. ಸಿರಾ–ಮಧುಗಿರಿ ಮುಖ್ಯ ರಸ್ತೆಯಲ್ಲಿ ಬೋರಸಂದ್ರ ಗೇಟಿನಿಂದ ಎಡಭಾಗಕ್ಕೆ ೨ ಕಿಮೀ ದೂರದಲ್ಲಿದೆ. ಬೋರಮ್ಮ ಎಂಬ ಹೆಸರಿನ ಹೆಸರನ್ನೇ ಮುಂದುವರಿಸಿ ಈ ಹೆಸರು ಬಂದಿದೆ ಎಂದು ಗ್ರಾಮಸ್ಥರು ಹೇಳುತ್ತಾರೆ. ಆದರೂ ಪುರುಷವಾಚಕ ಶಬ್ದ ಈ ಗ್ರಾಮಕ್ಕೆ ಇರುವುದರಿಂದಲೂ ಪಕ್ಕದಲ್ಲಿಯೇ ೮ ಅಡಿ ಆಳದ, ೫೬ ಹೆಕ್ಟೇರ್ ನೀರಾವರಿ ಸೌಲಭ್ಯ ಒದಗಿಸುವ ಕೆರೆಯೊಂದಿದ್ದು ಬೋರ+ಸಮುದ್ರ= ಸಂದ್ರ – ಬೋರಸಂದ್ರವಾಗಿದೆ ಎಂಬುದು ಸೂಕ್ತವಾಗಿದೆ. ೮೯೧.೯೪ ಹೆಕ್ಟೇರ್ ವಿಸ್ತೀರ್ಣವುಳ್ಳ ಭೂಮಿಯ ವಿಶಾಲ ವ್ಯಾಪ್ತಿಯ ಬೋರಸಂದ್ರದಲ್ಲಿ ೨೧೧೦ ಕುಟುಂಬಗಳಿವೆ. ಕುಂಚಿಟಿಗ, ಕುರುಬ ಜನಾಂಗ ಸಮ–ಸಮವಾಗಿರುವ ದೊಡ್ಡ ಸಮುದಾಯವಾಗಿದ್ದು ಬೇಡರು, ಆದಿಕರ್ನಾಟಕ, ಈಡಿಗ, ಬಣಜಿಗ ಹಾಗೂ ಅಗಸರ ಮನೆಗಳಿವೆ. ಇವು ಸಣ್ಣ ಸಮುದಾಯವಾಗಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಎತ್ತಿನ ಬಂಡಿ, ಸ್ಕೂಟರ್, ಟ್ರ್ಯಾಕ್ಟರ್ ಬಳಕೆಯಲ್ಲಿದ್ದು ಗ್ರಾಮದ ಮುಖ್ಯ ಬೆಳೆ ರಾಗಿ, ಅಲಸಂದೆ, ತೊಗರಿ, ಶೇಂಗಾ. ವ್ಯಾಪಾರಿ ಬೆಳೆಯಾಗಿ ಹತ್ತಿ, ತೆಂಗು, ಅಡಿಕೆ, ಸೂರ್ಯಕಾಂತಿ ಬೆಳೆಯುತ್ತಾರೆ. ೪ ಜನ ಸರ್ಕಾರಿ ನೌಕರರು, ಉಪನ್ಯಾಸಕರು ಇದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಪಂಚಾಯ್ತಿಗೆ ಸೇರಿದ್ದು ಮಾಗೋಡು ಗ್ರಾಮ ಪಂಚಾಯ್ತಿ ಇದರ ವ್ಯಾಪ್ತಿಯಲ್ಲಿಯೇ ಬರುತ್ತದೆ. ಈ ಗ್ರಾಮದ ಇಬ್ಬರು ಸದಸ್ಯರು ಪ್ರತಿನಿಧಿಗಳಿದ್ದಾರೆ. ಒಂದು ಅಂಗನವಾಡಿ, ಸರ್ಕಾರಿ ಹಿರಿಯ ಪಾಠಶಾಲೆಗಳಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ೪ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ೧೨ ಜನ ಫಲಾನುಭವಿಗಳಿದ್ದಾರೆ. ಜನತಾ, ಇಂದಿರಾ ಆವಾಸ್ ಯೋಜನೆ, ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೧ ಟೀ ಹೋಟೆಲ್, ೩ ಅಂಗಡಿಗಳಿವೆ.

ಇದೊಂದು ಪ್ರಾಚೀನ ಗ್ರಾಮವಾಗಿದ್ದು ಊರ ಮುಂಭಾಗದಲ್ಲಿ ಮುರಿದು ಬಿದ್ದ ಕೋಟೆ, ಊರ ಬಾಗಿಲುಗಳ ಅವಶೇಷಗಳಿವೆ. ಆಂಜನೇಯ, ರಂಗನಾಥ, ಬೊಮ್ಮಪ್ಪ, ಮುತ್ತುರಾಯಪ್ಪ ದೇವಾಲಯಗಳಿದ್ದು ಈರಗಾಟಪ್ಪನ ಪೌಳಿಯಿದೆ. ಇದಕ್ಕೆ ಮಲ್ಲಿಗೆ ಬೆಡಗಿನ ನಾಯಕರು ಯುಗಾದಿ ಕಾಲದಲ್ಲಿ ಜಾತ್ರೆ ನಡೆಸುತ್ತಾರೆ. ಊರ ಹೊರಗಿನ ಈರಮಲ್ಲಪ್ಪನ ಗುಡಿಗೆ ಎಲ್ಲರೂ ನಡೆದುಕೊಳ್ಳುತ್ತಾರೆ. ಹೊಸ ಬೆಳೆಯನ್ನು ಮನೆಗೆ ತರುವಾಗ ಈ ದೇವರಿಗೆ ಹರಿಸೇವೆ, ಅನ್ನ ಸಂತರ್ಪಣೆ ಮಾಡುತ್ತಿದ್ದು ಈಗ ಕಡಿಮೆಯಾಗಿದೆ.

ಗ್ರಾಮದ ೨೦ ಮನೆಗಳಲ್ಲಿ ಶೌಚಾಲಯದ ಸೌಲಭ್ಯ ಪಡೆದಿವೆ. ಚಾರಿತ್ರಿಕವಾಗಿ ಮಹತ್ವವಿರುವ ಬೋರಸಂದ್ರ ಶಾಸನ, ಸಿರಾ ಶಾಸನ ೯೯, ಕ್ರಿ.ಶ.೧೧೭೫ ರ ಪ್ರಕಾರ ಹೊಯ್ಸಳ ಅರಸ ವೀರಬಲ್ಲಾಳನು ನೊಳಂಬವಾಡಿಯ ಮೇಲೆ ಧಾಳಿ ಮಾಡಿದಾಗ ಸೀಬಿ ಬಳಿ ನಡೆದ ಯುದ್ಧದಲ್ಲಿ ಬೊಮ್ಮಯ್ಯ ಗೌಡನು ಮಡಿಯುತ್ತಾನೆ. ಆಗ ಆತನ ಮಗನಾದ ಬ್ರಹ್ಮನು ತನ್ನ ತಂದೆಗೆ ವೀರಗಲ್ಲನ್ನು ನೆಟ್ಟು ಶಾಸನ ಹಾಕಿಸಿದ ವಿವರವಿದೆ. ಹೀಗಾಗಿ ಬ್ರಹ್ಮಯ್ಯ ಹೆಸರಿನ ಗ್ರಾಮ ನಂತರದಲ್ಲಿ ಜನಪದರು ಬೋರಸಂದ್ರ ಎಂದು ಕರೆದಿರುವ ಬಗೆಗೆ ಸೂಕ್ಷ್ಮ ಮಾಹಿತಿ ಈ ಶಾಸನದಿಂದ ತಿಳಿಯುತ್ತದೆ. ಇದೇ ಗ್ರಾಮದ ವಿಶೇಷವೂ ಆಗಿದೆ.

## ಬಿದರಕೆರೆ

ಬಿದರಕೆರೆ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೭ ಕಿಮೀ ದೂರದಲ್ಲಿದೆ. ಸಿರಾ–ಚಂಗಾವರ–ಧರ್ಮಪುರ ಮುಖ್ಯ ರಸ್ತೆಯಲ್ಲಿ ಬಿದರಕೆರೆ ಗೇಟಿನಿಂದ ಎಡಭಾಗಕ್ಕೆ ಅರ್ಧ ಕಿಮೀ ದೂರ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೬೩೭.೨೪ ರಷ್ಟಿದೆ. ಈ ಗ್ರಾಮಕ್ಕೆ ಮಜರೆ ಗ್ರಾಮಗಳಾಗಿ ಗಜಮಾರನಹಳ್ಳಿ, ಬಿದರಕೆರೆ ಗೊಲ್ಲರಹಟ್ಟಿ ಸೇರ್ಪಡೆಗೊಂಡಿವೆ.

ಕೆರೆಯ ಅಂಗಳ ಊರ ಉತ್ತರ ಭಾಗದಲ್ಲಿದ್ದು ಒಂದು ಕಾಲದಲ್ಲಿ ಹೇರಳವಾದ ಈಚಲು ವನವಿದ್ದ ಸ್ಥಳ. ಇಲ್ಲಿ ಹೇರಳವಾಗಿ ಬಿದಿರು ಬೆಳೆಯೂ ಇದ್ದು ಕೆರೆಯ ಅಂಗಳ ಬಿದಿರಿನಿಂದ ಕೂಡಿದ್ದ ಕಾರಣ ಹಳ್ಳಿ ರಚನೆಯಾದಾಗ ಅಲ್ಲಿ ಪ್ರಾಕೃತಿಕ ರಚನೆಯೊಂದಿಗೆ ಬಿದರು ಮೆಳೆಯ + ಕೆರೆ ಸೇರಿ ಬಿದರಕೆರೆಯಾಗಿದೆ ಎಂದು ಗ್ರಾಮಪಂಚಾಯ್ತಿ ಸದಸ್ಯ

ಪದವೀಧರ ರಾಜಶೇಖರ ಅಭಿಪ್ರಾಯಪಡುತ್ತಾರೆ. ಕೆರೆಯ ಬಯಲು, ಮೇಲಕ್ಕೆ ದಿಣ್ಣೆ, ಎಡಭಾಗದಲ್ಲಿ ಕಾಡುಗೊಲ್ಲರ ಹಟ್ಟಿ, ಮುಂದೆ ಒಂದಿಷ್ಟು ತೆಂಗಿನ ತೋಟಸಾಲು. ಹಾಗಾಗಿ ಇಲ್ಲಿ ಕಾಡುಪ್ರಾಣಿಗಳಾದ ನರಿ, ಉಡ, ಮೊಲ, ಜಿಂಕೆ, ಹಂದಿಗಳು ವ್ಯಾಪಕವಾಗಿ ಕಂಡುಬರುತ್ತವೆ. ಗ್ರಾಮದಲ್ಲಿ ರೈತಾಪಿ ಜನ ಹಸು, ಮೇಕೆ, ಕುರಿ, ಕೋಳಿಗಳನ್ನು ಸಾಕಿದ್ದಾರೆ. ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಹದ್ದು, ಕಾಗೆ, ಕೋಗಿಲೆ, ಗೂಬೆ, ಗರುಡ ಕಂಡುಬಂದರೆ ನಾಗರಹಾವು ಹಾಗೂ ವಿಷಜಾತಿಯ ಹಾವುಗಳು ಕಂಡುಬರುತ್ತವೆ.

ವಾರ್ಷಿಕ ಸರಾಸರಿ ೪೩೪–೪೬೦ ಮಿಮೀ ಮಳೆ ಬೀಳುತ್ತಿದ್ದು ಬಿಸಿಲು ೩೧.೨ ಡಿಗ್ರಿ ಸೆಂಟಿಗ್ರೇಡ್ ಇದ್ದರೆ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಆಗಿರುತ್ತದೆ. ಈ ಗ್ರಾಮದ ಎಡಬದಿಗೆ ನಾಶವಾಗಿರುವ ಕೋಟೆ, ಊರಬಾಗಿಲು ಅವಶೇಷ ಕಂಡುಬಂದರೆ ಗ್ರಾಮ ಬೆಳೆದಂತೆ ಹೊರಚ್ಚಿಗೆ ನೂತನವಾಗಿ ಮನೆ ನಿರ್ಮಿಸಿಕೊಂಡಿರುವ ಲಕ್ಷಣ ಕಂಡುಬರುತ್ತದೆ. ಕೃಷಿ ಪ್ರಮುಖ ಕಸುಬಾಗಿರುವ ಇಲ್ಲಿನ ರೈತರು ಮಳೆ ಕಡಿಮೆ ಇರುವುದರಿಂದ ೩೭ ಕೊಳವೆ ಬಾವಿಗಳ ಮೂಲಕ ನೀರು ಪೂರೈಸಿಕೊಂಡು ಬೆಳೆ ತೆಗೆಯುತ್ತಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೬ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲರ್ಲಿ ಉಪ್ಪಾರ ಜನಾಂಗ ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ನಾಯಕ, ಆದಿದ್ರಾವಿಡ, ಕುಂಚಿಟಿಗರು ಕಿರುಸಮುದಾಯವಾಗಿದೆ. ಆದಿದ್ರಾವಿಡ ಜನಾಂಗದ ಕಟ್ಟೆ ಮನೆ ಈ ಗ್ರಾಮವಾಗಿದ್ದು ಲಕ್ಷ್ಮಿ ದೇವಸ್ಥಾನವಿದೆ. ಕನ್ನಡ ಮಾತೃಭಾಷೆಯಾಗಿದೆ.

ವಿವಿಧ ಆಕೃತಿಯ ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿವೆ. ೧೦೪ ಮನೆಗಳಿದ್ದು ಇವು ಆಶ್ರಯ, ಅಂಬೇಡ್ಕರ್, ಜನತಾ ವಸತಿ ಯೋಜನೆಯ ಅಡಿಯಲ್ಲಿ ೧೩ ಮನೆಗಳು ರಚನೆಯಾಗಿವೆ. ಇಲ್ಲಿನ ೪೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಒಟ್ಟು ೪೫೫ ಜನಸಂಖ್ಯೆ ಹೊಂದಿದೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ಆಟೋ ಬಳಕೆಯಲ್ಲಿದೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಜೋಳ, ತೊಗರಿ, ಹುರುಳಿ ಬೆಳೆಯುತ್ತಾರೆ. ವಿರಳವಾಗಿ ತೆಂಗಿನ ತೋಟಗಳಿವೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತದೆ. ಶೇಂಗಾ, ಹುಣಸೆಹಣ್ಣಿನ ವ್ಯಾಪಾರವಿದೆ.

ಮಹಿಳೆಯರು ಕೂಲಿ ಹಾಗೂ ಬೀಡಿ ಸುತ್ತುವುದು ವಾಡಿಕೆಯಾಗಿದೆ. ಸಾರಿಗೆ, ಕಂದಾಯ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಮೇಲುಕುಂಟೆ ತಾಲ್ಲೂಕು ಹಾಗೂ ಕೊಟ್ಟ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ರಾಜಶೇಖರ್ ಎಂಬ ಪದವೀಧರ ಉಪ್ಪಾರ ಜನಾಂಗದ ಯುವಕ ಇಲ್ಲಿನ ಗ್ರಾಮಪಂಚಾಯ್ತಿ ಪ್ರತಿನಿಧಿಯಾಗಿದ್ದಾರೆ.

ಗ್ರಾಮದಲ್ಲಿ ೩ ಸ್ತ್ರೀಶಕ್ತಿ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪುಗಳಿದ್ದು ಮಹಿಳಾ ಆರ್ಥಿಕ ಸಬಲತೆಗೆ ಪ್ರೇರಕವಾಗಿದೆ. ಒಂದು ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೪೪ ಮಕ್ಕಳು, ೨ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೭% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೪ ಪೆಟ್ಟಿಗೆ ಅಂಗಡಿ, ೧ ಟೀ ಅಂಗಡಿ ಇದ್ದು ಕರಿಯಮ್ಮ, ನರಸಿಂಹಸ್ವಾಮಿ, ಮಣ್ಣಮ್ಮ, ಲಕ್ಷ್ಮೀದೇವರ ದೇವಸ್ಥಾನಗಳಿವೆ. ಕರಿಯಮ್ಮನ ಊರ ಹಬ್ಬ ಮಾಡಿ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯಗಳನ್ನು ಆಚರಿಸುತ್ತಾರೆ. ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬಿದರೆಕೆರೆ ಗೊಲ್ಲರಹಟ್ಟಿ

ಬಿದರೆಕೆರೆ ಗೊಲ್ಲರಹಟ್ಟಿಯು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೫೫ ಕಿಮೀ ದೂರದಲ್ಲಿದೆ. ಸಿರಾ–ಚಂಗಾವರ ಮುಖ್ಯ ರಸ್ತೆಯಲ್ಲಿ ಗಜಮಾರನಹಳ್ಳಿ, ಭೂತಕಾಟನಹಳ್ಳಿ ನಡುವಿನ ರಸ್ತೆಯ ಎಡಬದಿಗೆ ಈ ಕಾಡುಗೊಲ್ಲರ ಬುಡಕಟ್ಟು ಗ್ರಾಮವಿದೆ. ಇದೊಂದು ಬಿದರೆಕೆರೆಯ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೬೮.೦೮ ಹೆಕ್ಟೇರ್ ಆಗಿದೆ. ಮರಳು ಮಿಶ್ರಿತ ಕಂದು ಮಣ್ಣನ್ನು ಹೊಂದಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಮುಂಗುಸಿ, ಹಂದಿ ಕಂಡುಬರುತ್ತವೆ. ಗ್ರಾಮದಲ್ಲಿ

ರೈತರು ಕುರಿ, ಮೇಕೆ, ಹಸು, ಎತ್ತು, ಎಮ್ಮೆ ಸಾಕಿದ್ದಾರೆ. ನಾಯಿ ಹಾಗೂ ೩ ಕತ್ತೆಗಳಿವೆ. ಸಾಕು ಪಕ್ಷಿಯಾಗಿ ಕೋಳಿಯಿದೆ. ಪಕ್ಷಿಗಳಾದ ಗೊರವಂಕ, ಬೆಳವ, ಹದ್ದು, ಗರುಡ, ಗಿಳಿ, ಕೌಜುಗ, ಕೊಕ್ಕರೆ, ಕೋಗಿಲೆ, ಗುಬ್ಬಚ್ಚಿ ಕಂಡುಬರುತ್ತವೆ. ಬಿಸಿಲಿನ ಬಯಲು ಸೀಮೆಯ ಪ್ರದೇಶವಾದ ಇಲ್ಲಿ ವಾರ್ಷಿಕ ಸರಾಸರಿ ೪೩೪-೪೬೦ ಮಿಮೀ ಮಳೆ ಬೀಳುತ್ತಿದ್ದು ಬಿಸಿಲು ೩೮ ಡಿಗ್ರಿ ಸೆಂಟಿಗ್ರೇಡ್ ಇದ್ದರೆ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಆಗಿರುತ್ತದೆ.

ಗ್ರಾಮದ ಉತ್ತರಕ್ಕೆ ಬಿದರೆಕೆರೆಯಿದ್ದು ತುಂಬುವುದು ವಿರಳ. ಕೃಷಿ ಕಾಯಕಕ್ಕೆ ೧೪ ಪಂಪ್‌ಸೆಟ್ ಇವೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ೨ ಸಿಸ್ಟರ್ನ್‌ಗಳಿದ್ದು ಒಂದು ಕೈಪಂಪು ಇದೆ.

ಕಾಡುಗೊಲ್ಲರ ೪೩ ಮನೆಗಳು ಮಾತ್ರವಿದ್ದು ಇವು ಹೆಂಚಿನ, ಶೀಟಿನ ೪ ಗುಡಿಸಲು ಮನೆಗಳಿವೆ. ಜನತಾ, ಆಶ್ರಯ, ವಸತಿ ಸೌಲಭ್ಯದ ಫಲಾನುಭವಿಗಳಿದ್ದಾರೆ. ೧೬೮ ಜನಸಂಖ್ಯೆ ಹೊಂದಿರುವ ಇಲ್ಲಿ ೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಸಾಂಪ್ರದಾಯಿಕ ವಾಹನ ಟ್ರ್ಯಾಕ್ಟರ್ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ತೊಗರಿ, ಹುರುಳಿ ಬೆಳೆಯುತ್ತಾರೆ. ಹುಣಸೆಹಣ್ಣು, ಕುರಿ ವ್ಯಾಪಾರ ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ ತಾಲ್ಲೂಕು ಹಾಗೂ ಕೊಟ್ಟ ಗ್ರಾಮ ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದ್ದು ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯ್ತಿ ಸದಸ್ಯರು ಈ ಗ್ರಾಮದ ಪ್ರತಿನಿಧಿಯಾಗಿದ್ದಾರೆ. ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೨೭ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೭% ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧ ಪೆಟ್ಟಿಗೆ ಅಂಗಡಿ ಇದೆ.

ಗ್ರಾಮದೇವತೆ ಕರಿಯಮ್ಮ ಹೊರಗಡೆ ತಿಮ್ಮಪ್ಪನ ಪೌಳಿಯಿದೆ. ವಾರ್ಷಿಕವಾಗಿ ಕರಿಯಮ್ಮನಿಗೆ ಆರತಿ, ವಾನ, ಬ್ಯಾಟೆ ಸಂಪ್ರದಾಯವಿದೆ. ಹೊರಬೀಡು ಎಂಬ ವಾರ್ಷಿಕ ಸಾಂಸ್ಕೃತಿಕ, ಧಾರ್ಮಿಕ ಸಂಪ್ರದಾಯವಿದ್ದು ಅಂದು ಪ್ರಾತಃಕಾಲ ಇಡೀ ಗ್ರಾಮ ಮನೆಯ ಮುಚ್ಚುಬಾಗಿಲು ಹಾಕಿ ಗ್ರಾಮದಿಂದ ಹೊರಗೆ ಅಡಿಗೆ ಮಾಡಿಕೊಂಡು ಇದ್ದು ಸೂರ್ಯ ಮುಳುಗಿದ ನಂತರ ಗ್ರಾಮ ಪ್ರವೇಶ ಮಾಡುವುದು ಇಲ್ಲಿನ ವಿಶೇಷ. ಉಳಿದಂತೆ ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಬಂದಕುಂಟೆ

ಬಂಡಕುಂಟೆ, ಬಂದಕುಂಟೆ ಈ ಎರಡೂ ಹೆಸರುಗಳ ನಡುವೆ ಬಂಡ ಮಾಯವಾಗಿ ಬಂದಕುಂಟೆ ಉಳಿದುಕೊಂಡಿದೆ ಎಂಬುದು ಈ ಗ್ರಾಮದ ಹಿರಿಯ ಗೋಪಾಲಯ್ಯ ಅವರ ಅಭಿಮತ. ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧ ಕಿ.ಮೀ ದೂರದಲ್ಲಿರುವ ಈ ಗ್ರಾಮ ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೪೦೮.೨೭ ಹೆಕ್ಟೇರ್ ಆಗಿದೆ. ಸಿರಾ-ಅಮರಾಪುರ ಮುಖ್ಯರಸ್ತೆಯ ತೊಗರಿಗುಂಟೆಯ ಬಳಿ ಎಡಕ್ಕೆ ತಿರುಗಿ ೧ ಕಿಮೀ ದೂರದಲ್ಲಿ ಈ ಗ್ರಾಮವಿದೆ. ಗೋವಿಂದನಹಳ್ಳಿ, ಬಂದಕುಂಟೆ ಗೊಲ್ಲರಹಟ್ಟಿಗಳು ಇದರ ಮಜರೆ ಗ್ರಾಮಗಳಾಗಿವೆ. ಸಿರಾ ತಾಲ್ಲೂಕಿನ ಗೌಡಗೆರೆ ಹೋಬಳಿಗೆ ಸೇರಿದ ಗ್ರಾಮವಾಗಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಬಯಲು ಪ್ರದೇಶವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದೆ.

ಕುರುಬರು ಇಲ್ಲಿ ವಾಸಿಸುತ್ತ ಕಂಬಳಿ ತುಪ್ಪಟ (ಬಂಡೆ) ಹದ ಮಾಡುತ್ತಾ ನೂಲು, ರಾಟೆ, ಕಂಬಳಿ ನೇಯ್ಗೆ ಕೆಲಸ ಮಾಡುತ್ತಿದ್ದರು. ಹಾಗಾಗಿಯೇ ಬಂಡ ಎಂದರೆ ಕುರಿಯ ತುಪ್ಪಟ ಬಂಡ ಎಂಬ ಹೆಸರಿದ್ದು ಆ ಕಾರಣದಿಂದಲೇ ಈ ಗ್ರಾಮಕ್ಕೆ ಬಂದಕುಂಟೆ ಎಂದು ಇದ್ದದ್ದು ನಂತರದ ದಿನಗಳಲ್ಲಿ ಬಂಡ ಇಲ್ಲಿ 'ಡ' ಅಕ್ಷರದ ಬದಲಿಗೆ 'ದ' ಅಕ್ಷರ ಸೇರ್ಪಡೆಯಾಗಿದೆ ಎಂದು ಯಕ್ಷಗಾನ ಭಾಗವತ, ೯೪ ವರ್ಷ ವಯಸ್ಸಿನ ಗೋಪಾಲಗೌಡ ಹೇಳುತ್ತಾರೆ. ಜೊತೆಗೆ ಇಲ್ಲಿದ್ದ ಕುರುಬರು, ಬಡಕನಹಳ್ಳಿ, ವೀರಗಾನಹಳ್ಳಿ ಕಡೆ ಹೋಗಿ ನೆಲೆಸಿದರು. ಆದರೂ ಇಲ್ಲಿನ ಆಂಜನೇಯ ದೇವರಿಗೆ ಅವರು ಬಂದು ಪೂಜಿಸುವ ಪದ್ಧತಿ ಇಂದಿಗೂ ಇದೆ ಎಂಬುದು ಇವರ ಅಭಿಮತವಾಗಿದೆ. ಯುವ ಸಾಹಿತಿ, ಚಲನಚಿತ್ರ ಕಲಾವಿದ ತಿಪ್ಪೇಶ್ ಅವರು ಹೇಳುವ ಪ್ರಕಾರ ಈ ಗ್ರಾಮಕ್ಕೆ

ಹೊರಗಡೆಯಿಂದ ಬಂದು ನೆಲೆಸಿದವರೇ ಅಧಿಕ. ಪಕ್ಕದಲ್ಲಿ ಕೆರೆಯೂ ಇರುವುದರಿಂದ ಹೊರಗಿನಿಂದ ಬಂದವರು, ಬಂದವರ ಕಟ್ಟೆ ಬಂದಕುಂಟೆ ಆಗಿದೆ ಎನ್ನುತ್ತಾರೆ. ಈ ಎರಡೂ ಮೂಲಗಳು ಇಲ್ಲಿ ಮೂಲ ನಿವಾಸಿಗಳ ಕಡೆಗೆ ಒತ್ತು ನೀಡಿದಂತಿದ್ದು ಬಂಡ ತಯಾರಿಕೆಯ ಊರು ಬಂಡ – ಬಂದವಾಗಿದೆ ಎಂಬುದು ವಾಸ್ತವಿಕ ಸಂಗತಿಯಾಗಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಮೊಲ, ಜಿಂಕೆ, ಕಾಡುಹಂದಿ ಕಂಡುಬರುತ್ತವೆ. ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗಾಗಿ ಹಸು, ಹಳ್ಳಿಕಾರ್ ತಳಿ ಎತ್ತು, ಕುರಿ, ಮೇಕೆ, ನಾಯಿಯಂತಹ ಪ್ರಾಣಿಗಳನ್ನು ಸಾಕಲಾಗಿದೆ. ಗಿಳಿ, ಗುಬ್ಬಚ್ಚಿ, ಗೂಬೆ, ಹದ್ದು, ಗರುಡ, ಕೋಗಿಲೆ, ಕೊಕ್ಕರೆ, ಬೆಳವ, ಗೊರವಂಕ, ಕೌಜುಗ, ಗಿಡುಗ ಈ ಪಕ್ಷಿಗಳನ್ನು ಕಾಣಬಹುದಾಗಿದೆ. ಕೋಳಿ ಸಾಕುಪಕ್ಷಿಯಾಗಿದೆ.

ಸಾಧಾರಣ ಮಳೆ, ಬಿಸಿಲು ಅಧಿಕ. ವಾಡಿಕೆಗಿಂತ ಮಳೆ ಕಡಿಮೆಯಿದ್ದು ೨ ವರ್ಷಗಳಲ್ಲಿ ಸರಾಸರಿ ೪೬೦ ಮಿಮೀ ಮಳೆ ಬಿದ್ದಿದೆ. ಉಷ್ಣಾಂಶ ೩೬–೩೭ ಡಿಗ್ರಿ ಇದ್ದರೆ ಚಳಿ ೧೨ ಡಿಗ್ರಿ ಸಾಮಾನ್ಯವಾಗಿದೆ. ಮಳೆ ಅವಲಂಬಿತ ಕೃಷಿ ಕಾಯಕ. ನೀರಿನ ತೀವ್ರತೆ ಕಡಿಮೆಯಿದ್ದು ಕೃಷಿ ಉಪಯೋಜನೆಗೆ ೧೨೦ ಕೊಳವೆ ಬಾವಿಗಳ ಮೂಲಕ ನೀರಿನ ಆಶ್ರಯ ಮಾಡಿಕೊಂಡಿದ್ದಾರೆ. ಒಂದು ಕೆರೆಯಿದ್ದರೂ ತುಂಬುವುದಿಲ್ಲ. ಗ್ರಾಮದಲ್ಲಿ ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ೧೦ ಸಿಸ್ಟರ್ನ್‌ಗಳ ಮೂಲಕ ನೀರು ಪೂರೈಸಲಾಗುತ್ತದೆ. ಮೂರು ಕೈಪಂಪುಗಳಿವೆ. ೭೫ ನಲ್ಲಿ ಸಂಪರ್ಕವಿದೆ. ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಕುಂಬಾರ, ಬ್ರಾಹ್ಮಣ, ಲಿಂಗಾಯಿತ, ಕ್ಷೌರಿಕ, ನಾಯಕ, ಆದಿದ್ರಾವಿಡ, ಮಡಿವಾಳ, ಕಮ್ಮಾರ, ಮುಸ್ಲಿಂ ಜನಾಂಗದವರು ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದ್ದು ಉರ್ದು ಅಲ್ಪಸಂಖ್ಯಾತ ಭಾಷೆಯಾಗಿದೆ. ವಿವಿಧ ಪ್ರಕಾರಗಳ ೨೪೬ ಮನೆಗಳಿದ್ದು ಅವು ಕಾಂಕ್ರೀಟ್, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿವೆ. ಒಟ್ಟು ೧೮೩ ಮನೆಗಳನ್ನು ಶೌಚಾಲಯದ ಬಳಕೆಯಿದೆ. ಇಲ್ಲಿನ ೨೩ ಗೃಹಗಳಿಗೆ ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಬಂಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಅಲಸಂದೆ, ತೊಗರಿ ಬೆಳೆಗಳನ್ನು ಆಹಾರ ಬೆಳೆಯಾಗಿ ಬೆಳೆಯುತ್ತಾರೆ. ತೆಂಗು, ಅಡಿಕೆ, ಸೂರ್ಯಕಾಂತಿ, ರೇಷ್ಮೆ, ಸೇವಂತಿಗೆ ಬೆಳೆಗಳಿವೆ. ಗ್ರಾಮದಲ್ಲಿ ಒಂದು ಹಾಲಿನ ಕೇಂದ್ರವಿದ್ದು ಸರಾಸರಿ ೩೫೦ ಲೀ. ಹಾಲು ಸಂಗ್ರಹವಾಗುತ್ತಿದೆ.

ಪ್ರಾಧ್ಯಾಪಕ ಡಾ॥ ಸಿ.ರಂಗನಾಥ್, ಶಿಕ್ಷಣ, ಫಾರೆಸ್ಟ್, ಸಾರಿಗೆ, ಅಂಚೆ ಇಲಾಖೆಗೆ ಸೇರಿದ ೧೦ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಇಂಜಿನಿಯರ್, ಎಲೆಕ್ಟ್ರಿಕಲ್ ಕಂಟ್ರಾಕ್ಟರ್ ಇದ್ದಾರೆ. ಗ್ರಾಮದಲ್ಲಿ ಮಹಿಳೆಯರು ಬೀಡಿ ಕಟ್ಟುವುದು, ಬಟ್ಟೆ ಹೊಲಿಯುವುದು ಈ ಮೊದಲಾದ ಗೃಹ ಕೈಗಾರಿಕೆ ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಮೇಲ್ಕುಂಟೆ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಈ ಗ್ರಾಮದ ೩ ಜನ ಪಂಚಾಯ್ತಿ ಸದಸ್ಯರಿದ್ದಾರೆ. ಒಂದು ಅಂಚೆ ಕಛೇರಿಯಿದೆ.

ಗ್ರಾಮದಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘ, ನ್ಯಾಯಬೆಲೆ ಅಂಗಡಿಯೊಂದು ಇದೆ. ೮ ಸ್ತ್ರೀಶಕ್ತಿ ಸಂಘ, ೩ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪಿನ ೨ ತಂಡಗಳಿದ್ದು ಮಹಿಳಾ ಸಬಲೀಕರಣಕ್ಕೆ ಪ್ರೇರಕವಾಗಿವೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಹಾಗೂ ಶ್ರೀ ಮಣ್ಣಮ್ಮ ಗ್ರಾಮಾಂತರ ಪ್ರೌಢಶಾಲೆ ಇದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಶಾಲೆಯಲ್ಲಿ ೧೧೬ ಮಕ್ಕಳು, ಪ್ರೌಢಶಾಲೆಯಲ್ಲಿ ೨೦೯ ಮಕ್ಕಳಿದ್ದಾರೆ. ಒಟ್ಟು ೮ ಜನ ಶಿಕ್ಷಕರಿದ್ದಾರೆ. ಗ್ರಾಮದ ಸಾಕ್ಷರತೆ ೫೬% ರಷ್ಟಿದೆ. ಒಂದು ಉಪ ಆರೋಗ್ಯ ಕೇಂದ್ರವಿದ್ದು ಸಮೀಪದ ಹಲವು ಹಳ್ಳಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧೨ ಪೆಟ್ಟಿಗೆ ಅಂಗಡಿ, ೪ ಟೀ ಅಂಗಡಿಗಳಿವೆ. ಜೊತೆಗೆ ದನಗಳ ವ್ಯಾಪಾರಿಗಳು ಈ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ವಿಜಯನಗರ ಅರಸರ ಕಾಲಕ್ಕೆ ಸಂಬಂಧಿಸಿದ ೪ ವೀರಗಲ್ಲು ಹಾಗೂ ೧೧ ಮಹಾಸತಿ ಕಲ್ಲುಗಳಿದ್ದು ಕಲಾತ್ಮಕ ಕೆತ್ತನೆಯಿಂದ ಕೂಡಿವೆ. ಧಾರ್ಮಿಕವಾಗಿ

ಆಂಜನೇಯ, ೨ ಲಕ್ಷ್ಮೀದೇವರು, ತಿಮ್ಮಪ್ಪನ ಗುಡಿಗಳಿವೆ. ಧಾರ್ಮಿಕ ಹಬ್ಬಗಳಾದ ಯುಗಾದಿ, ಸಂಕ್ರಾಂತಿ, ಶಿವರಾತ್ರಿ, ದೀಪಾವಳಿ, ದಸರಾ ಹಬ್ಬಗಳನ್ನು ಆಚರಿಸುತ್ತಾರೆ. ಹಿರಿಯ ಯಕ್ಷಗಾನ ಭಾಗವತ ಗೋಪಾಲಯ್ಯ, ಚಲನಚಿತ್ರ ಸಹನಿರ್ದೇಶಕ, ಗೀತ ರಚನೆಕಾರ ತಿಪ್ಪೇಸ್ವಾಮಿ ಸೇರಿದಂತೆ ಹಲವಾರು ಭಜನೆ, ರಂಗಭೂಮಿ ಕಲಾವಿದರಾಗಿದ್ದಾರೆ.

## ಬಂದಕುಂಟೆ ಗೊಲ್ಲರಹಟ್ಟಿ

ಬಂದಕುಂಟೆ ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೯ ಕಿಮೀ ದೂರದಲ್ಲಿದೆ. ಇದು ಬಂದಕುಂಟೆಯ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೬೪.೩ ಹೆಕ್ಟೇರ್ ಆಗಿದೆ. ಕಾಡುಗೊಲ್ಲರ ಪೂರ್ಣ ಗ್ರಾಮ. ಬಂದಕುಂಟೆ–ಹನುಮನಹಳ್ಳಿ ರಸ್ತೆಯಲ್ಲಿ ಎಡಭಾಗದಲ್ಲಿ ಈ ಗ್ರಾಮವಿದೆ. ಈ ಪರಿಸರದಲ್ಲಿ ನರಿ, ತೋಳ, ಮುಂಗುಸಿ, ಮೊಲ ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ನಾಯಿ, ಕತ್ತೆಗಳು ಸಾಕು ಪ್ರಾಣಿಗಳಾಗಿವೆ. ಈ ಪರಿಸರದಲ್ಲಿ ಗಿಳಿ, ಕೋಗಿಲೆ, ನವಿಲು, ಕೊಕ್ಕರೆ, ಮರಕುಟಿಕ, ಬೆಳವ, ಕೌಜಲಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ವಾರ್ಷಿಕ ೪೬೦ ಮಿಮೀ ಮಳೆ ಬೀಳುವ ಇಲ್ಲಿ ಬಿಸಿಲು ೩೮ ಡಿಗ್ರಿ, ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಆಗಿದೆ. ವಾಡಿಕೆ ಮಳೆ ಸಾಲದೆ ಉಪನೀರಾವರಿಯಾಗಿ ೧೪ ಕೊಳವೆ ಬಾವಿಗಳಿದ್ದು ಉಪಬೆಳೆಗೆ ಸಹಕಾರಿಯಾಗಿದೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೩ ಸಿಸ್ಟರ್ನ್‌ಗಳಿದ್ದು ೧ ಕೈಪಂಪ್ ಇದೆ.

ಕಾಡುಗೊಲ್ಲರ ಇಡೀ ಗ್ರಾಮದ ಮನೆಮಾತು ಕನ್ನಡ ವಿವಿಧ ಸ್ವರೂಪದ ಹೆಂಚಿನ, ಶೀಟಿನ, ೨ ಗುಡಿಸಲು ಸೇರಿದಂತೆ ೪೨ ಮನೆಗಳಿವೆ. ೧೩ ಮನೆಯಲ್ಲಿ ಶೌಚಾಲಯವಿದೆ. ೧೨ ಮನೆಗಳು ಇಂದಿರಾ ಆವಾಸ್, ಆಶ್ರಯ, ಭಾಗ್ಯಜ್ಯೋತಿಯ ಫಲಾನುಭವಿಗಳಿದ್ದಾರೆ. ೨೪೯ ಜನಸಂಖ್ಯೆ ಹೊಂದಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಅಲಸಂದೆ, ತೊಗರಿ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ, ಸೇವಂತಿಗೆ ಹೂ, ರೇಷ್ಮೆ ಬೆಳೆಗಳಿವೆ. ಶೇಂಗಾ, ಹುಣಸೆಹಣ್ಣು, ಕುರಿ ವ್ಯಾಪಾರಗಳಿವೆ. ಶಿಕ್ಷಕರು, ಪೊಲೀಸ್, ಸಾರಿಗೆ ಇಲಾಖೆ ೩ ಜನ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ ಮೇಲ್ಕುಂಟೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೨೭ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೬% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಭೂತಪ್ಪ, ಚಿತ್ರದೇವರ ಪೌಳಿಗಳಿವೆ. ಯುಗಾದಿ, ದೀಪಾವಳಿ, ಗೌರಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ದೀಪಾವಳಿ, ಹಿರಿ ಯರ ಹಬ್ಬ, ಹಾಲುಮೀಸಲು, ದೀಪ ತರುವ ಹಬ್ಬವಾಗಿ ಆಚರಿಸುತ್ತಾರೆ. ಭೂತಪ್ಪನ ಬಲಿ, ಆರತಿ, ಹರಕೆ ಸಂಪ್ರದಾಯವಾಗಿದೆ. ಕೋಲಾಟ, ಸೋಬಾನೆ ಪದ ಹಾಡುವ ಕಲಾವಿದರಿದ್ದಾರೆ. ಈರಣ್ಣ, ಸಣ್ಣಮ್ಮ, ಕದುರಮ್ಮ, ನರಸಿಂಹಣ್ಣ ಭಜನೆ, ಕೋಲು ಮೇಳದ ಕಲಾವಿದರು.

## ಬಡಕನಹಳ್ಳಿ

ಬಡಕನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೧ ಕಿ.ಮೀ. ದೂರದಲ್ಲಿದೆ. ಸಿರಾದಿಂದ ತಾವರೆಕೆರೆ–ಮುದ್ದಕ್ಕನಹಳ್ಳಿ ಮಾರ್ಗ ಮತ್ತು ಸಿರಾ ಚಂಗಾವರ ಮಾರ್ಗವಾಗಿ ಕಗ್ಗಲಡು ಗ್ರಾಮದಿಂದ ಎಡಕ್ಕೆ ತಿರುಗಿ ಬರುವ ಕಚ್ಚಾ ರಸ್ತೆಯೂ ಇದೆ. ರಸ್ತೆ ಸಂಪರ್ಕವಿರುವ ಕಗ್ಗಲಡು ಗ್ರಾಮಕ್ಕೆ ಒಂದು ಕಿ.ಮೀ. ದೂರದಲ್ಲಿ ಸಾಕಷ್ಟು ಖಾಸಗಿ, ಬಸ್ಸುಗಳ ಸೌಕರ್ಯವಿದೆ. ವ್ಯಕ್ತ ಮೂಲದ ಈ ಹಳ್ಳಿಯಲ್ಲಿ ರೇಣುಕಾಯಲ್ಲಮ್ಮ, ಲಕ್ಷ್ಮೀ ದೇವತೆ ಹಾಗೂ ಕೊಲ್ಲಾಪುರದಮ್ಮ ದೇವಸ್ಥಾನಗಳಿದ್ದು, ಕ್ರಮವಾಗಿ ಕುರುಬರು, ಆದಿ ಕರ್ನಾಟಕ ಜನಾಂಗದವರ ಆರಾಧ್ಯ ದೈವವಾಗಿದೆ. ಕೊಲ್ಲಾಪುರದಮ್ಮ ಹಾಗೂ ಕರಿಯಮ್ಮ ದೇವತೆ ದೇವಾಯಗಳಿದ್ದು ಇವು ಸಾರ್ವಜನಿಕವಾಗಿ ಆರಾಧನೆಗೆ ಒಳಗಾಗಿವೆ.

ಎತ್ತರದ ಸಣ್ಣಗಿನ ವ್ಯಕ್ತಿಯ ಹೆಸರಿನಿಂದ ಈ ಊರನ್ನು ಗುರುತಿಸಲಾಗಿದ್ದು, ಅದೇ ಹೆಸರು ಉಳಿದು ಬಂದಿದೆ ಎಂದು ಗ್ರಾಮದ ಹಿರಿಕ ಹನುಮಂತಪ್ಪ ಹೇಳುತ್ತಾರೆ. ಈ ಗ್ರಾಮದ

ಭೌಗೋಳಿಕ ವಿಸ್ತೀರ್ಣ ೩೧೨.೭೧ ಹೆಕ್ಟೇರ್ ಹೊಂದಿದೆ. ಸಿರಾ ಶಾಸನ ೯೦ ರ ಪ್ರಕಾರ ವೀರವೆಂಕಟಾಪತಿ ಮಹಾರಾಯರು ಈ ಗ್ರಾಮದ ದೇವಸ್ಥಾನವೊಂದಕ್ಕೆ ದತ್ತಿ ಕೊಟ್ಟ ವಿವರ ಅಸ್ಪಷ್ಟವಾಗಿದೆ. ಕಾಲ ೧೫೮೯. ಬಡಕ್ಕ ಮೂಲದಿಂದ ಬಡಕನಹಳ್ಳಿ ಎಂದಾಗಿದೆ.

ಗ್ರಾಮದಲ್ಲಿ ಆದಿ ಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದ್ದು, ಕುರುಬರು, ಕುಂಚಿಟಿಗರು, ಆದಿ ದ್ರಾವಿಡ, ವೈಶ್ಯರು, ಬೇಡರ ಮನೆಗಳಿವೆ. ಈ ಗ್ರಾಮದಲ್ಲಿ ೨೮೮ ಕುಟುಂಬಗಳಿದ್ದು, ೧೫೮೧ ಜನಸಂಖ್ಯೆಯನ್ನು ಹೊಂದಿದೆ. ಕಾಂಕ್ರೀಟ್, ಕಡಪ ಹಾಸು ಬಂಡೆ, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿದ್ದು, ಜನತಾ, ಇಂದಿರಾ ಆವಾಸ್, ಆಶ್ರಯ ಯೋಜನೆಗಳ ಫಲಾನುಭವಿಗಳಿದ್ದಾರೆ. ಭಾಗ್ಯಜ್ಯೋತಿ ಯೋಜನೆಯ ಒಂದು ನೂರಕ್ಕೂ ಹೆಚ್ಚು ಫಲಾನಭವಿಗಳಿದ್ದಾರೆ. ಸಿರಾದಿಂದ ಕಗ್ಗಲಡು–ತಾವರೆಕೆರೆ–ಬೇವಿನಹಳ್ಳಿ ಮಾರ್ಗವಾಗಿ ಖಾಸಗಿ ಬಸ್ಸುಗಳ ಸಂಚಾರವಿದ್ದು, ಜಿಲ್ಲಾ ಪಂಚಾಯಿತಿ ರಸ್ತೆ ಇದೆ. ೧೮ ಮನೆಗಳಲ್ಲಿ ಶೌಚಾಲಯಗಳ ಬಳಕೆಯಿದೆ.

ರಾಗಿ ಮುದ್ದೆ, ಅನ್ನ ಇವರ ಮುಖ್ಯ ಆಹಾರವಾಗಿದ್ದು, ಉಪ ಆಹಾರ ವಾಗಿದ್ದು, ಉಪಆಹಾರವಾಗಿ ರೊಟ್ಟಿ, ಉಪ್ಪಿಟ್ಟು, ದೋಸೆ ಬಳಸುತ್ತಾರೆ. ಮಾಂಸಾಹಾರ ಇಲ್ಲಿ ವಿಶೇಷವಾಗಿದೆ. ಲಾರಿ, ಆಟೋ, ಟ್ರ್ಯಾಕ್ಟರ್ ಮೊದಲಾದ ಆಧುನಿಕ ವಾಹನಗಳು ಹೆಚ್ಚಾಗಿದ್ದು, ಸಾಂಪ್ರದಾಯಿಕ ವಾಹನ ಎತ್ತಿನ ಬಂಡಿ ಇರುವುದಿಲ್ಲ. ರಾಗಿ, ಶೇಂಗಾ, ಜೋಳ, ಸೂರ್ಯಕಾಂತಿ, ಹತ್ತಿ ಇಲ್ಲಿನ ಮುಖ್ಯ ಬೆಳೆ. ಕೆರೆಯ ನೀರಿನ ಸೌಕರ್ಯವುಳ್ಳವರು ಭತ್ತ ಬೆಳೆಯುತ್ತಾರೆ. ಕೆಂಪು, ಕರಿ, ಮರಳು ಮಿಶ್ರಿತ ಭೂಮಿಯಾಗಿದ್ದು, ಈ ಗ್ರಾಮದ ಮಳೆಯ ಪ್ರಮಾಣ ೪೬೩ ಮಿ.ಮೀ. ೩೨–೩೬ ಸೆಂ. ಉಷ್ಣಾಂಶ ಹೊಂದಿರುವ ಈ ಗ್ರಾಮದಲ್ಲಿ ಚಳಿಯ ಪ್ರಮಾಣ ೯–೧೧ ಸೆಂ. ಇರುತ್ತದೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರ, ಗೌಡಗೆರೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕ್ಷೇತ್ರವಾಗಿರುವ ಬಡಕನಹಳ್ಳಿ ಗ್ರಾಮವಾಗಿ ಬಡಕ್ಕನಹಳ್ಳಿ ಎಂದು ಕರೆಯಲ್ಪಡುತ್ತದೆ.

ಹಸು, ಎಮ್ಮೆ, ಕುರಿ, ಮೇಕೆ ಕೆಲ ಗ್ರಾಮದ ಸಾಕು ಪ್ರಾಣಿಗಳು. ಈ ಪರಿಸರದ ಪೊದೆ, ಮರ–ಗಿಡಗಳ ಆಶ್ರಯದಲ್ಲಿ ಮೊಲ, ನರಿ, ಕಾಡು ಹಂದಿ ಮುಂಗುಸಿ ಕಂಡು ಬರುತ್ತಿವೆ. ಕೋತಿಗಳೂ ವ್ಯಾಪಕವಾಗಿವೆ. ದನ, ಕುರಿ, ಮೇಕೆ ವ್ಯಾಪಾರದ ಜೊತೆಗೆ ಒಂದು ಇಟ್ಟಿಗೆ ಫ್ಯಾಕ್ಟರಿ, ಬೀಡಿ ಸುತ್ತುವುದು, ಹೂ ಕಟ್ಟುವ, ಸಣ್ಣ ಕೈಗಾರಿಕೆ, ಗೃಹ ಕೈಗಾರಿಕೆಯನ್ನು ಕಾಣಬಹುದು. ಊರಿನ ಗಂಡರು ಹೆಚ್ಚಿನ ಸಂಖ್ಯೆಯಲ್ಲಿ ಸಮೀಪದಲ್ಲಿರುವ ಮದ್ದಕ್ಕನಹಳ್ಳಿ ಬಂಡೆ ಕೆಲಸಕ್ಕೆ, ಕಾರ್ಮಿಕರಾಗಿ ಹೋಗುತ್ತಿದ್ದಾರೆ. ಪೋಲೀಸ್, ಶಿಕ್ಷಣ ಇಲಾಖೆಯಲ್ಲಿ ನೌಕರಿಯಲ್ಲಿ ಇದ್ದಾರೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು, ಒಟ್ಟು ೮ ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಉತ್ತಮ ಕಾಂಪೌಂಡ್ ಸೌಕರ್ಯ ಹೊಂದಿದೆ. ಶೇ. ೬೫.೨ ರಷ್ಟು ಸಾಕ್ಷರತೆ ಸಾಧಿಸಿದ್ದು, ಪುರುಷರು ಮೇಲ್ಮೆ ಸಾಧಿಸಿ ೭೭.೬, ಮಹಿಳೆಯರು ೫೨.೮ ರಷ್ಟಿದ್ದಾರೆ. ಉಚಿತ ಆರೋಗ್ಯ ಕಾರ್ಯಕರ್ತೆಯರೂ ಇದ್ದಾರೆ.

ಸಾರ್ವಜನಿಕ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ಅಂಗವಿಕಲ, ವಿಧವಾ ವೇತನ, ಸೌಲಭ್ಯ ಪಡೆದವರು ಇದ್ದು, ಗ್ರಾಮದಲ್ಲಿ ಎಂಟು ಅಂಗಡಿ, ೨ ಟೀ ಅಂಗಡಿಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಪ್ರತಿವರ್ಷ ಕರಿಯಮ್ಮ ದೇವಿಯ ಜಾತ್ರೆ ನಡೆಯುತ್ತಿದ್ದು, ಆರತಿ, ಬಾನ, ಬ್ಯಾಟೆ ನಡೆಯುತ್ತದೆ. ರೇಣುಕಾ ಎಲ್ಲಮ್ಮ , ಕೊಲ್ಲಾಪುರದಮ್ಮ ದೇವರ ವಿಶೇಷ ಆಚರಣೆ, ಪ್ರಾಣಿ ಬಲಿಯೂ ನಡೆಯುತ್ತದೆ. ಗ್ರಾಮದಲ್ಲಿ ೧೮ ಎಸ್. ಎಸ್.ವೈ. ಮೂರು ಸ್ತ್ರೀ ಶಕ್ತಿ ಕೇಂದ್ರ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಈ ಗ್ರಾಮದ ಲಕ್ಷ್ಮಣ್ ಪಿ.ಡಿ.ಪಿ.ಯಾಗಿ ಕಾರ್ಯ ನಿರ್ವಹಿಸುತ್ತಿರುವ ಹಿರಿಯರು. ಸರ್ಕಾರಿ ನೌಕರ ಶಿಕ್ಷಕರು ಸಾರಿಗೆ ಇಲಾಖೆಗೆ ಸೇರಿದ ೫ ಜನ ನೌಕರರಿದ್ದಾರೆ.

ಗ್ರಾಮಕ್ಕೆ ಕೈ ಪಂಪು, ೧೮ ಕೊಳವೆ ಬಾವಿಗಳು ಮೂಲಕ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ವಡ್ಡರಹಟ್ಟಿ ಈ ಗ್ರಾಮದ ಉಪಗ್ರಾಮವಾಗಿದೆ.

## ಬಡಕನಹಳ್ಳಿ ವಡ್ಡರಹಟ್ಟಿ

ಇದೊಂದು ಬಡಕನಹಳ್ಳಿ ಮಜರೆ ಗ್ರಾಮವಾಗಿದ್ದು, ಸಿರಾ ಚಂಗಾವರ ರಸ್ತೆಯ –ಕಗ್ಗಲಡು ಗ್ರಾಮದಿದಂ ಎಡಬದಿಗೆ ಒಂದು ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೪೮.೯ ಹೆಕ್ಟೇರ್ ಆಗಿದ್ದು, ಸಿರಾ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿ ಪಶ್ಚಿಮಕ್ಕಿದೆ. ಕೆಂಪು, ಬಿಳಿ, ಮರಳು ಮಿಶ್ರಿತ ಮಣ್ಣನ್ನು ಹೊಂದಿರುವ ಈ ಪರಿಸರದಲ್ಲಿ ಹಸು, ಎಮ್ಮೆ, ಕುರಿ ಸಾಕು ಪ್ರಾಣಿಯಾಗಿ, ನರಿ, ಕರಡಿ, ಮೊಲ, ಹಂದಿ, ಕಂಡು ಬರುತ್ತವೆ. ಕೋಳಿ ಸಾಕಾಣಿಕೆಯೂ ವಿರಳವಾಗಿ ಕಂಡು ಬರುತ್ತದೆ.

ಸರಾಸರಿ ೪೬೩ ಮಿ.ಮೀ. ಮಳೆಯ ಪ್ರಮಾಣ ಹೊಂದಿರುವ ಈ ಗ್ರಾಮದಲ್ಲಿ ಚಳಿಯೂ ಹೆಚ್ಚು. ೯–೧೨ ಡಿಗ್ರಿ ಸೆಂ.ಚಳಿ ಇದ್ದರೆ, ಬಿಸಿಲಿನ ತಾಪಮಾನ ೩೪–೩೬ ಸೆಂ. ಇರುತ್ತದೆ. ಎರಡು ಕೈ ಪಂಪುಗಳಿವೆ. ಕೊಳವೆ ಬಾವಿಗಳಿಂದ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ.

ಬೋವಿ ಜನಾಂಗ ದೊಡ್ಡ ಸಮುದಾಯವಾಗಿದ್ದು, ಕನ್ನಡ ತೆಲುಗು ಮಾತನಾಡುತ್ತಾರೆ. ೬೬ ಕುಟುಂಬಗಳು ವಾಸಿಸುತ್ತಿದ್ದು, ಕಾಂಕ್ರೀಟ್, ಕಡಪ ಹಾಸು ಬಂಡೆ, ಮಣ್ಣಿನ ಮನೆಗಳ ಜೊತೆಗೆ ೨ ಗುಡಿಸಲುಗಳು ಕಂಡು ಬರುತ್ತದೆ. ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ಯೋಜನೆಗಳ ವಸತಿ ಸೌಲಭ್ಯವೂ ಸೇರಿದಂತೆ ಭಾಗ್ಯಜ್ಯೋತಿಯ ಫಲಾನುಭವಿಗಳೂ ಇದ್ದಾರೆ. ೨೫ ಶೀಟಿನ ಮನೆಗಳೂ ಇದೆ.

ರಾಗಿ ಮುದ್ದೆ, ಅನ್ನ ಇವರ ಮುಖ್ಯ ಆಹಾರವಾಗಿದ್ದು, ಅ ಮುಖ್ಯ ಆಹಾರವಾಗಿ ಚಪಾತಿ, ರೊಟ್ಟಿ, ಉಪ್ಪಿಟ್ಟು ಬಳಸುತ್ತಾರೆ. ಮಾಂಸಾಹಾರ ಇಲ್ಲಿ ವಿಶೇಷವಾಗಿದೆ. ಮೂರು ಲಾರಿಗಳು, ೧೦ ಸ್ಕೂಟರ್ ಈ ಗ್ರಾಮದಲ್ಲಿವೆ. ರಾಗಿ, ಶೇಂಗಾ, ಜೋಳ, ಸೂರ್ಯಕಾಂತಿ, ಹತ್ತಿ ಇಲ್ಲಿನ ಮುಖ್ಯ ಬೆಳೆ. ಹುಣಸೆ ಹಣ್ಣಿನ ಉದ್ಯಮವೂ ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಗೌಡಗೆರೆ ಗ್ರಾಮ ಪಂಚಾಯಿತಿಗೆ ಸೇರಿರುವ ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ.

೨ ಸ್ತ್ರೀ ಶಕ್ತಿ ಕೇಂದ್ರಗಳಿದ್ದು, ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಪ್ರಾಥಮಿಕ ಶಿಕ್ಷಣಕ್ಕೆ ಬಡಕನಹಳ್ಳಿ ಶಾಲೆಯನ್ನು ಆಶ್ರಯಿಸಲಾಗಿದೆ. ಸಾರ್ವಜನಿಕ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ಅಂಗವಿಕಲ, ವಿಧವಾ ವೇತನದ ಸೌಲಭ್ಯ ಪಡೆದವರು ಇದ್ದು, ಒಂದು ಗೂಡಂಗಡಿ ಗ್ರಾಮದಲ್ಲಿದೆ. ಕರಿಯಮ್ಮ ದೇವತೆಯಾಗಿದ್ದು , ಬಾನ, ಆರತಿ, ಬ್ಯಾಟೆ ನಡೆಯುತ್ತದೆ. ಯುಗಾದಿ, ಗಣಪತಿ, ದಸರಾ ಹಬ್ಬವನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಮಹಾಲಕ್ಷ್ಮಿ ದೇವಸ್ಥಾನಕ್ಕೆ ಶುಕ್ರವಾರ, ಮಂಗಳವಾರ ವಿಶೇಷ ಪೂಜೆ ನಡೆಯುತ್ತದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇಲ್ಲಿಂದ ೨ ಕಿ.ಮೀ. ದೂರದ ಮುದ್ದಕ್ಕನಹಳ್ಳಿ ಬಂಡೆಗೆ ಹೋಗುವ ಕೂಲಿ ಕಾರ್ಮಿಕರು ಈ ಗ್ರಾಮದಲ್ಲಿ ಹೆಚ್ಚಾಗಿದ್ದು (೨೩) ಕಲ್ಲು ಸೀಳುವ, ಸೈಜುಗಲ್ಲು ಹೊಡೆಯುವ, ಕೆಲಸ ನಿರ್ವಹಿಸುತ್ತಿದ್ದಾರೆ. ಆಟೋ ಟ್ಯಾಕ್ಸಿ ಹಾಗೂ ಲಾರಿ ಡ್ರೈವರ್ ಉಪ ಉದ್ದಿಮೆದಾರರಾಗಿದ್ದಾರೆ. ಊರಿನಲ್ಲಿ ಭಾಗ್ಯ ಜ್ಯೋತಿ ಅಂಬೇಡ್ಕರ್, ವಸತಿ ಯೋಜನೆಯ ಫಲಾನುಭವಿಗಳಿದ್ದು, ೨ ಮನೆಗಳಲ್ಲಿ ಮಾತ್ರ ಶೌಚಾಲಯ ಸೌಲಭ್ಯ ಹೊಂದಿದ್ದಾರೆ.

## ಬಡಮಾರನಹಳ್ಳಿ

ಬಡಮಾರನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೫ ಕಿ.ಮೀ. ದೂರದಲ್ಲಿದೆ. ಸಿರಾ–ಬರಗೂರು ರಸ್ತೆಯಲ್ಲಿ ಬರಗೂರಿನಿಂದ ೭ ಕಿ.ಮೀ. ದೂರದಲ್ಲಿರುವ ಈ ಹಳ್ಳಿ ಒಂದು ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೧೧೫೧.೦೫ ಹೆಕ್ಟೇರ್ ಹೊಂದಿದೆ. ಇದರ ಉಪ ಗ್ರಾಮಗಳಾಗಿ ಗೋಣಿಹಳ್ಳಿ, ಮಾರಪ್ಪನಹಳ್ಳಿಗಳಿವೆ,.

ಮಾರಣ್ಣ ಎಂಬ ಹೆಸರಿನ ವ್ಯಕ್ತಿ ಈ ಗ್ರಾಮದ ಮೂಲ ಪೂರಕವಾಗಿ, ಮಾರಿ ದೇವತೆ ನೆಲೆದೇವತೆಯಾದ ಕಾರಣ– ವ್ಯಕ್ತಿ ದೈವ ಮೂಲದಿಂದ ಬಡಮಾರನಹಳ್ಳಿ ಎಂದು ಕರೆಯಲಾಗಿದೆ. ವ್ಯಕ್ತಿ ಪ್ರಾಕೃತಿಕ ಸ್ವಭಾವ – ಲಕ್ಷಣ ಅನುಸರಿಸಿ 'ಬಡ' ಶಬ್ದವನ್ನು ವಿಶೇಷವಾಗಿ ಸೇರಿಸಲಾಗಿದೆ. ಇದು ಹಂದಿ ಕುಂಟೆ ಪಂಚಾಯ್ತಿಯ ವ್ಯಾಪ್ತಿಯ ಹಳ್ಳಿಗಳೆಲ್ಲಾ ಹೆಚ್ಚು ವಿಸ್ತಾರವಾದ ಗ್ರಾಮವಾಗಿದೆ. ಬಯಲು ನಾಡು, ಪೂರ್ವಾಭಿಮುಖವಾಗಿ ಕೆರೆ, ದಕ್ಷಿಣಕ್ಕೆ ಹಳ್ಳ ಇದೆ. ಆದರೂ ತುಂಬುವುದು ಅಪರೂಪ.

ಈ ಪರಿಸರದಲ್ಲಿ ಸಾಕು ಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ನಾಯಿಯನ್ನು ಸಾಕು ಪ್ರಾಣಿಗಳಾಗಿವೆ. ನರಿ, ಮೊಲ, ಹಂದಿ ಕಂಡು ಬರುತ್ತವೆ. ಗಿಳಿ, ಗೂಬೆ, ನವಿಲು, ಗೊರವಂಕ, ಬೆಳವ, ಕೊಕ್ಕರೆ, ಕೋಗಿಲೆ ಮೊದಲಾದ ಕಾಡು ಪಕ್ಷಿಗಳು ಕಂಡು ಬರುತ್ತವೆ. ಕೋಳಿ ಸಾಕು ಪಕ್ಷಿಯಾಗಿದೆ.

ಸರಾಸರಿ ೪೩೪ ಮಿ.ಮೀ. ಮಳೆಯ ಪ್ರಮಾಣ ಹೊಂದಿರುವ ಈ ಗ್ರಾಮದಲ್ಲಿ ಚಳಿಯೂ ಹೆಚ್ಚು. ೧೨ ಸೆಂ.ಚಳಿ ಇದ್ದರೆ, ಬಿಸಿಲಿನ ತಾಪಮಾನ ೩೧೨ ಸೆಂ. ಇರುತ್ತದೆ. ಕೃಷಿಗೆ ಬೋರ್ ವೆಲ್‌ಗಳ ಮೂಲಕ ನೀರು ಹಾಯಿಸಿ ಬೆಳೆ ತೆಗೆಯಲಾಗುತ್ತದೆ. ೧೩೨ ಬೋರ್‌ವೆಲ್‌ಗಳಿವೆ. ಗ್ರಾಮದಲ್ಲಿ ೧೦ ಸಿಸ್ಟನ್ ಎರಡು ಕೈ ಪಂಪುಗಳಿವೆ.

ಗ್ರಾಮದಲ್ಲಿ ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು, ಆದಿಕರ್ನಾಟಕ, ಕುಂಚಿಟಿಗರು, ಆದಿ ದ್ರಾವಿಡ, ವೀರವೈಶ್ಯರು, ಮಡಿವಾಳ ಕಿರು ಸಮುದಾಯವಾಗಿದೆ. ಕನ್ನಡ ಭಾಷೆ ಗ್ರಾಮದ ಭಾಷೆಯಾಗಿದೆ. ವಿವಿಧ ಪ್ರಕಾರದ ೨೮೨ ಮನೆಗಳಿದ್ದು, ಅವು ಕಡಪ ಹಾಸು ಬಂಡೆ, ಶೀಟಿನ, ಹೆಂಚಿನ, ಶೀಟಿನ ಮನೆಗಳಿದ್ದು, ಇವು ವಸತಿ ಯೋಜನೆಗಳಾದ ಜನತಾ, ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ವಸತಿ

ಯೋಜನೆಗಳ ೭೨ ಫಲಾನುಭವಿಗಳಿದ್ದಾರೆ. ಭಾಗ್ಯಜ್ಯೋತಿ ಯೋಜನೆಯ ವಿದ್ಯುತ್ ಫಲಾನುಭವಿಗಳಿದ್ದಾರೆ. ೯೦ ಮನೆಯಲ್ಲಿ ಶೌಚಾಲಯಗಳ ಬಳಕೆಯಿದೆ.

ಗ್ರಾಮದಲ್ಲಿ ರಾಗಿ ಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಇವರ ಬಳಸುವವರಿದ್ದಾರೆ.ವಾಗಿದ್ದು, ಸಾಂದರ್ಭಿಕವಾಗಿ ಬಾಡೂಟ, ಪಾಯಸ , ಹೋಳಿಗೆ ಇಲ್ಲಿ ವಿಶೇಷವಾಗಿ ಬಳಸುತ್ತಾರೆ. ಸಾಂಪ್ರದಾಯಿಕ ವಾಹನವಾದ ೩ ಎತ್ತಿನ ಗಾಡಿಗಳ ಜೊತೆಗೆ ಟೆಂಪೋ, ಟ್ರ್ಯಾಕ್ಟರ್ ಮೊದಲಾದ ಹಾಗೂ ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ತೋಗರಿ, ನವಣೆ, ಆಹಾರ ಬೆಳೆಗಳು. ರೇಷ್ಮೆ, ತೆಂಗು, ಅಡಿಕೆ, ಸೂರ್ಯಕಾಂತಿ, ತೋಟಗಾರಿಕೆ ಹಾಗೂ ವ್ಯಾಪಾರಿ ಬೆಳೆಗಳಾಗಿವೆ. ಉತ್ತಮ ಹೈನುಗಾರಿಕೆ ಹೊಂದಿರುವ ಗ್ರಾಮದಲ್ಲಿ ಒಂದು ಹಾಲಿನ ಡೈರಿ ಇದ್ದು, ಸರಾಸರಿ ೩೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಉಪನ್ಯಾಸಕರು, ಅರಣ್ಯ ಇಲಾಖೆ, ಶಿಕ್ಷಕರು, ಸಾರಿಗೆ ಸೇರಿದಂತೆ ಒಟ್ಟು ೧೪ ಜನ ನೌಕರರಿದ್ದಾರೆ. ವಕೀಲರು ಇಂಜಿನಿಯರ್ ಖಾಸಗಿಯವರಿದ್ದಾರೆ. ಗ್ರಾಮದಲ್ಲಿ ಕೈ ಕಸುಬಾಗಿ ಬೀಡಿ ಸುತ್ತುವುದು, ಬಟ್ಟೆ ಹೊಲಿಯುವುದು ಇದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ ಹಂದಿಕುಂಟೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕ್ಷೇತ್ರವಾಗಿರುವ ಈ ಗ್ರಾಮದ ೨ ಪಂಚಾಯಿತಿ ಸದಸ್ಯರಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮದಲ್ಲಿ ಅಂಚೆ ಕಚೇರಿಯಿದ್ದು ಸುತ್ತಲ ಹಲವು ಹಳ್ಳಿಗಳಿಗೆ ಅನುಕೂಲವಾಗಿದೆ. ಒಂದು ನ್ಯಾಯಬೆಲೆ ಅಂಗಡಿ, ೫ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು, ೨ ಧರ್ಮಸ್ಥಳ ಸ್ವಸಹಾಯ ಗುಂಪುಗಳಿವೆ. ಇವು ಅಧಿಕವಾಗಿ ಮಹಿಳೆಯರಿಗೆ ಅನುಕೂಲವಾಗಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ ಇದ್ದು, ಶಾಲೆಯಲ್ಲಿ ೧೦೨ ಮಕ್ಕಳಿದ್ದು, ೪ ಜನ ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತೆ ೬೦ ರಷ್ಟಿದೆ.

ಸಾರ್ವಜನಿಕ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ಅಂಗವಿಕಲ, ವಿಧವಾ ವೇತನ, ಸೌಲಭ್ಯ ಪಡೆದವರು ಇದ್ದು, ೨ ಹೋಟೆಲ್, ೬ ಗೂಡುಗಳಿವೆ. ಗ್ರಾಮದಲ್ಲಿ ಮಾರಮ್ಮ ೃ, ಈಶ್ವರ, ಅಂಜನೇಯ, ತಿಮ್ಮಪ್ಪ, ಭೂತಪ್ಪ, ಕರಿಯಮ್ಮನ ದೇವಾಲಯಗಳಿವೆ. ಮಾರಮ್ಮನ ಊರಹಬ್ಬ ಮಾಡಿ, ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯವಿದೆ.

ಗ್ರಾಮದಲ್ಲಿ ಯುಗಾದಿ, ಮಹಾನವಮಿ, ಶಿವರಾತ್ರಿ, ದೀಪಾವಳಿ, ಗೌರಿಗಣೇಶನ ಹಬ್ಬಗಳ ಜೊತೆಗೆ ಕಾಂತಮ್ಮ, ಗೌರಮ್ಮನ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ನರಸಿಂಹಯ್ಯ ಎಂಬ ಸ್ವಾತಂತ್ರ್ಯ ಹೋರಾಟಗಾರರು ಇದೇ ಗ್ರಾಮದವರಾಗಿದ್ದು, ಕೆಲ ಕಾಲ ತುಮಕೂರು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರ ಸಂಘದ ಅಧ್ಯಕ್ಷರೂ ಆಗಿದ್ದರು. ಇವರು ೨೦೧೨ ರ ಡಿಸೆಂಬರ್‌ನಲ್ಲಿ ದಿವಂಗತರಾದರು.

## ಬಡಮಂಗನಹಟ್ಟಿ

ಬಟಮಂಗನಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಇದೊಂದು ಚಂಗಾವರದ ಮಜರೆ ಗ್ರಾಮವಾಗಿದ್ದು, ಚಂಗಾವರ ಮುಖ್ಯ ಗ್ರಾಮದ ಎಡಭಾಗಕ್ಕೆ ೧ ಕಿ.ಮೀ. ದೂರದಲ್ಲಿದೆ. ಇದರ ಭೌಗೋಳಿಕ ವಿಸ್ತೀಇರ್ ೨೬೪೬.೭೭ ಹೆಕ್ಟೇರ್ ಆಗಿದೆ. ಗ್ರಾಮದ ನರಸಿಂಹಯ್ಯನ ಹೇಳಿಕೆಯ ಪ್ರಕಾರ ಇದರ ಮೂಲ ಮಡಮಾರಪ್ಪನಹಟ್ಟಿ ಎಂದಿದ್ದು, ನತಂರ ಬಡಮಂಗನಹಟ್ಟಿ ಎಂದು ಕರೆಯಲ್ಪಟ್ಟಿದೆ ಎನ್ನುತ್ತಾರೆ. ಗ್ರಾಮದ ಮೂಲದೇವತೆ ಗೌರಸಂದ್ರದ ಮಾರೆವ್ವ, ಈ ಮಾರೆವ್ವನ ಅರ್ಚಕ ಮಾರಣ್ಣ, ಆತನನ್ನು ಬಡಮಾರಣ್ಣ ಎಂದೇ ಕರೆಯುತ್ತಿದ್ದರು. ಆತನ ಮರಣಾ ನಂತರ ಅದೇ ಹೆಸರಿನಲ್ಲಿ ಹಟ್ಟಿ ಬೆಳೆದಿದೆ. ಮರಳು ಕೆಂಪು ಮಣ್ಣಿನ ಮಿಶ್ರಿತ ಈ ಗ್ರಾಮ ಪಕ್ಕದಲ್ಲಿ ಚಂಗಾವರದ ದೊಡ್ಡ ಕೆರೆ, ಉತ್ತರಕ್ಕೆ ಬಯಲು, ಕುರುಚಲು ಗಿಡ, ಮರ, ಪೊದೆ, ಬೀಳು ಭೂಮಿ ಇದ್ದು, ಈ ಪರಿಸರದಲ್ಲಿ ಸಾಕು ಪ್ರಾಣಿಗಳಾದ ನಾಯಿ, ಕತ್ತೆ, ಎತ್ತು, ಎಮ್ಮೆ, ಕುರಿ, ಮೇಕೆ, ಹಸುಗಳಿದ್ದು, ಕೋಳಿಯನ್ನು ಸಾಕಲಾಗಿದೆ. ನರಿ, ಮೊಲ, ಜಿಂಕೆ, ಉಡ, ಕಾಡು, ಹಂದಿ, ಕಂಡು ಬರುತ್ತವೆ. ಗಿಳಿ, ನವಿಲು, ಗೊರವಂಕ, ಕೋಗಿಲೆ, ಗರುಡ, ಗುಬ್ಬಚ್ಚಿ, ಬಾವಲಿ, ಹದ್ದು ಮೊದಲಾದ ಕಾಡು ಪಕ್ಷಿಗಳು ಕಂಡು ಬರುತ್ತವೆ.

ಮಳೆ ಪ್ರಮಾಣ ಕಳೆದ ಐದು ವರ್ಷಗಳಲ್ಲಿ ವಾಡಿಕೆಗಿಂತ ಕಡಿಮೆಯಾಗಿದೆ. ವಾರ್ಷಿಕ ೪೬೩ ಮಿ.ಮೀ. ಮಳೆ ಬಿದ್ದಿದ್ದು, ಬಿಸಿಲು ೩೮ ಸೆಂ. ಇದೆ. ಚಳಿ ೧೨ ಸೆಂ.ಇರುತ್ತದೆ. ಕುಡಿಯಲು ಗ್ರಾಮ ಪಂಚಾಯಿತಿಯಿಂದ ಮಿನಿ ಟ್ಯಾಂಕ್‌ಗಳ ಮೂಲಕ ನೀರು ಪೂರೈಸಲಾಗುತ್ತದೆ. ೭೪ ಮನೆಗಳಿದ್ದು ೪೧೪ ಜನಸಂಖ್ಯೆ ಇದೆ. ಈ ಗ್ರಾಮದಲ್ಲಿ ಕಾಡುಗೊಲ್ಲರು ಹೆಚ್ಚಿದ್ದು ಮುಖ್ಯ ಸಮುದಾಯವಾಗಿದೆ. ಬದಿಗೆ ೨೦ ಹಳ್ಳಿಕಾರ ಒಕ್ಕಲಿಗರ ಮನೆಗಳಿವೆ.

ಇಲ್ಲಿ ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿದ್ದು, ೮ ಗುಡಿಸಲುಗಳೂ ಇವೆ. ಜನತಾ, ವಸತಿ ಯೋಜನೆಯ

ಫಲಾನುಭವಿಗಳು, ಭಾಗ್ಯ ಜ್ಯೋತಿಯ ಫಲಾನುಭವಿಗಳೂ ಇದ್ದಾರೆ. ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ರೊಟ್ಟಿ, ಅನ್ನ ಅಮುಖ್ಯವಾಗಿದೆ. ಬಾಡೂಟ, ಹೋಳಿಗೆ, ಬಾಡೂಟ, ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಆಹಾರವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳು ಬಳಕೆ ಇದ್ದು, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಅಲಸಂದಿ, ಹೆಸರು, ಹುರುಳಿ, ತೊಗರಿ ಆಹಾರ ಬೆಳೆಗಳಾಗಿ ಬೆಳೆಯುತ್ತಾರೆ. ಒಬ್ಬರು ಸರ್ಕಾರಿ ನೌಕರರಿದ್ದು, ಬೀಡಿ ಸುತ್ತುವುದು, ಊಟದ ಎಲೆ ಕಟ್ಟುವುದು ಮಹಿಳೆಯರ ಸಣ್ಣ ಕೈಗಾರಿಕೆಗಳು.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯಿತಿ, ಗೌಡಗೆರೆ ತಾಲ್ಲೂಕು ಪಂಚಾಯಿತಿ, ಹಾಗೂ ಬೇವಿನಹಳ್ಳ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಇಲ್ಲಿಂದ ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ.

ಇಲ್ಲಿ ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳು, ಒಬ್ಬರು ನೌಕರರಿದ್ದು, ಸರ್ಕಾರಿ ಕಿರಿಯ ಪ್ರೌಢಶಾಲೆ ಇದೆ. ಇದರಲ್ಲಿ ೩೪ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಶೌಚಾಲಯಗಳ ಸೌಲಭ್ಯಗಳಿವೆ. ಒಟ್ಟು ೫.೧೭ ರಷ್ಟು ಸಾಕ್ಷರಸ್ಥರಿದ್ದು , ಪುರುಷರು ಶೇ. ೬೩, ಮಹಿಳೆಯರು ಶೇ. ೪೦.೨ ರಷ್ಟಿದ್ದಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ಅಂಗವಿಕಲ, ವಿಧವಾ ವೇತನದ ಫಲಾನುಭವಿಗಳಿದ್ದು ಗ್ರಾಮದಲ್ಲಿ ೨ ಅಂಗಡಿಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗೌರಸಂದ್ರದ ಮಾರಮ್ಮ ಗ್ರಾಮದೇವತೆ, ದೀಪಾವಳಿಯಂದು ತಿಮ್ಮಪ್ಪ, ಪಿತ್ರದೇವರ ದೀಪವಿರುತ್ತದೆ. ಹಾಲು ತುಪ್ಪದ ಹಬ್ಬವಾಗಿ ಆಚರಿಸುತ್ತಾರೆ. ವಿಜೃಂಭಣೆಯಿಂದ ಆಚರಿಸಲಾಗುವುದು. ಯುಗಾದಿ, ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ ಮುಖ್ಯ ಹಬ್ಬಗಳಾಗಿ ಆಚರಿಸುತ್ತಾರೆ.

## ಬೇವಿನಹಳ್ಳಿ

ಬೇವಿನಹಳ್ಳಿ ಸಿರಾ ತಾಲ್ಲೂಕು ಗೌಡಗೆರೆ ಹೋಬಳಿಗೆ ಸೇರಿದ ಒಂದು ಕಂದಾಯ ಗ್ರಾಮ. ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕೇಂದ್ರಗಳೂ ಆಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೩೪೦೪.೯೮ ಹೆಕ್ಟೇರ್ ಆಗಿದೆ. ಈ ಗ್ರಾಮಕ್ಕೆ ಮಜರೆ ಗ್ರಾಮಗಳಾಗಿ ಬ್ರಹ್ಮಸಂದ್ರ, ಬೊಮ್ಮಗಾನಹಳ್ಳಿ, ಶಿವನಯ್ಯನ ಪಾಳ್ಯ, ಬ್ರಹ್ಮಸಂದ್ರ ಗೊಲ್ಲರಹಟ್ಟಿ ಸೇರ್ಪಡೆಯಾಗಿವೆ.

ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೯ ಕಿ.ಮೀ. ದೂರದಲ್ಲಿದೆ. ಸಿರಾ–ಚೆಂಗಾವರ –ಧರ್ಮಪುರ ಮುಖ್ಯ ರಸ್ತೆಯಲ್ಲಿ ಈ ಗ್ರಾಮವಿದೆ. ಇದೊಂದು ಬುಡಕಟ್ಟು ಸಂಸ್ಕೃತಿಯ ಗ್ರಾಮವಾಗಿದ್ದು ಕರ್ನಾಟಕದಲ್ಲಿ ಜನಪದ ಮಹಾಕಾವ್ಯ ಕುರಿತ ಅಧ್ಯಯನ, ಗ್ರಾಮ ಸಂಸ್ಕೃತಿಯ ಅಧ್ಯಯನಕ್ಕೆ ಒಳಗಾದ ಮಧ್ಯ ಕರ್ನಾಟಕದ ಮೊದಲ ಹಳ್ಳಿ. ಇಲ್ಲಿನ ಕಾಡು ಗೊಲ್ಲರ ಸಂಪ್ರದಾಯ ಆಚರಣೆ ಈ ಹಿನ್ನೆಲೆಯಲ್ಲಿ ಜುಂಜಪ್ಪನ ಮಹಾ ಕಾವ್ಯ, ಗಣೆ ಸಂಪ್ರದಾಯ ಕುರಿತು ವಿಶ್ವವಿದ್ಯಾಲಯ ಮಟ್ಟದಲ್ಲಿ ಮೊದಲ ಸಂಶೋಧನೆಗೆ ಒಳಗಾದ ಗ್ರಾಮವಾಗಿದೆ. ಕಾಡುಗೊಲ್ಲರ ಒಂದೇ ಹಟ್ಟಿಯನ್ನು ಕುರಿತು, ಅಲ್ಲಿನ ಸಾಂಸ್ಕತಿಕ ವಿವಿಧ ಆಯಾಯ, ಜನ ಜೀವನ ಕುರಿತು ಮೊದಲ ಅಧ್ಯಯನಕ್ಕೆ ಒಳಗಾದ ತುಮಕೂರು ಜಿಲ್ಲೆಯ ಮೊದಲ ಗ್ರಾಮ. (ಡಾ.ಕಾಳೇ ಗೌಡ ನಾಗಾವಾರ–ಕಾಡುಗೊಲ್ಲರ ಹಟ್ಟಿ ಒಂದು ಸಂಸ್ಕೃತಿ ಅಧ್ಯಯನ ಬೆಂಗಳೂರು ವಿಶ್ವವಿದ್ಯಾಲಯ ಅಪ್ರಕಟಿತ ಸಂಶೋಧನಾ ಪ್ರಬಂಧ ಇದಾಗಿದೆ.

ಕುರುಬರು, ಗೊಲ್ಲರು ಸಮ ಸಂಖ್ಯೆಯಲ್ಲಿರುವ ಈ ಗ್ರಾಮ ಕುಲಾಚಾರ ಪದ್ಧತಿಯಂತೆ ವರ್ಗೀಕರಣಗೊಂಡೇ ಇದೆ. ನಡುವೆ ಚಂಗಾವರ ರಸ್ತೆ, ಉತ್ತರಕ್ಕೆ ಕೆರೆ, ರಸ್ತೆಯ ಎಡಭಾಗದಲ್ಲಿ ಕಾಡುಗೊಲ್ಲರ ಪೂರ್ಣ ಮನೆಗಳು, ಬಲಗಡೆ ಕುರುಬರು, ಆದಿಕರ್ನಾಟಕ, ಆದಿದ್ರಾವಿಡ, ನಾಯಕ, ವಿಶ್ವಕರ್ಮ, ಪಿಂಜಾರ, ವೈಶ್ಯ, ಮುಸ್ಲಿಂರ ಮನೆಗಳಿವೆ. ಬೇವಿನ ಮರಗಳು ವಿಪರೀತವಾಗಿ ಬೆಳೆಯುತ್ತಿದ್ದು ಭೂ ಪ್ರದೇಶವಾದುದರಿಂದ ಸತ್ವ ಮೂಲದಿಂದ ಬೇವಿನಹಳ್ಳಿ ಎಂದು ಗ್ರಾಮ ನಿಷ್ಪತ್ತಿಯಾಗಿದೆ. ಬಯಲು ಪ್ರದೇಶ, ಗ್ರಾಮದ ದಕ್ಷಿಣ–ಪಶ್ಚಿಮಕ್ಕೆ ೧೩೮ ಹೆಕ್ಟೇರ್ ಗೋಮಾಳವಿದ್ದು, ಕುರಿ, ದನಗಳಿಗೆ ಹುಲ್ಲುಗಾವಲಾಗಿದೆ.

ಕೆಂಪು ಮಿಶ್ರಿತ ಮರಳು ಮಣ್ಣಿನ ಭೂಪ್ರದೇಶ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ತೋಳ, ಜಿಂಕೆ, ಕಾಡು, ಹಂದಿ, ಉಡ. ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಕುರಿ, ಮೇಕೆ, ಹಸು, ಎಮ್ಮೆ, ನಾಯಿ, ಕತ್ತೆ ಹಾಗೂ ಪಕ್ಷಿಗಳಾದ ಕೋಗಿಲೆ, ನವಿಲು, ಗೊರವಂಕ, ಗಿಳಿ, ಕಾಗೆ, ಹದ್ದು, ಕೊಕ್ಕರೆ, ಗರುಡ, ಕೌಜಲು, ಕಂಡು ಬರುತ್ತವೆ. ಗ್ರಾಮದಲ್ಲಿ ಮಾಂಸ ಹಾಗೂ ಮೊಟ್ಟೆಗಾಗಿ ಕೋಳಿಯನ್ನು ಸಾಕಲಾಗುತ್ತದೆ.

ಬಿಸಿಲು ಬಯಲು ಸೀಮೆ, ಕಳೆದ ಐದು ವರ್ಷಗಳಲ್ಲಿ ಸರಾಸರಿ ಮಳೆ ೪೫೫ ಮಿ.ಮೀ. ಮಳೆ ಆಗಿದೆ. ಇದು ವಾಡಿಕೆಗಿಂತ ಕಡಿಮೆಯಾಗಿದೆ. ಉಷ್ಣಾಂಶ ೩೧೨ ಸೆಂ. ಇದ್ದರೆ,

ಚಳಿ ೧೨ ಸೆಂ. ಸಹಜವಾಗಿರುತ್ತದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಒಂದು ದೊಡ್ಡ ಟ್ಯಾಂಕ್ ಇದ್ದು, ೧೦೦ ಕೊಳಾಯಿ ನಲ್ಲಿ ಸಂಪರ್ಕವಿದೆ. ೪ ಕೈ ಪಂಪುಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ೨ ಕೆರೆಗಳಿವೆ. ಒಂದು ದೊಡ್ಡ ಕೆರೆ, ಬಲಭಾಗವನ್ನು ಗೋ ಕಟ್ಟೆ ಎಂದು ಕರೆಯುತ್ತಾರೆ. ಮಳೆ ಇಲ್ಲದ ತುಂಬುವುದು ಅಪರೂಪವಾಗಿದೆ. ರೈತರು ಉಪ ನೀರಾವರಿಗಾಗಿ ೧೨೦ ಕೊಳವೆ ಬಾವಿಗಳನ್ನು ಗಂಗಾ ಕಲ್ಯಾಣ ಮೊದಲಾದ ಸಹಾಯಾರ್ಥದ ಅಡಿಯಲ್ಲಿ ಕೊರೆಸಿ ತೋಟಗಾರಿಕೆ ಬೆಳೆ ತೆಗೆಯುತ್ತಿದ್ದಾರೆ.

ಕಾಡುಗೊಲ್ಲರು, ಕುರುಬರು ಇಲ್ಲಿನ ಸಾಮಾಜಿಕ ರಚನೆಯಲ್ಲಿ ದೊಡ್ಡ ಸಮುದಾಯವಾಗಿದೆ. ಗ್ರಾಮದ ಪೂರ್ಣ ಭಾಷೆ ಕನ್ನಡವಾಗಿದೆ. ಅಲ್ಪ ಸಂಖ್ಯಾತ ಮುಸ್ಲಿಂ, ವೈಶ್ಯರು, ಉರ್ದು, ತೆಲುಗು ಮಾತನಾಡುತ್ತಾರೆ. ವಿವಿಧ ಪ್ರಕಾರಗಳಾದ ಕಲ್ಲಿನ, ಹೆಂಚಿನ, ಸೀಮೆಂಟಿನ, ಕಾಂಕ್ರೀಟ್, ಒಂದೇ ಹುಲ್ಲು ಗುಡಿಸಿಲಿನ ಒಟ್ಟು ೫೨೬ ಮನೆಗಳಿವೆ. ಇವು ಸರ್ಕಾರದ ವಸತಿ ಯೋಜನೆಗಳಾದ ಇಂದಿರಾ ಆವಾಸ್, ಆಶ್ರಯ, ಜನತಾ ವಸತಿ ಯೋಜನೆಯ ೭೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ಉಚಿತ ವಿದ್ಯುತ್ ದೀಪದ ಫಲಾನುಭವಿಗಳಿದ್ದಾರೆ. ೧೮೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೨೮೧೪ ಜನಸಂಖ್ಯೆ ಇದೆ.

ಇಲ್ಲಿನ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನವಾಗಿದ್ದು, ರೊಟ್ಟಿ ಬಳಸುವವರಿದ್ದಾರೆ ಸಾಂದರ್ಭಿಕ ವಿಶೇಷ ಭೋಜನವಾಗಿ ಪಾಯಸ, ಬಾಡೂಟ, ಹೋಳಿಗೆ ಇರುತ್ತದೆ. ಸಾಂಪ್ರದಾಯಿಕ ವಾಹನಗಳಾದ ೧೪ ಎತ್ತಿನ ಗಾಡಿಗಳಿವೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ಲಾರಿ, ಕಾರು, ಬಸ್, ಟ್ರೆಲ್ಲರ್ ಬಳಕೆಯಲ್ಲಿದೆ. ದ್ವಿಚಕ್ರ ವಾಹನಗಳಾದ ಸೈಕಲ್, ಸ್ಕೂಟರ್ ಇವೆ. ಗ್ರಾಮವು ಕಚ್ಚಾ ಚರಂಡಿ ಹೊಂದಿದೆ.

ವಾಣಿಜ್ಯ ತೆರಿಗೆ, ಇಬ್ಬರು ಉಪನ್ಯಾಸಕರು, ಸಾರ್ವಜನಿಕ ಶಿಕ್ಷಣ, ಬೆಸ್ಕಾಂ, ಆರ್.ಡಿ.ಪಿ.ಐ. ಸಾರಿಗೆ, ಪೋಲೀಸ್, ಅಬಕಾರಿ, ಕಂದಾಯ, ಬಿಬಿಎಂಪಿ, ಪ್ರಾಥಮಿಕ ಶಿಕ್ಷಣ ೭ ಜನರೂ ಸೇರಿದಂತೆ ಒಟ್ಟು ೨೪ ಜನ ಸರ್ಕಾರಿ ನೌಕರರಿದ್ದಾರೆ. ವೈದ್ಯರು, ಇಂಜಿನಿಯರ್ ಸರ್ಕಾರಿ ಖಾಸಗಿ ವಲಯಗಳಲ್ಲಿದ್ದಾರೆ. ಇತರ ಖಾಸಗಿ ವಲಯಗಳಲ್ಲಿ ೧೦೦ ಜನರು ಬೆಂಗಳೂರು, ತುಮಕೂರು, ಪುಣೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಬೇವಿನಹಳ್ಳಿ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ ಪ್ರಮುಖ ಬೆಳೆಯಾಗಿದ್ದು, ರಾಗಿ, ಭತ್ತ, ಜೋಳ, ಸೂರ್ಯಕಾಂತಿ ಬೆಳೆಗಳು ತೆಂಗು, ಅಡಿಕೆ, ಹುಣಸೆ ಬೀಜದ, ಹಣ್ಣಿನ ವ್ಯಾಪಾರವಿದೆ. ಇಲ್ಲಿ ಒಂದು ಆಧುನಿಕ ಡೈರಿಯಿದ್ದು ಸರಾಸರಿ ೨೫೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಕೃಷಿಯೇತರ ಚಟುವಟಿಕೆಗಳಲ್ಲಿ ಸಹಕಾರಿಯಾಗಿದೆ. ಕುರಿಗಳು ಹುಲ್ಲು ನೀರಿಗಾಗಿ ಪರಸ್ಥಳ, ದೇಶಕ್ಕೆ ಹೋಗುವ ವಲಸೆ ಕುರಿ ಎಂದು

ಬೇವಿನಹಳ್ಳಿಯಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಲ್ಲದಿದ್ದರೂ ಇಟ್ಟಿಗೆ ಫ್ಯಾಕ್ಟರಿ, ಬಟ್ಟೆ ಹೊಲಿಯುವುದು, ಬೀಡಿ ಸುತ್ತುವುದು, ಹಿಟ್ಟಿನ ಗಿರಣಿಗಳು, ಕಂಬಳಿ ತಯಾರಕರು ಕಂಡು ಬರುತ್ತಾರೆ. ಇಲ್ಲಿ ಕಂಬಳಿಗಳು, ಬಾಂಬೆ, ಗೋವಾ, ಕೇರಳ ರಾಜ್ಯಗಳಿಗೆ ಮಾರಾಟವಾಗುತ್ತವೆ.

ಈ ಗ್ರಾಮವು ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರ. ತಾವರೆಕೆರೆ ಜಿಲ್ಲಾ ಮತ್ತು ಬೇವಿನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯಿತಿ ತಹಶೀಲ್ದಾರ್ ಕಛೇರಿ ಬೇವಿನಹಳ್ಳಿ ಗ್ರಾಮ ಪಂಚಾಯ್ತಿ, ೫ ಸದಸ್ಯರನ್ನು ಹೊಂದಿದೆ. ಅಲ್ಲದೆ ತಾವರೆಕೆರೆ ಪೋಲೀಸ್ ಠಾಣೆ, ಬೇವಿನಹಳ್ಳಿ ಅಂಚೆ ಮತ್ತು ವಿದ್ಯುತ್ ಮಂಡಳಿಯನ್ನು ಒಳಗೊಂಡಿದೆ. ಈ ಹಳ್ಳಿಯಲ್ಲಿ ಗ್ರಾ ನ್ಯಾಯ ಮಂಡಳಿ ಇದ್ದು ಸಣ್ಣ ಪುಟ್ಟ ಕಲಹಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಆದರೆ ಬಗೆ ಹರಿಯದ ತೀರ್ಮಾನಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ಇತ್ಯರ್ಥ ಮಾಡಿಕೊಳ್ಳುತ್ತಾರೆ. ಬಡೀರಪ್ಪ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದಾರೆ. ಜನಪದ ಕಾವ್ಯ ಹಾಡುಗಾರರೂ ಆಗಿದ್ದು, ದೇವರು ಕರೆಯುವ ಪದ ಹಾಡುವುದು. ನೃತ್ಯದಲ್ಲಿ ಸ್ಥಳೀಯವಾಗಿ ಹೆಸರಾಗಿದ್ದಾರೆ.

ಬೇವಿನಹಳ್ಳಿಯಲ್ಲಿ ಹಣಕಾಸಿನ ವ್ಯವಸ್ಥೆಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಉಣ್ಣೆ ನೇಕಾರರ ಸಹಕಾರಿ ಸಂಘ, ಸ್ತ್ರೀ ಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿಂದ ಸಹಾಯಧನ ಮತ್ತು ಬ್ಯಾಂಕಿಂಗ್ ಚಟುವಟಿಕೆ ನಡೆಯುತ್ತಿದೆ. ನ್ಯಾಯಬೆಲೆ ಅಂಗಡಿ ಇದೆ.

ಬೇವಿನಹಳ್ಳಿಯಲ್ಲಿ ಒಂದು ಅಂಗನವಾಡಿ ಕೇಂದ್ರ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಪ್ರೌಢಶಾಲೆಯನ್ನು ಹೊಂದಿದೆ. ಅಲ್ಲದೆ ಈ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ವಸತಿ ಶಾಲೆಯಿದ್ದು ಇಂದು ಇದರ ಮಹತ್ವವನ್ನು ಕಳೆದುಕೊಂಡಿದೆ. ಹಾಗೆಯೇ ಇಲ್ಲಿನ ಒಟ್ಟು ಸಾಕ್ಷರತಾ ಪ್ರಮಾಣವು ಶೇ. ೫೩.೮ ರಷ್ಟಿದೆ. ಶಾಲೆಯಲ್ಲಿ ಬಿಸಿಯೂಟ,

ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ ಸೌಲಭ್ಯವಿದೆ.

ಈ ಗ್ರಾಮದಲ್ಲಿ ಗ್ರಾಮ ಪಂಚಾಯ್ತಿ ಗ್ರಂಥಾಲಯವಿದ್ದು, ಹಳೆಯ ಪುಸ್ತಕ ಹಾಗೂ ನ್ಯೂಸ್ ಪೇಪರ್‌ಗಳು ಕಂಡು ಬರುತ್ತವೆ. ಉಪ ಆರೋಗ್ಯ ಕೇಂದ್ರವಿದ್ದು ಕುಟುಂಬ ಕಲ್ಯಾಣವಿದೆ. ಆದ್ದರಿಂದ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಚಳಿ, ಜ್ವರ, ಕೆಮ್ಮು ಮುಂತಾದ ರೋಗಗಳು ಕಂಡು ಬರುತ್ತದೆ. ಈ ಗ್ರಾಮದಲ್ಲಿ ಚಿತ್ತಯ್ಯ ಮತ್ತು ತಿಮ್ಮಯ್ಯ ಎಂಬುವರು ನಾಟಿ ಪದ್ಧತಿಯ ಔಷಧಿಯನ್ನು ನೀಡುತ್ತಾರೆ ಹಾಗೂ ಗ್ರಾಮದಲ್ಲಿ ಪಶುಚಿಕಿತ್ಸಾಲಯವಿದೆ.

ಇಲ್ಲಿ ಟೀ ಮತ್ತು ಉಪಹಾರದ ಆರು ಹೋಟೆಲ್‌ಗಳು ಮತ್ತು ೧೫ ಅಂಗಡಿಗಳಿವೆ. ಈ ಗ್ರಾಮದಲ್ಲಿ ಯಾವುದೇ ಐತಿಹಾಸಿಕ ನೆಲೆಗಳು, ಸ್ಮಾರಕಗಳು ಶಾಸನಗಳು ಕಂಡು ಬರದಿದ್ದರೂ ಇಲ್ಲಿ ಒಂದು ಬೇವಿನಕಟ್ಟೆ, ಎರಡು ಅಶ್ವತ್ಥ ಕಟ್ಟೆ ಮತ್ತು ಎರಡು ವೀರಗಲ್ಲು ಹಾಗೂ ಎರಡು ಕರುವುಗಲ್ಲುಗಳಿವೆ. ಬೇವಿನಹಳ್ಳಿ ರಂಗಪ್ಪ, ಬಿ.ಆರ್. ಕರೀಗೌಡ, ಕರಿಯಪ್ಪ ಈ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು.

ಧಾರ್ಮಿಕ ಕೇಂದ್ರಗಳಾಗಿ ಜುಂಜಪ್ಪ, ಶ್ರೀರಾಮ, ಆಂಜನೇಯ, ಲಕ್ಷ್ಮಿ, ಹೊಸೂರಮ್ಮ, ಕರಿಯಮ್ಮ, ಬೀರಪ್ಪ, ದುರ್ಗಮ್ಮ, ಎತ್ತಪ್ಪ ದೇವಾಲಯಗಳಿವೆ. ಅರಳಿಕಟ್ಟೆ ಗುರುಮಠ, ನಿತ್ಯಾನಂದ ಆಶ್ರಮ, ಶ್ರೀ ಗುರುಶಾಂತವೀರ ಅವಧೂತಸ್ವಾಮಿ ಆಶ್ರಮಗಳಿವೆ. ಈ ಗ್ರಾಮದಲ್ಲಿ ಕರಿಯಮ್ಮನ ಜಾತ್ರೆಯನ್ನು ಮಾಡಿ ಅಲ್ಲಿ ಆರತಿ ಮತ್ತು ಬಲಿ ನೀಡುವುದು ವಿಶೇಷವಾಗಿರುತ್ತದೆ.

ಸಾಂಸ್ಕೃತಿಕ ಜನಪದದಲ್ಲಿ ಸಾಂಸ್ಕೃತಿಕ ನಾಯಕ ವೀರಜುಂಜಪ್ಪನ ಸಮಗ್ರ ಕಥೆ ಹಾಡುವ ಹಿರಿಯ ಕಲಾವಿದರಾದ ಕೊರ್ಲೆ ತಿಮ್ಮಣ್ಣ, ವಿಭೂತಿ ತಿಮ್ಮಣ್ಣ ಇದ್ದಾರೆ. ಇವರು ಹಾಡಿರುವ ಮಹಾಕಾವ್ಯವನ್ನು ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿ ವೀರ ಜುಂಜಪ್ಪ ಸಮಗ್ರ ಕಥಾವಳಿ ಎಂಬ ಹೆಸರಲ್ಲಿ ಪ್ರಕಟಿಸಿದ್ದಾರೆ.

ಹರಿಕಥೆ ಕಲಾವಿದರಾದ ಪಿ.ಎನ್.ಮೈಲಾರಪ್ಪ ತತ್ವಪದಕಾರರು ಬಿ.ಜೆ. ರಂಗಯ್ಯ, ಜುಂಜಪ್ಪನ ಪದಗಳು, ಕೆಂಚಮ್ಮ, ಚಿಕ್ಕೀರಮ್ಮ, ಮಂಗಳಮ್ಮ, ತಿಮ್ಮಕ್ಕರು ಭಜನೆಯನ್ನು ಜಯಣ್ಣ, ಮಡ್ನಪ್ಪ, ರಂಗನಾಥಪ್ಪ, ದೊಡ್ಡರಂಗಪ್ಪರು ಮಾಡುತ್ತಾರೆ. ಹಾಗೆಯೇ ಈ ಗ್ರಾಮದಲ್ಲಿ ವಿನಾಯಕ ಸಂಘವಿದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ, ಗೌರಿಗಣೇಶ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬಿಳಿಗಿರಿಯಜ್ಜನ ಪಾಳ್ಯ

ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೦ ಕಿ.ಮೀ. ದೂರದಲ್ಲಿರುವ ಈ ಹಳ್ಳಿ ೨೬ ಮನೆಗಳ ಗ್ರಾಮ. ಮೂಲ ಗ್ರಾಮ ಹೊಸೂರಿಗೆ ಹೊಂದಿಕೊಂಡ ಮಜರೆ ಗ್ರಾಮವಾಗಿದ್ದು, ಕಂದಾಯ ಗ್ರಾಮಗಳ ಪಟ್ಟಿಯಲ್ಲಿ ನಮೂದಾಗಿ ರುವುದಿಲ್ಲ. ಈ ಗ್ರಾಮಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳೂ ಅಲಭ್ಯವೈಗಿದೆ. ಇದರ ಭೌಗೋಳಿಕ ವ್ಯಾಪ್ತಿ ೧೨೨ ಹೆಕ್ಟೇರ್ ಆಗಿದ್ದು, ಮುಖ್ಯ ಗ್ರಾಮ ಹೊಸೂರು ಲೆಕ್ಕದಲ್ಲಿ ಸೇರ್ಪಡೆಯಾಗಿದೆ. ಕುಂಚಿಟಿಗರು ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ಬೇಡ ನಾಯಕರು ಸಣ್ಣ ಸಮುದಾಯವಾಗಿದೆ. ಕಾಂಕ್ರೀಟ್, ಮತ್ತು ಮಂಗಳೂರು ಹೆಂಚಿನ ಮನೆಗಳಿದ್ದು, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯ ಜ್ಯೋತಿ ಯೋಜನೆಯ ಫಲಾನುಭವಿಗಳಿದ್ದಾರೆ. ೯೮ ಜನಸಂಖ್ಯೆ ಇದೆ.

ಗಿರಿಯಣ್ಣ ಎಂಬ ಹೆಸರಿನ ಹಲವರು ಈ ಗ್ರಾಮದಲ್ಲಿ ಇದ್ದುದ್ದರಿಂದ ಬೆಳಕಿದ್ದ ಗಿರಿಯಣ್ಣ, ಈ ಗ್ರಾಮದ ಮೂಲ ಪುರುಷನಾದುದರಿಂದ ಬಿಳಿಗಿರಿಯಣ್ಣನ ಪಾಳ್ಯ ಎಂದೇ ಈ ಗ್ರಾಮದ ನಾಮ ಸೂಚಿ ಪ್ರಕಟವಾಗಿದೆ. ಜನಪದರು ಗಿರಿಯಣ್ಣನ ಪಾಳ್ಯ, ಪಾಳ್ಯ ಎಂಬ ಹೆಸರುಗಳಿಂದಲೇ ಕರೆಯುವುದು ವಾಡಿಕೆಯಾಗಿದೆ.

ಮರಳು-ಕೆಂಪು, ಕಂದು ಮಿಶ್ರಿತ ಮಣ್ಣನ್ನು ಹೊಂದಿರುವ ಈ ಗ್ರಾಮದ ಮೇಲ್ಮೈ. ರಾಗಿ, ಹತ್ತಿ, ಶೇಂಗಾ, ಹರಳು, ತೊಗರಿ, ಹುರುಳಿ ಬೆಳೆಗಳಿಗೆ ಉತ್ತೇಜನಕಾರಿಯಾಗಿದೆ. ಮಳೆಯನ್ನು ಆಶ್ರಯಿಸಿ ಬದುಕುವ ಈ ಜಾಗ ಸರಾಸರಿ ೪೬೮. ಮಿ.ಮೀ. ಮಳೆ ಸುರಿಯುತ್ತದೆ. ೩೨-೩೬ ಸೆಂ. ಉಷ್ಣಾಂಶವಿದ್ದು, ಚಳಿ- ೧೨ ಸೆಂ.ಮೀ. ಇರುತ್ತದೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು, ರೊಟ್ಟಿ, ದೋಸೆ ಉಪ ಆಹಾರ. ವಿಶೇಷ ಸಂದರ್ಭದಲ್ಲಿ ಮಾಂಸ ಹಾಗೂ ಮೀನಿನ ಭೋಜನ ಇರುತ್ತದೆ. ಸಾಂಪ್ರದಾಯಿಕ ವಾಹನ ಬಂಡಿ, ಆಧುನಿಕ ವಾಹನವಾದ ಟೆಂಪೋ, ಸ್ಕೂಟರ್, ಟ್ರ್ಯಾಕ್ಟರ್ ಹೊಂದಿದ್ದಾರೆ.

ಈ ಗ್ರಾಮದಲ್ಲಿ ಮೊಲ, ನರಿ, ತೋಳ, ಮಂಗ ಈ ಮೊದಲಾದವು. ಹಾಗೂ ಸಾಕು ಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕುರಿ, ಕೋಳಿಗಳನ್ನು ಸಾಕಲಾಗುತ್ತದೆ. ಒಬ್ಬರು ಕೆ.ಎಸ್.ಆರ್.ಟಿ.ಸಿ. ನೌಕರರೂ ಇದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ

ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಿರಾ ವಿಧಾನಸಭೆ, ಚಿತ್ರದುರ್ಗ ಲೋಕಸಭೆ, ತಾವರೆಕೆರೆ ಜಿಲ್ಲಾ ಪಂಚಾಯಿತಿ, ಹಾಗೂ ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಒಂದು ಅಂಗನವಾಡಿ ಕೇಂದ್ರವಿದ್ದು ಇಬ್ಬರು ನೌಕರರಿದ್ದಾರೆ. ಕ್ಷಯ, ಕಾಲರಾ, ಫ್ಲೂ ಮೊದಲಾದ ಸಾಮಾನ್ಯ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಹೊಸೂರು, ತಾವರೆಕೆರೆ ಹಾಗೂ ಸಿರಾ ಸಾರ್ವಜನಿಕ ಆಸ್ಪತ್ರೆಗಳಿಂದ ಚಿಕಿತ್ಸೆ ಪಡೆಯುತ್ತಾರೆ.

ವೃದ್ಧಾಪ್ಯ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಯುಗಾದಿ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸಿ, ಗ್ರಾಮ ದೇವತೆ, ಕರಿಯಮ್ಮನ ಹಬ್ಬ, ಆರತಿ, ಬಾನಗಳಿಂದ ಮಾಂಸಾಹಾರ ಹಬ್ಬವಾಗಿ ವಿಜೃಂಭಣೆಯಿಂದ ನಡೆಯುತ್ತದೆ. ಗ್ರಾಮದಲ್ಲಿ ಈಶ್ವರ, ರಂಗನಾಥ ಸ್ವಾಮಿ ದೇವಾಲಯಗಳಿವೆ.

## ಬಾಳಜ್ಜನ ಹಟ್ಟಿ

ಬಾಳಜ್ಜನಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೩೧ ಕಿ.ಮೀ. ದೂರದಲ್ಲಿದೆ. ಸಿರಾ –ಹುಣಸೇಹಳ್ಳಿ ರಸ್ತೆಯಲ್ಲಿ ಹೆರವರ ಹಳ್ಳಿಯಿಂದ ಎಡಭಾಗಕ್ಕೆ ಡ್ಯಾಗೇರಹಳ್ಳಿಗೆ ಹೊಂದಿಕೊಂಡಂತೆ, ಈ ಹಳ್ಳಿ ಇದ್ದು, ಇದು ಡ್ಯಾಗೇರಹಳ್ಳಿಯ ಉಪ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೧೧೧೭.೮೨ ಹೆಕ್ಟೇರ್ ಮೂಲಗ್ರಾಮದಲ್ಲಿ ಹಂಚಿಕೆಯಾಗಿದೆ. ಬಾಳಜ್ಜ ಎಂಬ ಕಾಡುಗೊಲ್ಲರ ವ್ಯಕ್ತಿ ಕುರಿಗಾಹಿಯಾಗಿ ಕುರಿ ರೊಪ್ಪ ಹಾಕಿಕೊಂಡು, ನಂತರ ಗುಡಿಸಲು ನಿರ್ಮಿಸಿ ವಾಸವಾದನು. ಆತನಿಂದ ಮುಂದೆ ಈ ಹಟ್ಟಿ ಬೆಳೆಯಿತು. ಆದುದರಿಂದ ಕಂಪನಿ ಸರ್ಕಾರ ಲೆಕ್ಕ ವರದಿಯಲ್ಲಿ ಬಾಳಜ್ಜನ ಹಟ್ಟಿ ಎಂದೇ ನಮೂದಿಸಿ ಕರೆಯಲಾರಂಭಿಸಿದ್ದರಿಂದ ಇಂದು ಹಟ್ಟಿ ಬೆಳೆದು ೭೮ ಮನೆಗಳನ್ನು ಹೊಂದಿದೆ. ೩೮೪ ಜನಸಂಖ್ಯೆ ಹೊಂದಿದೆ.

ಕೆಂಪು, ಬಿಳಿ ಮರಳು ಮಣ್ಣನ್ನು ಹೊಂದಿರುವ ಇಲ್ಲಿನ ನೆಲದಲ್ಲಿ ಉಷ್ಣಾಂಶ ಅಧಿಕ. ಸರಾಸರಿ ೩೮–೩೧೨ ಸೆಂ. ಉಷ್ಣಾಂಶವಿದ್ದರೆ ಮಳೆಯ ಪ್ರಕಾರ ೪೬೧ ಮಿ.ಮೀ. ವಾರ್ಷಿಕ ಚಳಿಯೂ ೧೨ ಸೆಂ. ಇರುತ್ತದೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ಒಂದು ಕುಂಟೆ ಇದೆ. ತುಂಬುವುದು ಅಪರೂಪ. ತುಂಬಿದರೂ ನೀರು ನಿಲ್ಲುವುದಿಲ್ಲ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಕರಡಿ, ಮೊಲ, ನರಿ, ತೋಳ, ಜಿಂಕೆ. ಸಾಕು ಪ್ರಾಣಿಗಳಾದ ಹಸು, ಎತ್ತು, ಕುರಿ, ಮೇಕೆ, ಕತ್ತೆಗಳನ್ನು ಸಾಕುತ್ತಾರೆ. ಕೋಳಿ ಸಾಕು ಪಕ್ಷಿಯಾದರೆ ಗಿಳಿ, ಕಾಗೆ, ಗೂಬೆ, ಹದ್ದು, ಗೊರವಂಕ, ಗುಬ್ಬಚ್ಚಿ ಕಾಡು ಪಕ್ಷಿಗಳು. ಗ್ರಾಮ ಪಂಚಾಯಿತಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಆಗಿದ್ದು ೨ ಕೊಳವೆ ಬಾವಿಗಳಿವೆ.

ಕಾಡುಗೊಲ್ಲರು ಮಾತ್ರ ವಾಸಿಸುವ ಈ ಗ್ರಾಮ, ಕಲ್ಲಿನ, ಮಣ್ಣಿನ, ಹೆಂಚಿನ ಫಲಾನುಭವಿಗಳು ಹೆಚ್ಚಿದ್ದಾರೆ. ಜನತಾ, ಆಶ್ರಯ ಯೋಜನೆಯಗಳು ಇದ್ದಾರೆ. ಭಾಗ್ಯಜ್ಯೋತಿ ಯೋಜನೆಯ ೧೬ ಫಲಾನುಭವಿಗಳು ಇದ್ದಾರೆ. ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ ವಿಶೇಷ ಆಹಾರ. ಟೆಂಪೋ, ಟ್ರ್ಯಾಕ್ಟರ್ ಬಳಕೆ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಈ ಗ್ರಾಮದ ಮುಖ್ಯ ಆಹಾರ ಬೆಳೆಗಳಾಗಿ ರಾಗಿ, ಶೇಂಗಾ, ಅವರೆ, ತೊಗರಿ, ಹುರುಳಿ, ಅಲಸಂದಿ, ಹಾಗೂ ಸೂರ್ಯಕಾಂತಿ, ರೇಷ್ಮೆ, ತೆಂಗು, ಅಡಿಕೆ ಬೆಳೆಯುತ್ತಾರೆ. ಇಡೀ ಗ್ರಾಮದಲ್ಲಿ ಒಬ್ಬರು ಕೆ.ಎಸ್.ಆರ್.ಟಿ.ಸಿ. ನೌಕರರಿದ್ದಾರೆ.

ಸಿರಾ ವಿಧಾನಸಭೆ, ತಾವರೆಕೆರೆ ಜಿಲ್ಲಾ ಪಂಚಾಯಿತಿ, ಹುಣಸೇಹಳ್ಳಿ ತಾಲ್ಲೂಕು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಒಬಬರು ಪಂಚಾಯಿತಿ ಪ್ರತಿನಿಧಿ ಈ ಗ್ರಾಮದಲ್ಲಿದ್ದಾರೆ. ಒಂದು ಅಂಗನವಾಡಿ ಕೇಂದ್ರವಿದೆ. ೨೦ ಮಕ್ಕಳು ಒಬ್ಬರು ನೌಕರರಿದ್ದಾರೆ. ಸಾಕ್ಷರತೆ ಪ್ರಮಾಣ ೪೯.೪ ರಲ್ಲಿದೆ. ವೃದ್ಧಾಪ್ಯ ವೇತನ, ವಿಧವಾ ವೇತನದ ಸೌಲಭ್ಯವಂತರಿದ್ದಾರೆ. ೧ ಅಂಗಡಿ ಇದೆ. ಜುಂಜಪ್ಪ ಈ ಗ್ರಾಮದ ಮುಖ್ಯ ದೇವರು. ದೀಪಾವಳಿಯಲ್ಲಿ ದೇವರ ಉತ್ಸವ, ಜಲ್ದಿ, ದೀಪ ಏರಿಸುವ ಆಚರಣೆ ಇರುತ್ತದೆ. ಯುಗಾದಿ, ಗೌರಿಗಣೇಶ, ಮಹಾನವಮಿ ವಿಶೇಷ ಹಬ್ಬಗಳು. ಮಾರಯ್ಯ, ದಾಸರಂಗಯ್ಯ, ಚಿತ್ತಜ್ಜ, ವೀರಜುಂಜಪ್ಪನ ಮೇಲೆ ಗಣಿ ಊದಿಕೊಂಡು ಪದ ಹಾಡುತ್ತಾರೆ.

## ಭೂತಕಾಟನಹಳ್ಳಿ

ಭೂತಕಾಟನಹಳ್ಳಿ ಕಂದಾಯಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೪೧೪.೮೬ ಹೆಕ್ಟೇರ್. ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಕ್ಕೆ ಸಿರಾ–ಬೇವಿನಹಳ್ಳಿ ರಸ್ತೆಯಲ್ಲಿ, ಸಿರಾ ನಗರದಿಂದ ೮ ಕಿ.ಮೀ. ದೂರದಲ್ಲಿದೆ. ಇದೊಂದು ಧಾರ್ಮಿಕ, ಮೂಲದ ಗ್ರಾಮ ಸೂಚಕ ಹೆಸರಾಗಿದೆ. ಭೂತೇಶ್ವರ ಹಾಗೂ ಕಾಟಂಲಿಂಗ ಈ ಎರಡು ದೇವರುಗಳ ಸಂಗಮ ನೆಲೆ. ಇದರಿಂದಾಗಿ ಭೂತಕಾಟನಹಳ್ಳಿ ಆಗಿದೆ. ಗ್ರಾಮದ ಒಳಗೆ ಕಾಟಂಲಿಂಗ ಹೊರಗೆ ಗೊಲ್ಲರ ಭೂತಪ್ಪನ ಗುಡಿ ಇಂದಿಗೂ ಇದ್ದು, ಪ್ರಮುಖ ಧಾರ್ಮಿಕ ನೆಲೆಗಳಾಗಿವೆ. ಭೂತಪ್ಪ,

ಕಾಟಪ್ಪನ ಈ ಎರಡು ಗುಡಿಗಳೇ ಜನಪದರ ಬಾಯಿಯಲ್ಲಿ ಭೂತ–ಕಾಟನ ಹಳ್ಳಿಗಳಾಗಿ ರೂಢಿಯಾಗಿದೆ. ಭೂತಕಾಟನ ಹಳ್ಳಿಗೆ ಗೊಲ್ಲರಹಟ್ಟಿ ಮಜರೆ ಗ್ರಾಮವಾಗಿದೆ. ಸಿರಾ ಶಾಸನ ೮೩ ರ ಅಸ್ಪಷ್ಟ ಶಾಸನದಲ್ಲಿ (ಕಾರ ೧೭ ನೇ ಶತಮಾನ) ಈ ಗ್ರಾಮವನ್ನು ಬೂದಿಕಾಟನಹಳ್ಳಿ ಎಂದು ಕರೆದಿರುವುದು ವಿಶೇಷ.

ಈ ಗ್ರಾಮದಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ಬೇಡರು, ಕುರುಬರು, ಮಡಿವಾಳರು, ಆದಿಕರ್ನಾಟಕ ಸಣ್ಣ ಸಮುದಾಯ ವಾಗಿವೆ. ಒಟ್ಟು ೧೨೬ ಮನೆಗಳಿರುವ ಇಲ್ಲಿ ಕಾಂಕ್ರೀಟ್, ಕಡಪ ಕಲ್ಲಿನ, ಶೀಟಿನ ಮನೆಗಳಿವೆ. ಜನತಾ ಹಾಗೂ ಇಂದಿರಾ ಆವಾಸ್ ಯೋಜನೆಯ ೧೯ ಮನೆಗಳೂ ಇವೆ. ಎರಡು ಗುಡಿಸಲು ಮನೆಗಳಿವೆ. ೫೫೪ ಜನಸಂಖ್ಯೆ ಇದೆ. ೭೯ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಕೆಂಪು ಮಿಶ್ರಿತ, ಕಪ್ಪು ಮಣ್ಣು ಇಲ್ಲಿನ ಭೂಮಿಯಾಗಿದ್ದು, ಉತ್ತರಕ್ಕೆ ಇದೇ ಗ್ರಾಮದ ಹೆಸರಿನ ಕೆರೆಯೂ ಇದೆ. ೬೧೪ ಜನಸಂಖ್ಯೆ ಹೊಂದಿದೆ.

ಕೆರೆಯ ಹಿಂದೆ ಕೃಷಿ ಕಾಯಕವಾಗಿ ಭತ್ತ, ರಾಗಿ, ಜೋಳ ಬೆಳೆಗಳನ್ನು ಬೆಳೆಯುತ್ತಾರೆ. ಸರಾಸರಿ ೪೬೮ ಮಿ.ಮೀ. ಮಳೆ ಬೀಳುವ ಈ ಪ್ರದೇಶ ಶೇಂಗಾ, ಹತ್ತಿ, ಸೂರ್ಯಕಾಂತಿ ಬೆಳೆಗಳನ್ನು ವಿಶೇಷವಾಗಿ ಬೆಳೆಯುತ್ತಾರೆ. ಬಿಸಿಲು ೩೯.೪೦ ಸೆಂ.ಇದ್ದು ಚಳಿಯು ೧೨ ಸೆಂ. ಪ್ರಮಾಣದಲ್ಲಿರುತ್ತದೆ. ಕೊಳವೆ ಬಾವಿಯಿಂದ ಕುಡಿಯುವ ನೀರಿನ ಸೌಲಭ್ಯ ಹೊಂದಿರುವ ಇಲ್ಲಿ ಮೂರು ಕೈ ಪಂಪುಗಳು ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿನ ಸಾಕು ಪ್ರಾಣಿಗಳಾದ ಹಸು, ಕುರಿ, ಮೇಕೆ ಹಾಗೂ ಕಾಡಿನ ಪ್ರಾಣಿಗಳಾದ ಹಂದಿ, ನರಿ, ತೋಳ, ಜಿಂಕೆ, ಮೊಲ, ಉಡ, ಮುಂಗುಸಿ, ಕಾಡುಬೆಕ್ಕು ಈ ಮೊದಲಾದ ಪ್ರಾಣಿಗಳೂ ಇವೆ.

ರಾಗಿ ಮುದ್ದೆ, ಅನ್ನ ಇಲ್ಲಿನ ಮುಖ್ಯ ಆಹಾರ. ಉಳಿದಂತೆ ರೊಟ್ಟಿ, ದೋಸೆ, ಚಿತ್ರಾನ್ನ ಬಳಸುತ್ತಾರೆ. ವಿಶೇಷ ಸಂದರ್ಭದಲ್ಲಿ ಮಾಂಸಾಹಾರವೂ ಬಳಕೆಯಲ್ಲಿದೆ. ಸಾಂಪ್ರದಾಯಿಕ ವಾಹನವಾಗಿ ಎತ್ತಿನಬಂಡಿ ಕೃಷಿ ಬಳಕೆಯಲ್ಲಿ ಉಪಯೋಗವಾಗುತ್ತಿದ್ದು, ಟ್ರ್ಯಾಕ್ಟರ್, ಲಾರಿ, ಬೈಕ್‌ಗಳನ್ನು ಬಳಸುತ್ತಾರೆ. ಇಲ್ಲಿನ ಪೂರ್ವಭಾಗಕ್ಕೆ ಹರಿಯುವ ಹೊಳೆಯ ದಂಡೆಗೆ ಹೊಂದಿಕೊಂಡಂತೆ ಅಡಿಕೆ, ತೆಂಗಿನ ತೋಟಗಳು. ಅದರ ಸಮೀಪದಲ್ಲಿಯೇ ಇಟ್ಟಿಗೆ ಫ್ಯಾಕ್ಟರಿಗಳು ಕಾರ್ಯ ನಿರ್ವಹಿಸುತ್ತಿದ್ದ ೮೦ ಜನ ಕಾರ್ಮಿಕರು ಖಾಯಂ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ.

ಶೇಂಗಾ, ಅಡಿಕೆ, ಹುಣಸೇಹಣ್ಣು, ತೆಂಗಿನಕಾಯಿ ವ್ಯಾಪಾರವೂ ಇದೆ. ಸಾರಿಗೆ, ಕಂದಾಯ, ಸೆಕ್ರೇಟಿಯಟ್‌ನಲ್ಲಿ ಒಟ್ಟು ೯ ಜನ ನೌಕರರಿದ್ದು, ಹದಿನೈದಕ್ಕೂ ಹೆಚ್ಚು ಪದವೀಧರರಿರ್ದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಚಿತ್ರದುರ್ಗ ಲೋಕಸಭೆ, ಸಿರಾ ವಿಧಾನಸಭೆ ಹಾಗೂ ತಾವರೆಕೆರೆ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೆ ಒಳಪಡುವ ಭೂತಕಾಟನಹಳ್ಳಿ, ಗೌಡಗೆರೆ ಗ್ರಾಮ ಪಂಚಾಯಿತಿಗ ಒಳಪಡುವ ಈ ಗ್ರಾಮದ ಪ್ರತಿನಿಧಿಗಳಾಗಿ ಇಬ್ಬರು ಪಂಚಾಯಿತಿ ಸದಸ್ಯರಿದ್ದಾರೆ. ಹವ್ಯಾಸಿ ರಂಗಭೂಮಿ ಕಲಾವಿದರು, ಪ್ರತಿ ವರ್ಷ ಶನಿಪ್ರಭಾವ, ಪೌರಾಣಿಕ ನಾಟಕವನ್ನು ಶ್ರಾವಣ ಮಾಸದ ಸಂದರ್ಭಗಳಲ್ಲಿ ಅಭಿನಯಿಸುತ್ತಾ ಬರುತ್ತಿದ್ದಾರೆ. ವಿನಾಯಕ ಕಲಾಬಳಗದ ಸದಸ್ಯರು, ಸಾಂಸ್ಕೃತಿಕ ಚಟುವಟಿಕೆಯನ್ನು ನಡೆಸುತ್ತಾ ಬರುತ್ತಾ ಸಾಂಸ್ಕೃತಿಕವಾಗಿ ಕ್ರಿಯಾಶೀಲರಾಗಿದ್ದಾರೆ.

ಒಂದು ಅಂಗನವಾಡಿ ಕೇಂದ್ರ, ಹಿರಿಯ ಪ್ರಾಥಮಿಕ ಪಾಠಶಾಲೆಗಳಿದ್ದು, ಒಟ್ಟು ೬ ಜನ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ನೀರು ಬಿಡುವ ಪಂಚಾಯಿತಿ ನೌಕರರೂ ಇದ್ದಾರೆ. ಶೇ. ೬೩.೯ ರಷ್ಟಿರುವ ಇಲ್ಲಿನ ಸಾಕ್ಷರತಾ ಪ್ರಮಾಣದಲ್ಲಿ ಪುರುಷರು ಶೇ. ೭೬.೩, ಮಹಿಳೆಯರು ಶೇ. ೫೦.೯ ರಷ್ಟಿದ್ದಾರೆ ವಿಕಲ ಚೇತನ ವೇತನ, ವಿಧವಾ ವೇತನ, ಸಂಧ್ಯಾ ಸುರಕ್ಷಾ ಸೇರಿದಂತೆ ವಿವಿಧ ಫಲಾನುಭವಿಗಳಿದ್ದಾರೆ. ೯ ಗೂಡಂಗಡಿ, ರಸ್ತೆ ಬದಿಗೆ ಒಂದು ಟೀ ಅಂಗಡಿಯೂ ಕಾರ್ಯ ನಿರ್ವಹಿಸುತ್ತಿದೆ. ಕಾಟಂಲಿಂಗೇಶ್ವರ, ಲಕ್ಷ್ಮೀದೇವಿ ದೇವಾಲಯಗಳಿದ್ದು, ವಿಶೇಷ ಪೂಜೆ, ಆರತಿ, ಉತ್ಸವವೂ ನಡೆಯುತ್ತದೆ. ದಸರಾ ಮೆರವಣಿಗೆ, ಹೊಳೆ ತೆಗೆಯುವ ಹಂಬಿನ ಪೂಜೆ ಕಾರ್ಯವೂ ವಿಜೃಂಭಣೆಯಿಂದ ನಡೆಯುತ್ತದೆ. ಕಾಡುಗೊಲ್ಲರ ಮೂಲ ನೆಲೆಯಾದ ಈ ಹಳ್ಳಿಯ ಅದಿದೇವತೆ ಕಾಟಂಲಿಂಗ ಕಾಡುಗೊಲ್ಲರ ಕುಲದೈವ. ಆದರೂ ಕುಂಚಿಟಿಗರೂ ಸೇರಿದಂತೆ ಗ್ರಾಮಸ್ಥರೆಲ್ಲರೂ ಈ ದೇವರ ಒಕ್ಕಲಾಗಿ, ಶ್ರದ್ಧೆ–ಭಕ್ತಿಯಿಂದ ನಡೆದುಕೊಳ್ಳುತ್ತಿರುವುದು ಸಿರಾ ಸೀಮೆಯ ಅಪರೂಪದ ನಡಾವಳಿ. ಇಂಥದ್ದೇ ಪ್ರಸಂಗ ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿ, ಬೇಡರಕಟ್ಟೆ, ಸಮೀಪದ ಕಾಟಂಲಿಂಗೇಶ್ವರ ನಗರದಲ್ಲಿನ ಕಾಟಂಲಿಂಗ ಪಾಳುಬಿದ್ದ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ, ವೀರಶೈವರು ಆರಾಧ್ಯ ದೇವರನ್ನಾಗಿಸಿಕೊಂಡಿರುವ ಅಪರೂಪದ ಉದಾಹರಣೆಗೆ– ಭೂತಕಾಟನ ಹಳ್ಳಿಯ ಕಾಟಂಲಿಂಗನ ಆರಾಧನೆ ಮತ್ತೊಂದು ಜನಾಂಗಿ ಈ ಸಾಮರಸ್ಯ, ಜನಪದರ ಭಕ್ತಿ–ಭಾವನೆಗಳ ರೂಪವಾಗಿ ಉದಾಹರಣೆಯಾಗಿದೆ.

ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಗೋವಿಂದಪ್ಪ, ದೊಡ್ಡ ನರಸಿಂಹಯ್ಯ ರಂಗಭೂಮಿಯ ಪ್ರಮುಖ ಕಲಾವಿದರಾಗಿದ್ದಾರೆ.

## ಭೂತಪ್ಪನಗುಡಿ

ಭೂತಪ್ಪನಗುಡಿ ಸಿರಾ ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ದೂರದಲ್ಲಿದೆ. ಸಿರಾ-ತಾವರೆಕೆರೆ, ಹೊಸೂರು ಮಾರ್ಗದಲ್ಲಿ ಮೊಸರುಕುಂಟೆಯಿಂದ ಮುಂದೆ ಇದ್ದು, ಮೂಲ ಗ್ರಾಮ ಕೆ. ರಂಗನಹಳ್ಳಿಯ ಮಜರೆಯಾಗಿದೆ. ಭೂತಪ್ಪನ ಕಾಡುಗಲ್ಲಿನ ಒಂದು ಪುಟ್ಟ ವಿಗ್ರಹ ಗುಡಿ ಇದ್ದು, ನಂತರ ಗುಬ್ಬದ ಮಾದರಿಯಲ್ಲಿ ಸೀಟಿನ ಹೊದಿಕೆ ಹಾಕಿ ಹಾಲ್ ಮಾದರಿಯಲ್ಲಿ ಬೃಹತ್ ಮಂದಿನ ನಿರ್ಮಿಸಿದ್ದಾರೆ. ತೆರೆದ ರೀತಿಯ, ಮೇಲೊದಿಕೆಯಷ್ಟೆ ದೇವಾಲಯಕ್ಕಿರುವ ನೆರಳಿನ ಆಶ್ರಯ. ಈ ಪ್ರದೇಶಕ್ಕೆ ಬೆಂಗಳೂರು, ಮೈಸೂರು ಸೇರಿದಂತೆ ರಾಜ್ಯದ ನಾನಾ ಕಡೆಗಳಿಂದ ವಕ್ಕಲು ಬಂದು ಕುರಿ, ಕೋಳಿ ಹರಕೆ ಒಪ್ಪಿಸಿ ಊಟ ಹಾಕಿಸುವ ಸೇವೆ ಸೋಮವಾರ ಒಂದು ದಿನ ಹೊರತು ಪಡಿಸಿ, ಉಳಿದೆಲ್ಲಾ ದಿನವೂ ಇರುತ್ತದೆ. ಈಗಾಗಿಯೇ ಈ ಪ್ರದೇಶಕ್ಕೆ ಭೂತಪ್ಪನ ಗುಡಿ ಎಂದು ಕರೆದು ಸದಾ ಜನಸಂದಣಿ ಇರುತ್ತದೆ. ಮುಂದಕ್ಕೆ ಕೆರಂಗನಹಳ್ಳಿ-ಉತ್ತರಕ್ಕೆ ಕುಂಬಾರಹಳ್ಳಿ, ಪೂರ್ವಕ್ಕೆ ಪುರಲೇಹಳ್ಳಿಗಳ ನಡುವೆ ಭೂತಪ್ಪನ ಗುಡಿ ಇದ್ದು, ಜನ ವಸತಿಗ್ರಾಮವಾಗಿದೆ. ಜುಂಜಪ್ಪನ ಕಥೆಯ ಭಾಗವಾಗಿ ಬರುವ ಭೂತಪ್ಪ, ಜುಂಜಪ್ಪನನ್ನು, ತಾಳಿದುರ್ಗಿ ಎಂಬ ರಾಕ್ಷಸಿ ನುಂಗಿದಾಗ, ಗೌರಸಂದ್ರದ ಮಾರಮ್ಮ, ಭೂತಪ್ಪನನ್ನು ಸೃಷ್ಟಿಸಿ ಹರಿತವಾದ ಚಾಕನ್ನು ಕೈಯಲ್ಲಿ ಹಿಡಿದು ನಿಲ್ಲುತ್ತಾನೆ. ತಾಳೆದುರ್ಗಿ ಭೂತಪ್ಪನನ್ನು ನೇರವಾಗಿ ನುಂಗುತ್ತದೆ. ಆಗ ತಾಳಿದುರ್ಗಿಯ ಹೊಟ್ಟೆಯ ಒಳಗೆ ಸೇರಿದ ಭೂತಪ್ಪ, ಚಾಕುವಿನ ಸಹಾಯದಿಂದ ತಾಳಿ ದುರ್ಗಿಯ ಹೊಟ್ಟೆಯನ್ನು ಸೀಳಿ ಇಚೆಗೆ ಬರುತ್ತದೆ. ಸೀಳಿದ ಹೊಟ್ಟೆಯ ಮೂಲಕ ಜುಂಜಪ್ಪನೂ ಹೊರ ಬರುತ್ತಾನೆ. ಆಗ ಜುಂಜಪ್ಪ, ಭೂತಪ್ಪನನ್ನು ಭಕ್ತನನ್ನಾಗಿ, ನಿನಗೆ ನಿತ್ಯವೂ ರಕ್ತ ಮಾಂಸದ ಭೋಜನವಿರಲಿ ಎಂದು ಹರಸಿ, ಪುರಲೆಹಳ್ಳಿ ದಿಣ್ಣೆಯಲ್ಲಿ ನೆಲೆ ನಿಲ್ಲುವಂತೆ ಮಾಡುತ್ತಾನೆ. ಹೀಗೆ ಸ್ಥಾಪನೆಗೊಂಡ ದೈವವೇ ಭೂತಪ್ಪ. ಜುಂಜಪ್ಪನು ಐಕ್ಯವಾದ ಸಮಾಧಿಯಿಂದ ಇಲ್ಲಿಂದ ಉತ್ತರಕ್ಕೆ ೩ ಕಿ.ಮೀ. ದೂರದ ಕಳತರಹಳ್ಳಿ-ಹೊಸಹಳ್ಳಿ ಕೆರೆಯ ಮುಂಭಾಗದಲ್ಲಿದೆ.

ಕಪ್ಪು, ಬಿಳಿ, ಕೆಂಪು ಮಣ್ಣಿನಿಂದ ಕೂಡಿರುವ ಇಲ್ಲಿನ ನೆಲ, ಶೇಂಗಾ ಬೆಳೆಗೆ ಪ್ರಶಸ್ತವಾಗಿದೆ. ಕುರುಚಲು ಗಿಡ, ಹಳ್ಳ ದಿಣ್ಣೆ, ಬಯಲು ಪ್ರದೇಶವಾಗಿರುವ ಇಲ್ಲಿ ನರಿ, ಮೊಲ, ಹಂದಿ, ಜಿಂಕೆ, ಕಾಡುಬೆಕ್ಕು ವಾಸಿಸುತ್ತವೆ. ಗ್ರಾಮದಲ್ಲಿ ಹಸು, ಎತ್ತು, ಕುರಿ, ಮೇಕೆಯನ್ನು ಸಾಕುತ್ತಾರೆ. ಪಕ್ಷಿಗಳಾದ ಗಿಳಿ, ಕಾಗೆ, ಗೂಬೆ, ಗರುಡು, ಹದ್ದು, ಗೊರವಂಕ, ಬೆಳವ, ಕೌಜಗ ಕಂಡು ಬರುತ್ತವೆ. ಕೋಳಿ ಸಾಕು ಪ್ರಾಣಿಯಾಗಿದೆ.

ವಾರ್ಷಿಕ ಸರಾಸರಿ ೪೬೫ ಮಿ.ಮೀ.ಮಳೆ ಬೀಳುವ ಇಲ್ಲಿ ಬಿಸಿಲು ೩೮-೩೧೨ ಸೆಂ. ಇರುತ್ತದೆ. ಚಳಿ ೧೨ ಸೆಂ. ಇರುತ್ತದೆ. ಕುಡಿಯಲು ಹೊಸೂರು ಗ್ರಾಮ ಪಂಚಾಯಿತಿ ವತಿಯಿಂದ, ಕೊಳವೆ ಬಾವಿಯ ಮೂಲಕ ನೀರು ಪೂರೈಕೆ ಮಾಡಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ, ಕುಂಚಿಟಿಗರೂ, ನಾಯಕರು, ಈಡಿಗರು, ಸಿಳ್ಳೇಕ್ಯಾತರು, ಕೊರಚ, ದೇವಾಂಗ ಹಾಗೂ ಕಾಡುಗೊಲ್ಲರು ಕಂಡು ಬರುತ್ತಾರೆ. ಆದಿ ಕರ್ನಾಟಕ ಜನಾಂದ ದೊಡ್ಡ ಸಮುದಾಯವಾಗಿದೆ. ಕಾಂಕ್ರೀಟ್, ಹೆಂಚಿನ, ಶೀಟಿನ ಒಟ್ಟು ೫೨ ಮನೆಗಳಿವೆ. ೭ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೨೫೦ ಜಂಸಂಖ್ಯೆ ಹೊಂದಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಸಿಹಿ ಭೋಜನ ಸಾಂದರ್ಭಿಕ ಊಟವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಲಾರಿ, ಟೆಂಪೋ, ದ್ವಿಚಕ್ರ ವಾಹನ ಕಂಡು ಬರುತ್ತದೆ. ಶೇಂಗಾ, ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಅಲಸಂದಿ, ತೊಗರಿ, ಹುರುಳಿ ಬೆಳೆಯುತ್ತಾರೆ. ಒಂದು ನಂದಿನಿ ಹಾಲಿನ ಡೈರಿ ಇದ್ದು, ಕುಂಬಾರ ಹಳ್ಳಿ, ಪುರಲೇಹಳ್ಳಿ, ರಂಗನಹಳ್ಳಿಗಳಿಂದ ಹಾಲು ಸಂಗ್ರಹಿಸಲಾಗುತ್ತದೆ. ಹುಣಸೆಹಣ್ಣಿನ ವ್ಯಾಪಾರ, ಕುರಿ, ಮೇಕೆ ವ್ಯಾಪಾರ ಇರುತ್ತದೆ. ಮಹಿಳೆಯರು ಬೀಡಿ ಕಟ್ಟುವುದು, ಊಟದ ಎಲೆ ತಯಾರಿಕೆ, ಪೂಜಾ ಸಾಮಗ್ರಿಗಳ ಮಾರಾಟ ಮಾಡುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯಿತಿ, ಹೊಸೂರು ಗ್ರಾಮ ಪಂಚಾಯಿತಿ ಕ್ಷೇತ್ರಕ್ಕೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ೨ ಸ್ತ್ರೀ ಶಕ್ತಿ ಸಂಘಗಳಿದ್ದು ಒಂದು ಮಣ್ಣೆಮ್ಮ ಗ್ರಾಮಾಂತರ ಪ್ರೌಢಶಾಲೆ ಇದೆ. ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿವೆ. ವೃದ್ಧಾಪ್ಯ, ವಿಕಲಚೇತನ, ವಿಧವಾ ವೇತನ ಸೌಲಭ್ಯ ಪಡೆದವ ರಿದ್ದು, ೨ ಹೋಟೆಲ್, ೧೦ ಅಂಗಡಿಗಳಿವೆ. ಭೂತಪ್ಪನ ದೇವಸ್ಥಾನವಿದ್ದು,

ವಾರ್ಷಿಕ ಜಾತ್ರೆ ನಡೆಯುತ್ತದೆ. ಯುಗಾದಿ, ದೀಪಾವಳಿ, ಗೌರಿ, ಶಿವರಾತ್ರಿ ವಿಶೇಷ ಹಬ್ಬ ಆಚರಣೆಯಲ್ಲಿರುತ್ತದೆ.

## ಭೂತಕಾಟನಹಳ್ಳಿ ಗೊಲ್ಲರಹಟ್ಟಿ

ಇದೊಂದು ಭೂತಕಾಟನಹಳ್ಳಿಗೆ ಸೇರಿದ ಮಜರೆ ಗ್ರಾಮ. ಸಿರಾ–ಬೇವಿನಹಳ್ಳಿ ಮುಖ್ಯ ರಸ್ತೆಯಲ್ಲಿ ೧೦ ಕಿ.ಮೀ. ದೂರದ ಭೂತಕಾಟನ ಹಳ್ಳಿಯಿಂದ ಉತ್ತರಕ್ಕೆ ಅರ್ಧ ಕಿ.ಮೀ. ದೂರದಲ್ಲಿದೆ. ಸಿರಾದಿಂದ ಪಶ್ಚಿಮ ದಿಕ್ಕಿಗೆ ಸೇರಿದ್ದು, ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೨೧ ಹೆಕ್ಟೇರ್ ಆಗಿದೆ. ಈ ಗ್ರಾಮದ ನಿರ್ಮಾಣ ಬೋರಜ್ಜಿ ಎಂಬ ಕಾಡುಗೊಲ್ಲರ ವ್ಯಕ್ತಿಯಿಂದ ಆಗಿರುವುದರಿಂದ ಬೋರಜ್ಜನ ಹಟ್ಟಿ ಎಂತಲೂ ಕರೆಯಲಾಗುವುದು. ಭೂತಕಾಟನಹಳ್ಳಿಗೆ ಹೊಂದಿ ಕೊಂಡಿರುವುದರಿಂದ ಭೂತಕಾಟನಹಳ್ಳಿ ಗೊಲ್ಲರಹಟ್ಟಿ ಎಂದು ಇದೀಗ ರೂಢಿ ಮೂಲ ಹೆಸರಾಗಿದೆ.

ಕೆಂಪು, ಬಳಿ ಮಿಶ್ರಿತ ಜೇಡಿ ಮಣ್ಣಿನ ಸ್ವರೂಪ ಹೊಂದಿರುವ ಇಲ್ಲಿನ ಭೂಮಿ ಶೇಂಗಾ, ಹತ್ತಿ, ಹಾಗೂ ಸೂರ್ಯಕಾಂತಿ ಬೆಳೆಗೆ ಪ್ರಶಸ್ತವಾಗಿದೆ. ಮುಖ್ಯ ಬೆಳೆಯೂ ಇದೆ ಆಗಿದೆ. ಆರ್ಥಿಕ ಬೆಳೆಗಳಾಗಿ ಶೇಂಗಾ, ಹುಣಸೆಹಣ್ಣು, ತೆಂಗು, ಅಡಿಕೆ ಬೆಳೆಗಳೂ ಇವೆ. ಸಿರಾ ವಿಧಾನ ಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದ್ದು, ತಾವರೆಕೆರೆ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಒಳಪಡುತ್ತದೆ. ಪೋಲೀಸ್ ವಿದ್ಯುತ್ ಮುಂತಾದವುಗಳಿಗೆ ಸಿರಾ ಗ್ರಾಮಾಂತರ ವಿಭಾಗಗಳನ್ನು ಅವಲಂಬಿಸಿದೆ. ಗೌಡಗೆರೆ ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಈ ಕಿರುಗ್ರಾಮ ಒಂದು ಅಂಗನವಾಡಿ ಹಾಗೂ ಪ್ರಾಥಮಿಕ ಕಿರಿಯ ಪಾಠಶಾಲೆ ಹೊಂದಿದ್ದು, ಒಟ್ಟು ೪ ಜನ ಸಿಬ್ಬಂದಿಯವ ರಿದ್ದಾರೆ. ಇದೊಂದು ಕಾಡುಗೊಲ್ಲರ ಪೂರ್ಣ ನೆಲೆಯಾಗಿದ್ದು, ಕುರಿ ಪಾಲನೆಯ ಕಾರ್ಯ ಹೆಚ್ಚಿದೆ. ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಒಂದು ಸಂಘ, ಕರಿಯಮ್ಮ ಸ್ತ್ರೀ ಶಕ್ತಿ ಕೇಂದ್ರದ ಒಂದು ಸಂಘ ಸಕ್ರಿಯವಾಗಿದೆ. ಕುರಿ–ದನಗಳಿಗೆ ಚಿಕಿತ್ಸೆ ನೀಡುವ ಚಿಕ್ಕಹನುಮಯ್ಯ (೭೦) ಇಂದಿಗೂ ಕ್ರಿಯಾ ಶೀಲರಾಗಿದ್ದು ನಾಟಿ ವೈದ್ಯನೆಂದೇ ಪ್ರಸಿದ್ಧರಾಗಿದ್ದಾರೆ. ಸೋಬಾನೆ ರಂಗಮ್ಮ, ಗಿರಿಯಮ್ಮ ಸಂಗಡಿಗರು, ಚಿತ್ರದೇವರು, ಕಾಟಂ ದೇವರ ಮೇಲೆ ಕಾಡುಗೊಲ್ಲರ ಸಂಸ್ಕೃತಿ ಕುರಿತು ಪದ ಹಾಡುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ೫೪ ಮನೆಗಳಿದ್ದು ೨೧೨ ಜನಸಂಖ್ಯೆ ಇದೆ.

ಗ್ರಾಮದಲ್ಲಿ ವಿಕಲಚೇತನ, ವಿಧವಾ ವೇತನ, ಸಂಧ್ಯಾ ಸುರಕ್ಷಾ ಈ ಸಂಬಂಧಿ ಫಲಾನುಭವಿಗಳಿದ್ದು, ಆಶ್ರಯ, ಜನತಾ ಯೋಜನೆಯಲ್ಲಿ ಮನೆ ನಿರ್ಮಿಸಿಕೊಂಡವರೂ ಇದ್ದಾರೆ. ಜೊತೆಗೆ ಶಾಲೆಯಲ್ಲಿ ಮಾತ್ರ ಶೌಚಾಲಯವಿದ್ದು ಉಳಿದ ಮನೆಗಳಲ್ಲಿ ಬಯಲು ಶೌಚಾಲಯದಲ್ಲಿ ಹೊಂದಿಕೊಂಡಿದ್ದಾರೆ.

ಕಾಡುಗೊಲ್ಲರ ಸಂಪ್ರದಾಯಗಳಿಗೆ ಅನುಗುಣವಾಗಿ ಭೂತಪ್ಪ, ಲಕ್ಷ್ಮೀದೇವಿ ದೇವಾಲಯಗಳಿವೆ. ಮುಖ್ಯ ಗ್ರಾಮ ಭೂತಕಾಟನಹಳ್ಳಿ ಯಲ್ಲಿ ಇರುವ ಕಾಟಂಲಿಂಗೇಶ್ವವ ದೇವರಿಗೆ, ಕಾಡುಗೊಲ್ಲರು ಜಿನ್ನಿಗೆ ಮೀಸಲು, ಹಾಲು ತುಪ್ಪ ಎರೆಯುವ, ದೀಪಾವಳಿ ಸಂದರ್ಭದ ವಿಶೇಷ ಉತ್ಸವ ನಡೆಸುತ್ತಾರೆ. ಭೂತಪ್ಪನಿಗೆ ವಿಶೇಷವಾಗಿ ಬಲಿ, ಆರತಿ ನಡೆಯುತ್ತದೆ. ಮಾಂಸಾಹಾರ ಈ ದೇವರ ಉತ್ಸವ, ಆಚರಣೆಯ ಪ್ರಮುಖ ಆಹಾರ, ಉಳಿದಂತೆ ರಾಗಿ ಮುದ್ದೆ, ಅನ್ನ ಮುಖ್ಯ ಹಾಗೂ ರೊಟ್ಟಿ ಬಳಸುವವರಿದ್ದಾರೆಬಳಸುತ್ತಾರೆ. ಕಾಲೇಜು ಆಸ್ಪತ್ರೆ ಮತ್ತಿತ್ತರ ಸೌಕರ್ಯ ಸಿರಾ ನಗರದ ಮೂಲಕ ಪಡೆಯುತ್ತಾರೆ.

## ಬೆಟ್ಟಪ್ಪನಹಳ್ಳಿ

ಬೆಟ್ಟಪ್ಪನಹಳ್ಳಿಯು ಸಿರಾ ತಾಲ್ಲೂಕು ಕೇಂದ್ರದಿಂದ ವಾಯುವ್ಯ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ –ದ್ವಾರನಕುಂಟೆ ಮಾರ್ಗದಲ್ಲಿ ಸಿರಾದಿಂದ ೨೫ ಕಿ.ಮೀ. ದೂರದಲ್ಲಿರುವ ಚಂಗಾವರದ ಮಜರೆ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಹೆಚ್ಚು ಹಳ್ಳಿಕಾರರು ಇದ್ದು ಬೆಟ್ಟಪ್ಪ ಎಂಬುವರು ಈ ಗ್ರಾಮದ ಮೂಲ ಪುರುಷರಾಗಿದ್ದು ಅವರ ಹೆಸರಿನಲ್ಲಿ 'ಬೆಟ್ಟಪ್ಪನಹಳ್ಳಿ' ಆಯಿತೆಂಬ ಐತಿಹ್ಯವಿದೆ ಎಂದು ಹೇಳುತ್ತಾರೆ.

ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೩೬೮.೧೯ ಹೆಕ್ಟೇರ್‌ಗಳಾಗಿವೆ. ಬಯಲುನಾಡಿನ ಪ್ರದೇಶವಾಗಿದ್ದು ಕೆಂಪು ಮಿಶ್ರಿತ ಮರಳು ಮಣ್ಣಿನಿಂದ ಕೂಡಿದೆ. ಇಲ್ಲಿ ಯಾವುದೇ ಅರಣ್ಯ, ಬೆಟ್ಟಗುಡ್ಡ, ತೋಪುಗಳಾಗಲಿ ಕಂಡು ಬರುವುದಿಲ್ಲ. ಈ ಗ್ರಾಮದಲ್ಲಿ ಒಟ್ಟು ೨೮ ಕೊಳವೆ ಬಾವಿಗಳಿದ್ದು, ಕೃಷಿಗೆ ಸಹಾಯಕವಾಗಿವೆ. ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಸಿಸ್ಟನ್ ಮತ್ತು ಎರಡು ಕೈ ಪಂಪುಗಳಿವೆ. ಇಲ್ಲಿ ಒಂದು ಕಟ್ಟೆಯಿದ್ದು ಮಳೆಗಾಲದಲ್ಲಿ ನೀರಿನ ಪ್ರಮಾಣವನ್ನು ನೋಡಬಹುದು. ಇಲ್ಲಿನ ವಾರ್ಷಿಕ ಸರಾಸರಿ ಮಳೆಯ ಪ್ರಮಾಣವು ೪೪೬.೯ ಮಿ.ಮೀ. ಆಗಿರುತ್ತದೆ. ಬಿಸಿಲು ೩೭ ಸೆಂ. ಇದ್ದು, ಚಳಿ ೧೨ ಸೆಂ ಇದೆ.

ಈ ಹಳ್ಳಿಯಲ್ಲಿ ಒಟ್ಟು ೯೦ ಮನೆಗಳಿದ್ದು, ೪೦೮ ಜನಸಂಖ್ಯೆಯನ್ನು ಹೊಂದಿದೆ. ಇವರ ಭಾಷೆ ಕನ್ನಡವಾಗಿದೆ. ಇದರಲ್ಲಿ ಹಳ್ಳಿಕಾರರು, ದೊಡ್ಡ ಸಮುದಾಯವಾಗಿದೆ. ಕುರುಬ, ನಾಯಕ, ಗೊಲ್ಲ, ವಿಶ್ವಕರ್ಮರ ಕಿರು ಸಮುದಾಯವಾಗಿದೆ.

ಇವರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ, ಕಿಚಡಿ ಮತ್ತು ಸಿಹಿ ತಿನಿಸುಗಳಾಗಿವೆ.

ಸಾಂಪ್ರದಾಯಿಕ ಎತ್ತಿನ ಗಾಡಿಗಳೊಂದಿಗೆ ಟ್ರ್ಯಾಕ್ಟರ್, ಮಿನಿಟೆಂಪೋ, ದ್ವಿಚಕ್ರವಾಹನಗಳು ಇವೆ. ಮತ್ತು ಕಚ್ಚಾ ರಸ್ತೆ ಮತ್ತು ಚರಂಡಿ ವ್ಯವಸ್ಥೆಯಿದೆ. ಮನೆಗಳು ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದಲ್ಲಿದ್ದು, ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್ ಯೋಜನೆಯ ೨೭ ಮನೆಗಳು, ಭಾಗ್ಯ ಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಈ ಹಳ್ಳಿಯ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ, ರಾಗಿ, ಭತ್ತ, ಸೂರ್ಯಕಾಂತಿ, ತೆಂಗು, ಅಡಿಕೆ (ವಿರಳವಾಗಿ) ಹುಣಸೆಮರಗಳು ಹೇರಳವಾಗಿವೆ. ಹಾಗೂ ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಯಾವುದೇ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಕಂಡು ಬರದಿದ್ದರೂ ಬಟ್ಟೆ ಹೊಲಿಯುವುದು, ಬೀಡಿ ಸುತ್ತುವುದನ್ನು ಕಾಣಬಹುದಾಗಿದೆ. ಶಿಕ್ಷಣ, ಸಾರಿಗೆ ಇಲಾಖೆಯಲ್ಲಿ ೩ ಜನ ಸರ್ಕಾರಿ ನೌಕರರಿದ್ದಾರೆ.

ಈ ಗ್ರಾಮವು ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ , ಬೇವಿನಹಳ್ಳ ತಾಲ್ಲೂಕು ಪಂಚಾಯ್ತಿ, ಹಾಗೂ ಬೇವಿನಹಳ್ಳಿ ಗ್ರಾಮ ಪಂಚಾಯ್ತಿ ಕೇಂದ್ರವೂ ಆಗಿದ್ದು, ಒಬ್ಬರು ಸದಸ್ಯರು, ಪಟ್ಟನಾಯಕನಹಳ್ಳಿ ಪೋಲೀಸ್ ಠಾಣೆ, ಚಂಗಾವರ ಅಂಚೆ ಸಂಪರ್ಕ ಹೊಂದಿದೆ.

ಬೆಟ್ಟಪ್ಪನಹಳ್ಳಿಯು ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ. ಬಗೆಹರಿಯದ ತೀರ್ಮಾನಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳಲಾಗುತ್ತಿದೆ. ಈ ಗ್ರಾಮದಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದಿದ್ದರೂ ಸಹ ವ್ಯವಸಾಯ ಸೇವಾ ಸಹಕಾರ ಸಂಘ, ಸ್ತ್ರೀ ಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಸಣ್ಣ ಪ್ರಮಾಣದ ಉಳಿತಾಯ ಮತ್ತು ಸಾಲ ಸೌಲಭ್ಯ ನೀಡುತ್ತಿದೆ. ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಒಟ್ಟಾರೆ ಹಳ್ಳಿಯ ಸಾಕ್ಷರತಾ ಪ್ರಮಾಣವು ಶೇ. ೫೧.೭% ರಷ್ಟಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ.

ಈ ಹಳ್ಳಿಯಲ್ಲಿ ಯಾವುದೇ ಆರೋಗ್ಯ ಕೇಂದ್ರಗಳಿದಿದ್ದರೂ ಕುಟುಂಬ ಕಲ್ಯಾಣ ಇಲಾಖೆಯ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಇಲ್ಲಿ ಕಾಣಿಸಿಕೊಳ್ಳುವ ರೋಗಗಳು ಜ್ವರ, ಕೆಮ್ಮು, ಚಳಿ ಇತ್ಯಾದಿಗಳಾಗಿವೆ. ಅಲ್ಲದೆ ಈ ಗ್ರಾಮದಲ್ಲಿ ಕೆಂಚಣ್ಣನವರು ಪಶುಗಳಿಗೆ ನಾಟಿ ಔಷಧಿಯನ್ನು ನೀಡುತ್ತಾರೆ.

ಸರ್ಕಾರ ಸಮುದಾಯ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಹೊಂದಿದ್ದು ವಿಧವಾ ಮತ್ತು ವೃದ್ಧಾಪ್ಯ ವೇತನವನ್ನು ಪಡೆಯುತ್ತಿವೆ. ಅಲ್ಲದೆ ಮೂರು ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಹೊಂದಿದೆ. ಈ ಗ್ರಾಮದಲ್ಲಿ ಯಾವುದೇ ಐತಿಹಾಸಿಕ ನೆಲೆಗಳು ಕಂಡು ಬರದಿದ್ದರೂ ಒಂದು ಬೇವಿನಕಟ್ಟೆ ಮತ್ತು ಕೆಳಘೆ ಅಜ್ಜನಗುಡ್ಡೆ ಹಾಗೂ ಅರಳಿಮರವನ್ನು ಒಳಗೊಂಡಿದೆ.

ಧಾರ್ಮಿಕ ಕೇಂದ್ರವಾಗಿ ಬೇವಿನಾಳಮ್ಮ, ಭೂತಪ್ಪನ ದೇವಾಲಯಗಳಿವೆ. ಪ್ರತಿ ವರ್ಷವೂ ಬೇವಿನಾಳಮ್ಮನ ಜಾತ್ರೆಯನ್ನು ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿರುತ್ತದೆ. ಬೇವಿನಳಮ್ಮನ ಗ್ರಾಮದ ಹೊರ ಭಾಗದಲ್ಲಿ ನಾಥಪಂಥದ ಮಾದರಿಯಲ್ಲಿ ಆಚರಣೆಗಳು ನಡೆಯುತ್ತದೆ. ಭಜನೆ ಕಾರ್ಯಕ್ರಮಗಳೂ ಜರುಗುತ್ತವೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶ, ಶಿವರಾತ್ರಿ, ರಾಮನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬ್ರಹ್ಮಸಂದ್ರ

ಬ್ರಹ್ಮಸಂದ್ರ ಒಂದು ಜೋಡಿ ಗ್ರಾಮವಾಗಿದ್ದು, ಬೇವಿನಹಳ್ಳಿ ಕಂದಾಯ ಗ್ರಾಮಕ್ಕೆ ಸೇರ್ಪಡೆಯಾಗಿದೆ. ಪಟ್ಟನಾಯಕನಹಳ್ಳಿ – ಚಂಗಾವರ ಜಿಲ್ಲಾ ಪಂಚಾಯತ್, ಟಾರ್ ರಸ್ತೆಯಲ್ಲಿ ಸಿರಾ ತಾಲ್ಲೂಕು ಕೇಂದ್ರದಿಂದ ೨೭ ಕಿ.ಮೀ. ದೂರದಲ್ಲಿದೆ. ಬ್ರಹ್ಮಸಂದ್ರ ಹೆಸರಿನ ಉತ್ತರಾರ್ಧದ ಸಂದ್ರ ಮೂಲದ ಕೆರೆಯಾಗಲಿ, ನೀರಿನ ಮೂಲದ ಕಟ್ಟೆ ಇದ್ಯಾವುದೂ ಇಲ್ಲ. ಆದುದರಿಂದ ಆರಂಭದಲ್ಲಿ ಇದೊಂದು ಬ್ರಾಹ್ಮಣರ ಪ್ರಧಾನ ಗ್ರಾಮವಾಗಿರುವ ಕಾರಣದಿಂದ, ಬ್ರಹ್ಮ ಬ್ರಾಹ್ಮಣ ಮೂಲ ಕಾರಣವಾಗಿರಬೇಕು.

ಈ ಗ್ರಾಮದಲ್ಲಿ ೮೦ ಮನೆಗಳಿರುವ ಈ ಗ್ರಾಮದಲ್ಲಿ ಇಲ್ಲಿನ ಸಾಮಾಜಿಕ ರಚನೆಯಾಗಿರುವ ಒಂದು ಮನೆ ಮಾತ್ರ ಬ್ರಾಹ್ಮಣ ವರ್ಗಕ್ಕೆ ಸೇರಿದ್ದು, ಈ ಗ್ರಾಮದ ದೊಡ್ಡ ಸಮುದಾಯ ಮುಸ್ಲಿಂ ಜನಾಂಗವಾಗಿದೆ. ಕುಂಚಿಟಿಗರು, ಉಪ್ಪಾರರು, ಆದಿಕರ್ನಾಟಕ, ಆದಿ ದ್ರಾವಿಡ, ನಾಯಕ, ಅಕ್ಕಸಾಲಿಗರ ಕುಟುಂಬಗಳಿವೆ. ಈ ಗ್ರಾಮಕ್ಕೆ ಹೊಂದಿ ಕೊಂಡಂತೆ ಗೊಲ್ಲರಹಟ್ಟಿಯೂ ಪ್ರತ್ಯೇಕವಾಗಿದೆ. ಈ ಗ್ರಾಮದ

ಭೌಗೋಳಿಕ ವಿಸ್ತೀರ್ಣ ೩೪೮.೩೨ ಹೆಕ್ಟೇರ್. ಕೆಂಪು, ಬಿಳಿ, ಮರಳು ಮಿಶ್ರಿತ ಕೆಬ್ಬೆ ಮಣ್ಣಿನ ನೆಲ. ಮಳೆಯನ್ನೇ ಆಶ್ರಯಿಸಿ ಬದುಕುವ ಜನ ಜೀವನ ಸರಾಸರಿ ೪೫೫೮.೯ ಮಿ.ಮೀ. ಮಳೆ ಬೀಳುತ್ತಿದ್ದು, ೩೬–೩೯ ಉಷ್ಣಾಂಶವನ್ನು ಹೊಂದಿದೆ. ಚಳಿ ಸರಾಸರಿ ೧೨ ಸೆಂ. ಈ ಗ್ರಾಮದಲ್ಲಿ ಹಸು, ಕುರಿ, ಮೇಕೆ, ಎಮ್ಮೆ, ಕೋಳಿ ಇವು ಸಾಕು ಪ್ರಾಣಿಗಳು. ಕಾಡು ಪ್ರಾಣಿಗಳಾಗಿ ಮೊಲ, ಜಿಂಕೆ, ಕಾಡುಹಂದಿ, ಉಡ, ಮುಂಗುಸಿ, ಕಾಡುಬೆಕ್ಕು ವ್ಯಾಪಕವಾಗಿ ಕಂಡು ಬರುತ್ತವೆ. ಈ ಊರಿನ ಪಶ್ಚಿಮಕ್ಕೆ ೨೫ ಎಕರೆ ಗೋಮಾಳದ ಜಾಗವಿದ್ದು, ಕಾಡು ಪ್ರಾಣಿಗಳ ವಾಸಕ್ಕೂ ಯೋಗ್ಯವಾಗಿದೆ. ಹಾಗಾಗಿ ಈ ಗ್ರಾಮದ ಸುತ್ತಮುತ್ತ ಸಾಂದರ್ಭಿಕವಾಗಿ ಕಾಡುಹಂದಿ, ಜಿಂಕೆ ಬೇಟೆಯ ತಂಡ ಪರಊರುಗಳಿಂದ ಬಂದು ಬೇಟೆಯಾಡುವುದು ಇದೆ. ಕೊಳವೆಯ ಬಾವಿಯ ಮೂಲಕ ಮಿನಿ ಟ್ಯಾಂಕ್‌ಗೆ ನೀರು ತುಂಬಿದೆ. ೪ ಕಡೆ ನೀರು ಸಂಗ್ರಹ ಕೇಂದ್ರಗಳಿವೆ. ಕೈ ಪಂಪುಗಳೂ ಇವೆ. ಇಲ್ಲಿನ ಜನಸಂಖ್ಯೆ ೪೧೨ ಇದೆ.

ಒಬ್ಬ ವಕೀಲರು ಇದ್ದಾರೆ. ಒಬ್ಬರು ಶಿಕ್ಷಕರಿದ್ದಾರೆ. ರಾಗಿ ಮುದ್ದೆ, ಅನ್ನ ಈ ಗ್ರಾಮದ ಮುಖ್ಯ ಆಹಾರ. ಮುಸ್ಲಿಂ ಕುಟುಂಬಗಳು ಚಪಾತಿ ಮಾಂಸದ ಊಟವನ್ನು ಪ್ರಧಾನವಾಗಿ ಬಳಸುತ್ತಾರೆ. ಉಳಿದಂತೆ ಚಪಾತಿ, ಚಿತ್ರಾನ್ನ, ದೋಸೆ, ಉಪ್ಪಿಟ್ಟು ವಾಡಿಕೆಯಾಗಿ ಬಳಸುತ್ತಾರೆ. ಹಬ್ಬ ಹಾಗೂ ವಿಶೇಷ ಸಂದರ್ಭಗಳಲ್ಲಿ ಹೋಳಿಗೆ, ಪಾಯಸ ಮೊದಲಾದ ಸಿಹಿ ಅಡಿಗೆಯಂತೆ, ಊರಹಬ್ಬ ಗೌರಸಂದ್ರದ ಮಾರಮ್ಮನ ಆಚರಣೆ, ಬಾನ, ಬ್ಯಾಟೆ, ಆರತಿ ಉತ್ಸವ, ಆ ದಿನ ಮಾಂಸದ ಊಟ ವಿಶೇಷವಾಗಿ ಇರುತ್ತದೆ. ಶ್ರೀ ರಾಮ ಮಂದಿರ, ಹುಲಿಗೇಶ್ವರಿ ಈ ಬಗೆಯ ದೇವಾಲಯವಿದೆ. ಮುಸ್ಲಿಂಮರು ಪುಟ್ಟದಾಗಿ ಮಸೀದಿ ಕಟ್ಟಿಕೊಂಡು ಪ್ರಾರ್ಥನಾ ಸ್ಥಳವನ್ನಾಗಿ ಮಾಡಿಕೊಂಡಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ, ಬೇವಿನಹಳ್ಳಿ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಯ ಕೇಂದ್ರವೂ ಆಗಿದ್ದು, ತಾವರೆಕೆರೆ ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಗೆ ಸೇರಿದೆ. ಎರಡು ಸ್ತ್ರೀ ಶಕ್ತಿ ಸಹಾಯ ಗುಂಪು ಕೆಲಸ ಮಾಡುತ್ತಿದ್ದು, ನೇತಾಜಿ ಯುವಕ ಸಂಘ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು ನಡೆಸುತ್ತಾ ಬರುತ್ತಿವೆ. ಒಂದು ಅಂಗನವಾಡಿ ಕೇಂದ್ರ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು, ೫ನೇ ತರಗತಿಯವರೆಗೆ ವಿದ್ಯಾಭ್ಯಾಸ ಇದೇ ಗ್ರಾಮದಲ್ಲಿ ನಡೆಯುತ್ತಿದೆ. ಶೇ. ೫೩.೮% ಪ್ರಮಾಣದಲ್ಲಿ ಈ ಊರಿನ ಸಾಕ್ಷರತೆ ಪ್ರಮಾಣವಿದೆ. ಇದರಲ್ಲಿ ಮಹಿಳೆಯರು ಶೇ.೪೨, ಪುರುಷರು ಶೇ. ೬೫, ಅಂಗವಿಕಲಚೇತನ, ವಿಧವಾ ವೇತನ, ಸಂಧ್ಯಾ ಸುರಕ್ಷಾ ವೇತನದ ಫಲಾನುಭವಿಗಳಿದ್ದು, ಈ ಗ್ರಾಮದ ಬಹುತೇಕ ಮುಸ್ಲಿಂ ಕುಟುಂಬಗಳು ಶೌಚಾಲಯ ಹೊಂದಿವೆ. ಜನತಾ, ಇಂದಿರಾ ಆವಾಸ್ ಯೋಜನೆ ಫಲಾನುಭವಿಗಳೂ ಇದ್ದಾರೆ. ನಿವೇಶನ ರಹಿತ ಅಲೆಮಾರಿ ಕುಟುಂಬಗಳೂ ಈ ಗ್ರಾಮದ ರಸ್ತೆ ಬಡಿ ಜೋಪಡಿ ನಿರ್ಮಿಸಿಕೊಂಡು ಜೀವಿಸುತ್ತಿದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯ ಹೊಂದಿದೆ. ಭಾಗ್ಯಜ್ಯೋತಿ ಯೋಜನೆಯ ೨೩ ಫಲಾನುಭವಿಗಳೂ ಇದ್ದಾರೆ. ಕಿರು ನೀರು ಸರಬರಾಜು ಯೋಜನೆ ಜಾರಿಯಲ್ಲಿದೆ. ಶಿವರಾತ್ರಿ, ಯುಗಾದಿ, ಗೌರಿ–ಗಣೇಶ, ದಸರಾ, ರಂಜಾನ್, ಈದ್‌ಮಿಲಾದ್ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗೌರಮ್ಮ ಕೊಂತೆಮ್ಮನ ಹಬ್ಬವೂ ಆಚರಣೆಯಲ್ಲಿದೆ.

## ಬ್ರಹ್ಮಸಂದ್ರ ಗೊಲ್ಲರಹಟ್ಟಿ

ಬ್ರಹ್ಮಸಂದ್ರ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಸಿರಾ–ಪಟ್ಟನಾಯಕನಹಳ್ಳಿ ಮಾರ್ಗವಾಗಿ ಬಂದು, ಪಟ್ಟನಾಯಕನ ಹಳ್ಳಿಯಿಂದ ಆರು ಕಿ.ಮೀ. ಪಶ್ಚಿಮಕ್ಕೆ ಜಿಲ್ಲಾ ಪಂಚಾಯಿತಿ ರಸ್ತೆಯಲ್ಲಿ ಸಾಗಿದರೆ, ಬ್ರಹ್ಮಸಂದ್ರ ಗೊಲ್ಲರಹಟ್ಟಿ ಇದೆ. ಇದು ಬ್ರಹ್ಮಸಂದ್ರ ಗ್ರಾಮಕ್ಕೆ ಅರ್ಧ ಕಿ.ಮೀ. ದೂರದಲ್ಲಿ ಕಾಡುಗೊಲ್ಲರೇ ವಾಸಿಸುವ ಬುಡಕಟ್ಟು ಗ್ರಾಮ. ಒಟ್ಟು ೩೨ ಮನೆಗಳಿವೆ. ಇದು ಬೇವಿನಹಳ್ಳಿ ಕಂದಾಯ ಗ್ರಾಮಕ್ಕೆ ಸೇರ್ಪಡೆಯಾಗಿದ್ದು, ಗ್ರಾಮ ಪಂಚಾಯಿತಿಯ ಕೇಂದ್ರವೂ ಬೇವಿನಹಳ್ಳಿಯಾಗಿದೆ. ಈ ಮಜರೆ ಗ್ರಾಮ ಒಟ್ಟು ೩೪೮.೪೫ ಹೆಕ್ಟೇರ್ ಭೂಪ್ರದೇಶದಲ್ಲಿ ಹಂಚಿಕೆಯಾಗಿದೆ.

ಬಯಲು ನಾಡಿನ ಸ್ವರೂಪದ ಈ ಹಟ್ಟಿ, ಭೌಗೋಳಿಕವಾಗಿ ಕೆಂಪು, ಬಿಳಿ ಹಾಗೂ ಮರಳು ಮಿಶ್ರಿತ ಭೂಮಿಯನ್ನು ಹೊಂದಿದ್ದು, ಶೇಂಗಾ ಬೆಳೆಗೆ ಉತ್ತಮ ಫಲವತ್ತಾಗಿದೆ. ಬ್ರಹ್ಮಸಂದ್ರ ಗ್ರಾಮಕ್ಕೆ ಹೊಂದಿಕೊಂಡಂತೆಯೇ ಇದ್ದರೂ ಕಾಡುಗೊಲ್ಲರ ಸಾಂಪ್ರದಾಯಕತೆಗೆ ಅನುಗುಣವಾಗಿ ಪ್ರತ್ಯೇಕ ಗೊಂಡಿರುವ ಈ ಹಟ್ಟಿಯಲ್ಲಿ ಗೌರಸಂದ್ರದ ಮಾರಕ್ಕ, ಚಿತ್ರಲಿಂಗೇಶ್ವರನ ಪುಟ್ಟ ಗುಡಿಗಳಿವೆ. ಕೆರೆಯ ಮೂಲದ ಹೆಸರಿನ ಕೆಲ ಗ್ರಾಮದ ಹೆಸರಿನ ಹಿನ್ನೆಲೆಯನ್ನು ಉಚಿತವಾಗಿ ತಿಳಿಸಲಾಗುತ್ತಿಲ್ಲವಾದರೂ, ಬ್ರಾಹ್ಮಣರಿಗೆ ಸಂಬಂಧಿಸಿದ ಯಾವುದೇ ದಾಖಲೆ, ಕೆರೆ ಮತ್ತಿತರೆ ದಾಖಲಾತಿ ಇಲ್ಲಿ ಇರುವುದಿಲ್ಲ. ಆದರೂ ಪ್ರಾಚೀನ ಗ್ರಾಮವಾದ ಬ್ರಹ್ಮಸಂದ್ರ ಗ್ರಾಮದಲ್ಲಿ ಬ್ರಾಹ್ಮಣರು ಅಧಿಕವಾಗಿ ನೆಲೆಸಿದ್ದರಬಹುದು. ಕಾರಣಾಂತರದಿಂದ ಬ್ರಾಹ್ಮಣರು ಬೇರೆ ಕಡೆಗೆ ವಲಸೆ

ಹೋಗಿರಬಹುದು. ಇದಕ್ಕೆ ಆಕಾರವಾಗಿ ಈ ಹಟ್ಟಿಯ ಮೂಲ ಗ್ರಾಮದಲ್ಲಿ ಒಂದು ಬ್ರಾಹ್ಮಣರ ಕುಟುಂಬ ನೆಲೆಸಿದೆ. ಅದರ ಹೊರತು ಬೇರ್‍ಯಾವ ಮಾಹಿತಿಯೂ ಲಭ್ಯವಾಗುತ್ತಿಲ್ಲ.

ಈ ಗ್ರಾಮದಲ್ಲಿ ಕುರಿ, ಹಸು, ಕೋಳಿ, ಎಮ್ಮೆಯನ್ನು ಸಾಕುತ್ತಿದ್ದು, ಕುರಿಗಾರಿಕೆ ಪ್ರಧಾನವಾಗಿದೆ. ಸಮುದ್ರ ಮಟ್ಟಕ್ಕಿಂತ ಸರಾಸರಿ, ೬೫೩ ಮೀಟರ್ ಎತ್ತರವಿದ್ದು ಸರಾಸರಿ ಮಳೆಯ ಪ್ರಮಾಣ ೪೫೮ ಮಿ.ಮೀ., ಬಿಸಿಲು ೩೯-೪೦ ಸೆಂ.ಇದ್ದು ಚಳಿಯ ಪ್ರಮಾಣ ೧೨ ಸೆಂ. ಇರುತ್ತದೆ.

ಮಳೆಯ ಆಶ್ರಯದಿಂದ ಬದುಕುವ ಈ ಗ್ರಾಮದ ಜೀವನ ಕ್ರಮ ಕಷ್ಟದಾಯಕವೆ. ಇಲ್ಲಿ ಗ್ರಾಮ ಪಂಚಾಯಿತಿಯ ಕೊಳವೆ ಬಾವಿಯಿಂದ ಕುಡಿಯುವ ನೀರಿನ ಪೂರೈಕೆಯಾಗುತ್ತದೆ. ಒಂದು ಮಿನಿ ಟ್ಯಾಂಕ್ ಇದ್ದು, ಒಂದು ಕೈ ಪಂಪು ಸೌಲಭ್ಯವಿದೆ. ಒಟ್ಟು ೧೦೭ ಜನರು ವಾಸಿಸುತ್ತಿರುವ ಈ ಹಳ್ಳಿಯಲ್ಲಿ ಒಂದು ಅಂಗನವಾಡಿ ಕೇಂದ್ರವನ್ನು ಹೊಂದಿದ್ದು ಇಬ್ಬರು ಸಿಬ್ಬಂದಿಯವರಿದ್ದಾರೆ. ಬ್ರಹ್ಮಸಂದ್ರದಿಂದ ಕಚ್ಚಾ ರಸ್ತೆ ಕೂಡಿದ್ದು, ಇಲ್ಲಿ ಸರ್ಕಾರಿ ಅರೆ ಸರ್ಕಾರಿ ಕಚೇರಿಗಳಿರುವುದಿಲ್ಲ. ಪ್ರಾಥಮಿಕ ಶಾಲೆಗೂ ಈ ಗ್ರಾಮದ ಮಕ್ಕಳು ಬ್ರಹ್ಮಸಂದ್ರವನ್ನು ಅವಲಂಬಿಸಬೇಕಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಈರಣ್ಣ ಎಂಬ ೬೫ ವರ್ಷ ವಯಸ್ಸಿನ ವ್ಯಕ್ತಿ, ಪಶು ಸಂಬಂಧಿ ಕಾಯಿಲೆಗಳಿಗೆ ಔಷಧಿ ಚಿಕಿತ್ಸೆ ನೀಡುತ್ತಿದ್ದು, ನಾಟಿ ವೈದ್ಯ ಎಂದು ಪ್ರಸಿದ್ಧನಾಗಿದ್ದಾನೆ.

ಕಾಡುಗೊಲ್ಲರ ಸಂಸ್ಕೃತಿಗೆ ಅನುಗುಣವಾಗಿ ಕಳ್ಳ ಬೇಲಿ ಹಾಕಿಕೊಂಡು ಅದರ ಒಳಗೆ ತಿಮ್ಮಪ್ಪ, ಭೂತಪ್ಪ, ಈರಣ್ಣ ದೇವರುಗಳ ಪ್ರತ್ಯೇಕ ಗುಬ್ರಗಳಿವೆ. ಗೌರಸಂದ್ರದ ಮಾರಮ್ಮನ ಹಬ್ಬವನ್ನು, ದೇವತೆಗೆ ಎದುರುತ್ತಾ, ಪ್ರಾಣಿಬಲಿ ಕೊಟ್ಟು, ಆರತಿ ಮಾಡುವ ಸಂಪ್ರದಾಯವಿದೆ. ಉಳಿದಂತೆ ಯುಗಾದಿ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ದೀಪಾವಳಿಯಲ್ಲಿ ದೇವರಿಗೆ ದೀಪ ಏರಿಸುವ ವಿಶೇಷ ಹಬ್ಬ ಮಾಡುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಈ ಹಳ್ಳ ತಾವರೇಕೆರೆ ಜಿಲ್ಲಾ ಪಂಚಾಯ್ತಿ, ಬೇವಿನಹಳ್ಳಿ ತಾಲ್ಲೂಕು, ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಈ ಹಟ್ಟಿಯಲ್ಲಿ ಇಬ್ಬರು ಪದವೀಧರರಿದ್ದಾರೆ. ಮಾರಕ್ಕೆ, ಮಂಜುನಾಥ, ಲಕ್ಷ್ಮೀ ಹೆಸರಿನ ಸ್ತ್ರೀ ಶಕ್ತಿ ಸಂಘಗಳಿವೆ. ಕುರಿ ವ್ಯಾಪಾರ, ಶೇಂಗಾ, ಹುಣಸೇಹಣ್ಣು ಇಲ್ಲಿ ಪ್ರಮುಖ ವಾಣಿಜ್ಯ ಕಸುಬು. ರಾಗಿ, ಹತ್ತಿ, ಸೂರ್ಯಕಾಂತಿ ಬೆಳೆಯುತ್ತಾರೆ. ರಾಗಿ ಮುದ್ದೆ, ಗೊಜ್ಜು ಹಾಗೂ ಅನ್ನ ಮುಖ್ಯ ಆಹಾರ. ಉಳಿದಂತೆ ವಿಶೇಷ ಸಂದರ್ಭದಲ್ಲಿ ಹೋಳಿಗೆ, ಪಾಯಸ, ಮಾಂಸಾಹಾರವೂ ಇರುತ್ತದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾವೇತನ ಫಲಾನು ಭವಿಗಳು ಇದ್ದು, ಈ ಗ್ರಾಮದ ಸಾಕ್ಷರತೆಯ ಪ್ರಮಾಣ ಶೇ.೫೩.೮೦ ಮಾತ್ರ. ಎತ್ತಿನ ಬಂಡಿ, ಸ್ಕೂಟರ್ ಬಳಕೆಯೂ ಇದ್ದು, ಮೊಬೈಲ್ ಬಳಕೆ ವ್ಯಾಪಕವಾಗಿದೆ. ಮಲೇರಿಯಾ, ಟಿ.ಬಿ. ಈ ಗ್ರಾಮದ ಮುಖ್ಯ ಕಾಯಿಲೆಗಳು. ಕಾಡುಗೊಲ್ಲರ ಕಟ್ಟು ನಿಟ್ಟಾದ ಸಂಪ್ರದಾಯದ ಪಾಲನೆ ಈ ಗ್ರಾಮದಲ್ಲಿ ಕಂಡು ಬರುತ್ತದೆ.

ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸಿರಾ ಪಟ್ಟನಾಯಕನಹಳ್ಳಿ ಚಂಗಾವರ ರಸ್ತೆ ಸಂಪರ್ಕವಿದೆ.

## ಬೊಮ್ಮಗಾನಹಳ್ಳಿ

ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೧ ಕಿ.ಮೀ. ದೂರದಲ್ಲಿದೆ. ಬೇವಿನ ಹಳ್ಳಿಯ ಮಜರೆ ಗ್ರಾಮವಾಗಿದ್ದು ೨೩೫.೦೬ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಬೊಮ್ಮಣ್ಣ ಎಂಬ ವ್ಯಕ್ತಿ ಮೂಲದ ಈ ಹಳ್ಳಿಯಲ್ಲಿ ಕುರುಬರು ದೊಡ್ಡ ಸಮುದಾಯವಾಗಿದೆ. ಬೇಡರು, ಆದಿಕರ್ನಾಟಕ ಜನಾಂಗದವರ ಸಣ್ಣ ಸಮುದಾಯವಾಗಿದೆ. ೩೮ ಮನೆಗಳ ಈ ಗ್ರಾಮದಲ್ಲಿ೧೬೩ ಜನ ಸಂಖ್ಯೆ ಹೊಂದಿದೆ. ಕಾಂಕ್ರೀಟ್, ಹಾಸುಕಲ್ಲು ಚಪ್ಪಡಿ, ಸೀಟಿನ ಸ್ವರೂಪದ ಮನೆಗಳಿವೆ. ಶೀಟಿನ ಮನೆಗಳು ಇಂದಿರಾ ಆವಾಸ್ ಯೋಜನೆ ಅಡಿಯಲ್ಲಿ ನಿರ್ಮಾಣಗೊಂಡಿವೆ. ಆರಂಭದಲ್ಲಿ ೧೪ ಮನೆಗಳು ಜನತಾ ಯೋಜನೆಯಲ್ಲಿ ನಿರ್ಮಾಣವಾಗಿವೆ. ಎಲ್ಲ ಮನೆಗಳೂ ವಿದ್ಯುತ್ ಶಕ್ತಿ ಸೌಲಭ್ಯ ಪಡೆದಿದ್ದು, ಇವುಗಳಲ್ಲಿ ಭಾಗ್ಯ ಜ್ಯೋತಿ ಫಲಾನುಭವಿಗಳಾಗಿ ಸೇರಿವೆ. ರಾಗಿ ಹಿಟ್ಟಿಗೆ ಅಕ್ಕಿಯ ಚೂರು ಸೇರಿಸಿ ತಯಾರಿಸಿದ ಮುದ್ದೆ, ಮತ್ತು ಅನ್ನ ಮುಖ್ಯ ಆಹಾರ ವಾದರೆ ಅಮುಖ್ಯವಾಗಿ ಉಪ್ಪಿಟ್ಟು, ದೋಸೆ, ಚಿತ್ರಾನ್ನ ಉಪಯೋಗಿಸುತ್ತಾರೆ. ವಿಶೇಷವಾಗಿ ಮಾಂಸ, ಮೀನಿನ ಊಟವೂ ಇರುತ್ತದೆ. ಸಂಪ್ರದಾಯಿಕ ಕೃಷಿ ಕಸುಬಿನ ಈ ಗ್ರಾಮದಲ್ಲಿ ಎತ್ತಿನ ಬಂಡಿ ಬಳಕೆಯಲ್ಲಿವೆ. ಅಂತೆಯೇ ಟೆಂಪೋ, ಆಟೋಗಳನ್ನು ಬಾಡಿಗೆಯ ಸೌಕರ್ಯಕ್ಕಾಗಿ ಬಳಸುವ ಮೂರು ಕುಟುಂಬಗಳಿವೆ.

ಶೇಂಗಾ ಹಾಗೂ ಸೂರ್ಯಕಾಂತಿ, ಪ್ರಮುಖ ವಾಣಿಜ್ಯ ಬೆಳೆಗಳು. ಉಳಿದಂತೆ ರಾಗಿ, ಜೋಳ, ನವಣೆ, ಹುರುಳಿ ಬೆಳೆಯುತ್ತಾರೆ. ತೊಗರಿಯೂ ಬಳಕೆಯಲ್ಲಿರುವ ಕೃಷಿಯಾಗಿದೆ. ಚಿತ್ರದುರ್ಗ ಲೋಕಸಭೆ, ಸಿರಾ ವಿಧಾನಸಭೆ ಬೇವಿನಹಳ್ಳಿಯ

ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಈ ಮಜರೆ ಗ್ರಾಮದಲ್ಲಿ ಒಬ್ಬ ಪಂಚಾಯ್ತಿ ಸದಸ್ಯರು ಈ ಗ್ರಾಮದಿಂದ ಆಯ್ಕೆಯಾಗಿದ್ದಾರೆ. ಒಂದು ಅಂಗನವಾಡಿ ಕೇಂದ್ರವಿದ್ದು, ನೀರು ಬಿಡುವ ಪಂಚಾಯತ್ ಮಟ್ಟದ ನೌಕರರು ಇದ್ದಾರೆ. ಸಿಡಿಪಿಓ ಇಲಾಖೆಯ ಅಧಿಕಾರಿ, ಶಿಕ್ಷಕರು ಇಬ್ಬರು ಇದ್ದಾರೆ

ಇತರೆ ಸೌಲಭ್ಯಗಳಾದ ಕ್ಷೀರಭಾಗ್ಯ, ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆಯ ಫಲಾನುಭವಿಗಳು ಇದ್ದು, ಕುಡಿಯುವ ನೀರಿಗೆ ಎರಡು ಕೈ ಪಂಪು, ಹಾಗು ಕಿರು ನೀರು ಸರಬರಾಜಿನ ಒಂದು ಕೊಳವೆ ಬಾವಿಯ ಟ್ಯಾಂಕ್ ಇದೆ. ೪೫೮ ಮಿ.ಮೀ. ಮಳೆ ಬೀಳುವ ಈ ಪ್ರದೇಶ ೩೬-೩೮ ಸೆಂ. ಉಷ್ಣಾಂಶ ಹೊಂದಿದೆ. ಚಳಿಯ ಪ್ರಮಾಣ ೧೨ ಸೆಂ. ಹಸು, ಕುರಿ, ಎಮ್ಮೆ ಈ ಊರಿನ ಪ್ರಮುಖ ಸಾಕು ಪ್ರಾಣಿಗಳು. ಕೋಳಿಯನ್ನು ಸಾಕಿದ್ದಾರೆ. ಮೊಲ, ಜಿಂಕೆ, ಉಡ, ಕಾಡುಹಂದಿ ಈ ಭಾಗದ ಪ್ರಮುಖ ಕಾಡು ಪ್ರಾಣಿಗಳು. ಬೆಳವ, ಗೋಜಿನಹಕ್ಕಿ, ಗೊರವಂಕ, ಕೊಕ್ಕರೆ ಮೊದಲಾದ ಕಾಡು ಪಕ್ಷಿಗಳು ಈ ಪರಿಸರದಲ್ಲಿ ಕಂಡು ಬರುತ್ತವೆ. ಕುರುಬರು ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ೨೭ ಮನೆಗಳನ್ನು ಹೊಂದಿದ್ದಾರೆ. ಆರು ಬೇಡರು, ೩ ಆದಿಕರ್ನಾಟಕದವರ ಮನೆಗಳಿವೆ. ಒಂದು ಅಂಗನವಾಡಿ ಕೇಂದ್ರವನ್ನು ಮಾತ್ರ ಹೊಂದಿದ್ದು, ವಿದ್ಯಾಭ್ಯಾಸಕ್ಕೆ ಬೇವಿನಹಳ್ಳಿ, ಚಂಗಾವರ, ಸಿರಾ ನಗರಗಳನ್ನು ಆಶ್ರಯಿಸಿದೆ.

ಕರಿಯಮ್ಮ ಈ ಗ್ರಾಮದ ಆರಾಧ್ಯ ದೇವತೆ. ಯುಗಾದಿಯ ಪೂರ್ವದಲ್ಲಿ ಊರಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಅಂದು ಆರತಿ, ಬಾನು, ಬ್ಯಾಟೆಯಾಗಿ ಕುರಿ-ಮೇಕೆಗಳ ಬಲಿ ನಡೆಯುತ್ತದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ರಾಮನವಮಿ ಈ ಗ್ರಾಮದ ಪ್ರಮುಖ ಹಬ್ಬಗಳು. ಒಂದು ಗೂಡಂಗಡಿ ಇದ್ದು, ಬೇವಿನಹಳ್ಳಿಗೆ ಸಂಪರ್ಕ ಕಲ್ಪಿಸುವ ಒಂದು ಕಚ್ಚಾ ರಸ್ತೆ ಇದೆ. ಕರಿಯಮ್ಮ ಸ್ತ್ರೀಶಕ್ತಿ ಕೇಂದ್ರ ಸಕ್ರಿಯವಾಗಿ ಕೆಲಸ ಮಾಡುತ್ತಿದೆ.

ಬೇಡರ ನರಸಿಂಹಯ್ಯನ ಅಭಿಪ್ರಾಯದಂತೆ ಬೇಡರ ಮಲ್ಲಿಗೆ ಕುಲದವರ ಬೊಮ್ಮನಾಯಕನು ಮೊದಲು ಇಲ್ಲಿ ತಂಗಿ ಮನೆ ಕಟ್ಟಿದ್ದರಿಂದ ಬೊಮ್ಮಗಾನಹಳ್ಳಿ ಎಂದು ಕರೆಯಲಾಯಿತೆಂದು ಹೇಳುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ದೀಪಾವಳಿ, ದಸರಾ, ಗೌರಿಗಣೇಶ, ಯುಗಾದಿ ಹಬ್ಬಗಳನ್ನು ಆಚರಿಸುತ್ತಾರೆ.

## ಬರಗೂರು

ಬರಗೂರು ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿನಲ್ಲಿದೆ. ಸಿರಾ ಅಮರಾಪುರ ಮುಖ್ಯ ರಸ್ತೆಯ ಬರಗೂರು ಕ್ರಾಸ್‌ನಿಂದ ಬಲಕ್ಕೆ ತಿರುಗಿ ೭ ಕಿ.ಮೀ. ದೂರ ಟಾರ್ ರಸ್ತೆಯಲ್ಲಿ ಕ್ರಮಿಸಿದರೆ ಬರಗೂರು ಸಿಗುತ್ತದೆ. ಬರಗೂರು ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೯೯೩.೦೧ ಹೆಕ್ಟೇರ್. ಹನುಮೇಗೌಡನ ಪಾಳ್ಯ ಇದರ ಉಪಗ್ರಾಮವಾಗಿದ್ದು ಈ ಭೌಗೋಳಿಕ ವಿಸ್ತೀರ್ಣದೊಂದಿಗೆ ಕೂಡಿಕೊಂಡಿದೆ. ಬರಗು ಎಂಬ ಜಾತಿಯ ಧಾನ್ಯವನ್ನು ಹೇರಳವಾಗಿ ಬೆಳೆಯುತ್ತಿದ್ದ ಕಾರಣದಿಂದ ಈ ಗ್ರಾಮಕ್ಕೆ ಬರಗು+ಊರು= ಬರಗೂರು ಆಗಿದೆ ಎಂದು ಊರಿನ ಹಿರಿಯರ ಅಭಿಪ್ರಾಯವಾಗಿದೆ. ಆದರೂ ಬರಗೂರು ಹೇರಳವಾದ ಕುರುಚಲು ಗಿಡಗಳ, ಪೊದೆಗಳ, ಅಪ್ಪಟ ಬಯಲು ಸೀಮೆ. ಹಾಗಾಗಿ ಇಲ್ಲಿ ಕಾಡು ಪ್ರಾಣಿಗಳನ್ನು ಸಹಜವಾಗಿಯೇ ವಾಸಿಸುತ್ತಿದ್ದವು. ಅದರ ಅವಶೇಷ ಇಂದಿಗೂ ಬರಗೂರು, ಹಾಗೂ ಈ ಪರಿಸರದಲ್ಲಿ ಕಾಣಬಹು ದಾಗಿದೆ. ಬರಗ ಎಂದರೆ ಹುಲಿ ಎಂಬ ಇನ್ನೊಂದು ಹೆಸರಿದೆ. ಹಾಗಾಗಿ ಹುಲಿಗಳ ವಾಸಸ್ಥಾನವಾಗಿದ್ದ ಪ್ರದೇಶ ಎಂಬ ಅರ್ಥದಲ್ಲಿ ಬರಗೂರು ಎಂಬ ಹೆಸರು ಬಂದಿರಬಹುದು. ಕ್ರಿ.ಶ. ೮೭೮ ರಲ್ಲಿನ ಸಿರಾ ಶಾಸನ ಬರಗೂರನ್ನು ಉಲ್ಲೇಖಿಸಿದೆ. ಇದರ ಪ್ರಕಾರ ತುಮಕೂರಿನ ಉತ್ತರ ಭಾಗದಲ್ಲಿ ನೊಳಂಬ ವಾಡಿಯ ನೊಳಂಬರು ಆಡಳಿತ ನೀಡುತ್ತಿದ್ದು, ಇದಕ್ಕೆ ಮದ್ದಗಿರಿ, ಪಾವಗಡ, ಸಿರಾ ಭಾಗಗಳೂ ಸೇರಿದ್ದವು. ಹೇಮಾವತಿ ಅಥವಾ ಹೆಂಜೇರು ನೊಳಂಬ ವಾಡಿಯ ರಾಜಧಾನಿಯಾಗಿದ್ದವು ಎಂದಿದೆ. ಮತ್ತೊಂದು ವಿವರಣೆಯ ಪ್ರಕಾರ ನೊಳಂಬರ ಮಹೇಂದ್ರದೊರೆ, ಚೋಳ ರಾಜನೊಂದಿಗೆ ಯುದ್ಧ ಮಾಡಿ, ಗೆದ್ದು ಅದರ ನೆನಪಿಗೆ ಬರಗೂರನ್ನು ಉಪರಾಜಧಾನಿಯಾಗಿ ಮಾಡಿಕೊಂಡ ಎಂದಿದೆ. ಇದೇ ಸಂದರ್ಭದಲ್ಲಿ ಬರಗೂರಿನ ಈಶ್ವರ ದೇವಾಲಯವನ್ನು ಕಟ್ಟಿಸಿದ ರಾಜ ಮಹೇಂದ್ರನ ಹೆಸರಲ್ಲಿ ಶಿವಲಿಂಗವನ್ನು ಸ್ಥಾಪಿಸಿ, ಇದರ ಪೂಜಾ ಕಾರ್ಯದ ವೆಚ್ಚಕ್ಕಾಗಿ ಪಕ್ಕದ ನಾದೂರನ್ನು ದತ್ತಿ ನೀಡಿದ ಅಂಶವೂ ಬರಗೂರಿನ ಈಶ್ವರ ದೇವಾಲಯದಲ್ಲಿ ಹಾಕಿಸಿರುವ ಶಾಸನದಿಂದ ತಿಳಿಯುತ್ತದೆ. ಈ ಎಲ್ಲಾ ಅಂಶಗಳಿಂದ ಬರಗೂರು ಒಂದು ಪುರಾತನ ಗ್ರಾಮ ಎಂಬುದು ತಿಳಿಯುತ್ತದೆ. ಗ್ರಾಮದ ಪೂರ್ವಕ್ಕೆ ಗುಡ್ಡ, ಪಶ್ಚಿಮಕ್ಕೆ ಬಯಲು ಪ್ರದೇಶ ಉತ್ತರದ ಗಡಿಗೆ ಕೆರೆಯಿಂದ ಆವರಿಸಿಕೊಂಡಿರುವ ಬರಗೂರು ಹೆಚ್ಚಾಗಿ ತರಿ ಭೂ ಪ್ರದೇಶವನ್ನು ಹೊಂದಿದೆ. ಪೂರ್ವಕ್ಕೆ ಆಂಧ್ರದ ಗಡಿಗೆ ಹಾರೋಗೆರೆ ಇದೇ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಮರಳು ಮಿಶ್ರಿತ ಕಪ್ಪು ಮಣ್ಣಿನ ಪ್ರದೇಶವಾಗಿದೆ.

ಸಾಮಾಜಿಕ ಅರಣ್ಯಗಳಿಲ್ಲದಿದ್ದರೂ ಕುರುಚಲು ಗಿಡ, ಸೀಮೆ ಜಾಲಿಯಿಂದ ಕೂಡಿದೆ.

ಹಾಗಾಗಿ ಕಾಡು ಹಂದಿ, ಮೊಲ, ಜಿಂಕೆ, ಉಡ, ಮುಂಗುಸಿ, ತೋಳ ಹಾಗೂ ವಿಷಪೂರಿತ ಹಾವುಗಳು ಕಂಡು ಬರುತ್ತವೆ. ಪಕ್ಷಿಗಳಾದ ಕಾಗೆ, ಕೋಗಿಲೆ, ಕೌಜುಲಗ, ರಣಹದ್ದು, ಗಿಡುಗ, ಮರಕುಟಿಕ, ಸೋರೆಹಕ್ಕಿ, ಬಾವಲಿ, ಕೊಕ್ಕರೆ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಗ್ರಾಮಸ್ಥರು ಹಳ್ಳಿಕಾರ್ ಎತ್ತು, ಹಸುಗಳನ್ನು ನಾಟಿ ತಳಿಯ ಎಮ್ಮೆ, ಹಸುಗಳನ್ನು ಸಾಕುತ್ತಾರೆ. ಹೈನುಗಾರಿಕೆ ಹಾಗೂ ವ್ಯವಸಾಯಕ್ಕೂ ಹಸು–ಎತ್ತುಗಳನ್ನು ಸಹಜವಾಗಿಯೇ ಬಳಸುತ್ತಾರೆ. ಕುರಿ, ಮೇಕೆ, ಹಾಗೂ ಕೋಳಿಗಳನ್ನು ಸಾಕು ಪ್ರಾಣಿಗಳಾಗಿ ಸಾಕುತ್ತಾರೆ.

ವಾರ್ಷಿಕ ಸರಾಸರಿ ೪೬೩ ಮಿ.ಮೀ. ಮಳೆ ಬೀಳುತ್ತದೆ. ಒಂದೇ ದಿನ ೧೦೬ ಮಿ.ಮೀ. ಮಳೆ ಸುರಿದು ಸುತ್ತಲಿನ ಕೆರೆ–ಕಟ್ಟೆಗಳು ತುಂಬಿ ಕೋಡಿ ಹರಿದ ಉದಾಹರಣೆಯೂ ಇದೆ. ಹವಾಮಾನ ವೈಪರೀತ್ಯದಿಂದಾಗಿ ಕಳೆದ ಆರು ವರ್ಷಗಳಿಂದ ಬರಗಾಲಕ್ಕೆ ಈ ಗ್ರಾಮ ತುತ್ತಾಗಿದೆ. ಹಾಗಾಗಿ ಬಿಸಿಲಿನ ತಾಪಮಾನವೂ ಅಧಿಕವಾಗಿ ೩೮–೪೦ಂ ಸೆಂ. ವರೆಗೂ ಇರುತ್ತದೆ. ಚಳಿ ೧೨ಂ ಸೆಂ. ಸಹಜವಾಗಿರುತ್ತದೆ. ಈ ಗ್ರಾಮಕ್ಕೆ ಸಂಬಂಧಿಸಿದಂತೆ ಒಂದು ದೊಡ್ಡ ಹಳ್ಳವಿದ್ದು, ಎರಡು ಕೆರೆಗಳಿವೆ. ಆದರೂ ತುಂಬುವುದು ವಿರಳ. ಹಾಗಾಗಿ ಕೆರೆಯ ಅಂಗಳ ಬಳ್ಳಾರಿ ಜಾಲಿಯ ತಾಣವಾಗಿದ್ದು, ಸದ್ಯ ಈ ಜಾಲಿಯನ್ನು ಕಡಿದು, ಸುಟ್ಟು ಇಜ್ಜಲುಗಳಾಗಿ ಮಾಡುವ ಕೆಲಸ ಒಂದು ಕಡೆಯಾದರೆ, ಜಾಲಿ ಕಡಿದು ಉರುವಲಿಗೆ ಬಳಸುವ ಬಹು ಉಪಯೋಗದ ಕಾರ್ಯವೂ ನಡೆಯುತ್ತಿದೆ. ಬರಗೂರಿನಲ್ಲಿ ೩೦ ತೆರೆದ ಹಳೆಯ ಬಾವಿಗಳಿದ್ದು ಅವೆಲ್ಲವೂ ಒಣಗಿ ಹೋಗಿದೆ. ಸದ್ಯ ೧೭೫ ಕೊಳವೆ ಬಾವಿಗಳು ಈ ಪರಿಸರದಲ್ಲಿವೆ. ಗ್ರಾಮದಲ್ಲಿ ಗ್ರಾಮ ಪಂಚಾಯಿತಿಯ ಮೂಲಕ ೫ ಮಿನಿ ಟ್ಯಾಂಕ್‌ಗಳಿಗೆ ನೀರು ತುಂಬಿಸಿ, ಅಲ್ಲಿಂದ ೫೮ ನಲ್ಲಿಗಳಿವೆ ಕೊಳಾಯಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

ಗ್ರಾಮದ ಉತ್ತರಕ್ಕೆ ಆಂಜನೇಯ ದೇವಾಲಯವಿದ್ದು, ಬಹಳ ಪ್ರಸಿದ್ಧಿ ಪಡೆದ ದೇವಾಲಯ. ಬರಗೂರಪ್ಪ ಎಂಬ ಹೆಸರಿನಿಂದಲೂ ಕರೆದು, ತಮ್ಮ ಕುಟುಂಬದ ಸದಸ್ಯರಿಗೆ ಹೆಸರಿಡುವ ಪದ್ಧತಿ ಪಾವಗಡ, ಸಿರಾ ಭಾಗದಲ್ಲಿ ಇಂದಿಗೂ ಇದೆ. ಉಳಿದಂತೆ ಈಶ್ವರ, ಮೈಲಾರಲಿಂಗ, ಬೀರದೇವರು, ಬಸವೇಶ್ವರ, ಕರಿಯಮ್ಮ, ಈರಮ್ಮ , ಏಳುಮಂದಕ್ಕೆ ಈ ಹೆಸರಿನ ದೇವಾಲಯ ಗಳಿವೆ. ಬರಗೂರು ಈರಮ್ಮ ದೇವತೆಯ ಬಗೆಗೆ ಮೌಖಿಕ ಪರಂಪರೆಯಲ್ಲಿ ಅಪಾರ ವಙ್ಮಯವಿದೆ. ಪ್ರೊ. ದೊಡ್ಡರಂಗೇಗೌಡರು ಬರಗೂರು ಈರಮ್ಮ ದೇವತೆಯ ಬಗ್ಗೆ ಪುಸ್ತಕ ಪ್ರಕಟಿಸಿದ್ದಾರೆ.

ಕುರುಬ ಜನಾಂಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ೧೯೪ ಮನೆಗಳಿವೆ. ಉಳಿದಂತೆ ಕುಂಚಿಟಿಗರು ೮೬ ಮನೆ, ಆದಿಕರ್ನಾಟಕ ೮೬ ಮನೆ, ಆದಿ ದ್ರಾವಿಡ ೫೩ ಮನೆ, ನಾಯಕರು ೩೪ ಮನೆ, ಉಳಿದಂತೆ ಉಪ್ಪಾರ, ಮುಸ್ಲಿಂ, ಈಡಿಗ, ವೀರಶೈವ, ಬ್ರಾಹ್ಮಣ, ಕೊರಚ, ಕಮ್ಮಾರ, ಅಕ್ಕಸಾಲಿಗರು, ಭಜಂತ್ರಿ ಕುಟುಂಬಗಳೂ ಸೇರಿ ಪ್ರಸಕ್ತ ೭೩೪ ಮನೆಗಳಿವೆ. ಕನ್ನಡ ಪ್ರಧಾನ ಭಾಷೆಯಾಗಿದ್ದು, ಉರ್ದು, ತೆಲುಗು ಭಾಷೆಗಳನ್ನಾಡುವ ಕೆಲವು ಕುಟುಂಬಗಳಿವೆ. ಕಾಂಕ್ರೀಟ್, ಕಡಪ ಬಂಡೆ ಹಾಸಿನ, ದಪ್ಪ ಮಣ್ಣಿನ, ಹೆಂಚಿನ, ಶೀಟಿನ ಒಟ್ಟು ೭೩೪ ಮನೆಗಳಿದ್ದು ಇದರಲ್ಲಿ ೮ ಗುಡಿಸಲುಗಳೂ ಸೇರಿವೆ. ಪ್ರಸ್ತುತ ಬರಗೂರಿನ ಜನಸಂಖ್ಯೆ ೩೧೫೩ ಆಗಿದ್ದು, ಸಾಕ್ಷರತೆಯ ಪ್ರಮಾಣ ೭೧.೨ ರಷ್ಟಿದೆ. ಇದರಲ್ಲಿ ಪುರುಷರು ೮೩.೭, ಮಹಿಳೆಯರು ೫೭.೮ ರಷ್ಟಿದೆ. ೧೨೭ ಜನ ಆಶ್ರಯ, ಅಂಬೇಡ್ಕರ್ ಆವಾಸ್, ಜನತಾ ಯೋಜನೆಯ ವಸತಿ ಫಲಾನುಭವಿಗಳೂ ಸೇರಿದ್ದಾರೆ. ಗ್ರಾಮದಲ್ಲಿ ೫೪೨ ಮನೆಗಳಲ್ಲಿ ಶೌಚಾಲಯ ಬಳಸಲಾಗುತ್ತದೆ.

ರಾಗಿ ಮುದ್ದೆ, ಅನ್ನ ಈ ಗ್ರಾಮದ ಮುಖ್ಯ ಆಹಾರವಾಗಿದ್ದು, ಚಿತ್ರಾನ್ನ, ಉಪ್ಪಿಟ್ಟು, ದೋಸೆ ಬಳಸುವವರಿದ್ದಾರೆ ವಿಶೇಷ ಸಂದರ್ಭಗಳಲ್ಲಿ ಬಾಡೂಟ ಹಾಗೂ ಹೋಳಿಗೆ ಊಟದ ವ್ಯವಸ್ಥೆಯೂ ಇರುತ್ತದೆ. ಕೃಷಿ ಕೆಲಸಕ್ಕೆ ಸಾಂಪ್ರದಾಯಿಕ ಎತ್ತಿನ ಬಂಡಿ ಬಳಕೆ ಇದ್ದು, ೮ ಆಧುನಿಕವಾಗಿ ಟ್ರ್ಯಕ್ಟರ್, ಟೆಂಪೋ, ಲಾರಿಗಳನ್ನು ಬಳಸಲಾಗುತ್ತದೆ. ಈ ಗ್ರಾಮದಲ್ಲಿ ೩೦೦ ಕ್ಕೂ ಮೀರಿದ ಸಂಖ್ಯೆಯಲ್ಲಿ ಸ್ಕೂಟರ್‌ಗಳಿವೆ. ಶೇಂಗಾ, ರಾಗಿ, ಅಲಸಂದಿ, ತೊಗರಿ, ಹುರುಳಿ ಈ ಗ್ರಾಮದ ಮುಖ್ಯ ಬೆಳೆಗಳು. ಹುಣಸೆ, ಸಪೋಟ, ಸೇವಂತಿಗೆ ಬೆಳೆಗಳನ್ನು ಬೆಳೆಯುತ್ತಾರೆ. ಒಂದು ಹಾಲಿನ ಡೈರಿ ಇದ್ದು, ಸರಾಸರಿ ೧೫೦೦ ಲೀಟರ್ ಹಾಲು ಸಂಗ್ರಹಿಸಲಾಗುತ್ತಿದೆ. ಕುರುಬರ ಬೀದಿ, ನಾಯಕರ ಕೇರಿ, ಈರಮ್ಮ ಗುಡಿ ಬೀದಿ, ಊರಬಾಗಿಲು ಕೇರಿ ಸೇರಿದಂತೆ ಒಟ್ಟು ಆರು ಬೀದಿಗಳಿವೆ. ಸಾಹಿತ್ಯ, ಚಲನಚಿತ್ರ, ಬಂಡಾಯ ಸಾಹಿತ್ಯ ಸಂಘಟನೆಯ ಸಾಹಿತಿ ನಾಡೋಜ ಡಾ॥ ಬರಗೂರು ರಾಮಚಂದ್ರಪ್ಪ, ನಿ॥ ಜಿಲ್ಲಾಧಿಕಾರಿ ನಂಜುಂಡಪ್ಪ ಸೇರಿದಂತೆ ೭೦ ಕ್ಕೂ ಹೆಚ್ಚು ಸರ್ಕಾರಿ ನೌಕರರು ಇದ್ದಾರೆ. ಶಿಕ್ಷಣ, ಸಾರಿಗೆ ಅಂಚೆ ಇಲಾಖೆ, ರಕ್ಷಣೆ, ಕಂದಾಯ, ಅರಣ್ಯ, ಆರ್ಡಿಪಿ ಇಲಾಖೆಗೆ ಸೇರಿದ ಒಟ್ಟು ೨೩ ಜನ ಸರ್ಕಾರಿ ನೌಕರರಿದ್ದಾರೆ.

ವಾಲಿಸಾಬ್, ವೀರಭದ್ರಪ್ಪ, ಮುಬಾರಕ್, ಪ್ರಸನ್ನ ಕುಮಾರ್, ಆರ್.ತಿಪ್ಪೇಸ್ವಾಮಿ ಈ ಗ್ರಾಮದ ಪತ್ರಕರ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಾಹಿತಿ, ಶಿಕ್ಷಣ ಸಂಘಟಕ ಟಿ.ಎನ್. ಸುಬ್ಬರಾವ್ ಪ್ರಾಧ್ಯಾಪಕ ಡಾ॥ ದೇವರಾಜ್, ಡಾ॥ಮುಕುಂದಪ್ಪ, ಮಲ್ಲಯ್ಯ, ನೀತಿಸ್ವಾಮಿ, ಹಾಸ್ಯ ಸಾಹಿತಿ

ಗಳಾದ ಸುಧಾ ಬರಗೂರು, ಕಾದಂಬರಿಗಾರ ಸುಬ್ಬರಾವ್ ಈ ಗ್ರಾಮದವರು. ಸಿರಾ ಕ್ಷೇತ್ರಕ್ಕೆ ಪ್ರಪ್ರಥಮ ಶಾಸಕರಾಗಿ ಆಯ್ಕೆಯಾಗಿದ್ದ ಬರಗೂರು ರಾಮೇ ಗೌಡರು ಈ ಗ್ರಾಮದ ಶಿಕ್ಷಣ, ಸಾಮಾಜಿಕ ಪ್ರಗತಿಗೆ ದುಡಿದ ಹಿರಿಯರು.

ಸಿರಾ ವಿಧಾನಸಭಾ ಕ್ಷೇತ್ರ, ಬರಗೂರು ತಾಲ್ಲೂಕು ಪಂಚಾಯಿತಿ ಹಾಗು ಹುಲಿಕುಂಟೆ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೆ ಒಳಪಡುವ ಈ ಗ್ರಾಮ, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದಲ್ಲಿ ೮ ಜನ ಪಂಚಾಯಿತಿ ಸದಸ್ಯರು ಆಯ್ಕೆಯಾಗಿದ್ದು, ೩ ಜನ ಪಂಚಾಯಿತಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಒಂದು ಅಂಚೆ ಕಛೇರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೆನರಾ ಬ್ಯಾಂಕ್, ಡಿಸಿಸಿ ಬ್ಯಾಂಕ್ ಕಾರ್ಯ ನಿರ್ವಹಿಸುತ್ತಿದ್ದು, ೮ ಸ್ತ್ರೀ ಶಕ್ತಿ ಸಂಘಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ೩ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಗ್ರಾಮದಲ್ಲಿ ವಿವೇಕಾನಂದ ಕ್ರೀಡಾ ಸಂಘ, ನಟರಾಜ ಕಲಾ ಸಂಘಗಳು ಕ್ರಿಯಾಶೀಲವಾಗಿ ಸಾಂಸ್ಕೃತಿಕ ಕೆಲಸ ಮಾಡುತ್ತಿವೆ. ೨ ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಪ್ರೌಢಶಾಲೆ, ಹಿರಿಯ ಪ್ರಾಥಮಿಕ ಪಾಠಶಾಲೆ, ಆಂಜನೇಯ ಗ್ರಾಮಾಂತರ ಪ್ರೌಢಶಾಲೆ, ಕಿರಿಯ ಕಾಲೇಜು, ಪದವಿ ಕಾಲೇಜು, ಜ್ಞಾನಜ್ಯೋತಿ ಪದವಿ ಕಾಲೇಜುಗಳಿರುವುದು ವಿಶೇಷವಾಗಿದೆ. ಎರಡು ಐಟಿಐ ಕಾಲೇಜುಗಳು ಇದೆ. ಪಶು ಆರೋಗ್ಯ ಕೇಂದ್ರ ಗ್ರಾಮದಲ್ಲಿದೆ. ಗ್ರಾಮ ಪಂಚಾಯಿತಿ ಮಟ್ಟದ ಗ್ರಂಥಾಲಯದ ಕೊಠಡಿ ಇದ್ದು, ಪುಸ್ತಕಗಳು ಇರುವುದಿಲ್ಲ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನದ ಫಲಾನುಭವಿಗಳು ೮೦ ಜನ ಇದ್ದಾರೆ.೩೫ ಚಿಕ್ಕ– ದೊಡ್ಡ ಅಂಗಡಿಗಳಿರುವ ಇಲ್ಲಿ ೫ ಹೋಟೆಲ್‌ಗಳು, ೪ ಜವಳಿ ಅಂಗಡಿ, ೨ ಪುಸ್ತಕದ ಅಂಗಡಿಗಳು, ಔಷಧಿ ಅಂಗಡಿ, ಖಾಸಗಿ ಪಶು ಚಿಕಿತ್ಸಾಲಯಗಳು ಇವೆ. ಈಶ್ವರ ದೇವಾಲಯದಲ್ಲಿ ರಾಜ ಮಹೇಂದ್ರ ವರ್ಮನ ಶಾಸನವಿದೆ. ವಿವಿಧ ಭಂಗಿಯ ಎಂಟು ವೀರಗಲ್ಲು, ಮಾಸ್ತಿಗಲ್ಲುಗಳಿವೆ. ಬರಗೂರಿನಲ್ಲಿ ಅಗ್ನಿಕೊಂಡವಾದ ಈರಮ್ಮನ ಸಮಾಧಿ ಸ್ಥಳದಲ್ಲಿ ಹಾಕಿಸಿದ್ದ ಮಾಸ್ತಿ ಕಲ್ಲಿನ ಜಾಗದಲ್ಲಿ ಈಗ ಈರಮ್ಮನ ಗುಡಿ ನಿರ್ಮಿಸಿದ್ದಾರೆ. ಈ ದೇವಸ್ಥಾನದ ಹಿಂಭಾಗದಲ್ಲೂ ಮೂರು ವೀರಗಲ್ಲುಗಳು ಕಂಡು ಬರುತ್ತವೆ. ಬರಗೂರು ಆಂಜನೇಯ ಪ್ರೌಢಶಾಲೆಯ ಎದುರಿಗೆ ಒಂದು ವೀರಗಲ್ಲು, ಕೆರೆಯ ಏರಿಯ ಮೇಲೊಂದು ಮಾಸ್ತಿಕಲ್ಲು. ಹೀಗೆ ಬರಗೂರಿನ ಪರಿಸರದಲ್ಲಿ ಹದಿನೈದಕ್ಕೂ ಹೆಚ್ಚು ವೀರಮಾಸ್ತಿಕಲ್ಲುಗಳು ಕಂಡು ಬರುತ್ತವೆ.

ಬರಗೂರು ಕೆರೆಯ ಮುಂಭಾಗದ ಬರಗೂರು–ಹಂದಿಕುಂಟೆ ರಸ್ತೆಯಲ್ಲಿ ಭೈರಂಗಿ ಮಠ ಎಂಬ ಒಂದು ಹಳೆಯ ಕಾಲದ ಆಶ್ರಮ ಮಾದರಿ ಗುಡಿ ಇದೆ. ಇದರ ಪಕ್ಕದಲ್ಲಿಯ ಬ್ರಿಟೀಷರ ಕಾಲದ (೧೯ ನೇ ಶತಮಾನ) ಒಂದು ಸಮಾಧಿ. ಆ ಸಮಾಧಿಯ ಮೇಲೆ ಅಮೃತ ಶಿಲೆಯ ಹಾಸು ಬಂಡೆಯ ಮೇಲೆ ಕೊರೆದ ಒಂದು ಶಾಸನವಿದೆ. ೩೮ ನೇ ಸೈನ್ಯದ ತುಕಡಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಅಧಿಕಾರಿಯ ಸಂಬಂಧಿ ಹಾಗೂ ಮದ್ರಾಸ್ ವೈದ್ಯಕೀಯ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪಿ.ಹೆಚ್. ಎಕ್ಸ್‌ಪ್ ಇಲ್ಲಿ ಕಾರಣಾಂತರದಿಂದ ಸಾವನ್ನಪ್ಪುತ್ತಾರೆ. ಅವರ ಸೋದರ ಎಕ್ಸಪ್ ಅವರ ಸೋದರ ಏಕ್ಸಪ್ ಅವರ ಸಮಾಧಿ ಮಾಡಿ ಶಾಸನ ಹಾಕಿಸಿದ ವಿವರವಿದೆ.

ಗ್ರಾಮದಲ್ಲಿ ಬರಗೂರು ಈರಮ್ಮನ ಆರತಿ, ಬಾನ, ಮಡೆ ಇದ್ದು ಊರ ಹಬ್ಬವಾಗಿ ಪ್ರಕಟವಾಗುತ್ತದೆ. ಅಗ್ನಿಕೊಂಡದ ಆಚರಣೆ, ಬರಗೂರಿನ ಉತ್ತರಕ್ಕೆ ಹೇಮಾವತಿ ದೊಡ್ಡ ಬಾಣಗೆರೆ ರಸ್ತೆಯ ಹಂಚಿಗೆ ಗಡಿನಾಡ ಪ್ರಾಧಿಕಾರದಿಂದ ಕಲಾ ಮಂದಿರವೊಂದನ್ನು ನಿರ್ಮಿಸಿದ್ದಾರೆ. ಈರಮ್ಮನ ಮೌಖಿಕ ಕಾವ್ಯವನ್ನು ದೊಡ್ಡರಂಗೇಗೌಡ ಮತ್ತು ಕೆ.ವಿ. ಮುದ್ದುವೀರಪ್ಪ ಸಂಪಾದಿಸಿ ಪ್ರಕಟಿಸಿದ್ದಾರೆ. ಬರಗೂರಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಒಂದು ತಂಡವೇ ಇದ್ದು, ಸಿರಾ ಭಾಗದಲ್ಲಿ, ಈಚಲುವನ ನಾಶ, ಕ್ವಿಟ್ ಇಂಡಿಯಾ ಚಳುವಳಿ ಮುಂತಾದ ಬ್ರಿಟೀಷ್ ವಿರೋಧಿ ಹೋರಾಟಕ್ಕೆ ಈ ಊರ ಪ್ರಮುಖ ಪಾತ್ರ ವಹಿಸಿದೆ. ಬಿ.ಎನ್. ಕರೀಗೌಡ, ಗಿರಿಯಪ್ಪ, ಕರೀಗೌಡ ಮೊದಲಾದವರು ಸೆರೆಮನೆ ವಾಸ ಅನುಭವಿಸಿದ ಹಿರಿಯರು. ಯುಗಾದಿ, ದೀಪಾವಳಿ, ಗೌರಿ, ಮಹಾನವಮಿ ಈ ಗ್ರಾಮದ ಪ್ರಮುಖ ಹಬ್ಬಗಳಾಗಿವೆ. ಗೌರಮ್ಮ, ಕೊಂತಿಯಮ್ಮನ ಹಬ್ಬವನ್ನು ವಿಶೇಷವಾಗಿ ಮೂರು ದಿನಗಳ ಕಾಲ ನಡೆಸುತ್ತಾರೆ. ಗ್ರಾಮದಲ್ಲಿ ಯಕ್ಷಗಾನ, ಪೌರಾಣಿಕ ನಾಟಕಗಳನ್ನು ವಾರ್ಷಿಕವಾಗಿ ಪ್ರದರ್ಶಿಸುತ್ತಾ ಬರುತ್ತಿದ್ದಾರೆ. ತಮಟೆ ಕಲಾವಿದರು, ಸೋಬಾನೆ ಹಾಡುಗಾರ್ತಿ, ಬರಗೂರು ಶಿವಮ್ಮ, ನಿಂಗಮ್ಮ ಮೊದಲಾದವರು ಕಲಾವಿದ ಮಾಸಾಶನ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಈ ಗ್ರಾಮದ ಹಂಸವೇಣಿ ಶ್ರೀನಿವಾಸ್ ಸಿರಾ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿದ್ದಾರೆ. ಬರಗೂರು ಭೀಮಣ್ಣ ಹೆಸರಾಂತ ಯಕ್ಷಗಾನ ಭಾಗವತರು.

## ಬಡೇನಹಳ್ಳಿ

ಬಡೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೧ ಕಿ.ಮೀ. ದೂರದಲ್ಲಿದೆ. ಸಿರಾ–ಬರಗೂರು ಮುಖ್ಯ ರಸ್ತೆಯಲ್ಲಿ

ಬಡೇನಹಳ್ಳಿ ಗೇಟಿನಿಂದ ಎಡಭಾಗದ ಜಿಲ್ಲಾಪಂಚಾಯಿತಿ ರಸ್ತೆಯಲ್ಲಿ ಒಂದು ಕಿ.ಮೀ. ದೂರದಲ್ಲಿ ಈ ಗ್ರಾಮವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೩೮೨.೧೮ ಹೆಕ್ಟೇರ್ ಆಗಿದೆ. ಬಡೇನಹಳ್ಳಿ ಸನಿಹದಲ್ಲೇ ಹಾಳು ಬಿದ್ದ, ಮನೆ, ಕಲ್ಲು ಕೂಪುಗಳ ಅವಶೇಷಗಳು ಕಂಡು ಬರುವ ಗ್ರಾಮ ಸ್ವರೂಪ ಕಂಡು ಬರುತ್ತಿದ್ದು, ಇದನ್ನು ಬಡೇನಹಳ್ಳಿಯ ಮೂಲ ಗ್ರಾಮ ಎಂತಲೂ, ಮೊದಲಿಗೆ ಬಡಕನಹಳ್ಳಿ ಎಂಬ ಹೆಸರಿದ್ದು, ಅದೇ ಹೆಸರಿನಲ್ಲಿ ಬಡೇನಹಳ್ಳಿ ಯಾಗಿದೆ. ಮತ್ತೊಂದು ಮಾಹಿತಿಯ ಪ್ರಕಾರ ಈ ಗ್ರಾಮದ ಮೂಲ 'ಬಳ್ಳಿಕರನಹಳ್ಳಿ' ಎಂದು ಹೇಳುತ್ತಾರೆ. ಹೋರಿಗಳನ್ನು ಸಾಕುವ, ಕಾರಣದಿಂದ ಈ ಹೆಸರಿನಲ್ಲಿ ಕರೆಯಲಾಗುತ್ತಿತ್ತೆಂದು ಯಕ್ಷಗಾನ ಭಾಗವತ ಕಣುಮಯ್ಯನವರ ಅಭಿಪ್ರಾಯವಾಗಿದೆ. ಬಡೇನಹಳ್ಳಿ ಮೂರು ಹಂತಗಳಲ್ಲಿ ಗ್ರಾಮ ರಚನೆಯಾಗಿ, ಸ್ಥಳಾಂತಗೊಂಡು ಈಗಿರುವ ವಲಸೆ ಗ್ರಾಮದಲ್ಲಿ ಇದೆ ಎಂದು ನಿವೃತ್ತ ಪ್ರಾಂಶು ಪಾಲರಾದ ಟಿ. ಗೋವಿಂದಪ್ಪರವರ ಮತವಾಗಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದಕ್ಕೆ ಹೊಂದಿಕೊಂಡಂತೆ ಅಂಬೇಡ್ಕರ್ ಕಾಲೋನಿ ಇದೆ. ಮರಳು, ಕಂದು ಬಣ್ಣದಿಂದ ಕೂಡಿರುವ ಇಲ್ಲಿನ ಮಣ್ಣು ಶೇಂಗಾ ಬೆಳೆಗೆ ಉತ್ಕೃವಾದುದು. ಗಿಡ, ಪೊದೆ, ಪೂರ್ವಕ್ಕೆ ಕರಿರಾಮನಹಳ್ಳಿ ಕೆರೆ, ಪಶ್ಚಿಮಕ್ಕೆ ಬಡೇನಹಳ್ಳಿ ಗೋಕಟ್ಟೆ ಇದ್ದು, ಇದರ ತುಂಬಾ ಬಳ್ಳಾರಿ ಜಾಲಿ ಬೆಳೆದುಕೊಂಡು ಪೊದೆಯಿಂದ ಕೂಡಿದೆ. ಇದು ಉರುವಲಿಗೆ ಸಹಕಾರವಾಗಿದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಮುಂಗುಸಿ, ಹಂದಿ ಮೊದಲಾದ ಕಾಡು ಪ್ರಾಣಿಗಳು ಕಂಡು ಬರುತ್ತವೆ. ಗ್ರಾಮದಲ್ಲಿ ಪಶು ಪಾಲನೆಗೆ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಹಳ್ಳಿಕಾರ ನಾಟಿ ಎತ್ತು ಈ ಗ್ರಾಮದಲ್ಲಿದ್ದು, ಹಸುಗಳ ವ್ಯಾಪಾರಕ್ಕೂ ಈ ಗ್ರಾಮ ಹೆಸರಾಗಿದೆ. ಪಕ್ಷಿಗಳಾದ ಗಿಳಿ, ಬಾವುಲಿ, ಗೊರವ, ಕೌಜಲುಗ, ಹದ್ದು, ಗರುಡ, ಕೋಗಿಲೆ, ಕೊಕ್ಕರೆ, ಗುಬ್ಬಚ್ಚಿ, ಕಾಗೆ ಮೊದಲಾದ ಕಾಡು ಪಕ್ಷಿಗಳು ಕಂಡು ಬರುತ್ತವೆ. ಕೋಳಿಯನ್ನು ಮಾಂಸ ಹಾಗೂ ವಂಶಾಭಿವೃದ್ಧಿಗಾಗಿ ಸಾಕುತ್ತಾರೆ.

ಗ್ರಾಮಕ್ಕೆ ನೀರಿನ ಆಶ್ರಯವಾಗಿ ಒಂದು ಕೆರೆ, ಒಂದು ಗೋಕಟ್ಟೆ ಇದ್ದರೂ ತುಂಬುವುದು ವಿರಳ. ವಾರ್ಷಿಕ ಸರಾಸರಿ ಮಳೆ ೫೮೦ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ತಾಪವೂ ೩೮–೩೯ಂ ಸೆಂ. ಇರುತ್ತದೆ. ಚಳಿ ೧೨ಂ ಸೆಂ. ಸಹಜವಾಗಿರುತ್ತದೆ. ೬ ತೆರೆದ ಬಾವಿಗಳಿದ್ದರೂ ನೀರು ಕಡಿಮೆ. ಈ ಪರಿಸರದಲ್ಲಿ ೨೬ ಕೊಳವೆ ಬಾವಿಗಳಿವೆ. ಕುಡಿಯಲು ತಾಲ್ಲೂಕು ಪಂಚಾಯಿತಿ. ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ೪ ಸಿಸ್ಟನ್ ಹಾಗೂ ಒಂದು ಕೈ ಪಂಪು ಇದೆ. ಕುಂಚಿಟಿಗ ಜನಾಂಗ ಈ ಗ್ರಾಮದ ಏಕೈಕ ಜನಾಂಗವಾಗಿದ್ದು ೪೦ ಮನೆಗಳಿವೆ. ಕಾಂಕ್ರೀಟ್, ಹೆಂಚಿನ ಹಾಗೂ ಶೀಟಿನ ಸ್ವರೂಪದ ಮನೆಗಳಿದ್ದು, ೨೧೧ ಜನಸಂಖ್ಯೆ ಹೊಂದಿದ್ದಾರೆ. ಜನತಾ–ಆಶ್ರಯ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ೧೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ವಿಶೇಷ ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಊಟದ ವ್ಯವಸ್ಥೆ ಇದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿಯ ಬಳಕೆ ಇದ್ದು ಮೂರು ಗಾಡಿಗಳಿವೆ. ಟ್ರ್ಯಕ್ಟರ್, ಮಿನಿ ಟೆಂಪೋ, ದ್ವಿಚಕ್ರ ವಾಹನಗಳು ಬಳಕೆಯಲ್ಲಿವೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ತೊಗರಿ, ಹುರುಳಿ, ತೊಗರಿ, ಅಲಸಂದಿ ಆಹಾರ ಬೆಳೆಗಳು. ಸೂರ್ಯಕಾಂತಿ, ರೇಷ್ಮೆ, ಸೇವಂತಿಗೆ ವಾಣಿಜ್ಯ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ತೆಂಗು, ಮಾವು, ಅಡಿಕೆ, ಈ ಬಗೆಯ ಬೆಳೆಗಳಿವೆ. ಶೇಂಗಾ ಮತ್ತು ಹುಣಸೆಹಣ್ಣಿನ ವ್ಯಾಪಾರವಿದೆ. ವಾಣಿಜ್ಯ ತೆರಿಗೆ ಉಪನಿರ್ದೇಶಕ ಬಿ.ಜಿ. ಕೃಷ್ಣಕುಮಾರ್, ಬೆಂಗಳೂರು ವಿಶ್ವವಿದ್ಯಾಲಯದ ಪರಿಸರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ॥ ಬಿ.ಸಿ. ನಾಗರಾಜ್, ಉಪನ್ಯಾಸಕ ಶ್ರೀನಿವಾಸ್, ಪ್ರಾಚಾರ್ಯ ಟಿ. ಗೋವಿಂದಪ್ಪ ಸೇರಿದಂತೆ ಹತ್ತು ಮಂದಿ ವಿವಿಧ ಇಲಾಖೆಯ ನೌಕರರಿದ್ದಾರೆ. ಸಣ್ಣ ಕೈಗಾರಿಕೆಯಾಗಿ ಬೀಡಿ ಸುತ್ತುವುದು, ಟೈಲರಿಂಗ್ ಕೈಗಾರಿಕೆ ಇದೆ.

ಇಲ್ಲಿನ ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ, ಹಂದಿಕುಂಟೆ ತಾಲ್ಲೂಕು ಪಂಚಾಯಿತಿ ಹಾಗೂ ಹೊಸಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರಗಳನ್ನು ಒಳಗೊಂಡಿದ್ದು, ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರು ಈ ಗ್ರಾಮದ ಪ್ರತಿನಿಧಿ ಇದ್ದಾರೆ. ಸಿರಾ–ಅಮರಾಪುರ, ಸಿರಾ ಬರಗೂರು ಈ ಮೂಲಕ ರಸ್ತೆ ಸಂಪರ್ಕ ಹೊಂದಿದೆ. ೨ ಸ್ತ್ರೀ ಶಕ್ತಿ ಸ್ವಸಹಾಯ ತಂಡ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪುಗಳಿವೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಅಂಗನವಾಡಿಯಲ್ಲಿ ೧೯ ಮಕ್ಕಳು, ಶಾಲೆಯಲ್ಲಿ ೬೪ ಮಕ್ಕಳಿದ್ದು, ಮೂವರು ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ, ಪಠ್ಯಪುಸ್ತಕ ಪೂರೈಕೆಯಂತಹ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೭.೧ ರಷ್ಟು ಹೊಂದಿದ್ದು, ಊರಿನ ಹಿರಿಯ, ಲೇಖಕ ಹಾಗೂ ಉಪನ್ಯಾಸಕ

ರಾಗಿದ್ದು, ಟಿ. ಗೋವಿಂದಪ್ಪ ಅವರ ಪ್ರೇರಣೆ, ಮುತುವರ್ಜಿಯಿಂದ ಶಿಕ್ಷಕ ಸದನವನ್ನು ಕಟ್ಟಿಸಿ, ಶಿಕ್ಷಕರಿಗೆ ಉಚಿತ ವಸತಿ ಒದಗಿಸಿದ ತಾಲ್ಲೂಕಿನ ಮೊದಲ ಗ್ರಾಮ ಎಂಬುದು ಹೆಮ್ಮೆಯ ಸಂಗತಿ. ಅಂತೆಯೇ ಸ್ವಾಮಿ ವಿವೇಕಾನಂದ ಯುವಕರ ಸಂಘ, ಹಾಗೂ ಸಮುದಾಯ ಭವನವಿದೆ. ತಾಲ್ಲೂಕು ಮಟ್ಟದ ಯುವಜನ ಈ ಗ್ರಾಮದಲ್ಲಿ ನಡೆಸಿದ ಕೀರ್ತಿ ಈ ಗ್ರಾಮದ ಯುವಕರಿಗೆ ಸಲ್ಲುತ್ತದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ಸೌಲಭ್ಯ ಪಡೆದವರಿದ್ದಾರೆ. ಗ್ರಾಮದಲ್ಲಿ ಮೂರು ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದ ಪ್ರವೇಶದ ಬಳಿ ೨ ಕರುಗಲ್ಲುಗಳಿವೆ. ಈ ಗ್ರಾಮದ ಮುಖ್ಯ ರಸ್ತೆ ಬಡೇನಹಳ್ಳಿ ಗೇಟಿನಲ್ಲಿ ಒಂದು ವೀರಗಲ್ಲು ಇದ್ದು, ಅದನ್ನು ಅರಳೀಕಟ್ಟೆ ಕಟ್ಟಿ, ಸ್ಥಾಪಿಸಿ ಸಂರಕ್ಷಿಸಲಾಗಿದೆ. ವಿಶೇಷ ಹಬ್ಬಗಳಲ್ಲಿ ಕರುಗಲ್ಲುಗಳಿವೆ. ಪೂಜೆ ನೆರವೇರುತ್ತದೆ.

ಗ್ರಾಮದಲ್ಲಿ ಕೊಲ್ಲಾಪುರದಮ್ಮಮ ಪೌಳಿ, ಈಶ್ವರ–ಗಣೇಶನ ದೇವಾಲಯ, ಮುತ್ತುರಾಯನ ಪೌಳಿ ಇದೆ. ಭೂಮಿಯಲ್ಲಿ ಹೂತು ಹೋಗಿದ್ದ ಬಾರಿ ಗಾತ್ರದ ಶಿವಲಿಂಗವನ್ನು ೨೦೦೮ ರಲ್ಲಿ ಹೊರತೆಗೆದ ಟಿ. ಗೋವಿಂದಯ್ಯ ಮತ್ತಿತರರು, ಅದಕ್ಕೊಂದು ಗುಡಿ ಕಟ್ಟಿಸಿ, ಪೀಠ, ನಂದಿ ವಿಗ್ರಹಗಳೊಂದಿಗೆ ಪ್ರತಿಷ್ಠಾಪಿಸ ಲಾಗಿದೆ. ಇಲ್ಲಿಯೇ ಗಣಪತಿ ದೇವಾಲಯವೂ ಇದ್ದು, ನಿತ್ಯ ಪೂಜೆ ನೆರವೇರುತ್ತದೆ. ಗ್ರಾಮದಲ್ಲಿ ರಾಮದಾಸ ಎಂಬ ಅವಧೂತರ ಮಠವಿದ್ದು, ಅದೊಂದು ಮಂಟಪದ ಮಾದರಿಯಲ್ಲಿದೆ. ರಾಮಣ್ಣ ಎಂಬ ಬ್ರಹ್ಮಚಾರಿಯೊಬ್ಬರು, ಬಾಲ್ಯದಲ್ಲಿಯೇ ಸಂನ್ಯಾಸಿ ದೀಕ್ಷೆ ಪಡೆದು, ಭಿಕ್ಷಾಟನೆ ಮಾಡಿ, ಹಂಚಿ ಊಟ ಮಾಡುವ ತನುವನ್ನು ರೂಢಿಸಿಕೊಂಡಿದ್ದರು. ಇವರ ನಿಧನದ ತರುವಾಯ ಅವರ ಸಮಾಧಿ ಮಂದಿರ ನಿರ್ಮಾಣವಾಗಿದೆ. ಜೊತೆಗೆ ಶಿವರಾತ್ರಿ ನಂತರದ ದಿನ ಇಲ್ಲಿ ಹರಿ ಸೇವೆ ಹೆಸರಿನಲ್ಲಿ ಅನ್ನ ಸಂತರ್ಪಣೆ ಕಾರ್ಯವಿರುತ್ತದೆ. ಪ್ರತಿ ವರ್ಷ ಯುಗಾದಿಯ ನಂತರ ಕೊಲ್ಲಾಪುರದಮ್ಮನ ಊರಹಬ್ಬ ನಡೆದು, ಬಲಿ, ಆರತಿ, ಬಾನಗಳ ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಶಿವರಾತ್ರಿ, ಯುಗಾದಿ, ದಸರಾ, ದೀಪಾವಳಿ, ಗೌರಿ ಗಣೇಶನ ಹಬ್ಬಗಳನ್ನು ಶ್ರದ್ಧೆಯಿಂದ ಆಚರಿಸುತ್ತಾರೆ. ಗ್ರಾಮದಲ್ಲಿ ಟಿ. ಗೋವಿಂದಯ್ಯ ಎಂಬ ಪ್ರಾಂಶುಪಾಲರು, ಸೀತಾ ಪರಿತ್ಯಾಗ ನಾಟಕ ಹಾಗೂ ೨ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಗ್ರಾಮದಲ್ಲಿ ಪ್ರತಿವರ್ಷ ಸಂಪೂರ್ಣ ನಾಟಕಗಳನ್ನು ಪ್ರದರ್ಶಿಸುತ್ತಾ ಬರಲಾಗುತ್ತಿದೆ.

## ಬಸವನಹಳ್ಳಿ

ಬಸವನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಇದು ಕೊಟ್ಟ ಕಂದಾಯ ಗ್ರಾಮಕ್ಕೆ ಉಪಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೧೨೮.೦೪ ಹೆಕ್ಟೇರ್ ಆಗಿದೆ. ಮರಳು ಮಿಶ್ರಿತ ಕಂದು ಮಣ್ಣನ್ನು ಹೊಂದಿದೆ. ಇದೊಂದು ವ್ಯಕ್ತಿ ನಾಮ ಸೂಚಕವಾಗಿದ್ದು, ಬಸವಣ್ಣ ಎಂಬುವವನನ್ನು ಈ ಊರಿಗೆ ಬುನಾದಿ ಹಾಕಿ, ಮೊದಲು ಮನೆ ಕಟ್ಟಿದ್ದರಿಂದ ಇಲ್ಲಿಂದಲೇ ಊರು ಬೆಳೆಯಿತು. ಇದಕ್ಕೆ ಪ್ರೇರಕವಾದ ಈ ವ್ಯಕ್ತಿಯ ಹೆಸರಿನಲ್ಲೇ ಗ್ರಾಮವನ್ನು ಬಸವನಹಳ್ಳಿ ಎಂದು ಕರೆಯಲಾಗಿದೆ.

ಈ ಗ್ರಾಮದ ಪರಿಸರ ಕುರುಚಲು ಗಿಡ, ಪೊದೆ, ಹಳ್ಳ, ದಿಣ್ಣೆ ಕೂಡಿರುವು ದರಿಂದ ಇಲ್ಲಿ ಕಾಡು ಪ್ರಾಣಿಗಳೂ ಇವೆ. ನರಿ, ತೋಳ, ಮೊಲ, ಬಾರುಬೆಕ್ಕು, ಉಡ, ಕರಡಿ, ಕಾಡು ಹಂದಿ, ಜಿಂಕೆ ಈ ಭಾಗದಲ್ಲಿ ಕಂಡು ಬರುತ್ತದೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಕುರಿ, ಮೇಕೆ, ಎತ್ತು, ನಾಯಿ ಹಾಗೂ ಗೊಲ್ಲರ ಮನೆಯಲ್ಲಿ ಕತ್ತೆಯನ್ನು ಸಾಕಿದ್ದಾರೆ. ಪಕ್ಷಿಗಳಾದ ಗಿಳಿ, ಕಾಗೆ, ಕೋಗಿಲೆ, ಗೊರವಂಕ, ಬೆಳವ, ಕೌಜಲಗ ಮೊದಲಾದ ಹಕ್ಕಿಗಳು ಕಂಡು ಬರುತ್ತವೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ಮಳೆ ೫೮೦ ಮಿ.ಮೀ. ಆಗಿದ್ದು, ಬಿಸಿಲು ೩೯ಂ ಸೆಂ. ಇದ್ದು, ಚಳಿ ೧೨ಂ ಸೆಂ. ಆಗಿದೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ಕೆರೆ ಇದ್ದು, ಮಳೆ ಇಲ್ಲದೆ ಒಣಗಿದೆ. ತುಂಬುವುದು ಅಪರೂಪ. ಈ ಪರಿಸರದಲ್ಲಿ ೪೫ ಕೊಳವೆ ಬಾವಿಗಳನ್ನು ರೈತರು ನಿರ್ಮಿಸಿಕೊಂಡು, ಕೃಷಿ ಕೆಲಸಕ್ಕೆ ನೀರು ಒದಗಿಸುತ್ತಾರೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ಒಂದು ಕೈಪಂಪು, ೨ ಚಿಕ್ಕ ಟ್ಯಾಂಕ್ ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯ ವಾಗಿದ್ದು, ಗೊಲ್ಲರು, ಆದಿಕರ್ನಾಟಕ, ನಾಯಕ, ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಒಟ್ಟು ೧೮೪ ಮನೆಗಳಿದ್ದು, ೬೪೮ ಜನಸಂಖ್ಯೆ ಹೊಂದಿದ್ದಾರೆ. ೬೨ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ವಸತಿ ಯೋಜನೆಯಾದ ಜನತಾ, ಆಶ್ರಯ, ಅಂಬೇಡ್ಕರ್, ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೧೪ ಫಲಾನುಭವಿಗಳಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಅಮುಖ್ಯವಾಗಿ ರೊಟ್ಟಿ, ದೋಸೆ ಬಳಸುತ್ತಾರೆ. ವಿಶೇಷ ಭೋಜನವಾಗಿ ಬಾಡೂಟ, ಹೋಳಿಗೆ, ಪಾಯಸ ಬಳಸುತ್ತಾರೆ.

ಸಾಂಪ್ರದಾಯಿಕ ವಾಹನ ಎತ್ತಿನಬಂಡಿ, ಆಧುನಿಕ ವಾಹನಗಳಾಗಿ ಟ್ರ್ಯಾಕ್ಟರ್, ದ್ವಿಚಕ್ರ ವಾಹನ, ಕಾರು ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಅಲಸಂದಿ, ತೊಗರಿ, ಹುರುಳಿ, ಜೋಳ ಆಹಾರ ಬೆಳೆಗಳು. ತೆಂಗು, ಅಡಿಕೆ ತೋಟಗಾರಿಕೆ ಬೆಳೆಗಳು. ಒಂದು ಮಿನಿ ಹಾಲಿನ ಡೈರಿ ಇದೆ. ಹುಣಸೆಹಣ್ಣು, ಕುರಿ ವ್ಯಾಪಾರ ಇದೆ. ಇಂಜಿನಿಯರ್ ಗಳಾದ ಬಿ.ಎಂ. ಮಂಜುನಾಥ್, ಡಿ. ಪ್ರೇಮಾನಂದ್ ಸೇರಿದಂತೆ ಶಿಕ್ಷಕ ಬಿ. ರಂಗಪ್ಪ, ಭಾನುಮತಿ ಸೇರಿ ೬ ಜನ ಶಿಕ್ಷಕರು, ನಗರ ಸಭೆಯ ಯೋಜನಾಧಿಕಾರಿ ಶ್ರೀಮತಿ ವರಲಕ್ಷ್ಮಿ ಈ ಗ್ರಾಮದ ವಿಶೇಷ ಅಧಿಕಾರಿಗಳು.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ತಾಲ್ಲೂಕು, ಜಿಲ್ಲಾ ಹಾಗೂ ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಇಬ್ಬರು ಈ ಗ್ರಾಮದ ಪಂಚಾಯಿತಿ ಸದಸ್ಯರಿದ್ದಾರೆ. ಸಿರಾ–ಅಮರಾಪುರ, ಹುಲಿಕುಂಟೆ, ಬರಗೂರು, ಪಟ್ಟನಾಯಕನಹಳ್ಳಿ, ಧರ್ಮಪುರ ಮಾರ್ಗವಾಗಿ ರಸ್ತೆ ಸಂಚಾರ ಗ್ರಾಮದ ಅರ್ಧ ಕಿ.ಮೀ. ದೂರದಲ್ಲಿ ಹೋಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀ ಶಕ್ತಿ ಕೇಂದ್ರಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಹಕಾರ ಸಂಘಗಳಿದ್ದು, ಆರ್ಥಿಕ ಚಟುವಟಿಕೆಗೆ ಪ್ರೇರಕವಾಗಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರೌಢಶಾಲೆಗಳಿದ್ದು ಶಾಲೆಯಲ್ಲಿ ೩೧ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೮.೭ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೫ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಆಂಜನೇಯ, ಮಾರಮ್ಮನ ಪೌಳಿ ಇದೆ. ಅಂಬಾ ಭವಾನಿ ಗುಡಿಯೂ ಇದೆ. ಅಂಬಾ ಭವಾನಿ ಊರಹಬ್ಬವಾಗಿದೆ. ಬಲಿ, ಆರತಿ, ಹರಕೆ ಸಂಪ್ರದಾಯವಾಗಿದೆ. ಯುಗಾದಿ, ಮಹಾನವಮಿ, ಗೌರಿ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ಮಾಡುತ್ತಾರೆ. ಬಿ.ರಂಗಪ್ಪ, ನಿವೃತ್ತ ಶಿಕ್ಷಕರಾಗಿದ್ದು, ಯಕ್ಷಗಾನ, ಪೌರಾಣಿಕ ನಾಟಕಗಳ ನಿರ್ದೇಶಕರಾಗಿದ್ದರು. ಹಾರ್ಮೋನಿಯಂ, ವೀಣಾವಾದಕರೂ ಆಗಿದ್ದು, ಇವರ ನಿರ್ದೇಶನದಲ್ಲಿ ೫೦ ಕ್ಕೂ ಹೆಚ್ಚು ನಾಟಕಗಳು, ಬೇವಿನಹಳ್ಳಿ, ನಾದೂರು, ಬಸವನಹಳ್ಳಿ, ಕೊಟ್ಟಿಯಲ್ಲಿ ಪ್ರಸಾರವಾಗಿವೆ.

ಶ್ರೀನಿವಾಸ್, ಸ್ವಾಮಿ ಆಡಿಯೋ, ವೀಡಿಯೋ ಆರಂಭಿಸಿ, ಧ್ವನಿ ಸುರುಳಿಗಳನ್ನು ೧೯೮೦ರ ದಶಕದಿಂದಲೇ ದೊಡ್ಡ ರಂಗೇಗೌಡರ ಮುಂಗಾರು, ಮಧುರ ಅಲೆಗಳು, ಮುತ್ತಿನುಂಗುರ, ಮುತ್ತಿನ ಪಲ್ಲಕ್ಕಿ, ಸಪ್ತ ಸ್ವರಗಳು ಮುಂತಾದ ಜನಪ್ರಿಯ ಧ್ವನಿ ಸುರುಳಿಗಳನ್ನು ಹೊರತಂದಿದ್ದಾರೆ. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕ ಜುಂಜಪ್ಪ ಮಹಾ ಕಾವ್ಯವನ್ನು ಮೊದಲಿಗೆ ಧ್ವನಿಸುಳಿಗೆ ಅಳವಡಿಸಿದ ಹಿರಿಮೆ ಇವರದು. ಶ್ರೀ ಅಂಕಪ್ಪ ಎಂಬ ರಂಗ ನಿರ್ದೇಶಕ ಹಾಗೂ ಶ್ರೀದೇವಿ ಪಾತ್ರದಲ್ಲಿ ವಿಖ್ಯಾತರಾಗಿರುವ ರಾಮಣ್ಣ ಈ ಗ್ರಾಮದ ಮರೆಯಬಾರದ ಕಲಾವಂತರು, ಕರಿಯಮ್ಮ ಗ್ರಾಮದೇವತೆ ಹಬ್ಬ. ಪ್ರತಿವರ್ಷ ಆಶಾಢ ಮಾಸದಲ್ಲಿ ಆಚರಿಸುತ್ತಾ, ಆರತಿ, ಬಾನ, ಬಲಿ ಸಂಪ್ರದಾಯವಿದೆ. ರಾಮನವಮಿ ದಿನದಂದು, ಶ್ರೀರಾಮ ದೇವರ ಅಖಂಡ ಭಜನಾ ಮಹೋತ್ಸವ ಈ ಗ್ರಾಮದ ವಿಶೇಷವಾಗಿದೆ.

## ಬಸವನಹಳ್ಳಿ ಗೊಲ್ಲರಹಟ್ಟಿ

ಬಸವನಹಳ್ಳಿ ಗೊಲ್ಲರಹಟ್ಟಿ ಸಿರಾ–ಪಟ್ಟನಾಯಕನಹಳ್ಳಿ ಮಾರ್ಗದಲ್ಲಿ ಹುಲಿಕುಂಟೆಗೆ ಹೋಗುವ ರಸ್ತೆಯ ಬಸವನಹಳ್ಳಿ ಕೇಂದ್ರದಿಂದ ಉತ್ತರಕ್ಕೆ ೨೬ ಕಿ.ಮೀ. ದೂರದಲ್ಲಿದ್ದು, ಕೊಟ್ಟಿ ಕಂದಾಯ ಗ್ರಾಮಕ್ಕೆ ಉಪಗ್ರಾಮವಾಗಿದೆ. ಮರಳು ಮಿಶ್ರಿತ ಕಂದು ಮಣ್ಣನ್ನು ಹೊಂದಿದ್ದು ಈ ಪರಿಸರದಲ್ಲಿ ಮೊಲ, ಮುಂಗುಸಿ, ಜಿಂಕೆ, ತೋಳ, ನರಿ ಮೊದಲಾದ ಕಾಡು ಪ್ರಾಣಿಗಳು, ಹಸು, ಎತ್ತು, ಕುರಿ, ಮೇಕೆ, ಕೋಳಿ, ಕತ್ತೆಗಳನ್ನು ಸಾಕಿದ್ದಾರೆ.

ಇದೊಂದು ಕಾಡುಗೊಲ್ಲರ ಬುಡಕಟ್ಟು ಗ್ರಾಮವಾಗಿದೆ. ಈ ಗ್ರಾಮದ ವಾರ್ಷಿಕ ಸರಾಸರಿ ಮಳೆ ಪ್ರಮಾಣ ೫೮೦ ಮಿ.ಮೀ. ಆಗಿದ್ದು, ಉಷ್ಣಾಂಶ ೩೯೦ ಸೆಂ. ಆಗಿದೆ. ಚಳಿ ೧೨೦ ಸೆಂ. ಇದ್ದು, ಈ ಗ್ರಾಮಕ್ಕೆ ನೀರಿನ ಆಸರೆ ಇಲ್ಲ. ಹುಲಿಕುಂಟೆ ಗರಾಮ ಪಂಚಾಯಿತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಸರಬರಾಜು ಮಾಡಲಾಗುವುದು. ಕಾಡುಗೊಲ್ಲರು ಒಂದೇ ಇಲ್ಲಿನ ಸಮುದಾಯವಾಗಿದೆ. ಒಟ್ಟು ೨೬ ಮನೆಗಳಿದ್ದು, ೨ ಕಾಂಕ್ರೀಟ್ ಮನೆಗಳು, ಮಣ್ಣಿನ ಮನೆಗಳು, ಹೆಂಚಿನ ಹಾಗೂ ಶೀಟಿನ ಮನೆಗಳಿದ್ದು, ೪ ಗುಡಿಸಲುಗಳು ಇವೆ. ೧೧೯ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಆಹಾರವಾಗಿದೆ. ಸಂಪ್ರದಾಯಿಕ ವಾಹನವಾಗಿ ಎತ್ತಿನಗಾಡಿಗಳಿವೆ. ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾದ ರಾಗಿ, ತೊಗರಿ, ಹುರುಳಿ

ಬೆಳೆಯುತ್ತಾರೆ. ಹುಣಸೆಹಣ್ಣು, ಕುರಿ ವ್ಯಾಪಾರ ಮುಖ್ಯವಾಗಿದೆ. ಚಿತ್ತಯ್ಯ ಎಂಬ ಒಬ್ಬರು ಶಿಕ್ಷಕರಾಗಿದ್ದಾರೆ.

ಸಿರಾ ವಿಧಾನಸಭೆ, ಹುಲಿಕುಂಟೆ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ೨ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳಿವೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೭.೮ ರಷ್ಟಿದೆ. ಶೈಕ್ಷಣಿಕವಾಗಿ ನೆರೆಯ ಗ್ರಾಮಗಳನ್ನು ಅವಲಂಬಿಸಿದೆ. ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಒಂದು ಪೆಟ್ಟಿಗೆ ಅಂಗಡಿ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗೌರಸಂದ್ರದ ಮಾರಮ್ಮನ ಪೌಳಿ ಇದ್ದು, ಊರಹಬ್ಬವಾಗಿ, ಆರತಿ, ಬ್ಯಾಟೆ, ಬಾನದ ಹರಕೆ ಸಂಪ್ರದಾಯವಿದೆ. ದೀಪಾವಳಿ, ಶಿವರಾತ್ರಿ, ಯುಗಾದಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬೀರನಹಳ್ಳಿ

ಬೀರನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ, ವಾಯುವ್ಯಕ್ಕೆ ೨೮.೫ ಕಿ.ಮೀ. ದೂರದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು, ಇದರ ಮುಖ್ಯ ಗ್ರಾಮ ಹಾಲೋಗೆರೆಯಾಗಿದೆ. ಭೌಗೋಳಿಕ ವ್ಯಾಪ್ತಿ ೮೫೧.೧೨ ಚದರ ಹೆಕ್ಟೇರ್ ಮೂಲ ಗ್ರಾಮದೊಂದಿಗೆ ಹಂಚಿಯಾಗಿದೆ.

ಮರಳು–ಕೆಂಪು ಮಣ್ಣಿನಿಂದ ಕೂಡಿರುವ ಇಲ್ಲಿನ ಭೂಮಿ ರಾಗಿ, ಅಲಸಂದಿ, ಶೇಂಗಾ ಬೆಳೆಗಳಿಗೆ ಪ್ರೇರಕವಾಗಿದೆ. ಅಪ್ಪಟ ಬಯಲು ಸೀಮೆಯಾಗಿದ್ದು, ಎಮ್ಮೆ, ದನ, ಎತ್ತು ಮೊದಲಾದ ಸಾಕು ಪ್ರಾಣಿಗಳನ್ನು ಸಾಕುತ್ತಾರೆ. ಸಮೀಪದ ಗಿಡ, ಪೊದೆಗಳಲ್ಲಿ ಮೊಲ, ನರಿ, ಕಾಡು ಹಂದಿ ಮೊದಲಾದ ಪ್ರಾಣಿಗಳನ್ನು ಕಾಣಬಹುದು. ವಾರ್ಷಿಕ ೪೬೨ ಮಿ.ಮೀ. ಸರಾಸರಿ ಮಳೆ ಪ್ರಮಾಣದ ಇಲ್ಲಿ ೩೨೦ ಸೆಂ. ಬಿಸಿಲು, ೧೨೦ ಸೆಂ. ಚಳಿ ಇರುತ್ತದೆ. ಊರಿನ ಪೂರ್ವಕ್ಕೆ ದೊಡ್ಡ ಹಳ್ಳವಿದ್ದು, ಮಳೆಗಾಲದಲ್ಲಿ ನೀರು ಇರುತ್ತದೆ. ಕುಡಿಯುವುದಕ್ಕೆ ೨ ಕೈಪಂಪುಗಳ ಮೂಲಕ ನೀರನ್ನು ಸರಬರಾಜು ಮಾಡಲಾಗಿದೆ.

ಕಾಡು ಗೊಲ್ಲರು, ಆದಿಕರ್ನಾಟಕದವವು, ಮಡಿವಾಳ, ಉಪ್ಪಾರ ಸೇರಿದಂತೆ ಒಟ್ಟು ೬೦ ಮನೆಗಳಿವೆ. ಗೊಲ್ಲರು ದೊಡ್ಡ ಸಮುದಾಯವಾದರೆ ಆದಿಕರ್ನಾಟಕ ಸಣ್ಣ ಸಮುದಾಯವಾಗಿದೆ. ಹೆಂಚಿನ, ಶೀಟಿನ, ಕಲ್ಲಿನ, ಕಾಂಕ್ರೀಟ್ ಜೊತೆಗೆ ೨ ಗುಡಿಸಲುಗಳಿವೆ. ೨೧೪ ಜನಸಂಖ್ಯೆ ಇದೆ. ೪ ಜನತಾ ಮನೆಗಳಿವೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಉಪಆಹಾರ ವಾಗಿದೆ. ಬಾಡೂಟ, ಹೋಳಿಗೆ ಊಟ ವಿಶೇಷ ಸಾಂದರ್ಭಿಕ ಊಟವಾಗಿದೆ. ಎತ್ತಿನಗಾಡಿ, ಟ್ರ್ಯಾಕ್ಟರ್, ಮಿನಿ ಟೆಂಪೋ ಬಳಕೆಯಲ್ಲಿದೆ.

ಶೇಂಗಾ, ಸೂರ್ಯಕಾಂತಿ, ರೇಷ್ಮೆ ಪ್ರಮುಖ ವಾಣಿಜ್ಯ ಬೆಳೆಗಳು. ಆಹಾರ ಬೆಳೆಗಳಾಗಿ ಅಲಸಂದಿ, ತೊಗರಿ ಬೆಳೆಯುತ್ತಾರೆ. ತೆಂಗು, ಅಡಿಕೆ ಬೆಳೆಯೂ ಇದೆ. ಶಿಕ್ಷಕರು ಸೇರಿದಂತೆ ವಿವಿಧ ಸರ್ಕಾರಿ ನೌಕರರು ೪ ಮಂದಿ ಇದ್ದಾರೆ.

ಚಿತ್ರದುರ್ಗ ಲೋಕಸಭೆ, ಸಿರಾ ವಿಧಾನಸಭೆ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಹಾಗೂ ಬರಗೂರು ತಾಲ್ಲೂಕು ಪಂಚಾಯಿತ ಹಾಗೂ ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ. ಗ್ರಾಮದಲ್ಲಿ ಒಂದು ಸ್ತ್ರೀ ಶಕ್ತಿ, ಒಂದು ಅಂಗನವಾಡಿ ಕೇಂದ್ರವಿದೆ. ಸಾಕ್ಷರತೆಯ ಪ್ರಮಾಣ ೬೪.೮ ರಷ್ಟಿದೆ. ಮಹಿಳೆಯರು ೫೧.೧, ಪುರುಷರು ೭೭.೧ ರಷ್ಟು ಇದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಗ್ರಾಮದಲ್ಲಿ ಪೂರಪ್ಪ, ಕಲ್ಲವೀರಪ್ಪ, ಪಶು ವೈದ್ಯ ನೀಡುವ ನಾಟಿ ವೈದ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇತರೆ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷೆ, ವಿಧವಾ ವೇತನ, ಅಂಗ ವಿಕಲ ವೇತನದ ಫಲಾನುಭವಿಗಳಿದ್ದು, ೧ ಅಂಗಡಿ ಇದೆ. ಗ್ರಾಮದ ಯಡ್ರಪ್ಪ ದೇವರು, ಆದಿ ದೈವವಾಗಿದ್ದು, ವಾರ್ಷಿಕ ಸೇವೆಗಳಾದ ಆರತಿ, ಬಾನ, ಮಡೆ, ಬ್ಯಾಚೆ ಇರುತ್ತದೆ. ಯುಗಾದಿ, ಸಂಕ್ರಾಂತಿ, ದೀಪಾವಳಿ, ಗೌರಮ್ಮ, ಕುಂತಮ್ಮನ ಹಬ್ಬ ವಿಶೇಷವಾಗಿರುತ್ತದೆ. ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ.

## ಬೆಜ್ಜಿಹಳ್ಳಿ

ಬೆಜ್ಜಿಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೭ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ೬೪೮.೯ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಬೆಜ್ಜಿ–ಬೆಜ್ಜ–ಹಿರಿಯರು–ಅಜ್ಜಿ ಆ ಅರ್ಥದಲ್ಲಿ ಬೆಜ್ಜಿಹಳ್ಳಿ ಒಂಬ ಹೆಸರು ಬಂದಿದೆ ಎಂದು ಗ್ರಾಮದ ಶಿಕ್ಷಕ ಜಯಣ್ಣ ಅಭಿಪ್ರಾಯ ಪಡುತ್ತಾರೆ. ಈ ಗ್ರಾಮದ ಮೂಲ ದೈವ ಬೊಪ್ಪರಾಯ. ಬೊಪ್ಪರಾಯ ಕುಂಚಿಟಿಗರ ಜಲದೇವನವರ ಕುಲದ ಆದಿ ದೇವರು. ಕುಂಚಿಟಿಗರು ಮೂಲತಃ ಉತ್ತರ ದೇಶದವರಾಗಿದ್ದು

ಅವರು ದೆಹಲಿ ಕಡೆಯಿಂದ ದಕ್ಷಿಣ ಭಾರತಕ್ಕೆ ಬರುವಾಗ ಮಾರ್ಗ ಮಧ್ಯದಲ್ಲಿ ನದಿಯೊಂದು ಅಡ್ಡಲಾದಾಗ, ಕುರಿ ಮೇಯಿಸುತ್ತಿದ್ದ ಕುರುಬ ಮೂಲದ ವ್ಯಕ್ತಿಯು ಕುಂಚಿಟಿಗರವನು ಹೊಳೆ ದಾಟಿಸಲು ತನ್ನ ಶಿರವನ್ನೇ ಕತ್ತರಿಸಿ ಶಿವಧ್ಯಾನ ಮಾಡಿದಾಗ ನದಿ ಎಡವು ಭಾಗವಾಗಿ ದಾರಿ ಮಾಡಿಕೊಟ್ಟಿತೆಂದೂ, ಇದಕ್ಕೆ ಉಪಕೃತರಾದ ಕುಂಚಿಟಿಗರು ಮುಂಡ ರೂಪವಾದ ಬೊಪ್ಪರಾಯನಿಗೆ ತಮ್ಮ ಹೆಣ್ಣು ಮಗಳನ್ನು ಕೊಟ್ಟು ಲಗ್ನ ಮಾಡಿದ ವಿವರ ಕುಂಚಿಟಿಗರ ಪುರಾಣದಲ್ಲಿ ಪ್ರಕಟವಾಗುತ್ತದೆ.

ಸಿರಾ ಪಾವಗಡ, ಕೊರಟಗೆರೆ, ಆಂಧ್ರದ ಮಡಕಸಿರಾ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಕುಂಚಿಟಿಗರು ಜಲಧಿ ಬೊಪ್ಪರಾಯನನ್ನು ತಮ್ಮಮನೆ ದೇವರು-ಕುಲ ದೇವರನ್ನಾಗಿ ಆರಾಧಿಸುವ ಸಂಪ್ರದಾಯವಿದೆ. ಇದಕ್ಕೆ ಪ್ರೇರಕವಾಗಿ ಸಿರಾ ತಾಲ್ಲೂಕಿನ ಬೆಜ್ಜಿ ಹಳ್ಳಿಯಲ್ಲಿ ಜಲಧಿ ಬೊಪ್ಪರಾಯನ ವೀರಗಲ್ಲು ಇದ್ದು, ಇದೊಂದು ಶಿವಲಿಂಗದ ರೂಪದಲ್ಲಿ ಆರಾಧಿಸುತ್ತಾರೆ. ಬೆಜ್ಜಿಹಳ್ಳಿಯ ಜಲಧಿ ಬೊಪ್ಪರಾಯ ಸಿರಾ ತಾಲ್ಲೂಕಿನ ಪ್ರಸಿದ್ಧ ತೀರ್ಥಸ್ಥಳದಲ್ಲಿ ಒಂದಾಗಿ, ಕುಂಚಿಟಿಗರು – ಕುರುಬರ ಸಾಂಸ್ಕೃತಿಕ, ಸಮನ್ವಯತೆಯ ಕೇಂದ್ರವಾಗಿದೆ. ಬೀರದೇವರ ಆರಾಧನೆಯ ಸ್ವರೂಪದಲ್ಲಿ, ಭಾನುವಾರದಂತೆ ಬೊಪ್ಪರಾಯಪ್ಪನ ವಿಶೇಷ ಪೂಜೆ ನೇಮ-ನಿಷ್ಠೆಯಿಂದ ನಡೆಯುತ್ತದೆ.

ಕೆಂಪು ಮಿಶ್ರಿತ ಮರಳು ಮಣ್ಣಿನಿಂದ ಕೂಡಿರುವ ಬೆಜ್ಜಿಹಳ್ಳಿ ಸಮತಟ್ಟಾದ ಬಯಲು ಪ್ರದೇಶ. ಈ ಪರಿಸರದಲ್ಲಿ ನರಿ, ಮೊಲ, ಮುಂಗುಸಿ, ಜಿಂಕೆ ಕಂಡು ಬರುತ್ತವೆ. ಕಾಡು ಪಕ್ಷಿಗಳೂ ಇಲ್ಲಿದ್ದು, ಕೋಗಿಲೆ, ಗಿಳಿ, ಗೊರವಂಕ, ಪಾರಿವಾಳ ಮೊದಲಾದವು ಕಂಡು ಬರುತ್ತವೆ. ಗ್ರಾಮದಲ್ಲಿ ಕುರಿ, ಮೇಕೆ, ಎತ್ತು, ಎಮ್ಮೆ ಸಾಕುಪ್ರಾಣಿಗಳಾಗಿವೆ. ಕೋಳಿಯನ್ನು ಸಾಕಿದ್ದಾರೆ. ಗ್ರಾಮಕ್ಕೆ ಸಮೀಪದಲ್ಲಿ ೬೮ ಹೆಕ್ಟೇರ್ ರಕ್ಷಿತಾ ಅರಣ್ಯವಿದ್ದು, ಹುಲ್ಲುಗಾವಲು ಪ್ರದೇಶವಾಗಿದೆ. ಗುರುಟೀಕ್ ಇನ್‌ವೆಸ್ಟ್ ಮೆಂಟ್ ಕಂಪನಿಯ-ಮೈಸೂರು ಇವರು ಇಲ್ಲಿನ ೧೫೦ ಎಕರೆ ವಿಸ್ತೀರ್ಣದಲ್ಲಿ ತೇಗದ ಮರಗಳನ್ನು ಬೆಳೆಸಿದ್ದಾರೆ. ವಾಡಿಕೆಯ ಮಳೆ ಸರಾಸರಿ ೪೬೮ ಮಿ.ಮೀ. ಆಗಿದ್ದು, ೩೯-೪೦ಂ ಸೆಂ ಉಷ್ಣಾಂಶ ದಿಂದ ಕೂಡಿದೆ. ಚಳಿ ಪ್ರಮಾಣವೂ ೧೨ಂ ಸೆಂ. ಆಗಿದೆ. ಕುಡಿಯುವ ನೀರಿಗೆ ೩ ಚಿಕ್ಕ ಟ್ಯಾಂಕ್‌ಗಳಲ್ಲಿ ಕೊಳಾಯಿಗಳ ಮೂಲಕ ನೀರನ್ನು ಪೂರೈಸಲಾಗುವುದು. ೨ ಕೈ ಪಂಪುಗಳಿವೆ.

ಆದಿ ಕರ್ನಾಟಕ ಜನಾಂಗ ಈ ಗ್ರಾಮದ ದೊಡ್ಡ ಸಮುದಾಯ. ಕುಂಚಿಟಿಗರು, ಕುರುಬರು, ಉಪ್ಪಾರರು, ಬೋವಿ, ಮಡಿವಾಳ, ಮುಸ್ಲಿಂ ಜನಾಂಗದವರು ಸಣ್ಣ ಸಮುದಾಯವಾಗಿದೆ. ಒಟ್ಟು ೨೧೭ ಮನೆಗಳಿರುವ ಇಲ್ಲಿನ ಮನೆಗಳಲ್ಲಿ ಕಲ್ಲಿನ, ಹೆಂಚಿನ, ಕಾಂಕ್ರೀಟ್ ಮಣ್ಣಿನ ಮನೆಗಳಿವೆ. ೧೧೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೧೦೩೭ ಜನಸಂಖ್ಯೆ ಇದೆ. ೬೩ ಮನೆಗಳಲ್ಲಿ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ ಇಲ್ಲಿನ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ.ವಾಗಿದ್ದು, ಬಾಡೂಟ, ಹೋಳಿಗೆ ಊಟದ ವ್ಯವಸ್ಥೆ ಸಾಂದರ್ಭಿಕವಾಗಿ ನಡೆಯುತ್ತದೆ. ಸಾಂಪ್ರದಾಯಿಕ ವಾಹನ ಎತ್ತಿನ ಬಂಡಿ, ಟ್ರ್ಯಕ್ಟರ್, ಮಿನಿ ಆಟೋ ದ್ವಿಚಕ್ರ ವಾಹನಗಳೂ ಇವೆ. ಶೇಂಗಾ ಗ್ರಾಮದ ಮುಖ್ಯ ಬೆಳೆ. ರಾಗಿ, ಅಲಸಂದಿ, ತೊಗರಿ ಆಹಾರ ಬೆಳೆಗಳು. ನೀರಾವರಿ ಸೌಲಭ್ಯ ಇರುವವರು ತೆಂಗು, ಅಡಿಕೆ, ಭತ್ತ ಬೆಳೆಯುತ್ತಾರೆ. ಒಂದು ಆಧುನಿಕ ಹಾಲಿನ ಡೈರಿ ಇದ್ದು ದಿನವಹಿ ೬೦೦ ಲೀಟರ್ ಸರಾಸರಿ ಹಾಲು ಸಂಗ್ರಹವಾಗುತ್ತದೆ. ಶೇಂಗಾ -ಹುಣಸೇಹಣ್ಣು ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆಗಳು. ಕಂಬಳಿ ತಯಾರಿಕೆ, ಊಟದ ಎಲೆ ಸುತ್ತುವುದು, ಬೀಡಿ ಕಟ್ಟುವುದು ಮಹಿಳೆಯರ ಗೃಹ ಕೈಗಾರಿಕೆಯಾಗಿದೆ. ಕಂಬಳಿ ನೇಯ್ಗೆ ಹಾಗೂ ವ್ಯಾಪಾರವೂ ನಡೆಯುತ್ತಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ತಡಕಲೂರು ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಈ ಗ್ರಾಮ, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗ ಒಳಬರುತ್ತದೆ. ೪ ಸ್ತ್ರೀ ಶಕ್ತಿ ಕೇಂದ್ರಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಸೇರಿದಂತೆ, ಸರ್ಕಾರಿ ಹಿರಿಯ ಪಾಠಶಾಲೆ, ಅಂಗನವಾಡಿ ಕೇಂದ್ರಗಳಿದ್ದು, ಶಾಲೆಯಲ್ಲಿ ೧೧೯ ಮಕ್ಕಳಿದ್ದು ೩ ಜನ ಶಿಕ್ಷಕರಿದ್ದಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೧.೭ ರಷ್ಟಿದ್ದು. ಇದರಲ್ಲಿ ೪೯.೭ ಮಹಿಳೆಯರು, ಶೇ. ೭೨ ರಷ್ಟು ಪುರುಷರದ್ದಾಗಿದೆ. ೧೬ ವೃದ್ಧಾಪ್ಯ ವೇತನ, ೩ ಅಂಗವಿಕಲ, ೪ ವಿಧವಾ ವೇತನ ೬ ಎಸ್‌ಎಸ್‌ವೈ ಫಲಾನುಭವಿಗಳಿದ್ದು, ೬ ಅಂಗಡಿಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಗ್ರಾಮದಲ್ಲಿ ೩ ವೀರಗಲ್ಲುಗಳಿದ್ದು, ಇವು ವಿಜಯನಗರದ ಅರಸರ ಕಾಲಕ್ಕೆ ಸಂಬಂಧಿಸಿದವುಗಳೆಂದು ತಿಳಿದು ಬರುತ್ತದೆ. ವೀರ ಬೊಪ್ಪರಾಯಪ್ಪ ದೇವಸ್ಥಾನದ ಪ್ರಾಂಗಣದಲ್ಲಿ ವೀರಗಲ್ಲಿನ ಚಿತ್ರಗಳಿದ್ದು, ಆಕರ್ಷಕವಾಗಿವೆ. ಪೂಜೆಗೂ ಒಳಗಾಗಿವೆ. ೨ ಕರುಗಲ್ಲುಗಳೂ, ಅರಳಿ-ಬೇವಿನ ಮರದ ಕಟ್ಟೆಗಳಿದ್ದು ಪೂಜೆಗೆ ಒಳಗಾಗಿವೆ.

ಆಂಜನೇಯ, ಬೊಪ್ಪರಾಯ, ನರಸಿಂಹಸ್ವಾಮಿ, ಮಾರಮ್ಮ, ಪೆದ್ದಮ್ಮ ದೇವಾಲಯಗಳು ಗ್ರಾಮದಲ್ಲಿದ್ದು, ಮಾರಮ್ಮ ಗ್ರಾಮದೇವತೆಯಾಗಿದ್ದು, ಊರ ಹಬ್ಬವಾಗಿ ಆಚರಣೆ ಮಾಡುತ್ತಾರೆ. ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಶಿವರಾತ್ರಿ, ಯುಗಾದಿ, ದೀಪಾವಳಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ತುಪ್ಪಣ್ಣ ಎಂಬ ಮಾರಿದೇವರನ್ನು ಕುರಿತು ಚೌಡಿಕೆ ಪದ ಹಾಡುವುದು ವಿಶೇಷವಾಗಿದೆ. ಹಾಗೆಯೇ ರಂಗನಾಥಪ್ಪ, ಕದರಪ್ಪ, ನರಸಿಂಹಯ್ಯ ತಮಟೆ ವಾದಕರಾಗಿ ಸ್ಥಳೀಯವಾಗಿ ಹೆಸರಾಗಿದ್ದಾರೆ.

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದ್ದು ಶಾಲೆ ಉತ್ತಮ ಕೌಂಪೌಂಡು ಹೊಂದಿದೆ. ಶೌಚಾಲಯದ ವ್ಯವಸ್ಥೆಯೂ ಚೆನ್ನಾಗಿದೆ. ಬೆಜ್ಜಿಹಳ್ಳಿ–ಹಿರಿಯೂರು–ಅಮರಾಪುರಕ್ಕೆ ಉತ್ತರ–ಪಶ್ಚಿಮಕ್ಕೆ ಮುಖ್ಯ ರಸ್ತೆ ಇದ್ದು, ಸಿರಾ –ಅಮರಾಪುರ ಮುಖ್ಯ ರಸ್ತೆಯಲ್ಲಿ ತಡಕಲೂರು ಗೇಟಿನಿಂದಲೂ ಬೆಜ್ಜಿ ಹಳ್ಳಿಗೆ ಹೋಗಬಹುದು.

ತುಪ್ಪಣ್ಣ, ನಟರಾಜು, ದೊಡ್ಡೇಗೌಡ, ಜಗದೀಶ್ ಸರ್ಕಾರಿ ಎಂಜಿನಿಯರ್‌ಗಳು ಇದ್ದಾರೆ. ಡಾ. ಶಾಂತಕುಮಾರ್ ವೈದ್ಯರು ಈ ಗ್ರಾಮದ ವಿಶೇಷ ವ್ಯಕ್ತಿಗಳು. ೬ ಜನ ಶಿಕ್ಷಕರು ಇದ್ದಾರೆ. ಜಯಣ್ಣ ಮುಖ್ಯ ಶಿಕ್ಷಕರಾಗಿ ನಿವೃತ್ತರಾಗಿದ್ದಾರೆ. ಒಟ್ಟು ೧೧ ಜನ ಸರ್ಕಾರಿ ನೌಕರರು ಈ ಗ್ರಾಮದಲ್ಲಿದ್ದಾರೆ. ಜನಪದ ಸಂಗೀತ ಹಾಡುಗಾರರೂ ಆಗಿದ್ದಾರೆ.

ಬೆಜ್ಜಿಹಳ್ಳಿ ಜಲದಿ ಬೈಪುರಾಯನ ವಿಶೇಷ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ, ಗೌರಿಗಣೇಶ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗ್ರಾಮದ ಯುವಕ ಜಿ.ಎಸ್. ಗಂಗಾಧರಪ್ಪ ಉತ್ತಮ ಕವಿತೆಗಳನ್ನು ಪ್ರಕಟಿಸಿದ್ದಾರೆ.

## ಬೆಜ್ಜಿಹಳ್ಳಿ ಗೊಲ್ಲರಹಟ್ಟಿ

ಬೆಜ್ಜಿಹಳ್ಳಿ ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೫ ಕಿ.ಮೀ. ದೂರದಲ್ಲಿದ್ದು ಬೆಜ್ಜಿಹಳ್ಳಿ ಮೂಲ ಗ್ರಾಮಕ್ಕೆ ಎಡಭಾಗದಲ್ಲಿ ಪ್ರತ್ಯೇಕ ವಾಗಿದೆ. ಇದೊಂದು ಪೂರ್ಣವಾಗಿ ಕಾಡುಗೊಲ್ಲರ ಹಟ್ಟಿಯಾಗಿದ್ದು, ೨೨ ಕುಟುಂಬಗಳಿವೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ವಾಡಿಕೆ ಮಳೆ ಸರಾಸರಿ ೪೬೩ ಮಿ.ಮೀ. ಚಳಿ ೧೨೦ ಸೆಂ. ಇದ್ದು, ಬಿಸಿಲು ೩೬೦ ಸೆಂ. ಇರುತ್ತದೆ.

ಈ ಭಾಗದಲ್ಲಿ ನರಿ, ತೋಳ, ಮೊಲ, ಮುಂಗುಸಿ ಕಂಡು ಬಂದರೆ, ಕಾಡು ಪಕ್ಷಿ ನವಿಲು, ಕೊಕ್ಕರೆ, ಗೂಬೆ, ಕಾಗೆ ಕಂಡು ಬರುತ್ತವೆ. ಬೆಜ್ರಿಹಳ್ಳಿ ಉತ್ತರಕ್ಕಿದ್ದು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಒಂದು ಕೆರೆಯಿದ್ದು ಮಳೆ ಆಶ್ರಿತವಾಗಿದೆ. ತುಂಬುವುದು ವಿರಳವಾಗಿದೆ. ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿಯಿಂದ ಚಿಕ್ಕ ಟ್ಯಾಂಕ್ ಮೂಲಕ ಸರಬರಾಜು ಮಾಡಲಾಗುತ್ತಿದೆ. ಕಾಂಕ್ರೀಟ್, ಹಾಗೂ ಶೀಟು, ಹೆಂಚಿನ ೨೨ ಮನೆಗಳಿದ್ದು, ೧೧ ಮನೆಗಳಲ್ಲಿ ಶೌಚಾಲಯ, ಮಾಡಿಸಿಕೊಂಡಿದ್ದರೂ ಬಳಸುವುದು ೨ ಮನೆಯಲ್ಲಿ ಮಾತ್ರ. ೧೩೨ ಜನಸಂಖ್ಯೆ ಇದೆ.

ರಾಗಿ ಮುದ್ದೆ ಗ್ರಾಮದ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ, ಬಾಡೂಟ ಹಾಗೂ ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಭೋಜನ ವಾಗಿದೆ. ೪ ಎತ್ತಿನ ಗಾಡಿಗಳಿವೆ. ಟ್ರ್ಯಾಕ್ಟರ್, ದ್ವಿಚಕ್ರವಾಹನಗಳಿದ್ದು, ಶೇಂಗಾ ವಿಶೇಷ ಬೆಳೆ. ರಾಗಿ, ಅಲಸಂದಿ, ತೊಗರಿ, ಹುರುಳಿ ಆಹಾರ ಬೆಳೆಗಳು. ಹುಣಸೆಹಣ್ಣು ವ್ಯಾಪಾರಿ ಬೆಳೆಯಾಗಿವೆ. ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಸಿರಾ ವಿಧಾನಸಭೆ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ತಡಕಲೂರು ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗೆ ಸೇರುವ ಈ ಗ್ರಾಮ ಅಂಗನವಾಡಿ ಕೇಂದ್ರವಿದ್ದು, ೧೫ ಮಕ್ಕಳಿದ್ದಾರೆ. ೧ ಅಂಗನವಾಡಿ ಶಿಕ್ಷಕಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸೌಲಭ್ಯಗಳಾದ ವೃದ್ಧಾಪ್ಯ ವೇತನದ ೪ ಜನ ಫಲಾನುಭವಿಗಳಿದ್ದಾರೆ. ಮಾರಮ್ಮ, ಗ್ರಾಮದ ಮುಖ್ಯ ದೈವ. ಆದರೂ ಚಿತ್ರದೇವರು, ಮೂಡಲಗಿರಿಯಪ್ಪ ದೇವರ ಪೌಳಿಗಳು ಊರ ಹೊರಗೆ ಇವೆ. ಮಾರಮ್ಮನ ಹಬ್ಬ, ಊರಹಬ್ಬವಾಗಿ ವಿಶೇಷವಾಗಿ ನಡೆದು, ಬ್ಯಾಟೆ, ಆರತಿ, ಬಾನ ಸಂಪ್ರದಾಯಗಳಿವೆ. ನರಸಿಂಹ ಸ್ವಾಮಿಗೆ ಎದುರೆತ್ತಿ ಆರತಿ ಮಾಡುತ್ತಾರೆ. ದೀಪಾವಳಿ, ಈ ಗ್ರಾಮದ ವಿಶೇಷ ಹಬ್ಬ, ಹಿರಿಯರ ಹಬ್ಬ, ಹಾಲು ತುಪ್ಪದ ಹಬ್ಬ ಎಂದೆಲ್ಲಾ ಪೂಜಿಸುತ್ತಾರೆ. ಯುಗಾದಿ, ಮಹಾನವಮಿ, ಗೌರಿಗಣೇಶ ಹಬ್ಬವೂ ಸಾಂಪ್ರದಾಯಕವಾಗಿದೆ. ಬೆಜ್ರಿಹಳ್ಳಿ, ಲಕ್ಕನಹಳ್ಳಿ ಮಾರ್ಗವಾಗಿ ಜಿಲ್ಲಾ ರಸ್ತೆ ಇದೆ.

## ಬೊಪ್ಪರಾಯಪ್ಪನ ಪಾಳ್ಯ

ಇದು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ, ತಡಕಲೂರು ಗ್ರಾಮದಿಂದ ಬಲಕ್ಕೆ –ಸಿರಾದಿಂದ ೩೪ ಕಿ.ಮೀ. ದೂರದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು, ಬೆಜ್ರಿಹಳ್ಳಿ ಗ್ರಾಮದ ಮಜರೆ ಗ್ರಾಮವಾಗಿದೆ. ಗ್ರಾಮದಲ್ಲಿ ಬೊಪ್ಪರಾಯಪ್ಪ

ದೇವಸ್ಥಾನವಿದ್ದು, ಆ ಕಾರಣದಿಂದಲೇ ಬೊಪ್ಪರಾಯಪ್ಪನ ಪಾಳ್ಯ ಎಂದು ಕರೆಯುತ್ತಾರೆ. ಇದೊಂದು ಸಂಮ್ಮಿಶ್ರ ಹಳ್ಳಿಯಾಗಿದ್ದು, ಆದಿ ಕರ್ನಾಟಕದರು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಉಪ್ಪಾರ, ಬೋವಿ ಜನಾಂಗದವರು ಸಣ್ಣ ಸಮುದಾಯವಾಗಿದೆ. ಒಂದೇ ದೈವ ಎಂಬ ಭಾವನೆ, ಆರಾಧನೆ ಈ ಹಳ್ಳಿಯ ವಿಶೇಷವಾಗಿದೆ. ಪೊದೆ, ಮರ ಹೆಚ್ಚಾಗಿದ್ದು, ಆ ಪರಿಸರದಲ್ಲಿ ಮೊಲ, ನರಿ, ಹಂದಿ ಕಂಡು ಬರುತ್ತವೆ. ಕಾಗೆ, ಗೂಬೆ, ಮರಕುಟಿಕ, ಕೋಗಿಲೆ ಇದ್ದು, ಗ್ರಾಮದಲ್ಲಿ ನಾಟಿ ಹಸು, ಹಳ್ಳಿಕಾರ ತಳಿಯ ಹೋರಿ, ಎಮ್ಮೆ, ಕುರಿ, ಮೇಕೆ, ಕೋಳಿ ಸಾಕಿದ್ದಾರೆ. ಕೆಂಪು ಮಿಶ್ರಿತ ಮರಳು ಮಣ್ಣು ಹೊಂದಿರುವ ಇಲ್ಲಿ ಪ್ರಮುಖವಾಗಿ ಮಳೆ ಆಧಾರಿತ ವಾಗಿದೆ.

ಸರಾಸರಿ ೪೬೩ ಮಿ.ಮೀ. ಮಳೆ ಬೀಳುವ ಇಲ್ಲಿ ಚಳಿ ೧೨ಂಸೆಂ. ಇದ್ದು, ಬಿಸಿಲು ೩೯ಂ ಸೆಂ. ಇರುತ್ತದೆ. ಗ್ರಾಮದ ಎಡಬದಿಗೆ ಪೂರ್ವ ಉತ್ತರ ಮುಖವಾಗಿ ಒಂದು ದೊಡ್ಡ ಹಳ್ಳವಿದೆ. ಅಂತೆಯೇ ಬಲಭಾಗದಲ್ಲಿ ಒಂದು ಕೆರೆ ಇದ್ದು, ಮಳೆಗಾಲದಲ್ಲಿ ಮಾತ್ರ ನೀರು ಸಂಗ್ರಹವಾಗುತ್ತದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಬೋರ್‌ವೆಲ್ ಮೂಲಕ ನೀರು ಸರಬರಾಜು ಮಾಡಲಾಗುತ್ತದೆ. ಚಿಕ್ಕ ಚಿಕ್ಕ ಎರಡು ಟ್ಯಾಂಕ್‌ಗಳು ಇವೆ. ೩೬ ಮನೆಗಳಿರುವ ಇಲ್ಲಿ ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿದ್ದು, ಆಶ್ರಯ, ಇಂದಿರಾ ಆವಾಸ್ ಫಲಾನುಭವಿಗಳಿದ್ದಾರೆ. ೦೬ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ೧೮೭ ಜನಸಂಖ್ಯೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ವಿಶೇಷ ಸಂದರ್ಭದಲ್ಲಿ ಮಾಂಸದ ಊಟ, ಹೋಳಿಗೆ ಇರುತ್ತದೆ. ಸಂಪ್ರದಾಯಿಕ ವಾಹನಗಳಾಗಿ ಎತ್ತಿನ ಬಂಡಿ, ಆಧುನಿಕವಾಗಿ ಟ್ರ್ಯಕ್ಟರ್, ದ್ವಿಚಕ್ರ ವಾಹನವಿರುತ್ತದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ತೊಗರಿ, ಹುರುಳು ಬೆಳೆಯುತ್ತಾರೆ. ವಾಣಿಜ್ಯ ಬೆಳೆ ಶೇಂಗಾ, ಹತ್ತಿ, ಹುಣಸೇಹಣ್ಣು, ತೆಂಗು ಇರುತ್ತದೆ. ಇಬ್ಬರು ಸರ್ಕಾರಿ ನೌಕರರು ಈ ಗ್ರಾಮದಲ್ಲಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರಕ್ಕೂ, ಹುಲಿಕುಂಟೆ ಜಿಲ್ಲಾ ಪಂಚಾಯಿತಿಗೂ, ತಡಕಲೂರು ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗೆ ಸೇರಿರುವ ಈ ಗ್ರಾಮ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ೨ ಸ್ತ್ರೀ ಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ತಂಡಗಳಿವೆ. ಅಂಗನವಾಡಿ ಕೇಂದ್ರ ಮಾತ್ರವಿದ್ದು, ೧ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಮಕ್ಕಳಿಗೆ ಕ್ಷೀರಭಾಗ್ಯ ಉಪಹಾರದ ಬಳಕೆ ಇದ್ದು ೭೩ ಮಕ್ಕಳಿದ್ದು, ಈ ಗ್ರಾಮದ ಸಾಕ್ಷರತೆಯ ಪ್ರಮಾಣ ಶೇ. ೬೧% ರಷ್ಟಿದ್ದು, ಇದರಲ್ಲಿ ಮಹಿಳೆಯರು ಶೇ. ೪೯.೭, ಪುರುಷರು ಶೇ. ೭೨% ರಷ್ಟಿದ್ದಾರೆ. ಸಂಧ್ಯಾ ಸುರಕ್ಷೆ, ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನದ ಫಲಾನುಭವಿಗಳು ಇದ್ದುತ, ೧ ಅಂಗಡಿ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ಬೊಪ್ಪರಾಯಪ್ಪನ ದೇವಾಲಯವಿದ್ದು, ಆದಿ ಕರ್ನಾಟಕದವರು ಪೂಜಿಸುತ್ತಾರೆ. ಎಲ್ಲಾ ವರ್ಗದವರು ಒಕ್ಕಲಾಗಿದ್ದು, ಸಮನ್ವಯತೆ ಇದೆ. ಮಾರಮ್ಮನ ಊರ ಹಬ್ಬವಿದ್ದು, ಪ್ರಾಣಿ ಬಲಿ, ಆರತಿ, ಬಾನ, ಉತ್ಸವ ಇರುತ್ತದೆ. ಯುಗಾದಿ, ಶಿವರಾತ್ರಿ, ದೀವಣಿಗೆ, ದಸರಾ, ಗೌರಮ್ಮ, ಕುಂತಮ್ಮನ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ತಡಕಲೂರು, ಲಕ್ಕನಹಳ್ಳಿ ಮಾರ್ಗವಾಗಿ ಕಚ್ಚಾ ರಸ್ತೆ ಇದೆ.

## ಬಸರಿಹಳ್ಳಿ

ಬಸರಿಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೨೭ ಕಿಮೀ ದೂರದಲ್ಲಿ ತಾಲ್ಲೂಕಿನಿಂದ ದಕ್ಷಿಣ ದಿಕ್ಕಿಗಿದೆ. ಗ್ರಾಮದ ಪೂರ್ವಕ್ಕೆ ಸೋರೇಕುಂಟೆ, ದಕ್ಷಿಣಕ್ಕೆ ಚೆನ್ನಿಹಟ್ಟಿ, ಉತ್ತರಕ್ಕೆ ಹುಂಜನಾಳ ಗ್ರಾಮಗಳಿದ್ದು ಗ್ರಾಮದ ಹಿಂಭಾಗದಲ್ಲಿ ಬಸರಿಹಳ್ಳ ದಕ್ಷಿಣದಿಂದ ಉತ್ತರಕ್ಕೆ ಹರಿದು ಕಳ್ಳಂಬೆಳ್ಳ ಕೆರೆಯಲ್ಲಿ ಹಳ್ಳದ ನೀರು ಸಂಗ್ರಹವಾಗುತ್ತದೆ. ಗೂಬೆಹಳ್ಳದಿಂದ ಹರಿದು ಬರುವ ಗುಬ್ಬಿ ತಾಲ್ಲೂಕಿನ ವ್ಯಾಪ್ತಿಯ ನಿಸರ್ಗಗತ್ತ ನೀರು ಬಸರಿಹಳ್ಳ ತಲುಪಿ ಹೊಂಗೆಹಳ್ಳ ಸೇರಿ ಹುಂಜನಹಳ್ಳದ ಮೂಲಕ ಮುಂದೆ ಹರಿಯುತ್ತದೆ. ಗ್ರಾಮದ ಹಿರಿಯರಾದ ಸೋಮಯ್ಯನವರ ಪ್ರಕಾರ ಗ್ರಾಮ 'ವಿ' ಆಕೃತಿಯಲ್ಲಿ ಮೂರು ಹಳ್ಳಿಗಳ ಇರುಕಿನಲ್ಲಿ ಇದ್ದು, ತುಂಬಿದ ಬಸುರಿ ಹೆಂಗಸಿನ ಆಕೃತಿಯಲ್ಲಿ ಕಾಣಿಸುವುದರಿಂದ ನೈಸರ್ಗಿಕ ಸಹಜವಾಗಿ ಬಸುರಿ ಹೆಸರಿನಲ್ಲೇ ಕರೆದು ಬಸರಿಹಳ್ಳಿ ಆಗಿದೆ ಎನ್ನುತ್ತಾರೆ.

ಪೂರ್ವಕ್ಕೆ ಅನುಪನಕುಂಟೆ ಅರಣ್ಯ ಪ್ರದೇಶ, ಅದಕ್ಕೆ ಹೊಂದಿಕೊಂಡು ಗ್ರಾಮದ ಅಂಚಿಗೆ ಸಾಗುವ ಬಸರಿಹಳ್ಳ, ದೊಡ್ಡದಾಸಿಕಟ್ಟೆ ಇವುಗಳ ಸಮೀಪದಲ್ಲಿ ಬಸರಿಹಳ್ಳ ನಿರ್ಮಾಣವಾಗಿದೆ. ಮರಳುಮಿಶ್ರಿತ ಕಲ್ಲು ಗೊರಚು ಭೂಮಿಯನ್ನು ಹೊಂದಿರುವ ಈ ಗ್ರಾಮ ಶೇಂಗಾ ಬೆಳೆಗೆ ಉತ್ಕೃಷ್ಟವಾದುದು.

ಗ್ರಾಮದ ಪರಿಸರದಲ್ಲಿ ಮೊಲ, ಜಿಂಕೆ, ತೋಳ, ಸೀಳುನಾಯಿ, ನರಿ ವ್ಯಾಪಕವಾಗಿ ಕಂಡುಬರುವ ಕಾಡುಪ್ರಾಣಿಗಳು. ನವಿಲು, ಕಾಗೆ, ಗೂಬೆ, ಗಿಳಿ, ಕೌಜುಗ, ಬೆಳವ, ಗೊರವಂಕ ಪ್ರಮುಖ ಕಾಡುಪಕ್ಷಿಗಳು. ಕಲ್ಲುನೆಲ, ಮಳೆ

ಕಡಿಮೆ. ಆದರೂ ಭೂಮಿ ಶೀತದಿಂದ ಕೂಡಿದ್ದು ಕಡಿಮೆ ಮಳೆಯಲ್ಲಿಯೂ ಹೆಚ್ಚು ಶೇಂಗಾ ಬೆಳೆಯುತ್ತಾರೆ.

ಗ್ರಾಮದ ವಾಡಿಕೆ ಮಳೆ ೪೬೫ ಮಿಮೀ ಆಗಿದ್ದು ಉಷ್ಣಾಂಶ ೩೬ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಬಸರಿಹಳ್ಳ, ಬಸರಿಹಳ್ಳ ಕೆರೆಯಿದ್ದರೂ ಕುಡಿಯುವ ನೀರಿಗೆ ತೊಂದರೆ ಇದೆ. ಹಾಗಾಗಿ ೨ ಕೊಳವೆ ಬಾವಿಗಳ ಮೂಲಕ ಚಿಕ್ಕ ಟ್ಯಾಂಕಿಗೆ ಹರಿಸಿ ಕುಡಿಯಲು ಗ್ರಾಮ ಪಂಚಾಯ್ತಿಯ ಮೂಲಕ ನೀರು ಒದಗಿಸಲಾಗುತ್ತದೆ. ಈ ಪರಿಸರದಲ್ಲಿ ೨೧ ಕೊಳವೆ ಬಾವಿಗಳಿವೆ. ವೀರಶೈವರು ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗರು, ಬೇಡರು, ದಾಸರು, ಈಡಿಗರು, ಸಣ್ಣ ಸಮುದಾಯವಾಗಿದೆ. ಒಟ್ಟು ೬೩ ಮನೆಗಳಿದ್ದು ಇವುಗಳಲ್ಲಿ ಕಾಂಕ್ರೀಟ್, ಶೀಟಿನ, ಹೆಂಚಿನ ಮನೆಗಳಿವೆ. ೧೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೨೧೨ ಜನಸಂಖ್ಯೆ ಇದೆ. ೧೬ ಮನೆಗಳಲ್ಲಿ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ೨ ಎತ್ತಿನ ಬಂಡಿ, ಸಾಂಪ್ರದಾಯಿಕ ವಾಹನವಾದ ಟ್ರ್ಯಕ್ಟರ್, ಆಟೋ, ಮಿನಿ ಟೆಂಪೋ ಬಳಕೆಯಲ್ಲಿವೆ.

ಶೇಂಗಾ ಗ್ರಾಮದ ಪ್ರಮುಖ ಬೆಳೆಯಾಗಿದ್ದು ತೊಗರಿ, ರಾಗಿ, ಹುರುಳಿ ಪ್ರಮುಖ ಆಹಾರ ಬೆಳೆಯಾಗಿವೆ. ತೆಂಗಿನ, ಅಡಿಕೆಯ ತೋಟಗಳಿದ್ದು ತೆಂಗು, ಅಡಿಕೆ, ಹುಣಸೆಹಣ್ಣು, ಹತ್ತಿ, ಸೂರ್ಯಕಾಂತಿಯನ್ನು ವಾಣಿಜ್ಯ ಬೆಳೆಯಾಗಿ ಬೆಳೆಯಲಾಗುತ್ತಿದೆ. ಮೂರು ಜನ ಸರ್ಕಾರಿ ನೌಕರರಿದ್ದು ಬೀಡಿ ಸುತ್ತುವುದು, ಊಟದ ಎಲೆ ಕಟ್ಟುವುದು ಗ್ರಾಮದ ಮಹಿಳೆಯರ ಗೃಹಕೈಗಾರಿಕೆಯಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯತ್, ಸೀಬಿ ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯ್ತಿಯನ್ನೊಳಗೊಂಡ ಬಸರಿಹಳ್ಳ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ. ಸಿರಾ–ಹುಂಜನಹಳ್ಳಿ, ಸೋರೇಕುಂಟೆ ಮಾರ್ಗವಾಗಿ ರಸ್ತೆ ಸಂಪರ್ಕವಿದೆ. ೨ ಸ್ತ್ರೀಶಕ್ತಿ ಸಂಘಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘದ ೧ ತಂಡ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಂಗನವಾಡಿ, ಸರ್ಕಾರಿ ಕಿರಿಯ ಮಾಧ್ಯಮಿಕ ಪಾಠಶಾಲೆಗಳಿದ್ದು ಅಂಗನವಾಡಿಯಲ್ಲಿ ೨೦ ಮಕ್ಕಳು, ಒಬ್ಬರು ಶಿಕ್ಷಕಿ, ಶಾಲೆಯಲ್ಲಿ ೩೨ ಮಕ್ಕಳು ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೮.೬ ರಷ್ಟಿದ್ದು ಪುರುಷರು ೬೦%, ಮಹಿಳೆಯರು ೩೦% ಪ್ರಮಾಣದಲ್ಲಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಆಶ್ರಯ, ವಾಜಪೇಯಿ ಆವಾಸ್, ಬಸವ ಆವಾಸ್ ಯೋಜನೆಯ ಫಲಾನುಭವಿಗಳಿದ್ದಾರೆ.

ಗ್ರಾಮದಪ್ರವೇಶ ದ್ವಾರದಲ್ಲಿ ೨ ಕರಿಗಲ್ಲುಗಳಿದ್ದು ಇಂದಿಗೂ ಪೂಜೆಗೆ ಒಳಗಿಗಿವೆ. ಎರಡು ಅರಳೀಮರಗಳಿದ್ದು ಪೂಜೆಗೆ ಒಳಗಾಗುತ್ತಿವೆ. ಕೊಲ್ಲಾಪುರದಮ್ಮ ಭೂತಪ್ಪನ ಪೌಳಿಯಿದ್ದು ಶನಿವಾರ ವಿಶೇಷ ಪೂಜೆ ನಡೆಯುತ್ತದೆ. ಸೀಬಿ ನರಸಿಂಹಸ್ವಾಮಿ ಜಾತ್ರೆಯ ದಿನದಂದು ಬಸರಿಹಳ್ಳಿಯಲ್ಲಿಯೂ ದೇವರಿಗೆ ಎದುರೆತ್ತಿ, ಆರತಿ, ಬಾನ, ಪ್ರಾಣಿಬಲಿ ನಡೆಯುತ್ತದೆ. ಯುಗಾದಿ, ಗೌರಿ, ನವರಾತ್ರಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬಸವಂತನಹಳ್ಳಿ

ಬಸವಂತನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೨.೦೫ ಕಿಮೀ ದೂರದ ಚಿತ್ರದುರ್ಗ–ಸಿರಾ ರ್‍ಹಾ್ರಯ ಹೆದ್ದಾರಿಯ ಕಳ್ಳಂಬೆಳ್ಳ ಬಲಬದಿಗೆ ಅರ್ಧ ಕಿಮೀ ದೂರದಲ್ಲಿದ್ದು ಇದೊಂದು ಕಳ್ಳಂಬೆಳ್ಳ ಗ್ರಾಮದ ಮಜರೆ ಗ್ರಾಮವಾಗಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೧೮೯.೦೯ ಹೆಕ್ಟೇರ್ ಆಗಿದೆ.

ಬಸವಂತ ಎಂಬ ವ್ಯಕ್ತಿಮೂಲದ ಹಿನ್ನೆಲೆಯಲ್ಲಿ ಈ ಹೆಸರು ಬಂದಿದೆ ಎಂದು ಅಜ್ಜೇನಹಳ್ಳಿ ಮಲ್ಲೇಶ್ ಹೇಳುತ್ತಾರೆ. ಕಳ್ಳಂಬೆಳ್ಳದ ನಾಗರೀಕತೆಗೆ ಹೊಂದಿಕೊಂಡಂತಿರುವಈ ಗ್ರಾಮ ಕಂದು ಮರಳು ಮಿಶ್ರಿತ ಭೂಮಿಯನ್ನು ಹೊಂದಿರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ಮೊಲ, ಕಾಡು ಇಲಿ, ಹೆಗ್ಗಣ, ಮುಂಗುಸಿ ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎತ್ತು, ಕುರಿ, ಮೇಕೆ, ಕೋಳಿ ಸಾಕುತ್ತಾರೆ. ಪಕ್ಷಿಗಳಾದ ಕೋಗಿಲೆ, ಕಾಗೆ, ಹದ್ದು, ಬೆಳವ, ಗಿಳಿ, ಕೌಜುಗ, ಕೊಕ್ಕರೆ ಕಂಡುಬರುತ್ತವೆ.

ವಾರ್ಷಿಕ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಮೂಲದ ಇಲ್ಲಿನ ರೈತರು ೧೫ ಕೊಳವೆ ಬಾವಿಗಳ ಮೂಲಕ ಕೃಷಿ ಕಾಯಕ ನಡೆಸುತ್ತಿದ್ದಾರೆ. ಒಂದು ಕೆರೆ ಇದ್ದರೂ ತುಂಬುವುದು ಅಪರೂಪವಾಗಿದೆ.

ಕುಡಿಯಲು ಗ್ರಾಮಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಕೊಳವೆ ಬಾವಿಗಳ ಮೂಲಕ ಚಿಕ್ಕ ಟ್ಯಾಂಕಿಗೆ ಹರಿಸಿ ಅಲ್ಲಿಂದ ನೀರು ಸರಬರಾಜು ಮಾಡಲಾಗುವುದು. ಒಂದು ಚಿಕ್ಕ ಬೋರ್‌ವೆಲ್ ಇದೆ. ಕುಂಚಿಟಿಗ ಜನಾಂಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಕುರುಬರು ಕಿರುಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದ್ದು ಒಟ್ಟು ೨೮ ಮನೆಗಳಿವೆ. ೧೩೧ ಜನಸಂಖ್ಯೆ ಇದೆ.

ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿದ್ದು ವಸತಿ ಯೋಜನೆಗಳಾದ ಜನತಾ, ಆಶ್ರಯ ಯೋಜನೆ ಹಾಗೂ ಉಚಿತ ಭಾಗ್ಯಜ್ಯೋತಿ ಯೋಜನೆಯ ೩ ಫಲಾನುಭವಿಗಳಿದ್ದಾರೆ. ೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳಿವೆ. ಶೇಂಗಾ ಇಲ್ಲಿನ ಮುಖ್ಯ ಬೆಳೆಯಾಗಿದ್ದು ರಾಗಿ, ಜೋಳ, ತೊಗರಿ, ಹುರುಳಿ ಬೆಳೆಗಳನ್ನು ಆಹಾರ ಬೆಳೆಯಾಗಿ ಬೆಳೆಯಲಾಗುವುದು. ತೆಂಗು, ಅಡಿಕೆ, ತೋಟಗಾರಿಕೆ ಬೆಳೆಯಾಗಿದೆ. ಶೇಂಗಾ, ಹುಣಸೆಹಣ್ಣು ವಾಣಿಜ್ಯ ಬೆಳೆಗಳು.

ಶಿಕ್ಷಣ, ಸಾರಿಗೆ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ. ಗೃಹ ಕೈಗಾರಿಕೆಯಾಗಿ ಬೀಡಿ ಸುತ್ತುವುದು ಇದೆ. ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕ್ಷೇತ್ರಗಳ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ೨ ತಂಡವೂ ಸೇರಿದಂತೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘವೂ ಇದೆ. ಒಂದು ಅಂಗನವಾಡಿ ಕೇಂದ್ರ, ಒಂದು ಕಿರಿಯ ಪ್ರಾಥಮಿಕ ಶಾಲೆಯಿದ್ದು ೨೩ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಶೇ.೬೬.೯೧ ರಷ್ಟು ಸಾಕ್ಷರರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧ ಪೆಟ್ಟಿಗೆ ಅಂಗಡಿಯಿದೆ. ಗ್ರಾಮದಲ್ಲಿ ಕಾಳಿಕಾಂಬ, ಮೈಲಾರ ಲಿಂಗೇಶ್ವರ ಹಾಗೂ ಮಾರಮ್ಮನ ಪೌಳಿಯಿದೆ. ಮಾರಮ್ಮನ ಊರಹಬ್ಬ ಜಾತ್ರೆಯ ಮಾದರಿಯಲ್ಲಿ ನಡೆಯುತ್ತದೆ. ಯುಗಾದಿ, ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ, ಮಹಾನವಮಿ ಹಬ್ಬಗಳನ್ನು ಆಚರಿಸುತ್ತಾರೆ.

## ಬಾಲೇನಹಳ್ಳಿ

ಬಾಲೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೨ ಕಿಮೀ ದೂರದಲ್ಲಿದೆ. ಸಿರಾ–ಕಳ್ಳಂಬೆಳ್ಳ ರ್‍ರಾಜ್ಯ ಹೆದ್ದಾರಿಯಲ್ಲಿ ಚಿಕ್ಕನಹಳ್ಳಿಯಿಂದ ಮುಂದಕ್ಕೆ ಬಾಲೇನಹಳ್ಳಿ ಗೇಟು ಸಿಕ್ಕುತ್ತದೆ. ಅಲ್ಲಿಂದ ಎಡಕ್ಕೆ ಅರ್ಧ ಕಿಮೀ ಕ್ರಮಿಸಿದರೆ ಬಾಲೇನಹಳ್ಳಿ ಇದೆ. ಇದು ಹಾಲೇನಹಳ್ಳಿಗೆ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೬.೮ ಹೆಕ್ಟೇರ್ ಆಗಿರುತ್ತದೆ. ಮರಳುಮಿಶ್ರಿತ ಕಂದು ಮಣ್ಣನ್ನು ಹೊಂದಿರುವ ಈ ಗ್ರಾಮ ಸಾವಯವ ಕೃಷಿಗೆ ಹೆಸರಾಗಿದೆ. ೪ ರೈತರು ಸಾವಯವ ಸಹಕಾರ ಸಂಘ ರಚಿಸಿಕೊಂಡು ಬಾಳೆ, ತರಕಾರಿ, ಹಣ್ಣು ಬೆಳೆದು ಮಾರುಕಟ್ಟೆಗೆ ಸಾಗಿಸುವುದು ವಾಡಿಕೆಯಾಗಿದೆ. ರ್‍ರಾಜ್ಯ ಹೆದ್ದಾರಿಯ ಬದಿಗೆ ಸಾವಯವ ಸಹಕಾರಿ ಸಂಘದ ಕೊಠಡಿ ಇದೆ. ಇದಕ್ಕೆ ಎದುರಾಗಿ ಕರ್ನಾಟಕ ಸರ್ಕಾರದ ಕಾನೂನು, ಸಂಸದೀಯ ವ್ಯವಹಾರ ಹಾಗೂ ಪಶುಸಂಗೋಪನಾ ಸಚಿವರು ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಶ್ರೀ ಟಿ.ಬಿ.ಜಯಚಂದ್ರ ಅವರ ವಸತಿ ನಿಲಯವಿದೆ. ಇದು ಕೃಷ್ಣಾ ಕೊಳ್ಳ ನೀರಾವರಿ ಹೋರಾಟ ಸಮಿತಿಯ ಕಾರ್ಯಸ್ಥಳವೂ ಆಗಿದೆ.

ಬಾಲೇನಹಳ್ಳಿ ಪರಿಸರ ಗಿಡ, ಮರ, ತೋಟ ಸಾಲಿನಿಂದ ಕೂಡಿದೆ. ಇಲ್ಲಿ ಕಾಡುಪ್ರಾಣಿಗಳಾದ ಮೊಲ, ಇಲಿ, ಬಾರುಬೆಕ್ಕು, ಉಡ, ನರಿ ಈ ಬಗೆಯ ಪ್ರಾಣಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಪಶುಪಾಲನೆ, ಹೈನುಗಾರಿಕೆ, ಕೃಷಿಗಾಗಿ ಸೀಮೆಹಸು, ನಾಟಿಹಸು, ಎತ್ತು, ಎಮ್ಮೆ, ಕುರಿ, ಮೇಕೆಗಳು, ನಾಯಿಗಳನ್ನು ಸಾಕಲಾಗುತ್ತಿದೆ. ಪಕ್ಷಿಗಳಾದ ಗಿಳಿ, ಗೊರವಂಕ, ಕೊಕ್ಕರೆ, ಕೋಗಿಲೆ, ಹದ್ದು, ಗರುಡ, ಬೆಳವ, ಕೌಜಲಗ ಮೊದಲಾದ ಪಕ್ಷಿಗಳು, ವಿವಿಧ ಜಾತಿಯ ಹಾವುಗಳಾದ ನಾಗರ, ಮಂಡಲ, ಕೆರೆಹಾವು, ಉರಿಮಂಡಲ, ಹೆಬ್ಬಾವು ಈ ಪರಿಸರದಲ್ಲಿ ಕಂಡುಬರುತ್ತವೆ. ಕಳ್ಳಂಬೆಳ್ಳದ ಕೆರೆಯ ನೀರು ಈ ಭಾಗದ ತೋಟಗಾರಿಕೆಗೆ ಆಶ್ರಯವಾಗಿದೆ. ಜೊತೆಗೆ ರೈತರು ೪೫ ಕೊಳವೆ ಬಾವಿಗಳ ಮೂಲಕ ಕೃಷಿಗೆ ನೀರೊದಗಿಸುವ ಕೆಲಸ ಮಾಡುತ್ತಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಪೂರೈಸಲಾಗುವುದು. ಒಂದು ಕೈಪಂಪು, ಆರು ಕಿರು ಟ್ಯಾಂಕ್‌ಗಳಿವೆ.

ವಾರ್ಷಿಕ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಸಮುದಾಯ ದೊಡ್ಡ ಜನಾಂಗವಾಗಿದ್ದು ನಾಯಕರು, ತಿಗಳರು, ಸಾದರು, ಲಿಂಗಾಯಿತರು, ಆದಿಕರ್ನಾಟಕ ಹಾಗೂ ಮುಸ್ಲಿಂ ಸಮುದಾಯಗಳು ಕಿರುಸಮುದಾಯವಾಗಿವೆ. ವಿವಿಧ ಪ್ರಕಾರಗಳ ೧೧೮ ಮನೆಗಳಿದ್ದು ಅವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಶೀಟಿನ ರಚನೆಗಳಾಗಿವೆ. ೫೪೫ ಮನೆಗಳಿದ್ದು ೩೫ ಕುಟುಂಬಗಳು ಶೌಚಾಲಯ ಬಳಕೆಮಾಡುತ್ತಿವೆ.

ಇಲ್ಲಿನ ಮನೆಗಳು ಆಶ್ರಯ, ಅಂಬೇಡ್ಕರ್, ಜನತಾ, ವಸತಿ ಯೋಜನೆಯ ೯೩ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ, ಭತ್ತ, ರಾಗಿ, ಜೋಳ, ಸೂರ್ಯಕಾಂತಿ ಸಮಾನ ಬೆಳೆಗಳು. ತೊಗರಿ, ಅವರೆ, ಹುರುಳಿ, ಅಲಸಂದೆ ಬೆಳೆಯುತ್ತಾರೆ. ತೆಂಗು, ಅಡಿಕೆ, ಬಾಳೆ ತೋಟಗಾರಿಕೆ ಬೆಳೆಗಳು. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೫೦ ಲೀ. ಹಾಲು ಸಂಗ್ರಹವಾಗುತ್ತದೆ. ಅಡಿಕೆ, ತೆಂಗು, ಹುಣಸೆಹಣ್ಣಿನ ವ್ಯಾಪಾರ ಇರುತ್ತದೆ. ಶಿಕ್ಷಣ, ಸಾರಿಗೆ, ಕಂದಾಯ ಇಲಾಖೆಗೆ ಸೇರಿದ ಆರು ಜನ ಸರ್ಕಾರಿ ನೌಕರರಿದ್ದಾರೆ. ಬೀಡಿ ಸುತ್ತುವ, ಗರಿಕಡ್ಡಿ ಸೀಳುವ, ಚಾಪೆ ಹೆಣೆಯುವ ಗೃಹ ಕೆಲಸದ ಮಹಿಳೆಯರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ ಚಿಕ್ಕನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಕಳ್ಳಂಬೆಳ್ಳ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುತ್ತಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಈ ಗ್ರಾಮದ ೩ ಜನ ಗ್ರಾಮಪಂಚಾಯ್ತಿ ಸದಸ್ಯರಿದ್ದು ಬಾಲೇನಹಳ್ಳಿಯ ಚಂದ್ರಕಲಾ ಕಳ್ಳಂಬೆಳ್ಳ ಗ್ರಾಮಪಂಚಾಯ್ತಿಗೆ ಉಪಾಧ್ಯಕ್ಷರಾಗಿದ್ದಾರೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘದ ಕೇಂದ್ರಗಳಿದ್ದು ಆರ್ಥಿಕ ಸಬಲತೆಗೆ ಪ್ರೇರಕವಾಗಿವೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೯೨ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೬೬.೩ ಮಹಿಳೆಯರು ೫೬.೧ ಹಾಗೂ ಪುರುಷರು ೭೬.೪ ರಷ್ಟಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಕಿರು ಹೋಟೆಲ್‌ಗಳು, ೫ ಗೂಡಂಗಡಿಗಳಿವೆ. ಗ್ರಾಮದ ದ್ವಾರಬಾಗಿಲ ಬಳಿ ೨ ಕರಿಗಲ್ಲುಗಳಿದ್ದು ಒಳಗೆ ೨ ಅರಳಿಕಟ್ಟೆಗಳಿವೆ. ಆಂಜನೇಯ, ಗಣೇಶ, ಹುಚ್ಚಯ್ಯ ದೇವಸ್ಥಾನಗಳಿವೆ. ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಆಂಜನೇಯ ಹಾಗೂ ಹುಚ್ಚಯ್ಯ ದೇವಸ್ಥಾನಗಳು ಮುಜರಾಯಿ ಇಲಾಖೆಗೆ ಸೇರಿದ್ದು ಪುನರ್ ನಿರ್ಮಾಣವಾಗಿವೆ. ಶ್ರಾವಣ ಮಾಸದಲ್ಲಿ ಈ ದೇವಾಲಯದ ಬಳಿ ಆರತಿ, ಹರಿಸೇವೆ, ಅನ್ನ ಸಂತರ್ಪಣೆ ಇರುತ್ತದೆ. ಇದರ ಬದಿಗೆ ೪ ಮನೆಗಳಿವೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕುಂಚಿಟಿಗರ ಸಂಘ, ವಾಲ್ಮೀಕಿ ಯುವಕ ಸಂಘ ಕ್ರಿಯಾಶೀಲವಾಗಿದ್ದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸುತ್ತಿವೆ.

## ಬಾಲೇನಹಳ್ಳಿ ಆಂಜನೇಯ ಬಡಾವಣೆ

ಬಾಲೇನಹಳ್ಳಿ ಆಂಜನೇಯ ಬಡಾವಣೆಯು, ಸಿರಾ–ಕಳ್ಳಂಬೆಳ್ಳ ಮುಖ್ಯ ರಸ್ತೆಯಲ್ಲಿ ಚಿಕ್ಕನಹಳ್ಳಿಯಿಂದ ಮುಂದೆ ಒಂದು ಕಿ.ಮೀ. ದೂರದಲ್ಲಿದೆ. ಬಾಲೇನಹಳ್ಳಿ ಗೇಟಿಗೆ ಹೊಂದಿಕೊಂಡಂತೆ ರಾಷ್ಟ್ರೀಯ ಹೆದ್ದಾರಿಯ ಎಡ–ಬಲಕ್ಕೆ, ತೋಟದ ಮನೆಗಳಂತೆ ೧೬ ಮನೆಗಳು ರಚನೆಯಾಗಿದೆ. ಕಂದಾಯ, ದಾಖಲೆಯಲ್ಲಿ ಬಾಲೇನಹಳ್ಳಿ ಗ್ರಾಮ ಎಂದೇ ನಮೂದಾಗಿದ್ದರೂ, ೫೦ ವರ್ಷ ಗಳಿಂದ ಇಲ್ಲಿ ಕುಟುಂಬಗಳಿವೆ. ಗ್ರಾಮ ಸ್ವರೂಪ ಪಡೆದಿವೆ. ಸಿರಾ ಮಾರ್ಗದ ಚಿಕ್ಕನಹಳ್ಳಿ ದೊಡ್ಡ ಹಳ್ಳವಿದೆ. ಆರಂಭವಾಗಿ, ಸಚಿವ ಶ್ರೀ ಟಿ.ಬಿ. ಜಯಚಂದ್ರ ಅವರ ವಸತಿ ನಿಲಯ ಹೇಮಾವತಿವರೆಗೂ ಈ ಬಡಾವಣೆಯ ವ್ಯಾಪ್ತಿ ಹಬ್ಬಿದೆ. ಆಂಜನೇಯನ ದೇವಸ್ಥಾನ ಎಂದೇ ಕರೆದು ಕೊಳ್ಳುತ್ತಾರೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯ ವಾಗಿದ್ದು, ನಾಯಕ, ಸಾದರು ಕಿರುಸಮುದಾಯವಾಗಿದೆ. ರೈತಾಪಿ ಬದುಕು ಮುಖ್ಯವಾಗಿದ್ದು, ಮುಖ್ಯ ಬೆಳೆ, ರಾಗಿ, ಭತ್ತ, ತರಕಾರಿ, ಹೂವು ಬೆಳೆಯುತ್ತಾರೆ. ತೋಟಗಾರಿಕೆ ಮುಖ್ಯವಾಗಿದ್ದು, ಅಡಿಕೆ, ತೆಂಗು ಇಲ್ಲಿ

ಪ್ರಧಾನವಾಗಿದೆ. ಅಡಿಕೆ ಸುಲಿಯುವ, ಅದರ ಸ್ವಚ್ಛ ಮಾಡುವುದು (ಮಾರಾಟ) ಮುಖ್ಯ ಸರಕಾಗಿದೆ. ಬಿ.ಕೆ.ರಾಮಾಂಜಿನಪ್ಪ ಎಂಬ ಬೇಡ ಜನಾಂಗದ ೫೦ ವರ್ಷ ವಯಸ್ಸಿನ ವ್ಯಕ್ತಿ ದೆಹಲಿಯಲ್ಲಿ ಗೃಹ ಮಂತ್ರಾಲಯ ಇಲಾಖೆಯ ಭಾರತ ಜನಗಣತಿ ವಿಭಾಗದಲ್ಲಿ ಉಪನಿರ್ದೇಶಕರಾಗಿರುವುದು ಇಲ್ಲಿನ ವಿಶೇಷ. ಕಳ್ಳಂಬೆಳ್ಳ ಗ್ರಾಮ ಪಂಚಾಯಿತಿಗೆ ಒಳಪಟ್ಟಿದೆ. ಇಲ್ಲಿನ ಮುಖ್ಯ ಆಹಾರ ಅನ್ನ, ಮುದ್ದೆ ಆಗಿದ್ದು, ವಿಶೇಷವಾಗಿ ಮೀನು, ಬಾಡೂಟವೂ ನಡೆಯುತ್ತದೆ.

ಇಲ್ಲಿನ ಪ್ರಮುಖ ಆರಾಧ್ಯ ದೈವ ಆಂಜನೇಯ ದೇವಾಲಯ. ಚಿಕ್ಕನಹಳ್ಳಿ ಯಿಂದ ೧ ಕಿ.ಮೀ. ದೂರದಲ್ಲಿ ರಸ್ತೆಯ ಎಡಭಾಗದಲ್ಲಿ ಆಂಜನೇಯ ಹುಚ್ಚಯ್ಯ (ಈಶ್ವರ) ದೇವಾಲಯಗಳಿವೆ. ಇದೊಂದು ಪ್ರಾಚೀನ ದೇವಾಲಯವಾಗಿದ್ದು, ದೇವಾಲಯ ಆಕರ್ಷಕ ವಿನ್ಯಾಸ, ಗೋಪುರ, ಚಿತ್ರಾವಳಿಯನ್ನು ಹೊಂದಿದೆ. ಆಂಜನೇಯ, ಈಶ್ವರನ ಮೂರ್ತಿ, ನವಗ್ರಹ, ಅರಳಿ–ಬೇವು ಇವುಗಳ ಪೂಜೆ ವಿಶೇಷವಾಗಿ ನಡೆಯುತ್ತದೆ. ನಿತ್ಯ ಪೂಜೆ, ಅಭಿಷೇಕ ನಡೆಯುತ್ತಿದ್ದು, ಶಿವರಾತ್ರಿ ಹಾಗೂ ಶ್ರಾವಣ ಸೋಮವಾರ ಹಾಗೂ ಶನಿವಾರ ದಾಸೋಹದ ವ್ಯವಸ್ಥೆಯೂ ಇದೆ.

ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷೆ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಹಸು, ಎಮ್ಮೆ ಸಾಕಿದ್ದು ಹೈನುಗಾರಿಕೆಯೂ ಇಲ್ಲಿದೆ.

## ಬಾಲಬಸವನಹಳ್ಳಿ

ಬಾಲಬಸವನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೭ ಕಿಮೀ ದೂರದಲ್ಲಿದೆ. ಸಿರಾ–ಕಳ್ಳಂಬೆಳ್ಳ ಮುಖ್ಯ ರಸ್ತೆಯಲ್ಲಿ ಮಳ್ಳಂಪುರಹಳ್ಳಿ ಗೇಟಿನಿಂದ ತರೂರಿಗೆ ಹೋಗುವ ರಸ್ತೆಯಲ್ಲಿ ಈ ಗ್ರಾಮವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೧೩.೦೨ ಹೆಕ್ಟೇರ್ ಆಗಿದ್ದು ಇದಕ್ಕೆ ಬ್ಯಾಟಗನಹಳ್ಳಿ ಮಜರೆ ಗ್ರಾಮವಾಗಿದೆ.

ಬಸವಣ್ಣ ಎಂಬ ವ್ಯಕ್ತಿ ಈ ಗ್ರಾಮದ ಮೂಲಪುರುಷ ಸಮೀಪದಲ್ಲಿ ಬಾಲನಹಳ್ಳಿ ಇದ್ದು ಗುರುತಿಸುವಿಕೆಗೆ ಅನುಕೂಲಕರವಾಗಿ ಬಾಲಬಸವ ಎಂದು ಕರೆಯುತ್ತಾ ಬಂದಿದ್ದಾರೆ. ಸಾಮಾನ್ಯ ಬಾಯಲ್ಲಿ ಬಾಲ ಮಾಯವಾಗಿ ಇಂದು ಬಾಳಬಸವನಹಳ್ಳಿ ಎಂದೂ ಕರೆಯುವುದು ವಾಡಿಕೆಯಾಗಿದೆ.

ಮರಳು ಮಿಶ್ರಿತ ಕೆಂಪುಮಣ್ಣನ್ನು ಹೊಂದಿದ್ದು ಪೂರ್ವಕ್ಕೆ ಚಿಕ್ಕದೊಂದು ಕಟ್ಟೆಯಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿ, ವಿಷಪೂರಿತ ಹಾವುಗಳು ಕಂಡುಬರುತ್ತವೆ. ಸಾಕು ಪ್ರಾಣಿಗಳಾಗಿ ಕುರಿ, ಹಸು, ಎತ್ತು ಹಾಗೂ ಮೇಕೆಗಳನ್ನು ಸಾಕಲಾಗಿದೆ. ಮಾಂಸ ಹಾಗೂ ಮೊಟ್ಟೆಗಾಗಿ ಗಿರಿರಾಜ ಹಾಗೂ ನಾಟಿಕೋಳಿಗಳನ್ನು ಸಾಕಲಾಗಿದೆ. ಗಿಳಿ, ಗರುಡ, ಗೂಬೆ, ಹದ್ದು, ಗೀಜುಗ, ಕೊಕ್ಕರೆ, ಕೋಗಿಲೆ, ಕಾಗೆ, ಮರಕುಟಿಕ ಹಕ್ಕಿಗಳಿವೆ. ವಿಷಪೂರಿತ ಹಾವುಗಳೂ ಕಂಡುಬರುತ್ತವೆ.

ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಆಧಾರಿತ ಬದುಕಿನ ಜನರಿಗೆ ಸಹಜ ಮಳೆ ಸಾಲದು. ಹಾಗೂ ಅರೆ ನೀರಾವರಿಗಾಗಿ ಈ ಗ್ರಾಮದ ಪರಿಸರದಲ್ಲಿ ೪೦ ಕೊಳವೆ ಬಾವಿಗಳಿವೆ. ಒಂದು ಕಟ್ಟೆ ಇದ್ದರೂ ನೀರಿನ ಸಂಗ್ರಹ ಕಡಿಮೆ. ತುಂಬಿದಾಗ ಗ್ರಾಮದ ಪ್ರಾಣಿಗಳಿಗೆ, ದಿನಬಳಕೆಗೆ ಉಪಯೋಗವಾಗುತ್ತದೆ. ಕುಡಿಯಲು ಗ್ರಾಮಪಂಚಾಯ್ತಿಯ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಸರಬರಾಜು ಮಾಡಲಾಗುತ್ತದೆ. ೪ ಸಿಸ್ಟರ್ನ್‌ಗಳಿದ್ದು ೨ ಜಗ್ಗುವ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ತಿಗಳರು ದೊಡ್ಡ ಸಮುದಾಯವಾಗಿದ್ದು ಗಾಣಿಗ, ಕುಂಚಿಟಿಗರು ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೧೧೦ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಾಗಿವೆ. ಒಟ್ಟು ೪೭೬ ಜನಸಂಖ್ಯೆ ಹೊಂದಿದ್ದು ೩೦ ಮನೆಗಳಲ್ಲಿ ಶೌಚಾಲಯಗಳ ಬಳಕೆಯಿದೆ. ಇವು ಸರ್ಕಾರದ ಸೌಲಭ್ಯಗಳಾದ ಇಂದಿರಾ ಆವಾಸ್, ಆಶ್ರಯ ೧೯ ಫಲಾನುಭವಿಗಳಿದ್ದು ಭಾಗ್ಯಜ್ಯೋತಿ ಉಚಿತ ವಿದ್ಯುದ್ದೀಪ ಹೊಂದಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನ ಎತ್ತಿನ ಗಾಡಿಗಳ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆ. ತೋಟಗಾರಿಕೆ ಬೆಳೆಯಾಗಿ ತೆಂಗು, ತರಕಾರಿ, ಹಣ್ಣಿನ ಬೆಳೆಗಳಿವೆ. ರೇಷ್ಮೆ, ಸೇವಂತಿಗೆ ಹೂ ಬೆಳೆಯಿದೆ. ಒಂದು ನಂದಿನಿ ಹಾಲಿನ ಸಹಕಾರ ಸಂಘವಿದ್ದು ಸರಾಸರಿ ೧೫೦ ಲೀ ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹೂ, ಹುಣಸೆಹಣ್ಣು ಮುಖ್ಯ ವ್ಯಾಪಾರಿ ಸರಕಾಗಿದೆ. ಹೆಂಗಸರು ಹೂ ಕಟ್ಟುವುದು, ಬೀಡಿ ಕಟ್ಟುವುದು, ಹೊಂಗೆ ಬೀಜ ಸಂಗ್ರಹ, ಹುಣಸೆಹಣ್ಣು ಶುದ್ಧಿ ಮೊದಲಾದ ಗೃಹ ಕಸುಬು ಹೊಂದಿದ್ದಾರೆ.

ಆಡಳಿತಾತ್ಮಕವಾಗಿ ಈ ಗ್ರಾಮ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ತರೂರು ತಾಲ್ಲೂಕು ಪಂಚಾಯ್ತಿ ಹಾಗೂ ತರೂರು ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು

ಚಿತ್ರದುರ್ಗ ಜಿಲ್ಲಾ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು ೧೪ ಮಕ್ಕಳಿದ್ದಾರೆ. ಪ್ರಾಥಮಿಕ ಕಿರಿಯ ಶಾಲೆಯಿದ್ದು ೨೨ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೮% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ೪ ಪೆಟ್ಟಿಗೆ, ೩ ಅಂಗಡಿಗಳಿವೆ. ಗ್ರಾಮದಲ್ಲಿ ಮಾರಮ್ಮನ ಪೌಳಿಯಿದೆ. ಅರಳಿಕಟ್ಟೆ ಇದ್ದು ಮಾರಮ್ಮನ ಊರ ಹಬ್ಬ ಮಾಡಿ ಆರತಿ, ಬಲಿ, ಹರಕೆ ಸಂಪ್ರದಾಯಗಳಿವೆ. ಶ್ರೀ ವಿನಾಯಕ ಯುವಕ ಸಂಘವಿದ್ದು ಇದರ ಪದಾಧಿಕಾರಿಗಳು ಶ್ರೀ ವಿನಾಯಕ ದೇವಸ್ಥಾನವನ್ನು ಬೃಹತ್ತಾಗಿ ನಿರ್ಮಿಸಿದ್ದಾರೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ಸಿರಾ–ಕಳ್ಳಂಬೆಳ್ಳ–ತುಮಕೂರು, ತರೂರಿಗೆ ಬಸ್ ಸಂಪರ್ಕವಿದೆ.

## ಬಾಲನಪಾಳ್ಯ

ಬಾಲನಪಾಳ್ಯ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ೧೬ ಕಿಮೀ ದೂರದಲ್ಲಿದೆ. ಸಿರಾ–ತುಮಕೂರು ರಸ್ತೆಯಲ್ಲಿ ಮಳ್ಳಪ್ಪನಹಳ್ಳಿ ಗೇಟಿನಿಂದ ಎಡಭಾಗದಲ್ಲಿ ತರೂರು ರಸ್ತೆಯಲ್ಲಿ ಈ ಗ್ರಾಮವಿದೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೭೬.೦೬ ಹೆಕ್ಟೇರ್ ಆಗಿದೆ. ಬಾಲಪ್ಪ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಬಾಲನಪಾಳ್ಯ ಎಂದು ಹೆಸರು ಬಂದಿದೆ. ಬಯಲು ಪ್ರದೇಶವಾಗಿದ್ದು ತರೂರಿಗೆ ಸಮೀಪದಲ್ಲಿದೆ. ಕುರುಚಲು ಗಿಡ, ಹಳ್ಳ–ದಿಣ್ಣೆಗಳಿಂದ ಕೂಡಿದ ಭೂಭಾಗವಾಗಿದೆ. ಈ ಪರಿಸರದಲ್ಲಿ ನರಿ, ತೋಳ, ಮೊಲ, ಹಂದಿ, ಜಿಂಕೆ, ಮುಂಗುಸಿ, ಉಡ ಹಾಗೂ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಗ್ರಾಮದಲ್ಲಿ ಪಶುಪಾಲನೆ ಹಾಗೂ ಹೈನುಗಾರಿಕೆಗಾಗಿ ಹಸು, ನಾಟಿಹಸು ಸಾಕಿದ್ದಾರೆ. ಜೊತೆಗೆ ನಾಯಿ, ನಾಟಿ ಹುಂಜ, ಹೇಂಟೆಯ ಜೊತೆಗೆ ಗಿರಿರಾಜ ಕೋಳಿಗಳನ್ನು ಸಾಕಲಾಗಿದೆ. ಈ ಪರಿಸರದಲ್ಲಿ ಕಾಡುಪಕ್ಷಿಯಾಗಿ ನವಿಲು, ಕೋಗಿಲೆ, ಕೊಕ್ಕರೆ, ಗಿಳಿ, ಗುಬ್ಬಚ್ಚಿ, ಗೀಜಗ, ಹದ್ದು, ಗರುಡ, ಗೂಬೆ, ಗೊರವಂಕ, ಗಿಡುಗ ಕಂಡುಬರುತ್ತವೆ. ವಾರ್ಷಿಕ ಸಾರಿಗೆ ವಾಡಿಕೆ ಮಳೆ ೫೫೭.೧ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ವಾಡಿಕೆಗಿಂತ ಕಡಿಮೆ ಮಳೆಯಿರುವುದರಿಂದ ರೈತರು ಕೊಳವೆಬಾವಿಗಳ ಮೂಲಕ ಅರೆಕೃಷಿಗೆ ಮುಂದಾಗಿದ್ದಾರೆ. ಕುಡಿಯಲು ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಸರಬರಾಜು ಮಾಡಲಾಗುತ್ತದೆ. ೪ ಸಿಸ್ಟರ್ನ್‌ಗಳಿದ್ದು ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ನಾಯಕರು, ಸಾದರು, ಆದಿಕರ್ನಾಟಕ, ಆದಿದ್ರಾವಿಡ, ವೀರಶೈವ, ಗೊಜ್ಜಿಗರು ಹಾಗೂ ದೊಂಬಿದಾಸರು ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಸ್ವರೂಪದ ೭೧ ಮನೆಗಳಿದ್ದು ೨೭೮ ಜನಸಂಖ್ಯೆ ಹೊಂದಿದೆ. ಇವು ಶೀಟಿನ, ಹೆಂಚಿನ ಸ್ವರೂಪದ ಮನೆಗಳಾಗಿವೆ. ಇವು ಸರ್ಕಾರದ ವಸತಿ ಯೋಜನೆಯಾದ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದವರೂ ಇದ್ದಾರೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ಆಟೋ ಬಳಕೆಯಲ್ಲಿದೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಹಾರಕ, ಕೊರ್ಲೆ, ತೊಗರಿ, ಹುರುಳಿ ಆಹಾರ ಬೆಳೆಗಳಾಗಿ ಬೆಳೆಯುತ್ತಾರೆ. ಶೇಂಗಾ, ಹೊಂಗೆಬೀಜ, ಹುಣಸೆಹಣ್ಣು ಮುಖ್ಯ ವ್ಯಾಪಾರಿ ಸರಕಾಗಿದೆ. ಮಹಿಳೆಯರು ಗೃಹ ಕೈಗಾರಿಕೆಯಾಗಿ ಹುಣಸೆಹಣ್ಣು, ಬೀಡಿ ಸುತ್ತುವುದು, ಹೂ ಕಟ್ಟುವುದು, ಹೊಂಗೆ ಬೀಜದ ಶುದ್ಧೀಕರಣದ ಉಪಕಸುಬು ಹೊಂದಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯತ್, ತರೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವೂ ಆಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ತರೂರಿನಿಂದ ಅಂಚೆ ಸಂಪರ್ಕವಿದೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘವಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು ೩೧ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದಲ್ಲಿ ೬೨.೫ ಸಾಕ್ಷರತೆ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಮೂರು ಗೂಡಂಗಡಿ, ೨ ಟೀ ಅಂಗಡಿಗಳಿವೆ.

ಧಾರ್ಮಿಕವಾಗಿ ಮಾರಮ್ಮನ ಗದ್ದುಗೆ, ಆಂಜನೇಯ ದೇವಾಲಯವಿದೆ. ಆಂಜನೇಯನಿಗೆ ಶ್ರಾವಣ ಮಾಸದಲ್ಲಿ ಆರತಿ ಮಾಡುತ್ತಾರೆ. ಮಾರಮ್ಮನಿಗೆ ತರೂರು ದುರ್ಗಾಂಬ ಜಾತ್ರೆಯಂದು ಪ್ರಾಣಿಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬೆಟ್ಟನಹಳ್ಳಿ

ಬೆಟ್ಟನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೦ ಕಿಮೀ ದೂರದಲ್ಲಿದೆ. ಇದು ತಾಳಗುಂದ–ಕಳ್ಳಂಬೆಳ್ಳ ರಸ್ತೆಯಲ್ಲಿ ಬೆಟ್ಟನಹಳ್ಳಿ ಗೇಟಿನಿಂದ ಅರ್ಧ ಕಿಮೀ ಎಡಭಾಗದ ಗ್ರಾಮವಾಗಿದೆ. ಕಂದಾಯ ಗ್ರಾಮವಾಗಿರುವ ಈ ಹಳ್ಳಿಯ ಭೌಗೋಳಿಕ ವಿನ್ಯಾಸ ೬೨.೮೫ ಹೆಕ್ಟೇರ್ ಹೊಂದಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಚಿಕ್ಕ ಚಿಕ್ಕ ಗಿಡ, ಪೊದೆ, ತೋಟದ ಸಾಲುಗಳನ್ನು ಹೊಂದಿದ್ದು ಬಯಲು ಸೀಮೆಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಉಡ, ಬಾರ್‌ಬೆಕ್ಕುಗಳಿವೆ.

ಗ್ರಾಮದಲ್ಲಿ ಹೈನುಗಾರಿಕೆಯಿದ್ದು ಸೀಮೆಹಸು ಹಾಗೂ ನಾಟಿಹಸುಗಳನ್ನು ಸಾಕುತ್ತಾರೆ. ಹಳ್ಳಿಕಾರ್ ತಳಿಯ ಎತ್ತು, ಸೀಮೆಗಿಡ್ಡ ಜಾತಿಯ ಹಸುಗಳಿವೆ. ಕುರಿ, ಮೇಕೆ, ನಾಯಿ, ಬೆಕ್ಕು ಇತರ ಸಾಕುಪ್ರಾಣಿಗಳು. ಕೋಳಿ ಜಾತಿಯ ಗಿರಿರಾಜ ಹೇಂಟೆ, ಹುಂಜಗಳನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಬಯಲು ಪ್ರದೇಶ, ಬಿಸಿಲೂ ಹೆಚ್ಚು.

ಬೆಟ್ಟಪ್ಪ ಎಂಬ ವ್ಯಕ್ತಿ ಈ ಗ್ರಾಮ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದು ಆತನ ಹೆಸರಿನಲ್ಲಿಯೇ ಗ್ರಾಮ ಬೆಳೆದು ಬಂದಿರುವುದಾಗಿ ಗ್ರಾಮದ ರಾಮಣ್ಣ ವಿವರಿಸುತ್ತಾರೆ. ಕೃಷಿ ಬದುಕಿನ ಇಲ್ಲಿ ಮಳೆನೀರಿನ ಆಶ್ರಯ. ವಾಡಿಕೆ ಮಳೆ ೪೬೦ ಮಿಮೀ ಆಗಿದ್ದು ಉಷ್ಣಾಂಶ ೩೬ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಆಧಾರಿತ ಬದುಕಿಗೆ ನೀರು ಸಾಲದೆ ಕೊಳವೆ ಬಾವಿಗಳ ಮೊರೆಹೋಗಿದ್ದಾರೆ. ಈ ಪರಿಸರದಲ್ಲಿ ೩೦ ಕೊಳವೆ ಬಾವಿಗಳಿವೆ. ತೋಟಗಾರಿಕೆ ಬಳಕೆಗೆ ನೀರು ಮಧ್ಯಂತರ ಬಳಕೆಗೆ ಉಪಯೋಗವಾಗುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಯೋಜನೆಯ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ೧ ಕೈಪಂಪುಗಳಿದ್ದು ೫ ಸಿಸ್ಟರ್ನ್‌ಗಳಲ್ಲಿ ನೀರು ಪೂರೈಸಲಾಗುತ್ತದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಉಪ್ಪಾರ, ನಾಯಕ, ಲಿಂಗಾಯಿತ, ಕೊರಚರು ಕಿರುಸಮುದಾಯಗಳಾಗಿವೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದೆ. ವಿವಿಧ ಪ್ರಕಾರಗಳ ೮೩ ಮನೆಗಳಿದ್ದು ಇದರಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿವೆ. ಇಲ್ಲಿ ಆಶ್ರಯ, ಜನತಾ, ಇಂದಿರಾ ಆವಾಸ್ ವಸತಿ ಯೋಜನೆಯ ೩೧ ಫಲಾನುಭವಿಗಳಿದ್ದು ೨೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿ, ಟೆಂಪೋ, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಜೋಳ, ತೊಗರಿ ಆಹಾರ ಬೆಳೆಗಳು. ತೆಂಗು, ಅಡಿಕೆ, ಸೇವಂತಿಗೆ, ರೇಷ್ಮೆ, ತೋಟಗಾರಿಕೆಯ ಬೆಳೆಗಳು. ಒಂದು ಹಾಲಿನ ಡೈರಿಯಿದ್ದು ಸರಾಸರಿ ೧೮೦–೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ತೆಂಗು, ಅಡಿಕೆ, ಹೊಂಗೆಬೀಜ, ಹುಣಸೆಹಣ್ಣು ಮುಖ್ಯ ವಾಣಿಜ್ಯ ಸರಕುಗಳಾಗಿವೆ. ಶಿಕ್ಷಣ, ಆರೋಗ್ಯ, ಸಾರಿಗೆ, ಕೆಇಬಿ ಸೇರಿದಂತೆ ಒಟ್ಟು ಆರುಜನ ಸರ್ಕಾರಿ ನೌಕರರಿದ್ದಾರೆ. ಗ್ರಾಮದ ಮಹಿಳೆಯರು ಬೀಡಿ ಕಟ್ಟುವ, ಊಟದ ಎಲೆ ತಯಾರಿಸುವ ಸ್ವಾವಲಂಬನೆ ಹೊಂದಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಭೂಪಸಂದ್ರ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ವಿಧಾನಸಭಾ ಕ್ಷೇತ್ರಕ್ಕೆ ಸೇರಿದೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೨೯ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೧% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಅಂಗಡಿಗಳಿವೆ. ಧಾರ್ಮಿಕವಾಗಿ ಕುನ್ನಾಲಮ್ಮನ ಒಕ್ಕಲು ಹೆಚ್ಚಾಗಿದ್ದು ಕುನ್ನಾಲ ಕರಿಯಮ್ಮ ಜಾತ್ರೆಯ ದಿನ ದೇವರಿಗೆ ಎದುರೆತ್ತಿ ಆರತಿ ಮಾಡುವ ಸಂಪ್ರದಾಯವಿದೆ. ಜವಲಿಂಗೇಶ್ವರ,

ರಾಮಲಿಂಗ ದೇವರಗಳ ಗುಡಿಗಳಿದ್ದು ದೀಪಾವಳಿ, ಶಿವರಾತ್ರಿಯ ದಿನಗಳಲ್ಲಿ ಭಜನೆ ಅಭಿಷೇಕ ಕಾರ್ಯಕ್ರಮಗಳಿರುತ್ತವೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಭೂಪಸಂದ್ರ

ಭೂಪಸಂದ್ರ ಸಿರಾ ತಾಲ್ಲೂಕು, ಕಳ್ಳಂಬೆಳ್ಳ ಹೋಬಳಿಗೆ ಸೇರಿದ ಕಂದಾಯ ಗ್ರಾಮ. ತಾಲ್ಲೂಕು ಪಂಚಾಯ್ತಿ, ಗ್ರಾಮ ಪಂಚಾಯ್ತಿ ಕೇಂದ್ರವೂ ಆಗಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೫ ಕಿಮೀ ದೂರದಲ್ಲಿದೆ. ಸಿರಾ–ತುಮಕೂರು ರ್‍ಹಾಷ್ಟ್ರಿಯ ಹೆದ್ದಾರಿಯಲ್ಲಿ ಕಳ್ಳಂಬೆಳ್ಳದಿಂದ ಆಚೆಗೆ ಮರಳಪ್ಪನಹಳ್ಳಿ ಗೇಟಿನಿಂದ ಎಡಕ್ಕೆ ೩ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ೫೭೭೧ ಹೆಕ್ಟೇರ್ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿದೆ. ಮರಳಪ್ಪನಹಳ್ಳಿ ಮತ್ತು ಕಳ್ಳಿಪಾಳ್ಯ ಎಂಬ ಎರಡು ಉಪಗ್ರಾಮಗಳನ್ನು ಈ ಗ್ರಾಮ ಹೊಂದಿದೆ. ಭೂಪ ಎಂದರೆ ರಾಜ, ಅರಸ, ಒಡೆಯ ಎಂಬ ಅರ್ಥವಿದ್ದು ರಾಜನೊಬ್ಬನ ಹೆಸರಿನಲ್ಲಿ ಈ ಗ್ರಾಮ ರಚನೆಯಾಗಿದೆ. ಈ ಭೂಪತಿ ಯಾರು, ಯಾವ ಕಾಲದವನು ಅಥವಾ ಈ ಗ್ರಾಮದ ಹಿರಿಯರೊಬ್ಬರ ಹೆಸರು ಭೂಪತಿಯೇ ಎಂಬುದು ಯಾವ ಮೂಲಗಳಿಂದಲೂ ಲಭ್ಯವಾಗಿರುವುದಿಲ್ಲ. ಈ ಗ್ರಾಮದ ಸನಿಹದಲ್ಲಿಯೇ ಒಂದು ಕೆರೆಯಿದ್ದು ಇದರ ನಡುವೆ ಕಪ್ಪಡಿಕಟ್ಟೆ ಮತ್ತು ಮಂಗಜ್ಜಿಕಟ್ಟೆ ಎಂಬ ಎರಡು ಕುಂಟೆಗಳಿವೆ. ಈ ನೀರಿನ ವಿಸ್ತೃತ ರೂಪವೇ ಸಮುದ್ರದಂತೆ ಅದರ ರೂಪವಾಗಿ ಸಂದ್ರವಾಗಿ ಕರೆಯಲಾಗುವುದು.

ಮರಳು ಮಿಶ್ರಿತ ಕೆಂಪು ಭೂಮಿಯನ್ನು ಹೊಂದಿದ್ದು ಈ ಪರಿಸರದಲ್ಲಿ ಕುರುಚಲು ಗಿಡ, ಮರ, ಪೊದೆಗಳಿವೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಕಿರುಬ, ಕರಡಿ, ಜಿಂಕೆ, ಹಂದಿ, ಉಡ, ಮುಂಗುಸಿ ಕಂಡುಬಂದರೆ ಪಕ್ಷಿಗಳಾದ ಗಿಳಿ, ನವಿಲು, ಕಾಗೆ, ಕೌಜಲಗ, ಹದ್ದು, ಗರುಡ, ಗುಬ್ಬಚ್ಚಿ, ಗೂಬೆ, ಬೆಳವ, ಕೊಕ್ಕರೆ ಪಕ್ಷಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಸಾಕುಪ್ರಾಣಿಗಳಾಗಿ ಹಸು, ಹಳ್ಳಿಕಾರ್ ತಳಿ ಎತ್ತು, ಎಮ್ಮೆ, ಸೀಮೆಹಸು, ಕುರಿ, ಮೇಕೆ, ನಾಯಿಗಳು ಸಾಕುಪ್ರಾಣಿಗಳಾಗಿವೆ. ಕೋಳಿ ಸಾಕುಪಕ್ಷಿಯಾಗಿವೆ.

ಬಿಸಿಲು, ಬಯಲುನೀಡಿನ ಪ್ರದೇಶವಾದ ಈ ಹಳ್ಳಿಯ ಪರಿಸರದಲ್ಲಿ ವಾಡಿಕೆ ಮಳೆ ಸರಾಸರಿಗಿಂತಲೂ ಕಡಿಮೆ ಇದೆ. ವಾರ್ಷಿಕ ೪೬೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಅವಲಂಬಿತ ಜೀವನ ಇಲ್ಲಿನದಾಗಿದ್ದು ಕೃಷಿಗೆ ಮಳೆನೀರು ಸಾಕಾಗುವುದಿಲ್ಲ. ಹಾಗಾಗಿ ಉಪನೀರಾವರಿಯಾಗಿ ೬೫ ಕೊಳವೆ ಬಾವಿಗಳ ಮೂಲಕ ನೀರನ್ನು ಬಳಸಿಕೊಂಡು ತೋಟಗಾರಿಕೆ ಹಾಗೂ ಕೃಷಿಗೆ ಬಳಸಿಕೊಳ್ಳಲಾಗುತ್ತಿದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತದೆ. ಗ್ರಾಮದಲ್ಲಿ ೮ ಸಿಸ್ಟರ್ನ್‌ಗಲ ಮೂಲಕ ನೀರು ಒದಗಿಸುತ್ತಿದ್ದು ೨ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ನಾಯಕ, ಗಾಣಿಗ, ಆದಿದ್ರಾವಿಡ, ಮಡಿವಾಳ ಹಾಗೂ ದಾಸ ಸಮುದಾಯಗಳು ಚಿಕ್ಕ ಜನಾಂಗವಾಗಿವೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ವಿವಿಧ ಸ್ವರೂಪದ ೩೫೪ ಮನೆಗಳಿದ್ದು ಅವುಗಳು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದಲ್ಲಿ ರಚನೆಯಾಗಿವೆ. ಇವುಗಳು ಸರ್ಕಾರದ ವಸತಿ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ಹಾಗೂ ಭಾಗ್ಯಜ್ಯೋತಿ ಸಂಪರ್ಕ ಪಡೆದ ಗೃಹಗಳಾಗಿವೆ. ೧೩೪೮ ಜನಸಂಖ್ಯೆ ಹೊಂದಿರುವ ಇಲ್ಲಿ ೨೪೫ ಶೌಚಾಲಯಗಳನ್ನು ಹೊಂದಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಬಂಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯಬೆಳೆ. ರಾಗಿ, ಭತ್ತ, ಜೋಳ, ಅಲಸಂದೆ, ತೊಗರಿ ಆಹಾರ ಬೆಳೆಗಳು. ಸೂರ್ಯಕಾಂತಿ, ರೇಷ್ಮೆ, ತೆಂಗು, ಅಡಿಕೆ, ಸೇವಂತಿಗೆ ಹೂಗಳನ್ನು ಬೆಳೆಯಲಾಗುವುದು. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೫೦ ಲೀ. ಹಾಲು ಸಂಗ್ರಹವಾಗುತ್ತಿದೆ.

ಶೇಂಗಾ, ಹುಣಸೆಹಣ್ಣು, ಹೊಂಗೆಬೀಜ, ತೆಂಗು, ಅಡಿಕೆ, ರೇಷ್ಮೆ ಪ್ರಮುಖ ವ್ಯಾಪಾರಿ ಸರಕಾಗಿದೆ. ಸಾರಿಗೆ, ಆರೋಗ್ಯ, ಕಂದಾಯ, ಶಿಕ್ಷಣ, ಕೆಇಬಿ ಇಲಾಖೆಗಳಿಗೆ ಸೇರಿದ ೭ ಜನ ಸರ್ಕಾರಿ ನೌಕರರಿದ್ದಾರೆ. ಬೀಡಿ ಸುತ್ತುವುದು, ಎಲೆಕಟ್ಟುವುದು, ಗರಿಕಡ್ಡಿ ಸಿಗಿಯುವುದು ಈ ಮೊದಲಾದವು ಮಹಿಳೆಯರ ಉಪಕಸುಬಾಗಿ ಆರ್ಥಿಕ ಸ್ವಾವಲಂಬನೆಗೆ ದಾರಿಯಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಭೂಪಸಂದ್ರ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದ ಮೂರು ಜನ ಗ್ರಾಮ ಪಂಚಾಯ್ತಿ ಪ್ರತಿನಿಧಿಗಳಿದ್ದು ನರಸಣ್ಣ ಎಂಬುವವರು ಗ್ರಾಮಪಂಚಾಯ್ತಿ ಉಪಾಧ್ಯಕ್ಷರಾಗಿದ್ದಾರೆ. ಒಂದು ಅಂಚೆ ಕಛೇರಿಯಿದೆ. ತಾಲ್ಲೂಕು ಕಛೇರಿಗೆ, ವಿದ್ಯುತ್ ಹಾಗೂ ಲೋಕೋಪಯೋಗಿ ಇಲಾಖೆಯ ಮಹತ್ವದ ಕೆಲಸಗಳಿಗಾಗಿ

ಸಿರಾ ನಗರಕ್ಕೆ ಹೋಗಬೇಕಾಗಿದೆ. ನಾಲ್ಕು ಸ್ತ್ರೀಶಕ್ತಿ ಸಂಘದ ಸ್ವಸಹಾಯ ಗುಂಪು, ೧ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘವಿದ್ದು ಸ್ತ್ರೀಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೫೪ ಮಕ್ಕಳಿದ್ದಾರೆ. ೩ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೧.೬ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಟೀ ಅಂಗಡಿಗಳು, ೪ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದ ಕಳ್ಳಿಪಾಳ್ಯದ ದಾರಿಯಲ್ಲಿ ಬರುವ ಜಮೀನಿನಲ್ಲಿ ಮಾಸ್ತಿಗಲ್ಲು, ವೀರಕಲ್ಲುಗಳಿದ್ದು ಪುರುಷ ಮತ್ತು ಮಹಿಳೆಯರ ಸಾಂಸ್ಕೃತಿಕ ವೀರತ್ವದ ಸೂಚನೆಯನ್ನು ಪ್ರಕಟಿಸಲಾಗಿದೆ. ಮತ್ತೊಂದು ಗೋಸಂರಕ್ಷಣೆ ಹೋರಾಟದ ವೀರಗಲ್ಲು ಈ ಗ್ರಾಮದ ಕೆರೆಯ ಕೋಡಿಯ ಭಾಗದಲ್ಲಿ ಬಿದ್ದಿದೆ. ೨ ವೀರಗಲ್ಲುಗಳ ಜೊತೆಗೆ ೨ ಕರಿಗಲ್ಲುಗಳು, ಅರಳಿಕಟ್ಟೆ ಇದೆ. ವಿಶೇಷ ಸಂದರ್ಭಗಳಲ್ಲಿ ಎಣ್ಣೆ ಹಾಕಿ ಪೂಜಿಸಲಾಗುವುದು. ಧಾರ್ಮಿಕವಾಗಿ ರಂಗನಾಥ, ಮೈಲಾರಲಿಂಗ, ಓಬಳನರಸಿಂಹ, ಗಣಪತಿ, ಲಕ್ಷ್ಮೀದೇವರ ಗುಡಿಗಳಿವೆ. ಮಾರಮ್ಮನ ಗದ್ದುಗೆಯೂ ಇದೆ. ಇಲ್ಲಿನ ದೈವಸಂಬಂಧಿ ಆಚರಣೆ ಕುಲಾಚಾರದ ವಿಧಾನದಲ್ಲಿ ಸಾಂಪ್ರದಾಯಿಕ ಆಚರಣೆ, ಸಂಪ್ರದಾಯದೊಂದಿಗೆ ದಸರಾ ಸಂದರ್ಭದಲ್ಲಿ ಪೂಜೆ, ಉತ್ಸವ ಏರ್ಪಡುತ್ತದೆ. ಮಾರಮ್ಮನಿಗೆ ಆರತಿ, ಬಾನ, ಬ್ಯಾಟೆ ನೀಡಿ ಗ್ರಾಮ ಹಬ್ಬವಾಗಿ ಪರಿಗಣಿಸಲಾಗುವುದು.

## ಬ್ರಹ್ಮಸಂದ್ರ

ಬ್ರಹ್ಮಸಂದ್ರ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೦ ಕಿಮೀ ದೂರದಲ್ಲಿದೆ. ಸಿರಾ–ತುಮಕೂರು ರಾಷ್ಟ್ರೀಯ ಹೆದ್ದಾರಿಯ ಬ್ರಹ್ಮಸಂದ್ರ ಗೇಟಿನಿಂದ ಎಡಭಾಗದಲ್ಲಿ ತರೂರು ರಸ್ತೆಯಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಗೊಲ್ಲರಹಟ್ಟಿ ಎಂಬ ಬುಡಕಟ್ಟು ಹಟ್ಟಿಯನ್ನು ಮಜರೆ ಗ್ರಾಮವಾಗಿಸಿಕೊಂಡಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೪೨೮.೭೬ ಹೆಕ್ಟೇರ್ ಇದ್ದು ಕಂದುಮಿಶ್ರಿತ ಮರಳು ಮಣ್ಣನ್ನು ಹೊಂದಿದೆ. ಈ ಗ್ರಾಮ ಮೊದಲಿಗೆ ಅಗ್ರಹಾರವಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಬ್ರಾಹ್ಮಣರು, ವೈಶ್ಯ ಜನಾಂಗ ಇತ್ತೆಂದು ಹೇಳಲಾಗುತ್ತಿದೆ. ಗ್ರಾಮಕ್ಕೆ ಹೊಂದಿಕೊಂಡಂತೆ ೨ ಕೆರೆಗಳಿದ್ದು ಇದನ್ನು ಜೋಡಿಕೆರೆ ಗ್ರಾಮ ಎಂತಲೂ ಕರೆಯಲಾಗುತ್ತಿದೆ. ಈ ಕಾರಣದಿಂದಲೇ ಮಹಾಕೆರೆ ಎಂಬ ಶಬ್ದ ಉತ್ಪ್ರೇಕ್ಷೆಯಂತೆ ಬ್ರಹ್ಮಕೆರೆಗಳಾಗಿ ಬೊಮ್ಮಸಂದ್ರ, ಸಾಗರ ಎಂಬ ಅರ್ಥದಲ್ಲಿ ಬ್ರಹ್ಮಸಂದ್ರವಾಗಿದೆ.

ಈ ಗ್ರಾಮದ ಪೂರ್ವಕ್ಕೆ ತರೂರು ಗುಡ್ಡವಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಮೊಲ, ಹಂದಿ, ಕರಡಿ ಕಂಡುಬಂದರೆ ಗ್ರಾಮದಲ್ಲಿ ಸಾಕುಪ್ರಾಣಿಗಳಾಗಿ ಹಸು, ಹಳ್ಳಿಕಾರ್ ತಳಿ ಎತ್ತನ್ನು, ಎಮ್ಮೆ, ಕುರಿ, ಮೇಕೆ, ನಾಯಿ ಸಾಕಿದ್ದಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಗಳಾಗಿ ಗಿಳಿ, ಗೂಬೆ, ಗುಬ್ಬಚ್ಚಿ, ಗರುಡ, ಹದ್ದು, ಕಾಗೆ, ಕೋಗಿಲೆ, ಕೌಜಲಗ ಕಂಡುಬರುತ್ತವೆ.

ವಾಯವ್ಯ ಸೀಮೆ, ಮಳೆ. ಮಳೆ ಕಡಿಮೆ. ವಾರ್ಷಿಕ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೬ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಎರಡು ಕೆರೆಗಳಿದ್ದರೂ ತುಂಬುವುದು ದುರ್ಲಭ ಹಾಗೂ ಕೆರೆ ಹೂಳು ತುಂಬಿ ಗಿಡಮರಗಳ ಪೊದೆ ಬೆಳೆದಿದೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ. ೧೫ ಸಿಸ್ಟರ್ನ್‌ಗಳಿದ್ದು ೨ ಕೈಪಂಪುಗಳಿವೆ. ಕೃಷಿಗೆ ೧೨೦ ಕೊಳವೆ ಬಾವಿಗಳಿವೆ.

ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ದೊಡ್ಡ ಸಮುದಾಯವಾಗಿದ್ದು ಬೇಡರು, ಕುಂಚಿಟಿಗ, ಕಮ್ಮಾರ, ಬ್ರಾಹ್ಮಣ ಕಿರುಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮನೆಮಾತಾಗಿದೆ. ವಿವಿಧ ಪ್ರಕಾರಗಳ ೩೫೬ ಮನೆಗಳಿದ್ದು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಹಾಗೂ ೪ ಗುಡಿಸಲುಗಳಿವೆ. ಇಲ್ಲಿ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೯೭ ಫಲಾನುಭವಿಗಳಿದ್ದಾರೆ. ೧೩೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೧೧೦೦ ಜನಸಂಖ್ಯೆ ಇದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಎತ್ತಿನಗಾಡಿ, ಟ್ರ್ಯಾಕ್ಟರ್, ಟೆಂಪೋ, ಆಟೋ, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಅವರೆ, ತೊಗರಿ, ಜೋಳ, ಭತ್ತದ ಬೆಳೆಗಳಿವೆ. ತೋಟಗಾರಿಕೆ ಬೆಳೆಗಳಾದ ತೆಂಗು, ಮಾವು, ಅಡಿಕೆ ತೋಟಗಳಿವೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೫೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶಿಕ್ಷಣ, ಸಾರಿಗೆ, ಆರೋಗ್ಯ, ಕಂದಾಯ ಇಲಾಖೆಗೆ ಸೇರಿದ ೧೪ ಜನ

ಸರ್ಕಾರಿ ನೌಕರರಿದ್ದಾರೆ. ಗೃಹಕಸುಬಾಗಿ ಬೀಡಿ ಸುತ್ತುವುದು, ಹೂ ಕಟ್ಟುವುದು, ಟೈಲರಿಂಗ್ ಕೆಲಸಗಳಿವೆ. ಶ್ರೀಕಂಠಯ್ಯ ಎಂಬ ಪ್ರವಚನಕಾರರು ಶ್ರೀ ತಾರಕಾನಂದ ಸಂಪುಟ ಕೃತಿ ಪ್ರಕಟಿಸಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ತರೂರು ತಾಲ್ಲೂಕು ಪಂಚಾಯ್ತಿ, ಚಿನ್ನೇನಹಳ್ಳಿ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಈ ಗ್ರಾಮದ ೩ ಜನ ಪಂಚಾಯ್ತಿ ಪ್ರತಿನಿಧಿಗಳಿದ್ದಾರೆ. ೪ ಸ್ತ್ರೀಶಕ್ತಿ ಸಂಘ, ೪ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳಾ ಸಬಲೀಕರಣಕ್ಕೆ ಕಾರಣವಾಗಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ, ಸರ್ಕಾರಿ ಪ್ರೌಢಶಾಲೆಗಳಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೬.೬ ರಷ್ಟಿದೆ.

ಪ್ರಾಥಮಿಕ ಕಿರು ಆರೋಗ್ಯ ಕೇಂದ್ರವಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸ್ವಾಮಿ ವಿವೇಕಾನಂದ ಶೈಕ್ಷಣಿಕ ಸಂಪನ್ಮೂಲ ಕೇಂದ್ರವಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಹೋಟೆಲ್, ೪ ಪೆಟ್ಟಿಗೆ ಅಂಗಡಿಗಳಿವೆ. ಅರಳಿಕಟ್ಟೆ, ನಾಗರಕಟ್ಟೆಗಳಿವೆ. ಈಶ್ವರ, ಆಂಜನೇಯ, ಮಲ್ಲಮ್ಮ, ಮಾರಮ್ಮ ದೇವಾಲಯಗಳಿವೆ. ಮಾರಮ್ಮನ ಊರಹಬ್ಬ ಆಚರಿಸಿ ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ಮಹಾನವಮಿ, ದೀಪಾವಳಿ, ಶಿವರಾತ್ರಿ, ಗಣೇಶನ ಹಬ್ಬಗಳ ಆಚರಣೆಯಿದೆ.

## ಬ್ಯಾಡರಹಳ್ಳಿ

ಬ್ಯಾಡರ, ಬೇಡರಹಳ್ಳಿ ಎಂದು ಕರೆಯಲ್ಪಡುವ ಈ ಗ್ರಾಮ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೩೦ ಕಿಮೀ ದೂರದಲ್ಲಿದ್ದು ಗುಬ್ಬಿ–ಸಿರಾ ತಾಲ್ಲೂಕು ಗಡಿಕಲ್ಲಿನ ಗ್ರಾಮವಾಗಿದೆ. ಇದೊಂದು ಹುಂಜನಾಳ ಮೂಲ ಗ್ರಾಮದ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೨೬೨೩.೪೩ ಹೆಕ್ಟೇರ್ ಭೂಮಿಯಲ್ಲಿ ಮೂಲ ಗ್ರಾಮಗಳೊಂದಿಗೆ ಹಂಚಿಕೆಯಾಗಿದೆ.

ಬೇಡ ಜನಾಂಗ ಮೊದಲಿಗೆ ವಾಸಿಸುತ್ತಿದ್ದರಿಂದ ಸರ್ಕಾರಿ ಲೆಕ್ಕದಲ್ಲಿ ಬೇಡರಹಳ್ಳಿ ಎಂದು ನಮೂದಾಗಿದೆ. ವಾಸ್ತವವಾಗಿ ಇಂದು ಬೇಡ ಜನಾಂಗ ಕಡಿಮೆ ಸಂಖ್ಯೆಯಲ್ಲಿದ್ದು ಕುಂಚಿಟಿಗ ಮತ್ತು ಆದಿಕರ್ನಾಟಕ ಜನಾಂಗ ಗ್ರಾಮದ ದೊಡ್ಡ ಸಮುದಾಯವಾಗಿದೆ. ಬ್ಯಾಡರು, ಕಮ್ಮಾರ, ಅಕ್ಕಸಾಲಿಗ, ವೈಶ್ಯ ಕಿರು ಸಮುದಾಯಗಳಾಗಿವೆ. ಕನ್ನಡ ಭಾಷೆ ಗ್ರಾಮಭಾಷೆಯಾಗಿದೆ.

ಬಿಳಿ–ಕೆಂಪು ನುರುಜುಗಲ್ಲು, ಮರಳು ಮಿಶ್ರಿತ ಕಂದು ಭೂಮಿ ಇಲ್ಲಿನ ಲಕ್ಷಣವಾಗಿದೆ. ಗ್ರಾಮದ ಪಶ್ಚಿಮಕ್ಕೆ ೧೨೦ ಎಕರೆ ರಕ್ಷಿತ ಅರಣ್ಯವಿದೆ. ಹಾಗಾಗಿ ನರಿ, ತೋಳ, ಮೊಲ, ಜಿಂಕೆ, ಮುಂಗುಸಿ, ಕಾಡುಬೆಕ್ಕು ಕಂಡುಬರುತ್ತವೆ. ರೈತಾಪಿ ಬದುಕಿಗೆ ನಾಟಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ನವಿಲು ಗಿಳಿ, ಕೌಜುಗ, ಗರುಡ, ಹದ್ದು, ಕಾಗೆ, ಗೂಬೆ, ಗಿಳಿ ಮೊದಲಾದ ಕಾಡುಪಕ್ಷಿಗಳು ಈ ಪರಿಸರದಲ್ಲಿ ಕಂಡುಬರುತ್ತವೆ. ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗುತ್ತದೆ.

ವಾಡಿಕೆ ಮಳೆ ೪೬೫ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ನೀರಿನ ಆಶ್ರಯವಾಗಿ ಒಂದು ಕೆರೆಯಿದ್ದು ಮಳೆಯಿಂದ ಮಾತ್ರ ತುಂಬುತ್ತದೆ. ಗ್ರಾಮದ ಬದಿಗೆ ಹುಂಜನಾಳದ ಹಳ್ಳವಿದ್ದು ಇದರಲ್ಲಿ ಹೇಮಾವತಿ ನೀರು ಪಟ್ಟರಾವುತನಹಳ್ಳಿಯಿಂದ ಸಿರಾ ಕೆರೆಗೆ ಹರಿಯುತ್ತದೆ. ಕುಡಿಯುವುದಕ್ಕೆ ನೀರಿಗೆ ಪಂಚಾಯ್ತಿ ವತಿಯಿಂದ ಚಿಕ್ಕ ಟ್ಯಾಂಕ್‌ಗಳಿಗೆ ಬೋರ್‌ವೆಲ್‌ಗಳ ಮೂಲಕ ನೀರು ಪೂರೈಸಿ ಒದಗಿಸಲಾಗುತ್ತದೆ. ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಮನೆಗಳು, ೨ ಗುಡಿಸಲು ಸೇರಿ ಒಟ್ಟು ೯೫ ಮನೆಗಳಿವೆ. ಇವು ಆಶ್ರಯ, ಅಂಬೇಡ್ಕರ್ ಆವಾಸ್ ವಸತಿ ಯೋಜನೆಯ ೧೯ ಫಲಾನುಭವಿಗಳು, ಭಾಗ್ಯಜ್ಯೋತಿ ಯೋಜನೆಯ ಅವಕಾಶ ಪಡೆದವರೂ ಇದ್ದಾರೆ. ೪೭೮ ಜನಸಂಖ್ಯೆ ಇದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಬೈಕ್, ಆಟೋ ಬಳಸುತ್ತಾರೆ.

ಶೇಂಗಾ ಗ್ರಾಮದ ಮುಖ್ಯ ಬೆಳೆ. ಆಹಾರ ಬೆಳೆಯಾಗಿ ರಾಗಿ, ತೊಗರಿ, ಹುರುಳಿ ಬೆಳೆಯುತ್ತಾರೆ. ಶೇಂಗಾ ಮತ್ತು ಹುಣಸೆ ಹಣ್ಣಿನ ವ್ಯಾಪಾರವೂ ಇದೆ. ೬ ಮಂದಿ ಸರ್ಕಾರಿ ನೌಕರರಿದ್ದಾರೆ. ಊಟದ ಎಲೆ ತಯಾರಿಕೆ, ಬೀಡಿ ಸುತ್ತುವುದು, ಹಿಟ್ಟಿನ ಗಿರಣಿ ಸಣ್ಣ ಕೈಗಾರಿಕೆಗಳಾಗಿವೆ. ಶಿಕ್ಷಣ, ಸಾರಿಗೆ, ಅಂಚೆ

ಇಲಾಖೆಗೆ ಸೇರಿದ ೭ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವಕೀಲರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಸೀಬಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಈ ಹಳ್ಳಿ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳ ೨ ಗುಂಪುಗಳಿವೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಶಾಲೆಯಲ್ಲಿ ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೪೮.೯ ರಷ್ಟಿದೆ. ಪುರುಷರು ೬೦%, ಮಹಿಳೆಯರು ೩೮% ರಷ್ಟಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳು, ಟೀ ಅಂಗಡಿಗಳಿವೆ. ಗ್ರಾಮದಲ್ಲಿ ಪಾತಲಿಂಗೇಶ್ವರ, ಆಂಜನೇಯ, ಊರ ಹೊರಗೆ ಶನಿದೇವರ ದೇವಸ್ಥಾನವಿದೆ. ಆಂಜನೇಯನ ಊರಹಬ್ಬವನ್ನು ಶ್ರಾವಣ ಮಾಸದಲ್ಲಿ ಆರತಿಯೊಂದಿಗೆ ನಡೆಸುತ್ತಾರೆ. ವಿಶೇಷವಾಗಿ ವಾರ್ಷಿಕ ಪರ, ಸಾಮೂಹಿಕ ಅನ್ನದಾನ ಕಾರ್ಯಕ್ರಮವೂ ಈ ಸಂದರ್ಭದಲ್ಲಿರುತ್ತದೆ.

ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ, ಸಂಕ್ರಾಂತಿ, ಗೌರಿಹಬ್ಬಗಳನ್ನು ಆಚರಿಸುತ್ತಾರೆ. ಸಿರಾ, ತುಮಕೂರ, ಚೇಳೂರು, ರಂಗನಹಳ್ಳಿಗೆ ರಸ್ತೆ ಸಂಪರ್ಕ, ಬಸ್ ಸಂಪರ್ಕವೂ ಇದೆ.

## ಬ್ಯಾಟಗನಹಟ್ಟಿ

ಬ್ಯಾಟಗನಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವ–ಉತ್ತರವಾಗಿ ೨೧ ಕಿಮೀ ದೂರದಲ್ಲಿದೆ. ಇದು ಬಾಳಬಸವನಹಳ್ಳಿಗೆ ಸೇರಿದ ಮಜರೆ ಗ್ರಾಮವಾಗಿದ್ದು ಬೇಟೆ ಮೂಲದಿಂದ ಬ್ಯಾಟಗನಹಳ್ಳಿ ಎಂಬ ಹೆಸರು ಹಾಗೂ ಬೆಟ್ಟಪ್ಪ ಎಂಬ ವ್ಯಕ್ತಿಯ ಮೂಲದಿಂದಲೂ ಈ ಗ್ರಾಮಕ್ಕೆ ಬ್ಯಾಟಗಾನಹಳ್ಳಿ ಹೆಸರು ಬಂದಿದೆ. ಹಟ್ಟಿ ವಿಶೇಷ ಶಬ್ದವಾಗಿದ್ದು ಆದಿಕರ್ನಾಟಕ ಜನಾಂಗ ವಾಸಿಸುವ ಸ್ಥಳಕ್ಕೆ ಹಟ್ಟಿ ಎಂದು ಕರೆಯುತ್ತಾರೆ. ಸಮುದಾಯದಲ್ಲಿ ಹಟ್ಟಿ ಪ್ರತ್ಯೇಕ ಬಡಾವಣೆಗೆ ಇರುವ ಹೆಸರಾಗಿದೆ. ಕಾಡುಗೊಲ್ಲರ ಊರನ್ನು ಹೇಳುವಾಗ ಸಹಜವಾಗಿ ಗೊಲ್ಲರಹಟ್ಟಿ ಅಂದೇ ಕರೆಯಲಾಗುವುದು. ಈ ಹಿನ್ನೆಲೆಯಲ್ಲಿ ಬ್ಯಾಟನಗನಹಟ್ಟಿ ಸಿರಾ ತಾಲ್ಲೂಕಿನ ವಿಶಿಷ್ಟ ಗ್ರಾಮ ಸೂಚಿಯಾಗಿದೆ.

ಈ ಗ್ರಾಮದ ಭೌಗೋಳಿಕ ವ್ಯಾಪ್ತಿ ೪೮.೦೭ ಹೆಕ್ಟೇರ್ ಆಗಿದೆ. ಕೆಂಪು ಮರಳು ಮಿಶ್ರಿತ ಮಣ್ಣನ್ನು ಹೊಂದಿದ್ದು ಬಯಲು ಪ್ರದೇಶ. ಕುರುಚಲು ಗಿಡ, ಹಳ್ಳ–ದಿಣ್ಣೆಗಳಿಂದ ಕೂಡಿದ ಪ್ರದೇಶವಾಗಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಜಿಂಕೆ, ಹಂದಿ, ಮೊಲ, ಮುಂಗುಸಿ ಹಾಗೂ ವಿಷಪೂರಿತ ಹಾವುಗಳಿವೆ. ಗ್ರಾಮದಲ್ಲಿ ಕೃಷಿಗಾಗಿ ಹಸು ಸಾಕಿದ್ದಾರೆ. ಕುರಿ, ಮೇಕೆ, ಕೋಳಿ ಸಾಕುಪ್ರಾಣಿಗಳಾಗಿವೆ.

ಬಿಸಿಲು ಅಧಿಕ. ೩ ವರ್ಷಗಳಲ್ಲಿ ವಾಡಿಕೆ ಮಳೆ ೫೫೭ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿಗೆ ಮಳೆ ನೀರೇ ಆಧಾರವಾಗಿದ್ದು ನಿಸರ್ಗದತ್ತ ನೀರಿನ ಜೊತೆಗೆ ೧೦ ಕೊಳವೆ ಬಾವಿಗಳಿವೆ. ಇಲ್ಲಿ ಗಂಗಾಕಲ್ಯಾಣ ಯೋಜನೆಯ ಫಲಾನುಭವಿಗಳಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಯೋಜನೆ ಅಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ. ಒಂದು ಸಿಸ್ಟರ್ನ್ ಇದ್ದು ಒಂದು ಕೈಪಂಪು ಸಹ ಇದೆ.

ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಪೂರ್ಣವಾಸಿಗಳಾಗಿದ್ದು ೩೦ ಮನೆಗಳಿವೆ. ಇವು ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದ ರಚನೆಗಳಾಗಿವೆ. ೧೨೦ ಜನಸಂಖ್ಯೆ ಹೊಂದಿದ್ದು ಇಲ್ಲಿನ ಮನೆಗಳು ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ೨೭ ಫಲಾನುಭವಿಗಳಾಗಿದ್ದಾರೆ. ೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನವಾದ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರೇಷ್ಮೆ, ಸೇವಂತಿಗೆ ಹೂ ಬೆಳೆಯುತ್ತಾರೆ. ಶೇಂಗಾ ಮುಖ್ಯ ವ್ಯಾಪಾರಿ ಸರಕು. ಹುಣಸೆಹಣ್ಣು, ಹೊಂಗೆ ಬೀಜ ಸಂಗ್ರಹ ವ್ಯಾಪಾರವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದ್ದು ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ತರೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿದೆ ಸೇರಿದೆ. ಒಂದು ಅಂಗನವಾಡಿ ಸ್ವಸಹಾಯ ಸಂಘ, ಅಂಗನವಾಡಿ ಕೇಂದ್ರವಿದ್ದು ೧೯ ಮಕ್ಕಳಿದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರ ನೀಡಲಾಗುತ್ತಿದೆ. ಗ್ರಾಮದಲ್ಲಿ ೫೮% ಸಾಕ್ಷರರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸ್ವಾಮಿ ವಿವೇಕಾನಂದ ಸಂಪನ್ಮೂಲ ಕೇಂದ್ರವಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಪೆಟ್ಟಿಗೆ ಅಂಗಡಿ ಇದೆ. ಭೂತಪ್ಪ, ಮಾರಮ್ಮನ ಪೌಳಿಯಿದೆ. ಕುನ್ನಾಲಮ್ಮನ ಜಾತ್ರೆಯಂದು ಆರತಿ ಮಾಡಿ ಬಲಿ ಕೊಡುವುದು ಇಲ್ಲಿನ ಸಂಪ್ರದಾಯವಾಗಿದೆ. ಯುಗಾದಿ, ಶಿವರಾತ್ರಿ, ದಸರಾ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ.

## ಬೋರಸಂದ್ರ

ಬೋರಸಂದ್ರ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೩ ಕಿಮೀ ದೂರದಲ್ಲಿದೆ. ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿಯ ದೊಡ್ಡ ಆಲದಮರದ ಗೇಟಿನಿಂದ ಉತ್ತರಕ್ಕೆ ೩.೫ ಕಿಮೀ ದೂರದಲ್ಲಿದೆ. ಗ್ರಾಮವು ಕಂದಾಯ ಗ್ರಾಮವಾಗಿದ್ದು ಭೌಗೋಳಿಕವಾಗಿ ೪೪೬.೦೪ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ಒಂದು ಕೆರೆಯಿದ್ದು ಈ ಕಾರಣದಿಂದಲೇ ಬೋರನಸಂದ್ರ – ಬೋರಸಂದ್ರವಾಗಿದೆ ಎಂಬ ಅಭಿಪ್ರಾಯವನ್ನು ಗ್ರಾಮದ ತಿಮ್ಮಣ್ಣ ವ್ಯಕ್ತಪಡಿಸುತ್ತಾರೆ. ಆರಂಭದಲ್ಲಿ ಬೋರಸಮುದ್ರ ಎಂತಲೇ ಕರೆಯುತ್ತಿದ್ದ ಗ್ರಾಮ ನಂತರದ ದಿನಗಳಲ್ಲಿ ಸಂದ್ರವಾಗಿದೆ.

ಬಿಳಿ–ಕೆಂಪು ಮಿಶ್ರಿತ ಮರಳು ಭೂಮಿಯನ್ನು ಹೊಂದಿರುವ ಈ ಗ್ರಾಮದ ಪರಿಸರ ಕುರುಚಲು ಗಿಡ, ಪೊದೆ, ಹಳ್ಳ, ದಿಣ್ಣೆಗಳಿಂದ ಕೂಡಿದ್ದು ಈ ಪರಿಸರದಲ್ಲಿ ಮೊಲ, ಮುಂಗುಸಿ, ನರಿ ಮೊದಲಾದ ಕಾಡುಪ್ರಾಣಿಗಳನ್ನು ಕಾಣಬಹುದಾಗಿದೆ. ಜೊತೆಗೆ ರೈತಾಪಿ ಬದುಕೇ ಪ್ರಧಾನವಾಗಿರುವ ಇಲ್ಲಿ ಹಸು, ಎತ್ತು ಎಮ್ಮೆಗಳನ್ನು, ಕುರಿ–ಮೇಕೆಗಳನ್ನು ಸಾಕುತ್ತಾರೆ. ಪಕ್ಷಿಗಳಾದ ನವಿಲು, ಕೌಜುಗ, ಬೆಳವ, ಮರಕುಟಿಕ, ಗಿಳಿ, ಬೆಳವ, ಹಾಲಕ್ಕಿ ಕಂಡುಬರುತ್ತವೆ. ಸಾಕುಪ್ರಾಣಿಯಾಗಿ ಗ್ರಾಮದಲ್ಲಿ ಕೋಳಿ ಸಾಕಾಣಿಕೆ ಇದೆ. ಶೇಂಗಾ ಗ್ರಾಮದ ಪ್ರಮುಖ ಬೆಳೆಯಾಗಿದ್ದು ನೀರಿಗೆ ತೊಂದರೆಯಿದೆ.

ವಾಡಿಕೆ ಮಳೆ ೪೬೫ ಮಿಮೀ ಆಗಿದ್ದು ಉಷ್ಣಾಂಶ ೩೬ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮಕ್ಕೆ ಒಂದು ಕೆರೆಯಿದ್ದು ಮಳೆ ಬಂದರೆ ಮಾತ್ರ ತುಂಬುತ್ತದೆ. ಉಳಿದಂತೆ ಸಣ್ಣ ಪ್ರಮಾಣದ ಮಳೆಗೆ ಅರೆ ಕೆರೆಯಾಗಿ ಗ್ರಾಮದ ದೈನಂದಿನ ಸ್ವಚ್ಛತೆ ದನ–ಕರುಗಳಿಗೆ ಉಪಯೋಗವಾಗುತ್ತದೆ. ಗ್ರಾಮದ ಪಶ್ಚಿಮಕ್ಕೆ ಒಂದು ಹಳ್ಳವಿದ್ದು ಮಳೆಗಾಲದಲ್ಲಿ ಹೆಚ್ಚುವರಿ ನೀರು ಹರಿದುಹೋಗುತ್ತದೆ. ಇದರಿಂದ ಗ್ರಾಮಕ್ಕೆ ಪ್ರಯೋಜನ ಇರುವುದಿಲ್ಲ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ನೀರಿನ ವ್ಯವಸ್ಥೆಯಾಗಿದ್ದು ೩ ಸಿಸ್ಟರ್ನ್‌ಗಳಲ್ಲಿ ನೀರು ಬಿಡಲಾಗುತ್ತಿದೆ. ಒಂದು ಕೈಪಂಪು ಸಹ ಇದ್ದು ಸಧ್ಯ ದುರಸ್ತಿಯಲ್ಲಿದೆ.

ಗ್ರಾಮದ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ನಾಯಕ ಸಣ್ಣ ಸಮುದಾಯವಾಗಿದೆ. ಸಣ್ಣ ಪ್ರಮಾಣದಲ್ಲಿ ಕ್ರಿಶ್ಚಿಯನ್ ಜನಾಂಗವೂ ನೆಲೆಸಿದೆ. ಕನ್ನಡ ಮಾತೃಭಾಷೆಯಾಗಿರುವ ಇಲ್ಲಿನ ಜನತೆ ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಲ್ಲಿ ವಾಸಿಸುತ್ತಾರೆ. ವಸತಿ ಯೋಜನೆಯ ಫಲಾನುಭವಿಗಳಲ್ಲಿ ಆಶ್ರಯ, ಜನತಾ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ೨೨ ಫಲಾನುಭವಿಗಳಿದ್ದು ಗ್ರಾಮದ ಒಟ್ಟು ೮೮ ಮನೆಗಳಲ್ಲಿ ೩೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೩೮೪ ಜನಸಂಖ್ಯೆ ಇದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನ ಬಳಕೆ ನಿಧಾನವಾಗಿ ಕಡಿಮೆಯಾಗುತ್ತಿದ್ದು ೨ ಎತ್ತಿನ ಬಂಡಿಗಳ ಬಳಕೆಯಿದೆ. ಟ್ರ್ಯಾಕ್ಟರ್, ಮಿನಿ ಟೆಂಪೋ, ಆಟೋ ಬಳಕೆ ವ್ಯಾಪಕವಾಗಿದೆ. ಶೇಂಗಾ ಮುಖ್ಯ ಬೆಳೆಯಾಗಿರುವ ಈ ಗ್ರಾಮದಲ್ಲಿ ಆಹಾರ ಬೆಳೆಯಾಗಿ ರಾಗಿ, ತೊಗರಿ, ಜೋಳ, ಅಲಸಂದೆ, ಹೆಸರು ಬೆಳೆಗಳನ್ನು ಬೆಳೆಯುತ್ತಾರೆ. ಸೂರ್ಯಕಾಂತಿ, ರೇಷ್ಮೆ ಅಲ್ಪ ಪ್ರಮಾಣದ ಬೆಳೆಗಳು. ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ದಾಳಿಂಬೆ ಬೆಳೆಯೂ ಇದೆ. ವಾಣಿಜ್ಯ ಬೆಳೆಯಾಗಿ ತೆಂಗು, ಅಡಿಕೆ, ಶೇಂಗಾ ಬೆಳೆ ಗ್ರಾಮದ ಜೀವನಾಡಿಯಾಗಿವೆ. ಇಬ್ಬರು ಶಿಕ್ಷಣ, ಅರಣ್ಯ ಇಲಾಖೆಯ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಹೆಂಗಸರು ಉಪಕಸುಬಾಗಿ ಹೂ ಕಟ್ಟುವುದು, ಬೀಡಿ ಸುತ್ತುವುದು ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ ಹಾಗೂ ಸಿರಾ ತಾಲ್ಲೂಕು, ಗ್ರಾಮಪಂಚಾಯ್ತಿ ಕೇಂದ್ರವಾಗಿರುವ ಬೋರಸಂದ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ೨ ಸ್ತ್ರೀಶಕ್ತಿ ಸಂಘದ ಘಟಕಗಳು, ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘ ಕೆಲಸ ಮಾಡುತ್ತಿದ್ದು ಮಹಿಳೆಯರ ಸಬಲೀಕರಣಕ್ಕೆ ಶ್ರಮಿಸುತ್ತಿವೆ. ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಒಬ್ಬರು ಶಿಕ್ಷಕರು, ೨೪ ಮಕ್ಕಳಿದ್ದಾರೆ. ಸರ್ಕಾರಿ ಕಿರಿಯ ಶಾಲೆಯಲ್ಲಿ ಇಬ್ಬರು ಶಿಕ್ಷಕರು, ೩೭ ಮಕ್ಕಳಿದ್ದಾರೆ.

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಒಟ್ಟು ಸಾಕ್ಷರತೆಯ ಪ್ರಮಾಣ ೬೮.೨ ಆಗಿದ್ದು ೫೮.೨ ಪುರುಷರು, ೭೭% ಮಹಿಳೆಯರು ಇದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಯಿದೆ. ಗ್ರಾಮದ ಹೊರ ವಲಯದ ಜಮೀನಿನಲ್ಲಿ ೧ ವೀರಗಲ್ಲು ಇದ್ದು ವೀರನ ಹೋರಾಟದ ಚಿತ್ರಸಹಿತ ವೀರನ ಚಾರಿತ್ರಿಕ ಮಾಹಿತಿಯ ಬರಹವಿದೆ.

ಗ್ರಾಮದ ಪ್ರವೇಶದ ಬಲಭಾಗದಲ್ಲಿ ಆಂಜನೇಯ, ಎಡಭಾಗದಲ್ಲಿ ಮುದ್ದೆಮಾರಮ್ಮ ದೇವಾಲಯಗಳು ಗ್ರಾಮ ಸಂಸ್ಕೃತಿಯ ರೂಪವಾಗಿವೆ. ಕೊಲ್ಲಾಪುರದಮ್ಮನ ಪೌಳಿಯಿದ್ದು ಊರ ಹಬ್ಬವಾಗಿ ಆರತಿ, ಬಲಿ, ಆಚರಣೆ ವಾರ್ಷಿಕ ಊರ ಹಬ್ಬವಾಗಿ ನಡೆದು ಬಂಧು–ಬಳಗದ ಸಂಭ್ರಮವಿರುತ್ತದೆ. /ಯುಗಾದಿ, ಶಿವರಾತ್ರಿ, ದೀಪಾವಳಿ, ಮಹಾನವಮಿ, ಗೌರಿ–ಗಣೇಶ ವಿಶೇಷ ಹಬ್ಬಗಳಾಗಿವೆ. ಈ ಗ್ರಾಮದ ಉತ್ತರ ದಿಕ್ಕಿನಲ್ಲಿ ನೆಟ್ಟಿರುವ ವೀರಗಲ್ಲು ಶಾಸನದಲ್ಲಿ ಹೊಯ್ಸಳ ರಾಜ ಇಮ್ಮಡಿ ವೀರಬಲ್ಲಾಳನು ನೊಳಂಬವಾಡಿಯ ಮೇಲೆ ಧಾಳಿ ಮಾಡಿದನು. ಯುದ್ಧ ಸೀಬಿಯ ಬಳಿ ನಡೆದಾಗ ಬೊಮ್ಮಯ್ಯಗೌಡ ಹೋರಾಟದಲ್ಲಿ ಮಡಿಯುತ್ತಾನೆ. ಆತನ ಮಗ ಬ್ರಹ್ಮಯ್ಯನು ಒಂದು ವೀರಗಲ್ಲನ್ನು ತಂದೆಯ ಸ್ಮಾರಕವಾಗಿ ನೆಟ್ಟ ಸಂಗತಿಯನ್ನು ಈ ಶಾಸನ ತಿಳಿಸುತ್ತದೆ. ಕಾಲ ಕ್ರಿ.ಶ.೧೧೭೫ ಆಗಿದ್ದು ಎ.ಗ್ರಾ.ಕ. ಸಂಪುಟ–ಫಿಖಖ ರಲ್ಲಿ ಪ್ರಕಟವಾಗಿದೆ.

## ಬಸವನಹಳ್ಳಿ

ಬಸವನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಸಿರಾ ಚೇಳೂರು ರಸ್ತೆಯಲ್ಲಿ ಬೆಂಚೆಗೇಟಿನಿಂದ ಬಲಭಾಗಕ್ಕೆ ೧ ಕಿ.ಮೀ. ದೂರದಲ್ಲಿರುವ, ಸಿರಾದಿಂದ ೧೬ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಕಂದಾಯ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಬಸವಣ್ಣ ದೇವಸ್ಥಾನವಿರುವುದರಿಂದ ಈ ಹಳ್ಳಿಗೆ ಬಸವನಹಳ್ಳಿ ಎಂಬ ಹೆಸರು ಬಂದಿದೆ ಎಂದು ಹೇಳುತ್ತಾರೆ.

ಈ ಗ್ರಾಮ ಒಟ್ಟು ಭೌಗೋಳಿಕ ವಿಸ್ತೀರ್ಣವೂ ೨೧೭.೨೬ ಹೆಕ್ಟೇರ್ ಗಳಾಗಿದ್ದು ಬಯಲು ನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿರುವ ಇದು ಕುರುಚಲು ಗಿಡದ ಅರಣ್ಯವನ್ನು ಹೊಂದಿದೆ. ಯಾವುದೇ ಬೆಟ್ಟ, ಗುಡ್ಡವನ್ನು ಹೊಂದಿಲ್ಲ.

ಇಲ್ಲಿ ೪೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ವಾರ್ಷಿಕ ಮಳೆಯ ಸರಾಸರಿ ೪೬೦ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ತಾಪ ೩೭ಂ ಸೆಂ. ಇದ್ದು, ಚಳಿಯು ೯ಂ ಸೆಂ. ಇರುತ್ತದೆ. ಇಲ್ಲಿ ಒಂದು ಕಟ್ಟೆ ಇದೆ. ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿಯಿಂದ ಕೈ ಪಂಪನ್ನು ಕಲ್ಪಿಸಲಾಗಿದೆ.

ಈ ಗ್ರಾಮದಲ್ಲಿ ೧೨೨ ಮನೆಗಳಿದ್ದು, ೫೦೨ ಜನಸಂಖ್ಯೆಯನ್ನು ಹೊಂದಿದೆ. ಕನ್ನಡ ಈ ಗ್ರಾಮದ ಮಾತೃ ಭಾಷೆ ಕನ್ನಡವಾಗಿದೆ. ಕುಂಚಿಟಿಗ, ವೀರಶೈವ, ನಾಯಕರ ಮನೆಗಳಿವೆ. ಇವರ ಮುಖ್ಯ ಆಹಾರ ಮುದ್ದೆ, ಅನ್ನ ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ, ಕಿಚುಡಿ ಇತ್ಯಾದಿಗಳಾಗಿವೆ. ಸಾಂಪ್ರದಾಯಿಕ ವಾಹನಗಳೊಂದಿಗೆ ಟ್ರ್ಯಕ್ಟರ್, ಮಿನಿಟೆಂಪೋ ಮತ್ತು ದ್ವಿಚಕ್ರ ವಾಹನಗಳು ಇವೆ. ಕಚ್ಚಾ ರಸ್ತೆ ಮತ್ತು ಚರಂಡಿ ವ್ಯವಸ್ಥೆ ಇದೆ. ಕಲ್ಲಿನ, ಮಣ್ಣಿನ, ಹೆಂಚಿನ ಸ್ವರೂಪದ ಮನೆಗಳಿದ್ದು ಇವು ವಸತಿ ಯೋಜನೆಗಳಾದ ಇಂದಿರಾ ಆವಾಸ್ ಆಶ್ರಯ, ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಹೊಂದಿದ್ದಾರೆ.

ಈ ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು, ಶೇಂಗಾ ತೆಂಗು, ಅಡಿಕೆ, ರಾಗಿ, ಭತ್ತ, ಜೋಳ, ಮತ್ತು ದ್ವಿದಳ ಧಾನ್ಯಗಳನ್ನು , ಹುಣಸೇಹಣ್ಣಿನ ಮರಗಳು ಕಂಡು ಬರುತ್ತವೆ. ಈ ಗ್ರಾಮದಲ್ಲಿ ೧೦ ಸರ್ಕಾರಿ, ಕಂದಾಯ, ಶಿಕ್ಷಣ, ಸಾರಿಗೆ, ಅರಣ್ಯ ಇಲಾಖೆಯ ಕೆಲಸ ನಿರ್ವಹಿಸುತ್ತಿದ್ದು, ಕೃಷಿಯೊಂದಿಗೆ, ಬೀಡಿ ಸುತ್ತುವುದು ಮತ್ತು ಟೈಲರಿಂಗ್ ಕೆಲಸ ಮಾಡುತ್ತಿದ್ದಾರೆ.

ಬಸವನಹಳ್ಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ಬುಕ್ಕಾಪಟ್ಟಣ ಪಂಚಾಯ್ತಿ. ತಹಶೀಲ್ದಾರ್ ಕಛೇರಿ, ಗೋಪಾಲದೇವರಹಳ್ಳಿ ಪಂಚಾಯ್ತಿಗಳನ್ನು ಹಾಗೂ ಸಿರಾ ತಹಶೀಲ್ದಾರ್ ಕಛೇರಿಯನ್ನು ಹೊಂದಿದೆ. ಕಳ್ಳಂಬೆಳ್ಳ ವಿದ್ಯುತ್ ಮತ್ತು ಗೋಪಾಲದೇವರಹಳ್ಳಿ ಗ್ರಾಮ ಪಂಚಾಯ್ತಿ ಇಬ್ಬರು ಸದಸ್ಯರನ್ನು ಹೊಂದಿದೆ. ಈ ಗ್ರಾಮದಲ್ಲಿ ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ. ಬಗೆ ಹರಿಯದ ನ್ಯಾಯತೀರ್ಮಾನಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ. ಹಾಗೆಯೇ ಇಲ್ಲಿ ಕಂಡು ಬರುವಂತಹ ಸ್ತ್ರೀ ಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಸಂಘದಿಂದ ಸಣ್ಣ ಪ್ರಮಾಣದ ಹಣಕಾಸಿನ ಸಾಲಸೌಲಭ್ಯ ಪಡೆಯುತ್ತಿವೆ.

ಬಸವನಹಳ್ಳಿಯಲ್ಲಿ ಒಂದು ಅಂಗನವಾಡಿಕೇಂದ್ರ, ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಒಟ್ಟಾರೆ ಶೇ. ೬೨.೯ ರಷ್ಟು ಸಾಕ್ಷರತೆಯನ್ನು ಹೊಂದಿದೆ. ಈ ಗ್ರಾಮದಲ್ಲಿ ಯಾವುದೇ ಆರೋಗ್ಯ ಕೇಂದ್ರಗಳು ಇಲ್ಲದಿದ್ದರೂ ಈರದೊಡ್ಡಣ್ಣ, ನಾಟಿ ಔಷಧಿಯನ್ನು ನೀಡುತ್ತಾರೆ. ಇಲ್ಲಿ ಕಂಡು ಬರುವ ರೋಗಗಳೆಂದರೆ ಜ್ವರ, ಚಳಿ ಇತ್ಯಾದಿಗಳಾಗಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯ ಪಡೆಯುತ್ತಿದ್ದು, ಇಲ್ಲಿ ೩ ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಹೊಂದಿದೆ. ಎರಡು ಕರುಗಲ್ಲು ಐತಿಹಾಸಿಕ ನೆಲೆಗಳು ಸ್ಮಾರಕಗಳು ಕಾಣದಿದ್ದರೂ ಎರಡು ಕರುಗಲ್ಲು ಅರಳಿವೃಕ್ಷದ ಕಟ್ಟೆ ಇದೆ. ಮತ್ತು ಧಾರ್ಮಿಕ ಕೇಂದ್ರಗಳಾಗಿ ಬಸವಣ್ಣ ಮತ್ತು ದುರ್ಗಮ್ಮ ದೇವಾಲಯಗಳಿವೆ. ದುರ್ಗಮ್ಮನ ಜಾತ್ರೆಯನ್ನು ಪ್ರತಿ ವರ್ಷವೂ ಮಾಡುತ್ತಾರೆ. ಇದರಲ್ಲಿ ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿರುತ್ತದೆ. ಯುಗಾದಿ, ದಸರಾ, ಗೌರಿಗಣೇಶ, ದೀಪಾವಳಿ ಹಬ್ಬಗಳನ್ನು ಮಾಡುತ್ತಾರೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ತತ್ವಪದಕಾರರಾದ ಬಸವಣ್ಣ ಮತ್ತು ಭದ್ರಮ್ಮನವರ ತಂಡಗಳಿವೆ. ಮತ್ತು ಭಜನೆಯಲ್ಲಿ ರಂಗಸ್ವಾಮಯ್ಯನವರ ತಂಡವಿದೆ.

## ಬಟ್ಟೆಗಾನಹಳ್ಳಿ

ಬಟ್ಟೆಗಾನಹಳ್ಳಿಯು ಸಿರಾ ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ ಮೈಸೂರು ರಸ್ತೆಯಲ್ಲಿ ಬೆಂಚೆ ಗೇಟ್‌ನಿಂದ ೫ ಕಿ.ಮೀ. ದೂರದಲ್ಲಿರುವ ಸಿರಾದಿಂದ ೧೮ ಕಿ.ಮೀ.ಈ ಗ್ರಾಮವು ಕಂದಾಯ ಗ್ರಾಮವಾಗಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೧೨೪.೦೮ ಹೆಕ್ಟೇರ್‌ಗಳಾಗಿವೆ. ಅಲ್ಲದೆ ಈ ಗ್ರಾಮಕ್ಕೆ ಗೊಲ್ಲರಹಟ್ಟಿಯು ಸೇರ್ಪಡೆಯಾಗಿದೆ. ಜನಪದ ಐತಿಹ್ಯದ ಪ್ರಕಾರ ಹೊಟ್ಟೆ ನೋವಿನ ಭಟ್ಟಿ ಬೀಳುವ ಕಾಯಿಲೆಗೆ ಬಟ್ಟಿ ಕಟ್ಟುವ ಮೂಲಕ ಚಿಕಿತ್ಸೆ ನೀಡುತ್ತಿದ್ದರೆಂದು, ಅದೇ ಅನ್ವರ್ಥದಲ್ಲಿ ಬಟ್ಟೆಗಾನಹಳ್ಳಿ ಆಗಿದೆ ಎಂದು ಹೇಳಲಾಗುತ್ತದೆ.

ಬಯಲು ನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಅರಣ್ಯ ಬೆಟ್ಟ, ಗುಡ್ಡಗಳಿಂದಿದ್ದರೂ ಸ್ವಲ್ಪ ಪ್ರಮಾಣದ ಗುಡ್ಡದ ಮೇಲೆ ಬಟ್ಟೆಗಾನಹಳ್ಳಿಯ ಹಲವು ಮನೆಗಳಿವೆ. ಇಲ್ಲಿ ಒಂದು ಕಟ್ಟೆಯಿದ್ದು ಬಂದೆಗುಡ್ಡದ ಕಟ್ಟೆ ಎಂದು ಕರೆಯುತ್ತಾರೆ. ಮತ್ತು ಒಂದು ಹಳ್ಳವಿದೆ. ಇಲ್ಲಿ ಮಳೆಗಾಲದಲ್ಲಿ ಹರಿಯುತ್ತದೆ. ಮತ್ತು ೪೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಮತ್ತು ಕುಡಿಯುವ ನೀರಿಗಾಗಿ ನಾಲ್ಕು ಕೈಪಂಪುಗಳು ಮತ್ತು ಸಿಸ್ಟನ್‌ಗಳನ್ನು ಹೊಂದಿದೆ.

ಈ ಪರಿಸರದಲ್ಲಿ ನರಿ, ತೋಳ, ಮೊಲ, ಹಂದಿ, ಜಿಂಕೆ ಕಂಡು ಬಂದರೆ, ಗ್ರಾಮದಲ್ಲಿ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ಸಾಕು ಪ್ರಾಣಿಗಳಾಗಿ ಸಾಕಲಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಗಿಳಿ, ಕೊಕ್ಕರೆ, ಗುಬ್ಬಚ್ಚಿ, ಗೊರವಂಕ, ಬೆಳವ, ಕಾಗೆ, ಕಂಡು ಬರುತ್ತವೆ.

ಈ ಗ್ರಾಮದಲ್ಲಿ ೨೧೬ ಮನೆಗಳಿದ್ದು, ೯೧೧ ಜನಸಂಖ್ಯೆಯನ್ನು ಹೊಂದಿದೆ. ಕನ್ನಡ ಈ ಗ್ರಾಮದ ಮಾತೃ ಭಾಷೆ ಕನ್ನಡವಾಗಿದೆ. ಇಲ್ಲಿ ನಾಯಕ, ವೈಶ್ಯ, ದರ್ಜಿಗರ, ಆದಿಕರ್ನಾಟಕ ಇತ್ಯಾದಿಗಳ ಮನೆಗಳಿವೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ಮತ್ತು ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ಇತ್ಯಾದಿಗಳಾಗಿವೆ. ಸಾಂಪ್ರದಾಯಿಕ ವಾಹನಗಳು, ಟ್ರ್ಯಕ್ಟರ್, ಮಿನಿಟೆಂಪೋ, ದ್ವಿಚಕ್ರವಾಹನಗಳು ಕಂಡು ಬರುತ್ತವೆ. ರಸ್ತೆ ಮತ್ತು ಚರಂಡಿ ವ್ಯವಸ್ಥೆಯನ್ನು ಹೊಂದಿದೆ.

ಇಲ್ಲಿನ ಮನೆಗಳು ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳು ಇದ್ದು, ಅವು ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್, ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಸೌಲಭ್ಯ ಪಡೆದಿವೆ. ಗ್ರಾಮದ ಮನೆಗಳಲ್ಲಿ ೧೪ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು, ಶೇಂಗಾ ಮುಖ್ಯ ಬೆಳೆಯಾಗಿದ್ದು ಇದರೊಂದಿಗೆ ತೆಂಗು, ನವಣೆ, ರಾಗಿ, ಭತ್ತ, ಜೋಳ, ಹುಣಸೆಮರಗಳ ಬೆಳೆಯನ್ನು ಬೆಳೆಯುತ್ತಾರೆ. ಮತ್ತು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಇಲ್ಲಿ ಕೃಷಿಯೊಂದಿಗೆ ಶಿಕ್ಷಣ, ಸಾರಿಗೆ, ಕಂದಾಯ ಇಲಾಖೆಯ ೬ ಜನ ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ. ಹಾಗೂ ಗಿರಣಿ ಮತ್ತು ಮಿಲ್ಲು, ಬಟ್ಟೆ ಹೊಲಿಯುವ ಟೈಲರ್ ಹಾಗೂ ಬೀಡಿ ಸುತ್ತುವುದು ಕಂಡು ಬರುತ್ತದೆ.

ಬಟ್ಟಿನಗಾನಹಳ್ಳಿ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ, ಸಿರಾ ಜಿಲ್ಲಾ ಮತ್ತು ಗೋಪಾಲದೇವರಹಳ್ಳಿ ತಾಲ್ಲೂಕು ಪಂಚಾಯಿತಿ, ತಹಶೀಲ್ದಾರ್ ಕಛೇರಿ, ಕಛೇರಿಯನ್ನು ಹಾಗೂ ಗೋಪಾಲದೇವರ ಹಳ್ಳಿ ಗ್ರಾಮ ಪಂಚಾಯ್ತಿ ಆಗಿದೆ. ಕಳ್ಳಂಬೆಳ್ಳ ಪೋಲೀಸ್ ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ. ಇಬ್ಬರು ಸದಸ್ಯರನ್ನು ಮತ್ತು ಬೆಂಚೆ ಅಂಚೆ ಕಛೇರಿಯನ್ನು ಹೊಂದಿದೆ. ಗ್ರಾಮನ್ಯಾಯ ಮಂಡಳಿಯನ್ನು ಹೊಂದಿದೆ ಮತ್ತು ಬಗೆಹರಿಯದ ಸಮಸ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳುತ್ತಾರೆ.

ಈ ಗ್ರಾಮದಲ್ಲಿ ಅಂಗನವಾಡಿಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಒಟ್ಟಾರೆ ಶೇ. ೫೫.೯

ರಷ್ಟು ಸಾಕ್ಷರತೆಯನ್ನು ಹೊಂದಿದೆ. ಹಾಗೂ ಸ್ತ್ರೀ ಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವನ್ನು ಹೊಂದಿದ್ದು, ಸಣ್ಣ ಪ್ರಮಾಣದ ಸಾಲಸೌಲಭ್ಯವನ್ನು ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ.

ಈ ಹಳ್ಳಿಯನ್ನು ಯಾವುದೇ ಆರೋಗ್ಯದ ಕೇಂದ್ರಗಳಿಲ್ಲದಿದ್ದರೂ ಕುಟುಂಬ ಕಲ್ಯಾಣ ಪದ್ಧತಿಯನ್ನು ಹೊಂದಿ ಗ್ರಾಮಕ್ಕೆ ಆಶಾಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಸರ್ಕಾರದ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದು ಈ ಗ್ರಾಮದಲ್ಲಿ ಚಿಲ್ಲರೆ ವ್ಯಾಪಾರದ ೦೪ ಅಂಗಡಿಗಳನ್ನು ಹೊಂದಿದೆ. ಹಾಗೆಯೇ ಈ ಗ್ರಾಮದಲ್ಲಿ ಐತಿಹಾಸಿಕ ಎರಡು ಕರುಗಲ್ಲು ಒಂದು ಅರಳಿಕಟ್ಟೆ ಮತ್ತು ಬೇವಿನಕಟ್ಟೆಯನ್ನು ಹೊಂದಿದೆ.

ಈ ಗ್ರಾಮದಲ್ಲಿ ಧಾರ್ಮಿಕ ಓಬಳನರಸಿಂಹಸ್ವಾಮಿ, ಹನುಮಂತರಾಯ ಭೂತಪ್ಪನ ಪೌಳಿ ದೇವಾಲಯಗಳಿವೆ. ಮತ್ತು ಪ್ರತಿವರ್ಷವೂ ಭೂತಪ್ಪನಿಗೆ ನಿರಂತರವಾಗಿ ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿದೆ. ಯುಗಾದಿ, ದಸರಾ, ದೀಪಾವಳಿ, ಗೌರಿ ಗಣೇಶನ ಹಾಗೂ ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ಈ ಗ್ರಾಮದಲ್ಲಿ ಮದಕರಿ ನಾಯಕ ಸೇನೆಯನ್ನು ಪಡೆದಿದೆ. ಬಟ್ಟಿಗಾನಹಳ್ಳಿ ಕೃಷ್ಣಪ್ಪ ರಂಗಕಲಾವಿದರಾಗಿದ್ದು, ಸ್ಥಳೀಯವಾಗಿ ಹೆಸರು ಮಾಡಿದ್ದಾರೆ.

## ಬುಕ್ಕಾಪಟ್ಟಣ

ಬುಕ್ಕಾಪಟ್ಟಣ ಸಿರಾ ತಾಲ್ಲೂಕಿನ ಹೋಬಳಿ ಕೇಂದ್ರಗಳಲ್ಲಿ ಒಂದು ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಕೇಂದ್ರವೂ ಆಗಿದೆ. ಬಯಲು ಹಳ್ಳ, ಕೆರೆ, ಕಟ್ಟೆ, ದಿಬ್ಬ, ಕಾಡುಗಳು ಭೂ ಪ್ರದೇಶ ಪೂರ್ವಕ್ಕೆ ಗುಬ್ಬಿ ತಾಲ್ಲೂಕಿನ ಹಾಗಲವಾಡಿ, ಪಶ್ಚಿಮಕ್ಕೆ ಹಿರಿಯೂರು, ತಾಲ್ಲೂಕಿನ ಜವನಗೊಂಡನ ಹಳ್ಳಿ, ದಕ್ಷಿಣಕ್ಕೆ ಚಿಕ್ಕನಾಯಕನಹಳ್ಳಿ ಹೂಯೂರು–ಕಂದಿಕೆರೆ ಹೋಬಳಿಗೆ ಆತು ಕೊಂಡಿದೆ. ಸಿರಾ–ಚಿಕ್ಕನಾಯಕನಹಳ್ಳಿ ಮುಖ್ಯ ರಸ್ತೆಯಲ್ಲಿ, ಸಿರಾದಿಂದ ೨೧ ಕಿ.ಮೀ. ದೂರದಲ್ಲಿದೆ. ಆರಂಭದಲ್ಲಿ ಬಯಲು ಪ್ರದೇಶವಾಗಿದ್ದು, ಬೂದಿಗುಡ್ಡ ಇಟ್ಟಿಗೆಹಳ್ಳಿಗಳು ಹಿಂದೆ ಕಾಡಿನ ಒಳಭಾಗದ ಹಳ್ಳಿಗಳಾಗಿದ್ದವೆಂದು ಗ್ರಾಮಸ್ಥರ ಅಭಿಪ್ರಾಯ. ಬುಕ್ಕಾಪಟ್ಟಣ ವ್ಯಾಪ್ತಿಯ ೫೫ ಹೆಕ್ಟೇರ್ ರಕ್ಷಿತ ಅರಣ್ಯ ಪ್ರದೇಶವಿದ್ದು ಇದರಲ್ಲಿ ಸಾಗುವಾನಿ ಗಂಧ, ನೇರಳೆ, ಅರ್ಕಿಲೆಸ್, ಜಾಲಿ, ಹೊಂಗೆ, ಹುಣಸೆ, ನೀಲಗಿರಿ, ಆಲ, ಬ್ಯಾಟೆ, ಮುತ್ತುಗ ಮೊದಲಾದ ಕಾಡು ಜಾತಿಯ ಮರಗಳಿವೆ. ಈ ಗ್ರಾಮದ ಪೂರ್ವಕ್ಕೆ ಒಂದು ಸಣ್ಣ ಹಳ್ಳವಿದ್ದು, ಮಳೆಗಾಲದಲ್ಲಿ ಹರಿಯುತ್ತದೆ. ಹಿಂದೆ ಈ ಹಳ್ಳದ ನೀರಿನ ಹರಿವಿಗೆ ಸಿಕ್ಕಿಪಕ್ಕಿ ಟೆಕರಿ(ಪಕೀರ) ಕೊಚ್ಚಿಕೊಂಡು ಹೋಗಿದ್ದರಿಂದ ಈ ಹಳ್ಳಕ್ಕೆ ಪಕ್ಕಿ ಟೆಂಕರಿಹಳ್ಳ ಎಂದೇ ಕರೆಯುತ್ತಾರೆ. ಇದರ ಪಕ್ಕದಲ್ಲಿಯೇ ಮಸೀದಿಯೂ ಇದೆ. ಬುಕ್ಕಾಪಟ್ಟಣ ಸನಿಹದಲ್ಲೇ ಸೊಂಡಿಹಳ್ಳಿ ಕೆರೆ, ಮದೂಡಿ ಸಿದ್ದನಕಟ್ಟೆ, ನರಸಪ್ಪನ ಕಟ್ಟೆ ಎಂಬ ಹೆಸರಿನ ಮೂರು ಕಟ್ಟೆಗಳಿದ್ದು, ಮಳೆಗಾಲದಲ್ಲಿ ತುಂಬುತ್ತವೆ. ಈ ಗ್ರಾಮದ ಸರಹದ್ದಿನಲ್ಲಿಯೇ ಬರುವ ರಕ್ಷಿತ ಅರಣ್ಯ ಪ್ರದೇಶದಲ್ಲಿ ನರಿ, ಮೊಲ, ಕರಡಿ, ಹುಲಿ, ತೋಳ, ಜಿಂಕೆ, ಕಾಡುಹಂದಿ ವ್ಯಾಪಕವಾಗಿ ವಾಸಿಸುತ್ತವೆ. ಕಾಡು ಪಕ್ಷಿಗಳಾಗಿ ನವಿಲು, ಕೋಗಿಲೆ, ಕಾಗೆ, ಕೊಕ್ಕರೆ, ಕೌಜುಗ, ಗೊರವನಹಕ್ಕಿ, ಬೆಳವ, ಹದ್ದು, ಗೂಬೆ, ಗರುಡ, ಕಾಗೆಸಿಳ್ಳೆ, ಸಾಂಬಾರಕಾಗೆ, ಗುಬ್ಬಚ್ಚಿ ಕಂಡು ಬರುತ್ತವೆ.

ಬುಕ್ಕಾಪಟ್ಟಣ ಎಂಬ ಗ್ರಾಮವು ಬುಕ್ಕರಾಯನ ಆಳ್ವಿಕೆಯ ಕಾಲದಲ್ಲಿ, ಈ ಗ್ರಾಮ ರಚನೆಯಾಗಿರುವುದಾಗಿಯೂ, ಆತನ ಹೆಸರನ್ನೇ ಗ್ರಾಮಕ್ಕೆ ಇಡಲಾಗಿದ್ದು, ಗ್ರಾಮದ ಹೊರಭಾಗದಲ್ಲಿ ಒಂದು ದೊಡ್ಡ ಕೆರೆಯನ್ನು ಬುಕ್ಕರಾಯ ನಿಂದಲೇ ನಿರ್ಮಿಸಲಾಗಿದೆ ಎಂದು ಚಿಂತಕ. ಬುಕ್ಕಾಪಟ್ಟಣ ಮಂಜುನಾಥ್ ವ್ಯಾಖ್ಯಾನಿಸುತ್ತಾರೆ. ವಿಜಯನಗರ ಅರಸರ ಕಾಲದ ಗಾಣದ ಹುಣಸೆ ಶಾಸನದಲ್ಲಿ ಬುಕ್ಕಾಪಟ್ಟಣ, ಹೊನ್ನವಳ್ಳಿ ಗ್ರಾಮಗಳ ಉಲ್ಲೇಖವಿದೆ. ಜೊತೆಗೆ ಬುಕ್ಕಾಪಟ್ಟಣದ ಊರ ಬಾಗಿಲ ಬಳಿ ಇರುವ ಶಾಸನ ಏಕ ಫಿ೫೫ ಸಿರಾ ಶಾಸನ, ಕಾಲ ೧೬೭೯ ರಲ್ಲಿ ಬುಕ್ಕಾಪಟ್ಟಣ ಗ್ರಾಮದ ಹೆಸರಿನ ಖಚಿತ ಉಲ್ಲೇಖವಿದೆ. ಇದರಲ್ಲಿ ಹರತಿ ಇಮ್ಮಡಿ ಕೆಂಚಪ್ಪನಾಯಕ ಐಯ್ಯ, ಹಿರಿಯೂರು ಸೀಮೆಗೆ ಸೇರುವ ಬುಕ್ಕಾಪಟ್ಟಣ ವ್ಯಾಪ್ತಿಯು ಹುಯಿಲ್‌ದೊರೆ, ಹೊನ್ನವಳ್ಳಿಗಳನ್ನು, ತಾವರೆಕೆರೆ ದಳವಾಯಿ ಬಸವನಾಯ್ಕನ ಚಿಕ್ಕಬಸವನಾಯಕನಿಗೆ ಈ ಎರಡು ಗ್ರಾಮಗಳನ್ನು, ತೇರು ಮಲ್ಲೇಶ್ವರ ಸನ್ನಿಧಿಯ ದಾನ ನೀಡಿದ ವಿವರವಿದೆ. ಪ್ರಸ್ತಾಪವಿದೆ. ಇದಲ್ಲದೆ ಬುಕ್ಕಾಪಟ್ಟಣ ಗ್ರಾಮದ ಕಾಲುವೆ ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ, ನಾಲ್ಕು ಚಿಕ್ಕ ಚಿಕ್ಕ ಶಾಸನಗಳಿದ್ದು, ಅವು ಈ ದೇವಸ್ಥಾನ ಸೇವೆ, ಬಾಗಿಲುವಾಡ ನಿರ್ಮಿಸಿದ ವಿವರಗಳಿವೆ.

ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೬೭೩.೩೪ ಹೆಕ್ಟೇರ್ ಆಗಿದೆ. ಇದಕ್ಕೆ, ಮಜರೆ ಗ್ರಾಮಗಳಾಗಿ ಮಾರುತಿ ನಗರ, ಹೊಸಪಾಳ್ಯ, ಕ್ಯಾತೆದೇವರ ಹಟ್ಟಿ ಸೇರ್ಪಡೆಯಾಗಿವೆ. ಬಯಲು ಪ್ರದೇಶ ಪಶ್ಚಿಮಕ್ಕೆ ಅರೆ ಮಲೆ ನಾಡಿನ ವಾತಾವರಣವಿದೆ. ಕಳೆದ ೨ ವರ್ಷದಲ್ಲಿ ಮಳೆ ಕಡಿಮೆಯಾಗುತ್ತಿದ್ದು, ವಾರ್ಷಿಕ ೪೬೦ ಮಿ.ಮೀ. ಮಳೆಯಾಗಿದೆ. ಉಷ್ಣಾಂಶ ೩೭೦ ಸೆಂ. ಇದ್ದರೆ ಚಳಿಯ ಪ್ರಮಾಣ ೯೦ ಸೆಂ ಇದೆ. ಕುಡಿಯಲು ಗ್ರಾಮ ಪಂಚಾಯಿತಿಯ ಕಿರು ನೀರು ಸರಬರಾಜು ಯೋಜನೆಯ

ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಒಂದು ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್ ಇದ್ದು, ೨೫೦ ಕ್ಕೂ ಹೆಚ್ಚು ನಲ್ಲಿ ಸಂಪರ್ಕವಿದೆ. ಈ ಪರಿಸರದಲ್ಲಿ ಮಳೆಯ ಆಶ್ರಿತ ವ್ಯವಸಾಯವಾಗಿರುವುದಿಂದ, ಕೃಷಿಗೆ ನೀರು ಸಾಕಾಗುವುದಿಲ್ಲ. ಆದುದರಿಂದ ವಿವಿಧ ಜನವರ್ಗ, ಗಂಗಾ ಕಲ್ಯಾಣ, ಸಾಲ ರೂಪದಲ್ಲೂ ೧೩೦ ಕೊಳವೆ ಬಾವಿಗಳನ್ನು ಕೊರೆಸಿ ಅದರ ಮೂಲಕ ನೀರಾವರಿ ವ್ಯವಸಾಯ ಮಾಡುತ್ತಿದ್ದಾರೆ.

ಈ ಗ್ರಾಮದಲ್ಲಿ ೧೪೬೭ ಮನೆಗಳಿದ್ದು, ೬೦೧೬ ಜನಸಂಖ್ಯೆಯನ್ನು ಹೊಂದಿದೆ. ಕನ್ನಡ ಮಾತೃ ಭಾಷೆಯಾಗಿದೆ. ಅಲ್ಪಸಂಖ್ಯಾತರ ಭಾಷೆಯಾಗಿ, ತೆಲುಗು, ಉರ್ದು ಭಾಷೆ ಇದೆ. ಹಾಗೆಯೇ ಕುಂಚಿಟಿಗ ಮನೆಗಳು ಕಲ್ಲಿನ, ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದಲ್ಲಿದ್ದು, ಸರ್ಕಾರದ ವಸತಿ ಯೋಜನೆಯ ಫಲಾನುಭವಿಗಳಿದ್ದು, ೧೦೦ ಕ್ಕೂ ಹೆಚ್ಚು ಮನೆಯಲ್ಲಿ ಶೌಚಾಲಯದ ಬಳಕೆ ಇದೆ. ಕುರುಬ, ಬ್ರಾಹ್ಮಣ, ಆದಿಕರ್ನಾಟಕ, ಮುಸ್ಲಿಂ, ಈಡಿಗ, ಮಾರವಾಡಿ, ಭಜಂತ್ರಿ, ವಿಶ್ವಕರ್ಮ, ವೈಷ್ಣವ, ಕುರುಬ, ನಾಯಕ, ವೀರಶೈವರ ಮನೆಗಳಿವೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ವಿಶೇಷವಾಗಿ ಬಾಡೂಡ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಇಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು ಶೇಂಗಾ ಮುಖ್ಯ ಬೆಳೆಯಾಗಿದ್ದು, ಇದರೊಂದಿಗೆ ರಾಗಿ, ಭತ್ತ, ನವಣೆ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ತೆಂಗು, ಅಡಿಕೆ ವಾಣಿಜ್ಯ ಬೆಳೆಗಳಾಗಿದ್ದು ಹೈನುಗಾರಿಕೆಯಿಂದಾಗಿ ಆಧುನಿಕ ಡೈರಿಯಿಂದ ವರಮಾನದಲ್ಲಿ ಹೆಚ್ಚಳಕ್ಕೆ ಕಾರಣವಾಗಿದೆ. ಸಾರಿಗೆ, ಶಿಕ್ಷಣ, ವೈದ್ಯಕೀಯ, ಕಂದಾಯ, ಪಂಚಾಯತ್ ರಾಜ್, ಅರಣ್ಯ, ರಕ್ಷಣ, ಮೀನುಗಾರಿಕೆ ಇಲಾಖೆಗೆ ಸೇರಿದ ೨೫ ಸರ್ಕಾರಿ ಸೇವೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಖಾಸಗಿ ಇಂಜಿನಿಯರ್, ಹಾಗೂ ವೈದ್ಯರಿದ್ದಾರೆ. ಖಾಸಗಿ ಕಂಪನಿಗಳ ಉದ್ಯೋಗಿಗಳಾಗಿದ್ದಾರೆ. ಅರುಣ್ ಆರ್. ರೈತ ಸಂಪರ್ಕ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಈ ಗ್ರಾಮದ ವಿಶೇಷವಾಗಿದೆ.

ಈ ಪ್ರದೇಶದಲ್ಲಿ ಬೃಹತ್ ಕೈಗಾರಿಕೆಗಳಿಲ್ಲದಿದ್ದರೂ ಸಣ್ಣ ಪುಟ್ಟ ಇಟ್ಟಿಗೆ ಫ್ಯಾಕ್ಟರಿ, ಬಟ್ಟೆ ಹೊಲಿಯುವುದು, ಬೀಡಿ ಸುತ್ತುವುದು, ರಾಗಿ ಮಿಲ್ಲು ಮತ್ತು ಹಲ್ಲರ್‌ಗಳು, ವಾಹನ ಜೋಡಣೆ, ವಿದ್ಯುತ್ ಉಪಕರಣ, ಬಿಡಿ ಭಾಗಗಳು ತಯಾರಿಕ ಘಟಕಗಳಿವೆ.

ಈ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯ್ತಿ, ತುಮಕೂರು ಲೋಕಸಭಾ ಕ್ಷೇತ್ರ, ಸಿರಾ ತಹಶೀಲ್ದಾರ್ ಕಛೇರಿ, ಬುಕ್ಕಾಪಟ್ಟಣ ಗ್ರಾಮ ಪಂಚಾಯ್ತಿ ಮತ್ತು ಅಂಚೆ ಕಛೇರಿಯನ್ನು ಒಳಗೊಂಡಿದೆ. ಈ ಗ್ರಾಮದಲ್ಲಿ ೧೪ ಸದಸ್ಯರನ್ನು ಹೊಂದಿದೆ. ಅಲ್ಲದೆ ಪೋಲೀಸ್ ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಒಳಗೊಂಡಿದೆ. ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ.

ಬುಕ್ಕಾಪಟ್ಟಣದಲ್ಲಿ ಹಣಕಾಸಿನ ವ್ಯವಸ್ಥೆಯಲ್ಲಿ ಕೃಷಿ ಪ್ರಾಥಮಿಕ ಸಹಕಾರಿ ಸಂಘ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೆನರಾ ಬ್ಯಾಂಕ್, ೮ ಸ್ತ್ರೀ ಶಕ್ತಿ ಸಂಘಗಳು, ವಾಸವಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿಂದ ವ್ಯವಹಾರ ನಡೆಯುತ್ತಿದೆ. ಹಾಗೆಯೇ ವಾರಕ್ಕೊಮ್ಮೆ ಸಂತೆಯಲ್ಲಿ ವ್ಯಾಪಾರ ವಹಿವಾಟು ನಡೆಯುತ್ತದೆ. ಮಹಿಳೆಯರ ಆರ್ಥಿಕ ಪ್ರಗತಿಗೆ ಸ್ವಯಂ ಸೇವಾ ಸಂಘಟನೆಗಳು ಪ್ರಮುಖ ಪಾತ್ರ ವಹಿಸಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರಗಳು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಪ್ರೌಢಶಾಲೆ, ಆಕ್ಸ್‌ಫರ್ಡ್ ಸ್ಕೂಲ್, ಜೀವನಿಧಿ ಪ್ರೌಢಶಾಲೆ, ಶಾರದ ವಿದ್ಯಾಸಂಸ್ಥೆ, ವಿದ್ಯಾರಣ್ಯ ಪದವಿ ಪೂರ್ವ ಕಾಲೇಜು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ, ಶಿಕ್ಷಣವನ್ನು ಪಡೆಯುತ್ತಿದೆ. ತಿರುಮಲ ಕೈಗಾರಿಕಾ ಕಾಲೇಜು, ಕಂಪ್ಯೂಟರ್ ತರಬೇತಿ ಸಂಸ್ಥೆಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ, ಪಠ್ಯಪುಸ್ತಕಗಳ ಸೌಲಭ್ಯವಿದೆ. ಒಟ್ಟು ಸಾಕ್ಷರತಾ ಪ್ರಮಾಣವು ಶೇ. ೭೧.೨ ರಷ್ಟಿದೆ.

ಗ್ರಾಮ ಪಂಚಾಯ್ತಿಯ ಗ್ರಂಥಾಲಯವಿದೆ. ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ, ಪಶು ಚಿಕಿತ್ಸಾಲಯವನ್ನು ಒಳಗೊಂಡಿದೆ. ಅನಂತಪ್ಪ, ಚಂದ್ರಪ್ಪ, ಮಂಜುನಾಥ, ಸುಬ್ಬಮ್ಮ ನಾಟಿ ವೈದ್ಯ ವೃತ್ತಿ ಮಾಡುತ್ತಿದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಂಧ್ಯಾ ಸುರಕ್ಷಾ, ವೃದ್ಧಾಪ್ಯ, ವಿಧವಾ ವೇತನ, ಅಂಗವಿಕಲ ಸಮುದಾಯ ಸೌಲಭ್ಯಗಳನ್ನು ಪಡೆದುಕೊಳ್ಳುವ ಫಲಾನುಭವಿಗಳಿದ್ದಾರೆ. ಹಾಗೆಯೇ ೧೩ ಹೋಟೆಲ್‌ಗಳು ಒಂದು ಛತ್ರ, ೫೮ ಅಂಗಡಿಗಳನ್ನು ಹೊಂದಿದೆ. ವೈನ್ ಷಾಪ್, ಜೊತೆಗೆ ೪ ಅಂಗಡಿಗಳು, ಬೇಕರಿ, ದಿನಸಿ ಅಂಗಡಿ, ಕಲ್ಯಾಣ ಮಂಟಪವಿದೆ.

ಐತಿಹಾಸಿಕ ನೆಲೆಗಟ್ಟಿನಲ್ಲಿ ಎರಡು ವೀರಗಲ್ಲುಗಳನ್ನು ಒಳಗೊಂಡಿದೆ. ಮತ್ತು ೦೬ ಶಾಸನಗಳನ್ನು ಹೊಂದಿರುವುದು ಕಂಡು ಬಂದಿದೆ.

ಬುಕ್ಕಾಪಟ್ಟಣದ ವಿಜಯನಗರ ಮೊದಲ ವೆಂಕಟಪತಿ ದೇವರಾಯನ ಶಾಸನಗಳು ಕ್ರಿ.ಶ. ೧೬೮೯, ೧೫೫೭, ಕಾಲುವೆ ರಂಗನಾಥಸ್ವಾಮಿ ದೇವಾಲಯದಲ್ಲಿ ರುವ ಶಾಸನಗಳು ಇದರ ಜೀರ್ಣೋದ್ಧಾರದ ಬಗ್ಗೆ ತಿಳಿಸುತ್ತವೆ. ಇಲ್ಲಿ ಪ್ರಾಚೀನ ಕಾಲದ ಎರಡು ಬಾವಿಗಳು ಕಂಡು ಬಂದಿವೆ.

ಈ ಗ್ರಾಮ ಹದಿನೈದು ದೇವಾಲಯಗಳನ್ನು ಒಳಗೊಂಡಿದೆ. ಕಾಲುವೆ ರಂಗನಾಥಸ್ವಾಮಿ, ಶ್ರೀಶಕ್ತಿ ಗಣಪತಿ, ಗ್ರಾಮದೇವತೆ ಕರಿಯಮ್ಮ , ದುರ್ಗಮ್ಮ, ಶನೇಶ್ವರ, ಈಶ್ವರ, ಭೂತಪ್ಪ, ಬಸವಣ್ಣ ದೇವಾಲಯಗಳಿವೆ. ಹಾಗೂ ಇಸ್ಲಾಂ ಧರ್ಮದವರಿದ್ದು ಮಸೀದಿ ಮತ್ತು ದರ್ಗಾವನ್ನು ಒಳಗೊಂಡಿದೆ. ಸಾಂಪ್ರದಾಯಿಕ ಹಬ್ಬಗಳಾದ ಯುಗಾದಿ, ದೀಪಾವಳಿ ಆಚರಿಸುತ್ತಾರೆ. ದುರ್ಗಮ್ಮ, ಕರಿಯಮ್ಮ ದೇವತೆಗಳಿಗೆ ಜಾತ್ರೆಯನ್ನು ಮಾಡುವುದು. ಅದರಲ್ಲಿ ಆರತಿ ಮಾಡಿ ಬಲಿ ನೀಡುವುದು ಕಂಡು ಬರುತ್ತದೆ.

ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾನಪದದಲ್ಲಿ ಮರಿಯಪ್ಪ ಮತ್ತು ತಂಡ ರಂಗಭೂಮಿ ಹಾಗೂ ಭಜನೆ, ತತ್ವಪದಕಾರರು ಕಂಡು ಬರುತ್ತಾರೆ. ಹಾಗೆಯೇ ಶಿಷ್ಟಪದ ಸಾಹಿತ್ಯದಲ್ಲಿ ಧಾರಾವಾಹಿಗಳ ನಿರ್ದೇಶಕ ಬುಕ್ಕಾಪಟ್ಟಣ ವಾಸು ಇದೇ ಗ್ರಾಮದವರಾಗಿದ್ದಾರೆ. ಸಂಗೀತ ಗಾಯನದಲ್ಲಿ ಸಂಧ್ಯಾ, ಭಾವನ ಪ್ರಮುಖರಾಗಿದ್ದಾರೆ. ರಾಜಣ್ಣನವರು ನಂದಿಧ್ವಜ ಕುಣಿತಕ್ಕೆ ಪ್ರಸಿದ್ಧಿ ಪಡೆದಿದ್ದಾ ರೆಂದು ರಂಗನಿರ್ದೇಶಕ ನಟರಾಗಿ ಬಿ.ಸಿ. ಬಸವರಾಜು, ವಿಕ್ರಮನ ಪಾತ್ರದಲ್ಲಿ ೧೦೦ ಕ್ಕೂ ಹೆಚ್ಚು ಪ್ರಯೋಗ ನೀಡಿರುವ ಈರದೊಡ್ಡಯ್ಯ, ಪಾಳಾತಲಿಂಗೇಶ್ವರ ವೀರಗಾಸೆ ಕಲಾತಂಡ ಮೂಲಕ ರಾಜ್ಯಾದ್ಯಂತ ಪ್ರಸಿದ್ಧರಾಗಿರುವ ಗಂಗಾಧರಯ್ಯ, ಬಿ.ಆರ್. ರಮೇಶ್, ಶಿಲ್ಪಿ, ವರ್ಣ ಚಿತ್ರಕಾರ, ಮಹದೇವಾ ಚಾರಿ, ಈ ಗ್ರಾಮದ ವಿಶೇಷವಾಗಿದ್ದಾರೆ. ಪ್ರಬುದ್ಧ ಅಂಕಣಕಾರ, ಪತ್ರಕರ್ತ, ಬುಕ್ಕಾಪಟ್ಟಣ ಮಂಜುನಾಥ್, ಸಿರಾ ತಾಲ್ಲೂಕು, ಪಂಚಾಯ್ತಿ ಅಧ್ಯಕ್ಷರೂ ಆಗಿದ್ದರು.

ಪ್ರಸನ್ನ ಗಣಪತಿ ಭಕ್ತ ಮಂಡಳಿ, ಶ್ರೀರಾಮ ಯುವಕ ಮಂಡಳಿ, ವಾಸವಿ ಮಹಿಳಾ ಮಂಡಳಿ, ಬೇಡರ ಕಣ್ಣಪ್ಪ ಯುವಕರ ಸಂಘ, ರಾಜ್‌ಕುಮಾರ್ ಕಲಾ ಸಂಘ, ಸಾಂಸ್ಕೃತಿಕ –ಸಂಘಟಕನಾತ್ಮಕ ಸಂಘಗಳಿದ್ದು, ವಂದೇಮಾತರಂ ಆಟೋ ಮಾಲೀಕ, ಚಾಲಕರ ಕಲಾ ಸಂಘ, ಅತ್ಯಂತ ಚುರುಕಾಗಿ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಕನ್ನಡ ರಾಜ್ಯೋತ್ಸವ ಮತ್ತು ರ‍್ಟ್ರಾಯ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಿರುವುದು ಈ ಸಂಘದ ವಿಶೇಷವಾಗಿದೆ.

## ಬಾಲೇನಹಳ್ಳಿ ತಾಂಡ

ಬಾಲೇನಹಳ್ಳಿ ತಾಂಡವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ೨೫ ಕಿ.ಮೀ. ದೂರದಲ್ಲಿದೆ. ಇದು ಅಜ್ಜೇನಹಳ್ಳಿ ಮಜರೆ ಗ್ರಾಮವಾಗಿದ್ದು, ಬಾಲೆಣ್ಣ ಅಥವಾ ಬಾಲಕೃಷ್ಣ ಎಂಬುವವನ ಹೆಸರಲ್ಲಿ ಗ್ರಾಮ ರಚನೆಯಾಗಿದ್ದು, ಆತನ ಹೆಸರನ್ನೇ ಇಡಲಾಗಿದೆ. ಇದು ಪೂರ್ಣ ಲಂಬಾಣಿಗರ ತಾಂಡವಾಗಿರುವು ದರಿಂದ ಹೆಸರಿನ ಜೊತೆಗೆ ತಾಂಡ ಪಾರಂಪರಿಕ ಹೆಸರನ್ನು ಸೇರಿಸಿದ್ದಾರೆ. ಗ್ರಾಮಕ್ಕೆ ಉಡಸರ ತಾಂಡ ಎಂದೂ ಕರೆಯುತ್ತಾರೆ.

ಈ ಗ್ರಾಮ ಒಟ್ಟು ಭೌಗೋಳಿಕ ವಿಸ್ತೀರ್ಣವೂ ೮೮೨.೦೧ ಹೆಕ್ಟೇರ್ ಗಳಾಗಿದ್ದು , ಮೂಲ ಗ್ರಾಮ ಅಜ್ಜೇನಹಳ್ಳಿಯ ವ್ಯಾಪ್ತಿಯಲ್ಲಿ ಸೇರಿದೆ. ಪೂರ್ವಕ್ಕೆ ಗುಡ್ಡವಿದೆ. ಹಳ್ಳ ದಿಣ್ಣೆಗಳ ಸಮಪ್ರದೇಶ. ಕಲ್ಲು ಮಿಶ್ರಿತ ಕೆಂಪು ಮರಳು ಭೂಮಿಯಾಗಿದೆ. ಈ ಗ್ರಾಮದಲ್ಲಿ ಕುರಿ, ಮೇಕೆ, ಹಸು, ಹಾಗೂ ಪಕ್ಷಿಗಳಾದ ನವಿಲು, ಗಿಳಿ, ಕಾಗೆ, ಗುಬ್ಬಚ್ಚಿ, ಕೋಗಿಲೆ ಕಂಡು ಬಂದರೆ, ಕೋಳಿ ಸಾಕು ಪ್ರಾಣಿಯಾಗಿದೆ. ಕೃಷಿ ಉಪಯೋಗಕ್ಕಾಗಿ ಉಪ ನೀರಾವರಿಗಾಗಿ ೧೮ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ವಾರ್ಷಿಕ ಮಳೆಯ ಸರಾಸರಿ ೪೫೮ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ತಾಪ ೩೯೦ ಸೆಂ. ಇದ್ದು, ಚಳಿಯು ೧೨೦ ಸೆಂ. ಇರುತ್ತದೆ. ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿಯಿಂದ ಕಿರು ನೀರು ಯೋಜನೆ ಅಡಿಯಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ೨ ಸಿಸ್ಟನ್‌ಗಳಿದ್ದು, ೨ ಕೈ ಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಲಂಬಾಣಿ ಜನಾಂಗ ದೊಡ್ಡ ಸಮುದಾಯವಾಗಿದ್ದು, ಬೇಡರು, ಉಪ್ಪಾರ ಕಿರು ಸಮುದಾಯಗಳಾಗಿವೆ. ಕನ್ನಡ ಈ ಗ್ರಾಮದ ಮಾತೃ ಭಾಷೆ ಕನ್ನಡವಾಗಿದೆ. ಈ ಗ್ರಾಮದಲ್ಲಿ ವಿವಿಧ ಪ್ರಕಾರದ ೪೨ ಮನೆಗಳಿದ್ದು, ೨೦೦ ಜನಸಂಖ್ಯೆಯನ್ನು ಹೊಂದಿದೆ. ಕಲ್ಲಿನ, ಮಣ್ಣಿನ, ಹೆಂಚಿನ ಸ್ವರೂಪದ ಮನೆಗಳಿದ್ದು ಇವು ವಸತಿ ಯೋಜನೆಗಳಾದ ಇಂದಿರಾ ಆವಾಸ್ ಆಶ್ರಯ, ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಹೊಂದಿದ್ದಾರೆ. ೧೬ ಮನೆಗಳಲ್ಲಿ ಶೌಚಾಲದ ವ್ಯವಸ್ಥೆ ಇದೆ.

ಇವರ ಮುಖ್ಯ ಆಹಾರ ಮುದ್ದೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ವಿಶೇಷ ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ. ಸಾಂಪ್ರದಾಯಿಕ ವಾಹನಗಳೊಂದಿಗೆ ಎತ್ತಿನ ಬಂಡಿ, ಹಾಗೂ ದ್ವಿಚಕ್ರ ವಾಹನಗಳಾದ ಸ್ಕೂಟರ್, ಸೈಕಲ್ ಬಳೆಯಲ್ಲಿವೆ.

ಶೇಂಗಾ ಮುಖ್ಯ ಬೆಳೆ. ರಾಗಿ, ತೊಗರಿ, ಹುರುಳಿ, ಆಹಾರ ಬೆಳೆಗಳು. ಕನಕಾಂಬರ, ಮಲ್ಲಿಗೆ, ಸೇವಂತಿಗೆ ಹೂ ಬೆಳೆಯುತ್ತಾರೆ.ಹೊಂಗೆ ಬೀಜ, ಹುಣಸೆಹಣ್ಣು, ಹೂ ಮುಖ್ಯ ವ್ಯಾಪಾರಿ ಸರಕಾಗಿವೆ. ಮಹಿಳೆಯರು ಹೂ ಕಟ್ಟುವುದು, ಇಟ್ಟಿಗೆ ಫ್ಯಾಕ್ಟರಿ ಕೆಲಸಕ್ಕೆ ಹೋಗುತ್ತಾರೆ. ಕೂಲಿ ಕೆಲಸ ಇವರ ಬದುಕಿನ

ಪ್ರಮುಖ ಕಸುಬಾಗಿದೆ. ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ನೇರಲಗುಡ್ಡ ತಾಲ್ಲೂಕು, ಗ್ರಾಮ ಪಂಚಾಯಿತಿ ಹಾಗೂ ಪಟ್ಟಣ ಜಿಲ್ಲಾ ಪಂಚಾಯಿತಿ ಕೇಂದ್ರವಾಗಿದ್ದು, ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಗಾಣದ ಹುಣಸೆ ಬುಕ್ಕಾಪಟ್ಟಣ ತಾವರೆಕೆರೆ ಮಾರ್ಗವಾಗಿ ರಸ್ತೆ, ಬಸ್ ಸಂಚಾರಕ್ಕೆ ಸಂಪರ್ಕ ರಸ್ತೆ ಇದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿಕೇಂದ್ರ, ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಒಬ್ಬರು ಶಿಕ್ಷಕರಿದ್ದಾರೆ. ಒಟ್ಟಾರೆ ಶೇ. ೪೩.೬ ರಷ್ಟು ಸಾಕ್ಷರತೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದು, ಗ್ರಾಮದಲ್ಲಿ ೨ ಗೂಡಂಗಡಿಗಳಿವೆ. ಒಂದು ಕರುಗಲ್ಲು ಅರಳಿವೃಕ್ಷದ ಕಟ್ಟೆ ಇದೆ. ಭೂತಪ್ಪನ ಪೌಳಿಗಳಿವೆ. ರಾಮನಹಳ್ಳಿ, ಗಾಣದಹುಣಸೆ ಕರಿಯಮ್ಮನಿಗೆ ಎದುರೆತ್ತಿ ಆರತಿ ಮಾಡಿ ಬಲಿ ಕೊಡುವುದು ಇಲ್ಲಿನ ಹರಕೆ ಸಂಪ್ರದಾಯವಾಗಿದೆ. ಯುಗಾದಿ, ದಸರಾ, ಗೌರಿಗಣೇಶ, ದೀಪಾವಳಿ, ಶಿವರಾತ್ರಿ, ರಾಮನವಮಿ ಹಬ್ಬಗಳನ್ನು ವಿಶೇಷವಾಗಿ ಮಾಡುತ್ತಾರೆ.

## ಬಾಳಾಪುರ

ಬಾಳಾಪುರ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿನಲ್ಲಿದೆ. ೨೨ ಕಿ.ಮೀ. ದೂರದಲ್ಲಿರುವ ಹಳ್ಳಿಯೂ ಜನವಸತಿ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣವು ೬೬೮.೬೩ ಹೆಕ್ಟೇರ್‌ಗಳಾಗಿವೆ. ಬಾಳಾ ಅಂದರೆ ಶಿವನ ರೂಪದ ವ್ಯಕ್ತಿ ಕೇಂದ್ರೀಕೃತವಾಗಿ ಬಾಳಾಪುರ ಎಂದು ಕರೆಯುತ್ತಾರೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಯಾವುದೇ ಅರಣ್ಯ, ಬೆಟ್ಟ ಗುಡ್ಡಗಳು ಕಂಡು ಬರುವುದಿಲ್ಲ. ಇಲ್ಲಿ ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಎತ್ತುಗಳನ್ನು ಸಾಕಿದ್ದಾರೆ. ಈ ಭಾಗದಲ್ಲಿ ಕಾಡು ಪ್ರಾಣಿಗಳಾಗಿ ಜಿಂಕೆ, ಮೊಲ, ನರಿಗಳು ಕಂಡು ಬರುತ್ತವೆ. ಈ ಭಾಗದಲ್ಲಿ ೧೩ ಕೊಳವೆ ಬಾವಿಗಳು ಇದ್ದು ಕೃಷಿಗೆ ಸಹಾಯಕವಾಗಿವೆ. ಕುಡಿಯುವ ನೀರಿನ ವ್ಯವಸ್ಥೆಗೆ ಕೈ ಪಂಪುಗಳಿದ್ದು ಗ್ರಾಮ ಪಂಚಾಯ್ತಿ ವ್ಯವಸ್ಥೆ ಕಲ್ಪಿಸಿದೆ.

ಈ ಗ್ರಾಮದಲ್ಲಿ ೫೩ ಮನೆಗಳಿದ್ದು, ೨೪೨ ಜನಸಂಖ್ಯೆಗಳನ್ನು ಹೊಂದಿದೆ. ಕನ್ನಡ ಮಾತನಾಡುವ ಜನರಿದ್ದಾರೆ. ಇದರಲ್ಲಿ ಕುಂಚಿಟಿಗ ದೊಡ್ಡ ಸಮುದಾಯವಾಗಿದ್ದು, ನಾಯಕರು ಕಿರು ಸಮುದಾಯವಾಗಿದೆ. ಇಲ್ಲಿನ ಮನೆಗಳು ಹೆಂಚಿನ, ಕಲ್ಲಿನ, ಶೀಟಿನ ಸ್ವರೂಪದ ಮನೆಗಳಿದ್ದು, ಆಶ್ರಯ, ಜನತಾ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧೦ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ. ಗ್ರಾಮದ ಜನರ ಉದ್ಯೋಗ ಕೃಷಿಯಾಗಿದ್ದು ಶೇಂಗಾ ಮುಖ್ಯ ಬೆಳೆಯಾಗಿದ್ದು ಇದರೊಂದಿಗೆ ರಾಗಿ, ಭತ್ತ, ತೊಳ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳು ತೆಂಗು, ಅಡಿಕೆ, ಬೇವು, ಹುಣಸೆ ಬೆಳೆಗಳನ್ನು ಬೆಳೆಯುತ್ತಾರೆ.

ಈ ಗ್ರಾಮದಲ್ಲಿ ಜನರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ಮತ್ತು ವಿಶೇಷವಾಗಿ ಬಾಡೂಟವಾಗಿದೆ. ಸಾಂಪ್ರದಾಯಿಕ ಎತ್ತಿನಗಾಡಿಗಳು ಮತ್ತು ಆಧುನಿಕ ವಾಹನಗಳನ್ನು ಒಳಗೊಂಡಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಸಿರಾ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿ ಕೇಂದ್ರಗಳಾದ ಸಿರಾ ತಹಶೀಲ್ದಾರ್ ಕಛೇರಿ ಬುಕ್ಕಾಪಟ್ಟಣ ಉಪಪೋಲೀಸ ಠಾಣೆ ಹಾಗೂ ವಿದ್ಯುತ್ ಮಂಡಳಿ ಮತ್ತು ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರನ್ನು ಹೊಂದಿದೆ.

ಗ್ರಾಮದಲ್ಲಿ ಹಣಕಾಸಿನ ವ್ಯವಸ್ಥೆಯಲ್ಲಿ ಸ್ತ್ರೀ ಶಕ್ತಿ ಸಂಘಗಳಿಂದ ವ್ಯವಹಾರ ಮಾಡುತ್ತಿದ್ದಾರೆ. ಅಂಗನವಾಡಿ ಕೇಂದ್ರ ಹೊಂದಿದ್ದು, ಒಟ್ಟಾರೆ ಸಾಕ್ಷರತೆಯ ಪ್ರಮಾಣವು ಶೇ. ೫೭.೨ ರಷ್ಟಿದೆ.

ಆರೋಗ್ಯ ಬಗ್ಗೆ ತಿಳಿಯಲು ಆಶಾಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ತಿಳಿದುಕೊಳ್ಳುತ್ತಾರೆ. ಗ್ರಾಮದಲ್ಲಿ ಕುಟುಂಬ ಕಲ್ಯಾಣ ಪದ್ಧತಿಯನ್ನು ಹೊಂದಿದೆ. ಮತ್ತು ರಂಗಸ್ವಾಮಯ್ಯ ಪಶುಗಳಿಗೆ ನಾಟಿ ಪದ್ಧತಿ ನೀಡುತ್ತಾರೆ.ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಈ ಗ್ರಾಮದಲ್ಲಿ ಯಾವುದೇ ಐತಿಹಾಸಿಕ ನೆಲೆ ಸ್ಮಾರಕಗಳು ಶಾಸನಗಳಿದಿ ದ್ದರೂ ೨ ದೇವಾಲಯಗಳಿವೆ. ಮಾರಮ್ಮನ ಜಾತ್ರೆಯನ್ನು ಮಾಡುತ್ತಾರೆ. ಇದಕ್ಕೆ ಆರತಿ ಮಾಡಿ ಬಲಿ ನೀಡುವುದು ಕಂಡು ಬರುತ್ತದೆ. ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶನ ಹಬ್ಬ ಮಾಡುತ್ತಾರೆ. ಕಣಿವೆ

ಮಾರಮ್ಮನ ದೇವಾಲಯ, ಮುತ್ತುರಾಯ, ಭೂತಪ್ಪನ ಪೌಳಿಗಳಿವೆ.

## ಬೂದಿಗುಡ್ಡ ಕಾವಲು

ಬೂದಿಗುಡ್ಡ ಕಾವಲು, ಒಂದು ಬೇಚಾರಕ್ ಗ್ರಾಮ. ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ, ಬುಕ್ಕಾಪಟ್ಟಣ-ಹುಳಿಯಾರು ಮುಖ್ಯ ರಸ್ತೆಯಲ್ಲಿ ಬೂದಿಗುಡ್ಡ ಕಾವಲ್ ಬುಕ್ಕಾಪಟ್ಟಣದಿಂದ ೪ ಕಿ.ಮೀ. ದೂರದಲ್ಲಿ ಪೂರ್ವ ಭಾಗ ಕಾಡಿನಿಂದ ಆವೃತ್ತವಾಗಿದೆ. ಈ ಹಿಂದೆ ಇಲ್ಲಿ ಮನೆಗಳಿದ್ದ ಕಾರಣಗಳಿಂದ ಬೇರೆ ಕಡೆಗೆ ವಲಸೆ ಹೋಗಿವೆ ಎಂದು ಹೇಳಲಾಗುತ್ತಿದೆ. ಇಂದಿಗೂ ಜನ ವಸತಿ ಇದ್ದವೆಂದು ಹೇಳಲಾಗುತ್ತದೆ. ಹಳೆಯ ಮನೆಗಳ ಗೋಡೆ, ಕಲ್ಲು, ಕಂಡು ಬರುತ್ತಿದೆ. ಇಲ್ಲಿನ ಮಣ್ಣು ಜಮೀನಿಗೆ ಫಲವತ್ತಾಗಿದ್ದು, ಸಮೀಪದ ಜಮೀನಿನವರು ಮಣ್ಣನ್ನು ಹೊಲಗಳಿಗೆ ಸಾಗಿಸಿದ್ದಾರೆ. ಬೂದಿಗುಡ್ಡ ಗೊಬ್ಬರದ ನೆಲ ಎಂಬ ಭಾವನೆ ಬುಕ್ಕಾಪಟ್ಟಣ ಸೀಮೆಯಲ್ಲಿದೆ.

ಸಿರಾದಿಂದ ೨೬ ಕಿ.ಮೀ. ದೂರದ ಈ ಪರಿಸರ ಕಪ್ಪು ಮಿಶ್ರಿತ ಮರಳು ಮಣ್ಣಿನಿಂದ ಕೂಡಿದ್ದು, ಉತ್ಕೃಷ್ಟ ಫಲವತ್ತಾಗಿದೆ. ಈ ಪರಿಸರದಲ್ಲಿ ಕಾಡು ಆವೃತ್ತವಾಗಿದ್ದು, ನೇರಳೆ, ನೀಲ, ಕಾಡುಮತ್ತಿ, ಹೊಂಗೆ, ಬೇವು, ಬ್ಯಾಟೆ, ಮರಡಿ, ತುಗ್ಗಲಿ ಮರಗಳಿವೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಕರಡಿ, ತೋಳ, ಕಂಡು ಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಕಾಗೆ, ಕೋಗಿಲೆ, ಕೌಜುಲಗ, ಗಿಡುಗ, ಬೆಳವ, ಗುಬ್ಬಚ್ಚಿ ಕಂಡು ಬರುತ್ತವೆ.

ಇಲ್ಲಿನ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೫೪೨. ಮಿ.ಮೀ. ಆಗಿದ್ದು ಉಷ್ಣಾಂಶ ೩೩.೩೫ ಡಿ.ಸೆಂ. ಹಾಗೂ ಚಳಿ ೧೧-೧೨ ಡಿ.ಸೆಂ ಇರುತ್ತದೆ. ಚಿಕ್ಕನಾಯಕಹಳ್ಳಿ ವಿಧಾನಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದ್ದು, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ.

## ಭಾವಸಿಂಗನಾಯ್ಕನ ತಾಂಡ

ಭಾವಸಿಂಗ ನಾಯ್ಕನ ತಾಂಡ ಸಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿಯ, ಲಂಬಾಣಿ ತಾಂಡವಾಗಿದೆ. ಇದು ಸಿರಾ ಬುಕ್ಕಾಪಟ್ಟಣ ರಸ್ತೆಯ ಗಾಣದ ಹುಣಸೆ ಗ್ರಾಮದಿಂದ ಬಲಕ್ಕೆ ೪ ಕಿ.ಮೀ. ದೂರದಲ್ಲಿದ್ದು, ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೧೨೬.೬ ರಷ್ಟಿದ್ದು, ಅಜ್ಜೇನಹಳ್ಳಿ ಮುಖ್ಯ ಗ್ರಾಮಕ್ಕೆ ಸೇರ್ಪಡೆ ಗ್ರಾಮವಾಗಿದೆ.

ಭಾವಸಿಂಗ ಮತ್ತು ಲಂಬಾಣಿ ಸಮುದಾಯವೇ ಇರುವುದರಿಂದ ತಾಂಡವಾಗಿ-ಈ ಗ್ರಾಮಕ್ಕೆ ಭಾವಾಸಿಂಗನ ತಾಂಡ ಎಂದು ಹೆಸರು ಬಂದಿದೆ.

ಕೆಂಪು ಮಿಶ್ರಿತ ಬಿಳಿ ಪ್ರದೇಶ ಕುರುಚಲು ಗಿಡ, ಹಳ್ಳ, ಗುಡ್ಡ, ಭೂಭಾಗ ಬಯಲು ಪ್ರದೇಶವೂ ಆಗಿದೆ. ಹಾಗಾಗಿ ಈ ಪರಿಸರದಲ್ಲಿ ಹಂದಿ, ಮೊಲ, ಜಿಂಕೆ, ಚಿರತೆ, ತೋಳ, ನರಿ, ಉಡ, ಕರಡಿ ಕಂಡು ಬರುತ್ತವೆ. ಗ್ರಾಮದಲ್ಲಿ ಕೃಷಿಗಾಗಿ ಎತ್ತು, ಹಸು, ಕುರಿ, ಮೇಕೆ ಸಾಕಿದ್ದಾರೆ. ಈ ಪರಿಸರದಲ್ಲಿ ನವಿಲು, ಗೊರವಂಕ, ಗಿಳಿ, ಕಾಗೆ, ಕೋಗಿಲೆ, ಹದ್ದು, ಗರುಡ, ಗುಬ್ಬಚ್ಚಿ ಕಂಡು ಬರುತ್ತವೆ. ಕೋಳಿ ಸಾಕು ಪಕ್ಷಿಯಾಗಿದೆ.

ಮಳೆ ಕಡಿಮೆ. ಕಳೆದ ೫ ವರ್ಷಗಳಲ್ಲಿ ೪೮೬ ಮಿ.ಮೀ. ಮಳೆ ಬಿದ್ದಿದ್ದು, ವಾಡಿಕೆಗಿಂತ ಕಡಿಮೆಯಾಗಿದೆ. ಉಷ್ಣಾಂಶ ೩೯೦ ಸೆಂ. ಇದ್ದು, ಚಳಿ ೯೦ ಸೆಂ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಯೋಜನೆಯ ಅಡಿಯಲ್ಲಿ ನೀರು ಪೂರೈಸುತ್ತಿದ್ದು, ೧ ಸಿಸ್ಟನ್ ಇದ್ದು, ೧ ಕೊಳವೆ ಬಾವಿ ಇದೆ. ಹೆಂಗಸರು ಬೀಡಿ ಸುತ್ತುವುದು, ಮುತ್ತುಗದ ಎಲೆ ಸಂಗ್ರಹ, ಹೂ ಕಟ್ಟುವುದು, ಉಪ ಕಸುಬಾಗಿದೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಬುಕ್ಕಾ ಪಟ್ಟಣ ಜಿಲ್ಲಾ ಪಂಚಾಯಿತಿ, ನೇರಲಮಡ್ಡಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದ್ದು, ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗಾಣದಹುಣಸೆ, ತಾವರೆಕೆರೆ, ಮಾರ್ಗವಾಗಿ ಬುಕ್ಕಾಪಟ್ಟಣ, ಚಿಕ್ಕನಾಯಕನಹಳ್ಳಿಗೆ ಸಂಪರ್ಕ ರಸ್ತೆ, ಬಸ್ ಸಂಚಾರವಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ, ಪುಸ್ತಕ ಸೌಲಭ್ಯವಿದೆ. ಸಾಕ್ಷರತೆಯ ಪ್ರಮಾಣ ಶೇ. ೫೧.೪ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೨ ಪೆಟ್ಟಿಗೆ ಅಂಗಡಿಗಳಿವೆ.

ಧಾರ್ಮಿಕವಾಗಿ ಸೇವಾಲಾಲ್, ಭೀಮಪತಿ ಪೌಳಿಗಳಿದ್ದು, ನಾಗರಕಲ್ಲು, ಅರಳಿ ಮರವಿದೆ. ದೀಪಾವಳಿಯಲ್ಲಿ ಭೀಮಪತಿ ಹಾಗೂ ಸೇವಾಲಾಲ್ ದೊಡ್ಡ ಹಬ್ಬ ಆಚರಿಸಿ, ಹಿರಿಯರಿಗೆ ನೈವೇದ್ಯ ಅರ್ಪಿಸುವುದು ವಾಡಿಕೆಯಾಗಿದೆ. ಸಾಂಪ್ರದಾಯಿಕ ಉಡುಗೆ ತೊಡಿಗೆಯೊಂದಿಗೆ ಸಾಮೂಹಿಕ ನೃತ್ಯ ಪ್ರದರ್ಶನ ಈ

ಹಬ್ಬದ ವಿಶೇಷವಾಗಿದೆ. ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶ, ಶಿವರಾತ್ರಿ, ಶ್ರೀರಾಮ ನವಮಿ ಹಬ್ಬಗಳನ್ನು ಆಚರಿಸುತ್ತಾರೆ.

## ಬೆಂಚೆ

ಬೆಂಚೆ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ –ಮೈಸೂರು ರಸ್ತೆಯಲ್ಲಿ ಬೆಂಚೇಗೇಟ್‌ನಿಂದ ಬಲಭಾಗಕ್ಕೆ ಸಿರಾದಿಂದ ೧೬.೦೫ ಕಿ.ಮೀ. ದೂರದಲ್ಲಿರುವ ಗ್ರಾಮವು ಕಂದಾಯ ಗ್ರಾಮ ವಾಗಿದೆ. ಈ ಗ್ರಾಮದ ಹತ್ತಿರ ಬೆಣಚುಕಲ್ಲು ಪ್ರದೇಶವಾಗಿದ್ದು, ಆ ಪ್ರಾಕೃತಿಕ ಲಕ್ಷಣದಿಂದಲೇ ಗ್ರಾಮಕ್ಕೆ ಬೆಂಚೆ ಎಂದು ಕರೆಯಲಾಗಿದೆ. ಈ ಗ್ರಾಮದ ದಕ್ಷಿಣೆಗಾಗಿ ಇದ್ದ ಕೋಟೆಯು ಹಾಳಾಗಿರುತ್ತದೆ.

ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೨೨೯.೩೬ ಹೆಕ್ಟೇರ್‌ಗಳು, ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಈ ಗ್ರಾಮಕ್ಕೆ ಅರಣ್ಯ ಬೆಟ್ಟ ಗುಡ್ಡಗಳಾಗಲಿ ಕಂಡು ಬಂದಿಲ್ಲ. ಈ ಗ್ರಾಮದಲ್ಲಿ ಒಂದು ಕಟ್ಟೆ ಇದೆ. ಮಳೆಗಾಲದಲ್ಲಿ ನೀರಿನ ಪ್ರಮಾಣವಿರುತ್ತದೆ. ಹಾಗೆಯೇ ಇಲ್ಲಿ ೧೨೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಕುಡಿಯುವ ನೀರಿಗಾಗಿ ಸಿಸ್ಟನ್ ಮತ್ತು ಕೈ ಪಂಪುಗಳನ್ನು ವ್ಯವಸ್ಥೆ ಮಾಡಲಾಗಿದೆ. ಹಾಗೂ ಇಲ್ಲಿನ ವಾರ್ಷಿಕವಾಗಿ ಮಳೆಯ ಪ್ರಮಾಣವು ४೨೫.೯ ಮಿ.ಮೀ. ಆಗಿದೆ. ಈ ಪರಿಸರದಲ್ಲಿ ಕರಡಿ, ನರಿ, ಮೊಲ, ಜಿಂಕೆ ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ, ಕೋಳಿ, ಕಾಡು ಪಕ್ಷಿಗಳಾಗಿ ಕಾಗೆ, ಗಿಳಿ, ಹದ್ದು, ಗರುಡ, ಕೋಗಿಲೆ ಕಂಡು ಬರುತ್ತವೆ.

ಬೆಂಚೆಯಲ್ಲಿ ಒಟ್ಟು ೨೫೧ ಮನೆಗಳಿದ್ದು, ೧೦೩೪ ಜನಸಂಖ್ಯೆಯನ್ನು ಹೊಂದಿದೆ. ಈ ಗ್ರಾಮದ ಜನರ ಭಾಷೆಯು ಕನ್ನಡವಾಗಿದ್ದು, ಇಲ್ಲಿ ಕುಂಚಿಟಿಗ, ನಾಯಕ, ಆದಿಕರ್ನಾಟಕ, ಆದಿದ್ರಾವಿಡರ ಮನೆಗಳಿವೆ. ಇವರ ಆಹಾರ ಮುದ್ದೆ, ಅನ್ನ ಮತ್ತು ವಿಶೇಷ ದಿನಗಳಲ್ಲಿ ಬಾಡೂಟ, ಪಾಯಸ, ಹೋಳಿಗೆ ಇತ್ಯಾದಿ ಸಿಹಿ ತಿನಿಸುಗಳಾಗಿವೆ. ಇಲ್ಲಿ ಸಾಂಪ್ರದಾಯಿಕ ವಾಹನಗಳೊಂದಿಗೆ ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಮಿನಿಟೆಂಪೋ, ಹಾಗೂ ದ್ವಿಚಕ್ರವಾಹನಗಳಿವೆ. ಹಾಗೆಯೇ ಇಲ್ಲಿ ಚರಂಡಿ, ಮತ್ತು ಕಚ್ಚಾರಸ್ತೆಯನ್ನು ಹೊಂದಿದೆ. ಮನೆಗಳು ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದಲ್ಲಿದ್ದು ಇವು ಆಶ್ರಯ ಇಂದಿರಾ ಆವಾಸ್ ವಸತಿ ಯೋಜನೆಯ ೯೬ ಫಲಾನುಭವಿಗಳೂ ಇದ್ದು ೧೧೦ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಈ ಗ್ರಾಮದ ಜನರ ಮುಖ್ಯ ಉದ್ಯೋಗವು ಕೃಷಿಯಾಗಿದೆ. ಇಲ್ಲಿ ಶೇಂಗಾ ಮುಖ್ಯ ಬೆಳೆಯಾಗಿದ್ದು ಇದಲ್ಲದೇ ರಾಗಿ, ಭತ್ತ, ಜೋಳ, ನವಣೆ, ಸೂರ್ಯಕಾಂತಿ, ತೆಂಗು, ಅಡಿಕೆ, ಹುಣಸೆ, ಬೇವು ಇತ್ಯಾದಿ ಬೆಳೆಗಳಾಗಿವೆ. ಹಾಗೂ ಆಧುನಿಕ ಡೈರಿಯಿದ್ದು ಕೃಷಿಯೇತರ ಆದಾಯದ ಮೂಲಗಳಾಗಿವೆ. ಹಾಗೂ ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಶಿಕ್ಷಣ, ಸಾರಿಗೆ, ಕಂದಾಯ, ಆರೋಗ್ಯ ಇಲಾಖೆಯ ೧೦ ಜನ ಸರ್ಕಾರಿ ಸೇವೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಮತ್ತು ಬೀಡಿ ಸುತ್ತುವುದು, ಬಟ್ಟೆ ಹೊಲಿಯುವ ಯಂತ್ರಗಳು, ಸೈಕಲ್ ಮತ್ತು ದ್ವಿಚಕ್ರವಾಹನಗಳು ರಿಪೇರಿ ಕೆಲಸ ಮಾಡುವ ಅಂಗಡಿಗಳಿವೆ. ಅಲ್ಲದೆ ಕೃಷಿ ಮತ್ತು ಕೂಲಿ ಕಾರ್ಮಿಕರು ಇದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ಗೋಪಾಲದೇವರ ಹಳ್ಳಿ ತಾಲ್ಲೂಕು ಪಂಚಾಯ್ತಿ, ತಹಶೀಲ್ದಾರ್ ಕಛೇರಿಯನ್ನು ಗೋಪಾಲದೇವರಹಳ್ಳಿ ಪಂಚಾಯ್ತಿ, ३ ಸದಸ್ಯರು ಹಾಗೂ ಬೆಂಚೆ ಅಂಚೆಯನ್ನು ಕಳ್ಳಂಬೆಳ್ಳ ಪೋಲೀಸ್ ಠಾಣೆ ಮತ್ತು ವಿದ್ಯುತ್ ಮಂಡಳಿ ಹೊಂದಿದೆ. ಹಾಗೂ ಗ್ರಾಮ ನ್ಯಾಯ ಮಂಡಳಿ ಗಳಲ್ಲಿ ಹೊಂದಿದೆ. ಮತ್ತು ಬಗೆ ಹರಿಯದ ಸಮಸ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ.

ಈ ಗ್ರಾಮದಲ್ಲಿ ಒಂದು ಅಂಗನವಾಡಿಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಸರ್ಕಾರಿ ಪ್ರೌಢಶಾಲೆ, ಬೆಂಚೆ ಮತ್ತು ಬಸವನಹಳ್ಳಿ ಹೊಂದಿದ್ದು, ಒಟ್ಟು ಸಾಕ್ಷರತೆಯ ಪ್ರಮಾಣವೂ ಶೇ.೬೮.೯ ರಷ್ಟಿದೆ. ಅಲ್ಲದೆ ಇಲ್ಲಿ ಬ್ಯಾಂಕಿಂಗ್ /ಹಣಕಾಸು ವ್ಯವಸ್ಥೆಯಲ್ಲಿ ಇಲ್ಲದಿದ್ದರೂ ಸಂಘಗಳಿಂದ ಸಣ್ಣ ಪ್ರಮಾಣದ ಉಳಿತಾಯ ಮಾಡಲು ಇವುಗಳು ಸಹಾಯಕವಾಗಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ಸೌಲಭ್ಯವಿದೆ.

ಈ ಗ್ರಾಮದಲ್ಲಿ ಆರೋಗ್ಯದ ಯಾವುದೇ ಕೇಂದ್ರಗಳಿಲ್ಲದಿದ್ದರೂ ಕುಟುಂಬ ಕಲ್ಯಾಣ ಪದ್ಧತಿ ರೂಢಿಸಿಕೊಂಡು ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಮತ್ತು ಇಲ್ಲಿ ಜ್ವರ, ಕೆಮ್ಮು, ತಲೆನೋವು, ಚಳಿ ಇತ್ಯಾದಿ ರೋಗಗಳು ಕಂಡು ಬರುತ್ತವೆ.

ಸರ್ಕಾರದ ಸೌಲಭ್ಯಗಳನ್ನು ಪಡೆಯುತ್ತಿದ್ದು, ವಿಧವಾ ವೇತನ, ವಿಕಲ ಚೇತನ, ವೃದ್ಧಾಪ್ಯ ವೇತನದ ಫಲಾನುಭವಿಗಳಿದ್ದಾರೆ. ಸಮುದಾಯದ ಕಲ್ಯಾಣ ಕಾರ್ಯ ಕ್ರಮಗಳನ್ನು ರೂಪಿಸಿಕೊಳ್ಳುತ್ತಿದೆ. ಮತ್ತು ಇಲ್ಲಿ ಕುರಿಕಲ್ಲಪ್ಪನವರು ನಾಟಿ ವೈದ್ಯರು, ಅಲ್ಲದೆ ಚಿಲ್ಲರೆ ವ್ಯಾಪಾರದ ೦೮ ಅಂಗಡಿಗಳನ್ನು ಒಳಗೊಂಡಿದೆ. ಅದಲ್ಲದೆ ಇಲ್ಲಿ ಐತಿಹಾಸಿಕ ನೆಲೆಯ ಯಾವುದೇ ಸ್ಮಾರಕಗಳು ಶಾಸನ, ಹಸ್ತಪ್ರತಿಗಳು

ದೊರಕದಿದ್ದರೂ ಕರುಗಲ್ಲುಗಳು ಮತ್ತು ಬೇವಿನ ಮತ್ತು ಅರಳಿ ಮರದ ಕಟ್ಟೆಯನ್ನು ಹೊಂದಿದೆ. ಯುಗಾದಿ, ದೀಪಾವಳಿ, ದಸರಾ ಶಿವರಾತ್ರಿ, ಗೌರಿಗಣೇಶ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಧಾರ್ಮಿಕ ಕೇಂದ್ರಗಳಾದ ದುರ್ಗಮ್ಮ, ಈಶ್ವರ, ತಿಮ್ಮಪ್ಪ, ಭೂತಪ್ಪನ ಪೌಳಿಗಳಿವೆ. ಇಲ್ಲಿ ಪ್ರತಿವರ್ಷವೂ ದುರ್ಗಮ್ಮ ಮತ್ತು ಏಳುಮಂದಕ್ಕಗಳ ಜಾತ್ರೆಯು ನಡೆಯುತ್ತದೆ. ಮತ್ತು ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿದೆ. ಕರಿದ್ಯಾಮಯ್ಯನವರ ಕೆಂಚಣ್ಣ, ಕಲ್ಲಪ್ಪನವರ ದೊಡ್ಡಸಿದ್ದಯ್ಯ, ಜುಂಜಪ್ಪನವರ ವೀರಪ್ಪ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅರಣ್ಯ ನಾಶ ಚಳುವಳಿಯಲ್ಲಿ ಭಾಗವಹಿಸಿದ್ದರು. ಒಂದು ದಲಿತರ ಸೂರ್ಯ ಅಂಬೇಡ್ಕರ್‌ರವರ ಯುವಕ ಸಂಘವಿದೆ. ಪ್ರತಿ ವರ್ಷ ನಾಟಕ ಪ್ರದರ್ಶನ ಏರ್ಪಡುತ್ತದೆ. ಚೇಳೂರು–ಸಿರಾ ನಗರಗಳಿಗೆ ಬಸ್ ಸಂಚಾರ ಸಂಪರ್ಕರಸ್ತೆ, ಬೆಂಚೆ ಗೇಟಿನಿಂದ ಇದೆ.

## ಬೆಂಚೆಪಾಳ್ಯ

ಬೆಂಚೆ ಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ ಹುಯಿಲ್‌ದೊರೆ ಹೊಸಕೆರೆ ಮಾರ್ಗದಲ್ಲಿ ಸಿರಾದಿಂದ ೨೬ ಕಿ.ಮೀ. ದೂರದಲ್ಲಿದ್ದು, ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣವು ೪೯.೦೬ ಹೆಕ್ಟೇರ್‌ಗಳಾಗಿವೆ. ಬೆಂಚೆಯಿಂದ ವಲಸೆ ಬಂದು ನೆಲೆಸಿರುವ ಗ್ರಾಮವಾದ್ದರಿಂದ ಬೆಂಚೆಪಾಳ್ಯ ಎಂದು ಕರೆಯಲಾಗಿದೆ.

ಬೆಂಚೆ ಪಾಳ್ಯದಲ್ಲಿ ಬಯಲು ನಾಡಿನ ಪ್ರದೇಶವಾಗಿದ್ದು, ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇಲ್ಲಿನ ವಾರ್ಷಿಕ ಸರಾಸರಿ ೪೪೪೮ ಮಿ.ಮೀ. ಮಳೆಯಾಗುತ್ತಿದೆ. ಉಷ್ಣಾಂಶ ೩೮೦ ಸೆಂ. ನಿಂದ ಕೂಡಿದ್ದು, ಚಳಿಯು ೧೨೦ ಸೆಂ. ಇರುತ್ತದೆ. ಇಲ್ಲಿ ಆರು ಕೊಳವೆ ಬಾವಿಗಳಿದ್ದು ಕೃಷಿಗೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ಪೂರಕವಾಗಿದೆ. ಈ ಗ್ರಾಮದಲ್ಲಿ ಒಟ್ಟು ೬ ಮನೆಗಳಿದ್ದು, ೧೬ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಕುಂಚಿಟಿಗ ಜನಾಂಗದ ಮನೆಗಳಿವೆ. ಇವರ ಭಾಷೆ ಕನ್ನಡವಾಗಿದ್ದು ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ಮತ್ತು ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ಸಿಹಿ ತಿನಿಸುಗಳಾಗಿವೆ. ಸಾಂಪ್ರದಾಯಿಕ ವಾಹನಗಳು ಮತ್ತು ದ್ವಿಚಕ್ರ ವಾಹನಗಳಿವೆ. ರಸ್ತೆ ವ್ಯವಸ್ಥೆ ಇದೆ. ಚರಂಡಿಯನ್ನು ನಿರ್ಮಿಸಿರುವುದಿಲ್ಲ.

ಬೆಂಚೆ ಪಾಳ್ಯದ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ, ರಾಗಿ, ಭತ್ತ, ಜೋಳ, ನವಣೆ, ತೆಂಗು, ಅಡಿಕೆ, ಹುಣಸೇ ಹಣ್ಣಿನ ಬೆಳೆಯನ್ನು ಬೆಳೆಯುತ್ತಾರೆ. ಮತ್ತು ವ್ಯಾಪಾರದ ಸರಕುಗಳಾಗಿವೆ.

ಈ ಪಾಳ್ಯವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ ಮತ್ತು ಬುಕ್ಕಾಪಟ್ಟಣ ಜಿಲ್ಲಾ ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ ಬುಕ್ಕಾಪಟ್ಟಣ ಪೋಲೀಸ್ ಠಾಣೆ, ರಾಮಲಿಂಗಾಪುರ ಗ್ರಾಮ ಪಂಚಾಯ್ತಿ, ಹಾಗೂ ತುಪ್ಪದಕೋಣ ಅಂಚೆ ಕಛೇರಿಯನ್ನು ಹೊಂದಿದ್ದು ಗ್ರಾಮ ನ್ಯಾಯ ಮಂಡಳಿಗೆ ಬದ್ಧವಾಗಿದೆ.

ಬೆಂಚೆ ಪಾಳ್ಯದಲ್ಲಿ ಯಾವುದೇ ಸ್ತ್ರೀಶಕ್ತಿ ಸಂಘಗಳಿಲ್ಲ ಮತ್ತು ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಶಾಲೆಗಳು ಕಂಡು ಬರುವುದಿಲ್ಲ. ಆದ್ದರಿಂದಾಗಿ ಇಲ್ಲಿ ಯಾವುದೇ ಆರೋಗ್ಯ ಕೇಂದ್ರಗಳು ಇಲ್ಲದಿದ್ದರೂ ಕುಟುಂಬ ಕಲ್ಯಾಣ ಪದ್ಧತಿ ಇದೆ. ಆದ್ದರಿಂದ ಆಶಾಕಾರ್ಯಕರ್ತೆಯರು ವಾರಕ್ಕೊಮ್ಮೆ, ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ ಮತ್ತು ಇಲ್ಲಿ ಕಾಣಿಸಿಕೊಳ್ಳುವ ರೋಗ ಜ್ವರ, ಕೆಮ್ಮು, ಬಿ.ಪಿ ಇತ್ಯಾದಿಗಳಾಗಿವೆ.

ಐತಿಹಾಸಿಕ ನೆಲೆಯಾಗಿ ಬೇವಿನಕಟ್ಟೆಯನ್ನು ಹೊಂದಿದೆ. ಧಾರ್ಮಿಕ ಕೇಂದ್ರಗಳಲ್ಲಿ ತಿಮ್ಮಪ್ಪ ಮತ್ತು ಚಿಕ್ಕಅಘ್ರಹಾರದ ಮಾರಮ್ಮನನ್ನು ಪೂಜಿಸುತ್ತಾರೆ. ಹಾಗೆಯೇ ಪ್ರತಿವರ್ಷವೂ ಮಾರಮ್ಮ ಜಾತ್ರೆ ಮಾಡುತ್ತಾರೆ. ಆರತಿ ಮತ್ತು ಬಲಿ ನೀಡುವುದು ವಿಶೇಷವಾಗಿದೆ. ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ.

## ಬೆಂಚೆಗೇಟ್

ಬೆಂಚೆಗೇಟ್ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ–ಚೇಳೂರು ರಸ್ತೆಯಲ್ಲಿ ಸಿರಾದಿಂದ ೧೫.೫ ಕಿ.ಮೀ. ದೂರದಲ್ಲಿರುವ ಈ ಗೇಟ್‌ನ ಒಟ್ಟು ಭೌಗೋಳಿಕ ವಿಸ್ತೀರ್ಣವು ೩೮ ಹೆಕ್ಟೇರ್‌ಗಳಾಗಿವೆ. ಸಿರಾ–ಚೇಳೂರು ಮುಖ್ಯ ರಸ್ತೆಯಲ್ಲಿ ಬೆಂಚೆ ಮುಖ್ಯ ಗ್ರಾಮದಿಂದ ಅರ್ಧ ಕಿ.ಮೀ. ದೂರದಲ್ಲಿ ಮೊದಲಿಗೆ ಪುಟ್ಟ ಅಂಗಡಿಗಳೊಂದಿಗೆ ಗ್ರಾಮ ಬೆಳೆದು ಇತ್ತೀಚೆಗೆ ದೊಡ್ಡದಾಗಿ ಬೆಳೆದಿದೆ. ಬೆಂಚೆಯು ಉಪಗ್ರಾಮವಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು, ಮರಳುಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇಲ್ಲಿ ಕುಡಿಯುವ ನೀರಿಗಾಗಿ ಸಿಸ್ಟನ್ ಮತ್ತು ಕೈ ಜಗ್ಗುಗಳಿವೆ. ಆರು ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಮತ್ತು ವಾರ್ಷಿಕವಾಗಿ ೪೨೫.೯ ಮಿ.ಮೀ. ಸರಾಸರಿ ಮಳೆಯಾಗಿದೆ. ಬಿಸಿಲು ೩೯೦ ಸೆಂ. ಇದ್ದು, ಚಳಿ ೯೦ ಸೆಂ. ಇದೆ.

ಬೆಂಚೆಗೇಟ್‌ನಲ್ಲಿ ೨೮ ಮನೆಗಳಿದ್ದು ೧೦೩ ಜನಸಂಖ್ಯೆಯನ್ನು ಹೊಂದಿದೆ. ಅಲ್ಲದೇ ಇವರ ಭಾಷೆ

ಕನ್ನಡವಾಗಿದೆ. ಇವರಲ್ಲಿ ಕುಂಚಿಟಿಗ, ನಾಯಕ, ಬೋವಿಗಳ ಮನೆಗಳು ಇವೆ. ಮತ್ತು ಇವರ ಆಹಾರ ಮುದ್ದೆ, ಅನ್ನ ವಿಶೇಷವಾಗಿ ಬಾಡೂಟ, ಪಾಯಸ, ಇತ್ಯಾದಿ ಸಿಹಿ ತಿನಿಸುಗಳಾಗಿವೆ. ಇಲ್ಲಿ ಆಧುನಿಕ ವಾಹನಗಳಾದ ಟ್ರ್ಯಕ್ಟರ್ ಮತ್ತು ಮಿನಿಟೆಂಪೋ ಹಾಗು ದ್ವಿಚಕ್ರ ವಾಹನಗಳಾಗಿವೆ. ಇವು ಹೆಂಚಿನ, ಕಾಂಕ್ರೀಟ್ ಸ್ವರೂಪದವುಗಳಾಗಿವೆ. ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಹೊಂದಿದೆ.

ಈ ಗೇಟಿನ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ, ರಾಗಿ, ತೆಂಗು, ನವಣೆ ಹುಣಸೆ ಬೆಳೆಗಳನ್ನು ಬೆಳೆಯುತ್ತಾರೆ. ಹಾಗೆಯೇ ವ್ಯಾಪಾರದ ಸರಕುಗಳು ಸಹ ಆಗಿವೆ. ಇಲ್ಲಿ ಸಣ್ಣ ಕೈಗಾರಿಕೆಗಳಲ್ಲಿ ರಾಗಿ ಮಿಲ್ಲು, ರೇಷ್ಮೆ ಫಾರಂ ಮತ್ತು ಬಟ್ಟೆ ಹೊಲಿಯುವುದು, ಪ್ರಮುಖವಾಗಿ ಕಂಡು ಬಂದಿದೆ. ಹಾಗೂ ದ್ವಿಚಕ್ರ ವಾಹನಗಳ ರಿಪೇರಿ ಮಾಡುವ ಉದ್ಯೋಗವನ್ನು ಮಾಡುತ್ತಿದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಗೋಪಾಲದೇವರಹಳ್ಳಿ ತಾಲ್ಲೂಕು ಪಂಚಾಯ್ತಿ ತಹಶೀಲ್ದಾರ್ ಕಛೇರಿ ಹಾಗೂ ಗೋಪಾಲದೇವರಹಳ್ಳಿ ಗ್ರಾಮ ಪಂಚಾಯ್ತಿ ಬೆಂಚೆ ಅಂಚೆ ಕಛೇರಿ, ಕಳ್ಳಂಬೆಳ್ಳ ವಿದ್ಯುತ್ ಮತ್ತು ಪೋಲೀಸ್ ಠಾಣೆಯನ್ನು ಹೊಂದಿದೆ. ಈ ಗ್ರಾಮದಲ್ಲಿ ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದೆ.

ಈ ಗೇಟ್‌ನಲ್ಲಿ ವಿಶೇಷವೆಂದರೆ ಪ್ರತಿ ಶುಕ್ರವಾರ ಸಂತೆ ನಡೆಯುತ್ತದೆ. ತೆಂಗಿನಕಾಯಿ, ರಾಗಿ, ಧಾನ್ಯಗಳು ಮಂಡಿಯನ್ನು ಸೇರುತ್ತದೆ. ಗೋಪಾಲದೇವರ ಹಳ್ಳಿ ಪಂಚಾಯ್ತಿ ಕಾರ್ಯಾಲಯ, ಗ್ರಾಮಲೆಕ್ಕಿಗರ ಕಛೇರಿ ಮತ್ತು ಪಂಚಾಯ್ತಿ ಗ್ರಂಥಾಲಯವಿದೆ. ಎರಡು ಸ್ತ್ರೀ ಶಕ್ತಿಗಳು ಇವೆ.

ಈ ಗೇಟಿನಲ್ಲಿ ಒಂದು ಅಂಗನವಾಡಿ ಕೇಂದ್ರ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಇಲ್ಲಿನ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ. ೫೦ ರಷ್ಟಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ. ಇಲ್ಲಿ ಆರೋಗ್ಯ ಕೇಂದ್ರವಿಲ್ಲದಿದ್ದರೂ ಕುಟುಂಬ ಕಲ್ಯಾಣ ಪದ್ಧತಿಯನ್ನು ರೂಢಿಸಿಕೊಂಡಿದೆ. ಇಲ್ಲಿ ಶ್ರೀನಿವಾಸ ನಾಯ್ಕರವರು ನಾಟಿ ಔಷಧಿಯನ್ನು ನೀಡುತ್ತಾರೆ. ಇಲ್ಲಿ ಕಾಣಿಸಿಕೊಳ್ಳುವ ರೋಗ ಜ್ವರ, ಚಳಿ, ಕೆಮ್ಮು ಇತ್ಯಾದಿಗಳಾಗಿವೆ.

ಸರ್ಕಾರದ ಸಮುದಾಯದ ಸೌಲಭ್ಯವನ್ನು ಪಡೆಯುತ್ತಿದ್ದು, ಇಲ್ಲಿ ಆರು ಉಪಹಾರ ಹೋಟೆಲ್ ಮತ್ತು ಡಾಬಾವನ್ನು ೧೪ ಟೀ ಮತ್ತು ಚಿಲ್ಲರೆ ವ್ಯಾಪಾರದ ಅಂಗಡಿಗಳು, ೨ ಕೋಳಿ ಫಾರಂ ಅಂಗಡಿಯನ್ನು ಹೊಂದಿದೆ. ಅರಳಿಕಟ್ಟೆ, ಆಲದಕಟ್ಟೆಯು ಕಂಡು ಬರುತ್ತಿದೆ. ಹಾಗೂ ಪಕ್ಕದಲ್ಲಿ ಬಸವೇಶ್ವರ ಮತ್ತು ದುರ್ಗಮ್ಮ ದೇವಾಲಯಗಳಿವೆ. ಇಲ್ಲಿ ಪ್ರತಿವರ್ಷವು ಜಾತ್ರೆ ನಡೆಯುತ್ತದೆ. ದುರ್ಗಮ್ಮನಿಗೆ ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿರುತ್ತದೆ.

## ಬಂಗಾರಿಹಟ್ಟಿ

ಬಂಗಾರಿಹಟ್ಟಿಯೂ ಸಿರಾ ತಾಲ್ಲೂಕು ಕೇಂದ್ರದಿಂದ ವಾಯುವ್ಯ ದಿಕ್ಕಿನಲ್ಲಿದೆ. ಸಿರಾ-ಬುಕ್ಕಾಪಟ್ಟಣ-ತಾವರೆಕೆರೆ ರಸ್ತೆಯಲ್ಲಿರುವ ಬುಕ್ಕಾಪಟ್ಟಣದಿಂದ ೩ ಕಿ.ಮೀ. ದೂರದಲ್ಲೂ, ಸಿರಾದಿಂದ ೨೪ ಕಿ.ಮೀ. ದೂರದಲ್ಲಿರುವ ಗ್ರಾಮವು ಕಾಡು ಗೊಲ್ಲರ ಬುಡಕಟ್ಟು ಗ್ರಾಮವಾಗಿದೆ. ಬಂಗಾರಮ್ಮ ಹೆಣ್ಣುಮಗಳ ಹೆಸರಲ್ಲಿ ಕಾಡುಗೊಲ್ಲರ ಮನೆಗಳು ರಚನೆಯಾಗಿರುವುದು ಈ ಗ್ರಾಮದ ವಿಶೇಷವಾಗಿದೆ. ಇದು ಹುಣಸೆಕಟ್ಟೆಯ ಉಪಗ್ರಾಮವಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದು ಭೌಗೋಳಿಕ ವಿಸ್ತೀರ್ಣ ೨೯೨.೮ ಹೆಕ್ಟೇರ್‌ಗಳಾಗಿವೆ. ಬಿಸಿಲಿನ ಉಷ್ಣಾಂಶ ೩೯೦ ಸೆಂ. ಆಗಿದೆ. ಚಳಿಯು ೧೨೦ ಸೆಂ. ಆಗಿದೆ. ಈ ಗ್ರಾಮದಲ್ಲಿ ಯಾವುದೇ ಅರಣ್ಯ ಬೆಟ್ಟ ಗುಡ್ಡಗಳು ಕಂಡು ಬರುವುದಿಲ್ಲ. ಈ ಪ್ರದೇಶದಲ್ಲಿ ನರಿ, ಮೊಲ, ಜಿಂಕೆ, ಹಂದಿ ಕಂಡು ಬಂದರೆ, ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಕುರಿ, ಮೇಕೆ, ದನಗಳನ್ನು ಸಾಕಿದ್ದಾರೆ. ಈ ಪರಿಸರದಲ್ಲಿ ಪಕ್ಷಿಗಳಾದ ಕಾಗೆ, ಗಿಳಿ, ನವಿಲು ಕಂಡು ಬಂದರೆ ಕೋಳಿ ಸಾಕು ಪಕ್ಷಿಯಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರುನೀರು ಯೋಜನೆ ಅಡಿಯಲ್ಲಿ ನೀರು ಒದಗಿಸಲಾಗುತ್ತಿದೆ.

ಗ್ರಾಮದಲ್ಲಿ ೮೦ ಮನೆಗಳಿದ್ದು ೨೬೨ ಜನಸಂಖ್ಯೆಯನ್ನು ಹೊಂದಿದೆ. ಮತ್ತು ಗೊಲ್ಲರ ಮನೆಗಳಿವೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ, ವಿಶೇಷವಾಗಿ ಬಾಡೂಟ ಹಾಗೂ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಸಾಂಪ್ರದಾಯಿಕ ಎತ್ತಿನಗಾಡಿಗಳು ಮತ್ತು ಆಧುನಿಕ ವಾಹನಗಳನ್ನು ಹೊಂದಿದೆ. ಈ ಗ್ರಾಮದ ಮನೆಗಳು ಕಾಂಕ್ರೀಟ್, ಶೀಟಿನ ಮನೆಗಳಿದ್ದು ಇವು ಸರ್ಕಾರದ ವಸತಿ ಯೋಜನೆಗಳಾದ ಜನತಾ, ಆಶ್ರಯ ಯೋಜನೆಗಳು ೧೬ ಫಲಾನುಭವಿಗಳಿದ್ದಾರೆ. ೨೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ ಪ್ರಮುಖ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳು ತೆಂಗು, ಅಡಿಕೆ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಈ ಗ್ರಾಮದಲ್ಲಿ ಹೂ ಕಟ್ಟುವುದು, ಹುಣಸೆಹಣ್ಣು, ಬೀಡಿಕಟ್ಟುವ ಮಹಿಳಾ ಗೃಹ ಕೈಗಾರಿಕೆ ಇದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ನೇರಳೆಗುಡ್ಡ ತಾಲ್ಲೂಕು ಪಂಚಾಯ್ತಿ, ತಹಶೀಲ್ದಾರ್ ಕಛೇರಿ ನೇರಲಗುಡ್ಡ ಪಂಚಾಯ್ತಿ ಇಬ್ಬರು ಸದಸ್ಯರನ್ನು ಒಳಗೊಂಡಿದೆ. ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ. ಬುಕ್ಕಾಪಟ್ಟಣ ಪೋಲೀಸ್ ಠಾಣೆಯನ್ನು ಮತ್ತು ವಿದ್ಯುತ್ ಮಂಡಳಿಯನ್ನು ಯಾವುದೇ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿಲ್ಲ.

ಈ ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯನ್ನು ಹೊಂದಿದ್ದು, ಒಟ್ಟಾರೆ ಸಾಕ್ಷರತೆಯ ಪ್ರಮಾಣವು ೫೭.೭೭ ರಷ್ಟಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕಗಳ ಸೌಲಭ್ಯಗಳಿವೆ. ಇಲ್ಲಿ ಆರೋಗ್ಯ ಕೇಂದ್ರಗಳು ಇಲ್ಲದಿದ್ದರೂ ಸಹ ಕುಟುಂಬ ಕಲ್ಯಾಣ ಪದ್ಧತಿಯನ್ನು ಅಳವಡಿಸಿಕೊಂಡಿದೆ. ಸರ್ಕಾರದ ಸೌಲಭ್ಯವನ್ನು ಪಡೆದುಕೊಳ್ಳುತ್ತಿದೆ. ಎರಡು ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಹೊಂದಿದೆ. ವೃದ್ಧಾಪ್ಯ ವೇತನ, ವಿಧವಾ ವೇತನ, ಮಾಸಾಶನ ಸೌಲಭ್ಯ ಪಡೆಯುತ್ತಿದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಧಾರ್ಮಿಕ ಪರಂಪರೆಯಲ್ಲಿ ಜುಂಜಪ್ಪ, ಕಾಟಂದೇವರು, ಬಸವಣ್ಣ ದೇವಾಲಯಗಳನ್ನು ಹೊಂದಿದೆ. ಸಾಂಪ್ರದಾಯಿಕ ಹಬ್ಬಗಳೊಂದಿಗೆ ಜನರು ಜುಂಜಪ್ಪನ ಜಾತ್ರೆಯನ್ನು ಮಾಡುತ್ತಾರೆ. ಪ್ರಾಚೀನ ಕಾಲದ ಸಮಾಧಿಗಳು ಒಟ್ಟಿಗೆ ಇರುವುದನ್ನು ಕಾಣಬಹುದು ಮತ್ತು ಅಶ್ವತ್ಥ ಕಟ್ಟೆಯನ್ನು ಹೊಂದಿದೆ. ದೊಡ್ಡಯ್ಯ ಎಂಬ ಕಾಡುಗೊಲ್ಲರ ೭೪ ವರ್ಷ ವಯಸ್ಸಿನ ಯಕ್ಷಗಾನ ಭಾಗವತ ಮಂಡಲಪಾಯದ ಯಕ್ಷಗಾನ ಕಲೆಯ ಕಲಾವಿದರಿದ್ದು ರತಿಕಲ್ಯಾಣ, ದುಶ್ಯಾಸನಕತೆ, ಲಂಕಾದಹನ ಮೊದಲಾದ ಯಕ್ಷಗಾನ ಪ್ರಸಂಗಗಳನ್ನು ಕಲಿಸುತ್ತಿದ್ದು, ಭಾಗವತರಾಗಿ ಹೆಸರಾಗಿದ್ದಾರೆ. ಸರ್ಕಾರದ ಮಾಸಾಶನ ಗೌರವಧನ ಇವರಿಗೆ ಬರುತ್ತಿದೆ.

## ಮದಲೂರು

ಮದಲೂರು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೦ ಕಿಮೀ ದೂರದಲ್ಲಿದೆ. ಸಿರಾ-ಅಗಳಿ-ಮಡಕಸಿರಾ ಮುಖ್ಯ ರಸ್ತೆಯಲ್ಲಿದ್ದು ಎತ್ತರದ ಪ್ರದೇಶವಾಗಿದೆ. ಕಂದಾಯ ಗ್ರಾಮವಾಗಿ, ಸಿರಾ ಕಸಬಾ ಹೋಬಳಿಗೆ ಸೇರಿದೆ. ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿಗಳ ಕೇಂದ್ರ ಸ್ಥಳವೂ ಈ ಗ್ರಾಮವಾಗಿದ್ದು ಸಮುದ್ರ ಮಟ್ಟಕ್ಕಿಂತ ೬೭೧.೪೨ ಅಡಿ ಎತ್ತರದಲ್ಲಿದೆ. ಗ್ರಾಮಪಂಚಾಯ್ತಿಗೆ ಬಪ್ಪನಡು, ಎಂ.ದಾಸರಹಳ್ಳಿ, ಗಿಡಗನಹಳ್ಳಿ, ತಿಮ್ಮಸಾಗರ, ಹುಳಿಗೆರೆ, ಉಪ್ಪಾರಪಾಳ್ಯ, ರಂಗನಾಥಪುರ, ಕೆಂಪಾರ್ಲಹಟ್ಟಿ, ಹುಳಿಗೆರೆ ಗೊಲ್ಲರಹಟ್ಟಿ, ಇನುಕನಹಳ್ಳಿ, ಹೊಸಹಳ್ಳಿ ಗ್ರಾಮಗಳಿದ್ದು ಈ ಗ್ರಾಮ ಪಂಚಾಯ್ತಿ ವಲಯಕ್ಕೆ ಸೇರಿವೆ. ಇದೊಂದು ಪ್ರಾಚೀನ ಗ್ರಾಮವಾಗಿದ್ದು ಶಾಸನಗಳಲ್ಲೂ ಉಲ್ಲೇಖವಿದೆ. ಶಾಸನಗಳಲ್ಲಿ ಈ ಗ್ರಾಮವನ್ನು ವೀರಬೊಮ್ಮಪುರ ಎಂತಲೂ ಕರೆಯಲಾಗಿದೆ.

ಇದು ಕಂದಾಯ ಗ್ರಾಮವಾಗಿದ್ದು ೧೦೫೪.೧೨ ಹೆಕ್ಟೇರ್ ಭೂ ವಿಸ್ತೀರ್ಣವನ್ನು ಹೊಂದಿದೆ. ಇದಕ್ಕೆ ಮಜರೆ ಗ್ರಾಮವಾಗಿ ಗಿಡುಗನಹಳ್ಳಿ, ಎಂ.ದಾಸರಹಳ್ಳಿ, ಇನಕನಹಳ್ಳಿ, ತಿಮ್ಮಸಾಗರ, ಕೆಂಪಾರ್ಲಹಟ್ಟಿ, ಹುಳಿಗೆರೆ ಹಾಗೂ ಹುಳಿಗೆರೆ ಗೊಲ್ಲರಹಟ್ಟಿ, ಉಪ್ಪಾರಪಾಳ್ಯ ಹಾಗೂ ರಂಗನಾಥಪುರ ಗ್ರಾಮಗಳನ್ನು ಹೊಂದಿದೆ. ಗ್ರಾಮದ ಮೊದಲಿಗೆ ದೊಡ್ಡ ಕೆರೆ ಕೊನೆಗೆ ಚಿಕ್ಕ ಕೆರೆ ಎರಡು ಕೆರೆಗಳನ್ನು ಹೊಂದಿದ್ದು ಉತ್ತಮ ಮಳೆಯಾದರೆ ಈ ಗ್ರಾಮ ಹಾಗೂ ಗ್ರಾಮ ಪರಿಸರದ ಹಲವು ಹಳ್ಳಿಗಳು ಸಮೃದ್ಧಿಯಾಗುತ್ತವೆ. ದುರಂತ ಮದಲೂರು ಕೆರೆ ತುಂಬುವುದೇ ಅಪರೂಪ. ಹೂಳು ತುಂಬಿ ಕೆರೆ ನೀರಿನ ಹರವು ಕಡಿಮೆಯಾಗುತ್ತಿದ್ದು ಬಳ್ಳಾರಿ ಜಾಲಿ ಬೆಳೆದು ಕರೆ ಅಂಗಳ ಉರುವಲು, ಹಾಗೂ ಕಾಡುಪ್ರಾಣಿಗಳ ವಾಸಸ್ಥಾನವಾಗುತ್ತಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ಶೇಂಗಾ, ತೋಟಗಾರಿಕೆಗೆ ಉತ್ಕೃಷ್ಟವಾಗಿದೆ. ಪ್ರಸ್ತುತ ಮದಲೂರು ಕೆರೆಗೆ ಹೇಮಾವತಿ ಜಲಾಶಯದಿಂದ ನೀರು ತುಂಬಿಸುವ ಕಾಮಗಾರಿ ಚಾಲ್ತಿಯಲ್ಲಿರುವುದು ಈ ಭಾಗದ ಜನರು ಭರವಸೆಯ ಕಣ್ಣಿನಿಂದ ನೋಡುವಂತಾಗಿದೆ. ಮಾತ್ರವಲ್ಲ ಮದಲೂರು ಕೆರೆ ತುಂಬಿದರೆ, ಹುಲಿಕುಂಟೆ, ಗೌರಡೆರೆ ಹೋಬಳಿಯ ಹಲವಾರು ಹಳ್ಳಿಗಳು ಪರೋಕ್ಷ ಹಾಗೂ ಪ್ರತ್ಯಕ್ಷ ಅಂತರ್ಜಲ ಸಮೃದ್ಧಿಯ ಕಾರಣಗಳಿಂದ ಕೃಷಿ ಬದುಕಿಗೆ ಒತ್ತಾಸೆಯಾಗುತ್ತಿದೆ.

ಈ ಗ್ರಾಮಕ್ಕೆ ಸೇರಿದ ೧೮೨ ಹೆಕ್ಟೇರ್ ನೆಡುತೋಪು ಇದೆ. ಈ ಪರಿಸರದಲ್ಲಿ ಮೊಲ, ಮುಂಗುಸಿ, ನರಿ, ಉಡ, ಕರಡಿ ಕಂಡುಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎತ್ತು, ಕುರಿ, ಮೇಕೆ, ಎಮ್ಮೆ, ನಾಯಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಗಿಳಿ, ಗೀಜುಗ, ಗರುಡ, ಗುಬ್ಬಚ್ಚಿ, ಕೋಗಿಲೆ, ಕೊಕ್ಕರೆ, ಕೌಜಲಗ, ಕಾಡುಕೋಳಿ, ನವಿಲು, ಹದ್ದು, ಮರಕುಟಿಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಕೋಳಿ ಸಾಕುಪಕ್ಷಿಯಾಗಿದೆ.

ಬಯಲು ಪ್ರದೇಶ, ಮಳೆ ಕಡಿಮೆ, ವಾರ್ಷಿಕ ಮಳೆ ಸರಾಸರಿ ೪೫೪ ಮಿಮೀ ಆಗುತ್ತಿದ್ದು ಬಿಸಿಲು ೩೮-೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮದ ಎಡ-ಬಲಕ್ಕೆ ಎರಡು ಕೆರೆಗಳಿದ್ದರೂ ತುಂಬುವುದು ಕಷ್ಟ. ಹಾಗಾಗಿ ರೈತರು ಕೃಷಿಗಾಗಿ ಸಹಜ ಮಳೆಯೊಂದಿಗೆ ಕೊಳವೆ ಬಾವಿಗಳ ಮೂಲಕ ನೀರಾವರಿ ಅನುಕೂಲ

ಮಾಡಿಕೊಂಡಿದ್ದಾರೆ. ಈ ಪರಿಸರದಲ್ಲಿ ೧೩೦ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೧೫ ಸಿಸ್ಟರ್ನ್‌ಗಳಿದ್ದು ೩ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಸರ್ಪ ಒಕ್ಕಲಿಗರು (ಸಲ್ಪರು), ನಾಯಕ, ವೀರಶೈವ, ಬೋವಿ, ಆದಿದ್ರಾವಿಡ, ದೊಂಬಿದಾಸರು, ಕುಂಬಾರ, ಕುಂಚಿಟಿಗ, ವೈಶ್ಯ, ಮುಸ್ಲಿಂ, ರಜಪೂತ ಕುಟುಂಬಗಳು ಕಿರು ಸಮುದಾಯಗಳಿವೆ. ಗ್ರಾಮದಲ್ಲಿ ಕನ್ನಡ ಮಾತೃಭಾಷೆಯಾಗಿದ್ದು ಹಿಂದಿ, ತೆಲುಗು ಅಲ್ಪಸಂಖ್ಯಾತರ ಭಾಷೆಯಾಗಿ ಬಳಕೆಯಾಗುತ್ತಿದೆ. ವಿವಿಧ ಪ್ರಕಾರಗಳ ೨೬೦ ಮನೆಗಳಿದ್ದು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ, ೮ ಗುಡಿಸಲು ಸೇರಿ ಒಟ್ಟು ೨೬೦ ಮನೆಗಳಿವೆ. ಇಲ್ಲಿ ಜನತಾ, ಇಂದಿರಾ ಆವಾಸ್, ಅಂಬೇಡ್ಕರ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೭೨ ಫಲಾನುಭವಿಗಳಿದ್ದಾರೆ. ೧೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನವಾದ ಎತ್ತಿನ ಬಂಡಿಯ ಜೊತೆಗೆ ಟ್ರ್ಯಕ್ಟರ್, ಲಾರಿ, ಟೆಂಪೋ, ಆಟೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಬೆಳೆ ಈ ಭಾಗದ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ಅಲಸಂದೆ, ತೊಗರಿ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಗಳಾಗಿ ತೆಂಗು, ಅಡಿಕೆ, ಸಪೋಟ, ದಾಳಿಂಬೆ ಬೆಳೆಗಳು ಹತ್ತಿ, ಸೀಡ್ಸ್ ಬೀಜಗಳನ್ನು ಬೆಳೆಯುತ್ತಾರೆ. ಹುಣಸೆಹಣ್ಣು, ಹೊಂಗೆಬೀಜ, ತೆಂಗು, ಅಡಿಕೆ, ಹಣ್ಣುಗಳು ವಾಣಿಜ್ಯ ಬೆಳೆಗಳಾಗಿವೆ. ಒಂದು ಹಾಲಿನ ಡೈರಿಯಿದ್ದು ೨೬೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ.

ವೈದ್ಯಕೀಯ, ಶಿಕ್ಷಣ, ಸಾರಿಗೆ, ಕಂದಾಯ, ಅರಣ್ಯ ಇಲಾಖೆಗೆ ಸೇರಿದ ೨೬ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವೈದ್ಯರಾದ ಡಾ॥ ರಮೇಶ್, ಮುರುಗಪ್ಪ ಗೌಡ, ಡಾ॥ ಶೈಲ ಇದೇ ಗ್ರಾಮದವರೆಂಬುದು ವಿಶೇಷ. ಶಿಕ್ಷಕ, ಸಾಂಸ್ಕೃತಿಕ ಸಂಘಟಕ ಮದಲೂರು ಮೂರ್ತಿ ಇದೇ ಗ್ರಾಮದವರು. ಗ್ರಾಮದಲ್ಲಿ ಬೀಡಿ ಕಟ್ಟುವುದು, ಹೂ ಕಟ್ಟುವುದು, ಟೈಲರಿಂಗ್ ಮೊದಲಾದ ಗೃಹಕೈಗಾರಿಕೆ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ೩ ಜನ ಪಂಚಾಯತ್ ಸದಸ್ಯರು ಈ ಗ್ರಾಮದ ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ಒಂದು ಅಂಚೆ ಕಛೇರಿ, ಆರೋಗ್ಯ ಕೇಂದ್ರ, ಪಶು ಚಿಕಿತ್ಸಾಲಯ, ವ್ಯವಸಾಯ ಸೇವಾ ಸಹಕಾರ ಸಂಘ, ಕೆನರಾ ಬ್ಯಾಂಕ್ ಶಾಖೆ, ದೂರವಾಣಿ ವಿನಿಮಯ ಕೇಂದ್ರ, ಅಂಗನವಾಡಿ, ಸರ್ಕಾರಿ ಹಿರಿಯ ಪಾಠಶಾಲೆ, ಹಾವನೂರು ಪ್ರೌಢಶಾಲೆ ಈ ಗ್ರಾಮದ ಸಾರ್ವಜನಿಕ ಸಂಸ್ಥೆಗಳು. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಸ್ತ್ರೀಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ಶಾಲೆಯಲ್ಲಿ ೧೧೯ ಮಕ್ಕಳಿದ್ದು ೩ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೮.೭ ರಷ್ಟಿದೆ. ಒಂದು ಗ್ರಂಥಾಲಯವೂ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಹೋಟೆಲ್, ೧೪ ಪೆಟ್ಟಿಗೆ ಅಂಗಡಿ, ಜನರಲ್ ಸ್ಟೋರ್‌ಗಳಿವೆ.

ಐತಿಹಾಸಿಕ ಗ್ರಾಮವಾದ ಮದಲೂರು ಈ ಪರಿಸರದಲ್ಲಿ ೭ ವೀರಗಲ್ಲು, ೩ ಮಾಸ್ತಿ ಕಲ್ಲುಗಳು ಲಭ್ಯವಿದ್ದು ಇವು ನೊಳಂಬರ ಅರಸರ ಕಾಲದ ರಚನೆಗಳಾಗಿವೆ. ವಿಶೇಷವಾಗಿ ೨ ವೀರಗಲ್ಲುಗಳು ಶಾಸನ ಕಲ್ಲುಗಳಾಗಿಯೂ ಪ್ರಕಟವಾಗಿದ್ದು ಸಿರಾ ೨೩ ರ ಶಾಸನ ಮದಲೂರು ಪೆಣ್ಣಿಯಲ್ ವೀರಗಲ್ಲು ಶಾಸನ ಮದಲೂರಿನ ಕಲ್ಲೇಶ್ವರ ದೇವಾಲಯದ ಬಳಿ ಬಿದ್ದಿರುವ ಶಾಸನ ಕಲ್ಲಿನಲ್ಲಿ ಎಡವಯ್ಯ (ಅಡವಯ್ಯ ಎಂದು ಇರಬೇಕು). ಗೋ ಕಳ್ಳತನ ಹಾಗೂ ಸ್ತ್ರೀಯರ ಮಾನಭಂಗದಲ್ಲಿ ನಿರತ ಶತ್ರುಗಳ ವಿರುದ್ಧ ಹೋರಾಡಿ ಮಡಿಯುತ್ತಾನೆ. ಆಗ ಅವನ ಮಗ ಜಕ್ಕ ಎಂಬುವವನು ತನ್ನ ತಂದೆಯ ಹೋರಾಟ ಸಾವಿಗೆ ಪ್ರತಿಕಾರವಾಗಿ ತಾವೂ ಯುದ್ಧ ಮಾಡಿ ಮಡಿದ ವಿವರವಿದೆ. ಇದರ ಕಾಲ ಕ್ರಿ.ಶ.೧೦೦೦. ಮತ್ತೊಂದು ಹೊಯ್ಸಳರ ಕಾಲದ ಶಾಸನ ಕ್ರಿ.ಶ.೧೧೭೨ ರ ಸುಮಾರು ಸಿರಾ ಶಾಸನ ೪೪ ರಲ್ಲಿ ಹೊಯ್ಸಳರು ನೊಳಂಬವಾಡಿಯ ಮೇಲೆ ಆಕ್ರಮಣ ಮಾಡಿ ಗೋವು, ಧನಸಂಪತ್ತು ದೋಚುತ್ತಿದ್ದ ಸಂದರ್ಭಕ್ಕೆ ಮಾಚಿಗಾವುಂಡ (ಗೌಡ) ನ ಮಗ ಮುದಗಾವುಂಡ

(ಮುದ್ದೇಗೌಡ) ಮದಲೂರು ಕೆರೆಯ ಗದ್ದೆ ಬಯಲಿನಲ್ಲಿ ಹೊಯ್ಸಳರೊಂದಿಗೆ ಹೋರಾಡಿ ಮಡಿದನು. ಆಗ ಆತನ ಮಗ ಬಚ್ಚಯ್ಯ ಹೆಗ್ಗಡೆ ೧೪ ಖಂಡದ ಭೂಮಿಯನ್ನು ಮಾನ್ಯ ಮಾಡಿ ಈ ವೀರಗಲ್ಲು ಶಾಸನ ಹಾಕಿಸಿದ್ದಾನೆ. ಈ ಮಾನ್ಯದ ಗದ್ದೆ ಯಾರಿಗೆ ಸಲ್ಲುತ್ತದೆಂಬ ವಿವರವಿಲ್ಲ. ಇಲ್ಲಿ ಮದಲೂರನ್ನು ಬೊಮ್ಮಪುರ ಎಂದು ಉಲ್ಲೇಖಿಸಿರುವುದು ವಿಶೇಷ. ಮತ್ತೊಂದು ಕೊಟ್ಟ ಬಳಿಯ ಮದಲೂರು ಗಡಿಶಾಸನ ಸಿರಾ ಶಾಸನ ೨೭ ರಲ್ಲಿ ಮದಲೂರು ಗಡಿಯನ್ನು ಗುರುತಿಸಿದೆ. 'ಶ್ರೀಮಂತು ವೀರಬ್ರಹ್ಮ ಪುರವಾದ ಮದಲೂರ ಸೀಮಾಂತ' ಎಂದು ಉಲ್ಲೇಖಿಸಿದೆ.

ಗ್ರಾಮದಲ್ಲಿ ಕಲ್ಲೇಶ್ವರ, ಆಂಜನೇಯ, ದುರ್ಗಮ್ಮ, ಚನ್ನಿಗರಾಯ, ಕರಿಯಮ್ಮ, ಲಕ್ಷ್ಮೀ ದೇವಾಲಯಗಳಿದ್ದು ಯತಿಗಳ ಗದ್ದುಗೆ ಇವೆ. ದುರ್ಗಮ್ಮನ ಶ್ರಾವಣ ಬುಧವಾರದ ಆರತಿ, ಬಲಿ, ಹರಕೆ ಸಂಪ್ರದಾಯವಾಗಿದೆ. ದಸರಾ ದಿನದಂದು ಗ್ರಾಮದ ಎಲ್ಲ ದೇವತೆಗಳ ಊರ ಉತ್ಸವ ವಿಶೇಷವಾಗಿರುತ್ತದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ ಹಬ್ಬಗಳನ್ನು ವಿಜೃಂಭಣೆಯಿಂದ ನೆರವೇರಿಸುತ್ತಾರೆ. ಶ್ರೀ ಮುರುಗಪ್ಪ ಹಿರಿಯ ರಾಜಕೀಯ ಧುರೀಣರು. ಶ್ರೀಮತಿ ಲಕ್ಷ್ಮೀದೇವಮ್ಮ ಮೂರ್ತಿ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರೂ ಆಗಿದ್ದು ಈ ಗ್ರಾಮದ ವಿಶೇಷವಾಗಿದೆ. ಗ್ರಾಮದ ಕಲ್ಲೇಶ್ವರ ದೇವಸ್ಥಾನದ ಮುಂದೆ ಉಡೇಮಠ ಎಂಬ ಶೈವ ಸಂಪ್ರದಾಯದ ಒಂದು ಗದ್ದಿಗೆ ಲಿಂಗಮುದ್ರೆ ಕಲ್ಲು ಮಠವಿದೆ.

## ಮದಲೂರು ದಾಸರಹಳ್ಳಿ

ಮದಲೂರು ದಾಸರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೯ ಕಿಮೀ ದೂರದಲ್ಲಿದೆ. ಸಿರಾ–ಮದಲೂರು ಮುಖ್ಯರಸ್ತೆಗೆ ಹೊಂದಿಕೊಂಡು ಮದಲೂರು ಚಿಕ್ಕ ಕೆರೆಯ ಕೋಡಿಯ ಬಲತುದಿಯಲ್ಲಿದೆ. ಇದು ಮದಲೂರು ಗ್ರಾಮದ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೩೨.೦೭ ಹೆಕ್ಟೇರ್ ಇದೆ.  ಸಿರಾ ತಾಲ್ಲೂಕಿನ ೭ ದಾಸರಹಳ್ಳಿಗಳಲ್ಲಿ ಗುರುತಿಸುವಿಕೆ ಅನುಕೂಲವಾಗಲೆಂಬ ಕಾರಣದಿಂದ ಹತ್ತಿರದ ಹೊಂದಿಕೆ ಗ್ರಾಮಗಳ ಹೆಸರನ್ನು ಮೊದಲಿಗೆ ಸೇರಿ ಕರೆಯುವುದು ವಾಡಿಕೆಯಾಗಿದೆ. (ಕೆರೆಮೇಗಲ ದಾಸರಹಳ್ಳಿ, ಬರಗೂರು ದಾಸರಹಳ್ಳಿ) ಹೀಗೆ ರಚನೆಗೊಂಡಿರುವ ಮದಲೂರು ದಾಸರಹಳ್ಳಿಯಲ್ಲಿ ಕಾಡುಗೊಲ್ಲರು ಪ್ರಧಾನವಾಗಿದ್ದು ತಿರುಪತಿ ತಿಮ್ಮನ ಒಕ್ಕಲುಗಳು ಅಧಿಕವಾಗಿದ್ದಾರೆ. ಹಾಗಾಗಿ ಈ ಗ್ರಾಮದ ಕಾಡುಗೊಲ್ಲರ ಕುಟುಂಬಗಳಲ್ಲಿ ಮನೆಗೊಬ್ಬರು ದಾಸಣ್ಣ ಹೆಸರಿನ ವ್ಯಕ್ತಿಗಳು ಕಂಡುಬರುವುದು ವಿಶೇಷವಾಗಿದೆ.

ಗ್ರಾಮದ ಮುಂಭಾಗಕ್ಕೆ ಮದಲೂರು ಚಿಕ್ಕ ಕೆರೆ, ಬಲಬದಿಗೆ ಬಯಲು ಇರುವುದರಿಂದ ಈ ಭಾಗದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಮುಂಗುಸಿ, ಉಡ, ಹಂದಿ ಕಂಡುಬರುತ್ತವೆ. ಗ್ರಾಮದಲ್ಲಿ ಹೈನುಗಾರಿಕೆಗಾಗಿ ಹಸು, ಎಮ್ಮೆಗಳೊಂದಿಗೆ ಕೃಷಿಗಾಗಿಯೂ ಹಳ್ಳಿಕಾರ್ ತಳಿ ಎತ್ತುಗಳನ್ನು ಬೆಳೆಸುತ್ತಾರೆ. ಜೊತೆಗೆ ಕುರಿ, ಮೇಕೆ, ನಾಯಿ, ಕತ್ತೆಗಳನ್ನು ಸಾಕಿದ್ದಾರೆ. ಪಕ್ಷಿಗಳಾದ ಗಿಳಿ, ಗೊರವಂಕ, ಬೆಳವ, ಕೋಗಿಲೆ, ಕಾಗೆ, ಹದ್ದು, ಗರುಡ, ಗೂಬೆ, ಗುಬ್ಬಚ್ಚಿಗಳನ್ನು ಕಾಣಬಹುದು. ಕೋಳಿ ಸಾಕುಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ಮಳೆ ೪೩೪ ಮಿಮೀ, ಬಿಸಿಲು ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇದೆ. ವಾಡಿಕೆಗಿಂತ ಕಡಿಮೆ ಮಳೆಯನ್ನು ಹೊಂದಿದ್ದು ಕೃಷಿಗೆ ಕೊಳವೆ ಬಾವಿಗಳ ಆಶ್ರಯ ಪಡೆದಿದ್ದಾರೆ. ಈ ಪರಿಸರದಲ್ಲಿ ೪೦ ಕೊಳವೆ ಬಾವಿಗಳಿವೆ. ಕುಡಿಯಲು ಕಿರುನೀರು ಸರಬರಾಜು ಯೋಜನೆಯಲ್ಲಿ ನೀರು ಒದಗಿಸಲಾಗುತ್ತಿದೆ. ಗ್ರಾಮದಲ್ಲಿ ೮ ಕಿರು ಟ್ಯಾಂಕ್‌ಗಳಿದ್ದು ೨ ಪಂಪುಗಳಿವೆ.

ಕಾಡುಗೊಲ್ಲರು ೮ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ. ಕಾಡುಗೊಲ್ಲರು ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಕುಂಚಿಟಿಗ, ಉಪ್ಪಾರ ಜನಾಂಗಗಳು ಕಿರು ಸಮುದಾಯಗಳಾಗಿವೆ. ಮಾದಿಗರಹಟ್ಟಿ, ಮೇಗಲ ಕೇರಿ ಎಂಬ ಎರಡು ಓಣಿಗಳಿವೆ. ಕನ್ನಡ ಗ್ರಾಮದ ಮಾತೃಭಾಷೆಯಾಗಿದೆ.

ವಿವಿಧ ಸ್ವರೂಪದ ೧೭೮ ಮನೆಗಳಿರುತ್ತವೆ. ಇವುಗಳಲ್ಲಿ ಕಾಂಕ್ರೀಟ್,  ಕಲ್ಲಿನ, ಮಣ್ಣಿನ, ಶೀಟಿನ, ಹೆಂಚಿನ ಮನೆಗಳಿವೆ. ಇವುಗಳಲ್ಲಿ ೧೬ ಜನ  ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ದೀಪದ ಫಲಾನುಭವಿಗಳಿದ್ದಾರೆ. ಗ್ರಾಮದ ಒಟ್ಟು ಜನಸಂಖ್ಯೆ ೮೪೦ ಆಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಬಂಡಿಗಳ ಜೊತೆಗೆ ಟ್ರ್ಯಾಕ್ಟರ್, ಮಿನಿ ಟೆಂಪೋ, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಭತ್ತ, ಜೋಳ, ಅಲಸಂದೆ, ತೊಗರಿ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗು, ಅಡಿಕೆ, ರೇಷ್ಮೆ, ಹತ್ತಿ ಇತರ ಬೆಳೆಗಳು. ಶೇಂಗಾ, ಹುಣಸೇಹಣ್ಣು, ಹೊಂಗೆಬೀಜ, ಹತ್ತಿ, ತೆಂಗು, ಅಡಿಕೆ ವಾಣಿಜ್ಯ ವ್ಯಾಪಾರವಿದೆ. ಕುರಿ ವ್ಯಾಪಾರವೂ ಮಹತ್ವವಾಗಿದೆ. ಗ್ರಾಮದಲ್ಲಿ ಒಂದು ಮಿನಿ ಹಾಲಿನ ಕೇಂದ್ರವಿದ್ದು ಸರಾಸರಿ ೧೬೦–೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶಿಕ್ಷಣ,

ಪೊಲೀಸ್, ಬ್ಯಾಂಕಿಂಗ್, ಆರೋಗ್ಯ ಇಲಾಖೆಗೆ ಸೇರಿದ ೧೦ ಜನ ಸರ್ಕಾರಿ ನೌಕರರಿದ್ದಾರೆ. ಈರಣ್ಣ ಕನಕ ಬ್ಯಾಂಕಿನ ಉದ್ಯೋಗಿಯಾಗಿದ್ದಾರೆ. ಚಿಕ್ಕೀರಣ್ಣ ಖಾಸಗಿ ಹೈಸ್ಕೂಲ್ ಶಿಕ್ಷಕರು.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಒಬ್ಬರು ಈ ಗ್ರಾಮದ ಪಂಚಾಯ್ತಿ ಸದಸ್ಯರಿದ್ದಾರೆ. ೨ ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಶಾಲೆಯಲ್ಲಿ ೯೪ ಮಕ್ಕಲಿದ್ದಾರೆ. ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೮.೭% ರಷ್ಟಿದೆ.

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಗೂಡಂಗಡಿಗಳಿವೆ. ೨ ಟೀ ಅಂಗಡಿಗಳಿವೆ.

ಗ್ರಾಮದಲ್ಲಿ ಮೈಲಾರಲಿಂಗ, ಚಿತ್ರಲಿಂಗ, ಜುಂಜಪ್ಪ, ಭೂತಪ್ಪ, ಕರಿಯಮ್ಮನ ದೇವಾಲಯಗಳಿವೆ. ದಸರಾ ದಿನದಂದು ಗ್ರಾಮದ ದಳವಾಯಿ, ದಾಸಣ್ಣನ ವಿಶೇಷ ಉಡುಗೆ ತೊಡುಗೆಯೊಂದಿಗೆ ದೇವರುಗಳ ದರ್ಬಾರ್, ಉತ್ಸವ, ಆಕರ್ಷಕ ಉತ್ಸವವಾಗಿರುತ್ತದೆ. ದೀಪಾವಳಿಯ ಸಂದರ್ಭದಲ್ಲಿ ಜುಂಜಪ್ಪ ಹಾಗೂ ಚಿತ್ರದೇವರ ದೀಪ ಏರಿಸುವ, ದೀಪ ಇಳಿಸುವ, ಹಾಲು ಮೀಸಲು, ಹಿರಿಯರ ಹಬ್ಬ ವಿಜೃಂಭಣೆಯಿಂದ ಜರುಗುತ್ತದೆ. ಕರಿಯಮ್ಮ ಗ್ರಾಮ ದೇವತೆಯಾಗಿದ್ದು ಪ್ರಾಣಿಬಲಿ, ಆರತಿ, ಹರಕೆ ಸಂಪ್ರದಾಯದೊಂದಿಗೆ ೨ ದಿನಗಳ ಜಾತ್ರೆ ಉತ್ಸವ ಜರುಗುತ್ತದೆ. ಮದ್ದಮ್ಮನ ಆರಾಧನೆಯೂ ಈ ಗ್ರಾಮದ ವಿಶೇಷವಾಗಿದೆ. ಗ್ರಾಮದಲ್ಲಿ ದೀಪಾವಳಿ, ಯುಗಾದಿ, ದಸರಾ, ಶಿವರಾತ್ರಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸೋಬಾನೆ ಕಲಾವಿದರಾದ ರಂಗಮ್ಮ, ಪುಟ್ಟನರಸಮ್ಮ ಸ್ಥಳೀಯವಾಗಿ ಹೆಸರಾಗಿದ್ದಾರೆ. ವೀರ ಜುಂಜಪ್ಪನ ಸಮಗ್ರ ಕಾವ್ಯವನ್ನು ಗದ್ಯ ಪದ್ಯ ಎರಡೂ ಪ್ರಕಾರಗಳಲ್ಲಿ ಹಾಡುವ ಅಪರೂಪದ ಕಲಾವಿದ ದಾಸಣ್ಣ ಜಾನಪದ ಮಹಾಕಾವ್ಯ ಹಾಡುಗಾರಿಕೆ ಕಮ್ಮಟಗಳೂ ಸೇರಿದಂತೆ ಜಾನಪದ ಅಕಾಡೆಮಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದು ವಿಶೇಷ. ಇವರು ಹಾಡಿರುವ ಸಮಗ್ರ ವೀರಜುಂಜಪ್ಪನ ಕಥಾವಳಿಯನ್ನು ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿ ೨೦೧೧ ರಲ್ಲಿ ಪ್ರಕಟಿಸಿರುವುದು ಇವರ ವಿಶೇಷ. ಚಿಕ್ಕಣ್ಣ ಎಂಬ ೬೦ ವರ್ಷ ವಯಸ್ಸಿನ ಹಿರಿಯ ಗಣೆ ಕಲಾವಿದರಿದ್ದಾರೆ.

## ಮಲ್ಲೇಶ್ವರ

ಇದು ಸಿರಾ–ತಾಳದುಂದ ಮುಖ್ಯ ರಸ್ತೆಯಲ್ಲಿ ದೇವಗೊಂಡನಹಳ್ಳಿಗೆ ಹೊಂದಿಕೊಂಡಿರುವ ಉಪಗ್ರಾಮ. ಸಿರಾ ತಾಲ್ಲೂಕು ಕೇಂದ್ರದಿಂದ ೧೬ ಕಿಮೀ ದೂರದಲ್ಲಿದೆ. ಇದರ ಭೌಗೋಳಿಕ ವ್ಯಾಪ್ತಿ ೧೪೦.೦೪ ಹೆಕ್ಟೇರ್ ಆಗಿದೆ.

ಮಲ್ಲೇಶಪ್ಪ ಎಂಬ ವ್ಯಕ್ತಿಯು ಈ ಗ್ರಾಮದ ಮೊದಲ ವಸತಿ ನಿರ್ಮಿಸಿದ ವ್ಯಕ್ತಿ. ಅನಂತರ ಮನೆಗಳು ರಚನೆಯಾಗಿ ಮಲ್ಲೇಶಪ್ಪನಿಂದಾಗಿ ಮಲ್ಲೇಶ್ವರ ಎಂದೇ ಕರೆಯಲಾಗಿ ನಂತರ ಒಂದು ಗ್ರಾಮವಾಗಿ ರೂಪುಗೊಂಡಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ತೋಳ, ಕಾಡುಹಂದಿ, ಉಡ ಕಂಡುಬರುತ್ತವೆ.

ಗ್ರಾಮದಲ್ಲಿ ತಿಗಳರು ಹೆಚ್ಚಾಗಿದ್ದು ಕೃಷಿಗೆ ಹಸು, ಎತ್ತು, ಕುರಿ, ಮೇಕೆ, ಎಮ್ಮೆ ಸಾಕಿದ್ದಾರೆ. ನಾಯಿ, ಬೆಕ್ಕು ಸಾಕುಪ್ರಾಣಿಗಳಾಗಿವೆ. ನಾಟಿ ಕೋಳಿಗಳಾದ ಗಿರಿರಾಜ, ಹೇಂಟೆ, ಹುಂಜಗಳನ್ನು ಸಾಕಲಾಗಿದೆ.

ವಾಡಿಕೆ ಮಳೆ ೪೭೧.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಆಧಾರಿತ ಬದುಕಾಗಿದ್ದು ವಾಡಿಕೆ ಮಳೆ ನೀರು ಸಾಕಾಗುವುದಿಲ್ಲ. ಅದಕ್ಕಾಗಿ ೧೮ ಕೊಳವೆ ಬಾವಿಗಳಿದ್ದು ಉಪನೀರಾವರಿಗೆ ಬಳಕೆಯಾಗುತ್ತದೆ. ಹೇಮಾವತಿ ಪೊಟರಾಯಕನಹಳ್ಳಿ–ಕಳ್ಳಂಬೆಳ್ಳ ಮಾರ್ಗವಾಗಿ ಮದಲೂರು ಕೆರೆಗೆ ಹರಿಯುವಾಗ ಸಾಲೆ ಮಲ್ಲೇಶ್ವರ ಗ್ರಾಮದ ನಡುವೆ ಹರಿದು ಹೋಗುತ್ತದೆ. ಸದ್ಯ ನೀರಿನ ಬಳಕೆ ಲಭ್ಯವಾಗುತ್ತಿಲ್ಲ. ಕುಡಿಯಲು ಗ್ರಾಮಪಂಚಾಯ್ತಿಯ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತದೆ. ೨ ಕಿರು ಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ತಿಗಳ ಜನಾಂಗ ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗರು ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದ್ದು

ಕಾಂಕ್ರೀಟ್, ಹೆಂಚಿನ, ಶೀಟಿನ ವಿವಿಧ ಸ್ವರೂಪದ ೫೨ ಮನೆಗಳಿವೆ. ಇವು ಆಶ್ರಯ, ಇಂದಿರಾ ಆವಾಸ್, ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಹೊಂದಿವೆ. ೧೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನ ಎತ್ತಿನ ಬಂಡಿಗಳಿವೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳನ್ನು ಬಳಸಲಾಗುತ್ತಿದೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಕೊರ್ಲೆ ಬೆಳೆಯುತ್ತಾರೆ. ಹೂ, ತರಕಾರಿ, ಸೊಪ್ಪು ವಿಶೇಷ ಬೆಳೆಗಳಾಗಿವೆ. ಹಾಗೂ ಹುಣಸೆಹಣ್ಣು, ಹೊಂಗೆಬೀಜ, ಸೊಪ್ಪು, ತರಕಾರಿ, ಬಟನ್ಸ್ ಹೂ ವ್ಯಾಪಾರಿ ಸರಕಾಗಿವೆ. ಶಿಕ್ಷಕರು, ಸಾರಿಗೆ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಮಹಿಳೆಯರು ಹೂ ಕಟ್ಟುವುದು, ಊಟದ ಎಲೆ ಕೀಳುವುದು, ಹುಣಸೆಹಣ್ಣು ಬಿಡಿಸುವುದು ಉಪಕಸುಬಾಗಿಸಿಕೊಂಡಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ ರತ್ನಸಂದ್ರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ತಾಳಗುಂದದಿಂದ ಅಂಚೆ ಸಂಪರ್ಕ ಹೊಂದಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು ೪೬% ರಷ್ಟು ಸಾಕ್ಷರರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಕುನ್ನಾಲಮ್ಮನಿಗೆ ಎದುರೆತ್ತಿ ಆರತಿ ಮಾಡಿ ಪ್ರಾಣಿಬಲಿ ನೀಡಲಾಗುವುದು. ಗ್ರಾಮದಲ್ಲಿ ಶಿವರಾತ್ರಿ, ಯುಗಾದಿ, ದೀಪಾವಳಿ, ದಸರಾ ಹಬ್ಬಗಳನ್ನು ಆಚರಿಸುತ್ತಾರೆ.

## ಮಾಗೋಡು

ಮಾಗೋಡು ಸಿರಾ ತಾಲ್ಲೂಕಿನ ಪ್ರಮುಖ ಧಾರ್ಮಿಕ, ಪ್ರವಾಸಿ ತಾಣವಾಗಿ ರೂಪುಗೊಂಡಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೨ ಕಿಮೀ ದೂರದಲ್ಲಿ ಸಿರಾ–ಮಧುಗಿರಿ ಮುಖ್ಯ ರಸ್ತೆಯಲ್ಲಿ ಎರಗುಂಟೆ ಗೇಟಿನ ಸಮೀಪ ಬಲಕ್ಕೆ ತಿರುಗಿ ೨ ಕಿಮೀ ಕ್ರಮಿಸಿದರೆ ಮಾಗೋಡು ಮುಖ್ಯ ಗ್ರಾಮ ಸಿಗುತ್ತದೆ. ಅದಕ್ಕೆ ಹೊಂದಿಕೊಂಡೇ ಇರುವ ಗೊಲ್ಲರಹಟ್ಟಿ, ಮಾಗೋಡು ಗೊಲ್ಲರಹಟ್ಟಿ ಎರಡೂ ಗ್ರಾಮಗಳು ಇವೆ.

ಸಾದರು, ಆದಿಕರ್ನಾಟಕ, ಕುಂಚಿಟಿಗರು, ವೀರಶೈವರು, ದರ್ಜಿಯವರು, ಆದಿದ್ರಾವಿಡ, ಬೇಡರು, ವಿಶ್ವಕರ್ಮ ಈ ಜನಾಂಗದವರು ವಾಸಿಸುವ ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೮೭೦.೮೧ ಹೆಕ್ಟೇರ್. ಈ ಗ್ರಾಮಕ್ಕೆ ಉಪಗ್ರಾಮಗಳಾಗಿ ದೊಡ್ಡನಹಳ್ಳಿ, ಮಾಗೋಡು ಗೊಲ್ಲರಹಟ್ಟಿ ಕಾಲೋನಿ, ಕೆರೆಯಾಗಲಹಳ್ಳಿ, ಕೃಷಿ ಕಾಲೋನಿ, ಯರಗುಂಟೆ ಗೇಟು ಈ ಉಪಗ್ರಾಮಗಳು ಸೇರುತ್ತವೆ.

ಮಾಗೋಡು ಗ್ರಾಮ ನಾಮಸೂಚಿಯಂತೆ ಈ ಗ್ರಾಮ ತಗ್ಗಿನ ಪ್ರದೇಶದಲ್ಲಿದ್ದು ಗ್ರಾಮಕ್ಕೆ ಹೊಂದಿಕೊಂಡಂತೆ ದೊಡ್ಡ ಕೆರೆಯಿದೆ. ಆ ಕೆರೆಗೆ ಉತ್ತರ–ಪೂರ್ವದಿಂದ ನೈಸರ್ಗಿಕ ಮಳೆಯ ನೀರು ಮಣ್ಣು ಹರಿದು ಬಂದು ಇಲ್ಲಿ ಶೇಖರಣೆಯಾಗುತ್ತದೆ. ನೀರು ಇಂಗಿಹೋದ ನಂತರ ಇಲ್ಲಿನ ತಳಭಾಗದಲ್ಲಿ ನಿಂತ ಮಣ್ಣು (ಗೋಡು) ಒಣಗಿ ಬಿರುಕು ಒಡೆದು ಕಪ್ಪು ಮಿಶ್ರಿತ ಕಂದು ಬಣ್ಣಕ್ಕೆ ತಿರುಗಿ ಫಲವತ್ತಾಗಿರುತ್ತದೆ. ಈ ಮಣ್ಣನ್ನು ಸಮೀಪದ ಹೊಲ, ಗದ್ದೆ, ತೋಟಗಳಿಗೆ ಉಪಗೊಬ್ಬರವನ್ನಾಗಿ ಬಳಸಲಾಗುತ್ತದೆ. ಹೀಗೆ ಮಾಗಿದ ಗೋಡು ಮಣ್ಣಿನ ಪ್ರದೇಶವಾದುದರಿಂದ ಈ ಗ್ರಾಮಕ್ಕೆ ಮಾಗೋಡು ಎಂದು ಕರೆಯಲಾಯಿತೆಂದು ಗ್ರಾಮದ ಹಿರಿಕ ಸೀತಾರಾಮಯ್ಯ, ಹಿರೇಗೌಡ ಹೇಳುತ್ತಾರೆ.

ಉತ್ತರ ಕರ್ನಾಟಕದ ಶಿರಸಿ ಸಮೀಪವೂ ಇದೇ ಹೆಸರಿನ ಗ್ರಾಮವಿದ್ದು ಅದು ಕೂಡ ತಗ್ಗಿನಲ್ಲಿದ್ದು ನೀರಿನ ಫಾಲ್ಸ್ ಕೂಡ ಇದೆ. ಹೀಗೆ ಭೂಲಕ್ಷಣದಿಂದಾಗಿಯೇ ಮಾಗೋಡು ಎಂದು ಕರೆಯಲ್ಪಡುವ ಈ ಗ್ರಾಮದಲ್ಲಿ ೬೩೪ ಮನೆಗಳು, ೨೮೫೫ ಜನಸಂಖ್ಯೆ ಇದೆ. ಈ ಗ್ರಾಮದಲ್ಲಿ ನಿಸರ್ಗದತ್ತ ನೀರನ್ನು ಹೊರತುಪಡಿಸಿದರೆ ಉಳಿದಂತೆ ನೀರಿನ ಯಾವುದೇ ಆಸರೆ ಇರುವುದಿಲ್ಲ. ಆದರೂ ಗ್ರಾಮದಲ್ಲಿ ೧೦೦ ಕ್ಕೂ ಹೆಚ್ಚು ಬೋರ್‌ವೆಲ್‌ಗಳ ಮೂಲಕ ತೋಟಗಾರಿಕೆ, ಆಹಾರ ಬೆಳೆ ಬೆಳೆಯುವ ಸಂಪ್ರದಾಯವಿದೆ.

ನರಿ, ಮೊಲ, ಕಾಡುಹಂದಿ, ಜಿಂಕೆ ಮೊದಲಾದ ಕಾಡುಪ್ರಾಣಿಗಳು ಈ ಪರಿಸರದಲ್ಲಿ ವ್ಯಾಪಕವಾಗಿ ಕಂಡುಬಂದರೆ ಗ್ರಾಮದಲ್ಲಿ ಕೃಷಿ, ಹೈನುಗಾರಿಕೆಗಾಗಿ ಸೀಮೆಹಸು, ನಾಟಿಹಸು, ಎಮ್ಮೆ ಸಾಕಾಣಿಕೆ ಇದೆ. ಎತ್ತು, ಕುರಿ, ಮೇಕೆ ಪ್ರಾಣಿಗಳನ್ನು ಸಾಕುತ್ತಾರೆ. ಉಳಿದಂತೆ ನಾಟಿಕೋಳಿ ವಿರಳವಾಗಿ

ಕಂಡುಬರುತ್ತಿವೆ. ಈ ಪರಿಸರದಲ್ಲಿ ಕಾಗೆ, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಕೊಕ್ಕರೆ ಕಂಡುಬರುವ ಕಾಡುಪಕ್ಷಿಗಳಾಗಿವೆ.

ಸರಾಸರಿ ವಾಡಿಕೆ ಮಳೆ ೪೮೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

೮೦ ನಲ್ಲಿಗಳ ಮೂಲಕ ಕೊಳಾಯಿಗಳಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ೨೮೫ ಕುಟುಂಬಗಳಲ್ಲಿ ಕಾಂಕ್ರೀಟ್, ಹೆಂಚಿನ, ಕಲ್ಲಿನ ಹಾಗೂ ಮಣ್ಣಿನ ಮನೆಗಳಿವೆ. ೮೦ ಗುಡಿಸಲುಗಳೂ ಇವೆ. ೨೩ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ, ಚಿತ್ರಾನ್ನ, ದೋಸೆ, ಉಪ್ಪಿಟ್ಟು ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾಗಿ ಎತ್ತಿನಗಾಡಿ, ಆಧುನಿಕವಾಗಿ ಟ್ರ್ಯಾಕ್ಟರ್, ಟೆಂಪೋ, ಲಾರಿ, ಕಾರು ಬಳಕೆ ವ್ಯಾಪಕವಾಗಿದೆ.

ಶೇಂಗಾ, ರಾಗಿ, ಭತ್ತ, ಅಲಸಂದೆ, ಅವರೆ, ತೊಗರಿ ಈ ಗ್ರಾಮದ ಮುಖ್ಯ ಬೆಳೆಗಳು. ತೆಂಗು, ಅಡಿಕೆ, ಹತ್ತಿ, ವೀಳ್ಯದೆಲೆ, ತರಕಾರಿ, ಹೂವು, ಹುಣಸೆ ಹಣ್ಣು ವ್ಯಾಪಾರಿ ಬೆಳೆಗಳು. ಒಂದು ಹಾಲಿನ ಡೈರಿಯಿದ್ದು ಸರಾಸರಿ ೬೦೦ ಲೀ. ಹಾಲು ಸಂಗ್ರಹಿಸಲಾಗುತ್ತಿದೆ.

ಜೈಲು ಸೂಪರಿಂಟೆಂಡೆಂಟ್, ವಕೀಲರು, ಶಿಕ್ಷಕರು ಸೇರಿದಂತೆ ಗ್ರಾಮದಲ್ಲಿ ಒಟ್ಟು ೧೪ ಮಂದಿ ಸರ್ಕಾರಿ ನೌಕರರಿದ್ದು ಇಬ್ಬರು ಹಿರಿಯ ವಕೀಲರಿದ್ದಾರೆ. ಆರ್.ಸರ್ವೇಶ್, ಹಿರಿಯ ವಕೀಲರಾಗಿ ಬಾರ್ ಅಸೋಸಿಯೇಷನ್‌ನ ಅಧ್ಯಕ್ಷರಾಗಿದ್ದಾರೆ. ೪ ಜನ ವಕೀಲರಿದ್ದಾರೆ.

ಸಿರಾ ವಿಧಾನಸಭೆ, ಮದಲೂರು ಜಿಲ್ಲಾ ಪಂಚಾಯ್ತಿ, ಹೊನ್ನಗಾನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿರುವ ಮಾಗೋಡು ಸಿರಾ ಮಧುಗಿರಿ ಮುಖ್ಯ ರಸ್ತೆ ಹೊಂದಿದೆ. ಒಂದು ಕಡೆ ಕೃಷಿ ಸಹಕಾರ ಸಂಘ, ನ್ಯಾಯಬೆಲೆ ಅಂಗಡಿ, ಒಂದು ಅಂಗನವಾಡಿ, ಹಿರಿಯ ಪ್ರಾಥಮಿಕ ಪಾಠಶಾಲೆ, ಒಂದು ಅಂಗನವಾಡಿ, ಹಿರಿಯ ಪ್ರಾಥಮಿಕ ಪಾಠಶಾಲೆ, ೬ ಸ್ತ್ರೀಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ೬ ತಂಡಗಳು ಗ್ರಾಮದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ವಿವಿಧ ಇಲಾಖೆಗಳಲ್ಲಿ ೧೨ ಜನ ನೌಕರರು ಈ ಗ್ರಾಮದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಶಾಲೆಗೆ ಉತ್ತಮ ಕೌಂಪೌಂಡು, ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಮಾತ್ರವಲ್ಲದೆ ಈ ಗ್ರಾಮದಲ್ಲಿ ಹೆಚ್ಚು ಕುಟುಂಬಗಳು ಶೌಚಾಲಯ ಬಳಸುತ್ತಿದ್ದು ೬೦೦ ಶೌಚಾಲಯಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಆಶ್ರಯ, ಜನತಾ, ಇಂದಿರಾ ಆವಾಸ್, ವಾಜಪೇಯಿ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳಿದ್ದಾರೆ.

ಗ್ರಾಮದ ಕೆರೆಯ ಕೋಡಿಯಲ್ಲಿ ಶ್ರೀ ಆಂಜನೇಯ ದೇವಾಲಯವಿದ್ದು ಇದು ಪುರಾತನ ದೇವಾಲಯ ಎಂದು ಹೇಳಲಾಗುತ್ತದೆ. ಸಾದರ ಜನಾಂಗದ ಸೀತಾರಾಮಯ್ಯನವರು ಅರ್ಚಕರಾಗಿ ಧಾರ್ಮಿಕ ವಿಧಿಗಳನ್ನು ನಿತ್ಯ ನೆರವೇರಿಸುತ್ತಿದ್ದಾರೆ. ಉಳಿದಂತೆ ವೀರಶೈವರು ಕಲ್ಲೇಶ್ವರನನ್ನು ಪೂಜಿಸುತ್ತಾರೆ. ತಿಮ್ಮಪ್ಪ, ಮೈಲಾರಲಿಂಗ, ಭೂತಪ್ಪ ದೇವರುಗಳ ಉತ್ಸವವನ್ನು ನೆರವೇರಿಸುತ್ತಾರೆ. ಆದರೂ ಉಪಬಡಾವಣೆಯಲ್ಲಿರುವ ಗೊಲ್ಲರಹಟ್ಟಿಯ ರಂಗನಾಥ ದೇವಾಲಯ ವ್ಯಾಪಕ ಖ್ಯಾತಿಯ ನಡುವೆ ಉಳಿದ ದೇವರುಗಳ ಖ್ಯಾತಿ ಮಸುಕಾಗಿದೆ. ಶಿವರಾತ್ರಿ, ದೀಪಾವಳಿ, ಯುಗಾದಿ, ಮಹಾನವಮಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಫೆಬ್ರವರಿಯಲ್ಲಿ ನಡೆಯುವ ರಂಗನಾಥನ ಜಾತ್ರೆ ಒಂದು ವಾರದ ಕಾಲ ಊರ ಸಂಭ್ರಮವಾಗಿ ಸಿದ್ಧವಾಗುತ್ತದೆ.

## ಮಾಗೋಡು ಗೊಲ್ಲರಹಟ್ಟಿ

ಮಾಗೋಡು ಗೊಲ್ಲರಹಟ್ಟಿ ಮುಖ್ಯ ಗ್ರಾಮ ಮಾಗೋಡಿನೊಂದಿಗೆ ಕೂಡಿಕೊಂಡಿದೆ. ಕಾಡುಗೊಲ್ಲರ ಪ್ರತ್ಯೇಕ ಕಾಲೋನಿ ಈಗ ವ್ಯಾಪಕವಾಗಿ ಬೆಳೆದು ೧೧೪ ಮನೆಗಳು ಹೆಚ್ಚಿವೆ. ೭೪೩ ಜನಸಂಖ್ಯೆ ಹೊಂದಿರುವ ಈ ಮಜರೆ ಗ್ರಾಮದ ಭೂ ವಿಸ್ತೀರ್ಣ ೧೮೭೦ ಹೆಕ್ಟೇರ್ ಕಂದಾಯ ಗ್ರಾಮ ಮಾಗೋಡುವಿನಲ್ಲಿ ಹಂಚಿಕೆಯಾಗಿದೆ. ಉಳಿದಂತೆ ರೈತಾಪಿ ಬದುಕೇ ಇಲ್ಲಿನ ಜೀವನಾಡಿ. ಕುರಿ, ಮೇಕೆ ಪಾಲನೆಯ ಉಪಕಸುಬು ಇದೆ. ರಾಗಿ, ಹತ್ತಿ, ಅಲಸಂದಿ, ತೊಗರಿ, ನವಣೆ, ಹರಳು ಈ ಗ್ರಾಮದ ಮುಖ್ಯ ಬೆಳೆಗಳು. ಈ ಕಾಡುಗೊಲ್ಲರ ಹಟ್ಟಿಯ ಒಳಭಾಗದಲ್ಲಿ ಕಳ್ಳಿ ಬೇಲಿ ಹಾಕಿಕೊಂಡ ಕಂಬದ ರಂಗನ ದೇವಾಲಯ, ಅದಕ್ಕೆ ಹೊಂದಿಕೊಂಡಂತೆ ಚಿತ್ರದೇವರು, ಭೂತಪ್ಪ, ಗಂಗೆಮಾಳಿ ಈ ದೇವರುಗಳ ಪೌಳಿಗಳು ಒಂದೇ ಕಡೆ ಇವೆ. ಇತ್ತೀಚೆಗೆ ಪ್ರಧಾನ

ಗುಳಿಗೇನಹಳ್ಳಿ ನಾಗರಾಜ್ ಅವರ ಧರ್ಮದರ್ಶಿ ಅಧಿಕಾರ, ಮುಖಂಡ ವೀರೇಗೌಡರ ನೇತೃತ್ವದಲ್ಲಿ ಕಂಬದರಂಗನ ಬೃಹತ್ ದೇವಾಲಯ, ವಿಸ್ತಾರವಾದ ಪ್ರಾಂಗಣ, ವಸತಿ ನಿಲಯ, ಪ್ರಸಾದ ನಿಲಯ, ಸುಂದರ ಕಾಂಪೌಂಡ್ ನಿರ್ಮಿಸಿದ್ದಾರೆ. ಕಂಬದರಂಗ ಈ ಮಾಗೋಡು ರಂಗನಾಥನಾಗಿ ಹೆಸರಿನ ಸಂಸ್ಕೃತೀಕರಣವಾಗಿದೆ. ಮಾಗೋಡಪ್ಪ, ಕಂಬದಪ್ಪ, ಬೊಬ್ಬೂರು ರಂಗ, ಕಂಬದರಾಯ, ಕಂಬದರಂಗ, ರಂಗನಾಥ ಹೀಗೆ ಭಕ್ತರು ಭಾವಪೂರ್ಣವಾಗಿ ಕರೆದು ಭಯ–ಭಕ್ತಿಯಿಂದ ನಡೆದುಕೊಳ್ಳುವ ಇಲ್ಲಿನ ರಂಗನಾಥಸ್ವಾಮಿ ದೇವರಿಗೆ ಆಂಧ್ರ, ತಮಿಳುನಾಡು, ಕೇರಳ ಮೂಲದ ವ್ಯಾಪಕ ಭಕ್ತರಿದ್ದಾರೆ. ಪ್ರತಿವರ್ಷ ಜನವರಿ ಕೊನೆಯ ವಾರ ಜರುಗುವ ಹೂವಿನ ಕಲ್ಲುಗಾಲಿ ತೇರು ಬಯಲುಸೀಮೆಯಲ್ಲಿ ಪ್ರಖ್ಯಾತವಾಗಿದೆ. ಒಂದೂವರೆ–ಎರಡು ಲಕ್ಷ ಜನ ಒಂದು ಮಧ್ಯಾಹ್ನದ ಒಳಗೆ ಕಲೆಯುವುದು ಈ ದೇವಾಲಯದ ವಿಶೇಷ.

ಲಾರಿ, ಬಂಡಿಗಳಲ್ಲಿ ಹೂವನ್ನು ತಂದು ತೇರಿನ ಮೇಲೆ ಎಸೆಯುವುದು ಇಲ್ಲಿನ ಪ್ರಮುಖ ಹರಕೆ ಪದ್ಧತಿ. ಕಾಡುಗೊಲ್ಲರ ಒಡೆತನವಿರುವ ಈ ದೇವಾಲಯದ ಜಾತ್ರೆಯು ಒಂದುವಾರಗಳ ಕಾಲ ಜಾತ್ಯಾತೀತವಾಗಿ, ಸಾರ್ವತ್ರಿಕ ಆರಾಧನೆಗೆ ಒಳಗಾಗುವುದು ಇಲ್ಲಿನ ವಿಶೇಷ.

ಚಿಟ್ವಾಲದ ಮೇಲೆ ಮಲಗಿದ್ದ ಮಹಾವಿಷ್ಣು ಸಿಡಿಲಿನ ಶಾಖಕ್ಕೆ ಒಳಗಾಗಿ, ಉಕ್ಕಿನ ಪಾಳಾಗಿ ಭೂಮಿ ಸೇರಿ ನಂತರ ಕಂಬದ ರೂಪದಲ್ಲಿ ಹೊರಬಂದು ಕಂಬದ ರಂಗನಾಥನಾದ ಎಂಬುದು ಇಲ್ಲಿನ ವಿಶೇಷ. ಕಂಬದರಂಗನಾಥನ ಸಮಗ್ರ ಕಾವ್ಯವನ್ನು ಇದೇ ಗ್ರಾಮದ ಜೋಗೀರಣ್ಣ ಗಣೆಯ ಮೇಲೆ ಹಾಡಿದ್ದು ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ೨೦೦೧ ರಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಕಾಡುಗೊಲ್ಲರು ಶೈವ ಪರಂಪರೆಯಿಂದ ವೈಷ್ಣವ ಪಂಥಕ್ಕೆ ವಾಲಿರುವ ಸೂಕ್ಷ್ಮ ಸಂಗತಿಗಳು ಈ ಕಾವ್ಯದಲ್ಲಿ ದಟ್ಟವಾಗಿ ಪ್ರಕಟವಾಗಿರುವುದು ವಿಶೇಷ.

ವಾಡಿಕೆ ಮಳೆ ೪೭೧.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಮಾಂಸ, ಮೀನನ್ನು ವಿರಳವಾಗಿ ಬಳಸುತ್ತಾರೆ. ಗ್ರಾಮದಲ್ಲಿ ಎತ್ತಿನ ಬಂಡಿಗಳಿವೆ.

ಸಾರಿಗೆ, ಪೊಲೀಸ್, ಕಂದಾಯ ಇಲಾಖೆಗೆ ಸೇರಿದ ಮೂವರು ಸರ್ಕಾರಿ ನೌಕರರಿದ್ದಾ

ಸಿರಾ ವಿಧಾನಸಭೆ, ಚಿತ್ರದುರ್ಗ ಲೋಕಸಭೆ, ಮದಲೂರು ಜಿಲ್ಲಾ ಪಂಚಾಯ್ತಿ, ಮಾಗೋಡು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಈ ಗ್ರಾಮವನ್ನು ಪ್ರತಿನಿಧಿಸುತ್ತಿದ್ದಾರೆ. ೨ ಸ್ತ್ರೀಶಕ್ತಿ ಸಂಘಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ೨೦ ವೃದ್ಧಾಪ್ಯವೇತನ, ೧ ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಈ ಗ್ರಾಮದಲ್ಲಿ ಹಣ್ಣು–ಕಾಯಿ ಪೂಜಾ ಸಾಮಗ್ರಿಗಳ ಬೀದಿ ಅಂಗಡಿಗಳು, ೪ ಪೆಟ್ಟಿಗೆ ಅಂಗಡಿಗಳಿವೆ. ೨ ಟೀ ಗೂಡಂಗಡಿ ಇವೆ. ಕಲ್ಲಿನ ರಥದ ತೇರು ನಡೆಯುತ್ತದೆ.

ಮಧುಗಿರಿ–ಸಿರಾ ಮಾರ್ಗದಲ್ಲಿ ರಸ್ತೆ ಬಸ್ ಸಂಚಾರವಿದೆ. ಕುಡಿಯುವುದಕ್ಕೆ ೧೦ ಬೋರ್‌ವೆಲ್‌ಗಳ ಮೂಲಕ ಟ್ಯಾಂಕ್‌ನಲ್ಲಿ ನೀರು ಒದಗಿಸಿದೆ. ಕುರಿಯ ವ್ಯಾಪಾರ, ಹುಣಸೆಹಣ್ಣಿನ ಸಣ್ಣ ವ್ಯಾಪಾರವೂ ಇದೆ. ಯುಗಾದಿ, ದೀಪಾವಳಿ, ದಸರಾ, ಗೌರಿ–ಗಣೇಶನ ಹಬ್ಬ ಆಚರಿಸುವುದು ವಾಡಿಕೆಯಾಗಿದೆ. ಸಿರಾ–ಮಧುಗಿರಿ ರಸ್ತೆಗೆ ಸಂಪರ್ಕ ರಸ್ತೆ ಇದ್ದು ಬಸ್ ಸಂಚಾರವಿದೆ.

## ಮಾಗೋಡು ಕೃಷಿ ಕಾಲೋನಿ

ಮಾಗೋಡು ಕೃಷಿ ಕಾಲೋನಿ ಹೆಸರಿನ ಗ್ರಾಮವು, ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೪ ಕಿ.ಮೀ. ದೂರದಲ್ಲಿದೆ. ಮಾಗೋಡು ಪರಿಸರದ ಕೆಲವರು ಪ್ರತ್ಯೇಕವಾಗಿ ವಸತಿ ನಿರ್ಮಿಸಿಕೊಂಡು ವಾಸ ಮಾಡುತ್ತಿದ್ದರಿಂದಾಗಿ, ಸರ್ಕಾರಿ ದಾಖಲೆಯಲ್ಲಿ ಮಾಗೋಡು ಕೃಷಿ ಕಾಲೋನಿ ಎಂದು ದಾಖಲಿಸುತ್ತಾ ಬರಲಾಗಿದೆ. ಇದೊಂದು ಮಜರೆ ಗ್ರಾಮವಾಗಿದ್ದು, ಮಾಗೋಡು ಕಂದಾಯ ಗ್ರಾಮಕ್ಕೆ ಸೇರ್ಪಡೆಯಾಗಿದೆ. ಇದರ ವ್ಯಾಪ್ತಿ ಮಾಗೋಡು ಮುಖ್ಯ ಗ್ರಾಮದ ೧೮೭೦ ಭೌಗೋಳಿಕ ವಿಸ್ತೀರ್ಣದಲ್ಲಿ ಹಂಚಿಕೆಯಾಗಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ತಗ್ಗಿನ ಭೂ ಪ್ರದೇಶವಾಗಿದೆ. ಈ ಪರಿಸರದಲ್ಲಿ ಮುಂಗುಸಿ, ಇಲಿ, ಹೆಗ್ಗಣ ಕಂಡು ಬರುತ್ತವೆ. ಗ್ರಾಮದಲ್ಲಿ ರೈತರು ಕೃಷಿಕರಾಗಿದ್ದು ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಎಮ್ಮೆ , ಎತ್ತುಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕ್ವೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಗಿರಿರಾಜ ಕೋಳಿ, ಹ್ಯಾಟೆ, ಹುಂಜ ಕೋಳಿಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೪೮೦ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮–೩೯೦ ಸೆಂ.ರಷ್ಟು ಇದ್ದು, ಚಳಿಯು ೧೧–೧೨೦ ಸೆಂ. ಇರುತ್ತದೆ. ಕುಡಿಯಲು ಕೊಳವಎ ಬಾವಿಯ ಮೂಲಕ ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೧ಕೈ ಪಂಪು ಇದ್ದು, ಕೆಟ್ಟು ಹೋಗಿರುತ್ತದೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗದವರು ದೊಡ್ಡ ಸಮುದಾಯವಾಗಿದ್ದು, ನಾಯಕರು, ಬೋವಿ, ದಾಸರು, ಮಡಿವಾಳರು ಕಿರುಸಮುದಾಯವಾಗಿದೆ. ಇಲ್ಲಿನ ಮಾತೃ ಭಾಷೆ ಕನ್ನಡ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೭೩ ಮನೆಗಳಿದ್ದು, ಇವುಗಳು ಇಂದಿರಾ ಆವಾಸ್, ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಈ ಗ್ರಾಮದಲ್ಲಿ ಶೌಚಾಲಯದ ಬಳಕೆ ಇರುವುದಿಲ್ಲ. ಬಯಲು ಶೌಚಾಲಯವನ್ನೇ ಬಳಸುತ್ತಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಗ್ರಾಮದ ಜನರು ರಾಗಿ, ಶೇಂಗಾ, ಭತ್ತ, ಅಲಸಂದಿ, ತೊಗರಿ, ಅವರೆ, ಹುಣಸೆ ಹಣ್ಣು ಮುಖ್ಯ ಬೆಳೆಗಳನ್ನು ಬೆಳೆಯುತ್ತಾರೆ. ಮುಖ್ಯ ಬೆಳೆಗಳು ಹುಣಸೆ ಹಣ್ಣು, ಹತ್ತಿ, ಹೂವಿನ ಗಿಡಗಳಿಂದ ಕಾಕಡ, ಸೇವಂತಿಗೆ ಬೆಳೆದು ವ್ಯಾಪಾರರೋಗ್ಯವನ್ನು ಅವಲಂಬಿಸಿದ್ದಾರೆ. ಶಿಕ್ಷಕರು, ಸಾರಿಗೆ, ಪೋಲೀಸ್ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯಿತ್, ಹೊನ್ನಗಾನಹಳ್ಳಿ ತಾಲ್ಲೂಕು ಪಂಚಾಯಿತಿ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಒಂದು ಪ್ರಾಥಮಿಕ ಶಾಲೆ, ಒಂದು ಅಂಗನವಾಡಿ ಕೇಂದ್ರವಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಉಚಿತ ಪಠ್ಯಪುಸ್ತಕದ ಸೌಲಭ್ಯಗಳಿವೆ. ಶೌಚಾಲಯದ ಸೌಲಭ್ಯವಿದೆ.

೨ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳಿವೆ. ಗ್ರಾಮದ ಸಾಕ್ಷರತೆಯ ಪ್ರಮಾಣ ಶೇ. ೬೩ ರಷ್ಟು ಇದೆ. ಗ್ರಾಮದಲ್ಲಿ ಜ್ವರ, ಕೆಮ್ಮು, ಹೊಟ್ಟೆನೋವು ಸಾಮಾನ್ಯವಾಗಿ ಕಂಡು ಬರುವು ಕಾಯಿಲೆಗಳು. ನೇರವಾಗಿ ಮನೆಗಳಿಗೆ ಬಂದು ಚಿಕಿತ್ಸೆ ನೀಡುತ್ತಾರೆ. ಹೆಚ್ಚಿನ ಚಿಕಿತ್ಸೆಗಾಗಿ ಸಿರಾ ನಗರದ ಸೇವಾ ಸೌಲಭ್ಯ ಪಡೆಯುತ್ತಾರೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಮಾರಮ್ಮನ ಪೌಳಿ ಇದ್ದು, ಆಶಾಢ ಮಾಸದಲ್ಲಿ ಆರತಿ, ಬಲಿ ಅರ್ಪಿಸುತ್ತಾರೆ. ಮಾಗೋಡು ರಂಗನಾಥನಿಗೆ ಆರತಿ, ಬಲಿ ಅರ್ಪಿಸುತ್ತಾರೆ. ಮಾಗೋಡು ರಂಗನಾಥನಿಗೆ ಆರತಿ, ಸೇವೆಯ ಸಂಪ್ರದಾಯವಿದೆ.

ಶಿವರಾತ್ರಿ, ಯುಗಾದಿ, ರಾಮನವಮಿ, ಗೌರಿಗಣೇಶ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಕುಂತಮ್ಮ ಗೌರಮ್ಮನ ಆಚರಣೆಯೂ ಗ್ರಾಮ ಸಂಪ್ರದಾಯವಾಗಿದೆ.

## ಮುದಿಗೆರೆ

ಮುದಿಗೆರೆ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ೫೦ ಕಿ.ಮೀ. ದೂರದಲ್ಲಿ ಸಿರಾ–ಬುಕ್ಕಾಪಟ್ಟಣ ರಸ್ತೆಯಲ್ಲಿ ಬೂವನಹಳ್ಳಿ ಗೇಟಿನಿಂದ ಬಲಭಾಗದಲ್ಲಿ ೨ ಕಿಮೀ ದೂರದಲ್ಲಿದ್ದು ಇದೊಂದು ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೫೨೫.೧೨ ಹೆಕ್ಟೇರ್ ಆಗಿದೆ. ಮುದಿಗೆರೆ ಗೊಲ್ಲರಹಟ್ಟಿ ಇದರ ಮಜರೆ ಗ್ರಾಮವಾಗಿದೆ. ಊರ ದಕ್ಷಿಣ ಭಾಗದಲ್ಲಿ ಚಿಕ್ಕಸಂದ್ರ ಕೆರೆ, ಎಡ–ಬಲದಿ ಪರಶುರಾಮನ ಕಟ್ಟೆ ಹಾಗೂ ಮುದಿಗೆರೆ ಕಟ್ಟೆ ಎಂಬ ಎರಡು ಕುಂಟೆಗಳಿವೆ. ಬಯಲುಸೀಮೆ, ಬಿಸಿಲು ಅಧಿಕ. ಪೂರ್ವಕ್ಕೆ ಚಿಕ್ಕಸಂದ್ರ ಕಾವಲು, ರಕ್ಷಿತ ಅರಣ್ಯವಿದೆ. ರತ್ನಗಿರಿ ಪಾಳೆಯಗಾರರಾಗಿದ್ದ ಮುದಿಯಪ್ಪ ನಾಯಕನು ಈ ಗ್ರಾಮದವನಾಗಿದ್ದು ಪಕ್ಕದಲ್ಲಿಯೇ ಚಿಕ್ಕಸಂದ್ರದ ಕೆರೆಯೂ ಇರುವ ಕಾರಣದಿಂದ ಮುದಿಗೆರೆ ಆಗಿದೆ ಎಂದು ಶಿಕ್ಷಕ ಭೂತೇಶ್ ಅಭಿಪ್ರಾಯ ಪಡುತ್ತಾರೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಕರಡಿ, ಜಿಂಕೆ, ಮೊಲ, ಮುಂಗುಸಿ, ಕಿರುಬ ಜಾತಿಯ ಪ್ರಾಣಿಗಳು ಕಂಡುಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ನಾಯಿ ಪ್ರಾಣಿಗಳಿವೆ. ಈ ಹಂತದಲ್ಲಿ ಕಾಡು ಪಕ್ಷಿಗಳಾಗಿ ಕೋಗಿಲೆ, ಕಾಗೆ, ಕೊಕ್ಕರೆ, ಗೂಬೆ, ಗುಬ್ಬಚ್ಚಿ, ಹದ್ದು, ಗರುಡ, ಬಾವಲಿ ಮುಂತಾದ ಪಕ್ಷಿಗಳಿವೆ. ಕೋಳಿ ಸಾಕು ಪಕ್ಷಿಯಾಗಿದೆ.

ಕಡಿಮೆ ಮಳೆ ಬೀಳುವ ಇಲ್ಲಿನ ವಾಡಿಕೆ ಮಳೆ ೩೯೪ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕುಡಿಯುವ ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಕೃಷಿಗೆ

ಹೆಚ್ಚುವರಿಯಾಗಿ ೪೫ ಪಂಪ್‌ಸೆಟ್, ಕೊಳವೆಬಾವಿಗಳಿವೆ. ಗ್ರಾಮದಲ್ಲಿ ೮ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ದೊಡ್ಡ ಸಮುದಾಯವಾಗಿದ್ದು ನಾಯಕ, ಬೋವಿ, ಸಾದರ, ಮಡಿವಾಳ, ಬ್ರಾಹ್ಮಣ, ಶ್ರೀವೈಷ್ಣವ ಇವು ಕಿರು ಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮನೆಮಾತಾಗಿದೆ. ವಿವಿಧ ಸ್ವರೂಪದ ಒಟ್ಟು ೧೫೧ ಮನೆಗಳಿದ್ದು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಮಣ್ಣಿನ, ಶೀಟಿನ ಮನೆಗಳಿದ್ದು ೪೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿಯ ಜೊತೆಗೆ ಟ್ರ್ಯಾಕ್ಟರ್, ಸ್ಕೂಟರ್ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ಭತ್ತ, ರಾಗಿ, ಜೋಳ, ಸೂರ್ಯಕಾಂತಿ, ಹೆಸರು, ತೊಗರಿ ಆಹಾರ ಬೆಳೆಗಳು. ಶೇಂಗಾ ಹಾಗೂ ಹುಣಸೆಹಣ್ಣು ವ್ಯಾಪಾರಿ ಬೆಳೆಗಳಾಗಿವೆ.

ಶಿಕ್ಷಕರು, ಕಂದಾಯ, ಸಾರಿಗೆ, ಪೊಲೀಸ್ ಇಲಾಖೆಗೆ ಸೇರಿದ ೧೦ ಜನ ಸರ್ಕಾರಿ ನೌಕರರಿದ್ದು ಗ್ರಾಮದಲ್ಲಿ ಬೀಡಿ ಸುತ್ತುವುದು, ಟೈಲರಿಂಗ್, ಇಟ್ಟಿಗೆ ಫ್ಯಾಕ್ಟರಿ ಕಾರ್ಮಿಕರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಬೂವನಹಳ್ಳಿ ಗ್ರಾಮಪಂಚಾಯ್ತಿ ಕೇಂದ್ರವಾಗಿರುವ ಇದು ಚಿತ್ರದುರ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಕೇಂದ್ರ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಗ್ರಾಮ ಅರಣ್ಯ ಸಮಿತಿಯೂ ಒಂದು ಜಾಗೃತವಾಗಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಶಾಲೆ ಇದ್ದು ಶಾಲೆಯಲ್ಲಿ ೩೮ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೭.೪ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಅರಳಿಮರ, ಅರಳಿ ಕಟ್ಟೆ ಭವ್ಯವಾಗಿದೆ. ಆಂಜನೇಯ, ರಂಗನಾಥಸ್ವಾಮಿ, ಮಲ್ಲೇಶ್ವರ, ಮಾರಮ್ಮನ ದೇವಾಲಯಗಳಿವೆ. ಭೂತಪ್ಪನ ಪೌಳಿಯಿದೆ. ರಂಗನಾಥಸ್ವಾಮಿ ಮುಜರಾಯಿ ಇಲಾಖೆಗೆ ಸೇರಿದೆ. ಮಾರಮ್ಮನ ಊರಹಬ್ಬ ಆರತಿ, ವಾನ, ಬ್ಯಾಟೆ, ಹರಕೆ ಸಂಪ್ರದಾಯಗಳೊಂದಿಗೆ ವಿಜೃಂಭಣೆಯಿಂದ ನಡೆಯುತ್ತದೆ. ದಸರಾ ಹಬ್ಬದಂದು ಆಂಜನೇಯ, ರಂಗನಾಥ, ಮಲ್ಲೇಶ್ವರ ದೇವರ ಉತ್ಸವ ಇದ್ದು ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಮುದಿಗೆರೆ ಕಾವಲ್

ಮುದಿಗೆರೆ ಕಾವಲು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೩ ಕಿ.ಮೀ. ದೂರದಲ್ಲಿದೆ. ಇದೊಂದು ಮುದಿಗೆರೆಯ ಉಪ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೯೪೬.೪೭ ಹೆಕ್ಟೇರ್ ಪ್ರದೇಶದಲ್ಲಿ ಎಡಭಾಗದಲ್ಲಿ ರಕ್ಷಿತ ಅರಣ್ಯ ಪ್ರದೇಶವಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ ಕಂಡುಬರುತ್ತವೆ. ಸಾಕುಪ್ರಾಣಿಗಳಾದ ಹಸು, ಎಮ್ಮೆ, ಮೇಕೆ, ಕುರಿ, ಕೋಳಿ, ನಾಯಿಗಳಿವೆ. ಈ ಪರಿಸರದಲ್ಲಿ ಪಕ್ಷಿಗಳಾದ ಕಾಗೆ, ಕೋಗಿಲೆ, ಕೌಜುಗ, ಕೊಕ್ಕರೆ, ಗಿಳಿ, ಗೂಬೆ, ಹದ್ದು ಕಂಡುಬರುತ್ತವೆ.

ವಾರ್ಷಿಕ ಸರಾಸರಿ ವಾಡಿಕೆ ಮಳೆ ೩೯೪ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸುತ್ತಾರೆ. ಗ್ರಾಮದಲ್ಲಿ ೪ ಸಿಸ್ಟರ್ನ್‌ಗಳಿವೆ. ೨ ಕೈಪಂಪುಗಳಿವೆ.

ಬೇಡನಾಯಕ, ಲಂಬಾಣಿ, ಆದಿಕರ್ನಾಟಕ, ಬೋವಿ ಜನಾಂಗಗಳು ಇಲ್ಲಿ ವಾಸಿಸುತ್ತಿದ್ದು ನಾಯಕರು ದೊಡ್ಡ ಸಮುದಾಯವಾಗಿದೆ. ವಿವಿಧ ಪ್ರಕಾರಗಳ ೨೯ ಮನೆಗಳಿದ್ದು ಇವು ಹೆಂಚಿನ, ಶೀಟಿನ ಮನೆಗಳಾಗಿವೆ. ಆಶ್ರಯ, ಜನತಾ, ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧೪೦ ಜನಸಂಖ್ಯೆ ಹೊಂದಿದ್ದು ೧೧ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿಗಳಿವೆ. ದ್ವಿಚಕ್ರ ವಾಹನದ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಹುರುಳಿ, ತೊಗರಿ, ಬೆಳೆಗಳನ್ನು ಬೆಳೆಯುತ್ತಾರೆ. ಶೇಂಗಾ ವ್ಯಾಪಾರಿ ಬೆಳೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಬೂವನಹಳ್ಳಿ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿ ಪ್ರತಿನಿಧಿಗಳಿದ್ದಾರೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ.

೧ ಸ್ತ್ರೀಶಕ್ತಿ ಸಂಘವಿದೆ. ಅಂಗನವಾಡಿ ಕೇಂದ್ರವಿದ್ದು ೨೭ ಮಕ್ಕಳಿದ್ದಾರೆ. ಕೇಂದ್ರದಲ್ಲಿ ಪೌಷ್ಠಿಕ ಆಹಾರವನ್ನು ಮಕ್ಕಳಿಗೆ ನೀಡಲಾಗುತ್ತದೆ. ೫೬ ರಷ್ಟು ಸಾಕ್ಷರರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ.

ಗ್ರಾಮದಲ್ಲಿ ಮಾರಮ್ಮನ ಪೌಳಿಯಿದೆ. ಮುದಿಗೆರೆ ರಂಗನಾಥ, ಆಂಜನೇಯ ದೇವರಿಗೆ ಆರತಿ ಮಾಡುತ್ತಾರೆ. ಮಾರಮ್ಮನಿಗೆ ಆರತಿ, ಬೇಟೆ, ಬಾನ ಅರ್ಪಣೆಯ ಸಂಪ್ರದಾಯವಿದೆ. ಈ ಸಂದರ್ಭದಲ್ಲಿ ಬಾಡೂಟದ ವಿಶೇಷ ಆಚರಣೆ ಇದೆ. ಒಂದು ಕೋಳಿಫಾರಂ ಇದೆ. ೨ ಇಟ್ಟಿಗೆ ಫ್ಯಾಕ್ಟರಿಗಳಿವೆ.

## ಮುದಿಗೆರೆ ಗೊಲ್ಲರಹಟ್ಟಿ

ಮುದಿಗೆರೆ ಗೊಲ್ಲರಹಟ್ಟಿ ಸಿರಾ–ಬುಕ್ಕಾಪಟ್ಟಣ ಮುಖ್ಯ ರಸ್ತೆಯಲ್ಲಿ ಸಿರಾದಿಂದ ದಕ್ಷಿಣಕ್ಕೆ ೫ ಕಿ.ಮೀ ದೂರದಲ್ಲಿದೆ. ಇದು ಮುಖ್ಯಗ್ರಾಮ ಮುದಿಗೆರೆಯ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೪೧೦೩ ಹೆಕ್ಟೇರ್ ಇದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಎಡಭಾಗದಲ್ಲಿ ಚಿಕ್ಕಸಂದ್ರ ಕಾವಲು ಅರಣ್ಯ ಪ್ರದೇಶವಿದೆ. ೧ ಕೆರೆಯೂ ಇದೆ. ಬಯಲು ಸೀಮೆಯಾದ ಇಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ ಕಂಡುಬರುತ್ತವೆ.

ಗ್ರಾಮದಲ್ಲಿ ಸಾಕುಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕುರಿ, ಮೇಕೆಗಳಿವೆ. ಕತ್ತೆ ಹಾಗೂ ನಾಯಿಗಳೂ ಇವೆ. ಈ ಪರಿಸರದಲ್ಲಿ ಪಕ್ಷಿಗಳಾದ ಕಾಗೆ, ಕೋಗಿಲೆ, ಕೊಕ್ಕರೆ, ಕೌಜಲಗ, ಗೂಬೆ, ಹದ್ದು, ಗರುಡ, ಗಿಳಿ, ಗೀಜುಗ, ಗುಬ್ಬಚ್ಚಿಗಳಿವೆ. ಕೋಳಿ ಸಾಕುಪಕ್ಷಿಯಾಗಿದೆ.

ವಾಡಿಕೆ ಮಳೆ ೪೯೪ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಮಳೆ ನೀರಿನೊಂದಿಗೆ ಕೃಷಿ ಆಶ್ರಯವಾಗಿ ೨೮ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಕಟ್ಟೆಗಳಿವೆ. ೪ ಚಿಕ್ಕ ಟ್ಯಾಂಕ್‌ಗಳಿದ್ದು ೧ ಕೈಪಂಪುಗಳಿವೆ.

ಕಾಡುಗೊಲ್ಲರು ಮಾತ್ರ ವಾಸಿಸುವ ಈ ಗ್ರಾಮದಲ್ಲಿ ೬೩ ಮನೆಗಳಿವೆ. ಕನ್ನಡ ಮಾತೃಭಾಷೆ. ಮಣ್ಣಿನ, ಶೀಟಿನ, ಹೆಂಚಿನ ಮನೆಗಳಿದ್ದು ೨೪೮ ಜನಸಂಖ್ಯೆ ಹೊಂದಿದೆ. ೧೦ ಮನೆಗಳಲ್ಲಿ ಶೌಚಾಲಯ ಹೊಂದಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನ ಬಂಡಿ, ಟ್ರ್ಯಾಕ್ಟರ್, ಸ್ಕೂಟರ್‌ಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ ಆಹಾರ ಬೆಳೆಗಳು. ತೆಂಗು, ಅಡಿಕೆ ತೋಟಗಾರಿಕೆ ಬೆಳೆಗಳು. ಹುಣಸೆಹಣ್ಣು ಮಾರಾಟವಿದೆ. ಕುರಿ ವ್ಯಾಪಾರವೂ ಇದೆ. ಶಿಕ್ಷಕರು, ಕಂಡಕ್ಟರ್ ಸೇರಿ ೪ ಜನ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಬೂವನಹಳ್ಳಿ ಗ್ರಾಮಪಂಚಾಯ್ತಿ ಕೇಂದ್ರವಾದ ಈ ಗ್ರಾಮ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಗಳಿದ್ದು ಶಾಲೆಯಲ್ಲಿ ೨೫ ಮಕ್ಕಳಿದ್ದು ಒಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರರ ಪ್ರಮಾಣ ೫೭.೪ ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿಗಳಿವೆ.

ಗ್ರಾಮದಲ್ಲಿ ಒಂದು ಅರಳೀಕಟ್ಟೆ ಇದ್ದು ಇದು ಕಾಡುಗೊಲ್ಲರ ನ್ಯಾಯಸ್ಥಾನವೂ ಆಗಿದೆ. ಮಾರಮ್ಮನ ಪೌಳಿಯಿದೆ. ವಾರ್ಷಿಕವಾಗಿ ಊರ ಹಬ್ಬ ಮಾಡಿ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯಗಳಿವೆ. ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ದೀಪಾವಳಿ ಹಬ್ಬವನ್ನು ೧ ವಾರದ ಕಾಲ ದೀಪ ಏರಿಸುವ, ಹಿರಿಯರ ಹಾಲು–ತುಪ್ಪದ

ಹಬ್ಬವಾಗಿ ವಿಜೃಂಭಣೆಯಿಂದ ಆಚರಿಸುವುದು ಇಲ್ಲಿನ ವಿಶೇಷವಾಗಿದೆ.

## ಮಾನಂಗಿ

ಮಾನಂಗಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೬ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಒಟ್ಟು ೬೫೦.೮೦ ಹೆಕ್ಟೇರ್ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿದೆ. ಇದರ ಉಪಗ್ರಾಮಗಳಾಗಿ ಅಜ್ಜಯ್ಯನಪಾಳ್ಯ, ಕಾಡಜ್ಜನಪಾಳ್ಯ, ಮಾನಂಗಿ ತಾಂಡ, ಹನುಮಂತನಗರ ಎಂಬ ಉಪ ಗ್ರಾಮಗಳು ಇಲ್ಲಿನ ಒಟ್ಟು ಭೌಗೋಳಿಕ ವ್ಯಾಪ್ತಿಯನ್ನು ಹಂಚಿಕೊಂಡಿವೆ.

ಮಾನಂಗಿ ಎಂದರೆ ಸಣ್ಣ ಬಾವಿ. ನೀರು ನಿಲ್ಲುವ ಸ್ಥಳ, ಜೌಗು ಭೂಮಿ ಎಂದೆಲ್ಲಾ ಅರ್ಥವಿದೆ. ಚಿತ್ರದುರ್ಗ–ಸಿರಾ ರ್‍ಹಾಜ್ಯ ಹೆದ್ದಾರಿ–೪ ರಲ್ಲಿ ಬರುವ ಈ ಗ್ರಾಮ ರಸ್ತೆಯ ಎಡಬದಿಗೆ ಹೊಂದಿಕೊಂಡಿದೆ. ಕಪ್ಪುಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ತೋಟ ಸಾಲು, ಕೆರೆಕಟ್ಟೆ ಹಳ್ಳಗಳಿಂದ ಇಂದಿಗೂ ತಗ್ಗು–ದಿಣ್ಣೆಗಳಿಂದಲೇ ಕೂಡಿದೆ. ಹೆಸರಿಗೆ ತಕ್ಕಂತೆ ಗ್ರಾಮದಲ್ಲಿ ನಾಲ್ಕು ತೆರೆದ ಬಾವಿಗಳು, ಪಕ್ಕದಲ್ಲೇ ೨ ಜಂಗಮರ ಮಠಗಳು ಇಂದಿಗೂ ಇವೆ. ಮಾನಂಗಿ ಎಂಬುದಕ್ಕೆ ನೀರಿನಲ್ಲಿ ಬೆಳೆಯುವ ಜೊಂಡಿನ ಮಾದರಿಯ ಒಂದು ಬಗೆಯ ಸಸ್ಯ ಎಂತಲೂ ಕರೆಯಲಾಗುವುದರಿಂದ ಬುಡಕಟ್ಟು ಸಂಸ್ಕೃತಿಯ ಮೂಡ್ಲಪ್ಪ ಅಭಿಪ್ರಾಯಪಡುತ್ತಾರೆ.

ಸಮೀಪದ ತಾವರೆಕೆರೆ, ಮಾನಂಗಿ, ಲಕ್ಷ್ಮೀಸಾಗರ ಈ ಎಲ್ಲವೂ ನೀರಿನ ತಾಣಗಳೇ ಆಗಿವೆ. ಈ ಗ್ರಾಮದ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಉಡ, ಆಮೆ ಕಂಡುಬರುತ್ತವೆ. ಕೃಷಿ ಹಾಗೂ ವಾಣಿಜ್ಯಕ್ಕಾಗಿ ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ಕೋಳಿಗಳನ್ನನು ಸಾಕು ಪ್ರಾಣಿಗಳಾಗಿ ಸಾಕಲಾಗುವುದು ಕೃಷಿ ಹಾಗೂ ಆ ಸಂಬಂಧಿ ವಾಣಿಜ್ಯ ಬದುಕಿನ ಇಲ್ಲಿನ ಜನತೆ ಅಂಡೇನಹಳ್ಳಿ, ದ್ವಾರಾಳು, ಚಿಕ್ಕಸಂದ್ರ, ಬೂವನಹಳ್ಳಿ, ಸೋರೇಕುಂಟೆ ಈ ಸಾಲು ಕೆರೆಗಳನ್ನು ಹೊಂದಿದ್ದರೂ ತುಂಬುವುದು ವಿರಳ. ನೀರಿನ ಆಶ್ರಯ ತುಂಬಾ ಕಡಿಮೆ. ಹಾಗಾಗಿ ರೈತರು ಈ ಪರಿಸರದಲ್ಲಿ ೪೪ ಕೊಳವೆ ಬಾವಿಗಳನ್ನು ಹೊಂದಿದ್ದು ತಮ್ಮ ಅಡಿಕೆ, ತೆಂಗು, ವೀಳ್ಯದೆಲೆ ಬೆಳೆಗಳಿಗೆ ನೀರು ಒದಗಿಸಿಕೊಳ್ಳುತ್ತಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಪೂರೈಸಿಕೊಳ್ಳಲಾಗುತ್ತಿದೆ. ಗ್ರಾಮದಲ್ಲಿ ೬ ಚಿಕ್ಕ ಟ್ಯಾಂಕ್ ಹಾಗೂ ೨ ಪೈಪುಗಳಿವೆ.

ವಾರ್ಷಿಕ ಸರಾಸರಿ ವಾಡಿಕೆ ಮಳೆ ೬೦೨ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಆದಿಕರ್ನಾಟಕ ಜನಾಂಗದವರು ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗರು, ನಾಯಕರು, ಮರಾಠಿ ಭಾಷಿಕರು, ಮುಸ್ಲಿಮರು ಸಣ್ಣ ಸಮುದಾಯವಾಗಿದೆ. ಗ್ರಾಮದಲ್ಲಿ ಕನ್ನಡ ಪ್ರಧಾನ ಭಾಷೆಯಾಗಿದ್ದು ಉರ್ದು ಭಾಷೆಯನ್ನು ಉಪಭಾಷೆಯಾಗಿ ಬಳಸಲಾಗುತ್ತದೆ.

ವಿವಿಧ ಪ್ರಕಾರದ ೧೦೨ ಮನೆಗಳಿದ್ದು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿವೆ. ೩೫ ಮನೆಗಳಲ್ಲಿ ಶೌಚಾಲಯ ಹೊಂದಿದ್ದು ಆಶ್ರಯ, ಅಂಬೇಡ್ಕರ್, ಜನತಾ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೧೬ ಫಲಾನುಭವಿಗಳಿದ್ದಾರೆ. ಗ್ರಾಮದ ಒಟ್ಟು ಜನಸಂಖ್ಯೆ ೪೦೮ ಆಗಿರುತ್ತದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟಿಲ್ಲರ್, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಅಲಸಂದೆ, ತೊಗರಿ, ಭತ್ತ ಆಹಾರ ಬೆಳೆಗಳಾಗಿವೆ. ಅಡಿಕೆ, ತೆಂಗು ಈ ಗ್ರಾಮದ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಇಂಜಿನಿಯರ್ ಗೋವಿಂದರಾಜು, ಹಿರಿಯ ವೈದ್ಯ ಡಾ॥ ಗೋವಿಂದರಾಜು, ಇಂಜಿನಿಯರ್ ನಾಗರತ್ನಮ್ಮ ಸೇರಿದಂತೆ ವಿವಿಧ ಇಲಾಖೆಯಲ್ಲಿ ೧೦ ಜನ ನೌಕರರು ಇದ್ದಾರೆ. ಅಡಿಕೆ ಸುಲಿಯುವ, ಒಣಗಿಸುವ, ಬೀಡಿ ಕಟ್ಟುವ, ಊಟದ ಎಲೆ ತಯಾರಿಸುವ, ಬಟ್ಟೆ ಹೊಲಿಯುವ ಉಪಕಸುಬು ಮಹಿಳೆಯರಿಗಿದೆ. ಮಾನಂಗಿ ತಿಮ್ಮೇಶ್ ಲೇಖಕರಾಗಿದ್ದು 'ಮಾನಂಗಿ ಮಾರುತಿ ಗೀತೆಗಳು' ಕೃತಿಯನ್ನು ಪ್ರಕಟಿಸಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಬೂವನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಡುವ ಈ ಗ್ರಾಮ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರುತ್ತದೆ. ಈ ಗ್ರಾಮದಲ್ಲಿ ಇಬ್ಬರು ಪಂಚಾಯತ್ ಪ್ರತಿನಿಧಿಗಳಿದ್ದಾರೆ. ಗ್ರಾಮದಲ್ಲಿ ಅಂಚೆ ಕಛೇರಿ, ಅಂಗನವಾಡಿ ಕೇಂದ್ರ, ಕೆನರಾ ಬ್ಯಾಂಕ್ ೩ ಸ್ತ್ರೀಶಕ್ತಿ ಸ್ವಸಹಾಯ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಒಂದು ಉಪ ಆರೋಗ್ಯ ಕೇಂದ್ರವಿದ್ದು ಸಣ್ಣಪುಟ್ಟ ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ

ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಹೋಟೆಲ್, ೨ ಗೂಡಂಗಡಿಗಳಿವೆ. ಗ್ರಾಮ ಪರಿಸರದಲ್ಲಿ ೨ ವೀರಗಲ್ಲುಗಳಿದ್ದು ಹುತಾತ್ಮ ಜೀವನದ ಚಿತ್ರಣ ಕಟ್ಟಿಕೊಟ್ಟರೆ ೧ ಮಾಸ್ತಿಕಲ್ಲು ಇದೆ. ಇವು ೧೫ನೇ ಶತಮಾನಕ್ಕೆ ಸಂಬಂಧಿಸಿದ ಕಲ್ಲು ಎಂದು ಗ್ರಾಮಸ್ಥರಾದ ನರಸಿಂಹಮೂರ್ತಿ ಹೇಳುತ್ತಿದ್ದು ಶ್ರಾವಣ ಹಾಗೂ ದಸರಾ ಸಂದರ್ಭದಲ್ಲಿ ಪೂಜಿಸುವ ವಾಡಿಕೆ ಇದೆ.

ಊರಿನ ಪ್ರವೇಶ ದ್ವಾರದಲ್ಲಿ ಆಂಜನೇಯ, ಒಂದು ಕರಿಗಲ್ಲು ಬದಿಗೆ ಮಾರಮ್ಮನ ಗದ್ದುಗೆ ಇದೆ. ಅರಳಿಕಟ್ಟೆಯಿಂದ ಇದು ದ್ವಾರಬಾಗಿಲಿನಂತಿದೆ. ಇಲ್ಲಿನ ಈಶ್ವರ ದೇವಾಲಯದಲ್ಲಿ ನೂರೊಂದು ಲಿಂಗಗಳಿವೆ. ಮರುಡ ಬಸಪ್ಪ, ಕೊಲ್ಲಾಪುರದಮ್ಮ ದೇವತೆಗಳ ಗುಡಿಗಳಿವೆ. ೨ ಮಠಗಳಿದ್ದು ವೀರಶೈವ ಸಮುದಾಯದವರು ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಶಿವರಾತ್ರಿ, ಸಂಕ್ರಾಂತಿ ಹಬ್ಬಗಳ ಸಂದರ್ಭದಲ್ಲಿ ಮಠಗಳಲ್ಲಿ ಧಾರ್ಮಿಕ ಚಟುವಟಿಕೆ ನಡೆಯುತ್ತವೆ. ಗ್ರಾಮ ಹಬ್ಬವಾಗಿ ಮಾರಮ್ಮನಿಗೆ ಆರತಿ, ಬಾನ, ಬ್ಯಾಟೆ ಏರ್ಪಡುತ್ತದೆ. ಉಳಿದಂತೆ ದಸರಾ, ದೀಪಾವಳಿ, ಶಿವರಾತ್ರಿ, ಗೌರಿ–ಗಣೇಶ, ಯುಗಾದಿ ಹಬ್ಬಗಳನ್ನು ಸಂಭ್ರಮದಿಂದ ಆಚರಿಸುತ್ತಾರೆ.

## ಮಾನಂಗಿ ತಾಂಡ

ಮಾನಂಗಿ ತಾಂಡ ಒಂದು ಮಜರೆ ಗ್ರಾಮವಾಗಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೬ ಕಿಮೀ ದೂರದಲ್ಲಿದ್ದು ಸಿರಾ–ಚಿತ್ರದುರ್ಗ ರ್‍ಾಷ್ಟ್ರೀಯ ಹೆದ್ದಾರಿಗೆ ಬಲಬದಿಗೆ ಅರ್ಧ ಕಿಮೀ ದೂರದಲ್ಲಿದೆ. ಮಾನಂಗಿ ಗ್ರಾಮದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೬೦.೧೮ ಹೆಕ್ಟೇರ್ ಆಗಿದೆ. ಕೆಂಪುಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ಕುರುಚಲು ಗಿಡ, ಜೌಗು ಭೂಮಿ, ದಿಣ್ಣೆ, ಹಳ್ಳಗಳಿಂದ ಕೂಡಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಉಡ, ಬಾರುಬೆಕ್ಕು ಕಂಡುಬರುತ್ತವೆ. ಗ್ರಾಮದಲ್ಲಿ ಕೃಷಿ ಕಸುಬಿಗಾಗಿ ಹಸು, ಎತ್ತು, ಕುರಿ, ಮೇಕೆಗಳನ್ನು ಸಾಕುತ್ತಾರೆ. ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಕೋಗಿಲೆ, ಕಾಗೆ, ಗುಬ್ಬಚ್ಚಿ, ಗೂಬೆ, ಗರುಡ, ಹದ್ದು ಮುಂತಾದ ಪಕ್ಷಿಗಳು ಕಂಡುಬರುತ್ತವೆ. ಸಾಕುಪಕ್ಷಿಯಾಗಿ ಕೋಳಿಯನ್ನು ಸಾಕಲಾಗುವುದು. ಸರಾಸರಿ ೬೦೨ ಮಿಮೀ ಮಳೆ ಪ್ರಮಾಣ ಹೊಂದಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ಕೃಷಿಗಾಗಿ ೬ ಕೊಳವೆ ಬಾವಿಗಳಿದ್ದು ಕುಡಿಯಲು ಮಾನಂಗಿ ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಸಿಸ್ಟರ್ನ್‌ಗಳಲ್ಲಿ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ಒಂದು ಕೈಪಂಪು ಇದೆ.

ಲಂಬಾಣಿ ಜನಾಂಗ ಇಲ್ಲಿನ ದೊಡ್ಡ ಸಮುದಾಯವಾಗಿದೆ. ಬೇಡರು, ಕುಂಚಿಟಿಗರು ಸಣ್ಣ ಸಮುದಾಯವಾಗಿದೆ. ಲಂಬಾಣಿ ಹಾಗೂ ಕನ್ನಡ ಮಾತನಾಡುವ ಭಾಷೆಯಾಗಿದೆ. ಹೆಂಚಿನ, ಶೀಟಿನ, ಕಾಂಕ್ರೀಟ್ ಸ್ವರೂಪದ ೧೮ ಮನೆಗಳಿದ್ದು ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದು ಭಾಗ್ಯಜ್ಯೋತಿ ವಿದ್ಯುತ್ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ವ್ಯವಸಾಯಕ್ಕೆ ಟ್ರ್ಯಾಕ್ಟರ್ ಬಳಕೆಯಿದೆ. ಗ್ರಾಮದಲ್ಲಿ ಆಟೋ, ಟೆಂಪೋ ಇದ್ದು ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಅವರೆ, ತೊಗರಿ, ಹುರುಳಿ ಆಹಾರ ಬೆಳೆಗಳಾಗಿ ಬೆಳೆಯುತ್ತಾರೆ. ಶೇಂಗಾ ವ್ಯಾಪಾರವಿದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಬೂವನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಬರುವ ಈ ಗ್ರಾಮ ತಹಸೀಲ್ದಾರ್ ಕಛೇರಿ, ವಿದ್ಯುತ್ ಹಾಗೂ ಪೊಲೀಸ್ ಬಳಕೆಗೆ ಸಿರಾ ಕಛೇರಿಗಳನ್ನು ಅವಲಂಬಿಸಿದ್ದಾರೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಗ್ರಾಮದ ಸಾಕ್ಷರತೆ ಪ್ರಮಾಣ ೫೬ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಗ್ರಾಮದಲ್ಲಿ ದುರ್ಗಾದೇವಿ, ಮಾರಮ್ಮನ ಪೌಳಿ ಇದೆ. ದುರ್ಗಾ ದೇವಿಯ ಊರಹಬ್ಬ ಆಚರಿಸಲಾಗುವುದು. ಬಲಿ, ಹರಕೆ, ಆರತಿ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಮಹಾನವಮಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮೇಕೇರಹಳ್ಳಿ

ಮ್ಯಾಕೇರಹಳ್ಳಿ, ಮೇಕೆರಹಳ್ಳಿ ಎಂದು ಕರೆಯಲ್ಪಡುವ ಈ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೫ ಕಿಮೀ

ದೂರದಲ್ಲಿದೆ. ಸಿರಾ–ಹುಳಿಯಾರು ರಸ್ತೆಯಲ್ಲಿರುವ ಈ ಗ್ರಾಮ ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೫೦.೯೪ ಹೆಕ್ಟೇರ್ ಆಗಿದೆ. ಮೇಕೆ ಸಾಕಾಣಿಕೆಯ ಕಸುಬು ಮೂಲದ ಕಾರಣದಿಂದ ಮೇಕೇರಹಳ್ಳಿ ಹೆಸರಿನಲ್ಲಿ ಕರೆಯಲಾಗಿದೆ. ಗ್ರಾಮದ ಆರಂಭದಲ್ಲಿ ದೊಡ್ಡಹಳ್ಳ, ಬಲಬದಿಗೆ ತೋಟಗಾರಿಕೆ ಇಲಾಖೆಯ ಹಣ್ಣು, ತೆಂಗಿನ ಗಿಡಗಳ ಬೆಳೆಸುವ ತೋಟವಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಜಿಂಕೆ, ಕರಡಿ, ಕಾಡುಹಂದಿ ಮೊದಲಾದವು ಕಂಡುಬರುತ್ತವೆ. ಗ್ರಾಮಸ್ಥರು ಪಶುಪಾಲನೆಗಾಗಿ ಹಸು, ಸೀಮೆಹಸು, ಹಳ್ಳಿಕಾರ್ ತಳಿ ಎತ್ತು ಹಾಗೂ ಕುರಿ, ಮೇಕೆಗಳನ್ನು ಸಾಕುತ್ತಾರೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಬೆಳವ, ಗೀಜಗ, ಕೊಕ್ಕರೆ, ಹೀರೇಹಕ್ಕಿ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಕೋಳಿಯನ್ನು ಸಾಕು ಪಕ್ಷಿಯಾಗಿ ಸಾಕಲಾಗುವುದು.

ಸರಾಸರಿ ವಾಡಿಕೆ ಮಳೆ ೬೦೨.೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಒಂದು ಕೆರೆ ಇದ್ದು ಹಳ್ಳವೂ ಇದೆ. ಆದರೆ ತುಂಬುವುದು ಅಪರೂಪ. ಈ ಪರಿಸರದಲ್ಲಿ ೫೦ ಕೊಳವೆ ಬಾವಿಗಳಿದ್ದು ಕೃಷಿ ಕಾಯಕಕ್ಕೆ ಸಹಾಯವಾಗಿವೆ. ಆರು ಚಿಕ್ಕ ನೀರಿನ ಟ್ಯಾಂಕ್‌ಗಳ ಮೂಲಕ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತದೆ. ೨ ಕೈಪಂಪುಗಳಿವೆ.

ಕುಂಚಿಟಿಗರು ಇಲ್ಲಿನ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಬೇಡ, ಕುರುಬರು, ಕಮ್ಮಾರ, ಲಂಬಾಣಿಗಳು ಸಣ್ಣ ಸಮುದಾಯವಾಗಿವೆ. ಕನ್ನಡ ಇಲ್ಲಿನ ನೆಲಮೂಲ ಭಾಷೆಯಾಗಿದೆ. ವಿವಿಧ ಪ್ರಕಾರದ ೧೯೪ ಮನೆಗಳಿದ್ದು ಇವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಾಗಿವೆ. ಇಲ್ಲಿ ೭೯೬ ಜನಸಂಖ್ಯೆ ಹೊಂದಿದ್ದು ೫೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೬ ಮನೆಗಳಲ್ಲಿ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಬಂಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ. ಭತ್ತ, ಅಲಸಂದೆ, ತೊಗರಿ ಬೆಳೆಗಳನ್ನು ಆಹಾರ ಬೆಳೆಗಳಾಗಿ ಬೆಳೆಯಲಾಗುವುದು. ಶೇಂಗಾ ಮತ್ತು ಹುಣಸೇಹಣ್ಣು, ತೆಂಗಿನಕಾಯಿ ಮುಖ್ಯ ವಾಣಿಜ್ಯ ಬೆಳೆಯಾಗಿದೆ. ಒಂದು ಮಿನಿ ಹಾಲಿನ ಡೈರಿಯಿದ್ದು ಸರಾಸರಿ ೪೦೦ ಲೀ. ಹಾಲನ್ನು ಸಂಗ್ರಹಿಸಲಾಗುತ್ತಿದೆ.

ಸಿರಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುವ ಈ ಹಳ್ಳಿ ಭೂವನಹಳ್ಳಿ ಗ್ರಾಮಪಂಚಾಯಿತ್ತಿ ತಾವರೆಕೆರೆ ಜಿಲ್ಲಾ ಪಂಚಾಯಿತ್ತಿ ಯೋಜನಾಧಿಕಾರಿ ಎಂ.ಎನ್.ಚಂದ್ರಶೇಖರ್, ನವೋದಯ ವಸತಿ ಶಾಲೆಯ ಪ್ರಿನ್ಸಿಪಾಲ್ ನಾಗರಾಜ್ ಸೇರಿದಂತೆ ಸಾರಿಗೆ, ಶಿಕ್ಷಣ, ಕಂದಾಯ ಇಲಾಖೆಯ ೬ ಜನ ನೌಕರರಿದ್ದಾರೆ. ಉಪವಿಭಾಗಾಧಿಕಾರಿ ದಾಸಪ್ಪನವರೂ ಇದೇ ಗ್ರಾಮದವರು.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಹೊಂದಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಒಂದು ಉಪಆರೋಗ್ಯ ಕೇಂದ್ರವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೭ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದ ಆರಂಭದಲ್ಲಿಯೇ ನಾಗರಕಟ್ಟೆ, ಅರಳಿಮರ, ನಾಗರ ಕಲ್ಲುಗಳನ್ನು ಪ್ರತಿಷ್ಠಾಪಿಸಿ ಆರಾಧನೆಗೆ ಒಳಗಾಗಿವೆ. ಗ್ರಾಮದಲ್ಲಿ ಆಂಜನೇಯ, ಮಾರಮ್ಮ, ಚಿಕ್ಕಮ್ಮ, ಭೂತಪ್ಪ, ಕಣಿವೆ ಮಾರಕ್ಕ ದೇವಸ್ಥಾನಗಳಿವೆ. ಕಣಿವೆ ಮಾರಮ್ಮನ ಊರಹಬ್ಬ ಮಾಡುವುದು ಬಲಿ, ಹರಕೆ, ಆರತಿ ಆಚರಣೆ ಇರುತ್ತದೆ.

ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ದೀಪಾವಳಿ, ದಸರಾ, ಗೌರಿ–ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಒಬ್ಬರು ಪಂಚಾಯಿತ್ತಿ ಸದಸ್ಯರಿದ್ದಾರೆ. ನರಸಿಂಹಯ್ಯ ಹಿರಿಯ ರಂಗ ಕಲಾವಿದರಾಗಿ, ಮಹಾಲಿಂಗಪ್ಪ ಗೊರವರ ಕುಣಿತ ಕಲಾವಿದರಾಗಿ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ.

## ಮೂಗನಹಳ್ಳಿ

ಮೂಗನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೨ ಕಿಮೀ ದೂರದಲ್ಲಿದೆ. ಇದು ಸಿರಾ–ಮಧುಗಿರಿ ರಸ್ತೆಯಲ್ಲಿ ಗುಳಿಗೇನಹಳ್ಳಿಯಿಂದ ಬಲಗಡೆಗೆ ತಿರುಗಿ ಒಂದು ಕಿಮೀ ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು ಗೊಲ್ಲರಹಟ್ಟಿ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೭೨೩ ಹೆಕ್ಟೇರ್ ಇದೆ. ಬಯಲುನಾಡಿನ ಪ್ರದೇಶ. ಇದೊಂದು ವ್ಯಕ್ತಿ ನಾಮಸೂಚಕವಾಗಿದ್ದು ಮೂಕ ವ್ಯಕ್ತಿಯು ಆರಂಭದಲ್ಲಿ ಇಲ್ಲಿ ವಾಸಿಸುತ್ತಾ ಗ್ರಾಮ ರಚನೆಗೆ ಪ್ರೇರಕವಾಗಿರುವ ಕಾರಣದಿಂದ ಮೂಕನಹಳ್ಳಿ ಮೂಗನಹಳ್ಳಿಯಾಗಿ ರೂಪಾಂತರವಾಗಿದೆ. ಪುರುಷವಾಚಕ ಸ್ವರೂಪದಲ್ಲಿಯೇ ಗ್ರಾಮ ರಚನೆಯಾಗಿದೆ.

ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಕುರುಚಲು ಗಿಡ, ಮರ, ತಲ್ಲಿನ ಪ್ರದೇಶವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಉಡ, ಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಸಾಕುಪ್ರಾಣಿಗಳಾದ ನಾಟಿಹಸು, ಹಳ್ಳಿಕಾರ್ ತಳಿ ಎತ್ತು, ಸೀಮೆಹಸು, ಎಮ್ಮೆ, ಕುರಿ, ಮೇಕೆ, ನಾಯಿಗಳಿವೆ. ಕೋಳಿ ಸಾಕುಪಕ್ಷಿಯಾಗಿದ್ದು ಹೇಂಟೆ, ಹುಂಜೆ, ಗಿರಿರಾಜ ಕೋಳಿಗಳನ್ನು ಮಾಂಸ ಹಾಗೂ ಮೊಟ್ಟೆಗಾಗಿ ಸಾಕುತ್ತಾರೆ. ಪಕ್ಷಿಗಳಾದ ನವಿಲು, ಕೋಗಿಲೆ, ಕಾಗೆ, ಗೊರವಂಕ, ಗೂಬೆ, ಕೊಕ್ಕರೆ, ಕೌಜಲಗ, ಹದ್ದು, ಗರುಡ ಮೊದಲಾದ ಪಕ್ಷಿಗಳನ್ನು ಕಾಣಬಹುದು.

ಬಿಸಿಲು, ಧಗೆ ಅಧಿಕವಾಗಿದ್ದು ವಾರ್ಷಿಕ ಸರಾಸರಿ ವಾಡಿಕೆ ಮಳೆ ೪೭೧.೬ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಅವಲಂಬಿತ ಬದುಕು, ವಾಡಿಕೆ ಮಳೆ ಕಡಿಮೆ. ಹಾಗಾಗಿ ರೈತರು ಉಪನೀರಾವರಿಯಾಗಿ ೮೦ ಕೊಳವೆ ಬಾವಿಗಳನ್ನು ಹೆಚ್ಚುವರಿಯಾಗಿ ಮಾಡಿಕೊಂಡು ತೋಟಗಾರಿಕೆ, ಕೃಷಿ ಕೆಲಸಕ್ಕೆ ಬಳಸಲಾಗುತ್ತಿದೆ. ಒಂದು ಕೆರೆ ಇದ್ದರೂ ತುಂಬುವುದು ದುರ್ಲಭವಾಗಿದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಸರಬರಾಜು ಮಾಡಲಾಗುತ್ತಿದೆ. ಗ್ರಾಮದಲ್ಲಿ ೧ ಲಕ್ಷ ಲೀ. ಸಾಮರ್ಥ್ಯದ ಟ್ಯಾಂಕ್ ಇದ್ದು ೩೬ ನಲ್ಲಿಗಳಿವೆ. ೨ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ನಾಯಕ, ಕುರುಬ, ಕಮ್ಮಾರ, ಬ್ರಾಹ್ಮಣ, ಮಡಿವಾಳ, ಕ್ಷೌರಿಕ ಕುಟುಂಬಗಳಿವೆ. ಇವು ಕಿರು ಸಮುದಾಯವಾಗಿವೆ. ಕನ್ನಡ ಮಾತೃಭಾಷೆಯಾಗಿದೆ. ದೇವಸ್ಥಾನ ಕೇರಿ, ಮಠದ ಓಣಿಗಳಿವೆ.

ವಿವಿಧ ಪ್ರಕಾರಗಳ ೨೨೮ ಮನೆಗಳಿದ್ದು ಅವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಶೀಟಿನ, ಹೆಂಚಿನ ಸ್ವರೂಪದ ಮನೆಗಳಾಗಿವೆ. ಇವು ಆಶ್ರಯ, ಇಂದಿರಾ ಆವಾಸ್, ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೩ ಫಲಾನುಭವಿಗಳಿದ್ದಾರೆ. ೧೩೪೦ ಜನಸಂಖ್ಯೆ ಹೊಂದಿರುವ ಇಲ್ಲಿನ ೬೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಬಂಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಕೊರ್ಲೆ, ನವಣೆ ಆಹಾರ ಬೆಳೆಗಳಾಗಿವೆ. ಸೂರ್ಯಕಾಂತಿ, ಸೇವಂತಿಗೆ, ರೇಷ್ಮೆ ಉಪತೋಟಗಾರಿಕೆ ಬೆಳೆಯಾಗಿವೆ. ತೆಂಗು, ಅಡಿಕೆ ತೋಟಗಾರಿಕೆ ಬೆಳೆಗಳಾಗಿವೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೆಹಣ್ಣು, ಹೊಂಗೆಬೀಜ ಪ್ರಮುಖ ವ್ಯಾಪಾರಿ ಸರಕಾಗಿವೆ. ಶಿಕ್ಷಣ, ಪೊಲೀಸ್ ಇಲಾಖೆ, ಕಂದಾಯ, ಆರೋಗ್ಯ ಇಲಾಖೆ ಹಾಗೂ ಸಾರಿಗೆ ಇಲಾಖೆಯ ೭ ಜನ ಸರ್ಕಾರಿ ನೌಕರರಿದ್ದಾರೆ. ಪಶುವೈದ್ಯರಾದ ಡಾ.ರಂಗನಾಥ್, ಇಂಜಿನಿಯರ್ ಬಸವರಾಜ್, ರಂಗನಾಥ ಸೇರಿದಂತೆ ಐಟಿ–ಬಿಟಿ ನೌಕರರಿದ್ದಾರೆ. ವಕೀಲ ಹಾಗೂ ನೋಟರಿ ದೊಡ್ಡಮಲ್ಲಯ್ಯ ಇದೇ ಗ್ರಾಮದವರು. ಬೀಡಿ ಕಟ್ಟುವುದು, ಬಟ್ಟೆ ಹೊಲಿಯುವ, ಹೂ ಕಟ್ಟುವ ಉಪಕಸುಬಿನ ಮಹಿಳೆಯರಿದ್ದಾರೆ. ಪಾರಂಪರಿಕ ಬಡಗಿ ಕಾಯಕದವರೂ ಇದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ರತ್ನಸಂದ್ರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮದಲ್ಲಿ ೨ ಪಂಚಾಯ್ತಿ ಸದಸ್ಯರಿದ್ದಾರೆ. ಸಿರಾ–ಮಧುಗಿರಿಗೆ ರಸ್ತೆ ಸಂಪರ್ಕ ಚೆನ್ನಾಗಿದೆ. ಗುಳಿಗೇನಹಳ್ಳಿಯಿಂದ ಅಂಚೆ ಸೌಕರ್ಯವಿದೆ. ನಾಲ್ಕು ಸ್ತ್ರೀಶಕ್ತಿ ಸ್ವಸಹಾಯ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳಾ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೧೩೩ ಮಕ್ಕಳಿದ್ದಾರೆ. ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ೫೫.೨% ರಷ್ಟು ಸಾಕ್ಷರತೆ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಒಂದು ಪಶು ಆಸ್ಪತ್ರೆ ಇದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಹೋಟೆಲ್‌ಗಳು, ೮ ಪೆಟ್ಟಿಗೆ ಅಂಗಡಿಗಳಿವೆ.

ಈ ಗ್ರಾಮದ ಕಾವಲೇಶ್ವರಿ ಪ್ರಸಿದ್ಧ ಶಕ್ತಿ ದೇವಾಲಯವಾಗಿದ್ದು ಅಮ್ಮಾಜಿ ಎಂದೇ ಹೆಸರುವಾಸಿ, ಹುತ್ತ ದೇವತೆಯಾಗಿ ಮೂಗನಿಗೆ ಮಾತು ಕಲಿಸಿದಳೆಂಬ ನಂಬಿಕೆ ಈ ಗ್ರಾಮದ ಐತಿಹ್ಯವೂ ಆಗಿದೆ. ವರ್ಷದಲ್ಲಿ ಎರಡು ಬಾರಿ ಮಾತ್ರ ಅಮ್ಮಾಜಿ ದೇವತೆಗೆ ವಿಶೇಷ ಪೂಜೆ ಏರ್ಪಡುತ್ತದೆ. ಇದೊಂದು ಧಾರ್ಮಿಕ ಗುರುಮಠದ ಸ್ವರೂಪ ಪಡೆದುಕೊಂಡಿದ್ದು ಶ್ರೀ

ನಿತ್ಯಾನಂದ ಸ್ವಾಮಿಗಳು ಪಟ್ಟದ ಪೂಜಾರಿಗಳು. ಗ್ರಾಮದ ಧಾರ್ಮಿಕ ಆಚರಣೆಗಳಿಗೆ ಇವರ ನಿರ್ದೇಶನ ಇರುತ್ತದೆ. ಈ ದೇವಸ್ಥಾನದ ಪ್ರವೇಶ ದ್ವಾರದ ಕಲ್ಲಿನ ಮೇಲೆ ೧೫ ನೇ ಶತಮಾನಕ್ಕೆ ಸೇರಿದ ವರಾಹ–೧೧ ಎಂಬ ಬರಹ ಮಾತ್ರವಿದೆ. ರೇವಣ ಸಿದ್ದೇಶ್ವರ ಗುರುಮಠ, ರೇವಣ ದೇವಾಲಯವಿದೆ. ತಿಮ್ಮಪ್ಪ, ಮುತ್ತುರಾಯನ ದೇವಾಲಯಗಳಿವೆ. ದಸರಾ ಸಂದರ್ಭದಲ್ಲಿ ಅಮ್ಮಾಜಿ ಕಾವಲೇಶ್ವರಿ ಉತ್ಸವ, ಜಾತ್ರೆಯ ಸ್ವರೂಪದ ಆಚರಣೆಯಾಗುತ್ತದೆ. ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶನ ಹಬ್ಬಗಳನ್ನು ಆಚರಿಸಲಾಗುವುದು. ಗ್ರಾಮದಲ್ಲಿ ಕೋಟೆ, ಬುರ್ಜುಗಳ ಅವಶೇಷಗಳು ಕಂಡುಬರುತ್ತವೆ.

## ಮೂಗನಹಳ್ಳಿ ಗೊಲ್ಲರಹಟ್ಟಿ

ಮೂಗನಹಳ್ಳಿ ಗೊಲ್ಲರಹಟ್ಟಿಯು ಸಿರಾ ತಾಲ್ಲೂಕಿನ ಕಸಬಾ ಹೋಬಳಿಗೆ ಸೇರಿದ ಒಂದು ಬುಡಕಟ್ಟು ಗ್ರಾಮ. ಸಿರಾ–ಮಧುಗಿರಿ ಮುಖ್ಯರಸ್ತೆಯ ಗುಳಿಗೇನಹಳ್ಳಿಯ ಬಳಿ ಬಲಭಾಗದಲ್ಲಿ ೧ ಕಿಮೀ ದೂರದಲ್ಲಿದ್ದು ಸಿರಾ ತಾಲ್ಲೂಕು ಕೇಂದ್ರದಿಂದ ೧೨ ಕಿಮೀ ದೂರದಲ್ಲಿದೆ. ಇದು ಮೂಗನಹಳ್ಳಿಗೆ ಮಜರೆ ಗ್ರಾಮವಾಗಿರುವುದರಿಂದ ಮೂಗನಹಳ್ಳಿ ಗೊಲ್ಲರಹಟ್ಟಿ ಎಂದು ಕರೆಯಲಾಗುವುದು. ಇದರ ಭೌಗೋಳಿಕ ವ್ಯಾಪ್ತಿ ೭೨೩ ಹೆಕ್ಟೇರ್. ಮುಖ್ಯ ಗ್ರಾಮ ಮೂಗನಹಳ್ಳಿಯೊಂದಿಗೆ ಹಂಚಿಕೆಯಾಗಿದೆ. ಬಯಲುನಾಡಾಗಿದ್ದು ಈ ಪ್ರದೇಶದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಮೊಲ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದಲ್ಲಿ ಕುರಿ, ಮೇಕೆ, ಕೋಳಿ, ಹಸು, ಎತ್ತು, ಎಮ್ಮೆಗಳನ್ನು ಸಾಕಲಾಗುತ್ತದೆ. ಕೋಳಿ ಸಾಕುಪಕ್ಷಿಯಾಗಿದೆ.

ವಾಡಿಕೆ ಮಳೆ ೪೭೧.೬ ಮಿಮೀ ಆಗಿದ್ದು ರೈತಾಪಿ ವರ್ಗಕ್ಕೆ ನೀರು ಸಾಕಾಗುವುದಿಲ್ಲ. ಹಾಗಾಗಿ ಉಪ ನೀರಾವರಿಯಾಗಿ ೫೦ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಗ್ರಾಮದಲ್ಲಿ ೪ ಸಿಸ್ಟರ್ನ್‌ಗಳಿದ್ದು ೨ ಕೈಪಂಪುಗಳಿವೆ. ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಗೊಲ್ಲ ಸಮುದಾಯ ಮಾತ್ರ ವಾಸಿಸುತ್ತಿರುವ ಈ ಗ್ರಾಮದಲ್ಲಿ ಕಾಡುಗೊಲ್ಲರ ೮೬ ಕುಟುಂಬಗಳಿವೆ. ಇವು ಹೆಂಚಿನ, ಶೀಟಿನ ಹಾಗೂ ೨ ಗುಡಿಸಲುಗಳಿವೆ. ೨೮೮ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನವಾದ ಟ್ರ್ಯಾಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಜೋಳ, ಕೊರ್ಲೆ, ಭತ್ತ, ಹುರುಳಿ, ತೊಗರಿ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ, ಹೂ, ತರಕಾರಿ, ರೇಷ್ಮೆ, ಸೂರ್ಯಕಾಂತಿ ಬೆಳೆಗಳಿವೆ. ಶೇಂಗಾ, ಹುಣಸೆಹಣ್ಣು, ಕುರಿ, ಮೇಕೆ ವ್ಯಾಪಾರವಿದೆ. ಸಾರಿಗೆ, ಪೊಲೀಸ್, ಶಿಕ್ಷಣ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರಿದ್ದಾರೆ. ಮಹಿಳೆಯರು ಹೂ ಕಟ್ಟುವುದು, ಹುಣಸೆಹಣ್ಣು, ಹೊಂಗೆ ಬೀಜ ಸಂಗ್ರಹದಂಥ ಗೃಹಕೃತ್ಯದಲ್ಲಿ ತೊಡಗಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ರತ್ನಸಂದ್ರ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿ ಸದಸ್ಯರು ರಾಜ್ಯಶಾಸ್ತ್ರ, ಇಂಗ್ಲೀಷ್, ಸಮಾಜ ವಿಜ್ಞಾನಗಳ ಮೂರು ಸ್ನಾತಕೋತ್ತರ ಪದವೀಧರರೂ ಆಗಿರುವ ಶ್ರೀ ತಮ್ಮಣ್ಣ ಎಂಬುವವರು ಈ ಗ್ರಾಮದವರಾಗಿದ್ದು ರತ್ನಸಂದ್ರ ತಾಲ್ಲೂಕು ಪಂಚಾಯ್ತಿ ಸದಸ್ಯರಾಗಿದ್ದಾರೆ. ೨ ಸ್ತ್ರೀಶಕ್ತಿ ಕೇಂದ್ರಗಳಿದ್ದು ಮಹಿಳಾ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿದೆ. ಒಂದು ಅಂಗನವಾಡಿ ಕೇಂದ್ರ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೨೭ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೫.೨೦ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಜುಂಜಪ್ಪನ ದೇವಾಲಯವಿದ್ದು ದೀಪಾವಳಿಯಲ್ಲಿ ದೀಪೋತ್ಸವ, ದೀಪ ಏರಿಸುವ, ದೀಪ ಇಳಿಸುವುದು, ಜನ್ನಿಗೆ ಮೀಸಲು, ಹಾಲು–ತುಪ್ಪ ಎಂಬ ವಿಶಿಷ್ಟ ಆಚರಣೆಗಳೊಂದಿಗೆ ಒಂದು ವಾರಗಳ ಕಾಲ ಸಂಭ್ರಮದಿಂದ ಆಚರಿಸುತ್ತಾರೆ. ಉಳಿದಂತೆ ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ಮಹಾನವಮಿ, ಶ್ರೀರಾಮ ನವಮಿ ಹಬ್ಬಗಳನ್ನು ಶ್ರದ್ಧೆಯಿಂದ ಆಚರಿಸುತ್ತಾರೆ. ಮಾರಮ್ಮನಿಗೆ ಆರತಿ, ಬಲಿ, ಹರಕೆ ಸಂಪ್ರದಾಯವಿದೆ.

## ಮುಷ್ಟಿಗರಹಳ್ಳಿ

ಮುಷ್ಟಿಗರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೯ ಕಿಮೀ ದೂರದಲ್ಲಿದೆ. ಸಿರಾ–ಅಮರಾಪುರ ಮುಖ್ಯ ರಸ್ತೆಯಲ್ಲಿ

ತೊಗರಿಗುಂಟೆ ಗೇಟ್ ಬಳಿ ಎಡಕ್ಕೆ ತಿರುಗಿ ೧ ಕಿಮೀ ದೂರದಲ್ಲಿ ಈ ಗ್ರಾಮವಿದೆ. ಇದು ಕೊಟ್ಟ ಗ್ರಾಮದ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೯೪.೩೮ ರಷ್ಟಿದೆ. ಕಪ್ಪುಮಿಶ್ರಿತ ಮರಳು ಮಣ್ಣಿನ ಇಲ್ಲಿ ಕುರುಚಲು ಗಿಡ, ತರಿ ಭೂಮಿಯ ಪ್ರದೇಶ ದೊಡ್ಡ ಸೇತುವೆಯ ಹಳ್ಳ ಈ ಗ್ರಾಮದ ಸನಿಹದಲ್ಲೇ ಹರಿಯುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಮೊಲ, ಹಂದಿ ಕಂಡು ಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕು ಪಕ್ಷಿಯಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ಕೋಗಿಲೆ, ಕಾಗೆ, ಗೊರವಂಕ, ಕೊಕ್ಕರೆ, ಹದ್ದು, ಗಿಳಿ, ಗರುಡ, ಗಿಡುಗ ಈ ಬಗೆಯ ಹಕ್ಕಿಗಳು ಕಂಡುಬರುತ್ತವೆ.

ಭಾಗವತ ರಂಗಪ್ಪ ಹೇಳುವಂತೆ ಪಾಳೆಯಗಾರ ರಂಗಪ್ಪನಾಯಕನ ಕಾಲದಲ್ಲಿ ಕಾಳಗದ ಅಂದರೆ ಮುಷ್ಟಿ, ಕುಸ್ತಿ ಕಲಿಗಳನ್ನು ರೂಪಿಸುವ ಹಳ್ಳಿಯಾದುದರಿಂದ ಈ ಗ್ರಾಮಕ್ಕೆ ಮುಷ್ಟಿಗರಹಳ್ಳಿ ಎಂದು ಕರೆಯಲಾಗಿದೆ ಎನ್ನುತ್ತಾರೆ. ಆರಂಭದಲ್ಲಿ ಕುಸ್ತಿಮನೆ ಇದ್ದದ್ದು ನಂತರ ಊರು ಬೆಳೆದಿದೆ ಎಂಬುದು ಇವರ ಅಭಿಪ್ರಾಯವಾಗಿದೆ. ವಾರ್ಷಿಕ ಸರಾಸರಿ ೪೩೪ ಮಿಮೀ ವಾಡಿಕೆ ಮಳೆಯಾಗುತ್ತಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ೨೩ ಕೊಳವೆ ಬಾವಿಗಳಿದ್ದು ಕೃಷಿ ಬದುಕಿಗೆ ಪೂರಕವಾಗಿವೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದ್ದು ೩ ಕಿರು ಟ್ಯಾಂಕ್‌ಗಳಿವೆ. ಒಂದು ಕೈಪಂಪು ಸಹ ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ದೊಂಬಿದಾಸರು, ಬೋವಿ ಜನಾಂಗ ಕಿರು ಸಮುದಾಯವಾಗಿದೆ. ಕನ್ನಡ, ತೆಲುಗು ಇಲ್ಲಿನ ಭಾಷೆಯಾಗಿದೆ. ವಿವಿಧ ಪ್ರಕಾರಗಳ ೫೩ ಮನೆಗಳಿದ್ದು ಕಾಂಕ್ರೀಟ್, ಶೀಟಿನ, ಹೆಂಚಿನ ಮನೆಗಳಿವೆ. ಇವು ಆಶ್ರಯ, ಜನತಾ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೧೬ ಫಲಾನುಭವಿಗಳಾಗಿದ್ದಾರೆ. ೧೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಮಿನಿಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ತೊಗರಿ, ಹುರುಳಿ ಆಹಾರ ಬೆಳೆಗಳು. ತೆಂಗು, ತರಕಾರಿ ಇತರೆ ತೋಟಗಾರಿಕೆ ಬೆಳೆಗಳು. ಹುಣಸೇಹಣ್ಣು, ಶೇಂಗಾ ಇತರೆ ವಾಣಿಜ್ಯ ಬೆಳೆಗಳಾಗಿವೆ. ಇಬ್ಬರು ಶಿಕ್ಷಕರು, ಕಂಡಕ್ಟರ್ ಸೇರಿ ೪ ಜನ ನೌಕರರಿದ್ದಾರೆ. ದೊಂಬಿದಾಸರ ಕುಟುಂಬ ಟೇಪು, ಚೌರಿ, ಅಲಂಕಾರಿಕ ವಸ್ತು ಮಾರಾಟ ಮಾಡುತ್ತಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ಮೇಲುಕುಂಟೆ ತಾಲ್ಲೂಕು ಪಂಚಾಯ್ತಿ ಹಾಗೂ ಕೊಟ್ಟ ಗ್ರಾಮಪಂಚಾಯ್ತಿ ಕೇಂದ್ರಗಳಾಗಿವೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ೨ ಸ್ತ್ರೀಶಕ್ತಿ ಗುಂಪು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪುಗಳನ್ನು ಹೊಂದಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆ ಹೊಂದಿದ್ದು ಶಾಲೆಯಲ್ಲಿ ೯೧ ಮಕ್ಕಳಿದ್ದು ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಶೇ.೫೮.೫ ರಷ್ಟು ಸಾಕ್ಷರತೆ ಇದೆ. ಶಶಿಧರ ಅವರು ಎಪಿಎಂಸಿ ಅಧ್ಯಕ್ಷರಾಗಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ಸಾರಿಗೆ, ಶಿಕ್ಷಣ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರಿದ್ದಾರೆ.

ಮಲ್ಲೇಶ್ವರ, ಮಾರಮ್ಮ, ತಿಮ್ಮಪ್ಪ, ನರಸಿಂಹಸ್ವಾಮಿ ದೇವಾಲಯಗಳಿವೆ. ದಸರಾ ದಿನದಂದು ಈ ದೇವರ ಉತ್ಸವ, ಬನ್ನಿಪೂಜೆ ಇರುತ್ತದೆ. ಮಾರಮ್ಮನ ಊರಹಬ್ಬವಿದ್ದು ಆರತಿ, ಬಾನ, ಬ್ಯಾಟೆಯ ಸಂಪ್ರದಾಯ, ಹರಕೆಗಳಿವೆ. ಗ್ರಾಮದಲ್ಲಿ ಯುಗಾದಿ, ಮಹಾನವಮಿ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಮುಷ್ಟಿಗರಹಳ್ಳಿ ಮೂಡಲಪಾಯ ಯಕ್ಷಗಾನಕ್ಕೆ ಒಳ್ಳೆಯ ಹೆಸರಾಗಿದೆ, ಇಲ್ಲಿನ ದೊಂಬಿದಾಸರ ರಂಗಪ್ಪ ಒಳ್ಳೆಯ ಭಾಗವತರಾಗಿದ್ದು ಗಿರಿಜಾ ಕಲ್ಯಾಣ, ದಕ್ಷಯಾಗ, ಶಿವಜಲಂಧರ, ಲವಕುಶ, ಶತಕಂಠ ರಾಮಾಯಣ ಮೊದಲಾದ ೨೦ ಯಕ್ಷಗಾನ ಪ್ರಸಂಗಗಳನ್ನು ಸಿರಾ ಭಾಗದಲ್ಲಿ ನಿರ್ದೇಶಿಸಿದ ಒಳ್ಳೆಯ ಕಲಾವಿದರು.

**ಮುಷ್ಟಿಗರಹಳ್ಳಿ ಗೇಟ್**

ಮುಷ್ಠಿಗರ ಹಳ್ಳಿ ಗೇಟ್ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೮ ಕಿ.ಮೀ ದೂರದಲ್ಲಿದೆ. ಸಿರಾ–ಅಮರಾಪುರ ಮುಖ್ಯ ರಸ್ತೆಯಲ್ಲಿ ಮುಷ್ಠಿಗರ ಹಳ್ಳಿಗೆ ತಿರುಗುವ ಸ್ಥಳದಲ್ಲಿ ಮೊದಲಿಗೆ ಒಂದು ಪೆಟ್ಟಿಗೆ ಅಂಗಡಿ, ನಂತರ ನರಸಿಂಹಯ್ಯನ ಹೋಟೆಲ್ ಆರಂಭವಾಯಿತು. ಬಹಳ ದಿನ ನರಸಿಂಹಯ್ಯನ ಹೋಟೆಲ್ ಎಂದೇ ಬಸ್ ನಿಲ್ದಾಣವಾಗಿತ್ತು. ಈಗ ೧೬ ಮನೆಗಳು ನಿರ್ಮಾಣ ವಾಗಿ ಗ್ರಾಮದ ಸ್ವರೂಪ ಪಡೆದುಕೊಂಡಿದೆ. ಬಸ್ ನಿಲ್ದಾಣವೂ ಆಗಿದೆ. ತೊಗರಿಗುಂಟೆ, ಹಾಗೂ ಮುಷ್ಠಿಗರ ಹಳ್ಳಿ ಮೂಲದವರು ಬಹುತೇಕ ಇಲ್ಲಿ ನೆಲೆಸಿದ್ದಾರೆ. ಹೆಂಚಿನ, ಶೀಟಿನ ಹಾಗೂ ಕಾಂಕ್ರೀಟ್ ಸ್ವರೂಪದ ೧೬ ಮನೆಗಳಿವೆ. ೧ ಹೋಟೆಲ್, ೧ ಪೆಟ್ಟಿಗೆ ಅಂಗಡಿ ಇವೆ. ೫ ಜನ ಸರ್ಕಾರಿ ನೌಕರರು, ಹಾಗು ಡಾಕ್ಟರ್ ತಿಪ್ಪೇಸ್ವಾಮಿ ಸೇರಿದಂತೆ ೬ ಜನ ಸರ್ಕಾರಿ ನೌಕರರಿದ್ದಾರೆ. ಇದರ ಭೌಗೋಳಿಕ ವಿಸ್ತೀರ್ಣ ವ್ಯಾಪ್ತಿ ೯೪.೩೮ ಕೊಟ್ಟ ಉಪಗ್ರಾಮದಲ್ಲಿ ಸೇರ್ಪಡೆ ಯಾಗಿದೆ.

ಗ್ರಾಮದಲ್ಲಿ ಕುಂಚಿಟಿಗ ದೊಡ್ಡ ಸಮುದಾಯವಾಗಿದ್ದು, ಮುಸ್ಲಿಂ ಕಿರು ಸಮುದಾಯವಾಗಿದೆ. ಸಯ್ಯದ್ ಹುಸೇನ್ ಹಾಗೂ ಆತನ ಮಗ ಚಾಂದ್ ಪಾಷ ಈ ಭಾಗದ ಪ್ರಮುಖ ನಾಟಿ ವೈದ್ಯರಾಗಿ ಹಾವು, ಚೇಳು ಮೊದಲಾದ ವಿಷ ಜಂತುಗಳ ಕಡಿತಕ್ಕೆ ಔಷಧಿ ಚಿಕಿತ್ಸೆ ಪಾರಂಪರಿಕವಾಗಿ ಮಾಡುತ್ತಾ ಬಂದಿದ್ದಾರೆ. ದನಗಳ ಕಾಯಿಲೆಗೆ ಔಷಧಿ ನೀಡುತ್ತಾ ಹೆಸರುವಾಸಿಯಾಗಿರುವುದು ಈ ಗೇಟಿನ ವಿಶೇಷವಾಗಿದೆ. ಶಿಕ್ಷಣ–ಧಾರ್ಮಿಕ ವಿಷಯಗಳಿಗೆ ತೊಗರಿಗುಂಟೆ ಮುಖ್ಯ ಗ್ರಾಮಕ್ಕೆ ಹೋಗುತ್ತಾರೆ. ಅಮ್ಮಾಜಿ ದೇವರ ಉತ್ಸವದಲ್ಲಿ ಈ ಬಡಾವಣೆಯವರ ಪಾತ್ರ ವಿಶೇಷವಾಗಿರುತ್ತದೆ.

## ಮುದ್ದರಂಗನಹಳ್ಳಿ

ಮುದ್ದರಂಗನಹಳ್ಳಿ ಸಿರಾ–ಅಮರಾಪುರ ಮುಖ್ಯ ರಸ್ತೆಯಲ್ಲಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೦ ಕಿಮೀ ದೂರದಲ್ಲಿದೆ. ಇದು ಮೇಲುಕುಂಟೆ ಗ್ರಾಮದ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೦೮.೯೪ ಹೆಕ್ಟೇರ್ ಆಗಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಬಯಲುಸೀಮೆ ಪ್ರದೇಶವಾಗಿದೆ. ಮುದ್ದುರಂಗಪ್ಪ ಎಂಬ ವ್ಯಕ್ತಿಯ ಹೆಸರಿ ನಲ್ಲಿ ಕರೆಯುತ್ತಾರೆ. ಬಯಲು ಪ್ರದೇಶ. ಗಿಡ–ಮರಗಳ ಪೊದೆ ಇದೆ. ಜೊತೆಗೆ ಈ ಗ್ರಾಮದ ದಕ್ಷಿಣಕ್ಕೆ ತೊಗರಿಗುಂಟೆ–ಮುದ್ದರಂಗನಹಳ್ಳಿ ಗೇಟಿನ ನಡುವೆ ರಕ್ಷಿತ ಅರಣ್ಯವಿದ್ದು ನೀಲಗಿರಿ, ಸಾಗುವಾನಿ, ಬೇವು, ಹಲಸು ಮರಗಳನ್ನು ಬೆಳೆಸಲಾಗಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಹಂದಿ, ಜಿಂಕೆ ಕಂಡುಬರುತ್ತವೆ. ಗ್ರಾಮದಲ್ಲಿ ರೈತರು ಕೃಷಿ ಹಾಗೂ ಹೈನುಗಾರಿಕೆಗಾಗಿ ಪ್ರಾಣಿಗಳನ್ನು ಸಾಕಿದ್ದಾರೆ. ಹಸು, ಎಮ್ಮೆ, ಕುರಿ, ಮೇಕೆ, ನಾಯಿ ಸಾಕುಪ್ರಾಣಿಗಳು. ಕೋಳಿ ಸಾಕುಪಕ್ಷಿಯಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ಗಿಳಿ, ಗೂಬೆ, ಹದ್ದು, ಗರುಡ, ಗಿಡುಗ, ಕಾಗೆ, ಕೋಗಿಲೆ, ಕೊಕ್ಕರೆ, ಗೀಜುಗ, ಗೊರವಂಕ, ಬೆಳವ ಪಕ್ಷಿಗಳಾಗಿದೆ. ಕೃಷಿ ಅವಲಂಬಿತ ಬದುಕು. ಮಳೆ ನೀರಿನ ಆಶ್ರಯ. ಕಡಿಮೆ ಮಳೆ. ವಾಡಿಕೆ ಮಳೆ ೪೬೦ ಮಿಮೀ ಆದರೂ ಸಾಕಾಗುವುದಿಲ್ಲ. ಹಾಗಾಗಿ ಕೃಷಿಗೆ ಅರೆನೀರಾವರಿ ೨೮ ಬೋರ್‌ವೆಲ್‌ಗಳನ್ನು ಕೊರೆಸಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಒದಗಿಸಲಾಗುತ್ತಿದೆ. ೩ ಕಿರುಟ್ಯಾಂಕ್ ಗಳು, ೩ ಕೈಪಂಪುಗಳಿವೆ. ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಗೊಲ್ಲ ಸಮುದಾಯ ಚಿಕ್ಕ ಜನಾಂಗಗಳಾಗಿವೆ. ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೯೨ ಮನೆಗಳಿದ್ದು ಅವು ಕಾಂಕ್ರೀಟ್, ಶೀಟಿನ, ಹೆಂಚಿನ ಪ್ರಕಾರದ ಮನೆಗಳು. ೧೯ ಜನ ಆಶ್ರಯ, ಜನತಾ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಫಲಾನುಭವಿಗಳಿದ್ದಾರೆ. ೩೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ಹತ್ತಿ, ರಾಗಿ, ಜೋಳ, ಹಲಸಂದೆ ಬೆಳೆಯುತ್ತಾರೆ. ಒಂದು ಮಿನಿ ಹಾಲಿನ ಕೇಂದ್ರವಿದ್ದು ೧೮೦ ಮೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೆ, ಹೊಂಗೆಬೀಜದ ವ್ಯಾಪಾರವಿದೆ. ಶಿಕ್ಷಕರು, ಕೃಷಿ, ಆರೋಗ್ಯ, ಸಾರಿಗೆ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ಬೀಡಿ ಸುತ್ತುವುದು, ಹೊಂಗೆ ಹುಣಸೆ ಹಣ್ಣಿನ ಸಂಸ್ಕರಣೆಯ ಮಹಿಳಾ ಗೃಹ ಕೈಗಾರಿಕೆ ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಮೇಲ್ಕುಂಟೆ ಗ್ರಾಮ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಈ ಗ್ರಾಮದಲ್ಲಿದ್ದಾರೆ. ೩ ಸ್ತ್ರೀಶಕ್ತಿ ಸಂಘಗಳಿವೆ.೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಸ್ವಾವಲಂಬನೆಗೆ ಪ್ರೇರಕವಾಗಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೩೪ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ,

ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೬೨% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಹೋಟೆಲ್, ಒಂದು ಕಮ್ಮಾರರ ಅಂಗಡಿ, ೫ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದ ಹೊರವಲಯ, ಸಿದ್ದನಹಳ್ಳಿ ದಾರಿಯಲ್ಲಿ ಚಾಮುಂಡೇಶ್ವರಿ ದೇವಾಲಯವಿದೆ. ಶ್ರಾವಣ ಮಾಸದಲ್ಲಿ ವಿಶೇಷ ಅಲಂಕಾರ, ದೇವರ ಉತ್ಸವವಿರುತ್ತದೆ. ಬೆಂಗಳೂರು, ಮೈಸೂರು ಕಡೆಯ ಅಪಾರ ಸಂಖ್ಯೆಯ ಭಕ್ತರಿದ್ದಾರೆ. ಹೋಮ, ಅನ್ನ ಸಂತರ್ಪಣೆ ನಡೆಯುತ್ತದೆ. ಗ್ರಾಮದ ಬಸ್ ನಿಲ್ದಾಣದ ಬದಿಗೆ ಕೆಂಚಾವಧೂತ, ಸಿದ್ಧಾರೂಢರ ಆಶ್ರಮಗಳಿದ್ದು ಸೋಮವಾರ, ಶನಿವಾರ ವಿಶೇಷ ಭಜನೆ, ಸತ್ಸಂಗದ ಕಾರ್ಯಕ್ರಮವಿರುತ್ತದೆ. ಕೊಲ್ಲಾಪುರದಮ್ಮನ ಊರಹಬ್ಬ ವಿಶೇಷವಾಗಿ ನಡೆದು ಆರತಿ, ಹರಕೆ ಸಂಪ್ರದಾಯವಿದೆ.

ಯುಗಾದಿ, ಬಸವಜಯಂತಿ, ಶಿವರಾತ್ರಿ, ದೀಪಾವಳಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕಾಕೋಳು ಕೆಂಚಾವಧೂತ ಆಶ್ರಮ ಹಾಗೂ ಸಿದ್ದಾರೂಢರ ಆಶ್ರಮಗಳಿದ್ದು ಭಜನೆ, ಸತ್ಸಂಗ, ಧಾರ್ಮಿಕ, ಸಾಂಸ್ಕೃತಿಕ ಕೆಲಸಗಳಲ್ಲಿ ಸದಾ ಜಾಗೃತಿ ಮೂಡಿಸುತ್ತಿದೆ.

## ಮೇಲುಕುಂಟೆ

ಮೇಲುಕುಂಟೆ ಸಿರಾ ತಾಲ್ಲೂಕಿನ ಪ್ರೇಕ್ಷಣೀಯ ಸ್ಥಳವಾಗಿದೆ. ಶ್ರೀ ವೇಣುಗೋಪಾಲಸ್ವಾಮಿ ಭವ್ಯ ದೇವಾಲಯ, ರಥೋತ್ಸವ ಕರ್ನಾಟಕ ಮಾತ್ರವಲ್ಲದೆ ನೆರೆಯ ಆಂಧ್ರ, ತಮಿಳುನಾಡು ರಾಜ್ಯಗಳಿಂದಲೂ ಅಪಾರ ಸಂಖ್ಯೆಯಲ್ಲಿ ಭಕ್ತರಿದ್ದಾರೆ. ಹೆಸರಾಂತ ಶ್ರೀವೈಷ್ಣವ ಕೇಂದ್ರವೂ ಆಗಿರುವುದು ಇಲ್ಲಿನ ವಿಶೇಷ.

ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೯ ಕಿಮೀ ದೂರದಲ್ಲಿದ್ದು ಇದೊಂದು ಕಂದಾಯ ಗ್ರಾಮವಾಗಿದೆ. ಸಿರಾ–ಅಮರಾಪುರ ಮುಖ್ಯ ರಸ್ತೆಯಲ್ಲಿ ತೊಗರಿಗುಂಟೆಯಿಂದ ಸ್ವಲ್ಪ ಮುಂದೆ ಮೇಲುಕುಂಟೆ ರಸ್ತೆಯಲ್ಲಿ ತೊಗರಿಗುಂಟೆಯಿಂದ ಸ್ವಲ್ಪ ಮುಂದೆ ಮೇಲುಕುಂಟೆ ಗೇಟಿನಿಂದ ಬಲಭಾಗಕ್ಕೆ ೧.೫ ಕಿಮೀ ದೂರದಲ್ಲಿದೆ. ಸಿರಾ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಗ್ರಾಮ. ತಾಲ್ಲೂಕು ಪಂಚಾಯ್ತಿ, ಗ್ರಾಮ ಪಂಚಾಯ್ತಿ ಕೇಂದ್ರವೂ ಈ ಗ್ರಾಮವಾಗಿದೆ. ಇದರ ವ್ಯಾಪ್ತಿಗೆ ತೊಗರಿಗುಂಟೆ, ಗೊಲ್ಲಹಳ್ಳಿ, ಹುಚ್ಚಗೀರನಹಳ್ಳಿ, ಮುದ್ದರಂಗನಹಳ್ಳಿ, ತಾಡಿ ಪಾಳ್ಯ, ಕುರುಡನಹಳ್ಳಿ, ಬಂದಕುಂಟೆ, ಬಂದಕುಂಟೆ ಗೊಲ್ಲರಹಟ್ಟಿ, ಗೋವಿಂದನಹಳ್ಳಿ, ಹನುಮನಹಳ್ಳಿ, ಹುಚ್ಚಗೀರನಹಳ್ಳಿ, ಮುದ್ದರಂಗನಹಳ್ಳಿ ಈ ಗ್ರಾಮವು ಇದರ ವ್ಯಾಪ್ತಿಗೆ ಒಳಪಟ್ಟಿವೆ. ಈ ಗ್ರಾಮದ ವ್ಯಾಪ್ತಿ ೩೪೮.೬೮ ಹೆಕ್ಟೇರ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದೆ.

ಈ ಗ್ರಾಮದ ದಕ್ಷಿಣಕ್ಕೆ ಊರ ಮೇಲ್ಭಾಗದಲ್ಲಿ ಬಂದಕುಂಟೆ ಅಥವಾ ಕೆರೆಯಿದೆ. ನೀರಿನ ಗರಿಷ್ಠ ಮಟ್ಟ ೭ ಅಡಿಗಳ ಪ್ರಮಾಣದಲ್ಲಿದ್ದು ೮೨.೩೦ ಹೆಕ್ಟೇರ್ ಭೂಪ್ರದೇಶದ ಅಚ್ಚುಕಟ್ಟು ಪ್ರದೇಶ ಹೊಂದಿದೆ. ಊರಿನ ಮೇಗಲಿನ ಕುಂಟೆ ಇರುವುದರಿಂದ ಕೆರೆಯ ಕಾರಣದಿಂದ ಮೇಲುಕುಂಟೆ ಎಂದೂ ಈ ಗ್ರಾಮದ ಹಿಂದಕ್ಕೆ ಚಿಕ್ಕ ಕೆರೆಯಿದ್ದು ಅದರ ಸಮೀಪದಲ್ಲಿ ರಚನೆಯಾಗಿರುವ ಹಳ್ಳಿಗೆ ತೊಗರಿಕುಂಟೆ ಎಂಬ ಹೆಸರನ್ನು ಕರೆದಿರುವುದು ವಿಶೇಷವಾಗಿದೆ. ಕೆರೆಯ ಕಾರಣದಿಂದ ಈ ಗ್ರಾಮಕ್ಕೆ ಈ ಹೆಸರು ಬಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಮೊಲ, ಜಿಂಕೆ, ಹಂದಿ ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಎತ್ತು, ಮೇಕೆಗಳನ್ನು ಸಾಕಲಾಗಿದೆ. ಜೊತೆಗೆ ಈ ಪರಿಸರದಲ್ಲಿ ಕಾಡು ಹಕ್ಕಿಗಳಾದ ಗೊರವಂಕ, ಬೆಳವ, ಗಿಳಿ, ಗಿಡುಗ, ಹದ್ದು, ಗರುಡ, ಗೂಬೆ, ಕೋಗಿಲೆ, ಕಾಗೆ, ಮರಕುಟಿಕ, ಗುಬ್ಬಚ್ಚಿ ಕಂಡುಬರುತ್ತದೆ. ಬಯಲು ಪ್ರದೇಶ. ಬಿಸಿಲು ಅಧಿಕ. ವಾಡಿಕೆ ಮಳೆ ೪೬೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಮಳೆಯಾಶ್ರಿತ ರೈತಾಪಿ ಜನ. ನೀರಿನ ಸೌಕರ್ಯವಿಲ್ಲ. ಕೆರೆ ತುಂಬುವುದೇ ಇಲ್ಲ. ಇಂಥ ಸಂದರ್ಭಕ್ಕೆ ರೈತರು ಬೆಳೆಗಾಗಿ ಉಪನೀರಿನ ಮೊರೆಹೋಗಿ ೬೫ ಕೊಳವೆ ಬಾವಿಗಳನ್ನು ತೆಗೆಸಿದ್ದಾರೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ.

ಗ್ರಾಮದಲ್ಲಿ ೧೩೦ ನಲ್ಲಿಗಳಿದ್ದು ಮನೆಗಳಿಗೂ ನಲ್ಲಿ ಸಂಪರ್ಕ ಹೊಂದಿವೆ. ಮೆರಾಡ ಯೋಜನೆಯಡಿಯಲ್ಲಿ ೧೦ ಲಕ್ಷ ಸಾಮರ್ಥ್ಯದ ನೀರಿನ ಟ್ಯಾಂಕ್ ಇದೆ. ೩ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಕುಂಚಿಟಿಗ, ಮುಸ್ಲಿಂ, ಮಡಿವಾಳ, ಬ್ರಾಹ್ಮಣರು ಕಿರು ಸಮುದಾಯವಾಗಿದೆ. ಕನ್ನಡ, ತೆಲುಗು ಮಾತನಾಡುತ್ತಾರೆ. ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೧೬೮ ಮನೆಗಳಿದ್ದು ಅವು ಕಲ್ಲಿನ, ಕಾಂಕ್ರೀಟ್, ಹೆಂಚಿನ, ಶೀಟಿನ

ಸ್ವರೂಪದವುಗಳಾಗಿದ್ದು ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದವರಿದ್ದಾರೆ. ೮೦ ಮನೆಗಳಲ್ಲಿ ಶೌಚಾಲಯಗಳನ್ನು ಬಳಸುತ್ತಾರೆ. ಗ್ರಾಮದ ಒಟ್ಟು ಜನಸಂಖ್ಯೆ ೯೩೦.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ೩ ಸಾಂಪ್ರದಾಯಿಕ ಎತ್ತಿನ ಬಂಡಿಗಳಿವೆ. ಉಳಿದಂತೆ ಟ್ರ್ಯಕ್ಟರ್, ಟೆಂಪೋ, ಆಟೋ, ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ತೊಗರಿ, ಹುರುಳಿ, ಜೋಳ ಮುಖ್ಯ ಆಹಾರ ಬೆಳೆಗಳು. ತೆಂಗು, ಅಡಿಕೆ, ಸೇವಂತಿಗೆ, ರೇಷ್ಮೆ ತೋಟಗಾರಿಕೆ ಬೆಳೆಗಳು. ಗ್ರಾಮದಲ್ಲಿ ಹಾಲಿನ ಡೈರಿಯಿದ್ದು ೩೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೆಹಣ್ಣು ಪ್ರಮುಖ ವ್ಯಾಪಾರಿ ಸರಕುಗಳಾಗಿವೆ. ಅರಣ್ಯ ಇಲಾಖೆಯಲ್ಲಿ ೪ ಜನ, ಇಬ್ಬರು ಪೊಲೀಸ್, ಕಂದಾಯ ಇಲಾಖೆ ಹಾಗೂ ಸಾರಿಗೆ ಇಲಾಖೆಯಲ್ಲಿ ಇಬ್ಬರು ಸೇರಿ ೯ ಜನ ಸರ್ಕಾರಿ ನೌಕರರಾಗಿದ್ದಾರೆ. ಗ್ರಾಮದಲ್ಲಿ ಬೀಡಿ ಕಟ್ಟುವುದು, ಊಟದ ಎಲೆ ತಯಾರಿಕೆ, ಹೂ ಕಟ್ಟುವುದು ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಮೇಲುಕುಂಟೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವೂ ಆಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ೩ ಜನ ಪಂಚಾಯ್ತಿ ಸದಸ್ಯರಿದ್ದು ಚಂದ್ರಪ್ಪ ಸದ್ಯ ಗ್ರಾಮಪಂಚಾಯ್ತಿ ಉಪಾಧ್ಯಕ್ಷರಾಗಿದ್ದಾರೆ. ಒಂದು ಅಂಚೆ ಕಛೇರಿ, ಕೆನರಾ ಬ್ಯಾಂಕ್, ೩ ಸ್ತ್ರೀಶಕ್ತಿ ಸ್ವಸಹಾಯ ಸಂಘ. ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಇವು ಮಹಿಳಾ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿವೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ಶೇ.೬೨ ರಷ್ಟಿದೆ. ಒಂದು ಗ್ರಾಮ ಪಂಚಾಯ್ತಿ ಗ್ರಂಥಾಲಯ, ಪಶುವೈದ್ಯ ಆಸ್ಪತ್ರೆ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೪ ಹೋಟೆಲ್, ೮ ಪೆಟ್ಟಿಗೆ ಅಂಗಡಿಗಳಿವೆ. ಮೂರು ವೀರಗಲ್ಲುಗಳಿವೆ. ಒಂದು ಶಾಸನ ವೀರಗಲ್ಲು ಇದೆ. ಉಳಿದಂತೆ ೫ ಶಾಸನಗಳು ಈ ಗ್ರಾಮದ ಹೆಸರಿನಲ್ಲಿ ಪ್ರಕಟವಾಗಿದ್ದು ಸಿರಾ ಶಾಸನ ೮೪ ರ ಮೇಲುಕುಂಟೆ ಪ್ರಕಾರ ಹೇಮಾವತಿಯ ಗುಣೇಹಳ್ಳಿಯ ಗೌಡಿಕೆ ಇತ್ಯರ್ಥವಾಗಿದ್ದು ಗುಣೇಹಳ್ಳಿಯ ಗೌಡಿಕೆಯು ಆನೆಗೊಂದಿ ಗುಣೇಹಳ್ಳಿಯ ಚಿಕ್ಕಕ್ಯಾತೇಗೌಡರ ಮೊಮ್ಮಗ ಕರಿಗುಂಟೆ ಕರಿನಾಗಪ್ಪನಿಗೆ ಸಲ್ಲಬೇಕೆಂದು ಕ್ರಿ.ಶ.೧೬೧೧ ರಲ್ಲಿ ಶಾಸನ ಹಾಕಿಸಲಾಗಿದೆ. ಮತ್ತೊಂದು ಸಿರಾ ಶಾಸನ ೮೮ರ ಪ್ರಕಾರ ಅಕ್ಕಸಾಲಿಗನೊಬ್ಬ ಮಡಿದಾಗ ಆತನ ಮಗ ೧೨೫೩ ರಲ್ಲಿ ವೀರಗಲ್ಲು ಶಾಸನ ಹಾಕಿದ ವಿವರ ಅಸ್ಪಷ್ಟವಾಗಿದೆ. ಮತ್ತೊಂದು ಶಾಸನ ಸಿರಾ ಶಾಸನ ೮೭ ರಲ್ಲಿ ದೇಶಪಾಂಡೆ ಎಂಬುವವರು ಗೌಡ, ಶಾನುಭೋಗ, ಕೈವಾಡದವರಿಗೆ ಮಾನ್ಯ ಮಾಡಿಕೊಟ್ಟ ವಿವರ ಅಸ್ಪಷ್ಟವಾಗಿದೆ. ಉಳಿದ ೨ ಶಾಸನಗಳು ಇಲ್ಲಿನ ಆದಿಕರ್ನಾಟಕ ಜನಾಂಗದ ಲಕ್ಷ್ಮೀ ದೇವಾಲಯದ ಒಳಾಂಗಣ ಕಲ್ಲಿನಲ್ಲಿ ಕೊರೆಸಿದ್ದು ಪೂರ್ಣವಾಗಿ ಅಸ್ಪಷ್ಟವಾಗದೆ ಗರಾಮದಲ್ಲಿ ವೇಣುಗೋಪಾಲಸ್ವಾಮಿ, ಗುಡ್ಡದ ರಂಗನಾಥ, ಲಕ್ಷ್ಮಿ ದೇವಸ್ಥಾನ ಹಾಗೂ ಶನಿದೇವರ ದೇವಾಲಯಗಳಿವೆ. ಗೋಪಾಲಕೃಷ್ಣ ದೇವಾಲಯ ೪ ಎಕರೆ ಪ್ರದೇಶದಲ್ಲಿ ವಿಶಾಲವಾಗಿದ್ದು ರಾಮಾನುಜಾಚಾರ್ಯರ ಶಿಷ್ಯರಾದ ವಾಮನಾಚಾರ್ಯರು ಪ್ರತಿಷ್ಠಾಪನೆ ಮಾಡಿರುವ ಗೋಪಾಲ ಕೃಷ್ಣಮೂರ್ತಿ ಆಕರ್ಷಕವಾಗಿದೆ. ವೈಕುಂಠ ದರ್ಶನ, ನವಗ್ರಹ, ಆಂಜನೇಯ ದೇವಾಲಯಗಳು ಈ ಸಂಕೀರ್ಣದಲ್ಲಿದೆ. ಭೋಜನಶಾಲೆ, ಮಂಟಪ, ನೀರಿನ ಟ್ಯಾಂಕ್, ಹಾಸು ಬಂಡೆ, ಕಾಂಪೌಂಡ್, ಮೇಲೆ ಶೀಟಿನ ಹೊದ್ದಿಕೆ ಸುರಕ್ಷಿತವಾಗಿದೆ. ದೇವಾಲಯದ ಪ್ರಾಂಗಣ ದ್ವಾರ ಬಾಗಿಲಲ್ಲಿ ಅರ್ಚಕರ ಮನೆಯಿದ್ದು ಪ್ರಾಚೀನ ಸ್ವರೂಪದ ಕಲಾಕೃತಿ, ತೊಲೆ, ಕಂಬಸಾಲು, ಮಂಟಪ, ದ್ವಾರಮಂಟಪಗಳನ್ನು ಹೊಂದಿ ೧೨ ಅಂಕಣದ ಉತ್ತಮ ಮರಗಳಿಂದ ನಿರ್ಮಿಸಿದೆ. ಫೆಬ್ರವರಿಯಲ್ಲಿ ಶ್ರೀ ಗೋಪಾಲಕೃಷ್ಣ ದೇವರ ರಥೋತ್ಸವ, ಹೂವಿನ ತೇರು, ವಿವಿಧ ವಾನಗಳು ಒಂದು ವಾರಗಳ ಕಾಲ ವಿಜೃಂಭಣೆಯಿಂದ ಜರುಗುತ್ತವೆ.

ಸಂಕ್ರಾಂತಿ, ಯುಗಾದಿ, ಶಿವರಾತ್ರಿ, ದಸರಾ, ಗಣೇಶನ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ವಾಲ್ಮೀಕಿ ಯುವಕ ಸಂಘವಿದೆ. ಸಿರಾ ಮೇಲುಕುಂಟೆ, ಬರಗೂರು ಮಾರ್ಗವಾಗಿಯೂ ರಸ್ತೆ ಸಂಪರ್ಕ ವಾಹನ ಸೌಕರ್ಯವಿದೆ.

ಈ ಗ್ರಾಮಗ ಗೇಟಿನ ಬಳಿ ಸಿರಾ-ಅಮರಾಪುರ ರಸ್ತೆಯ ಎಡಬದಿಗೆ ಮೇಲುಕುಂಟೆ ಗ್ರಾಮಕ್ಕೆ ಸೇರಿದ ರಕ್ಷಿತ ಅರಣ್ಯ ೪೦

ಎಕರೆ ಪ್ರದೇಶದಲ್ಲಿದ್ದು ತೇಗ, ನೀಲಗಿರಿ, ಹೊನ್ನೆ, ಮಾವು, ಬೇವು, ನೀಲಗಿರಿ, ಜಾಲಿ, ಹುಣಸೆ, ಹೊಂಗೆ, ಹರ್ಕ್ಯುಲಸ್ ಜಾತಿಯ ಸಸ್ಯಗಳನ್ನು ಬೆಳೆಸಲಾಗಿದೆ. ಇದೊಂದು ಅರಣ್ಯ ಪ್ರದೇಶವಾಗಿದ್ದು ಆಕರ್ಷಕ ಸಸ್ಯತೋಟವಾಗಿದೆ.

## ಮೇಲುಕುಂಟೆ ಗೊಲ್ಲರಹಟ್ಟಿ

ಮೇಲುಕುಂಟೆ ಗೊಲ್ಲರಹಟ್ಟಿಯು ಮೇಲುಕುಂಟೆ ಗ್ರಾಮದ ಪಶ್ಚಿಮಕ್ಕೆ ಅರ್ಧ ಕಿಮೀ ದೂರದಲ್ಲಿರುವ ಮೇಲುಕುಂಟೆಯ ಮಜರೆ ಗ್ರಾಮವಾಗಿದೆ. ಈ ಗ್ರಾಮದ ಭೌಗೋಳಿಕ ವ್ಯಾಪ್ತಿ ೬೪.೬೮ ಹೆಕ್ಟೇರನಷ್ಟಿದೆ. ಕಾಡುಗೊಲ್ಲರು ವಾಸಿಸುತ್ತಿರುವುದರಿಂದ ಗೊಲ್ಲರಹಟ್ಟಿ, ಮೇಲುಕುಂಟೆಗೆ ಹೊಂದಿಕೊಂಡಿರುವುದರಿಂದ ಮೇಲುಕುಂಟೆ ಗೊಲ್ಲರಹಟ್ಟಿ ಎಂದು ಕರೆಯಲಾಗಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಪೊದೆ, ಗಿಡ, ಮರಗಳಿಂದ ಕೂಡಿದ ಪ್ರದೇಶವಾಗಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಹಂದಿ ಕಂಡುಬರುತ್ತವೆ. ಗ್ರಾಮದಲ್ಲಿ ಸಾಕುಪ್ರಾಣಿಗಳಾದ ಎತ್ತು, ಹಸು, ಕುರಿ, ಮೇಕೆ ಅಧಿಕವಾಗಿವೆ. ಕೋಳಿ ಸಾಕು ಪಕ್ಷಿಯಾಗಿದೆ. ಗಿಳಿ, ನವಿಲು, ಕೋಗಿಲೆ, ಗೊರವಂಕ, ಗೀಜಗ, ಕೊಕ್ಕರೆ, ಹದ್ದು, ಗರುಡ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ವಾಡಿಕೆ ಮಳೆ ೪೭೧.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮಕ್ಕೆ ಪ್ರತ್ಯೇಕ ಕೆರೆ ಇಲ್ಲ. ಮೇಲುಕುಂಟೆ ಕೆರೆ ಗ್ರಾಮದ ಪಶ್ಚಿಮಕ್ಕೆ ಇದ್ದು ಇದರ ನೀರು ಕುರಿ, ದನಗಳಿಗೆ ಬಳಕೆಯಾಗುತ್ತಿದೆ. ಕೃಷಿಗೆ ಈ ಗ್ರಾಮದವರು ೧೩ ಕೊಳವೆ ಬಾವಿ ಕೊರೆಸಿದ್ದು ತೋಟದ ಬೆಳೆಗಳಿಗೆ ನೀರಿನ ಆಶ್ರಯ ಮಾಡಿಕೊಂಡಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೪ ಕಿರು ಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ.

ಸಾಮಾಜಿಕ ರಚನೆ ಪೂರ್ಣವಾಗಿ ಕಾಡುಗೊಲ್ಲರಿಂದ ರಚನೆಯಾಗಿದೆ. ವಿವಿಧ ಪ್ರಕಾರಗಳ ೪೫ ಮನೆಗಳಿವೆ. ಇಲ್ಲಿ ಹೆಂಚಿನ, ಶೀಟಿನ ಸ್ವರೂಪದವುಗಳಾಗಿವೆ. ಆಶ್ರಯ, ಜನತಾ, ಇಂದಿರಾ ಆವಾಸ್ ವಸತಿ ಯೋಜನೆಯ ೯ ಫಲಾನುಭವಿಗಳಿದ್ದು ೧೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಆಧುನಿಕ ವಾಹನಗಳಾದ ಟ್ರ್ಯಕ್ಟರ್, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ತೊಗರಿ, ಹುರುಳಿ ಆಹಾರ ಬೆಳೆಗಳು. ರೇಷ್ಮೆ, ಸೂರ್ಯಕಾಂತಿ, ಅಡಿಕೆ, ತೆಂಗು ತೋಟಗಾರಿಕೆ ಬೆಳೆಗಳು. ಶೇಂಗಾ, ಕುರಿ ವ್ಯಾಪಾರ ಹಾಗೂ ಹುಣಸೆಹಣ್ಣಿನ ವ್ಯಾಪಾರವಿದೆ. ಪೊಲೀಸ್ ಹಾಗೂ ಶಿಕ್ಷಕರು ಹೀಗೆ ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ, ಮೇಲ್ಕುಂಟೆ ಗ್ರಾಮ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ೧ ಸ್ತ್ರೀಶಕ್ತಿ ಸಂಘ, ಅಂಗನವಾಡಿ ಕೇಂದ್ರವಿದ್ದು ೨೭ ಮಕ್ಕಳಿದ್ದಾರೆ. ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸಲಾಗುತ್ತದೆ. ಶೇ.೬೨ ರಷ್ಟು ಸಾಕ್ಷರತೆ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಗೂಡಂಗಡಿಗಳಿವೆ. ಗ್ರಾಮದಲ್ಲಿ ಒಂದು ಬಿಲ್ಪತ್ರೆ ಕಟ್ಟೆಯಿದ್ದು ಗದ್ದಿಗೆ ಎಂದು ಪೂಜಿಸಲಾಗುವುದು. ಗೋಪಾಲ ಕೃಷ್ಣನಿಗೆ ಆರತಿ ಮಾಡುತ್ತಾರೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮದ್ದೇವಹಳ್ಳಿ

ಮದ್ದೇವಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ ದೂರದಲ್ಲಿದ್ದು, ಸಿರಾ ಅಮರಾಪುರ ರಸ್ತೆಯ ಕೆರೆಯಾಗಲ ಹಳ್ಳಿಯಿಂದ ಬಲಭಾಗಕ್ಕೆ ಒಂದು ಕಿ.ಮೀ. ದೂರದಲ್ಲಿದೆ. ಇದೊಂದು ನಾದೂರಿನ ಉಪಗ್ರಾಮವಾಗಿದ್ದು, ಈ ಗ್ರಾಮದ ಆದಿದೇವತೆ ಮುದ್ದಮ್ಮ. ಆದುದರಿಂದ ಈ ಗ್ರಾಮಕ್ಕೆ ಮದ್ದವ್ವನಹಳ್ಳಿ ಎಂದು ಅದೇ ಆಡು ಮಾತಿನಲ್ಲಿ ಮದ್ದೇವಳ್ಳಿ ಆಗಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೨೫೪೩.೮೪ ಹೆಕ್ಟೇರ್ ವಿಸ್ತೀರ್ಣದ ನಾದೂರು ಗ್ರಾಮದೊಂದಿಗೆ ಹಂಚಿಕೆಯಾಗಿದೆ. ಜೊತೆಗೆ ಈ ಗ್ರಾಮದಲ್ಲಿ ೪೫ ಮನೆಗಳಿದ್ದು, ಕುಂಚಿಟಿಗರು ದೊಡ್ಡ ಸಮುದಾಯದವರು, ಕುರುಬರು ಸಣ್ಣ ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ಕಾಂಕ್ರೀಟ್ ಹಾಗೂ ಹೆಂಚಿನ ೪೫ ಮನೆಗಳಿದ್ದು, ಆಶ್ರಯ, ಜನತಾ ಯೋಜನೆಯ ಫಲಾನುಭವಿಗಳು ಇದ್ದಾರೆ. ೧೨ ಮನೆಗಳಲ್ಲಿ ಶೌಚಾಲಯಗಳ ಬಳಕೆ ಇದೆ. ೨೫೬ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ, ಅನ್ನ ಗ್ರಾಮದ ಮುಖ್ಯ ಆಹಾರವಾಗಿದ್ದು, ಉಪ್ಪಿಟ್ಟು, ರೊಟ್ಟಿ, ಚಿತ್ರಾನ್ನ ಉಪ ಆಹಾರವಾಗಿದೆ. ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹಾಗೂ ಹೋಳಿಗೆ ಊಟದ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಕೃಷಿಕರಾದ ಇಲ್ಲಿನ ಜನ ಟ್ರ್ಯಾಕ್ಟರ್, ಟೆಂಪೋ, ಸ್ಕೂಟರ್ ಬಳಸುತ್ತಾರೆ.

ಶೇಂಗಾ ಮುಖ್ಯ ವ್ಯಾಪಾರಿ ಬೆಳೆ. ರೇಷ್ಮೆ ಬೆಳೆಯೂ ಇದ್ದು ಮುಖ್ಯ ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ ಬಳಕೆಯಲ್ಲಿದೆ. ಹೆಂಗಸರು ಬೀಡಿ ಸುತ್ತುವುದು, ಟೈಲರಿಂಗ್ ಉಪಕಸುಬಾಗಿದೆ. ಮೂವರು ಸರ್ಕಾರಿ ನೌಕರರಿದ್ದಾರೆ. ವೀರಜುಂಜಪ್ಪ, ಸಬ್‌ಇನ್ಸ್‌ಪೆಕ್ಟರ್, ನಾಗೇಂದ್ರ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುವುದು ಈ ಗ್ರಾಮದ ವಿಶೇಷ. ಈ ಗ್ರಾಮದ ಯುವಕ ಮದ್ದೇನಳ್ಳಿ ರಾಮಕೃಷ್ಣ ಪ್ರಗತಿ ಪರ ರೈತರಾಗಿದ್ದು, ಕರ್ನಾಟಕ ಸರ್ಕಾರದ ಕೃಷಿ ಯೋಜನೆಯ ಅಡಿಯಲ್ಲಿ ಇತ್ತೀಚೆಗೆ (೨೦೧೧-೧೨) ಚೈನಾ, ಜಪಾನ್, ಥೈಲೆಂಡ್ ದೇಶಕ್ಕೆ ರೈತ ತರಬೇತಿ-ವೀಕ್ಷಣೆಗಾಗಿ ಪ್ರವಾಸ ಹೋಗಿದ್ದ ಹಿರಿಮೆ ರಾಮಕೃಷ್ಣ ಅವರದು.

ಸಿರಾ ವಿಧಾನಸಭೆ, ಚಿತ್ರದುರ್ಗ ಲೋಕಸಭೆ, ನಾದೂರು ಜಿಲ್ಲಾ ಪಂಚಾಯಿತಿ, ಹೆಂದೊರೆ ತಾಲ್ಲೂಕು ಪಂಚಾಯಿತಿ ತಾಲ್ಲೂಕ, ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಹಿರಿಯ ಪಾಠಶಾಲೆ, ಅಂಗನವಾಡಿ ಕೇಂದ್ರಗಳಿದ್ದು, ೪೭ ಮಕ್ಕಳು, ಇಬ್ಬರು ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿದ್ದು, ಶಾಲಾ ಕಾಂಪೌಂಡ್ ಹೊಂದಿದೆ.

ಗ್ರಾಮದಲ್ಲಿ ವೀರನಾಗಮ್ಮ ಗುಡಿ ಇದ್ದು, ಮುತ್ತರಾಯ ಹಾಗೂ ಭೂತಪ್ಪ ದೇವರುಗಳ ಪೌಳಿಗಳಿವೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಈ ಗ್ರಾಮದ ಕುರುಬರ ರಂಗಪ್ಪ ನಾಟಿ ಔಷಧಿಯ ಪಂಡಿತನಾಗಿದ್ದು, ವಾತ, ಉಷ್ಣ, ಕಫ, ಪ್ರಾಣಿ ಸಂಬಂಧಿ ಔಷಧೋಪಚಾರ ಮಾಡುತ್ತಾರೆ.

ಇತರ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಸೌಲಭ್ಯ ಪಡೆಯುತ್ತಿದ್ದು ಆಶ್ರಯ, ಹಾಗೂ ಜನತಾ ಯೋಜನೆಯ ಫಲಾನುಭವಿಗಳು ಇದ್ದಾರೆ. ಒಂದು ಪೆಟ್ಟಿಗೆ ಅಂಗಡಿ ಇದೆ. ಅರಳಿಯ ಕಟ್ಟೆ ಇದ್ದು, ಪೂಜೆಗೆ ಒಳಗಾಗಿದೆ.

ಮುದ್ದಮ್ಮ ಗ್ರಾಮದೇವತೆಯಾಗಿದ್ದು, ಊರಹಬ್ಬದ ಮಾದರಿಯಲ್ಲಿ ಉತ್ಸವ, ಮಡೆ, ಬಾನ, ದೇವರ ಉತ್ಸವ ಇದ್ದು, ಕೊನೆಯ ದಿನ ಬಾಡೂಟದ ವಿಶೇಷತೆ ಇರುತ್ತದೆ.

ದೀಪಾವಳಿ, ಯುಗಾದಿ, ಗೌರಿಗಣೇಶ, ಶಿವರಾತ್ರಿ ಮೊದಲಾದ ಎಲ್ಲಾ ಹಿಂದೂ ಹಬ್ಬಗಳನ್ನು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ.

## ಮದ್ದಕ್ಕನಹಳ್ಳಿ

ಮದ್ದಕ್ಕನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಸಿರಾ-ತಾವರೆಕೆರೆ ರ್‍ಯಾಜ್ಯ ಹೆದ್ದಾರಿಯಲ್ಲಿ ತಾವರೆಕೆರೆಯಿಂದ ೨ ಕಿ.ಮೀ. ಉತ್ತರ ದಿಕ್ಕಿಗಿದೆ. ಬಯಲು ಸೀಮೆಯ ಕಲ್ಲಿನ ಗಣಿ ಎಂದೇ ಹೆಸರು ವಾಸಿಯಾಗಿರುವ ಈ ಗ್ರಾಮದ ಪಶ್ಚಿಮಕ್ಕೆಮ ಶುದ್ಧ ಬಿಳಿಯ, ಒಂದು ಬಗೆಯ ಬಿರುಸಾದ ಬಂಡೆ ಇದ್ದು, ಅದರಿಂದ ಹಾಸು ಕಲ್ಲು, ವಿನ್ಯಾಸದ ಕಲ್ಲು, ದೊಡ್ಡ ದೊಡ್ಡ ಕೋರೆಗಳನ್ನು ತೆಗೆದು, ಬೆಂಗಳೂರು, ಮಂಗಳೂರು, ಮೈಸೂರು, ಇಳಕಲ್ಲು, ಅನಂತಪುರ, ಹಿಂದೂಪುರ ಸೇರಿದಂತೆ ದೇಶ -ವಿದೇಶಗಳಿಗೆ ಇಲ್ಲಿನ ಕಲ್ಲು ರಫ್ತಾಗುತ್ತಿದೆ. ೩ ಸಾವಿರ ಗಣಿ ಉದ್ಯಮಿಗಳು ಬೇರೆ ಬೇರೆ ಹಂತಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಮದ್ದಕ್ಕನಹಳ್ಳಿ ಕಲ್ಲು ಎಂದೇ ಖ್ಯಾತನಾಗಿ ಗ್ರ್ಯಾನೈಟ್ ವ್ಯಾಪಾರದಲ್ಲಿ ಮುಂಚೂಣಿಯಲ್ಲಿದೆ.

ಕ್ರಿ.ಶ. ೧೫೪೭ ರ ಸಿರಾ ಶಾಸನ ೫೪ ರಲ್ಲಿ ಈ ಗ್ರಾಮದ ಉಲ್ಲೇಖವಿದ್ದು ಇದರಲ್ಲಿ ಈ ಗ್ರಾಮವನ್ನು ಹೊಳಕಲ್ಲು ಎಂದು ಉಲ್ಲೇಖಿಸಿದೆ. ಹರತಿಯ ಹೊಟ್ಟೆ ಒಡೆಯನಾಯಕ ಗುರುಕಲ್ಲಪ್ಪ ಎಂಬುವವನಿಗೆ ಭೂಮಿಯನ್ನು ಮಾನ್ಯ ಮಾಡಿದ ಉಲ್ಲೇಖವಿದೆ. ಮದಕ್ಕ, ಮದ್ದಮ್ಮ ಎಂಬ ಈ ಹೆಸರು ಮೂಲ ಸ್ತ್ರೀ ಮೂಲದಿಂದ ಬಂದಿದ್ದು, ಕಾಡುಗಲ್ಲು ಸೀಳಿ, ಕಟ್ಟಡ ಮೊದಲಾದ ಕಾರ್ಯಗಳಿಗೆ ಬಳಸುತ್ತಿದ್ದ, ಕಲ್ಲು ವಡ್ಡರು 'ಮದ್ದಕ್ಕ' ಎಂದು ಕರೆದಿರಬಹುದೇ? ಕುಂಚಿಟಿಗರ ಒಂದು ಬೆಡಗಾದ 'ಕಂಬಳಿ'ಗೋತ್ರದವರು ವಿಶೇಷವಾಗಿ ಈ ದೇವಸ್ಥಾನಕ್ಕೆ ನಡೆದುಕೊಳ್ಳುತ್ತಾರೆ. ಅಂತೆಯೇ ಮದ್ದನಹಳ್ಳಿ- ಆ ಸುತ್ತಿನವರೂ ಈ ದೇವತೆಗೆ ಒಕ್ಕಲುಗಳಾಗಿದ್ದಾರೆ. ಸಿರಾ ಶಾಸನವೊಂದರ ಉಲ್ಲೇಖದಲ್ಲೂ ಮದ್ದಕ್ಕನ ಹಳ್ಳಿಯರ ಪ್ರಸ್ತಾಪವಿದ್ದು, ಕ್ರಿ.ಶ. ೧೬ ನೇ ಶತಮಾನದ ಸಂದರ್ಭದಲ್ಲಿ ಹರ್ತಿ ಪಾಳೆಯಗಾರರು-ಮದ್ದಕ್ಕನಹಳ್ಳಿ ಮದ್ದಮ್ಮ ದೇವಸ್ಥಾನಕ್ಕೆ ದತ್ತಿ ಕೊಟ್ಟ ಸಂಗತಿ ಪ್ರಕಟವಾಗುತ್ತದೆ. ಆದುದರಿಂದ ಇದೊಂದು ಪ್ರಾಚೀನ ದೈವವಾಗಿದ್ದು, ಈ ದೇವತೆಯ ಹೆಸರಿನಲ್ಲಿಯೇ ಮದ್ದಕ್ಕನಹಳ್ಳಿ ಎಂಬ ಊರು ಸ್ಥಾಪಿತವಾಗಿದೆ.

ಮಾಲಿ ಮದ್ದಣ್ಣ - ಮಾಲಿ ಮರಿಯಪ್ಪ ಪಿ.ಎಂ. ರಂಗನಾಥಪ್ಪ ಮಾಲಿ ವಂಶದವರೂ ಈ ದೇವತೆಯ ವಕ್ಕಲುಗಳಾಗಿದ್ದು, ಕರ್ನಾಟಕ ಶಾಸನ ಸಭೆಯ ಸದಸ್ಯರೂ ಆಗಿರುವುದು ವಿಶೇಷವಾಗಿದೆ. ಈ ಮಾಲಿ ವಂಶಸ್ಥರು ಮೂಲತಃ ವ್ಯಾಪಾರ ಮುಂತಾದ ಕಾರಣಗಳಿಂದ ಹೊರಗಡೆಯಿಂದ (ಪುಣೆ) ಬಂದು ಸಿರಾ ಸೀಮೆಯಲ್ಲಿ

ನೆಲೆಸಿದರೆಂಬ ಐತಿಹ್ಯವಿದೆ. ಆದುದರಿಂದ ಅವರೂ ಈ ದೇವಿಯ ಒಕ್ಕಲಾಗಿರುವುದನ್ನು ಗಮನಿಸಿದರೆ, ಇದೊಂದು ಪ್ರಮುಖ ಶಕ್ತಿ ದೇವತೆಯಾಗಿದ್ದು, ಹಂತ ಹಂತವಾಗಿ ತನ್ನ ಒಕ್ಕಲನ್ನು ವಿಸ್ತರಿಸಿಕೊಂಡಿರುವುದು ವ್ಯಕ್ತವಾಗುತ್ತದೆ.

ಮದ್ದಕ್ಕನಹಳ್ಳಿ ಒಂದು ಸಂಮಿಶ್ರ ಗ್ರಾಮ. ಕಂದಾಯ ಗ್ರಾಮ ಒಂದು ಗೊಲ್ಲರಹಟ್ಟಿಯನ್ನು ಮಜರೆ ಗ್ರಾಮವನ್ನಾಗಿಸಿ ಕೊಂಡಿದೆ. ಗ್ರಾಮದಲ್ಲಿ ಬೋವಿ ಜನಾಂಗ ದೊಡ್ಡ ಸಮುದಾಯವಾಗಿದ್ದು, ಕುಂಚಿಟಿಗರು ಸಣ್ಣ ಸಮುದಾಯ ವಾಗಿದೆ. ಉಳಿದಂತೆ ಆದಿ ದ್ರಾವಿಡ, ಆದಿ ಕರ್ನಾಟಕ, ಮಡಿವಾಳರು, ಭಜಂತ್ರಿ ಈ ಕುಟುಂಬಗಳು ವಾಸಿಸುತ್ತಿದ್ದು, ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೨೯೭.೭೩ ಆಗಿದ್ದು, ಮದ್ದಕ್ಕನ ಹಳ್ಳಿಯಲ್ಲಿ ೩೦೩ ಮನೆಗಳಿದ್ದು, ಒಟ್ಟು ಜನಸಂಖ್ಯೆ ೧೬೧೧ ಆಗಿದೆ. ಇವುಗಳಲ್ಲಿ ಕಾಂಕ್ರೀಟ್, ಕಡಪಕಲ್ಲಿನ ಮನೆ, ಮಣ್ಣಿನ ಮನೆ, ಮೂರು ಗುಡಿಸಲುಗಳೂ ಸೇರಿವೆ. ಇಂದಿರಾ ಆವಾಸ್, ಜನತಾ, ಅಂಬೇಡ್ಕರ್ ವಸತಿ ಯೋಜನೆಯೂ ಸೇರಿದಂತೆ ಭಾಗ್ಯ ಜ್ಯೋತಿ ವಿದ್ಯುತ್ ದೀಪದ ಸೌಕರ್ಯ ಪಡೆದ ಫಲಾನುಭವಿಗಳು ಇದ್ದಾರೆ.

ರಾಗಿ ಮುದ್ದೆ, ಅನ್ನ ಈ ಗ್ರಾಮದ ಮುಖ್ಯ ಆಹಾರ. ವಿಶೇಷವಾಗಿ ಬಾಡೂಟ, ಮದ್ಯ ಸೇವನೆ ಈ ಗ್ರಾಮದಲ್ಲಿ ಇಂದಿಗೂ ವ್ಯಾಪಕವಾಗಿದೆ. ತುಮಕೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಮದ್ಯ ವ್ಯಸನಿಗಳೂ ಸೇರಿದಂತೆ, ಬಾಲ ವಿಧವೆಯರನ್ನು ಹೊಂದಿರುವ ಸ್ಥಳ ಎಂಬುದೂ ಈ ಗ್ರಾಮದ ವಿಶೇಷವಾಗಿದೆ. ಉಪ ಆಹಾರವಾಗಿ ಚಪಾತಿ, ದೋಸೆ, ಉಪ್ಪಿಟ್ಟು ಮೊದಲಾದ ತಿಂಡಿ ಪದಾರ್ಥವಾಗಿ ಬಳಸುತ್ತಾರೆ. ಸದ್ಯ ೬೫ ಬೃಹತ್ ಲಾರಿಗಳು, ೮೦ ಟ್ರ್ಯಾಕ್ಟರ್‌ಗಳು, ೧೦೦ ದ್ವಿಚಕ್ರ ವಾಹನಗಳು ಈ ಗ್ರಾಮದಲ್ಲಿ ಕಂಡು ಬರುತ್ತಿದ್ದು, ಬಂಡೆ ವ್ಯಾಪಾರ ವ್ಯವಹಾರಗಳಿಗೆ ಬಳಸಲಾಗುತ್ತಿದೆ.

ರಾಗಿ, ಶೇಂಗಾ, ಸೂರ್ಯಕಾಂತಿ, ತೊಗರಿ, ಹುರುಳಿ, ಹತ್ತಿ ಈ ಗ್ರಾಮದ ಪ್ರಮುಖ ಬೆಳೆಗಳು. ವಿರಳವಾಗಿ ತೆಂಗು, ಅಡಿಕೆ, ಹತ್ತಿ, ಹುಣಶೆ ಬೀಜ, ಹೊಂಗೆ, ಬೇವು, ಹಿಪ್ಪೆ ಬೀಜಗಳ ವ್ಯಾಪಾರವನ್ನು ಕಾಣಬಹುದು. ತುಮಕೂರು ಜಿಲ್ಲೆಯ ಪ್ರಮುಖ ಗ್ರಾನೈಟ್ ಕಲ್ಲು ವ್ಯಾಪಾರ ಈ ಗ್ರಾಮದ ವಿಶೇಷ.

ಉಪನ್ಯಾಸಕ, ಕಮರ್ಶಿಯಲ್ ಇನ್ಸ್‌ಪೆಕ್ಟರ್, ಶಿಕ್ಷಕರು, ಡ್ರೈವರ್ ಸೇರಿದಂತೆ ಒಟ್ಟು ಹತ್ತು ಜನ ಸರ್ಕಾರಿ ನೌಕರರಿದ್ದು, ಅವರೆಲ್ಲರೂ ಗ್ರಾಮದಿಂದ ಹೊರಗೆ ನೆಲೆಸಿದ್ದಾರೆ. ಬಹುತೇಕ ಗಂಡಸರು ಬಂಡೆ ಕೆಲಸಕ್ಕೆ ಹೋಗುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯತ್ ಹಾಗೂ ಗೌಡಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಈ ಗ್ರಾಮದಲ್ಲಿ ಅಂಗನವಾಡಿ ಹಿರಿಯ ಪ್ರಾಥಮಿಕ, ಸರ್ಕಾರಿ ಪ್ರೌಢಶಾಲೆಗಳಿದ್ದು ಒಟ್ಟು ೨೦ ಸಿಬ್ಬಂದಿಗಳಿದ್ದಾರೆ. ಕಲ್ಲು ಕುಟಿಗರ ಸೇವಾ ಸಹಕಾರ ಸಂಘ, ಯುವಕ ಸಂಘಗಳೂ ಇವೆ. ಮುದ್ದಮ್ಮನ ಜಾತ್ರೆಯನ್ನು ಜಾತ್ಯಾತೀತವಾಗಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಪೆದ್ದಮ್ಮ (ದೊಡ್ಡಮ್ಮ) ದುರ್ಗಮ್ಮ, ಆಂಜಿನಮ್ಮ, ತಿಮ್ಮಪ್ಪ ಈ ದೇವರುಗಳ ಗುಡಿಗಳಿದ್ದು, ಅವುಗಳಿಗೂ ಪೂಜೆ ವಾರದ ದಿನದಲ್ಲಿ ನಡೆಯುತ್ತದೆ. ಮದ್ದಮ್ಮ ದೇವತೆಗೆ ಕುಂಚಿಟಿಗ ಸಮುದಾಯದ ಖಾಯಂ ಅರ್ಚಕರಿದ್ದು, ಅವರು ನಿತ್ಯವೂ ಪೂಜೆ ನಡೆಯುತ್ತದೆ. ಅಶ್ವತ್ಥಕಟ್ಟೆ, ನಾಗರಕಲ್ಲುಗಳೂ ಇದ್ದು, ಅವುಗಳಿಲೂ ಪೂಜೆ ನೆರವೇರುತ್ತದೆ. ಕರುಗಲ್ಲು ಇದ್ದು, ಅದರ ನೆತ್ತಿಯ ಮೇಲೆ ಎಣ್ಣೆ ಎರೆಯುವ ಸಂಪ್ರದಾಯವಿದೆ. ನಾಗರಾಜಪ್ಪ ಎಂಬುವ ಹರಿಕಥಾ ವಿದ್ವಾಂಸರಿದ್ದು, ಕನ್ನಡ, ತೆಲುಗು ಎರಡೂ ಭಾಷೆಯಲ್ಲಿ ಹರಿಕಥೆ ನಡೆಸಿ ಕೊಡುತ್ತಾರೆ. ಗ್ರಾಮದ ಭೋವಿ ಈರಮ್ಮ, ಕೆಂಚಮ್ಮ, ಲಕ್ಕಮ್ಮ, ರಂಗಜ್ಜಿ ಭಜನೆ–ತತ್ವಪದಕಾರರ ತಂಡವಿದೆ. ಸಾಂದರ್ಭಿಕವಾಗಿ ದೇವಸ್ಥಾನದಲ್ಲಿ ಶಿವ ಭಜನೆ ನಡೆಸಿಕೊಡುತ್ತಾರೆ. ಇವರಿಗೆ ಗುರುವಾಗಿ ಕಗ್ಗಲಡು ರಾಮಕೃಷ್ಣಪ್ಪ ಎಂದು ಹೇಳುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ವಿಧವಾ ವೇತನ, ಸಂಧ್ಯಾಸುರಕ್ಷಾ, ಅಂಗವಿಕಲ ವೇತನದ ಸೌಲಭ್ಯ ಪಡೆದವರು ಇದ್ದು, ಗ್ರಾಮದಲ್ಲಿ ಒಟ್ಟು ೧೪ ಅಂಗಡಿಯಿದ್ದು, ಟೀ, ಗೂಡುಗಳಿವೆ. ಸಿರಾ–ಕಗ್ಗಲಡು, ತಾವರೆಕೆರೆ–ಮದ್ದಕ್ಕನಹಳ್ಳಿ ಮಾರ್ಗವಾಗಿ ಖಾಸಗಿ ಬಸ್ಸುಗಳ ಸಂಚಾರವಿದ್ದು, ಜಿಲ್ಲಾ ಪಂಚಾಯಿತಿ ಮುಖ್ಯ ರಸ್ತೆಯಿದೆ. ದುರ್ಗಮ್ಮ, ಪೆದ್ದಮ್ಮ, ಲಕ್ಷ್ಮಿ, ರಂಗನಾಥ ಸ್ತ್ರೀ ಶಕ್ತಿ ಕೇಂದ್ರಗಳಿದ್ದು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ೩ ಸಂಘಗಳಿವೆ. ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರು ಈ ಗ್ರಾಮವನ್ನು ಪ್ರತಿನಿಧಿಸುತ್ತಿದ್ದು, ಗ್ರಾಮದಲ್ಲಿ ಕಿರುನೀರು ಸರಬರಾಜು ಯೋಜನೆ ಯಲ್ಲಿ ಒಟ್ಟು ೪೩ ನಲ್ಲಿಗಳ ಸೌಲಭ್ಯ ಪಡೆದಿದ್ದು, ೬ ಕೈ ಪಂಪುಗಳೂ ಇವೆ. ಹಸು, ಎಮ್ಮೆ, ಕುರಿ ಈ ಗ್ರಾಮದ ಪ್ರಾಣಿಗಳು ಸಮೀಪದಲ್ಲಿ ನರಿ, ಕರಡಿ, ಮೊಲ ಮೊದಲಾದ ಕಾಡು ಪ್ರಾಣಿಗಳು ಕಂಡು ಬರುತ್ತವೆ. ನ್ಯಾಯ ಬೆಲೆ ಅಂಗಡಿ ಆರೋಗ್ಯ ಸಹಾಯಕಿಯರು ಇದ್ದು ೧೬ ವಸತಿ ರಹಿತ ಕುಟುಂಬ ಗಳಿವೆ. ತಿಮ್ಮಯ್ಯ ಎಂಬ ಹಿರಿಯರು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದ, ಆದರೂ ದಾಖಲಾಗದ ಕಥೆ ಹೇಳಿ ಸದ್ಯದ ಸ್ಥಿತಿಯನ್ನು ನೆನೆದು ಮರುಗುತ್ತಾರೆ.

# ಮದ್ದಕ್ಕನಹಳ್ಳಿ ಗೊಲ್ಲರಹಟ್ಟಿ

ಸಿರಾ-ಮದ್ದಕ್ಕನಹಳ್ಳಿ ರಸ್ತೆಯಲ್ಲಿ ಸಿರಾ ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು ಮದ್ದಕ್ಕನ ಹಳ್ಳಿಗೆ ಸೇರ್ಪಡೆಯಾಗಿದೆ. ಸಿರಾದಿಂದ ಪಶ್ಚಿಮ ಭಾಗಕ್ಕಿರುವ ಈ ಗ್ರಾಮದಲ್ಲಿ ಒಟ್ಟು ೯೭ ಮನೆಗಳಿದ್ದು ಎಲ್ಲವೂ ಕಾಡುಗೊಲ್ಲರ ಬುಡಕಟ್ಟು ಮನೆಗಳಾಗಿರುವುದು. ವಿಶೇಷ ಒಟ್ಟು ೮೬.೩ ಭೌಗೋಳಿಕ ವಿಸ್ತೀರ್ಣ ಹೊಂದಿರುವ ಈ ಗ್ರಾಮದಲ್ಲಿ ಕಾಂಕ್ರೀಟ್, ಕಡಪ ಕಲ್ಲಿನ ಮನೆ, ಮಣ್ಣಿನ ಮನೆ, ಹೆಂಚಿನ ಸ್ವರೂಪದ ಮನೆಗಳಿವೆ. ಒಂಭತ್ತು ಗುಡಿಸಲುಗಳ ನಿವಾಸಿಗಳೂ ಇದ್ದಾರೆ. ಜನತಾ ವಸತಿ ಯೋಜನೆ ಹಾಗೂ ಉಚಿತ ವಿದ್ಯುತ್ ಸಂಪರ್ಕದ ಫಲಾನುಭವಿಗಳಿದ್ದಾರೆ. ೧೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.ಇವು ಇಂದಿರಾ ಆವಾಸ್ ಆಶ್ರಯ ಯೋಜನೆಗಳು. ೪೬೭ ಜನಸಂಖ್ಯೆ ಹೊಂದಿದೆ.

ಇಲ್ಲಿ ರಾಗಿ ಮುದ್ದೆ, ಅನ್ನ ಈ ಗ್ರಾಮದ ಮುಖ್ಯ ಆಹಾರವಾಗಿದ್ದು, ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹೋಳಿಗೆ ಮೊದಲಾದ, ಸಿಹಿ-ಖಾರದ ಆಹಾರವನ್ನು ಸೇವಿಸುತ್ತಾರೆ. ಮದ್ದಕ್ಕ ಎಂಬ ಈ ಊರಿನ ಸಮೀಪದಲ್ಲೇ ಒಂದು ದೇವಾಲಯವಿದ್ದು, ಈ ದೇವತೆಯ ಹೆಸರಲ್ಲಿಯೇ ಮೂಲ ಗ್ರಾಮ ಮದ್ದಕ್ಕನ ಹಳ್ಳಿ. ಅದರ ಉಪಗ್ರಾಮವಾಗಿ ಮದ್ದಕ್ಕನಹಳ್ಳಿ ಗೊಲ್ಲರಹಟ್ಟಿ ನಿರ್ಮಾಣವಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯಿತಿ ಹಾಗೂ ಗೌಡಗೆರೆ ಗ್ರಾಮ ಪಂಚಾಯಿತಿ ಕೇಂದ್ರಗಳಿಗೆ ಸೇರ್ಪಡೆಯಾಗಿರುವ ಈ ಕಾಡುಗೊಲ್ಲರ ಹಟ್ಟಿಯಲ್ಲಿ ಒಬ್ಬರು ಪಂಚಾಯಿತಿ ಸದಸ್ಯರಾಗಿದ್ದಾರೆ. ರಾಗಿ, ಮೆಕ್ಕೆಜೋಳ, ಸೂರ್ಯಕಾಂತಿ, ಶೇಂಗಾ, ಹತ್ತಿ, ಈ ಗ್ರಾಮದ ಮುಖ್ಯ ಬೆಳೆಗಳು. ಹೊಂಗೆ ಬೇವು, ಹುಣಸೆ ಈ ಬಗೆಯ ಹಣ್ಣು ಬೀಜಗಳ ಸಂಗ್ರಹದಿಂದ ಆರ್ಥಿಕ ಉತ್ಪನ್ನ ಮಾಡಿಕೊಂಡಿದ್ದಾರೆ. ಮೂರು ಸಾಂಪ್ರದಾಯಿಕ ಎತ್ತಿನ ಬಂಡಿಗಳಿರುವ ಈ ಗ್ರಾಮದಲ್ಲಿ ಲಾರಿಗಳು, ಸ್ಕೂಟರ್ ಬಳಕೆಯೂ ಇದೆ. ಲಾರಿಗಳ ಮೂಲಕ ಸಮೀಪದ ಬಂಡೆ ಕಲ್ಲುಗಳನ್ನು ಸಾಗಾಣಿಕೆ, ಸರಕು ಸಾಗಾಣಿಕೆಯನ್ನು ಮಾಡುತ್ತಿದ್ದಾರೆ.

ಈ ಹಳ್ಳಿಯಲ್ಲಿ ಪೂರಾ ಕಾಡುಗೊಲ್ಲರು ವಾಸಿಸುತ್ತಿದ್ದು ಇವರ ಮನೆಯ ವ್ಯವಹಾರಿಕ ಭಾಷೆ ಕನ್ನಡವಾಗಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು, ಒಟ್ಟು ೪ ಜನ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಗೆ ಬಿಸಿಯೂಟ, ಶೌಚಾಲಯ, ಕಾಂಪೌಂಡು ನೀರಿನ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಶಿಕ್ಷಣಕ್ಕೆ ಸಮೀಪದ ಮದ್ದಕ್ಕನ ಹಳ್ಳಿ, ತಾವರೆಕೆರೆ, ಹಾಗೂ ಸಿರಾ ನಗರಗಳನ್ನು ಅವಲಂಬಿಸಿದ್ದಾರೆ. ಈ ಗ್ರಾಮದಲ್ಲಿ ಆಶ್ರಯ, ಇಂದಿರಾ ಆವಾಸ್ ಯೋಜನೆಯೂ ಸೇರಿದಂತೆ ಭಾಗ್ಯ ಜ್ಯೋತಿಯ ಫಲಾನುಭವಿಗಳೂ ಇದ್ದಾರೆ. ವೃದ್ಧಾಪ್ಯ, ಅಂಗವಿಕಲ, ವಿಧವಾ ವೇತನದ ಫಲಾನುಭವಿಗಳೂ ಇದ್ದು, ಒಂದು ಸೂತಕದ ಗೃಹ ಪ್ರತ್ಯೇಕವಾಗಿದೆ. ಅದಕ್ಕೆ ಕೃಷ್ಣ ಕುಟೀರ ಎಂದು ಕರೆಯುತ್ತಾರೆ. ಗ್ರಾಮದ ಸಾಕ್ಷರತೆ ೫೨.೪ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಈ ಗ್ರಾಮದ ನಡುವೆ, ಕಾಡುಗೊಲ್ಲರ ಸಂಪ್ರದಾಯದ ಪ್ರಕಾರ ಮುಳ್ಳು ಬೇಲಿ (ಕಳ್ಳೆ ಬೇಲಿ) ಹಾಕಿ ಅದರ ಒಳಗೆ ಗುಬ್ರದ ಮಾದರಿಯಲ್ಲಿ ಬಾದೆ ಹುಲ್ಲಿನಿಂದ ನಿರ್ಮಿಸಿರುವ ಗುಡಿಯಲ್ಲಿ ಜುಂಜಪ್ಪ, ತಿಮ್ಮಪ್ಪ, ಚಿತ್ರದೇವರುಗಳ ದೇವಾಲಯಗಳಿವೆ. ಇವುಗಳಿಗೆ ಶನಿವಾರ, ಸೋಮವಾರ ವಿಶೇಷ ಪೂಜೆ ನಡೆಯುತ್ತಿದ್ದು, ದೀಪಾವಳಿಯ ಕೊನೆಯ ದಿನ ದೇವರುಗಳ ಮೆರವಣಿಗೆ, ಉತ್ಸವ ವಿಜೃಂಭಣೆಯಿಂದ ನಡೆಯುತ್ತದೆ.

ಇತ್ತೀಚೆಗೆ ಗ್ರಾಮದ ಯುವಕರು ಕೃಷ್ಣ ಜಯಂತಿ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ನಡೆಸುತ್ತಾ, ಕೋಲಾಟ, ನಾಟಕ, ನೃತ್ಯ ಕಾರ್ಯಕ್ರಮ ಏರ್ಪಡಿಸುತ್ತಾರೆ. ಕೃಷ್ಣಪ್ಪ, ವಸಂತ, ಚಿತ್ತಯ್ಯ, ವೆಂಕಟೇಶ ಇವರು ಕೋಲಾಟ ಕಲಾವಿದರಾಗಿದ್ದು ಕೃಷ್ಣ ಯಾದವ ಕೋಲಾಟ ತಂಡ ಕಟ್ಟಿಕೊಂಡು, ಉತ್ತಮ ಕಲಾಭ್ಯಾಸ ಮಾಡಿದ್ದಾರೆ. ಆಹ್ವಾನಿತ ಕಲಾವಿದರಾಗಿ ಬೇರೆ ಬೇರೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸುತ್ತಾರೆ. ಈವರೆಗೆ ೪ ಜನ ಪದವಿ ಪಡೆದ ವಿದ್ಯಾರ್ಥಿಗಳಿದ್ದು, ಕುರಿ ಪೋಷಣೆ, ಕುರಿ ವ್ಯಾಪಾರ, ಹುಣಸೆಹಣ್ಣಿನ ವ್ಯಾಪಾರ ಇವರ ಉಪಕಸುಬು ಅಗಿದೆ. ಮದ್ದಕ್ಕನ ಹಳ್ಳಿಯಲ್ಲಿ (ಮೂಲಗ್ರಾಮ) ನಡೆಯುವ ಗ್ರಾಮ ಜಾತ್ರೆ ಮದ್ದಕ್ಕನ ಜಾತ್ರೆ ಅಂದೇ ಇಲ್ಲಿಯೂ ವಿಶೇಷ ಪೂಜೆ, ಆರತಿ, ಬಾನ, ಬ್ಯಾಟೆ ನಡೆಯುತ್ತದೆ. ಪ್ರಾಣಿ ಬಲಿ, ಸಾರ್ವತ್ರಿಕ ಮಾಂಸದ ಊಟವೂ ಏರ್ಪಡಿಸಲಾಗುವುದು. ಯುಗಾದಿ, ದೀಪಾವಳಿ, ಮಹಾನವಮಿ ಹಾಗೂ ಶಿವರಾತ್ರಿ ಹಬ್ಬಗಳನ್ನು ಆಚರಿಸುವ ಇವರಿಗೆ ದೀಪಾವಳಿಯನ್ನು ಹಾಲು ಹಬ್ಬ, ಹಿರಿಯರ ಹಬ್ಬ, ದೀಪ ಏರೋ ಹಬ್ಬ, ಹುಚ್ಚೆಳ್ಳಬ್ಬ ಎಂದೆಲ್ಲಾ ಕರೆದು ವಿಜೃಂಭಣೆಯಿಂದ ಕಾಡುಗೊಲ್ಲರ ಬಿರುದು ಭಾವಗಳೊಂದಿಗೆ ಕಟ್ಟೆ ಮನೆ ಯಜಮಾನ, ಪೂಜಾರಿ, ಗೌಡರುಗಳ ನೇತೃತ್ವದಲ್ಲಿ ಆರತಿ, ಉತ್ಸವ ನಡೆಯುತ್ತದೆ.

## ಮಾರಪ್ಪನಹಳ್ಳಿ

ಮಾರಪ್ಪನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೫ ಕಿ.ಮೀ. ದೂರದಲ್ಲಿದೆ. ಇದು ಬಡಮಾರನಹಳ್ಳಿ ಗ್ರಾಮದ ಉಪ ಗ್ರಾಮವಾಗಿದ್ದು, ಇದರ ಭೌಗೋಳಿಕ ೧೪೪೮.೦೯ ಹೆಕ್ಟೇರ್ ಇದೆ. ಹುಲಿಗುಂಟೆ ಹೋಬಳಿಗೆ ಸೇರಿದ ಈ ಗ್ರಾಮ, ಬಯಲು ಪ್ರದೇಶವಾಗಿದ್ದು, ಕೆಂಪು, ಬಿಳಿ ಮರಳು ಮಿಶ್ರಿತ ಮಣ್ಣಿನಿಂದ ಕೂಡಿದೆ. ಈ ಪರಿಸರದಲ್ಲಿ ಮೊಲ, ನರಿ, ತೋಳ, ಮುಂಗುಸಿ, ಬೆಕ್ಕು ಕಾಡು ಪ್ರಾಣಿಗಳಿವೆ. ಗ್ರಾಮದಲ್ಲಿ ಹಸು, ಎತ್ತು, ಕುರಿ, ಮೇಕೆ, ಪ್ರಾಣಿಯನ್ನು ಸಾಕಿದ್ದಾರೆ. ಕೋಳಿ ಸಾಕು ಪಕ್ಷಿಯಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಕೋಗಿಲೆ, ಕಾಗೆ, ಗೂಬೆ, ಗುಬ್ಬಚ್ಚಿ, ಗಿಳಿ, ಕೌಜಲಗ ಮೊದಲಾದ ಪಕ್ಷಿಗಳು ಕಂಡು ಬರುತ್ತವೆ.

ವಾರ್ಷಿಕ ಮಳೆ ಸರಾಸರಿ ೪೩೪ ಮಿ.ಮೀ. ಆಗಿದ್ದು ಬಿಸಿಲು ೩೧೨ ಸೆಂ. ಚಳಿ ೧೨ ಸೆಂ. ಇದೆ. ವಾಡಿಕೆ ಮಳೆ ಕೃಷಿ ಕೆಲಸಕ್ಕೆ ಸಾಕಾಗದೆ, ೧೫ ಕೊಳವೆ ಬಾವಿಗಳ ಮೂಲಕ ನೀರನ್ನು ಒದಗಿಸುತ್ತಾರೆ. ಕುಡಿಯಲು ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಪೂರೈಸಲಾಗುವುದು. ೨ ಕಿರು ಟ್ಯಾಂಕ್‌ಗಳಿದ್ದು, ಒಂದು ಕೈ ಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿದ್ರಾವಿಡ, ಕಿರು ಸಮುದಾಯವಾಗಿದೆ. ವಿವಿಧ ಪ್ರಕಾರಗಳ ೩೨ ಮನೆಗಳಿದ್ದು, ಅವು ಹೆಂಚಿನ, ಶೀಟಿನ, ಕಾಂಕ್ರೀಟ್ ರೂಪದಲ್ಲಿದೆ. ಇವುಗಳು ಆಶ್ರಯ, ಜನತಾ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯ ಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ. ೧೫೯ ಜನಸಂಖ್ಯೆ ಹೊಂದಿದೆ. ೧೩ ಮನೆಯಲ್ಲಿ ಶೌಚಾಲಯ ಬಳಕೆಯಿದೆ.

ಇಲ್ಲಿನ ಮುಖ್ಯ ಆಹಾರ ರಾಗಿ ಮುದ್ದೆ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿ, ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ಆಟೋ ಬಳಕೆಯಲ್ಲಿದೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ ಆಹಾರ ಬೆಳೆಗಳು. ರೇಷ್ಮೆ, ತೆಂಗು, ಸೂರ್ಯಕಾಂತಿ ತೋಟಗಾರಿಕೆ ಬೆಳೆಯಾಗಿವೆ. ಸರ್ಕಾರಿ ನೌಕರರಾಗಿ ಇಬ್ಬರು ಶಿಕ್ಷಕರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ, ಹಂದಿಕುಂಟೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಒಂದು ಅಂಗನವಾಡಿ ಕೇಂದ್ರವಿದ್ದು, ಮಹಿಳಾ ಆರ್ಥಿಕ ಸ್ವಸಹಾಯಕವಾಗಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ೨೪ ಮಂದಿ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಪ್ರಯೋಜನಗಳಿದ್ದು, ಗ್ರಾಮದ ಸಾಕ್ಷರತೆ ಶೇ. ೬೦ ರಷ್ಟಿದೆ. ಒಬ್ಬರು ಶಿಕ್ಷಕರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯದ ಸೌಲಭ್ಯಗಳಾದ ವೃದ್ದಾಪ್ಯ ವೇತನ, ವಿಕಲ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಟೀ ಅಂಗಡಿ, ಕಿರಾಣಿ ಅಂಗಡಿಗಳಿವೆ. ಧಾರ್ಮಿಕವಾಗಿ ಮಾರಮ್ಮನ ತಾಳಿ ಇದ್ದು, ಈಚೆಗೆ ಶನಿಮಹಾತ್ಮ ದೇವಸ್ಥಾನ ನಿರ್ಮಾಣವಾಗಿದೆ.

ಶ್ರಾವಣ ಶನಿವಾರದಂದು ಶನಿದೇವರಿಗೆ ಆರತಿ, ಉತ್ಸವ, ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯವಿದೆ.

ಯುಗಾದಿ, ಗೌರಿ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕಾಂತಮ್ಮ, ಗೌರಮ್ಮ ಎಂಬ ವಿಶಿಷ್ಟ ಆಚರಣೆ ಈ ಗ್ರಾಮದಲ್ಲಿದೆ. ಬರಗೂರು–ಸಿರಾ, ಹಂದಿಕುಂಟೆ ಗೇಟಿಗೆ ಕಚ್ಚಾ ರಸ್ತೆ ಸಂಪರ್ಕವಿದೆ.

## ಮುದ್ದೇನಹಳ್ಳಿ

ಮುದ್ದೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೯ ಕಿ.ಮೀ ದೂರದಲ್ಲಿದೆ. ಸಿರಾ ಹೊಸೂರು ತಾವರೇಕೆರೆ ಮಾರ್ಗದಲ್ಲಿ ಹೊಸೂರಿನ ಸಮೀಪದಲ್ಲಿದ್ದು, ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಗೊಳ್ಳುತ್ತದೆ. ಕಂದಾಯ ಗ್ರಾಮವಾಗಿರುವ ಈ ಹಳ್ಳಿಯ ಭೌಗೋಳಿಕ ವ್ಯಾಪ್ತಿ ೭೨೬.೫೮ ಹೆಕ್ಟೇರ್ ಇದ್ದು, ಗೊಲ್ಲರಹಟ್ಟಿ ಇದೇ ಗ್ರಾಮದೊಂದಿಗೆ ಕೂಡಿಕೊಂಡು ಒಂದೇ ಸ್ವರೂಪ ಪಡೆದುಕೊಂಡಿದೆ. ಮುದ್ದಣ್ಣ ಎಂಬ ವ್ಯಕ್ತಿ ನಾನು ಸೂಚಕವಾಗಿರುವ ಹಳ್ಳಿ, ವೀರಮುದ್ದಪ್ಪ ಎಂಬ ಹೆಸರುಗಳ ಕಾಡುಗೊಲ್ಲರ ದೈವವಿದೆ. ವೀರಮುದ್ದ ಪ್ಪನ ದೇವಾಲಯ ಚೇಳೂರು, ಬಿದರೆ ಇಲ್ಲಿ ಕಾಡುಗೊಲ್ಲರ ಸಾಂಸ್ಕೃತಿಕ ನೆಲೆಗಳಿದ್ದು, ವೀರಮುದ್ದಪ್ಪನ ದೇವಾಲಯಗಳಿವೆ. ಈ ಹಿನ್ನೆಲೆಯಲ್ಲಿ ಮುದ್ದಪ್ಪ, ಹೆಸರಿನ ಈ ಬಹುವಚನ ರೂಪ ನಂತರ ಕಳೆದು ಏಕವಚನಕ್ಕೆ ತಿರುಗಿ ಮುದ್ದನಹಳ್ಳಿ, ಮುದ್ದೇನಹಳ್ಳಿ ಆಗಿದೆ. ಸಿರಾ ಶಾಸನ ೬೦ ಮುದ್ದೇನಹಳ್ಳಿ ಗಡಿಯಲ್ಲಿ ನೆಟ್ಟಿರುವ ವೀರಗಲ್ಲು ವಿವರ ಈ ಗ್ರಾಮದ ವಿವರ ಅಲಭ್ಯವಾದರೂ, ಪರಿಗಣನೆಗೆ ಅರ್ಹವಾಗಿದೆ. ವೀರಗಣೇಶ ದೇವ ನಿಡುಗಲ್ಲು ಸಂಸ್ಥಾನವನ್ನು ಆಳುತ್ತಿದ್ದ ಸಂದರ್ಭಗಳಲ್ಲಿ, ಆತನ ಸಾಮಂತವಾದ ಹುಲಿಕರಿಗೆ ಕುರಿತ ಕಡಲೂರು

ತಡುಗೆಯ ನಾಯಕನ ಮಗ, ರಾಮನಾಯಕ ಹುಲಿಕುಂಟೆಯ ಮೇಲೆ ದಾಳಿ ಮಾಡಿದಾಗ, ಆತನ ವಿರುದ್ಧವಾಗಿ ಹೋರಾಟಿ ಪೆಮ್ಮನಾಯಕ, ಆತನ ಮಗ ಅಭಯನಾಯಕರು, ಆತನ ಸೋದರಮಾವ, ಬೊಮ್ಮನಾಯಕ ಇವರು ಯುದ್ಧದಲ್ಲಿ ಹೋರಾಟಿ ಮರಣ ಹೊಂದಿದರು. ಆಗ ಆಳುವ ರಾಜರು ಬೊಮ್ಮನಾಯಕನಿಗೆ ವೀರಬೊಮ್ಮನೆಂದು ಬಿರುದನ್ನಿತ್ತು ಸನ್ಮಾನಿಸಿದ ವಿವರ ಈ ಶಾಸನ ಕಲ್ಲಿನಲ್ಲಿರುವುದು ವಿಶೇಷವಾಗಿದೆ. ಈ ವೀರ ಬೊಮ್ಮನಾಯಕ ಯಾರು, ಆತನು ಮುದ್ದೇನಹಳ್ಳಿ ಮೂಲದವನೆ ಇರಬಹುದೇ ಎಂಬೆಲ್ಲಾ ಕುತೂಹಲಕಾರಿ ಸಂಗತಿಗಳನ್ನು ಕೆಲ ಶಾಸನ ಮೂಡಿಸುತ್ತದೆ.

ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದೆ. ಈ ಪರಿಸರದಲ್ಲಿ ಕಾಡು ಪ್ರಾಣಿಯಾದ ನರಿ, ಮೊಲ, ಜಿಂಕೆ, ಕಾಡುಹಂದಿ, ಉಡ ಕಂಡು ಬಂದರೆ, ಗ್ರಾಮದಲ್ಲಿ ಹಸು, ಎತ್ತು, ಕುರಿ, ಮೇಕೆ ನಾಯಿಗಳನ್ನು ಸಾಕಲಾಗಿದೆ. ಈ ಪರಿಸರದಲ್ಲಿ ಕನ್ನಡ ಪೂರ್ಣ ಮನೆ ಮಾತಾದರೂ ಕೆಲವು ಮುಸ್ಲಿಂ ಕುಟುಂಬಗಳಾದ ಉರ್ದು ಮಾತನಾಡುತ್ತಾರೆ. ವಾರ್ಷಿಕ ಸರಾಸರಿ ಮಳೆ ಪ್ರಮಾಣ ೪೬೦ ಮಿ.ಮೀ. ಇದ್ದು, ಉಷ್ಣಾಂಶ ೩೭ ಸೆಂ. ಇದ್ದು, ಚಳಿ ಪ್ರಮಾಣ ೧೨ ಸೆಂ. ಇರುತ್ತದೆ. ಈ ಪರಿಸರದಲ್ಲಿ ಮಳೆಯ ನೀರಿನೊಂದಿಗೆ ಕೊಳವೆ ಬಾವಿಗಳು ನೀರನ್ನು ಕೃಷಿಗೆ ಉಪನೀರಾವರಿಯನ್ನಾಗಿ ಮಾಡಿ ಕೊಳ್ಳುತ್ತಿದ್ದಾರೆ.

ಕುಡಿಯಲು ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ಗ್ರಾಮ ಪಂಚಾಯಿತಿವತಿಯಿಂದ ನೀರು ಪೂರೈಸಲಾಗುತ್ತದೆ. ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕಾಡುಗೊಲ್ಲ ಜನಾಂಗದ ದೊಡ್ಡ ಸಮುದಾಯವಾಗಿದ್ದು, ಆದಿ ದ್ರಾವಿಡ, ಆದಿಕರ್ನಾಟಕ, ಕುಂಚಿಟಿಗ ಹಾಗೂ ಮುಸ್ಲಿಂ ಜನಾಂಗ ದೊಡ್ಡ ಸಮುದಾಯವಾಗಿದ್ದು, ಆದಿ ದ್ರಾವಿಡ, ಆದಿ ಕರ್ನಾಟಕ, ಕುಂಚಿಟಿಗ, ಹಾಗೂ ಮುಸ್ಲಿಂ ಜನಾಂಗ ಕಿರು ಸಮುದಾಯವಾಗಿದೆ.

ವಿವಿಧ ಪ್ರಕಾರಗಳ ೧೦೦ ಮನೆಗಳಿದ್ದು, ಅವು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಸೀಟಿನ ಸ್ವರೂಪದ ಮನೆಗಳಾಗಿವೆ. ಇವು ಇಂದಿರಾ ಆವಾಸ್, ಆಶ್ರಯ, ಜನತಾ ವಸತಿ ಯೋಜನೆಯ ೧೯ ಫಲಾನುಭವಿಗಳಿದ್ದಾರೆ. ೭೪ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ೬೧೯ ಜನಸಂಖ್ಯೆ ಹೊಂದಿದ್ದಾರೆ.

ರಾಗಿ ಮುದ್ದೆಯನ್ನು ಮುಖ್ಯ ಆಹಾರ. ವಿಶೇಷ ಸಂದರ್ಭಗಳಲ್ಲಿ ಬಾಡೂಟ. ಪಾಯಸ, ಹೋಳಿಗೆ ಊಟದ ವ್ಯವಸ್ಥೆ ಇರುತ್ತದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿ ಇದ್ದು, ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ ವಾಹನಗಳಿವೆ. ದ್ವಿಚಕ್ರ ವಾಹನಗಳೂ ಇವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ಜೋಳ, ಆಹಾರ ಬೆಳೆಗಳು. ತೆಂಗು, ಅಡಿಕೆ, ತೋಟಗಾರಿಕೆ ಬೆಳೆಗಳು. ಶೇಂಗಾ, ಹೊಂಗೆ ಬೀಜ, ಹತ್ತಿ, ಸೂರ್ಯಕಾಂತಿ ವಿಶೇಷ ವಾಣಿಜ್ಯ ಬೆಳೆಗಳಾಗಿವೆ. ಗ್ರಾಮದಲ್ಲಿ ಶಿಕ್ಷಣ, ಸಾರಿಗೆ ಸೇರಿದಂತೆ ಒಟ್ಟು ೪ ಜನ ಸರ್ಕಾರಿ ನೌಕರರಿದ್ದು, ಪ್ರೊ॥ ಶ್ರೀನಿವಾಸ್ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾಗಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯಿತಿ, ಹುಣಸೇಹಳ್ಳಿ ತಾಲ್ಲೂಕು ಪಂಚಾಯಿತಿ, ಹಾಗೂ ಹೊಸೂರು ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ೨ ಸ್ತ್ರೀಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಅಂಗನವಾಡಿ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಮಕ್ಕಳಿಗೆ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ಶೇ. ೬೦.೭ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ಅಂಗವಿಕಲ, ಹಾಗೂ ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಧಾರ್ಮಿಕವಾಗಿ ಕಣಿವೆ ಮಾರಕ್ಕ, ಮುದ್ದಮ್ಮ, ವೀರ ಪುಟ್ಟಣ್ಣ, ತಿಮ್ಮಪ್ಪನ ಎರಡು ದೇವಲಾಯಗಳಿವೆ. ಗ್ರಾಮದಲ್ಲಿ ದಸರಾ, ದೀಪಾವಳಿ ಹಬ್ಬಗಳಂದು ಎಲ್ಲಾ ದೇವರುಗಳ ವಿಶೇಷ ಮೆರವಣಿಗೆ ಇರುತ್ತದೆ. ದೀಪಾವಳಿ ಕಾಡುಗೊಲ್ಲರ ವಿಶೇಷ ಸಾಂಸ್ಕೃತಿಕ ಆಚರಣೆ ಆಗಿದ್ದು, ಯುಗಾದಿ, ಶಿವರಾತ್ರಿ, ಗೌರಿ–ಗಣೇಶನ ಹಬ್ಬಗಳನ್ನು ಶ್ರದ್ಧೆಯಿಂದ ಆಚರಿಸುತ್ತಾರೆ.

## ಮುದ್ದೇನಹಳ್ಳಿ ಗೊಲ್ಲರಹಟ್ಟಿ

ಮುದ್ದೇನಹಳ್ಳಿ ಗೊಲ್ಲರಹಟ್ಟಿ ಒಂದು ಕಾಡುಗೊಲ್ಲರ ಬುಡಕಟ್ಟು ಗ್ರಾಮ. ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೯ ಕಿ.ಮೀ. ದೂರದಲ್ಲಿದೆ. ಸಿರಾ–ತಾವರೆಕೆರೆ ಹೊಸೂರು ಮಾರ್ಗದಲ್ಲಿ ಹೊಸೂರಿನಿಂದ ೨ ಕಿ.ಮೀ. ದೂರದಲ್ಲಿದೆ. ಇದು ಮುದ್ದೇನಹಳ್ಳಿ ಕಂದಾಯ ಗ್ರಾಮಕ್ಕೆ ಪೂರ್ಣವಾಗಿ ಹೊಂದಿಕೊಂಡಿದ್ದು, ಗ್ರಾಮದ ಮೇಲ್ಭಾಗ ಉತ್ತರಕ್ಕಿದೆ. ನಡುವೆ ಚಿತ್ರದೇವರ ದೇವಾಲಯ, ಬೇವಿನಕಟ್ಟೆ ಮುದ್ದೇನಹಳ್ಳಿ–ಗೊಲ್ಲರಹಟ್ಟಿಯೂ ಬೇರ್ಪಡಿಸಿದೆ. ಇದರ ಭೌಗೋಳಿಕ ವಿಸ್ತೀರ್ಣ ೭೨೬.೫೮. ಮುಖ್ಯ ಗ್ರಾಮದಲ್ಲಿ ಹಂಚಿಕೆಯಾಗಿದೆ. ೭೧ ಮನೆಗಳಿದ್ದು ಇವು ಕಾಂಕ್ರೀಟ್, ಹೆಂಚಿನ, ಶೀಟಿನ

ಸ್ವರೂಪದ ಮನೆಗಳಾಗಿವೆ. ಇವು ಸರ್ಕಾರದ ವಸತಿಯೋಜನೆಯಾದ ಇಂದಿರಾಆವಾಸ್, ಆಶ್ರಯ, ಜನತಾ ಸೌಲಭಯ ಪಡೆದಿದ್ದಾರೆ. ಭಾಗ್ಯಜ್ಯೋತಿ ಉಚಿತ ವಿದ್ಯುತ್ ಸೌಲಭ್ಯ ಪಡೆದಿದ್ದಾರೆ. ೩೧೦ ಜನಸಂಖ್ಯೆ ಹೊಂದಿದ್ದು, ಶೈಕ್ಷಣಿಕವಾಗಿ ಮೂಲಗ್ರಾಮ ಮುದ್ದೇನಹಳ್ಳಿಯಿಂದ ಪಡೆಯಲಾಗುವುದು. ಗ್ರಾಮದ ಸಾಕ್ಷರತೆ ಪ್ರಮಾಣ ಶೇ. ೪೦.೭ ರಷ್ಟಿದೆ. ಕಾಡು ಗೊಲ್ಲರು ಕರೇಕಲ್ಲು ಚಿತ್ರಲಿಂಗದೇವಾಲಯವನ್ನು ಇತ್ತೀಚೆಗೆ ಆಧುನಿಕ ವಿನ್ಯಾಸದಲ್ಲಿ ನಿರ್ಮಿಸಿದ್ದಾರೆ. ಈ ದೇವಾಲಯದಲ್ಲಿ ತಿಮ್ಮಪ್ಪ, ಬಾಲಕೃಷ್ಣನ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ದೀಪಾವಳಿ ಈ ಗ್ರಾಮದ ವಿಶೇಷ ಹಬ್ಬವಾಗಿದ್ದು, ಹಿರಿಯ ಹಾಲು ತುಪ್ಪದ ಹಬ್ಬ ಎಂದು ಒಂದು ವಾರಗಳ ಕಾಲ ವಿಜೃಂಭಣೆಯಿಂದ ಆಚರಿಸುತ್ತಾರೆ.

ಶಿಕ್ಷಣ, ಕಂದಾಯ, ಸಾರಿಗೆ ಇಲಾಖೆಯ ೬ ಜನ ಸರ್ಕಾರಿ ನೌಕರರಿದ್ದು, ಕೆ. ಕಾಳಪ್ಪ ಈ ಗ್ರಾಮದ ಏಕೈಕ ಸ್ನಾತಕೋತ್ತರ ಪದವೀಧರನಾಗಿದ್ದು, ಸಿರಾ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರೂ ಆಗಿದ್ದರು. ಸುವರ್ಣ ಮುಖಿ ನದಿ ಈ ಗ್ರಾಮದ ಬದಿಗೆ ಹರಿಯುವುದು ಈ ಗ್ರಾಮದ ವಿಶೇಷವಾಗಿದೆ.

## ಮೇಳೆಕೋಟೆ

ಮೇಳೆಕೋಟೆ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೮ ಕಿ.ಮೀ. ದೂರದಲ್ಲಿದೆ. ಸಿರಾ–ಹಿರಿಯೂರು ರ್‍ಾಷ್ಟ್ರಿಯ ಹೆದ್ದಾರಿಯಲ್ಲಿ ತಾವರೆಕೆರೆಯಿಂದ ೩ ಕಿ.ಮೀ. ದೂರದಲ್ಲಿ ಬಲಭಾಗಕ್ಕೆ ಈ ಗ್ರಾಮವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೪೦೮.೮೮ ಹೆಕ್ಟೇರ್ ಆಗಿದೆ. ಇದೊಂದು ಹಳೆಯ ಗ್ರಾಮವಾಗಿದ್ದು ಅವಶೇಷನವಾಗಿರುವ ಕೋಟೆಯ ಗುರುತುಗಳಿವೆ. ಊರು ಪಕ್ಕಕ್ಕೆ ಹೊಸದಾಗಿ ನಿರ್ಮಾಣವಾಗಿರುವ ಸೂಚನೆ ಕಂಡು ಬರುತ್ತದೆ. ಹಳೆಯ ಕಾಲದ ಹಗೇವು, ಕಂದಕ ಹಾಗೆಯೇ ಇದ್ದು, ಗ್ರಾಮದ ಪ್ರಾಚೀನತೆಗೆ ಸಾಕ್ಷಿಯಾಗಿವೆ. ಕಂದು, ಮರಳು ಮಿಶ್ರಿತ ಮಣ್ಣಿನ ಲಕ್ಷಣ ಹೊಂದಿರುವ ಇಲ್ಲಿ ಶೇಂಗಾ ಬೆಳೆ ಮುಖ್ಯವಾದುದು.

ಈ ಪರಿಸರದಲ್ಲಿ ನರಿ, ತೋಳ, ಮೊಲ, ಜಿಂಕೆ, ಕಾಡುಹಂದಿ, ಉಡ, ಕಾಡುಬೆಕ್ಕು ಕಂಡು ಬರುತ್ತವೆ. ಗ್ರಾಮದಲ್ಲಿ ಹಸು,ಎಮ್ಮೆ, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ೩೯೪ ಮಿ.ಮೀ. ಇದ್ದು, ಚಳಿ ೧೨ ಸೆಂ.ಉಷ್ಣಾಂಶ ೩೮ ಸೆಂ. ಇರುತ್ತದೆ. ಮೇಳೆಕೋಟೆ ಕೆರೆ ಗ್ರಾಮದಲ್ಲಿದ್ದು, ಮಳೆ ಆಶ್ರಿತವಾಗಿದೆ. ಹಲವು ವರ್ಷಗಳಿಂದ ತುಂಬಿಲ್ಲ. ೧೩೨ ಕೊಳವೆ ಬಾವಿಗಳು ಈ ಪರಿಸರದಲ್ಲಿ ಇದ್ದು, ಗ್ರಾಮ ಪಂಚಾಯಿತಿ ವತಿಯಿಂದ ಕುಡಿಯಲು ನೀರನ್ನು ಒದಗಿಸಲಾಗಿದೆ.

ಕುಂಚಿಟಿಗ ಜನಾಂಗ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ಕುರುಬ, ನಾಯಕ, ಕಮ್ಮಾರ, ಈಡಿಗ, ಉಪ್ಪಾರ, ಆದಿಕರ್ನಾಟಕ ಸಣ್ಣ ಸಮುದಾಯವಾಗಿದೆ. ಕಾಂಕ್ರೀಟ್, ಮಣ್ಣಿನ, ಹೆಂಚಿನ, ಶೀಟಿನ ಪ್ರಕಾರದ ಒಟ್ಟು ೨೯೨ ಮನೆಗಳಿದ್ದು, ೧೬ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ಆಶ್ರಯ, ಅಂಬೇಡ್ಕರ್, ಜನತಾ ವಸತಿ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ ಗ್ರಾಮದ ಮುಖ್ಯ ಆಹಾರ. ಅನ್ನ, ರೊಟ್ಟಿ, ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಬಂಡಿ, ಆಧುನಿಕವಾಗಿ ಟ್ರ್ಯಾಕ್ಟರ್, ಟೆಂಪೋ ಬಳಸುತ್ತಾರೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಅಲಸಂದಿ, ತೊಗರಿ, ಹುರುಳಿ ಮುಖ್ಯ ಆಹಾರ ಬೆಳೆಗಳು. ತೋಟ ಇರುವವರು ತೆಂಗು, ಅಡಿಕೆ ಬೆಳೆಯುತ್ತಾರೆ. ಶೇಂಗಾ, ಹುಣಸೆಹಣ್ಣು ವಾಣಿಜ್ಯ ವ್ಯಾಪಾರಿ ಬೆಳೆಗಳು. ಹೆಂಗಸರು ಬೀಡಿ ಸುತ್ತುವುದು, ಊಟದ ಎಲೆ ತಯಾರಿಕೆ ಇದೆ. ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ತಾಲ್ಲೂಕು, ಜಿಲ್ಲಾ ಪಂಚಾಯಿತ ಕ್ಷೇತ್ರವನ್ನು ಹೊಂದಿದ್ದು, ಗ್ರಾಮ ಪಂಚಾಯಿತಿ ತಾವರೆಕೆರೆ ಆಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮದಲ್ಲಿ ೪ ಸ್ತ್ರೀ ಶಕ್ತಿ ಸಂಘ, ಸುಜಲ ಜಲಾನಯನ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿವೆ. ಒಟ್ಟು ೫೫.೪ ಸಾಕ್ಷರತೆ ಇದ್ದು, ೪೦.೬ ಮಹಿಳೆಯರು ೭೦.೪, ಮಹಿಳೆಯರು ಸಾಕ್ಷರವಂತರಿದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ನರಸಿಂಹಸ್ವಾಮಿ, ವೀರಬೊಮ್ಮಣ್ಣ, ಕೊಲ್ಲಾಪುರದಮ್ಮ, ಗೌರಸಂದ್ರದ ಮಾರಮ್ಮ ದೇವಾಲಯ ಗಳಿದ್ದು, ಕೊಲ್ಲಾಪುರದಮ್ಮನ ವಾರ್ಷಿಕ ಹಬ್ಬ ಇರುತ್ತದೆ. ಮಾರಮ್ಮನಿಗೆ ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ರಾಮನವಮಿ, ಮಹಾನವಮಿ, ಗೌರಿಗಣೇಶ, ದೀಪಾವಳಿ ಆಚರಣೆ ಇರುತ್ತದೆ. ಸಿರಾ–ತಾವರೆಕೆರೆ, ಜನಗೊಂಡನಹಳ್ಳಿ, ಹೊಸೂರು ರಸ್ತೆ ಸಂಪರ್ಕವಿದೆ.

## ಮೊಸರುಕುಂಟೆ

ಮೊಸರುಕುಂಟೆ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೪ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೭೦೦.೪೫ ಹೆಕ್ಟೇರ್ ಆಗಿದೆ. ಪುರಲೇಹಳ್ಳಿ ಇದರ ಮಜರೆ ಗ್ರಾಮವಾಗಿದೆ. ವೀರ ಜುಂಜಪ್ಪನನ್ನು ತಾಳೇ ದುರ್ಗಿಯು ಜೀವಂತ ನುಂಗಿದಾಗ, ಗೌರಸಂದ್ರದ ಮಾರಮ್ಮ, ಭೂತಪ್ಪ ಎಂಬ ದೈತ್ಯಾಕಾರದ ವ್ಯಕ್ತಿಯನ್ನು ಸೃಷ್ಟಿಸಿ, ಕೈಯಲ್ಲಿ ಚಾಕು ಸಹಿತ, ತಾಳೇ ದುರ್ಗಿಯ ಮುಂದೆ ನಿಲ್ಲುವಂತೆ ಮಾಡುತ್ತಾಳೆ. ಭೂತಪ್ಪನನ್ನು ನುಂಗಿದ ತಾಳೇ ದುರ್ಗಿಯ ಹೊಟ್ಟೆ ಬಗಿದು ಹೊರಬರುವಾಗ ಜುಂಜಪ್ಪನನ್ನು ಭೂತಪ್ಪ ಕರೆ ತರುತ್ತಾನೆ. ರಾಕ್ಷಸಿಯ ಹೊಟ್ಟೆ ಸೇರಿ ಮಲಿನವಾಗಿದ್ದು ಜುಂಜಪ್ಪನಿಗೆ ಬಂಡೆಯ ಮೇಲೆ ಕೂರಿಸಿ ಒಂದು ಖಂಡುಗ ಹಾಲಿನಿಂದ ಸ್ನಾನ ಮಾಡಿಸುತ್ತಾರೆ. ಹೀಗೆ ಸ್ನಾನ ಮಾಡಿದ ಹಾಲು ಹರಿದು ಈಗಿನ ಮೊಸರು ಕುಂಟೆ ಗ್ರಾಮದಲ್ಲಿ ಕೆರೆಯಾಗಿ ನಿಂತು ಕ್ರಮೇಣ ಹೆಪ್ಪುಗಟ್ಟಿ, ಮೊಸರಾದ ಕಾರಣ ಈ ಗ್ರಾಮಕ್ಕೆ ಮೊಸರು ಕುಂಟೆ ಎಂಬ ಹೆಸರು ಬಂದಿದೆ ಎಂದು ಜುಂಜಪ್ಪನ ಜನಪದ ಮಹಾ ಕಾವ್ಯದಲ್ಲಿ ಬರುತ್ತದೆ. ವಿಶೇಷವಾಗಿ ವಾಸ್ತವವಾಗಿ ಕಾಡು ಪ್ರದೇಶವಾಗಿದ್ದು, ಹೈನುಗಾರಿಕೆ ಹೆಚ್ಚಾಗಿದ್ದು, ಗೋವುಗಳ ಸಂವೃದ್ಧಿಯಾಗಿದ್ದು, ಹಾಲು-ಮೊಸರು ಯಥೇಚ್ಛವಾಗಿ ದೊರೆಯುತ್ತಿದ್ದರಿಂದ ಮೊಸರುಕುಂಟೆ ಎಂಬ ಹೆಸರು ಬಂದಿದೆ ಎಂದು ಗ್ರಾಮದ ನಿವೃತ್ತ ತಹಸೀಲ್ದಾರ್ ನರಸಿಂಹಯ್ಯ ಅಭಿಪ್ರಾಯ ಪಡುತ್ತಾರೆ.

ಕಂದು ಮಿಶ್ರಿತ ಮರಳು ಮಣ್ಣಿನಿಂದ ಕೂಡಿರುವ ಮಣ್ಣಿನ ಗುಣದಲ್ಲಿ ಶೇಂಗಾ ವಿಶೇಷವಾಗಿ ಬೆಳೆಯಲಾಗುವುದು. ಗ್ರಾಮದ ಉತ್ತರ ಹೊರವಲಯ ದಲ್ಲಿ ಮೊಸರುಕುಂಟೆ ಬಂಡೆ ಇದ್ದು, ಸೈಜುಗಲ್ಲು, ಹಾಸು ಬಂಡೆ, ಜಲ್ಲಿ ಕಲ್ಲಿನ ಕೈಗಾರಿಕೆ ನಿರಂತರವಾಗಿ ನಡೆಯುತ್ತದೆ. ಈ ಪರಿಸರದಲ್ಲಿ ನರಿ, ತೋಳ, ಜಿಂಕೆ, ಮೊಲ ಮೊದಲಾದ ಪ್ರಾಣಿಗಳು ಕಂಡು ಬರುತ್ತವೆ. ಗ್ರಾಮದಲ್ಲಿ ನಾಟಿ ಹಸು, ಹಳ್ಳಿಕಾರ ತಳಿ ಎತ್ತುಗಳನ್ನು, ಕುರಿ, ಮೇಕೆ, ಕೋಳಿಗಳನ್ನು ಸಾಕಿದ್ದಾರೆ. ಪಕ್ಷಿಗಳಾದ ಗಿಳಿ, ಕೋಗಿಲೆ, ನವಿಲು, ಗೊರವಂಕ, ಹದ್ದು, ಗಿಡುಗ, ಗರುಡ, ಕೊಕ್ಕರೆ ಮೊದಲಾದ ಪಕ್ಷಿಗಳು ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ೪೬೪ ಮಿ.ಮೀ. ಮಳೆ ಬೀಳುವ ಈ ಪ್ರದೇಶದಲ್ಲಿ ಉಷ್ಣಾಂಶ ೩೮ ಸೆಂ. ಇದ್ದರೆ, ಚಳಿ ಪ್ರಮಾಣ ೧೦ ಸೆಂ. ಪ್ರಾರಂಭವಾಗಿರುತ್ತದೆ. ಊರಿನ ಹೊರಭಾಗದಲ್ಲಿ ಒಂದು ಕೆರೆ ಇದೆ. ಈ ಗ್ರಾಮಕ್ಕೆ ಸಂಬಂಧಿಸಿದಂತೆ ೨೫ ಕೊಳವೆ ಬಾವಿಗಳಿದ್ದರೂ ಕುಡಿಯುವ ನೀರಿಗೆ ಅಭಾವವಿದೆ. ಹಾಗಾಗಿ ಗ್ರಾಮ ಪಂಚಾಯಿತಿ ವತಿಯಿಂದ ಕೊಳವೆ ಬಾವಿಯ ಮೂಲಕ ನೀರನ್ನು ಪೂರೈಸಲಾಗುತ್ತಿದೆ. ೨೫ ನಲ್ಲಿ ಸೌಕರ್ಯ ಪಡೆದಿದ್ದು, ಆದಿಕರ್ನಾಟಕ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ಬೇಡರು, ಕುಂಚಿಟಿಗ, ಉಪ್ಪಾರ, ಕಂಬಾರರು ಸಣ್ಣ ಸಮುದಾಯವಾಗಿ ಕನ್ನಡ ಈ ಗ್ರಾಮದ ಮಾತೃ ಭಾಷೆಯಾಗಿದೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಹಾಗೂ ಶೀಟಿನ ಒಟ್ಟು ೧೬೪ ಮನೆಗಳಿದ್ದು ೯೫ ಮನೆಯಲ್ಲಿ ಶೌಚಾಲಯ ಸೌಲಭ್ಯ ಹೊಂದಿದ್ದಾರೆ. ೯೮೪ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ, ಗ್ರಾಮದ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಸಾಂದರ್ಭಿಕವಾಗಿ ಬಾಡೂಟ, ಸಿಹಿ ಊಟದ ಏರ್ಪಾಡು ಇರುತ್ತದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಮಿನಿಟೆಂಪೋ, ಆಟೋ, ದ್ವಿಚಕ್ರ ವಾಹನಗಳ ಬಳಕೆ ಇದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಜೋಳ, ಅಲಸಂದಿ, ತೊಗರಿ, ಭತ್ತ ಬೆಳೆಯುತ್ತಾರೆ. ತೋಟಗಾರಿಕೆಯಾಗಿ ತೆಂಗು, ಅಡಿಕೆ, ರೇಷ್ಮೆ ಬೆಳೆ ಇದೆ. ತಹಸೀಲ್ದಾರ್ ನರಸಿಂಹಮೂರ್ತಿ, ಇಂಜಿನಿಯರ್ ಲಕ್ಷ್ಮೀ ಪ್ರಸಾದ್, ಡಿವಿಜನ್ ಆಫೀಸರ್ ಆರ್. ತಿಮ್ಮಯ್ಯ ಸೇರಿದಂತೆ ಗ್ರಾಮದಲ್ಲಿ ೧೫ ಜನ ಸರ್ಕಾರಿ ನೌಕರರಿದ್ದಾರೆ. ಇಟ್ಟಿಗೆ ಫ್ಯಾಕ್ಟರಿ, ಕೋಳಿಫಾರಂಗಳಿವೆ. ಗ್ರಾಮದ ಪಾತಯ್ಯನವರ ಮಗ ನಿಂಗಪ್ಪ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿದ್ದರು.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯತಿ ತಾವರೆಕೆರೆ ಮತ್ತು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತಿದ್ದು, ಈ ಗ್ರಾಮವನ್ನು ಇಬ್ಬರು ಪಂಚಾಯತ್ ಸದಸ್ಯರು ಪ್ರತಿನಿಧಿಸುತ್ತಿದ್ದಾರೆ. ಗ್ರಾಮದಲ್ಲಿ ೪ ಸ್ತ್ರೀ ಶಕ್ತಿ ಸಂಘ, ಗಣಪತಿ ಯುವಕ ಸಂಘಗಳಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಶಾಲೆಗಳಿದ್ದು, ಗ್ರಾಮದ ಸಾಕ್ಷರತಾ ಪ್ರಮಾಣ ೫೪.೧ ರಷ್ಟಿದೆ. ಇದರಲ್ಲಿ ಪುರುಷವು ೬೭.೪, ಮಹಿಳೆಯರು ೪೧.೩.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಮೊದಲಾದ ಸೌಲಭ್ಯಗಳಿವೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ಮೊಸರು ಕುಂಟೆ ಗ್ರಾಮದ ಜಮೀನಿನಲ್ಲಿ ೪ ಮಹಾಸನೆ ಕಲ್ಲು ಕಂಡು ಬರುತ್ತಿದ್ದು, ಒಂದಕ್ಕೆ ಗುಡಿ ಕಟ್ಟಿಸಲಾಗಿದೆ. ಮತ್ತೆರಡು ಕಲ್ಲುಗಳು ಹೊಲದ ಬದುವಿನಲ್ಲಿ ನಿಲ್ಲಿಸಲಾಗಿದೆ. ಈ ಎಲ್ಲವೂ ಕಾಡುಗಲ್ಲಿನಿಂದ ರಚನೆಯಾಗಿದ್ದು, ವಿಜಯನಗರದ ಅರಸರ ಕಾಲದ

ಕಲ್ಲುಗಳಾಗಿವೆ. ಗ್ರಾಮದ ಜನತೆ ಪೂಜಿಸುತ್ತಾರೆ. ಈಶ್ವರ, ಆಂಜನೇಯ. ಭೂತಪ್ಪ, ಲಕ್ಷ್ಮೀದೇವಿ ದೇವರ ಗುಡಿಗಳಿವೆ. ಆಂಜನೇಯನ ಜಾತ್ರೆ ಚೈತ್ರ ಮಾಸದಲ್ಲಿ ನಡೆಯುತ್ತದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ, ರಾಮನವಮಿ ಗ್ರಾಮದ ಪ್ರಮುಖ ಹಬ್ಬಗಳು.

## ಮಾರನಗೆರೆ

ಮಾರನಗೆರೆ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೪ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ೭೫೮ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದ್ದು, ಮಾರನಗೆರೆ ಗೊಲ್ಲರಹಟ್ಟಿ ಈ ಗ್ರಾಮದ ಮಜರೆ ಗ್ರಾವಾಗಿದೆ. ರ‍್ರಾಷ್ಟ್ರೀಯ ಹೆದ್ದಾರಿ ೪ ರ ಎಡಬದಿ ಅಂಟಿಕೊಂಡಿರುವ ಈ ಗ್ರಾಮದಲ್ಲಿ, ಕಂದು ಮರಳು, ಭೂಮಿ ಇದ್ದು, ಉತ್ತರಕ್ಕೆ ಸಣ್ಣ ಕಲ್ಲುಗಳ ಕರಲು ಭೂಮಿಯಾಗಿದೆ. ಪೊದೆ, ಗಿಡಮರ, ಹಳ್ಳ ದಿಣ್ಣೆಗಳ ಈ ನೆಲದಲ್ಲಿ ಮೊಲ, ಕಾಡುಹಂದಿ, ಜಿಂಕೆ, ಮುಂಗುಸಿ, ಬೆಕ್ಕು ಕಂಡು ಬರುತ್ತದೆ. ಗ್ರಾಮದಲ್ಲಿ ಹಳ್ಳಿಕಾರ ತಳಿ ಎತ್ತು, ಎಮ್ಮೆ, ಹಸು, ಕುರಿ, ಮೇಕೆಮ ಸಾಕುತ್ತಾರೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಕೌಜಲಗ, ಗೂಬೆ, ಹದ್ದು, ಗರುಡ, ಮರಕುಟಿಕ ಕಂಡು ಬರುತ್ತದೆ. ಕೋಳಿಯನ್ನು ಗ್ರಾಮದಲ್ಲಿ ಸಾಕು ಪಕ್ಷಿಯಾಗಿ ಸಾಕಲಾಗುವುದು. ಗ್ರಾಮದ ಬದಿಗೆ ಕೆರೆಯಿದ್ದು, ಈ ಪ್ರದೇಶದಲ್ಲಿ ಮಾರಣ್ಣ ಎನ್ನುವವರನ್ನು ಮೊದಲು ವಾಸ ಮಾಡುತ್ತಿದ್ದರಿಂದ ಆತನ ಹೆಸರು ಮತ್ತು ಕೆರೆ ಸೇರಿ ಮಾರನಗೆರೆಯಾಗಿದೆ ಎಂದು ಗ್ರಾಮದ ಹಿರಿಯರು ನರಸಿಂಹಣ್ಣ ಹೇಳುತ್ತಾರೆ.

ಕುಂಚಿಟಿಗರು, ಬೇಡರು, ಆದಿಕರ್ನಾಟಕ, ಕೊರಚರು, ಅಗಸ ಈ ಗ್ರಾಮದ ಸಮುದಾಯವಾಗಿದೆ. ಕಲ್ಲಿನ, ಕಾಂಕ್ರೀಟ್, ಮಣ್ಣಿನ, ಹೆಂಚಿನ ಸ್ವರೂಪದ ೧೭೫ ಮನೆಗಳಿವೆ. ಇವುಗಳಲ್ಲಿ ೨೫ ಮನೆಗಳಲ್ಲಿ ಶೌಚಾಲಯ ಬಳಕೆಯಿದೆ. ಇಂದಿರಾ ಆವಾಸ್, ಆಶ್ರಯ, ಜನತಾ ಅಂಬೇಡ್ಕರ್ ವಸತಿ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ ಬಳಸುವವರಿದ್ದಾರೆ ಬಾಡೂಟ, ಪಾಯಸ ಸಾಂದರ್ಭಿಕ ಆಹಾರವಾಗಿದೆ. ಕೃಷಿ, ಸಾರಿಗೆಗೆ ಟ್ರ್ಯಾಕ್ಟರ್, ಟೆಂಪೋ, ಆಟೋ ಬಳಸುತ್ತಾರೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಅಲಸಂದಿ, ತೊಗರಿ, ಬೆಳೆಯುತ್ತಾರೆ. ಕಂದಾಯ ಶಿಕ್ಷಣ, ಅರಣ್ಯ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದು, ಬೀಡಿ ಕಟ್ಟುವುದು, ಊಟದ ಎಲೆ ತಯಾರಿಸುವುದು ಕಂಡು ಬರುತ್ತದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕ್ಷೇತ್ರ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಗೆ ಬರುತ್ತದೆ. ಅಂಗನವಾಡಿ ಕೇಂದ್ರ, ಹಿರಿಯ ಪ್ರಾಥಮಿಕ ಪಾಠಶಾಲೆ, ೩ ಸ್ತ್ರೀ ಶಕ್ತಿ ಕೇಂದ್ರಗಳಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯವಿದೆ. ಶೇ. ೬೧ ಸಾಕ್ಷರವಂತರಾಗಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲವೇತನ, ವಿಧವಾ ವೇತನದ ಫಲಾನುಭವಿಗಳಿದ್ದು ೭ ಅಂಗಡಿಗಳಿವೆ. ಮಾರಮ್ಮ ಈ ಊರಿನ ಗ್ರಾಮದೇವತೆ. ಒಂದು ಅರ್ಥದಲ್ಲಿ ಈ ಗ್ರಾಮದೇವತೆಯ ಕಾರಣದಿಂದಲೂ ಮಾರಮ್ಮನ ಕೆರೆ ಮಾರನಕೆರೆಯಾಗಿದೆ ಎಂಬ ಹೇಳಿಕೆಯೂ ಗ್ರಾಮಸ್ಥರಿಂದ ವ್ಯಕ್ತವಾಗುತ್ತದೆ. ಆದರೂ ಮಳೆಗಾಲ ಕಡಿಮೆಯಾದುದರಿಂದ ನೀರಿಗೆ ಅಭಾವವಿದ್ದು ಕೆರೆ ಕಳೆದ ಹತ್ತು ವರ್ಷಗಳಿಂದ ತುಂಬಿರುವುದಿಲ್ಲ. ಕುಡಿಯುವ ನೀರಿಗೆ ಗ್ರಾಮ ಪಂಚಾಯ್ತಿ ಮೂಲಕ ಕೊಳಾಯಿಗಳಿಂದ ನೀರನ್ನು ಪೂರೈಸಲಾಗುವುದು. ಈ ಭಾಗದ ಮಳೆಯ ವಾರ್ಷಿಕ ಪ್ರಮಾಣ ೩೯೪ ಮಿ.ಮೀ. ಆಗಿದ್ದು ಉಷ್ಣಾಂಶ ೩೬ ಸೆಂ., ಚಳಿ ೧೨ ಸೆಂ.

ಕರಿಯಮ್ಮನ ಜಾತ್ರೆಯೂ ನಡೆಯುತ್ತಿದ್ದು ಬ್ಯಾಟೆ, ಬಾನ, ಆರತಿ, ಉತ್ಸವ, ಹರಕೆ ಇರುತ್ತವೆ. ಯುಗಾದಿ, ಗೌರಿ, ಗಣೇಶ, ದೀಪಾವಳಿ, ಮಹಾನವಮಿ, ರಾಮನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸಿರಾ-ಚಿತ್ರದುರ್ಗ ರ‍್ರಾಷ್ಟ್ರೀಯ ಹೆದ್ದಾರಿ ಸಂಪರ್ಕ ಹೊಂದಿದ್ದು, ಸಾರಿಗೆ ವ್ಯವಸ್ಥೆ ಉತ್ತಮವಾಗಿದೆ.

## ಮಾರನಗೆರೆ ಗೊಲ್ಲರಹಟ್ಟಿ

ಮಾರನಗೆರೆ ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೪ ಕಿ.ಮೀ. ದೂರದಲ್ಲಿದೆ. ಇದೊಂದು ಮಾರನಗೆರೆಯ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ಮುಖ್ಯ ಗ್ರಾಮದ ೭೫೮ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಮಾರನಗೆರೆ ಪರಿಸರದಲ್ಲೇ, ಸಿರಾ-ಚಿತ್ರದುರ್ಗ ರ‍್ರಾಷ್ಟ್ರೀಯ ಹೆದ್ದಾರಿ ೪ ರಲ್ಲಿ, ತಾವರೆಕೆರೆಯಿಂದ ಅರ್ಧ ಕಿ.ಮೀ. ನಂತರ ಎಡಕ್ಕೆ ತಿರುಗಿ- ಬುಕ್ಕಾಪಟ್ಟಣ, ಗಾಣದ ಹುಣಸೆ ಮಾರ್ಗವಾಗಿ ೨ ಕಿ.ಮೀ. ದೂರದಲ್ಲಿ ಎಂ.ಗೊಲ್ಲರಹಳ್ಳಿ ಇದೆ. ಕಪ್ಪು, ಜೇಡಿ ಮಣ್ಣಿನ ಸ್ವರೂಪ ಹೊಂದಿರುವ ಈ ಗ್ರಾಮ ಪೂರ್ವಕ್ಕೆ ಹಳ್ಳ, ದಕ್ಷಿಣಕ್ಕೆ ಸಣ್ಣ ಕೆರೆ ಹೊಂದಿದೆ. ದಕ್ಷಿಣ ಭಾಗದಲ್ಲಿ ಗುಡ್ಡ,

ಕುರುಚಲು, ಕಾಡು ಇರುವುದರಿಂದ ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ತೋಳ, ಕರಡಿ ಕಂಡು ಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಎತ್ತು ಹಾಗೂ ಕುರಿಗಾರು ಕುರಿ, ಮೇಕೆ, ಕತ್ತೆಗಳನ್ನು ಸಾಕು ಪ್ರಾಣಿಗಳಾಗಿ ಹಾಗೂ ಸಾಕು ಪಕ್ಷಿಯನ್ನಾಗಿ ಕೋಳಿಯನ್ನು ಸಾಕಿದ್ದಾರೆ.

ವಾರ್ಷಿಕ ಸರಾಸರಿ ಮಳೆ ೩೯೪ ಮಿ.ಮೀ. ಮಳೆ ಇದ್ದರೆ, ಚಳಿ ೧೨ ಸೆಂ , ಬಿಸಿಲು ೩೮೦ ಸೆಂ. ಆಗಿರುತ್ತದೆ. ನೀರಿಗೆ ಗ್ರಾಮ ಪಂಚಾಯಿತಿ ವತಿಯಿಂದ ಕೊಳವೆ ಬಾವಿಯ ಮೂಲಕ ಮಿನಿ ಟ್ಯಾಂಕ್‌ಗೆ ಹರಿಸಿ ಅಲ್ಲಿಂದ ನೀರು ಬಿಡಲಾಗುತ್ತಿದೆ. ೨ ಕೈ ಪಂಪುಗಳಿವೆ. ಕಾಡುಗೊಲ್ಲ ಜನಾಂಗ ಮಾತ್ರ ವಾಸಿಸುವ ಈ ಗ್ರಾಮದಲ್ಲಿ ಕನ್ನಡವೇ ಜನ ಸಾಮಾನ್ಯರ ಭಾಷೆ, ಕಲ್ಲಿನ, ಮಾಳಿಗೆಯ, ಮಣ್ಣಿನ, ಹೆಂಚಿನ, ಕಾಂಕ್ರೀಟ್, ಹಾಗೂ ಶೀಟಿನ ೭೬ ಮನೆಗಳಿವೆ. ಇವುಗಳಲ್ಲಿ ೬ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ಜನತಾ, ಇಂದಿರ ಆವಾಸ್, ಆಶ್ರಯ ವಸತಿ ಯೋಜನೆಯ ಫಲಾನುಭವಿಗಳೂ, ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ.

ಇಲ್ಲಿನ ಮುಖ್ಯ ಆಹಾರ ರಾಗಿ ಮುದ್ದೆ. ಅನ್ನ, ರೊಟ್ಟಿ ಬಳಸುವವರಿದ್ದಾರೆ.ಗಳು. ಬಾಡೂಟ, ಸಿಹಿ ಊಟವೂ ಸಾಂದರ್ಭಿಕವಾಗಿರುತ್ತದೆ. ಎತ್ತಿನ ಬಂಡಿ, ಟ್ರ್ಯಾಕ್ಟರ್, ಟ್ರಿಲ್ಲರ್ ದ್ವಿಚಕ್ರ ವಾಹನಗಳು ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಅಲಸಂದಿ, ತೊಗರಿ ಆಹಾರ ಬೆಳೆಗಳು. ಶೇಂಗಾ ಮತ್ತು ಕುರಿ ವ್ಯಾಪಾರ ವಾಣಿಜ್ಯ ಕಸುಬಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಗ್ರಾಮ ಪಂಚಾಯ್ತಿ, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದ್ದು, ಈ ಗ್ರಾಮದಲ್ಲಿ ಒಂದು ಅಂಗನವಾಡಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದೆ. ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೬೧ ರಷ್ಟಿದೆ.

ಪುರುಷರು ಶೇ. ೭೦%, ಮಹಿಳೆಯರು ಶೇ. ೫೧% ಇದ್ದಾರೆ. ಶಿವಣ್ಣ, ನಾಗಣ್ಣ ನಾಟಿ ಔಷಧಿ ನೀಡುವ ಪಶು ಸಂಬಂಧಿ ಚಿಕಿತ್ಸಕರು. ಸ್ಥಳೀಯವಾಗಿ ಹೆಸರಾಗಿದ್ದಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪಠ್ಯ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ಮಾರಮ್ಮ ಗ್ರಾಮದೇವತೆಯಾಗಿದ್ದು, ಒಂದು ಪೌಳಿ ಇದೆ. ಇತ್ತೀಚೆಗೆ ಕೃಷ್ಣ ಮಂದಿರವನ್ನು ನಿರ್ಮಿಸಿದ್ದಾರೆ. ಪ್ರತಿ ವರ್ಷ ಕೃಷ್ಣ ಜಯಂತಿಯನ್ನು ಯಾದವ ಸಂಘದ ಹೆಸರಲ್ಲಿ ಆಚರಿಸುತ್ತಿದ್ದಾರೆ. ಕರಿಯಮ್ಮನ ಜಾತ್ರೆಯನ್ನು ಏಪ್ರಿಲ್, ಮೇ ತಿಂಗಳಲ್ಲಿ ನಡೆಸಿ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಮಾಂಸಾಹಾರದ ವಿಶೇಷ ಭೋಜನದ ವ್ಯವಸ್ಥೆಯೂ ಇರುತ್ತದೆ. ಯುಗಾದಿ, ಮಹಾನವಮಿ, ದೀಪಾವಳಿ, ಗೌರಿಗಣೇಶ ಹಬ್ಬಗಳನ್ನು ಆಚರಿಸುವ ಇವರು ದೀಪಾವಳಿಯನ್ನು ೭ ದಿನಗಳ ಕಾಲ ಹಿರಿಯರ ಹಬ್ಬ, ಹಾಲು ಮೀಸಲು ಹಬ್ಬ, ದೀಪ ಏರುವ ಹಬ್ಬ ಎಂಬ ಹೆಸರಿನಲ್ಲಿ ಆಚರಿಸುವುದು ಸಂಪ್ರದಾಯವಾಗಿದೆ. ಚಿತ್ತಯ್ಯ, ನರಸಿಂಹಜ್ಜ ಜನಪದ ಗಣೆ ವಾದಕರಾಗಿದ್ದು, ಚಿತ್ರದೇವರ, ಎತ್ತಪ್ಪನ ಮೇಲೆ ಪದ ಹಾಡುತ್ತಾರೆ.

ಸೋಬಾನೆ ತಿಪ್ಪಮ್ಮ, ನಿಂಗಮ್ಮ, ಸಾಕಜ್ಜಿ, ರಂಗಮ್ಮ ಸ್ಥಳೀಯವಾಗಿ ಜನಪದ ಸಂಗೀತ ಕಲಾವಿದರಾಗಿ ಗುರುತಿಸಿಕೊಂಡಿದ್ದಾರೆ.

## ಮಾರನಗೆರೆ ಗೊಲ್ಲರಹಟ್ಟಿ ನವಗ್ರಾಮ

ಮಾರನಗೆರೆ ಗೊಲ್ಲರಹಟ್ಟಿಯ ಪೂರ್ವಕ್ಕೆ ಇದರ ವಿಸ್ತರಣೆಯಾಗಿ ಮಾರನಗೆರೆ ಗೊಲ್ಲರಹಟ್ಟಿಯು ನವಗ್ರಾಮವಿದೆ. ಇದು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೪ ಕಿ.ಮೀ. ದೂರವಿದ್ದು ತಾವರೆಕೆರೆ-ಗಾಣದ ಹುಣಸೆ ಮುಖ್ಯ ರಸ್ತೆಯಲ್ಲಿದೆ. ಗಾಣದಹುಣಸೆಯ ಬಲಭಾಗದಲ್ಲಿ ಮಾರನಗೆರೆ ಗೊಲ್ಲರಹಟ್ಟಿ ಶಾಲಾ ಮೈದಾನ ಇದ್ದರೆ ಅದರ ಕೊನೆಯ ತುದಿಗೆ ರಸ್ತೆಯ ಎಡಭಾಗದಲ್ಲಿ ನೂತನ ಬಡಾವಣೆ ನವಗ್ರಾಮ ರಚನೆಯಾಗಿದೆ. ೨೦೦೨ ರಲ್ಲಿ ಈ ಬಡಾವಣೆ ನಿರ್ಮಾಣವಾಗಿದ್ದು ಖಾಲಿ ನಿವೇಶನಕ್ಕೆ ಆಗಿನ ಶಾಸಕರಾಗಿದ್ದು ಪಿ.ಎಂ. ರಂಗನಾಥಪ್ಪ ಹಕ್ಕು ಪತ್ರ ನೀಡಿದ್ದ ಕಾರಣ ಬಡಾವಣೆಗೆ ರಂಗನಾಥ ಬಡಾವಣೆ ಎಂತಲೂ, ಕರೆಯುತ್ತಾರೆ.

ಕಾಡುಗೊಲ್ಲರು ದೊಡ್ಡ ಸಮುದಾಯದವರಾಗಿದ್ದು, ನಾಯಕರು, ಮಡಿವಾಳರು, ಬೆಸ್ತರು ಕಿರು ಸಮುದಾಯವಾಗಿದೆ. ವಿವಿಧ ಪ್ರಕಾರಗಳ ೨೩ ಮನೆಗಳಿದ್ದು, ಶಿಕ್ಷಣ, ನೀರು ಈ ಸೌಲಭ್ಯಗಳನ್ನು ಮುಖ್ಯ ಗ್ರಾಮ ಗೊಲ್ಲರ ಹಟ್ಟಿಯಲ್ಲಿ ಪಡೆಯುತ್ತಾರೆ. ಕುಡಿಯಲು ಗೊಲ್ಲರ ಹಟ್ಟಿಯ ಬೋರ್‌ವೆಲ್, ಹಾಗೂ ಸಿಸ್ಟನ್‌ಗಳ ಮೂಲಕ ನೀರು ಸಂಗ್ರಹಿಸಿಕೊಂಡು, ಅನಂತರ ಮನೆಗಳಿಗೆ ಬಳಸಿಕೊಳ್ಳುತ್ತಾರೆ. ಇದು ಗಾಣದಹುಣಸೆ ರಕ್ಷಿತ ಅರಣ್ಯ ವಲಯದ ಬದಿಗೆ

ಬರುವುದರಿಂದ ಈ ಪರಿಸರದಲ್ಲಿ ಹಂದಿ, ಮೊಲ, ಜಿಂಕೆ, ತೋಳ, ಕರಡಿ ಕಂಡು ಬರುತ್ತವೆ.

ಗ್ರಾಮದಲ್ಲಿ ಕೋಳಿ, ಕುರಿ, ಮೇಕೆ ಸಾಕಲಾಗಿದೆ. ಕೃಷಿ ಹಾಗೂ ಕೃಷಿ ಕಾರ್ಮಿಕರೇ ಹೆಚ್ಚಾಗಿದ್ದಾರೆ. ಕುರಿ ಪೋಷಣೆ ವಿಶೇಷವಾಗಿದೆ. ಈ ಗ್ರಾಮ ಪ್ರತ್ಯೇಕವಾಗಿ ಯಾವುದೇ ದೇವಾಲಯ ಹೊಂದಿಲ್ಲ. ಮುಖ್ಯ ಗ್ರಾಮದ ಮಾರಮ್ಮನಿಗೆ ಊರಹಬ್ಬದ ಸಂದರ್ಭದಲ್ಲಿ ಆರತಿ, ಬ್ಯಾಟೆಯ ಸಂಪ್ರದಾಯವಿದೆ. ಕೃಷ್ಣ ಮಂದಿರವಿದ್ದು, ನವೆಂಬರ್ ತಿಂಗಳ ಕೃಷ್ಣ ಜಯಂತಿ ಉತ್ಸವ ನಡೆಯುತ್ತದೆ. ಉಳಿದಂತೆ ದೀಪಾವಳಿ ವಿಶೇಷವಾಗಿದ್ದು, ಯುಗಾದಿ, ದಸರಾ, ಗೌರಿ–ಗಣೇಶನ ಹಬ್ಬ ಆಚರಿಸುತ್ತಾರೆ.

## ಮುಸಕಲೋಟಿ

ಮುಸಕಲೋಟಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಒಟ್ಟು ಭೌಗೋಳಿಕ ವಿಸ್ತೀರ್ಣ ೬೪೨.೮ ಹೆಕ್ಟೇರ್ ಹೊಂದಿದೆ. ಕರೇಕಲ್ಲು ಹಟ್ಟಿ, ಚೌಳಹಟ್ಟಿ ಎಂಬ ಎರಡು ಕಾಡುಗೊಲ್ಲರ ಹಟ್ಟಿಗಳು ಮಜರೆ ಗ್ರಾಮಗಳಾಗಿವೆ. ಮುಸಕಲೋಟಿ ಎಂಬುದು, ಮುಸುಕು ಒಕ್ಕಲಿಗರ ಒಂದು ಬೆಡಗಾಗಿದ್ದು, ಆರಂಭದಲ್ಲಿ ಇದೇ ಮೂಲದವರು ಇಲ್ಲಿ ನೆಲೆಸಿದ್ದರಿಂದ ಮುಸಕರ ಹಟ್ಟಿ– ಮೌಖಿಕ ಪರಂಪರೆಯಲ್ಲಿ ಮುಸಕಲೋಟಿಯಾಗಿದೆ ಎಂದು ಯಂಜಲಗೆರೆ ಚಿಕ್ಕಣ್ಣನವರ ಅಭಿಪ್ರಾಯವಾಗಿದೆ. ಆದರೆ ಇಂದು ಕುಂಚಿಟಿಗ ವರ್ಗದ ಒಂದು ಮನೆ ಮಾತ್ರ ಗ್ರಾಮದಲ್ಲಿವೆ. ಲೋಟಿ ಎಂದರೆ ಬಿದಿರು ಮೆಳೆಗಳ ಪ್ರದೇಶ ಎಂಬ ಅರ್ಥವೂ ಇದ್ದು ಬಿದಿರು ಬೆಳೆಯುವ ಪ್ರದೇಶದಲ್ಲಿ ಮನೆ ನಿರ್ಮಿಸಿಕೊಂಡಾ ಮುಸುಕಲೋಟಿ ಎಂದು ಕರೆದಿರುವ ಸಾಧ್ಯತೆಯೂ ಇದೆ. ಮರಳು, ಕಪ್ಪು ಚೌಳು ಮಣ್ಣಿನಿಂದ ಕೂಡಿದ್ದು ಗ್ರಾಮದ ಮುಂಭಾಗದಲ್ಲಿ ಕೆರೆ ಇದ್ದು, ಉತ್ತರಕ್ಕೆ ದಿಣ್ಣೆ ಇದೆ. ಮೊಲ, ನರಿ, ಮುಂಗುಸಿ ಮೊದಲಾದ ಕಾಡು ಪ್ರಾಣಿಗಳು, ಗ್ರಾಮದ ದಿಣ್ಣೆಗಳಲ್ಲಿ ಕಂಡು ಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ. ಪಕ್ಷಿಗಳಾದ ಗಿಳಿ, ಕಾಗೆ, ಗೂಬೆ, ಹದ್ದು, ಗೊರವಂಕ, ಬೆಳವ ಈ ಮುಂತಾದ ಪಕ್ಷಿಗಳು ಕಂಡು ಬರುತ್ತವೆ. ಕೋಳಿ ಗ್ರಾಮದ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ೪೬೩ ಮಿ.ಮೀ ಮೀಟರ್ ಮಳೆ ಬೀಳುವ ಇಲ್ಲಿ ಚಳಿಯು ೧೨೦ ಸೆಂ., ಬಿಸಿಲು ೩೯೦ ಸೆಂ. ಇದೆ. ಕುಡಿಯುವ ನೀರಿಗೆ ಗ್ರಾಮ ಪಂಚಾಯ್ತಿ ವತಿಯಿಂದ ೬ ಸಿಸ್ಟನ್‌ಗಳಲ್ಲಿ, ೨ ಕೈ ಪಂಪುಗಳ ಮೂಲಕ ೪೮ ನಲ್ಲಿ ಸಂಪರ್ಕದ ಮೂಲಕ ನೀರನ್ನು ಪೂರೈಸಲಾಗುವುದು.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿ ಕರ್ನಾಟಕದವರು ದೊಡ್ಡ ಸಮುದಾಯವಾಗಿದ್ದು, ಬಣಜಿಗ, ಕುಂಚಿಟಿಗ, ಅಗಸ, ಬೇಡರು, ಮುಸ್ಲಿಂ ಸಣ್ಣ ಸಮುದಾಯವಾಗಿದೆ. ಗ್ರಾಮದಲ್ಲಿ ಕಾಂಕ್ರೀಟ್, ಮಣ್ಣಿನ, ಕಲ್ಲಿನ, ಹೆಂಚಿನ, ಶೀಟಿನ ಒಟ್ಟು ೧೬೮ ಮನೆಗಳಿವೆ. ೧೦೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಆಶ್ರಯ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿದ್ದು, ಭಾಗ್ಯ ಜ್ಯೋತಿ ವಿದ್ಯುತ್ ಸಂಪರ್ಕ ಹೊಂದಿದ ಮನೆಗಳು ಇವೆ. ರಾಗಿ ಮುದ್ದೆ, ಗ್ರಾಮದ ಮುಖ್ಯ ಆಹಾರ, ರೊಟ್ಟಿ, ಅನ್ನ ಅಮುಖ್ಯ ಆಹಾರವಾಗಿದ್ದು, ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿ, ಟ್ರ್ಯಾಕ್ಟರ್, ಮಿನಿ ಆಟೋ, ದ್ವಿಚಕ್ರ ವಾಹನಗಳಿವೆ. ಗ್ರಾಮದಲ್ಲಿ ಶೇಂಗಾ ಮುಖ್ಯ ಬೆಳೆ. ಹಿಂದೆ ಈ ಗ್ರಾಮ ತಂಬಾಕು ಬೆಳೆಗೆ ಹೆಸರುವಾಸಿಯಾಗಿದ್ದು, ಈಗ ಈ ಬೆಳೆಯನ್ನು ನಿಲ್ಲಿಸಲಾಗಿದೆ. ೭೮೩ ಜನಸಂಖ್ಯೆ ಹೊಂದಿದ್ದಾರೆ.

ತೆಂಗು, ಅಡಿಕೆ, ರೇಷ್ಮೆ ವ್ಯಾಪಾರಿ ಬೆಳೆಗಳು. ನಿವೃತ್ತಿ ಶಿಕ್ಷಣಾಧಿಕಾರಿ ಕೆಂಚಮಾರಯ್ಯ ಸೇರಿದಂತೆ ಈ ಗ್ರಾಮದಲ್ಲಿ ೪ ಜನ ನೌಕರರಿದ್ದು ಕೆಂಚಮಾರಯ್ಯ ಮಧುಗಿರಿ ತಾಲ್ಲೂಕು ಮಿಡಗೇಶಿ ಜಿಲ್ಲಾ ಪಂಚಾಯಿತಿಯಿಂದ ಜಿಲ್ಲಾ ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಗ್ರಾಮದಲ್ಲಿ ಬೀಡಿ ಸುತ್ತುವುದು, ವಿತರಣೆಯೂ ಇದೆ. ಊಟದ ಎಲೆ ಕಟ್ಟುವುದು, ರಾಗಿ ಮಿಲ್ ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರವಾಗಿದ್ದು, ದ್ವಾರನಕುಂಟೆ ಗ್ರಾಮ ಪಂಚಾಯಿತಿ ಕ್ಷೇತ್ರವಾಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಈ ಗ್ರಾಮ ೪ ಸ್ತ್ರೀ ಶಕ್ತಿ ಕೇಂದ್ರ ಒಳಗೊಂಡಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆಗಳನ್ನು ಒಳಗೊಂಡಿರುವ ಇಲ್ಲಿನ ಶಿಕ್ಷಣ ವ್ಯವಸ್ಥೆ, ಪ್ರಾಥಮಿಕ ಶಾಲೆಯಲ್ಲಿ ಇಬ್ಬರು ಶಿಕ್ಷಕರು, ೩೯ ಮಕ್ಕಳಿದ್ದಾರೆ. ಅಂಗನವಾಡಿಯಲ್ಲಿ ೨೦ ಮಕ್ಕಳಿದ್ದು, ಒಬ್ಬರು ಶಿಕ್ಷಕಿ ಇದ್ದಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೫೧.೭. ಮಹಿಳೆಯರು ಶೇ. ೩೮.೨ , ಪುರುಷರು ಶೇ. ೬೩ ರಷ್ಟು ಸಾಕ್ಷರವಂತ ರಿದ್ದಾರೆ. ೧೫ ಸಂಧ್ಯಾ ಸುರಕ್ಷೆ, ೨ ವಿಕಲ ಚೇತನ, ೧೨ ವಿಧವಾ ವೇತನ ಫಲಾನುಭವಿಗಳಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಭೈರವೇಶ್ವರ, ಲಕ್ಷ್ಮಿ, ಶನಿದೇವರು, ಮಾರಮ್ಮ ದೇವಾಲಯಗಳಿವೆ. ಮಾರಮ್ಮನ ಊರಹಬ್ಬ ವಿಜೃಂಭಣೆಯಿಂದ ನಡೆದು, ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಾಗಿದೆ.

ಯುಗಾದಿ, ದೀಪಾವಳಿ, ದಸರಾ ಹಬ್ಬಗಳನ್ನು ಆಚರಿಸುತ್ತಾರೆ. ಪುಟ್ಟರಾಜು ಜನಪದ ಹಾಡುಗಾರಿಕೆಯರ ಕಲಾವಿದ ಸ್ಥಳೀಯವಾಗಿ ಹೆಸರಾಗಿದ್ದಾರೆ. ಜಗಜೀವನರಾಂ ಸಂಘ, ದಲೀತ ಸಂಘರ್ಷ ಸಮಿತಿ, ರೈತ ಸಂಘದ ಶಾಖೆಗಳಿವೆ. ಮುಸುಕಲೋಟಿ ಕೊಟ್ಟಿ, ಯಂಜಲಗೆರೆ ಮಾರ್ಗವಾಗಿ ಕಚ್ಚಾ ರಸ್ತೆ ಇದ್ದು, ಖಾಸಗಿ ಬಸ್ ಸಂಚಾರವಿದೆ.

## ಮುಕುಂದಪ್ಪನ ಪಾಳ್ಯ

ಮುಕುಂದಪ್ಪನ ಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೮ ಕಿ.ಮೀ. ದೂರದಲ್ಲಿದೆ. ಇದು ಯಂಜಲಗೆರೆಯ ಉಪಗ್ರಾಮವಾಗಿದ್ದು, ಸಂಕ್ಷಿಪ್ತವಾಗಿ ಎಂ.ಕೆ. ಪಾಳ್ಯ ಎಂದು ಕರೆಯಲಾಗುವುದು. ಆ ಮಟ್ಟಿಗೆ ಮೂಲ ಹೆಸರು ಮರೆತು ಹೋಗಿದೆ. ಇದರ ಭೌಗೋಳಿಕ ವ್ಯಾಪ್ತಿ ೧೮೩.೦೭ ಹೆಕ್ಟೇರ್ ಆಗಿದ್ದು, ಸಿರಾ–ಪಟ್ಟನಾಯಕನಹಳ್ಳಿ ಹುಲಿಕುಂಟೆ ರಸ್ತೆ ಮಾರ್ಗದ ಎಂ.ಕೆ ಪಾಳ್ಯ ಗೇಟಿನಿಂದ ೧ ಕಿ.ಮೀ ದೂರದಲ್ಲಿದೆ. ಮುಕುಂದಪ್ಪ ಎಂಬ ವ್ಯಕ್ತಿಯ ಹೆಸರಿನಿಂದ ಗ್ರಾಮ ರಚನೆಯಾಗಿದ್ದು, ಆ ಪರಂಪರೆಯ ಮನೆಯವರು ನಾವು ಎಂದೇ ಉಪನ್ಯಾಸಕ ಪ್ರೋ॥ ಮುರವರ್ಧನ ಅಭಿಪ್ರಾಯ ಪಡುತ್ತಾರೆ.

ಕೆಂಪು ಮಿಶ್ರಿತ ಮರಳು, ಮಣ್ಣು ಹೊಂದಿರುವ ಇಲ್ಲಿನ ನೆಲ ಶೇಂಗಾ ಬೆಳೆಗೆ ಉಪಯುಕ್ತವಾದುದು ಈ ಪರಿಸರದಲ್ಲಿ ಮರ, ಗಿಡಗಳು ಪೊದೆಗಳಿಂದ ಕೂಡಿದೆ. ಇಲ್ಲಿ ನರಿ, ಮೊಲ, ಉಡ, ಬಾರುಬೆಕ್ಕು, ಕಾಡುಹಂದಿ ಕಂಡು ಬರುತ್ತವೆ. ಪಕ್ಷಿಗಳಾದ ಗಿಳಿ, ಗೀಜಗ, ಗೂಬೆ, ಗೊರವಂಕ, ನವಿಲು, ಕೋಗಿಲೆ, ಕೌಜಲಗ, ಬೆಳವ, ಕೊಕ್ಕರೆ ಹಕ್ಕಿಗಳು. ಸಾಕು ಪಕ್ಷಿಯಾಗಿ ಕೋಳಿಯನ್ನು ಸಾಕಲಾಗುವುದು. ಪ್ರಾಣಿಗಳಾಗಿ ಹಸು, ಎಮ್ಮೆ, ಎತ್ತು, ಕುರಿ, ಆಡು, ನಾಯಿ ಕಂಡು ಬರುತ್ತವೆ. ಸರಾಸರಿ ಮಳೆ ಪ್ರಮಾಣ ೫೮೦ ಮಿ.ಮೀ. ಆಗಿದ್ದು. ಚಳಿ ೧೨ಂ ಸೆಂ. ಇದ್ದು, ಬಿಸಿಲಿನ ತಾಪ ೩೯–೪೦ಂ ಸೆಂ ಇರುತ್ತದೆ. ಈ ಪರಿಸರದಲ್ಲಿ ಕೃಷಿಗೆ ಸಂಬಂಧಿಸಿದಂತೆ ೨೯ ಬೋರ್ ವೆಲ್‌ಗಳಿವೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ೨ ಚಿಕ್ಕ ಟ್ಯಾಂಕ್‌ಗಳಿವೆ. ೧ ಕೈ ಪಂಪು ಸಹ ಇದೆ. ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದೆ. ಹಾಗೂ ೬೨ ಮನೆಯಗಳ ಪೈಕಿ ೫೯ ಮನೆ ಒಂದೇ ಸಮುದಾಯದ ಮನೆಗಳು. ೩ ಮನೆ ಅಗಸರ ಸಮುದಾಯಕ್ಕೆ ಸೇರಿದ್ದು ಕಿರು ಸಮುದಾಯವಾಗಿದೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ, ಮನೆಗಳಿದ್ದು ೨೩ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ಗ್ರಾಮದ ಜನಸಂಖ್ಯೆ ೩೫೭ ಆಗಿರುತ್ತದೆ. ವಸತಿ ಯೋಜನೆಗಳಾದ ಆಶ್ರಯ, ಜನತಾ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೬ ಫಲಾನುಭವಿಗಳು ಇದ್ದಾರೆ. ಶಿಕ್ಷಕರು, ಖಾಸಗಿ ವಕೀಲ ಲೆಂಕಪ್ಪ ಈ ಗ್ರಾಮದವರೆಂಬುದು ವಿಶೇಷ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು, ರೊಟ್ಟಿ, ದೋಸೆ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿರುತ್ತದೆ. ಸಾಂಪ್ರದಾಯಿಕ ವಾಹನವಾದ ೪ ಎತ್ತಿನ ಗಾಡಿಯ ಜೊತೆಗೆ ಆಧುನಿಕ ವಾಹನವಾದ ಟ್ರ್ಯಕ್ಟರ್, ಟೆಂಪೋ, ಆಟೋ ಬಳಕೆಯಲ್ಲಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ಆಹಾರ ಬೆಳೆಗಳಾಗಿ ರಾಗಿ, ಜೋಳ, ಭತ್ತ, ತೊಗರಿ, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ ಬೆಳೆಗಳಿವೆ. ಹುಣಸೇ ಹಣ್ಣು, ಎತ್ತಿನ ವ್ಯಾಪಾರ ಗ್ರಾಮದಲ್ಲಿದೆ. ಉಪನ್ಯಾಸಕರು, ಶಿಕ್ಷಕರು, ಆರೋಗ್ಯ ಇಲಾಖೆಯ ೪ ಜನ ಸರ್ಕಾರಿ ನೌಕರರಿದ್ದಾರೆ. ವಕೀಲರಾದ ಉಂಕಪ್ಪನವರು ಈ ಗ್ರಾಮದ ವಿಶೇಷ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಗುಂಟೆ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕ್ಷೇತ್ರ ಮತ್ತು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಈ ಗ್ರಾಮ ಬರುತ್ತದೆ. ಒಬ್ಬರು ಈ ಗ್ರಾಮದ ಪಂಚಾಯತ್ ಸದಸ್ಯರಿದ್ದಾರೆ. ಸಿರಾ ತಹಶೀಲ್ದಾರ್ ಕಛೇರಿ, ವಿದ್ಯುತ್ ಇಲಾಖೆಗೆ ಸಿರಾ, ಪೋಲೀಸ್ ರಕ್ಷಣೆಗೆ ಬರಗೂರು ಸಂಪರ್ಕಿಸಬೇಕಿದೆ. ೨ ಸ್ತ್ರೀ ಶಕ್ತಿ ಗುಂಪು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪುಗಳಿದ್ದು, ಗ್ರಾಮದ ಆರ್ಥಿಕ ಚಟುವಟಿಕೆಗೆ ಪ್ರೇರಕವಾಗಿದೆ. ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಶಾಲೆ ಇದೆ. ಶಾಲೆಯಲ್ಲಿ ಬಿಸಿ ಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪಠ್ಯ ಪುಸ್ತಕಗಳ ಸೌಕರ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೭.೩ ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆಯ ಫಲಾನುಭವಿಗಳಿದ್ದು, ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಉಂಕಿಮಲೆ ಮೂಲದ ಜೋಗಪ್ಪ ದೇವಾಲಯವಿದ್ದು, ಹೆಚ್ಚು ಇದರ ಒಕ್ಕಲಾಗಿದ್ದಾರೆ. ಕರಿಯಮ್ಮ, ಗೌರಸಂದ್ರದ ಮಾರಮ್ಮ ಊರಹಬ್ಬ ಮಾಡಿ, ಬಲಿ, ಆರತಿ, ಹರಕೆ ಸಂಪ್ರದಾಯವಿದೆ.

ಯುಗಾದಿ, ದೀಪಾವಳಿ, ಬಸವಜಯಂತಿ, ದಸರಾ, ಕುಂತಮ್ಮ, ಗೌರಮ್ಮ ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ನಡೆಸುತ್ತಾರೆ. ಕಲಾವಿದರು, ನಾಟಿ ವೈದ್ಯರಾದ ಡಾ. ಗುರುಸಿದ್ದಪ್ಪ ಮತ್ತು ನಾಗಣ್ಣ ಎಂಬ ೭೦ ವರ್ಷದ ನಾಟಿ ವೈದ್ಯರಿದ್ದು, ವಿಷ ಜಂತುಗಳಿಗೆ ಸಂಬಂಧಿಸಿದ ಔಷಧಿ ನೀಡುತ್ತಾ ಸ್ಥಳೀಯವಾಗಿ ಪ್ರಸಿದ್ಧರಾಗಿದ್ದಾರೆ. ಒಂದು ಭಜನಾ ಕಲಾತಂಡವಿದೆ.

## ಮೇಲಗಿರಿ ಪಾಳ್ಯ

ಎಂ.ಜಿ.ಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೨ ಕಿ.ಮೀ. ದೂರದಲ್ಲಿದೆ. ಮೇಲುಗಿರಿ ಪಾಳ್ಯ ಎನ್ನುವುದು ಈ ಗ್ರಾಮದ ಪೂರ್ಣ ಹೆಸರಾಗಿದ್ದು, ಕಾಲಾನುಕ್ರಮದಲ್ಲಿ ಎಂ.ಜಿ. ಪಾಳ್ಯ ಎಂದು ವಾಡಿಕೆಯಾಗಿದೆ. ಸಿರಾದ ಜನಗಣತಿ ವರದಿ, ಭೂದಾಲೆ ಹಾಗೂ ಗ್ರಾಮ ಪಂಚಾಯಿತಿ ಖಾತೆಯಲ್ಲಿ ಮಜರೆ ಗ್ರಾಮವಾಗಿದ್ದು, ವ್ಯಕ್ತಿಯ ಹೆಸರಲ್ಲೇ ಗ್ರಾಮ ನಿರ್ಮಾಣವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ಮೂಲ ಗ್ರಾಮ ತಡಕಲೂರು ಗ್ರಾಮದಲ್ಲಿ ಸೇರ್ಪಡೆಯಾಗಿದೆ. ಮರಳು, ಕೆಂಪು, ಬಿಳಿ ವರ್ಣದ ಮಣ್ಣಿನ ಗುಣ ಹೊಂದಿರುವ ಇಲ್ಲಿನ ನೆಲದಲ್ಲಿ ಕುರುಚಲು ಗಿಡ, ಮರ, ಪೊದೆಗಳಿವೆ. ತಿರುಪತಿ ಜನರ ಬಾಯಲ್ಲಿ ಮೇಲುಗಿರಿಯಾಗಿದ್ದು ಇದೇ ಹೆಸರಿನಲ್ಲಿ ಮೇಲುಗಿರಿ ಎಂದು ಕರೆಯಲಾಗಿದೆ.

ಇದರಲ್ಲಿ ಮೊಲ, ನರಿ, ಹುಲ್ಲೆಕರು, ಉಡ ಮೊದಲಾದವು ಕಂಡು ಬರುತ್ತವೆ. ಗ್ರಾಮದಲ್ಲಿ ರೈತಾಪಿ ಜನರು, ಹಸು, ಎಮ್ಮೆ, ಎತ್ತುಗಳನ್ನು ಸಾಕುತ್ತಾರೆ. ಕೋಳಿಗಳ ಸಾಕಾಣಿಕೆಯೂ ಇಲ್ಲಿದೆ. ಕೋಗಿಲೆ, ಗೊರವಂಕ, ಗಿಳಿ, ಹಾಗೂ ಮರಕುಟಿಕ ಇಲ್ಲಿ ಕಂಡು ಬರುವ ಕಾಡು ಪಕ್ಷಿಗಳಾಗಿವೆ.

ವಾರ್ಷಿಕ ಸರಾಸರಿ ೪೫೮ ಮಿ.ಮೀ. ಮಳೆ ಬೀಳುವ ಇಲ್ಲಿ, ಬಿಸಿಲು ೩೬೦ ಸೆಂ. ಇದ್ದು, ಚಳಿ ೧೨೦ ಸೆಂ. ಇರುತ್ತದೆ. ಕುಡಿಯುವ ನೀರನ್ನು ತಡಕಲೂರು ಗ್ರಾಮ ಪಂಚಾಯ್ತಿ ವತಿಯಿಂದ ೪ ಕೊಳವೆ ಬಾವಿಗಳ ಮೂಲಕ ಮಿನಿ ಟ್ಯಾಂಕ್‌ಗೆ ಹರಿಸಿ ಅಲ್ಲಿಂದ ಪೂರೈಸಲಾಗುವುದು.

ಕುಂಚಿಟಿಗರು, ಈ ಗ್ರಾಮದಲ್ಲಿ ಪೂರ್ಣ ಪ್ರಮಾಣದಲ್ಲಿ ವಾಸಿಸುತ್ತಿದ್ದಾರೆ. ೨ ಕುಟುಂಬ ಅಗಸರು ಇದ್ದಾರೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹಾಗೂ ಶೀಟಿನ ಮನೆಗಳಿವೆ.

ರಾಗಿ ಮುದ್ದೆ ಪ್ರಮುಖ ಆಹಾರವಾಗಿದ್ದು, ರೊಟ್ಟಿ, ಅನ್ನ ಬಳಸುತ್ತಾರೆ ಬಾಡೂಟ, ಹೋಳಿಗ ವಿಶೇಷ ಆಹಾರವಾಗಿದೆ. ಸಂಪ್ರದಾಯಕ ವಾಹನವಾದ ಟ್ರ್ಯಕ್ಟರ್ ಇದ್ದು, ದ್ವಿಚಕ್ರ ವಾಹನ ಬಳಕೆಯಲ್ಲಿದೆ. ೮೪ ಮನೆಗಳಿದ್ದು ೪೧೬ ಜನಸಂಖ್ಯೆ ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ತಡಕಲೂರು ಗ್ರಾಮ ಪಂಚಾಯಿತಿಗೆ ಸೇರಿರುವ ಈ ಗ್ರಾಮ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ತಡಕಲೂರು ಗ್ರಾಮ ಪಂಚಾಯಿತಿ ಒಬ್ಬ ಸದಸ್ಯರು ಈ ಗ್ರಾಮದ ಪ್ರತಿನಿಧಿಗಳಾಗಿದ್ದಾರೆ. ೨ ಸ್ತ್ರೀ ಶಕ್ತಿ ಸಂಘದ ಘಟಕಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಇದ್ದು, ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಶಾಲೆ ಇದ್ದು, ಮೂವರು ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೬೬.೨ ರಷ್ಟಿದ್ದು, ಶೇ. ೫೯.೪ ಮಹಿಳೆಯರು, ೭೨.೬ ರಷ್ಟು ಪುರುಷರು ಸಾಕ್ಷರವಂತರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನ ಫಲಾನುಭವಿಗಳಿದ್ದು, ಒಂದು ಅಂಗಡಿ ಇದೆ. ಗ್ರಾಮದಲ್ಲಿ ಜೋಗಪ್ಪನ ದೇವಾಲಯವಿದು, ಊರಹಬ್ಬ ಮಾಡುತ್ತಾರೆ. ದೀಪಾವಳಿ, ಗೌರಿ, ಯುಗಾದಿ, ಮಹಾನವಮಿ ವಿಶೇಷ ಹಬ್ಬಗಳು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯವಿದೆ. ಗ್ರಾಮದಲ್ಲಿ ೨೬ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ತಡಕಲೂರು ಎಂ.ಜಿ.ಪಾಳ್ಯದ ನಡುವೆ ಜಿಲ್ಲಾ ರಸ್ತೆ ಹಾದು ಹೋಗಿದೆ.

## ಮೂಡ್ಲೇನಹಳ್ಳಿ

ಮೂಡ್ಲೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಇದು ದೊಡ್ಡ ಬಾಣಗೆರೆ ಗ್ರಾಮದ ಮಜರೆ ಗ್ರಾಮವಾಗಿರುವ ಇದರ ಭೌಗೋಳಿಕ ವಿಸ್ತೀರ್ಣ ೮೩.೪ ಹೆಕ್ಟೇರ್ ಇದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿರುವ ಇಲ್ಲಿನ ಪರಿಸರದಲ್ಲಿ ತೋಳ, ನರಿ, ಮುಂಗುಸಿ, ಮೊಲ, ಜಿಂಕೆ ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕಿದ್ದಾರೆ. ಪಕ್ಷಿಗಳಾದ ಕಾಗೆ, ಕೋಗಿಲೆ, ಗೊರವಂಕ, ಬೆಳವ, ಹದ್ದು ಹಾಗೂ ಗಿಳಿ ಕಂಡು ಬಂದರೆ ಕೋಳಿ ಸಾಕು ಪಕ್ಷಿಯಾಗಿ ಕಂಡು ಬರುತ್ತದೆ. ಮೂಡಲಗಿರಿ ತಿಮ್ಮಪ್ಪನ ಒಕ್ಕಲಾಗಿದ್ದು ಮೂಡಲಯ್ಯ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಮೂಡ್ಲೇನಹಳ್ಳಿ ಎಂದಾಗಿದೆ.

ಸರಾಸರಿ ೪೮೮೪ ಮಿ.ಮೀ. ಮಳೆ ಬೀಳುವ ಈ ಪ್ರದೇಶದಲ್ಲಿ ೧೨೦ ಸೆಂ. ಚಳಿ ಇದ್ದು ಹಾಗೂ ೪೦೦ ಸೆಂ. ಉಷ್ಣಾಂಶದಿಂದ ಕೂಡಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ

ನೀರು ಪೂರೈಸಲಾಗುತ್ತಿದೆ. ಚಿಕ್ಕ ಎರಡು ಟ್ಯಾಂಕ್‌ಗಳಿದ್ದು, ೧ ಕೈ ಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ನಾಯಕರು, ಆದಿ ಕರ್ನಾಟಕ ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೨೪ ಮನೆಗಳಿದ್ದು, ಕಾಂಕ್ರೀಟ್, ಹೆಂಚಿನ, ಮಣ್ಣಿನ ಮನೆಗಳಿದ್ದು, ೧೨ ಶೀಟಿನ ಮನೆಗಳಿವೆ. ೧೦೮ ಜನಸಂಖ್ಯೆ ಹೊಂದಿದ್ದು, ೮ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ೬ ಜನತಾ ಮನೆಗಳಿವೆ.

ರಾಗಿ ಮುದ್ದೆ ಪ್ರಧಾನ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ. ವಿಶೇಷ ಸಂದರ್ಭದಲ್ಲಿ ಹೋಳಿಗೆ, ಪಾಯಸ ವಿಶೇಷ ಅಡಿಗೆಯಾಗಿವೆ.

ಸಾಂಪ್ರದಾಯಿಕ ವಾಹನವಾದಿ ಎತ್ತಿನಗಾಡಿ, ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದ್ದು, ಗ್ರಾಮದ ಮುಖ್ಯ ಬೆಳೆ ಶೇಂಗಾ. ಆಹಾರ ಬೆಳೆಗಳಾಗಿ ಅಲಸಂದಿ, ರಾಗಿ, ಜೋಳ, ಹಾಗೂ ತೊಗರಿ ಬೆಳೆಯುತ್ತಾರೆ. ಹುಣಸೆಹಣ್ಣು, ಸೂರ್ಯಕಾಂತಿ, ಶೇಂಗಾ ವ್ಯಾಪಾರವೂ ಇದೆ. ಶಿಕ್ಷಕರು, ಸಾರಿಗೆ ಇಲಾಖೆಯ ಇಬ್ಬರು ನೌಕರರಿದ್ದಾರೆ.

ಸಿರಾ ವಿಧಾನ ಸಭೆ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಹಾಗೂ ಬಾಣಗೆರೆ ಗ್ರಾಮ ಪಂಚಾಯಿತಿ ಕ್ಷೇತ್ರ ಹೊಂದಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ಶಾಲೆಯಲ್ಲಿ ೨೪ ಮಕ್ಕಳಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ಸೌಲಭ್ಯಗಳಿವೆ. ಸಾಕ್ಷರತೆ ೬೨.೧ ರ ಪ್ರಮಾಣದಲ್ಲಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ಚೇತನ, ಸೌಲಭ್ಯ ಪಡೆದವರಿದ್ದು ಒಂದು ಪೆಟ್ಟಿಗೆ ಅಂಗಡಿ ಇದೆ. ಗ್ರಾಮದಲ್ಲಿ ಅರಳಿ ಕಟ್ಟೆ ಇದ್ದು, ೨ ಕರುಗಲ್ಲುಗಳಿವೆ.

ಗ್ರಾಮದಲ್ಲಿ ರಾಮದೇವರು, ಭೂತಪ್ಪನ ಪೌಳಿಗಳಿವೆ. ಭೂತಪ್ಪನಿಗೆ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯ ಊರ ಹಬ್ಬದ ರೀತಿಯಲ್ಲಿ ನಡೆಸಲಾಗುವುದು. ವಸತಿ ಸೌಲಭ್ಯಗಳಾದ ಆಶ್ರಯ, ಜನತಾ, ಅಂಬೇಡ್ಕರ್ ವಸತಿ ಫಲಾನುಭವಿಗಳಿದ್ದು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ. ಯುಗಾದಿ, ದೀಪಾವಳಿ, ಗೌರಿ ಗಣೇಶ, ನವಮಿ ಹಾಗೂ ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮರುಳಪ್ಪನಹಳ್ಳಿ

ಮರುಳಪ್ಪನಹಳ್ಳಿ ಸಿರಾ ತಾಲ್ಲೂಕಿನ ಪೂರ್ವಕ್ಕೆ ಕಳ್ಳಂಬೆಳ್ಳ-ಸಿರಾ ರ್‍ಾ್ರಯ ಹೆದ್ದಾರಿಯಲ್ಲಿ ಸಿರಾ ತಾಲ್ಲೂಕು ಕೇಂದ್ರದಿಂದ ೧೩ ಕಿಮೀ ದೂರದಲ್ಲಿದೆ. ಕಳ್ಳಂಬೆಳ್ಳದಿಂದ ಸ್ವಲ್ಪ ಮುಂದೆ ಮಳ್ಳಪ್ಪನಹಳ್ಳಿ ಗೇಟಿನ ಬಳಿ ಎಡಕ್ಕೆ ತಿರುಗಿ ಒಂದು ಕಿಮೀ ದೂರದ ಈ ಹಳ್ಳಿ ಭೂಪಸಂದ್ರದ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೨೪೦ ಹೆಕ್ಟೇರ್ ಆಗಿದೆ.

ಮರುಳಪ್ಪ ಎಂಬ ವ್ಯಕ್ತಿ ಈ ಗ್ರಾಮದ ರಚನೆಗೆ ಪ್ರೇರಕನಾಗಿದ್ದು ಆತನ ಹೆಸರಿನಲ್ಲಿಯೇ ಗ್ರಾಮ ರಚನೆಯಾಗಿದೆ. ಉತ್ತಮ ರಸ್ತೆ ಸಂಪರ್ಕವಿದ್ದು ಇಲ್ಲಿಂದ ಮಧುಗಿರಿ, ಬಡವನಹಳ್ಳಿಗೂ ಸಂಪರ್ಕವಿದೆ. ಕೆಂಪು ಮಿಶ್ರಿತ ಮಣ್ಣನ್ನು ಹೊಂದಿದ್ದು ಪೂರ್ವ-ಪಶ್ಚಿಮ ಒಂದು ಹಳ್ಳವಿದೆ. ಮಳೆಗಾಲದಲ್ಲಿ ಮಾತ್ರ ನೀರಿನ ಒರತೆ ಇರುತ್ತದೆ. ಉಳಿದಂತೆ ನೀರಿನ ಸೌಕರ್ಯ ಇರುವುದಿಲ್ಲ. ಉತ್ತರಕ್ಕೆ ಬಯಲು, ದಿಣ್ಣೆ, ಕುರುಚಲು ಗಿಡ, ಪಶ್ಚಿಮಕ್ಕೆ ತೋಟಗಾರಿಕೆ ಹೊಂದಿರುವ ಈ ಗ್ರಾಮ ದಕ್ಷಿಣಕ್ಕೆ ರ್‍ಾ್ರಯ ಹೆದ್ದಾರಿಯ ಬಳಿ ಕೆಲವು ಅಂಗಡಿಗಳು, ಗ್ಯಾರೇಜ್ ಹೋಟೆಲ್ ರಚನೆಯಾಗಿದ್ದು ಒಂದು ಮಸೀದಿಯೂ ರಚನೆಯಾಗಿದೆ.

ಇದೇ ಪರಿಸರದಲ್ಲಿ ಹಿರಿಯ ಸಾಹಿತಿ ಪ್ರೊ. ಶಿವರಾಮಯ್ಯನವರು ತೋಟದಲ್ಲಿ ವಸತಿ ನಿರ್ಮಿಸಿ ವಾಸವಾಗಿದ್ದಾರೆ. ಮರುಳಪ್ಪನಹಳ್ಳಿ ಗೇಟ್ ಇಂದು ಬೆಳೆದಿದೆ. ಪ್ರಮುಖ ವ್ಯಾಪಾರಿ ಕೇಂದ್ರವೂ ಆಗಿದೆ. ಈ ಪರಿಸರದಲ್ಲಿ ಹೋಟೆಲ್, ಗ್ಯಾರೇಜ್, ಅಂಗಡಿಗಳಿವೆ. ಕಾಡುಪ್ರಾಣಿಗಳಾದ ಮೊಲ, ಜಿಂಕೆ, ನರಿ. ಕತ್ತೆಕಿರುಬ ಕಂಡುಬಂದರೆ ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗಾಗಿ ಹಳ್ಳಿಕಾರ್ ತಳಿ ಎತ್ತು, ಸೀಮೆ ಹಾಗೂ ನಾಟಿ ಹಸು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕಾಗೆ, ಕೋಗಿಲೆ, ನವಿಲು, ಗಿಳಿ, ಗೀಜುಗ, ಕೌಜಲಗ, ಕೊಕ್ಕರೆ, ಗರುಡ, ಗೂಬೆ, ಹದ್ದು ಪಕ್ಷಿಗಳನ್ನು ಕಾಣಬಹುದಾಗಿದೆ. ಕೋಳಿ ಸಾಕುಪಕ್ಷಿಯಾಗಿದ್ದು ಪಾರಂಪರಿಕ ಹಾಗೂ ಗಿರಿರಾಜ, ಫಾರಂ ಕೋಳಿ ತಳಿಗಳನ್ನು ಮೊಟ್ಟೆ ಹಾಗೂ ಮಾಂಸಕ್ಕಾಗಿ ಸಾಕಲಾಗಿದೆ.

ಬಿಸಿಲು, ಬರ, ಕೃಷಿ ಆಧಾರಿತ ಬದುಕಿನ ಇಲ್ಲಿ ಮಳೆಯನ್ನೇ ಆಧರಿಸಿ ಬದುಕು ನಿರ್ಧಾರವಾಗಿದೆ. ಹಾಗಾಗಿ ಉಪನೀರಿನ ಬಳಕೆಯ ಅಗತ್ಯವಿದೆ. ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೬ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ

ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಉಪನೀರಿನ ಆಸರೆಯಾಗಿ ೨೫ ಕೊಳವೆ ಬಾವಿಗಳ ಮೂಲಕ ನೀರನ್ನು ಪೂರೈಸಲಾಗುತ್ತಿದೆ. ಜೊತೆಗೆ ಸಾಂಪ್ರದಾಯಿಕ ಬಾವಿಗಳೂ ಗ್ರಾಮ ಪರಿಸರದಲ್ಲಿವೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರನ್ನು ಒದಗಿಸಲಾಗುತ್ತಿದೆ. ೬ ಕಿರುನೀರಿನ ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಇಲ್ಲಿನ ಜನಾಂಗಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಕುರುಬ, ಈಡಿಗ, ಬುಡಬುಡಿಕೆ ಹಾಗೂ ಮುಸ್ಲಿಂ ಜನಾಂಗಗಳು ಕಿರು ಸಮುದಾಯಗಳಾಗಿವೆ. ಕನ್ನಡ ಮಾತೃಭಾಷೆಯಾಗಿದ್ದು ಉರ್ದು ಮುಸ್ಲಿಂ ಜನಾಂಗದ ಭಾಷೆಯಾಗಿದೆ. ವಿವಿಧ ಪ್ರಕಾರದ ೮೮ ಮನೆಗಳಿದ್ದು ಅವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಾಗಿವೆ. ಇವು ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ೧೮ ಫಲಾನುಭವಿಗಳಿದ್ದಾರೆ. ಇಲ್ಲಿನ ೩೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಒಟ್ಟು ೫೬೪ ಜನಸಂಖ್ಯೆ ಹೊಂದಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನ ಎತ್ತಿನ ಗಾಡಿಗಳ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನ ಬಳಸುತ್ತಾರೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ನವಣೆ, ಅಲಸಂದೆ, ತೊಗರಿ ಬೆಳೆಗಳನ್ನು ಆಹಾರ ಬೆಳೆಯಾಗಿ ಬೆಳೆಯುತ್ತಾರೆ. ತೆಂಗು, ಅಡಿಕೆ ತೋಟಗಾರಿಕೆಯ ಬೆಳೆಗಳಾಗಿವೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೧೫೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ತೆಂಗು, ಅಡಿಕೆ, ಹುಣಸೆಹಣ್ಣು ಮುಖ್ಯ ವ್ಯಾಪಾರಿ ಸರಕುಗಳಾಗಿವೆ. ಶಿಕ್ಷಣ, ಸಾರಿಗೆ, ಕಂದಾಯ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ. ಮಹಿಳೆಯರು ಬೀಡಿ ಸುತ್ತುವ, ಅಡಿಕೆ ಕಾಯಿ ಸುಲಿಯುವ, ಅಡಿಕೆ ಕತ್ತರಿಸುವ, ಗರಿಕಡ್ಡಿ ಸೀಳುವ ಉಪಕಸುಬನ್ನು ಅವಲಂಬಿಸಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಭೂಪಸಂದ್ರ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರಗಳನ್ನು ಹೊಂದಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಇಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ಪರ್ವತಪ್ಪ ಈ ಹಿಂದೆ ಜಿಲ್ಲಾ ಪಂಚಾಯ್ತಿ ಸದಸ್ಯರಾಗಿದ್ದರು. ಗ್ರಾಮದಲ್ಲಿ ಸ್ಥಿರ ಹಾಗೂ ಚರ ದೂರವಾಣಿಗಳಿದ್ದು ಸಂಪರ್ಕ ಸಾಧನಗಳಾಗಿವೆ. ೨ ಸ್ತ್ರೀಶಕ್ತಿ ಸಂಘಗಳಿದ್ದು ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಇವು ಮಹಿಳೆಯರ ಸ್ವಾವಲಂಬನೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಇಬ್ಬರು ಶಿಕ್ಷಕರು ಹಾಗೂ ೩೦ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೬೧% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ಧಾರ್ಮಿಕವಾಗಿ ಆಂಜನೇಯ, ಮಾರಮ್ಮ, ಕರಿಯಮ್ಮ, ಗಣಪತಿ ಮಂಟಪವಿದೆ. ಈ ಗ್ರಾಮದ ಹೊರಭಾಗದ ಗೇಟಿನಲ್ಲಿ ಒಂದು ಮಸೀದಿ ಇದೆ. ಒಂದು ಸಮುದಾಯ ಭವನವಿದ್ದು ಧಾರ್ಮಿಕ, ವೈವಾಹಿಕ ಕಾರ್ಯಕ್ರಮಗಳಿಗೆ ಆಶ್ರಯವಾಗಿದೆ.

ಕೋಟೆ ಬಾಗಿಲು, ಬುರುಜುಗಳ ಅವಶೇಷಗಳು ಗ್ರಾಮದಲ್ಲಿ ಇಂದಿಗೂ ಕಂಡುಬರುತ್ತಿದೆ. ತಿಮ್ಮಕ್ಕ ಎಂಬ ಮಹಿಳೆ ಸಿರಾ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ ಗುರುತಿಸಿಕೊಂಡಿದ್ದರು. ಈಗ ದಿವಂಗತರು. ಅರಣ್ಯ, ಶಿಕ್ಷಣ, ಸಾರಿಗೆ, ವೈದ್ಯಕೀಯ, ಇಂಜಿನಿಯರಿಂಗ್ ಇಲಾಖೆಗೆ ಸೇರಿದ ಒಟ್ಟು ೬ ಜನ ನೌಕರರಿದ್ದಾರೆ. ಡಾ॥ ಕವಿತ, ಇಂಜಿನಿಯರ್ ಮಂಜಣ್ಣ, ಅರಣ್ಯಾಧಿಕಾರಿ ಈರಣ್ಣ ಈ ಗ್ರಾಮದ ವಿಶೇಷ ವ್ಯಕ್ತಿಗಳು. ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಲ್ಲಶೆಟ್ಟಿಹಳ್ಳಿ

ಮಲ್ಲಶೆಟ್ಟಿಹಳ್ಳಿಯು ಸಿರಾ ತಾಲ್ಲೂಕು ಕೇಂದ್ರದಿಂದ ೧೭ ಕಿಮೀ ದೂರದಲ್ಲಿದೆ. ಚಿತ್ರದುರ್ಗ–ತುಮಕೂರು ರ‍್ರಾಯ ಹೆದ್ದಾರಿಗೆ ಕರೇಜವನಹಳ್ಳಿಯ ಟೋಲ್‌ಗೇಟಿನಿಂದ ಬಲಕ್ಕೆ ಒಂದು ಕಿಮೀ ದೂರದಲ್ಲಿದೆ. ಇದು ಕಳ್ಳಂಬೆಳ್ಳದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೩೮೮.೮೧ ಹೆಕ್ಟೇರ್ ವಿಸ್ತೀರ್ಣ ಹೊಂದಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಶೇಂಗಾ ಬೆಳೆಗೆ ಉಪಯುಕ್ತವಾಗಿದೆ. ಈ ಗ್ರಾಮಕ್ಕೆ ಊರಬಾಗಿಲು, ಕೋಟೆಯ ಅವಶೇಷಗಳನ್ನು ಇಂದಿಗೂ ಕಾಣಬಹುದಾಗಿದೆ.

ಮಲ್ಲಪ್ಪಶೆಟ್ಟಿ ಎಂಬ ವ್ಯಕ್ತಿಯು ಇಲ್ಲಿನ ಮೂಲಪುರುಷನಾದ ಕಾರಣ ಅದೇ ಹೆಸರಿನಲ್ಲಿ ಗ್ರಾಮದ ರಚನೆಯಾಗಿದೆ. ಭೂತಪ್ಪ ದೇವಸ್ಥಾನ ಊರ ಹೊರಗಿದ್ದರೆ ಮಾರಮ್ಮನ ಪೌಳಿ ಊರಿನ ಪ್ರಾರಂಭಕ್ಕಿದೆ. ಆಂಜನೇಯನ ದೇವಸ್ಥಾನ, ಅರಳಿಕಟ್ಟೆ ಇವು ಈ ಗ್ರಾಮದ ಪ್ರಾಚೀನತೆಯನ್ನು ತೋರುತ್ತವೆ. ಪಶ್ಚಿಮಕ್ಕೆ ಹಳ್ಳ–ತಗ್ಗು, ಪೂರ್ವಕ್ಕೆ ದಿಣ್ಣೆಗಳಿಂದ ಕೂಡಿರುವ ಈ ಹಳ್ಳಿಯ ಪರಿಸರದಲ್ಲಿ ಕಾಡುಪ್ರಾಣಿಗಳಾದ ಮೊಲ, ನರಿ, ಜಿಂಕೆ, ಉಡ, ಬಾರುಬೆಕ್ಕು ಕಂಡುಬರುತ್ತವೆ. ಸಾಕುಪ್ರಾಣಿಗಳಾಗಿ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಲಾಗುವುದು. ಕಾಡುಪಕ್ಷಿಗಳಾಗಿ ಗಿಳಿ, ಕೋಗಿಲೆ, ಕಾಗೆ, ಗೊರವಂಕ, ಬೆಳವ, ಕೌಜುಗ, ಹಾಲಕ್ಕಿ, ಗೂಬೆ, ಹದ್ದು, ಗರುಡ, ಕೊಕ್ಕರೆ, ಗುಬ್ಬಚ್ಚಿ ಕಂಡುಬರುತ್ತವೆ. ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗುವುದು.

ವಾರ್ಷಿಕ ವಾಡಿಕೆ ಮಳೆ ೫೫೭ ಮಿಮೀ ಆಗಿದ್ದು ಉಷ್ಣಾಂಶ ೩೫ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ನೀರಿನ ಆಶ್ರಯ ಇಲ್ಲದ ಕಾರಣ ರೈತರು ೩೯ ನೆಲಬೋರುಗಳ ಮೂಲಕ ಕೃಷಿ ಕೆಲಸ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ೫ ಟ್ಯಾಂಕ್, ಕೈಪಂಪು ಇರುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಸಮುದಾಯ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಅಕ್ಕಸಾಲಿಗ, ಬಂಜಾರ, ಸಾದರು, ದಾಸರು ಕಿರು ಸಮುದಾಯಗಳಾಗಿವೆ. ವಿವಿಧ ಪ್ರಕಾರದ ೯೩ ಮನೆಗಳಿದ್ದು ಅವು ಕಾಂಕ್ರೀಟ್, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳು. ಒಟ್ಟು ೪೧೭ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ೧೮ ಶೌಚಾಲಯಗಳು ಬಳಕೆಯಲ್ಲಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನಗಾಡಿ, ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ತೊಗರಿ, ಹುರುಳಿ, ಅಲಸಂದೆ, ಭತ್ತ, ಜೋಳ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ ಬೆಳೆಯೂ ಇದೆ. ಇಂಜಿನಿಯರ್ ಸಣ್ಣ ರಂಗನಾಥ್ ಸೇರಿದಂತೆ ಸಾರಿಗೆ, ಪೊಲೀಸ್ ಇಲಾಖೆಯಲ್ಲಿ ಕೆಲಸ ನಿರ್ವಹಿಸುವ ೬ ಜನ ಸರ್ಕಾರಿ ನೌಕರರು ಈ ಗ್ರಾಮದಲ್ಲಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಬರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಈ ಗ್ರಾಮದ ಪ್ರತಿನಿಧಿಗಳಾಗಿದ್ದಾರೆ. ೪ ಸ್ತ್ರೀಶಕ್ತಿ ಸಂಘದ ಸ್ವಸಹಾಯ ಗುಂಪು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪುಗಳಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಗಳಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೬೬.೯ ಆಗಿದೆ. ಮಹಾದೇವಪ್ಪ ಎಂಬುವವರು ಪಶುಸಂಬಂಧಿ ಕಾಯಿಲೆಗಳಿಗೆ ಔಷಧ ನೀಡುತ್ತ ಹೆಸರಾಗಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ಆಂಜನೇಯ, ಮಾರಮ್ಮ, ಈಶ್ವರ, ಭೂತಪ್ಪ, ಗಣೇಶ, ಶನಿಮಹಾತ್ಮ ದೇವರುಗಳ ಗುಡಿಗಳಿವೆ. ಶ್ರಾವಣ ಮಾಸದಲ್ಲಿ ದೇವರುಗಳಿಗೆ ಆರತಿ, ಉತ್ಸವ, ಹರಕೆ ಸಂಪ್ರದಾಯವಿದೆ. ಭೂತಪ್ಪನಿಗೆ ಬಲಿ ಕೊಡುವ, ಕೂದಲು ತೆಗೆಸುವ, ಹರಕೆ ಸಂಪ್ರದಾಯ ಶನಿವಾರ ಇರುತ್ತದೆ. ದೀಪಾವಳಿ, ಯುಗಾದಿ, ಮಹಾನವಮಿ, ಸಂಕ್ರಾಂತಿ, ಬಸವಜಯಂತಿ ಹಬ್ಬಗಳನ್ನು ವಿಶೇಷವಾಗಿ ಆಚರಿಸಲಾಗುತ್ತದೆ.

## ಮರಳೇಗೌಡನಪಾಳ್ಯ

ಮರಳೇಗೌಡನ ಪಾಳ್ಯವು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೨ ಕಿಮೀ ದೂರದಲ್ಲಿದೆ. ಇದೊಂದು ಕಳ್ಳಂಬೆಳ್ಳದ ಮಜರೆ ಗ್ರಾಮವಾಗಿದ್ದು ಇದರ ಒಟ್ಟು ಭೌಗೋಳಿಕ ವ್ಯಾಪ್ತಿ ೩೮.೦೨ ಹೆಕ್ಟೇರ್ ಹೊಂದಿದೆ. ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿರುವ ಈ ಗ್ರಾಮದ ಪರಿಸರದಲ್ಲಿ ಕಳ್ಳಂಬೆಳ್ಳ ಕೆರೆಕೋಡಿಯಿದ್ದು ಬಂಗಲೆಯಿಂದ ನರಸಮ್ಮಜ್ಜಿ ಕಟ್ಟೆ ಗ್ರಾಮದ ಮುಖ್ಯ ರಸ್ತೆಯಲ್ಲಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿಗೆ ಕಳ್ಳಂಬೆಳ್ಳದ ಹೇಮಾವತಿ

ಹಾಗೂ ನಿಸರ್ಗದತ್ತ ನೀರನ್ನು ನಂಬಿಕೊಂಡಿದ್ದಾರೆ. ಆದರೂ ಈ ಪರಿಸರದಲ್ಲಿ ೨೦ ಬೋರ್‌ವೆಲ್‌ಗಳಿದ್ದು ಕೃಷಿ ಬಳಕೆಗೆ ಪ್ರಯೋಜನಕಾರಿಯಾಗಿವೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಕೊಳಾಯಿಗಳ ಮೂಲಕ ನೀರನ್ನು ಪೂರೈಸಲಾಗುತ್ತದೆ. ೩ ಸಿಸ್ಟರ್ನ್‌ಗಳಿದ್ದು ೧ ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ನಾಯಕ, ಸಾದರು, ಭಜಂತ್ರಿ ಹಾಗೂ ಮುಸ್ಲಿಂ ಕುಟುಂಬಗಳು ಕಿರುಸಮುದಾಯವಾಗಿದೆ. ವಿವಿಧ ಪ್ರಕಾರಗಳ ೩೨ ಮನೆಗಳಿದ್ದು ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿವೆ. ವಸತಿಯೋಜನೆಗಳಾದ ಜನತಾ, ಆಶ್ರಯ ಯೋಜನೆಯ ೧೬ ಫಲಾನುಭವಿಗಳಿದ್ದಾರೆ. ೧೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೧೪೩ ಜನಸಂಖ್ಯೆ ಇದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ, ಜೋಳ, ರಾಗಿ, ಹತ್ತಿ ಸಮಾನವಾಗಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ, ಬಾಳೆ ಬೆಳೆಯುತ್ತಾರೆ. ಶೇಂಗಾ ಹಾಗೂ ಹುಣಸೆಹಣ್ಣಿನ ವ್ಯಾಪಾರ ಮುಖ್ಯವಾಗಿದ್ದು ಗರಿಕಡ್ಡಿ, ಚಿಪ್ಪಿನ ವ್ಯಾಪಾರವೂ ಇದೆ.

ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ. ಗ್ರಾಮದಲ್ಲಿ ಒಂದು ಸ್ತ್ರೀಶಕ್ತಿ ಕೇಂದ್ರದ ಗುಂಪು ಇದ್ದು ಮಹಿಳಾ ಸಬಲೀಕರಣ ಕಾರ್ಯದಲ್ಲಿ ತೊಡಗಿದೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ ಹೊಸದಾಗಿ ಆರಂಭವಾಗಿದೆ. ಪ್ರಾಥಮಿಕ ಹಂತದಿಂದ ಪಿಯುವರೆಗೆ ಕಳ್ಳಂಬೆಳ್ಳ ಬಂಗಲೆ ಬಳಿಗೆ ಬರಬೇಕಾಗಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೬.೯% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಮೈಲಾರಲಿಂಗ, ಮಾರಮ್ಮನ ಪೌಳಿಯಿದೆ. ಆಷಾಢ ಮಾಸದಲ್ಲಿ ಮಾರಮ್ಮನಿಗೆ ಆರತಿ ಮಾಡಿ ಕುರಿ, ಕೋಳಿ ಬಲಿ ಕೊಡುತ್ತಾರೆ. ಯುಗಾದಿ, ದೀಪಾವಳಿ, ಮಹಾನವಮಿ, ಗೌರಿ–ಗಣೇಶ ಹಾಗೂ ಶಿವರಾತ್ರಿ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮುದಿಮಡು

ಮುದಿಮಡು ಸಿರಾ ತಾಲ್ಲೂಕು ಕಳ್ಳಂಬೆಳ್ಳ ಹೋಬಳಿ ಕೇಂದ್ರದಿಂದ ಪೂರ್ವಕ್ಕೆ ಸಿರಾ–ತುಮಕೂರು ರ‍್ಯಾಷ್ಟ್ರೀಯ ಹೆದ್ದಾರಿಗೆ ಬಲಬದಿಗೆ ೨ ಕಿಮೀ ದೂರದಲ್ಲಿದೆ. ಕರೇಜವನಹಳ್ಳಿ ರ‍್ಯಾಷ್ಟ್ರೀಯ ರಸ್ತೆ ಟೋಲ್‌ಗೇಟಿಗೆ ಸಮೀಪದ ಗ್ರಾಮ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೩೦.೪೨ ಹೆಕ್ಟೇರ್ ಆಗಿದೆ. ಸಿರಾ ಕೇಂದ್ರದಿಂದ ೧೮ ಕಿಮೀ ದೂರದ ಹಾದಿ. ನಿಜಯ್ಯನಪಾಳ್ಯ, ಚಿಕ್ಕದಾಸರಹಳ್ಳಿ ಇದರ ಮಜರೆ ಗ್ರಾಮಗಳಾಗಿವೆ.

ಈ ಗ್ರಾಮದ ಬಲಬದಿಗೆ ನಿಸರ್ಗ ಸಹಜ ಹಳ್ಳ, ಪೂರ್ವ–ಪಶ್ಚಿಮವಾಗಿ ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿಯ ಪಟಕಾರನಹಳ್ಳಿ ಕಲ್ಲುಗುಡಿಯಿಂದ ಕಾಡಿನ ಭಾಗದ ನೀರು ಹರಿದು ಹುಂಜನಹಳ್ಳಿ, ಬಸರಿಹಳ್ಳ, ಬ್ಯಾಡರಹಳ್ಳಿ ಹಳ್ಳಗಳ ಮೂಲಕ ಹಾದು ಯಲದಬಾಗಿ ಮೂಲಕ ಮುದಿಮಡು ಗ್ರಾಮವನ್ನು ಬಲದಿಂದ ಹಾದು ಮುಂದೆ ಕಳ್ಳಂಬೆಳ್ಳ ಕೆರೆಯನ್ನು ಸೇರುವ ಭೌಗೋಳಿಕ ಲಕ್ಷಣ ಹೊಂದಿದೆ. ಹಾಗೆ ಮಳೆಗಾಲದಲ್ಲಿ ತುಂಬಿ ಹರಿಯುತ್ತಿದ್ದ ಹಳ್ಳ ಮುದಿಮಡು ಗ್ರಾಮದ ಬಲಬದಿಗೆ ಮಡು ಅಥವಾ ಒಡ್ಡಿನ ರೂಪದಲ್ಲಿ ತಗ್ಗಾಗಿ ನಿಂತು ನೀರು ಸಂಗ್ರಹವಾಗುತ್ತಿದ್ದ ಕಾರಣದಿಂದ ಮುದಿಯ ಹಿರಿಯ ಹಳ್ಳ (ಮಡು) ಎಂದು ಹಿರಿಕರು ಕರೆಯುವುದಕ್ಕೆ ಮುಂದಾದರು. ಇಂಥ ಭೂ ಪ್ರದೇಶದಲ್ಲಿ ಮನೆಗಳು ನಿರ್ಮಾಣವಾದುದರಿಂದ ಮುದಿಮಡು ಎಂದು ನಿಸರ್ಗ ಸಹಜ ಪದಗಳಿಂದ ಗ್ರಾಮವನ್ನು ಕರೆಯಲಾಯಿತು.

ಮುದಿಮಡು ಬಿಳಿ–ಕೆಂಪು ಕಂದು ಮಿಶ್ರಿತ ಮಣ್ಣಿನ ಭೂಪ್ರದೇಶವಾಗಿದೆ. ತೋಟಸಾಲು, ಹಳ್ಳ ಮರಗಳ ಸಾಲು ಇರುವುದರಿಂದ ಈ ಭಾಗದಲ್ಲಿ ಕಾಡುಪ್ರಾಣಿಗಳಾದ ನರಿ, ಜಿಂಕೆ, ಮೊಲ, ಕರಡಿ, ಹಂದಿ, ಉಡ, ಬಾರುಬೆಕ್ಕು ಕಂಡುಬರುತ್ತವೆ. ಗ್ರಾಮದಲ್ಲಿ ರೈತಾಪಿ ಜನರು ಹೆಚ್ಚಿದ್ದು ಕೃಷಿ ಆಧಾರಿತ ಬದುಕು. ಹೈನುಗಾರಿಕೆಯೂ ಇದೆ. ಹಾಗಾಗಿ ನಾಟಿಹಸು, ಎಮ್ಮೆ, ಸೀಮೆಹಸುಗಳ ಜೊತೆಗೆ ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕಲಾಗುತ್ತದೆ. ಕುರಿ, ಮೇಕೆ, ನಾಯಿಗಳು ಇತರೆ ಸಾಕುಪ್ರಾಣಿಗಳು. ಸಾಕುಪಕ್ಷಿಯಾಗಿ ನಾಟಿ ಹುಂಜ, ಹೇಂಟೆ, ಗಿರಿರಾಜ ತಳಿ ಕೋಳಿಗಳನ್ನು ಮಾಂಸ ಹಾಗೂ ಮೊಟ್ಟೆಯ ಸಲುವಾಗಿ ಸಾಕಲಾಗುತ್ತದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ,

ಬೆಳವ, ಹದ್ದು, ಗರುಡ, ಗುಬ್ಬಚ್ಚಿ, ಕಾಗೆಸಿಳ್ಳ, ಪಿಟ್ಟೆಹಕ್ಕಿ, ಸಾಂಬಾರ ಕಾಗೆ ಕಂಡುಬರುತ್ತವೆ.

ಬಯಲು ಪ್ರದೇಶ. ವಾಡಿಕೆ ಮಳೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಕಳೆದ ೩ ವರ್ಷಗಳ ಸರಾಸರಿ ಮಳೆ ೫೨೭.೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಹೇಮಾವತಿ ಹಳ್ಳ ಈ ಗ್ರಾಮದ ಬಲಬದಿಗೆ ಹಾದುಹೋಗುತ್ತಿದ್ದು ಈ ಭಾಗದ ಕೊಳವೆಬಾವಿ, ತೋಟಗಳಿಗೆ ಜಲಸಂವರ್ಧನೆಯ ರೂಪದಲ್ಲಿ ಅನುಕೂಲವಾಗಿದೆ. ಆದರೂ ರೈತಾಪಿ ಬದುಕಿನ ಕೃಷಿಕರು ತಮ್ಮ ತೋಟ, ಹೊಲಗಳಲ್ಲಿ ಉಪನೀರಿನ ಸಹಾಯದಿಂದ ಬೆಳೆಯುತ್ತಿದ್ದಾರೆ. ಗ್ರಾಮದಲ್ಲಿ ೪೭ ಬೋರ್‌ವೆಲ್‌ಗಳಿವೆ. ಕುಡಿಯಲು ತರೂರು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಕೈಪಂಪುಗಳಿವೆ. ನಲ್ಲಿ ಸಂಪರ್ಕ ಹೊಂದಲಾಗಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕರು ದೊಡ್ಡ ಸಮುದಾಯವಾಗಿದ್ದು ನಾಯಕ, ಕುರುಬ, ಈಡಿಗ, ಕುಂಚಿಟಿಗ, ಆದಿದ್ರಾವಿಡ, ಮಡಿವಾಳ, ಗೊಲ್ಲರು ಕಿರುಸಮುದಾಯವಾಗಿದೆ. ಗ್ರಾಮದ ಪೂರ್ಣಭಾಷೆ ಕನ್ನಡವಾಗಿದೆ.

ವಿವಿಧ ಪ್ರಕಾರಗಳ ೯೮ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಇವು ಸರ್ಕಾರದ ವಸತಿ ಯೋಜನೆಯಾದ ಆಶ್ರಯ, ಜನತಾ, ಇಂದಿರಾ ಆವಾಸ್, ಅಂಬೇಡ್ಕರ್ ಯೋಜನೆಯಡಿಯಲ್ಲಿ ಸೌಲಭ್ಯ ಪಡೆದ ಮನೆಗಳಾಗಿವೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ಫಲಾನುಭವಿಗಳಿದ್ದಾರೆ. ಒಟ್ಟು ೩೩೮ ಜನಸಂಖ್ಯೆ ಹೊಂದಿದ್ದು ೮೦ ಮನೆಗಳಲ್ಲಿ ಶೌಚಾಲಯ ಹೊಂದಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ಆಟೋ, ಲಾರಿ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಹಾರಕ, ಕೊರ್ಲೆ, ಹುರುಳಿ, ತೊಗರಿ, ಹರಳು, ಹುಚ್ಚೆಳ್ಳು ಬೆಳೆಯುತ್ತಾರೆ. ತೆಂಗು, ಅಡಿಕೆ, ರೇಷ್ಮೆ, ಸೂರ್ಯಕಾಂತಿ, ಸೇವಂತಿಗೆ ಬೆಳೆಗಳು ತೋಟಗಾರಿಕೆಯ ಬೆಳೆಗಳಾಗಿವೆ. ಒಂದು ನಂದಿನಿ ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ.

ಶೇಂಗಾ, ಹೊಂಗೆಬೀಜ, ಹುಣಸೆಹಣ್ಣು, ತೆಂಗು, ಅಡಿಕೆ ಮುಖ್ಯ ವಾಣಿಜ್ಯ ಸರಕಾಗಿವೆ. ಶಿಕ್ಷಣ, ಆರೋಗ್ಯ ಇಲಾಖೆಯಲ್ಲಿ ೪ ಜನ ಸರ್ಕಾರಿ ನೌಕರರಿದ್ದಾರೆ. ಡಾ.ರಮೇಶ್, ಆರೋಗ್ಯಾಧಿಕಾರಿಯಾಗಿದ್ದಾರೆ. ಮಂಜುನಾಥ್ ಎಂಬುವವರು ಖಾಸಗಿ ವಕೀಲವೃತ್ತಿ ಮಾಡುತ್ತಿದ್ದಾರೆ. ಮಹಿಳೆಯರು ಗೃಹ ಕೈಗಾರಿಕೆಯಾಗಿ ಹುಣಸೆಹಣ್ಣು ಬಿಡಿಸುವುದು, ಹೊಂಗೆ ಬೀಜ ಸಂಗ್ರಹ, ಬಟ್ಟೆ ಹೊಲಿಯುವುದು, ಬೀಡಿ ಸುತ್ತುವುದು ಇದೆ. ರಾಗಿಮಿಲ್ಲು, ಇಟ್ಟಿಗೆ ಫ್ಯಾಕ್ಟರಿಗಳಿದ್ದು ಸಣ್ಣ ಕೈಗಾರಿಕೆಗಳಾಗಿವೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ತರೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರಿದೆ. ಈ ಗ್ರಾಮದ ಹೆಚ್.ಮಂಜುಳಾ ಮಂಜುನಾಥ್ ತಾಲ್ಲೂಕು ಪಂಚಾಯ್ತಿ ಸದಸ್ಯರಾಗಿ ತರೂರು ತಾಲ್ಲೂಕು ಪಂಚಾಯ್ತಿ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರೂ ಇದ್ದಾರೆ. ಕಟಾವೀರನಹಳ್ಳಿಯಿಂದ ಅಂಚೆ ಸಂಪರ್ಕವಿದೆ. ಒಂದು ನ್ಯಾಯಬೆಲೆ ಅಂಗಡಿಯಿದ್ದು ಪಡಿತರ ವಿತರಣೆಗೆ ಅನುಕೂಲವಾಗಿದೆ. ಭಾಗ್ಯಮ್ಮ ಎಂಬುವವರು ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರಾಗಿದ್ದರು. ಮುದಿಮಡು ರಂಗಸ್ವಾಮಯ್ಯ ಜಿಲ್ಲಾ ಪಂಚಾಯ್ತಿ ಸದಸ್ಯರೂ ಆಗಿದ್ದರು.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೨೭ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೨.೯% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸ್ಥಳೀಯವಾಗಿ ಒಬ್ಬರು ಆರೋಗ್ಯ ಸೇವಾ ಕಾರ್ಯಕರ್ತೆ ನೋಡಿಕೊಳ್ಳುತ್ತಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೫ ಪೆಟ್ಟಿಗೆ ಅಂಗಡಿ, ರಾಗಿಮಿಲ್ ಇದೆ. ಗ್ರಾಮದ ಹಳ್ಳಿಯ ಕೋಟೆ, ಊರಬಾಗಿಲು ಇದ್ದು ನಾಶವಾಗಿರುವ ಬಗೆಗೆ ಮುಖಂಡ ಮುದಿಮಡು ರಂಗಸ್ವಾಮಯ್ಯ ವಿವರಿಸುತ್ತಾರೆ. ಗ್ರಾಮದಲ್ಲಿ ಯಲ್ಲಮ್ಮ, ಮಾರಮ್ಮ, ಕಂಬದರಂಗನಾಥಸ್ವಾಮಿ ದೇವಾಲಯಗಳಿದ್ದು ಮಾರಮ್ಮನ ಊರಹಬ್ಬ ಮಾಡಿ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯಗಳಿವೆ. ಯುಗಾದಿ, ಮಹಾನವಮಿ, ವರಮಹಾಲಕ್ಷ್ಮಿ, ದೀಪಾವಳಿ, ಶಿವರಾತ್ರಿ, ಸಂಕ್ರಾಂತಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ

ಆಚರಿಸುತ್ತಾರೆ. ಈ ಗ್ರಾಮದ ಹೇಮಾವತಿ ದಂಡೆಯ ಮೇಲೆ ಅಕ್ಕಮ್ಮನ ಗುಡಿಯಿದೆ.

ಸಾಂಸ್ಕೃತಿಕವಾಗಿ ರಂಗಭೂಮಿ ಕಲೆಗೆ ಈ ಗ್ರಾಮ ಆರಂಭದಿಂದಲೂ ಹೆಸರಾಗಿದೆ. ಇಂದಿಗೂ ವಾರ್ಷಿಕವಾಗಿ ಹವ್ಯಾಸಿ ರಂಗಭೂಮಿ ಕಲಾವಿದರಾದ ಡಾ.ರಮೇಶ್ ವೃತ್ತಿಯಲ್ಲಿ ವೈದ್ಯಾಧಿಕಾರಿ ಕರ್ಣನ ಪಾತ್ರಾಭಿನಯ ಇವರಿಗೆ ವಿಶೇಷ ಮಹತ್ವ ತಂದರೆ ದೇವರಾಜಪ್ಪ ಎಂಬ ಪದವಿಪೂರ್ವ ಕಾಲೇಜಿನ ನಿವೃತ್ತ ಉಪನಿರ್ದೇಶಕ ದೇವರಾಜಪ್ಪ ಕಲಾಭಿನಯದಿಂದ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ.

ಸಿರಾ–ತುಮಕೂರು ರ‍್ಟ್ರಾಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಈ ಗ್ರಾಮಕ್ಕಿದೆ. ರಸ್ತೆ ಬದಿಗೆ ಈ ಗ್ರಾಮಕ್ಕೆ ಸೇರಿದ ಶನಿದೇವರ ದೇವಾಲಯವಿದ್ದು ಇದು ಮುದಿಮಡು, ತರೂರು ಗೇಟ್ ಎಂದೇ ಹೆಸರಾಗಿದೆ.

## ಮುಚ್ಚವೀರನಹಳ್ಳಿ

ಮುಚ್ಚವೀರನಹಳ್ಳಿ ಸಿರಾ ತಾಲ್ಲೂಕು ಕಳ್ಳಂಬೆಳ್ಳ ಹೋಬಳಿಗೆ ಸೇರಿದ ಹಳ್ಳಿ. ಸಿರಾದಿಂದ ಪೂರ್ವಕ್ಕೆ ೨೩ ಕಿಮೀ ದೂರದಲ್ಲಿದೆ. ಸಿರಾ–ತಾಳಗುಂದ ರಸ್ತೆಯಲ್ಲಿ ತಾಳಗುಂದದಿಂದ ೨ ಕಿಮೀ ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೬೩.೬೨ ಹೆಕ್ಟೇರ ಹೊಂದಿದೆ. ಬಿಸಿಲು, ಬಯಲು ಹಾಗೂ ಕುರುಚಲು ಗಿಡ–ಮರಗಳಿಂದ ಕೂಡಿರುವ ಪ್ರದೇಶವಾಗಿದೆ. ಮರಳುಮಿಶ್ರಿತ ಕೆಂಪುಮಣ್ಣನ್ನು ಹೊಂದಿದೆ.

ಬೇಡನಾಯಕರಲ್ಲಿ ಮುಚ್ಚಿಲೋನವರ ಒಂದು ಬೆಡಗು. ಆ ಬೆಡಗಿನ ಕುಲಕ್ಕೆ ಸೇರಿದ ವೀರಣ್ಣ ಎಂಬ ವ್ಯಕ್ತಿಯ ಹೆಸರಲ್ಲಿ ಗ್ರಾಮ ರಚನೆಯಾಗಿದ್ದು ಕುಲ–ವ್ಯಕ್ತಿ ಎರಡೂ ಪದಗಳು ಕೂಡಿಕೊಂಡಿದೆ. ಈ ಅರ್ಥದಲ್ಲಿಯೇ ಮುಚ್ಚವೀರನಹಳ್ಳಿ ಗ್ರಾಮ ರಚನೆಯಾಗಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಬಾರ್‌ಬೆಕ್ಕು, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಪಶುಪಾಲನೆ, ಹೈನುಗಾರಿಕೆ ಹಾಗೂ ಕೃಷಿಗಾಗಿ ಸೀಮೆಹಸು, ನಾಟಿಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಗೀಜುಗ, ಗುಬ್ಬಚ್ಚಿ, ಕೊಕ್ಕರೆ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಬಿಸಿಲು ಅಧಿಕ. ವಾಡಿಕೆಗಿಂತಲೂ ಕಡಿಮೆ ಮಳೆ ೪೬೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಅವಲಂಬಿತ ಕುಟುಂಬ. ಮಳೆ ನೀರು ಸಾಕಾಗುವುದಿಲ್ಲ. ಹಾಗಾಗಿ ಈ ಪರಿಸರದಲ್ಲಿ ಕೃಷಿ ನೀರಿಗಾಗಿ ೨೧ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ಗ್ರಾಮದಲ್ಲಿ ನಾಯಕರಹಟ್ಟಿ, ಗೊಲ್ಲರಹಟ್ಟಿ, ಮಣೆಗಾರ ಕೇರಿ, ದೇವಸ್ಥಾನಗಳ ಬಳಿ ಒಟ್ಟು ೬ ಕಿರು ಟ್ಯಾಂಕ್‌ಗಳಿವೆ. ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗದವರು ದೊಡ್ಡ ಸಮುದಾಯವಾಗಿದೆ. ನಾಯಕರು, ಗೊಲ್ಲರು ಕಿರುಸಮುದಾಯವಾಗಿದೆ. ಕನ್ನಡ ಗ್ರಾಮದ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರದ ಒಟ್ಟು ೬೮ ಮನೆಗಳಿದ್ದು ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿವೆ. ಇಲ್ಲಿನ ಮನೆಗಳು ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ೧೬ ಫಲಾನುಭವಿಗಳಿದ್ದಾರೆ. ೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೩೧೧ ಜನಸಂಖ್ಯೆ ಇದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆ. ರಾಗಿ, ತೊಗರಿ, ಜೋಳ, ಭತ್ತ, ಹುರುಳಿ ಆಹಾರ ಬೆಳೆಗಳು. ತೆಂಗು, ಅಡಿಕೆ, ವೀಳ್ಯದೆಲೆ ತೋಟಗಾರಿಕೆ ಬೆಳೆಗಳು. ಒಂದು ಕಿರು ಹಾಲಿನ ಡೈರಿಯಿದ್ದು ೧೮೦–೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೇಹಣ್ಣು, ಕುರಿ ವ್ಯಾಪಾರ ಮುಖ್ಯ ವ್ಯಾಪಾರಿ ಸರಕಾಗಿವೆ. ಶಿಕ್ಷಕರು, ಸಾರಿಗೆ, ಕಂದಾಯ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ ಹಾಗೂ ಭೂಪಸಂದ್ರ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಯಶೋದಮ್ಮ ಈ ಗ್ರಾಮದ ಪಂಚಾಯ್ತಿ ಸದಸ್ಯರಾಗಿದ್ದು ಸಧ್ಯ ಭೂಪಸಂದ್ರದ ಗ್ರಾಮಪಂಚಾಯ್ತಿ ಅಧ್ಯಕ್ಷರಾಗಿರುವುದು ಈ ಗ್ರಾಮದ ವಿಶೇಷವಾಗಿದೆ. ೨ ಸ್ತ್ರೀಶಕ್ತಿ ಸಂಘಗಳು, ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ಇಬ್ಬರು ಶಿಕ್ಷಕರು, ೨೫ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೩೮% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ

ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಮಾರಮ್ಮ ಕಣಿವೆ ಮಾರಕ್ಕ ದೇವರ ಗುಡಿಗಳಿವೆ. ಗೊಲ್ಲರಹಟ್ಟಿ ಬಡಾವಣೆಯಲ್ಲಿ ಜುಂಜಪ್ಪನ ಗುಬ್ಬವಿದೆ. ದೀಪಾವಳಿ ಸಂದರ್ಭದ ಏಳು ದಿನ ದೀಪ ಏರಿಸುವ ದಿನದಿಂದ ದೀಪ ಇಳಿಸುವವರೆಗೆ ಜಾತ್ರೆ, ಸಾಂಸ್ಕೃತಿಕ ಮಹೋತ್ಸವ ಏರ್ಪಡುತ್ತದೆ. ಮಾರಮ್ಮನ ಊರಹಬ್ಬವಿದ್ದು ಬಾನ, ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಾಯಸಂದ್ರ

ಮಾಯಸಂದ್ರ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೮ ಕಿಮೀ ದೂರದಲ್ಲಿದೆ. ಮೊದಲಿಗೆ ಇದು ಬುಡಕಟ್ಟು ಗ್ರಾಮವಾಗಿದ್ದು ನಂತರ ಸಾಮೂಹಿಕ ಗ್ರಾಮವಾಗಿದೆ ಎಂದು ಕೆ.ಬೊಮ್ಮಲಿಂಗಯ್ಯನವರ ಅಭಿಪ್ರಾಯವಾಗಿದೆ. ಇದು ಸಿರಾ–ಯರಗುಂಟೇಶ್ವರ ರಸ್ತೆಯಲ್ಲಿ ಯರಗುಂಟೇಶ್ವರ ನಗರದಿಂದ ರತ್ನಸಂದ್ರ ಮಾರ್ಗವಾಗಿ ಚಿಕ್ಕಗೂಳ–ತಾಳಗುಂದ ಮಾರ್ಗದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೦೦ ಹೆಕ್ಟೇರ್ ಆಗಿದೆ. ಈ ಗ್ರಾಮಕ್ಕೆ ಇದೇ ಹೆಸರಿನ ಎರಡು ಕೆರೆಗಳಿದ್ದು ಮಾಯಸಂದ್ರ ಹೊಸಕೆರೆ ಹಾಗೂ ಮಾಯಸಂದ್ರ ಹಳೇಕೆರೆ ಎಂದು ಕರೆಯಲಾಗುತ್ತಿದೆ. ಮಾಯಣ್ಣ ಎಂಬ ವ್ಯಕ್ತಿಯು ಕೆರೆ ಕಟ್ಟಿಸಿರುವ ಹಾಗೂ ಗ್ರಾಮ ರಚನೆಗೆ ಪ್ರೇರಕವಾದ ಹಿನ್ನೆಲೆಯಲ್ಲಿ ಮಾಯಸಂದ್ರವಾಗಿದೆಯೇ ಎಂಬ ಪ್ರಶ್ನೆ ಗ್ರಾಮ ನರಸಿಂಹಮೂರ್ತಿ ಎತ್ತಿದರೆ ಕರಿಯಣ್ಣರ ಅಭಿಪ್ರಾಯ ಈ ಗ್ರಾಮದ ಮುಖ್ಯ ದೇವತೆ ಕುನ್ನಾಲಮ್ಮ. ಆಕೆಯನ್ನು ಗ್ರಾಮದ ಕುಂದಾಲಮ್ಮ ಎಂತಲೂ ಕರೆಯುತ್ತಾರೆ. ಗೇಟಿನ ಬಳಿ ಪ್ರತ್ಯೇಕವಾದ ದೇವಾಲಯವಿದ್ದು ಯಾತ್ರಾಸ್ಥಳವಾಗಿದೆ. ಈ ಗ್ರಾಮದಲ್ಲಿ ಕುನ್ನಾಲಮ್ಮ ಮೆರವಣಿಗೆ ದೇವರಿದ್ದು ಶ್ರಾವಣ ಮಾಸದಲ್ಲಿ ವಿಶೇಷವಾಗಿ ದೇವರ ಉತ್ಸವ ಇಂದಿಗೂ ನಡೆಯುತ್ತದೆ. ಈ ಶಕ್ತಿದೇವತೆಯನ್ನು ಮಾಯಮ್ಮ ಎಂಬ ಅರ್ಥದಲ್ಲಿ ಕರೆಯಲಾಗುತ್ತಿದ್ದು ದೇವತೆಯ ಹೆಸರು ಗ್ರಾಮಕ್ಕೆ ಬಂದಿರುತ್ತದೆ ಎಂಬ ಅಭಿಪ್ರಾಯ ನರಸಿಂಹ ಮೂರ್ತಿಯವರದಾಗಿರುತ್ತದೆ. ಒಟ್ಟಾರೆ ಎರಡೂ ಮೂಲಗಳು ವ್ಯಕ್ತಿ ವಾಚಕವಾಗಿದ್ದು ದೈವ ಅಥವಾ ವ್ಯಕ್ತಿ ಈ ಎರಡೂ ಮೂಲಗಳಿಂದ ಈ ಗ್ರಾಮಕ್ಕೆ ಮಾಯಸಂದ್ರ ಎಂದು ಕರೆಯಲಾಗಿದೆ.

ಇದೊಂದು ಹಳೆಯ ಗ್ರಾಮವಾಗಿದ್ದು ಗ್ರಾಮದ ಸುತ್ತಲೂ ಕೋಟೆ ಗೋಡೆ, ದಿಡ್ಡಿಬಾಗಿಲು, ಬುರುಜುಗಳಿದ್ದು ಪ್ರಸ್ತುತ ನಾಶವಾಗಿವೆ. ಕುರುಚಲು ಗಿಡ, ಮರ, ದಿಣ್ಣೆ–ತಗ್ಗುಗಳಿಂದ ಕೂಡಿರುವ ಈ ಗ್ರಾಮದ ಪರಿಸರದಲ್ಲಿ ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದೆ. ಈ ಪರಿಸರದಲ್ಲಿ ನರಿ, ಕರಡಿ, ತೋಳ, ಮೊಲ, ಮುಂಗುಸಿ, ಬಾರುಬೆಕ್ಕು, ಕತ್ತೆಕಿರುಬ ಮೊದಲಾದ ಕಾಡುಪ್ರಾಣಿಗಳು ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಳ್ಳಿಕಾರ್ ತಳಿ ಹಸು, ನಾಟಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ನಾಯಿ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ನಾಟಿಕೋಳಿ, ಹೇಂಟೆ, ಹುಂಜ, ಫಾರಂ ಕೋಳಿ, ಗಿರಿರಾಜ ಕೋಳಿಗಳಿವೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಬಿಸಿಲು–ಬೇಸಿಗೆಯ ಈ ಗ್ರಾಮದಲ್ಲಿ ಮಳೆ ಪ್ರಮಾಣ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ವಾರ್ಷಿಕ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಕೆರೆ ಅಂಗಳದಲ್ಲಿ ಬಳ್ಳಾರಿ ಜಾಲಿ ಬೆಳೆದಿದೆ. ತುಂಬುವುದು ವಿರಳ. ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ೬೦೦–೯೦೦ ಅಡಿ ಆಳದ ಕೊಳವೆ ಬಾವಿಗಳನ್ನು ಕೊರೆಸಿದರೂ ನೀರಿನ ಗುಣಮಟ್ಟ ಸುಧಾರಿಸಿಲ್ಲ. ದೊರೆಯುವುದು ದುರ್ಲಭವಾಗಿದೆ. ಈ ಪರಿಸರದಲ್ಲಿ ೨೮ ಕೊಳವೆ ಬಾವಿಗಳಿದ್ದು ತೋಟಗಾರಿಕೆ ಬೆಳೆಗೆ ಬಳಕೆಯಾಗುತ್ತಿದೆ. ಕುಡಿಯಲು ಗ್ರಾಮಪಚಾಯ್ತಿ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಕೈಪಂಪುಗಳಿದ್ದು ಆರು ಸಿಸ್ಟರ್ನ್‌ಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಉಪ್ಪಾರ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ನಾಯಕ, ಕುಂಚಿಟಿಗ, ಕಾಡುಗೊಲ್ಲರು ಕಿರು ಸಮುದಾಯಗಳಾಗಿವೆ. ಕನ್ನಡ ಈ ಗ್ರಾಮದ ಮಾತೃಭಾಷೆಯಾಗಿದೆ. ಕೇರಿಯಾಗಿ ಜನಾಂಗಿಕ ಮನೆಗಳು ವಿಭಜನೆಯಾಗಿವೆ.

ವಿವಿಧ ಪ್ರಕಾರಗಳ ೧೪೯ ಮನೆಗಳಿದ್ದು ಅವು ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದವುಗಳಾಗಿವೆ. ಇವು ಸರ್ಕಾರದ ವಸತಿ ಯೋಜನೆಗಳಾದ ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆಯ ೧೯ ಫಲಾನುಭವಿಗಳಿದ್ದು ೬೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಗ್ರಾಮದ ಒಟ್ಟು ಜನಸಂಖ್ಯೆ ೬೩೮.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ

ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ಕಾರು, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆ. ಆಹಾರ ಧಾನ್ಯಗಳಾದ ರಾಗಿ, ಭತ್ತ, ಜೋಳ, ನವಣೆ, ಹಾರಕ, ಕೊರ್ಲೆ ಬೆಳೆಯುತ್ತಾರೆ. ಹುರುಳಿ, ತೊಗರಿ, ಹರಳು ಬೆಳೆಗಳಿವೆ. ತೋಟಗಾರಿಕೆ ತೆಂಗು, ಮಾವು, ಅಡಿಕೆ, ರೇಷ್ಮೆ ಬೆಳೆಗಳಿವೆ. ಸೂರ್ಯಕಾಂತಿ, ಸೇವಂತಿಗೆ ಅಲ್ಪಕಾಲೀನ ತೋಟಗಾರಿಕೆ ಬೆಳೆಗಳು. ಒಂದು ಹಾಲಿನ ಡೈರಿಯಿದ್ದು ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೆಹಣ್ಣು, ಹೊಂಗೆ ಬೀಜ, ತೆಂಗು, ಅಡಿಕೆ ವ್ಯಾಪಾರಿ ಸರಕಾಗಿವೆ. ಸರ್ಕಾರಿ, ಅರೆ–ಸರ್ಕಾರಿ ಇಲಾಖೆಗಳಿಗೆ ಸೇರಿದ ೬ ಜನ ನೌಕರರಿದ್ದು ವೈದ್ಯರಾದ ಡಾ॥ ಸಾಯಿಪ್ರಕಾಶ್, ನಿವೃತ್ತ ಉಪಕಾರ್ಯದರ್ಶಿ ನರಸಿಂಹಯ್ಯ ಈ ಗ್ರಾಮದವರೆಂಬುದು ವಿಶೇಷವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಭೂಪಸಂದ್ರ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿಗಳ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಈ ಗ್ರಾಮವನ್ನು ಪ್ರತಿನಿಧಿಸುತ್ತಿದ್ದಾರೆ. ೪ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿವೆ. ಅಂಗನವಾಡಿ ಕೇಂದ್ರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಇಲಾಖೆಯಲ್ಲಿ ೩೬ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೨.೬% ಆಗಿದೆ.

ಮಾರುತಿ ಕೆರೆ ಅಭಿವೃದ್ಧಿ ಸಂಘ, ರೈತ ಸಂಘದ ಶಾಖೆಯಿದೆ. ಒಂದು ಪಶುಚಿಕಿತ್ಸಾ ಕೇಂದ್ರವಿದೆ. ಜೊತೆಗೆ ಪಶುಗಳಿಗೆ ವಿಶೇಷ ಆಹಾರ ನೀಡಿಕೆಯನ್ನು ಡೈರಿ ವಿಭಾಗದಿಂದ ಒದಗಿಸಲಾಗುತ್ತಿದೆ. ಈ ಗ್ರಾಮದ ಎಸ್.ಆರ್.ಗೌಡ ಸಿರಾ ತಾಲ್ಲೂಕು ಪಂಚಾಯ್ತಿಯ ಮಾಜಿ ಅಧ್ಯಕ್ಷರಾಗಿದ್ದು ಈಗ ಕೆಎಂಎಫ್ ನಿರ್ದೇಶಕರಾಗಿ ಡೈರಿ ಅಭಿವೃದ್ಧಿಯಲ್ಲಿ ವಿಶೇಷ ಆಸಕ್ತಿ ಹೊಂದಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೬ ಪುಟ್ಟ ಅಂಗಡಿಗಳಿವೆ. ಗ್ರಾಮದ ಕೆರೆಯ ಒಳಭಾಗದಲ್ಲಿ ೨ ವೀರಗಲ್ಲುಗಳಿದ್ದು ಯುದ್ಧನಿರತ ವೀರನ ಚಿತ್ರಣವನ್ನು ಸೊಗಸಾಗಿ ಬಿಡಿಸಲಾಗಿದೆ. ಮೃದು ಶಿಲೆಯಾಗಿದ್ದು ಇದರ ರಚನೆ ೧೪ನೇ ಶತಮಾನಕ್ಕೆ ಸಲ್ಲುತ್ತದೆ ಎಂದು ಗ್ರಾಮದ ನರಸಿಂಹಮೂರ್ತಿ ಹೇಳುತ್ತಾರೆ. ಅರಳಿಕಟ್ಟೆ, ಕರಿಗಲ್ಲುಗಳಿವೆ. ದಸರಾ ಸಂದರ್ಭದಲ್ಲಿ ಕರಿಗಲ್ಲಿಗೆ ಎಣ್ಣೆ ಹಾಕಿ ಪೂಜಿಸುವುದು ಇಲ್ಲಿನ ನಾಯಕ ಜನಾಂಗದ ಸಂಪ್ರದಾಯವಾಗಿದೆ. ಕಾಳಾಪುರದ ನೈರುತ್ಯ ದಿಕ್ಕಿನಲ್ಲಿರುವ ಒಡೆಯರ ಕಟ್ಟೆಯ ಬಳಿ ಶಾಸನವೊಂದು ದೊರೆತಿದ್ದು ಚಿಕ್ಕವೀರ ಒಡೆಯರು ಕೆರೆ ಕಟ್ಟಿಸಿದರ ಖರ್ಚುವೆಚ್ಚಗಳನ್ನು ವಿವರಿಸಿದೆ. ಕಾಲ ಕ್ರಿ.ಶ.೧೬೭೨ (ಉಕಸಂಫಿಖಖ).

ಕುನ್ನಾಲ ಕರಿಯಮ್ಮ, ಆಂಜನೇಯ, ಮಾರಮ್ಮ ಗ್ರಾಮದ ಮುಖ್ಯ ದೇವರುಗಳು. ಮುನಿಯಪ್ಪ, ವೀರಗಾಟರಾಯನ ಗುಡಿಗಳಿವೆ. ಗ್ರಾಮದ ಹೊರವಲಯದ ಕುನ್ನಾಲಮ್ಮನ ದೇವಾಲಯದ ಜಾತ್ರೆ ವಿಶೇಷವಾಗಿ ವಾರಗಳ ಕಾಲ ನಡೆಯುತ್ತದೆ. ಆ ಕಾಲದಲ್ಲಿ ಗ್ರಾಮದ ಎಲ್ಲ ದೇವರುಗಳ ಮೆರವಣಿಗೆ ಕುಲಾಚಾರದ ಅನುಸಾರದ ರೀತಿ ರಿವಾಜುಗಳ ಮೇರೆಗೆ ಊರ ಉತ್ಸವ ಏರ್ಪಡುತ್ತದೆ.

ಯುಗಾದಿ, ದೀಪಾವಳಿ, ಮಹಾನವಮಿ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ನಾಗಾರಾಧನೆ, ಹಿರಿಯರ ಎಡೆ, ಗ್ರಾಮದ ಶಾಂತಿಗಾಗಿ ಬಲಿ, ಜಾಡು ತೆಗೆಯುವುದು, ಸರಗ ಹಾಕುವುದು ಈ ಗ್ರಾಮದ ಪ್ರಮುಖ ಸಂಪ್ರದಾಯಗಳಾಗಿವೆ. ಶ್ರೀ ಹೆಂಜಾರಪ್ಪ ದನಗಳಿಗೆ ಬರುವ ಸಪ್ಪೆರೋಗ, ಬಾಯಿಹುಣ್ಣು, ಕಾಲುಬಾಯಿ ರೋಗ, ಸೊರಗುವುದು ಈ ಸಂಬಂಧ ಚಿಕಿತ್ಸೆ ನೀಡುತ್ತಾರೆ. ಮಹಾಲಿಂಗಪ್ಪ ಹಾವು, ಚೇಳು, ನಾಯಿ ಕಡಿತ ಸಂಬಂಧ ಗಿಡಮೂಲಿಕೆಗಳ ಔಷಧಿ ನೀಡಿ ಉಪಚರಿಸುತ್ತಾರೆ. ಇವರು ಸ್ಥಳೀಯವಾಗಿ ಹೆಸರುವಾಸಿಯಾಗಿದ್ದಾರೆ.

## ಮಾಟನಹಳ್ಳಿ

ಮಾಟನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವ–ಉತ್ತರೋತ್ತರವಾಗಿ ೧೮ ಕಿಮೀ ದೂರದಲ್ಲಿದೆ. ಕಂದಾಯ ಗ್ರಾಮವಾಗಿರುವ ಈ ಗ್ರಾಮ ಸಿರಾ–ಅರೇಹಳ್ಳಿ–ಮಧುಗಿರಿ ರಸ್ತೆಯಲ್ಲಿ ಅರೇಹಳ್ಳಿ ಕ್ರಾಸಿನಿಂದ ಪೂರ್ವಕ್ಕೆ ೧೦ ಕಿಮೀ ದೂರದಲ್ಲಿದೆ ಬಯಲುಸೀಮೆ. ಮಾಟ ಎಂಬ ವ್ಯಕ್ತಿಯ ಹೆಸರಿನಲ್ಲಿ ಈ ಗ್ರಾಮ ರಚನೆಯಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೭೭.೪೫ ಹೆಕ್ಟೇರ್ ಆಗಿದೆ. ಇದರ ಉಪಗ್ರಾಮವಾಗಿ ಮಾಟನಹಳ್ಳಿ ಗೊಲ್ಲರಹಟ್ಟಿ ಇದೆ. ರಂಗನಾಥ್ ಅಭಿಪ್ರಾಯದಂತೆ ಈ ಗ್ರಾಮದಲ್ಲಿ ಹಿಂದೆ ಮಾಟ–ಮಂತ್ರ, ಯಂತ್ರ ಮಾಡುವ ಅಕ್ಕಸಾಲಿ ಕುಟುಂಬವಿದ್ದು ತದನಂತರ ಕಾಳಾಪುರ, ಸಿರಾ ಕಡೆಗೆ ವಲಸೆ ಹೋದರೆಂದು ಪೂರ್ವಿಕರು

ಹೇಳುತ್ತಿದ್ದರು. ಯಂತ್ರ-ಮಂತ್ರಗಳಲ್ಲಿ ಪರಿಣತಿ ಹಾಗೂ ಹೆಸರುವಾಸಿಯಾಗಿದ್ದ ಕಾರಣದಿಂದ ಆ ಪರಂಪರೆಯವರಿಂದ ಮಾಟನಹಳ್ಳಿ ಎಂದು ಹೆಸರು ಬಂದಿದೆ ಎಂಬ ಅಭಿಪ್ರಾಯ ನಿಜಕ್ಕೆ ಹತ್ತಿರವಾಗಿದೆ.

ಮರಳುಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಕಾಳಾಪುರ ಗ್ರಾಮದದಿದ ಉತ್ತರಕ್ಕೆ ಒಂದು ಕಿಮೀ ದೂರದಲ್ಲಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಜಿಂಕೆ, ತೋಳ, ಕಾಡುಹಂದಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಳ್ಳಿಕಾರ್ ತಳಿ ಎತ್ತು, ಹಸು, ಎಮ್ಮೆ, ಕುರಿ, ಮೇಕೆ, ಬೆಕ್ಕು, ನಾಯಿಗಳನ್ನು ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಗೂಬೆ, ಕಾಗೆ ಕಂಡುಬರುತ್ತವೆ.

ವಾರ್ಷಿಕ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಕೃಷಿ ಅವಲಂಬಿತ ಬದುಕು ಇಲ್ಲಿನದಾಗಿದ್ದು ಕೆಬ್ಬೆ ನೆಲ. ವಾಡಿಕೆ ಮಳೆ ಸಾಲುವುದಿಲ್ಲ. ಉಪನೀರಾವರಿಯಾಗಿ ೨೫ ಕೊಳವೆ ಬಾವಿಗಳನ್ನು ಕೊರೆಸಿ ತೋಟಗಾರಿಕೆ ಮತ್ತಿತರ ಉಪಯೋಗಕ್ಕೆ ನೀರನ್ನು ಬಳಸಲಾಗುತ್ತಿದೆ. ಒಂದು ಕೆರೆ ಇದ್ದು ತುಂಬುವುದು ದುರ್ಲಭವಾಗಿದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೩ ಸಿಸ್ಟರ್ನ್‌ಗಳಿದ್ದು ೧ ಕೈಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ನಾಯಕರು ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆ. ವಿವಿಧ ಪ್ರಕಾರಗಳ ೫೯ ಮನೆಗಳಿದ್ದು ಅವುಗಳು ಕಾಂಕ್ರೀಟ್, ಹೆಂಚಿನ, ಗುಡಿಸಲು, ಶೀಟಿನ ಸ್ವರೂಪದ ಮನೆಗಳಾಗಿವೆ. ೨೫೪ ಜನಸಂಖ್ಯೆ ಹೊಂದಿದ್ದು ಇಲ್ಲಿ ಜನತಾ, ಇಂದಿರಾ ಆವಾಸ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಸೌಲಭ್ಯ ಪಡೆದಿವೆ. ೨೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ೨ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಕೃಷಿ ದೊಡ್ಡ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ತೊಗರಿ, ಅಲಸಂದೆ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾದ ತೆಂಗು, ಅಡಿಕೆ, ಬಟನ್ಸ್ ಹೂ, ತರಕಾರಿ ಬೆಳೆಯುತ್ತಾರೆ. ಹುಣಸೆಹಣ್ಣು, ಹೊಂಗೆಬೀಜ, ತರಕಾರಿ ವ್ಯಾಪಾರಿ ಸರಕಾಗಿದೆ.

ಸರ್ಕಾರದ ಶಿಕ್ಷಣ, ಕಂದಾಯ, ಸಾರಿಗೆ ಇಲಾಖೆಗೆ ಸೇರಿದ ೭ ಜನ ನೌಕರರಿದ್ದಾರೆ. ಮಲ್ಲಿಕಾರ್ಜುನ ಉಪನ್ಯಾಸಕ, ರಂಗನಾಥ್ ಶಿಕ್ಷಕ, ರಾಜಪ್ಪ ಸಾರಿಗೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ಒಂದೇ ಮನೆಯ ಸರ್ಕಾರಿ ನೌಕರರಾಗಿದ್ದಾರೆ. ಗ್ರಾಮದಲ್ಲಿ ಮಹಿಳೆಯರು ಬೀಡಿ ಸುತ್ತುವುದು, ಊಟದ ಎಲೆ ತಯಾರಿಕೆ ಉಪಕಸುಬಾಗಿಸಿಕೊಂಡಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಭೂಪಸಂದ್ರ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮದಲ್ಲಿ ಚರ ದೂರವಾಣಿಗಳ ಬಳಕೆಯಿದೆ. ಮಾಟನಹಳ್ಳಿ ಕಾಳಾಪುರ-ತಾಳಗುಂದ ರಸ್ತೆ ಸಂಪರ್ಕ, ವಾಹನ ಸೌಲಭ್ಯವಿದೆ. ೨ ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೨೩ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೪.೨% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಅಂಗಡಿಗಳಿವೆ. ಮರಡಿ ರಂಗನಾಥನ ಒಕ್ಕಲಾಗಿದ್ದು ಎದುರೆತ್ತಿ ಆರತಿ ಮಾಡುವುದು ಈ ಗ್ರಾಮ ವಿಶೇಷ. ಮಾರಮ್ಮನ ಪೌಳಿಯಿದ್ದು ಊರಹಬ್ಬವಾಗಿ ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ದೀಪಾವಳಿ ಆಚರಿಸುತ್ತಾರೆ. ಗ್ರಾಮಸ್ಥರು ತಾಳಗುಂದ ಚನ್ನಿಗರಾಯನಿಗೆ ಎದುರೆತ್ತಿ ಆರತಿ ಮಾಡುವುದು ಸಂಪ್ರದಾಯವಿದೆ.

## ಮಾಟನಹಳ್ಳಿ ಗೊಲ್ಲರಹಟ್ಟಿ

ಮಾಟನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೮ ಕಿಮೀ ದೂರದಲ್ಲಿದೆ. ಸಿರಾ, ಮಧುಗಿರಿ, ಅರೇಹಳ್ಳಿ ರಸ್ತೆಯಲ್ಲಿ ಯರಗುಂಟೆ ಗೇಟಿನಿಂದ ಬಲಕ್ಕೆ ಬ್ರಹ್ಮಸಂದ್ರ–ತಾಳಗುಂದ ಮುಖ್ಯ ರಸ್ತೆಯಲ್ಲಿ ಕಾಳಾಪುರದ ಸಮೀಪ ಮಾಟನಹಳ್ಳಿಯಿದೆ. ಈ ಮುಖ್ಯ ಗ್ರಾಮದ ದಕ್ಷಿಣಕ್ಕೆ ಹೊರಭಾಗದಲ್ಲಿ ಕಾಡುಗೊಲ್ಲರ ೧೪ ಮನೆಗಳ ಒಂದು ಸಮುದಾಯವಿದೆ. ಮಾಟನಹಳ್ಳಿಗೆ ಹೊಂದಿಕೊಂಡ ಗ್ರಾಮವಾದ್ದರಿಂದ ಮಾಟನಹಳ್ಳಿ ಗೊಲ್ಲರಹಟ್ಟಿ ಎಂದು ಕರೆಯುವುದು ವಾಡಿಕೆಯಾಗಿದೆ.

ಇದು ಮಜರೆ ಗ್ರಾಮವಾಗಿದ್ದು ಮುಖ್ಯ ಗ್ರಾಮ ಮಾಟನಹಳ್ಳಿ ಭೌಗೋಳಿಕ ವ್ಯಾಪ್ತಿ ೭೭.೪೩ ಹೆಕ್ಟೇರ್ ಭೂಮಿಯಲ್ಲಿ ಈ ಗ್ರಾಮ ಹಂಚಿಕೆಯಾಗಿದ್ದು ೨೪ ಎಕರೆ ಭೂಹಿಡುವಳಿಯನ್ನು ಹೊಂದಿದೆ. ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿ, ಉಡ ಕಂಡುಬಂದರೆ ಗ್ರಾಮದಲ್ಲಿ ಕುರಿ, ಮೇಕೆ, ಎತ್ತು, ಹಸು, ನಾಯಿಗಳನ್ನು ಸಾಕಲಾಗಿದೆ. ಕೋಳಿ ಸಾಕುಪಕ್ಷಿಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಇಲ್ಲಿಗೆ ಚನ್ನರಾಯನಗುಡ್ಡ ಸಮೀಪವಿದ್ದು ಕಾಡುಪಕ್ಷಿಗಳು ಹೇರಳವಾಗಿವೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕೌಜುಗ, ಕಾಗೆ ಕಂಡುಬರುತ್ತವೆ.

ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ರೈತಾಪಿ ಬದುಕಿಗೆ ಸಾಕಾಗುವುದಿಲ್ಲ. ಆದ್ದರಿಂದ ಉಪನೀರಾವರಿಗೆ ೪ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಒಂದು ಕಿರು ಟ್ಯಾಂಕ್ ಹಾಗೂ ಒಂದು ಕೈಪಂಪು ಇದೆ. ಈ ಪರಿಸರದ ಹವಾಮಾನ ಹೆಚ್ಚು ಉಷ್ಣಾಂಶದಿಂದ ಕೂಡಿದ್ದು ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಊರೆಲ್ಲಾ ಕಾಡುಗೊಲ್ಲರು. ಕಾಡುಗೊಲ್ಲರದೇ ಊರು. ೧೪ ಮನೆಗಳಿದ್ದು ಅವು ಹೆಂಚಿನ, ಶೀಟಿನ ಮತ್ತು ಕಾಂಕ್ರೀಟ್ ಸ್ವರೂಪದ ಮನೆಗಳೂ ಇವೆ. ಇವಕ್ಕೆ ಸರ್ಕಾರದ ವಸತಿ ಯೋಜನೆಯಾದ ಆಶ್ರಯ, ಇಂದಿರಾ ಆವಾಸ್ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೮೧ ಜನಸಂಖ್ಯೆ ಇದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಹಾರಕ, ಕೊರ್ಲೆ ಬೆಳೆಯುತ್ತಾರೆ. ಹುಣಸೆಹಣ್ಣು, ಹೊಂಗೆಬೀಜ, ಕುರಿ–ಮೇಕೆ ವ್ಯಾಪಾರ ಮುಖ್ಯ ವ್ಯಾಪಾರಿ ಸರಕಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಭೂಪಸಂದ್ರ ಗ್ರಾಮ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು ೧೪ ಮಕ್ಕಳಿದ್ದಾರೆ. ಮಕ್ಕಳಗೆ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಹೆಚ್ಚಿನ ಶಿಕ್ಷಣಕ್ಕೆ ಕಾಳಾಪುರ, ಸಿರಾ, ಕುನ್ನಾಲಮ್ಮನ ದೇವಾಲಯಗಳಿಗೆ ಹೋಗುತ್ತಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೪.೨% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧ ಪೆಟ್ಟಿಗೆ ಅಂಗಡಿಯಿದೆ. ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪನ ಪೌಳಿಯಿದ್ದು ದೀಪಾವಳಿ ಸಂದರ್ಭದಲ್ಲಿ ವಿಶೇಷವಾಗಿ ಒಂದು ವಾರಗಳ ಕಾಲ ದೀಪ ಏರಿಸುವ, ಇಳಿಸುವ, ಹಾಲು ಮೀಸಲು, ಹಿರಿಯರ ಹಬ್ಬವಾಗಿ ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಕೋಲಮೇಳ, ಭಜನೆ, ಜುಂಜಪ್ಪನನ್ನು ಕುರಿತ ಪದ ಹೇಳುವುದು, ಗಣೆ ಊದುವ ಜನಪದ ಸಂಪ್ರದಾಯವಿದೆ. ಕುನ್ನಾಲಮ್ಮನಿಗೆ ಎದುರೆತ್ತಿ ಆರತಿ, ಬಲಿ, ಹರಕೆ ಸಂಪ್ರದಾಯವಿದ್ದು ದೀಪಾವಳಿ, ಯುಗಾದಿ, ದಸರಾ, ಗೌರಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಮರಿದಾಸರಹಳ್ಳಿ

ಮರಿದಾಸರ ಹಳ್ಳಿ ಒಂದು ಬೇಚಾರಕ್ ಗ್ರಾಮವಾಗಿದ್ದು, ಇಂದು ಬುಕ್ಕಾಪಟ್ಟಣ ರಕ್ಷಿತ ಅರಣ್ಯದ ಒಳಗೆ ಸೇರಿಕೊಂಡಿದೆ. ಹಿಂದೆ ಇಲ್ಲೊಂದು ಗ್ರಾಮ ಇದ್ದು, ಮನೆಗಳೂ ಇದ್ದವೆಂದೂ

ಹೇಳಲಾಗುತ್ತಿದೆ. ದಾಸ ಪರಂಪರೆಯವರು ಈ ಕಾಡಿನ ಭಾಗದಲ್ಲಿ ವಸತಿ ಮಾಡಿಕೊಂಡು ಬಹಳ ವರ್ಷ ವಾಸಿಸುತ್ತಿದ್ದು, ಕಾಲಾನಂತರ ಇಲ್ಲಿಂದ ಬೇರೆ ಬೇರೆ ಕಡೆ ವಲಸೆ ಹೋದರೆಂದು ಹೇಳಲಾಗುತ್ತಿದೆ.

ಕಾಡು ಪ್ರದೇಶವಾಗಿದೆ. ಮರಳು ಮಿಶ್ರಿತ ಕಪ್ಪು ಮಣ್ಣನ್ನು ಹೊಂದಿದೆ. ಬುಕ್ಕಾಪಟ್ಟಣ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ, ಬುಕ್ಕಾಪಟ್ಟಣ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಪರಿಸರದಲ್ಲಿ ಕಾಡಿನ ಪ್ರದೇಶವಾಗಿರುವುದರಿಂದ ಬಿಕ್ಕೆ, ಬ್ಯಾಲ, ನೀಲ, ನೇರಳೆ, ನೀಲಗಿರಿ, ಕಾಡುಮತ್ತಿ, ಹೊಂಗೆ, ಬೇವು, ಬ್ಯಾಟೆ, ಮರಡಿ, ತುಗ್ಗಲಿ ಮರಗಳಿವೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಕರಡಿ, ಉಡ, ತೋಳ, ಕಂಡು ಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಕಾಗೆ, ಕೋಗಿಲೆ, ಕೌಜುಲಗ, ಗಿಡುಗ, ಬೆಳವ, ಗುಬ್ಬಚ್ಚಿ ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ೫೩೪ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೪–೩೭ ಡಿ.ಸೆಂ. ಇದ್ದು, ಚಳಿ ೧೨–೧೩ ಡಿ.ಸೆಂ. ಇರುತ್ತದೆ. ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ.

## ಮಾರಗೊಂಡನಹಳ್ಳಿ

ಮಾರಗೊಂಡನಹಳ್ಳಿಯು ಸಿರಾ ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ–ಬುಕ್ಕಾಪಟ್ಟಣ–ಹಾಗಲವಾಡಿ ಮಾರ್ಗದಲ್ಲಿ ಸಿರಾದಿಂದ ೨೨ ಕಿ.ಮೀ. ದೂರದಲ್ಲಿದ್ದು, ಈ ಗ್ರಾಮವು ಕಂದಾಯ ಗ್ರಾಮ ಹಾಗೂ ಜೋಡಿಗ್ರಾಮವಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದು ಭೌಗೋಳಿಕ ವಿಸ್ತೀರ್ಣ ೮೩೦.೧೨ ಹೆಕ್ಟೇರ್‌ಗಳಾಗಿವೆ. ಬಿಸಿಲಿನ ಉಷ್ಣಾಂಶ ೩೯೦ ಸೆಂ. ಆಗಿದೆ. ಚಳಿಯು ೧೨೦ ಸೆಂ. ಆಗಿದೆ. ಈ ಗ್ರಾಮದಲ್ಲಿ ಯಾವುದೇ ಅರಣ್ಯ ಬೆಟ್ಟ ಗುಡ್ಡಗಳು ಕಂಡು ಬರುವುದಿಲ್ಲ. ಸ್ವಲ್ಪ ಪ್ರಮಾಣದ ಗುಡ್ಡವಿದೆ. ಈ ಗ್ರಾಮದಲ್ಲಿ ೮ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಹಾಗೂ ಒಂದು ಚೆನ್ನಯ್ಯನ ಹಳ್ಳವಿದ್ದು ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ಇಲ್ಲಿನ ವಾರ್ಷಿಕ ಸರಾಸರಿ ಮಳೆ ೪೩೦ ಮಿ.ಮೀ. ಮಳೆಯಾಗುತ್ತದೆ.

ಗ್ರಾಮದಲ್ಲಿ ಒಟ್ಟು ೪೩ ಮನೆಗಳಿದ್ದು ೬೭ ಜನಸಂಖ್ಯೆಯನ್ನು ಹೊಂದಿದೆ. ಮತ್ತು ನಾಯಕ ಜನಾಂಗವು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ ಮತ್ತು ಮುಸ್ಲಿಂರ ಮನೆಗಳಿರುತ್ತವೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ, ವಿಶೇಷವಾಗಿ ಬಾಡೂಟ, ಪಾಯಸ ಮತ್ತು ಸಿಹಿ ತಿನಿಸುಗಳಾಗಿವೆ. ಇವರ ಭಾಷೆ ಕನ್ನಡ ಮಾತೃ ಹಾಗೂ ಉರ್ದು ಅಲ್ಪಸಂಖ್ಯಾತರ ಭಾಷೆಯಾಗಿದೆ. ಆಧುನಿಕ ವಾಹನಗಳಾದ ಮಿನಿಟೆಂಪೋ, ಮತ್ತು ದ್ವಿಚಕ್ರವಾಹನಗಳು ಹಾಗೂ ರಸ್ತೆ ಮತ್ತು ಚರಂಡಿ ವ್ಯವಸ್ಥೆ ಹೊಂದಿದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ ಪ್ರಮುಖ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ಮತ್ತು ದ್ವಿದಳ ಧಾನ್ಯಗಳು, ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆಯನ್ನು, ಹುಣಸೆ ಬೇವುಗಳ ಬೆಳೆಯನ್ನು ಬೆಳೆಯುತ್ತಾರೆ. ಇವು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಆರ್ಥಿಕ ಆದಾಯ ಗಳಿಸಲು ಆಧುನಿಕ ಡೈರಿಯನ್ನು ಹೊಂದಿದ್ದು ಹೈನುಗಾರಕೆಯನ್ನು ಮಾಡುತ್ತಿದ್ದಾರೆ. ಇಲ್ಲಿ ಒಬ್ಬರು ಸರ್ಕಾರಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೆಯೇ ಇಲ್ಲಿ ಬೃಹತ್ ಕೈಗಾರಿಕೆಗಳಿಲ್ಲದಿದ್ದರೂ ಟೈಲರ್ ಮತ್ತು ಊಟದ ಎಲೆ ತಯಾರಿಸುವುದು ಕಂಡು ಬರುತ್ತದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ, ಸಿರಾ ತಹಶೀಲ್ದಾರ್ ಕಛೇರಿ ರಾಮಲಿಂಗಾಪುರ ಗ್ರಾಮ ಪಂಚಾಯ್ತಿ ಮತ್ತು ಒಬ್ಬರು ಸದಸ್ಯರು ಬುಕ್ಕಾಪಟ್ಟಣ ಪೋಲೀಸ್ ಠಾಣೆಯನ್ನು ತುಪ್ಪದಕೋಣೆ ಅಂಚೆ ಕಛೇರಿಯನ್ನು ಹೊಂದಿದೆ. ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದ್ದು, ಬಗೆಹರಿಯದ ಸಮಸ್ಯೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಬಗೆ ಹರಿಸಿಕೊಳ್ಳುತ್ತಿದ್ದಾರೆ.

ಈ ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯನ್ನು ಹೊಂದಿದ್ದು, ಕನ್ನಡ ಮಾಧ್ಯಮದಲ್ಲಿ ಉಚಿತ ಶಿಕ್ಷಣವನ್ನು ಪಡೆಯುತ್ತಿದ್ದಾರಲ್ಲದೇ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ. ೪೮.೬ ರಷ್ಟಿದೆ. ಹಾಗೂ ಈ ಗ್ರಾಮದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿಲ್ಲದಿದ್ದರೂ ಸ್ತ್ರೀ ಶಕ್ತಿ ಕೇಂದ್ರವನ್ನು ಹೊಂದಿದೆ.

ಈ ಹಳ್ಳಿಯಲ್ಲಿ ಯಾವುದೇ ಆರೋಗ್ಯ ಕೇಂದ್ರಗಳಿಲ್ಲದಿದ್ದರೂ, ಕುಟುಂಬ ಕಲ್ಯಾಣ ಯೋಜನೆಯ ಆಶಾ ಕಾರ್ಯಕರ್ತೆಯರು, ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಅಲ್ಲದೆ ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಚಳಿ ಇತ್ಯಾದಿ ರೋಗಗಳು ಕಂಡು ಬರುತ್ತವೆ. ಸರ್ಕಾರದ ಸಮುದಾಯದ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದು ಎರಡು ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಒಳಗೊಂಡಿದೆ.

ಈ ಗ್ರಾಮದಲ್ಲಿ ಐತಿಹಾಸಿಕ ನೆಲೆಯ ಎರಡು ಅರಳಿ ವೃಕ್ಷಗಳಿವೆ. ಧಾರ್ಮಿಕ ಕೇಂದ್ರಗಳಾದ ಆಂಜನೇ. ಕಣಿವೆಮಾರಮ್ಮ ದೇವಾಲಯಗಳಿವೆ. ಇಲ್ಲಿ ಪ್ರತಿವರ್ಷಕ್ಕೊಮ್ಮೆ ಕಣಿವೆಮಾರಮ್ಮನ ಜಾತ್ರೆಯನ್ನು ಆರತಿ ಮಾಡಿ ಬಲಿ ನೀಡುತ್ತಾರೆ.

## ಮಾಳನಹಳ್ಳಿ

ಮಾಳನಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಮಾರ್ಗದಲ್ಲಿ ಬೆಂಚೇಗೇಟಿನಿಂದ ಬಲಭಾಗಕ್ಕೆ ೭ ಕಿ.ಮೀ. ದೂರದಲ್ಲಿದೆ. ಸಿರಾದಿಂದ ೨೧ ಕಿ.ಮೀ. ದೂರದಲ್ಲಿದೆ. ಒಂದು ಕಂದಾಯ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೨೯೨.೮ ಹೆಕ್ಟೇರ್‌ಗಳಾಗಿವೆ. ಮಾಳಪ್ಪ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದು, ಈ ಗ್ರಾಮದಲ್ಲಿ ಯಾವುದೇ ಅರಣ್ಯ ಬೆಟ್ಟ ಗುಡ್ಡಗಳು ಕಂಡು ಬರುವುದಿಲ್ಲ. ವಾರ್ಷಿಕ ಸರಾಸರಿ ೪೧೮೯.೯ ಮಿ.ಮೀ. ಮಳೆಯಾಗುತ್ತಿದೆ. ಇಲ್ಲಿ ೧೨ ಕೊಳವೆ ಬಾವಿಗಳಿದ್ದು ಅದರಲ್ಲಿ ೦೧ ಕುಡಿಯುವ ನೀರಿನ ವ್ಯವಸ್ಥೆಗೆ ಹಾಗೂ ೦೧ ಕೈ ಪಂಪು ಇದೆ.

ಈ ಪ್ರದೇಶದಲ್ಲಿ ನರಿ, ಮೊಲ, ಜಿಂಕೆ, ಹಂದಿ ಕಂಡು ಬಂದರೆ, ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಕುರಿ, ಮೇಕೆ, ದನಗಳನ್ನು ಸಾಕಿದ್ದಾರೆ. ಹಾಗೂ ಕೋಳಿ ಸಾಕು ಪಕ್ಷಿಯಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರುನೀರು ಯೋಜನೆ ಅಡಿಯಲ್ಲಿ ನೀರು ಒದಗಿಸಲಾಗುತ್ತಿದೆ.

ಗ್ರಾಮದಲ್ಲಿ ಒಟ್ಟು ೫೨ ಮನೆಗಳಿದ್ದು ೨೮೭ ಜನಸಂಖ್ಯೆಯನ್ನು ಹೊಂದಿದೆ. ಮತ್ತು ಗೊಲ್ಲ, ಬೋವಿ, ನಾಯಕರ ಮನೆಗಳಿದ್ದು ಅವುಗಳು ಕಾಂಕ್ರೀಟ್, ಕಲ್ಲಿನ ಮನೆ, ಹೆಂಚು ಮತ್ತು ಶೀಟಿನ ಮನೆಗಳಿದ್ದು ಇವು ಸರ್ಕಾರದ ವಸತಿ ಯೋಜನೆಗಳಾದ ಜನತಾ, ಆಶ್ರಯ ಯೋಜನೆಗಳ ೧೪ ಫಲಾನುಭವಿಗಳಿದ್ದಾರೆ. ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಭೋಜನಗಳು. ಹಾಗೂ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಸಾಂಪ್ರದಾಯಿಕ ವಾಹನಗಳಿಲ್ಲದಿದ್ದರೂ ಮಿನಿಟೆಂಪೋ, ದ್ವಿಚಕ್ರ ವಾಹನಗಳಿವೆ ಹಾಗೂ ಕಚ್ಚಾ ರಸ್ತೆಯನ್ನು ಹೊಂದಿದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಮುಖ್ಯ ಬೆಳೆ ಶೇಂಗಾ ಪ್ರಮುಖ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ಮತ್ತು ದ್ವಿದಳ ಧಾನ್ಯಗಳು ಹಾಗೂ ತೆಂಗು, ಅಡಿಕೆ ಮರಗಳು ಇತ್ಯಾದಿ. ಅಲ್ಲದೆ ಪ್ರಾಣಿಗಳೊಂದಿಗೆ ವ್ಯಾಪಾರದ ಸರಕುಗಳಾಗಿವೆ. ಯಾವುದೇ ರೀತಿಯ ಆಧುನಿಕ ಡೈರಿಯನ್ನು ಕಾಣುವುದಿಲ್ಲ. ಯಾವುದೇ ರೀತಿಯ ಕೈಗಾರಿಕೆಗಳು ಕಂಡು ಬರುವುದಿಲ್ಲ.

ಈ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಸಿರಾ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿ, ತಹಶೀಲ್ದಾರ್ ಕಛೇರಿಯನ್ನು ಹೊಂದಿದೆ. ಕಳ್ಳಂಬೆಳ್ಳ ವಿದ್ಯುತ್ ಮತ್ತು ಪೋಲೀಸ್ ಠಾಣೆಯನ್ನು ದೊಡ್ಡ ಅಗ್ರಹಾರ ಗ್ರಾಮ ಪಂಚಾಯಿತಿ ಮತ್ತು ಒಬ್ಬರು ಸದಸ್ಯರನ್ನು ಹೊಂದಿದೆ. ಹಾಗೆಯೇ ದೊಡ್ಡ ಅಗ್ರಹಾರ ಅಂಚೆ ಕಛೇರಿಯನ್ನು ಚರದೂರವಾಣಿಗಳಾದ ಮೊಬೈಲ್‌ಗಳನ್ನು ಹೊಂದಿದೆ. ಈ ಗ್ರಾಮದಲ್ಲಿ ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ.

ಎರಡು ಸ್ತ್ರೀ ಶಕ್ತಿ ಸಂಘಗಳು ಮತ್ತು ಒಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವನ್ನು ಹೊಂದಿದೆ. ಅಲ್ಲದೆ ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯನ್ನು ಹೊಂದಿದ್ದು, ಒಟ್ಟಾರೆ ೨೦ ಮಕ್ಕಳು, ಒಬ್ಬರು ಶಿಕ್ಷಕರು, ಇಬ್ಬರು ಅಡುಗೆ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಗ್ರಾಮದ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ. ೪೨.೩ ರಷ್ಟಿದೆ. ಮಾಲನಹಳ್ಳಿಯಲ್ಲಿ ಯಾವುದೇ ಗ್ರಂಥಾಲಯ, ಆಟದ ಮೈದಾನವಿಲ್ಲದಿದ್ದರೂ, ಕುಟುಂಬ ಕಲ್ಯಾಣ ಪದ್ಧತಿಯನ್ನು ಹೊಂದಿದೆ. ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಗ್ರಾಮಕ್ಕೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಹಾಗೆಯೇ ಗೊಲ್ಲರ ಈರಣ್ಣ ಪಶುಗಳಿಗೆ ನಾಟಿ ಔಷಧಿಯನ್ನು ಕೊಡುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಅಲ್ಲದೆ ಈ ಹಳ್ಳಿಯಲ್ಲಿ ಒಂದು ಚಿಲ್ಲರೆ ವ್ಯಾಪಾರದ ಅಂಗಡಿಯನ್ನು ಒಳಗೊಂಡಿದೆ. ಅಲ್ಲದೇ ಐತಿಹಾಸಿಕ ಒಂದು ಆಲದ ಮರವನ್ನು ಹೊಂದಿದ್ದು ಅದನ್ನು ದೈವವೆಂದು ಪೂಜಿಸುವುದು ರೂಢಿಯಲ್ಲಿದೆ.

ಧಾರ್ಮಿಕ ಕೇಂದ್ರಕ್ಕೆ ಈ ಗ್ರಾಮದಲ್ಲಿ ಯತ್ತಪ್ಪ ಮತ್ತು ಜುಂಜಪ್ಪನ ೨ ದೇವಾಲಯಗಳಿವೆ. ವರ್ಷಕ್ಕೊಮ್ಮೆ ಜುಂಜಪ್ಪನ ಜಾತ್ರೆ ನಡೆಯುತ್ತದೆ. ಹಾಗೆಯೇ ಭೂತಪ್ಪನ ಪೌಳಿಗೆ ಬಲಿಯನ್ನು ನೀಡುವುದು ವಿಶೇಷವಾಗಿದೆ. ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಮಾದೇನಹಳ್ಳಿ

ಮಾದೇನಹಳ್ಳಿ ಸಿರಾ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕನಲ್ಲಿದೆ. ೨೫ ಕಿ.ಮೀ. ದೂರದಲ್ಲಿರುವ ಗ್ರಾಮವು ಜನವಸತಿ ಗ್ರಾಮ. ಹಾಗಲವಾಡಿ ಪಾಳೆಗಾರರ ಯರಿಮಾದನಾಯಕ ಹೆಸರಿನ ಮೇಲೆ ಮಾದೇನಹಳ್ಳಿ ಎಂದು ಹೆಸರಿಟ್ಟಿರುತ್ತಾರೆಂದು ಗ್ರಾಮಸ್ಥರು ತಿಳಿಸುತ್ತಾರೆ. ಇದು ಕಂದಾಯ ಗ್ರಾಮವಾಗಿದ್ದು. ಭೌಗೋಳಿಕ ವಿಸ್ತೀರ್ಣ ४೨೧ ಹೆಕ್ಟೇರ್‌ಗಳು.

ಬಯಲು ನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಆವೃತ್ತವಾಗಿದೆ. ಈ ಗ್ರಾಮದಲ್ಲಿ ಯಾವುದೇ ಅರಣ್ಯ ಬೆಟ್ಟ ಗುಡ್ಡಗಳು ಕಂಡು ಬರುವುದಿಲ್ಲ. ವಾರ್ಷಿಕ ಸರಾಸರಿ ಮಳೆಯ ಪ್ರಮಾಣವು ೪೫೬ ಮಿ.ಮೀ. ೩೫ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಈ ಗ್ರಾಮದಲ್ಲಿ ೯೮ ಮನೆಗಳಿದ್ದು, ೫೨೦ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಕುಂಚಿಟಿಗ, ದೊಡ್ಡ ಸಮುದಾಯವಾಗಿದ್ದು, ಕುಂಚಿಟಿಗ, ವೀರಶೈವ, ಉಪ್ಪಾರ, ನಾಯಕ, ಕಮ್ಮಾರ, ಮುಸ್ಲಿಂ, ಮಡಿವಾಳರ ಕಿರು ಸಮುದಾಯಗಳಿವೆ. ೧೯ ಮನೆಗಳಲ್ಲಿ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ಸಾಂಪ್ರದಾಯಿಕ ವಾಹನಗಳು ಮತ್ತು ಆಧುನಿಕ ವಾಹನಗಳನ್ನು ಒಳಗೊಂಡಿದೆ. ರಸ್ತೆ ಮತ್ತು ಚರಂಡಿ ವ್ಯವಸ್ಥೆಯನ್ನು ಹೊಂದಿದೆ. ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು, ಶೇಂಗಾ ಪ್ರಮುಖ ಬೆಳೆಯಾಗಿರುತ್ತದೆ. ಇದರೊಂದಿಗೆ ರಾಗಿ, ಭತ್ತ, ಜೋಳ, ಮತ್ತು ದ್ವಿದಳ ಧಾನ್ಯಗಳು ತೆಂಗು, ಅಡಿಕೆ, ಹುಣಸೆ ಬೆಳೆಗಳನ್ನು ಬೆಳೆಯುತ್ತಾರೆ. ಇವು ವ್ಯಾಪಾರದ ಸರಕುಗಳಾಗಿವೆ. ಒಂದು ಆಧುನಿಕ ಡೈರಿಯನ್ನು ಹೊಂದಿದೆ. ಈ ಗ್ರಾಮದಲ್ಲಿ ಸರ್ಕಾರಿ ಕೆಲಸದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲೆ ಮತ್ತು ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ , ಸಿರಾ ತಹಶೀಲ್ದಾರ್ ಕಛೇರಿ ರಾಮಲಿಂಗಾಪುರ ಗ್ರಾಮ ಪಂಚಾಯ್ತಿ ಒಬ್ಬರು ಸದಸ್ಯರು ಹೊಂದಿದೆ. ಅಲ್ಲದೆ ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ. ಹಣಕಾಸಿನ ವ್ಯವಸ್ಥೆಗೆ ಯಾವುದೇ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿಲ್ಲ. ಸ್ತ್ರೀ ಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಣ್ಣಮ್ಮ ಸ್ಮಾರಕ ಪ್ರೌಢಶಾಲೆಯನ್ನು ಹೊಂದಿದ್ದು ಒಟ್ಟಾರೆ ಶೇ. ೬೦.೧ ರಷ್ಟು ಸಾಕ್ಷರತೆಯ ಪ್ರಮಾಣವನ್ನು ಹೊಂದಿದೆ.

ಈ ಗ್ರಾಮದಲ್ಲಿ ಉಪ ಆರೋಗ್ಯ ಕೇಂದ್ರ, ಮತ್ತು ಪಶುಚಿಕಿತ್ಸಾ ಕೇಂದ್ರವನ್ನು ಒಳಗೊಂಡಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸಮುದಾಯದ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದು, ನಾಲ್ಕು ಚಿಲ್ಲರೆ ವ್ಯಾಪಾರ ಅಂಗಡಿಗಳನ್ನು ಒಳಗೊಂಡಿದೆ.

ಧಾರ್ಮಿಕ ಪರಂಪರೆಯಲ್ಲಿ ಶ್ರೀರಾಮ, ಕರಿಯಮ್ಮ, ಆಂಜನೇಯ ದೇವಾಲಯಗಳನ್ನು ಒಳಗೊಂಡಿದೆ. ಸಾಂಪ್ರದಾಯಿಕ ಹಬ್ಬಗಳೊಂದಿಗೆ ಪ್ರತಿ ವರ್ಷವೂ ಕರಿಯಮ್ಮ ಜಾತ್ರೆಯನ್ನು ಮಾಡುವುದು ವಿಶೇಷವಾಗಿರುತ್ತದೆ.

ಸಾಂಸ್ಕೃತಿಕ ಪರಂಪರೆಯಲ್ಲಿ ಸೋಬಾನೆ ಪದಕಾರರು ಭೀಮಕ್ಕ, ಕೆಂಪಮ್ಮ ತತ್ವಪದಕಾರರು ರಾಮಚಂದ್ರಪ್ಪ ಸಿರಾ ನಗರದಲ್ಲಿ ವಾಸವಾಗಿದ್ದಾರೆ. ಹಾಗಲವಾಡಿ ಪಾಳೆಯಗಾರರ ಕಾಲದ, ಶೈವ ಪರಂಪರೆಯ ಮಠವಿದ್ದು, ಇದು ಮಾದೇನಹಳ್ಳಿ ಕೆರೆಯ ಕೋಡಿಯಲ್ಲಿದೆ. ಮುದ್ದವೀರಸ್ವಾಮಿ ಮಠ ಎಂತಲೂ ಕರೆಯುತ್ತಾರೆ. ಶ್ರಾವಣ ಮಾಸದಲ್ಲಿ ಇಲ್ಲಿ ಹರಿಸೇವೆ, ಅನ್ನಸಂತರ್ಪಣೆ ನಡೆಯುತ್ತದೆ.

## ಮಣ್ಣಮ್ಮ ದೇವಸ್ಥಾನದ ಗೇಟ್

ಈ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನಲ್ಲಿದೆ. ಹಾಗೂ ಸಿರಾದಿಂದ ೧೮.೦೬ ಕಿ.ಮೀ. ದೂರದಲ್ಲಿದ್ದು, ಈ ಗ್ರಾಮವು ಮಜರೆ ಗ್ರಾಮವಾಗಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೮೩೦.೧೨ ಹೆಕ್ಟೇರ್‌ಗಳಾಗಿವೆ. ಈ ಗ್ರಾಮದಲ್ಲಿ ಯಾವುದೇ ಅರಣ್ಯ ಬೆಟ್ಟ ಗುಡ್ಡಗಳು ಕಂಡು ಬರುವುದಿಲ್ಲ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮತ್ತು ಎರೆ ಮಣ್ಣಿನಿಂದ ಕೂಡಿದ್ದು, ಈ ಗ್ರಾಮಕ್ಕೆ ವಾರ್ಷಿಕವಾಗಿ ೪೩೬ ಮಿ.ಮೀ. ಸರಾಸರಿ ಮಳೆಯಾಗುತ್ತಿದೆ. ಈ ಗ್ರಾಮದಲ್ಲಿ ೦೬ ಕೊಳವೆ ಬಾವಿಗಳಿದ್ದು ಸಾಕ್ಷಿಹಳ್ಳಿ, ಕುಂಬಾರಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಟ್ಯಾಂಕ್ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲದೇ ಎರಡು ಕೈ ಪಂಪುಗಳಿವೆ. ಮತ್ತು ಕಟ್ಟೆ ಇದ್ದು ಮಳೆಗಾಲ ದಲ್ಲಿ ನೀರಿನ ಪ್ರಮಾಣವಿರುತ್ತದೆ. ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ.

ಈ ಗ್ರಾಮದಲ್ಲಿ ಒಟ್ಟು ೦೮ ಮನೆಗಳಿದ್ದು, ೩೧ ಜನಸಂಖ್ಯೆಯನ್ನು ಹೊಂದಿದೆ. ಮತ್ತು ಕುಂಚಿಟಿಗ, ಆದಿ

ಕರ್ನಾಟಕ, ನಾಯಕರ ಮನೆಗಳಿರುತ್ತವೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ವಿಶೇಷವಾಗಿ ಬಾಡೂಟ, ಪಾಯಸ ಮತ್ತು ಹೋಳಿಗ ತಿನಿಸುಗಳಾಗಿವೆ. ಇವರ ಭಾಷೆ ಮಾತೃ ಕನ್ನಡ. ಇಲ್ಲಿ ಯಾವುದೇ ಸಾಂಪ್ರದಾಯಿಕ ವಾಹನಗಳು ಕಂಡು ಬರುವುದಿಲ್ಲ. ಮತ್ತು ೨ ಮಿನಿಟೆಂಪೋ, ಮತ್ತು ದ್ವಿಚಕ್ರವಾಹನಗಳು ಹಾಗೂ ಡಾಂಬರಿನ ರಸ್ತೆ ಮತ್ತು ಕಚ್ಚಾ ರಸ್ತೆ ಮಾರ್ಗವನ್ನು (ಸಿರಾ ಹುಯಿಲ್‌ದೊರೆ– ಹೊಸಕೆರೆ) ಹೊಂದಿದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ, ಸೂರ್ಯಕಾಂತಿ, ಪ್ರಮುಖ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ನವಣೆ ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆಯನ್ನು, ಹುಣಸೆ ಮರಗಳನ್ನು ಬೆಳೆಯುತ್ತಾರೆ. ಮತ್ತು ಇವು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಹಾಗೂ ಕೃಷಿಕಾರ್ಮಿಕರನ್ನು ಹೊಂದಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ, ಸಿರಾ ತಹಶೀಲ್ದಾರ್ ಕಛೇರಿಯನ್ನು ಹೊಂದಿದೆ. ರಾಮಲಿಂಗಾಪುರ ಅಂಚೆ ಮತ್ತು ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದ್ದು, ಬಗೆಹರಿಯದ ಸಮಸ್ಯೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಬಗೆ ಹರಿಸಿಕೊಳ್ಳುತ್ತಿದ್ದಾರೆ.

ಈ ಗ್ರಾಮದಲ್ಲಿ ಯಾವುದೇ ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಪಾಠಶಾಲೆಯನ್ನು ಹೊಂದಿಲ್ಲದಿದ್ದರೂ, ಸರ್ಕಾರಿ ಪ್ರೌಢಶಾಲೆಯನ್ನು ಹೊಂದಿದ್ದು ೨೨೧ ಜನ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಈ ಗ್ರಾಮದ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ. ೫೫.೮ ರಷ್ಟಿದೆ. ಪ್ರೌಢಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯಕ, ಸಮವಸ್ತ್ರ, ಉಚಿತಪುಸ್ತಕಗಳ ಸೌಲಭ್ಯವಿದೆ.

ಈ ಗ್ರಾಮದಲ್ಲಿ ಸಹಕಾರಿ ಸಂಘಗಳು, ಸ್ತ್ರೀ ಶಕ್ತಿ ಕೇಂದ್ರಗಳು ಕಂಡು ಬರುವುದಿಲ್ಲ ಮತ್ತು ಇಲ್ಲಿ ಯಾವುದೇ ಆರೋಗ್ಯ ಕೇಂದ್ರಗಳಿಲ್ಲದಿದ್ದರೂ, ಕುಟುಂಬ ಕಲ್ಯಾಣ ಯೋಜನೆಯ ಆಶಾ ಕಾರ್ಯಕರ್ತೆಯರು, ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯದ ಸೌಲಭ್ಯಗಳೊಂದಿಗೆ ೧೨ ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಹೊಂದಿದೆ ಏಕೆಂದರೆ ಇಲ್ಲಿ ಮಣ್ಣಮ್ಮನ ದೇವಸ್ಥಾನವಿದ್ದು ಪೂಜೆಗೆ ಬರುವ ಭಕ್ತಾದಿಗಳಿಗೆ ಹಣ್ಣು , ಕಾಯಿ ಮತ್ತು ಹೂವುಗಳ ಅಂಗಡಿಗಳನ್ನು ಕಾಣಬಹುದಾಗಿದೆ.

ಧಾರ್ಮಿಕ ಕೇಂದ್ರವಾಗಿ ಮಣ್ಣಮ್ಮನ ದೇವಾಲಯವಿದೆ. ಮತ್ತು ಪ್ರತಿ ವರ್ಷವೂ ಈ ಜಾತ್ರೆಯನ್ನು ಮಾಡುವುದು ಆರತಿಗಳೊಂದಿಗೆ ಬಲಿ ನೀಡುವ ಕಾರ್ಯ ದಿನನಿತ್ಯ ನಡೆಯುತ್ತದೆ. ಇದು ಸಿರಾ ತಾಲ್ಲೂಕಿನ ಪ್ರವಾಸಿ ಕೇಂದ್ರ ವಾಗಿದೆ. ಸುತ್ತಮುತ್ತಲ ಪ್ರದೇಶಕ್ಕೆ ಪ್ರಸಿದ್ಧವಾದ ದೇವತೆಯಾಗಿರುವುದು.

ಇಲ್ಲಿ ಸೋಮನಕುಣಿತ, ದೇವರ ಮೆರವಣಿಗೆ, ಅಗ್ನಿಕುಂಡ, ಶುಕ್ರವಾರ, ಮಂಗಳವಾರ ದೇವರ ವಿಶೇಷ ಪೂಜೆ ಬಲಿ ಅರ್ಪಣೆ, ಅನ್ನ ಸಂತರ್ಪಣೆ ಇರುತ್ತದೆ.

## ಮಾದಯ್ಯನಪಾಳ್ಯ

ಮಾದಯ್ಯನ ಪಾಳ್ಯವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಹಾಗೂ ಸಿರಾದಿಂದ ೧೯.೦೫ ಕಿ.ಮೀ. ದೂರದಲ್ಲಿದ್ದು, ಈ ಗ್ರಾಮವು ಓಬಳ್ಳಿಯ ಮಜರೆ ಗ್ರಾಮವಾಗಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೪೩ ಹೆಕ್ಟೇರ್‌ಗಳಾಗಿವೆ. ಮಾದಯ್ಯ ಎಂಬ ವ್ಯಕ್ತಿಯಿಂದ ಈ ಗ್ರಾಮ ರಚನೆಯಾಗಿರು ವುದರಿಂದ ಆಥನ ಹೆಸರನ್ನೇ ಗ್ರಾಮಕ್ಕೆ ಇಡಲಾಗಿದ್ದು, ಮಾದಯ್ಯನ ಪಾಳ್ಯವಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮತ್ತು ಎರೆ ಮಣ್ಣಿನಿಂದ ಕೂಡಿದ್ದು, ಈ ಗ್ರಾಮದಲ್ಲಿ ಯಾವುದೇ ಅರಣ್ಯ ಬೆಟ್ಟ ಗುಡ್ಡ, ತೋಪುಗಳು ಕಂಡು ಬರುವುದಿಲ್ಲ. ಹಾಗೂ ಈ ಗ್ರಾಮದಲ್ಲಿ ೦೮ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ಸಿಸ್ಟನ್ ಮತ್ತು ಕೈ ಪಂಪುಗಳನ್ನು ಹೊಂದಿದೆ. ಇಲ್ಲಿನ ವಾರ್ಷಿಕ ಮಳೆಯ ಸರಾಸರಿ ೪೪೬ ಮಿ.ಮೀ. ಸರಾಸರಿ ಮಳೆಯಾಗುತ್ತದೆ. ಬಿಸಿಲಿನ ಉಷ್ಣಾಂಶ ೩೮೦ ಸೆಂ. ಇದ್ದು, ಚಳಿಯು ೧೨೦ ಸೆಂ. ಇರುತ್ತದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಇದ್ದು, ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ ಕಂಡು ಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಕೋಗಿಲೆ, ಹದ್ದು, ಗೊರವಂಕ ಕಂಡು ಬರುತ್ತವೆ.

ಈ ಗ್ರಾಮದಲ್ಲಿ ಒಟ್ಟು ೧೨ ಮನೆಗಳಿದ್ದು, ೩೫ ಜನಸಂಖ್ಯೆಯನ್ನು ಹೊಂದಿದೆ. ಮತ್ತು ಕುಂಚಿಟಿಗ ಜನಾಂಗವು ಜೀವನ ನಡೆಸುತ್ತಿದೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ವಿಶೇಷವಾಗಿ ಬಾಡೂಟ, ಪಾಯಸ ಮತ್ತು ಹೋಳಿಗ ತಿನಿಸುಗಳಾಗಿವೆ. ಇವರ ಭಾಷೆ ಮಾತೃ ಕನ್ನಡ. ಇಲ್ಲಿ ಟ್ರ್ಯಕ್ಟರ್ ಮತ್ತು ದ್ವಿಚಕ್ರವಾಹನಗಳು ಕಚ್ಚಾ ರಸ್ತೆಯನ್ನು ಹೊಂದಿದೆ.

ಗ್ರಾಮದಲ್ಲಿ ಕಲ್ಲಿನ, ಹೆಂಚಿನ, ಶೀಟಿನ ಮನೆಗಳು ಇದ್ದು ಇವು ಆಶ್ರಯ, ಹಾಗೂ ಜನತಾ ವಸತಿ ಯೋಜನೆಯ ೪ ಫಲಾನುಭವಿಗಳಿದ್ದಾರೆ. ೧೦ ಮನೆಯಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ, ರಾಗಿ, ಭತ್ತ, ಜೋಳ, ನವಣೆ ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆಯನ್ನು, ಹುಣಸೆ ಮರಗಳನ್ನು ಬೆಳೆಯುತ್ತಾರೆ. ಮತ್ತು ಇವು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಹಾಗೂ ಕೃಷಿಕಾರ್ಮಿಕರನ್ನು ಹೊಂದಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಗೋಪಾಲದೇವರಹಳ್ಳಿ ತಾಲ್ಲೂಕು ಪಂಚಾಯ್ತಿ, ಸಿರಾ ತಹಶೀಲ್ದಾರ್ ಕಛೇರಿ, ಗೋಪಾಲದೇವರ ಹಳ್ಳಿ ಗ್ರಾಮ ಪಂಚಾಯ್ತಿ ಹಾಗೂ ಬೆಂಚೆ ಅಂಚೆ ಸಂಪರ್ಕ ಹೊಂದಿದೆ. ಕಳ್ಳಂಬೆಳ್ಳ ಪೋಲೀಸ ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಬಗೆಹರಿಯದ ಸಮಸ್ಯೆಗಳಲ್ಲಿದ್ದರೆ ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಬಗೆ ಹರಿಸಿಕೊಳ್ಳುತ್ತಿದ್ದಾರೆ.

ಈ ಗ್ರಾಮದಲ್ಲಿ ಯಾವುದೇ ಶಿಕ್ಷಣ ಇಲಾಖೆಯ ಕೇಂದ್ರಗಳಿಲ್ಲದಿದ್ದರೂ ಒಂದು ಸ್ತ್ರೀ ಶಕ್ತಿ ಕೇಂದ್ರವಿದೆ, ಇದರಿಂದ ಸಣ್ಣ ಪ್ರಮಾಣದ ಉಳಿತಾಯವನ್ನು ಸಾಲಸೌಲಭ್ಯವನ್ನು ಪಡೆಯುತ್ತಿದೆ. ಹಾಗೂ ಈ ಗ್ರಾಮದ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ. ೪೮.೯ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಈ ಗ್ರಾಮದಲ್ಲಿ ಸಮುದಾಯದ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾ ವೇತನ ಪಡೆಯುತ್ತಿದ್ದು, ಯಾವುದೇ ಐತಿಹಾಸಿಕ ನೆಲೆಯ ಸ್ಮಾರಕ ಹಾಗೂ ಶಾಸನಗಳು ಕಂಡು ಬರುವುದಿಲ್ಲ. ಈ ಗ್ರಾಮದಲ್ಲಿ ಯಾವುದೇ ದೇವಾಲಯಗಳಿಲ್ಲದಿದ್ದರೂ ಓಬಳ್ಳಿಹಳ್ಳಿಯ ಮಾರಮ್ಮನಿಗೆ ಎದುರೆತ್ತಿ, ಆರತಿ ಮಾಡುತ್ತಾರೆ. ತಿಮ್ಮಪ್ಪ ದೇವರಿಗೆ ಪೂಜೆ ಮಾಡಿಸಿಕೊಂಡು ಬರುವ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶ, ಶಿವರಾತ್ರಿ, ಸಂಕ್ರಾಂತಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಾರುತಿನಗರ

ಮಾರುತಿನಗರ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿನಲ್ಲಿದೆ. ಸಿರಾ ಹುಳಿಯೂರು ರಸ್ತೆಯಲ್ಲಿ ೨೦ ಕಿ.ಮೀ. ದೂರದಲ್ಲಿರುವ ಗ್ರಾಮವು ಬುಕ್ಕಾ ಪಟ್ಟಣದ ಒಂದು ಬಡಾವಣೆಯಾಗದೆ. ಇದನ್ನು ಇಟ್ಟಿಗೆಹಳ್ಳಿ ಎಂದು ಕರೆಯಲಾಗಿತ್ತು.

ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೪೮.೦೮ ಹೆಕ್ಟೇರ್‌ಗಳಾಗಿವೆ. ಬಯಲು ನಾಡಿನ ಪ್ರದೇಶವಾಗಿದೆ. ಕೆಂಪು ಮಿಶ್ರಿತ ಬಿಳಿ ಮತ್ತು ಮರಳು ಮಿಶ್ರಿತ ಬಿಳಿ ಕಲ್ಲು ಮಣ್ಣುಗಳಿಂದ ಕೂಡಿದೆ. ಒಟ್ಟು ವಾರ್ಷಿಕ ಸರಾಸರಿ ಮಳೆಯ ಪ್ರಮಾಣವು ೪೫೩೮ ಮಿ.ಮೀ. ಇದೆ. ಇಲ್ಲಿ ಒಂದು ಹಳ್ಳವಿದೆ. ಮತ್ತು ೧೧ ಕೊಳವೆ ಬಾವಿಗಳನ್ನು ಒಳಗೊಂಡಿದೆ. ಕುಡಿಯುವ ನೀರಿನ ವ್ಯವಸ್ಥೆಗೆ ಗ್ರಾಮ ಪಂಚಾಯ್ತಿಯಿಂದ ಕೈ ಪಂಪುಗಳು ಮಿನಿ ಟ್ಯಾಂಕಿನ ವ್ಯವಸ್ಥೆ ಕಲ್ಪಿಸಿಕೊಡಲಾಗಿದೆ.

ಈ ನಗರದಲ್ಲಿ ೧೦೦ ಮನೆಗಳಿದ್ದು, ೮೭ ಜನಸಂಖ್ಯೆಯನ್ನು ಹೊಂದಿದೆ. ಇಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದೆ. ಮುಸ್ಲಿಂರ ಮನೆಗಳಿವೆ. ಇವರ ಮುಖ್ಯ ಆಹಾರವು ರಾಗಿ ಮುದ್ದೆ, ಅನ್ನ. ವಿಶೇಷವಾಗಿ ಬಾಡೂಟ, ಹೋಳಿಗೆ, ಪಾಯಸ ಇತ್ಯಾದಿಗಳಾಗಿವೆ. ಕನ್ನಡ ಮಾತೃಭಾಷೆಯಾಗಿದ್ದು, ಉರ್ದು ಭಾಷೆ ಮಾತನಾಡುತ್ತಾರೆ.

ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು, ಶೇಂಗಾ ಮುಖ್ಯ ಬೆಳೆಯಾಗಿದೆ. ಇದರೊಂದಿಗೆ ರಾಗಿ, ಭತ್ತ, ತೆಂಗು, ಅಡಿಕೆ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಅಲ್ಲದೆ ೨ ಜನ ಸರ್ಕಾರದ ಸೇವೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ಗ್ರಾಮದಲ್ಲಿ ಯಾವುದೇ ಕೈಗಾರಿಕೆಗಳು ಕಂಡು ಬರುವುದಿಲ್ಲ.

ಚಿಕ್ಕನಾಯಕನಹಳ್ಳಿ ವಿಧಾನಸಭಾ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಬುಕ್ಕಾಪಟ್ಟಣ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದ್ದು ಸಿರಾ ತಹಶೀಲ್ದಾರ್ ಕಛೇರಿಯನ್ನು ಹೊಂದಿದ್ದು ಗ್ರಾಮನ್ಯಾಯ ಮಂಡಳಿಯನ್ನು ಹೊಂದಿದೆ. ಪಕ್ಕದಲ್ಲಿರುವ ಬುಕ್ಕಾಪಟ್ಟಣದ ಬ್ಯಾಂಕುಗಳು ವ್ಯವಹಾರಕ್ಕೆ ಬಳಸಿಕೊಂಡಿದ್ದಾರೆ. ಇಲ್ಲಿ ಕೇವಲ ಒಂದು ಅಂಗನವಾಡಿಕೇಂದ್ರವನ್ನು ಹೊಂದಿದ್ದು, ಒಟ್ಟಾರೆ ಶಿಕ್ಷಣದ ಸಾಕ್ಷರತಾ ಪ್ರಮಾಣವು ಶೇ. ೭೧.೨ ರಷ್ಟಿದೆ ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಬುಕ್ಕಾಪಟ್ಟಣದ ಮಜರೆ ಗ್ರಾಮವಾಗಿದ್ದರಿಂದ ಎಲ್ಲಾ ರೀತಿಯ ಸಮುದಾಯ ಸೌಲಭ್ಯಗಳನ್ನು ಪಡೆಯುತ್ತಿದ್ದು, ಬುಕ್ಕಾಪಟ್ಟಣ ಗ್ರಾಮದ ಐತಿಹಾಸಿಕತೆ, ಧಾರ್ಮಿಕತೆ, ಆರೋಗ್ಯ ಕೇಂದ್ರಗಳು, ಜಾತ್ರೆಗಳನ್ನು ಇದರೊಂದಿಗೆ ಒಟ್ಟಿಗೆ

ನಡೆಸಿಕೊಂಡು ಬರುತ್ತಿದೆ. ಹಾಗೆಯೇ ಇಲ್ಲಿ ಪತ್ರಿಕೆಯ (ಪ್ರಜಾಪ್ರಗತಿ) ವರದಿಗಾರ ಮಂಜುನಾಥ್‌ರವರು ಇಲ್ಲಿಯವರಾಗಿದ್ದಾರೆ.

## ಮೇಣಿಗಾನಹಳ್ಳಿ

ಮೇಣಿಗಾನಹಳ್ಳಿ ಮಾಳಿಗೆಹಳ್ಳಿ ಎಂದೆಲ್ಲಾ ಕರೆಯುವ ಈ ಬುಡಕಟ್ಟು ಗ್ರಾಮ. ಸಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿಗೆ ಸೇರಿದ ಒಂದು ಮಜರೆ ಗ್ರಾಮವಾಗಿದೆ. ಸಿರಾ–ತಾವರೆಕೆರೆ ಗಾಣದ ಹುಣಸೆರಸ್ತೆಯ ಹುಣಸೆ ಕಟ್ಟೆಯ ಸಮೀಪದಲ್ಲಿ ಈ ಗ್ರಾಮವಿದೆ. ಇದರ ಭೌಗೋಳಿಕ ವಿಸ್ತೀರ್ಣ ೬೯೭.೮೫ ಇದ್ದು, ಮುಖ್ಯ ಗ್ರಾಮ ಹುಣಸೆ ಕಟ್ಟೆಯೊಂದಿಗೆ ಹಂಚಿಕೆಯಾಗಿದೆ. ಮಾಳಿಗೆ ಮನೆಯ ಮೂಲದಿಂದ ಗ್ರಾಮಕ್ಕೆ ಮಾಳಿಗೆಹಳ್ಳಿ ಎಂದು ಹೆಸರು ಬಂದಿದೆ.

ಮೇಣಿಗಾನ ಕೃಷಿ ಮೂಲದ ಹೆಸರು. ನೇಗಿಲು ಹಿಡಿಯಲು ಮೇಣಿ ಅತ್ಯಂತ ಅಗತ್ಯ. ಮೇಣಿ ಒತ್ತಿ ಹಿಡಿದರೆ ಭೂಮಿ ಹದವಾಗಿ ಹರಿದು, ಒಳ್ಳೆಯ ಉಕ್ಕೆ ಮೂಡುತ್ತದೆ. ಆದುದರಿಂದ ಕೃಷಿ ಮೂಲದಿಂದ ಮೇಣಿಗ ಶಬ್ದ ವ್ಯಕ್ತಿ ಮೂಲವಾಗಿ ಬಂದಿದೆ. ಜನಪದರು ಈ ಗ್ರಾಮವನ್ನು ಮಾಳಿಗೆ ಹಟ್ಟಿ ಎಂತಲೂ ಕರೆಯುತ್ತಾರೆ.

ಬಯಲು ಪ್ರದೇಶದ ಕೆಂಪು ಮಿಶ್ರಿತ ಮರಳು ಮಣ್ಣಿನ ಭೂ ಸ್ವರೂಪ ಪಡೆದಿದೆ. ಈ ಪರಿಸರದಲ್ಲಿ ಜಿಂಕೆ, ಮೊಲ, ನರಿ, ಹಂದಿ, ಚಿರತೆ, ತೋಳ ಕಂಡು ಬಂದರೆ, ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸುಗಳನ್ನು ಸಾಕಲಾಗುತ್ತಿದೆ. ಕಾಡು ಪಕ್ಷಿಯಾಗಿ ಗಿಳಿ, ಕೋಗಿಲೆ, ಕಾಗೆ, ಗೀಜಗ, ಗೂಬೆ, ಗುಬ್ಬಚ್ಚಿ, ಗರುಡ, ಬೆಳವ, ಗೊರವಂಕಗಳಿವೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕವಾಗಿ ಮಳೆ ೪೫೮ ಮಿ.ಮೀ. ಬೀಳುವ ಈ ಪ್ರದೇಶದಲ್ಲಿ ಕೃಷಿ ಅವಲಂಬಿತ ಬದುಕಿಗೆ ಸಾಕಾಗುವುದಿಲ್ಲ. ಉಪನೀರಾವರಿಯಾಗಿ ಗ್ರಾಮದಲ್ಲಿ ೧೮ ಬೋರ್‌ವೆಲ್‌ಗಳಿವೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಯೋಜನೆಯ ಅಡಿಯಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ಬಿಸಿಲು ೩೯೦ ಸೆಂ. ಇದ್ದು, ಚಳಿ ೧೨೦ ಸೆಂ. ಸಹಜವಾಗಿರುತ್ತದೆ. ಹುಣಸೆಕಟ್ಟೆ ಕೆರೆಯಿದ್ದು, ನೇರಲಗುಡ್ಡದ ಹಳ್ಳವೂ ಇದೆ. ಆದರೆ ತುಂಬುವುದು ಅಪರೂಪ ವಾಗಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕಾಡುಗೊಲ್ಲರು ದೊಡ್ಡ ಸಮುದಾಯ ವಾಗಿದೆ. ಒಟ್ಟು ೩೮ ಮನೆಗಳಿದ್ದು, ಎಲ್ಲರೂ ಕನ್ನಡವನ್ನು ಮಾತೃ ಭಾಷೆಯನ್ನಾಗಿ ಮಾತನಾಡುತ್ತಾರೆ. ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿದ್ದು, ಅವು ಸರ್ಕಾರದ ವಸತಿ ಯೋಜನೆಗಳು ಆಶ್ರಯ, ಇಂದಿರಾ ಆವಾಸ್ ಯೋಜನೆಯ ೯ ಫಲಾನುಭವಿಗಳಿದ್ದದು, ೬ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಈ ಗ್ರಾಮದ ವಿಶೇಷ ಆಹಾರ ರಾಗಿ ಮುದ್ದೆ, ಅನ್ನ. ರೊಟ್ಟಿ ಬಳಸುವವರಿದ್ದಾರೆ ವಿಶೇಷ ಸಾಂದರ್ಭಿಕವಾಗಿ, ಬಾಡೂಟ, ಪಾಯಸ, ಸಾಂಪ್ರದಾಯಿಕ ವಾಹನಗಳು ಎತ್ತಿನ ಬಂಡಿ ಇದೆ. ಆಧುನಿಕವಾಗಿ ದ್ವಿ ಚಕ್ರ ವಾಹನಗಳು ಸ್ಕೂಟರ್, ಸೈಕಲ್ ಬಳಕೆಯಿದೆ.

ರಾಗಿ ಮುಖ್ಯ ಬೆಳೆ, ಶೇಂಗಾ, ಜೋಳ, ತೊಗರಿ, ಅಲಸಂದಿ ಬೆಳೆಯುತ್ತಾರೆ. ಬಟನ್ಸ್ (ಸೇವಂತಿಗೆ ಹೂ) ತರಕಾರಿ ಬೆಳೆಗಳು ಉಪ ಬೆಳೆಗಳಾಗಿವೆ. ಹುಣಸೆಹಣ್ಣು, ಹೊಂಗೆ ಬೀಜ, ಕುರಿ ವ್ಯಾಪಾರ ಪ್ರಮುಖ ವ್ಯಾಪಾರಿ ಸರಕಾಗಿವೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ, ವಿಧಾನಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯಿತಿ, ನೇರಲಗುಡ್ಡ ಗ್ರಾಮವಾಗಿದ್ದು, ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ಶೇ. ೪೬.೩ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು ೨ ಪೆಟ್ಟಿಗೆ ಅಂಗಡಿಗಳಿವೆ. ಒಂದು ಕರುಗಲ್ಲು, ಚಿತ್ರದೇವರ, ಆಂಜನೇಯ ಪೌಳಿಗಳಿವೆ. ಹೊರಗೆ ಭೂತಪ್ಪನ ಗುಡಿ ಇದೆ. ಭೂತಪ್ಪನಿಗೆ ಆರತಿ, ಬಲಿ ಹರಕೆ ಸಂಪ್ರದಾಯಗಳಿವೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಮುಖ್ಯ ಹಬ್ಬಗಳನ್ನು ಆಚರಿಸುತ್ತಾರೆ.

## ಮಂಗನಹಳ್ಳಿ

ಮಂಗನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇದೆ. ಸಿರಾ ಹುಳಿಯಾರು ರಸ್ತೆಯಲ್ಲಿ ಹುಯಿಲ್‌ದೊರೆ ಗೇಟ್‌ನಿಂದ ಬಲಭಾಗದ ತಾವರೆಕೆರೆ ರಸ್ತೆಯಲ್ಲಿ ೩ ಕಿ.ಮೀ. ದೂರದಲ್ಲಿ ಸಿರಾದಿಂದ ೧೭ ಕಿ.ಮೀ. ದೂರದಲ್ಲಿರುವ ಹಳ್ಳಿ ಜನವಸತಿ ಗ್ರಾಮವಾಗಿದೆ. ಆರಂಭದಲ್ಲಿ ಕುರುಚಲು ಕಾಡಿನಿಂದ ಆವೃತವಾದ ಭೂ ಪ್ರದೇಶವಾಗಿದೆ. ಆ ಸ್ಥಳದಲ್ಲಿ ಗ್ರಾಮ

ರಚನೆಯಾದಾಗ ಮಂಗನ ಹೆಸರಿಡು ಮಂಗನಹಳ್ಳಿ ಎಂದು ಕರೆಯಲಾಗಿದೆ.

ಬಯಲು ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದು, ಭೌಗೋಳಿಕ ವಿಸ್ತೀರ್ಣ ೪೭೭.೧೬ ಹೆಕ್ಟೇರ್‌ಗಳಾಗಿವೆ. ಈ ಗ್ರಾಮದಲ್ಲಿ ಯಾವುದೇ ಅರಣ್ಯ ಬೆಟ್ಟ-ಗುಡ್ಡಗಳು ಕಂಡು ಬರುವುದಿಲ್ಲ. ಗ್ರಾಮದಲ್ಲಿ ೨೬ ಕೊಳವೆ ಬಾವಿಗಳಿದ್ದು, ಕೃಷಿಗೆ ಸಹಾಯಕವಾಗಿದೆ.

ವಾರ್ಷಿಕವಾಗಿ ಮಳೆ ೪೬೦.೧ ಮಿ.ಮೀ. ಬಿಸಿಲು ೩೯ಂ ಸೆಂ. ಇದ್ದು, ಚಳಿ ೧೨ಂ ಸೆಂ. ಸಹಜವಾಗಿರುತ್ತದೆ. ಗ್ರಾಮದಲ್ಲಿ ಒಟ್ಟು ೫೫ ಮನೆಗಳಿದ್ದು, ೨೭೩ ಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಕುಂಚಿಟಿಗ ದೊಡ್ಡಸಮುದಾಯವಾಗಿದ್ದು, ನಾಯಕ, ಗೊಲ್ಲರ ಕಿರು ಸಮುದಾಯವಾಗಿದೆ. ಇವರ ಭಾಷೆ ಕನ್ನಡ. ಗ್ರಾಮದಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿದ್ದು, ಅವು ಸರ್ಕಾರದ ವಸತಿ ಯೋಜನೆಗಳು ಆಶ್ರಯ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿದ್ದು, ೧೦ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಈ ಗ್ರಾಮದ ವಿಶೇಷ ಆಹಾರ ರಾಗಿ ಮುದ್ದೆ. ವಿಶೇಷ ಸಾಂದರ್ಭಿಕವಾಗಿ, ಬಾಡೂಟ, ಪಾಯಸ. ಸಾಂಪ್ರದಾಯಿಕ ವಾಹನಗಳು ೨ ಎತ್ತಿನ ಬಂಡಿ ಇದೆ. ಆಧುನಿಕವಾಗಿ ದ್ವಿ ಚಕ್ರ ವಾಹನಗಳು ಸ್ಕೂಟರ್ ಬಳಕೆಯಿದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ ಮುಖ್ಯ ಬೆಳೆ.ರಾಗಿ, ಜೋಳ, ದ್ವಿದಳಧಾನ್ಯಗಳನ್ನು ಬೆಳೆಯುತ್ತಾರೆ. ತೆಂಗು, ಅಡಿಕೆ, ಹುಣಸೆಹಣ್ಣು ಬೆಳೆಗಳನ್ನು ಬೆಳೆಯುತ್ತಾರೆ. ಕೃಷಿ ಕಾರ್ಮಿಕರು ಸರ್ಕಾರಿ ಸೇವೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಶಿಕ್ಷಣ, ಸಾರಿಗೆ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಬೀಡಿ ಸುತ್ತುವುದು, ಮತ್ತು ಇಟ್ಟಿಗೆ ಫ್ಯಾಕ್ಟರಿಯನ್ನು ಹೊಂದಿದೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಹುಯಿಲುದೊರೆ ತಾಲ್ಲೂಕು ಪಂಚಾಯಿತಿ, ತಹಶೀಲ್ದಾರ್ ಕಛೇರಿ ಹುಯಿಲ್‌ದೊರೆ ಪಂಚಾಯ್ತಿ ಒಬ್ಬರು ಸದಸ್ಯರನ್ನು ಹಾಗೂ ಗ್ರಾಮ ನ್ಯಾಯ ಮಂಡಳಿಯನ್ನು ಒಳಗೊಂಡಿದೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದೆ. ಗ್ರಾಮದ ಸಾಕ್ಷರತೆ ಶೇ. ೬೩.೮ ರಷ್ಟಿದೆ. ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಚಿಲ್ಲರೆ ವ್ಯಾಪಾರದ ೩ ಅಂಗಡಿಗಳನ್ನು ಒಳಗೊಂಡಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಧಾರ್ಮಿಕ ಪರಂಪರೆಯಲ್ಲಿ ಹನುಮಂತರಾಯ, ಕೊಲ್ಲಾಪುರದಮ್ಮ, ಭೂತಪ್ಪ ದೇವಾಲಯಗಳಿವೆ. ಪ್ರತಿ ವರ್ಷವೂ ಕೊಲ್ಲಾಪುರದಮ್ಮನ ಜಾತ್ರೆಯನ್ನು ಮಾಡಿ ಅದರಲ್ಲಿ ಆರತಿ ಮತ್ತು ಬಲಿ ನೀಡುವುದು ವಿಶೇಷವಾಗಿರುತ್ತದೆ. ಸಾಂಸ್ಕೃತಿಕ ರಂಗದಲ್ಲಿ ಜೆ. ರಂಗನಾಥ್‌ರವರು ಸಾಹಿತಿಗಳಾಗಿದ್ದು ನಾಟಕಗಳನ್ನು ಬರೆಯುತ್ತಿದ್ದಾರೆ.

ಈ ಗ್ರಾಮದಲ್ಲಿ ಐತಿಹಾಸಿಕ ನೆಲೆ, ಸ್ಮಾರಕ, ಶಾಸನಗಳು ಕಂಡು ಬರುವುದಿಲ್ಲ. ಆದರೆ ಕಾರಹಬ್ಬದ ದಿನ ಎರಡು ಕರುಗಲ್ಲುಗಳನ್ನು ಪೂಜಿಸುತ್ತಾರೆ. ಹಾಗೂ ಊರಿನ ಗುರ್ತಿಸುವಿಕೆಗೆ ಅರಳಿವೃಕ್ಷವನ್ನು ಕಾಣಬಹುದು. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಮುಖ್ಯ ಹಬ್ಬಗಳನ್ನು ಆಚರಿಸುತ್ತಾರೆ.

## ಯಲಿಯೂರು

ಎಲೆಯೂರು, ಯಲಿಯೂರು ಎಂದೆಲ್ಲಾ ಕರೆಯಲ್ಪಡುವ ಈ ಗ್ರಾಮ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೭ ಕಿಮೀ ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು ಸಿರಾ-ತುಮಕೂರು ರ್‍ಾ.ಯ ಹೆದ್ದಾರಿಯಲ್ಲಿ ಸಿರಾದಿಂದ ೬ ಕಿಮೀ ದೂರದಲ್ಲಿ ಎಲೆಯೂರು ಗೇಟಿನಿಂದ ಎಡಕ್ಕೆ ತಿರುಗಿ ೧ ಕಿಮೀ ದೂರ ಒಳಗೆ ಹೋದರೆ ಯಲೆಯೂರು ಗ್ರಾಮವಿದೆ. ಎಲೆ ಬೆಳೆಯುವವರ ಊರು ಎಲೆಯೂರು ಆಗಿದೆ. ಈ ಭಾಗದಲ್ಲಿ ತಿಗಳ ಜನಾಂಗದವರು ಪ್ರಧಾನವಾಗಿ ವೀಳ್ಯದೆಲೆ ಬೆಳೆಯುತ್ತಾರೆ. ಮಾತ್ರವಲ್ಲ ಇಲ್ಲಿ ಬೆಳೆದ ಎಲೆ, ತುಮಕೂರು, ಮಧುಗಿರಿ, ಬಾಂಬೆ ಕಡೆಗೂ ರಫ್ತಾಗುತ್ತವೆ. ಸಿರಾ ಸೀಮೆಯಲ್ಲಿ ಬಹು ಬೇಡಿಕೆ ಇರುವ ವೀಳ್ಯದೆಲೆ ಎಂದರೆ ಎಲೆಯೂರಿನ ವೀಳ್ಯದೆಲೆ ಆಗಿರುತ್ತದೆ.

ಕಡವಿಗೆರೆಯ ಅಡಿಕೆ, ಎಲೆಯೂರು ಎಲೆ ಅಪರೂಪದ ಜೋಡಿ ಎಂಬ ಗಾದೆಯನ್ನು ತಿಮ್ಮಯ್ಯ ನೆನಪಿಸುತ್ತಾರೆ. ಆದುದರಿಂದ ಎಲೆ ಬೆಳೆಯುವ ನೆಲವಾಗಿದ್ದರಿಂದ ಎಲೆಯೂರು ಆಗಿದೆ. ನಂತರ 'ಎ' ಕಾರ 'ಯ' ಕಾರವಾಗಿಯೂ ಬಳಕೆಯಲ್ಲಿರುವುದು. ಮೌಖಿಕ ಪರಂಪರೆಯಲ್ಲಿ ಸಹಜವಾದ ಗುಣ ಶಾಸನಗಳಲ್ಲೂ ಎಲೆಯೂರು ಎಂದೇ ಉಲ್ಲೇಖಿಸಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ೧೨೩೮.೧೦ ಹೆಕ್ಟೇರ್ ಭೂ ವಿಸ್ತೀರ್ಣವನ್ನು ಹೊಂದಿದೆ. ಎಲೆಯೂರು ಹೊಸ ಬಡಾವಣೆ, ಜುಂಜರಾಮನಹಳ್ಳಿ, ಹೆಗ್ಗನಹಳ್ಳಿ, ಈಡಿಗರ ದಾಸರಹಳ್ಳಿ,

ತಿತ್ತಿಗಾನಹಳ್ಳಿ, ಹೆಗ್ಗನಹಳ್ಳಿ ಗೊಲ್ಲರಹಳ್ಳಿಗಳೆಂಬ ಒಟ್ಟು ಆರು ಮಜರೆ ಗ್ರಾಮಗಳನ್ನು ಹೊಂದಿದೆ. ಮರಳು ಮಿಶ್ರಿತ ಕಂದು ಮಣ್ಣನ್ನು ಹೊಂದಿದ್ದು ತೋಟಗಾರಿಕೆ, ಕೆರೆ, ಕುರುಚಲು ಗಿಡ, ಹಳ್ಳ ದಿಣ್ಣೆಗಳಿಂದ ಕೂಡಿದೆ. ಹಾಗಾಗಿ ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಬಾರುಬೆಕ್ಕು, ಉಡ ಕಂಡುಬರುತ್ತವೆ. ಗ್ರಾಮದಲ್ಲಿ ಸಾಕುಪ್ರಾಣಿಗಳಾಗಿ ಹಸು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕಿದ್ದಾರೆ. ಈ ಪರಿಸರದಲ್ಲಿ ಪಕ್ಷಿಗಳಾದ ಗಿಳಿ, ಗೀಜುಗ, ಕೌಜಲಗ, ಕಾಗೆ, ಕೋಗಿಲೆ ಕಂಡುಬರುತ್ತವೆ. ಸಾಕು ಪಕ್ಷಿಯಾಗಿ ಕೋಳಿ ಇದೆ. ವಾರ್ಷಿಕ ಸರಾಸರಿ ವಾಡಿಕೆ ಮಳೆ ೪೮೧.೪ ಮಿಮೀ ಆಗಿದ್ದು ಉಷ್ಣಾಂಶ ೩೬–೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ, ತೋಟಗಾರಿಕೆಗಾಗಿ ಈ ಪರಿಸರದಲ್ಲಿ ೧೫೦ ಕೊಳವೆ ಬಾವಿಗಳಿವೆ. ಉತ್ತರಕ್ಕೆ ಒಂದು ಕೆರೆ ಇದ್ದು ತುಂಬುವುದು ಅಪರೂಪ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಯೋಜನೆ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೧೮ ಸಿಸ್ಟರ್ನ್‌ಗಳಿದ್ದು ೩ ಕೈಪಂಪುಗಳಿವೆ.

ತಿಗಳ ಜನಾಂಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಲಿಂಗಾಯಿತ, ಆದಿಕರ್ನಾಟಕ, ಈಡಿಗ, ಮಡಿವಾಳ, ಕುಂಚಿಟಿಗರು ಕಿರು ಸಮುದಾಯಗಳಾಗಿವೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಒಟ್ಟು ೨೯೦ ಮನೆಗಳಿದ್ದು ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ಕುಟುಂಬಗಳಿವೆ. ಒಟ್ಟು ೮೨೮ ಜನಸಂಖ್ಯೆ ಹೊಂದಿದ್ದು ೧೮೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಇಲ್ಲಿನ ಆಹಾರ ಕ್ರಮದಲ್ಲಿ ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿ, ಆಧುನಿಕವಾಗಿ ಟ್ರ್ಯಾಕ್ಟರ್, ಟೆಂಪೋ, ಲಾರಿ, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಬಯಲಿನ ಮುಖ್ಯ ಬೆಳೆಯಾದರೆ ಆಹಾರ ಬೆಳೆಯಾಗಿ ರಾಗಿ, ತೊಗರಿ, ಹುರುಳಿ, ಹೆಸರು ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ವೀಳ್ಯದೆಲೆ, ಹಣ್ಣು, ಹು, ತರಕಾರಿ ಬೆಳೆಯುವುದು ಇಲ್ಲಿನ ವಿಶೇಷವಾಗಿದೆ. ತೆಂಗು, ಅಡಿಕೆ ಬೆಳೆಯೂ ಇದೆ.

ಒಂದು ಡೈರಿ ಇದ್ದು ಸರಾಸರಿ ೩೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ವೀಳ್ಯದೆಲೆ, ಅಡಿಕೆ, ತೆಂಗು, ಹುಣಸೆಹಣ್ಣು ಮುಖ್ಯ ವ್ಯಾಪಾರಿ ಸರಕಾಗಿದೆ. ಶಿಕ್ಷಕರು, ವಾಹನ ಚಾಲಕರು ಸೇರಿದಂತೆ ಒಟ್ಟು ೮ ಮಂದಿ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಬೀಡಿ ಕಟ್ಟುವುದು, ಹೂ ಕಟ್ಟುವುದು, ಊಟದ ಎಲೆ ಕಟ್ಟುವುದು ಇತ್ಯಾದಿ ಮಹಿಳಾ ಉಪಕಸುಬಾಗಿದೆ. ಒಂದು ನ್ಯಾಯಲೆಲೆ ಅಂಗಡಿ ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಯಲಿಯೂರು ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳನ್ನು ಹೊಂದಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ೪ ಜನ ಪಂಚಾಯ್ತಿ ಸದಸ್ಯರು ಈ ಗ್ರಾಮವನ್ನು ಪ್ರತಿನಿಧಿಸುತ್ತಿದ್ದಾರೆ. ಒಂದು ಅಂಚೆ ಕಛೇರಿಯಿದ್ದು ಉಳಿದಂತೆ ತಾಲ್ಲೂಕು ಕಛೇರಿ, ವಿದ್ಯುತ್, ಲೋಕೋಪಯೋಗಿ ಕೆಲಸಗಳಿಗೆ ಸಿರಾ ನಗರಕ್ಕೆ ಹೋಗಬೇಕಾಗಿದೆ. ೫ ಸ್ತ್ರೀಶಕ್ತಿ ಸಂಘ, ೪ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘದ ತಂಡಗಳಿದ್ದು ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ತೊಡಗಿಸಿಕೊಂಡಿವೆ. ಗ್ರಾಮದ ಗೇಟಿನ ಬಳಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ೧೨ ಮಕ್ಕಳು, ೩ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಊಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪಠ್ಯಪುಸ್ತಕ ಸೌಲಭ್ಯಗಳಿವೆ. ಇಲ್ಲಿನ ಸಾಕ್ಷರತೆ ೬೪.೮ ರಷ್ಟಿದೆ. ಒಂದು ಗ್ರಂಥಾಲಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಹೋಟೆಲ್, ೧೦ ಪೆಟ್ಟಿಗೆ ಅಂಗಡಿ, ೧ ಸಮುದಾಯ ಭವನದ ಛತ್ರವಿದೆ. ಗ್ರಾಮದ ಪ್ರವೇಶಕ್ಕೆ ೨ ಕರಿಗಲ್ಲುಗಳಿದ್ದು ೨ ಅರಳಿಮರಗಳಿವೆ. ಊರಬಾಗಿಲ ಮುಂದೆ ಕೋಟೆಯ ಅವಶೇಷಗಳು ಕಂಡುಬರುತ್ತವೆ. ಸಿರಾ ಶಾಸನ ೭೬ ರಲ್ಲಿ ಯಲಿಯೂರಿನ ಉಲ್ಲೇಖವಿದ್ದು ವಿಜಯನಗರದ ಅರಸರಾದ ೨ನೇ ಹರಿರಾಯನು ಆಳ್ವಿಕೆ ಮಾಡುತ್ತಿದ್ದ ಕಾಲದಲ್ಲಿ ಯಲಿಯೂರಿನ ವರ್ತಕರಾದ ವಿಶ್ವನಾಥ ಶೆಟ್ಟಿಯ ಮಕ್ಕಳಾದ ನಾಗಿಶೆಟ್ಟಿ ಮತ್ತು ರಾಮಿಶೆಟ್ಟಿ ಎಂಬುವವರು ತೆರಿಗೆ ವಿಚಾರದಲ್ಲಿ ರಾಜದ್ರೋಹ ಮಾಡಿದರೂ ರಾಜರು ಅವರನ್ನು ಕರೆದು ಅವರನ್ನು ಸನ್ಮಾನಿಸಿದ ವಿವರವಿದೆ. ಕಾಲ ೧೩೭೯ (ವಿ.ಕ.ಸಂ.ಫಿ೫೫).

ಕೊಲ್ಲಾಪುರದಮ್ಮ, ಮಾರಮ್ಮ, ಹಟ್ಟಿ ಮಾರಮ್ಮ, ಮಲ್ಲೇಶ್ವರ, ಶನಿದೇವರ ದೇವಾಲಯಗಳಿವೆ. ಮಾರಮ್ಮನ ಊರಹಬ್ಬ ಮಾಡಲಾಗುತ್ತಿದೆ. ಬಲಿ, ಆರತಿ, ಬ್ಯಾಚೆ ಇರುತ್ತದೆ. ಯುಗಾದಿ, ಬಸವಜಯಂತಿ, ಗೌರಿ, ಮಹಾನವಮಿ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಯಲಿಯೂರು

ಗ್ರಾಮ ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಗೆ ಹೆಸರಾಗಿದೆ. ಈಚಲು ವನ ನಾಶ, ಅಸಹಕಾರ ಚಳುವಳಿ ಇಲ್ಲಿನ ವಿಶೇಷ. ಸ್ವಾತಂತ್ರ್ಯ ಹೋರಾಟಗಾರರಾದ ಕೊಟ್ಟಿಗೆಮನೆ ತಿಮ್ಮಯ್ಯ, ಎಸ್.ಮಲ್ಲಪ್ಪ, ಚಿಕ್ಕಹನುಮಯ್ಯ, ನಂಜುಂಡಪ್ಪ, ದೊಡ್ಡನಂಜಪ್ಪ, ವೈ.ಕರಿಯಣ್ಣ, ದಾಸಪ್ಪ, ಶ್ರೀಮತಿ ಕೆಂಪಕ್ಕ, ಸಿ.ಹನುಮಂತಯ್ಯ ಮುಖ್ಯರಾದವರು. ಪ್ರತಿವರ್ಷ ಯಕ್ಷಗಾನ ದೇವಿ ಮಹಾತ್ಮೆ ನಾಟಕವನ್ನು ಅಭಿನಯಿಸುತ್ತಾರೆ. ತಿಪ್ಪೇಸ್ವಾಮಿ ರಂಗಸೀನರಿ ಸಿರಾ ಸೀಮೆಯಲ್ಲಿ ರಂಗ ಚಟುವಟಿಕೆಗೆ ಸದಾ ಬಳಕೆಯಾಗುತ್ತಿರುವುದು ವಿಶೇಷ.

## ಯಲಿಯೂರು ಗೇಟ್

ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿಯಲ್ಲಿ ಸಿರಾದಿಂದ ಯಲಿಯೂರು ಗೇಟಿಗೆ ೬ ಕಿಮೀ ದೂರ. ಇಲ್ಲಿಂದ ಉತ್ತರಕ್ಕೆ ೧ ಕಿಮೀ ಕ್ರಮಿಸಿದರೆ ಯಲಿಯೂರು ಸಿಗುತ್ತದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಒಟ್ಟು ೧೨೩೮.೧೦ ಚದುರ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿರುವ ಈ ಮುಖ್ಯ ಗ್ರಾಮಕ್ಕೆ ಯಲಿಯೂರು ಹೊಸ ಬಡಾವಣೆ ಸೇರಿಕೊಂಡಿದೆ. ಸಸ್ಯ ಮೂಲದಿಂದ ಬಿಚ್ಚಿಕೊಳ್ಳುವ ಈ ಗ್ರಾಮದ ಹೆಸರು ಈ ಭಾಗ ತಗ್ಗಿನ ಭೂಪ್ರದೇಶವಾಗಿದ್ದು ವೀಳ್ಯದೆಲೆ ಬೆಳೆಗೆ ಹೆಸರುವಾಸಿ. ತಿಗಳ ಜನಾಂಗದವರು ಈ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿ, ತೋಟಗಾರಿಕೆಯನ್ನು ಬೆಳೆಸಿದ್ದರಿಂದಾಗಿಯೇ ಎಲೆಯೂರು ಜನಪದರ ಬಾಯಿಯಲ್ಲಿ ಯಲೆವೂರಾಗಿದೆ. ಒಟ್ಟು ೧೨೦ ಕುಟುಂಬಗಳಿರುವ ಈ ಗ್ರಾಮದಲ್ಲಿ ೭೫೦ ಜನರು ವಾಸಿಸುತ್ತಿದ್ದಾರೆ.

ಕಪ್ಪು ಮರಳು, ಜೇಡಿ ಮಣ್ಣಿನಿಂದ ಕೂಡಿರುವ ಈ ಭೂಭಾಗದಲ್ಲಿ ತೋಟಗಾರಿಕೆ ಮುಖ್ಯ ಕಸುಬು. ವೀಳ್ಯದೆಲೆ, ಅಡಿಕೆ, ತರಕಾರಿ, ಸೊಪ್ಪಿಗೆ ಇಂದಿಗೂ ಯಲೆಯೂರು ಹೆಸರುವಾಸಿ. ಉಳಿದಂತೆ ಬೆದ್ದಲು ದಿಣ್ಣೆಯ ಭೂ ಭಾಗದಲ್ಲಿ ರಾಗಿ, ಶೇಂಗಾ, ಹತ್ತಿ, ಅವರೆ, ತೊಗರಿ, ಹೆಸರು, ಹುರುಳಿ ಬೆಳೆಗಳನ್ನು ಬೆಳೆಯುತ್ತಾರೆ. ಮರಗಳ ಸಾಲು, ಪೊದೆ, ಸಣ್ಣ ಹಳ್ಳ, ಕೆರೆ ಪ್ರದೇಶವಾಗಿರುವುದರಿಂದ ಈ ಭಾಗದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಕರಡಿ ಕಂಡುಬರುತ್ತವೆ. ಕಾಡುಹಂದಿಯೂ ಹಿಂಡು ಹಿಂಡಾಗಿ ವಾಸಿಸುತ್ತವೆ. ಗಿಳಿ, ಗೊರವಂಕ, ಕೊಕ್ಕರೆ ಮೊದಲಾದ ಕಾಡುಪಕ್ಷಿಗಳು ಊ ಭಾಗದಲ್ಲಿ ವಾಸಿಸುತ್ತವೆ. ರೈತರು ಹಸು, ಎತ್ತುಗಳನ್ನು ಪಶುಪಾಲನೆ ಹಾಗೂ ಕೃಷಿ ಕೆಲಸಕ್ಕೆ ಬಳಸುತ್ತಾರೆ. ಸರಾಸರಿ ೪೫೬ ಸೆಂ.ಮೀ ಮಳೆ ಬೀಳುವ ಈ ಭೂಪ್ರದೇಶದಲ್ಲಿ ಬಿಸಿಲಿನ ತಾಪಮಾನ ३೬ ಡಿಗ್ರಿ ಹಾಗೂ ಡಿಸೆಂಬರ್–ಜನವರಿಯಲ್ಲಿ ಚಳಿ ೯–೧೧ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಹೇಮಾವತಿ ಹಳ್ಳ ಈ ಊರಿನ ಸನಿಹ ಹರಿದು ಹೋಗುವುದರಿಂದ ಯಲೆಯೂರು ಕೆರೆ ಪ್ರತಿವರ್ಷ ತುಂಬುತ್ತದೆ. ಜೊತೆಗೆ ಜಲ ಉತ್ಪತ್ತಿಯ ಮೂಲಕ ಬೋರ್‌ವೆಲ್‌ಗಳಲ್ಲಿ ನೀರಿನ ಪ್ರಮಾಣ ಅಧಿಕವಾಗಿ ರೈತರಿಗೆ ವರದಾನವಾಗಿದೆ. ಉಳಿದಂತೆ ೬ ಕೊಳವೆ ಬಾವಿಗಳಿದ್ದು ಗ್ರಾಮಕ್ಕೆ ಕೊಳಾಯಿಗಳ ಮೂಲಕ ಕುಡಿಯುವ ನೀರನ್ನು ಪೂರೈಸಲಾಗುತ್ತದೆ. ತಿಗಳರು ಗ್ರಾಮದ ದೊಡ್ಡ ಸಮುದಾಯವಾಗಿದ್ದು ತಾಲ್ಲೂಕು ಪಂಚಾಯ್ತಿಯ ಸದಸ್ಯರಾಗಿ ಗ್ರಾಮ ಪಂಚಾಯ್ತಿ ಸದಸ್ಯ, ಅಧ್ಯಕ್ಷರಾಗಿಯೂ ರಾಜಕೀಯ ಆಡಳಿತ ನಡೆಸಿದ್ದಾರೆ. ಉಳಿದಂತೆ ವೀರಶೈವ, ಸಾದರು, ಬಲಜಿಗ, ಆದಿಕರ್ನಾಟಕ, ಮಡಿವಾಳ, ಕುಂಚಿಟಿಗರು ಸಣ್ಣ ಸಮುದಾಯವಾಗಿದ್ದಾರೆ. ಗ್ರಾಮದಲ್ಲಿ ಊರ ಬೀದಿ, ದೇವಸ್ಥಾನದ ಕೇರಿ, ಕೆಳಗಲ ಕೇರಿ ಎಂಬ ಬೀದಿಗಳಿವೆ. ಕಾಂಕ್ರೀಟ್, ಕಲ್ಲು ಕಟ್ಟಡದ, ಮಣ್ಣಿನ ಹಾಗೂ ಮಂಗಳೂರು ಹೆಂಚಿನ ಮನೆಗಳಿವೆ. ಆರು ಗುಡಿಸಲುಗಳೂ ಇವೆ. ಜನತಾ, ಆಶ್ರಯ, ವಾಜಪೇಯಿ ಆವಾಸ್ ಯೋಜನೆಯ ಫಲಾನುಭವಿಗಳು, ಭಾಗ್ಯಜ್ಯೋತಿ ಫಲಾನುಭವಿಗಳು ಇದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ತಿಂಡಿಯಾಗಿ ಚಿತ್ರಾನ್ನ, ದೋಸೆ, ಉಪ್ಪಿಟ್ಟು ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾಗಿ ೨೦ ಎತ್ತಿನ ಬಂಡಿ ಗ್ರಾಮದಲ್ಲಿ ಕಂಡುಬಂದರೆ ಟ್ರ್ಯಾಕ್ಟರ್, ಲಾರಿಗಳು, ಟೆಂಪೋಗಳು ಗ್ರಾಮದಲ್ಲಿವೆ. ೬೦ ಸ್ಕೂಟರ್ ಬೈಕುಗಳಿವೆ.

ವಕೀಲರು, ಉಪನ್ಯಾಸಕರು, ಶಿಕ್ಷಕರು ಸೇರಿದಂತೆ ಗ್ರಾಮದಲ್ಲಿ ೬ ಜನ ಸರ್ಕಾರಿ ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರಗಳಿಗೆ ಸೇರಿರುವ ಎಲೆಯೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ಕೇಂದ್ರಗಳೂ ಆಗಿವೆ. ಈ ಗ್ರಾಮದಲ್ಲಿ ೫ ಜನ ಗ್ರಾಮಪಂಚಾಯ್ತಿ ಸದಸ್ಯರು ಪ್ರತಿನಿಧಿಸುತ್ತಿದ್ದಾರೆ. ಇಬ್ಬರು ಪಂಚಾಯ್ತಿ ನೌಕರರಿದ್ದಾರೆ. ಒಂದು ಕೃಷಿ ಸಹಕಾರಿ ಸಂಘವಿದ್ದು ಸ್ತ್ರೀಶಕ್ತಿ ಕೇಂದ್ರಗಳು, ೧೨ ಸ್ವಸಹಾಯ ಗುಂಪು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಂಘಗಳಿವೆ. ಮುಖ್ಯ ಗ್ರಾಮದ ಒಳಗೆ ಒಂದು ಅಂಗನವಾಡಿ ಕೇಂದ್ರವಿದ್ದು ೭೫ ಮಕ್ಕಳು, ಇಬ್ಬರು ಸಹಾಯಕಿಯರು ಇದ್ದಾರೆ. ಇಲ್ಲಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಮಕ್ಕಳು ಯಲೆಯೂರಿನಿಂದ ಬಂದು ಶಿಕ್ಷಣಾಭ್ಯಾಸ ಮಾಡುತ್ತಿದ್ದಾರೆ. ಶಾಲೆಯಲ್ಲಿ

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ

ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಹೋಟೆಲ್‌ಗಳು, ೬ ಕಿರಾಣಿ ಅಂಗಡಿಗಳು ಗ್ರಾಮದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಗ್ರಾಮದೇವತೆ ಮಾರಮ್ಮನಾಗಿದ್ದು ಪ್ರತಿ ವರ್ಷ ಊರ ಹಬ್ಬವಾಗಿ ವಿಜೃಂಭಣೆಯಿಂದ ಜಾತ್ರೆ ಮಾಡುತ್ತಾರೆ. ಆರತಿ, ಬಾನ, ಬ್ಯಾಟೆ ವಿಶೇಷವಾಗಿರುತ್ತದೆ. ದೀಪಾವಳಿ, ಯುಗಾದಿ, ಮಹಾನವಮಿ ಈ ಗ್ರಾಮದ ವಿಶೇಷ ಹಬ್ಬಗಳು. ರಾಮನವಮಿ, ಶಿವರಾತ್ರಿ, ವರಮಹಾಲಕ್ಷ್ಮಿ ಹಬ್ಬಗಳನ್ನು ಮಾಡುತ್ತಾರೆ.

## ಯರಗುಂಟೆ

ಯರಗುಂಟೆ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೦ ಕಿಮೀ ದೂಪದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು ರತ್ನಸಂದ್ರಕ್ಕೆ ಸೇರ್ಪಡೆಯಾಗಿದೆ. ಎರೆ ಭೂಮಿ ಅಲ್ಲೊಂದು ಸಣ್ಣ ನೀರಿನ ಕುಳಿ ಇರುವ ಕಾರಣದಿಂದ ಈ ಗ್ರಾಮಕ್ಕೆ ಯರಗುಂಟೆ ಎಂಬ ಹೆಸರು ಇದೆಯಾದರೂ ಗ್ರಾಮದ ಭೌಗೋಳಿಕ ವಿಸ್ತೀರ್ಣ ೯೮೮.೩೨ ಹೆಕ್ಟೇರ್ ರತ್ನಸಂದ್ರ ಮೂಲ ಗ್ರಾಮದಲ್ಲಿ ಹಂಚಿಹೋಗಿದೆ. ಕಪ್ಪು-ಬಿಳಿ, ಕಂದು ಭೂಮೇಲ್ಮೈ ಲಕ್ಷಣ ಹೊಂದಿರುವ ಯರಗುಂಟೆಯಲ್ಲಿ ದೊಡ್ಡ ಸಮುದಾಯ ಕುಂಚಿಟಿಗ ಜನಾಂಗ. ಸಣ್ಣ ಸಮುದಾಯಗಳಾಗಿ ಆದಿಕರ್ನಾಟಕ, ಈಡಿಗ, ದೊಂಬಿದಾಸ, ಬೋವಿ, ಗೊಲ್ಲರು ಹಾಗೂ ಕ್ಷೌರಿಕರ ಮನೆಗಳಿವೆ. ಒಟ್ಟು ೧೨೦ ಕುಟುಂಬಗಳು ವಾಸಿಸುವ ಇಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಗುಡಿಸಲು ಮನೆಗಳು, ಹೆಂಚಿನ ಮನೆಗಳಿವೆ.

ಗ್ರಾಮದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ ಕಂಡುಬಂದರೆ ಸಾಕುಪ್ರಾಣಿಗಳಾಗಿ ಹಸು, ಎಮ್ಮೆ, ಕುರಿ, ಮೇಕೆಗಳಿವೆ. ಕೋಗಿಲೆ, ಕೊಕ್ಕರೆ, ಗಿಳಿ, ಬೆಳವ ಕಾಡುಪಕ್ಷಿಗಳು, ಕೋಳಿ ಸಾಕುಪಕ್ಷಿ. ಕುಡಿಯಲು ಗ್ರಾಮ ಪಂಚಾಯ್ತಿಯಿಂದ ಸೌಲಭ್ಯವಿದೆ.

ರಾಗಿ, ಶೇಂಗಾ, ಅಲಸಂದೆ, ಅವರೆ, ತೊಗರಿ ಇಲ್ಲಿನ ಮುಖ್ಯ ಬೆಳೆಗಳಾಗಿದ್ದು ಹುಣಸೆ, ರೇಷ್ಮೆ ಉಪಬೆಳೆಯನ್ನು ಬೆಳೆಯುತ್ತಾರೆ. ಗ್ರಾಮದಲ್ಲಿ ಹಿಂದೆ ತಗ್ಗಿನಿಂದ ನೀರು ನಿಲ್ಲುತ್ತಿದ್ದು ಕೆರೆಯಂತೆ ಭಾಸವಾಗುತ್ತಿತ್ತು. ಈಗ ಇಲ್ಲೆಲ್ಲಾ ಸರ್ಕಾರಿ ಜಮೀನುಗಳಾಗಿ ವ್ಯವಸಾಯ ಭೂಮಿಯಾಗಿ ಮಾರ್ಪಟ್ಟಿವೆ. ಹಾಗಾಗಿ ನೀರಿನ ಸೌಕರ್ಯ ತೀರಾ ಕಡಿಮೆ. ಬರುವ ವಾಡಿಕೆ ಮಳೆ ೪೫೬ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮಪಂಚಾಯ್ತಿಯಿಂದ ಕೊಳಾಯಿ ಮೂಲಕ ೧೦ ನಲ್ಲಿಗಳಲ್ಲಿ ನೀರು ಸರಬರಾಜು ಮಾಡುವ ಪದ್ಧತಿಯಿದೆ.

ಗ್ರಾಮದಲ್ಲಿ ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೃಷಿ ಕೆಲಸಕ್ಕೆ ಎತ್ತಿನ ಗಾಡಿಗಳನ್ನು ಬಳಸುವಂತೆ ಟ್ರ್ಯಕ್ಟರ್ ಬಳಕೆಯೂ ಇದೆ. ಸ್ಕೂಟರ್ ಬಳಕೆ ಹೆಚ್ಚಿದೆ. ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಹಿರಿಯ ಪ್ರಾಥಮಿಕ ಶಾಲೆ, ಕಂದಾಯ ಕಛೇರಿ ಮೊದಲಾದ ಸೇವಾ ಸೌಕರ್ಯಗಳಿವೆ. ಶಿಕ್ಷಕರು ೪ ಜನವಿದ್ದು ೩ ಜನ ಸಹಾಯಕರು (ಅಡಿಗೆ)ಯವರಿದ್ದಾರೆ. ನೀರು ಬಿಡುವ ವಾಟರ್‌ಮನ್ ಸಹ ಇದೇ ಗ್ರಾಮದಲ್ಲಿದ್ದಾರೆ. ಈ ಗ್ರಾಮದ ೧೦ ಜನ ಸರ್ಕಾರಿ ನೌಕರರು ಶಿಕ್ಷಣ, ತಾಂತ್ರಿಕ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಂಜಿನಿಯರ್‌ಗಳಾದ ನಾಗೇಂದ್ರ, ಸುಂದರೇಶ್, ಆನಂದಮೂರ್ತಿ ಈ ಗ್ರಾಮವರೆಂಬುದು ವಿಶೇಷ. ಗ್ರಾಮದ ಸಾಕ್ಷರತೆ ೬೪.೨ ರಷ್ಟಿದೆ.

ಸಿರಾ ವಿಧಾನಸಭೆ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ ರತ್ನಸಂದ್ರ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಸೇರುವ ಈ ಹಳ್ಳಿ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೂ ಒಳಪಟ್ಟಿದೆ. ರತ್ನಸಂದ್ರ ಗ್ರಾಮ ಪಂಚಾಯ್ತಿಯೂ ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ೯ ವೃದ್ಧಾಪ್ಯವೇತನ, ೧ ವಿಕಲ ಚೇತನ ವೇತನ, ೬ ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಜೊತೆಗೆ ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳು ಅಧಿಕ.

ಮಾರಮ್ಮ ಈ ಗ್ರಾಮದ ಗ್ರಾಮದೇವತೆಯಾಗಿದ್ದು ಊರಿನ ಮೂಲ ದೇವರು ಶಿವ. ಇದನ್ನು ಊರ ಹೆಸರಿಂದಲೇ ಕರೆದು ಪೂಜಿಸುವ ಸಂಪ್ರದಾಯವಾಗಿ ಯರಗುಂಟೇಶ್ವರವಾಗಿದೆ. ಉಳಿದಂತೆ ಮುತ್ತಪ್ಪ, ಸಾಯಿಬಾಬ ಮಂದಿರವನ್ನು ಇತ್ತೀಚೆಗೆ ಕಟ್ಟಿಕೊಂಡಿದ್ದಾರೆ. ಮಾರಮ್ಮನ ಊರ ಹಬ್ಬ ವಿಶೇಷವಾಗಿ ಜರುಗುತ್ತಿದ್ದು ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯ ಇರುತ್ತದೆ. ಗ್ರಾಮದಲ್ಲಿ ೭೦ ಮನೆಗಳಲ್ಲಿ ಶೌಚಾಲಯ ಬಳಕೆ ಇರುವುದು ವಿಶೇಷ. ಶಾಲೆಗಳಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಕಾಂಪೌಂಡು, ಶೌಚಾಲಯ ವ್ಯವಸ್ಥೆ ಅಚ್ಚುಕಟ್ಟಾಗಿದೆ. ಸಿರಾ-

ಮಧುಗಿರಿ ಮುಂತಾದ ಕಡೆ ತಿರುಗಾಟಕ್ಕೆ ಉತ್ತಮ ರಸ್ತೆಯ ಸಂಪರ್ಕವಿದೆ.

## ಯರಗುಂಟೆ ಗೇಟ್

ಯರಗುಂಟೆ ಗೇಟ್ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೯ ಕಿ.ಮೀ. ದೂರದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು ರತ್ನಸಂದ್ರ ಕಂದಾಯ ಗ್ರಾಮದ ಉಪಗ್ರಾಮವಾಗಿದೆ. ಮಧುಗಿರಿ–ಸಿರಾ ಮುಖ್ಯ ರಸ್ತೆಯ ಬದಿಗೆ ಯರಗುಂಟೆ ಗ್ರಾಮಕ್ಕೆ ಹೋಗುವ ತಿರುವಿನಲ್ಲಿ ಆರಂಭದಲ್ಲಿ ವ್ಯಾಪಾರಿ ಗೂಡಂ ಗಡಿಗಳು ನಿರ್ಮಾಣವಾದವು. ಜನಸಂದಣಿ ಹೆಚ್ಚಾದಂತೆಲ್ಲಾ ಮನೆಗಳು ನಿರ್ಮಾಣವಾಗಿ ಇಂದು ಗ್ರಾಮದ ಸ್ವರೂಪ ಪಡೆದಿವೆ. ಯರೆಭೂಮಿಯ ಪ್ರದೇಶದಲ್ಲಿ ಕೆರೆಯೊಂದು ಇದ್ದುದ್ದರಿಂದ ಅಥವಾ ನೀರು ನಿಲ್ಲುವ ತಗ್ಗಿನ ಭೂ ಪ್ರದೇಶವಾದುದರಿಂದ ಯರೆಯ>ಕುಂಟೆ> ಮರಗುಂಟೆಯಾಗಿದೆ.

ಕೆಂಪು, ಮರಳು ಹಾಗೂ ಕಪ್ಪು ಜೇಡಿ ಮಣ್ಣುಗಳ ಮಿಶ್ರ ರೂಪದಲ್ಲಿರುವ ಇಲ್ಲಿನ ಭೌಗೋಳಿಕ ಪ್ರದೇಶ, ೬೮೮.೨೩ ಹೆಕ್ಟೇರ್ ವಿಸ್ತೀರ್ಣದಲ್ಲಿ ರತ್ನಸಂದ್ರ, ಯರಗುಂಟೆ ಮುಖ್ಯ ಗ್ರಾಮಗಳು ಹಂಚಿಕೆಯಾಗಿವೆ.

ಈ ಭಾಗದಲ್ಲಿ ನರಿ, ಮೊಲ, ಕಾಡುಹಂದಿ, ಉಡ, ಆಮೆ, ಮುಂಗುಸಿ, ಇಲಿ, ಹೆಗ್ಗಣ ಕಂಡು ಬರುತ್ತವೆ. ಗ್ರಾಮದಲ್ಲಿ ರೈತರು ಕೃಷಿಕರಾಗಿದ್ದು ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಎಮ್ಮೆ , ಎತ್ತುಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೪೫೨ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮–೩೯° ಸೆಂ.ರಷ್ಟು ಇದ್ದು, ಚಳಿಯು ೧೧–೧೨° ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ಕೊಳಾಯಿ ಸೌಲಭ್ಯವಿದೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು, ಗೊಲ್ಲರು, ಮಡಿವಾಳರು, ನಾಯಕರು, ಭಜಂತ್ರಿ, ದೊಂಬಿದಾಸರು ಸಮ ಪ್ರಮಾಣ ದಲ್ಲಿದ್ದಾರೆ. ಒಟ್ಟು ೩೨ ಮನೆಗಳಿವೆ. ಇಲ್ಲಿನ ಗ್ರಾಮದ ಜನಸಂಖ್ಯೆ ೧೭೩ ಇದೆ. ಇಲ್ಲಿನ ಮಾತೃ ಭಾಷೆ ಕನ್ನಡ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ಗರಿಗಳಿಂದ ನಿರ್ಮಿಸಿಕೊಂಡಿರುವ ಜೋಪಡಿಗಳೂ ಇವೆ. ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ರೈತಾಪಿ ಜನರು ಶೇಂಗಾ,ರಾಗಿ, ತೊಗರಿ ಬೆಳೆಯುತ್ತಾರೆ. ಸೂರ್ಯಕಾಂತಿ, ಸೇವಂತಿ, ತೋಟಗಾರಿಕೆ ಬೆಳೆ ಬೆಳೆಯಲಾಗುತ್ತಿದೆ. ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹೆಚ್ಚಾಗಿ ಗೂಡಂಗಡಿ, ಕಿರಾಣಿ ಅಂಗಡಿ, ಹೋಟೆಲ್‌ಗಳು, ಟೀ ಅಂಗಡಿಗಳು ಹಾಗೂ ಇಲ್ಲಿನ ಪ್ರಮುಖ ಉದ್ಯೋಗ ಮಾಗೋಡು ದೇವಸ್ಥಾನಕ್ಕೆ ಕೇಂದ್ರವಾಗಿರುವ ಕಾರಣ ಪೂಜಾ ಪರಿಕರ, ಹಣ್ಣು, ಆಹಾರ ಪದಾರ್ಥಗಳೂ ಮಾರಾಟವಾಗುತ್ತಿವೆ. ಮಧುಗಿರಿ–ಸಿರಾ ಬಸ್ ಸಂಪರ್ಕವಿದ್ದು, ಅಂಚೆ ಕಛೇರಿಗೆ ಗುಳಿಗೇನಹಳ್ಳಿ ಸಂಪರ್ಕಿಸಬೇಕಾಗಿದೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರಕ್ಕೆ ಒಳಪಟ್ಟಿದೆ. ತಾಲ್ಲೂಕು ಪಂಚಾಯಿತಿ ಕ್ಷೇತ್ರಕ್ಕೆ ಸೇರಿದೆ. ಶೈಕ್ಷಣಿಕವಾಗಿ ಮಕ್ಕಳು ಯರಗುಂಟೆ ಮುಖ್ಯ ಗ್ರಾಮ ಹಾಗೂ ಮನೆಗಳಿಗೆ ಹೋಗುತ್ತಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೬೪.೨ ರಷ್ಟಿದೆ.

ಇಲ್ಲಿ ೨ ಸ್ತ್ರೀ ಶಕ್ತಿ ಸಂಘಗಳಿವೆ, ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಭೂತಪ್ಪನ ಪೌಳಿ, ಮಾರಮ್ಮನ ಮಂಟಪ ಇದ್ದು, ಭೂತಪ್ಪನಿಗೆ ಆರತಿ, ಬಲಿ, ಹರಕೆ ಸಂಪ್ರದಾಯವಿದೆ. ಶ್ರಾವಣ ಮಾಸದಲ್ಲಿ ಮಾಗೋಡು ಆಂಜನೇಯ ಹಾಗೂ ರಂಗನಾಥ ಸ್ವಾಮಿಗೆ ಆರತಿ ಎದುರೆತ್ತುವ ಸಂಪ್ರದಾಯವಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ದಸರಾ, ಗೌರಿಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗ್ರಾಮದೊಳಗಿನ ಮುತ್ತುರಾಯ ಹಾಗೂ ಸಾಯಿಬಾಬ ದೇವರಿಗೆ ನಡೆದುಕೊಳ್ಳುವ ಸಂಪ್ರದಾಯವಿದೆ.

## ಯರಗುಂಟೆ ಎ.ಕೆ. ಕಾಲೋನಿ

ಯರಗುಂಟೆ ಎ.ಕೆ. ಕಾಲೋನಿ ಸಿರಾ ತಾಲ್ಲೂಕು ಕೇಂದ್ರದಿಂದ ಎತ್ತರಕ್ಕೆ ಮಧುಗಿರಿ, ಸಿರಾ ಮುಖ್ಯ ರಸ್ತೆಯಲ್ಲಿ ಸಿರಾದಿಂದ ೧೦ ಕಿ.ಮೀ. ದೂರದಲ್ಲಿದೆ. ಯರಗುಂಟೆ ಮುಖ್ಯ ಗ್ರಾಮಕ್ಕೆ ಹೊಂದಿಕೊಂಡಿದ್ದು, ಆದಿಕರ್ನಾಟಕ ಜನಾಂಗದ ವರ ಪ್ರತ್ಯೇಕ ವಸತಿ ಮನೆಗಳಿವೆ.

ಇದರ ಭೌಗೋಳಿಕ ವಿಸ್ತೀರ್ಣ ರತ್ನಸಂದ್ರ ಕಂದಾಯ ಗ್ರಾಮದಲ್ಲಿ ಹಂಚಿಕೆಯಾಗಿದೆ. ಆದಿಕರ್ನಾಟಕ

ಸಮುದಾಯದವರು ಮಾತ್ರ ಇಲ್ಲಿ ವಾಸಿಸುತ್ತಿದ್ದು ೨೩ ಮನೆಗಳಿದ್ದು, ಇವು ಹೆಂಚಿನ, ಶೀಟಿನ, ಕಡಪ ಕಲ್ಲಿನ ಸ್ವರೂಪದಲ್ಲಿವೆ. ಯಾರ ಮನೆಯಲ್ಲಿಯೂ ಶೌಚಾಲಯ ಬಳಸುವುದಿಲ್ಲ. ಇಲ್ಲಿನ ಬಹುತೇಕ ಮನೆಗಳು ಜನತಾ, ಅಂಬೇಡ್ಕರ್ ಆವಾಸ್ ವಸತಿ ಯೋಜನೆಯ ೧೦ ಫಲಾನುಭವಿಗಳಿದ್ದಾರೆ. ಶಿಕ್ಷಣ ಇಲಾಖೆಯ ಒಬ್ಬರು ಸರ್ಕಾರಿ ನೌಕರರಿದ್ದಾರೆ. ಮುಖ್ಯ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಇದರ ಮೂಲಕ ಶಿಕ್ಷಣ ಪಡೆಯುತ್ತಿದ್ದಾರೆ. ಈ ಗ್ರಾಮದ ಸಾಕ್ಷರತೆ ೫೨.೪ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ಅಂಗವಿಕಲ, ಹಾಗೂ ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಮಾರಮ್ಮನ ಪೌಳಿ ಇದ್ದು, ಊರ ಹಬ್ಬ ಮಾರಮ್ಮನ ಜಾತ್ರೆಯಂದೇ ಇಲ್ಲಿಯೂ ಆರತಿ, ಬಾನ, ಬ್ಯಾಟೆ ಸಂಪ್ರದಾಯಗಳಿವೆ. ಎಲ್ಲರೂ ಕೃಷಿಕ ಜೀವನ ಅವಲಂಬಿತರು. ಪಕ್ಕದ ಯರಗಂಟೆ ಗೇಟಿನ ಹಾಗೂ ಅರೇಹಳ್ಳಿ ಇಟ್ಟಿಗೆ ಫ್ಯಾಕ್ಟರಿ ಹಾಗೂ ಸಿರಾ ಮಂಡಿ, ಎಣ್ಣೆ ಗಿರಣಿಗಳಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ.

ಗ್ರಾಮದ ಸಾಯಿಬಾಬನ ಮಂದಿರಕ್ಕೆ ನಡೆದುಕೊಳ್ಳುತ್ತಿದ್ದಾರೆ. ಮಾಗೋಡು ರಂಗನಾಥನಿಗೆ ಇಲ್ಲಿಂದ ಎದುರೆತ್ತಿ ಆರತಿ ಮಾಡುವ ಸಂಪ್ರದಾಯವಿದೆ. ಯರಗುಂಟೇಶ ದೇವಾಲಯಕ್ಕೆ ಕೈವಾಡದವರಲ್ಲಿ ಈ ಕಾಲೋನಿಯವರು ತೋಟಿ, ಹಾಗೂ ತಳವಾರಿಕೆ ಕೆಲಸ ನಿರ್ವಹಿಸುವ ವಂಶವಾಹಿ, ಗ್ರಾಮ ಸಂಸ್ಕೃತಿ ಇಲ್ಲಿದೆ. ಯುಗಾದಿ, ದೀಪಾವಳಿ, ದಸರಾ, ಕಾಂತಮ್ಮ, ಗೌರಮ್ಮ, ಗೌರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಯರಗುಂಟೇಶ್ವರ ನಗರ

ಯರಗುಂಟೇಶ್ವರ ನಗರ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೮ ಕಿಮೀ ದೂರದಲ್ಲಿದೆ. ಇದು ದ್ವಾರಾಳುವಿನ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೪೮ ಹೆಕ್ಟೇರ್ ಆಗಿದೆ. ದ್ವಾರಾಳುವಿನ ಮೆರವಣಿಗೆ ದೇವರಾದ ಯರಗುಂಟೇಶ್ವರ (ವೀರಭದ್ರ)ನ ದೇವಸ್ಥಾನ ಇರುವುದರಿಂದ ಆ ದೇವರ ಹೆಸರಿನಲ್ಲಿಯೇ ಹೊಸ ಬಡಾವಣೆ ನಿರ್ಮಾಣವಾಗಿ ವಿವಿಧ ಜಾತಿಯ ೮೨ ಮನೆಗಳು ಬೆಳೆದಿವೆ. ಮರಳು ಮಿಶ್ರಿತ ಬಿಳಿ ಚೌಳು, ಎರೆಮಣ್ಣನ್ನು ಹೊಂದಿರುವ ಈ ಗ್ರಾಮ ಬಯಲುಸೀಮೆ ಪ್ರದೇಶವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಮುಂಗುಸಿ, ಬೆಕ್ಕು ಕಂಡುಬರುತ್ತವೆ. ಸಾಕುಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕುರಿ, ಮೇಕೆಗಳಿವೆ. ಈ ಪರಿಸರದಲ್ಲಿ ಪಕ್ಷಿಗಳಾದ ಕೊಕ್ಕರೆ, ಕಾಗೆ, ಕೋಗಿಲೆ, ಕೌಜಲಗ, ಗಿಳಿ, ಗೀಜಗ, ಗೂಬೆ, ಗರುಡ, ಹದ್ದು, ಗೊರವಂಕ ಕಂಡುಬರುತ್ತವೆ. ಕೋಳಿ ಸಾಕುಪಕ್ಷಿಯಾಗಿದೆ. ಸಾಧಾರಣ ಮಳೆ. ವಾಡಿಕೆ ಮಳೆ ೩೯೪ ಮಿಮೀ ಆಗಿದ್ದು ಉಷ್ಣಾಂಶ ೩೮–೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ೧೬ ಬೋರ್‌ವೆಲ್ ಅವಲಂಬಿಸಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಕೆಯಾಗುತ್ತದೆ. ೪ ಸಿಸ್ಟರ್ನ್‌ಗಳಿದ್ದು ೧ ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ. ಉಪ್ಪಾರ, ನಾಯಕ, ಕ್ಷೌರಿಕ, ವಿಶ್ವಕರ್ಮ, ಸಿಳ್ಳೇಕ್ಯಾತ, ಆದಿಕರ್ನಾಟಕ ಕಿರು ಸಮುದಾಯಗಳಾಗಿವೆ. ವಿವಿಧ ಪ್ರಕಾರಗಳ ೮೨ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ, ೪ ಗುಡಿಸಲು ಮನೆಗಳಿವೆ. ೩೦೮ ಜನಸಂಖ್ಯೆ ಹೊಂದಿದ್ದು ೧೦ ಮನೆಗಳಲ್ಲಿ ಶೌಚಾಲಯ ಸೌಲಭ್ಯವಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ತೊಗರಿ, ಅಲಸಂದೆ ಆಹಾರ ಬೆಳೆಗಳು. ಹೂವು, ತರಕಾರಿ ವಾಣಿಜ್ಯ ಬೆಳೆಗಳಾಗಿವೆ. ಸೂರ್ಯಕಾಂತಿ, ಸೀಡ್ಸ್ ಹತ್ತಿ ಬೆಳೆಯುತ್ತಿದ್ದಾರೆ. ಹುಣಸೆಹಣ್ಣು, ಶೇಂಗಾ ವ್ಯಾಪಾರಿ ಬೆಳೆಯಾಗಿದೆ. ಸಾರಿಗೆ, ಆರೋಗ್ಯ ಇಲಾಖೆಯಲ್ಲಿ ೨ ಸರ್ಕಾರಿ ನೌಕರರಿದ್ದಾರೆ. ಬೀಡಿ ಸುತ್ತುವುದು, ಹೂ ಕಟ್ಟುವುದು ಮಹಿಳೆಯರ ಉಪಕಸುಬಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ ಲಕ್ಷ್ಮೀಸಾಗರ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿಯ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ೩ ಸ್ತ್ರೀಶಕ್ತಿ ಸಂಘಗಳಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೩೪ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೬೮.೯೦ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ.

ಯರಗುಂಟೇಶ್ವರ ದೇವಾಲಯವಿದೆ. ಮಾರಮ್ಮ, ಉಡಸಲಮ್ಮ ದೇವಸ್ಥಾನವಿದ್ದು ಮುಖ್ಯ ಗ್ರಾಮ ದ್ವಾರಾಳುವಿನ ಊರ ಹಬ್ಬಗಳಾದ ಉಡಸಲಮ್ಮನ ಜಾತ್ರೆ, ಆರತಿ, ಬಲಿ, ಬ್ಯಾಟೆ ನಡೆಯುತ್ತದೆ. ಆಷಾಢದಲ್ಲಿ ದೀಪಾವಳಿ, ಯುಗಾದಿ, ಗೌರಿ, ಶಿವರಾತ್ರಿ ದಸರಾ ಹಬ್ಬಗಳನ್ನು ಆಚರಿಸುತ್ತಾರೆ. ಸಿಳ್ಳೇಕ್ಯಾತರ ಸೀನಪ್ಪ ಉತ್ತಮ ರಂಗಕಲಾವಿದ, ನಿರ್ದೇಶಕರಾಗಿ ಹೆಸರು ಮಾಡಿದ್ದಾರೆ.

## ಯರವರಹಳ್ಳಿ

ಯರವರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೭ ಕಿ.ಮೀ. ದೂರದಲ್ಲಿದೆ. ಇದೊಂದು ಮಜರೆ ಗ್ರಾಮವಾಗಿದ್ದು, ಇಲ್ಲಿಗೆ ಸಮೀಪದಲ್ಲಿ ಪೂರ್ವ ದಿಕ್ಕಿನಲ್ಲಿರುವ ಡ್ಯಾಗೇರನಹಳ್ಳಿ ಉಪಗ್ರಾಮವಾಗಿದೆ. ಡ್ಯಾಗೇರಹಳ್ಳಿಯೊಂದಿಗೆ ಇಲ್ಲಿನ ಭೌಗೋಳಿಕ ವಿಸ್ತೀರ್ಣ ಹಂಚಿಕೆಯಾಗಿದ್ದು, ಒಟ್ಟು ೧೧೧೭.೮೨ ಹೆಕ್ಟೇರ್ ಹೊಂದಿದೆ. ಮೂಲದಲ್ಲಿ ಹುಣಸೇಹಳ್ಳಿ, ದ್ವಾರನಕುಂಟೆ, ಬೇವಿನಹಳ್ಳಿ, ಹರೇಸಮುದ್ರ, ಕಾಮನಗಾನಹಳ್ಳಿ ಈ ಮೂಲ ಗಳಿಂದ ವಲಸೆ ಬಂದು, ಒಂದೊಂದೇ ಮನೆ ಕಟ್ಟಿಕೊಂಡು ವಾಸ ಮಾಡ ತೊಡಗಿದ್ದರಿಂದ ಈ ಗ್ರಾಮಕ್ಕೆ ಯರವರಹಳ್ಳಿ ಎಂದು ಹೆಸರು ನಿಂತಿದೆ. ಹೊರಗಡೆಯಿಂದ ಬಂದು ಈ ಮನೆ ಕಟ್ಟಿಕೊಂಡ ಊರ – ಯರವರಹಳ್ಳಿ ಆಗಿದೆ ಎಂದು, ಗ್ರಾಮದ ಯುವಕ ಟ್ರಜರಿ ಅಧಿಕಾರಿ ನಾಗರಾಜು ಹೇಳುತ್ತಾರೆ. ಇದೊಂದು ವಾಸ್ತವತೆಯಿಂದ ಕೂಡಿದ ಅಂಶವಾಗಿದ್ದು, ಈ ಗ್ರಾಮದ ಬಹುತೇಕ ಕುಟುಂಬಗಳ ಮೂಲ ಬೇರೆ ಬೇರೆ ಗ್ರಾಮಗಳಲ್ಲಿರುವುದು ಇಂದಿಗೂ ಕಂಡು ಬರುವ ಅಂಶವಾಗಿದೆ.

ಬಯಲು ಸೀಮೆಯ ಪ್ರದೇಶವಾಗಿದ್ದು, ಕಪ್ಪು ಮಿಶ್ರಿತ ಮರಳು ನೆಲ. ಉತ್ತರಕ್ಕೆ ಜೌಗು ಭೂಮಿಯೂ ಇದೆ. ಜೊತೆಗೆ ಉತ್ತರ ದಿಕ್ಕಿಗೆ ಈಚಲನ ವನ, ಕುರುಚಲ ಗಿಡಗಳು ವ್ಯಾಪಕವಾಗಿದೆ. ಹಾಗಾಗಿ ಈ ಪರಿಸರದಲ್ಲಿ ಮೊಲ, ಮುಂಗುಸಿ, ನರಿ, ಕರಡಿ, ತೋಳಗಳನ್ನು ಕಾಣಬಹುದಾಗಿದೆ. ಕಾಗೆ, ಗೂಬೆ, ಹದ್ದು, ಗಿಡುಗ, ಗಿಳಿ ಮೊದಲಾದ ಕಾಡು ಪಕ್ಷಿಗಳನ್ನು ಈ ಪರಿಸರದಲ್ಲಿ ಕಾಣಬಹುದಾಗಿದೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾಗಿ ಎತ್ತು, ಎಮ್ಮೆ, ಕುರಿ, ಮೇಕೆಯನ್ನು ಸಾಕುತ್ತಾರೆ. ಕೋಳಿ ಸಾಕು ಪಕ್ಷಿಯಾಗಿದೆ. ಸರಾಸರಿ ೪೬೧ ಮಿ.ಮೀ. ಮಳೆ ಬೀಳುವ ಇಲ್ಲಿ ಚಳಿ ೧೨ ಸೆಂ. ಇದ್ದರೆ, ಬಿಸಿಲಿನ ತಾಪಮಾನ ೩೭ ಸೆಂ. ಇರುತ್ತದೆ. ಗ್ರಾಮಕ್ಕೆ ಕುಡಿಯುವ ನೀರಿಗೆ, ಗ್ರಾಮ ಪಂಚಾಯಿತಿಯಿಂದ ೮ ಕೊಳವೆ ಬಾವಿಗಳಿಂದ ನೀರನ್ನು ಆರು ಕಡೆ ನಿರ್ಮಿಸಿರುವ ಕಿರು ಟ್ಯಾಂಕುಗಳ ಸಂಗ್ರಹದಿಂದ ಮನೆಗಳಿಗೆ ೪೮ ಕೊಳಾಯಿಗಳಲ್ಲಿ ಹರಿಸುತ್ತಾರೆ. ಗ್ರಾಮದಲ್ಲಿ ೨ ಕೈ ಪಂಪುಗಳಿವೆ.

ಕುರುಬ ಸಮುದಾಯದ ಈ ಗ್ರಾಮದ ಬಹು ದೊಡ್ಡ ಸಮುದಾಯವಾಗಿದ್ದು ಹಳ್ಳಿಕಾರ ಹಾಗೂ ಆದಿಕರ್ನಾಟಕದ ತಲಾ ೨೦ ಮನೆಗಳಿವೆ. ಕಾಂಕ್ರೀಟ್, ಮಣ್ಣಿನ ಮತ್ತು ಹೆಂಚು ಹಾಗೂ ಶೀಟಿನ ಒಟ್ಟು ೧೭೩ ಮನೆಗಳಿದ್ದು, ಗ್ರಾಮದಲ್ಲಿ ೫೮ ಮನೆಗಳು ಶೌಚಾಲಯ ಹೊಂದಿವೆ. ಆಶ್ರಯ, ಜನತಾ, ವಸತಿಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಫಲಾನುಭವಿಗಳಿದ್ದಾರೆ. ಗ್ರಾಮದ ಪ್ರಮುಖ ಆಹಾರ ರಾಗಿ ಮುದ್ದೆ, ಅನ್ನ, ರೊಟ್ಟಿ ಉಪ ಆಹಾರವಾಗಿದೆ. ವಿಶೇಷ ಸಂದರ್ಭದಲ್ಲಿ ಮಾಂಸ, ಮೀನಿನ ಊಟದ ವ್ಯವಸ್ಥೆಯೂ ಇರುತ್ತದೆ. ಸಂಪ್ರದಾಯಿಕ ವಾಹನಗಳು ಇಲ್ಲವಾಗಿರುವ ಈ ಗ್ರಾಮದಲ್ಲಿ ಟ್ರ್ಯಾಕ್ಟರ್, ಲಾರಿ, ಮಿನಿ ಟೆಂಪೋ, ಆಟೋ ಹಾಗೂ ಸ್ಕೂಟರ್ ವಾಹನಗಳು ಬಳಕೆಯಲ್ಲಿವೆ. ೬೧೭ ಜನಸಂಖ್ಯೆ ಇದೆ.

ರೈತಾಪಿ ಕಂಬಳಿ ನೇಯ್ಗೆ ಇಲ್ಲಿನ ಪ್ರಮುಖ ಉದ್ಯೋಗವಾಗಿದ್ದು, ರಾಗಿ, ತೊಗರಿ, ಅಲಸಂದಿ, ಹೆಸರು ಪ್ರಮುಖ ಆಹಾರ ಬೆಳೆಗಳು. ಹತ್ತಿ, ಸೂರ್ಯಕಾಂತಿ, ತೆಂಗು, ಅಡಿಕೆ, ಹೂಗಳಾಗಿ ಕಾಕಡ, ಸೇವಂತಿಗೆ, ಚೆಂಡು ಹೂಗಳನ್ನು ಬೆಳೆಯುತ್ತಾರೆ. ಶೇಂಗಾ, ಹತ್ತಿ, ತೆಂಗು ವ್ಯಾಪಾರಿ ಬೆಳೆಗಳು. ೧೬ ಜನ ಶಿಕ್ಷಕರು, ಒಬ್ಬರು ಉಪನ್ಯಾಸಕರು, ಒಬ್ಬರು ಖಜಾನೆ ಅಧಿಕಾರಿ (ನಾಗರಾಜ್) ಹಾಗೂ ಕೃಷಿ ಸೇವಾ ಸಹಕಾರಿ ಸಂಘದ ಅಧಿಕಾರಿಗಳೂ ಸೇರಿ ಒಟ್ಟು ೧೮ ಜನ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಒಟ್ಟು ೫೩ ಕೈ ಮಗ್ಗಗಳಿದ್ದು, ಕಂಬಳಿ, ನೇಯ್ಗೆ, ಕಂಬಳಿ ವ್ಯಾಪಾರ, ಬಂಡೆ ಕತ್ತರಿಸುವುದು, ಬಂಡೆಯ ಮಿಷನ್ ಈ ಬಗೆಯ ಸಣ್ಣ ಕೈಗಾರಿಕೆ ಗ್ರಾಮದಲ್ಲಿದೆ.

ಸಿರಾ ವಿಧಾನಸಭೆ, ಚಿತ್ರದುರ್ಗ ಲೋಕಸಭೆ, ತಾವರೆಕೆರೆ ಜಿಲ್ಲಾ ಪಂಚಾಯಿತಿ ಹಾಗೂ ಹುಣಸೇಹಳ್ಳಿ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಕ್ಷೇತ್ರಗಳ ವ್ಯಾಪ್ತಿಗೆ ಒಳಪಟ್ಟು ಈ ಹಳ್ಳಿಯಿಂದ ಒಬ್ಬ ನೀರು ಬಿಡುವ ಹಾಗೂ ಕಂದಾಯ ವಸೂಲಾತಿ ಇಬ್ಬರು ನೌಕರರಿದ್ದಾರೆ. ಹುಣಸೇಹಳ್ಳಿ, ನಾರಾಯಣಪುರ, ಡ್ಯಾಗೇರಹಳ್ಳಿ ಮಾರ್ಗವಾಗಿ ಜಿಲ್ಲಾ ಕಚ್ಚಾ ರಸ್ತೆ ಇದ್ದು, ಬಸ್ ಸಂಚಾರವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ಬೀರಲಿಂಗೇಶ್ವರ, ವೆಂಕಟೇಶ್ವರ, ಕರಿಯಮ್ಮ ಮೊದಲಾದ ೫ ಸ್ತ್ರೀ ಶಕ್ತಿ ಸಂಘಗಳಿದ್ದು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಉಣ್ಣೆ ನೇಕಾರರ ಸಂಘ, ಕೃಷಿ ಸೇವಾ ಸಹಕಾರ ಸಂಘಗಳಿದ್ದು ಸಕ್ರಿಯವಾಗಿದೆ.

ಒಂದು ಅಂಗನವಾಡಿ ಕೇಂದ್ರ, ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಅಂಗನವಾಡಿಯಲ್ಲಿ ೨೮ ಮಕ್ಕಳು, ಕನ್ನಡ ಶಾಲೆಯಲ್ಲಿ ನೂರು ಮಕ್ಕಳಿದ್ದು, ೨-೪ ಜನ ನೌಕರ ವರ್ಗದವರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೪೯-೯ ಇದ್ದು, ಪುರುಷರು ೫೯.೪, ಮಹಿಳೆಯರು ೩೮.೫ ಇದೆ.

ಗ್ರಾಮದಲ್ಲಿ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆ ಸೇರಿದಂತೆ ವಿವಿಧ ಯೋಜನೆಯ ಫಲಾನುಭವಿಗಳಿದ್ದಾರೆ. ೮ ಅಂಗಡಿಗಳು, ೨ಟೀ ಅಂಗಡಿಗಳಿವೆ.

ಸಾವಂತಿಕೆರೆ ಇತ್ತೀಚೆಗೆ ಕಟ್ಟಿಸಿರುವ ವೆಂಕಟೇಶ್ವರ ದೇವಾಲಯ ಆಧುನಿಕವಾಗಿದೆ. ಮಂಟಪ, ವಿನ್ಯಾಸ, ಪ್ರಾಂಗಣ, ಅಡಿಗೆ ಸಾಲು, ಕಾಂಪೌಂಡ್ ಸುಂದರವಾಗಿದೆ. ಊರಿನ ಹೊರಗೆ, ಉತ್ತರಕ್ಕೆ ಶನಿದೇವರ ದೇವಸ್ಥಾನವಿದ್ದು, ಪ್ರತಿ ವರ್ಷ ಶ್ರಾವಣ ಶನಿವಾರದ ಕೊನೆಯ ದಿನ ಆರತಿ, ಬಾನ, ಉತ್ಸವ, ಸಂಜೆ ಶನಿಮಹಾತ್ಮೆ ನಾಟಕ ಏರ್ಪಡುತ್ತದೆ.

ಗ್ರಾಮದ ಒಳಗೆ ಲಕ್ಷ್ಮೀದೇವರು (ಲಕ್ಕಮ್ಮನಗುಡಿ) ಚೌಡಮ್ಮ ದೇವಾಲ ಯಗಳಿವೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಮಹಾನವಮಿ, ಪ್ರಮುಖ ಹಬ್ಬಗಳು. ಗ್ರಾಮದೇವತೆ ಕರಿಯಮ್ಮನ ಹಬ್ಬ ಮಾಡಿ ಬಲಿ, ಆರತಿ, ಹರಕೆ ಉತ್ಸವ ಇರುತ್ತದೆ. ಊರಹಬ್ಬವಾಗಿ ಆಚರಿಸಲಾಗುತ್ತದೆ. ಗ್ರಾಮದಲ್ಲಿ ಬೀರಲಿಂಗೇಶ್ವರ ಕೋಲಾಟ ಕಲಾ ತಂಡವಿದ್ದು, ಬೀರಲಿಂಗಪ್ಪ ಈ ತಂಡದ ಮುಖಂಡ. ರಮೇಶ್, ಬೀರಣ್ಣ, ಕರಿಯಪ್ಪ, ಇತರ ಕೋಲಾಟ ಕಲಾವಿದರು. ಜಯಮ್ಮ ಸೋಬಾನೆ ಕಲಾವಿದೆ. ಇವರು ಹಾಡಿರುವ ಸೋಬಾನೆ ಹಾಡುಗಳನ್ನು ಡಾ. ಚಿಕ್ಕಣ್ಣ ಸಂಗ್ರಹಿಸಿ, ಬಂಡಿ ಬಂದಾವೆ ಬಾಳೆ ವನದಾಗೆ ಸಂಗ್ರಹದಲ್ಲಿ ಪ್ರಕಟಿಸಿದ್ದಾರೆ. ಸಿರಾ ಹುಣಸೇಹಳ್ಳಿ, ಜನಗೊಂಡನಹಳ್ಳಿ ಮಾರ್ಗವಾಗಿ ಬಸ್ ಸಂಪರ್ಕ ಸೌಲಭ್ಯವಿದೆ.

## ಯಲಪೇನಹಳ್ಳಿ

ಯಲಪೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ೩೨೯.೪೩ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಯಲಪೇನಹಳ್ಳಿ ಎಂಬುದು ಯಲ್ಲಪ್ಪನ ಹೆಸರಿನ ಗ್ರಾಮವಾಗಿದ್ದು ಈ ಹಳ್ಳಿಯ ಆರಂಭದ ಕಾಲಕ್ಕೆ, ಈತನ ಪಾರುಪತ್ಯ ಇದ್ದಿರಬೇಕು. ಆದರೂ ಗ್ರಾಮದ ಹಿರಿಯರಾದ ನರಸಿಂಹ ಮೂರ್ತಿಯ ಅಭಿಪ್ರಾಯ ಎಲೆಯ ಮಾರುವ ಗ್ರಾಮ ಎಂದು ವಿವರಿಸಿದರು. ಇದಕ್ಕೆ ಯಾವುದೇ ಸಮರ್ಥನೆ ಇರುವುದಿಲ್ಲ. ಸಿರಾ ಸೀಮೆಯಲ್ಲಿ ಯಲ್ಲಪ್ಪ, ಎಲ್ಲಪ್ಪ ಹೆಸರಿನ ವ್ಯಕ್ತಿಗಳು ಸಹಜವಾಗಿಯೇ ಇರುವುದರಿಂದ, ಇದೊಂದು ವ್ಯಕ್ತಿಯಾಗಿ ಈ ಊರಿನ ಹೆಸರಿಗೂ ಕಾರಣವಾಗಿದೆ.

ಮರಳು ಮಿಶ್ರಿತ ಕೆಂಪು ಮಣ್ಣು ಹೊಂದಿರುವ ಈ ಗ್ರಾಮದ ಬಯಲು ಪ್ರದೇಶ. ಗ್ರಾಮಕ್ಕೆ ಹೊಂದಿಕೊಂಡಂತೆ ಕೆರೆಯೂ ಇದ್ದು, ಅದು ಸೀಮೆ ಜಾಲಿಯಿಂದ ತುಂಬಿದೆ. ಈ ಪರಿಸರದಲ್ಲಿ ಮೊಲ, ಜಿಂಕೆ, ಮುಂಗುಸಿ, ಕಾಡುಹಂದಿ, ನರಿ, ತೋಳಗಳು ವಾಸಿಸುತ್ತವೆ. ಪಕ್ಷಿಗಳಾದ ಕಾಗೆ, ಗಿಳಿ, ಪಾರಿವಾಳ, ಕೋಗಿಲೆ ಮೊದಲಾದ ಪಕ್ಷಿಗಳೂ ಇವೆ. ಗ್ರಾಮದಲ್ಲಿ ಹಸು, ಎತ್ತು, ಎಮ್ಮೆ, ಕುರಿ, ಕೋಳಿಗಳನ್ನು ಸಾಕುತ್ತಾರೆ.

ವಾರ್ಷಿಕ ಸರಾಸರಿ ೪೬೩ ಮಿ.ಮೀ. ಮಳೆ ಬೀಳುವ ಈ ಪ್ರದೇಶದಲ್ಲಿ ೩೬೦ ಸೆಂ. ಉಷ್ಣಾಂಶದಿಂದಲೂ, ೯೦ ಸೆಂ. ಚಳಿಯಿಂದಲೂ ಕೂಡಿದೆ, ಮೂರು ಮಿನಿ ಟ್ಯಾಂಕ್‌ಗಳ ಮೂಲಕ ಕೊಳಾಯಿಗಳಲ್ಲಿ ನೀರು ಹರಿಸಿ ೧೬ ನಲ್ಲಿಗಳಲ್ಲಿ ನೀರನ್ನು ಕುಡಿಯುವುದಕ್ಕೆ ಪೂರೈಸಲಾಗುತ್ತಿದೆ.

ಗ್ರಾಮದಲ್ಲಿ ಗೊಲ್ಲರು ದೊಡ್ಡ ಸಮುದಾಯ ಆದಿಕರ್ನಾಟಕ, ಉಪ್ಪಾರ, ಆದಿ ದ್ರಾವಿಡ, ಈಡಿಗ, ವೀರಶೈವ ಹಾಗೂ ಅಗಸರ ಕುಟುಂಬದವರು ಸಣ್ಣ ಸಮುದಾಯವಾಗಿದೆ. ಒಟ್ಟು ೧೫೫ ಮನೆಗಳಿದ್ದು, ಕಲ್ಲಿನ, ಕಾಂಕ್ರೀಟ್, ಹೆಂಚಿನ ಮನೆಗಳಿವೆ. ಎರಡು ಗುಡಿಸಲುಗಳೂ ಇದ್ದು ೬ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ಭಾಗ್ಯಜ್ಯೋತಿ ಸೌಲಭ್ಯ ಪಡೆದವರು ಅಧಿಕ. ರಾಗಿ ಮುದ್ದೆ ಅನ್ನ ಮುಖ್ಯ ಆಹಾರವಾಗಿದ್ದು, ರೊಟ್ಟಿ ಬಳಸುವವರಿದ್ದಾರೆ. ಸಾಂದರ್ಭಿಕವಾಗಿ ಬಾಡೂಟ ಹೋಳಿಗೆ ಊಟ ಏರ್ಪಾಡು ಮಾಡುತ್ತಾರೆ. ಕೃಷಿ ಬದುಕಿಗೆ ಸಾಂಪ್ರದಾಯಿಕ ಎತ್ತಿನ ಬಂಡಿಗಳ ಜೊತೆಗೆ ಟ್ರ್ಯಾಕ್ಟರ್, ಲಾರಿಗಳು, ಟಿಲ್ಲರ್‌ಗಳ ಬಳಕೆಯಿದೆ. ದ್ವಿಚಕ್ರ ವಾಹನವಾಗಿ ಸ್ಕೂಟರ್ ಬಳಸುತ್ತಾರೆ. ೮೧೪ ಜನಸಂಖ್ಯೆ ಇದೆ.

ರಾಗಿ, ಶೇಂಗಾ, ಅಲಸಂದಿ, ಅವರೆ, ತೊಗರಿ ಮುಖ್ಯ ಆಹಾರ ಬೆಳೆಗಳು. ವಾಣಿಜ್ಯ ಬೆಳೆಯಾಗಿ ಹತ್ತಿ, ಸೂರ್ಯಕಾಂತಿ, ಸೇವಂತಿ, ತೋಟಗಾರಿಕೆಯಲ್ಲಿ ತೆಂಗು, ಅಡಿಕೆ, ದಾಳಿಂಬೆ, ಹಣ್ಣುಗಳನ್ನು ಬೆಳೆಯುತ್ತಾರೆ. ಹುಣಸೇಹಣ್ಣಿನ ವ್ಯಾಪಾರವೂ ಇದೆ. ಗುಡಿ ಕೈಗಾರಿಕೆ ರಾಗಿ ಮಿಲ್, ಬೀಡಿ ಸುತ್ತುವುದು ಇದೆ. ಮೂವರು ಸರ್ಕಾರಿ ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಬರಗೂರು ತಾಲ್ಲೂಕು ಪಂಚಾಯಿತಿ, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರುವ ಈ ಹಳ್ಳಿ ಬರಗೂರು ಗ್ರಾಮ ಪಂಚಾಯಿತಿಗೆ ಸೇರಿದೆ. ಗ್ರಾಮದಲ್ಲಿ ೨ ಸ್ತ್ರೀ ಶಕ್ತಿ ಸಂಘಗಳಿದ್ದು, ಒಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಪಾಠಶಾಲೆ

ಇದ್ದು, ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲವಾಗಿದೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಸಮೀಪದ ಬರಗೂರು ಗ್ರಾಮಕ್ಕೆ ಹೋಗುತ್ತಾರೆ. ಸಾಕ್ಷರತೆಯ ಪ್ರಮಾಣ ಶೇ. ೫೮ ರಷ್ಟಿದೆ. ಮಹಿಳೆಯರು ಶೇ. ೪೫.೫., ಪುರುಷರು ೬೯.೯ ರಷ್ಟಿದ್ದಾರೆ.

೮೦ ವರ್ಷದ ಕುಂಚಿಟಿಗರ ಮುರುಗೇಗೌಡ ಹಾವು, ವಿಷ ಜಂತು ಕಡಿದವರಿಗೆ ಔಷಧೋಪಚಾರದಿಂದ ಗುಣ ಪಡಿಸುವ ಪಾರಂಪರಿಕ ವೈದ್ಯ ಎಂದೇ ಹೆಸರಾಗಿದ್ದಾರೆ. ೨ ಅಂಗವಿಕಲ ಚೇತನ, ವೃದ್ಧಾಪ್ಯ ವೇತನ, ೮ ಮಂದಿ ಸಂಧ್ಯಾ ಸುರಕ್ಷಾ ಯೋಜನೆ ೭ ಜನ ಹಾಗೂ ವಿಧವಾ ವೇತನದ ಸೌಲಭ್ಯ ಪಡೆದ ಹದಿಮೂರು ಜನರು ಈ ಗ್ರಾಮದಲ್ಲಿದ್ದಾರೆ. ನಾಲ್ಕು ಗೂಡಂಗಡಿಗಳು ಕಾರ್ಯ ನಿರ್ವಹಿಸುತ್ತಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಒಂದು ಅರಳಿಕಟ್ಟೆ, ೨ ಕರುಗಲ್ಲುಗಳಿದ್ದು ಪೂಜೆಗೆ ಒಳಗಾಗಿವೆ. ಸಿದ್ದೇಶ್ವರ (ಹೆಂಜಾರಪ್ಪ) ಆಂಜನೇಯ, ಮಾತಪ್ಪ ದೇವರುಗಳು ಗುಡಿಗಳಿದ್ದು, ಕಾಡು ಗೊಲ್ಲರು ಪ್ರತ್ಯೇಕವಾಗಿ ಕೃಷ್ಣ ಮಂದಿರ ನಿರ್ಮಿಸಿಕೊಂಡಿದ್ದಾರೆ. ಊರ ಹಬ್ಬವಾಗಿ ಮಾರಮ್ಮನ ಜಾತ್ರೆ ನಡೆದು, ಆರತಿ, ಬಾನ, ಬ್ಯಾಟೆ ಅರ್ಪಣೆಯ ಸಂಪ್ರದಾಯವಿದೆ. ಮೂರು ದಿನಗಳ ಜಾತ್ರೆ ನಡೆಯುತ್ತದೆ. ತಿಪ್ಪೇಸ್ವಾಮಿ, ರಾಮಕ್ಕ, ಲಕ್ಷ್ಮಕ್ಕ, ಸಣ್ಣೀರಪ್ಪ ಜನಪದ ಹಾಡುಗಾರರಾಗಿ ಊರ ಮನ್ನಣೆಗೆ ಪಾತ್ರವಾಗಿರುವ ಕಲಾವಿದರು ಹಿರಿಯ ವೈದ್ಯರಾದ ಡಾ. ಜಗದೀಶ್, ಇದೇ ಗ್ರಾಮದವರೆಂಬುದು ವಿಶೇಶ. ನಾಗರಾಜ್, ರಂಗನಾಥ್ ಪ್ರಗತಿ ಪರ ರೈತರು ರಾಜಕೀಯ ಧುರೀಣರು.

## ಯಾದಲಡಕು

ಯಾದಲಡಕು ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೪೩೨.೦೨ ಹೆಕ್ಟೇರ್‌ನಷ್ಟಿದೆ. ಕಾಡುಗೊಲ್ಲರು, ಕುಂಚಿಟಿಗರು, ಆದಿಕರ್ನಾಟಕ, ಬೇಡ ಹೀಗೆ ಬಹು ಜನಾಂಗದ ವಾಸಸ್ಥಳ ಇದಾದರೂ ಹಿಂದೆ ಇದೊಂದು ಕಾಡುಗೊಲ್ಲರ ವಾಸಸ್ಥಳ ಮಾತ್ರವಾಗಿದ್ದು, ನಂತರ ಇತರೆ ಜನಾಂಗದ ಸಮುದಾಯ ಸೇರ್ಪಡೆಯಾಗಿರಬೇಕು. ಆ ಕಾರಣದಿಂದಲೇ ಯಾದಲಡಕು ಯಾದವರು ಕುಠೀರ. ಹೀಗೆ ಗ್ರಾಮ ಬೆಳೆದು ಬಂದಿದೆ. ಸಿರಾ–ಪಟ್ಟನಾಯಕನಹಳ್ಳಿ–ಮಾರ್ಗದಲ್ಲಿ ಪಟ್ಟನಾಯಕನಹಳ್ಳಿಯಿಂದ ಮುಂದೆ ಹುಲಿಕುಂಟೆ – ಕ್ಯಾದಿಗುಂಟೆಗೆ ಹೋಗುವ ಮಾರ್ಗದಲ್ಲಿ ಮುಖ್ಯರಸ್ತೆಯಿಂದ ಒಂದು ಕಿ.ಮೀ. ಒಳಗೆ ರಸ್ತೆಯ ಬಲಬದಿಗೆ ಯಾದಲಡಕು ಗ್ರಾಮವಿದೆ. ಈ ಪರಿಸರದಲ್ಲಿ ಕಂದು ಮಿಶ್ರಿತ ಮರಳು ಭೂಮಿಯನ್ನು ಹೊಂದಿದೆ. ಒಂದು ಕೆರೆ, ಹಳ್ಳಗಳಿಂದ ಕೂಡಿದ್ದರೂ, ನೀರಿನ ಸೌಲಭ್ಯ ತೀರಾ ಕಷ್ಟ. ಪೊದೆ, ಗಿಡ, ಮರ, ಕುರುಚಲು ಕಾಡುಗಳಿಂದ ಕೂಡಿದ ಈ ಪರಿಸರಗಳಲ್ಲಿ ಮೊಲ, ಜಿಂಕೆ, ಹಂದಿ, ನರಿ ಕಂಡು ಬರುತ್ತವೆ. ಜೊತೆಗೆ ರೈತಾಪಿ ಬದುಕಿನ ಈ ಗ್ರಾಮದಲ್ಲಿ ಪಶುಪಾಲನೆಯಾಗಿ ಹಸು, ಎಮ್ಮೆ, ಕುರಿ, ಮೇಕೆ, ಕತ್ತೆಗಳು, ನಾಯಿಯನ್ನು ಸಾಕಲಾಗುತ್ತದೆ. ಕಾಡು ಪಕ್ಷಿಗಳಾಗಿ ಗಿಳಿ, ಕೋಗಿಲೆ, ಕಾಗೆ, ಗೊರವಂಕ, ಕೌಜುಗ, ಗುಬ್ಬಚ್ಚಿ ಮೊದಲಾದವು ಕಂಡು ಬರುತ್ತವೆ. ಸಾಕು ಪಕ್ಷಿಯಾಗಿ ಕೋಳಿಯನ್ನು ಸಾಕಲಾಗುವುದು. ಗ್ರಾಮದಲ್ಲಿ ಕೃಷಿ ಬದುಕಿಗೆ ಮಳೆಯೇ ಆಧಾರ. ಆದರೂ ವಾರ್ಷಿಕ ಮಳೆಯ ಪ್ರಮಾಣ ಕಡಿಮೆ ಇದ್ದು, ೫೮೦ ಮಿ.ಮೀ. ಮಳೆಯಾಗುತ್ತದೆ. ಬಿಸಿಲು ೩೮–೩೯ಂ ಸೆಂ. ಸಹಜವಾಗಿರುತ್ತದೆ. ಚಳಿಯೂ ೧೨ಂ ಸೆಂ. ಇರುತ್ತದೆ.

ಈ ಪರಿಸರದಲ್ಲಿ ೮೩ ಕೊಳವೆ ಬಾವಿಗಳಿದ್ದು, ಕುಡಿಯಲು ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಗ್ರಾಮ ಪಂಚಾಯಿತಿಯಿಂದ ನೀರನ್ನು ಪೂರೈಸಲಾಗುತ್ತಿದೆ. ೨ ಕೈ ಪಂಪುಗಳು ಇದೆ. ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಕಾಡುಗೊಲ್ಲರು, ಆದಿ ದ್ರಾವಿಡ, ಮಡಿವಾಳ, ಕುಂಬಾರ, ನಾಯಕ, ಸಣ್ಣ ಸಮುದಾಯಗಳಿವೆ. ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದೆ. ೩೫೬ ಮನೆಗಳಿರುವ ಈ ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದ ಮನೆ ರಚನೆಯಾಗಿವೆ. ೧೪೯೦ ಜನಸಂಖ್ಯೆ ಇದ್ದು ಇಲ್ಲಿ ೧೨೦ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಯ ೩೨ ಫಲಾನುಭವಿಗಳಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆಯನ್ನು ವಿಶೇಷ ಸಾಂದರ್ಭಿಕ ಆಹಾರವಾಗಿ ಬಳಸಲಾಗುತ್ತದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಬಂಡಿ, ಹಾಗೂ ಆಧುನಿಕ ವಾಹನವಾಗಿ ಟ್ರ್ಯಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಬಳಸಲಾಗುತ್ತಿದೆ. ಶೇಂಗಾ ಇಲ್ಲಿನ ಮುಖ್ಯ ಬೆಳೆಯಾದರೆ, ರಾಗಿ, ಅಲಸಂದಿ, ತೊಗರಿ, ನವಣೆ, ಜೋಳ, ಹುರುಳಿ ಬೆಳೆಗಳನ್ನು ಆಹಾರ ಬೆಳೆಗಳಾಗಿ ಬೆಳೆಯುತ್ತಾರೆ. ಶೇಂಗಾ, ತೆಂಗು, ಅಡಿಕೆ, ಹುಣಸೆಹಣ್ಣು ವಾಣಿಜ್ಯ ಬೆಳೆಯಾಗಿವೆ. ಇಂಜೀನೀಯರ್ ವೈ.ಕೆ. ಜಯರಾಮಯ್ಯ ನಿವೃತ್ತ ಪ್ರಾಚಾರ್ಯ ಆರ್. ಕೃಷ್ಣಯ್ಯ, ಉಪನ್ಯಾಸಕ ಆರ್. ರಾಜಣ್ಣ, ಇಂಜೀನೀಯರ್ ಪುಟ್ಟನಂಜಯ್ಯ ಇವರುಗಳು ಸೇರಿದಂತೆ ಒಟ್ಟು ಎಂಟು ಜನ ನೌಕರರಿದ್ದಾರೆ. ಬೀಡಿ ಕಟ್ಟುವುದು, ಊಟದ ಎಲೆ ತಯಾರಿಕೆ, ಟೈಲರಿಂಗ್,

ರಾಗಿ ಗಿರಣಿ ಸೇರಿದಂತೆ ಕುಂಬಾರಿಕೆ, ಮಡಿವಾಳಿಕೆ ಗೃಹ ಕೈಗಾರಿಕೆಗಳಿವೆ.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ, ಬರಗೂರು ತಾಲ್ಲೂಕು ಪಂಚಾಯಿತಿ, ಹಾಗೂ ಹೊಸಹಳ್ಳ ಗ್ರಾಮ ಪಂಚಾಯಿತಿಗೆ ಸೇರಿದ್ದು, ಮೂರು ಜನ ಪಂಚಾಯಿತಿ ಸದಸ್ಯರು ಈ ಗ್ರಾಮವನ್ನು ಪ್ರತಿನಿಧಿಸುತ್ತಿದ್ದಾರೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಬರಗೂರು, ಹುಲಿಕುಂಟೆ, ಪಟ್ಟನಾಯಕನಹಳ್ಳಿ, ಚಂಗಾವರಕ್ಕೆ ರಸ್ತೆ ಸಂಪರ್ಕವಿದೆ. ಎಂಟು ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ಮೂರು ಧರ್ಮಸ್ಥಳ ಸ್ವಸಹಾಯ ಸಂಘದ ತಂಡಗಳಿದ್ದು, ಗ್ರಾಮಾಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತಿವೆ. ಒಂದು ಅಂಚೆ ಕಛೇರಿ, ಅಂಗನವಾಡಿ ಕೇಂದ್ರ, ಪ್ರಾಥಮಿಕ ಹಿರಿಯ ಪಾಠಶಾಲೆಗಳಿದ್ದು, ಗ್ರಾಮದ ಅಂಗನವಾಡಿಯಲ್ಲಿ ೨೭ ಮಕ್ಕಳು, ಶಾಲೆಯಲ್ಲಿ ೧೧೮ ಮಕ್ಕಳಿದ್ದು, ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪಠ್ಯ ಪುಸ್ತಕ ಸೌಲಭ್ಯಗಳಿವೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೦.೪ ರಷ್ಟಿದೆ. ಒಂದು ಗ್ರಾಮ ಪಂಚಾಯಿತಿ ಗ್ರಂಥಾಲಯವಿದ್ದು ಪುಸ್ತಕ ಇರುವುದಿಲ್ಲ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ ವೇತನ, ವಿಧವಾ ವೇತನ ಫಲಾನುಭವಿಗಳಿದ್ದು, ಹನ್ನೆರಡು ಅಂಗಡಿಗಳಿವೆ. ಇಲ್ಲಿನ ರಂಗನಾಥ ದೇವಾಲಯದ ಆವರಣದಲ್ಲಿ ಗಾಂಧೀಜಿ ಮರಣದ ದಿನ ೩೦–೧–೧೯೪೭ ರಂದು ಸ್ಮಾರಕ ಶಾಸನ ಬರೆಸಲಾಗಿದೆ. ಜೊತೆಗೆ ೧೫೫೭ ರ ಮಾರ್ಚಿ ೧೫ ರಂದು ಕದರಿ ನರಸಿಂಹ, ಈಶ್ವರ, ತಿರುಮಲ, ಆಂಜನೇಯ, ಲಕ್ಷ್ಮೀದೇವ ಸ್ಥಾನ ಪ್ರತಿಷ್ಠಾಪಿಸಿದ ಉಲ್ಲೇಖ ಸಿರಾ ಶಾಸನ ೧೨ ರಲ್ಲಿದೆ. ಮಾರಮ್ಮ, ಕರಿಯಮ್ಮ ದೇವಾಲಯಗಳಿದ್ದು, ರಂಗನಾಥ ಸ್ವಾಮಿಯ ಭವ್ಯ ದೇವಾಲಯ, ಪ್ರಾಂಗಣ, ಗೋಪುರ, ಚಿತ್ರಗಳು ಸೊಗಸಾಗಿವೆ. ಜಾತ್ರೆಯನ್ನು ನಡೆಸಲಾಗುವುದು. ಆಂಜನೇಯನಿಗೆ ಶ್ರಾವಣದಲ್ಲಿ ಆರತಿ ಮಾಡಿದರೆ, ಗ್ರಾಮ ದೇವತೆ ಮಾರಮ್ಮನ ಊರಹಬ್ಬವಾಗಿ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯಗಳಿವೆ.

ಶ್ರೀ ಓಬಳ ನರಸಿಂಹಸ್ವಾಮಿಯ ಆಶ್ರಮವಿದ್ದು, ವಾರ್ಷಿಕವಾಗಿ ಪರೇವು ಮಾಡುತ್ತಾರೆ. ಇದು ಪಟ್ಟನಾಯಕನಹಳ್ಳಿ ಶ್ರೀ ನಂಜಾವಧೂತ ಸ್ವಾಮಿಗಳ ಪೂರ್ವಾಶ್ರಮವಾಗಿದ್ದು ಇವರ ಪೂರ್ವಿಕರ ನೆಲೆಯಾಗಿದೆ.

ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಮಹಾನವಮಿ, ಗೌರಿಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.ರಂಗ ಕಲಾವಿದರು, ಜನಪದ ಸಂಗೀತವನ್ನು ಹಾಡುತ್ತಾರೆ. ಯಾದಲಡಕು ಜಯರಾಮಯ್ಯ ಅಂಕಣಾ ಬರಹಗಾರರಾಗಿದ್ದಾರೆ. ಶಿಕ್ಷಣ ತಜ್ಞರಾಗಿರುವುದು ವಿಶೇಷವಾಗಿದೆ.

ಈ ಗ್ರಾಮದಲ್ಲಿ ದೊರೆತ ಸಿರಾ ೧೩ ನೇ ಶಾಸನದ ಪ್ರಕಾರ ಜಮೀನಿನ ದಾನದ ಉಲ್ಲೇಖವಿದೆ. ಇದರಲ್ಲಿ ಯಾದಲಡಕಿನ ಗೌಡರಂಗಯ್ಯನವರು ಬಡಕನಹಳ್ಳಿ ಹನುಮಯ್ಯರ ಮಕ್ಕಳಾದ ರಂಗಯ್ಯ, ಚಿಕ್ಕಣ್ಣ, ದೊಡ್ಡಯ್ಯ, ಚಿಕ್ಕಣ್ಣ ಇವರಿಗೆ, ಯಾದಲಡುಕಿನ ಹೊನ್ನವೀರಗೌಡನಿಂದ ಬರೆಸಿಕೊಟ್ಟ ಶಾಸನ ಎಂದಿದ್ದು ಅಪೂರ್ಣವಾಗಿದೆ.

## ಯಂಜಲಗೆರೆ

ಯಂಜಲಗೆರೆ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೯ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೩೨೩.೦೩ ಹೆಕ್ಟೇರ್. ಕರೆಕೆಂಚಪ್ಪನ ಪಾಳ್ಯ ಹಾಗೂ ಮುಕುಂದಪ್ಪನ ಪಾಳ್ಯ ಎಂಬ ಎರಡು ಗ್ರಾಮಗಳು ಇದರ ಉಪಗ್ರಾಮಗಳಾಗಿವೆ. ಯಂಜಲಗೆರೆ ಗ್ರಾಮದ ಬದಿಗೆ ಉತ್ತರಾಭಿಮುಖವಾಗಿ ಮುಸಕಲೋಟಿ ಕೆರೆ ಇದೆ. ಯಂಜಲಗೆರೆ ಗ್ರಾಮದ ಪಶ್ಚಿಮ ಬದಿಗೆ ಕರೇಕಲ್ಲುಹಟ್ಟಿ ಎಂಬ ಕಾಡುಗೊಲ್ಲರ ಬುಡಕಟ್ಟು ಗ್ರಾಮ. ಯಂಜಲಗೆರೆಯ ಉತ್ತರದ ಕೊನೆಯ ತುದಿಗೆ ಶಾಸಮರು ಗ್ರಾಮವಿದೆ. ಹೀಗಾಗಿ ಈ ಮೂರು ಗ್ರಾಮಗಳ ನೀರು ಕೂಡಾವಳಿ ಸೇರ್ಪಡೆಯಾಗಿರುವುದರಿಂದಾಗಿ ಪೂರ್ವಿಕರು ಊಟ ಮಾಡಿ ಕೈ ತೊಳೆಯಬಹುದಾದ ಹತ್ತಿರ ಅಥವಾ ತೊಳೆಯುತ್ತಿದ್ದ ಕಾರಣಗಳಿಂದಲೇ ಈ ಗ್ರಾಮಕ್ಕೆ ಯಂಜಲಗೆರೆ ಎಂದಾಗಿದೆ ಎಂದು ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷರಾಗಿದ್ದ ಚಿಕ್ಕಣ್ಣ ಹಾಗೂ ಸಬ್ ರಿಜಿಸ್ಟ್ರರ್ ಧರ್ಮೇಶ್ ವ್ಯಾಖ್ಯಾನಿಸುತ್ತಾರೆ. ಇದರ ಹೊರತು ಅನ್ಯ ಕಾರಣಗಳಿಲ್ಲ ಎಂಬ ಬಲವಾದ ತರ್ಕವೂ ಅವರದಾಗಿದೆ. ಕೆಂಪು, ಮರಳು ಮಿಶ್ರಿತ ಮಣ್ಣಿನ ಈ ಗ್ರಾಮದ ಪಶ್ಚಿಮಕ್ಕೆ ದಿಣ್ಣೆ, ಕುರುಚಲು ಗಿಡ, ಹಳ್ಳಗಳಿಂದ ಕೂಡಿದೆ. ಹಾಗಾಗಿ ಈ ಪರಿಸರದಲ್ಲಿ ನರಿ, ಮೊಲ, ಕರಡಿ, ಕಾಡುಹಂದಿ, ಉಡ, ಬಾರುಬೆಕ್ಕು ಕಂಡು ಬರುತ್ತದೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾಗಿ ಹಸು, ಎತ್ತು, ಮೇಕೆ, ಕುರಿ, ಕೋಳಿಗಳನ್ನು ಸಾಕುತ್ತಾರೆ.

ಇಲ್ಲಿನ ಬಿಸಿಲು ಸರಾಸರಿ ೩೯–೪೦ಂ ಸೆಂ. ಇದ್ದು, ಚಳಿ ೧೨ಂ ಸೆಂ. ಇರುತ್ತದೆ. ವಾರ್ಷಿಕ ಸರಾಸರಿ ೫೮೦ ಮಿ.ಮೀ. ಮಳೆ ಬೀಳುತ್ತದೆ. ಬದಿಗೆ ಕೆರೆ ಇದ್ದರೂ ತುಂಬುವುದು ಅಪರೂಪ. ಹಾಗಾಗಿ ಈ ಪರಿಸರದಲ್ಲಿ ರೈತರು ೭೨

ಬೋರ್‌ವೆಲ್ ಕೊರೆಸಿ, ಕೃಷಿ ಬದುಕಿಗೆ ಆಶ್ರಯಧಾತರಾಗಿದ್ದಾರೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸೆಲಾಗುತ್ತಿದೆ. ೮ ಸಣ್ಣ ಟ್ಯಾಂಕ್‌ಗಳು ಇದ್ದು, ಎರಡು ಕೈ ಪಂಪುಗಳಿವೆ. ವಾಣಿಜ್ಯ ತೆರಿಗೆ ಅಧಿಕಾರಿ ಡಿ.ಡಿ. ನಾಯಕ್, ಅಮೇರಿದಲ್ಲಿ ನೆಲೆಸಿರುವ ವೈದ್ಯ ಡಾ॥ ವೈ.ಕೆ. ರಾಮಯ್ಯ, ಅಧ್ಯಾಪಕರಾದ ಬಾಬು, ಸೇರಿದಂತೆ ವಕೀಲರೂ, ಇಂಜಿನಿಯರ್ ಸೇರಿ ೧೦ ಜನ ನೌಕರರು ಈ ಗ್ರಾಮದಲ್ಲಿದ್ದಾರೆ. ಮಹಿಳೆಯರು ಗೃಹ ಕೈಗಾರಿಕೆಯಾಗಿ ಬೀಡಿ ಕಟ್ಟುವುದು, ಊಟದ ಎಲೆ ತಯಾರಿಕೆ ಮಾಡುತ್ತಾರೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿ ಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದ್ದು, ಕುಂಚಿಟಿಗ, ನಾಯಕ, ಕುಂಬಾರ, ಹಳ್ಳಿಕಾರ, ಅಕ್ಕಸಾಲಿಗ, ಈಡಿಗ, ಕಮ್ಮಾರ ಇವು ಸಣ್ಣ ಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದೆ. ಇಲ್ಲಿನ ಒಟ್ಟು ೨೬೮ ಮನೆಗಳಲ್ಲಿ ಕಲ್ಲಿನ, ಕಾಂಕ್ರೀಟ್, ಹೆಂಚಿನ ಹಾಗೂ ಶೀಟಿನ ಮತ್ತು ೪ ಗುಡಿಸಲು ಮನೆಗಳೂ ಸೇರಿವೆ. ೧೪೪೬ ಜನಸಂಖ್ಯೆ ಹೊಂದಿರುವ ಇಲ್ಲಿನ ಸಮುದಾಯದಲ್ಲಿ ೧೫೫ ಕುಟಂಬಗಳು ಶೌಚಾಲಯದ ಬಳಕೆ ಮಾಡುತ್ತಾರೆ. ೩೮ ಮನೆಗಳಲ್ಲಿ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು, ರೊಟ್ಟಿ, ಅಂಬಲಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನಗಳು. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿ, ಆಧುನಿಕ ವಾಹನವಾದ ಟ್ರ್ಯಕ್ಟರ್, ಟೆಂಪೋ, ಆಟೋ ಬಳಕೆಯಲ್ಲಿದೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ತೊಗರಿ, ಹುರುಳಿ, ಅಲಸಂದಿ ಆಹಾರ ಬೆಳೆಗಳಾಗಿವೆ. ತೋಟಗಾರಿಕೆ ಬೆಳೆಗಳಾಗಿ ತೆಂಗು, ಅಡಿಕೆ, ಸೂರ್ಯಕಾಂತಿ ಬೆಳೆಗಳಿವೆ. ಒಂದು ಹಾಲಿನ ಡೈರಿ ಇದ್ದು, ಸರಾಸರಿ ೨೫೦ ಲೀಟರ್ ಹಾಲು ಸಂಗ್ರಹವಾ ಗುತ್ತದೆ. ಶೇಂಗಾ, ಹುಣಸೆಹಣ್ಣು ವ್ಯಾಪಾರಿ ಬೆಳೆಗಳಾಗಿವೆ. ಕುರಿ ವ್ಯಾಪಾರವೂ ಇದೆ. ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಾಗಿದ್ದು, ಗ್ರಾಮ ಪಂಚಾಯಿತಿ ಕ್ಷೇತ್ರವೂ ಆಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಒಂದು ಅಂಚೆ ಕಛೇರಿ ಇದೆ.

ಆರು ಸ್ತ್ರೀ ಶಕ್ತಿ ಸ್ವಸಹಕಾರ ಸಂಘಗಳು, ೩ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳು ಇವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಅಂಬೇಡ್ಕರ್ ಪ್ರೌಢಶಾಲೆಗಳಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕ ಸೌಲಭ್ಯ ಗಳಿವೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೦.೪ ರಷ್ಟು ಆಗಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸೌಲಭ್ಯಗಳಾದ ಸಮುದಾಯ ಸೌಲಭ್ಯದ ಫಲಾನುಭವಿಗಳಿದ್ದಾರೆ. ಇಂದಿರಾ ಆವಾಸ್, ಆಶ್ರಯ, ಜನತಾ ವಸತಿ ಯೋಜನೆಯ ಫಲಾನುಭವಿಗಳೂ ಇದ್ದಾರೆ. ಉಚಿತ ಭಾಗ್ಯಜ್ಯೋತಿ ಯೋಜನೆಯ ಸೌಲಭ್ಯ ಪಡೆದ ಕುಟುಂಬ ಗಳಿವೆ. ಗ್ರಾಮದಲ್ಲಿ ೩ ಟೀ ಅಂಗಡಿ, ೯ ಪೆಟ್ಟಿಗೆ ಅಂಗಡಿಗಳಿವೆ. ಮಾರಮ್ಮ, ಬಸವಣ್ಣ, ತಿಮ್ಮಪ್ಪ, ಸಿದ್ದಪ್ಪ, ಭೂತಪ್ಪ ಹಾಗೂ ಮುತ್ತುರಾಯನ ಪೌಳಿಗಳಿವೆ. ಮಾರಮ್ಮನ ಊರಹಬ್ಬವನ್ನು ಮಾಡಿ ಬಾನ, ಆರತಿ, ಬ್ಯಾಟ ಮಾಡುವ ಹರಕೆ ಸಂಪ್ರದಾಯವಿದೆ. ಯುಗಾದಿ, ಶಿವರಾತ್ರಿ, ಮಹಾನವಮಿ, ದೀಪಾವಳಿ ಹಾಗೂ ಗೌರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕುಂತೆಮ್ಮ-ಗೌರಮ್ಮ ಹಬ್ಬಗಳನ್ನು ಹೆಣ್ಣು ಮಕ್ಕಳು ಮುತುವರ್ಜಿಯಿಂದ ಆಚರಿಸುವುದು ರೂಢಿಯಲ್ಲಿದೆ. ಗ್ರಾಮದಲ್ಲಿ ಶ್ರೀರಾಮಯ್ಯ, ಚಿಕ್ಕಣ್ಣ, ಉತ್ತಮ ರಂಗ ಕಲಾವಿದರು. ಶ್ರೀ ರಾಮಯ್ಯ ಪುರಾಣ ಕಾವ್ಯಗಳನ್ನು ಕಂಠಪಾಠ ಮಾಡಿ, ಶ್ರಾವಣ ಮಾಸದಲ್ಲಿ ವಾಚಿಸುತ್ತಿದ್ದ ಅಪರೂಪದ ಪಂಡಿತರಾಗಿದ್ದರು. ೭ ಜನ ಸರ್ಕಾರಿ ನೌಕರರಿದ್ದಾರೆ.

ಡಾ.ವೈ.ಕೆ. ರಾಮಯ್ಯ ಪ್ರಸ್ತುತ ಅಮೇರಿಕದಲ್ಲಿದ್ದು, ಗ್ರಾಮೀಣ, ಬಡ, ಅರ್ಹ ವಿದ್ಯಾರ್ಥಿಗಳಿಗೆ ಪದವಿ ಹಂತದಲ್ಲಿ ಸರಾಸರಿ ೨೦೦೦ ರೂ ವಿದ್ಯಾರ್ಥಿ ಪ್ರತಿಭಾ ವೇತನವನ್ನು ಯಂಜಲಗೆರೆ ಅಂಗಡಿ ಕೆಂಚಪ್ಪ ಸ್ಮಾರಕವಾಗಿ ಕಳೆದ ೧೦ ವರ್ಷಗಳಿಂದಲೂ ನೀಡುತ್ತಾ ಬರುತ್ತಿರುವುದು ಈ ಗ್ರಾಮದ ವಿಶೇಷವಾಗಿದೆ. ದ್ವಾರನಕುಂಟೆ, ಚಂಗಾವರ, ಹುಲಿಕುಂಟೆ, ಪಟ್ಟನಾಯಕನಹಳ್ಳಿ ಮಾರ್ಗವಾಗಿ ರಸ್ತೆ ಬಸ್ ಸಂಚಾರವಿದೆ. ಶಿಕ್ಷಕ ಮೂಡಲಗಿರಿಯಪ್ಪನವರು ಶನಿಪುರಾಣ ಪುಸ್ತಕ ಪ್ರಕಟಿಸಿದ್ದಾರೆ. ಕಥಾ ಪಾರಾಯಣದಲ್ಲಿ ಹೆಸರು ಮಾಡಿದ್ದಾರೆ.

## ಯಂಜಲಗೆರೆ ಗೊಲ್ಲರಹಟ್ಟಿ

ಯಂಜಲಗೆರೆ ಗೊಲ್ಲರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಇದು ಯಂಜಲಗೆರೆಯ ಉಪಗ್ರಾಮವಾಗಿದೆ. ಯಂಜಲಗೆರೆಗೆ ಸಮೀಪದಲ್ಲಿದ್ದು, ಅದರ ಉಪಗ್ರಾಮವಾಗಿ ಕಾಡುಗೊಲ್ಲರು ವಸತಿ ನಿರ್ಮಿಸಿಕೊಂಡಿರುವುದರಿಂದ ಯಂಜಲಗೆರೆ ಗೊಲ್ಲರಹಟ್ಟಿ ಎಂದು ಕರೆಯುತ್ತಾರೆ.

ಇದರ ಭೌಗೋಳಿಕ ವಿಸ್ತೀರ್ಣ ವ್ಯಾಪ್ತಿ ಮುಖ್ಯ ಗ್ರಾಮ ಕರೇಕಲ್ಲು ಹಟ್ಟಿಯ ೩೨೩.೦೩ ಹೆಕ್ಟೇರ್ ಹೊಂದಿದೆ. ಕೆಂಪು

ಮಿಶ್ರಿತ ಮರಳು ಮಣ್ಣಿನಿಂದ ಕೂಡಿದ್ದು, ಶೇಂಗಾ ಬೆಳೆಗೆ ಪ್ರಶಸ್ತವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ತೋಳ, ಉಡ, ಕಾಡುಬೆಕ್ಕು, ಚಿರತೆ ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸುಗಳನ್ನು ಸಾಕಿದ್ದಾರೆ. ನಾಯಿ, ಬೆಕ್ಕು, ಇತರ ಕಾಡು ಪ್ರಾಣಿಗಳು ಇವೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಬಾವುಲಿ, ಕಾಗೆಪಿಳ್ಳೆ, ಕಾಗೆ, ಬೆಳವ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಗಿರಿರಾಜ ಕೋಳಿ ಹಾಗೂ ನಾಟಿ ಕೋಳಿಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ಶೇ. ೫೮೦ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೯–೪೦ಂ ಸೆಂ.ರಷ್ಟು ಇದ್ದು, ಚಳಿಯು ೯–೧೧ಂ ಸೆಂ. ಇರುತ್ತದೆ. ಈ ಗ್ರಾಮದಲ್ಲಿ ೫ ಕೊಳವೆ ಬಾವಿಗಳಿದ್ದು, ಕೃಷಿ ಮೂಲಕ್ಕೆ ಬಳಕೆಯಾಗುತ್ತದೆ. ಕೃಷಿ ಇಲ್ಲಿನ ಮುಖ್ಯ ಕಸುಬು. ಕುರಿ, ಮೇಕೆ, ಸಾಕಾಣಿಕೆ ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕಾಡುಗೊಲ್ಲರು ಮಾತ್ರ ವಾಸಿಸುತ್ತಿದ್ದು, ಇಲ್ಲಿನ ಮಾತೃ ಭಾಷೆ ಕನ್ನಡವಾಗಿದೆ. ವಿವಿಧ ಪ್ರಕಾರ ೩೯ ಮನೆಗಳಿದ್ದು, ಅವು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ, ಆರು ಗುಡಿಸಲು ಮನೆಗಳಿದ್ದು ಇಲ್ಲಿ ಜನತಾ, ಇಂದಿರಾ ಆವಾಸ್ ಯೋಜನೆಯ ೯ ಫಲಾನುಭವಿಗಳಿದ್ದಾರೆ. ಯಾರ ಮನೆಗಳಲ್ಲೂ ಶೌಚಾಲಯದ ವ್ಯವಸ್ಥೆ ಇಲ್ಲ. ಎಲ್ಲರೂ ಬಯಲನ್ನೇ ಅವಲಂಬಿಸಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಇಲ್ಲಿನ ಮುಖ್ಯ ಬೆಳೆ ಶೇಂಗಾ, ಉಪಬೆಳೆಗಳಾಗಿ ರಾಗಿ, ತೊಗರಿ, ಹುರುಳಿ, ಜೋಳ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಗಳಾಗಿ ತೆಂಗು, ಅಡಿಕೆ, ಹತ್ತಿ ಬೆಳೆಯುತ್ತಾರೆ. ಮುಖ್ಯ ವ್ಯಾಪಾರ ಕುರಿ ವ್ಯಾಪಾರ, ಶೇಂಗಾ, ಹುಣಸೆ ಹಣ್ಣು ಆಗಿದೆ. ಆಡಳಿತಾತ್ಮಕವಾಗಿ ಸಿರಾ ವಿಧಾನಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರವಾಗಿದೆ. ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳನ್ನು ಹೊಂದಿದೆ.

೨ ಸ್ತ್ರೀ ಶಕ್ತಿ ಸಂಘಗಳಿದ್ದು, ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ಜ್ವರ, ಕೆಮ್ಮು, ಹೊಟ್ಟೆನೋವು ಸಾಮಾನ್ಯ ಕಾಯಿಲೆಗಳು. ಸ್ಥಳೀಯ ಆರೋಗ್ಯ ಕಾರ್ಯಕರ್ತರುಗಳು ಈ ಗ್ರಾಮಕ್ಕೆ ಭೇಟಿ ನೀಡಿ ಮಾತ್ರೆ ವಿತರಿಸುತ್ತಾರೆ. ಹೆಚ್ಚಿನ ಚಿಕಿತ್ಸೆಗೆ ಪಟ್ಟನಾಯಕನಹಳ್ಳಿಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಚಿಲ್ಲರೆ ಅಂಗಡಿ ಇದೆ. ಭೂತಪ್ಪನ ಪೌಳಿ ಇದೆ. ಮಾರ್ಚಿ ತಿಂಗಳಲ್ಲಿ ಕರಿಯಮ್ಮನಿಗೆ ಆರತಿ, ಬಾನ, ಬ್ಯಾಟೆಯ ಸಂಪ್ರದಾಯಗಳಿದ್ದು ಊರ ಹಬ್ಬದ ಮಾದರಿಯಲ್ಲಿ ಆಚರಿಸುತ್ತಾರೆ. ಉಳಿದಂತೆ ಯುಗಾದಿ, ದಸರಾ, ಗೌರಿಗಣೇಶ, ದೀಪಾವಳಿ, ಕುಂತಮ್ಮ–ಗೌರಮ್ಮನ ಹಬ್ಬಗಳನ್ನು ವಿಶೇಷವಾಗಿ ಆಚರಿಸುವುದು ರೂಢಿಯಲ್ಲಿದೆ. ದಾಸನಕುಂಟೆ, ಹುಲಿಕುಂಟೆ, ಚಂಗಾವರ ಮಾರ್ಗ ಹಾಗೂ ಪಟ್ಟನಾಯಕನಹಳ್ಳಿ ಮಾರ್ಗವಾಗಿ ಬಸ್ ಸಂಪರ್ಕವಿದೆ.

## ಯಲದಬಾಗಿ

ಯಲದಬಾಗಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೦ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೩೩೫.೨೧ ಹೆಕ್ಟೇರ್ ಇದೆ. ಈ ಗ್ರಾಮಕ್ಕೆ ಉಪ ಗ್ರಾಮಗಳಾಗಿ ಕುಂಟೇಗೌಡನಹಳ್ಳಿ , ಹಾವಿನಾಳು, ಹಂಡೇಚಿಕ್ಕನಹಳ್ಳಿ, ನವಣೇ ಬೋರನಹಳ್ಳಿ, ಹಕ್ಕಿಪಿಕ್ಕರ ಕಾಲೋನಿ, ಹಂಡೇಚಿಕ್ಕನಹಳ್ಳಿ ಗೊಲ್ಲರಹಟ್ಟಿ ಕಾಲೋನಿಗಳು ಮಜರೆ ಗ್ರಾಮಗಳಾಗಿವೆ.

ಕೆಂಪು–ಬಿಳಿ ಕರಲು ಮಿಶ್ರಿತ ಮರಳು ಮಣ್ಣು ಹೊಂದಿರುವ ಈ ಗ್ರಾಮಕ್ಕೆ ಒಂದು ಕೆರೆಯಿದೆ. ಕುರುಚಲು ಗಿಡ, ಪೊದೆ, ಮರ, ಹಳ್ಳ, ದಿಣ್ಣೆ ಹೊಂದಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಬಿಸಿಲು ನಾಡಾದ ಇಲ್ಲಿ ವಾರ್ಷಿಕ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ೬೫ ಕೊಳವೆ ಬಾವಿಗಳಿದ್ದು ಕೃಷಿಗೆ ವರದಾನವಾಗಿವೆ. ಕುಡಿಯುವುದಕ್ಕೆ ಗ್ರಾಮಪಂಚಾಯ್ತಿ ವತಿಯಿಂದ ಕೊಳವೆ ಬಾವಿಯ ಮೂಲಕ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೮ ಸಿಸ್ಟರ್ನ್‌ಗಳಿದ್ದು ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗ, ವೀರಶೈವ, ಕುಂಬಾರ, ಕ್ರಿಶ್ಚಿಯನ್, ನಾಯಕ, ಬ್ರಾಹ್ಮಣ ಸಮುದಾಯಗಳು ಸಣ್ಣ ಸಮುದಾಯವಾಗಿವೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ ಗುಡಿಸಲು ಸೇರಿ ಒಟ್ಟು ೨೧೩ ಮನೆಗಳಿವೆ. ೩೨ ಮನೆಗಳಲ್ಲಿ

ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ದೀಪದ ಉಚಿತ ಫಲಾನುಭವಿಗಳಿದ್ದಾರೆ. ಒಟ್ಟು ೪೫೩ ಜನಸಂಖ್ಯೆ ಹೊಂದಿರುವ ಇಲ್ಲಿನ ೮೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಅಲಸಂದೆ, ತೊಗರಿ, ಹುರುಳಿ ಆಹಾರ ಬೆಳೆಗಳಾಗಿವೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ ಬೆಳೆಯುತ್ತಾರೆ. ಶೇಂಗಾ, ತೆಂಗು, ಅಡಿಕೆ, ಸೂರ್ಯಕಾಂತಿ, ಹೊಂಗೆಬೀಜ ವಾಣಿಜ್ಯ ಬೆಳೆಗಳಾಗಿವೆ. ಉಪನ್ಯಾಸಕ, ಸಾಹಿತಿ ಯಲದಬಾಗಿ ಚಿಕ್ಕರಂಗೇಗೌಡ, ವಕೀಲರಾದ ಬಸವರಾಜು, ರವಿ, ಇಂಜಿನಿಯರ್ ದೇವರಾಜು ಸೇರಿದಂತೆ ೧೦ ಜನ ಸರ್ಕಾರಿ ನೌಕರರಿದ್ದಾರೆ. ಬೀಡಿ ಸುತ್ತುವುದು, ಊಟದ ಎಲೆ ಕಟ್ಟುವುದು ಗ್ರಾಮದ ಉಪಕಸುಬಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ, ಸೀಬಿ ತಾಲ್ಲೂಕು ಪಂಚಾಯ್ತಿ, ಸೀಬಿ ಅಗ್ರಹಾರ ಗ್ರಾಮಪಂಚಾಯ್ತಿ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿರುವ ಈ ಗ್ರಾಮದಲ್ಲಿ ಅಂಚೆ ಕಛೇರಿ, ಗ್ರಾಮಪಂಚಾಯ್ತಿ ಕಾರ್ಯಾಲಯ, ಹಾಲಿನ ಸಹಕಾರಿ ಸಂಘಗಳಿವೆ. ೪ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಆರ್ಥಿಕ ಪ್ರಗತಿಗೆ ಶ್ರಮಿಸುತ್ತಿವೆ. ಅಂಗನವಾಡಿ ಕೇಂದ್ರದಲ್ಲಿ ೨೯ ಮಕ್ಕಳು, ಶಾಲೆಯಲ್ಲಿ ೭೬ ಮಕ್ಕಳು ೪ ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕಾಂಪೌಂಡ್, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೦% ಆಗಿದೆ. ೫೦% ಮಹಿಳೆಯರು ಮತ್ತು ೭೦% ಪುರುಷರು ಸಾಕ್ಷರರಾಗಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಟೀ ಅಂಗಡಿ, ೬ ಪೆಟ್ಟಿಗೆ ಕಿರಾಣಿ ಸಾಮಾನಿನ ಅಂಗಡಿಗಳಿವೆ. ಗ್ರಾಮದಲ್ಲಿ ೨ ವೀರಗಲ್ಲು, ಮಾಸ್ತಿಗಲ್ಲುಗಳಿದ್ದು ೧೨ನೇ ಶತಮಾನದ ಕಾಲದ ವೀರನ ಹೋರಾಟ, ನಂತರ ಮರಣ ಹೊಂದಿ ದೇವಲೋಕದ ಪಯಣದ ಚಿತ್ರಗಳನ್ನು ಚಿತ್ರಿಸಲಾಗಿದೆ. ಗ್ರಾಮದಲ್ಲಿ ಕರಿಗಲ್ಲು, ಅರಳೀಕಟ್ಟೆ, ಕೋಟೆಯ ಅವಶೇಷ ಕಂಡುಬರುತ್ತದೆ. ಈಶ್ವರ, ಕಂಬದ ನರಸಿಂಹ, ಓಬಳನರಸಿಂಹ, ಕೊಲ್ಲಾಪುರದಮ್ಮನ ಪೌಳಿಗಳಿವೆ. ಮಾರಮ್ಮ, ಕೊಲ್ಲಾಪುರದಮ್ಮನ ಆರತಿ, ಬಾನ, ಬ್ಯಾಟೆ ನಡೆಸಿ ಊರಹಬ್ಬ ಆಚರಿಸುವ ಸಂಪ್ರದಾಯವಿದೆ.

ಹಿರಿಯ ಪತ್ರಕರ್ತ ಹಾಗೂ ಲೇಖಕರೂ ಆಗಿರುವ ವೆಂಕಟನಾರಾಯಣ ಇದೇ ಗ್ರಾಮದವರಾಗಿದ್ದು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಗೌರವಕ್ಕೆ ಪಾತ್ರರಾಗಿದ್ದಾರೆ.

## ಯರದಕಟ್ಟೆ

ಯರದಕಟ್ಟೆ ಸಿರಾ ತಾಲ್ಲೂಕು ಕೇಂದ್ರದಿಂದ ವಾಯುವ್ಯ ದಿಕ್ಕಿನಲ್ಲಿದೆ. ಹಾಗೂ ಸಿರಾ–ಬುಕ್ಕಾಪಟ್ಟಣ–ತಾವರೆಕೆರೆ ರಸ್ತೆಯಲ್ಲಿ ಬುಕ್ಕಾಪಟ್ಟಣದಿಂದದಿಂದ ೭ ಕಿ.ಮೀ. ದೂರದಲ್ಲಿದ್ದು, ಸಿರಾದಿಂದ ೨೮ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಕಂದಾಯ ಗ್ರಾಮವಾಗಿದೆ. ಈ ಗ್ರಾಮದ ಹತ್ತಿರ ಯರಕವನ್ನು ಕುಲುಮೆ ಮೂಲಕ ತಯಾರಿಸುತ್ತಿದ್ದರು. ಹಾಗೂ ಯರಕ (ಕಬ್ಬಿಣ)ದ ಕುಲುಮೆಗೆ ಪ್ರಸಿದ್ಧವಾದ ಕಾರಣದಿಂದ ಯರದ ಕಟ್ಟೆ ನಂತರ ಯರದ ಕಟ್ಟೆಯಾಗಿ ರೂಪಾಂತರವಾಗಿದೆ. ಚಿಕ್ಕದಾದ ಕಟ್ಟೆಯಿತ್ತು. ಈ ಎರಡರ ಯರದಕಟ್ಟೆ ಯಾಯಿತೆಂದು ಗ್ರಾಮಸ್ಥರು ತಿಳಿಸುತ್ತಾರೆ.

ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೫೦.೧೬ ಹೆಕ್ಟೇರ್‌ಗಳಾಗಿವೆ. ಗ್ರಾಮಕ್ಕೆ ಸೇರ್ಪಡೆಯಾಗಿರುವ ಗ್ರಾಮಗಳೆಂದರೆ ಚಿನ್ನಪ್ಪನ ಹಟ್ಟಿ ಮತ್ತು ವಡ್ಡರಹಟ್ಟಿಯಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದು, ಈ ಗ್ರಾಮದಲ್ಲಿ ಗೋಮಾಳ ೧೫೦ ಹೆಕ್ಟೇರ್ ಪ್ರದೇಶದಲ್ಲಿದೆ. ಇಲ್ಲಿನ ವಾರ್ಷಿಕ ಮಳೆಯ ಸರಾಸರಿ ೪೫೮ ಮಿ.ಮೀ. ಸರಾಸರಿ ಮಳೆಯಾಗುತ್ತದೆ. ಬಿಸಿಲಿನ ಉಷ್ಣಾಂಶ ೩೮ಂ ಸೆಂ. ಇದ್ದು, ಚಳಿಯು ೧೨ಂ ಸೆಂ. ಇರುತ್ತದೆ. ಗ್ರಾಮದಲ್ಲಿ ೪೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿ ಇದ್ದು, ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ಕೋಳಿಗಳು ಕಂಡು ಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಕೋಗಿಲೆ, ಹದ್ದು, ಗೊರವಂಕ, ಗೂಬೆ ಕಂಡು ಬರುತ್ತವೆ.

ಈ ಗ್ರಾಮದಲ್ಲಿ ಒಟ್ಟು ೧೫೦ ಮನೆಗಳಿದ್ದು, ೬೯೮ ಜನಸಂಖ್ಯೆಯನ್ನು ಹೊಂದಿದೆ. ಮತ್ತು ಕುಂಚಿಟಿಗ , ಕುಂಬಾರ,

ಬೋವಿ, ನಾಯಕ, ಬಣಜಿಗ, ಮುಸ್ಲಿಂರ ಮನೆಗಳಿವೆ. ಕನ್ನಡ, ಉರ್ದು ಮಾತನಾಡುವ ಜನರಿದ್ದಾರೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ವಿಶೇಷವಾಗಿ ಬಾಡೂಟ, ಪಾಯಸ ಮತ್ತು ಹೋಳಿಗ ತಿನಿಸುಗಳಾಗಿವೆ. ಇಲ್ಲಿ ಟ್ರ್ಯಕ್ಟರ್ ಮತ್ತು ದ್ವಿಚಕ್ರವಾಹನಗಳು ಕಚ್ಚಾ ರಸ್ತೆಯನ್ನು ಹೊಂದಿದೆ. ಗ್ರಾಮದಲ್ಲಿ ಕಲ್ಲಿನ, ಹೆಂಚಿನ, ಶೀಟಿನ ಮನೆಗಳು ಇದ್ದು ಇವು ಆಶ್ರಯ, ಹಾಗೂ ಜನತಾ ವಸತಿ ಯೋಜನೆ ಫಲಾನುಭವಿಗಳಿದ್ದಾರೆ. ೧೪ ಮನೆಯಲ್ಲಿ ಶೌಚಾಲಯದ ವ್ಯವಸ್ಥೆ ಇದೆ. ರಸ್ತೆ ಮತ್ತು ಚರಂಡಿ ವ್ಯವಸ್ಥೆಯನ್ನು ಹೊಂದಿದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ ಪ್ರಮುಖ ಬೆಳೆಯಾಗಿದ್ದು, ಇದರೊಂದಿಗೆ ರಾಗಿ, ಭತ್ತ, ಜೋಳ, ದ್ವಿದಳ ಧಾನ್ಯಗಳು, ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆಯನ್ನು, ಹುಣಸೆ ಮರಗಳನ್ನು ಬೆಳೆಯುತ್ತಾರೆ. ಆಧುನಿಕ ಡೈರಿಯನ್ನು ಹೊಂದಿದ್ದು ಕೃಷಿಯೇತರ ಆರ್ಥಿಕ ಲಾಭಗಳಿಕೆ ಇದರ ಉದ್ದೇಶವಾಗಿದೆ. ಈ ಗ್ರಾಮದಲ್ಲಿ ಕಮ್ಮಾರ, ಕುಂಬಾರಿಕೆಯನ್ನು ಕಾಣಬಹುದಾಗಿದೆ. ಶಿಕ್ಷಣ, ಸಾರಿಗೆ, ಆರೋಗ್ಯ, ಕಂದಾಯ, ಸರ್ಕಾರಿ ಸೇವೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ೬ ಜನ ನೌಕರರಿದ್ದಾರೆ. ಖಾಸಗಿ ಉದ್ಯೋಗಿಗಳೂ ಇದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ನೇರಲಗುಡ್ಡ ತಾಲ್ಲೂಕು ಪಂಚಾಯ್ತಿ, ತಹಶೀಲ್ದಾರ್ ಕಛೇರಿ, ಬುಕ್ಕಾಪಟ್ಟಣ ಪೋಲೀಸ ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ. ನೇರಲಗುಡ್ಡ ಗ್ರಾಮ ಪಂಚಾಯ್ತಿ ಒಬ್ಬರು ಸದಸ್ಯರು. ಗ್ರಾಮ ನ್ಯಾಯ ಮಂಡಳಿಯನ್ನು ಒಳಗೊಂಡಿದೆ. ಗ್ರಾಮದಲ್ಲಿ ಸ್ತ್ರೀ ಶಕ್ತಿ ಸಂಘಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳನ್ನು ಕಾಣಬಹುದಾಗಿದೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಶೇ. ೫೦ ರಷ್ಟು ಸಾಕ್ಷರತೆಯನ್ನು ಹೊಂದಿದೆ. ಗ್ರಾಮದಲ್ಲಿ ಯಾವುದೇ ಆರೋಗ್ಯ ಕೇಂದ್ರಗಳನ್ನು ಒಳಗೊಂಡಿಲ್ಲ. ಆದರೆ ಕುಟುಂಬ ಕಲ್ಯಾಣ ಪದ್ಧತಿ ಅಳವಡಿಸಿಕೊಂಡಿದೆ. ಶಾಲೆಯಲ್ಲಿ ಬಿಸಿಯೂಟ. ಕ್ಷೀರಭಾಗ್ಯ, ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಈ ಗ್ರಾಮದಲ್ಲಿ ನಾಲ್ಕು ವೀರಗಲ್ಲುಗಳು ಮತ್ತು ಒಂದು ಶಾಸನವನ್ನು ಒಳಗೊಂಡಿದೆ. ಅಲ್ಲದೆ ೨ ಕರುಗಲ್ಲುಗಳಿವೆ. ಗ್ರಾಮದ ಉತ್ತರ ದಿಕ್ಕಿಗೆ ಸುಮಾರು ೨೦೦ ಮೀಟರ್ ದೂರದಲ್ಲಿ ರಾಮಚಂದ್ರಪ್ಪನ ಹೊಲದಲ್ಲಿ ವೀರಗಾರರ ಗುಡಿ ಇದೆ. ಇಲ್ಲಿ ಎರಡು ವೀರಗಲ್ಲುಗಳಿವೆ. ಐತಿಹಾಸಿಕ ನೆಲೆಗಳು ಕಂಡು ಬಂದಿದ್ದು ಸುತ್ತಲೂ ಗ್ರಾಮಗಳು ನಾಶವಾಗಿರುವುದು ಕಂಡು ಬಂದಿದ್ದು ಉಳಿದ ಅವಶೇಷಗಳನ್ನು ಕಾಣಬಹುದಾಗಿದೆ. ಯರದಕಟ್ಟೆ ಡಾ. ಎಂ.ಜಿ. ನಾಗರಾಜ್, ಡಾ.ಪಿ.ವಿ. ಕೃಷ್ಣಮೂರ್ತಿ ಸಂಪಾದಿಸಿದ್ದು (ಇತಿಹಾಸದರ್ಶ ಸಂ.೨೧) ಇದೊಂದು ಹಿರಿಯರ ಹೆಸರಲ್ಲಿ ಮಾನ್ಯ ಕೊಟ್ಟಂತೆ ಅಸ್ಪಷ್ಟ ವಿವರಗಳಿವೆ. ಹರತಿ ಸಂಸ್ಥಾನದ ಕೆಂಚಪ್ಪ ನಾಯಕನ ಉಲ್ಲೇಖವಿದೆ. ಇದರ ಕಾಲ ೧೬.೧೭ ಶ. ಆಗಿದೆ.

ಧಾರ್ಮಿಕ ಪರಂಪರೆಯಲ್ಲಿ ವೀರಾಂಜನೇಯ, ಕರಿಯಮ್ಮ ಭೂತಪ್ಪನ ದೇವಾಲಯಗಳಿವೆ. ಒಂದು ಮಸೀದಿ ಇದೆ. ಪ್ರತಿ ವರ್ಷವು ಗ್ರಾಮ ದೇವತೆ ಕರಿಯಮ್ಮನ ಜಾತ್ರೆಯನ್ನು ಮಾಡುವುದು ವಿಶೇಷವಾಗಿರುತ್ತದೆ.

ಯುಗಾದಿ, ದೀಪಾವಳಿ, ದಸರಾ, ಗೌರಿಗಣೇಶ, ಶಿವರಾತ್ರಿ, ಸಂಕ್ರಾಂತಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಯರಮಾದನಹಳ್ಳಿ

ಯರಮಾದನಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಸಿರಾದಿಂದ ೧೭ ಕಿ.ಮೀ. ದೂರದಲ್ಲಿರುವ ಈ ಹಳ್ಳಿಯು ಸಿರಾ–ಮೈಸೂರು ರಸ್ತೆಯಲ್ಲಿ ಬೆಂಚಿಗೇಟಿನಿಂದ ಬಲಭಾಗಕ್ಕೆ ೩ ಕಿ.ಮೀ. ದೂರದಲ್ಲಿದ್ದು, ಒಂದು ಕಂದಾಯ ಗ್ರಾಮವಾಗಿದೆ. ಈ ಹಳ್ಳಿಯ ಭೌಗೋಳಿಕ ವಿಸ್ತೀರ್ಣ ೧೨೪.೦೮. ಈ ಗ್ರಾಮಕ್ಕೆ ಗೊಲ್ಲರಹಟ್ಟಿ ಸೇರ್ಪಡೆಯಾಗಿದೆ.

ಬಯಲುನಾಡಿನಿಂದ ಕೂಡಿರುವ ಈ ಹಳ್ಳಿಯಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ಯಾವುದೇ ಆರಣ್ಯ ತೋಪುಗಳಾಗಲಿ ಇಲ್ಲ. ಇಲ್ಲಿನ ವಾರ್ಷಿಕ ಸರಾಸರಿ ಮಳೆ ೪೩೦ ಮಿ.ಮೀ. ವಾರ್ಷಿಕವಾಗಿ ಮಳೆ ೪೬೦.೧ ಮಿ.ಮೀ. ಬಿಸಿಲು ೩೯೦ ಸೆಂ. ಇದ್ದು, ಚಳಿ ೧೨೦ ಸೆಂ. ಸಹಜವಾಗಿರುತ್ತದೆ. ಈ ಹಳ್ಳಿಯಲ್ಲಿ ೬೮ ಕೊಳವೆ ಬಾವಿಗಳಿದ್ದು ಕೃಷಿಗೆ ನೀರನ್ನು ಒದಗಿಸುತ್ತಿವೆ. ಅಲ್ಲದೆ ಒಂದು ಹಳ್ಳ ಹಾಗೂ ಕಟ್ಟೆಯನ್ನು ಹೊಂದಿದೆ. ಕುಡಿಯುವ ನೀರಿನ ಬಳಕೆಗೆ ೦೩ ಕೈ ಪಂಪು ಮತ್ತು ಸಿಸ್ಟನ್‌ಗಳನ್ನು ಕಲ್ಪಿಸಲಾಗಿದೆ. ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ.

ಯರಮಾದನಹಳ್ಳಿಯಲ್ಲಿ ಒಟ್ಟು ೫೫ ಮನೆಗಳಿದ್ದು, ೬೭೭ ಜನ ಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಕುಂಚಿಟಿಗ, ನಾಯಕ, ವೀರಶೈವ, ಗೊಲ್ಲ, ವಿಶ್ವಕರ್ಮ, ಕಮ್ಮಾರ,

ಮಡಿವಾಳರ ಮನೆಗಳಿವೆ. ಇವರ ಭಾಷೆ ಕನ್ನಡ. ಮನೆಗಳು ಸರ್ಕಾರದ ವಸತಿ ಯೋಜನೆಗಳು ಆಶ್ರಯ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿದ್ದು, ೪೦ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಈ ಗ್ರಾಮದ ವಿಶೇಷ ಆಹಾರ ರಾಗಿ ಮುದ್ದೆ. ವಿಶೇಷ ಸಾಂದರ್ಭಿಕವಾಗಿ, ಬಾಡೂಟ, ಪಾಯಸ. ಸಾಂಪ್ರದಾಯಿಕವಾಗಿ ಎತ್ತಿನ ಬಂಡಿ ಇದೆ. ಆಧುನಿಕವಾಗಿ ಟ್ರ್ಯಕ್ಟರ್, ಮಿನಿಟೆಂಪೋ ಮತ್ತು ದ್ವಿ ಚಕ್ರ ವಾಹನಗಳ ಬಳಕೆಯಿದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ ಮುಖ್ಯ ಬೆಳೆ.ರಾಗಿ, ಜೋಳ, ದ್ವಿದಳಧಾನ್ಯಗಳನ್ನು ಬೆಳೆಯುತ್ತಾರೆ. ತೆಂಗು, ಅಡಿಕೆ, ಹುಣಸೆಹಣ್ಣು ಬೆಳೆಗಳನ್ನು ಬೆಳೆಯುತ್ತಾರೆ. ಮೇಲಿನ ಬೆಳೆಗಳೇ ವ್ಯಾಪಾರದ ಸರಕುಗಳಾಗಿವೆ. ಈ ಗ್ರಾಮದಲ್ಲಿ ಶಿಕ್ಷಣ, ಸಾರಿಗೆ ಇಲಾಖೆಗೆ ಸೇರಿದ ಸರ್ಕಾರಿ ನೌಕರರಿದ್ದಾರೆ. ಯರಮಾದನಹಳ್ಳಿಯು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಗೋಪಾಲದೇವರಹಳ್ಳಿ ತಾಲ್ಲೂಕು ಪಂಚಾಯಿತಿ, ಗೋಪಾಲದೇವರ ಗ್ರಾಮ ಪಂಚಾಯ್ತಿ ಕೇಂದ್ರವಾಗಿದೆ. ಈ ಗ್ರಾಮದಲ್ಲಿ ಇಬ್ಬರು ಪಂಚಾಯಿತಿ ಸದಸ್ಯರಿದ್ದಾರೆ. ಹಾಗೆಯೇ ಸಿರಾ ತಹಶೀಲ್ದಾರ್ ಕಛೇರಿ, ಕಳ್ಳಂಬೆಳ್ಳ ವಿದ್ಯುತ್ ಮತ್ತು ಪೋಲೀಸ್ ಠಾಣೆಯನ್ನು ಮತ್ತು ಬೆಂಚೆ ಅಂಚೆ ಕಛೇರಿಯನ್ನು ಹೊಂದಿದೆ. ಯಾವುದೇ ಬಸ್ ಸೌಲಭ್ಯವನ್ನು ಹೊಂದಿಲ್ಲ. ಈ ಹಳ್ಳಿಯು ಸಣ್ಣಪುಟ್ಟ ಜಗಳ, ಕಲಹಗಳನ್ನು ತೀರ್ಮಾನಿಸಿಕೊಳ್ಳಲು ಗ್ರಾಮನ್ಯಾಯ ಮಂಡಳಿಯನ್ನು ಹೊಂದಿದೆ.

ಈ ಹಳ್ಳಿಯೂ ಯಾವುದೇ ಬ್ಯಾಂಕಿಂಗ್ ಸೌಲಭ್ಯ ಹೊಂದಿಲ್ಲ. ೩ ಸ್ತ್ರೀ ಶಕ್ತಿ ಮತ್ತು ಎರಡು ಧರ್ಮಸ್ಥಳ ಸಂಘವನ್ನು ಹೊಂದಿರುವುದು ವಿಶೇಷವಾಗಿದ್ದು ಸಣ್ಣ ಪ್ರಮಾಣದ ಉಳಿತಾಯ ಮಾಡಿ ಇದರಿಂದ ಸೌಲ ಸೌಲಭ್ಯ ಪಡೆಯುತ್ತಿದೆ. ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಕಿರಿಯ ಪಾಠಶಾಲೆ ಇದೆ. ಗ್ರಾಮದ ಸಾಕ್ಷರತೆ ಶೇ. ೫೪.೮ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಹಾಗೆಯೇ ಈ ಗ್ರಾಮದಲ್ಲಿ ೦೮ ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಒಳಗೊಂಡಿದೆ. ಯಾವುದೇ ಐತಿಹಾಸಿಕ ನೆಲೆಯನ್ನು ಹೊಂದಿಲ್ಲದೇ ಇದ್ದರೂ ಅರಳಿಕಟ್ಟೆಯನ್ನು ಹೊಂದಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಮುಖ್ಯ ಹಬ್ಬಗಳನ್ನು ಆಚರಿಸುತ್ತಾರೆ. ಧಾರ್ಮಿಕ ಕೇಂದ್ರವಾಗಿ ಈ ಗ್ರಾಮದಲ್ಲಿ ಮೈಲಾರಲಿಂಗೇಶ್ವರ, ದುರ್ಗಮ್ಮ, ಆಂಜನೇಯ ದೇವಾಲಯಗಳಿವೆ. ದುರ್ಗಮ್ಮನಿಗೆ ವರ್ಷಕ್ಕೊಮ್ಮೆ ಜಾತ್ರೆಯನ್ನು ಮಾಡಿ ಆರತಿ, ಬಲಿ ನೀಡುವುದು ವಿಶೇಷವಾಗಿದೆ. ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಡುಗೆ ನೀಡದಿದ್ದರೂ ಸೋಬಾನೆ ಪದದಲ್ಲಿ ಹಳ್ಳಜ್ಜಿ, ಮಾರಜ್ಜಿ, ರಂಗಜ್ಜಿ, ಮಲ್ಲಕ್ಕರ ಸೋಬಾನೆ, ಜನಪದ ಗೀತೆಗಳಿಂದ ಸ್ಥಳೀಯವಾಗಿ ಹೆಸರಾಗಿದ್ದಾರೆ.

## ಯರಮಾದನಹಳ್ಳಿ ಗೊಲ್ಲರಹಟ್ಟಿ

ಯರಮಾದನಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಸಿರಾದಿಂದ ೧೭ ಕಿ.ಮೀ. ದೂರದಲ್ಲಿದೆ. ಈ ಹಳ್ಳಿಯು ಸಿರಾ-ಮೈಸೂರು ರಸ್ತೆಯಲ್ಲಿ ಬೆಂಚೆಗೇಟಿನಿಂದ ೨ ಕಿ.ಮೀ. ದೂರದಲ್ಲಿದ್ದು, ಯರಮಾದನ ಹಳ್ಳಿಗೆ ಒಂದು ಮಜರೆ ಗ್ರಾಮವಾಗಿದೆ. ಈ ಹಳ್ಳಿಯ ಭೌಗೋಳಿಕ ವಿಸ್ತೀರ್ಣ ೩೮ ಹೆಕ್ಟೇರ್ ಪ್ರದೇಶವಾಗಿದೆ.

ಬಯಲುನಾಡಿನಿಂದ ಕೂಡಿರುವ ಈ ಹಳ್ಳಿಯಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ಯಾವುದೇ ಆರಣ್ಯ ತೋಪುಗಳಾಗಲಿ ಇಲ್ಲ. ಇಲ್ಲಿನ ವಾರ್ಷಿಕ ಸರಾಸರಿ ಮಳೆ ೪೩೦ ಮಿ.ಮೀ. ವಾರ್ಷಿಕವಾಗಿ ಮಳೆ ೪೬೦.೧ ಮಿ.ಮೀ. ಬಿಸಿಲು ೩೯೦ ಸೆಂ. ಇದ್ದು, ಚಳಿ ೧೨೦ ಸೆಂ. ಸಹಜವಾಗಿರುತ್ತದೆ. ಈ ಹಳ್ಳಿಯಲ್ಲಿ ೨೦ ಕೊಳವೆ ಬಾವಿಗಳಿದ್ದು ಬಳಕೆಗೆ ೦೧ ಕೈ ಪಂಪು ಮತ್ತು ಸಿಸ್ಟನ್‌ಗಳನ್ನು ಕಲ್ಪಿಸಲಾಗಿದೆ. ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ.

ಯರಮಾದನಹಳ್ಳಿಯಲ್ಲಿ ಗೊಲ್ಲರಹಟ್ಟಿಯಲ್ಲಿ ಒಟ್ಟು ೪೬ ಮನೆಗಳಿದ್ದು, ೧೧೬ ಜನ ಸಂಖ್ಯೆಯನ್ನು ಹೊಂದಿದೆ. ಎಲ್ಲವೂ ಗೊಲ್ಲರ ಮನೆಗಳಾಗಿವೆ. ಇದರಲ್ಲಿ ೦೯ ಗುಡಿಸಲು ಮತ್ತು ೨೫ ಶೀಟಿನ ಮನೆಯನ್ನು ಕಂಡು ಬಂದಿದ್ದು, ಮನೆಗಳು ಸರ್ಕಾರದ ವಸತಿ ಯೋಜನೆಗಳು ಆಶ್ರಯ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳಿದ್ದಾರೆ.

ಈ ಗ್ರಾಮದ ವಿಶೇಷ ಆಹಾರ ರಾಗಿ ಮುದ್ದೆ, ಅನ್ನ. ವಿಶೇಷ ಸಾಂದರ್ಭಿಕವಾಗಿ, ಬಾಡೂಟ, ಪಾಯಸ, ಹೋಳಿಗೆ. ಸಾಂಪ್ರದಾಯಿಕವಾಗಿ ಎತ್ತಿನ ಬಂಡಿ ಇದೆ. ಆಧುನಿಕವಾಗಿ ಟ್ರ್ಯಕ್ಟರ್, ಮಿನಿಟೆಂಪೋ ಮತ್ತು ದ್ವಿ ಚಕ್ರ ವಾಹನಗಳ ಬಳಕೆಯಿದೆ. ಅಲ್ಲದೆ ಶಿಕ್ಷಣ ಇಲಾಖೆಯಲ್ಲಿ ಒಬ್ಬರು ನೌಕರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ ಮುಖ್ಯ ಬೆಳೆ.ರಾಗಿ, ಜೋಳ, ನವಣೆ, ಅಡಿಕೆ ಬೆಳೆಯುತ್ತಾರೆ. ತೆಂಗು, ಅಡಿಕೆ ಬೆಳೆಗಳನ್ನು ಬೆಳೆಯುತ್ತಾರೆ. ಮೇಲಿನ ಬೆಳೆಗಳೇ ವ್ಯಾಪಾರದ ಸರಕುಗಳಾಗಿವೆ.

ಯರಮಾದನಹಳ್ಳಿಯು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಗೋಪಾಲದೇವರಹಳ್ಳಿ ತಾಲ್ಲೂಕು ಪಂಚಾಯಿತಿ, ಗೋಪಾಲದೇವರ ಹಾಗೂ ತಹಶೀಲ್ದಾರ್ ಕಛೇರಿ, ಹೊಂದಿದ್ದು, ಸಿರಾ ಲೋಕೋಪಯೋಗಿ ಇಲಾಕೆ ಹಾಗೂ ಕಳ್ಳಂಬೆಳ್ಳ ವಿದ್ಯುತ್ ಮತ್ತು ಪೋಲೀಸ್ ಠಾಣೆಯನ್ನು ಗೋಪಾಲದೇವರ ಹಳ್ಳಿ ಗ್ರಾಮ ಪಂಚಾಯ್ತಿಯನ್ನು ಹೊಂದಿದ್ದು ಒಬ್ಬರು ಸದಸ್ಯರನ್ನು ಹೊಂದಿದೆ. ಅಲ್ಲದೆ ಬೆಂಚೆ ಅಂಚೆ ಕಛೇರಿಯನ್ನು ಹೊಂದಿದೆ. ಯಾವುದೇ ಖಾಸಗಿ ಮತ್ತು ಸರ್ಕಾರಿ ಬಸ್ ಸೌಲಭ್ಯವನ್ನು ಹೊಂದಿಲ್ಲ. ಈ ಹಳ್ಳಿಯು ಸಣ್ಣಪುಟ್ಟ ಜಗಳ, ಕಲಹಗಳನ್ನು ತೀರ್ಮಾನಿಸಿಕೊಳ್ಳಲು ಗ್ರಾಮನ್ಯಾಯ ಮಂಡಳಿಯನ್ನು ಹೊಂದಿದೆ. ಅಲ್ಲದೆ ಬಗೆ ಹರಿಯದ ಸಮಸ್ಯೆಗಳಿಗೆ ತಾಲ್ಲೂಕು ಮತ್ತು ನ್ಯಾಯಾಲಯಗಳಲ್ಲಿ ಬಗೆ ಹರಿಸಿಕೊಳ್ಳಲಾಗುತ್ತದೆ.

ಈ ಹಳ್ಳಿಯೂ ಯಾವುದೇ ಬ್ಯಾಂಕಿಂಗ್ ಸೌಲಭ್ಯ ಹೊಂದಿಲ್ಲ. ಆದರೆ ಆರ್ಥಿಕತೆಯಲ್ಲಿ ಸಣ್ಣ ಪ್ರಮಾಣದ ಉಳಿತಾಯಕ್ಕೆ ಒಂದು ಸ್ತ್ರೀ ಶಕ್ತಿ ಸಂಘವನ್ನು ನಿರ್ಮಿಸಿಕೊಂಡು ಅದರಿಂದ ಸಾಲಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ.

ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಇದರಲ್ಲಿ ೧೪ ಮಕ್ಕಳಿದ್ದು ಒಬ್ಬರು ಶಿಕ್ಷಕಿ ಮತ್ತು ಇನ್ನೊಬ್ಬರು ಸಹಾಯಕಿಯರನ್ನು ಹೊಂದಿ ಕನ್ನಡ ಮಾಧ್ಯಮದಲ್ಲಿದೆ. ಹಾಗೆಯೇ ಇಲ್ಲಿನ ಒಟ್ಟು ಸಾಕ್ಷರತೆಯ ಪ್ರಮಾಣ ಶೇ. ೫೦.೮ ರಷ್ಟಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ನೀಡಲಾಗುತ್ತಿದೆ.

ಈ ಗ್ರಾಮವು ಕುಟುಂಬ ಕಲ್ಯಾಣ ವ್ಯವಸ್ಥೆಯನ್ನು ಹೊಂದಿದ್ದು, ವಾರಕ್ಕೊಮ್ಮೆ ಆಶಾ ಕಾರ್ಯಕರ್ತೆಯರು ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಈ ಗ್ರಾಮದ ಮುಖ್ಯ ರೋಗಗಳು ಜ್ವರ, ಕೆಮ್ಮು, ಚಳಿ ಇತ್ಯಾದಿಗಳಾಗಿವೆ. ಅಲ್ಲದೇ ಪಶುಗಳಿಗೆ ಜುಂಜಪ್ಪನವರು ನಾಟಿ, ಔಷಧಿಯನ್ನು ನೀಡುತ್ತಾರೆ.

ಯರಮಾದನಹಳ್ಳಿ ಗೊಲ್ಲರಹಟ್ಟಿಯಲ್ಲಿ ಯಾವುದೇ ಐತಿಹಾಸಿಕವಾದ ನೆಲೆಗಳಲ್ಲಿದಿದ್ದರೂ ೨ ಕರುಗಲ್ಲು ಮತ್ತು ಒಂದು ಬೇವಿನ ಮತ್ತು ಅರಳಿಕಟ್ಟೆಗಳಿವೆ. ಹಾಗೆಯೇ ಧಾರ್ಮಿಕ ನೆಲೆಗಟ್ಟಿನಲ್ಲಿ ತಿಮ್ಮಪ್ಪ ಮತ್ತು ದುರ್ಗಮ್ಮ ದೇವಾಲಯಗಳಿವೆ. ಗ್ರಾಮದೇವತೆಗೆ ವರ್ಷಕ್ಕೊಮ್ಮೆ ಜಾತ್ರೆ ಮಾಡುತ್ತಾರೆ. ಆರತಿ ಮತ್ತು ಬಲಿ ನೀಡುವುದು ವಿಶೇಷವಾಗಿದೆ. ಬಿಜ್ಜಂಬಳ್ಳದ ಜುಂಜಪ್ಪನಿಗೆ ಹಾಲು ಮೀಸಲು ಕೊಡುವ ಪದ್ಧತಿ ಇದೆ.

ಈ ಗ್ರಾಮದಲ್ಲಿ ಯಾವುದೇ ಸಾಂಸ್ಕೃತಿಕ ಸಾಹಿತ್ಯವಿಲ್ಲದಿದ್ದರೂ ಕೋಲಾಟದಲ್ಲಿ ದಾಸಪ್ಪ ಮತ್ತು ಸಂಗಡಿಗರು, ಸೋಬಾನೆ ಪದಕಾರರು ರಾಮಕ್ಕಜ್ಜಿ, ಶಿವಕ್ಕರನ್ನು ಕಾಣಬಹುದು. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಮುಖ್ಯ ಹಬ್ಬಗಳನ್ನು ಆಚರಿಸುತ್ತಾರೆ.

## ರತ್ನಸಂದ್ರ

ರತ್ನಸಂದ್ರ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೦ ಕಿಮೀ ದೂರದಲ್ಲಿದೆ. ಸಿರಾ–ಮಧುಗಿರಿ ಜಿಲ್ಲಾ ಪಂಚಾಯ್ತಿ ಮುಖ್ಯ ರಸ್ತೆಯಲ್ಲಿ ಸಾಗಿ ಅರೇಹಳ್ಳಿ ಗೇಟಿನಿಂದ ಬಲಕ್ಕೆ ತಿರುಗಿ ಬ್ರಹ್ಮಸಂದ್ರ ಮಾರ್ಗವಾಗಿ ೨ ಕಿಮೀ ಕಚ್ಚಾರಸ್ತೆಯಲ್ಲಿ ಮುಂದೆ ನಡೆದರೆ ರತ್ನಸಂದ್ರ ಗ್ರಾಮ ಸಿಕ್ಕುತ್ತದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಗ್ರಾಮಪಂಚಾಯ್ತಿಯ ಕೇಂದ್ರವೂ ಆಗಿದೆ. ಇದೊಂದು ಪ್ರಾಚೀನ ಗ್ರಾಮ ಎಂದು ಹೇಳಲಾಗುತ್ತಿದ್ದು ಹಿಂದೆ ಇದಕ್ಕೆ ರತ್ನಪುರಿ, ರತ್ನಸಮುದ್ರ ಎಂದು ಕರೆಯುತ್ತಿದ್ದರೆಂದೂ ಈ ಗ್ರಾಮಕ್ಕೆ ಹೊಂದಿಕೊಂಡಂತೆ ಕೆರೆಯೊಂದು ನಿರ್ಮಾಣಾದಂದಿನಿಂದ ಕೆರೆಯ ಕಾರಣದಿಂದ ರತ್ನಸಂದ್ರವಾಗಿದೆ ಎಂದು ಗ್ರಾಮದ ನಿವೃತ್ತ ಪೋಸ್ಟ್‌ಮಾಸ್ಟರ್ ದ್ಯಾವಣ್ಣ ಅಭಿಪ್ರಾಯಪಡುತ್ತಾರೆ.

ಒಟ್ಟು ೬೮೮.೩೨ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು ಈ ಗ್ರಾಮಕ್ಕೆ ಯರಗುಂಟೆ, ಕದರೆ ಕಂಬನಹಳ್ಳಿ, ಕೆಂಪನಹಳ್ಳಿ, ಗೊಲ್ಲರಹಟ್ಟಿ ಈ ಉಪಗ್ರಾಮಗಳನ್ನು ಹೊಂದಿದೆ. ಎತ್ತರವೂ ಅಲ್ಲದೆ ತಗ್ಗೂ ಅಲ್ಲದ ಮಟ್ಟಸ್ಥ ಭೂಸ್ಥಳದಲ್ಲಿ ಗ್ರಾಮ ನಿರ್ಮಾಣವಾಗಿದ್ದು ಕೆಂಪು ಮರಳು, ಜೇಡಿಮಿಶ್ರಿತ ಮಣ್ಣನ್ನು ಹೊಂದಿದೆ. ಕುರುಚಲು ಗಿಡ, ಪೊದೆ, ಮರಗಳು ಈ ಪರಿಸರದಲ್ಲಿ ವ್ಯಾಪಕವಾಗಿವೆ. ತೋಟದ ಸಾಲು ಕಂಡುಬರುವುದರಿಂದ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಕಾಡುಹಂದಿ, ಉಡ, ಮುಂಗುಸಿ, ಕರಡಿ ಮೊದಲಾದ ಕಾಡುಪ್ರಾಣಿಗಳು ಕಂಡುಬರುತ್ತವೆ. ಸಾಕುಪ್ರಾಣಿಗಳಾಗಿ ರೈತಾಪಿ ಬದುಕಿಗೆ ಆಶ್ರಯವಾಗಿ ಕುರಿ, ಮೇಕೆ, ಹಸು, ಎತ್ತು, ಎಮ್ಮೆಗಳನ್ನು ಸಾಕುತ್ತಾರೆ. ಈ ಪರಿಸರದಲ್ಲಿ ಪಕ್ಷಿಗಳಾದ ಕೊಕ್ಕರೆ, ಗೂಬೆ, ಕಾಗೆ, ಗೊರವಂಕ, ಗಿಳಿ, ಕೌಜುಗ ಮೊದಲಾದವು ಕಂಡುಬಂದರೆ ಗ್ರಾಮದಲ್ಲಿ ಸಾಕುಪಕ್ಷಿಯಾಗಿ ಕೋಳಿಯನ್ನು ಸಾಕುತ್ತಾರೆ.

ಸರಾಸರಿ ವಾಡಿಕೆ ಮಳೆ ೪೫೬.೬೦ ಮಿಮೀ ಆಗಿದ್ದು ಉಷ್ಣಾಂಶ ೩೪ ಡಿಗ್ರಿ ಹಾಗೂ ಚಳಿ ೯.೫ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ರತ್ನಸಂದ್ರದ ದೊಡ್ಡ ಕೆರೆಯಿದ್ದು ೩೫೦ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ಕೆರೆಯ ನೀರನ್ನು ಕೃಷಿಗಾಗಿ ಒದಗಿಸುವ ಸಾಮರ್ಥ್ಯ ಹೊಂದಿದೆ. ನೀರಿನ ಮಟ್ಟ ೧೯.೧೦ ಅಡಿಗಳಷ್ಟು. ಆದರೂ ೨೩ ವರ್ಷಗಳಿಂದ ತುಂಬಿಲ್ಲ ಎಂಬ ಬೇಸರ ಇಲ್ಲಿನ

ಗ್ರಾಮಸ್ಥರಲ್ಲಿದೆ. ಕುಡಿಯುವ ನೀರಿಗಾಗಿ ೧೦ ಕೊಳವೆ ಬಾವಿಗಳನ್ನು ನಿರ್ಮಿಸಿ ೪೦ ನಲ್ಲಿಗಳ ಮೂಲಕ ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿ ನೀರನ್ನು ಸರಬರಾಜು ಮಾಡಲಾಗುತ್ತದೆ. ಒಂದು ಪ್ರಾಚೀನ ಬಾವಿಯಿದೆ.

ಆದಿಕರ್ನಾಟಕ ಜನಾಂಗ ಇಲ್ಲಿನ ದೊಡ್ಡ ಸಮುದಾಯವಾಗಿದ್ದು ಬಲಜಿಗ, ಉಪ್ಪಿನಕೊಳಗದ ಒಕ್ಕಲಿಗರು, ವೀರಶೈವರು, ಬ್ರಾಹ್ಮಣ, ಬೇಡರು ಹಾಗೂ ಕಡಿಮೆ ಸಂಖ್ಯೆಯಲ್ಲಿ ಕುಂಚಿಟಿಗರ ಕುಟುಂಬಗಳು, ಕುಂಬಾರರು, ಕಮ್ಮಾರರು ಸಣ್ಣ ಸಮುದಾಯವಾಗಿ ವಾಸಿಸುತ್ತವೆ. ಕನ್ನಡ ಈ ಗ್ರಾಮದ ಮಾತೃಭಾಷೆಯಾಗಿದೆ. ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ, ಮಣ್ಣಿನ ಮನೆಗಳಿವೆ. ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್, ಜನತಾ ವಸತಿ ಯೋಜನೆಯ ೨೯ ಫಲಾನುಭವಿಗಳು, ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ಪ್ರಯೋಜನ ಪಡೆದವರೂ ಇದ್ದಾರೆ.

ಗ್ರಾಮದಲ್ಲಿ ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ, ಚಿತ್ರಾನ್ನ, ಇಡ್ಲಿ ಇಲ್ಲಿನ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾಗಿ ಎತ್ತಿನ ಗಾಡಿ ಕಂಡುಬರುತ್ತದೆ. ಉಳಿದಂತೆ ಟ್ರ್ಯಕ್ಟರ್, ಟೆಂಪೋ, ಸ್ಕೂಟರ್ ಕಂಡುಬರುತ್ತವೆ. ರಾಗಿ, ಶೇಂಗಾ, ಅಲಸಂದೆ, ಹುರುಳಿ, ಅವರೆ ಮುಖ್ಯ ಆಹಾರ ಬೆಳೆಗಳು. ವಾಣಿಜ್ಯ ಬೆಳೆಯಾಗಿ ತೆಂಗು, ಅಡಿಕೆ, ಹುಣಸೆ ಹಾಗೂ ಸೂರ್ಯಕಾಂತಿ ಬೆಳೆಯುತ್ತಾರೆ. ೭ ಜನ ಸರ್ಕಾರಿ ನೌಕರರಿದ್ದು ವಾಣಿಜ್ಯ ತೆರಿಗೆ ಅಧಿಕಾರಿ ಹೇಮಂತ ಕುಮಾರ್ ಈ ಗ್ರಾಮದವರಾಗಿದ್ದರು. ಶಿಕ್ಷಕರು, ಕಂಡಕ್ಟರ್, ಅಂಚೆ ಇಲಾಖೆ, ಕಂದಾಯ ಇಲಾಖೆಯ ನೌಕರರಿದ್ದಾರೆ. ಶ್ರೀಹರ್ಷ ಉಪನ್ಯಾಸಕರಾಗಿದ್ದಾರೆ. ಪ್ರೊ॥ ಹನುಮಂತರಾಯಪ್ಪ ಸಿದ್ಧಗಂಗಾ ಮಹಿಳಾ ಕಾಲೇಜು ತುಮಕೂರಿನಲ್ಲಿ ಉಪನ್ಯಾಸಕರಾಗಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ರತ್ನಸಂದ್ರ ತಾಲ್ಲೂಕು ಪಂಚಾಯ್ತಿ ಕೇಂದ್ರವೂ ಆಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಜಿಲ್ಲಾ ರಸ್ತೆ, ಅರೆಹಳ್ಳಿ, ಮಧುಗಿರಿ ಮಾರ್ಗವಾಗಿ ತರೂರು, ಬ್ರಹ್ಮಸಂದ್ರ ಗೇಟ್ ಮೂಲಕ ತುಮಕೂರು–ಚಿತ್ರದುರ್ಗ ರ‍್ರಾ॥ಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುತ್ತದೆ.

ಹಾಲಿನ ಡೈರಿ, ಅಂಚೆ ಕಛೇರಿ, ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಹಾಗೂ ರಂಗನಾಥ ಪ್ರೌಢಶಾಲೆಗಳಿವೆ. ಒಟ್ಟು ೨೦ ಜನ ನೌಕರರು ಈ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಹೋಟೆಲ್, ೬ ಕಿರಾಣಿ ಅಂಗಡಿ, ತರಕಾರಿ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ.

ಗ್ರಾಮದಲ್ಲಿ ಎಲ್ಲಮ್ಮ ದೇವಿಯ ದೇವಾಲಯವಿದ್ದು ಚಿಕ್ಕೆಂಚೇಗೌಡರ ವಂಶದವರು ಕಟ್ಟಿಸಿದ್ದಾರೆ. ಗ್ರಾಮದಲ್ಲಿ ಶ್ರೀ ರಂಗನಾಥ ದೇವಸ್ಥಾನವಿದ್ದು ವಿಸ್ತಾರವಾದ ಪ್ರಾಂಗಣ, ಗೋಪುರ, ಅಂಗಳ, ವಿಮಾನ, ಸುಕನಾಸಿಗಳನ್ನು ಒಳಗೊಂಡು ಏಕಾದಶಿ ಸಂದರ್ಭದಲ್ಲಿ ಬೃಹತ್ ಜಾತ್ರೆ ನಡೆಯುತ್ತದೆ. ಒಂದು ವಾರದ ಕಾಲ ನಡೆಯುವ ಈ ಜಾತ್ರೆಯ ಕೊನೆಯಲ್ಲಿ ಅನ್ನ ಸಂತರ್ಪಣೆ ಇರುತ್ತದೆ. ಈ ದೇವಸ್ಥಾನಕ್ಕೆ ಸಂಬಂಧಿಸಿದಂತೆ ೨ ಶಾಸನಗಳಿದ್ದು ೧೪ನೇ ಶತಮಾನದಲ್ಲಿ ತಿಪ್ಪಯ್ಯನ ಮಗ ಲೋಕರಸನು ದೇವಸ್ಥಾನದಲ್ಲಿ ಸರ್ವೆ ಮಾಡಿದ ಹಾಗೂ ಇದೇ ಸಂದರ್ಭದ ಇನ್ನೊಂದು ಶಾಸನ ರಾಮರಾಜಯ್ಯ ಎಂಬುವನು ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದ ಸಂಗತಿ ತಿಳಿಯುತ್ತದೆ. ಈ ಎರಡೂ ಶಾಸನಗಳು ಇಲ್ಲಿನ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಸಂಬಂಧಿಸಿವೆ.

ಮಾರಮ್ಮ ಈ ಗ್ರಾಮದ ಗ್ರಾಮದೇವತೆಯಾಗಿದ್ದು ಆಷಾಢ ಮಾಸದಲ್ಲಿ ಗ್ರಾಮದ ಹಬ್ಬ ನಡೆಯುತ್ತದೆ. ಆ ಸಂದರ್ಭದಲ್ಲಿ ಬಾನ, ಆರತಿ, ಬ್ಯಾಟೆ ಏರ್ಪಡುತ್ತದೆ. ಒಂದು ಮಸೀದಿ ಇದೆ. ಚೌಡಪ್ಪ ಎಂಬ ಆದಿಕರ್ನಾಟಕ ಜನಾಂಗ ಹಿರಿಯ ಜನಪದ ಕಲಾವಿದರಿದ್ದು ಚಾರಿತ್ರಿಕ, ಹಾಸ್ಯಗೀತೆಗಳನ್ನು ಹಾಡುತ್ತಾರೆ. ಇವರು ಹಾಡಿರುವ ಗೀತೆಗಳನ್ನು ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿ, ಬಂಡಿ ಬಂದಾವು ಬಾಳೆವನದಾಗೆ ಜನಪದ ಗೀತ ಸಂಕಲನದಲ್ಲಿ ಪ್ರಕಟಿಸಲಾಗಿದೆ. ಈ ಗ್ರಾಮದಿಂದ ದಕ್ಷಿಣಕ್ಕೆ ದೊಡ್ಡಗೂಳ ಗ್ರಾಮಕ್ಕೆ ಹೋಗುವ ರತ್ನಸಂದ್ರ ಕೆರೆಯ ಏರಿಯ ಹಿಂಭಾಗದಲ್ಲಿ ಒಂದು ಮಾಸ್ತಿಕಲ್ಲು ಇದ್ದು ಅದು ವಿಜಯನಗರ ಕಾಲದ ಮೃದು, ಹಸಿರು ಬಣ್ಣದಿಂದ ಕೂಡಿದೆ. ಗ್ರಾಮದವರು ಪೂಜೆ ಸಲ್ಲಿಸುತ್ತಾರೆ. ದೊಡ್ಡಗೂಳ ರಸ್ತೆಯ ಕೆರೆಯ ಏರಿಯ ಹಿಂದೆ ಒಂದು ಕಲ್ಲು ಇದ್ದು ಅದನ್ನು ತರಿಮರದ ಕಲ್ಲು ಎಂದು ಕರೆಯುತ್ತಾರೆ. ರತ್ನಸಂದ್ರ–ದೊಡ್ಡಗೂಳದ ನಡುವೆ ವ್ಯಾಜ್ಯ ನಡೆದು ಈ ಎರಡೂ ಗ್ರಾಮಗಳ ನಡುವೆ ಮಾತು, ವ್ಯವಹಾರ ನಿಷೇಧಿಸಿದಂತೆ ತರಿಮರ ಕಡಿಯುವುದು ಎಂದು ಸಿರಾ ಸೀಮೆಯಲ್ಲಿ ಕರೆಯುತ್ತಾರೆ. ಜೊತೆಗೆ ಇದೇ ಗ್ರಾಮದ ಚಿಕ್ಕೋಬನ ಹೊಲದ ಬದುವಿನಲ್ಲಿರುವ ವೀರಗಲ್ಲು ಶಾಸನದಲ್ಲಿ ಕಾಟಣ್ಣ ಗಾವುಂಡನ ಮೊಮ್ಮಗನಾದ ಮಾರಸಿಂಗ ಗಾವುಂಡ (ಗೌಡ)ನು ಗೋಸಂರಕ್ಷಣೆಗಾಗಿ ಕಾದಾಡಿ ಮಡಿದನೆಂದೂ

ಅದಕ್ಕೆ ಬೂದುರಗೌಡನು ಬರೆಸಿದ ವೀರಗಲ್ಲು ಇದಾಗಿದ್ದು ಇದು ೧೦ನೇ ಶತಮಾನಕ್ಕೆ ಸಲ್ಲುವ ಕಲ್ಲಾಗಿದೆ.

## ರಂಗಾಪುರ ಗೊಲ್ಲರಹಟ್ಟಿ

ರಂಗಾಪುರದ ಗೊಲ್ಲರಹಟ್ಟಿ ಕೊಟ್ಟ ಗ್ರಾಮದ ಉಪಗ್ರಾಮವಾಗಿದ್ದು ರಂಗಾಪುರಕ್ಕೆ ಹೊಂದಿಕೊಂಡಂತಿರುವ ಕಾಡುಗೊಲ್ಲರ ಬುಡಕಟ್ಟು ಗ್ರಾಮವಾಗಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ೬ ಕಿಮೀ ದೂರದಲ್ಲಿ ಸಿರಾ–ಅಮರಾಪುರ ರಸ್ತೆಯ ಈ ಗ್ರಾಮವಿದೆ. ಮುಖ್ಯಗ್ರಾಮ ರಂಗನಾಥನ ಹೆಸರಲ್ಲಿ ರೂಪುಗೊಂಡಿದ್ದ ರಂಗನಾಥಪುರಕ್ಕೆ ಹೊಂದಿಕೊಂಡ ಗ್ರಾಮವಾದುದರಿಂದ ರಂಗಾಪುರ ಗೊಲ್ಲರಹಟ್ಟಿಯಾಗಿದೆ. ಇದರ ಭೌಗೋಳಿ ವ್ಯಾಪ್ತಿ ೧೮೦.೭ ಹೆಕ್ಟೇರ್ ಇದ್ದು ಮರಳು ಮಿಶ್ರಿತ ಕೆಂಪುಮಣ್ಣನ್ನು ಹೊಂದಿದೆ. ಈ ಪರಿಸರದಲ್ಲಿ ನರಿ, ತೋಳ, ಮುಂಗುಸಿ, ಕಾಡುಹಂದಿ ಮೊದಲಾದ ಕಾಡುಪ್ರಾಣಿಗಳಿವೆ. ಗ್ರಾಮದಲ್ಲಿ ಕುರಿ, ಮೇಕೆ, ಹಸು, ಎಮ್ಮೆ, ಕತ್ತೆ, ನಾಯಿ ಸಾಕುಪ್ರಾಣಿಗಳಾಗಿವೆ.

ಸರಾಸರಿ ವಾಡಿಕೆ ಮಳೆ ೪೩೪ ಮಿಮೀ ಆಗಿದ್ದು ಉಷ್ಣಾಂಶ ૩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಉಪಯೋಗಕ್ಕೆ ೧೦ ಕೊಳವೆ ಬಾವಿಗಳಿವೆ. ಮೂರು ಕಿರುನೀರಿನ ಟ್ಯಾಂಕ್ ಇದ್ದು ೨ ಕೈಪಂಪುಗಳಿವೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ನೀರು ಸರಬರಾಜು ಮಾಡಲಾಗುತ್ತಿದೆ.

ಇಡೀ ಗ್ರಾಮದಲ್ಲಿ ಕಾಡುಗೊಲ್ಲರ ೧೮ ಮನೆಗಳಿವೆ. ಇವುಗಳಲ್ಲಿ ಒಂದು ಕಾಂಕ್ರೀಟ್ ಮನೆ ಹೊರತುಪಡಿಸಿದರೆ ಉಳಿದೆಲ್ಲವೂ ಹೆಂಚಿನ, ಶೀಟಿನ ಮನೆ ಹಾಗೂ ೨ ಗುಡಿಸಲುಗಳಿವೆ. ಗ್ರಾಮದ ಜನಸಂಖ್ಯೆ ೬೨ ಇದ್ದು ೬ ಮನೆಗಳಲ್ಲಿ ಶೌಚಾಲಯ ಸೌಲಭ್ಯಗಳಿವೆ. ಮನೆಗಳಲ್ಲಿ ಜನತಾ, ಆಶ್ರಯ, ಕೃಷ್ಣ ಕುಟೀರ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನ ಗಾಡಿ, ಟ್ರ್ಯಾಕ್ಟರ್, ದ್ವಿಚಕ್ರ ವಾಹನದ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ತೊಗರಿ, ಹುರುಳಿ ಆಹಾರ ಬೆಳೆಯಾಗಿ ಬೆಳೆಯುತ್ತಾರೆ. ಶೇಂಗಾ ಮತ್ತು ಹುಣಸೆ ಹಣ್ಣಿನ ವ್ಯಾಪಾರವಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ ಹಾಗೂ ಮೇಲುಕುಂಟೆ ತಾಲ್ಲೂಕು ಪಂಚಾಯ್ತಿ ಹಾಗೂ ಕೊಟ್ಟ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ಒಂದು ಸ್ತ್ರೀಶಕ್ತಿ ಸ್ವಸಹಾಯ ಗುಂಪು ಇದ್ದು ಆರ್ಥಿಕ ಸಬಲೀಕರಣಕ್ಕಾಗಿ ಶ್ರಮಿಸುತ್ತಿದೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು ಒಂದು ಪ್ರಾಥಮಿಕ ಶಾಲೆಯಿದೆ. ೧೭ ಮಕ್ಕಳು, ಒಬ್ಬರು ಶಿಕ್ಷಕಿಯಿದ್ದು ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಸಲಾಗುತ್ತಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೮.೫ ರಷ್ಟಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗೌರಸಂದ್ರದ ಮಾರಮ್ಮ ಗ್ರಾಮ ದೇವತೆಯಾಗಿ ವಾರ್ಷಿಕ ಆರತಿ, ಬಾನ, ಬ್ಯಾಟೆಯ ಹರಕೆ ಸಂಪ್ರದಾಯವಿದೆ. ಅದರಂತೆ ಮೂಡಲಗಿರಿ ತಿಮ್ಮಪ್ಪ ದೇವರ ಮಡಿಯಿದ್ದು ದಸರಾ, ದೀಪಾವಳಿ ಹಬ್ಬಗಳಂದು ವಿಶೇಷ ಪೂಜೆ ನಡೆಯುತ್ತದೆ. ದೇವರಿಗೆ ಆರತಿ, ಉತ್ಸವವಿರುತ್ತದೆ.

ಯುಗಾದಿ, ದೀಪಾವಳಿ, ದಸರಾ, ಗೌರಿ–ಗಣೇಶ ಹಬ್ಬಗಳನ್ನು ಆಚರಿಸುವ ಈ ಗ್ರಾಮದಲ್ಲಿ ದೀಪಾವಳಿ ವಿಶೇಷ ಹಬ್ಬವಾಗಿದೆ. ಹಿರಿಯರ ಹಬ್ಬ, ಹಾಲು ಮೀಸಲಿನ ಹಬ್ಬ, ದೀಪ ಏರಿಸುವ ಹಬ್ಬ ಇತ್ಯಾದಿ ಹೆಸರಲ್ಲಿ ದೀಪಾವಳಿಯನ್ನು ಆರು ದಿನಗಳ ಕಾಲ ಆಚರಿಸುವುದು ಈ ಗ್ರಾಮದ ವಿಶೇಷವಾಗಿದೆ.

## ರಂಗಾಪುರ

ರಂಗಾಪುರ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ, ೧೯ ಕಿ.ಮೀ. ದೂರದಲ್ಲಿದ್ದು, ಅಮರಾಪುರ, ಸಿರಾ ಮುಖ್ಯ ರಸ್ತೆಯಲ್ಲಿ ರಂಗಾಪುರ ತಿರುವಿನಿಂದ ಎಡಭಾಗಕ್ಕೆ ಒಂದೂವರೆ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಈ ಗ್ರಾಮಕ್ಕೆ ಕೃಷ್ಣಾಪುರ ಗೊಲ್ಲರಹಟ್ಟಿ ಸೇರಿಕೊಂಡಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೫೫.೪೬ ಹೆಕ್ಟೇರ್ ಹೊಂದಿದ್ದು, ನಾದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. ೫೨೧ ಜನಸಂಖ್ಯೆ ಇರುವ ಇಲ್ಲಿ ಜನ ಸಂಖ್ಯೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯ ಉಳಿದಂತೆ ಆದಿ ಕರ್ನಾಟಕ ಮತ್ತು ಆದಿ ದ್ರಾವಿಡರ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

ರಂಗಾಪುರ ಸಿರಾ ತಾಲ್ಲೂಕು ವಿಧಾನಸಭಾ ಕ್ಷೇತ್ರ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರ ಮತ್ತು ಹೆಂದೊರೆ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳನ್ನು ಒಳಗೊಂಡಿದ್ದು ಇಲ್ಲಿ ೧೨೪ ಮನೆಗಳಿವೆ. ಕಲ್ಲಿನ, ಮಣ್ಣಿನ, ಮಂಗಳೂರು ಹೆಂಚಿನ ಮನೆಗಳಿದ್ದು, ಆಶ್ರಯ ಅಂಬೇಡ್ಕರ್, ಇಂದಿರಾ ಆವಾಸ್

ಯೋಜನೆಯ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೬ ಮನೆಗಳಲ್ಲಿ ಮಾತ್ರ ಶೌಚಾಲಯ ಬಳಸುತ್ತಾರೆ. ಮರಳು ಮಿಶ್ರಿತ ಕೆಂಪು ಮಣ್ಣಿನ ಗುಣ ಹೊಂದಿರುವ ಗ್ರಾಮಕ್ಕೆ ಹೊಂದಿಕೊಂಡಂತೆ ೪೫ ಹೆಕ್ಟೇರ್ ಅರಣ್ಯ ಭೂಮಿಯನ್ನು ಗೋಮಾಳವನ್ನಾಗಿ ಪರಿವರ್ತಿಸಿದ್ದಾರೆ.

ಕಾಡುಪ್ರಾಣಿಗಳಾದ ಕಾಡುಹಂದಿ, ತೋಳ, ನರಿ, ಮುಂಗುಸಿ, ಜಿಂಕೆ ಕಂಡು ಬರುತ್ತದೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆಯನ್ನು ಸಾಕುತ್ತಾರೆ. ಪಕ್ಷಿಗಳಾದ ನವಿಲು, ಪಾರಿವಾಳ, ಗಿಳಿ, ಕೋಗಿಲೆ, ಕಾಗೆ, ನವಿಲು, ಕಾಡುಕೋಳಿ ಕಾಡುಪಕ್ಷಿಗಳಾಗಿ ಕಾಣಬಹುದು.

ಸರಾಸರಿ ೪೬೫ ಮಿ.ಮೀ ಮಳೆಯಾಗುವ ಇಲ್ಲಿ ೩೬ ಸೆಂ. ಬಿಸಿಲಿನ ತಾಪಮಾನವಿದ್ದು, ಚಳಿ ೧೨ ಸೆಂ. ಇರುತ್ತದೆ. ಗ್ರಾಮಕ್ಕೆ ಹೊಂದಿಕೊಂಡಂತೆ ಕೆರೆ ಹಾಗೂ ಹೊರಗೆ ಒಂದು ಗೋಕಟ್ಟೆ ಇದ್ದು, ನಿಸರ್ಗ ಮಳೆಯಿಂದ ಕೆರೆ ತುಂಬಿದರೆ ಭತ್ತವನ್ನು ವಿಶೇಷವಾಗಿ ಬೆಳೆಯುತ್ತಾರೆ. ಗ್ರಾಮಕ್ಕೆ ಗ್ರಾಮ ಪಂಚಾಯಿತಿಯಿಂದ ನಾಲ್ಕು ಚಿಕ್ಕ ಚಿಕ್ಕ ಟ್ಯಾಂಕ್‌ಗಳ ಮೂಲಕ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಎರಡು ಕೈ ಪಂಪುಗಳಿವೆ. ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ, ರೊಟ್ಟಿ ಬಳಸುವವರಿದ್ದಾರೆಬಳಸುತ್ತಾರೆ. ಬಾಡೂಟ ಹಾಗೂ ಹೋಳಿಗೆ ವಿಶೇಷ ಸಾಂದರ್ಭಿಕ ಊಟವಾಗಿದೆ. ಎತ್ತಿನ ಬಂಡಿಯನ್ನು ಸಾಂಪ್ರದಾಯಕ ವಾಹನವಾಗಿ ಬಳಸಿದರೆ, ಟ್ರ್ಯಾಕ್ಟರ್, ಮಿನಿಟೆಂಪೋ, ಲಾರಿಗಳನ್ನು ಬಳಸುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಅಲಸಂದಿ, ತೊಗರಿ, ಹುರುಳಿ ಬೆಳೆಗಳನ್ನು ಬೆಳೆಯುತ್ತಾರೆ. ರಾಗಿ, ಅಲಸಂದಿ, ತೊಗರಿ, ಹುರುಳಿ ಬೆಳೆಗಳನ್ನು ಬೆಳೆಯುತ್ತಾರೆ. ಹುಣಸೆ ಹಣ್ಣಿನ ವ್ಯಾಪಾರವೂ ಇದೆ. ಕೆಲವು ಕುಟುಂಬಗಳು ಬೀಡಿ ಕಟ್ಟುತ್ತಾರೆ. ಗ್ರಾಮದಲ್ಲಿ ಒಂದು ಅಂಗನವಾಡಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು, ೬೩ ಮಕ್ಕಳು ಕಲಿಯುತ್ತಿದ್ದಾರೆ. ಮೂವರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದ ಸಾಕ್ಷರತೆ ಪ್ರಮಾಣ ಶೇ. ೪೮.೬ ರಷ್ಟು ಇದ್ದು, ಪುರುಷರು ೮೦.೫ , ಮಹಿಳೆಯರು ೩೫.೭ ರಷ್ಟಿದ್ದಾರೆ.

ಶಿಕ್ಷಣ ಇಲಾಖೆ, ರೇಷ್ಮೆ ಇಲಾಖೆಯವರು ೩ ಜನ ಸರ್ಕಾರಿ ನೌಕರರಿದ್ದಾರೆ. ವೃದ್ಧಾಪ್ಯ, ಅಂಗವಿಕಲ, ವಿಧವಾ ವೇತನದ ಫಲಾನುಭವಿಗಳು ಇದ್ದಾರೆ. ೪ ಎಸ್.ಎಸ್.ವೈ ತಂಡಗಳಿವೆ. ೪ ಟೀ ಪೆಟ್ಟಿಗೆ ಅಂಗಡಿಗಳೂ ಇವೆ. ಗ್ರಾಮದ ಹೊರಗೆ ೨ ಕರುಗಲ್ಲುಗಳಿದ್ದು, ಜನರು ಅದರ ಮೇಲೆ ಎಣ್ಣೆ ಹಾಕಿ ಪೂಜಿಸುವುದು ವಾಡಿಕೆ. ಅರಕಟ್ಟೆ ಇಲ್ಲಿನ ನ್ಯಾಯಾಧಿಕರಣ ಕೇಂದ್ರ. ಪೂಜೆಗೂ ಒಳಗಾಗುತ್ತಿದೆ.

ಬೊಮ್ಮಲಿಂಗೇಶ್ವರ, ಆಂಜನೇಯ ಗ್ರಾಮದ ದೇವರುಗಳಾಗಿದ್ದು, ಆಂಜನೇಯನ ಜಾತ್ರೆ ಧಾರ್ಮಿಕವಾಗಿ ನಡೆಯುತ್ತದೆ. ಒಂದು ದಿನ ಆರತಿ, ಬಾನ, ಉತ್ಸವ ಇರುತ್ತದೆ. ಯುಗಾದಿ, ದೀಪಾವಳಿ, ಸಂಕ್ರಾಂತಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗೌರಮ್ಮ, ಕೊಂತಮ್ಮ ಆಚರಣೆಯೂ ಇಲ್ಲಿದೆ.

## ರಾಗಲಹಳ್ಳಿ

ರಾಗಲಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೬ ಕಿ.ಮೀ. ದೂರದಲ್ಲಿದೆ. ಸಿರಾ –ಮೊದಲೂರು–ಬರಗೂರು ಮಾರ್ಗದಲ್ಲಿದ್ದು, ಕಂದಾಯ ಗ್ರಾಮವಾಗಿದ್ದು ೪೦೫.೫೨ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದೆ. ರಾಘವ, ರಾಗಲವಾಗಿ ರಾಗಲಹಳ್ಳ ಎಂದು ನಿಂತಿದೆ ಎಂದು ಊರಿನ ರಂಗಪ್ಪ ಹೇಳುತ್ತಾರೆ. ಆದರೂ ಖಚಿತ ಇಲ್ಲ. ವ್ಯಕ್ತಿ ಮೂಲದ ಈ ಗ್ರಾಮ ಕೆಂಪು ಮಿಶ್ರಿತ ಮರಳು ಮಣ್ಣಿನಿಂದ ಕೂಡಿದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಉಡ, ಬೆಕ್ಕು ಕಂಡು ಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಎತ್ತು, ಕುರಿ, ಮೇಕೆ ಸಾಕಿದ್ದಾರೆ. ಕೋಳಿ ಸಾಕು ಪಕ್ಷಿಯಾದರೆ, ಪಕ್ಷಿಗಳಾದ ನವಿಲು, ಗೊರವಂಕ, ಗುಬ್ಬಚ್ಚಿ, ಗೂಬೆ, ಹದ್ದು, ಕೌಜುಗ, ಕೊಕ್ಕರೆ ಕಂಡು ಬರುತ್ತದೆ.

ವಾರ್ಷಿಕ ಸರಾಸರಿ ೪೨೪ ಮಿ.ಮೀ. ಮಳೆ ಬೀಳುವುದು. ಉಷ್ಣಾಂಶ ೩೭೦ ಸೆಂ ಇದ್ದು, ಚಳಿ ೧೨ ಸೆಂ. ಇರುತ್ತದೆ. ಈ ಪರಿಸರದಲ್ಲಿ ೪೫ ಕೊಳವೆ ಬಾವಿಗಳಿದ್ದು, ಕೃಷಿ ಕೆಲಸಕ್ಕೆ ಬಳಕೆಯಾಗುತ್ತಿವೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ. ಒಂದು ಕೆರೆ ಇದ್ದು, ತುಂಬುವುದು ಅಪರೂಪ. ಆರು ಕಿರು ಟ್ಯಾಂಕ್‌ಗಳಿದ್ದು, ೨ ಕೈ ಪಂಪುಗಳಿವೆ. ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ಕುರುಬರು, ಆದಿಕರ್ನಾಟಕ, ಈಡಿಗ ಕಿರು ಸಮುದಾಯ ಗಳಾಗಿವೆ. ಕನ್ನಡ ಇಲ್ಲಿನ ಮಾತೃಭಾಷೆ. ವಿವಿಧ ಪ್ರಕಾರಗಳ ೧೫೬ ಮನೆಗಳಿದ್ದು, ಅವು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದವುಗಳಾಗಿವೆ. ೬೪೮ ಜನಸಂಖ್ಯೆಯ ಇಲ್ಲಿ ೬೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಈ ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನಗಾಡಿ, ಸಾಂಪ್ರದಾಯಿಕ ವಾಹನವಾದರೆ ಟ್ರ್ಯಾಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ತೊಗರಿ, ಹುರುಳಿ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಕೆ ಬೆಳೆಯುತ್ತಾರೆ. ಒಂದು ಮಿನಿ ಹಾಲಿನ ಡೈರಿ ಇದ್ದು ೨೦೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ತೆಂಗು, ಹುಣಸೆಹಣ್ಣು ವ್ಯಾಪಾರ ಬೆಳೆಗಳು. ಪಶು ವೈದ್ಯರಾದ ನಾಗಣ್ಣ, ಇಂಜಿನಿಯರ್ ಜಗನ್ನಾಥ್, ಶಿಕ್ಷಕರು ಸೇರಿದಂತೆ ೧೦ ಜನ ನೌಕರಿದ್ದಾರೆ. ಬೀಡಿ ಕಟ್ಟುವುದು, ಟೈಲರಿಂಗ್ ಮಹಿಳೆಯರ ಗೃಹಕೃತ್ಯವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ, ಹಂದಿಕುಂಟೆ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭೆ ಕ್ಷೇತ್ರಕ್ಕೆ ಸೇರಿದೆ. ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರು ಈ ಗ್ರಾಮದ ಪ್ರತಿನಿಧಿಗಳಿದ್ದಾರೆ. ಒಂದು ಅಂಚೆ ಕಛೇರಿ ಇದೆ. ೩ ಸ್ತ್ರೀ ಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮೀಣಾ ಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಅಂಗನವಾಡಿ ಕೇಂದ್ರ ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ೪೮ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ ಪಠ್ಯಪುಸ್ತಕ ವಿತರಣೆ ಇದೆ. ಗ್ರಾಮದ ಸಾಕ್ಷರತೆ ೬೧.೭ ರಷ್ಟಿದೆ. ಶ್ರೀ ರಂಗನಾಥ ಎಂಬುವವರು ಸಿರಾದಲ್ಲಿ ಅಕ್ಕಮಹಾದೇವಿ ವಿದ್ಯಾ ಸಂಸ್ಥೆ ಬಿಇಡಿ ಕಾಲೇಜು ಆರಂಭಿಸಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ಊರಬಾಗಿಲು, ಕೋಟೆಯು ನಾಶವಾಗಿದ್ದು, ಅದರ ಅವಶೇಷಗಳಿವೆ. ಕರುಗಲ್ಲು, ಅರಳಿಕಟ್ಟೆ ಇದ್ದು ಈರನಾಗಪ್ಪ, ನರಸಿಂಹಸ್ವಾಮಿ ಹಾಗೂ ಗ್ರಾಮದೇವತೆ ಬೇವಿನಳಮ್ಮನ ದೇವಾಲಯಗಳಿವೆ.

ಬೇವಿನಹಳ್ಳಮ್ಮನ ಊರಹಬ್ಬ, ಆರತಿ, ಬಾನ, ಬ್ಯಾಟೆಯೊಂದಿಗೆ ಸಾಂಪ್ರದಾಯಿಕವಾಗಿ ನಡೆಯುತ್ತದೆ.

ಯುಗಾದಿ, ದೀಪಾವಳಿ, ಗೌರಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ನಾಟಿ ವೈದ್ಯರಾದ ಕದುರಪ್ಪ, ನರಸಪ್ಪ ಈ ಗ್ರಾಮ ಪರಿಸರದ ಪ್ರಾಣಿಗಳಿಗೆ ಹಲವು ಕಾಯಿಲೆಗಳಿಗೆ ಚಿಕಿತ್ಸೆ ನೀಡುತ್ತಾರೆ.

## ರಂಗಾಪುರ

ರಂಗಾಪುರ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಒಟ್ಟು ೨೪೧.೭೨ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದೆ. ಮರಳು ಮಿಶ್ರಿತ ಕೆಂಪು ಮಣ್ಣು ಹೊಂದಿರುವ ಈ ಭೂ ಪ್ರದೇಶದಲ್ಲಿ ಮಳೆಯ ಆಶ್ರಯದಿಂದ ಜನರ ಬದುಕು ರೂಪಿತವಾಗಿದೆ. ವಾರ್ಷಿಕ ೪೬೨ ಮಿ.ಮೀ. ಸರಾಸರಿ ಮಳೆ ಬೀಳುತ್ತಿದ್ದು ಇದು ಸಾಲದಾಗಿದೆ.

ಬಿಸಿಲಿನ ತಾಪ ೩೮೦ ಸೆಂ ಗೂ ಹೆಚ್ಚುತ್ತಿದೆ. ಚಳಿ ೧೨೦ ಸೆಂ ಇದ್ದು, ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿ ಮೂಲಕ ಕುಡಿಯುವ ನೀರು ಒದಗಿಸಲಾಗುತ್ತಿದೆ. ಗ್ರಾಮದಲ್ಲಿ ೩ ಕೈ ಪಂಪುಗಳಿದ್ದು, ೨ ಸಿಸ್ಟನ್‌ಗಳಿವೆ. ಗ್ರಾಮದ ಪರಿಸರದಲ್ಲಿ ಬಯಲು ಸೀಮೆ, ಕುರುಚಲು ಗಿಡ, ಪೊದೆಗಳಿರುವುದ ರಿಂದ ಮೊಲ, ಬೆಕ್ಕು, ಕಾಡುಹಂದಿ, ಉಡ ಮೊದಲಾದ ಕಾಡು ಪ್ರಾಣಿಗಳು, ಕೋಗಿಲೆ, ಗಿಳಿ, ಕೊಕ್ಕರೆ, ಗಿಡುಗ ಮೊದಲಾದ ಪಕ್ಷಿಗಳು ಕಂಡು ಬರುತ್ತವೆ. ಗ್ರಾಮದಲ್ಲಿ ರೈತಾಪಿ ಜನ ಹಸು, ಎಮ್ಮೆ, ಕುರಿ, ಮೇಕೆ, ಕೋಳಿಯನ್ನು ಸಾಕುತ್ತಾರೆ.

ವಾಲ್ಮೀಕಿ ಸಮುದಾಯ ಇಲ್ಲಿನ ದೊಡ್ಡ ಸಮುದಾಯವಾಗಿದೆ. ಕಲ್ಲಿನ, ಕಾಂಕ್ರೀಟ್, ಶೀಟಿನ ಒಟ್ಟು ೯೬ ಮನೆಗಳಿದ್ದು, ಒಂದು ಗುಡಿಸಲು ಇದೆ. ಆಶ್ರಯ, ಜನತಾ ಯೋಜನೆಯ ೧೬ ಫಲಾನುಭವಿಗಳೂ ಇದ್ದು, ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಸೌಲಭ್ಯ ಪಡೆದವರು ಹೆಚ್ಚಾಗಿದ್ದಾರೆ. ೪೮೩ ಜನಸಂಖ್ಯೆ ಇದೆ.

ರಾಗಿ ಮುದ್ದೆ ಗ್ರಾಮದ ಮುಖ್ಯ ಆಹಾರವಾಗಿದ್ದು, ರೊಟ್ಟಿ, ಅನ್ನ ಬಳಸುವವರಿದ್ದಾರೆ ಬಾಡೂಟ, ಹೋಳಿಗೆ ವಿಶೇಷ ಸಂದರ್ಭದ ಭೋಜನ. ರೈತಾಪಿಗಳೇ ಅಧಿಕವಾಗಿರುವ ಇಲ್ಲಿ ಸಂಪ್ರದಾಯಿಕ ವಾಹನ ಇರುವುದಿಲ್ಲ. ಟ್ರ್ಯಕ್ಟರ್, ಲಾರಿ, ಆಟೋ, ಸ್ಕೂಟರ್ ಬಳಕೆ ಇದೆ. ಗ್ರಾಮದ ಮುಖ್ಯ ಬೆಳೆ ಶೇಂಗಾ, ರಾಗಿ ಆಹಾರ ಬೆಳೆಯಾಗಿಯೂ ಅಲಸಂದಿ, ತೊಗರಿ ಬೆಳೆಯುತ್ತಾರೆ. ಮೆಕ್ಕೆ ಜೋಳ, ಸೂರ್ಯಕಾಂತಿ, ತೆಂಗು, ರೇಷ್ಮೆ ನೀರಾವರಿ ಬೆಳೆಗಳು. ಹೆಸರಾಂತ ಹೃದಯ ರೋಗ ತಜ್ಞರಾಗಿ ಕಾರ್ಯ ನಿರ್ವಹಿಸುತತಿರುವ ಡಾ. ಮುದ್ದರಂಗಪ್ಪ ಇದೇ ಗ್ರಾಮದವರು ಎಂಬುದು ವಿಶೇಷ. ಉಳಿದಂತೆ ೩ ಜನ ಸರ್ಕಾರಿ ಇಲಾಖೆಯ ನೌಕರರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ

ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಿರಾ ವಿಧಾನಸಭೆ, ಚಿತ್ರದುರ್ಗ ಲೋಕಸಭೆ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಬರಗೂರು ಗ್ರಾಮ ಪಂಚಾಯಿತಿ ಹಾಗು ತಾಲ್ಲೂಕು ಪಂಚಾಯಿತಿ ಕೇಂದ್ರವೂ ಆಗಿದೆ. ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ(೩೨), ಅಂಗನವಾಡಿ ಕೇಂದ್ರ (೨೭) ಗಳಿದ್ದು, ಒಟ್ಟು ೬೪ ಮಕ್ಕಳು, ಮೂರು ಜನ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸಾಕ್ಷರತೆಯ ಪ್ರಮಾಣ ೬೯.೪ ರಷ್ಟಿದ್ದು ಪುರುಷರು ೬೯.೪, ಮಹಿಳೆಯರು ೫೧.೨ ರಷ್ಟಿದ್ದಾರೆ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನದ ಪಡೆದ ೧೯ ಸೌಲಭ್ಯವಂತರಿದ್ದಾರೆ. ಗ್ರಾಮದ ಒಳಗೆ ೨ ಕರುಗಲ್ಲುಗಳಿದ್ದು, ಒಂದು ಅರಳಿಕಟ್ಟೆ ಇದೆ. ಬೇವು–ಅರಳಿಯೊಂದಿಗೆ ಪೂಜಿಸಲ್ಪಡುತ್ತದೆ. ಈ ಗ್ರಾಮದ ಉಪ್ಪಾರ ನರಸನ ಹೊಲದ ಬಳಿ ದೊರೆತಿರುವ ಶಾಸನದಲ್ಲಿ (ಎ.ಕ. ೬೫೫ ಸಿರಾ ೪೭) ನಿಡಗಲ್ಲು ಸಂಸ್ಥಾನದ ಮಲ್ಲನಾಯಕನು ಲಕ್ಷ್ಮನಾಯಕರು, ಶ್ರೀನಾಥ ಭಟ್ಟ ಎಂಬುವವರಿಗೆ ಬರಗೂರು ಸೀಮೆಯೊಳಗೆ ಧಾರೆ ಎರೆದು ಕೊಟ್ಟರು ಎಂಬ ಅಸ್ಪಷ್ಟ ದಾಖಲೆಯ ಶಾಸನವಿದೆ. ಇದರಲ್ಲಿ ಯಾವ ಜಮೀನು, ದೇವಸ್ಥಾನ ಇತ್ಯಾದಿ ವಿವರ ಇರುವುದಿಲ್ಲ. ಶಾಸನದ ಕಾಲ ೧೫೫೬ ಆಗಿದೆ.

ಈಶ್ವರ, ಬಸವಣ್ಣ, ಕರಿಯಮ್ಮ, ಗಣೇಶನ ಗುಡಿಯೂ ಇದ್ದು, ಗ್ರಾಮದಲ್ಲಿ ವಾರ್ಷಿಕವಾಗಿ ಕರಿಯಮ್ಮನ ಜಾತ್ರೆ ನಡೆಸುತ್ತಾರೆ. ಬಾನ, ಆರತಿ, ಬ್ಯಾಟೆ ಈ ಕಾಲದ ಪ್ರಮುಖ ಆಚರಣೆಗಳು. ಉಳಿದಂತೆ ಯುಗಾದಿ, ದೀಪಾವಳಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ರಂಗನಹಳ್ಳಿ

ರಂಗನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೨ ಕಿಮೀ ದೂರದಲ್ಲಿದ್ದು ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿಯಲ್ಲಿ ಕಟಾವೀರನಹಳ್ಳಿ–ತರೂರು ಗೇಟಿನ ಮುಖ್ಯರಸ್ತೆಗೆ ೭ ಕಿಮೀ ದೂರದಲ್ಲಿದೆ. ತರೂರು–ಹೊಸಮಲ್ಲನಹಳ್ಳಿಗೆ ಸಮೀಪದಲ್ಲಿದ್ದು ಹೊಸಮಲ್ಲನಹಳ್ಳಿಯಿಂದ ಬಸ್ ಸೌಕರ್ಯವಿದೆ. ಹೊಸಮಲ್ಲನಹಳ್ಳಿ ಮೂಲದ ರಂಗಪ್ಪ ಎಂಬುವವರು ಈ ಗ್ರಾಮದ ಮೂಲಪುರುಷ. ಹಾಗಾಗಿ ಆತನ ಹೆಸರಿನಿಂದಲೇ ರಂಗನಹಳ್ಳಿ ಎಂದು ಕರೆಯುತ್ತಾರೆ. ಗ್ರಾಮದಲ್ಲಿ ಭೂತಪ್ಪನ ಪೌಳಿಯಿದ್ದು ಬೇಡ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಇದೊಂದು ಕಂದಾಯ ಗ್ರಾಮವಾಗಿದ್ದು ೩೯೨.೧೩ ಹೆಕ್ಟೇರ್ ಭೂವಿಸ್ತೀರ್ಣ ಹೊಂದಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ಜಿಂಕೆ, ನರಿ, ಮೊಲ, ಕರಡಿ, ಮುಂಗುಸಿ, ಉಡ, ಬಾರುಬೆಕ್ಕು ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಕೆಂಪು–ಬಿಳಿ ಮರಳು ಮಣ್ಣಿನಿಂದ ಕೂಡಿದ್ದು ವಾರ್ಷಿಕ ವಾಡಿಕೆ ಮಳೆ ೫೫೩.೭ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ನೀರಿನ ಆಶ್ರಯವಾಗಿ ಕಡಿಮೆ ಮಳೆ ಬೀಳುವುದರಿಂದ ವಿವಿಧ ಯೋಜನೆಯಲ್ಲಿ ಸೇರಿದಂತೆ ಸ್ವಂತ ಹಣದಿಂದಲೂ ೧೩ ಕೊಳವೆ ಬಾವಿ ಕೊರೆಸಲಾಗಿದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ನೀರು ಪೂರೈಸಲಾಗುತ್ತಿದೆ. ೨ ಸಿಸ್ಟರ್ನ್‌ಗಳಲ್ಲಿ ನೀರು ಪೂರೈಸಲಾಗುತ್ತಿದೆ. ೧ ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಕುಂಬಾರ, ಕುಂಚಿಟಿಗ, ಆದಿದ್ರಾವಿಡ ಕಿರು ಸಮುದಾಯವಾಗಿದೆ. ಕನ್ನಡ ಗ್ರಾಮದ ಮನೆಮಾತಾಗಿದೆ. ವಿವಿಧ ಪ್ರಕಾರಗಳ ೩೧ ಮನೆಗಳಿದ್ದು ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿವೆ. ಒಟ್ಟು ೧೨೫ ಜನಸಂಖ್ಯೆಯಿದ್ದು ಭಾಗ್ಯಜ್ಯೋತಿ, ಇಂದಿರಾ ಆವಾಸ್, ಜನತಾ ವಸತಿ ಯೋಜನೆಯ ೩೧ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯಬೆಳೆ. ರಾಗಿ, ಭತ್ತ, ಅವರೆ, ತೊಗರಿ ಆಹಾರ ಬೆಳೆಗಳು. ತೆಂಗು, ಅಡಿಕೆ, ಹೂ, ತರಕಾರಿ ತೋಟಗಾರಿಕೆ ಬೆಳೆಗಳಾಗಿವೆ. ಬೀಡಿ ಕಟ್ಟುವುದು, ಹೂ ಕಟ್ಟುವುದು ಮೊದಲಾದ ಗೃಹಕೈಗಾರಿಕೆ ಇದೆಯ

ಆಡಳಿತಾತ್ಮಕವಾಗಿ ಸಿರಾ ವಿಧಾನಸಭೆ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಸೀಬಿ ತಾಲ್ಲೂಕು ಪಂಚಾಯ್ತಿ, ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ೧ ಸ್ತ್ರೀಶಕ್ತಿ ಸ್ವಸಹಾಯ ಗುಂಪು ಇದ್ದು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ. ಶೈಕ್ಷಣಿಕವಾಗಿ ೧ ಅಂಗನವಾಡಿ ಕೇಂದ್ರ, ಒಂದು ಕಿರಿಯ ಪಾಠಶಾಲೆಯಿದ್ದು ೨೪ ಮಕ್ಕಳು, ಒಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೦.೮% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಗೂಡಂಗಡಿ ಇದೆ. ಆಂಜನೇಯ, ಭೂತಪ್ಪನ ದೇವಾಲಯಗಳಿವೆ. ಭೂತಪ್ಪನಿಗೆ ಆರತಿ, ಬ್ಯಾಟೆ, ಬಲಿ ನೀಡಲಾಗುತ್ತಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸಿರಾ–ತರೂರು, ಗಂಜಲಗುಂಟೆ ಮಾರ್ಗವಾಗಿ ಬಸ್ ಸಂಚಾರವಿದೆ.

## ರಾಮಲಿಂಗಾಪುರ (ಕುರೇಹಳ್ಳಿ)

ರಾಮಲಿಂಗಾಪುರ ಸಿರಾ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ–ಬುಕ್ಕಾಪಟ್ಟಣ– ಹಾಗಲವಾಡಿ ಮಾರ್ಗದಲ್ಲಿ ರಾಮಲಿಂಗಾಪುರ ಗೇಟಿನಿಂದ ಎಡಭಾಗಕ್ಕೆ ಒಂದು ಕಿ.ಮೀ. ದೂರದಲ್ಲಿದೆ. ಸಿರಾದಿಂದ ೨೫ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಕಂದಾಯ ಗ್ರಾಮವಾಗಿದೆ. ಈ ಗ್ರಾಮಕ್ಕೆ ಮೊದಲು ಕುರೇಹಳ್ಳಿ ಎಂಬ ಹೆಸರಿತ್ತು. ಕುರೇಹಳ್ಳಿ ಕೂರೇಹಳ್ಳಿ  ಎಂಬ ಹೆಸರು ಅಪಮಾನ ಎಂಬ ಬಗೆದ ಗ್ರಾಮಸ್ಥರು ೧೯೭೫ ರ ನಂತರ ರಾಮಲಿಂಗಾಪುರ ಎಂದು ಪುನರ್ ನಾಮಕರಣ ಮಾಡಿದ್ದಾರೆ. 'ರಾಮಲಿಂಗಾಪುರ' ವೆಂದು ಗ್ರಾಮದಲ್ಲಿ ರಾಮಲಿಂಗೇಶ್ವರ ದೇವಾಲಯವೂ ಇರುವುದು ವಿಶೇಷವಾಗಿದೆ.

ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೬೯೦.೮೩ ಹೆಕ್ಟೇರ್‌ಗಳಾಗಿವೆ.  ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮತ್ತು ಎರೆ ಮಣ್ಣಿನಿಂದ ಕೂಡಿದ್ದು, ಈ ಗ್ರಾಮದಲ್ಲಿ ಯಾವುದೇ ಅರಣ್ಯ ಬೆಟ್ಟ ಗುಡ್ಡ, ತೋಪುಗಳು ಕಂಡು ಬರುವುದಿಲ್ಲ. ಹಾಗೂ ಒಂದು ಕೆರೆಯಿದ್ದು ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ ಈ ಗ್ರಾಮದಲ್ಲಿ ೧೨೫ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ೨ ಸಿಸ್ಟನ್‌ಗಳು ಮತ್ತು ಕೈ ಪಂಪುಗಳನ್ನು ಹೊಂದಿದೆ. ಇಲ್ಲಿನ ವಾರ್ಷಿಕ ಮಳೆಯ ಸರಾಸರಿ ೪೫೦.೬ ಮಿ.ಮೀ. ಸರಾಸರಿ ಮಳೆಯಾಗುತ್ತದೆ. ಬಿಸಿಲಿನ ಉಷ್ಣಾಂಶ ೩೮ಂ ಸೆಂ. ಇದ್ದು, ಚಳಿಯು ೧೨ಂ ಸೆಂ. ಇರುತ್ತದೆ. ಕಳೆದ ೪ ವರ್ಷಗಳಿಂದ ವಾಡಿಕೆಗಿಂತ ಕಡಿಮೆ ಮಳೆ ಬಿದ್ದಿದೆ.

ಈ ಗ್ರಾಮದಲ್ಲಿ ಒಟ್ಟು ೩೭೧ ಮನೆಗಳಿದ್ದು, ೧೩೮೪ ಜನಸಂಖ್ಯೆಯನ್ನು ಹೊಂದಿದೆ. ಮತ್ತು ವೀರಶೈವ, ಆದಿಕರ್ನಾಟಕ, ಕುಂಚಿಟಿಗ, ಬೋವಿ, ನಾಯಕ, ಗಂಗೆಮತಸ್ಥ, ಕ್ರಿಶ್ಚಿಯನ್, ಅರಸು, ಬ್ರಾಹ್ಮಣ, ಕಮ್ಮಾರ, ಆದಿದ್ರಾವಿಡರ ಮನೆಗಳಿವೆ. ಇದರಲ್ಲಿ ಕಾಂಕ್ರೀಟ್, ಕಲ್ಲಿನ, ಗುಡಿಸಲು, ಹೆಂಚಿನ, ಶೀಟಿನ ಮನೆಗಳಿವೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ವಿಶೇಷವಾಗಿ ಬಾಡೂಟ, ಪಾಯಸ ಮತ್ತು ಹೋಳಿಗೆ, ಕಿಚುಡಿ, ಕಡುಬು ಇತ್ಯಾಜಿ  ಸಿಹಿ ತಿನಿಸುಗಳಾಗಿವೆ. ಇವರ ಮಾತೃಭಾಷೆ ಕನ್ನಡ.

ಈ ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿ, ಆಧುನಿಕವಾಗಿ ಟ್ರ್ಯಕ್ಟರ್ , ಟೆಂಪೋ, ಲಾರಿ ಮತ್ತು ದ್ವಿಚಕ್ರವಾಹನಗಳು ಕಚ್ಚಾ ರಸ್ತೆಯನ್ನು ಮತ್ತು ಚರಂಡಿ ವ್ಯವಸ್ಥೆ ಹೊಂದಿದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ ಪ್ರಮುಖ ಬೆಳೆಯಾಗಿದ್ದು,  ರಾಗಿ, ಭತ್ತ, ಜೋಳ, ನವಣೆ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳು ಹಾಗೂ ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆ, ಮಾವು, ಬೇವು, ಹಲಸು ಬೆಳೆಗಳನ್ನು ಬೆಳೆಯುತ್ತಾರೆ. ಅಲ್ಲದೆ ಆಧುನಿಕ ಡೈರಿಯನ್ನು ಹೊಂದಿದ್ದು ಆರ್ಥಿಕೇತರ ಆದಾಯ ಗಳಿಸಲು ಸಹಕಾರಿಯಾಗಿದೆ. ಶಿಕ್ಷಣ, ಕಂದಾಯ, ಸಾರಿಗೆ, ಅರಣ್ಯ ಇಲಾಖೆಯಲ್ಲಿ ಒಟ್ಟು ೧೦ ಜನ ಸರ್ಕಾರಿ ನೌಕರಿಯಲ್ಲಿ ಕೆಲಸ ಮಾಡುವವರು ಇದ್ದಾರೆ. ಹಾಗೆಯೇ ಬಟ್ಟೆ ಹೊಲಿಯುವುದು, ಊಟದ ಎಲೆ ತಯಾರಿಸುವುದು, ಬೀಡಿ ಸುತ್ತುವುದು ಪ್ರಮುಖ ಕೆಲಸವಾಗಿದೆ. ಇಲ್ಲಿ ಗುಡಿಕಾರರು, ಕಮ್ಮಾರರು ತಮ್ಮ ವೃತ್ತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ. ಕುಂಬಾರರು ಮಡಿಕೆ ತಯಾರಿಕೆ, ಹಾಗಲವಾಡಿ, ಬುಕ್ಕಾಪಟ್ಟಣ, ಸಿರಾ ಪಟ್ಟಣಗಳಿಗೆ ಮಾರಾಟ ಮಾಡುತ್ತಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ, ಸಿರಾ ತಹಶೀಲ್ದಾರ್ ಕಛೇರಿ, ಬುಕ್ಕಾಪಟ್ಟಣ ಪೋಲೀಸ್ ಠಾಣೆ ಮತ್ತು ವಿದ್ಯುತ್ ಮಂಡಳಿ, ರಾಮಲಿಂಗಾಪುರ ಅಂಚೆ ಕಛೇರಿ, ಗ್ರಾಮಪಂಚಾಯ್ತಿ ೩ ಜನ ಸದಸ್ಯರನ್ನು ಒಳಗೊಂಡಿದೆ.  ಈ ಗ್ರಾಮವು ಗ್ರಾಮ ನ್ಯಾಯ ಮಂಡಳಿ ಬಗೆಹರಿಯದ ಸಮಸ್ಯೆಗಳನ್ನು  ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಬಗೆ ಹರಿಸಿಕೊಳ್ಳುತ್ತಿದ್ದಾರೆ.

ಈ ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಶೇ. ೬೬.೫ ರಷ್ಟು ಸಾಕ್ಷರತೆಯನ್ನು ಹೊಂದಿದೆ. ಈ ಗ್ರಾಮದಲ್ಲಿ ಯಾವುದೇ ಬ್ಯಾಂಕಿಂಗ್ ಸೌಲಭ್ಯವಿಲ್ಲದಿದ್ದರೂ ಸ್ತ್ರೀ ಶಕ್ತಿ ಸಂಘಗಳು ಮತ್ತು ಉಳಿತಾಯ ವ್ಯವಸ್ಥೆಯನ್ನು ಮಾಡಲು ಸಹಕಾರಿಯಾಗಿವೆ.

ಶಾಲೆಯಲ್ಲಿ ಬಿಸಿಯೂಟ. ಕ್ಷೀರಭಾಗ್ಯ, ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಮಲಿಂಗಾಪುರದಲ್ಲಿ ಉಪಗ್ರಂಥಾಲಯವನ್ನು ಹೊಂದಿದೆ. ಇದರಲ್ಲಿ ಯಾವುದೇ ಗ್ರಂಥಾಲಯಗಳಲ್ಲಿ ಪುಸ್ತಕಗಳು ಕಂಡು ಬಂದಿಲ್ಲ. ಕುಟುಂಬ ಕಲ್ಯಾಣ ವ್ಯವಸ್ಥೆಯಿಂದ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಚಳಿ. ಬಿಪಿಯಂತಹ ರೋಗಗಳು ಕಂಡು ಬರುತ್ತವೆ. ಇಲ್ಲಿ ರಾಮಣ್ಣನವರು ಹಾವು ಕಡಿತಕ್ಕೆ ಮತ್ತು ಇತರೆ ನಾಟಿ ಔಷಧಿಯನ್ನು ನೀಡುತ್ತಾರೆ.

ಸರ್ಕಾರದ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನ, ವಿಕಲ ಚೇತನ ವೇತನಗಳನ್ನು ಪಡೆದುಕೊಳ್ಳುತ್ತಿದ್ದು ಸಮುದಾಯದ ಕಲ್ಯಾಣ ಕಾರ್ಯಕ್ರಮಗಳನ್ನು ಪಡೆದುಕೊಳ್ಳುತ್ತಿದೆ. ಹಾಗೆಯೇ ಈ ಗ್ರಾಮದಲ್ಲಿ ಒಂದು ಉಪಹಾರ ಹೋಟೆಲ್ ಮತ್ತು ಆರು ಚಿಲ್ಲರೆ ವ್ಯಾಪಾರದ ಅಂಗಡಿಯನ್ನು ಒಳಗೊಂಡಿದೆ. ಕಲ್ಲಿನ, ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿದ್ದು, ಜನತಾ, ಆಶ್ರಯ, ಅಂಬೇಡ್ಕರ್, ವಸತಿ ಯೋಜನೆಯ ೯೨ ಫಲಾನುಭವಿಗಳಿದ್ದಾರೆ.

ರಾಮಲಿಂಗಾಪುರದಲ್ಲಿ ಐತಿಹಾಸಿಕ ನೆಲೆಯ ಸ್ಮಾರಕಗಳನ್ನು ಹೊಂದಿದೆ. ಎರಡು ಕರುಗಲ್ಲುಗಳು ಮತ್ತು ಎರಡು ಆಶ್ವತ್ಥಕಟ್ಟೆಗಳನ್ನು ಹೊಂದಿದೆ. ಹಾಗೆಯೇ ಶವಸಂಸ್ಕಾರ ಮಾಡಲು ರುದ್ರಭೂಮಿ ಇದ್ದು ಸಾಮೂಹಿಕವಾಗಿ ಬಳಕೆಯಾಗುತ್ತಿದೆ. ಮುಸ್ಲಿಂ ಹಾಗೂ ಕ್ರಿಶ್ಚಿಯನ್ನರಿಗೆ ಪ್ರತ್ಯೇಕ ರುದ್ರಭೂಮಿ ಇರುವುದು ವಿಶೇಷವಾಗಿದೆ.

ಧಾರ್ಮಿಕ ಕೇಂದ್ರಗಳಿಗೆ ಸಂಬಂಧಿಸಿದಂತೆ ಶ್ರೀರಾಮ, ಹನುಮಂತರಾಯ, ಬಸವಣ್ಣ, ಭೂತಪ್ಪನ ದೇವಸ್ಥಾನಗಳಿವೆ. ಹಾಗೆಯೇ ಕ್ರಿಶ್ಚಿಯನ್ ಸಮುದಾಯದ ಚರ್ಚನ್ನು ಹೊಂದಿದೆ. ದೊಡ್ಡ ಮಸೀದಿ ಇದೆ. ಪ್ರತಿ ವರ್ಷವೂ ಮಣ್ಣಮ್ಮ ದೇವಿಯನ್ನು ವಿಜಯದಶಮಿಯಂದು ಬನ್ನಿ ಮಡಿಯಲು ಕರೆ ತರುತ್ತಾರೆ. ಮತ್ತು ಗ್ರಾಮದೇವತೆಯ ಹಬ್ಬವಾಗಿ ಆಚರಿಸುತ್ತಾರೆ.

ಸಾಂಸ್ಕೃತಿಕ ಕ್ಷೇತ್ರದಲ್ಲಿ ಬಸವರಾಜು ಮತ್ತು ಸಂಗಡಿಗರಿಂದ ಭಜನೆ ಮತ್ತು ತತ್ವಪದ ಹಾಗೂ ಶ್ಯಾಮಣ್ಣನವರಿಂದ ಹರಿಕಥಾ ವಿದ್ವಾಂಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಗ್ರಾಮದಲ್ಲಿ ಒಂದು ಅಂಬೇಡ್ಕರ್ ಯುವಕ ಸಂಘವನ್ನು ಮಾತ್ರ ಕಾಣುತ್ತೇವೆ.

ಯುಗಾದಿ, ದಸರಾ, ಶಿವರಾತ್ರಿ, ದೀಪಾವಳಿ, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರಾಮಲಿಂಗಾಪುರ–ಬುಕ್ಕಾಪಟ್ಟಣ, ಹಾಗಲವಾಡಿ ಮಾರ್ಗವಾಗಿ ತುಮಕೂರು ಜಿಲ್ಲಾ ಕೇಂದ್ರಕ್ಕೆ ಸಂಪರ್ಕ ರಸ್ತೆ ಇದೆ. ಗ್ರಾಮದಲ್ಲಿ ಒಂದು ಹಾಲಿನ ಡೈರಿ ಇದ್ದು, ದಿನದ ಸರಾಸರಿ ಹಾಲು ಸಂಗ್ರಹ ೫೦೦ ಲೀಟರ್ ಆಗಿರುತ್ತದೆ. ೨೦೦೮ ನೇ ಸಾಲಿನಲ್ಲಿ ಅತ್ಯುತ್ತಮ ಗುಣ ಮಟ್ಟದ ಹಾಲು ಸಂಗ್ರಹ ಕೇಂದ್ರ ಎಂದು ಕರ್ನಾಟಕ ಸರ್ಕಾರದಿಂದ ಪ್ರಶಸ್ತಿ, ನಗದು ಪಡೆದ ಹಿರಿಮೆಯೂ ಈ ಗ್ರಾಮಕ್ಕಿದೆ. ಮಣ್ಣಮ್ಮ ರೈತ ಸಂಪರ್ಕ ಕೇಂದ್ರ ಕ್ರಿಯಾಶೀಲವಾಗಿದೆ.

## ರಾಮನಹಳ್ಳಿ

ರಾಮನಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯ ದಿಕ್ಕಿನಲ್ಲಿ ೨೪ ಕಿ.ಮೀ. ದೂರದಲ್ಲಿದ್ದು, ರಾಮಣ್ಣ ಎಂಬ ವ್ಯಕ್ತಿ ಮೂಲದಿಂದ ರಾಮನಹಳ್ಳಿ ಎಂದಾಗಿದೆ. ಇದರ ಭೌಗೋಳಿಕ ವಿಸ್ತೀರ್ಣವು ೬೧೨.೩೮ ಹೆಕ್ಟೇರ್‌ಗಳಾಗಿವೆ. ಬಯಲು ನಾಡಿನ ಪ್ರದೇಶದಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಈ ಗ್ರಾಮದಲ್ಲಿ ಬಯಲು ಪ್ರದೇಶ. ಕುರುಚಲು ಗಿಡ, ಹಳ್ಳ, ತಗ್ಗುಗಳಿಂದ ಕೂಡಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ, ಕಂಡು ಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಎತ್ತು, ಕುರಿ ಸಾಕಲಾಗಿದೆ. ಕೋಳಿ ಸಾಕು ಪಕ್ಷಿಯಾಗಿದೆ. ಪಕ್ಷಿಗಳಾದ ಗಿಳಿ, ಕಾಗೆ, ಹದ್ದು, ಗುಬ್ಬಚ್ಚಿ ಕಂಡು ಬರುತ್ತವೆ.

ಈ ಗ್ರಾಮದಲ್ಲಿ ೩೫ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಹಾಗೆಯೇ ಕುಡಿಯುವ ನೀರಿನ ವ್ಯವಸ್ಥೆಗೆ ಗ್ರಾಮ ಪಂಚಾಯ್ತಿ ವತಿಯಿಂದ ಕೈ ಪಂಪುಗಳನ್ನು ಮತ್ತು ಸಿಸ್ಟನ್‌ಗಳನ್ನು ಕಲ್ಪಿಸಿದೆ. ಇಲ್ಲಿನ ವಾರ್ಷಿಕ ಮಳೆಯ ಸರಾಸರಿ ಪ್ರಮಾಣವು ೪೬೨ ಮಿ.ಮೀ. ಆಗಿದೆ. ಬಿಸಿಲು ೩೯೦ ಸೆಂ. ಇದ್ದು, ಚಳಿ ೧೨೦ ಸೆಂ. ಸಹಜವಾಗಿರುತ್ತದೆ.

ಗ್ರಾಮದಲ್ಲಿ ಒಟ್ಟು ೧೨೩ ಮನೆಗಳಿದ್ದು, ೫೦೨ ಜನ ಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ನಾಯಕ, ಕುಂಬಾರ, ಮಡಿವಾಳ, ಕುಂಚಿಟಿಗ, ಆದಿದ್ರಾವಿಡ, ಆದಿಕರ್ನಾಟಕರ ಮನೆಗಳಿವೆ. ಇವರು ಕನ್ನಡ ಮಾತನಾಡುವ ಜನರಾಗಿದ್ದಾರೆ. ಇಲ್ಲಿನ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ವಿಶೇಷವಾಗಿ ಬಾಡೂಟವಾಗಿದೆ. ಆಧುನಿಕ ವಾಹನಗಳನ್ನು ಒಳಗೊಂಡಿದೆ. ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರವಾಹನಗಳ ಬಳಕೆ ಇದೆ. ಗ್ರಾಮದಲ್ಲಿ ಹೆಂಚಿನ, ಶೀಟಿನ, ಕಾಂಕ್ರೀಟ್ ಮನೆಗಳಿದ್ದು, ೩೧ ಮನೆಗಳು ಇಂದಿರಾ ಆವಾಸ್, ಆಶ್ರಯ ವಸತಿ ಯೋಜನೆ ಅಡಿಯಲ್ಲಿ ನಿರ್ಮಾಣವಾಗಿದೆ. ೫೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಶೇಂಗಾ ಮುಖ್ಯ ಬೆಳೆ.ರಾಗಿ, ಜೋಳ, ಭತ್ತ, ಅಡಿಕೆ, ಹುಣಸೆ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಗ್ರಾಮದಲ್ಲಿ ಆಧುನಿಕ ಡೈರಿಯನ್ನು ಹೊಂದಿದ್ದು, ಕೃಷಿಯೇತರ ಆರ್ಥಿಕ ಆದಾಯಗಳಿಸಲು ಸಹಾಯಕವಾಗಿದೆ. ಶಿಕ್ಷಕ, ಕಂದಾಯ, ಅರಣ್ಯ, ಕೆಇಬಿ ಇಲಾಕೆಗೆ ಸೇರಿದ ೧೨ ಜನ ಸರ್ಕಾರಿ ಸೇವೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಡಾ. ರಂಗಯ್ಯ ಅಮೇರಿಕಾದಲ್ಲಿ ವೈದ್ಯಕೀಯರಾಗಿರುವುದು ಈ ಗ್ರಾಮದ ವಿಶೇಷವಾಗಿದೆ. ೨ ಖಾಸಗಿ ಇಂಜನಿಯರ್, ವಕೀಲರಿದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ನೇರಳಗುಡ್ಡ ತಾಲ್ಲೂಕು ಪಂಚಾಯಿತಿ, ಹಾಗೂ ತಹಶೀಲ್ದಾರ್ ಕಛೇರಿ, ಹೊಂದಿದ್ದು, ನೇರಲಗುಡ್ಡ ಗ್ರಾಮಪಂಚಾಯ್ತಿ ಇಬ್ಬರು ಸದಸ್ಯರನ್ನು ಹೊಂದಿದೆ. ಇದು ಪೋಲೀಸ್ ಪಂಚಾಯ್ತಿ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ. ಸಾಂಪ್ರದಾಯಿಕ ಕಸಬಾದ ಕುಂಬಾರಿಕೆ ಕೆಲಸ ಮುಂದುವರಿದಿದ್ದು, ಮಡಿಕೆ ತಯಾರಿಕೆಯಲ್ಲಿ ತಾಲ್ಲೂಕಿನ ಮುಂಚೂಣಿಯಲ್ಲಿದೆ.

ಸ್ತ್ರೀ ಶಕ್ತಿ ಸಂಘಗಳು ಮತ್ತು ಗ್ರಾಮ ಅರಣ್ಯ ಸಮಿತಿಯನ್ನು ಹೊಂದಿದೆ. ಹಾಗೆಯೇ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಅಲ್ಲದೆ ಒಟ್ಟು ಸಾಕ್ಷರತಾ ಪ್ರಮಾಣ ಶೇ. ೭೭.೨ ರಷ್ಟಿದೆ. ಗ್ರಾಮದ ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ವಸ್ತ್ರ, ಪುಸ್ತಕ ಸೌಲಭ್ಯಗಳಿವೆ.

ಈ ಗ್ರಾಮದಲ್ಲಿ ಯಾವುದೇ ಆರೋಗ್ಯ ಕೇಂದ್ರಗಳು ಕಂಡು ಬರುವುದಿಲ್ಲ. ಸರ್ಕಾರದ ಸೌಲಭ್ಯವನ್ನು ಪಡೆದುಕೊಳ್ಳುತ್ತಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಇದರಲ್ಲಿ ಐತಿಹಾಸಿಕ ನೆಲೆ, ಸ್ಮಾರಕಗಳು, ಶಾಸನಗಳು ಕಂಡು ಬರುವುದಿಲ್ಲ. ಮತ್ತು ಧಾರ್ಮಿಕ ಕೇಂದ್ರಗಳಾದ ಆಂಜನೇಯ, ಲಕ್ಷ್ಮಿ ದೇವಾಲಯಗಳನ್ನು ಹೊಂದಿದೆ. ಪ್ರತಿ ವರ್ಷವೂ ಆಂಜನೇಯನ ಮತ್ತು ಲಕ್ಷ್ಮೀದೇವರ ಜಾತ್ರೆಯನ್ನು ಮಾಡುತ್ತಾರೆ. ಈ ಗ್ರಾಮದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಸಂಘಟನೆಗಳು ಇದ್ದು, ರಾಮೋತ್ಸವ ಕಾರ್ಯವನ್ನು ಪ್ರತಿವರ್ಷ ರಾಮನವಮಿಯಂದು ವಿಶೇಷವಾಗಿ ಆಚರಿಸುತ್ತಾರೆ.

## ರಂಗನಾಥಪುರ

ರಂಗನಾಥಪುರ ಇದು ಮರಡಿಗುಡ್ಡ ಎಂದೇ ಹೆಸರಾಗಿದೆ. ಪ್ರಖ್ಯಾತ ಪ್ರವಾಸ ಸ್ಥಳ. ಈ ಗ್ರಾಮದ ಬದಿಗೆ ೬೦ ಮೀ ಎತ್ತರದ ಗುಡ್ಡವಿದ್ದು ಅದರ ಮೇಲೆ ಸಾಲಿಗ್ರಾಮ ಶಿಲೆಯ ರಂಗನಾಥನ ಭೋಗನಿದ್ರಾ ಸ್ಥಿತಿಯ ಆಕರ್ಷಕ ಮೂರ್ತಿ, ಭೂತಗಳು, ನಾಗರಕಲ್ಲು, ದೇವಾಲಯದ ಹೊರವಲಯದಲ್ಲಿ ಒಂದು ಭೂತಪ್ಪನ ಗುಡಿಯಿದೆ. ಕಲ್ಯಾಣ ಮಂಟಪ, ಉದ್ಯಾನ, ನೀರಿನ ಟ್ಯಾಂಕ್, ವಸತಿ ನಿಲಯಗಳಿಂದ ಕೂಡಿದೆ. ಸುತ್ತಲೂ ಕುರುಚಲು ಗಿಡ, ಮರ, ಕೆಳಗೆ ಕೆಂಪು ಭೂಮಿ ಈ ಗುಡ್ಡದ ಬುಡದಲ್ಲಿ ಪರಸವ್ವನ ಕೆರೆ ಆಕರ್ಷಣೀಯ ಸ್ಥಳವಾಗಿದೆ.

ಮೊದಲಿಗೆ ರಂಗನಹಳ್ಳಿ ಸಿರಾ-ಬುಕ್ಕಾಪಟ್ಟಣ ರಸ್ತೆಯ ಕಂಬದಹಳ್ಳಿ ಸನಿಹದಲ್ಲಿದ್ದು ಅಲ್ಲಿಂದ ದೇವಸ್ಥಾನದ ಬಳಿಗೆ ಕೆಲವು ಪೂಜಾರಿಗಳು ಸ್ಥಳಾಂತರವಾಗಿ ಗುಡ್ಡದ ರಂಗಾಪುರ ಎಂದಾಗಿ ಗ್ರಾಮ ನಿರ್ಮಾಣವಾಗಿದೆ. ಸರ್ಕಾರಿ ದಾಖಲೆಗಳಲ್ಲಿ ರಂಗನಹಳ್ಳಿ ಎಂದೇ ಉಲ್ಲೇಖಿತವಾಗಿದ್ದು ಇದೊಂದು ಕಂದಾಯ ಗ್ರಾಮವಾಗಿದೆ.

ಸಿರಾ-ಬುಕ್ಕಾಪಟ್ಟಣ ಮುಖ್ಯರಸ್ತೆಯಲ್ಲಿ ಕಂಬದಹಳ್ಳಿ ಗೇಟಿನಿಂದ ೪ ಕಿಮೀ ದೂರದಲ್ಲಿ ಈ ಗ್ರಾಮವಿದೆ. ಸಿರಾದಿಂದ ೨೫ ಕಿಮೀ ದೂರದಲ್ಲಿದೆ. ಗ್ರಾಮದ ಪೂರ್ವಕ್ಕೆ ಎತ್ತರ ಗುಡ್ಡ, ಆ ಗುಡ್ಡದ ಮೇಲೆ ರಂಗನಾಥಸ್ವಾಮಿ ಮೂಲಗುಡಿ, ಕೆಳಗೆ ರಂಗನಾಥನ ಮೆರವಣಿಗೆ ದೇವರು, ೩೦ ಮಂಟಪ, ಕಲ್ಯಾಣಿ, ತೇರು ಬಯಲು, ತೋಪು ಇದೆ. ಇದರ ಸನಿಹದಲ್ಲಿಯೇ ಪರಸಮ್ಮನ ಕೆರೆಯಿದ್ದು ಕಾಡುಗೊಲ್ಲರ ಸಂಸ್ಕೃತಿಯಲ್ಲಿ ಈ ಕೆರೆಗೆ ವಿಶೇಷ ಮಹತ್ವವಿದೆ. ತಮ್ಮ ದೇವರುಗಳನ್ನು ನಡೆಮಡಿಯಲ್ಲಿ ತಂದು ಪರಸಮ್ಮನ ಕೆರೆಯಲ್ಲಿ ಪುಣ್ಯ ಸ್ನಾನ ಮಾಡಿಸುವುದು ಪವಿತ್ರ ಎಂಬ ಭಾವನೆಯಿದೆ. ಈ ಸಂಪ್ರದಾಯ ಇಂದಿಗೂ ನಡೆದುಕೊಂಡು ಬಂದಿದೆ.

ಈ ಗ್ರಾಮದ ಸನಿಹದಲ್ಲಿ ಕುರುಚಲು ಕಾಡು, ಕೆಂಪುಮಿಶ್ರಿತ ಕಂದು ಬಣ್ಣದ ಕಲ್ಲು, ಕೆಂಪು ಮಣ್ಣಿನಿಂದ ಕೂಡಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಬಯಲು, ಗುಡ್ಡ, ಕುರುಚಲು ಕಾಡಿನ ಭೂಪ್ರದೇಶವಾಗಿದ್ದು ವಾರ್ಷಿಕ ಸರಾಸರಿ ಮಳೆ ೪೫೦.೬ ಮಿಮೀ ಆಗಿದ್ದು ಉಷ್ಣಾಂಶ ೩೯-೪೦ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಗ್ರಾಮದ ಸನಿಹದಲ್ಲಿ ಪರಸವ್ವನ ಕೆರೆಯಿದ್ದು ತುಂಬುವುದು ಅಪರೂಪ. ಒಂದು

ಹಳ್ಳವೂ ಮಳೆಗಾಲದಲ್ಲಿ ಹರಿಯುತ್ತದೆ. ರಂಗನಾಥನ ಮಜ್ಜನದ ಬಾವಿ ಅಥವಾ ಕಲ್ಯಾಣಿ ಇಂದಿಗೂ ಅರೆ ತುಂಬಿದ ಸ್ಥಿತಿಯಲ್ಲಿದ್ದು ನೀರು ಮಲಿನವಾಗಿದೆ. ಬಳಸಲು ಸಾಧ್ಯವಿಲ್ಲವಾಗಿದೆ. ಕುಡಿಯಲು ಹುಯಿಲ್‌ದೊರೆ ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತದೆ. ಈ ಪರಿಸರದಲ್ಲಿ ೧೨೫ ಕೊಳವೆ ಬಾವಿಗಳಿದ್ದು ಅದರಿಂದ ರೈತರು ಉಪನೀರಾವರಿ ಮಾಡಿಕೊಂಡು ಬೆಳೆ ಬೆಳೆಯುತ್ತಾರೆ.

ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಬೆಸ್ತರು, ನಾಯಕರು, ಲಂಬಾಣಿಗರು ಕಿರು ಸಮುದಾಯವಾಗಿವೆ. ಗ್ರಾಮದಲ್ಲಿ ಕನ್ನಡ ಮಾತೃಭಾಷೆಯಾಗಿದ್ದು ಲಂಬಾಣಿ ಭಾಷೆಯನ್ನು ಬಳಸುತ್ತಾರೆ. ವಿವಿಧ ಸ್ವರೂಪಗಳ ಒಟ್ಟು ೩೭೧ ಮನೆಗಳಿದ್ದು ಅವು ಕಾಂಕ್ರೀಟ್, ಕಲ್ಲಿನ, ಶೀಟಿನ, ಹೆಂಚಿನ ಮನೆಗಳಾಗಿವೆ. ೧೧೨ ಮನೆಗಳು ಸರ್ಕಾರದ ವಸತಿ ಸೌಲಭ್ಯಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ರಚನೆಯಾದ ಹಾಗೂ ಉಚಿತ ವಿದ್ಯುತ್ ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧೦೭೧ ಜನಸಂಖ್ಯೆ ಹೊಂದಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಳ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ರಂಗನಾಥಪುರ, ಮರಡಿಗುಡ್ಡ, ಕಂಬದಹಳ್ಳಿ ಗೇಟಿನಿಂದ ಸಂಪರ್ಕ ಟಾರ್ ರಸ್ತೆಯಿದ್ದು ಸಾರಿಗೆ ಬಸ್ ಸಂಚಾರವಿದೆ. ಚರಂಡಿ ವ್ಯವಸ್ಥೆಯಿದೆ.

ಗ್ರಾಮದಲ್ಲಿ ಒಟ್ಟು ೩೭೧ ಮನೆಗಳಿದ್ದು ೧೦೭೧ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಕುಂಚಿಟಿಗ, ಗಂಗಾಮತಸ್ಥ, ಲಂಬಾಣಿಗರ ಮನೆಗಳಿವೆ. ಇವರ ಮುಖ್ಯ ಭಾಷೆ ಕನ್ನಡವಾಗಿದೆ.

ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಇಲ್ಲಿ ಶೇಂಗಾ ಪ್ರಮುಖ ಬೆಳೆಯಾಗಿದ್ದು ಇದರೊಂದಿಗೆ ರಾಗಿ, ಭತ್ತ, ಜೋಳ, ತೆಂಗು, ಅಡಿಕೆ, ಹುಣಸೆ ಬೆಳೆಗಳನ್ನು ಬೆಳೆಯುತ್ತಾರೆ. ಇವುಗಳೇ ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಈ ಗ್ರಾಮದಲ್ಲಿ ಹೆಚ್ಚಿನ ಆದಾಯಕ್ಕಾಗಿ ಆಧುನಿಕ ಡೈರಿಯನ್ನು ಹೊಂದಿದ್ದು ಪಶುಸಂಗೋಪನೆಯು ಆರ್ಥಿಕೇತರ ಆದಾಯ ಗಳಿಸಲು ಸಹಕಾರಿಯಾಗುತ್ತಿದೆ.

ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಡಾ॥ಆರ್.ಪಿ. ಜಯಪ್ರಕಾಶ್ ನಾರಾಯಣ್ ಸೇರಿ ಶಿಕ್ಷಕರು, ರಕ್ಷಣಾ ಇಲಾಖೆಯ ೩ ಜನ ಸರ್ಕಾರಿ ನೌಕರರಿದ್ದಾರೆ. ಬೃಹತ್ ಕೈಗಾರಿಕೆಗಳಿಲ್ಲದಿದ್ದರೂ ಟೈಲರಿಂಗ್, ಬೀಡಿ ಸುತ್ತುವುದು, ಊಟದ ಎಲೆ ತಯಾರಿಸುವ ಗೃಹ ಕೈಗಾರಿಕೆಗಳನ್ನು ಕಾಣಬಹುದು. ಆರ್.ವಿ. ಬಸವರಾಜು, ರಂಗನಾಥಪ್ಪ, ಜೊ॥ ರಂಗನಾಥಪ್ಪ ಖಾಸಗಿ ವಕೀಲರಿದ್ದಾರೆ. ಆರ್.ವಿ. ಪುಟ್ಟಕಾಮಣ್ಣ ನಿವೃತ್ತ ಅಧ್ಯಾಪಕರಾಗಿದ್ದಾರೆ.

ಈ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ, ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ ಸಿರಾ ತಹಸೀಲ್ದಾರ್ ಕಛೇರಿಯನ್ನು ಹೊಂದಿದೆ. ಅಲ್ಲದೇ ಹುಯಿಲ್‌ದೊರೆ ಗ್ರಾಮಪಂಚಾಯ್ತಿ ಇಬ್ಬರು ಸದಸ್ಯರನ್ನು ಒಳಗೊಂಡಿದೆ. ಇದಕ್ಕೆ ರಸ್ತೆ ಮಾರ್ಗವನ್ನು ಹೊಂದಿದೆ. ಅಲ್ಲದೇ ಸಾರಿಗೆ ಸಂಪರ್ಕ ಮತ್ತು ಹುಯಿಲ್‌ದೊರೆ ಅಂಚೆ ಕಛೇರಿ ಹಾಗೂ ಚರ ದೂರವಾಣಿಗಳಾದ ಮೊಬೈಲ್‌ಗಳನ್ನು ಹೊಂದಿದೆ. ಈ ಗ್ರಾಮವು ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದೆ ಅಲ್ಲದೇ ಬಗೆಹರಿಯದ ಕಲಹಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ.

ಈ ಗ್ರಾಮದಲ್ಲಿ ಇಲ್ಲಿನ ೩ ಸ್ತ್ರೀಶಕ್ತಿ ಸಂಘಗಳು ಮತ್ತು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವನ್ನು ಹೊಂದಿ ಸಣ್ಣ ಪ್ರಮಾಣದ ಉಳಿತಾಯ ಮಾಡಲು ಸಹಾಯಕವಾಗಿವೆ. ಅಲ್ಲದೇ ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೫.೬% ಆಗಿದೆ.

ಈ ಗ್ರಾಮದಲ್ಲಿ ಯಾವುದೇ ಆರೋಗ್ಯ ಕೇಂದ್ರವಿಲ್ಲದೇ ಇದ್ದರೂ ಕುಟುಂಬ ಕಲ್ಯಾಣ ಇಲಾಖೆಯ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಈ ಗ್ರಾಮದಲ್ಲಿ ೬ ಲ್ಲರೆ ವ್ಯಾಪಾರದ ಅಂಗಡಿಗಳಿವೆ. ಈ ಗ್ರಾಮದಲ್ಲಿ ಐತಿಹಾಸಿಕ ನೆಲೆಯ ಪುರಾವೆಗಳಿಲ್ಲದಿದ್ದರೂ ಇತಿಹಾಸ ಪ್ರಸಿದ್ಧ ಮರಡಿ ರಂಗನಾಥಸ್ವಾಮಿ ದೇವಾಲಯದ ಬಳಿ ವೀರಗಲ್ಲುಗಳು, ಅರಳಿವೃಕ್ಷ, ಕರಿಗಲ್ಲುಗಳನ್ನು ಹೊಂದಿದೆ. ಕ್ರಿ.ಶ.೧೭ ನೇ ಶತಮಾನಕ್ಕೆ ಸಲ್ಲುವ ಒಂದು ತಾಮ್ರಪತ್ರ ಈ

ಗ್ರಾಮದ ಹೆಸರಿನಲ್ಲಿದ್ದು ಅದು ಜಯಪತ್ರದ ಮಾದರಿಯಲ್ಲಿದೆ. ಇದನ್ನು ಡಾ॥ ಲಕ್ಷ್ಮಣ್ ತೆಲಗಾವಿ, ಸೂರ್ಯನಾಥ ಕಾಮತ್ ಇತಿಹಾಸ ದರ್ಶನ ಸಂಪುಟದಲ್ಲಿ ಪ್ರಕಟಿಸಿರುತ್ತಾರೆ. ಪ್ರಾಚೀನ ಕಾಲದ ಕಲ್ಯಾಣಿಯನ್ನು ಹೊಂದಿದೆ. ಈ ಗ್ರಾಮದ ಧಾರ್ಮಿಕ ಕೇಂದ್ರಗಳಲ್ಲಿ ಮರಡಿ ರಂಗನಾಥಸ್ವಾಮಿ ದೇವಾಲಯವು ಇತಿಹಾಸ ಪ್ರಸಿದ್ಧವಾಗಿದೆ. ಪ್ರತಿ ವರ್ಷ ಯುಗಾದಿಯ ನಂತರ ಚಿತ್ತಾನ ಕ್ಷೇತ್ರದಲ್ಲಿ ಜಾತ್ರೆಯನ್ನು ಮಾಡುತ್ತಾರೆ. ಬೃಹತ್ ಹೂವಿನ, ಕಲ್ಲುಗಾಲಿ ತೇರು ಹರಿಯುತ್ತದೆ. ಮಂಡೆ, ಹರಿಸೇವೆ ಹರಕೆ ಸಂಪ್ರದಾಯ ನಡೆಯುತ್ತದೆ. ಜನಗಳ ಜಾತ್ರೆಯೂ ನಡೆಯುತ್ತದೆ.

ಹರಿಗೆ ಕುಣಿತದ ಪ್ರಸಿದ್ಧ ಕಲಾವಿದರಾದ ಈರಕರಿಯಣ್ಣ, ರಂಗಪಾಪಯ್ಯ, ಭೂತೇಗೌಡ, ಕಾಮಣ್ಣ, ಹಾಲಪ್ಪ ಈ ಗ್ರಾಮದ ವಿಶೇಷ. ಶ್ರಾವಣ ಶನಿವಾರ ಮತ್ತು ದಸರಾ ಸಂದರ್ಭದಲ್ಲಿ ಹರಿಕೆ ಕುಣಿತ ಏರ್ಪಡುತ್ತದೆ. ಆರ್.ವಿ. ಪುಟ್ಟಕಾಮಣ್ಣ ಪರಿಸರವಾದಿ, ಚಿಂತಕರಾಗಿದ್ದು ಭೂಮಿತಾಯಿ ಒಡಲಿಗೆ ಕನ್ನ ಎಂಬ ವಿಶಿಷ್ಟ ಪುಸ್ತಕವನ್ನು ಸಂಪಾದಿಸಿದ್ದಾರೆ. ಇದು ಮರಳು, ಮರ ನಾಶ, ಪ್ರಕೃತಿಯ ವಿನಾಶಕಾರಿ ಬೆಳವಣಿಗೆ ಕುರಿತ ವಿಚಾರಪೂರಿತ ಲೇಖನಗಳನ್ನು ಸಂಕಲಿಸಿದ್ದಾರೆ. ಸಿರಾ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿದ್ದು ಪ್ರೊ॥ ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯು ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಸಿರಾ ನಗರದಲ್ಲಿ ಬೃಹತ್ ಪ್ರಮಾಣದಲ್ಲಿ ನಡೆಸುವುದರ ಜೊತೆಗೆ ಸಿರಾ ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದು ಭವನ ನಿರ್ಮಾಣಕ್ಕೆ ಸ್ಥಳ ಕನ್ನಡ ವ್ಯವಸ್ಥೆಯನ್ನು ಮಾಡಿದ ಹಿರಿಮೆಯೂ ಇವರಿಗೆ ಸಲ್ಲುತ್ತದೆ.

ಲಂಬಾಣಿ ಕುಣಿತದ ರಂಗಣ್ಣ ನಾಯಕ, ಲಕ್ಷ್ಮೀಬಾಯಿ, ಲಲಿತಾಬಾಯಿ, ಸಕ್ರಾಬಾಯಿ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ರಾಮಾನಾಯಕ, ದಾದಾನಾಯ್ಕ, ಪಾಲಾನಾಯ್ಕ ಉತ್ತಮ ರಂಗಕಲಾವಿದರಾಗಿದ್ದಾರೆ. ಸಪೂರ್ಣ ರಾಮಾಯಣ, ಸತ್ಯ ಹರಿಶ್ಚಂದ್ರ ಈ ಗ್ರಾಮದಲ್ಲಿ ಪ್ರತಿ ವರ್ಷವೂ ಪ್ರಯೋಗವಾಗುತ್ತಿರುವ ಪೌರಾಣಿಕ ನಾಟಕಗಳಾಗಿವೆ.

## ರಂಗಾಪುರ

ರಂಗಾಪುರ, ಗುಡ್ಡದ ರಂಗಾಪುರ, ಕಂಬದಹಳ್ಳಿ ರಂಗಾಪುರ ಎಂದು ಕರೆಯಲ್ಪಡುವ ಈ ಗ್ರಾಮ ಸಿರಾ-ಬುಕ್ಕಾಪಟ್ಟಣ ಮುಖ್ಯ ರಸ್ತೆಯಲ್ಲಿ ಕಂಬದಹಳ್ಳಿ ಗೇಟಿನಿಂದ ಎಡಕ್ಕೆ ೨ ಕಿಮೀ ದೂರದಲ್ಲಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ೨೩ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಇದರ ಮಜರೆ ಗ್ರಾಮವಾಗಿ ರಂಗನಾಥಪುರ ಸೇರ್ಪಡೆಯಾಗಿದೆ. ಈಗಿನ ಗುಡ್ಡದ ಬಳಿಯಿರುವ ರಂಗನಾಥಪುರ ಈ ಗ್ರಾಮದ ಮೂಲವಾಗಿದ್ದು ಕೆಲವು ಒಕ್ಕಲುಗಳು ರಂಗನಾಥ ದೇವಸ್ಥಾನದ ಬಳಿ, ಗುಡ್ಡದ ಬುಡದಲ್ಲಿ ಮನೆ ನಿರ್ಮಿಸಿಕೊಂಡರು. ಅದು ಕೂಡ ರಂಗನಾಥಪುರ ಎಂದು ಕರೆದುಕೊಂಡಿತು.

ಗುಡ್ಡದ ರಂಗನಾಥ ದೇವರ ಹೆಸರಲ್ಲಿ ಗ್ರಾಮ ರಚನೆಯಾದುದರಿಂದ ರಂಗಾಪುರ ಎಂಬ ಹೆಸರು ಬಂದಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೮೬೦.೩೪ ಹೆಕ್ಟೇರ್ ಇದ್ದು ಗುಡ್ಡದ ರಂಗಾಪುರ ಇದರೊಂದಿಗೆ ಹಂಚಿಕೊಂಡಿದೆ. ಕೆಂಪು ಚಿಟ್, ಕಂದುಬಣ್ಣದ ಕಲ್ಲುಗಳು, ಬೆಣಚು ಕಲ್ಲು, ಕಂದುಮಿಶ್ರಿತ ಮರಳು ಮಣ್ಣು ಇಲ್ಲಿನ ಭೂಪ್ರದೇಶ. ಗ್ರಾಮದ ಸುತ್ತ ವಿಶೇಷವಾಗಿ ಪೂರ್ವಕ್ಕೆ ಒಂದು ರಕ್ಷಿತ ಅರಣ್ಯ ಪ್ರದೇಶವಿದೆ. ಗುಡ್ಡ, ಕುರುಚಲು ಗಿಡ-ಮರ ಬಯಲು ಪ್ರದೇಶವಾಗಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಬಯಲು ಪ್ರದೇಶವಾಗಿದ್ದು ಮಳೆ ಪ್ರಮಾಣ ಕಡಿಮೆ. ಕಳೆದ ೨ ವರ್ಷಗಳಲ್ಲಿ ವಾರ್ಷಿಕ ಸರಾಸರಿ ಮಳೆ ೪೬೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಕೆಯಾಗುತ್ತಿದ್ದು ಉಪನೀರಾವರಿಗೆ ೧೬ ಕೊಳವೆ ಬಾವಿಗಳಿವೆ. ಇವು ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ರಚನೆಯಾಗಿವೆ. ಪರಸವ್ವನ ಕೆರೆಯಿಂದ ನೀರು ಗದ್ದೆಗಳಿಗೆ ಬಳಕೆಯಾಗುವ ಅವಕಾಶವಿದ್ದು ಅದು ತುಂಬುವುದು ಅಪರೂಪವಾಗಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ದೊಡ್ಡ ಸಮುದಾಯವಾಗಿದ್ದು ವಡ್ಡರು, ಬೇಡರು ಕಿರು ಸಮುದಾಯವಾಗಿದೆ. ೨ ಮುಸ್ಲಿಂ ಕುಟುಂಬಗಳೂ ಇವೆ. ಕನ್ನಡ ಮಾತೃಭಾಷೆಯಾಗಿದ್ದು ಉರ್ದು ಅಲ್ಪಸಂಖ್ಯಾತ ಭಾಷೆಯಾಗಿದೆ. ಒಟ್ಟು ೧೮೬ ಜನಸಂಖ್ಯೆ ಇದೆ. ಕಾಂಕ್ರೀಟ್, ಮಣ್ಣಿನ, ಹೆಂಚಿನ ಸ್ವರೂಪದ ಮನೆಗಳಿದ್ದು ಇವು ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಯ ಅಡಿಯಲ್ಲಿ ರಚನೆಯಾಗಿವೆ. ೫೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ರಾಗಿ, ಶೇಂಗಾ, ತೊಗರಿ ಬೆಳೆಯುತ್ತಿದ್ದು ವ್ಯಾಪಾರಿ ಸರಕಾಗಿ ಶೇಂಗಾ, ಹುಣಸೆಹಣ್ಣು, ಹೊಂಗೆಬೀಜಗಳಿವೆ. ಮಹಿಳೆಯರು ಹುಣಸೆಹಣ್ಣು ಬಿಡಿಸುವ, ಬೀಡಿ ಸುತ್ತುವ ಉಪಕಸುಬು ಹೊಂದಿದ್ದಾರೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ, ಹುಯಿಲ್‌ದೊರೆ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವೂ ಆಗಿದೆ. ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಚರದೂರವಾಣಿ ಸಂಪರ್ಕ ಹೊದಿದದೆ. ಎರಡು ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೩.೦೪% ಆಗಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಧಾರ್ಮಿಕವಾಗಿ ೨ ಕರಿಗಲ್ಲುಗಳಿದ್ದು ಅರಳಿಕಟ್ಟೆ ಇದೆ. ಮಾರಮ್ಮ, ಕೊಲ್ಲಾಪುರದಮ್ಮನ ಪೌಳಿಗಳಿವೆ. ಮರಡಿ ರಂಗನಾಥನಿಗೆ ಎದುರೆತ್ತಿ ಆರತಿ, ಬಲಿ ಸಂಪ್ರದಾಯವಿದೆ. ಮರಡಿ ರಂಗನಾಥನ ಜಾತ್ರೆಯಲ್ಲಿ ಈ ಗ್ರಾಮದವರು ನಿಷ್ಠೆಯಿಂದ ಪಾಲ್ಗೊಳ್ಳುತ್ತಾರೆ.

## ರಂಗನಹಳ್ಳಿ (ಚಿಕ್ಕ ಅಗ್ರಹಾರ ಮಜರೆ ಗ್ರಾಮ)

ರಂಗನಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿ ೧೯ ಕಿಮೀ ದೂರದಲ್ಲಿದೆ. ಈ ಗ್ರಾಮವು ರಂಗನಹಳ್ಳಿಯ ಚಿಕ್ಕ ಅಗ್ರಹಾರದ ಉತ್ತರಕ್ಕಿದೆ. ಇದು ಸಹ ಕಂದಾಯ ಗ್ರಾಮವಾಗಿದ್ದು ಚಿಕ್ಕಅಗ್ರಹಾರದಿಂದ ಹೋದಂತಹ ವಲಸೆಗಾರರಾಗಿದ್ದಾರೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೧೧೬.೦೯ ಹೆಕ್ಟೇರ್‌ಗಳು.

ಗ್ರಾಮದ ಭೂಮೇಲ್ಮೈ ಬಯಲುನಾಡಿನ ಪ್ರದೇಶ, ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇದಕ್ಕೆ ಯಾವುದೇ ಗುಡ್ಡ ಅರಣ್ಯ ಪ್ರದೇಶವು ಇಲ್ಲದಿದ್ದರೂ ರಂಗನಾಥಪುರ (ಹುಯಿಲ್‌ದೊರೆ ಪಂಚಾಯ್ತಿ) ಗೆ ಸೇರಿದಂತಹ ಅರಣ್ಯವು ಪಕ್ಕದಲ್ಲಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೨೫.೯ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಇಲ್ಲಿ ಒಂದು ಕೈಪಂಪು, ೧೨ ಕೊಳವೆ ಬಾವಿಗಳಿವೆ. ಅದರಲ್ಲಿ ಒಂದು ಕುಡಿಯುವ ನೀರು ಪೂರೈಕೆಗೆ ಸಹಾಯಕವಾಗಿದೆ. ಇದಲ್ಲದೇ ಮಳೆಗಾಲದಲ್ಲಿ ತುಂಬುವಂತಹ ಒಂದು ಕಟ್ಟೆಯಿದೆ. ಈ ಗ್ರಾಮದಲ್ಲಿ ಒಟ್ಟು ೧೬ ಮನೆಗಳನ್ನು ಹೊಂದಿದ್ದು ೫೨ ಜನಸಂಖ್ಯೆಯಿದೆ. ಎಲ್ಲಾ ಮನೆಗಳು ಶೀಟಿನ ಮನೆಗಳಾಗಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಕೃಷಿ ಈ ಗ್ರಾಮದ ಪ್ರಮುಖ ಕಸುಬಾಗಿದೆ. ಶೇಂಗಾ, ಸೂರ್ಯಕಾಂತಿ, ನವಣೆ, ಜೋಳ, ದ್ವಿದಳ ಧಾನ್ಯಗಳು. ತೆಂಗು, ಅಡಿಕೆ ಬೆಳೆಯನ್ನು ಬೆಳೆಯುತ್ತಾರೆ. ಇಲ್ಲಿನ ವ್ಯಾಪಾರದ ಸರಕುಗಳು ಕೂಡ ಆಗಿವೆ. ಯಾವುದೇ ರೀತಿಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆಗಳಿಲ್ಲದಿದ್ದರೂ ಕೃಷಿ ಕಾರ್ಮಿಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಿಕ್ಷಣ ಇಲಾಖೆಗೆ ಸೇರಿದ ಒಬ್ಬರು ಸರ್ಕಾರಿ ನೌಕರರಿದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ ಮತ್ತು ದೊಡ್ಡ ಅಗ್ರಹಾರ ಗ್ರಾಮಪಂಚಾಯ್ತಿ ಹಾಗೂ ಸಿರಾ ತಹಸೀಲ್ದಾರ್ ಕಛೇರಿ ಹಾಗೂ ದೊಡ್ಡ ಅಗ್ರಹಾರ ಅಂಚೆ ಕಛೇರಿಯನ್ನು ಹೊಂದಿದ್ದಲ್ಲದೇ ಚರ ದೂರವಾಣಿಗಳಾಗಿ ಮೊಬೈಲ್‌ಗಳನ್ನು ಹೊಂದಿ ಸಂಪರ್ಕ ಸಾಧನಗಳಾಗಿವೆ. ರಸ್ತೆ ಸಂಪರ್ಕವು ಚಿಕ್ಕ ಅಗ್ರಹಾರಕ್ಕೆ ಖಾಸಗಿ ಮತ್ತು ಸರ್ಕಾರಿ ಬಸ್ಸುಗಳನ್ನು ಹೊಂದಿದ್ದು ಇದರ ಸೌಲಭ್ಯವನ್ನು ಪಡೆದಿದೆ. ಹಳ್ಳಿಯಲ್ಲಿ ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದೆ. ಅಲ್ಲದೆ ಬಗೆಹರಿಯದ ಸಮಸ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳಲಾಗುತ್ತಿದೆ.

ಬ್ಯಾಂಕಿಂಗ್ ವ್ಯವಸ್ಥೆಯಿಲ್ಲದಿದ್ದರೂ ಒಂದು ಸ್ತ್ರೀಶಕ್ತಿ ಸಂಘ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವು ಸಣ್ಣ ಉಳಿತಾಯಕ್ಕೆ ಸಹಕಾರಿಯಾಗಿವೆ. ಹಾಗೆಯೇ ಈ ಗ್ರಾಮದಲ್ಲಿ ಯಾವುದೇ ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಹೊಂದಿಲ್ಲ ಆದರೂ ಈ ಹಳ್ಳಿಯ ಸಾಕ್ಷರತಾ ಪ್ರಮಾಣ ೫೭.೦% ಆಗಿದೆ.

ಹಳ್ಳಿಯ ಜನರು ಕುಟುಂಬ ಕಲ್ಯಾಣ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದಾರೆ. ವಾರಕ್ಕೊಮ್ಮೆ ಆಶಾ ಕಾರ್ಯಕರ್ತೆಯರು ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿದುಕೊಳ್ಳುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಐತಿಹಾಸಿಕ ಸಂಸ್ಕೃತಿಯ ಪ್ರತೀಕಗಳಾದ ಸ್ಮಾರಕಗಳು, ಶಾಸನ ಮತ್ತು ಹಸ್ತಪ್ರತಿಗಳು ಕಂಡುಬರುವುದಿಲ್ಲ. ಈ ಗ್ರಾಮದಲ್ಲಿ ಆಂಜನೇಯ, ತಿಮ್ಮಪ್ಪ ಗ್ರಾಮದೇವತೆಯ ಧಾರ್ಮಿಕ ಪರಂಪರೆಯಾಗಿದೆ. ಪ್ರತಿ ವರ್ಷಕ್ಕೊಮ್ಮೆ ಮಾರಮ್ಮನ ಜಾತ್ರೆ ನಡೆಯುತ್ತದೆ. ಅದರಲ್ಲಿ ಬಲಿ ಕೊಡುವುದು ಹಾಗೂ ಆರತಿಗಳನ್ನು ಮಾಡುವುದು ಕಂಡುಬರುತ್ತದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ, ಗೌರಿ–ಗಣೇಶ ಈ ಗ್ರಾಮದ ಮುಖ್ಯ ಹಬ್ಬಗಳು.

## ಲಕ್ಷ್ಮೀಸಾಗರ

ಲಕ್ಷ್ಮೀಸಾಗರ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೧ ಕಿಮೀ ದೂರದಲ್ಲಿದ್ದು ಸಿರಾ–ಚಿತ್ರದುರ್ಗ ರ್‍ರಾಷ್ಟ್ರೀಯ ಹೆದ್ದಾರಿಗೆ ದ್ವಾರಾಳು ಗ್ರಾಮದಿಂದ ಎಡಬದಿಗೆ ೧.೫ ಕಿಮೀ ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು ಒಟ್ಟು ಭೌಗೋಳಿಕ ವಿಸ್ತೀರ್ಣ ೬೦೩.೧೦ ಹೆಕ್ಟೇರ್ ಭೂವಿಸ್ತೀರ್ಣ ಹೊಂದಿದೆ. ಸಿರಾ ಕಸಬಾ ಹೋಬಳಿಗೆ ಸೇರಿದ್ದು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವೂ ಆಗಿದೆ. ಆರಂಭದಲ್ಲಿ ಈ ಗ್ರಾಮಕ್ಕೆ ಹಂಡೇನಹಳ್ಳಿ ಎಂದು ಕರೆಯುತ್ತಿದ್ದರು. ನಂತರ ಹೆಸರು ರೂಪಾಂತರವಾಗಿ ಲಕ್ಷ್ಮೀಸಾಗರವಾಗಿದೆ. ತಾಲ್ಲೂಕು ಕಛೇರಿಯ ಬಹುತೇಕ ಹಳೆಯ ದಾಖಲೆಗಳಲ್ಲಿ ಇಂದಿಗೂ ಹಂಡೇನಹಳ್ಳಿ ಎಂದೇ ನಮೂದಾಗಿದೆ. ಇದೊಂದು ಜಾತಿ ಮತ್ತು ಬೆಡಗು ಮೂಲದ ಹೆಸರಾಗಿದ್ದು ಕುರುಬರಲ್ಲಿ ಹಂಡೇ ಕುರುಬ ಎಂಬ ಬೆಡಗಿದೆ. ಅಂತೆಯೇ ಕುಂಚಿಟಿಗರಲ್ಲಿಯೂ ಹಂಡೇ ಹಲಸೂರು ಎಂಬ ಒಂದು ಕುಲವಿದೆ. ಈಗಿನ ಲಕ್ಷ್ಮೀಸಾಗರದಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾದರೆ ಕುರುಬರು ಕಿರು ಸಮುದಾಯವಾಗಿದೆ. ಆದುದರಿಂದ ಯಾರಿಂದಲಾದರೂ ಹಂಡೆ ಹೆಸರು ಬಂದಿರಲಿ, ಅದು ಕುಲಮೂಲದ ವ್ಯಕ್ತಿವಾಚಕ ಶಬ್ದ ಎಂಬುದು ಖಚಿತ. 'ಹಂಡೇನ' ಹೆಸರು ಸೂಚಿಸುತ್ತದೆ. ಈ ಗ್ರಾಮದ ದಕ್ಷಿಣ ದಿಕ್ಕಿಗೆ ಗ್ರಾಮಕ್ಕೆ ಹೊಂದಿಕೊಂಡಂತೆ ಕೆರೆಯೊಂದು ಇದ್ದು ಈ ಕೆರೆ ಸಾಗರವಾಗಿರುವ ಹಿನ್ನೆಲೆಯಿಂದ ವಿಶೇಷವಾಗಿ ಕೊಲ್ಲಾಪುರದಮ್ಮ, ಮಾರಮ್ಮ ಎರಡು ಸ್ತ್ರೀಶಕ್ತಿದೇವತೆಗಳ ನೆಲೆಯೂ ಆಗಿರುವ ಹಿನ್ನೆಲೆಯಿಂದ ಲಕ್ಷ್ಮೀಕೆರೆ ಸಾಗರವಾಗಿ ಲಕ್ಷ್ಮೀಸಾಗರವಾಗಿದೆ.

ಮರಳುಮಿಶ್ರಿತ ಕಂದು ಮಣ್ಣನ್ನು ಹೊಂದಿದ್ದು ಕೆರೆ, ಅದರ ಬಯಲು ತೋಟಸಾಲು, ಕುರುಚಲು ಗಿಡಗಳ ಸಾಲು ಇರುವುದರಿಂದ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಮುಂಗುಸಿ, ತೋಳ, ಜಿಂಕೆ ಕಂಡುಬರುತ್ತವೆ. ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗೆ ಹಳ್ಳಿಕಾರ್ ಎತ್ತು, ಸೀಮೆ ಹಾಗೂ ನಾಟಿಹಸು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕುಪ್ರಾಣಿಗಳಾಗಿ ಸಾಕಿದ್ದಾರೆ. ಕೋಳಿ ಸಾಕುಪಕ್ಷಿಯಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಕೊಕ್ಕರೆ, ಗಿಳಿ, ಗೂಬೆ, ಹದ್ದು, ಗರುಡ, ಕೋಗಿಲೆ, ಕೊಕ್ಕರೆ, ಕಾಗೆ, ಗೊರವಂಕ, ಗಿಡುಗ, ಬಾನುಲಿ, ಗುಬ್ಬಚ್ಚಿ ಕಂಡುಬರುತ್ತವೆ. ವಿಷಜಂತುಗಳಾದ ಹಾವು, ಮಂಡರಗಪ್ಪೆ, ಚೇಳು ಕಂಡುಬರುತ್ತವೆ. ಇಲಿ, ಹೆಗ್ಗಣ, ತೋಡು, ಅಳಿಲು, ಮುಂಗುಸಿಗಳೂ ಇವೆ.

ಬಯಲುಸೀಮೆ. ಬಿಸಿಲು ಅಧಿಕವಾಗಿದ್ದು ವಾಡಿಕೆ ಮಳೆ ೪೫೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ವ್ಯವಸಾಯಕ್ಕೆ ಒಂದು ಕೆರೆಯಿದ್ದು ಅದು ೨೮೯ ಅಚ್ಚುಕಟ್ಟು ಪ್ರದೇಶ ಹೊಂದಿದ್ದು ನೀರಾವರಿ ಸಾಮರ್ಥ್ಯವಿದ್ದರೂ ತುಂಬುವುದು ವಿರಳ. ಹಾಗಾಗಿ ಕೃಷಿಗೆ ರೈತರು ಕೊಳವೆಬಾವಿಗಳನ್ನು ಆಶ್ರಯಿಸಿರುವುದನ್ನು ಕಾಣಬಹುದು. ಈ ಪರಿಸರದಲ್ಲಿ ೯೩ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಕೊಳಾಯಿಗಳ ಮೂಲಕ ನೀರು ಒದಗಿಸಿದ್ದಾರೆ. ಗ್ರಾಮದಲ್ಲಿ ಮನೆ ಹಾಗೂ ಬೀದಿ ಸಂಪರ್ಕ ಹೊಂದಿರುವ ಒಟ್ಟು ೧೨೦ ನಲ್ಲಿಗಳಿವೆ. ಎರಡು ಕೈಪಂಪು, ಒಂದು ಟ್ಯಾಂಕ್ ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಕುರುಬ, ನಾಯಕ, ಬೋವಿ, ವೀರಶೈವ, ಮುಸ್ಲಿಂ, ಉಪ್ಪಾರ, ವೈಶ್ಯ, ಕೊರಚ, ಮಡಿವಾಳ ಜನಾಂಗಗಳು ಕಿರು ಸಮುದಾಯಗಳಾಗಿವೆ. ಗ್ರಾಮದಲ್ಲಿ ಕನ್ನಡ

ಮಾತೃಭಾಷೆಯಾಗಿದ್ದು ಉರ್ದು, ತೆಲುಗು, ತಮಿಳು ಅಲ್ಪಸಂಖ್ಯಾತರ ಭಾಷೆಯಾಗಿದೆ.

ವಿವಿಧ ಪ್ರಕಾರಗಳ ೨೯೪ ಮನೆಗಳಿದ್ದು ಅವು ಕಲ್ಲಿನ, ಮಣ್ಣಿನ, ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದ ಮನೆಗಳಾಗಿವೆ. ೮೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಇಲ್ಲಿ ೧೨೩೮ ಜನಸಂಖ್ಯೆ ಹೊಂದಿದ್ದು ಇಲ್ಲಿನ ಮನೆಗಳಲ್ಲಿ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ, ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಹೊಂದಿರುವ ೩೧ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಲಾರಿ, ಟೆಂಪೋ, ಟಿಲ್ಲರ್ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಶೇಂಗಾ ಮುಖ್ಯ ಬೆಳೆಯಾದರೂ ಅಷ್ಟೇ ಪ್ರಮಾಣದಲ್ಲಿ ಸೀಡ್ಸ್ ಹತ್ತಿ, ಸೂರ್ಯಕಾಂತಿ, ರೇಷ್ಮೆ ಬೆಳೆದಿದೆ. ರಾಗಿ, ಜೋಳ, ತೊಗರಿ ಆಹಾರ ಬೆಳೆಗಳು. ಅಡಿಕೆ, ತೆಂಗು, ಭತ್ತ ವಿಶೇಷವಾಗಿ ಬೆಳೆಯುತ್ತಾರೆ. ಪ್ರಮುಖ ವಾಣಿಜ್ಯ ಬೆಳೆಯೂ ಹುಣಸೆಹಣ್ಣು, ಸೀಡ್ಸ್ ಹತ್ತಿ ಗ್ರಾಮದಲ್ಲಿದೆ.

ವಿಶೇಷ ಜಿಲ್ಲಾಧಿಕಾರಿ ರಾಧಾಕೃಷ್ಣ, ಇಂಜಿನಿಯರ್ ನಟರಾಜು, ಜಿಲ್ಲಾ ಸರ್ಜನ್ ಡಾ॥ ಚಂದ್ರಶೇಖರ್ ಸೇರಿ ಒಟ್ಟು ೨೭ ಜನ ಸರ್ಕಾರಿ ನೌಕರರಿದ್ದು ಶಿಕ್ಷಣ, ಬ್ಯಾಂಕ್, ಸಾರಿಗೆ, ಆರೋಗ್ಯ, ಲೋಕೋಪಯೋಗಿ ಇಲಾಖೆಯಲ್ಲಿದ್ದಾರೆ. ಸಿರಾ ಟೌನ್ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಎಲ್.ಆರ್. ಲಕ್ಷ್ಮೀಕಾಂತ ಇದೇ ಗ್ರಾಮದವರು. ಮಹಿಳೆಯರು ಬೀಡಿ ಸುತ್ತುವುದು, ಅಡಿಕೆ ಸುಲಿಯುವುದು, ಗರಿ ಕಡ್ಡಿ ಒರೆಯುವುದು ಮುಂತಾದ ಉಪಕಸುಬುಗಳನ್ನು ಕೈಗೊಂಡು ಆರ್ಥಿಕ ಸಬಲೀಕರಣಕ್ಕೆ ಪ್ರೇರಕರಾಗಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ ಕೇಂದ್ರವಾಗಿದ್ದು ಲಕ್ಷ್ಮೀಸಾಗರ ಗ್ರಾಮ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಒಂದು ಅಂಚೆ ಕಛೇರಿ, ಗ್ರಾಮಪಂಚಾಯ್ತಿ ಕಛೇರಿ ಇದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆಗಳಿದ್ದು ಶಾಲೆಯಲ್ಲಿ ೮೯ ಮಕ್ಕಳು, ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ೬೩.೭ ರಷ್ಟು ಸಾಕ್ಷರರಿದ್ದಾರೆ. ಒಂದು ಗ್ರಂಥಾಲಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೮ ಕಿರಾಣಿ, ಪೆಟ್ಟಿಗೆ ಅಂಗಡಿಗಳಿವೆ. ಒಂದು ಅರಳಿಕಟ್ಟೆ, ಶ್ರೀರಾಮ ಮಂದಿರ, ಕಣಿವೆ ಮಾರಕ್ಕ, ಕೊಲ್ಲಾಪುರದ ಮಹಾಲಕ್ಷ್ಮಿ ದೇವಸ್ಥಾನಗಳಿವೆ. ಭೂತಪ್ಪನ ಪೌಳಿಯಿದೆ. ಕೊಲ್ಲಾಪುರದ ಮಹಾಲಕ್ಷ್ಮಿ ದೇವರ ಊರ ಹಬ್ಬವಿದ್ದು ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಶಿವರಾತ್ರಿ, ಮಹಾನವಮಿ, ದಸರಾ, ಯುಗಾದಿ, ರಾಮನವಮಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಶ್ರೀ ಜಯರಾಮಯ್ಯ ಎಂಬ ರಂಗಭೂಮಿ ಕಲಾವಿದ, ಹಾರ್ಮೋನಿಯಂ ಮತ್ತು ಓ.ಎಲ್.ಗುರುಸ್ವಾಮಿ ರಂಗಭೂಮಿ ಕಲಾವಿದರಿದ್ದಾರೆ. ಚಿಕ್ಕರಂಗಪ್ಪ, ಏಕಾಂತಪ್ಪ, ದಾಸಪ್ಪ ಪ್ರಮುಖ ತಮಟೆ ಕಲಾವಿದರಾಗಿದ್ದಾರೆ.

## ಲಿಂಗದಹಳ್ಳಿ

ಲಿಂಗದಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರ–ಈಶಾನ್ಯಕ್ಕೆ ೮ ಕಿಮೀ ದೂರದಲ್ಲಿದೆ. ಸಿರಾ–ಅಮರಾಪುರ ರಸ್ತೆಯಲ್ಲಿ ಕೊಟ್ಟ ಹನುಮಂತನಗರ ಕ್ರಾಸಿನಿಂದ ಬಲಕ್ಕೆ ತಿರುಗಿ ೨ ಕಿಮೀ ಕ್ರಮಿಸಿದರೆ ಹೊನ್ನಗೊಂಡನಹಳ್ಳಿ ಮಾರ್ಗದಲ್ಲಿ ಲಿಂಗದಹಳ್ಳಿ ಇದೆ. ಇದೊಂದು ಕೊಟ್ಟ ಗ್ರಾಮದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೧೭೫೦ ಹೆಕ್ಟೇರ್ ಆಗಿದೆ. ಲಿಂಗದಹಳ್ಳಿ ಎಂಬ ನಾಮ ನಿಷ್ಪತ್ತಿ ಈ ಗ್ರಾಮದ ನಡುವೆ ಈಶ್ವರನ ದೇವಾಲಯವಿದ್ದು ಬೃಹತ್ ಶಿವಲಿಂಗವಿದೆ. ಶಿವಲಿಂಗ ಇರುವ ಕಾರಣದಿಂದಲೇ ಲಿಂಗದಹಳ್ಳಿ ಎಂದು ಕರೆಯಲಾಗಿದೆ.

ಬಿಳಿಮಿಶ್ರಿತ ಮಣ್ಣು ಗ್ರಾಮದ ಉತ್ತರ ಭಾಗಕ್ಕೆ ತಗ್ಗು ಇದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಬಾರುಬೆಕ್ಕು, ಉಡ ಮೊದಲಾದವು ಕಂಡುಬರುತ್ತವೆ. ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಗುಬ್ಬಚ್ಚಿ, ಕೋಗಿಲೆ, ಕಾಗೆ, ಹದ್ದು, ಗರುಡ ಕಂಡುಬಂದರೆ ಕೋಳಿ ಸಾಕುಪಕ್ಷಿಯಾಗಿದೆ. ಕೃಷಿ ಹಾಗೂ ಹಾಲು ಉತ್ಪಾದನೆಗಾಗಿ ಗ್ರಾಮಸ್ಥರು ಹಳ್ಳಿಕಾರ್ ಎತ್ತು, ನಾಟಿ ಹಸು, ಸೀಮೆಹಸು, ಕುರಿ, ಮೇಕೆ, ಎಮ್ಮೆ, ನಾಯಿಗಳಿವೆ.

ವಾರ್ಷಿಕ ವಾಡಿಕೆ ಮಳೆ ೪೫೩ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್

ಸಾಮಾನ್ಯವಾಗಿರುತ್ತದೆ. ಕೃಷಿ ಕಾಯಕದಿಂದಾಗಿ ರೈತರು ಮಳೆನೀರಿನ ಆಶ್ರಯದ ಜೊತೆಗೆ ೮೫ ಬೋರ್‌ವೆಲ್ ಬಳಸುತ್ತಾರೆ. ಕುಡಿಯಲು ಗ್ರಾಮ ಪಂಚಾಯ್ತಿಯ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಸರಬರಾಜಿದೆ. ೮ ಕಿರು ಟ್ಯಾಂಕ್‌ಗಳಲ್ಲಿ ೨ ನಲ್ಲಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಬೇಡ, ಮುಸ್ಲಿಂ, ಕುಂಬಾರ ಕಿರು ಸಮುದಾಯಗಳಾಗಿವೆ. ಕನ್ನಡ, ಉರ್ದು ಭಾಷೆ ಗ್ರಾಮದಲ್ಲಿ ಬಳಕೆಯಲ್ಲಿದೆ. ವಿವಿಧ ಪ್ರಕಾರಗಳ ೧೮೦ ಮನೆಗಳಿದ್ದು ಅವು ಕಲ್ಲಿನ, ಕಾಂಕ್ರೀಟ್, ಶೀಟಿನ ಹಾಗೂ ಹೆಂಚಿನ ಮನೆಗಳಾಗಿವೆ. ವಸತಿ ಸೌಲಭ್ಯ ಪಡೆದು ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ೧೬ ಜನ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೪೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಗ್ರಾಮದ ಒಟ್ಟು ಸಂಖ್ಯೆ ೮೪೬ ಇದೆ.

ಗ್ರಾಮದಲ್ಲಿ ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನ ಎತ್ತಿನ ಬಂಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನ ಬಳಸುತ್ತಾರೆ.

ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ. ಭತ್ತ, ತೊಗರಿ, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ಅಡಿಕೆ, ತೆಂಗಿನ ತೋಟಗಳೂ ಇವೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ ಹಾಗೂ ಹುಣಸೆಹಣ್ಣಿನ ವ್ಯಾಪಾರ ಗ್ರಾಮದಲ್ಲಿದೆ. ಸರ್ಕಾರಿ ಸೇವೆಯಲ್ಲಿ ಕೆಎಸ್‌ಆರ್ಟಿಸಿ, ಶಿಕ್ಷಣ ಹಾಗೂ ಇತರೆ ಇಲಾಖೆಗೆ ಸೇರಿದ ೪ ಜನ ನೌಕರರಿದ್ದಾರೆ. ಉಪಕಸುಬಾಗಿ ಟೈಲರಿಂಗ್, ಬೀಡಿ ಕಟ್ಟುವುದು ಇದೆ. ಬದಿಯಲ್ಲಿಯೇ ಇಟ್ಟಿಗೆ ಫ್ಯಾಕ್ಟರಿ ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ಕೊಟ್ಟ ಗ್ರಾಮಪಂಚಾಯ್ತಿ ಹಾಗೂ ಮೇಲ್ಕುಂಟೆ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಸೇರಿರುವ ಈ ಗ್ರಾಮ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದಲ್ಲಿ ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಹಣಕಾಸಿನ ವ್ಯವಸ್ಥೆಯಲ್ಲಿ ೪ ಸ್ತ್ರೀಶಕ್ತಿ ಸ್ವಸಹಾಯ ಗುಂಪು, ೨ ಧರ್ಮಸ್ಥಳ ಸ್ವಸಹಾಯ ತಂಡಗಳಿದ್ದು ಆರ್ಥಿಕ ಸಬಲತೆಯಲ್ಲಿ ತೊಡಗಿಸಿಕೊಂಡಿವೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಶಾಲೆಯಲ್ಲಿ ೮೭ ಮಕ್ಕಳು, ೩ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೮.೫ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೬ ಪೆಟ್ಟಿಗೆ ಅಂಗಡಿ, ೨ ಟೀ ಅಂಗಡಿಗಳಿವೆ. ಈಶ್ವರ, ರಂಗನಾಥ, ನರಸಿಂಹಸ್ವಾಮಿ, ಶನಿಮಹಾತ್ಮ ಹಾಗೂ ಗ್ರಾಮದೇವತೆ ಮಾರಮ್ಮನ ದೇವಾಲಯವಿದೆ. ಚಂದ್ರಯ್ಯ ಹಿರಿಯ ರಂಗಭೂಮಿ ಕಲಾವಿದರಾಗಿದ್ದು ಮಾಸಾಶನ ಪಡೆಯುತ್ತಾರೆ.

ಪ್ರತಿವರ್ಷ ದಸರಾ ದಿನದಂದು ದೇವತೆಗಳ ಉತ್ಸವ, ಅಂಬು ಹಾಯುವುದು, ಊರಾಡುವ ಕಾರ್ಯಕ್ರಮವಿರುತ್ತದೆ. ಮಾರಮ್ಮ ದೇವತೆಗೆ ಊರಹಬ್ಬದ ನೆಪದಲ್ಲಿ ಆರತಿ, ಬೇಟೆ, ಬಾನ ಹಾಗೂ ಹರಕೆ ಸಂಪ್ರದಾಯವಿದೆ. ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ಮಹಾನವಮಿ ಹಾಗೂ ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಬಸವರಾಜಪ್ಪ ಎಂಬ ರಂಗ ಕಲಾವಿದ, ಹಾರ್ಮೋನಿಯಂ ಮಾಸ್ಟರಿದ್ದು ಮಾಸಾಶನ ಸೌಲಭ್ಯ ಪಡೆಯುತ್ತಿದ್ದಾರೆ.

## ಲಕ್ಕವ್ವನಹಳ್ಳಿ

ಲಕ್ಕವ್ವನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೩೧ ಕಿ.ಮೀ. ದೂರದಲ್ಲಿದೆ. ಇದೊಂದು ಚಂಗಾವರ ಗ್ರಾಮಕ್ಕೆ ಮಜರೆ ಗ್ರಾಮವಾಗಿದ್ದು ಮೂಲ ಗ್ರಾಮದಲ್ಲಿ ಇದರ ಭೌಗೋಳಿಕ ವ್ಯಾಪ್ತಿ ಹಂಚಿಕೆಯಾಗಿದೆ. ಒಟ್ಟು ೨೬೪೬.೭೭ ಹೆಕ್ಟೇರ್‌ನಲ್ಲಿ ಈ ಗ್ರಾಮವು ಇದೆ. ಮರಳು ಮಿಶ್ರಿತ ಕೆಂಪು ಮಣ್ಣು ಹೊಂದಿದ್ದು ಗ್ರಾಮದ ದಕ್ಷಿಣಕ್ಕೆ ಸಾಮಾಜಿಕ ಸಂರಕ್ಷತೆ ಅರಣ್ಯವಿದ್ದು, ಅದನ್ನು ಎತ್ತಪ್ಪಕಟ್ಟ ಪ್ರದೇಶ ಎಂದು ಕರೆಯುತ್ತಾರೆ. ಗ್ರಾಮದ ಹೆಂಗಸೊಬ್ಬರು ತನ್ನ ಗಂಡನೊಂದಿಗೆ ಸಹಗಮನ ಮಾಡಿದಾಗ ಆಕೆಯ ಹೆಸರಿನಲ್ಲಿ ಕರೆಯಲಾಯಿತೆಂದು ಹೇಳಲಾಗುತ್ತಿದೆ. ಆದರೆ ಆಕೆಯ ಹೆಸರಿನ ದೇವಾಲಯವಾಗಲಿ, ಮಾಸ್ತಿ ಕಲ್ಲಾಗಲಿ ಗ್ರಾಮದಲ್ಲಿ ಕಂಡು ಬರುವುದಿಲ್ಲ.

ಎತ್ತಪ್ಪನಕಟ್ಟೆ ಪರಿಸರದ ಕುರುಚಲು ಕಾಡು, ಮರ ಪೊದೆ ಇರುವುದರಿಂದ ಮೊಲ, ನರಿ, ಉಡ, ಮುಂಗುಸಿ, ಕಾಡುಬೆಕ್ಕು, ಹಾವು, ಚೇಳು, ಮಂಡರಗಪ್ಪೆ ಕಂಡು ಬರುತ್ತವೆ.

ಪಕ್ಷಿಗಳಾದ ನವಿಲು, ಗಿಳಿ, ಕಾಗೆ, ಗೊರವಂಕ, ಕೌಜಲಗ, ಕೊಕ್ಕರೆ ಕಂಡು ಬಂದರೆ ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಎತ್ತು, ಎಮ್ಮೆ, ಕುರಿ, ಮೇಕೆ, ಕೋಳಿ ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ೪೬೩ ಮಿ.ಮೀ. ಮಳೆ ಬೀಳುತ್ತಿದ್ದು, ಚಳಿ ೧೨ ಸೆಂ. ಬಿಸಿಲು ೩೬ ಸೆಂ. ಇದ್ದು ಲಕ್ಕವ್ವನ ಕೆರೆಯಿದ್ದು, ಮಳೆಗಾಲದಲ್ಲಿ ಮಾತ್ರ ತುಂಬುತ್ತದೆ. ಕುಡಿಯಲು ಗ್ರಾಮ ಪಂಚಾಯಿತಿಯಿಂದ ನೀರಿನ ಪೂರೈಕೆಯಾ ಗುತ್ತದೆ.

ಹಳ್ಳಿಕಾರ ಒಕ್ಕಲಿಗರು ಗ್ರಾಮದ ದೊಡ್ಡ ಸಮುದಾಯವಾಗಿದ್ದು, ಕುರುಬರು, ಕುಂಚಿಟಿಗರು, ಅಗಸ ಸಣ್ಣ ಸಮುದಾಯವಾಗಿದೆ. ಒಟ್ಟು ೧೪೨ ಮನೆಗಳಿದ್ದು, ಕಾಂಕ್ರೀಟ್, ಕಲ್ಲಿನ, ಮಣ್ಣಿನ ಹಾಗೂ ಶೀಟಿನ ಮನೆಗಳಿವೆ. ೭೪ ಶೌಚಾಲಯ ಗಳಿದ್ದು, ಇಂದಿರಾ ಆವಾಸ್, ಜನತಾ ಹಾಗೂ ಆಶ್ರಯ ಯೋಜನೆಯ ಫಲಾನುಭವಿಗಳಿದ್ದು, ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳಿದ್ದಾರೆ. ೬೧೨ ಜನಸಂಖ್ಯೆ ಹೊಂದಿದೆ.

ಇಲ್ಲಿನ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ರೊಟ್ಟಿ ಉಪಆಹಾರವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳಿವೆ. ಶೇಂಗಾ ಇಲ್ಲಿನ ಮುಖ್ಯ ಬೆಳೆಯಾಗಿದ್ದು, ರಾಗಿ, ಅಲಸಂದಿ, ತೊಗರಿ ಮುಖ್ಯ ಬೆಳೆಯಾಗಿದೆ. ತೆಂಗು, ಸೂರ್ಯಕಾಂತಿ, ರೇಷ್ಮೆ ಬೆಳೆಯನ್ನು ವಾಣಿಜ್ಯ ಬೆಳೆಯಾಗಿ ಬೆಳೆಯಲಾಗುವುದು. ಇಬ್ಬರು ಸರ್ಕಾರಿ ನೌಕರರಿದ್ದು, ೩ ಸ್ತ್ರೀ ಶಕ್ತಿ ಕೇಂದ್ರ, ೩ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪುಗಳಿವೆ. ಬೀಡಿ ಸುತ್ತುವುದು, ಊಟದ ಎಲೆ ಕಟ್ಟುವುದು ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ಗೌಡಗೆರೆ ತಾಲ್ಲೂಕು ಪಂಚಾಯಿತಿ, ತಾವರೆಕೆರೆ ಜಿಲ್ಲಾ ಪಂಚಾಯಿತಿ ಹಾಗೂ ಹೊಸೂರು ಗ್ರಾಮ ಪಂಚಾಯಿತಿ ಕ್ಷೇತ್ರಗಳ ವ್ಯಾಪ್ತಿಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೂ ಒಳಪಟ್ಟಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಗ್ರಾಮದಲ್ಲಿದ್ದು, ೩೯ ಮಕ್ಕಳು ಶಾಲೆಯಲ್ಲಿ ಹಾಗೂ ಅಂಗನವಾಡಿಯಲ್ಲಿ ೨೨ ಮಕ್ಕಳು ಕಲಿಯುತ್ತಿದ್ದು, ಇಬ್ಬರು ಶಿಕ್ಷಕರು, ಅಂಗನವಾಡಿ ಶಿಕ್ಷಕಿ ಕಾರ್ಯ ನಿರ್ವಹಿಸುತ್ತಿದ್ದು, ಗ್ರಾಮದ ಸಾಕ್ಷರತೆ ಪ್ರಮಾಣ ೫೧.೭ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇದರಲ್ಲಿ ಪುರುಷವು ಶೇ. ೬೩, ಮಹಿಳೆಯರು ೪೦.೨ ರಷ್ಟಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಶೌಚಾಲಯ ಸೌಲಭ್ಯವಿದೆ. ಅಂಗವಿಕಲ, ವೃದ್ಧಾಪ್ಯ, ಸಂಧ್ಯಾ ಸುರಕ್ಷಾ ವೇತನದ ಫಲಾನುಭವಿಗಳಿದ್ದು ಗ್ರಾಮದಲ್ಲಿ ೫ ಅಂಗಡಿಗಳಿವೆ. ಊರ ಹೊರಗೆ ೧ ವೀರಗಲ್ಲು ಇದ್ದು ಇದು ಯುದ್ಧ ನಿರತ ವೀರನ ಚಿತ್ರ ತೋರುವ, ದೇವ ಲೋಕದ ಚಿತ್ರಗಳಿವೆ. ಗ್ರಾಮದ ಹೆಂಚಾರಪ್ಪ ಎಂಬ ೮೦ ವರ್ಷದ ವ್ಯಕ್ತಿ, ಹಾವು ಮೊದಲಾದ ವಿಷ ಜಂತು ಕಡಿದ ಇತರೆ ಕಾಯಿಲೆಗಳಿಗೆ ಚಿಕಿತ್ಸೆ ನೀಡುತ್ತಾರೆ. ಆಂಜನೇಯ, ಭೂತಪ್ಪ, ಕಣಿವೆ ಮಾರಕ್ಕ, ರಂಗನಾಥನ ದೇವಾಲಯಗಳಿದ್ದು ಕಣಿವೆ ಮಾರಕ್ಕನ ಊರ ಹಬ್ಬವನ್ನು ವಾರ್ಷಿಕವಾಗಿ ಆಚರಿಸುತ್ತಾರೆ. ಬಾನ, ಆರತಿ, ಬ್ಯಾಟೆ ಈ ಕಾಲದ ಮಹತ್ವದ ಆಚರಣೆಗಳಾಗಿವೆ. ಗ್ರಾಮದಲ್ಲಿ ಯುಗಾದಿ, ಗೌರಿ, ಮಹಾನವಮಿ, ಶಿವರಾತ್ರಿ, ದೀಪಾವಳಿ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಈಶ್ವರಪ್ಪ ಎಂಬ ೭೦ ವರ್ಷದ ವ್ಯಕ್ತಿ ನಂದಿಧ್ವಜ ಕುಣಿಸುವ ಕಲಾವಿದರಾಗಿದ್ದಾರೆ. ಸಿರಾ–ಧರ್ಮಪುರ ರಸ್ತೆಯ ಬಲಬದಿಗೆ ಈ ಗ್ರಾಮವಿದ್ದು, ಗ್ರಾಮಕ್ಕೆ ಕಚ್ಚಾ ರಸ್ತೆಯ ಸಂಪರ್ಕವಿದೆ.

## ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ

ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ ದೊಡ್ಡ ಗೊಲ್ಲರಹಟ್ಟಿ ಎಂದೆಲ್ಲಾ ಕರೆಯಲ್ಪಡುವ ಈ ಕಾಡುಗೊಲ್ಲರ ಹಟ್ಟಿ ಬುಡಕಟ್ಟು ಗ್ರಾಮ. ಇದೊಂದು ಚಂಗಾವರ ಗ್ರಾಮದ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೨೬೪೬.೭೭ ರಲ್ಲಿ ಹಂಚಿಕೆಯಾಗಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದೆ. ಪಕ್ಕದಲ್ಲಿ ಕೆರೆ, ಎತ್ತಪ್ಪನ ಕಟ್ಟೆ, ರಕ್ಷಿತ ಗೋಮಾಳ ಇರುವುದರಿಂದ ಈ ಭಾಗದಲ್ಲಿ ಕಾಡು ಪ್ರಾಣಿ ಹೆಚ್ಚು. ನರಿ, ತೋಳ, ಮೊಲ, ಜಿಂಕೆ, ಕರಡಿ ಕಂಡು ಬರುತ್ತವೆ. ಪಕ್ಷಿಗಳಾದ ನವಿಲು, ಕೌಜುಲಗ, ಕಾಗೆ, ಗೂಬೆ, ಕೋಗಿಲೆ, ಮರಕುಟುಕ, ಗುಬ್ಬಚ್ಚಿಗಳು ಕಂಡು ಬರುತ್ತವೆ. ಗ್ರಾಮದಲ್ಲಿ ಕುರಿ, ಮೇಕೆ, ಕತ್ತೆ, ಹಸು, ಎಮ್ಮೆ, ಎತ್ತು ಸಾಕು ಪ್ರಾಣಿಗಳು. ಕೋಳಿ ಸಾಕಾಣಿಕೆಯೂ ಇದೆ. ನಾಯಿ, ಗೊಲ್ಲರ ಕುರಿಗಾರಿಕೆಗೆ ಉಪಯುಕ್ತ ಪ್ರಾಣಿಯಾಗಿದೆ.

ಸರಾಸರಿ ೪೬೩ ಮಿ.ಮೀ ಮಳೆ ಬೀಳುತ್ತದೆ. ಬಿಸಿಲು ೩೧೨ ಸೆಂ., ಚಳಿ ೧೦ ಸೆಂ. ಇರುತ್ತದೆ. ಎತ್ತಪ್ಪನ ಕಟ್ಟೆ, ಲಕ್ಕವ್ವನ ಹಳ್ಳಕೆರೆಗಳಿದ್ದು, ಮಳೆಗಾಲದಲ್ಲಿ ಲಕ್ಕಪ್ಪನಹಳ್ಳಿ ಕೆರೆ ತುಂಬುತ್ತದೆ. ೨ ಕೈ ಪಂಪುಗಳು, ಒಂದು ಮಿನಿ ಟ್ಯಾಂಕ್‌ಗಳಿಂದ ಕುಡಿಯುವ ನೀರನ್ನು ಪೂರೈಸಲಾಗುತ್ತದೆ. ಕಾಂಕ್ರೀಟ್, ಹೆಂಚು, ಶೀಟಿನ ಮನೆಗಳು ಜೊತೆಗೆ ೪ ಗುಡಿಸಲುಗಳೂ ಇವೆ. ಈ ಗ್ರಾಮದ ಎಲ್.ಟಿ. ಗೋವಿಂದಪ್ಪ ಎಂಬುವರು ಆದಾಯ ತೆರಿಗೆ ಅಧಿಕಾರಿಯಾಗಿದ್ದು, ಅವರ

ಮಗ ಶ್ರೀನಿವಾಸಬಾಬು, ಸಿರಾ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿದ್ದರು. ಇತರ ಮನೆಯಲ್ಲಿ ಶೌಚಾಲಯ ಸೌಲಭ್ಯವಿದೆ. ಜನತಾ ಆಶ್ರಯ, ವಸತಿ ಸೌಲಭ್ಯ ಹಾಗೂ ಭಾಗ್ಯ ಜ್ಯೋತಿ ವಿದ್ಯುತ್ ಸೌಕರ್ಯದ ಫಲಾನುಭವಿಗಳಿದ್ದಾರೆ. ೮೪ ಮನೆಗಳಿದ್ದು ೩೧೨ ಜನಸಂಖ್ಯೆ ಹೊಂದಿವೆ.

ಗ್ರಾಮದಲ್ಲಿ ರಾಗಿ ಮುದ್ದೆ ಮುಖ್ಯ ಆಹಾರ. ರೊಟ್ಟಿ, ಅನ್ನ ಬಳಸುವವರಿದ್ದಾರೆ.ಗಳು. ಬಾಡೂಟ, ಹೋಳಿಗೆ, ಪಾಯಸ ಸಾಂದರ್ಭಿಕ ಊಟದ ಕ್ರಮ. ಟ್ರ್ಯಕ್ಟರ್, ಲಾರಿ, ಸಾಂಪ್ರದಾಯಿಕ ವಾಹನಗಳ ಬಳಕೆ ಇವೆ. ಶೇಂಗಾ ಗ್ರಾಮದ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಜೋಳ, ಅಲಸಂದೆ, ತೊಗರಿ, ಹುರುಳಿ ಬೆಳೆಯುತ್ತಾರೆ. ಸೂರ್ಯಕಾಂತಿ, ರೇಷ್ಮೆ, ನೀರಾವರಿ ಬೆಳೆಗಳು. ಸಿರಾ ವಿಧಾನಸಭಾ ಕ್ಷೇತ್ರ, ಗೌಡಗೆರೆ ತಾಲ್ಲೂಕು ಪಂಚಾಯಿತಿ ಕ್ಷೇತ್ರ, ಬೇವಿನಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರದ ಹಾಗೂ ತಾವರೆಕೆರೆ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುತ್ತದೆ. ಈ ಗ್ರಾಮದಿಂದ ಒಬ್ಬರು ಪಂಚಾಯಿತಿ ಸದಸ್ಯರಿದ್ದಾರೆ. ೨ ಸ್ತ್ರೀ ಶಕ್ತಿ ಸಹಾಯಕ ಸಂಘ, ೧ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪು ಕಾರ್ಯ ನಿರ್ವಹಿಸುತ್ತಿವೆ. ಗ್ರಾಮದಲ್ಲಿ ಅಂಗನವಾಡಿ ಕೇಂದ್ರವಿದ್ದು ೨೯ ಮಕ್ಕಳು, ಒಬ್ಬರು ನೌಕರರು, ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೩೫ ವಿದ್ಯಾರ್ಥಿಗಳು ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಇತರೆ ಸಮುದಾಯಗಳಾದ ವೃದ್ಧಾಪ್ಯ, ವಿಕಲಚೇತನ, ವಿಧವಾ ವೇತನ ಫಲಾನುಭವಿಗಳಿದ್ದು, ೩ ಅಂಗಡಿಗಳಿವೆ. ಗ್ರಾಮದ ಒಳಗೆ ೨ ಕರುಗಲ್ಲು, ಅರಳಿ ಕಟ್ಟೆ ಇದ್ದು ಪೂಜಿಸಲ್ಪಡುತ್ತದೆ.

ಗ್ರಾಮದಲ್ಲಿ ಕಾಟಂಲಿಂಗ, ಚಿತ್ರದೇವರುಗಳ ಪೌಳಿಗಳಿದ್ದು, ದೀಪಾವಳಿಯಲ್ಲಿ ವಿಶೇಷ ಉತ್ಸವ ಏರ್ಪಡುತ್ತದೆ. ನಿಂಗಜ್ಜ ಎಂಬ ೮೦ ವರ್ಷದ ವ್ಯಕ್ತಿ ಜನಪದ ಮಹಾಕಾವ್ಯ ಹಾಡುಗಾರರಾಗಿದ್ದು ಇವರಿಗೆ ಕರ್ನಾಟಕ ಜನಪದ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ನಿಂಗಜ್ಜ ಹಾಡಿರುವ ಚಿತ್ರದೇವರ ಕಾವ್ಯವನ್ನು ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ೨೦೦೦ ಸಾಲಿನಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಗ್ರಾಮ ದೇವತೆ ಮಾರಮ್ಮನ ಆರತಿ ಉತ್ಸವ ನಡೆಯುತ್ತಿದೆ. ದೀಪಾವಳಿ ಈ ಗ್ರಾಮದ ದೊಡ್ಡ ಹಬ್ಬ. ಯುಗಾದಿ, ಮಹಾನವಮಿ, ಗೌರಿಹಬ್ಬ ಮುಖ್ಯ ಹಬ್ಬಗಳು. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಲಭ್ಯವಿದೆ. ದ್ವಾರನಕುಂಟೆ–ಸಿರಾ ರಸ್ತೆಗೆ ಲಿಂಕ್ ರಸ್ತೆ ಇದೆ.

## ಲಕ್ಕನಹಳ್ಳಿ

ಲಕ್ಕನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೫ ಕಿ.ಮೀ. ದೂರದಲ್ಲಿದೆ. ಕರ್ನಾಟಕ–ಆಂಧ್ರ ಎರಡೂ ರಾಜ್ಯಗಳಿಗೆ ಗಡಿ ಗೆರೆ ಕೊಯ್ದಂತಿದೆ. ಸಿರಾ–ಅಮರಾಪುರ ರಸ್ತೆ ಹಾದು ಹೋಗಿದೆ. ಹಾಗಾಗಿ ಎಡಭಾಗದ ಮನೆಗಳು ಕರ್ನಾಟಕದ ಗಡಿಯ ಒಳಗೂ ರಸ್ತೆಯ ಬಲಭಾಗದ ಮನೆಗಳು ಆಂಧ್ರ ಪ್ರದೇಶದ ಅನಂತ ಪುರ ಜಿಲ್ಲೆಯ ಮಡಕಸಿರಾ ತಾಲ್ಲೂಕಿನ ವ್ಯಾಪ್ತಿಗೂ ಸೇರಿದೆ. ಆದರೂ ಈ ಒಟ್ಟು ಗ್ರಾಮಕ್ಕೆ ಲಕ್ಕನಹಳ್ಳಿ ಎಂದೇ ಕರೆಯಲಾಗಿದೆ. ಕನ್ನಡ ಈ ನೆಲದ ಮಾತೃಭಾಷೆಯಾಗಿದೆ. ಈ ಗ್ರಾಮದಲ್ಲಿ ಲಕ್ಷ್ಮೀದೇವರು ಪ್ರತಿಷ್ಠಾಪಿತವಾದುದರಿಂದ ಜನಪದರ ಬಾಯಲ್ಲಿ ಲಕ್ಕಿಯ ಊರು ನಂತರ ಲಕ್ಕನ ಊರು > ಲಕ್ಕನಹಳ್ಳಿ ಆಯಿತೆಂದು ಶಿಕ್ಷಕ ನಾರಾಯಣಪ್ಪ ಅಭಿಪ್ರಾಯ ಪಡುತ್ತಾರೆ.ಆದರೂ ಪುರುಷ ಮೂಲಕ ಲಕ್ಕಣ್ಣ ಎಂಬ ವ್ಯಕ್ತಿಯೇ ಈ ಗ್ರಾಮದ ರಚನೆಗೆ ಪ್ರೇರಕ. ಆತನು ಲಕ್ಷ್ಮೀದೇವರ ಒಕ್ಕಲು ಆಗಬಹುದು. ಲಕ್ಕಣ್ಣನ ಹಳ್ಳಿ ಮತ್ತು ಲಕ್ಕನಹಳ್ಳಿ ಯಾಗಿದೆ.

ಈ ಗ್ರಾಮದ ಕೋಟೆ, ಊರಬಾಗಿಲುಗಳಿಂದ ಕೂಡಿದ್ದು, ಸದ್ಯ ಕೋಟೆ ನಾಶವಾಗಿದೆ. ಊರ ಬಾಗಿಲೂ ಇಲ್ಲ. ಒಟ್ಟು ೨೪೬೮.೯ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಮೂಲಗ್ರಾಮ ತಡಕಲೂರಿನೊಂದಿಗೆ ಹಂಚಿಕೊಂಡಿದೆ. ಲಕ್ಕನಹಳ್ಳಿ ಕಪ್ಪು, ಕೆಂಪು, ಬಿಳಿ ಮಣ್ಣಿನ ಗುಣ ಹೊಂದಿರುವ ಲಕ್ಕನಹಳ್ಳಿ ಬಯಲು ಸೀಮೆಯ ಪ್ರದೇಶ. ನೀರಿನ ಅಭಾವ ಎದ್ದು ಕಾಣುತ್ತದೆ. ವಾರ್ಷಿಕ ಮಳೆಯ ಪ್ರಮಾಣವೂ ಕಡಿಮೆ. ವಾಡಿಕೆಯ ಮಳೆ ವಾರ್ಷಿಕವಾಗಿ ೪೫೮ ಮಿ.ಮೀ. ಬಿಸಿಲು ೩೯–೪೦೦ ಸೆಂ. ಇದ್ದು, ಚಳಿ ೧೨೦ ಸೆಂ ಇರುತ್ತದೆ. ಕುರುಚಲು ಗಿಡ, ಪೊದೆ, ಮರಗಿಡಗಳ ಆಶ್ರಯ ಪಡೆದ ಈ ಪರಿಸರದಲ್ಲಿ ಹಂದಿ, ಮೊಲ, ಜಿಂಕೆ, ಮೊದಲಾದ ಕಾಡು ಪ್ರಾಣಿಗಳಿದ್ದು, ಗಿಳಿ, ಕೋಗಿಲೆ, ನವಿಲು, ಗೊರವಂಕ, ಬೆಳವ ಮೊದಲಾದ ಪಕ್ಷಿಗಳಿದ್ದು, ಹಾವು ಚೇಳು, ಮೊಂಡರಗಪ್ಪೆ, ಜರಿ ಮೊದಲಾದ ವಿಷ ಜಂತುಗಳೂ ಇವೆ. ನೀರಿಗೆ ಕೊಳವೆ ಬಾವಿಯನ್ನು ಆಶ್ರಯ ಪಡೆದಿರುವ ಈ ಹಳ್ಳಿ, ಕೊಳವೆ ಬಾವಿಗಳ ಮೂಲಕ ೩ ಚಿಕ್ಕ ಟ್ಯಾಂಕ್‌ಗಳ ಮೂಲಕ ನೀರನ್ನು ಸಂಗ್ರಹಿಸಿ, ನಲ್ಲಿಗಳ ಮೂಲಕ ಸರಬರಾಜು ಮಾಡಲಾ ಗುತ್ತಿದೆ. ೨ ಕೈ ಪಂಪುಗಳಿವೆ.

ಕುಂಚಿಟಿಗರು, ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ಕುರುಬರು, ಆದಿಕರ್ನಾಟಕ, ಕುಂಬಾರ, ಬೇಡರು, ಮುಸ್ಲಿಂ, ವೀರಶೈವ ಜನಾಂಗ ಸಣ್ಣ

ಸಮುದಾಯವಾಗಿದೆ. ತೆಲುಗು, ಉರ್ದು ವಿರಳವಾಗಿ ಬಳಕೆಯಾಗುತ್ತಿದೆ. ೧೮೨ ಮನೆಗಳಿರುವ ಇಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿವೆ. ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ವಸತಿ ಗೃಹಗಳಿವೆ. ಭಾಗ್ಯ ಜ್ಯೋತಿ ಯೋಜನೆಯ ೭೪ ಫಲಾನುಭವಿಗಳೂ ಇದ್ದಾರೆ. ೧೧೧೪ ಜನಸಂಖ್ಯೆ ಇದೆ.

ರಾಗಿ ಮುದ್ದೆ ಈ ಗ್ರಾಮದ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಹೋಳಿಗೆ ವಿಶೇಷ ಊಟವಾಗಿದೆ. ಗ್ರಾಮದಲ್ಲಿ ಟ್ರ್ಯಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳಿವೆ. ಶೇಂಗಾ ಗ್ರಾಮದ ಮುಖ್ಯ ಬೆಳೆ. ರಾಗಿ, ಜೋಳ, ಭತ್ತ, ಆಹಾರ ಬೆಳೆಗಳು. ರೇಷ್ಮೆ, ಹತ್ತಿ, ಸೂರ್ಯಕಾಂತಿ, ಹುಣಸೆಹಣ್ಣು, ತೆಂಗು, ಅಡಿಕೆ, ದಾಳಿಂಬೆ, ವಾಣಿಜ್ಯ ಬೆಳೆಗಳು. ಈ ಗ್ರಾಮದಲ್ಲಿ ೮ ಸರ್ಕಾರಿ ನೌಕರರಿದ್ದು, ಪ್ರಾಂಶುಪಾಲರಾದ ಚಿಕ್ಕಹನುಮಯ್ಯ, ವೈದ್ಯರಾದ ಡಾ. ಗೋವಿಂದರಾಜು, ಮುಖ್ಯ ಅಧಿಕಾರಿಗಳಾಗಿದ್ದು, ವಿವಿಧ ಇಲಾಖೆಯ ೧೪ ಸರ್ಕಾರಿ ನೌಕರರು ಇದ್ದಾರೆ. ಗ್ರಾಮದಲ್ಲಿ ಬೀಡಿ ಸುತ್ತುವುದು, ಊಟದ ಎಲೆ ಕಟ್ಟುವುದು, ಹಿಟ್ಟಿನ ಗಿರಣಿ ಮೊದಲಾದ ಸಣ್ಣ ಕೈಗಾರಿಕೆಗಳಿವೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ತಡಕಲೂರು ತಾಲ್ಲೂಕು ಪಂಚಾಯಿತಿ, ಹಾಗೂ ತಡಕಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಗೊಂಡಿದೆ. ಅಂಚೆ ಇಲಾಖೆ, ಸರ್ಕಾರಿ ಮಾಧ್ಯಮಿಕ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು, ಅಂತ್ಯೋದಯ ಕಾನ್ವೆಂಟ್ ಸ್ಕೂಲ್, ಬಿಸಿಎಂ ವಿದ್ಯಾರ್ಥಿ ನಿಲಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಪಶು ಆಸ್ಪತ್ರೆಗಳನ್ನು ಕಾಣಬಹುದಾಗಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನೂರಕ್ಕೆ ನೂರು ಫಲಿತಾಂಶ ಪಡೆದ ಹಿರಿಮೆಯ ಈ ಗ್ರಾಮಾಂತರ ಗಡಿ ಕಾಲೇಜಿನಲ್ಲಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಉತ್ತಮ ಕಾಪೌಂಡು, ಆಟದ ಮೈದಾನವಿದೆ.

೧೭ ಜನ ನೌಕರರು ಈ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ೪ ಸ್ತ್ರೀ ಶಕ್ತಿ ಸಂಘಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ೨ ಗುಂಪು, ಬಾಪೂಜಿ ಯುವಕ ಸಂಘ ಸಾಂಸ್ಕೃತಿಕ ವಾಗಿ ರಚನಾತ್ಮಕ ಕೆಲಸ ಮಾಡುತ್ತಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಕೆಂಚಪ್ಪ, ದಿಬ್ಬಣ್ಣ, ಈ ಗ್ರಾಮದ ನಾಟಿ ಔಷಧಿ ನೀಡುತ್ತಿದ್ದಾರೆ. ವೃದ್ಧಾಪ್ಯ, ಅಂಗವಿಕಲ, ವಿಧವಾ ವೇತನ, ಸೌಲಭ್ಯ ಪಡೆದವರೂ ಇದ್ದಾರೆ. ೧೪ ಅಂಗಡಿಗಳಿದ್ದು, ೮ ಹೋಟೆಲ್‌ಗಳಿವೆ.

ಯುಗಾದಿ, ದೀಪಾವಳಿ, ಕುಂತಮ್ಮ-ಗೌರಮ್ಮ, ಮಹಾನವಮಿ, ಶಿವರಾತ್ರಿ ಈ ಗ್ರಾಮದ ವಿಶೇಷ ಹಬ್ಬಗಳು. ಕುಂತಮ್ಮ ಗೌರಮ್ಮ ಗ್ರಾಮದ ಹೆಣ್ಣು ಮಕ್ಕಳ ವಿಶೇಷ ಹಬ್ಬವಾಗಿದೆ. ಭಜನೆ ಕಲಾವಿದರಾದ ಮೂಡ್ಲಗಿರಿಯಪ್ಪ, ಹನುಮಂತಪ್ಪ, ಶಂಕರಪ್ಪ, ಎಲ್.ಬಿ. ನರಸಿಂಹಯ್ಯ ಇದ್ದಾರೆ. ಗ್ರಾಮದಲ್ಲಿ ಗೌರಸಂದ್ರದ ಮಾರಮ್ಮನ ಹಬ್ಬವನ್ನು ಊರಹಬ್ಬವಾಗಿ ಆಚರಿಸಲಾಗುತ್ತಿದೆ. ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಹೇಮಾವತಿ-ಸಿದ್ದೇಶ್ವರ ಜಾತ್ರೆಗೆ ಇಲ್ಲಿಂದ ಸೌದೆ, ಹರಳು ಹಾಕುವ ಸಾಮೂಹಿಕ ಭೋಜನಕ್ಕೆ ದವಸ, ಹುಣಸೆಹಣ್ಣು, ಕುಂಬಳ ಕಾಯಿ, ತೆಂಗಿನಕಾಯಿ ಕೊಡುವ ಸಂಪ್ರದಾಯವಿದೆ. ನೆರೆಯ ಆಂಧ್ರ ಗಡಿಗೆ ಸೇರಿದ ಮಕ್ಕಳು, ಕನ್ನಡ ಶಾಲೆಗೆ ದಾಖಲಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ತೆಲುಗು ನೆಲದಲ್ಲೂ ಅಪ್ಪಟ ಕನ್ನಡದ ವಾತಾವರಣ ಈ ಗ್ರಾಮದ ವಿಶೇಷವಾಗಿದೆ.

## ಲಕ್ಕನಹಳ್ಳಿ

ಲಕ್ಕನಸಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೫ ಕಿಮೀ ದೂರದಲ್ಲಿದೆ. ಸಿರಾ-ಕಳ್ಳಂಬೆಳ್ಳ ಮೈಸೂರು ರಸ್ತೆಯಲ್ಲಿ ಕಳ್ಳಂಬೆಳ್ಳ ಕೆರೆಯ ಮೇಲ್ಭಾಗದಲ್ಲಿ ಮೈಸೂರು ರಸ್ತೆಗೆ ಸಮೀಪದಲ್ಲಿದೆ. ಇದು ಕಳ್ಳಂಬೆಳ್ಳ ಗ್ರಾಮಕ್ಕೆ ಹೊಂದಿಕೊಂಡಿರುವ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೪೮೨.೦೧ ಹೆಕ್ಟೇರ್ ಆಗಿದೆ. ಗ್ರಾಮ ಹಳೆಯ ಸ್ವರೂಪವನ್ನು ಪಡೆದು ಸುತ್ತಲೂ ಕೋಟೆ, ಬುರ್ಜು ಇದ್ದ ಅವಶೇಷ ಕಂಡುಬರುತ್ತದೆ. ಲಕ್ಕಣ್ಣ ಎಂಬ ವ್ಯಕ್ತಿ ಮೂಲದಿಂದ ಈ ಹೆಸರು ಬಂದಿದೆ. ಬಲಬದಿಗೆ ಕಳ್ಳಂಬೆಳ್ಳದ ವಿಶಾಲ ಕೆರೆಯ ಮುಂಬೈಲು ದಕ್ಷಿಣಕ್ಕೆ ೩೨ ಹೆಕ್ಟೇರ್ ಗೋಮಾಳದ ಬಯಲು ಕೆಂಪು, ಮರಳು ಮಿಶ್ರಿತ ಭೂಮಿ ಹೊಂದಿರುವುದರಿಂದ ಈ ಭಾಗದಲ್ಲಿ ಶೇಂಗಾ ವಿಶೇಷ ಬೆಳೆ. ಈ ಪರಿಸರದಲ್ಲಿ ಜಿಂಕೆ, ನರಿ, ಮೊಲ, ಉಡ, ಬಾರುಬೆಕ್ಕು, ಕರಡಿ ಈ ಮೊದಲಾದ ಕಾಡುಪ್ರಾಣಿಗಳು ಕಂಡುಬರುತ್ತವೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಹಳ್ಳಿಕಾರ್ ಎತ್ತು, ಎಮ್ಮೆ ಸಾಕುತ್ತಾರೆ. ಗ್ರಾಮದ ಕಾಡುಗೊಲ್ಲರ ಮನೆಗಳಲ್ಲಿ ವಿಶೇಷವಾಗಿ ಕುರಿ, ಮೇಕೆ ಹಾಗೂ ವಲಸೆ ಹೊಗುವ ಸಂದರ್ಭದಲ್ಲಿ ಭಾರ ಹೊರುವುದಕ್ಕೆ ಬೇಕಾದ ಕತ್ತೆಗಳನ್ನು, ನಾಯಿಗಳನ್ನು ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ,

ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಮಳೆ ಕಡಿಮೆ ಇರುವ ಕಾರಣ ರೈತರು ಕೃಷಿ ಬದುಕಿಗೆ ೩೮ ಕೊಳವೆ ಬಾವಿಗಳನ್ನು ಆಶ್ರಯಿಸಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದ್ದು ೪ ಕಿರುಟ್ಯಾಂಕ್‌ಗಳಿವೆ. ೨ ಕೈಪಂಪುಗಳು ಇವೆ. ಗ್ರಾಮದ ಪೂರ್ವಕ್ಕೆ ಹೇಮಾವತಿ ನೈಸರ್ಗಿಕ ಹಳ್ಳ ಹರಿದು ಬರುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯ. ಕಾಡುಗೊಲ್ಲರು ಕಿರುಸಮುದಾಯವಾಗಿದ್ದು ಸಂಪೂರ್ಣ ಭಾಷೆ ಕನ್ನಡವಾಗಿದೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ ಶೀಟಿನ ಒಟ್ಟು ೧೦೨ ಮನೆಗಳಿದ್ದು ೩೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಇಲ್ಲಿನ ಜನಸಂಖ್ಯೆ ೫೨೮ ಆಗಿರುತ್ತದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ೪ ಎತ್ತಿನ ಗಾಡಿಗಳ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಕ್ಯ ಬೆಳೆಯಾಗಿದ್ದು ರಾಗಿ, ಜೋಳ, ಅಲಸಂದೆ, ತೊಗರಿ, ಹುರುಳಿ ಆಹಾರ ಬೆಳೆಗಳು. ತೆಂಗು, ಅಡಿಕೆ ತೋಟಗಾರಿಕೆ ಬೆಳೆಗಳು. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೫೦ ಲೀ. ಹಾಲು ಸಂಗ್ರಹವಾಗುತ್ತದೆ. ಶೇಂಗಾ, ಕುರಿ ವ್ಯಾಪಾರ, ಹುಣಸೆಹಣ್ಣು ವ್ಯಾಪಾರಿ ಸರಕಾಗಿವೆ. ಗ್ರಾಮದಲ್ಲಿ ಶಿಕ್ಷಕರು, ಸಾರಿಗೆ, ಕಂದಾಯ ಇಲಾಖೆಯ ಮತ್ತಿತರ ೪ ಜನ ಸರ್ಕಾರಿ ನೌಕರರಿದ್ದಾರೆ. ಬೀಡಿ ಸುತ್ತುವುದು, ಊಟದ ಎಲೆ ಕಟ್ಟುವುದು ಇದೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಈ ಗ್ರಾಮದಲ್ಲಿ ಒಬ್ಬ ಪಂಚಾಯ್ತಿ ಪ್ರತಿನಿಧಿ ಇದ್ದಾರೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ೨ ಸ್ತ್ರೀಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪುಗಳಿದ್ದು ಗ್ರಾಮದ ಆರ್ಥಿಕ ಚಟುವಟಿಕೆಗೆ ಸಹಾಯವಾಗಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಶಾಲೆಯಿದ್ದು ಶಾಲೆಯಲ್ಲಿ ೩೩ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೬.೯% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೬ ಪೆಟ್ಟಿಗೆ ಅಂಗಡಿಗಳಿವೆ. ವೀರಮಲ್ಲಮ್ಮನ ಗುಡಿಮಾರಮ್ಮ, ಆಂಜನೇಯ ದೇವಾಲಯಗಳಿದ್ದು ವೀರಮಲ್ಲಮ್ಮ ಮಹಾಸತಿ ಎಂದು ಗ್ರಾಮಕ್ಕೆ ಲಕ್ಕೇಗೌಡರ ಅಭಿಪ್ರಾಯವಾಗಿದೆ. ಉಳಿದಂತೆ ಮಾರಮ್ಮ ಗ್ರಾಮದೇವತೆಯಾಗಿದ್ದು ಇದರ ಪಕ್ಕದಲ್ಲೇ ಕರಿಗಲ್ಲು ಇದ್ದು ಈಗ ಮುಚ್ಚಿಹೋಗಿದೆ. ಗ್ರಾಮದ ಹೊರವಲಯದ ಮೈಸೂರು ರಸ್ತೆಯಲ್ಲಿ ಶನಿದೇವರು, ಭೂತಪ್ಪನ ಗುಡಿಗಳಿವೆ. ಮಾರಮ್ಮ ಗ್ರಾಮದೇವತೆಯಾಗಿದ್ದು ವಾರ್ಷಿಕವಾಗಿ ಆರತಿ, ಬಾನ, ಮಡೆ ಇರುತ್ತದೆ. ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ ಗ್ರಾಮದ ವಿಶೇಷ ಹಬ್ಬ. ಕಾಡುಗೊಲ್ಲರು ದೀಪಾವಳಿಯನ್ನು ಹಿರಿಯರ ಹಬ್ಬ, ಹಾಲು–ತುಪ್ಪದ ಹಬ್ಬ ಎಂದು ಏಳು ದಿನಗಳ ಕಾಲ ಆಚರಿಸುವುದು ಇಲ್ಲಿನ ವಿಶೇಷ.

## ಲುಟ್ಟಹನುಮನಪಾಳ್ಯ

ಲುಟ್ಟಹನುಮನಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೮ ಕಿಮೀ ದೂರದಲ್ಲಿದೆ. ಇದೊಂದು ಸೀಬಿ ಅಗ್ರಹರ ಗ್ರಾಮದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೬೨.೧೩ ಹೆಕ್ಟೇರ್ ಆಗಿದೆ. ಗ್ರಾಮದೇವತೆ ಆಂಜನೇಯ ಆಗಿದೆ. ಹನುಮಯ್ಯ ಹೆಸರಿನ ಬಲಾಢ್ಯ, ಕಟ್ಟುಮಸ್ತಾಗಿದ್ದ ವ್ಯಕ್ತಿ ಗ್ರಾಮದ ಮುಖಂಡನಾಗಿ ವ್ಯವಹಾರಗಳಲ್ಲಿ ಭಾಗಿಯಾಗುತ್ತಿದ್ದುದರಿಂದ ಲುಟ್ಟಹನುಮಯ್ಯನ ಹೆಸರಿನಲ್ಲಿಯೇ ಹಳ್ಳಿಯನ್ನು ಗುರುತಿಸಿ ದಾಖಲಿಸಿದ್ದಾರೆ. ಹಾಗಾಗಿ ಲುಟ್ಟಹನುಮಯ್ಯನಾಳ್ಯ ಎಂದೇ ಕರೆಯುತ್ತಾರೆ. ರ್ರಾಯ ಹೆದ್ದಾರಿ–೪, ಸಿರಾ–ತುಮಕೂರು ನಡುವೆ ತರೂರು ಗೇಟಿನಿಂದ ಬಲಭಾಗದಲ್ಲಿ ೨ ಕಿಮೀ ದೂರದಲ್ಲಿ ಈ ಗ್ರಾಮವಿದೆ. ಗ್ರಾಮದ ಜನಸಂಖ್ಯೆ ೩೯೨ ಇದೆ.

ಬಿಸಿಲು ಪ್ರದೇಶದ ಈ ಹಳ್ಳಿಯ ಪರಿಸರದಲ್ಲಿ ಗಿಡ, ಮರ, ಪೊದೆ ಇರುವುದರಿಂದ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ.

ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾಡಿಕೆ ಮಳೆ ೪೬೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮ ಪರಿಸರದಲ್ಲಿ ೪೫ ಕೊಳವೆ ಬಾವಿಗಳಿದ್ದು ಕೃಷಿಗೆ ಬಳಕೆಯಾಗುತ್ತಿದೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ೬ ಸಿಸ್ಟರ್ನ್‌ಗಳಲ್ಲಿ ನೀರು ಪೂರೈಸಲಾಗುತ್ತಿದೆ. ೨ ಕೈಪಂಪುಗಳಿವೆ. ಕುಂಚಿಟಿಗ ದೊಡ್ಡ ಸಮುದಾಯವಾಗಿದ್ದು ಬೇಡ, ಮಡಿವಾಳ, ಗಾಣಿಗ, ಭಜಂತ್ರಿ ಸಣ್ಣ ಸಮುದಾಯವಾಗಿದೆ. ಮನೆಗಳ ರಚನೆಯಲ್ಲಿ ಕಾಂಕ್ರೀಟ್, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿವೆ. ಒಟ್ಟು ಮನೆಗಳು ೧೩೮ ಇದ್ದು ಇದರಲ್ಲಿ ೧೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟಿಲ್ಲರ್, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಗ್ರಾಮದ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಅಲಸಂದೆ, ತೊಗರಿ ಬೆಳೆಯುತ್ತಾರೆ. ಒಂದು ಪುಟ್ಟ ಹಾಲಿನ ಡೈರಿಯಿದ್ದು ಹುಣಸೆಹಣ್ಣು, ತೆಂಗು, ಅಡಿಕೆ ವಾಣಿಜ್ಯ ಬೆಳೆಗಳಾಗಿವೆ. ೪ ಜನ ಸರ್ಕಾರಿ ನೌಕರರಿರುವ ಈ ಗ್ರಾಮದಲ್ಲಿ ವಕೀಲ ಎಲ್.ಇ.ರಂಗಯ್ಯ ಇಂಜಿನಿಯರ್ ಜವಲಿಂಗಪ್ಪ ಇದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಸೀಬಿ ಅಗ್ರಹಾರ ಗ್ರಾಮ ಪಂಚಾಯ್ತಿ ಹಾಗೂ ಸೀಬಿ ತಾಲ್ಲೂಕು ಪಂಚಾಯ್ತಿ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ ಕ್ಷೇತ್ರದ ವ್ಯಾಪ್ತಿಗೆ ಬರುವ ಈ ಗ್ರಾಮ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಗ್ರಾಮದಲ್ಲಿ ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೧% ಆಗಿದೆ. ಇದರಲ್ಲಿ ೪೯.೨ ಮಹಿಳೆಯರು, ೭೧ ಪುರುಷ ಸಾಕ್ಷರರಿದ್ದಾರೆ. ಗ್ರಾಮದಲ್ಲಿ ದೇಶೀ ಔಷಧೋಪಚಾರ ನೀಡುವ ಸಣ್ಣಗೋವಿಂದಪ್ಪ ಪಶುಸಂಬಂಧಿ ಔಷಧ ನೀಡುವಲ್ಲಿ ಹೆಸರುಮಾಡಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೫ ಪೆಟ್ಟಿಗೆ ಅಂಗಿಗಳಿವೆ. ಶ್ರೀರಾಮ, ಆಂಜನೇಯ ಗ್ರಾಮದ ದೇವಾಲಯಗಳಾಗಿದ್ದು ಗ್ರಾಮದೇವತೆ ಮುದ್ದೇಮಾರಮ್ಮನ ಊರು ಜಾತ್ರೆ ಮಾಡುತ್ತಾರೆ. ಆರತಿ, ಬಾನ ಹಾಗೂ ಬಲಿ ಈ ಸಂದರ್ಭದ ವಿಶೇಷ ಆಚರಣೆಗಳು, ಗ್ರಾಮದಲ್ಲಿ ಮಹಾನವಮಿ, ಶಿವರಾತ್ರಿ, ಯುಗಾದಿ, ದೀಪಾವಳಿ, ಸಂಕ್ರಾಂತಿ, ರಾಮನವಮಿ ಹಬ್ಬಗಳನ್ನು ಮಾಡುತ್ತಾರೆ. ಸಿರಾ–ತುಮಕೂರಿಗೆ ಸಂಪರ್ಕ ರಸ್ತೆಯಿದ್ದು ಸಂಚಾರಕ್ಕೆ ಅನುಕೂಲವಾಗಿದೆ.

## ಲಿಂಗಶೆಟ್ಟಿಹಳ್ಳಿ

ಇದು ಬುಕ್ಕಾಪಟ್ಟಣ–ಗಾಣದ ಹುಣಸೆ ಮುಖ್ಯ ರಸ್ತೆಯ ಎಡಬದಿಗೆ ಬುಕ್ಕಾಪಟ್ಟಣದಿಂದ ಪೂರ್ವಕ್ಕೆ ನಾಲ್ಕು ಕಿ.ಮೀ. ದೂರದಲ್ಲಿದೆ ಇದೊಂದು ಬೇಚಾರಕ್ ಗ್ರಾಮ. ಮನೆಗಳಿದ್ದವೆಂಬುದಕ್ಕೆ ಇಂದಿಗೂ ಗ್ರಾಮದ ಅವಶೇಷಗಳು ಕಂಡು ಬರುತ್ತವೆ. ಒಂದು ಮನೆಗಳೂ ಈಗ ಇರುವುದಿಲ್ಲ.

ಕಾಡು ಪ್ರದೇಶವಾಗಿದೆ. ಮರಳು ಮಿಶ್ರಿತ ಕಪ್ಪು ಮಣ್ಣನ್ನು ಹೊಂದಿದೆ. ಬುಕ್ಕಾಪಟ್ಟಣ ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಬಯಲು ಪ್ರದೇಶವಾಗಿದೆ. ಇಲಿಗೆಹಳ್ಳಿ ಅಥವಾ ಮಾರುತಿನಗರ ವ್ಯಾಪ್ತಿಗೆ ಈ ಗ್ರಾಮ ಸೇರುತ್ತದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಕರಡಿ, ಉಡ, ತೋಳ, ಕಂಡು ಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಕಾಗೆ, ಕೋಗಿಲೆ, ಕೌಜುಲಗ, ಗಿಡುಗ, ಬೆಳವ, ಗುಬ್ಬಚ್ಚಿ ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ೫೩೪ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೬–೩೮ ಡಿ.ಸೆಂ. ಇದ್ದು, ಚಳಿ ೧೨–೧೪ ಡಿ.ಸೆಂ. ಇರುತ್ತದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ.

## ವಡ್ಡರಹಟ್ಟಿ (ಡ್ಯಾಗೇರಹಳ್ಳಿ)

ವಡ್ಡರಹಟ್ಟಿ –ಬೋವಿ ಕಾಲೋನಿ ಎಂದು ಕರೆಯಲ್ಪಡುವ ೨ ಹಳ್ಳಿಗಳು ಗೌಡಗೆರೆ ಹೋಬಳಿಯಲ್ಲಿ ಕಂಡು ಬರುತ್ತವೆ. ಒಂದು ಬಡಕನಹಳ್ಳಿ ಮಜರೆ ವಡ್ಡರಹಟ್ಟಿ ಯಾದರೆ ಈ ಗ್ರಾಮ ಡ್ಯಾಗೇರಹಳ್ಳಿಗೆ ಮಜರೆ ಗ್ರಾಮವಾಗಿದೆ. ವಡ್ಡರೇ ಕೂಡಿ ಬಂದು ಗ್ರಾಮ ನಿರ್ಮಿಸಿಕೊಂಡ ಕಾರಣ ಜಾತಿ ಹೆಸರಿನಲ್ಲೇ ಈ

ಗ್ರಾಮದ ಹೆಸರು ರೂಢಿಯಾಗಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೩೦ ಕಿ.ಮೀ. ದೂರದ ಈ ಹಳ್ಳಿ ೧೧೧೭.೮೨ ಹೆಕ್ಟೇರ್ ವಿಸ್ತೀರ್ಣದಲ್ಲಿ ಹಂಚಿಕೆಯಾಗಿದೆ.

ಕೆಂಪು, ಬಿಳಿ ಮರಳು ಮಿಶ್ರಿತ ಭೂಮಿ. ನರಿ,ತೋಳ, ಮೊಲ, ಈ ಪರಿಸರದ ಕಾಡುಪ್ರಾಣಿಗಳು. ಹಸು, ಎಮ್ಮೆ, ಕುರಿ, ಮೇಕೆ, ಸಾಕು ಪ್ರಾಣಿಗಳು. ನವಿಲು, ಕಾಗೆ, ಕೊಕ್ಕರೆ, ಗಿಳಿ, ಕೋಗಿಲೆ ಕಾಡುಪಕ್ಷಿಗಳು. ಕೋಳಿಸಾಕು ಪಕ್ಷಿ. ಸರಾಸರಿ ೪೬೧ ಮಿ.ಮೀ. ಮಳೆ ಬೀಳುತ್ತಿದ್ದು, ೧೨ ಸೆಂ.ಚಳಿ ಇದ್ದು, ಬಿಸಿಲಿನ ತಾಪಮಾನ ೩೬ ಸೆಂ. ಇಲ್ಲಿನ ಹವಾಮಾನ ನೀರಿಗೆ ಗ್ರಾಮ ಪಂಚಾಯಿತಿ ಮೂಲಕ ಕೊಳಾಯಿಗಳಲ್ಲಿ ಸರಬರಾಜು ಮಾಡಲಾಗುತ್ತಿದೆ. ೨ ಕೈ ಪಂಪುಗಳಿವೆ. ಬೋವಿ ಜನಾಂಗ ಮಾತ್ರ ಇಲ್ಲಿ ವಾಸಿಸುತ್ತಿದ್ದು ತೆಲುಗು ಭಾಷೆಯಾಗಿದೆ. ಹಸಿ ಗೋಡೆಯ, ಕಾಂಕ್ರೀಟ್ ಶೀಟು, ಹೆಂಚಿನ ಮನೆಗಳಿದ್ದು, ಶೌಚಾಲಯ ಇರುವುದಿಲ್ಲ. ಜನತಾ ಅಂಬೇಡ್ಕರ್ ಅವಾಜ್ ಯೋಜನೆಯಡಿ ಫಲಾನು ಭವಿಗಳು ಅಧಿಕ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯವನ್ನು ಪಡೆದಿದ್ದಾರೆ. ೪೨ ಮನೆಗಳಿದ್ದು ೧೮೬ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ, ಬಳಸುವವರಿದ್ದಾರೆ. ಬಾಡೂಟ, ಮದ್ಯಪಾನ ಸಹಜವಾಗಿರುತ್ತದೆ. ಟ್ರ್ಯಾಕ್ಟರ್, ಟೆಂಪೋ ಬಳಕೆಯಲ್ಲಿದೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾದ ರಾಗಿ, ಜೋಳ, ಅಲಸಂದಿ, ತೊಗರಿ ಬೆಳೆಯುತ್ತಾರೆ. ಹೆಚ್ಚಿನ ಉದ್ಯೋಗ ಬಂಡೆ ಕಲ್ಲು ಕೆಲಸವಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯಿತಿ, ಹುಣಸೇಹಳ್ಳಿ ತಾಲ್ಲೂಕು ಪಂಚಾಯಿತಿ, ಹಾಗೂ ಗ್ರಾಮ ಪಂಚಾಯಿತಿ ಸೇರಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಒಂದು ಅಂಗನವಾಡಿ ಕೇಂದ್ರ ಮಾತ್ರವಿದ್ದು, ೧೨ ಮಕ್ಕಳು ಒಬ್ಬರು ಶಿಕ್ಷಕಿ ಕಾರ್ಯನಿರ್ವಹಿಸುತ್ತಿದ್ದಾರೆ. ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯ ಪಡೆದವರಿದ್ದು, ೧ ಪುಟ್ಟ ಅಂಗಡಿ ಇದೆ. ರಂಗನಾಥ ದೇವಾಲಯವಿದ್ದು, ವಾರ್ಷಿಕ ಜಾತ್ರೆ ಮಾಡುತ್ತಾರೆ. ಶಿವರಾತ್ರಿ, ಯುಗಾದಿ, ದೀಪಾವಳಿ, ಗೌರಿಗಣೇಶ, ಮಹಾನವಮಿ ಪ್ರಮುಖ ಹಬ್ಬಗಳು.

## ವೀರಗಾನಹಳ್ಳಿ

ವೀರಗಾನಹಳ್ಳಿ ಸಿರಾ ಪಟ್ಟನಾಯಕನಹಳ್ಳಿಯ ನಡುವೆ ಸಿರಾದಿಂದ ೧೭ ಕಿ.ಮೀ. ಒಳ ಹಾದಿಯಲ್ಲಿ ಬಂದಕುಂಟೆ ಗೇಟಿನಿಂದ ೬ ಕಿ.ಮೀ. ದೂರದಲ್ಲಿದೆ. ಪಟ್ಟನಾಯಕನಹಳ್ಳಿಗೆ ೨ ಕಿ.ಮೀ. ದೂರದ ಹಾದಿ ಜಿಲ್ಲಾ ಪಂಚಾಯಿತಿ ಕಚ್ಚಾ ರಸ್ತೆ ಇದೆ. ಇದು ಹೆಂದೊರೆ ಗ್ರಾಮದ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೩೪೮ ಹೆಕ್ಟೇರ್ ಆಗಿದೆ. ಪೂರ್ವಕ್ಕೆ ಗುಂಡು ತೋಪುಹಳ್ಳ, ಪಶ್ಚಿಮಕ್ಕೆ ಕನನೇರು ಈಚಲು ಹಳ್ಳ, ಬದಿಗೆ ಗುಂಡುತೋಪಿನ ಕಟ್ಟೆ, ಈರಾಪುರ ಕೆರೆ, ಕುರುಬರ ಕುಂಟಪ್ಪನ ಕಟ್ಟೆ ಇವುಗಳ ನಡುವೆ ಈರಗಾನ ಹಳ್ಳಿ ಇದೆ. ವೀರಪ್ಪ ಎಂಬ ವ್ಯಕ್ತಿ ಮೂಲದ ಈ ಹಳ್ಳಿಯಲ್ಲಿ ರೈತಾಪಿ ಕುಟುಂಬ ಪ್ರಧಾನವಾಗಿದೆ. ಕಂದು, ಮರಳು ಮಿಶ್ರಿತ ಮಣ್ಣಿನ ಇಲ್ಲಿನ ನೆಲದಲ್ಲಿ, ಪೂರ್ವಕ್ಕೆ ಕನ್ನೇರು ಹಳ್ಳದ ಕುರುಚಲು ಕಾಡು, ಪಶ್ಚಿಮಕ್ಕೆ ಹೆಂದೊರೆಯ ಕೆರೆ ಇದ್ದು, ಹಳ್ಳ ದಿಣ್ಣೆಗಳಿಂದ ಕೂಡಿದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿ, ಉಡ, ಹೆಗ್ಗಣ, ಮುಂಗುಸಿ, ಬಾರ್ ಬೆಕ್ಕು ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾಗಿ ಕುರಿ, ಎತ್ತು, ಎಮ್ಮೆ, ಮೇಕೆ ಸಾಕಲಾಗುತ್ತದೆ.

ಈ ಪರಿಸರದಲ್ಲಿ ನವಿಲು, ಗಿಳಿ, ಕೊಕ್ಕರೆ, ಗೊರವಂಕ, ಬೆಳವ, ಕೌಜುಗ ಮೊದಲಾದ ಹಕ್ಕಿ ಪಕ್ಷಿಗಳು ವಾಸಿಸುತ್ತವೆ. ಕೋಳಿಯನ್ನು ಸಾಕು ಪ್ರಾಣಿಯಾಗಿ ಸಾಕಲಾಗುತ್ತದೆ.

ವಾರ್ಷಿಕ ಸರಾಸರಿ ೩೯೪ ಮಿ.ಮೀ. ಮಳೆ ಬೀಳುತ್ತಿದ್ದು ಉಷ್ಣಾಂಶ ೩೮ ಸೆಂ. ಇದ್ದು, ಚಳಿ ೧೨ ಸೆಂ. ಆಗಿರುತ್ತದೆ. ಈ ಪರಿಸರದಲ್ಲಿ ೬೬ ಕೊಳವೆ ಬಾವಿಗಳಿದ್ದು, ಕೃಷಿ ಬೆಳೆಗೆ ಆಶ್ರಯವಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ವೀರಾಪುರದ ಕೆರೆ, ಕುರುಬರ ಕುಂಟಪ್ಪನ ಕಟ್ಟೆ, ಇದ್ದರೂ ತುಂಬುವುದು ಅಪರೂಪ. ೨ ಕೈ ಪಂಪುಗಳಿವೆ. ಗ್ರಾಮದಲ್ಲಿ ೪ ಹಳೆಯ ಬಾವಿಗಳಿದ್ದು, ಬತ್ತಿ ಹೋಗಿವೆ.

ಕುರುಬ ಜನಾಂಗ ದೊಡ್ಡ ಸಮುದಾಯವಾಗಿದ್ದು, ಕುಂಚಿಟಿಗರು, ಆದಿ ಕರ್ನಾಟಕ, ಈಡಿಗರು ಸಣ್ಣ ಸಮುದಾಯವಾಗಿದೆ. ಕನ್ನಡ ಮಾತೃ ಭಾಷೆಯಾ ಗಿರುವ ಈ ಗ್ರಾಮದಲ್ಲಿ ಒಟ್ಟು ೨೩೫ ಮನೆಗಳಿದ್ದು, ೧೧೧೮ ಜನಸಂಖ್ಯೆ ಹೊಂದಿದೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಮನೆಗಳು ಒಟ್ಟು ೨೩೫ ಮನೆಗಳಿವೆ. ಆಶ್ರಯ, ಜನತಾ, ಅಂಬೇಡ್ಕರ್, ವಸತಿ ಯೋಜನೆಯ ೯೨ ಫಲಾನುಭವಿಗಳಿದ್ದಾರೆ. ಭಾಗ್ಯ ಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ಮನೆಗಳಿದ್ದು, ೯೫ ಮನೆಯಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ, ಬಳಸುವವರಿದ್ದಾರೆ ವಿಶೇಷ ಸಂದರ್ಭದಲ್ಲಿ ಮಾಂಸದ ಊಟ, ಹೋಳಿಗೆ ಊಟದ ವ್ಯವಸ್ಥೆ ಇರುತ್ತದೆ. ಸಾಂಪ್ರದಾಯಿಕ ವಾಹನವಾಗಿ ಎತ್ತಿನ ಬಂಡಿ, ಟ್ರ್ಯಾಕ್ಟರ್, ಟೆಂಪೋ, ಆಟೋಗಳನ್ನು ಬಳಸುತ್ತಾರೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ತೊಗರಿ, ಅಲಸಂದಿ, ಹೆಸರು, ಉರುಳಿ, ಈರುಳ್ಳಿ, ಮೆಣಸಿನಕಾಯಿಗಳನ್ನು ಆಹಾರ ಬೆಳೆಯಾಗಿ ಬೆಳೆಯುತ್ತಾರೆ. ಶೇಂಗಾ, ಹುಣಸೆ ಹಣ್ಣಿನ ವ್ಯಾಪಾರ ಕಂಬಳಿ ನೇಯ್ಗೆ, ಕಂಬಳಿ ವ್ಯಾಪಾರವೂ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ಆಡಿಟರ್ ಲಕ್ಷ್ಮಣ್, ಪ್ರಾಧ್ಯಾಪಕ ಡಾ॥ ಈರಣ್ಣ, ಇಂಜಿನಿಯರ್ ಆನಂದಪ್ಪ, ನಾಗರಾಜು, ವೈದ್ಯರಾದ ಡಾ॥ಕಮಲನಿಧ್, ಡಾ॥ ಹನುಮಂತಯ್ಯ, ಅಧ್ಯಾಪಕರು, ಸಾರಿಗೆ ನೌಕರರು ಸೇರಿ ಇಬ್ಬರು ವಕೀಲರು ಇದ್ದಾರೆ. ಗೃಹೋದ್ಯಮವಾಗಿ ಬೀಡಿ ಸುತ್ತುವುದು, ಎಲೆ ತಯಾರಿಕೆ, ಬಟ್ಟೆ ಹೊಲಿಯುವುದು, ಕಂಬಳಿ ದಾರ ತೆಗೆಯುವ ಕಾಯಕವಿದೆ.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ ಹಾಗೂ ಹೆಂದೊರೆ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಕ್ಷೇತ್ರ ಹೊಂದಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ೩ ಜನ ಪಂಚಾಯಿತಿ ಸದಸ್ಯರಿದ್ದಾರೆ. ಅಂಚೆ ಕಚೇರಿ, ಅಂಗನವಾಡಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿದ್ದು, ಶಾಲೆಯಲ್ಲಿ ೭೩ ಮಕ್ಕಳಿದ್ದು ಮೂರು ಜನ ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯ ಪುಸ್ತಕ ಉಚಿತ ಹಂಚಿಕೆ, ಶೌಚಾಲಯ ಸೌಲಭ್ಯ ಹೊಂದಿದೆ. ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳ ೫ ತಂಡವೂ ಸೇರಿದಂತೆ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪಿನ ೪ ತಂಡಗಳಿವೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ೮ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ೨ ಕರುಗಲ್ಲುಗಳು, ಅರಳಿಕಟ್ಟೆ ಇದ್ದು ಪೂಜೆಗೆ ಪಾತ್ರವಾಗಿದೆ. ಉಳಿದಂತೆ ದ್ಯಾಮಲಾಂಭ, ದುರ್ಗಮ್ಮ, ಮಾರಮ್ಮ, ರೇವಣಸಿದ್ಧೇಶ್ವರ ದೇವಾಲಯಗಳಿವೆ. ಬಂಡೆಪ್ಪನ ದೇವಾಲಯವೂ ಇದೆ. ದುರ್ಗಮ್ಮನ ಜಾತ್ರೆಯನ್ನು ಊರ ಹಬ್ಬವಾಗಿ ಆಚರಿಸಿ, ಆರತಿ, ಬಾನ, ಬ್ಯಾಟೆ ನೀಡುವ ಸಂಪ್ರದಾಯ ಆಚರಣೆಗಳಿವೆ ಎಂದು ಕೆ. ಗೋವಿಂದಪ್ಪ ವಿವರಿಸುತ್ತಾರೆ. ಶನಿದೇವರ ಆರತಿ, ನಾಟಕ ಪ್ರದರ್ಶನವೂ ಇರುತ್ತದೆ. ಶ್ರಾವಣ ಮಾಸದ ಕೊನೆಯ ದಿನ ಈ ಪದ್ಧತಿ ಇಂದಿಗೂ ನಿರಂತರವಾಗಿ ಸಾಗುತ್ತಾ ಬಂದಿದೆ ಎಂದು ಶಿಕ್ಷಕ ವಿ.ಪಿ. ಸೀತಾರಾಮ ಹೇಳುತ್ತಾರೆ.

ಸಂಕ್ರಾಂತಿ, ದೀಪಾವಳಿ, ಯುಗಾದಿ, ಶಿವರಾತ್ರಿ, ಮಹಾನವಮಿ ಹಬ್ಬಗಳ ಜೊತೆಗೆ ಗಣೇಶನ ಉತ್ಸವ, ಕನಕ ಜಯಂತಿ ಕಾರ್ಯಕ್ರಮಗಳು ಆರತಿ, ಉತ್ಸವಗಳೂ ನಡೆಯುತ್ತವೆ. ಗ್ರಾಮದಲ್ಲಿ ತಮಟೆ ಕಲಾವಿದರಾದ ಗುಂಡಪ್ಪ, ನಾಗಪ್ಪ, ಗೊರವನ ರಾಮಯ್ಯ, ಸಣ್ಣೀರಪ್ಪ, ಬಾಲಕೃಷ್ಣಯ್ಯ ರಂಗಭೂಮಿ ಕಲಾವಿದರಾಗಿ ಹೆಸರಾಗಿದ್ದಾರೆ. ಸೋಬಾನೆ ಲಕ್ಷ್ಮಕ್ಕ, ಸಾಕಮ್ಮ, ಲಕ್ಕಮ್ಮ, ಭಜನೆ ಕಲಾವಿದರಾದ ಪರಶುರಾಮಣ್ಣ ಸ್ಥಳೀಯವಾಗಿ ಹೆಸರು ಮಾಡಿದ್ದಾರೆ. ಚರಿತ್ರೆ, ಹರಿಭಕ್ತ ಸಾರ, ನಳದಮಯಂತಿ ಕಾರ್ಯಗಳನ್ನು ಧಾರ್ಮಿಕ ಕಾವ್ಯವಾಗಿ ಶ್ರಾವಣ ಮಾಸದಲ್ಲಿ ಓದುತ್ತಿದ್ದು, ಕೊನೆಯಲ್ಲಿ ವಿಶೇಷ ಪೂಜೆ, ಅನ್ನದಾನ ಸಂಪ್ರದಾಯದ ದೊಡ್ಡರಂಗಪ್ಪ ಅವರು ವಿಶಿಷ್ಟ ಕಾರ್ಯ ವಾಚಕರಾಗಿದ್ದು ಗಮನಾರ್ಹ ಗಮಕಗಳು. ಇವರ ೪ ಜನ ಮಕ್ಕಳು ಶಿಕ್ಷಣ ಇಲಾಖೆಯಲ್ಲಿ ಉದ್ಯೋಗದಲ್ಲಿದ್ದಾರೆ.

## ವೀರಾಪುರ

ವೀರಾಪುರ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೯ ಕಿ.ಮೀ. ದೂರದಲ್ಲಿದೆ. ಸಿರಾ–ಬಂದುಕುಂಟೆ, ಹನುಮನಹಳ್ಳಿ ಮಾರ್ಗವಾಗಿ ಪಟ್ಟನಾಯಕನ ಹಳ್ಳಿಗೆ ಹೋಗುವಾಗ ವೀರಗಾನಹಳ್ಳಿ ಸಮೀಪದಲ್ಲಿ ಈ ಗ್ರಾಮವಿದೆ. ಇದು ಹೆಂದೊರೆಯ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೧೯೮.೦೨ ಹೆಕ್ಟೇರ್ ಬಯಲು ಪ್ರದೇಶ. ವೀರಗಾನಹಳ್ಳಿಯ ಕೆಲವು ಕುಟುಂಬಗಳು ವಲಸೆ ಬಂದು, ಮನೆ ಕಟ್ಟಿಕೊಂಡ ಕಾರಣದಿಂದ ವೀರಗಾನ ಹಳ್ಳಿಯ ಮತ್ತೊಂದು ರೂಪವಾಗಿ ವೀರಾಪುರವಾಗಿದೆ ಎಂದು ದೊಡ್ಡರಂಗಪ್ಪ ಅಭಿಪ್ರಾಯ ಪಡುತ್ತಾರೆ.

ಮರಳು ಮಿಶ್ರಿತ ಕೆಂಪು ಭೂಮಿ, ಈ ಗ್ರಾಮದ ಪರಿಸರದಲ್ಲಿ ದಕ್ಷಿಣಕ್ಕೆ ಹೊಳೆ, ಗಿಡಮರಳು, ಕನ್ನೇರು ಹಳ್ಳ ಇದೆ. ಹಾಗಾಗಿ ಇಲ್ಲಿ ನರಿ, ತೋಳ, ಜಿಂಕೆ, ಉಡ, ಹಂದಿ, ಮೊಲ, ಕರಡಿ ಕಂಡು ಬರುತ್ತದೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕುರಿ, ತೋಳಗಳನ್ನು ಸಾಕು ಪ್ರಾಣಿಗಳಾಗಿ ಸಾಕಲಾಗಿದೆ.

ಕಾಡು ಪಕ್ಷಿಗಳಾಗಿ ಮರಕುಟಿಕ, ಕೊಕ್ಕರೆ, ಕೋಗಿಲೆ, ಕಾಗೆ ಕಂಡು ಬರುತ್ತದೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ಮಳೆ ೫೮೦ ಮಿ.ಮೀ ಇದ್ದು, ಒಂದು ಕಟ್ಟೆ, ಮಳೆಯ ಜೊತೆಗೆ ಕೃಷಿಗೆ ಕೊಳವೆ ಬಾವಿಯನ್ನು

ಅವಲಂಬಿಸಿದ್ದಾರೆ. ಈ ಪರಿಸರದಲ್ಲಿ೧೧ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಕೆ ಕೊಡಲಾಗುತ್ತಿದೆ. ೧ ಸಿಸ್ಟನ್ ಇದ್ದು, ೧ ಕೈ ಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯ ವಾಗಿದ್ದು, ಆದಿಕರ್ನಾಟಕ ಕಿರು ಸಮುದಾಯವಾಗಿದೆ. ಕಾಂಕ್ರೀಟ್, ಆಶ್ರಯ, ಹೆಂಚಿನ, ಸ್ವರೂಪದ ೩೨ ಮನೆಗಳಿವೆ. ಇವು ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆ, ಭಾಗ್ಯ ಜ್ಯೋತಿ ವಿದ್ಯುತ್ ಸೌಲಭ್ಯ ಪಡೆದವರಿದ್ದಾರೆ. ೧೩ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ೧೮೪ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ದ್ವಿಚಕ್ರವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಯಾಗಿ ರಾಗಿ, ಭತ್ತ, ಹುರುಳಿ, ತೊಗರಿ ಬೆಳೆಯುತ್ತಾರೆ. ತೋಟಗಾರಿಕೆಯಾಗಿ ತೆಂಗು, ಅಡಿಕೆ ಬೆಳೆಯಿದೆ. ಹುಣಸೇಹಣ್ಣು, ತೆಂಗು, ಶೇಂಗಾ ವಾಣಿಜ್ಯ ಬೆಳೆಗಳಾಗಿವೆ. ತೋಟಗಾರಿಕೆ, ಪಶುವೈದ್ಯಕೀಯ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ. ಪಶವೈದ್ಯ ದೊಡ್ಡಣ್ಣ, ಉಪನಿರ್ದೇಶಕ ರಾಯಣ್ಣ, ಪ್ರಾಧ್ಯಾಪಕ ಹೇಮಂತ್ ಇದೇ ಗ್ರಾಮದವರೆಂಬುದು ವಿಶೇಷ.

ಆಡಳಿತಾತ್ಮಕವಾಗಿ ಸಿರಾ ವಿಧಾನ ಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ, ಹೆಂದೊರೆ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ತಾಲ್ಲೂಕು ಕಚೇರಿ, ವಿದ್ಯುತ್ ಈ ಕ್ಷೇತ್ರದ ವ್ಯಾಪ್ತಿಗೆ ಸಿರಾ ನಗರಕ್ಕೆ ಬರಬೇಕಾಗಿದೆ. ಪಟ್ಟನಾಯನಕಹಳ್ಳಿ ಕಿರು ಆಸ್ಪತ್ರೆ, ಸಹಾಯ ಪಡೆಯುತ್ತಿದ್ದಾರೆ. ಗ್ರಾಮದಲ್ಲಿ ಸ್ತ್ರೀ ಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿದ್ದು, ಸ್ತ್ರೀಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ.

ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆ ಇದೆ. ಶಾಲೆಯಲ್ಲಿ ೨೫ ಮಕ್ಕಳಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ಸೌಲಭ್ಯಗಳಿದ್ದು, ಶಿಕ್ಷಕರಿದ್ದಾರೆ. ಗ್ರಾಮದ ಸಾಕ್ಷರತೆ ೫೬.೮ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ ಸೌಲಭ್ಯಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ.

ಭೂತಪ್ಪ ದೇವರ ಪೌಳಿ ಇದೆ. ಊರಹಬ್ಬ ಮಾಡಿ ಆರತಿ, ಬಾನ, ಬ್ಯಾಟೆ ಆರತಿ ಸಂಪ್ರದಾಯವಿದೆ. ಕನ್ನಡಮ್ಮನಿಗೆ ಆರತಿ, ಹರಿಸೇವೆ ಸಂಪ್ರದಾಯ ಶ್ರಾವಣ ಮಾಸದಲ್ಲಿ ಏರ್ಪಡುತ್ತದೆ. ಯುಗಾದಿ, ದೀಪಾವಳಿ, ಗೌರಿ ಗಣೇಶ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ವರದಾಪುರ

ವರದಾಪುರ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಸಿರಾ–ಅಮರಾಪುರ ಮುಖ್ಯ ರಸ್ತೆಯಲ್ಲಿ ಎಡಭಾಗಕ್ಕೆ ಲಕ್ಕನಹಳ್ಳಿಗೆ ಸಮೀಪದಲ್ಲಿದೆ. ಇದೊಂದು ಬಯಲು ಸೀಮೆಯಾಗಿದ್ದು, ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೩೪೨.೩ ಹೆಕ್ಟೇರ್ ವಿಸ್ತೀರ್ಣ ಈ ಗ್ರಾಮದಲ್ಲಿ ಮೋದಲಿಗೆ ವರದಪ್ಪ ಎಂಬ ಶ್ಯಾನುಭೋಗ ಪಾರಂಪರೆಯ ವ್ಯಕ್ತಿ ಇದ್ದು, ಕಂಪನಿ ಸರ್ಕಾರದಲ್ಲಿ ಕಂದಾಯ ನಿರ್ವಹಣೆ ನೋಡಿ ಕೊಳ್ಳುತ್ತಿದ್ದರು. ನಂತರ ಬ್ರಾಹ್ಮಣ ಕುಂಟುಂಬಗಳ ಇಲ್ಲಿಂದ ಮೇಲುಕುಂಟೆ, ಬೆಂಗಳೂರು ಸಿರಾ ಗ್ರಾಮಗಳಿಗೆ ವಲಸೆ ಹೋದರೆಂದು ಗ್ರಾಮದ ಶ್ರೀನಿವಾಸ್ ಹೇಳುತ್ತಾರೆ. ವ್ಯಕ್ತಿ ಮೂಲದ ಈ ಗ್ರಾಮಕ್ಕೆ ವರದಾಪುರ ಎಂಬ ಹೆಸರು ಬಂದಿದೆ.

ಕುರುಚಲು ಗಿಡ, ಪೂದೆ, ಮರಗಿಡಗಳ ಆಶ್ರಯ ಪಡೆದ ಈ ಪರಿಸರದಲ್ಲಿ ಹಂದಿ, ಮೊಲ, ಜಿಂಕೆ, ಮೊದಲಾದ ಕಾಡು ಪ್ರಾಣಿಗಳಿದ್ದು, ಪಕ್ಷಿಗಳಾದ ಗಿಳಿ, ಕೋಗಿಲೆ, ನವಿಲು, ಗೊರವಂಕ, ಬೆಳವ, ಕೌಜಲಗ, ಕೊಕ್ಕರೆ, ಹದ್ದು, ಗರುಡ ಮೊದಲಾದ ಪಕ್ಷಿಗಳಿದ್ದು, ಗ್ರಾಮದಲ್ಲಿ ಕೃಷಿಗಾಗಿ ಎತ್ತು, ಹಸುಗಳನ್ನು ಸಾಕಿದ್ದಾರೆ. ಎಮ್ಮೆ, ಕುರಿ, ಮೇಕೆಗಳೂ ಇವೆ. ಕೋಳಿ ಸಾಕು ಪ್ರಾಣಿಯಾಗಿದೆ.

ವಾರ್ಷಿಕ ಮಳೆಯ ಪ್ರಮಾಣವೂ ಕಡಿಮೆ. ವಾಡಿಕೆಯ ಮಳೆ ವಾರ್ಷಿಕವಾಗಿ ೫೮೦ ಮಿ.ಮೀ. ಬಿಸಿಲು ೩೯೦ ಸೆಂ. ಇದ್ದು, ಚಳಿ ೯೦ ಸೆಂ ಇರುತ್ತದೆ. ಬಿಸಿ ಕಡಿಮೆ ಒಂದು ಕೆರೆ ಇದ್ದರೂ ತುಂಬುವುದು ಅಪರೂಪ. ಹಾಗಾಗಿ ಈ ಪರಿಸರದಲ್ಲಿ ೧೬ ಕೊಳವೆ ಬಾವಿಗಳಿದ್ದು ಕೃಷಿ ಉಪಯೋಗಕ್ಕೆ ಬಳಕೆಯಾಗುತ್ತಿದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ.ಗ್ರಾಮದಲ್ಲಿ ೩ ಸಿಸ್ಟನ್‌ಗಳಿವೆ. ೧ ಕೈ ಪಂಪು ಇದೆ.

ಆದಿಕರ್ನಾಟಕ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ನಾಯಕ, ಕಮ್ಮಾರ, ಉಪ್ಪಾರ ಜನಾಂಗ ಸಣ್ಣ ಸಮುದಾಯವಾಗಿದೆ. ವಿವಿಧ ಪ್ರಕಾರದ ೬೦ ಮನೆಗಳಿದ್ದು, ಅವು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿವೆ. ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ೨೩ ಫಲಾನುಭವಿಗಳು, ಹಾಗೂ ಭಾಗ್ಯ ಜ್ಯೋತಿ ವಿದ್ಯುತ್ ಯೋಜನೆಯ ಫಲಾನು ಭವಿಗಳೂ ಇದ್ದಾರೆ. ૩೦೨ ಜನಸಂಖ್ಯೆ ಇದೆ.

ರಾಗಿ ಮುದ್ದೆ ಈ ಗ್ರಾಮದ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಹೋಳಿಗೆ ವಿಶೇಷ ಊಟವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿ, ಟ್ರ್ಯಕ್ಟರ್, ದ್ವಿಚಕ್ರ ಮೊದಲಾದ ಆಧುನಿಕ ವಾಹನಗಳಿವೆ. ಶೇಂಗಾ ಗ್ರಾಮದ ಮುಖ್ಯ ಬೆಳೆ. ರಾಗಿ, ಜೋಳ, ಭತ್ತ, ಅಡಿಕೆ, ಅಲಸಂದಿ, ತೊಗರಿ ಆಹಾರ ಬೆಳೆಗಳು. ಒಂದು ಮಿನಿ ಹಾಲಿನ ಕೇಂದ್ರವಿದ್ದು, ಸರಾಸರಿ ೧೦೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೆಹಣ್ಣು ವ್ಯಾಪಾರವಿದೆ. ೨ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ದೊಡ್ಡಬಾಣಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಗೊಂಡಿದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರು ಈ ಗ್ರಾಮದ ಪ್ರತಿನಿಧಿಗಳಾಗಿದ್ದಾರೆ.

೨ ಸ್ತ್ರೀ ಶಕ್ತಿ ಸಂಘಗಳಿದ್ದು, ಮಹಿಳಾ ಸಬಲೀಕರಣಕ್ಕೆ ದುಡಿಯುತ್ತಿವೆ. ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ૩೬ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಶೇ. ೫೪.೫ ರಷ್ಟು ಸಾಕ್ಷರವಂತರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ಅಂಗವಿಕಲ ಚೇತನ ವೇತನ, ವಿಧವಾ ವೇತನ, ಸೌಲಭ್ಯ ಪಡೆದವರೂ ಇದ್ದಾರೆ. ೪ ಅಂಗಡಿಗಳಿದ್ದು, ಗ್ರಾಮದಲ್ಲಿ ಮರಡಿರಂಗನಾಥ, ದುರ್ಗಮ್ಮ, ಮಾರಮ್ಮನ ಪೌಳಿ ಇದೆ. ಶ್ರೀನಿವಾಸ ದೇವರಿಗೆ ವಾರ್ಷಿಕವಾಗಿ ಆರತಿ, ಮ ಸೇವೆ, ಶ್ರಾವಣ ಮಾಸದಲ್ಲಿ ನೆರವೇರುತ್ತದೆ. ತಾವರೆಕೆರೆ ಬಂಡಿ ರಂಗನಾಥನ ರಥೋತ್ಸವದ ದಿನ ಈ ಗ್ರಾಮದ ಬಂಡಿರಂಗ ನಾಥನಿಗೆ ವಿಶೇಷ ಉತ್ಸವ ಏರ್ಪಡುತ್ತದೆ. ದುರ್ಗಮ್ಮ, ಮಾರಮ್ಮನಿಗೆ ಆರತಿ, ಬಲಿ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಕುಂತಮ್ಮ-ಗೌರಮ್ಮ, ಮಹಾನವಮಿ, ಶಿವರಾತ್ರಿ ಈ ಗ್ರಾಮದ ವಿಶೇಷ ಹಬ್ಬಗಳು. ಕುಂತಮ್ಮ ಗೌರಮ್ಮ ಗ್ರಾಮದ ಹೆಣ್ಣು ಮಕ್ಕಳ ವಿಶೇಷ ಹಬ್ಬವಾಗಿದೆ. ಶ್ರೀನಿವಾಸ ಎಂಬ ಯುವ 'ಅಮ್ಮನ ನೆನಪುಗಳು' ಎಂಬ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ.

## ವಾಜರಹಳ್ಳಿ

ವಾಜರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮ – ಉತ್ತರಕ್ಕೆ ಸಿರಾದಿಂದ ૩೫ ಕಿ.ಮೀ. ದೂರದಲ್ಲಿದೆ. ದ್ವಾರನಕುಂಟೆಯಿಂದ ೨ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಇದರ ಭೌಗೋಳಿಕ ವ್ಯಾಪ್ತಿ ೨೪೨ ಹೆಕ್ಟೇರ್ ವಿಸ್ತೀರ್ಣ. ಚಿನ್ನ, ಬೆಳ್ಳಿ,ಕಾಲುಂಗುರದ ಅಕ್ಕಸಾಲಿಗರು ಅಧಿಕವಾಗಿ ನೆಲೆಸಿದ್ದರಿಂದ ಈ ಗ್ರಾಮಕ್ಕೆ ವಾಜರಹಳ್ಳಿ ಎಂದು ಹೆಸರು ಬಂದಿದೆ. ಆದರೆ ಇಂದು ಅಕ್ಕಸಾಲಿಗರ ಒಂದು ಕುಟುಂಬವೂ ಗ್ರಾಮದಲ್ಲಿ ಇರುವುದಿಲ್ಲ. ಕೆಂಪು, ಮರಳು ಮಣ್ಣಿನ ಇಲ್ಲಿನ ನೆಲದಲ್ಲಿ ತೇವಾಂಶ ಕಡಿಮೆ.

ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೪೬೪ ಮಿ.ಮೀ. ಬಿಸಿಲು ૩೯–೪೦಼ ಸೆಂ. ಇದ್ದು, ಚಳಿ ೧೨಼ ಸೆಂ ಇರುತ್ತದೆ.

ಕುರುಚಲು ಗಿಡ, ಪೊದೆ, ಮರಗಿಡಗಳ ಆಶ್ರಯ ಪಡೆದ ಈ ಪರಿಸರದಲ್ಲಿ ಹಂದಿ, ಮೊಲ, ಜಿಂಕೆ, ಮುಂಗುಸಿ, ಬೆಕ್ಕು ಮೊದಲಾದ ಕಾಡು ಪ್ರಾಣಿಗಳಿದ್ದು, ಪಕ್ಷಿಗಳಾದ ಗಿಳಿ, ಕೋಗಿಲೆ, ನವಿಲು, ಗೊರವಂಕ, ಬೆಳ್ವ, ಕೌಜಲಗ, ಕೊಕ್ಕರೆ, ಹದ್ದು, ಗರುಡ ಮೊದಲಾದ ಪಕ್ಷಿಗಳಿದ್ದು, ಗ್ರಾಮದಲ್ಲಿ ಕೃಷಿಗಾಗಿ ಎತ್ತು, ಹಸುಗಳನ್ನು ಸಾಕಿದ್ದಾರೆ. ಎಮ್ಮೆ, ಕುರಿ, ಮೇಕೆಗಳೂ ಇವೆ. ಕೋಳಿ ಸಾಕು ಪ್ರಾಣಿಯಾಗಿದೆ. ಗ್ರಾಮಕ್ಕೆ ಹೊಂದಿಕೊಂಡಂತೆ ಒಂದು ಕೆರೆ ಇದ್ದು, ಮಳೆಗಾಲದಲ್ಲಿ ಮಾತ್ರ ತುಂಬುತ್ತದೆ. ಊರಿನ ಮುಂಭಾಗದಲ್ಲಿ ಕಾರೇಹಳ್ಳ ಮಾರ್ಗದಲ್ಲಿ ಒಂದು ಹಳ್ಳವಿದ್ದು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ.

ಕುರುಬ ಜನಾಂದ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ಆದಿಕರ್ನಾಟಕ, ಗೊಲ್ಲರು, ಬೇಡರು, ಹಳ್ಳಿಕಾರ, ಭಜಂತ್ರಿ ಸಣ್ಣ ಸಮುದಾಯ ವಾಗಿದೆ. ವಿವಿಧ ಪ್ರಕಾರದ ೨೧೬ ಮನೆಗಳಿದ್ದು, ಅವು ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿವೆ. ಶೌಚಾಲಯವನ್ನು ಪಂಚಾಯಿತಿ ಅನುದಾನದಲ್ಲಿ ೯೬ ಮನೆಗಳಲ್ಲಿ ಬಳಸಲಾಗುತ್ತದೆ. ೧೧೨૩ ಜನಸಂಖ್ಯೆ ಇದೆ.

ರಾಗಿ ಮುದ್ದೆ ಈ ಗ್ರಾಮದ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಹೋಳಿಗೆ ವಿಶೇಷ ಊಟವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿ, ಟ್ರ್ಯಾಕ್ಟರ್, ದ್ವಿಚಕ್ರ ಮೊದಲಾದ ಆಧುನಿಕ ವಾಹನಗಳಿವೆ. ಶೇಂಗಾ ಗ್ರಾಮದ ಮುಖ್ಯ ಬೆಳೆ. ರಾಗಿ, ಜೋಳ, ಭತ್ತ, ಅಡಿಕೆ, ಅಲಸಂದಿ, ತೊಗರಿ ಆಹಾರ ಬೆಳೆಗಳು. ಶಿಕ್ಷಕರು ಸೇರಿದಂತೆ ವಿವಿಧ ಹುದ್ದೆಯ ೬ ಜನ ಸರ್ಕಾರಿ ನೌಕರರಿದ್ದಾರೆ. ಕಂಬಳಿ ನೇಯ್ಗೆ, ಮಾರಾಟವೂ ಇದೆ. ರಾಗಿ ಮಿಲ್, ದ್ವಿಚಕ್ರ ವಾಹನ ರಿಪೇರಿ ಕೆಲಸದವರೂ ಇದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಬೇವಿನಹಳ್ಳಿ ಜಿಲ್ಲಾ ಪಂಚಾಯಿತಿ, ಹುಲಿಕುಂಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಈ ಗ್ರಾಮ, ದ್ವಾರನಕುಂಟೆ ಗ್ರಾಮ ಪಂಚಾಯಿತಿ ಹಾಗೂ ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಗೊಂಡಿದೆ.

೧ ಅಂಗನವಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು, ೯೯ ಮಕ್ಕಳು ೪ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಗ್ರಾಮದಲ್ಲಿ ೧೫ ನೇ ಶತಮಾನದ ಎರಡು ಶಾಸನ ೧೭ ಅಸ್ಪಷ್ಟವಾಗಿದ್ದು, ಕೆಲವರ ಹೆಸರನ್ನು ಮಾರ ಉಲ್ಲೇಖಿಸಿದೆ. ಶಾಸನ ೧೮ ರಲ್ಲಿ ಬರಗೂರು ಅಗ್ರಹಾರದ ಕುಂಟೆಯ ಕಟ್ಟೆಯನ್ನು ತಿಮ್ಮನಾಯ್ಕ ಎಂಬುವವನು ಒಡೆದಿದ್ದು, ಕಟ್ಟೆ ದುರಸ್ಥೀಕರಣಕ್ಕೆ ಹೆಂಜೇರಿನ (ಹೇಮಾವತಿ) ಯ ಬೊಮ್ಮಯ್ಯಗೌಡ ಹಾಗೂ ತಿಮ್ಮೇಗೌಡ ಇವರಿಗೆ ಒಂದಿಷ್ಟು ಭೂಮಿಯನ್ನು ನಿಡಗಲ್ಲು ಚಿಕ್ಕತಿಮ್ಮನ ಕಾಲದಲ್ಲಿ ಈ ಒಪ್ಪಂದ ಆಯಿತೆಂದು, ಇದಕ್ಕೆ ತಪ್ಪಿದರೆ, ಗೋವನ್ನು ಕೊಂದ ಬ್ರಾಹ್ಮಣನ ಹತ್ಯೆ, ಪಾಪ ಲಭಿಸಲಿ ಎಂದು ಶಾಸನ ವಿವರಿಸುತ್ತದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದಲ್ಲಿ ಅಂಚೆ ಕಛೇರಿ, ವಾಲ್ಮೀಕಿ ಯುವಕ ಸಂಘ, ಸ್ತ್ರೀ ಶಕ್ತಿ ೪ ಸಂಘಗಳಿದ್ದು, ಚೌಡೇಶ್ವರಿ ಅಭಿವೃದ್ಧಿ ಟ್ರಸ್ಟ್ ಸಹ ಇದ್ದು, ಗ್ರಾಮದ ಬೆಳವಣಿಗೆಗೆ ಪ್ರಯತ್ನಿಸುತ್ತಿದೆ. ಗ್ರಾಮದಲ್ಲಿ ಶೇ. ೫೮ ರಷ್ಟು ಸಾಕ್ಷರವಂತರಿದ್ದಾರೆ. ಗ್ರಾಮದಲ್ಲಿ ಮಹಿಳಾ ಸಬಲೀಕರಣಕ್ಕೆ ದುಡಿಯುತ್ತಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ವ್ಯವಸ್ಥೆಯಿದೆ. ಆಶ್ರಯ, ಇಂದಿರಾ ಆವಾಸ್, ಜನತಾ ಯೋಜನೆಗಳು, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ಕುಟುಂಬಗಳಿವೆ.

ಜುಂಜಪ್ಪ, ಗಿರಿಯಪ್ಪ ಪಶು ಸಂಬಂಧಿ ಔಷಧೋಪಚಾರ ಮಾಡುತ್ತಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ಅಂಗವಿಕಲ ಚೇತನ ವೇತನ, ವಿಧವಾ ವೇತನ, ಸೌಲಭ್ಯ ಪಡೆದವರೂ ಇದ್ದಾರೆ. ೨ ಹೋಟೆಲ್‌ಗಳಿದ್ದು, ೮ ಪೆಟ್ಟಿಗೆ ಅಂಗಡಿಗಳಿದ್ದು, ವಾಜರಹಳ್ಳಿ, ಕಾರೇಹಳ್ಳಿ ಮಾರ್ಗವಾಗಿ ಅಮರಾಪುರ, ಸಿರಾ ರಸ್ತೆಗೆ ಸಂಪರ್ಕ ಕಲ್ಪಿಸುವ ಜಿಲ್ಲಾ ರಸ್ತೆ ಇದ್ದು, ಬಸ್‌ಗಳು ಈ ಮಾರ್ಗವಾಗಿ ಸಂಚರಿಸುತ್ತವೆ. ಚಿತ್ರದೇವವು, ಕಾಳಂಲಿಂಗನ ಪೌಳಿ ಇದ್ದು, ಚೌಡೇಶ್ವವಿಯ ದೇವಾಲಯವಿದೆ. ಯುಗಾದಿ, ದೀಪಾವಳಿ, ಸಂಕ್ರಾಂತಿ ಹಬ್ಬದ ಆಚರಣೆಯಿದೆ.

## ವೀರಬೊಮ್ಮನಹಳ್ಳಿ

ವೀರಬೊಮ್ಮನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಇದೊಂದು ಸಿರಾ ತಾಲ್ಲೂಕಿನ ಯಾತ್ರಾ ಸ್ಥಳವಾಗಿದ್ದು, ವೀರಬೊಮ್ಮಣ್ಣನ ದೇವಾಲಯ, ತಾಲ್ಲೂಕಿನ ಧಾರ್ಮಿಕ ಕ್ಷೇತ್ರವೂ ಆಗಿದೆ. ಸಿರಾ-ಅಮರಾಪುರ ಮುಖ್ಯ ರಸ್ತೆಯಲ್ಲಿ, ದಾಸರಹಳ್ಳಿಯ ನಂತರ ಎಡಕ್ಕೆ ವೀರಬೊಮ್ಮನಹಳ್ಳಿಯ ಗೇಟಿನಲ್ಲಿ ವೀರಬೊಮ್ಮನ ಭವ್ಯವಾದ ಗೋಪುರವಿದೆ. ಅಲ್ಲಿಂದ ೨ ಕಿ.ಮೀ. ದೂರದಲ್ಲಿ ವೀರಬೊಮ್ಮನಹಳಳಿ ಗ್ರಾಮವಿದೆ. ಇದೊಂದು ಪ್ರಮುಖ ಧಾರ್ಮಿಕ ನಲೆಯಾಗಿದ್ದು, ವೀರಬೊಮ್ಮಣ್ಣನೆಂಬ ಸಾಂಸ್ಕೃತಿಕ ವೀರನೊಬ್ಬ, ತನ್ನ ದನಗಳನ್ನು ಬೇಡರಿಂದ ರಕ್ಷಿಸಲು ಮಾಡಿದ ಹೋರಾಟ, ಆ ಹೋರಾಟದಲ್ಲಿ ಮಡಿದ ವಿವರವನ್ನು ಕಾವ್ಯ ರೂಪದಲ್ಲಿ ಹಾಡಲಾಗುತ್ತಿದೆ. ಈ ಸಾಂಸ್ಕೃತಿಕ ನಾಯಕನ ಹೆಸರಿನಲ್ಲಿಯೇ ಗ್ರಾಮವೊಂದು ರಚನೆಯಾಗಿರುವುದು ಈ ಗ್ರಾಮದ ವಿಶೇಷವಾಗಿದೆ ಮಾತ್ರವಲ್ಲ ಈ ಬಗೆಯ ಸಾಂಸ್ಕೃತಿಕ ಅನನ್ಯತೆ ಯನ್ನು ಸಾರುವ ಐದು ವೀರಗಲ್ಲುಗಳು ಈ ಗ್ರಾಮದ ದೂರಭಾಗದ ವೀರಬೊಮ್ಮಣ್ಣನ ಪೌಳಿಯ ಬಳಿ ಸಾಲಾಗಿ ನಿಲ್ಲಿಸಲಾಗಿದ್ದು ಇವು ತುರುಗೋಳ್ ಕಾಳಗದ ದಟ್ಟ ಚಿತ್ರಣವೊಂದನ್ನು ಅಚ್ಚುಕಟ್ಟಾಗಿ ಕಟ್ಟಿ ಕೊಡುತ್ತದೆ. ಇಲ್ಲಿ ಉಪಲಭ್ಯವಾಗಿರುವ ಮತ್ತು ಆರಾಧನೆಗೆ ಒಳಗಾಗಿರುವ ವೀರಗಲ್ಲುಗಳು ೧೫ ನೇ ಶತಮಾನದವುಗಳೆಂದು, ಇವು ವಿಜಯನಗರದ ಅರಸರ ಕಾಲದನೆಂದು, ಇವು ವಿಜಯನಗರದ ಅರಸರ ಕಾಲದನೆಂದು, ಡಾ.ಎನ್. ನಂದೀಶ್ ವ್ಯಾಖ್ಯಾನಿಸಿದ್ದಾರೆ. ಇಲ್ಲಿನ ಐದು ವೀರಗಲ್ಲುಗಳು ವೀರಬೊಮ್ಮಣ್ಣ ತಂದೆ, ತಾತ, ಪೂರ್ವಿಕರನ್ನು ಅವರ ಗೋವುಗಳ್ಳರೊಂದಿಗೆ ನಡೆಸಿದ ಹೋರಾಟದ ಬಗೆಯನ್ನು ಚಿತ್ರಿಸಲಾಗಿದೆ. ಮೊದಲ ವೀರಗಲ್ಲಿನಲ್ಲಿ ವೀರಬೊಮ್ಮನು, ನಾಲ್ಕನೆಯ ವೀರಗಲ್ಲಿನಲ್ಲಿ ವೀರಬೊಮ್ಮಣ್ಣನ ತಾತ ಪೆಮ್ಮನಾಯಕ ಎಂತಲೂ, ಐದನೆಯ ವೀರಗಲ್ಲು ವೀರಬೊಮ್ಮಣ್ಣನ ತಂದೆ ಅಭಯನಾಯಕ ಚಿತ್ರನೆಂದು ಕೆಂಕೆರೆ ಹನುಮಂತೇಗೌಡರು ವಿವರಿಸುತ್ತಾರೆ. ಡಾ. ಮುದ್ದುವೀರಪ್ಪ

ವೀರಬೊಮ್ಮಣ್ಣನನ್ನು ಕುರಿತ ಪುಟ್ಟ ಕಥನ ಕಾವ್ಯವನ್ನು ಪ್ರಕಟಿಸಿದ್ದಾರೆ.

ದೇವಗಿರಿ ಉಪನಗರವನ್ನು ಇದರೊಂದಿಗೆ ಹಂಚಿಕೊಂಡಿರುವಂತೆ ಇಲ್ಲಿನ ಭೌಗೋಳಿಕ ವಿಸ್ತೀರ್ಣ ೫೧೦.೦೪ ಹೆಕ್ಟೇರ್ ಆಗಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದೆ. ದಿಬ್ಬ, ಹಳ್ಳ, ಪೊದೆಗಳಿಂದ ಕೂಡಿರುವ ಇಲ್ಲಿನ ಭೂಪ್ರದೇಶದಲ್ಲಿ  ನರಿ, ಮೊಲ, ಜಿಂಕೆ, ಉಡ, ಹಂದಿ ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು,ಎತ್ತು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಲಾಗುತ್ತದೆ. ಕೋಳಿ ಸಾಕು ಪಕ್ಷಿಯಾಗಿದೆ. ಪಕ್ಷಿಗಳಾದ ಗಿಳಿ, ಕಾಗೆ, ಗೊರವಂಕ, ಕೋಗಿಲೆ, ಗೂಬೆ, ಹದ್ದು, ಗರುಡ, ಗುಬ್ಬಚ್ಚಿ ಮೊದಲಾದ ಪಕ್ಷಿಗಳನ್ನು ಈ ಪರಿಸರದಲ್ಲಿ ಕಾಣಬಹುದಾಗಿದೆ.

ವಾರ್ಷಿಕ ಸರಾಸರಿ  ೫೮೦ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲಿನ ತಾಪ ೩೯ಂ ಸೆಂ. ಆಗಿದ್ದು, ಚಳಿ ೧೨ಂ ಸೆಂ. ಆಗಿರುತ್ತದೆ. ಈ ಪ್ರದೇಶದಲ್ಲಿ ೪೦ ಕೊಳವೆ ಬಾವಿಗಳಿದ್ದು, ಒಂದು ಕೆರೆ, ಮತ್ತೊಂದು ಚಿಲುಮೆ ಹಳ್ಳವಿದೆ. ಕುಡಿಯಲು ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಪಂಚಾಯತ್ ರಾಜ್ ಇಲಾಖೆಯಿಂದ ನೀರನ್ನು ಸರಬರಾಜು ಮಾಡಲಾಗುತ್ತದೆ. ೮ ಸಿಸ್ಟನ್‌ಗಳಿದ್ದು, ಒಂದು ಕೈ ಪಂಪು ಇದೆ. ಕುಂಚಿಟಿಗ ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ಆದಿ ದ್ರಾವಿಡ, ನಾಯಕ ಜನಾಂಗ ದವರು  ಸಣ್ಣ ಸಮುದಾಯದವರಾಗಿದ್ದಾರೆ. ಕನ್ನಡ ಇಲ್ಲಿನ ನೆಲದ ಭಾಷೆಯಾಗಿದೆ. ವಿವಿಧ ಪ್ರಕಾರಗಳ ೯೮ ಮನೆಗಳಿದ್ದು, ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿವೆ. ೨೫ ಶೌಚಾಲಯಗಳೂ ಇವೆ. ವಸತಿ ಯೋಜನೆಯ ಜನತಾ, ಅಂಬೇಡ್ಕರ್ ಯೋಜನೆಯ ೨೯ ಫಲಾನುಭವಿಗಳೂ, ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳೂ ಇದ್ದಾರೆ. ಗ್ರಾಮದ ಒಟ್ಟು ಜನಸಂಖ್ಯೆ ೬೮೩ ಆಗಿದೆ. ಇಲ್ಲಿನ ಮುಖ್ಯ ಆಹಾರ ರಾಗಿ ಮುದ್ದೆ ಆಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಆಹಾರವಾಗಿದೆ. ಎತ್ತಿನ ಬಂಡಿಯೊಂದಿಗೆ ಟ್ರ್ಯಾಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳಿವೆ. ೪೯೪ ಜನಸಂಖ್ಯೆ ಇದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಜೋಳ, ಅಲಸಂದಿ, ತೊಗರಿ, ಹುರುಳಿ ಆಹಾರ ಬೆಳೆಗಳು. ತೆಂಗು, ಅಡಿಕೆ, ರೇಷ್ಮೆ ಇವುಗಳನ್ನು ವಾಣಿಜ್ಯ ಬೆಳೆಯಾಗಿ ಬೆಳೆಯಲಾಗುವುದು. ಇಂಜಿನಿಯರ್‌ಗಳಾದ ಚಂದ್ರಪ್ಪ, ಶ್ರೀಧರ್ ಸೇರಿದಂತೆ ಶಿಕ್ಷಕರು ಸೇರಿ ಒಟ್ಟು ೫ ಜನ ಸರ್ಕಾರಿ ನೌಕರರು ಈ ಗ್ರಾಮ ದಲ್ಲಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ, ಹೊಸಹಳ್ಳಿ ಗ್ರಾಮ ಪಂಚಾಯಿತಿ ಹಾಗೂ ಬರಗೂರು ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಸೇರಿರುವ ಈ ಹಳ್ಳಿ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮದಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘದ ೪ ತಂಡಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘದಲ್ಲಿ ಗುಂಪುಗಳಿದ್ದು, ಗ್ರಾಮ ಪ್ರಗತಿಗೆ ಪೂರಕವಾಗಿ ಕೆಲಸ ಮಾಡುತ್ತಿವೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ ಇದ್ದು, ೨೨ ಮಕ್ಕಳು, ಒಬ್ಬರು ಶಿಕ್ಷಕಿ ಇದ್ದರೆ ಸರ್ಕಾರಿ ಹಿರಿಯ ಪಾಠಶಾಲೆಯಲ್ಲಿ ೧೦೬ ಮಕ್ಕಳು, ೩ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯವಿದ್ದು, ಸಮವಸ್ತ್ರ, ಉಚಿತ ಪುಸ್ತಕ ವಿತರಣೆ ಸೌಕರ್ಯಗಳಿವೆ.  ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೬೬.೩ ಆಗಿದ್ದು, ಪುರುಷರು ಶೇ. ೭೪.೯ ಮಹಿಳೆಯರು, ಶೇ. ೫೨ ರಷ್ಟು ಸಾಕ್ಷರವಂತರಾಗಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೪ ಅಂಗಡಿಗಳಿವೆ.

ಗ್ರಾಮದಲ್ಲಿ ಆರು ವೀರಗಲ್ಲುಗಳಿದ್ದು, ಈ ಎಲ್ಲವೂ ವೀರಬೊಮ್ಮಣ್ಣನು ಪಶು ಸಂರಕ್ಷಣೆಗಾಗಿ, ಬೇಡರ ಪಡೆಯೊಂದಿಗೆ ಹೋರಾಡಿದ ಚಿತ್ರಗಾರ ಎಂದು ಕೆಂಕೆರೆ ಹನುಮಂತೇಗೌಡರ ಅಭಿಪ್ರಾಯ ಪಡುತ್ತಾರೆ. ಈ ಎಲ್ಲ ಕಲ್ಲುಗಳ ರಚನೆ ೧೫ ನೇ ಶತಮಾನದ ಸಂದರ್ಭ ಆಗಿವೆ.

ವೀರಬೊಮ್ಮಣ್ಣನ ಜಾತ್ರೆ, ಏಪ್ರಿಲ್ ಮಾಸದಲ್ಲಿ ೫ ದಿನಗಳು ಕಾಲ ವಿಜೃಂಭಣೆಯಿಂದ ನಡೆಯುತ್ತದೆ. ದಿಬ್ಬದ ವೀರಣ್ಣನ ಪರಿಸೆ ಎಂಬ ಹೆಸರಲ್ಲಿ ಜಾತ್ರೆ ಉತ್ಸವ ನಡೆದು, ರಥೋತ್ಸವ, ಕೊನೆಯಲ್ಲಿ ಅನ್ನ ಸಂತರ್ಪಣೆ ನಡೆಯುತ್ತದೆ. ಈ ಸಂದರ್ಭದಲ್ಲಿ  ಧಾರ್ಮಿಕ ಸಭೆ, ಸಾಂಸ್ಕೃತಿಕ ಕಾರ್ಯಕ್ರಮ ಗಳೂ ನಡೆಯುತ್ತವೆ, ಕೊಲ್ಲಾಪುರದ ದೇವಿಯ ಊರಹಬ್ಬ ನಡೆದು, ಆರತಿ, ಬಾನ, ಬಬಾಟೆಯ ಸಂಪ್ರದಾಯ ಹರಕೆಗಳಿರುತ್ತವೆ. ಕರಿಯಮ್ಮ ದೇವಿಯ ಪೌಳಿ, ಗೌರವ ಸಂದ್ರಮ್ಮ ದೇವಿಯ ಗುಡಿಗಳು ಇರುತ್ತವೆ. ಇವುಗಳಿಗೆ ಆರತಿ ಮಾಡುವ ಸಂಪ್ರದಾಯವಿರುತ್ತದೆ. ಈ ಗ್ರಾಮದಲ್ಲಿ ದಿಬ್ಬಣ್ಣ ದಿಬ್ಬರದ ಈರಣ್ಣ, ವೀರಬೊಮ್ಮಣ್ಣ, ಬೊಮ್ಮಕ್ಕ ಈ ಹೆಸರುಗಳನ್ನು ಹುಟ್ಟುವ ಮಕ್ಕಳಿಗೆ ಇಡಲಾಗುತ್ತಿದೆ. ಯುಗಾದಿ, ದಸರಾ, ಗೌರಿ ಗಣೇಶ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು

ವಿಶೇಷವಾಗಿ ಆಚರಿಸಲಾಗುತ್ತಿದೆ. ಗೌರಮ್ಮ ಕೊಂತಮ್ಮ ಎಂಬ ದೇಶಿ ಹಬ್ಬದ ಆಚರಣೆಯ ಈ ಗ್ರಾಮದಲ್ಲಿದೆ.

## ವೆಂಕಟಾಪುರ

ವೆಂಕಟಾಪುರ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೪ ಕಿಮೀ ದೂರದಲ್ಲಿದೆ. ತುಮಕೂರು–ಸಿರಾ ರ್‍ಹಾ್ರಯ ಹೆದ್ದಾರಿಯಲ್ಲಿ ಸೋಮಸಾಗರ ಗೇಟಿನಿಂದ ಎಡಭಾಗದಲ್ಲಿ ಹಾಲ್‌ದೊಡ್ಡೇರಿಗೆ ೧ ಕಿಮೀ ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದು ಇದರ ಭೌಗೋಳಿಕ ವಿಸ್ತೀರ್ಣ ೮೮.೫೯ ಹೆಕ್ಟೇರ್ ಇದೆ. ತಿರುಪತಿ ವೆಂಕಟೇಶನ ವಕ್ಕಲಾದ ಇಲ್ಲಿನ ಪೂರ್ವಿಕರು ತಮ್ಮ ಗ್ರಾಮಕ್ಕೆ ವೆಂಕಟಾಪುರ ಎಂದು ಕರೆದಿದ್ದಾರೆಂದು ಹಾಲುದೊಡ್ಡೇರಿ ಚಿತ್ತಯ್ಯ ಅವರ ಅಭಿಪ್ರಾಯವಾಗಿದೆ. ಮರಳುಮಿಶ್ರಿತ ಕೆಂಪುಭೂಮಿ ಹೊಂದಿದ್ದು ಉತ್ತರಕ್ಕೆ ಸಾಲುಗುಡ್ಡ, ಪೂರ್ವಕ್ಕೆ ಕಾಡುಪ್ರದೇಶವಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಬಿಸಿಲು, ಧಗೆ ಅಧಿಕವಾಗಿದ್ದು ವಾಡಿಕೆ ಮಳೆ ೫೫೭.೩ ಮಿಮೀ ಆದರೂ ಸಾಕಾಗುವುದಿಲ್ಲ. ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಅವಲಂಬಿತ ರೈತರು ೨೫ ಕೊಳವೆ ಬಾವಿಗಳ ಮೂಲಕ ತೋಟಗಾರಿಕೆ ಕೃಷಿ ಕೆಲಸಕ್ಕೆ ಆಶ್ರಯವಾಗಿದೆ. ಒಂದು ಕೆರೆ ಪೂರ್ವ–ಪಶ್ಚಿಮವಾಗಿ ಹಳ್ಳ ಇದ್ದರೂ ತುಂಬುವುದು ಅಪರೂಪ. ಕುಡಿಯಲು ಗ್ರಾಮ ಪಂಚಾಯ್ತಿ ನೀರು ಒದಗಿಸಲಾಗುವುದು. ೪ ಸಿಸ್ಟರ್ನ್‌ಗಳಲ್ಲಿ ನೀರಿನ ಪೂರೈಕೆಯಾಗುತ್ತಿದ್ದು ೧ ಕೈಪಂಪು ಇದೆ. ಸಾರಿಗೆ ಇಲಾಖೆ. ಲೋಕೋಪಯೋಗಿ ಇಲಾಖೆಯ ೨ ಸರ್ಕಾರಿ ನೌಕರರಿದ್ದಾರೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ನಾಯಕ, ಕುಂಬಾರ, ಈಡಿಗ, ಕಮ್ಮಾರ, ಮಡಿವಾಳ, ತಿಗಳರ ೨ ಮನೆಗಳಿವೆ. ಗ್ರಾಮದ ಭಾಷೆ ಕನ್ನಡವಾಗಿದೆ. ವಿವಿಧ ಪ್ರಕಾರಗಳ ೫೫ ಮನೆಗಳಿದ್ದು ಅವು ಕಲ್ಲಿನ, ಕಡಪ, ಶೀಟಿನ, ಹೆಂಚಿನ ಮನೆಗಳಾಗಿವೆ. ಇವು ಇಂದಿರಾ ಆವಾಸ್, ಆಶ್ರಯ, ಜನತಾ ವಸತಿ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೩೧೮ ಜನಸಂಖ್ಯೆ ಇದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ಆಟೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ತೊಗರಿ, ಅವರೆ, ಹಾರಕ, ನವಣೆ ಮುಖ್ಯ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಮಾವಿನ ಬೆಳೆಗಳಿವೆ. ಗ್ರಾಮದ ಮಹಿಳೆಯರು ಬೀಡಿ ಸುತ್ತುವುದು, ಎಲೆ ಕಟ್ಟುವುದು ಗೃಹ ಕೆಲಸವಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯಿತಿ, ತರೂರು ತಾಲ್ಲೂಕು ಪಂಚಾಯಿತಿ ಹಾಗೂ ಚಿನ್ನೇನಹಳ್ಳಿ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಶಾಲೆ ಇದ್ದು ೨೪ ಮಕ್ಕಳಿದ್ದಾರೆ. ಒಬ್ಬರು ಶಿಕ್ಷಕರಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೪.೪% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೨ ಪೆಟ್ಟಿಗೆ ಅಂಗಡಿಗಳಿವೆ.

ಆಂಜನೇಯ ದೇವಾಲಯವಿದ್ದು ವೆಂಕಟೇಶ್ವರನ ಚಿಕ್ಕಪೌಳಿಯಿದೆ. ಇದನ್ನು ಮೂಡಲಗಿರಿಯಪ್ಪ ಎಂದು ಆರಾಧಿಸುವುದು ರೂಢಿಯಲ್ಲಿದೆ. ಕೊಲ್ಲಾಪುರದಮ್ಮನ ಎದುರೆತ್ತಿ ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಯುಗಾದಿ, ದಸರಾ, ಗೌರಿ–ಗಣೇಶ, ಮಹಾನವಮಿ ಹಬ್ಬ ಆಚರಿಸುವುದು ವಾಡಿಕೆಯಾಗಿದೆ. ಬೇಡರು ವಾರ್ಷಿಕವಾಗಿ ಯುಗಾದಿ ಸಂದರ್ಭದಲ್ಲಿ ಕೋಲು ಬೇಟೆಗೆ ಹೋಗುವ ವಿಶಿಷ್ಟ ಸಂಪ್ರದಾಯ ಈ ಗ್ರಾಮದಲ್ಲಿದೆ.

## ವಡ್ಡನಹಳ್ಳಿ

ವಡ್ಡನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೩ ಕಿಮೀ ದೂರದಲ್ಲಿದೆ. ಸಿರಾ–ತುಮಕೂರು ರ್‍ಹಾ್ರಯ ಹೆದ್ದಾರಿಯ ಸಮೀಪದಲ್ಲಿ ಈ ಗ್ರಾಮವಿದ್ದು ಇದು ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೨೫೦.೩೬ ಹೆಕ್ಟೇರ್ ಆಗಿದ್ದು ಬಯಲು ಪ್ರದೇಶವಾಗಿದೆ. ಸಮೀಪದ ಸೀಬಿ ರಕ್ಷಿತ ಅರಣ್ಯ, ಚಿಕ್ಕ ಗಿಡ, ದಿಣ್ಣೆ, ತಗ್ಗುಗಳಿರುವುದರಿಂದ ಈ

ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಗಿರಿರಾಜ, ಹೇಂಟೆ, ಹುಂಜ ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ, ಕೊಕ್ಕರೆ ಕಂಡುಬರುತ್ತವೆ.

ವಾರ್ಷಿಕ ವಾಡಿಕೆ ಮಳೆ ೪೨೦ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ೪ ಕಿರು ಟ್ಯಾಂಕ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಒಂದು ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ದೊಡ್ಡ ಸಮುದಾಯವಾಗಿದ್ದು ತಿಗಳ, ಬೋವಿ ಜನಾಂಗ ಕಿರು ಸಮುದಾಯವಾಗಿದೆ. ಕನ್ನಡ ಹಾಗೂ ತೆಲುಗು ಮಾತನಾಡುತ್ತಾರೆ. ವಿವಿಧ ಪ್ರಕಾರಗಳ ೨೩ ಮನೆಗಳಿದ್ದು ಅವು ಕಲ್ಲಿನ, ಶೀಟಿನ, ಹೆಂಚಿನ ಮನೆಗಳಾಗಿವೆ. ಒಟ್ಟು ಜನಸಂಖ್ಯೆ ೭೮ ಇದೆ. ೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಮಿನಿಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ತೊಗರಿ, ಹುರುಳಿ ಆಹಾರ ಬೆಳೆಗಳು. ಸೂರ್ಯಕಾಂತಿ, ವೀಳ್ಯದೆಲೆ, ತೆಂಗು ಬೆಳೆಯುತ್ತಾರೆ. ವ್ಯಾಪಾರಿ ಸರಕಾಗಿ ಶೇಂಗಾ, ಹೊಂಗೆ ಬೀಜ, ಹೂಗಳನ್ನು ಕಾಣಬಹುದಾಗಿದೆ. ಒಬ್ಬರು ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ತರೂರು ತಾಲ್ಲೂಕು ಪಂಚಾಯ್ತಿ ಹಾಗೂ ಚಿನ್ನೇನಹಳ್ಳಿ ಗ್ರಾಮ ಪಂಚಾಯ್ತಿ ಕ್ಷೇತ್ರ ಒಳಗೊಂಡಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ೨ ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದ್ದು ೧೯ ಮಕ್ಕಳಿದ್ದಾರೆ. ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲಾಗುತ್ತದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೮.೧೨% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ.

ಧಾರ್ಮಿಕವಾಗಿ ಮಾರಮ್ಮನ ಪೌಳಿಯಿದ್ದು ಆಷಾಢ ಮಾಸದಲ್ಲಿ ದೇವರಿಗೆ ಆರತಿ, ಬಾನ, ಬ್ಯಾಟೆಯ ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ ಹಾಗೂ ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ವಡ್ಡರಹಟ್ಟಿ (ಅಮಲಗೊಂದಿ)

ಅಮಲಗೊಂದಿ ವಡ್ಡರಹಟ್ಟಿಯು ಸಿರಾ ತಾಲ್ಲೂಕು ಕೇಂದ್ರದಿಂದ ೧೯ ಕಿಮೀ ದೂರದಲ್ಲಿದ್ದು ಅಮಲಗೊಂದಿಗೆ ಸೇರಿದ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೫೫ ಹೆಕ್ಟೇರ್ ಇರುತ್ತದೆ. ಇದು ಅಮಲಗೊಂದಿಯ ಬಡಾವಣೆಯಂತಿದ್ದು ಜಯನಗರ ಎಂಬ ಹೆಸರಿನಲ್ಲಿ ಕರೆಯಲಾಗುತ್ತದೆ. ಬೋವಿ ಜನಾಂಗ ಮಾತ್ರ ಈ ಗ್ರಾಮದಲ್ಲಿ ವಾಸಿಸುವುದರಿಂದ ವಡ್ಡರಹಟ್ಟಿ ಎಂದೇ ಜನಪದರು ಕರೆಯುತ್ತಿದ್ದಾರೆ.

ಮರಳುಮಿಶ್ರಿತ ಕೆಂಪು ಭೂಮಿ ಹೊಂದಿರುವ ಇಲ್ಲಿನ ನೆಲ ಪೊದೆ, ಗಿಡ, ಹಳ್ಳ–ದಿಣ್ಣೆಗಳಿಂದ ಕೂಡಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ೧೩ ಬೋರ್‌ವೆಲ್‌ಗಳಿದ್ದು ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಸಹಾಯಧನದ ರೂಪದಲ್ಲಿ ಗ್ರಾಮಸ್ಥರು ಪಡೆದಿದ್ದಾರೆ. ಕುಡಿಯುವ ನೀರಿಗೆ ಗ್ರಾಮಪಂಚಾಯ್ತಿಯಿಂದ ಬೋರ್‌ವೆಲ್‌ಗಳ ಮೂಲಕ ಮಿನಿಟ್ಯಾಂಕಿಗೆ ಹಾಯಿಸಿ ಅಲ್ಲಿಂದ ಒದಗಿಸಲಾಗುತ್ತಿದೆ. ಪೂರ್ವಕ್ಕೆ ದೊಡ್ಡ ಹಳ್ಳವಿದೆ. ಈ ಗ್ರಾಮಕ್ಕೆ ಸೇರಿದ ಕೆರೆಯೊಂದಿದ್ದು ತುಂಬುವುದು ವಿರಳ. ಬೋವಿ

ಜನಾಂಗ ಮಾತ್ರ ವಾಸ ಮಾಡುವ ಈ ಗ್ರಾಮದ ಮನೆಮಾತು ಕನ್ನಡ. ತೆಲುಗು ವ್ಯಾವಹಾರಿಕವಾಗಿ ಬಳಸುತ್ತಾರೆ. ಕಾಂಕ್ರೀಟ್, ಹೆಂಚಿನ, ಶೀಟಿನ ಒಟ್ಟು ೨೬ ಮನೆಗಳಿದ್ದು ಇದರಲ್ಲಿ ಬಹುತೇಕ ಆಶ್ರಯ, ಅಂಬೇಡ್ಕರ್, ಆವಾಸ್ ಯೋಜನೆಯ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೧೦೮ ಜನಸಂಖ್ಯೆ ಇದ್ದು ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ಆಟೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ, ರಾಗಿ, ಭತ್ತ ಮುಖ್ಯ ಬೆಳೆಗಳು. ಕುರಿ ವ್ಯಾಪಾರ, ಹುಣಸೆಹಣ್ಣು, ಕಲ್ಲು ಒಡೆಯುವುದು ಇಲ್ಲಿನ ವಾಣಿಜ್ಯ ಕಸುಬಾಗಿದೆ. ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾಪಂಚಾಯ್ತಿ, ಸೀಬಿ ತಾಲ್ಲೂಕು ಪಂಚಾಯ್ತಿ ಹಾಗೂ ಸೀಬಿ ಅಗ್ರಹಾರದ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ೨ ಸ್ತ್ರೀಶಕ್ತಿ ಸಂಘ. ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಅಂಗನವಾಡಿ ಕೇಂದ್ರ ಮಾತ್ರ ಇದ್ದು ೧೫ ಮಕ್ಕಳು ಕಲಿಯುತ್ತಿದ್ದಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೧% ಆಗಿದೆ. ಶಾಲೆಯಲ್ಲಿ ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗುತ್ತಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಕರಿಯಮ್ಮ ಊರ ದೇವತೆಯಾಗಿದ್ದು ಊರಹಬ್ಬ ಮಾಡಿ ಆರತಿ, ಬಾನ, ಬ್ಯಾಟೆ ಇರುತ್ತದೆ. ಶಿವರಾತ್ರಿ, ಯುಗಾದಿ, ದೀವಳಿಗೆ, ಮಹಾನವಮಿ ಮುಖ್ಯ ಹಬ್ಬಗಳ ಆಚರಣೆಯಿದೆ.

## ವಡ್ಡರಹಟ್ಟಿ

ವಡ್ಡರಹಟ್ಟಿ ಸಿರಾ ತಾಲ್ಲೂಕು ಕೇಂದ್ರದಿಂದ, ೨೬ ಕಿ.ಮೀ. ದೂರದಲ್ಲಿದೆ. ಇದು ಯರದಕಟ್ಟೆಯ ಬೋವಿ ಕಾಲೋನಿ ವಡ್ಡರಹಟ್ಟಿ, ಬೋವಿ ಕಾಲೋನಿ ಎಂದೆಲ್ಲಾ ಕರೆಯುವ ಇದು ಯರದಕಟ್ಟೆಯ ಉಪ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೧೫೨.೬ ಹೆಕ್ಟೇರ್‌ಗಳಾಗಿವೆ. ಬಯಲು ನಾಡಿನ ಪ್ರದೇಶವಾಗಿದ್ದು ಇಲ್ಲಿನ ಮರಳು ಮಿಶ್ರಿತ ಮಣ್ಣಿನಿಂದ ಕೂಡಿದೆ. ಇಲ್ಲಿನ ಮಾತೃಭಾಷೆ ಕನ್ನಡವಾಗಿದ್ದು ತೆಲುಗು ಮಾತನಾಡುತ್ತಾರೆ. ಈ ಗ್ರಾಮದಲ್ಲಿ ವಾರ್ಷಿಕ ಸರಾಸರಿ ಮಳೆಯ ಪ್ರಮಾಣವು ೪೫೮ ಮಿ.ಮೀ. ಆಗಿದೆ. ಹದಿನಾಲ್ಕು ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ.

ಗ್ರಾಮದಲ್ಲಿ ೪೦ ಮನೆಗಳಿದ್ದು, ೧೮೯ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಬೋವಿ ಜನಾಂಗ ದೊಡ್ಡ ಸಮುದಾಯವಾಗಿದೆ. ಇಲ್ಲಿನ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ವಿಶೇಷವಾಗಿ ಬಾಡೂಟವಾಗಿದೆ. ಆಧುನಿಕ ವಾಹನಗಳನ್ನು ಒಳಗೊಂಡಿದೆ. ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರವಾಹನಗಳ ಬಳಕೆ ಇದೆ. ಗ್ರಾಮದಲ್ಲಿ ಹೆಂಚಿನ, ಶೀಟಿನ, ಕಾಂಕ್ರೀಟ್ ಮನೆಗಳಿದ್ದು, ಅವು ಇಂದಿರಾ ಆವಾಸ್, ಆಶ್ರಯ ವಸತಿ ಯೋಜನೆ ಅಡಿಯಲ್ಲಿ ·ರ್ಮಾಣವಾಗಿದೆ. ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು ಶೇಂಗಾ ಪ್ರಮುಖ ಬೆಳೆಯಾಗಿದ್ದು ಇದರೊಂದಿಗೆ ರಾಗಿ, ಭತ್ತ, ಜೋಳ ಮತ್ತು ದ್ವಿದಳ ಧಾನ್ಯಗಳೂ, ತೆಂಗು, ಅಡಿಕೆ, ಬೇವು ಬೆಳೆಗಳನ್ನು ಬೆಳೆಯುತ್ತಾರೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ ನೇರಳಗುಡ್ಡ ತಾಲ್ಲೂಕು ಪಂಚಾಯ್ತಿ ತಹಶೀಲ್ದಾರ್ ಕಛೇರಿ, ನೇರಲಗುಡ್ಡ ಪಂಚಾಯ್ತಿ ಗ್ರಾಮ ನ್ಯಾಯ ಮಂಡಳಿಯನ್ನು ಹೊಂದಿದೆ.

ಅಂಗನವಾಡಿ ಕೇಂದ್ರವನ್ನು ಹೊಂದಿದ್ದು, ಒಟ್ಟಾರೆ ಶೇ. ೪೫ ರಷ್ಟು ಸಾಕ್ಷರತೆಯ ಪ್ರಮಾಣವನ್ನು ಹೊಂದಿದೆ. ಇಲ್ಲಿ ಯಾವುದೇ ಗ್ರಂಥಾಲಯ ಮತ್ತು ಆರೋಗ್ಯ ಕೇಂದ್ರಗಳನ್ನು ಒಳಗೊಂಡಿಲ್ಲ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಚಿಲ್ಲರೆ ವ್ಯಾಪಾರದ ಅಂಗಡಿಯನ್ನು ಒಳಗೊಂಡಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಧಾರ್ಮಿಕ ಪರಂಪರೆಯಲ್ಲಿ ದುರ್ಗಮ್ಮ, ಗ್ರಾಮದೇವತೆಯ ದೇವಾಲಯ ವನ್ನು ಒಳಗೊಂಡಿದೆ. ಪ್ರತಿವರ್ಷವೂ ಇದರ ಜಾತ್ರೆಯನ್ನು ಮಾಡುತ್ತಾರೆ.

ಭೂತೇಶ್ ಎಂಬುವವರು ದಲಿತ ಸಂಘಟಕರಾಗಿದ್ದು, ಕವಿತೆಗಳನ್ನು ಬರೆಯುತ್ತಾರೆ. ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ವಡ್ಡನಹಳ್ಳಿ

ವಡ್ಡನಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಸಿರಾದಿಂದ ೧೫ ಕಿಮೀ ದೂರದಲ್ಲಿರುವ ಗ್ರಾಮವು ಸಿರಾ–ಹೊನ್ನೇನಹಳ್ಳಿ ಕಳ್ಳಂಬೆಳ್ಳ ಮಾರ್ಗದಲ್ಲಿದ್ದು ಕಂದಾಯ ಗ್ರಾಮವಾಗಿದೆ. ಸೇವುಣ ಅರಸನಾದ ವಡ್ಡಿಗನ ಹೆಸರಲ್ಲಿ ನಿರ್ಮಾಣವಾದ ಗ್ರಾಮವಾದುದರಿಂದ ವಡ್ಡನಹಳ್ಳಿ ಎಂದು ಹೆಸರು ಬಂದಿದೆ ಎನ್ನಲಾಗಿದೆ. ಇದು ಊಹೆಯಾಗಿದ್ದು ಸೇವುಣ ಅರಸನಾದ ವಡ್ಡಿಗನಿಗೂ ಈ ಹೆಸರಿಗೂ ಸಂಬಂಧ ತಳುಕು ಹಾಕಲಾಗದು. ಇದೊಂದು ವಡ್ಡ ಅಥವಾ ಬೋವಿ ಜನಾಂಗದ ಹೆಸರಾಗಿದ್ದು ಆ ಜನಾಂಗಿಕ ನೆಲೆಯಾಗಿ ವಡ್ಡನಹಳ್ಳಿ ಎಂದಾಗಿದೆ. ವಾಸ್ತವವಾಗಿ ಸಿರಾ ತಾಲ್ಲೂಕಿನಲ್ಲಿ ಚಿನ್ನೇನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಂದು ಸೀಬಿ ಅಗ್ರಹಾರದ ವ್ಯಾಪ್ತಿಯಲ್ಲಿ ಒಂದು, ದೊಡ್ಡ ಅಗ್ರಹಾರ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ವಡ್ಡನಹಳ್ಳಿ ಹಾಗೂ ವಡ್ಡನಹಳ್ಳಿ ತಾಂಡ ಎಂಬ ಎರಡು ವಡ್ಡನ ಹೆಸರಿನಲ್ಲಿ ಗ್ರಾಮ ರಚನೆಯಾಗಿವೆ. ಈ ಎಲ್ಲವೂ ಜಾತಿಸೂಚಕ ಹೆಸರು ಎಂಬುದು ಸತ್ಯಕ್ಕೆ ಹತ್ತಿರವಾದ ವಿಷಯವಾಗಿದೆ.

ಗ್ರಾಮದ ಕೋಟೆ ಹಾಗೂ ಬುರುಜು ಹಾಳಾಗಿರುತ್ತದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೧೯.೯೬ ಹೆಕ್ಟೇರ್‌ಗಳಾಗಿವೆ. ಅಲ್ಲದೇ ಈ ಗ್ರಾಮಕ್ಕೆ ಲಂಬಾಣಿ ತಾಂಡ (ವಡ್ಡನಹಳ್ಳಿ ತಾಂಡ) ಸೇರ್ಪಡೆಯಾಗಿದೆ.

ಈ ಹಳ್ಳಿಯು ಭೂಮಿಯ ಮೇಲ್ಮೈ ಲಕ್ಷಣ ಬಯಲುನಾಡಿನಿಂದ ಕೂಡಿದ್ದು ಕೆಂಪು ಮರಳು ಮಿಶ್ರಿತ ಮಣ್ಣಿನಿಂದ ಆವೃತ್ತವಾಗಿದೆ. ಬೆಟ್ಟ–ಗುಡ್ಡ ಅರಣ್ಯಗಳನ್ನು ಹೊಂದಿಲ್ಲದಂತಹ ಪ್ರದೇಶವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೨೮ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಮಳೆಗಾಲದಲ್ಲಿ ತುಂಬಿ ಹರಿಯುವಂತಹ ಕೋಡಿಹಳ್ಳ ಮತ್ತು ವಡ್ಡನಹಳ್ಳಿ ಕೆರೆಯನ್ನು ಕಾಣಬಹುದು. ೬೮ ಕೊಳವೆ ಬಾವಿಗಳಿವೆ. ಇವರಿಂದ ಕೃಷಿಯ ಬಳಕೆಗೆ ಅಗತ್ಯವಾಗಿದೆ. ೨ ಸಿಸ್ಟರ್ನ್ ಮತ್ತು ಮೂರು ಕೈಪಂಪುಗಳ ಸಹಾಯದಿಂದ ಕುಡಿಯುವ ನೀರಿನ ವ್ಯವಸ್ಥೆ ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಒದಗಿಸಲಾಗಿದೆ.

ಗ್ರಾಮದಲ್ಲಿ ಒಟ್ಟು ೧೯೯ ಮನೆಗಳನ್ನು ಹೊಂದಿದ್ದು ೭೯೧ ಜನಸಂಖ್ಯೆಯನ್ನು ಹೊಂದಿದೆ. ಈ ಗ್ರಾಮದಲ್ಲಿ ಕುಂಚಿಟಿಗ, ಆದಿಕರ್ನಾಟಕ, ನಾಯಕ, ಆದಿದ್ರಾವಿಡ, ಈಡಿಗ, ವೈಷ್ಣವ, ಬೋವಿ, ವೀರಶೈವ ಮನೆಗಳಿವೆ. ಇವರ ಭಾಷೆ ಕನ್ನಡ ಮತ್ತು ಉರ್ದುಗಳಾಗಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಡಾಂಬರು ಮತ್ತು ಕಚ್ಚಾರಸ್ತೆಯನ್ನು ಒಳಗೊಂಡಿದೆ. ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿದ್ದು ಇವು ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ವಸತಿ ಯೋಜನೆಯ ೯೩ ಫಲಾನುಭವಿಗಳಿದ್ದು ೨೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಹಳ್ಳಿಯಲ್ಲಿ ಕೃಷಿಯೇ ಜೀವನಾಧಾರವಾದ ವೃತ್ತಿ. ಇದರಿಂದ ಶೇಂಗಾ, ತೊಗರಿ, ನವಣೆ, ರಾಗಿ, ಭತ್ತ, ದ್ವಿದಳ ಧಾನ್ಯಗಳು, ತೆಂಗು, ಅಡಿಕೆ, ಹುಣಸೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕೃಷಿಯೊಂದಿಗೆ ಆಧುನಿಕ ಡೈರಿಯಿಂದ ಹಸು ಸಾಕಾಣಿಕೆಗೆ ಇಲ್ಲಿ ಸಹಕಾರಿಯಾಗಿದೆ. ಅಲ್ಲದೇ ಅವುಗಳೇ ವ್ಯಾಪಾರದ ಸರಕುಗಳಾಗಿವೆ. ಶಿಕ್ಷಣ, ವೈದ್ಯಕೀಯ, ಸಾರಿಗೆ ಇಲಾಖೆಯಲ್ಲಿ ಒಟ್ಟು ೯ ಜನ ಸರ್ಕಾರಿ ನೌಕರಿಯಲ್ಲಿದ್ದಾರೆ. ಟೈಲರ್, ಬೀಡಿ ಸುತ್ತುವುದು, ಗಿರಣಿ/ ಹಲ್ಲರ್ ಪ್ರಮುಖವಾಗಿವೆ. ಕೃಷಿ ಕಾರ್ಮಿಕರಲ್ಲದೇ ಹೊರಗಿನ ಪಟ್ಟಣಗಳಲ್ಲಿ ವಿವಿಧ ಕಂಪನಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ವಡ್ಡನಹಳ್ಳಿಯಲ್ಲಿಯೂ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ ಮತ್ತು ತಹಸೀಲ್ದಾರ್ ಕಛೇರಿಯನ್ನು ದೊಡ್ಡ ಅಗ್ರಹಾರ ಗ್ರಾಮಪಂಚಾಯ್ತಿಯನ್ನು ಹೊಂದಿದೆ. ಇದರಲ್ಲಿ ಇಬ್ಬರು ಸದಸ್ಯರಾಗಿದ್ದಾರೆ. ಕಳ್ಳಂಬೆಳ್ಳ ವಿದ್ಯುತ್ ಮತ್ತು ಪೊಲೀಸ್ ಠಾಣೆಯನ್ನು ಹೊಂದಿದೆ.

ಸಿರಾ, ಹೊನ್ನೇನಹಳ್ಳಿ, ಕಳ್ಳಂಬೆಳ್ಳ ರಸ್ತೆ ಮಾರ್ಗ ಮತ್ತು ವಡ್ಡನಹಳ್ಳಿ ಅಂಚೆ ಕಛೇರಿಯನ್ನು ಹಾಗೂ ಚರ ದೂರವಾಣಿಗಳಾದ ಮೊಬೈಲ್ ಹಾಗೂ ಖಾಸಗಿ ಸಾರಿಗೆ

ವ್ಯವಸ್ಥೆಯನ್ನು ಹೊಂದಿದೆ. ಈ ಗ್ರಾಮವು ನ್ಯಾಯಮಂಡಳಿಯನ್ನು ಹೊಂದಿದೆ. ದೊಡ್ಡ ಮತ್ತು ಬಗೆಹರಿಯದ ಸಮಸ್ಯೆಗಳನ್ನು ಸಿರಾ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರದ ನ್ಯಾಯ ಮಂಡಳಿಯಿಂದ ಬಗೆಹರಿಸಿಕೊಳ್ಳಲಾಗುತ್ತಿದೆ.

ಈ ಹಳ್ಳಿಯಲ್ಲಿ ಯಾವುದೇ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿಲ್ಲದಿದ್ದರೂ ೨ ಸ್ತ್ರೀಶಕ್ತಿ ಸಂಘಗಳು ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಆರ್ಥಿಕತೆಯ ಸಣ್ಣ ಪ್ರಮಾಣದ ಉಳಿತಾಯ ಕಾರ್ಯವನ್ನು ನಿರ್ವಹಿಸುತ್ತಿವೆ. ಇಲ್ಲಿ ಒಂದು ಅಂಗನವಾಡಿ ಕೇಂದ್ರ ಮತ್ತು ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೭೦.೬% ಆಗಿದೆ.

ಈ ಗ್ರಾಮದಲ್ಲಿ ಗ್ರಂಥಾಲಯ, ಆಟದ ಮೈದಾನಗಳು ಕಂಡುಬರುವುದಿಲ್ಲ. ಇಲ್ಲಿನ ಜನರು ಕುಟುಂಬ ಕಲ್ಯಾಣವ್ಯವಸ್ಥೆ ರೂಢಿಸಿಕೊಂಡಿದ್ದಾರೆ. ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಶಿವಯ್ಯ ಎಂಬುವವರು ಪಶುಗಳಿಗೆ ನಾಟಿ ಔಷಧಿಗಳನ್ನು ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೮ ಚಿಲ್ಲರೆ ವ್ಯಾಪಾರದ ಅಂಗಡಿಗಳಿವೆ. ಐತಿಹಾಸಿಕತೆಯ ಸ್ಮಾರಕಗಳು ಕಂಡುಬರದಿದ್ದರೂ ಸಹ ಎರಡು ಕರಿಗಲ್ಲು, ಅಶ್ವತ್ಥವೃಕ್ಷ ಮತ್ತು ಅಪ್ರಕಟಿತವಾದಂತಹ ಒಂದು ಶಾಸನವನ್ನು ಕಾಣಬಹುದಾಗಿದೆ. ಗ್ರಾಮದ ಲಿಂಗಮುದ್ರೆ ಕಲ್ಲಿನ ಮೇಲೆ ಅಸ್ಪಷ್ಟವಾದ ಬರಹವಿದ್ದು ಇದೊಂದು ಕಾಡುಗಲ್ಲಿನ ಕೆತ್ತನೆಯಾಗಿದೆ.

ವಡ್ಡನಹಳ್ಳಿಯಲ್ಲಿ ಧಾರ್ಮಿಕ ಸಂಸ್ಕೃತಿಯ ಪ್ರತೀಕವಾಗಿ ದುರ್ಗಮ್ಮ, ಆಂಜನೇಯ, ಭೂತಪ್ಪನ ಪೌಳಿಗಳು ಕಂಡುಬರುತ್ತವೆ. ಯುಗಾದಿ ತರುವಾಯ ಗ್ರಾಮದೇವತೆಯ ಜಾತ್ರೆಯನ್ನು ಮಾಡುವುದು ವಿಶೇಷವಾಗಿದೆ. ಇದಕ್ಕೆ ಆರತಿ ಮತ್ತು ಬಲಿ ನೀಡುವುದನ್ನು ಕಾಣುತ್ತೇವೆ.

ಸಾಂಸ್ಕೃತಿಕ ಸಾಹಿತ್ಯ, ಸಂಗೀತ ಕ್ಷೇತ್ರದಲ್ಲಿ ಹಿಂದಿನ ಜನಾಂಗದಲ್ಲಿನ ಜಾನಪದ ಹಾಡುಗಳು, ಭಜನೆ, ತತ್ವಪದಗಳು ಗ್ರಾಮೀಣ ಸೊಗಡಿನ ಕಲೆಯನ್ನು ಯುವಪೀಳಿಗೆ ಮುಂದುವರಿಸಲು ಪ್ರಯತ್ನ ನಡೆಸುತ್ತಿದೆ ಎಂದು ಹೇಳಬಹುದು. ದಸರಾ, ಯುಗಾದಿ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ಸಂಘಟನೆ ಮತ್ತು ಚಳುವಳಿಗೆ ಈ ಗ್ರಾಮ ಹೆಸರಾಗಿದ್ದು ಅಂಬೇಡ್ಕರ್ ಯುವಕ ಸಂಘ ಸ್ಥಾಪನೆಯಾಗಿರುವುದು ವಿಶೇಷವಾಗಿದೆ.

## ವಡ್ಡನಹಳ್ಳಿ ತಾಂಡ

ವಡ್ಡನಹಳ್ಳಿ ತಾಂಡವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಸಿರಾದಿಂದ ೧೫ ಕಿಮೀ ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೦೮ ಹೆಕ್ಟೇರ್‌ಗಳಾಗಿವೆ. ಈ ಹಳ್ಳಿಯ ಭೂಮಿಯ ಮೇಲ್ಮೈ ಲಕ್ಷಣವು ಬಯಲುನಾಡಿನಿಂದ ಕೂಡಿದ್ದು ಕೆಂಪು ಮರಳು ಮಿಶ್ರಿತ ಮಣ್ಣಿನಿಂದ ಕೂಡಿದೆ. ಬೆಟ್ಟ-ಗುಡ್ಡ ಅರಣ್ಯ, ತೋಪುಗಳನ್ನು ಹೊಂದಿಲ್ಲದಂತಹ ಪ್ರದೇಶವಾಗಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೨೮ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಮಳೆಗಾಲದಲ್ಲಿ ತುಂಬಿ ಹರಿಯುವಂತೆ ಒಂದು ಕೋಡಿಹಳ್ಳಿ ಮತ್ತು ವಡ್ಡನಹಳ್ಳಿ ಕೆರೆಯನ್ನು ಹೊಂದಿದ್ದು ೧೮ ಕೊಳವೆ ಬಾವಿಯನ್ನು ಒಳಗೊಂಡಿದೆ. ಇದರಲ್ಲಿ ಒಂದು ಕೈಪಂಪು ಹಾಗೂ ಒಂದು ಸಿಸ್ಟರ್ನ್‌ಗಳನ್ನು ಹೊಂದಿ ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿದೆ.

ಗ್ರಾಮದಲ್ಲಿ ಒಟ್ಟು ೨೬ ಮನೆಗಳನ್ನು ಹೊಂದಿದ್ದು ಒಟ್ಟು ೧೧೨ ಜನಸಂಖ್ಯೆಯನ್ನು ಹೊಂದಿದೆ. ಹೆಂಚಿನ, ಶೀಟಿನ ಸ್ವರೂಪದ ಮನೆಗಳಿದ್ದು ಅವು ಆಶ್ರಯ, ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ನಿರ್ಮಾಣವಾಗಿದೆ. ೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಈ ಗ್ರಾಮದಲ್ಲಿ ಲಂಬಾಣಿ ಮತ್ತು ಗೊಲ್ಲ ಜನಾಂಗವನ್ನು ಹೊಂದಿದೆ. ಇವರ ಮುಖ್ಯ ಭಾಷೆ ಕನ್ನಡ ಮತ್ತು ಲಂಬಾಣಿಯಾಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಹಳ್ಳಿಯಲ್ಲಿ ಕೃಷಿಯೇ ಜೀವನಾಧಾರವಾದ ವೃತ್ತಿ. ಇದರಿಂದ ಶೇಂಗಾ ಮುಖ್ಯ ಬೆಳೆಯಾಗಿದೆ. ಅಲ್ಲದೆ ರಾಗಿ, ಭತ್ತ, ನವಣೆ ದ್ವಿದಳ ಧಾನ್ಯಗಳು. ತೆಂಗು, ಅಡಿಕೆ, ಹುಣಸೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಇವುಗಳೇ ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಈ ಹಳ್ಳಿಯಲ್ಲಿ ಯಾವುದೇ ರೀತಿಯ ನೌಕರಿ ಮತ್ತು ಕೈಗಾರಿಕೆಗಳನ್ನು ಹೊಂದಿಲ್ಲ. ಉದ್ಯೋಗ ಮತ್ತು ಕೃಷಿ ಕೂಲಿ ಕಾರ್ಮಿಕರು ಇದ್ದಾರೆ.

ಈ ಹಳ್ಳಿಯು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ ಮತ್ತು ಬುಕ್ಕಾಪಟ್ಟಣ ಜಿಲ್ಲಾ ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ ತಹಸೀಲ್ದಾರ್ ಕಛೇರಿಯನ್ನು ಹೊಂದಿದೆ. ಗ್ರಾಮಪಂಚಾಯ್ತಿ ದೊಡ್ಡ ಅಗ್ರಹಾರ ಹಾಗೂ ವಡ್ಡನಹಳ್ಳಿ ಅಂಚೆ ಸಂಪರ್ಕ ಹೊಂದಿದೆ. ಗ್ರಾಮಪಂಚಾಯ್ತಿಗೆ ಒಬ್ಬರು ಸದಸ್ಯರನ್ನು ಆರಿಸಿದೆ. ಅಲ್ಲದೇ ಕಳ್ಳಂಬೆಳ್ಳ ವಿದ್ಯುತ್ ಮತ್ತು ಪೊಲೀಸ್ ಠಾಣೆಯನ್ನು ಹೊಂದಿದೆ. ಗ್ರಾಮದಲ್ಲಿ ಶಿಕ್ಷಣ, ಸಾರಿಗೆ, ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರಿದ್ದಾರೆ.

ಸಿರಾ–ಹೊನ್ನೇನಹಳ್ಳಿ ಕಳ್ಳಂಬೆಳ್ಳ ರಸ್ತೆ ಮಾರ್ಗದಲ್ಲಿ ವಡ್ಡನಹಳ್ಳಿ ಗೇಟ್‌ನಿಂದ ಎಡಭಾಗಕ್ಕೆ ೧ ಕಿಮೀ ದೂರದಲ್ಲಿದೆ. ಗ್ರಾಮ ನ್ಯಾಯಮಂಡಳಿ ವ್ಯವಸ್ಥೆ ಇದೆ. ಬಗೆಹರಿಯದ ಕಲಹಗಳಿಗೆ ಸಿರಾ, ತುಮಕೂರು ನ್ಯಾಯಮಂಡಳಿಯನ್ನು ಹೊಂದಿದೆ. ಈ ಗ್ರಾಮದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯಿಲ್ಲದಿರುವುದರಿಂದ ಸ್ತ್ರೀಶಕ್ತಿ ಸಂಘಗಳು ಮತ್ತು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಸಣ್ಣ ಉಳಿತಾಯ ಮಾಡುವಲ್ಲಿ ಯಶಸ್ವಿಯಾಗಿ ಕೆಲಸ ನಿರ್ವಹಿಸುತ್ತಿವೆ.

ಈ ಗ್ರಾಮದಲ್ಲಿ ಅಂಗನವಾಡಿ ಕೇಂದ್ರವಿದ್ದು ಇದರಲ್ಲಿ ೧೫ ಮಕ್ಕಳು, ಒಬ್ಬರು ಶಿಕ್ಷಕಿ ಹಾಗೂ ಸಹಾಯಕಿಯಿದ್ದಾರೆ. ೨೦೧೧ ಕ್ಕಿಂತ ಮುಂಚೆ ಕಿರಿಯ ಪ್ರಾಥಮಿಕ ಶಾಲೆಯಿತ್ತು ಇಂದು ಇದನ್ನು ವಡ್ಡನಹಳ್ಳಿ ಶಾಲೆಗೆ ಸೇರಿಸಲಾಗಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೦% ಆಗಿದೆ.

ವಡ್ಡನಹಳ್ಳಿ ತಾಂಡದಲ್ಲಿ ಉಪಆರೋಗ್ಯ ಕೇಂದ್ರಗಳಿಲ್ಲದಿದ್ದರೂ ಕುಟುಂಬ ಕಲ್ಯಾಣವನ್ನು ಹೊಂದಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಚಿಲ್ಲರೆ ವ್ಯಾಪಾರದ ಅಂಗಡಿಯನ್ನು ಹೊಂದಿದೆ. ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ, ಗೌರಿ–ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ. ಲಂಬಾಣಿಗಳು ಬೀಸತಿ ಹಬ್ಬವನ್ನು ಆಚರಿಸುತ್ತಾರೆ. ಐತಿಹಾಸಿಕವಾದ ಯಾವುದೇ ನೆಲೆ, ಸ್ಮಾರಕ, ಶಾಸನ, ಹಸ್ತಪ್ರತಿಗಳನ್ನು ಹೊಂದಿಲ್ಲದೇ ಇರುವುದು ಕಂಡುಬರುತ್ತದೆ. ಧಾರ್ಮಿಕ ಪರಂಪರೆಯನ್ನು ಹೊಂದಿರುವಂತಹ ದೇವಾಲಯಗಳನ್ನು ಹೊಂದಿದೆ. ತಿಮ್ಮಪ್ಪನ ಜಾತ್ರೆ ವಿಶೇಷವಾಗಿದೆ ಹಾಗೆಯೇ ಬಲಿ ಮತ್ತು ಆರತಿ ನೀಡುವುದು ವಡ್ಡನಹಳ್ಳಿಯಲ್ಲಿರುವ ಭೂತಪ್ಪನ ಪೌಳಿಗೆ ಈ ಪದ್ಧತಿ ಆಚರಿಸುತ್ತಾರೆ. ದೀಪಾವಳಿಯಲ್ಲಿ ಲಂಬಾಣಿಗರು ಭೀಮಸತಿ ಆಚರಣೆ ಮಾಡಿ ಹಿರಿಯರಿಗೆ ಔತಣ ನೀಡುವುದು, ಸಮೂಹ ನೃತ್ಯ ಮಾಡುವುದು ಇಲ್ಲಿನ ಸಂಪ್ರದಾಯವಾಗಿದೆ.

## ಶಿವನಯ್ಯನಪಾಳ್ಯ

ವ್ಯಕ್ತಿ ಮೂಲದ ಹೆಸರಿನಿಂದ ಸ್ಥಾಪಿತವಾಗಿರುವ ಈ ಗ್ರಾಮ ಸಿರಾ ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿದೆ. ಎಂ. ದೊರೆ ಕಂದಾಯ ಗ್ರಾಮಕ್ಕೆ ಸೇರ್ಪಡೆಯಾಗಿದೆ. ೪ ಕಿ.ಮೀ. ದೂರದ ಪಟ್ಟನಾಯಕನಹಳ್ಳಿಯಿಂದ ಪಶ್ಚಿಮಕ್ಕೆ ಇರುವ ಈ ಹಳ್ಳಿ ಶಿವಯ್ಯ ಎನ್ನುವ ವ್ಯಕ್ತಿ ಮೊದಲು ಇಲ್ಲಿ ನೆಲೆಸಿದ ಕಾರಣದಿಂದ ಆತನ ಹೆಸರಿನಲ್ಲೇ ಗ್ರಾಮ ನಿರ್ಮಾಣವಾಯಿತೆಂದು ಹೇಳ ಲಾಗುತ್ತಿದೆ. ಈ ಗ್ರಾಮದಲ್ಲಿ ಕುಂಚಿಟಿಗರು, ವೀರಶೈವರು, ಹಾಗೂ ಶ್ರೀ ವೈಷ್ಣವ ಜನಾಂಗದ ಒಟ್ಟು ೭೩ ಕುಟುಂಬಗಳಿವೆ. ಕಾಂಕ್ರೀಟ್ ಹಾಗೂ ಮಂಗಳೂರು ಹೆಂಚಿನ ವಪ್ಪಾರದ ಮನೆಗಳು ಈ ಗ್ರಾಮದಲ್ಲಿ ಹೆಚ್ಚಾಗಿದ್ದು, ನಾಲ್ಕು ಮನೆಗಳು ಶೌಚಾಲಯದ ಉಪಯೋಗ ಮಾಡಿಕೊಂಡಿದ್ದಾರೆ. ೩೧೮ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ, ಅನ್ನ ಈ ಗ್ರಾಮದ ಮುಖ್ಯ ಆಹಾರವಾಗಿದ್ದು, ಉಳಿದಂತೆ ಚಿತ್ರಾನ್ನ, ಉಪ್ಪಿಟ್ಟು, ದೋಸೆ ತಿಂಡಿಗಳಾಗಿ ಬಳಸುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಕೋಳಿ, ಕುರಿ, ಮೇಕೆ ಮಾಂಸದ ಅಡಿಗೆ, ಹಾಗೂ ಪಾಯಸ, ಹೋಳಿಗೆ, ಈ ಬಗೆಯ ವಿಶೇಷ ಆಹಾರವನ್ನು ಸ್ವೀಕರಿಸುತ್ತಾರೆ. ಈ ಗ್ರಾಮದ ದಕ್ಷಿಣ ಭಾಗಕ್ಕೆ ಚೆಂಗಾವರ–ಪಟ್ಟನಾಯಕನಹಳ್ಳಿ ಜಿಲ್ಲಾ ಪಂಚಾಯತಿ ರಸ್ತೆ ಹಾದು ಹೋಗಿದ್ದು, ಸುಮಾರು ನಾಲ್ಕು ಕಿ.ಮೀ. ದೂರಕ್ಕೆ, ರಸ್ತೆಯ ಬದಿಗೆ ಕೆಂಚಪ್ಪ ಎಂಬುವವರು ಸಾಲು ಮರ ನೆಟ್ಟು ಬೆಳೆಸಿದ್ದಾರೆ. ಈಗ ಈ ಮರಗಳು (ಆಲದ ಮರ) ಬೃಹತ್ತಾಗಿ ಬೆಳೆದು ತಾಲ್ಲೂಕಿನ ಸಾಲು ಮರದ ಗ್ರಾಮ ಎಂಬ ಹಿರಿಮೆಗೂ ಪಾತ್ರವಾಗಿದೆ. ಈ ಗ್ರಾಮದಲ್ಲಿ ಒಂದು ಪ್ರಾಥಮಿಕ ಶಾಲೆಯಿದ್ದು, ಅಂಗನವಾಡಿಯ ಸೌಲಭ್ಯವೂ ಇದೆ. ಆಧುನಿಕ ವಾಹನವಾಗಿ ಟ್ರ್ಯಕ್ಟರ್, ಮಿನಿಟೆಂಪೋ, ಸ್ಕೂಟರ್ ಬಳಕೆ ಈ ಗ್ರಾಮದಲ್ಲಿದ್ದು, ವ್ಯವಸಾಯಕ್ಕೆ ವಿಶೇಷವಾಗಿ ಎತ್ತಿನ ಬಂಡಿಗಳನ್ನು ಆಶ್ರಯ ಪಡೆದಿದ್ದಾರೆ. ಒಳಚರಂಡಿ ಕಾಣದ ಈ

ಹಳ್ಳಿಯಲ್ಲಿ ಕುಡಿಯುವುದಕ್ಕೆ ಕೊಳವೆ ಬಾವಿಯ ಆಶ್ರಯ ಪಡೆದಿದ್ದಾರೆ. ಮೂರು ಮಿನಿ ಟ್ಯಾಂಕ್ ಸೌಲಭ್ಯ ಹೊಂದಿದೆ.

ಶಿವಯ್ಯನಯ್ಯನ ಪಾಳ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ ೨೯೨ ಹೆಕ್ಟೇರ್ ಆಗಿದ್ದು, ಕೆಂಪು, ಮರಳು, ಬಿಳಿ ಮಿಶ್ರಿತ ಮಣ್ಣನ್ನು ಹೊಂದಿದೆ. ಈ ಗ್ರಾಮದ ಪಶ್ಚಿಮಕ್ಕೆ ೪೩ ಎಕರೆ ವಿಸ್ತೀರ್ಣದ ಗೋಮಾಳ ಭೂಮಿ ಇದ್ದು, ಇದರ ಲಾಭ ಕುರಿಗಾಯಿಗಳಿಗೆ ಆಗುತ್ತಿದೆ. ವಾರ್ಷಿಕ ಸರಾಸರಿ ೪೬೪ ಮಿ.ಮೀ. ಮಳೆ ಸುರಿಯುತ್ತಿದ್ದು, ಬಿಸಿಲು ೩೬ ಸೆಂ., ಚಳಿಯು ೧೨ ಸೆಂ. ಇರುತ್ತದೆ.

ಸಾಕು ಪ್ರಾಣಿಗಳಾದ ಕುರಿ, ಎಮ್ಮೆ, ಹಸು,ಕೋಳಿಗಳನ್ನು ಸಾಕುತ್ತಾರೆ. ಸೀಮೆಯ ಹಸು ಸಾಕಿ ಹೈನುಗಾರಿಯನ್ನು ಮಾಡುತ್ತಿರುವ ಮೂರು ಕುಟುಂಬಗಳು ಈ ಗ್ರಾಮದಲ್ಲಿವೆ. ಶೇಂಗಾ ಈ ಗ್ರಾಮದ ಪ್ರಮುಖ ಕೃಷಿ ಬೆಳೆಯಾಗಿದ್ದು, ತೊಗರಿ, ರಾಗಿ, ಜೋಳವನ್ನು ಬೆಳೆಯುತ್ತಾರೆ. ಸೂರ್ಯಕಾಂತಿ ಮತ್ತು ಶೇಂಗಾ ಪ್ರಮುಖ ವಾಣಿಜ್ಯ ಬೆಳೆಗಳಾಗಿವೆ. ಹುಣಸೆಹಣ್ಣಿನ ವ್ಯಾಪಾರವೂ ಈ ಗ್ರಾಮದಲ್ಲಿ ನಡೆಯುತ್ತದೆ. ಇಬ್ಬರು ಸರ್ಕಾರಿ ನೌಕರರ ಶಿಕ್ಷಕರೂ ಮತ್ತು ಗ್ರಾಮ ಪಂಚಾಯಿತಿ ನೌಕರರು ಇದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುವ ಈ ಗ್ರಾಮ, ಚಿತ್ರದುರ್ಗ ಲೋಕಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಬೇವಿನಹಳ್ಳಿ ತಾಲ್ಲೂಕು ಪಂಚಾಯಿತಿ ಹಾಗೂ ಬೇವಿನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುತ್ತದೆ.

ಈ ಗ್ರಾಮದಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ವೀರಶೈವ ಚಿಕ್ಕ ಸಮುದಾಯವಾಗಿದೆ. ಸ್ತ್ರೀ ಶಕ್ತಿ ಸಮುದಾಯ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಇಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದು, ಮಹಿಳೆಯರು ಆರ್ಥಿಕ ಸ್ವಾವಲಂಬನೆಗೆ ಈ ಸಂಘಗಳನ್ನು ಬಳಕೆ ಮಾಡಿ ಕೊಳ್ಳುತ್ತಿದ್ದಾರೆ. ವೃದ್ಧಾಪ್ಯ ವೇತನ, ಹಾಗೂ ವಿಧವಾ ವೇತನದ ಫಲಾನುಭವಿಗಳು ಈ ಗ್ರಾಮದಲ್ಲಿದ್ದು, ಕಿರಾಣಿ ಸ್ವರೂಪದ ಮೂರು ಅಂಗಡಿಗಳಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಆಂಜನೇಯ ಹಾಗೂ ಗುಜ್ಜಾರಪ್ಪ ಈ ಎರಡು ದೇವಸ್ಥಾನಗಳಿದ್ದು, ಕಣಿವೆ ಮಾರಕ್ಕನ ಎದುರೆತ್ತಿ ಹಬ್ಬ, ಬೇಟೆ ಮಾಡುವುದು ವಿಶೇಷವಾಗಿದೆ. ಆರತಿ, ಬಾನ, ಬ್ಯಾಟೆ ನಡೆಯುತ್ತದೆ. ಈ ಶಾಲೆಯ ಶಿಕ್ಷಕರಿಂದ (ರೇವಣಸ್ವಾಮಿ) ಅವರಿಂದ ಶಿವ ಭಜನೆ, ಕುಣಿತ ಅಭ್ಯಾಸ ಮಾಡಿರುವ ಮಕ್ಕಳು, ಇಂದು ದೊಡ್ಡವರಾಗಿದ್ದು, ೨೦೦೩-೦೪ ನೇ ಸಾಲಿನಲ್ಲಿ ಜಿಲ್ಲಾ ಶೈಕ್ಷಣಿಕ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿದ್ದರು. ಒಂದು ಉತ್ತಮ ಕಲಾ ಗ್ರಾಮದ  ಹಿರಿಮೆಗೂ ಪಾತ್ರವಾಗಿತ್ತು. ಆದರೆ ಆ ಪರಂಪರೆ ಇಂದು ಉಳಿದಿಲ್ಲ.

ಆಶ್ರಯ-ಇಂದಿರಾ ಆವಾಸ್, ಯೋಜನೆಗಳ ಫಲಾನುಭವಿಗಳಿದ್ದು, ಮೊದಲ ಭಾಗ್ಯ ಜ್ಯೋತಿ ವಿದ್ಯುತ್ ಸೌಲಭ್ಯ ಪಡೆದವರ ಹತ್ತು ಕುಟುಂಬಗಳಿವೆ. ಜಿಲ್ಲಾ ಪಂಚಾಯಿತಿ ಮಡ್ಡು ರಸ್ತೆ ಈ ಗ್ರಾಮದಿಂದ ಉತ್ತರಕ್ಕೆ ಹುಲಿ ಕುಂಟೆ ಕಡೆಗೆ ಹಾದು ಹೋಗಿದೆ. ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮೂರು ಕಿ.ಮೀ. ದೂರದ ಪಟ್ಟನಾಯಕನಹಳ್ಳಿಯನ್ನು ಅವಲಂಬಿಸಿದ್ದಾರೆ. ಶಿವರಾತ್ರಿ, ಯುಗಾದಿ, ಗೌರಿ-ಗಣೇಶ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಶಾಸಮರು

ಶಾಸಮರು-ಶಾಸನೂರು, ಎಂದೆಲ್ಲಾ ಕರೆಯುವ ಈ ಗ್ರಾಮ, ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೨ ಕಿ.ಮೀ ದೂರದಲ್ಲಿದೆ. ಕಂದಾಯ ಗ್ರಾಮವಾಗಿರುವ ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೩೪೨.೧೨ ಹೆಕ್ಟೇರ್ ಆಗಿದೆ. ಉತ್ತರಕ್ಕೆ ಕಾರೇಹಳ್ಳಿ, ಪೂರ್ವಕ್ಕೆ ಯಂಜಲಗೆರೆ-ಪಶ್ಚಿಮಕ್ಕೆ ವಾಜರಹಳ್ಳಿ ಈ ಗ್ರಾಮದ ಗಡಿಕಲ್ಲುಗಳು. ಜೈನರು ಅಧಿಕವಾಗಿದ್ದ ಕಾರಣದಿಂದ ಶವಣ ಊರು ಶ್ರವಣೂರು ಶಾಸಮೂರು ಆಯಿತೆಂದು, ಹೇಮಾವತಿ ಸಂಸ್ಥಾನದ ನೊಳಂಬ ರಾಜರಿಗೆ ಈ ಗ್ರಾಮದ ಜೈನ ಸಮುದಾಯದವರು ಶಾಸನ ಬರೆಯುವ ಕಾಯಕ ಮಾಡುತ್ತಿದ್ದ ಕಾರಣ ಶಾಸನಗಳ ತಯಾರಿಕೆ ಗ್ರಾಮವಾಗಿ ಶಾಸನೂರು ಶಾಸಮರು ಆಯಿತೆಂದು ಅಭಿಪ್ರಾಯವಿದೆ. ಇಂದಿಗೂ ಜೈನರ ೪ ಕುಟಂಬಗಳಿವೆ. ಇವರು ಜಮೀನು, ವ್ಯಾಪಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಮರಳು, ಕೆಂಪು, ಬಿಳಿ ಚಟ್ಟಿನ ಸ್ವರೂಪದ ಮಣ್ಣನ್ನು ಹೊಂದಿರುವ ಶಾಸಮರು ಗ್ರಾಮ ಸಮುದ್ರ ಮಟ್ಟಕ್ಕಿಂತ ೬೦೫ ಮೀಟರ್ ಉತ್ತರದಲ್ಲಿದೆ. ಹೊಸಕೆರೆ, ಚಿಕ್ಕಕೆರೆ ಎಂಬ ೨ ಕೆರೆಗೋಡಿರುವ ಈ ಗ್ರಾಮದ ಮುಸಲೋಟಿ ಕೆರೆಯ ಹಿನ್ನೀರಿಗೆ ಆತುಕೊಂಡಿದೆ. ಈ ಗ್ರಾಮದ ಉತ್ತರ-ಪಶ್ಚಿಮಕ್ಕೆ ಬಯಲು – ದಿಣ್ಣೆ ಪ್ರದೇಶವಿದ್ದು ಅಲ್ಲಿ  ನರಿ, ಮೊಲ, ಜಿಂಕೆ ಕಂಡು ಬರುತ್ತವೆ. ಗ್ರಾಮದಲ್ಲಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕಾಣಿಕೆಯು ಇದೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಸಾಂಬಾರ ಕಾಗೆ, ಕಾಗೆ, ಮರಕುಟಿಕ, ಹದ್ದು, ಗರುಡ, ಗುಬ್ಬಚ್ಚಿ ಕಂಡು ಬರುತ್ತವೆ. ಸಾಕು ಕೋಳಿಗಳನ್ನು ವಿಶೇಷವಾಗಿ  ಸಾಕುತ್ತಾರೆ.

ವಾರ್ಷಿಕ ೪೬೪ ಮಿ.ಮೀ. ಮಳೆ ಬೀಳುತ್ತಿದ್ದು, ಬಿಸಿಲು ೩೮–೪೦ಂ ಸೆಂ ಇರುತ್ತದೆ. ಚಳಿ ೧೨ಂ ಸೆಂ. ಕುಡಿಯುವ ನೀರಿಗೆ ಅಭಾವವಿದ್ದು, ಗ್ರಾಮ ಪಂಚಾಯಿತಿ ವತಿಯಿಂದ ಕೊಳವೆ ಬಾವಿಗಳ ಮೂಲಕ ಮಿನಿ ಟ್ಯಾಂಕಿಗೆ ಹಾಯಿಸಿ ಕುಡಿಯಲು ಒದಗಿಸಲಾಗುತ್ತದೆ.

ಕುಂಚಿಟಿಗ ಜನಾಂಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ಉಪ್ಪಾರ, ಜೈನರು, ಮಡಿವಾಳ ಕುಟುಂಬಗಳಿವೆ. ಕನ್ನಡ ಈ ಗ್ರಾಮದ ಮನೆಯ ಮಾತಾಗಿದೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಒಟ್ಟು ೧೨೬ ಮನೆಗಳಿದ್ದು, ೭೫ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ಆಶ್ರಯ, ಜನತಾ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಯ ೩೯ ಫಲಾನುಭವಿಗಳಿದ್ದಾರೆ. ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಬಳಸುವವರಿದ್ದಾರೆ. ರೊಟ್ಟಿ, ಅನ್ನವಾಗಿದೆ. ಬಾಡೂಟ, ಹೋಳಿಗೆ, ಪಾಯಸದ ಊಟ ಸಾಂದರ್ಭಿಕ ಭೋಜನಗಳಾಗಿವೆ. ೬ ಎತ್ತಿನಗಾಡಿಗಳೂ ಸೇರಿದಂತೆ ಟ್ರ್ಯಾಕ್ಟರ್, ಆಧುನಿಕ ವಾಹನಗಳಾದ ದ್ವಿಚಕ್ರ ವಾಹನಗಳಿವೆ. ೮೧೪ ಜನಸಂಖ್ಯೆ ಇದೆ.

ಶೇಂಗಾ ಗ್ರಾಮದ ಮುಖ್ಯ ಆಹಾರವಾಗದ್ದು, ರಾಗಿ, ಭತ್ತ, ಅಲಸಂದಿ, ತೊಗರಿ, ಜೋಳ ಆಹಾರ ಬೆಳೆಗಳಾಗಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ, ರೇಷ್ಮೆ ಕೃಷಿ ಇದ್ದು, ಶೇಂಗಾ ಹಾಗೂ ಹುಣಸೆ ಹಣ್ಣಿನ ವ್ಯಾಪಾರ ಇರುತ್ತದೆ. ಮೂವರು ಸರ್ಕಾರಿ ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಹಾಗೂ ದ್ವಾರನಕುಂಟೆ ಗ್ರಾಮ ಪಂಚಾಯಿತಿಗೆ ಸೇರಿದ ಶಾಸಮರು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಈ ಗ್ರಾಮದ ಒಬ್ಬರು ಪಂಚಾಯಿತಿ ಪ್ರತಿನಿಧಿ ಇದ್ದಾರೆ. ೩ ಸ್ತ್ರೀ ಶಕ್ತಿ ಸಂಘಗಳು, ಜಲ ಸಂವರ್ಧನೆ ಕೇಂದ್ರ ಇರುವ ಈ ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಗಳಿವೆ. ಅಂಗನವಾಡಿಯಲ್ಲಿ ೧ ಶಿಕ್ಷಕರಿದ್ದು, ೨೧ ಮಕ್ಕಳಿದ್ದಾರೆ. ಶಾಲೆಯಲ್ಲಿ ಇಬ್ಬರು ಶಿಕ್ಷಕರಿದ್ದು, ೧೧೯ ವಿದ್ಯಾರ್ಥಿ ಗಳಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪುಸ್ತಕ, ಶೌಚಾಲಯ ಸೌಲಭ್ಯಗಳಿವೆ. ೨೦೭ ರಲ್ಲಿ ಸಿರಾ ಸರ್ಕಾರಿ ಪ್ರಥಮ ದರ್ಜೆಕಾಲೇಜಿನ ಎನ್.ಎಸ್.ಎಸ್. ಘಟಕ ಏರ್ಪಡಿಸಿದ್ದ ವಿಶೇಷ ಯೋಜನೆ ಅಡಿಯಲ್ಲಿ ಹಳೆಯ ಕೋಟೆ ಕಂದರ ಮುಚ್ಚುವ ಕೆಲಸ ಮಾಡಿದೆ. ಶಾಲಾ ವನವನ್ನು ಗ್ರಾಮಸ್ಥವು, ಹಾಗೂ ಶಿಕ್ಷಕ ರಂಗನಾಥ್, ನಾಯಕ್ ಸಹಕಾರದಿಂದ ನಿರ್ಮಿಸ ಲಾಗಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೫.೫ ಇದ್ದು, ಪುರುಷರು ಶೇ. ೫೧, ಮಹಿಳೆಯರು ಶೇ. ೮೦.೯ ರಷ್ಟಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಸೌಲಭ್ಯ ಪಡೆಯುತ್ತಿದ್ದು, ಗ್ರಾಮದಲ್ಲಿ ೩ ಅಂಗಡಿಗಳಿವೆ. ಗ್ರಾಮದ ದಕ್ಷಿಣಕ್ಕೆ ಹಳೆಯ ಕೆರೆಯ ಮುಂಭಾಗದ ರಸ್ತೆ, ಕರೆಕಲ್ಲು ಹಟ್ಟಿ ರಸ್ತೆ ಯಲ್ಲಿ ನಾಶವಾಗಿರುವ ಒಂದು ಕೋಟೆಯ ಮಾದರಿ ಇದ್ದು, ಕಂದರ ಬಿದ್ದಿದೆ. ವೀರನಾಗಮ್ಮನ ಪ್ರಾಚೀನ ಗುಡಿಯನ್ನು ಇತ್ತೀಚೆಗೆ ಆಧುನೀಕರಿಸಿ, ಗೋಪುರ, ಪೌಳಿ, ಪ್ರಾಂಗಣ ನಿರ್ಮಿಸಿ ಆಕರ್ಷಕಗೊಳಿಸಿದ್ದಾರೆ.ಈ ದೇವರಿಗೆ ಹಿರಿಯೂರು, ಪಾವಗಡ, ಕೊರಟಗೆರೆ ಕಡೆಗಳಿಂದಲೂ ಒಕ್ಕಲಿದ್ದಾರೆ. ಲಕ್ಷ್ಮಿದೇವಿಯ ಎರಡು ಗುಡಿಗಳಿವೆ. ಕರಿಯಮ್ಮ ಗ್ರಾಮ ದೇವತೆಯಾದ್ದು, ವಾರ್ಷಿಕ ಊರಹಬ್ಬವಾಗಿ ಆರತಿ, ಬಾನ, ಬ್ಯಾಟೆ ಇರುತ್ತದೆ. ಯುಗಾದಿ, ದೀಪಾವಳಿ, ಗೌರಿ, ಗಣಪತಿ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಬಾಪೂಜಿ ಯುವಕ ಸಂಘ, ದಲಿತ ಸಂಘಗಳಿದ್ದು ಕ್ರಿಯಾಶೀಲವಾಗಿಲ್ಲ. ದೇವರಾಜಪ್ಪ ಎಂಬ ೪೨ ವರ್ಷ ವಯಸ್ಸಿನ ಅಂಧ ಕಲಾವಿದರು ಜನಪದ ಗೀತೆ, ತತ್ವಪದಗಳನ್ನು ಸೊಗಸಾಗಿ ಹಾಡುತ್ತಾರೆ. ಸಣ್ಣಮ್ಮ (೮೦) ಎಂಬ ಮಹಿಳೆ ವೀರನಾಗಮ್ಮನ ಕುರಿತ ಪದ ಹಾಡುತ್ತಾರೆ. ಇವರು ಹಾಡಿರುವ ಗೀತೆಗಳನ್ನು ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿ ಬಂಡಿ ಬಂದಾವು ಬಾಳೆ ವನದಾಗೆ ಪುಸ್ತಕದಲ್ಲಿ ಪ್ರಕಟಿಸಿ ದ್ದಾರೆ. ಕಾರೆಹಳ್ಳಿ ಶಾಸಮರು ಯಂಜಲಗೆರೆ–ಶಾಸಮರು, ಕಚ್ಚಾ ರಸ್ತೆ ಇದ್ದು ಖಾಸಗಿ ವಾಹನಗಳು ಓಡಾಡುತ್ತಿವೆ. ಈ ಊರನ್ನು ಕುರಿತು ಒಂದು ಜನಪದ ಗೀತೆ ಹೀಗೆ ಪ್ರಕಟವಾಗುತ್ತದೆ.

ಹಾಸಿಗೆ ಹಾಸೋದು ಬಸವನಹಳ್ಳಿ
ದೀಪ ತುಂಬಾರು ಕ್ಯಾದಿಗುಂಟೆ
ಹೊತ್ತಿಗೆ ಮುಂಚೆ ಮಲಗೋರು ಶಾಸಮರಿನವರು

ಆರಂಭದಲ್ಲಿ ರಸ್ತೆ, ಸಾರಿಗೆ ಸಂಪರ್ಕ ಇಲ್ಲದೆ, ರೈತಾಪಿ ಕಸುಬಿನ ಜನ ಸಂಜೆ ಬಹುಬೇಗ ಊಟ ಮುಗಿಸಿ ಮಲಗಿ, ಬೆಳಿಗ್ಗೆ ರೈತಾಪಿ ಬದುಕಿಗೆ ಅಣಿಯಾಗುತ್ತಿದ್ದ ಸಂದರ್ಭವನ್ನು ಈ ಜನಪದ ಗೀತೆ ನಿರೂಪಿಸುತ್ತದೆ.

## ಶೆಟ್ಟಿಗಾನಹಳ್ಳಿ

ಶೆಟ್ಟಿಗಾನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೮.೫ ಕಿ.ಮೀ. ದೂರದಲ್ಲಿದೆ. ಸಿರಾ–ಅಮರಾಪುರ ಮುಖ್ಯ ರಸ್ತೆಯಲ್ಲಿ, ಚಿಕ್ಕಬಾಣಗೆರೆ ಗೇಟಿನಿಂದ ಮುಂದೆ, ಚಿಕ್ಕತಾ ಬಾಗೆಯ ಗ್ರಾಮದ ಸಮೀಪದಲ್ಲಿ ಈ ಗ್ರಾಮವಿದ್ದು, ಇದು ಚಿಕ್ಕ

ಬಾಣಗೆರೆಯ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೪೩.೩೪ ಹೆಕ್ಟೇರ್ ಆಗಿದ್ದು, ಬಯಲುನಾಡು ಕೆಂಪು, ಮರಳು ಮಿಶ್ರಿತ ಪ್ರದೇಶ ವಾಗಿದ್ದು ಕುರುಚಲು ಗಿಡ ಮರಗಳಿಂದ ಆವೃತ್ತವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಉಡ, ಮುಂಗುಸಿ ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸು, ಮೇಕೆ, ಕುರಿ, ಮೇಕೆ, ಕೋಳಿ ಪ್ರಾಣಿಗಳಿವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಗೊರವಂಕ ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ೫೮೪ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೯೦ ಸೆಂ. ಇರುತ್ತದೆ. ಚಳಿ ೧೨೦ ಸೆಂ. ಗ್ರಾಮದಲ್ಲಿ ಒಂದು ಕೆರೆ ಇದ್ದು, ತುಂಬುವುದು ಅಪರೂಪವಾಗಿದೆ. ಈ ಪರಿಸರದಲ್ಲಿ ೧೮ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೪ ಚಿಕ್ಕ ಟ್ಯಾಂಕ್‌ಗಳಿದ್ದು, ಒಂದು ಕೈ ಪಂಪು ಇದೆ. ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯ ವಾಗಿದ್ದು, ಆದಿ ದ್ರಾವಿಡ, ಆದಿ ಕರ್ನಾಟಕ, ಕುರುಬ, ಮಡಿವಾಳ ಕಿರು ಸಮುದಾಯಗಳಾಗಿವೆ. ಒಟ್ಟು ೩೯ ಮನೆಗಳಿದ್ದು, ೧೫ ಮನೆಗಳಲ್ಲಿ ಶೌಚಾಲಯದ ಬಳಕೆ ಇದ್ದು, ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ೧೬ ಫಲಾನುಭವಿಗಳಿದ್ದಾರೆ. ೧೮೪ ಜನ ಸಂಖ್ಯೆ ಹೊಂದಿದ್ದಾರೆ. ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನವಾಗಿ ಟ್ರ್ಯಕ್ಟರ್, ದ್ವಿಚಕ್ರವಾಹನ ಬಳಕೆಯಲ್ಲಿದೆ. ಎತ್ತಿನಗಾಡಿ ಬಳಕೆಯಲ್ಲಿದೆ. ಶೇಂಗಾ ಮುಖ್ಯ ಬೆಳೆ. ರಾಗಿ, ಜೋಳ, ತೊಗರಿ, ಹುರುಳಿ ಇವರ ಆಹಾರ ಬೆಳೆಗಳು. ಶೇಂಗಾ, ಹುಣಸೇಹಣ್ಣು ವ್ಯಾಪಾರಿ ಬೆಳೆಗಳಾಗಿವೆ. ೨ ಸರ್ಕಾರಿ ನೌಕರರಿದ್ದಾರೆ. ೧೧೫ ಜನಸಂಖ್ಯೆ ಹೊಂದಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಬರಗೂರು ತಾಲ್ಲೂಕು ಪಂಚಾಯಿತಿ ಹಾಗೂ ದೊಡ್ಡಬಾಣಗೆರೆ ಗ್ರಾಮ ಪಂಚಾಯಿತಿ ಕ್ಷೇತ್ರಗಳನ್ನು ಹೊಂದಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ೨ ಸ್ತ್ರೀ ಶಕ್ತಿ ಕೇಂದ್ರಗಳಿದ್ದು, ಒಂದು ಅಂಗನವಾಡಿ, ಸರ್ಕಾರಿ ಹಿರಿಯ ಪಾಠಶಾಲೆಗಳನ್ನು ಹೊಂದಿದ್ದು, ಶಾಲೆಯಲ್ಲಿ ೨೭ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಶೌಚಾಲಯ, ಪುಠ್ಯ ಪುಸ್ತಕ, ಸಮವಸ್ತ್ರ ಸೌಲಭ್ಯಗಳಿವೆ. ಈ ಗ್ರಾಮದ ಸಾಕ್ಷರತೆ ೪೮.೩ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಕೊಲ್ಲಾಪುರದಮ್ಮ, ಅರಳಿ ಬೇವು ಸಮೇತ ಅರಳಿಕಟ್ಟೆ, ಹೊರಗೆ ನಾಗರಕಲ್ಲು, ಕೊಲ್ಲಾಪುರದಮ್ಮ ಭೂತಪ್ಪ ದೇವರುಗಳ ಪೌಳಿಗಳಿವೆ. ಕೊಲ್ಲಾಪುರದಮ್ಮ ಊರಹಬ್ಬ ಮಾಡಿ ಬಲಿ, ಆರತಿ, ಹರಕೆ ಸಂಪ್ರದಾಯಗಳಿವೆ. ಯುಗಾದಿ, ಮಹಾನವಮಿ, ದೀಪಾವಳಿ, ಗೌರಿಹಬ್ಬ ಇವುಗಳ ಜೊತೆಗೆ ಕುಂತಮ್ಮ–ಗೌರಮ್ಮ ಆಚರಣೆ ಇದೆ. ಬಾಣಗೆರೆ–ಬರಗೂರಿಗೆ ಕಚ್ಚಾ ರಸ್ತೆ ಸಂಪರ್ಕವಿದೆ.

## ಶೂಲದಾಳ

ಶೂಲದಾಳ ಒಂದು ಬೇಚಾರಕ್ ಗ್ರಾಮ. ಬುಕ್ಕಾಪಟ್ಟಣ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಪುರ ಗ್ರಾಮಕ್ಕೆ ಪೂರ್ವಕ್ಕೆ ಶೂಲದಾಳ ಗ್ರಾಮವಿತ್ತೆಂದು ಹೇಳಲಾಗುತ್ತಿದೆ. ಬುಕ್ಕಾಪಟ್ಟಣ ರಕ್ಷಿಣ ಅರಣ್ಯಕ್ಕೆ ಹೊಂದಿಕೊಂಡಂತೆ ಶೂಲದಾಳು ಅವಶೇಷಗಳು ಇಂದಿಗೂ ಕಂಡು ಬರುತ್ತವೆ.

ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಕುಮಾರರಾಮನ ಚಾರಿತ್ರಿಕ ನೆಲೆ ಎಂದು ಹೇಳಲಾಗುವ ಈ ಸ್ಥಳ ಶೂಲದ ಆಳು ವಾಸ್ತವವಾಗಿ ಕೆಂಪಿಲಿಪಟ್ಟಣದ ರಾಜ ಕೆಸಂಲಿರಾಯನ ಮಗ ಕುಮಾರ ರಾಮನ ಕಟ್ಟಾಳು ಒಬ್ಬನು ಹೋರಾಡಿದ ನೆನಪಿಗೆ, ಆತನು ಹುತಾತ್ಮನಾದ ಕಾರಣದಿಂದಾಗಿಯೇ ಈ ಸ್ಥಳಕ್ಕೆ ಶೂಲದ ಆಳು ನಂತರ ಶೂಲದಾಳು ಆಗಿ ಮೌಖಿಕ ಪರಂಪರೆಯಲ್ಲಿ ಬಳಕೆಯಾಗಿದೆ. ವಾಲ್ಮೀಕಿ (ಬೇಡ ನಾಯಕರು) ಜನಾಂಗದವರು ಪೂಜಿಸುವ ಒಂದು ಮಂಟಪವಿದೆ. ಇಂದಿಗೂ ಶಿವರಾತ್ರಿ, ದಸರಾ ಹಬ್ಬಗಳಂದು ಶೂಲದಾಳು ದೇವರಿಗೆ ಉತ್ಸವ ಮಾಡುತ್ತಾರೆ.

ಸಿರಾ ತಾಲ್ಲೂಕು, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಪರಿಸರದಲ್ಲಿ ಮನೆಗಳು ಇರುವುದಿಲ್ಲ. ಪುಟ್ಟದಾರಿ ಪುರ ಗ್ರಾಮದಿಂದ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುತ್ತದೆ.

## ಶಿವಾಜಿನಗರ

ಶಿವಾಜಿನಗರ ಬಡಾವಣೆಯು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ

೧೦.೦೨ ಕಿಮೀ ದೂರದಲ್ಲಿರುವ ಈ ಗ್ರಾಮವು ಕಂದಾಯ ಗ್ರಾಮವಾಗಿದೆ. ಈ ಗ್ರಾಮವು ಹೊಸದಾಗಿ ವಲಸೆ ಬಂದಂತಹ ಮರಾಠ ಜನಾಂಗದ ಬಡಾವಣೆಯಾಗಿರುವುದರಿಂದ ಅವರ ಐತಿಹಾಸಿಕ ವೀರನ ಹೆಸರಿನಲ್ಲಿ ಶಿವಾಜಿನಗರ ಎಂಬ ಹೆಸರಿನಿಂದ ಕರೆಯಲಾಗಿದೆ. ಈ ಬಡಾವಣೆಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೩.೦ ಹೆಕ್ಟೇರ್ ಹೊಂದಿದೆ. ನಿಂಬೇಮರದಹಳ್ಳಿಯ ಮಜರೆ ಗ್ರಾಮವಾಗಿದೆ.

ಗ್ರಾಮದ ಭೂಮೇಲ್ಮೈ ಬಯಲುನಾಡಿನಿಂದ ಕೂಡಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನ ಭೂಮಿಯನ್ನು ಹೊಂದಿದೆ. ಈ ಗ್ರಾಮದಲ್ಲಿ ಬೆಟ್ಟ, ಗುಡ್ಡ ಮತ್ತು ಅರಣ್ಯ ಹಾಗೂ ತೋಪುಗಳು ಕಂಡುಬರುವುದಿಲ್ಲ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೪೦.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಒಂದು ಕೈಪಂಪು ಮತ್ತು ಮಿನಿ ಟ್ಯಾಂಕನ್ನು ನೀರಿನ ವ್ಯವಸ್ಥೆಗೆ ಕಲ್ಪಿಸಲಾಗಿದೆ. ಈ ಬಡಾವಣೆಯಲ್ಲಿ ೧೪ ಮನೆಗಳನ್ನು ಹೊಂದಿದ್ದು ಎಲ್ಲಾ ಮನೆಗಳು ಶೀಟಿನ ಮನೆಗಳಾಗಿವೆ. ೪೭ ಒಟ್ಟು ಜನಸಂಖ್ಯೆಯನ್ನು ಹೊಂದಿದ್ದು ಮರಾಠ ಜನಾಂಗವನ್ನು ಕಾಣುತ್ತೇವೆ. ಮನೆಗಳಲ್ಲಿ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳು ಕಂಡುಬರುವುದಿಲ್ಲ ಆದರೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಕೃಷಿಯಲ್ಲಿ ಹೆಚ್ಚಿನ ಜನರು ತೊಡಗದಿದ್ದರೂ ಕೃಷಿ ಕಾರ್ಮಿಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಯಾವುದೇ ರೀತಿಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆಗಳಿಲ್ಲದಿದ್ದರೂ ಆಧುನಿಕ ಕೂಲಿ ಕೆಲಸಗಾರರಿದ್ದಾರೆ.

ಈ ಬಡಾವಣೆಯು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ ಮತ್ತು ದೊಡ್ಡ ಅಗ್ರಹಾರ ಗ್ರಾಮಪಂಚಾಯ್ತಿ ವ್ಯಾಪ್ತಿಯನ್ನು ಹೊಂದಿದೆ. ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ ಮತ್ತು ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ ಹಾಗೂ ತಹಸೀಲ್ದಾರ್ ಕಛೇರಿಯನ್ನು ಹೊಂದಿದೆ. ಕಳ್ಳಂಬೆಳ್ಳ ವಿದ್ಯುತ್ ಮತ್ತು ಉಪಪೊಲೀಸ್ ಠಾಣೆಯನ್ನು ಹೊಂದಿದೆ.

ಸಿರಾ, ಹೊನ್ನೇನಹಳ್ಳಿ-ಕಳ್ಳಂಬೆಳ್ಳದ ರಸ್ತೆ ಮಾರ್ಗವನ್ನೇ ಹೊಂದಿದ್ದು ಖಾಸಗಿ ಸಾರಿಗೆಯನ್ನು ಹೊಂದಿದೆ. ವಡ್ಡನಹಳ್ಳಿ ಅಂಚೆ ಸಂಪರ್ಕ ಮತ್ತು ಚರ ಮೊಬೈಲ್‌ಗಳನ್ನು ಸಂಪರ್ಕ ಸಾಧನಗಳಾಗಿವೆ. ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದೆ. ಬಗೆಹರಿಯದ ವ್ಯಾಜ್ಯಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳುತ್ತಾರೆ. ಯಾವುದೇ ಬ್ಯಾಂಕಿಂಗ್ ವ್ಯವಸ್ಥೆ ಕಂಡುಬಂದಿಲ್ಲ ಮತ್ತು ಹೊಸದಾದ ಬಡಾವಣೆಯಾಗಿರುವುದರಿಂದ ಯಾವುದೇ ಸಂಘಗಳನ್ನು ಸ್ಥಾಪಿಸಿಕೊಂಡಿಲ್ಲ. ಈ ಬಡಾವಣೆಯಲ್ಲಿ ಅಂಗನವಾಡಿ, ಪ್ರಾಥಮಿಕ ಶಾಲೆಯನ್ನು ಹೊಂದಿಲ್ಲದಿದ್ದರೂ ಗ್ರಾಮದ ಸಾಕ್ಷರತಾ ಪ್ರಮಾಣ ೪೮% ಆಗಿದೆ. ಗ್ರಾಮದ ಜನರು ಕುಟುಂಬ ಕಲ್ಯಾಣ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದಾರೆ. ವಾರಕ್ಕೊಮ್ಮೆ ಆರೋಗ್ಯ ಸಹಾಯಕಿಯರು ಗ್ರಾಮಕ್ಕೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಅಂಗಡಿಯನ್ನು ಹೊಂದಿದೆ. ಐತಿಹಾಸಿಕ ಸಂಸ್ಕೃತಿಯ ಪ್ರತೀಕಗಳಾದ ಯಾವುದೇ ಧಾರ್ಮಿಕ ಸಂಸ್ಕೃತಿಯ ಕೇಂದ್ರಗಳು ಇಲ್ಲದಿದ್ದರೂ ನಿಂಬೆಮರದಹಳ್ಳಿಯ ಕಣಿವೆ ಮಾರಮ್ಮ ಮತ್ತು ಈಶ್ವರ ದೇವಾಲಯಗಳು ಈ ಗ್ರಾಮಕ್ಕೂ ದೇವಾಲಯಗಳಾಗಿವೆ. ಯುಗಾದಿಯ ನಂತರ ಗ್ರಾಮದೇವತೆ ಕಣಿವೆ ಮಾರಮ್ಮನಿಗೆ ಜಾತ್ರೆ ಮಾಡುತ್ತಾರೆ. ಇದರಲ್ಲಿ ಆರತಿ ಮತ್ತು ಬಲಿ ಕೊಡುವುದು ಸಹಜ ಪ್ರಕ್ರಿಯೆಯಾಗಿದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ, ಶಿವಾಜಿ ಜಯಂತಿಯನ್ನು ಆಚರಿಸುತ್ತಾರೆ.

## ಶಿಡ್ಲೆಕೋಣ

ಶಿಡ್ಲಕೋಣ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಸಿರಾದಿಂದ ೧೮ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಸಿರಾ ಚೇಳೂರು ಮುಖ್ಯ ರಸ್ತೆಯಲ್ಲಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೩೯೨.೦೭ ಹೆಕ್ಟೇರ್‌ಗಳಾಗಿವೆ. ಈ ಗ್ರಾಮಕ್ಕೆ ಗೊಲ್ಲರಹಟ್ಟಿ ಉಪಗ್ರಾಮವಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಆವೃತವಾಗಿದೆ. ಈ ಗ್ರಾಮಕ್ಕೆ ಹತ್ತಿರದಲ್ಲಿ ಗುಬ್ಬಿ ತಾಲ್ಲೂಕಿಗೆ ಸೇರಿದ ಪ್ರದೇಶದಲ್ಲಿ ಶಿಡ್ಲೆಬೊಮ್ಮಲಿಂಗೇಶ್ವರ ದೇವಸ್ಥಾನವಿದೆ. ಕೊಣದಿಂದಾಗಿ ಶಿಡ್ಲೆಕೊಣ > ಶಿಡ್ಲೆಕೋಣವಾಗಿ ಬಳಕೆಯಲ್ಲಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೫೨ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಇಲ್ಲಿ ೮೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಅಲ್ಲದೇ ಒಂದು ಕಟ್ಟೆಯಿದ್ದು ಮಳೆಗಾಲದಲ್ಲಿ ತುಂಬುತ್ತದೆ. ಕುಡಿಯುವ ನೀರಿನ ಬಳಕೆಗೆ ಸಿಸ್ಟರ್ನ್ ಮತ್ತು ೩ ಕೈಪಂಪುಗಳನ್ನು ಹೊಂದಿದೆ. ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ.

ಗ್ರಾಮದಲ್ಲಿ ಒಟ್ಟು ೧೮೧ ಮನೆಗಳಿದ್ದು ೭೨೩ ಜನಸಂಖ್ಯೆಯನ್ನು ಹೊಂದಿದೆ. ನಾಯಕ, ಕುಂಚಿಟಿಗ, ಮುಸ್ಲಿಂ, ವೀರಶೈವ, ಆದಿಕರ್ನಾಟಕ ಮನೆಗಳಿವೆ. ಇವರ ಭಾಷೆಯು ಕನ್ನಡ ಮತ್ತು ಉರ್ದು ಆಗಿದ್ದು ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಗ್ರಾಮದಲ್ಲಿ ಹೆಂಚಿನ, ಶೀಟಿನ, ಕಾಂಕ್ರೀಟ್ ಸ್ವರೂಪದ ಮನೆಗಳಿದ್ದು ಅವು ಸರ್ಕಾರದ ವಸತಿ ಯೋಜನೆಯ ಆಶ್ರಯ, ಇಂದಿರಾ ಆವಾಸ್ ಸ್ವರೂಪದ ಮನೆಗಳಿದ್ದು ಅವು ಸರ್ಕಾರದ ವಸತಿ ಯೋಜನೆಯ ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ಹಳ್ಳಿಯ ಜನರ ಮುಖ್ಯ ಉದ್ಯೋಗ ಕೃಷಿ. ಇಲ್ಲಿನ ಪ್ರಮುಖ ಬೆಳೆ ಶೇಂಗಾ, ರಾಗಿ, ಭತ್ತ, ಜೋಳ, ದ್ವಿದಳ ಧಾನ್ಯಗಳು, ತೆಂಗು, ಅಡಕೆ ಇತ್ಯಾದಿಗಳಾಗಿದ್ದು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಅಲ್ಲದೇ ಹೇರಳವಾಗಿ ಹುಣಸೇಮರಗಳನ್ನು ಹೊಂದಿದೆ. ಇದರೊಂದಿಗೆ ಆರ್ಥಿಕೇತರ ಆದಾಯಕ್ಕೆ ಆಧುನಿಕ ಡೈರಿಯನ್ನು ಹೊಂದಿದೆ. ಶಿಕ್ಷಕ, ರಸ್ತೆ ಸಾರಿಗೆ, ಕಂದಾಯ ಇಲಾಖೆಗೆ ಸೇರಿದ ಒಬ್ಬರು ನೌಕರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅಲ್ಲದೇ ಯಾವುದೇ ಬೃಹತ್ ಕೈಗಾರಿಕೆಗಳು ಇಲ್ಲದಿದ್ದರೂ ಸಹ ಗಿರಣಿಯ ರಾಗಿಮಿಲ್, ಬಟ್ಟೆ ಹೊಲಿಯುವುದು ಸಣ್ಣ ಪ್ರಮಾಣದಲ್ಲಿವೆ.

ಚಿಕ್ಕನಾಯಕನಹ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಗೋಪಾಲದೇವರ ಹಳ್ಳಿ ತಾಲ್ಲೂಕು ಪಂಚಾಯಿತಿ ಸಿರಾ ತಹಸೀಲ್ದಾರ್ ಕಛೇರಿಯನ್ನು ಕಳ್ಳಂಬೆಳ್ಳ ವಿದ್ಯುತ್ ಮತ್ತು ಪೊಲೀಸ್ ಠಾಣೆಯನ್ನು ಗೋಪಾಲದೇರರ ಹಳ್ಳಿ ಪಂಚಾಯಿತಿ ಮತ್ತು ಒಬ್ಬರು ಸದಸ್ಯರನ್ನು ಹೊಂದಿದ್ದು ಗೋಪಾಲದೇವರ ಹಳ್ಳಿ ಅಂಚೆ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮ ನ್ಯಾಯಮಂಡಳಿಯನ್ನು ಬಗೆಹರಿಯದ ಸಮಸ್ಯೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳಲಾಗುತ್ತದೆ.

ಶಿಡ್ಲೆಕೋಣದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೊಮ್ಮಲಿಂಗೇಶ್ವರ ಪ್ರೌಢಶಾಲೆ, ಬೊಮ್ಮಲಿಂಗೇಶ್ವರ ಸಂಯುಕ್ತ ಪದವಿಪೂರ್ವ ಕಾಲೇಜು ಹೊಂದಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೪.೦% ಆಗಿದೆ.

ಗ್ರಾಮವು ಯಾವುದೇ ಬ್ಯಾಂಕಿಂಗ್ ವ್ಯವಸ್ಥೆ ಹೊಂದಿಲ್ಲದಿದ್ದರೂ ೩ ಸ್ತ್ರೀಶಕ್ತಿ ಸಂಘಗಳು, ಮದಕರಿ ನಾಯಕ ಸಂಘ ಮತ್ತು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವನ್ನು ಹೊಂದಿದೆ. ಇಲ್ಲಿ ಕುಟುಂಬ ಕಲ್ಯಾಣ ವ್ಯವಸ್ಥೆಯಿದೆ. ಸರ್ಕಾರಿ ಆಯುರ್ವೇದಿಕ್ ಆಸ್ಪತ್ರೆಯನ್ನು ಹೊಂದಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಟೀ ಹೋಟೆಲ್, ೧೦ ಚಿಲ್ಲರೆ ವ್ಯಾಪಾರದ ಅಂಗಡಿಗಳಿವೆ. ಧಾರ್ಮಿಕ ಪರಂಪರೆಯಲ್ಲಿ ಸಾಂಪ್ರದಾಯಿಕ ಹಬ್ಬಗಳೊಂದಿಗೆ ಆಂಜನೇಯ, ಮುದ್ದಮಾರಮ್ಮ ದೇವಾಲಯಗಳಿವೆ. ಮುದ್ದೆಮಾರಮ್ಮ ಮತ್ತು ಭೂತಪ್ಪರಿಗೆ ಆರತಿ ಮಾಡಿ ಬಲಿಕೊಡುತ್ತಾರೆ.

ಈ ಗ್ರಾಮದಲ್ಲಿ ಯುಗಾದಿ, ಮಹಾನವಮಿ, ಶಿವರಾತ್ರಿ, ಸಂಕ್ರಾಂತಿ, ಗೌರಿ–ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ. ಇತ್ತೀಚೆಗೆ ವಾಲ್ಮೀಕಿ ಹೆಸರಿನ ಆಶ್ರಮವಿದ್ದು ಒಬ್ಬರು ಗುರುಗಳ ಮಾರ್ಗದರ್ಶನದಲ್ಲಿ ಧಾರ್ಮಿಕ ಪ್ರವಚನ ಚಟುವಟಿಕೆಗಳು ಜರುಗುತ್ತವೆ.

## ಶಿಡ್ಲೆಕೋಣ ಗೊಲ್ಲರಹಟ್ಟಿ

ಶಿಡ್ಲೆಕೋಣ ಗೊಲ್ಲರಹಟ್ಟಿಯು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ೧೮ ಕಿಮೀ ದೂರದಲ್ಲಿರುವ ಈ ಗ್ರಾಮವು ಮಜರೆ ಗ್ರಾಮವಾಗಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೬೩.೫ ಹೆಕ್ಟೇರ್‌ಗಳಾಗಿವೆ. ಬಯಲು ನೀಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಈ ಗ್ರಾಮದಲ್ಲಿ ಅರಣ್ಯ ಬೆಟ್ಟ, ಗುಡ್ಡ, ತೋಪುಗಳನ್ನು ಹೊಂದಿಲ್ಲ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೫೨ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮದಲ್ಲಿ ಒಂದು ಕಟ್ಟೆಯನ್ನು ಹೊಂದಿದ್ದು ಮಳೆಗಾಲದಲ್ಲಿ ಮಾತ್ರ ನೀರಿರುತ್ತದೆ. ಕುಡಿಯುವ ನೀರಿನ ಬಳಕೆಗೆ ಸಿಸ್ಟರ್ನ್ ಮತ್ತು ಎರಡು ಕೈಪಂಪುಗಳಿವೆ.

ಈ ಗ್ರಾಮದಲ್ಲಿ ೨೮ ಮನೆಗಳಿದ್ದು ೬೮ ಜನಸಂಖ್ಯೆಯನ್ನು ಹೊಂದಿದೆ. ಎಲ್ಲವೂ ಗೊಲ್ಲರ ಮನೆಗಳಾಗಿವೆ. ಕಾಂಕ್ರೀಟ್, ಹೆಂಚು, ಗುಡಿಸಲು, ಶೀಟಿನ ಮನೆಗಳಾಗಿವೆ. ಇವರ ಭಾಷೆ ಕನ್ನಡ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಕಚ್ಚಾರಸ್ತೆಯನ್ನು ಹೊಂದಿದ್ದು ಚರಂಡಿಯನ್ನು ಒಳಗೊಂಡಿಲ್ಲ. ಮನೆಗಳಲ್ಲಿ ಆಶ್ರಯ, ಜನತಾ ವಸತಿ ನಿಲಯಗಳಾಗಿದ್ದು ಸರ್ಕಾರದ ಸೌಲಭ್ಯ ಪಡೆಯುತ್ತಿವೆ. ೧೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಈ ಹಳ್ಳಿಯ ಜನರ ಮುಖ್ಯ ಉದ್ಯೋಗ ಕೃಷಿ. ಕೃಷಿಗೆ ಮಳೆಯನ್ನು ಆಧರಿಸಿಕೊಂಡಿರುವ ಪ್ರದೇಶ ಮತ್ತು ೮ ಕೊಳವೆ ಬಾವಿಗಳನ್ನು ಹೊಂದಿದ್ದು ಸಹಾಯಕವಾಗಿವೆ. ಮುಖ್ಯ ಬೆಳೆ ಶೇಂಗಾ, ರಾಗಿ, ಭತ್ತ ದ್ವಿದಳ ಧಾನ್ಯಗಳು ತೆಂಗು ಮತ್ತು ಹುಣಸೇ ಮರಗಳು ವ್ಯಾಪಾರದ ಸರಕುಗಳಾಗಿವೆ. ಇಲ್ಲಿನ ಜನರು ಯಾವುದೇ ನೌಕರಿಯಲ್ಲಿ ಕೆಲಸ ನಿರ್ವಹಿಸುತ್ತಿಲ್ಲ ಮತ್ತು ಒಂದು ರಾಗಿಮಿಲ್, ಒಂದು ಟೈಲರ್ ಅಂಗಡಿಗಳಿವೆ. ಕುರಿ ವ್ಯಾಪಾರ, ಹುಣಸೆ ಹಣ್ಣಿನ ವ್ಯಾಪಾರವಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಗೋಪಾಲದೇವರಹಳ್ಳಿ ತಾಲ್ಲೂಕು ಪಂಚಾಯ್ತಿ ಸಿರಾ ತಹಸೀಲ್ದಾರ್ ಕಛೇರಿಯನ್ನು ಕಳ್ಳಂಬೆಳ್ಳ ವಿದ್ಯುತ್ ಮತ್ತು ಪೊಲೀಸ್ ಠಾಣೆಯನ್ನು ಗೋಪಾಲದೇವರಹಳ್ಳಿ ಪಂಚಾಯ್ತಿಯನ್ನು ಮತ್ತು ಅಂಚೆ ಕಛೇರಿಯನ್ನು ಹೊಂದಿದೆ. ಈ ಗ್ರಾಮಕ್ಕೆ ಸಿರಾ–ಚೇಳೂರು ರಸ್ತೆ ಮಾರ್ಗವನ್ನು ಹೊಂದಿದೆ. ಇಲ್ಲಿ ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದ್ದು ಬಗೆಹರಿಯದ ಸಮಸ್ಯೆಗಳನ್ನು ಇತ್ಯರ್ಥಪಡಿಸಿಕೊಳ್ಳಲು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳನ್ನು ಹೊಂದಿದೆ.

ಶಿಡ್ಲೆಕೋಣದಲ್ಲಿ ಒಂದು ಅಂಗನವಾಡಿ ಕೇಂದ್ರವನ್ನು ಹೊಂದಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೫% ಆಗಿದೆ. ಒಂದು ಸ್ತ್ರೀಶಕ್ತಿ ಸಂಘವನ್ನು ಸ್ಥಾಪಿಸಿಕೊಳ್ಳಲಾಗಿದೆ. ಇದರಿಂದ ಸಣ್ಣ ಪ್ರಮಾಣದ ಸಾಲಸೌಲಭ್ಯಗಳನ್ನು ಪಡೆದುಕೊಳ್ಳಲು ಸಹಾಯಕವಾಗಿದೆ.

ಈ ಗ್ರಾಮದಲ್ಲಿ ಗ್ರಂಥಾಲಯ, ಆಟದ ಮೈದಾನಗಳು ಕಂಡುಬರದಿದ್ದರೂ ಒಂದು ಗೇಟ್‌ನಲ್ಲಿ ಸರ್ಕಾರಿ ಆಯುರ್ವೇದಿಕ್ ಆಸ್ಪತ್ರೆಯನ್ನು ಹೊಂದಿದೆ. ಇಲ್ಲಿ ಕುಟುಂಬ ಕಲ್ಯಾಣ ವ್ಯವಸ್ಥೆಯನ್ನು ಹೊಂದಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಹಿರಿಯ ಗುಡ್ಡೆ, ಸ್ಮಾರಕ ರಲ್ಲು ಹಾಗೂ ಆಲದ ಮರಗಳಿವೆ. ಶಿಡ್ಲೆಕೋಣದೊಂದಿಗೆ ಅಂಗಡಿ, ಗಿರಣಿ ಮತ್ತು ಟ್ರ್ಯಕ್ಟರ್ ರಿಪೇರಿ ಮಾಡುವ ಅಂಗಡಿಯನ್ನು ಹೊಂದಿದೆ.

ಧಾರ್ಮಿಕ ಕೇಂದ್ರಗಳಾದ ಮುದ್ದೇಮಾರಮ್ಮ, ಆಂಜನೇಯ, ಓಬಳನರಸಿಂಹಸ್ವಾಮಿ ದೇವಾಲಯಗಳನ್ನು ಹೊಂದಿದೆ. ಈ ದೇವರಿಗೆ ದೀಪಾವಳಿಯಲ್ಲಿ ಜಾತ್ರೆ ಮಾಡುತ್ತಾರೆ. ಶಿಡ್ಲೇಕೋಣದೊಂದಿಗೆ ವರ್ಷಕ್ಕೊಮ್ಮೆ ಮಾರಮ್ಮನ ಜಾತ್ರೆ ಮಾಡುತ್ತಾರೆ. ಇದಕ್ಕೆ ಆರತಿ ಮಾಡಿ ಬಲಿ ನೀಡುತ್ತಾರೆ.

## ಶಾಗದಡು

ಶಾಗದಡು ಶಾಕದಡು ಎಂದೆಲ್ಲಾ ಕರೆಯಲ್ಪಡುವ ಈ ಗ್ರಾಮ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೬ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೪೪೨.೧೭ ಹೆಕ್ಟೇರ್ ಆಗಿದೆ. ಗ್ರಾಮಕ್ಕೆ

ಹೊಂದಿಕೊಂಡೇ ಗೊಲ್ಲರಹಟ್ಟಿಯೂ ಸೇರಿಕೊಂಡು ಪ್ರತ್ಯೇಕ ಕಾಲೋನಿ ಆಗಿದ್ದರೂ ಗ್ರಾಮದ ಒಳಗೇ ಇದೆ. ನಾಗರಿಕ ಸೌಲಭ್ಯಗಳೆಲ್ಲವೂ ಈ ಗ್ರಾಮದ ಜೊತೆಯಲ್ಲಿಯೇ ಬಳಕೆಯಾಗುತ್ತಿವೆ. ಒಟ್ಟು ಕುಟುಂಬಗಳ ಸಂಖ್ಯೆ ೩೮೬ ಆಗಿದ್ದು ೧೭೪೦ ಜನಸಂಖ್ಯೆ ಹೊಂದಿದೆ. ಕುಂಚಿಟಿಗ ಬೇಡ ನಾಯಕ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಆದಿದ್ರಾವಿಡ, ಈಡಿಗ, ಮಡಿವಾಳ, ಶ್ರೀವೈಷ್ಣವ, ಅಕ್ಕಸಾಲಿಗರು ಸಣ್ಣ ಸಮುದಾಯವಾಗಿದೆ.

ಶಾಗದಡು ಎಂಬ ನಾಮಸೂಚಕದ ಐತಿಹ್ಯ ರಾಮಾಯಣ ಸಂಬಂಧಿ ಕಥೆಯ ಮೂಲಕ ವ್ಯಕ್ತಪಡಿಸುವ ಗ್ರಾಮದ ಹಿರಿಯ ಹಾಗೂ ಯಕ್ಷಗಾನ ಭಾಗವತ ಲಕ್ಷ್ಮೀರಾಮೇಗೌಡ ಶ್ರೀರಾಮ ತನ್ನ ವನವಾಸದ ಕಾಲದಲ್ಲಿ ಈ ಭಾಗಕ್ಕೂ ಬಂದಿದ್ದು ತನ್ನ ವಸತಿ, ಕ್ರೂರ ಪ್ರಾಣಿಗಳಿಂದ ರಕ್ಷಣೆ ಪಡೆಯಲು ಬಾಣ ಬಿಟ್ಟಾಗ ಈ ಗ್ರಾಮದ ಸನಿಹದ ಕಾಡು ಮತ್ತು ಅದಕ್ಕೆ ಹೊಂದಿಕೊಂಡಿದ್ದ ಏಳು ಗ್ರಾಮಗಳೂ ನಾಶವಾದವು. ಶ್ರೀರಾಮನ ಬೆಂಕಿಯ ಬಾಣ ಅಷ್ಟಕ್ಕೇ ನಿಲ್ಲದೆ ಶಾಗದಡು ಗ್ರಾಮದ ಬಳಿಗೆ ಬಂದಾಗ ಈ ಗ್ರಾಮದ ಮುಖ್ಯ ದೈವ ಶ್ರೀ ಬಾಲಕೃಷ್ಣನ ಪ್ರಾರ್ಥನೆಯೊಂದಿಗೆ ಬೆಂಕಿ ತಣ್ಣಗಾಯಿತೆಂದು ಬೆಂಕಿಯಿಂದ ತಪ್ಪಿಸಿಕೊಂಡ ಕೊನೆ ಊರು ಶಾಕದಡು ಆಗಿ ಕೊನೆಗೆ ಶಾಗದಡುವಾಗಿದೆ ಎಂದು ವಿವರಿಸುತ್ತಾರೆ. ರಾಮ-ಕೃಷ್ಣ ಈ ಎರಡೂ ಅವತಾರಗಳು ಬೇರೆ ಬೇರೆ ಕಾಲಘಟ್ಟದಲ್ಲಿ ಬಂದಿರುವುದರಿಂದ ಈ ಹೇಳಿಕೆ ಅಷ್ಟೇನೂ ಸಮರ್ಥನೀಯವಾಗಿ ಕಾಣುವುದಿಲ್ಲ. ಆದರೂ ಗ್ರಾಮದಲ್ಲಿ ಬಾಲಕೃಷ್ಣ ಶ್ರೀರಾಮರ ದೇವಾಲಯಗಳಿವೆ. ಶಾಕದಡು ಎಂಬುದು ಬಿಸಿಬಿಸಿ ಅಡುಗೆ ತಯಾರಿಸುವ ಎಂಬ ಅರ್ಥವೂ ಇರುವುದರಿಂದ ಗ್ರಾಮದಲ್ಲಿ ಶಾಖಾಹಾರಿಗಳಾದ ಬ್ರಾಹ್ಮಣರು ಈ ಭಾಗದಲ್ಲಿ ಅಡಿಗೆ ತಯಾರು ಮಾಡುತ್ತಿದ್ದರೆ ಎಂಬ ಪ್ರಶ್ನೆಯೂ ಮೂಡುತ್ತದೆ.

ಗ್ರಾಮದಲ್ಲಿ ಇಂದಿಗೂ ರೂಢಿ ಇರುವಂತೆ ಯುಗಾದಿ ಹಬ್ಬದ ಮುಂಚೆ ಊರಿನ ಜನರೆಲ್ಲಾ ಒಂದು ದಿನ ಊರಿನ ಮನೆಗಳ ಬಾಗಿಲು ಮುಚ್ಚಿ ದನಕರುಗಳೊಂದಿಗೆ ಹೊರಗಡೆಗೆ ಬಂದು ಮರಗಳ ನೆರಳು, ತೋಟಗಳಲ್ಲಿ ಇಡೀ ದಿನ ನೆಲೆಸಿ ಅಲ್ಲಿಯೇ ಮಾಂಸಾಹಾರದ ಅಡಿಗೆ ತಯಾರಿಸಿ ಬಿಸಿಬಿಸಿ ಊಟ ಸೇವಿಸಿ ಸೂರ್ಯ ಮುಳುಗಿದ ತರುವಾಯ ಗ್ರಾಮದವರೆಲ್ಲರೂ ಶ್ರೀರಾಮ ದೇವಸ್ಥಾನದಲ್ಲಿ ಸೇರಿ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗದ ತರುವಾಯ ತಮ್ಮ ತಮ್ಮ ಮನೆಯೊಳಗೆ ಪ್ರವೇಶಿಸುವ ಹೊರಬೀಡು ಪದ್ಧತಿಯಿದ್ದು ಈ ಆಚರಣೆಯ ನಿಮಿತ್ತ ಶಾಗದಡು ಹೆಸರು ಬಂದಿರುವ ಸಾಧ್ಯತೆಯೂ ಇದೆ.

ಶಾಗದಡುವಿನ ದಕ್ಷಿಣ ಭಾಗಕ್ಕೆ ಗುಡ್ಡಸಾಲು, ಹಳ್ಳ, ಕುರುಚಲು ಕಾಡು ಪ್ರದೇಶವಿದ್ದು ಭೂಪ್ರದೇಶವನ್ನು ಹೆಚ್ಚಾಗಿ ಹೊಂದಿದೆ. ಸಾಮಾಜಿಕ ಅರಣ್ಯದಲ್ಲಿ ಕಗ್ಗಲಿ, ಈಚಲ, ಹೊನ್ನೆ, ಜಾಲಿ, ಹುಣಸೆ, ಮುತ್ತುಗ, ತೂಪರೆ ಮರಗಳಿವೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ವಿಷಪೂರಿತ ಹಾವುಗಳೂ ಇವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೪೮ ಮಿಮೀ ಆಗಿದ್ದು ಇದು ಏನೇನೂ ಸಾಕಾಗುವುದಿಲ್ಲ. ಉಷ್ಣಾಂಶ ೩೨ ಡಿಗ್ರಿ ಹಾಗೂ ಚಳಿ ೯-೧೩ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮದಲ್ಲಿ ೪ ಕೊಳವೆ ಬಾವಿಗಳಿದ್ದು ಕಿರುನೀರು ಸರಬರಾಜು ಯೋಜನೆಯ ಮೂಲಕ ೩ ಕೈಪಂಪು, ೨ ಕಿರು ಟ್ಯಾಂಕ್‌ದಳಿಂದ ನೀರನ್ನು ಕುಡಿಯುವುದಕ್ಕೆ ಸರಬರಾಜು ಮಾಡಲಾಗುತ್ತಿದೆ.

ಕಾಂಕ್ರೀಟ್, ಹಾಸುಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಒಟ್ಟು ೩೯೬ ಮನೆಗಳಿದ್ದು ಜನತಾ, ಇಂದಿರಾ ಆವಾಸ್, ಆಶ್ರಯ ಯೋಜನೆಯ ೯೩ ಫಲಾನುಭವಿಗಳಿದ್ದಾರೆ. ಜೊತೆಗೆ ಭಾಗ್ಯಜ್ಯೋತಿ ಯೋಜನೆಯ ಸೌಲಭ್ಯ ಪಡೆದವರಿದ್ದಾರೆ.

ಕೆಂಪು, ಕರಕಲು, ಬಿಳಿಚಿಟ್ ಹಾಗೂ ಉತ್ತರ ಭಾಗದಲ್ಲಿ ಕಪ್ಪುಮಿಶ್ರಿತ ಮರಳು ಮಣ್ಣಿನ ಭೂಮಿಯ ಈ ಗ್ರಾಮದಲ್ಲಿ ಶೇಂಗಾ, ಹತ್ತಿ, ರಾಗಿ, ಮೆಕ್ಕೆಜೋಳ, ಸೂರ್ಯಕಾಂತಿ, ದ್ವಿದಳ ಧಾನ್ಯಗಳಾದ ತೊಗರಿ, ಅಲಸಂದೆ, ಹರಳು, ಹೆಸರು ಕಾಳುಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ಉಪ್ಪಿಟ್ಟು, ಚಿತ್ರಾನ್ನ ರೊಟ್ಟಿ ಬಳಸುವವರಿದ್ದಾರೆ. ರಾಮದೇವರ ಪೂಜಾರಿಕೆ ಇರುವ ಬೇಡ ನಾಯಕರು ಕೋಳಿ ಮಾಂಸ ಸ್ವೀಕರಿಸುವುದಿಲ್ಲ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ನಿವೃತ್ತ ವಿಶೇಷ ಜಿಲ್ಲಾಧಿಕಾರಿ ಸಾಹಿತಿ ಭಕ್ತರಾಮೇಗೌಡ ಸೇರಿದಂತೆ ಈ ಗ್ರಾಮದಲ್ಲಿ ಭೂದಾಖಲೆ ಜಿಲ್ಲಾಧಿಕಾರಿ ದೇವರಾಜ್, ಕಂದಾಯ ಅಧಿಕಾರಿ ಲಿಂಗಪ್ಪ, ಪ್ರಾಂಶುಪಾಲ ಸಣ್ಣತಿಮ್ಮಯ್ಯ ಸೇರಿದಂತೆ ೧೦ ಕ್ಕೂ ಹೆಚ್ಚು ಜನ ಸರ್ಕಾರಿ ಅಧಿಕಾರಿಗಳಿದ್ದಾರೆ.

ಗ್ರಾಮದಲ್ಲಿ ಬಾಲವಾಡಿ, ಸರ್ಕಾರಿ ಹಿರಿಯ ಪ್ರಾಥಮಿಕ, ಪ್ರೌಢಶಾಲೆಗಳಿದ್ದು ಒಟ್ಟು ೧೪ ಜನ ಸರ್ಕಾರಿ ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೦.೪% ಆಗಿದೆ. ಇದರಲ್ಲಿ ಪುರುಷರು ೬೨.೪ ಮತ್ತು ಮಹಿಳೆಯರು ೫೦.೪ ಪ್ರಮಾಣದಲ್ಲಿದ್ದಾರೆ. ಉಳಿದಂತೆ ಅಂಚೆ ಕಛೇರಿ, ಗ್ರಾಮಲೆಕ್ಕಿಗರ ಕಛೇರಿಗಳಿದೆ. ೧೫೬ ಮನೆಗಳಲ್ಲಿ ಶೌಚಾಲಯದ ಸೌಲಭ್ಯ ಹೊಂದಿದ್ದಾರೆ.

ಆಧುನಿಕ ಹಾಲಿನ ಡೈರಿ, ಹಿಟ್ಟಿನ ಗಿರಣಿ, ಸೈಕಲ್ ರಿಪೇರಿಯ ಕೈಗಾರಿಕೆ, ಊಟದ ಎಲೆ ಕಟ್ಟುವುದು, ಬೀಡಿ ಕಟ್ಟುವುದು, ಟೈಲರಿಂಗ್ ಕೆಲಸ, ಗೃಹ ಕೈಗಾರಿಕೆಯೂ ಇದೆ. ಶೇಂಗಾ, ಅಡಿಕೆ, ತೆಂಗು, ಹುಣಸೆಹಣ್ಣು, ಹೊಂಗೆಬೀಜ, ಹತ್ತಿ, ತರಕಾರಿ ಈ ಗ್ರಾಮದ ವಾಣಿಜ್ಯ ಬೆಳೆಗಳು.

ತಾಲ್ಲೂಕಿನ ಹೊರಗಿನ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಈ ಗ್ರಾಮ ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ ಹಾಗೂ ಹುಯಿಲ್‌ದೊರೆ ತಾಲ್ಲೂಕು ಪಂಚಯ್ತಿ ವ್ಯಾಪ್ತಿಗೆ ಒಳಪಡುತ್ತದೆ. ಗ್ರಾಮಪಂಚಾಯ್ತಿ ಹುಯಿಲ್‌ದೊರೆ ಗ್ರಾಮವಾಗಿದ್ದು ಈ ಗ್ರಾಮದ ಮಹೇಶ್ ಸಧ್ಯ ಪಂಚಾಯ್ತಿ ಅಧ್ಯಕ್ಷರಾಗಿದ್ದಾರೆ. ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿಗೆ ಈ ಗ್ರಾಮದ ಪುಟ್ಟಮಣಿ ಬೊಮ್ಮಣ್ಣ ಸದಸ್ಯರಾಗಿ ಪ್ರತಿನಿಧಿಸುತ್ತಿರುವುದು ವಿಶೇಷ. ಐದು ಪಂಚಾಯ್ತಿ ಸದಸ್ಯರನ್ನು ಈ ಗ್ರಾಮ ಹೊಂದಿದೆ. ಆರು ಸ್ತ್ರೀಶಕ್ತಿ ಸಂಘಗಳು, ಮೂರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಒಂದು ಸುಜಲ ಜಲಾನಯನ ಸಂಘಗಳಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ಎಸ್‌ಎಸ್‌ವೈ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೨ ಹೋಟೆಲ್‌ಗಳು, ೮ ಕಿರಾಣಿ ಅಂಗಡಿ, ಟೀ, ಗೂಡಂಗಡಿಗಳಿವೆ. ಅರಳಿಕಟ್ಟೆ, ೨ ಕರಿಗಲ್ಲುಗಳಿದ್ದು ಪೂಜೆಗೊಳಗಾಗುತ್ತಿವೆ.

ಶ್ರೀರಾಮ, ಬಾಲಕೃಷ್ಣ, ಮಾರಮ್ಮ, ಅಜ್ಜಯ್ಯ, ಕಣಿವೆ ಮಾರಕ್ಕ ದೇವರುಗಳ ಗುಡಿಗಳಿದ್ದು ಯುಗಾದಿಯ ನಂತರದ ದಿನಗಳಲ್ಲಿ ಕಣಿವೆ ಮಾರಕ್ಕನ ದೇವರ ಉತ್ಸವ, ಜಾತ್ರೆ, ಆರತಿ, ಬಾನ, ಮಡೆ ನಡೆಯುತ್ತದೆ. ಬೇಡ ಸಮುದಾಯದವರು ಪರಂಪರಾಗತವಾಗಿ ಗೌಡ ಎಂದು ತಮ್ಮ ಹೆಸರಿನ ಮುಂದೆ ದಾಖಲಿಸುತ್ತಾ ಬಂದಿರುವುದು ಈ ಗ್ರಾಮದ ವಿಶೇಷ. ಲಕ್ಷ್ಮೀರಾಮೇಗೌಡ, ಭಕ್ತರಾಮೇಗೌಡ, ಲಿಂಗೇಗೌಡ ಇತ್ಯಾದಿ ಹೆಸರಿನವರೆಲ್ಲರೂ ಬೇಡ–ನಾಯಕ ಸಮುದಾಯದವರು ಕರೆದುಕೊಳ್ಳುವ ವಿಶೇಷ ನಾಮಸೂಚಿಗಳಾಗಿವೆ.

ಇದೊಂದು ಕಲಾ ಗ್ರಾಮವಾಗಿದ್ದು ೧೮–೧೯ ನೇ ಶತಮಾನದಿಂದಲೂ ಮೂಡಲಪಾಯ ಯಕ್ಷಗಾನದ ಪ್ರಧಾನ ನೆಲೆ. ಈ ಗ್ರಾಮದ ಕಾಲುವೆ ರಂಗಪ್ಪ ಎಂಬ ಶ್ರೀವೈಷ್ಣವ ಜನಾಂಗದ ಭಾಗವತ ಕುಟುಂಬ ಕೂಲಿಮಠದ ಮಾದರಿಯಲ್ಲಿ ಮೂಡಲಪಾಯ ಯಕ್ಷಗಾನ ಭಾಗವಂತಿಕೆ ಕಲಿಕಾ ಕೇಂದ್ರ ಆರಂಭಿಸಿ, ಗುರು–ಶಿಷ್ಯರ ಮಾದರಿಯಲ್ಲಿ ಯಕ್ಷಗಾನದ ಪ್ರಸಂಗಗಳನ್ನು ಬಾಯಿಪಾಠ, ನೃತ್ಯಭಂಗಿ, ತಾಳ, ಮದ್ದಳೆ, ಮುಖವೀಣೆ ಕಲೆಗಳನ್ನು ಕಲಿಸುತ್ತಿದ್ದರು. ಕಲಾ ಪ್ರಸಾರಕ್ಕಾಗಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಶಾಲೆಯೊಂದನ್ನು ತೆರೆದದ್ದು ಈ ಗ್ರಾಮದ ವಿಶೇಷ. ಇಂದ್ರಜಿತ್ ಕಾಳಗ, ಕರಿಭಂಟ, ಲವಕುಶರ ಕಾಳಗ, ದುಶ್ಯಾಸನನ ಕಥೆ, ಸುಂದರಕಾಂಡ ರಾಮಾಯಣ, ಶತಕಂಠ ರಾಮಾಯಣ, ದೇವಿ ಮಹಾತ್ಮೆ, ವಿರಾಟಪರ್ವ ಮೊದಲಾದ ೨೫ ಯಕ್ಷಗಾನ ಪ್ರಸಂಗಗಳನ್ನು ಇಲ್ಲಿಂದ ಕಲಿತ ಲಕ್ಷ್ಮೀರಾಮೇಗೌಡ, ಬಂದಕುಂಟೆ ಗೋಪಾಲಗೌಡ, ಕಣಿಮಣ್ಣ, ತಿಮ್ಮಯ್ಯ, ರಮಾನಂದ, ಕೃಷ್ಣಪ್ಪ ಮೊದಲಾದ ಭಾಗವತರು ಇಂದಿಗೂ ಭಾಗವಂತಿಕೆ ಕಲೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಮುಖವೀಣೆ ಕಲಾವಿದ ಕೃಷ್ಣಪ್ಪ, ಮೃದಂಗ ಭಾಗವಂತಿಕೆ ಕಲಾವಿದ ಕಾಲುವೆ ಮಧುಸೂಧನ ಪ್ರತಿಭಾವಂತ ಕಲಾವಿದರು. ಲಿಂಗೇಗೌಡ, ರಾಮಕ್ಕ, ಲಕ್ಷ್ಮಮ್ಮ, ಚಿಕ್ಕಮ್ಮ, ಮಲ್ಲಿಕಾರ್ಜುನ, ತಿಪ್ಪಯ್ಯ ತತ್ವಪದಕಾರರು ಈ ಗ್ರಾಮದ ವಿಶೇಷವಾಗಿದ್ದಾರೆ.

## ಸ್ವಾರೆಕುಂಟೆ

ಸ್ವಾರೆಕುಂಟೆ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೮ ಕಿಮೀ ದೂರದಲ್ಲಿದ್ದು, ಸಿರಾ–ಹಿರಿಯೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬೂವನಹಳ್ಳಿ ಕ್ರಾಸಿನಿಂದ ಎಡಕ್ಕೆ ತಿರುಗಿ ಬೂವನಹಳ್ಳಿ ಮಾರ್ಗವಾಗಿ ಸ್ವಾರೆಕುಂಟೆಗೆ ಬಸ್ ಸಂಪರ್ಕವಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೨೯.೫೮ ಹೆಕ್ಟೇರ್ ಆಗಿದೆ. ಈ ಗ್ರಾಮದ ಅಧಿದೇವತೆ ಕರಿಯಮ್ಮ ಸ್ವಾರೆ ಅಂದರೆ ಮಡಿಕೆಯಲ್ಲಿ ಉದ್ಭವವಾದ ಕಾರಣ ಸೋರೆಕುಂಟೆ ಎಂಬ ಹೆಸರಾಯಿತೆಂಬ ಸಾಮಾನ್ಯ ಹೇಳಿಕೆಯ ನಡುವೆಯೂ ಇದೊಂದು ಕುಂಬಾರರು ಮಡಿಕೆ ತಯಾರಿಸುವ ಗ್ರಾಮವಾಗಿದ್ದು ದಿನಬಳಕೆಯ ಸ್ವಾರೆ (ಮಡಿಕೆ) ತಯಾರಿಸಿ ಕೊಡುತ್ತಿದ್ದುದರಿಂದ ಮತ್ತು ಪಕ್ಕದಲ್ಲಿಯೇ ಕೆರೆಯೂ ಇರುವುದರಿಂದ ಜೊತೆಗೆ ಇಂದಿಗೂ ೭ ಕುಂಬಾರರ ಕುಟುಂಬಗಳು ಇಲ್ಲಿ ಇಂದಿಗೂ ಇರುವುದರಿಂದ ಸ್ವಾರೆ

ಮೂಲದಿಂದಲೇ ಸ್ವಾರೆಕುಂಟೆ ಎಂದಾಗಿದೆ. ಗ್ರಾಮ ಬೆಳೆದಿದೆ. ತಂಗಡಿ ಎಂಬ ಹೊಸ ಬಡಾವಣೆಯೂ ನಿರ್ಮಾಣವಾಗಿದೆ.

ಮರಳು ಮಿಶ್ರಿತ ಕಂದು ಮಣ್ಣನ್ನು ಹೊಂದಿದ್ದು ಚಿಕ್ಕಸಂದ್ರದ ಕೆರೆಯ ನೀರು ಸೋರೆಕುಂಟೆ ಕೆರೆ, ಬೂವನಹಳ್ಳಿ ಕಟ್ಟೆಯ ನೀರುಗಳ ಉಪಯೋಗ ಈ ಗ್ರಾಮಕ್ಕೆ ಆಗುತ್ತದೆ. ಹಾಗಾಗಿ ಕೆರೆ ಅಂಗಳ, ಗಿಡ-ಮರ, ತೋಟಗಾರಿಕೆ ಅಧಿಕವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಜಿಂಕೆ, ಹಂದಿ, ಉಡ, ಬೆಕ್ಕು, ಮುಂಗುಸಿ, ವಿಷ ಜಂತುಗಳಾದ ಹಾವು ಕಂಡುಬರುತ್ತವೆ.

ಗ್ರಾಮದಲ್ಲಿ ರೈತರು ಹಸು, ಹಳ್ಳಿಕಾರ್ ತಳಿ ಎತ್ತು, ಕುರಿ, ಮೇಕೆ, ಕತ್ತೆ, ನಾಯಿಗಳನ್ನು ಸಾಕಿದ್ದಾರೆ. ಪಕ್ಷಿಗಳಾದ ಗಿಳಿ, ಗೀಜುಗ, ಗರುಡ, ಗೊರವಂಕ, ಗುಬ್ಬಚ್ಚಿ, ಗೂಬೆ, ಗಿಡುಗ, ಕೋಗಿಲೆ, ಕಾಗೆ, ಕೊಕ್ಕರೆ, ಬೆಳವ, ಬಾವಲಿ, ಮರಕುಟಿಕ, ಹದ್ದು ಕಂಡುಬರುತ್ತವೆ. ಕೋಳಿ ಸಾಕುಪಕ್ಷಿಯಾಗಿದೆ.

ರೈತರಿಗೆ ಎರಡು ಕೆರೆಯ ನೀರಿನ ಆಶ್ರಯವಿದ್ದರೂ ಮಳೆಯಿಲ್ಲದೆ ಕೆರೆ ತುಂಬುವುದಿಲ್ಲ. ಕೃಷಿಗಾಗಿ ರೈತರು ೧೦೮ ಕೊಳವೆ ಬಾವಿಯನ್ನು ತೆಗೆಸಿ ಕೃಷಿ ಕಾಯಕದಲ್ಲಿ ನಿರತರಾಗಿದ್ದಾರೆ. ವಾರ್ಷಿಕ ವಾಡಿಕೆ ಮಳೆ ೪೬೦ ಮಿಮೀ ಆಗಿದ್ದು ಉಷ್ಣಾಂಶ ೩೮-೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಸೋರೆಕುಂಟೆ ಕೆರೆಯಿದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಕೆಯಾಗುತ್ತದೆ.

ಸಾಮಾಜಿಕ ರಚನೆಯಲ್ಲಿ ಕಾಡುಗೊಲ್ಲರು ದೊಡ್ಡ ಸಮುದಾಯ. ಬೇಡರು, ಕುಂಚಿಟಿಗರು, ಆದಿದ್ರಾವಿಡ, ಲಿಂಗಾಯಿತರು, ಕುಂಬಾರ, ಬೋವಿ, ಮುಸ್ಲಿಂ, ಆದಿದ್ರಾವಿಡ ಕಿರು ಸಮುದಾಯಗಳಾಗಿವೆ. ಕನ್ನಡ ಮಾತೃಭಾಷೆಯಾಗಿದ್ದು ತೆಲುಗು, ಉರ್ದು ಉಪಭಾಷೆಗಳಾಗಿವೆ. ಗೊಲ್ಲರಹಟ್ಟಿ ಓಣಿ, ಕೆಳಗಲ ಕೇರಿ ಎಂಬ ಎರಡು ಓಣಿಗಳಿವೆ. ದೇವಾಲಯ ಬೀದಿಯೂ ಇದೆ.

ವಿವಿಧ ಪ್ರಕಾರಗಳ ೪೨೮ ಮನೆಗಳಿದ್ದು ೮೪ ಮನೆಗಳಲ್ಲಿ ಆಶ್ರಯ, ಜನತಾ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಫಲಾನುಭವಿಗಳಿದ್ದಾರೆ. ಕಾಡುಗೊಲ್ಲರಿಗಾಗಿ ಕೃಷ್ಣಕುಟೀರ, ಸೂತಕದ ಗೃಹಗಳಿವೆ. ಇಲ್ಲಿನ ಮನೆಗಳು ಕಾಂಕ್ರೀಟ್, ಹೆಂಚಿನ, ಮಣ್ಣಿನ, ಶೀಟಿನ ಮನೆಗಳಿವೆ. ೧೮೩೦ ಜನಸಂಖ್ಯೆ ಹೊಂದಿರುವ ಇಲ್ಲಿನ ೧೫೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಬಂಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳಂಥ ಆಧುನಿಕ ವಾಹನಗಳಿವೆ.

ಶೇಂಗಾ ಮುಖ್ಯಬೆಳೆ. ಆದರೂ ಭತ್ತ, ರಾಗಿ, ಹೆಸರು, ಧನಿಯ, ಮೆಣಸಿನಕಾಯಿ, ಜೋಳ, ಈರುಳ್ಳಿ ಬೆಳೆಯುತ್ತಾರೆ. ಜೊತೆಗೆ ತೋಟಗಾರಿಕೆ ಅಡಿಕೆ, ತೆಂಗು ವಿಶೇಷವಾಗಿದೆ. ಅಡಿಕೆ ಬೆಳೆ ಸುಲಿಯುವ, ಒಣಗಿಸಿ ಮಾರುವ ವಿಶೇಷ ವ್ಯವಸ್ಥೆ ಈ ಗ್ರಾಮದಲ್ಲಿದೆ. ತೆಂಗು, ಹುಣಸೆ, ಹತ್ತಿ, ಸೂರ್ಯಕಾಂತಿ ವಾಣಿಜ್ಯ ಬೆಳೆಗಳು. ಗ್ರಾಮದಲ್ಲಿ ನಂದಿನಿ ಹಾಲಿನ ಡೈರಿಯಿದ್ದು ಸರಾಸರಿ ೩೮೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶಿಕ್ಷಣ, ಸಾರಿಗೆ, ಕಂದಾಯ, ಲೋಕೋಪಯೋಗಿ ಇಲಾಖೆಗೆ ಸೇರಿದ ೨೪ ಜನ ಸರ್ಕಾರಿ ನೌಕರರಿದ್ದಾರೆ. ಪಶುವೈದ್ಯರಾದ ಡಾ॥ ಕೃಷ್ಣಪ್ಪ, ಇಂಜಿನಿಯರ್ ಕರೇಹನುಮೇಗೌಡ ಈ ಗ್ರಾಮದ ಮುಖ್ಯಸ್ಥರಾಗಿದ್ದಾರೆ. ಗ್ರಾಮದಲ್ಲಿ ಬೀಡಿ ಸುತ್ತುವುದು, ಊಟದ ಎಲೆ ತಯಾರಿಕೆ, ಟೈಲರಿಂಗ್ ಮಹಿಳೆಯರ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯ್ತಿ, ಲಕ್ಷ್ಮೀಸಾಗರ ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ೫ ಜನ ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಸಿರಾ-ಬೂವನಹಳ್ಳಿ, ಸೋರೆಕುಂಟೆ, ಬುಕ್ಕಾಪಟ್ಟಣ ಮಾರ್ಗವಾಗಿ ರಸ್ತೆ ಸಂಪರ್ಕವಿದೆ. ಒಂದು ಅಂಚೆ ಕಛೇರಿಯಿದೆ.

೮ ಸ್ತ್ರೀಶಕ್ತಿ ಸಂಘಗಳು, ೩ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಸಹಕಾರಿಯಾಗಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆಗಳಿದ್ದು ಶಾಲೆಯಲ್ಲಿ ೧೪೬ ಮಕ್ಕಲಿದ್ದು ೫ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೫೩.೬ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧೫ ಗೂಡಂಗಡಿಗಳು, ೩ ಟೀ ಅಂಗಡಿಗಳಿವೆ. ೨ ವೀರಗಲ್ಲು, ಅರಳಿಕಟ್ಟೆ, ಆಂಜನೇಯ, ಮಾರಮ್ಮ, ಶ್ರೀರಾಮ, ಅಜ್ಜಯ್ಯನ

ದೇವಾಲಯವಿದೆ. ಸೋರೆಕುಂಟೆ ಕರಿಯಮ್ಮ ಪ್ರಸಿದ್ಧ ದೇವತೆಯಾಗಿದ್ದು ಮುಜರಾಯಿ ಇಲಾಖೆಗೆ ಒಳಪಟ್ಟಿದೆ. ಎರಡು ಸೋಮಗಳಿದ್ದು ಕರಿಯಣ್ಣ, ನರಸಣ್ಣ ಸೊಗಸಾಗಿ ಸೋಮನ ಕುಣಿಸುವ ಕಲಾವಿದರಾಗಿದ್ದಾರೆ. ಈಗ ಕರಿಯಮ್ಮನ ಊರ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಬಲಿ, ಸರಗು ಹಾಕುವುದು, ಆರತಿ, ಬಾನದ ಹರಕೆ ಸಂಪ್ರದಾಯಗಳಿವೆ. ಶನಿದೇವರ ದೇವಾಲಯಗಳು ಹೊರಭಾಗದಲ್ಲಿವೆ.

ಯುಗಾದಿ, ದೀಪಾವಳಿ, ಗೌರಿ, ದಸರಾ, ಶಿವರಾತ್ರಿ ವಿಶೇಷ ಹಬ್ಬಗಳು. ದೀಪಾವಳಿಯನ್ನು ೭ ದಿನಗಳ ಕಾಲ ದೀಪ ಏರಿಸುವ, ದೀಪ ಇಳಿಸುವ, ಹಾಲು ಮೀಸಲು, ಜನ್ನಿಗೆ ಮೀಸಲು ಮೊದಲಾದ ಹರಕೆ ಸಂಪ್ರದಾಯಗಳೊಂದಿಗೆ ಆಚರಿಸುವುದು ಈ ಗ್ರಾಮದ ವಿಶೇಷವಾಗಿದೆ. ಒಂದು ಮಸೀದಿ ಇದೆ. ರಂಜಾನ್, ಬಕ್ರೀದ್, ಬಾಬಯ್ಯನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಭಜನೆ ಕಲಾವಿದರಾದ ಭೈರಪ್ಪ, ಕದುರಪ್ಪ, ಕರಿಯಣ್ಣ, ಸೋಬಾನೆ ಕಲಾವಿದರಾದ ಸಾಕಮ್ಮ, ರಂಗಮ್ಮ ಸ್ಥಳೀಯವಾಗಿ ಹೆಸರು ಮಾಡಿದ್ದಾರೆ. ಗ್ರಾಮದಲ್ಲಿ ೨ ವೀರಗಲ್ಲುಗಳಿದ್ದು ಇವು ವಿಜಯನಗರ ಕಾಲದವುಗಳಾಗಿವೆ.

ನಾಗರಾಜಾಚಾರ್ ಹೆಸರಾಂತ ರಂಗನಿರ್ದೇಶಕರಾಗಿದ್ದು ಸತ್ಯ ಹರಿಶ್ಚಂದ್ರ, ರಾಮಾಯಣ, ಭಕ್ತ ಸುಧನ್ವ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಇವರ ಶಿಷ್ಯ ಹಾಗೂ ರಂಗ ನಿರ್ದೇಶಕರಾದ ಶ್ರೀನಿವಾಸ್, ಪ್ರಸ್ತುತ ಪೌರಾಣಿಕ ನಾಟಕಗಳು ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ಸಿಡಿಯಪ್ಪನಪಾಳ್ಯ

ಪಾಳ್ಯ ಎಂದೇ ಕರೆಯಲ್ಪಡುವ ಸಿಡಿಯಜ್ಜನ, ಸಿಡಿಯಪ್ಪನ ಈ ಪಾಳ್ಯ ಪಟ್ಟನಾಯಕನಹಳ್ಳಿಯ ಜೋಡಿ ಗ್ರಾಮವಾಗಿದ್ದು ಕೂಡಿಕೊಂಡಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೯ ಕಿ.ಮೀ. ದೂರದಲ್ಲಿದ್ದು ಇದು ನಾದೂರು ಮುಖ್ಯ ಗ್ರಾಮದ ಮಜರೆ ಗ್ರಾಮವಾಗಿದೆ. ಕಾಮಗೊಂಡನಹಳ್ಳಿ ಹೊಸದಾಗಿ ಮನೆ ನಿರ್ಮಿಸಿದರು. ಇವರು ಶ್ರೀಮಂತ ಜಮೀನುದಾರರಾಗಿದ್ದು, ಇವರ ಸಂಬಂಧಿಕರಿಗೆ ಉಚಿತವಾಗಿ ನಿರ್ದೇಶನ ಕೊಟ್ಟ ಈ ಕಾರಣದಿಂದ ಗ್ರಾಮ ಬೆಳೆಯಿತು. ಮೊದಲಿಗೆ ಮನೆ ನಿರ್ಮಿಸಿದ ಸಿಡಿಯಪ್ಪನವರ ಹೆಸರನ್ನೇ ದಾಖಲೆಯನ್ನಾಗಿಸಿ ಸಿಡಿಯಪ್ಪನ ಪಾಳ್ಯ ಎಂದು ಕರೆಯಲಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ಮುಖ್ಯ ಗ್ರಾಮ ನಾದೂರಿನೊಂದಿಗೆ ಹಂಚಿಕೆಯಾಗಿದ್ದು ೨೫೪೩.೮೪ ಹೆಕ್ಟೇರ್‌ನೊಂದಿಗೆ ಹಂಚಿಕೆಯಾಗಿದೆ. ಇದರ ಪಕ್ಕದಲ್ಲೇ ಪಟ್ಟನಾಯಕನ ಹಳ್ಳಿ ನಾದೂರು ರಸ್ತೆಯ ಉದ್ದಕ್ಕೂ ಮನೆಗಳು ಬೆಳೆದಿವೆ. ಪೆಟ್ರೋಲ್ ಬಂಕ್, ಪೋಲೀಸ್ ಠಾಣೆ, ಹಾಗೂ ಆಸ್ಪತ್ರೆ ಇದೇ ಬಡಾವಣೆಯ ವ್ಯಾಪ್ತಿಯಲ್ಲಿ ಬರುತ್ತವೆ. ಜೊತೆಗೆ ಓಂಕಾರ ಬಡಾವಣೆ ಎಂಬ ಹೊಸ ನಿವೇಶನ ಮನೆಗಳು ನಿರ್ಮಾಣವಾಗಿ ಪಟ್ಟನಾಯಕನಹಳ್ಳಿ ಸಿಡಿಯಪ್ಪನ ಪಾಳ್ಯ, ಓಂಕಾರೇಶ್ವರ ಬಡಾವಣೆ ಕೂಡಿಕೊಂಡಿವೆ.

ಬಯಲು ಪ್ರದೇಶ, ಈ ಗ್ರಾಮದ ಪೂರ್ವಕ್ಕೆ ಬಯಲು ಪ್ರದೇಶಹಳ್ಳ, ದಿಣ್ಣೆ, ಕುರುಚಲು ಗಿಡ ಪಶ್ಚಿಮಕ್ಕೆ ಕಾಮಗೊಂಡನಹಳ್ಳಿ ಕೆರೆ ಹಾಗಾಗಿ ಈ ಪರಿಸರದಲ್ಲಿ ನರಿ,ಮೊಲ, ಜಿಂಕೆ, ಹಂದಿ, ತೋಳ ಕಂಡು ಬರುತ್ತದೆ.

ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಗಿಳಿ, ಗೊಬೆ, ಗುಬ್ಬಚ್ಚಿ, ಗರುಡ, ಗೊರವಂಕ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳಿವೆ. ನಾಟಿ ಕೋಳಿ, ಗಿರಿರಾಜ ಕೋಳಿ, ಹೇಟೆ, ಹುಂಜನನ್ನು ಸಾಕುತ್ತಾರೆ.

ಬಯಲು ಬಿಸಿಲಿನ ಪ್ರದೇಶ, ಕಳೆದ ಐದು ವರ್ಷಗಳಲ್ಲಿ ಕಡಿಮೆ ಇದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರಿನ ಪೂರೈಕೆಯಾಗುತ್ತಿದೆ. ನಲ್ಲಿ ಸಂಪರ್ಕವಿದೆ. ಕೃಷಿಗಾಗಿ ಉಪ ನೀರಾವರಿ ಸೌಕರ್ಯಕ್ಕಾಗಿ ೩೮ ಕೊಳವೆ ಬಾವಿಗಳಿವೆ. ಉಷ್ಣಾಂಶ ೩೭ ಸೆಂ. ಇದ್ದರೆ ಚಳಿ ಪ್ರಮಾಣ ೧೨ ಸೆಂ. ಇದೆ. ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುರುಬ ಜನಾಂಗ ದೊಡ್ಡ ಸಮುದಾಯವಾಗಿದೆ. ಕ್ಷೌರಿಕರು, ಅಗಸರು, ಬೇಡರು, ಸಾಂಬರು ಕಿರು ಸಮುದಾಯವಾಗಿದೆ. ಕಲ್ಲಿನ, ಕಾಂಕ್ರೀಟ್, ಹೆಂಚಿನ ೧೨೦ ಮನೆಗಳಿವೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದ್ದು, ಉರ್ದು, ತೆಲುಗು ಅಲ್ಪ ಸಂಖ್ಯಾತರ ಭಾಷೆಯಾಗಿದೆ. ೧೦೦ ಮನೆಗಳಲ್ಲಿ ಶೌಚಾಲಯದ ಬಳಕೆ ಇದ್ದು, ವಸತಿ ಯೋಜನೆಯೂ ಆಶ್ರಯ, ಇಂದಿರಾ ಆವಾಸ್ ಹಾಗೂ ಭಾಗ್ಯ ಜ್ಯೋತಿ ವಿದ್ಯುತ್ ಸಂಪರ್ಕದ ಫಲಾನುಭವಿಗಳಿದ್ದಾರೆ. ೨೧೨ ಜನಸಂಖ್ಯೆ ಹೊಂದಿದೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದೆ. ರೊಟ್ಟಿ ಬಳಸುವವರಿದ್ದಾರೆ. ವಿಶೇಷ ಸಂದರ್ಭದಲ್ಲಿ ಬಾಡೂಟ, ಪಾಯಸ, ಹೋಳಿಗೆ ಊಟದ ವ್ಯವಸ್ಥೆ ಇರುತ್ತದೆ. ಸಾಂಪ್ರದಾಯಿಕ ವಾಹನಗಳಾಗಿ ಎತ್ತಿನ ಬಂಡಿಯ ಜೊತೆಗೆ ಟ್ರ್ಯಕ್ಟರ್, ದ್ವಿಚಕ್ರವಾಹನಗಳಾದ ಶೇಂಗಾ ಇಲ್ಲಿನ ಮುಖ್ಯ ಬೆಳೆ. ರಾಗಿ, ಜೋಳ, ಭತ್ತ, ತೊಗರಿ, ಅಲಸಂದಿ ಬೆಳೆಯುತ್ತಾರೆ. ಹತ್ತಿ, ಕರ್ಬೂಜ, ಟಮೋಟ, ಕಲ್ಲಂಗಡಿ ಸೀಡ್ಸ್ ಬೆಳೆಯುತ್ತಾರೆ. ಶೇಂಗಾ, ಹುಣಸೆಹಣ್ಣು, ಕುರಿ ವ್ಯಾಪಾರ ವಾಣಿಜ್ಯ ಸರಕಾಗಿವೆ. ಶಿಕ್ಷಣ, ಕಂದಾಯ, ರಕ್ಷಣೆ, ಅಂಚೆ, ಅಬಕಾರಿ, ಸಾರಿಗೆ, ಸೆಕ್ರೇಟರಿಯಟ್ ಇಲಾಖೆಗೆ ಸೇರಿದ ೬೦ ಜನ ಸರ್ಕಾರಿ ನೌಕರರಿದ್ದಾರೆ. ಸ್ವತಂತ್ರ ವಕೀಲರು, ವೈದ್ಯರೂ ಇಂಜಿನಿಯರ್ ವೃತ್ತಿ ನಿರತರಾಗಿದ್ದಾರೆ. ಹೆಣ್ಣು ಮಕ್ಕಲು, ಬೀಡಿ ಕಟ್ಟುವುದು,

ಹುಣಸೆ ಹಣ್ಣು ಶುದ್ಧೀಕರಿಸುವ, ಹೂ ಕಟ್ಟುವ ಉಪ ಕಸುಬು ಹೊಂದಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನ ಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಪಟ್ಟನಾಯಕನಹಳ್ಳಿಯಿಂದ ಅಂಚೆ ಸಂಪರ್ಕ ಹೊಂದಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಮಲೇರಿಯಾ, ಕ್ಷಯ, ಕೆಮ್ಮು, ಕಫ ಇಲ್ಲಿನ ಸಾಮಾನ್ಯ ರೋಗಗಳು.ಇಲ್ಲಿನ ಕರುಣಾ ಟ್ರಸ್ಟ್ ಆಸ್ಪತ್ರೆ ಹಾಗೂ ಸಿರಾದ ಸಾರ್ವಜನಿಕ ಆಸ್ಪತ್ರೆಯಿಂದ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ತ್ರೀ ಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಹಕಾರಿ ಸಂಘಗಳಿವೆ. ಪ್ರಾಥಮಿಕ ಪಾಠಶಾಲೆ, (ಕಿರಿಯ) ಹಾಗೂ ಅಂಗನವಾಡಿ ಕೇಂದ್ರವಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ. ಶೇ. ೬೪.೮ ರಷ್ಟು ಸಾಕ್ಷರತೆ ಇದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದು, ೨ ಪೆಟ್ಟಿಗೆ ಅಂಗಡಿಗಳಿವೆ.

ನಾಗರಕಲ್ಲು, ಮಾರಮ್ಮನ ಗದ್ದಿಗೆ ಇದೆ. ಪಟ್ಟನಾಯಕನಹಳ್ಳಿ, ಗುರುಗುಂಡಬ್ರಹ್ಮ ನಂಜಪ್ಪನಿಗೆ ಒಕ್ಕಲಾಗಿದ್ದು, ಈ ಭಾಗದಲ್ಲಿ ಪ್ರಕಟವಾಗಿರುವ ಜನಪದ ಗೀತೆಗಳಲ್ಲಿ, ಈ ಗ್ರಾಮದ ಮುಖಂಡರಾದ ಸೋಮೇಶ್ವರಲಿಂಗಣ್ಣ ನವರನ್ನು ಕುರಿತು 'ಸ್ವಾಮೇಲಿಂಗಣ್ಣನವರ ಮಂಗಳ ಮಹಾ ಮಂಗಳ' ಎಂದು ಶೃತಿಯೊಂದಿಗೆ ಮುಕ್ತಾಯವಾಗುತ್ತದೆ. (ಬಂಡಿ ಬಂದಾವೆ ಬಾಳೆ ವನದಾಗೆ ಸಂ. ಚಿಕ್ಕಣ್ಣಯಣ್ಣಕಟ್ಟೆ).

ಗ್ರಾಮದಲ್ಲಿ ದೀಪಾವಳಿ, ಯುಗಾದಿ, ದಸರಾ, ಗೌರಿ ಗಣೇಶ, ಶಿವರಾತ್ರಿ, ರಾಮನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸೋಮೇಶ್ವರ, ಮೈಲಾರಲಿಂಗ, ದೇವರ ವಿಶೇಷ ಆರಾಧನೆಯೂ ಗ್ರಾಮದಲ್ಲಿದೆ. ದುರ್ಗಮ್ಮನ ಆರತಿ, ಬೇಟೆ, ಹರಕೆ ಸಂಪ್ರದಾಯಗಳಿವೆ.

## ಸಿದ್ದನಹಳ್ಳಿ

ಸಿದ್ಧನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೮ ಕಿ.ಮೀ. ದೂರದಲ್ಲಿದೆ. ಸಿರಾ–ಪಟ್ಟನಾಯಕನಹಳ್ಳಿ ಮಾರ್ಗವಾಗಿ ಬಸ್ ಸಂಚಾರವಿದೆ. ಅಲ್ಲದೆ ಸಿರಾ–ಹನುಮನಹಳ್ಳಿ–ವೀರಗಾನಹಳ್ಳಿಯ ಮೂಲಕವೂ ರಸ್ತೆ ಸಂಪರ್ಕವಿದೆ. ಇದು ಕಾಮಗೊಂಡನಹಳ್ಳಿಯ ಮಜರೆ ಗ್ರಾಮವಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ ೧೪೬.೬೬ ಹೆಕ್ಟೇರ್ ಆಗಿದೆ. ಬಯಲು ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದೆ.

ಮರಗಿಡ, ಪೊದೆ, ಹಳ್ಳ ದಿಣ್ಣೆಯ ಈ ಪ್ರದೇಶದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಮುಂಗುಸಿ ಕಂಡು ಬರುತ್ತದೆ. ಹಸು,ಎಮ್ಮೆ, ಕುರಿ, ಕೋಳಿ, ಎತ್ತು, ನಾಯಿಗಳು ಸಾಕು ಪ್ರಾಣಿಗಳಾಗಿವೆ.

ವಾರ್ಷಿಕ ಮಳೆಯ ಸರಾಸರಿ ೫೮೦ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೮ಂ ಸೆಂ. ಇದ್ದು, ಚಳಿಯು ೧೨ಂ ಸೆಂ. ಸಾಮಾನ್ಯವಾಗಿದೆ. ಸಿದ್ದೇನಹಳ್ಳಿಗೆ ಒಂದು ಕೆರೆ ಇದ್ದರೂ ತುಂಬುವುದು ಅಪರೂಪ. ಹಾಗಾಗಿ ಈ ಪರಿಸರದಲ್ಲಿ ೩೮ ಕೊಳವೆ ಬಾವಿಗಳಿದ್ದು, ಕೃಷಿಗೆ ಉಪ ನೀರಾವರಿಯಾಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಆರು ಕಿರು ಟ್ಯಾಂಕ್‌ಗಳಿದ್ದು, ಒಂದು ಕೈ ಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯ ವಾಗಿದೆ. ಆದಿಕರ್ನಾಟಕ, ಕಮ್ಮಾರ, ಕುಂಬಾರ ಕುಟುಂಬಗಳು ಕಿರು ಸಮುದಾಯ ವಾಗಿದೆ. ವಿವಿಧ ಪ್ರಕಾರದ ೧೧೪ ಮನೆಗಳಿದ್ದು, ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಿದ್ದು ಇಲ್ಲಿ ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳೂ ಇದ್ದಾರೆ. ಒಟ್ಟು ೪೨೮ ಜನಸಂಖ್ಯೆ ಹೊಂದಿದ್ದು, ೪೮ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರ. ರಾಗಿ ರೊಟ್ಟಿ, ಅನ್ನ ಬಳಸುವವರಿದ್ದಾರೆ. ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಭೋಜನದ ವ್ಯವಸ್ಥೆ ಇದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳು ಬಳಕೆಯಲ್ಲಿವೆ.

ಶೇಂಗಾ ಗ್ರಾಮದ ಮುಖ್ಯ ಬೆಳೆ. ರಾಗಿ, ಭತ್ತ, ತೊಗರಿ, ಹುರುಳಿ, ಅಲಸಂದಿ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ ಬೆಳೆಯುತ್ತಾರೆ. ಒಂದು ಮಿನಿ ಹಾಲಿನ ಡೈರಿ ಇದ್ದು, ಸರಾಸರಿ ೧೮೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೆಹಣ್ಣು ವ್ಯಾಪಾರಿ ಬೆಳೆಗಳು. ಶಿಕ್ಷಕರು, ಸಾರಿಗೆ, ಕಂದಾಯ ಇಲಾಖೆಯ ೬ ಜನ ಸರ್ಕಾರಿ ನೌಕರರಿದ್ದಾರೆ. ವಕೀಲರೂ ಇದ್ದಾರೆ. ಮಹಿಳೆಯರು ಗೃಹ ಕಸುಬಾಗಿ ಬೀಡಿ ಸುತ್ತುವುದು, ಇಟ್ಟಿಗೆ ಫ್ಯಾಕ್ಟರಿ ಕೆಲಸ ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ, ಹೆಂದೊರೆ ಗ್ರಾಮ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಹೊಂದಿರುವ ಸಿದ್ದನಹಳ್ಳಿ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರು ಈ ಗ್ರಾಮದ ಪ್ರತಿನಿಧಿಗಳಾಗಿದ್ದಾರೆ. ಲೋಕೋಪಯೋಗಿ ಇಲಾಖೆ, ವಿದ್ಯುತ್, ತಾಲ್ಲೂಕು ಕಚೇರಿ, ಸಿರಾ ನಗರಕ್ಕೆ ಬರಬೇಕಾಗಿದೆ.

೩ ಸ್ತ್ರೀ ಸಂಘ, ೪ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು, ಮಹಿಳಾ ಆರ್ಥಿಕ ಸಬಲೀಕರಣದಲ್ಲಿ ತೊಡಗಿಸಿಕೊಂಡಿದೆ. ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಶಾಲೆಯಲ್ಲಿ ೪೭ ಮಕ್ಕಳಿದ್ದು, ಇಬ್ಬರು ಶಿಕ್ಷಕರಿದ್ದಾರೆ. ಶೌಚಾಲಯ, ಕ್ಷೀರಭಾಗ್ಯ, ಬಿಸಿಯೂಟ, ಸಮವಸ್ತ್ರ, ಪುಸ್ತಕಗಳ ಸೌಲಭ್ಯವಿದೆ. ಶೇ. ೭೦ ರಷ್ಟು ಸಾಕ್ಷರಕರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಮೂರು ಅಂಗಡಿಗಳಿವೆ. ಬೇವಿನ ಮರ ಮತ್ತು ಅರಳೀ ಕಟ್ಟೆಯಿದೆ. ತಿಮ್ಮಪ್ಪ, ದುರ್ಗಮ್ಮ ದೇವತೆಗಳಿವೆ. ದುರ್ಗಮ್ಮನ ಊರಹಬ್ಬವಿದ್ದು ಬಾನ, ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಮಹಾನವಮಿ, ಗೌರಿಗಣೇಶ, ಕಾಂತಮ್ಮ ಗೌರಮ್ಮನ ಹಬ್ಬ ಮಾಡುತ್ತಾರೆ. ಗಿರಿಯಪ್ಪನ ಪುಟ್ಟ ಪೌಳಿ ಇದೆ. ಹಾರ್ಮೋನಿಯಂ ಕಲಾವಿದ ಮಾರಣ್ಣ, ಸೋಬಾನೆ ಕಲಾವಿದರಾದ ರಂಗಮ್ಮ, ತಿಮ್ಮಕ್ಕಜ್ಜಿ, ಭಜನೆ ಪದ ಹೇಳುವ ರಾಮಲಿಂಗಯ್ಯ ಸ್ಥಳೀಯವಾಗಿ ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗುರುತಿಸಿಕೊಂಡಿದ್ದಾರೆ.

## ಸೀಗಲಹಳ್ಳಿ

ಸೀಗಲಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ, ಉತ್ತರಕ್ಕೆ ೧೭ ಕಿ.ಮೀ. ದೂರದಲ್ಲಿದೆ. ಸಿರಾ-ಅಮರಾಪುರ ಮುಖ್ಯ ರಸ್ತೆಯಲ್ಲಿ ಪಟ್ಟನಾಯಕನಹಳ್ಳಿ ಕ್ರಾಸ್‌ನಿಂದ ಬಲಭಾಗಕ್ಕೆ ತಿರುಗಿ ೨ ಕಿ.ಮೀ. ನಡೆದರೆ ಸೀಗಲಹಳ್ಳಿ ಸಿಗುತ್ತದೆ. ಇದೊಂದು ನಾದೂರಿನ ಮಜರೆ ಗ್ರಾಮವಾಗಿದ್ದು, ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮ ನಾದೂರಿನೊಂದಿಗೆ ಕೂಡಿಕೊಂಡಿದೆ. (೨೫೪೩.೮೪). ಇದೊಂದು, ಬೆಂಗಾಡು ಆಗಿದ್ದರಿಂದ ಸೀಕಲು-ಸೀಗಲು ಆಗಿದೆ, ಎಂದು ಗ್ರಾಮದ ಹಿರಿಯ ಮಾಜಿ ಗ್ರಾ.ಪಂ. ಅಧ್ಯಕ್ಷ ಕರಿಯಣ್ಣ ಅಭಿಪ್ರಾಯ ಪಡುತ್ತಾರೆ. ಮತ್ತೊಂದು ಮೂಲದ ಪ್ರಕಾರ ಈ ಗ್ರಾಮಕ್ಕೆ ಸೀಳಿಕೊಂಡಂತೆ ಹಲವು ಹಳ್ಳಿಗಳಿದ್ದು, ಆ ಹಳ್ಳಿಗಳಿಗೆ ಪಟ್ಟನಾಯಕನಹಳ್ಳಿ ಕ್ರಾಸ್‌ನಲ್ಲಿ ಬಸ್ ಇಳಿದರೆ ಇದೇ ಗ್ರಾಮದ ಮೂಲಕ ಹಾದು ಹೋಗ ಬೇಕಾದುದರಿಂದ ಸೀಳಿನ ಹಾದಿಯಾಗಿ ಸೀಗಲಹಳ್ಳಿ ಎಂದು ಕರೆದಿದ್ದಾರೆಂದು ಮಂಡಿ ವರ್ತಕ ಸೀನಪ್ಪ ಹೇಳುತ್ತಾರೆ. ಒಟ್ಟಾರೆ ಇದೊಂದು ಮಜರೆ ಗ್ರಾಮವಾಗಿದ್ದು, ೧೩೧ ಮನೆಗಳನ್ನು ಹೊಂದಿದೆ. ೩೭೪ ಜನಸಂಖ್ಯೆ ಹೊಂದಿದೆ.

ಕುಂಚಿಟಿಗ, ಆದಿಕರ್ನಾಟಕ, ಮತ್ತು ಕಾಡುಗೊಲ್ಲರು ಮೂರು ಜನಾಂಗ ಒಂದೇ ಕಡೆ ವಾಸಿಸುವುದು ಇಲ್ಲಿನ ವಿಶೇಷ. ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ. ಉಳಿದೆರಡು ಜನಾಂಗಗಳು ಸಣ್ಣ ಸಮುದಾಯವಾಗಿದೆ. ಮರಳು ಮಿಶ್ರಿತ ಕೆಂಪು ನೆಲ ಇಲ್ಲಿನ ವಿಶೇಷ. ಹಾಗಾಗಿ ಶೇಂಗಾ, ಹತ್ತಿ, ಭತ್ತ, ಅಲಸಂದಿ, ತೊಗರಿ ಬೇಳೆಯನ್ನು ಹೆಚ್ಚು ಬೆಳೆಯುತ್ತಾರೆ. ಇಲ್ಲದಿದ್ದರೆ ರಾಗಿ ಬೆಳೆ ಇಲ್ಲಿ ಮುಖ್ಯವಾಗುತ್ತದೆ. ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗಾಗಿ, ನಾಟಿ ಹಸು, ಎಮ್ಮೆ, ಸೀಮೆ ಹಸುಗಳನ್ನು ಸಾಕಿದ್ದಾರೆ. ಗೊಲ್ಲರು ಕುರಿ, ಮೇಕೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಕಿದ್ದಾರೆ. ಈ ಗ್ರಾಮದ ಪರಿಸರದಲ್ಲಿ ಜಿಂಕೆ, ಮೊಲ, ನರಿ, ತೋಳ ಕಂಡು ಬರುವ ಕಾಡು ಪ್ರಾಣಿಗಳು. ಅಂತೆಯೇ ಗಿಳಿ, ಕೋಗಿಲೆ, ಗೊರವಂಕ, ನವಿಲು, ಮೊದಲಾದ ಪಕ್ಷಿಗಳೂ ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೬೫ ಮಿ.ಮೀ. ಆಗಿದ್ದು, ಚಳಿ ೧೨೦ ಸೆಂ. ಇರುತ್ತದೆ. ಅದರಂತೆ ಉಷ್ಣಾಂಶವೂ ೩೭೦ ಸೆಂ. ಇರುತ್ತದೆ. ಕುಡಿಯುವ ನೀರಿಗೆ ೩ ಕೈ ಪಂಪು, ೨ ಸಿಸ್ಟನ್‌ಗಳ ಮೂಲಕ ನೀರು ಸರಬರಾಜನ್ನು ಗ್ರಾಮ ಪಂಚಾಯಿತಿ ಇಲಾಖೆಯವರು ಏರ್ಪಡಿಸಿದರುತ್ತಾರೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಮಂಗಳೂರು ಹೆಂಚಿನ ಮನೆಗಳಿದ್ದು, ಗ್ರಾಮದಲ್ಲಿ ೧೫ ಕುಟುಂಬಗಳು ಶೌಚಾಲಯ ಬಳಕೆ ಮಾಡುತ್ತಿವೆ. ಉಳಿದವರು ಬಯಲು ಶೌಚಾಲಯದ ಆಶ್ರಯ ಪಡೆದಿದ್ದಾರೆ.

ರಾಗಿ ಮುದ್ದೆ, ಮುಖ್ಯ ಆಹಾರವಾಗಿದ್ದು, ರೊಟ್ಟಿ, ಉಪ ಆಹಾರವಾಗಿದೆ. ಅದರಂತೆ ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹಾಗೂ ಹೋಳಿಗೆ ಊಟ ಇರುತ್ತದೆ. ಶೇಂಗಾ ಈ ಗ್ರಾಮದ ಮುಖ್ಯ ಬೆಳೆ. ಉಳಿದಂತೆ ತೆಂಗು, ಅಡಿಕೆ, ಹತ್ತಿ, ಹುಣಸೆ ಹಣ್ಣು, ಕುರಿ ವ್ಯಾಪಾರವೂ ಇದೆ. ಶಿಕ್ಷಕರು, ಇಂಜಿನಿಯರ್ ಸೇರಿದಂತೆ ೪ ಜನ ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದು, ಅಂಗನವಾಡಿ ಕೇಂದ್ರ ಸರ್ಕಾರಿ ಹಿರಿಯ ಪಾಠಶಾಲೆಗಳಿವೆ. ಊಟದ ಎಲೆ, ಬೀಡಿಕಟ್ಟುವುದು, ಟೈಲರಿಂಗ್ ಕೆಲಸ ಉಪ ಕಸುಬಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ, ನಾದೂರು ಗ್ರಾಮ ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯತ್ ಕೇಂದ್ರ ಹಾಗೂ ಹೆಂದೊರೆ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ೪ ಸ್ತ್ರೀ ಶಕ್ತಿ ಕೇಂದ್ರಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ತಂಡಗಳು ಇದ್ದು ಗ್ರಾಮದಲ್ಲಿ ಶೇ. ೬೮.೬ ರಷ್ಟು ಸಾಕ್ಷರವಂತರಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ವೃದ್ಧಾಪ್ಯ ವೇತನ, ಅಂಗವಿಕಲ, ವಿಧವಾ ವೇತನ ಸೌಲಭ್ಯ ಪಡೆದವರ ಜೊತೆಗೆ ಯಕ್ಷಗಾನ ಭಾಗವತ ಸೀಗಲಹಳ್ಳಿ ಕರಿಯಣ್ಣ ಕಲಾವಿದರ ಮಾಸಾಶನ ಪಡೆಯುತ್ತಿದ್ದಾರೆ. ಇವರು ಪ್ರತಿಭಾವಂತ ಯಕ್ಷಗಾನ ಭಾಗವತರೂ ಹೌದು. ಆರು ಅಂಗಡಿಗಳು, ೨ ಟೀ ಅಂಗಡಿಗಳಿವೆ. ಗ್ರಾಮದಲ್ಲಿ ಮಾರಮ್ಮ ದೇವರ ಗದ್ದಿಗೆ ಇದ್ದು, ಯುಗಾದಿ ಆದ ನಂತರ ಗ್ರಾಮದ ಹಬ್ಬ ಮಾಡುತ್ತಾರೆ. ಆ ಕಾಲದಲ್ಲಿ ಆರತಿ, ಬಾನ, ಹಾಗೂ ಬ್ಯಾಟೆ ಇರುತ್ತದೆ. ಪ್ರತಿ ವರ್ಷ ದೇವಿ ಮಹಾತ್ಮೆ ಯಕ್ಷಗಾನ ಪ್ರದರ್ಶನ ಈ ಗ್ರಾಮದ ವಿಶೇಷವಾಗಿದೆ.

## ಸಿದ್ದಾಪುರ

ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೯ ಕಿ.ಮೀ. ದೂರದ ಸಿದ್ದಾಪುರ ಗ್ರಾಮ ಪಂಚಾಯಿತಿ ಕೇಂದ್ರ ಬೇವಿನಹಳ್ಳಿಗೆ ದಕ್ಷಿಣ ಮುಖವಾಗಿ ಎರಡು ಕಿ.ಮೀ. ದೂರದಲ್ಲಿದೆ. ಕುಂಚಿಟಿಗ ಜನಾಂಗದವರೇ ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ಕಾಡು ಗೊಲ್ಲರು, ಕುರುಬರು, ಮಡಿವಾಲ ಈ ಜನಾಂಗಗಳ ಕುಟುಂಬ ಚಿಕ್ಕ ಸಮುದಾಯವಾಗಿದೆ. ಸಿದ್ಧಾಪುರ ಜುಂಜಪ್ಪನ ಗುಡ್ಡೆ ಸಿದ್ದಾಪುರ ಎಂದೇ ಹೆಸರುವಾಸಿಯಾಗಿದೆ. ಈ ಗ್ರಾಮದ ಹಿರಿಕ ಜುಂಜೇಗೌಡರು ಸಿರಾ ತಾಲ್ಲೂಕಿನ ಪ್ರಭಾವಿ ನಾಯಕನಾಗಿದ್ದು, ಕಟ್ಟೆ ನ್ಯಾಯಾಧೀಕರಣಕ್ಕೆ ಇವರು ಹೆಸರು ವಾಸಿಯಾಗಿದ್ದರು. ತುಂಬಾ ಸಂಭಾವಿತ ವ್ಯಕ್ತಿಯಾಗಿ ಸರ್ವ ಜನಾಂಗದ ಪ್ರೀತಿ ಆದರಕ್ಕೆ ಪಾತ್ರರಾಗಿದ್ದು, ತೊಂಭತ್ತು ಮೂರನೇ ವಯಸ್ಸಿನಲ್ಲಿ ತೀರಿಕೊಂಡರು. (೨೦೦೧). ಸಿದ್ಧಾಪುರ ಒಂದು ಕಂದಾಯ ಗ್ರಾಮವಾಗಿದ್ದು, ೩೭೦ ಹೆಕ್ಟೇರ್ ಭೂ ವಿಸ್ತೀರ್ಣವನ್ನು ಹೊಂದಿದೆ. ವ್ಯಕ್ತಿ ಮೂಲದಿಂದ ಸಿದ್ದಾಪುರ ನಿರ್ಮಾಣವಾಗಿದ್ದು, ಇದು ಸಾದು ಸಿದ್ಧರ ಊರಾಗಿತ್ತೆಂದು ಜುಂಜೇಗೌಡರ ಮೊಮ್ಮಗಳು ನವ್ಯ ಹೇಳುತ್ತಾರೆ. ಇಲ್ಲಿಂದ ನಾಲ್ಕು ಕಿ.ಮೀ. ದೂರದಲ್ಲಿ ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪನ ಸಮಾಧಿ ಇದೆ. ಇದನ್ನು ದೇವಾಲಯದ ಮಾದರಿಯಲ್ಲಿ ಪೂಜಿಸುವುದು ಸಿರಾ ತಾಲ್ಲೂಕಿನಲ್ಲಿ ವಾಡಿಕೆಯಾಗಿದೆ.

ಕೆಂಪು, ಬಿಳಿ, ಮರಳು ಮಿಶ್ರಿತ ಕಪ್ಪು ಉದುರು ಬಣ್ಣದ ಇಲ್ಲಿನ ಮಣ್ಣು, ಶೇಂಗಾ ಬೆಳೆ, ಹತ್ತಿ ಬೆಳೆಗೆ ಫಲವತ್ತಾದ ಜಾಗ. ಗ್ರಾಮದಲ್ಲಿ ೪೬೫ ಮಿ.ಮೀ. ಮಳೆಯಾಗುತ್ತಿದ್ದು, ೩೬.೪೦ ಸೆಂ. ಉಷ್ಣಣದ ಪ್ರಮಾಣವಿದೆ. ೨೦ ರಷ್ಟು ಚಳಿಯೂ ಕಂಡು ಬರುತ್ತದೆ. ನೈಸರ್ಗಿಕ ಮಳೆಯ ನೀರನ್ನೇ ಆಶ್ರಯಿಸಿದ್ದಾರೆ. ಕುಡಿಯುವುದಕ್ಕೆ ಎರಡು ಕೈ ಪಂಪುಗಳು. ಒಂದು ಮಿನಿ ಟ್ಯಾಂಕ್ ಹೊಂದಿದೆ.

ಆದಿ ಕರ್ನಾಟಕ, ಕಾಡುಗೊಲ್ಲರು ಪ್ರತ್ಯೇಕ ಬೀದಿಗಳಲ್ಲಿ ವಾಸಿಸುತ್ತಿದ್ದು, ಕುರುಬರು, ಕುಂಚಿಟಿಗರು, ಮಡಿವಾಳರು ಒಂದೇ ಕೇರಿಯಲ್ಲಿ ವಾಸಿಸುತ್ತಿದ್ದಾರೆ. ಕನ್ನಡ ಭಾಷೆಯ ಹೊರತಾಗಿ ಬೇರೆ ಭಾಷಾ ಸಂಪರ್ಕವಿಲ್ಲದ ಗ್ರಾಮ. ೧೨೪ ಮನೆಗಳಿದ್ದು, ೬೧೩ ಜನ ಸಂಖ್ಯೆಯನ್ನು ಹೊಂದಿದೆ. ಇವುಗಳಲ್ಲಿ ಕಾಂಕ್ರೀಟ್, ಹಾಸು ಬಂಡೆಯ ಕಲ್ಲಿನ, ಹಾಗೂ ಮಣ್ಣಿನ ಮಾಳಿಗೆ ಮನೆಗಳಿವೆ. ರಸ್ತೆ ಬದಿಗೆ ೪ ಗುಡಿಸಲುಗಳ ಮನೆಗಳಿದ್ದು, ಇವರು ವಸತಿ ರಹಿತರಾಗಿದ್ದಾರೆ.

ರಾಗಿ ಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು, ದೋಸೆ, ಚಿತ್ರಾನ್ನ, ಉಪ್ಪಿಟ್ಟು ಬಳಸುವವರಿದ್ದಾರೆ ವಿಶೇಷ ಸಂದರ್ಭದಲ್ಲಿ ಬಾಡೂಟದ ವ್ಯವಸ್ಥೆಯೂ ಇದೆ. ಕುಂಚಿಟಿಗ ಜನಾಂಗದ ಅಳುವಿನೋರು ಅಧಿಕ ಸಂಖ್ಯೆಯ ಲ್ಲಿದ್ದು, ಸೋಮವಾರವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸುತ್ತಾರೆ. ಅಂದು ಜುಂಜಪ್ಪನ ವಾರವಾಗಿ, ಮಾಂಸಾಹಾರ ನಿಷಿದ್ಧವಾಗಿರುತ್ತದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಬಂಡಿಗಳ ಮೂಲಕ ಕೃಷಿ ಕಾರ್ಯ ನಿರ್ವಹಣೆ ಮಾಡುತ್ತಿದ್ದರೂ ಗ್ರಾಮದಲ್ಲಿ ಆರು ಟ್ರ್ಯಕ್ಟರ್, ಟೆಂಪೋ, ಹಾಗೂ ಹನ್ನೆರಡು ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಶೇಂಗಾ ಈ ಗ್ರಾಮದ ಮುಖ್ಯ ಬೆಳೆ. ರಾಗಿ, ಜೋಳ, ನವಣೆ, ಸೂರ್ಯಕಾಂತಿ, ಹತ್ತಿ, ತೊಗರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಹುಣಸೆ ಹಣ್ಣಿನ ವ್ಯಾಪಾರವೂ ಇಲ್ಲಿದೆ. ಶೇಂಗಾವನ್ನು ಆರ್ಥಿಕ ಬೆಳೆಯನ್ನಾಗಿ ಬೆಳೆಯಲಾಗುವುದು.

ಚಿತ್ರದುರ್ಗ ಲೋಕಸಭಾ ಕ್ಷೇತ್ರ, ಸಿರಾ ವಿಧಾನಸಭಾ ಕ್ಷೇತ್ರಕ್ಕೂ ಸೇರ್ಪಡೆಯಾಗಿರುವ ಈ ಗ್ರಾಮ. ಬೇವಿನಹಳ್ಳಿ ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ. ತಾಲ್ಲೂಕು ಪಂಚಾಯಿತಿಯೂ ಬೇವಿನಹಳ್ಳಿಯಾಗಿದ್ದು, ಜಿಲ್ಲಾ ಪಂಚಾಯಿತಿ, ತಾವರೆಕೆರೆಯಾಗಿದೆ. ಶಿಕ್ಷಣ, ಮಹಾನಗರ ಪಾಲಿಕೆ, ಸಾರಿಗೆ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ.

ಒಂದು ಅಂಗನವಾಡಿ ಕೇಂದ್ರ, ಒಂದು ಪ್ರಾಥಮಿಕ ಕಿರಿಯ ಪಾಠಶಾಲೆ, ಈ ಗ್ರಾಮದಲ್ಲಿದ್ದು ಒಟ್ಟು ೬ ಜನ ನೌಕರರಿದ್ದಾರೆ.

ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನದ ಫಲಾನುಭವಿಗಳು ಇದ್ದು, ಶಾಲೆಯಲ್ಲಿ ಶೌಚಾಲಯ, ಬಿಸಿಯೂಟ, ಕ್ಷೀರಭಾಗ್ಯ, ಕುಡಿಯುವ ನೀರಿನ ಟ್ಯಾಂಕ್ ಹೊಂದಿದೆ. ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ ೩೦ ಮನೆಗಳು ವಿದ್ಯುತ್ ಸಂಪರ್ಕ ಪಡೆದಿವೆ. ಜನತಾ ಮನೆಗಳು, ಇಂದಿರಾ ಆವಾಸ್ ಮನೆಗಳು ಇವೆ. ಈ ಗ್ರಾಮ ಶೌಚಾಲಯ ಹೊಂದಿರುವುದಿಲ್ಲ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಬೇವಿನ ಹಳ್ಳಿಯಿಂದ ಹಿರಿಯೂರು, ಇಕ್ಕನೂರು ಮಾರ್ಗವಾಗಿ ಜಿಲ್ಲಾ ಪಂಚಾಯಿತಿ ಮುಖ್ಯ ರಸ್ತೆ ಹಾದು ಹೋಗಿದ್ದು, ವಾಹನಗಳು ಓಡಾಡುತ್ತಾ ಸಾರಿಗೆ ಸಂಪರ್ಕ ಹೊಂದಿದೆ. ಗ್ರಾಮದ ಹೊರಭಾಗದಲ್ಲಿ ಶನಿದೇವರ ದೇವಸ್ಥಾನವಿದ್ದು, ಗ್ರಾಮದ ಒಳಗೆ ಮುತ್ತರಾಯ ಸ್ವಾಮಿ ಹಾಗೂ ಕೊಲ್ಲಾಪುರದಮ್ಮ ದೇವಸ್ಥಾನವಿದೆ. ಕೊಲ್ಲಾಪುರದಮ್ಮ ಊರಹಬ್ಬ ವಿಶೇಷವಾಗಿ ನಡೆಯುತ್ತಿದ್ದು, ಬ್ಯಾಟೆ, ಆರತಿ, ಮಡೆ ಪೂಜೆ ನಡೆಯುತ್ತದೆ. ಯುಗಾದಿ, ದೀಪಾವಳಿ ಈ ಗ್ರಾಮದ ವಿಶೇಷ ಹಬ್ಬಗಳು. ಶಿವರಾತ್ರಿ, ರಾಮನವಮಿ, ಹಬ್ಬಗಳ ಆಚರಣೆಯೂ ಇದೆ.

## ಸಂಕಾಪುರ

ಸಂಕಾಪುರ–ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೦ ಕಿ.ಮೀ ದೂರದಲ್ಲಿದೆ. ಸಿರಾ–ಬೇವಿನಹಳ್ಳಿ, ಸಿದ್ದಾಪುರ ಮಾರ್ಗದಲ್ಲಿ, ಸಿರಾ –ಬೇವಿನಹಳ್ಳಿ–ಸಿದ್ದಾಪುರ ಮಾರ್ಗದಲ್ಲಿ ಸಿರಾ–ಹಿರಿಯೂರು ಗಡಿಗೆ (ಕುರುಬರಹಳ್ಳಿ) ಸೇರಿಕೊಂಡಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೪೯.೧೮ ಹೆಕ್ಟೇರ್ ಆಗಿದ್ದು, ಬಯಲು ಪ್ರದೇಶವಾಗಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ಶೇಂಗಾ ಬೆಳೆಗೆ ಉತ್ಕೃಷ್ಟವಾಗಿದೆ.

ಶಂಕರಪುರ ಎಂಬುದು ಶಂಕರ ಪುರ ಎಂದಾಗಿದೆ ಎಂದು ಗ್ರಾಮದ ಮಹಾಲಕ್ಷ್ಮಮ್ಮ ವ್ಯಾಖ್ಯಾನಿಸುತ್ತಾರೆ.

ಸಂಕಾಪುರ ಬಯಲು ದಿಣ್ಣೆ, ಕುರುಚಲು ಗಿಡ, ಪೊದೆಗಳಿಂದ ಕೂಡಿದ್ದು, ಈ ಪರಿಸರದಲ್ಲಿ ಕಾಡು ಪ್ರಾಣಿಯಾದ ನರಿ, ಮೊಲ, ಜಿಂಕೆ, ಕಾಡು ಹಂದಿ, ತೋಳ ಕಂಡು ಬಂದರೆ ಗ್ರಾಮದಲ್ಲಿ ರೈತರು ಹಸು, ಕುರಿ, ಎಮ್ಮೆ, ಕೋಳಿಯನ್ನು ಸಾಕಾ ಪ್ರಾಣಿಗಳಾದಿ ಸಾಕುತ್ತಾರೆ. ಈ ಪರಿಸರದಲ್ಲಿ ಕಾಡು ಪಕ್ಷಿಗಳಾಗಿ ಗಿಳಿ, ನವಿಲು, ಗೊರವಂಕ, ಹದ್ದು, ಗಿಡುಗ, ಕಾಗೆ, ಕೋಗಿಲೆ, ಗರುಡ, ಗುಬ್ಬಚ್ಚಿ ಕಂಡು ಬರುತ್ತವೆ.

ವಾರ್ಷಿಕ ಮಳೆ ಕಲೆಧ ೫ ವರ್ಷಗಳಲ್ಲಿ ತೀರಾ ಕಡಿಮೆಯಾಗಿದೆ. ೪೬೫ ಮಿ.ಮೀ. ಮಳೆ ಬಿದ್ದಿದ್ದು, ರೈತಾಪಿ ಜನರು ಪರಿತಪಿಸುವಂತಿದೆ. ಹಾಗಾಗಿ ಈ ಪರಿಸರದಲ್ಲಿ ೧೪ ಕೊಳವೆ ಬಾವಿಗಳ ಮೂಲಕ ಉಪ ನೀರಾವರಿಯನ್ನಾಗಿಸಿಕೊಂಡಿದ್ದಾರೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಒದಗಿಸಲಾಗುತ್ತಿದ್ದು, ೨ ಕಿರು ಟ್ಯಾಂಕ್‌ಗಳಿವೆ. ಒಂದು ಕೈ ಪಂಪು ಇದೆ. ಇಲ್ಲಿನ ಬಿಸಿಲಿನ ತಾಪ ೩೧೨ ಸೆಂ. ಇದ್ದು, ಚಳಿ ೧೨ ಸೆಂ. ಸಹಜವಾಗಿರುತ್ತದೆ. ಒಂದು ಕಟ್ಟೆ ಇದ್ದು, ಮಳೆ ಇಲ್ಲದೆ ತುಂಬುವುದು ಅಪರೂಪವಾಗಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯ ವಾಗಿದ್ದು ಕನ್ನಡ ಗ್ರಾಮದ ಮಾತೃಭಾಷೆಯಾಗಿದೆ.

ವಿವಿಧ ಪ್ರಕಾರಗಳ ೬೭ ಮನೆಗಳಿದ್ದು, ಅವು ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದಲ್ಲಿದೆ. ಇವು ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್ ಹಾಗೂ ಭಾಗ್ಯಜ್ಯೋತಿ, ವಿದ್ಯುತ್ ಯೋಜನೆಯ ಫಲಾನುಭವಿ ಗಳಿದ್ದಾರೆ. ಒಟ್ಟು ೩೭೩ ಜನಸಂಖ್ಯೆ ಹೊಂದಿದ್ದು, ಇಲ್ಲಿನ ೧೭ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ ಸಾಂದರ್ಭಿಕವಾಗಿ ಬಾಡೂಟ, ಪಾಯಸ ಮತ್ತು ಹೋಳಿಗೆ ಭೋಜನದ ವ್ಯವಸ್ಥೆ ಇರುತ್ತದೆ.

ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿಯೊಂದಿಗೆ, ಟ್ರ್ಯಾಕ್ಟರ್, ಹಾಗೂ ದ್ವಿಚಕ್ರ ವಾಹನಗಳು ಬಳಕೆಯಿದೆ. ಶೇಂಗಾ ಇಲ್ಲಿನ ಮುಖ್ಯ ಬೆಳೆಯಾಗಿದ್ದು, ಹುರುಳಿ, ರಾಗಿ, ಜೋಳ, ಸಜ್ಜೆ, ನವಣೆ, ಆರಕ ಬೆಳೆಯುತ್ತಾರೆ. ತೋಟಗಾರಿಕೆಯಾಗಿ ತೆಂಗು, ಅಡಿಕೆ ಇದ್ದು, ಹುಣಸೆಹಣ್ಣು , ಹೊಂಗೆ ಬೀಜ, ಹೂವು ಕಟ್ಟುವುದು ವ್ಯಾಪಾರಿ ಸರಕುಗಳಾಗಿವೆ.

ಶಿಕ್ಷಕರು ಸಾರಿಗೆ, ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ. ಹೆಂಗಸರು, ಹುಣಸೆಹಣ್ಣು ಬಿಡಿಸುವ, ಹೂ ಕಟ್ಟುವುದು, ಬೀಡಿ ಕಟ್ಟುವುದು ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ತಾವರೆಕೆರೆ ಜಿಲ್ಲಾ ಪಂಚಾಯಿತಿ, ಬೇವಿನಹಳ್ಳಿ ತಾಲ್ಲೂಕು, ಹೊಸೂರು ಗ್ರಾಮ ಪಂಚಾಯಿತಿ ಕೇಂದ್ರಗಳಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಬೇವಿನಹಳ್ಳಿಯಿಂದ ಅಂಚೆ ಬಡವಾಟೆಯಾಗುತ್ತದೆ. ಗ್ರಾಮದಲ್ಲಿ ೨ ಸ್ತ್ರೀ ಶಕ್ತಿ,

ಸ್ವಸಹಾಯ ಸಂಘ, ೨ ಧರ್ಮಸ್ಥಲ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರು ಆರ್ಥಿಕ ಸಬಲತೆಗೆ ಕಾರಣವಾಗಿದೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದೆ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ, ಶೌಚಾಲಯದ ಸೌಲಭ್ಯಗಳಿವೆ. ಶೈಕ್ಷಣಿಕ ಪ್ರಮಾಣ ೫೩.೬ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಕಣಿವೆ ಮಾರಕ್ಕನ ಪೌಳಿ, ಶಿವನಗುಡಿ ಇದ್ದು, ಅರಳೀಕಟ್ಟೆ, ಕರುಗಲ್ಲು ಇದೆ. ಕಣಿವೆ ಮಾರಕ್ಕನ ಊರಹಬ್ಬ ಆಚರಿಸಿ, ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಉಳಿದಂತೆ ದೀಪಾವಳಿ, ಯುಗಾದಿ, ಶಿವರಾತ್ರಿ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

### ಸಲುಪರಹಳ್ಳಿ

ಸಲುಪರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೮ ಕಿಮೀ ದೂರದಲ್ಲಿದೆ. ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮಸಾಗರ ಗೇಟಿನಿಂದ ಎಡಗಡೆಗೆ ೩ ಕಿಮೀ ದೂರದಲ್ಲಿ ಸಲುಪರಹಳ್ಳಿ ಇದೆ. ಇದೊಂದು ತುಮಕೂರು–ಸಿರಾ ತಾಲ್ಲೂಕುಗಳ ಗಡಿ ಗ್ರಾಮವೂ ಹೌದು. ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೧೮೨.೫೦ ಹೆಕ್ಟೇರ್ ಆಗಿದೆ. ಉತ್ತರಕ್ಕೆ ಗುಡ್ಡಗಾಡು, ದಕ್ಷಿಣಕ್ಕೆ ಕೆರೆ ಹಳ್ಳಗಳಿಂದ ಕೂಡಿರುವ ಈ ಗ್ರಾಮದ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಕರಿಗಲ್ಲು ಮಿಶ್ರಿತ ಬಿಳಿಮಣ್ಣು ಹೊಂದಿದ್ದು ರಾಗಿ ಬೆಳೆಗೆ ಉಪಯುಕ್ತವಾಗಿದೆ. ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಸಾಕಾಗುವುದಿಲ್ಲ. ಉಷ್ಣಾಂಶ ಅಧಿಕ – ೩೬ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಸಲುಪ ಎಂಬುದು ಜನಾಂಗಿಕ ಮೂಲವಾಗಿ ಸರ್ಪಒಕ್ಕಲಿಗ ಪದವಾಗಿದೆ. ಸರ್ಪ > ಸಲುಪವಾಗಿ – ಸಲುಪರಹಳ್ಳಿ ಆಗಿದೆ. ವಾಸ್ತವವಾಗಿ ಇಂದು ಒಂದು ಕುಟುಂಬವೂ ಈ ಜನಾಂಗದವರಿಲ್ಲ. ಬೇಡ ಜನಾಂಗ ಗ್ರಾಮದಲ್ಲಿದೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ಗಂಗಾಕಲ್ಯಾಣ ಯೋಜನೆಯಡಿ ೪೦ ಕೊಳವೆ ಬಾವಿಗಳಿದ್ದು ಕೃಷಿ ಕೆಲಸಕ್ಕೆ ಬಳಕೆಯಾಗುತ್ತಿದೆ. ಗ್ರಾಮದಲ್ಲಿ ೪ ಕಿರುಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಬೇಡನಾಯಕ ಜನಾಂಗ ಈ ಗ್ರಾಮದ ಪೂರ್ಣ ಸಮುದಾಯವಾಗಿದ್ದು ಕನ್ನಡ ಮನೆಮಾತಾಗಿದೆ. ವಿವಿಧ ಪ್ರಕಾರದ ೧೪೯ ಮನೆಗಳಿದ್ದು ಅವು ಕಲ್ಲಿನ, ಹೆಂಚಿನ, ಶೀಟಿನ, ಮಣ್ಣಿನ ಮನೆಗಳಾಗಿವೆ. ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೧೯ ಫಲಾನುಭವಿಗಳಿದ್ದಾರೆ. ೫೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದ್ದು ಗ್ರಾಮಪಂಚಾಯ್ತಿ ಸಹಭಾಗಿತ್ವ ಪಡೆದಿದೆ. ೭೧೪ ಜನಸಂಖ್ಯೆ ಇದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ, ರಾಗಿ ಸಮಾನ ಬೆಳೆಗಳು. ಸೂರ್ಯಕಾಂತಿ, ಅವರೆ, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಗಳಾದ ಕೋಸು, ಹೂವು, ಹಣ್ಣು, ತರಕಾರಿ ಬೆಳೆದು ತುಮಕೂರು ಮಾರುಕಟ್ಟೆಗೆ ಸಾಗಿಸಲಾಗುತ್ತದೆ. ಶಿಕ್ಷಕರು, ಸಾರಿಗೆ, ಆರೋಗ್ಯ ಇಲಾಖೆಗೆ ಸೇರಿದ ೯ ಜನ ನೌಕರರಿದ್ದಾರೆ. ಮಹಿಳೆಯರ ಹೂ ಕಟ್ಟುವ, ಬೀಡಿ ಸುತ್ತುವ ಗೃಹ ಕೈಗಾರಿಕೆ ನೋಡಿಕೊಳ್ಳುತ್ತಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ ಹಾಗೂ ಸೀಬಿ ತಾಲ್ಲೂಕು ಮತ್ತು ಚಿನ್ನೇನಹಳ್ಳಿ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ೪ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿವೆ.

ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಶಾಲೆಯಲ್ಲಿ ೪೩ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೧.೩% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ

ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಗೂಡಂಗಡಿಗಳಿವೆ. ಗ್ರಾಮದಲ್ಲಿ ಶ್ರೀ ಚಿಕ್ಕಣ್ಣಸ್ವಾಮಿ ಪ್ರಾಚೀನ ದೇವರಾಗಿದ್ದು ದಸರಾ ಸಂದರ್ಭದಲ್ಲಿ ಉತ್ಸವ ಏರ್ಪಡುತ್ತದೆ. ಗಣಪತಿಯ ಪುಟ್ಟಗುಡಿಯಿದೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಮಹಾನವಮಿ, ಗೌರಿ–ಗಣೇಶ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಸಿರಾ–ತುಮಕೂರಿಗೆ ಹೆಚ್ಚಿನ ಶಿಕ್ಷಣಕ್ಕೆ ಬಂದು ಹೋಗುತ್ತಿದ್ದಾರೆ. ನಾರಾಯಣಪ್ಪ ನಾಟಿ ವೈದ್ಯರಾಗಿದ್ದಾರೆ. ಪಶು ಸಂಬಂಧಿ ಖಾಯಿಲೆಗಳಿಗೆ ಚಿಕಿತ್ಸೆ ನೀಡುತ್ತಾರೆ.

## ಸಿರಾದಡ

ಸಿರಾದಡ ಗ್ರಾಮವು ಸಿರಾ ತಾಲ್ಲೂಕಿನ ಕಳ್ಳಂಬೆಳ್ಳ ಹೋಬಳಿಗೆ ಸೇರಿದ ಕಂದಾಯ ಗ್ರಾಮವಾಗಿದೆ. ಸಿರಾ–ತುಮಕೂರು ರ್‍ಾಷ್ಟ್ರಿಯ ಹೆದ್ದಾರಿಯಲ್ಲಿ ಮಳ್ಳಪ್ಪನಹಳ್ಳಿ ಗೇಟಿನಿಂದ ಎಡಭಾಗದಲ್ಲಿ ಉತ್ತರಾಭಿಮುಖವಾಗಿ ೬ ಕಿಮೀ ದೂರದಲ್ಲಿದೆ. ಇದರ ಭೌಗೋಳಿಕ ವ್ಯಾಪ್ತಿ ೧೫೮ ಹೆಕ್ಟೇರ್ ಆಗಿದ್ದು ಕಾಡುಗೊಲ್ಲರ ಹಟ್ಟಿ ಇದಕ್ಕೆ ಮಜರೆ ಗ್ರಾಮವಾಗಿ ಸೇರ್ಪಡೆಗೊಂಡಿದೆ.

ಸಿರಾದಡ ಒಂದು ಪ್ರಾಚೀನ ಹಳ್ಳಿಯಾಗಿದ್ದು ಗ್ರಾಮದಲ್ಲಿ ಮುರಿದುಬಿದ್ದ ಕೋಟೆ, ದಿಡ್ಡಿಬಾಗಿಲ ಅವಶೇಷಗಳು ಇಂದಿಗೂ ಕಾಣುತ್ತವೆ. ಇಲ್ಲಿಂದ ೬ ಕಿಮೀ ಮುಂದಕ್ಕೆ ಮಧುಗಿರಿ ತಾಲ್ಲೂಕಿನ ಗಡಿಯಿದೆ.

ಸಿರಾದಡ ಈ ಹೆಸರು ಕುತೂಹಲಕಾರಿಯಾಗಿದೆ. ಸಿರಾ ಎಂದು ದೊಡ್ಡ ಗ್ರಾಮವಿದ್ದು ಅದರ ಸಮೀಪದ ಹಳ್ಳಿ ಎಂಬ ಅರ್ಥದಲ್ಲಿ ಅಥವಾ ಸಣ್ಣ ಪುಟ್ಟ ಪಾಳೆಯಪಟ್ಟುಗಳಿಗೆ ಗಡಿ ನೆಲವಾಗಿಯೂ ದಡ ಅಥವಾ ತುದಿ (ಥಠಡಿಜಜಡಿ) ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ. ಈ ಬಗೆಯ ಹೆಸರೇ ಈ ಗ್ರಾಮದ ಪ್ರಾಚೀನತೆಯನ್ನು ಹೇಳುತ್ತದೆ. ತಾಲ್ಲೂಕು–ಜಿಲ್ಲಾ ಗಡಿ ನಿರ್ಮಾಣವಾಗುವ ಪೂರ್ವದಲ್ಲಿ ಪ್ರಾಂತ್ಯಗಳ ವಿಸ್ತಾರ ಈಗಿನ ಜಿಲ್ಲಾ, ತಾಲ್ಲೂಕಿನ ನಿರ್ದಿಷ್ಟ ಗಡಿಯನ್ನು ದಾಟಿ ಹೋಗುತ್ತಿದ್ದ ಸಂದರ್ಭದ ಒಳಗೂ ಪ್ರದೇಶಗಳ ಎಲ್ಲೆಕಟ್ಟನ್ನು ಗುರುತಿಸುತ್ತಿದ್ದ ಕಾರಣದಿಂದಾಗಿ ಗಡಿ ಅಥವಾ ದಡ ಎಂಬ ಅರ್ಥದಲ್ಲಿ ಸಿರಾದಡ ಎಂದು ಕರೆಯಲಾಗಿದೆ. ಕ್ರಿ.ಶ.೧೫೧೦ ರ ಶಾಸನದಲ್ಲೂ ಸಿರಾದಡ ಗ್ರಾಮದ ಉಲ್ಲೇಖ ಇರುವುದು ಇದರ ಪ್ರಾಚೀನತೆಯನ್ನು ತೋರುತ್ತದೆ.

ಬಯಲು ಪ್ರದೇಶ. ಪಕ್ಕ ಗುಬ್ಬಿ ಚಿಕ್ಕನಹಳ್ಳಿ, ಬಾಲನಹಳ್ಳಿ, ಮುಚ್ಚವೀರನ ಹಳ್ಳಿ ಈ ಗ್ರಾಮಗಳು ಕೆದರಿಕೊಂಡಂತೆ ಸಿರಾದಡ ವಿಸ್ತಾರವಾಗಿದೆ. ಮರಳು ಮಿಶ್ರಿತ ಕೆಂಪು ಮಣ್ಣಿನ ಪ್ರದೇಶವಾಗಿದ್ದು ಶೇಂಗಾ, ರಾಗಿ ಬೆಳೆಗೆ ಉತ್ಕೃಷ್ಟವಾಗಿದೆ. ತೋಟಸಾಲು, ಬಯಲು, ದಿಣ್ಣೆ, ಹಳ್ಳ ಎರಡೂ ರೀತಿಯ ಪರಿಸರವಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ, ತೋಳ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಸೀಮೆ, ನಾಟಿ ಹಸು, ಹಳ್ಳಿಕಾರ್ ತಳಿ ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಗಿರಿರಾಜ ಮತ್ತು ನಾಟಿ ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ೭೫೦ ಅಡಿ ಆಳಕ್ಕೆ ಇಳಿದರೂ ನೀರು ಅಪರೂಪವಾಗುತ್ತಿದೆ. ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ತೋಟಗಾರಿಕೆಗೆ ಉಪನೀರಾವರಿಯಾಗಿ ೩೫ ಕೊಳವೆ ಬಾವಿಗಳನ್ನು ಕೊರೆಸಿದರೂ ನೀರು ಕಷ್ಟವಾಗಿ ಈ ಪರಿಸರದ ೪ ತೋಟಗಳು ಸಂಪೂರ್ಣ ಒಣಗಿ ಸುಳಿಬಿದ್ದಿವೆ. ನೀರಿನ ಒರತೆ ಕಡಿಮೆಯಾಗಿದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ೬ ಕಿರುಟ್ಯಾಂಕ್‌ಗಳ ಮೂಲಕ ನೀರು ಪೂರೈಸಲಾಗುತ್ತದೆ. ಗ್ರಾಮದಲ್ಲಿ ೨ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದ್ದು ನಾಯಕ, ಆದಿದ್ರಾವಿಡ, ಲಿಂಗಾಯಿತ ಜನಾಂಗಗಳು ಕಿರು ಸಮುದಾಯಗಳಾಗಿವೆ. ಗ್ರಾಮದ ಮನೆಯ ಮಾತು ಕನ್ನಡವಾಗಿದೆ. ವಿವಿಧ ಪ್ರಕಾರದ ೯೩ ಮನೆಗಳಿವೆ. ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದ ಮನೆಗಳಾಗಿವೆ. ಇವುಗಳಲ್ಲಿ ಕೆಲವು ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆಯ ೧೯ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಫಲಾನುಭವಿಗಳು ಇದ್ದಾರೆ. ೩೫೮ ಜನಸಂಖ್ಯೆ ಹೊಂದಿರುವ ಈ ಗ್ರಾಮದ ೪೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ೨ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಗ್ರಾಮದ ಮುಖ್ಯ ಬೆಳೆ. ರಾಗಿ, ಭತ್ತ, ತೊಗರಿ, ಹುರುಳಿ ಆಹಾರ ಬೆಳೆಗಳು. ತೆಂಗು, ಅಡಿಕೆ, ವೀಳ್ಯದೆಲೆ ರೇಷ್ಮೆ,

ಸೇವಂತಿಗೆ ಹೂಗಳನ್ನು ಬೆಳೆಯುತ್ತಿದ್ದಾರೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೆಹಣ್ಣು, ತೆಂಗು, ವೀಳ್ಯದೆಲೆ ಮುಖ್ಯ ವ್ಯಾಪಾರಿ ಸರಕಾಗಿವೆ. ಗ್ರಾಮದಲ್ಲಿ ಒಟ್ಟು ೬ ಜನ ಸರ್ಕಾರಿ ನೌಕರರಿದ್ದು ಜೆ.ಎಸ್.ರೇಣುಕಾನಂದ ಪ್ರೌಢಶಾಲಾ ಶಿಕ್ಷಕರು ಉಳಿದಂತೆ ೪ ಜನ ಪ್ರಾಥಮಿಕ ಶಿಕ್ಷಕರಿದ್ದಾರೆ. ಒಬ್ಬರು ಅಮೇರಿಕಾದಲ್ಲಿ ಇಂಜಿನಿಯರ್ ಇದ್ದಾರೆ. ಭಾಗ್ಯ ಮತ್ತು ಪುನೀತ್ ತಪಸ್ವಿ ಇಂಜಿನಿಯರ್ ಆಗಿ ಖಾಸಗಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಹಿಳೆಯರು ಗೃಹ ಕಸುಬಾಗಿ ಬೀಡಿ ಸುತ್ತುವುದು, ಊಟದ ಎಲೆ ತಯಾರಿಕೆ, ಗರಿಕಡ್ಡಿ ಹೆರೆಯುವುದು ಉಪ ಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಭೂಪಸಂದ್ರ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಈ ಗ್ರಾಮದ ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ಸಿರಾ–ಮಧುಗಿರಿ, ಸಿರಾ–ತರೂರು ತಾಳಗುಂದಕ್ಕೆ ರಸ್ತೆ ಸಂಪರ್ಕವಿದೆ. ೨ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಸಬಲೀಕರಣಕ್ಕೆ ಪ್ರೇರಕವಾಗಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೩೫ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೩% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ಕ್ರಿ.ಶ.೧೫೧೦ ರ ಸಿರಾ ಶಾಸನ ೧೧೧ ರಲ್ಲಿ ಈ ಗ್ರಾಮ ಉಲ್ಲೇಖವಿದ್ದು ಇದರಲ್ಲಿ ಗುಜ್ಜನಾಡ ಪರ್ವತಾರಾಧ್ಯ ಒಡೆಯರಿಗೆ ಅವರ ಶಿಷ್ಯ ಹಾಗೂ ತರೂರಿನ ಕುಮಾರ ಒಡೆಯರ ಮಗ ಚಿಕ್ಕಣ್ಣ ಎಂಬುವವನು ಸಿರಾದಡುವಿನ ಕೆರೆಯ ಹಿಂದಿನ ಗದ್ದೆಯನ್ನು ದಾನರೂಪದಲ್ಲಿ ಕೊಟ್ಟು, ಇದಕ್ಕೆ ಸಾಕ್ಷಿಯಾಗಿ ಗೌಡ, ಶಾನುಭೋಗ ಹಾಗೂ ಊರ ಮುಖ್ಯಸ್ಥರ ಸಮಕ್ಷಮವನ್ನು ಸೂಚಿಸಿದೆ.

ಧಾರ್ಮಿಕವಾಗಿ ಕೆರೆಯ ಏರಿಯ ಬದಿಯಲ್ಲಿ ತಿಮ್ಮಪ್ಪನ ಗುಡಿ ಆದಿಕರ್ನಾಟಕರ ಕೇರಿಯಲ್ಲಿ ಕುನ್ನಾಲಮ್ಮನ ಗದ್ದುಗೆ, ಗಣೇಶನ ದೇವಾಲಯವಿದೆ. ಕುನ್ನಾಲಮ್ಮನ ಊರಹಬ್ಬ ಆಚರಿಸಿ ಪ್ರಾಣಿಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಸ್ವಾಮಿ ವಿವೇಕಾನಂದ ಸಂಸ್ಥೆಯ ರಾಷ್ಟ್ರಬಂಧು ಯುವಕ ಸಂಘವಿದೆ.

ಗ್ರಾಮದಲ್ಲಿ ಶಿವರಾತ್ರಿ, ದೀಪಾವಳಿ, ಯುಗಾದಿ, ಗೌರಿ–ಗಣೇಶ ಹಾಗೂ ಮಹಾನವಮಿ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಜನಪದ ಕಲಾವಿದೆಯರಾದ ತಿಮ್ಮಕ್ಕ, ಕೆಂಚಮ್ಮ, ಕದರಮ್ಮ ಸೋಬಾನೆ ಪದ ಹೇಳುವ ಕಲಾವಿದರಾಗಿ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ಹೈಸ್ಕೂಲ್ ಶಿಕ್ಷಕ ಜೆ.ಎಸ್.ರೇಣುಕಾನಂದ ಕವಿತೆ, ಪ್ರಬಂಧ ಹಾಗೂ ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನ ಬರೆದಿದ್ದಾರೆ.

## ಸಿರಾದಡು ಗೊಲ್ಲರಹಟ್ಟಿ

ಸಿರಾದಡು ಒಂದು ಕಂದಾಯಗ್ರಾಮ. ಇದರ ಪಕ್ಕದಲ್ಲಿ ಅದಕ್ಕೆ ಹೊಂದಿಕೊಂಡ ಗ್ರಾಮ ಸಿರಾದಡು ಗೊಲ್ಲರಹಟ್ಟಿ. ಇದು ಕಳ್ಳಂಬೆಳ್ಳ ಹೋಬಳಿಗೆ ಸೇರಿದ ತಾಳಗುಂದದ ಬಳಿಯಿದೆ. ಸಿರಾದಿಂದ ಪೂರ್ವಕ್ಕೆ ೨೦ ಕಿಮೀ ದೂರದಲ್ಲಿದೆ. ಇದು ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೦.೦೮ ಹೆಕ್ಟೇರ್ ಆಗಿದೆ. ಮರಳುಮಿಶ್ರಿತ ಕೆಂಪು ಮಣ್ಣನ್ನು ಹೊಂದಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ವಾಡಿಕೆ ಮಳೆ ೬೪೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ. ಗ್ರಾಮದಲ್ಲಿ ೨ ಸಿಸ್ಟರ್ನ್‌ಗಳಿದ್ದು ಒಂದು ಕೈಪಂಪು ಇದೆ.

ಕಾಡುಗೊಲ್ಲರ ೨೦ ಮನೆಗಳಿದ್ದು ೧೦೪ ಜನಸಂಖ್ಯೆ ಹೊಂದಿದೆ. ಹೆಂಚಿನ, ಶೀಟಿನ ಮನೆಗಳಿದ್ದು ೮ ಶೌಚಾಲಯಗಳಿವೆ. ಇಲ್ಲಿ ಜನತಾ, ವಿವಿಧ ವಸತಿ ಮೂಲಗಳ ನೆರವಿನಿಂದ ರಚನೆಯಾಗಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯಬೆಳೆ. ರಾಗಿ, ಭತ್ತ, ಜೋಳ ಆಹಾರ ಬೆಳೆಗಳು. ಸೂರ್ಯಕಾಂತಿ, ತೆಂಗು ತೋಟಗಾರಿಕಾ ಬೆಳೆಗಳು. ಹುಣಸೆಹಣ್ಣು, ಕುರಿ ವ್ಯಾಪಾರದ ಮುಖ್ಯ ಸರಕುಗಳು.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ ಭೂಪಸಂದ್ರ ತಾಲ್ಲೂಕು ಹಾಗೂ ಪಂಚಾಯ್ತಿ ಕೇಂದ್ರವಾಗಿದ್ದು ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೩೫ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೩% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧ ಪೆಟ್ಟಿಗೆ ಅಂಗಡಿಯಿದೆ. ಗ್ರಾಮದಲ್ಲಿ ಮಾರಮ್ಮ, ಚಿತ್ರಲಿಂಗನ ಪೌಳಿಯಿದೆ. ದೀಪಾವಳಿ ವಿಶೇಷ ಆಚರಣೆಯಾಗಿದ್ದು ದೀಪ ಏರಿಸುವ ಹಬ್ಬವಾಗಿ ಆಚರಿಸುತ್ತಾರೆ. ವಿಶೇಷ ಹಬ್ಬಗಳಾಗಿ ದೀಪಾವಳಿ, ಯುಗಾದಿ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

ಗ್ರಾಮದೇವತೆಯಾಗಿ ಮಾರಮ್ಮನಿಗೆ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯಗಳಿವೆ.

### ಸೀಬಿ

ಸೀಬಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೨ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದೆ. ಒಟ್ಟು ೨೦೬೩.೩೪ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದೆ. ಈ ಗ್ರಾಮಕ್ಕೆ ಕಲ್ಲಶೆಟ್ಟಿಹಳ್ಳಿ, ಉಮಾಪತಿಹಳ್ಳಿ, ದುರ್ಗದಹಳ್ಳಿ ಹಾಗೂ ಗೊಲ್ಲರಹಟ್ಟಿ ಮಜರೆ ಗ್ರಾಮಗಳಾಗಿವೆ. ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿಯಲ್ಲಿ ಜೋಗಿಹಳ್ಳಿಯ ಬಳಿ ಎಡಕ್ಕೆ ೪ ಕಿಮೀ ದೂರದಲ್ಲಿ ಸೀಬಿ ಗ್ರಾಮವಿದೆ. ಇದನ್ನು ದೊಡ್ಡಸೀಬಿ ಎಂತಲೂ ಕರೆಯುತ್ತಾರೆ.

ಇದೊಂದು ಪುರಾಣ ಪ್ರಸಿದ್ಧ ಗ್ರಾಮವಾಗಿದೆ. ಸೀಬಿ ಎಂಬ ಶಬ್ದ ಸಿಖಿ ಶಬ್ದದಿಂದ ಬಂದಿದ್ದು ಸಂಸ್ಕೃತದಲ್ಲಿ ಶಿಖಿ ಎಂದರೆ ನವಿಲು ಎಂಬ ಅರ್ಥವಿದೆ. ಇದು ನಂತರ ಸೀಬಿ ಆಗಿದೆ. ಸೀಬಿ ಇಂದಿಗೂ ಕುರುಚಲು ಕಾಡು, ಪೊದೆ, ಗುಡ್ಡಗಳ ಪ್ರದೇಶ. ಈ ಗ್ರಾಮದ ದಕ್ಷಿಣಕ್ಕೆ ದೊಡ್ಡ ಗುಡ್ಡವಿದ್ದು ಅಲ್ಲಿ ಮೂಲನರಸಿಂಹಸ್ವಾಮಿ ದೇವಾಲಯವಿದೆ. ತಾಮ್ರ ಶಾಸನವೊಂದರ ಪ್ರಕಾರ ಸೀಬಿಯನ್ನು ಸಿಬ್ಬೂರು, ಸೀಬಿಯ ಊರು ಎಂದು ಕರೆದಿದೆ. ಇದು ಸುರಾಸುರ ಎಂಬ ರಾಕ್ಷಸನ ನೆಲೆಯಾಗಿದ್ದು ದೇವತೆಗಳಿಗೂ ಆತನು ಕಾಟ ಕೊಡುತ್ತಿದ್ದನು. ಈ ರಾಕ್ಷಸನ ಸಂಹಾರದ ಸಲುವಾಗಿಯೇ ನರಸಿಂಹನು ಸೀಬಿ ಗುಡ್ಡದಲ್ಲಿ ನೆಲೆಸಿದನೆಂಬ ಐತಿಹ್ಯವಿದೆ.

ಇನ್ನೊಂದು ಮೂಲದ ಪ್ರಕಾರ ಸೀಬಿ ಗುಡ್ಡದಲ್ಲಿ ಬೃಹನ್ಮುನಿಯು ವಾಸವಾಗಿದ್ದನು. ಈ ಋಷಿ ಕಾಮಧೇನು ಎಂಬ ಹಸುವನ್ನು ಕರೆಸಿ ಹಾಲು ಕರೆಯುತ್ತಿದ್ದನೆಂದೂ ಹೇಳಲಾಗುತ್ತದೆ. ಇದಕ್ಕೆ ಐತಿಹ್ಯವಾಗಿ ದೊಡ್ಡಸೀಬಿ ಗುಡ್ಡದ ಕೆಳಗೆ ಹಾಲುಬಾವಿ ಎಂಬ ಸ್ಥಳ ಇಂದಿಗೂ ಇದೆ. ಇಲ್ಲಿ ಸಂಗ್ರಹಗೊಂಡಿರುವ ನೀರು ಇಂದಿಗೂ ಹಾಲಿನ ಸ್ವರೂಪದಲ್ಲಿಯೇ ಇದೆ. ಹಿಂದೆ ಇದನ್ನು ಕ್ಷೀರವಾಪಿ ಎಂತಲೂ ಕರೆಯುತ್ತಿದ್ದರೆಂದು ಹೇಳಲಾಗುತ್ತಿದೆ.

ಸೀಬಿ ಗ್ರಾಮಕ್ಕೆ ಹೊಂದಿಕೊಂಡಿರುವ ದೊಡ್ಡ ಗುಡ್ಡದಲ್ಲಿ ನರಸಿಂಹಸ್ವಾಮಿಯು ಎರಡು ಪಾದಗಳನ್ನು ಊರಿದ ಚಿತ್ರವಿದ್ದು ಅದಕ್ಕೆ ಗುಡಿಯೊಂದನ್ನು ನಿರ್ಮಿಸಿ ಪ್ರತಿ ಶನಿವಾರ ಹಾಗೂ ವಿಶೇಷ ಸಂದರ್ಭಗಳಲ್ಲಿ ಪೂಜೆ ನಡೆಯುತ್ತಿದೆ. ಇದು ನರಸಿಂಹಸ್ವಾಮಿಯ ಮೂಲ ನೆಲೆಯಾಗಿದೆ. ಸೀಬಿ ಗ್ರಾಮದಲ್ಲಿ ಕೋಳಿಗಳು ಹೆಚ್ಚಿದ್ದು ಅವುಗಳ ಕೂಗುವಿಕೆಯಿಂದ ಸ್ವಾಮಿಗೆ ನಿದ್ರಾಭಂಗವಾಗಿ ಇಲ್ಲಿಂದ ೪ ಮೈಲಿಗಳ ದೂರದ ಎನ್.ಎಚ್ ರಸ್ತೆಯ ಬಳಿಯಿರುವ ಸೀಬಿ ಕ್ಷೇತ್ರದಲ್ಲಿ ನರಸಿಂಹಸ್ವಾಮಿ ನೆಲೆ ನಿಂತನೆಂಬ ಸ್ಥಳೀಯ ಐತಿಹ್ಯವಿದೆ. ಸೀಬಿ ಚಕ್ರವರ್ತಿಯ ಸತ್ವಪರೀಕ್ಷೆ ನಡೆದು ಗಿಡುಗ, ಪಾರಿವಾಳ, ಮಹಾವಿಷ್ಣು ದರ್ಶನ ಕೊಟ್ಟ ಸ್ಥಳ ಎಂತಲೂ ಇದನ್ನು ಕರೆಯಲಾಗುತ್ತಿದೆ.

ವಿಜಯನಗರದ ಅರಸು ಬುಕ್ಕರಾಯನ ಮಗನಾದ ಹರಿಹರರಾಯನು ಈ ಗ್ರಾಮಕ್ಕೆ ಕೆರೆಯೊಂದನ್ನು ಕಟ್ಟಿಸಿ ಅದನ್ನು ಬ್ರಾಹ್ಮಣರಿಗೆ ದಾನ ನೀಡಿದನು. ಮುಂದೆ ಇದರ ಸಮೀಪದಲ್ಲಿ ಸೀಬಿ ಅಗ್ರಹಾರ ಎಂಬ ಗ್ರಾಮದ ಉಗಮಕ್ಕೂ ಕಾರಣದ ಬಗೆಗೆ ೧೪೦೩ ರಲ್ಲಿ ಶಾಸನವೊಂದರಲ್ಲಿ ಉಲ್ಲೇಖವಿದೆ. ಕಪ್ಪು–ಬಿಳಿ ಮಿಶ್ರಿತ ಬಂಡೆ ಗ್ರಾಮದ ಹಿಂದಕ್ಕೆ ಆತುಕೊಂಡಿದ್ದು ಇದನ್ನು ಸೀಬಿಗುಡ್ಡ ಎಂದು ಕರೆಯುತ್ತಾರೆ. ಇಲ್ಲಿ ಬಂಡೆಸೀಳಿ, ಸೈಜುಗಲ್ಲು ಮಾಡಿ ಮಾರಾಟ ಮಾಡಲಾಗುತ್ತಿದೆ. ಮರಳುಮಿಶ್ರಿತ ಬಿಳಿ–ಕಂದು ಮಣ್ಣನ್ನು ಹೊಂದಿರುವ ಇಲ್ಲಿನ ಭೂಮಿ ಶೇಂಗಾ ಬೆಳೆಗೆ ಉತ್ಕೃಷ್ಟವಾಗಿದೆ. ಕುರುಚಲು ಗಿಡ, ಪೊದೆ, ತಗ್ಗು–ದಿಣ್ಣೆಗಳಿಂದ ಕೂಡಿರುವ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ.

ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ವಾಡಿಕೆ ಮಳೆ ೪೬೫ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಸೀಬಿಗೆ ಒಂದು ಕೆರೆಯಿದ್ದು ಮಳೆಯಾಧಾರಿತವಾಗಿ ತುಂಬುವುದು ಅಪರೂಪವಾಗಿದೆ. ಸೀಬಿಹಳ್ಳ ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಕುಡಿಯುವ ನೀರಿಗಾಗಿ ಗ್ರಾಮಪಂಚಾಯ್ತಿ ವತಿಯಿಂದ ೪ ಮಿನಿಟ್ಯಾಂಕ್ ಗಳಲ್ಲಿ ಗ್ರಾಮಕ್ಕೆ ಪೂರೈಸಲಾಗುತ್ತದೆ. ೨ ಕೈಪಂಪುಗಳೂ ಇವೆ. ಈ ಪರಿಸರದಲ್ಲಿ ೪೫ ಕೊಳವೆಬಾವಿಗಳಿವೆ.

ನಾಯಕ ಸಮುದಾಯ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಹಳ್ಳಿಕಾರ, ಕುಂಚಿಟಿಗರು, ಮಡಿವಾಳ, ಕುಂಬಾರ ಸಣ್ಣ ಸಮುದಾಯವಾಗಿದೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಶೀಟಿನ, ಹೆಂಚಿನ ಮನೆಗಳೂ ಸೇರಿ ಒಟ್ಟು ೧೪೮ ಮನೆಗಳಿವೆ. ಇವುಗಳು ಆಶ್ರಯ, ಅಂಬೇಡ್ಕರ್, ಆವಾಸ್, ಜನತಾ, ವಸತಿ ಯೋಜನೆಯ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ೩೨ ಫಲಾನುಭವಿಗಳಿದ್ದಾರೆ. ೯೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೬೮೯ ಜನಸಂಖ್ಯೆ ಇದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಮಿನಿಟೆಂಪೋ, ಆಟೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಗ್ರಾಮದ ಮುಖ್ಯ ಬೆಳೆಯಾಗಿದೆ. ರಾಗಿ, ತೊಗರಿ, ನವಣೆ, ಕೊರ್ಲೆ, ಹುರುಳಿ ಆಹಾರ ಬೆಳೆಗಳು. ತೋಟದ ಆಶ್ರಯದ ಕೆಲವರು ಅಡಿಕೆ, ತೆಂಗು ಬೆಳೆಯುತ್ತಾರೆ. ಒಂದು ಹಾಲಿನ ಡೈರಿಯಿದ್ದು ಪ್ರತಿದಿನ ಸರಾಸರಿ ೭೦೦ ಲೀ. ಹಾಲು ಸಂಗ್ರಹವಾಗುತ್ತಿದೆ.

ಶೇಂಗಾ, ಹುಣಸೆಹಣ್ಣು ಗ್ರಾಮದ ವಾಣಿಜ್ಯ ಬೆಳೆಗಳಾಗಿವೆ. ೬ ಜನ ಸರ್ಕಾರಿ ನೌಕರರು ಈ ಗ್ರಾಮದಲ್ಲಿದ್ದು ಬೀಡಿ ಕಟ್ಟುವುದು, ಊಟದ ಎಲೆ ತಯಾರಿಸುವುದು ಇದೆ. ಹಿಟ್ಟಿನ ಗಿರಣಿಯೂ ಇದ್ದು ಸಣ್ಣ ಕೈಗಾರಿಕೆಯಾಗಿದೆ. ಶಿಕ್ಷಣ, ಸಾರಿಗೆ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಸೀಬಿ ಗ್ರಾಮಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಕ್ಷೇತ್ರವೂ ಆಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಒಳಪಟ್ಟಿದೆ. ಒಂದು ಅಂಚೆ ಕಛೇರಿಯೂ ಕಾರ್ಯನಿರ್ವಹಿಸುತ್ತಿದೆ. ಮೂರು ಸ್ತ್ರೀಶಕ್ತಿ ಸಂಘಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘವಿದೆ. ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಅಂಗನವಾಡಿಯಲ್ಲಿ ೨೭ ಜನ, ಶಾಲೆಯಲ್ಲಿ ೩೮ ಮಕ್ಕಳಿದ್ದಾರೆ. ಒಟ್ಟು ನಾಲ್ವರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಉತ್ತಮ ಕಾಂಪೌಂಡ್, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೦.೩% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸಣ್ಣಲಿಂಗಪ್ಪ ಎಂಬುವವರು ನಾಟಿ ಔಷಧ ನೀಡುತ್ತಿದ್ದು ವಾತ, ಪಿತ್ಥ ಸಂಬಂಧಿ ಖಾಯಿಲೆಗಳನ್ನು ಗುಣಪಡಿಸುತ್ತಾರೆಂದು ಸ್ಥಳೀಯವಾಗಿ ನಂಬಿಕೆಯಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಗೂಡಂಗಡಿಗಳು, ೨ ಟೀ ಹೋಟೆಲ್‌ಗಳು ಇದೆ. ಗ್ರಾಮದ ನಡುವೆ ಅರಳಿಕಟ್ಟೆಯಿದ್ದು ಪೂಜಿಸಲ್ಪಡುತ್ತದೆ. ಗ್ರಾಮದ ಹೊರಭಾಗದಲ್ಲಿ ನರಸಿಂಹಸ್ವಾಮಿ ದೇವಾಲಯವಿದ್ದು ವಿಶೇಷ ಪೂಜೆ, ದಸರಾ ಸಂದರ್ಭದಲ್ಲಿ ಮೆರವಣಿಗೆ ನಡೆಯುತ್ತದೆ. ಗ್ರಾಮದ ಒಳಗೆ ಬಸವೇಶ್ವರ, ತಿಮ್ಮಪ್ಪ, ಆಂಜನೇಯನ ದೇವಾಲಯಗಳಿವೆ. ಯುಗಾದಿ, ದೀಪಾವಳಿ, ನವಮಿ, ಸಂಕ್ರಾಂತಿ, ಗೌರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಮುಕುಂದಪ್ಪ ಎಂಬುವವರು ಈ ಗ್ರಾಮದವರಾಗಿದ್ದು ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಈ ಗ್ರಾಮಕ್ಕೆ ಸಿರಾ, ತುಮಕೂರು, ಸೀಬಿ, ಚೇಳೂರು, ರಂಗನಹಳ್ಳಿ, ಮೈಸೂರು ರಸ್ತೆ ಸಂಪರ್ಕವಿದೆ.

## ಸೀಬಿ ಅಗ್ರಹಾರ

ಸೀಬಿ ಅಗ್ರಹಾರ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೯ ಕಿಮೀ ದೂರದಲ್ಲಿದೆ. ರ್‍ಾಷ್ಟ್ರೀಯ ಹೆದ್ದಾರಿ ಸಿರಾ–ತುಮಕೂರು ಈ ಮಾರ್ಗದಲ್ಲಿ ದೊಡ್ಡ ಆಲದಮರದ ಗೇಟಿನಿಂದ ಬಲಭಾಗದಲ್ಲಿ ೧.೫ ಕಿಮೀ ದೂರದಲ್ಲಿದ್ದು ಇದೊಂದು ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೧೨೪೭.೪೫ ಹೆಕ್ಟೇರ್ ಆಗಿದ್ದು ಜೋಗಿಹಳ್ಳಿ, ಅಮಲಗೊಂದಿ, ವಡ್ಡರಹಟ್ಟಿ, ನಾಗೇನಹಳ್ಳಿ, ಪುಟ್ಟಹನುಮನಪಾಳ್ಯ, ಅಜ್ಜಯ್ಯನಪಾಳ್ಯ, ಹನುಮಂತನಗರ ಈ ಏಳು ಹಳ್ಳಿಗಳನ್ನು ಉಪಗ್ರಾಮಗಳನ್ನಾಗಿ ಹೊಂದಿದೆ. ಶಿಖೆಯ ನವಿಲಿನ ಊರಾದ ಸೀಬಿಗೆ ಇದೊಂದು ಕವಲು ಗ್ರಾಮವಾಗಿ

ರೂಪುಗೊಂಡ ಕಾರಣ ಸೀಬಿ ಹೆಸರಿನ ಪೂರ್ವಪದದೊಂದಿಗೆ ದಾನವಾಗಿ ನೀಡಿದ ಬ್ರಾಹ್ಮಣರ ಪ್ರಾಧಾನ್ಯತೆಯ ಅಥವಾ ವಿದ್ಯಾಕೇಂದ್ರವಾದ ಕಾರಣದಿಂದ ಸೀಬಿ ಅಗ್ರಹಾರವಾಗಿದೆ. ಇದು ವಿಜಯನಗರದ ಅರಸರ ಕಾಲದಲ್ಲಿ ರೂಪುಗೊಂಡ ಅಗ್ರಹಾರವಾಗಿದೆ.

ಈ ಬಗ್ಗೆ ತಾಮ್ರಶಾಸನ ಹೀಗಿದೆ: 'ಸೀಬಿ ಚೇಳೂರು ಸೀಮೆಗೆ ಸೇರಿದ್ದು ಸೀಬಿ ಅರಣ್ಯ ಪ್ರದೇಶದಲ್ಲಿ ಅಪ್ಪಯ್ಯಭಟ್ಟರು ಕೆರೆಯೊಂದನ್ನು ಕಟ್ಟಿಸಿದರು. ಜೊತೆಗೆ ಚಂದ್ರಮೌಳೇಶ್ವರ ದೇವಾಲಯದಲ್ಲಿ ನರಸಿಂಹ ಮತ್ತು ಬ್ರಾಹ್ಮಣನಿಗೆ ಕೆರೆಯ ಹಿಂದಿನ ಗದ್ದೆಯನ್ನು ದಾನ ನೀಡಿ ಅಗ್ರಹಾರವಾಗಿಸಿ ಇದಕ್ಕೆ ವಿಜಯನಗರದ ಅರಸ ಹರಿಹರರಾಯನ ಹೆಸರಲ್ಲಿ ಹರಿಹರಪುರ ಎಂದು ಕರೆದಿದೆ'.

ಮರಳುಮಿಶ್ರಿತ ಬಿಳಿ, ಕಂದು ಮಣ್ಣು ಹೊಂದಿದ್ದು ಗ್ರಾಮದ ಪಶ್ಚಿಮಕ್ಕೆ ದೊಡ್ಡ ಸೀಬಿ, ಸೀಬಿಗುಡ್ಡ, ಗ್ರಾಮದ ಬುಡದಲ್ಲೇ ಪಶ್ಚಿಮಕ್ಕೆ ಅಗ್ರಹಾರದ ಕೆರೆಯಿದ್ದು ಇದೊಂದು ಬ್ರಾಹ್ಮಣರ ಪೂಜೆ ಮೊದಲಾದ ಮಂಗಳಕರ ಕಾರ್ಯಗಳಿಗಾಗಿಯೇ ನಿರ್ಮಿಸಿದ ಕೆರೆಯಾಗಿದೆ. ಈ ಕಾರಣದಿಂದಲೇ ಇದು ವಿಜಯನಗರದ ಅರಸರ ಕಾಲದ ರಚನೆ ಎಂದು ಅಗ್ರಹಾರದ ಶ್ರೀ ನರಸಿಂಹಮೂರ್ತಿ ಅವರು ಹೇಳುತ್ತಾರೆ.

ಗ್ರಾಮದ ದ್ವಾರಬಾಗಿಲಲ್ಲೇ ಕರಿಗಲ್ಲು, ಬಲಬದಿಗೆ ಆಂಜನೇಯ ಎಡಬದಿಗೆ ಮಾರಿದೇವತೆ, ಇದನ್ನು ಏಳೂರ ದೇವರು ಎಂದು ಕರೆದು ಊರ ಹಬ್ಬವನ್ನು ಸಾಂಪ್ರದಾಯಿಕ ಆಚರಣೆಗಳೊಂದಿಗೆ ಆರತಿ, ಬ್ಯಾಟೆ, ಬಾನಗಳೊಂದಿಗೆ ೧೨ ಕೈವಾಡದವರ ಸಮಕ್ಷಮ ಆಚರಿಸುವುದು ಇಲ್ಲಿನ ಸಂಪ್ರದಾಯವಾಗಿದೆ.

ಸೀಬಿ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ ಸೀಬಿ ತಾಲ್ಲೂಕು ಪಂಚಾಯ್ತಿ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಗೆ ಒಳಪಟ್ಟಿದೆ. ಕುರುಚಲು ಗಿಡ, ಪೊದೆ, ತೋಟ, ಹಳ್ಳ, ದಿಣ್ಣೆ ವ್ಯಾಪಕವಾಗಿರುವುದರಿಂದ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಅರೆಮಲೆನಾಡಿನಂತಿರುವ ಈ ಭಾಗದಲ್ಲಿ ವಾಡಿಕೆ ಮಳೆ ೪೬೫ ಮಿಮೀ ಆಗಿದ್ದು ಉಷ್ಣಾಂಶ ೩೬ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮ ಪರಿಸರದಲ್ಲಿ ೪ ತೆರೆದ ಬಾವಿಗಳಿದ್ದು ನೀರಿಲ್ಲ. ರೈತಾಪಿ ಬದುಕಿಗೆ ೭೫ ಕೊಳವೆ ಬಾವಿಗಳನ್ನು ನಿರ್ಮಿಸಿಕೊಂಡಿದ್ದಾರೆ. ಕುಡಿಯುವ ನೀರಿಗೆ ಗ್ರಾಮಪಂಚಾಯ್ತಿ ವತಿಯಿಂದ ಬೋರ್‌ವೆಲ್‌ಗಳ ಕೊಳಾಯಿ ಮೂಲಕ ನೀರು ಪೂರೈಸಲಾಗುವುದು. ಊರ ಹಿಂಭಾಗದಲ್ಲಿ ಹಳ್ಳ, ಊರ ಮುಂಭಾಗದಲ್ಲಿ ಕೆರೆಯಿದೆ. ಮಳೆಗಾಲದಲ್ಲಿ ಮಾತ್ರ ತುಂಬುತ್ತದೆ. ೨ ಕೈಪಂಪುಗಳೂ ಇವೆ.

ನಾಯಕ, ಬ್ರಾಹ್ಮಣ, ಕುಂಚಿಟಿಗ, ಆದಿಕರ್ನಾಟಕ, ಆದಿದ್ರಾವಿಡ, ವೈಶ್ಯ ಹಾಗೂ ಮಡಿವಾಳರು ವಾಸಿಸುತ್ತಿದ್ದು ನಾಯಕ ಜನಾಂಗ ದೊಡ್ಡ ಸಮುದಾಯವಾಗಿದೆ. ಕನ್ನಡ ಪೂರ್ಣ ವ್ಯಾವಹಾರಿಕ ಭಾಷೆಯಾಗಿದೆ. ಕಾಂಕ್ರೀಟ್, ಮಣ್ಣಿನ, ಹೆಂಚಿನ, ಶೀಟಿನ ವಿವಿಧ ಪ್ರಕಾರಗಳ ಒಟ್ಟು ೧೬೫ ಮನೆಗಳಿದ್ದು ೭೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟಿಲ್ಲರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಗ್ರಾಮದ ಮುಖ್ಯ ಬೆಳೆಯಾಗಿದ್ದು ರಾಗಿ, ತೊಗರಿ, ಅಲಸಂದೆ, ಭತ್ತ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ, ರೇಷ್ಮೆ ಬೆಳೆಯುತ್ತಾರೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೬೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ ಮತ್ತು ತೆಂಗು, ಅಡಿಕೆ ವಾಣಿಜ್ಯ ವ್ಯಾಪಾರಿ ಬೆಳೆಗಳಾಗಿವೆ. ಮಹಿಳೆಯರು ಊಟದ ಎಲೆ ಕಟ್ಟುವುದು, ಬೀಡಿ ಸುತ್ತುವುದು, ಬಟ್ಟೆ ಹೊಲಿಯುವ ಸಣ್ಣ ಕೈಗಾರಿಕೆ ಮಾಡುತ್ತಾರೆ. ಅಂಚೆ ಕಛೇರಿ, ಹೆಚ್‌ಎಂಟಿ ಸೇರಿದಂತೆ ಕೇಂದ್ರ ಸರ್ಕಾರದ ಇಬ್ಬರು, ರಾಜ್ಯಸರ್ಕಾರದ ಆರು ಜನ ನೌಕರರು ಈ ಗ್ರಾಮದಲ್ಲಿದ್ದಾರೆ. ೩ ಜನ ಪಂಚಾಯ್ತಿ ಸದಸ್ಯರು ಈ ಗ್ರಾಮವನ್ನು ಪ್ರತಿನಿಧಿಸುತ್ತಿದ್ದು ಒಬ್ಬರು ಪಂಚಾಯ್ತಿ ನೌಕರರಿದ್ದಾರೆ.

ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘದ ಗುಂಪುಗಳಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪಾಠಶಾಲೆಯಿದ್ದು ಶಾಲೆಯಲ್ಲಿ ೫೧ ಮಕ್ಕಳಿದ್ದು ೩ ಜನ ನೌಕರರಿದ್ದಾರೆ. ಗ್ರಾಮದ ಒಟ್ಟು ಜನಸಂಖ್ಯೆ ೬೩೨ ಇದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ

ಸಾಕ್ಷರತಾ ಪ್ರಮಾಣ ೬೧% ಆಗಿದೆ. ಪುರುಷರು ೭೧%, ಮಹಿಳೆಯರು ೪೯.೨೦% ರಷ್ಟು ಇದ್ದಾರೆ.

ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಗ್ರಂಥಾಲಯವಿದ್ದು ಕಾರ್ಯ ನಿರ್ವಹಿಸುತ್ತಿಲ್ಲ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ಕೆರೆಯ ಹಿಂದಿನ ಪಾತಪ್ಪನ ಗುಡಿಯ ಮುಂದೆ ಒಂದು ವೀರಗಲ್ಲು ಇದ್ದು ಹಸಿರು–ಬಿಳಿ ಕಲ್ಲಿನಲ್ಲಿ ಕೆತ್ತಲಾಗಿದ್ದು ಇದು ನೊಳಂಬರ ಕಾಲದ ರಚನೆಯಾಗಿದೆ. ವೀರನೊಬ್ಬನ ಹೋರಾಟದ ಚಿತ್ರವನ್ನು ಆಕರ್ಷಕವಾಗಿ ಕೆತ್ತಲಾಗಿದೆ. ಗ್ರಾಮದಲ್ಲಿ ಅಗ್ರಹಾರದಮ್ಮ, ಬಸವಣ್ಣ, ಆಂಜನೇಯ, ಭೂತಪ್ಪ, ಪಾತಪ್ಪ ದೇವಸ್ಥಾನಗಳಿವೆ. ಬಸವಣ್ಣ, ಆಂಜನೇಯ ದೇವಾಲಯಗಳು ಮುಜರಾಯಿ ಇಲಾಖೆಗೆ ಒಳಪಟ್ಟಿವೆ. ಯುಗಾದಿ, ಶಿವರಾತ್ರಿ, ಬಸವಜಯಂತಿ, ಮಹಾನವಮಿ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಪ್ರತಿ ಶನಿವಾರದಂದು ಭೂತಪ್ಪನಿಗೆ ಬಲಿ, ಹರಕೆ ಸಂಪ್ರದಾಯಗಳು ನಡೆಯುತ್ತವೆ.

## ಸೀಬಯ್ಯನಪಾಳ್ಯ

ಸೀಬಯ್ಯನಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೪ ಕಿಮೀ ದೂರದಲ್ಲಿದೆ. ಇದು ಹುಂಜನಾಳ ಕಂದಾಯ ಗ್ರಾಮಕ್ಕೆ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿಯು ೨೬೨೩.೪೮ ಹೆಕ್ಟೇರ್ ಮೂಲ ಗ್ರಾಮದಲ್ಲಿ ಹಂಚಿಕೆಯಾಗಿದೆ. ಸೀಬಿ ನರಸಿಂಹಸ್ವಾಮಿಯ ಒಕ್ಕಲಾದ ಸೀಬಯ್ಯನೆಂಬುವವನು ಈ ಗ್ರಾಮದ ಮೂಲ ಪುರುಷನಾದುದರಿಂದ ಆತನ ಹೆಸರಲ್ಲೇ ಈ ಗ್ರಾಮ ಬೆಳೆದು ಬಂದಿದೆ. ಸಿರಾ ತುಮಕೂರು ರ್‍ಾ.ಯ ಹೆದ್ದಾರಿಯಲ್ಲಿ ಸೋಮಸಾಗರ ಗೇಟಿನಲ್ಲಿ ಎಡಕ್ಕೆ ತಿರುಗಿ ಅಲ್ಲಿಂದ ಹುಂಜನಾಳು ಮಾರ್ಗವಾಗಿ ೨ ಕಿಮೀ ದೂರದಲ್ಲಿರುವ ಈ ಹಳ್ಳಿ ತುಮಕೂರು ತಾಲ್ಲೂಕಿನ ಸೋರೇಕುಂಟೆಗೆ ಗಡಿ ಗ್ರಾಮವಾಗಿದೆ. ಮರಳು, ಕೆಂಪು ಮಿಶ್ರಿತ ಭೂಮಿ ಲಕ್ಷಣ ಹೊಂದಿರುವ ಇಲ್ಲಿನ ನೆಲದಲ್ಲಿ ಸಣ್ಣ ಗಿಡ–ಮರ ಪೊದೆ ಹೆಚ್ಚಾಗಿದೆ. ದಕ್ಷಿಣಕ್ಕೆ ತೋಟದ ಸಾಲು ಇದೆ. ಸೋರೇಕುಂಟೆ ಹಳ್ಳದ ಸರಹದ್ದು ಹೊಂದಿರುವುದರಿಂದ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಮಳೆ ಆಶ್ರಯಿತ ಜೀವನದ ಇಲ್ಲಿನ ವಾಡಿಕೆ ಮಳೆ ೪೬೫ ಮಿಮೀ ಆಗಿದ್ದು ಉಷ್ಣಾಂಶ ೩೬ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಒಂದು ಮಳೆಯಾಶ್ರಿತ ಕೆರೆಯಿದೆ. ಪಶ್ಚಿಮಕ್ಕೆ ದೊಡ್ಡ ಹಳ್ಳವಿದೆ. ಎರಡು ಚಿಕ್ಕ ಚಿಕ್ಕ ಟ್ಯಾಂಕ್‌ನಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ಒಂದು ಕೈಪಂಪು ಇದೆ. ಕುಡಿಯುವ ನೀರನ್ನು ಪಂಚಾಯ್ತಿ ವತಿಯಿಂದ ಸರಬರಾಜು ಮಾಡಲಾಗುತ್ತಿದೆ.

ವೀರಶೈವರು ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಬೇಡರು, ಆದಿಕರ್ನಾಟಕ, ಲಂಬಾಣಿ ಸಣ್ಣ ಸಮುದಾಯವಾಗಿದೆ. ಎರಡು ಗೊಲ್ಲರ ಮನೆಗಳು ಪ್ರತ್ಯೇಕವಾಗಿವೆ. ಕಾಂಕ್ರೀಟ್, ಹೆಂಚಿನ, ಶೀಟಿನ ಒಟ್ಟು ೩೮ ಮನೆಗಳಿದ್ದು ೧೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೧೩ ಫಲಾನುಭವಿಗಳಿದ್ದಾರೆ. ೪ ಜನ ಸರ್ಕಾರಿ ನೌಕರರಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ರಾಗಿ ಗ್ರಾಮದ ಮುಖ್ಯ ಬೆಳೆ, ಆಹಾರ ಬೆಳೆಯೂ ಇದೇ ಆಗಿದ್ದು ತೊಗರಿ, ಅವರೆ, ಹುರುಳಿ ಬೆಳೆಯನ್ನು ಬೆಳೆಯುತ್ತಾರೆ. ತೆಂಗು, ಶೇಂಗಾ ಪ್ರಮುಖ ವ್ಯಾಪಾರಿ ಬೆಳೆಗಳು. ಒಬ್ಬರು ಕೆಎಸ್‌ಆರ್‌ಟಿಸಿ ನೌಕರರು ಈ ಗ್ರಾಮದಲ್ಲಿದ್ದಾರೆ. ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ ಸೀಬಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಪರಿಧಿಗೆ ಒಳಪಟ್ಟಿದೆ. ೧ ಸ್ತ್ರೀಶಕ್ತಿ ಗುಂಪು, ೨ ಧರ್ಮಸ್ಥಳ ಸ್ವಸಹಾಯ ಗುಂಪುಗಳಿವೆ.

ಅಂಗನವಾಡಿ ಹಾಗೂ ಸರ್ಕಾರಿ ಕಿರಿಯ ಶಾಲೆ ಗ್ರಾಮದಲ್ಲಿದ್ದು ಅಂಗನವಾಡಿಯಲ್ಲಿ ೧೮ ಮಕ್ಕಳು, ಶಾಲೆಯಲ್ಲಿ ೩೪ ಮಕ್ಕಳಿದ್ದಾರೆ. ಒಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೮.೬% ಆಗಿದೆ. ಮಹಿಳೆಯರು ೩೫% ಹಾಗೂ ಪುರುಷರು ೬೬.೬೫% ಪ್ರಮಾಣದಲ್ಲಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಸೀಬಿ ನರಸಿಂಹಸ್ವಾಮಿ ದೇವಾಲಯ, ಕೊಲ್ಲಾಪುರದಮ್ಮ ದೇವರ ಗುಡಿಗಳಿವೆ. ಸೀಬಿ ನರಸಿಂಹಸ್ವಾಮಿ ಜಾತ್ರೆಯ ಕಾಲದಲ್ಲಿ ಇಲ್ಲಿಯೂ ದೇವರನ್ನು ಎದುರೆತ್ತಿ, ಆರತಿ, ಬ್ಯಾಟೆ, ಮಡಿ ವಿಶೇಷ ಆಚರಣೆಗಳಿವೆ. ಕೊಲ್ಲಾಪುರದಮ್ಮ ಗ್ರಾಮದೇವತೆಯಾಗಿದೆ. ವಾರ್ಷಿಕವಾಗಿ ಆರತಿ, ಬಾನ, ಬೇಟೆ ಸಂಪ್ರದಾಯವಿದೆ. ಯುಗಾದಿ, ಶಿವರಾತ್ರಿ, ಗೌರಿ ವಿಶೇಷ ಆಚರಣೆಯ ಹಬ್ಬಗಳಾಗಿವೆ. ಗ್ರಾಮದ ಹೊರಭಾಗದಲ್ಲಿ ಕೋಟೆಯ ಅವಶೇಷವಿದ್ದು ಗ್ರಾಮ ಹೊಸದಾಗಿ ನಿರ್ಮಿತವಾಗಿರುವ ಸೂಚನೆ ಕಂಡುಬರುತ್ತದೆ. ಹಳೆಯ, ಹೊಸ ಎರಡಕ್ಕೂ ಹೊಂದಿಕೊಂಡಂತೆ ಕೋಟೆಯಿದ್ದ ಕುರುಹು ಇದೆ.

## ಸಾಕ್ಷಿಹಳ್ಳಿ

ಸಾಕ್ಷಿಹಳ್ಳಿಯು ಸಿರಾ ತಾಲ್ಲೂಕು ಕೇಂದ್ರದಿಂದ ನೈಋತ್ಯಕ್ಕಿದೆ. ಈ ಗ್ರಾಮವು ಸಿರಾ ಹುಯಿಲ್‌ದೊರೆ ಹೊಸಕೆರೆ ಮಾರ್ಗದಲ್ಲಿ ೧೭ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೩೮೮೯.೯೮ ಹೆಕ್ಟೇರ್‌ಗಳಾಗಿದೆ. ಇದಕ್ಕೆ ಸಾಕ್ಷಿಹಳ್ಳಿ ಗೇಟ್/ ಮಣ್ಣಮ್ಮನ ದೇವಸ್ಥಾನ ಗೇಟ್ ಸೇರ್ಪಡೆಯಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಈ ಪ್ರದೇಶದಲ್ಲಿ ಯಾವುದೇ ಅರಣ್ಯ, ತೋಪು, ಬೆಟ್ಟ-ಗುಡ್ಡಗಳು ಕಂಡುಬರುವುದಿಲ್ಲ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೩೬ ಮಿಮೀ ಆಗಿದ್ದು ಉಷ್ಣಾಂಶ ೩೬ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮದಲ್ಲಿ ಒಂದು ಬಂಡೆಕಟ್ಟೆ ಇದೆ. ೩೮ ಕೊಳವೆಬಾವಿಗಳನ್ನು ಹೊಂದಿದೆ. ಕುಡಿಯುವ ನೀರಿಗಾಗಿ ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ೧ ಸಿಸ್ಟರ್ನ್ ಮತ್ತು ೨ ಕೈಪಂಪುಗಳ ವ್ಯವಸ್ಥೆಯಿದೆ.

ಇಲ್ಲಿನ ಮುಖ್ಯ ಉದ್ಯೋಗ ಕೃಷಿಯಾಗಿದೆ. ಇದರಲ್ಲಿ ಶೇಂಗಾ ಪ್ರಮುಖ ಬೆಳೆಯಾಗಿದ್ದು ಇದರೊಂದಿಗೆ ರಾಗಿ, ಭತ್ತ, ಜೋಳ, ತೊಗರಿ, ತೆಂಗು, ಹುಣಸೆ ಮರಗಳನ್ನು ಬೆಳೆಯುತ್ತಿದ್ದಾರೆ. ಇವೇ ವ್ಯಾಪಾರದ ಸರಕುಗಳು ಆಗಿವೆ. ಈ ಗ್ರಾಮದಲ್ಲಿ ಉಪನ್ಯಾಸಕ ಕೃಷಿ, ಶಿಕ್ಷಣ, ಕೈಗಾರಿಕೆ ಇಲಾಖೆಯಲ್ಲಿ ೪ ಜನ ಸರ್ಕಾರಿ ಸೇವೆಯಲ್ಲಿ ಸೇರಿದ್ದಾರೆ. ಬೃಹತ್ ಕೈಗಾರಿಕೆಗಳಿಲ್ಲದಿದ್ದರೂ ಟೈಲರಿಂಗ್ ಕೆಲಸ ಮಾಡುವ ೨ ಅಂಗಡಿಗಳಿವೆ. ಸೈಕಲ್ ರಿಪೇರಿ ಅಂಗಡಿಗಳಿವೆ. ಈ ಪ್ರದೇಶದಲ್ಲಿ ಕಮ್ಮಾರರು ಕಬ್ಬಿಣದ ಕೆಲಸ ನಿರ್ವಹಿಸುತ್ತಿದ್ದಾರೆ. ಒಂದು ಕುಲುಮೆ ಇದೆ.

ಸಾಕ್ಷಿಹಳ್ಳಿಯಲ್ಲಿ ಒಟ್ಟು ೧೯೦ ಮನೆಗಳಿದ್ದು ೭೯೧ ಜನಸಂಖ್ಯೆಯನ್ನು ಹೊಂದಿದೆ. ಅದರಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಆದಿದ್ರಾವಿಡ, ಆದಿಕರ್ನಾಟಕ, ಮುಸ್ಲಿಂ, ಕಮ್ಮಾರ, ವಿಶ್ವಕರ್ಮರ ಮನೆಗಳಿವೆ. ಇವು ಕಲ್ಲಿನ, ಶೀಟಿನ, ಹೆಂಚಿನ ಸ್ವರೂಪದವಾಗಿವೆ. ಮನೆಗಳು ಆಶ್ರಯ, ಜನತಾ, ಇಂದಿರಾ ಆವಾಸ್ ವಸತಿ ಯೋಜನೆ ಹಾಗೂ ಉಚಿತ ವಿದ್ಯುತ್ ಸೌಲಭ್ಯ ಪಡೆದಿದ್ದಾರೆ. ೧೦೦ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ಇವರ ಭಾಷೆ ಕನ್ನಡ ಮತ್ತು ಉರ್ದುಗಳಾಗಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಗ್ರಾಮಕ್ಕೆ ಡಾಂಬರು ಮತ್ತು ಕಚ್ಚಾ ರಸ್ತೆಯಿದೆ. ಚರಂಡಿ ವ್ಯವಸ್ಥೆ ಸ್ವಲ್ಪ ಪ್ರಮಾಣದಲ್ಲಿದೆ. ಈ ಗ್ರಾಮದ ಮಧ್ಯೆ ರಸ್ತೆಯಿದ್ದು ಎರಡೂ ಇಕ್ಕೆಲಗಳಲ್ಲಿ ಮನೆಗಳು ನಿರ್ಮಾಣವಾಗಿರುವುದು ಕಂಡುಬರುತ್ತದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ತುಮಕೂರು ಲೋಕಸಭಾ ಕ್ಷೇತ್ರ ಮತ್ತು ಬುಕ್ಕಪಟ್ಟಣ ಜಿಲ್ಲಾ ಪಂಚಾಯ್ತಿ ರಾಮಲಿಂಗಾಪುರ ತಾಲ್ಲೂಕು ಪಂಚಾಯ್ತಿ ಸಿರಾ ತಹಸೀಲ್ದಾರ್ ಕಛೇರಿ ವ್ಯವಸ್ಥೆಯನ್ನು ಬುಕ್ಕಾಪಟ್ಟಣ ಪೊಲೀಸ್ ಠಾಣೆಯನ್ನು ಹಾಗೂ ರಾಮಲಿಂಗಾಪುರ ಗ್ರಾಮಪಂಚಾಯ್ತಿಯನ್ನು ಇಬ್ಬರು ಸದಸ್ಯರನ್ನು ಹೊಂದಿದೆ. ಅಲ್ಲದೆ ಅಂಚೆ ಕಛೇರಿಯನ್ನು ಹೊಂದಿದೆ. ಈ ಗ್ರಾಮದಲ್ಲಿ ಗ್ರಾಮ ನ್ಯಾಯಮಂಡಳಿ ವ್ಯವಸ್ಥೆಯಿದ್ದು ಸಣ್ಣ ಪುಟ್ಟ ಕಲಹಗಳನ್ನು ತೀರ್ಮಾನಿಸಿಕೊಳ್ಳುತ್ತವೆ. ಬಗೆಹರಿಯದ ಸಮಸ್ಯೆಗಳನ್ನು

ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ.

ಗ್ರಾಮದಲ್ಲಿ ಅಂಗನವಾಡಿ ಕೇಂದ್ರವಿದ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೫.೮% ಆಗಿದೆ. ಗ್ರಾಮದಲ್ಲಿ ಸ್ತ್ರೀಶಕ್ತಿ ಸಂಘಗಳು ಮತ್ತು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವಿದ್ದು ಸಣ್ಣ ಪ್ರಮಾಣದ ಉಳಿತಾಯ ಬ್ಯಾಂಕುಗಳಾಗಿ ಸೇವೆ ಸಲ್ಲಿಸುತ್ತಿವೆ.

ಗ್ರಾಮದಲ್ಲಿ ಆರೋಗ್ಯ ಕೇಂದ್ರಗಳಿಲ್ಲದಿದ್ದರೂ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಇಲ್ಲಿ ಒಂದು ಪಶುಚಿಕಿತ್ಸಾಲಯ ಕೇಂದ್ರವಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಚಿಲ್ಲರೆ ವ್ಯಾಪಾರ ಅಂಗಡಿಗಳನ್ನು ಹೊಂದಿದೆ. ಐತಿಹಾಸಿಕ ನೆಲೆಯಾಗಿ ಎರಡು ಅರಳಿ ಮರಗಳು, ಒಂದು ಸ್ತಂಭಗಲ್ಲನ್ನು ಹೊಂದಿದೆ. ಹಾಗೆಯೇ ಇಲ್ಲಿನ ಧಾರ್ಮಿಕ ಕೇಂದ್ರದ ದೇವಾಲಯಗಳಲ್ಲಿ ಸಾಕ್ಷಿಹಳ್ಳಿಯ ಮಣ್ಣಮ್ಮ ಎಂದು ಪ್ರಸಿದ್ಧಿ ಪಡೆಯುತ್ತಿದೆ. ಸಾಂಪ್ರದಾಯಿಕ ಹಬ್ಬಗಳೊಂದಿಗೆ ಮಣ್ಣಮ್ಮನ ಜಾತ್ರೆಯನ್ನು ಮಾಡುತ್ತಾರೆ. ಪ್ರತಿ ವರ್ಷಕ್ಕೊಮ್ಮೆ ಆರತಿ ಮಾಡಿ ಬಲಿ ನೀಡುವುದು ವಿಶೇಷವಾಗಿದೆ.

ಗ್ರಾಮದ ಲಿಂಗಣ್ಣ ತಮಟೆ ಕಲಾವಿದರಾಗಿ ಸ್ಥಳೀಯವಾಗಿ ಹೆಸರಾಗಿದ್ದಾರೆ. ಯುಗಾದಿ, ದಸರಾ, ರಾಮನವಮಿ, ಶಿವರಾತ್ರಿ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ.

## ಸಾದರ ಕರೇನಹಳ್ಳಿ

ಸಾದರ ಕರೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೮ ಕಿಮೀ ದೂರದಲ್ಲಿದೆ. ಸಿರಾ–ಬುಕ್ಕಾಪಟ್ಟಣ ಮುಖ್ಯ ರಸ್ತೆಯಲ್ಲಿ ಕಿಲಾರದಹಳ್ಳಿ ಗೇಟಿನ ಬಳಿ ಎಡಭಾಗದಲ್ಲಿ ಅರ್ಧ ಕಿಮೀ ದೂರದಲ್ಲಿರುವ ಒಂದು ಪುಟ್ಟ ಹಳ್ಳಿಯಾಗಿದೆ. ಇದು ಕಂದಾಯ ಗ್ರಾಮವಾಗಿದ್ದು ೧೦೪.೦೧ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದೆ.

ಸಾಧು–ಸನ್ಯಾಸಿ ಮೂಲದ ಕರಿಯ ಅಜ್ಜ ಈ ಭಾಗದಲ್ಲಿ ನೆಲೆಸಿ ಆಧ್ಯಾತ್ಮಿಕ ಚಟುವಟಿಕೆ ನಡೆಸುತ್ತಾ ಬಂದನು. ಆತನನ್ನು ಅನುಸರಿಸಿ ಕೆಲವರು ಬಂದು ಮನೆಕಟ್ಟಿಕೊಂಡು ವಾಸಿಸುತ್ತಿದ್ದರು. ಮುಂದೆ ಗ್ರಾಮ ಬೆಳೆದು ಸರ್ಕಾರಿ ದಾಖಲೆಯಲ್ಲಿ ಸಾದರ ಮೂಲ ಹೆಸರೇ ಸೇರಿಕೊಂಡು ಸಾದರ ಕರೇನಹಳ್ಳಿ ಎಂಬ ಗ್ರಾಮ ಬೆಳೆದಿದೆಯೆಂದು ಪದವೀಧರ ಯುವ ಶೇಷಾನಾಯ್ಕ ಅವರ ಅಭಿಪ್ರಾಯವಾಗಿದೆ.

ಕಪ್ಪು ಎರೆಮಣ್ಣಿನ ಫಲವತ್ತಾದ ಭೂಪ್ರದೇಶ. ಈ ಪರಿಸರದಲ್ಲಿ ಯಾವುದೇ ಕೆರೆ ಹಳ್ಳಗಳಿಲ್ಲ. ರಕ್ಷಿತ ಅರಣ್ಯ ಸಮೀಪದಲ್ಲಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ. ಹಾವುಗಳಾದ ನಾಗರ, ಹೆಬ್ಬಾವು, ನೀರಾವು, ಹೊಳ್ಳೆ ಹಾವು ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೪೮ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಒಂದು ಕೊಳವೆ ಬಾವಿಯಿದ್ದು ಒಂದು ಕೈಪಂಪು ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಲಂಬಾಣಿ ಸಮುದಾಯದ ೧೩ ಮನೆಗಳು ಮಾತ್ರ ಇದ್ದು ಮಾತೃಭಾಷೆ ಕನ್ನಡವಾಗಿದ್ದು ಲಂಬಾಣಿ ಭಾಷೆ ಮಾತನಾಡುತ್ತಾರೆ. ಒಟ್ಟು ೬೦ ಜನಸಂಖ್ಯೆ ಮಾತ್ರ ಹೊಂದಿರುವ ಈ ಪುಟ್ಟ ಹಳ್ಳಿಯಲ್ಲಿ ಹೆಂಚಿನ, ಶೀಟಿನ ಮನೆಗಳಿವೆ. ಇವು ಸರ್ಕಾರದ ವಸತಿ ಯೋಜನೆಗಳಾದ ಇಂದಿರಾ ಆವಾಸ್, ಆಶ್ರಯ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಹೊಂದಿವೆ. ೨ ಮನೆಗಳು ಶೌಚಾಲಯದ ಸೌಲಭ್ಯ ಹೊಂದಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ದ್ವಿಚಕ್ರ ವಾಹನಗಳ ಬಳಕೆಯಿದೆ.

ರಾಗಿ ಮುಖ್ಯ ಬೆಳೆ. ಶೇಂಗಾ, ತೊಗರಿ, ಅವರೆ, ಜೋಳ ಬೆಳೆಯುತ್ತಾರೆ. ಹತ್ತಿ, ಈರುಳ್ಳಿ, ಸೂರ್ಯಕಾಂತಿ, ತರಕಾರಿ ಬೆಳೆಗಳಿವೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಯಿಲ್‌ದೊರೆ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಕೇಂದ್ರಗಳಾಗಿದ್ದು ತುಮಕೂರು ಲೋಕಸಭಾ ಕ್ಷೇತ್ರವಾಗಿದೆ. ಹುಯಿಲ್‌ದೊರೆಯಿಂದ ಅಂಚೆ ಸಂಪರ್ಕವಿದ್ದು ತಹಸೀಲ್ದಾರ್ ಕಛೇರಿ, ಕೆಇಬಿ, ಆಸ್ಪತ್ರೆಗೆ ಸಿರಾ ನಗರಕ್ಕೆ ಹೋಗುತ್ತಾರೆ.

ಶಾಲಾ ಸೌಲಭ್ಯವಿರುವುದಿಲ್ಲ. ಪಕ್ಕದ ಕಿಲಾರದಹಳ್ಳಿ ತಾಂಡ ಹಾಗೂ ಹುಯಿಲ್‌ದೊರೆಗೆ ಹೋಗಬೇಕಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೭.೯% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಗೂಡಂಗಡಿ ಇದ್ದು ಅರಳಿ–ಬೇವಿನಮರದ ಕಟ್ಟೆ, ನಾಗರಕಲ್ಲು ಇದೆ. ಭೀಮಸತಿ, ಸೇವಾಲಾಲ್ ಪೌಳಿಗಳಿದ್ದು ಪೂಜಿಸುತ್ತಾರೆ. ದೀಪಾವಳಿ ಇವರ ದೊಡ್ಡ ಹಬ್ಬ. ಹಿರಿಯರ ಹಬ್ಬವಾಗಿ ರಕ್ತಸಂಬಂಧಿಗಳೆಲ್ಲಾ ಕೂಜಿ ಆಚರಿಸುವುದು ವಾಡಿಕೆಯಾಗಿದೆ. ಯುಗಾದಿ, ದಸರಾ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಸೋಮ್ಲಾನಾಯಕನ ತಾಂಡ

ಈ ತಾಂಡವು ಸಿರಾ ತಾಲ್ಲೂಕು ಕೇಂದ್ರದಿಂದ ವಾಯವ್ಯ ದಿಕ್ಕಿನಲ್ಲಿದೆ. ಸಿರಾದ ೨೪.೫ ಕಿಮೀ ದೂರದಲ್ಲಿರುವ ಗ್ರಾಮವು ಜನವಸತಿ ಗ್ರಾಮವಾಗಿದೆ. ಸೋಮ್ಲಾನಾಯಕ ಎಂಬ ಲಂಬಾಣಿ ಜನಾಂಗದ ವ್ಯಕ್ತಿ ಮೊದಲು ಇಲ್ಲಿ ಮನೆ ನಿರ್ಮಿಸಿ ವಾಸವಾಗಿದ್ದರಿಂದ ಈತನ ಹೆಸರೇ ಗ್ರಾಮಕ್ಕೆ ಇಡಲಾಗಿದೆ. ಲಂಬಾಣಿ ಜನಾಂಗದರಾಗಿದ್ದರಿಂದ ತಾಂಡವೆಂದು ಹೆಸರು ಪಡೆದಿದೆ.

ಇದರ ಭೌಗೋಳಿಕ ವಿಸ್ತೀರ್ಣವು ೨೪೦.೮ ಹೆಕ್ಟೇರ್‌ಗಳಾಗಿವೆ. ಬಯಲುನಾಡಿನ ಪ್ರದೇಶವಾಗಿದ್ದು ಮರಳುಮಿಶ್ರಿತ ಕೆಂಪುಮಣ್ಣಿನಿಂದ ಕೂಡಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಗ್ರಾಮದಲ್ಲಿ ೨೦ ಮನೆಗಳಿದ್ದು ೭೯ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಲಂಬಾಣಿಗರ ಮನೆಗಳಿವೆ. ಇವರ ಭಾಷೆ ಲಂಬಾಣಿಯಾಗಿದ್ದು ಕನ್ನಡ ಮಾತನಾಡುತ್ತಾರೆ. ೨ ಕೊಳವೆ ಬಾವಿಗಳಿದ್ದು ಕೃಷಿಗೆ ಉಪಯೋಗವಾಗಿದೆ. ಇಲ್ಲಿನ ವಾರ್ಷಿಕ ಸರಾಸರಿ ಮಳೆ ೪೬೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಯೋಜನೆಯ ಅಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಕೃಷಿ ಮುಖ್ಯ ಉದ್ಯೋಗವಾಗಿದ್ದು ಶೇಂಗಾದ ಜೊತೆಗೆ ರಾಗಿ, ಭತ್ತ, ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಈ ಗ್ರಾಮದಲ್ಲಿ ಹೈನುಗಾರಿಕೆ, ವ್ಯಾಪಾರ, ಹೂ ಕಟ್ಟುವುದು, ಬೀಡಿ ಸುತ್ತುವುದು, ಹುಣಸೆಹಣ್ಣಿನ ಮಹಿಳಾ ಗೃಹ ಕೈಗಾರಿಕೆಯಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ, ನೇರಳಗುಡ್ಡ ತಾಲ್ಲೂಕು ಪಂಚಾಯ್ತಿ ಕ್ಷೇತ್ರವಾಗಿದ್ದು ತಹಸೀಲ್ದಾರ್ ಕಛೇರಿ, ನೇರಲಗುಡ್ಡ ಪಂಚಾಯ್ತಿ ಹೊಂದಿದೆ. ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದೆ. ಹಣಕಾಸು ವ್ಯವಸ್ಥೆಗೆ ಬ್ಯಾಂಕಿಂಗ್ ಸೌಲಭ್ಯವಿಲ್ಲ. ಆದರೆ ೫೨% ರಷ್ಟು ಸಾಕ್ಷರತಾ ಪ್ರಮಾಣವನ್ನು ಹೊಂದಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಯಾವುದೇ ಆರೋಗ್ಯ ಕೇಂದ್ರಗಳಿಲ್ಲ. ಕುಟುಂಬ ಕಲ್ಯಾಣ ವ್ಯವಸ್ಥೆಯನ್ನು ಹೊಂದಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಚಿಲ್ಲರೆ ವ್ಯಾಪಾರದ ಅಂಗಡಿಯನ್ನು ಒಳಗೊಂಡಿದೆ. ಧಾರ್ಮಿಕ ಪರಂಪರೆಯಲ್ಲಿ ನೇರಲಗುಡ್ಡದ ದೇವಾಲಯಗಳಿಗೆ ನಡೆದುಕೊಳ್ಳುತ್ತಾರೆ. ಭೀಮಸತಿ ಆಚರಣೆ ವಿಶೇಷವಾಗಿದ್ದು ದೀಪಾವಳಿ ಹಬ್ಬದಂದು ಹಿರಿಯರಿಗೆ ಹೊಸಬಟ್ಟೆ, ಸಿಹಿ ಅಡಿಗೆ ಊತಣ, ಸಾಂಪ್ರದಾಯಿಕ ನೃತ್ಯವೂ ಇರುತ್ತದೆ.

## ಸಂಗಯ್ಯನಪಾಳ್ಯ

ಎಸ್.ಪಾಳ್ಯವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಸಿರಾ–ಮೈಸೂರು ರಸ್ತೆಯಲ್ಲಿ ಬೆಂಚೆ ಗೇಟ್‌ನಿಂದ ೦.೫ ಕಿಮೀ ಮತ್ತು ಸಿರಾದಿಂದ ೨೦ ಕಿಮೀ ದೂರದಲ್ಲಿರುವ ಈ ಗ್ರಾಮವು ಗೋಪಾಲದೇವರಹಳ್ಳಿಯ ಮಜರೆ ಗ್ರಾಮವಾಗಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣವು ೬೦ ಹೆಕ್ಟೇರ್‌ಗಳಾಗಿವೆ. ವೀರಶೈವರ ಸಂಗಮಬಸವ ಎಂಬ

ಜಂಗಮಯ್ಯ ಈ ಗ್ರಾಮದ ಮೂಲಪುರುಷನಾಗಿದ್ದು ಆತನ ಹೆಸರನ್ನೇ ಗ್ರಾಮಕ್ಕೆ ಇಡಲಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳುಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಅರಣ್ಯ, ಬೆಟ್ಟ-ಗುಡ್ಡ, ತೋಪುಗಳು ಕಂಡುಬರುವುದಿಲ್ಲ. ಇಲ್ಲಿ ಯಾವುದೇ ಕೆರೆ, ಕಟ್ಟೆಗಳಿಲ್ಲದಿದ್ದರೂ ಕೊಳವೆ ಬಾವಿಗಳನ್ನು ಹೊಂದಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೪೦ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಲ್ಲಿ ನೀರು ಪೂರೈಸಲಾಗುತ್ತಿದೆ. ಒಂದು ಕೈಪಂಪು ಇದೆ.

ಗ್ರಾಮದಲ್ಲಿ ಒಟ್ಟು ೧೯ ಮನೆಗಳಿದ್ದು ೪೮ ಜನಸಂಖ್ಯೆಯನ್ನು ಹೊಂದಿದೆ. ಮನೆಗಳು ಆಶ್ರಯ, ಜನತಾ ಯೋಜನೆಯಡಿಯಲ್ಲಿ ರಚನೆಯಾಗಿದ್ದು ೧೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಎಲ್ಲಾ ಮನೆಗಳು ವೀರಶೈವರದಾಗಿವೆ. ಇಲ್ಲಿನ ಭಾಷೆ ಕನ್ನಡವಾಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಪಾಯಸ, ಕಡುಬು, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಇಲ್ಲಿನ ಜನರ ಮುಖ್ಯ ಉದ್ಯೋಗವು ವ್ಯವಸಾಯವಾಗಿದೆ. ಶೇಂಗಾ ಪ್ರಮುಖ ಬೆಳೆ ಮತ್ತು ರಾಗಿ, ಭತ್ತ, ಜೋಳ, ಅಡಿಕೆ, ತೆಂಗು, ಹುಣಸೆ ಮರಗಳು ಪ್ರಮುಖವಾಗಿವೆ. ಶಿಕ್ಷಣ, ಕಂದಾಯ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ ಮತ್ತು ಗೋಪಾಲದೇವರಹಳ್ಳಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರವ್ಯಾಪ್ತಿಗೆ ಸೇರಿದೆ. ಸಿರಾದಲ್ಲಿ ತಹಸೀಲ್ದಾರ್ ಕಛೇರಿ, ಜಿ.ಡಿ. ಹಳ್ಳಿಯಲ್ಲಿ ಗ್ರಾಮಪಂಚಾಯ್ತಿ ಹಾಗೂ ಅಂಚೆ ಕಛೇರಿಯನ್ನು ಹೊಂದಿದೆ. ಕಳ್ಳಂಬೆಳ್ಳ ಪೊಲೀಸ್ ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ. ಗ್ರಾಮದಲ್ಲಿ ನ್ಯಾಯ ಮಂಡಳಿ ವ್ಯವಸ್ಥೆಯಿದೆ. ಬಗೆಹರಿಯದ ಸಮಸ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ. ಇಲ್ಲಿ ಒಂದು ಸ್ತ್ರೀಶಕ್ತಿ ಸಂಘ ಮತ್ತು ಧರ್ಮಸ್ಥಳ ಸಂಘವನ್ನು ಹೊಂದಿದ್ದು ಹಣಕಾಸಿನ ಸೌಲಭ್ಯ ಪಡೆಯುತ್ತಿವೆ.

ಎಸ್.ಪಾಳ್ಯದಲ್ಲಿ ಯಾವುದೇ ರೀತಿಯ ಶಿಕ್ಷಣ ಕೇಂದ್ರಗಳು ಕಂಡುಬರುವುದಿಲ್ಲ. ಪಕ್ಕದ ಜಿ.ಡಿ ಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ೨೫% ಆಗಿದೆ.

ಇಲ್ಲಿ ಯಾವುದೇ ಆರೋಗ್ಯ ಕೇಂದ್ರಗಳಿಲ್ಲದಿದ್ದರೂ ಕುಟುಂಬ ಕಲ್ಯಾಣ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಐತಿಹಾಸಿಕ ಯಾವುದೇ ನೆಲೆ, ಸ್ಮಾರಕ ಶಾಸನಗಳು ಕಂಡುಬರದಿದ್ದರೂ ಸಹ ಕರಿಗಲ್ಲು ಮತ್ತು ಅರಳಿಕಟ್ಟೆಯನ್ನು ಹೊಂದಿದೆ. ಧಾರ್ಮಿಕ ಕೇಂದ್ರವಾಗಿ ಮುರುಡ ಬಸವೇಶ್ವರ ದೇವಾಲಯವಿದೆ. ಗೋಪಾಲದೇವರ ಹಳ್ಳಿಯ ದುರ್ಗಮ್ಮನ ಜಾತ್ರೆಯನ್ನು ಪ್ರತಿವರ್ಷ ಆಚರಿಸುತ್ತಾರೆ.

ಯುಗಾದಿ, ದೀಪಾವಳಿ, ದಸರಾ, ಗೌರಿ-ಗಣೇಶ, ಶಿವರಾತ್ರಿ, ಸಂಕ್ರಾಂತಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಶಿವರಾತ್ರಿಯಂದು ಇಲ್ಲಿನ ಮುರುಡ ಬಸವೇಶ್ವರನ ದೇವಾಲಯದಲ್ಲಿ ಅಖಂಡ ಶಿವಭಜನೆ, ಅಭಿಷೇಕ ನಂತರ ಹರಿಸೇವೆಯೊಂದಿಗೆ ನಡೆಸುತ್ತಾರೆ.

## ಹನುಮನಹಳ್ಳಿ

ಹನುಮನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೨ ಕಿಮೀ ದೂರದಲ್ಲಿದೆ. ಸಿರಾ-ಬಂದಕುಂಟೆ ಪಟ್ಟನಾಯಕನಹಳ್ಳಿ ಮಾರ್ಗದಲ್ಲಿ ಮುಖ್ಯ ರಸ್ತೆಯಲ್ಲಿರುವ ಈ ಗ್ರಾಮ ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೨೪೮.೦೬ ಹೆಕ್ಟೇರ್ ಆಗಿದೆ. ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ಬಯಲು ಪ್ರದೇಶ. ಬಯಲು, ಕುರುಚಲು ಗಿಡ, ವೀಳ್ಯದೆಲೆ, ತೆಂಗು, ಅಡಿಕೆ ತೋಟಗಳಿವೆ.

ಗ್ರಾಮದ ಉತ್ತರ ಭಾಗದಲ್ಲಿ ಹಳ್ಳದ ಸ್ವರೂಪದಲ್ಲಿ ತಗ್ಗು ಇದ್ದು ಅಲ್ಲಿ ತೋಟಗಳಿವೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಜಿಂಕೆ, ತೋಳ, ಹಂದಿ, ಮುಂಗುಸಿ

ಮೊದಲಾದ ಕಾಡುಪ್ರಾಣಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ರೈತರು ಹಸು, ಎತ್ತು, ಎಮ್ಮೆ, ಕುರಿ, ಮೇಕೆಗಳನ್ನು ಸಾಕುತ್ತಾರೆ. ಈ ಪರಿಸರದಲ್ಲಿ ಗಿಳಿ, ಗರುಡ, ಗಿಡುಗ, ಗೂಬೆ, ಗುಬ್ಬಚ್ಚಿ, ಗೀಜುಗ, ಕೋಗಿಲೆ, ಕಾಗೆ, ಬೆಳವ, ಗೊರವಂಕ, ಕೊಕ್ಕರೆ ಕಂಡುಬರುತ್ತವೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾಡಿಕೆ ಮಳೆ ೪೬೦ ಮಿಮೀ ಆಗಿದ್ದು ಕೃಷಿಗೆ ಸಾಕಾಗುವುದಿಲ್ಲ. ಆದುದರಿಂದ ಈ ಪರಿಸರದಲ್ಲಿ ೧೦೮ ಕೊಳವೆ ಬಾವಿಗಳಿದ್ದು ಇವು ತೋಟಗಾರಿಕೆ ಬೆಳೆಗಳಾದ ವೀಳ್ಯದೆಲೆ, ಅಡಿಕೆ, ತೆಂಗು, ರೇಷ್ಮೆ, ಶೇಂಗಾ ಬೆಳೆಗಳಿಗೆ ಬಳಕೆಯಾಗುತ್ತಿದೆ. ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಒಂದು ಹುಡುಗರಕಟ್ಟೆ ಎಂಬ ಹೆಸರಿನ ಕಟ್ಟೆ ಇದ್ದು ದನ–ಕರುಗಳಿಗೆ ಕುಡಿಯಲು ಬಳಕೆಯಾಗುತ್ತಿದೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ೪ ಸಿಸ್ಟರ್ನ್‌ಗಳಿದ್ದು ಕಿರುನೀರು ಸರಬರಾಜು ಯೋಜನೆಯಲ್ಲಿ ನೀರು ಪೂರೈಕೆಯಾಗುತ್ತದೆ. ೩ ಕೈಪಂಪುಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ ಕಿರು ಸಮುದಾಯವಾಗಿದೆ. ಗ್ರಾಮದ ಭಾಷೆ ಕನ್ನಡವಾಗಿದೆ. ವಿವಿಧ ಪ್ರಕಾರಗಳ ೧೭೫ ಮನೆಗಳಿದ್ದು ಅವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಸ್ವರೂಪದಲ್ಲಿವೆ. ೧೧೨ ಶೀಟಿನ ಮನೆಗಳು ಇವೆ. ಇವುಗಳಲ್ಲಿ ೮೯ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೭೩೫ ಜನಸಂಖ್ಯೆ ಹೊಂದಿದ್ದು ಗ್ರಾಮದ ಮುಖ್ಯ ಆಹಾರ ರಾಗಿಮುದ್ದೆ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಆಧುನಿಕ ವಾಹನ ಟ್ರ್ಯಕ್ಟರ್, ಆಟೋ, ದ್ವಿಚಕ್ರ ವಾಹನಗಳ ಜೊತೆಗೆ ಎತ್ತಿನ ಬಂಡಿಗಳ ಬಳಕೆಯಿದೆ. ಬೀಜದ ಹೋರಿಗಳ ಸಾಂಪ್ರದಾಯಿಕ ಬೀಜದ ಹೋರಿಗಳ ಬಳಕೆಯೂ ಇದೆ. ಶೇಂಗಾ ಮುಖ್ಯ ಬೆಳೆ. ರಾಗಿ, ಜೋಳ, ತೊಗರಿ, ಹೆಸರು, ಹುರುಳಿ ಬೆಳೆಗಳಿವೆ. ವೀಳ್ಯದೆಲೆ, ಅಡಿಕೆ ಈ ಗ್ರಾಮದ ವಿಶೇಷ ಬೆಳೆಯಾಗಿದೆ. ರೇಷ್ಮೆ, ಹತ್ತಿ ಸೀಡ್ಸ್ ಬೆಳೆಗಳೂ ಇವೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೩೦೦ ಲೀ. ಹಾಲು ಸಂಗ್ರಹವಾಗುತ್ತಿದೆ.

ವೀಳ್ಯದೆಲೆ, ಶೇಂಗಾ, ಹುಣಸೆಹಣ್ಣು ಈ ಗ್ರಾಮದ ಮುಖ್ಯ ಸರಕು. ಶಿಕ್ಷಕರು, ಉಪನ್ಯಾಸಕರು, ಪೊಲೀಸ್, ಕಂದಾಯ, ಆರೋಗ್ಯ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರು ಈ ಗ್ರಾಮದಲ್ಲಿದ್ದಾರೆ. ಉಪನ್ಯಾಸಕರಾದ ರಾಮಯ್ಯ, ವೇಣುಗೋಪಾಲ, ತಿಪ್ಪೇಸ್ವಾಮಿ, ಜಿ.ವೆಂಕಟಪ್ಪ, ಹೆಚ್.ವಿ.ಗೌಡ ಈ ಗ್ರಾಮದ ಉನ್ನತ ಸರ್ಕಾರಿ ನೌಕರರಾಗಿದ್ದಾರೆ. ಬೀಡಿ ಸುತ್ತುವ, ಎಲೆ ಕಟ್ಟುವ, ಹೂ ಕಟ್ಟುವ ವಿವಿಧ ಗೃಹಕಸುಬಿನ ಹೆಂಗಸರು ಇದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯ್ತಿ ಮೇಲ್ಕುಂಟೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ.

೪ ಸ್ತ್ರೀಶಕ್ತಿ ಸಂಘ, ೪ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿದ್ದು ಮಹಿಳಾ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು ಶಾಲೆಯಲ್ಲಿ ೯೯ ಮಕ್ಕಳು, ೩ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಪ್ರತ್ಯೇಕ ಬೋರ್‌ವೆಲ್, ಕೈತೋಟ, ಕಾಂಪೌಂಡ್ ತುಂಬಾ ಅಚ್ಚುಕಟ್ಟಾದ ವ್ಯವಸ್ಥೆ ಇದೆ. ಗ್ರಾಮದ ಸಾಕ್ಷರತೆ ೬೨.೪ ರಷ್ಟಿದೆ. ಈ ಗ್ರಾಮದ ಜಿ.ವೆಂಕಟಪ್ಪ ಎಂಬ ಉಪನ್ಯಾಸಕರು ಲೇಖಕರೂ ಆಗಿದ್ದು 'ಮಡಿಲು' ಎಂಬ ಕವನ ಸಂಕಲನ ಪ್ರಕಟಿಸಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧೦ ಪೆಟ್ಟಿಗೆ ಅಂಗಡಿ, ೨ ಟೀ ಅಂಗಡಿಗಳಿವೆ. ಭೂತಪ್ಪನ ವಿಶೇಷ ದೇವಾಲಯ, ಅರಳಿಕಟ್ಟೆ, ಕಣಿವೆ ಮಾರಕ್ಕನ ದೇವಾಲಯ, ಪೌಳಿಗಳಿವೆ. ಭೂತಪ್ಪನ ದೇವಾಲಯ ಮತ್ತು ಗೋಪುರ ವಿಗ್ರಹಗಳನ್ನು ಕೆತ್ತಲಾಗಿದೆ. ಇದು ಇತ್ತೀಚಿನ ರಚನೆಯಾಗಿದೆ. ಹೊರಾಂಗಣದಲ್ಲಿ ಒಂದು ಮಠ, ಸಾಧುಗವ ತಂಗುಸ್ಥಳ, ಗದ್ದಿಗೆ ಇದೆ. ಭೂತಪ್ಪನ ಜಾತ್ರೆ ಪ್ರತಿ ಫೆಬ್ರವರಿಯಲ್ಲಿ ೨ ದಿನ ನಡೆದು ಆರತಿ, ಬಲಿ, ಹರಕೆ ಸಂಪ್ರದಾಯವಿದೆ. ಮಾರಮ್ಮನಿಗೂ ಮಹಾನವಮಿ ಸಂದರ್ಭದಲ್ಲಿ ಆರತಿ, ಬ್ಯಾಟೆ ಮಾಡುತ್ತಾರೆ. ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ ಹಬ್ಬ ಆಚರಿಸುತ್ತಾರೆ. ಈ ಗ್ರಾಮದಲ್ಲಿ ಒಂದು ಮಠವಿದ್ದು ಇದೊಂದು ಜಾತ್ಯಾತೀತ ಮಠವಾಗಿದೆ. ನೆಲಮಾಳಿಗೆಯಲ್ಲಿ ಗದ್ದುಗೆ, ಮೇಲೆ ಶಿವಲಿಂಗ ಮೂರು ಮಂಟಪಗಳಿವೆ. ಆದಿಕರ್ನಾಟಕ ಜನಾಂಗದವರೂ ಸೇರಿದಂತೆ ಎಲ್ಲ ಜಾತಿಯ ಭಜನೆ ಕಲಾವಿದರು ಸೋಮವಾರ, ಶನಿವಾರ ಕಲೆತು ರಾತ್ರಿಯೆಲ್ಲಾ ಭಜನೆ, ಪ್ರಸಾದ ವಿನಿಯೋಗವಿರುತ್ತದೆ. ಗ್ರಾಮದ ಭೂತಪ್ಪನ ಜಾತ್ರೆಯಂದು

ಗ್ರಾಮದವರಿಂದ ಊಟ ಸಂಗ್ರಹಿಸಿ ಹೊರಗಿನಿಂದ ಬರುವವರಿಗೆ ಊಟ ಬಡಿಸುವುದು ಇಲ್ಲಿನ ವಾಡಿಕೆ.

## ಹಲ್ಲೂಕುರು

ಹಲ್ಲೂಕುರು ಸಿರಾ ತಾಲ್ಲೂಕು ಕೇಂದ್ರದಿಂದ ೫ ಕಿಮೀ ದೂರದಲ್ಲಿ ಸಿರಾ-ಮಧುಗಿರಿ ಮುಖ್ಯ ರಸ್ತೆಯ ಹಲ್ಲೂಕುರು ಗೇಟಿನಿಂದ ಎಡಭಾಗದಲ್ಲಿ ೧ ಕಿ.ಮೀ ದೂರದಲ್ಲಿದೆ. ಸಿರಾದಿಂದ ಉತ್ತರ ದಿಕ್ಕಿನಲ್ಲಿರುವ ಪುರಾತನ ಗ್ರಾಮ ಕಂದಾಯ ಗ್ರಾಮವಾಗಿದ್ದು ೩೧೮.೧೨ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ.

ಗ್ರಾಮದ ಐತಿಹ್ಯದ ಪ್ರಕಾರ ಇದೊಂದು ಹೈನುಗಾರಿಕೆಗೆ ಪ್ರಸಿದ್ಧ ಊರಾಗಿ ಹಾಲು ಕರೆಯುವ ಊರು ಹಲ್ಲೂಕುರು ಆಗಿದೆ ಎಂದು ಹೇಳಲಾಗುತ್ತಿದೆ. ಈ ಗ್ರಾಮದಲ್ಲಿ ಗಂಗರ ಕಾಲದ ಕ್ರಿ.ಶ ೭೮೮ ರ ಶಾಸನ ಲಭ್ಯವಾಗಿದೆ. ಇದರಲ್ಲಿ ಈ ಗ್ರಾಮವನ್ನು ಪಾಲ್ಕುರ್ಗೆ ಎಂದು ಉಲ್ಲೇಖಿಸಿದೆ. ಆದುದರಿಂದ ಇದೊಂದು ಪ್ರಾಚೀನ ಗ್ರಾಮವಾಗಿದ್ದು ಪ್ರಾಗೈತಿಹಾಸಿಕ ಕಾಲದಿಂದ ಹಾಲ್ಲೂಗ್ಗುರು ಮುಂದೆ ಗ್ರಾಮ್ಯವಾಗಿ ಹಲ್ಲೂಕುರು ಎಂದಾಗಿದೆ. ತಗ್ಗಿನ, ನೀರು ನಿಲ್ಲುವ, ಸದಾ ಹಸಿರಿನಿಂದ ಕೂಡಿರುವ ಕಪ್ಪು ಭೂಮಿ ಇದಾಗಿದ್ದು ಹೈನುಗಾರಿಕೆಗೆ ಅತ್ಯಂತ ಪ್ರಶಸ್ತ ಸ್ಥಳವಾಗಿದೆ. ಆ ಕಾರಣದಿಂದಲೇ ಹಾಲು ಕರೆಯುವ ಊರು ಹಲ್ಲೂಕುರು ಎಂದಾಗಿರಬೇಕು.

ಈ ಗ್ರಾಮದಲ್ಲಿ ದೊಡ್ಡ ಸಮುದಾಯ ಆದಿಕರ್ನಾಟಕ ಜನಾಂಗದವರು. ಬೇಡ, ನಾಯಕ, ಈಡಿಗ, ವೀರಶೈವ, ಬ್ರಾಹ್ಮಣ ಇವು ಸಣ್ಣ ಸಮುದಾಯಗಳು. ಈ ಗ್ರಾಮಕ್ಕೆ ಪುರಾತನ ಕೆರೆಯಿದ್ದು ಅದು ಹೂಳು ತುಂಬಿಕೊಂಡು ಗಿಡಗಂಟಿಗಳು ಬೆಳೆದಿವೆ. ಗ್ರಾಮದಲ್ಲಿ ಹಿರಿಯ ಪ್ರಾಥಮಿಕ ಪಾಠಶಾಲೆ, ಅಂಗನವಾಡಿ ಕೇಂದ್ರಗಳಿದ್ದು ಸಾರಿಗೆ, ಅರಣ್ಯ, ಪೊಲೀಸ್, ಅಂಚೆ ಇಲಾಖೆಯಲ್ಲಿ ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಗ್ರಾಮದ ಆಂಜನೇಯ ದೇವಾಲಯ ಮುಜರಾಯಿ ಇಲಾಖೆಗೆ ಒಳಪಟ್ಟಿದ್ದು ರಾಮೇಶ್ವರ, ಲಕ್ಷ್ಮಿದೇವತೆ, ಮಾರಮ್ಮ, ಕೊಲ್ಲಾಪುರದಮ್ಮ, ಈರನಾಗಮ್ಮ ಈ ಹೆಸರಿನ ದೇವಾಲಯಗಳಿವೆ. ಗ್ರಾಮದಲ್ಲಿ ಒಟ್ಟು ಮೂರು ವೀರಗಲ್ಲುಗಳು ಎರಡು ಹಂತದಲ್ಲಿದ್ದು ವೀರನೊಬ್ಬನು ಬಾಣ ಹಿಡಿದು ನಿಂತ ಭಂಗಿ, ಮೊದಲ ಹಂತವಾದರೆ ಎರಡನೆಯದು ಆತನ ಯುದ್ಧದಲ್ಲಿ ಮಡಿದು ಸ್ವರ್ಗಕ್ಕೆ ಹೋಗುವ ದೇವತಾ ಸ್ತ್ರೀಯರು ಕರೆದೊಯ್ಯುವ ಚಿತ್ರಣಗಳಿವೆ. ಹುಲಿ ಬೇಟೆಯ ವೀರಗಲ್ಲು ಕುತೂಹಲಕರವಾಗಿದ್ದು ಹುಲಿ ಶೌರ್ಯವನ್ನು ಸಂಕೇತಿಸಬಹುದು. ಉಳಿದಂತೆ ಸೂರ್ಯ, ಚಂದ್ರ, ಆಕಾಶ, ನಕ್ಷತ್ರಗಳ ಪ್ರಾಕೃತಿಕ ಸೊಬಗು ಶ್ರೇಷ್ಠ ಕೆಲಸ ಮಾಡಿದ ವ್ಯಕ್ತಿ ಸೂರ್ಯ-ಚಂದ್ರ ಇರುವವರೆಗೂ ಶಾಶ್ವತ ಎಂಬುದರ ಸಂಕೇತವಾಗಿದೆ.

ಗ್ರಾಮದಲ್ಲಿ ಹಸು, ಎಮ್ಮೆ, ಎತ್ತು, ಕುರಿ, ಮೇಕೆಗಳನ್ನು ಸಾಕುತ್ತಿದ್ದು ಪೊದೆ, ಮರಗಳ ಈ ಪರಿಸರದಲ್ಲಿ ವ್ಯಾಪಕವಾಗಿರುವುದರಿಂದ ಕಾಡುಪ್ರಾಣಿಗಳಾದ ಮೊಲ, ಮುಂಗುಸಿ, ಹಾವು, ಉಡ, ಬೆಕ್ಕು, ನರಿ, ಕಾಡುಹಂದಿ ಕಂಡುಬರುತ್ತವೆ. ಕೋಳಿ ಸಾಕುಪಕ್ಷಿಯಾದರೆ ಗಿಳಿ, ಕೌಜುಗ, ಗೊರವ, ಬೆಳವ, ಪಾರಿವಾಳ, ಗೂಬೆ, ಕಾಗೆ, ಗುಬ್ಬಚ್ಚಿ ಮೊದಲಾದ ಕಾಡು ಪಕ್ಷಿಗಳು ಕಂಡುಬರುತ್ತವೆ.

ಸರಾಸರಿ ವಾಡಿಕೆ ಮಳೆ ೪೮೫ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೆರೆಯಿಂದ ನೀರಿನ ಸೌಲಭ್ಯ ಪಡೆದರೆ ಕುಡಿಯುವುದಕ್ಕೆ ಕೊಳವೆ ಬಾವಿಗಳ ಮೂಲಕ ಕೊಳಾಯಿಗಳಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ಗ್ರಾಮದಲ್ಲಿ ೧೦ ನಲ್ಲಿಗಳಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ, ದೋಸೆ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಬಂಡಿಯೊಂದಿಗೆ ಟ್ರ್ಯಾಕ್ಟರ್, ಸ್ಕೂಟರ್ ಬಳಕೆಯೂ ಇದೆ. ರಾಗಿ, ಭತ್ತ, ಅಲಸಂದೆ, ಅವರೆ ಮುಖ್ಯ ಆಹಾರ ಬೆಳೆಗಳು. ಹುಣಸೆ ಹಣ್ಣು ವ್ಯಾಪಾರ, ಬೀಡಿ ಕಟ್ಟುವುದು ಇದೆ. ಹತ್ತಿ, ತೆಂಗು ವಿರಳವಾಗಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿತ್ರದುರ್ಗ ಲೋಕಸಭೆ, ಮದಲೂರು ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಪಂಚಾಯ್ತಿ, ಮಾಗೋಡು ಗ್ರಾಮಪಂಚಾಯ್ತಿಯ ವ್ಯಾಪ್ತಿಗೆ ಒಳಪಟ್ಟಿದೆ.

ಈ ಗ್ರಾಮದಲ್ಲಿ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ಮನೆಗಳು ಭಾಗ್ಯಜ್ಯೋತಿ ಯೋಜನೆಯ ೧೪ ಫಲಾನುಭವಿಗಳು ಅಧಿಕ ಸಂಖ್ಯೆಯಲ್ಲಿದ್ದಾರೆ.

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಗ್ರಾಮದಲ್ಲಿ ೩ ಅಂಗಡಿಗಳು, ಟೀ ಅಂಗಡಿಗಳಿವೆ. ೧೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಆಂಜನೇಯ, ಲಕ್ಷ್ಮಿ, ರಾಮೇಶ್ವರ ದೇವರ ಉತ್ಸವ ದಸರಾ ಸಂದರ್ಭದಲ್ಲಿ ವಿಶೇಷವಾಗಿರುತ್ತದೆ. ಗ್ರಾಮದೇವತೆಯಾದ ಮಾರಮ್ಮನ ಜಾತ್ರೆ ಊರ ಹಬ್ಬವಾಗಿ ನೆರವೇರುತ್ತದೆ. ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ದಸರಾ, ಗೌರಿ, ಶಿವರಾತ್ರಿ, ರಾಮನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ದೊಡ್ಡ ಕೋಳಿ ಸಾಕಾಣಿಕೆಯ ಕೇಂದ್ರವಿದ್ದು ಇದೊಂದು ವ್ಯಾಪಾರಿ ಕೇಂದ್ರವೂ ಆಗಿದೆ. ಇಟ್ಟಿಗೆ ಫ್ಯಾಕ್ಟರಿ ಇದೆ.

ಸಿರಾ–ಮಧುಗಿರಿಗೆ ಸಂಪರ್ಕ ರಸ್ತೆ ಇದ್ದು ಬಸ್ ವ್ಯವಸ್ಥೆಗೆ ಪದ್ಮಾಪುರ ಗೇಟಿಗೆ ಬರಬೇಕಿದೆ.

## ಹಲ್ಲೂರು ಕಾವಲ್

ಹಲ್ಲೂರು ಕಾವಲ್ ಸಿರಾ ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ ದೂರದಲ್ಲಿ ಸಿರಾ–ಮಧುಗಿರಿ ಮುಖ್ಯ ರಸ್ತೆಯ ಎಡಭಾಗದಲ್ಲಿದೆ. ಸಿರಾ ನಗರದಿಂದ ಉತ್ತರ ದಿಕ್ಕಿಗಿದೆ. ಇದು ಪುರಾತನ ಹಲ್ಲೂರು ಕಂದಾಯ ಗ್ರಾಮಕ್ಕೆ ಮಜರೆ ಯಾಗಿದ್ದು, ಹಲ್ಲೂರಿಗೆ ಹೊಂದಿಕೊಂಡಿದೆ. ಇದರ ಭೌಗೋಳಿಕ ವಿಸ್ತೀರ್ಣ ೩೧೮.೧೨ ಹೆಕ್ಟೇರ್ ಮುಖ್ಯ ಗ್ರಾಮದಲ್ಲಿ ಹಂಚಿಕೆಯಾಗಿದೆ.

ಸಿರಾ ದೊಡ್ಡ ಕೆರೆ ಬಯಲು. ಹಾಗೂ ಹಲ್ಲೂರು ಕೆರೆಯ ಮುಂಗೋಡು ಗಳಿಂದ ಆರಂಭದಲ್ಲಿ ಹುಲ್ಲುಗಾವಲು ಆಗಿದ್ದು ನಂತರ ವ್ಯವಸಾಯ ಭೂಮಿಯಾಗಿ ಪರಿವರ್ತನೆಯಾಗಿದೆ. ಹಾಲೂ ಮೂಲದಿಂದಲೇ ಹಾಲು ಕರೆಯುವ ಊರು ಹಲ್ಲೂರು ಎಂದು ಸಂಕ್ಷಿಪ್ತವಾಗಿದ್ದು, ಇದರ ಸಮೀಪದಲ್ಲಿ ಅವರವರ ಜಮೀನು ಹಾಗೂ ಹೊರಗಡೆಯಿಂದ ಬಂದವರು ಮನೆ ಕಟ್ಟಿಕೊಂಡು ವಾಸಿಸುವ ಕಾರಣದಿಂದಾಗಿ ಇದೊಂದು ಜನವಸತಿ ಪ್ರದೇಶವಾಗಿದೆ. ಇಲ್ಲಿ ೯ ಮನೆಗಳಿದ್ದು, ೪೫ ಜನಸಂಖ್ಯೆ ಇದೆ.

ಶಿಕ್ಷಣಕ್ಕೆ ಮುಖ್ಯ ಗ್ರಾಮದೊಂದಿಗೆ ಸಂಪರ್ಕ ಹೊಂದಿದ್ದು, ಮಕ್ಕಳು ಇಲ್ಲಿಗೆ ಬರುತ್ತಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಗ್ರಾಮದಲ್ಲಿ ಮಾರಮ್ಮನ ಪೌಳಿ ಇದ್ದು, ಹಲ್ಲೂರಿನಲ್ಲಿ ಆಂಜನೇಯ, ಮಾರಮ್ಮನ ಹಬ್ಬದಂದೇ ಇಲ್ಲಿಯೂ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯ ವಿದೆ. ಇಲ್ಲಿನ ವಸತಿಗಳಲ್ಲಿ ಹೆಂಚಿನ, ಕಡಪ ಕಲ್ಲಿನ ಮನೆಗಳಿದ್ದು, ಕೆಲವರು ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ಫಲಾನುಭವಿಗಳು ಇದ್ದಾರೆ.

೬ ಕೋಳಿ ಸಾಕಾಣಿಕೆ ಕೇಂದ್ರ, ೬ ಇಟ್ಟಿಗೆ ಭಟ್ಟಿಗಳಿವೆ. ಕೆರೆಯ ಮುಂಗೋಪಿಗೆ ಹೊಂದಿಕೆಯಾಗಿದ್ದು, ಕೆದರಿಕೊಂಡಂತೆ ಮನೆಗಳು ರಚನೆಯಾಗಿವೆ.

## ಹನುಮಂತನಗರ

ಹನುಮಂತನಗರ (ಆಂಜನೇಯ ದೇವಸ್ಥಾನ) ಸಿರಾ ತಾಲ್ಲೂಕು ಕೇಂದ್ರ ದಿಂದ ಪಶ್ಚಿಮಕ್ಕೆ ೩ ಕಿ.ಮೀ. ದೂರದಲ್ಲಿದೆ. ಸಿರಾ–ಹಿರಿಯೂರು ರ‍್ಯಾಷ್ಟ್ರಿಯ ಹೆದ್ದಾರಿ ೪ರಲ್ಲಿದ್ದು, ಇದು ಮಾನಂಗಿಯ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೬೫೦.೯೮ ಹೆಕ್ಟೇರ್ ಅಜ್ಜಮ್ಮನ ಪಾಳ್ಯ ಮುಖ್ಯ ಗ್ರಾಮದೊಂದಿಗೆ ಹಂಚಿಕೆಯಾಗಿದೆ. ಆಂಜನೇಯನ ದೇವಸ್ಥಾನವಿದ್ದು, ಮಾನಂಗಿ ತಾಂಡ, ಕಾಡಜ್ಜನ ಪಾಳ್ಯ, ಆರು ಗ್ರಾಮಕ್ಕೆ ಸೇರಿದ್ದಾಗಿತ್ತು. ಮೊದಲಿಗೆ ಈ ಗ್ರಾಮಕ್ಕೆ ಜನರು ಶ್ರಾವಣ ಶನಿವಾರದಂದು, ಆಂಜನೇಯನಿಗೆ ಆರತಿ ಮಾಡುವ ಪರೇವು ಸೇವೆ ಮಾಡುತ್ತಿದ್ದರು. ರ‍್ಯಾಷ್ಟ್ರಿಯ ಹೆದ್ದಾರಿಗೆ ಹೊಂದಿ ಕೊಂಡಿದ್ದರಿಂದ ರಸ್ತೆ ಸಂಚಾರದ ಲಾರಿ ಚಾಲಕರು ಇಲ್ಲಿ ವಿಶ್ರಮಿಸುವ, ಮುಖ ತೊಳೆಯುವುದನ್ನು ಮೊದಲಿಗೆ ಆರಂಭಿಸಿದರು. ಹೀಗೆ ಲಾರಿ ಚಾಲಕರ, ತಂಗುದಾಣವಾಗಿ, ದೇವರಿಗೆ ಪೂಜೆ, ಪುನಸ್ಕಾರ, ಹರಕೆ ಸಂಪ್ರದಾಯ ಬೆಳೆಯುತ್ತಾ ಬಂದು ಇಂದು ಒಂದು ಗ್ರಾಮ ಸ್ವರೂಪ ಪಡೆದುಕೊಂಡಿದೆ. ಎಲ್ಲಾ ನಾಗರೀಕ ಸೌಲಭ್ಯ ಹೊಂದಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿರುವ ಇಲ್ಲಿ ಉತ್ತರಕ್ಕೆ ಕಾಡಜ್ಜನ ಕಟ್ಟೆ ಇದೆ. ದಕ್ಷಿಣಕ್ಕೆ ಕುರುಚಲು ಗಿಡಗಳು, ಹಳ್ಳದಿಣ್ಣೆ ಭೂ ಪ್ರದೇಶ, ಹೀಗಾಗಿ ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ತೋಳ, ಉಡ, ಕಾಡುಬೆಕ್ಕು, ಚಿರತೆ ಕಂಡು ಬರುತ್ತವೆ. ಗ್ರಾಮದಲ್ಲಿ ಸಾಕು ಪ್ರಾಣಿಗಳಾದ ಹಸುಗಳನ್ನು ಸಾಕಿದ್ದಾರೆ. ನಾಯಿ, ಬೆಕ್ಕು, ಇತರ ಕಾಡು ಪ್ರಾಣಿಗಳು ಇವೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಬಾವುಲಿ, ಕಾಗೆಪಿಳ್ಳ, ಕಾಗೆ, ಬೆಳವ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿಗಳಿವೆ. ಕೋಳಿಯನ್ನು ಮಾಂಸ ಹಾಗೂ ಮೊಟ್ಟೆಗಾಗಿ ಸಾಕಲಾಗಿದೆ.

ಬಯಲು ಪ್ರದೇಶ. ವಾರ್ಷಿಕ ಸರಾಸರಿ ಮಳೆ ಪ್ರಮಾಣ ಶೇ. ೪೩೪ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮–೪೦೦ ಸೆಂ.ರಷ್ಟು ಇದ್ದು, ಚಳಿಯು ೧೨–೧೩೦ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕಿರು ನೀರು ಯೋಜನೆ ಹಾಗೂ ಅಂಜಿನಮ್ಮ ದೇವಸ್ಥಾನ ಸಮಿತಿಯವರ ಟ್ಯಾಂಕ್ ಹಾಗೂ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ಮುಸ್ಲಿಂ, ನಾಯಕರು, ಲಂಬಾಣಿ, ಕುರುಬರು, ಪಿಸಾಲರು, ಕಿರುಸಮುದಾಯಗಳಾಗಿವೆ.

ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದ್ದು, ವ್ಯವಹಾರಿಕವಾಗಿ ತೆಲುಗು, ಉರ್ದು, ಹಿಂದಿ, ಲಂಬಾಣಿ ಭಾಷೆಯಲ್ಲಿ ಮಾತನಾಡುತ್ತಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು ಸೇರಿ ೪೯ ಮನೆಗಳಿದ್ದು, ಇಲ್ಲಿ ಜನತಾ, ಆಶ್ರಯ, ಅಂಬೇಡ್ಕರ್ ಆವಾಸ್, ವಾಜಪೇಯಿ ಯೋಜನೆ, ವಸತಿ ಯೋಜನೆಯ ಅಡಿಯಲ್ಲಿ ಇದ್ದು, ಕೊಳಚೆ ನಿರ್ಮೂಲನೆ ಮಂಡಳಿಯ ಗೃಹ ಯೋಜನೆಯ ೧೬ ಫಲಾನುಭವಿಗಳೂ ಇದ್ದಾರೆ. ೪೦ ಮನೆಗಳು ಶೌಚಾಲಯದ ಸೌಲಭ್ಯವಿದೆ. ಉಳಿದವರು ಬಯಲನ್ನೇ ಅವಲಂಬಿಸಿದ್ದಾರೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕೃಷಿ ಬದುಕು ಕಡಿಮೆ. ವ್ಯಾಪಾರ, ಉದ್ಯೋಗಿಗಳು ಅಧಿಕ. ಹಾಗಾಗಿ ವ್ಯವಸಾಯವಾಗಿ ರಾಗಿ, ಶೇಂಗಾ, ಭತ್ತ, ತೊಗರಿ, ಹುರುಳಿ ಬೆಳೆಯುತ್ತಾರೆ. ತೆಂಗಿನ, ಅಡಿಕೆ ತೋಟವೂ ಇದೆ. ತೆಂಗು, ಅಡಿಕೆ, ಹೊಂಗೆ ಬೀಜ, ಹೂ ಕಟ್ಟುವುದು ಮುಖ್ಯ ವ್ಯಾಪಾರದ ಸರಕುಗಳಾಗಿವೆ. ರೇಷ್ಮೆ ಕೃಷಿ ಆನಂದಪ್ಪ, ಹಾಗೂ ಶಿಕ್ಷಕಿ ಬಾನುಮತಿ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಮಧ್ಯಮ ನೆನಗಾರಿಕೆಯಾಗಿ ಸ್ಯಾಂಡಲ್ ಅಗರಬತ್ತಿ, ಊಟದ ಎಲೆಗಳ ತಯಾರಿಕೆ, ಅಡಿಕೆ ಊಟದ ತಟ್ಟೆ, ಹಾಗೂ ಊಟದ ಪೇಪರ್ ಪ್ಲೇಟ್ ತಯಾರಿಕಾ ಕಾರ್ಖಾನೆಗಳಿವೆ. ಒಂದು ಪೆಟ್ರೋಲ್ ಬಂಕ್ ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭೆ ಹಾಗೂ ಮದಲೂರು ಜಿಲ್ಲಾ ಪಂಚಾಯಿತಿ, ಮಾನಂಗಿ ತಾಲ್ಲೂಕು ಹಾಗೂ ಭೂವನಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರಗಳಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭೆ ಕ್ಷೇತ್ರವಾಗಿದೆ. ಮಾನಂಗಿಯಿಂದ ಅಂಚೆ ಸಂಪರ್ಕ ಹೊಂದಿದೆ.

ಶೈಕ್ಷಣಿಕವಾಗಿ ಒಂದು ಆಂಜನೇಯ ದೇವಸ್ಥಾನ ಸಮಿತಿಯಿಂದ ಪೂರ್ವ ಪ್ರಾಥಮಿಕ ಹಂತದಿಂದ ೭ನೇ ತರಗತಿಯವರೆಗೆ ಕನ್ನಡ–ಇಂಗ್ಲೀಷ್ ಮಾಧ್ಯಮದಲ್ಲಿ ಶಾಲೆ ನಡೆಯುತ್ತದೆ. ಆಂಜನೇಯ ಶಿಕ್ಷಕರ ತರಬೇತಿ ಕಾಲೇಜು ಸದ್ಯಕ್ಕೆ ಹಾಜರಾತಿ ಕೊರತೆಯಿಂದಾಗಿ ಮುಚ್ಚಿದೆ. ಮಾತೃಶ್ರೀ ಐಟಿಐ ಕಾಲೇಜು ಇದೆ. ಈ ಗ್ರಾಮದ ಶೈಕ್ಷಣಿಕ ಪ್ರಮಾಣಶೇ. ೮೭ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಪ್ರಸಿದ್ಧವಾದ ಆಂಜನೇಯ ದೇವಾಲಯವಿದ್ದು, ಇದು ಕಾಡುಜೈನ ಪಾಳ್ಯ, ಅಜ್ಜಯ್ಯನ ಪಾಳ್ಯ, ಮಾನಂಗಿ ತಾಂಡ, ಹಾಗೂ ಮಾನಂಗಿ ಗ್ರಾಮಗಳ ಲೆಕ್ಕದಲ್ಲಿ ಹಂಚಿಕೆಯಾಗಿ ಒಂದು ಟ್ರಸ್ಟ್ ಮಾಡಿಕೊಳ್ಳಲಾಗಿದೆ. ಟ್ರಸ್ಟ್ ಮೂಲಕ ಶಿಕ್ಷಣ ಸಂಸ್ಥೆ, ಕುಡಿಯುವ ನೀರು, ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದೆ.

ಆಂಜನೇಯ ದೇವರಿಗೆ, ದಾರಿಹೋಕ ಪ್ರಯಾಣಿಕರ ಸೇರಿದಂತೆ ತಮಿಳುನಾಡು, ಮೂಲಗಳಿಂದಲೂ ಭಕ್ತರಿದ್ದಾರೆ. ದೇವಾಲಯದ ಹೆಸರಲ್ಲಿ ಹೋಟೆಲ್, ಅಂಗಡಿ ಮಳಿಗೆ, ಡಾಬಾ ನಿರ್ಮಾಣವಾಗಿದೆ. ಶ್ರಾವಣ ಸೋಮವಾರ ವಿಶೇಷ ಪೂಜೆ, ಅನ್ನ ಸಂತರ್ಪಣೆ ಇರುತ್ತದೆ.

ಇದರ ಸಮೀಪದಲ್ಲೇ ೬ ಡಾಬಾ ಹೋಟೆಲ್, ೩೯ ಅಂಗಡಿಗಳು, ೧೦ ಟೀ ಹೋಟೆಲ್‌ಗಳು– ಗರಿಗಳ ಗುಡಿಸಲುಗಳ ಅಂಗಡಿಗಳಿವೆ. ಶಾಖಾ ಮಠವಿದ್ದು, ಧಾರ್ಮಿಕ ಚಟುವಟಿಕೆ ನಡೆಯುತ್ತದೆ. ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ, ರಾಮನವಮಿ, ಹನುಮ ಜಯಂತಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ.

## ಹನುಮಂತಪುರ

ಹನುಮಂತಪುರ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಸಿರಾ–ಅಮರಾಪುರ ರಸ್ತೆಯ ಎಡಬದಿಗೆ ೩ ಕಿಮೀ ದೂರದಲ್ಲಿದೆ. ಇದೊಂದು ಓಜಗುಂಟೆಯ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೪೫.೨ ಹೆಕ್ಟೇರ್ ಇದೆ. ಬೋವಿ ಜನಾಂಗದವರು ಮೊದಲು ಇಲ್ಲಿ ವಾಸಿಸುತ್ತ ಆಂಜನೇಯ ದೇವಸ್ಥಾನವನ್ನು ಪೌಳಿಯ ರೂಪದಲ್ಲಿ ಸ್ಥಾಪಿಸಿ ಅದೇ ಹೆಸರಿನಲ್ಲಿ ತಮ್ಮ ವಾಸಸ್ಥಳಕ್ಕೆ ಹನುಮಂತಪುರ ಎಂದು ಕರೆದುಕೊಂಡರು.

ಎಡಬದಿಗೆ ಸುವರ್ಣಮುಖಿ ಹಳ್ಳ, ಪಶ್ಚಿಮಕ್ಕೆ ಸಂಗಮ ಪಿಕಪ್, ಉತ್ತರಕ್ಕೆ ರಸ್ತೆ, ಸುತ್ತಲೂ ತೋಟ, ಕುರುಚಲು ಗಿಡ ಇದು ಹನುಮಂತಪುರದ ಪರಿಸರ. ಇಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ, ಕರಡಿ ಕಂಡುಬರುತ್ತದೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳು.

ಕಾಡುಪಕ್ಷಿಗಳಾಗಿ ನವಿಲು, ಗೀಜುಗ, ಗುಬ್ಬಚ್ಚಿ, ಗೂಬೆ, ಕೋಗಿಲೆ, ಕಾಗೆ, ಗೊರವಂಕ, ಕೊಕ್ಕರೆ ಕಂಡುಬರುತ್ತವೆ.

ವಾರ್ಷಿಕ ವಾಡಿಕೆ ಮಳೆ ೪೩೪ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಪೂರ್ವಕ್ಕೆ ಒಂದು ಕಟ್ಟೆ ಇದ್ದು ತುಂಬುವುದು ದುರ್ಲಭವಾಗಿದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಕೈಪಂಪು ಒಂದು ಸಿಸ್ಟರ್ನ್‌ಗಳಿವೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಬೋವಿ ಜನಾಂಗ ದೊಡ್ಡ ಸಮುದಾಯವಾಗಿದೆ. ಕುಂಚಿಟಿಗ, ಆದಿಕರ್ನಾಟಕ, ಸಿಳ್ಳೆಕ್ಯಾತ, ಬಣಜಿಗ, ಆದಿದ್ರಾವಿಡ ಜನಾಂಗ ಕಿರು ಸಮುದಾಯಗಳಾಗಿವೆ. ವಿವಿಧ ಪ್ರಕಾರದ ೪೬ ಮನೆಗಳಿದ್ದು ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಾಗಿವೆ. ಇವು ವಸತಿ ಯೋಜನೆಯಾದ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಯಡಿ ರಚನೆಯಾಗಿವೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ಫಲಾನುಭವಿಗಳಿದ್ದಾರೆ. ೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ತೊಗರಿ, ಹುರುಳಿ, ಜೋಳ ಬೆಳೆಯುತ್ತಾರೆ. ಶೇಂಗಾ, ಹುಣಸೆಹಣ್ಣಿನ ವ್ಯಾಪಾರವಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಕೊಟ್ಟ ಗ್ರಾಮಪಂಚಾಯ್ತಿ ಕ್ಷೇತ್ರಕ್ಕೆ ಸೇರಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಗಾಗಿದೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಕೇಂದ್ರಗಳಿವೆ. ಅಂಗನವಾಡಿ, ಸರ್ಕಾರಿ ಕಿರಿಯ ಶಾಲೆಯಿದ್ದು ಶಾಲೆಯಲ್ಲಿ ೩೫ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೪.೬ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದೇವತೆ ದೊಡ್ಡಮ್ಮ, ಆದಿದೇವ ಆಂಜನೇಯ, ತಿಮ್ಮಪ್ಪ ದೇವರ ಗುಡಿಗಳಿವೆ. ಗ್ರಾಮದ ಹೊರಗೆ ಹೊಳೆದಂಡೆಗೆ ಶನಿಮಹಾತ್ಮನ ಪುಟ್ಟ ಪೌಳಿಯಿದೆ. ದೊಡ್ಡಮ್ಮನ ಊರಹಬ್ಬವಾಗಿ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ, ಹಬ್ಬಗಳನ್ನು ವಿಶೇಷವಾಗಿ ಆಚರಿಸಲಾಗುತ್ತಿದೆ. ಸಿರಾ–ಅಮರಾಪುರ ಮುಖ್ಯ ರಸ್ತೆಯಿದ್ದು ಸಂಚಾರಕ್ಕೆ ಉತ್ತಮ ಸಂಪರ್ಕವಿದೆ.

## ಹೆಗ್ಗನಹಳ್ಳಿ

ಹೆಗ್ಗನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೬ ಕಿ.ಮೀ. ದೂರದಲ್ಲಿದೆ. ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿಯ ಬಲ–ಎಡ ಎರಡೂ ಬದಿಗೆ ಹೆಗ್ಗನಹಳ್ಳಿ ಗ್ರಾಮ ಹಂಚಿಕೆಯಾಗಿದೆ. ಇದು ಯಲಿಯೂರು ಮುಖ್ಯ ಗ್ರಾಮದ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೨೨೮.೦೩ ರಷ್ಟಿದೆ. ಇದಕ್ಕೆ ಹೊಂದಿಕೊಂಡಂತೆ ಅನತಿ ದೂರದಲ್ಲಿ ಒಂದು ಕಾಡುಗೊಲ್ಲರ ಬುಡಕಟ್ಟು ಗ್ರಾಮವಿದೆ. ಹೆಗ್ಗ, ವಗ್ಗ, ಗೊಗ್ಗ, ಗೊರವ ಮೂಲದ ಪದಗಳು ಹೆಗ್ಗಪ್ಪ, ವಗ್ಗಪ್ಪ, ಗೊರಪ್ಪ ಎಂಬ ಹೆಸರುಗಳು ಮೈಲಾರಲಿಂಗನ ಪರಂಪರೆಯಲ್ಲಿ ವ್ಯಾಪಕವಾಗಿದೆ. ಆದುದರಿಂದ ಹೆಗ್ಗನಹಳ್ಳಿ ಎಂಬುದು ಗೊಗ್ಗ – ಗೊರವ ಮೂಲದಿಂದ ಬಂದಿದೆ. ಈ ಗ್ರಾಮದ ಅಧಿದೈವ ಮೈಲಾರಲಿಂಗೇಶ್ವರ.

ಬೇಡರು, ಆದಿಕರ್ನಾಟಕ, ಕುರುಬರು, ಮೈಲಾರದೇವರ ಒಕ್ಕಲುಗಳಾಗಿದ್ದಾರೆ. ಗೊರವ ದೀಕ್ಷೆ ಪಡೆದ ನಾಲ್ವರು ಈ ಗ್ರಾಮದಲ್ಲಿರುವುದು ವಿಶೇಷ. ಮಲ್ಲಣ್ಣ, ಮಹಾಲಿಂಗಯ್ಯ, ಗೊರವಯ್ಯ, ಬೀರಣ್ಣ ಇವರು ಗೊರವರ ಕಲೆಯ ಈ ಗ್ರಾಮದ ಕಲಾವಿದರು. ಇಂಥ ಅನ್ವರ್ಥ ರೂಪವಾಗಿ ಹೆಗ್ಗನಹಳ್ಳಿ ಹೆಸರು ಬಂದಿದೆ. ಗೊರವನಹಳ್ಳಿಯ ರೂಪವಾಗಿ ಹೆಗ್ಗನಹಳ್ಳಿ ಎಂದಾಗಿದೆ.

ಇದರ ಭೌಗೋಳಿಕ ವ್ಯಾಪ್ತಿ ೨೨೮.೦೩ ರಷ್ಟಿದ್ದು ಇದರ ಉಪಗ್ರಾಮವಾಗಿ ಗೊಲ್ಲರಹಟ್ಟಿ ಇದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಗ್ರಾಮ ತಗ್ಗಿನ ಪ್ರದೇಶವಾಗಿದ್ದು ಕೊರಕಲು, ತೋಟಗಾರಿಕೆ ಪೊದೆ, ಗಿಡಗಳಿಂದ ಕೂಡಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ಮೊಲ, ಮುಂಗುಸಿ, ಕಾಡುಹಂದಿ, ಮುಂಗುಸಿ ಕಂಡುಬರುತ್ತವೆ. ಗ್ರಾಮದಲ್ಲಿ ಕುರಿ, ಮೇಕೆ, ಹಸು, ಎತ್ತುಗಳನ್ನು ಸಾಕಲಾಗುವುದು. ಕೋಳಿ ಸಾಕುಪ್ರಾಣಿಯಾಗಿದೆ. ಈ ಪರಿಸರದಲ್ಲಿ ಪಕ್ಷಿಗಳಾದ ಕೋಗಿಲೆ, ಕಾಗೆ, ಕೊಕ್ಕರೆ, ಗಿಳಿ, ಗೀಜುಗ, ಗೊರವಂಕ, ಗುಬ್ಬಿ, ಗೂಬೆ, ಹದ್ದು ಗರುಡ ಪಕ್ಷಿಗಳು ಕಂಡುಬರುತ್ತವೆ.

ಹೆಚ್ಚು ಬಿಸಿಲು, ಕಡಿಮೆ ಮಳೆಯ ಈ ಪರಿಸರದಲ್ಲಿ ವಾಡಿಕೆ ಮಳೆ ೪೬೦ ಮಿಮೀ ಆಗಿದ್ದು ಉಷ್ಣಾಂಶ ೩೭–೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ೧೫ ಕೊಳವೆ ಬಾವಿಗಳಿದ್ದು ಕೃಷಿಗೆ ಬಳಕೆಯಾಗುತ್ತಿದೆ. ಕುಡಿಯಲು ಗ್ರಾಮ ಪಂಚಾಯ್ತಿಯ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಗ್ರಾಮದ ಪೂರ್ವಕ್ಕೆ ತುರುಕನಕಟ್ಟೆ ಇದ್ದು ಇದು ಕಡವಿಗೆರೆ ವ್ಯಾಪ್ತಿಗೆ ಬರುತ್ತದೆ. ಸಿರಾ ಮುಸಲ್ಮಾನ ಅಧಿಕಾರಿಯೊಬ್ಬ ಕಡವಿಗೆರೆಯ ಕರಿಯಮ್ಮನ ಶಕ್ತಿ, ಪವಾಡಕ್ಕೆ ಮನಸೋತು ಈ ಕಟ್ಟೆ ಕಟ್ಟಿಸಿದ ಕಾರಣ ತುರುಕನಕಟ್ಟೆ ಎಂದು ಕರೆಯಲಾಗುವುದು. (ಗಮನಿಸಿ: ಡಾ॥ಚಿಕ್ಕಣ್ಣ ಯಣ್ಣೆಕಟ್ಟೆ – ತುಮಕೂರು ಜಿಲ್ಲೆ ಜಾನಪದೀಯ ಅಧ್ಯಯನ, ೨೦೦೧) ಗ್ರಾಮದಲ್ಲಿ ೨ ಕಿರು ಟ್ಯಾಂಕ್‌ಗಳಿದ್ದು ೨ ಕೈಪಂಪುಗಳಿವೆ.

ಬೇಡನಾಯಕರು ಇಲ್ಲಿ ದೊಡ್ಡ ಸಮುದಾಯವಾಗಿದ್ದು ಕುರುಬರು, ಆದಿಕರ್ನಾಟಕ ಕಿರುಸಮುದಾಯವಾಗಿದೆ. ಕನ್ನಡ ಮನೆಮಾತು. ವಿವಿಧ ಪ್ರಕಾರಗಳ ೫೩ ಮನೆಗಳಿದ್ದು ಅವುಗಳು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದವುಗಳಾಗಿದೆ. ಒಟ್ಟು ಜನಸಂಖ್ಯೆ ೨೪೩ ಇದ್ದು ೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ಮಿನಿಬಸ್ ಇದೆ. ದ್ವಿಚಕ್ರ ವಾಹನಗಳಿದೆ. ಶೇಂಗಾ ಮುಖ್ಯಬೆಳೆ. ರಾಗಿ, ಭತ್ತ, ತೊಗರಿ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಗಳಾದ ಬಟನ್ಸ್, ಚೆಂಡುಹೂ, ತರಕಾರಿ ಬೆಳೆಯುತ್ತಾರೆ. ತೆಂಗು, ಅಡಿಕೆ ತೋಟಗಳು ಇವೆ. ಶೇಂಗಾ, ಹುಣಸೆಹಣ್ಣು ವ್ಯಾಪಾರಿ ಬೆಳೆಗಳು. ಇಬ್ಬರು ಸರ್ಕಾರಿ ನೌಕರರಿದ್ದಾರೆ. ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯಿತಿ, ಯಲಿಯೂರು ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಇಬ್ಬರು ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ.

೨ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಗಳಿದ್ದು ೪೪ ಮಕ್ಕಳಿದ್ದು ೨ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೬೪.೮% ರಷ್ಟಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿ, ಒಂದು ಟೀ ಅಂಗಡಿ ಇದೆ. ಮೈಲಾರಲಿಂಗ ಈ ಗ್ರಾಮದ ಅಧಿದೇವತೆ. ಪ್ರತಿವರ್ಷ ಮಹಾನವಮಿ ದಿನ ದೋಣಿಸೇವೆ ಉತ್ಸವ ನಡೆಯುತ್ತಿದೆ. ಆಂಜನೇಯ, ತಿಪ್ಪೇಸ್ವಾಮಿ ದೇವಾಲಯಗಳಿವೆ. ಕರಿಯಮ್ಮ ಗ್ರಾಮದೇವತೆಯಾಗಿದ್ದು ಊರಹಬ್ಬ ಮಾಡುತ್ತಾರೆ. ಬಲಿ, ಬೇಟೆ, ಹರಕೆ ಸಂಪ್ರದಾಯಗಳಿವೆ. ಶಿವರಾತ್ರಿ, ಯುಗಾದಿ, ದೀಪಾವಳಿ, ಮಹಾನವಮಿ ಹಬ್ಬ ಆಚರಿಸುತ್ತಾರೆ. ಸಿರಾ–ತುಮಕೂರಿಗೆ ರ್‍ಾಷ್ಟ್ರೀಯ ಹೆದ್ದಾರಿಯ ಸಂಪರ್ಕ ಹೊಂದಿದೆ.

## ಹೆಗ್ಗನಹಳ್ಳಿ ಗೊಲ್ಲರಹಟ್ಟಿ

ಹೆಗ್ಗನಹಳ್ಳಿ ಉಪಗ್ರಾಮವಾದ ಈ ಕಾಡುಗೊಲ್ಲರಹಟ್ಟಿಯು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೬ ಕಿ.ಮೀ ದೂರದಲ್ಲಿದೆ. ಇದೊಂದು ಯಲಿಯೂರಿನ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೪೩.೭ ಹೆಕ್ಟೇರ್ ಆಗಿದೆ. ಮರಳುಮಿಶ್ರಿತ ಕಂದುಮಣ್ಣನ್ನು ಹೊಂದಿದ್ದು ಈ ಪರಿಸರದಲ್ಲಿ ನರಿ, ಮೊಲ, ಕಾಡುಹಂದಿ ಕಂಡುಬರುತ್ತದೆ ಗ್ರಾಮದಲ್ಲಿ ಕುರಿ, ಹಸು, ಮೇಕೆ, ಕತ್ತೆಯನ್ನು ಸಾಕಿದ್ದಾರೆ. ಕೋಳಿ ಸಾಕುಪ್ರಾಣಿ. ಈ ಪರಿಸರದಲ್ಲಿ ಗಿಳಿ, ಗೂಬೆ, ಗೊರವಂಕ, ಕೊಕ್ಕರೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ವಾರ್ಷಿಕ ವಾಡಿಕೆ ಮಳೆ ೪೫೧ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ಕಿರುನೀರು ಯೋಜನೆಯಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ಉಳಿದಂತೆ ೧೩ ಕೊಳವೆ ಬಾವಿಗಳಿದ್ದು ಕೃಷಿ ಕೆಲಸಕ್ಕೆ ಬಳಸಲಾಗುತ್ತಿದೆ

ಕಾಡುಗೊಲ್ಲರು ಮಾತ್ರ ವಾಸಿಸುವ ಈ ಬುಡಕಟ್ಟು ಗ್ರಾಮದಲ್ಲಿ ೪೮ ಮನೆಗಳಿವೆ. ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿದ್ದು ಗ್ರಾಮದಲ್ಲಿ ಕನ್ನಡ ಮನೆಮಾತಾಗಿದೆ. ಜನತಾ, ಆಶ್ರಯ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಸ್ಕೂಟರ್ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ.

ಉಪಬೆಳೆಗಳಾಗಿ ರಾಗಿ, ಭತ್ತ, ತೊಗರಿ, ಹುರುಳಿ ಬೆಳೆಯುತ್ತಾರೆ. ಶೇಂಗಾ, ಹುಣಸೆಹಣ್ಣು ವ್ಯಾಪಾರಿ ಬೆಳೆಗಳು.

ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಯಲಿಯೂರು ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಸಿರಾ–ತುಮಕೂರು ರ್‍ಾಷ್ಟ್ರಿಯ ಹೆದ್ದಾರಿ ಸಾರಿಗೆ ಸಂಪರ್ಕ ಹೊಂದಿದೆ. ಸ್ತ್ರೀಶಕ್ತಿ ಕೇಂದ್ರವಿದ್ದು, ಮಹಿಳಾ ಸಬಲೀಕರಣದಲ್ಲಿ ಸಹಾಯವಾಗಿದೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಹೆಚ್ಚಿನ ಶಿಕ್ಷಣಕ್ಕೆ ಸಿರಾ–ಚಿಕ್ಕನಹಳ್ಳಿ, ಯಲಿಯೂರು ಗೇಟಿಗೆ ಹೋಗುತ್ತಾರೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೪.೮ ರಷ್ಟಿದೆ. ನಾಗಣ್ಣ ನಾಟಿ ಔಷಧ ನೀಡುವ ವೈದ್ಯ. ಹಾಗೆಯೇ ಜನಪದ ಕೋಲಾಟದ ಕಲಾವಿದರೂ ಆಗಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೩ ಕಿರು ಗೂಡಂಗಡಿಗಳಿವೆ. ಚಿತ್ರದೇವರ ಪೌಳಿಯಿದ್ದು ಭಗವಂತಪ್ಪ ಎಂಬ ಹೆಸರಲ್ಲಿ ಆರಾಧಿಸುತ್ತಾರೆ. ಕರಿಯಮ್ಮ ದೇವರಿಗೆ ಆರತಿ, ಬಲಿ, ಬಾನ, ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ದೀಪಾವಳಿ ಹಬ್ಬ ವಿಶೇಷವಾಗಿ ಹಿರಿಯರ ಹಬ್ಬ, ಹಾಲು ಹಬ್ಬ, ದೀಪ ಏರಿಸುವ ಹಬ್ಬ ಎಂಬ ಹೆಸರಲ್ಲಿ ೩ ದಿನಗಳ ಕಾಲ ಆಚರಿಸುತ್ತಾರೆ. ಸಮೀಪದ ಚಿಕ್ಕದಾಸರಹಳ್ಳಿಯ ಬಳಿಯಿರುವ ಜುಂಜಪ್ಪನ ಸಮಾಧಿಗೆ ಹಾಲು–ತುಪ್ಪ ಅರ್ಪಿಸುತ್ತಾರೆ. ಉಳಿದಂತೆ ಯುಗಾದಿ, ಮಹಾನವಮಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಹುಳಿಗೆರೆ

ಹುಳಿಗೆರೆ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೫ ಕಿಮೀ ದೂರದಲ್ಲಿದೆ. ಸಿರಾ, ಮದಲೂರು–ಬರಗೂರು ಮುಖ್ಯ ರಸ್ತೆಯಲ್ಲಿ ಈ ಗ್ರಾಮವಿದ್ದು ಇದು ಮದಲೂರಿನ ಮಜರೆ ಗ್ರಾಮವಾಗಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೨೪೨.೦೫ ಹೆಕ್ಟೇರ್ ಆಗಿದೆ. ಕೆಂಪುಮಿಶ್ರಿತ ಮರಳು ಮಣ್ಣನ್ನು ಹೊಂದಿದೆ. ಬಯಲುಸೀಮೆ, ಬಿಸಿಲು ಅಧಿಕ.

ಹುಳಿಗೆರೆ ಹುಣಸೆ ಮೂಲದಿಂದ ಬಂದಿದ್ದು ಈ ಪರಿಸರದಲ್ಲಿ ವಿಶೇಷವಾಗಿ ಹುಣಸೆಮರ ಇದ್ದುದರಿಂದಲೂ ಇಲ್ಲಿಯೇ ಒಂದು ಕೆರೆಯು ನಿರ್ಮಾಣವಾಗಿ ಅದರ ಸನಿಹದಲ್ಲಿಯೇ ಗ್ರಾಮ ರಚನೆಯಾಗಿರುವ ಕಾರಣ ಹುಳಿಗೆರೆಯಾಗಿದೆ ಎಂದು ಗ್ರಾಮದ ಹಿರೀಕ ಹುಳಿಗೆರೆ ಚಿಕ್ಕಣ್ಣ ಅವರ ಅಭಿಪ್ರಾಯವಾಗಿದೆ. ಹುಲಿಯ ಮೂಲದಿಂದಲೂ ಹುಲಿಯಗೆರೆ ನಂತರ ಹುಳಿಗೆರೆಯಾಗಿದೆ ಎಂದು ಕಲಾವಿದ ತಿಮ್ಮರಾಜು ಅವರ ಅಭಿಪ್ರಾಯವಾಗಿದೆ.

ಮರಳುಮಿಶ್ರಿತ ಕೆಂಪುಮಣ್ಣನ್ನು ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಉಡ, ಬಾರುಬೆಕ್ಕು ಕಂಡುಬರುತ್ತವೆ. ಗ್ರಾಮದಲ್ಲಿ ಸಾಕುಪ್ರಾಣಿಯಾಗಿ ಕುರಿ, ಮೇಕೆ, ಹಸು, ಎಮ್ಮೆ, ಎತ್ತುಗಳನ್ನು ಸಾಕಲಾಗಿದೆ. ನಾಯಿಗಳೂ ಇವೆ. ಈ ಪರಿಸರದಲ್ಲಿ ಪಕ್ಷಿಗಳಾದ ಗಿಳಿ, ಗೀಜುಗ, ಗೊರವಂಕ, ಕೋಗಿಲೆ, ಕಾಗೆ, ಬೆಳವ, ಕೊಕ್ಕರೆ ಕಂಡುಬರುತ್ತವೆ. ಕೋಳಿ ಸಾಕುಪಕ್ಷಿಯಾಗಿದೆ.

ಬಿಸಿಲು ಅಧಿಕ. ವಾಡಿಕೆಗಿಂತಲೂ ಕಡಿಮೆ ಮಳೆ ಬೀಳುತ್ತದೆ. ವಾರ್ಷಿಕ ಸರಾಸರಿ ಮಳೆ ೪೩೪ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಗ್ರಾಮದ ಪಕ್ಕದಲ್ಲಿ ಕೆರೆಯಿದೆ. ಆದರೂ ಮಳೆಯಿಲ್ಲದ ಕಾರಣ ತುಂಬುವುದು ಅಪರೂಪ. ಹಾಗಾಗಿ ಕೃಷಿ ಕೆಲಸಕ್ಕೆ ಹೆಚ್ಚಿವರಿ ನೀರಿಗಾಗಿ ೧೨೦ ಕೊಳವೆ ಬಾವಿಗಳಿವೆ. ಇವು ತೋಟಗಾರಿಕೆ ಬೆಳೆಗಳಿಗೆ ಬಳಕೆಯಾಗುತ್ತಿವೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಸರಬರಾಜು ಮಾಡಲಾಗುತ್ತದೆ. ೧೨ ಸಿಸ್ಟರ್ನ್‌ಗಳಲ್ಲಿ ನೀರು ಪೂರೈಕೆಯಾಗುತ್ತಿದೆ. ಎರಡು ಕೈಪಂಪುಗಳು ಇವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಈಡಿಗ, ಬೇಡರು, ಮಡಿವಾಳ, ದರ್ಜಿಗಳು, ಮುಸ್ಲಿಂ, ಭಜಂತ್ರಿ ಜನಾಂಗಗಳು ಕಿರುಸಮುದಾಯಗಳಾಗಿವೆ. ಕನ್ನಡ, ಉರ್ದು ಭಾಷೆ ಬಳಕೆಯಲ್ಲಿದೆ. ವಿವಿಧ ಪ್ರಕಾರಗಳ ೨೯೮ ಮನೆಗಳಿದ್ದು ಅವು ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಾಗಿವೆ. ಇಲ್ಲಿನ ಗೃಹ ನಿರ್ಮಾಣದಲ್ಲಿ ಆಶ್ರಯ, ಇಂದಿರಾ ಆವಾಸ್, ಜನತಾ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೬೩ ಫಲಾನುಭವಿಗಳಿದ್ದಾರೆ. ೯೯೨ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ೭೨ ಮನೆಗಳು ಶೌಚಾಲಯ ಬಳಕೆ ಮಾಡುತ್ತಿವೆ.

ರಾಗಿಮುದ್ದೆ , ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಮಿನಿ ಟೆಂಪೋ, ಆಟೋ, ದ್ವಿಚಕ್ರ

ವಾಹನಗಳಿವೆ. ಶೇಂಗಾ ಮುಖ್ಯ ಬೆಳೆ. ರಾಗಿ, ಜೋಳ, ಅಲಸಂದೆ, ತೊಗರಿ ಮುಖ್ಯ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ಸೂರ್ಯಕಾಂತಿ, ಹತ್ತಿ, ತೆಂಗು, ದಾಳಿಂಬೆ, ಅಡಿಕೆ ಬೆಳೆಗಳಿವೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೩೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೆಹಣ್ಣು, ತೆಂಗು, ಅಡಿಕೆ, ಸಪೋಟ ವ್ಯಾಪಾರಿ ಬೆಳೆಗಳಾಗಿವೆ. ನ್ಯಾಯಬೆಲೆ ಅಂಗಡಿ ಇದೆ.

ಶಿಕ್ಷಣ, ಸಾರಿಗೆ, ಆರೋಗ್ಯ, ಕಂದಾಯ ಇಲಾಖೆಯ ೨೦ ಜನ ಸರ್ಕಾರಿ ನೌಕರರಿದ್ದಾರೆ. ಬೀಡಿ ಕಟ್ಟುವುದು, ಟೈಲರಿಂಗ್, ಹೂ ಕಟ್ಟುವುದು ಮಹಿಳೆ ಯರ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ೪ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಸಬಲೀಕರಣಕ್ಕೆ ಪ್ರೇರಕವಾಗಿದೆ. ಒಂದು ನ್ಯಾಯಬೆಲೆ ಅಂಗಡಿಯಿದೆ.

ಶೈಕ್ಷಣಿಕವಾಗಿ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಸರ್ಕಾರಿ ಪ್ರೌಢಶಾಲೆಗಳಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೮.೭% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೬ ಪೆಟ್ಟಿಗೆ ಅಂಗಡಿಗಳು, ೪ ಟೀ ಅಂಗಡಿಗಳಿವೆ.

ಹುಳಿಗೆರೆ ಈರಪ್ಪ ಹುಲಿಗಿಂತಲೂ ದೊಡ್ಡವನು ಎಂದೇ ನಂಬಿರುವ ಹುಳಿಗೆರೆಯ ಕೋಡಿ ಈರಣ್ಣ ದೇವಾಲಯ ಐತಿಹಾಸಿಕವಾಗಿ ಮಹತ್ವವಾದುದು. ಮೂಲತಃ ಪೆನುಗೊಂಡೆ ಮೂಲದ ವ್ಯಕ್ತಿ ಅಸಾಧಾರಣ ಪವಾಡಗಳಿಂದ ಹುಳಿಗೆರೆ ಪರಿಸರದ ಜನರ ಭಕ್ತಿ, ಗೌರವಕ್ಕೆ ಪಾತ್ರನಾಗಿ ದೈವವಾದ ಪ್ರಸಂಗ ಮೌಖಿಕ ಕಥೆಗಳಲ್ಲಿ ಪ್ರಕಟವಾಗುತ್ತದೆ. ಕುಂಚಿಟಿಗರ ವಿಶೇಷವಾಗಿ ಬಸಲೇನರ ಪಂಗಡದವರಿಗೆ ಕುಲದೈವವಾಗಿದೆ, ಬಳಿಗೆಯ ಕೆರೆಯ ಕೋಡಿಯಲ್ಲಿ ಬೃಹತ್ ದೇವಾಲಯ ನಿರ್ಮಿಸಿ ಪ್ರತಿ ಶುಕ್ರವಾರ ಮತ್ತು ಶನಿವಾರ ವಿಶೇಷ ಪೂಜೆ ನಡೆಯುತ್ತದೆ. ದಸರಾ ಹಬ್ಬದ ಸಂದರ್ಭದಲ್ಲಿ ವಾರಗಳ ಕಾಲ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜರುಗುತ್ತದೆ. ಅರಳೀಕಟ್ಟೆ, ಕರಿಗಲ್ಲು, ನಾಗರ ಕಲ್ಲುಗಳು ಈ ಗ್ರಾಮದ ಪ್ರಾಚೀನತೆಗೆ ಸಾಕ್ಷಿಯಾಗಿವೆ.

ಗ್ರಾಮದಲ್ಲಿ ಮಾರಮ್ಮ, ಕೊಲ್ಲಾಪುರದಮ್ಮ ದೇವರುಗಳ ಪೌಳಿಗಳಿವೆ. ಗ್ರಾಮದೇವತೆಯ ಹಬ್ಬ ಆಚರಿಸಲಾಗುತ್ತದೆ. ಶ್ರೀ ಚಂದ್ರಶೇಖರ್ ಈ–ಟಿವಿ, ದೂರದರ್ಶನದಲ್ಲಿ ಕಾರ್ಯಕ್ರಮ ನಿರ್ದೇಶಕರಾಗಿ, ನಿರ್ವಾಹಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪುಟ್ಟಯ್ಯ ಯಕ್ಷಗಾನ ಭಾಗವತರಾಗಿ ಪ್ರಸಿದ್ಧವಾದರೆ ರಂಗ ಕಲಾವಿದರಾಗಿ ಪ್ರೊ॥ ತಿಮ್ಮಣ್ಣ, ರಂಗಕಲಾವಿದ ಸಮಾಜಸೇವಕ ತಿಮ್ಮರಾಜು, ವಾಲಗದ ಈರಣ್ಣ, ದಾಸಪ್ಪ, ಕೋಲಾಟದ ಈರಣ್ಣ, ಸೋಬಾನೆ ಗಂಗವ್ವನವರ ಹನುಮಜ್ಜಿ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ.

ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ, ಗೌರಿ–ಗಣೇಶ, ಶ್ರೀರಾಮ ನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಬರಗೂರು–ಮದಲೂರು ಸಿರಾ ಮಾರ್ಗವಾಗಿ ರಸ್ತೆ, ಬಸ್ ಸಂಚಾರವಿದೆ.

## ಹುಳಿಗೆರೆ ಗೊಲ್ಲರಹಟ್ಟಿ

ಹುಳಿಗೆರೆ ಗೊಲ್ಲರಹಟ್ಟಿಯು ಮದಲೂರಿನ ಉಪಗ್ರಾಮ. ಸಿರಾ–ಬರಗೂರು, ಮದಲೂರು ರಸ್ತೆಯಲ್ಲಿ ಸಿರಾದಿಂದ ೧೫.೫ ಕಿಮೀ ದೂರದಲ್ಲಿದ್ದು ಹುಳಿಗೆರೆಗೆ ಮೇಲ್ಮುಖವಾಗಿ ಅರ್ಧ ಕಿ.ಮೀ ದೂರದಲ್ಲಿದೆ. ಇದು ಪೂರ್ಣವಾಗಿ ಕಾಡುಗೊಲ್ಲರ ಬುಡಕಟ್ಟು ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೩೨.೪೦ ಹೆಕ್ಟೇರ್.

ಮರಳು ಮಿಶ್ರಿತ ಕೆಂಪು ವಣ್ಣಿನ ಪ್ರದೇಶ. ಬಯಲು ಸೀಮೆ, ಕುರುಚಲು ಗಿಡ, ಮರಗಳ ದಿಣ್ಣೆ ಪ್ರದೇಶ. ಈ ಪ್ರದೇಶದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಮುಂಗುಸಿ, ಬಾರುಬೆಕ್ಕು ಕಂಡುಬರುತ್ತವೆ. ಗ್ರಾಮದಲ್ಲಿ ಸಾಕುಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಎತ್ತು, ಎಮ್ಮೆ, ನಾಯಿ, ಕತ್ತೆಗಳನ್ನು ಸಾಕಿದ್ದಾರೆ.

ಸಾಧಾರಣ ಮಳೆ. ವಾಡಿಕೆ ಮಳೆ ೪೩೪ ಮಿಮೀ ಆಗಿದ್ದು ಉಷ್ಣಾಂಶ ೩೮–೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿಗೆ ಮಳೆಯನ್ನೇ ಅವಲಂಬಿಸಿದ್ದಾರೆ. ತೋಟಗಾರಿಗೆರೆ ಉಪನೀರಾವರಿಯಾಗಿ ೨೯ ಕೊಳವೆ ಬಾಯಿ ತೆಗೆಸಲಾಗಿದ್ದು ನೀರಿನ ಪ್ರಮಾಣ ಸಾಧಾರಣ ೧೦೦೦ ರಿಂದ ೧೪೦೦ ಅಡಿ ಕೊರೆಸಿದರೂ ನೀರಿನ ಒರತೆ ಕಡಿಮೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೪ ಸಿಸ್ಟರ್ನ್‌ಗಳಿದ್ದು ೧ ಕೈಪಂಪು ಇದೆ.

ಕಾಡುಗೊಲ್ಲರ ಪೂರ್ಣ ಹಳ್ಳಿಯಾಗಿದ್ದು ಕನ್ನಡ ಮಾತೃಭಾಷೆಯಾಗಿದೆ. ಇಲ್ಲಿ ೬೮ ಮನೆಗಳಲ್ಲಿ ಕಾಂಕ್ರೀಟ್, ಶೀಟಿನ, ಹೆಂಚಿನ ಮನೆಗಳಿವೆ. ೨೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಗ್ರಾಮದಲ್ಲಿ ಎತ್ತಿನ ಗಾಡಿಯಿದ್ದು ಟ್ರ್ಯಕ್ಟರ್, ಟೆಂಪೋ, ಆಟೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ. ಭತ್ತ, ರಾಗಿ, ಜೋಳ, ಅಲಸಂದೆ, ತೊಗರಿ ಆಹಾರ ಬೆಳೆಗಳು. ಸೂರ್ಯಕಾಂತಿ, ರೇಷ್ಮೆ, ಸೇವಂತಿಗೆ ಹೂ ಬೆಳೆಯುತ್ತಾರೆ. ತೆಂಗು, ಅಡಿಕೆ, ಹುಣಸೆಹಣ್ಣು, ಶೇಂಗಾ ಪ್ರಮುಖ ವ್ಯಾಪಾರಿ ಬೆಳೆ. ಕುರಿ ವ್ಯಾಪಾರ, ಕುರಿ ಗೊಬ್ಬರದ ವ್ಯಾಪಾರವೂ ಇದೆ. ೬೩ ಮನೆಗಳಿದ್ದು ೪೦೩ ಜನಸಂಖ್ಯೆ ಹೊಂದಿದೆ. ಮಹಿಳೆಯರು ಹೂ ಕಟ್ಟುವುದು, ಬೀಡಿ ಕಟ್ಟುವುದು ಉಪಕಸುಬಾಗಿಸಿಕೊಂಡಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೩೫ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೮.೭% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧ ಕೃಷ್ಣಕುಟೀರ (ಸೂತಕದ ಗೃಹ)ವಿದೆ. ಗ್ರಾಮದಲ್ಲಿ ವೀರಹೊನ್ನಪ್ಪ, ಬಾಲಪ್ಪ, ಕೃಷ್ಣಮಂದಿರ, ಚಿತ್ರದೇವರ ಪೌಳಿಗಳಿವೆ. ದೀಪಾವಳಿಯ ಸಂದರ್ಭದಲ್ಲಿ ಈ ದೇವರುಗಳಿಗೆ ದೀಪ ಏರಿಸುವ, ಹಾಲು ಮೀಸಲು, ಜನ್ನಿಗೆ ಹೆಡೆ, ದೀಪ ಇಳಿಸುವ ೯ ದಿನಗಳ ವಿಶೇಷ ಆಚರಣೆ ಇರುತ್ತದೆ. ಗ್ರಾಮದ ದೇವತೆ ಕರಿಯಮ್ಮನಿಗೆ ಊರಹಬ್ಬ ಮಾಡಿ ಆರತಿ, ಬಾನ, ಬ್ಯಾಟೆ ಮಾಡಿ ರಕ್ತ-ಅನ್ನವನ್ನು ಗ್ರಾಮದ ನಾಲ್ಕು ದಿಕ್ಕುಗಳಿಗೆ ಸರಗು ಹಾಕುವುದು ವಿಶೇಷವಾಗಿದೆ. ಕುರಿಗೆ ಜಾಡು ಕಳೆಯುವ ಆಚರಣೆಯೂ ಈ ಗ್ರಾಮದಲ್ಲಿದೆ. ಶ್ರೀ ಚಿಕ್ಕಣ್ಣ ಎಂಬ ೯೦ ವರ್ಷದ ವೃದ್ಧ ಜುಂಜಪ್ಪ, ಚಿತ್ರದೇವರ ಬಗೆಗೆ ಪದ ಹಾಡುವ ಅಪೂರ್ವ ಕಲಾವಿದ ಮಾಹಿತಿದಾರ. ಇವರು ಡಾ.ತೀನಂ ಶಂಕರನಾರಾಯಣ ಅವರ ಕಾಡುಗೊಲ್ಲರ ಸಂಪ್ರದಾಯ ಮತ್ತು ಆಚರಣೆಗಳ ಮಹಾಪ್ರಬಂಧಕ್ಕೆ ವಕ್ತೃವಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಜೊತೆಗೆ ಜುಂಜಪ್ಪ ಸಮಗ್ರ ಕಥಾವಳಿಗೆ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಜೊತೆಗೆ ಈರಪ್ಪ ಎಂಬ ಮತ್ತೊಬ್ಬ ಜನಪದ ಕಲಾವಿದ ಗಣೆ, ಹಾಡುಗಾರಿಕೆಯಲ್ಲಿಯೂ ಪರಿಣಿತರು. ಇಂದಿಗೂ ಬಸವನೊಂದಿಗೆ ಭಿಕ್ಷಾಟನೆಯ ಜೊತೆಗೆ ಜುಂಜಪ್ಪನ ಕಥೆಯನ್ನು ಪ್ರಸಾರ ಮಾಡುತ್ತಿದ್ದಾರೆ. ಕೋಲಾಟದ ಕಲಾವಿದರಾಗಿ ರಂಗಪ್ಪ, ವೀರಪ್ಪ ಮುಖ್ಯರಾಗಿದ್ದಾರೆ.

ಗ್ರಾಮದಲ್ಲಿ ಭೂತಪ್ಪ, ಮುತ್ತರಾಯನ ಪೌಳಿಯಿದ್ದು ಮಾರಮ್ಮನ ಆರತಿ, ಬಾನ ಇರುತ್ತದೆ. ದೀಪಾವಳಿ, ದಸರಾ, ಯುಗಾದಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹೊಸಹಳ್ಳಿ

ಹೊಸಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ೧೬ ಕಿಮೀ ದೂರದಲ್ಲಿದೆ. ಬೊಪ್ಪನಾಡು ಮುಖ್ಯ ಗ್ರಾಮದ ಮಜರೆ ಗ್ರಾಮವಾಗಿದೆ. ಸಿರಾ-ಮದಲೂರು ಬರಗೂರು ಮಾರ್ಗದಲ್ಲಿ ಬೊಪ್ಪನಾಡು ಗ್ರಾಮದ ಸಮೀಪದಲ್ಲಿದ್ದು ಇದರ ಭೌಗೋಳಿಕ ವಿಸ್ತೀರ್ಣ ೨೯.೦೯ ಹೆಕ್ಟೇರ್ ಆಗಿದೆ. ಹೊಸದಾಗಿ ಒಂದೊಂದೇ ಮನೆಗಳು ರಚನೆಯಾದುದರಿಂದ ಹೊಸಹಳ್ಳಿ ಎಂದು ಕರೆಯಲಾಗಿದೆ.

ಕೆಂಪು ಬಿಳಿ ಮರಳಿನಿಂದ ಕೂಡಿದ ಇಲ್ಲಿನ ಭೂ ಲಕ್ಷಣ ಶೇಂಗಾ ಬೆಳೆಗೆ ಪ್ರಯೋಜನಕಾರಿಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಮೊಲ, ಜಿಂಕೆ, ಮುಂಗುಸಿ ಕಂಡುಬಂದರೆ ಗ್ರಾಮದಲ್ಲಿ ಹಸು, ಎಮ್ಮೆ, ಮೇಕೆ, ಕುರಿ ಇವೆ. ಸಾಕುಪಕ್ಷಿಯಾಗಿ ಕೋಳಿ, ಇವುಗಳಲ್ಲಿ ಗಿರಿರಾಜ, ನಾಟಿಹುಂಜ, ಹೇಂಟೆಗಳನ್ನು ಸಾಕಲಾಗುತ್ತಿದೆ.

ವಾಡಿಕೆ ಮಳೆ ೪೩೪ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ೧೨ ಕೊಳವೆ ಬಾವಿಗಳಿವೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಲ್ಲಿ ೩ ಸಿಸ್ಟರ್ನ್‌ಗಳಲ್ಲಿ ನೀರು ಪೂಲೈಸಲಾಗುತ್ತಿದೆ. ೧೨ ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ೨೧ ಮನೆಗಳಿವೆ. ಬೇರೆ ಜನಾಂಗದವರು ವಾಸಿಸುತ್ತಿಲ್ಲ. ಇದರಲ್ಲಿ ಕಾಂಕ್ರೀಟ್ ಮನೆ, ಹೆಂಚಿನ ಮನೆ, ಶೀಟಿನ ಮನೆಗಳಿವೆ. ೮೮ ಜನಸಂಖ್ಯೆ ಹೊಂದಿದೆ. ೧೦ ಮನೆಗಳಲ್ಲಿ ಶೌಚಾಲಯ ಹೊಂದಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯಬೆಳೆಯಾಗಿದ್ದು ರಾಗಿ, ಭತ್ತ, ಜೋಳ ಆಹಾರ ಬೆಳೆಯಾಗಿದೆ. ತೋಟಗಾರಿಕೆ ಬೆಳೆಯಾಗಿ ಸೂರ್ಯಕಾಂತಿ, ಸೇವಂತಿಗೆ ಬೆಳೆಯಲಾಗುವುದು. ತೆಂಗು, ಅಡಿಕೆ ಮುಖ್ಯ ವ್ಯಾಪಾರಿ ಬೆಳೆಗಳು. ಶೇಂಗಾ, ಹುಣಸೆಹಣ್ಣು, ಹೊಂಗೆಬೀಜ ವಾಣಿಜ್ಯ ಸರಕುಗಳಾಗಿವೆ. ಗ್ರಾಮದಲ್ಲಿ ಹುಣಸೆಹಣ್ಣು ಬಿಡಿಸುವುದು, ಹೂ ಕಟ್ಟುವುದು, ಹೊಂಗೆಬೀಜ ಮಾಡುವುದು ಮಹಿಳೆಯರ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿಗಳ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ೧ ಸ್ತ್ರೀಶಕ್ತಿ ಸಂಘವಿದ್ದು ೧ ಅಂಗನವಾಡಿ ಕೇಂದ್ರವಿದೆ. ಗ್ರಾಮದ ಸಾಕ್ಷರತೆ ಶೇ.೫೭.೫ ರಷ್ಟಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧ ಪೆಟ್ಟಿಗೆ ಅಂಗಡಿಯಿದೆ. ಧಾರ್ಮಿಕವಾಗಿ ಕೊಲ್ಲಾಪುರದಮ್ಮನ ದೇವಾಲಯವಿದ್ದು ಆಷಾಢ ಮಾಸದಲ್ಲಿ ಊರಹಬ್ಬದ ಮಾದರಿಯಲ್ಲಿ ಉತ್ಸವ ಏರ್ಪಡುತ್ತದೆ. ಆರತಿ, ಬಾನ, ಪ್ರಾಣಿಬಲಿ ಏರ್ಪಡುತ್ತದೆ. ಯುಗಾದಿ, ದೀಪಾವಳಿ, ನವಮಿ, ಶಿವರಾತ್ರಿ, ಸಂಕ್ರಾಂತಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುವುದು ಗ್ರಾಮದಲ್ಲಿದೆ.

## ಹುಚ್ಚಗೀರನಹಳ್ಳಿ

ಹುಚ್ಚಗೀರನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ ದೂರದಲ್ಲಿದೆ. ಸಿರಾ–ಅಮರಾಪುರ ಮುಖ್ಯ ರಸ್ತೆಯಲ್ಲಿರುವ ಈ ಗ್ರಾಮ ಮೇಲುಕುಂಟೆಯ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೧೪೦.೮೩ ಹೆಕ್ಟೇರ್ ಆಗಿದ್ದು ಅಪ್ಪಟ ಬಯಲು ಪ್ರದೇಶವಾಗಿದೆ.

ಮರಳುಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಶೇಂಗಾ ಬೆಳೆಗೆ ಉತ್ಕೃಷ್ಟವಾಗಿದೆ. ಈ ಪರಿಸರದಲ್ಲಿ ಬಿಸಿಲು ಅಧಿಕ. ಮಳೆ ವಾಡಿಕೆಗಿಂತಲೂ ಕಡಿಮೆ. ವಾಡಿಕೆ ಮಳೆ ೪೬೦ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಇಲ್ಲಿನ ಜನ ಕೃಷಿ ಅವಲಂಬಿತರು ಅಧಿಕವಾಗಿದ್ದು ಮಳೆ ನೀರು ಸಾಕಾಗುವುದಿಲ್ಲ. ಹಾಗಾಗಿ ಕೃಷಿಗೆ ೪೦ ಕೊಳವೆ ಬಾವಿಗಳ ಮೂಲಕ ನೀರನ್ನು ಪೂರೈಸಲಾಗುತ್ತಿದೆ. ಒಂದು ಕೆರೆ ಇದ್ದರೂ ತುಂಬುವುದು ಅಪರೂಪವಾಗಿದೆ. ಗ್ರಾಮದ ಪಶ್ಚಿಮ ಹಾಗೂ ಪೂರ್ವಕ್ಕೆ ಹಳ್ಳಗಳಿದ್ದರೂ ಮಳೆಗಾಲದಲ್ಲಿ ಒಂದೆರಡು ದಿನ ಮಾತ್ರ ಹರಿದು ಬತ್ತಿಹೋಗುತ್ತದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೮ ಸಿಸ್ಟರ್ನ್‌ಗಳಲ್ಲಿ ನೀರನ್ನು ಪೂರೈಸುತ್ತಿದ್ದು ಎರಡು ಕೈಪಂಪುಗಳಿವೆ.

ಈ ಪ್ರದೇಶದ ವ್ಯಾಪ್ತಿಯಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಂಡುಬಂದರೆ ಗ್ರಾಮದಲ್ಲಿ ರೈತಾಪಿ ಬದುಕಿನ ಜನ ಹಸು, ಎಮ್ಮೆ, ಎತ್ತು, ಕುರಿ, ಮೇಕೆ ಸಾಕಿದ್ದಾರೆ. ಹೈನುಗಾರಿಕೆಗೆ ಸೀಮೆಹಸು ವಿಶೇಷವಾಗಿವೆ. ಈ ಪರಿಸರದಲ್ಲಿ ಬಯಲು, ಕುರುಚಲು ಕಾಡು ಇರುತ್ತದೆ. ಹಾಗಾಗಿ ಇಲ್ಲಿ ನವಿಲು, ಗಿಳಿ, ಕೊಕ್ಕರೆ, ಕೌಜಲಗ, ಹದ್ದು, ಕೋಗಿಲೆ, ಕಾಗೆ, ಗೂಬೆ, ಗೊರವಂಕ ಮೊದಲಾದ ಪಕ್ಷಿಗಳಿವೆ. ಕೋಳಿ ಸಾಕು ಪಕ್ಷಿಯಾಗಿದೆ.

ಹುಚ್ಚಗಿರಿಯಪ್ಪ ಎಂಬ ವ್ಯಕ್ತಿ ಪಟ್ಟನಾಯಕನಹಳ್ಳಿ ಕ್ರಾಸ್‌ನಿಂದ ಈಗಿನ ಸ್ಥಳದಲ್ಲಿ ಆರಂಭದಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದು ನಂತರ ಮನೆಗಳು ರಚನೆಯಾದವು. ಮುಂದೆ ಆತನ ಹೆಸರಿನಲ್ಲಿಯೇ ಗ್ರಾಮ ರಚನೆಯಾಗಿ ಹುಚ್ಚಗಿರಿಯಪ್ಪನಹಳ್ಳಿ – ಹುಚ್ಚಗೀರನಹಳ್ಳಿ ಎಂದು ಆಗಿದೆ ಎಂದು ವಿವರಿಸುತ್ತಾರೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗದವರು ಕಡಿಮೆ ಸಂಖ್ಯೆಯಲ್ಲಿದ್ದು ಕಿರು ಸಮುದಾಯವಾಗಿದೆ. ಗ್ರಾಮದ ಮನೆಮಾತು ಕನ್ನಡವಾಗಿದೆ. ೬೫೨ ಜನಸಂಖ್ಯೆ ಹೊಂದಿದ್ದು ವಿವಿಧ ಪ್ರಕಾರಗಳ ೧೪೩ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿವೆ. ೨೨ ಜನ ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯೂ ಸೇರಿದಂತೆ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಫಲಾನುಭವಿಗಳಿದ್ದಾರೆ. ಇಲ್ಲಿನ ೬೫ ಕುಟುಂಬಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ

ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನವಾದ ಟ್ರ್ಯಕ್ಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆ. ರಾಗಿ, ತೊಗರಿ, ಅಲಸಂದೆ, ಭತ್ತ ಆಹಾರ ಬೆಳೆಗಳು. ತೆಂಗು, ಅಡಿಕೆ, ಹುಣಸೆಹಣ್ಣು, ಹೊಂಗೆಬೀಜ ವಾಣಿಜ್ಯ ಬೆಳೆಗಳು. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶಿಕ್ಷಣ, ರಸ್ತೆ ಸಾರಿಗೆ, ಪೊಲೀಸ್, ಸೊಸೈಟಿ ಹನುಮಂತ ಸೇರಿದಂತೆ ಒಟ್ಟು ೭ ಜನ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಬೀಡಿ ಕಟ್ಟುವುದು, ಊಟದ ಎಲೆ ತಯಾರಿಕೆ ಮೊದಲಾದ ಗೃಹ ಕೆಲಸದಲ್ಲಿ ಹೆಂಗಸರು ತೊಡಗಿಸಿಕೊಂಡಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯತ್, ಮೇಲುಕುಂಟೆ ತಾಲ್ಲೂಕು ಪಂಚಾಯ್ತಿ, ಮೇಲ್ಕುಂಟೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಗೊಂಡಿದೆ. ಗ್ರಾಮದಲ್ಲಿ ಇಬ್ಬರು ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ಸಿರಾ, ಬರಗೂರು, ಪಟ್ಟನಾಯಕನಹಳ್ಳಿ ರಸ್ತೆ ಮಾರ್ಗ ವಾಹನ ಸೌಲಭ್ಯವಿದೆ.

೩ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿದ್ದು ಮಹಿಳೆಯರ ಮಹಿಳಾ ಆರ್ಥಿಕ ಸಬಲೀಕರಣಕ್ಕೆ ಸಹಕಾರಿಯಾಗಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೧೧೧ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೬೨% ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೬ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಗುಡ್ಡದ ರಂಗನಾಥಸ್ವಾಮಿ, ಕಣಿವೆ ಮಾರಕ್ಕ, ಗೌರಸಂದ್ರದ ಮಾರಮ್ಮ, ನಾಗಪ್ಪನ ಕಟ್ಟೆಯಿದ್ದು ದಸರಾ ಹಬ್ಬದಂದು ಗುಡ್ಡದರಂಗನಾಥಸ್ವಾಮಿ ಉತ್ಸವ ನಡೆಯುತ್ತದೆ. ೧ ಕರಿಗಲ್ಲು, ಅರಳಿಕಟ್ಟೆ ಇದೆ. ಕಣಿವೆ ಮಾರಮ್ಮನ ವಿಶೇಷ ಹಬ್ಬ, ಮೊದಲ ದಿನ ನಾಗರಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಎರಡನೇ ದಿನ ಕಣಿವೆ ಮಾರಕ್ಕನ ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ರಂಗಕಲಾವಿದರಾದ ರಾಮಕೃಷ್ಣಪ್ಪ, ಜಗದೀಶ್, ಲೋಕೇಶ್, ಹನುಮಂತರಾಯಪ್ಪ, ಯಕ್ಷಗಾನ ಭಾಗವತ ಈರಕ್ಯಾತಪ್ಪ, ಭಜನೆ ಬಂಗೆಪ್ಪ, ಈರಣ್ಣ ಸ್ಥಳೀಯವಾಗಿ ಹೆಸರು ಮಾಡಿರುವ ಕಲಾವಿದರು. ಸಿದ್ದಾರೂಢ ಮತ್ತು ಕೆಂಚಾವಧೂತರ ಎರಡು ಆಶ್ರಮಗಳಿದ್ದು ಭಜನಾ ಮಂದಿರಗಳಾಗಿವೆ.

## ಹೊನ್ನಗೊಂಡನಹಳ್ಳಿ

ಹೊನ್ನಗೊಂಡನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೦ ಕಿಮೀ ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೩೧೮.೫೫ ಹೆಕ್ಟೇರ್ ಆಗಿದೆ. ಇದಕ್ಕೆ ಉಪಗ್ರಾಮಗಳಾಗಿ ಅಪ್ಪಿಹಳ್ಳಿ, ದಾವೂದ್‌ಪಾಳ್ಯ, ಗೊಲ್ಲರಹಟ್ಟಿ ಸೇರ್ಪಡೆಗೊಂಡು ಒಟ್ಟು ಕಂದಾಯ ಭೂಮಿ ೭೭೯.೫೫ ಆಗಿದೆ. ಸಿರಾ-ಬರಗೂರು ಮುಖ್ಯ ರಸ್ತೆಯಲ್ಲಿ ಲಿಂಗದಹಳ್ಳಿ ಗೇಟಿನಿಂದ ಬಲಕ್ಕೆ ತಿರುಗಿ ಅಲ್ಲಿಂದ ೭ ಕಿಮೀ ದೂರದಲ್ಲಿ ಹೊನ್ನಗೊಂಡನಹಳ್ಳಿ ಇದೆ. ಉತ್ತಮ ರಸ್ತೆ ಸಂಪರ್ಕ ಹೊಂದಿದೆ.

ಹೊನ್ನೇಗೌಡ ಎಂಬುವವನ ಹೆಸರಲ್ಲಿ ಈ ಗ್ರಾಮ ರಚನೆಯಾಗಿದೆ. ಹಳೆಗನ್ನಡ ಗೊಮಂಡ ನಂತರ ಗೌಡ ಪದವಾಗಿ ಮಾರ್ಪಾಟು ಆಗಿದೆ. ಹೊನ್ನಗೊಂಡನಹಳ್ಳಿ, ಗೌರಗೊಂಡನಹಳ್ಳಿ, ಕಾಮಗೊಂಡನಹಳ್ಳಿ ಸಿರಾ ತಾಲ್ಲೂಕಿನ ಈ ಹಳ್ಳಿಗಳು ಪೂರ್ವದ ಹಳೆಗನ್ನಡದ ಗೊಂಡ ಪದದೊಂದಿಗೆ ಇಂದಿಗೂ ಚಾಲ್ತಿಯಲ್ಲಿರುವುದು ಈ ಗ್ರಾಮದ ವಿಶೇಷವಾಗಿದೆ. ವಿಶಾಲ ಪ್ರದೇಶ. ಮುರಿದ ಕೋಟೆ ದಿಡ್ಡಿ, ಅವಶೇಷಗಳು ಇಂದಿಗೂ ಕಾಣಸಿಗುವುದರಿಂದ ಇದೊಂದು ಪ್ರಾಚೀನ ಗ್ರಾಮ ಎಂಬುದು ತಿಳಿಯುತ್ತದೆ. ಕಪ್ಪು ಮರಳು ಮಿಶ್ರಿತ ಮಣ್ಣನ್ನು ಹೊಂದಿದ್ದು ತಗ್ಗಿನಿಂದ ಕೂಡಿದ ಸ್ಥಳವಾಗಿದೆ.

ಒಂದು ಕೆರೆ, ಒಂದು ಹಳ್ಳ ಇದ್ದು ಬಯಲು ಪ್ರದೇಶವಾಗಿದೆ. ಈ ಪರಿಸರದಲ್ಲಿ ನರಿ, ತೋಳ, ಕರಡಿ, ಮುಂಗುಸಿ, ಮೊಲ, ಬಾರ್‌ಬೆಕ್ಕು ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಹೈನುಗಾರಿಕೆ ಹಾಗೂ ಕೃಷಿ ಕೆಲಸಕ್ಕೆ ಸೀಮೆಹಸು, ನಾಟಿಹಸು, ಹಳ್ಳಿಕಾರ್ ತಳಿ ಎತ್ತುಗಳನ್ನು ಸಾಕಿದ್ದಾರೆ. ಕುರಿ, ಮೇಕೆ, ಎಮ್ಮೆ, ನಾಯಿಗಳು ನಾಟಿಕೋಳಿ, ಗಿರಿರಾಜ ಕೋಳಿಗಳನ್ನು ಸಾಕಲಾಗಿದೆ.

ಈ ಪರಿಸರದಲ್ಲಿ ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಗೂಬೆ, ಹದ್ದು, ಗರುಡ, ಗಿಡುಗ, ಕೋಗಿಲೆ, ಕಾಗೆ, ಕೊಕ್ಕರೆ ಕಂಡುಬರುತ್ತವೆ.

ಬಿಸಿಲು ಧಗೆಯ ಗ್ರಾಮ. ವಾಡಿಕೆ ಮಳೆ ಸರಾಸರಿಗಿಂತ ಕಡಿಮೆ. ೨೦೧೦-೧೩ ನೇ ಸಾಲಿಗೆ ೬೪೦ ಮಿಮೀ ಆಗಿದ್ದು ಏನೇನೂ ಸಾಲದು. ಕೃಷಿ ಅವಲಂಬಿತ ಗ್ರಾಮ. ಉಷ್ಣಾಂಶ ೩೯-೪೦ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿಗೆ ಉಪನೀರಾವರಿಯಾಗಿ ೮೦ ಕೊಳವೆ ಬಾವಿಯನ್ನು ತೆಗೆಸಲಾಗಿದೆ. ಗ್ರಾಮದಲ್ಲಿ ೨೩ ತೆರೆದ

ಬಾವಿಗಳಿದ್ದರೂ ಅವೆಲ್ಲವೂ ಒಣಗಿ ಹೋಗಿವೆ. ಕೆಲವನ್ನು ಮುಚ್ಚಲಾಗಿದೆ. ಕೊಳವೆ ಬಾವಿಗಳ ಮೂಲಕ ನೀರಾವರಿ ಅನುಕೂಲ ಮಾಡಿಕೊಂಡು ಕೃಷಿ ಬೆಳೆ ತೆಗೆಯುತ್ತಾರೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೧ ಲಕ್ಷ ಲೀ. ಸಾಮರ್ಥ್ಯದ ನೀರಿನ ವಾಟರ್ ಟ್ಯಾಂಕ್ ಇದೆ. ೧೦೦ ಒಳ ನೀರಾವರಿ ನಲ್ಲಿ ಸಂಪರ್ಕಗಳಿವೆ. ೩ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಕುಂಚಿಟಿಗ ಹಾಗೂ ಆದಿಕರ್ನಾಟಕ ಜನಾಂಗಗಳು ಸಮಪ್ರಮಾಣದಲ್ಲಿದ್ದು ದೊಡ್ಡ ಸಮುದಾಯಗಳಾಗಿವೆ. ಉಳಿದಂತೆ ಕುರುಬ, ನಾಯಕ, ಮುಸ್ಲಿಂ, ಕುಂಬಾರ, ವಿಶ್ವಕರ್ಮ, ವೈಶ್ಯ, ಮಡಿವಾಳ ಜನಾಂಗಗಳು ಕಿರು ಸಮುದಾಯಗಳಾಗಿವೆ. ವಿವಿಧ ಪ್ರಕಾರದ ೨೩೮ ಮನೆಗಳಿದ್ದು ಗ್ರಾಮದ ಮಾತೃಭಾಷೆ ಕನ್ನಡವಾಗಿದೆ.

ಇಲ್ಲಿನ ಮನೆಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಿವೆ. ೭೪ ಜನ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಹೊಂದಿದ ಫಲಾನುಭವಿಗಳಿದ್ದಾರೆ. ೧೨೪೮ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ೧೮೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನಗಾಡಿಯೊಂದಿಗೆ ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ, ಲಾರಿ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಜೋಳ, ಅಲಸಂದೆ, ತೊಗರಿ ಆಹಾರ ಬೆಳೆಗಳು. ಸೂರ್ಯಕಾಂತಿ, ಸೇವಂತಿಗೆ, ತೆಂಗು, ಅಡಿಕೆ, ರೇಷ್ಮೆ ಪ್ರಮುಖ ವ್ಯಾಪಾರಿ ಬೆಳೆಗಳು. ಒಂದು ಹಾಲಿನ ಡೈರಿಯಿದ್ದು ಸರಾಸರಿ ೪೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹುಣಸೆಹಣ್ಣು, ಹೊಂಗೆ ಬೀಜ, ಕಂಬಳಿ ಮುಖ್ಯ ವ್ಯಾಪಾರಿ ಸರಕುಗಳಾಗಿವೆ. ಗ್ರಾಮದಲ್ಲಿ ಮಹಿಳೆಯರು ಬೀಡಿ ಕಟ್ಟುವುದು, ಊಟದ ಎಲೆ ತಯಾರಿಕೆ, ಬಟ್ಟೆ ಹೊಲಿಯುವುದು ಹಾಗೂ ಕಂಬಳಿ ದಾರ ತೆಗೆಯುವ, ನೂಲುವ ಉಪಕಸುಬು ಹೊಂದಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವೂ ಆಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಗೊಂಡಿದೆ. ಈ ಗ್ರಾಮವನ್ನು ೪ ಜನ ಜನಪ್ರತಿನಿಧಿಗಳು ಗ್ರಾಮ ಪಂಚಾಯ್ತಿ ಸದಸ್ಯರಾಗಿದ್ದಾರೆ.

ಒಂದು ಅಂಚೆ ಕಛೇರಿ, ಗ್ರಾಮಪಂಚಾಯ್ತಿ ಕಛೇರಿ, ಕಂದಾಯ ಕಛೇರಿ, ಆರು ಸ್ತ್ರೀಶಕ್ತಿ ಸಂಘ, ೩ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಗ್ರಾಮದಲ್ಲಿ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಸರ್ಕಾರಿ ಪ್ರೌಢಶಾಲೆಗಳಿದ್ದು ಪ್ರಾಥಮಿಕ ಶಾಲೆಯಲ್ಲಿ ೧೨೪, ಹೈಸ್ಕೂಲ್‌ನಲ್ಲಿ ೨೧೫ ಮಕ್ಕಳು, ೧೨ ಜನ ಅಧ್ಯಾಪಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೪೮.೬ ರಷ್ಟಿದೆ.

ಒಂದು ಗ್ರಾಮ ಪಂಚಾಯ್ತಿ ಗ್ರಂಥಾಲಯವಿದೆ. ಉಪ ಆರೋಗ್ಯ ಕೇಂದ್ರವೂ ಇದೆ. ವ್ಯವಸಾಯ ಕೃಷಿ ಸಹಕಾರ ಸಂಘವಿದೆ. ರೈತರ ವಿವಿಧ ಉಪಯೋಗಕ್ಕೆ ಇದು ಬಳಕೆಯಾಗುತ್ತಿದೆ. ಕೆರೆ ಅಚ್ಚುಕಟ್ಟು ಅಭಿವೃದ್ಧಿ ಸಮಿತಿ, ಸುಜಲ ಸಮಿತಿ, ರೈತ ಹೋರಾಟ ಸಮಿತಿ, ಅಂಬೇಡ್ಕರ್ ಜನಜಾಗೃತಿ ಸಮಿತಿಗಳು ಕ್ರಿಯಾಶೀಲವಾಗಿವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಹೋಟೆಲ್, ೧೨ ಪೆಟ್ಟಿಗೆ ಅಂಗಡಿಗಳಿವೆ. ಇದೊಂದು ಸಿರಾ ತಾಲ್ಲೂಕಿನ ಹೆಚ್ಚು ಸರ್ಕಾರಿ ನೌಕರರನ್ನು ಹೊಂದಿದ್ದ ಗ್ರಾಮವಾಗಿದ್ದು ಸಧ್ಯ ಅವರ ಸಂಖ್ಯೆ ಇಳಿಮುಖವಾಗಿದೆ. ಮುಖ್ಯ ಇಂಜಿನಿಯರ್, ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು ಈ ಗ್ರಾಮದವರಾಗಿದ್ದುದು ವಿಶೇಷವಾಗಿದೆ. ಸಧ್ಯ ಶಿಕ್ಷಣ, ಇಂಜಿನಿಯರ್, ವೈದ್ಯರು, ಬ್ಯಾಂಕಿಂಗ್, ಭೂಗರ್ಭ ಇಲಾಖೆ, ಆಡಿಟಿಂಗ್, ಸಾರಿಗೆ, ಆರೋಗ್ಯ ಇಲಾಖೆಗೆ ಸೇರಿದ ೨೭ ಜನ ನೌಕರರಿದ್ದಾರೆ. ಭೂವಿಜ್ಞಾನಿಗಳಾದ ಡಾ॥ ಶಿವರಾಮಯ್ಯ ಈ ಗ್ರಾಮದವರು. ೩ ಜನ ಇಂಜಿನಿಯರ್‌ಗಳು ವಿದೇಶದಲ್ಲಿದ್ದಾರೆ. ಕೃಷ್ಣಯ್ಯ ಕೆನರಾ ಬ್ಯಾಂಕ್‌ನ ಉನ್ನತ ಅಧಿಕಾರಿಯಾಗಿದ್ದಾರೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ ೨ ಕರಿಗಲ್ಲು, ಅರಳಿಕಟ್ಟೆ, ಕರಿಯಮ್ಮ, ಮಸೀದಿ ಧಾರ್ಮಿಕ ಸ್ಥಳಗಳು. ಇವುಗಳಿಗೆ ದಸರಾ ಉತ್ಸವದಂದು ಈ ದೇವರುಗಳ ಮೆರವಣಿಗೆ ಏರ್ಪಾಡಾಗುತ್ತದೆ. ಆಷಾಢ ಮಾಸದಲ್ಲಿ ಕರಿಯಮ್ಮ ಹಾಗೂ ಗ್ರಾಮದೇವತೆ ಮಾರಮ್ಮನ ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದ್ದು ಗ್ರಾಮಕ್ಕೆ ಸರಗು ಹಾಕುವ ಸಂಪ್ರದಾಯವಿದೆ.

ಉಳಿದಂತೆ ಯುಗಾದಿ, ದಸರಾ, ಶಿವರಾತ್ರಿ, ಗೌರಿ–ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮುಸ್ಲಿಮರು ಈದ್‌ಮಿಲಾದ್, ಬಕ್ರೀದ್, ರಂಜಾನ್ ಆಚರಿಸುತ್ತಾರೆ. ಬಾಬಯ್ಯನ ಆಚರಣೆ ಸಾಮೂಹಿಕವಾಗಿರುವುದು ಈ ಗ್ರಾಮದ ವಿಶೇಷವಾಗಿದೆ.

## ಹೊನ್ನಗೊಂಡನಹಳ್ಳಿ ಯಾದವರಹಟ್ಟಿ

ಹೊನ್ನಗೊಂಡನಹಳ್ಳಿಯ ಉತ್ತರಕ್ಕೆ ಒಂದು ಕಿ.ಮೀ ದೂರದಲ್ಲಿರುವ ಹೊನ್ನಗೊಂಡನಹಳ್ಳಿ ಗೊಲ್ಲರಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ೧೦.೫ ಕಿಮೀ ದೂರದಲ್ಲಿದೆ. ಸಿರಾ ಕಸಬಾ ಹೋಬಳಿಗೆ ಸೇರಿದ ಒಂದು ಬುಡಕಟ್ಟು ಗ್ರಾಮ ಹೊನ್ನಗೊಂಡನಹಳ್ಳಿಗೆ ಸೇರಿದ ಮಜರೆ ಗ್ರಾಮವಾಗಿದೆ. ಇದೊಂದು ಕಾಡುಗೊಲ್ಲರ ಪ್ರಾಚೀನ ಹಳ್ಳಿಯಾಗಿದ್ದು ಗ್ರಾಮದಲ್ಲಿ ಕದರಿ ನರಸಿಂಹಸ್ವಾಮಿ ದೇವಾಲಯ, ಅರಳಿಕಟ್ಟೆ ಇಂದಿಗೂ ಇದೆ. ಇದರ ಭೌಗೋಳಿಕ ವಿಸ್ತೀರ್ಣ ೧೫೨.೩೭ ಹೆಕ್ಟೇರ್ ಆಗಿದ್ದು ಬಯಲು ಸೀಮೆಯಾಗಿದೆ. ಮರಳುಮಿಶ್ರಿತ ಕೆಂಪು ಮಣ್ಣನ್ನು ಹೊಂದಿದೆ. ಈ ಗ್ರಾಮದ ಉತ್ತರಕ್ಕೆ ಚಿತ್ತಯ್ಯನ ಕಟ್ಟೆ ಪಶ್ಚಿಮಕ್ಕೆ ತಗ್ಗು, ಪೂರ್ವಕ್ಕೆ ದಿಣ್ಣೆ ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ತೋಳ, ಹಂದಿ ಕಂಡುಬರುತ್ತವೆ. ಗ್ರಾಮದಲ್ಲಿ ಸಾಕುಪ್ರಾಣಿಯಾದ ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕಿದ್ದಾರೆ. ಕೋಳಿ ಸಾಕು ಪಕ್ಷಿಯಾಗಿದೆ. ಗಿಳಿ, ಗೊರವಂಕ, ಗೂಬೆ, ಗರುಡ, ಹದ್ದು, ಕೋಗಿಲೆ, ಕಾಗೆ, ಕೊಕ್ಕರೆ, ನವಿಲು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ವಾರ್ಷಿಕ ವಾಡಿಕೆ ಮಳೆ ೪೬೦ ಮಿಮೀ ಆಗಿದ್ದು ಕೃಷಿ ಬದುಕಿಗೆ ಸಾಕಾಗುವುದಿಲ್ಲ. ಇದರ ಪರಿಹಾರವಾಗಿ ರೈತಾಪಿ ಜನ ಉಪನೀರಾವರಿಯಾಗಿ ವಿವಿಧ ಮೂಲಗಳಿಂದ ೧೨ ಕೊಳವೆ ಬಾವಿಗಳನ್ನು ತೋಡಿಸಿಕೊಂಡು ತೋಟಗಾರಿಕೆ, ಉಪಬೆಳೆ ಬೆಳೆಯುತ್ತಿದ್ದಾರೆ. ಉಳಿದಂತೆ ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಕೆ ಮಾಡುತ್ತಿದ್ದು ೩ ಕಿರು ಸಿಸ್ಟರ್ನ್‌ಗಳಿದ್ದು ೧ ಕೈಪಂಪು ಇದೆ. ಒಂದು ಹಳೆಯ ಸೇದುವ ಬಾವಿಯಾಗಿದ್ದು ಒಣಗಿಹೋಗಿದೆ. ಕಾಡುಗೊಲ್ಲರ ೧೧೦ ಮನೆಗಳಿದ್ದು ೬೫೦ ಜನಸಂಖ್ಯೆ ಹೊಂದಿದೆ.

ಮೇಗಳಕೇರಿ, ಕೆಳಗಲ ಕೇರಿ, ಅಜ್ಜೇನಹಳ್ಳಿ ಬೀದಿ ಎಂಬ ಮೂರು ಬೀದಿಗಳಿದ್ದು ಎಲ್ಲರೂ ಕಾಡುಗೊಲ್ಲ ಜನಾಂಗದ ಜನರು. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ಇಲ್ಲಿನ ಮನೆಗಳಲ್ಲಿ ಕಾಂಕ್ರೀಟ್, ಮಣ್ಣಿನ, ಹೆಂಚಿನ, ಶೀಟಿನ ಹಾಗೂ ೧೫ ಗುಡಿಸಲು ಇಂದಿಗೂ ಇವೆ. ೧೯೯೪–೯೫ ನೇ ಸಾಲಿನ ಬೆಳ್ಳಿ ಬೆಳಕು ಯೋಜನೆಯಡಿಯಲ್ಲಿ ತುಮಕೂರು ಜಿಲ್ಲೆಯಲ್ಲಿ ಈ ಗ್ರಾಮವನ್ನು ವಿಶೇಷ ಯೋಜನೆಗೆ ತೆಗೆದುಕೊಂಡು ೬೦ ಮನೆ ಚರಂಡಿ, ವಿದ್ಯುತ್, ಆಶ್ರಮ ವಸತಿಶಾಲೆ, ಶೌಚಾಲಯ, ಸಮುದಾಯ ಭವನ ನಿರ್ಮಿಸಿಕೊಡಲಾಗಿದೆ. ಇತ್ತೀಚೆಗೆ ಆಶ್ರಯ, ಜನತಾ, ವಸತಿ ಯೋಜನೆಯ ಅಡಿಯಲ್ಲಿ ಗೃಹ ನಿರ್ಮಾಣವಾಗಿದೆ. ೧೦ ಮನೆಗಳಲ್ಲಿ ಶೌಚಾಲಯ ಬಳಕೆಯಿದೆ. ಈ ಗ್ರಾಮದ ಒಟ್ಟು ಜನಸಂಖ್ಯೆ ೬೫೦ ಆಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ೨ ಎತ್ತಿನ ಗಾಡಿಗಳು ಇದ್ದು ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳ ಬಳಕೆಯಿದೆ. ಶೇಂಗಾ ಮುಖ್ಯ ಬೆಳೆ. ಆಹಾರ ಬೆಳೆಗಳಾಗಿ ರಾಗಿ, ಜೋಳ, ತೊಗರಿ, ಹುರುಳಿ, ಅಲಸಂದೆ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ರೇಷ್ಮೆ, ಸೇವಂತಿಗೆ, ತರಕಾರಿ ಬೆಳೆಯುತ್ತಾರೆ. ಗ್ರಾಮದಲ್ಲಿ ಕುರಿ ವ್ಯಾಪಾರ, ಹುಣಸೆಹಣ್ಣು, ತೆಂಗು, ಶೇಂಗಾ ವ್ಯಾಪಾರವಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಚಿಕ್ಕನಹಳ್ಳಿ ಜಿಲ್ಲಾ ಪಂಚಾಯ್ತಿ, ಹೊನ್ನಗೊಂಡನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದ ಈರಣ್ಣ ಎಂಬ ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಸುಮಾರು ೨೧೦ ದೂರವಾಣಿ (ಮೊಬೈಲ್) ಬಳಕೆಯಲ್ಲಿವೆ. ಒಂದು ಅಂಗನವಾಡಿ ಕೇಂದ್ರ, ಸಮುದಾಯ ಶಾಲೆ ಯೋಜನೆಯ ಆಶ್ರಮ ಶಾಲೆಯಿದ್ದು ಶಾಲೆಯಲ್ಲಿ ಬಿಸಿಯೂಟ, ಊಟ, ವಸತಿ, ಪುಸ್ತಕ, ಹಾಸಿಗೆ, ಹೊದಿಕೆ ಬಟ್ಟೆ ನೀಡಲಾಗುತ್ತಿದೆ. ೨೫ ಮಕ್ಕಳು ಈ ವಸತಿ ಶಾಲೆಯಲ್ಲಿ ಓದುತ್ತಿದ್ದಾರೆ. ಕರ್ನಾಟಕದ ಮುಖ್ಯ ಮಂತ್ರಿಯಾಗಿದ್ದ ಹೆಚ್.ಡಿ. ಕುಮಾರಸ್ವಾಮಿ ೨೧.೧೨.೨೦೦೬ ರಲ್ಲಿ ಈ ಗ್ರಾಮದ ತಾಲ್ಲೂಕು ಪಂಚಾಯ್ತಿ ಸದಸ್ಯ, ಈ ಗ್ರಾಮದ ಬೆಳ್ಳಿಬೆಳಕು ಯೋಜನೆಯ ಸಂಚಾಲಕ, ತುಮಕೂರು ಜಿಲ್ಲಾ ದೌರ್ಜನ್ಯ ತಡೆಗಟ್ಟುವ ಕಾರ್ಯದಳದ ಸದಸ್ಯರೂ ಆಗಿರುವ ಎಂ.ಆರ್.ಡಿ ಪದವೀಧರ ಕೆ.ಚಿಕ್ಕಣ್ಣ ಅವರ ಮನೆಯಲ್ಲಿ ಮುಖ್ಯಮಂತ್ರಿ ವಾಸ್ತವ್ಯ ಹೂಡಿದ್ದ ಸಂದರ್ಭದಲ್ಲಿ ಇದೇ ವಸತಿ ಶಾಲೆಯಲ್ಲಿ ಕುಮಾರಸ್ವಾಮಿಯವರು ಇಡೀ ದಿನ ಜನಸಂಪರ್ಕ ಸಭೆ ನಡೆಸಿದ್ದು ವಿಶೇಷವಾಗಿದೆ. ವಸತಿ ಶಾಲೆಯಲ್ಲಿ ಇಬ್ಬರು ಶಿಕ್ಷಕರಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ

ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೩ ಪೆಟ್ಟಿಗೆ ಅಂಗಡಿಗಳಿವೆ. ಧಾರ್ಮಿಕವಾಗಿ ಪ್ರಾಚೀನ ಕಾಲದ ಕದರಿ ನರಸಿಂಹ ದೇವಾಲಯವಿದ್ದು ಪಟ್ಟದ ಪೂಜಾರಿ ಉಗ್ರಜ್ಜ ನೇತೃತ್ವದಲ್ಲಿ ಕಲ್ಲುಗಾಲಿ ರಥೋತ್ಸವ, ಜಾತ್ರೆ ಒಂದು ವಾರಗಳ ಕಾಲ ವಿಜೃಂಭಣೆಯಿಂದ ನಡೆಯುತ್ತದೆ. ಈ ಸಂದರ್ಭದಲ್ಲಿ ಜನಪದ ಕಲಾ ಪ್ರದರ್ಶನ, ಅನ್ನ ಸಂತರ್ಪಣೆ ಏರ್ಪಡುತ್ತದೆ.

ಶಿಕ್ಷಣ, ರೈಲ್ವೇ, ಪೋಲೀಸ್, ಹೆಚ್.ಎ.ಎಲ್ ಸೇರಿದಂತೆ ಒಟ್ಟು ೫ ಜನ ಸರ್ಕಾರಿ ನೌಕರರಿದ್ದಾರೆ. ಬಿ.ಕರಿಯಣ್ಣ ಸಧ್ಯ ತುಮಕೂರು ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಲೇಖಕರೂ ಆಗಿರುವುದು ಈ ಗ್ರಾಮದ ವಿಶೇಷ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸ್ವಸಹಾಯ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ.

ಆಂಜನೇಯ, ಲಕ್ಕದಾತಗೊಂಡಸ್ವಾಮಿ, ಈರಮುದ್ದಣ್ಣ, ಭೂತಪ್ಪ, ಬೇವಿನಹಳ್ಳಿ ಕರಿಯಮ್ಮನ ಪೌಳಿಗಳಿದ್ದು ಬೇವಿನಹಳ್ಳಿ ಕರಿಯಮ್ಮನ ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ.

ಜನಪದ ಕಲೆಗೆ ಈ ಗ್ರಾಮ ವಿಶೇಷವಾಗಿ ಪ್ರಸಿದ್ಧವಾಗಿದ್ದು ಕದರಪ್ಪ, ಚಿಕ್ಕರಾಮಣ್ಣ, ಸಣ್ಣೀರಪ್ಪ, ಸಣ್ಣಚಿಕ್ಕಣ್ಣ, ತೋಪಣ್ಣ, ರೊಕ್ಕಣ್ಣ ಪ್ರಮುಖ ಕೋಲಾಟದ ಕಲಾವಿದರು. ಸ್ಥಳೀಯವಾಗಿ ಹೆಸರು ಮಾಡಿರುವ ಜನಪದ ಕಲಾಸಂಪನ್ನರು. ಸೋಬಾನೆ ದೊಡ್ಡಮಾರಕ್ಕ, ಕಾಡಮ್ಮ, ಈರಮ್ಮ, ನರಸಮ್ಮ, ಸೋಬಾನೆ ಈರಮ್ಮ ಸ್ಥಳೀಯವಾಗಿ ಗುರುತಿಸಿಕೊಂಡು ಧಾರ್ಮಿಕ ವೈವಾಹಿಕ ಸಮಾರಂಭಗಳಲ್ಲಿ ಆಧುನಿಕ ಕಲಾವಿದರಾಗಿ ಭಾಗವಹಿಸುತ್ತಿರುವ ಕಲಾವಿದರು.

ಗ್ರಾಮದಲ್ಲಿ ಗೆಳೆಯರ ಬಳಗ ಎಂಬ ಸಾಂಸ್ಕೃತಿಕ ಸಂಘವಿದ್ದು ಗ್ರಾಮದ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ಪ್ರಗತಿಗೆ ಪೂರಕವಾಗಿ ತೊಡಗಿಸಿಕೊಂಡಿದೆ. ಕೆ.ಚಿಕ್ಕಣ್ಣ ಇದರ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ಹನುಮಂತನಗರ

ಹನುಮಂತನಗರ, ಚಿರತಹಳ್ಳಿಯೊಂದಿಗೆ ಕೂಡಿಕೊಂಡಿದ್ದರೂ ಪ್ರತ್ಯೇಕತೆ ಯನ್ನು ಉಳಿಸಿಕೊಂಡಿದೆ. ಸಿರಾ ತಾಲ್ಲೂಕು ಕೇಂದ್ರದಿಂದ ೩೯ ಕಿ.ಮೀ. ದೂರದಲ್ಲಿ ರುವ ಚಿಕ್ಕಹಳ್ಳಿ, ಚಿರತೆಗಳ ಆವಾಸಸ್ಥಾನ ಎಂಬ ಪರಿಕಲ್ಪನೆ ಇದೆ. ಗ್ರಾಮದಲ್ಲಿ ರಾಮದೇವರ ಗುಡಿ ಹೊಂದಿಕೊಂಡಿರುವುದರಿಂದ ಹನುಮಂತ ಪುರ ಎಂದು ಕರೆಯಲಾಗಿದೆ. ಮರಳು ಮಿಶ್ರಿತ ಕೆಂಪು ಮಣ್ಣು ಹೊಂದಿದ್ದು ಚಿರತಹಳ್ಳಿ–ಹನುಮಂತನಗರಕ್ಕೆ ಹೊಂದಿಕೊಂಡಂತೆ ೧೨೮ ಎಕರೆ ಗೋಮಾಳವಿದ್ದು, ಹುಲ್ಲು ಗಾವಲಾಗಿದೆ.

ಗ್ರಾಮದಲ್ಲಿ ಹಸು, ಕುರಿ, ಎಮ್ಮೆ, ಮೇಕೆ ಸಾಕುತ್ತಾರೆ. ಈ ಪರಿಸರದಲ್ಲಿ ನರಿ, ಮೊಲ, ಹಂದಿ ಕಂಡು ಬಂದರೆ ಪಕ್ಷಿಗಳಾದ ಗಿಳಿ, ಗೂಬೆ, ಮರಕುಟಿಕ, ಗುಬ್ಬಚ್ಚಿ ಕಂಡು ಬರುತ್ತದೆ. ಗ್ರಾಮದಲ್ಲಿ ಕೋಳಿ ಸಾಕಾಣಿಗೆ ಇದೆ. ಸರಾಸರಿ ೪೬೩ ಮಿ.ಮೀ. ಮಳೆ ಬೀಳುವ ಈ ಪರಿಸರದಲ್ಲಿ ೧೨೦ ಸೆಂ. ಚಳಿ ಇದ್ದು, ೩೮೦ ಸೆಂ. ಉಷ್ಣಾಂಶ ಸಾಮಾನ್ಯ. ಕುಡಿಯುವ ನೀರಿಗೆ ಚಿರತಹಳ್ಳಿಯ ಮುಖ್ಯ ಟ್ಯಾಂಕ್‌ನಿಂದ ಕೊಳಾಯಿ ಮೂಲಕ ೩೪ ನಲ್ಲಿಗಳಲ್ಲಿ ನೀರು ಹರಿಸಲಾಗುವುದು. ಕುಂಚಿಟಿಗರು, ಆದಿಕರ್ನಾಟಕ, ಗೊಲ್ಲರು, ಆದಿದ್ರಾವಿಡ ಜನಾಂಗದವರು ಒಟ್ಟಿಗೆ ನೆಲೆಸಿದ್ದು, ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ. ೬೩ ಮನೆಗಳಿರುವ ಇಲ್ಲಿ ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಿದ್ದು, ೨ ಗುಡಿಸಲುಗಳಿವೆ. ಜನತಾ, ಆಶ್ರಯ, ವಸತಿ ಯೋಜನೆಯ ೯ ಫಲಾನುಭವಿಗಳು ಹೆಚ್ಚಿದ್ದಾರೆ. ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳು ಇದ್ದಾರೆ. ೩೫೦ಜನಸಂಖ್ಯೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ರೊಟ್ಟಿ, ಅನ್ನ ಬಳಸುವವರಿದ್ದಾರೆ ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎತ್ತಿನಗಾಡಿ, ಆಧುನಿಕ ಟ್ರ್ಯಕ್ಟರ್, ಮಿನಿ ಟೆಂಪೋ, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಬೆಳೆಯಾಗಿದ್ದು, ರಾಗಿ, ಅಲಸಂದಿ, ಜೋಳ, ಭತ್ತ ಆಹಾರ ಬೆಳೆಗಳಾಗಿವೆ. ಹತ್ತಿ, ರೇಷ್ಮೆ, ಸೂರ್ಯಕಾಂತಿ ಬೆಳೆಗಳನ್ನು ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ದಾಳಿಂಬೆ, ಅಡಿಕೆ, ತೆಂಗು ಬೆಳೆಯುತ್ತಾರೆ. ಇಬ್ಬರು ಸರ್ಕಾರಿ ನೌಕರರಿದ್ದಾರೆ. ಹುಣಸೆಹಣ್ಣಿನ ವ್ಯಾಪಾರವೂ ಇದೆ.

ಸಿರಾ ವಿಧಾನಸಭೆ, ತಡಕಲೂರು ಗ್ರಾಮ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಹಾಗೂ ಹುಲಿಕುಂಟೆ ಜಿಲ್ಲಾ ಪಂಚಾಯಿತಿ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಗ್ರಾಮದಲ್ಲಿ ಒಂದು ಅಂಗನವಾಡಿ, ಪ್ರಾಥಮಿಕ ಕಿರಿಯ ಶಾಲೆ ಇದ್ದು,೨೮ ಮಕ್ಕಳು ಇಬ್ಬರು

ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯವಿದೆ. ಒಂದು ಸ್ತ್ರೀ ಶಕ್ತಿ ಗುಂಪು ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಂಧ್ಯಾ ಸುರಕ್ಷೆ, ಎಸ್.ಎಸ್.ವೈ. ವಿಧವಾ ವೇತನದ ಫಲಾನುಭವಿಗಳಿದ್ದು, ಒಂದು ಅಂಗಡಿ ಇದೆ. ಕರಿಯಮ್ಮ ಗ್ರಾಮದ ಮುಖ್ಯ ದೈವವಾಗಿದ್ದು ಮೇ ತಿಂಗಳಲ್ಲಿ ಗ್ರಾಮದ ಊರಹಬ್ಬ ಆಚರಿಸುತ್ತಾರೆ. ಪ್ರಾಣಿ ಬಲಿ, ಆರತಿ,ಬಾನ ಸಹಜವಾಗಿರುತ್ತದೆ. ಚಿರತಹಳ್ಳಿ, ಅಮರಾಪುರ–ಸಿರಾ ಮಾರ್ಗವಾಗಿ ಜಿಲ್ಲಾ ಪಂಚಾಯಿತಿ ರಸ್ತೆ ಮಾರ್ಗವಿದೆ. ಮುಂದೆ ಆಂಧ್ರಪ್ರದೇಶದ ಮದನಕುಂಟೆಗೆ ಲಿಂಕ್ ರಸ್ತೆ ಇದೆ.

## ಹಳ್ಳಪ್ಪನ ಪಾಳ್ಯ

ಹಳ್ಳಪ್ಪನ ಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೩ ಕಿ.ಮೀ. ದೂರದಲ್ಲಿದೆ. ತಡಕಲೂರು ಮಜರೆ ಗ್ರಾಮವಾಗಿದೆ. ರೈತಾಪಿ ಕಸುಬಿನ ಜನರೇ ವಾಸಿಸುವ ಇಲ್ಲಿನ ಮಣ್ಣು ಕೆಂಪು, ಬಿಳಿ ಮಿಶ್ರಿತವಾಗಿದ್ದು, ಮಳೆಯ ಪ್ರಮಾಣವೂ ಕಡಿಮೆ. ಕುರುಚಲು ಗಿಡ, ಮರ, ಪೊದೆಗಳ ದಟ್ಟಣೆಯನ್ನು ಕಾಣಬಹುದಾಗಿದೆ. ಗ್ರಾಮಕ್ಕೆ ಹೊಂದಿಕೊಂಡಂತೆ ಒಂದು ಪುಟ್ಟ ಕಟ್ಟೆಯಿದ್ದು, ಮೂಲ ಸೌಕರ್ಯಕ್ಕೆ ಮಾತ್ರ ಅನುಕೂಲ. ಆದರೂ ತುಂಬುವುದು ವಿರಳ ಎಂದು ಗ್ರಾಮದ ನರಸೀಯಪ್ಪ ಹೇಳುತ್ತಾರೆ. ಹಳ್ಳಪ್ಪ ಎಂಬ ವ್ಯಕ್ತಿಯು ಮೊದಲು ಇಲ್ಲಿ ವಾಸ ಮಾಡುತ್ತಿದ್ದು, ಆತನಿಂದಲೇ ಊರು ಬೆಳೆದಿದೆ. ಹಾಗಾಗಿ ಅದೇ ಹೆಸರಿನಿಂದ ಕರೆಯುತ್ತಾರೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಕಾಗೆ, ಕೋಗಿಲೆ ಕಂಡು ಬರುತ್ತವೆ. ಗ್ರಾಮದಲ್ಲಿ ವ್ಯವಸಾಯಕ್ಕಾಗಿ ಹಸು, ಹಳ್ಳಿಕಾರ ಎತ್ತುಗಳನ್ನು ಸಾಕಿದ್ದಾರೆ. ಕುರಿ, ಮೇಕೆ, ಕೋಳಿ ಸಾಕಾಣಿಕೆಯೂ ಇದೆ.

ಸರಾಸರಿ ೪೬೩ ಮಿ.ಮೀ. ಮಳೆ ಸುರಿಯುವ ಇಲ್ಲಿ ಬಿಸಿಲಿನ ಧಗೆ ಹೆಚ್ಚು. ಒಮ್ಮೊಮ್ಮೆ ೪೦ಂ ಸೆಂ. ಬಿಸಿಲು ಇದ್ದು, ಚಳಿ ಸರಾಸರಿ ೧೨ಂ ಸೆಂ. ಇರುತ್ತದೆ. ಕುಡಿಯಲು ಗ್ರಾಮ ಪಂಚಾಯಿತಿಯಿಂದ ಕೊಳವೆ ಬಾವಿಯಿಂದ ನೀರು ಸರಬರಾಜು ಮಾಡಲಾಗುತ್ತಿದೆ. ೨ ನಲ್ಲಿ ಟ್ಯಾಂಕ್ ಇದೆ. ನಾಯಕರು ಈ ಗ್ರಾಮದ ದೊಡ್ಡ ಸಮುದಾಯ, ಕಾಡುಗೊಲ್ಲರು, ಕುಂಚಿಟಿಗರು ಸಣ್ಣ ಸಮುದಾಯವಾಗಿದೆ. ಒಟ್ಟು ૩૨ ಮನೆಗಳಿದ್ದು, ಕಾಂಕ್ರೀಟ್, ಹೆಂಚಿನ, ಶೀಟಿನ ಹಾಗೂ ಒಂದು ಗುಡಿಸಲು ಮನೆ ಇದೆ. ೬ ಮನೆಗಳಲ್ಲಿ ಶೌಚಾಲಯದ ಬಳಕೆ ಇದ್ದು, ಅಂಗನವಾಡಿ ಕೇಂದ್ರವಿದೆ. ೧೪ ಮಕ್ಕಳು, ೧ ಸಹಾಯಕ ಕಾರ್ಯ ನಿರ್ವಹಿಸುತ್ತಿದ್ದಾರೆ. ೧೫೩ ಜನಸಂಖ್ಯೆ ಇದೆ.

ರಾಗಿ ಮುದ್ದೆ, ಗ್ರಾಮದ ಮುಖ್ಯ ಆಹಾರ, ಅನ್ನ, ರೊಟ್ಟಿ ಉಪಆಹಾರಗಳು. ಬಾಡೂಟ, ಹೋಳಿಗೆ ಸಾಂದರ್ಭಿಕ ಊಟವಾಗಿದೆ. ಎತ್ತಿನಗಾಡಿ, ಟ್ರ್ಯಕ್ಟರ್, ದ್ವಿಚಕ್ರವಾಹನ ಬಳಕೆಯಲ್ಲಿದೆ. ಶೇಂಗಾ ಗ್ರಾಮದ ಮುಖ್ಯ ಬೆಳೆ. ರಾಗಿ, ನವಣೆ, ಹುರುಳಿ, ತೊಗರಿ ಆಹಾರ ಬೆಳೆಗಳು. ಸೂರ್ಯಕಾಂತಿ, ಹುಣಸೆ ಹಣ್ಣು, ತೆಂಗು ವ್ಯಾಪಾರಿ ಬೆಳೆಗಳಾಗಿವೆ. ಒಬ್ಬರು ಕೆ.ಎಸ್.ಆರ್.ಟಿ.ಸಿ. ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ತಡಕಲೂರು ತಾಲ್ಲೂಕು, ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಒಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ೨ ಸ್ತ್ರೀ ಶಕ್ತಿ ಸಂಘಗಳಿದ್ದು, ವಿಧವಾ ವೇತನ, ಎಸ್.ಎಸ್.ವೈ. ವೃದ್ಧಾಪ್ಯವೇತನಗಳ ಫಲಾನುಭವಿಗಳಿದ್ದಾರೆ. ಆಶ್ರಯ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳು ಇದ್ದು, ಭೂತಪ್ಪದೇವರ ಹರಿಸೇವೆ, ಆರತಿ, ಬ್ಯಾಟೆ ಗ್ರಾಮದ ಊರಹಬ್ಬದ ಆಚರಣೆಯಾಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಶನಿದೇವರು, ಮಾರಮ್ಮ ದೇವರ ಪೌಳಿಗಳಿವೆ. ಯುಗಾದಿ, ಶಿವರಾತ್ರಿ, ಗೌರಮ್ಮ, ಕುಂತೆಮ್ಮ ವಿಶೇಷ ಹಬ್ಬಗಳನ್ನು ಆಚರಿಸುತ್ತಾರೆ. ತತ್ವಪದ ಕಾರಣರಾದ ನಿಂಗಜ್ಜಿ, ಕೆಂಚಮ್ಮ, ಗಣೆ ಕಾವ್ಯ ಹಾಡುವ ಕಾಡುಗೊಲ್ಲರ ಈರಣ್ಣ ಈ ಗ್ರಾಮದ ಗಮನಾರ್ಹ ಕಲಾವಿದರು. ಕಲಾ ಮಂದಿರ, ಸಾಂಸ್ಕೃತಿಕ ಮತ್ತಿತರ ಯಾವುದೇ ಚಟುವಟಿಕೆಗಳ ಸಂಘಟಿತ ಸಂಘ, ಸಂಸ್ಕೃತಿ ಈ ಗ್ರಾಮದಲ್ಲಿ ಇರುವುದಿಲ್ಲ. ಆದರೂ ಕಲಾವಿದರೂ ದೇವಾಲಯ, ಹರಿಕಥೆ ಹಾಗೂ ಶಿವಕಥಾ ಪಾರಾಯಣದ ಸಂದರ್ಭದಲ್ಲಿ ಒಗ್ಗೂಡಿ ಸಾಂಸ್ಕೃತಿಕ ಚಟುವಟಿಕೆ ನಡೆಸಿ ಕೊಡುತ್ತಾರೆ. ಶಿಕ್ಷಣಕ್ಕೆ ತೊಂದರೆ ಇದೆ ಎಂದು ಗ್ರಾಮಸ್ಥರ ಅಳಲಾಗಿದ್ದು, ಸಮೀಪದ ತಡಕಲೂರು, ಲಕ್ಕನಹಳ್ಳಿ ಗ್ರಾಮಗಳಿಗೆ ಮಕ್ಕಳು ಹೋಗಬೇಕಾಗಿದೆ.

## ಹನುಮೇಗೌಡನ ಪಾಳ್ಯ

ಹನುಮೇಗೌಡನ ಪಾಳ್ಯ ಸಿರಾ ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿ ಬರಗೂರಿನಿಂದ ವಾಯುವ್ಯಕ್ಕೆ ೧ ಕಿ.ಮೀ. ದೂರದಲ್ಲಿದೆ. ಹನುಮೇಗೌಡ ಎಂಬ ವ್ಯಕ್ತಿ ಮೊದಲು

ಈ ಗ್ರಾಮದಲ್ಲಿ ಮನೆ ನಿರ್ಮಿಸಿಕೊಂಡು ವಾಸವಾದ ಪ್ರಯುಕ್ತ ಇದೇ ಹೆಸರಿನಲ್ಲಿ ಗ್ರಾಮ ಬೆಳೆದಿದೆ. ಸದ್ಯ ಈ ಗ್ರಾಮದಲ್ಲಿ ೩೮ ಮನೆಗಳಿದ್ದು ಇದರ ಭೌಗೋಳಿಕ ವಿಸ್ತೀರ್ಣ ಬರಗೂರು ಮೂಲ ಗ್ರಾಮದಲ್ಲಿ ಸೇರ್ಪಡೆಯಾಗಿದೆ. ೧೧೯೩.೦೧ ಹೆಕ್ಟೇರ್, ಮರುಳು ಮಿಶ್ರಿತ ಕೆಂಪು ಮಣ್ಣು ಹೊಂದಿರುವ ಇಲ್ಲಿನ ನೆಲದಲ್ಲಿ ಶೇಂಗಾ, ರಾಗಿ, ಹತ್ತಿ , ಅಲಸಂದಿ, ತೊಗರಿ ಮುಖ್ಯ ಬೆಳೆಗಳನ್ನಾಗಿ ಬೆಳೆಯುತ್ತಾರೆ. ನೀರಾವರಿ ಸೌಕರ್ಯ ಇರುವ ಆರು ಕುಟುಂಬಗಳು ತೆಂಗು, ಅಡಿಕೆ ಬೆಳೆಯನ್ನು ಬೆಳೆಯು ತ್ತಾರೆ. ಇಲ್ಲಿನ ನಿಸರ್ಗ ಸಹಜ ಗಿಡ ಪೊದೆಗಳಲ್ಲಿ ಮೊಲ, ನರಿ, ಉಡ, ಹಾವು, ಮುಂಗುಸಿ ಮೊದಲಾದ ಕಾಡು ಪ್ರಾಣಿಗಳು ಕಂಡು ಬಂದರೆ, ಗಿಳಿ, ಕೌಜಲಗ, ಬೆಕ್ಕು, ಕಾಗೆ, ಹದ್ದು ಮೊದಲಾದ ಕಾಡು ಪಕ್ಷಿಗಳು ಕಂಡು ಬರುತ್ತವೆ. ಗ್ರಾಮದ ಜನಸಂಖ್ಯೆ ೨೦೩ ಇದೆ.

ವಾರ್ಷಿಕ ಸರಾಸರಿ ಮಳೆ ೪೬೩ ಮಿ.ಮೀ. ಇದ್ದು, ಉಷ್ಣಾಂಶ ೩೬೦ ಸೆಂ. ಇರುತ್ತದೆ. ಚಳಿಯೂ ೧೨೦ ಸೆಂ. ಪ್ರಮಾಣದಲ್ಲಿದೆ. ಕುಂಟೆವೊಂದಿದ್ದು, ಇದು ಗ್ರಾಮದ ಸ್ವಚ್ಛತಾ ಕಾರ್ಯಗಳಿಗೆ ಬಳಕೆಯಾಗುತ್ತದೆ. ದನ,ಕರು ಕುಡಿಯುವ ನೀರಿಗೆ ಆಶ್ರಯವಾಗಿದೆ. ಕುಡಿಯುವುದಕ್ಕೆ ಬರಗೂರು ಗ್ರಾಮ ಪಂಚಾಯಿತಿ ಯಿಂದ ಕೊಳವೆ ಬಾವಿಯ ಮೂಲಕ ಒಂದು ಮಿನಿ ಟ್ಯಾಂಕ್ ಮೂಲಕ ಸರಬರಾಜು ಮಾಡಲಾಗುತ್ತಿದೆ. ಕುಂಚಿಟಿಗರು ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ವಿಶ್ವಕರ್ಮ ಅಗಸರು ಸಣ್ಣ ಸಮುದಾಯವಾಗಿದೆ. ಹೆಂಚಿನ, ಶೀಟಿನ, ಕಾಂಕ್ರೀಟ್ ಕಲ್ಲಿನ ಒಟ್ಟು ೩೮ ಮನೆಗಳಿವೆ. ರಾಗಿ ಮುದ್ದೆ ಈ ಗ್ರಾಮದ ಪ್ರಮುಖ ಆಹಾರ. ರೊಟ್ಟಿ, ಅನ್ನ ಉಪ ಆಹಾರಗಳು. ವಿಶೇಷ ಸಂದರ್ಭದಲ್ಲಿ ಮಾಂಸದ ಊಟ ಹೋಳಿಗೆ ಊಟದ ಏರ್ಪಾಡು ಇರುತ್ತದೆ. ಇಲ್ಲಿ ಒಂದು ಅಂಗನವಾಡಿ ಕೇಂದ್ರ ಮಾತ್ರವಿದ್ದು ೧೬ ಮಕ್ಕಳಿದ್ದಾರೆ. ಇಬ್ಬರು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಾರೆ. ೧೫೩ ಜನಸಂಖ್ಯೆ ಇದೆ.

ಸಿರಾ ವಿಧಾನಸಭೆ, ಚಿತ್ರದುರ್ಗ ಲೋಕಸಭೆ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ ಹಾಗೂ ಬರಗೂರು ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ವೃದ್ಧಾಪ್ಯ ವೇತನ, ವಿಧವಾ ವೇತನ, ಎಸ್.ಎಸ್.ವೈ. ಸೌಲಭ್ಯ ಪಡೆದವವು ಇದ್ದಾರೆ. ೬ ಮನೆಗಳಲ್ಲಿ ಶೌಚಾಲಯವಿದೆ. ಒಂದು ಪುಟ್ಟ ಅಂಗಡಿ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದೇವತೆ ಕರಿಯಮ್ಮನ ಉತ್ಸವ, ಆರತಿ, ಬಾನ, ಬ್ಯಾಚೆ ವಾರ್ಷಿಕ ಆಚರಣೆಯಾಗಿ ಊರಹಬ್ಬವಾಗಿ ಪ್ರಕಟವಾಗುತ್ತದೆ. ಚೌಡಮ್ಮ, ಏರಿ ಬಸವಣ್ಣ ಈ ಗ್ರಾಮದ ಇತರ ದೇವಸ್ಥಾನಗಳು. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಮಹಾನವಮಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಕುಂತಮ್ಮ–ಗೌರಮ್ಮ ಹಬ್ಬದ ಸಡಗರವೂ ದೀಪಾವಳಿ ಸಂದರ್ಭದಲ್ಲಿ ವಿಶೇಷವಾಗಿರುತ್ತದೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬರಗೂರು ಗ್ರಾಮಕ್ಕೆ ಹೋಗಬೇಕಾಗಿದೆ. ಸಾಕ್ಷರತೆ ಪ್ರಮಾಣ ಶೇ. ೭೧.೧೨ ಇದ್ದು, ಪುರುಷರು ಶೇ. ೮೩.೭ ಇದ್ದರೆ ಮಹಿಳೆಯರು ಶೇ. ೫೭.೮ ಇದ್ದಾರೆ ಬರಗೂರು ಮಾರ್ಗವಾಗಿ ರಸ್ತೆ ಇದ್ದು, ಖಾಸಗಿ ವಾಹನಗಳು ಸಂಚಾರ ಮಾಡುತ್ತವೆ.

## ಹಾರೋಗೆರೆ

ಹಾರೋಗೆರೆ ಸಿರಾ ತಾಲ್ಲೂಕು ಕೇಂದ್ರದಿಂದ ೩೦ ಕಿ.ಮೀ. ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದೆ. ಬರಗೂರು–ಆಂಧ್ರಪ್ರದೇಶದ ಮಡಕಸಿರಾ ನೇರ ರಸ್ತೆಯ, ಮೋರಬಾಗಿಲು ಗ್ರಾಮದ ಸಂಪರ್ಕ ರಸ್ತೆಯ ನಡುವೆ ಹಾರೋಗೆರೆ ಇದೆ. ಬರಗೂರಿನಿಂದ ಪೂರ್ವಕ್ಕೆ ಆರು ಕಿ.ಮೀ. ದೂರದಲ್ಲಿದೆ. ಒಟ್ಟು ೮೫೧.೧೨ ಹೆಕ್ಟೇರ್ ಭೌಗೋಳಿಕ ವ್ಯಾಪ್ತಿಯನ್ನು ಪಡೆದಿರುವ ಈ ಗ್ರಾಮಕ್ಕೆ ಬೀರನಹಳ್ಳಿ ಉಪಗ್ರಾಮವಾಗಿದೆ. ಈ ಗ್ರಾಮದ ಐತಿಹ್ಯವೆಂದರೆ ಹೇಮಾವತಿ ಸಂಸ್ಥಾನದ ಬ್ರಾಹ್ಮಣರು, ಇಲ್ಲಿನ ದೇವಸ್ಥಾನಕ್ಕೆ ಬರುತ್ತಿದ್ದು, ಪಂಡಿತರು ಈ ಗ್ರಾಮದಲ್ಲಿ ರಂಗನಾಥ ಸ್ವಾಮಿಯನ್ನು ಪೂಜಿಸಲು ನೀರು, ಮಡಿ ಮತ್ತಿತರ ಕಾರಣಕ್ಕೆ ಹಾರೋಗೆರೆಯ ಕೆರೆ ನೀರನ್ನು ಬಳಸುತ್ತಿದ್ದರು. ಇವರನ್ನು ಅನುಸರಿಸಿ ಆ ಪ್ರಾಂತ್ಯದ ಬ್ರಾಹ್ಮಣರು ಇಲ್ಲಿನ ಕೆರೆಯಲ್ಲಿ ಸ್ನಾನ ಮಾಡುವ ಪದ್ಧತಿ ರೂಢಿಯಾಯಿತು. ಈ ಕಾರಣದಿಂದಾಗಿ ಹಾರುತರು ಅಂದರೆ ಬ್ರಾಹ್ಮಣರು ಸ್ನಾನ ಮಾಡುವ ಕೆರೆ, ಹಾರೋಗೆರೆಯಾಗಿ ಈ ಗ್ರಾಮವನ್ನು ಇದೇ ಹೆಸರಿನಿಂದ ಕರೆಯಲಾಯಿತು ಎನ್ನುತ್ತಾರೆ. ಚನ್ನಬಸಪ್ಪನವರು ಇನ್ನೊಂದು ಹೇಳಿಕೆಯ ಪ್ರಕಾರ ಹೆಂಜೇರಿನ ಉಪರಾಜಧಾನಿಯಾಗಿದ್ದ ಬರಗೂರು–ಇಲ್ಲಿನ ವಟುಗಳಿಗೆ ಗುರುಗಳಾಗಿ ಹೆಚ್ಚಿನ ಸಂಖ್ಯೆಯಲ್ಲಿ ಹಾರೋಗೆರೆಯ ಬ್ರಾಹ್ಮಣರು ಇದ್ದರೆಂದು, ನೊಳಂಬ ರಾಜರು ಬ್ರಾಹ್ಮಣರಿಗಾಗಿಯೇ ಈ ಊರನ್ನು ಸ್ಥಾಪಿಸಿದನೆಂದ, ಆ ಕಾಲಕ್ಕೆ ಹಾರೋಗೆರೆ ಅಗ್ರಹಾರವಾಗಿತೆಂದು ಹೇಳುತ್ತಾರೆ. ಒಟ್ಟಾರೆ ಹಾರೋಗೆರೆ ಒಂದು ಹಳೆಯ ಗ್ರಾಮವಾಗಿದ್ದು, ಮುರಿದು ಬಿದ್ದಿರುವ ಕೋಟೆಯ ಅವಶೇಷಗಳು ಕೋಟೆ ಬಾಗಿಲುಗಳನ್ನು ಕಾಣಬಹುದಾಗಿದೆ. ಹಾರೋಗೆರೆ ಪರಿಸರದಲ್ಲಿ ನರಿ, ತೋಳ, ಮುಂಗುಸಿ, ಮೊಲ ಕಂಡು ಬರುತ್ತಿದ್ದು, ಪಾರಿವಾಳ, ಕೋಗಿಲೆ, ಕಾಗೆ, ಗೂಬೆ, ಹದ್ದು, ಗಿಳಿ, ಕೊಕ್ಕರೆ ಮೊದಲಾದ ಪಕ್ಷಿಗಳೂ ಇವೆ. ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆಗಾಗಿ ನಾಟಿ

ಹಾಗೂ ಹಳ್ಳಿಕಾರ್ ತಳಿ ಹಸುಗಳನ್ನು ಸಾಕುತ್ತಾರೆ. ಎಮ್ಮೆ, ಕುರಿ, ಮೇಕೆ, ಎತ್ತುಗಳ ಜೊತೆಗೆ ಸೀಮೆ ಹಸುವನ್ನು ಹೈನುಗಾರಿಕೆಗಾಗಿ ಸಾಕುತ್ತಿದ್ದಾರೆ.

ಸರಾಸರಿ ೪೬೨ ಮಿ.ಮೀ. ಮಳೆ ಬೀಳುವ ಭೂ ಪ್ರದೇಶದಲ್ಲಿ ಶೇ. ೧೨೦ ಸೆಂ. ಚಳಿ ಇರುತ್ತದೆ. ಬಿಸಿಲಿನ ತಾಪಮಾನವೂ ಅಧಿಕವಾಗಿದ್ದು ಕಳೆದ ಹತ್ತು ೨೦೧೦-೧೩ ನೇ ಸಾಲಿನಲ್ಲಿ ಅತಿ ಹೆಚ್ಚು ೩೯೦ ಸೆಂ. ದಾಖಲಾಗಿದೆ. ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿರುವ ಹಾರೋಗೆರೆಯಲ್ಲಿ ಶೇಂಗಾ, ರಾಗಿ, ಅಲಸಂದಿ, ತೊಗರಿ ಮುಖ್ಯ ಬೆಳೆಯಾಗಿದ್ದು, ಹತ್ತಿ, ಮುಸುಕಿನ ಜೋಳ, ಸೂರ್ಯಕಾಂತಿಯನ್ನು ಆರ್ಥಿಕವಾಗಿ ಬೆಳೆಯುತ್ತಾರೆ. ಅಡಕೆ, ತೆಂಗು, ಬಾಳೆ, ದಾಳಿಂಬೆ, ಸಪೋಟಗಳನ್ನು ತೋಟಗಾರಿಕೆ ಬೆಳೆಗಳನ್ನಾಗಿ ಬೆಳೆಯುವುದು ಇಲ್ಲಿನ ವಾಡಿಕೆಯಾಗಿದೆ.

ಈ ಗ್ರಾಮಕ್ಕೆ ಹೊಂದಿಕೊಂಡಂತೆ ೫೮ ಹೆಕ್ಟೇರ್‌ಗಳಲ್ಲಿ ಕೆರೆಯಿದ್ದು, ತುಂಬುವುದು ಅಪರೂಪವಾಗಿದೆ. ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿ ವತಿಯಿಂದ ೩ ಕೈ ಪಂಪುಗಳಲ್ಲಿ ೩ ಸಿಸ್ಟನ್‌ಗಳಲ್ಲಿ ನೀರನ್ನು ಪೂರೈಸಲಾಗುವುದು. ಬೀದಿ ನಲ್ಲಿಗಳೂ ಇವೆ.

ವೀರಶೈವ ಜನಾಂಗ ಇಲ್ಲಿನ ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ಕಮ್ಮಾರ, ನಾಯಕ, ಕುಂಚಿಟಿಗ, ಮುಸ್ಲಿಂ ಜನಾಂಗಗಳು ಸಣ್ಣ ಸಮುದಾಯವಾಗಿದೆ. ಗ್ರಾಮದ ಒಳಗೆ ಕಾಡುಗೊಲ್ಲರು ಸೇರಿ ಕೊಂಡಿದ್ದಾರೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಮಂಗಳೂರು ಹೆಂಚಿನ ನೆಗಳಿದ್ದು, ಜನತಾ, ಇಂದಿರಾ ಆವಾಸ್ ಯೋಜನೆಯ ೯೨ ಫಲಾನುಭವಿಗಳು ಇದ್ದಾರೆ. ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಗ್ರಾಮದಲ್ಲಿ ೧೦೦ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ಸಂಗಯ್ಯನವರ ಮಗ ಕೆ.ಪಿ. ಚನ್ನಬಸವಯ್ಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದಾರೆ. ೩೪೮ ಮನೆಗಳಿದ್ದು ೧೧೧೪ ಜನಸಂಖ್ಯೆ ಇದೆ.

ರಾಗಿ ಮುದ್ದೆ, ಅನ್ನ ಗ್ರಾಮದ ಮುಖ್ಯ ಆಹಾರವಾಗಿದ್ದು, ರೊಟ್ಟಿ, ದೋಸೆಯನ್ನು ಬಳಸುವವರಿದ್ದಾರೆ.ವಾದರೆ, ವಿಶೇಷ ಸಂದರ್ಭಗಳಲ್ಲಿ ಬಾಡೂಟ, ಹೋಳಿಗೆ ಊಟದ ವ್ಯವಸ್ಥೆಯೂ ಇರುತ್ತದೆ. ಗ್ರಾಮದಲ್ಲಿ ಟ್ರ್ಯಕ್ಟರ್, ಲಾರಿ,ಟೆಂಪೋ, ಸ್ಕೂಟರ್ ಬಳಕೆ ಇದ್ದು ಸಂಪ್ರದಾಯಿಕ ವಾಹನ ಎತ್ತಿನ ಗಾಡಿ ಇದೆ. ಗ್ರಾಮದಲ್ಲಿ ವೈದ್ಯರು, ಶಿಕ್ಷಕರು, ಬಿಎಂಟಿಸಿ, ಕೋರ್ಟ್ ಇಲಾಖೆಯ ಹನ್ನೆರಡು ಜನ ನೌಕರರು ಈ ಗ್ರಾಮದವರಿದ್ದಾರೆ. ಉಳಿದಂತೆ ಈ ಗ್ರಾಮದಲ್ಲಿ ಬಟ್ಟೆ ಹೊಲಿಗೆ, ಎಲೆ ತಯಾರಿಕೆ, ಬೀಡಿ ಸುತ್ತುವುದು ಕಂಡು ಬರುತ್ತದೆ. ಸೈಕಲ್ ರಿಪೇರಿ ಅಂಗಡಿಗಳಿವೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ಜಿಲ್ಲಾ ಪಂಚಾಯಿತಿ, ಬರಗೂರು ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗೂ, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಅಮ್ಮಾಜಿ ಪ್ರೌಢಶಾಲೆಗಳಿದ್ದು, ಒಟ್ಟು ೧೬ ಸಿಬ್ಬಂದಿಗಳು, ೨೧೧ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಗ್ರಾಮದ ಸಾಕ್ಷರತೆ ಪ್ರಮಾಣ ಶೇ. ೬೪.೮ ಆಗಿದ್ದು, ಮಹಿಳೆಯರು ಶೇ. ೫೧ ರಷ್ಟು, ಪುರುಷರು ಶೇ. ೭೭ ರಷ್ಟು ಇದ್ದಾರೆ. ಗ್ರಾಮದಲ್ಲಿ ಒಂದು ಉಪ ಆರೋಗ್ಯ ಕೇಂದ್ರ, ೨ ಸ್ತ್ರೀ ಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ೨ ಗುಂಪುಗಳಿವೆ. ಒಂದು ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯವಿದೆ.

ವಿಕಲ ಚೇತನ ವೇತನ, ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದು ಗ್ರಾಮದಲ್ಲಿ ೨ ಹೋಟೆಲ್ ಹಾಗೂ ೧೩ ಅಂಗಡಿಗಳಿವೆ. ಗ್ರಾಮದಲ್ಲಿ ೨ ವೀರಗಲ್ಲುಗಳಿದ್ದು, ಹೋರಾಟದ ನಂತರ ಮಡಿದ, ದೇವಲೋಕ ಹೋಗುವ ಚಿತ್ರಣಗಳಿವೆ. ೨ ಕರುಗಲ್ಲುಗಳಿದ್ದು, ಅವು ಪೂಜೆಗೆ ಒಳಗಾಗಿವೆ. ದೊಡ್ಡ ಅಶ್ವತ್ಥ ವೃಕ್ಷವಿದೆ. ಗ್ರಾಮದಲ್ಲಿ ರಂಗನಾಥ, ಬೇವಿನಳ್ಳಮ್ಮ, ಶನಿದೇವರ ದೇವಸ್ಥಾನ, ಚಿತ್ರದೇವರ ಪೌಳಿ ಇದ್ದು, ವಾರ್ಷಿಕ ಜಾತ್ರೆಯೂ ನಡೆಯುತ್ತದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಮಾರಪ್ಪ ಎಂಬ ಗೊಲ್ಲ ಸಮುದಾಯದ ೭೦ ವರ್ಷ ವಯಸ್ಸಿನ ವ್ಯಕ್ತಿ ಹಸು, ಕುರಿಗಳಿಗೆ ನಾಟಿ ಔಷಧಿ ನೀಡುತ್ತಾ, ಪಂಡಿತ ಎಂದು ಕರೆಸಿಕೊಂಡಿದ್ದಾರೆ. ಶಿವರಾತ್ರಿ, ಬಸವಜಯಂತಿ, ಯುಗಾದಿ, ಮಹಾನವಮಿ ಗ್ರಾಮದ ಮುಖ್ಯ ಹಬ್ಬಗಳಾಗಿವೆ.

## ಹೊಸಕೋಟೆ

ಹೊಸಕೋಟೆ ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೭ ಕಿ.ಮೀ. ದೂರದಲ್ಲಿದ್ದು, ಇದೊಂದು ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೨೧೪.೦೩ ಹೆಕ್ಟೇರ್ ಆಗಿದೆ. ಚಿಕ್ಕಬಾಣಗೆರೆ ಸಮೀಪದಲ್ಲಿರುವ ಈ ಗ್ರಾಮ ಯಾವುದೇ ಕೋಟೆ, ಊರ ಬಾಗಿಲು ಹೊಂದಿಲ್ಲ. ವಿವಿಧ ಜನ ವರ್ಗದ ೪೮ ಮನೆಗಳು ಮಾತ್ರ ಇರುತ್ತವೆ. ಬಾಣಗೆರೆ, ಹೇಮಾವತಿ ಕಡೆಯಿಂದ ಬಂದ ಜನ ಇಲ್ಲಿ ನಿವೇಶನ ವಸತಿ

ಮಾಡಿಕೊಂಡ ಕಾರಣದಿಂದ ಹೊಸ ಬಡಾವಣೆಗೆ ಪರ್ಯಾಯವಾಗಿ ಹೊಸಕೋಟೆ ಎಂಬ ರೈತರು ಇಟ್ಟು ಕೊಳ್ಳಲಾಗಿದೆ ಎಂದು ಹಿರಿಕ ರಂಗನಾಥಪ್ಪ ಹೇಳುತ್ತಾರೆ. ಕಪ್ಪು ಮಿಶ್ರಿತ ಮರಳು ಭೂಮಿ, ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಉಡ, ಬೆಕ್ಕು ಕಂಡು ಬಂದರೆ, ಗ್ರಾಮದಲ್ಲಿ ಹಸು, ಎಮ್ಮೆ, ಮೇಕೆ, ಕುರಿ, ಕೋಳಿ ಸಾಕಲಾಗಿದೆ. ಪಕ್ಷಿಗಳಾದ ಕೊಕ್ಕರೆ, ಕೋಗಿಲೆ, ಗಿಳಿ, ಗೊರವಂಕ, ಗೀಜಗ, ಬೆಳವ ಪಕ್ಷಿಗಳು ಕಂಡು ಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೩೪ ಮಿ.ಮೀ. ಆಗಿದೆ. ಬಿಸಿಲು ೩೯೦ ಸೆಂ. ಇದ್ದು, ಚಳಿ ೧೨೦ ಸೆಂ. ಸಹಜವಾಗಿರುತ್ತದೆ. ಈ ಪರಿಸರದಲ್ಲಿ ೧೦ ಕೊಳವೆ ಬಾವಿಗಳಿದ್ದು, ಕೃಷಿಗೆ ಬಳಕೆಯಾಗುತ್ತವೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಸರಬರಾಜು ಯೋಜನೆಯಡಿ ಒದಗಿಸಲಾಗುತ್ತಿದೆ. ೩ ಸಿಸ್ಟನ್‌ಗಳಿದ್ದು ೧ ಕೈ ಪಂಪು ಇದೆ.

ಕುಂಚಿಟಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು, ವೀರಶೈವ, ಬೋವಿ, ಆದಿಕರ್ನಾಟಕ ಕಿರು ಸಮುದಾಯಗಳಾಗಿವೆ. ಕನ್ನಡ, ತೆಲುಗು ಭಾಷೆ ಗ್ರಾಮದ ಭಾಷೆಯಾಗಿದೆ. ವಿವಿಧ ನೌಕರರ ೪೮ ಮನೆಗಳಿದ್ದು ಅವು ಕಡಪ ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿವೆ. ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆಯ ೨೩ ಫಲಾನುಭವಿಗಳಿದ್ದಾರೆ. ೧೩ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ೪೧೦ ಜನಸಂಖ್ಯೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ ಸಾಂದರ್ಭಿಕ ಭೋಜನವಾಗಿದೆ. ಎತ್ತಿನಬಂಡಿ, ಟ್ರ್ಯಕ್ಟರ್, ದ್ವಿಚಕ್ರ ವಾಹನಗಳಿವೆ. ಶೇಂಗಾ ಮುಖ್ಯ ಆಹಾರ. ರಾಗಿ, ಭತ್ತ, ಜೋಳ, ತೊಗರಿ ಪ್ರಮುಖ ಆಹಾರ ಬೆಳೆಗಳು. ಅಡಿಕೆ, ತೆಂಗು, ಹುಣಸೆ ಹಣ್ಣು, ವ್ಯಾಪಾರಿ ಬೆಳೆಗಳಾಗಿವೆ. ಒಂದು ಮಿನಿ ಹಾಲಿನ ಡೈರಿ ಇದ್ದು ಸರಾಸರಿ ೧೪೦ ಮೀಟರ್ ಹಾಲು ಸಂಗ್ರಹವಾಗಿದೆ. ಮಹಿಳೆಯರು ಬೀಡಿ ಸುತ್ತುವುದು, ಊಟದ ಎಲೆ ತಯಾರಿಕೆ ಗೃಹ ಕೃತ್ಯವಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಹುಲಿಕುಂಟೆ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ದೊಡ್ಡ ಬಾಣಗೆರೆ ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರವಾಗಿದೆ. ೨ ಸ್ತ್ರೀ ಶಕ್ತಿ ಸಂಘಗಳಿವೆ. ಅಂಗನವಾಡಿ, ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ಶಾಲೆಯಲ್ಲಿ ೨೯ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಪುಸ್ತಕ ವಿತರಣೆಯ ಸೌಲಭ್ಯಗಳಿವೆ. ಶೇ. ೪೬.೩ ರಷ್ಟು ಸಾಕ್ಷರತೆ ಇದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಕೊಲ್ಲಾಪುರದಮ್ಮ ಶನಿದೇವರ ದೇವಾಲಯವಿದೆ. ಕೊಲ್ಲಾಪುರದಮ್ಮ ಊರಹಬ್ಬ ನಡದು ಬಾನ, ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಗೌರಿ, ಶಿವರಾತ್ರಿ, ದಸರಾ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹೊಸಹಳ್ಳಿ

ಹೊಸಹಳ್ಳಿ ಗ್ರಾಮವು ಹುಲಿಕುಂಟೆ ಹೋಬಳಿಯ, ಗ್ರಾಮ ಪಂಚಾಯಿತಿಯ ಕೇಂದ್ರವಾಗಿದೆ. ಸಿರಾ–ಅಮರಾಪುರ ರಸ್ತೆಯಲ್ಲಿ, ಸಿರಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಬೇರೆ ಬೇರೆ ಮೂಲಗಳಿಂದ ಬಂದು ಹೊಸದಾಗಿ ಮನೆ ಕಟ್ಟಿಕೊಂಡ ಕಾರಣ ಈ ಗ್ರಾಮಗಳ ಹೊಸಹಳ್ಳಿ ಒಂದು ಕರೆಯಲಾಗಿದೆ.

ಇದೊಂದು ಕಂದಾಯ ಗ್ರಾಮವಾಗಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೩೪೮.೧೨ ಹೆಕ್ಟೇರ್ ಆಗಿದೆ. ಮುಖ್ಯ ರಸ್ತೆಯ (ಅಮರಾಪುರ –ಸಿರಾ) ಬಲಬದಿಗೆ ತಿರುಗಿ ಅರ್ಧ ಕಿ.ಮೀ. ಒಳಗೆ ಮಣ್ಣು ರಸ್ತೆಯಲ್ಲಿ ಕ್ರಮಿಸಿದರೆ ಈ ಗ್ರಾಮವಿದೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ೨೪೮ ಹೆಕ್ಟೇರ್ ಗೋಮಾಳ ಜಮೀನು ಇದ್ದು, ದನ–ಕುರಿಗಳಿಗೆ ಆಶ್ರಯವಾಗಿದೆ. ಕೆಂಪು, ಬಿಳಿ ಮಣ್ಣಿನಿಂದ ಕೂಡಿರುವ ಈ ಭೂಮಿಯ ಲಕ್ಷಣ–ಕುರುಚಲು ಗಿಡ, ಹಳ್ಳ, ದಿಣ್ಣೆಗಳಿಂದ ಕೂಡಿದೆ. ಪಶ್ಚಿಮಕ್ಕೆ ಒಂದು ಕೆರೆಯಿದ್ದು, ತುಂಬುವುದು ಅಪರೂಪ. ಹಾಗಾಗಿ ಬಳ್ಳಾರಿ ಜಾಲಿ ಬೆಳೆದುಕೊಂಡಿದ್ದು, ಇದು ಉರುವಲಿಗೆ ಸಹಕಾರಿಯಾಗಿದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿ, ಕಾಡುಬೆಕ್ಕು, ಮುಂಗುಸಿ, ಹೆಗ್ಗಣ, ಇಲಿ ಮೊದಲಾದವು ಕಂಡು ಬರುತ್ತವೆ. ರೈತಾಪಿ ಹಾಗೂ ಹೈನುಗಾರಿಕೆಗಾಗಿ ಹಸುವನ್ನು ಸಾಕುತ್ತಾರೆ. ಕೃಷಿ ಕಾರ್ಯಕ್ಕೆ ಎತ್ತು ಸಾಕಿದ್ದಾರೆ. ಎಮ್ಮೆ, ಕುರಿ, ಮೇಕೆ, ಕೋಳಿಗಳೂ ಈ ಗ್ರಾಮದ ಸಾಕು ಪ್ರಾಣಿಗಳಾಗಿವೆ.

ಬಿಸಿಲು, ಬರ ಹೊಂದಿಕೊಂಡಂತೆ ಕಾಣುವ ಇಲ್ಲಿ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೫೪೮೦ ಮಿ.ಮೀ. ಬೀಳುತ್ತದೆ. ಬಿಸಿಲಿನ ಪ್ರಮಾಣ ೩೯೦ ಸೆಂ. ಇದ್ದರೆ, ಚಳಿಯ ಪ್ರಮಾಣ ೧೨೦ ಸೆಂ. ಇರುತ್ತದೆ. ಒಂದು ಕೆರೆಯ ಜೊತೆಗೆ

ಕೆಂಗಪ್ಪನ ಕಟ್ಟೆ, ಹೊಸಕಟ್ಟೆ, ಗೋಕಟ್ಟೆಗಳೆಂಬ ೩ ಗೋ ಕಟ್ಟೆಗಳಿವೆ. ಒಂದು ಸಣ್ಣ ಹಳ್ಳ ದಕ್ಷಿಣದಿಂದ ಉತ್ತರಕ್ಕೆ ಹರಿದು ಹೋದರೂ, ನೀರು ಸಂಗ್ರಹವಾ ಗುವುದಿಲ್ಲ. ಇದು ಮಳೆ ಬಿದ್ದಾಗ ಮಾತ್ರ ಹರಿಯುತ್ತದೆ. ಹಾಗಾಗಿ ರೈತಾಪಿ ಬದುಕಿನ ಈ ಗ್ರಾಮದಲ್ಲಿ ೬೮ ಕೊಳವೆ ಬಾವಿಗಳ ಮೂಲಕ ಕೃಷಿ ಕಾಯಕದಲ್ಲಿ ತೊಡಗಿದ್ದಾರೆ. ಕುಡಿಯಲು ಸಣ್ಣ ನೀರು ಸಂಗ್ರಹ ಟ್ಯಾಂಕ್‌ಗಳ ಮೂಲಕ ಗ್ರಾಮ ಪಂಚಾಯಿತಿ ವತಿಯಿಂದ ನೀರನ್ನು ಪೂರೈಸಲಾಗುತ್ತಿದೆ. ೨ ಕೈ ಪಂಪು ಗಳೂ ಗ್ರಾಮದಲ್ಲಿವೆ.

ಕುಂಚಿಟಿಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು, ಆದಿ ಕರ್ನಾಟಕ, ಆದಿ ದ್ರಾವಿಡ, ವೀರಶೈವ, ಕಮ್ಮಾರ, ಮುಸ್ಲಿಂ ಕುಟುಂಬಗಳು ಸಣ್ಣ ಸಮುದಾಯ ವಾಗಿದೆ. ಕನ್ನಡ ಮತ್ತು ಉರ್ದು ಭಾಷೆಯನ್ನು ಮಾತನಾಡುತ್ತಾರೆ. ೨೨೭ ಮನೆಗಳ ಇಲ್ಲಿನ ರಚನೆ ಕಾಂಕ್ರೀಟ್, ಕಲ್ಲು, ಮಣ್ಣು ಹಾಗೂ ಹೆಂಚಿನ ಸ್ವರೂಪದ ಮನೆಗಳಿವೆ. ೩೧ ಮನೆಗಳು ಜನತಾ, ಆಶ್ರಯ, ಅಂಬೇಡ್ಕರ್ ಆವಾಸ್ ವಸತಿ ಯೋಜನೆಗಳ ಅಡಿಯಲ್ಲಿ ನಿರ್ಮಾಣವಾದವುಗಳೂ ಇವೆ. ಹಾಗೆಯೇ ಭಾಗ್ಯಜ್ಯೋತಿ ವಿದ್ಯುತ್ ಫಲಾನುಭವಿಗಳೂ ಇದ್ದಾರೆ. ೩೧೮ ಮನೆಗಳಿದ್ದು ೯೩೦ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ೧೧೮ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ.

ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ , ರೊಟ್ಟಿ ಮುಖ್ಯ ಆಹಾರವಾಗಿದೆ. ಬಾಡೂಟ, ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಬಂಡಿ, ಆಧುನಿಕ ವಾಹನಗಳಾದ ಟ್ರ್ಯಕ್ಟರ್, ಆಟೋ, ಟೆಂಪೋ ಬಳಕೆಯಿದೆ. ಶೇಂಗಾ ಗ್ರಾಮದ ಮುಖ್ಯ ಬೆಳೆಯಾಗಿದ್ದು, ರಾಗಿ, ಭತ್ತ, ಅಲಸಂದಿ, ತೊಗರಿ, ಹುರುಳಿ ಆಹಾರ ಬೆಳೆಗಳಾಗಿವೆ. ಸೂರ್ಯಕಾಂತಿ, ಹತ್ತಿ, ತೆಂಗು, ಅಡಿಕೆ ವಾಣಿಜ್ಯ ಬೆಳೆಯಾಗಿದೆ. ಹುಣಸೆಹಣ್ಣಿನ ಬೆಳೆಯೂ ಇರುತ್ತದೆ. ನಂದಿನ ಹಾಲಿನ ಸಹಕಾರ ಸಂಘವಿದ್ದು ನಿತ್ಯ ೫೦೦ ಲೀಟರ್ ಹಾಲು ಸಂಗ್ರಹವಾಗುತ್ತದೆ. ಶಿಕ್ಷಣ, ಸಾರಿಗೆ, ಇಲಾಕೆಗೆ ಸೇರಿದ ೩೨ ಜನ ಸರ್ಕಾರಿ ನೌಕರರಿದ್ದಾರೆ. ಮುಖ್ಯೋಪಾಧ್ಯಾಯರಾದ ಸಿದ್ದೇಶ್ವರ, ಕೆಎಸ್‌ಆರ್‌ಟಿಸಿ ಅಧಿಕಾರಿ ತಿಮ್ಮರಾಯಪ್ಪ ಈ ಗ್ರಾಮದವರು. ಆರ್.ಟಿ.ಓ. ತಿಮ್ಮರಾಯಪ್ಪ, ಮಹಾಲಿಂಗಯ್ಯ, ಚಿಕ್ಕೇಗೌಡ ಜೆ.ಟಿ.ಓ. ಅಧಿಕಾರಿಗಳು, ಮಾಜಿ ಸೈನಿಕರಾದ ಈಶ್ವರಯ್ಯ, ೩ ಜನ ಪೋಲೀಸ್ ಅಧಿಕಾಕಿರಗಳು ೨೧ ಜನ ಶಿಕ್ಷಕರು ಸೇರಿ ಒಟ್ಟು ೩೨ ಜನ ಸರ್ಕಾರಿ ನೌಕರರು ಈ ಗ್ರಾಮದಲ್ಲಿದ್ದಾರೆ.

ಸಿರಾ ಸೀಮೆಯ ಬಹು ದೊಡ್ಡ ಅಧ್ಯಕ್ಷರಾಗಿರುವ ಎಂ.ಸಿ.ಸದಾನಂದ ಅವರು ಇದೇ ಗ್ರಾಮದವರೆಂಬುದು ವಿಶೇಷ. ಮಹಿಳೆಯರು ಸಣ್ಣ ಕೈಗಾರಿಕೆ ಯಾಗಿ ಬೀಡಿ ಸುತ್ತುವುದು, ಊಟದ ಎಲೆ ತಯಾರಿಸುವುದು, ಟೈಲರಿಂಗ್ ಈ ಬಗೆಯ ಸಣ್ಣ ಗೃಹ ಕೈಗಾರಿಕೆಯಲ್ಲಿ ತೊಡಗಿರುತ್ತಾರೆ. ಗ್ರಾಮದಲ್ಲಿ ರಾಗಿ ಮಿಲ್, ಇಟ್ಟಿಗೆ ಫ್ಯಾಕ್ಟರಿಗಳಿವೆ. ವಾಹನ ರಿಪೇರಿ ಘಟಕಗಳಿವೆ.

ಸಿರಾ ವಿಧಾನಸಭಾ ಕ್ಷೇತ್ರ, ನಾದೂರು ಜಿಲ್ಲಾ ಪಂಚಾಯಿತಿ, ಬರಗೂರು ತಾಲ್ಲೂಕು ಪಂಚಾಯಿತಿ ಕೇಂದ್ರವೂ ಆಗಿರುವ ಹೊಸಹಳ್ಳಿ ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ. ಚಿತ್ರದುರ್ಗ ಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ೩ ಜನ ಪಂಚಾಯಿತಿ ಸದಸ್ಯರು, ಒಬ್ಬರು ವಾಟರ್ ಮ್ಯಾನ್ ಇದ್ದಾರೆ. ಅಂಚೆ ಕಛೇರಿ ಇದ್ದು, ಬರಗೂರು–ಅಮರಾಪುರ, ಸಿರಾ ಸಂಪರ್ಕ ಕಲ್ಪಿಸುವ ಉತ್ತಮ ರಸ್ತೆ ಇದೆ. ಸ್ವಸಹಾಯ ಮಾದರಿಯ ನಾಲ್ಕು ಸ್ತ್ರೀ ಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಗುಂಪು ಪ್ರತಿನಿಧಿಗಳಿದ್ದಾರೆ.

ಶೈಕ್ಷಣಿಕವಾಗಿ ಒಂದು ಅಂಗನವಾಡಿ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಗಳಿದ್ದು, ಅಂಗನವಾಡಿಯಲ್ಲಿ ೨೩ ಮಕ್ಕಳು, ಶಾಲೆಯಲ್ಲಿ ೯೩ ಮಕ್ಕಳು ಕಲಿಯುತ್ತಿದ್ದಾರೆ. ನಾಲ್ವರು ಶಿಕ್ಷಕರಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕ ವಿತರಣೆಗಳ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೫೮.೯ ರಷ್ಟಿದೆ. ಪುರುಷರು ಶೇ. ೭೦.೫ ರಷ್ಟು ಇದ್ದರೆ, ಮಹಿಳೆಯರು ೪೬.೭ ರಷ್ಟಿದೆ. ಒಂದು ಗ್ರಂಥಾಲಯವಿದ್ದು, ಸದ್ಯಕ್ಕೆ ಚಾಲನೆಯಲ್ಲಿರುವುದಿಲ್ಲ. ಒಂದು ಪಡಿತರ ಅಂಗಡಿ ಇದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೮ ಗೂಡಂಗಡಿಗಳು, ಟೀ ಅಂಗಡಿಗಳೂ ಇವೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಗ್ರಾಮದ ಆರಂಭಕ್ಕೆ ೨ ಕರುಗಲ್ಲುಗಳಿದ್ದು, ಗ್ರಾಮದ ಒಳಗೆ ೨ ಅರಳಿ ಮರ, ಕಟ್ಟೆಯಿದ್ದು, ಪೂಜ್ಯನೀಯ ಸ್ಥಳವಾಗಿದೆ. ಆಂಜನೇಯ, ಭೈರವ, ಶನಿಮಹಾತ್ಮ, ಶ್ರೀದೇವಿ, ಭೂತಪ್ಪನ ಪೌಳಿಯೂ ಇದೆ. ಕೆಂಚರಾಯ, ಶಕುನಿರಾಯ, ಕರಿಯಣ್ಣ ಮೂರು ದೊಡ್ಡ ಭೂತಪ್ಪನ ಗುಡಿಗಳು ಇದ್ದು, ಐದು ವರ್ಷಕ್ಕೊಮ್ಮೆ ಹರಿಗೆಹಬ್ಬ ಉತ್ಸವವಾಗಿ ವಿಜೃಂಭಣೆಯಿಂದ ಸಾಗುತ್ತದೆ. ಭೂತಪ್ಪನಿಗೆ ಆರಿತ ಮಾಡಿ ಕುರಿ, ಕೋಳಿ ಬಲಿಕೊಡುವ ವಾರ್ಷಿಕ ಊರಹಬ್ಬದ ಸಂಪ್ರದಾಯವಿದೆ.

ಗ್ರಾಮದಲ್ಲಿ ಶಿವರಾತ್ರಿ, ನವಮಿ, ದೀಪಾವಳಿ, ಯುಗಾದಿ, ಗೌರಿ ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಮುಸ್ಲಿಂಮರು ರಂಜಾನ್, ಬಕ್ರೀದ್, ಈದ್ ಮಿಲಾದ್ ಹಬ್ಬಗಳನ್ನು ಸಾಂಪ್ರದಾಯಿಕವಾಗಿ ಆಚರಿಸುತ್ತಾರೆ. ಗ್ರಾಮದಲ್ಲಿ ಗ್ರಾಮ ಸೌಹಾರ್ದತೆ, ಸಾಂಸ್ಕೃತಿಕ ಅನನ್ಯತೆ ಇದೆ. ಶ್ರೀ ಮಹಾಲಿಂಗಯ್ಯ ದೇವಿ ಪಾತ್ರ, ಗೋವಿಂದಪ್ಪ ರಂಗ ಕಲಾವಿದರಾಗಿ ಹೆಸರು ಮಾಡಿದ್ದಾರೆ. ಕೋಲಾಟದ ದೊಡ್ಡ ಹನುಮಯ್ಯ, ಕಾಲೋನಿ ರಂಗಮ್ಮ ಜನಪದ ಸಂಗೀತ ಕಲಾವಿದರಾಗಿ ಹೆಸರು ಮಾಡಿದ್ದಾರೆ. ಸಾಹಿತಿ ಹೆಚ್.ಕೆ. ಪರಶುರಾಮಯ್ಯ ಲೇಖಕರಾಗಿ ಪದ್ಯ ಬರೆದು ಪ್ರಕಟಿಸಿದ್ದಾರೆ. ಅವರ ಮಗ ಕರುಣಾ ಆಸ್ಪತ್ರೆಯ ನೇತ್ರ ತಜ್ಞರೂ ಆಗಿರುತ್ತಾರೆ. ಹೆಚ್.ಪಿ. ಕುಮಾರಸ್ವಾಮಿ, ಮಾಯಾರಣ್ಯ ಎಂಬ ಕಾದಂಬರಿ ಪ್ರಕಟಿಸಿದ್ದಾರೆ. ಈ ಗ್ರಾಮದ ಎಂ.ಚಿದಾನಂದ್ ಶಿಕ್ಷಣ ತಜ್ಞರಾಗಿದ್ದು ಸಿರಾದಲ್ಲಿ ಪ್ರೆಸಿಡೆನ್ಸಿ ಶಿಕ್ಷಣ ಸಂಸ್ಥೆಯನ್ನು ಬೃಹತ್ ಪ್ರಮಾಣದಲ್ಲಿ ನಡೆಸುತ್ತಿದ್ದಾರೆ.

## ಹೊಸಹಳ್ಳಿ ಜನತಾ ಕಾಲೋನಿ

ಹೊಸಹಳ್ಳಿ ಜನತಾ ಕಾಲೋನಿ ಸಿರಾ ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿ ಉತ್ತರಕ್ಕಿದೆ. ಹೊಸಹಳ್ಳಿ ಗ್ರಾಮ ಪಂಚಾಯಿತಿಯ ಕೇಂದ್ರವೂ ಆಗಿರುವ ಹೊಸಹಳ್ಳಿ ಹುಲಿಕುಂಟೆ ಹೋಬಳಿಗೆ ಸೇರಿರುವ ಗ್ರಾಮವಾಗಿದ್ದು, ಗ್ರಾಮ ಬೆಳೆದಂತೆ ೩೩ ಮನೆಗಳ ಹೊಸ ಬಡಾವಣೆ ಬೆಳೆದಿದೆ. ಆದಿಕರ್ನಾಟಕ, ಆದಿದ್ರಾವಿಡ, ಹಾಗೂ ನಾಯಕ ಜನಾಂಗದವರ ಮನೆಗಳು ಇಲ್ಲಿದ್ದು, ೧೪೩ ಜನಸಂಖ್ಯೆ ಹೊಂದಿದೆ. ಇದರ ಭೌಗೋಳಿಕ ವಿಸ್ತೀರ್ಣ ವ್ಯಾಪ್ತಿ ಮುಖ್ಯ ಗ್ರಾಮ ಹೊಸಹಳ್ಳಿಯ ೩೪೮.೧೨ ಹೆಕ್ಟೇರ್‌ಗಳಲ್ಲಿ ಹಂಚಿಕೆಯಾಗಿದೆ. ಹೆಂಚಿನ, ಶೀಟಿನ, ಕಾಂಕ್ರೀಟ್ ಸ್ವರೂಪದ ಮನೆಗಳಿದ್ದು, ಇವು ಆಶ್ರಯ, ಅಂಬೇಡ್ಕರ್, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಶಿಕ್ಷಣಕ್ಕೆ ಮಕ್ಕಳು ಹೊಸಹಳ್ಳಿಯಲ್ಲಿ ಅವಲಂಬಿಸಿದ್ದಾರೆ. ಗ್ರಾಮದಲ್ಲಿ ಭೂತಪ್ಪ, ಭೈರಪ್ಪ, ಹಾಗೂ ಅಂಜಿನೇಯ ದೇವರುಗಳಿಗೆ ಆರತಿ ಉತ್ಸವ ನಡೆದಾಗ ಕಾಲೋನಿಯವರ ಆರತಿ ಎಂದು ಪ್ರತ್ಯೇಕವಾಗಿ ಆರತಿ ಕಾರ್ಯ ನಡೆಯುತ್ತದೆ. ಕೈವಾಡದವರು ಗ್ರಾಮ ಸಂಸ್ಕೃತಿಯ ಮಾದರಿಯಲ್ಲಿ ದೇವರ ಕಾರ್ಯದಲ್ಲಿ ಇಲ್ಲಿನ ಎಲ್ಲರೂ ಭಾಗವಹಿಸುತ್ತಾರೆ. ಸಾಮಾಜಿಕ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಗ್ರಾಮದ ಹೊರಭಾಗದಲ್ಲಿರುವ ಅಂಬಾ ಭವಾನಿ ದೇವತೆಗೆ ಈ ಗ್ರಾಮದವರು ವಿಶೇಷವಾಗಿ ನಡೆದುಕೊಳ್ಳುತ್ತಾರೆ.

## ಹಳೇ ಬಿಜ್ಜಂಬೆಳ್ಳ

ಹಳೇಬಿಜ್ಜಂಬೆಳ್ಳ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಈ ಗ್ರಾಮಮ ಸಿರಾ-ಚೇಳೂರು ರಸ್ತೆ ಮಾರ್ಗದಲ್ಲಿ ಬೆಂಚೆಗೇಟ್‌ನಿಂದ ಬಲಭಾಗಕ್ಕೆ ೬ ಕಿಮೀ ದೂರದಲ್ಲೂ ಸಿರಾದಿಂದ ೨೪ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಹಳೇಬಿಜ್ಜಂಬೆಳ್ಳದ ಒಟ್ಟು ಭೌಗೋಳಿಕ ವಿಸ್ತೀರ್ಣವು ೩೩೪.೧೩ ರಷ್ಟಿದೆ. ಬಿಜ್ಜಂಬೆಳ್ಳ ಒಂದು ಹಳೆಯ ಗ್ರಾಮವಾಗಿದ್ದು ವೀರ ಜುಂಜಪ್ಪನು ಪಾದ ಊರಿದನೆಂಬ ನಂಬಿಕೆಯಿದೆ. ಜುಂಜಪ್ಪನ ದೇವಾಲಯ ಮತ್ತು ಹಳ್ಳ ಇರುವುದರಿಂದ ಬಿಜ್ಜ ಎಂದರೆ ಹಿರಿಯ – ಬೆಳ್ಳ > ಹಳ್ಳವಾಗಿ ಬಿಜ್ಜಂಬೆಳ್ಳವಾಗಿದೆ.

ಇದು ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇಲ್ಲಿ ಯಾವುದೇ ಅರಣ್ಯ, ಬೆಟ್ಟ-ಗುಡ್ಡ, ತೋಪುಗಳು ಕಂಡುಬರುವುದಿಲ್ಲ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೪೬.೯ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಇಲ್ಲಿ ಒಂದು ಕೆರೆಯಿದ್ದು ಮಳೆಗಾಲದಲ್ಲಿ ತುಂಬುತ್ತದೆ. ಇಲ್ಲಿ ೨೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಕುಡಿಯುವ ನೀರಿನ ವ್ಯವಸ್ಥೆಗೆ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಸಿಸ್ಟರ್ನ್ ಮತ್ತು ಕೈಪಂಪುಗಳನ್ನು ಹೊಂದಿದೆ.

ಈ ಗ್ರಾಮದಲ್ಲಿ ಒಟ್ಟು ೮೫ ಮನೆಗಳಿದ್ದು ೩೪೯ ಜನಸಂಖ್ಯೆಯನ್ನು ಹೊಂದಿದೆ. ಇವರ ಭಾಷೆ ಕನ್ನಡವಾಗಿದೆ. ಇದರಲ್ಲಿ ಕುಂಚಿಟಿಗ, ನಾಯಕ, ಆದಿಕರ್ನಾಟಕ, ಬೆಸ್ತರ ಮನೆಗಳಿವೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನಗಳಿಲ್ಲದಿದ್ದರೂ ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಗ್ರಾಮಕ್ಕೆ ಚರಂಡಿವ್ಯವಸ್ಥೆಯನ್ನು ಕಚ್ಚಾರಸ್ತೆಯನ್ನು ಒಳಗೊಂಡಿದೆ.

ಬಿಜ್ಜಂಬೆಳ್ಳದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಇದರಲ್ಲಿ ಶೇಂಗಾ, ರಾಗಿ, ಜೋಳ, ದ್ವಿದಳ ಧಾನ್ಯಗಳು, ತೆಂಗು, ಅಡಿಕೆ, ಹುಣಸೆ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಇವು ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಇಲ್ಲಿ ಒಬ್ಬರು ಸರ್ಕಾರಿ ಸೇವೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಮತ್ತು ಬೃಹತ್ ಕೈಗಾರಿಕೆಗಳಿಲ್ಲದಿದ್ದರೂ ಬಟ್ಟೆ ಹೊಲಿಯುವುದು, ಬೀಡಿ ಸುತ್ತುವುದು, ಗುಡಿ ಕೈಗಾರಿಕೆಗಳಲ್ಲಿ ಒಂದಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ, ಗೋಪಾಲದೇವರಹಳ್ಳಿ ತಾಲ್ಲೂಕು ಪಂಚಾಯ್ತಿ, ಸಿರಾ ತಹಸೀಲ್ದಾರ್ ಕಛೇರಿಯನ್ನು ಕಳ್ಳಂಬೆಳ್ಳ ವಿದ್ಯುತ್ ಮಂಡಳಿ ಮತ್ತು ಪೊಲೀಸ್ ಠಾಣೆಯನ್ನು ಹೊಂದಿದ್ದು ಗೋಪಾಲದೇವರಹಳ್ಳಿ ಪಂಚಾಯ್ತಿ ಮತ್ತು ಅಂಚೆ ಕಛೇರಿಯನ್ನು ಹೊಂದಿದೆ ಮತ್ತು ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದ್ದು ಬಗೆಹರಿಯದ ಸಮಸ್ಯೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳಲಾಗುತ್ತದೆ. ಈ ಗ್ರಾಮದಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದಿದ್ದರೂ ಸ್ತ್ರೀಶಕ್ತಿ ಸಂಘಗಳು ಮತ್ತು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳನ್ನು ಹೊಂದಿದ್ದು ಸಣ್ಣ ಉಳಿತಾಯ ಮಾಡಲು ತುಂಬಾ ಸಹಾಯಕವಾಗಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೯.೫% ಆಗಿದೆ.

ಗ್ರಾಮದಲ್ಲಿ ಆರೋಗ್ಯ ಕೇಂದ್ರಗಳಿಲ್ಲದಿದ್ದರೂ ಕುಟುಂಬ ಕಲ್ಯಾಣ ಪದ್ಧತಿಯನ್ನು ರೂಢಿಸಿಕೊಂಡಿದೆ. ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ರಾಜಣ್ಣನವರು ಪಶುಗಳಿಗೆ ನಾಟಿ ಔಷಧಿಯನ್ನು ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಒಳಗೊಂಡಿದೆ.

ಐತಿಹಾಸಿಕ ನೆಲೆಯ ೨ ಕರಿಗಲ್ಲು ಮತ್ತು ಬೇವಿನ ಕಟ್ಟೆಗಳಿವೆ. ಧಾರ್ಮಿಕ ಆಚರಣೆಯ ಕೇಂದ್ರವಾಗಿ ಬಸವೇಶ್ವರ, ಕರಿಯಮ್ಮ, ಭೂತಪ್ಪ, ಜುಂಜಪ್ಪ ಎಂಬ ದೇವಾಲಯಗಳಿವೆ. ಪ್ರತಿ ವರ್ಷವೂ ದೀಪಾವಳಿಯಲ್ಲಿ ನಾಲ್ಕು ದಿನಗಳ ಕಾಲ ಜುಂಜಪ್ಪನ ಜಾತ್ರೆ ನಡೆಯುತ್ತದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

ಬಿಜ್ಜಂಬೆಳ್ಳದ ಜುಂಜಪ್ಪನ ಜಾತ್ರೆ ದೀಪಾವಳಿ ಹಬ್ಬದ ಕಾಲದಲ್ಲಿ ನಾಲ್ಕು ದಿನಗಳು ನಡೆದು ಜನ್ನಿಗೆ ತರುವುದು, ದೀಪ ಏರಿಸುವುದು, ದೀಪ ಇಳಿಸುವುದು ಮುಂತಾದ ಆಚರಣೆಗಳಿವೆ. ಚೇಳೂರು, ಹೊಸಕೆರೆ, ತುಮಕೂರು ಭಾಗಗಳಿಂದಲೂ ಭಕ್ತರು ಸೇರುತ್ತಾರೆ. ಹಾವು-ಚೇಳು, ಹೊಲ ಸಸ್ಯಗಳಿಗೆ ಬೀಳುವ ಕ್ರಿಮಿಕೀಟನಾಶದ ರೂಪದಲ್ಲಿ ಜುಂಜಪ್ಪನ ದೀಪಕ್ಕೆ ಹರಳು ಹಾಕಿದರೆ ಬೆಳ್ಳಿ ನಾಗರಹಾವು ಚಿತ್ರ ಹಾಕಿಸಿದರೆ ಪರಿಹಾರ ಎಂಬ ನಂಬಿಕೆಯಿದೆ. ಒಂದು ವಾರದ ಕಾಲ ಬೃಹತ್ ಜಾತ್ರೆ ನಡೆದು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಾಡುಗೊಲ್ಲರು, ಕುಂಚಿಟಿಗರ, ಅಳುವಿನೋರು ಕೂಡಿಕೊಂಡು ಜಾತ್ರೆ ನೆರವೇರಿಸುತ್ತಾರೆ.

## ಹುಯಿಲ್‌ದೊರೆ

ಹುಯಿಲ್‌ದೊರೆ ಗ್ರಾಮವು ಸಿರಾದಿಂದ ಪಶ್ಚಿಮಕ್ಕೆ ಸಿರಾ-ಹುಳಿಯಾರು ರಸ್ತೆಯಲ್ಲಿ ಸಿರಾದಿಂದ ೧೪ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಗ್ರಾಮದ ಕೋಟೆಯು ಹಾಳಾಗಿರುತ್ತದೆ. ಈ ಪ್ರದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣವು ೧೦೦೭.೩೧ ಹೆಕ್ಟೇರ್‌ಗಳಾಗಿವೆ. ಹಾಗೂ ಈ ಗ್ರಾಮಕ್ಕೆ ಮಜರೆ ಗ್ರಾಮವಾದ ಕಂಬದಹಳ್ಳಿ ಸೇರ್ಪಡೆಯಾಗಿದೆ. ಈ ಗ್ರಾಮದ ಪಕ್ಕದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹರಿಯುವ ಒಂದು ಹಳ್ಳವಿದೆ. ಈ ಹಳ್ಳ ಮಳೆಗಾಲದಲ್ಲಿ ತುಂಬಿ ಹರಿದು ರಸ್ತೆ ಸಂಚಾರಕ್ಕೆ ವ್ಯತಿರಿಕ್ತತೆ ಉಂಟುಮಾಡುತ್ತಿತ್ತು. ಪ್ರಕೃತಿಯ ವೈಪರೀತ್ಯವನ್ನು ಹುಯಲ್-ತೊರೆ ಎಂದು, ಅದರ ಪಕ್ಕದಲ್ಲಿ ಮನೆ ನಿರ್ಮಾಣವಾದುದರಿಂದ ಹುಯಿಲ್‌ತೊರೆ ನಂತರ ಹುಯಿಲ್‌ದೊರೆಯಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪುಮಣ್ಣಿನಿಂದ ಕೂಡಿದೆ. ಇಲ್ಲಿ ಯಾವುದೇ ಅರಣ್ಯ, ತೋಪುಗಳು, ಬೆಟ್ಟ-ಗುಡ್ಡಗಳು ಕಂಡುಬರುವುದಿಲ್ಲ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೫೨ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಇಲ್ಲಿ ಒಂದು ಹೊಳೆ, ಎರಡು ಕಟ್ಟೆಗಳಿದ್ದು ಮಳೆಗಾಲದಲ್ಲಿ ತುಂಬುತ್ತವೆ. ಹಾಗೆಯೇ ಕುಡಿಯುವ ನೀರಿಗಾಗಿ ಸಿಸ್ಟರ್ನ್ ಮತ್ತು ೨ ಕೈಪಂಪುಗಳನ್ನು ಹೊಂದಿದೆ. ೯೮ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ.

ಗ್ರಾಮದಲ್ಲಿ ಒಟ್ಟು ೨೩೦ ಮನೆಗಳಿದ್ದು ೧೦೨೨ ಜನಸಂಖ್ಯೆಯನ್ನು ಹೊಂದಿದೆ. ಮನೆಗಳು ಕಲ್ಲಿನ, ಕಾಂಕ್ರೀಟ್,

ಹೆಂಚಿನ ಸ್ವರೂಪದಲ್ಲಿದ್ದು ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್ ಯೋಜನೆಯ ೪೮ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಲಂಬಾಣಿ, ವೀರಶೈವ, ನಾಯಕ, ಆದಿದ್ರಾವಿಡ, ವೈಶ್ಯ, ಭಜಂತ್ರಿಯವರು ಕಿರು ಸಮುದಾಯವಾಗಿದೆ. ಇವರ ಭಾಷೆ ಕನ್ನಡವಾಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಕಚ್ಚಾರಸ್ತೆ ಮತ್ತು ಡಾಂಬರು ರಸ್ತೆಯಿದ್ದು ಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ೧೦೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಇಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು ಶೇಂಗಾ ಪ್ರಮುಖ ಬೆಳೆಯಾಗಿದೆ. ಇದರೊಂದಿಗೆ ರಾಗಿ, ಭತ್ತ, ಜೋಳ, ಸೂರ್ಯಕಾಂತಿ, ನವಣೆ ದ್ವಿದಳಗಳು. ತೆಂಗು, ಅಡಿಕೆ, ಹುಣಸೆ ಬೆಳೆಯನ್ನು ಬೆಳೆಯುತ್ತಾರೆ. ವ್ಯಾಪಾರದ ಸರಕುಗಳಾಗಿ ಹುಣಸೆ, ಶೇಂಗಾ ಇದೆ. ಈ ಗ್ರಾಮದಲ್ಲಿ ಆಧುನಿಕ ಡೈರಿಯನ್ನು ಹೊಂದಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಗ್ರಾಮದಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸುತ್ತಿದ್ದಾರೆ. ಶಿಕ್ಷಣ, ಕಂದಾಯ, ರಸ್ತೆ ಸಾರಿಗೆ ಇಲಾಖೆಯ ೬ ಜನ ಸರ್ಕಾರಿ ನೌಕರಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಬೃಹತ್ ಕೈಗಾರಿಕೆಗಳು ಇಲ್ಲದಿದ್ದರೂ ಟೈಲರ್ ಅಂಗಡಿಗಳು, ರಾಗಿ ಮಿಲ್, ಇಟ್ಟಿಗೆ ಫ್ಯಾಕ್ಟರಿ ಮತ್ತು ಬೀಡಿ ಸುತ್ತುವುದು ಸಣ್ಣ ಪ್ರಮಾಣದಲ್ಲಿ ಕಂಡುಬರುತ್ತದೆ.

ಈ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ ಮತ್ತು ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ವ್ಯಾಪ್ತಿಗೆ ಸೇರಿದೆ. ಸಿರಾ ತಹಸೀಲ್ದಾರ್ ಕಛೇರಿ, ಬುಕ್ಕಾಪಟ್ಟಣ ಪೊಲೀಸ್ ಠಾಣೆ, ಹುಯಿಲ್‌ದೊರೆ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು ಅಂಚೆ ಕಛೇರಿಯನ್ನು ಒಳಗೊಂಡಿದೆ. ಇದರಲ್ಲಿ ಮೂರು ಜನ ಸದಸ್ಯರಿದ್ದಾರೆ. ಈ ಗ್ರಾಮವು ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದೆ. ಬಗೆಹರಿಯದ ಸಮಸ್ಯೆಗಳನ್ನು ತುಮಕೂರು ಮತ್ತು ಸಿರಾ ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳಲಾಗುತ್ತದೆ.

ಈ ಗ್ರಾಮದಲ್ಲಿ ರೈತರಿಗೆ ಸಹಾಯಕಾರಿಯಾಗಿ ರೈತಸೇವಾ ಸಹಕಾರಿ ಸಂಘ, ಸುಜಲ ಜಲಾನಯನ ಸಂಘ, ಯುವಕ ಸಂಘ, ಸ್ತ್ರೀಶಕ್ತಿ ಸಂಘಗಳು, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳನ್ನು ಸ್ಥಾಪಿಸಿಕೊಳ್ಳಲಾಗಿದೆ.

ಹುಯಿಲ್‌ದೊರೆಯಲ್ಲಿ ಒಂದು ಅಂಗನವಾಡಿ ಕೇಂದ್ರ, ಶ್ರೀ ಶಾರದಾಂಬ ಕಾನ್ವೆಂಟ್, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶ್ರೀನಿವಾಸ ಪ್ರೌಢಶಾಲೆಯನ್ನು ಒಳಗೊಂಡಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೪.೧% ಆಗಿದೆ. ಒಂದು ಬಿಸಿಎಂ ವಿದ್ಯಾರ್ಥಿನಿಲಯವಿದೆ.

ಈ ಹಳ್ಳಿಯಲ್ಲಿ ಪಂಚಾಯ್ತಿ ಗ್ರಂಥಾಲಯವಿದ್ದು ಯಾವುದೇ ಪುಸ್ತಕಗಳು ಕಂಡುಬರುವುದಿಲ್ಲ. ಅಲ್ಲದೇ ಒಂದು ಉಪ ಆರೋಗ್ಯ ಕೇಂದ್ರವಿದೆ. ಕುಟುಂಬ ಕಲ್ಯಾಣ ವ್ಯವಸ್ಥೆಯಿದ್ದು ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಇಲ್ಲಿ ಟೀ ಅಂಗಡಿ ಮತ್ತು ಉಪಹಾರ ಕೇಂದ್ರಗಳಿವೆ ಅಲ್ಲದೇ ೧೨ ಚಿಲ್ಲರೆ ವ್ಯಾಪಾರದ ಅಂಗಡಿಗಳಿವೆ. ಈ ಗ್ರಾಮದಲ್ಲಿ ಐತಿಹಾಸಿಕ ನೆಲೆಯ ಸ್ಮಾರಕಗಳಾಗಿವೆ. ೨ ವೀರಗಲ್ಲು, ೧ ಮಹಾಸತಿ ಕಲ್ಲು ಇವೆ. ಹಾಗೆಯೇ ಕರಿಗಲ್ಲು, ಅರಳಿಕಟ್ಟೆ ಇದೆ.

ಧಾರ್ಮಿಕ ಕೇಂದ್ರಗಳಾದ ಶ್ರೀರಾಮ, ಕರಿಯಮ್ಮ, ಕೊಲ್ಲಾಪುರದಮ್ಮ ದೇವಾಲಯಗಳಿವೆ. ಸಾಂಪ್ರದಾಯಿಕ ಹಬ್ಬಗಳೊಂದಿಗೆ ಕರಿಯಮ್ಮನ ಜಾತ್ರೆಯನ್ನು ಮಾಡುತ್ತಾರೆ. ಆರತಿ, ಬಲಿ ನೀಡುತ್ತಾರೆ. ಮಣ್ಣಿನ ಜಾತ್ರೆಗೆ ಈ ಗ್ರಾಮದಿಂದಲೂ ಮಡಿಲಕ್ಕಿ ಹೋಗುತ್ತದೆ.

ಸಾಂಸ್ಕೃತಿಕ ಕ್ಷೇತ್ರದಲ್ಲಿ ರಂಗಭೂಮಿಯಲ್ಲಿ ಹನುಮಂತೇಗೌಡರು ಮತ್ತು ಸೋಬಾನೆ ಪದಕ್ಕೆ ಕೆಂಚಮ್ಮ, ಈರಮ್ಮ, ರಾಮಜ್ಜಿಯವರು ಗ್ರಾಮೀಣ ಸೊಗಡಿನೊಂದಿಗೆ ವಿಶಿಷ್ಟ ಪದಗಳನ್ನು ಹಾಡುತ್ತಾರೆ. ಗ್ರಾಮದಲ್ಲಿ ದೀಪಾವಳಿ, ದಸರಾ, ಯುಗಾದಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಚಿಕ್ಕನಾಯಕನಹಳ್ಳಿ, ಮೂಡಿಗೆರೆ, ಚಿಕ್ಕಬಳ್ಳಾಪುರ ಮುಖ್ಯ ರಸ್ತೆ ಸಂಪರ್ಕ, ಸರ್ಕಾರಿ, ಖಾಸಗಿ ಬಸ್ ಸಂಪರ್ಕಗಳಿವೆ.

## ಹುಣಸೆಕಟ್ಟೆ

ಹುಣಸೆಕಟ್ಟೆ ತಾಲ್ಲೂಕು ಕೇಂದ್ರದಿಂದ ವಾಯವ್ಯ ದಿಕ್ಕಿನಲ್ಲಿದೆ. ಸಿರಾದಿಂದ ೨೪.೫ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಗ್ರಾಮದ ಹತ್ತಿರ ಕಟ್ಟೆ ಇದ್ದು ಅಲ್ಲಿ ಹುಣಸೆ ಮರಗಳು ಇರುವುದರಿಂದ ವ್ಯಾಪಕವಾಗಿ ಹುಣಸೆ

ಮರ ಈ ಭಾಗದಲ್ಲಿ ಬೆಳೆಯುವ ಕಾರಣದಿಂದಾಗಿ ಹುಣಸೇಕಟ್ಟೆ ಎಂದು ಕರೆಯುತ್ತಾರೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದು ಭೌಗೋಳಿಕ ವಿಸ್ತೀರ್ಣ ೬೯೭.೮೫ ಹೆಕ್ಟೇರ್‌ಗಳು. ಇದಕ್ಕೆ ಬಂಗಾರಿ ಹಟ್ಟಿ, ಗೊಲ್ಲರಹಟ್ಟಿ ಸೇರ್ಪಡೆಯಾದ ಗ್ರಾಮಗಳಾಗಿವೆ. ಈ ಗ್ರಾಮದಲ್ಲಿ ಯಾವುದೇ ಅರಣ್ಯ, ಬೆಟ್ಟ-ಗುಡ್ಡಗಳು ಕಂಡುಬರುವುದಿಲ್ಲ. ಇಲ್ಲೊಂದು ಕಟ್ಟೆಯಿದೆ. ಇದರಲ್ಲಿ ೨೫ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೬೫.೯ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯುವ ನೀರಿನ ವ್ಯವಸ್ಥೆಗೆ ಕೈಪಂಪುಗಳು, ಮಿನಿ ಟ್ಯಾಂಕ್‌ಗಳನ್ನು ಹೊಂದಿದೆ. ಗ್ರಾಮ ಪಂಚಾಯ್ತಿಯ ಕಿರುನೀರು ಯೋಜನೆಯಡಿ ನೀರು ಪೂರೈಕೆಯಾಗುತ್ತಿದೆ.

ಗ್ರಾಮದಲ್ಲಿ ಒಟ್ಟು ೨೫೮ ಮನೆಗಳಿದ್ದು ೧೩೨೬ ಜನಸಂಖ್ಯೆಯನ್ನು ಹೊಂದಿದ್ದು ಕುಂಚಿಟಿಗ, ನಾಯಕ, ಆದಿಕರ್ನಾಟಕ, ಮುಸ್ಲಿಂ, ಕ್ರಿಶ್ಚಿಯನ್, ಬಂಜಾರ, ಬೋವಿ, ಆದಿದ್ರಾವಿಡರ ಮನೆಗಳಿವೆ. ಕನ್ನಡ-ಉರ್ದು ಮಾತನಾಡುವಂತಹ ಜನರಿದ್ದಾರೆ. ಇಲ್ಲಿನ ೩೬ ಮನೆಗಳು ಆಶ್ರಯ, ಅಂಬೇಡ್ಕರ, ವಸತಿ ಯೋಜನೆಯಡಿಯಲ್ಲಿ ರಚನೆಯಾಗಿದೆ. ೪೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಕೃಷಿ ಜನರ ಮುಖ್ಯ ಉದ್ಯೋಗವಾಗಿದೆ. ಶೇಂಗಾ, ರಾಗಿ, ಭತ್ತ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳು, ತೆಂಗು, ಅಡಿಕೆ, ಹುಣಸೆ ಬೆಳೆಗಳನ್ನು ಬೆಳೆಯುತ್ತಾರೆ. ಆಧುನಿಕ ಡೈರಿಯನ್ನು ಹೊಂದಿದೆ. ಸರ್ಕಾರಿ ಸೇವೆಯಲ್ಲಿ ಕೆಲಸ ಮಾಡುತ್ತಿದ್ದು ಸಣ್ಣ ಪ್ರಮಾಣದ ಗೃಹ ಕೈಗಾರಿಕೆಗಳನ್ನು ಹೊಂದಿದೆ. ಕೃಷಿ ಕಾರ್ಮಿಕರು ಹಾಗೂ ಆಧುನಿಕ ಕೆಲಸವನ್ನು ಮಾಡುತ್ತಿದ್ದಾರೆ. ಶಿಕ್ಷಣ, ಸಾರಿಗೆ, ಕಂದಾಯ, ಅರಣ್ಯ ಇಲಾಖೆಯಲ್ಲಿ ಒಟ್ಟು ೧೪ ಜನ ಸರ್ಕಾರಿ ನೌಕರರಿದ್ದಾರೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾಪಂಚಾಯ್ತಿ, ನೇರಳಗುಡ್ಡ ತಾಲ್ಲೂಕು ಪಂಚಾಯ್ತಿ ಮತ್ತು ಗ್ರಾಮಪಂಚಾಯ್ತಿಯ ಮೂವರು ಸದಸ್ಯರನ್ನು ಒಳಗೊಂಡಿದೆ. ಅಂಚೆ ಕಛೇರಿಯನ್ನು ಹೊಂದಿದೆ. ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದೆ.

ಹಣಕಾಸು ವ್ಯವಸ್ಥೆಗೆ ಬ್ಯಾಂಕಿಂಗ್ ಸೌಲಭ್ಯವನ್ನು ಹೊಂದಿಲ್ಲ ಮತ್ತು ಮೂರು ಸ್ತ್ರೀಶಕ್ತಿ ಸಂಘಗಳು ಹಾಗೂ ದಲಿತ ಸಂಘರ್ಷ ಸಮಿತಿಯನ್ನು ಹೊಂದಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೭.೯% ಆಗಿದೆ.

ಗ್ರಾಮದಲ್ಲಿ ಉಪ ಆರೋಗ್ಯ ಕೇಂದ್ರವನ್ನು ಒಳಗೊಂಡಿದ್ದು ಕುಟುಂಬ ಕಲ್ಯಾಣವನ್ನು ಹೊಂದಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ನಾಟಿ ಔಷಧಿಯನ್ನು ನೀಡುವ ಚಿತ್ತಪ್ಪ ಪಶುಗಳಿಗೆ ಮತ್ತು ನಿಗಪ್ಪ ಮನುಷ್ಯರಿಗೆ ಔಷಧಿಯನ್ನು ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ನಾಲ್ಕು ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಒಳಗೊಂಡಿದೆ. ಧಾರ್ಮಿಕ ಪರಂಪರೆಯಲ್ಲಿ ಈಶ್ವರ, ಭೂತಪ್ಪ, ಅಜ್ಜಪ್ಪ, ಕರಿಯಮ್ಮ, ಮಾರಮ್ಮ, ಚೌಡಮ್ಮನ ದೇವಸ್ಥಾನ ಹಾಗೂ ಮಸೀದಿಯನ್ನು ಒಳಗೊಂಡಿದೆ. ಪ್ರತಿ ವರ್ಷವೂ ಕರಿಯಮ್ಮನ ಜಾತ್ರೆಯನ್ನು ಮಾಡಿ ಆರತಿ ಮತ್ತು ಬಲಿ ನೀಡುವುದು ವಿಶೇಷವಾಗಿದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ, ರಂಜಾನ್, ಈದ್‌ಮಿಲಾದ್, ಬಾಬಯ್ಯನ ಹಬ್ಬಗಳನ್ನು ಆಚರಿಸುತ್ತಾರೆ. ಸಾಂಸ್ಕೃತಿಕ ರಂಗದಲ್ಲಿ ಸಿದ್ದಪ್ಪ, ಭೀಮಣ್ಣ, ರಂಗಭೂಮಿಯಲ್ಲೂ ಕೋಲಾಟ ರಚನೆಕಾರರಾಗಿದ್ದಾರೆ. ಸೋಬಾನೆ ಪದಕಾರರು ತಿಮ್ಮಕ್ಕ, ಗಂಗಮಾಳಮ್ಮನವರಿದ್ದಾರೆ. ಐತಿಹಾಸಿಕ ನೆಲೆ, ಸ್ಮಾರಕವಾಗಿ ಎರಡು ಕರಿಗಲ್ಲುಗಳನ್ನು ಹೊಂದಿದೆ.

## ಹೊನ್ನೇನಹಳ್ಳಿ

ಹೊನ್ನೇನಹಳ್ಳಿ ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕಿದೆ. ಈ ಗ್ರಾಮವು ಸಿರಾ–ಹುಳಿಯಾರು ರಸ್ತೆಯಲ್ಲಿ ಸಿರಾದಿಂದ ೬ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಈ ಪ್ರದೇಶದ ಒಟ್ಟು ಭೌಗೋಳಿಕ ಸ್ತೀರ್ಣವು ೬೫೨.೯೦ ಹೆಕ್ಟೇರ್‌ಗಳಾಗಿವೆ. ಈ ಗ್ರಾಮಕ್ಕೆ ಕುಣಗಾಟನಹಳ್ಳಿ ಮಜರೆ ಗ್ರಾಮವು ಸೇರ್ಪಡೆಯಾಗಿದೆ. ಹೊನ್ನಯ್ಯ ಎಂಬ ವ್ಯಕ್ತಿ ಮೂಲದಿಂದ ಈ ಗ್ರಾಮಕ್ಕೆ ಹೊನ್ನೇನಹಳ್ಳಿ ಎಂದು ಕರೆಯಲಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇಲ್ಲಿ ಯಾವುದೇ ಅರಣ್ಯ, ತೋಪುಗಳು, ಬೆಟ್ಟಗುಡ್ಡಗಳು ಕಂಡುಬರುವುದಿಲ್ಲ. ಇಲ್ಲಿ ಒಂದು ಹಳ್ಳ ಮತ್ತು ಕಟ್ಟೆಯನ್ನು ಹೊಂದಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೫೨ ಮಿಮೀ ಆಗಿದ್ದು ಉಷ್ಣಾಂಶ ೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯುವ ನೀರಿಗಾಗಿ ಸಿಸ್ಟರ್ನ್ ಮತ್ತು ಎರಡು ಕೈಪಂಪುಗಳನ್ನು ಹೊಂದಿದೆ. ಇಲ್ಲಿ ೬೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ.

ಈ ಗ್ರಾಮದಲ್ಲಿ ಒಟ್ಟು ೩೧೬ ಮನೆಗಳಿದ್ದು ೭೪೮ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಮುಸ್ಲಿಂ, ಕುಂಚಿಟಿಗರು ಸಮಸಂಖ್ಯೆಯಲ್ಲಿದ್ದು ಆದಿಕರ್ನಾಟಕ, ವೈಶ್ಯರು, ಬ್ರಾಹ್ಮಣರು ಕಿರುಸಮುದಾಯಗಳಾಗಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಕಚ್ಚಾರಸ್ತೆ, ಡಾಂಬರ್ ರಸ್ತೆ ಮತ್ತು ಚರಂಡಿ ವ್ಯವಸ್ಥೆಯನ್ನು ಹೊಂದಿದೆ. ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಿದ್ದು ಅವು ಆಶ್ರಯ, ಜನತಾ, ಇಂದಿರಾ ಆವಾಸ್ ವಸತಿಯೋಜನೆ ಹಾಗೂ ವಿದ್ಯುತ್ ಸೌಲಭ್ಯ ಪಡೆದಿದ್ದು ೧೦೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಇಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಇದರಲ್ಲಿ ಶೇಂಗಾ, ರಾಗಿ, ಭತ್ತ, ಜೋಳ, ನವಣೆ, ಸೂರ್ಯಕಾಂತಿ, ದ್ವಿದಳ ಧಾನ್ಯಗಳು ಹಾಗೂ ತೆಂಗು, ಅಡಿಕೆ, ಹುಣಸೆ ಮರಗಳು ಪ್ರಮುಖವಾಗಿವೆ. ಅಲ್ಲದೇ ವ್ಯಾಪಾರದ ಸರಕುಗಳಾಗಿವೆ. ಇಲ್ಲಿ ಮುಸ್ಲಿಂ ಸಮುದಾಯ ಪಾತ್ರೆ ಇತ್ಯಾದಿ ವ್ಯಾಪಾರದಲ್ಲಿ ತೊಡಗಿದೆ.

ಹಳ್ಳಿಯಲ್ಲಿ ಆಧುನಿಕ ಡೈರಿಯಿದ್ದು ಕೃಷಿಯೊಂದಿಗೆ ಆದಾಯ ಗಳಿಸಲು ಸಹಾಯಕವಾಗಿದೆ. ಶಿಕ್ಷಣ, ಸಾರಿಗೆ, ಆರೋಗ್ಯ ಇಲಾಖೆಯ ಮೂರು ಜನ ಸರ್ಕಾರಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಬೃಹತ್ ಕೈಗಾರಿಕೆಗಳಿಲ್ಲದಿದ್ದರೂ ಗಂಧದಕಡ್ಡಿ, ಬೀಡಿ ಸುತ್ತುವುದು, ಟೈಲರ್, ದ್ವಿಚಕ್ರ ವಾಹನಗಳ ರಿಪೇರಿ ಕೆಲಸ ಮಾಡುವವರು ಇಲ್ಲಿ ಕಂಡುಬರುತ್ತಾರೆ.

ಹೊನ್ನೇನಹಳಅಳಿಯು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾಪಂಚಾಯ್ತಿ, ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ, ಸಿರಾ ತಹಸೀಲ್ದಾರ್ ಕಛೇರಿಯನ್ನು ಹೊಂದಿದೆ. ಅಲ್ಲದೆ ಹುಯಿಲ್‌ದೊರೆ ಗ್ರಾಮಪಂಚಾಯ್ತಿ ಇಬ್ಬರು ಗ್ರಾಮ ಪಂಚಾಯ್ತಿ ಸದಸ್ಯರನ್ನು ಹೊಂದಿದ್ದು ಮೇಕೇರಹಳ್ಳಿ ಅಂಚೆ ಕಛೇರಿಯನ್ನು ಹೊಂದಿದೆ. ಅಲ್ಲದೆ ಈ ಗ್ರಾಮದಲ್ಲಿ ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದ್ದು ಬಗೆಹರಿಯದಂಥ ಸಮಸ್ಯೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ.

ಹೊನ್ನೇನಹಳ್ಳಿ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೮.೩% ಆಗಿದೆ. ಯಾವುದೇ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿಲ್ಲದಿದ್ದರೂ ನಾಲ್ಕು ಸ್ತ್ರೀಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವನ್ನು ಹೊಂದಿದೆ.

ಕುಟುಂಬ ಕಲ್ಯಾಣ ವ್ಯವಸ್ಥೆಯಿದೆ. ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಗ್ರಾಮದಲ್ಲಿ ೯ ಟೀ ಮತ್ತು ಚಿಲ್ಲರೆ ವ್ಯಾಪಾರದ ಅಂಗಡಿಗಳಿವೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಐತಿಹಾಸಿಕ ನೆಲೆಯ ಸ್ಮಾರಕಗಳು, ೨ ಕರಿಗಲ್ಲು, ಮೂರು ಅಶ್ವತ್ಥ ಕಟ್ಟೆಗಳಿರುವುದನ್ನು ಕಾಣುತ್ತೇವೆ. ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ, ರಾಮನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಬುಕ್ಕಾಪಟ್ಟಣ ಶಾಸನದಲ್ಲಿ ಈ ಗ್ರಾಮದ ಉಲ್ಲೇಖವಿದೆ. ಧಾರ್ಮಿಕ ಕೇಂದ್ರಗಳಾದ ಕಣಿವೆ ಮಾರಮ್ಮ, ಬೇವಿನಾಳಮ್ಮ ಚಿಕ್ಕ ಮಸೀದಿಯನ್ನು ಹೊಂದಿದೆ. ಅದರೊಂದಿಗೆ ಈದ್ಗಾ ಮೈದಾನವನ್ನೂ ಹೊಂದಿದೆ. ಯುಗಾದಿಯ ನಂತರ ಕಣಿವೆ ಮಾರಮ್ಮನಿಗೆ ಜಾತ್ರೆ ಮಾಡುತ್ತಾರೆ. ಅದಕ್ಕೆ ಆರತಿ ಮಾಡಿ ಬಲಿ ನೀಡುವುದನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಮುಸ್ಲಿಂ ಸಮುದಾಯವು ಈದ್‌ಮಿಲಾದ್ ಮುಂತಾದ ಹಬ್ಬಗಳನ್ನು ಆಚರಣೆ ಮಾಡುತ್ತಾರೆ.

ಸಾಂಸ್ಕೃತಿಕ ಕ್ಷೇತ್ರದಲ್ಲಿ ಯಾರೂ ಕಂಡುಬರದಿದ್ದರೂ ಇಲ್ಲಿ ದಲಿತ ಸಂಘವನ್ನು ಕಾಣಬಹುದು. ಹಾಗೆಯೇ ಬೀಡಿ ಕಾರ್ಮಿಕರ ಸಂಘವನ್ನು ಹೊಂದಿದೆ. ವಾದ್ಯಮೇಳ, ಬ್ಯಾಂಡ್‌ಸೆಟ್‌ನ ಕಲಾತಂಡವಿದೆ ಈ ಹಳ್ಳಿಯಲ್ಲಿ ಹಿಂದೂ–ಮುಸ್ಲಿಮರೆಂಬ ಬೇಧಭಾವವಿಲ್ಲದೇ ಅನ್ಯೋನ್ಯವಾಗಿರುವುದು ಒಂದು ಉತ್ತಮವಾದ ಸಂಗತಿಯಾಗಿದೆ.

## ಹೊಸಬಿಜ್ಜನಬೆಳ್ಳ

ಹೊಸಬಿಜ್ಜನಬೆಳ್ಳವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಈ ಗ್ರಾಮವು ಸಿರಾ–ಚೇಳೂರು ರಸ್ತೆ ಮಾರ್ಗದಲ್ಲಿ ಬೆಂಚೆ ಗೇಟ್‌ನಿಂದ ಬಲಭಾಗಕ್ಕೆ ೪.೦೫ ಕಿಮೀ ದೂರದಲ್ಲೂ ಸಿರಾದಿಂದ ೨೧.೫ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಹೊಸಬಿಜ್ಜಂಬೆಳ್ಳದ ಒಟ್ಟು ಭೌಗೋಳಿಕ ವಿಸ್ತೀರ್ಣವು ೪೪೫.೨೭ ಹೆಕ್ಟೇರ್‌ಗಳಾಗಿವೆ.

ಬಿಜ್ಜ ಎಂದರೆ ಹಿರಿಯ, ಅಜ್ಜಯ್ಯ ಎಂಬ ಅರ್ಥವಿದ್ದು ಇಲ್ಲಿ ಜುಂಜಪ್ಪನ ಸಮಾಧಿ, ದೇವಾಲಯವಿದೆ. ಪಕ್ಕದಲ್ಲಿ ಹಳ್ಳವಿದೆ. ಹಳ್ಳ ಮತ್ತು ಅಜ್ಜಯ್ಯ ಈ ಎರಡೂ ಅರ್ಥದಲ್ಲಿ ಬಿಜ್ಜನಬೆಳ್ಳ ಆಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳುಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇಲ್ಲಿ ಯಾವುದೇ ಅರಣ್ಯ, ಬೆಟ್ಟ–ಗುಡ್ಡ, ತೋಪುಗಳು ಕಂಡುಬರುವುದಿಲ್ಲ. ಇಲ್ಲಿ ಒಂದು ಕೆರೆಯಿದ್ದು ಮಳೆಗಾಲದಲ್ಲಿ ನೀರು ಹರಿಯುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೪೬.೯ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಇಲ್ಲಿ ೪೦ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿದೆ. ಕುಡಿಯುವ ನೀರಿನ ವ್ಯವಸ್ಥೆಗೆ ಸಿಸ್ಟರ್ನ್ ಮತ್ತು ೨ ಕೈಪಂಪುಗಳನ್ನು ಕಲ್ಪಿಸಿಕೊಡಲಾಗಿದೆ.

ಗ್ರಾಮದಲ್ಲಿ ಒಟ್ಟು ೧೧೦೪ ಮನೆಗಳಿದ್ದು ೪೮೬ ಜನಸಂಖ್ಯೆ ಹೊಂದಿದೆ. ಮಾತೃಭಾಷೆ ಕನ್ನಡವಾಗಿದೆ. ಇದರಲ್ಲಿ ಕುಂಚಿಟಿಗ, ನಾಯಕ, ಶಿಳ್ಳೇಕ್ಯಾತ, ಆದಿದ್ರಾವಿಡ, ಆದಿಕರ್ನಾಟಕದವರ ಮನೆಗಳಿವೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಕಚ್ಚಾರಸ್ತೆ ಮತ್ತು ಚರಂಡಿಯನ್ನು ಕಲ್ಪಿಸಲಾಗಿದೆ.

ಬಿಜ್ಜಂಬೆಳ್ಳದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಇದರಲ್ಲಿ ಶೇಂಗಾ ಮುಖ್ಯ ಬೆಳೆಯಾಗಿದೆ. ರಾಗಿ, ಭತ್ತ, ನವಣೆ, ತೆಂಗು, ಅಡಿಕೆ, ಹುಣಸೆ, ಮಾವು, ಬೇವು ಇತ್ಯಾದಿಗಳನ್ನು ಕಾಣಬಹುದಾಗಿದೆ. ಗ್ರಾಮದಲ್ಲಿ ಶಿಕ್ಷಣ, ಸಾರಿಗೆ, ಕಂದಾಯ ಇಲಾಖೆಗೆ ಸೇರಿದ ೯ ಜನ ಸರ್ಕಾರಿ ಸೇವೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಪ್ರಾಣಿಗಳ ವ್ಯಾಪಾರದೊಂದಿಗೆ ಟೈಲರ್, ಬೀಡಿ ಸುತ್ತುವುದು, ಮಂಕರಿ ಹೆಣೆಯುವುದು ಪ್ರಮುಖ ಉದ್ಯೋಗವಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ಗೋಪಾಲದೇವರಹಳ್ಳಿ ತಾಲ್ಲೂಕು ಪಂಚಾಯ್ತಿ, ಸಿರಾ ತಹಸೀಲ್ದಾರ್ ಕಛೇರಿಯನ್ನು ಕಳ್ಳಂಬೆಳ್ಳ ಪೊಲೀಸ್ ಠಾಣೆ ಮತ್ತು ವಿದ್ಯುತ್ ಮಂಡಳಿಯನ್ನು ಹೊಂದಿದೆ. ಗೋಪಾಲದೇವರಹಳ್ಳಿ ಗ್ರಾಮಪಂಚಾಯ್ತಿ ಮತ್ತು ಅಂಚೆ ಕಛೇರಿಯನ್ನು ಹೊಂದಿದೆ. ಗ್ರಾಮ ನ್ಯಾಯ ಮಂಡಳಿಯನ್ನು, ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ತೀರ್ಮಾನಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಈ ಗ್ರಾಮದಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದಿದ್ದರೂ ಮೂರು ಸ್ತ್ರೀಶಕ್ತಿ ಸಂಘಗಳು, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳನ್ನು ಹೊಂದಿದ್ದು ಸಣ್ಣ ಉಳಿತಾಯ ಮಾಡಲು ಸಹಕಾರಿಯಾಗಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೫.೮% ಆಗಿದೆ.

ಗ್ರಾಮದಲ್ಲಿ ಆರೋಗ್ಯ ಕೇಂದ್ರಗಳಿಲ್ಲದಿದ್ದರೂ ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ಆರೋಗ್ಯದ ಬಗ್ಗೆ ತಿಳಿಯುತ್ತಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಇಲ್ಲಿ ತಿಪ್ಪೇಸ್ವಾಮಿಯವರು ನಾಟಿ ಔಷಧಿಯನ್ನು ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಒಳಗೊಂಡಿದೆ. ಐತಿಹಾಸಿಕ ನೆಲೆಯ ಯಾವುದೇ ಸ್ಮಾರಕಗಳು, ಶಾಸನಗಳು, ಹಸ್ತಪ್ರತಿಗಳು ಇಲ್ಲದಿದ್ದರೂ ಎರಡು ಕರಿಗಲ್ಲುಗಳು ಮತ್ತು ಎರಡು ಅರಳಿವೃಕ್ಷಗಳು ಇವೆ. ಈ ಗ್ರಾಮದಲ್ಲಿ ಭೈರದೇವರು, ಯಲ್ಲಮ್ಮ, ಆಂಜನೇಯ ಎಂಬ ಮೂರು ಧಾರ್ಮಿಕ ದೇವಾಲಯಗಳಿವೆ. ಪ್ರತಿ ವರ್ಷವೂ ದುರ್ಗಮ್ಮನ ಜಾತ್ರೆಯನ್ನು ಆರತಿ ಮಾಡಿ, ಬಲಿ ನೀಡುವುದು ವಿಶೇಷವಾಗಿದೆ. ಪಕ್ಕದ ಹಳೇಬಿಜ್ಜಂಬೆಳ್ಳದ ಜುಂಜಪ್ಪನ ದೇವಸ್ಥಾನದ ಜಾತ್ರೆಯಲ್ಲಿ ಈ ಗ್ರಾಮದವರೂ ಪಾಲ್ಗೊಳ್ಳುತ್ತಾರೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ, ಗೌರಿ-ಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹೊಸಹಳ್ಳಿ

ಹೊಸಹಳ್ಳಿಯು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿನಲ್ಲಿ ೨೧ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣವು ೬೮ ಹೆಕ್ಟೇರ್‌ಗಳಾಗಿವೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೭೧.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ೧೬ ಕೊಳವೆಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಕುಡಿಯುವ ನೀರಿನ ವ್ಯವಸ್ಥೆಗೆ ಕೈಪಂಪುಗಳನ್ನು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯನ್ನು ಕಲ್ಪಿಸಿದೆ.

ಈ ಗ್ರಾಮದಲ್ಲಿ ೯೭ ಮನೆಗಳಿದ್ದು ೨೭೭ ಜನಸಂಖ್ಯೆಯನ್ನು ಹೊಂದಿದೆ. ಕುಂಚಿಟಿಗರು ದೊಡ್ಡ ಸಮುದಾಯವಾಗಿದೆ. ನಾಯಕರು, ಮುಸ್ಲಿಂ, ಆದಿಕರ್ನಾಟಕ, ಮಡಿವಾಳ ಕಿರುಸಮುದಾಯವಾಗಿದೆ. ಮನೆಗಳು ಕಲ್ಲಿನ, ಹೆಂಚಿನ, ಶೀಟಿನ, ಕಾಂಕ್ರೀಟ್ ಸ್ವರೂಪದಲ್ಲಿವೆ. ಸರ್ಕಾರದ ವಸತಿ ಯೋಜನೆಯಾದ ಆಶ್ರಯ, ಇಂದಿರಾ ಆವಾಸ್ ಯೋಜನೆಯ ೩೨ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಕನ್ನಡ ಮಾತನಾಡುತ್ತಾರೆ.

ಗ್ರಾಮದ ಜನರ ಉದ್ಯೋಗ ಕೃಷಿಯಾಗಿದ್ದು ಶೇಂಗಾ ಮುಖ್ಯ ಬೆಳೆಯಾಗಿದೆ. ಇದರೊಂದಿಗೆ ರಾಗಿ, ಭತ್ತ, ಜೋಳ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳು, ತೆಂಗು, ಅಡಿಕೆ, ಬೇವು, ಹುಣಸೆ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗು, ಹುಣಸೆ ವ್ಯಾಪಾರಿ ಸರಕಾಗಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಹಾಗೂ ಸಿರಾ ತಹಸೀಲ್ದಾರ್ ಕಛೇರಿ ಬುಕ್ಕಾಪಟ್ಟಣ ಉಪಪೊಲೀಸ್ ಠಾಣೆ ಹಾಗೂ ವಿದ್ಯುತ್ ಮಂಡಳಿಯಿದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರನ್ನು ಹೊಂದಿದೆ.

ಗ್ರಾಮದ ಹಣಕಾಸಿನ ವ್ಯವಸ್ಥೆಯಲ್ಲಿ ೨ ಸ್ತ್ರೀಶಕ್ತಿ ಸಂಘಗಳಲ್ಲಿ ವ್ಯವಹಾರ ಮಾಡುತ್ತಿದ್ದಾರೆ. ೨ ಧರ್ಮಸ್ಥಳ ಸ್ವಸಹಾಯ ಗುಂಪುಗಳಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೬.೮% ಆಗಿದೆ.

ಆರೋಗ್ಯದ ಬಗ್ಗೆ ತಿಳಿಯಲು ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ತಿಳಿದುಕೊಳ್ಳುತ್ತಾರೆ. ಗ್ರಾಮದಲ್ಲಿ ಕುಟುಂಬ ಕಲ್ಯಾಣ ಪದ್ಧತಿಯನ್ನು ಹೊಂದಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ರಂಗಯ್ಯ ನಾಟಿ ಔಷಧಿ ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಶಿಕ್ಷಣ, ಸಾರಿಗೆ, ಕಂದಾಯ ಇಲಾಖೆಗಳಿಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ.

ಗ್ರಾಮದಲ್ಲಿ ಯಾವುದೇ ಐತಿಹಾಸಿಕ ನೆಲೆ, ಸ್ಮಾರಕಗಳು, ಶಾಸನಗಳಿಲ್ಲದಿದ್ದರೂ ಕೊಲ್ಲಾಪುರದಮ್ಮನ ೨ ದೇವಾಲಯಗಳಿದ್ದು ಜಾತ್ರೆಯನ್ನು ಮಾಡುತ್ತಾರೆ. ಇದಕ್ಕೆ ಆರತಿ ಮಾಡಿ ಬಲಿ ನೀಡುವುದು ಕಂಡುಬರುತ್ತದೆ. ದೊಡ್ಡ ಅರಳೀಮರ, ಕಟ್ಟೆ ಇದೆ.

ಪ್ರೊ॥ ಹೆಚ್.ಜಿ. ಸಣ್ಣಗುಡ್ಡಯ್ಯ ಎಂಬ ಹಿರಿಯ ಪ್ರಾಧ್ಯಾಪಕ, ಸಾಹಿತಿ ಈ ಗ್ರಾಮದವರಾಗಿದ್ದು ಆಧುನಿಕ ಕನ್ನಡ ಸಾಹಿತ್ಯಕ್ಕೆ ಪ್ರಬಂಧ, ಕಾವ್ಯ ಪ್ರಕಾರಗಳಿಗೆ ಸಂಬಂಧಿಸಿದ ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ಚಿಂತಕರು. ಸದ್ಯ ದಿವಂಗತರಾಗಿದ್ದು ಇವರ ಹೆಸರಲ್ಲಿ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಇವರ ಮಗಳು ಆಯುರ್ವೇದ ವೈದ್ಯರಾಗಿದ್ದಾರೆ. ಸಿರಾ, ಬುಕ್ಕಾಪಟ್ಟಣ, ಚೇಳೂರು, ಹಾಗಲವಾಡಿ ಮಾರ್ಗವಾಗಿ ತುಮಕೂರಿಗೆ ರಸ್ತೆ ಸಂಪರ್ಕ ಹಾಗೂ ಬಸ್ ಸಂಪರ್ಕವಿದೆ.

## ಹೊಸಹಳ್ಳಿ ಲಂಬಾಣಿ ತಾಂಡ

ಹೊಸಹಳ್ಳಿ ಸಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿಗೆ ಸೇರಿದ ಕಂದಾಯ ಗ್ರಾಮ. ಈ ಗ್ರಾಮದ ಸಮೀಪದಲ್ಲಿ ಇದರ ಮಜರೆ ಗ್ರಾಮವಾಗಿ ಲಂಬಾಣಿ ತಾಂಡ್ಯ ಗ್ರಾಮವಿದೆ. ೨೮ ಮನೆಗಳಿರುವ ಈ ಗ್ರಾಮದಲ್ಲಿ ಲಂಬಾಣಿ ಜನಾಂಗ ಮಾತ್ರ ವಾಸಿಸುತ್ತಿದ್ದು, ಆ ಕಾರಣದಿಂದಾಗಿಯೇ ಲಂಬಾಣಿ ತಾಂಡ ಎಂದು ಕರೆಯುತ್ತಾರೆ. ಸಿರಾದಿಂದ ಪಶ್ಚಿಮಕ್ಕೆ ೨೩ ಕಿ.ಮೀ. ದೂರದಲ್ಲಿದೆ.

ಲಂಬಾಣಿ ಜನಾಂಗದ ೨೮ ಮನೆಗಳಿದ್ದು ಇವು ಶೀಟಿನ, ಹೆಂಚಿನ ಸ್ವರೂಪದಲ್ಲಿವೆ. ಇವು ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ಈ ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನವಾಗಿದ್ದು, ಅಮುಖ್ಯ ವಾಗಿ ರೊಟ್ಟಿ ಬಳಸುತ್ತಾರೆ. ವಿಶೇಷ ಸಾಂದರ್ಭಿಕ ಭೋಜನವಾಗಿ ಬಾಡೂಟ, ಪಾಯಸ, ಹೋಳಿಗೆ ಭೋಜನವೂ ಇರುತ್ತದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಒಂದು ಸಿಸ್ಟನ್ ಇದೆ.

ಗ್ರಾಮದ ಮುಖ್ಯ ಬೆಳೆ ರಾಗಿ, ಶೇಂಗಾ, ಸೂರ್ಯಕಾಂತಿ ಬೆಳೆಯುತ್ತಾರೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲ ಚೇತನ ವೇತನ ಹಾಗೂ ವಿಧವಾ ವೇತನಗಳ ಫಲಾನು ಭವಿಗಳಿದ್ದಾರೆ.

೨ ಸ್ತ್ರೀ ಶಕ್ತಿ ಸಂಘಗಳಿದ್ದು, ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿವೆ. ಕೃಷಿ ಪ್ರಧಾನ ಕುಟುಂಬಗಳಿದ್ದು, ಕೂಲಿ ಕಾರ್ಮಿಕರೂ ಇದ್ದಾರೆ. ಕೆಮ್ಮು , ನೆಗಡಿ, ಗ್ಯಾಸ್ ಸಂಬಂಧಿ ಕಾಯಿಲೆಗಳಿಗೆ ಸ್ಥಳೀಯವಾಗಿ ಬುಕ್ಕಾಪಟ್ಟಣದಲ್ಲಿ ಚಿಕಿತ್ಸೆ ಪಡೆಯುತ್ತಾರೆ. ಹೆಚ್ಚಿನ ಚಿಕಿತ್ಸೆಗೆ ಸಿರಾ ನಗರಕ್ಕೆ ಹೋಗುತ್ತಾರೆ.

ಗ್ರಾಮದಲ್ಲಿ ದೀಪಾವಳಿ ವಿಶೇಷವಾಗಿ ಆಚರಿಸುತ್ತಾರೆ. ಉಳಿದಂತೆ ದಸರಾ, ಯುಗಾದಿ, ಗೌರಿ-ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ. ಭೀಮಸತಿ ದೇವಾಲಯದ ಒಂದು ಪೌಳಿ ಇದ್ದು, ಅದನ್ನು ಪೂಜಿಸುತ್ತಾರೆ.

ಕುರಿ, ಮೇಕೆ, ಹಸು ಈ ಗ್ರಾಮದ ಪ್ರಮುಖ ಪ್ರಾಣಿ, ಕೋಳಿಗಳನ್ನು ಸಾಕುತ್ತಾರೆ.

ವಾಡಿಕೆ ಮಳೆ ೪೭೧.೬ ಮಿ.ಮೀಟರ್ ಆಗಿದ್ದು ೨೦೧೪ ರ ಅಕ್ಟೋಬರ್ ಒಂದರಲ್ಲಿ ೧೩೧ ಮಿ.ಮೀ. ಮಳೆಯಾಗಿದೆ. ಇದೇ ಇಲ್ಲಿನ ವಿಶೇಷ. ಸಮೀಪದ ಹೊಸಹಳ್ಳಿ ಕೆರೆಯ ನೀರನ್ನು ಪ್ರಾಣಿಗಳಿಗೆ ಕುಡಿಯಲು ಬಳಸುತ್ತಾರೆ. ಗ್ರಾಮದಲ್ಲಿ ಶೌಚಾಲಯ ಸೌಲಭ್ಯ ೨ ಮನೆಯಲ್ಲಿ ಮಾತ್ರ ಇದ್ದು, ಉಳಿದವರು ಬಯಲು ಶೌಚಾಲಯ ಅವಲಂಬಿಸಿರುತ್ತಾರೆ.

## ಹೊಸಪಾಳ್ಯ

ಹೊಸಪಾಳ್ಯವು ಸಿರಾ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿನಲ್ಲಿದೆ. ೨೦ ಕಿಮೀ ದೂರದಲ್ಲಿರುವ ಜನವಸತಿ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣವು ೯೩.೩೪ ಹೆಕ್ಟೇರ್‌ಗಳಾಗಿವೆ. ಈ ಗ್ರಾಮಕ್ಕೆ ಹೊಸಹಳ್ಳಿ ಸೇರ್ಪಡೆಯಾಗಿರುವ ಗ್ರಾಮವಾಗಿದೆ. ಹೊಸಹಳ್ಳಿಯ ಪಕ್ಕದ ಗ್ರಾಮವಾಗಿ ಹೊಸಪಾಳ್ಯವಾಗಿದೆ.

ಬಯಲುನಾಡಿನ ಪ್ರದೇಶವಾಗಿದ್ದು ಮರಳುಮಿಶ್ರಿತ ಕೆಂಪುಮಣ್ಣಿನಿಂದ ಕೂಡಿದೆ. ಯಾವುದೇ ಅರಣ್ಯ, ಬೆಟ್ಟ-ಗುಡ್ಡಗಳು ಕಂಡುಬರುವುದಿಲ್ಲ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ,

ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೪೮ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಭಾಗದಲ್ಲಿ ೨೯ ಕೊಳವೆ ಬಾವಿಗಳಿದ್ದು ಕೃಷಿಗೆ ಸಹಾಯಕವಾಗಿವೆ. ಕುಡಿಯುವ ನೀರಿನ ವ್ಯವಸ್ಥೆಗೆ ಕೈಪಂಪುಗಳನ್ನು ಗ್ರಾಮಪಂಚಾಯ್ತಿ ವ್ಯವಸ್ಥೆಯಡಿಯಲ್ಲಿ ಕಲ್ಪಿಸಿದೆ.

ಈ ಗ್ರಾಮದಲ್ಲಿ ೨೧೩ ಮನೆಗಳಿದ್ದು ೭೩೮ ಜನಸಂಖ್ಯೆಯನ್ನು ಹೊಂದಿದೆ. ಕನ್ನಡ ಮಾತನಾಡುವ ಜನರಿದ್ದಾರೆ. ಇದರಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಮುಸ್ಲಿಂ, ನಾಯಕ, ಗೊಲ್ಲ, ಉಪ್ಪಾರ, ಮಡಿವಾಳರು ಕಿರುಸಮುದಾಯವಾಗಿವೆ. ಇಲ್ಲಿನ ಮನೆಗಳು ಆಶ್ರಯ, ಜನತಾ, ಇಂದಿರಾ ಆವಾಸ್ ವಸತಿಯೋಜನೆಯ ೧೯ ಫಲಾನುಭವಿಗಳಿದ್ದಾರೆ. ೧೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು ಶೇಂಗಾ ಮುಖ್ಯ ಬೆಳೆಯಾಗಿದೆ. ಇದರೊಂದಿಗೆ ರಾಗಿ, ಭತ್ತ, ಜೋಳ, ಸೂರ್ಯಕಾಂತಿ ಮತ್ತು ದ್ವಿದಳ ಧಾನ್ಯಗಳು, ತೆಂಗು, ಅಡಿಕೆ, ಬೇವು, ಹುಣಸೆ ಬೆಳೆಗಳನ್ನು ಬೆಳೆಯುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ, ಬುಕ್ಕಾಪಟ್ಟಣ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿ ಕೇಂದ್ರಗಳಾಗಿದೆ. ಸಿರಾ ತಹಸೀಲ್ದಾರ್ ಕಛೇರಿ, ಬುಕ್ಕಾಪಟ್ಟಣ ಉಪಪೊಲೀಸ್ ಠಾಣೆ ಹಾಗೂ ವಿದ್ಯುತ್ ಮಂಡಳಿಗೆ ಸೇರಿದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರನ್ನು ಹೊಂದಿದೆ.

ಗ್ರಾಮದ ಹಣಕಾಸಿನ ವ್ಯವಸ್ಥೆಯಲ್ಲಿ ಸ್ತ್ರೀಶಕ್ತಿ ಸಂಘಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿಂದ ವ್ಯವಹಾರ ಮಾಡುತ್ತಿದ್ದಾರೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೮.೯% ಆಗಿದೆ.

ಆರೋಗ್ಯದ ಬಗ್ಗೆ ತಿಳಿಯಲು ಆಶಾ ಕಾರ್ಯಕರ್ತೆಯರು ವಾರಕ್ಕೊಮ್ಮೆ ಭೇಟಿ ನೀಡಿ ತಿಳಿದುಕೊಳ್ಳುತ್ತಾರೆ. ಗ್ರಾಮದಲ್ಲಿ ಕುಟುಂಬ ಕಲ್ಯಾಣ ಪದ್ಧತಿಯಿದೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಒಂದು ಉಪಹಾರ ಹೋಟೆಲ್ ಮತ್ತು ೪ ಚಿಲ್ಲರೆ ವ್ಯಾಪಾರದ ಅಂಗಡಿಗಳಿವೆ.

ಗ್ರಾಮದಲ್ಲಿ ಯಾವುದೇ ಸ್ಮಾರಕಗಳು ಇಲ್ಲದಿದ್ದರೂ ೨ ಕರಿಗಲ್ಲುಗಳನ್ನು ಹೊಂದಿದೆ. ಧಾರ್ಮಿಕ ಕೇಂದ್ರಗಳಲ್ಲಿ ಕೊಲ್ಲಾಪುರದಮ್ಮ ದೇವಾಲಯವಿದೆ. ಜಾತ್ರೆಯನ್ನು ಮಾಡುತ್ತಾರೆ. ಇದಕ್ಕೆ ಆರತಿ ಮಾಡಿ ಬಲಿ ನೀಡುವುದು ಕಂಡುಬರುತ್ತದೆ.

## ಹಂದಿಮುಲ್ಕು

ಹಂದಿಮುಲ್ಕು ಗ್ರಾಮವು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೧೫ ಕಿಮೀ ದೂರದಲ್ಲಿದೆ. ಈ ಗ್ರಾಮವು ಸಿರಾ–ಹೊನ್ನೇನಹಳ್ಳಿ–ಕಳ್ಳಂಬೆಳ್ಳ ಮಾರ್ಗದಲ್ಲಿ ಕಂಚಿಗಾನಹಳ್ಳಿ ಕ್ರಾಸ್‌ನಿಂದ ಎಡಭಾಗಕ್ಕೆ ೧ ಕಿಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಈ ಪ್ರದೇಶಕ್ಕೆ ರಂಗನಾಥಪುರದ ಅರಣ್ಯದಿಂದ ಕಾಡುಹಂದಿಗಳು ಬಂದು ಇಲ್ಲಿ ಮಲಗುತ್ತಿದ್ದುದರಿಂದ ಹಂದಿಮುಲ್ಕು ಎಂದು ಹೆಸರು ಪಡೆದಿದೆ. ಹಂದಿಮೂಲೆ – ಹಂದಿಮುರುಲು > ಹಂದಿಮುಲ್ಕು ಎಂದಾಗಿದೆ. ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೬೫.೫೩ ಹೆಕ್ಟೇರ್‌ಗಳಾಗಿವೆ.

ಹಳ್ಳಿಯ ಭೂಮೇಲ್ಮೈ ಬಯಲುನಾಡಿನಿಂದ ಕೂಡಿದ್ದು ಮರಳುಮಿಶ್ರಿತ ಕೆಂಪುಮಣ್ಣಿನಿಂದ ಆವೃತವಾಗಿದೆ. ಈ ಪ್ರದೇಶದಲ್ಲಿ ಒಂದು ಕಲ್ಲುಕೊರೆ ಇದೆ. ಅರಣ್ಯ ಮತ್ತು ತೋಪುಗಳು ಕಂಡುಬರುವುದಿಲ್ಲ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೪೩೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್

ಸಾಮಾನ್ಯವಾಗಿರುತ್ತದೆ. ಮೂರ್‍ನಾಲ್ಕು ವರ್ಷಗಳಿಂದ ಮಳೆಯಾಗದ ಕಾರಣ ತೀವ್ರ ಬರಗಾಲಕ್ಕೆ ತುತ್ತಾಗಿದೆ. ಗ್ರಾಮದಲ್ಲಿ ಒಂದು ಕಟ್ಟೆ ಇದೆ. ಕುಡಿಯುವ ನೀರಿನ ವ್ಯವಸ್ಥೆಗೆ ಎರಡು ಕೈಪಂಪುಗಳು ಮತ್ತು ಕೃಷಿ ಬಳಕೆಗೆ ೧೨ ಕೊಳವೆ ಬಾವಿಯನ್ನು ಹೊಂದಿದೆ.

ಇಲ್ಲಿ ೩೬ ಮನೆಗಳನ್ನು ಹೊಂದಿದ್ದು ೧೫೪ ಜನಸಂಖ್ಯೆಯನ್ನು ಒಳಗೊಂಡಿದೆ. ಗ್ರಾಮದಲ್ಲಿ ಹೆಂಚಿನ, ಶೀಟಿನ ಮನೆಗಳಿವೆ. ೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಅದರಲ್ಲಿ ಬೋವಿ ದೊಡ್ಡ ಸಮುದಾಯವಾಗಿದ್ದು ನಾಯಕ, ಕುಂಚಿಟಿಗ, ಗೊಲ್ಲರ ಮನೆಗಳಿವೆ. ಇವರ ಮುಖ್ಯ ಭಾಷೆ ಕನ್ನಡವಾಗಿದೆ. ತೆಲುಗು ಭಾಷೆಯನ್ನು ಮಾತನಾಡುವ ಜನರಿದ್ದಾರೆ. ೧೪ ಮನೆಗಳಲ್ಲಿ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ. ಕಚ್ಚಾರಸ್ತೆಯನ್ನು ಹೊಂದಿದೆ.

ಹಳ್ಳಿಯ ಜನರ ಮುಖ್ಯ ಕಸುಬು ಕೃಷಿಯಾಗಿದೆ. ಶೇಂಗಾ, ಸೂರ್ಯಕಾಂತಿ, ರಾಗಿ, ಜೋಳ, ದ್ವಿದಳ ಧಾನ್ಯಗಳು, ತೆಂಗು, ಅಡಿಕೆ ಇತ್ಯಾದಿಗಳನ್ನು ಬೆಳೆಯುತ್ತಾರೆ. ವ್ಯಾಪಾರದ ಸರಕುಗಳಾಗಿಯೂ ಮಾರ್ಪಟ್ಟಿವೆ. ಬೃಹತ್ ಕೈಗಾರಿಕೆಗಳಿಲ್ಲದೇ ಸಣ್ಣ ಪ್ರಮಾಣದ ಗುಡಿ ಕೈಗಾರಿಕೆಗಳನ್ನು ಕಾಣಬಹುದು. ಬಟ್ಟೆ ಹೊಲಿಯುವುದು, ಕಲ್ಲು ಗಣಿಗಾರಿಕೆ ಪ್ರಮುಖವಾಗಿದೆ. ಅಲ್ಲದೇ ಕೃಷಿಯೊಂದಿಗೆ ಕಲ್ಲಿನ ಕಾರ್ಮಿಕರನ್ನು ಕಾಣಬಹುದಾಗಿದೆ. ಕಲ್ಲು ಕುಟ್ಟುವುದು, ಬಂಡೆ ಕೆಲಸಕ್ಕೆ ಹೋಗುವವರು ಅಧಿಕವಾಗಿದೆ.

ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ಮತ್ತು ತುಮಕೂರು ಲೋಕಸಭಾ ಕ್ಷೇತ್ರ, ಬುಕ್ಕಾಪಟ್ಟಣ ಜಿಲ್ಲಾ ಪಂಚಾಯ್ತಿ, ಹುಯಿಲ್‌ದೊರೆ ತಾಲ್ಲೂಕು ಪಂಚಾಯ್ತಿ ಹಾಗೂ ದೊಡ್ಡ ಅಗ್ರಹಾರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ಕಳ್ಳಂಬೆಳ್ಳ ವಿದ್ಯುತ್ ಮತ್ತು ಪೊಲೀಸ್ ಠಾಣೆಯನ್ನು ಹೊಂದಿದೆ. ಸಿರಾ ತಹಸೀಲ್ದಾರ್ ಕಛೇರಿ ಹಾಗೂ ವಡ್ಡನಹಳ್ಳಿ ಅಂಚೆಯನ್ನು ಹೊಂದಿ ಸಿರಾ, ಹೊನ್ನೇನಹಳ್ಳಿ, ಕಳ್ಳಂಬೆಳ್ಳ ರಸ್ತೆ ಮಾರ್ಗದಿಂದ ಕೂಡಿದೆ. ಈ ಗ್ರಾಮದಲ್ಲಿ ಗ್ರಾಮ ನ್ಯಾಯಮಂಡಳಿಯನ್ನು ಹೊಂದಿದ್ದು ಬಗೆಹರಿಯದ ಕಲಹಗಳನ್ನು ಸಿರಾ ಮತ್ತು ತುಮಕೂರು ನ್ಯಾಯಾಲಯಗಳಲ್ಲಿ ತೀರ್ಮಾನಿಸಿಕೊಳ್ಳುತ್ತಾರೆ.

ಹಂದಿಮುಲ್ಕು ಗ್ರಾಮವು ಯಾವುದೇ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿಲ್ಲದಿದ್ದರೂ ಒಂದು ಸ್ತ್ರೀಶಕ್ತಿ ಸಂಘ ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವನ್ನು ಸಣ್ಣ ಉಳಿತಾಯ ಮಾಡುವ ಆರ್ಥಿಕ ಸಂಘವಾಗಿ ಬಳಸಿಕೊಳ್ಳಲಾಗಿದೆ. ಹಾಗೆಯೇ ಗ್ರಾಮ ಅರಣ್ಯ ಸಮಿತಿಯನ್ನು ಪಡೆದಿದೆ.

ಹಳ್ಳಿಯಲ್ಲಿ ಒಂದು ಅಂಗನವಾಡಿ ಕೇಂದ್ರ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೬.೯% ಆಗಿದೆ.

ಗ್ರಾಮದ ಜನರು ಆರೋಗ್ಯಭಾಗ್ಯಕ್ಕೆ ಕುಟುಂಬ ಕಲ್ಯಾಣ ಪದ್ಧತಿಯನ್ನು ಅನುಸರಿಸಿದ್ದಾರೆ. ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ರಾಮಾಬೋವಿ ಎಂಬುವವರು ನಾಟಿ ಔಷಧಿ ನೀಡುವಂತಹವರಾಗಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಇಲ್ಲಿ ಒಂದು ಚಿಲ್ಲರೆ ಅಂಗಡಿಯನ್ನು ಹೊಂದಿದೆ.

ಐತಿಹಾಸಿಕ ನೆಲೆ, ಶಾಸನ, ಸ್ಮಾರಕವಾಗಿ ಒಂದು ಅರಳಿಮರದ ಕಟ್ಟೆಯಿದೆ. ಧಾರ್ಮಿಕ ಕೇಂದ್ರದ ಪರಂಪರೆಯಲ್ಲಿ ಭೂತಪ್ಪ, ಗ್ರಾಮದೇವತೆ ಪೂಜೆ ಮಾಡುತ್ತಾರೆ. ಯುಗಾದಿ ಹಬ್ಬದ ತರುವಾಯ ಮಾರಮ್ಮ, ಉಡಸಲಮ್ಮ ದೇವಿಗೆ ಜಾತ್ರೆಯನ್ನು ಮಾಡುವ ಮೂಲಕ ಆರತಿ, ಬಲಿ ಕೊಡುವುದು ವಿಶೇಷ. ಯುಗಾದಿ, ದೀಪಾವಳಿ, ದಸರಾ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಹಕ್ಕಿಪಿಕ್ಕಿಯರ ಕಾಲೋನಿ

ಹಕ್ಕಿಪಿಕ್ಕಿ ಕಾಲೋನಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೮ ಕಿಮೀ ದೂರವಿದ್ದು ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿ ದೊಡ್ಡ ಆಲದ ಮರಕ್ಕೆ ಬಲಗಡೆ ೫ ಕಿಮೀ ದೂರದಲ್ಲಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೨೮.೦೮ ಹೆಕ್ಟೇರ್ ಆಗಿದ್ದು ಯಲದಬಾಗಿ ಗ್ರಾಮದ ಉಪಗ್ರಾಮವಾಗಿದೆ. ಹಕ್ಕಿಪಿಕ್ಕಿ ಅಲೆಮಾರಿ ಜನಾಂಗ ಯಲದಬಾಗಿ ಗ್ರಾಮದ ಊರ ಹೊರವಲಯದಲ್ಲಿ ರಸ್ತೆ ಬದಿಗೆ ಗುಡಿಸಲು ಹಾಕಿಕೊಂಡು ವಾಸಿಸುತ್ತ ಇಲ್ಲಿಯೇ ವಸತಿ ಕಂಡುಕೊಂಡಿದ್ದರಿಂದ ೨೦೦೧ ನೇ ಜನಗಣತಿಯ ಸಂದರ್ಭದಲ್ಲಿ ಈ ಗ್ರಾಮಕ್ಕೆ ಹಕ್ಕಿಪಿಕ್ಕಿ ಕಾಲೋನಿ ಎಂದು ಆಗಿನ ಸಿರಾ ತಾಲ್ಲೂಕು ತಹಸೀಲ್ದಾರ್ ಆನಂದರಾಮ ಮಧ್ಯಸ್ಥ, ಜನಗಣತಿ ತರಬೇತಿ ಸಂಯೋಜಕ ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ಆ ಸಂದರ್ಭದಲ್ಲಿ ನವಣೆಬೋರನಹಳ್ಳಿ

ಶಾಲೆಯ ಶಿಕ್ಷಕ ಹಾಗೂ ಗಣತಿ ಅಧಿಕಾರಿ ಶಿವಲಿಂಗಯ್ಯ ಅವರಿಗೆ ಸೂಚಿಸಿದ್ದರಿಂದ ಕಂದಾಯ ದಾಖಲೆಯಾಗಿ ಸ್ಥಳ ಪರೀಶೀಲಿಸಿ ಮಜರೆ ಗ್ರಾಮ ಸ್ವರೂಪದಲ್ಲಿದ್ದರಿಂದಾಗಿ ಸೇರ್ಪಡೆಯಾಗಿ ಹಕ್ಕಿಪಿಕ್ಕಿ ಕಾಲೋನಿ ಎಂದೇ ಕರೆಯಲ್ಪಟ್ಟಿದೆ.

ಕರಲು, ಕಂದು ಮರಳು ಮಿಶ್ರಿತ ಮಣ್ಣಿನಿಂದ ಕೂಡಿದ ಮಣ್ಣು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

೨೦೦೧ ರಲ್ಲಿ ೮ ಮನೆಗಳು ಮಾತ್ರ ಇದ್ದು ಇಂದು ಹಕ್ಕಿಪಿಕ್ಕಿಗಳ ಹಟ್ಟಿಯಾಗಿದ್ದು ಈ ಜನಾಂಗದ ೩೩ ಮನೆಗಳಿವೆ. ೨೭ ಹೆಂಚಿನ, ೬ ಗುಡಿಸಲು ಮನೆಗಳಿದ್ದು ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಇಲ್ಲಿ ೧೪೦ ಜನರು ವಾಸಿಸುತ್ತಿದ್ದಾರೆ. ಗ್ರಾಮದ ಭಾಷೆ ಮರಾಠಿಯಾಗಿದೆ. ಕನ್ನಡ ಮಾತನಾಡುತ್ತಾರೆ.

ವಾಡಿಕೆ ಮಳೆ ೪೭೧.೬ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ದ್ವಿಚಕ್ರ ವಾಹನಗಳ ಬಳಕೆಯಿದೆ. ಹೆಂಡದ ಸರಬರಾಜು, ಹಕ್ಕಿ, ಕಾಡು ಪ್ರಾಣಿಗಳ ಶಿಕಾರಿ ಇರುತ್ತದೆ. ಟೇಪು, ಬಾಚಣಿಕೆ, ಕೂದಲು ಸಂಗ್ರಹ ಕಸುಬಿನವರಿದ್ದಾರೆ. ಕೃಷಿ ಕೆಲವರ ಕಸುಬಾಗಿದ್ದು ಕೂಲಿ ಹಾಗೂ ಕೋರಿ ಜಮೀನಿನಲ್ಲಿ ಕೃಷಿ ಕಾಯಕದ ಜನರಿದ್ದಾರೆ. ಈ ಪರಿಸರದಲ್ಲಿ ರಾಗಿ, ಹುರುಳಿ, ತೊಗರಿ ಬೆಳೆಗಳನ್ನು ಬೆಳೆಯುತ್ತಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಸೀಬಿ ಅಗ್ರಹಾರ ಗ್ರಾಮ ಪಂಚಾಯ್ತಿ, ಸೀಬಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹೊಂದಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ.

ಒಂದು ಅಂಗನವಾಡಿ ಕೇಂದ್ರವಿದ್ದು ೧೭ ಮಕ್ಕಳು, ಒಬ್ಬರು ಕಾರ್ಯಕತೆ ಇದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರದ ಪೂರೈಕೆಯಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೧% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಗೂಡಂಗಡಿ ಇದೆ. ಗ್ರಾಮದೇವತೆ ಕೊಲ್ಲಾಪುರದಮ್ಮನ ಪೌಳಿಯಿದೆ. ಇದನ್ನೇ ಊರಹಬ್ಬವಾಗಿ ಆಚರಿಸುತ್ತಾರೆ. ಆರತಿ, ಬ್ಯಾಚೆ, ಬಲಿ, ಹರಕೆ ಸಂಪ್ರದಾಯಗಳಿವೆ. ಯುಗಾದಿ, ಮಹಾನವಮಿ, ಗಣೇಶ ಹಾಗೂ ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಣೆ ಮಾಡುತ್ತಾರೆ. ಸಿರಾ, ಸಿದ್ಲೇಕೋಣ, ತುಮಕೂರಿಗೆ ರಸ್ತೆ ಸಾರಿಗೆ ಹಾಗೂ ಬಸ್ ಸಂಚಾರವಿದೆ.

## ಹನುಮಂತನಗರ

ಹನುಮಂತಪುರ, ಹನುಮಂತನಗರ, ದೊಡ್ಡ ಆಲದ ಮರ, ಬ್ರಹ್ಮಸಂದ್ರ ಗೇಟ್ ಎಂದೆಲ್ಲಾ ಕರೆಯುವ ಹನುಮಂತನಗರ ಬಯಲು ಪ್ರದೇಶದ ನಗರ ರೂಪ. ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿಯಲ್ಲಿ ಸಿರಾ ತಾಲ್ಲೂಕು ಕೇಂದ್ರದಿಂದ ೧೮ ಕಿಮೀ ದೂರದಲ್ಲಿದೆ. ಈ ಗ್ರಾಮವು ಸೀಬಿ ಅಗ್ರಹಾರದ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೧೨೨.೦೮ ಹೆಕ್ಟೇರ್ ಇದೆ. ಹಳ್ಳ–ದಿಣ್ಣೆ, ಬಯಲು ಪ್ರದೇಶದ ಈ ಸ್ಥಳ ಕೆಂಪು ಮರಳು ಮಿಶ್ರಿತ ಮಣ್ಣಿನಿಂದ ಕೂಡಿದೆ. ಈಗ್ಗೆ ೨೫ ವರ್ಷಗಳ ಹಿಂದೆ ಒಂದು ಮನೆಯೂ ಇಲ್ಲದೆ ಈ ಸ್ಥಳದಲ್ಲಿ ಒಂದು ದೊಡ್ಡ ಆಲದ ಮರವಿದ್ದು ಕೆಲವು ಖಾಸಗಿ ಬಸ್ಸುಗಳು ತರೂರು, ಬಡವನಹಳ್ಳಿ, ಚಿನ್ನಯ್ಯಪಾಳ್ಯ, ಬ್ರಹ್ಮಸಂದ್ರ, ಜವನಹಳ್ಳಿ ಕಡೆಗೆ ಹೋಗುವವರು ಇಲ್ಲಿ ಇಳಿದು ಹೋಗುತ್ತಾ ಬ್ರಹ್ಮಸಂದ್ರ ಗೇಟ್ ಆಗಿತ್ತು. ಇದೇ ಸ್ಥಳದಲ್ಲಿ ಆಲದ ಮರವಿದ್ದುದರಿಂದ ದೊಡ್ಡಆಲದ ಮರ ಎಂಬ ಹೆಸರೂ ಇತ್ತು. ಇಂದಿಗೂ ಖಾಸಗಿ, ಸರ್ಕಾರಿ ಎರಡೂ ಬಸ್ಸುಗಳ ನಿಲುಗಡೆಯ ಸ್ಥಳವಾಗಿದ್ದು ದೊಡ್ಡಆಲದ ಮರ ಎಂದೇ ಕರೆಯಲಾಗುವುದು.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಗ್ರಾಮದ ಪಕ್ಕದಲ್ಲಿ ಅಗ್ರಹಾರದ ಕೆರೆಯಿದೆ. ವಾಡಿಕೆ ಮಳೆ ೫೫೭.೩ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಮೂಲವಾಗಿ ೧೮ ಕೊಳವೆ ಬಾವಿಗಳಿದ್ದು ಕುಡಿಯುವುದಕ್ಕೆ ಪಂಚಾಯ್ತಿ ವತಿಯಿಂದ ಕೊಳಾಯಿಗಳಲ್ಲಿ ನೀರನ್ನು

ಪೂರೈಸಲಾಗುತ್ತಿದೆ. ೨೫ ನಲ್ಲಿ ಸಂಪರ್ಕ ಹೊಂದಿವೆ. ಮೂರು ಕೈಪಂಪುಗಳೂ ಇವೆ. ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗ, ಆದಿದ್ರಾವಿಡ, ಆದಿಕರ್ನಾಟಕ, ಕುಂಬಾರ, ವೀರಶೈವ, ಮುಸ್ಲಿಂ, ವೈಶ್ಯ, ಅಗಸ, ಬ್ರಾಹ್ಮಣ ಸಣ್ಣ ಸಮುದಾಯವಾಗಿವೆ. ಇಲ್ಲಿ ಕನ್ನಡ, ತೆಲುಗು, ಉರ್ದು ಭಾಷೆಯನ್ನು ಆಡಲಾಗುತ್ತದೆ. ೧೬೮ ಮನೆಗಳಿದ್ದು ಕಾಂಕ್ರೀಟ್, ಮಣ್ಣಿನ, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿವೆ. ೫೯೨ ಜನಸಂಖ್ಯೆಯನ್ನು ಹೊಂದಿರುವ ಇಲ್ಲಿ ೯೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಮನೆಗಳು ವಸತಿ ಯೋಜನೆಯಾದ ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್, ಜನತಾ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಮಿನಿಟೆಂಪೋ, ಆಟೋ, ಲಾರಿ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಅಲಸಂದೆ, ತೊಗರಿ, ಜೋಳ ಹಾಗೂ ಹುರುಳಿಯನ್ನು ಆಹಾರ ಬೆಳೆಯಾಗಿ ಬೆಳೆಯುತ್ತಾರೆ. ಅಡಿಕೆ, ತೆಂಗು, ರೇಷ್ಮೆ, ಹತ್ತಿಯನ್ನು ವಾಣಿಜ್ಯ ಬೆಳೆಯಾಗಿಯೂ ಬೆಳೆಯುತ್ತಾರೆ. ಒಂದು ಹಾಲಿನ ಡೈರಿಯಿದ್ದು ೫೦೦ ಲೀ. ಹಾಲನ್ನು ಸಂಗ್ರಹಿಸಲಾಗುತ್ತದೆ. ಶಿಕ್ಷಕರು, ಸಾರಿಗೆ ಇಲಾಖೆಗೆ ಸೇರಿದ ೬ ಜನ ನೌಕರರಿದ್ದು ಗ್ರಾಮದಲ್ಲಿ ರಾಗಿ ಮಿಲ್, ಬಟ್ಟೆ ಹೊಲಿಯುವುದು, ಗ್ಯಾರೇಜ್ ಮೊದಲಾದ ಸಣ್ಣ ಗೃಹೋಪಯೋಗಿ ಕೈಗಾರಿಕೆಗಳಿವೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದ ಈ ಗ್ರಾಮ ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಸೀಬಿ ತಾಲ್ಲೂಕು ಪಂಚಾಯ್ತಿ ಹಾಗೂ ಸೀಬಿ ಅಗ್ರಹಾರ ಪಂಚಾಯ್ತಿ ಮತ್ತು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಇಲ್ಲಿ ಅಂಚೆ ಕಛೇರಿ, ಬ್ಯಾಂಕ್, ಶಾಲೆ, ಅಂಗನವಾಡಿ ಕೇಂದ್ರ, ಒಂದು ಕಾಲೇಜು ಇದೆ. ೩ ಸ್ತ್ರೀಶಕ್ತಿ ಗುಂಪು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಗುಂಪುಗಳಿದ್ದು ಗ್ರಾಮದ ಆರ್ಥಿಕ ಚಟುವಟಿಕೆಗೆ ಸಹಕಾರಿಯಾಗಿದೆ. ಅಂಗನವಾಡಿ ಕೇಂದ್ರದಲ್ಲಿ ೨೨ ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಯಲ್ಲಿ ೩೩ ಮಕ್ಕಳಿದ್ದು ೩ ಜನ ನೌಕರರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಕೆ.ಮಲ್ಲಣ್ಣ ಸ್ಮಾರಕ ಪದವಿಪೂರ್ವ ಕಾಲೇಜು ಇದೆ. ಕಾಲೇಜಿನಲ್ಲಿ ೯೦ ಮಕ್ಕಳಿದ್ದು ಪ್ರಾಂಶುಪಾಲರು ಸೇರಿದಂತೆ ೬ ಜನ ಉಪನ್ಯಾಸಕರಿದ್ದಾರೆ. ಉತ್ತಮ ಕೊಠಡಿ, ಕಾಂಪೌಂಡ್ ಸೌಲಭ್ಯ ಹೊಂದಿದೆ. ಉತ್ತಮ ಫಲಿತಾಂಶವೂ ಬರುತ್ತಿರುವುದು ಈ ಕಾಲೇಜಿನ ವಿಶೇಷವಾಗಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೬.೯% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೧೫ ಹೋಟೆಲ್, ೩೫ ಕಿರಾಣಿ ಅಂಗಡಿಗಳಿರುವುದು. ಈ ಪುಟ್ಟ ಗ್ರಾಮದ ವಾಣಿಜ್ಯ ಚಟುವಟಿಕೆಯ ತೀವ್ರತೆಯನ್ನು ಪ್ರಕಟಿಸುತ್ತದೆ. ಗ್ರಾಮದ ಹೊರಭಾಗದಲ್ಲಿ ಮಂಡಿಯೂ ನಡೆಯುತ್ತದೆ. ಗಣಪತಿ, ಲಕ್ಷ್ಮಿ, ಕನ್ನಿಕಾ ಪರಮೇಶ್ವರಿ ದೇವಾಲಯಗಳಿವೆ. ಯುಗಾದಿ, ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಪಶು ಆಸ್ಪತ್ರೆ, ಮನುಷ್ಯ ಸಂಬಂಧಿ ಚಿಕಿತ್ಸಾಲಯಗಳು, ಮಂಡಿ, ಗ್ಯಾರೇಜ್, ಹೂವಿನ, ದಿನಸಿ ಅಂಗಡಿಗಳು ಕಂಡುಬರುತ್ತವೆ. ಆಂಜನೇಯ ದೇವರ ಜಾತ್ರೆ, ಪಟ್ಟೆ ಹೇಳುವುದು ಇಲ್ಲಿನ ವಿಶೇಷ.

ತರೂರು, ಸೀಬಿ, ಬಡವನಹಳ್ಳಿ, ಮಧುಗಿರಿ, ತುಮಕೂರು ಈ ಭಾಗಗಳಿಗೆ ಉತ್ತಮ ಬಸ್ ಸಂಚಾರ, ರಸ್ತೆ ಸೌಲಭ್ಯ ಕಲ್ಪಿಸಿದಂತೆ ಸಂಪರ್ಕ ಕೇಂದ್ರವಾಗಿರುವ ಈ ಹಳ್ಳಿ, ತೀಕ್ಷ್ಣವಾಗಿ ಬೆಳೆಯುತ್ತಿರುವ ವ್ಯಾಪಾರಿ ಸಂಪರ್ಕ, ಜನಸಂಪರ್ಕವುಳ್ಳ ಗ್ರಾಮವಾಗಿದೆ. ರಾಷ್ಟ್ರಬಂಧು ಯುವಕ ಸಂಘವಿದೆ.

## ಹಾಲೇನಹಳ್ಳಿ

ಹಾಲೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೨ ಕಿಮೀ ದೂರದಲ್ಲಿದೆ. ಸಿರಾ–ತುಮಕೂರು ರಾಷ್ಟ್ರೀಯ ಹೆದ್ದಾರಿಯ ಚಿಕ್ಕನಹಳ್ಳಿಯಲ್ಲಿ ಇಲ್ಲಿಂದ ಎಡಕ್ಕೆ ತಿರುಗಿ ಜಿಲ್ಲಾ ಪಂಚಾಯ್ತಿ ಗೂಳ ರಸ್ತೆಯಲ್ಲಿ ೨ ಕಿಮೀ ಸಾಗಿದರೆ ಹಾಲೇನಹಳ್ಳಿ ಗ್ರಾಮವಿದೆ. ಇದೊಂದು ಪ್ರಾಚೀನ ಗ್ರಾಮವಾಗಿದೆ. ನಗರ ರಸ್ತೆ, ಪೇಟೆ ಬೀದಿ, ಅಂಗಳ, ಇಟ್ಟಿಗೆಯಿಂದ ಕಟ್ಟಿದ ಮಹಡಿ ಮನೆಗಳು. ಬಟ್ಟೆ, ಹತ್ತಿ, ವೀಳ್ಯದೆಲೆ, ತಂಬಾಕಿನ ವ್ಯಾಪಾರಕ್ಕೆ ಈ ಗ್ರಾಮ ಹೆಸರುವಾಸಿಯಾಗಿತ್ತೆಂದು ಶಿಕ್ಷಕ ನಾಗಪ್ಪ ಹೇಳುತ್ತಾರೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೮೮೭.೭೫ ಹೆಕ್ಟೇರ್ ಆಗಿದೆ. ಹೊಸ ಬಡಾವಣೆ, ಬಾಲೇನಹಳ್ಳಿ, ಅಜ್ಜೇನಹಳ್ಳಿ, ಅಜ್ಜೇನಹಳ್ಳಿ ಕಾಲೋನಿ, ಉದ್ದಯ್ಯನಪಾಳ್ಯ, ಕಳ್ಳಂಬೆಳ್ಳ ಬಂಗಲೆ ಇದರ ಮಜರೆ ಗ್ರಾಮಗಳಾಗಿವೆ.

ಹಾಲು, ಹೈನುಗಾರಿಕೆಗೆ ಈ ಗ್ರಾಮ ಪ್ರಸಿದ್ಧವಾಗಿದ್ದು ಆ ಕಾರಣದಿಂದಲೇ ಹಾಲೇನಹಳ್ಳಿ ಎಂಬ ಹೆಸರು ಬಂದಿದೆ ಎಂಬ ಅಭಿಪ್ರಾಯದೊಂದಿಗೆ ಕುಂಚಿಟಿಗರ ಮೂಲದ ಆಳುನೋರ ಪೈಕಿಯ ಹಾಲೇಗೌಡ ಈ ಗ್ರಾಮ ನಿರ್ಮಿಸಿದನು. ಆತನ ಹೆಸರಿನಲ್ಲಿಯೇ ಗ್ರಾಮ ಬೆಳೆದಿದೆ ಎಂದು ರಾಮಚಂದ್ರಯ್ಯ ಅಭಿಪ್ರಾಯಪಡುತ್ತಾರೆ. ಪಶ್ಚಿಮಕ್ಕೆ ದೊಡ್ಡ ಹಳ್ಳ, ತಗ್ಗು ಪ್ರದೇಶ, ಗಿಡ–ಮರಗಳ ಪೊದೆಯಿಂದ ಕೂಡಿರುವ ಈ ಭಾಗದ ಮಣ್ಣು ಕಪ್ಪು ಬಣ್ಣದಿಂದ ಕೂಡಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಹಳ್ಳಿಕಾರ್ ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ನೀರಿನ ಆಸರೆ ಕಡಿಮೆ ಇರುವುದರಿಂದ ರೈತರು ೧೫೦ ಕೊಳವೆ ಬಾವಿಗಳ ಮೂಲಕ ಕೃಷಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ೮ ಕಿರುಟ್ಯಾಂಕ್ ಗಳಲ್ಲಿ ನೀರನ್ನು ಪೂರೈಸಲಾಗುತ್ತದೆ. ೩ ಕೈಪಂಪುಗಳಿವೆ.

ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಸಮುದಾಯವು ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗ, ನಾಯಕ, ಗಾಣಿಗ, ವೀರಶೈವ, ಆದಿದ್ರಾವಿಡ, ದೇವಾಂಗ, ಈಡಿಗ, ದರ್ಜಿ, ಕುಂಬಾರ, ಬಳೆಶೆಟ್ಟರು ಗಾಣಿಗ, ವೈಶ್ಯರು, ಬ್ರಾಹ್ಮಣ, ಅಕ್ಕಸಾಲಿಗ, ಮಡಿವಾಳ ಹಾಗೂ ಮುಸ್ಲಿಂ ಜನಾಂಗಗಳು ಕಿರು ಸಮುದಾಯವಾಗಿವೆ. ಕನ್ನಡ, ಉರ್ದು, ತೆಲುಗು ಭಾಷೆಯನ್ನು ಬಳಸುತ್ತಾರೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಪ್ರಕಾರಗಳ ೪೮೨ ಮನೆಗಳಿವೆ. ಒಟ್ಟು ೨೦೮೩ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ವಸತಿ ಯೋಜನೆಗಳಾದ ಆಶ್ರಯ, ಅಂಬೇಡ್ಕರ್, ಜನತಾ ವಸತಿ ಯೋಜನೆ ಹಾಗೂ ಉಚಿತ ಭಾಗ್ಯಜ್ಯೋತಿ ವಿದ್ಯುತ್ ಪೂರೈಕೆಯ ೨೨ ಫಲಾನುಭವಿಗಳಿದ್ದಾರೆ. ೧೩೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ಆಟೋ, ಲಾರಿ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾದರೂ ಇತ್ತೀಚೆಗೆ ಬದಲಾಗುತ್ತಿದೆ. ಆಹಾರ ಬೆಳೆಗಳಾದ ರಾಗಿ, ಭತ್ತ, ಜೋಳ, ತೊಗರಿ, ಅಲಸಂದೆ, ಹೆಸರು ಬೆಳೆಯುತ್ತಾರೆ. ತೋಟಗಾರಿಕೆ ಹೆಚ್ಚಿದ್ದು ಅಡಿಕೆ, ತೆಂಗು, ವೀಳ್ಯದೆಲೆ ಬೆಳೆಯಿದೆ. ಹಣ್ಣು, ಹೂವು, ತರಕಾರಿ ಬೆಳೆಯುತ್ತಾರೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೭೫೦ ಲೀ. ಹಾಲು ಸಂಗ್ರಹವಾಗುತ್ತಿದೆ. ಮುಖ್ಯ ವಾಣಿಜ್ಯ ಬೆಳೆಯಾಗಿ ತೆಂಗು, ಅಡಿಕೆ, ಹುಣಸೆಹಣ್ಣು, ವೀಳ್ಯದೆಲೆ ವ್ಯಾಪಾರವಿದೆ.

ಶಿಕ್ಷಣ, ಕಂದಾಯ, ಅರಣ್ಯ ಇಲಾಖೆಗೆ ಸೇರಿದೆ ಒಟ್ಟು ೬ ಜನ ಸರ್ಕಾರಿ ನೌಕರರು ಇದ್ದಾರೆ. ಮಹಿಳೆಯರು ಗೃಹ ಕೈಗಾರಿಕೆಯಾಗಿ ಬೀಡಿ ಸುತ್ತುವುದು, ಊಟದ ಎಲೆ ಕಟ್ಟುವುದು, ಟೈಲರಿಂಗ್ ಕಾರ್ಯ ನಿರ್ವಹಿಸುತ್ತಾರೆ. ಕುಂಬಾರಿಕೆ, ಸಾಂಪ್ರದಾಯಿಕ ಮಡಿಕೆ ತಯಾರಿಕೆಯ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಗ್ರಾಮ ಪಂಚಾಯ್ತಿ ಕೇಂದ್ರಕ್ಕೆ ಸೇರಿದ್ದು ಚಿಕ್ಕನಹಳ್ಳಿ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಡುತ್ತದೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಸೇರುವ ಈ ಗ್ರಾಮದಲ್ಲಿ ೫ ಜನ ಪಂಚಾಯತ್ ಸದಸ್ಯರಿದ್ದಾರೆ. ಪ್ರಸ್ತುತ ಶ್ರೀಮತಿ ಜಾನಕಮ್ಮ ಕಳ್ಳಂಬೆಳ್ಳ ಗ್ರಾಮಪಂಚಾಯ್ತಿ ಅಧ್ಯಕ್ಷರಾಗಿದ್ದು ಈ ಗ್ರಾಮದಿಂದ ಆಯ್ಕೆಯಾಗಿದ್ದಾರೆ. ಒಬ್ಬರು ಪಂಚಾಯ್ತಿ ನೌಕರರಿದ್ದಾರೆ.

೧೦ ಸ್ತ್ರೀಶಕ್ತಿ ಸ್ವಸಹಾಯ ಸಂಘ ಹಾಗೂ ೫ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘದ ಪ್ರತಿನಿಧಿಗಳಿದ್ದು ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಪ್ರಮುಖ ಪಾತ್ರವಹಿಸಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೧೪೧ ಮಕ್ಕಳು ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೬.೩% ಆಗಿದೆ. ಹಾಲೇನಹಳ್ಳಿ ಕರೀಗೌಡರು ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ್ದು ಕುಂಚಿಟಿಗರ ಮಹಾಪುರಾಣ ಕೃತಿ ರಚಿಸಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

೩ ಹೋಟೆಲ್, ೧೮ ಗೂಡಂಗಡಿಗಳಿವೆ. ದೈನಂದಿನ ಚಟುವಟಿಕೆಯಲ್ಲಿ ತೊಡಗಿವೆ. ಗ್ರಾಮದ ಆರಂಭದಲ್ಲಿ ೨ ಕರಿಗಲ್ಲುಗಳಿದ್ದು ಅರಳಿಕಟ್ಟೆಯಿದೆ. ೧೨ ನೇ ಶತಮಾನಕ್ಕೆ ಸಲ್ಲಬಹುದಾದ ವೀರಗಲ್ಲು ದೊರೆತಿದ್ದು ಈಟಿ ಹಿಡಿದ ವೀರರ ಚಿತ್ರವಿದ್ದು ಸೂರ್ಯಚಂದ್ರರ ಚಿತ್ರವಿದೆ. ಇದೊಂದು ಮರಣ ಹೊಂದಿರುವ ಸೂಚನೆಯಾಗಿದೆ. ಉಳಿದಂತೆ ಆಂಜನೇಯ, ಮಾರಮ್ಮ, ಈಶ್ವರ, ಬೇಡರ ಕಣ್ಣಪ್ಪ, ಕೊಲ್ಲಾಪುರದಮ್ಮ, ಲಕ್ಕಮ್ಮ ಗುಡಿಗಳ ಜೊತೆಗೆ ಒಂದು ಜಾಮೀಯ ಮಸೀದಿ ಇದೆ. ಬಸವಣ್ಣ, ಈಶ್ವರ, ಆಂಜನೇಯ ದೇವಾಲಯಗಳು ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿವೆ. ಈ ಗ್ರಾಮದ ಗೌಡನವರ ತೋಟದಲ್ಲಿನ ವೀರಗಲ್ಲು ಶಾಸನದಲ್ಲಿ ಜಡವಿಗೊಂಡನ ಮಗ ನಾಗ ಯುದ್ಧದಲ್ಲಿ ಹೋರಾಡಿ ಮಡಿದ ವಿವರವಿದೆ. ಅಸ್ಪಷ್ಟವಾಗಿದೆ.

ಕೊಲ್ಲಾಪುರದಮ್ಮ, ಮಾರಮ್ಮ ಈ ಗ್ರಾಮದೇವತೆಗಳ ಹಬ್ಬ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಆರತಿ, ಬಲಿ, ಹರಕೆ ಸಂಪ್ರದಾಯವಿದೆ. ಗ್ರಾಮದಲ್ಲಿ ಯುಗಾದಿ, ಬಸವ ಜಯಂತಿ, ಗೌರಿ–ಗಣೇಶ, ಮಹಾನವಮಿ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ವಿಚಾರವಾದಿ ಸಾಹಿತಿ ಡಾ.ಜಿ.ರಾಮಕೃಷ್ಣ, ಮುಖವೀಣೆ ಕಲಾವಿದ ನಾಗಣ್ಣ, ಸ್ವಾತಂತ್ರ್ಯ ಹೋರಾಟಗಾರರಾದ ವೀರಸಂಗಾರಾಧ್ಯ, ಎಸ್.ವಿ. ಪ್ರಭುದೇವಯ್ಯ ಈ ಗ್ರಾಮದವರೆಂಬುದು ವಿಶೇಷವಾಗಿದೆ. ಸಿರಾ, ಚಿಕ್ಕನಹಳ್ಳಿ, ದೊಡ್ಡಗೂಳ, ಮಧುಗಿರಿಗೆ ರಸ್ತೆ ಸಂಪರ್ಕವಿದೆ.

## ಹಾವಿನಾಳು

ಹಾವಿನಾಳು ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೧ ಕಿಮೀ ದೂರದಲ್ಲಿದೆ. ಯಲದಬಾಗಿ ಗ್ರಾಮದ ಮಜರೆ ಗ್ರಾಮವಾಗಿರುವ ಈ ಹಳ್ಳಿ ಹಾವಿನಹಳ್ಳ–ಹಾವಿನಹಾಳು ಗ್ರಾಮವಾಗಿದೆ. ಈ ಸರಹದ್ದಿನಲ್ಲಿ ಬಸರಿಹಳ್ಳ, ಹುಂಜನಹಳ್ಳ, ಹೊಂಗೆಹಳ್ಳ, ಕಲ್ಲುಗುಡಿ ಹಳ್ಳ ಹೀಗೆ ನಿಸರ್ಗಸಹಜ ಮಳೆಯ ನೀರು ಅನುಪನಕುಂಟೆ ಕಾಡಿನಲ್ಲಿ ಹರಿದು ಇಳಿಮುಖವಾಗಿ ಹರಿದುಬರುವ ಸ್ಥಳದಲ್ಲಿ ಹಾವಿನಹಳ್ಳವಾಗಿರುವುದರಿಂದ ಗ್ರಾಮದ ನಿಷ್ಪತ್ತಿಯೂ ಹಾಗೆಯೇ ಆಗಿದೆ. ೧೨೮ ಹೆಕ್ಟೇರ್ ಒಟ್ಟು ಭೌಗೋಳಿಕ ವಿಸ್ತೀರ್ಣ ಹೊಂದಿರುವ ಹಾವಿನಹಳ್ಳ ಕುರುಚಲು ಕಾಡು, ಹಳ್ಳ, ಕಲ್ಲು–ಗುಡ್ಡಗಳ ಪ್ರದೇಶ. ಮರಳು ಪುಡಿಗಲ್ಲು ಭೂಮಿ, ಶೇಂಗಾ ಬೆಳೆಗೆ ಉತ್ಕೃಷ್ಟವಾದ ನೆಲ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಹೊಂಗೆಹಳ್ಳ, ಹಾವಿನ ಹಳ್ಳವಿದ್ದು ಇದರ ಮೂಲಕ ಹೇಮಾವತಿ ನದಿ ಹರಿದು ಕಳ್ಳಂಬೆಳ್ಳ ಕೆರೆ ಸೇರುತ್ತದೆ. ಒಂದು ಪುಟ್ಟ ಕುಂಟೆಯಿದ್ದು ತುಂಬುವುದು ಅಪರೂಪ. ಕುಡಿಯುವುದಕ್ಕೆ ಗ್ರಾಮಪಂಚಾಯ್ತಿ ವತಿಯಿಂದ ಮಿನಿ ಟ್ಯಾಂಕ್ ತುಂಬಿಸಿ ಇದರ ಮೂಲಕ ಸರಬರಾಜು ಮಾಡಲಾಗುತ್ತದೆ. ೧ ಕೈಪಂಪು ಇದೆ.

ಕುಂಚಿಟಿಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ ಜನಾಂಗ ಕಿರು ಸಮುದಾಯವಾಗಿದೆ. ಕಾಂಕ್ರೀಟ್, ಹೆಂಚಿನ, ಶೀಟಿನ ೬೮ ಮನೆಗಳಿದ್ದು ಇಂದಿರಾ ಆವಾಸ್, ಆಶ್ರಯ, ವಸತಿ ನಿಲಯಗಳ ಫಲಾನುಭವಿಗಳಿದ್ದಾರೆ. ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೧೭ ಫಲಾನುಭವಿಗಳೂ ಇದ್ದಾರೆ. ಗ್ರಾಮದ ಜನಸಂಖ್ಯೆ ೨೫೮ ಇದ್ದು ೨೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ಆಟೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಗ್ರಾಮದ ಮುಖ್ಯ ಬೆಳೆಯಾಗಿದೆ. ರಾಗಿ, ತೊಗರಿ, ಅಲಸಂದೆ, ಹುರುಳಿ ಆಹಾರ ಬೆಳೆಗಳು. ಶೇಂಗಾ, ಹುಣಸೆಹಣ್ಣು ವಾಣಿಜ್ಯ ಬೆಳೆಗಳು. ಇಬ್ಬರು ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ನಂದಿನಿ ಹಾಲಿನ ಸಹಕಾರ ಸಂಘವಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾಪಂಚಾಯ್ತಿ, ಸೀಬಿ ತಾಲ್ಲೂಕು ಪಂಚಾಯ್ತಿ ಹಾಗೂ ಸೀಬಿ ಅಗ್ರಹಾರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಗೊಂಡಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ೨ ಸ್ತ್ರೀಶಕ್ತಿ ಕೇಂದ್ರಗಳಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು ೩೨ ಮಕ್ಕಳು ಕಲಿಯುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೧% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ

ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಆಂಜನೇಯ, ಮಾರಮ್ಮ, ಮಣ್ಣಮ್ಮ ದೇವಾಲಯದ ಪೌಳಿಗಳಿವೆ. ಕಣಿವೆ ಮಾರಮ್ಮನ ಊರಹಬ್ಬ ಮಾಡುತ್ತಾರೆ. ಆರತಿ, ಬಾನ, ಬ್ಯಾಟೆ ಇರುತ್ತದೆ. ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ರಾಮನವಮಿ ಗ್ರಾಮದ ಪ್ರಮುಖ ಹಬ್ಬಗಳು. ಸಿರಾ, ತುಮಕೂರು, ಚೇಳೂರು, ರಂಗನಹಳ್ಳಿ ಮಾರ್ಗದ ಬಸ್ ಸಂಚಾರವಿದೆ.

## ಹೊನ್ನೇನಹಳ್ಳಿ

ಹೊನ್ನೇನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೨ ಕಿಮೀ ದೂರದಲ್ಲಿದೆ. ಬ್ರಹ್ಮಸಂದ್ರ, ತರೂರು, ಚಿಕ್ಕಗೂಳ ಮಾರ್ಗವಾಗಿ ಸಿರಾ ಸಂಪರ್ಕ ಹೊಂದಿದ್ದು ಸಿರಾ ನಗರಕ್ಕೆ ೨೨ ಕಿಮೀ ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು ೨೦೨.೯೪ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದೆ.

ಸಾಮಾಜಿಕ ರಚನೆಯಲ್ಲಿ ಹೊನ್ನೇನಹಳ್ಳಿ ವ್ಯಕ್ತಿ ಹೆಸರಿನ ಮಬಲವಾಗಿದ್ದು ಹೊನ್ನಯ್ಯ ಅಥವಾ ಹೊನ್ನಪ್ಪ ಹೆಸರಿನ ವ್ಯಕ್ತಿಯಿಂದ ಗ್ರಾಮ ರಚನೆಯಾಗಿ ಕಾಲಾಂತರದಲ್ಲಿ ಅಯ್ಯ ಅಥವಾ ಅಪ್ಪ ಶಿಥಿಲವಾಗಿ ಏಕವಚನ ರೂಪದಲ್ಲಿ ಹೊನ್ನಹಳ್ಳಿ ಹೊನ್ನೇನಹಳ್ಳಿಯಾಗಿದೆ.

ಕೆಂಪುಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ಬಯಲುಸೀಮೆಯಾಗಿದೆ. ಪೊದೆ, ಮರ, ಗಿಡಗಳನ್ನು ಹೊಂದಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಸೀಮೆ, ನಾಟಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಗಿರಿರಾಜ ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ವಾಡಿಕೆ ಮಳೆ ೪೬೦ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿ ಅವಲಂಬಿತರಿಗೆ ವಾಡಿಕೆ ಮಳೆಯ ಪ್ರಮಾಣ ಸಾಕಾಗುವುದಿಲ್ಲ. ಕೃಷಿ ಹಾಗೂ ತೋಟಗಾರಿಕೆಗಾಗಿ ೨೪ ಕೊಳರೆ ಬಾವಿಗಳಿದ್ದು ರೈತರಿಗೆ ಉಪಕಸುಬಿಗೆ ಆಶ್ರಯವಾಗಿವೆ. ಗ್ರಾಮದಲ್ಲಿ ಕುಡಿಯಲು ಕಿರುನೀರು ಸರಬರಾಜು ಯೋಜನೆಯಲ್ಲಿ ಗ್ರಾಮ ಪಂಚಾಯ್ತಿಯಿಂದ ನೀರನ್ನು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೪ ಚಿಕ್ಕ ಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ.

ಕುಂಚಿಟಿಗ ಜನಾಂಗ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ನಾಯಕ ಕಿರು ಸಮುದಾಯಗಳಾಗಿವೆ. ಕನ್ನಡ ಮನೆಯ ಮಾತಾಗಿದೆ. ವಿವಿಧ ಪ್ರಕಾರದ ೬೧ ಮನೆಗಳಿದ್ದು ಇವುಗಳು ಕಾಂಕ್ರೀಟ್, ಹೆಂಚಿನ, ಶೀಟಿನ ಮನೆಗಳಾಗಿವೆ. ಇವು ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ರಚನೆಯಾಗಿವೆ.

ರಾಗಿ, ಜೋಳ, ತೊಗರಿ ಮುಖ್ಯ ಆಹಾರ ಬೆಳೆಗಳಾಗಿದ್ದು ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ, ರಾಗಿ ಬೆಳೆಯುತ್ತಾರೆ. ತೆಂಗು, ಅಡಿಕೆ, ರೇಷ್ಮೆ, ಸೇವಂತಿಗೆ ಹೂ ಪ್ರಮುಖ ತೋಟಗಾರಿಕೆ ಬೆಳೆಯಾಗಿವೆ. ಶೇಂಗಾ, ಹೊಂಗೆ ಬೀಜ, ಅಡಿಕೆ, ತೆಂಗು ವಾಣಿಜ್ಯ ಸರಕುಗಳಾಗಿವೆ. ಶಿಕ್ಷಣ, ಸಾರಿಗೆ, ಕಂದಾಯ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಭೂಪಸಂದ್ರ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರನ್ನು ಹೊಂದಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಒಂದು ಅಂಚೆ ಕಛೇರಿ ಇದ್ದು ಸುತ್ತಲ ಗ್ರಾಮಗಳಿಗೆ ಅಂಚೆ ಸೌಲಭ್ಯವಿದೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೨೧ ಮಕ್ಕಳು, ಒಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೫.೮% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಮಾರಮ್ಮನ ಪೌಳಿಯಿದ್ದು ಆರಾಧಿಸುತ್ತಾರೆ. ಕುನ್ನಾಲಮ್ಮನ ಜಾತ್ರೆ ನಡೆಸುತ್ತಾರೆ.

## ಹಾಲ್‌ದೊಡ್ಡೇರಿ

ಹಾಲುದೊಡ್ಡೇರಿ, ಹಾಲ್‌ದೊಡ್ಡೇರಿ ಎಂದೆಲ್ಲಾ ಕರೆಯುವ ಈ ಗ್ರಾಮ ಹಾಲುಮೂಲದ, ಪಶುಪಾಲನೆಯ ಹಿನ್ನೆಲೆಯ ಹಳ್ಳಿ. ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೮ ಕಿಮೀ ದೂರದಲ್ಲಿದ್ದು ಸೀಬಿ ನರಸಿಂಹಸ್ವಾಮಿ ದೇವಾಲಯದಿಂದ ಉತ್ತರಕ್ಕೆ ೪ ಕಿಮೀ ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೬೪೩.೮೬ ರಷ್ಟಿದೆ. ಬಯಲು, ಗುಡ್ಡಗಾಡು, ಕೆರೆ, ಹೊಳೆಗಳ ಭೂಮಿಯಾದುದರಿಂದ ಹಸುಗಳು ಉತ್ಕೃಷ್ಟವಾಗಿ ಬೆಳೆದು ಪಶುಪಾಗನೆ, ಹೈನುಗಾರಿಕೆ ಇದ್ದುದರಿಂದ ಹಾಲ್‌ದೊಡ್ಡೇರಿ ಆಗಿದೆ. ಗ್ರಾಮದ ಸನಿಹದಲ್ಲೇ ದೊಡ್ಡ ಕೆರೆಯಿದ್ದು ಹಸುಗಳ ಹುಲ್ಲುಗಾವಲು, ಎಡಕ್ಕೆ ಸೀಬಿ ಗುಡ್ಡದ ಕಾಡು, ಬಲಭಾಗಕ್ಕೆ ಗಿಡದಾರಹಳ್ಳಿ ಕಾಡು, ಸನಿಹದಲ್ಲೇ ತರೂರು ಗುಡ್ಡ ಇರುವುದರಿಂದ ಹುಲ್ಲುಗಾರಿಕೆಗೆ ಪ್ರಶಸ್ತವಾಗಿ ಹಾಲುದೊಡ್ಡ ಏರಿ, ಹಾಲು ದೊಡ್ಡೇರಿ ಆಗಿದೆ. ಮರಳುಮಿಶ್ರಿತ ಬಿಳಿ ಕಲ್ಲುಗಳ ನೆಲ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ಬಯಲು, ಗುಡ್ಡಗಾಡು, ಮಳೆ ಕಡಿಮೆ. ವಾರ್ಷಿಕ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೆರೆಯಿದ್ದರೂ ಮಳೆಯಿಲ್ಲದೆ ತುಂಬುವುದಿಲ್ಲ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯ್ಲಲಿ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೧೫ ಕಿರು ಟ್ಯಾಂಕ್‌ಗಳಿವೆ. ೨ ಕೈಪಂಪು ಇದ್ದರೂ ಕೆಟ್ಟುಹೋಗಿವೆ. ಕೃಷಿಕಾಯಕ ನಿರತ ರೈತರು ೬೦ ಕೊಳವೆಬಾವಿಗಳ ಮೂಲಕ ನೀರು ಪೂರೈಸಿಕೊಳ್ಳುತ್ತಿದ್ದಾರೆ.

ಸಾಮಾಜಿಕ ರಚನೆಯಲ್ಲಿ ಬೇಡ ನಾಯಕರು, ಆದಿಕರ್ನಾಟಕ ಜನಾಂಗಗಳು ಸಮಪ್ರಮಾಣದಲ್ಲಿವೆ. ಆದಿದ್ರಾವಿಡ, ಶ್ರೀವೈಷ್ಣವ, ವೀರಶೈವ, ಬ್ರಾಹ್ಮಣ, ಮಡಿವಾಳ, ಕ್ಷೌರಿಕರು ಸಣ್ಣ ಸಮುದಾಯಗಳು. ಕನ್ನಡ ಗ್ರಾಮದ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೨೦೧ ಮನೆಗಳಿದ್ದು ಅವು ಗಾರೆಗಚ್ಚಿನ, ಕಲ್ಲಿನ, ಕಡಪಾ ಹಾಸುಕಲ್ಲು, ಶೀಟು, ಹೆಂಚಿನ ಮನೆಗಳಾಗಿವೆ. ೮೬೮ ಜನಸಂಖ್ಯೆ ಹೊಂದಿರುವ ಇಲ್ಲಿನ ೭೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಅವರೆ, ಭತ್ತ, ಜೋಳ, ನವಣೆ ಆಹಾರ ಬೆಳೆಗಳು. ತೋಟಗಾರಿಕೆ ಬೆಳೆಯಾಗಿ ಹೂವು, ತರಕಾರಿಗಳ ಜೊತೆಗೆ ತೆಂಗು, ಅಡಿಕೆ, ಬಾಳೆಯಿದೆ. ಒಂದು ಹಾಲಿನ ಡೈರಿಯಿದ್ದು ಸರಾಸರಿ ೨೬೦ ಲೀ. ಹಾಲು ಸಂಗ್ರಹಿಸಲಾಗುತ್ತಿದೆ. ಗ್ರಾಮದಲ್ಲಿ ಸಾರಿಗೆ, ಶಿಕ್ಷಣ, ಆರೋಗ್ಯ, ಕಂದಾಯ ಇಲಾಖೆಗೆ ಸೇರಿದ ೧೮ ನೌಕರರಿದ್ದಾರೆ. ಗ್ರಾಮದಲ್ಲಿ ಗೃಹ ಕಸುಬಾಗಿ ಹೂ ಕಟ್ಟುವುದು, ಊಟದ ಎಲೆ ಕಟ್ಟುವುದು, ಬೀಡಿ ಸುತ್ತುವುದು ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಸೀಬಿ ತಾಲ್ಲೂಕು ಪಂಚಾಯ್ತಿ ಹಾಗೂ ಚಿನ್ನೇನಹಳ್ಳಿ ಗ್ರಾಮ ಪಂಚಾಯ್ತಿ ಕೇಂದ್ರಗಳಾಗಿವೆ. ಚಿತ್ರದುರ್ಗ ಜಿಲ್ಲಾ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಇಬ್ಬರು ಪಂಚಾಯತ್ ಸದಸ್ಯರು ಈ ಗ್ರಾಮದ ಪ್ರತಿನಿಧಿಗಳಾಗಿದ್ದಾರೆ. ಅಂಚೆ ಕಛೇರಿ, ೪ ಸ್ತ್ರೀಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಗ್ರಾಮದ ಪ್ರಗತಿಗೆ ಆರ್ಥಿಕ ವ್ಯವಹಾರಕ್ಕೆ ಪೂರಕವಾಗಿವೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೧೨೪ ಮಕ್ಕಳು, ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೦% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ನಾಗಣ್ಣ ಎಂಬುವವರು ವಿಷಜಂತುಗಳ ಕಡಿತಕ್ಕೆ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಸ್ಥಳೀಯವಾಗಿ ಹೆಸರಾಗಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೨ ಟೀ ಅಂಗಡಿ, ೬ ಪೆಟ್ಟಿಗೆ ಅಂಗಡಿಗಳಿವೆ.

ಪುರಾತನ ಗ್ರಾಮ ನಾಶವಾದ ಪಳೆಯುಳಿಕೆ ಇದೆ. ಆರಂಭದಲ್ಲಿ ಆಂಜನೇಯ, ಮಾರಮ್ಮ, ಅರಳೀಕಟ್ಟೆ, ಮುಜರಾಯಿ ಇಲಾಖೆಗೆ ಸೇರಿದ ತಿರುಮಲ ದೇವರು,

ಶ್ರೀರಾಮ ಮಂದಿರ ಇವುಗಳ ಜೊತೆಗೆ ಈಶ್ವರ, ಗಣೇಶನ ಗುಡಿಗಳಿವೆ. ಮಹಾಸತಿ ಹೆಸರಿನ ಈರಮ್ಮ, ಮಲ್ಲನ ಗುಡಿಯೂ ಪ್ರಾಚೀನವಾದದ್ದು. ಇವುಗಳಿಗೆ ದಸರಾ ಹಬ್ಬದಂತೆ ಮೆರವಣಿಗೆ, ಬನ್ನಿ ಮುಡಿಯುವುದು, ಕಲಾಚಾರದ ಗೌರವ ಈ ದೇವರುಗಳ ಹೆಸರಲ್ಲಿ ಇಂದಿಗೂ ಬಳಕೆಯಲ್ಲಿದೆ.

ಯುಗಾದಿ ಹಬ್ಬದ ಮರುದಿವಸ ಗ್ರಾಮದಸ್ಥರು ಸುತ್ತಲ ಗುಡ್ಡಗಳಿಗೆ ಬ್ಯಾಟೆ ಸಾಲುಗಳೊಂದಿಗೆ ಕೋಲು ಬೇಟೆ ಹೋಗಿ ಹಂದಿ, ಜಿಂಕೆ, ಮೊಲ ಪ್ರಾಣಿಗಳನ್ನು ಬೇಟೆಯಾಡುವುದು ಈ ಗ್ರಾಮದ ಸಂಪ್ರದಾಯವಾಗಿದೆ. ಜೊತೆಗೆ ಮಾರಮ್ಮ ಗ್ರಾಮದೇವತೆಯ ಹಬ್ಬ ಮಾಡಲಾಗುತ್ತಿದ್ದು ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯವಿದೆ. ಆ ಕಾಲದಲ್ಲಿ ಬಾಡೂಟ ವಿಶೇಷವಾಗಿರುತ್ತದೆ.

ಹಾಲ್‌ದೊಡ್ಡೇರಿ ಸುಧೀಂದ್ರ, ಸಾಹಿತಿ, ಪತ್ರಿಕೋದ್ಯಮಿ ಇದೇ ಗ್ರಾಮದವರೆಂಬುದು ವಿಶೇಷವಾಗಿದೆ. ವಾಲ್ಮೀಕಿ ಯುವಕರ ಸಂಘ, ದಲಿತ ಸಂಘರ್ಷ ಸಂಘಗಳಿದ್ದು ಇವು ಜನಾಂಗಿಕ ಅಭಿವೃದ್ಧಿಗೆ ಕಾರ್ಯನಿರ್ವಹಿಸುತ್ತಿವೆ.

## ಹಂಡೇಚಿಕ್ಕನಹಳ್ಳಿ

ಹಂಡೆಚಿಕ್ಕನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೦ ಕಿಮೀ ದೂರದಲ್ಲಿದೆ. ಇದು ರ್‍ಹಾಷ್ಟ್ರೀಯ ಹೆದ್ದಾರಿ ಸಿರಾ–ತುಮಕೂರು ರಸ್ತೆಯಲ್ಲಿ ದೊಡ್ಡ ಆಲದ ಮರದ ಗೇಟಿನ ನಂತರ ಕುಂಟೇಗೌಡನಹಳ್ಳಿ ಕ್ರಾಸ್‌ನಿಂದ ೪ ಕಿಮೀ ದೂರದಲ್ಲಿದ್ದು ಯಲದಬಾಗಿ ಗ್ರಾಮಕ್ಕೆ ಮಜರೆ ಗ್ರಾಮವಾಗಿದೆ.

ಇದರ ಭೌಗೋಳಿಕ ವ್ಯಾಪ್ತಿ ೨೧೧.೧ ಹೆಕ್ಟೇರ್ ಇದ್ದು ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದೆ. ಕುರುಚಲು ಗಿಡ, ಹಳ್ಳ, ದಿಣ್ಣೆಗಳಿಂದ ಕೂಡಿರುವ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ವಾಡಿಕೆ ಮಳೆ ೫೫೭.೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಈ ಪರಿಸರದಲ್ಲಿ ೨೧ ಕೊಳವೆ ಬಾವಿಗಳಿದ್ದು ಕೃಷಿ ಕೆಲಸಕ್ಕೆ ಆಶ್ರಯವಾಗಿದೆ. ಕುಡಿಯುವುದಕ್ಕೆ ಗ್ರಾಮ ಪಂಚಾಯ್ತಿ ವತಿಯಿಂದ ಕೊಳವೆ ಬಾವಿ ಮತ್ತು ಚಿಕ್ಕ ಟ್ಯಾಂಕ್ ಮೂಲಕ ನೀರನ್ನು ಪೂರೈಸಲಾಗುತ್ತದೆ. ೧ ಕೈಪಂಪು ಇದೆ.

ಕುಂಚಿಟಿಗ ಜನಾಂಗದ ಹಂಡೆ ಗೋತ್ರದವರು ಈ ಗ್ರಾಮದ ಮೂಲ ನಿವಾಸಿಗಳಾದುದರಿಂದ ಹಂಡೆ ಮೂಲದಲ್ಲಿಯೇ ಚಿಕ್ಕಣ್ಣನು ಊರಲ್ಲಿ ಮುಂದಾಳಾದುದರಿಂದ ಆತನ ಹೆಸರಲ್ಲೇ ಈ ಗ್ರಾಮವನ್ನು ನಿರ್ಮಿಸಲಾಗಿದೆ. ಹಾಗಾಗಿಯೇ ಹಂಡೇಚಿಕ್ಕನಹಳ್ಳಿ ಎಂದು ಕರೆಯಲಾಗುವುದು. ಗ್ರಾಮದಲ್ಲಿ ಕುಂಚಿಟಿಗರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಆದಿದ್ರಾವಿಡ, ನಾಯಕ, ಕುಂಬಾರ, ಮಡಿವಾಳ ಜನಾಂಗ ಸಣ್ಣ ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ೬೩ ಮನೆಗಳಿರುವ ಈ ಗ್ರಾಮದಲ್ಲಿ ಒಟ್ಟು ೨೧೦ ಜನಸಂಖ್ಯೆಯಿದೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಿದ್ದು ಆಶ್ರಯ, ಅಂಬೇಡ್ಕರು, ಜನತಾ, ಆಶ್ರಯ, ವಸತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಭಾಗ್ಯಜ್ಯೋತಿ ಉಚಿತ ವಿದ್ಯುತ್ ಬಳಕೆದಾರ ಕುಟುಂಬಗಳೂ ಇವೆ. ೧೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಇಲ್ಲಿನ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಅಲಸಂದೆ, ತೊಗರಿ ಬೆಳೆಗಳನ್ನು ಬೆಳೆಯುತ್ತಾರೆ. ಶೇಂಗಾ, ಹುಣಸೆಹಣ್ಣು ವಾಣಿಜ್ಯ ಕಸುಬಾಗಿದೆ. ಬೀಡಿ ಕಟ್ಟುವುದು, ಊಟದ ಎಲೆ ತಯಾರಿಕೆಯಿದೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಸೀಬಿ ತಾಲ್ಲೂಕು ಪಂಚಾಯ್ತಿ ಹಾಗೂ ಸೀಬಿ ಅಗ್ರಹಾರ ಗ್ರಾಮಪಂಚಾಯ್ತಿಗೆ ಒಳಪಟ್ಟಿದೆ. ಈ ವ್ಯಾಪ್ತಿಯಲ್ಲಿ ರಕ್ಷಣೆ, ವಿದ್ಯುತ್, ನೀರುಸೌಕರ್ಯಗಳ ಕಾರ್ಯ ನಿರ್ವಹಣೆ ನಡೆಯುತ್ತದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘ ಹಾಗೂ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಶಾಲೆಯಿದ್ದು ಅಂಗನವಾಡಿಯಲ್ಲಿ ೧೪ ಮಕ್ಕಳು, ಶಾಲೆಯಲ್ಲಿ ೨೭ ಮಕ್ಕಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೬೦% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ

ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨ ಪೆಟ್ಟಿಗೆ ಅಂಗಡಿಗಳಿವೆ. ಗ್ರಾಮದಲ್ಲಿ ಅರಳಿಕಟ್ಟೆಯಿದ್ದು ೨ ಕರಿಗಲ್ಲುಗಳಿವೆ. ರಾಮಮಂದಿರ, ಕಣಿವೆ ಮಾರಕ್ಕ, ಹಟ್ಟಿಮಾರಮ್ಮ, ತಿಮ್ಮಣ್ಣ ಎಂಬ ೬೦ ವರ್ಷದ ವ್ಯಕ್ತಿ ವಿಷಜಂತು ಕಚ್ಚಿದರೆ ಉಚಿತ ಚಿಕಿತ್ಸೆ ನೀಡುವ ಮೂಲಕ ಉತ್ತಮ ನಾಟಿ ವೈದ್ಯನೆಂದು ಹೆಸರು ಮಾಡಿದ್ದಾನೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ ಹಬ್ಬ ಆಚರಿಸುತ್ತಾರೆ. ಕಣಿವೆ ಮಾರಮ್ಮನ ಊರಹಬ್ಬ ಮಾಡುತ್ತಾರೆ. ಈ ಸಂದರ್ಭದಲ್ಲಿ ಆರತಿ, ಬಾನ, ಬ್ಯಾಟೆ ಮೊದಲಾದ ಹರಕೆ ಸಂಪ್ರದಾಯವಿದೆ.

## ಹುಂಜನಾಳು

ಹುಂಜನಹಳ್ಳ, ಹುಂಜನಾಳ, ಹುಂಜನಾಳು ಹೀಗೆ ಜನಪದರು ಒಂದೇ ಮೂಲದ ಹಳ್ಳಿಯನ್ನು ಹಕಾರ, ನಕಾರಗಳಲ್ಲಿ ಕೊಂಚ ವ್ಯತ್ಯಾಸ ಮಾಡಿಕೊಂಡು ಕರೆಯುತ್ತಿರುವ ಈ ಗ್ರಾಮ ಒಂದು ಹಳೆಯ ಹಳ್ಳಿ. ಪೂರ್ವಕ್ಕೆ ದೊಡ್ಡ ಹಳ್ಳ – ಹುಂಜನಹಳ್ಳ ಇರುವ ಕಾರಣದಿಂದಾಗಿಯೇ ಈ ಗ್ರಾಮಕ್ಕೆ ಹುಂಜನಹಳ್ಳ ಎಂದು ಕರೆಯಲಾಗಿದೆ. ಜೊತೆಗೆ ಗ್ರಾಮದ ಪೂರ್ವಕ್ಕೆ ಅನುಪನಕುಂಟೆ ಕಾಡು ಇದ್ದು ಈ ಕಾಡಿನಂಚಿಗೆ ದಕ್ಷಿಣದಿಂದ ಬೆಳ್ಳಾವಿ ಹೋಬಳಿಗೆ ಸೇರಿದ ಸೋರೇಕುಂಟೆ, ಚೆನ್ನಿಹಟ್ಟಿ, ಲಕ್ಕನಹಳ್ಳಿ ಹಟ್ಟಿ, ಪಾಲಿಹಟ್ಟಿ, ಚೇಳೂರು ಹೋಬಳಿಗೆ ಸೇರಿದ ಎಣ್ಣೆಕಟ್ಟೆ, ಬ್ಯಾಡನಕಟ್ಟೆ, ಪಟ್ಟರಾಹುತನಹಳ್ಳಿ, ಕಲ್ಲುಗುಡಿ, ಸೋರೇಕಾಯಿ ಪೆಂಟೆ, ರಂಗನಹಳ್ಳಿ, ನಲ್ಲೂರು ಲಿಂಗಾಪುರ, ಸಾತೇನಹಳ್ಳಿ ಈ ಭಾಗಗಳಿಂದಲೂ ಮಳೆಯನೀರಿನ ಹರಿವು ಗೂಬೆಹಳ್ಳ, ಹೊಂಗೆಹಳ್ಳ, ಬಸರಿಹಳ್ಳದ ಮೂಲಕ ಹರಿದು ಹುಂಜನಹಳ್ಳ ಸೇರಿ ಮುಂದೆ ಕಳ್ಳಂಬೆಳ್ಳ ಕೆರೆಯನ್ನು ತಲುಪುತ್ತದೆ. ಹುಂಜನಹಳ್ಳ ದೊಡ್ಡ ಹಳ್ಳವಾಗಿದ್ದು ಕಾಡು ಕೋಳಿಗಳು ವಿಪರೀತ ಅನ್ನುವ ಹಾಗೆ ಇದ್ದ ಕಾರಣದಿಂದ ಹುಂಜನಹಳ್ಳ ಎಂದು ಕರೆದಿರುವುದು ಈ ಗ್ರಾಮದ ಐತಿಹ್ಯವಾಗಿದೆ. ಹುಂಜನ + ಹಳ್ಳ – ಹುಂಜನಾಳ.

ಸಿರಾ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೩೧ ಕಿಮೀ ದೂರದಲ್ಲಿದೆ. ಸಿರಾ–ದೊಡ್ಡ ಆಲದ ಮರದ ಸೀಬಿ ಮಾರ್ಗದ ಮೂಲಕ ಈ ಗ್ರಾಮಕ್ಕೆ ಟಾರ್ ರಸ್ತೆಯಿದೆ. ರ‍್ಟ್ರಾಯ ಹೆದ್ದಾರಿ ಸಿರಾ–ತುಮಕೂರು ನಡುವೆ ಸೋಮಸಾಗರ ಗೇಟಿನಿಂದಲೂ ಹುಂಜನಾಳುವಿಗೆ ಉತ್ತಮ ರಸ್ತೆಯಿದೆ. ಒಟ್ಟು ೨೬೨೩.೪೩ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿರುವ ಈ ಕಂದಾಯ ಗ್ರಾಮ ಬಸರಿಹಳ್ಳಿ, ಬ್ಯಾಡರಹಳ್ಳಿ, ತಿಮ್ಮನಹಳ್ಳಿ, ಪಿಲ್ಲಹಳ್ಳಿ, ಸೀಬಯ್ಯನಪಾಳ್ಯ, ಎತ್ತಪ್ಪನಹಟ್ಟಿ ಹಾಗೂ ಕಾಳಜ್ಜಿ ರೊಪ್ಪ ಎಂಬ ಏಳು ಮಜರೆ ಗ್ರಾಮಗಳನ್ನು ಹೊಂದಿದೆ. ಹುಂಜನಾಳು ಗ್ರಾಮದ ಸುತ್ತ ಹಳೆಯ ಕೋಟೆಯ ಅವಶೇಷಗಳು ಇಂದಿಗೂ ಅಸ್ಪಷ್ಟವಾಗಿ ಕಾಣುತ್ತವೆ.

ಮರಳು ಮಿಶ್ರಿತ ಕಲ್ಲು ಭೂಮಿಯಾಗಿದ್ದು ಶೇಂಗಾ ಬೆಳೆಗೆ ಹೆಚ್ಚು ಪ್ರಶಸ್ತವಾಗಿದೆ. ಊರಿನ ಪಶ್ಚಿಮಕ್ಕೆ ೧೩೩೪ ಹೆಕ್ಟೇರ್ ಅರಣ್ಯಭೂಮಿ ಈ ಗ್ರಾಮದ ಹೆಸರಿಗೆ ದಾಖಲಾಗಿದೆ. ಕಾಡು ಹೀಗೆಯೇ ಮುಂದುವರಿಯುತ್ತದೆ. ಕಾಡಿನಲ್ಲಿ ಮರಡಿ, ತೂಬರಿ, ತರಿ, ಬಿಕ್ಕೆ, ಮುತ್ತುಗ, ಬಂದ್ರೆ, ಸಾಗುವಾನಿ ಜಾತಿಗೆ ಸೇರಿದ ಗಿಡ–ಮರಗಳಿವೆ. ಬಿಕ್ಕೆಯ ಹಣ್ಣು ಆಗಸ್ಟ್–ಸೆಪ್ಟೆಂಬರ್ ತಿಂಗಳಲ್ಲಿ ಉತ್ಕೃಷ್ಟ ಫಲ ಬಿಡುತ್ತದೆ. ಮರಡಿ ಕಪ್ಪು ದ್ರಾಕ್ಷಿ ಜಾತಿಗೆ ಸೇರಿದ ಹಣ್ಣಿನ ಮರವಾಗಿದ್ದು ಡಿಸೆಂಬರ್–ಏಪ್ರಿಲ್‌ವರೆಗೆ ಯಥೇಚ್ಛವಾಗಿ ಹಣ್ಣು, ಬೀಜ ಬಿಡುತ್ತದೆ. ಸರ್ಕಾರ ಈ ಹಣ್ಣನ್ನು ಹರಾಜಿನ ಮೂಲಕ ಮಾರಾಟ ಮಾಡುತ್ತಾರೆ. ಮರಡಿಯ ಬೀಜ, ಸೇಂಗಾ ಮಾದರಿಯಲ್ಲಿದ್ದು ಅದಕ್ಕೂ ಚಿಕ್ಕ ಪಪ್ಪಿನ ಬಾದಾಮಿ ಸ್ವರೂಪದ ದ್ವಿದಳ ಧಾನ್ಯವಾಗಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಜಿಂಕೆ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಕಾಡುಕೋಳಿ, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾಡಿಕೆ ಮಳೆ ೪೬೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಗ್ರಾಮದಲ್ಲಿ ಮೂರು ತೆರೆದ ಬಾವಿಗಳಿದ್ದು ಒಣಗಿವೆ. ೧೨೫ ಕೊಳವೆ ಬಾವಿಗಳು ಈ ಪರಿಸರದಲ್ಲಿವೆ. ಒಂದು ಕೆರೆಯಿದ್ದು ಮಳೆಗಾಲದಲ್ಲಿ ತುಂಬಿದರೆ ಬೇಸಿಗೆಯಲ್ಲಿ ಖಾಲಿಯಾಗುತ್ತದೆ. ಇದು ಕೃಷಿಗೆ ಆಪ್ತವಾಗಿಲ್ಲ. ಕುಡಿಯುವ ನೀರಿಗೆ ಬೋರ್‌ವೆಲ್‌ಗಳ ಮೂಲಕ ಚಿಕ್ಕ ತೊಟ್ಟಿಗೆ ಹರಿಸಿ, ಕೊಳಾಯಿಗಳ ಮೂಲಕ ಪೂರೈಕೆ ಮಾಡಲಾಗುತ್ತದೆ. ಎರಡು ಕೈಪಂಪುಗಳೂ ಇವೆ.

ಇಲ್ಲಿನ ಸಾಮಾಜಿಕ ರಚನೆ ವೀರಶೈವ, ಆದಿಕರ್ನಾಟಕ, ಆದಿದ್ರಾವಿಡ, ನಾಯಕ, ಬ್ರಾಹ್ಮಣರು, ಅಕ್ಕಸಾಲಿಗರು. ದಾಸರು, ಮಡಿವಾಳ ಸಮುದಾಯಗಳಿಂದ ಕೂಡಿದ್ದು ವೀರಶೈವ ಜನಾಂಗ ಈ ಗ್ರಾಮದ ದೊಡ್ಡ ಸಮುದಾಯವಾಗಿದೆ. ಉಳಿದವು ಸಣ್ಣ ಸಮುದಾಯವಾಗಿವೆ. ಹಳ್ಳದ ಬೀದಿ, ಸ್ಕೂಲ್ ಕೇರಿ, ಮಠದ ದಾರಿ ಹೀಗೆ ಓಣಿಗಳಿದ್ದು ಒಟ್ಟು ೨೧೯

ಮನೆಗಳಿವೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಸ್ವರೂಪದ ಮನೆಗಳಿದ್ದು ೧೪೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಆಶ್ರಯ, ಅಂಬೇಡ್ಕರ್, ಜನತಾ, ಬಸವ ಯೋಜನೆಯ ಫಲಾನುಭವಿಗಳು, ಭಾಗ್ಯಜ್ಯೋತಿ ವಿದ್ಯುತ್ ದೀಪದ ಉಪಯೋಗದಾರ ಕುಟುಂಬಗಳಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಪ್ರಮುಖ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ಹಾರಕ, ನವಣೆ, ಕೊರ್ಲೆ, ಅಲಸಂದೆ, ತೊಗರಿ ಆಹಾರ ಬೆಳೆಗಳಾಗಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ ಬೆಳೆಯಿದ್ದು ಶೇಂಗಾ, ಹುಣಸೆ ಹಣ್ಣಿನ ವ್ಯಾಪಾರವೂ ಇದೆ. ೮ ಜನ ಸರ್ಕಾರಿ ನೌಕರರಿದ್ದಾರೆ. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಹೆಚ್.ಎನ್. ನಂಜುಂಡಯ್ಯ ಈ ಗ್ರಾಮದವರು. ಗ್ರಾಮದಲ್ಲಿ ಬೀಡಿ ಸುತ್ತುವ, ಮುತ್ತುಗದ ಎಲೆಯಿಂದ ಊಟದ ಎಲೆ ತಯಾರಿಸುವ ಗೃಹಕೈಗಾರಿಕೆ ಇದೆ. ರಾಗಿಮಿಲ್, ಬಟ್ಟೆ ಹೊಲಿಯುವ ಗೃಹ ಕೈಗಾರಿಕೆಯೂ ಸಹ ಇದೆ. ಬಡಗಿ, ಕಮ್ಮಾರಿಕೆಯೂ ಇದೆ. ಕಂದಾಯ, ಶಿಕ್ಷಣ, ಅರಣ್ಯ ಇಲಾಖೆಗೆ ಸೇರಿದ ನಾಲ್ಕು ಜನ ಸರ್ಕಾರಿ ನೌಕರರಿದ್ದಾರೆ.

ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ಸೀಬಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದೆ. ಸಿರಾ, ತುಮಕೂರು, ಚೇಳೂರು, ರಂಗನಹಳ್ಳಿಗೆ ಸಂಪರ್ಕ ರಸ್ತೆ ವ್ಯವಸ್ಥೆ ಇದೆ. ಅಂಚೆ ಕಛೇರಿ, ಅಂಗನವಾಡಿ ಕೇಂದ್ರ, ಸರ್ಕಾರಿ ಮಾಧ್ಯಮಿಕ ಪಾಠಶಾಲೆಗಳಿದ್ದು ಅಂಗನವಾಡಿಯಲ್ಲಿ ೨೮, ಕನ್ನಡ ಶಾಲೆಯಲ್ಲಿ ೧೦೩ ಮಕ್ಕಳು ಕಲಿಯುತ್ತಿದ್ದಾರೆ. ಒಟ್ಟು ೫ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಸಮಾಜಕಲ್ಯಾಣ, ಬಿಸಿಎಂ ಇಲಾಖೆಯ ವಿದ್ಯಾರ್ಥಿ ವೇತನ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೪೮.೯% ಆಗಿದೆ. ಮಹಿಳೆಯರು ೩೮%, ಪುರುಷರು ೬೦% ಸಾಕ್ಷರರಿದ್ದಾರೆ. ಒಂದು ಗ್ರಂಥಾಲಯವಿದ್ದು ಇತ್ತೀಚೆಗೆ ಮುಚ್ಚಲಾಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಶ್ರೀರಂಗಯ್ಯ ಎಂಬುವವರು ಆಯುರ್ವೇದ ಔಷಧೋಪಚಾರ ನೀಡುತ್ತಿದ್ದು ಸ್ಥಳೀಯವಾಗಿ ಹೆಸರಾಗಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೪ ಅಂಗಡಿಗಳು, ೨ ಟೀ ಶಾಪ್‌ಗಳಿವೆ. ಬಸವೇಶ್ವರ, ಈಶ್ವರ, ಆಂಜನೇಯ ಊರ ಹೊರಗೆ ಶನಿದೇವರ ದೇವಾಲಯಗಳಿವೆ. ಶಿವಗಂಗಾ ಮಠವಿದ್ದು ಇದು ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದ ಸಾಮಾಜಿಕ ಕೆಲಸ ಕಾರ್ಯಗಳಿಗೆ ಬಳಕೆ ಮಾಡುತ್ತಿದ್ದು ಅದನ್ನು ನವೀಕರಿಸಬೇಕಾದ ಅಗತ್ಯವಿದೆ ಎಂದು ಗ್ರಾಮದ ಮುಖಂಡ ಈಶ್ವರಪ್ಪ ಹೇಳುತ್ತಾರೆ. ಮಾರಮ್ಮ ಗ್ರಾಮ ದೇವತೆಯಾಗಿದ್ದು ವಾರ್ಷಿಕ ಜಾತ್ರೆ, ಊರಹಬ್ಬ ನಡೆಸುತ್ತಾರೆ. ಈ ಸಂದರ್ಭದಲ್ಲಿ ಆರತಿ, ಬಾನ, ಬ್ಯಾಟೆ ನಡೆಯುವ ಪ್ರಮುಖ ಹರಕೆ ಸಂಪ್ರದಾಯವಾಗಿವೆ.

ಕ್ರಿ.ಶ.೧೩೭೬ ರ ಸಂದರ್ಭದ ೧ನೇ ಬುಕ್ಕರಾಯನ ಕಾಲದ ವೀರಗಲ್ಲು ಶಾಸನವೊಂದಿದ್ದು ಕಳ್ಳರೊಡನೆ ಹೋರಾಡಿ ತೀರಿಕೊಂಡ ಪಮೆಯನಾಯ್ಕನ ಮಗ ಮಾದನಿಗೆ ಹಿರಿಯನಾದ ಮಾದಯ್ಯನಾಯ್ಕ ಹಾಕಿಸಿದ ವೀರಗಲ್ಲು ಎಂದು ನಮೂದಿಸಿದೆ. ಜೊತೆಗೆ ಸಿರಾ ಶಾಸನ ೧೧೧ ರ ಪ್ರಕಾರ ಕ್ರಿ.ಶ.೧೬೬೧ ರಲ್ಲಿ ಮೈಸೂರು ಸಂಸ್ಥಾನ ಒಡೆಯರಾದ ಕಾಲದಲ್ಲಿ ಮುದ್ದಣ ಒಡೆಯರ ಮಗ ಸೋಮಯ್ಯ ಒಡೆಯರು ಹುಂಜನಾಳುವಿನಲ್ಲಿ ನರಸಿಂಹಸ್ವಾಮಿ ದೇವಾಲಯ ಕಟ್ಟಿಸಿದರು. ಜೊತೆಗೆ ಹೊಸದಾಗಿ ಸೋಮೇನಹಳ್ಳಿ ಎಂಬ ಹೊಸ ಊರನ್ನು ಸ್ಥಾಪಿಸಿದರು. ನರಸಿಂಹಸ್ವಾಮಿ ದೇವರಿಗೆ ಸದಾ ದೀಪಾರಾಧನೆ ನಡೆಸಲು ಹುಂಜನಹೊಳೆಯ ಮಾದಯ್ಯನಾಯ್ಕನಿಗೆ ಭೂಮಿಯನ್ನು ದತ್ತಿ ನೀಡಿರುವ ಅಂಶವಿದೆ.

ಶಿವರಾತ್ರಿ ದೊಡ್ಡ ಹಬ್ಬವಾಗಿದ್ದು ವೀರಶೈವ ಸಮುದಾಯ ಬೃಹತ್ ಪ್ರಮಾಣದಲ್ಲಿ ಆಚರಿಸುತ್ತಾರೆ. ಯುಗಾದಿ, ನವಮಿ, ದೀಪಾವಳಿ, ಸಂಕ್ರಾಂತಿ, ಗೌರಿ ಹಬ್ಬಗಳ ಆಚರಣೆಯೂ ಇದೆ. ಶಿಲ್ಪ ಕಲಾವಿದ ಬಸವರಾಜಾಚಾರ್ ಮಣ್ಣಿನ, ವಾಸ್ತು, ವಿಗ್ರಹಗಳ ಚಿತ್ರ ಬಿಡಿಸುತ್ತಾರೆ. ಜನಪದ ಕಲಾವಿದರಾದ ಕೆಂಪಕ್ಕ, ಮಣ್ಣಕ್ಕ, ಸಣ್ಣಮ್ಮ ಗ್ರಾಮದಲ್ಲಿ ಗಮನ ಸೆಳೆದ ಕಲಾವಿದೆಯರು. ಸೋಬಾನೆ ಪದ, ದೇವರ ಪದ ಹಾಡುವುದು ರೂಢಿಯಲ್ಲಿದೆ.

## ಹೊಸಬುರ್ಜ

ಹೊಸಬುರ್ಜು ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೦ ಕಿಮೀ ದೂರದಲ್ಲಿದೆ. ಸಿರಾ–ತರೂರು ಈ ಗ್ರಾಮವಿದ್ದು ಕಂದಾಯ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ

೩೧೩.೩೭ ಹೆಕ್ಟೇರ್ ಆಗಿದೆ. ಗ್ರಾಮದಲ್ಲಿ ನಾಶವಾದ ಕೋಟೆ, ಬುರ್ಜು ಅವಶೇಷವಿದೆ. ಬುರ್ಜು ಹೊಂದಿರುವ ಗ್ರಾಮವಾಗಿರುವುದರಿಂದ ಹೊಸಬುರ್ಜು ಎಂದು ಕರೆಯಲಾಗಿದೆ.

ಮರಳುಮಿಶ್ರಿತ ಕೆಂಪು, ಕಂದುಮಣ್ಣನ್ನು ಹೊಂದಿದೆ. ಈ ಗ್ರಾಮಕ್ಕೆ ಅರ್ಧ ಕಿಮೀ ದೂರದಲ್ಲಿ ಹೊಸಮಲ್ಲಹಳ್ಳಿ ಎಂಬ ಗ್ರಾಮವೂ ಇದೆ. ಈ ಎರಡೂ ಗ್ರಾಮಗಳಿಗೂ ಹೊಸ ಎಂಬ ವಿಶೇಷಣ ಸೇರಿರುವುದು ವಿಶೇಷವಾಗಿದೆ. ಕುರುಚಲು ಮರ, ಗಿಡ, ಹಳ್ಳ ದಿಣ್ಣೆಗಳಿಂದ ಕೂಡಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಗಿರಿರಾಜ, ನಾಟಿಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾಡಿಕೆ ಮಳೆ ೫೩೩.೪ ಮಿಮೀ ಆಗಿದ್ದು ಉಷ್ಣಾಂಶ ೩೭ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕುಡಿಯಲು ತರೂರು ಗ್ರಾಮಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದ್ದು ಕೃಷಿಗಾಗಿ ಮಳೆಯ ನೀರಿನ ಜೊತೆಗೆ ೧೮ ಕೊಳವೆ ಬಾವಿಗಳಿವೆ. ಗ್ರಾಮದಲ್ಲಿ ೧ ಕಿರು ಟ್ಯಾಂಕ್ ಇದ್ದು ೧ ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗರು ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರಗಳ ೨೫ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದವುಗಳಾಗಿವೆ. ಇದಕ್ಕೆ ಸರ್ಕಾರದ ವಸತಿ ಯೋಜನೆಗಳಾದ ಇಂದಿರಾ ಆವಾಸ್, ಆಶ್ರಯ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಫಲಾನುಭವಿಗಳಿದ್ದಾರೆ. ೧೫ ಮನೆಗಳಲ್ಲಿ ಶೌಚಾಲಯ ಹೊಂದಿದ್ದಾರೆ. ೮೩ ಜನಸಂಖ್ಯೆ ಇದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಟೆಂಪೋ, ಆಟೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಹಾರಕ, ಕೊರ್ಲೆ, ಜೋಳ, ಅಲಸಂದೆ, ತೊಗರಿ ಆಹಾರ ಬೆಳೆಯಾಗಿದೆ. ತೆಂಗು, ಅಡಿಕೆ, ಸೂರ್ಯಕಾಂತಿ, ಸೇವಂತಿಗೆ ಹೂ ಬೆಳೆಯುತ್ತಾರೆ. ಶೇಂಗಾ, ಹುಣಸೆಹಣ್ಣು, ಹೊಂಗೆಬೀಜ, ಹೂ ವ್ಯಾಪಾರಿ ಸರಕಾಗಿವೆ. ಹೆಂಗಸರು ಹೂ ಕಟ್ಟುವುದು, ಹೊಂಗೆ ಬೀಜ, ಹುಣಸೆಹಣ್ಣು ಪರಿಷ್ಕರಣೆಯು ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ತರೂರು ತಾಲ್ಲೂಕು ಪಂಚಾತಿ ಹಾಗೂ ಗ್ರಾಮ ಪಂಚಾಯ್ತಿ ಕ್ಷೇತ್ರಗಳನ್ನು ಹೊಂದಿದ್ದು, ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ತರೂರು ಗ್ರಾಮದಿಂದ ಅಂಚೆ ಸಂಪರ್ಕ ಹೊಂದಿದೆ. ಗ್ರಾಮದಲ್ಲಿ ಒಂದು ಅಂಗನವಾಡಿ ಶಾಲೆಯಿದ್ದು ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಕೆಯಾಗುತ್ತಿದೆ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೊಸಮಲ್ಲಳ್ಳಿ, ತರೂರು, ದೊಡ್ಡಾಲದಮರಕ್ಕೆ ಹೋಗುತ್ತಿದ್ದು ಗ್ರಾಮದ ಸಾಕ್ಷರತಾ ಪ್ರಮಾಣ ೭೭.೬% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಪೆಟ್ಟಿಗೆ ಅಂಗಡಿ ಇದೆ. ಧಾರ್ಮಿಕವಾಗಿ ತಿಮ್ಮಪ್ಪ, ಮಾರಮ್ಮನ ಗುಡಿಗಳಿದ್ದು ದುರ್ಗಮ್ಮನ ಗದ್ದುಗೆ ಇದೆ. ತರೂರು ದುರ್ಗಮ್ಮನ ಜಾತ್ರೆಯಂದು, ದುರ್ಗಮ್ಮನಿಗೆ ಪ್ರಾಣಿಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಆಷಾಢ ಮಾಸದಲ್ಲಿ ಮಾರಮ್ಮನಿಗೆ ಆರತಿ ಮಾಡಿ ಕೋಳಿ ಬಲಿ ಕೊಡುವುದು ಗ್ರಾಮ ವಾಡಿಕೆಯಾಗಿದೆ. ತಿಮ್ಮಪ್ಪ ದೇವರ ಉತ್ಸವ ದಸರಾದಿದಲ್ಲಿ ವಿಶೇಷವಾಗಿರುತ್ತದೆ.

ಯುಗಾದಿ, ದಸರಾ, ಗೌರಿ–ಗಣೇಶ, ಶಿವರಾತ್ರಿ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಶಾಲೆಯ ಸೌಕರ್ಯವಿಲ್ಲ. ತರೂರು, ಬ್ರಹ್ಮಸಂದ್ರ, ತುಮಕೂರು–ಸಿರಾ ನಗರಗಳಾಗಿ ರಸ್ತೆ ಸಂಪರ್ಕವಿದೆ.

## ಹೊಸಮಲ್ಲನಹಳ್ಳಿ

ಹೊಸಮಲ್ಲನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೧ ಕಿಮೀ ದೂರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು ಸಿರಾ–ತರೂರು ಮಾರ್ಗವಾಗಿ ಗಂಜಲಗುಂಟೆ ಸಮೀಪದಲ್ಲಿದೆ. ಇದರ ಭೌಗೋಳಿಕ ವ್ಯಾಪ್ತಿ ೨೦೯.೪೧ ಹೆಕ್ಟೇರ್ ಆಗಿದ್ದು ಗೊಲ್ಲರಹಟ್ಟಿ ಮಜರೆ ಗ್ರಾಮವಾಗಿದೆ.

ಮಲ್ಲಣ್ಣ ಎಂಬ ವ್ಯಕ್ತಿ ಹೊಸದಾಗಿ ಬಂದು ಮನೆಕಟ್ಟಿಕೊಂಡ ಕಾರಣದಿಂದ ಹೊಸ ಮತ್ತು ಮಲ್ಲಣ್ಣ ಎಂಬ ಪದಗಳು ಸೇರಿ ಹೊಸಮಲ್ಲನಹಳ್ಳಿ ಆಗಿದೆ. ಗ್ರಾಮ್ಯವಾಗಿ ಈ

ಗ್ರಾಮಕ್ಕೆ ಹೊಮಾನಹಳ್ಳಿ ಎಂದು ಸರಳವಾಗಿ ಕರೆಯುವುದು ರೂಢಿಯಾಗಿದೆ. ಮರಳುಮಿಶ್ರಿತ ಕೆಂಪು ಮಣ್ಣು, ಬಿಳಿ, ಕಂದು ಮಣ್ಣಿನಿಂದ ಕೂಡಿದ್ದು ಚಿಕ್ಕಚಿಕ್ಕ ಗಿಡ, ಮರ ತೋಟಸಾಲಿನಿಂದ ಕೂಡಿದೆ. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಜಿಂಕೆ, ಮೊಲ, ಕರಡಿ, ಮುಂಗುಸಿ, ಉಡ ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಸೀಮೆಹಸು, ನಾಟಿಹಸು, ಹಳ್ಳಿಕಾರ್ ತಳಿ ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕೋಳಿ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಕೊಕ್ಕರೆ, ಗರುಡ, ಕಾಗೆ ಕಂಡುಬರುತ್ತವೆ. ವಿಷಪೂರಿತ ಹಾವುಗಳೂ ಕಂಡುಬರುತ್ತವೆ.

ಕಳೆದ ಎರಡು ವರ್ಷಗಳಲ್ಲಿ ಮಳೆ ವಾಡಿಕೆಗಿಂತ ಕಡಿಮೆಯಿದೆ. ವಾರ್ಷಿಕ ವಾಡಿಕೆ ಮಳೆ ೫೫೩.೭ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ರೈತಾಪಿ ಜನ ಕೃಷಿಗೆ ಸಹಜ ಮಳೆ ಸಾಕಾಗುವುದಿಲ್ಲ. ಉಪನೀರಾವರಿಗಾಗಿ ಗಂಗಾಕಲ್ಯಾಣ ಮೊದಲಾದ ಯೋಜನೆಯಲ್ಲಿ ೮೫ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಕುಡಿಯಲು ತರೂರು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ೮ ಸಿಸ್ಟರ್ನ್‌ಗಳಲ್ಲಿ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ೩ ಕೈಪಂಪುಗಳಿವೆ. ರಂಗಪ್ಪನಾಯಕನ ಕಟ್ಟೆ, ಹುಸೇನಸಾಬರ ಕೆರೆಯಿದ್ದು ನೀರು ಬರುವುದು ಕಡಿಮೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗ, ಕಮ್ಮಾರ, ಆದಿಕರ್ನಾಟಕ, ಆದಿದ್ರಾವಿಡ ದೇಶಭಾಗದವರು ಕಿರುಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದ್ದು ವಿವಿಧ ಪ್ರಕಾರಗಳ ೧೬೫ ಮನೆಗಳಿವೆ. ೧೫ ಕಾಂಕ್ರೀಟ್, ಮಂಗಳೂರು ಹೆಂಚಿನ, ಶೀಟಿನ, ಒಂದು ಗುಡಿಸಲು ಸೇರಿದಂತೆ ಮನೆಗಳಿವೆ. ಇವು ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಇಂದಿರಾ ಆವಾಸ್ ಮೊದಲಾದ ಯೋಜನೆಯ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ಉಚಿತ ವಿದ್ಯುತ್ ಸೌಲಭ್ಯದ ಕುಟುಂಬಗಳಿವೆ. ೭೩೭ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ೫೯ ಮನೆಗಳು ಶೌಚಾಲಯ ಹೊಂದಿವೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಾಕ್ಟರ್, ಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ, ತೊಗರಿ, ಅಲಸಂದೆ, ತೊಗರಿ ಮುಖ್ಯ ಆಹಾರ ಬೆಳೆಗಳು. ರೇಷ್ಮೆ, ಅಡಿಕೆ, ಸೇವಂತಿಗೆ ಹೂ ಮುಖ್ಯ ತೋಟಗಾರಿಕೆ ಬೆಳೆಗಳು. ನಂದಿನಿ ಹಾಲಿನ ಡೈರಿಯಿದ್ದು ದಿನವಹಿ ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ. ಶೇಂಗಾ, ಹೊಂಗೆಬೀಜ, ಹುಣಸೆಹಣ್ಣು ವಾಣಿಜ್ಯ ಬೆಳೆಗಳಾಗಿವೆ. ಕುರಿ ವ್ಯಾಪಾರವೂ ಇದೆ.

ಶಿಕ್ಷಕರು, ಸಾರಿಗೆ ಇಲಾಖೆಗೆ ಸೇರಿದ ಇಬ್ಬರು ನೌಕರರಿದ್ದು ಗ್ರಾಮದಲ್ಲಿ ಹೂ ಕಟ್ಟುವುದು, ಹುಣಸೆಹಣ್ಣು ಬಿಡಿಸುವುದು, ಹೊಂಗೆಬೀಜ ಸಂಗ್ರಹಗಳಂಥ ಮಹಿಳೆಯರ ಉಪಕಸುಬು ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತರೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಈ ಗ್ರಾಮದ ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ತರೂರಿನಿಂದ ಅಂಚೆ ಸಂಪರ್ಕ ಹೊಂದಿದೆ. ಒಂದು ನ್ಯಾಯಬೆಲೆ ಅಂಗಡಿ, ೨ ಸ್ತ್ರೀಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಸ್ತ್ರೀಯರ ಆರ್ಥಿಕ ಸಬಲತೆಗೆ ಪ್ರೇರಕವಾಗಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೧೭೪ ಮಕ್ಕಳು, ೬ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೮.೫% ಆಗಿದೆ. ಇಲ್ಲಿನ ಶಾಲೆಗೆ ಹೊಸಬುರ್ಜು, ಗೊಲ್ಲಹಳ್ಳಿಗಳಿಂದ ಮಕ್ಕಳು ಬರುತ್ತಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ. ಸಣ್ಣಗಿರಿಯಣ್ಣ, ಸಣ್ಣಲಿಂಗ ಎಂಬ ಹಿರಿಯರು ಪಶುಸಂಬಂಧಿ ಸಾಂಪ್ರದಾಯಿಕ ವೈದ್ಯಕೀಯ ಚಿಕಿತ್ಸೆ ಮಾಡುತ್ತಾರೆ. ಮೋಹನಣ್ಣ ಹಾವು-ಚೇಳು ಕಡಿತಕ್ಕೆ ಔಷಧಿ ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೨ ಟೀ ಅಂಗಡಿ ಸೇರಿದಂತೆ ೪ ಗೂಡಂಗಡಿಗಳಿವೆ. ಲಕ್ಕಮ್ಮನ ದೇವಾಲಯರಿದ್ದು ಮಾರಮ್ಮ, ದುರ್ಗಮ್ಮನ ಪೌಳಿಗಳಿವೆ. ತರೂರು ದುರ್ಗಮ್ಮನಿಗೆ ಈ ಗ್ರಾಮದಿಂದ ಮಡಿಲಕ್ಕಿ, ಆರತಿ ಹೋಗುತ್ತದೆ. ಬಲಿ, ಹರಕೆಯು ಇದೆ.

ಉಳಿದಂತೆ ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ, ಗೌರಿ–ಗಣೇಶನ ಹಬ್ಬ ಆಚರಿಸುತ್ತಾರೆ. ಸಿರಾ–ತರೂರು, ದೊಡ್ಡ ಆಲದ ಮರ, ಅರೇಹಳ್ಳಿ, ಮಧುಗಿರಿ ರಸ್ತೆಗೆ ಬಸ್ ಸಂಪರ್ಕವಿದೆ.

## ಹೊಸಮಲ್ಲನಹಳ್ಳಿ ಗೊಲ್ಲರಹಟ್ಟಿ

ಹೊಸಮಲ್ಲನಹಳ್ಳಿ ಗೊಲ್ಲರಹಟ್ಟಿಯು ಸಿರಾ ತಾಲ್ಲೂಕು ಕೇಂದ್ರದಿಂದ ೨೨ ಕಿಮೀ ದೂರದಲ್ಲಿದೆ. ಸಿರಾ–ತರೂರು ರಸ್ತೆಯಲ್ಲಿ ಗಂಜಲಗುಂಟೆ ನಂತರ ಹೊಸಮಲ್ಲನಹಳ್ಳಿ ಇದ್ದು ಅದಕ್ಕೆ ಹೊಂದಿಕೊಂಡಂತೆ ಗೊಲ್ಲರಹಟ್ಟಿ ಇದೆ. ಹೊಸಮಲ್ಲನಹಟ್ಟಿಯ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ೪೦.೦೮ ಹೆಕ್ಟೇರ್ ಆಗಿದೆ. ಕೆಂಪು–ಬಿಳಿ ಮರಳು ಮಿಶ್ರಿತ ನೆಲ, ಕುರುಚಲು ಗಿಡ, ಮರ, ತೋಟದ ಸಾಲು. ಹಾಗಾಗಿ ಈ ಪರಿಸರದಲ್ಲಿ ಕಾಡುಪ್ರಾಣಿಗಳು ಅಧಿಕ ಸಂಖ್ಯೆಯಲ್ಲಿವೆ. ನರಿ, ಮೊಲ, ಕರಡಿ, ಮುಂಗುಸಿ, ಉಡ, ವಿಷಪೂರಿತ ಹಾವು ಕಂಡುಬರುತ್ತವೆ. ಗ್ರಾಮದ ರೈತರು ಹೈನುಗಾರಿಕೆ ಹಾಗೂ ಕೃಷಿಗಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಗಿರಿರಾಜ, ನಾಟಿ ಕೋಳಿಗಳನ್ನು ಮಾಂಸ ಹಾಗೂ ಮೊಟ್ಟೆಯ ಬಳಕೆಗಾಗಿ ಸಾಕಿರುವ ಸಾಕುಪಕ್ಷಿಯಾಗಿದೆ. ಕಾಡುಪಕ್ಷಿಯಾಗಿ ನವಿಲು, ಗಿಳಿ, ಕೋಗಿಲೆ, ಗೊರವಂಕ, ಬೆಳವ, ಹದ್ದು, ಗರುಡ, ಕಾಗೆ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ಮಳೆ ೫೫೭.೦೩ ಮಿಮೀ ಆಗಿದ್ದು ಉಷ್ಣಾಂಶ ೩೮ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಮಳೆಯ ನೀರಿನ ಜೊತೆಗೆ ಉಪನೀರಾವರಿಯಾಗಿ ೩೦ ಕೊಳವೆ ಬಾವಿಗಳನ್ನು ತೆಗೆಸಲಾಗಿದೆ. ಇದರಿಂದ ತೋಟಗಾರಿಕೆಗೆ ಅನುಕೂಲವಾಗಿದೆ. ಈ ಪರಿಸರದಲ್ಲಿ ಒಂದು ಕಟ್ಟೆಯಿದ್ದು ತುಂಬುವುದು ಅಪರೂಪವಾಗಿದೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ೪ ಕಿರು ಟ್ಯಾಂಕ್‌ಗಳಿದ್ದು ೧ ಕೈಪಂಪು ಇದೆ.

ಕಾಡುಗೊಲ್ಲರು ಮಾತ್ರ ವಾಸಿಸುವ ಇಲ್ಲಿ ಕನ್ನಡ ಮಾತೃಭಾಷೆಯಾಗಿದೆ. ವಿವಿಧ ಪ್ರಕಾರದ ೩೦ ಮನೆಗಳಿದ್ದು ಇವು ಹೆಂಚಿನ, ಶೀಟಿನ ಸ್ವರೂಪದವುಗಳಾಗಿವೆ. ಇದಕ್ಕೆ ಸರ್ಕಾರದ ವಸತಿ ಯೋಜನೆಯಾದ ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆ ಹಾಗೂ ಉಚಿತ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಫಲಾನುಭವಿಗಳಿದ್ದಾರೆ. ೧೩೨ ಜನಸಂಖ್ಯೆ ಇರುವ ಈ ಗ್ರಾಮದ ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಯ ಜೊತೆಗೆ ಟ್ರ್ಯಕ್ಟರ್, ಮಿನಿಟೆಂಪೋ, ದ್ವಿಚಕ್ರ ವಾಹನಗಳ ಬಳಕೆಯಿದೆ.

ಶೇಂಗಾ ಮುಖ್ಯ ಬೆಳೆಯಾಗಿದ್ದು ರಾಗಿ, ಭತ್ತ, ಜೋಳ ಬೆಳೆಯುತ್ತಾರೆ. ತೆಂಗು, ಹುಣಸೆ, ಸೇವಂತಿಗೆ ಬೆಳೆಗಳಿವೆ. ಇವು ವ್ಯಾಪಾರಿ ಸರಕಾಗಿಯೂ ಇದ್ದು ಕುರಿ, ಮೇಕೆ ವ್ಯಾಪಾರವೂ ಇದೆ. ಮಹಿಳೆಯರು ಹೊಂಗೆಬೀಜ, ಹುಣಸೇಹಣ್ಣು, ಬಟನ್ಸ್ ಹೂ ಕಟ್ಟುವುದು ಮುಂತಾದ ಉಪಕಸುಬುಗಳಲ್ಲಿ ತೊಡಗಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಕಳ್ಳಂಬೆಳ್ಳ ಜಿಲ್ಲಾ ಪಂಚಾಯ್ತಿ, ತರೂರು ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರ ಹೊಂದಿದ್ದು ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ತರೂರು ಮೂಲಕ ಅಂಚೆ ಸಂಪರ್ಕ ಹೊಂದಿದೆ. ಶಾಲೆಗೆ ಗಂಜಲಗುಂಟೆ, ಹೊಸಮಲ್ಲನಹಳ್ಳಿ, ತರೂರುಗಳಿಗೆ ಹೋಗಬೇಕಾಗಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೮.೫% ಆಗಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧ ಪೆಟ್ಟಿಗೆ ಅಂಗಡಿ ಇದೆ. ಗ್ರಾಮದಲ್ಲಿ ಈರಕರಿಯಪ್ಪ, ಮುತ್ತಪ್ಪ ಹಾಗೂ ಈರಗಾಟಪ್ಪ ಪೌಳಿಗಳಿದ್ದು ದೀಪಾವಳಿಯ ೭ ದಿನಗಳು ದೇವರ ಉತ್ಸವವಿರುತ್ತದೆ. ಜನ್ನಿಗೆ, ಹಾಲು ಮೀಸಲು, ದೀಪ ಏರಿಸುವ, ದೀಪ ಇಳಿಸುವ ವಿಶೇಷ ಆಚರಣೆ ಈ ಸಂದರ್ಭದಲ್ಲಿದೆ. ದೀಪಾವಳಿಯ ಜೊತೆಗೆ ದಸರಾ, ಯುಗಾದಿ, ಶಿವರಾತ್ರಿ, ಗೌರಿ–ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ. ಹೊಸಮಲ್ಲನಹಳ್ಳಿ, ತರೂರು ಬಸ್ ಸಂಪರ್ಕವಿದ್ದು ಬ್ರಹ್ಮಸಂದ್ರ ಗೇಟ್, ಸಿರಾಕ್ಕೂ ರಸ್ತೆ ಸಂಪರ್ಕವಿದೆ.

ಮುತ್ತುರಾಯನಿಗೆ ಆರತಿ, ತರೂರು ದುರ್ಗಮ್ಮನಿಗೆ ಆರತಿ, ಬಲಿ, ಹರಕೆ ಸಂಪ್ರದಾಯ ವಿಶೇಷವಾಗಿ ಡಿಸೆಂಬರ್ ತಿಂಗಳಲ್ಲಿ ನಡೆಯುತ್ತದೆ.

## ಮೊದಲೂರು ರಂಗಾಪುರ

ಮೊದಲೂರು ರಂಗಾಪುರ ಗ್ರಾಮವು ಸಿರಾ ತಾಲ್ಲೂಕು ಸಿರಾ ಕಸಬಾ ಹೋಬಳಿ ಮದಲೂರು ಗ್ರಾಮ ಪಂಚಾಯ್ತಿ

ವ್ಯಾಪ್ತಿಗೆ ಸೇರಿದ ಮದಲೂರಿನ ಮಜರೆ ಗ್ರಾಮವಾಗಿದೆ. ಸಿರಾ–ಮದಲೂರು–ಬರಗೂರು ರಸ್ತೆ ಮಾರ್ಗದಲ್ಲಿ ತಿಮ್ಮಸಾಗರದಿಂದ ರಂಗಾಪುರ ಕ್ರಾಸ್‌ನಿಂದ ೧ ಕಿಮೀ ದೂರದಲ್ಲಿದೆ. ಇದರ ಭೌಗೋಳಿಕ ವ್ಯಾಪ್ತಿ ೨೦೦.೦೮ ಹೆಕ್ಟೇರ ಆಗಿದ್ದು ಬಯಲು ಪ್ರದೇಶವಾಗಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ಪೊದೆ, ಚಿಕ್ಕಚಿಕ್ಕ ಗಿಡ–ಮರಗಳ ಪ್ರದೇಶವಾಗಿದೆ. ಹಾಗಾಗಿ ಈ ಪರಿಸರದಲ್ಲಿ ಮೊಲ, ಜಿಂಕೆ, ನರಿ, ತೋಳ, ಮುಂಗುಸಿ ಕಂಡುಬರುತ್ತವೆ. ರಂಗನಾಥ ದೇವರ ಹೆಸರಿನಲ್ಲಿ ಈ ಗ್ರಾಮ ರಚನೆಯಾಗಿದೆ.

ಗ್ರಾಮದಲ್ಲಿ ಸಾಕುಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ನಾಯಿಯನ್ನು ಸಾಕಲಾಗಿದೆ. ಪಕ್ಷಿಗಳಾದ ಗಿಳಿ, ಗುಬ್ಬಚ್ಚಿ, ಗೂಬೆ, ಹದ್ದು, ಗೀಜುಗ, ಗರುಡ, ಕೋಗಿಲೆ, ಕಾಗೆ ಕಂಡುಬರುತ್ತದೆ.

ಬಿಸಿಲು ಹೆಚ್ಚು. ಮಳೆ ಕಡಿಮೆ. ವಾಡಿಕೆ ಮಳೆ ೪೩೪ ಮಿಮೀ ಆಗಿದ್ದು ಉಷ್ಣಾಂಶ ೩೮–೩೧೨ ಡಿಗ್ರಿ ಹಾಗೂ ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಸಾಮಾನ್ಯವಾಗಿರುತ್ತದೆ. ಕೃಷಿಗೆ ಸಹಜ ಮಳೆಯ ನೀರು ಸಾಲುವುದಿಲ್ಲ. ಹಾಗಾಗಿ ಉಪನೀರಿನ ಆಶ್ರಯಕ್ಕೆ ೧೨ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆ ಅಡಿಯಲ್ಲಿ ನೀರು ಪೂರೈಕೆ ಮಾಡಲಾಗಿದೆ. ಗ್ರಾಮದಲ್ಲಿ ೩ ಸಿಸ್ಟರ್ನ್‌ಗಳಿದ್ದು ೧ ಕೈಪಂಪು ಇದೆ.

ಸಾಮಾಜಿಕ ರಚನೆಯಲ್ಲಿ ಕುರುಬರು, ನಾಯಕರು ಸಮಪ್ರಮಾಣದಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುಂಚಿಟಿಗ, ಆದಿಕರ್ನಾಟಕ, ಬೋವಿ, ಲಿಂಗಾಯಿತ, ಮಡಿವಾಳ, ವಿಶ್ವಕರ್ಮ ಕಿರುಸಮುದಾಯವಾಗಿದೆ. ವಿವಿಧ ಪ್ರಕಾರಗಳ ೨೯ ಮನೆಗಳಿದ್ದು ಅವು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದವುಗಳಾಗಿವೆ. ೧೪೮ ಜನಸಂಖ್ಯೆ ಹೊಂದಿರುವ ಇಲ್ಲಿನ ಗೃಹಗಳಿಗೆ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕದ ಫಲಾನುಭವಿಗಳಿದ್ದಾರೆ. ೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುವವರಿದ್ದಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ವಾಹನ ಎತ್ತಿನ ಬಂಡಿ, ಆಧುನಿಕ ವಾಹನ ಟ್ರ್ಯಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ.

ಶೇಂಗಾ ಮುಖ್ಯ ಬೆಳೆ. ರಾಗಿ, ಭತ್ತ, ಅಲಸಂದೆ, ತೊಗರಿ ಆಹಾರ ಬೆಳೆಗಳು. ಸೂರ್ಯಕಾಂತಿ, ರೇಷ್ಮೆ, ಸೇವಂತಿಗೆ ಹೂ ತೋಟಗಾರಿಕೆ ಬೆಳೆಗಳು. ಶೇಂಗಾ ಹಾಗೂ ಹುಣಸೆಹಣ್ಣಿನ ವ್ಯಾಪಾರ ಇದೆ. ಹೆಂಗಸರು ಹೂ ಕಟ್ಟುವ, ಬೀಡಿ ಕಟ್ಟುವುದು ಇದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭಾ ಕ್ಷೇತ್ರ, ಮದಲೂರು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರಗಳಾಗಿದ್ದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೨೪ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೫೮.೭೧ ರಷ್ಟಿದೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧ ಪೆಟ್ಟಿಗೆ ಅಂಗಡಿ ಇದೆ. ಧಾರ್ಮಿಕವಾಗಿ ಆಂಜನೇಯ, ದುರ್ಗಮ್ಮ, ಕರಿಯಮ್ಮ ದೇವಾಲಯಗಳಿದ್ದು ಆಂಜನೇಯನಿಗೆ ಶ್ರಾವಣ ಮಾಸದಲ್ಲಿ ಆರತಿ, ಉತ್ಸವ ನಡೆದರೆ ದುರ್ಗಮ್ಮ, ಕರಿಯಮ್ಮ ದೇವರುಗಳಿಗೆ ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ. ಶ್ರೀ ಕೃಷ್ಣಾಚಾರ್ ಎಂಬುವವರು ಸಂಗೀತ ಕಲಾವಿದರಾಗಿದ್ದು ರಂಗನಿರ್ದೇಶನ ಮಾಡುತ್ತಾರೆ.

## ಕಲ್ಲುಕೋಟೆ ವಾರ್ಡ್ ನಂ.೧

ಕಲ್ಲುಕೋಟೆ ಸಿರಾ–ಅಮರಾಪುರ ಮುಖ್ಯ ರಸ್ತೆಯಲ್ಲಿ ಸಿರಾ ನಗರಕ್ಕೆ ಹೊಂದಿಕೊಂಡಂತೆ ಬಸ್ ನಿಲ್ದಾಣದಿಂದ ಉತ್ತರಕ್ಕೆ ೨.೫ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಒಟ್ಟು ೭೫೩.೪೮ ಹೆಕ್ಟೇರ್ ಭೂಪ್ರದೇಶವನ್ನು ಹೊಂದಿದೆ. ಪಶ್ಚಿಮಕ್ಕೆ ಗುಡ್ಡದಹಟ್ಟಿ, ದಕ್ಷಿಣಕ್ಕೆ ಮಂಜು ಪೀರ್ ಮಣಸ್ ಹಾಗೂ ಬೆಸ್ಕಾಂ ಕಾಲೋನಿಗಳು ಈ ಭೂವ್ಯಾಪ್ತಿಗೆ ಒಳಪಡುತ್ತವೆ. ೨೦೦೧ ರ ಜನಗಣತಿ ಆಧಾರದ ಮೇಲೆ ಕಲ್ಲುಕೋಟೆಯನ್ನು ಸಿರಾ ನಗರಸಭೆ ವ್ಯಾಪ್ತಿಗೆ ತರಲಾಗಿದೆ. ಪ್ರಸ್ತುತ ಈ ಗ್ರಾಮದ ಮಜರೆ ಗ್ರಾಮಗಳಾದ ನಾಗಜ್ಜಿಗುಡ್ಲು (ರಂಗನಾಥನಗರ) ಗುಡ್ಡದಹಟ್ಟಿ ಒಳಗೊಂಡಂತೆ ನಗರ ಸಭೆಯ ಒಂದನೇ ವಾರ್ಡ್ ಅನ್ನಾಗಿ ಗುರುತಿಸಲಾಗಿದೆ.

ಸಿರಾ ನಗರದ ಹೊರಗೆ ಇರುವ ಈ ಗ್ರಾಮ ಕಲ್ಲುಕೋಟೆಗಳಿಂದ ಆವೃತ್ತವಾಗಿರುವುದರಿಂದ ಕಲ್ಲುಕೋಟೆ ಎಂದು ಕರೆಯಲಾಗುತ್ತದೆ ಎಂದು ಗ್ರಾಮದ ಹಿರಿಕ ಲಿಂಗಣ್ಣ ಅಭಿಪ್ರಾಯಪಡುತ್ತಾರೆ. ಸಿರಾದ ಪಾಳೆಯಗಾರ

ರಂಗಪ್ಪನಾಯಕನ ಆಳ್ವಿಕೆಯ ಕಾಲ ಕ್ರಿ.ಶ.೧೬೧೨ ರ ಸುಮಾರಿನಲ್ಲಿ ಸಿರಾ ನಗರದ ಸುತ್ತ ಕೋಟೆ ನಿರ್ಮಾಣವಾಗಿದ್ದು ಅದರ ವ್ಯಾಪ್ತಿ ಈಗಿನ ಕಲ್ಲುಕೋಟೆಯ ತನಕ ವಿಸ್ತಾರವಾಗಿದ್ದ ಕಾರಣದಿಂದ ಕಲ್ಲುಕೋಟೆ ಎಂದು ಕರೆಯಲಾಗಿದೆ ಎಂಬ ಅಭಿಪ್ರಾಯವೂ ಇದೆ. ಪ್ರಸ್ತುತ ಕೋಟೆ ನಾಶವಾಗಿದ್ದು ಅವರ ಅವಶೇಷ ಗ್ರಾಮದಲ್ಲಿ ಕಂಡುಬರುತ್ತದೆ.

ಊರಬಾಗಿಲಲ್ಲೇ ದಂಡಿನ ಮಾರಮ್ಮ ದೇವಾಲಯವಿದ್ದು ಇದು ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾದುದೆಂದು ಹೇಳಲಾಗುತ್ತಿದೆ. ಆದಿ ಕರ್ನಾಟಕ ಜನಾಂಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ಉಪ್ಪಾರ, ಬೇಡ, ಉಪ್ಪಿನಕೊಳಗದ ಒಕ್ಕಲಿಗ, ಗೊಲ್ಲರು, ರಜಪೂತರು, ಕುರುಬರು, ವೀರಶೈವ, ಕುಂಚಿಟಿಗ, ಈಡಿಗ, ಕುಂಬಾರ, ಮಡಿವಾಳ ಗ್ರಾಮದ ಸಣ್ಣ ಸಮುದಾಯವಾಗಿದೆ. ಒಟ್ಟು ೧೧೨ ಮನೆಗಳಿವೆ.

ಬಿಳಿಮರಳು ಮಿಶ್ರಿತ ಮಣ್ಣನ್ನು ಹೊಂದಿರುವ ಈ ಭೂಭಾಗದಲ್ಲಿ ಸರಾಸರಿ ಮಳೆ ಪ್ರಮಾಣ ೫೫೭ ಮಿಮೀ ಉಷ್ಣಾಂಶ, ೩೪ ರಿಂದ ೩೮ ಡಿಗ್ರಿ, ಚಳಿಯು ೯ ರಿಂದ ೧೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ, ನಾಯಿ, ಕೋಳಿ ಸಾಕುಪ್ರಾಣಿಗಳಾಗಿದ್ದು ಈ ಪರಿಸರದಲ್ಲಿ ಕಾಡುಹಂದಿ, ಮೊಲ, ನರಿ ಮೊದಲಾದ ಕಾಡುಪ್ರಾಣಿಗಳು ಕಂಡುಬರುತ್ತವೆ. ಈ ಗ್ರಾಮದ ಉತ್ತರಕ್ಕೆ ಸುವರ್ಣಮುಖಿ ಹಳ್ಳ ಹರಿಯುತ್ತಿದ್ದು ಇದರ ಮೇಲೆ ಬ್ರಿಟಿಷರ ಕಾಲದಲ್ಲಿ ಗಾರೆಗಚ್ಚಿನ ಮೇಲು ಸೇತುವೆ ನಿರ್ಮಿಸಿ ಸಿರಾ–ಅಮರಾಪುರ ಮುಖ್ಯ ರಸ್ತೆಯನ್ನು ನಿರ್ಮಿಸಲಾಗಿದೆ. ಈ ಗ್ರಾಮಕ್ಕೆ ಕುಡಿಯುವ ನೀರಿಗೆ ಸಿರಾ ದೊಡ್ಡಕೆರೆಯಿಂದ ಹೇಮಾವತಿ ನೀರನ್ನು ಕೊಳಾಯಿ ಮೂಲಕ ಸರಬರಾಜು ಮಾಡಲಾಗುತ್ತದೆ. ಉತ್ತರಕ್ಕೆ ಜಯಮಂಗಲಿ ಹಳ್ಳವಿದ್ದು ಮಳೆಗಾಲದಲ್ಲಿ ಮಾತ್ರ ನೀರಿನಿಂದ ಕೂಡಿದ್ದು ನಂತರ ಉತ್ಕೃಷ್ಟವಾದ ಮರಳನ್ನು ಕಟ್ಟಡ ನಿರ್ಮಾಣದ ಕೆಲಸಕ್ಕೆ ಸಾಗಿಸಲಾಗುತ್ತದೆ. ಈ ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ ಮನೆಗಳಿದ್ದು ಗುಡಿಸಲುಗಳೂ ಇವೆ. ಜೊತೆಗೆ ಹೆಂಚಿನ ಮನೆಗಳು ಅಧಿಕ. ಜನತಾ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಮನೆಗಳೂ ಇವೆ. ಗ್ರಾಮದಲ್ಲಿ ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳು ೭೨ ರ ಸಂಖ್ಯೆಯಲ್ಲಿದ್ದಾರೆ.

ಜ್ವರ, ಕೆಮ್ಮು, ಅಸಿಡಿಟಿ ಈ ಗ್ರಾಮದ ಸಾಮಾನ್ಯ ಖಾಯಿಲೆಗಳಾಗಿವೆ. ಈ ರೋಗಗಳಿಗೆ ಜನರು ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ ಸಿರಾ ಸಾರ್ವಜನಿಕ ಆಸ್ಪತ್ರೆಗೆ ಹೋಗುತ್ತಾರೆ.

ರಾಗಿಮುದ್ದೆ, ಅನ್ನ ಇಲ್ಲಿನ ಮುಖ್ಯ ಆಹಾರವಾಗಿದ್ದು ರೊಟ್ಟಿ, ದೋಸೆ, ಉಪ್ಪಿಟ್ಟು ಬಳಸುವವರಿದ್ದಾರೆ ವಿಶೇಷವಾಗಿ ಬಾಡೂಟ ಹಾಗೂ ಹೋಳಿಗೆ, ಪಾಯಸದ ಊಟವೂ ಇದೆ.

ಎತ್ತಿನ ಬಂಡಿ ಸಾಂಪ್ರದಾಯಿಕ ವಾಹನವಾದಂತೆ ಟೆಂಪೋ, ಲಾರಿ, ಕಾರು, ಟ್ರ್ಯಾಕ್ಟರ್, ಸ್ಕೂಟರ್ ಬಳಕೆಯಲ್ಲಿವೆ. ರಾಗಿ, ಶೇಂಗಾ, ಹತ್ತಿ, ಭತ್ತ ಮುಖ್ಯ ಬೆಳೆಗಳು. ಹತ್ತಿ, ದಾಳಿಂಬೆ, ತೆಂಗು, ತರಕಾರಿ ಬೆಳೆಗಳು ಪ್ರಮುಖ ವಾಣಿಜ್ಯ ಬೆಳೆಗಳಾಗಿವೆ. ಒಂದು ಅಂಗನವಾಡಿ ಕೇಂದ್ರ, ಕಿರಿಯ ಪಾಠಶಾಲೆಗಳಿದ್ದು ೪ ಜನ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಪೊಲೀಸ್ ಇಲಾಖೆಯ ಡಿವೈಎಸ್‌ಪಿ ನಾಗರಾಜ್ ಸೇರಿದಂತೆ ಮೂವರು ಸರ್ಕಾರಿ ನೌಕರರು ಈ ಗ್ರಾಮದವರು.

ಬೀಡಿ ಕೈಗಾರಿಕೆ, ನರ್ಸರಿ ಬೆಳೆಸುವುದು (ಸಸ್ಯ), ದಾಳಿಂಬ್ ಸಂಗ್ರಹ, ಅಡಿಕೆ ಸುಲಿಯುವುದು ಉಪಕಸುಬಾಗಿದೆ. ವೃದ್ಧಾಪ್ಯವೇತನ, ವಿಧವಾ ವೇತನ, ಅಂಗವಿಕಲ ವೇತನದ ಫಲಾನುಭವಿಗಳಿದ್ದು ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಹಾಗೂ ಶೌಚಾಲಯ ಸೌಲಭ್ಯ ಹೊಂದಿದೆ. ಗ್ರಾಮದಲ್ಲಿ ದಂಡಿನ ಮಾರಮ್ಮ ಹಾಗೂ ದುರ್ಗಮ್ಮನ ಜಾತ್ರೆಯನ್ನು ಊರಹಬ್ಬವಾಗಿ ವಿಜೃಂಭಣೆಯಿಂದ ಆಚರಿಸುತ್ತಾರೆ. ಊರ ಹೊರಗಿರುವ ಗುಡ್ಡದರಂಗಪ್ಪನ ಜಾತ್ರೆ ಒಂದು ವಾರದ ಕಾಲ ನಡೆಯುತ್ತದೆ.

ಈ ಗ್ರಾಮದ ಶ್ರೀ ದಶರಥ ಪತ್ರಕರ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಯುಗಾದಿ, ಮಹಾನವಮಿ, ಕೊಂತೆಮ್ಮ–ಗೌರಮ್ಮರ ಹಬ್ಬ ಉತ್ಸುಕತೆಯಿಂದ ನಡೆಯುತ್ತದೆ. ಈ ಗ್ರಾಮದಲ್ಲಿ ೧೬ ಮತ್ತು ೧೮ನೇ ಶತಮಾನಕ್ಕೆ ಸೇರಿದ ೨ ಶಾಸನಗಳು ಇದ್ದು ಮೈಲಾರಲಿಂಗ ದೇವಸ್ಥಾನವನ್ನು ನಾಗಣ್ಣಗೌಡ ಕಟ್ಟಿಸಿದ ವಿವರ, ಗ್ರಾಮದ ಲಿಂಗನಾಯ್ಕನ ಹೊಲದ ಶಾಸನ ೧೨೨ ರ ಪ್ರಕಾರ ಈ ಹೊಲವನ್ನು ಮೈಲಾರಲಿಂಗನ ಮಾನ್ಯ ಎಂದು ಉಲ್ಲೇಖಿಸಿದೆ.

## ಜ್ಯೋತಿನಗರ ವಾರ್ಡ್ ನಂ. ೨

ಜ್ಯೋತಿನಗರ ಸಿರಾ ನಗರಸಭಾ ವ್ಯಾಪ್ತಿಯ ವಾರ್ಡ್ ನಂ. ೨ ಕ್ಕೆ ಸೇರಿದೆ. ಸಿರಾ ನಗರ ಸಭೆಯಿಂದ ಉತ್ತರಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಈ ಭಾಗದ ವಿದ್ಯುತ್ ಇಲಾಖೆ ಕಾರ್ಯ ನಿರ್ವಹಿಸುತ್ತಾ ಪವರ್ ಹೌಸ್, ನಿರ್ಮಾಣವಾಗಿರುವುದರಿಂದ ಜ್ಯೋತಿ(ಬೆಳಕಿನ) ನಗರ ಎಂದು ಕರೆಯಲಾಗಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿರುವ ಜ್ಯೋತಿನಗರ ಬಡಾವಣೆ ಇದೀಗ ಸಂಪೂರ್ಣವಾಗಿ

ಬದಲಾಗಿದೆ. ಇದರ ವ್ಯಾಪ್ತಿ ಎರಡು ಬಡಾವಣೆಗಳಲ್ಲಿ ಹಂಚಿ ಹೋಗಿದೆ. ಸಿರಾ ತಾಲ್ಲೂಕು ಕಚೇರಿ, ಕೋರ್ಟ್, ಕೆಇಬಿ ಕಚೇರಿ, ತಾಲ್ಲೂಕು ಪಂಚಾಯಿತಿ ಕಚೇರಿ, ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಿರಾ–ಅಮರಾ ಪುರ ರಸ್ತೆಯ ಎಡಭಾಗದಲ್ಲಿ ಕೋಲ್ಲಾಪುರದಮ್ಮ ದೇವಸ್ಥಾನದ ಮಾರ್ಗದವರೆಗೆ ಇದರ ವ್ಯಾಪ್ತಿ ಹರಡಿಕೊಂಡಿದೆ. ಈ ಪರಿಸರದಲ್ಲಿ ಎತ್ತರಕ್ಕೆ ತೋಟಸಾಲು, ಕೊರಕಲು ಹಳ್ಳ ಇರುವುದರಿಂದ ಈ ಭಾಗದಲ್ಲಿ ಮೊಲ, ಕೋತಿ, ನರಿ, ಮುಂಗುಸಿ, ತೋಳ, ಇಲಿ, ಹೆಗ್ಗಣ, ಮುಂಗುಸಿ ಕಂಡು ಬರುತ್ತವೆ. ಸಾಕು ಪ್ರಾಣಿಗಳಾಗಿ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ನಾಯಿ, ಬೆಕ್ಕು, ಗೂಬೆ, ಪಕ್ಷಿಗಳಾದ ಗರುಡ, ಹದ್ದು, ಬೆಳವ, ಕೌಜಲಗ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳಿವೆ.,

ಇಲ್ಲಿನ ಹವಾಮಾನ ಉಷ್ಣಾಂಶ ಅಧಿಕವಾಗಿದೆ. ಬಿಸಿ ತಾಪಮಾನದಿಂದ ಕೂಡಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಶೇ. ೬೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮–೪೦ಂ ಸೆಂ.ರಷ್ಟು ಇದ್ದು , ಚಳಿಯು ೧೨ಂ ಸೆಂ. ಇರುತ್ತದೆ. ಕುಡಿಯಲು ನಗರ ಸಭೆಯಿಂದ ನೀರು ಪೂರೈಸಲಾಗುತ್ತದೆ. ಕೆಇಬಿ ಕಾಲೋನಿಗೆ ಪ್ರತ್ಯೇಕ ಕೊಳವೆ ಬಾವಿ ಮೂಲಕ ನೀರು ಪೂರೈಕೆಯಾಗುತ್ತಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು, ಕುರುಬರು, ಸಮ ಪ್ರಮಾಣದಲ್ಲಿದ್ದು, ದೊಡ್ಡ ಸಮುದಾಯವಾಗಿದೆ. ಗೊಲ್ಲರು, ಅಕ್ಕಸಾಲಿಗರು, ಬಲಿಜಿಗ, ಆದಿಕರ್ನಾಟಕ, ಆದಿದ್ರಾವಿಡ, ಮುಸ್ಲಿಂ, ಬ್ರಾಹ್ಮಣ, ವೈಶ್ಯರು, ಲಂಬಾಣಿ, ಕುಂಬಾರ, ನಾಯಕ ಸಮುದಾಯಗಳು ಕಿರು ಸಮುದಾಯವಾಗಿದೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು ಸೇರಿ ಒಟ್ಟು ೭೪೩ ಮನೆಗಳಿದ್ದು, ಎಲ್ಲಾ ಮನೆಗಳಲ್ಲಿಯೂ ಶೌಚಾಲಯದ ಬಳಕೆಯಿದೆ. ೧೭೯೪ ಜನಸಂಖ್ಯೆಯನ್ನು ಹೊಂದಿದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಸಾಂಪ್ರದಾಯಿಕ ವಾಹನಗಳು ಇರುವುದಿಲ್ಲ. ಲಾರಿ, ಟೆಂಪೋ, ಕಾರು, ಸ್ಕೂಟರ್ ಬಳಕೆಯಲ್ಲಿದೆ. ಬಹುತೇಕ ಉದ್ಯೋಗದಾತರೇ ಆಗಿರುವುದರಿಂದ ಇಲ್ಲಿ ರೈತರ ಸಂಖ್ಯೆ ಕಡಿಮೆ. ಅಲ್ಪ ಸ್ವಲ್ಪ ಜಮೀನು ಹೊಂದಿರುವ ಪರ ಊರಿನವರು ರಾಗಿ, ಶೇಂಗಾ, ಹತ್ತಿ ಬೆಳೆಯುತ್ತಾರೆ.

ಬಡಾವಣೆಯಲ್ಲಿ ಪೋಲೀಸ್, ಶಿಕ್ಷಣ ಇಲಾಖೆ, ವೈದ್ಯಕೀಯ, ಸಾರಿಗೆ, ಆರೋಗ್ಯ, ಬೆಸ್ಕಾಂ ಇಲಾಖೆಗೆ ಸೇರಿದ ೩೮೬ ಜನ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರ ವಿಧಾನಸಭೆ, ಚಿತ್ರದುರ್ಗ ಲೋಕಸಭೆ ಸಿರಾ ನಗರದ ಸಭಾ ಕ್ಷೇತ್ರ ಹೊಂದಿದ್ದು, ಆರ್. ಉಗ್ರೇಶ್ ಈ ಭಾಗದ ಸದಸ್ಯರಾಗಿದ್ದು, ತಹಸೀಲ್ದಾರ್, ಬೆಸ್ಕಾಂ, ಲೋಕೋಪಯೋಗಿ, ಆರೋಗ್ಯ, ರಕ್ಷಣೆ ಸಿರಾ ನಗರದಲ್ಲಿ ಇದೆ. ಸಿರಾದಿಂದ ಚೇಳೂರು, ಚಿತ್ರದುರ್ಗ, ಹಿಂದೂಪುರ, ಮಂಗಳೂರು ಕಡೆಗೆ ರಸ್ತೆ ಸಂಪರ್ಕವಿದೆ. ಲೋಕ ಅದಾಲತ್ ಬಾರ್, ಅಸೋಸಿಯೇಷನ್ ರಕ್ಷಣೆಯಲ್ಲಿ ಕಾನೂನು ನೆರವು ಮಂಡಳಿ, ನ್ಯಾಯಾಲಯದ ಅಡಿಯಲ್ಲಿ ದೊರೆಯುತ್ತದೆ. ಈ ಬಡಾವಣೆಯಲ್ಲಿ ಭೂ ಅಭಿವೃದ್ಧಿ ಬ್ಯಾಂಕ್, ಸಹಕಾರಿ ಉಗ್ರಾಣವಿದೆ.

ಗ್ರಾಮದಲ್ಲಿ ೧೦ ಸ್ತ್ರೀ ಶಕ್ತಿ ಸಂಘಗಳಿವೆ. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಕಾರ ಸಂಘವಿದೆ. ಒಂದು ಅಂಗನವಾಡಿ ಕೇಂದ್ರವಿದೆ. ಸೇಂಟ್ ಆನ್ ಆಂಗ್ಲ ಪ್ರೌಢ, ಪ್ರಾಥಮಿಕ ಶಾಲೆ, ಜ್ಞಾನ ಜ್ಯೋತಿ ವಿದ್ಯಾಮಂದಿರ, ಪ್ರಾಥಮಿಕ ಹಂತ, ಕಾಳಿದಾಸ ಪ್ರೌಢಶಾಲೆ, ಈ ವ್ಯಾಪ್ತಿಯಲ್ಲಿ ಬರುತ್ತಿದ್ದು, ಕಾಳಿದಾಸ ಪ್ರೌಢಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯ, ಉಚಿತ ಪಠ್ಯಪುಸ್ತಕ, ಬಟ್ಟೆ, ಸೈಕಲ್ ವ್ಯವಸ್ಥೆ ಇದೆ. ಉಳಿದ ಶಾಲೆಯಲ್ಲಿ ಶೌಚಾಲಯ, ಕಾಂಪೌಂಡು, ವ್ಯವಸ್ಥಿತವಾದ ಕೊಠಡಿ ಸೌಲಭ್ಯವಿದೆ. ಇಲ್ಲಿನ ಸಾಕ್ಷರತಾ ಪ್ರಮಾಣ ಶೇ. ೮೩.೬ ರಷ್ಟಿದೆ. ೨ ಖಾಸಗಿ ಕ್ಲಿನಿಕ್‌ಗಳಿವೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ವಿಧವಾ ವೇತನ, ಸಂಧ್ಯ ಸುರಕ್ಷಾ ಫಲಾನುಭವಿಗಳಿದ್ದಾರೆ. ೭ ಹೋಟೆಲ್‌ಗಳು, ೨೩ ಚಿಲ್ಲರೆ ಅಂಗಡಿ, ಗ್ಯಾರೇಜ್, ಪುಸ್ತಕದ ಅಂಗಡಿ, ವೈನ್‌ಷಾಪ್‌ವಿದೆ.

ಗ್ರಾಮದಲ್ಲಿ ಶ್ರೀರಾಮ, ದುರ್ಗಮ್ಮ, ಚಾಮುಂಡಿ ದೇವಾಲಯಗಳಿದ್ದು, ಒಂದು ಚರ್ಚ್, ಹಿಂದುಗಳ ರುದ್ರಭೂಮಿ, ಕಲ್ಯಾಣಿ, ಒಂದು ವಿದ್ಯುತ್ ಚಿತಾಗಾರ, ಇದೇ ವ್ಯಾಪ್ತಿಯಲ್ಲಿ ಬರುತ್ತವೆ.

ಬೆಸ್ಕಾಂ, ತಹಶೀಲ್ದಾರ ಕಛೇರಿ, ತಾಲ್ಲೂಕು ಪಂಚಾಯಿತಿ, ಕೋರ್ಟ್, ಈ ಬಡಾವಣೆಯ ಮುಖ್ಯ ವ್ಯಾಪ್ತಿಗೆ ಸೇರುತ್ತದೆ, ಲೇಖಕ ಆರ್. ತಿಪ್ಪೇಸ್ವಾಮಿ ಕಲಾವಿದರಾದ ಗೋವಿಂದರಾಜು, ಡಾ.ಮುತ್ತುರಾಜು, ಕೆಇಬಿ ಹೊನ್ನೇಶಪ್ಪ, ಲಕ್ಷ್ಮಣ ಇದೇ ಬ್ಲಾಕ್‌ನಲ್ಲಿ ನೆಲೆಸಿದ್ದಾರೆ. ಲೇಖಕರು ಹಾಗೂ ಮಾಜಿ ಕಸಾಪ ಅಧ್ಯಕ್ಷ ಆರ್.ವಿ. ಪುಟ್ಟರಾಮಣ್ಣ ಇದೇ ಬಡಾವಣೆಯ ನಿವಾಸಿಯಾಗಿದ್ದಾರೆ. ಪತ್ರಕರ್ತರಾದ ದಶರಥ ಹಾಗೂ ಸಿ.ಟಿ.ಎಸ್. ಗೋವಿಂದಪ್ಪ ಇದೇ ಬಡಾವಣೆಯಲ್ಲಿ

ವಾಸಿಸುತ್ತಿದ್ದಾರೆ. ರೂಪೇಶ್, ಕೃಷ್ಣಯ್ಯ ಲೇಖಕರಾಗಿದ್ದಾರೆ. ಬಿ.ಕೆ. ಮಂಜುನಾಥ್ ಇಂಜಿನಿಯರ್ ಆಗಿದ್ದು ಮಾಹಿತಿ ಸಂಪನ್ಮೂಲ ಜಾಗೃತಿ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ.

## ಜ್ಯೋತಿನಗರ ವಾರ್ಡ್ ನಂ. ೩

ಜ್ಯೋತಿನಗರ ಸಿರಾ ನಗರಸಭೆಯಿಂದ ಉತ್ತರಕ್ಕೆ ಅರ್ಧ ಕಿ.ಮೀ. ದೂರದಲ್ಲಿದೆ. ಸಿರಾ–ಅಮರಾಪುರ ಮುಖ್ಯ ರಸ್ತೆಯ ಬಲಭಾಗದಿಂದ ಪ್ರವಾಸಿ ಮಂದಿರ, ಟೆಲಿಫೋನ್ ಎಕ್ಸ್‌ಛೇಂಜ್ ಕಛೇರಿಯ ಹಿಂಭಾಗದ ಜ್ಯೋತಿನಗರ ಬನ್ನಿ ನಗರ ಮುಖ್ಯ ರಸ್ತೆಯ ಬಲ ತುದಿಯಿಂದ ಸಿರಾ ಕಲ್ಲು ಕೋಟೆ ಬಡಾವಣೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಡ್ಡರಸ್ತೆಯವರೆಗೆ ಜ್ಯೋತಿನಗರ ಬಡಾವಣೆ ಇದೆ.

ಮೊದಲಿಗೆ ವಿದ್ಯುತ್ ಕಚೇರಿ, ಪವರ್ ಹೌಸ್ ಇರುವುದರಿಂದ ಜ್ಯೋತಿನಗರ ಎಂದು ಕರೆಯಲಾಯಿತು. ನಂತರ ಒಂದೇ ಜ್ಯೋತಿ ನಗರ ವಿಸ್ತಾರವಾಗಿ ಬೆಳೆದು ಎರಡು ವಾರ್ಡ್‌ಗಳಾಗಿ ವಿಂಗಡಣೆಯಾಗಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಸಮತಟ್ಟಾದ ಭೂ ಪ್ರದೇಶವಾಗಿದೆ. ಈ ವಾರ್ಡಿನ ಬಲತುದಿಗೆ ತೋಟಗಳ ಸಾಲುಗಳಿವೆ. ಹಾಗಾಗಿ ಈ ಪರಿಸರದಲ್ಲಿ ಮೊಲ, ಕೋತಿ, ನರಿ, ಮುಂಗುಸಿ, ತೋಳ, ಇಲಿ, ಹೆಗ್ಗಣ, ಮುಂಗುಸಿ ಕಂಡು ಬರುತ್ತವೆ. ಸಾಕು ಪ್ರಾಣಿಗಳಾಗಿ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ನಾಯಿ, ಬೆಕ್ಕು, ಗೂಬೆ, ಪಕ್ಷಿಗಳಾದ ಗರುಡ, ಹದ್ದು, ಬೆಳವ, ಕೌಜಲಗ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳಿವೆ.,

ಇಲ್ಲಿನ ಹವಾಮಾನ ಉಷ್ಣಾಂಶ ಅಧಿಕವಾಗಿದೆ. ಬಿಸಿ ತಾಪಮಾನದಿಂದ ಕೂಡಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಶೇ. ೬೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೭–೩೯೦ ಸೆಂ.ರಷ್ಟು ಇದ್ದು, ಚಳಿಯು ೧೨೦ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೩೧೪ ಕೊಳಾಯಿಗಳಲ್ಲಿ ಮನೆಗಳಿಗೂ ನೀರು ಸರಬರಾಜು ಮಾಡಲಾಗುತ್ತಿದೆ. ಒಂದು ಹಳೆಯ ಬಾವಿ ಇದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು, ಕುರುಬರು, ಗೊಲ್ಲರು, ಆದಿಕರ್ನಾಟಕ, ವಿಶ್ವಕರ್ಮ, ಮುಸ್ಲಿಂ, ಬ್ರಾಹ್ಮಣರು ಸಮುದಾಯದವರಿದ್ದಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು ಸೇರಿ ಒಟ್ಟು ೮೧೪ ಮನೆಗಳಿದ್ದು, ೨೫೬೦ ಜನಸಂಖ್ಯೆಯನ್ನು ಹೊಂದಿದ್ದು, ೯೫೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಲಾರಿ, ಟೆಂಪೋ, ಕಾರು, ಸ್ಕೂಟರ್ ಬಳಕೆಯಲ್ಲಿದೆ. ಕಡಿಮೆ ಸಂಖ್ಯೆಯ ರೈತರಿದ್ದು, ತೆಂಗು, ಅಡಿಕೆ ಬೆಳೆಯುತ್ತಾರೆ.

ಗ್ರಾಮದಲ್ಲಿ ಪೋಲೀಸ್, ಶಿಕ್ಷಣ ಇಲಾಖೆ, ವೈದ್ಯಕೀಯ, ಸಾರಿಗೆ, ಆರೋಗ್ಯ, ಬೆಸ್ಕಾಂ ಹಾಗೂ ಪ್ರಾಂಶುಪಾಲ ಕೃಷ್ಣಮೂರ್ತಿ, ಪ್ರಾಧ್ಯಾಪಕರು ಸೇರಿದ ೧೬೦ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವೈದ್ಯರಾದ ಡಾ. ಕೆ.ರಾಮಕೃಷ್ಣ, ಡಾ. ಶಿವಣ್ಣ, ಡಾ. ಎಸ್.ಮಂಜುನಾಥ್ ಇದೇ ಬಡಾವಣೆ ಯಲ್ಲಿ ನೆಲೆಸಿದ್ದಾರೆ. ಖಾಸಗಿ ವಕೀಲರಾದ ಬೇವಿನಹಳ್ಳಿ ಚಂದ್ರಶೇಖರ್, ದೊಡ್ಡ ಮಲ್ಲಯ್ಯ ವಕೀಲರು ಇಲ್ಲಿ ನೆಲೆಸಿದ್ದಾರೆ. ಅಬಕಾರಿ ಪೋಲೀಸ್ ಕಛೇರಿ ಇಲ್ಲಿದೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭೆ, ಚಿತ್ರದುರ್ಗ ಲೋಕಸಭೆ ಕ್ಷೇತ್ರಗಳು ಈ ಬಡಾವಣೆಗೆ ಸೇರಿವೆ. ಲೋಕೋಪಯೋಗಿ, ಅಂಚೆ, ತಾಲ್ಲೂಕು ಕಛೇರಿ, ತಾಲ್ಲೂಕು ಕಚೇರಿ, ಪೋಲೀಸ್, ಕೋರ್ಟ್ ಸಿರಾ ನಗರದ ವಾರ್ಡ್ ೨ ರ ವ್ಯಾಪ್ತಿಗೆ ಸೇರುತ್ತವೆ. ಈ ವಾರ್ಡಿನ ಜನರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಸಿರಾ –ಅಮರಾಪುರ ಅಂತರಾಜ್ಯದ ರಸ್ತೆ ಸಂಪರ್ಕವಿದೆ. ಒಂದು ನ್ಯಾಯ ಬೆಲೆ ಅಂಗಡಿ ಇದೆ.

ಎಟಿಎಂ (ಕೆನರಾ ಬ್ಯಾಂಕ್), ಗ್ರಾಮದಲ್ಲಿ ೬ ಸ್ತ್ರೀ ಶಕ್ತಿ ಸಂಘಗಳಿವೆ. ೪ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಕಾರ ಸಂಘವಿದೆ. ಒಂದು ಅಂಗನವಾಡಿ ಕೇಂದ್ರವಿದೆ. ಡಾಲ್ಫಿನ್ ಶಿಶುಕೇಂದ್ರ, ಒಂದು ಪ್ರಾಥಣಿಕ ಪಾಠಶಾಲೆಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯ, ಉಚಿತ ಪಠ್ಯಪುಸ್ತಕ, ಬಟ್ಟೆ ವ್ಯವಸ್ಥೆ ಇದೆ. ಇಲ್ಲಿನ ಸಾಕ್ಷರತಾ ಪ್ರಮಾಣ ಶೇ. ೮೪.೬ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ವಿಧವಾ ವೇತನ, ಸಂಧ್ಯ ಸುರಕ್ಷಾ ಫಲಾನುಭವಿಗಳಿದ್ದಾರೆ. ೨ ಡಾಬಾ ಹೋಟೆಲ್ ಸೇರಿ ೬ ಹೋಟೆಲ್ ಗಳು, ೧೪ ಚಿಲ್ಲರೆ ಅಂಗಡಿಗಳಿವೆ. ಒಂದು ಪತಂಜಲಿ ಯೋಗ ಕೇಂದ್ರವಿದೆ.

ಗ್ರಾಮದಲ್ಲಿ ಕೊಲ್ಲಾಪುರದಮ್ಮ, ನಾಗರಕಟ್ಟೆ, ಗಣೇಶ ಮಂದಿರ ದೇವಾಲಯಗಳಿದ್ದು, ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ.

ಹಿರಿಯ ಹರಿಕಥಾ ವಿದ್ವಾಂಸ ತಿಪ್ಪೇರುದ್ರಾರಾಧ್ಯ, ಲೇಖಕರಾದ ಡಿ. ಕೃಷ್ಣಮೂರ್ತಿ, ವೈ. ನರೇಶ್ ಬಾಬು, ಡಾ.ಎ.ಬಿ. ಬಾಳಪ್ಪ ಈ ಬಡಾವಣೆಯಲ್ಲಿದ್ದಾರೆ.

## ಜ್ಯೋತಿನಗರ ಕೊಳಚೆ ಪ್ರದೇಶ ವಾರ್ಡ್ ನಂ. ೪

ವಾರ್ಡ್ ನಂ. ೪ ರಲ್ಲಿ ಬರುವ ಜ್ಯೋತಿನಗರ ಕೊಳಚೆ ಪ್ರದೇಶ ಸಿರಾ ನಗರಸಭಾ ವ್ಯಾಪ್ತಿಯ ಉತ್ತರಕ್ಕೆ ಅರ್ಧ ಕಿ.ಮೀ. ದೂರದಲ್ಲಿದೆ. ಜ್ಯೋತಿನಗರ, ಬನ್ನಿನಗರ, ರಸ್ತೆಯ ದೂರವಾಣಿ ಕೇಂದ್ರ ಕಛೇರಿಯ ಹಿಂಭಾಗದಿಂದ ಆರಂಭಗೊಂಡು, ಉತ್ತರಕ್ಕೆ ನೇರವಾಗಿ ಕೊಳಚೆ ಪ್ರದೇಶದ ಪೂರ್ಣಭಾಗ್ಯ ಪತಂಜಲಿ ಯೋಗ ಮಂದಿರದ ಹಿಂಭಾಗದ ನ್ಯಾಯಬೆಲೆ ಅಂಗಡಿ ಒಳಗೊಂಡಂತೆ ಭವಾನಿ ನಗರದ ವಾರ್ಡಿನ ತನಕ, ಪೂರ್ವಕ್ಕೆ ಕಾರೇಹಳ್ಳಿ ರಂಗನಾಥ ದೇವಸ್ಥಾನದವರೆಗೆ  ಇದರ ವ್ಯಾಪ್ತಿ ಚಾಚಿಕೊಂಡಿದೆ.

ಕೆಂಪು ಮರಳು, ಕಪ್ಪು ಮಣ್ಣಿನಿಂದ ಕೂಡಿರುವ ಈ ಪ್ರದೇಶದಲ್ಲಿ ಉತ್ತರ ದಕ್ಷಿಣಕ್ಕೆ ದೊಡ್ಡ ಚರಂಡಿ ಹರಿಯುತ್ತದೆ. ಅದನ್ನು ಹೊರತು ಪಡಿಸಿದರೆ, ಇನ್ಯಾವುದೇ ಹಳ್ಳಗಳು ಇರುವುದಿಲ್ಲ. ಈ ಪರಿಸರದಲ್ಲಿ ಪೂರ್ವ, ಉತ್ತರಕ್ಕೆ ತೋಟಗಳ ಸಾಲು, ಗಿಡ, ಮರಗಳು ಇರುವುದರಿಂದ ಈ ಪರಿಸರದಲ್ಲಿ ಮೊಲ, ಕೋತಿ, ನರಿ, ಮುಂಗುಸಿ, ತೋಳ, ಇಲಿ, ಹೆಗ್ಗಣ, ಮುಂಗುಸಿ ಕಂಡು ಬರುತ್ತವೆ. ಸಾಕು ಪ್ರಾಣಿಗಳಾಗಿ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ನಾಯಿ, ಬೆಕ್ಕು, ಗೂಬೆ, ಪಕ್ಷಿಗಳಾದ ಗರುಡ, ಹದ್ದು, ಬೆಳವ, ಕೌಜಲಗ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳಿವೆ. ಕೋಳಿ ಹಾಗೂ ಮೊಟ್ಟೆಯನ್ನು ಮಾಂಸದ ಬಳಕೆಗಾಗಿ ಸಾಕಲಾಗುತ್ತದೆ.

ಇಲ್ಲಿನ ಹವಾಮಾನ ಉಷ್ಣಾಂಶ ಅಧಿಕವಾಗಿದೆ. ಬಿಸಿ ತಾಪಮಾನದಿಂದ ಕೂಡಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಶೇ. ೬೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೭–೩೯ಂ ಸೆಂ.ರಷ್ಟು ಇದ್ದು, ಚಳಿಯು ೧೨ಂ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದ್ದು, ಉಳಿದಂತೆ ಕುಂಚಿಟಿಗರು, ಕುರುಬರು, ಗೊಲ್ಲರು,  ಬಣಜಿಗರು, ಮೇದರು, ಕೊರವರು, ಲಂಬಾಣಿ, ಯಳವರು, ಸಿಳ್ಳೇಕ್ಯಾತರು, ವೀರಶೈವರು, ಮುಸ್ಲಿಂ, ನಾಯಕರು ಸಣ್ಣ ಸಮುದಾಯದವರಿದ್ದಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು ಸೇರಿ ಒಟ್ಟು ೧೨೦೦ ಮನೆಗಳಿದ್ದು, ೩೦೦೦ ಜನಸಂಖ್ಯೆಯನ್ನು ಹೊಂದಿದ್ದು,  ಗ್ರಾಮದಲ್ಲಿ ಶೆಡ್ ಮಾದರಿ, ಗುಡಿಸಿಲಿನ ಜೋಪಡಿಗಳು ಇದ್ದು, ಇವು ಆಶ್ರಯ ಯೋಜನೆ, ಜನತಾ ವಸತಿ ಯೋಜನೆ, ಅಂಬೇಡ್ಕರ್ ಯೋಜನೆ ಅಡಿಯಲ್ಲಿ ೩೨೦ ಮನೆಗಳು ರಚನೆಯಾಗಿವೆ. ಉಚಿತ ವಿದ್ಯುತ್ ಫಲಾನುಭವಿಗಳೂ ಇದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಗ್ರಾಮದಲ್ಲಿ ಮುಖ್ಯ ಭಾಷೆ ಕನ್ನಡವಾಗಿದ್ದು, ಕೆಲವರು ತೆಲುಗು, ಹಿಂದಿ, ಮರಾಠಿ, ಉರ್ದು, ಲಂಬಾಣಿ ಭಾಷೆಗಳನ್ನು ಮಾತನಾಡುತ್ತಾರೆ. ಆಧುನಿಕ ವಾಹನಗಳಾದ ಸ್ಕೂಟರ್, ಆಟೋ ಹೊಂದಿದ್ದಾರೆ.

ಗ್ರಾಮದಲ್ಲಿ ಕೆಇಬಿ, ಪೌರಕಾರ್ಮಿಕರು, ಶಿಕ್ಷಕರು, ಪರಿಸರ ಇಂಜಿನಿಯರ್ ಸೇರಿದಂತೆ ಒಟ್ಟು ೫೦ ಜನ ಸರ್ಕಾರಿ ನೌಕರರು ಇದ್ದಾರೆ. ಖಾಸಗಿ ವೈದ್ಯರು, ಡೆಂಟಲ್, ಶಿಕ್ಷಣ ಇಲಾಖೆ, ಮಿಲ್ ಹೀಗೆ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ವಿಧಾನಸಭೆ, ಚಿತ್ರದುರ್ಗ ಲೋಕಸಭೆ ಕ್ಷೇತ್ರಗಳು ಈ ಬಡಾವಣೆಗೆ ಸೇರಿವೆ. ವಾರ್ಡ್ ನಂ.೪ ರ ವ್ಯಾಪ್ತಿಗೆ ಒಳಪಡುವಂತೆ ಈ ಬಡಾವಣೆಯಲ್ಲಿ ಶ್ರೀಮತಿ ಅನ್ನಪೂರ್ಣ ರಂಗನಾಥ್ ಕಳೆದ ಮೂರು ಅವಧಿಗೆ ೧೫ ವರ್ಷಗಳಿಂದಲೂ ಪ್ರತಿನಿಧಿಸುತ್ತಿದ್ದು, ಇವರು ನಗರಸಭೆಯ ಅಧ್ಯಕ್ಷರೂ ಆಗಿದ್ದರು. ಪ್ರಸ್ತುತ ಸದಸ್ಯರಾಗಿದ್ದಾರೆ. ಅಂಚೆಕಛೇರಿ, ತಾಲ್ಲೂಕು ಕಚೇರಿ, ಕೋರ್ಟ್ ಸಿರಾ ನಗರದ ವ್ಯಾಪ್ತಿಯಲ್ಲಿಯೇ ಇದ್ದು, ಅದರ ಪ್ರಯೋಜನ ಪಡೆಯುತ್ತಿದ್ದಾರೆ. ೮ ವಿವಿಧ ಸ್ವರೂಪದ ಚಿಲ್ಲರೆ, ಕಿರಾಣಿ, ದಿನಸಿ ಅಂಗಡಿಗಳಿದ್ದು, ೨ ಹೋಟೆಲ್‌ಗಳಿವೆ. ಸಾಮಾಜಿಕ ಸೌಲಭ್ಯವಾಗಿ ಸಂಧ್ಯಾಸುರಕ್ಷಾ, ಅಂಗವಿಕಲರ ವೇತನಗಳ ಫಲಾನುಭವಿಗಳಿದ್ದಾರೆ. ಇಲ್ಲಿನ ಮುಖ್ಯ ಉದ್ಯೋಗ ಕಾರ್ಮಿಕರಾಗಿದ್ದು, ವ್ಯವಸಾಯ ಕಾರ್ಮಿಕರೂ ಸೇರಿದಂತೆ ವಿವಿಧ ಅಂಗಡಿ, ರೈಸ್‌ಮಿಲ್, ಗ್ಯಾರೇಜ್‌ಗಳಲ್ಲಿ ದುಡಿಯುತ್ತಿದ್ದಾರೆ. ಮಹಿಳೆಯರು ಹೂ ಕಟ್ಟುವುದು, ಟೈಲರಿಂಗ್ ಉದ್ಯೋಗವೂ ಇದೆ.

ಒಂದು ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯದ ವ್ಯವಸ್ಥೆ ಇದೆ.

ಗ್ರಾಮದಲ್ಲಿ ಒಂದು ಅರಳಿಕಟ್ಟೆ, ನಾಗರಕಲ್ಲು, ಕಾರೆಹಳ್ಳಿ ರಂಗನಾಥನ ದೇವಾಲಯಗಳಿದ್ದು, ಮಾರಮ್ಮನ ಊರಹಬ್ಬ, ಅರಕೆಯಾಗಿ ಆರತಿ, ಬಾನ, ಬ್ಯಾಟೆಯ ಸಂಪ್ರದಾಯವಿದೆ. ದುರ್ಗಮ್ಮನಿಗೆ ಆರತಿ ಮಾಡುವುದು ಇದೆ. ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ. ವಿಶೇಷವಾಗಿ ಮುಸ್ಲಿಂಮರು ರಂಜಾನ್, ಈದ್ ಮಿಲಾದ್, ಬಕ್ರೀದ್ ಹಬ್ಬವನ್ನು ಆಚರಿಸುತ್ತಾರೆ.

ಸಿಳ್ಳೆಕ್ಯಾತ ಜನಾಂಗದವರು ಕುಟುಂಬಗಳಾದ ಸಂಜೀವಪ್ಪ ಹಾಗೂ ಹನುಮಂತರಾಯಪ್ಪ ಇವರು ತೊಗಲು ಗೊಂಬೆ ಕಲಾವಿದರಾಗಿದ್ದು, ಸತ್ಯಹರಿಶ್ಚಂದ್ರ, ಸಂಪೂರ್ಣ ರಾಮಾಯಣ, ಶಿವಜಲಂಧರ, ಲವಕುಶ, ಕುರುಕ್ಷೇತ್ರ ಈ ಮೊದಲಾದ ತೊಗಲುಗೊಂಬೆ ಮೇಳಗಳನ್ನು ಪಾರಂಪರಿಕವಾಗಿ ಅಭಿನಯಿಸುತ್ತಾ ಬರುತ್ತಿದ್ದಾರೆ. ಇವರಲ್ಲಿ ಸಂಜೀವರಾಯಪ್ಪ, ಅನುಸೂಯಮ್ಮ, ರಾಜಣ್ಣ, ಹನುಮಂತರಾಯಪ್ಪ ಒಳ್ಳೆಯ ತೊಗಲುಗೊಂಬೆ ಕಲಾವಿದರಾಗಿದ್ದು, ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ.

ಕೊರಮರ ಕ್ಷೇಮಾಭಿವೃದ್ಧಿ ಸಂಘವಿದ್ದು, ಬುಟ್ಟಿ-ಬಿದಿರು ಕೆಲಸದ ಸಂಘಟನೆಯಲ್ಲಿ ತೊಡಗಿದ್ದಾರೆ.

## ಭೋವಿ ಕಾಲೋನಿ ವಾರ್ಡ್ ನಂ. ೫

ಭೋವಿ ಕಾಲೋನಿ, ಸಿರಾದ ಹಳ್ಳಿಯ ವಡ್ಡರ ಹಟ್ಟಿಗಿರುವ ಈಗಿನ ಹೆಸರು. ಇದು ಸಿರಾ ನಗರದ ಸಭೆಯಿಂದ ಉತ್ತರ-ಪೂರ್ವಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಪಶ್ಚಿಮಕ್ಕೆ ಕಾಳಿದಾರನಗರ( ಕುರುಬರಹಟ್ಟಿ) ಪೂರ್ವಕ್ಕೆ ಸೊಪ್ಪಿನ ಹಟ್ಟಿ, ಉತ್ತರ-ಪಶ್ಚಿಮಕ್ಕೆ ರಂಗನಾಥ ನಗರ ಇವರ ಗಡಿ ದಿಕ್ಕುಗಳು, ಕುರುಬರ ಹಟ್ಟಿಯ ಉತ್ತರದ ಕೊನೆಗಿರುವ ಗಂಗಮ್ಮನ ಹಳ್ಳದಿಂದ ಆನೆಗೋರಿ, ರಾಗಿಕಲ್ಲು ಮಸೀದಿಯವರೆಗೆ ಬಿಲಿವರ್ಸ್ ಚರ್ಚಿನ ತನಕ ಬೋವಿ ಕಾಲೋನಿಯ ವ್ಯಾಪ್ತಿ ಸೇರಿದೆ. ಬೋವಿ ಜನಗಳೇ ಇಲ್ಲಿನ ಮೂಲ ನಿವಾಸಿಗಳಾದುದರಿಂದ ಕುಲ ಮೂಲದಿಂದ ಬೋವಿ ಕಾಲೋನಿ (ಹಳೆಯ ವಡ್ಡರಹಟ್ಟಿ) ಎಂದಾಗಿದೆ.

ಕೆಂಪು ಬಿಳಿ, ಕಂದು ಮಿಶ್ರಿತ ಮಣ್ಣನ್ನು ಹೊಂದಿರುವ ಈ ಪರಿಸರದಲ್ಲಿ ಮೊಲ, ಅಳಿಲು, ನರಿ, ಮುಂಗುಸಿ, ತೋಳ, ಇಲಿ, ಹೆಗ್ಗಣ, ಮುಂಗುಸಿ ಕಂಡು ಬರುತ್ತವೆ. ಸಾಕು ಪ್ರಾಣಿಗಳಾಗಿ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ನಾಯಿ, ಬೆಕ್ಕು, ಗೂಬೆ, ಪಕ್ಷಿಗಳಾದ ಗರುಡ, ಹದ್ದು, ಬೆಳವ, ಕೌಜಲಗ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳಿವೆ.

ಇಲ್ಲಿನ ಹವಾಮಾನ ಉಷ್ಣಾಂಶ ಅಧಿಕವಾಗಿದೆ. ಬಿಸಿ ತಾಪಮಾನದಿಂದ ಕೂಡಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಶೇ. ೬೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೬-೩೮೦ ಸೆಂ.ರಷ್ಟು ಇದ್ದು, ಚಳಿಯು ೧೭೦ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೩೨೦ ಮನೆಗಳಲ್ಲಿ ನೇರವಾಗಿ ನಲ್ಲಿ ನೀರಿನ ಸಂಪರ್ಕವಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಭೋವಿ, ಬಲಿಜಿಗ, ಆದಿಕರ್ನಾಟಕ, ಕುಂಚಿಟಿಗರು, ಕುರುಬರು, ಗೊಲ್ಲರು, ಕ್ಷೌರಿಕ, ಬೇಡ, ಬೆಸ್ತ, ದರ್ಜಿ ಸಮಪ್ರಮಾಣದಲ್ಲಿ ಮಿಶ್ರ ರೂಪದಲ್ಲಿದೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು ಸೇರಿ ಒಟ್ಟು ೯೧೨ ಮನೆಗಳಿದ್ದು, ಇವು ಆಶ್ರಯ ಯೋಜನೆ, ಜನತಾ ವಸತಿ ಯೋಜನೆ, ಅಂಬೇಡ್ಕರ್ ಆವಾಸ್ ಯೋಜನೆ, ಬಸವ ಯೋಜನೆ ಅಡಿಯಲ್ಲಿ ೩೨೦ ಮನೆಗಳು ರಚನೆಯಾಗಿವೆ.

ಗ್ರಾಮದಲ್ಲಿ ಮುಖ್ಯ ಭಾಷೆ ಕನ್ನಡವಾಗಿದ್ದು, ಕೆಲವರು ತೆಲುಗು, ಮರಾಠಿ, ಉರ್ದು, ಲಂಬಾಣಿ ಉಪಭಾಷೆಯನ್ನಾಗಿ ಮಾತನಾಡುತ್ತಾರೆ. ಬನ್ನಿಗರ ಮುಖ್ಯ ರಸ್ತೆ ಮುಖ್ಯ ಓಣಿಗಳಿವೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹೊಂದಿದ್ದಾರೆ. ಕೆಲವು ರೈತರು ಇಲ್ಲಿರುವ ತಮ್ಮ ಹೊಲ-ಗದ್ದೆಗಳಲ್ಲಿ ಭತ್ತ, ರಾಗಿ, ಜೋಳ, ತೊಗರಿ, ಶೇಂಗಾ ಬೆಳೆಯನ್ನು ಬೆಳೆಯುತ್ತಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಗ್ರಾಮದಲ್ಲಿ ಸಾರಿಗೆ, ಬ್ಯಾಂಕಿಂಗ್, ಶಿಕ್ಷಣ, ಪಂಚಾಯತ್ ರಾಜ್, ಸೇರಿದಂತೆ ಒಟ್ಟು ೧೧೯ ಜನ ಸರ್ಕಾರಿ ನೌಕರರು ಇದ್ದಾರೆ. ಬಸ್ ಮಾಲೀಕ, ಕಾರ್ಮಿಕರು, ಕೂಲಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ವಾರ್ಡ್ ನಂ.೫, ಹಾಗೂ ಚಿತ್ರದುರ್ಗ ಲೋಕಸಭೆ ವ್ಯಾಪ್ತಿಗೆ ಒಳಪಡುವಂತೆ ಈ ಬಡಾವಣೆಯ ಬಲಬದಿಯಿಂದ ಮುಖ್ಯ ಬಸ್ ನಿಲ್ದಾಣದ

ಮೂಲದ ದೇಶದ ಪ್ರಮುಖ ನಗರಗಳಿಗೆ ರಸ್ತೆ ಸಂಪರ್ಕ ಹೊಂದಿದೆ.

೬ ಸ್ತ್ರೀ ಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘ, ಕಾರ್ಯನಿರ್ವಹಿಸುತ್ತಿದೆ. ಒಂದು ಅಂಗನವಾಡಿಕೇಂದ್ರವಿದೆ. ದುರ್ಗಾ ಐಟಿಐ ಕಾಲೇಜು ಇದೇ ಬಡಾವಣೆಯಲ್ಲಿದೆ. ೧೨೦ ಮಕ್ಕಳು, ಫಿಟ್ಟರ್, ಎಲೆಕ್ಟ್ರಿಕಲ್ ಹಾಗೂ ಕಂಪ್ಯೂಟರ್ ತರಬೇತಿ ಕೋರ್ಸ್ ಶಿಕ್ಷಣ ನೀಡಲಾಗುತ್ತಿದೆ. ಹಾಗೂ ೪ ಜನ ಶಿಕ್ಷಕ (ತರಬೇತಿದಾರರು), ಇಬ್ಬರು ಸಹಾಯಕರಿದ್ದಾರೆ. ನಟರಾಜ್ ನಗರಸಭೆಯ ಸದಸ್ಯರಾಗಿದ್ದಾರೆ.

ಕಾದಂಬರಿದಾರ ಕೃಷ್ಣಪ್ಪ, ಪ್ರಮುಖ ಕಾದಂಬರಿಕಾರರಾಗಿದ್ದಾರೆ. ಎರಡು ದೊಡ್ಡ ಕಾದಂಬರಿ ಪ್ರಕಟವಾಗಿದೆ. ಕೆ.ಬೊಮ್ಮಲಿಂಗಯ್ಯ, ಯಕ್ಷಗಾನ, ಕಲಾವಿದರು, ಶಿವಕುಮಾರ್ ಚಿನ್ನಲೇಖಕ ಕಲಾವಿದರಿದ್ದಾರೆ. ಆನೆಗೊರಿ ಎಂಬ ಐತಿಹಾಸಿಕ ಸ್ಮಾರಕ ಈ ಬಡಾವಣೆಯ ವಿಶೇಷ. ಸಿರಾ ಪಾಳೆಯಗಾರರ ಕಾಲದ ಪಟ್ಟದ ಆನೆ ತೀರಿಕೊಂಡಾಗ ಅದನ್ನು ಸಮಾಧಿ ಮಾಡಿ ನಾಲ್ಕು ಅಡಿ ಎತ್ತರದ ೩೦ ಥ ೪೦ ಅಡಿ ಉದ್ದ-ಅಗಲದ ತೆರೆದ ಮಂಟಪ, ಅದರ ಮೇಲೆ ಅರಳಿ ಬೇವು ಮರಗಳನ್ನು ನೆಟ್ಟು, ಆನೆಯ ಸ್ಮಾರಕ ನಿರ್ಮಿಸಿರುವುದು ಆನೆಗೋರಿ ಸುಂದರ ವಿನ್ಯಾಸದಿಂದ ಕೂಡಿದೆ. ಇಲ್ಲಿ ಗಣಪತಿ ಮಂಟಪ ನಿರ್ಮಿಸಿದ್ದಾರೆ. ಬಲಿವರ್ ಚರ್ಚ್ ಇದೇ ವ್ಯಾಪ್ತಿಯಲ್ಲಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ವಿಧವಾ ವೇತನ ಗಳಿವೆ. ಆರು ಟೀ ಅಂಗಡಿ, ೧೦ ಚಿಲ್ಲರೆ ಅಂಗಡಿಗಳಿವೆ.

ಸಮೀಪದ ಬಡಾವಣೆಯಲ್ಲಿ ನಡೆಯುವ ದಸರಾ ಉತ್ಸವ ಬನ್ನಿ ಉತ್ಸವ ದಲ್ಲಿ ಈ ಭಾಗದ ಜನ ಭಾಗವಹಿಸುತ್ತಾರೆ. ಸಿರಾದ ದೊಡ್ಡ ಮಾರಮ್ಮನ ಜಾತ್ರೆ, ಉತ್ಸವದಲ್ಲಿ ಆರತಿ, ಸೇವೆ, ಸಿರಾದ ದುರ್ಗಮ್ಮನಗೆ ಆರತಿ ಸೇವೆ ಇರುತ್ತದೆ.

ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ.

## ರಂಗನಾಥ ನಗರ ವಾರ್ಡ್ ನಂ. ೬

ರಂಗನಾಥ ನಗರ ಬಡಾವಣೆಯ ಸಿರಾ ನಗರ ಸಭಾ ಕೇಂದ್ರದಿಂದ ಉತ್ತರ ಪೂರ್ವಕ್ಕೆ ಅರ್ಧ ಕಿ.ಮೀ. ದೂರದಲ್ಲಿದೆ. ಮೊದಲಿಗೆ ಮಾದಿಗರ ಹಟ್ಟಿ ಎಂದಿದ್ದು, ನಗರ ಕೇಂದ್ರದಿಂದ ಕೊಂಚ ಹೊರಭಾಗದಲ್ಲಿತ್ತು. ಕುರುಬರ ಹಟ್ಟಿಯ ಉತ್ತರಕ್ಕೆ ಗಂಗಮ್ಮನಹಳ್ಳಿ ಎಂಬ ಒಂದು ಮೋರಿಯ ಭಾಗ ಕುರುಬರ ಹಟ್ಟಿ ಹಾಗೂ ಮಾದಿಗರ ಹಟ್ಟಿಗಳನ್ನು ಬೇರ್ಪಡಿಸಿತ್ತು. ಈಗ ಹೆಚ್ಚು ಕಡಿಮೆ ಮಾದಿಗರಹಟ್ಟಿ, ಕುರುಬರ ಹಟ್ಟಿಗಳೆರಡೂ ಕೂಡಿಕೊಂಡಿವೆ. ಪ್ರವಾಸಿ ಮಂದಿರದ ಹೊರಭಾಗ, ಗಂಗಮ್ಮನಹಳ್ಳ, ಶ್ರೀರಂಗ ಫ್ಲೋರ್ ಮಿಲ್, ಆನೇ ಗೋರಿಗಡಿಯನ್ನು ಹೊರಾಂಗಣ ಕಂಬದ ರಂಗನಾಥ ದೇವಸ್ಥಾನದವರೆಗೆ ಇದರ ಗಡಿ ಹಬ್ಬಿದೆ. ನಗರಸಭಾ ವ್ಯಾಪ್ತಿಗೆ ಒಳಗೊಂಡಿದೆ. ಬಯಲು ಪ್ರದೇಶವಾಗಿದ್ದು, ಮರಳು ಮಿಶ್ರಿತ ಬಿಳಿ ಮಣ್ಣನ್ನು ಹೊಂದಿದೆ.

ಈ ಪರಿಸರದಲ್ಲಿ ಮೊಲ, ಅಳಿಲು, ನರಿ, ಮುಂಗುಸಿ, ತೋಳ, ಇಲಿ, ಹೆಗ್ಗಣ, ಮುಂಗುಸಿ ಕಂಡು ಬರುತ್ತವೆ. ಸಾಕು ಪ್ರಾಣಿಗಳಾಗಿ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ನಾಯಿ, ಬೆಕ್ಕು, ಗೂಬೆ, ಪಕ್ಷಿಗಳಾದ ಗರುಡ, ಹದ್ದು, ಬೆಳವ, ಕೌಜಲಗ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳಿವೆ.

ಇಲ್ಲಿನ ಹವಾಮಾನ ಉಷ್ಣಾಂಶ ಅಧಿಕವಾಗಿದೆ. ಬಿಸಿ ತಾಪಮಾನದಿಂದ ಕೂಡಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಶೇ. ೬೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೬-೩೮೦ ಸೆಂ.ರಷ್ಟು ಇದ್ದು, ಚಳಿಯು ೧೦-೧೧೦ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೧೬೮ ಮನೆಗಳಲ್ಲಿ ನೇರವಾಗಿ ನಲ್ಲಿ ನೀರಿನ ಸಂಪರ್ಕವಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದ್ದು, ಉಳಿದಂತೆ ಭೋವಿ, ಲಂಬಾಣಿ, ಮುಸ್ಲಿಂ ಹಾಗೂ ಕುರುಬರು ಅತಿ ಸಣ್ಣ ಸಮುದಾಯವಾಗಿದೆ. ದುರ್ಗಮ್ಮನ ಗುಡಿ ಓಣಿ, ಜ್ಯೋತಿನಗರ ರಸ್ತೆ, ಕೆಳಬೀದಿ, ಮುಖ್ಯರಸ್ತೆ ಎಂಬ ಓಣಿಗಳಿವೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಮಾಳಿಗೆಯ, ಹೆಂಚಿನ ಮನೆ, ಶೀಟಿನ ಮನೆಗಳು ಸೇರಿ ಒಟ್ಟು ೬೫೦ ಮನೆಗಳಿದ್ದು, ಇಲ್ಲಿನ ಜನಸಂಖ್ಯೆ ೧೪೦೦ ಯನ್ನು ಹೊಂದಿದೆ. ಇವು ಆಶ್ರಯ ಯೋಜನೆ, ಜನತಾ ವಸತಿ ಯೋಜನೆ, ಅಂಬೇಡ್ಕರ್ ಆವಾಸ್ ಯೋಜನೆ, ಎಲ್ಲಾ ಮನೆಗಳೂ ಭಾಗ್ಯಜ್ಯೋತಿ ಯೋಜನೆ ಅಡಿಯಲ್ಲಿ ಉಚಿತ ವಿದ್ಯುತ್ ಸಂಪರ್ಕ ಹೊಂದಿದೆ. ೨೧೦ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ಉಳಿದಂತೆ ನಗರದವರು ನಿರ್ಮಿಸಿರುವ ಸಾಮೂಹಿಕ ಶೌಚಾಲಯ ಹಾಗೂ ಉಳಿದಂತೆ ಬಯಲು ಶೌಚಾಲಯಗಳನ್ನು ಬಳಸುತ್ತಾರೆ.

ಗ್ರಾಮದಲ್ಲಿ ಮುಖ್ಯ ಭಾಷೆ ಕನ್ನಡವಾಗಿದೆ. ನಾಲ್ಕು ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ

ಹೊಂದಿದ್ದಾರೆ. ಕೆಲವು ರೈತರು ಇಲ್ಲಿರುವ ತಮ್ಮ ಹೊಲ–ಗದ್ದೆಗಳಲ್ಲಿ ಭತ್ತ, ರಾಗಿ, ಜೋಳ, ಸೂರ್ಯಕಾಂತಿ, ತೊಗರಿ, ಶೇಂಗಾ ಬೆಳೆಯನ್ನು ಬೆಳೆಯುತ್ತಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಗ್ರಾಮದಲ್ಲಿ ಸಾರಿಗೆ, ರೇಷ್ಮೆ. ಬ್ಯಾಂಕಿಂಗ್, ಕೆಇಬಿ, ಶಿಕ್ಷಣ, ಪಂಚಾಯತ್ ರಾಜ್, ಸೇರಿದಂತೆ ಒಟ್ಟು ೨೪೦ ಜನ ಸರ್ಕಾರಿ ನೌಕರರು ಇದ್ದಾರೆ. ಖಾಸಗಿ ಬಸ್ ಮಾಲೀಕ, ಕಾರ್ಮಿಕರು, ಮಂಡಿ, ಕಾರ್ಖಾನೆಗಳಲ್ಲಿ ಕಾರ್ಯ ನಿರ್ವಹಿಸುವವರು ಇದ್ದಾರೆ. ಹೆಂಗಸರು ಗೃಹೋಪಯೋಗಿ ಕಸುಬಾಗಿ ಗಂಧದ ಕಡ್ಡಿ ಹೊಸೆಯುವುದು, ಬೀಡಿ ಕಟ್ಟುವುದು, ಹೂ ಕಟ್ಟುವುದು ಇದೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ವ್ಯಾಪ್ತಿಗೆ ಒಳಪಟ್ಟಿದ್ದು, ಬಸವರಾಜ್ ಎಂಬುವರರು ಇಲ್ಲಿನ ನಗರಸಭೆಯನ್ನು ಪ್ರತಿನಿಧಿಸುತ್ತಿದ್ದಾರೆ. ತಹಶೀಲ್ದಾರ್, ಕೆಇಬಿ, ಲೋಕೋಪಯೋಗಿ, ಕೋರ್ಟ್, ಸಿರಾ ನಗರದಲ್ಲಿಯೇ ಇದ್ದು, ಅಲ್ಲಿಗೆ ಸಂಪರ್ಕ ಹೊಂದಿದ್ದಾರೆ.

ಶೈಕ್ಷಣಿಕವಾಗಿ ಒಂದು ಪ್ರಾಥಮಿಕ ಪ್ರೌಢಶಾಲೆ, ಒಂದು ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ೬೨ ಮಕ್ಕಳಿದ್ದು, ೫ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಕಾಂಪೌಂಡ್, ಸಮವಸ್ತ್ರ, ಉಚಿತ ಪಠ್ಯಪುಸ್ತಕಗಳ ಸೌಲಭ್ಯವಿದೆ. ಇಲ್ಲಿನ ಸಾಕ್ಷರತೆಯ ಪ್ರಮಾಣವು ಶೇ. ೬೪ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ವಿಧವಾ ವೇತನಗಳಿವೆ. ೧ ಟೀ ಅಂಗಡಿ, ೪ ಚಿಲ್ಲರೆ ಅಂಗಡಿಗಳಿವೆ.

ಧಾರ್ಮಿಕವಾಗಿ ದುರ್ಗಮ್ಮ, ಲಕ್ಕಮ್ಮ, ಮಾರಮ್ಮ , ನರಸಿಂಹಸ್ವಾಮಿ, ೨ ಕಂಬದ ರಂಗನಾಥ ದೇವಾಲಯಗಳಿವೆ. ಒಂದು ನಾಗರಹುತ್ತವಿದ್ದು, ಪೂಜೆ ನೆರವೇರುತ್ತದೆ. ೨ ಹಳೆಯ ಪ್ರಾಚೀನ ಬಾವಿಗಳಿವೆ. ವಾರ್ಷಿಕವಾಗಿ ದುರ್ಗಮ್ಮನ ಉತ್ಸವ ನಡೆಯುತ್ತದೆ. ದೊಡ್ಡ ಮಾರಿಗೆ ಆರತಿ, ಬಾನ, ಬಲಿ ಸಂಪ್ರದಾಯ ವಿರುತ್ತದೆ.

ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ.

ಸಾಂಸ್ಕೃತಿಕವಾಗಿ ಸುಂಕದ ರಾಜಣ್ಣ, ಭಾಗವತ ತಿಪ್ಪೇಸ್ವಾಮಿ, ರೇಷ್ಮೆ ರಂಗನಾಥ್, ತಿಮ್ಮಣ್ಣ, ಶಿವಣ್ಣ, ಹರೀಶ, ನರಸಿಂಹಯ್ಯ ರಂಗಭೂಮಿ ಕಲಾವಿದ ರಾಗಿ ಸ್ಥಳೀಯವಾಗಿ ಹೆಸರು ಮಾಡಿದ್ದಾರೆ. ಪ್ರತಿವರ್ಷ ಲವಕುಶರ ಕಾಳ ಯಕ್ಷಗಾನ ಪ್ರಸಂಗವನ್ನು ಪ್ರಯೋಗ ಮಾಡುತ್ತಾ ಬರುತ್ತಿದ್ದರೂ ಇತ್ತೀಚೆಗೆ ರಾಮಾಯಣವನ್ನು ಪ್ರದರ್ಶಿಸುತ್ತಿದ್ದಾರೆ.

ಶಿವಣ್ಣ, ಷಣ್ಮುಖಪ್ಪ ಪ್ರಮುಖ ಅರೇವಾದ್ಯ ಕಲಾವಿದರು. ಲಕ್ಕಪ್ಪ, ಶಕುನಪ್ಪ, ಭಾಸ್ಕರ, ಪ್ರಮುಖ ತಮಟೆ ವಾದನ ಕಲಾವಿದರಾಗಿದ್ದರು. ಹನುಮಂತಪ್ಪ, ನಾಗಮ್ಮ, ಲಕ್ಕಮ್ಮ, ಜನಪದ ಕಲಾವಿದರು, ಸೋಬಾನೆ ಈರಣ್ಣ ಎಂಬ ೬೦ ವರ್ಷ ವಯಸ್ಸಿನ ಕಲಾವಿದ. ಸೋಬನೆ, ಕಥನಗೀತೆ, ಜನಪದಸಂಗೀತಕ್ಕೆ ಹೆಸರುವಾಸಿಯಾಗಿದ್ದಾರೆ. ಇವರು ಹಾಡಿರುವ ಸಿರಾ ಕೋಟೆ ಕುರಿತ ಪದಗಳನ್ನು ಡಾ. ಚಿಕ್ಕಣ್ಣ ಎಣ್ಣೆಕಟ್ಟೆ ಸಂಗ್ರಹಿಸಿ ಬಂಡಿ ಬಂದಾವೆ ಬಾಳೆ ವನದಾಗೆ ಸಂಕಲನದಲ್ಲಿ ಪ್ರಕಟಿಸಲಾಗಿದೆ. ಉಮೇಶ್ ಲೇಖಕರಾಗಿದ್ದು ಪುಸ್ತಕ ರಚಿಸಿದ್ದಾರೆ.

ಅಂಬೇಡ್ಕರ್ ರಂಗಮಂದಿರ, ಸಮುದಾಯ ಭವನಗಳಿವೆ. ಬಸವರಾಜ್, ಅಪ್ಪಿ, ಜಯಕೃಷ್ಣನ್, ಅಂಬೇಡ್ಕರ್ ಯುವಕರ ಸಂಘ, ನವೋದ.ಯ ಯುವಕ ಸಂಘಗಳ ಸಂಘಟಕರಾಗಿದ್ದಾರೆ.

### ಮೊದಲಹಂತ ಕಾಳಿದಾಸನಗರ–ವಾಡ್ ನಂ. ೭

ಕಾಳಿದಾಸನಗರ ಬಡಾವಣೆ ಮೊದಲ ಹಂತ ಸಿರಾ ನಗರ ಸಭೆಯ ವ್ಯಾಪ್ತಿಗೆ ಒಳಗೆ ಬರುತ್ತದೆ. ಕುರುಬ ಜನಾಂಗದವರೇ ಅಧಿಕವಾಗಿರುವುದರಿಂ ದಾಗಿ ಕಾಳಿದಾಸನಗರ ಎಂದು ಕರೆಯಲಾಗಿದೆ. ಕಾಳಿದಾಸ ನಗರ ರಂಗನಾಥ ನಗರ ಮುಖ್ಯ ರಸ್ತೆಯ ಎಡಬದಿಯಿಂದ, ಗಂಗಮ್ಮನಹಳ್ಳದಿಂದ ಪಶ್ಚಿಮಕ್ಕೆ ಸಿರಾ ಪ್ರವಾಸಿ ಮಂದಿರ, ಬಿ.ಆರ್. ಅಂಬೇಡ್ಕರ್ ಪಾರ್ಕ್, ಮಧುಗಿರಿ–ಸಿರಾ ಮುಖ್ಯ ರಸ್ತೆಯ ಬಲಭಾಗಕ್ಕೆ ನಗರಸಭೆ ಪೋಲೀಸ್ ಕ್ವಾಟ್ರಸ್, ೨ ಸರ್ಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬರಗೂರು ಚಂದ್ರಪ್ಪ ರಂಗಮಂದಿರ,ಇದರ ವ್ಯಾಪ್ತಿಗೆ ಒಳಗೊಂಡಿದೆ.

ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದೆ. ಈ ಪರಿಸರದಲ್ಲಿ ಇಲಿ, ಹೆಗ್ಗಣ ಹೊರತು ಪಡಿಸಿ ಬೇರೆ ಯಾವುದೇ ಪ್ರಾಣಿಗಳು ಕಂಡು ಬರುವುದಿಲ್ಲ. ಕೃಷಿ ಹೈನುಗಾರಿಕೆಗಾಗಿ ಹಸು, ಎಮ್ಮೆ, ಎತ್ತು, ಕುರಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಗೊರವಂಕ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳಿವೆ.

ಇಲ್ಲಿನ ಹವಾಮಾನ ಉಷ್ಣಾಂಶ ಅಧಿಕವಾಗಿದೆ. ಬಿಸಿ ತಾಪಮಾನದಿಂದ ಕೂಡಿದ್ದು, ಕಳೆದ ಐದು ವರ್ಷಗಳಲ್ಲಿ ಶೇ. ೫೦.೨ ರಷ್ಟು ಮೀ. ಮಳೆಯಾಗಿದೆ. ೨೦೧೪ ರ ಅಕ್ಟೋಬರ್‌ನಲ್ಲಿ ೧೫೩ ಮಿ.ಮೀ.ನಷ್ಟು ಮಳೆ ಬಿದ್ದಿದೆ. ಉಷ್ಣಾಂಶ ೩೮–೪೦ಂ ಸೆಂ.ರಷ್ಟು ಇದ್ದು, ಚಳಿಯು ೧೦–೧೨ಂ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುರುಬ ಜನಾಂಗ ದೊಡ್ಡ ಸಮುದಾಯವಾಗಿದ್ದು, ಉಳಿದಂತೆ ಭೋವಿ, ಲಂಬಾಣಿ, ಕುಂಚಿಟಿಗ, ಈಡಿಗ, ಆದಿಕರ್ನಾಟಕ, ಮ್ಯಾದರು, ಲಂಬಾಣಿ, ರಜಪೂತ್, ಬಲಿಜಿಗ ಸಣ್ಣ ಸಮುದಾಯವಾಗಿದೆ. ಎಂ.ಎಲ್.ಎ. ದಾಸಪ್ಪನವರ ಮನೆ ಓಣಿ, ಮೇದರ ಓಣಿ ಎಂಬ ಓಣಿಗಳಿವೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಮಾಳಿಗೆಯ, ಹೆಂಚಿನ ಮನೆ, ಶೀಟಿನ ಮನೆಗಳು ಸೇರಿ ಒಟ್ಟು ೪೮೦ ಮನೆಗಳಿದ್ದು, ಇವು ಆಶ್ರಯ ಯೋಜನೆ, ಜನತಾ ವಸತಿ ಯೋಜನೆ, ಅಂಬೇಡ್ಕರ್ ಆವಾಸ್ ಯೋಜನೆ, ೨೦೦ ಮನೆಗಳೂ ಭಾಗ್ಯಜ್ಯೋತಿ ಯೋಜನೆ ಅಡಿಯಲ್ಲಿ ಉಚಿತ ವಿದ್ಯುತ್ ಸಂಪರ್ಕ ಹೊಂದಿದೆ. ೪೦೦ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ.

ಗ್ರಾಮದಲ್ಲಿ ಮುಖ್ಯ ಭಾಷೆ ಕನ್ನಡವಾಗಿದೆ. ತೆಲುಗು ಭಾಷೆಗಳನ್ನು ಬಳಸುತ್ತಾರೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹೊಂದಿದ್ದಾರೆ. ಕೆಲವು ರೈತರು ಇಲ್ಲಿರುವ ತಮ್ಮ ಹೊಲ–ಗದ್ದೆಗಳಲ್ಲಿ ಭತ್ತ, ರಾಗಿ, ಜೋಳ, ಸೂರ್ಯಕಾಂತಿ, ತೊಗರಿ, ಶೇಂಗಾ ಬೆಳೆಯನ್ನು ಬೆಳೆಯುತ್ತಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಗ್ರಾಮದಲ್ಲಿ ಪೋಲೀಸ್, ಸಾರಿಗೆ, ಬ್ಯಾಂಕಿಂಗ್, ಕೆಇಬಿ, ಶಿಕ್ಷಣ, ಆರೋಗ್ಯ, ನ್ಯಾಯಾಲಯ, ಸೇರಿದಂತೆ ಒಟ್ಟು ೧೮೦ ಕ್ಕೂ ಹೆಚ್ಚು ಜನ ನೌಕರರು ಇದ್ದಾರೆ. ಖಾಸಗಿ ವೈದ್ಯರು, ಉಪನ್ಯಾಸಕರು, ವಕೀಲರು ಇದ್ದಾರೆ. ಬಸ್, ಮಿಲ್, ಗ್ಯಾರೇಜ್, ಕಂಪನಿಯ ಉದ್ಯೋಗಿಗಳು ಇದ್ದಾರೆ. ಹೆಂಗಸರು ಗೃಹೋಪಯೋಗಿ ಕಸುಬಾಗಿ ಟೈಲರಿಂಗ್, ಬೀಡಿ ಕಟ್ಟುವುದು, ಹೂ ಕಟ್ಟುವುದು ಸಣ್ಣ ಉದ್ಯಮವಾಗಿದೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ವ್ಯಾಪ್ತಿಗೆ ಒಳಪಟ್ಟಿದ್ದು, ಸಿರಾ ನಗರ ಸಭೆಯ ವಾರ್ಡ್ ನಂ, ೭ ರ ವ್ಯಾಪ್ತಿ ಬರುತ್ತಿದ್ದು, ಶ್ರೀಮತಿ ಶಾರದಾ ಶಿವಕುಮಾರ್ ಎಂಬುವರರು ಇಲ್ಲಿನ ನಗರಸಭೆ ಯನ್ನು ಪ್ರತಿನಿಧಿಸುತ್ತಿದ್ದಾರೆ. ಮಾಜಿ ಶಾಸಕರಾದ ಎಸ್.ಕೆ. ದಾಸಪ್ಪನವರು ಇದೇ ಬಡಾವಣೆಯಲ್ಲಿ ನೆಲೆಸಿರುವುದು ವಿಶೇಷವಾಗಿದೆ.

ಅಂಚೆ ಸೌಲಭ್ಯ, ಇಮೇಲ್, ದೂರವಾಣಿ, ಮೊಬೈಲ್ ಬಳಕೆಯಿದೆ. ಕನಸ ಸಹಕಾರಿ ಬ್ಯಾಂಕ್ ಇದೆ. ೪ ಸ್ತ್ರೀ ಶಕ್ತಿ ಸಂಘಗಳಿವೆ. ಧರ್ಮಸ್ಥಳ ಗ್ರಾಮೀಭಿವೃದ್ಧಿ ಸ್ವಸಹಾಯ ಸಂಘಗಳಿವೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಗರಸಭಾ ಕಾರ್ಯಾಲಯ, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಬಾಲಕಿಯರ ಪ್ರೌಢಶಾಲೆ, ಸರ್ಕಾರಿ ಹಿರಿಯ ಮಾದರಿ ಪಾಠಶಾಲೆ, ಸರ್ಕಾರಿ ಕಾಲೇಜು ಇದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಕಾಂಪೌಂಡ್, ಸಮವಸ್ತ್ರ, ಉಚಿತ ಪಠ್ಯಪುಸ್ತಕಗಳ ಸೌಲಭ್ಯವಿದೆ. ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಪಿ.ಹೆಚ್.ಮಹೇಂದ್ರಪ್ಪ ಅತ್ಯುತ್ತಮ ಪ್ರಾಂಶುಪಾಲ ರಾಜ್ಯಪ್ರಶಸ್ತಿ ಪಡೆದಿದ್ದಾರೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಮೆಡಿಕಲ್ ಸ್ಟೋರ್, ಒಂದು ಬೇಕರಿ, ಕೋರಿಯರ್ ಆಫೀಸ್, ೬ ಪೆಟ್ಟಿಗೆ ಅಂಗಡಿಗಳು, ಜೆರಾಕ್ಸ್ ಅಂಗಡಿಗಳು, ಕಂಪ್ಯೂಟರ್ ಸೆಂಟರ್, ಗೂಡಂಗಡಿಗಳು ಇವೆ.

ಸಿರಾ ಪ್ರವಾಸಿ ಮಂದಿರದಲ್ಲಿ ೧೮೪೬ ರ ಬ್ರಿಟೀಷ್ ಅಧಿಕಾರಿ ಫಗ್ಯೂಗಸನ್ ಎಂಬುವ ಅಧಿಕಾರಿ ಸಿರಾಕ್ಕೆ ಬಂದ ಸಂದರ್ಭದಲ್ಲಿ ಜೊತೆಯಲ್ಲಿ ಆತನ ಮಡದಿ ಹೆಲನ್ ಎಂಬುವರು ಇದ್ದು, ಆಕೆ ಕಾಲರ, ಸಾಂಕ್ರಾಮಿಕ ರೋಗಕ್ಕೆ ಬಲಿಯಾದಳೆಂದು, ಹಾಗೂ ಸುಂದರಿಯಾದ ಈಕೆಗೆ ೧೬ ವರ್ಷ ವಯಸ್ಸು ಎಂದು ಮರಣ ಶಾಸನ ಬರೆಸಲಾಗಿದೆ,

ಮಾರಿ ದೇವತೆಯ ಆರತಿ, ಊರಹಬ್ಬ ಸಂಪ್ರದಾಯವಿದೆ. ಶ್ರಾವಣ ಮಾಸದ ಕೊನೆಯ ಶನಿವಾರದಂದು ಶನಿದೇವರಿಗೆ ಆರತಿ, ಸಂಜೆ ಶನಿಮಹಾತ್ಮೆ ನಾಟಕ ಆಡುವ ಸಂಪ್ರದಾಯವಿದ್ದು ನಿರಂತರವಾಗಿ ನಡೆದು ಬಂದಿದೆ. ಉಳಿದಂತೆ ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ.

ರಂಗನಿರ್ದೇಶಕ ಜಯರಾಮಯ್ಯ ಹಾರ್ಮೋನಿಯಂ ಕಲಾವಿದರಾಗಿದ್ದು ಪಾರಂಪರಿಕವಾಗಿ ಶನಿಮಹಾತ್ಮೆ ನಾಟಕ ನಡೆಸುತ್ತಾ ಬರುತ್ತಿದ್ದಾರೆ.

## ಕಾಳಿದಾಸನಗರ ವಾರ್ಡ್ ನಂ. ೮

ಕಾಳಿದಾಸನಗರ ಬಡಾವಣೆ, ಸಿರಾ ನಗರ ಕೇಂದ್ರದ ವಾರ್ಡ್ ನಂ. ೮ ರಲ್ಲಿ ಬರುತ್ತದೆ. ನಗರಸಭಾ ಕಛೇರಿಯಿಂದ ಪೂರ್ವಕ್ಕೆ ಬರುತ್ತದೆ. ನಗರಸಭಾ ಕಚೇರಿಯ ಪೂರ್ವಕ್ಕೆ ಅರ್ಧ ಕಿ.ಮೀ.ದೂರದಲ್ಲಿದೆ. ಮೊದಲಿಗೆ ಕುರುಬರ ಹಟ್ಟಿ ಎಂದಿದ್ದು, ನಂತರದಲ್ಲಿ ಕಾಳಿದಾಸನಗರ ಎಂಬ ಹೆಸರಿನೊಂದಿಗೆ ಪರಿಚಯವಾಗುತ್ತಿದ್ದರೂ, ಹಿರಿಯ ತಲೆಮಾರಿನವರು, ಇಂದಿಗೂ ಕುರುಬರ ಹಟ್ಟಿ ಎಂದೇ ಕರೆಯುತ್ತಿದ್ದಾರೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ಸಿರಾ ನಗರ ವ್ಯಾಪ್ತಿಯಲ್ಲಿ ಹಂಚಿಕೆಯಾಗಿದೆ.

ಬಯಲು ಪ್ರದೇಶವಾಗಿದ್ದು, ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದೆ. ಈ ಪರಿಸರದಲ್ಲಿ ಇಲಿ, ಹೆಗ್ಗಣ ಹೊರತು ಪಡಿಸಿ ಬೇರೆ ಯಾವುದೇ ಪ್ರಾಣಿಗಳು ಕಂಡು ಬರುವುದಿಲ್ಲ. ಬಡಾವಣೆಯಲ್ಲಿ ಕೃಷಿ ಹೈನುಗಾರಿಕೆಗಾಗಿ ಹಸು, ಎಮ್ಮೆ, ಎತ್ತು, ನಾಯಿ, ಬೆಕ್ಕು, ಕುರಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಗೊರವಂಕ, ಗುಬ್ಬಚ್ಚಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳಿವೆ.

ಇಲ್ಲಿನ ಹವಾಮಾನ ಉಷ್ಣಾಂಶ ಅಧಿಕವಾಗಿದೆ. ಬಿಸಿ ತಾಪಮಾನದಿಂದ ಕೂಡಿದ್ದು, ಕಳೆದ ಐದು ವರ್ಷಗಳಲ್ಲಿ ಶೇ. ೬೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೯-೪೦ಂ ಸೆಂ.ರಷ್ಟು ಇದ್ದು, ಚಳಿಯು ೧೨-೧೩ಂ ಸೆಂ. ಇರುತ್ತದೆ. ನೀರಿನ ಸೌಕರ್ಯವಾಗಿ ಯಾವುದೇ ನೈಸರ್ಗಿಕ ಕೆರೆಹಳ್ಳಗಳಿಲ್ಲ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುರುಬ ಜನಾಂಗ ದೊಡ್ಡ ಸಮುದಾಯ ವಾಗಿದ್ದು, ಉಳಿದಂತೆ ವೈಶ್ಯರು, ಮಡಿವಾಳರು, ದರ್ಜಿಗರು, ಬ್ರಾಹ್ಮಣರು, ಅಕ್ಕಸಾಲಿಗ, ನಾಯಕರು, ಲಿಂಗಾಯಿತರು ಸಣ್ಣ ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದ್ದು, ತೆಲುಗು, ಮರಾಠಿ, ಹಿಂದಿ ಭಾಷೆಗಳನ್ನು ಬಳಸುತ್ತಾರೆ.

ಸಿದ್ದಪ್ಪನ ಗುಡಿ ಬೀದಿ, ಮಾರಮ್ಮನ ಗುಡಿ ಬೀದಿ, ಮಿಲ್ ರಸ್ತೆ, ಗಂಗಮ್ಮನಹಳ್ಳದ ರಸ್ತೆ, ಎಸ್.ಕೆ. ಸಿದ್ಧಣ್ಣ ಮನೆ ಬೀದಿ, ಎರದಕಟ್ಟೆಯವರ ಬೀದಿ ಎಂಬ ಓಣಿಗಳಿವೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಮಾಳಿಗೆಯ, ಹೆಂಚಿನ ಮನೆ, ಶೀಟಿನ ಮನೆಗಳು ಸೇರಿ ಒಟ್ಟು ೫೨೦ ಮನೆಗಳಿವೆ. ಆಶ್ರಯ ಯೋಜನೆಯ ೧೪೦ ಮನೆಗಳಿವೆ.

ಸಾಂಪ್ರದಾಯಿಕ ವಾಹನಗಳು ಇರುವುದಿಲ್ಲ. ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹೊಂದಿದ್ದಾರೆ. ಒಳಚರಂಡಿ ವ್ಯವಸ್ಥೆ ಕಾರ್ಯ ನಡೆಯುತ್ತದೆ. ಈ ಬಡಾವಣೆಯಲ್ಲಿ ರೈತರು ಇಲ್ಲಿರುವ ತಮ್ಮ ಹೊಲ-ಗದ್ದೆಗಳಲ್ಲಿ ಭತ್ತ, ರಾಗಿ, ಜೋಳ, ಸೂರ್ಯಕಾಂತಿ, ತೊಗರಿ, ಶೇಂಗಾ ಬೆಳೆಯನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆ ಬೆಳೆಗಳಿವೆ. ಪ್ರಮುಖ ವ್ಯಾಪಾರಿ ಸರಕುಗಳಾಗಿ ತೆಂಗು, ಅಡಿಕೆ, ಶೇಂಗಾ ಇದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಗ್ರಾಮದಲ್ಲಿ ಪೋಲೀಸ್, ಕಂದಾಯ, ಪುರಸಭೆ ಸೇರಿದಂತೆ ನೌಕರರು ಇದ್ದಾರೆ. ಖಾಸಗಿ ವೈದ್ಯರು, ಉಪನ್ಯಾಸಕರು, ವಕೀಲರು ಇದ್ದಾರೆ. ಬಸ್, ಮಿಲ್ ಉದ್ಯೋಗಿಗಳು ಇದ್ದಾರೆ. ಸಾಂಪ್ರದಾಯಿಕ ಕಂಬಳಿ ತಯಾರಿಕೆ ಈ ಬಡಾವಣೆಯ ವಿಶೇಷ ಇಲ್ಲಿ ಸಿದ್ಧವಾದ ಕಂಬಳಿಗಳು, ಸಿಲೋನ್, ದಕ್ಷಿಣ ಆಫ್ರಿಕಾ ಮುಂತಾದ ಹೊರ ದೇಶಗಳನ್ನು ಸೇರಿದಂತೆ, ಬಾಂಬೆ, ಕೇರಳ, ಮದ್ರಾಸ್, ಕಾಶ್ಮೀರಗಳಿಗೆ ಇಲ್ಲಿಂದ ರಫ್ತಾಗುವುದು ವಿಶೇಷ. ವಿಶೇಷವಾಗಿ ಮಲ್ಲಣ್ಣ, ತಿಪ್ಪಣ್ಣ, ಚಳ್ಳಿಕೇರಪ್ಪ, ಪರಶುರಾಮಣ್ಣ, ಚೌಡಪ್ಪ, ಪಾಂಡುರಂಗಯ್ಯ, ಸಿದ್ಧಣ್ಣ, ಹುಲಿಯಜ್ಜಿ, ಗೋವಿಂದಪ್ಪ ಕಂಬಳಿ ತಯಾರಿಕೆ ಮತ್ತು ಮಾರಾಟದ ಪ್ರಮುಖ ಉದ್ಯೋಗವನ್ನಾಗಿಸಿಕೊಂಡಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ವ್ಯಾಪ್ತಿಗೆ ಒಳಪಟ್ಟಿದ್ದು, ತಹಶೀಲ್ದಾರ್ ಕಛೇರಿ, ಪೋಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಇಲಾಖೆಗಳಿವೆ. ಸಿರಾ ತಾಲ್ಲೂಕು ಕೇಂದ್ರದಲ್ಲಿಯೇ ಸೌಲಭ್ಯ ಪಡೆಯುತ್ತಿದ್ದಾರೆ. ಚಿತ್ರದುರ್ಗಾ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಉತ್ತಮ ರಸ್ತೆ ಮಾರ್ಗದ ಸಾರಿಗೆ ಸಂಪರ್ಕವಿದೆ. ಸಿರಾ ಮಧುಗಿರಿ ರಸ್ತೆ ಕಾಳಿದಾಸ ನಗರದ ಎಡಬದಿಯಿಂದ ಹಾಯ್ದು ಹೋಗಿದೆ. ಅಂಚೆ ಕಚೇರಿ, ಈಮೇಲ್, ಕೊರಿಯರ್ ಸೌಲಭ್ಯ ಪಡೆದಿದೆ. ಕಾನೂನು ನೆರವು ಮಂಡಳಿ, ಬಾರ್ ಅಸೋಸಿಯೇಷನ್, ತ್ವರಿತ ನ್ಯಾಯಾಲಯ ಸಿರಾ ನ್ಯಾಯಾಂಗ ಇಲಾಖೆಯಿಂದ ಪಡೆಯುತ್ತಿದ್ದಾರೆ. ಎಸ್.ಕೆ. ಸಿದ್ದಣ್ಣ ಇದೇ ಬಡಾವಣೆಯವರಾಗಿದ್ದು ಸಿರಾ ಪುರಸಭೆಯ ಅಧ್ಯಕ್ಷರೂ, ಹಲವಾರು ಧಾರ್ಮಿಕ ಸಾಂಸ್ಕೃತಿಕ ವೇದಿಕೆಗಳ ಅಧ್ಯಕ್ಷರಾಗಿ

ಕಾರ್ಯನಿರ್ವಹಿಸಿದವರು. ಪ್ರಸ್ತುತ ಮಂಜುನಾಥ್ ಈ ವಾರ್ಡಿನ ಪ್ರತಿನಿಧಿಯಾಗಿದ್ದಾರೆ.

ಹಣಕಾಸು ವ್ಯವಸ್ಥೆಯಲ್ಲಿ ಆರು ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳು ಈ ಬಡಾವಣೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಒಂದು ಅಂಗನವಾಡಿ ಕೇಂದ್ರ, ಒಂದು ಬಾಲವಾಡಿಯೂ ಇದೆ. ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಪೌಷ್ಠಿಕ ಆಹಾರ ವಿತರಣೆಯಾಗುತ್ತಿದೆ.

ಶಿವರಾತ್ರಿಯ ನಂದಿ ಉತ್ಸವ, ಸಾಂಸ್ಕೃತಿಕವಾಗಿ ಶನಿಮಹಾತ್ಮ ನಾಟಕವನ್ನು ಶ್ರಾವಣ, ಶಿವರಾತ್ರಿ ಕಾಲಕ್ಕೆ ಸತತವಾಗಿ ೫೦ ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವುದು ವಿಶೇಷವಾಗಿದೆ. ಪೂಜಾರಿ ತಿಮ್ಮಣ್ಣ, ಶನಿಮಹಾತ್ಮ , ಶಾಸ್ತ್ರದ ಪಾಂಡುರಂಗಪ್ಪ ವಿಕ್ರಮ, ಕೆಂಚಣ್ಣ, ಭಟ್ಟರು, ಮಂತ್ರಿ, ಪರಶುರಾಮಣ್ಣ ಲೋಲಿಕೆ, ಕೃಷ್ಣೇಗೌಡ ಕಾರವಾನ್ ಪಾತ್ರದಲ್ಲಿ ವಿಶೇಷ ಗಮನ ಸೆಳೆದಿದ್ದಾರೆ. ಸೋಮೇಶಯ್ಯ, ಚೌಡಪ್ಪ ಇವರುಗಳು ವಿಶೇಷ ಗಮನ ಸೆಳೆದಿದ್ದಾರೆ. ಪ್ರತಿವರ್ಷ ಮಹಾನವಮಿ ದಸರಾ ಹಬ್ಬದ ಮರುದಿವಸ ಮೈಲಾರಲಿಂಗೇಶ್ವರ ದೇವಾಲಯದ ಆವರಣದಲ್ಲಿ ದೋಣಿ ಸೇವೆ ಎಂಬ ವಿಶೇಷ ಸಾಂಸ್ಕೃತಿಕ ಉತ್ಸವ ನಡೆಸಲಾಗುತ್ತಿದೆ. ಅಂದು ತಾಲ್ಲೂಕಿನ ಗೊರವರ ಕಲೆ, ನೃತ್ಯ ವಿಶೇಷವಾಗಿರುತ್ತದೆ. ಬಡಗೊರವಯ್ಯ, ಮೈಲಾರಪ್ಪ, (ಚಳ್ಳಕೆರೆ ಪೈಕಿ) ಚಂದ್ರಪ್ಪ, ಗೊರವರು ಈ ಬಡಾವಣೆಯಲ್ಲಿದ್ದು, ವಿಶೇಷ ಉಡುಗೆ, ತೊಡುಗೆ, ಹಾಗೂ ನೃತ್ಯ, ವಾದ್ಯ ವಿಶೇಷಗಳಿಂದ ಗಮನ ಸೆಳೆದಿದ್ದಾರೆ. ಇವರೆಲ್ಲರೂ ಕುರುಬ ಜನಾಂಗದವರು.

ಕನಕ ಮಹಿಳಾ ಸಂಘ, ಕನಕ ಯುವಕ ವೇದಿಕೆ, ಈ ಬಡಾವಣೆಯ, ಸಾಂಸ್ಕೃತಿಕ ಸಂಘಗಳಾಗಿವೆ. ನ್ಯಾಯಬೆಲೆ ಅಂಗಡಿ ಇದೆ. ಜಾನಪದ ಸಾಹಿತ್ಯ ಸಂಗ್ರಹ ಸಂಪಾದನೆ, ಪ್ರಕಟಣೆ, ಕಲಾವಿದರಿಂದ ಪ್ರದರ್ಶನ ಪ್ರಸಾರದ ಹಿನ್ನೆಲೆಯಲ್ಲಿ ೧೯೯೯ ರಲ್ಲಿ ಆರಂಭವಾದ ಗಡಿನಾಡ ಜಾನಪದ ಸಂಪರ್ಕ ಕೇಂದ್ರ, ಒಂದು ರ್‍ಾಷ್ಟ್ರೀಯ ಸಂಶೋಧನೆ ಸಂಸ್ಥೆಯಾಗಿದ್ದು, ಪ್ರತಿ ವರ್ಷ 'ಜಾನಪದ ಸಂಪನ್ನ' ಗೌರವ ಪ್ರಶಸ್ತಿ ನೀಡುತ್ತಿದೆ. ಜಾನಪದ ಕ್ಷೇತ್ರದ ೪೨ ಪುಸ್ತಕಗಳನ್ನು ಪ್ರಕಟಿಸಿರುವುದು ಈ ಸಂಸ್ಥೆಯ ವಿಶೇಷ. ಜೊತೆಗೆ 'ಬಂಡಿ ಬಂದಾವೆ ಬಾಳೆ ವನದಾಗೆ' ಕೃತಿಗೆ ೨೦೧೦ ನೇ ಸಾಲಿನ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪ್ರಕಟವಾಗಿರು ವುದು ಈ ಕೇಂದ್ರದ ಸಾಹಿತ್ಯ-ಪ್ರಕಟಣೆಯ ಸಿದ್ಧಿ ಸಾಧನೆ ಆಗಿದೆ. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಜಾನಪದ ಸಂಸ್ಥೆಯ ಸ್ಥಾಪಿತ ಸಂಚಾಲಕರು. ಆರ್. ತೇಜಸ್ಸು ಸೈಕಲ್ ರೇಸ್ ಸ್ಪರ್ಧೆಯಲ್ಲಿ ರಾಜ್ಯ ಮಟ್ಟದಲ್ಲಿ ಮೊದಲ ಬಹುಮಾನ ಪಡೆದು, ರ್‍ಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಭಾಗವಹಿಸುತ್ತಿದ್ದಾರೆ. ಇಲ್ಲಿನ ಸಾಕ್ಷರತಾ ಪ್ರಮಾಣ ೭೬.೪ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಗುರು ರೇವಣ ಸಿದ್ದೇಶ್ವರ ಸಮುದಾಯ ಭವನ, ಕಲ್ಯಾಣ ಮಂಟಪವಿದೆ. ೧೨ ಅಂಗಡಿಗಳಿವೆ. ೪ ಟೀ ಅಂಗಡಿಗಳಿವೆ.

ಐತಿಹಾಸಿಕವಾಗಿ, ಕಾಳಿದಾಸನಗರ ಬಡಾವಣೆಯಲ್ಲಿರುವ ಗುರುರೇವಣ ಸಿದ್ದೇಶ್ವರ ದೇವಾಲಯ, ಕುರುಬರ ಗುರುಶ್ರೀ ಮಠವೂ ಆಗಿದೆ. ಇಲ್ಲಿ ೧೮೦೦-೧೮೫೦ ರ ಸುಮಾರಿಗೆ ರಚನೆಗೊಂಡಿರಬಹುದೆಂದು ಉಲ್ಲೇಖಿಸಿರುವ ಅಪೂರ್ವ ಭಿತ್ತಿ ಚಿತ್ರಗಳಿವೆ. ಕರ್ನಾಟಕದ ವಾಸ್ತುಶಿಲ್ಪ ತಜ್ಞರು, ಲೇಖಕರು, ಇವುಗಳನ್ನು ಕುರಿತು ಬರೆದಿದ್ದಾರೆ. ೩೦x೪೦ ರ ಅಳತೆಯ ಗುರು ರೇವಣಸಿದ್ದೇಶ್ವರ ದೇವಸ್ಥಾನ ಗರ್ಭಗುಡಿ ಹಾಗೂ ಅಂಗಳ ಹೊಂದಿದ್ದು, ಅಂಗಳದ ಗೋಡೆಯ ತುಂಬಾ ಭಿತ್ತಿ ಚಿತ್ರಗಳಿಂದ ಕೂಡಿದೆ. ಇದರಲ್ಲಿ ರಾಮಾಯಣ, ಮಹಾಭಾರತ, ಕುರುಬರ ಮೂಲ ಪುರುಷನೆಂದು ಪರಿಭಾವಿಸುವ ಉಂಡಾಳ ಪದ್ಮಣ್ಣನ ಜೀವನ ವಿವರ ಅಪೂರ್ವ ರೀತಿಯಲ್ಲಿ ದಾಖಲಾಗಿದೆ. (ಸಿರಾ ಸೀಮೆಯ ಜಾನಪದೀಯ ಅಧ್ಯಯನ ಡಾ. ಚಿಕ್ಕಣ್ಣ ಯಣ್ಣೆಕಟ್ಟೆ). ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಸಿದ್ದಣ್ಣ, ಇದೇ ಬಡಾವಣೆಯವರು.

ಧಾರ್ಮಿಕವಾಗಿ ಮಾರಮ್ಮ, ಎರಡು ಮೈಲಾರಲಿಂಗೇಶ್ವರ, ಸಿದ್ದಪ್ಪ, ತಿಮ್ಮಪ್ಪ, ಗುರು ರೇವಣ ಸಿದ್ದೇಶ್ವರರ ಮಠ, ಅರಳಿಕಟ್ಟೆ, ಈ ಎಲ್ಲವೂ ಈ ಬಡಾವಣೆಯ ವಿಶೇಷವಾಗಿದೆ.

ಗ್ರಾಮದಲ್ಲಿ ಜನರು ಧಾರ್ಮಿಕ ಹಬ್ಬಗಳಾದ ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ.

ಆಷಾಢದ ಮೊದಲ ವಾರದಲ್ಲಿ ಮಾರಮ್ಮನ ಜಾತ್ರೆ, ಬಲಿ, ಆರತಿ, ಉತ್ಸವವಿದ್ದರೆ, ಆಷಾಢದ ಮೊದಲ ಪಾದದಲ್ಲಿ ಏಕಾದಶಿ ಹಬ್ಬ ಆಚರಿಸುತ್ತಾರೆ. ಮಹಾನವಮಿ ಹಬ್ಬದ ದಸರಾ ವೈಭವಕ್ಕೆ ಇಲ್ಲಿನ ಸಿದ್ದೇಶ್ವರ, ತಿಮ್ಮಪ್ಪ ಹಾಗೂ ಮೈಲಾರಲಿಂಗನ ಉತ್ಸವ, ವಿಶೇಷ ಅಲಂಕಾರಗಳೊಂದಿಗೆ ಬನ್ನಿ ಮಂಟಪಕ್ಕೆ ಹೋಗುವುದು ತುಂಬಾ ಆಕರ್ಷಣೆಯಾಗಿರುತ್ತದೆ. ರೇವಣಸಿದ್ದೇಶ್ವರ ವಾಹನದ ರಾವಣನ ವಿರಾಟ್ ರೂಪ ಪ್ರೇಕ್ಷಕರನ್ನು ವಿಶೇಷವಾಗಿ ಸೆಳೆಯುತ್ತದೆ. ಮಾರಮ್ಮನಿಗೆ ಬಲಿ, ಆರತಿ, ಉತ್ಸವ ಆಚರಣೆಗಳಿರುತ್ತವೆ. ಶ್ರಾವಣ ಶನಿವಾರ ಶನಿದೇವರಿಗೆ ಆರತಿ, ಶನಿದೇವರ ನಾಟಕ, ಅಥವಾ ಕಥಾ ಶ್ರವಣದ ಪರಂಪರೆ ನಿರಂತರವಾಗಿ ನಡೆದು ಕೊಂಡು ಬರುತ್ತಿದೆ.

## ಸೊಪ್ಪಿನಹಟ್ಟಿ ವಾರ್ಡ್ ನಂ. ೯

ಸೊಪ್ಪಿನಹಟ್ಟಿ, ಸಿರಾ ನಗರದ ಹಳೆಯ ಊರುಗಳಲ್ಲಿ ಒಂದು. ಸಿರಾನಗರ ಸಭೆಯ ವ್ಯಾಪ್ತಿಯಲ್ಲಿ, ಕೇಂದ್ರ ಕಛೇರಿಯಿಂದ ಉತ್ತರ ದಿಕ್ಕಿಗೆ ಅರ್ಧ ಕಿ.ಮೀ. ದೂರದಲ್ಲಿದೆ. ಸಿರಾ ಪಾಳೆಯಗಾರರ ಆಡಳಿತ ಹಾಗೂ ನಂತರವೂ ಸಿರಾ ನಗರದಿಂದ ಹೊರ ವಲಯ ಭಾಗವಾಗಿದ್ದು, ಚಿಕ್ಕ ಕೆರೆಯ ಮುಂಭಾಗ ಕೆರೆಯ ಅಂಗಳಕ್ಕೆ ಹೊಂದಿಕೊಂಡಿದ್ದ ಭಾಗವಾಗಿದ್ದು, ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದ ಫಲವತ್ತಾದ ಭೂಮಿ. ಹಾಗಾಗಿ ಇಲ್ಲಿ ಬಗೆ ಬಗೆಯ ಸೊಪ್ಪು, ತರಕಾರಿ, ಕಾಯಿಪಲ್ಯೆಗಳು ಬೆಳೆಯುತ್ತಿದ್ದರು. ಇಂಥ ಪ್ರದೇಶ ನಂತರ ಜನ ವಸತಿಯಾಗಿ ಪರಿವರ್ತನೆಯಾಯಿತು. ನಂತರ ಜನವಸತಿಯಾಗಿ ಪರಿವರ್ತನೆಯಾಯಿತು. ಆಗ ಸೊಪ್ಪು ಮೂಲದಿಂದಲೇ ಸೊಪ್ಪಿನ ಹಟ್ಟಿ ಎಂದು ಕರೆದುಕೊಂಡರು. ಸಿರಾ ಮಧುಗಿರಿ ಮುಖ್ಯ ರಸ್ತೆಯ ಮೋಹನ್ ಭಂಡಾರ, ದೀಪ್ತಿ ಮೆಡಿಕಲ್, ಅನುಪಮ ಜೆರಾಕ್ಸ್, ಅಂಗಡಿ ಸಾಲಿನಿಂದ ಉತ್ತರಕ್ಕೆ ಗಂಗಮ್ಮನ ಹಳ್ಳದ ತನಕ, ಅಲ್ಲಿಂದ ಬಲಕ್ಕೆ ಮಾರಮ್ಮನ ಗದ್ದಿಗೆ, ಬೇವಿನ ಮರ, ಬನ್ನಿ ನಗರ ಶಾಲಾ ಅಂಚಿನವರೆಗೆ, ಅಲ್ಲಿಂದ ಮತ್ತೆ ಉತ್ತರಕ್ಕೆ ವಾಣಿ ಬೀಡಿ ಕಂಪನಿಯಿಂದ, ಪುರಿ ಬಟ್ಟಿ, ಐಸ್ ಕ್ಯಾಂಡಿ ರಾಮಣ್ಣ, ಮಂಜುನಾಥ್ ಅವರ ಮನೆ ಅಂದರೆ ಬನ್ನಿ ಪಾರ್ಕ್‌ನವರೆಗೆ ನಂತರ ಪೂರ್ವಕ್ಕೆ ಚಳ್ಳಕೆರೆಯಮ್ಮನ ದೇವಾಲಯ, ಇಬ್ಬನಿ ಬ್ಯೂಟಿ ಪಾರ್ಲರ್‌ನಿಂದ ದೊಡ್ಡ ತೊರೆಯ ದಕ್ಷಿಣದ ಭಂಡಾರದಿಂದ ಪೂರ್ವಕ್ಕೆ ನೇರ ರಸ್ತೆ, ಗಂಗಮ್ಮನ ಹಳ್ಳ ರಮೇಶ್ ಕಾಂಡಿಮೆಂಟ್ ಹೌಸ್, ಹಾಗೂ ದೀಪ್ತಿ ಮೆಡಿಕಲ್‌ನಿಂದ ಬನ್ನಿನಗರ ಮುಖ್ಯ ರಸ್ತೆಯ ಎಡಭಾಗ ಪೂರ್ಣ ಸೊಪ್ಪಿನಹಟ್ಟಿಯ ಬಡಾವಣೆಯಾಗಿರುತ್ತದೆ.

ಈ ಪರಿಸರದಲ್ಲಿ ಕಾಡು ಪ್ರಾಣಿಗಳೂ ಇಲ್ಲವಾದರೂ ಇಲಿ, ಹೆಗ್ಗಣ, ಮುಂಗುಸಿ, ಹಾವುಗಳು ಹೊರತು ಪಡಿಸಿ ಬೇರೆ ಯಾವುದೇ ಪ್ರಾಣಿಗಳು ಕಂಡು ಬರುವುದಿಲ್ಲ. ಕೃಷಿ ಹೈನುಗಾರಿಕೆಗಾಗಿ ಹಸು, ಎಮ್ಮೆ, ಎತ್ತು, ಕುರಿಗಳನ್ನು ಹಾಗೂ ಕೋಳಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಗೊರವಂಕ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳ ಗಳಿವೆ.

ಇಲ್ಲಿನ ಹವಾಮಾನ ಉಷ್ಣಾಂಶ ಅಧಿಕವಾಗಿದೆ. ಬಿಸಿ ತಾಪಮಾನದಿಂದ ಕೂಡಿದ್ದು, ಕಳೆದ ಐದು ವರ್ಷಗಳಲ್ಲಿ ಶೇ. ೫೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೭-೩೮೦ ಸೆಂ.ರಷ್ಟು ಇದ್ದು, ಚಳಿಯು ೧೦-೧೧೦ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ಸಾರ್ವಜನಿಕ ಸಾಮೂಹಿಕ ಹಾಗೂ ಖಾಸಗಿಯಾಗಿ ನಲ್ಲಿ ಸಂಪರ್ಕ ಪಡೆದಿದ್ದಾರೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಬಲಿಜ ಜನಾಂಗ ದೊಡ್ಡ ಸಮುದಾಯವಾಗಿದ್ದು, ವಾಸ್ತವವಾಗಿ ಬಲಿಜಿಗ ಜನಾಂಗವನ್ನು ಸಿರಾ ನಗರದಲ್ಲಿ ಸೊಪ್ಪಿನಹಟ್ಟಿಯವರು ಸೊಪ್ಪಿನವರು ಎಂದೇ ಪರ್ಯಾಯ ಹೆಸರುಗಳಿಂದ ಕರೆಯುತ್ತಾರೆ. ಕೆಲವರು ಗೌಡ ಬಲಿಜಿಗ ಎಂದು ಕರೆದುಕೊಳ್ಳುತ್ತಾರೆ. ನಾಯಕ, ವೈಶ್ಯ, ಲಾಡ್‌ರು, ದರ್ಜಿ, ರಜಪೂತ, ಕುರುಬರು, ಅಕ್ಕಸಾಲಿಗರು, ಮುಸ್ಲಿಂ, ಕಮ್ಮಾರರು, ಲಿಂಗಾಯಿತರು ಕಿರುಸಮುದಾಯಗಳಾಗಿವೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಮಾಳಿಗೆಯ, ಹೆಂಚಿನ ಮನೆ, ಶೀಟಿನ ಮನೆಗಳು ಸೇರಿ ಒಟ್ಟು ೬೨೩ ಮನೆಗಳಿದ್ದು, ೧೬೧೨ ಜನಸಂಖ್ಯೆ ಹೊಂದಿದ್ದಾರೆ. ಇವು ಆಶ್ರಯ ಯೋಜನೆ, ಜನತಾ ವಸತಿ ಯೋಜನೆ, ಅಂಬೇಡ್ಕರ್ ಆವಾಸ್ ಯೋಜನೆಯ ೪೦ ಫಲಾನುಭವಿಗಳಿದ್ದಾರೆ. ಎಲ್ಲ ಮನೆಗಳೂ ಭಾಗ್ಯಜ್ಯೋತಿ ಯೋಜನೆ ಅಡಿಯಲ್ಲಿ ಉಚಿತ ವಿದ್ಯುತ್ ಸಂಪರ್ಕ ಹೊಂದಿದೆ. ೬೦೦ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ.

ಗ್ರಾಮದಲ್ಲಿ ಮುಖ್ಯ ಭಾಷೆ ಕನ್ನಡವಾಗಿದೆ. ಉರ್ದು, ತೆಲುಗು, ಹಿಂದಿ, ಮರಾಠಿ ಭಾಷೆಗಳನ್ನು ಬಳಸುತ್ತಾರೆ.

ಸಾಂಪ್ರದಾಯಿಕ ಒಂಟಿ ಎತ್ತಿನಗಾಡಿಗಳಿವೆ. ಆಧುನಿಕ ವಾಹನಗಳಾದ ವೆಂಕಟೇಶ್ವರ, ಹಾಗೂ ನೋಕಿಯಾ ಬಸ್‌ಗಳು ಸಾರಿಗೆ ಸೇವೆಯಲ್ಲಿ ತೊಡಗಿಸಿಕೊಂಡಿವೆ. ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹೊಂದಿದ್ದಾರೆ. ಕೆಲವು ರೈತರು ಇಲ್ಲಿರುವ ತಮ್ಮ ಹೊಲ-ಗದ್ದೆಗಳಲ್ಲಿ ಭತ್ತ, ರಾಗಿ, ಜೋಳ, ಸೂರ್ಯಕಾಂತಿ, ತೊಗರಿ, ಶೇಂಗಾ ಬೆಳೆಯನ್ನು ಬೆಳೆಯುತ್ತಾರೆ. ಅಡಿಕೆ, ತೆಂಗು ತೋಟಗಾರಿಕೆ ಇದ್ದು, ಮಹಿಳೆಯರು ಬೀಡಿ ಸುತ್ತುವ, ಬಟ್ಟೆ ಹೊಲಿಯುವ, ಹೂಕಟ್ಟುವ ಕಾಯಕ ಮಾಡುತ್ತಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಗ್ರಾಮದಲ್ಲಿ ಪೋಲೀಸ್, ಸಾರಿಗೆ, ಪುರಸಭೆ, ವಾಣಿಜ್ಯ ತೆರಿಗೆ, ಬ್ಯಾಂಕಿಂಗ್, ಶಿಕ್ಷಣ ಇಲಾಖೆಗೆ ಸೇರಿದಂತೆ ಒಟ್ಟು ೪೩ ಜನ ನೌಕರರು ಇದ್ದಾರೆ. ಖಾಸಗಿ ವೈದ್ಯರು, ಉಪನ್ಯಾಸಕರು, ವಕೀಲರು ಇದ್ದಾರೆ. ನಿವೃತ್ತ ಮುಖ್ಯ ನ್ಯಾಯಾಧೀಶರಾದ ಎಸ್.ಎನ್. ಕೆಂಚಣ್ಣ ವಾರ್ಡಿನ ವಿಶೇಷವಾಗಿದ್ದಾರೆ. ಚಾರ್ಟಡ್ ಆಡಿಟರ್ ಹಾಗೂ ಸಿರಾ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಎಸ್.ಆರ್. ಶಿವಕುಮಾರ್ ಇದೇ ಬಡಾವಣೆಯವರು ಎಂಬುದು ವಿಶೇಷವಾಗಿದೆ. ಉಪನ್ಯಾಸಕ ಅಶೋಕ್‌ಕುಮಾರ್,

ಶ್ರೀಹರ್ಷ ಸೇರಿದಂತೆ, ಉಪನ್ಯಾಸಕರು ಇದ್ದಾರೆ. ಸಾಂಪ್ರದಾಯಿಕ ಗುಡಿಕೈಗಾರಿಕೆಯಾದ ಕಮ್ಮಾರರು ಇದ್ದು, ಕಮ್ಮಾರಿಕೆ ಸಹಕಾರ ಸಂಘ ನಿರ್ಮಿಸಿಕೊಂಡು ಸಂಘಟಿತರಾಗಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ವ್ಯಾಪ್ತಿಗೆ ಒಳಪಟ್ಟಿದ್ದು, ಸಿರಾ ನಗರ ಸಭೆಯ ವಾರ್ಡ್ ನಂ, ೯ ರ ವ್ಯಾಪ್ತಿ ಬರುತ್ತಿದ್ದು, ಶುಭರಮೇಶ್ ಈ ವಾರ್ಡ್‌ನ ನಗರಸಭಾ ಸದಸ್ಯರಾಗಿದ್ದಾರೆ. ಒಂದು ಅಂಚೆ ಕಛೇರಿ ಕಾರ್ಯ ನಿರ್ವಹಿಸುತ್ತಿದೆ. ನ್ಯಾಯಬೆಲೆ ಅಂಗಡಿ ಇದೆ. ೪ ಧರ್ಮಸ್ಥಳ ಗ್ರಾಮೀಭಿವೃದ್ಧಿ ಸ್ವಸಹಾಯ ಸಂಘಗಳಿವೆ. ೭ ಸ್ತ್ರೀ ಶಕ್ತಿ ಗುಂಪುಗಳೂ ಇವೆ. ಶೈಕ್ಷಣಿಕವಾಗಿ ಪೂಣಂ ಶಾಲೆ, ಒಂದು ಅಂಗನವಾಡಿ ಕೇಂದ್ರವಿದೆ. ಸೊಪ್ಪಿನಹಟ್ಟಿ, ಲಾರ್ಡ್‌ಪುರಕ್ಕೆ ಹೊಂದಿಕೊಂಡಂತೆ ಸೊಪ್ಪಿನಹಟ್ಟಿ ಸರ್ಕಾರಿ ಪ್ರಾಥಮಿಕ ಶಾಲೆ ಇದ್ದು, ಉತ್ತಮ ಫಲಿತಾಂಶದಿಂದ ಹೆಸರಾಗಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಕಾಂಪೌಂಡ್, ಸಮವಸ್ತ್ರ, ಉಚಿತ ಪಠ್ಯಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೮೫ ರಷ್ಟಿದೆ. ಎರಡು ಮೆಡಿಕಲ್ ಸ್ಟೋರ್ಸ್‌ಗಳಿವೆ. ೬ ಚಿನ್ನದ ಅಂಗಡಿ, ೧೦ ಹೋಟೆಲ್‌ಗಳು, ೧೦ ಕಿರಾಣಿ ಅಂಗಡಿಗಳು, ೪ ಕಟಿಂಗ್ ಶಾಪ್‌ಗಳಿವೆ. ೨ ಫ್ಲೋರ್ ಮಿಲ್‌ಗಳಿವೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಭೂತಪ್ಪನ ಗುಡಿ, ವೀರಗಾರರ ಗುಡಿ, ಶ್ರೀರಾಮ, ಮಾರಮ್ಮ, ದುರ್ಗಮ್ಮನ ದೇವಾಲಯ ಗಳಿವೆ. ಊರ ಮುಖ್ಯ ದೇವತೆ ದುರ್ಗಮ್ಮನ ಕಳಸ ಇದೇ ಬಡಾವಣೆಯಿಂದ ಹೊರಡುವ, ಆಕರ್ಷಕ ಜಿನೋತ್ಸವ ಮೆರವಣಿಗೆ ನಡೆಯುತ್ತದೆ. ಹಾಗಾಗಿಯೇ ಧಾರ್ಮಿಕವಾಗಿ ಈ ಬಡಾವಣೆಗೆ ವಿಶೇಷ ಮಹತ್ವವಿದೆ. ಉಳಿದಂತೆ ಈ ಬನ್ನಿ ಮಂಟಪ ಈ ಬಡಾವಣೆಗೆ ಹೊಂದಿಕೊಂಡಿದ್ದು, ದಸರಾ ಹಬ್ಬದಂದೇ ದೇವತೆಗಳ ಗದ್ದಿಗೆ, ಬನ್ನಿ ಉತ್ಸವ ಏರ್ಪಡುತ್ತದೆ. ಒಂದು ಲಕ್ಷ ಮೀರಿ ಜನ ಸೇರುವುದು ಇಲ್ಲಿನ ವಿಶೇಷ.

ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ. ಬನ್ನಿ ಯುವಕರ ಸಂಘವಿದೆ. ಸ್ವಾತಂತ್ರ್ಯ ಹೋರಾಟಗಾರ ಮೀಸೆ ನರಸಿಂಹಯ್ಯ ಇದೇ ಬಡಾವಣೆಯವರು ಯುವ ರಾಜ್ಯ ಪ್ರಶಸ್ತಿ ಪುರಸ್ಕೃತ ಡಾ.ಎಸ್.ಆರ್. ರಮೇಶ್ ಇದೇ ಬಡಾವಣೆಯವರಾಗಿದ್ದು ಸದ್ಯ ಬೇರೆ ಕಡೆ ಇರುತ್ತಾರೆ.

ಸೊಪ್ಪಿನಹಟ್ಟಿ ಬನ್ನಿ ನಗರ ಎಂದೇ ಗುರುತಿಸಿಕೊಂಡಿದ್ದು, ಸಾಂಸ್ಕೃತಿಕ, ಧಾರ್ಮಿಕವಾಗಿ ಉತ್ತಮ ಸಾಧನೆ ತೋರುತ್ತಿರುವುದು ಈ ಬಡಾವಣೆಯ ವಿಶೇಷವಾಗಿದೆ.

## ಲಾಡ್‌ಪುರ – ಭವಾನಿನಗರ– ವಾರ್ಡ್ ನಂ. ೧೦

ಭವಾನಿ ನಗರ, ಲಾಡ್ ಪುರ, ಶ್ರೀರಾಮನಗರ, ಚಿಕ್ಕಕೆರೆಯ ಅಂಗಳ, ಹೊಲಮಾಳ ಎಂದೆಲ್ಲಾ ಕರೆದುಕೊಳ್ಳುವ ಈ ಬಡಾವಣೆ ಸಿರಾ ನಗರದ ಸಾಂಸ್ಕೃತಿಕ, ಧಾರ್ಮಿಕ ಚಾರಿತ್ರಿಕವಾಗಿಯೂ ಮಹತ್ವವಾದುದು, ಶಿವಾಜಿ ಮಹಾರಾಜರ ಕಾಲದಲ್ಲಿ ಮಹಾರಾಷ್ಟ್ರ ಕಡೆಯಿಂದ ಬಂದ ಲಾಡ್ ಜನಾಂಗ ಹೆಚ್ಚಿನ ಸಂಖ್ಯೆಯಲ್ಲಿ ಈ ಭಾಗದಲ್ಲಿ ವಸತಿ ನಿರ್ಮಿಸಿಕೊಂಡಿದ್ದರಿಂದ ಆ ಜನಾಂಗಿಕ ಹೆಸರಿನಲ್ಲಿಯೇ ಲಾರ್ಡ್ ಪುರ ಎಂದೂ, ಲಾರ್ಡ್ ಪುರ ಬೆಳೆದಂತೆ, ಲಾಡ್ ಜನಾಂಗದ ಅದಿದೇವತೆ ಭವಾನಿ ದೇವಿ ಗುಡಿಯವರೆಗೆ ಹೊಸ ಬಡಾವಣೆ ನಿರ್ಮಾಣವಾಗಿ ಬೃಹತ್ತಾಗಿ ಬೆಳೆದಿರುವುದರಿಂದ ಭವಾನಿ ನಗರ–ಎರಡನ್ನು ಕೂಡಿಸಿ ೧೦ನೇ ವಾರ್ಡ್ ಎಂದು ವಿಭಾಗಿಸಿದೆ.

ಸೊಪ್ಪಿನಹಟ್ಟಿ ಶಾಲೆಯ ಉತ್ತರ ಹಾಗೂ ಪೂರ್ವದ ಚಿಕ್ಕೆರೆ ಅಂಗಳ–ಕಮ್ಮಾರ ಸಂಘದ ಮನೆಯಿಂದ ಮೇಲಕ್ಕೆ ಹಾಗೆಯೇ ದೊಡ್ಡ ಮೋರಿಯನ್ನು ಬಳಸಿಕೊಂಡು, ಚಳ್ಳಕೇರಮ್ಮನ ಗುಡಿಯ ಮುಂಭಾಗದ ಕೇರಿಯಿಂದ, ಮತ್ತೆ ಎಡಕ್ಕೆ ಶ್ರೀ ಬನ್ನಿ ಮೈದಾನದ, ಬನ್ನಿ ಮಂಟಪ ಓಜಗುಂಟೆ ರಸ್ತೆಯ ನೇರಕ್ಕೆ, ಮಾನವ ವಿದ್ಯಾಮಂದಿರ ಈ ಎಲ್ಲವೂ ಈ ಬಡಾವಣೆಯ ವ್ಯಾಪ್ತಿಗೆ ಸೇರುತವೆ. ಪೂರ್ವಕ್ಕೆ ಚಿಕ್ಕಕೆರೆ ಅಂಗಳ, ಶ್ರೀರಾಮ ದೇವಾಲಯ, ಸಾರ್ವಜನಿಕ ಶೌಚಾಲಯ, ಮಾಲಿವಂಶಸ್ಥರ ಮನೆ, ಮಾಲಿ ಪಾರ್ಕ್‌ನ ಹಳೆಯ ಬಾವಿಗಳು, ಈಬಡಾವಣೆ ಗಡಿಗಳಾಗಿವೆ.

ಸಿರಾ ನಗರ ಸಭೆಯಿಂದ ಉತ್ತರಕ್ಕೆ ಅರ್ಧ ಕಿ.ಮೀ. ವ್ಯಾಪ್ತಿಯಲ್ಲಿ ಈ ಬಡಾವಣೆಯಿದ್ದು, ಕಪ್ಪು, ಮರಳು ಮಿಶ್ರಿತ ಮಣ್ಣಿನಿಂದ ಕೂಡಿದೆ. ಉತ್ತರಕ್ಕೆ ಚಿಕ್ಕಕೆರೆ ಹಿಂಭಾಗದ ಬಯಲು, ಓಜಗುಂಟೆ ತೋಟಸಾಲು, ಪೂರ್ವಕ್ಕೆ ಚಿಕ್ಕಕೆರೆ, ಇರುವುದರಿಂದ ಈ ಪರಿಸರದಲ್ಲಿ ಇಲಿ, ಹೆಗ್ಗಣ, ಮುಂಗುಸಿ, ಮಂಗ, ಬೆಕ್ಕು, ಹಾವುಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಕೃಷಿ ಹೈನುಗಾರಿಕೆಗಾಗಿ ಹಸು, ಎಮ್ಮೆ, ಎತ್ತು, ಕುರಿಗಳನ್ನು ಹಾಗೂ ಕೋಳಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳಿವೆ.

ಇಲ್ಲಿನ ಹವಾಮಾನ ಉಷ್ಣಾಂಶ ಅಧಿಕವಾಗಿದೆ. ಬಿಸಿ ತಾಪಮಾನದಿಂದ ಕೂಡಿದ್ದು, ಕಳೆದ ಐದು ವರ್ಷಗಳಲ್ಲಿ ಶೇ. ೫೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೭–೩೮೦

ಸೆಂ.ರಷ್ಟು ಇದ್ದು, ಚಳಿಯು ೧೦–೧೧ಂ ಸೆಂ. ಇರುತ್ತದೆ. ಹೈದರಾಲಿ, ಟಿಪ್ಪು ಕಾಲದ ಪುಷ್ಪೋದ್ಯಾನ ಬೆಳೆಸಲು ನೀರನ್ನು ಬಳಸುತ್ತಿದ್ದರು. ಇದು ಬೆಂಗಳೂರಿನ ಲಾಲ್‌ಬಾಗ್ ನಿರ್ಮಾಣಕ್ಕೆ ಪ್ರೇರಕ. ವಂಶಸ್ಥರ ಮನೆ ಇದೆ. ಬಡಾವಣೆಯೂ ಇಲ್ಲಿದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ಸಾರ್ವಜನಿಕ ನಲ್ಲಿಗಳೇ ಅಧಿಕವಾಗಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ದೊಡ್ಡ ಸಮುದಾಯ ವಾಗಿದ್ದು, ಶ್ರೀರಾಮ ಬಡಾವಣೆ, ಉಳಿದಂತೆ ಲಾಡ್‌ರು, ಮುಸ್ಲಿಂ, ಕುರುಬರು, ಅಕ್ಕಸಾಲಿಗರು, ಕಮ್ಮಾರರು, ಕುಂಚಿಟಿಗ, ಗೊಲ್ಲರು, ತಿಗಳರು, ದಾಸರು, ಲಿಂಗಾಯಿತರು ಕಿರುಸಮುದಾಯಗಳಾಗಿವೆ.

ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದ್ದು, ಮರಾಠಿ, ತೆಲುಗು, ಉರ್ದು ಮಾತನಾಡುತ್ತಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಮಾಳಿಗೆಯ, ಹೆಂಚಿನ ಮನೆ, ಶೀಟಿನ ಮನೆಗಳಿದ್ದು, ಇವು ಸ್ಲಂ ಬೋರ್ಡ್, ಇಂದಿರಾ ಆವಾಸ್ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ಅಡಿಯಲ್ಲಿ ರಚನೆಯಾಗಿವೆ.

ಸಾಂಪ್ರದಾಯಿಕ ಎತ್ತಿನಗಾಡಿ, ಒಂಟಿ ಎತ್ತಿನಗಾಡಿಗಳಿವೆ. ಆಧುನಿಕ ವಾಹನಗಳಾದ ವೆಂಕಟೇಶ್ವರ, ಹಾಗೂ ನೋಕಿಯಾ ಬಸ್‌ಗಳು ಸಾರಿಗೆ ಸೇವೆಯಲ್ಲಿ ತೊಡಗಿಸಿಕೊಂಡಿವೆ. ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹೊಂದಿದ್ದಾರೆ. ಕೆಲವು ರೈತರು ಇಲ್ಲಿರುವ ತಮ್ಮ ಹೊಲ–ಗದ್ದೆಗಳಲ್ಲಿ ಭತ್ತ, ರಾಗಿ, ಜೋಳ, ಸೂರ್ಯಕಾಂತಿ, ತೊಗರಿ, ಶೇಂಗಾ ಬೆಳೆಯನ್ನು ಬೆಳೆಯುತ್ತಾರೆ. ಅಡಿಕೆ, ತೆಂಗು ತೋಟಗಾರಿಕೆ ಇದ್ದು, ಸಾರಿಗೆ, ಪೌರಕಾರ್ಮಿಕ, ಇಲಾಖೆಯಲ್ಲಿ ೬ ಜನ ಸರ್ಕಾರಿ ನೌಕರರಿದ್ದಾರೆ. ಮಹಿಳೆಯರು ಬೀಡಿ ಸುತ್ತುವ, ಬಟ್ಟೆ ಹೊಲಿಯುವ, ಹೂಕಟ್ಟುವ ಕಾಯಕ ಮಾಡುತ್ತಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ವ್ಯಾಪ್ತಿಗೆ ಒಳಪಟ್ಟಿದ್ದು, ಪಿ.ಆಂಜನಪ್ಪ ಈ ಭಾಗದ ನಗರಸಭಾ ಸದಸ್ಯರಾಗಿದ್ದಾರೆ. ೬ ಧರ್ಮಸ್ಥಳ ಗ್ರಾಮೀಣಭಿವೃದ್ಧಿ ಸ್ವಸಹಾಯ ಸಂಘಗಳಿವೆ. ೬ ಸ್ತ್ರೀ ಶಕ್ತಿ ಗುಂಪುಗಳೂ ಇವೆ. ಧರ್ಮಸ್ಥಳ ಶುದ್ಧ ಕುಡಿಯುವ ನೀರನ್ನು ಒದಗಿಸುವ ಒಂದು ಟ್ಯಾಂಕ್ ನೀರು ಶುದ್ಧೀಕರಣ ಘಟಕವಿದೆ. ಶೈಕ್ಷಣಿಕವಾಗಿ ಸೊಪ್ಪಿನಹಟ್ಟಿ ಶಾಲೆ. ಮಾಧವ ವಿದ್ಯಾ ಮಂದಿರ, ಒಂದು ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಕಾಂಪೌಂಡ್, ಸಮವಸ್ತ್ರ, ಉಚಿತ ಪಠ್ಯಪುಸ್ತಕಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೬೦ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧೦ ಪೆಟ್ಟಿಗೆ ಅಂಗಡಿಗಳು, ೪ ಹೋಟೆಲ್, ೨ ಟೈಲರಿಂಗ್ ಅಂಗಡಿಗಳಿವೆ.

ಪ್ರಾಚೀನ ಕಾಲದ ಒಂದು ಮಸೀದಿ, ಭವಾನಿ ದೇವಾಲಯ, ಖಾನ್ ಬಾಗ್ ತಪೋಧ್ಯಾನ, ಹಳೆಯ ಬಾವಿ, ಕಲ್ಯಾಣಿ ಇದ್ದು ಇವು ಗತಕಾಲದ ನೆನಪಿನ ರೂಪವಾಗಿವೆ.

ಬನ್ನಿನಗರ ಎಂದು ಖ್ಯಾತಿಯಾಗಿರುವ, ಬನ್ನಿ ನಗರದ ಬನ್ನಿ ಮಂಟಪ, ದಸರಾ ಮಹೋತ್ಸವಕ್ಕೆ ಹೆಸರುವಾಸಿ. ಅಂದು ಆಯುಧ ಪೂಜೆ, ಬನ್ನಿ ಉತ್ಸವ,  ಬನ್ನಿ ಕಡಿಯುವ, ಬನ್ನಿ ಗದ್ದುಗೆ ಉತ್ಸವದಲ್ಲಿ ಸಿರಾ ನಗರದ ಎಲ್ಲಾ ದೇವರುಗಳು ಇಲ್ಲಿವೆ. ಭಿಜಂಗೈಯ್ಯುತ್ತವೆ. ಗದ್ದಿಗೆ, ಬನ್ನಿ ಮರ ಕಡಿತದ ಮೇಲೆ ಹಿಂತಿರುಗುತ್ತವೆ. ಈ ಸಂದರ್ಭ ಸಂಜೆ ಏಳು ಗಂಟೆಯಿಂದ ರಾತ್ರಿ ೧೦ ಗಂಟೆಯ ತನಕ ಬನ್ನಿ ಮಂಟಪ, ಸಾಂಸ್ಕೃತಿಕ ರಸದೌತಣ, ಬಗೆ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳು, ದೇವರುಗಳು ಮೆರವಣಿಗೆ, ಹರಿಗೆ, ಸೋಮನ ಕುಣಿತ, ವೀರಗಾಸೆ, ಕೋಲಾಟ, ಕರಡಿ, ನಾಗಸ್ವರ, ಬಗೆಬಗೆಯ ವಾದನಗಳು ರೋಮಾಂಚನಗೊಳ್ಳುತ್ತವೆ. ಒಂದು ಪಟ್ಟ ಬನ್ನಿ ಮಂಟಪ ೩ ಗಂಟೆಯ ಈ ಅವಧಿಯೊಳಗೆ ಒಂದು ಲಕ್ಷಕ್ಕೂ ಮೀರಿದ ಜನ ಸಿರಾ ನಗರದ ಅಪರೂಪದ, ಸಾಂಸ್ಕೃತಿಕ ಕೇಂದ್ರ ಬನ್ನಿ ಗೆಳೆಯರ ಬಳಗ ಆಕರ್ಷಕ ದೀಪಾಲಂಕಾರ, ಅಲಂಕಾರದ ವ್ಯವಸ್ಥೆ ಮಾಡುತ್ತಾರೆ. ಭವಾನಿಮ್ಮನ ವಿಸ್ತಾರ ದೇಗುಲ, ಕಲ್ಯಾಣ, ಪ್ರಾಂಗಣ ಗೋಪುರವಿದೆ. ಶ್ರೀರಾಮ ದೇವಾಲಯವೂ ವಿಶಾಲ ಕಾಂಪೌಂಡ್ ಸಮೇತ ವಿಶಾಲವಾಗಿದೆ. ಬನ್ನಿ ಆಂಜನೇಯ ದೇವಾಲಯ ಪಾರ್ಕ್ ಒಳಗೆ ಸೊಗಸಾಗಿದೆ. ೨ ನಾಗರ ಕಟ್ಟೆಗಳಿವೆ. ಮುಸ್ಲಿಂ ಜನಾಂಗದ ಒಂದು ಸ್ಮಶಾನವಿದೆ. ಚಿನ್ನದ ಗೋರಿ ಮಸೀದಿ ಇದೆ.

## ಕಚೇರಿ ಮೊಹಲ್ಲಾ ವಾರ್ಡ್ ನಂ.೧೧

ಕಚೇರಿ ಮೊಹಲ್ಲಾ ಸಿರಾ ನಗರದ ಮಧುಗಿರಿ ಸಿರಾ ಮುಖ್ಯ ರಸ್ತೆಯ, ನಾರಾಯಣ ಸ್ವಾಮಿ ಬಯಲು ಮಂಟಪದ ಎದುರಿಗೆ, ಆಂಜನೇಯನ ದೇವಾಲಯ, ಕೃಷಿ ಇಲಾಖೆ, ಪೊಲೀಸ್ ಸ್ಟೇಷನ್‌ನಿಂದ ಉತ್ತರಕ್ಕೆ ರಂಗನಾಥ ರೈಸ್ ಮಿಲ್,

ಬನ್ನಿನಗರ ರಸ್ತೆಯ ಮಾರಮ್ಮನ ಗುಡಿ ಬೀದಿಯ ಬಲಭಾಗಕ್ಕೆ ತಿರುಗಿ, ಶ್ರೀರಾಮ ದೇವಸ್ಥಾನದಿಂದ ದೊಡ್ಡ ಮೋರಿಯ ತನಕ ಇದರ ವ್ಯಾಪ್ತಿ ಹರಡಿದೆ. ಉತ್ತರಕ್ಕೆ ಲಾಡ್ ಪುರ, ದಕ್ಷಿಣಕ್ಕೆ ವಾಸವಿ ಶಾಲೆ, ಪೂರ್ವಕ್ಕೆ ದೊಡ್ಡ ಮೋರಿ ಭಾಗದವರೆಗೆ ಇದರ ವ್ಯಾಪ್ತಿ ಇದೆ. ಕಂಪನಿ ಸರ್ಕಾರದಲ್ಲಿ ತಾಲ್ಲೂಕು ಕಚೇರಿ ಈಗಿನ ಆಂಜನೇಯ ದೇವಾಲಯ ಹಾಗೂ ಕೃಷಿ ಇಲಾಖೆಯ ವ್ಯಾಪ್ತಿಯಲ್ಲಿ ಇದ್ದು, ತಹಸೀಲ್ದಾರ್ ಆಡಳಿತದ ಮುಖ್ಯಸ್ಥರಾಗಿದ್ದರು. ಆ ಕಾರಣದಿಂದಾಗಿ ಅರೇಬಿಕ್ ಮೂಲದಿಂದಾಗಿ ಕಛೇರಿ ಮೊಹಲ್ಲಾ(ಬಡಾವಣೆ) ಎಂಬ ಹೆಸರು ಬಂದಿದೆ. ಇಂದಿಗೂ ಹೆಚ್ಚು ಜನ ಮುಸ್ಲಿಂ ಸಮುದಾಯದವರೇ ಇರುವುದು ಈ ಬಡಾವಣೆಯ ವಿಶೇಷವಾಗಿದೆ.

ಕೆಂಪು ಮಿಶ್ರಿತ ಕಪ್ಪು ಮರಳು ಭೂ ಪ್ರದೇಶವಾಗಿದ್ದು, ಈ ಪರಿಸರದಲ್ಲಿ ಇಲಿ, ಹೆಗ್ಗಣ, ಮುಂಗುಸಿ, ಮಂಗ, ಬೆಕ್ಕು, ಕಂಡು ಬಂದರೆ, ಕೃಷಿ ಹೈನುಗಾರಿಕೆಗಾಗಿ ಹಸು, ಎಮ್ಮೆ, ಎತ್ತು, ಕುರಿಗಳನ್ನು ಹಾಗೂ ಕೋಳಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಬಾತುಕೋಳಿ, ಪಾರಿವಾಳಗಳಿವೆ.

ಶ್ರೀರಾಮದೇವರ ಗುಡಿ ಆವರಣದಲ್ಲಿ ೪ ಮರಗಳಲ್ಲಿ ಕೊಕ್ಕರೆಗಳ ವಾಸಸ್ಥಳ ವಾಗಿದ್ದು, ಸರಾಸರಿ ಒಂದು ಸಾವಿರಕ್ಕೂ ಅಧಿಕ ಕೊಕ್ಕರೆಗಳು ಪ್ರತಿ ಸಂಜೆ ೫ ಗಂಟೆಗೆ ಕಲೆಯುವುದು ಇಲ್ಲಿನ ವಿಶೇಷವಾಗಿದೆ.

ಇಲ್ಲಿನ ಹವಾಮಾನ ಉಷ್ಣಾಂಶ ಅಧಿಕವಾಗಿದೆ. ಬಿಸಿ ತಾಪಮಾನದಿಂದ ಕೂಡಿದ್ದು, ವಾರ್ಷಿಕ ಸರಾಸರಿ ಮಳೆ ಶೇ. ೫೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೭-೩೮ಂ ಸೆಂ.ರಷ್ಟು ಇದ್ದು, ಚಳಿಯು ೧೦-೧೧ಂ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೨೧೪ ಸಾರ್ವಜನಿಕ ನಲ್ಲಿಗಳ ಸಂಪರ್ಕವಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಮುಸ್ಲಿಂ ಜನಾಂಗ ದೊಡ್ಡ ಸಮುದಾಯ ವಾಗಿದ್ದು, ಉಳಿದಂತೆ ವೈಶ್ಯರು, ಅಕ್ಕಸಾಲಿಗರು, ಬಲಿಜಿಗರು, ನಾಯಕರು, ಲಿಂಗಾಯಿತರು ಕಿರುಸಮುದಾಯಗಳಾಗಿವೆ.

ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದ್ದು, ತೆಲುಗು, ಉರ್ದು ಮಾತ ನಾಡುತ್ತಾರೆ. ಗ್ರಾಮದಲ್ಲಿ ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಸ್ವರೂಪದ ೩೭೯ ಮನೆಗಳಿದ್ದು, ಇಲ್ಲಿ ಜನತಾ, ವಾಜಪೇಯಿ ಆವಾಸ್, ಇಂದಿರಾ ಆವಾಸ್ ಯೋಜನೆಯ ೧೦೨ ಫಲಾನುಭವಿಗಳಿದ್ದಾರೆ. ೨೪೩ ಮನೆಗಳು ಶೌಚಾಲಯದ ಸೌಲಭ್ಯವಿದೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಬಡಾವಣೆಯ ಹೊರವಲಯ ಉತ್ತರ ಪೂರ್ವಕ್ಕೆ ಚಿಕ್ಕ ಕೆರೆಯಿದೆ. ಗ್ಯಾರೇಜ್, ಬೀಡಿ ಸುತ್ತುವ, ದವಸ ವ್ಯಾಪಾರಗಳ ಸರಕಾಗಿದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಾಲೇಜು ಶಿಕ್ಷಣ ಪ್ರೊ. ಶಾಮಸಾಬ್ ಮುಜಾವರ, ಪ್ರೊ. ಅಸೀಬಾರಾನಂ ಸೇರಿದಂತೆ ಪೋಲೀಸ್, ಸಾರಿಗೆ, ಕಂದಾಯ, ಇಲಾಖೆಯ ನೌಕರರು ಇದ್ದಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ವಾರ್ಡ್ ನಂ. ೧೧ ಕ್ಕೆ ಸೇರಿದ್ದು, ತಬಸುಮ್ ಬಾನು ಇಲ್ಲಿನ ನಗರಸಭೆಯ ಸದಸ್ಯರಾಗಿದ್ದಾರೆ. ಕಂದಾಯ, ಕೆ.ಇ.ಬಿ. ನ್ಯಾಯಾಲಯ, ಸಿರಾ ನಗರದಲ್ಲಿ ಸೌಲಭ್ಯ ಪಡೆಯುತ್ತಿದ್ದಾರೆ. ೩ ಸ್ತ್ರೀ ಶಕ್ತಿ ಗುಂಪುಗಳೂ ಇವೆ.

ಶೈಕ್ಷಣಿಕವಾಗಿ ವಾಸವಿ ಶಾಲೆ. ಸರ್ಕಾರಿ ಉರ್ದು ಶಾಲೆ ಇದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಕಾಂಪೌಂಡ್, ಸಮವಸ್ತ್ರ, ಉಚಿತ ಪಠ್ಯಪುಸ್ತಕಗಳ ಸೌಲಭ್ಯವಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೫ ಚಿಲ್ಲರೆ ಅಂಗಡಿಗಳು, ೩ ಹೋಟೆಲ್‌ಗಳು, ೫ದಿನಸಿ ಅಂಗಡಿಗಳು, ಪ್ರೊಫೆಷನಲ್ ಕೊರಿಯರ್ ಆಫೀಸ್, ಗುರು ತಟ್ಟೆ ತಯಾರಿಕಾ ಘಟಕ, ಪೇಪರ್, ಫ್ಲೋರ್ ಮಿಲ್ ೨, ನ್ಯಾಯಬೆಲೆ ಅಂಗಡಿ ಇದೆ. ಕಿರಾಣಿ ಅಂಗಡಿಗಳಿವೆ.

ಹಳೆಯ ಶಕ್ತಿ ಆಂಜನೇಯ ದೇವಾಲಯವಿದೆ. ಹಿಂದು ಮುಸ್ಲಿಂ ಎರಡೂ ಸಮುದಾಯದವರು ಇಲ್ಲಿರುವುದರಿಂದ ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ರಂಜಾನ್, ಬಕ್ರೀದ್, ಈದ್‌ಮಿಲಾದ್, ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸು ತ್ತಾರೆ.

## ಸಿರಾನಿ ಮೊಹಲ್ಲಾ ವಾರ್ಡ್ ನಂ. ೧೨

ಸಿರಾನಿ ಮೊಹಲ್ಲಾ ಸಿರಾ ನಗರ ಸಭೆಯಿಂದ ಪೂರ್ವಕ್ಕೆ ಅರ್ಧ ಕಿ.ಮೀ ದೂರದಲ್ಲಿದೆ. ಸಿರಾ ಮಧುಗಿರಿ ಮುಖ್ಯ ರಸ್ತೆಯ ಎಡಭಾಗದಲ್ಲಿದೆ. ಕನ್ನಿಕಾ ಪರಮೇಶ್ವರಿ ದೇವಾಲಯ, ಸಿರಾದ ದೊಡ್ಡಮೋರಿ, ಹಳೆಯ ಆಸ್ಪತ್ರೆ ಸರ್ಕಲ್ ನಿಂದ ಎಡಭಾಗ, ಹುಲೇಹದೀನ್ ಮಸೀದಿಯವರೆಗೆ ಇದರ ವ್ಯಾಪ್ತಿ ಹಬ್ಬಿದೆ. ಉತ್ತರಕ್ಕೆ ಚಿಕ್ಕಕೆರೆ ಇದೆ. ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ನಿರ್ಮಾಣವಾದ ಬಡಾವಣೆ ಇದಾಗಿದೆ. ಬಡಾವಣೆಗೆ ಸಿರಾನಿ ಬಡಾವಣೆ ಎಂದು ಕರೆಯಲಾ ಗುತ್ತದೆ ಎಂದು ಈ ವಾರ್ಡಿನ ಸದಸ್ಯರಾದ ಅಹಮದಿ ಅವರ ಅನಿಸಿಕೆಯಾಗಿದೆ.

ಕಪ್ಪು ಮಿಶ್ರಿತ ಕಪ್ಪು ಮರಳು ಭೂ ಪ್ರದೇಶವಾಗಿದ್ದು, ಈ ಪರಿಸರದಲ್ಲಿ ಇಲಿ, ಹೆಗ್ಗಣ, ಮುಂಗುಸಿ, ಮಂಗ, ಬೆಕ್ಕು, ಕಂಡು ಬಂದರೆ, ಉತ್ತರಕ್ಕೆ ತೋಟಸಾಲು, ಗದ್ದೆ ಬಯಲು, ಪಕ್ಕ ಕೆರೆ ಇರುವುದರಿಂದ ಈ ಭಾಗದಲ್ಲಿ ನರಿ, ಮೊಲ ಪ್ರಾಣಿಗಳು ಆಗಾಗಾ ಕಾಣಿಸಿಕೊಳ್ಳುತ್ತವೆ. ಉಳಿದಂತೆ ರೈತಾಪಿ ಕೃಷಿ ಹೈನುಗಾರಿಕೆಗಾಗಿ ಹಸು, ಎಮ್ಮೆ, ಹಂದಿ, ಎತ್ತು, ಕುರಿಗಳನ್ನು ಹಾಗೂ ಕೋಳಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಬಾತುಕೋಳಿ, ಪಾರಿವಾಳಗಳಿವೆ.

ಇಲ್ಲಿನ ಹವಾಮಾನ ಉಷ್ಣಾಂಶ ಅಧಿಕವಾಗಿದೆ. ಬಿಸಿ ತಾಪಮಾನದಿಂದ ಕೂಡಿದ್ದು, ವಾರ್ಷಿಕ ಸರಾಸರಿ ಮಳೆ ಶೇ. ೬೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೭-೩೮೦ ಸೆಂ.ರಷ್ಟು ಇದ್ದು, ಚಳಿಯು ೧೦-೧೧೦ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಮುಸ್ಲಿಂ ಜನಾಂಗ ದೊಡ್ಡ ಸಮುದಾಯ ವಾಗಿದ್ದು, ಉಳಿದಂತೆ ಅಕ್ಕಸಾಲಿಗರು, ಅಗಸರು, ನಾಯಕರು, ಬೋವಿ, ಕ್ಷೌರಿಕರು, ಆದಿಕರ್ನಾಟಕ, ಕಮ್ಮಾರರು, ಕಿರುಸಮುದಾಯಗಳಾಗಿವೆ.

ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದ್ದು, ತೆಲುಗು, ಉರ್ದು ಮಾತ ನಾಡುತ್ತಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಸ್ವರೂಪದ ೪೮೩ ಮನೆಗಳಿದ್ದು, ೧೪೦ ಮನೆಗಳು ಆಶ್ರಯ, ಕೊಳಚೆ, ನಿರ್ಮೂಲನ ಬೋರ್ಡ್, ವಾಜಪೇಯಿ ಆವಾಸ್, ವಸತಿ ಯೋಜನೆಯ ಅಡಿಯಲ್ಲಿ ರಚನೆಯಾಗಿದೆ. ಉಚಿತ ಭಾಗ್ಯಜ್ಯೋತಿ ಯೋಜನೆಯಲ್ಲಿ ಕರೆಂಟ್ ಸಂಪರ್ಕ ಹೊಂದಿದ್ದಾರೆ. ೨೦೦ ಮನೆಗಳು ಶೌಚಾಲಯದ ಸೌಲಭ್ಯವಿದೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಬಡಾವಣೆಯ ಹೊರವಲಯ ಉತ್ತರ ಪೂರ್ವಕ್ಕೆ ಚಿಕ್ಕ ಕೆರೆಯಿದೆ. ಗ್ಯಾರೇಜ್, ಬೀಡಿ ಸುತ್ತುವ, ದವಸ ವ್ಯಾಪಾರಗಳ ಸರಕಾಗಿದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಸಾರಿಗೆ, ಕಂದಾಯ, ಕೆಇಬಿ, ಆರೋಗ್ಯ, ತೋಟಗಾರಿಕೆ, ಪೌರಕಾರ್ಮಿಕ ಇಲಾಖೆಗಳಲ್ಲಿ ೪೦ ಮಂದಿ ಸರ್ಕಾರಿ ನೌಕರರಿದ್ದಾರೆ. ಹೆಚ್ಚಾಗಿ ಖಾಸಗಿ ಗ್ಯಾರೇಜ್, ಬೀಡಿ ಕಾರ್ಖಾನೆ, ಹಾಗೂ ಅಂಗಡಿಯಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಬೀಡಿ ಕಟ್ಟುವುದು, ಹೂ ಕಟ್ಟುವುದು ಇಲ್ಲಿನ ಮುಖ್ಯ ಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ವ್ಯಾಪ್ತಿಗೆ ಒಳಪಟ್ಟಿದ್ದು, ೪ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳು ಇವೆ.

ಒಂದು ಅಂಗನವಾಡಿ ಕೇಂದ್ರವಿದೆ. ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಕ್ಷೌರಿಕ, ಗ್ಯಾರೇಜ್ ಅಂಗಡಿ, ಟೀ ಅಂಗಡಿ ಸೇರಿದಂತೆ ೧೪ ಅಂಗಡಿಗಳಿವೆ. ಕನ್ನಿಕಾ ಪರಮೇಶ್ವರಿ ದೇವಾಲಯ, ವಾಸವಿ ಕಲ್ಯಾಣ ಮಂಟಪ, ಅಲೇ ಹುದ್ಗೀಸ್ ಮಸೀದಿ, ಒಂದು ಮುಸ್ಲಿಂ ಸಮುದಾಯ ಸ್ಮಶಾನ ಇದೆ. ಈ ಬಡಾವಣೆಗೆ ಹೊಂದಿಕೊಂಡಂತೆ ಚಿಕ್ಕಕೆರೆ ಇದೆ. ಭೂತಪ್ಪನ ಗುಡಿ ಇದೆ.

ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ರಂಜಾನ್, ಬಕ್ರೀದ್, ಈದ್‌ಮಿಲಾದ್, ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ. ಕೋಟೆ ಮಾರಮ್ಮನಿಗೆ ಇಲ್ಲಿಂದ ಆರತಿ, ಬಾನ, ಬ್ಯಾಟೆ ಮಾಡುವ ಸಂಪ್ರದಾಯವಿದೆ.

## ವಾರ್ಡ್ ನಂ. ೧೩. ಗರಿಮಾರಿನ ಹಟ್ಟಿ

ಗರಿಮಾರಿನಹಟ್ಟಿಯು ಸಿರಾ ನಗರ ಮಧುಗಿರಿ ರಸ್ತೆಯ ಬಲಭಾಗಕ್ಕೆ ನಗರಸಭೆಯಿಂದ ಒಂದು ಕಿ.ಮೀ. ದೂರದಲ್ಲಿರುವ ಈ ಬಡಾವಣೆ, ಸಿರಾ ನಗರದ ಹಳೆಯ ಮಾದರಿಯಾಗಿದೆ. ಇದಕ್ಕೆ ಕೋಟೆ ಬಡಾವಣೆಯ ಕೆಲವು ಭಾಗ ಸೇರಿದೆ. ಮರಳು ಮಿಶ್ರಿತ ಕಪ್ಪು ಮಣ್ಣಿನಿಂದ ಕೂಡಿದ್ದು, ಸಿರಾದ ಪೂರ್ವೋತ್ತರವಾಗಿ, ಜಾಜಿಕಟ್ಟೆ ಹಳ್ಳಿ, ಕೊಳಚೆ ಒಳ ಚರಂಡಿ

ಈ ಭಾಗದ ನಡುವೆ ಹರಿದು ಹೋಗುತ್ತದೆ. ಗ್ರಾಮದ ಉತ್ತರಕ್ಕೆ ಚಿಕ್ಕಕೆರೆ–ಬಲಕ್ಕೆ ಜಾಮೀಯ ಮಸೀದಿ, ಕೋಟೆಯ ಭಾಗ, ಶ್ರೀರಕ್ಷಾ ವಿದ್ಯಾನಿಕೇತನ ಶಾಲೆಯ ತನಕ ಇದರ ವಿಸ್ತಾರ ಹಬ್ಬಿದೆ.

ದಾಸರಹಟ್ಟಿ, ಕುಂಬಾರರ ಹಟ್ಟಿ ಈ ಎರಡು ಹಳೆಯ ಬಡಾವಣೆಯ ಹೆಸರಲ್ಲೇ ಈ ಭಾಗ ಪ್ರಸಿದ್ಧವಾಗಿದೆ. ಗರಿಮಾರ ಎಂಬ ವ್ಯಕ್ತಿ ಮೂಲದಿಂದ ಗಲಿಮಾರನಹಟ್ಟಿ ಎಂಬ ಹೆಸರು ಬಂದಿದೆ.

ಈ ಪರಿಸರದಲ್ಲಿ ಇಲಿ, ಹೆಗ್ಗಣ, ಮುಂಗುಸಿ, ಗುಳ್ಳೇನರಿ ಕಾಣಿಸಿಕೊಂಡರೆ, ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಹಂದಿ, ಎತ್ತು, ಕುರಿಗಳನ್ನು ಹಾಗೂ ಕೋಳಿಗಳನ್ನು ಸಾಕಲಾಗಿದೆ. ಹಂದಿ ಈ ಭಾಗದಲ್ಲಿ ವಿಪರೀತ ಎನ್ನುವಂತಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಬಾತುಕೋಳಿ, ಪಾರಿವಾಳಗಳಿವೆ.

ವಾರ್ಷಿಕ ಸರಾಸರಿ ಮಳೆ ಶೇ. ೬೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮–೪೦ಂ ಸೆಂ.ರಷ್ಟು ಇದ್ದು, ಚಳಿಯು ೧೨–೧೩ಂ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೩೮೪ ಮನೆಗಳಿಗೆ ನೀರಿನ ಸಂಪರ್ಕವಿದ್ದರೆ, ಉಳಿದವರು ಸಾರ್ವಜನಿಕ ನಲ್ಲಿ ಸಂಪರ್ಕ ಬಳಕೆ ಮಾಡುತ್ತಿದ್ದಾರೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುಂಬಾರ, ಮುಸ್ಲಿಂ, ಹಾಗೂ ಬಲಿಜಿಗ ಸಮಪ್ರಮಾಣದಲ್ಲಿದ್ದು, ವೀರಶೈವರು, ಕುಂಚಿಟಿಗರು, ಕೊರಚರು, ದಾಸರು, ಕ್ಷೌರಿಕರು ಕಿರುಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದ್ದು, ತೆಲುಗು, ಉರ್ದು, ಲಂಬಾಣಿ ಮಾತ ನಾಡುತ್ತಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಸ್ವರೂಪದ ೩೪೦ ಮನೆಗಳಿದ್ದು, ಇಲ್ಲಿನ ಜನರ ಜನಸಂಖ್ಯೆ ೨೯೬೦ ಹೊಂದಿದ್ದು, ೧೪೦ ಮನೆಗಳು ಜನತಾ, ಆಶ್ರಯ, ಅಂಬೇಡ್ಕರ್ ಆವಾಸ್, ವಸತಿ ಯೋಜನೆಯ ಅಡಿಯಲ್ಲಿ ರಚನೆಯಾಗಿದೆ. ೨೦೦ ಮನೆಗಳು ಶೌಚಾಲಯದ ಸೌಲಭ್ಯವಿದೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ರಾಗಿ, ಶೇಂಗಾ ಮುಖ್ಯ ಬೆಳೆಯಾಗಿದ್ದು, ಜೋಳ, ತೆಂಗು, ಭತ್ತ, ಬೆಳೆಯುತ್ತಾರೆ. ತೆಂಗು, ಭತ್ತ, ಮೆಕ್ಕೆ ಜೋಳ, ಶೇಂಗಾ ಪ್ರಮುಖ ವ್ಯಾಪಾರಿ ಬೆಳೆಗಳು.

ಶಿಕ್ಷಣ, ಸಾರಿಗೆ, ಕಂದಾಯ, ಬಿಸಿಎಂ, ಆರೋಗ್ಯ, ಇಲಾಖೆಗಳಲ್ಲಿ ೧೦೦ ಮಂದಿ ಸರ್ಕಾರಿ ನೌಕರರಿದ್ದಾರೆ. ಶಿಕ್ಷಣ ತಜ್ಞ ಆರ್. ಸಂಜೀವರಾಯಪ್ಪ ಡಿಡಿಪಿಐ ಆಗಿ ನಿವೃತ್ತರಾಗಿದ್ದಾರೆ. ಗುಡಿ ಕೈಗಾರಿಕೆಯಾಗಿ ಮಡಿಕೆ ತಯಾರಿಕೆ, ಕಮ್ಮಾರಿಕೆ, ಹಾಗೂ ಬಡಗಿ ಸಂಪ್ರದಾಯದ ಕಸುಬಿನವರಾಗಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ವ್ಯಾಪ್ತಿಗೆ ಒಳಪಟ್ಟಿದ್ದು, ಅಬ್ದುಲ್ ಖಾದರ್ ಈ ಬಡಾವಣೆಯನ್ನು ನಗರಸಭೆಗೆ ಪ್ರತಿನಿಧಿಯಾಗಿದ್ದಾರೆ. ಅಂಚೆ ಕಛೇರಿ, ಅಂಗನವಾಡಿ, ಉರ್ದುಶಾಲೆ, ಸರ್ಕಾರಿ ಪ್ರಾಥಮಿಕ ಪಾಠಶಾಲೆ, ರಕ್ಷಿತ ಕಾನ್ವೆಂಟ್ ಶಾಲೆಗಳಿವೆ. ಸರ್ಕಾರಿ ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳು ಸೌಲಭ್ಯವಿದೆ. ೪ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳು ಇವೆ. ಈ ಬಡಾವಣೆಯ ಸಾಕ್ಷರತಾ ಪ್ರಮಾಣ ಶೇ. ೬೬ ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಭೂತಪ್ಪ, ಪಂಜೆಸನ್ ಮಸೀದಿಗಳಿವೆ. ವೀರಭದ್ರ, ಫಲ್ಲೇಶ್ವರರ ಗುಡಿಗಳಿವೆ.

ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ರಂಜಾನ್, ಬಕ್ರೀದ್, ಈದ್‌ಮಿಲಾದ್, ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ. ಕೋಟೆ ಮಾರಮ್ಮನ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಕವಿ ಕೋಟೆ ಚಂದ್ರ ಶೇಖರ್ ಇದೇ ಬಡಾವಣೆಯಲ್ಲಿದ್ದಾರೆ. ಕೋಟೆ ಸಂರಕ್ಷಣಾ ವೇದಿಕೆ, ಮದಕರಿ ನಾಯಕ ಸಂಘಗಳಿವೆ.

## ವಾರ್ಡ್ ನಂ. ೧೪ ಕೆರೆ ಹಿಂದಲಹಟ್ಟಿ

ಕೆರೆಯ ಹಿಂದಿಲಹಟ್ಟಿ, ಸಿರಾ ನಗರದ ಮೂಲ ನಿವಾಸಿಗಳಾಗಿದ್ದು, ಇದೊಂದು ಆದಿಕರ್ನಾಟಕ ಜನಾಂಗದ ನೆಲ. ಮೊದಲಿಗೆ ಕೋಟೆ ಕೆಲಸ, ಊರ ದೇವರ, ಸ್ವಚ್ಛತೆಯ ಕುಲ ಮೂಲ. ಕೈವಾಡದವರಲ್ಲಿ ಒಂದಾಗಿ ಕಾರ್ಯ

ನಿರ್ವಹಿಸುತ್ತಾ, ಕೆರೆಯ ಹಿಂದಲಹಟ್ಟಿ ಅಥವಾ ಮಾದಿಗರ ಹಟ್ಟಿ ಎಂತಲೇ ಗುರುತಿಸಿಕೊಂಡಿತ್ತು. ಸಿರಾ ನಗರದ, ನಗರಾ ಸಭಾ ಕೇಂದ್ರದಿಂದ ೧ ಕಿ.ಮೀ. ದೂರದಲ್ಲಿ, ಸಿರಾ , ಮಧುಗಿರಿ ಮುಖ್ಯ ರಸ್ತೆಯಲ್ಲಿ ಕೆರೆಯ ಹಿಂದಲ ಹಟ್ಟಿ ಬರುತ್ತದೆ. ದಕ್ಷಿಣಕ್ಕೆ ಸಿರಾ ದೊಡ್ಡ ಕೆರೆ, ಅದರ ಒಂದು ಬದಿಗೆ ಸಿರಾ ಕೋಟೆ, ಕೆರೆಗೆ ಆತುಕೊಂಡಂತೆ ಕೋಟೆ ಇದೆ. ಸಿರಾ ಮಧುಗಿರಿ ರಸ್ತೆ ಹಾದು ಹೋಗುತ್ತದೆ. ರಸ್ತೆಯ ಎಡ ಬದಿಗೆ ಹೊಂದಿಕೊಂಡಂತಿರುವ ಗ್ರಾಮವೇ ಕೆರೆಯ ಹಿಂದಲಹಟ್ಟಿ ಸಿರಾ ದೊಡ್ಡ ಕೆರೆಯ ಹಿಂಭಾಗದಲ್ಲಿ ಇರುವುದರಿಂದ ಕೆರೆಯ ಹಿಂದಲಹಟ್ಟಿ ಎಂದೇ ಕರೆಯಲಾಗುತ್ತದೆ.

ದಕ್ಷಿಣಕ್ಕೆ ಕೆರೆ ಕೋಡಿಗೆ ಹೊಂದಿಕೊಂಡಂತೆ ಜಮಿಲಾಬಿ ಮಸೀದಿ ಇದೆ. ಪೂರ್ವಕ್ಕೆ ಕೋಟೆ ಆಂಜನೇಯ ದೇವಾಲಯ, ಜಲಶುದ್ಧೀಕರಣ ಘಟಕ, ದೊಡ್ಡ ಅರಳಿಕಟ್ಟೆ ಉತ್ತರಕ್ಕೆ ಚಿಕ್ಕಕೆರೆ, ಕೋಡಿಗುಣಿ ಮಠ (ವೀರಭದ್ರೇಶ್ವರ ದೇವಸ್ಥಾನ) ಪೂರ್ವಕ್ಕೆ ಹೊಳೆ ಹಂಪಯ್ಯನ ಮಠವಿದೆ. ಈ ಎಲ್ಲಾ ಭೌಗೋಳಿಕ ವಿಸ್ತೀರ್ಣವನ್ನು ಒಳಗೊಂಡ ಕೆರೆಯ ಹಿಂದಲಹಟ್ಟಿ, ಚಿಕ್ಕಪೇಟೆ, ಕುಂಬಾರ ಹಟ್ಟಿ, ಕೆರೆಯ ಹಿಂದಲಹಟ್ಟಿ ಸೇರಿ ವಾರ್ಡ್ ನಂ. ೧೪ ರಲ್ಲಿ ವಿಲೀನವಾಗಿದೆ.

ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿರುವ ಇಲ್ಲಿ ಭೌಗೋಳಿಕ ಪರಿಸರ– ಸಿರಾ ದೊಡ್ಡ ಕೆರೆಯ ಕೋಡಿ ಕೆರೆಯ (ಹಿಂದಲಹಟ್ಟಿ) ಯ ನಡುವೆ ಹಾದು ಹೋಗಿವೆ. ಪೂರ್ವಕ್ಕೆ ಚೆನ್ನನ ಕುಂಟೆ ರಸ್ತೆ, ಉತ್ತರಕ್ಕೆ ಚಿಕ್ಕಕೆರೆ, ಗದ್ದೆ ಬಯಲು, ತೋಟ ಸಾಲು ಇದೆ. ಹಾಗಾಗಿ ಈ ಪರಿಸರದಲ್ಲಿ ಇಲಿ, ಹೆಗ್ಗಣ, ಮುಂಗುಸಿ, ಕಂಡು ಬರುತ್ತವೆ. ಅರೆ ರೈತಾಪಿ ಕಾರ್ಮಿಕರು ಉದ್ಯೋಗಿಗಳ ಸಂಮಿಶ್ರತನ ಇಲ್ಲಿನ ಬದುಕಿನಲ್ಲಿದೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಹಂದಿ, ಎತ್ತು, ಕುರಿಗಳನ್ನು ಹಾಗೂ ಕೋಳಿಗಳನ್ನು ಸಾಕಲಾಗಿದೆ. ಹಂದಿ ಈ ಭಾಗದಲ್ಲಿ ವಿಪರೀತ ಎನ್ನುವಂತಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಬಾತುಕೋಳಿ, ಪಾರಿವಾಳಗಳಿವೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ಕಳೆದ ೪ ವರ್ಷಗಳಲ್ಲಿ ಶೇ. ೬೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮–೪೦೦ ಸೆಂ.ರಷ್ಟು ಇದ್ದು, ಚಳಿಯು ೧೨–೧೩೦ ಸೆಂ. ಇರುತ್ತದೆ. ಏಪ್ರಿಲ್ ಮೇ ತಿಂಗಳಲ್ಲಿ ದಾಖಲಾಗುತ್ತದೆ. ಈ ಗ್ರಾಮದ ನಡುವೆ ಹಳ್ಳ ಹರಿದು ಹೋದರೂ ನೀರು ಇರುವುದಿಲ್ಲ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೧೮೦ ಮನೆಗಳಿಗೆ ಸಾರ್ವಜನಿಕ ನಲ್ಲಿಗಳು ಹಾಗೂ ಮನೆಗೆ ಸಂಪರ್ಕ ಹೊಂದಿದ ಕೊಳವೆ ನಲ್ಲಿ ಸಂಪರ್ಕ ಬಳಕೆ ಮಾಡುತ್ತಿದ್ದಾರೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದೆ. ಮುಸ್ಲಿಂ, ಬಲಿಜಿಗ, ವೀರಶೈವರು, ಕುಂಚಿಟಿಗರು, ಅಗಸರು, ಹಂದಿಜೋಗಿಗಳು, ಅಕ್ಕಸಾಲಿಗರು, ಗಾಣಿಗರು, ಮಡಿವಾಳರು, ನಾಯಕರು ಕಿರುಸಮುದಾಯಗಳಾಗಿವೆ.

ಕನ್ನಡ ಇಲ್ಲಿನ ಮಾತೃ ಭಾಷೆಯಾಗಿದ್ದು, ತೆಲುಗು, ಉರ್ದು, ಹಿಂದಿ ಮಾತನಾಡುತ್ತಾರೆ. ಕುಂಬಾರಹಟ್ಟಿ ಓಣಿ, ಚನ್ನನ ಕುಂಟೆ ಓಣಿ, ಮಾರಮ್ಮ ಗದ್ದಿಗೆ ಬೀದಿ, ಕೋಟೆ ಓಣಿ ಎಂಬ ಓಣಿಗಳಿವೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಹುಲ್ಲಿನ ಸೋಗೆ ಗೋಡೆಯ ಗುಡಿಸಲುಗಳು ಸೇರಿ ೭೨೦ ಮನೆಗಳಿದ್ದು, ಇಲ್ಲಿನ ಜನರ ಜನಸಂಖ್ಯೆ ೨೫೦೦ ಹೊಂದಿದ್ದು, ೩೮೦ ಮನೆಗಳು ಜನತಾ, ಆಶ್ರಯ, ಅಂಬೇಡ್ಕರ್ ಆವಾಸ್, ವಾಜಪೇಯಿ ಯೋಜನೆ, ವಸತಿ ಯೋಜನೆಯ ಅಡಿಯಲ್ಲಿ ಇದ್ದು, ಕೊಳಚೆ ನಿರ್ಮೂಲನೆ ಮಂಡಳಿಯ ಗೃಹ ಯೋಜನೆಯ ಫಲಾನುಭವಿಗಳೂ ಇದ್ದಾರೆ. ೪೮೦ ಮನೆಗಳು ಶೌಚಾಲಯದ ಸೌಲಭ್ಯವಿದೆ. ಉಳಿದವರು ಬಯಲನ್ನೇ ಅವಲಂಬಿಸಿದ್ದಾರೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ರಾಗಿ, ಶೇಂಗಾ ಮುಖ್ಯ ಬೆಳೆಯಾಗಿದ್ದು, ಜೋಳ, ತೆಂಗು, ಭತ್ತ, ಬೆಳೆಯುತ್ತಾರೆ. ತೆಂಗು, ಭತ್ತ, ಮೆಕ್ಕೆ ಜೋಳ, ಶೇಂಗಾ ಪ್ರಮುಖ ವ್ಯಾಪಾರಿ ಬೆಳೆಗಳು. ಸೂರ್ಯಕಾಂತಿ, ಹುಣಸೇಹಣ್ಣು ಮಾರುಕಟ್ಟೆ ಬೆಳೆಗಳಾಗಿವೆ. ಒಂದು ಹಾಲಿನ ಡೈರಿ ಇದೆ. ದೊಡ್ಡಕೆರೆ, ಹಾಗೂ ಚಿಕ್ಕಕೆರೆ ಎರಡೂ ನೀರಿನ ಕೆರೆಗಳು ಇದೇ ಬಡಾವಣೆಯ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ವೈದ್ಯರಾದ ಡಾ.ಕೆ.ಜಗನ್ನಾಥ್, ಬಿಡಿಓ, ಬ್ಯಾಂಕ್, ಕಾಲೇಜು ಶಿಕ್ಷಣ ಇಲಾಖೆಯ ಆರ್, ಲೋಕನಾಥ್ ಸೇರಿದಂತೆ ೨೩ ಜನ ಸರ್ಕಾರಿ ನೌಕರರಿದ್ದಾರೆ. ಪೌರಕಾರ್ಮಿಕರೂ ಇದ್ದಾರೆ. ಖಾಸಗಿ ಬಸ್, ಅಂಗಡಿ, ಎಣ್ಣೆ ಗಿರಣಿಗಳ ಕಾರ್ಮಿಕರಿದ್ದಾರೆ. ಕುಂಬಾರರು, ಕಮ್ಮಾರ, ಗುಡಿ ಕೈಗಾರಿಕೆಗಳಿವೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ವಾರ್ಡ್ ನಂ. ೧೪ರ

ವ್ಯಾಪ್ತಿಗೆ ಒಳಪಟ್ಟಿದ್ದು, ಆರ್. ಸರಿತ ಈ ವಾರ್ಡ್‌ನ ನಗರಸಭಾ ಸದಸ್ಯರಾಗಿದ್ದಾರೆ. ಕುಡಿಯಲು ನಗರ ಸಭೆಯಿಂದ ನೀರು ಪೂರೈಸಲಾಗುತ್ತಿದ್ದು, ಜಲಶುದ್ಧೀಕರಣ ಘಟಕವೂ ಇದೇ ಬಡಾವಣೆಯ ವ್ಯಾಪ್ತಿಯಲ್ಲಿರುವುದು ವಿಶೇಷವಾಗಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತಿದ್ದು, ಅಂಚೆ ಕಛೇರಿ, ತಾಲ್ಲೂಕು ಕಚೇರಿ, ನ್ಯಾಯಾಲಯ, ಲೋಕೋಪಯೋಗಿ ಇಲಾಖೆಗಳು ಸಿರಾ ನಗರದಲ್ಲಿಯೇ ಇದ್ದು, ಈ ವಾರ್ಡಿನ ಜನರು ಇಲ್ಲಿಂದ ಸೇವಾ ಸೌಲಭ್ಯ ಪಡೆಯುತ್ತಿದ್ದಾರೆ. ಸಿರಾ, ಚಿಕ್ಕಬಳ್ಳಾಪುರ, ಮಧುಗಿರಿ, ಮೂಡುಗೆರೆ, ಚಿಕ್ಕಮಗಳೂರು ಮುಖ್ಯ ರಸ್ತೆ ಈ ಬಡಾವಣೆಯ ಮಧ್ಯೆ ಹಾದು ಹೋಗಿದೆ. ಒಂದು ನ್ಯಾಯಬೆಲೆ ಅಂಗಡಿ ಇದ್ದು, ಪಡಿತರ ವಿತರಣೆ ಮಾಡುತ್ತಿದೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದೆ. ೧ನೇ ತರಗತಿಯಿಂದ ೬ನೇ ತರಗತಿವರೆಗೆ ಪ್ರಾಥಮಿಕ ಪಾಠಶಾಲೆ ಇದೆ. ಐದು ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ೬೦ ಮಕ್ಕಳಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳು ಸೌಲಭ್ಯವಿದೆ.

೪ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳು ಇವೆ. ಧರ್ಮಸ್ಥಳ ಸ್ವಸಹಾಯ ಸಂಘಗಳಿದ್ದು, ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿದೆ. ಈ ಬಡಾವಣೆಯ ಸಾಕ್ಷರತಾ ಪ್ರಮಾಣ ಶೇ. ೬೩.೪ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೬ ಟೀ ಅಂಗಡಿಗಳಿವೆ. ೪ ಹೋಟೆಲ್‌ಗಳಿವೆ. ಈ ಬಡಾವಣೆಯ ಪೂರ್ವದ ತುದಿಯ ಆಂಜನೇಯನ ದೇವಾಲಯದ, ದೀಪ ಕಂಬದ ಮೇಲೆ ಶಿಲಾ ಶಾಸನವಿದೆ. ದಕ್ಷಿಣಕ್ಕೆ ಸಿರಾ ನೆಲಗೋಟೆಯಿದೆ. ಅದರಲ್ಲಿ ಪ್ರಾಚೀನ ಬಾವಿ, ಕಲ್ಯಾಣಿಗಳಿವೆ. ಒಂದು ಜಮೀಲಾಬಿ ಮಸೂದಿ ಇದೆ. ಕೋಟೆಮಾರಮ್ಮ, ಕಾಲೋನಿ ಮಾರಮ್ಮ ಎಂಬ ಎರಡು ಮಾರಿ ಗುಡಿ-ಪೌಳಿಗಳಿವೆ. ೨ ಆಂಜನೇಯ ದೇವಸ್ಥಾ, ಪಲ್ಲೇಶ್ವರ, ಈಶ್ವರ, ವೀರಭದ್ರನ ದೇವಾಲಯಗಳಿವೆ. ಹೊಳೆ ಹಂಸ ಮಠ ಗದ್ದಿಗೆ, ಮಠವೂ ಇದೇ ಬಡಾವಣೆಯಲ್ಲಿದೆ. ಲಕ್ಷ್ಮೀದೇವರ ೨ ಗುಡಿಗಳಿವೆ. ೨ ಅರಳಿಕಟ್ಟೆ, ದೇವರ ಪೌಳಿಗಳಿವೆ. ಕೆರೆಗೆ ಕೂಡಿಕೊಂಡಂತೆ ಆಂಜನೇಯ, ಕಲ್ಯಾಣಿ, ಅರಳಿಕಟ್ಟೆ ವಿಶೇಷವಾಗಿದೆ.

ಗ್ರಾಮದಲ್ಲಿ ಮಾರಮ್ಮನ ಬೃಹತ್ ಜಾತ್ರೆ ಆಷಾಢ ಮಾಸದ ಎರಡನೇ ಪಾದದಲ್ಲಿ ವಿಜೃಂಭಣೆಯಿಂದ ಜರುಗುತ್ತದೆ. ಪ್ರಾಣಿ ಬಲಿ, ಆರತಿ, ಬಾನ, ಸರಗು ಹಾಕುವುದು, ಹರಕೆ ಸಂಪ್ರದಾಯವಿದೆ. ಹೊಳೆಹಂಸಮ್ಮನ ಮಠದಲ್ಲಿ ಉತ್ಸವ, ಕೊಂಡ ಹಾಯುವ ಸಂಪ್ರದಾಯವಿದೆ.

ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ಯುಗಾದಿ, ರಾಮನವಮಿ, ದಸರಾ, ದೀಪಾವಳಿ, ಗೌರಿ, ಗಣೇಶ, ಶಿವರಾತ್ರಿ ಹಬ್ಬಗಳನ್ನು ಸಡಗರಗಳಿಂದ ಆಚರಿಸುತ್ತಾರೆ. ಕೋಟೆ ಮಾರಮ್ಮನ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

ಸಾಹಿತ್ಯ ಸಂಘಟನೆ, ಪ್ರಕಾಶನ ಕ್ಷೇತ್ರದಲ್ಲಿ ಮಹತ್ವದ ಕೆಲಸ ಮಾಡಿರುವ ಹಿರಿಯ ಕೋರ್ಟ್ ಅಧಿಕಾರಿ, ಹಾಗೂ ದಲಿತ ಬಂಡಾಯ ಸಂಘಟಕ ಸಿರಾ ಎಲ್. ರಂಗನಾಥ್ ಯುವ ಕವಿ, ಚಿಂತಕ ಆರ್. ಲೋಕನಾಥ್, ರಾಜ್ಯ ಡಿ.ಎಸ್. ನಾಯಕ, ರಾಜಸಿಂಹ, ಇದೇ ಬಡಾವಣೆಯಲ್ಲಿದ್ದಾರೆ. ಪಂಚಮ ಪ್ರಕಾಶನ ಸಂಸ್ಥೆ ಹಲವಾರು ಮಹತ್ವದ ಗ್ರಂಥಗಳನ್ನು ಪ್ರಕಟಿಸಿದೆ. ರಾಜ್ಯ ಸಾಹಿತ್ಯ ಅಕಾಡೆಮಿ ಗೌರವಕ್ಕೆ ಇವರ ಪ್ರಕಟಣೆಗಳು ಪಾತ್ರವಾಗಿರುವುದು ವಿಶೇಷ. ಕುಂಟು ಲಕ್ಕಣ್ಣ, ಲೋಳಿ ಲಕ್ಕಪ್ಪ, ತಿಮ್ಮಣ್ಣ, ರಂಗಧಾಮ ಇಲ್ಲಿನ ಪ್ರಮುಖ ತಮಟೆ ಕಲಾವಿದರಾಗಿದ್ದಾರೆ.

## ವಾರ್ಡ್ ನಂ. ೧೫ ಪಾರ್ಕ್ ಮೊಹಲ್ಲಾ

ಸಿರಾ ಕೆರೆಗೆ ಹಾಗೂ ಕೋಟೆಗೆ ಹೊಂದಿಕೊಂಡಂತೆ, ಮಧುಗಿರಿ ರಸ್ತೆಯಲ್ಲಿ ತೋಟಗಾರಿಕೆ ಇಲಾಖೆಯ ಸಸ್ಯ ತೋಟ ಇರುವುದರಿಂದ ಈ ಬಡಾವಣೆಗೆ ಪಾರ್ಕ್ ಮೊಹಲ್ಲಾ ಎಂದು ಕರೆಯಲಾಗಿದೆ. ಉತ್ತರಕ್ಕೆ ತೋಟಗಾರಿಕೆ ಕಛೇರಿ, ದಕ್ಷಿಣಕ್ಕೆ ಖಾದ್ರಿಯಾ ಮಸೀದಿ ಗಡಿ, ಪೂರ್ವಕ್ಕೆ ದೊಡ್ಡಕೆರೆ ಕಂದಕ, ಪಶ್ಚಿಮಕ್ಕೆ ಸಿರಾ-ಮಧುಗಿರಿ ಬಸ್ ರಸ್ತೆ. ಇದರ ಭೌಗೋಳಿಕ ವಿಸ್ತೀರ್ಣವಾಗಿದೆ. ಸಿರಾ ನಗರ ಸಭಾ ಕೇಂದ್ರದಿಂದ ಅರ್ಧ ಕಿ.ಮೀ. ದೂರದಲ್ಲಿದೆ.

ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಈ ಪರಿಸರದಲ್ಲಿ ನರಿ, ಮೊಲ, ಉಡ, ಮಂಗ, ಇಲಿ, ಹೆಗ್ಗಣ, ಮುಂಗುಸಿ, ಕಂಡು ಬರುತ್ತವೆ. ಕೆರೆಯ ಅಂಗಳಕ್ಕೆ ಹೊಂದಿಕೊಂಡಿರುವುದರಿಂದ ನರಿ, ಮುಂಗುಸಿ, ಮೊಲವು ಕಂಡು ಬರುತ್ತದೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಹಂದಿ, ಎತ್ತು, ಕುರಿಗಳನ್ನು ಹಾಗೂ ಕೋಳಿಗಳನ್ನು ಸಾಕಲಾಗಿದೆ. ಹಂದಿ ಈ ಭಾಗದಲ್ಲಿ ವಿಪರೀತ ಎನ್ನುವಂತಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಬಾತುಕೋಳಿ, ಪಾರಿವಾಳಗಳಿವೆ.

ವಾರ್ಷಿಕ ಸರಾಸರಿ ಮಳೆ ಪ್ರಮಾಣ ಶೇ. ೬೦೨ ರಷ್ಟು ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೬-೩೯ಂ ಸೆಂ.ರಷ್ಟು ಇದ್ದು, ಚಳಿಯು ೧೦-೧೨ಂ ಸೆಂ. ಇರುತ್ತದೆ. ಪೂರ್ವಕ್ಕೆ ದೊಡ್ಡ ಕೆರೆ ಇದ್ದರೂ, ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೭೪ ಮನೆಗಳಿಗೆ ನೇರವಾಗಿ ನೀರು

ಸಂಪರ್ಕ ಹರಿಸಲಾಗುತ್ತಿದೆ. ಹಾಗೂ ಉಳಿದಂತೆ ೧೫೦ ಮನೆಗಳಿಗೆ ನಲ್ಲಿ ಮೂಲಕ ಸಾರ್ವಜನಿಕ ಸಂಪರ್ಕ ಬಳಕೆ ಮಾಡುತ್ತಿದ್ದಾರೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಮುಸ್ಲಿಂ ಸಮುದಾಯವಿದ್ದು, ಉರ್ದು, ಹಿಂದಿ ಮಾತನಾಡುತ್ತಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು ಸೇರಿ ೩೦೦ ಮನೆಗಳಿದ್ದು, ಇಲ್ಲಿನ ಜನರ ಜನಸಂಖ್ಯೆ ೧೫೦೦ ಹೊಂದಿದ್ದು, ೧೪೩ ಮನೆಗಳು ಜನತಾ, ಆಶ್ರಯ, ಅಂಬೇಡ್ಕರ್ ಆವಾಸ್, ವಾಜಪೇಯಿ ಯೋಜನೆ, ವಸತಿ ಯೋಜನೆಯ ಅಡಿಯಲ್ಲಿದ್ದು, ಸ್ಲಂಬೋರ್ಡ್ ಯೋಜನೆಯ ಫಲಾನುಭವಿಗಳಿದ್ದಾರೆ. ೨೦೦ ಮನೆಗಳು ಶೌಚಾಲಯದ ಸೌಲಭ್ಯವಿದೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ಕೇಸರಿಬಾತ್ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

೬ ಬೀಡಿ ಗಂಡಂಗಳಿವೆ. ಶಿಕ್ಷಣ ಇಲಾಖೆ, ನಗರಸಭೆ ಇಲಾಖೆಯ ಸೇರಿದಂತೆ ೧೪ ಜನ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ವಾರ್ಡ್ ನಂ. ೧೫ರ ವ್ಯಾಪ್ತಿಗೆ ಒಳಪಟ್ಟಿದ್ದು, ರೆಹನಾಬಾನು ಈ ವಾರ್ಡ್‌ನ ಪ್ರತಿನಿಧಿಯಾಗಿದ್ದಾರೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತಿದ್ದು, ಅಂಚೆ ಕಛೇರಿ, ತಾಲ್ಲೂಕು ಕಚೇರಿ, ನ್ಯಾಯಾಲಯ, ಲೋಕೋಪಯೋಗಿ ಇಲಾಖೆಗಳು ಇವೆಲ್ಲವೂ ಸಿರಾ ನಗರದಲ್ಲಿಯೇ ಇದ್ದು, ೬ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳು ಇವೆ. ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸ ಲಾಗುತ್ತಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೯ ಅಂಗಡಿಗಳಿವೆ. ಬೀಡಿ ಎಲೆ, ಹೊಗೆಸೊಪ್ಪಿನ ಅಂಗಡಿಗಳಿವೆ. ೪ ಟೀ ಅಂಗಡಿಗಳಿವೆ.

ಗ್ರಾಮದಲ್ಲಿ ಧಾರ್ಮಿಕ ರಂಜಾನ್, ಈದ್ ಮಿಲಾದ್ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸಿರಾದ ರೆಹಾನ್ ದರ್ಗಾದ ಉರುಸ್, ಜಾತ್ರೆಯಲ್ಲಿ ವಿಶೇಷವಾಗಿ ಭಾಗವಹಿಸುತ್ತಾರೆ.

## ವಾರ್ಡ್ ನಂ. ೧೬. ಪಾರ್ಕ್ ಮೊಹಲ್ಲಾ ರಬ್ ನಗರ

ಸಿರಾ ನಗರ ಮಧುಗಿರಿ ರಸ್ತೆಯ ಎಡಭಾಗಕ್ಕೆ ಖಾದ್ರಿ ಮಸೀದಿಯಿಂದ ಸಿರಾ ದೊಡ್ಡಕೆರೆ ಅಂಗಳದವರೆಗೆ, ದಕ್ಷಿಣಕ್ಕೆ ಉರ್ದು ಶಾಲೆಯ ತನಕ, ಇದರ ವ್ಯಾಪ್ತಿ ಹಬ್ಬಿದೆ. ಉತ್ತರ ದಕ್ಷಿಣಕ್ಕೆ ಸಿರಾ ಮಧುಗಿರಿ ಬಸ್ ರಸ್ತೆ ಹಾದು ಹೋಗಿದ್ದು, ಪಾರ್ಕ್ ಮೊಹಲ್ಲಾ ಮಾರ್ಗದಿಂದ ಮೇಲಕ್ಕೆ ಈ ಬಡಾವಣೆ ಇದೆ. ಸಿರಾ ನಗರಸಭೆಗೆ ಅರ್ಧ ಕಿ.ಮೀ. ದೂರದಲ್ಲಿದೆ. ಬಿಳಿ–ಕೆಂಪು ಮಿಶ್ರಿತ ಮಣ್ಣನ್ನು ಹೊಂದಿದ್ದು, ಈ ಬಡಾವಣೆಯ ಪೂರ್ವಕ್ಕೆ ಕೆರೆ ಬಯಲು ಈ ಪರಿಸರದಲ್ಲಿ ಮೊಲ, ಬೆಕ್ಕು, ನರಿ ಆಗಾಗ ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಹಂದಿ, ಎತ್ತು, ಕುರಿಗಳನ್ನು ಹಾಗೂ ಕೋಳಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಬಾತುಕೋಳಿ, ಪಾರಿವಾಳಗಳಿವೆ.

ವಾರ್ಷಿಕ ಸರಾಸರಿ ಮಳೆ ಶೇ. ೬೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮–೪೦ಂ ಸೆಂ.ರಷ್ಟು ಇದ್ದು, ಚಳಿಯು ೧೨–೧೩ಂ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಸಂಪೂರ್ಣವಾಗಿ ಮುಸ್ಲಿಂ ಸಮುದಾಯವಿದೆ. ಇಲ್ಲಿನ ಮಾತೃ ಭಾಷೆ ಉರ್ದು, ಕನ್ನಡ ವ್ಯವಹಾರಿಕವಾಗಿ ಭಾಷೆಯಾಗಿದೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಸ್ವರೂಪದ ೩೫೩ ಮನೆಗಳಿದ್ದು, ಇಲ್ಲಿನ ಜನರ ಜನಸಂಖ್ಯೆ ೧೩೦೦ ಹೊಂದಿದ್ದು, ೧೪೮ ಮನೆಗಳು ಜನತಾ, ಆಶ್ರಯ, ಅಂಬೇಡ್ಕರ್ ಆವಾಸ್, ವಸತಿ ಯೋಜನೆಯ ಅಡಿಯಲ್ಲಿ ರಚನೆಯಾಗಿದೆ. ೨೫೦ ಮನೆಗಳು ಶೌಚಾಲಯದ ಸೌಲಭ್ಯವಿದೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶಿಕ್ಷಣ, ಸಾರಿಗೆ, ಕಂದಾಯ, ಕೆಇಬಿ, ಆರೋಗ್ಯ, ಇಲಾಖೆಗೆ ಸೇರಿದ ೭ ಮಂದಿ ಸರ್ಕಾರಿ ನೌಕರರಿದ್ದಾರೆ. ಇಂಜಿನಿಯರ್, ಡಾಕ್ಟರ್, ಖಾಸಗಿ ನೌಕರರು ಇದ್ದಾರೆ. ಬೀಡಿ ಕಾರ್ಮಿಕರು ಹೆಚ್ಚು ಇದ್ದಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ವ್ಯಾಪ್ತಿಗೆ ಒಳಪಟ್ಟಿದ್ದು, ಏಜಾಸ್ ಬೇಗ್ ಇಲ್ಲಿನ ನಗರಸಭೆಗೆ ಪ್ರತಿನಿಧಿಯಾಗಿದ್ದಾರೆ. ಅಂಚೆ ಕಛೇರಿ, ತಾಲ್ಲೂಕು ಕಛೇರಿ, ಕೋರ್ಟ್, ವಿದ್ಯುತ್ ಸಿರಾ ಮುಖ್ಯ ನಗರ, ಸರ್ಕಾರಿ ಇಲಾಖೆಗಳಿಂದ ಪಡೆಯುತ್ತಾರೆ. ಬಿಪಿ, ಡಯಾಬಿಟಿಸ್, ಕ್ಷಯ, ಕಂಡು ಬರುತ್ತವೆ. ಇವುಗಳಿಂದ ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಹಾಗೂ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಾರೆ. ಶೈಕ್ಷಣಿಕರಾಗಿ ಒಂದು ಉರ್ದುಶಾಲೆ, ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯಗಳ ಸೌಲಭ್ಯವಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಖಾದ್ರಿ ಮಸೀದಿ ಇದ್ದು, ಹಳೆಯ ಮಸೀದಿ ಮೊಗಲರ ವಾಸ್ತು ಶಿಲ್ಪಕ್ಕೆ ಮಾದರಿಯಾಗಿದೆ. ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ರಂಜಾನ್, ಬಕ್ರೀದ್, ಈದ್‌ಮಿಲಾದ್, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ವಾರ್ಡ್ ನಂ. ೧೭ ಮೆಹಬೂಬ್ ನಗರ

ಮೆಹಬೂಬ್ ನಗರ ಸಿರಾ–ಮಧುಗಿರಿ ಬಸ್ ರಸ್ತೆಯ ಎಡಭಾಗಕ್ಕೆ ಜಂಡಾ ಮೆಕ್ಕಾ ಮೈದಾನದಿಂದ ಪ್ಯಾರಾಸಾಬ್ ಮನೆಯತನಕ ಈ ಬಡಾವಣೆಯ ವ್ಯಾಪ್ತಿ ಹಬ್ಬಿದೆ. ಪಶ್ಚಿಮಕ್ಕೆ ಅರಬ್ ಷಾ ರಾದ್ರಿ ದರ್ಗಾ– ಪೂರ್ವಕ್ಕೆ ದೊಡ್ಡಕೆರೆ, ದಕ್ಷಿಣಕ್ಕೆ ನಫೋಸ್ವಾಮಿ ಸಾಮಿಲ್, ಸರ್ಕಾರಿ ಉರ್ದುಶಾಲೆಯ ತನಕ ಇದ್ದು ವಿಸ್ತಾರವಾಗಿದೆ. ಸಿರಾ ನಗರಸಭೆ ಕಛೇರಿಯಿಂದ ಒಂದು ಕಿ.ಮೀ. ದೂರದಲ್ಲಿದೆ.

ಮೆಹಬೂಬ್ ಎಂಬ ದರ್ಗಾದ ಗುರು ಇಲ್ಲಿ ಮೊದಲಿಗೆ ನೆಲೆಸಿದ್ದರಿಂದ ಅದೇ ಹೆಸರಿನಲ್ಲಿ ಬಡಾವಣೆ ಬೆಳೆದಿದೆ ಎಂದು ಹಿರಿಯ ರಾಜರಾರಣಿ ಪ್ಯಾರಾಸಾಬ್ ಅಭಿಪ್ರಾಯ ಪಡುತ್ತಾರೆ.

ಬಿಳಿ–ಕೆಂಪು, ಕಪ್ಪು ಮಿಶ್ರಿತ ಮಣ್ಣನ್ನು ಹೊಂದಿದ್ದು, ಕೇಂದ್ರ ಸರ್ಕಾರದ ಕೊಳಚೆ ನಿರ್ಮೂಲನಾ ಬೋರ್ಡ್ ವ್ಯಾಪ್ತಿಗೆ ಈ ಬಡಾವಣೆ ಒಳಪಟ್ಟಿದೆ.

ಈ ಪರಿಸರದಲ್ಲಿ ಮೊಲ, ಬೆಕ್ಕು, ನರಿ ಆಗಾಗ ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಹಂದಿ, ಎತ್ತು, ಕುರಿಗಳನ್ನು ಹಾಗೂ ಕೋಳಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಬಾತುಕೋಳಿ, ಪಾರಿವಾಳಗಳಿವೆ.

ವಾರ್ಷಿಕ ಸರಾಸರಿ ಮಳೆ ಶೇ. ೬೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೬–೩೯° ಸೆಂ.ರಷ್ಟು ಇದ್ದು, ಚಳಿಯು ೧೦–೧೨° ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೨೦೦ ಮನೆಗಳಿಗೆ ನೀರಿನ ನೇರ ಸಂಪರ್ಕವಿದ್ದು, ೨೦೦ ಸಾರ್ವಜನಿಕ ನಲ್ಲಿ ಸಂಪರ್ಕ ಹೊಂದಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಸಂಪೂರ್ಣವಾಗಿ ಮುಸ್ಲಿಂ ಸಮುದಾಯವಿದೆ. ಇಲ್ಲಿನ ಮಾತೃ ಭಾಷೆ ಉರ್ದು, ಕನ್ನಡ ವ್ಯವಹಾರಿಕವಾಗಿ ಭಾಷೆಯಾಗಿದೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಸ್ವರೂಪದ ೬೦೦ ಮನೆಗಳಿದ್ದು, ಇಲ್ಲಿನ ಜನರ ಜನಸಂಖ್ಯೆ ೧೩೦೦ ಹೊಂದಿದ್ದು, ೮೦ ಮನೆಗಳು ಸ್ಲಂಬೋರ್ಡ್, ವಸತಿಯೋಜನೆಯ ಫಲಾನುಭವಿಗಳಿದ್ದಾರೆ. ಹಾಗೂ ಇಂದಿರಾ ಆವಾಸ್ ವಸತಿ ಯೋಜನೆಯ ಅಡಿಯಲ್ಲಿ ರಚನೆಯಾಗಿದೆ. ಭಾಗ್ಯಜ್ಯೋತಿ ವಿದ್ಯುತ್ ಸೌಕರ್ಯ ಒದಗಿಸಲಾಗಿದೆ. ೪೦೦ ಮನೆಗಳು ಶೌಚಾಲಯದ ಸೌಲಭ್ಯವಿದೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶಿಕ್ಷಣ, ಸಾರಿಗೆ, ಕಂದಾಯ, ಕೆಇಬಿ, ಪೌರಕಾರ್ಮಿಕ ಇಲಾಖೆಗೆ ಸೇರಿದ ೧೩ ಮಂದಿ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಇಂಜಿನಿಯರ್, ಡಾಕ್ಟರ್, ಖಾಸಗಿ ವಕೀಲರು ಇದ್ದಾರೆ. ಬೀಡಿ ಉದ್ಯಮ ಇಲ್ಲಿನ ಪ್ರಧಾನ ಕಸುಬು. ಹೆಂಗಸರು ಮನೆಗಳಲ್ಲಿ ಬೀಡಿ ಕಟ್ಟುತ್ತಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ವ್ಯಾಪ್ತಿಯು ವಾರ್ಡ್ ನಂ. ೧೬ ಕ್ಕೆ ಒಳಪಟ್ಟಿದ್ದು, ದಾಶಾನ್ ಇಲ್ಲಿನ ನಗರಸಭೆಗೆ ಪ್ರತಿನಿಧಿಯಾಗಿದ್ದಾರೆ. ಅಂಚೆ ಕಛೇರಿ, ತಾಲ್ಲೂಕು ಕಛೇರಿ, ಕೋರ್ಟ್, ವಿದ್ಯುತ್ ಸಿರಾ ಮುಖ್ಯ ನಗರದ ವಿವಿಧ

ಬಡಾವಣೆಗಳಲ್ಲಿ ಅದರ ಪ್ರಯೋಜನ ಪಡೆಯುತ್ತಾರೆ. ೪ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳಿವೆ. ಸರ್ಕಾರಿ ಉರ್ದುಕಿರಿಯ ಶಾಲೆ, ಒಂದು ಮದರಸ, ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕ, ಬಟ್ಟೆಗಳ ಸೌಲಭ್ಯವಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಅರಬ್ ಷಾ ಖಾದ್ರಿ ದರ್ಗಾ ಇದೆ. ೨ ಬೀಡಿ ಕಾರ್ಖಾನೆಗಳಿವೆ.

ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ರಂಜಾನ್, ಬಕ್ರೀದ್, ಈದ್‌ಮಿಲಾದ್, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮಲ್ಲಿಕ್ ರೆಹಾನ್ ದರ್ಗಾದ ಉರುಸ್, ಕಾವಲಿ ಕಾರ್ಯಕ್ರಮದಲ್ಲಿ ಈ ಬಡಾವಣೆಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ.

## ವಾರ್ಡ್ ನಂ. ೧೯ ಬೇಗಂ ಮೊಹಲ್ಲಾ ೨

ಬೇಗಂ ಮೊಹಲ್ಲಾ ಮತ್ತು ಆಸಿಂ ಲೇ ಔಟ್ ಒಟ್ಟಿಗೆ ಸೇರಿದೆ. ಬೇಗಂ ಮೊಹಲ್ಲಾ –೨ ಎಂದೇ ಕರೆದು, ವಾರ್ಡ್ ನಂ ೧೯ ಕ್ಕೆ ಸೇರಿಸಲಾಗಿದೆ. ಬೇಗಂ ಎಂಬ ಉದಾರ ಮುಸ್ಲಿಂ ಲೇಡಿಯ ಕೊಡುಗೆ, ಮಸೀದಿ ನಿರ್ಮಾಣ, ಸಹಾಯದಿಂದ ಹೆಸರಾಗಿದ್ದವರು. ಹಾಗೂ ಹೊಸದಾಗಿ ಸಿರಾ–ತುಮಕೂರು ರಸ್ತೆಯ ಎಡಭಾಗದಲ್ಲಿ ಲೇಔಟ್ ನಿರ್ಮಿಸಿ, ಜನ ವಸತಿಗೆ ಪ್ರೇರಕವಾದ ಆಸಿಂ ಎಂಬ ವ್ಯಕ್ತಿಯ ಹೆಸರನ್ನು ಸೇರಿಸಿ ಆಸಿಂ ಲೇಔಟ್ ಎಂದೇ ಕರೆಯುತ್ತಾರೆ.

ಇದು ಸಿರಾ ನಗರ ಸಭೆಯಿಂದ ಒಂದು ಕಿ.ಮೀ.ದೂರದಲ್ಲಿ ಪಶ್ಚಿಮಕ್ಕಿದೆ. ಸಿರಾ ಮಧುಗಿರಿ ಎಸ್. ರಸ್ತೆಯ ಎಡಬದಿಗೆ, ತುಮಕೂರು ರಸ್ತೆಯ ಎಡಭಾಗದ, ತಿಪ್ಪೇಸ್ವಾಮಿ ಸಾಮಿಲ್, ಖಾನ್ ಸಾಬ್ ನಿವಾಸ, ಆರ್.ರೆಹಾನ್ ಸಮುದಾಯ ಭವನ, ಉಪಕಾರ್ ಕಲ್ಯಾಣ ಮಂಟಪ, ಗ್ಯಾರೇಜ್‌ನಿಂದ ಸಿರಾ ಕೆರೆಯ ಅಂಗಳದವರೆಗೆ ಇದರ ವ್ಯಾಪ್ತಿ ಹರಡಿದೆ.

ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ಪೂರ್ವಕ್ಕೆ ದೊಡ್ಡಕೆರೆ, ಹಿನ್ನೀರು, ತೆಂಗು, ಅಡಿಕೆ ತೋಟ, ಗೌಳಿಗರ ಹಟ್ಟಿಯೂ ಇದೇ ಬಡಾವಣೆಗೆ ಸೇರಿದೆ. ಕೆಂಪು ಬಿಳಿ ಮಿಶ್ರಿತ ಮರಳು ಮಣ್ಣು, ಮಲ್ಲಿಕೆ ರೆಹಾನ್ ದರ್ಗದ, ಮುಖೇನವಾಗಿರುವ ಈ ಪ್ರದೇಶ, ಮಲ್ಲಿಕೆ ರಹಾನ್ ಖಾನ್ ಕೋಟೆಯಿಂದ ಇಲ್ಲಿಯವರೆಗೆ ಮುಸ್ಲಿಂಮರ ಧಾರ್ಮಿಕ ಚಟುವಟಿಕೆಗೆ ಈ ಪ್ರದೇಶವನ್ನು ಬಳಸುತ್ತಿದ್ದನೆಂದು ಹೇಳಲಾಗುತ್ತದೆ. ಈ ಪರಿಸರದಲ್ಲಿ ಮೊಲ, ಬೆಕ್ಕು, ನರಿ ಆಗಾಗ ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಹಂದಿ, ಎತ್ತು, ಕುರಿಗಳನ್ನು ಹಾಗೂ ಕೋಳಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳಿವೆ.

ವಾರ್ಷಿಕ ಸರಾಸರಿ ಮಳೆ ಶೇ. ೬೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮–೫೦ ಸೆಂ.ರಷ್ಟು ಇದ್ದು, ಚಳಿಯು ೧೦–೧೨೦ ಸೆಂ. ಇರುತ್ತದೆ. ದೊಡ್ಡ ಕೆರೆ ಸಮೀಪದಲ್ಲಿದ್ದರೂ ಆ ನೀರನ್ನು ಬಳಸುತ್ತಿಲ್ಲ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ.

ಗ್ರಾಮದಲ್ಲಿ ಮುಸ್ಲಿಂ ಸಮುದಾಯ ದೊಡ್ಡ ಸಮುದಾಯ ವಾಗಿದೆ. ಉಳಿದಂತೆ ಗೌಳಿಗರು, ತಮಿಳರು, ವೀರಶೈವರು ಕಿರು ಸಮುದಾಯ ವಾಗಿದೆ.

ಇಲ್ಲಿನ ಮಾತೃ ಭಾಷೆ ಕನ್ನಡ, ಉಳಿದಂತೆ ತಮಿಳು, ಉರ್ದು ಭಾಷೆಯಲ್ಲಿ ಮಾತನಾಡುತ್ತಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ಶೆಡ್ ಸ್ವರೂಪದ ೪೦೦ ಮನೆಗಳಿದ್ದು, ಇಲ್ಲಿನ ಜನರ ಜನಸಂಖ್ಯೆ ೧೨೦೦ ಹೊಂದಿದ್ದು, ೧೪೩ ಮನೆಗಳು ಆಶ್ರಯ, ಇಂದಿರಾ ಆವಾಸ್, ಕೊಳಚೆ ನಿರ್ಮೂಲ ಮಂಡಳಿಯ ವಸತಿಯೋಜನೆಯ ಫಲಾನುಭವಿಗಳಿದ್ದಾರೆ. ಉಚಿತ ವಿದ್ಯುತ್ ಸೌಲಭ್ಯ ಜೊತೆಗೆ ಭಾಗ್ಯಜ್ಯೋತಿ ವಿದ್ಯುತ್ ಸೌಕರ್ಯ ಒದಗಿಸಲಾಗಿದೆ. ೨೩೪ ಮನೆಗಳು ಶೌಚಾಲಯದ ಸೌಲಭ್ಯವಿದೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಪಂಚಾಯತ್ ರಾಜ್, ಶಿಕ್ಷಣ, ಸಾರಿಗೆ, ಕಂದಾಯ, ಅಂಚೆ, ಕೆಇಬಿ, ಪೌರಕಾರ್ಮಿಕ ಇಲಾಖೆಗೆ ಸೇರಿದ ೨೩ ಮಂದಿ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಇಂಜಿನಿಯರ್, ವಿಮಾನ್ ಪೈಲಟ್ ಖಾನ್ ಸೇರಿದಂತೆ ಡಾಕ್ಟರ್, ಖಾಸಗಿ ವಕೀಲರು ಇದ್ದಾರೆ. ಉಪಕಾರ್ ಬೀಡಿ ಉದ್ಯಮ ಕಂಪನಿಯಲ್ಲಿ ಕಾರ್ಮಿಕರು ೧೦೦ ಕ್ಕೂ ಹೆಚ್ಚು ಜನ ತೊಡಗಿಸಿಕೊಂಡಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ಕ್ಷೇತ್ರದ ವ್ಯಾಪ್ತಿಗೆ ಬಡಾವಣೆ ಒಳಪಟ್ಟಿದ್ದು, ರಜೀಯಾ ಖಾನಂ ಎಂಬುವವರು ಈ ಬಡಾವಣೆಯ ನಗರಸಭಾ ಸದಸ್ಯರಾಗಿದ್ದಾರೆ. ಅಂಚೆ ಕಛೇರಿ, ತಾಲ್ಲೂಕು ಕಛೇರಿ, ಕೋರ್ಟ್, ವಿದ್ಯುತ್ ಸಿರಾ ನಗರದಲ್ಲಿಯೇ ಇದ್ದು ಅದರ ಪ್ರಯೋಜನ ಪಡೆಯುತ್ತಾರೆ. ಜ್ವರ, ಕೆಮ್ಮು, ತಲೆಬೇನೆ ಮುಂತಾದ ಸಣ್ಣ ಪುಟ್ಟ ಖಾಯಿಲೆಗಳಿಗೆ ಸಿರಾ ಸರ್ಕಾರಿ ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗೋ ಹೋಗುತ್ತಾರೆ. ಶೈಕ್ಷಣಿಕವಾಗಿ ಸರ್ಕಾರಿ ಉರ್ದು ಶಾಲೆ, ಒಂದು ಅಂಗನವಾಡಿ ಕೇಂದ್ರ ಹಾಗೂ ತಿಪ್ಪೇಸ್ವಾಮಿ ಆಂಗ್ಲ ಕಾನ್ವೆಂಟ್ ಶಾಲೆಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕ, ಬಟ್ಟೆಗಳ ಸೌಲಭ್ಯವಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೫ ಹೋಟೆಲ್, ೪ ಟೀ ಸ್ಟಾಲ್‌ಗಳು, ೮ ಗ್ಯಾರೇಜ್, ೨ ಕೋಳಿ ಅಂಗಡಿಗಳು ಇದೆ. ಈ ವಾರ್ಡಿನ ಹೊರವಲಯದ ಕೆರೆ ಅಂಗಳದಲ್ಲಿ ಕ್ರಿಶ್ಚಿಯನ್ ಪಾದ್ರಿಯ ಸಮಾಧಿಯೂ ಸ್ಮಾರಕವಾಗಿದೆ. ಬೇಗಂ ಮಸೀದಿ ಇದೆ. ತಿಪ್ಪೇಸ್ವಾಮಿ ಸಾಮಿಲ್ ಇದೆ.

ಮಲ್ಲಿಕ್ ರೆಹಾನ್ ದರ್ಗದ ಉರುಸ್ ಜಾತ್ರೆ ವಿಜೃಂಭಣೆಯಿಂದ ಈ ಬಡಾವಣೆಯ ವ್ಯಾಪ್ತಿಯಲ್ಲಿ ನಡೆಯುತ್ತದೆ. ಲೇಖಕ ಜಿಯಾವುಲ್ಲಾ ಯಳನಾಡು ಇದೇ ಬಡಾವಣೆಯಲ್ಲಿ ನೆಲಸಿದ್ಧ ಕನ್ನಡದಲ್ಲಿ ಆರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ರಂಜಾನ್, ಬಕ್ರೀದ್, ಈದ್‌ಮಿಲಾದ್, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ವಾರ್ಡ್ ನಂ. ೨೦ ಗಾಡಿವಾನ್ ಮೊಹಲ್ಲಾ

ಗಾಡಿವಾನ್ ಮೊಹಲ್ಲಾ ಪಶ್ಚಿಮಕ್ಕೆ ಸಿರಾ–ತುಮಕೂರು ರಸ್ತೆ, ಮಧುಗಿರಿ ರಸ್ತೆಯ ಇಕ್ಕೆಲಕ್ಕೆ ಹಂಚಿಕೊಂಡಿದೆ. ದೊಡ್ಡ ವಾಟರ್ ಟ್ಯಾಂಕ್, ಬಲಕ್ಕೆ ಮಲ್ಲಿಕರೆಹಾನ್ ಮಸೀದಿ, ಹಳೆಯ ದರ್ಗಾ, ದರ್ಗಾ ಸರ್ಕಲ್‌ನಿಂದ ಪ್ಯಾರಾ ಸಾಬ್ ಮನೆಯ ತನಕ ಇದರ ವ್ಯಾಪ್ತಿ ಹರಡಿದೆ. ಕಂಪನಿ ಸರ್ಕಾರ ಹಾಗೂ ಮೊಗಲರ ಆಡಳಿತ ಕಾಲದಿಂದಲ್ಲೂ ಇಲ್ಲಿ ಅತಿ ಹೆಚ್ಚು ಕಾರ್ಮಿಕರು ನೆಲೆಸಿದ್ದು ಬಂಡಿಗಳಲ್ಲಿ ಸಾಮಾನು ಸಾಗಿಸುತ್ತಿದ್ದ ತಂಡ ಇಲ್ಲಿದ್ದ ಕಾರಣದಿಂದಾಗಿ ಗಾಡಿವಾಲ್–ಗಾಡಿವಾನ್ ಎಂದಾಗಿ, ಆತನ ಹೆಸರಿನಲ್ಲಿಯೇ ಬಡಾವಣೆ ನಿರ್ಮಾಣವಾಗಿದೆ.

ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು, ಈ ಪರಿಸರದಲ್ಲಿ ಇಲಿ, ಹೆಗ್ಗಣ, ಮುಂಗುಸಿ ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಮೇಕೆ, ಕುರಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಬಾತುಕೋಳಿ, ಪಾರಿವಾಳಗಳಿವೆ.

ವಾರ್ಷಿಕ ಸರಾಸರಿ ಮಳೆ ಶೇ. ೫೦೨ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮–೪೦ಂ ಸೆಂ.ರಷ್ಟು ಇದ್ದು, ಚಳಿಯು ೧೦–೧೨ಂ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ಒಂದು ದೊಡ್ಡ ವಾಟರ್ ಟ್ಯಾಂಕ್ ಇದ್ದು, ಈ ಭಾಗ ವಾಟರ್ ಟ್ಯಾಂಕ್ ಎಂದೇ ಕರೆಯಲ್ಪಟ್ಟಿದೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಮುಸ್ಲಿಂ ಸಮುದಾಯ ದೊಡ್ಡ ಸಮುದಾಯ ವಾಗಿದೆ. ಉಳಿದಂತೆ ಕಮ್ಮಾರರು, ವೀರಶೈವರು ಕಿರು ಸಮುದಾಯ ವಾಗಿದೆ.

ಇಲ್ಲಿನ ಮಾತೃ ಭಾಷೆ ಕನ್ನಡ, ಉರ್ದು ಮುಖ್ಯ ಭಾಷೆಯಲ್ಲಿ ಮಾತನಾಡುತ್ತಾರೆ. ಸಿರಾ–ತುಮಕೂರು ರಸ್ತೆ, ಮಧುಗಿರಿ–ಸಿರಾ ರಸ್ತೆ ಕೊಡುವ ಬಸ್ ನಿಲ್ದಾಣವಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ಶೆಡ್ ಸ್ವರೂಪದ ೬೦೦ ಮನೆಗಳಿದ್ದು, ಇಲ್ಲಿನ ಜನರ ಜನಸಂಖ್ಯೆ ೧೫೦೦ ಹೊಂದಿದ್ದು, ೨೦೪ ಮನೆಗಳು ಆಶ್ರಯ, ಸ್ಲಂಬೋರ್ಡ್, ವಾಜ್‌ಪೇಯಿ ಆವಾಸ್, ವಸತಿಯ ಯೋಜನೆಯ ಫಲಾನುಭವಿಗಳಿದ್ದಾರೆ. ೪೦೦ ಮನೆಗಳು ಶೌಚಾಲಯದ ಸೌಲಭ್ಯವಿದೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಎತ್ತಿನ ಬಂಡಿಯಲ್ಲಿ ಕಾರ್ಮಿಕರು ಮಂಡಿಗೆ ಮೂಟೆ ಸಾಗಿಸಲು ಬಳಸುತ್ತಾರೆ. ಒಂಟಿ ಎತ್ತಿನ ಗಾಡಿಗಳೂ ಇಲ್ಲಿವೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಶಿಕ್ಷಣ, ಸಾರಿಗೆ, ಆಸ್ಪತ್ರೆ ಇಲಾಖೆಗೆ ಸೇರಿದ ೧೪ ಮಂದಿ ಸರ್ಕಾರಿ ನೌಕರರಿದ್ದಾರೆ. ಉಳಿದಂತೆ ಬೀಡಿ ಕಾರ್ಮಿಕರು ಅತಿ ಹೆಚ್ಚಿದ್ದಾರೆ. ಮಹಿಳೆಯರು ಗೃಹ ಕಸುಬಾಗಿ ಬೀಡಿ ಕಟ್ಟುತ್ತಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ಕ್ಷೇತ್ರದ ವಾರ್ಡ್ ನಂ. ೨೦ ಕ್ಕೆ ವ್ಯಾಪ್ತಿಗೆ ಬಡಾವಣೆ ಒಳಪಟ್ಟಿದ್ದು, ಪ್ರಸ್ತುತ ೬ ಮದುಲ್ಲಾ ಖಾನ್ ಎಂಬುವವರು ಈ ಬಡಾವಣೆಯ ನಗರಸಭಾ ಸದಸ್ಯರಾಗಿದ್ದಾರೆ. ಅಂಚೆ ಕಛೇರಿ, ಕೆಇಬಿ, ಆಸ್ಪತ್ರೆ ಸಿರಾ ನಗರದಲ್ಲಿಯೇ ಇದ್ದು ಅದರ ಪ್ರಯೋಜನ ಪಡೆಯುತ್ತಾರೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಕೆ ಯಾಗುತ್ತಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ ಹೋಟೆಲ್, ಕುಕನ್ ಅಂಗಡಿ, ಸಾಮಿಲ್, ೨ ಕೋಳಿ ಅಂಗಡಿಗಳು, ೬ ಕಿರಾಣಿ ಷಾಪ್‌ಗಳು ಇದೆ. ಮಕ್ಕಳ ದರ್ಗಾ ಈ ಬಡಾವಣೆಯ ವಿಶೇಷವಾಗಿದೆ. ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ರಂಜಾನ್, ಬಕ್ರೀದ್, ಈದ್ ಮಿಲಾದ್, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ವಾರ್ಡ್ ನಂ. ೨೧ ಅಸಾರ್ ಮೊಹಲ್ಲಾ

ಅಸಾರ್ ಎಂಬ ವ್ಯಕ್ತಿ ಮೂಲದಿಂದ ಪ್ರತ್ಯೇಕ ಬಡಾವಣೆಯ ಅಸ್ಥಿತ್ವ ರೂಪುಗೊಂಡಿರುವ ವಾರ್ಡ್ ನಂ ೨೧, ಸಿರಾ ನಗರ ಸಭಾ ವ್ಯಾಪ್ತಿಯಲ್ಲಿ, ನಗರಸಭಾ ಕೇಂದ್ರ ಕಛೇರಿಯಿಂದ ಒಂದು ಕಿ.ಮೀ. ದೂರದಲ್ಲಿದೆ.

ಮಧುಗಿರಿ–ಸಿರಾ ರಸ್ತೆಯ ಎಡಬದಿಯಿಂದ ಪೂರ್ವಕ್ಕೆ ಸಿರಾ–ಮಧುಗಿರಿ ಕೋಟೆಯ ಮುಖ್ಯರಸ್ತೆ , ಸರ್ಕಾರಿ ಹಳೆಯ ಆಸ್ಪತ್ರೆ, ಪಶ್ಚಿಮಕ್ಕೆ ಮಟನ್ ಮಾರ್ಟ್‌ಗಳು, ದಕ್ಷಿಣಕ್ಕೆ ಅಲ್ಲಾಮಿನ್ ಬಾಲಕಿರಿಯರ ಉರ್ದು ಹೈಸ್ಕೂಲ್, ನಟರಾಜ್ ಬೀಡಿ ಕಂಪನಿ, ಹಾಗೂ ಭಾರತ್ ಕ್ರಿಕೆಟ್ ಸಹಕಾರ ಸಂಘ ಇದರ ವ್ಯಾಪ್ತಿಯ ಗಡಿಗಳು.

ಕಪ್ಪು ಮರಳು ಮಿಶ್ರಿತ ಮಣ್ಣನ್ನು ಹೊಂದಿದ್ದು, ಈ ಪರಿಸರದಲ್ಲಿ ಇಲಿ, ಹೆಗ್ಗಣ, ಮುಂಗುಸಿ ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಮೇಕೆ, ಕುರಿಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಬಾತುಕೋಳಿ, ಪಾರಿವಾಳಗಳಿವೆ.

ವಾರ್ಷಿಕ ಸರಾಸರಿ ಮಳೆ ಶೇ. ೫೦೬ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮–೩೯ಂ ಸೆಂ.ರಷ್ಟು ಇದ್ದು, ಚಳಿಯು ೧೦–೧೨ಂ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೧೫೦ ಸಾರ್ವಜನಿಕ ನಲ್ಲಿಗಳಿವೆ. ೧೦೦ ಮನೆಗಳಿಗೆ ನಲ್ಲಿ ಸಂಪರ್ಕವಿದೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಮುಸ್ಲಿಂ ಸಮುದಾಯ ದೊಡ್ಡ ಸಮುದಾಯವಾಗಿದೆ. ಹಳೆ ಆಸ್ಪತ್ರೆ ವಸತಿ ನಿಲಯದಲ್ಲಿ ಆದಿಕರ್ನಾಟಕ, ನಾಯಕ ಜನಾಂಗದ ನಾಲ್ಕು ಕುಟುಂಬಗಳು ಮಾತ್ರ ಇವೆ.

ಇಲ್ಲಿನ ಮಾತೃ ಭಾಷೆ ಕನ್ನಡ, ಉರ್ದು ಮುಖ್ಯ ಭಾಷೆಯಲ್ಲಿ ಮಾತನಾಡುತ್ತಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೨೫೦ ಮನೆಗಳಿದ್ದು, ೬೦ ಮನೆಗಳು ಆಶ್ರಯ, ಇಂದಿರಾ ಆವಾಸ್, ಸ್ಲಂಬೋರ್ಡ್, ವಾಜ್‌ಪೇಯಿ ಆವಾಸ್ ವಸತಿಯ ಯೋಜನೆಯ ಫಲಾನುಭವಿಗಳಿದ್ದಾರೆ. ೧೭೩ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಎತ್ತಿನ ಬಂಡಿಯಲ್ಲಿ ಕಾರ್ಮಿಕರು ಮಂಡಿಗೆ ಮೂಟೆ ಸಾಗಿಸಲು ಬಳಸುತ್ತಾರೆ. ಒಂಟಿ ಎತ್ತಿನ ಗಾಡಿಗಳೂ ಇಲ್ಲಿವೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಇಲೆಲ್ಲಾ ಬೀಡಿ ಕಾರ್ಮಿಕರು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನಟರಾಜು ಬೀಡಿ ಕಂಪನಿ, ಶಾರದಾ ಬೀಡಿ ಕಂಪನಿ, ವಿಶ್ವಾಸ್ ಬೀಡಿ ವರ್ಕ್ಸ್, ಬೆಂಗಳೂರು ಲಕ್ಷ್ಮೀ ವರ್ಕ್ಸ್, ಕಾರ್ಖಾನೆಗಳಿವೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ಕ್ಷೇತ್ರದ ವಾರ್ಡ್ ನಂ. ೨೧ ಕ್ಕೆ ವ್ಯಾಪ್ತಿಗೆ ಬಡಾವಣೆ ಒಳಪಟ್ಟಿದ್ದು, ಹಿರಿಯ ಕೈಗಾರಿಕೋದ್ಯಮ ಧುರೀಣ ಭಾಂದೆ ಪಾಷ ಈ ಬಡಾವಣೆಯ ನಗರಸಭಾ ಸದಸ್ಯರಾಗಿ ಮೂರನೆ ಬಾರಿಗೂ ಆಯ್ಕೆಯಾಗಿ ರುವುದು ಇವರ ವಿಶೇಷ . ಅಂಚೆ ಕಛೇರಿ, ನ್ಯಾಯಾಲಯ, ಕೆಇಬಿ, ಆಸ್ಪತ್ರೆ ಸಿರಾ ನಗರದಲ್ಲಿಯೇ ಇದ್ದು ಅದರ ಪ್ರಯೋಜನ ಪಡೆಯುತ್ತಾರೆ. ಹಣಕಾಸಿನ ಒಂದು ಭಾರತ್ ಕ್ರೆಡಿಟ್ ಸಹಕಾರ ಸಂಘವಿದೆ. ಸ್ತ್ರೀಯರ ಸಹಕಾರ ಸಂಘವಿದೆ. ಅಲ್ಲಾಮಿನ್ ಬಾಲಕಿಯರ ಉರ್ದು ಹೈಸ್ಕೂಲ್, ಉಬ್ನ ಕಾನ್ವೆಂಟ್ ಶಾಲೆ, ಉರ್ದು ಪ್ರಾಥಮಿಕ ಪಾಠಶಾಲೆಗಳಿದ್ದು,

ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪಠ್ಯ ಪುಸ್ತಕ, ಸಮವಸ್ತ್ರಗಳ ಸೌಲಭ್ಯವಿದೆ. ಒಂದು ಸರ್ಕಾರಿ ಯುನಾನಿ ಆಸ್ಪತ್ರೆ ಇದೆ. ವೈದ್ಯರ ವಸತಿ ನಿಲಯವಿದೆ. ಬಾಲಕಿಯರ ಮದರಸವಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧೦ ಮಟನ್ ಅಂಗಡಿಗಳಿವೆ. ೪ ಹೋಟೆಲ್, ೨೦ ಅಂಗಡಿಗಳು, ಒಂದು ಖಾಸಗಿ ಕ್ಲಿನಿಕ್ ಇದೆ. ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ರಂಜಾನ್, ಬಕ್ರೀದ್, ಈದ್ ಮಿಲಾದ್, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ವಾರ್ಡ್ ನಂ. ೨೨ ಖರಾದಿ ಮೊಹಲ್ಲಾ

ಖರಾದಿ ಮೊಹಲ್ಲಾ ಸಿರಾ ಹಳೆಯ ಮೊಹಲ್ಲಾ ಪೇಟೆಯ ಜಾಗಕ್ಕೆ ಸೇರುತ್ತದೆ. ಸಿರಾದ ದೊಡ್ಡ ಮಸೀದಿ ಜೀಮೀಯ ಮಸೀದಿಯ ಪೂರ್ವದಿಂದ ಸಿರಾ–ಮಧುಗಿರಿ ರಸ್ತೆಯ ಉತ್ತರ–ಪೂರ್ವಕ್ಕೆ ಹಳೆಯ ಆಸ್ಪತ್ರೆಯ ಕಾಂಪೌಂಡ್ ತನಕ, ಮಟನ್ ಮಾರ್ಕೆಟ್ ಬಲಬದಿಯೂ ಸೇರುದಂತೆ ಆರ್.ಆರ್. ಮಸೀದಿಯವರೆಗೆ ಇದರ ಭೌಗೋಳಿಕ ವ್ಯಾಪ್ತಿ ಹರಡಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಈ ಪರಿಸರದಲ್ಲಿ ದಟ್ಟ ಮನೆಗಳ ಸಂದಣಿಯಿಂದ ಕೂಡಿದೆ. ಹಾಗಾಗಿ ಇಲ್ಲಿ ವಿಶೇಷವಾಗಿ ಕಾಡು ಪ್ರಾಣಿಗಳನ್ನು ಕಾಣಲಾಗುವುದಿಲ್ಲ. ಆದರೂ ಹಳೆಯ ಮನೆಗಳ ಸಾಲು ಆಗಿರುವುದರಿಂದ ಇಲ್ಲಿ ಕಾಡು ಇಲಿ, ಹೆಗ್ಗಣ, ಮಂಗಗಳು ಕಂಡು ಬರುತ್ತವೆ. ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ದನ, ಕುದುರೆ, ಬೆಕ್ಕು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ನಾಟಿ ಹಾಗೂ ಗಿರಿರಾಜ ಕೋಳಿ, ಫಾರಂ ಕೋಳಿಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೫೦೬ ರಷ್ಟು ಮೀ. ಮಳೆಯಾಗಿದೆ. ಉಷ್ಣಾಂಶ ೩೮–೩೯ಂ ಸೆಂ.ರಷ್ಟು ಇದ್ದು, ಚಳಿಯು ೧೦–೧೨ಂ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೩೪೨ ಸಾರ್ವಜನಿಕ ನಲ್ಲಿಗಳಿವೆ. ಕೆಲವರು ಖಾಸಗಿಯಾಗಿ ಮನೆಗೆ ಸಂಪರ್ಕ ಸಾಧಿಸಿಕೊಂಡಿರುತ್ತಾರೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಮುಸ್ಲಿಂ ಸಮುದಾಯ ದೊಡ್ಡ ಸಮುದಾಯವಾಗಿದ್ದು, ವೀರಶೈವರು, ಅಕ್ಕಸಾಲಿಗರು, ದರ್ಜಿಗಳು, ಅಗಸರು ಸಣ್ಣ ಸಮುದಾಯವಾಗಿದೆ. ಇಲ್ಲಿನ ಮಾತೃ ಭಾಷೆ ಕನ್ನಡ, ಉರ್ದು, ಹಿಂದಿ, ತೆಲುಗು ಭಾಷೆಯಲ್ಲಿ ಮಾತನಾಡುತ್ತಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೬೧೨ ಮನೆಗಳಿದ್ದು, ಇಲ್ಲಿನ ಜನಸಂಖ್ಯೆ ೧೮೧೪ ನ್ನು ಹೊಂದಿದೆ. ೮೩ ಮನೆಗಳು ಆಶ್ರಯ, ಇಂದಿರಾ ಆವಾಸ್, ಸ್ಲಂಬೋರ್ಡ್, ವಾಜ್‌ಪೇಯಿ ಆವಾಸ್ ವಸತಿಯ ಯೋಜನೆಯ ಫಲಾನುಭವಿಗಳಿದ್ದಾರೆ. ಉಚಿತ ಭಾಗ್ಯ ಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳಾಗಿದ್ದಾರೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಕೈಗಾಡಿಗಳನ್ನು ಬಳಸುತ್ತಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಬೀಡಿ ಮುಖ್ಯ ಉದ್ಯೋಗವಾಗಿದ್ದು, ಬೀಡಿ ವ್ಯಾಪಾರಗಳು ಇಲ್ಲಿನ ಪ್ರಧಾನವಾಗಿದೆ. ಗುಜರಿ, ತಗಡು, ಮಿಷನರಿ, ಕೈಗಾಡಿಯಲ್ಲಿ ದೈನಂದಿನ ಪಾತ್ರೆ, ಬಟ್ಟೆ, ಹಣ್ಣು, ತರಕಾರಿ ವ್ಯಾಪಾರವೂ ಇಲ್ಲಿದೆ.

ಶಿಕ್ಷಕರು, ಸಾರಿಗೆ, ಕಂದಾಯ, ತೋಟಗಾರಿಕೆ ಇಲಾಖೆಯಲ್ಲಿ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವೈದ್ಯರಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ಕ್ಷೇತ್ರದ ವಾರ್ಡ್ ನಂ. ೨೨ ಕ್ಕೆ ವ್ಯಾಪ್ತಿಗೆ ಬಡಾವಣೆ ಒಳಪಟ್ಟಿದ್ದು, ಅಭಿಪ್ ಖಾನ್ ಈ ವಾರ್ಡ್‌ನ ನಗರಸಭಾ ಸದಸ್ಯರಾಗಿ ಒಂದು ಅಂಚೆ ಕಛೇರಿ ಇದೆ, ಸಿರಾ–ಬೆಂಗಳೂರು–ಬಾಂಬೆ ರ‍್ರಾಷ್ಟ್ರಿಯ ಹೆದ್ದಾರಿ ಸಂಪರ್ಕ ಹೊಂದಿದೆ. ಸ್ಥಿರ–ಚರ ದೂರವಾಣಿ ಸಂಪರ್ಕ ಹೊಂದಿದ್ದಾರೆ. ಇಂಟರ್‌ನೆಟ್, ಕೊರಿಯರ್ ಸಂಪರ್ಕ ಹೊಂದಿದೆ. ಸಿರಾ ಮುಖ್ಯ ನ್ಯಾಯಾಲಯ, ಹಾಗೂ ಕಾನೂನು ನೆರವು ಮಂಡಳಿ ಇದ್ದು ಅದರ ಪ್ರಯೋಜನ ಪಡೆಯುತ್ತಾರೆ. ಲೋಕಾಯುಕ್ತ ತುಮಕೂರು ಜಿಲ್ಲಾ ಕೇಂದ್ರದಿಂದ ಪಡೆಯುತ್ತಾರೆ. ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಸಲಾಗುತ್ತಿದೆ. ನಾಲ್ಕು ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳಿದ್ದು, ಬೀಡಿ ವ್ಯಾಪಾರ ಮಳಿಗೆ, ತಂಬಾಕು, ಎಲೆ ಮಾರಾಟ ಸಹಕಾರಿ ಸಂಘವಿದೆ. ಬೀಡಿ ಅಂಗಡಿಗಳೂ ಇವೆ. ೨ ಕ್ಲಿನಿಕ್ ಈ ಬಡಾವಣೆಯಲ್ಲಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧೦ ಚಿಲ್ಲರೆ ಅಂಗಡಿಗಳಿವೆ. ೬ ಹೋಟೆಲ್, ೨೦ ಅಂಗಡಿಗಳು, ಐತಿಹಾಸಿಕವಾಗಿ ಉಜ್ಜನಿ ಮಠವಿದೆ. ವೀರಶೈವ ಪರಂಪರೆಯ ಈ ಮಠ ೨೫೦ ವರ್ಷಗಳಷ್ಟು ಹಳೆಯದು. ಇಲ್ಲಿ ಚನ್ನ ವೃಷಭ ದೇಶೀ ಕೇಂದ್ರ ಸ್ವಾಮೀಜಿಯ ಗದ್ದುಗೆ ಇದ್ದು, ಇದಕ್ಕಾಗಿ ಒಂದು ಪುಟ್ಟ ಗದ್ದುಗೆ ಇದ್ದು, ಒಂದು ಕಲ್ಲಿನ ಮೇಲೆ ದೊಡ್ಡನಂಜಪ್ಪನ ಮಕ್ಕಳ ಗದ್ದುಗೆ, ದೇವಸ್ಥಾನ ಸಮೀಪದ ವಿವರವುಳ್ಳ ಒಂದು ಶಾಸನವಿದೆ. ಇದನ್ನು ಉಜ್ಜನಿ ಮಠ ಎಂದು, ಬಸವಣ್ಣನ ದೇವಸ್ಥಾನ ಎಂತಲೂ ಕರೆಯಲಾಗುವುದು. ಮೊಗಲಪೇಟೆ ಬಸವಣ್ಣನ ಗದ್ದಿಗೆ ಎಂದೇ ಕರೆಯಲಾಗುವುದು. ಆರ್. ಆರ್. ಮಸೀದಿಯೂ ಐತಿಹಾಸಿಕವಾದುದು.

ಗ್ರಾಮದಲ್ಲಿ ಧಾರ್ಮಿಕ ಹಬ್ಬಗಳಾದ ರಂಜಾನ್, ಬಕ್ರೀದ್, ಈದ್ ಮಿಲಾದ್, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮಲ್ಲಿಕೆ ರೆಹಾನ್ ದರ್ಗಾದ ಉರುಸ್ ಉತ್ಸವದಲ್ಲಿ ಈ ಬಡಾವಣೆಯುವರ ಪಾತ್ರ ವಿಶೇಷವಾಗಿರುತ್ತದೆ. ಬಸವಣ್ಣನ ದೇವಾಲಯದ ಆವರಣದ ಉಜ್ಜಿನಿ ಮಠದಲ್ಲಿ ಶಿವರಾತ್ರಿ ಜಾಗರಣೆ, ಹರಿಕಥೆ, ಪಾನಕ ಪ್ರಸಾದ ಕಾರ್ಯಗಳು ನಡೆಯುತ್ತವೆ. ವೀರಶೈವರು, ಶಿವರಾತ್ರಿ, ಯುಗಾದಿ, ದಸರಾ, ಗೌರಿ, ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ.

## ವಾರ್ಡ್ ನಂ. ೨೩ ಜಾಮೀಯಾ ನಗರ

ಜಾಮೀಯಾ ನಗರ ಎಂದು ಕರೆಯಲ್ಪಡುವ ಈ ಭಾಗ ಸಿರಾದ ದೊಡ್ಡ ಮಸೀದಿಯ ಪೂರ್ಣಭಾಗ, ಮೆಕ್ಕಾ ರೈಸ್ ಮಿಲ್ ರಸ್ತೆಯ ಅರ್ಧಭಾಗ ಉತ್ತರದ ಅರ್ಧಭಾಗದಿಂದ, ಮಧುಗಿರಿ ರಸ್ತೆಯ ದೊಡ್ಡ ಅಂಗಡಿ (ಧನಲಕ್ಷ್ಮೀ ಸ್ಟೋರ್ ಬದಿ–ಸರ್ಕಾರಿ ಪ್ರಾಥಮಿಕ ಪಾಠಶಾಲೆ, ದೊಡ್ಡ ಮೋರಿ, ಷಾದಿ ಮೊಹಲ್ಲಾ, ಬಾಲಾಜಿ ಕಲ್ಯಾಣ ಮಂಟಪ, ಶ್ರೀವೆಂಕಟೇಶ್ವರ ದೇವಾಲಯ, ದೀಪ್ ಶಾಲೆಯ ವ್ಯಾಪ್ತಿಯನ್ನು ಹರಡಿದೆ. ಜಾಮೀಯಾ ಮಸೀದಿ ಈ ಭಾಗದಲ್ಲಿ ಹೆಚ್ಚು ಪ್ರಸಿದ್ಧಿಯಾಗಿರುವುದರಿಂದ ಅದೇ ಹೆಸರಿನಲ್ಲಿ ಬಡಾವಣೆಯೂ ನಿರ್ಮಾಣವಾಗಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಇದು ಸಿರಾದ ಹಳೆಯ ಹಾಗೂ ತಗ್ಗಿನ ಭೂ ಪ್ರದೇಶವಾಗಿದೆ. ಜಾಜಿ ಕಟ್ಟೆಯ ಕೆರೆ ತುಂಬಿದಾಗ ಅದರ ನೀರು ಈ ಬಡಾವಣೆಯ ನಡುವೆ ಹರಿದು, ಚಿಕ್ಕಕೆರೆ ಸೇರುತ್ತವೆ. ಉಳಿದಂತೆ ಕಿರಿದಾದ ಮೋರಿ ಹರಿಯುತ್ತದೆ. ಈ ಪರಿಸರದಲ್ಲಿ ಇಲಿ, ಹೆಗ್ಗಣ, ಮುಂಗುಸಿಗಳು ಕಂಡು ಬರುತ್ತವೆ. ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಬೆಕ್ಕು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಬಾತುಕೋಳಿ, ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೫೦೨ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮–೩೯ಂ ಸೆಂ.ರಷ್ಟು ಇದ್ದು, ಚಳಿಯು ೧೧ಂ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೨೧೨ ಮನೆಗಳಲ್ಲಿ ನೇರ ಸಂಪರ್ಕವಿದ್ದರೆ, ಉಳಿದವರು ಸಾರ್ವಜನಿಕ ನಲ್ಲಿಗಳ ಸಂಪರ್ಕ ಹೊಂದಿದ್ದಾರೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಮುಸ್ಲಿಂ ಸಮುದಾಯ ದೊಡ್ಡ ಸಮುದಾಯವಾಗಿದ್ದು, ವೀರಶೈವರು, ಬ್ರಾಹ್ಮಣರು, ದರ್ಜಿಗಳು, ಆದಿದ್ರಾವಿಡ, ಆದಿಕರ್ನಾಟಕ, ಮಡಿವಾಳ ಜನಾಂಗಗಳು ಸಣ್ಣ ಸಮುದಾಯವಾಗಿದೆ.

ಇಲ್ಲಿನ ಮಾತೃ ಭಾಷೆ ಕನ್ನಡ, ಉರ್ದು, ತೆಲುಗು, ಮರಾಠಿ, ಹಿಂದಿ ಭಾಷೆಯಲ್ಲಿ ಮಾತನಾಡುತ್ತಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೬೧೦ ಮನೆಗಳಿದ್ದು, ಇಲ್ಲಿನ ಜನಸಂಖ್ಯೆ ೧೭೬೧ಳ ನ್ನು ಹೊಂದಿದೆ. ೧೨೦ಮನೆಗಳು ಆಶ್ರಯ, ಇಂದಿರಾ ಆವಾಸ್, ಸ್ಲಂಬೋರ್ಡ್, ವಾಜ್‌ಪೇಯಿ ಆವಾಸ್ ವಸತಿಯ ಯೋಜನೆಯ ಫಲಾನುಭವಿಗಳಿದ್ದಾರೆ. ೬೦೦ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಹೊಂದಿದ್ದಾರೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಕೈಗಾಡಿಗಳನ್ನು ಬಳಸುತ್ತಾರೆ. ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಬೀಡಿ ಉದ್ಯಮ, ಗುಜರಿ ಸಾಮಾನು ಮಾರಾಟ, ಇಲ್ಲಿನ ಪ್ರಮುಖ ಉದ್ಯಮವಾಗಿದೆ. ಗ್ಯಾರೇಜ್, ಕಬ್ಬಿಣದ ಉಪಕರಣಗಳ ಕಿರು ಕೈಗಾರಿಕೆ, ಬಟ್ಟೆ ಹೊಲಿಯುವ, ಉಪ ಕೈಗಾರಿಕೆಗಳೂ ಇವೆ. ಶಿಕ್ಷಕರು, ಕೈಗಾರಿಕೆ, ಸಾರಿಗೆ ಇಲಾಖೆಯ ೧೪ ಜನ ಸರ್ಕಾರಿ ನೌಕರರಿದ್ದಾರೆ. ಪ್ರೊ. ಬುರಾಮದ್ದೀನ್ ಈ ಬಡಾವಣೆ ವಿಶೇಷ. ಐಟಿಐ, ಇಂಜಿನಿಯರ್, ವಕೀಲರು ಇದ್ದಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ಕ್ಷೇತ್ರದ ವಾರ್ಡ್ ನಂ. ೨೨ ಕ್ಕೆ ವ್ಯಾಪ್ತಿಗೆ ಬಡಾವಣೆ ಒಳಪಟ್ಟಿದೆ. ಸ್ಥಿರ–ಚರ

ದೂರವಾಣಿ ಸಂಪರ್ಕ ಹೊಂದಿದ್ದಾರೆ. ಸಿರಾ ಮುಖ್ಯ ನ್ಯಾಯಾಲಯ ದಿಂದ ಕಾನೂನು ನೆರವು ಮಂಡಳಿ ಇದ್ದು ಅದರ ಪ್ರಯೋಜನ ಪಡೆಯುತ್ತಾರೆ. ದೀಪಕ್ ಇಂಗ್ಲೀಷ್ ಕಾನ್ವೆಂಟ್ ಶಾಲೆಯಿದ್ದು, ಒಂದರಿಂದ ೧೦ನೇ ತರಗತಿವರೆಗೆ ಶಿಕ್ಷಣ ನೀಡಲಾಗುತ್ತಿದೆ. ಒಂದು ಅಂಗನವಾಡಿ ಕೇಂದ್ರವಿದೆ. ನ್ಯಾಯಬೆಲೆ ಅಂಗಡಿ ಇದೆ. ೨ ಕ್ಲಿನಿಕ್‌ಗಳು ಇದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೬ ಹೋಟೆಲ್ ಗಳು, ಒಂದು ವಸತಿ ಗೃಹ (ಶ್ರೀ ವೆಂಕಟೇಶ್ವರ ಡಿಲೆಕ್ಸ್ ಲಾಡ್ಜ್) ಶಾದಿ ಮಹಲ್ ಕಲ್ಯಾಣ ಮಂಟಪ, ೨೪ ಕಿರಾಣಿ ಅಂಗಡಿಗಳಿವೆ.

ಐತಿಹಾಸಿಕವಾಗಿ ಫೇಕ್ ಫರೀದ್ ಸಾಹೇಬ ಎಂಬ ಸಾಧುವೊಬ್ಬರು ನಿರ್ಮಿಸಿದ್ದಾರೆಂದು ಹೇಳಲಾಗುವ ಜಾಮಿಯಾ ಮಸೀದಿ, ಕ್ರಿಶ. ೧೯೭೬ ರಲ್ಲಿ ನಿರ್ಮಾಣವಾದುದ್ದೆಂದು, ಇಲ್ಲಿನ ಶಾಸನದ ಉಲ್ಲೇಖವಿದೆ. ಬೃಹತ್ತಾದ ಮಸೀದಿ, ಒಳಆವರಣದಲ್ಲಿ ಫರೀದ್ ಸಾಹೇಬರ ಗೋರಿ, ಆತನ ಸೋದರ ಪೇಕ್ ಫರೀದ್ ಹಾಗೂ ಸೋದರಿ ಷಹರಾಬಾನು ಇವರುಗಳ ಗೋರಿಗಳಿವೆ. ಬೃಹತ್ ನೀರಿನ ಕೊಳವಿದ್ದು, ಸುಂದರ ವಾಸ್ತು ಶಿಲ್ಪಗಳಿಂದ ಕೂಡಿದೆ. ಇದು ಸಿರಾದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದಾಗಿದೆ. ಶಿಲ್ಪ ಕೌಶಲದ ಕಂಬ ಸಾಲು ಆಜಾತವಿದೆ. ಶ್ರೀ ವೆಂಕಟೇಶ್ವರ, ಗಣಪತಿ ದೇವಾಲಯಗಳಿವೆ. ಏಕಾದಶಿ ಹಬ್ಬದಲ್ಲಿ ಭಗವಾನ್ ವೆಂಕಟೇಶ್ವರನ ಉತ್ಸವ, ವಿಜೃಂಭಣೆಯಿಂದ ನಡೆಯುತ್ತದೆ.

ಗ್ರಾಮದಲ್ಲಿ ಹಿಂದೂಗಳು ಧಾರ್ಮಿಕ ಹಬ್ಬಗಳಾದ ಶಿವರಾತ್ರಿ, ದಸರಾ, ಗೌರಿ, ಗಣೇಶ ಹಬ್ಬಗಳನ್ನು ಆಚರಿಸದರೆ, ಮುಸ್ಲಿಂಮರು ರಂಜಾನ್, ಬಕ್ರೀದ್, ಈದ್ ಮಿಲಾದ್, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಹಿಂದು-ಮುಸ್ಲಿಂ ಸಮನ್ವತೆಯ ಇಲ್ಲಿ ಆರಂಭದಿಂದಲೂ ಉತ್ತಮವಾಗಿದೆ.

## ವಾರ್ಡ್ ನಂ. ೨೪ ಮುಚ್ಚಿಗರ ಹಟ್ಟಿ, ಪೇಷ್ಮಾ ಮೊಹಲ್ಲಾ ೨ನೇ ಹಂತ

ಮುಚ್ಚಿಗರಹಟ್ಟಿ ಮತ್ತು ಪೇಷ್ಮಾ ಮೊಹಲ್ಲಾ ೨ನೇ ಹಂತದ ಈ ಬಡಾವಣೆ ಸಿರಾದ ಮೆಕ್ಕಾ ರೈಸ್ ಮಿಲ್‌ನ ಪೂರ್ವದಿಂದ, ಆರಂಭವಾಗಿ ಮೋತಿ ಮೊಹಲ್ಲಾ, ಆರ್. ಆರ್. ಮಸೀದಿ, ಮಲ್ನಾಡ್ ಆಂಗ್ಲ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಸೇರಿದಂತೆ, ಶಾರದಾ ಕ್ಲಿನಿಕ್‌ವರೆಗೆ, ಉತ್ತರಕ್ಕೆ ಜಮಿಯಾ ಮಸೀದಿ ರಸ್ತೆಯ ರಕ್ತಾ ಪ್ರಾವಿಜನ್ ಸ್ಟೋರ್, ಮೋತಿ ಮೊಹಲ್ ಬಳಕೆದಾರರ ಸಂಘ, ನ್ಯಾಯಬೆಲೆ ಅಂಗಡಿ, ಹಳೆಯ ಮುಚ್ಚಿಗರ ಹಟ್ಟಿ, ಹಳೆಯ ಕೊಲ್ಲಾಪುರದಮ್ಮ ದೇವಾಲಯದ ನಿವೇಶನ, ಯಲ್ಲಮ್ಮ ದೇವಸ್ಥಾನ ಒಳಗೊಂಡಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಇದೊಂದು ಹಿಂದು ಮುಸ್ಲಿಂಮರ ಸಂಮಿಶ್ರ ಬಡಾವಣೆಯಾಗಿದ್ದು, ಸಿರಾದ ಹಳೆಯ ಬಡಾವಣೆ ಯಾಗಿದೆ. ಈ ಪರಿಸರದಲ್ಲಿ ಇಲಿ, ಹೆಗ್ಗಣ, ಮುಂಗುಸಿಗಳು ಕಂಡು ಬರುತ್ತವೆ. ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಬೆಕ್ಕು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕಾಡುಕೋಳಿ, ಗಿರಿ ರಾಜ ಕೋಳಿ, ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೫೦೨ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮-೪೦ ಸೆಂ.ರಷ್ಟು ಇದ್ದು, ಚಳಿಯು ೧೧೦ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ಸಾರ್ವಜನಿಕ ನಲ್ಲಿಗಳ ಸಂಪರ್ಕ ಹೆಚ್ಚಿದೆ. ೨ ಹಳೆ ಬಾವಿಗಳಿದ್ದು ಬತ್ತಿ ಹೋಗಿದೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಮುಸ್ಲಿಂ ಸಮುದಾಯ ದೊಡ್ಡ ಸಮುದಾಯವಾಗಿದ್ದು, ವೀರಶೈವರು, ಬಲಿಜಿಗ, ಕ್ಷೌರಿಕರು, ಲಂಬಾಣಿ, ಅಗಸರು, ಸಣ್ಣ ಸಮುದಾಯವಾಗಿದೆ.

ಇಲ್ಲಿನ ಮಾತೃ ಭಾಷೆ ಕನ್ನಡ, ಉರ್ದು, ತೆಲುಗು ಭಾಷೆಯಲ್ಲಿ ಮಾತನಾಡುತ್ತಾರೆ. ಎಲ್ಲಮ್ಮ ದೇವರ ಓಣಿ, ಆರ್ ಆರ್ ಮಸೀದಿ ಓಣಿ, ಜಮೀಯ ಮಸೀದಿ ಓಣಿ, ಮದರಸ ಓಣಿಗಳಿವೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೪೮೩ ಮನೆಗಳಿದ್ದು, ಮೋತಿಮೊಹಲ್ಲಾ, ಮುಚ್ಚಿಗರಹಟ್ಟಿ, ಪೇಷ್ವಾ ಮೊಹಲ್ಲಾ ಎಂಬ ಬಡಾವಣೆಗಳಲ್ಲಿ ವಿಂಗಡಣೆಯಾಗಿದೆ ೨೫೦ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಹೊಂದಿದ್ದಾರೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಕೈಗಾಡಿಗಳನ್ನು ಬಳಸುತ್ತಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ, ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಗುಜರಿ ಅಂಗಡಿ ಸಾಲು ಈ ಬಡಾವಣೆಯ ಪಶ್ಚಿಮಕ್ಕಿದ್ದು, ಕೊಳಚೆ ಪ್ರದೇಶದ ವ್ಯಾಪ್ತಿಯಲ್ಲಿದೆ. ಇಲ್ಲಿ ಕೈಗಾಡಿಗಳಲ್ಲಿ ಹಳೆಯ ಸಾಮಾನು ಮಾರಾಟ, ಹಣ್ಣು, ತರಕಾರಿ, ತಿಂಡಿ ಪದಾರ್ಥ, ಗೃಹ ಬಳಕೆ ವಸ್ತುಗಳ ಮಾರಾಟದ ವ್ಯವಸ್ಥೆ ಇದೆ. ಕಮ್ಮಾರಿಕೆ ಇದೆ. ವಾಹನ ಬಿಡಿಭಾಗ ಹಾಗೂ ಗ್ಯಾರೇಜ್‌ಗಳು ಹೆಚ್ಚಿವೆ.

ಶಿಕ್ಷಕರು, ಸಾರಿಗೆ , ಪೌರಕಾರ್ಮಿಕರ ಇಲಾಖೆಯ ಸರ್ಕಾರಿ ನೌಕರರಿದ್ದಾರೆ. ಬೀಡಿ ಉದ್ಯಮವಿದೆ. ಮಹಿಳೆಯರು ಬೀಡಿ ಕಟ್ಟುವುದು, ಹೂ ಕಟ್ಟುವ ಹಾಗೂ ಟೈಲರಿಂಗ್ ಗೃಹ ಕೆಲಸ ಮಾಡುತ್ತಿದ್ದಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ಕ್ಷೇತ್ರದ ವಾರ್ಡ್ ನಂ. ೨೪ ಕ್ಕೆ ವ್ಯಾಪ್ತಿಗೆ ಬಡಾವಣೆ ಅಂಚೆ ಕಚೇರಿ, ಸಿರಾ ಕೇಂದ್ರ ಕಛೇರಿ, ತಹಸೀಲ್ದಾರ್, ಲೊಕೋಪಯೋಗಿ, ಕಂದಾಯ, ಸಿರಾ ಕೇಂದ್ರದಲ್ಲಿಯೇ ಇದೆ. ಸ್ಥಿರ-ಚರ ದೂರವಾಣಿ ಸಂಪರ್ಕ ಹೊಂದಿದ್ದಾರೆ. ನ್ಯಾಯಬೆಲೆ ಅಂಗಡಿ ಇದೆ. ೪ ಸ್ತ್ರೀ ಶಕ್ತಿ ಸಂಘಗಳಿವೆ.

ಶೈಕ್ಷಣಿಕವಾಗಿ ಒಂದು ಮಲೆನಾಡು ಆಂಗ್ಲ ಪ್ರಾಥಮಿಕ ಹಾಗೂ ಪ್ರೌಢಶಾಲೆ ಇದೆ. ಒಂದು ಮದರಸ, ಉರ್ದುಶಾಲೆ ಇದೆ. ೨ ಖಾಸಗಿ ದವಾಖಾನೆ, ಒಂದು ಮೂಲವ್ಯಾಧಿ ಚಿಕಿತ್ಸಾ ಕೇಂದ್ರಗಳಿವೆ. ಆರು ಔಷಧಿ ಅಂಗಡಿಗಳಿವೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೬ ಟೀ ಅಂಗಡಿಗಳು, ೨೩ ಮಾಂಸದ ಅಂಗಡಿಗಳು, ೧೨ ಕಿರು ಅಂಗಡಿಗಳಿವೆ. ಒಂದು ಕಲ್ಯಾಣಿ ಇದ್ದು ಮುಚ್ಚಿ ಹೋಗಿದೆ. ಒಂದು ಆರ್. ಆರ್. ಮಸೀದಿ, ಯಲ್ಲಮ್ಮ, ದೇವಾಲಯವಿದೆ. ಹಿಂದೆ ಮುಚ್ಚಿಗ ಜನಾಂಗದ ಕುಲದೇವತೆ ಕೊಲ್ಲಾಪುರದಮ್ಮನ ದೇವಾಲಯ. ಈಗ ವಸತಿ ಗೃಹವಾಗಿದ್ದು ದೇವತೆಯನ್ನು ಜ್ಯೋತಿ ನಗರದ ಹೊಸ ಬಡಾವಣೆಯಲ್ಲಿ ನೂತನ ದೇವಾಲಯ ನಿರ್ಮಿಸಿ ಪ್ರತಿಷ್ಠಾಪಿಸಲಾಗಿದೆ.

ಗ್ರಾಮದಲ್ಲಿ ಹಿಂದೂಗಳು ಧಾರ್ಮಿಕ ಹಬ್ಬಗಳಾದ ಶಿವರಾತ್ರಿ, ದಸರಾ, ಗೌರಿ, ಗಣೇಶ ಹಬ್ಬಗಳನ್ನು ಆಚರಿಸದರೆ, ಮುಸ್ಲಿಂಮರು ರಂಜಾನ್, ಬಕ್ರೀದ್, ಈದ್ ಮಿಲಾದ್, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಬಾಬಯ್ಯನ ಜಲ್ದಿ, ಹಾಗೂ ಮಲ್ಲಿಕಾಪರ್ ದರ್ಗಾದ ಉರುಸ್‌ನಲ್ಲಿ ಈ ಬಡಾವಣೆಯ ಎರಡೂ ಕೋಮಿನ ಜನರೂ ಸಮಾನವಾಗಿ ಭಾಗವಹಿಸುವುದು ಇಲ್ಲಿನ ವಿಶೇಷವಾಗಿದೆ.

## ವಾರ್ಡ್ ನಂ. ೨೫ ನಾಯಕಹಟ್ಟಿ-ಅಗ್ರಹಾರ ಬೀದಿ

ಅಗ್ರಹಾರ ಬೀದಿ ನಾಯಕರ ಹಟ್ಟಿ, ಖಾಸಗಿ ಬಸ್ ನಿಲ್ದಾಣ, ಕಾಳಿಕಾಂಬ ದೇವಾಲಯ ಬೀದಿ, ಈ ಎಲ್ಲವೂ ಅಗ್ರಹಾರ ಬಡಾವಣೆಯ ವ್ಯಾಪ್ತಿಗೆ ಸೇರಿದೆ. ಸಿರಾದ ಪೂರ್ವ, ಪಶ್ಚಿಮವಾಗಿ ನಾರಾಯಣಸ್ವಾಮಿ ಬಯಲು ಕಲ್ಯಾಣ ಮಂಟಪದಿಂದ ಗಜಾನನ ಬಾಲಿಕಾ ಪ್ರೌಢಶಾಲೆಯ ತನಕ ಮಧುಗಿರಿ ಮುಖ್ಯ ರಸ್ತೆಗೆ, ಉತ್ತರ-ದಕ್ಷಿಣಕ್ಕೆ ಅಂಚೆ ಕಚೇರಿ, ಖಾಸಗಿ ಬಸ್‌ನಿಲ್ದಾಣದ ಎಡಬದಿ ಪೂರ್ಣ- ಮೆಕ್ಕ ರೈಸ್ ಮಿಲ್‌ನ ಎಡಬದಿಯಿಂದ ಪೂರ್ಣ ಮಧುಗಿರಿ ಮುಖ್ಯ ರಸ್ತೆಯ ತನಕ ಇದರ ವ್ಯಾಪ್ತಿ ಹರಡಿಕೊಂಡಿದೆ.

ಸಿರಾ ನಗರಸಭೆಯಿಂದ ಅರ್ಧ ಕಿ.ಮೀ. ದೂರದ ಪಶ್ಚಿಮಕ್ಕೆ ಈ ಬಡಾವಣೆ ಇದ್ದು, ನಾಯಕ ಜನಾಂಗದವರು ಇಲ್ಲಿನ ಮೂಲ ನಿವಾಸಿಗಳಾಗಿದ್ದರಿಂದ ನಾಯಕರಹಟ್ಟಿ ಎಂದೇ ಕರೆಯಲಾಗಿದೆ. ನಂತರ ಬ್ರಾಹ್ಮಣ ಸಮುದಾಯದವರು ಪೌರೋಹಿತ್ಯ ಮೊದಲಾದ ಧಾರ್ಮಿಕ ಚಟುವಟಿಕೆ ಹಾಗೂ ಶ್ರೀನಾರಾಯಣ ಸ್ವಾಮಿ ದೇವಾಲಯದ ಪೂಜೆ-ಧಾರ್ಮಿಕ ವಿಧಿ ವಿಧಾನದ ಸಲುವಾಗಿ ಬ್ರಾಹ್ಮಣ ಕುಟುಂಬಗಳು ಇಲ್ಲಿ ನೆಲೆಸಿದ್ದವು. ನಂತರ ಈ ಬಡಾವಣೆಯ ಎದುರಿನ ಕಚೇರಿ ಮೊಹಲ್ಲಾದಲ್ಲಿ ತಾಲ್ಲೂಕು ಕಛೇರಿ ಆರಂಭವಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ತಹಸೀಲ್ದಾರ್ ವಸತಿ ನಿಲಯ, ನಾರಾಯಣ ಸ್ವಾಮಿ ದೇವಾಲಯದ ಮುಂಭಾಗದ ಬಲಭಾಗದಲ್ಲಿ ಅಂದರೆಹಳೆಯ ತರಕಾರಿ ಮಾರ್ಕೆಟ್‌ನ ಬದಿಗೆ ಇದ್ದುದ್ದರಿಂದ, ತಹಸೀಲ್ದಾರ್ ಸಹ ಬ್ರಾಹ್ಮಣ ಸಮುದಾಯದವರಾಗಿದ್ದು, ಆಗಿನ ಕಂದಾಯ ಲೆಕ್ಕದಲ್ಲಿ ಅಗ್ರಹಾರ ವಸತಿ ನಿಲಯಗಳು ಎಂದು ಕರೆದಿದ್ದಾರೆ. ಆರಂಭದಲ್ಲಿ ಬ್ರಾಹ್ಮಣರ ಮನೆಗಳು ಹೆಚ್ಚು ಇದ್ದು, ಪ್ರಸ್ತುತ ಕಡಿಮೆ ಅಗಿವೆ ಎಂದು ಶ್ರೀ ನಾರಾಯಣ್ ಅಭಿಪ್ರಾಯ ಪಡುತ್ತಾರೆ. ಇಂದು ಇದೊಂದು ಪ್ರತ್ಯೇಕ ಬಡಾವಣೆಯಾಗಿ ನಾರಾಯಣಸ್ವಾಮಿ ದೇವಾಲಯದ ಮುಂಭಾಗ ದಿಂದ ಗಜಾನನ ಶಾಲೆಯ ಹಿಂಭಾಗ, ಹಾಗೂ ಹಳೆ ಅಂಚೆ ಕಛೇರಿರಸ್ತೆ, ಬಾಳ್ ರೋಡ್ ರೂಂ, ಗಿರಣಿ ಅಂಗಡಿಯವರೆ ಈ ಬಡಾವಣೆಯ ವ್ಯಾಪ್ತಿ ಇದೆ.

ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಈ ಪರಿಸರದಲ್ಲಿ ಇಲಿ, ಹೆಗ್ಗಣ, ಹಾವುಗಳು ಕಂಡು ಬರುತ್ತವೆ. ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಬೆಕ್ಕು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೫೦೨ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮-೩೯೦ ಸೆಂ.ರಷ್ಟು ಇದ್ದು, ಚಳಿಯು ೧೧೦ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ಆರು ಹಳೆಯ ಬಾವಿಗಳಿದ್ದು ನೀರು ಬಳಕೆಯಲ್ಲಿರುವುದಿಲ್ಲ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು, ಬ್ರಾಹ್ಮಣರು, ಮುಸ್ಲಿಂ, ಅಕ್ಕಸಾಲಿಗರು, ದರ್ಜಿಗರು, ಮಾರ್ವಾಡಿಗರು, ಕುಂಚಿಟಿಗರು ಸಣ್ಣ ಸಮುದಾಯವಾಗಿದೆ.

ಇಲ್ಲಿನ ಮಾತೃ ಭಾಷೆ ಕನ್ನಡ, ಉರ್ದು, ತೆಲುಗು, ಹಿಂದಿ, ಮರಾಠಿ ರಾಜಸ್ಥಾನಿ, ಗುಜರಾತಿ ಭಾಷೆಯಲ್ಲಿ ಮಾತನಾಡುತ್ತಾರೆ. ಅಗ್ರಹಾರ ಬೀದಿ, ನಾರಾಯಣ ಸ್ವಾಮಿ ಗುಡೀಬೀದಿ, ಹಳೆ ಅಂಚೆ ಕಛೇರಿ ರಸ್ತೆ, ನಾಯಕರ ಹಟ್ಟಿ ಓಣಿ, ಆಂಜನೇಯ ದೇವಾಲಯದ ಬೀದಿ, ಹೀಗೆ ವಿವಿಧ ರಸ್ತೆ, ಓಣಿ ಮಾರ್ಗಗಳಿವೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೧೨೦೦ ಮನೆಗಳಿದ್ದು, ೨೫೦೦ ಜನಸಂಖ್ಯೆಯನ್ನು ಹೊಂದಿದ್ದು, ೧೧೦ ಮನೆಗಳು ಇಂದಿರಾ ಆವಾಸ್, ಆಶ್ರಯ, ವಾಜ್‌ಪೈ ಆವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಎಲ್ಲರ ಮನೆಗಳಲ್ಲಿಯೂ ಶೌಚಾಲಯದ ವ್ಯವಸ್ಥೆ ಹೊಂದಿದ್ದಾರೆ.

ಸಾಂಪ್ರದಾಯಿಕ ವಾಹನಗಳಾದ ಒಂಟಿ ಎತ್ತಿನ ಗಾಡಿಗಳಿವೆ. ಉಳಿದಂತೆ ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಯುಜಿಸಿ ರಸ್ತೆ ಚರಂಡಿಯ ಸೌಲಭ್ಯವೂ ಇದೆ. ವ್ಯಾಪಾರ ಇಲ್ಲಿನ ಮುಖ್ಯ ಕಸುಬಾಗಿದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಬಟ್ಟೆ, ಮಾಂಸ, ಆಹಾರ ದಿನಸಿ, ಹೋಟೆಲ್ ಉದ್ಯಮ, ಚಪ್ಪಲಿ, ಚಿನ್ನ, ಬೆಳ್ಳಿ ಆಭರಣ, ಇವುಗಳ ಜೊತೆಗೆ ತರಕಾರಿ, ಗೂಡಂಗಡಿ, ಹಾಗೂ ಖಾಸಗಿ ಬಸ್ ನಿಲ್ದಾಣ ಹಾಗೂ ಅದರ ಬದಿಯಲ್ಲಿ ಚಪ್ಪಲಿ, ಹಣ್ಣು, ಔಷಧಿ, ಆಹಾರ ಪದಾರ್ಥಗಳ ಅನ್ಯಪಾರವೂ ಅಧಿಕವಾಗಿದೆ. ಮದ್ಯದ ಅಂಗಡಿ, ಮೊಬೈಲ್ ಪೋಟೋಗ್ರಫಿ, ಆರೋಗ್ಯ ಕೇಂದ್ರ, ಹಲ್ಲಿನ ಕ್ಲಿನಿಕ್ ಹಾಗೂ ಕನ್ನಡಕದ ಅಂಗಡಿಗಳಿವೆ.

ಶಿಕ್ಷಕರು, ಕಂದಾಯ, ರಕ್ಷಣೆ, ಸಾರಿಗೆ, ಕೃಷಿ ಇಲಾಖೆಗಳ ೮೦ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವೈದ್ಯರು, ಇಂಜಿನಿಯರುಗಳು, ವಕೀಲರು ಇದ್ದಾರೆ.

ಗಂಧದ ಕಡ್ಡಿ ತಯಾರಿಕೆ, ಬೀಡಿ ತಯಾರಿಕೆ, ಐಸ್‌ಕ್ರೀಂ ತರಾಯರಿಕೆಯ ಕಿರು ಫ್ಯಾಕ್ಟರಿಗಳಿವೆ. ಗ್ಯಾರೇಜ್, ಸೈಕಲ್ ರಿಪೇರಿ ಮಾರಾಟದ ಅಂಗಡಿಗಳಿವೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತಿದ್ದು, ಪ್ರಕಾಶ್ ಮುದ್ದರಾಜು ಈ ಬಡಾವಣೆಯ ಪ್ರತಿನಿಧಿಯಾಗಿದ್ದಾರೆ. ಮಾಜಿ ನಗರ ಸಭೆಯ ಅಧ್ಯಕ್ಷ ಆರ್. ರಾಮು ಇದೇ ಬಡಾವಣೆಯ ನಿವಾಸಿಯಾಗಿದ್ದಾರೆ. ಮಾಜಿ ಮಂಡಲ್ ಪ್ರಧಾನರು, ಹಾಗೂ ಸಿರಾ ತಾಲ್ಲೂಕು ಕುಂಚಿಟಿಗರ ಸಂಘದ ಅಧ್ಯಕ್ಷರು, ರಂಗನಾಥ್ ಸಹಕಾರ ಬ್ಯಾಂಕಿನ ಅಧ್ಯಕ್ಷರೂ ಆದ ಗುಟಿಗೇನಹಳ್ಳಿ ನಾಗರಾಜ್ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರಾದ ಶೋಭಾ ನಾಗರಾಜ್ ಇದೇ ಬಡಾವಣೆಯವರು. ಇದೇ ಬಡಾವಣೆಯಲ್ಲಿ ಪ್ರಧಾನ ಇಲಾಖೆ ಕಛೇರಿ ಇದೆ. ರ್‍ಾಷ್ಟ್ರೀಯ ಹೆದ್ದಾರಿ ೪ ಬಡಾವಣೆಗೆ ಹೊಂದಿಕೊಂಡಂತೆ ಹಾದು ಹೋಗಿದ್ದು, ಬೆಂಗಳೂರು-ಮುಂಬಯಿ ಸಂಪರ್ಕ ಕಲ್ಪಿಸುತ್ತದೆ. ಖಾಸಗಿ ಬಸ್ ನಿಲ್ದಾಣವೂ ಇದೇ ವ್ಯಾಪ್ತಿಯಲ್ಲಿ ಬರುತ್ತದೆ. ವ್ಯಾಪಕವಾಗಿ ಮೊಬೈಲ್ ಹಾಗೂ ಸ್ಥಿರ -ಚರ ದೂರವಾಣಿ ಸಂಪರ್ಕ ಹೊಂದಿದ್ದಾರೆ. ನ್ಯಾಯಾಂಗ ಸೌಲಭ್ಯಕ್ಕೆ ಸಿರಾ ಸಿವಿಲ್ ನ್ಯಾಯಾಲಯಕ್ಕೆ ಹೋಗುತ್ತಾರೆ. ಉಚಿತ ಕಾನೂನು ಸೇವಾ ಮಂಡಳಿಯ ಸೌಲಭ್ಯ ಪಡೆಯುತ್ತಾರೆ. ೬ ಸ್ತ್ರೀ ಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಇವು ಮಹಿಳೆಯರ ಆರ್ಥಿಕ ಸಬಲತೆಗೆ ಪ್ರೇರಕವಾಗಿದೆ. ೨ ಅಂಗನವಾಡಿ ಕೇಂದ್ರ, ಒಂದು ನ್ಯಾಯಬೆಲೆ ಅಂಗಡಿಗಳಿವೆ. ಇಲ್ಲಿ ಸಾಕ್ಷರತೆ ಪ್ರಮಾಣ ಶೇ. ೯೪ ರಷ್ಟಿದೆ. ಗಜಾನನ ಬಾಲಿಕಾ ಪ್ರೌಢಶಾಲೆ ಇದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಸೌಲಭ್ಯಗಳಿವೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ.

ಧಾರ್ಮಿಕವಾಗಿ ಈ ಬಡಾವಣೆಯ ದೇವರುಗಳ ನಗರವಾಗಿದೆ. ಶ್ರೀ ನಾರಾಯಣಸ್ವಾಮಿ ದೇವಾಲಯ, ಪ್ರಾಚೀನ ದೇವಾಲಯವಾಗಿದ್ದು ವಿಶೇಷವಾಗಿದೆ. ಮುಜರಾಯಿ ಇಲಾಖೆಗೆ ಸೇರಿದೆ. ಶ್ರೀ ವೆಂಕಟೇಶ್ವರನ ದೇವಾಲಯ, ಕಾಳಿಕಾಂಬ ದೇವಾಲಯ, ಪಾಂಡುರಂಗ ದೇವಾಲಯ, ಆಂಜನೇಯನ

ದೇವಾಲಯ, ನಾಗರಕಟ್ಟೆಗಳಿವೆ. ಪಾಂಡುರಂಗ ದೇವಾಲಯದ ಸಮುದಾಯ ಭವನವಿದ್ದು, ಮದುವೆ, ಧಾರ್ಮಿಕ ಕಾರ್ಯ ಕ್ರಮಗಳಿಗೆ ಬಳಕೆಯಾಗಿವೆ. ನಾರಾಯಣ ಸ್ವಾಮಿ ಉತ್ಸವ, ಪಾಂಡುರಂಗ ಉತ್ಸವಗಳು ವಿಶೇಷವಾಗಿ ಶ್ರದ್ಧಾ ಭಕ್ತಿಯಿಂದ ನಡೆಯುತ್ತವೆ. ಉಳಿದಂತೆ ಮಾರಮ್ಮನ ಜಾತ್ರೆ ಹಾಗೂ ಗವಿ ಆಂಜನೇಯನ ಆರತಿ, ದುರ್ಗಮ್ಮನ ಉತ್ಸವ, ಗಣಪತಿ ಉತ್ಸವಗಳನ್ನು ಈ ಬಡಾವಣೆಯವರು ಭಾಗವಹಿಸುವುದು ಪ್ರಧಾನವಾಗಿರುತ್ತದೆ.

ಸಾಂಸ್ಕೃತಿಕವಾಗಿ, ಹಿರಿಯ ಜ್ಯೋತಿಷಿ ಶ್ರೀ ಸುಧೀಂದ್ರ ಜೋಯಿಸ್ ಲೇಖಕರಾಗಿದ್ದು, ಜ್ಯೋತಿಷ್ಯವಿಜ್ಞಾನಕ್ಕೆ ಸಂಬಂಧಿಸಿದಂತೆ ಸಾಹಿತ್ಯ ರಚಿಸಿದ್ದಾರೆ. ಕಮಲಾ ನರಸಿಂಹನ್ ಇದೇ ಗ್ರಾಮದವರಾಗಿದ್ದು, ಕಾದಂಬರಿ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ. ಶ್ರೀ ಸುರೇಶ್ ವಸ್ತ ಪರಿಸರ, ಪ್ರವಾಸ, ಶಿಕ್ಷಣ, ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿದಂತೆ ಮೌಲಿಕ ಬರಹಗಳನ್ನು ಕನ್ನಡ ಪ್ರಭ, ತುಮಕೂರು ವಾರ್ತೆ, ಮೊದಲಾದ ಪತ್ರಿಕಗಳಲ್ಲಿ ಅಂಕಣ ಬರಹಗಾರ ರಾಗಿದ್ದಾರೆ. ತುಮಕೂರು ವಾರ್ತೆ ಪ್ರಕಾಶಕ ಸಂಪಾದಕರಾಗಿದ್ದು ಇವರ ಚಿಂತನೆಗಳು ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಪ್ರಜಾ ಪ್ರಗತಿ ಪತ್ರಿಕೆಯ ವರದಿಗಾರ ಬರಗೂರು ವಿರೂಪಾಕ್ಷ ಇದೇ ಬಡಾವಣೆಯ ನಿವಾಸಿ. ನಾಯಕರಹಟ್ಟಿ ನರಸಿಂಹಯ್ಯ ಪಾಳೆಯಗಾರರ ವೇಷದ ಕಲಾವಿದರಾಗಿ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ಗೌರಿಶಂಕರ ವಸತಿ ಗೃಹವೂ ಈ ಬಡಾವಣೆಯಲ್ಲಿದೆ. ಕಣಜನಹಳ್ಳಿ ಶ್ರೀಧರ ಪತ್ರಕರ್ತರಾಗಿ ಐತಿಹಾಸಿಕ ಲೇಖನ ಪ್ರಕಟಿಸಿದ್ದಾರೆ.

## ವಾರ್ಡ್ ನಂ. ೨೬ಎ ಮಲ್ಲಿಕಾಪುರದ ಹಟ್ಟಿ ಬೀಡಿ ಕಾರ್ಮಿಕರ ಬಡಾವಣೆ

ಮಲ್ಲಿಕಾಪುರದ ಹಟ್ಟಿ, ಸಿರಾದ ನಗರಸಭಾ ವ್ಯಾಪ್ತಿಯ ವಾರ್ಡ್ ನಂ. ೨೬ ರಲ್ಲಿ ಬರುತ್ತದೆ. ನಗರಸಭೆ ಮತ್ತು ಕೇಂದ್ರ ಸ್ಥಾನದಿಂದ ೫ ಕಿ.ಮೀ. ದೂರದಲ್ಲಿ ಪೂರ್ವ ದಿಕ್ಕಿನಲ್ಲಿದೆ. ಇದು ಸಿರಾ–ತುಮಕೂರು ರ್‍ಾಷ್ಟ್ರೀಯ ಹೆದ್ದಾರಿ ೪೮ ರ ಬಲಬದಿಗೆ ಇದೆ. ವಿಖ್ಯಾತ ಮಲ್ಲಿ ರೆಹಮಾನ್ ದರ್ಗಾದ ವ್ಯಾಪ್ತಿಯಲ್ಲಿದೆ. ಆದಿಕರ್ನಾಟಕ ಜನಾಂಗದವರು ವಸತಿ ನಿರ್ಮಿಸಿಕೊಂಡು ವಾಸಿಸುತ್ತಿದ್ದರಿಂದ ಮಲ್ಲಿಕ್ ರೆಹಾನ್ ಬಡಾವಣೆ ಎಂದು ಕರೆದರೆ, ಅದು ಸಾಮಾನ್ಯರ ಬಾಯಲ್ಲಿ ಮಲ್ಲಿಕಾಪುರ ಎಂದಾಗಿದೆ. ಇದು ಕಂದಾಯ ಗ್ರಾಮದ ಗೌರವಕ್ಕೆ ಪಾತ್ರವಾಗಿದ್ದು, ೧೧೬.೫೪ ಹೆಕ್ಟೇರ್ ಭೌಗೋಳಿಕ ವ್ಯಾಪ್ತಿ ಹೊಂದಿದೆ. ಕರೆಕಲ್ಲಹಟ್ಟಿ ಇದರ ಉಪಗ್ರಾಮವಾಗಿದ್ದು, ಪ್ರಸ್ತುತ ಸಂತೇಪೇಟೆ, ಮಾರುತಿನಗರ, ಮಲ್ಲಿಕಾಪುರದ ಹಟ್ಟಿ ಕೂಡು ಗ್ರಾಮವಾಗಿದೆ. ಬಯಲು ನಾಡಾಗಿದ್ದು, ಪೂರ್ವದ ಹೆಸರು ಕರೆಕಲ್ಲಹಟ್ಟಿ ಎಂದಿತ್ತು. ಕಾಲಾನಂತರ ಮಲ್ಲಿಕಾಪುರದ ಹಟ್ಟಿ ಎಂದು ಕರೆಯಲು ಆರಂಭಿಸಿದ್ದಾರೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಗ್ರಾಮದ ದಕ್ಷಿಣ–ಪೂರ್ವಕ್ಕೆ ಇಂದಿಗೂ ಕೃಷಿ ಕಾರ್ಯಕ್ಕೆ ಬಳಕೆಯಾಗುತ್ತಿದೆ. ಈ ಪರಿಸರದಲ್ಲಿ ಇಲಿ, ಹೆಗ್ಗಣ, ವಿಷಪೂರಿತ ಹಾವು, ಚೇಳುಗಳು ಕಂಡು ಬರುತ್ತವೆ. ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಬೆಕ್ಕು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೫೦೨ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೯–೪೦ಂ ಸೆಂ.ರಷ್ಟು ಇದ್ದು, ಚಳಿಯು ೧೨ಂ ಸೆಂ. ಇರುತ್ತದೆ. ನವೆಂಬರ್–ಮಾರ್ಚಿ ತಿಂಗಳವರೆಗೆ ಇರುತ್ತದೆ. ಉಳಿದಂತೆ ೬–೮ ಡಿ.ಸೆಂ. ಸಹಜವಾಗಿರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ಸಾರ್ವಜನಿಕ ಹಾಗೂ ಗೃಹ ನಲ್ಲಿ ಸಂಪರ್ಕ ಹೊಂದಿದ್ದಾರೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗ ದೊಡ್ಡ ಸಮುದಾಯವಾಗಿದ್ದು, ಈಡಿಗ, ಗೌಡ, ಬಣಜಿಗ ಸಣ್ಣ ಸಮುದಾಯವಾಗಿದೆ. ಮುಖ್ಯ ರಸ್ತೆ ಕೊಳದ ಪಲೆ ಈಶ್ವರ ದೇವಸ್ಥಾನಕ್ಕೆ ಸಂಪರ್ಕಿಸುತ್ತದೆ.

ಇಲ್ಲಿನ ಮಾತೃ ಭಾಷೆ ಕನ್ನಡ, ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೭೧೨ ಮನೆಗಳಿದ್ದು, ೧೭೧೪ ಜನಸಂಖ್ಯೆಯನ್ನು ಹೊಂದಿದ್ದು, ೮೩ ಮನೆಗಳು ಇಂದಿರಾ ಆವಾಸ್, ಆಶ್ರಯ, ವಾಜ್‌ಪೈ ಆವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಎಲ್ಲರ ಮನೆಗಳಲ್ಲಿಯೂ ಶೌಚಾಲಯದ ವ್ಯವಸ್ಥೆ ಹೊಂದಿದ್ದಾರೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭಯ ಬಳಕೆಯಿದೆ.

ಸಾಂಪ್ರದಾಯಿಕ ವಾಹನಗಳಾದ ಒಂಟಿ ಎತ್ತಿನ ಗಾಡಿಗಳಿವೆ. ಉಳಿದಂತೆ ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಯುಜಿಸಿ ರಸ್ತೆ, ಒಳ ಚರಂಡಿಯ ಸೌಲಭ್ಯವೂ ಇದೆ.

ಕೃಷಿ ಬಳಕೆಯು ಈ ಭಾಗದಲ್ಲಿ ಹೆಚ್ಚಿದ್ದು ಶೇಂಗಾ, ರಾಗಿ, ಜೋಳ, ಹುರುಳಿ, ತೊಗರಿ ಬೆಳೆಯುತ್ತಾರೆ. ಸೂರ್ಯಕಾಂತಿ, ಸೇವಂತಿಕೆ, ತೋಟಗಾರಿಕೆ ಬೆಳೆಗಳಾಗಿ ತೆಂಗು ಬೆಳೆಯುತ್ತಾರೆ. ವ್ಯಾಪಾರದ ಮುಖಯ ಸರಕು ಶೇಂಗಾ, ಹೂವು ಆಗಿರುತ್ತದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಸಾರಿಗೆ, ಕಾಲೇಜು ಶಿಕ್ಷಣ ಇಲಾಖೆಯ ಒಟ್ಟು ೪ ಜನ ಸರ್ಕಾರಿ ನೌಕರರಿದ್ದಾರೆ. ಬೃಹತ್ ಕೈಗಾರಿಕೆ ಇಲ್ಲದಿದ್ದರೂ ೨ ಮರದ ಮಿಲ್ಲುಗಳಿವೆ. ಗ್ರಾಮದಲ್ಲಿ ಬೀಡಿ ಕಟ್ಟುವುದು, ಊದುಬತ್ತಿ ಹೊಸೆಯುವುದು, ಹೂ ಕಟ್ಟುವುದು ಗೃಹ ಕೈ ಕಸುಬಾಗಿದೆ. ರಾಗಿ ಮಿಲ್ ಬದಿಗೆ ಇಟ್ಟಿಗೆ ಫ್ಯಾಕ್ಟರಿ ಇದೆ. ಗಾರೆ ಕೆಲಸ, ಮಂಡಿ, ಹಾಗೂ ಕೃಷಿ ಕೆಲಸದ ಕಾರ್ಮಿಕರು ಇಲ್ಲಿ ಹೆಚ್ಚು ಇದ್ದಾರೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದ್ದು, ತಹಸೀಲ್ದಾರ್, ಪೋಲೀಸ್, ವಿದ್ಯುತ್, ನೀರು ಸಂಬಂಧಿಸಿದ ಇಲಾಖೆಗಳು ಸಿರಾ ನಗರದಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದು, ಈ ವಾರ್ಡ್‌ನೊಂದಿಗೆ ಸಂಪರ್ಕ ಹೊಂದಿವೆ.

ನಟರಾಜುರವರು ಇಲ್ಲಿನ ನಗರಸಭಾ ಸದಸ್ಯರಾಗಿದ್ದಾರೆ. ಅಂಚೆ ಕಛೇರಿ, ಸಂತೇಪೇಟೆ ಮುಖ್ಯ ಕಛೇರಿಯೊಂದಿಗೆ ಸಂಪರ್ಕವಿದೆ. ಗ್ರಾಮದಲ್ಲಿ ದೂರವಾಣಿಗಳಿದ್ದು, ಅದು ಪ್ರಮುಖ ಸಂಪರ್ಕ ಸಾಧನಗಳಾಗಿವೆ. ಸಿರಾ ತಾಲ್ಲೂಕು ಮ್ಯಾಜಿಸ್ಟ್ರಟರ್ ಕೋರ್ಟ್‌ನಲ್ಲಿ ಉಚಿತ ಕಾನೂನು ನೆರವು ಕೇಂದ್ರವಿದೆ. ಲೋಕಾಯುಕ್ತ ಕೋರ್ಟ್ ತುಮಕೂರಿನಲ್ಲಿದೆ. ಖಾಸಗಿ ಬ್ಯಾಂಕ್ ವ್ಯವಸ್ಥೆಯಲ್ಲಿ ೪ ಸ್ತ್ರೀ ಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಉಜ್ಜೀವನ, ಸ್ಪಂದನ ಸ್ವಸಹಾಯ ಸಂಘಗಳು ಮಹಿಳೆಯರ ಆರ್ಥಿಕ ಸಬಲತೆಗೆ ಪ್ರೇರಕವಾಗಿದೆ.

ಶೈಕ್ಷಣಿಕವಾಗಿ ೧ ಅಂಗನವಾಡಿ ಕೇಂದ್ರ, ಒಂದನೇ ತರಗತಿಯಿಂದ ೫ನೇ ತರಗತಿವರೆಗೆ ಸರ್ಕಾರಿ ಕಿರಿಯ ಪಾಠಶಾಲೆ ಇದ್ದು, ಕನ್ನಡ ಮಾಧ್ಯಮದಲ್ಲಿ ಬೋಧಿಸಲಾಗಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪಠ್ಯಪುಸ್ತಕ, ಸಮವಸ್ತ್ರದ ಸೌಲಭ್ಯಗಳಿವೆ. ಸಾಕ್ಷರತೆಯ ಪ್ರಮಾಣ ಶೇ. ೬೭.೩ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೪ಟೀ ಅಂಗಡಿಗಳು, ೬ ಕಿರಾಣಿ ಅಂಗಡಿಗಳಿವೆ.

ಐತಿಹಾಸಿಕವಾಗಿ ಈ ಭಾಗ ಮಹತ್ತರವಾದ ಸ್ಮಾರಕಗಳನ್ನು ಹೊಂದಿದೆ. ಸಿರಾ ನಗರವನ್ನಾಳಿದ ಮೊಗಲ್ ಅರಸರಲ್ಲಿ ಪ್ರಭಾವಿ ಅರಸನಾದ ಮಲ್ಲಿಕ್ ರೆಹಾನ್‌ನ ಸಮಾಧಿ, ಇದೇ ವಿಭಾಗದಲ್ಲಿದೆ. ಇದೊಂದು ಸುಂದರ ವಾಸ್ತು ಸ್ಮಾರಕವಾಗಿದ್ದು ಚೌಕಾಕೃತಿಯ ಮಲ್ಲಿಕ್ ರಿಹಾನ್ ದರ್ಗಾ ೪ ಗೋಪುರ, ಮಧ್ಯ ಭಾಗದಲ್ಲಿ ಗುಮ್ಮಟವಿದೆ. ೮ ಅಡಿ ಎತ್ತರದ ಗೋಪುರ, ಒಳಗೆ ಮಲ್ಲಿಕ್ ರೆಹಾನ್ ಗೋರಿ ಇದೆ.ಈ ದರ್ಗಾದ ಹಿಂಭಾಗದಲ್ಲಿ ಔರಂಗಜೇಬನ ಮಗಳ ಸಮಾಧಿ ಇದೆ. ಮೊಗಲ ಅರಸ ಔರಂಗಜೇಬನ ಮಗಳು ಅಸ್ತಮ ಖಾಯಿಲೆಯಿಂದ ಬಳಲುತ್ತಿದ್ದಾಗ, ದಕ್ಷಿಣ ಭಾರತದಲ್ಲಿ ಸಿರಾ ಮೊಗಲರ ಪ್ರಬಲ ಪಾಳೆಯ ಪಟ್ಟಾಗಿದ್ದು, ಸಿರಾ ಅಸ್ತಮ ಖಾಯಿಲೆಗೆ ಉತ್ತಮ ವಾತಾವರಣ ಎಂದೇ ಅರಿತ ಔರಂಗಜೇಬನ ತನ್ನ ಮಗಳಿಗಾಗಿ ಸಿರಾ ನಗರದಲ್ಲಿ ವಸತಿ ಮಾಡಿದನೆಂದೂ ಬಹಳ ವರ್ಷಗಳ ನಂತರ ಆಕೆ ತೀರಿಕೊಂಡಳೆಂದು, ಅವಳ ಸ್ಮಾರಕ ಇಂದಿಗೂ ಮಲ್ಲಿಕ್ ರೆಹಾನ್ ದರ್ಗಾದ ಪೂರ್ವಕ್ಕೆ ಇದೆ. ಅರೇಬಿಕ್ ಉರ್ದು ಭಾಷೆಯ ಲಿಪಿ ಸ್ಮಾರಕಗಳಿವೆ. ಒಂದು ಮಸೀದಿ, ಅದರ ಹಿಂಭಾಗ ಮದರಸ ವಸತಿ ಶಾಲೆ ಇದೆ. ಇದು ಪವಿತ್ರ ಯಾತ್ರಾ ಸ್ಥಳವಾಗಿದ್ದು, ಹಿಂದು ಮುಸ್ಲಿಂ ಎರಡು ಪಂಗಡದವರೂ ನಡೆದುಕೊಳ್ಳುತ್ತಾರೆ. ಐದು ಎಕರೆ ವಿಸ್ತೀರ್ಣ ದಲ್ಲಿ ಪ್ರಾಚೀನ ಕಾಲದ ಮೊಗಲರ ಸಮಾಧಿಗಳ ಸ್ಮಶಾನವಿದೆ. ತುಮಕೂರು–ಸಿರಾ ಮುಖ್ಯ ರಸ್ತೆಗೆ ಹೊಂದಿಕೊಂಡಿದ್ದು, ಸಂಪರ್ಕಕ್ಕೆ ಉತ್ತಮ ಸಾರಿಗೆ ಸೌಲಭ್ಯವಿದೆ.

ಧಾರ್ಮಿಕವಾಗಿ ಮಲ್ಲಿಕ್ ರೆಹಾನ್ ಉರಸ್ ಒಂದು ವಾರಗಳ ಕಾಲ ಬೃಹತ್ ಪ್ರಮಾಣದಲ್ಲಿ ಸೇರುತ್ತದೆ. ಕವಾಲಿ ನಡೆಯುತ್ತದೆ. ಹಿಂದು–ಮುಸ್ಲಿಂ ಸಕ್ಕರೆ ಓದಿಸುವ ಸಂಪ್ರದಾಯವಿರುತ್ತದೆ. ಮಾರಮ್ಮ, ಆಂಜನೇಯನ ಗುಡಿ ಇದೆ. ಅಶ್ವತ್ಥ ಕಟ್ಟೆ ಇದೆ. ಗ್ರಾಮದಲ್ಲಿ ಮಾರಮ್ಮನ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ.

ತಮಟೆ ಕಲಾವಿದ ರಂಗನಾಥಪ್ಪ, ನರಸಿಂಹಯ್ಯ ಇದ್ದು, ಈಗ ವಯೋಮಾನದಿಂದ ವಾದ್ಯ ನುಡಿಸುತ್ತಿಲ್ಲ. ತಮ್ಮ ಮಕ್ಕಳು ಮುಂದುವರಿಸುತ್ತಿ ಲ್ಲವೆಂದು ತಮ್ಮ ಮಕ್ಕಳು ಕೆಲವರು ತೋಡಿ ಕೊಳ್ಳುತ್ತಿದ್ದಾರೆ.

ಆಂಜನೇಯನಿಗೆ ಆರತಿ, ಉತ್ಸವ, ದೀಪಾವಳಿ ಸಂದರ್ಭದಲ್ಲಿ ಏರ್ಪಡುತ್ತದೆ. ಆಶಾಢ ಮಾಸದ ಎರಡನೇ ಪಾದದಲ್ಲಿ ಪ್ರತಿವರ್ಷ ಊರ ಮಾರಮ್ಮನ ಹಬ್ಬ ಆಚರಿಸುತ್ತಾರೆ. ಆರತಿ, ಬಲಿ, ಅರಕೆ ಸಂಪ್ರದಾಯವಾಗಿದೆ.

ಇದರ ಪಕ್ಕದಲ್ಲಿ ಬೀಡಿ ಕಾರ್ಮಿಕರ ಬಡಾವಣೆ ನಿರ್ಮಾಣವಾಗಿದ್ದು, ಬೀಡಿ ಕೈಗಾರಿಕೆಯಲ್ಲಿ ನಿರತ, ಮುಸ್ಲಿಂ, ಬೇಡರು, ಲಂಬಾಣಿ, ಬೋವಿ ಜನಾಂಗದವರು ನೆಲೆಸಿದ್ದಾರೆ. ಭಾರತ ಸರ್ಕಾರದ ಕಾರ್ಮಿಕ ಇಲಾಖೆ, ರಾಜೀವಗಾಂಧಿ ವಸತಿ ನಿಗಮ, ವಾಜ್ ಪೈ ಆವಾಸ್, ಯೋಜನೆಗಳಿಂದ

೨೮೧ ವಸತಿ ನಿಲಯಗಳನ್ನು ನಿರ್ಮಿಸಲಾಗಿದೆ. ಬೀಡಿ ಕಾರ್ಮಿಕರ ವಿವಿದ್ದೋದ್ದೇಶ ಕಾರ್ಮಿಕರ ಸಹಕಾರ ಸಂಘ (ರಿ.) ಕಾರ್ಯಾಲಯ ಇಲ್ಲಿಯೇ ಇದೆ. ಇದರ ನಿರ್ವಹಣೆಯನ್ನು ಚಿಂತಕ–ಲೇಖಕರೂ ಆದ ಅಬ್ದುಲ್ ಖಾದರ್ ನಿರ್ವಹಿಸುತ್ತಿದ್ದಾರೆ.

## ಕರೇಕಲ್ಲುಹಟ್ಟಿ 'ಬಿ' ವಾರ್ಡ್ ನಂ.೨೬ಬಿ

ಕರೇಕಲ್ಲು ಹಟ್ಟಿಯು ಸಿರಾ ನಗರಸಭಾ ವ್ಯಾಪ್ತಿಗೆ ಒಳಪಟ್ಟಿದ್ದು ನಗರ ಸಭೆಯ ಕಾರ್ಯಾಲಯತದಿಂದ ಪೂರ್ವಕ್ಕೆ ಒಂದು ಕಿ.ಮೀ. ದೂರದಲ್ಲಿದೆ. ರ್‍ಾಷ್ಟ್ರೀಯ ಹೆದ್ದಾರಿ ೪ ರ ಎಡಭಾಗದಲ್ಲಿ ಸಿರಾ ಅಂಚೆ ಕಚೇರಿಯಿಂದ ಪೂರ್ವಕ್ಕೆ ಈ ಕಾಲೋನಿ ಪೇಷ್ಮಾ ಮೊಹಲ್, ಕರೇಕಲ್ಲುಹಟ್ಟಿ, ಹಾಗೂ ಮಲ್ಲಿಕಾಪುರದಟ್ಟಿಯ ಕೆಲವು ಮನೆಗಳನ್ನು ಒಟ್ಟುಗೂಡಿಸಿ ನಗರ ಸಭೆಯವರು ೨೬ ನೇ ವಾರ್ಡ್ ಎಂದು ನವೀಕರಿಸಿದ್ದಾರೆ. ತೀರಾ ದೊಡ್ಡದೂ ಅಲ್ಲದೆ ಚಿಕ್ಕದೂ ಅಲ್ಲದೆ ಕಾಡು. ಕರೇಕಲ್ಲಿನ ಭೂಪ್ರದೇಶವಾಗಿದ್ದು, ಪ್ರತ್ಯೇಕ ಅಸ್ಥಿತ್ವ ಉಳಿಸಿಕೊಂಡಿದೆ. ಮನೆಗಳು ರಚನೆಯಾದುದರಿಂದ ಕರೇಕಲ್ಲು ಹಟ್ಟಿ ಎಂದು ಗುಂಡುಗಳಿಂದ ಕೂಡಿದ್ದ ಭೂಮಿ ಇಂದು ಮಟ್ಟಸವಾಗಿ ಮನೆ ನಿರ್ಮಿಸಿ ಕೊಂಡಿದ್ದಾರೆ.

ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಈ ಭಾಗದಲ್ಲಿ ನರಿ, ಮೊಲ, ಕಾಡುಹಂದಿ, ಉಡ, ಆಮೆ, ಮುಂಗುಸಿ, ಇಲಿ, ಹೆಗ್ಗಣ ಕಂಡು ಬರುತ್ತವೆ. ಗ್ರಾಮದಲ್ಲಿ ರೈತರು ಕೃಷಿಕರಾಗಿದ್ದು ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಎಮ್ಮೆ , ಎತ್ತುಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೪೫೨ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮–೩೯ಂ ಸೆಂ.ರಷ್ಟು ಇದ್ದು, ಚಳಿಯು ೧೧–೧೨ಂ ಸೆಂ. ಇರುತ್ತದೆ. ೩ ತೆರೆದ ಬಾವಿಗಳಿದ್ದು, ಈಗ ಮುಚ್ಚಲಾಗಿದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೧೮೦ ನಲ್ಲಿ ಸಂಪರ್ಕ ಹೊಂದಿದೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಜನಾಂಗದ ದೊಡ್ಡ ಸಮುದಾಯವಾಗಿದ್ದು, ಮುಸ್ಲಿಂ, ಈಡಿಗ, ಕುಂಚಿಟಿಗ ಕಿರು ಜನಾಂಗದವರಿದ್ದಾರೆ. ಇಲ್ಲಿನ ಮಾತೃ ಭಾಷೆ ಕನ್ನಡ. ಉಳಿದಂತೆ ಉರ್ದು, ತೆಲುಗು, ಮಾತನಾಡುತ್ತಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೪೦೦ ಮನೆಗಳಿದ್ದು, ಇಲ್ಲಿನ ಜನಸಂಖ್ಯೆ ೧೨೫೦ ಹೊಂದಿದೆ. ಇವುಗಳು ಏಕಲವ್ಯವಸತಿ ಯೋಜನೆ, ವಾಜ್ ಪೇಯಿ ಆವಾಸ್, ನಗರಸಭಾ ಅನುದಾನ, ಅಂಬೇಡ್ಕರ್ ವಸತಿ ಯೋಜನೆಯ ೨೭ ಫಲಾನುಭವಿಗಳಿದ್ದಾರೆ. ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಹೊಂದಿವೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ರೈತಾಪಿ ಜನರು ಶೇಂಗಾ,ರಾಗಿ, ತೊಗರಿ ಬೆಳೆಯುತ್ತಾರೆ. ಸೂರ್ಯಕಾಂತಿ, ಸೇವಂತಿ, ತೋಟಗಾರಿಕೆ ಬೆಳೆ ಬೆಳೆಯಲಾಗುತ್ತಿದೆ. ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶಿಕ್ಷಣ, ಸಾರಿಗೆ, ಪೋಲೀಸ್, ಕಂದಾಯ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ಡ್ರೈವರ್, ಹಾಗೂ ವಿವಿಧ ಅಂಗಡಿಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಮಹಿಳೆಯರು ಗೃಹ ಕೈಗಾರಿಕೆಯಾಗಿ ಬೀಡಿ ಕಟ್ಟುವುದು, ಹೂ ಕಟ್ಟುವುದು, ಟೈಲರಿಂಗ್ ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ವಾರ್ಡ್ ನಂ. ೨೬ ರ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಈ ವಾರ್ಡ್‌ನಿಂದ ನಟರಾಜ್ ಎಂಬುವವರು ನಗರ ಸಭಾ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ. ಅಂಚೆ ಕಚೇರಿ, ತಹಸೀಲ್ದಾರ್ ಕಛೇರಿ, ಪೋಲೀಸ್, ಕೆಇಬಿ, ಲೋಕೋಪಯೋಗಿ ಇಲಾಖೆಗಳಿಗೆ ಸಿರಾ ನಗರದ ಮುಖ್ಯ ಕಛೇರಿಗಳನ್ನು ಸಂಪರ್ಕಿಸಲಾಗುತ್ತಿದೆ. ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದ್ದು, ರ್‍ಾಷ್ಟ್ರೀಯ ಹೆದ್ದಾರಿ ೪ ಈ ಬಡಾವಣೆಯ ನಡುವೆ ಹಾದು ಹೋಗಿದೆ.

ಈ ವ್ಯಾಪ್ತಿಯಲ್ಲಿ ಅಂಚೆ ಕಛೇರಿ, ದೂರವಾಣಿ ಸೌಕರ್ಯವಿದೆ. ಸಿರಾ ನ್ಯಾಯಾಲಯ ಹಾಗೂ ಕಾನೂನು ನೆರವು ಮಂಡಳಿಯಿಂದ ಸಣ್ಣ ಪುಟ್ಟ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುತ್ತಾರೆ.

ಇಲ್ಲಿ ೪ ಸ್ತ್ರೀ ಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯಕ ಸಂಘ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಉಪಯುಕ್ತವಾಗಿದೆ. ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪಠ್ಯ ಪುಸ್ತಕ ಸೌಲಭ್ಯಗಳಿವೆ.

ಮಕ್ಕಳಿಗೆ ಪೌಷ್ಠಿಕ ಆಹಾರ ವಿತರಿಸಲಾಗುತ್ತಿದೆ. ಇಲ್ಲಿನ ಸಾಕ್ಷರತೆ ಪ್ರಮಾಣ ಶೇ. ೭೧ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧೦ ಚಿಲ್ಲರೆ ಅಂಗಡಿಗಳಿವೆ. ೦೩ ಹೋಟೆಲ್‌ಗಳು, ೨ ಗ್ರಾನೈಟ್ ಅಂಗಡಿ, ಒಂದು ಸ್ಕೂಟರ್ರ ಶೋ ರೂಮ್, ೩ ಗ್ಯಾರೇಜ್, ೨ ಫ್ಲೋರ್ ಮಿಲ್, ೨ ಸೌದೆ ಡಿಪೋಗಳಿವೆ. ಐತಿಹಾಸಿಕವಾಗಿ ಒಂದು ಕರುಗಲ್ಲು ಇದೆ. ಒಂದು ಅರಳಿಕಟ್ಟೆ ಇದೆ. ಮೂಡಲಗಿರಿ ತಿಮ್ಮಪ್ಪ, ಕುಕ್ಕಲಮ್ಮ, ಕೊಲ್ಲಾಪುರದಮ್ಮ, ಎಲ್ಲಮ್ಮನ ದೇವಸ್ಥಾನಗಳಿವೆ.

ಮೂಡಲಗಿರಿ ತಿಮ್ಮಪ್ಪನ ಉತ್ಸವ, ಮರಡಿಗುಡ್ಡದ ಸಮೀಪದ ಪುರಸಕ್ಕನ ಕೆರೆಗೆ ಗಂಗಾಸ್ನಾನ, ಕಳಸದವರು ಯಜಮಾನರು ಉಗ್ರಾಣದವರು, ಹಣ್ಣಡಿಕೆ, ಹೊತ್ತವರು ಈಬಗೆಯ ಕೈವಾಡದ ಮೂಡಲಗಿರಿ ತಿಮ್ಮಣ್ಣನ ಸೇವಾ ಕೈಂಕರ್ಯ ಹಂಚಿಕೆಯಾಗಿದೆ. ಯಜಮಾನ್ ತಿಮ್ಮಣ್ಣನ ವಂಶಸ್ಥರು ಯಜಮಾನದಲ್ಲಿ, ಕಳಸ ಇವರ ಮನೆಯಿಂದ ಧಾರ್ಮಿಕ ವಿಧಿ ವಿಧಾನಗಳೊಂದಿಗೆ, ನಡೆ ಮುಡಿಯಲ್ಲಿ ಕರೆದೊಯ್ಯುತ್ತಿದ್ದಾರೆ. ಇದೊಂದು ಏಳು ಹಳ್ಳಿಯ ದೇವರಾಗಿದ್ದು, ಉಗ್ರಾಣದ ನಿರ್ವಹಣೆಯಲ್ಲಿ ಮುದಿಗೆರೆಯವರು, ಹಣ್ಣಡಿಕೆ ಜವಾಬ್ದಾರಿ ಮೇಕೇರಹಳ್ಳಿ, ಹೊತ್ತರವಿ (ಪೂಜಾ ನೀರು ತರುವುದು) ಬಾಲ ಬಸವನಹಳ್ಳಿ ಯವರಿಗೆ ಯಜಮಾನ್ ತಿಮ್ಮಣ್ಣ ಸದ್ಯ ಅವರ ಮಗ ರಾಷ್ಟ್ರಪತಿ ಬಂಗಾರ ಪದಕ ಪುರಸ್ಕೃತರಾದ ರೇವಣಸಿದ್ದಪ್ಪ ಅವರಿಗಿದೆ. ಊರ ಮಾರಿದೇವತೆಗೆ ಆರತಿ, ಉತ್ಸವ, ಏರ್ಪಡುತ್ತದೆ.

ಯುಗಾದಿ, ಶಿವರಾತ್ರಿ, ದೀಪಾವಳಿ, ದಸರಾ, ಗೌರಿಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಅಂತೆಯೇ ಮುಸ್ಲಿಂ ಬಂಧುಗಳು ರಂಜಾನ್, ಈದ್ ಮಿಲಾದ್, ಹಬ್ಬಗಳನ್ನು ಆಚರಿಸುತ್ತಾರೆ. ಕುಕ್ಕಲಮ್ಮನಿಗೆ ಆರತಿ,ಬಲಿ, ಹರಕೆ ಸಂಪ್ರದಾಯಗಳಿವೆ.

ಜಾನಪದ ಕಲೆಗಳಾದ ಅರೆ, ಬ್ಯಾಂಡ್ ಸೆಟ್ ವಾದ್ಯ ಕಲಾವಿದರಾದ ಬಿ. ಬಸವರಾಜ್, ಸೋಮಶೇಖರ್, ಗಿರೀಶ್, ಭೂತೇಶ್ ಕಲಾವಿದರಿದ್ದಾರೆ. ಬಡಗಿ ಸಂಪ್ರದಾಯವಿದೆ. ಬಡಗಿ ರಾಜಣ್ಣ, ವಿಜಿ, ಮಂಜುನಾಥ್, ನರಸಿಂಹಣ್ಣ, ಪಾರಂಪರಿಕೆ ಮರದ ಕೆಲಸ ಮುಂದುವರೆಸಿದ್ದಾರೆ ಅರ್ಚಕ ರಾಮಚಂದ್ರ ತಂಡ ಅರೆವಾದ್ಯ ಮೀಸೆ ರಂಗಣ್ಣ ಡೋಲ್ ತಂಡವಿದೆ. ವೃತ್ತಿಯಲ್ಲಿ ಅಂಚೆ ಪೇದೆಯಾಗಿರುವ ರೇವಣ ಸಿದ್ದಯ್ಯನವರು ಸಿರಾ ಗೃಹರಕ್ಷಕ ದಳದ ಘಟನಾಧಿಕಾರಿಯಾಗಿ ಕಳೆದ ೩೩ ವರ್ಷಗಳಿಂದ ಸೇವೆ ಸಲ್ಲಿಸಿದ್ದಾರೆ. ಇವರ ಅಪ್ರತಿಮ ಸೇವಾ ಸಾಧನೆ ಪರಿಗಣಿಸಿ ಭಾರತದ ರಾಷ್ಟ್ರಪತಿಗಳ ಚಿನ್ನದ ಪದಕ ಪಡೆದಿರುವುದು ಇವರ ವಿಶೇಷ. ಜೊತೆ ಡಾ.ಬಿ.ಆರ್. ಅಂಬೇಡ್ಕರ್ ರ್‍ಾಷ್ಟ್ರೀಯ ಪುರಸ್ಕಾರ, ಬಸವಜ್ಯೋತಿ ರಾಜ್ಯ ಪುರಸ್ಕಾರ ಕೂಡಲಸಂಗಮಗಳೂ ಸೇರಿದಂತೆ ಹಲವು ಸೇವಾ ಪುರಸ್ಕಾರಗಳು ಪ್ರಾಪ್ತವಾಗಿ ರುವುದು ಇವರ ವಿಶೇಷವಾಗಿದೆ.

ದಲಿತ ಸಂಘರ್ಷ ಸಮಿತಿ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು ಲಕ್ಷ್ಮೀ ಕಾಂತ ಇಲ್ಲಿನವರಾಗಿದ್ದು ಜಿಲ್ಲಾ ದಲಿತ ಸಂಘದ ಅಧ್ಯಕ್ಷರಾಗಿರುವುದು ಇಲ್ಲಿನ ವಿಶೇಷವಾಗಿದೆ.

## ಸಂತೇಪೇಟೆ–ಮಾರುತಿನಗರ ವಾರ್ಡ್ ನಂ. ೨೭

ಸಿರಾ ನಗರದಲ್ಲಿ ವ್ಯಾಪಾರಿಗಳ ಸಂಘಟನೆ, ಕೊಳ್ಳುವ–ತೆಗೆದುಕೊಳ್ಳುವ ವ್ಯವಹಾರಿಕ ಹಂತ ಮೊದಲಿಗೆ ಆರಂಭವಾದ ಕಾರಣದಿಂದಾಗಿ ಸಂತೇಪೇಟೆ ಮೊದಲ ಹಂತ ಎಂತಲೂ, ಸಂತೆಪೇಟೆ ಎಂದೂ, ಹೊಸದಾಗಿ ಬಡಾವಣೆ ವಿಸ್ತಾರವಾಗಿ, ಅಲ್ಲೊಂದು ಆಂಜನೇಯ ದೇವಾಲಯ ನಿರ್ಮಾಣವಾದು ದರಿಂದ ಮಾರುತಿ ನಗರ ಎಂತಲೂ ಕರೆಯಲಾಗಿದೆ. ಸಂತೆಪೇಟೆ ಪ್ರಾಥಮಿಕ ಶಾಲೆಯ ಎಡಬದಿಯಿಂದ, ಕರಿಯಮ್ಮನ ಗದ್ದಿಗೆ, ಪವರ್ತೇಗೌಡರ ಮನೆ, ಬಸವಣ್ಣನ ದೇವಾಲಯ, ಲಕ್ಕಯ್ಯನ ಗುಡಿಯವರೆಗೆ, ಇದರ ಭೌಗೋಳಿಕ ವ್ಯಾಪ್ತಿ ಹಬ್ಬಿದೆ.

ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಪೂರ್ವಕ್ಕೆ ಕರೇಕಲ್ಲು ಹಟ್ಟಿ, ಉತ್ತರಕ್ಕೆ ರ್‍ಾಷ್ಟ್ರೀಯ ಹೆದ್ದಾಗಿ ಬೆಂಗಳೂರು–ಬಾಂಬೆ ೪ ಕ್ಕೆ ಹೊಂದಿ ಕೊಂಡಂತೆ ಇದರ ವರ್ಗೀಕರಣವಾಗಿದೆ. ಮಾರುತಿನಗರ ಈ ಸಂತೆಪೇಟೆ ಮೊದಲ ಹಂತದ ವ್ಯಾಪ್ತಿಗೆ ಸೇರಿಕೊಂಡಿದೆ. ಹಳೆಯ ಬಡಾವಣೆ, ಈ ಪರಿಸರದಲ್ಲಿ ನರಿ, ಮೊಲ, ಹಂದಿ, ಬೆಕ್ಕು, ಇಲಿ, ಹೆಗ್ಗಣ, ಉಡ ಕಂಡು ಬರುತ್ತವೆ. ಗ್ರಾಮದಲ್ಲಿ ರೈತರು ಕೃಷಿಕರಾಗಿದ್ದು ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಎಮ್ಮೆ , ಎತ್ತುಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳನ್ನು ಸಾಕಲಾಗಿದೆ. ಮೊಟ್ಟೆ ಹಾಗೂ ಸಂತಾನ ಅಭಿವೃದ್ಧಿ ಮಾಂಸಕ್ಕಾಗಿ ಸಾಕಲಾಗುತ್ತಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೫೦೨ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮–೪೦ಂ ಸೆಂ.ರಷ್ಟು ಇದ್ದು, ಚಳಿಯು ೧೧–೧೨ಂ ಸೆಂ. ಇರುತ್ತದೆ. ೨೦೧೪ ನೇ ಅಕ್ಟೋಬರ್ ತಿಂಗಳಲ್ಲಿ ಅತಿ ಹೆಚ್ಚು ೧೫೨ ಮಿ.ಮೀ ಮಳೆಯಾಗಿದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೨೧೨ ಸಾರ್ವಜನಿಕ

ನಲ್ಲಿಗಳ ಸಂಪರ್ಕ ಹೊಂದಿದ್ದಾರೆ. ೨ ಹಳೆ ಬಾವಿಗಳಿದ್ದು ಬತ್ತಿ ಹೋಗಿವೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರ ಜನಾಂಗ ದೊಡ್ಡ ಸಮುದಾಯವಾಗಿದ್ದು, ಈಡಿಗ, ಆದಿಕರ್ನಾಟಕ, ಆದಿದ್ರಾವಿಡ, ಬಲಿಜಿಗ, ಲಂಬಾಣಿ, ಮಡಿವಾಳ ಜನಾಂಗ ಸಣ್ಣ ಸಮುದಾಯವಾಗಿದೆ. ಬಸವಣ್ಣನ ಗುಡಿ ಓಣಿ, ಕರಿಯಮ್ಮನ ಗದ್ದಿಗೆ ಓಣಿ, ಪಾರ್ವತಿ ಗೌಡರ ಮನೆ ಓಣಿ, ತಳವಾರಕಾರ ನಾಯಕರ ಮನೆ ಓಣಿ ಎಂಬ ಸಂಪ್ರದಾಯಿಕ ಕೇರಿಗಳು ಕುಲಮೂಲ, ವೃತ್ತಿ ಮೂಲದಿಂದ ಇಂದಿಗೂ ಕರೆಯಲ್ಪಡುತ್ತಿವೆ.

ಇಲ್ಲಿನ ಮಾತೃ ಭಾಷೆ ಕನ್ನಡ ಮಾತನಾಡುತ್ತಾರೆ. ಹಾಗೂ ತೆಲುಗು, ಲಂಬಾಣಿ ವಿರಳವಾಗಿ ಬಳಕೆಯಾಗುತ್ತಿದೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೪೦೦ ಮನೆಗಳಿದ್ದು, ೨೫೦೦ ಜನಸಂಖ್ಯೆಯನ್ನು ಹೊಂದಿದ್ದು, ಇಂದಿರಾ ಆವಾಸ್, ಜನತಾ, ಆಶ್ರಯ, ವಸತಿ ಯೋಜನೆಯ ೧೫೫ ಫಲಾನುಭವಿಗಳಿದ್ದಾರೆ. ಎಲ್ಲರ ಮನೆಗಳಲ್ಲಿಯೂ ಶೌಚಾಲಯದ ವ್ಯವಸ್ಥೆ ಹೊಂದಿದ್ದಾರೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಬಳಕೆಯಿದೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ತಳ್ಳುವ ಗಾಡಿಯ ಮೂಲಕ ತರಕಾರಿ, ದಿನಬಳಕೆ ವಸ್ತುಗಳು, ಬೀದಿ ಬದಿಯ ವ್ಯಾಪಾರದವರು ಕೆಲವರಿದ್ದಾರೆ. ಮಹಿಳೆಯರು ಬೀಡಿಕಟ್ಟುವ, ಹೂ ಕಟ್ಟುವ, ಟೈಲರಿಂಗ್ ನಂತಹ ಗೃಹೋಪಯೋಗಿ ಕಾಯಕ ಮಾಡುತ್ತಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶಿಕ್ಷಕರು, ಪೋಲೀಸ್ ಇಲಾಖೆ, ಕಂದಾಯ ಇಲಾಖೆ, ಸಾರಿಗೆ, ರಕ್ಷಣೆ ಇಲಾಖೆಗೆ ಸೇರಿದ ಒಟ್ಟು ೪೫ ಜನ ಸರ್ಕಾರಿ ನೌಕರರಿದ್ದಾರೆ. ವೈದ್ಯರಿದ್ದಾರೆ. ಸರ್ಕಾರಿ ಖಾಸಗಿ ಇಂಜಿನಿಯರ್‌ಗಳು, ದೊಡ್ಡಯ್ಯನೆಬುವವರು ಭಾರತೀಯ ಭೂ ಸೇವೆಯಲ್ಲಿ ನೌಕರರಾಗಿದ್ದಾರೆ. ೬ ಸ್ತ್ರೀ ಶಕ್ತಿ ಸಂಘಗಳಿದ್ದು, ೨ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘವೂ ಇದೆ. ಸಿರಾ ಮುಖ್ಯ ಅಂಚೆ ಕಛೇರಿ ಸೌಲಭ್ಯ ಹೊಂದಿದೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ವಾರ್ಡ್ ನಂ. ೨೭ ರ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದ್ದು, ಶ್ರೀ ಪಿ. ಮೌನೇಶ್ ಎಂಬುವರು ಇಲ್ಲಿನ ನಗರಸಭಾ ಸದಸ್ಯರಾಗಿದ್ದಾರೆ. ಸಿರಾ ನಗರ ಸಭೆಯ ಅಧ್ಯಕ್ಷರಾದ ಶ್ರೀಮತಿ ಜ್ಞಾನಪೂರ್ಣಮ್ಮ ಅವರ ವಸತಿ ಇದೇ ಬಡಾವಣೆಯಲ್ಲಿರುವುದು ವಿಶೇಷವಾಗಿದೆ. ನ್ಯಾಯಬೆಲೆ ಅಂಗಡಿ, ೧೦ ಪೆಟ್ಟಿಗೆ ಅಂಗಡಿ, ೪ ದಿನಸಿ ಅಂಗಡಿಗಳು, ಗ್ಯಾರೇಜ್, ಕಾರ್ಪೆಂಟ್ ಕೆಲಸದ ಅಂಗಡಿಗಳಿವೆ.

ಶೈಕ್ಷಣಿಕವಾಗಿ ಗಜಾನನ ಪ್ರೌಢಶಾಲೆ ಇದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪಠ್ಯಪುಸ್ತಕ, ಸಮವಸ್ತ್ರದ ಸೌಲಭ್ಯಗಳಿವೆ. ಅಂಗನವಾಡಿ ಕೇಂದ್ರವಿದ್ದು ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಕೆಯಾಗುತ್ತಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಐತಿಹಾಸಿಕವಾಗಿ ಪಟೇಲ ಪರ್ವತೇಗೌಡರ ಮನೆ ಇದ್ದು ಗ್ರಾಮ ಸಂಸ್ಕೃತಿಯ ಪ್ರಕಾರ ಕೈವಾಡದರ ಮನೆಗಳಿವೆ. ಮೂಲ ತಳವಾರನಾದ ಕಾರನಾಯಕರ ಮನೆಗಳಿವೆ. ಇಲ್ಲಿನ ಮಲ್ಲಿಕ್ ರೆಹಾನ್ ದರ್ಗಾದ ಬಣ್ಣಗಾರಿಕೆಯ ಹೊಣೆಯನ್ನು ಪಾರಂಪರಿಕವಾಗಿ ನಡೆಸಿಕೊಂಡು ಬರುತ್ತಿದರು. ಐತಿಹಾಸಿಕ ಉಜ್ಜನಿ ಮಠದ ಪಾರಂಪರಿಕ ತಳವಾರನಾಗಿ ಬಿರುದು ಪಡೆದ ಕುಟುಂಬವಾಗಿತ್ತು. ಪುಟ್ಟರಂಗಯ್ಯ ಇವರ ಧರ್ಮಪತ್ನಿಯಾಗಿದ್ದು ಸಿರಾದ ಕಸ್ತೂರಿ ರಂಗಪ್ಪ ನಾಯಕರ ಪೋಲೀಸ್ ಸಂರಕ್ಷಣೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು. ಮಾತ್ರವಲ್ಲದೆ ಕೋಟೆ ಪುನರ್ ನಿರ್ಮಾಣದ ಕಾರ್ಯದಲ್ಲಿಯೂ ಪ್ರಮುಖ ಪಾತ್ರ ವಹಿಸಿದವರು ಜೊತೆಗೆ ತುಮಕೂರು ಜಿಲ್ಲೆಯ ನಾಯಕರ ಸಂಘದ ಉಗಮಕ್ಕೆ ಪ್ರೇರಕವಾದವರು. ಪ್ರಪ್ರಥಮ ಮಹಿಳಾ ಅಧ್ಯಕ್ಷೆಯೂ ಆಗಿದ್ದವರು. ತಳವಾರ ಮನೆ ಎಂಬ ಹಿರಿಮೆಗೆ ಇಂದಿಗೂ ಕರೆಯಲ್ಪಡುತ್ತಿದೆ. ಇವರ ಮಗಳು ಶ್ರೀಮತಿ ಜ್ಞಾನಪೂರ್ಣಮ್ಮ ಸಿರಾ ನಗರ ಸಭೆಯ ಅಧ್ಯಕ್ಷರೂ ಆಗಿದ್ದಾರೆ. ರಂಗಕಲಾವಿದ ಚಲಪತಿ ಈ ಬಡಾವಣೆಯ ಸಾಂಸ್ಕೃತಿಕ ವ್ಯಕ್ತಿಯಾಗಿದ್ದಾರೆ.

ಧಾರ್ಮಿಕವಾಗಿ ಆಂಜನೇಯ ದೇವಾಲಯ, ಬಸವಣ್ಣ ದೇವಾಲಯ, ಕರಿಯಮ್ಮನ ಗದ್ದಿಗೆ, ೨ ಅರಳಿಕಟ್ಟೆ, ನಾಗರಕಲ್ಲುಗಳಿವೆ. ಮಲ್ಲಿಕ್ ರೆಹಾನ್ ದರ್ಗಾದ ಉತ್ಸವದಲ್ಲಿ ಈ ಬಡಾವಣೆಯವರ ಸೇವೆ ಇಂದಿಗೂ ಮುಂದು ವರೆದಿದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಸಂಕ್ರಾಂತಿ, ದಸರಾ, ಗೌರಿ, ಗಣೇಶ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸಿರಾ ದೊಡ್ಡ ಮಾರಮ್ಮನಿಗೆ ಅರಕೆ, ಬಾನ, ಆರತಿ ಸಂಪ್ರದಾಯವಿದೆ. ಮಲ್ಲಿಕ್ ರೆಹಾನ್ ದರ್ಗಕ್ಕೆ ಸಕ್ಕರೆ ಓದಿಸುವ ಸಂಪ್ರದಾಯವೂ ಇದೇ ಬಡಾವಣೆಯಲ್ಲಿ ಇಂದಿಗೂ ರೂಢಿಯಾಗಿದೆ.

## ಸಂತೇಪೇಟೆ ೨ನೇ ಹಂತ ನಾಯಕರಹಟ್ಟಿ ವಾರ್ಡ್ ನಂ. ೨೮

ಸಿರಾ ನಗರದಲ್ಲಿ ಮೊದಲ ಸಂತೆ ನಡೆಯುತ್ತಿದ್ದ ಕಾರಣ ಎಂದಾಗಿಯೇ ಸಂತೇಪೇಟೆ ಎಂದು ಕರೆಯುವ ಈ ಪ್ರದೇಶ ಸಿರಾದ ಹಳೆಯ ಬಡಾವಣೆ ಸಿರಾ ನಗರ ಸಭೆಯಿಂದ ಅರ್ಧ ಕಿ.ಮೀ. ದೂರದಲ್ಲಿದೆ. ರ್‍ಾ.ಯ ಹೆದ್ದಾರಿ ೪ ಕ್ಕೆ ಬಲಭಾಗದಲ್ಲಿ ಸದ್ಯ ಸಿರಾ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತಿರುವ ಸಂತೆಪೇಟೆ, ನಾಯಕರ ಹಟ್ಟಿ, ಸುಣ್ಣಕಲ್ಲರಹಟ್ಟಿ, ಹಳ್ಳಿಯ ಜನವಸತಿ ಭೂ ಪ್ರದೇಶವಾಗಿದೆ.

ಸಂತೇಪೇಟೆಯ ಸರ್ಕಾರಿ ಪ್ರಾಥಮಿಕ ಶಾಲೆಯಿಂದ ಪಶ್ಚಿಮಕ್ಕೆ, ರ್‍ಾ.ಯ ಹೆದ್ದಾರಿ, ಕೈಗಾರಿಕಾ ಬಡಾವಣೆಯಿಂದ ಕೊಳದಪಲೆ ಈಶ್ವರನ ದೇವಾಲಯದ ವರೆಗೆ ಉತ್ತರ–ದಕ್ಷಿಣಕ್ಕೆ ಇದರ ವ್ಯಾಪ್ತಿ ಹಬ್ಬಿದೆ. ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ, ತರಕಾರಿ ಮಾರ್ಕೆಟ್, ಕಾರ್ಪೊರೇಷನ್ ಬ್ಯಾಂಕ್, ಶ್ರೀ ನಿಧಿ ಜವಳಿ ಅಂಗಡಿ, ಕಾಂಡಿಮೆಂಟ್ ಶ್ರೀ ಧರ್ಮಸ್ಥಳ ಶುದ್ಧ ಕುಡಿಯುವ ನೀರಿನ ಘಟಕವೂ ಸಂತೇಪೇಟೆಯ ವ್ಯಾಪ್ತಿಗೆ ಒಳಪಡುತ್ತದೆ.

ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ದಕ್ಷಿಣದಿಂದ ಉತ್ತರಕ್ಕೆ ಕಿರಿದಾದ ಮೋರಿ ಹರಿಯುತ್ತದೆ. ದಕ್ಷಿಣದ ಕೊಳದಪಲೆ ಈಶ್ವರನ ದೇವಾಲಯ ಪರಿಸರ ಗಿಡ, ಮರ, ತೋಟಗಾರಿಕೆಯ ಪ್ರದೇಶವಾಗಿದ್ದು, ರ್‍ಾ.ಯ ಹೆದ್ದಾರಿಗೆ ಹೊಂದಿಕೊಂಡಿದ್ದು, ಈ ಪರಿಸರದಲ್ಲಿ ನರಿ, ಮೊಲ, ಹಂದಿ, ಕರಡಿ, ಜಿಂಕೆ, ಹಾವು, ಮುಂಗುಸಿ, ಇಲಿ, ಹೆಗ್ಗಣ ಕಂಡು ಬರುತ್ತವೆ. ಗ್ರಾಮದಲ್ಲಿ ರೈತರು ಕೃಷಿಕರಾಗಿದ್ದು ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಎಮ್ಮೆ , ಎತ್ತುಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೫೦೨ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮–೪೦ಂ ಸೆಂ.ರಷ್ಟು ಇದ್ದು, ಚಳಿಯು ೧೧–೧೨ಂ ಸೆಂ. ಇರುತ್ತದೆ. ೨೦೧೪ ನೇ ಅಕ್ಟೋಬರ್ ತಿಂಗಳಲ್ಲಿ ಅತಿ ಹೆಚ್ಚು ೧೩೭ ಮಿ.ಮೀ ಮಳೆಯಾಗಿದೆ. ಹಳೆಯ ಎರಡು ಕಲ್ಯಾಣಿಗಳಿದ್ದು ಈಗ ಬತ್ತಿ ಹೋಗಿದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೨೭೩ ಸಾರ್ವಜನಿಕ ನಲ್ಲಿಗಳ ಸಂಪರ್ಕ ಹೊಂದಿದ್ದಾರೆ. ಕೆಲವು ಮನೆಗಳಲ್ಲಿ ನಲ್ಲಿಗಳ ಸಂಬಂಧ ಹೊಂದಲಾಗಿದೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ನಾಯಕರು ದೊಡ್ಡ ಸಮುದಾಯ ವಾಗಿದ್ದು, ಈಡಿಗರು, ಕುಂಚಿಟಿಗರು, ವೀರಶೈವ, ಭಜಂತ್ರಿ, ಅಕ್ಕಸಾಲಿಗ, ಬೆಸ್ತ, ಲಂಬಾಣಿ, ಆದಿಕರ್ನಾಟಕ, ಆದಿದ್ರಾವಿಡ, ಗೊಲ್ಲರು, ಕುರುಬ, ಮುಸ್ಲಿಂಮರು, ವೈಶ್ಯರು, ಬ್ರಾಹ್ಮಣರು, ದರ್ಜಿ, ಶೇಠ್ ಜನಾಂಗ ಕಿರುಸಮು ದಾಯವಾಗಿದೆ.

ಇಲ್ಲಿನ ಮಾತೃ ಭಾಷೆ ಕನ್ನಡ ಮಾತನಾಡುತ್ತಾರೆ. ಹಾಗೂ ತೆಲುಗು, ಮರಾಠಿ, ಉರ್ದು, ಗುಜರಾತಿ ಭಾಷೆಗಳನ್ನು ಮಾತನಾಡುತ್ತಾರೆ. ನಾಯಕರ ಕೇರಿ, ಗೌಡರ ಕೇರಿ, ಕರಿಯಮ್ಮನ ಗದ್ದಿಗೆ ಬೀದಿ, ಸುಣ್ಣಕಲ್ಲರಹಟ್ಟಿ ಕೇರಿ, ಕೊಳದಪಲೆ ಈಶ್ವರನ ಗುಡಿ ಓಣಿ, ಓಣಿಗಳಿವೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೬೦೦ ಮನೆಗಳಿದ್ದು, ಇವುಗಳು ಕೊಳಚೆ ನಿರ್ಮೂಲನಾ ಮಂಡಳಿ, ಇಂದಿರಾ ಆವಾಸ್, ಜನತಾ, ಆಶ್ರಯ, ವಸತಿ ಯೋಜನೆಯ ೨೦೦ ಫಲಾನುಭವಿ ಗಳಿದ್ದಾರೆ. ೪೨೩ ಮನೆಗಳಲ್ಲಿಯೂ ಶೌಚಾಲಯದ ವ್ಯವಸ್ಥೆ ಹೊಂದಿದ್ದಾರೆ. ಶೌಚಾಲಯದ ಬಳಕೆಯ ಬಗ್ಗೆ ನಗರಸಭಾ ಅಧ್ಯಕ್ಷರಾದ ಜ್ಞಾನಪೂರ್ಣಮ್ಮ ಜಾಗೃತಿ ಕಾರ್ಯಕ್ರಮ ರೂಪಿಸಿರುವುದು ಇಲ್ಲಿನ ವಿಶೇಷ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ತಳ್ಳುವ ಗಾಡಿಯ ಮೂಲಕ ತರಕಾರಿ, ದಿನಬಳಕೆ ವಸ್ತುಗಳು, ಬೀದಿ ಬದಿಯ ವ್ಯಾಪಾರದವರು ಕೆಲವರಿದ್ದಾರೆ. ಮಹಿಳೆಯರು ಬೀಡಿಕಟ್ಟುವ, ಹೂ ಕಟ್ಟುವ, ಟೈಲರಿಂಗ್ ನಂತಹ ಗೃಹೋಪಯೋಗಿ ಕಾಯಕ ಮಾಡುತ್ತಿದ್ದಾರೆ. ಪುಟ್ಟರಂಗಮ್ಮ ಪಾರಂಪರಾಗತ ತರಕಾರಿ ವ್ಯಾಪಾರ ಮೂಲದವರು. ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆಪಲಾವ್, ದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಶಿಕ್ಷಕರು, ಪೋಲೀಸ್ ಇಲಾಖೆ, ಕಂದಾಯ ಇಲಾಖೆ, ಸಾರಿಗೆ, ರಕ್ಷಣೆ ಇಲಾಖೆಗೆ ಸೇರಿದ ಒಟ್ಟು ೫೩ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವೈದ್ಯರಿದ್ದಾರೆ. ಸರ್ಕಾರಿ ಖಾಸಗಿ ಇಂಜಿನಿಯರ್‌ಗಳು, ಐಟಿ, ಬಿಟಿ ಉದ್ಯೋಗಿಗಳಾಗಿದ್ದಾರೆ. ಎಣ್ಣೆ ಮಿಲ್, ಕಬ್ಬಿಣದ ಉಪಕರಣ, ತಯಾರಿಕಾ ಘಟಕ, ಗ್ರಾನೈಟ್ ಕೈಗಾರಿಕೆಗಳಿವೆ. ಸಾಂಪ್ರದಾಯಿಕ ಮರದ ಕೆಲಸದ ಬಡಗಿ ಕೆಲಸದವರಿದ್ದಾರೆ. ಸುಣ್ಣ ತಯಾರಿಕೆ ಹಾಗೂ ಮಾರಾಟದ ಗಂಗಮ್ಮ ಅವರ ಕುಟುಂಬ ಇದೇ ಬಡಾವಣೆಯಲ್ಲಿದೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ವಾರ್ಡ್ ನಂ. ೨೮ ರ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದ್ದು, ತಳವಾರ ಪರಂಪರೆಯ ಜ್ಞಾನಪೂರ್ಣಮ್ಮ ಈ ಭಾಗದ ನಗರಸಭಾ ಸದಸ್ಯರಾಗಿದ್ದಾರೆ. ಪ್ರಸ್ತುತ ಅಧ್ಯಕ್ಷರೂ ಆಗಿರುವುದು ಈ ಬಡಾವಣೆಯ ವಿಶೇಷ. ಕಳೆದ ಬಾರಿಯೂ ತಳವಾರ ಪರಂಪರೆಯ ಸರೋಜಮ್ಮನವರೂ ನಗರಸಭೆ ಅಧ್ಯಕ್ಷರೂ ಆಗಿದ್ದರು. ಚಿತ್ರದುರ್ಗ–ಬೆಂಗಳೂರು ರ್‍ಾಷ್ಟ್ರೀಯ ಹೆದ್ದಾರಿ ರಸ್ತೆ ಸಂಪರ್ಕ ಹೊಂದಿದ್ದಾರೆ. ಅಂಚೆ ಕಚೇರಿ ಸಂತೆ ಪೇಟೆಯ ಹೆಸರಿನಲ್ಲಿಯೇ ನಡೆಯುತ್ತದೆ. ನ್ಯಾಯಾಲಯ, ಆಸ್ಪತ್ರೆ, ಕೆಇಬಿ ಈ ಸೌಲಭ್ಯಗಳನ್ನು ಸಿರಾ ನಗರದಿಂದಲೇ ಪಡೆಯುತ್ತಿದ್ದಾರೆ. ಮೊಬೈಲ್, ಈಮೇಲ್, ಕೊರಿಯರ್ ಸೌಲಭ್ಯ ಸಂಪರ್ಕ ಹೊಂದಿದ್ದಾರೆ.

೧೯೭೦ ರ ವರೆಗೆ ಇದೇ ಬಡಾವಣೆಯಲ್ಲಿ ಸಂತೆ ನಡೆಯುತ್ತಿದ್ದು, ನಂತರ ಗಾಂಧಿನಗರ, ಹೈಸ್ಕೂಲ್ ಆವರಣ, ಐಬಿ ಹಿಂಭಾಗಗಳಿವೆ. ಸ್ಥಳಾಂತರವಾಗಿ ಸದ್ಯ ಸಿರಾ ಜಾಜಿಕಟ್ಟೆ ಬದಿಯಲ್ಲಿ ಸಂತೆ ನಡೆಯುತ್ತಿದೆ. ತರಕಾರಿ, ಹೂ, ಹಣ್ಣಿನ ಮಾರ್ಕೆಟ್ ಇದೇ ಬಡಾವಣೆಯಲ್ಲಿದೆ. ಕಾರ್ಪೋರೇಷನ್ ಬ್ಯಾಂಕಿನ ಒಂದು ಶಾಖೆ, ಮೂರು ಎಟಿಎಂ. ಈ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಸುಂಕ ಸಹಿತ ವಾಹನ ನಿಲುಗಡೆ ಇಲ್ಲಿದೆ. ಆರು ಸ್ತ್ರೀ ಶಕ್ತಿ ಸಂಘಗಳು, ೪ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳು, ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿದೆ. ಒಂದು ಪ್ರಾಥಮಿಕ ಹಿರಿಯ ಪಾಠಶಾಲೆ, ಐಟಿಐ ಕಾಲೇಜು, ನರ್ಸಿಂಗ್ ಕಾಲೇಜುಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪಠ್ಯಪುಸ್ತಕ, ಸಮವಸ್ತ್ರದ ಸೌಲಭ್ಯಗಳಿವೆ. ರಾಮಕೃಷ್ಣ ಆಸ್ಪತ್ರೆ, ಬಾಲಾಜಿ ಪೆಟ್ರೋಲ್ ಬಂಕ್, ಈ ಬಡಾವಣೆಯ ವಿಶೇಷವಾಗಿದೆ. ಒಂದು ಗ್ರಂಥಾಲಯವಿದೆ. ಒಂದು ಸಮುದಾಯ ಭವನವಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೬ ಹೋಟೆಲ್, ೨ ಬಟ್ಟೆ ಅಂಗಡಿ, ೧೪ ಅಂಗಡಿಗಳು, ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪ ಈ ಬಡಾವಣೆಯಲ್ಲಿವೆ. ಈ ಬಡಾವಣೆಗೆ ಹೊಂದಿಕೊಂಡಂತೆ ಶ್ರೀ ಕೃಷ್ಣಮೂರ್ತಿಚಾರ್ ಅವರ ಖಾಸಗಿ ಜಮೀನಿನಲ್ಲಿ ವಿಜಯನಗರ ಅರಸರ ಕಾಲಕ್ಕೆ ಸೇರಿದ ೨ ವೀರಗಲ್ಲುಗಳಿವೆ. ಬಸ್ ನಿಲ್ದಾಣದ ಬದಿಗೆ ೨ ವೀರಗಾರರ ಪೌಳಿಗಳಿದ್ದು, ವೀರಗಲ್ಲು ಮಾದರಿಯಲ್ಲಿದೆ. ಭೈರಾಗಿ ಮಠ ಇದೇ ಬಡಾವಣೆಯಲ್ಲಿ ಇತ್ತೆಂದು ಹೇಳುವ ಶ್ರೀಮತಿ ಜ್ಞಾನಪೂರ್ಣಮ್ಮ ಭೈರಾಗಿಗಳ ಸಮಾಧಿ ತೋರುತ್ತಾರೆ. ಹಿಂದೆ ತಳವಾರ ಸಮುದಾಯಕ್ಕೆ ಮಾತ್ರ ಮೀಸಲಾಗಿದ್ದ ಸ್ಮಶಾನ ಇಂದು ಸಾರ್ವತ್ರಿಕ ಸ್ಮಶಾನವಾಗಿದೆ. ಸ್ವಾತಂತ್ರ್ಯ ಹೋರಾಟಗಾರರಾಗಿ ಮೈಸೂರು ಪ್ರಜಾ ಪ್ರತಿನಿಧಿಸಭೆ ಸದಸ್ಯರಾಗಿದ್ದ ಕರಿಬಸಪ್ಪ ಇದೇ ಬಡಾವಣೆಯವರಾಗಿದ್ದ ರೆಂಬುದು ವಿಶೇಷ.

ಇತಿಹಾಸ ಪ್ರಸಿದ್ಧ ಕೊಳದಪಲೆ ಈಶ್ವರನ ದೇವಾಲಯ, ಆದಿಶಕ್ತಿ ದೇವಾಲಯ, ಆಂಜನೇಯ, ಶ್ರೀರಾಮ ದೇವಾಲಯಗಳಿವೆ. ೨ ಅಶ್ವತ್ಥಕಟ್ಟೆಗಳು, ಹಳೆಯ ಕಟ್ಟೆ ಈಗ ಜನವಸತಿ ಪ್ರದೇಶವಾಗಿದೆ. ಬ್ರಹ್ಮಪಿತ ಈಶ್ವರಿ ವಿಶ್ವವಿದ್ಯಾಲಯದ ಭವನ ಇದೇ ಬಡಾವಣೆಯಲ್ಲಿದೆ. ಮಠದವರ ಮನೆ, ವೀರಗಾರರ ಮನೆತನ, ಭೈರಾಗಿಗಳು ಕುಟುಂಬ ಇಲ್ಲಿದ್ದರೆಂದು, ಅವರ ಕುಟುಂಬಗಳು ಅಲ್ಲಲ್ಲಿ ಚೆದುರಿಹೋಗಿವೆ. ಕೊಳದಪಲೆ ಈಶ್ವರನ ಉತ್ಸವ ಪ್ರತಿ ಶಿವರಾತ್ರಿಯಂದು ಬೃಹತ್ ಪ್ರಮಾಣದಲ್ಲಿ ನಡೆಯುತ್ತದೆ. ಉಳಿದಂತೆ ಸಿರಾದ ದೊಡ್ಡ ಮಾರಮ್ಮನಿಗೆ ಆರತಿ, ಬಲಿಯ ಹರಕೆ ಸಂಪ್ರದಾಯವಿದೆ. ಶ್ರೀರಾಮ ದೇವರಿಗೆ ಅಖಂಡ ಭಜನೆ ಏರ್ಪಾಡು ಮಾಡಲಾಗುತ್ತಿದೆ.

ಇಲ್ಲಿ ಯುಗಾದಿ, ದೀಪಾವಳಿ, ದಸರಾ, ರಾಮನವಮಿ, ಗೌರಿ, ಗಣೇಶನ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸಲಾಗುವುದು. ಹಿರಿಯ ಜನಪದ ಕಲಾವಿದೆ ಸುಣ್ಣದ ಸಿದ್ದಮ್ಮ ಉತ್ತಮ ಜನಪದ ಹಾಡುಗಾರ್ತಿಯಾಗಿದ್ದು, ಇವರು ಹಾಡಿರುವ ಗೀತೆಗಳನ್ನು ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿ, ಬಂಡಿ ಬಂದಾವ್ರು ಬಾಳೆ ವನದಾಗೆ ಸಂಕಲನದಲ್ಲಿ ಪ್ರಕಟಿಸಿದ್ದಾರೆ. ಇತಿಹಾಸ ಲೇಖಕ ಡಾ. ಎನ್. ನಂದೀಶ್ವರ ಇದೇ ಬಡಾವಣೆಯವರಾಗಿದ್ದು, ಮೂರು ಪುಸ್ತಕಗಳನ್ನು ತೇಜಸ್ವಿ ಪ್ರಕಾಶನದ ಅಡಿಯಲ್ಲಿ ಪ್ರಕಟಿಸಿದ್ದಾರೆ. ಪ್ರಸ್ತುತ ಇವರು ಕಳ್ಳಂಬೆಳ್ಳ ಶ್ರೀಮರಡಿ ರಂಗನಾಥ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕನ್ನಡ ಪ್ರಭ ಪತ್ರಿಕೆಯ ಪ್ರತಿನಿಧಿ ಹಾಗೂ ರಾಜ್ಯಶಾಸ್ತ್ರ ಉಪನ್ಯಾಸಕ ಕನ್ನಡ ಪ್ರಭ ಶಿವಕುಮಾರ್ ಇದೇ ಬಡಾವಣೆಯವರು.

ಒಂದು ಸಮುದಾಯ ಭವನ, ಶ್ರೀ ಧರ್ಮಸ್ಥಳ ಶುದ್ಧ ಕುಡಿಯುವ ನೀರಿನ ಘಟಕ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತುಮಕೂರು ಜಿಲ್ಲಾ ಕಾರ್ಯ ಸಿರಾ ವಲಯದ ನಿರ್ವಾಹಕರ ನಿರ್ದೇಶಕರ ಕೇಂದ್ರ ಕಚೇರಿ ಇದೇ ಬಡಾವಣೆಯಲ್ಲಿದ್ದು, ಪಿ.ಕೆ. ಪುರುಷೋತ್ತಮ ಇದರ ನಿರ್ದೇಶಕರಾಗಿ, ೫೦ ಜನ ಸಿಬ್ಬಂದಿ ಇದೇ ಬಡಾವಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಚಿಕ್ಕನಾಯಕನಹಳ್ಳಿ, ಕೊರಟಗೆರೆ, ಸಿರಾ, ಮಧುಗಿರಿ, ಪಾವಗಡ ಇದರ ವ್ಯಾಪ್ತಿಗೆ ಒಳಪಟ್ಟಿವೆ.

## ಗಾಂಧಿನಗರ, ಕೆ.ಆರ್. ಬಡಾವಣೆ ವಾರ್ಡ್ ನಂ.೨೯

ಗಾಂಧಿನಗರ ಕೃಷ್ಣ ಬಡಾವಣೆ, ರಂಗಪ್ಪನ ಪಾಳ್ಯ, ಈ ಮೂರೂ ಬಡಾವಣೆಗಳು ಸಿರಾ ನಗರ ಸಭೆಯ ವಾರ್ಡ್ ನಂ. ೨೯ ರ ವ್ಯಾಪ್ತಿಗೆ ಸೇರುತ್ತವೆ. ನಾರಾಯಣಸ್ವಾಮಿ ಬಯಲು ಕಲ್ಯಾಣ ಮಂಟಪದ ಎಡಬದಿಯ ಮೂಲೆಯಿಂದ ಉತ್ತರ–ದಕ್ಷಿಣಕ್ಕೆ ತರಕಾರಿ ಅಂಗಡಿ, ರಾಜು ಸ್ಟುಡಿಯೋ, ಪುಟ್ಟಮ್ಮನ ವೃತ್ತ, ಸಿರಾ ಹೋಸ ಬಸ್ಸ್ಯಾಂಡ್, ಬೃಂದಾವನ ಮೆಡಿಕಲ್ ಸ್ಟೋರ್, ಆಂಜನೇಯನ ದೇವಾಲಯ, ಪೂರ್ವ–ಪಶ್ಚಿಮಕ್ಕೆ ರ್‍ಾಷ್ಟ್ರಿಯ ಹೆದ್ದಾರಿ ೪ ಕ್ಕೆ ಹೊಂದಿಕೊಂಡ, ಪ್ರವೀಣ್ ಲಾರ್ಡ್, ರಂಗನಾಥ ಚಿತ್ರಮಂದಿರ, ರಂಗನಾಥ ಕಾಲೇಜಿನಿಂದ ಬದ್ರಿನಾರಾಯಣ ಪೆಟ್ರೋಲ್ ಬಂಕ್, ಕನಕದಾಸ ಪಾರ್ಕ್‌ವರೆಗೆ, ಎಸ್‌ಬಿಎಂ, ಅನ್ನಪೂರ್ಣ ಕ್ಲಿನಿಕ್ ತನಕ ಮಧುಗಿರಿ–ಸಿರಾ ಮುಖ್ಯ ರಸ್ತೆಯ ಬಲಭಾಗ–ಇದರ ವ್ಯಾಪ್ತಿ ಹಬ್ಬಿದೆ.

ಹಳೆಯರಂಗಪ್ಪನ ಪಾಳ್ಯ, ಹಳೆ ಬಸ್ ನಿಲ್ದಾಣ ಈಗ ಗಾಂಧಿನಗರ ಎಂದಾಗಿ ಪರಿವರ್ತನೆಯಾಗಿದೆ.

ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಇಲ್ಲಿನ ಭೂಭಾಗದಲ್ಲಿ ಮುಂಗುಸಿ, ಇಲಿ, ಹೆಗ್ಗಣ ಕಂಡು ಬರುತ್ತವೆ. ಗ್ರಾಮದಲ್ಲಿ ರೈತರು ಕೃಷಿಕರಾಗಿದ್ದು ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಎಮ್ಮೆ , ಎತ್ತುಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೫೦೨ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮–೪೯ಂ ಸೆಂ.ರಷ್ಟು ಇದ್ದು, ಚಳಿಯು ೧೧–೧೨ಂ ಸೆಂ. ಇರುತ್ತದೆ. ೨೦೧೪ ನೇ ಅಕ್ಟೋಬರ್ ತಿಂಗಳಲ್ಲಿ ಅತಿ ಹೆಚ್ಚು ೧೩೭ ಮಿ.ಮೀ ಮಳೆಯಾಗಿದೆ. ಹಳೆಯ ಎರಡು ಕಲ್ಯಾಣಿಗಳಿದ್ದು ಈಗ ಬತ್ತಿ ಹೋಗಿದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ವೈಶ್ಯರು ದೊಡ್ಡ ಸಮುದಾಯ ವಾಗಿದ್ದು, ನಾಯಕರು, ಕುಂಚಿಟಿಗರು, ಅಕ್ಕಸಾಲಿಗರು, ಲಾಡರು, ಬೆಸ್ತ, ಮ್ಯಾದರು, ಮಾರ್ವಾಡಿಗರು ಕಿರುಸಮುದಾಯವಾಗಿದೆ. ಇಲ್ಲಿನ ಮಾತೃ ಭಾಷೆ ಕನ್ನಡ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೧೪೦೦ ಮನೆಗಳಿದ್ದು, ಇಲ್ಲಿನ ಜನಸಂಖ್ಯೆ ೨೬೦೦ ಹೊಂದಿದೆ. ಇವುಗಳು ಕೊಳಚೆ ನಿರ್ಮೂಲನಾ ಮಂಡಳಿ, ಇಂದಿರಾ ಆವಾಸ್, ಜನತಾ, ಆಶ್ರಯ, ವಸತಿ ಯೋಜನೆಯ ೫೦೦ ಫಲಾನುಭವಿಗಳಿದ್ದಾರೆ. ೧೨೦೦ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಹೊಂದಿದ್ದಾರೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ. ಈ ಬಡಾವಣೆಯ ವ್ಯಾಪಾರೋದ್ಯಮ ಮುಖ್ಯವಾಗಿದ್ದು, ಸಿರಾದ ಪ್ರಮುಖ ವ್ಯಾಪಾರಿ ಕೇಂದ್ರ ಇದೇ ಬಡಾವಣೆಯಾಗಿದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆಪಲಾವ್, ದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ವೈದ್ಯರು, ಇಂಜಿನಿಯರು, ಕೆ.ಎ.ಎಸ್. ಅಧಿಕಾರಿ ನಾರಾಯಣ್, ಅಬಕಾರಿ, ಸಾರಿಗೆ, ಜೀವವಿಮಾ, ಬ್ಯಾಂಕ್ ಹುದ್ದಗೆ ಸೇರಿದಂತೆ ೧೦೦ ಕ್ಕೂ ಹೆಚ್ಚು ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವೈದ್ಯರಿದ್ದಾರೆ. ಸರ್ಕಾರಿ ಖಾಸಗಿ ಇಂಜಿನಿಯರ್‌ಗಳು, ವಕೀಲರು ಇದ್ದಾರೆ. ಬೀಡಿ ಉದ್ಯಮ, ಗಂಧದ ಕಡ್ಡಿ, ಪ್ಲಾಸ್ಟಿಕ್, ಗಾರ್ಮೆಂಟ್, ರಾಗಿಮಿಲ್ ಈ ಬಗೆಯ ಸಣ್ಣ ಹಾಗೂ ಗೃಹ ಕೈಗಾರಿಕೆಗಳಿವೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ವಾರ್ಡ್ ನಂ. ೨೯ ರ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದ್ದು, ಶ್ರೀನಿವಾಸ ಬಾಬು ಈ ಭಾಗದ ನಗರಸಭಾ ಸದಸ್ಯರಾಗಿದ್ದಾರೆ. ಸ್ಥಿರ ಹಾಗೂ ಚರ ದೂರವಾಣಿ, ಮೊಬೈಲ್, ಈಮೇಲ್, ಕೊರಿಯರ್ ಸೌಲಭ್ಯ ಸಂಪರ್ಕ ಹೊಂದಿದ್ದಾರೆ. ಅಂಚೆ ಸೌಲಭ್ಯ ಪಡೆಯುತ್ತಿದ್ದಾರೆ. ನ್ಯಾಯಾಲಯಕ್ಕೆ ಸಿರಾ ಮುಖ್ಯ ನ್ಯಾಯಾಲಯ ಹಾಗೂ ಕಾನೂನು ನೆರವು ಮಂಡಳಿಯ ಸೌಲಭ್ಯ ಪಡೆಯುತ್ತಿದ್ದಾರೆ. ಸಂತೆ ಬದಿಯ ತರಕಾರಿ, ವೀಳ್ಯೆದೆಲೆ, ಅಡಿಕೆ, ಹೂ–ಹಣ್ಣುಗಳ ವ್ಯಾಪಾರ ಸಂತೆ ಸೇರುತ್ತದೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೆನರಾ, ಕರ್ನಾಟಕ ರ್‍ಾಷ್ಟ್ರೀಕೃತ ಬ್ಯಾಂಕ್‌ಗಳಿದ್ದು, ವಾಲ್ಮೀಕಿ, ರಂಗನಾಥ, ಆರ್ಯವೈಶ್ಯ, ಟಿ.ಸಿ.ಬಿ. ಸ್ಥಳೀಯ ಬ್ಯಾಂಕುಗಳಿವೆ. ೪ ಎಟಿಎಂ ಗಳಿವೆ. ಒಂದು ಖಾಸಗಿ ಸಹಕಾರಿ ಸಂಘದ ಬ್ಯಾಂಕ್ ಇದೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳು, ಸ್ತ್ರೀ ಶಕ್ತಿ ಸಂಘಗಳಿವೆ. ಮಾಲ್‌ಗಳಿವೆ. ಬಂಬೂಬಜಾರ್, ಬ್ಯಾನರ್, ಬಂಟ್, ತಯಾರಿಕರಿದ್ದಾರೆ. ಶೈಕ್ಷಣಿಕವಾಗಿ ರಂಗನಾಥ ಪದವಿ ಪೂರ್ವ ಕಾಲೇಜು, ಕುವೆಂಪು ಪ್ರಾಥಮಿಕ ಶಾಲೆಗಳಿವೆ. ಇಲ್ಲಿನ ಸಾಕ್ಷರತೆ ಪ್ರಮಾಣ ಶೇ. ೯೪ ರಷ್ಟಿದೆ. ಒಂದು ಸರ್ಕಾರಿ ಗ್ರಂಥಾಲಯವಿದ್ದು ೪೩೧೨ ಪುಸ್ತಕಗಳಿವೆ. ಇಬ್ಬರು ಸಿಬ್ಬಂದಿಗಳಿದ್ದಾರೆ. ೨ ಅಲೋಪತಿ ಆಸ್ಪತ್ರೆ (ಖಾಸಗಿ) ಇವೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೧೪ ಹೋಟೆಲ್ ಗಳು, ೮೦ ಬಟ್ಟೆ ಅಂಗಡಿಗಳು, ೬೦ ಚಿನ್ನದ ಅಂಗಡಿಗಳು, ೪೦ ಚಪ್ಪಲಿ ಅಂಗಡಿಗಳು, ೩೦ ದಿನಸಿ ಅಂಗಡಿಗಳು, ೨೦ ಫ್ಯಾನ್ಸಿ ಸ್ಟೋರ್‌ಗಳು, ೮ ಬೇಕರಿ ಗಳು, ೬೦೦ ಚಿಲ್ಲರೆ ಅಂಗಡಿಗಳು, ೧೦ ಆಟೋಮೋಬೈಲ್, ೨೦ ಪುಸ್ತಕದ ಅಂಗಡಿ, ೮ ಕ್ಯಾಸೆಟ್ ಅಂಗಡಿ, ೬೯ ಮೊಬೈಲ್ ಅಂಗಡಿಗಳು, ೧೦ ಪ್ರಿಟಿಂಗ್ ಪ್ರೆಸ್, ಸಿರಾದ ಬಹುತೇಕ ಮುದ್ರಣ ಹಾಗೂ ಆ ಸಂಬಂಧಿ ವ್ಯವಹಾರ ನಡೆಯುವುದು ಇದೇ ಬಡಾವಣೆಯಲ್ಲಿ. ಉಳಿದಂತೆ ೨೦ ಔಷಧಿ ಅಂಗಡಿ, ೧೦ ವಾಚ್ ಅಂಗಡಿಗಳು, ೧೩ ಮೆಡಿಕಲ್ ಷಾಪ್, ೨ ವಸತಿನಿಲಯ, ಬ್ರಿಟೀಷರ ಕಾಲದ ಅತಿಥಿ ಗೃಹ ಈಗ ಶಿಥಿಲವಾಗಿದೆ.

ದುರ್ಗಮ್ಮ , ರಾಘವೇಂದ್ರ, ಗಣಪತಿ, ಶನಿದೇವರು, ಅರಳೀಕಟ್ಟೆ, ಆಂಜನೇಯ ದೇವಸ್ಥಾನಗಳಿವೆ. ಸ್ವಾತಿ, ನಿರ್ಮಲ, ಕಮಲ ಆಸ್ಪತ್ರೆಗಳು, ಮಹೇಶ್ ಡೆಂಟಲ್, ಸುಧಾ ಅನುಪಮ, ಅರುಣ್ ಕ್ಲಿನಿಕ್‌ಗಳಿವೆ. ಚನ್ನಬಸವೇಶ್ವರ ಆರ್ಯುವೇದಿಕ್ ಆಸ್ಪತ್ರೆ ಇದೆ. ಜೆರಾಕ್ಸ್, ಎಸ್ಟಿಡಿ ಬೂತ್, ಎಕ್ಸ್‌ರೇ, ಸ್ಕ್ಯಾನಿಂಗ್, ಬಳೆ ಅಂಗಡಿ, ೧೦ ಕಟಿಂಗ್ ಷಾಪ್, ವೈನ್ಸ್ ಶಾಪ್‌ಗಳಿವೆ.

ದುರ್ಗಮ್ಮನ ಉತ್ಸವ, ಮಹೋತ್ಸವವಾಗಿ, ಊರ ಹಬ್ಬವಾಗಿ ವಿಜೃಂಭಣೆ ಯಿಂದ ನಡೆಯುತ್ತದೆ. ಈ ದೇವಸ್ಥಾನದಲ್ಲಿ ಒಂದು ಶಾಸನವಿದ್ದು, ದೊಡ್ಡ ಶೀರ್‍ಯದ ಪಾಲುಮತದ ರೇವಣಸಿದ್ದೇಶ್ವರ ಶಿಷ್ಯರು ಮಾಡಿಸಿದ ಗುಡಿಕೆಲಸ ಎಂದು ಕಲ್ಲುಬಂಡೆ ಶಾಸನವಿದೆ.

ಉಳಿದಂತೆ ಮಾರಮ್ಮನ ಹಬ್ಬವನ್ನು ಗ್ರಾಮದೇವತೆ ಹಬ್ಬವಾಗಿ ಆಚರಿಸಲಾ ಗುತ್ತದೆ. ಕೋಟೆ ಮಾರಮ್ಮನಿಗೆ ಆರತಿ, ಬಲಿ ಅರ್ಪಿಸುವುದು ಇಲ್ಲಿನ ವಾಡಿಕೆ ಯಾಗಿದೆ. ಶಿವರಾತ್ರಿ, ಯುಗಾದಿ, ರಾಮನವಮಿ, ಗೌರಿಗಣೇಶ, ದಸರಾ ಹಬ್ಬಗಳನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಗಣಪತಿ ಉತ್ಸವವೂ ಒಂದು ತಿಂಗಳ ಸಾಂಸ್ಕೃತಿಕ ಹಬ್ಬವಾಗಿ ಮಹೋತ್ಸವವಾಗಿ ನಡೆಯುತ್ತದೆ.

## ಬಾಲಾಜಿ ನಗರ-ವಿದ್ಯಾನಗರ ವಾರ್ಡ್ ನಂ. ೩೦

ಬಾಲಾಜಿ ನಗರ ಸಿರಾ ನಗರದ ನಗರ ಸಭೆಯ ವ್ಯಾಪ್ತಿಯಲ್ಲಿ ಬರುತ್ತದೆ. ಮೊದಲಿಗೆ ಸರ್ಕಾರಿ ನೌಕರರ ವಸತಿ ನಿಲಯಗಳಿದ್ದು, ಬಾಲಾಜಿ ನಗರ ಬಡಾವಣೆ ಎಂದಿತ್ತು. ದಕ್ಷಿಣಕ್ಕೆ ಬಡಾವಣೆ ಬೆಳೆದು, ಇಂದು ವಿದ್ಯಾನಗರ ಎಂಬ ಹೊಸ ಹೆಸರಿನಲ್ಲಿ ಹಾಗೂ ಮಂಜುಶ್ರೀ ಆಂಗ್ಲ ಶಾಲೆಯ ಬಡಾವಣೆ ಯವರು ಮಂಜುನಾಥ ನಗರ ಎಂದು ಗುರುತಿಸಿಕೊಂಡು, ಹಳೆಯ ಬಾಲಾಜಿ ನಗರ, ವಿದ್ಯಾನಗರ, ಮಾಧವಿನಗರ, ವಾಸವಿನಗರ ವಿಶಾಲವಾಗಿ ಬೆಳೆದು ಸಿರಾ ನಗರ ಸಭೆಯ ವಾರ್ಡ್ ನಂ. ೩೦ ರ ವರ್ಗೀಕರಣದಲ್ಲಿ ಸೇರಿದೆ. ನಗರಸಭೆಯಿಂದ ಪೂರ್ವಕ್ಕೆ ಅರ್ಧ ಕಿ.ಮೀಟರ್‌ನಿಂದ ಒಂದೂವರೆ ಕಿ.ಮೀ.ವರೆಗೆ ಸಿರಾ ನಗರದ ಎಡಭಾಗ, ನಂದಿನಿ ಹೋಟೆಲ್‌ನಿಂದ, ಅಯ್ಯಪ್ಪ ಬೇಕರಿ, ಎಲ್.ಐ.ಸಿ. ಕಛೇರಿ, ಹನುಮಾನ್ ಬಸ್ ಗ್ಯಾರೇಜ್ ಐಟಿಐ ಕಾಲೇಜಿನಿಂದ ದಕ್ಷಿಣಕ್ಕೆ ಬುಕ್ಕಾಪಟ್ಟಣ ರಸ್ತೆ, ಭಾರತ್ ಪೆಟ್ರೋಲ್ ಬ್ಯಾಂಕ್, ಅಯ್ಯಪ್ಪ ದೇವಸ್ಥಾನ, ಹಾವನೂರು ಕಾಲೇಜ್‌ವರೆಗೆ ಇದರ ವ್ಯಾಪ್ತಿ ಹಬ್ಬಿದೆ.

ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಪಶ್ಚಿಮಕ್ಕೆ ಜಾಜಮ್ಮನ ಕಟ್ಟೆ ಇದೆ. ಸಿರಾ ನಗರದ ಹೊರ ವಲಯದ ಭೂ ಪ್ರದೇಶ ಉತ್ತರಕ್ಕೆ ಮರಗಿಡ, ಹಳ್ಳ, ದಿಣ್ಣೆಗಳಿಂದ ಕೂಡಿದ್ದು, ರ‍್ಾಷ್ಟ್ರಿಯ ಹೆದ್ದಾರಿ ಸಿರಾ ಬೈಪಾಸ್ ಹಾದು ಹೋಗುತ್ತದೆ. ಪೂರ್ವಕ್ಕೆ ಕೊಳದಲೆ ಈಶ್ವರನ ದೇವಾಲಯದ ಹಿಂಭಾಗ ಇದರ ಗಡಿಯಾಗಿದ್ದು, ಈ ಭಾಗದಲ್ಲಿ ನರಿ, ಮೊಲ, ಕಾಡುಹಂದಿ, ಉಡ, ಆಮೆ, ಮುಂಗುಸಿ, ಇಲಿ, ಹೆಗ್ಗಣ ಕಂಡು ಬರುತ್ತವೆ. ಗ್ರಾಮದಲ್ಲಿ ರೈತರು ಕೃಷಿಕರಾಗಿದ್ದು ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಎಮ್ಮೆ , ಎತ್ತುಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೫೦೨ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮-೩೯ಂ ಸೆಂ.ರಷ್ಟು ಇದ್ದು, ಚಳಿಯು ೧೧-೧೨ಂ ಸೆಂ. ಇರುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ. ೬೮೦ ಮನೆಗಳಲ್ಲಿ ಖಾಸಗಿ ನಲ್ಲಿ ಸಂಪರ್ಕ ಹೊಂದಿರುತ್ತಾರೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು ದೊಡ್ಡ ಸಮುದಾಯ ವಾಗಿದ್ದು, ವೈಶ್ಯರು, ಲಿಂಗಾಯಿತರು, ಕುರುಬರು, ಬ್ರಾಹ್ಮಣವು, ಮುಸ್ಲಿಂ, ನಾಯಕರು, ಲಂಬಾಣಿ, ಈಡಿಗರು, ಕ್ರಿಶ್ಚಿಯನ್‌ರು, ಅಕ್ಕಸಾಲಿಗರು, ಜೈನರು, ಕಿರುಸಮುದಾಯವಾಗಿದೆ. ಶಂಕರ್ ಆಸ್ಪತ್ರೆ ಓಣಿ, ಮಂಜುಶ್ರೀ ಬೀದಿ, ಜಾಜಿಕಟ್ಟೆ ಬೀದಿ, ಅನ್ನಪೂರ್ಣ ದೇವಸ್ಥಾನದ ರಸ್ತೆ ಹೀಗೆ ರಸ್ತೆಗಳು ವಿಭಾಗವಾಗಿದ್ದು, ಇಲ್ಲಿನ ಮಾತೃ ಭಾಷೆ ಕನ್ನಡ. ಉಳಿದಂತೆ ತೆಲುಗು, ಉರ್ದು, ಹಿಂದಿ ಮಾತನಾಡುತ್ತಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೭೮೦ ಮನೆಗಳಿದ್ದು, ಇಲ್ಲಿನ

ಜನಸಂಖ್ಯೆ ೨೪೦೦ ಹೊಂದಿದೆ. ಇವುಗಳು ಕೊಳಚೆ ನಿರ್ಮೂಲನಾ ಮಂಡಳಿ, ಇಂದಿರಾ ಆವಾಸ್, ಜನತಾ, ಆಶ್ರಯ, ವಸತಿ ಯೋಜನೆಯ ೧೭೫ ಫಲಾನುಭವಿಗಳಿದ್ದಾರೆ. ಎಲ್ಲಾ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಹೊಂದಿದ್ದಾರೆ.

ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ಶಿಕ್ಷಕರು, ಪ್ರಾಧ್ಯಾಪಕರು, ಟೈಲರ್, ಅರಣ್ಯ, ಸಾರಿಗೆ, ಕಂದಾಯ, ವೈದ್ಯರು, ಖಜಾನೆ, ಮಿಲಿಟರಿ, ಬೆಸ್ಕಾಂ, ಕೃಷಿ ಇಲಾಖೆ, ಕೈಗಾರಿಕೆ ಹೀಗೆ ವಿವಿಧ ಇಲಾಖೆಗಳಿಲೆ ಸೇರಿದ ೩೦೦ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವೈದ್ಯರು, ವಕೀಲರು, ಕಾರ್ಮಿಕ ನೌಕರರು, ಕಾಂಟ್ರ್ಯಾಕ್ಟರ್‌ಗಳು ಇದ್ದಾರೆ. ನಿವೃತ್ತ ಪ್ರಾಧ್ಯಾಪಕ ರುಗಳಿದ್ದಾರೆ. ೧೬ ಕ್ಕೂ ಹೆಚ್ಚು ಖಾಸಗಿ ವೈದ್ಯರಿದ್ದಾರೆ. ನಿವೃತ್ತ ಅಧಿಕಾರಿಗಳಿದ್ದಾರೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆಪಲಾವ್, ದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ವಾರ್ಡ್ ನಂ. ೩೦ ರ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದ್ದು, ಎಸ್.ಜೆ. ರಾಜಣ್ಣ ಈ ಭಾಗದ ನಗರಸಭಾ ಸದಸ್ಯರಾಗಿದ್ದಾರೆ. ಹಣಕಾಸು ವ್ಯವಸ್ಥೆಯಲ್ಲಿ ಒಂದು ರ್‍ಾಷ್ಟ್ರೀಕೃತ ಬ್ಯಾಂಕ್ ಹಾಗೂ ಎಟಿಎಂ ಸೌಲಭ್ಯವಿದೆ. ಭಾರತೀಯ ಜೀವವಿಮಾ ಪ್ರಾದೇಶಿಕ ಕಛೇರಿ ಇದೆ. ಮಡಿವಾಳ ಮಾಚಿದೇವ ಖಾಸಗಿ ಬ್ಯಾಂಕ್, ಮಹಿಳಾ ಸ್ವಸಹಾಯ ಸಂಘಗಳಿವೆ. ಬೀದಿ ಬದಿಯ ತಿಂಡಿ ಮಳಿಗೆ, ಕೈಗಾಡಿ ತರಕಾರಿ ವ್ಯಾಪಾರಿಗಳು, ತ್ಯಾಗರಾಜಪ್ಪ ಆಯಿಲ್ ಮಿಲ್, ನಂದಿನಿ ಹೋಟೆಲ್, ಜನತಾ ಹೋಟೆಲ್, ೨೩ ಅಂಗಡಿಗಳು, ಹಾರ್ಡ್‌ವೇರೆ ಅಂಗಡಿಗಳಿವೆ. ಶೈಕ್ಷಣಿಕವಾಗಿ ಹಾವನೂರು ಪದವಿ ಪೂರ್ವ ಕಾಲೇಜು, ಮಂಜುಶ್ರೀ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಒಂದು ಐಟಿಐ ಕಾಲೇಜು, ವಾಸವಿ ಮಕ್ಕಳ ಶಾಲೆ, ಕಿಡ್ಸ್ ಇದೆ. ಶಂಕರ್ ಆಸ್ಪತ್ರೆ, ರಘು ಆಸ್ಪತ್ರೆಗಳಿವೆ. ಒಂದು ಮೂಳೆ ಆಸ್ಪತ್ರೆ (ಖಾಸಗಿ) ಯೂ ಇದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಧಾರ್ಮಿಕವಾಗಿ ೧೭ನೇ ತೀರ್ಥಂಕರರಾದ ಕುಂತುನಾಥ ಜೈನ ದೇವಾಲಯ, ಅನ್ನಪೂರ್ಣೇಶ್ವರಿ ಮಡಿವಾಳ ಮಾಚಿದೇವರ ದೇವಾಲಯಗಳಿವೆ.

ಯುಗಾದಿ, ಶಿವರಾತ್ರಿ, ದೀಪಾವಳಿ, ದಸರಾ, ಗೌರಿಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಹಿರಿಯ ಲೇಖಕ, ಪ್ರಜಾವಾಣಿ ಸಾಪ್ತಾಹಿಕ ಸಂಪಾದಕ ಚ.ಹ.ರಘುನಾಥ್, ಲೇಖಕರಾದ ಪ್ರೊ॥ಕೆ. ಹನುಮಂತರಾಯಪ್ಪ, ಪತ್ರಕರ್ತ ಅನಂತ ರಾಮು, ಇದೇ ಬಡಾವಣೆಯಲ್ಲಿದ್ದಾರೆ. ಮಾಜಿ ಕಸಾಪ ಅಧ್ಯಕ್ಷ ಬಿ. ಗೋವಿಂದಪ್ಪ, ಮಾಜಿ ಪುರಸಭಾಧ್ಯಕ್ಷ ತ್ಯಾಗರಾಜಪ್ಪ, ಸೇರಿದಂತೆ ಸಮಾಜಸೇವೆ, ವಿವಿಧ ಸಂಘ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿರುವ ಸಾಧಕರಿದ್ದಾರೆ. ಇದೇ ಬಡಾವಣೆ ಯಲ್ಲಿ ಸಿರಾ ಸೀಮೆ ಚಿಂತಕರ ವೇದಿಕೆ–ಸಾಮಾಜಿಕ, ಸಾಂಸ್ಕೃತಿಕ, ಜನಪದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಉದ್ದೇಶ ಹೊಂದಿ ಕಾರ್ಯಾರಂಭ ಮಾಡಿದೆ. ೫೦ ವರ್ಷದ ಲೇಖಕಿ ಪೂರ್ಣಿಮಾ ಬಾಬು ೧೪ ಕೃತಿಗಳನ್ನು ಪ್ರಕಟಿಸಿದ್ದಾರೆ. ರಾಜ್ಯ ಮಟ್ಟದ ಸಾಹಿತ್ಯ ಗೌರವ ಪುರಸ್ಕಾರಗಳು ಇವರಿಗೆ ಲಭಿಸಿವೆ. ಪತ್ರಕರ್ತ ಶ್ರೀಮಂತ ಕುಮಾರ್ ಇಲ್ಲಿ ನೆಲೆಸಿದ್ದಾರೆ.

## ಸಪ್ತಗಿರಿ ಬಡಾವಣೆ ವಾರ್ಡ್‌ನಂ. ೩೧

ಸಪ್ತಗಿರಿ ಬಡಾವಣೆಯು ಸಿರಾ ನಗರದಸಭಾ ವ್ಯಾಪ್ತಿಯಿಂದ ಒಂದೂವರೆ ಕಿ.ಮೀ. ದೂರದಲ್ಲಿದೆ. ಸಿರಾದಿಂದ ದಕ್ಷಿಣಕ್ಕೆ ರ್‍ಾಷ್ಟ್ರೀಯ ಹೆದ್ದಾರಿ ೪ ಕ್ಕೆ ಹೊಂದಿಕೊಂಡಂತೆ ಈ ಗ್ರಾಮವಿದೆ. ಸಿರಾ ನಗರದ ರ್‍ಾಷ್ಟ್ರೀಯ ಹೆದ್ದಾರಿಯ ಬಲಭಾಗದ ಸರ್ಕಾರಿ ಆಸ್ಪತ್ರೆಯಿಂದ ಮಾರ್ಕೆಟ್ ಯಾರ್ಡ್, ತನದ ಅದರ ವಿಸ್ತೀರ್ಣವಿದೆ. ೭೫೩.೪೮ ಕಿ.ಮೀ. ಕಲ್ಲುಕೋಟೆ ಭೂವಿಸ್ತೀರ್ಣದಲ್ಲಿ ಇದರ ವ್ಯಾಪ್ತಿ ಕೂಡಿಕೊಂಡಿದೆ. ಶಿವಾಜಿನಗರ, ಸಪ್ತಗಿರಿ ಬಡಾವಣೆ, ಮಾರುತಿನಗರ, ಜಾಜಿಕಟ್ಟೆ ಮೈದಾನ, ಅಯ್ಯಪ್ಪ ದೇವಾಲಯ, ಬಂಡೆ ಆಂಜಿನಯ್ಯ, ಫೈರ್ ಇಂಜಿನ್ ಆಫೀಸ್, ಮಸೀದಿ ಒಳಗೊಂಡಂತೆ ಇದರ ವಿಸ್ತೀರ್ಣ ಹಬ್ಬಿದೆ. ಪಶು ಆಸ್ಪತ್ರೆ, ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ಇಲಾಖೆ, ಉರ್ದು ಶಾಲೆ, ಸಿರಾದ ಸಂತೆ ಮೈದಾನವೂ ಇದೇ ವ್ಯಾಪ್ತಿಯಲ್ಲಿ ಬರುತ್ತದೆ.

ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು, ಈ ಭಾಗದಲ್ಲಿ ನರಿ, ಮೊಲ, ಕಾಡುಹಂದಿ, ಉಡ, ಆಮೆ, ಮುಂಗುಸಿ, ಇಲಿ, ಹೆಗ್ಗಣ ಕಂಡು ಬರುತ್ತವೆ. ಗ್ರಾಮದಲ್ಲಿ ರೈತರು ಕೃಷಿಕರಾಗಿದ್ದು ಸಾಕು ಪ್ರಾಣಿಗಳಾಗಿ ಕುರಿ, ಮೇಕೆ, ಹಸು, ಎಮ್ಮೆ , ಎತ್ತುಗಳನ್ನು ಸಾಕಲಾಗಿದೆ. ಪಕ್ಷಿಗಳಾದ ಕೋಗಿಲೆ, ಹದ್ದು, ಗರುಡ, ಕೌಜಲಗ, ಗೊರವಂಕ, ಸಾಂಬಾರ ಕಾಗೆ, ಬೆಳವ, ಹದ್ದು, ಗೂಬೆ, ನೀರು ಕೋಳಿ, ಕಾಗೆ, ಕೊಕ್ಕರೆ, ಗಿಳಿ ಕಂಡು ಬರುತ್ತವೆ. ಸಾಕು ಪಕ್ಷಿಗಳಾಗಿ ಕೋಳಿ, ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ಮಳೆ ಶೇ. ೪೫೨ ರಷ್ಟು ಮಿ.ಮೀ. ಆಗಿದ್ದು, ಉಷ್ಣಾಂಶ ೩೮-೩೯೦ ಸೆಂ.ರಷ್ಟು ಇದ್ದು, ಚಳಿಯು ೧೧-೧೨೦ ಸೆಂ. ಇರುತ್ತದೆ. ಬುಕ್ಕಾಪಟ್ಟಣ ರಸ್ತೆಗೆ ಒಂದು ಹಳ್ಳ, ನಮಾಜಿ ದಿಣ್ಣೆಯ ಒಂದು ಹಳ್ಳ, ಬೈಪಾಸು ಪಕ್ಕದ ಶಿವಾಜಿನಗರದ ಒಂದು ಕಿರುಹಳ್ಳ ಸೇರಿರ ಒಟ್ಟು ೩ ಕಿರು ಹಳ್ಳಗಳು ಮಳೆಗಾಲದಲ್ಲಿ ಮಾತ್ರ ನೀರು ಇರುತ್ತದೆ. ಜಾಜಿಕಟ್ಟೆ ಎಂಬ ಒಂದು ಚಿಕ್ಕ ಕೆರೆ ಇದ್ದು, ಬಟ್ಟೆ ತೊಳೆಯುವ, ಪ್ರಾಣಿ-ಪಕ್ಷಿಗಳಿಗೆ ಕುಡಿಯಲು ನೀರು ಒದಗಿಸುತ್ತದೆ. ಕುಡಿಯಲು ಸಿರಾ ನಗರ ಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತದೆ.

ಗ್ರಾಮದಲ್ಲಿ ಸಾಮಾಜಿಕ ರಚನೆಯಲ್ಲಿ ಕುಂಚಿಟಿಗರು, ಕುರುಬರು, ನಾಯಕರು, ಕೊರಚರು, ಕೊರಮರು, ಈಡಿಗರು, ಆದಿಕರ್ನಾಟಕ, ಆದಿದ್ರಾವಿಡ, ಬೋವಿ ಜನಾಂಗದವರಿದ್ದಾರೆ. ಇಲ್ಲಿನ ಮಾತೃ ಭಾಷೆ ಕನ್ನಡ. ಉಳಿದಂತೆ ತೆಲುಗು, ತಮಿಳು, ಮರಾಠಿ, ಉರ್ದು ಮಾತನಾಡುತ್ತಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆಗಳು, ೮೧೪ ಮನೆಗಳಿದ್ದು, ಇಲ್ಲಿನ ಜನಸಂಖ್ಯೆ ೧೮೯೩ ಹೊಂದಿದೆ. ಇವುಗಳು ಏಕಲವ್ಯವಸತಿ ಯೋಜನೆ, ವಾಜ್‌ಪೇಯಿ ಆವಾಸ್, ನಗರಸಭಾ ಅನುದಾನ, ಅಂಬೇಡ್ಕರ್ ವಸತಿ ಯೋಜನೆಯ ೨೪೨ ಫಲಾನುಭವಿಗಳಿದ್ದಾರೆ. ಎಲ್ಲಾ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಹೊಂದಿದ್ದಾರೆ.

ಸಾಂಪ್ರದಾಯಿಕವಾಗಿ ಎತ್ತಿನಗಾಡಿ (ಶಿವಾಜಿನಗರ), ಆಧುನಿಕ ವಾಹನಗಳಾದ ಲಾರಿ, ಟೆಂಪೋ, ಮಿನಿಬಸ್, ಕಾರು, ಸ್ಕೂಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ರೈತಾಪಿ ಜನರು ಶೇಂಗಾ, ರಾಗಿ ಬೆಳೆಯುತ್ತಾರೆ. ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಒಂದು ಮಿನಿ ಹಾಲು ಸಂಗ್ರಹಣ ಕೇಂದ್ರ(ಶಿವಾಜಿ ನಗರ)ದಲ್ಲಿದೆ.

ಗ್ರಾಮದ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ. ಬಳಸುವವರಿದ್ದಾರೆದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶಿಕ್ಷಣ, ಸಾರಿಗೆ, ನಗರಸಭೆ, ಅರಣ್ಯ ಇಲಾಖೆಗೆ ಸೇರಿದ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಡ್ರೈವರ್, ಅಕ್ಕಿ ಗಿರಣಿ, ಕಲ್ಲು ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಒಂದು ರಾಗಿ ಮಿಲ್ ಇದೆ. ೨ ಇಟ್ಟಿಗೆ ಫ್ಯಾಕ್ಟರಿಗಳಿವೆ. ಒಂದು ಎಣ್ಣೆ ಗಿರಣಿ, ಅಕ್ಕಿ ಗಿರಣಿ ಇದೆ. ಮಹಿಳೆಯರು ಗೃಹ ಕೈಗಾರಿಕೆಯಾಗಿ ಬೀಡಿ ಕಟ್ಟುವುದು, ಹೂ ಕಟ್ಟುವುದು, ಉಪಕಸುಬಾಗಿದೆ.

ಆಡಳಿತಾತ್ಮಕವಾಗಿ ಸಿರಾ ನಗರಸಭೆ ಹಾಗೂ ಚಿತ್ರದುರ್ಗ ಲೋಕಸಭೆ ಕ್ಷೇತ್ರ, ಸಿರಾ ನಗರಸಭಾ ವಾರ್ಡ್ ನಂ. ೩೧ ರ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗವಿದ್ದು ವಾಹನ ಸಂಚಾರ ಸುಗಮವಾಗಿದೆ. ಅಂಚೆ ಕಚೇರಿ, ತಹಸೀಲ್ದಾರ್ ಕಛೇರಿ, ಕೆಇಬಿ, ಲೋಕೋಪಯೋಗಿ ಇಲಾಖೆಗಳಿಗೆ ಸಿರಾ ನಗರದ ಮುಖ್ಯ ಕಛೇರಿಗಳನ್ನು ಸಂಪರ್ಕಿಸಬೇಕಾಗಿದೆ. ಸಿರಾ ನಗರದಲ್ಲಿ ಕಾನೂನು ಸೇವಾ ಪ್ರಾಧಿಕಾರದ ನೆರವು ಮಂಡಳಿ ಇದೆ.

ಈ ವ್ಯಾಪ್ತಿಯಲ್ಲಿ ಕೃಷಿ ವ್ಯವಸಾಯ ಮಾರುಕಟ್ಟೆ, ಸಾರ್ವಜನಿಕ ಮಂಡಿ, ಸಹಕಾರಿ ಉಗ್ರಾಣ, ಸಂತೆ ಬರುತ್ತವೆ. ಇಲ್ಲಿ ೯ ಸ್ತ್ರೀ ಶಕ್ತಿ ಸಂಘ, ೪ ಧರ್ಮಸ್ಥಳ, ಗ್ರಾಮೀಣಾಭಿವೃದ್ಧಿ ಸ್ವಸಹಾಯಕ ಸಂಘ, ಕಾರ್ಯ ನಿರ್ವಹಿಸುತ್ತದೆ. ಶೈಕ್ಷಣಿಕವಾಗಿ ಈ ವ್ಯಾಪ್ತಿಯಲ್ಲಿ ಒಂದು ಉರ್ದು ಪ್ರೌಢಶಾಲೆ, ಉರ್ದು ಪ್ರಾಥಮಿಕ ಪಾಠಶಾಲೆ, ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪಠ್ಯ ಪುಸ್ತಕ ಸೌಲಭ್ಯಗಳಿವೆ. ಶೈಕ್ಷಣಿಕ ಸಾಕ್ಷರತೆ ಪ್ರಮಾಣ ಶೇ. ೬೨.೩ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ, ಹಾಗೂ ಸಂಧ್ಯಾ ಸುರಕ್ಷೆಯ ಯೋಜನೆಗಳು, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ೨೩ ಅಂಗಡಿಗಳಿವೆ. ೦೯ ಹೋಟೆಲ್‌ಗಳು, ಮಾಂಸದ ಅಂಗಡಿ, ೩ ಬಾರ್‌ಗಳು, ಒಂದು ಸಪ್ತಗಿರಿ ಚಿತ್ರಮಂದಿರ, ಹಾಗು ಸೋಮೇಶ್ವರನ ಕಲ್ಯಾಣ ಮಂಟಪವಿದೆ. ಅಲ್ಪಸಂಖ್ಯಾತ ಹಾಗೂ ಸಮಾಜ ಕಲ್ಯಾಣ ವಿದ್ಯಾರ್ಥಿನಿಯರ ಹಾಸ್ಟೆಲ್ ಇದೆ. ಅಂಬೇಡ್ಕರ್ ಸಮುದಾಯ ಭವನ, ಸರ್ಕಾರಿ ನೌಕರರ ಸಂಘ, ನಿವೃತ್ತ ನೌಕರರ ಸಂಘದ ಕಟ್ಟಡಗಳಿವೆ. ಗೃಹ ರಕ್ಷಕ, ದಳದ ಕಛೇರಿ ನಿರ್ಮಾಣವಾಗುತ್ತಿದೆ. ಫೈರ್ ಇಂಜಿನ್ ಕಛೇರಿ ಇದೆ.

ರಂಗಕಲಾವಿದ ರಾಮಚಂದ್ರಪ್ಪ ಜನಪದ ಹಾಡುಗಾರ, ಗೋಪಾಲ ಕೃಷ್ಣ, ಈ ಬಡಾವಣೆಯಲ್ಲಿ ನೆಲೆಸಿದ್ದಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ದಸರಾ, ಗೌರಿಗಣೇಶನ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಂಜು ಪೀರ್ ಮಕಾನ

ಮಂಜು ಪೀರ್ ಮಕಾನ -ಸಿರಾ ನಗರದ ಜ್ಯೋತಿನಗರ ಬಡಾವಣೆಯ ಬದಿಯಲ್ಲಿದೆ. ಉತ್ತರಕ್ಕೆ ಪ್ರಸಿದ್ಧ ವಿದ್ಯಾಸಂಸ್ಥೆ, ದಕ್ಷಿಣಕ್ಕೆ ಸೇಂಟ್ ಆನ್ ಶಾಲೆ, ಕಾಳಿದಾಸ ಹೈಸ್ಕೂಲ್ ನಡುವಿನ ಸ್ವಲ್ಪ ಹಂತರದಲ್ಲಿ ಮಂಜುಪೀರ್ ಮಕಾನ ಎಂಬ ಒಂದು

ವಸತಿ ಶಾಲೆ, ಅರೇಬಿಕ್, ಬೋಧನೆ ಇದೆ. ಮಂಜು ಪೀರ್ ಎಂಬ ಮುಸ್ಲಿಂ ಮೌಲಿಯೊಬ್ಬರು, ಉತ್ತರ ಭಾರತದ ಕಡೆಯಿಂದ ಬಂದು, ಇಲ್ಲಿ ವಸತಿ ಮಾಡಿಕೊಂಡು ತಂಗಿ, ಇಸ್ಲಾಂಮಿಕ್, ಧಾರ್ಮಿಕ ಬೋಧನೆ ಮಾಡುತ್ತಿದ್ದಾರೆಂದು, ಆತನು ಸಾಧ್ವಿಯಾಗಿದ್ದು, ಧರ್ಮಸಮನ್ವಯ ಪರವಾಗಿ ಎಲ್ಲಾ ಧರ್ಮೀಯರೊಂದಿಗೆ ಅನನ್ಯವಾಗಿದ್ದರೆಂದು ಈ ಭಾಗದ ಜನ ಈಗಲೂ ನೆನೆಯುತ್ತಾರೆ. ಆತನ ಮರಣಾ ನಂತರ ಆತನ ಸಮಾಧಿ, ಆತನಿಗೆ ಸೇರಿದ್ದು ಎಂದು ಹೇಳಲಾಗುವ ೫ ಎಕರೆ ಜಮೀನಿನ ಸುತ್ತ ಕಾಂಪೌಂಡ್ ಹಾಕಿಕೊಂಡು, ಅರೇಬಿಕ್ ಶಾಲೆ, ವಸತಿ ಗೃಹದ ಮೂಲಕ, ನಂತರ ಅನಾಥಾಲಯದ ಮಾದರಿಯಲ್ಲಿ ಅಲ್ಲೊಂದು ವಸತಿ ಮಂದಿರವೂ ಇದ್ದಿತು. ೨೦೦೬ ನೇ ಸಾಲಿನ ತನಕ ಇಲ್ಲಿ ಸರ್ಕಾರಿ ಉರ್ದು ಶಾಲೆಯೂ ಇದ್ದು, ಮಕ್ಕಳ ಕೊರತೆಯಿಂದಾಗಿ ಶಾಲೆಯನ್ನು ಸ್ಥಗಿತಗೊಳಿಸಿದೆ. ಇಲ್ಲಿ ಕನ್ನಡ ಬೋಧಕ (ರಾಮಕೃಷ್ಣಪ್ಪ) ರಾಗಿದ್ದು ವರನ್ನು ಇಂದು ಚನ್ನನ ಕುಂಟೆಗೆ ವರ್ಗಾಯಿಸಲಾಗಿದೆ.

ಮಂಜು ಪೀರ್ ಮಕಾನ ಈಗ ಪೂರ್ಣವಾಗಿ ಮುಸ್ಲಿಂ ಶಾಲೆ ನಡೆಯುತ್ತದೆ. ಸದ್ಯ ೧೮ ವಿದ್ಯಾರ್ಥಿಗಳು, ಒಬ್ಬರು ಅಧ್ಯಾಪಕರೂ ಇದ್ದು, ಇಬ್ಬರು ಅಡಿಗೆ ಸಹಾಯಕರಿದ್ದಾರೆ. ವಾರ್ಡ್ ಲೆಕ್ಕದಲ್ಲಿ ಇದ್ದರೂ ಜ್ಯೋತಿನಗರ ವಾರ್ಡ್ ೨ ಕ್ಕೆ ಹೊಂದಿಕೊಂಡಿದೆ.

## ಕ್ಷೇತ್ರ ತಜ್ಞರು

ಶ್ರೀಮತಿ ಎಂ. ಶಾಂತಮ್ಮ

## ಆಕರ – ಪರಾಮರ್ಶಾ ಗ್ರಂಥಗಳು


೧. ತುಮಕೂರು ಜಿಲ್ಲಾ ದರ್ಶನ, ಸಿ.ಎನ್. ಭಾಸ್ಕರಪ್ಪ (ಸಂ)

೨. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ೧೨

೩. ಸಿರಾ ಸೀಮೆ ಇತಿಹಾಸ ಮತ್ತು ಸಂಸ್ಕೃತಿ – ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ೨೦೦೭

೪. ಸಿರಾ ತಾಲ್ಲೂಕು ದರ್ಶನ, ಡಾ.ಎನ್. ನಂದೀಶ್ವರ, ೨೦೦೮

೫. ಸಿರಾ ಸೀಮೆ ಜಾನಪದೀಯ ಅಧ್ಯಯನ, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ೨೦೧೧

೬. ಕಲ್ಪಶೋಧ, ಡಾ. ಡಿ.ಎನ್.ಯೋಗೀಶ್ವರಪ್ಪ, ೨೦೧೨

೭. ತುಮಕೂರು ಜಿಲ್ಲೆ ಜನಪದ ಕಲಾವಿದರು, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ೨೦೦೭

೮. ತುಮಕೂರು ಜಿಲ್ಲೆ ಜಾತ್ರೆಗಳು, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ೨೦೦೧

೯. ಸಿರಾ ತಾಲ್ಲೂಕಿನ ಸ್ಮಾರಕಗಳು ಹಾಗೂ ಶಾಸನಗಳು, ಡಾ.ಎನ್. ನಂದೀಶ್ವರ, ೨೦೦೮


## ಪರಿಶೀಲನೆ ಮಾಹಿತಿ

೧. ಶ್ರೀ ಪಿ.ಎಚ್.ಮಹೇಂದ್ರಪ್ಪ, ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜು, ಸಿರಾ

೨. ಪ್ರೊ॥ ಜಗನ್ನಾಥ, ಪ್ರಾಧ್ಯಾಪಕ, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಬುಕ್ಕಾಪಟ್ಟಣ, ಸಿರಾ ತಾ॥

೩. ಶ್ರೀ ವೇದಮೂರ್ತಿ, ಇತಿಹಾಸ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಸಿರಾ

೪. ಶ್ರೀ ಕೆ.ಚಿಕ್ಕಣ್ಣ, ಎಂ.ಆರ್.ಡಿ ಸದಸ್ಯರು, ದೇವರಾಜ ಅರಸ್ ಅಭಿವೃದ್ಧಿ ನಿಗಮ, ಹೊನ್ನಗಾನಹಳ್ಳಿ ಗೊಲ್ಲರಹಟ್ಟಿ, ಸಿರಾ ತಾ॥

೫. ಶ್ರೀ ಕೆಂಚಪ್ಪ, ಅಂಕಿ ಅಂಶಗಳ ಅಧಿಕಾರಿ, ಸಿರಾ ತಾಲ್ಲೂಕು

೬. ಶ್ರೀ ಮಲ್ಲಿಕಾರ್ಜುನ, ಮಾಹಿತಿ ಸಹಾಯಕರು, ತಾಲ್ಲೂಕು ಪಂಚಾಯ್ತಿ ಕಛೇರಿ, ಸಿರಾ